KARNATAKA
STATE
ARCHIVES

KARNATAKA STATE ARCHIVES

KARNATAKA STATE ARCHIVES

Roll No:

149

Roll No:

149

Roll No:

149

ARS 34 APP 82

NAVAYUGA KANNADA
WEEKLY

CONTD FROM ROLL NO 148
FROM:
to 23:2:1961

ARS 34 APP 82

NAVAYUGA KANNADA
WEEKLY

CONTD FROM ROLL NO 2 48
FROM:
16 23: 2: 1961

ARS 34 APP 82

NAVAYUGA KANNADA
WEEKLY

CONTD FROM ROLL NO 148

FROM:

16 23:2:1961

NAVAYUGA WEEKLY, UDIPI.
REGD. NO.BG. 176

16-2-1961

LICENSE NO. 31
Licensed to Post without Prepayment

ಕ್ಷ-ಕಿರಣ

ಭವರೋಗ ರಾಮಬಾಣ—ಮರವೆ

> ಮರವೆಯಿಂದಲೆ ಇಹವು, ಮರವೆಯಿಂದಲೆ ಪರವು, ಮರವೆಯೊಂದಿಲ್ಲದಿರೆ ಮರಳಿನಾ ಈ ಜಗದಿ ಹುರುಳಿಲ್ಲವೆಂದ......

ಶ್ರೀ ನಾಗರಾಜ, 'ಹಿಂದೀರತ್ನ', ಉಜಿರೆ.

ಇಪ್ಪತ್ತೈದರ ನವಹರೆಯದ ಯುವಕ, ಇಪ್ಪತ್ತೊಂದರ ಯುವತಿ— ನವವಿವಾಹಿತರು ಒಬ್ಬರನ್ನೊಬ್ಬರು ಅತಿಯಾಗಿ ಪ್ರೀತಿಸುತ್ತಾರೆ ಒಬ್ಬರ ಮೇಲೊಬ್ಬರಿಗೆ ಎಲ್ಲಿಲ್ಲದ ಅಕ್ಕರೆ. ಗಂಡನಿಗೆ ನೂರೈವತ್ತು ರೂಪಾಯಿಯ ನೌಕರಿಯಿದೆ ಸಂಜೆ ಆಫೀಸು ಬಿಟ್ಟೊಡನೆ ಗಂಡ ಮನೆಗೆ ಬರುತ್ತಾನೆ. ಇಬ್ಬರೂ ವಾಕಿಂಗಿಗೆ ಇಲ್ಲವೇ ಸಿನೇಮಾಕ್ಕೆ ಜೊತೆಯಾಗಿ ಹೋಗುವರು. ನಗುವರು ಹುಚ್ಚುಚ್ಚು ಮಾತಾಡುವರು. ಅಂತೂ ಆವರಗೊಂದು ಆದರ್ಶ ದಂಪತ್ಯ. ಅಪೂರ್ವ ಜೋಡಿ!

ಒಂದು ದಿನ ಎಂದಿನಂತೆ ಆಫೀಸಿನಿಂದ ಬರಬೇಕಾದ ಸಮಯಕ್ಕೆ ಪತಿ ಬರಲಿಲ್ಲ ಅರ್ಧಗಂಟೆ ತಡವಾಗಿದೆ ಒಂದು ಕಾರು ಬಂದು ಮನೆಯ ಅಂಗಳದಲ್ಲಿ ನಿಂತಿತು. ನಾಲ್ಕು ಜನರು ಆಕೆಯ ಪತಿಯ ಶವವನ್ನು ಕಾರಿನಿಂದ ಇಳಿಸಿದರು, ಬೀದಿಯಲ್ಲಿ ಬರುವಾಗ, ತನ್ನಾಕೆಗೆ ಪ್ರಿಯವಾದ ಹೂವನ್ನು ಕೊಳ್ಳಲೆಂದು ಹೋದ ಪತಿ, ಲಾರಿಯೊಂದರ ಚಕ್ರದಡಿಗೆ ಬಿದ್ದು ಗತಪ್ರಾಣನಾಗಿದ್ದ. ಸಂಬಂಧಿಕರಿಗೆಲ್ಲಾ ಕರೆಹೋಯಿತು. ಶವದಹನ ನಡೆದಾಗ ಆ ತರುಣ ಪತ್ನಿಯ ಗೋಳೇ ಗೋಳು. 'ತನ್ನನ್ನು ಅದೇ ಚಿತೆಯನ್ನೇರುತ್ತೇನೆ—ಎಂದು ಬೊಬ್ಬಿರಿಯುತ್ತಾಳೆ. ಎಲ್ಲರೂ ಸೇರಿ ತಡೆದಿಡುತ್ತಾರೆ.

ಎರಡು ತಿಂಗಳು ಕಳೆಯಿತು. ಆ ವಿಧವೆಯ ಮನೆಗೆ ಹೋಗಿ ನೋಡಿದಲ್ಲಿ, ಹಿಂದಿನ ಆ ಕೆದರಿದ ಕೂದಲು, ಬಾವಿದ ಕಣ್ಣು—ಒಂದೂ ಕಾಣಸದು! ಶಾಂತ ಗಂಭೀರವಾಗಿದೆ — ಮುಖ. ಹತ್ತಿರದಲ್ಲೇ ನಾಲ್ಕಾರು ಪತ್ರಿಕೆಗಳು — ಒಂದನ್ನಾಕೆ ಓದುತ್ತಿರುವಳು. ಬಹುಶಃ ಯಾವುದೋ ವಾದ ಕತೆಯಿರಬೇಕು.

ಇನ್ನೂ ಒಂದೆರಡು ತಿಂಗಳು ಕಳೆದ ಬಳಿಕ ನೀವಾಕೆಯನ್ನು ಸಿನಿಮಾ ಮಂದಿರದ ಬಳಿ ಕಂಡರೆ— ಆಕೆ, ಯಾವುದೋ ಒಂದು ಪ್ರಣಯ ಕತೆಯ ಸಿನಿಮಾ ನೋಡಲು—ಬಂದುದನ್ನು ಗೊತ್ತು ಹಚ್ಚಬಹುದು! ಮತ್ತಷ್ಟು ಗಮನವಿರಿಸಿದಲ್ಲಿ ಆಕೆಯ ಜೊತೆಗೆ ಇನ್ನೊರ್ವ ಯುವಕನನ್ನೂ ಕಾಣಬಹುದು.' ಬಹುಶಃ ಆವಳ ನೆಂಟನೋ-ನೆರೆಯವನಿರಬಹುದು. ಸಿನಿಮಾ ಬಿಟ್ಟೊಡನೆ ಇಬ್ಬರೂ ಒಂದೇ ಜಟಕಾ ಬಂಡಿಯನ್ನೇರುವುದನ್ನು ಕಂಡು ಮತ್ತಷ್ಟು ಚಕಿತರಾಗಬಹುದು!

ಇದಾದ ನಾಲ್ಕಾರು ತಿಂಗಳಲ್ಲೇ— ಬ್ರಹ್ಮ ಸಮಾಜದಲ್ಲೋ ಅಥವಾ ಬೇರಿನ್ನೆಲ್ಲೋ ಅವರೀರ್ವರ ವಿವಾಹ ನಡೆಯಿತೆಂಬ ವರದಿಯನ್ನು ಸ್ಥಳೀಯ ಪತ್ರಿಕೆಗಳಲ್ಲಿ ಕಾಣಬಹುದು.

—ಇದೀಗ ನಮ್ಮ ಸಮಾಜದಲ್ಲಿ—ಇಂದಿನ ದಿನಗಳಲ್ಲಿ ಕಾಣಬರುವ ಸಾವಿರ ಒಂದು, ಘಟನೆ ಆರಂಭದಿಂದ ಕೊನೆಯ ತನಕ ಹಲವಾರು ಘಟ್ಟಗಳಲ್ಲಿ ಆ ಯುವತಿಯ ಮನಸ್ಸಿನ ಮೇಲೆ— ಮರೆವು ತನ್ನ ಕೈವಾಡವನ್ನು ಹೇಗೆ ತೋರಿಸಿತೆಂಬುದನ್ನು ಕಾಣುತ್ತೇವೆ. ಪತಿಯ ಚಿತೆಯನ್ನೇರುತ್ತೇನೆ —ಎಂದ ಆ ಯುವತಿಯನ್ನು ತಡೆಯದಿದ್ದಲ್ಲಿ—ಮರೆವಿನ ಸಂಜೀವಿನಿ ತನ್ನ ಕಾರ್ಯಕ್ಕೈಗೊಳ್ಳದಿದ್ದಲ್ಲಿ ಆಕೆಯ ಪುನರ್ವಿವಾಹವೆಂದಾದರೂ ಸಂಭವನೀಯವೇ?

ಮನುಷ್ಯ ತನ್ನ ಜೀವನದಲ್ಲಿ ಎದುರಿಸುವ—ಎದುರಿಸಬೇಕಾಗಿ ಬರುವ ಸುಖದುಃಖಗಳು ಹಲವಾರು. ತಂದೆ, ತಾಯಿ, ಅಣ್ಣ—ತಂಗಿ, ಹೆಂಡತಿ, ನಾದಿನಿ—ಇತ್ಯಾದಿಯಾಗಿ ಆಪ್ತರನ್ನು ಕಳಕೊಂಡಾಗ ಈ ಪ್ರಪಂಚವೇ ನಿಃಸಾರವೆನ್ನಿಸುತ್ತದೆ; ಆಘಾತವನ್ನೆದುರಿಸಲಾರದೆ, ನಿಃಸಹಾಯನಾಗಿ ಆತ್ಮಹತ್ಯೆಗೇ ಮನ ಮುಂದಾಗುತ್ತದೆ. ತಮ್ಮನ್ನು—ತಮ್ಮ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳಬಲ್ಲವರು— ಮಾತ್ರ ಆತ್ಮಹತ್ಯೆಯಿಂದ ಪಾರಾಗುವರು.

ಆದರೆ ನಾಲ್ಕು ದಿನ ಕಳೆಯಲಿ ಆ ದುಃಖದ ಧಾರೆ ಸ್ವಲ್ಪ ಹಗುರೆನಿಸುವುದು. ಒಂದು ವರ್ಷ ಕಳೆದಾಗ, ವಸಂತಾದಿ ಋತುಗಳ ಬದಲಾವಣೆಯಾದಾಗ, ಪ್ರಕೃತಿಯೇ, ಪ್ರಪಂಚವೇ, ಬದಲಾದಾಗ 'ಪರಿಸ್ಥಿತಿಯ ಶಿಶು'ವೆನಿಸಿದ ಮನುಷ್ಯ ಬದಲಾಗದಿರಲಾರ. ಆಗ ಆ ದುಃಖ ಎಲ್ಲೋ ನೆನಪಿನ ಮೂಲೆಯಲ್ಲಿ ಸೇರಿಹೋಗುತ್ತದೆ. ಹತ್ತಿಪ್ಪತ್ತು ವರ್ಷ ಕಳೆದಾಗಲಂತು ಜನಕ್ಕಿಂತ ಹೆಚ್ಚಿನ ದುಃಖ ಅನುಭವಿಸಿಯೋ—ಇಲ್ಲವೇ—ಆ ದುಃಖವನ್ನು ಮರೆಸಬಲ್ಲ ಸುಖವನ್ನು ಅನುಭವಿಸಿಯೋ— ಅಂತೂ ಮನುಷ್ಯ ಹಳೆಯ ನೋವನ್ನು ನುಂಗಿಬಿಟ್ಟಿರುತ್ತಾನೆ ಬೇರೊಬ್ಬರು ಜ್ಞಾಪಿಸಿಕೊಟ್ಟಾಗ ನೆನಪು ಮಾಡಿಕೊಳ್ಳಲು ಹತ್ತಾರು ನಿಮಿಷ ಬೇಕಾಗುವಷ್ಟು ಮರೆತು ಬಿಡಬಹುದು.

ಇಂತಹ ಸ್ಥಿತಿಗೆ ತಲಪುವುದು ದೌರ್ಬಲ್ಯವೆಂದರೂ ಸರಿಯೇ! ಆದರೂ ಅದು ಅವನ ಪಾಲಿಗೊಂದು ವರದಾನವಾಗಿ ಪರಿಣಮಿಸಿದೆ. ಇಲ್ಲದಿದ್ದರೆ, ಭೂಲೋಕ ತನ್ನ ಅಲ್ಪ ದುಃಖಗಳ ಬಗ್ಗೆ ಕೂಡಾ ಶೋಕಿಸುತ್ತಾ ಮಾನವಲೋಕವೇ 'ರೋದನಾಲಯ'ವಾಗಿ ಪರಿಣಮಿಸಿ, ಜನರೆಲ್ಲಾ ಅಳುಬುರುಕರಾಗಿ ಬಿಡುತ್ತಿದ್ದರು.

ಅಷ್ಟು ಮಾತ್ರವಲ್ಲದೆ ಕಂಡದ್ದು, ಕೇಳಿದ್ದು, ಊಹಿಸಿದ್ದು, ಯೋಚಿಸಿದ್ದು,— ಎಲ್ಲವನ್ನೂ ಸರ್ವಕಾಲವೂ ಜ್ಞಾಪಕದಲ್ಲಿ ಇಟ್ಟುಕೊಂಡರೆ, ನಮ್ಮ ಮಿದುಳೊಂದು ಭಾರೀ ಉಗ್ರಾಣದಂತಾಗಿ, ಅದೊಮ್ಮೆಗೆ ಬಂದೀತು! ಅಲ್ಲಿಂದ ಬೇಕಾದುದು ಬೇಡವಾದುದೂ ಎಲ್ಲವೂ ಸೇರಿಕೊಂಡಲ್ಲಿಂದ ನಮಗೆ ಬೇಕಾದುದನ್ನು ಹೆಕ್ಕಿಕೊಳ್ಳುವುದೂ ಕಷ್ಟವಾದೀತು ಗಾಳಿ ಹೆಚ್ಚಾಗಿ ತುಂಬಿದ ಕಿಟ್ಟೆಂಡಿನಂತಾದೀತು! ಅಂದರೆ ಹುಚ್ಚು ಹಿಡಿದೀತು ಪ್ರಪಂಚವೊಂದು ಹುಚ್ಚರ ಆಸ್ಪತ್ರೆಯಾದೀತು'

ಆದಕ್ಕಾಗಿಯೇ ಮನಃಶಾಸ್ತ್ರಜ್ಞರು 'ದುಃಖ' ನೋವುಗಳನ್ನು ಶಮನಗೊಳಿಸಬಲ್ಲ ಸಿದ್ಧೌಷಧ ಮರವೇ ಎಂದು ಕರೆದಿರುವುದು!

—

ಕನ್ನಡಿಗರು ಹತವೀರರಾಗಿದ್ದಾರೆಯೆ?

(೧ನೇ ಪುಟದಿಂದ)

ರಾಜ್ಯ ಸಂಪತ್ತು ಹೆಚ್ಚುವುದೆಂದೂ ಮೊದಲಾಗಿ ತಿಳಿದುಕೊಳ್ಳಬೇಕು.

ರಾಷ್ಟ್ರೀಯ ಆರ್ಥಿಕ ಸಂಶೋಧನಾ ಮಂಡಳಿಯು ಇತ್ತೀಚೆಗೆ ಒಂದು ವರದಿಯನ್ನು ಅರ್ಪಿಸಿ ಮಂಗಳೂರು ಬಂದರವನ್ನು ಒಂದು ಆಳವಾದ ಬಂದರವಾಗಿ ಬೆಳೆಸಬೇಕೆಂದೂ ಹಾಸನ-ಮಂಗಳೂರು ರೈಲುದಾರಿಯನ್ನು ತಡಮಾಡದೆ ರಚಿಸಬೇಕೆಂದೂ ಮಲ್ಪೆಯನ್ನು ಹಡಗುಕಟ್ಟುವ ಅಥವಾ ಮೀನುಗಾರಿಕೆಯ ಬಂದರವಾಗಿಯೋ ವಿಶಿಷ್ಟರೀತಿಯಲ್ಲಿ ಬೆಳೆಸಬೇಕೆಂದೂ ಹೇಳಿದೆಯೆಂದು ತಿಳಿದು ಬರುತ್ತದೆ. ಈ ವರದಿಯ ಹೇಳಿಕೆಗಳು ಯಾವ ಘಟ್ಟಕ್ಕೆ ಬಂದು ನಿಲ್ಲುವುವೆಂದು ನಾವು ಈಗಲೇ ಹೇಳುವಂತಿಲ್ಲ. ಕೇವಲ ಕೇಂದ್ರ ಕೊಡುತ್ತದೆ, ಕೊಡುವಾಗ ಕೊಂಡು ಕೊಳ್ಳುವ' ಎಂಬ ನೀತಿಯನ್ನು ನಮ್ಮ ಸರಕಾರ ಹಿಡಿದುದರಿಂದಲೇ ನಾವು ಬಯಸಿದ್ದೆಲ್ಲಾ ಬೇರೆ ರಾಜ್ಯಗಳ ಪಾಲಿಗೆ ಹೋಯಿತು. ಕೆಚ್ಚೆದೆಯ ಕನ್ನಡಿಗರು ಕಸುವಿಲ್ಲದವರೆಂಬುದನ್ನೂ ಕನ್ನಡಿಗರ ಮೈಸೂರು ಸರಕಾರ ನಿರ್ಬಲವೆಂಬುದನ್ನೂ ಇದುವರೆಗೆ ತೋರಿಸಿಕೊಟ್ಟಂತಾಯಿತು.

ಕನ್ನಡಿಗರೂ ಅವರ ಸರಕಾರವೂ ಇದುವರೆಗೆ ಕೈನೀಡಿ ನಿರೀಕ್ಷಿಸಿದುದು ಸಾಕು. ನಮ್ಮ ವಿಧಾನ ಸಭೆ—ಮಂಡಲಗಳ ಸದಸ್ಯರೂ ಲೋಕ ಸಭೆ—ರಾಜ್ಯ ಸಭಾಸದರೂ ಕನ್ನಡದ ಮುಖ್ಯ ಅವಶ್ಯಕತೆಯಾದ ಬಂದರಗಳ ಅಭಿವೃದ್ಧಿ ಮತ್ತು ಒಳನಾಡು ಹಾಗೂ ಬಂದರ ನಗರಗಳ ಸಂಬಂಧವಾಗಿ ಸಾರಿಗೆ ವ್ಯವಸ್ಥೆಯನ್ನು ಪಡೆದುಕೊಳ್ಳಲು ಏಕ ಕಂಠದಿಂದ ಕೂಗಬೇಕು. 'ಪರಮೇಶ್ವರೋವಾ ದಿಲ್ಲೀಶ್ವರೋವಾ' ನೀತಿಯನ್ನು ಅವಶ್ಯ ಬಿಟ್ಟುಬಿಡಬೇಕು. ಕನ್ನಡನಾಡಿನ ಆಯಾತ ನಿರ್ಯಾತಗಳನ್ನು ನಿರ್ವಹಿಸಲು ಸಮರ್ಥವಾದ ಬಂದರಗಳನ್ನು ಕನ್ನಡನಾಡಿನಲ್ಲಿಯೇ ಕಟ್ಟುವಂತೆ ರಚನಾತ್ಮಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಕನ್ನಡನಾಡಿನ ಸರಕಾರ ತನ್ನೆಲ್ಲಾ ಶಕ್ತಿಯನ್ನು ಕೇಂದ್ರೀಕರಿಸಿ ಈ ಬಗ್ಗೆ ಹೋರಾಡಬೇಕು. ದ್ವಿತೀಯ ಯೋಜನೆಯ ಅಂತಿಮ ಘಟ್ಟದಲ್ಲಿ ಕನ್ನಡಿಗರ ಸುಸಂಘಟಿತ ಪ್ರಯತ್ನದ ಫಲವಾಗಿ ಶರಾವತಿಕೊಳ್ಳದ ಯೋಜನೆಯು ಅಡಕವಾಗಿರುವುದನ್ನು ಸಂಸ್ಮರಿಸಬೇಕು. ಅದೇ ರೀತಿಯ ಅದಕ್ಕಿಂತಲೂ ಹೆಚ್ಚಿನ ಪ್ರಯತ್ನ ಬಂದರ- ರೈಲು ದಾರಿಗಳ ಬಗ್ಗೆ ನಡೆಯಬೇಕು; ತ್ವರಿತದಲ್ಲಿಯೇ ಜಯಶಾಲಿಯಾಗಬೇಕು. ಕನ್ನಡಿಗರಲ್ಲಿಯೂ ಕೆಚ್ಚು ಇದೆಯೆಂಬುದನ್ನು ತೋರಿಸಿಕೊಡಬೇಕು.

ಆದರೆ, ಈ ರೀತಿ ನಡೆಯಲು ಕನ್ನಡಿಗರು ಸಿದ್ಧರಿರುವರೆ? ಕನ್ನಡಿಗರ, ಕನ್ನಡಿಗರ ಸರಕಾರದ ಬಲವೆಲ್ಲ ಚೆಲ್ಲಾಪಿಲ್ಲಿಯಾಗಿ ಹರಡಿ ದುರ್ಬಲವಾಗುವುದನ್ನು, ಅವಶ್ಯಕತೆಯಿಲ್ಲದಲ್ಲಿ ಉಪಯೋಗವಾಗುವುದನ್ನು ನಾವು ವೀಕ್ಷಿಸುವಾಗ, ಕನ್ನಡಿಗರಲ್ಲಿ ಅನೇಕತೆ, ಅತಂತ್ರತೆ, ಅಕರ್ಮಣ್ಯತೆಗಳು ತಾಂಡವವಾಡಿ ಅಧಿಕಾರಕ್ಕಾಗಿ, ಲಾಭಕ್ಕಾಗಿ ಬೇರೆ ಬೇರೆಯವರು ಬೇರೆ ಬೇರೆಯಾಗಿ ತಮ್ಮ ತಮ್ಮೊಳಗೆ ಕತ್ತಿ ಮಸೆಯುತ್ತಿರುವಾಗ ಕನ್ನಡಿಗರನ್ನು ಕನ್ನಡಾಂಬೆಯೇ ಕೈಬಿಟ್ಟಿದ್ದಾಳೆನ್ನಬೇಕು. ಆದರೆ, ಇದೇ ದುಸ್ಥಿತಿ ಮುಂದಕ್ಕೂ ಮುಂದುವರಿಯಗೊಟ್ಟರೆ, 'ಸ್ವರ್ಣದನಾಡು ಕನ್ನಡನಾಡು" ಉಂಡುಣಲಿಕ್ಕಿರದ ಅರಸನೋಲಗವಾದೀತು. ಆದುದರಿಂದ ಕನ್ನಡಿಗರೆಲ್ಲರೂ ಒಂದಾಗಿ ಮೊದಲು ಕೂಗಬೇಕು—"ಕನ್ನಡಿಗರು ಒಂದೇ; ಕನ್ನಡ ಒಂದೇ"—ಆಗ ನಮ್ಮ ಬೇಡಿಕೆಗಳನ್ನು ತಿರಸ್ಕರಿಸುವ ಧೈರ್ಯವೂ ದಿಲ್ಲೀಶ್ವರರಿಗೆ ಬರಲಾರದು.

ಪಿಗ್ಮಿ—೧

ಪ್ರಸಿದ್ಧ ಮನಶ್ಶಾಸ್ತ್ರಜ್ಞ ಮ್ಯಾಕ್‌ಡೂಗಲ್ ಹೇಳಿರುವಂತೆ ಮಾನವನ ಸಹಜ ಗುಣಗಳಲ್ಲಿ ಸಂಗ್ರಹ ಪ್ರವೃತ್ತಿ—ಕೂಡಿಡುವ ಬುದ್ಧಿ, ಉಳಿತಾಯ ಭಾವನೆಯೂ ಒಂದು. ಮಾನವನ ಜೀವನದ ಹೋರಾಟಕ್ಕೆ, ವಿಜಯಕ್ಕೆ ಬೇಕಾದ ಎಲ್ಲಾ ಶಕ್ತಿ-ಅವಶ್ಯಕತೆಗಳನ್ನು ಪರಮಾತ್ಮನು ಬಾಲ್ಯದಲ್ಲಿಯೇ ಬೀಜರೂಪದಲ್ಲಿ ಒದಗಿಸುವನು. ಅಂತೆಯೇ ಸಂಗ್ರಹ ಪ್ರವೃತ್ತಿಯೂ ಕೂಡಾ. ಇದನ್ನು ಚಿಕ್ಕ ಮಕ್ಕಳಲ್ಲಿ ನಾವು ಧಾರಾಳವಾಗಿ ಕಾಣಬಹುದು. ಪುಟ್ಟ ಬಾಲಕರು ತಮ್ಮ ಕುತೂಹಲವನ್ನು ಕೆರಳಿಸುವ ವಸ್ತುಗಳನ್ನು ಆಸ್ಥೆಯಿಂದ ಸಂಗ್ರಹಿಸುತ್ತಿರುವುದನ್ನು ನೋಡದವರಾರು?

ಈ ಸಂಗ್ರಹಬುದ್ಧಿಯು ಅಭಿವೃದ್ಧಿಯೂ ಆಗಬಹುದು; ಕುಂಠಿತಗೊಳ್ಳಲೂಬಹುದು. ಅದು ಸಂದರ್ಭ ಮತ್ತು ಅವಕಾಶಗಳನ್ನಾಧರಿಸಿದೆ. ಯಾವುದೇ ಒಂದು ಕ್ರಿಯೆ ಮತ್ತೆ ಮತ್ತೆ ಆವರ್ತನಗೊಂಡಲ್ಲಿ ಅದು ಬಲಿತು ಅಭ್ಯಾಸವಾಗಿ ಮಾರ್ಪಡುವುದು — ಕುಶಲ ಕಲಾವಿದನ ಕೈಬೆರಳುಗಳು ಅವನಿಗೆ ತಿಳಿಯದೆಯೇ ಮುಂದು ಮುಂದಕ್ಕೆ ಚಲಿಸುವಂತೆ,

ಕೂಡಿಡುವ ಗುಣವೂ ಹಾಗೆಯೇ—
ಉಳಿತಾಯದ ಭಾವನೆಯು ಬಲಿತು
ಸ್ಥಿರ ಅಭ್ಯಾಸವಾಗಲು; ಸುಲಭ ಸಾಧ್ಯವಾಗಲು:

—ಪಿಗ್ಮಿ

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

Edited, Printed & Published by K. H. Shetty, at the Navayuga Press, Udipi, S. India,

40th year of publication. 23-2-1961 ೪೦ನೇ ವರ್ಷ

ಸಂಪುಟ ೪೦ Vol. 40

ನವಯುಗ

ಸಂಚಿಕೆ ೨೪ No. 24

ಬೆಲೆ 0=13

ಪ್ರಚಲಿತ ಪ್ರಸಂಗ

ನಾಗಾರಾಜ್ಯದಲ್ಲಿ ನವಮನ್ವಂತರ

ಭಾರತ ಸರಕಾರವು ನಾಗಾನಾಯಕರೊಡನೆ ಮಾಡಿಕೊಂಡ ಒಡಂಬಡಿಕೆಯಂತೆ ನಾಗಾರಾಜ್ಯದಲ್ಲಿ ಮಾಧ್ಯಮಿಕ ಮಂಡಳವು ಉದ್ಘಾಟನೆಯಾಯಿತು. 'ಅಹಿಂಸಾಪರರಾಗಿ ಕರ್ತವ್ಯಪಾಲಕರಾಗಿ ಶಾಂತಿ ಸ್ಥಾಪಿಸುವಲ್ಲಿ ನಾಗಾಜನರು ಹಿಂದುಳಿಯಬಾರದು.

ನಾಗಾ ಪ್ರದೇಶದ ಜನಕಾಮನೆಯನ್ನು ಅರಿತುಕೊಂಡು ಅದನ್ನು ಪೂರೈಸುವ ಆಶ್ವಾಸನವಿತ್ತ ಭಾರತ ಸರಕಾರವು ಇದೀಗ ಅವರ ಬೇಡಿಕೆಯನ್ನು ಮನ್ನಿಸುವ ಕಾರ್ಯಕ್ರಮಗಳಲ್ಲಿ ತೊಡಗಲು ಆರಂಭಮಾಡಿದೆ. ಪ್ರತ್ಯೇಕ ಸ್ವತಂತ್ರ ನಾಗಾರಾಜ್ಯದ ಬೇಡಿಕೆಯನ್ನು ಮುಂದಿಟ್ಟು ಹಿಂಸಾಚರಣೆಯಲ್ಲಿ ಫಿಜೊವಿನ ನೇತೃತ್ವದಲ್ಲಿರುವ ಒಂದು ನಾಗಾಜನರ ಪಂಗಡಕ್ಕೆ ಬೆಂಬಲವು ಇಳಿಮುಖವಾಗಿ, ಭಾರತ ಸರಕಾರದ ಅಧೀನದ ಒಂದು ಪ್ರತ್ಯೇಕ ರಾಜ್ಯಸ್ಥಾಪನೆಗೆ ಅಲ್ಲಿ ಬೆಂಬಲ ಹೆಚ್ಚುತ್ತಿದ್ದು, ನಾಗಾ ಪ್ರದೇಶದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಉದ್ದೇಶದಿಂದ ಅವರ ೧೬ ಬೇಡಿಕೆಗಳನ್ನು ಭಾರತ ಸರಕಾರವು ಮನ್ನಿಸಿತ್ತು.

ಇದೇ ತಿಂಗಳ ೧೮ರಂದು 'ನಾಗಾ ನೇತಾರರು ಮತ್ತು ಭಾರತ ಸರಕಾರಗಳ ನಡುವಾದ ಒಡಂಬಡಿಕೆಯನ್ವಯ ಮಹತ್ವದ ಹೆಜ್ಜೆಯಾಗಿ ನಾಗಾ ಪ್ರದೇಶದ ವಿವಿಧ ಜಾತಿಗಳ ಪ್ರತಿನಿಧಿಗಳಿಂದ ಕೂಡಿದ ಮಧ್ಯಾವಧಿ ಮಂಡಳವನ್ನು ಅಸ್ಸಾಮದ ರಾಜ್ಯಪಾಲ ಶ್ರೀ ಶ್ರೀನಾಗೇಶರು ಉದ್ಘಾಟಿಸಿದರು.

ಕೊಹಿಮಾದಲ್ಲಿ ಸಮಾವೇಶಗೊಂಡಿದ್ದ ಈ ಸಂಬಂಧದ ಸಭೆಯೊಂದರಲ್ಲಿ ಎಂಟು ಸಹಸ್ರ ನಾಗಾ ಜನರು ಭಾಗ ವಹಿಸಿದ್ದರು. ನಾಗಾ ಜನತೆಯು ರಾಜ್ಯಪಾಲರಿಗೆ ಉತ್ಸಾಹದಿಂದ ನೀಡಿದ ಸ್ವಾಗತ ಹಾಗೂ ನಡೆಸಿದ ಮೆರವಣಿಗೆಗಳಿಂದ ತಮ್ಮ ಬೇಡಿಕೆಯು ಸಿದ್ಧಿಸಿದುದಕ್ಕೆ ಅವರು ತೃಪ್ತಿಯನ್ನು ಪ್ರದರ್ಶಿಸುತ್ತಿತ್ತು. ಈ ಪ್ರದೇಶದ ೧೬ ಜಾತಿಗಳ ಪ್ರತೀಕವಾಗಿ ಮೆರವಣಿಗೆಯ ದಾರಿಯಲ್ಲಿ ೧೬ ಮಂಟಪಗಳು ರಚಿತವಾಗಿದ್ದುವು.

'ನಾವು ಜೀವಂತವಿರಲು ಬಯಸುವುದಾದರೆ, ನಮ್ಮ ಹಿಂಸಾ ಪ್ರವೃತ್ತಿಯನ್ನು ದೂರವಿಡಬೇಕು. ವಿಕ್ಷುಬ್ಧವಾಗಿ ಹೋಗಿರುವ ನಾಗಾ ಪ್ರದೇಶದಲ್ಲಿ ಶಾಂತಿ ಮತ್ತು ಸಾಮಾನ್ಯ ಸ್ಥಿತಿಯನ್ನು ಸ್ಥಾಪಿಸುವುದೇ ಅತಿ ದೊಡ್ಡ ಸಮಸ್ಯೆಯಾಗಿದೆ. ಇದರ ಜತೆಗೆ ಭಾರತ ಸರಕಾರ ಹಾಗೂ ನಮ್ಮೊಳಗಾದ ೧೬ ಒಡಂಬಡಿಕೆಗಳನ್ನು ಕಾರ್ಯರೂಪಕ್ಕೆ ತರಬೇಕಾಗಿದೆ" ಎಂದು ನಾಗಾ ಸಮ್ಮೇಳನದ ಅಧ್ಯಕ್ಷ ಡಾ॥ ಇಕಂಗಾಲಿಬೊರವರು ಹೇಳಿ, ಫಿಜೋನ ಕೈಕೆಳಗಿನ ನಾಗಾ ನೇಶನಲ್ ಕೌನ್ಸಿಲಿನ ಮೂಲಕ ಹತ್ಯೆ, ರಕ್ತಪಾತ ಮತ್ತು ನಷ್ಟಗಳುಂಟಾದುದರಿಂದ ಅವರನ್ನು ಮೇಲೆ ದೋಷಾರೋಪಣೆ ಮಾಡಿದರು. ಕ್ರೂರಕೃತಿಗಳನ್ನು ತ್ಯಜಿಸಿ ಸೌಹಾರ್ದದಿಂದ ಬಾಳುವುದರಿಂದಲೇ ನಾಗಾ ಜನರ ಏಳಿಗೆಯೆಂಬುದನ್ನು ಅವರು ಒತ್ತಿ ಹೇಳಿದರು.

ಉದ್ಘಾಟಕರಾದ ರಾಜ್ಯಪಾಲ ಶ್ರೀ ನಾಗೇಶರು ಪ್ರತಿನಿಧಿಗಳ ಪ್ರತಿಜ್ಞಾವಿಧಿಯನ್ನು ಮಾಡಿಸುತ್ತ, ಕಳೆದ ಕೆಲವು ವರ್ಷಗಳಲ್ಲಿ ನಾಗ ಗುಡ್ಡಗಾಡಿನ ಜನತೆಗೆ ಮತ್ತು ಅಧಿಕಾರಿಗಳಿಗೆ ಉಪದ್ರವ, ಚಿಂತೆ ಮತ್ತು ಸಂಕಟಗಳು ಎದುರು ಬರುತ್ತಿದ್ದುವು. ನಾಗಾ ಜನರು ಶಾಂತಿಯನ್ನು ಬಯಸುತ್ತಿರುವುದು ಸ್ವಾಭಾವಿಕವೇ. ಅವರು ಶಾಂತಿಯನ್ನುಳಿಸಿ, ತಮ್ಮ ಶಕ್ತಿಯನ್ನು ವ್ಯರ್ಥಹರಿಯಗೊಡದೆ, ರಚನಾತ್ಮಕ ಕಾರ್ಯಗಳಲ್ಲಿ ತೊಡಗಿಸಲು ಬದ್ಧಕಂಕಣರಾಗಲಿ;ಎಂದು ಹಾರೈಸಿದರು.

ಸರಕಾರ ಮತ್ತು ಜನತೆಯು ಕಳೆದ ಕಾಲವನ್ನು ಮರೆತು ಬಿಟ್ಟು, ಹೊಸ ಮನ್ವಂತರೋದಯವಾಗುವಂತಾಗಲೆಂಬುದೇ ಈ ಹೊಸ ವ್ಯವಸ್ಥೆಯ ಉದ್ದೇಶ. ಇದು ಕೈಗೂಡಿತೆಂದರೆ, ನಾಗಾ ಪರ್ವತಶ್ರೇಣಿಗಳ ಹರಡಿದ್ದ ಉಪದ್ರವ ಅಂಧಕಾರದ ನಡುವೆ ದಿವ್ಯ ಜ್ಯೋತಿಯೊಂದು ಉದಿಸಿದಂತಾಗುವುದು. ನಾಗಾ ಪ್ರದೇಶದ ಹಿತಕ್ಕಾಗಿ ಉದ್ವೇಗ ಮತ್ತು ಕೋಪದ ಭಾವನೆಗಳನ್ನು ದೂರೀಕರಿಸಿ, ದುಡಿಯಬೇಕು ಮತ್ತು ಭಾರತದ ನಾಗರಿಕರಾಗಿ ಸೇರಿಕೊಂಡು ಕಾರ್ಯತತ್ಪರರಾಗುವ ಸಂಕಲ್ಪವನ್ನವರು ಮಾಡಬೇಕು. ಭಾರತದ ಸ್ವಾತಂತ್ರ್ಯದ ಫಲವನ್ನು ಇತರ ಜನರು ಅನುಭವಿಸುವಂತೆಯೇ ನಾಗಾ ಜನರೂ ಅನುಭೋಗಿಸುವಂತಾಗಬೇಕು.

ನಾಗಾರಾಜ್ಯದ ಈ ಮಧ್ಯಾವಧಿ ಮಂಡಳದ ನೇಮಕವು ಪ್ರಥಮ ಹೆಜ್ಜೆಯಾಗಿದೆ. ಮುಂದಕ್ಕೆ ನಾಗಾಪ್ರದೇಶವನ್ನು ಪ್ರತ್ಯೇಕವಾಗಿ ರಚಿಸಲಾಗುವುದು. ಆಗ ಅದಕ್ಕೊಂದು ವಿಧಾನಸಭೆ ಹಾಗೂ ಸಚಿವ ಸಂಪುಟವು ನಿರ್ಮಾಣಗೊಳ್ಳುವುವು. ಈ ನಡುವಣ ಸಾಂಕ್ರಾಮಿಕ ಸಮಯದಲ್ಲಿ ಈ ಮಾಧ್ಯಮಿಕ ಸಮಿತಿ ಮತ್ತು ಪ್ರಾಂತ ಪರಿಷತ್ತು ಒಂದುಗೂಡಿ ರಾಜ್ಯಾಭಿವೃದ್ಧಿಯತ್ತ ರಚನಾತ್ಮಕ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಅತ್ಯವಶ್ಯ. ಅಸ್ತವ್ಯಸ್ತವಾಗಿದ್ದ ರಾಜ್ಯದಲ್ಲಿ ಹಿಂಸಾಚಾರವನ್ನು ತಡೆದು ಶಾಶ್ವತ ಶಾಂತಿಯನ್ನು ಸ್ಥಾಪಿಸುವುದೇ ಇಂದು ಅವರು ಎದುರಿಸಬೇಕಾದ ಪ್ರಧಾನ ಕರ್ತವ್ಯವೆನಿಸಿದೆ.

"ಭಾರತದ ಯಾವ ಮೂಲೆಯ ಜನರೇ ಇರಲಿ ತಮ್ಮ ಮೂಲ ಸಂಸ್ಕೃತಿಗೆ ಅನುಸಾರವಾಗಿ ಯಾವುದೇ ರಾಜ್ಯವನ್ನ

(೧೨ನೇ ಪುಟ ನೋಡಿರಿ)

R. O. C. No B 3/681/61

UDIPI MUNICIPALITY.

NOTICE

Is hereby given that the right of collecting fees in the Municipal Markets, Cart Stands, Jutka Stand, Mutton stalls and slaughter house for the year 1961—62 will be sold by public auction by the Municipal Commissioner, Udipi on Tuesday the 28th February 1961 at 3 P. M. in the Municipal Office, Udipi.

The sale is subject to the rules in force. The three existing mutton stalls will be sold separately.

Further particulars or information may be had from the Municipal Office, Udipi, on all working days during office hours.

I Joshua,
Commissioner.

Municipal Office, Udipi.
Dated 17—2—1961

R. O. C No. B 3/681/61

ಉಡುಪಿ ಮುನ್ಸಿಪಾಲಿಟಿ

ನೋಟೀಸು

ಈ ಮೂಲಕ ತಿಳಿಯಪಡಿಸುವುದೇನೆಂದರೆ,— 1961—62ನೇ ವರ್ಷದಲ್ಲಿ ಉಡುಪಿ ಮುನ್ಸಿಪಾಲಿಟಿಯ ಆಡಳಿತಕ್ಕೆ ಒಳಪಟ್ಟ ಮಾರ್ಕೇಟುಗಳು, ಗಾಡಿ ಚಾಕ, ಜಟ್ಕಾ ಚಾಕ, ಮಟನ್ ಸ್ಟಾಲ್ ಮತ್ತು ವಧಾಗೃಹದಲ್ಲಿ ಕರ ವಸೂಲು ಮಾಡುವ ಹಕ್ಕನ್ನು ಮುನ್ಸಿಪಲ್ ಕಮಿಶನರರು ತಾರೀಕು 28—2—1961ನೇ ಮಂಗಳವಾರ ಅಪರಾಹ್ನ ಗಂಟೆ 3.00ಕ್ಕೆ ಮುನ್ಸಿಪಲ್ ಆಫೀಸಿನಲ್ಲಿ ಆ ಕುರಿತು ಜ್ಯಾರಿಯಲ್ಲಿರತಕ್ಕ ನಿಯಮಗಳಿಗನುಸಾರವಾಗಿ ಬಹಿರಂಗವಾಗಿ ಏಲಂ ಮೂಲಕ ಮಾರಾಟ ಮಾಡುವರು.

ಮೂರು ಮಟನ್ ಸ್ಟಾಲುಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಏಲಂ ಮಾಡಲಾಗುವುದು.

ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಆಫೀಸು ಸಮಯ, ಮುನ್ಸಿಪಲ್ ಆಫೀಸಿಗೆ ಬಂದು ತಿಳಿಕೊಳ್ಳಬಹುದು

ಐ ಜೋಶುವ,
ಕಮಿಶನರ್.

ಮುನ್ಸಿಪಲ್ ಆಫೀಸ್, ಉಡುಪಿ
ತಾ. 17 2—1961

ಮಂಗಳೂರಲ್ಲಿ ಈಗಾಗಲೇ ತೆರೆಯಲ್ಪಟ್ಟು ಪ್ರಗತಿಯಿಂದ ಮುಂದೆ ಸಾಗುತ್ತಿರುವ ಇನ್ನೊಂದು ಪ್ರಸಿದ್ಧ ಜವುಳಿ ಮಳಿಗೆ—

ಸಾರೀ ಎಂಪೋರಿಯಮ್

ಕೆಥೊಲಿಕ್ ಕ್ಲಬ್ಬಿನ ಎದುರು, ಹಂಪನಕಟ್ಟಾ, ಮಂಗಳೂರು-1

ನಿಮ್ಮ ಉತ್ತಮ ಆಯ್ಕೆಗೆ ಯೋಗ್ಯವೆಂದೆನಿಸಿದ ರೇಶ್ಮೆ ಸೀರೆಗಳೂ, ಹತ್ತಿ ನೂಲಿನ ಸೀರೆಗಳೂ ಸರ್ವೋತ್ಕೃಷ್ಟವಾಗಿವೆ, ಯಾವತ್ತೂ ತರದ ಶರ್ಟಿಂಗ್, ಕೋಟಿಂಗ್, ಚೀಟ್ಸ್, ಸಿಲ್ಕ್, ನೈಲಾನ್ ಇತ್ಯಾದಿ ಬಟ್ಟೆಬರೆಗಳಿಗೂ ಸಂದರ್ಶಿಸಿರಿ —

SAREE EMPORIUM

Opposit Catholic Club
HAMPANKATTA, **MANGALORE—1.**

NAVAYUGA WEEKLY, UDIPI. 16-2-1961 LICENSE NO. 31
REGD. NO.BG. 176 Licensed to Post without Prepayment

ಸ್ವ-ಕಿರಣ

ಭವರೋಗ ರಾಮಬಾಣ—ಮರವೆ

> ಮರವೆಯಿಂದಲೆ ಇಹವು, ಮರವೆಯಿಂದಲೆ ಪರವು, ಮರವೆಯೊಂದಿಲ್ಲದಿರೆ ಮರಳಿನಾ ಈ ಜಗದಿ ಹುರುಳಿಲ್ಲವೆಂದ... ..

ಶ್ರೀ ನಾಗರಾಜ, 'ಹಿಂದೀರತ್ನ', ಉಜಿರೆ

ಇಪ್ಪತ್ತೆರಡರ ನವಹರೆಯದ ಯುವಕ, ಇಪ್ಪತ್ತೊಂದರ ಯುವತಿ— ನವವಿವಾಹಿತರು ಒಬ್ಬರನ್ನೊಬ್ಬರು ಅತಿಯಾಗಿ ಪ್ರೀತಿಸುತ್ತಾರೆ ಒಬ್ಬರ ಮೇಲೊಬ್ಬರಿಗೆ ಎಲ್ಲಿಲ್ಲದ ಅಕ್ಕರೆ. ಗಂಡನಿಗೆ ನೂರೈವತ್ತು ರೂಪಾಯಿಯ ನೌಕರಿಯಿದೆ ಸಂಜೆ ಆಫೀಸು ಬಿಟ್ಟೊಡನೆ ಗಂಡ ಮನೆಗೆ ಬರುತ್ತಾನೆ. ಇಬ್ಬರೂ ವಾಕಿಂಗಿಗೆ ಇಲ್ಲವೇ ಸಿನೇಮಾಕ್ಕೆ ಜೊತೆಯಾಗಿ ಹೋಗುವರು ನಗುವರು ಹುಚ್ಚುಚ್ಚು ಮಾತಾಡುವರು. ಅಂತೂ ಅವರದೊಂದು ಆದರ್ಶ ದಾಂಪತ್ಯ. ಅಪೂರ್ವ ಜೋಡಿ!

ಒಂದು ದಿನ ಎಂದಿನಂತೆ ಆಫೀಸಿನಿಂದ ಬರಬೇಕಾದ ಸಮಯಕ್ಕೆ ಪತಿ ಬರಲಿಲ್ಲ ಅರ್ಧಗಂಟೆ ತಡವಾಗಿದೆ ಒಂದು ಕಾರು ಬಂದು ಮನೆಯಂಗಳದಲ್ಲಿ ನಿಂತಿತು. ನಾಲ್ಕು ಜನರು ಆಕೆಯ ಪತಿಯ ಶವವನ್ನು ಕಾರಿನಿಂದ ಇಳಿಸಿದರು. ಬೀದಿಯಲ್ಲಿ ಬರುವಾಗ, ತನ್ನಾಕೆಗೆ ಪ್ರಿಯವಾದ ಹೂವನ್ನು ಕೊಳ್ಳಲೆಂದು ಹೋದ ಪತಿ, ಲಾರಿಯೊಂದರ ಚಕ್ರದಡಿಗೆ ಬಿದ್ದು ಗತಪ್ರಾಣನಾಗಿದ್ದ ಸಂಬಂಧಿಕರಿಗೆಲ್ಲ ಕರೆಹೋಯಿತು. ಶವದಹನ ನಡೆದಾಗ ಆ ತರುಣ ಪತ್ನಿಯು ಗೋಳೋಗೋಳೆ' ತನ್ನನ್ನು ಬಿಡಿ ಚಿತೆಯನ್ನೇರುತ್ತೇನೆ—ಎಂದು ಬೊಬ್ಬಿರಿಯುತ್ತಾಳೆ. ಎಲ್ಲರೂ ಸೇರಿ ತಡೆದಿಡುತ್ತಾರೆ.

ಎರಡು ತಿಂಗಳು ಕಳೆಯಿತು. ಆ ವಿಧವೆಯ ಮನೆಗೆ ಹೋಗಿ ನೋಡಿದರೆ, ಹಿಂದಿನ ಆ ಕೆದರಿದ ಕೂದಲು, ಊದಿದ ಕಣ್ಣು—ಒಂದೂ ಕಾಣಿಸದು! ಶಾಂತ ಗಂಭೀರವಾಗಿದೆ— ಮುಖ. ಹತ್ತಿರದಲ್ಲೇ ನಾಲ್ಕಾರು ಪತ್ರಿಕೆಗಳು— ಒಂದನ್ನಾಕೆ ಓದುತ್ತಿರುವಳು ಬಹುಶಃ ಯಾವುದೋ ವಾರದ ಕತೆಯಿರಬೇಕು.

ಇನ್ನೂ ಒಂದೆರಡು ತಿಂಗಳು ಕಳೆದ ಬಳಿಕ ನೀವಾಕೆಯನ್ನು ಸಿನಿಮಾ ಮಂದಿರದ ಬಳಿ ಕಂಡರೆ— ಆಕೆ, ಯಾವುದೋ ಒಂದು ಪ್ರಣಯ ಕತೆಯ ಸಿನಿಮಾ ನೋಡಲು—ಬಂದುದನ್ನು ಗೊತ್ತು ಹಚ್ಚಬಹುದು! ಮತ್ತಷ್ಟು ಗಮನವಿರಿಸಿದಲ್ಲಿ ಅವಳ ಜೊತೆಗೆ ಇನ್ನೋರ್ವ ಯುವಕನನ್ನೂ ಕಾಣಬಹುದು! ಬಹುಶಃ ಅವಳ ನೆರೆಮನೆಯವನಿರಬಹುದು. ಸಿನಿಮಾ ಬಿಟ್ಟೊಡನೆ ಇಬ್ಬರೂ ಒಂದೇ ಜಟಕಾ ಬಂಡಿಯನ್ನೇರುವುದನ್ನು ಕಂಡು ಮತ್ತಷ್ಟು ಚಕಿತರಾಗಬಹುದು!

ಇದಾದ ನಾಲ್ಕಾರು ತಿಂಗಳಲ್ಲೇ— ಬ್ರಹ್ಮ ಸಮಾಜದಲ್ಲೋ ಅಥವಾ ಬೇರಿನ್ನೆಲ್ಲೋ ಅವರೀರ್ವರ ವಿವಾಹ ನಡೆಯಿತೆಂಬ ವರದಿಯನ್ನು ಸ್ಥಳೀಯ ಪತ್ರಿಕೆಗಳಲ್ಲಿ ಕಾಣಬಹುದು.

—ಇದೀಗ ನಮ್ಮ ಸಮಾಜದಲ್ಲಿ—ಇಂದಿನ ದಿನಗಳಲ್ಲಿ ಕಾಣಬಹುದಾದ ಒಂದು ಘಟನೆ ಆರಂಭದಿಂದ ಕೊನೆಯ ತನಕ ಹಲವಾರು ಘಟ್ಟಗಳಲ್ಲಿ ಆ ಯುವತಿಯ ಮನಸ್ಸಿನ ಮೇಲೆ— ಮರೆವು ತನ್ನ ಕೈವಾಡವನ್ನು ಹೇಗೆ ತೋರಿಸಿತೆಂಬುದನ್ನು ಕಾಣುತ್ತೇವೆ. ಪತಿಯ ಚಿತೆಯನ್ನೇರುತ್ತೇನೆ—ಎಂದ ಆ ಯುವತಿಯನ್ನು ತಡೆಯದಿದ್ದಲ್ಲಿ—ಮರೆವಿನ ಸಂಜೀವಿನಿ ತನ್ನ ಕಾರ್ಯಕೈಗೊಳ್ಳದಿದ್ದಲ್ಲಿ ಆಕೆಯ ಪುನರ್ವಿವಾಹವೆಂದಾದರೂ ಸಂಭವನೀಯವೇ?

ಮನುಷ್ಯ ತನ್ನ ಜೀವನದಲ್ಲಿ ಎದುರಿಸುವ—ಎದುರಿಸಬೇಕಾಗಿ ಬರುವ ಸುಖದುಃಖಗಳು ಹಲವಾರು. ತಂದೆ, ತಾಯಿ, ಅಣ್ಣ—ತಂಗಿ, ಹೆಂಡತಿ, ನಾದಿನಿ—ಇತ್ಯಾದಿಯಾಗಿ ಆಪ್ತರನ್ನು ಕಳಕೊಂಡಾಗ ಈ ಪ್ರಪಂಚವೇ ನಿಃಸಾರವೆನ್ನಿಸುತ್ತದೆ; ಆಘಾತವನ್ನೆದುರಿಸಲಾರದೆ, ನಿಃಸಹಾಯನಾಗಿ ಆತ್ಮಹತ್ಯೆಗೇ ಮನ ಮುಂದಾಗುತ್ತದೆ. ತಮ್ಮನ್ನು—ತಮ್ಮ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳಬಲ್ಲವರು ಮಾತ್ರ ಆತ್ಮಹತ್ಯೆಯಿಂದ ಪಾರಾಗುವರು.

ಆದರೆ ನಾಲ್ಕು ದಿನ ಕಳೆಯಲಿ ಆ ದುಃಖದ ಭಾರ ಸ್ವಲ್ಪ ಹಗುರೆನಿಸುವುದು. ಒಂದು ವರ್ಷ ಕಳೆದಾಗ, ವಸಂತಾದಿ ಋತುಗಳ ಬದಲಾವಣೆಯಾದಾಗ, ಪ್ರಕೃತಿಯೇ, ಪ್ರಪಂಚವೇ, ಬದಲಾದಾಗ 'ಪರಿಸ್ಥಿತಿಯ ಶಿಶು'ವೆನಿಸಿದ ಮನುಷ್ಯ ಬದಲಾಗದಿರಲಾರ ಆಗ ಆ ದುಃಖ ಎಲ್ಲೋ ನೆನಪಿನ ಮೂಲೆಯನ್ನು ಸೇರಿಹೋಗುತ್ತದೆ ಹತ್ತಿಪ್ಪತ್ತು ವರ್ಷ ಕಳೆದಾಗಲಂತೂ ಅದಕ್ಕಿಂತ ಹೆಚ್ಚಿನ ದುಃಖ ಅನುಭವಿಸಿಯೋ—ಇಲ್ಲವೇ—ಆ ದುಃಖವನ್ನು ಮರೆಸಬಲ್ಲ ಸುಖವನ್ನು ಅನುಭವಿಸಿಯೋ—ಅಂತೂ ಮನುಷ್ಯ ಹಳೆಯ ನೋವನ್ನು ನುಂಗಿಬಿಟ್ಟಿರುತ್ತಾನೆ ಬೇರೊಬ್ಬರು ಜ್ಞಾಪಿಸಿಕೊಟ್ಟಾಗ ನೆನಪು ಮಾಡಿಕೊಳ್ಳಲು ಹತ್ತಾರು ನಿಮಿಷ ಬೇಕಾಗುವಷ್ಟು ಮರೆತು ಬಿಡಬಹುದು.

ಇಂತಹ ಸ್ಥಿತಿಗೆ ತಲುಪುವುದು ದೌರ್ಬಲ್ಯವೆಂದರೂ ಸರಿಯೇ! ಆದರೂ ಅದು ಅವನ ಪಾಲಿಗೊಂದು ವರದಾನವಾಗಿ ಪರಿಣಮಿಸಿದೆ. ಇಲ್ಲದಿದ್ದರೆ, ಭೂಲೋಕ ತನ್ನ ಅಲ್ಪ ದುಃಖಗಳ ಬಗ್ಗೆ ಕೂಡಾ ಶೋಕಿಸುತ್ತಾ ಮಾನವಲೋಕವೇ 'ರೋದನಾಲಯ'ವಾಗಿ ಪರಿಣಮಿಸಿ, ಜನರೆಲ್ಲಾ ಅಳುಬುರುಕರಾಗಿ ಬಿಡುತ್ತಿದ್ದರು

ಅಷ್ಟು ಮಾತ್ರವಲ್ಲದೆ ಕಂಡದ್ದು, ಕೇಳಿದ್ದು, ಊಹಿಸಿದ್ದು, ಯೋಚಿಸಿದ್ದು,— ಎಲ್ಲವನ್ನೂ ಸದಾ ಕಾಲವೂ ಜ್ಞಾಪಕದಲ್ಲಿ ಇಟ್ಟುಕೊಂಡರೆ, ನಮ್ಮ ಮಿದುಳೊಂದು ಭಾರೀ ಉಗ್ರಾಣದಂತಾಗಿ, ಅದೊಮ್ಮೆಗೆ ಬಂದೀತು! ಅಲ್ಲಿಂದ ಬೇಕಾದುದು ಬೇಡದಾದುದೂ ಎಲ್ಲವೂ ಸೇರಿಕೊಂಡಲ್ಲಿಂದ ನಮಗೆ ಬೇಕಾದುದನ್ನು ಹೆಕ್ಕಿಕೊಳ್ಳುವುದೂ ಕಷ್ಟವಾದೀತು ಗಾಳಿ ಹೆಚ್ಚಾಗಿ ತುಂಬಿದ ಸಿಲ್ಲಿಂಡಿನಂತಾದೀತು! ಅಂದರೆ ಹುಚ್ಚು ಹಿಡಿದೀತು ಪ್ರಪಂಚವೊಂದು ಹುಚ್ಚರ ಆಸ್ಪತ್ರೆಯಾದೀತು!

ಅದಕ್ಕಾಗಿಯೇ ಮನಃಶಾಸ್ತ್ರಜ್ಞರು 'ದುಃಖ' ನೋವುಗಳನ್ನು ಶಮನಗೊಳಿಸಬಲ್ಲ ಸಿದ್ಧೌಷಧ ಮರವೇ ಎಂದು ಕರೆದಿರುವುದು!

— —

ಕನ್ನಡಿಗರು ಹತವೀರರಾಗಿದ್ದಾರೆಯೆ?

(೧ನೇ ಪುಟದಿಂದ)

ರಾಜ್ಯ ಸಂಪತ್ತು ಹೆಚ್ಚುವುದೆಂದೂ ಮೊದಲಾಗಿ ತಿಳಿದುಕೊಳ್ಳಬೇಕು.

ರಾಷ್ಟ್ರೀಯ ಆರ್ಥಿಕ ಸಂಶೋಧನಾ ಮಂಡಳಿಯು ಇತ್ತೀಚೆಗೆ ಒಂದು ವರದಿಯನ್ನು ಅರ್ಪಿಸಿ ಮಂಗಳೂರು ಬಂದರವನ್ನು ಒಂದು ಆಳವಾದ ಬಂದರವಾಗಿ ಬೆಳೆಸಬೇಕೆಂದೂ ಹಾಸನ-ಮಂಗಳೂರು ರೇಲುದಾರಿಯನ್ನು ತಡಮಾಡದೆ ರಚಿಸಬೇಕೆಂದೂ ಮಲ್ಪೆಯನ್ನು ಹಡಗುಕಟ್ಟುವ ಅಥವಾ ಮೀನುಗಾರಿಕೆಯ ಬಂದರವಾಗಿಯೋ ವಿಶಿಷ್ಟರೀತಿಯಲ್ಲಿ ಬೆಳೆಸಬೇಕೆಂದೂ ಹೇಳಿದೆಯಾಗಿ ತಿಳಿದು ಬರುತ್ತದೆ. ಈ ವರದಿಯ ಹೇಳಿಕೆಗಳು ಯಾವ ಘಟ್ಟಕ್ಕೆ ಬಂದು ನಿಲ್ಲುವವೆಂದು ನಾವು ಈಗಲೇ ಹೇಳುವಂತಿಲ್ಲ. ಕೇವಲ 'ಕೇಂದ್ರ ಕೊಡುತ್ತದೆ, ಕೊಡುವಾಗ ಕೊಂಡುಕೊಳ್ಳುವ' ಎಂಬ ನೀತಿಯನ್ನು ನಮ್ಮ ಸರಕಾರ ಹಿಡಿದುದರಿಂದಲೇ ನಾವು ಬಯಸಿದ್ದೆಲ್ಲಾ ಬೇರೆ ರಾಜ್ಯಗಳ ಪಾಲಿಗೆ ಹೋಯಿತು. ಕೆಚ್ಚೆದೆಯ ಕನ್ನಡಿಗರು ಕಸುವಿಲ್ಲದವರೆಂಬುದನ್ನೂ ಕನ್ನಡಿಗರ ಮೈಸೂರು ಸರಕಾರ ನಿರ್ಬಲವೆಂಬುದನ್ನೂ ಇದುವರೆಗೆ ತೋರಿಸಿಕೊಟ್ಟಂತಾಯಿತು.

ಕನ್ನಡಿಗರೂ ಅವರ ಸರಕಾರವೂ ಇದುವರೆಗೆ ಕೈನೀಡಿ ನಿರೀಕ್ಷಿಸಿದುದು ಸಾಕು. ನಮ್ಮ ವಿಧಾನ ಸಭೆ—ಮಂಡಲಗಳ ಸದಸ್ಯರೂ ಲೋಕ ಸಭೆ—ರಾಜ್ಯ ಸಭಾ ಸದರೂ ಕನ್ನಡದ ಮುಖ್ಯ ಆವಶ್ಯಕತೆಯಾದ ಬಂದರಗಳ ಅಭಿವೃದ್ಧಿ ಮತ್ತು ಒಳನಾಡು ಹಾಗೂ ಬಂದರ ನಗರಗಳ ಸಂಬಂಧವಾಗಿ ಸಾರಿಗೆ ವ್ಯವಸ್ಥೆಯನ್ನು ಪಡೆಯುಕೊಳ್ಳಲು ಏಕ ಕಂಠದಿಂದ ಕೂಗಬೇಕು. 'ಪರಮೇಶ್ವರೋವಾ ದಿಲ್ಲೀಶ್ವರೋವಾ' ನೀತಿಯನ್ನು ಅವಶ್ಯ ಬಿಟ್ಟುಬಿಡಬೇಕು ಕನ್ನಡನಾಡಿನ ಆಯಾತ ನಿರ್ಯಾತಗಳನ್ನು ನಿರ್ವಹಿಸಲು ಸಮರ್ಥವಾದ ಬಂದರಗಳನ್ನು ಕನ್ನಡನಾಡಿನಲ್ಲಿಯೇ ಕಟ್ಟುವಂತೆ ರಚನಾತ್ಮಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಕನ್ನಡನಾಡಿನ ಸರಕಾರ ತನ್ನೆಲ್ಲಾ ಶಕ್ತಿಯನ್ನು ಕೇಂದ್ರೀಕರಿಸಿ ಈ ಬಗ್ಗೆ ಹೋರಾಡಬೇಕು. ದ್ವಿತೀಯ ಯೋಜನೆಯ ಅಂತಿಮ ಘಟ್ಟದಲ್ಲಿ ಕನ್ನಡಿಗರ ಸುಸಂಘಟಿತ ಪ್ರಯತ್ನದ ಫಲವಾಗಿ ಶರಾವತಿಕೊಳ್ಳದ ಯೋಜನೆಯು ಅಡಕವಾಗಿರುವುದನ್ನು ಸಂಸ್ಮರಿಸಬೇಕು. ಅದೇ ರೀತಿಯ ಅದಕ್ಕಿಂತಲೂ ಹೆಚ್ಚಿನ ಪ್ರಯತ್ನ ಬಂದರ- ರೇಲು ದಾರಿಗಳ ಬಗ್ಗೆ ನಡೆಯಬೇಕು; ತ್ವರಿತದಲ್ಲಿಯೇ ಜಯಶಾಲಿಯಾಗಬೇಕು. ಕನ್ನಡಿಗರಲ್ಲಿಯೂ ಕೆಚ್ಚು ಇದೆಯೆಂಬುದನ್ನು ತೋರಿಸಿಕೊಡಬೇಕು.

ಆದರೆ, ಈ ರೀತಿ ನಡೆಯಲು ಕನ್ನಡಿಗರು ಸಿದ್ಧರಿರುವರೆ? ಕನ್ನಡಿಗರ, ಕನ್ನಡಿಗರ ಸರಕಾರದ ಬಲವೆಲ್ಲ ಚೆಲ್ಲಾಪಿಲ್ಲಿಯಾಗಿ ಹರಡಿ ದುರ್ಬಲವಾಗುವುದನ್ನು, ಅವಶ್ಯಕತೆಯಿಲ್ಲದಲ್ಲಿ ಉಪಯೋಗವಾಗುವುದನ್ನು ನಾವು ವೀಕ್ಷಿಸುವಾಗ, ಕನ್ನಡಿಗರಲ್ಲಿ ಅನೇಕತೆ, ಅತಂತ್ರತೆ, ಅಕರ್ಮಣ್ಯತೆಗಳು ತಾಂಡವವಾಡಿ ಅಧಿಕಾರಕ್ಕಾಗಿ ಲಾಭಕ್ಕಾಗಿ ಬೇರೆ ಬೇರೆಯವರು ಬೇರೆ ಬೇರೆಯಾಗಿ ತಮ್ಮ ತಮ್ಮೊಳಗೆ ಕತ್ತಿ ಮಸೆಯುತ್ತಿರುವಾಗ ಕನ್ನಡಿಗರನ್ನು ಕನ್ನಡಾಂಬೆಯೇ ಕೈಬಿಟ್ಟಿದ್ದಾಳೆನ್ನಬೇಕು. ಆದರೆ, ಇದೇ ದುಸ್ಥಿತಿ ಮುಂದಕ್ಕೂ ಮುಂದುವರಿಯಗೊಟ್ಟರೆ, "ಸ್ವರ್ಣದನಾಡು ಕನ್ನಡನಾಡು" ಉಂಡುಣಲಿಕ್ಕಿರದ ಅರಸನೋಲಗವಾದೀತು. ಆದುದರಿಂದ ಕನ್ನಡಿಗರೆಲ್ಲರೂ ಒಂದಾಗಿ ಮೊದಲು ಕೂಗಬೇಕು—"ಕನ್ನಡಿಗರು ಒಂದೇ; ಕನ್ನಡ ಒಂದೇ"—ಆಗ ನಮ್ಮ ಬೇಡಿಕೆಗಳನ್ನು ತಿರಸ್ಕರಿಸುವ ಧೈರ್ಯವೂ ದಿಲ್ಲೀಶ್ವರರಿಗೆ ಬರಲಾರದು.

———

ಪಿಗ್ಮಿ—೧

ಪ್ರಸಿದ್ಧ ಮನಶ್ಶಾಸ್ತ್ರಜ್ಞ ಮ್ಯಾಕ್‌ಡೂಗಲ್ ಹೇಳಿರುವಂತೆ ಮಾನವನ ಸಹಜ ಗುಣಗಳಲ್ಲಿ ಸಂಗ್ರಹ ಪ್ರವೃತ್ತಿ-ಕೂಡಿಡುವ ಬುದ್ಧಿ, ಉಳಿತಾಯ ಭಾವನೆಯೂ ಒಂದು. ಮಾನವನ ಜೀವನದ ಹೋರಾಟಕ್ಕೆ, ವಿಜಯಕ್ಕೆ ಬೇಕಾದ ಎಲ್ಲಾ ಶಕ್ತಿ-ಅವಶ್ಯಕತೆಗಳನ್ನು ಪರಮಾತ್ಮನು ಬಾಲ್ಯದಲ್ಲಿಯೇ ಬೀಜರೂಪದಲ್ಲಿ ಒದಗಿಸುವನು ಅಂತೆಯೇ ಸಂಗ್ರಹ ಪ್ರವೃತ್ತಿಯೂ ಕೂಡಾ. ಇದನ್ನು ಚಿಕ್ಕ ಮಕ್ಕಳಲ್ಲಿ ನಾವು ಧಾರಾಳವಾಗಿ ಕಾಣಬಹುದು ಪುಟ್ಟ ಬಾಲಕರು ತಮ್ಮ ಕುತೂಹಲವನ್ನು ಕೆರಳಿಸುವ ವಸ್ತುಗಳನ್ನು ಆಸ್ಥೆಯಿಂದ ಸಂಗ್ರಹಿಸುತ್ತಿರುವುದನ್ನು ನೋಡದವರಾರು?

ಈ ಸಂಗ್ರಹಬುದ್ಧಿಯು ಅಭಿವೃದ್ಧಿಯೂ ಆಗಬಹುದು; ಕುಂಠಿತಗೊಳ್ಳಲೂ ಬಹುದು. ಅದು ಸಂದರ್ಭ ಮತ್ತು ಅವಕಾಶಗಳನ್ನಾಧರಿಸಿದೆ ಯಾವುದೇ ಒಂದು ಕ್ರಿಯೆ ಮತ್ತೆ ಮತ್ತೆ ಆವರ್ತನಗೊಂಡಲ್ಲಿ ಅದು ಬಲಿತು ಅಭ್ಯಾಸವಾಗಿ ಮಾರ್ಪಡುವುದು — ಕುಶಲ ಕಲಾವಿದನ ಕೈಬೆರಳುಗಳು ಅವನಿಗೆ ತಿಳಿಯದೆಯೇ ಮುಂದುಮುಂದಕ್ಕೆ ಚಲಿಸುವಂತೆ,

ಕೂಡಿಡುವ ಗುಣವೂ ಹಾಗೆಯೇ—
ಉಳಿತಾಯದ ಭಾವನೆಯು ಬಲಿತು
ಸ್ಥಿರ ಅಭ್ಯಾಸವಾಗಲು; ಸುಲಭ ಸಾಧ್ಯವಾಗಲು.

—ಪಿಗ್ಮಿ

ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

Edited, Printed & Published by K. H. Shetty, at the Navayuga Press, Udipi, S. India.

40th year of publication. 23-2-1961 ೪೦ನೇ ವರ್ಷ

ಸಂಪುಟ ೪೦ Vol. 40

ನವಯುಗ

ಸಂಚಿಕೆ ೨೪ No. 24

ಬೆಲೆ 0=13

ಪ್ರಚಲಿತ ಪ್ರಸಂಗ

ನಾಗಾರಾಜ್ಯದಲ್ಲಿ ನವಮನ್ವಂತರ

ಭಾರತ ಸರಕಾರವು ನಾಗಾನಾಯಕರೊಡನೆ ಮಾಡಿಕೊಂಡ ಒಡಂಬಡಿಕೆಯಂತೆ ನಾಗಾರಾಜ್ಯದಲ್ಲಿ ಮಾಧ್ಯಮಿಕ ಮಂಡಳವು ಉದ್ಘಾಟನೆಯಾಯಿತು. 'ಅಹಿಂಸಾಪರರಾಗಿ ಕರ್ತವ್ಯಪಾಲಕರಾಗಿ ಶಾಂತಿ ಸ್ಥಾಪಿಸುವಲ್ಲಿ ನಾಗಾಜನರು ಹಿಂದುಳಿಯಬಾರದು.

ನಾಗಾ ಪ್ರದೇಶದ ಜನಕಾಮನೆಯನ್ನು ಅರಿತುಕೊಂಡು ಅದನ್ನು ಪೂರೈಸುವ ಆಶ್ವಾಸನವಿತ್ತ ಭಾರತ ಸರಕಾರವು ಇದೀಗ ಅವರ ಬೇಡಿಕೆಯನ್ನು ಮನ್ನಿಸುವ ಕಾರ್ಯಕ್ರಮಗಳಲ್ಲಿ ತೊಡಗಲು ಆರಂಭಮಾಡಿದೆ. ಪ್ರತ್ಯೇಕ ಸ್ವತಂತ್ರ ನಾಗಾರಾಜ್ಯದ ಬೇಡಿಕೆಯನ್ನು ಮುಂದಿಟ್ಟು ಹಿಂಸಾಚರಣೆಯಲ್ಲಿ ಫಿಜೊವಿನ ನೇತೃತ್ವದಲ್ಲಿರುವ ಒಂದು ನಾಗಾಜನರ ಗುಂಗಡಕ್ಕೆ ಬೆಂಬಲವು ಇಳಿಮುಖವಾಗಿ, ಭಾರತ ಸರಕಾರದ ಅಧೀನದ ಒಂದು ಪ್ರತ್ಯೇಕ ರಾಜ್ಯಸ್ಥಾಪನೆಗೆ ಅಲ್ಲಿ ಬೆಂಬಲ ಹೆಚ್ಚುತ್ತಿದ್ದು, ನಾಗಾ ಪ್ರದೇಶದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಉದ್ದೇಶದಿಂದ ಅವರ ೧೬ ಬೇಡಿಕೆಗಳನ್ನು ಭಾರತ ಸರಕಾರವು ಮನ್ನಿಸಿತ್ತು.

ಇದೇ ತಿಂಗಳ ೧೮ರಂದು ನಾಗಾ ನೇತಾರರು ಮತ್ತು ಭಾರತ ಸರಕಾರಗಳ ನಡುವಾದ ಒಡಂಬಡಿಕೆಯನ್ವಯ ಮಹತ್ವದ ಹೆಜ್ಜೆಯಾಗಿ ನಾಗಾ ಪ್ರದೇಶದ ವಿವಿಧ ಜಾತಿಗಳ ಪ್ರತಿನಿಧಿಗಳಿಂದ ಕೂಡಿದ ಮಧ್ಯಾವಧಿ ಮಂಡಳವನ್ನು ಅಸಾಮದ ರಾಜ್ಯಪಾಲ ಶ್ರೀ ಶ್ರೀನಾಗೇಶರು ಉದ್ಘಾಟಿಸಿದರು.

ಕೊಹಿಮಾದಲ್ಲಿ ಸಮಾವೇಶಗೊಂಡಿದ್ದ ಈ ಸಂಬಂಧದ ಸಭೆಯೊಂದರಲ್ಲಿ ಎಂಟು ಸಹಸ್ರ ನಾಗಾ ಜನರು ಭಾಗ ವಹಿಸಿದ್ದರು. ನಾಗಾ ಜನತೆಯು ರಾಜ್ಯಪಾಲರಿಗೆ ಉತ್ಸಾಹದಿಂದ ನೀಡಿದ ಸ್ವಾಗತ ಹಾಗೂ ನಡೆಸಿದ ಮೆರವಣಿಗೆಗಳಿಂದ ತಮ್ಮ ಬೇಡಿಕೆಯು ಒಪ್ಪಿಸಿದುದಕ್ಕೆ ಅವರು ತೃಪ್ತಿಯನ್ನು ಪ್ರದರ್ಶಿಸುತ್ತಿತ್ತು. ಈ ಪ್ರದೇಶದ ೧೬ ಜಾತಿಗಳ ಪ್ರತೀಕವಾಗಿ ಮೆರವಣಿಗೆಯ ದಾರಿಯಲ್ಲಿ ೧೬ ಮಂಟಪಗಳು ರಚಿತವಾಗಿದ್ದುವು.

'ನಾವು ಜೀವಂತವಿರಲು ಬಯಸುವುದಾದರೆ, ನಮ್ಮ ಹಿಂಸಾ ಪ್ರವೃತ್ತಿಯನ್ನು ದೂರವಿಡಬೇಕು ವಿಕ್ಷುಬ್ಧವಾಗಿ ಹೋಗಿರುವ ನಾಗಾ ಪ್ರದೇಶದಲ್ಲಿ ಶಾಂತಿ ಮತ್ತು ಸಾಮಾನ್ಯ ಸ್ಥಿತಿಯನ್ನು ಸ್ಥಾಪಿಸುವುದೇ ಅತಿ ದೊಡ್ಡ ಸಮಸ್ಯೆಯಾಗಿದೆ. ಇದರ ಜತೆಗೆ ಭಾರತ ಸರಕಾರ ಹಾಗೂ ನಮ್ಮೊಳಗಾದ ೧೬ ಒಡಂಬಡಿಕೆಗಳನ್ನು ಕಾರ್ಯರೂಪಕ್ಕೆ ತರಬೇಕಾಗಿದೆ ' ಎಂದು ನಾಗಾ ಸಮ್ಮೇಳನದ ಅಧ್ಯಕ್ಷ ಡಾ। ಇಕಂಗಾಲಿಬೊರವರು ಹೇಳಿ, ಫಿಜೋನ ಕೈಕೆಳಗಿನ ನಾಗಾ ನೇಶನಲ್ ಕೌನ್ಸಿಲಿನ ಮೂಲಕ ಹತ್ಯೆ, ರಕ್ತಪಾತ ಮತ್ತು ನಷ್ಟಗಳುಂಟಾದುದರಿಂದ ಅವರನ್ನು ಮೇಲೆ ದೋಷಾರೋಪಣೆ ಮಾಡಿದರು. ಕ್ರೂರಕೃತಿಗಳನ್ನು ತ್ಯಜಿಸಿ ಸೌಹಾರ್ದದಿಂದ ಬಾಳುವುದರಿಂದಲೇ ನಾಗಾ ಜನರ ಏಳಿಗೆಯೆಂಬುದನ್ನು ಅವರು ಒತ್ತಿ ಹೇಳಿದರು.

ಉದ್ಘಾಟಕರಾದ ರಾಜ್ಯಪಾಲ ಶ್ರೀ ನಾಗೇಶರು ಪ್ರತಿನಿಧಿಗಳ ಪ್ರತಿಜ್ಞಾವಿಧಿಯನ್ನು ಮಾಡಿಸುತ್ತ, ಕಳೆದ ಕೆಲವು ವರ್ಷಗಳಲ್ಲಿ ನಾಗ ಗುಪ್ತಕಾದುಗಳ ಜನತೆಗೆ ಮತ್ತು ಅಧಿಕಾರಿಗಳಿಗೆ ಉಪದ್ರವ, ಚಿಂತೆ ಮತ್ತು ಸಂಕಟಗಳು ಎದುರು ಬರತೊಡಗಿವು. ನಾಗಾ ಜನರು ಶಾಂತಿಯನ್ನು ಬಯಸುತ್ತಿರುವುದು ಸ್ವಾಭಾವಿಕವೇ ಅವರು ಶಾಂತಿಯನ್ನಳಿಸಿ, ತಮ್ಮ ಶಕ್ತಿಯನ್ನು ವ್ಯರ್ಥಹರಿಯಗೊಡದೆ. ರಚನಾತ್ಮಕ ಕಾರ್ಯಗಳಲ್ಲಿ ತೊಡಗಿಸಲು ಒದ್ದಕಂಕಣರಾಗಲಿ;ಎಂದು ಹಾರೈಸಿದರು.

ಸರಕಾರ ಮತ್ತು ಜನತೆಯು ಕಳೆದ ಕಾಲವನ್ನು ಮರೆತು ಬಿಟ್ಟು, ಹೊಸ ಮನ್ವಂತರೋದಯವಾಗುವಂತಾಗಲೆಂಬುದೇ ಈ ಹೊಸ ವ್ಯವಸ್ಥೆಯ ಉದ್ದೇಶ ಇದು ಕೈಗೂಡಿತೆಂದರೆ, ನಾಗಾ ಪರ್ವತಕಾಡುಗಳಲ್ಲಿ ಹರಡಿದ್ದ ಉಪದ್ರವ ಅಂಧಕಾರದನಡುವೆ ದಿವ್ಯ ಜ್ಯೋತಿಯೊಂದು ಉದಿಸಿದಂತಾಗುವುದು ನಾಗಾ ಪ್ರದೇಶದ ಹಿತಕ್ಕಾಗಿ ಉದ್ವೇಗ ಮತ್ತು ಕೋಪದ ಭಾವನೆಗಳನ್ನು ದೂರೀಕರಿಸಿ, ದುಡಿಯಬೇಕು ಮತ್ತು ಭಾರತದ ನಾಗರಿಕರಾಗಿ ನೇರಿಕೊಂಡು ಕಾರ್ಯತತ್ಪರರಾಗುವ ಸಂಕಲ್ಪವನ್ನವರು ಮಾಡಬೇಕು. ಭಾರತದ ಸ್ವಾತಂತ್ರ್ಯದ ಫಲವನ್ನು ಇತರ ಜನರು ಅನುಭವಿಸುವಂತೆಯೇ ನಾಗಾ ಜನರೂ ಅನುಭೋಗಿಸುವಂತಾಗಬೇಕು.

ನಾಗಾರಾಜ್ಯದ ಈ ಮಧ್ಯಾವಧಿ ಮಂಡಳದ ನೇಮಕವು ಪ್ರಥಮ ಹೆಜ್ಜೆಯಾಗಿದೆ. ಮುಂದಕ್ಕೆ ನಾಗಾಪ್ರದೇಶವನ್ನು ಪ್ರತ್ಯೇಕವಾಗಿ ರಚಿಸಲಾಗುವುದು ಆಗ ಒದಕ್ಕೊಂದು ವಿಧಾನಸಭೆ ಹಾಗೂ ಸಚಿವ ಸಂಪುಟವು ನಿರ್ಮಾಣಗೊಳ್ಳುವುದು. ಈ ನಡುವಣ ಸಾಂಕ್ರಾಮಿಕ ಸಮಯದಲ್ಲಿ ಈ ಮಾಧ್ಯಮಿಕ ಸಮಿತಿ ಮತ್ತು ಪ್ರಾಂತ ಪರಿಷತ್ತು ಒಂದಾಗೂಡಿ ರಾಜ್ಯಾಭಿವೃದ್ಧಿಯತ್ತ ರಚನಾತ್ಮಕ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಅತ್ಯವಶ್ಯ ಅಸ್ತವ್ಯಸ್ತವಾಗಿದ್ದ ರಾಜ್ಯದಲ್ಲಿ ಹಿಂಸಾಚಾರವನ್ನು ತಡೆದು ಶಾಶ್ವತ ಶಾಂತಿಯನ್ನು ಸ್ಥಾಪಿಸುವುದೇ ಇಂದು ಅವರು ಎದುರಿಸಬೇಕಾದ ಪ್ರಧಾನ ಕರ್ತವ್ಯವೆನಿಸಿದೆ.

"ಭಾರತದ ಯಾವ ಮೂಲೆಯ ಜನರೇ ಇರಲಿ ತಮ್ಮ ಮೂಲ ಸಂಸ್ಕೃತಿಗೆ ಅನುಸಾರವಾಗಿ ಯಾವುದೇ ರಾಜ್ಯದಲ್ಲ

(೧೨ನೇ ಪುಟ ನೋಡಿರಿ)

R. O C No B 3/681/61

UDIPI MUNICIPALITY.

NOTICE

Is hereby given that the right of collecting fees in the Municipal Markets Cart Stands Jutka Stand, Mutton stalls and slaughter house for the year 1961—62 will be sold by public auction by the Municipal Commissioner, Udipi on Tuesday the 28th February 1961 at 3 P. M. in the Municipal Office, Udipi.

The sale is subject to the rules in force. The three existing mutton stalls will be sold separately.

Further particulars or information may be had from the Municipal Office, Udipi. on all working days during office hours.

I Joshua,
Commissioner.

Municipal Office, Udipi
Dated 17—2—1961

R O C No B 3/681/61

ಉಡುಪಿ ಮುನ್ಸಿಪಾಲಿಟಿ

ನೋಟೀಸು

ಈ ಮೂಲಕ ತಿಳಿಯಪಡಿಸುವುದೇನೆಂದರೆ,– 1961–62ನೇ ವರ್ಷದಲ್ಲಿ ಉಡುಪಿ ಮುನ್ಸಿಪಾಲಿಟಿಯ ಆಡಳಿತಕ್ಕೆ ಒಳಪಟ್ಟ ಮಾರ್ಕೆಟುಗಳು, ಗಾಡಿ ಚಾಕ, ಜಟ್ಕಾ ಚಾಕ, ಮಟನ್ ಸ್ಟಾಲ್ ಮತ್ತು ವಧಾಗೃಹದಲ್ಲಿ ವರಿ ವಸೂಲು ಮಾಡುವ ಹಕ್ಕನ್ನು ಮುನ್ಸಿಪಲ್ ಕಮಿಶನರವರು ತಾರೀಕು 28–2–1961ನೇ ಮಂಗಳವಾರ ಅಪರಾಹ್ನ ಘಂಟೆ3.00ಕ್ಕೆ ಮುನ್ಸಿಪಲ್ ಆಫೀಸಿನಲ್ಲಿ ಆ ಕುರಿತು ಜ್ಯಾರಿಯಲ್ಲಿರತಕ್ಕ ನಿಯಮಗಳಿಗನುಸಾರವಾಗಿ ಬಹಿರಂಗವಾಗಿ ಏಲಂ ಮೂಲಕ ಮಾರಾಟ ಮಾಡುವರು

ಮೂರು ಮಟನ್ ಸ್ಟಾಲುಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಏಲಂ ಮಾಡಲಾಗುವುದು.

ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಆಫೀಸು ಸಮಯ, ಮುನ್ಸಿಪಲ್ ಆಫೀಸಿಗೆ ಬಂದು ತಿಳಕೊಳ್ಳಬಹುದು

ಐ ಜೋಶುವ,
ಕಮಿಶನರ್.

ಮುನ್ಸಿಪಲ್ ಆಫೀಸ್, ಉಡುಪಿ
ತಾ. 17-2-1961

ಮಂಗಳೂರಲ್ಲಿ ಈಗಾಗಲೇ ತೆರೆಯಲ್ಪಟ್ಟು ಪ್ರಗತಿಯಿಂದ ಮುಂದೆ ಸಾಗುತ್ತಿರುವ ಇನ್ನೊಂದು ಪ್ರಸಿದ್ಧ ಜವುಳಿ ಮಳಿಗೆ—

ಸಾರೀ ಎಂಪೋರಿಯಮ್

ಕೆಥೊಲಿಕ್ ಕ್ಲಬ್ಬಿನ ಎದುರು, ಹಂಪನಕಟ್ಟಾ, ಮಂಗಳೂರು–1

ನಿಮ್ಮ ಉತ್ತಮ ಆಯ್ಕೆಗೆ ಯೋಗ್ಯವೆಂದೆನಿಸಿದ ರೇಶ್ಮೆ ನೀರೆಗಳೂ, ಹತ್ತಿ ನೂಲಿನ ಸೀರೆಗಳೂ ಸರ್ವೋತ್ಕೃಷ್ಟವಾಗಿವೆ, ಯಾವತ್ತೂ ತರದ ಶರ್ಟಿಂಗ್, ಕೋಟಿಂಗ್, ಚಿಂಟ್ಸ್, ಸಿಲ್ಕ್, ನೈಲಾನ್ ಇತ್ಯಾದಿ ಬಟ್ಟೆಬರೆಗಳಿಗೂ ಸಂದರ್ಶಿಸಿರಿ —

SAREE EMPORIUM

Opposit Catholic Club
HAMPANKATTA, MANGALORE—1.

NAVAYUGA WEEKLY, UDIPI.
REGD. NO.BG. 176
16-2-1961
LICENSE NO. 31
Licensed to Post without Prepayment

ಕ್ಷ-ಕಿರಣ

ಭವರೋಗ ರಾಮಬಾಣ—ಮರವೆ

> ಮರವೆಯಿಂದಲೆ ಇಹವು, ಮರವೆಯಿಂದಲೆ ಪರವು, ಮರವೆಯೊಂದಿಲ್ಲದಿರೆ ಮರಳಿನಾ ಈ ಜಗದಿ ಹುರುಳಿಲ್ಲವೆಂದ……

ಶ್ರೀ ನಾಗರಾಜ, 'ಹಿಂದೀರತ್ನ', ಉಜಿರೆ

ಇಪ್ಪತ್ತೆಂಟರ ನವಹರೆಯದ ಯುವಕ, ಇಪ್ಪತ್ತೊಂದರ ಯುವತಿ— ನವವಿವಾಹಿತರು ಒಬ್ಬರನ್ನೊಬ್ಬರು ಅತಿಯಾಗಿ ಪ್ರೀತಿಸುತ್ತಾರೆ. ಒಬ್ಬರ ಮೇಲೊಬ್ಬರಿಗೆ ಎಲ್ಲಿಲ್ಲದ ಅಕ್ಕರೆ. ಗಂಡನಿಗೆ ನೂರೈವತ್ತು ರೂಪಾಯಿಯ ನೌಕರಿಯಿದೆ. ಸಂಜೆ ಆಫೀಸು ಬಿಟ್ಟೊಡನೆ ಗಂಡ ಮನೆಗೆ ಬರುತ್ತಾನೆ. ಇಬ್ಬರೂ ವಾಕಿಂಗಿಗೆ ಇಲ್ಲವೇ ಸಿನೇಮಾಕ್ಕೆ ಜೊತೆಯಾಗಿ ಹೋಗುವರು. ನಗುವರು ಹುಚ್ಚುಚ್ಚು ಮಾತಾಡುವರು. ಅಂತೂ ಅವರನ್ನೊಂದು ಆದರ್ಶ ದಾಂಪತ್ಯ. ಅಪೂರ್ವ ಜೋಡಿ!

ಒಂದು ದಿನ ಎಂದಿನಂತೆ ಆಫೀಸಿನಿಂದ ಬರಬೇಕಾದ ಸಮಯಕ್ಕೆ ಪತಿ ಬರಲಿಲ್ಲ. ಅರ್ಧಗಂಟೆ ತಡವಾಗಿದೆ ಒಂದು ಕಾರು ಬಂದು ಮನೆಯ ಅಂಗಳದಲ್ಲಿ ನಿಂತಿತು. ನಾಲ್ಕು ಜನರು ಆಕೆಯ ಪತಿಯ ಶವವನ್ನು ಕಾರಿನಿಂದ ಇಳಿಸಿದರು. ಬೀದಿಯಲ್ಲಿ ಬರುವಾಗ, ತನ್ನಾಕೆಗೆ ಪ್ರಿಯವಾದ ಹೂವನ್ನು ಕೊಳ್ಳಲೆಂದು ಹೋದ ಪತಿ, ಲಾರಿಯೊಂದರ ಚಕ್ರದಡಿಗೆ ಬಿದ್ದು ಗತಪ್ರಾಣನಾಗಿದ್ದ. ಸಂಬಂಧಿಕರಿಗೆಲ್ಲಾ ಕರೆಹೋಯ್ತು. ಶವದಹನ ನಡೆದಾಗ ಆ ತರುಣ ಪತ್ನಿಯ ಗೋಳೇ ಗೋಳು! ತನ್ನನ್ನು ಬಿಡಿ ಚಿತೆಯನ್ನೇರುತ್ತೇನೆ—ಎಂದು ಬೊಬ್ಬಿರಿಯುತ್ತಾಳೆ. ಎಲ್ಲರೂ ಸೇರಿ ತಡೆದಿಡುತ್ತಾರೆ.

ಎರಡು ತಿಂಗಳು ಕಳೆಯಿತು. ಆ ವಿಧವೆಯ ಮನೆಗೆ ಹೋಗಿ ನೋಡಿದರೆ, ಹಿಂದಿನ ಆ ಕೆದರಿದ ಕೂದಲು, ಊದಿದ ಕಣ್ಣು—ಒಂದೂ ಕಾಣಿಸದು! ಶಾಂತ ಗಂಭೀರವಾಗಿದೆ — ಮುಖ. ಹತ್ತಿರದಲ್ಲೇ ನಾಲ್ಕಾರು ಪತ್ರಿಕೆಗಳು — ಒಂದನ್ನಾಕೆ ಓದುತ್ತಿರುವಳು. ಬಹುಶಃ ಯಾವುದೋ ಪ್ರೇಮದ ಕತೆಯಿರಬೇಕು.

ಇನ್ನೂ ಒಂದೆರಡು ತಿಂಗಳು ಕಳೆದ ಬಳಿಕ ನೀವಾಕೆಯನ್ನು ಸಿನಿಮಾ ಮಂದಿರದ ಬಳಿ ಕಂಡರೆ— ಆಕೆ, ಯಾವುದೋ ಒಂದು ಪ್ರಣಯ ಕತೆಯ ಸಿನಿಮಾ ನೋಡಲು—ಬಂದುದನ್ನು ಗೊತ್ತು ಹಚ್ಚಬಹುದು! ಮತ್ತಷ್ಟು ಗಮನವಿರಿಸಿದಲ್ಲಿ, ಅವಳ ಜೊತೆಗೆ ಇನ್ನೋರ್ವ ಯುವಕನನ್ನೂ ಕಾಣಬಹುದು! ಬಹುಶಃ ಅವಳ ನೆರೆಮನೆಯವನಿರಬಹುದು. ಸಿನಿಮಾ ಬಿಟ್ಟೊಡನೆ ಇಬ್ಬರೂ ಒಂದೇ ಜಟಕಾ ಬಂಡಿ ಹತ್ತುತ್ತಿರುವುದನ್ನು ಕಂಡು ಮತ್ತಷ್ಟು ಚಕಿತರಾಗಬಹುದು!

ಇದಾದ ನಾಲ್ಕಾರು ತಿಂಗಳಲ್ಲೇ— ಬ್ರಹ್ಮ ಸಮಾಜದಲ್ಲೋ ಅಥವಾ ಬೇರೆಲ್ಲೋ ಅವರೀರ್ವರ ವಿವಾಹ ನಡೆಯಿತೆಂಬ ವರದಿಯನ್ನು ಸ್ಥಳೀಯ ಪತ್ರಿಕೆಗಳಲ್ಲಿ ಕಾಣಬಹುದು.

—ಇದೀಗ ನಮ್ಮ ಸಮಾಜದಲ್ಲಿ — ಇಂದಿನ ದಿನಗಳಲ್ಲಿ ಕಾಣಬಹುದಾದ ಒಂದು ಘಟನೆ ಆರಂಭದಿಂದ ಕೊನೆಯ ತನಕ ಹಲವಾರು ಘಟ್ಟಗಳಲ್ಲಿ ಆ ಯುವತಿಯ ಮನಸ್ಸಿನ ಮೇಲೆ—ಮರೆವು ತನ್ನ ಕೈವಾಡವನ್ನು ಹೇಗೆ ತೋರಿಸಿತೆಂಬುದನ್ನು ಕಾಣುತ್ತೇವೆ. ಪತಿಯ ಚಿತೆಯನ್ನೇರುತ್ತೇನೆ—ಎಂದ ಆ ಯುವತಿಯನ್ನು ತಡೆಯದಿದ್ದಲ್ಲಿ—ಮರೆವಿನ ಸಂಜೀವಿನಿ ತನ್ನ ಕಾರ್ಯಕೈಗೊಳ್ಳದಿದ್ದಲ್ಲಿ ಆಕೆಯ ಪುನರ್ವಿವಾಹವೆಂದಾದರೂ ಸಂಭವನೀಯವೇ?

ಮನುಷ್ಯ ತನ್ನ ಜೀವನದಲ್ಲಿ ಎದುರಿಸುವ—ಎದುರಿಸಬೇಕಾಗಿ ಬರುವ ಸುಖದುಃಖಗಳು ಹಲವಾರು. ತಂದೆ, ತಾಯಿ, ಅಣ್ಣ—ತಂಗಿ, ಹೆಂಡತಿ, ಸ್ನೇಹಿತ—ಇತ್ಯಾದಿಯಾಗಿ ಆಪ್ತರನ್ನು ಕಳಕೊಂಡಾಗ ಈ ಪ್ರಪಂಚವೇ ನಿಃಸಾರವನ್ನಿಸುತ್ತದೆ; ಆಘಾತವನ್ನೆದುರಿಸಲಾರದೆ, ನಿಃಸಹಾಯನಾಗಿ ಆತ್ಮಹತ್ಯೆಗೇ ಮನ ಮುಂದಾಗುತ್ತದೆ. ತಮ್ಮನ್ನು—ತಮ್ಮ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳಬಲ್ಲವರು— ಮಾತ್ರ ಆತ್ಮಹತ್ಯದಿಂದ ಪಾರಾಗುವರು.

ಆದರೆ ನಾಲ್ಕು ದಿನ ಕಳೆಯಲಿ ಆ ದುಃಖದ ಭಾರ ಸ್ವಲ್ಪ ಹಗುರೆನಿಸುವುದು. ಒಂದು ವರ್ಷ ಕಳೆದಾಗ, ವಸಂತಾದಿ ಋತುಗಳ ಬದಲಾವಣೆ ಕಂಡಾಗ, ಪ್ರಕೃತಿಯೇ, ಪ್ರಪಂಚವೇ, ಬದಲಾದಾಗ 'ಪರಿಸ್ಥಿತಿಯ ಶಿಶು'ವೆನಿಸಿದ ಮನುಷ್ಯ ಬದಲಾಗದಿರಲಾರ. ಆಗ ಆ ದುಃಖ ಎಲ್ಲೋ ನೆನಪಿನ ಮೂಲೆಯಲ್ಲಿ ಸೇರಿಹೋಗುತ್ತದೆ. ಹತ್ತಿಪ್ಪತ್ತು ವರ್ಷ ಕಳೆದಾಗಲಂತೂ ಆದಕ್ಕಿಂತ ಹೆಚ್ಚಿನ ದುಃಖ ಅನುಭವಿಸಿಯೋ—ಇಲ್ಲವೇ—ಆ ದುಃಖವನ್ನು ಮರೆಸಬಲ್ಲ ಸುಖವನ್ನು ಅನುಭವಿಸಿಯೋ— ಅಂತೂ ಮನುಷ್ಯ ಹಳೆಯ ನೋವನ್ನು ನುಂಗಿಬಿಟ್ಟಿರುತ್ತಾನೆ. ಬೇರೊಬ್ಬರು ಜ್ಞಾಪಿಸಿಕೊಟ್ಟಾಗ ನೆನಪು ಮಾಡಿಕೊಳ್ಳಲು ಹತ್ತಾರು ನಿಮಿಷ ಬೇಕಾಗುವಷ್ಟು ಮರೆತು ಬಿಡಬಹುದು.

ಇಂತಹ ಸ್ಥಿತಿಗೆ ತಲುಪುವುದು ದೌರ್ಬಲ್ಯವೆಂದರೂ ಸರಿಯೇ! ಆದರೂ ಅದು ಅವನ ಪಾಲಿಗೊಂದು ವರದಾನವಾಗಿ ಪರಿಣಮಿಸಿದೆ. ಇಲ್ಲದಿದ್ದರೆ, ಭೂಲೋಕ ತನ್ನ ಅಲ್ಪ ದುಃಖಗಳ ಬಗ್ಗೆ ಕೂಡಾ ಶೋಕಿಸುತ್ತಾ ಮಾನವಲೋಕವೇ 'ರೋದನಾಲಯ"ವಾಗಿ ಪರಿಣಮಿಸಿ, ಜನರೆಲ್ಲಾ ಅಳುಬುರುಕರಾಗಿ ಬಿಡುತ್ತಿದ್ದರು.

ಅಷ್ಟು ಮಾತ್ರವಲ್ಲದೆ ಕಂಡದ್ದು, ಕೇಳಿದ್ದು, ಊಹಿಸಿದ್ದು, ಯೋಚಿಸಿದ್ದು,— ಎಲ್ಲವನ್ನೂ ಸದಾಕಾಲವೂ ಜ್ಞಾಪಕದಲ್ಲಿ ಇಟ್ಟುಕೊಂಡರೆ, ನಮ್ಮ ಮಿದುಳೊಂದು ಭಾರೀ ಉಗ್ರಾಣದಂತಾಗಿ, ಅದೊಮ್ಮೆಗೆ ಬಂದೀತು! ಅಲ್ಲಿಂದ ಬೇಕಾದುದು ಬೇಡವಾದುದೂ ಎಲ್ಲವೂ ಸೇರಿಕೊಂಡಲ್ಲಿಂದ ನಮಗೆ ಬೇಕಾದುದನ್ನು ಹೆಕ್ಕಿಕೊಳ್ಳುವುದೂ ಕಷ್ಟವಾದೀತು ಗಾಳ ಹೆಚ್ಚಾಗಿ ತುಂಬಿದ ಕುಲ್ಲೆಡಿನಂತಾದೀತು! ಅಂದರೆ ಹುಚ್ಚು ಹಿಡಿದೀತು ಪ್ರಪಂಚವೊಂದು ಹುಚ್ಚರ ಆಸ್ಪತ್ರೆಯಾದೀತು!

ಆದಕ್ಕಾಗಿಯೇ ಮನಃಶಾಸ್ತ್ರಜ್ಞರು 'ದುಃಖ' ನೋವುಗಳನ್ನು ಶಮನಗೊಳಿಸಬಲ್ಲ ಸಿದ್ಧೌಷಧ-ಮರವೇ ಎಂದು ಕರೆದಿರುವುದು!

ಕನ್ನಡಿಗರು ಹತವೀರರಾಗಿದ್ದಾರೆಯೆ?

(೧ನೇ ಪುಟದಿಂದ)

ರಾಜ್ಯ ಸಂಪತ್ತು ಹೆಚ್ಚುವುದೆಂದೂ ಮೊದಲಾಗಿ ತಿಳಿದುಕೊಳ್ಳಬೇಕು.

ರಾಷ್ಟ್ರೀಯ ಆರ್ಥಿಕ ಸಂಶೋಧನಾ ಮಂಡಳಿಯು ಇತ್ತೀಚೆಗೆ ಒಂದು ವರದಿಯನ್ನು ಅರ್ಪಿಸಿ ಮಂಗಳೂರು ಬಂದರವನ್ನು ಒಂದು ಆಳವಾದ ಬಂದರವಾಗಿ ಬೆಳೆಸಬೇಕೆಂದೂ ಹಾಸನ-ಮಂಗಳೂರು ರೇಲುದಾರಿಯನ್ನು ತಡಮಾಡದೆ ರಚಿಸಬೇಕೆಂದೂ ಮಲ್ಪೆಯನ್ನು ಹಡಗುಕಟ್ಟುವ ಅಥವಾ ಮೀನುಗಾರಿಕೆಯ ಬಂದರವಾಗಿಯೋ ವಿಶಿಷ್ಟರೀತಿಯಲ್ಲಿ ಬೆಳೆಸಬೇಕೆಂದೂ ಹೇಳಿದೆಯಾಗಿ ತಿಳಿದು ಬರುತ್ತದೆ. ಈ ವರದಿಯ ಹೇಳಿಕೆಗಳು ಯಾವ ಘಟ್ಟಕ್ಕೆ ಬಂದು ನಿಲ್ಲುವವೆಂದು ನಾವು ಈಗಲೇ ಹೇಳುವಂತಿಲ್ಲ. ಕೇವಲ ಕೇಂದ್ರ ಕೊಡುತ್ತದೆ, ಕೊಡಮಾಡಿಕೊಂಡು ಕೊಳ್ಳುವ" ಎಂಬ ನೀತಿಯನ್ನು ನಮ್ಮ ಸರಕಾರ ಹಿಡಿದುದರಿಂದಲೇ ನಾವು ಬಯಸಿದ್ದೆಲ್ಲ ಬೇರೆ ರಾಜ್ಯಗಳ ಪಾಲಿಗೆ ಹೋಯಿತು. ಕೆಚ್ಚಿದೆಯೆ, ಕನ್ನಡಿಗರು ಕಸುವಿಲ್ಲದವರೆಂಬುದನ್ನೂ ಕನ್ನಡಿಗರ ಮೈಸೂರು ಸರಕಾರ ನಿರ್ಬಲವೆಂಬುದನ್ನೂ ಇದುವರೆಗೆ ತೋರಿಸಿಕೊಟ್ಟಂತಾಯಿತು.

ಕನ್ನಡಿಗರೂ ಅವರ ಸರಕಾರವೂ ಇದುವರೆಗೆ ಕೈಸೋಡಿ ನಿರೀಕ್ಷಿಸಿದುದು ಸಾಕು. ನಮ್ಮ ವಿಧಾನ ಸಭೆ—ಮಂಡಲಗಳ ಸದಸ್ಯರೂ ಲೋಕ ಸಭೆ—ರಾಜ್ಯ ಸಭಾ ಸದರೂ ಕನ್ನಡದ ಮುಖ್ಯ ಆವಶ್ಯಕತೆಯಾದ ಬಂದರಗಳ ಅಭಿವೃದ್ಧಿ ಮತ್ತು ಒಳನಾಡು ಹಾಗೂ ಬಂದರ ನಗರಗಳ ಸಂಬಂಧವಾಗಿ ಸಾರಿಗೆ ವ್ಯವಸ್ಥೆಯನ್ನು ಪಡೆದುಕೊಳ್ಳಲು ಏಕ ಕಂಠದಿಂದ ಕೂಗಬೇಕು. 'ಪರಮೇಶ್ವರೋವಾ ದಿಲ್ಲೀಶ್ವರೋವಾ' ನೀತಿಯನ್ನು ಅವಶ್ಯ ಬಿಟ್ಟು ಬಿಡಬೇಕು. ಕನ್ನಡನಾಡಿನ ಆಯಾತ ನಿರ್ಯಾತಗಳನ್ನು ನಿರ್ವಹಿಸಲು ಸಮರ್ಥವಾದ ಬಂದರಗಳನ್ನು ಕನ್ನಡನಾಡಿನಲ್ಲಿಯೇ ಕಟ್ಟುವಂತೆ ರಚನಾತ್ಮಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಕನ್ನಡನಾಡಿನ ಸರಕಾರ ತನ್ನೆಲ್ಲಾ ಶಕ್ತಿಯನ್ನು ಕೇಂದ್ರೀಕರಿಸಿ ಈ ಬಗ್ಗೆ ಹೋರಾಡಬೇಕು. ದ್ವಿತೀಯ ಯೋಜನೆಯ ಅಂತಿಮ ಘಟ್ಟದಲ್ಲಿ ಕನ್ನಡಿಗರ ಸುಸಂಘಟಿತ ಪ್ರಯತ್ನದ ಫಲವಾಗಿ ಶರಾವತಿಕೊಳ್ಳದ ಯೋಜನೆಯು ಆಡಕವಾಗಿರುವುದನ್ನು ಸ್ಮರಿಸಬೇಕು. ಅದೇ ರೀತಿಯ ಅದಕ್ಕಿಂತಲೂ ಹೆಚ್ಚಿನ ಪ್ರಯತ್ನ ಬಂದರ- ರೇಲು ದಾರಿಗಳ ಬಗ್ಗೆ ನಡೆಯಬೇಕು; ತ್ವರಿತದಲ್ಲಿಯೇ ಜಯಶಾಲಿಯಾಗಬೇಕು. ಕನ್ನಡಿಗರಲ್ಲಿಯೂ ಕೆಚ್ಚು ಇದೆಯೆಂಬುದನ್ನು ತೋರಿಸಿಕೊಡಬೇಕು.

ಆದರೆ, ಈ ರೀತಿ ನಡೆಯಲು ಕನ್ನಡಿಗರು ಸಿದ್ಧರಿರುವರೆ? ಕನ್ನಡಿಗರ, ಕನ್ನಡಿಗರ ಸರಕಾರದ ಬಲವೆಲ್ಲ ಚೆಲ್ಲಾಪಿಲ್ಲಿಯಾಗಿ ಹರಡಿ ದುರ್ಬಲವಾಗುವುದನ್ನು, ಆವಶ್ಯಕತೆಯಿಲ್ಲದಲ್ಲಿ ಉಪಯೋಗವಾಗುವುದನ್ನು ನಾವು ವೀಕ್ಷಿಸುವಾಗ, ಕನ್ನಡಿಗರಲ್ಲಿ ಅನೇಕತೆ, ಅತಂತ್ರತೆ, ಅಕರ್ಮಣತೆಗಳು ತಾಂಡವವಾಡಿ ಅಧಿಕಾರಕ್ಕಾಗಿ, ಲಾಭಕ್ಕಾಗಿ ಬೇರೆ ಬೇರೆಯವರು ಬೇರೆ ಬೇರೆಯಾಗಿ ತಮ್ಮ ತಮ್ಮೊಳಗೆ ಕತ್ತಿ ಮಸೆಯುತ್ತಿರುವಾಗ ಕನ್ನಡಿಗರನ್ನು ಕನ್ನಡಾಂಬೆಯೇ ಕೈಬಿಟ್ಟಿದ್ದಾಳೆನ್ನಬೇಕು. ಆದರೆ, ಇದೇ ದುಸ್ಥಿತಿ ಮುಂದಕ್ಕೂ ಮುಂದುವರಿಯಗೊಟ್ಟರೆ, 'ಸ್ವರ್ಣದನಾಡು ಕನ್ನಡನಾಡು" ಉಂಡುಣಲಿಕ್ಕಿರದ ಅರಸನೋಲಗವಾದೀತು. ಆದುದರಿಂದ ಕನ್ನಡಿಗರೆಲ್ಲರೂ ಒಂದಾಗಿ ಮೊದಲು ಕೂಗಬೇಕು—"ಕನ್ನಡಿಗರು ಒಂದೇ; ಕನ್ನಡ ಒಂದೇ" —ಆಗ ನಮ್ಮ ಬೇಡಿಕೆಗಳನ್ನು ತಿರಸ್ಕರಿಸುವ ಧೈರ್ಯವೂ ದಿಲ್ಲೀಶ್ವರರಿಗೆ ಬರಲಾರದು.

ಪಿಗ್ಮಿ—೧

ಪ್ರಸಿದ್ಧ ಮನಶ್ಶಾಸ್ತ್ರಜ್ಞ ಮ್ಯಾಕ್‌ಡೂಗಲ್ ಹೇಳಿರುವಂತೆ ಮಾನವನ ಸಹಜ ಗುಣಗಳಲ್ಲಿ ಸಂಗ್ರಹ ಪ್ರವೃತ್ತಿ—ಕೂಡಿಡುವ ಬುದ್ಧಿ, ಉಳಿತಾಯ ಭಾವನೆಯೂ ಒಂದು. ಮಾನವನ ಜೀವನದ ಹೋರಾಟಕ್ಕೆ, ವಿಜಯಕ್ಕೆ ಬೇಕಾದ ಎಲ್ಲಾ ಶಕ್ತಿ-ಆವಶ್ಯಕತೆಗಳನ್ನು ಪರಮಾತ್ಮನು ಬಾಲ್ಯದಲ್ಲಿಯೇ ಬೀಜರೂಪದಲ್ಲಿ ಒದಗಿಸುವನು. ಅಂತೆಯೇ ಸಂಗ್ರಹ ಪ್ರವೃತ್ತಿಯೂ ಕೂಡಾ. ಇದನ್ನು ಚಿಕ್ಕ ಮಕ್ಕಳಲ್ಲಿ ನಾವು ಧಾರಾಳವಾಗಿ ಕಾಣಬಹುದು ಪುಟ್ಟ ಬಾಲಕರು ತಮ್ಮ ಕುತೂಹಲವನ್ನು ಕೆರಳಿಸುವ ವಸ್ತುಗಳನ್ನು ಆಸ್ಥೆಯಿಂದ ಸಂಗ್ರಹಿಸುತ್ತಿರುವುದನ್ನು ನೋಡದವರಾರು?

ಈ ಸಂಗ್ರಹಬುದ್ಧಿಯು ಅಭಿವೃದ್ಧಿಯೂ ಆಗಬಹುದು; ಕುಂಠಿತಗೊಳ್ಳಲೂಬಹುದು. ಅದು ಸಂದರ್ಭ ಮತ್ತು ಅವಕಾಶಗಳನ್ನಾಧರಿಸಿದೆ. ಯಾವುದೇ ಒಂದು ಕ್ರಿಯೆ ಮತ್ತೆ ಮತ್ತೆ ಆವರ್ತನಗೊಂಡಲ್ಲಿ ಅದು ಬಲಿತು ಅಭ್ಯಾಸವಾಗಿ ಮಾರ್ಪಡುವುದು — ಕುಶಲ ಕಲಾವಿದನ ಕೈಬೆರಳುಗಳು ಅವನಿಗೆ ತಿಳಿಯದೆಯೇ ಮುಂದು ಮುಂದಕ್ಕೆ ಚಲಿಸುವಂತೆ,

ಕೂಡಿಡುವ ಗುಣವೂ ಹಾಗೆಯೇ—
ಉಳಿತಾಯದ ಭಾವನೆಯು ಬಲಿತು
ಸ್ಥಿರ ಅಭ್ಯಾಸವಾಗಲು; ಸುಲಭ ಸಾಧ್ಯವಾಗಲು:

—ಪಿಗ್ಮಿ

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

Edited, Printed & Published by K. H. Shetty, at the Navayuga Press, Udipi, S. India.

40th year of publication. 23-2-1961 ೪೦ನೇ ವರ್ಷ

ಸಂಪುಟ ೪೦ | Vol. 40

ನವಯುಗ

ಸಂಚಿಕೆ ೨೪ | No. 24

ಬೆಲೆ 0-13

ಪ್ರಚಲಿತ ಪ್ರಸಂಗ

ನಾಗಾರಾಜ್ಯದಲ್ಲಿ ನವಮನ್ವಂತರ

> ಭಾರತ ಸರಕಾರವು ನಾಗಾನಾಯಕರೊಡನೆ ಮಾಡಿಕೊಂಡ ಒಡಂಬಡಿಕೆಯಂತೆ ನಾಗಾರಾಜ್ಯದಲ್ಲಿ ಮಾಧ್ಯಮಿಕ ಮಂಡಳವು ಉದ್ಘಾಟನೆಯಾಯಿತು. ಅಹಿಂಸಾಪರರಾಗಿ ಕರ್ತವ್ಯಪಾಲಕರಾಗಿ ಶಾಂತಿ ಸ್ಥಾಪಿಸುವಲ್ಲಿ ನಾಗಾಜನರು ಹಿಂದುಳಿಯಬಾರದು.

ನಾಗಾ ಪ್ರದೇಶದ ಜನಕಾಮನೆಯನ್ನು ಅರಿತುಕೊಂಡು ಅದನ್ನು ಪೂರೈಸುವ ಆಶ್ವಾಸನವಿತ್ತ ಭಾರತ ಸರಕಾರವು ಇದೀಗ ಅವರ ಬೇಡಿಕೆಯನ್ನು ಮನ್ನಿಸುವ ಕಾರ್ಯಕ್ರಮಗಳಲ್ಲಿ ತೊಡಗಲು ಆರಂಭಮಾಡಿದೆ. ಪ್ರತ್ಯೇಕ ಸ್ವತಂತ್ರ ನಾಗಾರಾಜ್ಯದ ಬೇಡಿಕೆಯನ್ನು ಮುಂದಿಟ್ಟು ಹಿಂಸಾಚರಣೆಯಲ್ಲಿ ಫಿಜೊವಿನ ನೇತೃತ್ವದಲ್ಲಿರುವ ಒಂದು ನಾಗಾಜನರ ಪಂಗಡಕ್ಕೆ ಬೆಂಬಲವು ಇಳಿಮುಖವಾಗಿ, ಭಾರತ ಸರಕಾರದ ಅಧೀನದ ಒಂದು ಪ್ರತ್ಯೇಕ ರಾಜ್ಯಸ್ಥಾಪನೆಗೆ ಅಲ್ಲಿ ಬೆಂಬಲ ಹೆಚ್ಚುತ್ತಿದ್ದು, ನಾಗಾ ಪ್ರದೇಶದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಉದ್ದೇಶದಿಂದ ಅವರ ಆ ಬೇಡಿಕೆಗಳನ್ನು ಭಾರತ ಸರಕಾರವು ಮನ್ನಿಸಿತ್ತು.

ಇದೇ ತಿಂಗಳ ೧೮ರಂದು ನಾಗಾ ನೇತಾರರು ಮತ್ತು ಭಾರತ ಸರಕಾರಗಳ ನಡುವಾದ ಒಡಂಬಡಿಕೆಯನ್ವಯ ಮಹತ್ವದ ಹೆಜ್ಜೆಯಾಗಿ ನಾಗಾ ಪ್ರದೇಶದ ವಿವಿಧ ಜಾತಿಗಳ ಪ್ರತಿನಿಧಿಗಳಿಂದ ಕೂಡಿದ ಮಧ್ಯಾವಧಿ ಮಂಡಳವನ್ನು ಅಸ್ಸಾಮದ ರಾಜ್ಯಪಾಲ ಶ್ರೀ ಶ್ರೀನಾಗೇಶರು ಉದ್ಘಾಟಿಸಿದರು.

ಕೊಹಿಮಾದಲ್ಲಿ ಸಮಾವೇಶಗೊಂಡಿದ್ದ ಈ ಸಂಬಂಧದ ಸಭೆಯೊಂದರಲ್ಲಿ ಎಂಟು ಸಹಸ್ರ ನಾಗಾ ಜನರು ಭಾಗ ವಹಿಸಿದ್ದರು. ನಾಗಾ ಜನತೆಯು ರಾಜ್ಯಪಾಲರಿಗೆ ಉತ್ಸಾಹದಿಂದ ನೀಡಿದ ಸ್ವಾಗತ ಹಾಗೂ ನಡೆಸಿದ ಮೆರವಣಿಗೆಗಳಿಂದ ತಮ್ಮ ಬೇಡಿಕೆಯು ಸಿದ್ಧಿಸಿದುದಕ್ಕೆ ಅವರು ತೃಪ್ತಿಯನ್ನು ಪ್ರದರ್ಶಿಸುವಂತಿತ್ತು. ಈ ಪ್ರದೇಶದ ೧೬ ಜಾತಿಗಳ ಪ್ರತೀಕವಾಗಿ ಮೆರವಣಿಗೆಯ ದಾರಿಯಲ್ಲಿ ೧೬ ಮಂಟಪಗಳು ರಚಿತವಾಗಿದ್ದುವು.

'ನಾವು ಜೀವಂತವಿರಲು ಬಯಸುವುದಾದರೆ, ನಮ್ಮ ಹಿಂಸಾ ಪ್ರವೃತ್ತಿಯನ್ನು ದೂರವಿಡಬೇಕು. ವಿಕ್ಷುಬ್ಧವಾಗಿ ಹೋಗಿರುವ ನಾಗಾ ಪ್ರದೇಶದಲ್ಲಿ ಶಾಂತಿ ಮತ್ತು ಸಾಮಾನ್ಯ ಸ್ಥಿತಿಯನ್ನು ಸ್ಥಾಪಿಸುವುದೇ ಅತಿ ದೊಡ್ಡ ಸಮಸ್ಯೆಯಾಗಿದೆ. ಇದರ ಜತೆಗೆ ಭಾರತ ಸರಕಾರ ಹಾಗೂ ನಮ್ಮೊಳಗಾದ ೧೬ ಒಡಂಬಡಿಕೆಗಳನ್ನು ಕಾರ್ಯರೂಪಕ್ಕೆ ತರಬೇಕಾಗಿದೆ' ಎಂದು ನಾಗಾ ಸಮ್ಮೇಳನದ ಅಧ್ಯಕ್ಷ ಡಾ॥ ಇಕಂಗಾಲಿಬೊರವರು ಹೇಳಿ, ಫಿಜೋನ ಕೈಕೆಳಗಿನ ನಾಗಾ ನ್ಯಾಶನಲ್ ಕೌನ್ಸಿಲಿನ ಮೂಲಕ ಹತ್ಯೆ, ರಕ್ತಪಾತ ಮತ್ತು ನಷ್ಟಗಳುಂಟಾದುದರಿಂದ ಅವರನ್ನು ಮೇಲೆ ದೋಷಾರೋಪಣೆ ಮಾಡಿದರು. ಕ್ರೂರಕೃತಿಗಳನ್ನು ತ್ಯಜಿಸಿ ಸೌಹಾರ್ದದಿಂದ ಬಾಳುವುದರಿಂದಲೇ ನಾಗಾ ಜನರ ಏಳಿಗೆಯೆಂಬುದನ್ನು ಅವರು ಒತ್ತಿ ಹೇಳಿದರು.

ಉದ್ಘಾಟಕರಾದ ರಾಜ್ಯಪಾಲ ಶ್ರೀ ನಾಗೇಶರು ಪ್ರತಿನಿಧಿಗಳ ಪ್ರತಿಜ್ಞಾವಿಧಿಯನ್ನು ಮಾಡಿಸುತ್ತ, ಕಳೆದ ಕೆಲವು ವರ್ಷಗಳಲ್ಲಿ ನಾಗ ಗುಡ್ಡಕಾಡುಗಳ ಜನತೆಗೆ ಮತ್ತು ಅಧಿಕಾರಿಗಳಿಗೆ ಉಪದ್ರವ, ಚಿಂತೆ ಮತ್ತು ಸಂಕಟಗಳು ಎದುರು ಬರುತ್ತಿದ್ದುವು. ನಾಗಾ ಜನರು ಶಾಂತಿಯನ್ನು ಬಯಸುತ್ತಿರುವುದು ಸ್ವಾಭಾವಿಕವೇ. ಅವರು ಶಾಂತಿಯನ್ನುಳಿಸಿ, ತಮ್ಮ ಶಕ್ತಿಯನ್ನು ವ್ಯರ್ಥಹರಿಯಗೊಡದೆ, ರಚನಾತ್ಮಕ ಕಾರ್ಯಗಳಲ್ಲಿ ತೊಡಗಿಸಲು ಬದ್ಧಕಂಕಣರಾಗಲಿ ಎಂದು ಹಾರೈಸಿದರು.

ಸರಕಾರ ಮತ್ತು ಜನತೆಯು ಕಳೆದ ಕಾಲವನ್ನು ಮರೆತು ಬಿಟ್ಟು, ಹೊಸ ಮನ್ವಂತರೋದಯವಾಗುವಂತಾಗಲೆಂಬುದೇ ಈ ಹೊಸ ವ್ಯವಸ್ಥೆಯ ಉದ್ದೇಶ. ಇದು ಕೈಗೂಡಿತೆಂದರೆ, ನಾಗಾ ಪರ್ವತಶ್ರೇಣಿಗಳಲ್ಲಿ ಹರಡಿದ್ದ ಉಪದ್ರವ ಅಂಧಕಾರದೆಡೆ ಈ ದಿವ್ಯಜ್ಯೋತಿಯೊಂದು ಉದಿಸಿದಂತಾಗುವುದು. ನಾಗಾ ಪ್ರದೇಶದ ಹಿತಕ್ಕಾಗಿ ಉದ್ವೇಗ ಮತ್ತು ಕೋಪದ ಭಾವನೆಗಳನ್ನು ದೂರೀಕರಿಸಿ, ದುಡಿಯಬೇಕು ಮತ್ತು ಭಾರತದ ನಾಗರಿಕರಾಗಿ ಸೇರಿಕೊಂಡು ಕಾರ್ಯತತ್ಪರರಾಗುವ ಸಂಕಲ್ಪವನ್ನವರು ಮಾಡಬೇಕು. ಭಾರತದ ಸ್ವಾತಂತ್ರ್ಯದ ಫಲವನ್ನು ಇತರ ಜನರು ಅನುಭವಿಸುವಂತೆಯೇ ನಾಗಾ ಜನರೂ ಅನುಭೋಗಿಸುವಂತಾಗಬೇಕು.

ನಾಗಾರಾಜ್ಯದ ಈ ಮಧ್ಯಾವಧಿ ಮಂಡಳದ ನೇಮಕವು ಪ್ರಥಮ ಹೆಜ್ಜೆಯಾಗಿದೆ. ಮುಂದಕ್ಕೆ ನಾಗಾಪ್ರದೇಶವನ್ನು ಪ್ರತ್ಯೇಕವಾಗಿ ರಚಿಸಲಾಗುವುದು. ಆಗ ಇದಕ್ಕೊಂದು ವಿಧಾನಸಭೆ ಹಾಗೂ ಸಚಿವ ಸಂಪುಟವು ನಿರ್ಮಾಣಗೊಳ್ಳುವುವು. ಈ ನಡುವಣ ಸಾಂಕ್ರಾಮಿಕ ಸಮಯದಲ್ಲಿ ಈ ಮಾಧ್ಯಮಿಕ ಸಮಿತಿ ಮತ್ತು ಪ್ರಾಂತಿಕ ಪರಿಷತ್ತು ಒಂದುಗೂಡಿ ರಾಜ್ಯಾಭಿವೃದ್ಧಿಯತ್ತ ರಚನಾತ್ಮಕ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಅತ್ಯವಶ್ಯ. ಅಸ್ತವ್ಯಸ್ತವಾಗಿದ್ದ ರಾಜ್ಯದಲ್ಲಿ ಹಿಂಸಾಚಾರವನ್ನು ತಡೆದು ಶಾಶ್ವತ ಶಾಂತಿಯನ್ನು ಸ್ಥಾಪಿಸುವುದೇ ಇಂದು ಅವು ಎದುರಿಸಬೇಕಾದ ಪ್ರಧಾನ ಕರ್ತವ್ಯವೆನಿಸಿವೆ.

"ಭಾರತದ ಯಾವ ಮೂಲೆಯ ಜನರೇ ಇರಲಿ ತಮ್ಮ ಮೂಲ ಸಂಸ್ಕೃತಿಗೆ ಅನುಸಾರವಾಗಿ ಯಾವುದೇ ರಾಜ್ಯದಲ್ಲ

(೧೨ನೇ ಪುಟ ನೋಡಿರಿ)

R. O C No B 3/681/61

UDIPI MUNICIPALITY.

NOTICE

Is hereby given that the right of collecting fees in the Municipal Markets, Cart Stands, Jutka Stand, Mutton stalls and slaughter house for the year 1961—62 will be sold by public auction by the Municipal Commissioner, Udipi on Tuesday the 28th February 1961 at 3 P. M in the Municipal Office, Udipi.

The sale is subject to the rules in force. The three existing mutton stalls will be sold separately.

Further particulars or information may be had from the Municipal Office, Udipi, on all working days during office hours.

I Joshua,
Commissioner.

Municipal Office, Udipi.
Dated 17—2—1961

R O C. No. B 3/681/61

ಉಡುಪಿ ಮುನ್ಸಿಪಾಲಿಟಿ

ನೋಟೀಸು

ಈ ಮೂಲಕ ತಿಳಿಯಪಡಿಸುವುದೇನೆಂದರೆ,— 1961—62ನೇ ವರ್ಷದಲ್ಲಿ ಉಡುಪಿ ಮುನ್ಸಿಪಾಲಿಟಿಯ ಆಡಳಿತಕ್ಕೆ ಒಳಪಟ್ಟ ಮಾರ್ಕೆಟುಗಳು, ಗಾಡಿ ಚಾಕ, ಜಟ್ಕಾ ಚೌಕ, ಮಟನ್ ಸ್ಟಾಲ್ ಮತ್ತು ವಧಾಗೃಹದಲ್ಲಿ ಕರ ವಸೂಲು ಮಾಡುವ ಹಕ್ಕನ್ನು ಮುನ್ಸಿಪಲ್ ಕಮಿಶನರವರು ತಾರೀಕು 28—2—1961ನೇ ಮಂಗಳವಾರ ಅಪರಾಹ್ನ ಘಂಟೆ3.00ಕ್ಕೆ ಮುನ್ಸಿಪಲ್ ಆಫೀಸಿನಲ್ಲಿ ಆ ಕುರಿತು ಜ್ಯಾರಿಯಲ್ಲಿರತಕ್ಕ ನಿಯಮಗಳಿಗನುಸಾರವಾಗಿ ಬಹಿರಂಗವಾಗಿ ಏಲಂ ಮೂಲಕ ಮಾರಾಟ ಮಾಡುವರು.

ಮೂರು ಮಟನ್ ಸ್ಟಾಲುಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಏಲಂ ಮಾಡಲಾಗುವುದು.

ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಆಫೀಸು ಸಮಯ, ಮುನ್ಸಿಪಲ್ ಆಫೀಸಿಗೆ ಬಂದು ತಿಳಕೊಳ್ಳಬಹುದು

ಐ ಜೋಶುವ,
ಕಮಿಶನರ್.

ಮುನ್ಸಿಪಲ್ ಆಫೀಸ್, ಉಡುಪಿ
ತಾ. 17-2-1961

ಮಂಗಳೂರಲ್ಲಿ ಈಗಾಗಲೇ ತೆರೆಯಲ್ಪಟ್ಟು ಪ್ರಗತಿಯಿಂದ ಮುಂದೆ ಸಾಗುತ್ತಿರುವ ಇನ್ನೊಂದು ಪ್ರಸಿದ್ಧ ಜವುಳಿ ಮಳಿಗೆ—

ಸಾರೀ ಎಂಪೋರಿಯಮ್

ಕೆಥೊಲಿಕ್ ಕ್ಲಬ್ಬಿನ ಎದುರು, ಹಂಪನಕಟ್ಟಾ, ಮಂಗಳೂರು-1

ನಿಮ್ಮ ಉತ್ತಮ ಆಯ್ಕೆಗೆ ಯೋಗ್ಯವೆಂದೆನಿಸಿದ ರೇಶ್ಮೆ ಸೀರೆಗಳೂ, ಹತ್ತಿ ನೂಲಿನ ಸೀರೆಗಳೂ ಸರ್ವೋತ್ಕೃಷ್ಟವಾಗಿವೆ, ಯಾವತ್ತೂ ತರದ ಶರ್ಟಿಂಗ್, ಕೋಟಿಂಗ್, ಚೀಟ್ಸ್, ಸಿಲ್ಕ್, ನೈಲಾನ್ ಇತ್ಯಾದಿ ಬಟ್ಟೆಬರೆಗಳಿಗೂ ಸಂದರ್ಶಿಸಿರಿ —

SAREE EMPORIUM

Opposit Catholic Club.
HAMPANKATTA, **MANGALORE—1.**

ESTD. 1921

NAVAYUGA
KANNADA WEEKLY,
UDIPI.

Founder
Late Sri A. B. Shetty,
Former Minister for Public Health, Govt of Madras & Govt. of Mysore.

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ. ೧೯೨೧.

ಗೌರವ ಸಂಪಾದಕರು.
ಎಸ್. ಗೋಪೀಚಂದ ರಾವ್,
ವಿದ್ವಾನ್.
ಬಿ. ರಾಮರಾಯ ಶೆಟ್ಟಿ,
ಬಿ. ಎ., ಎಲ್. ಟಿ.

ಸಂಚಾಲಕ ಸಂಪಾದಕರು.
ಕೆ. ಹೊನ್ನಯ್ಯ ಶೆಟ್ಟಿ.

●

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3 50
ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ.
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ 6-75
ಬಿಡಿಪ್ರತಿ ರೂ 0-13

ಚಂದಾ ಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಕಥಾ ವಿಹಾರ:

ನಾಪತ್ತೆಯಾದ ಪೆನ್ನು

ಕಿಶೋರ ಅಣ್ಣನಾದರೂ ತಂಗಿ ಲಲಿತೆಯ ವರ್ಗದಲ್ಲೇ ಕಲಿಯುತ್ತಿದ್ದ— ಇದರಿಂದಾಗಿಯೇ ಅವರ ಸಂಬಂಧ ಅಷ್ಟಕಷ್ಟೆ. ಆದರೆ, ನಾಪತ್ತೆಯಾದ ಲಲಿತೆಯ ಪೆನ್ನು ಮರಳಿ ದೊರೆತಾಗ, ಈ ಅಣ್ಣತಂಗಿಯರ ನಡುವೆ ಮಧುರ ಸಂಬಂಧವನ್ನೂ ಮೂಡಿಸಿತು.

ಶಾಲೆ ಪ್ರಾರಂಭವಾಗಿರಲಿಲ್ಲ. ಆದರೆ ತರಗತಿಯಲ್ಲಿ ಎಲ್ಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರೂ ಉಪಸ್ಥಿತರಿದ್ದರು.

ಲಲಿತಾ ಮೆಲ್ಲನೆ ಕಿಶೋರನ ಬಳಿ ಸಾರಿ ಕೇಳಿದಳು—"ಸ್ವಲ್ಪ ಪೆನ್ಸಿಲು ಕೊಡುವಿಯಾ, ಅಣ್ಣಾ?"

ಕಿಶೋರ್ ಕೊಂಚಕಾಲ ಲಲಿತೆಯನ್ನು ದಿಟ್ಟಿಸಿ ನೋಡಿದ. ಹಿರಿತನದ ಅಧಿಕಾರದ ವಾಣಿಯಿಂದಲೇ ಕೇಳಿದ— "ನಿನ್ನ ಪೆನ್ ಎಲ್ಲಿ ಹೋಯಿತು?"

ಲಲಿತಾ ಮಾತಾಡಲಿಲ್ಲ. ದೀನ ದೃಷ್ಟಿಯಿಂದ ಆತನನ್ನೇ ನೋಡತೊಡಗಿದಳು.

ಶಾಲೆ ಪ್ರಾರಂಭವಾಗಲು ಇನ್ನು ಐದೇ ಐದು ನಿಮಿಷ ಬಾಕಿಯುಳಿದಿತ್ತು. ಆ ಮೇಲೆ "ಢಣ—ಢಣ!" ಗಂಟೆ ಬಾರಿಸುತ್ತಾರೆ ತಪನಂತರ, ಉಪಾಧ್ಯಾಯರು ತರಗತಿಗೆ ಬರುತ್ತಾರೆ...... ಬಂದೇ ಬರುತ್ತಾರೆ!........

ಲಲಿತೆಯ ಎದೆ ಹೊಡೆದುಕೊಳ್ಳುತಿತ್ತು.

"ಮರೆತುಬಿಟ್ಟೆನಣ್ಣ. ಮನೆಯಲ್ಲೇ ಉಳಿದು ಹೋಯಿತು"—ಆಕೆಯ ಸ್ವರ ನಡುಗುತಿತ್ತು. ಕಣ್ಣು ಮಂಜಾಗಿತ್ತು. ಉಪಾಧ್ಯಾಯರು ಕ್ಲಾಸಿಗೆ ಬಂದು, ನೋಟ್ಸು ಕೊಡುತ್ತಾರೆ. ಬರೆದುಕೊಳ್ಳದವರು ಆ ಇಪ್ಪತ್ತು ಮೂವತ್ತು ಮಂದಿಯೆದುರು, ಅಪರಾಧಿಯೆನಿಸಿ, ಎಲ್ಲರಿಗಿಂತ ಎತ್ತರದಲ್ಲಿ ಮುಖಭಂಗಿತರಾಗಿ ನಿಂತುಕೊಳ್ಳಬೇಕಿತ್ತು. ತರಗತಿಯಲ್ಲಿ ಚುರುಕಾಗಿದ್ದ ಲಲಿತೆಗೆ ಆ ಶಿಕ್ಷೆ ಅಸಹನೀಯವಾಗಿತ್ತು; ಆದರೇನು? ಆಕೆಯ ಬಳಿ ಇವತ್ತು ಪೆನ್ನೂ ಇರಲಿಲ್ಲ; ಪೆನ್ಸಿಲೂ ಇರಲಿಲ್ಲ!

"ಸಾಧ್ಯವಿಲ್ಲ! ಮರೆತಿಯೇಕೆ? ಪೆನ್ಸಿಲು ಕೊಡಲಿಕ್ಕೆ ಸಾಧ್ಯವೇ ಇಲ್ಲ"—ಅಣ್ಣನೆಂಬ ಹಿರಿಮೆಯ ಒರಟುತನ ಕಿಶೋರರ ಸ್ವರದಲ್ಲಿತ್ತು.

ಚಿಮ್ಮನೆ ಚೆಲ್ಲಾಡಿತು, 'ಕಣ್ಣಿನ ಕಾರಂಜಿ' ಲಲಿತೆ ಮತ್ತಲ್ಲಿ ನಿಲ್ಲದಾದಳು. ತನ್ನ ಸ್ಥಳಕ್ಕೆ ಬಂದು ಡೆಸ್ಕಿನ ಮರೆಯಲ್ಲೇ ಬಿಕ್ಕಳಿಸತೊಡಗಿದಳು ಅಳುವನ್ನು ತಡೆದುಕೊಳ್ಳಬೇಕೆಂಬ ಅವಳ ಪ್ರಯತ್ನವೆಲ್ಲ ನಿಷ್ಫಲವಾಯಿತು. ಜೊತೆಗಾತಿಯರು 'ಏನು, ಏನೆಂ"ದು ವಿಚಾರಿಸುತ್ತಲೇ ಅಳುಮೇರೆ ಮೀರಿತು. ಯಾರಿಗೂ ಏನಾಯಿತೆಂದು ತಿಳಿಯಲಿಲ್ಲ; ಕುತೂಹಲದಿಂದ ನೋಡುತಿದ್ದರು. ಕಿಶೋರ, ಮುಖ ಬಿಗಿಹಿಡಿದುಕೊಂಡೇ ನೋಡುತಿದ್ದ, ತಂಗಿಯನ್ನು. ಇಡೀ ಕ್ಲಾಸು ಸ್ತಬ್ಧವಾಗಿತ್ತು.

"ಢಂ ಢಣ ಢಣ ಢಣಣಣಣ!"

ಗಂಟೆಯಾಯಿತು; ಅದರ ಪ್ರತಿಧ್ವನಿಯ ಬೆನ್ನಿಗೇ ಬಂದರು, ಉಪಾಧ್ಯಾಯರು. ಲಲಿತಾ ತನ್ನಿಂದಾದಷ್ಟು ಮುಖನಗಿಸಿಕೊಂಡು, ದುಃಖ ಹಿಂಗಿಸಿಕೊಂಡು ಎಲ್ಲರೊಡನೆ ಎದ್ದುನಿಂತಳು.

ಉಪಾಧ್ಯಾಯರು ಆಕೆಯ ಕಡೆ ಗಮನವೀಯಲಿಲ್ಲ. ನೋಟ್ಸು ಓದಿಹೇಳಲು ಪ್ರಾರಂಭಿಸಿದರು. ಎಲ್ಲರೂ ಬರೆದುಕೊಳ್ಳತೊಡಗಿದರು.

ಆದರೆ ಲಲಿತಾ ...? ಅಪರಾಧಿನೀ! ಮೆಲ್ಲನೆ ಅಪರಾಧಿನಿಯಾಗಿಯೇ ಎದ್ದು ನಿಂತುಕೊಂಡಿದ್ದಳು.

ಆಕೆಯೊಬ್ಬಳ ಹೊರತು ಮತ್ತೆಲ್ಲರೂ ನೋಟ್ಸು ಬರೆದುಕೊಳ್ಳುತ್ತಿರುವುದನ್ನು ಕಂಡುಕೊಂಡರು, ಮಾಸ್ತರ್.

"ಏನು? ನೋಟ್ಸು ಬರೆದುಕೊಳ್ಳುವುದಿಲ್ಲವೇಕೆ?"

ಮತ್ತೆ ಕಾರಂಜಿಯ ಕಟ್ಟು ಒಡೆಯಿತು. ಡೆಸ್ಕಿನ ಮೇಲೆ ಕಂಬನಿಯ ಮುತ್ತುಗಳು ಉರುಳತೊಡಗಿದುವು ಆಕೆಗೆ ತನ್ನನ್ನು ತಾನು ಸಂಭಾಳಿಸಿಕೊಳ್ಳಲು ಸಾಧ್ಯವಾಗದೆ ತತ್ತರಿಸಿ ಹೋದಳು.

ಕಿಶೋರ ನೋಡಿದ; ದಿಗಿಲುಬಿದ್ದು ನೋಡಿದ ತನ್ನ ತಂಗಿಯ ಪರಿಸ್ಥಿತಿಯನ್ನು ಕಂಡು ಆತನ ಹೃದಯವೂ ಕರಗಿತು. ನಿರಪರಾಧಿನಿ ತಂಗಿ ಅಪರಾಧಿಯಾಗಿ ಬಿಕ್ಕಳಿಸುತಿದ್ದಾಳೆ! ತನ್ನ ಬಳಿ ಒಂದು ಪೆನ್ ಒಂದು ಪೆನ್ಸಿಲ್ ಇದೆ, ಆಕೆಯ ಬಳಿ ಏನೂ ಇಲ್ಲ!

ತಟ್ಟನೆ ಎದ್ದ ಕಿಶೋರ್. ಕೈಯಲ್ಲಿ ಪೆನ್ಸಿಲನ್ನು ಹಿಡಿದು, "ಸರ್!" ಎಂದು ಸಂಜ್ಞಾ ಮಾತ್ರದಿಂದಲೇ ಉಪಾಧ್ಯಾಯರ ಒಪ್ಪಿಗೆಯನ್ನು ಪಡೆದ, ತಂಗಿಗೆ ಕೊಟ್ಟುಬಂದ. ಲಲಿತಾ ಕೃತಜ್ಞತಾಭಾವದಿಂದ, ಅಭಿಮಾನದಿಂದ, ಅಣ್ಣನನ್ನೊಮ್ಮೆ ನೋಡಿ, ಕುಳಿತು ಬರವಣಿಗೆಗೆ ಸಿದ್ಧಳಾದಳು.

ಈ ಅಣ್ಣತಂಗಿಯರಿಬ್ಬರಿಗೂ ಒಂದೇ ತರಗತಿಯಾಗಲು ಕಿಶೋರನ ಮಂದ ಬುದ್ಧಿಯೇ ಕಾರಣವಾಗಿತ್ತು. ಇದೇ ಮೂಲ ಕಾರಣವಾಗಿತ್ತು, ಇಂದಿನ ಈ ಘಟನೆಗೆ!

ಲಲಿತಾ ಚುರುಕು; ತಾನು ಹೆಡ್ಡ! ತಾನು ಪ್ರತಿದಿನ ಉಪಾಧ್ಯಾಯರೆದುರು ಅಪರಾಧಿಯೆನಿಸಿಕೊಳ್ಳುತಿದ್ದೆ; ಆದರೆ ಆಕೆ ಒಂದು ದಿನವೂ ಹಾಗಾಗುದಿಲ್ಲ. ಮೇಲಾಗಿ ಆಕೆ ನನಗಿಂತ ಚಿಕ್ಕವಳು! ಛೇ, ನಾಚಿಕೆಗೇಡು! ಇವತ್ತು—ಏನಾದರಾಗಲಿ—ಆಕೆಯನ್ನು ಅಪರಾಧಿನಿಯನ್ನಾಗಿ ಮಾಡಿಯೇ ಬಿಡುವೆನು! ಹೂಂ!

ಲಲಿತಾ ಪೆನ್ನು ತರಲು ಮರೆತುಬಿಟ್ಟಿದ್ದಲ್ಲ. ಆಕೆ ಬೆಳಿಗ್ಗೆ ಬರೆದು ಪೆನ್ನನ್ನು ತನ್ನ ಚೀಲದಲ್ಲೇ ಹಾಕಿದ್ದಳು. ಆದರೆ ಆಕೆ ಕಾಣದಂತೆ ಕಿಶೋರ ಕಾರ್ಯ ಸಾಧನೆಯ ಸಲುವಾಗಿ ತೆಗೆದುಬಿಟ್ಟಿದ್ದ, ಅಲ್ಲಿಂದ! ಮನೆಯಲ್ಲೇ ಎಲ್ಲೋ ಅಡಗಿಸಿಟ್ಟಿದ್ದ.

ಆತನ ಹಂಚಿಕೆಯಂತೆ ಲಲಿತಾ ಅಪರಾಧಿನಿಯಾದಳು ಆದರೆ ಆಕೆಯ ನೊಂದ ಕಣ್ಣೀರನ್ನು ಸಹಿಸದಾದ, ಆತ. ತನ್ನ ಕೆಲಸಕ್ಕೆ ತಾನೇ ನೊಂದುಕೊಂಡ; ಅಂತೆಯೇ ಪುನಃ ಪೆನ್ಸಿಲ್ ಕೊಟ್ಟುಬಂದ.

ಶಾಲೆಬಿಡುವ ತನಕವೂ ಲಲಿತೆಗೆ ಇದೇ ಚಿಂತೆ "ಚೀಲಕ್ಕೆ ಹಾಕಿದ ಪೆನ್ನು ಎಲ್ಲಿಗೆ ಹೋಗಿರಬಹುದು?"

"ಪ್ರಾಯಃ ಚೀಲಕ್ಕೆ ಹಾಕಲೇ ಮರೆತಿರಬೇಕು ನಾನು" ಎಂದುಕೊಂಡಳು ತನ್ನಲ್ಲಿಯೇ.

ಆ ದಿನ ಉಪಾಧ್ಯಾಯರು ಹತ್ತು ಪ್ರಶ್ನೆಗಳನ್ನು ಕೊಟ್ಟಿದ್ದರು. ಪ್ರತಿ ಪ್ರಶ್ನೆಗಳಿಗೂ ಹತ್ತು—ಹತ್ತು ಮಾರ್ಕುಗಳು. ಅವುಗಳ ಉತ್ತರವನ್ನು ಮನೆಯಲ್ಲಿ ಬರೆದುಕೊಂಡು ತರಬೇಕಿತ್ತು.

"ಸುಂದರವಾದ ಅಕ್ಷರದಿಂದ ಬರೆದು ತರಬೇಕು ಯಾರೂ ಇನ್ನೊಬ್ಬರ ನಕಲು ತೆಗೆಯಬಾರದು. ಸ್ವಂತ ಶಕ್ತಿಯಿಂದ ಎಷ್ಟು ಸಾಧ್ಯವೋ ಅಷ್ಟನ್ನು ನಾಳೆ ತಪ್ಪದೆ ಬರೆದು ತರಬೇಕು"—ಎಚ್ಚರಿಕೆಯಿತ್ತಿದ್ದರು, ಉಪಾಧ್ಯಾಯರು.

ಗಂಟೆ ಹನ್ನೆರಡಕ್ಕೆ ಶಾಲೆ ಬಿಟ್ಟಿತು. ವಿದ್ಯಾರ್ಥಿಗಳೆಲ್ಲರೂ ಗುಂಪುಗೂಡಿ ಶಾಲೆಯಿಂದ ಹೊರಬಿದ್ದರು.

ದಾರಿಯಲ್ಲಿ ಕಿಶೋರನೊಡನೆ ಹೇಳಿದಳು, ಲಲಿತೆ—"ಅಣ್ಣ ನನ್ನ ಪೆನ್ನು ಎಲ್ಲಿ ಹೋಯಿತೋ ತಿಳಿಯದು. ಚೀಲಕ್ಕೆ ಹಾಕಿಕೊಂಡಿದ್ದೆ..."

"ಹುಚ್ಚೀ, ಹೋಗುವುದೆಲ್ಲಿಗೆ? ಮನೆಯಲ್ಲೇ ಎಲ್ಲೋ ಇರಬೇಕು. ಆ ಮೇಲೆ ಹುಡುಕುವ"—ತಂಗಿಯನ್ನು ಸಮಾಧಾನಪಡಿಸಿದ.

ಆತ ಪಶ್ಚಾತ್ತಾಪದಿಂದ ಒಳಗೊಳಗೇ ಕರಗಿಹೋಗಿದ್ದ! "ಏನೂ ಅರಿಯದ ಇಂಥ ತಂಗಿಗೆ ನಾನು ಎಂಥ ದ್ರೋಹಗೆಯ್ದೆ!"

ಈ ಅಣ್ಣ ಆಗ ಒಮ್ಮೆ ಕೊಡೆನೆಂದರೂ ಕೊನೆಗೆ ತನ್ನ ಮೇಲೆ ಕನಿಕರ ತಾಳಿ

(೧೧ನೇ ಪುಟ ನೋಡಿರಿ)

ಠೇವಣಾತಿಗಳು........ಆಕರ್ಷಕ ಬಡ್ಡಿ ದರಗಳು

ಜೀವನದ ವೆಚ್ಚವು ದಿನೇ ದಿನೇ ಹೆಚ್ಚುತ್ತಲಿದ್ದರೂ, ಕಷ್ಟಪಟ್ಟು ಉಳಿಸಿದ ನಿಮ್ಮ ಹಣಕ್ಕೆ—ಅತ್ಯಗತ್ಯವಿರುವ ಸುರಕ್ಷಿತತೆ ಮತ್ತು ಭದ್ರತೆಗಳೊಂದಿಗೆ—ಅತ್ಯಾಕರ್ಷಕ ದರದಲ್ಲಿ ಬಡ್ಡಿ ಕೊಟ್ಟು, ನಿಮ್ಮನ್ನು ಸಂತುಷ್ಟರಾಗಿ ಮಾಡಲು

ಕೊರ್ಪೊರೇಶನ್ ಬೇಂಕು

ತಾನು ಠೇವಣಾತಿಗಳ ಮೇಲೆ ಕೊಡುವ ಬಡ್ಡಿ ದರಗಳನ್ನು ಇತ್ತೀಚೆಗೆ ಬದಲಾಯಿಸಿದೆ.

ವಿವರಗಳನ್ನು
ನಿಮಗೆ ಸಮೀಪವಿರುವ ಇದರ ಶಾಖೆಯಿಂದ ಪಡೆಯಬಹುದು.

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ವಿಚಾರವರ್ಷ

ನಿವೃತ್ತರಾಗುವ ಆತುರದಲ್ಲಿ....

ಹತ್ತು ವರ್ಷಗಳಿಗಿಂತ ಹೆಚ್ಚು ಕಾಲ ಅಧಿಕಾರದಲ್ಲಿದ್ದ ಕಾಂಗ್ರೆಸಿಗರು ಸ್ವೇಚ್ಛೆಯಿಂದ ಅದನ್ನು ಬಿಟ್ಟು ಬರಬೇಕು ಎಂದು ಸಂಜೀವ ರೆಡ್ಡಿಯವರ ಭಾಷಣ ತಾಗಿದುದು ಯಾರಿಗೆ? ಅವರೇನು ಮಾಡಿಯಾರು? ಅದರಿಂದ ಏನಾದೀತು?

ಶ್ರೀ ಎಸ್. ಗೋಪೀಚಂದ ರಾವ್, ವಿದ್ವಾನ್.

ಮೂರನೆಯ ಸಾರ್ವತ್ರಿಕ ಚುನಾವಣೆಗಳು ಸಮೀಪಗತವಾಗುತ್ತಿರುವಂತೆ ಜನತೆಯ ವಿಚಾರಧಾರೆಯೂ ನಾನಾ ರೀತಿಯಾಗಿ ಹರಿಯತೊಡಗಿದೆ. ರಾಜಕಾರಣಿಗಳ ಲಕ್ಷ್ಯವೀಗ ಸಂಪೂರ್ಣ ರಾಜಕಾರಣದ ಸುತ್ತಲೇ ಸುಳಿದಾಡುತ್ತಿದೆ. ಕಾಂಗ್ರೆಸ್ಸು ಟಿಕೇಟನ್ನು ಪಡೆಯಲು ಹೊಸ ಹೊಸ ಮುಖಗಳು ಉತ್ಸಾಹಪಡುತ್ತಿರುವಂತೆಯೇ ಕೆಲವಾರು ಹಳೆಯ ಧುರೀಣರು ಹಿಂದು ಮುಂದು ನೋಡುವಂತಹ ಪ್ರಸಂಗವೀಗ ತಲೆದೋರುತ್ತಿದೆ. ರಾಷ್ಟ್ರಪತಿ ರಾಜೇಂದ್ರ ಪ್ರಸಾದ ಮತ್ತು ಪ್ರಧಾನಿ ನೆಹರುಗಳು ಕೂಡ ತಾವು ಮುಂದೆಯೂ ತಂತಮ್ಮ ಪದವಿಗಳಲ್ಲಿ ನಿಲ್ಲಬೇಕೇ ಬೇಡವೇ ಎಂದು ಪರಿಶೀಲನೆ ನಡೆಸುವಂತಹ ಸ್ಥಿತಿ ಸದ್ಯ ಒದಗಿಬಂದಿದೆ. ರಾಷ್ಟ್ರದ ಅತಿ ಹಿರಿಯ ಮುತ್ಸದ್ದಿಗಳೂ ಆಳುವ ಪಕ್ಷದ ಅತಿ ಹಿರಿಯರೂ ಭಾರತೀಯರೆಲ್ಲರ ಹೃದಯ—ಮನಸ್ಸುಗಳನ್ನು ಅಪಹರಿಸಿಕೊಂಡಿರುವವರೂ ಆದ ಈ ಮೇಧಾವಿಗಳು 'ವಿವೇಚನೆ'ಗೆ ತೊಡಗುತ್ತಿರುವಾಗ, ಅಧಿಕಾರಕ್ಕಾಗಿ ಬಾಯಿಬಿಡುವ ಹಲವಾರು ರಾಜಕಾರಣಿಗಳು ನಮ್ಮ ಕಣ್ಣಮುಂದೆ ಸುಳಿದಾಡುತ್ತಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷ ಶ್ರೀ ನೀಲಂ ಸಂಜೀವ ರೆಡ್ಡಿಯವರು ಪಕ್ಷದ ಬಲಸಂವರ್ಧನೆಗೆ ಏನೇನು ಉಪಾಯ ವರಸಿದರೆಂದು ಹೇಳುವಂತಿಲ್ಲ. ಪಕ್ಷದೊಳಗೆ ಸದಸ್ಯರು ಪರಸ್ಪರ ಕತ್ತಿ ಚಮಕಿಸುವ ಪ್ರವೃತ್ತಿಯಿಂದ ವಿಮುಖರಾಗುವಂತೆಸಗಿದರೆಂದೂ ಹೇಳಬರುವುದಿಲ್ಲ. ಆದರೆ, ಕಾಂಗ್ರೆಸಿಗರಿಗೆ ದಿಗಿಲುಂಟುಮಾಡುವ ಒಂದು ಉದ್ಗಾರವನ್ನು ಹೊರಡಿಸಿದ್ದಾರೆ; ಈ ಉದ್ಗಾರವು ಕಾಂಗ್ರೆಸ್ಸಿನ ಬಲವಾದ ಕಂಬಗಳನ್ನೇ ಅಲ್ಲಾಡಿಸುವಂತಹದಿದೆ. ಇತ್ತೀಚೆಗೆ ಶರದಾರ ನಗರದಲ್ಲಿ ಸೇರಿದ್ದ ಕಾಂಗ್ರೆಸ್ ಅಧಿವೇಶನದಲ್ಲಿ ಹತ್ತು ವರ್ಷಗಳಿಗಿಂತ ಅಧಿಕಕಾಲ ಅಧಿಕಾರದಲ್ಲಿರುವ ಕಾಂಗ್ರೆಸ್ಸಿಗರು ತಾವಾಗಿಯೇ ಅಧಿಕಾರವನ್ನು ಬಿಟ್ಟು ಹೊರಬಂದು ಪಕ್ಷ ಸಂಘಟನೆಗ ದುಡಿಯಬೇಕು; ಮತ್ತು ಹೊಸಬರಿಗೆ ತಮ್ಮ ಹುದ್ದೆಯನ್ನು ನಿರ್ವಹಿಸುವಂತೆ ತೆರವು ಮಾಡಬೇಕು ಎಂದು ಶ್ರೀ ರೆಡ್ಡಿ ನುಡಿದಿದ್ದರು. ಈ ಬಗ್ಗೆ ಯಾವುದೇ ಒತ್ತಾಯವನ್ನು ತರುವುದು ಸರಿಯಲ್ಲವೆಂದೂ ಈ ಅಧಿಕಾರತ್ಯಾಗವು ಸ್ವೇಚ್ಛೆಯಿಂದಲೇ ಆಗಬೇಕೆಂದೂ ಅವರ ಅಂಬೋಣವಿದೆ.

ಹೊಸಬರನ್ನು ಪಕ್ಷಕ್ಕೆ ಆಕರ್ಷಿಸಲು, ಪಕ್ಷದ ಇತರರಿಗೂ ರಾಜಕಾರಣದಲ್ಲಿ ಹುದ್ದೆಪಡೆಯುವ ಅವಕಾಶಪಡೆಯಲು ಅನುಕೂಲವಾಗಲು ಈ ಯೋಜನೆಯು ಉಪಯುಕ್ತವಾಗಬಹುದು; ಆಗುತ್ತದೆ. ಎರಡನೆಯ ಸಾರ್ವತ್ರಿಕ ಚುನಾವಣೆಯ ನಂತರದಲ್ಲಿ ವಿವಿಧ ರಾಜ್ಯಗಳಲ್ಲಿ ಮುಖ್ಯಮಂತ್ರಿ ಹಾಗೂ ಮಂತ್ರಿ ಮಂಡಳಿಯ ಸದಸ್ಯರನ್ನು ಆರಿಸುವಾಗ ಹೊಸ ಮುಖಗಳಿಗೆ ಅವಕಾಶನೀಡಬೇಕೆಂಬ ಕೇಳಿಕೆಯು ಮುಂದೆ ಬಂದಿತ್ತು. ಆದರೆ, ರಾಜ್ಯಗಳಲ್ಲಿಯಂತೂ ದೂರವುಳಿಯಲಿ, ಕೇಂದ್ರದಲ್ಲಿನ ಮಂತ್ರಿಗಳಲ್ಲಿಯೇ ಗಮನಾರ್ಹವಾದ ಪರಿವರ್ತನೆಯಾಗಲಿಲ್ಲ. ರಾಜ್ಯಗಳಲ್ಲೂ ಹೆಚ್ಚು ಕಡಿಮೆ ಹಿಂದಿನ ಮುಖ್ಯಮಂತ್ರಿಯವರೇ ಮತ್ತೂ ಮುಖ್ಯಮಂತ್ರಿಯಾದರು; ಅವರ ಹಿಂದಿನ ಜತೆಗಾರರೇ ಮುಂದೆಯೂ ಸಹ ಮಂತ್ರಿಗಳಾಗಿ ಉಳಿದರು; ಒಬ್ಬಿಬ್ಬರು ಹೋಗಿ ಹೊಸಬರು ಬಂದಿರಬಹುದು ಅಷ್ಟೆ. ಆದರೆ, ಇದರಿಂದ ಕಾಂಗ್ರೆಸ್ ಪಕ್ಷದಲ್ಲಿ ನಿರಾಸೆಹೊಂದಿ ಅತೃಪ್ತರಾಗಿ ಮಂತ್ರಿ ಮಂಡಳಿಯ ವಿರುದ್ಧ ಅಭಿಪ್ರಾಯ ಸಂಘಟಿಸುವುದರಲ್ಲಿ ತೊಡಗಿದವರೂ ಇಲ್ಲದಿಲ್ಲ.

ಇಂತಹ ಸಂದರ್ಭದಲ್ಲಿ ವ್ಯತ್ಯಾಸವನ್ನೂ ಮಾಡಲು ಬರುವುದಿಲ್ಲವೆಂದು ತಿಳಿದೇ ಶ್ರೀ ರೆಡ್ಡಿಯವರು ತಮ್ಮ ಕಲ್ಪನೆದರು ಆದರೆ, ಈ ಕಲ್ಪನೆಗೆ ಗುರಿಯಾದವರು ರಾಷ್ಟ್ರಪತಿ ಪ್ರಸಾದ ಮತ್ತು ಪ್ರಧಾನಿ ನೆಹರು ಮಾತ್ರ. ಉಳಿದವರಲ್ಲಿ ಸ್ವಾತಂತ್ರ್ಯ ಪ್ರಾಪ್ತಿಯಾದಂದಿನಿಂದಲೂ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡವರು ಬಹಳ ಜನ. ಆದರೆ, ಇವರಾರೂ ಈ ಬಗ್ಗೆ ವಿಶೇಷ ಚಿಂತೆಗೆ ಆಸ್ಪದಕೊಟ್ಟಂತೆ ತೋರುವುದಿಲ್ಲ. ಶ್ರೀ ರೆಡ್ಡಿಯವರೇ ತಮ್ಮ ಅಭಿಪ್ರಾಯವನ್ನು ಹೊರಗೆಡಹಿದಾಗ, ನೆಹರುರಂತಹರ ಬಗ್ಗೆ ಈ ಹೇಳಿಕೆಯು ಅನ್ವಯಿಸುವುದಿಲ್ಲವೆಂದು ಪರಾ ಒರೆದಿದ್ದರೂ ಅವರಂತಹರೇ ವಿಶೇಷವಾಗಿ ಅನುಮಾನಿಸುವಂತಾಗಿದೆ. ಹುದ್ದೆಯಿಂದ ನಿವೃತ್ತಿ ಹೊಂದುವುದೇನೂ ಕಷ್ಟದ ಕೆಲಸವಲ್ಲ. ಶ್ರೀ ನೆಹರು ಅಥವಾ ಡಾ. ಪ್ರಸಾದರು ಅಧಿಕಾರಕ್ಕಾಗಿ ಅಧಿಕಾರದಲ್ಲಿ ಉಳಿದಿರುವರು ಎಂದು ಕನಸಿನಲ್ಲಾದರೂ ಭಾವಿಸುವವ ಭಾರತದಲ್ಲಿಯೇ ಇಲ್ಲ. ಆದರೂ ಅವರಿಬ್ಬರೂ ತುಸು ಹಿಂದೆ ಮುಂದೆ ನೋಡುವಂತಿದೆ.

ಡಾ। ರಾಜೇಂದ್ರ ಪ್ರಸಾದರು ಭಾರತ ಪ್ರಜಾಪ್ರಭುತ್ವದ ಪ್ರಥಮ ರಾಷ್ಟ್ರಪತಿಗಳಾಗಿ ಸೇವೆ ಸಲ್ಲಿಸಿದವರು. ೧೯೫೦ರಿಂದ ಇಂದಿನ ವರೆಗೂ ಅವರು ಆ ಹುದ್ದೆಯಲ್ಲಿ ಉಳಿದಿದ್ದಾರೆ ೧೯೬೨ರಲ್ಲಿ ಹೊಸ ಚುನಾವಣೆಗಳು ನಡೆಯುವ ವರೆಗೂ ಉಳಿಯುತ್ತಾರೆ; ಎಂದರೆ ಒಟ್ಟು ೧೨ ವರ್ಷಗಳ ಕಾಲ ಅವರು ರಾಷ್ಟ್ರಪತಿಗಳಾಗಿ ಉಳಿಯುವಂತಾಯಿತು. ಎರಡನೆಯ ಸಾರ್ವತ್ರಿಕ ಚುನಾವಣಾನಂತರ ಇವರು ಅಧ್ಯಕ್ಷ ಸ್ಥಾನವನ್ನಲಂಕರಿಸಲು ಇಷ್ಟಪಡಲಿಲ್ಲ. ಆದರೆ, ಹಿರಿಯ ರಾಜಕಾರಣಿಗಳ ಹಾಗೂ ಅವರ ಹಿತಚಿಂತಕರ ಒತ್ತಾಯದಿಂದಲೆಂಬಂತೆ ಅವರು ಆ ಸ್ಥಾನವನ್ನು ಸ್ವೀಕರಿಸಿದರು. ಅಷ್ಟು ಮಾತ್ರವಲ್ಲದೆ, ಈ ಅವಧಿಯಲ್ಲಿಯೇ ಅವರು ನಿವೃತ್ತರಾಗ ಬಯಸಿದ್ದರು ಇಲ್ಲಿಯೂ ಅವರನ್ನು ಅದೇ ಸ್ನೇಹಪ್ರವೃತ್ತಿ ಬಂಧಿಸಿತು. ಆದರೇ ಇದ್ದರೂ ೧೯೬೨ರ ನಂತರವೂ ಅದೇ ಸ್ಥಾನದಲ್ಲಿರಲು ಡಾ। ಪ್ರಸಾದರು ಖಂಡಿತ ಒಪ್ಪುವ ಲಕ್ಷಣಗಳು ಗೋಚರಿಸುವುದಿಲ್ಲ. ಇತರ ಹಿರಿಯ ಕಾಂಗ್ರೆಸಿಗರಿಗೂ ಉನ್ನತಾಧಿಕಾರ ಸ್ಥಾನದಲ್ಲಿರುವ ಅವಕಾಶ ಕಲ್ಪಿಸಿ ಕೊಡುವುದು ಮತ್ತು ತನ್ನ ಆರೋಗ್ಯವನ್ನು ಸುಧಾರಿಸಿಕೊಳ್ಳುವುದೇ ಅವರು ನಿವೃತ್ತಿಯ ಬಗ್ಗೆ ಇತ್ತ ಕಾರಣಗಳಾಗಿವೆ. ಜತೆಗೆ ಇತರ ರಾಜಕಾರಣಗಳೂ ಇವರನ್ನು ಪ್ರೇರೇಪಿಸುತ್ತಿವೆ ಎಂದು ತಿಳಿದು ಬಂದಿದೆ. ಹೀಗೆ ಬಾಹ್ಯ ಪ್ರೇರಣೆಯಲ್ಲಿ ಶ್ರೀ ರೆಡ್ಡಿಯವರ ಉದ್ಗಾರವೂ ಒಂದಾಗಿರಬಹುದು. ವರಿಷ್ಠ ನಾಯಕರೇ ಉನ್ನತಾಧಿಕಾರವನ್ನು ಸ್ವೇಚ್ಛೆಯಿಂದ ತೊರೆದು ಕೆಳಗಿಳಿದು ಅನ್ಯರಿಗೆ ಹೊಸ ಪರಿವಾರವನ್ನು ಹಾಕಿ ಕೊಡುವುದ ನ್ಯಾಯವೆಂಬ ಅಭಿಪ್ರಾಯ ಇವರದು.

ಪ್ರಧಾನಿ ನೆಹರೂರವರು ಡಾ। ಪ್ರಸಾದರಿಗಿಂತಲೂ ಹೆಚ್ಚುಕಾಲ ಗದ್ದುಗೆಯಲ್ಲಿ ಉಳಿದಿದ್ದಾರೆ; ತನ್ನ ಕಾಲದಲ್ಲಿ ಭಾರತೀಯರ ಮಾತ್ರವಲ್ಲ ವಿಶ್ವದ ಹೆಚ್ಚಿನವರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ ಆಫ್ರೋ ಏಷ್ಯಾ ಜನಾಂಗಗಳಲ್ಲಿ ಸ್ವಾವಲಂಬನದ ಭಾವನೆಯನ್ನು ಕೆರಳಿಸಿ, ಅವುಗಳಲ್ಲಿ ಒಕ್ಕಟ್ಟು ಸ್ಥಾಪನೆಯಾಗುವಂತೆ ಮಾಡಿದ್ದಾರೆ. ವಿಶ್ವಕ್ಕೆ ಪಂಚಶೀಲದ ತತ್ವಗಳನ್ನು ಧಾರೆಹೊಯ್ದು ಶಾಂತಿ-ಸೌಹಾರ್ದಗಳಿಂದ ಲೋಕಸ್ವರ್ಣಸಂಬಂಧವನ್ನುಳಿಸಿಕೊಂಡು ಸುಖಶಾಂತಿ ಸಾಗರದಲ್ಲಿ ತೇಲಾಡಬಹುದೆಂದು ಸಿದ್ಧಪಡಿಸಿದ್ದಾರೆ ದೇಶದ ಆಂತರಿಕ ವ್ಯವಹಾರಗಳಲ್ಲಿಯೂ ಅಭಿವೃದ್ಧಿ ಕಾರ್ಯಗಳಲ್ಲಿಯೂ ಅತೀವ ಆಸಕ್ತಿಯನ್ನು ತಾಳಿ, ದರಿದ್ರ ಭೂಮಿಯನ್ನು ಶ್ರೀಮಂತವಾಗಿಸಲು ಅಹೋರಾತ್ರಿ ಹೆಣಗುತಿದ್ದಾರೆ. ಭಾರತದಂತಹ ಅಧಿಕ ಸಂಖ್ಯಾಕ, ನಿರಕ್ಷರ ಕುಕ್ಷಿಗಳ, ದರಿದ್ರ ದೇಶದಲ್ಲಿ ಕ್ರಾಂತಿಯಿಂದಲೇ ಏಳಿಗೆ ಸಾಧ್ಯವೆಂದು ನಂಬಿದ್ದವರಲ್ಲಿ ಪ್ರಜಾಪ್ರಭುತ್ವ ತತ್ವಗಳನ್ನು ನೆಟ್ಟು ಅವುಗಳಿಗೆ ಸರಿಯಾಗಿ ನಡೆದುಕೊಂಡೇ ಉದ್ಧಾರ ಕಾರ್ಯ ಸಾಧ್ಯವೆಂಬುದನ್ನು ಪ್ರತ್ಯಕ್ಷ ತೋರಿಸಿ ಕೊಡಲು ಪ್ರಯತ್ನ ನಡೆಸುತ್ತಿದ್ದಾರೆ. ಹಿರಿಯ ಪ್ರಜಾಪ್ರಭುತ್ವ ರಾಷ್ಟ್ರದ ಬಾಲ್ಯಾವಸ್ಥೆಯಲ್ಲಿ ನೆಹರುರಂಥ ಜನನಾಯಕರು ನಮಗೆ ದೊರೆತುದರಿಂದಲೇ ಭಾರತವು ಉತ್ಥಾನ ಪಥಗಾಮಿಯಾಗುತ್ತಿದೆ. ಇಂತಹ ನೆಹರು ಈಗ [illegible] ನಿವೃತ್ತರಾಗಬಯಸಿ [illegible] ಆದರೆ, ಅವರ ಇಚ್ಛೆಯನ್ನು ಪೂರೈಸಿಕೊಳ್ಳುವ ಅವಕಾಶ ದೊರೆಯಲಿಲ್ಲ. ಶ್ರೀ ನೆಹರು ಮುಂದಿನ ಸಾರ್ವತ್ರಿಕ ಚುನಾವಣಾನಂತರವೂ ಪ್ರಧಾನಿಯಾಗಿಯೇ ಮುಂದುವರಿಯಬೇಕೆ? ಎಂಬ ವಿಚಾರ ಅವರು ಮಾತ್ರವಲ್ಲ ವಿಚಾರವಂತರೆಲ್ಲರೂ ಉತ್ತರಿಸಬೇಕಾದ ಪ್ರಶ್ನೆ.

ಪ್ರಜಾಪ್ರಭುತ್ವದಲ್ಲಿ ರಾಷ್ಟ್ರಪತಿಗಳ ಸ್ಥಾನವು ಕೇವಲ ಅಲಂಕಾರ ಪ್ರಾಯವಾದುದು; ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಸಂವಿಧಾನವು ಕಲ್ಪಿಸಿಕೊಟ್ಟಿರುವ ಅಧಿಕಾರವನ್ನವರು ಉಪಯೋಗಿಸಿಕೊಳ್ಳಬಹುದು—ಅದರೂ ಕೇಂದ್ರ ಮಂತ್ರಿಮಂಡಳಿಯ ಅಭಿಪ್ರಾಯ—ಸಲಹೆಗಳಿಗೆ ಹೊಂದಿಕೊಂಡೇ ಇವರು ನಡೆದುಕೊಳ್ಳಬೇಕಾಗುವುದು—ಅದನ್ನು ಬದಲಿಸದ ವರೆಗೆ ರಾಷ್ಟ್ರಾಧ್ಯಕ್ಷರ ಅಧಿಕಾರವ್ಯಾಪ್ತಿಯ ಬಗ್ಗೆ ಎದ್ದ ಕೆಲವಾರು ಪ್ರಶ್ನೆಗಳಿಗೆ ದೊರೆತ, ದೊರೆಯಬಹುದಾದ ಉತ್ತರಗಳು ರಾಷ್ಟ್ರಪತಿಗಳ ಸ್ಥಾನಕ್ಕೆ ಗೌರವವನ್ನೂ ಆದರವನ್ನೂ ಪ್ರದರ್ಶಿಸುತ್ತವೆ ನಿಜವೇ; ಆದರೆ, ಅವರನ್ನು ಕೇವಲ ಅಲಂಕಾರ

(೧೦ನೇ ಪುಟ ನೋಡಿರಿ)

ಸ್ಥಾಪನೆ: 1924

ದಿ ಕರ್ಣಾಟಕ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಆಫೀಸು: ಮಂಗಳೂರು—3.

ಈ ಕೆಳಗಿನ ಬಡ್ಡಿ ದರಗಳಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು.

ಒಂದು ತಿಂಗಳಿಗೆ	.. ಸಾ।। ಸೇಕಡಾ	3-75	ನ.ಪೈಸೆ
ಮೂರು ತಿಂಗಳುಗಳಿಗೆ	,,	4-00	,,
ಆರು ತಿಂಗಳುಗಳಿಗೆ	,,	4-25	,,
12 ತಿಂಗಳುಗಳಿಂದ23 ತಿಂಗಳುಗಳ ವರೆಗೆ	,,	4-50	,,
24 ತಿಂಗಳುಗಳಿಂದ 48 ತಿಂಗಳುಗಳ ವರೆಗೆ ...	,,	4-75	,,

"ಹನಿ ಡಿಪೋಸಿಟ್ಸ್" ನಲ್ಲಿ

ನಿಮ್ಮ ದೈನಂದಿನ ಉಳಿತಾಯವನ್ನು ವಿನಿಯೋಗಿಸಿರಿ.

THE KARNATAKA BANK LIMITED.

ಆಧ್ಯಾತ್ಮಿಕ ವಿಚಾರ

ಭಗವದ್ಗೀತೆಯ ಪ್ರಕಾಶ

> ಪರಮಾತ್ಮನು ನಿಯಮಿಸಿದ ಕರ್ಮಗಳನ್ನು ನಿಷ್ಕಾಮ ಪ್ರೀತಿಯಿಂದ ಮಾಡಿ, ಮಾಡಿದ ಕರ್ಮಗಳೆಲ್ಲವನ್ನೂ ಆತನಿಗೆ ಅರ್ಪಿಸಿ ಸರ್ವ ಜೀವ ಜಂತುಗಳಲ್ಲಿ ವೈರವನ್ನು ಸಾಧಿಸದೆ ಬಾಳುವವನು ಮಾತ್ರ ಪರಮಾತ್ಮ ದರ್ಶನ ಪಡೆಯಬಲ್ಲನು; ಸುಖಶಾಂತಿ ಪಡೆಯಬಲ್ಲನು.

ಶ್ರೀ ಎಂ. ಬಿ. ಶಂಕರ ರಾವ್, ಐ. ಎ. ಎಸ್. (ನಿವೃತ್ತ)

ಕಿರಣ ೧೧: ವಿಶ್ವರೂಪದರ್ಶನ

ಅರ್ಜುನ—ಕೃಷ್ಣನೇ, ನಿನ್ನ ಪರಮಾನುಗ್ರಹದಿಂದ ಆತ್ಮಕ್ಕೆ ಸಂಬಂಧಿಸಿದ ವಿಷಯಗಳೆಲ್ಲಾ ಮನವರಿಕೆಯಾದುವು. ನನ್ನಲ್ಲಿ ಈಗ ಸಂಶಯಗಳಿಲ್ಲ. ನಿನ್ನ ಚ್ಯುತಿಯಿಲ್ಲದ ಮಹಿಮೆಯು ನನಗೆ ಈಗ ಗೋಚರವಾಯಿತು. ಆದರೆ ನಿನ್ನ ದಿವ್ಯ ಸ್ವರೂಪವು ಹೇಗಿದೆ ಎಂದು ತಿಳಕೊಳ್ಳುವ ಆತುರವು ನನ್ನಲ್ಲಿ ಹುಟ್ಟಿದೆ ಪರಂಜ್ಯೋತಿ ಪರಮಾತ್ಮನೇ, ನನ್ನ ಆತುರವನ್ನು ದಯವಿಟ್ಟು ಪೂರೈಸು.

ಭಗವಾನ—ನನಗೆ ಸಾವಿರಾರು ಸ್ವರೂಪಗಳಿವೆ. ನನ್ನ ಸ್ವರೂಪಗಳಿಗೆ ಲೆಕ್ಕವಿಲ್ಲ ಆದಿತ್ಯರೂ, ವಸುಗಳೂ, ರುದ್ರರೂ, ಅಶ್ವಿನಿಯರೂ, ಎಲ್ಲರೂ ನನ್ನ ಸ್ವರೂಪವೇ. ಹಿಂದೆ ನೀನು ಕಾಣದಿರುವ ವೈಚಿತ್ರ್ಯವನ್ನು ಇಂದು ಕಾಣಿಸುವೆನು. ಈ ಇಡಿ ವಿಶ್ವವು ನನ್ನಲ್ಲಿ ಅಡಕವಾಗಿದೆ. ನಿನ್ನ ಕಣ್ಣುಗಳಿಗೆ ಅದು ಗೋಚರವಾಗದು. ಈಗ ಭಕ್ತನಾದ ನಿನಗೆ ನಾನು ದಿವ್ಯ ದೃಷ್ಟಿಯನ್ನು ಕೊಡುತ್ತೇನೆ. ನನ್ನ ಅಪಾರವಾದ ಶಕ್ತಿಯನ್ನು.

ಹೀಗೆ ನುಡಿದು ಕೃಷ್ಣ ಭಗವಾನನು ತನ್ನ 'ವಿಶ್ವರೂಪ'ವನ್ನು ತೋರಿಸುತ್ತೇನೆ. ಅನೇಕ ಮುಖಗಳೂ, ನೇತ್ರಗಳೂ ಇದ್ದು ವಿಚಿತ್ರವಾಗಿ ಪ್ರಕಾಶಿಸಿ, ನವರತ್ನಭರಿತವಾಗಿ ಹಸ್ತದಲ್ಲಿ ದಿವ್ಯಾಯುಧಗಳನ್ನು ಧರಿಸಿಕೊಂಡಿದ್ದ ಆ ರೂಪವನ್ನು ತೋರಿಸುತ್ತಾನೆ. ಕೈಯಲ್ಲಿ ಪುಷ್ಪಮಾಲಿಕೆಗಳು, ಸುಗಂಧ ವಸ್ತುಗಳು, ಇನ್ನು ಹಲವು ಉತ್ತಮ ವಸ್ತುಗಳನ್ನು ಹಿಡಕೊಂಡು ಒಂದು ಸಹಸ್ರ ಸೂರ್ಯಮಂಡಲಗಳ ಪ್ರಕಾಶ ರಾಶಿಯಿಂದ ಕೂಡಿದ ತನ್ನ ವಿಶ್ವರೂಪವನ್ನು ತೋರಿಸುತ್ತೇನೆ ಆಶ್ಚರ್ಯ ಭರಿತನಾಗಿ, ರೋಮಾಂಚನಗೊಂಡ ಪಾರ್ಥನು ತಲೆಯನ್ನು ಬಾಗಿ, ಕರಗಳನ್ನು ಜೋಡಿಸಿ, ತನ್ನ ಮುಂದೆ ನಿಂತಿರುವ ಭಗವಂತನನ್ನು ನಮಸ್ಕರಿಸಿ ಹೀಗೆನ್ನುತ್ತಾನೆ:—

ಅರ್ಜುನ.—ಪರಮಾತ್ಮನೇ, ನಿನ್ನ ದೇಹದಲ್ಲಿ ಸಹಸ್ರಾರು ದೇವತೆಗಳೂ, ನಾನಾ ವಿಧದ ಚರಾಚರವಸ್ತುಗಳೂ ತೋರುತ್ತಿವೆ. ಸಮಸ್ತ ಋಷಿಗಳೂ, ನಾಗದೇವತೆಯರೂ ತೋರುತ್ತಿರುವರು. ಲಕ್ಷಕಟ್ಟಲೆಯ ಮುಖಗಳೂ, ಭುಜಗಳೂ, ಕಣ್ಣುಗಳೂ, ಕಾಣುತ್ತಿವೆ. ಅದ್ಭುತವಾದ ಬೆಳಕು ತೋರುತ್ತಿದೆ. ನಿನಗೆ ಚ್ಯುತಿಯಿಲ್ಲ. ನಿನ್ನ ಕಣ್ಣುಗಳು ಸೂರ್ಯಚಂದ್ರರಂತೆ ತೋರುತ್ತಿವೆ ನಿನ್ನ ಮುಖವು ಅಗ್ನಿಕುಂಡದಂತಿದೆ. ನಿನ್ನ ಪ್ರಭೆಯು ಇಡಿ ಜಗತ್ತನ್ನೇ ಆವರಿಸಿದಂತೆ ಭಾಸವಾಗುತ್ತದೆ. ನಿನ್ನ ಉದರದಲ್ಲಿ ಸಮಸ್ತ ಸುರರು ಕೈಜೋಡಿಸಿ ನಿಂತಿರುವರು. ಋಷಿಗಳು ಸ್ತೋತ್ರಗಳನ್ನು ಹಾಡುತ್ತಿರುವರು. ಗಂಧರ್ವರೂ, ಯಕ್ಷರೂ, ಅಸುರರೂ, ಸಿದ್ಧರೂ, ತಟಸ್ಥರಾಗಿ ನಿಂತಿರುವರು. ನಾನು ನಿನ್ನ ಈ ವಿಶ್ವರೂಪ ದರ್ಶನದಿಂದ ರೋಮಾಂಚಿತನಾಗಿರುವೆನು. ನನ್ನ ಕೈಕಾಲುಗಳು ನಡುಗುತ್ತಿವೆ ನನ್ನ ಧೈರ್ಯವು ಕುಂದಿಹೋಯಿತು. ಪರಮಪುರುಷನೇ, ನನ್ನನ್ನು ಕ್ಷಮಿಸು. ಎಲ್ಲಾ ಕೌರವರೂ, ಪಿತಾಮಹಭೀಷ್ಮನೂ, ಗುರುದ್ರೋಣನೂ, ಕರ್ಣನೂ, ಇತರ ಯೋಧರೂ, ನಮ್ಮ ಕಡೆಯ ಯೋಧರೂ ವೀರರೂ ನಿನ್ನ ಅದ್ಭುತವಾದ ಬಾಯಿಗಳೊಳಗೆ ಪುಗುತ್ತಾ ಇರುವುದು ಕಂಡುಬರುತ್ತಿದೆ. ನದಿಗಳೆಲ್ಲವೂ ಹರಿ ಹರಿದು ಕೊನೆಗೆ ಸಮುದ್ರವನ್ನು ಸೇರುವಂತೆ ಸಮಸ್ತ ಶೂರರೂ, ವೀರರೂ ನಿನ್ನಲ್ಲಿ ಓಡಿಬರುತ್ತಿರುವರು. ನೊಣಗಳು ದೀಪಕ್ಕೆ ಮುತ್ತಿ ಸಾಯುವಂತೆ, ಇವರೆಲ್ಲಾ ನಿನ್ನ ಬಾಯಿಗಳಲ್ಲಿ ಮುತ್ತಿ ನಾಶವಾಗುತ್ತಿರುವರು ನಿನ್ನ ಪ್ರಕಾಶವನ್ನು ನೋಡುವಾಗ ನನ್ನ ಕಣ್ಣುಗಳು ಹೆದರುತ್ತವೆ. ನೀನು ಭಯಂಕರ ಸ್ವರೂಪಿಯಾಗಿ ತೋರುವೆ. ನೀನು ಈ ರೀತಿ ವರ್ತಿಸುವ ಉದ್ದೇಶವೇನು?

ಭಗವಾನ—ಜಗತ್ತನ್ನು ನಾಶಮಾಡುವ ಶಕ್ತಿಯುಳ್ಳ ಕಾಲನು ನಾನೇ. ನೀನಿಲ್ಲದಿದ್ದರೂ, ಕುರುಕ್ಷೇತ್ರದಲ್ಲಿ ನೆರೆದಿರುವ ಯಾವತ್ತೂ ಯೋಧರನ್ನೂ ಸಂಹರಿಸಬಹುದು. ಅವರು ಮರಣಕ್ಕೆ ಗುರಿಯಾಗುವರು. ಆದುದರಿಂದ ಎಚ್ಚೆತ್ತು ನೋಡು ಮತ್ತು ಖ್ಯಾತಿಯನ್ನು ಲಭಿಸು. ನಿನ್ನ ಅಹಂಕಾರಿಗಳಾದ ವೈರಿಗಳ ಗರ್ವವನ್ನು ಮುರಿದು ಬಿಡು. ಅವರು ಅಶುದ್ಧ ಮನಸ್ಸಿನ ನನ್ನನ್ನು ಮರೆತ ಧನದ ಲೋಭದಲ್ಲಿ ಮುಳುಗಿದ ದುರಾತ್ಮರು. ನಿನ್ನ ಶತ್ರುಗಳನ್ನು ನಾನು ಮೊದಲೇ ನಾಶಮಾಡಿದ್ದೇನೆ. ಶೂರ ಪಾರ್ಥನೇ, ನಿಮಿತ್ತ ಮಾತ್ರ ನೀನು ಈಗ ಕಾರ್ಯಕಾರಿಯಾಗು, ಭಯವನ್ನು ಬಿಟ್ಟು ದ್ರೋಣ, ಭೀಷ್ಮ, ಜಯದ್ರಥ, ಕರ್ಣ, ಮೊದಲಾದ ವೀರರನ್ನು ಸಂಹರಿಸು. ಅವರೆಲ್ಲರೂ ನನ್ನ ಶಾಪಕ್ಕೆ ಒಳಪಟ್ಟಿರುವರು. ಯುದ್ಧದಲ್ಲಿ ನಿನಗೆ ಜಯವು ಪ್ರಾಪ್ತಿಸುವುದು.

ಅರ್ಜುನ—ಹೃಷಿಕೇಶನೇ, ನಿನ್ನನ್ನು ಭಜಿಸುವವರು ಶಾಂತಿಯನ್ನು ಪಡೆಯುವರು. ಸಿದ್ಧರು ನಿನಗೆ ಸಾಷ್ಟಾಂಗ ನಮಸ್ಕಾರ ಮಾಡುವರು. ರಕ್ಕಸರು ದಿಕ್ಪಾಲಾಗಿರುವರು, ದುಷ್ಟರು ಏಕೆ ನಿನ್ನನ್ನು ಸ್ತುತಿಸುವುದಿಲ್ಲ? ನೀನೇ ಆದಿ ದೈವ ನೀನೇ ಜಗತ್ತಿನ ಐಶ್ವರ್ಯ, ನೀನೇ ದಿವ್ಯ ಜ್ಞಾನಿ, ನೀನೇ ವೈಕುಂಠ, ನಿನ್ನ ವಿಶ್ವರೂಪವೇ ಧರ್ಮ, ನೀನೇ ಐಶ್ವರ್ಯ ರಾಶಿ. ನೀನೇ ವಾಯು, ನೀನೇ ಯಮನು, ನೀನೇ ಅಗ್ನಿ, ನೀನೇ ಬ್ರಹ್ಮನ ತಾತನು. ಸಹಸ್ರ ತಡವೆ ನಿನಗೆ ಅಡ್ಡ ಬೀಳುತ್ತೇನೆ. ಚತುರ್ದಿಕ್ಕುಗಳನ್ನು ನೋಡಿ ನಿನ್ನನ್ನು ನಮಸ್ಕರಿಸುತ್ತೇನೆ. ಅಜ್ಞಾನದಿಂದ ಈ ತನಕ ನಿನ್ನಲ್ಲಿ ಆಟವಾಡಿದೆ, ಗೆಳೆಯಾ, ಕೃಷ್ಣಾ ಎಂದು ಕರೆದೆ. ನನ್ನನ್ನು ಕ್ಷಮಿಸು. ನೀನೇ ಜಗತ್ತಿನ ಮುಖ್ಯೋಪಾಧ್ಯಾಯನು. ನಿನಗೆ ಎಣೆಯಾದವರು ಬೇರೆ ಯಾರು ಇಲ್ಲ. ನೀನೇ ಮಹಾಶಕ್ತಿಯು ನೀನೇ ಸತ್ಯ ದೇವತೆಯು, ನೀನೇ ತಂದೆಯು, ನೀನೇ ತಾಯಿಯು, ನೀನೇ ನನ್ನ ಮಿತ್ರನು. ನನ್ನಲ್ಲಿ ಪ್ರೇಮವಿಡು. ನಿನ್ನ ವಿಶ್ವರೂಪ ದರ್ಶನದಿಂದ ನಾನು ಧನ್ಯನಾದೆನು. ನನ್ನ ಕಣ್ಣುಗಳು ಶುಭ್ರವಾದವು. ನಿನ್ನ ಸೌಮ್ಯರೂಪವನ್ನು ತೋರಿಸು. ಶಂಖಚಕ್ರ ಗದಾಪದ್ಮಾಭೂಷಿತನಾಗಿ ಪ್ರಸನ್ನನಾಗು. ಚತುರ್ಭುಜನಾಗಿ ನಿಲ್ಲು ಬೇಡಿಕೊಳ್ಳುವೆನು.

ಭಗವಾನ:—ಪಾರ್ಥನೇ, ನನ್ನ ವಿಶ್ವರೂಪವನ್ನು ನೀನು ಈಗ ನೋಡಿ ಸಂಪೂರ್ಣ ಭಕ್ತನಾದೆ, ಯೋಗಿಯಾದೆ. ಈ ನನ್ನ ರೂಪವನ್ನು ಬೇರಾರೂ ನೋಡಿಲ್ಲ. ಭಯವನ್ನು ಬಿಟ್ಟುಬಿಡು. ನನ್ನ ಸೌಮ್ಯರೂಪವನ್ನು ಈಗ ತೋರಿಸುತ್ತೇನೆ.

ಭಗವಾನ ಕೃಷ್ಣನು ತನ್ನ ನಿಜರೂಪವನ್ನು ಧರಿಸಿದನು. ಬಹಳ ಸುಂದರರೂಪಿಯಾದನು. ಅರ್ಜುನನಲ್ಲಿ ಸಂತೋಷವು ಉದಿಸಿತು. ಆನಂದಭರಿತನಾದನು. ಆಗ ಭಗವಾನನು ಪಾರ್ಥನನ್ನೆ ದಿಟ್ಟಿಸಿ ಪುನಃ ಹೀಗೆಂದನು —

ನಿಸ್ವಾರ್ಥವಾದ ಭಕ್ತಿಮಾರ್ಗದ ಮೂಲಕವೇ ನನ್ನ ಈ ಸುಂದರರೂಪವನ್ನು ನೋಡಬಹುದು. ನಾನು ನಿಯಮಿಸಿದ ಕರ್ಮಗಳನ್ನು ನಿಷ್ಕಾಮಪ್ರೀತಿಯಿಂದ ಮಾಡಿ, ಮಾಡಿದ ಕರ್ಮಗಳನ್ನೆಲ್ಲಾ ನನಗೆ ಅರ್ಪಿಸಿ ಯಾವ ಜೀವ ಜಂತುಗಳಲ್ಲೂ ವೈರವನ್ನು ಸಾಧಿಸದೇ ಬಾಳುವವನಿಗೆ ಮಾತ್ರ ನನ್ನ ಸುಂದರರೂಪವು ದೃಶ್ಯವಾಗುವುದು. ಅಂತಹ ಭಕ್ತನಿಗೆ ಸಂಪೂರ್ಣ ಶಾಂತಿಯು ಲಭಿಸುವುದು.

ನವಯುಗಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ

UDIPI MUNICIPALITY

TENDER NOTICE

Sealed tenders will be received by the undersigned up to 4 p. m. on 28—2—1961 for ordinary Kerosene and Petromax street lighting for the year 1961—62 Any particulars as to conditions of contract may be obtained from Municipal Office, Udipi during office hours on all working days.

Municipal Office, Udipi
Dated· 17—2—1961

I. Joshua,
Municipal Commissioner, Udipi.

ಕಳೆದ 5 ವರ್ಷಗಳ ಅದ್ವಿತೀಯ ಪ್ರಗತಿ!!!

	31.12.1955ರಲ್ಲಿ ರೂ.	31.12.1960ರಲ್ಲಿ ರೂ.
1. ತೆತ್ತ ಮೂಲಧನ ಮತ್ತು ಕ್ಷೇಮನಿಧಿ.	3,18,000	6,87,000
2. ಗವರ್ನಮೆಂಟ್ ಸೆಕ್ಯೂರಿಟೀಸ್ ಇತ್ಯಾದಿ:	6,96 000	45,23,000
3. ಒಟ್ಟು ಸಾಲಗಳು	12.92,000	69,90,000
4. ಒಟ್ಟು ಠೇವಣಾತಿಗಳು	**20,49,000**	**1,17,99,000**
5. ಚಲಾವಣಾ ಭಂಡವಾಳ	**24,55,000**	**1,31,00,000**

ಜನತಾ ಸೇವೆಯ ಮುನ್ನಡೆಯಲ್ಲಿ....

ದಿ. ಪಾಂಗಾಳ ನಾಯಕ್ ಬೇಂಕ್ ಲಿ.,

ರೆಜಿಸ್ಟರ್ಡ್ ಆಫೀಸು, ಉಡುಪಿ, ದ ಕನ್ನಡ. ಸ್ಥಾಪನೆ: 1920

ಮೈಸೂರು ಸರಕಾರದ ವಿಮಾ ಇಲಾಖೆ,
ಬೆಂಗಳೂರು.
(ಮೋಟಾರು ಶಾಖೆ)

ಪ್ರಕಟಣೆ

ಶ್ರೀ ಎ. ರಾಮಚಂದ್ರ ನಾಯ್ಡು, ಬಿ ಯಸ್‌ಸಿ, ಕಾರ್ಯದರ್ಶಿ, ಮೈಸೂರು ಸರಕಾರದ ವಿಮಾ ಇಲಾಖೆ, ಬೆಂಗಳೂರು ಇವರು 1961ನೇ ಮಾರ್ಚಿ 5ರಂದು ಉಡುಪಿಯ ಪ್ರವಾಸಿ ಮಂದಿರದಲ್ಲಿ ಮೊಕ್ಕಾಂ ಮಾಡಲಿರುವರು.

ಈ ಇಲಾಖೆಯ ಮೋಟಾರು ಶಾಖೆಯಲ್ಲಿ ಏಜನ್ಸಿಯನ್ನು ಪಡೆಯಲಪೇಕ್ಷಿಸುವವರು ಅವರನ್ನು ಭೇಟಿಯಾಗಬಹುದು.

ಟಿ ಶ್ರೀನಿವಾಸನ್
ಕಾರ್ಯದರ್ಶಿಗಳ ಪರವಾಗಿ

ಪರಿಚಯ

ಹೆಮ್ಮರ್‌ಶೀಲ್ಡರ ವಿಶಿಷ್ಟ ವ್ಯಕ್ತಿತ್ವ

ಸಂಯುಕ್ತ ರಾಷ್ಟ್ರಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಡಾಗ್ ಹೆಮ್ಮರ್‌ಶೀಲ್ಡರ ಬಗ್ಗೆ ರಶ್ಯ ಹಾಗೂ ಅದರ ಹಿಂಬಾಲಕ ರಾಷ್ಟ್ರಗಳು ಅಸಹಬ್ದವಾಡಿದರೂ ಅವರ ಸಮರ್ಥಕರಿಗೆ ಕೊರತೆಯಿಲ್ಲ. ಆದರೂ ವಿಶ್ವದಲ್ಲಿ ಎದ್ದಿರುವ ತ್ವೇಷ ಹೇಗೆ ಕೊನೆಗೊಂಡೀತು, ಅದರ ಪರಿಣಾಮ ವೇನಾದೀತು ಎಂದು ಭವಿಶ್ಯವೇ ನುಡಿಯಬೇಕು.

ಕಾಂಗೊವಿನ ಪರಿವರ್ತಿತ ರೂಪದಿಂದಾಗಿ ಸಂಯುಕ್ತ ರಾಷ್ಟ್ರ ಸಂಘದ ಜವಾಬ್ದಾರಿಯು ಮತ್ತಷ್ಟು ಹೆಚ್ಚಿದೆ. ಸಂಘವು ತನ್ನ ಕರ್ತವ್ಯವನ್ನು ಸಮರ್ಪಕ ರೀತಿಯಲ್ಲಿ ನಿರ್ವಹಿಸಲಿಲ್ಲ ಎಂಬ ವಾದ ಈಗ ಮುಂದೆ ಬಂದಿದೆ. ಕಾಂಗೊವಿನ ದುರ್ಘಟನೆಯಿಂದಾಗಿ, ಸಂಯುಕ್ತ ರಾಷ್ಟ್ರ ಸಂಘವು ತನ್ನ ಮೂಲ ಸಿದ್ಧಾಂತಗಳನ್ನು ಮೂಲೆಗೆ ತಳ್ಳಿ ಸಾಮ್ರಾಜ್ಯವಾದಿಗಳಿಗೆ ಬೆಂಗೋಲಾಗಿ ನಿಂತಿದೆಯೆಂಬ ಅಪವಾದವು ಬಂದಿದೆ. ಈ ಕಟು ಟೀಕೆಗಳಿಗ ಗುರಿಯಾದವರೆಂದರೆ, ಅದರ ಪ್ರಧಾನ ಕಾರ್ಯದರ್ಶಿ ಶ್ರೀ ಡಾಗ್ ಹೆಮ್ಮರ್ ಶೀಲ್ಡರು. ಕಾಂಗೋ ವಿವಾದದ ಸಂಬಂಧದಲ್ಲಿ ರಶ್ಯವು ಈ ಮೊದಲೇ ಇವರನ್ನು ಕಿತ್ತುಹಾಕಬೇಕೆಂದು ಹಲವಾರು ಬಾರಿ ಒತ್ತಾಯಪಡಿಸಿತ್ತು. ಸದ್ಯ ಅದು ಅವರಿಗೆ ಇತ್ತ ಮನ್ನಣೆಯನ್ನು ಹಿಂದೆ ತೆಗೆಯುವ ಘೋಷಣೆಯನ್ನೂ ಮಾಡಿದೆ.

ರಶ್ಯದ ಕೇಳಿಕೆಗೆ ಉತ್ತರ ರೂಪವಾಗಿ ಶ್ರೀ ಡಾಗ ಹೆಮ್ಮರ್ ಶೀಲ್ಡರು ತಾನು ಪ್ರಧಾನ ಕಾರ್ಯದರ್ಶಿ ಪದವಿಗೆ ರಾಜಿನಾಮೆ ನೀಡಲಾರೆನೆಂದಿದ್ದಾರೆ ಸಂಯುಕ್ತ ರಾಷ್ಟ್ರ ಸಂಘದ ಸದಸ್ಯರಲ್ಲಿ ಹೆಚ್ಚಿನವರ ಮತವು ತನಗಿದೆಯೆಂದವರು ಹೇಳಿದ್ದಾರೆ ಪ್ರಪಂಚದ ಅಧಿಕಾಂಶ ತಟಸ್ಥ ದೇಶಗಳು ಇವರೊಡನೆ ರಾಜಿನಾಮೆಯಿಯಬೇಕೆಂದು ಒತ್ತಾಯಪಡಿಸಿದರೆ, ಈ ಬಗ್ಗೆ ಅವರು ಆಲೋಚಿಸಿಯಾರು ತಟಸ್ಥ ರಾಷ್ಟ್ರಗಳ ಅಭಿಪ್ರಾಯವೇನೆಂಬುದು ಭವಿಷ್ಯದಲ್ಲಿಯೇ ತಿಳಿಯಬೇಕಾದರೂ ಸಂಯುಕ್ತ ರಾಷ್ಟ್ರ ಸಂಘದಲ್ಲಿ ಪ್ರಧಾನ ಕಾರ್ಯದರ್ಶಿಯ ಹುದ್ದೆಗೆ ಇವರಿಗಿಂತ ಯೋಗ್ಯ ವ್ಯಕ್ತಿಪ್ರಕೃತ ದೊರೆಯಲಾರರು ಎಂದು ತಿಳಿಯುವ ಸದಸ್ಯ ರಾಷ್ಟ್ರಗಳಿಗೆ ಕಡಿಮೆಯಿಲ್ಲ ಕೆನಡ ಮತ್ತು ಅಮೆರಿಕೆಗಳು ಶ್ರೀ ಡಾಗ್ ಹೆಮ್ಮರ್ ಶೀಲ್ಡರನ್ನು ಬಲವಾಗಿ ಸಮರ್ಥಿಸಿವೆ. ಅಮೆರಿಕೆಯ ಶಿಷ್ಟ ಮಂಡಳದ ಪ್ರಧಾನರಾದ ಶ್ರೀ ಅಡ್ಲಾಯಿ ಸ್ಟಿವೆನ್ಸನರು "ಶ್ರೀ ಹೆಮ್ಮರ್ ಶೀಲ್ಡರ ದಾಖಲೆಗಳನ್ನು ಯಾರೂ ನೋಡಬಹುದು; ಇವರು ಅಂತಾರಾಷ್ಟ್ರೀಯ ನ್ಯಾಯ ಮತ್ತು ನಿಷ್ಠೆಯುಳ್ಳ ಸೇವಕರಾಗಿದ್ದಾರೆ. ವಿಶ್ವದ ಶಾಂತಿಪ್ರಿಯ ರಾಷ್ಟ್ರಗಳು ಇವರನ್ನು ಅವಶ್ಯ ಸಮರ್ಥಿಸುತ್ತವೆ" ಎಂದಿದ್ದಾರೆ. ಕಳೆದ ಅಕ್ಟೋಬರದಲ್ಲಿ ಸಂ. ರಾ. ಸಂಘದ ಬೃಹತ್ಸಭೆಯಲ್ಲಿ ಶ್ರೀ ಕ್ರುಶ್ಚೇವರು ರಾಜಿನಾಮೆ ನೀಡುವಂತೆ ಆಗ್ರಹ ಪಡಿಸಿದಾಗ ಶ್ರೀ ಹೆಮ್ಮರ್‌ಶೀಲ್ಡರು ೧೯೬೩ರ ವರೆಗೆ—ತನ್ನ ಕಾರ್ಯಾವಧಿ ಕೊನೆಗೊಳ್ಳುವವರೆಗೂ—ಈ ಹುದ್ದೆಯಲ್ಲಿರುವ ಇರಾದೆಯನ್ನು ಪ್ರಕಟಪಡಿಸಿದ್ದರು.



ಸಮುದ್ರದ ಉಪ್ಪು ನೀರಿನಿಂದ ಸಿಹಿ ನೀರನ್ನು ಪ್ರತ್ಯೇಕಿಸುವ ಯಂತ್ರ ಮಾದರಿಯನ್ನು ಅಮೇರಿಕೆಯು ತಯಾರಿಸಿದೆ. ಇದು ಸಫಲಗೊಂಡರೆ, ನೀರಿನ ಪ್ರಶ್ನೆಗೆ ಸಮಾಧಾನಕರ ಉತ್ತರವು ದೊರೆತಂತಾಗುವುದು.

ಸಂಯುಕ್ತ ರಾಷ್ಟ್ರಸಂಘದೊಡನೆ ತನ್ನದೇ ಆದ ಸೇನೆಯಿಲ್ಲದಿರುವುದರಿಂದ ಕೆಲವು ಸಂದರ್ಭಗಳಲ್ಲಿ ಪರಿಸ್ಥಿತಿಯನ್ನು ಎದುರಿಸುವಲ್ಲಿ ಅದು ನಿರ್ಬಲವೆನಿಸುತ್ತದೆ ಎಂದು ಹಲವರ ಅಭಿಪ್ರಾಯವಿದೆ. ಆದರೆ, ಶ್ರೀ ಹೆಮ್ಮರ್‌ಶೀಲ್ಡರು ಸಂ. ರಾ. ಸಂಘಕ್ಕೆ ಸ್ಥಾಯಿ ಸೇನೆಯಿರಬಾರದು. ಅವಶ್ಯಕತೆಬಿದ್ದು ತೋರಿದಾಗ ಅಸ್ಥಾಯಿ ಸೇನೆಯನ್ನು ವಿವಿಧ ದೇಶಗಳ ಸಹಾಯದಿಂದ ತಯಾರಿಸಿಕೊಂಡರೆ ಸಾಕು ಎಂದು ಎನ್ನುತ್ತಾರೆ.

ಆಶ್ಯನ್ ನಾಯಕರ ವಿವೇಕವನ್ನೂ ಶ್ರೀ ಹೆಮ್ಮರ್‌ಶೀಲ್ಡರು ಆದರಿಸುತ್ತಾರೆ. ಕೆಲವು ವರ್ಷಗಳಿಗೆ ಮೊದಲು ನ್ಯೂಯಾರ್ಕಿನ ಒಂದು ಸಾರ್ವಜನಿಕ ಸಮಾರಂಭದಲ್ಲಿ ಇವರು, "ಏಶ್ಯನ್ ರಾಷ್ಟ್ರಗಳ ಅಭಿಪ್ರಾಯವನ್ನು ಪಾಶ್ಚಾತ್ಯ ರಾಷ್ಟ್ರಗಳು ಮನ್ನಿಸುವುದಾದರೆ, ಇಡಿ ಜಗತ್ತಿಗೆ ಲಾಭವುಂಟಾಗುವುದು" ಎಂದಿದ್ದರು. ಶ್ರೀ ಮದ್ಭಗವದ್ಗೀತೆಯಲ್ಲಿ ದೊರೆಯುವ ಸಾರವನ್ನಿವರು ಮನ್ನಿಸುತ್ತಾರೆ. ಹಿಂದೊಮ್ಮೆ ಸಂ. ರಾ. ಸಂಘದ ಅಮೆರಿಕೆಯ ಎಸೋಸಿಯೇಶನ್ನಿನಲ್ಲಿ ತನ್ನ ವಿಚಾರಕ್ಕೆ ಪರಿಪುಷ್ಟಿಯಾಗಿ ಗೀತೆಯ ಒಂದು ಶ್ಲೋಕವನ್ನು ಉಲ್ಲೇಖಿಸಿದ್ದರು, ಭಾರತವು ವಿಶ್ವದ ಸಮಕ್ಷಮವಿಟ್ಟ ಪಂಚಶೀಲ ತತ್ವಗಳನ್ನು ಇವರು ಅಭಿಮಾನಪೂರ್ವಕ ಮನ್ನಿಸುವುದು ಮಾತ್ರವಲ್ಲ. ಸಂ. ರಾ. ಸಂಘವು ತನ್ನ ಗುರಿಯನ್ನು ಮುಟ್ಟಬೇಕಾದರೆ, ಈ ಸಿದ್ಧಾಂತಗಳು ಅತ್ಯಂತ ಉ

(ಆನೇ ಪುಟ ನೋಡಿ)

ಪುತ್ತೂರು ಡಿ. ಮುನ್ಸಿಫ್ ಕೋರ್ಟಿನಲ್ಲಿ

R. E. P 373/60 O.S 84/49

ಅಬ್ಬಾಸ್ ಬ್ಯಾರಿ ಕೂಡಾ—ಅರ್ಜಿದಾರರು

ಆೈಸಮ್ಮ ಕೂಡಾ — ಎದ್ರಿರು.

1ನೇ ಎದ್ರಿ ಆೈಸಮ್ಮ, ಅಬ್ದುಲ್ಲ ಬ್ಯಾರಿಯ ಮಗಳು, ಪುತ್ತೂರು ತಾಲೂಕು. ಆೈವತ್ತೊಕ್ಲು ಗ್ರಾಮ— ಇವರಿಗೆ ತಿಳಿಸುವುದೇನೆಂದರೆ:—

ಈ ಡಿಕ್ರಿಯ ಕುರಿತು 1ನೇ ಅರ್ಜಿದಾರಗಾದ ಪರಾಭಾರೆ ಮಂಜೂರು ಮಾಡಿ ನಂತರ ಡಿಕ್ರಿಗೆ ಜವಾಬ್ದಾರಿ ಇರುವ ಸ್ಥಿರಾಸ್ತಿಯನ್ನು ಏಲಂಪಡಿಸುವ ಬಗ್ಗೆ ದಾಖಲು ಮಾಡಿದ ಈ ಅಮಲ್ದಾರಿಯು ತಾ. 37—2—61ಕ್ಕೆ ಇರುವುದರಿಂದ ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ಆ ದಿವಸ ಹಾಜರಾಗಿ ಉದಪರಿಸಿಕೊಳ್ಳತಕ್ಕದ್ದು.

B Chidananda Rao,

Vakil for petitioners.

ಪುತ್ತೂರು, ತಾ. 17—2—61

ಹೊಸ ಯೋಜನೆ ಅಮೂಲ್ಯ ಪ್ರಕಟಣೆ

ಎರಡು ವರ್ಷಗಳ ಅಭ್ಯಾಸಪೂರ್ಣ ಸತತ ಪರಿಶ್ರಮದಿಂದ ಸಂಗ್ರಹಿಸಲಾಗುತ್ತಿರುವ ವಿಚಾರ ವೈವಿಧ್ಯಗಳ ಉಪಯುಕ್ತ ಹೆಬ್ಬೊತ್ತಿಗೆ—

ಬೆಡಗಿನ ಉಡುಪಿ

[ಸಚಿತ್ರ]

- ಉಡುಪಿ ತಾಲೂಕಿನ ಸಮಗ್ರ ವಿಚಾರಗಳನ್ನು ಕೂಲಂಕುಶವಾಗಿಯೂ, ನಿಷ್ಪಕ್ಷಪಾತವಾಗಿಯೂ ನಿರೂಪಿಸುವ ಅಪೂರ್ವ ಸಾಹಸ.
- ತಾಲೂಕಿನ ಎಪ್ಪತ್ತಮೂರು ಪಂಚಾಯತುಗಳು, ನೂರಹದಿನೈದರಷ್ಟು ಗ್ರಾಮಗಳು— ಇವುಗಳ ಇತಿಹಾಸ, ಸಾಂಸ್ಕೃತಿಕ ವೈಭವ—ಪೌರಾಣಿಕ ಪಾವಿತ್ರ್ಯ—ಭಾಷೆ, ಜಾತಿ, ಸಂಪ್ರದಾಯ ಹಾಗೂ ಸಾಮಾಜಿಕ ಜನಜೀವನ - ವ್ಯಾವಹಾರಿಕ ವಿಶೇಷತೆ—ಪ್ರಾಮುಖ್ಯ ಮನೆತನ, ಸಂಘ, ಸಂಸ್ಥೆಗಳ ಹಿರಿಮೆ—ಉಡುಪಿ ತಾಲೂಕಿನವರಾಗಿದ್ದು ಪರಊರುಗಳಲ್ಲಿ ಸಾಧಿಸಿದ—ಸಾಧಿಸುತ್ತಿರುವ ಮಹನೀಯರ ಕೀರ್ತಿ ಪರಿಚಯ—ಪ್ರತಿಯೊಂದು ಗ್ರಾಮ ದೇವಸ್ಥಾನಗಳ ಪುರಾಣೇತಿಹಾಸ— ರಾಜಕೀಯ ವೈವಿಧ್ಯತೆ—ಹಾಗೂ ಇನ್ನಿತರ ಎಲ್ಲಾ ವಿಚಾರಗಳನ್ನೂ **ಸಚಿತ್ರವಾಗಿ** ಸಂಗ್ರಹಿಸಲಾಗಿದೆ ಇದೀಗ ಪ್ರಕಟಣೆಗೆ ಸಿದ್ಧವಾಗುತ್ತಿದೆ.

ಇನ್ನೊಂದು ವಿಶೇಷತೆ: ಡ್ಯೈರೆಕ್ಟರಿಯ ಮಾದರಿಯಲ್ಲಿ ಪ್ರಕಟವಾಗಲಿರುವ ಈ ಪ್ರಕಟಣೆಯಲ್ಲಿ ಉಡುಪಿ ತಾಲೂಕಿನ ಹಾಗೂ ಈ ತಾಲೂಕಿಗೆ ಸೇರಿದವರಾಗಿದ್ದು ಇದೀಗ ಹೊರ ನಾಡಿನಲ್ಲಿರುವ ಮಹನೀಯರ ಪರಿಚಯವನ್ನು ಅವರ ಉದ್ಯೋಗ, ವ್ಯಾವಹಾರಿಕ ವೈವಿಧ್ಯತೆಗೆ ಸರಿಯಾಗಿ ಕ್ರಮಾನುಗತವಾಗಿ ಭಾವಚಿತ್ರದೊಂದಿಗೆ ಪ್ರಕಟಿಸುವ ವಿಶೇಷ ವ್ಯವಸ್ಥೆ ಇದೆ.

ಈ ಹಿರಿ ಹೊತ್ತಗೆಯಲ್ಲಿ ಉಡುಪಿ ತಾಲೂಕಿನ ಎಲ್ಲಾ ಊರುಗಳ ವಿಶೇಷತೆಗಳನ್ನು ಛಾಯಾಚಿತ್ರ ಮೂಲಕವೂ ನಿರೂಪಿಸಲಾಗಿದೆ.

ಮಹಾಜನರ ಸಲಹೆ, ಸೂಚನೆ, ಸಹಕಾರಗಳನ್ನು ತೀವ್ರವಾಗಿ ಸ್ವಾಗತಿಸಲಾಗುವುದು. ವಿವರಗಳಿಗೆ ಪತ್ರವ್ಯವಹಾರ ನಡೆಸಿರಿ—

"ಪ್ರತಿಮಾ ಪ್ರಕಾಶನ", ಉಡುಪಿ.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R. E. P. 576/1960.

ಭವಾನಿ ಶಂಕರ ಆಚಾರ್ಯ— ಅರ್ಜಿದಾರ.

ಮತ್ತು

ಜಗತ್ಪಾಲ ಕೊಂಡೆ— ಯೆದ್ರಿ.

ಜಗತ್ಪಾಲ ಕೊಂಡೆ, ನಾಗರಾಜ ಕೊಂಡೆಯವರ ಮಗ, ಕಾರ್ಕಳ ತಾಲ್ಕು ಶ್ರೀರೂಲು ಗ್ರಾಮದ ಬಾಷಾಲುಗುತ್ತು ಎಂಬಲ್ಲಿ, ಪೋಸ್ಟು ಅಜೆಕಾರು (ದ. ಕ.)

ಮೇಲಿನ ಅಮಲ್ದಾರಿಯಲ್ಲಿ ಡಿಕ್ರಿ ಆೈವೇಜಿನ ವಸೂಲುಬಗ್ಗೆ ಎದ್ರಿಯ ಸ್ಥಿರಾಸ್ತಿಯನ್ನು ಜಪ್ತುಪಡಿಸಿ ನಿಮ್ಮ ಹಾಜರಾತಿ ಬಗ್ಗೆ ತಾ. 9—3—1961ಕ್ಕೆ ಇಟ್ಟಿರುವುದರಿಂದ ನೀವು ಖುದ್ದು ಯಾ ವಕೀಲರ ಮುಖಾಂತ್ರ ಹಾಜರಾಗಿ ಉದಾಹರಿಸತಕ್ಕದ್ದು, ತಪ್ಪಿದ್ರೆ ಕೋರ್ಟಿನವರಿಗೆ ಯುಕ್ತ ಕಂಡಂತೆ ತೀರ್ಮಾನಿಸಲಾದೀತೆಂತ ಈ ಮೂಲಕ ತಿಳಿಸಲಾಗಿಯದೆ.

(By order of the Court)

(Sd) N. Shanker Bhat,

Advocate for Petitioner.

ಪುತ್ತೂರು, 15—2—61.

> ಮಾನವನು ಮಾತ್ರವಲ್ಲ ಪ್ರಾಣಿ ವನಸ್ಪತಿ ವಸ್ತುಗಳು ಕೂಡ ತಮ್ಮಲ್ಲಿರುವ ಉತ್ತಮ ಪವಿತ್ರ ಗುಣಗಳಿಂದ ಸಮ್ಮಾನಿತರಾಗುತ್ತಾರೆ; ತಮ್ಮ ಧನ ಸಂಪತ್ತಿನಿಂದಲ್ಲ.

ನವಯುಗ

ಸಂಪುಟ	ಬುಧವಾರ	ವಾರ
೧೦	೨೨-೨-'೬೧	೨೪

ಅಭ್ಯರ್ಥಿಗಳ ಆಯ್ಕೆ

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ನಾಲ್ಕು ದಿನಗಳ ಕಾಲ ಸಭೆ ಸೇರಿ, ಮುಂದಿನ ವರ್ಷ ನಡೆಯಲಿರುವ ಸಾರ್ವತ್ರಿಕ ಚುನಾವಣೆಗಳಲ್ಲಿ ಸ್ಪರ್ಧಿಸಲು ಕಾಂಗ್ರೆಸ್ ಅಭ್ಯರ್ಥಿಗಳನ್ನು ಆರಿಸುವ ಕುರಿತಾಗಿ ತೀರ್ಮಾನವನ್ನು ಕೈಗೊಂಡಿದ್ದು, ಈ ನಿರ್ಧಾರವು ಸ್ವಾಗತಾರ್ಹವಾಗಿದೆ. ಕಾಂಗ್ರೆಸ್‌ನಲ್ಲಿ ಹೊಸ ಮುಖಗಳಿಗೆ ಅವಕಾಶ ಕಲ್ಪಿಸಿಕೊಡಬೇಕೆಂಬ ವಾದವು ಇಂದು ನಿನ್ನೆಯದಲ್ಲ. ಕಾಂಗ್ರೆಸ್ಸಿನಲ್ಲಿ ಹೊಸ ರಕ್ತವು ಸೇರಬೇಕು; ಇದಕ್ಕಾಗಿ ಅದರಲ್ಲಿ ಹೊಸ ವ್ಯಕ್ತಿಗಳಿಗೆ ಪ್ರವೇಶ ಪಡೆಯುವ ಅವಕಾಶವೊದಗಿಸಬೇಕು; ಹೊಸಬರನ್ನು ಆಕರ್ಷಿಸಬೇಕು ಎಂಬ ಮಾತಿಗೆ ಈ ವರ್ಷವಾದರೂ ಸೂಕ್ತ ಮಾನ್ಯತೆ ದೊರೆಯುವಂತಾದುದು ಸಂತಸದ ಸುದ್ದಿಯಾಗಿದೆ. ಸದ್ಯ ರಾಜ್ಯ ವಿಧಾನ ಮಂಡಳ ಹಾಗೂ ಕೇಂದ್ರ ಪಾರ್ಲಿಮೆಂಟುಗಳಲ್ಲಿ ಕಾಂಗ್ರೆಸ್ ಪಡೆದಿರುವ ಸಂಖ್ಯಾಬಲದಲ್ಲಿ ಮೂರರಲ್ಲೊಂದಂಶದಷ್ಟು ಸದಸ್ಯರು ತಮ್ಮ ಸದಸ್ಯತನದಿಂದ ನಿವೃತ್ತರಾಗಬೇಕೆಂದೂ ಈ ಬದಲಿಗೆ ಹೊಸಬರನ್ನು ಆರಿಸಿಕೊಳ್ಳಬೇಕೆಂದೂ ಕಾರ್ಯಕಾರಿ ಸಮಿತಿಯು ನಿರ್ಣಯಿಸಿದೆಯೆಂದು ತಿಳಿಯುತ್ತದೆ. ಕಾಂಗ್ರೆಸ್ ಅಧ್ಯಕ್ಷ ಶ್ರೀ ಸಂಜೀವ ರೆಡ್ಡಿಯವರ ಹತ್ತು ವರ್ಷಗಳಿಗಿಂತಲೂ ಹೆಚ್ಚು ಕಾಲ ಅಧಿಕಾರದಲ್ಲಿರುವವರು ಸ್ವೇಚ್ಛೆಯಿಂದ ತಮ್ಮ ಸ್ಥಾನವನ್ನು ತೆರವುಮಾಡಬೇಕೆಂಬ ಅಭಿಪ್ರಾಯವನ್ನು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಸ್ವಲ್ಪಾಂಶದಲ್ಲಿ ಒಪ್ಪಿಕೊಂಡಂತೆ ಭಾಸವಾಗುತ್ತದೆ. ಕಾಂಗ್ರೆಸು ಮುಂದಿನ ಚುನಾವಣೆಗಳಲ್ಲಿಯೂ, ಕೇಂದ್ರ ಹಾಗೂ ಹೆಚ್ಚಿನ ರಾಜ್ಯಗಳಲ್ಲಿ ಗೆದ್ದುಬರುವುದರಲ್ಲಿ ಸಂದೇಹವುಳಿದಿಲ್ಲದಿರುವುದರಿಂದ, ಈ ಯೋಜನೆಯಿಂದ ಕಾಂಗ್ರೆಸ್ಸಿನಲ್ಲಿ ಹಳೆಯ ಸದಸ್ಯರ ಅನುಭವದೊಡನೆ ಹೊಸ ಸದಸ್ಯರ ಉತ್ಸಾಹವೂ ಸೇರಿಕೊಂಡು ಒಂದು ರೀತಿಯ ಹೊಸ ಚೇತನ ಹರಿಯುವ ಆಶೆಯಿದೆ. ಹಳಬರೂ ಹೊಸಬರೂ ಪರಸ್ಪರ ಸೌಹಾರ್ದದಿಂದ ನಡೆದುಕೊಂಡರೆ, ರಚನಾತ್ಮಕ ಕಾರ್ಯಗಳು ನಡೆಯುವುದಕ್ಕೆ ಸುಲಭವಾಗುವುದು; ಇದರಿಂದ ಹೆಚ್ಚಿನವರಿಗೆ ರಾಜನೀತಿಯಲ್ಲಿ ತರಬೇತಿ ಪಡೆಯುವ ಅವಕಾಶ ಸಿಗುವುದು.

ಇಲ್ಲಿ ಎದ್ದು ಬರುವ ಸಮಸ್ಯೆಯೂ ಇಲ್ಲದಿಲ್ಲ. ನಿವೃತ್ತರಾಗಬೇಕಾದ ಮೂವರಲ್ಲೊಬ್ಬನಾರು ಎಂಬ ಪ್ರಶ್ನೆಯನ್ನೂ ಅಭ್ಯರ್ಥಿ ಚುನಾವಣಾ ಸಮಿತಿಯು ನಿರ್ಧರಿಸಬೇಕಾಗುತ್ತದೆ. ಅಧಿಕಾರ - ಸ್ಥಾನವೆನ್ನುವುದು ಮಾದಕ ವಸ್ತುವಿನಂತಾಗಿರುವ ಈ ವಿಲಕ್ಷಣ ಕಾಲದಲ್ಲಿ ಸ್ವೇಚ್ಛೆಯಿಂದ ತನಗೆ ಸ್ಥಾನಬೇಡವೆನ್ನುವ ನಿರಪೇಕ್ಷಾಬುದ್ಧಿಯ ಸದಸ್ಯ ಸಂಖ್ಯೆಯನು ಕೈಬೆರಳುಗಳಿಂದೆಣಿಸಬಹುದು. ಹಾಗಿರುವಾಗ, ಯಾರನ್ನು ಬಿಟ್ಟು ಬಿಡಬೇಕು ಎಂಬ ಬೃಹತ್ ಸಮಸ್ಯೆ ಮೂಡುವುದು. ಒತ್ತಾಯದಿಂದ ಯಾರನ್ನಾದರೂ ಕೈಬಿಟ್ಟರೆ, ಆತನು ಪಕ್ಷ ವಿರೋಧಿಯಾಗಲಾರನೆನ್ನುವ ವಿಶ್ವಾಸವಿಡುವಷ್ಟು ಭಾರತೀಯರ ಮನೋಮಟ್ಟ ಏರಿ ಬಂದಿಲ್ಲ. ಪಕ್ಷಹಿತ, ಪಕ್ಷ ಗೌರವಗಳಿಗಿಂತಲೂ ವ್ಯಕ್ತಿಗತ ಹಿತವನ್ನೇ ಬಯಸುವವರು ವಿಪುಲರಾಗಿರುವಾಗ ಇಂತಹ ಸಂದೇಹಕ್ಕೆಡೆಯಿರುವುದು ಸ್ವಾಭಾವಿಕ. ಕೆಲವೊಂದು ನಿರ್ದಿಷ್ಟ ಪ್ರದೇಶಗಳಲ್ಲಿ ನಿರ್ದಿಷ್ಟ ವ್ಯಕ್ತಿಗಳು ಪ್ರಭಾವಿತರಾಗಿರುವುದು ಸಾಧ್ಯವೆಂಬುದರಿಂದ, ಇಂತಹವರು ಶ್ರೀ ನೆಹರುರಿಗೆ ಪ್ರಧಾನಿ ಪಟ್ಟ ಸ್ಥಿರವಿರುವಂತೆ ತಮಗೂ ಸ್ಥಾನ ಸ್ಥಿರವೆಂದು ತಿಳಿದುಕೊಂಡಿರಬಹುದು. ಅಂತಹ ಕ್ಷೇತ್ರಗಳಲ್ಲಿ ಈ ಪ್ರಭಾವಿ ವ್ಯಕ್ತಿಗಳೊಡನೆ ಕೈತೊಳೆದುಕೊಳ್ಳುವುದು ಲಾಭವೆನಿಸೀತೆ? ಹೊಸಬರನ್ನು ತರುವ ಪ್ರಯತ್ನವನ್ನು ಮಾಡುವಲ್ಲಿ ಹಳಬರ ವಿರೋಧ ಕಟ್ಟಿಕೊಳ್ಳುವ ಪ್ರಸಂಗ ಬರಬಾರದಂತೆ ಚುನಾವಣಾ ಅಭ್ಯರ್ಥಿ ವರಣ ಸಮಿತಿಯವರೂ ಕಾಂಗ್ರೆಸ್ ಪ್ರತಿನಿಧಿಗಳೂ ಕೂಡಿ ಕಾರ್ಯವೆಸಗುವುದು ಆವಶ್ಯಕವಾಗಿದೆಯೆಂಬುದನ್ನು ಮರೆಯುವಂತಿಲ್ಲ.

ಕಾಂಗ್ರೆಸ್ ಅಭ್ಯರ್ಥಿಗಳನ್ನು ಆರಿಸುವಾಗ ಬಹು ಎಚ್ಚರಿಕೆಯಿಂದಿರಬೇಕಾದ ವಿಷಯವನ್ನು ಕಾರ್ಯಕಾರಿ ಸಮಿತಿಯು ಈ ಬಾರಿ ತಿಳಿದುಕೊಂಡಿದೆ. ತಾನು ತಿಳಿದುಕೊಂಡಂತೆ ಅದು ಆಚರಿಸುವುದಾದರೆ, ಈ ಬಾರಿಯ ಕಾಂಗ್ರೆಸ್ ಉಮೇದ್ವಾರಿಗಳು ಪಕ್ಷನಿಷ್ಠೆಯುಳ್ಳವರಾಗುವುದು ಖಂಡಿತವೆ. ಕಾಂಗ್ರೆಸ್‌ನ ಕೆಲ ಸದಸ್ಯರು ಪಕ್ಷದ ನೀತಿಧೋರಣೆ ಹಾಗೂ ತತ್ವಗಳನ್ನು ಮುಂದುಗಡೆ ಒಪ್ಪಿದವರಂತೆ ತೋರಿಸಿ ಹಿಂದುಗಡೆ ವಿರೋಧ ರೂಪದ ಚಟುವಟಿಕೆಗಳಲ್ಲಿ ತೊಡಗುತ್ತಿರುವುದನ್ನು ಕಾಂಗ್ರೆಸ್ ವರಿಷ್ಠರು ಗಮನಿಸಿದ್ದಾರೆ. ಯಾರದೋ ಒತ್ತಾಯಕ್ಕೆ ಕಟ್ಟುಬಿದ್ದು ತಮ್ಮ ನಿಜವಾದ ಅಭಿಪ್ರಾಯವನ್ನು ವ್ಯಕ್ತಪಡಿಸಲು ಹಿಂಜರಿದು, ಹಿಂದ ಡಿಕೊಳ್ಳುವವರಿಂದಲೇ ಪಕ್ಷದ ಶಿಸ್ತಿಗೆ, ಗೌರವಕ್ಕೆ ಧಕ್ಕೆ ತಗಲುವುದು. ಆದುದರಿಂದ ಪಕ್ಷದ ಮುಖ್ಯ ಧ್ಯೇಯಗಳಾದ ಜಾತೀಯ ಸೌಹಾರ್ದ, ಅಸ್ಪೃಶ್ಯತಾ ನಿವಾರಣೆ, ಭೂಸುಧಾರಣೆ, ಸಹಕಾರಿ ಪದ್ಧತಿ ಮತ್ತು ಪಾನ ಪ್ರತಿಬಂಧಗಳ ಬಗ್ಗೆ ಹುರಿಯಾಳುವಿನ ವರ್ತನೆ ಹಾಗೂ ಅಭಿಪ್ರಾಯಗಳೇನು ಎಂಬುದನ್ನು ಮುಖ್ಯವಾಗಿ ಗಮನಿಸಲಾಗುವುದೆನ್ನಲಾಗಿದೆ. ಹುರಿಯಾಳುವು ತನ್ನ ಕ್ಷೇತ್ರದಲ್ಲಿ ನಡೆಸಿದ ಸೇವಾಜೀವನ, ಆತನ ಸಾಮಾಜಿಕ ಸ್ಥಾನಮಾನಗಳೊಂದಿಗೆ ಆರ್ಥಿಕ ಸ್ಥಿತಿಗತಿಯನ್ನೂ ಪರಿಗಣಿಸಲಾಗುವುದೆಂದು ಈ ಮೊದಲೇ ಪ್ರಕಟವಾಗಿತ್ತು. ಕಾಂಗ್ರೆಸ್ಸು ಈ ಬಾರಿ ವ್ಯಕ್ತಿಯ ಗುಣಶೀಲ ಸ್ವಭಾವಗಳಿಗೆ ಪ್ರಾಧಾನ್ಯವನ್ನು ಈಯುವುದರಲ್ಲಿ ಕಟ್ಟುನಿಟ್ಟಿನ ನೀತಿಯನ್ನು ಅನುಸರಿಸುವುದು ಅತ್ಯವಶ್ಯವಾಗಿದೆ. ಈ ಕಾರ್ಯದಲ್ಲಿ ಹಲವಾರು ಅಡೆತಡೆಗಳು ಹುದ್ದರಿ ಆಯ್ಕೆಯ ಸಮಿತಿಯನ್ನು ಎಡತಾಕಬಹುದು. ಆದರೆ, ಪಕ್ಷದ ಪಾವಿತ್ರ್ಯ, ಐಕ್ಯ ಹಾಗೂ ಧ್ಯೇಯ ಸಾಧನೆಯ ದೃಷ್ಟಿಯಿಂದ ಅವನ್ನು ಎದುರಿಸಿ, ನಿಜವಾದ ಯೋಗ್ಯತಾ ಸಂಪನ್ನನೂ ಕಾಂಗ್ರೆಸ್ ನೀತಿಯಲ್ಲಿ ನಿಷ್ಠೆಯುಳ್ಳವನೂ ತನ್ನ ಹೊಣೆಗಾರಿಕೆಯನ್ನು ನಿರ್ವಹಿಸಬಲ್ಲವನೂ ಆದ ಉಮೇದ್ವಾರನನ್ನೇ ಆರಿಸಬೇಕು. ಆಗ, ಜನತೆಯು ತಮಗೆ ಒದಗಿಸಿಕೊಟ್ಟ ಕಾಂಗ್ರೆಸ್ ಪ್ರತಿನಿಧಿಗೆ ಬೆಂಬಲ ನೀಡುವ ಸರಿಯಾದ ಅವಕಾಶವೊದಗುವುದು.

ರೂಪಿಸಿದ ತತ್ವಗಳನ್ನು ನೆಮ್ಮಿ ಮುಂದುವರಿಯುವುದು ಕಾಂಗ್ರೆಸ್ಸಿನ ಕರ್ತವ್ಯವಾಗಿದೆ. ಜಾತೀಯ ವಾದ, ಆರ್ಥಿಕಬಲ ಮೊದಲಾದ ನೀತಿಗಳನ್ನು ಸರ್ವಥಾ ದೂರವಿರಿಸಿ, ಚುನಾವಣೆಯಲ್ಲಿ ಗೆಲ್ಲುವುದನ್ನು ಮಾತ್ರ ಧ್ಯೇಯವಾಗಿರಿಸದೆ ರಾಷ್ಟ್ರಹಿತವನ್ನು ಗಮನಿಸುವುದು ಕೇವಲ ಕಾಂಗ್ರೆಸ್ ಪಕ್ಷದ ಕರ್ತವ್ಯವಲ್ಲ; ಅಖಿಲ ಭಾರತೀಯರ ಪರಮ ಕರ್ತವ್ಯವೆಂಬುದನ್ನು ಅವಶ್ಯ ಸ್ಮರಣೆಯಲ್ಲಿಟ್ಟುಕೊಳ್ಳಬೇಕು.

ಕಾಂಗೊ ಸಮಸ್ಯೆ

ಫೆಬ್ರವರಿ 'ಎರಡನೆ ವಾರ'ದಲ್ಲಿ ಕಾಂಗೊವಿನ ಪದಚ್ಯುತ ಪ್ರಧಾನಿಯಾಗಿದ್ದ ಪೆಟ್ರಿಸ್ ಲುಮುಂಬಾರನ್ನು ಕಟಾಂಗದ ಒಂದು ಹಳ್ಳಿಯಲ್ಲಿ ಜನರು ಕೊಂದರು ಎಂದು ಕಟಾಂಗ ಸರಕಾರವು ತಾ. ೧೩ರಲ್ಲಿ ಸಾರಿರುವುದನ್ನು ತಿಳಿದು ದುಃಖ ಸಾಗರದಲ್ಲಿ ಅಖಂಡ ವಿಶ್ವವು ಮುಳುಗೇಳುತಿದ್ದಾಗಲೇ ಅವರನ್ನು ಜನವರಿ ೧೮ರಂದೇ ಬೆಲ್ಜಿಯನ್ ಅಧಿಕಾರಿಯೊಬ್ಬನು ಗುಂಡಿಕ್ಕಿ ಕೊಂದ ವರ್ತಮಾನ ತನಗೆ ಬಂದಿರುವುದಾಗಿ ಘಾನಾದ ಅಧ್ಯಕ್ಷ ಶ್ರೀ ನುಕ್ರೂಮಾ ಹೊರಗೆಡಹಿ ಜನತೆಯನ್ನು ಮತ್ತಷ್ಟು ವಿಸ್ಮಯಪಡುವಂತೆ ಮಾಡಿದ್ದಾರೆ. ಕಟಾಂಗ ಸರಕಾರವು ಇತ್ತ ಹೇಳಿಕೆಯ ಮೇಲೆ ಎಳ್ಳಿನ ಏಳು ಭಾಗದಷ್ಟು ವಿಶ್ವಾಸ ಇಡಬಹುದಾಗಿದ್ದರೂ ಈ ಸುದ್ದಿಯಿಂದ ಅದು ಸಂಪೂರ್ಣ ಹಾರಿಹೋಗುವಂತಾಗಿದೆ. ಕಟಾಂಗದ ಶೋಂಬೆ, ಮೊಬುಟು ಮತ್ತು ಕಸಾವುಬುರವರ ಕಪಟ ಕಾರಸ್ಥಾನವೀಗ ಸಂಪೂರ್ಣ ಬಹಿರಂಗವಾಗುವ ಲಕ್ಷಣಗಳು ಗೋಚರವಾಗುತ್ತಿವೆ. ಲುಮುಂಬಾರ ಹತ್ಯೆಯ ಬಗ್ಗೆ ಸರ್ವಸಾಮಾನ್ಯ ಎಲ್ಲ ರಾಷ್ಟ್ರಗಳಿಂದಲೂ ಬಲವಾದ ವಿರೋಧೀ ಪ್ರತಿಕ್ರಿಯೆ ಬಂದುದನ್ನು ಗಮನಿಸುವಾಗ, ಭಾರತೀಯ ಕಾಂಗ್ರೆಸ್ಸು ಈ ಸಂಬಂಧದಲ್ಲಿ ಸ್ವೀಕರಿಸಿದ ಗೊತ್ತುವಳಿಯು ನ್ಯಾಯೋಚಿತವಾಗಿದೆ. ಲುಮುಂಬಾ ಹಾಗೂ ಅವರ ಸಹಕಾರಿಗಳ ಕೊಲೆಯ ಸಂಬಂಧದಲ್ಲಿ ಪೂರ್ಣ ಹಾಗೂ ನಿಷ್ಪಕ್ಷಪಾತ ವಿಚಾರಣೆ ನಡೆಸಬೇಕು, ಕಾಂಗೊವಿನ ಸ್ಥಳೀಯ ಸೈನ್ಯವನ್ನು ಪೂರ್ಣ ನಿಯಂತ್ರಣಕ್ಕೊಳಪಡಿಸಿಕೊಂಡು ಅದನ್ನು ನಿಶ್ಶಸ್ತ್ರಗೊಳಿಸಬೇಕು, ಕಾಂಗೊದಲ್ಲಿ ಸಂ. ರಾ. ಸಂಘದ ಮೂಲಕ ಕೆಲಸ ಮಾಡುತ್ತಿರುವ ಸೈನ್ಯಪಡೆಗಳನ್ನು ಬಿಟ್ಟು ಇತರ ವಿದೇಶೀ ಸೇನೆಗಳನ್ನು ಮತ್ತು ಸಲಹೆಗಾರರನ್ನು, ವಿಶೇಷವಾಗಿ ಬೆಲ್ಜಿಯನ್ನರನ್ನು ಹೊರಗೆ ಹಾಕಬೇಕು, ಕಾಂಗೊ ಪ್ರಜಾರಾಜ್ಯದ ಪಾರ್ಲಿಮೆಂಟಿನ ಅಧಿವೇಶನವನ್ನು ಕರೆಯಬೇಕು. ಈ ಆದೇಶಗಳನ್ನು ಪರಿಣಾಮಕಾರಕ ರೀತಿಯಲ್ಲಿ ಅವಶ್ಯ ಕಂಡಲ್ಲಿ ಬಲ ಪ್ರಯೋಗ ಮಾಡಿ ವ್ಯವಹೃತಗೊಳಿಸಲು ಸಂ. ರಾ. ಸಂಘಕ್ಕೆ ಸಂಪೂರ್ಣ ಅಧಿಕಾರ ಹಾಗೂ ಜವಾಬ್ದಾರಿಕೆಯನ್ನು ಬಿಟ್ಟುಕೊಡಬೇಕು ಎಂಬ ವಿಧಾಂಶಗಳು ಈ ಗೊತ್ತುವಳಿಯಲ್ಲಿ ಅಡಕವಾಗಿದೆ. ಭಾರತವು ಇದೇ ಆಶಯವುಳ್ಳ ಗೊತ್ತುವಳಿಯನ್ನು ಉಚಿತ ಸಂದರ್ಭದಲ್ಲಿ ಸಂಯುಕ್ತ ರಾಷ್ಟ್ರ ಸಂಸ್ಥೆಯಲ್ಲೂ ಮಂಡಿಸಬೇಕು; ಮತ್ತು ವಿಶ್ವದ ಮಾನವತೆಯ ಕೈವಾರಿಗಳೆನಿಸಿದ ರಾಷ್ಟ್ರಗಳು ಇದಕ್ಕೆ ಅವಶ್ಯ ಬೆಂಬಲ ನೀಡಿ ಕಾಂಗೋವಿನಲ್ಲಿ ಶಾಂತಿ ಸ್ಥಾಪಿತವಾಗುವಂತೆ ನೋಡಿಕೊಳ್ಳಬೇಕು. ಲುಮುಂಬಾರ ಹತ್ಯೆಗೆ ಕಾರಣರಾದವರು ಯಾರೆಂಬುದನ್ನು ಗೊತ್ತುಹಚ್ಚಿ ಅವರಿಗೆ ತಕ್ಕ ಶಾಸ್ತಿಯನ್ನು ಮಾಡಬೇಕು.

ಸಂಕ್ಷಿಪ್ತ ಸುದ್ದಿಗಳು

ಬಿಕ್ಕಟ್ಟು ಹರಿಯಿತೆ?

ಮೈಸೂರು ರಾಜ್ಯಕೀಯದಲ್ಲಿ ತೋರಿಬಂದ ಬಿಕ್ಕಟ್ಟು ಪ್ರಕಟಗೊಳ್ಳುವುದು ಇದೀಗ ನಿಂತಿದ್ದರೂ ಚುನಾವಣಾ ಸಮಿತಿಗೆ ಸದಸ್ಯರನ್ನು ಆರಿಸುವಾಗ ಅದು ಮತ್ತೊಮ್ಮೆ ವ್ಯಕ್ತವಾಯಿತು. ಚುನಾವಣೆಯ ವೇಳೆಯಲ್ಲಿ ಐಕ್ಯವನ್ನುಳಿಸಿಕೊಂಡು ಒಂದಾಗಿ ದುಡಿಯುವುದರಿಂದ ಪಕ್ಷದ ಬಲ ಹೆಚ್ಚುವುದೆಂಬುದನ್ನು ತಿಳಿದ ಕಾಂಗ್ರೆಸಿಗರು ಈಗಲಾದರೂ ಒಂದಾಗಲು ಒಪ್ಪಿದುದು ರಾಜ್ಯ ಕಾಂಗ್ರೆಸ್‌ನ ದೃಷ್ಟಿಯಿಂದ ಕ್ಷೇಮಕರ. ಶ್ರೀ ಟಿ. ಎ. ಪೈಯವರು ಚುನಾವಣಾ ಸಮಿತಿಯನ್ನು ಆರಿಸುವ ಅಧಿಕಾರವನ್ನು ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಶ್ರೀ ನಿಜಲಿಂಗಪ್ಪ ಮತ್ತು ಮುಖ್ಯಮಂತ್ರಿ ಜತ್ತಿಯವರಿಗೆ ಬಿಟ್ಟುಕೊಡುವಂತೆ ಮಂಡಿಸಿದ ಗೊತ್ತುವಳಿಯೊಂದು ಅಂತ್ಯದಲ್ಲಿ ಸರ್ವಾನುಮತದಿಂದ ಸ್ವೀಕೃತವಾಯಿತು. ಭಿನ್ನತೆಯಲ್ಲಿ ಏಕತೆಯನ್ನು ಸ್ಥಾಪಿಸುವ ಭಾರತೀಯ ಸಂಸ್ಕೃತಿಯು ಶ್ರೀ ಪೈಗಳ ಮೂಲಕವೀಗ ಮೈಸೂರು ರಾಜ್ಯದಲ್ಲಿ ಪ್ರಕಟಗೊಂಡುದು ಕಾಂಗ್ರೆಸಿಗರೆಲ್ಲರ ಸುದೈವ.

ಪಾಪಕಾರ್ಯ

'ಕಾಂಗ್ರೆಸ್‌ನ್ನು ಬಲವಾದ ರೋಗವೊಂದು ಕಾಡುತ್ತಿದೆ; ಅದು ಮಂತ್ರಿಮಂಡಳ ಕಟ್ಟುವ ರೋಗ'ವೆಂದ ಮಾಜಿ ಮುಖ್ಯಮಂತ್ರಿ, ಸದ್ಯ ಮಂತ್ರಿಮಂಡಳ ವಿರೋಧಿಗಳ ನಾಯಕ ಶ್ರೀ ಕೆಂಗಲ್ ಹನುಮಂತಯ್ಯನವರು ಅದು ಸಾಂಕ್ರಾಮಿಕ ರೋಗವೆಂಬುದನ್ನೂ ಉಚ್ಚರಿಸಿರಬಹುದು. ಮಂತ್ರಿಮಂಡಳ ಕಟ್ಟಲು ಸಹಾಯವಾಗುವಂತೆ ತಮ್ಮ ಹಿಂದೆ ಗುಂಪು ಕಟ್ಟಿಕೊಳ್ಳುವ ರೋಗ ಈಗೀಗ ಕಾಂಗ್ರೆಸ್ಸಿನಲ್ಲಿ ಮಿಡಿತೆಗಳಂತೆ ಬಹು ಬೇಗನೆ ಹರಡುತ್ತಿದೆ. ಕೇಂದ್ರದ ವರಿಷ್ಠ ಮಂಡಳದ ಮೇಲೆಯೂ ಕೈ ತೊಳೆದುಕೊಂಡ ಶ್ರೀ ಕೆಂಗಲ್ಲರು ಮೈಸೂರಿಗರು ಮಹಾಪಾಪ ಮಾಡಿದ್ದಾರೆಂದು ತಿಳಿಯಬಾರದೆಂದು ಕೇಳಿಕೊಂಡು ತಾವು ಪಾಪ ಮಾಡಿದ್ದೇವೆಂಬುದನ್ನು ಒಪ್ಪಿಕೊಂಡಿದ್ದಾರೆ. ರಾಜ್ಯದ ಹಿತ ಸಾಧಿಸಬೇಕಾದ ರಾಜ್ಯ ಕಾಂಗ್ರೆಸ್ಸು ಒಮ್ಮತದಿಂದ ರಚನಾತ್ಮಕ ಕಾರ್ಯ

ಗಳಲ್ಲಿ ಪ್ರವೃತ್ತರಾಗುವುದನ್ನು ಬಿಟ್ಟು ಪರಸ್ಪರ ದೋಷಾರೋಪಣೆ ಮಾಡುವುದರಲ್ಲಿ ತೊಡಗುವುದು ಪಾಪವಲ್ಲದೆ ಮತ್ತೇನು?

ಸಮ್ಮಿಶ್ರ ಸರಕಾರ

ಒರಿಸ್ಸದ ಮುಖ್ಯ ಮಂತ್ರಿ ಶ್ರೀ ಹರಿಕೃಷ್ಣ ಮೆಹತಾಬರು ಮಂತ್ರಿ ಪದವಿಯಿಂದ ನಿವೃತ್ತರಾಗಲು ಬಯಸುತ್ತಿದ್ದರೂ ಇದು ವರೆಗೆ ಅದಕ್ಕೆ ಪರವಾನಿಗೆ ದೊರೆತಿರಲಿಲ್ಲ. ಸದ್ಯ ಪ್ರಾದೇಶಿಕ ಕಾಂಗ್ರೆಸ್ ಹಾಗೂ ಶ್ರೀ ಮೆಹತಾಬರ ನಡುವಣ ಭಿನ್ನತೆಯು ಮತ್ತಷ್ಟು ಬೆಳೆದಿದ್ದು ಮುಖ್ಯ ಮಂತ್ರಿಯವರು ಈಗ ತಾನೇ ರಾಜಿನಾಮೆಯಿತ್ತಿದ್ದಾರೆ. ಕಾಂಗ್ರೆಸ್ಸಿಗೆ ನಿಚ್ಚಳ ಬಹುಮತವಿಲ್ಲದಾಗ ಗಣತಂತ್ರ ಪರಿಷತ್ತಿನೊಡನೆ ಸೇರಿಕೊಂಡು ಸರಕಾರವನ್ನು ರಚಿಸಿದರೇನೋ ನಿಜವೇ. ಚುನಾವಣಾ ರಂಗಕ್ಕೆ ದುಮುಕುವ ಈ ಅವಸರದಲ್ಲಿ ಇವರ ವೈತ್ರಿಯಿಂದ ಕಾಂಗ್ರೆಸ್ಸಿಗೆ ಹಾನಿಯೆಂದು ತಿಳಿದ ರಾಜ್ಯ ಕಾಂಗ್ರೆಸ್ಸಿನ ಒತ್ತಾಯದಿಂದ ಸಮ್ಮಿಶ್ರ ಸರಕಾರ ಅಧಿಕಾರ ಬಿಟ್ಟುಕೊಟ್ಟಿದೆ. ಒರಿಸ್ಸದಲ್ಲಿ ಈ ರೀತಿ ಪರ್ಯವಸಾನಗೊಂಡ ಸಮ್ಮಿಶ್ರ ಸರಕಾರದ ಭವಿಷ್ಯ ಇನ್ನು ಕೇರಳದಲ್ಲಿ ಯಾವ ರೀತಿ ಕೊನೆಗೊಳ್ಳುವುದೆಂದು ಭವಿಷ್ಯವೇ ನುಡಿಯಬೇಕಾಗಿದೆ.

ಚುನಾವಣೆಯಾಗಾಳ

ಭಾರತದ ಕಮ್ಯುನಿಸ್ಟ್ ಪಕ್ಷದಲ್ಲಿ ಈಗೀಗ ಭಾರತ ಚೀನಗಳ ಸೀಮಾ ಸಮಸ್ಯೆಯ ಸಂಬಂಧದಲ್ಲಿ ಭಾರತದ ನೀತಿಗೆ ಬೆಂಬಲವು ದೊರೆಯತೊಡಗಿದೆ. ಭಾರತದೊಡನೆ ಸಾಕಷ್ಟು ಅಂಕೆ ಸಂಖ್ಯೆಗಳೂ ದಾಖಲೆಗಳೂ ಈ ಬಗ್ಗೆ ಇರುವುದರಿಂದ ಸಮಾಧಾನದಲ್ಲಿಯೇ ಒಡಂಬಡಿಕೆಯ ಮೂಲಕ ಈ ವಿವಾದವನ್ನು ಮುಕ್ತಾಗೊಳಿಸಲು ಪ್ರಯತ್ನಿಸಬೇಕೆಂದು ಇವರು ಹೇಳುತ್ತಾರೆ. ವಿದೇಶ ಬಹಿಷ್ಕರಿಸಿದ ಭಾರತೀಯ ಕಮ್ಯುನಿಸ್ಟರ ವಿಚಾರಸರಣಿ, ಧೋರಣೆಗಳು ಪರಿವರ್ತನೆಗೊಂಡುದರಿಂದ ಅವರಲ್ಲಿ ದೇಶದ ಬಗ್ಗೆ ಜಾಗ್ರತಿ ಹುಟ್ಟಿದೆಯೆಂಬ ಸಮಾಧಾನವುಂಟಾದರೂ, ಮುಂದಿನ ಚುನಾವಣೆಯಲ್ಲಿ ನಿಧ್ಯವಾದಷ್ಟು ಸ್ಥಾನಗಳಿಗೆ ಗಾಳ ಹಾಕುವುದೇ ಈ ನೀತಿಯ ಅಂತರಾಳವೆಂಬುದನ್ನು ವಿವೇಕಿಗಳೆಲ್ಲರೂ ಬಲ್ಲರು. ಕೇರಳದಲ್ಲಿ ಕಳೆದ ವರ್ಷ ನಡೆದ ಚುನಾವಣೆಗಳಲ್ಲಿ ಸಂಪೂರ್ಣ ಪರಾಭವವನ್ನುಂಡ ಇವರು ಮುಂದಿನ ವರ್ಷಕ್ಕೆ ಈಗಿಂದೀಗಲೇ ಎಚ್ಚತ್ತಿದ್ದಾರೆನ್ನಬಹುದು.

ಕಾಂಗೊ ಪ್ರಶ್ನೆ

ಘಾನಾದ ಅಧ್ಯಕ್ಷ ಶ್ರೀ ನುಕ್ರೂಮಾ ಆಫ್ರೀಕ್ಯದ ಬಗ್ಗೆ ಚಿಂತಿಸುವವರಲ್ಲಿ ಅಗ್ರಗಣ್ಯರು. ಕಾಂಗೋವಿನ ದುರಂತದಿಂದಾಗಿ ಅವರು ಅತೀವ ಕಳವಳಕ್ಕೀಡಾಗಿದ್ದಾರೆ. ಕಾಂಗೋವಿನಲ್ಲಿ ಶಾಂತಿಯನ್ನು ಸ್ಥಾಪಿಸುವಲ್ಲಿ ತುಂಬ ಕಳವಳ ವಹಿಸುತ್ತಿದ್ದಾರೆ. ಕಾಂಗೋವಿನಲ್ಲಿ ಕೇವಲ ಆಫ್ರಿಕನ್ ರಾಷ್ಟ್ರಗಳ ಸೇನೆಯಿಂದ ಕೂಡಿದ ಸಂಯುಕ್ತ ರಾಷ್ಟ್ರ ಸಂಘದ ಸೈನ್ಯವೊಂದನ್ನು ರಚಿಸಿ ಉಳಿದ ಸೇನೆಯನ್ನು ಹಿಂದಕ್ಕೆ ಕರೆಸಬೇಕೆಂದೂ ಕಾಂಗೋ ಸೈನಿಕರನ್ನು ಸಂಪೂರ್ಣ ನಿಶ್ಶಸ್ತ್ರಗೊಳಿಸಬೇಕೆಂದೂ ಅವರು ಡಾಗ್ ಹೆಮ್ಮರ್ ಶೀಲ್ಡರಿಗೆ ತಂತಿ ಮೂಲಕ ತಿಳಿಸಿದ್ದಾರೆ. ಅಲ್ಲದೆ, ಕಾಂಗೊ ಸಮಸ್ಯೆಯನ್ನು ಬಗೆಹರಿಸಲು ಸಪ್ತಸೂತ್ರಗಳಿಂದ ಕೂಡಿದ ಒಂದು ಯೋಜನೆಯನ್ನೂ ತಯಾರಿಸಿದ್ದಾರೆ. ಇದರಲ್ಲಿ ಆಫ್ರಿಕೇತರ ಸೈನಿಕರನ್ನು ಕಾಂಗೋದಿಂದ ಹೊರದೂಡುವುದೂ ಒಂದಾಗಿದೆ.

ಅಲ್ಲಲ್ಲಿಯ ಸುದ್ದಿ ಸಾರ

ಮಣಿಪಾಲ ಇಂಜಿನಿಯರಿಂಗ್ ಕಾಲೇಜ್‌ನ ವರ್ಧಂತ್ಯುತ್ಸವವು ಮೈಸೂರು ರಾಜ್ಯದ ಹಣಕಾಸಿನ ಮಂತ್ರಿ ಶ್ರೀ ಟಿ. ಮರಿಯಪ್ಪನವರ ಅಧ್ಯಕ್ಷತೆಯಲ್ಲಿ ತಾ. 17 ರಂದು ನೆರವೇರಿತು. ಡಾ. ಟಿ. ಎಂ. ಎ. ಪೈಗಳು ಸ್ವಾಗತ ಭಾಷಣ ಮಾಡಿ ಕಾಲೇಜಿನ ಪೂರ್ವ ವೃತ್ತಾಂತವನ್ನು ವಿವರಿಸಿದರು. ಶ್ರೀ ಜೋನ್ ಬ್ರ್ಯಾಹಂ ಅವರು ಮಾಡಿದ ಸ್ವಸ್ತಿ ವಾಚನಕ್ಕೆ ಶ್ರೀ ಎ. ಎಚ್. ನಾರಾಯಣ ಸ್ವಾಮಿಯವರು ಉತ್ತರಿಸಿದರು. ಪ್ರಿನ್ಸಿಪಾಲ್ ಶ್ರೀ ಎಂ ಎನ್. ಕಾಮತರು ಕಾಲೇಜಿನ ಅಭಿವೃದ್ಧಿಪರ ವರದಿಯನ್ನೋದಿದರು. ಅಧ್ಯಕ್ಷ, ಮಂತ್ರಿಯವರು ಮಣಿಪಾಲದ ಪ್ರಗತಿಗಾಗಿ ಸಂತೋಷ ವ್ಯಕ್ತಪಡಿಸಿ ರಾಷ್ಟ್ರಕ್ಕೆ ತಿಲಕ ಪ್ರಾಯವಾದ ಸ್ಥಳೀಯ ಸಂಸ್ಥೆಗಳನ್ನು ಸ್ಥಾಪಿಸಿರುವ ಡಾ. ಪೈಗಳ ಸಾಹಸಾದರ್ಶಗಳು ಕೊಂಡಾಡತಕ್ಕುವೆಂದರು. ಈ ಕಾಲೇಜಿನ ಸೇವೆ ಉತ್ಕೃಷ್ಟವಾದುವೆಂದು ಸಂಸ್ಥೆಗೆ ಸರ್ವ ಯಶಸ್ಸನ್ನು ಬಯಸಿದರು. ಕಾರ್ಯದರ್ಶಿ ಶ್ರೀ ಜೋರ್ಜ್ ಥೋಮಸ್ ಇವರಿಂದ ಧನ್ಯವಾದದ ಬಳಿಕ ಮನರಂಜನಾ ಕಾರ್ಯಕ್ರಮಗಳು ಜರಗಿದವು

ಈ ಕಾಲೇಜಿನ ಸ್ಪೋರ್ಟ್ ದಿನಾಚರಣೆಯು ತಾ. 16ರಂದು ಎಲ್. ಐ ಸಿ ಯ ಸೀನಿಯರ್ ಡಿವಿಜನಲ್ ಮೆನೇಜರ್ ಶ್ರೀ ಟಿ ಆರ್. ಎ. ಪೈಗಳು ಮುಖ್ಯ ಅತಿಥಿಗಳಾಗಿ ಜರಗಿತು.

ಉಡುಪಿ ಪೌರಸಭೆಗೆ ಆರ್ಥಿಕ ಸಚಿವರ ಸಂದರ್ಶನ:— ಇದೇ ತಾ 17 ನೇ ಬೆಳಿಗ್ಗೆ ಮೈಸೂರಿನ ಆರ್ಥಿಕ ಸಚಿವ ಶ್ರೀ ಟಿ. ಮರಿಯಪ್ಪನವರು ಉಡುಪಿ ನಗರಸಭೆಗೆ ಸಂದರ್ಶನವಿತ್ತಾಗ ನಗರಸಭಾಧ್ಯಕ್ಷ ಡಾ. ಕೆ. ಎಲ್. ಐತಾಳರು ಸ್ವಾಗತಿಸಿ, ನಗರದಲ್ಲಿಯ ಫೈಲೇರಿಯಾ ರೋಗವನ್ನು ತಡೆಗಟ್ಟಬೇಕು, ನಳ್ಳಿನೀರಿನ ಯೋಜನೆಗೆ ನೆರವು ನೀಡಬೇಕು, ಅಫೀಸು ಕಟ್ಟಡ ಶಾಲಾ ಕಟ್ಟಡಗಳ ವೆಚ್ಚದಲ್ಲಿ ಅರ್ಧಾಂಶವನ್ನಾದರೂ ಸರಕಾರ ವಹಿಸಬೇಕೆಂಬವೇ ಮೊದಲಾದ ಬೇಡಿಕೆಗಳನ್ನು ಮಂತ್ರಿಗಳ ಮುಂದಿಟ್ಟರು. ಮಂತ್ರಿಗಳು ತಮ್ಮ ನಿವೇದನೆಯನ್ನು ಯುಕ್ತರೀತಿಯಲ್ಲಿ ಸರಕಾರಕ್ಕೆ ಕಳುಹಿಸಬೇಕೆಂದೂ ಏಕರೀತಿಯ ಕಾಯಿದೆಗಳು ಅನ್ವಯವಾಗುವಾಗ ನಿಮ್ಮ ಯೋಜನೆಗಳು ಕಾರ್ಯಗತವಾಗುವುವೆಂದೂ ಉತ್ತರಿಸಿದರು.

ಸತ್ಕಾರ ಸಮಾರಂಭ — ಕುರುಕಾಲು ಶ್ರೀ ಕಾಂಚಾರು ಗಿರಿಜಾ ಮಾಧ್ಯಮಿಕ, ಕುರುಕಾಲು ಗಣಪತಿ ಪ್ರಾಥಮಿಕ ಶಾಲೆಗಳಲ್ಲಿ ದೀರ್ಘಕಾಲದಿಂದ ಸರ್ವಿಸು ಮಾಡುತ್ತಿದ್ದು — ತನ್ನ ಊರಾದ ಸುರತ್ಕಲ್ ವಿದ್ಯಾದಾಯಿನಿ ಹೈಸ್ಕೂಲಿನಲ್ಲಿ ಕೆಲಸ ದೊರೆತ ಕಾರಣ, ಕಳೆದ ಜುಲೈಯಲ್ಲಿ ಕುರುಕಾಲು ಶಾಲೆಯಿಂದ ನಿವೃತ್ತಿ ಹೊಂದಿದ ಶ್ರೀ ಯಚ್ ಯು. ಅನಂತಯ್ಯ, 60 ವರ್ಷ ಪ್ರಾಯವಾದ್ದರಿಂದ ಕುರುಕಾಲು ಶಾಲೆಯಿಂದ ಕಳೆದ ದಶಂಬ್ರದಲ್ಲಿ ಬಿಡುಗಡೆ ಹೊಂದಿದ ಶ್ರೀ ಎಸ್. ಶ್ಯಾನುಭೋಗ — ಮತ್ತು 60 ವರ್ಷ ಪ್ರಾಯವಾಗಿ ಇದೇ ಫೆಬ್ರವರಿ ತಾ. 12ಕ್ಕೆ ಕುರುಕಾಲು ಶಾಲೆಯಿಂದ ನಿವೃತ್ತಿಯಾದ ಶ್ರೀ ಎಂ ದೇಜಪ್ಪ ಶೆಟ್ಟಿ — ಈ ಮೂರು ಮಂದಿಯನ್ನು ಸತ್ಕರಿಸಿ ಬೀಳ್ಕೊಡುವ ಬಗ್ಗೆ, ಮೇಲ್ಕಂಡ 2 ಶಾಲೆಗಳ ಅಧ್ಯಾಪಕ ವರ್ಗದವರ ಸಂಯುಕ್ತ ಸಭೆಯು ಇದೇ ತಾ. 12ರಂದು ಕಾಂಚಾರು ಶಾಲೆಯಲ್ಲಿ, ಉಭಯ ಶಾಲೆಗಳ ಮೆನೇಜರರಾದ ಶ್ರೀ ಕುರುಕಾಲು ಗಣಪಯ್ಯ ಶೆಟ್ರ ಅಧ್ಯಕ್ಷತೆಯಲ್ಲಿ ಜರಗಿತು. ಆರಂಭದಲ್ಲಿ ಶ್ರೀಗಳಾದ ಕೆ. ವಾಸು ಶೆಟ್ರು, ಕೆ ವೆಂಕಟ್ರಮಣ ಭಟ್ರು, ಕೆ. ಚಿಟ್ಟು ಶೆಟ್ರು, ಕೆ ವಾಮನ ಶೆಟ್ರು, ಕೆ. ಭುಜಂಗ ಶೆಟ್ರು, ಬಿ. ವೆಂಕಟೇಶ ರಾವ್, ಬಿ. ದೇವರಾವ್, ಕೆ. ಶಿವರಾಮ ಶೆಟ್ರು, ಬಿ. ಅನಂತರಾಮ ಶಾನುಭೋಗರು, ಕೆ. ಕೃಷ್ಣಯ್ಯ ಶೆಟ್ರು, ಕೂಡಾ ನಿವೃತ್ತಿ ಹೊಂದಿದ ಅಧ್ಯಾಪಕರ ಆದರ್ಶಗುಣಕಥನ ಮಾಡಿ ಭಾಷಣವಿತ್ತರು. ಬಳಿಕ ಬಿಡುಗಡೆ ಹೊಂದಿದ ಅಧ್ಯಾಪಕರು ತಮ್ಮ ದೀರ್ಘಕಾಲದ ಸರ್ವಿಸಿನ ಸವಿ ವಿಚಾರವನ್ನು ವರ್ಣಿಸಿ ಮಾತನಾಡಿದ ಬಳಿಕ ಅಧ್ಯಕ್ಷರು ತನಗೂ, ನಿವೃತ್ತಿಯಾದ ಅಧ್ಯಾಪಕರಿಗೂ ಇದ್ದ ನಿಕಟ ಪ್ರೇಮವನ್ನು ಮಾರ್ಮಿಕವಾಗಿ ವಿವರಿಸಿದ್ದಲ್ಲದೆ, ಸದ್ರಿಯವರು ಆಗಾಗ ಶಾಲೆಗೆ ಬರುತ್ತಿದ್ದು ಶಾಲೆಯ ಸುಖಕಷ್ಟಗಳಲ್ಲಿ ಭಾಗಿಗಳಾಗಿ ನಮ್ಮ ಮನಸಂತೋಷ ಪಡಿಸುತ್ತಿರಬೇಕಾಗಿ ಕೇಳಿಕೊಂಡು ಭಾಷಣವಿತ್ತರು. ತರುವಾಯ ಟೀಪಾರ್ಟಿ ಸತ್ಕಾರವೂ, ಗ್ರೂಫ್ ಫೊಟೊ ಕಾರ್ಯಕ್ರಮವೂ ಜರಗಿ ಸಭೆಯು ವಿಸರ್ಜನೆಯಾಯ್ತು.

ಶಿರ್ವ— ಸ್ಥಳೀಯ ಹಿಂದೂ ಹೈಸ್ಕೂಲಿನ ವಾರ್ಷಿಕೋತ್ಸವವು, ಇದೇ ತಾ. 11ರಂದು ಅದಮಾರು ಮಠಾಧೀಶ ಶ್ರೀ ವಿಬುಧೇಶತೀರ್ಥ ಶ್ರೀ ಪಾದಂಗಳವರ ಅಧ್ಯಕ್ಷತೆಯಲ್ಲೂ ಮರುದಿನ ಹಳೆ ವಿದ್ಯಾರ್ಥಿಸಂಘದ ವಾರ್ಷಿಕೋತ್ಸವವು ಪಲಿಮಾರು ಮಠಾಧೀಶ ಶ್ರೀ ರಘುವಲ್ಲಭ ತೀರ್ಥ ಶ್ರೀ ಪಾದಂಗಳವರ ಅಧ್ಯಕ್ಷತೆಯಲ್ಲೂ ವಿವಿಧ ಕಾರ್ಯಕ್ರಮಗಳಿಂದ ವಿಜೃಂಭಣೆಯಿಂದ ಜರಗಿಸಲ್ಪಟ್ಟವು.

ತಾ. 10ರಂದು ಶಿಕ್ಷಕ, ರಕ್ಷಕ ಸಂಘದ ವಾರ್ಷಿಕೋತ್ಸವವು ಶ್ರೀ ಎಂ. ಎಸ್. ಅನಂತ ಕೃಷ್ಣಾಚಾರ್ ಇವರ ಅಧ್ಯಕ್ಷತೆಯಲ್ಲಿಯೂ ಸಾಹಿತ್ಯೋತ್ಸವವು ಶ್ರೀ ಪೇಜಾವರ ಸೀತಾರಾಮ ಆಚಾರ್ಯರ ಅಧ್ಯಕ್ಷತೆಯಲ್ಲಿಯೂ ಜರಗಿದವು. ಶ್ರೀ ಕೊಡತ್ತಾರು ಅನಂತಪದ್ಮನಾಭ ಉಡುಪರಿಂದ ಭಾಷಣ; ಶ್ರೀ ರಘುರಾಮ ವರ್ಮರಿಂದ ಕಾವ್ಯವಾಚನವಾದ ಬಳಿಕ ಅಧ್ಯಕ್ಷ ಶ್ರೀ ಸೀತಾರಾಮ ಆಚಾರ್ಯರವರು ವಿದ್ಯೋದಯ ಹಸ್ತಪತ್ರಿಕೆಯನ್ನು ಉದ್ಘಾಟಿಸಿ ಯುವಕ ಯುವತಿಯರು ಸಾಹಿತ್ಯಸೇವೆಯನ್ನು ಹೇಗೆ ಮಾಡಬಹುದೆಂದು ಸೂಕ್ತ ಸಲಹೆಗಳನ್ನಿತ್ತರು. ಮುಖ್ಯೋಪಾಧ್ಯಾಯ ಶ್ರೀ ಬಿ. ಜಯರಾಮ ಶೆಟ್ಟರು ಆರಂಭದಲ್ಲಿ ಸ್ವಾಗತ ಭಾಷಣವನ್ನೂ ಕೊನೆಯಲ್ಲಿ ಧನ್ಯವಾದವನ್ನೂ ಅರ್ಪಿಸಿದರು.

ಕಾರಿಂಜೆ, ಕಾವಳಕಟ್ಟೆ— ಸ್ಥಳೀಯ ಯುವಕ ಸಂಘದ ವಾರ್ಷಿಕೋತ್ಸವದ ಅಂಗವಾಗಿ ಕಾರಿಂಜೆ ಕ್ಷೇತ್ರದಲ್ಲಿ ಮಂಗಳೂರಿನ ಕಲಾನಿಕೇತನದ ಕೆ ಎಸ್. ಗೋಪಾಲಕೃಷ್ಣನ್‌ರವರ ಕೊಳಲವಾದನ, ದೇವಪ್ಪ ರಾಮಣ್ಣ ಸೆಟ್ಟಿ ಮತ್ತು ಜಗನ್ನಾಥ ರೈಯವರಿಂದ ಹಾಸ್ಯ ಪ್ರದರ್ಶನ, ಶ್ರೀ ಕೆ. ಎಸ್ ರಾಜನ್‌ರವರಿಂದ ಹರಿಕಥೆ, ಶ್ರೀ ಕೆ. ಜಯ ಆಳ್ವರ ಶಿಷ್ಯೆಯರಾದ ಕುಮಾರಿ ಲಲಿತಾರತ್ನ ಇವರಿಂದ ಭಾರತೀಯ ನೃತ್ಯ ಪ್ರದರ್ಶನಗಳು ಯಶಸ್ವಿಯಾಗಿ ಜರಗಿದುವು. ಕಾರ್ಯದರ್ಶಿ ಕೆ. ಇ. ಜಿನರಾಜ ಹೆಗ್ಡೆಯವರು ಧನ್ಯವಾದಗಳನ್ನಿತ್ತರು.

ಉದ್ಯಾವರ ಶ್ರೀ ಬೈದರ್ಕಳ ಗರಡಿಯ ಜೀರ್ಣೋದ್ಧಾರ ಉಡುಪಿ ತಾಲೂಕು ಉದ್ಯಾವರ ಶ್ರೀ ಬೈದರ್ಕಳ ಗರಡಿಯು ಬಹಳ ನಾದುರುಸ್ತಿಯಾದುದರಿಂದ ಅದನ್ನು ಜೀರ್ಣೋದ್ಧಾರಮಾಡಿಸುವ ಸದುದ್ದೇಶದಿಂದ ತಾ. 16—2—61ರಂದು ಸದರಿ ಗರಡಿಯ ವಠಾರದಲ್ಲಿ ಉಡುಪಿಯ ಡಾ ಪಿ ಜಿ. ಆಚಾರ್ಯರ ಅಧ್ಯಕ್ಷತೆಯಲ್ಲಿ ಮಹಾಸಭೆಯೊಂದು ಜರಗಿ ಪ್ರಾತಿನಿಧಿಕವಾದ ಜೀರ್ಣೋದ್ಧಾರ ಕಮಿಟಿಯೊಂದು ಸ್ಥಾಪಿಸಲ್ಪಟ್ಟಿರುತ್ತದೆ. ಜೀರ್ಣೋದ್ಧಾರದ ಕೆಲಸಗಳನ್ನು ನಿರ್ವಹಿಸಲಿಕ್ಕೂ ಇದಕ್ಕೆ ಬೇಕಾದ ಸಾಹಿತ್ಯ ಸಾಮಗ್ರಿ, ಸಹಾಯಧನಗಳನ್ನು ಸಂಗ್ರಹಿಸಲಿಕ್ಕೂ ಒಂದು ಕಾರ್ಯನಿರ್ವಾಹಕ ಸಮಿತಿಯನ್ನು ಕೂಡಾ ರಚಿಸಲಾಗಿದೆ. ಇದಕ್ಕೆ ಡಾ. ಪಿ. ಜಿ. ಆಚಾರ್ಯರು ಅಧ್ಯಕ್ಷರಾಗಿ, ಶ್ರೀ ಕೆ. ಕಾಳಪ್ಪ ಸೆಟ್ಟಿ ಕೋಶಾಧಿಕಾರಿ, ಶ್ರೀ ಎಚ್. ವಿಠಲ ಸೆಟ್ಟಿ ಕಾರ್ಯದರ್ಶಿ, ಶ್ರೀಗಳಾದ ಉದ್ಯಾವರ ದೇಜು ಪೂಜಾರಿ, ಕೊರಗ ಪೂಜಾರಿ, ಮುಮ್ಮ ಪೂಜಾರಿ, ಮುತ್ತಪ ಪೂಜಾರಿ, ದಾಸು ಪೂಜಾರಿ, [illegible] ಪೂಜಾರಿ ಇವರು ಸದಸ್ಯರಾಗಿ ಆರಿಸಲ್ಪಟ್ಟಿದ್ದಾರೆ.

ಈ ಸತ್ಕಾರ್ಯಕ್ಕೆ ಊರು ಪರವೂರುಗಳಲ್ಲಿರುವ ಮಹನೀಯರು ಸಂಪೂರ್ಣ ಸಹಕರಿಸಬೇಕಾಗಿ ಕಮಿಟಿಯವರ ವಿನಂತಿ ಇದೆ.

ಅಂತರ್ ಕಾಲೇಜು ಪಂದ್ಯಾಟಗಳು ಮಣಿಪಾಲ ಎಕೆಡಮಿ ಆಫ್ ಜನರಲ್ ಎಜ್ಯುಕೇಶನಿನ ಅಂತರ್ ಕಾಲೇಜುಗಳ ವಾರ್ಷಿಕ ಪಂದ್ಯಾಟಗಳ ಉದ್ಘಾಟನಾ ಸಮಾರಂಭವನ್ನು ಎಂ. ಜಿ. ಎಂ. ಕಾಲೇಜಿನ ಆಟದ ಬಯಲಲ್ಲಿ ಉಡುಪಿ ಜ್ಯುಡಿಶಿಯಲ್ ಸಬ್ ಮೆಜಿಸ್ಟ್ರೇಟ್ ಶ್ರೀ ಬಿ ವಿಶ್ವನಾಥ ರೈಗಳು ತಾ. 12ರಂದು ನೆರವೇರಿಸಿದರು. ಬಳಿಕ ಮರುದಿನವೂ ಪಂದ್ಯಾಟ ಜರಗಿದವು ತಾ13 ನೇ ಸಂಜೆ ಟಿ. ಸೆಟಿನ್ನ (ಐ. ಎಸ್) ಇವರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಬಹುಮಾನ ವಿತರಣೆ ನಡೆಯಿತು. ತಾ. 17ರಂದು ಜಿಲ್ಲಾ ಪೊಲಿಸ್ ಸೂಪರಿಂಟೆಂಡ್ ಶ್ರೀ ಎ ಜಿ. ಕೃಷ್ಣಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸಮಾರೋಪ ಸಮಾರಂಭವು ಜರಗಿತು

ಎಂ. ಜಿ. ಎಮ್. ಕಾಲೇಜು— ಅಣಕ ಪಾರ್ಲಿಮೆಂಟಿನ ಅಧಿವೇಶನವು ಇದೇ ತಾ 13 ರಂದು ಲೆಕ್ಚರರ್ ಶ್ರೀ ಪಿ ಜಿ. ಗುರುರಾಜ ಭಟ್ಟರು ಸ್ಪೀಕರರಾಗಿ, ಘಟನೆಯ ಸಲಹೆಗಾರ ಶ್ರೀ ಟಿ. ಕೃಷ್ಣರಾಯರ ಮಾರ್ಗದರ್ಶನದಲ್ಲಿ ಜರಗಿತು ಪ್ರಿನ್ಸಿಪಾಲ್ ಸುಂದರ ರಾಯರು ಉದ್ಘಾಟನಾ ಭಾಷಣಮಾಡಿದರು. ಶ್ರೀ ಎಲ್. ಜೆ. ಸುವಾರಿಸ್ ಪ್ರಧಾನ ಮಂತ್ರಿಯಾಗಿಯೂ ಶ್ರೀ ಜಿ ಸೋಮಶೇಖರ ಭಟ್ಟರು ವಿರೋಧಿ ಪಕ್ಷದ ಮುಖಂಡರಾಗಿಯೂ ಕಾರ್ಯನಿರ್ವಹಿಸಿದರು.

ಕಾಲೇಜು ಯೂನಿಯನ್ ದಿನಾಚರಣೆಯು ತಾ. 18ರಂದು ಜಿಲ್ಲಾ ಮತ್ತು ಸೆಶ್ಶನ್ಸ್ ಜಡ್ಜರಾದ ಶ್ರೀ ವಿ ಸಿ. ರಾಮಚಂದ್ರನ್ ಇವರ ಸಮಾರೋಪ ಭಾಷಣದೊಂದಿಗೆ ನೆರವೇರಿತು.

ಶ್ರೀ ಪೂರ್ಣಪ್ರಜ್ಞ ಕಾಲೇಜು— ಇದರ ಯೂನಿಯನ್ ದಿನಾಚರಣೆಯು ತಾ. 19ರಂದು ಅದಮಾರು ಶ್ರೀ ಪಾದಂಗಳವರ ಅಧ್ಯಕ್ಷತೆಯಲ್ಲಿ ಜರಗಿ ಸುರತ್ಕಲ್ ರೀಜನಲ್ ಇಂಜಿನಿಯರಿಂಗ್ ಕಾಲೇಜಿನ ಪ್ರಿನ್ಸಿಪಾಲ್ ಡಾ ಎ ಎಸ್ ಅಡ್ಕೆಯವರು ಮುಖ್ಯ ಅಥಿತಿಗಳಾಗಿ ಭಾಷಣಮಾಡಿದರು.

ಶಿವರಾತ್ರಿಯ ಪವಿತ್ರ ದಿನದಲ್ಲಿ — ಉಡುಪಿಯ ಶ್ರೀ ಬ್ರಹ್ಮ ಬೈದ್ಯರ್ಕಳ ಭೂಮಾವತಿ ಯಕ್ಷಗಾನ ಸಂಘದವರು ಮಹಾಶಿವರಾತ್ರಿ ಅಂಗವಾಗಿ ವಿಶೇಷ ಕಾಲಕ್ಷೇಪವನ್ನು ಜರಗಿಸಿದರು. ಪವಿತ್ರ ದಿನದ ಮಹತ್ವವನ್ನು ಸ್ಮರಿಸುವ ಸಭಾ ಕಾರ್ಯಕಲಾಪಗಳು ಜರಗಿದ ಬಳಿಕ 'ಭೂಕೈಲಾಸ' ಎಂಬ ಯಕ್ಷಗಾನ ಕೂಟವು ಚೇತೋಹಾರಿಯಾಗಿ ನೆರವೇರಿತು.

ಮಂಗಳೂರಿನ ಆರ್ಯ ಸಮಾಜ. ಮಂದಿರದಲ್ಲಿ ಇದೇ ತಾ 13ರಂದು ಋಷಿಬೋಧೋತ್ಸವವೂ ಸ್ವಾಮಿ ಶ್ರದ್ಧಾನಂದ ಸೇವಾಶ್ರಮದ ವಾರ್ಷಿಕೋತ್ಸವವೂ ಶ್ರೀ ಕೆ ಕೆ ಶೆಟ್ಟಿ ಎಂ. ಎಲ್ ಸಿ ಇವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ನೆರವೇರಿತು.

ಲಲಿತಕಲಾ ಶಾಲೆಯ ವರ್ಧಂತಿ— ಮಣಿಪಾಲದ ಎಕೆಡೆಮಿಯವರು ನಡೆಸಿಕೊಂಡು ಹೋಗುತ್ತಿರುವ ಸಂಗೀತ ಮತ್ತು ಲಲಿತಕಲಾ ಶಾಲೆಯ ವರ್ಧಂತ್ಯುತ್ಸವವು ತಾ. ಯು. ಸುಂದರ ರಾಮ ಪೈ ಮೆಮೋರಿಯಲ್ ಸ್ಟೇಜಿನಲ್ಲಿ ಡಿ ಮುನ್ಸಿಫ್ ಶ್ರೀ ಜಿ. ಎಸ್. ನಾಗಮೋತಿಯವರ ಅಧ್ಯಕ್ಷತೆಯಲ್ಲಿ ತಾ 18ರಂದು ನೆರವೇರಿತು ಡಾ. ಟಿ ಎಂ. ಎ. ಪೈಗಳು ಸ್ವಾಗತ ಭಾಷಣಮಾಡಿ ಈ ಶಾಲೆಯ ಪರಿಸ್ಥಿತಿಯನ್ನು ವಿವರಿಸಿದರು. ಶ್ರೀಮತಿ ಅನಸೂಯ, ಜಿ ಎಸ್. ನಾಗಮೋತಿಯವರು ಬಹುಮಾನ ವಿತರಣೆ ಮಾಡಿದರು. ಕೊನೆಗೆ ಸಂಗೀತ ನೃತ್ಯಾದಿಗಳು ಜರಗಿದವು.

'NAVAYUGA' WEEKLY is in the list of periodicals and Newspapers approved for use in Secondary School as per proceedings Roc. No. 466 N/50 date 2-12-19 0 of the Director of public Instruction Madras.

ಪರಿಚಯ

(೫ನೇ ಪುಟದಿಂದ)

ಪಯುಕ್ತವಾಗಿವೆಯೆಂದು ತಿಳಿಯುತ್ತಾರೆ ವಿಶ್ವತ್ಕ್ಲೇಶವನ್ನು ಕಡಿಮೆ ಮಾಡುವ ಮಹಾ ಸಾಹಸದಲ್ಲಿ ಭಾರತವು ನೀಡುತ್ತಿರುವ ಸಹಕಾರವನ್ನು ಶ್ರೀ ಹೆಮ್ಮರ್ ಶೀಲ್ಡರು ಹಲವಾರು ಬಾರಿ ಪ್ರಶಂಸಿಸಿದ್ದಾರೆ

ಸಂಯುಕ್ತ ರಾಷ್ಟ್ರ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ಶ್ರೀ ಹೆಮ್ಮರ್ ಶೀಲ್ಡರು ತಮ್ಮ ಹಿಂದೆ ಈ ಪದವಿಯಲ್ಲಿದ್ದ ಶ್ರೀ ಟ್ರಿಗ್ವೆಲಿಯವರಿಗಿಂತಲೂ ಕೀರ್ತಿ ಗಳಿಸಿದ್ದಾರೆ. ಇವರು ಅತ್ಯಲ್ಪ ಮಾತನಾಡುವ ರಾಜನೀತಿಜ್ಞಯೆಂದು ಹೆಸರು ಪಡೆದಿದ್ದಾರೆ ಇವರ ವಾಗ್ಜಾಲವು ಆಕಾರದಲ್ಲಿ ಸಂಕ್ಷಿಪ್ತವಾಗಿದ್ದರೂ ಅದು ಸುಸ್ಪಷ್ಟವಿರುತ್ತದೆ ಮುಂದಿರುವ ಸಮಸ್ಯೆಯ ಮೂಲವನ್ನು ಶೀಘ್ರವಾಗಿ ಕಂಡು ಹಿಡಿಯುವುದೇ ಇವರ ಅಪೂರ್ವ ಯೋಗ್ಯತೆ ತಮ್ಮ ಅಭಿಪ್ರಾಯವನು ಸ್ಪಷ್ಟವಾಗಿ ಹೊರಗೆಡಹುವುದು ಇವರ ಸ್ವಭಾವವಾದರೂ ಆಡುವಾಗ ಸಾಧ್ಯವಾದಷ್ಟು ಸೌಮ್ಯ ಶಬ್ದಗಳನ್ನೇ ಪ್ರಯೋಗಿಸುವುದು, ಯಾವುದೇ ಸಂದರ್ಭದಲ್ಲಿ ಉದ್ರೇಕಾವಸ್ಥೆಗೇರದಿರುವುದು ಇವರ ವೈಶಿಷ್ಟ್ಯ ಮೊತ್ತಮೊದಲಿಗೆ ೧೯೫೩ದಲ್ಲಿ ಐದು ವರ್ಷಗಳ ಅವಧಿಗೆ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಗೊಂಡ ಇವರ ಕಾರ್ಯತತ್ಪರತೆ, ಸಂ ರಾ. ಸಂಘದ ಧ್ಯೇಯವನ್ನು ಮುಟ್ಟುವುದರಲ್ಲಿ ಇವರ ಕರ್ತವ್ಯಪರತೆ ಹಾಗೂ ಮತ್ತೆ ಕೆಲವು ಉದಾರ ಗುಣಗಳನ್ನು ಕಂಡು ೧೯೫೮ರಲ್ಲಿ ಮತ್ತೂ ಐದು ವರ್ಷಗಳ ವರೆಗೆ ಇವರು ಅದೇ ಪದವಿಗೆ ನಿಯುಕ್ತರಾದರು

ಸ್ವೀಡನ್ನಿನ ಒಂದು ಶ್ರೀಮಂತ ಕುಲೀನ ಸಂಸಾರದಲ್ಲಿ ೧೯೦೫ರಲ್ಲಿ ಹುಟ್ಟಿದ ಶ್ರೀ ಡಾಗ್ ಹೆಮ್ಮರ್‌ಶೀಲ್ಡರ ತಂದೆಯವರು ಸ್ವೀಡನ್ನಿನ ಶಿಕ್ಷಣ ವಿಭಾಗದ ಕಾರ್ಯದರ್ಶಿಯಾಗಿದ್ದರು ಉಪ್ಪಸಲಾ ಮತ್ತು ಸ್ಟಾಕ್ ಹೋಂಗಳ ವಿಶ್ವವಿದ್ಯಾಲಯಗಳಲ್ಲಿ ಶ್ರೀ ಶೀಲ್ಡರು ಅಧ್ಯಯನ ನಡೆಸಿದರು. ಭಾಷಾ ಶಾಸ್ತ್ರವು ಇವರ ಅಚ್ಚುಮೆಚ್ಚಿನ ವಿಷಯವಾಗಿತ್ತು ಇದರನಂತರ ಅರ್ಥಶಾಸ್ತ್ರ ಹಾಗೂ ಸಮಾಜ ಶಾಸ್ತ್ರಗಳಲ್ಲಿ ಇವರ ಮನಸ್ಸು ಓಡುತ್ತಿತ್ತು ವಿದ್ಯಾಧ್ಯಯನದನಂತರ ಶ್ರೀ ಹೆಮ್ಮರ್‌ಶೀಲ್ಡರು ಸ್ಟಾಕ್‌ಹೋಂ ವಿಶ್ವವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ದುಡಿದರು. ಹಲವಾರು ಸಂಸ್ಥೆಗಳ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸುತ್ತ ಇವರು ಸ್ವೀಡನ್ನಿನ ಅರ್ಥಶಾಖೆಯ ಕಾರ್ಯದರ್ಶಿಯಾಗಿ ೧೯೩೬ರಿಂದ ೧೯೫೩ರ ವರೆಗಿದ್ದರು. ಆನಂತರ ವಿದೇಶ ಮಂತ್ರಿಶಾಖೆಗೆ ಇವರು ವರ್ಗಾಯಿಸಲ್ಪಟ್ಟರು. ಮಂತ್ರಿಮಂಡಳಿಯಲ್ಲಿ ಆ ಮೇಲೆ ಸೇರಿಸಲ್ಪಟ್ಟರು ಸಂಯುಕ್ತ ರಾಷ್ಟ್ರಸಂಘದ ಪ್ರಧಾನ ಕಾರ್ಯದರ್ಶಿಯಾಗುವುದಕ್ಕೆ ಮೊದಲು ಇವರು ೧೯೪೯, ೫೧—೫೩ರ ಸಾಮಾನ್ಯಾಧಿವೇಶನಗಳಲ್ಲಿ ಸ್ವೀಡಿಷ್ ಶಿಷ್ಟಮಂಡಳಿಯ ಸದಸ್ಯರಾಗಿದ್ದು ಭಾಗವಹಿಸಿದ್ದರು

ರಾಜಕಾರಣದಲ್ಲಿಯೇ ವ್ಯಸ್ತವಾಗಿರುವ ಶ್ರೀ ಡಾಗ್ ಹೆಮ್ಮರ್ ಶೀಲ್ಡರಿಗೆ ಸಾಹಿತ್ಯ, ಸಂಗೀತ ಮತ್ತು ನಾಟಕಗಳಲ್ಲಿ ಆಸಕ್ತಿ ಅಧಿಕ. ಪರ್ವತಾರೋಹಣದಲ್ಲಿ ಇವರಿಗೆ ಆಸ್ಥೆ ಹೆಚ್ಚು. ವಿಶ್ವಸಂಸ್ಥೆಯಂತಹ ಮಹಾಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾಗುವವನಲ್ಲಿರಬೇಕಾದ ಎಲ್ಲ ಯೋಗ್ಯತೆಗಳೂ ಗುಣಗಳೂ ಇವರಲ್ಲಿವೆಯೆಂಬುದು ನಿಸ್ಸಂದೇಹ. ಆದರೆ, ಇವರ ಹಾಗೂ ವಿಶ್ವಸಂಸ್ಥೆಯ ದುರ್ದೈವದಿಂದಾಗಿ ಇಬ್ಬರ ಹೆಸರಿಗೆ ಕಳಂಕ ಹಚ್ಚುವ ಅಮಾನುಷಕೃತ್ಯ ಕಾಂಗೋದಲ್ಲಿ ನಡೆಯಿತು. ಅಲ್ಲಿ ಶಾಂತಿ ಸ್ಥಾಪನೆ ಮಾಡುತ್ತಿರುವ ಸಂ ರಾ. ಸೇನೆಯೂ ಅದರ ಪದಾಧಿಕಾರಿಗಳೂ ನೋಡು ನೋಡುತ್ತಿದ್ದಂತೆಯೇ ಪೇಟ್ರಿಸ • ಲುಮುಂಬಾರವರ ವಧೆಯಾಯಿತು, ಅಲ್ಲಿ ಎಲ್ಲರೂ ಇದ್ದು ಯಾರೂ ಇಲ್ಲದಂತಾದರು ಲುಮುಂಬಾರ ಹತ್ಯೆಗೆ ಕಾರಣೀಭೂತರಾರು, ಹತ್ಯೆಯಲ್ಲಿ ಸಂಯುಕ್ತ ರಾಷ್ಟ್ರ ಸಂಸ್ಥೆಯ, ಶ್ರೀ ಹೆಮ್ಮರ್ ಶೀಲ್ಡರ ಪಾತ್ರವೇನು ಎಂಬುದರ ಬಗ್ಗೆ ಬಲವಾದ ವಾದವಿವಾದಗಳು ಕೇಳಬರತೊಡಗಿವೆ.

ಯಾರೂ ಏನೇ ಹೇಳಲಿ, ಡಾಗ್ ಹೆಮ್ಮರ್ ಶೀಲ್ಡರಂತಹ ವ್ಯಕ್ತಿ ಬೇರೆಯಿಲ್ಲವೆಂಬುದು ಖಂಡಿತ. ಸಂ ರಾ ಸಂಘದ ಹೆಚ್ಚಿನ ಸದಸ್ಯರಬೆಂಬಲ ಅವರಿಗಿದೆಯೆಂಬುದೂ ಅಷ್ಟೆ ಖಂಡಿತ ಲುಮುಂಬಾರ ಹತ್ಯೆಯ ಬಗ್ಗೆ ಕೂಲಂಕಷ ವಿಚಾರಣೆ ನಡೆದು ನಿಜವಾದ ಅಪರಾಧಿಗಳನ್ನು ದಂಡಿಸುವುದಕ್ಕೆ ಸಂ ರಾ ಸಂಘವು ನಿರ್ಣಯಿಸುವುದಾದರೆ, ಅದನ್ನು ನಿರ್ವಹಿಸಲು ಡಾಗ್ ಹೆಮ್ಮರ್ ಶೀಲ್ಡರು ಸರ್ವ ಸಮರ್ಥರೆಂಬುದೂ ಖಂಡಿತವೇ.



ಸ್ವತಂತ್ರ ಜಗತ್ತಿನ ರಕ್ಷಣೆಗಾಗಿ ಅಮೇರಿಕೆಯು ತಯಾರಿಸಿದ ಅಣುಶಕ್ತಿಚಾಲಿತ ಜಲಾಂತರ್ಗಾಮಿ "ಜಾರ್ಜ್ ವಾಷಿಂಗ್‌ಟನ್"

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ
ಬೆಲೆ ರೂ 1-4-0 (1=25)

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ
ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ ರೂ ಎರಡು ಉತ್ತಮ ಪ್ರತಿ. ರೂ ಎರಡೂವರೆ
ವಿ ಪಿ —ಅಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ
0=25 N P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು
ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ
ನವಭಾರತ ಪುಸ್ತಕ ಭಂಡಾರ, ಉಡುಪಿ

ದಿ ಮೂಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ.

ನೋಟೀಸು

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಕಾಣಿಸಿದ ಪಾರ್ಟಿಯರು ನಮ್ಮ ಬೇಂಕಿನಿಂದ ಚಿನ್ನಾಭರಣದ ಅಡವಿನಲ್ಲಿ ಸಾಲ ಪಡಕೊಂಡು ದೀರ್ಘ ಕಾಲದಿಂದ ಅಸಲು-ಬಡ್ಡಿಯನ್ನು ಬಾಕಿ ಮಾಡಿರುವುದರಿಂದ ರಿಜಿಸ್ಟ್ರಿ ನೋಟೀಸು ಕೊಟ್ಟರೂ ಅಡವಿಟ್ಟ ನಗಗಳನ್ನು ಬಿಡಿಸಿಕೊಳ್ಳದಿರುವುದರಿಂದ, ಸದ್ರಿಯವರ ನಗಗಳನ್ನು ತಾರೀಕು 13—3—1961ನೇ ಸೋಮವಾರ ಅಪರಾಹ್ನ ಗಂಟೆ 1ಕ್ಕೆ ಯಾ ತದನಂತರ ಯುಕ್ತ ಕಂಡ ದಿವಸ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು ತಿಳಿದಿರಲಿ.

ಲೋನು ನಂಬ್ರ	ಹೆಸರು ಮತ್ತು ವಿಳಾಸ	ತಾ 31 12 1960ರ ವರೆಗಿನ ಬಡ್ಡಿ ಸಮೇತ
818/59	ವಿಟ್ಠಲ್ ಶೆಟ್ಟಿ, S/o ಉಗ್ಗಪ್ಪ ಶೆಟ್ಟಿ, ಶಿಮಂತೂರು, ಪಂಜಿನಡ್ಕ	195 - 56
890/59	ಗುರುವ, S/o ತೋಕು ಮೇಸ್ತ್ರಿ, ಕಿಲ್ಪಾಡಿ ಮುಲ್ಕಿ	9 - 75
1908/59	ಸ್ಟೀಫನ್ ಕೊರೆಯಾ, S/o ವಿಂಗೆಲ್ ಕೊರೆಯಾ, ಮಾನಂಪಾಡಿ, ಮುಲ್ಕಿ	111 - 07
2025/59	ಚಿಕ್ಕ ಯಾನೆ ಕೋಟಿ ಶೆಟ್ಟಿ, S/o ದಾಸು ಶೆಟ್ಟಿ, ಐಕಳ, ತಾಳಿಪಾಡಿ.	30 - 95
2192/59	ಅಪ್ಪು ಮ್ಯಾಲಿ, S/o ಜೋಗಿ ಮ್ಯಾಲಿ, ಬಂದರ, ಮುಲ್ಕಿ,	22 - 40

ಮುಲ್ಕಿ
16—2—1961

ಯಂ ಆರ್ ಯೆಚ್ ಪೂಂಜ,
ಮೆನೇಜರ್

ಭೀಮಯೋಜನೆ

ಒರಿಸ್ಸಾ ರಾಜ್ಯದ ತೃತೀಯ ಯೋಜನೆ

ಭಾರತದ ಹಿಂದುಳಿದ ರಾಜ್ಯಗಳಲ್ಲಿ ಒಂದಾಗಿದ್ದ ಒರಿಸ್ಸಾ ಇಂದಿಗೂ ಬಹಳಷ್ಟು ಹಿಂದುಳಿದಿದೆ ಇದಕ್ಕೆ ಅಲ್ಲಿ ಜನನ ಪ್ರಮಾಣ ಹೆಚ್ಚಿರುವುದೇ ಕಾರಣ ಆದಕ್ಕಾಗಿ, ೧೯೬೧—೬೬ರಲ್ಲಿ ವಿಶೇಷ ರೀತಿಯ ಯೋಜನೆ ಬೇಕೆಂದು ರಾಷ್ಟ್ರೀಯ ಆರ್ಥಿಕ ಮಂಡಳಿ ಹೇಳುತ್ತದೆ.

ಭಾರತದ ಅತಿ ದರಿದ್ರ ರಾಜ್ಯವೆಂದು ಗಾಂಧೀಜಿಯವರು ಹಿಂದೊಮ್ಮೆ ತನ್ನ ಒರಿಸ್ಸ ಸಂಚಾರಾವಧಿಯಲ್ಲಿ ಹೃದಯಾಂತರಾಳದಿಂದ ಉದ್ಗರಿಸಿದ್ದರು. ಸುಮಾರು ೬೦ ಸಾವಿರ ಚದರ ಮೈಲು ವಿಸ್ತಾರವೂ ೧½ ಕೋಟಿ ಜನರೂ ಇರುವ ಈ ರಾಜ್ಯದಲ್ಲಿ ಕೇವಲ ಆರು ಲಕ್ಷ ಜನರು ಮಾತ್ರ ನಗರ ವಾಸಿಗಳೆಂದರೆ ವಿಚಿತ್ರವೆನಿಸುವುದಿಲ್ಲವೆ? ಸೇಕಡಾ ೮೦ರಷ್ಟು ಜನತೆ ಭತ್ತದ ಕೃಷಿಯನ್ನೇ ಮಾಡಿಕೊಂಡಿದ್ದು, ನೂರಕ್ಕೆ ೧೫ರಷ್ಟು ಮಾತ್ರ ಸಾಕ್ಷರರಿದ್ದು, ಸಾರಿಗೆ ಸಂಪರ್ಕಗಳು ಅತೀವ ವಿರಳವಾಗಿದ್ದ ಒರಿಸ್ಸ ಇಂದು ಪ್ರಗತಿ ಪಥದಲ್ಲಿ ಮುಂದಡಿಯಿಡುತ್ತಿದೆ.

ರೂರಕೇಲಾ ಉಕ್ಕಿನ ಕಾರಖಾನೆ, ಎರಡು ರಿ-ಫ್ರಾಕ್ಟರಿ, ಎರಡು ಕಾಗದದ ಕಾರಖಾನೆ, ಒಂದು ನೂಲುವ ಮತ್ತು ನೇಯುವ ಕಾರಖಾನೆ, ಸಿಮೆಂಟು, ಸಕ್ಕರೆ ಕಾರಖಾನೆಗಳು ಒಂದೊಂದು, ಎರಡು ಫೆರ್ರೊ ಮೆಂಗನೀಸ್, ಒಂದೊಂದು ಟೆಕ್ಸ್‌ಟೈಲ್, ಟ್ಯೂಬ್ ಫೆಕ್ಟರಿ, ಎರಡು ಎಲ್ಯೂಮಿನಿಯಂ ಕಾರಖಾನೆಗಳು—ಇವಕ್ಕೆ ಹೊಂದಿಕೊಂಡು ಇನ್ನಿತರ ಚಿಕ್ಕ ಪುಟ್ಟ ಕಾರಖಾನೆಗಳು ಕಟಕ್ಕಿನ ಸಮೀಪದಲ್ಲಿ ಸ್ಥಾಪನೆಗೊಂಡ ದೊಡ್ಡ ಪ್ರಮಾಣದ ಔದ್ಯಮಿಕ ಯೋಜನೆಗಳಾಗಿವೆ. ೧೯೪೭ರ ವರೆಗೆ ನಾಮ ಮಾತ್ರಕ್ಕೂ ಪ್ರವೇಶಿಸದ ಔದ್ಯಮೀಕರಣವು ಈ ಹನ್ನೆರಡು ವರ್ಷಗಳಲ್ಲಿ ಶಲೆಯೆತ್ತಿ ಒರಿಸ್ಸದ ಜನತೆಯ ವಿಕಾಸದಲ್ಲಿ ಭಾಗವಹಿಸಿದೆಯೆನ್ನುವುದು ಅಭಿಮಾನಾಸ್ಪದವಾಗಿದೆ.

ದ್ವಿತೀಯ ಯೋಜನಾವಧಿಯಲ್ಲಿ ಒರಿಸ್ಸ ರಾಜ್ಯದ ಒಟ್ಟು ವ್ಯಯವು ೯೧ ಕೋಟಿ ರೂಪಾಯಿಗಳೆಂದು ಅಂದಾಜು ಮಾಡಿದ್ದಾರೆ ಕಳೆದ ಅಕ್ಟೋಬರದಲ್ಲಿ ಘೋಷಿಸಲಾದ ರಾಜ್ಯದ ಮೂರನೆಯ ಯೋಜನೆಯ ಪ್ರಮಾಣವು ೧೬೨ ಕೋಟಿ ರೂಪಾಯಿಗಳಷ್ಟಿದ್ದರೂ ಮುಂದೆ ಇದು ೧೬೦ ಕೋಟಿಗಳಿಗೆ ಇಳಿಯಿತು ಕೃಷ್ಯುತ್ಪನ್ನಗಳಿಗೆ ಈ ಯೋಜನೆಯಲ್ಲಿ ಅಗ್ರ ಪ್ರಾಶಸ್ತ್ಯವನ್ನು ನೀಡಲಾಗಿದ ಔದ್ಯಮೀಕರಣ, ಖನಿಜೋತ್ಪತ್ತಿಗಳ ಬಗ್ಗೆ ಒಟ್ಟು ಏಳು ಕೋಟಿ ರೂಪಾಯಿಗಳನ್ನು ಮಾತ್ರ ತೆಗೆದಿಡಲಾಗಿದೆ

ಮಧ್ಯಮ ವರ್ಗದ ಹಾಗೂ ಬೃಹತ್ಪ್ರಮಾಣದ ಉದ್ಯಮಗಳ ಬಗ್ಗೆ ರಾಜ್ಯ ಸರಕಾರದ ನೀತಿಯು ಬದಲಾಗಿದೆ. ಉದ್ದಿಮೆದಾರರಿಗೆ ಸರಕಾರಿ ಜಮೀನನ್ನು ಬಿಟ್ಟುಕೊಡುವುದು, ಖಾಸಗಿ ಭೂಮಿಯನ್ನು ಪಡೆದುಕೊಡುವುದು, ನೀರು ಮತ್ತು ವಿದ್ಯುಚ್ಛಕ್ತಿಯನ್ನು ಪೂರೈಸಿಕೊಡುವುದು, ಕಾರಖಾನೆಯ ಕ್ಷೇತ್ರಕ್ಕೆ ಸಂಬಂಧಿಸಿದ ಪ್ರದೇಶಗಳನ್ನು ಉನ್ನತಗೊಳಿಸಿಕೊಡುವುದು, ರಾಜ್ಯ ಆರ್ಥಿಕ ಮಹಾಮಂಡಳದಿಂದ ಸಾಲವನ್ನು ಒದಗಿಸುವುದು, ವ್ಯಕ್ತಿಗತ ಉದ್ದಿಮೆಗೆ ಪರವಾನಿಗೆಯನ್ನು ಕೊಡುವುದ, ಬಂಡವಳ ಒಡವೆ ವಸ್ತುಗಳನ್ನು ಆಯಾತ ಮಾಡುವುದು, ಅವಕಾಶವೊದಗುವಲ್ಲಿ ವಿವಿಧ ಸಂಸ್ಥೆಗಳಿಂದ ಆರ್ಥಿಕ ಸಹಾಯವನ್ನು ಒದಗಿಸಿಕೊಡುವುದು—ಸರಕಾರದ ಉದ್ದೇಶವಿರುತ್ತದೆ ಹೆಚ್ಚಿನ ರಸ್ತೆಗಳನ್ನು ಮಾಡಿಸುವುದು ಮತ್ತು ಇರುವ ಮಾರ್ಗಗಳನ್ನು ಉತ್ತಮಗೊಳಿಸುವುದು, ಅಧಿಕ ವಿದ್ಯುಚ್ಛಕ್ತಿಯ ಉತ್ಪಾದನೆ ಮಾಡುವುದು, ತಾಂತ್ರಿಕ ಶಿಕ್ಷಣದ ಸೌಲಭ್ಯಗಳನ್ನು ಒದಗಿಸುವುದ, ನುರಿತ ನೌಕರರನ್ನು ಸಾಕಷ್ಟು ಪ್ರಮಾಣದಲ್ಲಿ ಒದಗಿಸುವುದು—ಈ ಉದ್ದೇಶಗಳನ್ನೂ ರಾಜ್ಯ ಸರಕಾರವಿಟ್ಟುಕೊಂಡಿದೆ

ಮೂರನೆಯ ಯೋಜನಾಂತ್ಯದೊಳಗೆ ರಾಜ್ಯದ ಅತಿ ಹಿಂದುಳಿದ ಪ್ರದೇಶಗಳಲ್ಲಿ ಐದು ಕ್ಷೇತ್ರಗಳನ್ನು ಆರಿಸಿ, ಅವನ್ನು ಅಭಿವೃದ್ಧಿಗೊಳಿಸಲಾಗುವುದು ಸಣ್ಣ ಮಟ್ಟದ ಕೈಗಾರಿಕೆಯ ಕ್ಷೇತ್ರಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಕಟ್ಟಲಾಗುವುದು ಕಚ್ಚಾ ವಸ್ತುಗಳ ಡಿಪೋಗಳು, ಒಂದು ಸಹಕಾರಿ ನೂಲುವ ಕಾರಖಾನೆ ಮತ್ತೊಂದು ಸಹಕಾರಿ ಸಕ್ಕರೆಯ ಕಾರಖಾನೆಗಳನ್ನು ನಿರ್ಮಿಸುವ ಯೋಜನೆಯಿರುವುದು ರಾಜ್ಯದ ಖನಿಜೋತ್ಪತ್ತಿಯನ್ನು ಹೆಚ್ಚಿಸುವ ಸಲುವಾಗಿ, ನೇರ ಮಾರ್ಗಗಳ ರಚನೆ ಹಾಗೂ ಕಟಕ್ ಜಿಲ್ಲೆಯ ಸುಕಿಂಡ ಗಣಿ ಕ್ಷೇತ್ರದಲ್ಲ ಹೆಚ್ಚಿನ ರಸ್ತೆಗಳ ನಿರ್ಮಾಣದತ್ತ ಸರಕಾರವು ಗಮನ ಹರಿಸುವುದು ಒರಿಸ್ಸ ಮೈನಿಂಗ್ ಕಾರ್ಪೊರೇಶನ್ ಸದ್ಯ ೧—೨ ಲಕ್ಷ ಟನ್‌ಗಳಷ್ಟು ಮಾತ್ರ ಕಬ್ಬಿಣದ ಅದುರುಗಳನ್ನು ಅಗೆಯುತ್ತಿದೆ ಇದಕ್ಕೆ ಇನ್ನೂ ಹೆಚ್ಚಿನ ಭೂಮಿಯನ್ನು ಒದಗಿಸಿ, ಈ ಉತ್ಪಾದನೆಯನ್ನು ೧೦ ಲಕ್ಷ ಟನ್ನುಗಳಿಗೇರಿಸುವ ಉದ್ದೇಶವಿದೆ ಇದರಿಂದ ರಾಜ್ಯದ ಉಕ್ಕಿನ ಕಾರಖಾನೆಗೆ ಬೇಕಾಗುವಷ್ಟು ಅದುರುಗಳನ್ನಿದು ಪೂರಯಿಸಲು ಸಮರ್ಥವಾಗುವುದು ಮಾತ್ರವಲ್ಲದ ಹೆಚ್ಚಿನ ಪ್ರಮಾಣವನ್ನು ಹೊಸತಾಗಿ ಅಭಿವೃದ್ಧಿಹೊಂದುತ್ತಿರುವ 'ಪ್ರದೀಪ' ಬಂದರಿನಿಂದ ನಿರ್ಯಾತವಾಡಲೂ ನಿರ್ಧರಿಸಲಾಗಿದೆ

ಔದ್ಯಮಿಕ ರಂಗದ ಹೆಚ್ಚಳಕ್ಕೆ ವಿದ್ಯುಚ್ಛಕ್ತಿಯು ಅತ್ಯವಶ್ಯ ೧೯೫೧ರಲ್ಲಿ ಒರಿಸ್ಸದ ವಿದ್ಯುದುತ್ಪಾದನಾ ಶಕ್ತಿ ೪,೬೨೦ ಕಿಲೋವ್ಯಾಟ್ ಈ ಪ್ರಮಾಣವು ದ್ವಿತೀಯ ಯೋಜನಾಂತ್ಯದಲ್ಲಿ ಎರಡು ಲಕ್ಷ ಕಿಲೋವ್ಯಾಟ್‌ಗಳಷ್ಟಾಗುವ ನಿರೀಕ್ಷೆಯಿದೆ ನೀರಾವರಿ ಮತ್ತು ವಿದ್ಯುದುತ್ಪಾದನೆಗೆ ಮೂರನೆಯ ಯೋಜನೆಯಲ್ಲಿ ೬೫ ಕೋಟಿ ರೂಪಾಯಿಗಳನ್ನು ನಿಗದಿಮಾಡಿರುವುದರಿಂದ ವಿದ್ಯುತ್ ತಯಾರಿಕೆಯತ್ತ ವಿಶೇಷ ಗಮನ ನೀಡಿದಂತಾಗುವುದು ಇಷ್ಟರಲ್ಲೇ ಮುಂದುವರಿಯುತ್ತಿರುವ ವಿದ್ಯುದ್ಯೋಜನೆಗಳಲ್ಲದೇ ಯೋಜನಾಂತ್ಯದಲ್ಲಿ ಒಟ್ಟು ಹತ್ತು ಲಕ್ಷ ಕಿಲೊವ್ಯಾಟ್ ವಿ. ಪಡೆಯುವ ಗುರಿಯಿದೆ. ತನ್ನ ನೆರೆರಾಜ್ಯಗಳಿಗಿಂತ ಒರಿಸ್ಸವು ಹಿಂದುಳಿಯಬಾರದು ಎಂಬುದರಿಂದ ಈ ರಾಜ್ಯದಲ್ಲಿ ಬಹಳಷ್ಟು ಸಾಧನೆಗಳು ನಡೆಯುತ್ತಿವೆ.

ಸದ್ಯ ರಾಜ್ಯದಲ್ಲಿರುವ ಇಂಜಿನಿಯರಿಂಗ್ ಕಾಲೇಜು, ಇಂಜಿನಿಯರಿಂಗ್ ಶಾಲೆಗಳಲ್ಲಿ ವಿದ್ಯಾರ್ಥಿ ಪ್ರವೇಶದ ಮಿತಿಯನ್ನು ಹೆಚ್ಚಿಸುವುದಲ್ಲದೆ, ಇನ್ನೊಂದು ಇಂಜಿನಿಯರಿಂಗ್ ಕಾಲೇಜಿನ ಸ್ಥಾಪನೆ ಮತ್ತು ರೂರಕೇಲಾದಲ್ಲಿ ಪ್ರಾದೇಶಿಕ ಇಂಜಿನಿಯರಿಂಗ್ ಕಾಲೇಜ್ ರಚನೆಯೂ ತೃತೀಯ ಯೋಜನಾಂತರ್ಗತವಾಗಿದೆ.

ರಾಷ್ಟ್ರೀಯ ಆರ್ಥಿಕ ಮಂಡಳವು ಒರಿಸ್ಸ ರಾಜ್ಯದಲ್ಲಿ ಔದ್ಯಮೀಕರಣದ ವಿಕಾಸದ ಬಗ್ಗೆ ಪರಿಶೀಲನೆ ನಡೆಸುತ್ತಿದೆ ಇದರ ಪ್ರಾಥಮಿಕ ವರದಿಯಂತೆ, ೧೯೫೧ರಲ್ಲಿ ೧೯೦ ರೂಪಾಯಿ ಇದ್ದ ಒರಿಸ್ಸಾದ ನಾಗರಿಕನ ವಾರ್ಷಿಕ ವರಮಾನ (ಭಾರತದಲ್ಲಿ ೨೪೮) ಈ ವರ್ಷದಲ್ಲಿ ರೂ ೨೬೭ (ಭಾರತದಲ್ಲಿ ೩೧೨) ಆಗುವುದು ಈ ಅಂಕೆಸಂಖ್ಯೆಗಳನ್ನೂ, ಒರಿಸ್ಸದಲ್ಲಿ ಈ ಹತ್ತು ವರ್ಷಗಳಲ್ಲಾದ ಪ್ರಗತಿಯನ್ನೂ ನೋಡುವಾಗ, ಅಲ್ಲಿನ ವಾರ್ಷಿಕ ಆದಾಯವು ಗಣನೀಯವಾಗಿ ಏರದಿರಲು ಜನಸಂಖ್ಯೆಯು ಅಧಿಕವಾಗುತ್ತಿರುವುದೇ ಕಾರಣವೆನ್ನಬೇಕು ಜನನ ಪ್ರಮಾಣವು ಅಲ್ಲಿ ಹೆಚ್ಚಾಗಿದೆ

ಈ ರಾಷ್ಟ್ರೀಯ ಮಂಡಳವು ಒರಿಸ್ಸದ ಅಭಿವೃದ್ಧಿಗೆ ಒಂದು ಹಂಚಿಕೆಯನ್ನು ಮಾಡಿದೆ. ೧೯೬೧—೬೬ರಲ್ಲಿ ಒಟ್ಟು ೧,೩೭೫ ಕೋಟಿ ರೂಪಾಯಿಗಳನ್ನು ಅಭಿವೃದ್ಧಿಗಾಗಿ ವಿನಿಯೋಗಿಸಬೇಕೆಂದೂ ಇದರಿಂದ ಈಗ ೪೦೦ ಕೋಟಿಯಿರುವ ರಾಜ್ಯದ ವಾರ್ಷಿಕ ಉತ್ಪನ್ನವು ಆಗ ೬೦೦ ಕೋಟಿಗಳಿಗೇರುವುದೆಂದೂ ವ್ಯಕ್ತಿಯ ವರಮಾನ ರೂ ೨೬೭ರಿಂದ ರೂ ೩೪೪ಕ್ಕೆ ಹೆಚ್ಚುವುದೆಂದೂ ಅದು ಹೇಳುತ್ತದೆ ಜನನ ಪ್ರಮಾಣವು ಈ ರಾಜ್ಯದಲ್ಲಿ ಭಾರತದ ರಾಷ್ಟ್ರೀಯ ಪ್ರಮಾಣಕ್ಕಿಂತ ಹೆಚ್ಚಿರುವುದರಿಂದ ಸರಿಹೊಂದಿಸಿಕೊಳ್ಳಲು ಈ ರೀತಿಯ ಯೋಜನೆಯು ಅತ್ಯವಶ್ಯವೆಂದು ಮಂಡಳದ ಅಭಿಪ್ರಾಯವಿದೆ

ಹೀಗೆ ಒಂದು ಸಮಯದಲ್ಲಿ ದಟ್ಟದರಿದ್ರ ರಾಜ್ಯವಾಗಿದ್ದ ಒರಿಸ್ಸವು ಇಂದು ಅಭಿವೃದ್ಧಿ ಪಥಪ್ರಯಾಣ ಮಾಡುತ್ತಿದೆ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಪ್ರಗತಿಯನ್ನು ಮಾಡಿ, ಭಾರತದ ಉಳಿದ ರಾಜ್ಯಗಳ ಮಟ್ಟಕ್ಕೆ ಬರಲು ಪ್ರಯತ್ನಿಸುತ್ತಿದೆ. ಭಾರತ ಸರಕಾರವೂ ಈ ಬಗ್ಗೆ ಒರಿಸ್ಸರಾಜ್ಯಕ್ಕೆ ವಿಶೇಷ ರೂಪದಲ್ಲಿ ಸಹಕಾರ ನೀಡುತ್ತದೆ —ಯೋಜನಾ

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

R E P No 760/1960.
O S No 133/1959.

1. ರಾಜಮತಿ —ವಾದಿಳು
2 ಅನಂತಮತಿ ಅಮ್ಮ—ಅರ್ಜಿದಾರರು

ಮತ್ತು

ಪದ್ಮರಾಜ ಅಜ್ರಿ ಸಹಾ —ಎದ್ರಿರು

ಯವರೊಳಗೆ

ಕೋರ್ಟ್ ಹುಕುಂ ಪ್ರಕಾರ ಸದ್ರಿ ಅಮ್ಲ ಜ್ಯಾರಿಯ 2ನೇ ಎದ್ರಿಳು ಅನಂತಮತಿ, ಚಂದಪ್ಪ ಮಗಳು 5ನೇ ಎದ್ರಿ ನೇಮಿರಾಜ ಅಜ್ರಿ 6ನೇ ಎದ್ರಿ ಚಂದ್ರರಾಜ ಅಜ್ರಿ 21ನೇ ಎದ್ರಿ ಆದಿರಾಜ ಅಜ್ರಿ ಅನಂತ ಮತಿ ಮಕ್ಕಳು— ಕಾರ್ಕಳ ತಾಲೂಕು ರಂಜಾಳ ಗ್ರಾಮದ ಸಣ್ಣ ಪಡ್ಡಾಸೆ ಎಂಬಲ್ಲಿರುವವರು ಯಿವರಿಗೆ ಈ ಮೂಲಕ ತಿಳಿಸುವದೇನೆಂದರೆ—

ಸದ್ರಿ ಅಮ್ಲಜ್ಯಾರಿಗೆ ಕಾರಣವಾದ ಡಿಕ್ರಿ ವಸೂಲಿ ಹಕ್ಕು ವಾದಿಳಾದ 1ನೇ ಅರ್ಜಿದಾರಳಿಂದ 2ನೇ ಅರ್ಜಿದಾರಳಿಗೆ ತಾರೀಕು 12—10—1960ರಲ್ಲು ರಜಿಸ್ಟರ್ ಆಗಿ ಟ್ರಾನ್ಸ್‌ಫರ್ ಆಗಿ ಸದ್ರಿ ಟ್ರಾನ್ಸ್‌ಫರ್ ಮಂಜೂರು ಮಾಡಬೇಕಾಗಿ ಅರ್ಜಿದಾರರು ದಾಕ್ಲು ಮಾಡಿದ ಸದ್ರಿ ಅಮ್ಲಜ್ಯಾರಿಯೂ ಸದ್ರಿ 2. 5. 6 21ನೇ ಎದ್ರಿರ ಹಾಜರಾತಿ ಬಗ್ಗೆ ತಾ 14—3 1961 ಕ್ಕೆ ಯಿಟ್ಟದೆ ಆದರಿಂದ ಆ ಕುರಿತು ಸದ್ರಿ ಎದ್ರಿರ ಆಕ್ಷೇಪ ಯಿದ್ದ ಸದ್ರಿ ದಿವಸ ಬೆಳಿಗ್ಗೆ 10 ಗಂಟೆಗೆ ಸದ್ರಿ ಕೋರ್ಟ್ ಮುಂದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು

Sd H K Gopalkrishna Rao
Advocate for Petitioner.
Karkal 15—2—1961

ಶ್ರೀ ಎ. ಬಿ. ಶೆಟ್ಟಿ ಸ್ಮಾರಕ ನಿಧಿಗೆ ಸಹಾಯ ಮಾಡಿರಿ

UDIPI MUNICIPALITY
TENDER NOTICE

Sealed tenders will be received by the commissioner up to 4 p m on 28—2—1961 for petty works for the year 1961—62 Any particulars as to condition of contract may be obtained from Municipal Office Udipi during office hours on all working days

Municipal Office, Udipi
Dated 17—2—1961

I Joshua,
Municipal Commissioner, Udipi

THE MOOLKY BANK LIMITED, MULKI
NOTICE

The 31st Annual General Meeting of the Bank will be held at the Registered Office of the Bank on Tuesday the 21st March, 1961 at 10 A M

The Register of Members and Transfer Books of Bank will be closed from 13—3—1961 to 25—3—1961 (both days inclusive)

(Sd) M R H Punja,
Manager

ವಿಚಾರವರ್ಷ

(೩ನೇ ಪುಟದಿಂದ)

ಮೂರ್ತಿ'ಯನ್ನಾಗಿಸಿದೆ. ಇಂತಹ ಅಲಂಕಾರ ಮೂರ್ತಿಯನ್ನು ಬ್ರಿಟನ್ನಿನ ರಾಣಿಗೆ ಹೋಲಿಸಿದುದನ್ನೂ ನಾವು ಮರೆಯುವಂತಿಲ್ಲ. ದೇಶದ ಸರಕಾರದ ನೀತಿ-ಧೋರಣೆಗಳೆಲ್ಲವೂ ಪ್ರಧಾನಿಯನ್ನು ಹೊಂದಿಕೊಂಡಿರುತ್ತದೆ. ಅತನೇ ನಿಜವಾದ ಆಡಳಿತಗಾರ. ಕೆಲಸಗಳನ್ನು ಮಾಡಿಸುವವನು ಅವನೇ. ಆದುದರಿಂದ ಡಾ|| ಪ್ರಸಾದರು ನಿವೃತ್ತರಾದರೆ, ಅವರ ಸ್ಥಾನವನ್ನು ಅವರಷ್ಟೇ ದಕ್ಷತೆಯಿಂದ ನಿರ್ವಹಿಸಬಲ್ಲ ಇತರ ವರಿಷ್ಠ ನಾಯಕರೂ ನಮ್ಮಲ್ಲಿ ಇಲ್ಲದಿಲ್ಲ.

ಆದರೆ, ಪ್ರಧಾನಿ ನೆಹರುರವರ ನಿವೃತ್ತಿಯ ಮಾತು ಹಾಗಲ್ಲ. ಮುಖ್ಯವಾಗಿ ಭಾರತದ ಜನತೆಯ ಗೌರವಾದರಗಳಿಗೆ ಹಲವಾರು ಕಾರಣಗಳಿಂದ ಪಾತ್ರರಾದ ನೆಹರುರನ್ನು ಬಿಟ್ಟರೆ, ಅವರಷ್ಟು ಅಖಿಲ ಭಾರತೀಯ ಪ್ರಸಿದ್ಧಿ ಗೌರವ ಪಡೆದ ಬೇರೆ ನಾಯಕರು ಇಲ್ಲವೆನ್ನಬಹುದು. ಇತ್ತೀಚೆಗೆ ಪಂಡಿತ ನೆಹರುರವರ ಬಗ್ಗೆ ಇದ್ದ ಅಭಿಮಾನವು ಸ್ವಯಂ ಕಾಂಗ್ರೆಸಿಗರಲ್ಲೇ ಲೋಪವಾಗುತ್ತಿರುವುದು ಗೋಚರವಾಗುತ್ತದೆ. ಭಾರತದ ಹೊರಗಡೆ ಅವರ ಕೀರ್ತಿಲತೆ ವಿಶಾಲವಾಗಿ ಹರಡುತ್ತಿರುವಂತೆಯೇ ದೇಶದೊಳಗೆ ಅವರ ಬಗೆಗೆ ಅಸಮಾಧಾನದ ಭಾವನೆಯೂ ವರ್ಗದಲ್ಲಿ ಹುಟ್ಟತೊಡಗಿದೆ. ನೆಹರು ತಮ್ಮ ವ್ಯಕ್ತಿಗತ ಹಿರಿಮೆಯಿಂದ ಹೆಚ್ಚಿನ ಭಾರತೀಯರನ್ನು ಆಕರ್ಷಿಸಿರುವರೇ ಹೊರತು ಬೇರೆ ಕಾರಣಗಳಿಂದಲ್ಲ. ಇಂತಹ ನೆಹರು ತನ್ನ ಪದವಿ ಬಿಟ್ಟರೆ, ಕಾಂಗ್ರೆಸ್ಸಿನಲ್ಲೇ ಅಧಿಕಾರಕ್ಕಾಗಿ ಹೋರಾಟ ನಡೆಯುವುದು. ಈ ಹೋರಾಟವನ್ನು ಇಂದಾಗಲೀ ಮುಂದಾಗಲೀ ತಪ್ಪಿಸುವುದು ಕಷ್ಟಸಾಧ್ಯ. ಪಂಡಿತ ನೆಹರು ಮುಂದೆಯೂ ಅಧಿಕಾರದಲ್ಲಿ ಮುಂದುವರಿಯುವುದು ದೇಶದ ಹಿತದೃಷ್ಟಿಯಿಂದಲೂ ಅವರ ವೈಯಕ್ತಿಕ ದೃಷ್ಟಿಯಿಂದಲೂ ಅಷ್ಟೊಂದು ಹಿತವಲ್ಲ. ಆದರೆ, ಅವರು ನಿವೃತ್ತರಾಗುವುದಕ್ಕೆ ಮೊದಲು ತನ್ನಂತೆಯೇ ವಿಶಾಲ ಉದಾರ ಭಾವನೆಯಿಂದ ಭಾರತದ ಬಗ್ಗೆ ಚಿಂತಿಸುವ ಮತ್ತು ಭಾರತೀಯರೆಲ್ಲರ ಹೃನ್ಮನಗಳನ್ನೂ ಆಕರ್ಷಿಸಬಲ್ಲ ಆಡಳಿತಗಾರರನ್ನು ಸೃಷ್ಟಿ ಮಾಡಿ ಹೋಗುವ ಅವಶ್ಯಕತೆಯಿದೆಯೆನಿಸುತ್ತದೆ. ಅಲ್ಲದೆ, ಅಂತಹವನನ್ನು ಕಲಕಾಲ ತನ್ನ ಮಾರ್ಗದರ್ಶನದಲ್ಲಿಯೇ ಮುಂದುವರಿಸಿಕೊಂಡು ಹೋಗುವುದೂ ಅಗತ್ಯವೆನಿಸುತ್ತದೆ.

ರಾಜಾಜಿಯವರು ಮದ್ರಾಸದಲ್ಲಿ ಮುಖ್ಯಮಂತ್ರಿಯಾಗಿದ್ದಾಗ ಸುಬ್ರಹ್ಮಣ್ಯರಂತಹ ನಾಯಕರನ್ನು ತರಬೇತುಗೊಳಿಸಿ ರಾಜ್ಯಕ್ಕೆ ಇತ್ತುದನ್ನು ನಾವು ಮರೆಯಬಾರದು. ಮೊರಾರ್ಜಿ ದೇಸಾಯಿಯವರು ಚವಾಣರನ್ನು ಬೊಂಬಾಯಿಗೆ ಕೊಟ್ಟು ತಾವು ಕೇಂದ್ರದ ಸೋಪಾನಾರೋಹಣ ಮಾಡಿದರು. ಅದೇ ರೀತಿಯ ಒಂದು ನೂತನ ಸೃಷ್ಟಿಯಾಗ ಕೇಂದ್ರದಲ್ಲಿ ಆಗಬೇಕಾಗಿದೆ. ಭಾರತದ ಬಗ್ಗೆ ಅಹೋರಾತ್ರಿ ಚಿಂತಿಸುವ ನೆಹರು ಈಗಾಗಲೇ ಇಂತಹ ಪ್ರಯೋಗದಲ್ಲಿ ತೊಡಗುತ್ತಿರಬಹುದು, ತೊಡಗಿರಲೇ ಬೇಕು.

ಸೀಮಾ ಸಮಸ್ಯೆ

ಚೀನದ ಮೊಂಡುತನ ಮುರಿಯಲಿಲ್ಲ!

ಭಾರತ—ಚೀನಗಳ ಸೀಮಾ ಸಮಸ್ಯೆಯ ಬಗ್ಗೆ ಗಡಿ ದಾಖಲೆಗಳನ್ನು ಪರಿಶೀಲಿಸಿದ ಸಮಿತಿಯಲ್ಲಿ ಒಮ್ಮತ ಬರಲಿಲ್ಲ. ಇದರಿಂದಾಗಿ ಸಮಸ್ಯೆ ಬಗೆಹರಿಯಲಿಲ್ಲ, ಒಂದು ವರ್ಷ ಮಾತ್ರ ಕಳೆದುಹೋಯಿತು!

ಭಾರತ ಮತ್ತು ಚೀನಗಳ ನಡುವೆ ಎದ್ದಿರುವ ಗಡಿಸಮಸ್ಯೆಯ ಬಗ್ಗಿನ ಹೆಚ್ಚಿನ ವಿವರಗಳು ಈಗ ಹೊರಬಿದ್ದಿವೆ. ಕಳೆದ ಎಪ್ರಿಲ್ ತಿಂಗಳಲ್ಲಿ ದಿಲ್ಲಿಗೆ ದರ್ಶನವಿತ್ತ ಚೀನೀಯ ಪ್ರಧಾನಿ ಚೌ ಎನ್ ಲಾಯ್ ಅವರು ಪ್ರಧಾನಿ ನೆಹರುರೊಡನೆ ವಿಚಾರ ವಿನಿಮಯ ಮಾಡಿದ್ದರು. ಈ ವೇಳೆಯಲ್ಲಿ ಉಭಯ ರಾಷ್ಟ್ರಗಳ ನಡುವೆ ಒಮ್ಮತವು ಬಾರದೆ ಇದ್ದುದರ ಪರಿಣಾಮವಾಗಿಯೇ ಎರಡೂ ಕಡೆಯವರು ಒಂದು ಸಮಿತಿಯನ್ನು ನೇಮಿಸಿಕೊಂಡರು. ಭಾರತ ಮತ್ತು ಚೀನಗಳ ನಡುವಣ ಗಡಿಯ ಬಗ್ಗೆ ಇಬ್ಬರಲ್ಲಿಯೂ ಇರಬಹುದಾದ ಐತಿಹಾಸಿಕ ದಾಖಲೆಗಳನ್ನು ಪರಿಶೀಲಿಸುವ ಈ ಸಮಿತಿಗೆ ಒಪ್ಪಿಸಿದರು. ಸಮಿತಿಯೂ ಬರೂ ದಿಲ್ಲಿ, ರಂಗೂನ ಹಾಗೂ ಪೇಕಿಂಗ್‌ಗಳಲ್ಲಿ ಸಭೆ ಸೇರಿತ್ತು. ಆದರೆ, ಎರಡೂ ಸಮಿತಿಗಳ ನಡುವೆ ಏಕಮತವು ಹುಟ್ಟಬರಲಿಲ್ಲ—ಎಂಬುದು ವಿಸ್ಮಯಕಾರಕ ಸಂಗತಿಯೆನ್ನುವಂತಿಲ್ಲ. ಮೊದಲೇ ನಿರೀಕ್ಷಿಸಿದಂತೆ ಈ ಸಮಿತಿಯ ನೇಮಕವು ಸಮಯದೂಡುವ ಒಂದು ತಂತ್ರಮಾತ್ರವಾಗಿ ಪರಿಣಮಿಸಿದೆ. ಎರಡೂ ಸಮಿತಿಗಳು ಐತಿಹಾಸಿಕ ದಾಖಲೆಗಳನ್ನು ಪರಿಶೀಲಿಸಿ ಸಂಯುಕ್ತ ವರದಿಯನ್ನು ಒಪ್ಪಿಸಬೇಕೆಂದು ಆಶಿಸಿದ್ದರೂ ಬಿನ್ನ ಮತದ ಪರಿಣಾಮವಾಗಿ ಬೇರೆ ಬೇರೆಯಾಗಿ ಅವನ್ನು ಅರ್ಪಿಸಿರುತ್ತವೆ. ಭಾರತವು ನೇಮಿಸಿದ ಸಮಿತಿಯ ವರದಿಯನು ಲೋಕಸಭೆಯ ಮುಂದೆ ಇಡಲಾಗಿದೆ.

ಈ ವರದಿಯಲ್ಲಿ ಎದ್ದು ಕಾಣುವ ಒಂದೇ ಒಂದು ವಿಷಯವೆಂದರೆ ಚೀನದ ಹಠಮಾರಿತನದ ಉಲ್ಲೇಖ ಮಾತ್ರ. ೨,೪೦೦ ಮೈಲುದ್ದದ ದುರ್ಗಮ ಘಾಟಿಯಲ್ಲಿರುವ ಭಾರತ—ಚೀನಗಳ ಸೀಮೆಯನ್ನು ಗುರುತಿಸವುದು ಅತೀವ ಕಷ್ಟವೇ ಎಂಬುದು ವಿಶ್ವವಿದಿತ. ಆದರೂ ಈ ಬಗ್ಗೆ ನಡೆದಿದ್ದ ಹಲವಾರು ಒಪ್ಪಂದಗಳ ದಾಖಲೆಗಳನ್ನು ಚೀನವು ಸಂಪೂರ್ಣವಾಗಿ ಅಲ್ಲಗಳೆಯುತ್ತಿರುವುದು. ಅದರ ಚಂಡಿತನದ ಪರಮಾವಧಿಯನ್ನು ಪ್ರದರ್ಶಿಸುತ್ತದೆ. ಮ್ಯಕಮ್ಹೋನ ರೇಖೆಯನ್ನು ಪೂರ್ವದ ಸೀಮೆಯೆಂದ ಭಾರತವು ಹೇಳಿದರೆ, ಅದನ್ನು ಗಡಿಯೆಂದು ಒಪ್ಪುವ ಅಧಿಕಾರ ಟಿಬೇಟಿಗಿಲ್ಲವೆಂದೂ, ಆ ಕಾರಣದಿಂದ ಟಿಬೇಟು—ಭಾರತಗಳ ಒಡಂಬಡಿಕೆಯ ಪರಿಣಾಮಸ್ವರೂಪವಾದ ಈ ರೇಖೆಯು ಚೀನವನ್ನು ಬಂಧಿಸಲಾರದೆಂದೂ ಚೀನದ ಸಮಿತಿಯ ಅಂಬೋಣ. ಆದರೆ, ಪಶ್ಚಿಮ ಮತ್ತು ಮಧ್ಯಭಾಗಗಳ ಸೀಮೆಗಳ ಬಗ್ಗೆ ಚೀನವು ಟಿಬೇಟು ಮಾಡಿಕೊಂಡ ದಾಖಲೆಗಳನ್ನೇ ಮುಂದೊಡ್ಡುತ್ತಿದೆ ಎಂಬುದು ಸೋಜಿಗವೆನ್ನಬೇಕು. ಈ ಗಡಿಗಳ ಬಗ್ಗೆ ವಿವಿಧ ಕಾಲದಲ್ಲಿ ಮಾಡಿಕೊಂಡ ಬೇರೆ ಬೇರೆ ಒಡಂಬಡಿಕೆಗಳಿದ್ದರೂ ಅವಾವುವನ್ನೂ ಮನ್ನಿಸಲು ಚೀನವು ಸಿದ್ಧವಿಲ್ಲ. ಇದರಿಂದ ಚೀನದ ಹವಣಿಕೆಯು ಪ್ರತ್ಯಕ್ಷವಾಗಿ ಪ್ರಕಟಗೊಂಡಿದೆ ಎಂದು ತಿಳಿಯಬೇಕು.

ಚೀನಕ್ಕೆ ಇಂದು ಬೇಕಾಗಿರುವುದು ಸೀಮೆಯ ಗೋಜಲ್ಲ, ಕಾಗದ ಪತ್ರಗಳ ಪುರಾವೆಯಲ್ಲ, ಸಮಾಧಾನದಿಂದ ಶಾಂತಿ—ಸೌಹಾರ್ದವಲ್ಲ. ಭಾರತದೊಡನೆ ಅದು ವಾಸ್ತವಿಕವಾಗಿ ಸ್ನೇಹವನ್ನು ಬಯಸುವುದಾದರೆ, ನೂರಾರು ವರ್ಷಗಳಿಂದಲೂ ಯಾವುದೇ ವಿವಾದಕ್ಕೆಡೆಗೊಡದ ಉತ್ತರದ ಗಡಿಯ ಬಗ್ಗೆ ಗೊಂದಲವನ್ನು ಎಳೆಸುತ್ತಿರಲಿಲ್ಲ. ಅದಕ್ಕೆ ಬೇಕಾಗಿರುವುದು ಇತಿಹಾಸ ಮಾನ್ಯ ಸತ್ಯವಲ್ಲ; ಸಿಂಹದ ಪಾಲು. ಈ ಪಾಲು ಒಡಂಬಡಿಕೆಯಲ್ಲಿ ಲಭಿಸದೆ ಹೋದರೆ, ಮೊಂಡುತನದಿಂದಲಾದರೂ ಪಡೆಯಬೇಕು. ಇದಕ್ಕಾಗಿ ಸತ್ಯದ ಅವಹೇಳನವಾದರೂ ಚಿಂತೆಯಿಲ್ಲ—ಈ ತೆರದ ಧೋರಣೆಯನ್ನು ತಳೆದು—ಶಾಂತಿಯನ್ನು ಸಖ್ಯವನ್ನು ಬಯಸುವ ವಿಚಿತ್ರ ಪ್ರದೇಶ ಚೀನವಾಗಿದೆ.

ಭಾರತದ ವಿರುದ್ಧ ಕೀಟಲೆಯೆಳಸುವ ಪ್ರಯತ್ನವನ್ನೂ ಚೀನವು ತೊಡಗಿದೆ. ಭಾರತದ ಪಕ್ಕದ ಭೂತಾನ ಮತ್ತು ಪಾಕಿಸ್ತಾನಗಳನ್ನು ಭಾರತಕ್ಕೆ ವಿರುದ್ಧವಾಗಿ ಎತ್ತಿ ಕಟ್ಟುವ ಹವಣಿಕೆಯನ್ನು ಮಾಡುತ್ತಿದೆ. ಚೀನದ ಬೆದರಿಕೆಗೆ ಬಗ್ಗುವಷ್ಟು ನಿಬಲ ರಾಷ್ಟ್ರ ಭಾರತವಲ್ಲವೆಂಬುದನ್ನು ಚೀನವು ಇನ್ನೂ ತಿಳಿಯದಿರುವುದು ಆಶ್ಚರ್ಯದ ಸಂಗತಿ. ಅನ್ಯಾಯವನ್ನು, ಅಪಮಾನವನ್ನು, ಅತ್ಯಾಚಾರವನ್ನು ಮನ್ನಿಸುವವರು ಭಾರತೀಯರಲ್ಲವೆಂಬುದನ್ನು ಚೀನ ಇನ್ನಾದರೂ ಮನವರಿಕೆ ಮಾಡಿಕೊಳ್ಳಬೇಕು. ಅದು ನಿಜವಾಗಿ ಭಾರತದ ಸಖ್ಯ ಬಯಸುತ್ತಿಲ್ಲವೆಂಬುದಕ್ಕೆ ಈ ಸಮಿತಿಯ ವರದಿಯೇ ಸಾಕ್ಷಿ. ಭಾರತ ಸರಕಾರದ ಕೈಸೇರಿದ ವರದಿಯ ಪ್ರತಿ ವಾಕ್ಯದಲ್ಲಿಯೂ ಚೀನದ ಮೊಂಡುತನವು ಪ್ರತ್ಯಕ್ಷವಾಗುತ್ತಿದೆ, ತನ್ನ ಕೋಳಿಗೆ ಮೂರು ಕಾಲು ಎನ್ನುವ ಅದರ ವಿಚಿತ್ರವಾದ ಎದ್ದು ತೋರುತ್ತದೆ. ಆದರೆ, ಅದು ನ್ಯಾಯವೆನಿಸುವುದಿಲ್ಲ.

ಭಾರತೀಯ ಸಂಸತ್ತಿನಲ್ಲಿ ರಾಷ್ಟ್ರಪತಿಗಳು ಮುಂಗಡ ಪತ್ರದ ಅಧಿವೇಶನದಲ್ಲಿ ಪ್ರಾರಂಭ ಭಾಷಣ ಮಾಡುತ್ತ ಚೀನ ಭಾರತಗಳ ಸಂಬಂಧದ ಬಗ್ಗೆ ಬಹುವಾಗಿ ಆಡಿದರು. ಭಾರತೀಯ ವಿದೇಶ ನೀತಿಗೆ ಸಂಬಂಧಿಸಿಯೇ ಅವರು ತಮ್ಮ ಭಾಷಣದ ಬಹುಭಾಗವನ್ನು ಮಾಡಿದರು. ಆಂತರಿಕವಾಗಿ ಅವರು ಪ್ರಸ್ತಾಪಿಸಿದ ವಿಷಯಗಳೂ ಕಡಿಮೆ, ಮಹತ್ವದಲ್ಲಿಯೂ ಕಡಿಮೆಯೇ. ಅವರು ತಮ್ಮ ಭಾಷಣದಲ್ಲಿ ಚೀನವು ಮಾಡಿದ ಏಕಪಕ್ಷೀಯ ವಾದವನ್ನು ಭಾರತವು ಎಂದಿಗೂ ಒಪ್ಪುವಂತಿಲ್ಲವೆಂಬುದನ್ನು ಸ್ಪಷ್ಟಪಡಿಸಿದ್ದಾರೆ. "ಚೀನ—ಭಾರತಗಳ ಗಡಿಯು ಅನೇಕ ವರ್ಷಗಳಿಂದ ಒಪ್ಪಂದಗಳು, ಸಂಪ್ರದಾಯ ಹಾಗೂ ನಡವಳಿಕೆಯ ಮೂಲಕ ಪ್ರಸ್ತಾಪಿಸಲ್ಪಟ್ಟಿರುವೆಂದು ನಮ್ಮ ದೃಢ ವಿಶ್ವಾಸ. ಈ ಬಗ್ಗೆ ಚೀನದ ಏಕಪಕ್ಷೀಯ ವಾದವನ್ನು ನಾವು ಎಂದಿಗೂ ಒಪ್ಪುವುದಿಲ್ಲ. ಇಂದು ಚೀನವು ಅಸಹಕಾರ ಮನೋವೃತ್ತಿಯನ್ನು ತೋರಿಸುತ್ತಿದ್ದರೂ ಕೊನೆಗೊಮ್ಮೆ ಅದು ನಮ್ಮ ದೇಶದೊಂದಿಗೆ ಸಮಾಧಾನಕರವಾದ ಒಡಂಬಡಿಕೆ ಮಾಡಿಕೊಳ್ಳಲು ಮುಂದೆ ಬರುವುದೆಂದು ಆಶಿಸುತ್ತೇವೆ. ಚೀನವು ಲಾಂಗಜೂವಿನಿಂದ ತನ್ನ ಸೈನ್ಯವನ್ನು ಮರಳಿ ಕರೆದಿದೆ. ಗಡಿಯಲ್ಲಿ ಹೊಸ ದುರ್ಘಟನೆಗಳು ನಡೆದಿಲ್ಲ. ಆದರೂ ಅಸಹಕಾರ ಪ್ರವೃತ್ತಿ ಮುಂದುವರಿದಿದೆ. ಭಾರತದ ಸಾರ್ವಭೌಮ ಪ್ರದೇಶದಲ್ಲಿ ನಡೆದಿರುವ ಆಕ್ರಮಣ ಹಾಗೂ ಅತಿಕ್ರಮಣ ಸಮಸ್ಯೆಗಳು ಬಿಡಬೇಕಷ್ಟೆ. ಭಾರತ ಸರಕಾರವು ಇವನ್ನು ಬಗೆಹರಿಸಲು ಸೂಕ್ತ ಉಪಾಯ ಕೈಗೊಳ್ಳುತ್ತಿದೆ."—ಎಂದು ಅವರು ಹೇಳಿದರು.

ರಾಷ್ಟ್ರಪತಿಗಳಂತೆಯೇ ಸಮಸ್ಯೆ ಸಮಾಧಾನಕರವಾಗಿ ಬಗೆಹರಿಯಬೇಕೆಂದು ಆಶಿಸುವುದು ತಪ್ಪಲ್ಲ; ಆದರೆ ಅದು ಅಸಂಭವವೆಂಬಾಗ ಭಾರತವು ಅನ್ಯಾಯಕ್ಕೆ ತಲೆತಗ್ಗಿಸಬಾರದು ಅಲ್ಲವೆ?



≈ ಕುಮಾರಿ ಬಿಲ್ಲೆಗಳು ≈

(Registered)

ಈ ದೇಶೀಯ ತಯಾರಿಕೆಯ ಗುಣಾಂಶವು ವರ್ಷಗಟ್ಟಲೆಯಿಂದ ವಿಖ್ಯಾತವಾಗಿದೆ ಮತ್ತು ಪ್ರಮುಖ ಕೆಮಿಸ್ಟರಿಂದ ಈ ಕೆಳಗಿನ ದರಗಳಲ್ಲಿ ವಿಕ್ರಯಿಸಲ್ಪಡುತ್ತವೆ. ಟ್ಯೂಬಿಗೆ ರೂ. 3=00 (ಸಾದಾ), ರೂ. 5=00 (ಸ್ಪೆಶ್ಯಲ್), ರೂ 8=00 (ಎಕ್ಸಾಟ್ರ ಸ್ಪೆಶ್ಯಲ್).

P. DEVEE & Co. (M. I.) CALCUTTA—40

ಸ್ಟಾಕಿಸ್ಟರು ಷಾ ಕಂಪೆನಿ, ಮಂಗಳೂರು—1.

The Moolky Bank, Ltd.

MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4%
5 ,, 12	,,	4¼%
13 ,, 24	,,	4½%

ರೂ 5,000/- ಮತ್ತು ಮೇಲಣ ಡಿಪೋಸಿಟಿಗೆ ¼% ಜಾಸ್ತಿ ಕೊಡಲಾಗುವುದು.

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ	2½%
ಚಾಲ್ತಿ ಲೇವಣಾತಿಗೆ	½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್ ಪೂಂಜ
ಮೆನೇಜರ್,

ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಕಥಾ ವಿಹಾರ

(೨ನೇ ಪುಟದಿಂದ)

ಪೆನ್ಸಿಲು ಕೊಟ್ಟು ಸಹಾಯ ಮಾಡಿದ. ಈಗ ಪೆನ್ನು ಹುಡುಕಿಕೊಡುವೆನೆಂದು ಧೈರ್ಯ ಕೊಡುತ್ತಿರುವ!—ಲಲಿತಾ ತನ್ನಣ್ಣನ ಮೇಲೆ ವಿಶೇಷ ಅಭಿಮಾನ ತಾಳಿದ್ದಳು. ಸ್ನೇಹ ಪೂರಿತ ನಯನಗಳಿಂದ ಅಣ್ಣನನ್ನು ಆತ್ಮೀಯವಾಗಿ ನೋಡಿದಳು. ಬಿಸಿಲು ನೆತ್ತಿಯನ್ನು ಸುಡುತಿತ್ತು. ಧೂಳು ಕೆಂಪಗೆ ಕಾಗಿತ್ತು. ಮುಂದೊಂದು ಪುರಾತನ ಗೋಳಿಯ ಮರದಡಿ ಇನ್ನೂ ಬೆಳಗಿನ ತಂಪು ಹಾರಿಹೋಗಿರಲಿಲ್ಲ—ನೆರಳಿನ ಸೊಗಸಿನಿಂದ. ಅಣ್ಣ ತಂಗಿಯರಿಬ್ಬರೂ ಅದನ್ನು ಸೇರಿದರು.

"ಲಲಿತಾ, ಆ ಪ್ರಶ್ನೆಗೆ ಉತ್ತರ ಬರೆದು ಬಿಡೋಣ"

"ನೀನು ಬೇಕಾದರೆ ಬರೆ. ನಾನು ಮತ್ತೆ—ಮನೆಯಲ್ಲಿ ಬರೆಯುತ್ತೇನೆ.

"ಮತ್ತೆ – ಅಂದರೆ? ಮುಗಿಸಿ ಬಿಡೋಣ"

ಲಲಿತಾ ಕೊಂಚ ಸುಮ್ಮನಿದ್ದು; ನಕಲು ತೆಗೆಯಬಾರದು ಎಂದಿರುವರು ಎಂದಳು.

"ಅದು ಹೇಳುವುದು ಅವರ ಸ್ವಭಾವ, ಲಲಿತಾ," ಕಿಶೋರ ಇಂತಹವರಲ್ಲಿ ಬಹಳ ನಿಪುಣ. ಆತನ ಬಲವಂತಕ್ಕೆ ಆಗಿನ ಪರಿಸ್ಥಿತಿಯಲ್ಲಿ ಲಲಿತಾ ಇದಿರು ಹೇಳುವಂತಿರಲಿಲ್ಲ. ಇಬ್ಬರೂ ಮರದ ಬೇರಿನ ಮೇಲೆ ಕುಳಿತು ಚೀಲದಿಂದ ಪುಸ್ತಕಗಳನ್ನು ತೆಗೆದರು.

ಕಿಶೋರನ ಬುದ್ಧಿ ನೈಪುಣ್ಯ ಈ ವಿಷಯದಲ್ಲಿ ಚೆನ್ನಾಗಿ ಬೆಳೆದಿತ್ತು. ಲಲಿತೆಗೆ ತಿಳಿಯದ ಒಂದು ಪ್ರಶ್ನೆಯ ಉತ್ತರವನ್ನು ಬೇರೊಬ್ಬ ಹುಡುಗನಿಂದ ಸಂಪಾದಿಸಿದ್ದ.

ಆ ದಿನ ಅವರು ಮನೆಯನ್ನು ಸಮೀಪಿಸುತ್ತಲೇ ಅವರ ಕಿರಿಯ ತಮ್ಮ ಸತೀಶ ಓಡಿ ಬಂದು ಒಂದು ಸಂತಸದ ಸುದ್ದಿಯನ್ನು ಅತೀವ ಉತ್ಸಾಹದಿಂದ ಬಿನ್ನವಿಸ ತೊಡಗಿದ.

ಅಣ್ಣ! ಅಕ್ಕ ದೊಡ್ಡಣ್ಣ ಬಂದಿದ್ದಾನೆ. ನೋಡ್ಣಣ್ಣ!"

ಕಿಶೋರ ಮತ್ತು ಲಲಿತೆ—ಇಬ್ಬರಿಗೂ ಈ ಮಾತು ಕೇಳಿ ಸಂತೋಷದಿಂದ ಎದೆ ಉಬ್ಬಿಹೋಯಿತು. ಒಂದೇ ಓಟಕ್ಕೆ ಮನೆಯನ್ನು ತಲುಪಿ ದೊಡ್ಡಣ್ಣನ ಬಳಿಸಾರಿದರು.

ದೊಡ್ಡಣ್ಣನಿಗೆ ರೇಲ್ವೇ ಡಿಪಾರ್ಟ್‌ಮೆಂಟಿನಲ್ಲಿ ಕೆಲಸ ಸಿಕ್ಕಿದಲ್ಲಿಗಾಯ್ತು ಆರು ತಿಂಗಳಿಗೊಮ್ಮೆ ಮನೆಗೆ ಬಂದು ತಂದೆ ತಾಯಿ ತಮ್ಮ ತಂಗಿಯರನ್ನೆಲ್ಲ ನೋಡಿ ಹೋಗುತಿದ್ದ. ಪ್ರತೀಸಾರಿಯೂ ಬರುವಾಗ ಸತೀಶನಿಗೆ ಬೊಂಬೆ ಮತ್ತು ಸಿಹಿತಿಂಡಿಯನ್ನು ತಾರದೇ ಇರುತ್ತಿರಲಿಲ್ಲ ಹಾಗೆಯೇ ಲಲಿತಾ ಮತ್ತು ಕಿಶೋರ ಇವರಿಗೂ ಏನಾದರೂ ತಂದೇ ತರುತಿದ್ದ.

ಹೀಗೆಲ್ಲಾ ಇರುವಾಗ ದೊಡ್ಡಣ್ಣ ಬಂದುದು ಉತ್ಸವ ಜನಕವಲ್ಲದೆ ಬೇರೇನು?

"ದೊಡ್ಡಣ್ಣ ಏನು ತಂದಿರಬಹುದು? ಕಿಶೋರನ ಅಂತರಾಳದ ಪ್ರಶ್ನೆಯಿದು. ಆದರೆ ಈ ಪ್ರಶ್ನೆಗೆ ತುಟಿಗಳನ್ನು ಮೀರಿ ಹೊರಬರುವ ಶಕ್ತಿಯಿದ್ದಿಲ್ಲ.

ದೊಡ್ಡಣ್ಣ ಬಂದ ಉತ್ಸವದಲ್ಲಿ ಆ ದಿನ ಅಣ್ಣತಂಗಿಯರಿಬ್ಬರಿಗೂ ನಾಪತ್ತೆಯಾದ ಪೆನ್ನಿನ ನೆನಪೇ ಆಗಲಿಲ್ಲ. ಅದು ಹಾಗೆಯೇ ಉಳಿದು ಹೋಯಿತು.

ಆ ದಿನ ಸಂಜೆ ದೊಡ್ಡಣ್ಣ ಕೇಳಿದ— ಕಿಶೋರ್ ಪಾಠಗಳೆಲ್ಲಾ ಹೇಗಾಗುತ್ತಿವೆ

"ಚೆನ್ನಾಗಿವೆ."

"ಅಂದರೆ, ತರಗತಿಯಲ್ಲಿ ನೀನು ಹೇಗಿರುವಿ? ಲಲಿತಾ ಮುಂದೋ ನೀನು ಮುಂದೋ—ಬರುವ ವರ್ಷ ಹೈಸ್ಕೂಲಿನ ಫೋರ್ತ್ ಫಾರ್ಮ್ ಸೇರುವವರಾರು?"

"ನಾನೇ" ಎಂದ ಕಿಶೋರ್.

"ನಾನು ಕೂಡಾ' ಎಂದು ದನಿಗೂಡಿಸಿದಳು ಲಲಿತಾ.

"ಸರಿ ಇಬ್ಬರೂ ಪಾಸಾಗಬೇಕು. ನೋಡು ಕಿಶೋರು, ನೀನು ಹೈಸ್ಕೂಲ್ ಕಲಿತು, ಕಾಲೇಜು ಮುಗಿಸಿ, ದೊಡ್ಡ ನೌಕರಿಯನ್ನು ಸಂಪಾದಿಸುವವ. ಚೆನ್ನಾಗಿ ಕಲಿಯಬೇಕು." ಎನ್ನುತ್ತಾ ಒಂದು ಚಿಕ್ಕ ಪೆಟ್ಟಿಗೆಯಿಂದ ಹದಿನಾರು ರೂಪಾಯಿ ಬೆಲೆಬಾಳುವ ಒಂದು ಹೊಸ ಪೆನ್ನನ್ನು ತೆಗೆದ.

"ನಿಮ್ಮಿಬ್ಬರಲ್ಲಿ ಯಾರು ತರಗತಿಯಲ್ಲಿ ಜಾಣರೋ ಅವರಿಗೋಸ್ಕರ ಈ ಪೆನ್ನು ತಂದಿದ್ದೇನೆ."

ಕಿಶೋರ, ಲಲಿತಾ—ಇಬ್ಬರೂ ಆಸೆ ನಿರಾಶೆಗಳ ತಾಕಲಾಟದಲ್ಲಿ ಹೊಯ್ದಾಡ ತೊಡಗಿದರು.

"ದೊಡ್ಡಣ್ಣ! ನನ್ನ ಪೆನ್ನು ಲಲಿತೆಗೆ ಕೊಡುತ್ತೇನೆ. ಈ ಪೆನ್ನು ನನಗೆ..."

"ಯಾಕೆ ಲಲಿತೆ ಪೆದ್ದಳೇನು?"

"ದೊಡ್ಡಣ್ಣ! ನನ್ನ ಪೆನ್ನು ಕಳೆದು ಹೋಗಿದೆ'—ಸಣ್ಣ ಮುಖಮಾಡಿಕೊಂಡು ಹೇಳಿದಳು, ಲಲಿತೆ.

"ದೊಡ್ಡಣ್ಣ. ಮಾಸ್ತರರು ಹತ್ತು ಪ್ರಶ್ನೆ ಕೊಟ್ಟಿದ್ದಾರೆ. ಒಂದೊಂದಕ್ಕೆ ಹತ್ತು ಹತ್ತು ಮಾರ್ಕಂತೆ ಅದರಲ್ಲಿ ಯಾರಿಗೆ ಹೆಚ್ಚು ಮಾರ್ಕ ಸಿಕ್ಕುವುದೋ ಅವರಿಗೆ ಕೊಟ್ಟುಬಿಡಣ್ಣ ಈ ಪೆನ್ನು"—ತೀರ್ಮಾನಿಸಿತ್ತ ಕಿಶೋರ್. ಆತನಿಗೆ ಧೈರ್ಯವಿತ್ತು, ಲಲಿತೆಗಿಂತ ಜಾಸ್ತಿ ತೆಗೆವೇನು ಎಂದು—ಸ್ವಂತ ಬುದ್ಧಿಯಿಂದಲ್ಲದಿದ್ದರೂ ಸಹಕಾರ ಶಕ್ತಿಯಿಂದ!

ಲಲಿತಾ ಬೇರೇನೂ ಹೇಳಲಿಲ್ಲ. ದೊಡ್ಡ ಕಣ್ಣುಗಳಿಂದ, ನಿಸ್ಸಹಾಯಕ ಮುಖಮುದ್ರೆಯಿಂದ ಕಿಶೋರನನ್ನು ದಿಟ್ಟಿಸಿದಳು ಮಾತ್ರ! ಆಕೆಯ ಈ ದೃಷ್ಟಿ ಕಿಶೋರನನ್ನು ಪ್ರಶ್ನಿಸುವಂತಿತ್ತು—"ನೀನು ನನ್ನ ನಕಲು ತೆಗೆದಿರುವಿ, ತಾನೇ!"

ದೊಡ್ಡಣ್ಣ ಪೆನ್ನನ್ನು ಹಾಗೆಯೇ ಪೆಟ್ಟಿಗೆಯಲ್ಲಿ ಸೇರಿಸಿದ. ಆದಿನ ಅಷ್ಟಕ್ಕೇ ಮುಗಿಯಿತು.

ಮರುದಿನ ಶಾಲೆಯಲ್ಲಿ ತಿಳಿದ ಪರಿಣಾಮವನ್ನರಿತು ಲಲಿತಾ ಸಂಪೂರ್ಣ ಇಳಿದುಹೋಗಿದ್ದಳು. ಪ್ರತಿಸಾರಿಯೂ ಮೊದಲನೇ ನಂಬರು ಪಡೆಯುತಿದ್ದ ಲಲಿತಾ ಈ ಸಾರಿ "ಫೈಲ್" ಆಗಿದ್ದಳು! ಗೆಳತಿಯರು, "ಮಾರ್ಕೆಷ್ಟು?" ಎಂದು ಕೇಳಿದ ಪ್ರಶ್ನೆಗೆ ಏನೂ ಹೇಳದೆ ಪುಸ್ತಕವನ್ನು ಡೆಸ್ಕಿನೊಳಗೆ ಸೇರಿಸಿಬಿಟ್ಟಿದ್ದಳು. "ಅವರು ಮತ್ತೂ ಒತ್ತಾಯಿಸಿ ಕೇಳಿದ್ದರೆ ಕಣ್ಣೀರು ಉಕ್ಕುತಿತ್ತು.

ಆದರೆ ಕಿಶೋರನಿಗೆ ಇಷ್ಟುಸಾರಿ ಆತ ಪಡೆಯುತಿದ್ದ ಮಾರ್ಕುಗಳಿಗಿಂತ ಜಾಸ್ತಿಯೇ ಪಡೆದಿದ್ದ. ಇಷ್ಟುಸಾರಿ ನಕಲು ಹೊಡೆಯುವುದಕ್ಕೆ ಲಲಿತೆ ಎಡೆಕೊಡುತ್ತಿರಲಿಲ್ಲ. ಈ ಸಾರಿ ಗೆಲುವಿನಿಂದಲೇ ಲಲಿತೆಯ ಕಡೆ ನೋಡಿ ಕೈಸನ್ನೆಯಿಂದಲೇ, "ಎಷ್ಟು?" ಎಂದು ಕೇಳಿದ; ಲಲಿತೆ ಏನೂ ಹೇಳದೆ ಮುಖ ತಿರುಗಿಸಿದಳು.

ಕಿಶೋರನಿಗೆ ಅರವತ್ತೇಳು, ಲಲಿತೆಗೆ ಅರುವತ್ತು ಮಾರ್ಕುಗಳು ದೊರಕಿದ್ದುವು ಆದರೆ, ಇಬ್ಬರ ಮಾರ್ಕಿನಲ್ಲಿಯೂ ಮೂವತ್ತು ಮೂವತ್ತು ಮಾರ್ಕು ಉಪಾಧ್ಯಾಯರು ಕಳೆದಿದ್ದರು.

ಇದಕ್ಕೆ ಕಾರಣ ಆ ಇಬ್ಬರಿಗೂ ತಿಳಿದಿತ್ತು. ಲಲಿತಾ ನೀರು ತುಂಬಿದ ಕಣ್ಣಿನಿಂದ ಕಿಶೋರನನ್ನು ನೋಡಿದಳು....

ದೊಡ್ಡಣ್ಣ ತಂದ ಪೆನ್ನು ಕಿಶೋರನಿಗೆ ಲಭಿಸಿತು. ಲಲಿತಾ ಆ ದಿನ ಸಪ್ಪಗಾಗಿದ್ದಳು. ಯಾರೊಡನೆಯೂ ಮಾತನಾಡಲಿಲ್ಲ; ಮುಖದಲ್ಲಿ ಕೊಂಚವೂ ನಗುವಿಲ್ಲ. ಆಕೆಯ ಆ ಬಾಡಿದ ಮುಖವನ್ನು ನೋಡಿ ದೊಡ್ಡಣ್ಣನ ಎದೆಗೆ ಅಲಗಿಕ್ಕಿದಂತಾಯಿತು—

"ಲಲಿತಾ!"

ಲಲಿತಾ, ದೊಡ್ಡಣ್ಣನತ್ತ ನೋಡಿದಳು ಮಾತ್ರ.

"ಲಲಿತಾ, ಪೆನ್ನು ಕಿಶೋರನಿಗೇ ಸಿಕ್ಕಿತೆಂದು ಬೇಸರವೇ, ಲಲಿತಾ? ಹೋಗಲಿ ಬಿಡು. ಇನ್ನೊಮ್ಮೆ ಬರುವಾಗ..."

"ಇಲ್ಲಣ್ಣ. ನನಗೇನೂ ಬೇಸರವಿಲ್ಲ."

"ಇನ್ನೊಮ್ಮೆ ಬರುವಾಗ ನಿನಗೂ ಅಂತಹದೇ ಪೆನ್ನು ತರುತ್ತೇನೆ, ಲಲಿತಾ."

ಲಲಿತಾ ಏನೂ ಹೇಳಲಿಲ್ಲ.

ಕಿಶೋರ ಮೊದಲೇ ನಿಶ್ಚಯಿಸಿದಂತೆ ಆತನ ಹಳೆಯ ಪೆನ್ನು ಲಲಿತೆಗೆ ದೊರಕಿತು. ಹಾಗಾಗಿ ನಾಪತ್ತೆಯಾದ ಲಲಿತೆಯ ಪೆನ್ನಿಗೆ ಯಾರ ಗಮನವೂ ಹೆಚ್ಚಿಗೆ ಹರಿಯಲಿಲ್ಲ.

ಎಲ್ಲಿಯತನಕ? ನಾಲ್ಕಾರು ದಿನಗಳವರೆಗೆ ಮಾತ್ರ! ಮತ್ತೆ ಪ್ರತಿಸಲ ಪ್ರೀತಿ ತುಂಬಿ ಕಾಯಿಸುತ್ತಿದ್ದ ಆ ಪೆನ್ನು ಲಲಿತೆಗೆ ಹಿಡಿಸದ ಕಾರಣ ತನ್ನ ಮೆಚ್ಚಿನ ಪೆನ್ನಿನ ನೆನಪಾಗತೊಡಗಿತು ಅವಳಿಗೆ.

"ಅಣ್ಣಾ ಆ ಪೆನ್ನು ಹುಡುಕು ಅಣ್ಣಾ, ನೀನೊಮ್ಮೆ. ನಾನೆಷ್ಟು ಅರಸಿದರೂ ಸಿಗುವುದಿಲ್ಲ"

ಕಿಶೋರ ಆಕೆಯ ಮಾತನ್ನು ಪ್ರತಿಸಾರಿಯೂ ಹಾರಿಸಿಬಿಡುತ್ತಿದ್ದ. ಅಥವಾ ಹುಡುಕಿದವನಂತೆ ಮಾಡಿ, "ಸಿಗಲೇ ಇಲ್ಲ ಲಲಿತಾ!" ಎಂದು ರಾಗ ಎಳೆಯುತಿದ್ದ.

ಉಪಾಯವಿಲ್ಲದೆ ಲಲಿತಾ ಅದೇ ಪೆನ್ನಿನಲ್ಲಿ—ಹೇಗೊ ಹೇಗೋ—ಜಾಗರೂಕತೆಯಿಂದ ದಿನದೂಡುತಿದ್ದಳು.

ಆದರೆ ಆ ದಿನ ಆಕೆಗೆ ದೊಡ್ಡ ನಿಧಿ ಸಿಕ್ಕಿದಷ್ಟು ಆನಂದವಾಯಿತು ರೀಡಿಂಗ್ ರೂಮಿನಲ್ಲಿ!

ರೀಡಿಂಗ್ ರೂಮಿನಲ್ಲಿದ್ದಾಗ ಅಲ್ಲಿಯೇ ಸಮೀಪದಲ್ಲಿ ಯಾವುದೋ ಪತ್ರಿಕೆಯನ್ನು ಹಿಡಿದು ವಾರ್ತೆಗಳನ್ನು ಸಂಗ್ರಹಿಸಿ ಬರೆದುಕೊಳ್ಳುತಿದ್ದ ಏಳನೆಯ ತರಗತಿಯ ಮುರಲಿಯ ಕೈಯಲ್ಲಿ ತನ್ನ ನಾಪತ್ತೆಯಾದ ಪೆನ್ನು ಇರುವುದನ್ನು ಕಂಡು ಲಲಿತೆ ಬೆಚ್ಚಿಬಿದ್ದಳು. "ಮುರಲಿ, ಸ್ವಲ್ಪ ಪೆನ್ನು ಕೊಡು."—ಮೃದುವಾಗಿ ಕೇಳಿದಳು ಲಲಿತಾ. ಆತ ಕೊಟ್ಟ, ಅವಳು ಅದನ್ನು ತಿರುಗಿಸಿ ಮುರುಗಿಸಿ ನೋಡಿ. "ಇದು ನನ್ನ ಪೆನ್ನು ಮುರಲಿ" ಎಂದಳು.

ತಟ್ಟನೆ ಆಕೆಯ ಕೈಯಿಂದ ಪೆನ್ನನ್ನು ಕಸಿದುಕೊಂಡು ಮುರಲಿ, "ಗೊತ್ತು! ಮೊನ್ನೆ ನನ್ನ ತಂದೆ ಮಂಗಳೂರಿನಿಂದ ಬರುವಾಗ ತಂದುಕೊಟ್ಟ ಪೆನ್ನು ನಿನ್ನದಾಗುವುದು ಹೇಗದು?" ಎಂದು ಹೇಳಿ ಅಲ್ಲಿಂದ ಹೋಗಿಬಿಟ್ಟ. ಆತ ಹೋಗುವುದನ್ನೇ ಲಲಿತಾ ದಿಗ್ಭ್ರಮೆಗೊಳಗಾಗಿ ನೋಡುತ್ತಾ ನಿಂತಳು

ಆ ದಿನ ಸಂಜೆ ಮುರಲಿಗೆ ಹೆಡ್ಮಾಸ್ತರರಿಂದ ಕರೆ ಬಂತು; ಹೋದ.

"ಎಲ್ಲಿ ನಿನ್ನ ಪೆನ್ನು ತೆಗೆದುಕೊಂಡು ಬಾ."

ಮುರಲಿ ಪೆನ್ನು ತಂದ. ಅದನ್ನು ಮೇಲಿನ ಮೇಜಿನ ಮೇಲಿರಿಸಿ ಲಲಿತೆಯನ್ನು ಬರಹೇಳಿ ಕಳಿಸಿದರು; ಆಕೆಯೂ ಬಂದಳು.

"ಈ ಪೆನ್ನು ನಿನಗೆಲ್ಲಿಂದ ಬಂತು? ಸತ್ಯ ಹೇಳು."

ಮುರಲಿ ತಡವರಿಸಿದ—"ಮೊನ್ನೆ ತಂದೆ ತಂದುಕೊಟ್ಟುದು."

"ಸತ್ಯ ಹೇಳು! ಈ ಪೆನ್ನು ಲಲಿತೆಯದು ಎನ್ನಲಿಕ್ಕೆ ಸಾಕ್ಷಿಯಿದೆ. ಪೆಟ್ಟು ತಿಂದೀಯೇ, ಜೋಕೆ!"

ಕೊಂಚಕಾಲ ಬಿಟ್ಟು, "ಇಲ್ಲ; ನನ್ನದೇ ಪೆನ್ನು" ಎಂದ.

ಹೆಡ್ಮಾಸ್ತರ್ ಕಪಾಟಿನ ಮೇಲಿದ್ದ ಬೆತ್ತವನ್ನು ತೆಗೆದರು. ಮೇಜಿನ ಮೇಲಿದ್ದ ಪೆನ್ನಿನ ಮೋಹಿನ ತುದಿಯನ್ನು ಮುರಲಿ

ಮಕ್ಕಳ ಮಮತೆಯ
'ಬಿಕ್ಕೊ'ರವರ
ಗ್ಲೂಕೋಸ್ ಕೂಡಿದ ಪೆಪ್ಪರ್
ಮಿಠಾಯಿಗಳು ರುಚಿಕರ, ಸೇವನೆಗೆ
ಪ್ರಸಿದ್ಧಿಪಟ್ಟಿವೆ.

Regd. Trade Mark
BICCO

'ಬಿಕ್ಕೊ'ರವರ
ಹಣ್ಣಿನ ಶರಬತ್ತುಗಳು
ಅತಿಥಿಗಳ ಆದರದ ಸತ್ಕಾರಕ್ಕೆ ಅತ್ಯನುಕೂಲ.
ತಯಾರಕರು:
ಭಾರತ್ ಇಂಡಸ್ಟ್ರಿಯಲ್ ಎಂಡ್ ಕ್ಯಾನಿಂಗ್
ಕಂಪೆನಿ ಲಿಮಿಟೆಡ್, ಕಾಪು ದ. ಕ

NAVAYUGA WEEKLY, UDIPI.
REGD. NO.BG. 176

23-2-1961

LICENSE NO. 31
Licensed to Post without Prepayment

ಯ ಮುದತ್ತು ಹಿಡಿದು ಗದರಿದರು—
"ಬೊಗಳು! ಯಾರ ಪೆನ್ನಿದು? ಏನಿದೆ ಇದರಲ್ಲಿ?"

ಮುರಲಿ ನೋಡಿದ...ಕಾಲು 'ಗಡ ಗಡ' ಎನ್ನುತಿತ್ತು. ನೋಡಿದ'

"LALITA"

ತುಂಡಾದ ಬ್ಲೇಡಿನ ಮೊನೆಯಿಂದ ಲಲಿತಾ ತನ್ನ ಹೆಸರನ್ನು ಅದರಲ್ಲಿ ಹಿಂದೊಮ್ಮೆ ಗೀರಿದ್ದಳು, ನಿಶೇ ತುಳವಾಗಿ!

"ಚರ್ಮ ಸುಲಿದು ಬಿಟ್ಟೇನು! ಯಾರನು ಪೆನ್ನು?"—ಹೆಡ್ಮಾಸ್ಟರ್ ಬೆತ್ತವನ್ನೆತ್ತಿದರು.

ಸತ್ಯ ಹೊರಬಾರದೆ ಗತ್ಯಂತರವಿಲ್ಲ. ಮುರಲಿ ನಿಜವ ಹೇಳಿದ—"ಕಿಶೋರನ ಕೈಯಿಂದ ಎಂಟಾಣೆಗೆ ನಾನು ತೆಗೆದುಕೊಂಡೆನು, ಸರ್"

ಈ ಮಾತು ಕೇಳಿ ಲಲಿತೆಯ ಮುಖ ವಿವರ್ಣವಾಯಿತು. ಕೋಣೆಯ ಬಾಗಿಲಿನಲ್ಲಿ ಹುಡುಗರು ಗುಂಪುಗೂಡಿ ನೋಡುತಿದ್ದರು 'ಕಿಶೋರನನ್ನು ಬರಹೇಳು' ಎಂಬ ಹೆಡ್ಮಾಸ್ಟರರ ಆಜ್ಞೆಯ ಹಿಂದಿನಿಂದಲೇ ಕಿಶೋರ ಕಾಲೆಳೆಯುತ್ತಾ ಬಂದ. ಲಲಿತಾಳ ಎದೆಯೂ ಹೊಡೆದುಕೊಳ್ಳುತಿತ್ತು.

ಲಲಿತಾ ಇದನ್ನೆಲ್ಲ ಅಪೇಕ್ಷಿಸಿರಲಿಲ್ಲ. ಶಾಲೆಯಲ್ಲಿ ತನ್ನ ಪೆನ್ನು ಕಳೆದು ಹೋಗಿ ಅದು ಮುರಲಿಗೆ ಸಿಕ್ಕಿರಬೇಕು—ಎಂದಲೇ ಊಹಿಸಿದ್ದಳು. ಆದರೆ ಈಗ ಪರಿಣಾಮ ಮಿಂಚಿಹೋಗಿತ್ತು.

"ನೀನು ಈ ಪೆನ್ನನ್ನು ಮುರಲಿಗೆ ಮಾರಿದ್ದು ನಿಜವೇ?"

ಕಿಶೋರ್ ಮಾತಾಡಲಿಲ್ಲ. ಆದರೆ ಬೆತ್ತದ ಪೆಟ್ಟಿಗೆ ಬಾಗಲೇ ಬೇಕಾಯಿತು. "ನಿಜ"ವೆಂದು ಒಪ್ಪಿದ.

ಹೆಡ್ಮಾಸ್ಟರ್ ಲಲಿತೆಯ ಕಡೆ ತಿರುಗಿದರು. ಆಕೆ ಮುಖ ಅಡಿಹಾಕಿ ಬಿಕ್ಕಳಿಸಿ ಅಳುತ್ತಿರುವುದು ಕಂಡುಬಂತು. ಕಣ್ಣೀರು ಧಾರಾಕಾರವಾಗಿ ಸುರಿಯುತಿತ್ತು. ಹೆಡ್ಮಾಸ್ಟರ್ ಕ್ಷಣಕಾಲ ಮೌನವಾದರು.

ಲಲಿತ ಬಹಳ ಕಷ್ಟಪಟ್ಟು ತನ್ನನು ತಾನು ಸಮಾಧಾನ ಪಡಿಸಿಕೊಂಡು ಅಳುವನ್ನು ನುಂಗಿಕೊಂಡಳು. ಕಣ್ಣೀರನ್ನು ಬರಸಿಕೊಂಡು ಮುಖವನ್ನೆತ್ತಿ ಹೆಡ್ಮಾಸ್ಟರರೊಡನೆ ಹೇಳಿದಳು –

"ಸರ್! ನಾನೇ ಮುರಲಿಗೆ ಎಂಟಾಣೆ ಕೊಡುತ್ತೇನೆ. ಆ ಪೆನ್ನು ನನಗೆ ಬೇಕು."

"ಸರಿ. ಎಂಟಾಣೆ ತಂದುಕೊಟ್ಟು ಪೆನ್ನು ತೆಗೆದುಕೊಂಡು ಹೋಗು...ಹೋಗಿರಿ, ಎಲ್ಲ!" ಎಂದರು, ಹೆಡ್ಮಾಸ್ಟರ್.

ಅಷ್ಟಕ್ಕೆ ಶಾಲೆಯ ಗಂಟೆಯೂ ಮುಗಿದಿತ್ತು.

ಬೀದಿಯಲ್ಲಿ ಅಣ್ಣ ತಂಗಿಯರಿಬ್ಬರೂ ಮೌನವಾಗಿಯೇ ಮುಂದುವರಿದರು. ಯಾರೂ ಮಾತನಾಡಲಿಲ್ಲ.

ಆ ಪುರಾತನ ಗೋಳಿಯಮರ ಬರುತ್ತಲೇ, ಏನೇನೋ ನೆನಪಾಗಿ ಕಿಶೋರ ನಿಂತ. ಲಲಿತೆಯೂ ನಿಂತಳು. ಒಂದೇ ಸವನೆ ಪಟಪಟನೆ ಕಿಶೋರನ ಕಣ್ಣಿನಿಂದ ಹನಿಗಳುದುರಿದುವು. ಲಲಿತೆಯ ಕೈಯನ್ನು ಹಿಡಿದುಕೊಂಡು, "ಲಲಿತಾ! ನನ್ನನ್ನು ಕ್ಷಮಿಸು, ಲಲಿತಾ..." ಎಂದು ಬಹಳ ಕಷ್ಟದಿಂದ ಹೇಳಿದ.

ಲಲಿತೆಯ ಕಣ್ಣಿನಲ್ಲೂ ನೀರು ತುಂಬಿತ್ತು. "ಅಣ್ಣಾ" ಪಟಪಟನೆ ಆಕೆಯ ಕಣ್ಣಿನಿಂದಲೂ ನಾಲ್ಕಾರು ಹನಿಗಳು ಕೆನ್ನೆಯ ಮೇಲೆ ಉರುಳಿ ಕೆಳಬಿದ್ದುವು.

ಶ್ರೀ ಯು ಪದ್ಮನಾಭ ಭಟ್, ವಿದ್ವಾನ್.

ಕುಂದಾಪುರ ಡಿಸ್ಟ್ರಿಕ್ಟ ಮುನ್ಸೀಫ್ ಕೋರ್ಟಿನಲ್ಲಿ

S C 556/59
R E P. 730/60

ವಿಶ್ವೇಶ್ವರ ಹೊಳ್ಳ — ಅರ್ಜಿದಾರ–
1 ಪ್ರಭಾಕರ ರಾವ್, 2 ಶಿವರಾಮ ರಾವ್, 3 ರಾಮದಾಸ ರಾಮಕೃಷ್ಣಯ್ಯ ಬಿಜೂರು— ಎದುರು—

ಎದುರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ—

ಎದುರು. 1 ಪ್ರಭಾಕರ ರಾವ್, 2 ಶಿವರಾಮ ರಾವ್— ಬಿಜೂರು ಶಿವರಾಯರ ಮಕ್ಕಳು 3. ರಾಮದಾಸ ರಾಮಕೃಷ್ಣಯ್ಯ ಬಿಜೂರು ಕುಂದಾಪುರ ತಾಲೂಕು ಬಿಜೂರು ಗ್ರಾಮಸ್ಥರು

ಅರ್ಜಿದಾರನು ಬಿಜೂರು ಮೃತ ಬಾಲಚಂದ್ರರಾಯನ ಸೊತ್ತುಗಳ ಮೇಲೆ ಪಡೆದ ಮೇಲ್ಕಂಡ ಡಿಕ್ರಿಯ ಬಗ್ಗೆ ನಿಮ್ಮ ಸ್ವಾಧೀನಯಿರುವ ಮೃತನ ಬಾಬ್ತು ಯಿನ್ವೆಂಟ್ರಿಯಿಂದ ಕಾಣುವ ಬಿಜೂರು ಗ್ರಾಮದ ಆಸ್ತಿಯನ್ನು ಜಪ್ತು ಮಾಡಿಸಿರುವುದರಿಂದ ಸದ್ರಿ ಆಸ್ತಿಯನ್ನು ನೀವು ಯಾರಿಗೂ ಯಾವತರದ ಪರಾಧೀನ ಮಾಡಿ ಕೊಡಬಾರದಾಗಿ ನಿಮಗೆ ಈ ಮೂಲಕ ನಿರ್ಬಂಧಿಸಿರುತ್ತದೆ ಸದ್ರಿ ಅಮಲ್ ಜಾರಿಯು ತಾರೀಕು 6—3—1961ಕ್ಕೆ ತಸ್ತಿಗೆ ಯಿಟ್ಟಿರುತ್ತದೆಂಬ ಸಂಗ್ತಿ ಈ ಮೂಲಕ ತಿಳಿಸಲಾಗುತ್ತದೆ ನಿಮ್ಮ ಆಕ್ಷೇಪಣೆ ಯಿದ್ದ ಪಕ್ಷದಲ್ಲಿ ಸದ್ರಿ ತಾರೀಕಿನ ದಿವಸ ಕೋರ್ಟಿನ ಮುಂದೆ ಹಾಜರು ಮಾಡಿ ಕೊಳ್ಳತಕ್ಕದ್ದು

M. Ananthaya
Advocate for petitioner.

ತಾರೀಕು 12—2. 61.
ಮೊಕ್ಕಾಂ ಕುಂದಾಪುರ.

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ತಮ್ಮ ಜೀವನವನ್ನು ನಡೆಸಬಹುದು" ಎಂದು ರಾಜ್ಯಪಾಲರು ಹೇಳಿ, ನಾಗಾ ಜನತೆಯ ಮನಸ್ಸಿನಲ್ಲಿ ಹುದುಗಿರಬಹುದಾದ ಸಂದೇಹವನ್ನು ದೂರ ಮಾಡಿದರು. ನಾವು ಭಾರತೀಯರು; ಭಾರತದ ನಾಗರಿಕರು; ನಮ್ಮ ವಿಶಾಲ ದೇಶದಲ್ಲಿ ನಾನಾ ಬಗೆಯ ಸಂಸ್ಕೃತಿಗಳು ಉಳಿದು ಬಂದಿವೆಯೆಂಬುದೇ ನಮ್ಮ ಸೌಭಾಗ್ಯ; ಈ ಸಂಸ್ಕೃತಿಯನ್ನ ನಾವು ಅವಶ್ಯ ಉಳಿಸಿಕೊಂಡು ಬರಬೇಕಾಗಿದೆ ಭಾರತದ ಶಕ್ತಿ ಇಲ್ಲಿನ ಸಂಸ್ಕೃತಿಗಳ ಒಗ್ಗಟ್ಟಿನಲ್ಲಿ ಅಡಕವಾಗಿದೆ ನಾಗಾ ಜನತೆಯು ತಮ್ಮ ಸಂಸ್ಕೃತಿಗೆ ಅನುಸಾರವಾಗಿ, ವಿವೇಕಯುತರಾಗಿ ನಡೆಯಬೇಕು, ಎಂದು ಅವರು ಕೇಳಿಕೊಂಡರು

ನಾಗಾ ಪ್ರದೇಶದ ವೈಚಿತ್ರ್ಯವೇ ಅಲ್ಲಿ ಮೊದಲು ಎದ್ದಿದ್ದ ಗಲಭೆಗಳಿಗೆ ಕಾರಣ. ಅಲ್ಲಿನ ಜನತೆಯು ತಮ್ಮ ಸಂಪ್ರದಾಯಕ್ಕೆ, ಸಂಸ್ಕೃತಿಗೆ ವ್ಯತಿರಿಕ್ತವಾಗಿ ಎಂದೂ ನಡೆಯರು. ಭಾರತ ಸರಕಾರದೊಳಗಿರುವುದರಿಂದ ನಾಗಾ ಸಂಸ್ಕೃತಿಗೆ ಧಕ್ಕೆ ಬರುವುದೆಂದೇ ಫಿಜೋ ಭಾರತ ಸರಕಾರಕ್ಕೆ ವಿರುದ್ಧವಾಗಿ ಗಲಭೆಯೆಬ್ಬಿಸ ತೊಡಗಿದ್ದನು ತಾನೂ ಒಂದು ಪಕ್ಷವನ್ನು ಕಟ್ಟಿ, ದೇಶದಲ್ಲಿ ಹಿಂಸಾಚರಣೆಗೆ ತೊಡಗಿದನು. ನಾಗಾರಾಜ್ಯದ ಶಾಂತಿ ಕಲಕಿ ಮಹಾ ಕ್ರಾಂತಿಯನ್ನೆಬ್ಬಿಸಿದನು ಭಾರತ ಸರಕಾರದ ಯಾವ ಉದಾರ ನೀತಿಗೂ ಫಿಜೋ ಸಮ್ಮತಿಸಲಿಲ್ಲ, ಆತನೂ ಪಕ್ಷದ ಸದಸ್ಯರೂ ಅದ್ಯ ಭೂಗತರಾಗಿದ್ದಾರೆಂದು ತಿಳಿಯುತ್ತದೆ. ಆದರೆ ಭಾರತ ಸರಕಾರದ ಆಶಯವನ್ನು ಸರಿಯಾಗಿ ಅವರು ಅರಿದಿಲ್ಲವೆಂಬುದರಿಂದಲೇ ಅವರು ಈ ರೀತಿಯ ಅಮಾನುಷ ಕೃತ್ಯಗಳನ್ನೆಸಗುತಿದ್ದರೆನ್ನಬಹುದು. ಭಾರತ ಸರಕಾರದ ನೀತಿಯನ್ನು ಪ್ರಧಾನಿ ನೆಹರುರವರು ಕಳಿಸಿದ ಸಂದೇಶದಲ್ಲಿ ಸರಿಯಾಗಿ ಸ್ಪಷ್ಟಪಡಿಸಿದ್ದಾರೆ: "ಯಾವುದೇ ಪ್ರದೇಶದ ಆಡಳಿತೆಯಲ್ಲಿ ಅಲ್ಲಿಯ ಜನತೆಯೊಳಗೆ ಆತ್ಮನಿರ್ಭರತೆಯ ಭಾವನೆಗಳು ವಿಕಾಸಗೊಳ್ಳುವಂತಾಗಬೇಕು; ನಾಗಾಜನತೆಗೆ ನಾವು ಪದೇ ಪದೇ ತಮ್ಮ ಸಾಂಸ್ಕೃತಿಕ ಮತ್ತು ಸಾಮಾಜಿಕ ಪರಂಪರೆ ಮತ್ತು ಜೀವನದ ವಿಶಿಷ್ಟ ಪದ್ಧತಿಯನ್ನು ಅನುಸರಿಸಲು ಸಂಪೂರ್ಣ ಸ್ವತಂತ್ರರಾಗಬೇಕು"

ಭಾರತಸರಕಾರವು ನಾಗಾ ಪ್ರದೇಶವನ್ನು ಇದುವರೆಗೂ ಅಲಕ್ಷ್ಯಿಸಿರುವುದಿಲ್ಲ. ಅದರ ಅಭಿವೃದ್ಧಿಯ ಕಡೆಗೆ, ಅಲ್ಲಿನ ಜನತೆಯ ಉನ್ನತಿಯ ಬಗ್ಗೆ ಪರಿಶ್ರಮಿಸುತ್ತಲೇ ಇದೆ. ಮೊದಲು ಅಸ್ಸಾಮ ರಾಜ್ಯದ ಭಾಗವಾಗಿದ್ದಾಗಲೇ ಅಲ್ಲಿ ವಿಕಾಸ ಯೋಜನೆಗಳನ್ನು ರೂಪಿಸಲಾಗುತಿತ್ತು. ಈ ಮೂರು ವರ್ಷಗಳಿಂದ ಪ್ರತ್ಯೇಕ ರಾಜ್ಯದ ರೂಪವನ್ನು ಹೊಂದಿರುವಾಗ ಈ ಪ್ರದೇಶವು ಮತ್ತಷ್ಟು ಅಭಿವೃದ್ಧವಾಗಿದೆ ನಾಗಾ ಪ್ರದೇಶದಲ್ಲಿ ದ್ವಿತೀಯ ಯೋಜನೆಯು ಪ್ರಾರಂಭಿಕ ವರ್ಷಗಳಲ್ಲಿ ಪರಿಸ್ಥಿತಿಯು ತೀವ್ರ ವಿಕೋಪಕ್ಕೆ ಹೋದುದರಿಂದ ಅಲ್ಲಿ ಯಾವುದೇ ವಿಕಾಸ ಕಾರ್ಯಗಳು ನಡೆದಂತೆ ತೋರುವುದಿಲ್ಲ; ನಡೆಯಲೂ ಇಲ್ಲ. ಆದರೆ, ಆ ಮೇಲಿನ ಮೂರು ವರ್ಷಗಳಲ್ಲಿ ಅಲ್ಲಿನ ಗಲಭೆ ಅಂಕಿತದೊಳಗೆ ಬಂದುದರ ಪರಿಣಾಮವಾಗಿ ೪ ಕೋಟಿ ರೂಪಾಯಿಗಳನ್ನು ಸರಕಾರದ ಕಡೆಯಿಂದ ವ್ಯಯಿಸಲಾಗಿದೆ. ಜನತೆಯೂ ಶ್ರಮದಾನ ಹಾಗೂ ಸಾಮಗ್ರಿದಾನಗಳನ್ನು ಮಾಡಿವೆ ಈಗ ರೂಪಿತವಾಗುತ್ತಿರುವ ತೃತೀಯ ಯೋಜನೆಯಲ್ಲಿ ಏಳು ಕೋಟಿ ರೂಪಾಯಿಗಳ ಅಭಿವೃದ್ಧಿ ಯೋಜನೆಗಳನ್ನು ಸೇರಿಸಿಕೊಳ್ಳಲಾಗಿದೆ. ನಾಗಾ ಜನತೆಯು ಈ ಯೋಜನೆಗಳಲ್ಲಿ ಹೃತ್ಪೂರ್ವಕ ಸಹಯೋಗನೀಡಿ, ತನ್ನ ಅಭಿವೃದ್ಧಿಯನ್ನು ಸಾಧಿಸಿಕೊಳ್ಳಬೇಕಾಗಿದೆ.

ದುರ್ಗಮ ಪರ್ವತ—ಕಾಡು ಪ್ರದೇಶವಾದ ನಾಗಾರಾಜ್ಯದಲ್ಲಿ ನಡೆದ ಸಮಾರಂಭದಲ್ಲಿ ೧,೦೦೦ ಶಾಲಾ ವಿದ್ಯಾರ್ಥಿಗಳೂ ಇದ್ದರು ಎಂದು ಹೇಳಿದರೆ, ಅಲ್ಲಿನ ವಿಕಾಸ ಕಾರ್ಯಗಳ ತೀವ್ರಗತಿಯನ್ನು ಊಹಿಸಬಹುದು.

ನಾಗಾ ಜನರು ಬಂಡುಗಾರತನದಿಂದ ತಮ್ಮ ಉನ್ನತಿಯಾಗಲಾರದೆಂದೀಗ ಸರಿಯಾಗಿ ಅರಿತುಕೊಂಡಿದ್ದಾರೆ. ಆದುದರಿಂದ ಗತಕಾಲವನ್ನು ಭಯಕಾಲವೆಂದು ತಿಳಿದು, ಅವೆಲ್ಲವನ್ನೂ ಮರೆತು ನವ ಮನ್ವಂತರೋದಯವಾದ ಸುದಿನದಿಂದ ಎಲ್ಲರೂ ಹಿಂಸಾಚರಣೆಗೆ ತಿಲಾಂಜಲಿಯಿತ್ತು ಸದ್ಯದ ಪ್ರಶಾಸನ ವ್ಯವಸ್ಥೆಯಲ್ಲಿ ತಮಗೆ ದೊರತಿರುವ ಮೂಲಭೂತ ಅಧಿಕಾರಗಳನ್ನು ಕರ್ತವ್ಯಗಳಿಗೆ ಹೊಂದಿಕೊಂಡು ಸಹಕರಿಸಿ ನಡೆಯಬೇಕಾಗಿದೆ. ಕುಹಕಿಗಳ ದುರ್ಬೋಧನೆಗೆ ಕಿವಿಗೊಡದೆ ರಾಷ್ಟ್ರೀಯ ಪ್ರವೃತ್ತಿಯನ್ನು ಹೆಚ್ಚಿಸಿಕೊಳ್ಳಬೇಕಾಗಿದೆ.

ಪಿಗ್ಮಿ—೨

ಸಿಂಡಿಕೇಟ್ ಬೇಂಕ್

ಮಾನವನನ್ನು ಅಭ್ಯಾಸದ ಶಿಶುವೆಂದು ಸಹಾ ಹೇಳುವುದುಂಟು
ಪದೇ ಪದೇ ಆಚರಿಸಿ ರೂಢಿಯಾಗಿ, ಚಟವಾಗಿ,
ಅಭ್ಯಾಸವಾಗಿ ಬಲಿತು ನಿಂತ ಕ್ರಿಯೆಯನ್ನು ಹಠಾತ್ತಾಗಿ
ಕಿತ್ತೊಗೆಯುವುದು, ನಿಲ್ಲಿಸಿಬಿಡುವುದು ಅಸಾಧ್ಯವಾದ ಕೆಲಸ.
ಹೀಗೆ ಮಾಡುವುದರಿಂದ ದೇಹ ಮನಸ್ಸುಗಳಿಗೆ ಆಘಾತ ಕೂಡಾ
ಸಂಭವಿಸಬಹುದು. ಈ ಅನುಭವ,'ಮಾನವನು ಅಭ್ಯಾಸದ ಕೈಗೂಸು'
ಎಂಬ ಮಾತನ್ನು ಪುಷ್ಟೀಕರಿಸುತ್ತದೆ.

ಒಳ್ಳೆಯ ಯೋಚನೆ, ಒಳ್ಳೆಯ ಕೆಲಸಗಳನ್ನು ತಿರುಗಿ ತಿರುಗಿ
ನಡೆಸುವುದರಿಂದ ಅವು ಒಳ್ಳೆಯ ಅಭ್ಯಾಸಗಳಾಗಿ ಪರಿಣಮಿಸುತ್ತವೆ.
ಕೈಗೆ ಬಂದ ಪುಡಿಕಾಸುಗಳನ್ನು ತಾತ್ಸಾರದಿಂದ ಕಂಡು
ಮನಬಂದಂತೆ ವೆಚ್ಚ ಮಾಡುತ್ತಾ ಹೋದರೆ ಅನಾವಶ್ಯಕವಾಗಿ
ಹಣವನ್ನು ಪೋಲು ಮಾಡುವ ಚಟವು ಪ್ರಬಲಿಸುತ್ತದೆ.
ಬದಲಾಗಿ ಚಿಲ್ಲರೆ ಪುಡಿಕಾಸುಗಳನ್ನು ಸಹಾ ವ್ಯವಸ್ಥಿತವಾಗಿ
ಕೂಡಿಡುತ್ತಾ ಹೋದರೆ ಉಳಿತಾಯದ ಅಭ್ಯಾಸ ನೆಲೆಯೂರುತ್ತದೆ.
ಇದು ಒಂದು ಒಳ್ಳೆಯ ಅಭ್ಯಾಸವನ್ನು ಮಾತ್ರವಲ್ಲ ಒಂದು
ಪುಟ್ಟ ನಿಧಿಯನ್ನು ದೊರಕಿಸಿಕೊಡುತ್ತದೆ.

ದಿನಕ್ಕೆ ೨೫ ನಯೆಪೈಸೆಗಳಷ್ಟನ್ನು
ಸಹಾ ವ್ಯವಸ್ಥಿತವಾಗಿ ಕೂಡಿಡಲು ಪಿಗ್ಮಿ

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. –ಸಂ ನ.

ಕಾದಂಬರಿ ಪುಸ್ತಕಗಳು

ಅಳಿದ ಮೇಲೆ (ಹೊಸ ಕಾದಂಬರಿ)	2_75
ಪಂಚಭೂತ (ಕಾದಂಬರಿ)	2_50
ನನ್ನ ಸುತ್ತಲಿನ ಕಡಲು	1_75
ಪರಮಾಣು—ಇಂದು—ನಾಳೆ	3_00

ಸಿಗುವ ಸ್ಥಳ:
ನವಭಾರತ ಬುಕ್ ಡಿಪೊ, ಉಡುಪಿ

Edited, Printed & Published by K. H. Shetty, at the Navayuga Press, Udipi, S. India.

40th year of publication. 2-3-1961 ೪೦ನೇ ವರ್ಷ

ಸಂಪುಟ ೪೦ Vol. 40

ನವಯುಗ

ಸಂಚಿಕೆ ೨೫ No. 25

ಬೆಲೆ 0=13

ಪ್ರಚಲಿತ ಪ್ರಸಂಗ

ಮೈಸೂರು ಕಾಂಗ್ರೆಸ್‌ನಲ್ಲಿ ಸೌಹಾರ್ದ

ಬಹುಕಾಲದ ತಿಕ್ಕಾಟದ ನಂತರ ಕಾಂಗ್ರೆಸ್ ಪಕ್ಷ ಮತ್ತು ಆಡಳಿತೆಯ ವಿಭಾಗಗಳ ಘರ್ಷಣೆ ಶಾಂತವಾಯಿತು; ಮೈಸೂರು ಕಾಂಗ್ರೆಸ್ ಇತಿಹಾಸದಲ್ಲಿಯೇ ಮೊತ್ತಮೊದಲನೆಯದಾಗಿ ಇವೆರಡು ಒಂದುಗೂಡಿದ ಒಡಂಬಡಿಕೆ ಮಾಡಿಕೊಂಡುವು.

ಪರಿಹರಿಸಬೇಕು ಎಂದು ಇಕ್ಕಡೆಯವರೂ ಬಯಸಿ ಪರಿಹಾರದ ಸೂಚನೆಗಳು ಮಾತ್ರ ಒಬ್ಬರಿಂದೊಬ್ಬರಿಗೆ ಸ್ವೀಕಾರಾರ್ಹವಾಗದುಳಿದುದರಿಂದ ಒಂದು ತರದ ವೈಮನಸ್ಯದ ಕರಿನೆರಳು ಹರಡಿದ್ದ ಮೈಸೂರು ರಾಜ್ಯಕೀಯದಲ್ಲಿ ಸದ್ಯ ನವ ಅರುಣೋದಯವಾದುದು ಸ್ವಾಗತಾರ್ಹವಿದೆ. ರಾಜ್ಯ ಕಾಂಗ್ರೆಸ್ಸಿನ ಪ್ರಶಾಸನ ಮತ್ತು ಕಾರ್ಯವಾಹಿ ವಿಭಾಗಗಳ ನಡುವಣ ವಿರಸ ಪ್ರಕರಣವು ಬೆಳಕಿಗೆ ಬಂದು ಬಹು ಕಾಲಾನಂತರವಾದರೂ ಅದು ಕೊನೆಗೊಳ್ಳುವಂತಾದುದು ರಾಜ್ಯ ಕ್ಷೇಮದ ದೃಷ್ಟಿಯಿಂದ ಸೂಕ್ತವೆನ್ನಬೇಕು. ಜತ್ತಿ ಮಂತ್ರಿ ಮಂಡಳಿಯ ವಿರುದ್ಧ ಪ್ರಬಲವಾದ ಆರೋಪಗಳೇನೂ ಇಲ್ಲವೆಂದೂ ಉಂಟಾಗಿದ್ದ ಬಿರುಕನ್ನು ಉಂಟು ಮಾಡಿಕೊಂಡವರೇ ಕೂಡಿಸಬೇಕೆಂದೂ ಕಾಂಗ್ರೆಸ್ ಅಧ್ಯಕ್ಷ ಶ್ರೀ ರೆಡ್ಡಿಯವರು ಉದ್ಘೋಷಿಸಿದ್ದರು; ಮತ್ತು ಇದಕ್ಕೆ ಕಾಂಗ್ರೆಸ್ ವರಿಷ್ಠರೂ ತಲೆದೂಗಿದ್ದರು. ಜತ್ತಿಯವರನ್ನು ಪಟ್ಟದಿಂದ ಇಳಿಸಲೇಬೇಕೆಂಬ ಇರಾದೆಯಿಂದ ರಾಜ್ಯ ಕಾಂಗ್ರೆಸ್ಸು ಒಂದು ಗೊತ್ತುವಳಿಯನ್ನೂ ಸ್ವೀಕರಿಸಿತ್ತು. ಆದರೆ, ಕಾಂಗ್ರೆಸ್ ವರಿಷ್ಠರು ಜತ್ತಿಯವರ ಮೇಲಿಟ್ಟ ಅಭಿಮಾನ ಹಾಗೂ ಕೃಪೆಯಿಂದಾಗಿ ಆ ಗೊತ್ತುವಳಿಯು 'ಬರೇ ಗುಲ್ಲು ಸಿಸ್ಪೆಗೇಡು' ಎಂಬಂತಾಗಿತ್ತು.

ಗುಂಪು ರಾಜಕೀಯವನ್ನು ಹೋಗಲಾಡಿಸಲು ಎಲ್ಲ ಗುಂಪುಗಳ ಪ್ರತಿನಿಧಿಗಳೂ ಸೇರಿರುವ ಸಮರ್ಥ ಮಂತ್ರಿ ಮಂಡಳ ರಚನೆಯನ್ನು ಬಯಸುತಿದ್ದ ಅಂದಿನ ಮಂತ್ರಿ ಮಂಡಳ ವಿರೋಧಿ ಸದಸ್ಯರು ಈಗ ಅಲ್ಪತೃಪ್ತರಂತೆ ವರ್ತಿಸಿದ್ದಾರೆ. ವಿಧಾನ ಸಭಾ ಕಾಂಗ್ರೆಸ್ ನಾಯಕನೇ ಬೇರೆಯಾಗಬೇಕೆಂದು ಛಲ ತೊಟ್ಟವರು ಈಗ, ಅದೇ ನಾಯಕನಿಗೆ ಬೆಂಬಲ ಕೊಡಲು ಮುಂದೆ ಬಂದಿದ್ದಾರೆ. ಶ್ರೀ ಜತ್ತಿಯವರು ಇದೀಗ ಮಂತ್ರಿಮಂಡಳಿ ವಿಸ್ತರಣೆಯನ್ನು ಮಾಡಿದ್ದಾದರೂ ಈ ತೆರದ ವಿಸ್ತರಣೆಗೆ ಅಂದೇ ಒಪ್ಪಿದ್ದಾರೆ; ಆದರೆ, ಅದು ಅಂದಿನ ಭಿನ್ನಮತೀಯರಿಗೆ ಆಗ ಸಮ್ಮತವಾಗಲಿಲ್ಲ; ಅವರು ತನ್ನ ಹಠವನ್ನೇ ಸಾಧಿಸತೊಡಗಿದ್ದರು,

ಭಿನ್ನಾಭಿಪ್ರಾಯದ ಕಾರಣ— ಆದರ ಬಗ್ಗೆ ಎರಡೂ ಕಡೆಯ ವಾದ ವಿವಾದಗಳು, ಸಮರ್ಥನೆ ಭರ್ತ್ಸನೆಗಳನ್ನು ಇನ್ನೂ ಇನ್ನೂ ಚರ್ಚಿಸುವುದು ವಿವೇಕಯುತವಾಗಲಾರದು. ಆದರೂ ಇಂದು ನಾಲ್ವರು ಮಂತ್ರಿಗಳನ್ನು ಹೊಸತಾಗಿ ಸೇರಿಸಲ್ಪಟ್ಟುದರಿಂದ ಸಮಾಧಾನ ತಾಳಿದ ಶ್ರೀ ನಿಜಲಿಂಗಪ್ಪ ಮತ್ತವರ ಬೆಂಬಲಿಗರು ಅಂದೇ ಇದಕ್ಕೆ ಒಪ್ಪುತಿದ್ದರೆ, ರಾಜ್ಯ ಕಾಂಗ್ರೆಸ್ಸಿನ ಹಗರಣ ಇಷ್ಟು ಹೀನಮಟ್ಟಕ್ಕೆ ಇಳಿಯುತ್ತಿರಲಿಲ್ಲ. ಇಂದು ಎರಡೂ ಕಡೆಯವರು ಒಂದಾಗಿ ಸೇರುವಂತಾದುದು ಕಾಂಗ್ರೆಸ್ ಪಕ್ಷದ ದೃಷ್ಟಿಯಿಂದ ಅತಿ ಮಹತ್ವಪೂರ್ಣ ಘಟನೆಯೆಂದೇ ಹೇಳಬೇಕು.

ಚುನಾವಣೆಗಳು ಸಮೀಪಿಸುತ್ತಿರುವಾಗ ನಾಯಕತ್ವದಲ್ಲಿ ಬದಲಾವಣೆ ಅನಗತ್ಯವೆಂದು ಕಾಂಗ್ರೆಸ್ ವರಿಷ್ಠರು ಮೊದಲೇ ಅಭಿಪ್ರಾಯ ಹೊರಗೆಡಹಿದ್ದರು; ಇದರ ಉಚಿತಾನುಚಿತತೆಗಳನ್ನು ಅರಿತುಕೊಳ್ಳಲು ರಾಜ್ಯ ಕಾಂಗ್ರೆಸ್ಸಿಗೆ ಇಷ್ಟು ಸಮಯ ಬೇಕಾಯಿತು. ಚುನಾವಣಾ ಸಮಿತಿಯನ್ನು ರಚಿಸುವಾಗ, ತಮ್ಮೊಳಗಿನ ಹೋರಾಟವು ಮುಂದೆ ತಮ್ಮ ಪತನಕ್ಕೇ ಕಾರಣವಾಗಬಹುದು ಎಂದು ಕಾಂಗ್ರೆಸ್ಸಿಗರು ಅರಿತುಕೊಂಡರು. ಪಕ್ಷದೊಳಗಿನ ಬಿಕ್ಕಟ್ಟು ಪಕ್ಷವನ್ನೇ ನಿರ್ಬಲಗೊಳಿಸುತ್ತದೆಯೆಂಬ ಅನುಭವದ ಸತ್ಯವನ್ನವರು ಕಂಡುಕೊಂಡು ಈ ಬಗ್ಗೆ ಏನು ಮಾಡುವುದೆಂದು ಚಿಂತಿಸುತ್ತಿದ್ದರೆನ್ನಬಹುದು.

ಸಂಧಾನ ಕಾರ್ಯದಲ್ಲಿ ಪಳಗಿದ ಶ್ರೀ ಟಿ. ಎ. ಪೈ ಅವರು ಎರಡೂ ಪಕ್ಷಗಳಿಗೆ ಸಮ್ಮತವಾಗುವಂತೆ ಚುನಾವಣಾ ಸಮಿತಿಯನ್ನು ಅವಿರೋಧವಾಗಿ ಆರಿಸಿ ಪಕ್ಷವನ್ನು ಬಿಕ್ಕಟ್ಟಿನಲ್ಲಿರಿಸಿಕೊಳ್ಳುವುದರ ಅವಶ್ಯಕತೆಯನ್ನು ಮುಂದಿಟ್ಟು ಮಾಡಿಕೊಟ್ಟರು. ಕಾಂಗ್ರೆಸ್ ಅಧ್ಯಕ್ಷ ನಿಜಲಿಂಗಪ್ಪ ಮತ್ತು ಮುಖ್ಯ ಮಂತ್ರಿ ಜತ್ತಿಯವರಿಗೆ ಈ ಬಗ್ಗೆ ಸಂಪೂರ್ಣ ಅಧಿಕಾರ ನೀಡುವ ಗೊತ್ತುವಳಿಯೊಂದನ್ನು ಮುಂದೆ ತಂದರು. ಇದೇ ಸಂದರ್ಭದಲ್ಲಿ ಈ ನಾಯಕರಿಬ್ಬರೂ ಪ್ರಶಾಸನಾತ್ಮಕ ಬಿಕ್ಕಟ್ಟನ್ನು ನೀಗಿಸಿಕೊಳ್ಳುವಂತೆ ಸೂಚನೆಗಳು ಬಂದುವು. ವರಿಷ್ಠರ ಆಶೀರ್ವಾದವುಳಿದಿದ್ದರೂ ರಾಜ್ಯದಲ್ಲಿ ನೆಮ್ಮದಿಯಿಂದ ಉಸಿರಾಡಲು ಬಯಸುತಿದ್ದ ಜತ್ತಿಯವರು ಯಾವುದಕ್ಕೇ ಆಗಲಿ ತಾನು ಸಿದ್ಧವೆಂದು ರಾಜಿನಾಮೆ ಕೊಡುವುದನ್ನು ಬಿಟ್ಟು ಉದ್ಘೋಷಿಸುವವರು ಅದಕ್ಕೆ ಒಪ್ಪದೆ ಇದ್ದಾರೆ? ಶ್ರೀ ನಿಜಲಿಂಗಪ್ಪನವರಿಗಾದರೂ ಅಷ್ಟೇ. ತಾವು ಜತ್ತಿಯವರನ್ನು ಉರುಳಿಸಲು ಹೂಡಿದ ತಂತ್ರಗಳಾವುವೂ ನಿಷ್ಫಲವೆನಿಸಿದಾಗ, ಹೇಗಾದರೂ ಸಮಾಧಾನವಾದರೆ ಸಾಕು ಎಂಬಂತಾಗಿರದಿರದು. ಆದುದರಿಂದಲೇ ಹಿಂದೆ ತನ್ನನ್ನೇ ಅರಸಿಬಂದ ಸೂಚನೆಯನ್ನು ಈಗ ತಾನಾಗಿಯೇ ಅರಸಿಕೊಂಡು ಹೋಗಬೇಕಾಯ್ತು ಅವರಿಗೆ. ತಮ್ಮ ಗುಂಪಿಗೆ ಸೇರಿದವರಿಗೆ ನಾಲ್ಕು ಮಂತ್ರಿ ಸ್ಥಾನವನ್ನು ಒದಗಿಸಿಕೊಟ್ಟು, ಭಿನ್ನಾಭಿಪ್ರಾಯ ದೂರವಾಯಿತು ಎಂದು ಅಂದುಬಿಟ್ಟರು. ಇದು ಶ್ರೀ ಜತ್ತಿಯವರ ಜಯಭೇರಿಯ ಮೊಳಗೆಂದು ಈಗ ಕಲ್ಪಿಸಿಕೊಳ್ಳಬಹುದಾದರೂ ನಿಜವಾಗಿಯೂ ಕ್ರಾಂತಿಯನಂತರದಲ್ಲಿ ಸ್ಥಾಪನೆಗೊಳ್ಳುವ ಶಾಂತಿಯಿದು ಎಂದು ಹೇಳಿದರೆ ಅತಿಶಯೋಕ್ತಿಯಲ್ಲ.

ಮೈಸೂರು ಪ್ರದೇಶ ಕಾಂಗ್ರೆಸ್ಸಿನ ಅಧ್ಯಕ್ಷರು ಮತ್ತು ವಿಧಾನ ಮಂಡಳ ಕಾಂಗ್ರೆಸ್ ಪಕ್ಷದ ನಾಯಕರು ಪಕ್ಷ ಮತ್ತು ಮಂತ್ರಿ ಮಂಡಳಿಗಳ ವಿಚಾರದಲ್ಲಿ ಒಂದು ಸೌಹಾರ್ದಮಯ ಒಡಂಬಡಿಕೆಗೆ ಬಂದಿರುವುದು ಮೈಸೂರು ಕಾಂಗ್ರೆಸಿನ ಇತಿಹಾಸದಲ್ಲಿ ಇದೇ ಮೊತ್ತಮೊದಲೆನ್ನಬಹುದು. 'ಸಾರ್ವಜನಿಕ ಚುನಾವಣೆಗಳು ನಡೆಯಲಿರುವುದರಿಂದ ಮುಂದಿನ ತಿಂಗಳುಗಳು ಅತ್ಯಂತ ಮಹತ್ವದ್ದಾಗಿವೆ. ಆದುದರಿಂದ ನಾವೆಲ್ಲರೂ ಒಂದಾಗಿ ಪರಸ್ಪರ ಸೌಹಾರ್ದದಿಂದ, ಒಕ್ಕಟ್ಟಿನಿಂದ ನಡೆದುಕೊಳ್ಳಬೇಕಲ್ಲದೆ ಚುನಾವಣೆಗಳಲ್ಲಿ ಸಂಪೂರ್ಣ ಯಶಸ್ಸು ಪಡೆದು ದೇಶದಲ್ಲಿ ಪ್ರಜಾಪ್ರಭುತ್ವ ಸರಿಯಾಗಿ ನಡೆಯಲು ಸಹಾಯ ಮಾಡಬೇಕು" ಎಂಬ ಒಂದು ಹೇಳಿಕೆಯನ್ನು ನಿಜಲಿಂಗಪ್ಪ—ಜತ್ತಿಯವರು ಹೊರಡಿಸಿದ್ದಾರೆ.

ಮಂತ್ರಿಗಳಾಗಿ ಹೊಸತಾಗಿ ಶ್ರೀಗಳಾದ ಎಚ್. ಕೆ. ವೀರಣ್ಣಗೌಡ, ಎಚ್. ಎಸ್. ರುದ್ರಪ್ಪ, ವೀರೇಂದ್ರ ಪಾಟೀಲ ಮತ್ತು ಬಿ. ವೈಕುಂಠ ಬಾಳಿಗರೂ ಚುನಾವಣಾ ಸಮಿತಿಗೆ, ಕಾಂಗ್ರೆಸ್ ಅಧ್ಯಕ್ಷ ಶ್ರೀ ನಿಜಲಿಂಗಪ್ಪ, ಮುಖ್ಯ ಮಂತ್ರಿ ಶ್ರೀ ಜತ್ತಿ, ಶ್ರೀಗಳಾದ ಎಂ. ವಿ. ರಾಮರಾವ್, ವೆಂಕಪ್ಪ ರೆಡ್ಡಿ, ಎಂ. ವಿ. ಕೃಷ್ಣಪ್ಪ, ಜಿ. ವಿ. ಹಳ್ಳಿಕೇರಿ, ಮೂಲಿ ಮರಿಯಪ್ಪ, ಶ್ರೀರಾಮ ರೆಡ್ಡಿ ಮತ್ತು ಶಂಕರ ಆಳ್ವರು ಒಮ್ಮತದಿಂದ ಆರಿಸಲ್ಪಟ್ಟಿದ್ದಾರೆ.

ಒಂದು ವರ್ಷದಿಂದ ಬಲವಾಗಿ ಬೆಳೆದಿದ್ದ ಈ ಒಡಕು ಕೇವಲ ಒಂದೇ ವಾರದಲ್ಲಿ ಪರಿಹಾರವಾದುದು ಶ್ಲಾಘ್ಯವಾಗಿದೆ. ಈಗ ಉಂಟಾದ ಸೌಹಾರ್ದ ಕಾಂಗ್ರೆಸ್ಸಿನಲ್ಲಿ ಆಚಂದ್ರಾರ್ಕವಾಗಿ ಉಳಿಯುವಂತೆ ಮಾಡಿ, ಕಾಂಗ್ರೆಸ್ ಹಿತಸಾಧನೆ ಮಾಡುವುದು ಕಾಂಗ್ರೆಸ್ಸಿಗರ ಕರ್ತವ್ಯ. ಮುಂದಿನ ವರ್ಷಗಳಲ್ಲಿಯಾದರೂ ಅದು ಒಮ್ಮತದಿಂದ ರಾಷ್ಟ್ರಕಲ್ಯಾಣದತ್ತ ಅಧಿಕಾಧಿಕ ಗಮನ ಕೊಡುವುದು ಅತ್ಯಾವಶ್ಯ.

ಮಂಗಳೂರಲ್ಲಿ ಈಗಾಗಲೇ ತೆರೆಯಲ್ಪಟ್ಟು ಪ್ರಗತಿಯಿಂದ ಮುಂದೆ ಸಾಗುತ್ತಿರುವ ಇನ್ನೊಂದು ಪ್ರಸಿದ್ಧ ಜವುಳಿ ಮಳಿಗೆ—

ಸಾರೀ ಎಂಪೋರಿಯಮ್

ಕೆಥೊಲಿಕ್ ಕ್ಲಬ್ಬಿನ ಎದುರು, ಹಂಪನಕಟ್ಟಾ, ಮಂಗಳೂರು-1

ನಿಮ್ಮ ಉತ್ತಮ ಆಯ್ಕೆಗೆ ಯೋಗ್ಯವೆಂದೆನಿಸಿದ ರೇಶ್ಮೆ ಸೀರೆಗಳೂ, ಹತ್ತಿ ನೂಲಿನ ಸೀರೆಗಳೂ ಸರ್ವೋತ್ಕೃಷ್ಟವಾಗಿವೆ. ಯಾವತ್ತೂ ತರದ ಶರ್ಟಿಂಗ್, ಕೋಟಿಂಗ್, ಚಿಂಟ್ಸ್, ಸಿಲ್ಕ್, ನೈಲಾನ್ ಇತ್ಯಾದಿ ಬಟ್ಟೆಬರೆಗಳಿಗೂ ಸಂದರ್ಶಿಸಿರಿ —

SAREE EMPORIUM

Opposit Catholic Club,
HAMPANKATTA, MANGALORE—1

ESTD. 1921

NAVAYUGA
KANNADA WEEKLY, UDIPI.

Founder:
Late Sri A. B. Shetty,
Former Minister for Public Health, Govt. of Madras & Govt. of Mysore.

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೨೧.

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್.
ಬಿ. ಶಾನುರಾಯ ಶೆಟ್ಟಿ, ಬಿ. ಎ., ಎಲ್. ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

●

ಜಾಹೀರಾತು ದರಗಳು:
ಸ್ಥಿರ ಸ್ಥಿತ (ಕಂಟ್ರಾಕ್ಟ್) ಕಲಂ ಇಂಚಿಗೆ ರೂ. 2-50
ಅಸ್ಥಿರ ಸ್ಥಿತ (ಕೆಜುವಲ್) ಕಲಂ ಇಂಚಿಗೆ ರೂ. 3 50
ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6 75
ಒಂದು ಪ್ರತಿ ರೂ 0-13

ಚಂದಾಹಣವನ್ನಾಗಲೀ ಜಾಹೀರಾತಿನ ಬಾಬತುಗಳನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಚಾರ್ಜು ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಕಥಾವಿಹಾರ

ಕೊನೆಗಾಣದ ಬವಣೆ

ಹಠಮುನಿಯಲು ಪರಶಾಯುವನೆ? ಶಾಯದೆ ಹೋದರೂ ಶಾಯುವ ಪ್ರಯತ್ನವನ್ನಾದರೂ ಮಾಡದಿರುವುದು ಮಹಾಸಂಕಥವೆನಿಸುವುದು. ಮಳೆಯನ್ನೇ ನಂಬಿ ಅದರ ಆಸರೆಯಲ್ಲೇ ದಿನಗಳೆವ ಚಿಕ್ಕ ಪುಟ್ಟ ರೈತರು ಆದನ್ನೇ ಹೊಂದಿಕೊಂಡಿರುವುದನ್ನು ಸಾಧ್ಯವಾದಷ್ಟು ತಪ್ಪಿಸಬೇಕು

ಶ್ರೀ ಎಚ್. ಆನಂದ ರಾಮ ಅಡಿಗ.

ವೆಂಕಣ್ಣ—ದೂರ ದೃಷ್ಟಿ ಹಾಯಿಸಿದ. ದೂರ ದಿಗಂತ ಭೂಮಿಯನ್ನು ಮುಟ್ಟುವಂತಿದ್ದರೂ ಎಲ್ಲೆಲ್ಲಿಯೂ ಆಕಾಶಚುಂಬಿತ ಮೋಡಗಳು ಕಾಣುತ್ತಿರಲಿಲ್ಲ ಆತನಿಗೆ. ಕಳೆದ ವರ್ಷ ಇದೇ ಸಮಯ, ಭೋರ್ಗರೆದು ಸುರಿವ ಜಡಿಮಳೆ, ಕೊಚ್ಚಿಕೊಂಡೇ ಹೋಗಿತ್ತು ವೆಂಕಣ್ಣನ ಕಿರುಮನೆಯನ್ನು. ಧನಿಗಳ ಆಸರೆ—ಊರವರ ಸಹಾಯ ಆವನನ್ನು ಈ ವರ್ಷವೂ ಬೇಸಾಯಗಾರನನ್ನಾಗಿ ಮಾಡಿಸಿದುವು. ಹಾಗಾಗಿ ಆವನಿಂದು ಅದೇ ಊರಿನಲ್ಲಿ ನಾಲ್ವತ್ತು ವರ್ಷಗಳ ಅನುಭವಿ ರೈತನಾಗಿದ್ದಾನೆ. ವೆಂಕಣ್ಣ ಆರೆಂಟು ದಿನಗಳಿಂದಲೂ ಮಳೆಯ ಚಿಹ್ನೆಯ ಕಾಣದೇ ನೊಂದ. ಅವನ ಆಸರೆಪಡೆದ ಅವನ ಕುಟುಂಬದ ಪೋಷಣೆಗಾಗಿ ಗೇಣಿ ಹೊಲದಲ್ಲಿ ಬೆವರು ಸುರಿಸಿದರೇನೇ ತಕ್ಕ ಪ್ರತಿಫಲ ದೊರೆಯುವುದಾತನಿಗೆ.

ಕಳೆದವರ್ಷ—ವಿಕಾರಿ ಸಂ॥ರದ ಮಿಥುನ ಮಾಸ — ? ? ?

ಹಿಂದೆಂದೂ ಕಾಣದ—ಕೇಳದ ಭೀಕರ ನೆರೆ. ತಾನು ನೆಟ್ಟು ಬೆಳೆಯಿಸಿದ ತೆಂಗು–ಕಂಗಿನ ಮರಗಳು ತಲೆಕೆಳಗಾಗಿ ಹರಿದುಹೋಗುವ ದೃಶ್ಯ—(!) ಅವನಿಗಿನ್ನೂ ಕಣ್ಣಿಗೆ ಕಟ್ಟಿಕೊಳ್ಳಬೇಕೆನಿಸುವುದು.

ಅದೂ ಹೋಗಲಿ, ಇನ್ನಾದರೂ ಬೆಳೆಸಬಹುದು. ೫೦ ರೂಪಾಯಿ ಕೊಟ್ಟು ಮಾಡಿಸಿದ ಚಿಕ್ಕ ತುಂಬುವ ಪತ್ತಾಸು—ಪೆಟ್ಟಿಗೆ—ದೇವರ ಡಬ್ಬಿ…ಎಲ್ಲವೂ ವರುಣನ ಪ್ರಕೋಪಕ್ಕೆ ಆಹುತಿ. ವೆಂಕಣ್ಣನ ಚಿಕ್ಕ ಹುಡುಗನನ್ನು ಬೆಂಚಿತ್ತಿ 'ಅಂಬೆ' ಎಂದು ಕೂಗಿ ಕುಣಿದಾಡುತ್ತಿರುವ ಆ ಹಸುವಿನ ಒಂದು ತಿಂಗಳ ಚಿಕ್ಕ ಮಗು… 'ಅಯ್ಯೋ…' ಅಂದೂ ಚೀರಿದ್ದ—ನೋಡಲಾರದೆ. ಇಂದೂ ತಾಳಲಾರದ ಅಯ್ಯೋ ಎಂದ … ಆದರೆ–ಆದು ಉಳಿದುದು …? ವೆಂಕಣ್ಣನ ಕುಟುಂಬ ಮತ್ತು ಮನೆಯ ಮುಂದೆ ತೂಗುಹಾಕಿದ 'ಬಾಪೂ'ವಿನ ಚಿತ್ರ….,

ಆ ಸ್ವಾತಂತ್ರ್ಯದಾತನ ಮುಂದೆ ನಿಂತು ವೆಂಕಣ್ಣ ಹೃದಯಪೂರ್ವಕ ಆರ್ತನಾದ, ಕೃಷ್ಣನೆನ್ನುವ ದೇವರ ಸಾಲಿನಲ್ಲಿ ನಮ್ಮ ಬಾಪೂವನ್ನು ಕಂಡುಕೊಂಡಿದ್ದ ವೆಂಕಣ್ಣ.

"ದೇವಾ—ಸ್ವಾತಂತ್ರ್ಯವೇನೊ ದೊರಕಿಸಿಕೊಟ್ಟೆ—ನೀನು ಅಮರನಾದೆ—ಆದರೆ ಉಳಿದ ನಮ್ಮಂತಹ ರೈತರ ಬಾಳು ಹೀಗಾದರೆ ನಮ್ಮೀ ಭಾರತದ ಉಳಿಗಾಲವೆಲ್ಲಿ?" ಎನ್ನುವಂತಿತ್ತು ಆವನ ಆರ್ತನಾದ.

ಈ ವರ್ಷ…. ಶಾರ್ವರಿಯ ಮಿಥುನ ಮಾಸ….

ಹೊಸ ಹುಮ್ಮಸಿನಿಂದ ಬೇಸಾಯದ ಕಸಬು ಮುಗಿಸುತ್ತಲಿದ್ದಾನೆ ವೆಂಕಣ್ಣ. ಮಕ್ಕಳನ್ನು ಸಹಾಯಕರನ್ನಾಗಿ ಮಾಡಿಕೊಂಡಿದ್ದಾನೆ– ಆದರೇನು? ಉತ್ಸಾಹಕ್ಕೆ ತಕ್ಕ ಪ್ರೋತ್ಸಾಹವಿಲ್ಲ. ಮಳೆಯು ಬಾರದೆ ಅವನ ಹೊಲಗಳು ಒಣಗಿ ಬಾಯ್ಬಿಟ್ಟವು. ನೆಟ್ಟ ಸಸಿಗಳೆಲ್ಲಾ ತಲೆಬಾಡಿ ನೆಲಕಂಡವು. ಮುಂದಿನ ಉಣಿಸಿಗೆ ಇಂದೇ ಭವಿಷ್ಯ ಸೂಚಿಸುತ್ತಿತ್ತು. 'ಇಂದು ಬಾರದಿದ್ದರೆ ನಾಳೆ ನೋಡುವ—ಬಾರದಿದ್ದೀತೇ?'—ಆಸೆಯಿನ್ನೂ ಆರಿರಲಿಲ್ಲ. ನಾಳೆ—ನಾಡಿದು– ಎಂಟು ದಿನಗಳು ಸತತವಾಗಿ ಸೂರ್ಯೋದಯದಿಂದ ಪ್ರಬಲವಾದ ಉಷ್ಣಭರಿತ ಬಿಸಿಲು, ತಾಳಲಾರದ ಸೆಕೆ, ವೆಂಕಣ್ಣನ ಊಳುವ ಗದ್ದೆಗಳಲ್ಲಿ ಕಣ್ಣಿಗೆ ತಂಪೆರಚಲು—ಬಿಡಲು ಒಂದು ತುಟುಕು ಹನಿಯೂ ಇರಲಿಲ್ಲ. ಇದರಲ್ಲಿ ಬೇಸಾಯವೆಂತು? ಬೇಸಾಯಗಾರ ಬೇಗ ಸಾಯ ಎನ್ನುವಂತಿದ್ದರೆ ಅದೂ ವೆಂಕಣ್ಣನ ಬಾಳ್ವೆಗೆ.

ದಿನ ದಿನವೂ ಆಕಾಶದತ್ತ ನೋಟ ಬೀರಿ ಅತೃಪ್ತನಾಗುವುದು ವೆಂಕಣ್ಣನಿಗೆ ದಿನದ ಪಾಳಿಯಾಯಿತು. ಹೊಳೆಯ ದಡ ದಲ್ಲಿದ್ದರೂ ಊಳಲು ನೀರಿಲ್ಲ ವೆಂಕಣ್ಣನಿಗೆ— ಹತ್ತಾರು ಆಳು ಪ್ರಮಾಣದ ಕೆಳಗೆ ಹರಿಯುತ್ತಿದೆ ಮಂದಗಾಮಿಯಾಗಿ ನದಿ. ಎಲ್ಲವೂ ಹೋಯಿತು… ದೇವರು ಕೊಟ್ಟ ಮಕ್ಕಳನ್ನು ಸಾಕುವುದು ಹೇಗೆ? ಒಂದು ದಿನ ಎಲ್ಲರೂ ಹರಿಯುವ ನೀರಿಗೆ ಹಾರಿಬಿಡುವ. ಈ ಕಷ್ಟಕ್ಕಿಂತಲೂ ಅದೇ ಮೇಲಲ್ಲವೇ? ಎಂದು ಹೆಂಡತಿಯಲ್ಲಿ ನೊಂದು ಹೇಳಿದಾಗ—ಆಕೆಯೂ ಕಣ್ಣೀರು ತಂದು –'ನಮಗೆ ಮಾತ್ರವೇ ಮಳೆಯಿಲ್ಲ? ಎಲ್ಲರಿಗೂ ಕಷ್ಟಬಂದಿರುವಾಗ ನಾವು ಚಿಂತಿಸಿದರೆ ಫಲವೇನು?' ಎಂದು ಧೈರ್ಯ ತುಂಬುವಳು—

ಒಂದು ದಿನ ಸೂರ್ಯೋದಯಕ್ಕೆ ಆಕಾಶ ನೋಡಲಾರೆನೆಂದು ದುಃಖಿಸುತ್ತಾ ಕುಳಿತಿರುವ ವೆಂಕಣ್ಣನನ್ನು ಮಳೆ ಕೋಗಿಲೆ ಕೂಗುತ್ತಾ ಎಚ್ಚರಿಸಿತು ಪುನಃ ಶುಭ ಚಿಹ್ನೆ ಎನುವಂತೆ ಮೋಡಗಳು ಅತ್ತಿಂದಿತ್ತ ಚಲಿಸುತ್ತಿದ್ದುವು. ವೆಂಕಣ್ಣ ಅವನ್ನು ಕೇಳಿಕಂಡು ನಸು ನಕ್ಕ.

'ವೆಂಕಣ್ಣಾ ….. ವೆಂಕಣ್ಣಾ……..'

ಉತ್ತರ ಕೊಡಲೋ ಬೇಡವೊ ಎನ್ನುವ ಕಾತ್ಸಾರ ಆತನಿಗೆ. ಊರಿನ ಗಂಡುಭೀರರಾಗಿ ಮೆರೆದಾಡಿ ಪೇಟೆಯ ಹೋಟೇಲಿಗರ ಆಳಾಗಿ ಅವರು ಕೊಡುವ ಒಂದು ತೊಟ್ಟು ನೀರಿಗಾಗಿ ಬಾಯ್ಬಿಟ್ಟು ಇಲ್ಲದ ಸಲ್ಲದ ವಿಷಯವನ್ನು ಚರ್ಚಿಸುವಾಗ 'ಜಗತ್ಪ್ರಳಯ'ವೆಂಬ ಪತ್ರಿಕೆಯ ಸುದ್ದಿ ಎಲ್ಲರ ಬಾಯಿಗೂ ಬಂದು ತನ್ನೂರಿಗೆ ಬಹುಬೇಗನೇ ಸುದ್ದಿ ಮುಟ್ಟಿಸುವ ಗೋವಿಂದನಿಗೆ ಬೇಳದಿದ್ದೀತೇ ಈ ಸುದ್ದಿ?

'ವೆಂಕಣ್ಣಾ. .'—ಪುನಃ ಕೂಗಿದ…. ಗೋವಿಂದ …ಮುಖಗಂಟುಮಾಡಿ ತಾತ್ಸಾರದಿಂದ 'ಏನಾಗಬೇಕಿತ್ತು?'—ಕೇಳಿದ ವೆಂಕಣ್ಣ—

'ನಾಡಿದು ಜುಲಾಯಿ ೧೪ನೇ ತಾರೀಕು ಗುರುವಾರ ಸಂಜೆ ೭–೧೫ಕ್ಕೆ 'ಜಗತ್ಪ್ರಳಯವಾಗ್ತದಂತೆ'.

'ಹೌದೇನೋ' ನೆಗೆದ ಬಿದ್ದವನಂತೆ ಹೌಹಾರಿ ಕೇಳಿದ ವೆಂಕಣ್ಣ.

'ಖಂಡಿತವಂತೆ. ಹಾಗೆ ಹೇಳಿದವರು ದೊಡ್ಡ ಗುಡ್ಡ ಬೆಟ್ಟಮೇಲೀದ್ದಾರಂತೆ'.

'ಗುಡ್ಡಕ್ಯಾಕೆ ನಾಯ ಬೇಕಿತ್ತು. ಕೊಚ್ಚಿಕೊಂಡು ಹೋಗುತ್ತಿರುವ ಸಹಸ್ರಾರು ಮಂದಿ ಜನರು ಉಳಿಯುವುದಿಲ್ಲ—ಅದರಲ್ಲಿ ಒಬ್ಬ ಉಳಿದರೆ? —'

'ಹೌದು, ಮಳೆ ಬೀಳ್ತಾ ಇಲ್ವಾಂತ ವ್ಯಥೆ ತಂದುಕೊಂಡು ಕೊರಗಬೇಡ, ನಾಡಿದು ನಾವ್ಯಾರೂ ಉಳಿಯುವುದಿಲ್ಲ' —(?)—ಸರಸರನೆ ಹೊರಟು ಹೋದ ಗೋವಿಂದ— ಒಂದೊಂದು ಮನೆಯಲ್ಲಿ ಇಷ್ಟೊತ್ತು ಕಳೆಸಿರೆ ಹೇಗೆ ತುಂಬಿಕ ಬಲ್ಲ ವಾರ್ತೆಯನ್ನು ಹಳ್ಳಿಯಲ್ಲಿ? —ಉದ್ದದ ಉಸಿರನ್ನು ಬಿಟ್ಟು 'ಉಸ್ಸಪ್ಪಾ' ಎಂದ.

(೧೨ನೇ ಪುಟ ನೋಡಿರಿ)

ಕಳೆದ 5 ವರ್ಷಗಳ ಅದ್ವಿತೀಯ ಪ್ರಗತಿ!!!

		31-12-1955ರಲ್ಲಿ ರೂ	31-12-1960ರಲ್ಲಿ ರೂ.
1	ಶೇರ್ ಮೂಲಧನ ಮತ್ತು ಕ್ಷೇಮನಿಧಿ.	3,18,000	6,87,000
2.	ಗವರ್ನ್‌ಮೆಂಟ್ ಸೆಕ್ಯೂರಿಟೀಸ್ ಇತ್ಯಾದಿ:	6,96 000	45,23,000
3.	ಒಟ್ಟು ಸಾಲಗಳು	12 92 000	69,90,000
4.	ಒಟ್ಟು ಠೇವಣಾತಿಗಳು	20.49.000	1.17.99.000
5.	ಚಲಾವಣಾ ಭಂಡವಾಳ	24.55.000	1.31.00.000

ಜನತಾ ಸೇವೆಯ ಮುನ್ನಡೆಯಲ್ಲಿ….

ದಿ. ಪಾಂಗಾಳ ನಾಯಕ್ ಬೇಂಕ್ ಲಿ.,
ರೆಜಿಸ್ಟರ್ಡ್ ಆಫೀಸು. ಉಡುಪಿ, ದ. ಕನ್ನಡ. ಸ್ಥಾಪನೆ: 1920

ವಿಚಾರ ವರ್ಷ

ಸತ್ಯ ಪರಿಪಾಲನೆಯ ಪ್ರಯತ್ನ - ಪ್ರತಿಜ್ಞೆ

ಮಾತುಮಾತಿಗೆ ಆಣೆಯಿಡುವುದು ಮಹಾಪರಾಧವಾದರೂ ಆಣೆಯಿಡುವುದು ತಪ್ಪಲ್ಲ. ಮಾನವತೆಯು ಬೆಳೆಯುತ್ತ ಬಂದಂತೆ ಸತ್ಯವನ್ನುಳಿಸಲು ನಡೆದ ಮಾನವೀಯ ಪ್ರಯತ್ನಗಳಲ್ಲಿ ಇದು ಇಂದಿಗೂ ಉಳಿದು ಬಂದಿದೆ. ವಿವಿಧ ದೇಶವಾಸಿಗಳ ಶಪಥ—ಶಾಪ ವಿಧಾನವನ್ನು ನೀವೂ ತಿಳಿಯಲು ಬಯಸುವುದಿಲ್ಲವೆ?

ಸಂಗ್ರಾಹಕರು ಶ್ರೀ ಎಸ್. ಗೋಪೀಚಂದ ರಾವ್, ವಿದ್ವಾನ್.

ಆಣೆಯಿಡುವುದರಿಂದ ತನ್ನ ಮಾತಿನಲ್ಲಿ ವಿಶ್ವಾಸ ಹುಟ್ಟಿಸುವುದು ಸಾಧ್ಯವೆಂದು ಹೆಚ್ಚಿನವರ ತಿಳುವಳಿಕೆ. ಬೇರೆ ಬೇರೆ ವರ್ಗದ ಜನರು ಈ ರೀತಿ ಇಡುವ ಆಣೆಯ ಕ್ರಮವಾದರೂ ವಿಭಿನ್ನವಿರುತ್ತದೆ. "ನಾನು ಸುಳ್ಳುಗಾರನೆಂದಾದರೆ ಈ ಖಡ್ಗ, ಈ ಬರ್ಚಿಯು ನನ್ನನ್ನು ಇರಿಯಲಿ" ಎಂದು ಹೇಳಿ ಅವನ್ನು ಮುಳುಗಿಸಿಟ್ಟ ನೀರನ್ನು ಕುಡಿಯುವುದು ಮಲಯದಲ್ಲಿ ಶಪಥ ಹಾಕುವ ಕ್ರಮ. ತೀನಿಂಬರ್ ಜಾತಿಯವರು ಆಣೆ ಹಾಕುವಾಗ 'ನಾನು ಮಿಥ್ಯಾವಾದಕ್ಕೆ ಆಶ್ರಯನಿತ್ತಿರುವೆನಾದರೆ, ನನ್ನ ಅವಸಾನವಾಗಲಿ' ಎಂದು ತಮ್ಮ ರಕ್ತದ ಕೆಲವು ಬಿಂದುಗಳನ್ನು ಕುಡಿಯುತ್ತಾರೆ.

ಉತ್ತರ ಭಾರತದಲ್ಲಿನ ಕೆಲವು ಜಾತಿಗಳವರು ಶಪಥ ಗ್ರಹಣ ಮಾಡುವುದಕ್ಕೆ ಮೊದಲು ಭೂಮಿಯ ಮೇಲೆ ಕೋಳಿಯ ರಕ್ತವನ್ನು ಚೆಲ್ಲುತ್ತಾರೆ. ಇದರ ಮೇಲೆ ನಿಂತು ಪ್ರತಿಜ್ಞೆ ಮಾಡಬೇಕಾಗುತ್ತದೆ. ಖೊಂಡ್ ಜಾತಿಗೆ ಸೇರಿದವರು ಚಿರತೆಯ ಚರ್ಮದ ಮೇಲೆ ನಿಂತು ಶಪಥ ಮಾಡುತ್ತಾರೆ. ತಾನು ಶಪಥಭಂಗ ಮಾಡಿದರೆ, ಚಿರತೆಯು ತಿಂದು ತೇಗಲಿ ಎಂಬುದೇ ಇದರ ಆಶಯವಿರಬಹುದು. ನಾಗಾ ಪ್ರದೇಶದ ಜನರು ಹಗ್ಗಗಳ ಪಂಜರದಲ್ಲಿ ನಿಂತು ಆಣೆ ಹಾಕುತ್ತಾರೆ. ತಾವು ವಚನಭಂಗಗೆಯ್ದರೆ, ಹಗ್ಗದಂತೆಯೇ ಸುರುಳಿ ಸುರುಳಿ ಹೊರಳಾಡಿ ಮೃತ್ಯುಮುಖರಾಗುವೆವು ಎಂಬ ವಿಶ್ವಾಸ ಅವರಿಗೆ. ಬಂದೂಕು ಇಲ್ಲವೇ ಹುಲಿಯ ಹಲ್ಲನ್ನು ಹಿಡಿದುಕೊಂಡು ಶಪಥ ಕೈಗೊಳ್ಳುವುದೂ ಇದೆ. ಇವೋವಾ ಎಂಬ ಜಾತಿಯವರೊಡನೆ ಒಂದು ರಹಸ್ಯವಾದ ಕಲ್ಲು ಇದೆ. ಇವನ್ನು ಏಳು ಬೇರೆ ಬೇರೆ ಪ್ರಾಣಿಗಳ ಚರ್ಮದಿಂದ ಹೊದಿಸಿದ್ದಾರೆ. ಈ ಕಲ್ಲಿನ ತುಂಡನ್ನು ಎತ್ತಿ ಇವರು ಆಣೆಯಿಡುತ್ತಾರೆ. ಕೇಸಾಮಿ ಜನರು ಹಳೆಯ ಪವಿತ್ರ ಕತ್ತಿಯನ್ನು ಹಿಡಿದ, ಒಟಿಕ ಜನರು ಗ್ರಾಮದೇವತೆಯ ಮೂರ್ತಿಯ ಮೇಲೆ ಕೈಯಿಟ್ಟು ಪ್ರತಿಜ್ಞೆ ಸ್ವೀಕರಿಸುತ್ತಾರೆ. ದಕ್ಷಿಣ ಭಾರತದಲ್ಲಿ ಕಡ್ಡಿ ಮುರಿದು ಶಪಥ ಮಾಡುವುದು, ಇಸ್ಕೊಬ್ಬರ ತಲೆಯ ಮೇಲೆ, ಹೃದಯದ ಮೇಲೆ ಕೈಯಿಟ್ಟು ಆಣೆಯಿಡುವುದು, ಪುಸ್ತಕ ಮುಟ್ಟಿ ಪ್ರಮಾಣ ಮಾಡುವುದು, ಬಟ್ಟಲಿನ ಅನ್ನವನ್ನು ಸಾಕ್ಷಿಯಾಗಿಟ್ಟು ಮಾತು ಹೇಳುವುದು ಪ್ರಚಾರದಲ್ಲಿದೆ. ತಮ್ಮ ಅತಿ ಪ್ರೀತಿಯ ವಸ್ತುವನ್ನು ಮಾಡಿದ ಶಪಥಕ್ಕೆ ಸಾಕ್ಷಿಯಿಡುವುದು ವಾಡಿಕೆ. ಕೆಲವೊಮ್ಮೆ ದೇವ ದೇವತೆಯರನ್ನೂ ತಮ್ಮ ಸಾಕ್ಷಿದಾರರನ್ನಾಗಿ ಎಳೆದು ತರುವ ಕ್ರಮವೂ ಇದೆ.

ಪ್ರಾಚೀನ ಹಾಗೂ ಮಧ್ಯಯುಗದಲ್ಲಿ ಹೆಚ್ಚಾಗಿ ಶಸ್ತ್ರಾಸ್ತ್ರಗಳ ಮೇಲೆ ಕೈಯಿಟ್ಟು ಶಪಥ ಮಾಡುತಿದ್ದರು. ಲೇಟಿನ್ ಜನರು ಪವಿತ್ರ ಪಾಷಾಣವನ್ನೆತ್ತಿ 'ಜುಪಿಟರ್ ಲೇಪಿಸ್'ನ ಹೆಸರೆತ್ತಿ ಪ್ರತಿಜ್ಞೆ ಸ್ವೀಕರಿಸುತಿದ್ದರು. ಹಿಂದೂ ಜನರಿಗೆ ಗಂಗೆಯ ಸಾಕ್ಷಿಯು ಪವಿತ್ರವಿರುವಂತೆ ಯೂನಾನಿ ಜನರಿಗೆ 'ಸ್ಟಿಕ್ಸ್' ಎಂಬ ನದಿಯ ಸಾಕ್ಷಿಯು ವಿಶೇಷವಾಗಿದೆ. ವೆಸ್ಟರ್ ನಾರ್ಕ್ ಎಂಬವನು ನೀರು ನದಿಗಳಂತೆಯೇ ಸರ್ವವನ್ನೂ ನಿಷ್ಕಲ್ಮಶ ದೃಷ್ಟಿಯಿಂದ ಪ್ರತೀಕ್ಷಿಸುತ್ತಿರುವ ಪ್ರಕೃತಿಯ ಅಂಶಗಳಾದ ಸೂರ್ಯ, ಚಂದ್ರ, ಅಗ್ನಿ ಮೊದಲಾದುವುಗಳನ್ನೂ ಸಾಕ್ಷಿಯಾಗಿ ಇಡಬಹುದು ಎನ್ನುತ್ತಾನೆ.

ಸಂಸತ್ತು, ವಿಧಾನಸಭೆ ಮೊದಲಾದುವುಗಳಲ್ಲಿ ಇಲ್ಲವೇ ರಾಷ್ಟ್ರದ ಹಿರಿಯ ಅಧಿಕಾರ ಹುದ್ದೆಯಲ್ಲಿರುವವರು ಪ್ರತಿಜ್ಞಾ ವಿಧಿ ತೀರಿಸುವ ವಿಧಿಯೇನೂ ಹೊಸತೆನ್ನುವಂತಿಲ್ಲ. ಪ್ರಾಚೀನ ಕಾಲದಿಂದಲೂ ಪ್ರಶಾಸನಾಧಿಕಾರಿಗಳು ತಮ್ಮ ಪದವಿ, ಕಾರ್ಯಾಲಯ, ಆಸನ ಮತ್ತು ಶಾಸನಗಳ ಬಗ್ಗೆ ಶಪಥ ಗ್ರಹಣ ಮಾಡುತ್ತ ಬಂದಿರುತ್ತಾರೆ. ಪ್ರಾಚೀನ ಎಥೆನ್ಸ್, ಇಂಗ್ಲೆಂಡ್, ಫ್ರಾನ್ಸ್ ಮತ್ತು ರಶ್ಯಗಳಲ್ಲಿ ಪ್ರತಿಜ್ಞಾ ಪ್ರಣಾಳಿಯು ಇತ್ತು. ಪ್ರಾಚೀನ ಭಾರತದಲ್ಲಿ ಶಪಥಗ್ರಹಣ ಮಾತ್ರವಲ್ಲದೆ, ಇದನ್ನು ಉಲ್ಲಂಘಿಸಿದರೆ ಅಜ್ಞಾತವಾಸದ ಶಿಕ್ಷೆಯೂ ವಿಧಿಸಲ್ಪಡುತಿತ್ತು.

ವರದಾನ ಮತ್ತು ಶಾಪದ ಕತೆಯೂ ಹೀಗೆಯೇ. ಶಾಪ ಅಥವಾ ವರದಾನವೆಂಬುದು ನಿಜವಾಗಿ ಒಂದು ಅಭಿಲಾಷೆ ಮಾತ್ರ. ಆದರೆ, ಈ ಅಭಿಲಾಷೆಯು ಬಹು ವಿಚಿತ್ರ ರೂಪಗಳನ್ನು ಪಡೆಯುತಿತ್ತು. ಒಬ್ಬ ಪಯೂಮಿಯ ತೋಟದಲ್ಲಿ ಕಳ್ಳತನವಾಯಿತೆಂದರೆ, ಯಜಮಾನ ಕೂಗಾಡುತ್ತಾನೆ: "ನನ್ನ ಹಣ್ಣು ಕದ್ದವನ ಕಣ್ಣಿನಲ್ಲಿ ಬೆಂಕಿ ಉರಿಯಲಿ." ಲಾಅಂಗ ಕರಮೊತಾ ಜಾತಿಯವರಲ್ಲಿಯೂ ಇದೇ ಅರ್ಥದ "ನೀನು ಹಾಳಾಗಿ ಹೋಗು; ನಿನ್ನ ಮೇಲೆ ಸಿಡಿಲು ಬಡಿಯಲಿ" ಎಂಬ ಶಾಪ ನೀಡುವ ಕ್ರಮವಿದೆ, 'ನಿನ್ನ ಮನೆಗೆ ಬೆಂಕಿ ಬೀಳ', ನಿನ್ನ ನಾ

(೧೧ನೇ ಪುಟ ನೋಡಿರಿ)

QUALITY IN
PRINTING INKS
MEANS MANY THINGS....

- Brilliance
- Depth of colour
- Covering power
- Drying capacity
- Workability
- Fastness to light etc.

in GANGES inks
the emphasis is on QUALITY
used and proved for 35 years

Factories at
HOWRAH — BOMBAY — MADRAS

ಮಹಿಳಾ ಮಂಡಳಿ:

ಮಕ್ಕಳ ಮನೋವಿಜ್ಞಾನ

ಮಕ್ಕಳ ಸ್ವಭಾವ ನಡವಳಿಕೆಗಳಿಗೆ ಅವರ ಪರಿಸರವೇ ಕಾರಣ. ಅವರ ಯಾವುದೇ ಕಾರ್ಯದಲ್ಲಿ ಅವರನ್ನು ನಿರುತ್ಸಾಹಗೊಳಿಸದೆ ಪ್ರೋತ್ಸಾಹಿಸುವುದರಿಂದ ಬೆಳೆದು ಬರುವಾಗ ಆತ್ಮಾಭಿಮಾನಿಗಳಾಗಿ ಸತ್ಪ್ರಜೆಗಳಾಗುವರು, ಇದಕ್ಕೆ ಹೊರತಾಗಿ ಅವರ ತೇಜೋವಧೆಯೆಸಗಿದರೆ, ಮುಂದವರು ಉದ್ಧಟರೇ ಆಗುವರು.

"ರಂಜನೆ", ಬೆಂಗಳೂರು.

ಅಧಿಕಾರ ನಡೆಸಲು ತಿಳಿಯದಿರುವ ಮಗು ತನ್ನ ನಿಜ—ಯೋಗ್ಯತೆಯನ್ನು ಯಾವಾಗಲೂ ನಂಬುವುದಿಲ್ಲ.

ಹರೆಯದ ಮಕ್ಕಳ, ತರುಣರ ಅನೇಕ ತಪ್ಪುಗಳಿಗೆ ಬೆನ್ನಿನ ಮೇಲೆ ಆಗಾಗ್ಗೆ ತಟ್ಟುವ ಶಭಾಸ್‌ಗಿರಿಯೇ ಅತ್ಯುತ್ತಮ ಗುಣಕಾರಿ. ೧೨ರಿಂದ ೧೮ರ ವಯಸ್ಸಿನ ವರೆಗಿನ ಹುಡುಗ—ಹುಡುಗಿಯರಲ್ಲಿ ತಮ್ಮ ಯೋಗ್ಯತೆಯ ಬಗ್ಗೆ ನಂಬಿಕೆಯಿರುವುದಿಲ್ಲ.

ಸಮಾಜದ (ತಾಯಿ ತಂದೆಗಳ) ದೃಷ್ಟಿಯಲ್ಲಿ ಅವರು ಅಪರಾಧಿಗಳು, ಮನಶ್ಶಾಸ್ತ್ರಜ್ಞರ ಪ್ರಕಾರ ಇದು ಸಾಮಾಜಿಕ ವ್ಯಾಧಿಯ ರೂಪವೇ ಆಗಿದೆ. ಅವರು ತಮ್ಮ ಜೀವನ ಪರಿಪಕ್ವವಾಗಿ ಬೆಳೆಯುವ ಮೊದಲೇ ಜೀವನದಲ್ಲಿ ಏಟು ತಿಂದವರಾಗಿರುತ್ತಾರೆ.

ದೀರ್ಘಕಾಲ ಮನೆಗೆ,—ಶಾಲೆಗೆ ಹೋಗದೆ ತಪ್ಪಿಸಿಕೊಳ್ಳುವ ಚಿದ್ರಾಲಾಗದ, ಮೊಂಡ, ಅವಿಧೇಯ, ಸ್ತ್ರೀ—ಪುರುಷರಲ್ಲಿ ಸರಿಯಾಗಿ ವರ್ತಿಸದ,—ಮುಂತಾದ ಕೆಲವು ಸಮಸ್ಯೆಗಳೇ ಬಾಲರ ತಾರುಣ್ಯಕ್ಕೆ ಪ್ರತಿಕೂಲವಾಗಿರುವ ಮನೋವಿಕಾರ.

ಮೂರಕ್ಕೆ ಎರಡರಷ್ಟು ಕೆಟ್ಟನಡತೆಯ ಮಕ್ಕಳು ಮಲತಾಯಿ—ತಂದೆಯರಿಂದಲೂ, ಇಲ್ಲ ತಂದೆ ಕೆಟ್ಟನಡತೆಯವರಿರುವುದರಿಂದಲೂ, ಅಕ್ಕ ಪಕ್ಕದವರಿಂದ ದೊರೆಯದ ಮೈತ್ರೀಭಾವ ಇವುಗಳಿಂದಾದ ಅಂತರ್ಗತ ಮನಸ್ಸಿನ ಹೋರಾಟದಿಂದ ಉಂಟಾಗಿರುವವರಿರುತ್ತಾರೆ.

ಬಾಲಾಪರಾಧಕ್ಕೆ ಗುರಿಯಾಗುವ ಸಕಲ ಬಾಲರಿಗೂ ಕೊನೆಯಪಕ್ಷ ಒಂದು ಸಾಮಾನ್ಯ ತೊಂದರೆ ಇದ್ದೇ ಇರುವುದು—ತಮ್ಮ ಬಗ್ಗೆ ತೀವ್ರ ಪ್ರತಿಷೇಧಕ ಸಂವೇದನೆ, ಅವರಲ್ಲಿನ ತಾವು ನಿಷ್ಪ್ರಯೋಜಕರೆಂಬ ತಿಳುವಳಿಕೆ, ತಾವು ಮಾಡುವ ಯಾವುದೇ ಕೆಲಸದಲ್ಲಿಯೂ ಜಯಶೀಲರಾಗುವುದಿಲ್ಲವೆಂಬ ನಂಬಿಕೆ ಅವರಲ್ಲಿ ಮೂಡಿರುತ್ತದೆ. ಚಿಕ್ಕಂದಿನಿಂದಲೂ ಅವರು ಬೇಕಾದಷ್ಟು ವಿಮರ್ಶೆಗೆ ಒಳಗಾಗಿ ತಮ್ಮ ವ್ಯಕ್ತಿತ್ವವನ್ನು ಹಿಡಿತದಲ್ಲಿಟ್ಟುಕೊಂಡಿರುವರು.

ಇದಕ್ಕೆ ಉತ್ತಮವಾದ ಉಪಾಯ ಬಹು ಸುಲಭ. ನಿಮ್ಮ ಮಗುವನ್ನು ಹೊಗಳಿ, ಅವರ ಬಗ್ಗೆ ತಾಯಿ—ತಂದೆಗಳಾದ ನಿಮ್ಮ ನಿಲುವೇ ಅವರು ತಮ್ಮನ್ನು ನೋಡಿಕೊಳ್ಳುವ ಕೈಗನ್ನಡಿಯಿರುತ್ತದೆ. ಅವರ ಆರೋಗ್ಯ ಮನಃಕ್ಷೋಭೆಗೆ ಅಲ್ಲಿ ಉತ್ತಮವಾದ ಪ್ರತಿರೂಪವನ್ನು ಕಾಣಬೇಕವರು. ಆಗಿಂದಾಗ್ಗೆ ನೀಡುವ ನಿಮ್ಮ ಪ್ರಶಂಸೆಯೇ ಅವರಲ್ಲಿರುವ ಮನೋವಿಕಾರಗಳನ್ನು ಕಲಕಿ, ಒಬ್ಬ ಸ್ವಶಕ್ತಿಯುಳ್ಳವನನ್ನಾಗಿಯೂ, ಆತ್ಮವಿಶ್ವಾಸವುಳ್ಳವನನ್ನಾಗಿಯೂ ಮಾಡುತ್ತದೆ.

ಮಕ್ಕಳ ಶಿಕ್ಷಣದಲ್ಲಿ ಮೆಚ್ಚುಗೆಯೇ ಮೂಲ ಆದರೂ ಹೆಚ್ಚು ತಿಳಿದ ತಂದೆ ತಾಯಿಗಳೂ ತಪ್ಪು ಮಾಡುವುದುಂಟು. ಇಲ್ಲಿ ನೋಡಿ ೧೫ ವರ್ಷದ ಸುಜಾತೆ ಒಮ್ಮೆ ನನ್ನಲ್ಲಿಗೆ ಅಳುತ್ತಾ ಬಂದು.

"ನಾನು ಏನೂ ಪ್ರಯೋಜನವಿಲ್ಲ. ಯಾವ ಕೆಲಸಕ್ಕೂ ಬಾರದವಳು, ನಾನು ನನ್ನನ್ನೇ ಕೇಳುವೆ 'ನಾನು ಬದುಕಿರುವುದರಿಂದೇನು ಪ್ರಯೋಜನ'?"

—ಸುಜಾತಳ ತಂದೆ ಸ್ವಲ್ಪ ಒರಟಿದ್ದು ಖಡಾಖಡಿ ಮನುಷ್ಯ. ತಾಯಿ ಆತನ ಜತೆಯವಳು. ಚಿಕ್ಕಂದಿನಿಂದಲೂ ಸುಜಾತಳ ನಡೆವಳಿಕೆಯ ಚಿಕ್ಕ ವಿಷಯಗಳೂ ಗಮನಿಸಲ್ಪಟ್ಟು ದೂಷಿಸಲ್ಪಟ್ಟಿದೆ. ಆ ಮಗು ತಾನು ಇದೂ ವರೆಗೂ ಮಾಡಿದ ಒಂದು ಕೆಲಸಕ್ಕೂ ಮೆಚ್ಚುಗೆಯ ಮಾತನ್ನು ಕೇಳಿದ ನೆನೆಪಿಲ್ಲ.

ಅತ್ತ ಸುನಂದಳನ್ನು ನೋಡಿ, ಮಿತಿಮೀರಿದ ಭಯವುಳ್ಳವಳೂ, ಸಂಕೋಚ ಸ್ವಭಾವದವಳೂ, ಬೇಗನೆ ಕಣ್ಣೀರು ತರುವವಳೂ ಇದ್ದಾಳೆ ಅವಳು.

"ನಾನು ಯಾವ ಕೆಲಸವನ್ನೂ ಪ್ರಾರಂಭಿಸುವ ಮೊದಲು ಅದನ್ನು ಕುಲಗೆಡಿಸಿರುತ್ತೇನೆ. ಅದನ್ನು ನಾನು ಬಲ್ಲೆ".

—ಅವಳು ತನ್ನ ತಪ್ಪುಗಳನ್ನು ಒಪ್ಪಿಕೊಳ್ಳುತ್ತಾಳೆ.

'ನಾನು ಯಾವಾಗಲೂ ಒಂದೂ ಸರಿಯಾದ ಕೆಲಸವನ್ನು ಮಾಡಲಾರೆ."

ಸುನಂದಳ ತಾಯಿ ಒಳ್ಳೆಯವರು ಆದರೆ ಉದಾತ್ತ ಧ್ಯೇಯವುಳ್ಳ ತಾಯಿ. 'ಮಕ್ಕಳನ್ನು ಕೆಡಿಸಬಾರದೆ'ಂಬ ದೃಷ್ಟಿಯಿಂದ ನಿಸ್ಸಂಕೋಚವಾಗಿ ಮಕ್ಕಳ ತಪ್ಪುಗಳನ್ನು ವಿವರಿಸುತ್ತಾರೆ. ಆದರೆ ಅವರಿಗೆ ಮೆಚ್ಚುಗೆಯ ಮಾತೇ ಆಡುವುದಿಲ್ಲ.

"ಮಗು ಸರಿಯಾದುದನ್ನು ಮಾಡಲೇಬೇಕಾದುದು ಅವರ ಕರ್ತವ್ಯ".

—ಆಕೆ ಹೇಳುತ್ತಾಳೆ.

'ಮತ್ತೇಕೆ ಅವನ್ನು ಹೊಗಳಬೇಕು?'

ಬಾಲಕರ ಶಿಕ್ಷಣದಲ್ಲಿ ಬಹು ಸ್ವಲ್ಪ ಮಟ್ಟಿಗೆ ವಿಮರ್ಶೆಯನ್ನು ಉಪಯೋಗಿಸಬೇಕಾಗಿದೆ. ನಿಮ್ಮ ಮಕ್ಕಳು ಶಿಸ್ತಿನಲ್ಲಿ ಸಹಜ ಮೊಂಡತನದಿಂದ ಕ್ರಮವಾಗಿ ಬಿಡುಗಡೆ ಹೊಂದಿ ವಿವೇಕಯುಕ್ತ ನಡವಳಿಕೆಯನ್ನು ಪಡೆಯಲು ನೀವು ಸಹಾಯ ಮಾಡಬೇಕು. ಪ್ರತಿಯೊಂದು ವಿಮರ್ಶೆಯೂ ಹೊಗಳಿಕೆಯಿಂದ ಅಂಕುರಿಸಲ್ಪಟ್ಟಿದ್ದರೆ ಉತ್ತಮ. ಮಕ್ಕಳಲ್ಲಿ ಕಾಣಸಿಗುವ ಎಲ್ಲಾ ಒಳ್ಳೆಯ ನಡವಳಿಕೆಗಳಿಗೂ ಬುದ್ಧಿವಂತರಾದ ತಾಯಿ-ತಂದೆಗಳು ವಾಸ್ತವ ಹೊಗಳಿಕೆಯನ್ನು ನಿಯಂತ್ರಿಸಬೇಕಾಗಿಲ್ಲ. ಮಕ್ಕಳ ಭಯದ ಬಗ್ಗೆ ತಮ್ಮ ನಿರೋಧಕ ಮನವನ್ನು ಹೆಚ್ಚಿಸಿಕೊಳ್ಳಲು ಅವಕಾಶಮಾಡಿಕೊಡಿ. ಅಂತಹ ಸಮಯಲ್ಲಿ ಆಡುವ ಒಂದೇ ಒಂದು ಸಣ್ಣ ಕೆಲಸಕ್ಕೆ ಬಾರದ, ಅಧೈರ್ಯದ ಮಾತೂ ಅವರನ್ನು ಭೀರುಗಳನ್ನಾಗಿ ಮಾಡಬಹುದು.

ಮಗು ಕರೆದ ತಕ್ಷಣ ಬರಬೇಕು ನಿಜ, ಆದರೆ ಆ ರೀತಿ ಅದು ಮೊದಲ ಸಲ ಬರದಿದ್ದರೆ ಅದನ್ನು ಹೊಡೆದಾಗಲಿ ಬೈದಾಗಲಿ ಹೆದರಿಸದೇ.

"ಕರೆದಾಗ ಬಂದರೆ ನೀನು ಒಳ್ಳೆಯ ಹುಡುಗನಾಗುತ್ತೀ"

—ಎನ್ನುವ ಮಾತು ನಿಷ್ಪ್ರಯೋಜಕವಾಗುವುದಿಲ್ಲ.

ಊಟಕ್ಕೆ ಕೂರುವ ಮೊದಲು ಮಗು ಬಟ್ಟೆ ಕಳಚಿಡಬೇಕು; "ರಾಮು ನೀನು ಶುಚಿಯಾಗಿರುವುದು ನನಗೆ ಬಹಳ ಆನಂದ ಕೊಡುವುದು"

—ಎಂಬ ಮಾತು ಮಗುವಿನ ಮನಕ್ಕೆ ಆಘಾತಿಸಬಹುದಾದ ಒಂದು ಚೂರು ಕೆಟ್ಟ ಅಭಿಪ್ರಾಯವನ್ನೂ ತೊಡೆಯುವುದು"

ಮಗುವಿಗೆ ತನ್ನ ಆವಶ್ಯಕತೆಯ ಬಗ್ಗೆ ಮನ ಬೇಗ ಜಾರುವುದುಂಟು. ಬಹಳ ಸರಳ ಸ್ವಭಾವದ ವಾಣಿ.

"ನಾನು ಕುಸುಮಳಂತೆ ಸುಂದರವಾಗಬೇಕೆನ್ನುವೆ"

—ಎಂದು ಆಶೆಯಿಂದ ಹೇಳಿದಾಗ, ನೀವು ಉತ್ತರಿಸುವುದಿಲ್ಲ. ಬದಲು; "ಅದನ್ನೇನು ಹಚ್ಚಿಕೊಳ್ಳಬೇಡ ಮಗು, ನೀನು ಒಳ್ಳೆಯ ಹುಡುಗಿ, ಅದೇ ಮುಖ್ಯವಾಗಿ ಬೇಕಾದ್ದು."

—ಇಂತಹ ಮಾತುಗಳು ಮಗುವಿಗೆ ಅಸ್ಪಷ್ಟ ಮಾನವಾಗಿರುವುದು. ವಾಣಿ ತನ್ನ ನಡತೆಯ ಬಗ್ಗೆ ಯೋಚಿಸದೇ ತನ್ನ ರೂಪಿನ ಬಗ್ಗೆ ಯೋಚಿಸುತ್ತಿದ್ದರೆ ನೀವು, 'ಮಗು, ನೀನೂ ಸುಂದರಳಿದ್ದೀ, ಸುಂದರತೆಯಲ್ಲಿ ನೂರಾರು ವಿಧವಿವೆ. ಕುಸುಮಳೊಂದು ರೀತಿ ಸುಂದರಳಾದರೆ, ನೀನೊಂದು ರೀತಿ ಸುಂದರಿಳೇ ಇದ್ದೀಽ"

—ಎಂದಾಗ ಮಗುವಿನ ಹುಮ್ಮಸ್ಸು ಕುಸಿಯದೇ ನಿಲ್ಲುತ್ತದೆ.

ಗೋಪಿ ಮನೆಗೆ ತನ್ನ ಓದಿನ ಯೋಗ್ಯತಾ ಪತ್ರ ತಂದಾಗ ಯಾವಾಗಲೂ ಪ್ರಥಮ ಶ್ರೇಣಿಯಲ್ಲಿರುತ್ತಿದ್ದವ ಈಗ ದ್ವಿತೀಯ ಶ್ರೇಣಿಯಲ್ಲಿದ್ದರೆ ನೀವು ಅವನ ಯೋಗ್ಯತಾ ಪತ್ರವನ್ನು ಸಾಮಾನ್ಯದಂತೇ ತೆಗೆದುಕೊಳ್ಳಬೇಕು ಅವನನ್ನು ಜರಿಯದೇ.

"ಗೋಪಿ ನನಗೆ ನಿನ್ನ ಬಗ್ಗೆ ಸ್ವಾಭಿಮಾನವಿದೆ. ನೀನು ನಿನ್ನ ಕೈಲಾದಷ್ಟು ಕಷ್ಟಪಟ್ಟು ಕೆಲಸಮಾಡುತ್ತಿರುವಾಗ ಪ್ರಥಮ ಹಾಗೂ ದ್ವಿತೀಯ ಶ್ರೇಣಿಗೂ ಇರುವ ವ್ಯತ್ಯಾಸ ಅತ್ಯಲ್ಪ, ನಿನ್ನ ಕಾರ್ಯವನ್ನು ಬಿಡಬೇಡ ಮುಂದುವರೆ"

—ಎಂಬ ನಿಮ್ಮ ಹಾರ್ದಿಕ ಪ್ರೋತ್ಸಾಹದ ಮಾತು ಅವನಲ್ಲಿ ಉಂಟಾಗಿದ್ದ ವ್ಯಥೆಯನ್ನು ಹೋಗಲಾಡಿಸಿ ಚೆನ್ನಾಗಿ ಕೆಲಸಮಾಡಲು ನವ ಚೈತನ್ಯ ತುಂಬುತ್ತದೆ.

ಬುದ್ಧಿವಂತ ತಾಯಿ ತಂದೆಗಳು ಚಿಕ್ಕ ತಪ್ಪಿನ ನಡವಳಿಕೆಗಳನ್ನು ದೊಡ್ಡದನ್ನಾಗಿ ಉದ್ಗರಿಸುವುದಿಲ್ಲ. ಕೋಪದ ಭರದಲ್ಲಿ "ಓ ಕಂಠಿ ನೀನು ಬಹಳ ಅಸಹ್ಯನಿದ್ದೀ!" ಅಥವಾ 'ಲೇ ರತ್ನಾ, ನಿನ್ನಂಥ ಮೂರ್ಖ ಹುಡಿಗಿಯೊಡನೆ ನಾನೇನು ಮಾಡಲಿ?" ಇಂತಹ ವಾಕ್ಯಗಳು ಮಗುವಿನ ಚುರುಕು ಮನದ ಮೇಲೆ ಯಾವತ್ತೂ ನಿಲ್ಲುತ್ತವೆ.

ನೀವು ಆಗಿಂದಾಗ್ಗೆ ಕೊಡುವ ಉದಾರ ಮೆಚ್ಚುಗೆಯ ಮಾತೇ ನಿಮ್ಮ ಮಗುವಿನ ಚಿತ್ತ ಸಲ ಪಕ್ವವಾಗಲು ಸಹಕರಿಸುವಂತಹದು. ತನ್ನ ಬಗ್ಗೆ ನಂಬಿಕೆ ಗಳಿಸಿಕೊಂಡು ತರುಣಾವಸ್ಥೆಗೆ ಬರಲು ಸಹಕರಿಸುವುದು ಅದೊಂದೇ. ಆ ರೀತಿಯಾದವರು ಹೊಸ ಜನರಲ್ಲಿ, ಹೊಸ ಸಂದರ್ಭದಲ್ಲಿ, ಸುಲಭವಾಗಿ ಬೆರೆಯುವರು. ತಮ್ಮ ವ್ಯಕ್ತಿತ್ವದ ಬಗ್ಗೆ ಸಾಕಷ್ಟು ತೃಪ್ತಿಪಟ್ಟುಕೊಂಡು ಹೊಸ, ಹೊಸ ವಿಷಯಗಳಲ್ಲಿ ಸ್ಪರ್ಧಿಗಳಂತೇ ಮುಂದುವರೆಯುವರು.

ಮಕ್ಕಳನ್ನು ಯಾವಾಗಲೂ ಪರಸ್ಪರ ಹೋಲಿಸಬಾರದು. ನಿಮ್ಮ ಮಕ್ಕಳನ್ನು ಹೊಗಳುವುದರಿಂದ ಅವು ಸೊಕ್ಕಿ, ಗರ್ವಿಷ್ಠರಾಗುವರೆಂದು ತಿಳಿದುಕೊಳ್ಳಬೇಡಿ.

"ನೀನು ಸೌಭಾಗ್ಯಳಿಗಿಂತ ಸುಂದರಳಿದ್ದೀ!"

"ನೀನು ಮುರಳಿಗಿಂತ ಬುದ್ಧಿವಂತನಿದ್ದೀ!"

—ಎಂದು ಮಕ್ಕಳಿಗೆ ಹೇಳುವುದು ತಪ್ಪಿದೀತು. ಮಗುವಿನ ವ್ಯಕ್ತಿತ್ವವನ್ನು ಬೆಳೆಸಬೇಕಾದರೆ ಮಗು ಮತ್ತು ಅದರ ಸಾಧ್ಯತೆ ಇವುಗಳನ್ನೇ ಹೋಲಿಸಿಕೊಳ್ಳಬೇಕೇ ವಿನಃ ಬೇರೇ ಮಕ್ಕಳೊಂದಿಗಲ್ಲ. ಈ ತಪ್ಪಿಂದಲ್ಲದೇ ಮೆಚ್ಚುಗೆ, ಜಂಬವನ್ನಾಗಲೀ ಗರ್ವವನ್ನಾಗಲೀ ಮಕ್ಕಳಲ್ಲಿ ಹುಟ್ಟಿಸುವುದಿಲ್ಲ. ಮೆಚ್ಚುಗೆ ಪಡೆಯದ ಮಕ್ಕಳೇ ತಾವು ತಮ್ಮಲ್ಲೇ ಹೋರಾಡಿ ಅಲ್ಪ ಬುದ್ಧಿಯುಳ್ಳ ಗರ್ವಿಷ್ಠರಾದ ಪ್ರಾಥರಾಗುವರು.

ಆದ್ದರಿಂದ ನಿಮ್ಮ ಮಕ್ಕಳನ್ನು ಮೆಚ್ಚಿರಿ, ಅವರಲ್ಲಿರುವ ಎಲ್ಲಾ ಒಳ್ಳೆಯತನಕ್ಕೂ ಕೈಹಿಡಿದು ಸಹಾಯಮಾಡಿ. ನಿಮ್ಮ ಮಗು ನಿಜವಾಗಿಯೂ ನಿಮ್ಮ ಪ್ರೋತ್ಸಾಹದ ಒಪ್ಪಿಗೆಯಿಂದ ಉತ್ತಮಗೊಂಡು ನಾಡಿನ ಸತ್ಪ್ರಜೆಯಾಗಲು ಸಹಕರಿಸಿ.

(ನಾಧಾರ)

ಮೈಸೂರು ಸರಕಾರದ ವಿಮಾ ಇಲಾಖೆ,
ಬೆಂಗಳೂರು.
(ಮೋಟಾರು ಶಾಖೆ)
ಪ್ರಕಟಣೆ

ಶ್ರೀ ಎ. ರಾಮಚಂದ್ರ ನಾಯ್ಡು, ಬಿ ಯಸ್‌ಸಿ, ಕಾರ್ಯದರ್ಶಿ, ಮೈಸೂರು ಸರಕಾರದ ವಿಮಾ ಇಲಾಖೆ, ಬೆಂಗಳೂರು ಇವರು 1961ನೇ ಮಾರ್ಚ 5ರಂದು ಉಡುಪಿಯ ಪ್ರವಾಸಿ ಮಂದಿರದಲ್ಲಿ ಮೊಕ್ಕಾಂ ಮಾಡಲಿರುವರು.

ಈ ಇಲಾಖೆಯ ಮೋಟಾರು ಶಾಖೆಯಲ್ಲಿ ಏಜನ್ಸಿಯನ್ನು ಪಡೆಯಲಪೇಕ್ಷಿಸುವವರು ಅವರನ್ನು ಭೇಟಿಯಾಗಬಹುದು.

ಟಿ ಶ್ರೀನಿವಾಸನ್
ಕಾರ್ಯದರ್ಶಿಗಳ ಪರವಾಗಿ

ಶಬ್ದ ಚಿತ್ರ

ಶ್ರೀ ಆಡಲಾಯ್ ಸ್ಟೀವನ್‌ಸನ್

ಸಂಯುಕ್ತ ರಾಷ್ಟ್ರ ಸಂಘದಲ್ಲಿ ಅಮೆರಿಕೆಯ ಪ್ರತಿನಿಧಿಯಾಗಿರುವ ಶ್ರೀ ಅಡಲಾಯ್ ಸ್ಟೀವನ್‌ಸನರು ಆಡಳಿತೆಯಲ್ಲಿ ಎತ್ತಿದ ಕೈ. ರಾಷ್ಟ್ರದ ವಿವಿಧ ಅಧಿಕಾರಗಳಲ್ಲಿದ್ದ ಇವರು ಸಮರ್ಥರಾಜಕಾರಣಿಯೆನಿಸಿದ್ದಾರೆ.

ಡೆಮೊಕ್ರಾಟಿಕ್ ಪಕ್ಷದ ಅಡಲಾಯ ಸ್ಟೀವನ್ಸನ್‌ರವರು ಒಳ ಆಡಳಿತದ ನೀತಿಯ ವಿಷಯದಲ್ಲೂ, ಪರರಾಷ್ಟ್ರಗಳ ಸಂಬಂಧದ ನೀತಿಯ ವಿಷಯದಲ್ಲೂ ಅತ್ಯಂತ ಸ್ಪಷ್ಟವಾಗಿ ಬಿಚ್ಚುನುಡಿಯುವ ವ್ಯಕ್ತಿ

ಮಾನವ ಸಮುದಾಯದಲ್ಲಿ ಅವರಿಗಿರುವ ಪ್ರೇಮವಿಶ್ವಾಸಗಳ ಕಾರಣವಾಗಿ, ಅವರು ಕಳೆದ ಎಂಟು ವರುಷಗಳಲ್ಲಿ ಮೂವತ್ತಕ್ಕೂ ಹೆಚ್ಚು ರಾಷ್ಟ್ರಗಳಿಗೆ ಭೇಟಿಕೊಟ್ಟು ಅಲ್ಲಿನ ಜನತೆಗಳ ಸಮಸ್ಯೆಗಳನ್ನೂ, ಆಶೋತ್ತರಗಳನ್ನೂ ಬಹು ವಿವರವಾಗಿಯೂ, ವ್ಯಾಪಕವಾಗಿಯೂ ಅಧ್ಯಯನ ಮಾಡಿ ಬಂದಿದ್ದಾರೆ.

೧೯೫೨ರಲ್ಲೂ ಮತ್ತು ೧೯೫೬ರಲ್ಲೂ ಸ್ಟೀವನ್ಸನ್‌ರವರು ಡೆಮೊಕ್ರಾಟಿಕ್ ಪಕ್ಷದಿಂದ ಅಧ್ಯಕ್ಷಪದವಿಗೆ ಆರಿಸಿ ನಿಲ್ಲಿಸಲ್ಪಟ್ಟಿದ್ದರು. ಆದರೆ ಡ್ವೈಟ್ ಡಿ. ಐಸನ್‌ಹೋವರ್‌ಗೆ ಎರಡುಬಾರಿಯೂ ಸೋತರು. ಮುಂದಿನ ವರುಷಗಳಲ್ಲಿ ಅವರು ಅಂತಾರಾಷ್ಟ್ರೀಯ ಸಮಸ್ಯೆಗಳನ್ನು ಶ್ರದ್ಧೆಯಿಂದ ಅಧ್ಯಯನಮಾಡಿ ಪರಿಶೀಲಿಸಿದ ಫಲವಾಗಿ ಅವರಲ್ಲಿ ನೆಲೆಗೊಂಡ ದೃಢನಂಬಿಕೆ—"ಶ್ರೀಮಂತರ ಮತ್ತು ಬಡವರ ಮಧ್ಯೆ ಇರುವ ಜೀವನ ಮಟ್ಟದ ವಿಷಮ ವೈಪರೀತ್ಯವು ಜಗತ್ತಿನ ಶಾಂತಿಗೆ ಶಸ್ತ್ರೀಕರಣದ ಜೂಜಿನಷ್ಟೇ ಅಪಾಯಕರವಾದುದು; ಮತ್ತು ಈ ವಿಷಮ ಅಂತರವನ್ನು ತಗ್ಗಿಸುವುದು ಶಸ್ತ್ರಗಳ ಹತೋಟಿಯಷ್ಟೇ ಮುಖ್ಯ ಮತ್ತು ಅಗತ್ಯ" ಎಂಬುದು.

ಸ್ಟೀವನ್ಸನ್ ರವರು ಇತ್ತೀಚೆಗೆ "ನಮ್ಮ ಸಹಾಯ ಕಾರ್ಯಕ್ರಮಗಳು ಮುಖ್ಯವಾಗಿ ಕಮ್ಯೂನಿಸಂ ಅನ್ನು ತಡೆಗಟ್ಟುವುದಕ್ಕಾಗಿ ಇರದೆ (ಹೇಗೂ ಅದು ಆಗೇ ಆಗುವುದು.) ಆಧುನಿಕತೆಯಲ್ಲಿ ಹಿಂದುಳಿದಿರುವ ರಾಷ್ಟ್ರಗಳ ಆರ್ಥಿಕ ಬೆಳವಣಿಗೆಗಾಗಿ, ಅವು ಆತ್ಮಗೌರವದಿಂದ ತಮ್ಮ ಕಾಲು ಮೇಲೆ ತಾವು ನಿಲ್ಲುವಂತೆ ವೃದ್ಧಿ ಹೊಂದಲು ಅಗತ್ಯವಾದ ಸ್ಥಿತಿಯನ್ನೂ ಉಂಟುಮಾಡುವ ಉದ್ದೇಶದಿಂದ — ರೂಪಿಸಲ್ಪಡಬೇಕು" ಎಂದು ಹೇಳಿದ್ದಾರೆ.

ಏಷ್ಯಾ ಆಫ್ರಿಕಾ ಮತ್ತು ದಕ್ಷಿಣ ಅಮೆರಿಕಾ ದೇಶಗಳಲ್ಲಿನ ಜನತೆಯ ಕೆಳಮಟ್ಟದ ಜೀವನವನ್ನು ಕುರಿತು ಸ್ಟೀವನ್ಸನ್‌ರು—ಇಲ್ಲಿನ ರಾಷ್ಟ್ರಗಳ ಅಗತ್ಯಗಳನ್ನು ನೋಡಿದರೇ ನಡುಕಹುಟ್ಟಿಸುವಷ್ಟು ಅಗಾಧವಾಗಿದೆ. ಇತರ ಮುಂದುವರಿದ ರಾಷ್ಟ್ರಗಳ ಸಹಕಾರ ಸೌಹಾರ್ದಗಳಿಂದ ಮಾತ್ರ ಇವನ್ನು ಸಾಧಿಸಲು ಆದೀತು.' ಎಂದಿದ್ದಾರೆ.

ಹತೋಟಿ ಮತ್ತು ಮೇಲ್ವಿಚಾರಣೆಗೆ ಒಳಪಟ್ಟ ನಿಶ್ಶಸ್ತ್ರೀಕರಣವನ್ನು ಸಮರ್ಥಿಸುತ್ತಾ ಸ್ಟೀವನ್ಸನ್‌ರು—"ಶಾಂತಿಸ್ಥಾಪನೆಯು ಎಲ್ಲಕ್ಕಿಂತ ಅಗತ್ಯ; ಕಾಯಿದೆಗಳನ್ನನುಸರಿಸಿ ಅದನ್ನು ಸ್ಥಾಪಿಸಲು ಸತತ ಶ್ರಮಿಸಬೇಕು; ನಿಶ್ಶಸ್ತ್ರವಾದ ಜಗತ್ತೇ ನಮಗೆ ಕ್ಷೇಮದಿಂದ ಬಾಳಲು ಎಡೆ" ಎಂದಿದ್ದಾರೆ.

೧೯೪೮ರಲ್ಲಿ ಅವರು ಅಧ್ಯಕ್ಷ ಸ್ಥಾನಕ್ಕೆ ನಿಲ್ಲಿಸಲ್ಪಟ್ಟಾಗ ಇಲ್ಲಿನಾಯ್ಸ್ ಸಂಸ್ಥಾನದ ಗೌರ್ನರ್ ಆಗಿ ಕೆಲಸಮಾಡುತ್ತಿದ್ದರು. ಆ ಸಂಸ್ಥಾನದಲ್ಲಿ ಹಿಂದೆಂದೂ ಬರದಿದ್ದಂಥ ಬಹು ಹೆಚ್ಚು ಸಂಖ್ಯೆಯಿಂದ ಆ ಪದವಿಗೆ ಆರಿಸಲ್ಪಟ್ಟಿದ್ದರು.

ಅವರು ಅಲ್ಲಿ ಗೌರ್ನರ್ ಆಗಿದ್ದ ಅವಧಿಯಲ್ಲಿ ಆ ಸಂಸ್ಥಾನದ ರಾಜ್ಯಾಂಗದಲ್ಲಿ ಅನೇಕ ತಿದ್ದುಪಾಟುಗಳನ್ನು ಮಾಡಿದರು. ಆಡಳಿತ ಶಾಖೆಯ ಕಾಯಿದೆಗಳನ್ನು ವಿಶಾಲಪಡಿಸಿದರು; ಮನೋರೋಗದ ಆಸ್ಪತ್ರೆಗಳನ್ನು ಆಧುನಿಕಗೊಳಿಸಿದರು. ರಾಜಮಾರ್ಗಗಳನ್ನು ಉತ್ತಮಗೊಳಿಸಿದರು ಮತ್ತು ತೆರಿಗೆಗಳನ್ನು ತಗ್ಗಿಸಿದರು.

ವೃತ್ತಿಯಲ್ಲಿ ಸ್ಟೀವನ್ಸನ್‌ರು ಲಾಯರ್. ೧೯೩೩ರಲ್ಲಿ ಅವರು ವ್ಯವಸಾಯಾಡಳಿತದ ವಿಶೇಷ ಸಲಹೆಗಾರರಾಗಿ ವಾಷಿಂಗ್‌ಟನ್‌ಗೆ ಬಂದರು. ಎರಡನೇ ವಿಶ್ವಯುದ್ಧದ ಕಾಲದಲ್ಲಿ ಅವರು ನೇವಿಯ ಸೆಕ್ರೆಟರಿಗೆ ವಿಶೇಷ ಸಹಾಯಕರಾಗಿದ್ದರು.

೧೯೪೩ರಲ್ಲಿ, ಇಟಲಿ ದೇಶದ ಆರ್ಥಿಕ ಮತ್ತು ಸಾಮಾಜಿಕ ಪುನರ್ವ್ಯವಸ್ಥೆಯ ಕಾರ್ಯಕ್ಕಾಗಿ ಹೋದ ತಂಡದ ಮುಂದಾಳಾಗಿದ್ದರು. ಅವರ ವರದಿಯು ಯುದ್ಧದಿಂದ ಹಾಳಾದ ಇತರ ಪ್ರದೇಶಗಳ ಪುನರ್ವ್ಯವಸ್ಥೆಯ ಕಾರ್ಯಕ್ರಮಕ್ಕೆ ಮಾದರಿಯಾಯಿತು. ಮಾರನೆಯ ವರುಷ ಅವರು ಅನೇಕ ಯೂರೋಪಿಯನ್ ರಾಷ್ಟ್ರಗಳಿಗೆ ಹೋದ ಯುದ್ಧ ಖಾತೆಯ ವಿಶೇಷ ತಂಡದಲ್ಲಿ ಸೇವೆಸಲ್ಲಿಸಿದರು.

೧೯೪೫ ರಲ್ಲಿ ಸ್ಯಾನ್ ಫ್ರಾನ್ಸಿಸ್‌ಕೋದಲ್ಲಿ ನಡೆದ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಸಂಯುಕ್ತ ಸಂಸ್ಥಾನದ ಪ್ರತಿನಿಧಿ ಮಂಡಲದ ಪತ್ರಿಕಾ ಪ್ರತಿನಿಧಿಯಾಗಿ ಕೆಲಸಮಾಡಿದರು. ಈ ಕಾಲದಲ್ಲೇ ಅವರು ಸೆಕ್ರೆಟರಿ ಆಫ್ ಸ್ಟೇಟಿಗೆ ವಿಶೇಷ ಸಹಾಯಕರಾಗಿದ್ದುದು. ೧೯೪೫ ರಲ್ಲಿ ಲಂಡನ್ನಿನಲ್ಲಿ ವಿಶ್ವಸಂಸ್ಥೆಯ ಸಿದ್ಧತೆಯ ಸಂಘಟನೆಗೆ ಮಂತ್ರಿಗಳಾಗಿ ಕೆಲಸಮಾಡಿದಾಗ ಪತ್ರಿಕಾಪ್ರತಿನಿಧಿಯೊಬ್ಬನು ಇವರನ್ನು ಕುರಿತು "ಪ್ರತಿಪಕ್ಷದವರ ಅಭಿಪ್ರಾಯಗಳನ್ನು ಅರಿತುಕೊಳ್ಳುವ ತಾಳ್ಮೆ—ಶಕ್ತಿಯುಳ್ಳ ಈ ಸ್ಟೀವನ್ಸನ್‌ರು ತಮ್ಮ ಜಾಣತನದಿಂದ ಬಹುಬಾರೀ ಕೆಲಸಗಳನ್ನು ಸಾಧಿಸಿದಲ್ಲದೆಯೇ ಅತ್ಯಂತ ಜನಪ್ರಿಯರಾದರು. ಎಂದು ಹೊಗಳಿದ್ದನೆ

ಮುಂದೆ ಇವರು ವಿಶ್ವ ಸಂಸ್ಥೆಯ ಮೊದಲನೆಯ ಸಭೆಗೆ ಹೋದ ಸಂಯುಕ್ತ ಸಂಸ್ಥಾನದ ಪ್ರತಿನಿಧಿ ಮಂಡಲಕ್ಕೆ ಪ್ರಥಮ ಸಲಹೆಗಾರರಾಗಿದ್ದರು. ೧೯೪೬–೪೭ರಲ್ಲಿ ಇವರು ವಿಶ್ವಸಂಸ್ಥೆಗೆ ಪರ್ಯಾಯ ಪ್ರತಿನಿಧಿಗಳಾಗಿದ್ದರು.

ಇವರು ೧೯೦೦ರಲ್ಲಿ ಕ್ಯಾಲಿಫೋರ್ನಿಯಾದ ಲಾಸ್ ಏಂಜಲ್ಸ್‌ನಲ್ಲಿ ಹುಟ್ಟಿದರು. ಇವರು ಆರು ವರುಷದವರಾಗಿರುವಾಗಲೇ ಅವರ ಕುಟುಂಬ ಇಲ್ಲಿನಾಯ್ಸಿಗೆ ವಲಸೆ ಬಂದಿತು. ಇವರ ತಂದೆ ಲಾಯಿ ಗ್ರೀನ್ ಸ್ಟೀವನ್ಸನ್ನರು ಇಲ್ಲಿನಾಯ್ಸ್ ಸಂಸ್ಥಾನದ ಸೆಕ್ರೆಟರಿಗಳಾಗಿದ್ದರು. ಇವರ ಹೆಸರಿನವರೇ ಆದ ಇವರ ತಾತ ೧೮೯೩—೧೮೯೭ರಲ್ಲಿ ಸಂಯುಕ್ತ ಸಂಸ್ಥಾನದ ವೈಸ್ ಪ್ರೆಸಿಡೆಂಟ್ ಆಗಿದ್ದರು. ಆಗ ಗ್ರೋವರ್ ಕ್ಲೀವ್‌ಲ್ಯಾಂಡರು ಎರಡನೆಯಬಾರಿ ಅಧ್ಯಕ್ಷಪದವಿಯಲ್ಲಿದ್ದರು

ಸ್ಟೀವನ್ಸನ್ನರು ಬ್ಲೂಮಿಂಗ್‌ಟನ್ ಮತ್ತು ಇಲ್ಲಿನಾಯಸ್‌ನ ಸಾರ್ವಜನಿಕ ಶಾಲೆಗಳಲ್ಲಿ ಓದಿ ಚೋಟ್ ಶಾಲೆಯಲ್ಲೂ ವ್ಯಾಸಂಗ ಮಾಡಿದರು. ಅನಂತರ ಒಂದು ವರುಷ ಸ್ವಿಟ್ಜರ್‌ಲೆಂಡಿನಲ್ಲಿ ವ್ಯಾಸಂಗ ಮುಂದುವರಿಸಿ, ಆ ಮೇಲೆ ೧೯೨೨ರಲ್ಲಿ ಪ್ರಿನ್ಸ್‌ಟನ್-ವಿಶ್ವವಿದ್ಯಾನಿಲಯದಿಂದ ಪದವೀಧರರಾಗಿ ಬಂದರು. ಮುಂದೆ ಹಾರ್ವರ್ಡ್ ಮತ್ತು ವಾಯುವ್ಯ ವಿಶ್ವವಿದ್ಯಾನಿಲಯಗಳಲ್ಲಿ 'ಲಾ' ಅಧ್ಯಯನ ಮಾಡಿದರು.

೧೯೨೪ರಲ್ಲಿ "ಬ್ಲೂಮಿಂಗ್‌ಟನ್ ಡೈಲಿ ಪ್ಯಾಂಟಗ್ರಾಫ್" ಎಂಬ ಪತ್ರಿಕೆಯ ಸಂಪಾದಕ ಮಂಡಲಿಯಲ್ಲಿ ಕೆಲಸಮಾಡಿದರು.

ಕವಿತಾ ವಿತಾನ:

"ನನ್ನ" ಸಾವು

೧

ದಿನದಂತು, ದಿನಹೋಯ್ತು
ಬೆಳಗಾಗಲಿಲ್ಲ;
ರವಿ ಬಂದ, ಶಶಿ ಬಂದ,
ನೀನು ಬರಲಿಲ್ಲ

೨

ಮನಸಿನಲಿ, ಕನಸಿನಲಿ
ನಿನ್ನದೆ ಚಿಂತೆ;
ಬುದ್ಧಿಯಲಿ, ಭಾವದಲಿ
ನಿನ್ನದೇ ಕವಿತೆ.

೩

ಕಣ್ಣಿನಲಿ, ಕರ್ಣದಲಿ
ನಿನ್ನೆಲ್ಲ ಆಟ;
ಕೃತದಲಿ, ಗೈತದಲಿ
ನಿನ್ನೊಂದೆ ಕಾಟ.

೪

ನಾನೆಂಬ ತಂಡದಲಿ
ನಿನ್ನನೇ ನೆನೆದೆ;
ಕ್ಷಣವೆಂಬ ತಾಣದಲಿ
ನಿನ್ನನೇ ಕಾದೆ

೫

ನಾನೆನಿತು ಕಾದರೂ
ನೀ ಬಾರದಾದೆ;
ನವೆದರೂ ನೊಂದರೂ
ನೀನರಿಯದಾದೆ.

೬

ನೋವು ಇಂದಿನವರೆಗು
ಎನ್ನ ಸೋತ್ತಾಯ್ತು;
ಬಾಳ್ಬಯಕೆ ಬೆಳೆಯಿಸುವ
ಕೂಳ ತುತ್ತಾಯ್ತು.

೭

ಸೊರುವೆ ನೀ ನನ್ನನ್ನು
ನಿನ್ನ ಕಾಯುವೆನು;
ಕೂಡುವೆನು ನಿನ್ನನ್ನು,
ಮತ್ತೆ ಸಾಯುವೆನು.

— ಸಾಗರ್.

ಸ್ಥಾಪನೆ: 1924

ದಿ ಕರ್ನಾಟಕ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಆಫೀಸು: ಮಂಗಳೂರು—3.

ಈ ಕೆಳಗಿನ ಬಡ್ಡಿ ದರಗಳಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು:

ಒಂದು ತಿಂಗಳಿಗೆ	.... ನಾ॥ ಸೇಕಡಾ	3-75 ನ.ಪೈಸೆ
ಮೂರು ತಿಂಗಳುಗಳಿಗೆ	.... ,,	4-00 ,,
ಆರು ತಿಂಗಳುಗಳಿಗೆ	.... ,,	4 25 ,,
12 ತಿಂಗಳುಗಳಿಂದ 23 ತಿಂಗಳುಗಳ ವರೆಗೆ	,,	4-50 ,,
24 ತಿಂಗಳುಗಳಿಂದ 48 ತಿಂಗಳುಗಳ ವರೆಗೆ	,,	4 75 ,,

"ಹನಿ ಡಿಪೋಸಿಟ್ಸ್" ನಲ್ಲಿ

ನಿಮ್ಮ ದೈನಂದಿನ ಉಳಿತಾಯವನ್ನು ವಿನಿಯೋಗಿಸಿರಿ.

THE KARNATAKA BANK LIMITED.

ಶ್ರೀ ಎ. ಬಿ. ಶೆಟ್ಟಿ
ಸ್ಮಾರಕ ನಿಧಿಗೆ
ಸಹಾಯ ಮಾಡಿರಿ

ಹುಳವು ಬಿಸ್ಸಿಗಳನ್ನು ತಿಂದು ನಷ್ಟ ಮಾಡುವಂತೆ ಈರ್ಷ್ಯೆಯು ಮಾನವನನ್ನು ಸುಟ್ಟು ನಿರ್ನಾಮಗೊಳಿಸುತ್ತದೆ

ನವಯುಗ

ವರುಷ	ಉಡುಪಿ	ವಾರ
೪೦	೨-೩-'೬೧	೨೫

ಮುಂಗಡಪತ್ರ ಅಧಿವೇಶನ

ರಾಜ್ಯ ವಿಧಾನ ಸಭೆ ಮತ್ತು ವಿಧಾನ ಪರಿಷತ್ತುಗಳ ಸಂಯುಕ್ತ ಸಭೆಯಲ್ಲಿ ಮುಂಗಡಪತ್ರ ಅಧಿವೇಶನದ ಉದ್ಘಾಟನೆಯನ್ನು ರಾಜ್ಯಪಾಲ ಜಯಚಾಮರಾಜ ಒಡೆಯರು ತಾ ೨೭ರಂದು ಮಾಡಿದ್ದರು. ಅದೇ ದಿನ ನಾಲ್ವರು ಹೊಸ ಮಂತ್ರಿಗಳ ನೇಮಕವಾದುದನ್ನು ಪ್ರತಿಭಟಿಸಿ ಹೆಚ್ಚಿನ ವಿರೋಧಿ ಪಕ್ಷೀಯ ಸದಸ್ಯರು ಹೊರನಡೆದುದೇ ಅಂದಿನ ವೈಶಿಷ್ಟ್ಯವೆನ್ನಬಹುದು. ರಾಜ್ಯಪಾಲರ ಭಾಷಣವಾದರೂ ಸಾಂಪ್ರದಾಯಿಕವಾಗಿದ್ದು ಸರಕಾರವು ಮಾಡಿದ ಕಾರ್ಯಕಲಾಪಗಳ ವಿವರಣೆಯಿಂದ ಕೂಡಿತ್ತು. ದ್ವಿತೀಯ ಪಂಚವಾರ್ಷಿಕ ಯೋಜನಾವಧಿಯಲ್ಲಿ ರಾಜ್ಯವು ಮಾಡಿದ್ದ ಪ್ರಗತಿ, ಸಾಧಿಸಿದ ಲಕ್ಷ್ಯಗಳತ್ತ ರಾಜ್ಯಪಾಲರು ದೃಷ್ಟಿ ಹರಿಸಿ ಮುಂದೆ ಪ್ರಾರಂಭವಾಗಲಿರುವ ತೃತೀಯ ಯೋಜನೆಯ ರೂಪರೇಷೆಯನ್ನು ತಿಳಿಸಿದರು. ಕಳೆದ ವರ್ಷಗಳಲ್ಲಿ ಪಂಚಾಯತ ಸ್ಥಾಪನೆಯ ಉದ್ದೇಶದತ್ತ ಸರಕಾರವು ಸಮೀಪವರ್ತಿಯಾಗುತ್ತಿದೆ. ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಟ್ಟು ಅಧಿಕಾರ ವಿಕೇಂದ್ರಿಕರಣವನ್ನು ಸಾಧಿಸಿ ಈಡಿಸೆಯಲ್ಲಿ ಬಹುದೂರ ಸಾಗಿ ಬಂದಿದೆ ಎಂದರವರು. ಪಂಚಾಯತ ರಾಜ್ಯದ ಸ್ಥಾಪನೆಯು ಒಂದು ಪ್ರಗತಿಶೀಲ ಮಹತ್ವಪೂರ್ಣ ಹೆಜ್ಜೆಯೆಂಬುದನ್ನು ಅವಶ್ಯ ಒಪ್ಪಿಕೊಳ್ಳಬೇಕಾದರೂ ಇದರ ಯಶಸ್ವಿತೆಯನ್ನು ಈಗಾಗಲೇ ಹೇಳುವುದು ಸಾಧ್ಯವಿಲ್ಲ.

ಮಹಾರಾಷ್ಟ್ರ—ಕರ್ನಾಟಕ ರಾಜ್ಯಗಳ ನಡುವಣ ಸೀಮಾ ವಿವಾದವನ್ನು ಬಗೆ ಹರಿಸಲು ಎರಡೂ ಸರಕಾರಗಳು ಒಂದು ಸಮಿತಿಯನ್ನು ಮಾಡಿವೆಯೆಂದೂ ಇದರ ವರದಿಯು ಕೈಸೇರಿದ ಮೇಲೆ ಸರಕಾರವು ಆ ವಿಚಾರದಲ್ಲಿ ನಿರ್ಧಾರಕ್ಕೆ ಬರುವುದೆಂದೂ ರಾಜ್ಯಪಾಲರೆಂದರು. ಪರಸ್ಪರ [illegible] ಗಡಿ ಪ್ರದೇಶಗಳ [illegible] ನ್ಯಾಯ [illegible] ಎಂಬ [illegible] ಇತರ ಗಡಿ [illegible] ಸರಕಾರವು ಈಗ ತಳ[illegible] ಈ ಬ[illegible] ಇಲ್ಲ[illegible] ಹೊಳೆಯುತ್ತ[illegible].

ತೃತೀಯ ಯೋಜನೆಯಲ್ಲಿ [illegible] ಹೆಚ್ಚಿನ [illegible] ಕೃಷಿ, ನೀರಾವರಿ, ವಿದ್ಯುಚ್ಛಕ್ತಿ, ಆಹಾರೋತ್ಪಾದನೆಗೆ ತಗದಿರಿಸಿದ್ದು ಉಚಿತವಿದೆ. ಈ ಅವಧಿಯಲ್ಲಿ ೧೦ ಲಕ್ಷ ಟನ್ ಹೆಚ್ಚಿಗೆ ಆಹಾರವನ್ನು ಬೆಳೆಸಿ ಈ ವಿಷಯದಲ್ಲಿ ರಾಜ್ಯವನ್ನು ಸ್ವಾವಲಂಬಿಯಾಗಿ ಮಾಡುವುದು ಸರಕಾರದ ಗುರಿಯಿದೆ—ಇದು ಸ್ತುತ್ಯಾರ್ಹ ಮಾತ್ರವಲ್ಲ ಅತ್ಯವಶ್ಯವಾದುದು. ಅದರ, ಶರಾವತಿ ಯೋಜನೆಯು ಪೂರ್ಣವಾಗಿ ರಾಜ್ಯದ ವಿದ್ಯುದುತ್ಪಾದನೆಯಲ್ಲಿ ಗಣನೀಯ ಏರಿಕೆ ತೋರಿಬರಬಹುದಾದರೂ ಅದರಂತೆಯೇ ಬಳಕೆ—ಬೇಡಿಕೆಗಳೂ ಬಹುವಾಗಿ ಹೆಚ್ಚುವುದು ಸಂಭವನೀಯವೇ ಆದುದರಿಂದ, ಹೊಸ ವಿದ್ಯುದ್ಯೋಜನೆಗಳಲ್ಲದೆ ಬೇಡಿಕೆಯನ್ನು ಸಂಪೂರ್ಣವಾಗಿ ಪೂರೈಸುವುದು ಅಸಾಧ್ಯವೆನಿಸುವ ಸಂದೇಹವನ್ನು ರಾಜ್ಯಪಾಲರು ಪ್ರಕಟಿಸಿದ್ದು, ಕಾಳೀ ನದೀ ಯೋಜನೆಯನ್ನು ಎತ್ತಿಕೊಳ್ಳುವ ಪ್ರಯತ್ನ ಮಾಡಬೇಕಾಗಬಹುದೆಂದರು. ಇಂದಿನ ಯುಗದಲ್ಲಿ ವಿದ್ಯುತ್ತಿನ ಮೌಲ್ಯವು ಅತ್ಯಧಿಕವಾಗುತ್ತಿರುವುದರಿಂದ, ಅದಿಲ್ಲದೆ ಹೋದರೆ, ಔದ್ಯಮಿಕ ಹಾಗೂ ನೀರಾವರಿ ರಂಗಗಳ ಬಲವು ಕುಗ್ಗುವುದರಿಂದ, ಈ ಯೋಜನೆಯನ್ನು ಮೂರನೆಯ ಯೋಜನೆಯಲ್ಲಿ ಸೇರಿಸುವುದು ಅತ್ಯಗತ್ಯ. ಈ ಬಗ್ಗೆ ರಾಜ್ಯ ಸರಕಾರ ಅನವರತ ಪ್ರಯತ್ನ ಮಾಡಿ ಯಶಸ್ವಿಯಾಗಲೇಬೇಕು.

ಮಂಗಳೂರು ಮತ್ತು ಕಾರವಾರ ಬಂದರುಗಳ ಅಭಿವೃದ್ಧಿಯಾಗುವುದರಿಂದ ಒಟ್ಟು ೨೫ ಲಕ್ಷ ಟನ್ ಅದುರನ್ನು ನಿರ್ಯಾತಗೊಳಿಸುವುದು ರಾಜ್ಯಕ್ಕೆ ಸಾಧ್ಯವಾಗುತ್ತದೆ. ಹಾಸನ—ಮಂಗಳೂರು ರೈಲ್ವೆಯ ಬಗ್ಗೆ ರಾಜ್ಯಪಾಲರು ಪ್ರಸ್ತಾಪಿಸಿರುವುದರಿಂದ ಅದು ನಿರ್ಮಾಣವಾಗಬಹುದೆಂದು ಹಾರಯ್ಸಿದರೆ ಹುಬ್ಬಳ್ಳಿ ಕಾರವಾರಗಳ ದಾರಿಯಿಲ್ಲವೆಂದೇ ಹೇಳಬೇಕಾಗುತ್ತದೆ. ಮಲ್ಪೆಯನ್ನು ಮೀನುಗಾರಿಕೆಯ ಕೇಂದ್ರವಾಗಿ ಅಭಿವೃದ್ಧಿಗೊಳಿಸಬಹುದೆಂದ ತಜ್ಞರ ಅಭಿಪ್ರಾಯಕ್ಕೆ ಸರಕಾರ ತಲೆದೂಗುವ ಆವಶ್ಯಕತೆಯಿದೆ.

ರಾಜ್ಯಪಾಲರು ಪ್ರಸ್ತಾಪಿಸಿದ ಇತರ ವಿಚಾರಗಳಲ್ಲಿ ಹೊಸತೇನೂ ಇರುವುದಿಲ್ಲ. ಕೋಲಾರದ ಚಿನ್ನದ ಗನಿಗಳನ್ನು ಕೇಂದ್ರಕ್ಕೆ ವರ್ಗಾಯಿಸಲು ಅಂತಿಮ ನಿರ್ಧಾರ ಮಾಡಿಲ್ಲವೆಂಬುದರಿಂದ ಈ ಬಗ್ಗೆ ವಿಚಾರ ನಡೆಯುತ್ತಿದೆಯೆಂಬುದು ಸ್ಪಷ್ಟವಾಯ್ತು. ಬೇಗನೇ ರಸ್ತೆ ಸಾರಿಗೆ ಕಾರ್ಪರೇಶನ್ ಸ್ಥಾಪಿಸಲಾಗುವುದು ಎನ್ನಲಾಗುತ್ತಿದ್ದರೂ ಈ ಭಾಷಣದಲ್ಲಿ ಮಾತ್ರ ಅದರ ಉಲ್ಲೇಖವೇ ಇಲ್ಲದಿರುವುದು ವಿಸ್ಮಯಕರವಾಗಿದೆ. ಬುಡಕಟ್ಟಿನ ವರ್ಗ ಮತ್ತು ಜನಾಂಗಗಳಿಗೆ ಭೂಮಿ ವಿತರಣೆಯ ಕಾರ್ಯ ಉಚಿತ ರೀತಿಯಲ್ಲಿ ನಡೆದಿದೆಯಾದರೂ ಉಳಿದ ಬಡವರಿಗೆ ವಿತರಿಸುವಲ್ಲಿ ತೀವ್ರತೆ ಬೇಕಾಗಿದೆ. ಭೂಸುಧಾರಣಾ ಮಸೂದೆಯಲ್ಲದೆ ಈ ಅಧಿವೇಶನದ ಮುಂದೆ ಬರುವ ಇತರ ಒಂಬತ್ತು ಮಸೂದೆಗಳಲ್ಲಿ ವಿಶೇಷವೆಂಬುದಿಲ್ಲವಾದುದರಿಂದ ಮುಂಗಡ ಪತ್ರಾಧಿವೇಶನವು "ಸಾಮಾನ್ಯ" ಅಧಿವೇಶನವೆಂಬುದು ರಾಜ್ಯಪಾಲರ ಭಾಷಣ ವೃತ್ತದಿಂದಲೇ ತಿಳಿಯುತ್ತದೆ. ಆದರೂ ಮಂತ್ರಿ ಮಂಡಳ ವಿಸ್ತರಣೆಯ ಬಗ್ಗೆ ಪ್ರತಿಪಕ್ಷೀಯರ ವಿರೋಧದಿಂದಾಗಿ ಅಧಿವೇಶನದಲ್ಲಿ ಬಿರುಸಿನ ಸನ್ನಿವೇಶಗಳಿಗೆ ಕಡಿಮೆಯಿರಲಾರದೆನಿಸುತ್ತದೆ.

ಸಂಕ್ಷಿಪ್ತ ಸುದ್ದಿಗಳು

ಪಂಡಿತ ಪಂತರ ಅನಾರೋಗ್ಯ

ಸರದಾರರನಂತರ ಸಮರ್ಥ ಗೃಹ ಮಂತ್ರಿಯೆಂಬ ಹೆಸರನ್ನು ಪಡೆದ, ಪ್ರಧಾನಿ ನೆಹರುರವರ ಶಕ್ತಿಯ ಒಂದು ಅಂಶವೆಂಬಂತಿರುವ ಪಂ| ಗೋವಿಂದ ವಲ್ಲಭ ಪಂತರು ಅಸ್ವಸ್ಥರಾಗಿರುವುದರಿಂದ ರಾಷ್ಟ್ರಕ್ಕೆ ರಾಷ್ಟ್ರವೇ ಚಿಂತಾಕ್ರಾಂತವಾಗಿದೆ. ತಜ್ಞ ವೈದ್ಯರು ಹಲವಾರು ಮಂದಿ ಅವರ ದೇಹಸ್ಥಿತಿಯನ್ನು ಪರಿಶೀಲಿಸುತ್ತಿದ್ದು ಉಪಚಾರ ಮಾಡುತ್ತಿದ್ದಾರೆ, ಆದರೂ ದೇಹಸ್ಥಿತಿಯಲ್ಲಿ ಹೆಚ್ಚಿನ ಸುಧಾರಣೆಯು ತೋರಿ ಬಂದಿರುವುದಿಲ್ಲ ಸದ್ಯ ವಾಣಿಜ್ಯೋದ್ಯಮ ಮಂತ್ರಿಯಾಗಿರುವ ಶ್ರೀ ಲಾಲ ಬಹಾದೂರ ಶಾಸ್ತ್ರಿಯವರು ಗೃಹ ಇಲಾಖೆಯನ್ನೂ ನೋಡಿಕೊಳ್ಳುವರೆಂದು ತಿಳಿದು ಬಂದಿದೆ.

ಇದ್ದಲಿನ ಅಭಾವ

"ಕಲ್ಲಿದ್ದಲಿನ ಬೇಡಿಕೆ ಹೆಚ್ಚಿರುವುದರಿಂದಲೇ ಅದರ ಅಭಾವವು ತೋರುತ್ತಿದೆ ಇದಕ್ಕೆ ರೇಲ್ವೆ ವಿಭಾಗವು ಹೊಣೆಗಾರವಲ್ಲ" ಎಂದು ಸಂಸತ್ತಿನಲ್ಲಿ ರೇಲ್ವೆ ಮಂತ್ರಿ ಜಗಜ್ಜೀವನರಾಮರು ಹೇಳಿದರು. "ಕಲ್ಲಿದ್ದಲಿನ ಉತ್ಪಾದನೆ, ಸಾಗಾಟ, ವಿತರಣೆ ವ್ಯವಸ್ಥೆಯಲ್ಲಿ ಸರಿಯಾದ ನಿಯಂತ್ರಣವಿಟ್ಟುಕೊಳ್ಳಲಾಗಿದೆ. ರೇಲ್ವೆಗಳಿಗೆ ಕೆಳಮಟ್ಟದ ಕಲ್ಲಿದ್ದಲಿನ ಪೂರೈಕೆಯಾಗುತ್ತಿರುವುದರಿಂದ ತುಸು ಕಾರ್ಯಕ್ಷಮತೆ ಕುಂದಿದೆ; ಅವುಗಳಿಗೆ ಒಳ್ಳೆಯ ಇದ್ದಲು ಒದಗಿಸಲು ಪರಿಶೀಲನೆ ನಡೆಸಲಾಗುತ್ತಿದೆ" ಎಂದ ಜಗಜ್ಜೀವನರಾಮರು ಇನ್ನು ನಾಲ್ಕಾರು ತಿಂಗಳುಗಳಲ್ಲಿ ಇದ್ದಲು ಅಭಾವವು ದೂರವಾಗುವ ಆಶಯ ವ್ಯಕ್ತಪಡಿಸಿದರು.

ಒರಿಸ್ಸಾದ ರಾಜ್ಯಕೀಯ

ಒರಿಸ್ಸಾದ ಸಂಯುಕ್ತ ಸರಕಾರದ ನಾಯಕ ಡಾ| ಹರಿಕೃಷ್ಣ ಮೆಹತಾಬರಿತ್ತ ರಾಜಿನಾಮೆಯಿಂದಾಗಿ ಅಲ್ಲಿನ ರಾಜಕೀಯ ರಂಗದಲ್ಲಿ ಮುಂದಿನ ಚುನಾವಣೆಯ ತಯಾರಿ ನಡೆಯಲು ನಿರಾತಂಕವೆಂಬಂತಾಗಿದೆ. ರಾಜ್ಯಪಾಲ ಶ್ರೀ ಸುಂದರಸಾಕರರು ರಾಷ್ಟ್ರಾಧ್ಯಕ್ಷರಿಗೆ ಒಂದು ವರದಿಯನ್ನು ಕಳಿಸಿ ಅಲ್ಲಿ ಪಕ್ಷೀಯ ಆಡಳಿತೆಯು ನಡೆಯಲು ಸಾಧ್ಯವಿಲ್ಲವೆಂಬುದನ್ನು ಮನವರಿಕೆ ಮಾಡಿಕೊಟ್ಟರು. ಆದರಂತೆ, ತನ್ನ ವಿಶೇಷಾಜ್ಞೆಯನ್ನು ವಿಧಿಸಿ ಅಲ್ಲಿ ತನ್ನ ಆಡಳಿತೆಯನ್ನು ಸಾರಿದ್ದಾರೆ, ರಾಷ್ಟ್ರಪತಿಗಳು. ಈ ಆಳಿಕೆಯ ಅವಧಿಯು ಸದ್ಯ ಆರೇ ತಿಂಗಳುಗಳಾದರೂ ಸಾರ್ವತ್ರಿಕ ಚುನಾವಣೆಗಳು ಮುಂದಿನ ವರ್ಷವೇ ನಡೆಯುವ ನಿರೀಕ್ಷೆಯಿರುವುದರಿಂದ ಪುನಃ ಆರು ತಿಂಗಳ ಕಾಲ ಅವಧಿಯನ್ನು ಮುಂದುವರಿಸುವುದು ಅಸಂಭವವಲ್ಲ. ಸಮ್ಮಿಶ್ರ ಸರಕಾರವು ವಿಸರ್ಜನೆಗೊಳ್ಳದಿದ್ದರೆ, ಅದರ ಪ್ರಭಾವವು ಚುನಾವಣೆಗಳ ಮೇಲೆ ಬೀಳುವುದು ಸ್ವಾಭಾವಿಕವೇ ಆದುದರಿಂದ ಅಲ್ಲಿನ ವಿದ್ಯಮಾನವು ಅನಿವಾರ್ಯವೆನ್ನಬೇಕು.

ಬೆಲ್ಜಿಯನರ ಗಡೀಪಾರು

ಲುಮುಂಬಾ ಪರ ಏಗುಪ್ತರು ಕೈರೋದಲ್ಲಿಯ ಬೆಲ್ಜಿಯನ್ ರಾಯಭಾರಿ ಕಛೇರಿಯ ಮೇಲೆ ಹಲ್ಲೆ ನಡೆಸಿದುದರಿಂದ ರೊಚ್ಚಿಗೆದ್ದ ಬೆಲ್ಜಿಯಂ, ಸಂಯುಕ್ತ ಅರಬ ರಾಜ್ಯದೊಡನೆ ರಾಜಕೀಯ ಸಂಬಂಧವನ್ನು ಕಡಿದುಕೊಂಡಿದೆ. ಇದರ ಪ್ರತಿಯಾಗಿ ಈಜಿಪ್ತದಲ್ಲಿರುವ ಬೆಲ್ಜಿಯಂ ಆಸ್ತಿಯೆಲ್ಲವನ್ನೂ ರಾಷ್ಟ್ರೀಕರಿಸಿ, ಬೆಲ್ಜಿಯನರನ್ನು ಹೊರಗೆ ಹಾಕುವಂತೆ ಅಧ್ಯಕ್ಷ ನಸ್ಸೇರರು ಒಂದು ಆಜ್ಞೆ ವಿಧಿಸಿದ್ದಾರೆ. ಕಳೆದ ದಶಂಬರದಲ್ಲಿಯೇ ಇಂತಹ ಆಜ್ಞೆಯೊಂದನ್ನು ಹೊರಡಿಸಿದ್ದು, ಅದರನ್ವಯ ವಶವಾಗದೆ ಉಳಿದಿರುವ ವಿಮಾನಸಾರಿಗೆ ಸುಬೇನಾ, ಬೆಲ್ಗಾ ವಾರ್ತಾಸಂಸ್ಥೆ ಮೊದಲಾದುವನ್ನು ಸದ್ಯ ರಾಷ್ಟ್ರೀಕರಿಸಲಾಗಿದೆ. ಈ ಕಾರಖಾನೆ ಹಾಗೂ ಸಂಸ್ಥೆಗಳನ್ನು ಈಜಿಪ್ತವು ಮುಂದುವರಿಸಿಕೊಂಡು ಹೋಗಬಹುದು; ನಿಲ್ಲಿಸಿಯೂ ಬಿಡಬಹುದು!

ವಿಷ ಚಿಕಿತ್ಸೆಯ ಸೌಲಭ್ಯ

ಹುಬ್ಬಳ್ಳಿಯ ಕರ್ನಾಟಕ ಮೆಡಿಕಲ್ ಕಾಲೇಜಿನ ಆಸ್ಪತ್ರೆಯಲ್ಲಿ ಹಾವು ಕಡಿದುದಕ್ಕೆ ಸಮರ್ಥ ಚಿಕಿತ್ಸೆ ಮಾಡುವ ಸೌಲಭ್ಯವನ್ನು ಒದಗಿಸಲಾಗಿದೆ. ಇದೇ ರೀತಿಯಲ್ಲಿ ನಾಯಿ ಕಚ್ಚಿದುದಕ್ಕೂ ಚಿಕಿತ್ಸೆಯ ಏರ್ಪಾಡು ಮಾಡುವ ಯೋಚನೆಯಿದೆ. ದೊರೆಯುತ್ತಿರುವ ಈ ಸೌಲಭ್ಯವನ್ನು ಆವಶ್ಯಕತೆಯಿದ್ದವರು ಪಡೆದುಕೊಳ್ಳಬೇಕೆಂದು ಆಸ್ಪತ್ರೆಯ ನಿಯಂತ್ರಕ ಸಮಿತಿ ಕೇಳಿಕೊಂಡಿದೆ



ಶ್ರೀ ಟಿ. ಎ. ಪೈಗಳಿಂದ ತಾ 24—2-61ರಂದು ಉದ್ಘಾಟಿಸಲ್ಪಟ್ಟ ಮಹಿಷಮರ್ದಿನಿ ಕಲಾಮಂದಿರ ಕಡಿಯಾಳಿ

ಅಲ್ಲಲ್ಲಿಯ ಸುದ್ದಿ ಸಾರ

ಕಲಾಮಂದಿರದ ಉದ್ಘಾಟನೆ— ಕಡಿಯಾಳಿ (ಉಡುಪಿ) ಹಾ. ಎ. ಶಾಲೆಯ ಆವರಣದಲ್ಲಿ ಶಾಲೆಯ ಹಳೆಯ ವಿದ್ಯಾರ್ಥಿ ಸಂಘದ ವತಿಯಿಂದ ರಚಿಸಲ್ಪಟ್ಟ "ಮಹಿಷಮರ್ದಿನೀ ಕಲಾ ಮಂದಿರ"ದ ಉದ್ಘಾಟನೆಯು ದಿ. ೨೪ರಂದು ಶ್ರೀ ಟಿ. ಎ. ಪೈ ಅವರಿಂದ ನೆರವೇರಿತು. ಶ್ರೀ ಜಿ. ಎಸ್. ನಾಗಮೋತಿಯವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಸಂಘದ ಅಧ್ಯಕ್ಷ ಶ್ರೀ ಕೆ. ಕೆ. ಪೈ ಇವರು ಕಲಾಮಂದಿರ ರಚನೆಗೆ ನೆರವಾದ ನೂರಾರು ಉದಾರಿ ಮುಖಗಳನ್ನು ಸ್ಮರಿಸುತ್ತ ನೆರೆದವರನ್ನು ಸ್ವಾಗತಿಸಿದರು. ಪ್ರಮುಖ ಕಾರ್ಯದರ್ಶಿ ಶ್ರೀ ಎಸ್. ಗೋಪೀಚಂದ ರಾವ್ ಇವರು ಕಲಾಮಂದಿರಕ್ಕೆ ಸಂಬಂಧಪಟ್ಟ ವರದಿಯನ್ನೂ ಪರಿಶೋಧಿಸಿದ ಲೆಕ್ಕಪತ್ರಗಳನ್ನೂ ಓದಿಹೇಳಿದರು. ಉದ್ಘಾಟನೆ ಮಾಡುತ್ತ ಶ್ರೀ ಪೈ ಅವರು, ಶಾಲೆಗಳ ಕಡೆಗೆ ಹಳೆಯ ವಿದ್ಯಾರ್ಥಿಗಳ ಕರ್ತವ್ಯಗಳನ್ನು ವಿವರಿಸಿ, ಕಲಾಮಂದಿರದಂತಹ ಮಹಾಕಾರ್ಯದಲ್ಲಿ ಈ ಸಂಘವು ಪ್ರವೃತ್ತವಾದುದಕ್ಕೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಶಾಲಾ ವ್ಯವಸ್ಥಾಪಕ ಶ್ರೀ ಮಕ್ವಾಡಿ ನಾರ್ಣಪ್ಪಯ್ಯನವರು ಹಳೆಯ ವಿದ್ಯಾರ್ಥಿಗಳ ಸಹಾಯದ ಬಗ್ಗೆ ಕೃತಜ್ಞತೆ ಅರ್ಪಿಸಿದರು. ಅಧ್ಯಕ್ಷರು ಸಂಘದ ಕಾರ್ಯಗಳನ್ನು ಪ್ರಶಂಸಿಸಿದರು. ಹಳೆಯ ವಿದ್ಯಾರ್ಥಿಗಳು "ಬ್ರಹ್ಮಚಾರಿ" ನಾಟಕವನ್ನು ಅಭಿನಯಿಸಿದರು. ಪೂರ್ವಾಹ್ನ ಶ್ರೀ ಎಂ. ವಿ. ಪಡಿಯೂರರು ಧ್ವಜಾರೋಹಣ ಮಾಡಿದ್ದರು.

ತಾ. ೨೫ರಂದು ಕಡಿಯಾಳಿ ಹಾ. ಎ. ಶಾಲೆಯ ವರ್ಧಂತ್ಯುತ್ಸವವು ಶ್ರೀ ಎ ಜಿ. ಅಸ್ರಣ್ಣಯವರ ಹಿರಿತನದಲ್ಲಿ ನೆರವೇರಿತು. ಪೂರ್ವಾಹ್ನ ಶ್ರೀ ಎಂ. ವಿ. ಪದಕಣ್ಣಾಯರಿಂದ ಧ್ವಜಾರೋಹಣವಾದಬಳಿಕ ಶಾಲೆಯ ಮಕ್ಕಳಿಗೆ ಸಿಹಿತಿಂಡಿಯನ್ನು ವಿತರಿಸಲಾಯ್ತು. ಅಪರಾಹ್ನದ ಸಭೆಯಲ್ಲಿ ಶಾಲಾ ಮುಖ್ಯೋಪಾಧ್ಯಾಯ ಶ್ರೀ ಪಿ. ಗುರುರಾಜ ಭಟ್ಟರು ಶಾಲೆಯ ಪ್ರಗತಿ ಸೂಚಿಸುವ ವರದಿಯನ್ನು ಓದಿ ಹೇಳಿದರು. ಕುಮಾರಿ ಸೀತಾಬಾಯಿ ಇವರು ಸ್ವಸ್ತಿವಾಚನವನ್ನು ಮಾಡಿದರು. ಶ್ರೀ ಆರ್. ಆರ್. ಕುಂಜೂರ್ ಅವರು ಬಹುಮಾನ ವಿತರಣೆ ಮಾಡಿದರು. ಅಧ್ಯಕ್ಷರು ಶಾಲೆಗೆ ಹಳೆಯ ವಿದ್ಯಾರ್ಥಿಗಳು ನೆರವಾಗುವಂತೆಯೇ ಸಾರ್ವಜನಿಕರೂ ಸಹಾಯ ನೀಡುವುದು ಅವಶ್ಯವೆಂದರು. 'ಶ್ರೀರಾಮ ಪಾದುಕಾ ಪಟ್ಟಾಭಿಷೇಕ' ನಾಟಕವನ್ನು ಮಕ್ಕಳು ಆಡಿದರು.

ಶಾಲೆಯ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ತಾ. ೨೬ರಂದು ಡಾ| ಕೆ. ಎಲ್. ಐತಾಳರ ನೇತೃತ್ವದಲ್ಲಿ ನಡೆಯಿತು. ಸಂಘದ ಅಧ್ಯಕ್ಷ ಶ್ರೀ ಕೆ. ಕೆ. ಪೈ ಅವರು ಸ್ವಾಗತಿಸಿದ ಬಳಿಕ ಪ್ರಧಾನ ಕಾರ್ಯದರ್ಶಿ ಶ್ರೀ ಎಸ್. ಗೋಪೀಚಂದ ರಾವ್ ಇವರು ವರದಿಯನ್ನು ಓದಿದರು. ಈ ಸಂದರ್ಭದಲ್ಲಿ ಸಂಘದ ಸದಸ್ಯರಿಗಾಗಿ ಏರ್ಪಡಿಸಿದ್ದ ವಿವಿಧ ಸ್ಪರ್ಧೆಗಳಲ್ಲಿ ಜಯಶೀಲರಾದವರಿಗೆ ಪಾರಿತೋಷಕಗಳನ್ನು ವಿತರಣೆ ಮಾಡಲಾಯ್ತು. ಡಾ. ಐತಾಳರು ಸಂಘದ ಕಾರ್ಯಸಾಧನೆಯನ್ನೂ ಮಹತ್ವವನ್ನೂ ಪ್ರಶಂಸಿಸಿದರು. "ಲಂಚ ಪ್ರಪಂಚ" ನಾಟಕವನ್ನು ಹಳೆಯ ವಿದ್ಯಾರ್ಥಿಗಳು ಯಶಸ್ವಿಯಾಗಿ ಅಭಿನಯಿಸಿದರು.

ಅಂದು ಪೂರ್ವಾಹ್ನ ಸಂಘದ ವಾರ್ಷಿಕ ಮಹಾಧಿವೇಶನವು ಅಧ್ಯಕ್ಷ ಶ್ರೀ ಕೆ. ಕೆ. ಪೈ ಅವರ ಹಿರಿತನದಲ್ಲಿ ಸೇರಿತ್ತು. ಸಂಘದ ಕಾರ್ಯಕಲಾಪಗಳನ್ನು ವಿವರಿಸುವ ವರದಿ ಮತ್ತು ಪರಿಶೋಧಿಸಿದ ಲೆಕ್ಕಪತ್ರಗಳನ್ನು ಸಭೆಯು ಸ್ವೀಕರಿಸಿತು. ಮುಂದಿನ ವರ್ಷಕ್ಕೆ ಕಾರ್ಯವಾಹೀ ಸದಸ್ಯರನ್ನು ಆರಿಸಲಾಯ್ತು. ಮುಂದಿನ ವರ್ಷಗಳಲ್ಲಿ, ಒಂದು ಪುಸ್ತಕ ಭಂಡಾರವನ್ನು ತೆರೆಯುವ, ಶಾಲೆಯ ಬಡ ಮಕ್ಕಳಿಗೆ ಸಹಾಯನೀಡುವ ನಿರ್ಣಯಗಳಿಗೆ ಅಧಿವೇಶನವು ಒಪ್ಪಿಗೆಯನ್ನು ಸೂಚಿಸಿತು.

ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ವರ್ಧಂತ್ಯುತ್ಸವವು ಕಳೆದ ತಾ. 27ರಂದು ಮಣಿಪಾಲದಲ್ಲಿ ಕಾಲೇಜಿನ ಕ್ರೀಡಾ ಭವನದಲ್ಲಿ ಮಂಗಳೂರಿನ ಬಿಷಪ್ ರೈ| ರೆ| ಡಾ| ಆರ್. ಡೆಸೋಜಾ ಅವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಡಾ| ಟಿ. ಎಂ. ಎ ಪೈಯವರು ಸ್ವಾಗತ ಭಾಷಣ ಮಾಡುತ್ತಾ ಇದರ ಪುರೇತಿಹಾಸವನ್ನೂ ಇತ್ತಲಾಗೆ ಪ್ರಾರಂಭಿಸಲಾಗಿರುವ ಸ್ನಾತಕೋತ್ತರ ವ್ಯಾಸಂಗದ ವಿಚಾರವನ್ನೂ ತಿಳಿಸಿದರು. ಸ್ಟೂಡೆಂಟ್ ಪ್ರೆಸಿಡೆಂಟ್ ಶ್ರೀ ಎಸ್. ಜಯಕರ ರಾಯರು ಸಂದೇಶ ವಾಚನ ಮಾಡಿದರು. ಡಾ| ಆರ್. ಪಿ. ಕೊಪ್ಪಿಕಾರ್‌ರವರು ಕಾಲೇಜಿನ ವರದಿಯನ್ನೋದಿದರು. ಅಧ್ಯಕ್ಷರು ಬಹುಮಾನ ವಿತರಣೆ ಮಾಡಿ ಈ ಕಾಲೇಜಿನ ಹೊಗಳಿಕೆಯನ್ನು ತುಂಬಾ ಓದಿರುವ ನನಗೆ ಇದನ್ನು ಪ್ರತ್ಯಕ್ಷ ಕಂಡು ಇಲ್ಲಿಯ ಪ್ರಗತಿಯನ್ನು ನೋಡಿ ಆನಂದವಾಗಿರುವುದೆಂದೂ ಇದರ ಸ್ಥಾಪಕರು ಶ್ಲಾಘನೀಯ ಕಾರ್ಯ ಮಾಡಿರುವರೆಂದೂ ಹೇಳಿದರು. ಡಾ. ಜಿ. ಡಿ. ವೇಲಿಯತ್ ಇವರು ಧನ್ಯವಾದಗಳನ್ನರ್ಪಿಸಿದರು. ಬಳಿಕ ಮನೋರಂಜನಾ ಕಾರ್ಯಕ್ರಮಗಳು ಯಶಸ್ವಿಯಾಗಿ ಜರಗಿದವು.

ಕಲಾವಿದ ಶ್ರೀ ಕೆ. ಕೆ. ಹೆಬ್ಬಾರರಿಗೆ ಸನ್ಮಾನ— ಪ್ರಖ್ಯಾತ ಚಿತ್ರಗಾರರಾಗಿ ರಾಷ್ಟ್ರಾಧ್ಯಕ್ಷರಿಂದ ಪ್ರಥಮ ಪದ್ಮಶ್ರೀ ಪ್ರಶಸ್ತಿಯನ್ನು ಪಡೆದ ಕಲಾವಿದ ಶ್ರೀ ಕಟ್ಟಿಂಗೆರೆ ಕೃಷ್ಣ ಹೆಬ್ಬಾರರಿಗೆ ಕಳೆದ ತಾ 26ರಂದು ಉಡುಪಿಯ ಕರ್ನಾಟಕ ಸಂಘ, ವಿಕ್ಟೋರಿಯಾ ಜುಬಿಲಿ ಯೂನಿಯನ್ ಕ್ಲಬ್ ಮತ್ತು ಉಡುಪಿ ನಗರಸಭೆಯವರು ಕ್ಲಬ್ಬಿನ ಕಲಾಮಂಟಪದಲ್ಲಿ ಶ್ರೀ ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ಮಾನಪತ್ರವನ್ನಿತ್ತು ಸತ್ಕರಿಸಿದರು. ಡಾ| ಕೆ. ಎಲ್. ಐತಾಳರು ಸ್ವಾಗತ ಭಾಷಣ ಮಾಡಿ ನಗರಸಭೆಯ ಮಾನಪತ್ರವನ್ನು ಓದಿ ಅರ್ಪಿಸಿದರು. ಶ್ರೀ ಕು. ಶಿ. ಹರಿದಾಸ ಭಟ್ಟರು ಕರ್ನಾಟಕ ಸಂಘ ಮತ್ತು ಕ್ಲಬ್ಬಿನ ಪರವಾಗಿ ಸನ್ಮಾನ ಪತ್ರವನ್ನು ಓದಿ ಗಂಧದ ಪೆಟ್ಟಿಗೆಯಲ್ಲಿಟ್ಟು ಅರ್ಪಿಸಿದರು. ಶ್ರೀ ಹೆಬ್ಬಾರರು ಭಾಷಣ ಮಾಡುತ್ತಾ ತನ್ನ ಬಾಲ್ಯದ ದಿನಗಳನ್ನು ನೆನೆದು ತನ್ನ ಸಾಧನೆ, ಸಿದ್ಧಿ ಮೊದಲಾದವುಗಳನ್ನು ವಿವರಿಸಿದರು. ಅಧ್ಯಕ್ಷ ಶ್ರೀ ಕಾರಂತರು ಶ್ರೀ ಹೆಬ್ಬಾರರ ಕಲಾಪ್ರತಿಭೆಯನ್ನು ವಿವರಿಸಿ ಮಾತನಾಡಿದರು. ಶ್ರೀ ಎಸ್. ಎಲ್. ನಾರಾಯಣ ಭಟ್ಟರು, ಧನ್ಯವಾದಗಳನ್ನರ್ಪಿಸಿದರು ಕೊನೆಗೆ ಕುಮಾರಿ ಜೆನಿ ಬ್ಯಾಯವರಿಂದ ಹಾಡು, ಕುಮಾರಿ ವಿಜಯಲಕ್ಷ್ಮಿಯವರಿಂದ ನೃತ್ಯ ಜರಗಿತು.

ದಿ| ಸೆಟ್ಟಿಬೆಟ್ಟು ರಾಘವ ಹೆಗ್ಡೆ, ಪೆರ್ಣಾಳೆ— ಇವರು ಫೆಬ್ರವರಿ ತಾ. 19ರಲ್ಲು ಬೆಳಿಗ್ಗೆ ತನ್ನ 41ನೇ ವಯಸ್ಸಿನಲ್ಲಿ ಹೆರ್ಗಾ ಗ್ರಾಮದ ಕೊಕ್ಲ ಲಕ್ಷ್ಮೀ ಸದನದಲ್ಲಿ ದೈವಾಧೀನರಾದರೆಂಬುದನ್ನು ತಿಳಿಸಲು ತುಂಬಾ ವಿಷಾದಿಸುತ್ತೇವೆ. ಶ್ರೀಯುತರು ಉಚ್ಚ ಮನೆತನಕ್ಕೆ ಸೇರಿದ ದಿವಂಗತ ಬಡಗಬೆಟ್ಟು ಶೀನಪ್ಪ ಹೆಗ್ಡೆಯರ ದ್ವಿತೀಯ ಪುತ್ರರು. ತಂದೆಯಂತೆಯೇ ತುಂಬಾ ಉದಾರಿಗಳೂ ಮೇಲ್ಪಟ್ಟದ ಕಾಂಗ್ರೆಸು ಕಾರ್ಯಕರ್ತರೂ, ಗಾಂಧೀಜಿಯವರ ಶುದ್ಧ ಅಹಿಂಸಾ ತತ್ವದ ಪ್ರತಿಪಾದಕರೂ, ಗೀತಾ ತತ್ವದ ಅನುಷ್ಠಾಧಕರೂ, ಆಗಿದ್ದರು. ಮಾತ್ರವಲ್ಲ ಆ ಜನ್ಮ ಬ್ರಹ್ಮಚಾರಿಯಾಗಿಯೇ ಸಾಮಾಜಿಕ ಸೇವಾ ಕಾರ್ಯಗಳಲ್ಲಿ ತನುಮನ ಧನಗಳನ್ನರ್ಪಿಸಿ, ಜನತೆಯ ಹೃತ್ಪೂರ್ವಕ ಅನುರಾಗ ಗಳಿಸಿದ ಪುಣ್ಯಜೀವಿ. ತನ್ನ ಬಾಲ್ಯದ 20 ವರ್ಷಗಳ ತನಕವೂ ತಂದೆಯಂತೆಯೇ, ಬರೇ ಹಣ್ಣುಹಂಪಲುಗಳನ್ನು ಮಾತ್ರ ಸೇವಿಸಿಕೊಂಡು ಆಧ್ಯಾತ್ಮಿಕ ತರಬೇತಿ ಪಡೆದು ಬಾಲ್ಯಾಶ್ರಮ ಮುಗಿಸಿದವರು. ಕೇವಲ ನಾಲ್ಕೈದು ದಿನಗಳ ಅಸ್ವಸ್ಥತೆಯಿಂದ ಮರಣದ ಕೊನೆಯ ಗಳಿಗೆಯ ವರೆಗೂ ಅಹಿಂಸಾವಾದಿಯಾಗಿ ಅಂತರ್ಧಾನರಾದರು. ಇವರ ಅಕಾಲ ಮರಣದಿಂದಾಗಿ ಈ ಸುತ್ತುವಲಯದ ಉತ್ತಮ ನಿರಾಡಂಬರ ಕಾಂಗ್ರೆಸು ಕಾರ್ಯಕರ್ತರೊಬ್ಬರು ಕಣ್ಮರೆಯಾದಂತಾಯ್ತು. ಕಳೆದ ಹಲವು ವರುಷಗಳಿಂದ ಉಡುಪಿ ತಾಲೂಕು ಕಾಂಗ್ರೆಸು ಕಮಿಟಿಯ ಸದಸ್ಯರಾಗಿದ್ದುದಲ್ಲದೆ ಹಿರಿಯಡಕ ಮಂಡಲ ಕಾಂಗ್ರೆಸ್ ಕಮಿಟಿಯ ಸದಸ್ಯರಾಗಿಯೂ ಸೇವೆಸಲ್ಲಿಸಿರುವರು.

ಮೃತರ ಒಬ್ಬರೇ ಅಣ್ಣಂದಿರಾದ ಕೃಂಗೇರಿಯಲ್ಲಿರುವ ಡಾ. ಎಲ್. ಬಿ. ಎಸ್. ಹೆಗ್ಡೆಯವರ ಹಾಗೂ ಇತರ ಬಂಧು ಮಿತ್ರರುಗಳಿಗಾದ ದುಃಖವನ್ನನುಭವಿಸಲು ಶ್ರೀ ಪರಮಾತ್ಮನು ಶಕ್ತಿಯನ್ನು ಕೊಡಲೆಂದೂ, ಮೃತರ ಆತ್ಮಕ್ಕೆ ಚಿರಶಾಂತಿ ದೊರಕಲೆಂದೂ ಹೃತ್ಪೂರ್ವಕ ಆಶಿಸುತ್ತೇವೆ. —ಮಿತ್ರವೃಂದ.

ಕಟ್ಟಿಗೆ ದರ ಏರಿಕೆಯನ್ನು ವಿರೋಧಿಸುವ ಸಭೆಯೊಂದು ಇತ್ತೀಚೆಗೆ ಉಡುಪಿಯಲ್ಲಿ ನಗರ ಸಭೆಯ ಉಪಾಧ್ಯಕ್ಷ ಶ್ರೀ ಪಿ. ರಂಗನಾಥ ಶೆಣೈಯವರ ಅಧ್ಯಕ್ಷತೆಯಲ್ಲಿ ಜರಗಿತು. ಇತ್ತೀಚೆಗೆ ಕಟ್ಟಿಗೆಯ ಕ್ರಯವು ಮಿತಿಮೀರಿ ಏರುತ್ತಿರುವುದರಿಂದ ಜನಸಾಮಾನ್ಯರಿಗೆ ಬಹಳ ಕಷ್ಟವಾಗುವುದೆಂದೂ ಈ ಕುರಿತು ಸೂಕ್ತ ಕಾರ್ಯಕ್ರಮ ಕೈಗೊಳ್ಳುವುದು ಅತ್ಯಾವಶ್ಯಕವೆಂದೂ ಪರ್ಮಿಟ್ ಕ್ರಮದಲ್ಲಿ ಬದಲಾವಣೆ ಅತ್ಯಾವಶ್ಯಕವೆಂದೂ ಕುಮ್ಕಿ ಜಾಗದ ಮರಮಟ್ಟುಗಳನ್ನು ಉಪಯೋಗಿಸಲನುಕೂಲಿಸುವಂತೆ ವರ್ಗದಾರರಿಗೆ ದರಖಾಸ್ತಿಗೆ ಕೊಡಬೇಕೆಂದೂ ಸರಕಾರವನ್ನು ಕೇಳಿಕೊಳ್ಳುವ ಇತ್ಯಾದಿ ನಿರ್ಧಾರವಾಯಿತು.

ವಿದೇಶ ಪ್ರಯಾಣ— ಡಾ' ಮಂಡ್ಕೂರು ರಾಮಣ್ಣ ಶೆಟ್ರ ಪುತ್ರ ಎಸ್. ರಬೀಂದ್ರನಾಥ ಶೆಟ್ಟಿ, B E ಇಂಜಿನಿಯರ್ (Greaves Cotton Company Ltd Bombay) ಶಿಲ್ಪನ ತಾಂತ್ರಿಕ ವಿಜ್ಞಾನ ಪಡೆಯಲು ಆಸ್ಟ್ರೇಲಿಯಾದ ಮೆಲ್‌ಬೋರ್ನ್‌ಗೆ ಕಳೆದ ತಾ. 24ಕ್ಕೆ ಬೊಂಬಾಯಿಂದ ವಿಮಾನ ಮೂಲಕ ತೆರಳಿದ್ದಾರೆ.

ಬೆಳ್ವಾಯಿ— ಇಲ್ಲಿಯ ಬೋರ್ಡ್ ಪ್ರಾಥಮಿಕ ಶಾಲೆಯ ವಾರ್ಷಿಕೋತ್ಸವವು ಕಳೆದ ತಾ 18ರಲ್ಲಿ ಪುತ್ತೂರು ತಾಲ್ಲೂಕು ಬೋರ್ಡು ಅಧ್ಯಕ್ಷ ಶ್ರೀ ಕೆ. ಸುಬ್ರಮಣ್ಯ ಗೌಡರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಎಂ ರಾಮ ಭಟ್ಟರಿಂದ ವರದಿವಾಚನ. ಶ್ರೀ ಕೆ ಗೋಪಾಲಕೃಷ್ಣ ಇವರಿಂದ ಸ್ವಸ್ತಿವಾಚನ. ಅಧ್ಯಕ್ಷರಿಂದ ಬಹುಮಾನ ವಿತರಣೆ ಹಾಗೂ ಸಮಯೋಚಿತ ಭಾಷಣವಾದ ಮೇಲೆ ಮನರಂಜನಾ ಕಾರ್ಯಕ್ರಮಗಳು ಜರಗಿದವು.

ಬೆಳಿಗ್ಗೆ ಪುತ್ತೂರು ತಾಲೂಕು ಬೋರ್ಡ್ ಸದಸ್ಯ ಶ್ರೀ ಬಿ ಕಿಟ್ಟಣ್ಣ ರೈಗಳು ಧ್ವಜಾರೋಹಣ ಮಾಡಿದರು. ಅನಂತರ ಛದ್ಮವೇಷ ಸ್ಪರ್ಧೆ, ಶಿಕ್ಷಕ ರಕ್ಷಕ ಸಂಘದ ಸಭೆ ಜರಗಿದವು

ಬೆಳ್ಮಣ್ಣು— ಇಲ್ಲಿಯ ಬೋರ್ಡ್ ಹೈಸ್ಕೂಲಿನ ವರ್ಧಂತ್ಯುತ್ಸವವು ಕಳೆದ ತಾ. 4 ರಂದು ಶ್ರೀ ಎಸ್. ಮೋಹನದಾಸ ಆಡ್ಯಂತಾಯರ ಅಧ್ಯಕ್ಷತೆಯಲ್ಲಿ ಪಂಚಾಯತ್ ಚೇರ್‌ಮೇನ್ ಪಟೇಲ್ ವೆಂಕಟರಾಯರು ರಾಷ್ಟ್ರೀಯ ಧ್ವಜವನ್ನರಳಿಸಿದರು. ಬಳಿಕ ಶ್ರೀ ಬಿ. ಎ ಬಾಬುರಾಯರ ಕೃಪೆಯಿಂದ ವಿದ್ಯಾರ್ಥಿಗಳಿಗೆ ಉಪಹಾರ ಕೊಡಲ್ಪಟ್ಟಿತು. ಅಪರಾಹ್ನ ರೆ. ಫಾ. ನಿಕೋಲಸ್, ಜೆ. ಪಿರೇರಾರವರು ಸ್ವಾಗತ ಭಾಷಣ ಮಾಡಿದರು. ಡಾ| ಕೊರಡ್ಕಲ್ ವೆಂಕಟರಾಯರು ಸಂದೇಶಗಳನ್ನೂ, ಮುಖ್ಯೋಪಾಧ್ಯಾಯ ಶ್ರೀ ಜಿ ಎ. ಸಾಮಕರು ವರದಿಯನ್ನೂ ಶಾಲಾ ವಿದ್ಯಾರ್ಥಿ ನಾಯಕ ಶ್ರೀ ಎಸ್. ಸದಾನಂದ ಸೆಟ್ಟರು ಶಾಲಾ ಸರಕಾರದ ವರದಿಯನ್ನು ಓದಿದರು. ಶ್ರೀ ಬಿ. ಅನಂತ ಕೃಷ್ಣ ತಂತ್ರಿಗಳು ಸ್ವಸ್ತಿವಾಚನಗೈದರು ಶ್ರೀ ಬಿ. ನಾರಾಯಣರಾಯರು ಅದಕ್ಕೆ ಉತ್ತರವಿತ್ತರು. ಬಳಿಕ ಸಭಿಕರ ಭಾಷಣ, ಬಹುಮಾನ ವಿತರಣೆ, ಅಧ್ಯಕ್ಷರ ಭಾಷಣ ನಾಟಕಾದಿ ವಿನೋದಾವಳಿಗಳು ಜರಗಿದವು. ಶ್ರೀ ಎ ದಿನೇಶರಾಯರು ಧನ್ಯವಾದಗಳನ್ನಿತ್ತರು.

ಉಡುಪಿ ಡಿ. ಮು. ಕೋರ್ಟಿನಲ್ಲಿ

O S. 574/1955

R 1. A 606/1960

ರಾಮಕೃಷ್ಣ ಮಂಜ—ಪೌತಿ ಕೂಡಾ — ಅರ್ಜಿದಾರರು

ಮತ್ತು

ಮಂಜಯ್ಯ ಶೆಟ್ಟಿ ಕೂಡಾ—ಎದ್ರಿರು

ಇವರೊಳಗೆ

ಪ್ರತಿವಾದಿರು: 6) ಚಂದಮ್ಮ ಶೆಡ್ತಿ, ನಾಗಮ್ಮ ಶೆಡ್ತಿ ಮಗಳು, 8) ರಾಮಣ್ಣ ಶೆಟ್ಟಿ, ಗಿರಿಯಮ್ಮ ಶೆಡ್ತಿ ಮಗಳು, 14) ರಾಜೀವ ಶೆಟ್ಟಿ, 15) ಹಿರಿಯಣ್ಣ ಶೆಟ್ಟಿ, ಸೂರ್ಯಣ್ಣ ಶೆಟ್ರ ಮಕ್ಕಳು. 8ರಿಂದ 15ನೇಯವರು ಚೇರ್ಕಾಡಿ ಗ್ರಾಮದ ಮೂಡೂರು, 6ನೇಯವಳು ಕುಂದಾಪುರ ತಾಲ್ಲೂಕು ಕ್ರೋಡಿಮನೆ ಗ್ರಾಮದ ಚೆನ್ನಬೈಲು.

ಸದ್ರಿ ಎದ್ರಿರಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ:—

ಅರ್ಜಿದಾರರು ನೀವು ಕೂಡಾ ವಗೈರೆರ ಮೇಲೆ ಪಡೆದ O S 574/55ನೇ ಪ್ರಿಲಿಮಿನರಿ ಡಿಕ್ರಿಯ ಮೇಲೆ ಮಾಡಿದ ಸದ್ರಿ ಅರ್ಜಿಯಲ್ಲಿ ನಿಮ್ಮ ನೋಟೀಸಿನ ಬಗ್ಗೆ ತಾರೀಕು 8—3—61ಕ್ಕೆ ಇಟ್ಟಿದೆ ಆ ಕುರಿತು ನಿಮಗೇನಾದರೂ ಆಕ್ಷೇಪಣೆಯಿದ್ದಲ್ಲಿ ಆ ದಿವಸ ಬೆಳಿಗ್ಗೆ 11 ಗಂಟೆಗೆ ಸರಿಯಾಗಿ ಈ ಕೋರ್ಟು ಮುಂದೆ ಬಂದು ಹಾಜರಾಗಿ ಜ್ವಾಹೀರು ಮಾಡಿಕೊಳ್ಳತಕ್ಕದ್ದು ತಪ್ಪಿದ್ರೆ ನಿಮ್ಮ ಗೈರುಹಾಜರಿಯಿಂದ ತೀರ್ಮಾನಿಸಲ್ಪಡುವುದು,

P. N. Krishnamurthi Rao,
Advocate for Petitioners.
Udipi, S. K, 15 –2...61.

ಕುಂದಾಪುರ ಅಸಿಸ್ಟಂಟ ಕಮಿಶನರ ಕೋರ್ಟಿನಲ್ಲಿ

O. P. 37/1961

ವಾಲ್ಸಿನ ಬಾಯಿ — ಅರ್ಜಿದಾರಳು.

ಮತ್ತು

1) ತಿಮ್ಮ ಪೂಜಾರಿ, 2) ಕರ್ಕಿ ಹೆಂಗ್ಸು, ಬಸವಿ ಹೆಂಗ್ಸಿನ ಮಕ್ಕಳು — ಉಡುಪಿ ತಾಲೂಕು ಪನೆಕಳ್ಳಿ ಗ್ರಾಮ — ಎದ್ರಿರು.

ಸದ್ರಿ ಎದ್ರಿರಿಗೆ ತಿಳಿಯಪಡಿಸುವದೇನಂದ್ರೆ—

ಅರ್ಜಿದಾರಳಿಗೆ ನಿಮ್ಮಿಂದ ಬರಾ ನಿಲಂಬಿ ಮತ್ತು ವಿಕಾರಿ ಸಂಬಂಧಗಳ ಗೇಣಿ ಬಾಕಿ ಮತ್ತು ಆಸ್ತಿ ಸ್ವಾಧೀನತೆ ಕೇಳಿ ಮಾಡಿದ ಮೇಲ್ಕಂಡ ಅರ್ಜಿಯು ತಾರೀಕು 8 3 61 ಕ್ಕೆ ಇಟ್ಟಿದೆ. ಆ ಕುರಿತು ಉದಾಹರಿಸುವಂತಾದಿದ್ದರೆ ಆ ದಿವಸ ಬೆಳಿಗ್ಗೆ 11 ಗಂಟೆಗೆ ಈ ಕೋರ್ಟು ಮುಂದೆ ಬಂದು ಹಾಜರಾಗಿ ಜ್ವಾಹೀರು ಮಾಡಿಕೊಳ್ಳುವುದೆಂತ ಈ ಮೂಲಕ ತಿಳಿಯಪಡಿಸಲಾಗಿದೆ.

P. N. Krishnamurthi Rao,
Advocate for Petitioner
Udipi, S K. Dated 15—2—61.

ದಿ ವಿಜಯ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ಸ್ಥಾಪನೆ: 1931

ಕಾಯಂ ಠೇವಣಾತಿದಾರರಿಗೆ ಸುಸಂದರ್ಭ

ಮೇಲಿನ ಠೇವಣಾತಿ ಬಡ್ಡಿ ದರವನ್ನು 5% ವರೆಗೆ ಹೆಚ್ಚಿಸಲಾಗಿದೆ.

ವಿವರಗಳಿಗೆ ನಮ್ಮ ಶಾಖೆಗಳಲ್ಲಿ ವಿಚಾರಿಸಿರಿ

ನಮ್ಮ ಶಾಖೆಗಳು:—

ಮುಂಬಾಯಿ, ಮಂಗಳೂರು, ಬೆಂಗಳೂರು, ಮೈಸೂರು.

ಮಡಿಕೇರಿ, ಉಡುಪಿ ಇತ್ಯಾದಿ ಇತ್ಯಾದಿ

ಅಧಿಕಾರ ವ್ಯಾಪ್ತಿ

ಅಧಿಕಾರ ವಾಣಿಗೆ ಮಾತ್ರ ಬೆಲೆ

ಯಾವುದೇ ಒಂದು ಕಾರ್ಯವು ಅದರ ಅಧಿಕಾರಿಯಿಂದ ನಡೆದರೆ ಮಾತ್ರ ಸಫಲ, ಇಲ್ಲವಾದರೆ ವಿಫಲ ಶ್ರೀ ರಾಮಕೃಷ್ಣ ಪರಮಹಂಸರು ಹೇಳಿದ ಈ ಕಥೆ ಇದಕ್ಕೊಂದು ನಿದರ್ಶನ

ಓರ್ವ ಜಿಜ್ಞಾಸೇಚ್ಛು ರಾಮಕೃಷ್ಣ ಪರಮಹಂಸರಲ್ಲಿಗೆ ಬಂದು ಪ್ರಶ್ನಿಸಿದನು! "ಮಹಾರಾಜ, ಮಂತ್ರವೆಂದರೇನು? ಯಾವನೇ ಒಬ್ಬ ಯಾವುದೇ ಗ್ರಂಥದಿಂದ ಮಂತ್ರಗಳನ್ನು ಆರಿಸಿ ಅವನ್ನು ಉರು ಹಾಕಿ ಉಚ್ಚರಿಸತೊಡಗಿದರೆ, ಅದು ಲಾಭದಾಯಕವೆನಿಸುವುದೆ?"

ಪರಮಹಂಸರು ತಲೆಯಾಡಿಸುತ್ತ ಹೇಳಿದರು "ಇಲ್ಲ ಸರ್ವಥಾ ಇಲ್ಲ. ಮಂತ್ರಗಳು ತಮ್ಮ ಅಧಿಕಾರಿಯ ಬಳಿ ಸೇರಿದಾಗ ಮಾತ್ರ ಪರಿಣಾಮಕಾರಿಯಾಗುವುವು ಇದಕ್ಕೆ ಉದಾಹರಣೆಯಾಗಿ ಈ ಕಥೆಯನ್ನು ಹೇಳಬಹುದು

"ಒಬ್ಬ ರಾಜನಿದ್ದನು. ಅವನೊಂದು ದಿನ ತನ್ನ ಪ್ರಧಾನಮಂತ್ರಿಯ ಬಳಿ ನಡೆದನು ಆಗ ಮಂತ್ರಿ ಜಪಮಾಡುವುದರಲ್ಲಿ ನಿಮಗ್ನನಾಗಿದ್ದನು ಮಹಾರಾಜನು ಅಲ್ಲಿಯೇ ನಿಂತುಕೊಂಡನು. ಪ್ರಧಾನಮಂತ್ರಿಯು ತನ್ನ ಕರ್ತವ್ಯವನ್ನು ಮುಗಿಸಿ ಬಂದಾಗ, ರಾಜನು ಪ್ರಶ್ನಿಸಿದನು. "ಏನಯ್ಯಾ, ಯಾವ ಜಪ ಮಾಡುತ್ತಿದ್ದೆ?"

"ಪ್ರಧಾನಿಯು ಉತ್ತರಿಸಿದನು: 'ಮಹಾರಾಜರೇ, ಗಾಯತ್ರಿಯನ್ನು ಜಪಿಸುತಿದ್ದೆ'

'ರಾಜನು ಹೇಳಿದನು. 'ನಮಗೂ ಗಾಯತ್ರೀ ಜಪವನ್ನು ಉಪದೇಶಮಾಡು. ನೋಡೋಣ.'

" ಆಗದು ಮಹಾರಾಜರೆ, ನಾನು ಇಂತಹ ಕಾರ್ಯವನ್ನೆಸಗಲಾರೆನು' ಮಂತ್ರಿಯು ನಿರಾಕರಿಸಿದನು.

"ರಾಜನು ಕುಪಿತನಾಗಿ ಉದ್ರೇಕದಿಂದ ಜೋರಾಗಿ ಪ್ರಶ್ನಿಸಿದನು. 'ಆಗದು? ಅದೇಕಾಗದು?'

"ಕೆಲವು ದಿನಗಳು ಗತಿಸಿದುವು. ಅಷ್ಟರಲ್ಲಿ ರಾಜನು ಒಬ್ಬ ಬ್ರಾಹ್ಮಣನನ್ನು ಪೌರೋಹಿತ್ಯಕ್ಕೆ ಕೊಂಡುಕೊಂಡು ಆತನಿಂದ ಗಾಯತ್ರೀ ಮಂತ್ರವನ್ನು ಕಲಿತುಕೊಂಡನು. ಒಂದು ದಿನ ಪ್ರಧಾನಮಂತ್ರಿಯ ಮುಂದೆ ಆ ಜಪವನ್ನುಚ್ಚರಿಸುತ್ತ 'ಇದು ಶುದ್ಧವಾಗಿದೆಯೋ ಇಲ್ಲವೋ ಹೇಳು' ಎಂದನು.

"ಪ್ರಧಾನನು ಹೇಳಿದನು: 'ಮಂತ್ರವೇನೋ ಅದೇ ಆದರೆ, ಇದರಲ್ಲಿ ಅದರ ಗುಣ ಮತ್ತು ಸ್ವಭಾವಗಳು ಮಾತ್ರ ತೋರುವುದಿಲ್ಲ.'

"ರಾಜನು ಬೆರಗುಗೊಂಡನು. ಮಂತ್ರವು ಅದೇ ಆಗಿರುವಾಗ, ಅದರ ಗುಣ-ಸ್ವಭಾವಗಳಿಲ್ಲವೆಂದರೇನು? ಎಂಬುದೇ ರಾಜನ ಮನಸ್ಸಿಗೆ ನಿಲುಕಲಿಲ್ಲ. ಆತನು ಹೆಮ್ಮೆಯಿಂದಲೇ 'ಅದೇಕೆ ಹಾಗೆ? ಇದನ್ನು ತೋರಿಸಿಕೊಡಬೇಕು' ಎಂದು ಆಜ್ಞೆ ಮಾಡಿದನು.

"ರಾಜನ ಆಜ್ಞೆ, ಧಾರಕನಾದನು ಮಂತ್ರಿವರ್ಯ.

"ಅರಮನೆಯಲ್ಲಿ ಕೆಲಸಮಾಡುತ್ತಿರುವ ದಾಸಾನುದಾಸನೊಬ್ಬ ಅಲ್ಲಿಯೇ ನಿಂತುಕೊಂಡಿದ್ದ ಪ್ರಧಾನನು ಆತನನ್ನು ತನ್ನ ಸಮೀಪಕ್ಕೆ ಕರೆದನು. 'ಮಹಾರಾಜನ ಬೆನ್ನಿಗೆ ಹೊಡೆ' ಎಂದನು ಮಂತ್ರಿ. ಆದರೆ, ಸೇವಕನು ಮಿಣಿ ಮಿಣಿ ನೋಡತೊಡಗಿದನೇ ಹೊರತು ಅತ್ತಿತ್ತ ಕದಲಲಿಲ್ಲ. ಇದೆಂತಹ ಆಟವೆಂಬುದನ್ನಾತ ತಿಳಿಯದಾದನು. ಮಂತ್ರಿಯು ಒಂದುಬಾರಿ ಹೇಳಿದನು, ಎರಡುಬಾರಿ ಹೇಳಿದನು, ಮೂರನೆಯಬಾರಿ ಗದರಿಸಿ ಹೇಳಿದನು. ಆದರೆ, ಆ ಪೋರ ಆಜ್ಞಾಪಾಲನೆ ಮಾಡಲಿಲ್ಲ ತನ್ನ ಮಂತ್ರಿಯ ಬಾಯಿಯಿಂದ ಈ ರೀತಿಯ ಮಾತುಗಳು ಹೊರಟಾವೆಂದು ರಾಜನು ಕನಸಿನಲ್ಲಿಯೂ ನೆನಸಿರಲಿಲ್ಲ. ಸರ್ವಲೋಕದ ಸಾರ್ವಭೌಮನ ಸಮಕ್ಷಮ ನಿಂತು ಆತನ ಮಂತ್ರಿ—ಕೈಯಡಿಯ ಸೇವಕ—ನೊಬ್ಬ ಈ ರೀತಿ ಉದ್ಧಟತನದ ಆಜ್ಞೆ ಹೊರಡಿಸಬೇಕೆಂದರೆ ನಿಜಕ್ಕೂ ಉನ್ಮತ್ತನಿರಲೇಬೇಕು. ಕ್ಷಣ ಕ್ಷಣಕ್ಕೆ ಅರಸನ ಸಿಟ್ಟು ಬೆಳೆದು ಹೆಮ್ಮರವಾಗುತಿತ್ತು. ಆತನದರ ಉರಿಯನ್ನು ಭಾರವನ್ನು ತಾಳದಾದನು. ಆವೇಶಯುಕ್ತನಾಗಿ ತನಗಾದ ಅಪಮಾನದ ಮರೆಯಲ್ಲಿ, 'ಲೋ, ಈ ಮಂತ್ರಿಯ ಕೆನ್ನೆಗೊಂದು ಏಟು ಕೊಡು ಮಟ್ಟಾಳ, ಯಾರಮುಂದೆ ಏನು ಬೊಗಳುತ್ತಾನೆ?' ಎಂದು ಕೆಡೆನುಡಿದನು. ಆ ಪೋರ ಒಂದು ಮುಂದು ನೋಡುವುದನ್ನು ಬಿಟ್ಟು ಹೆಜ್ಜೆ ಮುಂದಿಟ್ಟು ಮಂತ್ರಿಯ ಕಪಾಲಕ್ಕೆ ಏಟು ಬಿಗಿದೇ ಬಿಟ್ಟನು.

'ಪ್ರಧಾನನಿಗೆ ನಗು ತಡೆಯಲಾಗಲಿಲ್ಲ' ಆತನು ವಿಜ್ಞಾಪಿಸಿದನು: 'ಮಹಾರಾಜ, ತಮ್ಮ ಪ್ರಶ್ನೆಗೆ ಸೂಕ್ತ ಸಮಾಧಾನ ದೊರೆಯಿತಲ್ಲಾ?

"ರಾಜನಿಗೆ ಏನೆಂದು ಮನವರಿಕೆಯಾಗಲಿಲ್ಲ. 'ನಮ್ಮ ಯಾವ ಪ್ರಶ್ನೆ?'

" 'ಅದೇ, ಈಗ ತಾನೇ ಅಜ್ಞಾಪಿಸಿದಿರಲ್ಲಾ? ಮಂತ್ರ ಅದೇ ಆದರೂ ಅದರ ಗುಣ — ಸ್ವಭಾವಗಳದರಲ್ಲಿಲ್ಲ ಎಂಬುದಕ್ಕೆ ನಿದರ್ಶನ'.

"ರಾಜ ಅಪ್ರತಿಭನಾದ ಇದೇನಿದು ವಿಚಿತ್ರ! ಆದರೂ ಪ್ರಶ್ನಿಸಿದನು ಅದು ಹೇಗೆ?"

"ಪ್ರಧಾನ ಮಂತ್ರಿ ತಿಳಿಯ ಹೇಳಿದನು. 'ನನ್ನ ಆಜ್ಞೆಯೂ ನಿಮ್ಮ ಆಜ್ಞೆಯೂ ಏಕ ರೀತಿಯದಾಗಿತ್ತು ಅದನ್ನು ಪಾಲಿಸಬೇಕಾದವನೂ ಇವನೊಬ್ಬನೇ ಅಲ್ಲವೆ? ನನ್ನ ಆಜ್ಞೆಗೆ ಮಾನ್ಯತೆ ದೊರೆಯಲಿಲ್ಲ. ಆದರೆ, ತಮ್ಮದಕ್ಕೆ ಅದು ಲಭಿಸಿತು. ಏಕೆಂದರೆ, ಅಧಿಕಾರ ಸಹಿತವಾದ ಮಾತಿಗೆ ಅಷ್ಟು ಬೆಲೆಯಿದೆ, ಮನ್ನಣೆಯಿದೆ ನನ್ನ ಬಾಯಿಯಿಂದ ಆ ಮಾತುಗಳು ಹೊರಟಾಗ ಅವು ತಮ್ಮ ಗುಣ—ಸ್ವಭಾವಗಳನ್ನು ಕಳೆದು ಕೊಂಡುವು. ತಾವೆಂದಾಗ, ಪಡೆದುವು. ಹಾಗೆಯೇ ಮಂತ್ರಾಧಿಕಾರಿಯಾದ ನನ್ನ ಬಾಯಿಯಿಂದ ಮಂತ್ರಗಳು ಹೊರಟಾಗ ತಮ್ಮ ಗುಣಸ್ವಭಾವಯುಕ್ತವಾಗುವುವು. ಅನಧಿಕಾರಿಯಾದ ತಮ್ಮ ಬಾಯಿಯಿಂದ ಬಂದಾಗ ಗುಣರಹಿತವಾಗುವುವು"

"ರಾಜನ ಕಂಠ ತುಂಬಿಬಂತು. ಕೈಗಳು ಮಂತ್ರಿಯನ್ನಪ್ಪಿಕೊಂಡವು. ಹೃದಯವು ಆರ್ದ್ರವಾಗಿ ಅದು ನಯನಗಳಲ್ಲಿ ಇಳಿದು ಬಂತು."

ಜಿಜ್ಞಾಸು ಪರಮಹಂಸರಿಗೆ ಪೊಡಮಟ್ಟು ಮರಳಿದನು.



ಪುರುಷೋತ್ತಮ ದಾಸ್ ಟಂಡನ್ ಭಾರತ ರತ್ನ

ರಾಷ್ಟ್ರೀಯ ಚಳವಳಿಯ ಹೋರಾಟನಡೆಸಿದ ಹಿರಿಯರಲ್ಲಿ ಒಬ್ಬರಾದ ಶ್ರೀ ಪುರುಷೋತ್ತಮ ದಾಸ್ ಟಂಡನ್ ಅವರು ಹಲವಾರು ಬಾರಿ ಸೆರೆಮನೆವಾಸವನ್ನು ಅನುಭವಿಸಿದ್ದಾರೆ ಅವರು ಅಸಹಕಾರ ಚಳವಳಿಗೆ ಓಗೊಟ್ಟು 1921ರಲ್ಲಿ ವಕೀಲ ವೃತ್ತಿಯನ್ನು ತ್ಯಜಿಸಿದರು ಮುಂದೆ ಅವರು ರೌಲಟ್ ಕಾನೂನು ಚಳವಳಿಯಲ್ಲಿ, 1930 ಮತ್ತು 1932 ರ ಸತ್ಯಾಗ್ರಹಗಳು, ಸಂಯುಕ್ತ ಪ್ರಾಂತ್ಯಗಳ ಕಂದಾಯ ನಿರಾಕರಣೆ ಚಳವಳಿ ಮತ್ತು 1942ರಲ್ಲಿ "ಭಾರತದಿಂದ ತೊಲಗಿರಿ" ಚಳವಳಿ—ಈ ಮುಂತಾದ ಚಳವಳಿಗಳಲ್ಲಿ ಭಾಗಿಯಾಗಿದ್ದರು

ಶ್ರೀ ಟಂಡನ್ ಅವರು ಲಾಲಾ ಲಜಪತರಾಯರು ಸ್ಥಾಪಿಸಿದ ಸರ್ವೆಂಟ್ಸ್ ಆಫ್ ಪೀಪಲ್ ಸೊಸೈಟಿಯ ಒಬ್ಬ ಸದಸ್ಯರು. ಅವರು ಅನೇಕ ವರ್ಷಗಳವರೆಗೆ ಅಲಹಾಬಾದ್ ಪುರಸಭೆಯ ಅಧ್ಯಕ್ಷರಾಗಿದ್ದರು 1937ರಿಂದ 1939ರವರೆಗೆ ಮತ್ತು 1946 ರಿಂದ 1950 ರವರೆಗೆ ಸಂಯುಕ್ತ ಪ್ರಾಂತ್ಯಗಳ ಶಾಸನ ಸಭೆಯ ಚುನಾಯಿತ ಅಧ್ಯಕ್ಷರಾಗಿದ್ದರು ಅವರು ರಾಜ್ಯಾಂಗ ಸಭೆಯ ಸದಸ್ಯರೂ ಲೋಕಸಭೆಯ ಸದಸ್ಯರೂ ಇತ್ತೀಚಿನವರೆಗೆ ರಾಜ್ಯ ಸಭಾ ಸದಸ್ಯರೂ ಆಗಿದ್ದರು ಶ್ರೀಯುತರು ಹಿಂದೀ ಸಾಹಿತ್ಯ ಸಮ್ಮೇಳನ ಸಂಸ್ಥಾಪಕರಲ್ಲಿ ಒಬ್ಬರಾಗಿದ್ದಾರೆ.

ಕುಮಾರಿ ಚಿತ್ರಿಗಳು

(Registered)

ಈ ದೇಶೀಯ ತಯಾರಿಕೆಯ ಗುಣಾಂಶವು ವರ್ಷಗಟ್ಟಲೆಯಿಂದ ವಿಖ್ಯಾತವಾಗಿದೆ ಮತ್ತು ಪ್ರಮುಖ ಕೆಮಿಸ್ಟರಿಂದ ಈ ಕೆಳಗಿನ ದರಗಳಲ್ಲಿ ವಿಕ್ರಯಿಸಲ್ಪಡುತ್ತವೆ. ಟ್ಯೂಬಿಗೆ ರೂ. 4=00 (ಸಾದಾ), ರೂ. 6=00(ಸ್ಪೆಶ್ಯಲ್), ರೂ 9=00 (ಎಕ್ಸ್ಟ್ರಾ ಸ್ಪೆಶ್ಯಲ್).

P. DEVEE & Co. (M. I.) CALCUTTA—40

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ. ರೂ ಎರಡು ಉತ್ತಮ ಪ್ರತಿ ರೂ ಎರಡೂವರೆ
ವಿ ಸೂ —ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು.
ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದ್ದರೆ ನಮಗೆ ಬರೆಯಿರಿ
ನವಭಾರತ ಪುಸ್ತಕ ಭಂಡಾರ, ಉಡುಪಿ

ಕಾಸರಗೋಡ ಮುನ್ಸಿಫ್ ಕೋರ್ಟಿನಲ್ಲಿ

O S 405 55 R E P 659/60

ಒಟ್ಟಿಕ್ಕುಂಜ ಬ್ಯಾರಿ ಸಹಾ

— ಅರ್ಜಿದಾರರು,

ಕೆ. ಮಹಾಬಲ ಸಹಾ

— ಪ್ರತಿವಾದಿಗಳು.

ಎನ್. ಶ್ರೀ ರಾಮಕೃಷ್ಣ, 4ನೇ ಶ್ರೀ ಚನಿಯಪ್ಪ, 5ನೇ ಶ್ರೀ ಗೋಪಕ್ಕ, ಮಾಂಗಾ ಬೆಂಗ್ರಿನ ಪಕ್ಕದ, ಕೈರಂಗಳ ಗ್ರಾಮದಲ್ಲಿರುವವರು.
ಇವರಿಗ ತಿಳಿಸುವದೇನಂದ್ರೆ —

ಮೇಲ್ಕಂಡ ಅಪ್ಲಿಕ್ಯಾಶನಿನಲ್ಲಿ ವಾದಿ ಪ್ರತಿವಾದಿಗಳು ಹೊಂದಿದ ಡಿಕ್ರಿಯ ಮೇಲೆ ... ಬಗ್ಗೆ ಅಪ್ಲಿಕ್ಯಾಶನ್ ದಾಖಲ್ಮಾಡಿದ ಪ್ರಕಾರ ಅಪ್ಲಿಕ್ಯಾಶನಿನ ವಿಚಾರಣೆ ಬಗ್ಗೆ ತಾರೀಕು 27—3—1961ಕ್ಕೆ ಇಟ್ಟಿರುವದ್ರಿಂದ ಆ ದಿನ ಮೇಲ್ಕಂಡ ಕೋರ್ಟಿನಲ್ಲಿ ಬೆಳಗ್ಗೆ 11 ಗಂಟೆಗೆ ತಪ್ಪದೆ ಹಾಜರಾಗತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಸಲಾಗಿರುವದೆ.

(Sd) K. P V B Ejman,

Advocate for Petitioner.

Kasaragod 25—2—1961

ಆಧ್ಯಾತ್ಮಿಕ ವಿಚಾರ

ಭಗವದ್ಗೀತೆಯ ಪ್ರಕಾಶ

ಪರಮಾತ್ಮನಲ್ಲಿ ವಿಲೀನಗೊಳ್ಳಲು ಭಕ್ತಿಯೋಗಕ್ಕಿಂತ ಸರಳ ಸುಲಭವಾದ ವಿಧಾನಬೇರೆಯಿಲ್ಲ ಅವರವರ ಶಕ್ತ್ಯನುಸಾರ ಧ್ಯಾನ, ಜ್ಞಾನ, ಭಕ್ತಿಯೋಗಗಳಲ್ಲಿ ಬೇಕಾದುವನ್ನು ಅನುಸರಿಸಿ, ಒಬ್ಬನೇ ಒಬ್ಬನಾಗಿ ಎಲ್ಲೆಲ್ಲಿಯೂ ಇದ್ದು ಮೆರೆಯುತ್ತಿರುವ ಪರಮಾತ್ಮ ಸಾನಿಧ್ಯವನ್ನು ಪಡೆಯ ಬಹುದು.

ಶ್ರೀ ಎಂ. ಬಿ ಶಂಕರ ರಾವ್, ಐ ಎ ಎಸ್. (ನಿವೃತ್ತ)

ಕಿರಣ ೧೨: ಭಕ್ತಿ ಯೋಗ

ಅರ್ಜುನ:— ನಿನ್ನ ಸ್ವರೂಪವನ್ನು ನೋಡದೆ ನಿನ್ನನ್ನು ಪೂಜಿಸುವವರು ಒಂದು ತರಗತಿಯವರು. ನಿನ್ನ ಸ್ವರೂಪವನ್ನು ನೋಡಿ ನಿನ್ನನ್ನು ಪೂಜಿಸುವವರು ಇನ್ನೊಂದು ತರಗತಿಯವರು. ಇವರಲ್ಲಿ ವ್ಯತ್ಯಾಸವೇನು?—

ಭಗವಾನ:— ಯಾರು ತನ್ನ ಚಿತ್ತವನ್ನು ಸಂಪೂರ್ಣವಾಗಿ ನನ್ನಲ್ಲಿಟ್ಟು ನಿಷ್ಕಾಮಪ್ರೀತಿಯಿಂದ ಪ್ರೇರೇಪಿಸಿದ ನಿಷ್ಕಾಮ ಕರ್ಮಗಳನ್ನು ಮಾಡುತ್ತಾನೋ, ಯಾರು ಯಾವ ಕಳಂಕವೂ ಇಲ್ಲದ ಶುದ್ಧ ಭಕ್ತಿಯನ್ನು ನನ್ನಲ್ಲಿ ಇಡುತ್ತಾನೋ ಅವನೇ ಯೋಗೇಶ್ವರನು. ಇತರ ಯೋಗಿಗಳು ಏಕಾಂಗಿಯಾಗಿ ಮಾತ್ರ ನನ್ನನ್ನು ಸೇರುವರು. ಭಕ್ತಿಯೋಗದ ಮಾರ್ಗದಲ್ಲಿ ಕಂಟಕಗಳು ಕಡಿಮೆ. ಏಕಾಗ್ರಚಿತ್ತದಿಂದ ನನ್ನನ್ನು ಸ್ಮರಿಸಿ, ತಾವು ಮಾಡುವ ಎಲ್ಲಾ ಕರ್ಮಗಳನ್ನು ನನಗೆ ಒಪ್ಪಿಸಿ, ನಾನೇ ಅವರ ಪ್ರೇಮದ ಬಿಂಬವೆಂದು ಭಕ್ತಿತೋರಿಸುವವರು ಭಕ್ತಿಯೋಗಿಗಳಾಗುವರು. ಅದು ಕಾರಣ, ನೀನು ನಿನ್ನ ಚಿತ್ತವನ್ನು ನನ್ನಲ್ಲಿ ಸಂಪೂರ್ಣವಾಗಿಡು. ಹಾಗೆ ಮಾಡಿದರೆ, ನೀನು ಇನ್ನುಮುಂದೆ ನನ್ನಲ್ಲಿ ನೆಲೆಗೊಳ್ಳುವೆ. ಇದರಲ್ಲಿ ಸಂಶಯವಿಲ್ಲ. ಭಕ್ತಿಭಾವದಿಂದ ನನ್ನ ಧ್ಯಾನವನ್ನು ಮಾಡುತ್ತ ಇರು. ಧ್ಯಾನವು ಕಷ್ಟವೆಂದು ತೋರಿದರೆ, ನನ್ನ ಸೇವೆಯನ್ನು ಶ್ರದ್ಧೆಯಿಂದ ಮಾಡು ನನ್ನ ಸೇವೆಯಿಂದ ನೀನು ಮುಕ್ತಿಯನ್ನು ಪಡೆಯುವೆ ಇದೂ ನಿನ್ನಿಂದ ಸಾಧ್ಯವಾಗದಿದ್ದರೆ, ನೀನು ಮಾಡಿದ ಯಾವತ್ತೂ ಕರ್ಮಗಳ ಫಲವನ್ನು ಆಶಿಸದೆ ತ್ಯಾಗಿಯಾಗು. ತ್ಯಾಗದಿಂದ ಶಾಂತಿಯು ಸಿಕ್ಕುವುದು. ಯಾವ ಜೀವಾತ್ಮನಲ್ಲಿ ವೈರವನ್ನು ಬೆಳೆಸದೆ, ಎಲ್ಲರಲ್ಲೂ ಕರುಣೆಯನ್ನು ಬೀರಿ, 'ನಾನು, ನನ್ನದು, ನಾನು ಮಾಡಿದೆನು" ಎನ್ನುವ ಅಹಂಕಾರವನ್ನು ಸುಟ್ಟುಬಿಟ್ಟು, ಸುಖ ದುಃಖಗಳನ್ನು ಏಕರೀತಿಯಲ್ಲಿ ಅನುಭವಿಸಿ, ಇದ್ದುದರಲ್ಲಿ ತೃಪ್ತಿಹೊಂದಿ, ನನ್ನ ಮಹಿಮೆಯನ್ನೂ ಶಕ್ತಿಯನ್ನೂ ಸರಿಯಾಗಿ ಅರಿತು, ಕ್ರೋಧ, ಭಯ, ಸಂಶಯಗಳನ್ನು ಓಡಿಸಿಬಿಟ್ಟು ನನ್ನ ಪ್ರೇಮಕ್ಕೆ ಭಕ್ತಿಭಾವದಿಂದ ಪಾತ್ರನಾಗು ಯಾರು ದುರಾಶೆಗಳನ್ನು ತೊಲಗಿಸುವನೋ, ಯಾರು ಚುರುಕುಬುದ್ಧಿಯವನೋ, ಯಾರು ವೈರಿಗಳನ್ನು ಪ್ರೀತಿಸುವನೋ, ಆತನೇ ತ್ಯಾಗಿಯು. ಆತನೇ ನನ್ನ ಪರಮಭಕ್ತನು. ಯಾರು ಶೀತೋಷ್ಣಗಳನ್ನು ಸಮದೃಷ್ಟಿಯಿಂದ ಸಹಿಸುವನೋ, ಯಾರು ಹೊಗಳಿಕೆಗೆ ಹಿಗ್ಗುವುದಿಲ್ಲವೋ, ಯಾರು ತೆಗಳಿಕೆಗ ಕುಗ್ಗುವುದಿಲ್ಲವೋ ಯಾರು ವಂಚನೆಯನ್ನು ಬಿಟ್ಟು ಸತ್ಯಧರ್ಮದಲ್ಲಿ ನಡೆಯುವನೋ, ಯಾರು ಮತ್ಸರವನ್ನು ತೊರೆದು, ಸುಖದುಃಖಗಳನ್ನು ಒಂದೇ ರೀತಿ ಕಾಣುವನೋ, ಆ ಮಾನವನು ನನ್ನ ಪರಮಭಕ್ತನು. ಮಾತ್ರವಲ್ಲ ಆತನು ನನಗೆ ಪರಮಪ್ರಿಯನ. ಆತನು ನನ್ನಲ್ಲಿ ಒಂದಾಗುವನು.

ಂ ಂ

ಕಿರಣ ೧೩ ದೇಹವೂ, ಆತ್ಮವೂ

ಅರ್ಜುನ: ಸ್ವಭಾವ ಮತ್ತು ಚೈತನ್ಯ, ಸ್ಥಾನವು ಮತ್ತು ಅದರ ತಿಳುವಳಿಕೆಯು, ಜ್ಞಾನವು ಮತ್ತು ಅದರ ಉದ್ದೇಶವು, ಇವನ್ನು ಕೇಶವನೇ ದಯವಿಟ್ಟು ತಿಳಿಸು

ಭಗವಾನ:— ಕುಂತೀ ಪುತ್ರನೇ ಅವಧರಿಸು ಮನುಷ್ಯನ ದೇಹವೇ ಸ್ಥಾನ. ಶರೀರವನ್ನು ಸೇರಿಕೊಂಡ ಆತ್ಮನೆ ಸ್ಥಾನದ ತಿಳುವಳಿಕೆಯು, ಎಲ್ಲಾ ಸ್ಥಾನಗಳ ತಿಳುವಳಿಕೆಯು ನನ್ನಲಿದೆ ಎಂಬುದನ್ನು ಮೊದಲು ಗಮನಿಸು. ಸ್ಥಾನಗಳ ಮತ್ತು ಅವುಗಳ ತಿಳುವಳಿಕೆಯ ಉದ್ದೇಶಗಳನ್ನು ಸಂಗ್ರಹಿಸುವುದೆ ಜ್ಞಾನವು ಸಂಪೂರ್ಣ ಜ್ಞಾನಿಗಳಾದ ಋಷಿಗಳು ಹಲವು ವಿಧಗಳಲ್ಲಿ ಇದನ್ನೆಲ್ಲ ಪದ್ಯರೂಪದಲ್ಲಿ ಹಾಡಿ ತೋರಿಸಿರುವರು. ಶ್ಲೋಕ ರೂಪದಲ್ಲಿಯೂ ಪ್ರಕಾಶಿಸಿರುವರು. ಮುಖ್ಯ ಧಾತುಗಳು, ಸ್ಥಿತ ಪ್ರಜ್ಞತೆ, ವಿವೇಕ, ಅಗೋಚರ ವಸ್ತುಗಳು, ಐದು ಇಂದ್ರಿಯಗಳು, ಹತ್ತು ಇಂದ್ರಿಯ ಭಾವಗಳು, ಮನಸ್ಸು ದುರಾಶೆ, ವೈರ, ಸುಖ, ದುಃಖ, ಶರೀರದ ರಚನೆ, ನಿಷ್ಕಾಮ ಪ್ರೀತಿ, ಒಳ್ಳೆಯ ಆಶೆಗಳು, ಬುದ್ಧಿಸೂಕ್ಷ್ಮತೆ ಸ್ಫೂರ್ತಿ—ಇವೆಲ್ಲವೂ ಒಂದಾಗಿ ಸೇರಿ ಸ್ಥಾನವೆಂಬುದನ್ನು ಸೃಷ್ಟಿಸುತ್ತಿವೆ ಇದನ್ನು ನಾನು ಸಂಕ್ಷೇಪವಾಗಿ ಹೇಳುತ್ತೇನೆ ಲಜ್ಜೆ, ಪ್ರಾಮಾಣಿಕತೆ, ಅಹಿಂಸೆ, ಸಹನ, ಸತ್ಯ, ಗುರುಸೇವೆ, ಶುಚಿತ್ವ, ಸಾಹಸ, ಮತ್ತು ಇಂದ್ರಿಯನಿಗ್ರಹ, ಇನ್ನೂ ಅಹಂಭಾವ, ಜನನ, ಮರಣ, ವಾರ್ಧಕ್ಯ, ಅನಾರೋಗ್ಯ, ನೋವು, ಇವುಗಳಲ್ಲಿರುವ ಕೆಡುಕನ್ನು ಪರಿಶೋಧಿಸುವಿಕೆ, ಮನೆ, ಪತ್ನಿ, ಮಕ್ಕಳು, ಎನ್ನುವ ಮೋಹಪಾಶದಿಂದ ಬಂಧನದಿಂದ ಮುಕ್ತನಾಗುವಿಕೆ ಧ್ಯಾನಮೌನಗಳಿಂದ ಏಕಾಗ್ರಚಿತ್ತ, ಭಕ್ತಿಯನ್ನು ನನ್ನಲ್ಲಿಡುವಿಕೆ ಪ್ರೇತಭೂತಗಳ ಜ್ಞಾನ, ಸತ್ಯಶೋಧನೆ, ಮೊದಲಾದ ಯಾವತ್ತೂ ವಸ್ತು ವಿಷಯಗಳಲ್ಲಿ ಸೇರಿ ಸಂಪೂರ್ಣ ಜ್ಞಾನವೆನ್ನಿಸುವ ರಚನೆಯಾಗುತ್ತದೆ. ಪರಮಾತ್ಮನು ಸಂಪೂರ್ಣ ಜ್ಞಾನಿಯು. ಆತನಿಗೆ ಆದಿಯೂ ಇಲ್ಲ, ಅಂತ್ಯವೂ ಇಲ್ಲ ಅಣುರೇಣು ತೃಣಕಾಷ್ಠಗಳಲ್ಲೂ ಆತನು ಇರುವನು. ಇಂದ್ರಿಯಗಳ ಜ್ಞಾನವು ಆತನಲ್ಲಿದ್ದರೂ, ಆತನು ಇಂದ್ರಿಯಗಳಿಂದ ಬಾಹಿರನು. ಪ್ರಕೃತಿಯ ಸ್ವಭಾವಗಳಿಂದ ಆತನು ಆನಂದ ಪಡುತ್ತಾನೆ. ಆದರೆ ಅಪ್ಪ ಭಾವಗಳು ಆತನನ್ನು ತಟ್ಟವು. ಆತನು ಎಲ್ಲಾ ಜೀವ ಜಂತುಗಳ ಒಳಗೂ, ಹೊರಗೂ ಇರುವನು. ಆವನು ನಿಶ್ಚಲನಾದರೂ, ಎಂದೂ ಚಲಿಸುತ್ತಲೆ ಇರುವನು ಅತಿಸೂಕ್ಷ್ಮನಾದುದರಿಂದ ಆವನು ಗೋಚರಿಸುವುದು ಅಸಾಧ್ಯ. ಆವನು ದೂರದಲ್ಲೂ, ಹತ್ತಿರದಲ್ಲೂ ಇರುವನು ಆವನು ಅಖಂಡನು ಆದರೂ ಪ್ರತಿಯೊಂದು ಅಣುವಿನಲ್ಲಿ ಇರುವನು. ಆವನಿಂದಲೆ ಜಗತ್ತಿನ ಅಳಿವು, ಉಳಿವು ಆವನು ಸೃಷ್ಟಿಕರ್ತನು, ಆವನೇ ನಾಶಕಾರಕನು ಆವನೇ ಪ್ರಕಾಶ ಮೂರ್ತಿಯು ಆವನೇ ಶೋಭಾರತ್ನವು. ಆವನಿಗೆ ಕತ್ತಲೆಯು ಗೋಚರಿಸದು ಆವನೇ ಜ್ಞಾನದ ವಸ್ತು ಜ್ಞಾನ ಸಂಪಾದನೆಯ ಉದ್ದೇಶಕನು ಆವನು ಎಲ್ಲರ ಹೃದಯಗಳಲ್ಲೂ ಮಂಡಿಸಿರುವನು. ಸ್ಥಾನ ಜ್ಞಾನಗಳನ್ನು ಅವುಗಳ ಮುಖ್ಯ ಉದ್ದೇಶಗಳನ್ನು ಸಂಕ್ಷಿಪ್ತವಾಗಿ ವಿವರಿಸಿದ್ದೇನೆ. ಸ್ವಭಾವವೂ, ಚೈತನ್ಯವೂ ಆದಿಯಿಲ್ಲದ ಭಾವಗಳು. ಸಕಲ ಗುಣಗಳೂ, ಸ್ವಭಾವದಿಂದ ಉದಿಸುವುವು. ಸ್ವಭಾವವೇ ದೇಹವನ್ನು ರಚಿಸುವ ಯಂತ್ರ. ಸ್ವಭಾವದಿಂದಲೇ ಶರೀರದ ಎಲ್ಲಾ ಅವಯವಗಳು ಹುಟ್ಟುತ್ತಿವೆ. ಸುಖದುಃಖಗಳ ಅನುಭವವು ಚೈತನ್ಯದಿಂದ ಲಭಿಸುವುದು. ಸ್ವಭಾವನ್ನು ಸೇರಿ ಚೈತನ್ಯವು ಸ್ವಭಾವದ ಭಾವಗಳನ್ನು ಅನುಭವಿಸುತ್ತಿದೆ. ಈ ಭಾವಗಳ ತಿಳುವಳಿಕೆಯಿಂದಲೇ ಜೀವನವು ಕೆಟ್ಟ ಮತ್ತು ಒಳ್ಳೆಯ ಗರ್ಭವನ್ನು ಸೇರಿ ಜನನಗಳಾಗುತ್ತಿವೆ ಶರೀರವನ್ನೊಳಗೊಂಡ ಉತ್ತಮವೂ, ಶುದ್ಧವೂ ಆದ ಚೈತನ್ಯವು ಎಲ್ಲವನ್ನೂ ತಿಳಿದು, ಎಲ್ಲವನ್ನೂ ಆಧರಿಸಿ, ಸುಖಗಳನ್ನು ಒದಗಿಸಿ ಪರಮಾತ್ಮನಲ್ಲಿ ಅಡಕವಾಗವುದು ಈ ತತ್ವವನ್ನು ಅರಿತ ಸಂಪೂರ್ಣ ಜ್ಞಾನಯೋಗಿಗಳು ಪುನರ್ಜನ್ಮವೆತ್ತುವುದಿಲ್ಲ ಬರೇ ಧ್ಯಾನದ ಶಕ್ತಿಯಿಂದ ಕಲವರು ತಮ್ಮ ದೇಹದ ಚೈತನ್ಯವನ್ನು ತಿಳಿಯುವರು. ದೃಢಚಿತ್ತವೆ ಆ ತಿಳುವಳಿಕೆಗೆ ಆಧಾರವು. ದೇಹವೂ, ಆತ್ಮವೂ, ಒಂದಾಗಿ ಸೇರಿರುವುದರಿಂದ ಎಲ್ಲಾ ಕರ್ಮಗಳು ನಡೆಯುತ್ತಿವೆ. ಈ ಸಂಬಂಧದಿಂದಲೇ ಜನನಗಳು ಪ್ರಾಪ್ತಿಸುತ್ತವೆ, ಚಲನಗಳು ಆಗುತ್ತಲಿವೆ. 'ಅಹಂಕಾರ'ವನ್ನು ಬಿಟ್ಟು ಬಿಟ್ಟು ಎಲ್ಲಾ ಕರ್ಮಗಳು ಸ್ವಭಾವದಿಂದಲೇ ಉಂಟಾಗುವವು ಎಂದು ನಿಶ್ಚಲ ಬುದ್ಧಿಯಿಂದ ತಿಳಿದುಕೊಳ್ಳುವವನಿಗೆ ಜ್ಞಾನವು ಲಭಿಸುವುದು. ಎಲ್ಲವೂ ಪರಂಜ್ಯೋತಿ ಪರಮಾತ್ಮನಿಂದಲೆ ಹುಟ್ಟುತ್ತಿವೆ. ಚಲಿಸುತ್ತಿವೆ ಎಂದು ಸಂಶಯವಿಲ್ಲದ ತಿಳಿದವರು ನಿಷ್ಕಾಮ ಕರ್ಮಗಳನ್ನು ಮಾಡಿ ಮೋಕ್ಷ ಮಾರ್ಗವನ್ನು ಕಂಡು ಹಿಡಿಯುವರು ಅವರು ಕ್ರಮೇಣ ನನ್ನಲ್ಲಿ ಐಕ್ಯರಾಗುವರು. ಒಬ್ಬನೇ ಒಬ್ಬನಾದ ಸೂರ್ಯನು ಸಮಸ್ತ ಜಗತ್ತನ್ನು ಬೆಳಗಿಸುವಂತೆ, ಆತ್ಮವು ಎಲ್ಲಾ ದೇಹಗಳನ್ನು ಬೆಳಗಿಸುತ್ತದ. ದಿವ್ಯ ದೃಷ್ಟಿಯಿಂದ ದೇಹಕ್ಕೂ, ಆತ್ಮಕ್ಕೂ ಇರುವ ಭೇದವನ್ನು ತಿಳಿದವರು ಜನನಗಳಿಂದ ವಿಮುಕ್ತರಾಗಿ, ಪರಮಾತ್ಮನಲ್ಲಿ ಸೇರುವರೆ ಪ್ರಯತ್ನಿಸಿ ಜಯಪ್ರದರಾಗುವರು.

ಠೇವಣಾತಿಗಳು.......ಆಕರ್ಷಕ ಬಡ್ಡಿ ದರಗಳು

ಜೀವನದ ವೆಚ್ಚವು ದಿನೇ ದಿನೇ ಹೆಚ್ಚುತ್ತಲಿದ್ದರೂ, ಕಷ್ಟಪಟ್ಟು ಉಳಿಸಿದ
ನಿಮ್ಮ ಹಣಕ್ಕೆ—ಅತ್ಯಗತ್ಯವಿರುವ ಸುರಕ್ಷಿತತೆ ಮತ್ತು ಭದ್ರತೆ
ಗಳೊಂದಿಗೆ—ಅತ್ಯಾಕರ್ಷಕ ದರದಲ್ಲಿ ಬಡ್ಡಿ ಕೊಟ್ಟು,
ನಿಮ್ಮನ್ನು ಸಂತುಷ್ಟರಾಗಿ ಮಾಡಲು

ಕೊರ್ಪೊರೇಶನ್ ಬೇಂಕು

ತಾನು ಠೇವಣಾತಿಗಳ ಮೇಲೆ ಕೊಡುವ ಬಡ್ಡಿ ದರಗಳನ್ನು
ಇತ್ತೀಚೆಗೆ ಬದಲಾಯಿಸಿದೆ

ವಿವರಗಳನ್ನು
ನಿಮಗೆ ಸಮೀಪವಿರುವ ಇದರ ಶಾಖೆಯಿಂದ ಪಡೆಯಬಹುದು

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಿಗಳು,
ಫಾರ್ಮುಗಳು,
ದೊರೆಯುತ್ತವೆ.
ವಿಚಾರಿಸಿರಿ—
ನವಯುಗ ಪ್ರೆಸ್, ಉಡುಪಿ

Tel: 'BLUEYAGAR'. — ಚಿನ್ನ ಮುತ್ತು ವಜ್ರಗಳ ಆಧುನಿಕ ತವರುಮನೆ — Phone :374

ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್.

ಸ್ಥಾಪನೆ.1919] ಚಿನ್ನ ಮುತ್ತು ವಜ್ರದ ವ್ಯಾಪಾರಿಗಳು, (ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ) ಮಂಗಳೂರು [ಮಾಲಿಕ. ಕೆ ಕ ಆರ್ ಶೇಟ್

ವಿಚಾರವರ್ಷ

(೯ನೇ ಪುಟದಿಂದ)

ಲಿಗೆ ಸೀಳಿಹೋಗ'; 'ನಿನ್ನ ಕಣ್ಣು ಹೊಟ್ಟು ಹೋಗ' ಎಂದು ಮುಂತಾದ ಶಾಪ ವಚನಗಳನ್ನು ನಾವು ದಿನನಿತ್ಯವೆಂಬಂತೆ ಕೇಳುತಿದ್ದೇವೆ.

ಮೆಲಾನೇಶಿಯಾದಲ್ಲಿ ಮಗುವಿನ ತಲೆಯ ಮೇಲೆ ಕೈಯಿಟ್ಟು ಆಶೀರ್ವಾದ ಕೊಡುವ ಕ್ರಮವಿದೆ. ಇದರಿಂದ ಆಶೀರ್ವಾದ ನೀಡುವವನಲ್ಲಿರುವ ದೈವಿಕ ಶಕ್ತಿ ಬಾಲಕನಲ್ಲಿ ಸೇರುವುದು ಎಂಬ ವಿಶ್ವಾಸ ಇವರದು. ಮಸಾಯಿ ಜಾತಿಯಲ್ಲಿ ಮೂಗಿನಿಂದ ಸೀನಿಯೇ ಆಶೀರ್ವಾದ ಕೊಡುವ ಕ್ರಮವಿದೆ. ಪಶ್ಚಿಮ ಆಫ್ರಿಕದ ಫಿಯೋರ್ ಜಾತಿಯವರು ಯಾವುದಾದರೂ ವಸ್ತುವನ್ನು ಮಾರುತ್ತಿರುವಾಗ, ಅದಕ್ಕೆ ಆಶೀರ್ವಾದ ಮಾಡುತ್ತಾರೆ. ತಮ್ಮ ಬೆರಳುಗಳನ್ನು ಕಂಕುಳಲ್ಲಿರಿಸಿಕೊಂಡು ಕೊಂಡುಕೊಳ್ಳುವವನ ಕಡೆಗೆ ಕೈಚಾಚಿ ಆಶೀರ್ವಾದ ನೀಡುತ್ತಾರೆ. ಹಾಗೆಯೇ ಕೊಂಡುಕೊಳ್ಳುವವನಿಗೂ ವಿಕ್ರೇತನ ಶುಭಾಶಂಸೆ ಅರ್ಥಾತ್ ಆಶೀರ್ವಾದವು ಅವಶ್ಯಕವೆಂದು ತಿಳಿಯುತ್ತಾರೆ.

ಹಿಬ್ರೂ ಜನಾಂಗದಲ್ಲಿ ಆಶೀರ್ವಾದ ಕೊಡುವಾಗ ತಮ್ಮೆರಡೂ ಕೈಗಳನ್ನು ಮೇಲಕ್ಕೆತ್ತುತಿದ್ದರು. ಯೆಹೂದಿಯರ ಇಗರ್ಜಿಗಳಲ್ಲಿ ಬಲಗೈಯೆತ್ತಿ ಆಶೀರ್ವದಿಸುತ್ತಾರೆ. ಇಸ್ಲಾಮಿ ಸಂಪ್ರದಾಯದಂತೆ ಆಶೀರ್ವದಿಸುವಾಗ ಟೊಪಿಯು ಗುಣಾಗಾಡುತ್ತಿರುತ್ತದೆ. "ಆಯರ್ಲೆಂಡಿನ ಜನಪದ ಕಥೆಗಳಿಗನುಸಾರವಾಗಿ ಒಂದು ಬಾರಿ ಶಾಪವಿತ್ತರೆ, ಅದು ಒಂದಲ್ಲ ಒಂದು ವಸ್ತುವಿನ ಮೇಲೆ ಬೀಳಲೇ ಬೇಕು, ಇದಕ್ಕೆ ಏಳು ವರ್ಷಗಳ ಅವಧಿಯಿದ್ದು ಅದುತನಕ ಅದು ಗಾಳಿಯಲ್ಲೇ ಹಾರಾಡಿಕೊಂಡಿರುತ್ತದೆ. ಅವಧಿ ಮುಗಿಯುವುದರೊಳಗೆ ಅದರ ಗುರಿಯಾಗಿದ್ದವನ ಮೇಲೆ ಬೀಳಿಯೇ ಬೀಳುತ್ತದೆ. ಶಾಪವಿತ್ತವನಾದರೂ ಅದನ್ನು ಹಿಂತೆಗೆದುಕೊಳ್ಳಲಾರ.' ಕೊಂಡ ಪಕ್ಷದಲ್ಲಿ ಅದು ಆತನನ್ನೇ ತಿಂದುಬಿಡುವುದು; ಇಲ್ಲವೇ ರೋಗ, ಕಷ್ಟ, ನಷ್ಟಗಳು ಆತನಿಗೆ ಬರುವುವು

ಪ್ರಾಚೀನ ಟ್ಯೂಟನ್ ಗಾದೆಯಂತೆ, ಶಾಪವು ಕೂಡಲೇ ತನ್ನ ಕಾರ್ಯದಲ್ಲಿ ಪ್ರವರ್ತಿಸುತ್ತದೆ. ಒಂದುಬಾರಿ ಉಚ್ಚಾರಿತವಾದ ಮಾತನ್ನು ಹಿಂದೆಗೆದುಕೊಳ್ಳುವುದು ಸಾಧ್ಯವಿಲ್ಲವೆಂದು ಕ್ರೈಸ್ತರ ಧರ್ಮಗ್ರಂಥ ಓಲ್ಡ್ ಟೆಸ್ಟಮೆಂಟಿನಲ್ಲಿ ಉಲ್ಲೇಖವಿದೆ. ಪ್ರಪಂಚದಲ್ಲಿ ಶಾಪದ ಭಯ, ಸಂಕಟ ಮತ್ತು ಆಕ್ರಮಣಗಳಿಂದ ಉಳಿಯುವ ಉಪಾಯ ಮತ್ತು ಉಪಚಾರಗಳೂ ಇವೆ. ಶಾಪದಿಂದ ಉಳಿಯಬೇಕಾದರೆ, ಅರಬರು ತತ್‌ಕ್ಷಣ ಭೂಮಿಯಲ್ಲಿ ಬಿದ್ದು ಮುಖವನ್ನು ಭೂಮಿಗೆ ತಾಗಿಸಿಬಿಡುತ್ತಾರೆ. ಆಗ ಪ್ರಕಟಗೊಂಡ ಶಾಪವು ತೇಲುತ್ತ ಮುಂದುವರಿಯುವುದಂತೆ!

ಪ್ರಪಂಚದ ಎಲ್ಲ ಜಾತಿಯವರೂ ಶಪಥ ಮತ್ತು ಶಾಪಗಳಿಂದ ಹೆದರುತ್ತಾರೆಂದೇನೂ ಇಲ್ಲ. ಇವನ್ನು ಸ್ವಾಗತಿಸುವವರೂ ಕೆಲವರಿದ್ದಾರೆ. ಯೂನಾನಿನ ರೈತರು ಗದ್ದೆಯನ್ನು ಬಿತ್ತಿದಾಗ, ತಮ್ಮನ್ನು ಯಾರಾದರೂ ನಿಂದಿಸಬೇಕು, ತಮಗೆ ಶಾಪ ಕೊಡಬೇಕು ಎನ್ನುತ್ತಾರೆ. ಇಲ್ಲವಾದರೆ, ಅವರ ಕೃಷಿಯು ಉತ್ತಮ ಫಸಲು ಕೊಡುವುದಿಲ್ಲವಂತೆ! ಇಸ್ಥೋನಿಯಾದ ಬೆಸ್ತರು ಮೀನು ಹಿಡಿಯಲು ಹೋಗುವುದಕ್ಕೆ ಮೊದಲು ಯಾರಾದರೂ ತಮ್ಮನ್ನು ಸಾಕೆನಿಸುವಷ್ಟು ನಿಂದಿಸಿದರೆ, ಅದು ಶುಭ ಸೂಚಕವೆಂದು ಅಭಿಮಾನಪಡುತ್ತಾರೆ. ಈ ನಿಂದೆಯನ್ನು ಪಡೆಯುವುದಕ್ಕೋಸ್ಕರ ಅವರು ಯಾರಾದರೊಬ್ಬರ ಮೇಲೆ ಸಿಡಿದು ಬೀಳುತ್ತಾರೆ; ಕೆಲವೊಮ್ಮೆ ಅವರಿಗೆ ಶಾರೀರಿಕ ಪೀಡೆ ಕೊಡುವುದೂ ಇದೆ. ಬಿಹಾರದ ಹಳ್ಳಿಗಳಲ್ಲಿ ಜನರು ಇದಕ್ಕಾಗಿಯೇ ನೆರೆಮನೆಯ ಮಾಡಿಗೆ ಕಲ್ಲು ಹೊಡೆದು ಅದರ ಮಾಲಿಕನಿಂದ ಬೈಗಳನ್ನು ಕೇಳಿ ತೃಪ್ತಿಪಡುತ್ತಾರೆ.

ಶಿವರಾತ್ರಿಯ ಪರ್ವದಿನಗಳಂದು ಹೆರವರ ಮನೆಮಾಡುಗಳಿಗೆ ಕಲ್ಲು ಗೆಟ್ಟಿಗಳನ್ನೆಸೆದು ಅವರಿಂದ ನಿಂದೆಯನ್ನೋ ಶಾಪವನ್ನೋ ಗಳಿಸಿ ಧನ್ಯರೆಂದು ಕೊಳ್ಳುವವರೂ ಇಲ್ಲದಿಲ್ಲ. ಹಬ್ಬಹರಿ ದಿನಗಳಲ್ಲಿ ಬೇರೆಯವರ ಒಡವೆ ವಸ್ತುಗಳನ್ನು ಕದಿದು ಅಡಗಿಸಿಟ್ಟು ಅವರಿಂದ ಬೈಸಿಕೊಳ್ಳುವುದೂ ಪುರಾತನ ಸಂಪ್ರದಾಯ. ಎಪ್ರಿಲ್ ಫೂಲ್ ಮಾಡುವುದೂ ಇದೇ ಮಾದರಿಯ ಒಂದು ಆಟವೆನ್ನಬಹುದು.

ಹೀಗೆ ಶಪಥ, ಶಾಪ ಮತ್ತು ವರದಾನದ ವಿಚಿತ್ರ ಪ್ರಣಾಳಿ ಹಾಗೂ ಪರಂಪರೆಗಳು ಬಹಳವಿವೆ. ಇವೆಲ್ಲವನ್ನೂ ನಾವು ವೀಕ್ಷಿಸುವಾಗ, ಇವು ವ್ಯಕ್ತಿಯ. ನಿರ್ಬಲತೆಯನ್ನು ತೋರಿಸುವುದೆಂದೂ ಅದರೂ ಹಲವಾರು ಶತಮಾನಗಳಿಂದ ಈ ತಪರಂಪರೆ ಉಚ್ಛೃಂಖಲವಾಗಿ ಮುಂದುವರಿದು ಬಂದಿದೆಯೆಂದೂ ತಿಳಿಯುವುದು. ಮಾನವನು ಶಪಥ ಗ್ರಹಣ ಮಾಡಿದರೂ ವಚನ ಭಂಗಕ್ಕೆ ಪಕ್ಕಾಗುತ್ತಿರುವುದು ವಿಶ್ವವಿದಿತವಿದೆ. ಮಿಥ್ಯವೇ ಗೆದ್ದಿದ್ದರೂ ಶಪಥ ಮಾಡುವ ಒಂದು ಸಂಪ್ರದಾಯವು ಸತ್ಯ ಪರಿಪಾಲನೆಯ ಪ್ರಯತ್ನ; ಮತ್ತು ಈ ಪ್ರಯತ್ನ ಮಾನವೀಯವೆಂಬುವು ಮಾತ್ರ ನೂರಕ್ಕೆ ನೂರರಷ್ಟು ಸತ್ಯ. ಬಹಳ ಹಿಂದಿನ ಕಾಲದಿಂದಲೂ ಸತ್ಯವನ್ನಾಡುವ ಕಲೆಯನ್ನು ಜನಪ್ರಿಯಗೊಳಿಸುತ್ತ ಬರುವುದಕ್ಕಾಗಿಯೇ ಈ ಆಂದೋಲನ ಏಳುತ್ತ ಬಂದಿದೆ; ಪ್ರಾಚೀನರ ಸತ್ಯಪ್ರಿಯತೆಯ ದ್ಯೋತಕವಾಗಿ, ಅಸತ್ಯಕ್ಕೊಂದು ಆಹ್ವಾನವಾಗಿ ಪ್ರತಿಜ್ಞೆ ಇಂದಿಗೂ ನಿಂತಿದೆ ಆದರೆ, ಈ ಉತ್ತಮ ಪ್ರವೃತ್ತಿಯು ಈಗೀಗ ವಿರೋಧಾಭಾಸವಾಗುತ್ತಿರುವುದು ಇಂದಿನ ಸತ್ಯನಿಷ್ಠ ಜಗತ್ತಿಗೊಂದು ಆಹ್ವಾನ.



ಗ್ರೀನ್‌ಲೇಂಡಿನ ಹಿಮಮಟ್ಟದಡಿ ಅಮೆರಿಕೆಯು ಡೇನಿಷ್ ಸರಕಾರದೊಡನೆ ಕೂಡಿ ರಚಿಸಿದ ಅಣು ಕೇಂದ್ರದ ಚಿತ್ರವಿದು.

"ನಚಿಕೇತ"ರ

ಇನ್ನೊಂದು ನವೀನ ಕಾದಂಬರಿ—

ಋಣ ಯಾತ್ರೆ

ಇದೀಗ ಪ್ರಕಟವಾಗಿದೆ.

ಬೆಲೆ ರೂ. 1-50 ನ. ಪೈಸೆ.

ಮೊದಲು ಪ್ರಕಟವಾದ ಕಾದಂಬರಿ—

ಭಾವಾರ್ಚನೆ

ಬೆಲೆ ರೂ. 1 25 ನ. ಪೈಸೆ.

ಪ್ರತಿಗಳು ಸಿಗುವ ಸ್ಥಳಗಳು:—

ನವಯುಗ ಪ್ರೆಸ್, ಉಡುಪಿ.

ನವಭಾರತ ಬುಕ್ ಡಿಪೊ, ಉಡುಪಿ,

Statement about ownership and other particulars about Newspaper: NAVAYUGA

FORM IV (Rule 8)

1. *Place of Publication*	...	UDIPI
2. *Periodicity of its Publication*	...	WEEKLY
3. *Printers' Name*	...	K. H. SHETTY
Nationality	...	INDIAN
Address	...	Navayuga Press, Palukote, Udipi (S. K.)
4. *Publisherrs' Name*	...	K. H. SHETTY
Nationality	...	INDIAN
Address	...	Palukote Udipi (S. K.)
5. *Editor's Name*	...	K. H SHETTY
Nationality	...	INDIAN
Address	.	Palukote, Udipi (S. K.)
6. *Names and addresses of individuals who own the news-paper and partners or shareholders holding more than one per cent of the total capital.*		K. H. SHETTY Palukote, Udipi (S. K.) (Prop.)

I, K. H. Shetty, hereby declare that the particulars given above are true to the best of my knowledge and belief.

(*Sd.*) K. H. SHETTY,
Signature of Publisher.

Date 2—3—1961.

ಮಕ್ಕಳ ಮಮತೆಯ

'ಬಿಕ್ಕೊ'ರವರ

ಗ್ಲೂಕೋಸ್ ಕೂಡಿದ ಪೆಪ್ಪರ್ ಮಿಠಾಯಿಗಳು ರುಚಿಕರ, ಸೇವನೆಗೆ ಪ್ರಸಿದ್ಧಿ ಪಟ್ಟಿವೆ.

Regd. Trade Mark

BICCO

'ಬಿಕ್ಕೊ'ರವರ

ಹಣ್ಣಿನ ಶರಬತ್ತುಗಳು

ಅತಿಥಿಗಳ ಆದರದ ಸತ್ಕಾರಕ್ಕೆ ಅತ್ಯನುಕೂಲ.

ತಯಾರಕರು:

ಭಾರತ್ ಇಂಡಸ್ಟ್ರಿಯಲ್ ಎಂಡ್ ಕ್ಯಾನಿಂಗ್ ಕಂಪೆನಿ ಲಿಮಿಟೆಡ್, ಕಾಪು, ದ. ಕ.

ಕಥಾವಿಹಾರ

(೨ನೇ ಪುಟದಿಂದ)

ವೆಂಕಣ್ಣ. ಆತನ ಕಿರಿಯ ಹೆಣ್ಣು ಮಗು 'ಅಪ್ಪಾ, ಅಮ್ಮ ಕರೀತಾಳೆ—ಗಂಜಿ ಉಣ್ಣಬೇಕಂತೆ—' ಎಂದು ಕೂಗಿ ಕರೆದಳು.

'ಗಂಜಿ (?!) ಯಾರಿಗಾಗಿ?! ನೀವೆಲ್ಲಾ ಊಟಮಾಡಿ ನಾನು ಊಟಮಾಡೋದಿಲ್ಲ—' ದಿನದ ಮುಕ್ಕಾಲು ಪಾಲು ತನ್ನ ಜೀವನದ ಚಿಂತೆಯಲ್ಲಿಯೇ ಕಾಲ ಕಳೆಯುತ್ತ ದಿನದೂಡುತ್ತಿದ್ದ ವೆಂಕಣ್ಣನಿಗೆ ಜಗತ್ಪ್ರಳಯದ ವಿಶೇಷದಿಂದ ತುಸು ಸಂತೋಷವಾಯಿತು. ಒಮ್ಮೆ ಮುಖದಲ್ಲಿ ಚಿಂತೆಯ ಗೆರೆಯೊಂದು ಮಿಂಚಿ ಮಾಯವಾಯಿತು.

ರಾತ್ರಿಯಾಗಿದೆ—ವಿರಮಿಸುವ ಮಹಾರಾತ್ರಿ — ಊಟಮಾಡದೆಯೆ ಮಲಗಿದ ವೆಂಕಣ್ಣನಿಗೆ ಭೀಕರ ನಿದ್ದೆ ಬಂದಿತು—

'ಭೋರ್ಗರೆಯುವ ಬಿರುಗಾಳಿ....ಕೊಚ್ಚಿ ಕೊಚ್ಚಿ ತಿರುತಿರುಗಿ ಉರುಳುವ ಮರಮಟ್ಟುಗಳು....ಬಯಲಿನ ತುದಿಯಲ್ಲಿ ಹರಿಯುವ ನದಿ...ತುಂಬಿ ತುಳುಕಿ ಬಯಲಿನಲ್ಲಿರುವ ನೆಟ್ಟ ಸಸಿಗಳನ್ನು ಕಿತ್ತೊಗೆದು ಮನೆಯಾಕಾರದ ಮಳಲ ರಾಶಿಯನ್ನು ತಂದು ಹಾಕಿದುದನ್ನು ನೋಡುತ್ತಿದ್ದಾನೆ ದೂರದಿಂದ ವೆಂಕಣ್ಣ—

ತನ್ನ ಮಕ್ಕಳು—ಮನೆ—ವಾತಾವರಣ ಯಾರೊಬ್ಬರೂ ಕಾಣುವಂತಿರಲಿಲ್ಲ—ಬೆಟ್ಟದ ತಪ್ಪಲಲ್ಲಿ ನಿಂತು ದೃಷ್ಟಿಹರಿಯಿಸಿದಾಗ ಉರುಳುತ್ತಿರುವ ಮನೆ—ಕೂಗಾಡುವ ನಾಯಿ.

'ಅಂಬೆ—ಅಂಬೆ—' ಎಂದು ಆರ್ತನಾದಗೊಡನೆ ಸಂಕಟವನ್ನು ತಾಳಲಾರದೇ ಕೂಗಿಡುವ ಹಸು—ಎಮ್ಮೆಗಳು, ಸಿಡಿದು ಬೊಬ್ಬೆಯೆಬ್ಬಿಸುವ ಬಿದಿರುಗಳ ಸಿಡಿಲಾಟ, ಹಾಹಾಕಾರದ ಕೋಲಾಹಲದ ಭಯಾನಕ ಅವಶೇಷಗಳ ರೌದ್ರ ತಾಂಡವ. ಅತ್ತ ಮನೆಯ ಮಾಡಿನ ಮೇಲೆ ಕುಳಿತು ಕೂಗುತ್ತಿರುವ ಕೋಳಿ ಸಮೂಹವನ್ನು ಕಂಡರೆ, ಇತ್ತ ವೃಕ್ಷದ ತುದಿಯನ್ನೇರಿ ಗಂಟಲು ಹರಿಯುವಂತೆ ಚೀರುತ್ತಿರುವ ಪಕ್ಷಿ ಸಂಘೋಷ....'ಅದೋ—ಬೆಟ್ಟದ ತುದಿಯಲ್ಲಿ ಬೆಳೆದ ಮಾಮರ....?! ಗಗನ ಮುಟ್ಟುವಂತೆ ಉರಿಯುತ್ತಿದೆ — ಬೆಂಕಿಯಿಟ್ಟವರಾರು? ಉಳಿಯುವವರಾರು? ಕೇವಲ ಕೆಲವು ನಿಮಿಷಗಳಲ್ಲಿ ವೆಂಕಣ್ಣನೂ ಒಬ್ಬನಾಗನೇ?

ನಿಮಿಷ ನಿಮಿಷಗಳೂ ಶಿವನ ಲೀಲೆಯ ಭೀಭತ್ಸ ಭರತನಾಟ್ಯ. ಜಗತ್ತಿನ ಆರ್ತನಾದವೇ ಆತನ ನಾಟ್ಯಕ್ಕೆ ಹಿನ್ನೆಲೆ. ಮೃಗ—ಪಕ್ಷಿಗಳ ಕಠೋರ ಕೂಗೇ ಅವನಿಗೆ ಸಂಗೀತದ ರಸದೌತಣ.

'ದಶಾವತಾರ'ದಲ್ಲಿ ಶಿವನನ್ನು ಕಂಡಿದ್ದ ವೆಂಕಣ್ಣ—ಊರಿನ ಶಾಲಾ ನಾಟಕದಲ್ಲೂ ಶಿವನು ಪ್ರತ್ಯಕ್ಷನಾಗಿದ್ದ—ಒಡೆಯರ ಮಗ 'ಪಟ್ಟಣಕ್ಕೆಬಾ ಸಿನೇಮಾ ತೋರಿಸ್ತೀನಿ' ಒಮ್ಮೆ 'ಶಿವನ ಲೀಲೆ'ಯನ್ನೇ ತೋರಿಸಿದ್ದೀನಿ ವೆಂಕಣ್ಣ' ಅಂತ ಅಂದಿದ್ದರು. ಎಲ್ಲೂ ಸಾಧಾರಣ ಒಂದೇ ತರ. ಆದ್ದರಿಂದ ವೆಂಕಣ್ಣನ ಮನಸ್ಸಿನಲ್ಲಿ ಇಂದು ಆತನ ತಾಂಡವ ನೃತ್ಯ ಕಂಡಿತು. ಡಮರು ನಿನಾದದಿಂದ ಕಪಾಲಮಾಲಾಧಾರಿಯಾಗಿ ಭಸ್ಮಾನುಲೇಪಿತನಾಗಿ ಮೃಗಚರ್ಮಾಂಬರ ಧರನಾಗಿ ಪ್ರಕೃತಿಯ ಅಂತ್ಯಕ್ಕಾಗಿ ಹಾತೊರೆದು ಕುಣಿಯುತ್ತಿರುವ ಶಿವನ ರೌದ್ರರೂಪ ಕಂಡಿಂಬೇಕು ವೆಂಕಣ್ಣನಿಗೆ.... ಹೆದರಿದ... ಅವನು ನಿಂತ ಗುಡ್ಡವೇ ನಡುಗಲಾರಂಭಿಸಿತು ಮೊದ ಮೊದಲು ನಿಧಾನವಾಗಿ ಕೊನೆಗೆ ಧೈರ್ಯವೇ ಉಡುಗಿಹೋಯ್ತು... ತಲೆ ಕೆಳಗಾಗಿ ಉರುಳುರುಳಿ ಬಿದ್ದು ಹೋಗುತ್ತಿರುವ ವೆಂಕಣ್ಣನ ಮೈ ನುಜ್ಜು ಗುಜ್ಜಾಯಿತು. ಪ್ರಕೃತಿಯ ಪಂಚಭೂತಗಳಲ್ಲಿ ಅವನ ಜೀವನ ವಿಲೀನವಾಯ್ತು.

ಕಣ್ಣು ಮುಚ್ಚಿಕೊಂಡೆ ಎಚ್ಚೆತ್ತ ವೆಂಕಣ್ಣನಿಗೆ. ಮೈಯೆಲ್ಲ ಒದ್ದೆಯಾಗಿದ್ದುದು ಮನವರಿಕೆಯಾಗಿತ್ತು ಮೈಯೆಲ್ಲ ಬೆವತದ್ದೇ ಅಲ್ಲದೆ ಕಣ್ಣಲ್ಲಿ ನೀರಿಳಿದು ಸುಮಾರಷ್ಟು ತೋಯ್ದಿತ್ತು. ಪ್ರಚಂಡ ರೌದ್ರದ ಕನಸಿಗಾಗಿ ನೊಂದ ವೆಂಕಣ್ಣ ಹಾಗೆಯೆ ಮನೆಯಿಂದ ಹೊರಬಂದು ಮೂಡಲ ಮುಖಮಾಡಿ ಸೂರ್ಯದೇವನನ್ನು ಕಂಡು ನಮಸ್ಕರಿಸಿ, 'ದೇವಾ, ದಿನವೂ ಹೀಗೇಯೇ [ಏಕೆ ಮಾಡುತ್ತಿರುವೆ—? ನನ್ನ ಹೊಲ ಸುಟ್ಟು ಹೋದುದನ್ನು ಕಂಡು ನಿನಗೆ ಸ್ವಲ್ಪವಾದರೂ ದಯೆ ಬಾರದೇ?'—ಎನ್ನುತ್ತ ಕಣ್ಣನ್ನು ಒರೆಸಿಕೊಂಡ. ಕಣ್ಣಲ್ಲಿ ಇಳಿಯುತ್ತಿದ್ದ ನೀರು ನೀರಾಗಿರದೆ ಆತನ ಹೃದಯದ ಕರುಳಿನ ಮೊರೆತದ ರಸಗಂಗೆಯಾಗಿತ್ತು; ಮಾತ್ರವಲ್ಲ ಹಾಗೆಯೇ ಪ್ರಖರ ಬಿಸಿಲು ಧರಣಿಗೆ ಬಡಿಯುತ್ತಲಿದ್ದರೆ ಆದು ಬತ್ತಲು ಇನ್ನೂ ಹೆಚ್ಚುದಿನ ಬೇಕೇ?—

ಪುಸ್ತಕ ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ.—ಸಂ, ನ.)

ಆಯ್ದ ಜಾನಪದ ಗೀತೆಗಳು:— ಆಯ್ದವರು: ಶ್ರೀ ಕೆ. ರಾ. ಕೃ. ಪ್ರಕಾಶಕರು: ಜನಪದ ಸಾಹಿತ್ಯ ಅಕಾಡೆಮಿ, ಸರಸ್ವತಿಪುರಂ, ಮೈಸೂರು. ಪುಟಗಳು: ೬೪. ಬೆಲೆ: ರೂ. ೦-೫೦.

ಜಾನಪದ ಕಥನ ಗೀತೆಗಳೇ ಮೊದಲಾದ ಏಳೆಂಟು ಜಾನಪದ ಗೀತೆಗಳ ಸಂಕಲನವನ್ನು ಹೊರತಂದ ಕೆ. ರಾ. ಕೃ. ಕನ್ನಡದ ಮನೆಮನೆಗೂ ಜಾನಪದ ಗೀತೆಗಳ ಪುಸ್ತಕ ಮುಟ್ಟುವಂತಾಗಬೇಕು, ಅವುಗಳ ಸೌಂದರ್ಯ ಸವಿಯುವಂತಾಗಬೇಕೆಂಬ ಹಂಬಲದಿಂದ ಕಿರು ಹೊತ್ತಿಗೆಗಳ ರೂಪದಲ್ಲಿ ಅವನ್ನು ಪ್ರಕಟಿಸಲು ನಿರ್ಧರಿಸಿದ್ದಾರೆ. ಈ ನಿರ್ಧಾರದ ಪರಿಣಾಮವೇ ಈ ಕಿರು ಪುಸ್ತಕ. ಹಿಂದಿನ ಸಂಕಲನಗಳಿಂದಲೇ ಆಯ್ದ ಸುಂದರ ರಸಭರಿತ ಗೀತೆಗಳು ಮನೆಯಲ್ಲಿ ಹಾಡುವುದಕ್ಕೆ ಯೋಗ್ಯವಾಗಿಯೇ ಇವೆ. ಹೆಣ್ಣು ಮಕ್ಕಳು ಅವಶ್ಯ ಹಾಡಬೇಕಾಗಿರುವುವುಗಳನ್ನೇ ಇಲ್ಲಿ ಆಯ್ದು ಕೊಟ್ಟಿರುವುದು ಇಲ್ಲಿ ಕಾಣುವ ಒಂದು ವೈಶಿಷ್ಟ್ಯ.

'ಧೂಪ್ ಛಾಂವ್"—(ಹಿಂದೀ ಏಕಾಂಕೀ ಪ್ರಹಸನ) ಬರೆದವರು: ಶ್ರೀ ಉ. ಲಕ್ಷ್ಮೀನಾರಾಯಣ ಕಿಣಿ. ಪ್ರಕಾಶಕರು: ಉಡುಪಿ ತಾಲೂಕು ಹಿಂದೀ ಪ್ರಚಾರ ಸಮಿತಿ, ಉಡುಪಿ. ಪುಟಗಳು: ೩೭ ಬೆಲೆ: ರೂ ೦—೫೦.

ಅಧಿಕೃತ ಭಾಷೆಯಾಗಿ ಹಿಂದಿಯನ್ನು ಭಾರತ ಸರಕಾರವು ಸ್ವೀಕರಿಸುವ ನಿರ್ಧಾರವನ್ನು ಮಾಡುವುದಕ್ಕೂ ಮೊದಲು ನಮ್ಮ ಜಿಲ್ಲೆಯಲ್ಲಿ ಹಿಂದೀ ಗಾಳಿಯು ಬಿರುಸಾಗಿಯೇ ಬೀಸಿತ್ತು. ಶ್ರೀ ಬೇಕಲ ಕೃಷ್ಣಯ್ಯನವರಿಂದ ಉಡುಪಿಯಲ್ಲಿ ಮೊದಲಾದ ಹಿಂದೀ ಪ್ರಚಾರವು ಶ್ರೀ ಉ. ಲಕ್ಷ್ಮೀನಾರಾಯಣ ಕಿಣಿಯವರಿಂದ ಸುವಿಸ್ತೃತವಾಯಿತು. ಅಹಿಂದೀ ಭಾಷಾಭ್ಯಾಸಿಗಳೂ ಹಿಂದಿಯನ್ನು ಕಲಿತು, ಹಿಂದೀ ಭಾಷಾವಾದಿಗಳೊಡನೆ ಸೇರಿಕೊಂಡು ಉತ್ತಮ ಸಾಹಿತ್ಯ ಕೃತಿಗಳನ್ನು ರಚಿಸಬಹುದೆಂದು ಶ್ರೀ ಕಿಣಿಯವರು ಈ ಕಿರುನಾಟಕವನ್ನು ಬರೆದು ಸಿದ್ಧ ಮಾಡಿಕೊಟ್ಟಿದ್ದಾರೆ. ಶ್ರೀಮಂತರೆಲ್ಲರೂ ಸಜ್ಜನರಲ್ಲ, ದರಿದ್ರರೆಲ್ಲರೂ ದುರ್ಜನರಲ್ಲವೆಂಬ ಕಟು ಸತ್ಯವನ್ನು ಸಿದ್ಧಾಂತಿಸುವುದೇ ಪ್ರಹಸನದ ಕಥಾವಸ್ತು. ಹೆಸರಿಗೆ ಒಂದು ಆಂಗ್ಲ ಕಥೆಯ ಆಧಾರದಿಂದ ಇದು ರೂಪಿತವಾಗಿದ್ದರೂ ನಾಟಕೀಯ ಶೈಲಿ, ರೀತಿಗಳು ಲೇಖಕರ ಮೌಲಿಕ ಶಕ್ತಿಯನ್ನು ತೋರಿಸಲು ಸಮರ್ಥವಾಗಿವೆ. ಹಿಂದೀ ಭಾಷಾ ಪ್ರದೇಶಗಳನ್ನು ಆಗಾಗ ಸುತ್ತಾಡಿ ಹಿಂದಿಯ ಕ್ಷೇತ್ರದಲ್ಲಿ ಅತಿ ನಿಕಟ ಸಂಬಂಧವಿಟ್ಟುಕೊಂಡ ಶ್ರೀ ಕಿಣಿಯವರು ಜನ್ಮತಃ ಅಹಿಂದೀ ಭಾಷಾ ಪ್ರದೇಶಿಯಾಗಿದ್ದರೂ ಹಿಂದೀ ಭಾಷಾ ಪ್ರದೇಶಿಗೆ ಬಹು ದೂರವಿಲ್ಲವೆಂಬುದು ನಮಗರಿವಾಗುವುದು.

ಶ್ರೀರಾಮ ಎಂಬ ಮುಂತಾದ ಹೆಸರುಗಳು ಕಿವಿಗೆ ಬಿದ್ದೊಡನೆಯೇ ನಾವು ಪೌರಾಣಿಕ ವ್ಯಕ್ತಿಗಳವರೆಂದು ತಿಳಿಯುತ್ತೇವೆ. ಆದರೆ, ಅದೇ ಹೆಸರು ಮಿ| ರಾಮ್. ಎಂದಾದರೆ ಆಧುನಿಕವೆನಿಸುತ್ತದೆ. ಹಿಂದೀ ಎಂದೊಡನೆಯೇ ಉತ್ತರ ಭಾರತದ ಹೆಸರುಗಳೇ ಕೃತಿಯಲ್ಲಿರಬೇಕಾಗಿಲ್ಲ ಅವರಂತೆಯೇ ದಾಕ್ಷಿಣಾತ್ಯರೂ ನಮ್ಮವರೂ ಮಾತಾಡಲೂ ಬರೆಯಲೂ ಸಶಕ್ತರೆಂಬುದನ್ನು ಸ್ವಯಂ ಕಿಣಿಯವರೇ ತೋರಿಸಿಕೊಟ್ಟಿರುವಾಗ ಅಖಿಲ ಭಾರತದಲ್ಲಿ ಹಿಂದಿ ಪ್ರಚಾರ ತೀವ್ರವಾಗಿ ನಡೆಯುತ್ತಿರುವಾಗ, ಈ ನಾಟಕದಲ್ಲಿನ ಮೋಹನ್ ಲಾಲ, ಶಾಂತಿಲಾಲ, ರೋಹಿ. ಹರಿಯೂ ಎಂಬ ಪಾತ್ರಗಳ ಬದಲಿಗೆ ಇಲ್ಲಿನ ಜನಜನಿತ ನಾಮಗಳು ಬಂದಿದ್ದರೆ, ಪಾಠಕರಿಗೂ ಪ್ರೇಕ್ಷಕರಿಗೂ ತಮ್ಮ ಸುತ್ತಲಿನದೇ ಕಥಾನಕವೆಂಬುದು ಭಾಸವಾಗುವುದು ಸುಲಭ. ಶ್ರೀ ಕಿಣಿಯವರ ಉತ್ತಮ ಭಾಷಾಶೈಲಿಯು, ನಿರೂಪಣ ಶಕ್ತಿಯ ಸಂಪೂರ್ಣ ಪರಿಚಯದಿಂದ ಅವರಿಂದ ಇನ್ನೂ ಹೆಚ್ಚಿನ ಕೃತಿಗಳನ್ನು ಆಶಿಸಿದರೆ ತಪ್ಪಾಗಲಾರದು.

ಪ್ಲವ ಸಂವತ್ಸರದ ಶಾಸ್ತ್ರಸಿದ್ಧ ಶ್ರೀಕೃಷ್ಣ ಪಂಚಾಂಗ: ಸಂಪಾದಕರು: ಶ್ರೀಗಳಾದ ಕರಿಂಕ ಕೃಷ್ಣ ಬನ್ನಿಂತಾಯ (ವಿಟ್ಲ ಪೋಸ್ಟ್) ಮತ್ತು ಮರಕೂರು ರಾಮಚಂದ್ರಾಚಾರ್ಯ ಪರಿಶೋಧಕರು: ದೈವಜ್ಞರತ್ನ ಜ್ಯೋತಿರ್ವಿದ್ಯಾ ಮಾರ್ತಾಂಡ ಶ್ರೀ ವೇ|| ಯರ್ಮುಂಜ ಶಂಕರ ಜೋಯಿಸರು. ಬೆಲೆ: ರೂ. ೦ — ೫೦.

ನವೀನ ದೃಗ್ಗಣಿತ ರೀತಿಯಿಂದ ಗುಣಿಸಿರುವ ಈ ಪಂಚಾಂಗವು ನಮ್ಮ ದೈನಂದಿನ ಉಪಯೋಗಕ್ಕೆ ಪರ್ಯಾಪ್ತವೆನಿಸುವುದು. ಭಾರತ ಸರಕಾರದವರು ಸ್ವೀಕರಿಸಿದ ನೂತನ ಪಂಚಾಂಗದ ಕ್ರಮವನ್ನು ಪ್ರಾರಂಭದಿಂದಲೂ ಇಟ್ಟುಕೊಂಡು ಬಂದಿರುವ ಶಾಸ್ತ್ರಸಿದ್ಧ ಪಂಚಾಂಗದಲ್ಲಿ ಎಲ್ಲರಿಗೂ ಆವಶ್ಯಕವಾದ ಪಂಚಾಂಗ ವಿಷಯಗಳಲ್ಲದೆ ಮುಹೂರ್ತ, ಜ್ಯೋತಿಷ್ಯ ವಿಷಯಗಳೂ ಅಡಕವಾಗಿವೆ.

— ಗೋರಾ

Notice.

ಕುಂದಾಪುರ ಡಿ ಮು ಕೋರ್ಟಿನಲ್ಲಿ

O. P. 50/1960.

ಗಂಗಿ ಮೊಗ್ಸು — ಅರ್ಜಿದಾರಳು.

ದೇವ ಪೂಜಾರಿ — ಎದ್ರಿ.

ಕುಂದಾಪುರ ತಾಲ್ಲೂಕು ಹಂಗಳೂರು ಗ್ರಾಮದಲ್ಲಿರುವ ಶೇಷ ಪೂಜಾರಿಯ ಮಗ ದೇವ ಪೂಜಾರಿಗೆ ಈ ಮೂಲಕ ತಿಳಿಯಪಡಿಸುವುದೇನಂದರೆ:—

ಮೇಲ್ಕಂಡ ಅರ್ಜಿಯಲ್ಲಿ ಹಿಂದೂ ಪದ್ಧತಿ ಪ್ರಕಾರ ಆದ ಮದುವೆಯನ್ನು ರದ್ದುಪಡಿಸಬೇಕೆಂತ ವಗೈರೆ ಕಾನ್ಸ ದಾಖಲು ಮಾಡಿದ ಅರ್ಜಿಯು ತಾರೀಖು 16 3_1961ಕ್ಕೆ ಇಟ್ಟಿದೆ. ಸದ್ರಿ ದಿವಸ ನಿಮ್ಮ ಆಕ್ಷೇಪಣೆಯುದ್ದಲ್ಲಿ ನೀವು ಸ್ವತಃ ವ ವಕೀಲರ ಮುಖಾಂತರ ವ್ಯವಹರಿಸತಕ್ಕದ್ದು. ಇಲ್ಲವಾದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲಾದೀತು.

S. S. Kolkebail,
Vakil for Petitioner.

ಕುಂದಾಪುರ, 21—2_1961.



The Moolky Bank, Ltd.

MULKI.

ಡಿಪ್ರೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ	4%
5 ,, 12 ,,	4¼%
13 ,, 24 ,,	4½%

ರೂ. 5.000/- ಮತ್ತು ಮೇಲಣ ಡಿಪೋಸಿಟಿಗೆ ¼% ಜಾಸ್ತಿ ಕೊಡಲಾಗುವುದು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ಠೇವಣಾತಿಗೆ ¼%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್,

ಮೂಲ್ಕಿ ಬೇಂಕ್ ಲಿ. ಮುಲ್ಕಿ.

NAVAYUGA WEEKLY, UDIPI.
REGD. NO.BG. 176

2-3-1961

LICENSE NO. 31
Licensed to Post without Prepayment

ಆಲಸ್ಯ ಚಿಕಿತ್ಸೆ

ಆಲಸ್ಯದ ಕೈಗೊಂಬೆಯಾಗಬೇಡಿರಿ

> ಮಾನವನ ಶರೀರದ ಮಹಾ ಶತ್ರುವಾದ ಆಲಸ್ಯವನ್ನು ದೂರವಿಡಿರಿ.
> ಯಾರೇ ಆಗಲಿ, ಆಲಸಿಗಳಾಗಬೇಕಾದ ಅವಶ್ಯಕತೆಯಿಲ್ಲವೆಂಬುದನ್ನು
> ಗಮನಿಸಿ ಸದಾ ಉತ್ತೇಜಕರಾಗಿರಲು ಪ್ರಯತ್ನ ನಡೆಸಿರಿ.

ಆಲಸ್ಯದ ಗುಣ ಸ್ವಭಾವವನ್ನು, ಅದರ ಬಲೆಗೆ ಸಿಲುಕಿದವರು ಮತ್ತು ಸದಾ ಅದರಲ್ಲಿಯೇ ಮುಳುಗೇಳುತ್ತಿರುವವರು ಮಾತ್ರ ತಿಳಿಸಿಕೊಡುವುದಿಲ್ಲ ಎಂದೊಬ್ಬ ಮನೋವಿಜ್ಞಾನವೇತ್ತನ ಅಂಬೋಣವಿದೆ. ಈ ಮಾತು ಚಿಕ್ಕದಾದರೂ ಕಟು ಸತ್ಯವನ್ನು ಪ್ರಕಟಪಡಿಸುತ್ತದೆ; ತೋರಿಕೆಯ ಮಟ್ಟಿಗೆ ಇದರಲ್ಲಿ ಸತ್ಯತೆಯು ಕಾಣುವುದೆಂದರೆ ಇದು ವಿಚಿತ್ರವೆನಿಸಬಹುದು. ಆಲಸ್ಯದ ಗಂಧಗಾಳಿಯು ಸೋಂಕೂ ಬಡಿಯದವನು ಅದರ ಕಲೆಬುಡವನ್ನು ಹೇಗೆ ತಾನೇ ತಿಳಿದಾನು? ಹಾಗೆಯೇ ಸದಾ ಆಲಸ್ಯ ಸಾಗರದಲ್ಲಿ ಮುಳುಗೇಳುವವನು ಅದನ್ನು ಸ್ವರ್ಗಸುಖವೆಂದು ತಿಳಿಯದೆ ಉದಾಸೀನತೆಯ ಪಾಪಕೂಪವೆಂದು ಮನವರಿಕೆ ಮಾಡಿಕೊಂಡಿದ್ದರೆ, ಆತನು ಮತ್ತೂ ಮತ್ತೂ ಅದರಲ್ಲೇಕೆ ಒದ್ದಾಡುತ್ತಿರುವನು?

ಮನೋವಿಜ್ಞಾನಾನುಸಾರವಾಗಿ ಸೋಮಾರಿತನ ಅಥವಾ ಆಲಸ್ಯವನ್ನು ಮೂರು ಪಂಗಡಗಳಲ್ಲಿ ವಿಭಕ್ತಗೊಳಿಸಬಹುದು. ಮೊದಲನೆಯದು ಅಸ್ಥಿರ ಆಲಸ್ಯ; ಎರಡನೆಯದು ನಿಯತಕಾಲಿಕ ಉದಾಸೀನತೆ ಮತ್ತು ಕೊನೆಯದು ಸ್ಥಿರ ಆಲಸ್ಯ.

ಮಾನವ ಮನಸ್ಸಿನಲ್ಲಿ ಸಂಚಾರಿಭಾವಗಳು ಸಾಗರದ ತೆರೆಗಳಂತೆ ಏಳುತ್ತ ಅಳಿಯುತ್ತ ಬರುತ್ತಿರುವಂತೆ ಅಸ್ಥಿರ ಆಲಸ್ಯವೂ ಮಾನವನಲ್ಲಿ ಮೂಡುತ್ತದೆ; ಅಡಗುತ್ತದೆ. ಈ ಸೋಮಾರಿತನಕ್ಕೆ ದೊಡ್ಡ ದೊಡ್ಡ ಕಾರಣಗಳು ಬೇಕಾಗಿಯೂ ಇಲ್ಲ. ಕೇವಲ ಅತಿ ಚಿಕ್ಕ ವ್ಯಾಜಗಳಿಂದಲೂ ಇದು ಹುಟ್ಟಬಹುದು ; ಚಿಂತೆ, ಮನೆಯ ಅಭಾವತೆ, ಆರೋಗ್ಯದಲ್ಲಿ ವ್ಯತ್ಯಾಸ - ಹೀಗೆ ಕ್ಷಣಿಕ ಕಾರಣಗಳಿಂದಲೇ ಈ ಅಸ್ಥಿರವಾದ ಆಲಸ್ಯವು ಉದಿಸುವುದು. ಪ್ರಿಯ ಜನರಿಂದ ಉಪೇಕ್ಷಿತರಾದರೆ ಅಥವಾ ಆತ್ಮಾವಹೇಳನೆಯ ಭಾವವುದಿಸಿದರೆ ಇದರಿಂದಲೂ ಈ ತೆರದ ಆಲಸ್ಯ ಹುಟ್ಟಬಹುದು ಆದುದರಿಂದ ನಾವು ಆಲಸ್ಯವಿದೂರರಿರಬೇಕಾದರೆ, ಇವೆಲ್ಲವನ್ನೂ ಮೊತ್ತಮೊದಲು ದೂರೀಕರಿಸಬೇಕು; ಹಾಗೂ 'ಆತ್ಮಾವಹೇಳನೆ'ಯ ಭಾವವು ಅಂಕುರಿಸುವುದಕ್ಕೂ ಎಡೆಕೊಡಬಾರದು ಆತ್ಮಾವಹೇಳನೆಯಲ್ಲಿ ವ್ಯಕ್ತಿಯು ತಾನಾಗಿಯೇ ಬೀಳುವಂತೆ ಮಾಡುವ ಅದ್ಭುತ ಶಕ್ತಿಯಿದೆ.

ಉದಾಸೀ ಮನೋಭಾವ ೩—೪ ದಿನ ಅಥವಾ ಹೆಚ್ಚಿನ ಸಮಯದ ವರೆಗೆ ಮುಂದುವರಿಯಿತೆಂದರೆ, ಅದನ್ನು ಅಲಕ್ಷಿಸಬಾರದು. ಅದರ ಕಾರಣವೇನೆಂಬುದನ್ನು ಅವಶ್ಯ ಅರಸಬೇಕು. ಅವಚೇತನವೇ ಮನಸ್ಸಿನಲ್ಲಿ ಅಸಂತುಷ್ಟ ಭಾವನೆಗಳನ್ನು ಉಂಟುಮಾಡಿರಬೇಕು. ಆದುದರಿಂದ ಇವನ್ನು ನಿರ್ಮೂಲಗೊಳಿಸಬೇಕು.

ನಿಯತಕಾಲಿಕ ಉದಾಸೀನತೆಯು ಅಧಿಕ ಗಂಭೀರಸ್ಥಿತಿಯ ದ್ಯೋತಕವಾಗಿದೆ. ಇದು ನಿಯಮಿತ ರೂಪದಲ್ಲಿ ಬರುತ್ತದೆ, ಹೋಗುತ್ತದೆ. ಈ ನಡುವೆ ಕೆಲವೊಮ್ಮೆ ಉತ್ತೇಜಕ ಭಾವವೂ ಕಾಣಿಸುವುದುಂಟು; ಈ ಭಾವದಲ್ಲಿ ಆಲಸ್ಯ ಮತ್ತು ಉತ್ತೇಜನಗಳು ಒಂದರ ಹಿಂದೊಂದರಂತೆ ಬಂದು ಮಾಯವಾಗುತ್ತವೆ.

ಜನ್ಮಜಾತ ಪ್ರವೃತ್ತಿಗಳಿಂದಾಗಿಯೇ ಈ ಪ್ರಕಾರದ ಆಲಸ್ಯವು ತಲೆದೋರುತ್ತದೆ. ಇವು ಸಂಪೂರ್ಣ ಸ್ವಭಾವ ಸಂಬಂಧವಾಗಿಯೇ ಇರುತ್ತವೆ. ಕಾಲಕ್ರಮದಲ್ಲಿ ಈ ಪ್ರವೃತ್ತಿ ಬೆಳೆಯುತ್ತಬಂದು ಕೊನೆಯಲ್ಲಿ ಸ್ವಭಾವದಲ್ಲಿ ಪರಿಗಣ್ಯ ಸ್ಥಾನವನ್ನು ಪಡೆಯುತ್ತವೆ. ನಿಯತಕಾಲಿಕ ಆಲಸ್ಯಾವಸ್ಥೆಯಲ್ಲಿ ಉದಾಸೀನತಾಗ್ರಸ್ತ ವ್ಯಕ್ತಿಯು ತನ್ನ ಜೀವನದಲ್ಲಿ ಏನೂ ಕೆಲಸ ಮಾಡಲಾರನೆಂದು ಅರ್ಥವಲ್ಲ; ಅಥವಾ ಆತನು ಜೀವನದಲ್ಲಿ ಅಸಫಲನಾಗುತ್ತಾನೆಂದೂ ಅಲ್ಲ. ಸಾಮಾನ್ಯವಾಗಿ ಈ ವರ್ಗಕ್ಕೆ ಸೇರಿದವರ ಶಕ್ತಿ ಅದ್ಭುತವಿರುತ್ತದೆ. ಆಕಾಶ ಪಾತಾಳವೊಂದು ಮಾಡುವ ಸಾಹಸವು ಅವರಲ್ಲಿರುತ್ತದೆಯೆಂದರೆ ನೀವು ನಿಬ್ಬೆರಗಾಗುವಿರಿ.

ಸ್ಥಿರ ಆಲಸ್ಯಕ್ಕೂ ಅತಿ ನಿಕಟ ಸಂಬಂಧವಿದೆ. ಅನಪೇಕ್ಷಿತ ವ್ಯಕ್ತಿಯ ಸಂಸರ್ಗದಂತೆ ಈ ಅವಸ್ಥೆ ದುಃಖದಾಯಕವಿದೆ. ಇದಕ್ಕೆ ಬಲಿ ಬಿದ್ದವನು ಸದಾ ಸರ್ವಥಾ ಖಿನ್ನ ವದನನಾಗಿರುತ್ತಾನೆ. ಯಾವಾಗಲೂ 'ಅಹಂ'ನ್ನು ಕೇಂದ್ರೀಕರಿಸಿಕೊಂಡು, ಒಂದಲ್ಲ ಒಂದರ ಬಗ್ಗೆ ಚಿಂತಿಸುತ್ತಿರುವುದು, ಪ್ರಪಂಚದ ಕಷ್ಟಗಳಿಂದ ಮಾರುದ್ದ ಹಾರುವುದು, ಸಬಲ ಪರ್ಯಾಪ್ತ ಕಾರಣಗಳಿಲ್ಲದೆಯೂ ದುಃಖಿಸುತ್ತಿರುವುದು, ಮಾತು ಮಾತಿಗೆ ದಾರ್ಶನಿಕತೆಯ ಕಂತೆ ಬಿಚ್ಚುವುದು—ಸ್ಥಾಯಿ ಆಲಸಿಗಳಲ್ಲಿರುವ ವೈಶಿಷ್ಟ್ಯಗಳು. ಆದುದರಿಂದಲೇ ಸ್ಥಿರ ಆಲಸ್ಯವು ಒಂದು ತರದ ಮಾನಸಿಕ ರೋಗಗಳ ಸಾಲಿಗೆ ಸೇರಿದುದೆನ್ನಬಹುದು.

ಸ್ಥಿರ ಆಲಸ್ಯದಿಂದ ಬಿಡುಗಡೆ ಹೊಂದುವುದು ಸುಲಭವಲ್ಲ ಕೆಲವೊಂದು ಸಂದರ್ಭಗಳಲ್ಲಿ ಮಾನಸ ಚಿಕಿತ್ಸಕರನ್ನೇ ಶರಣು ಹೋಗಬೇಕಾಗುದು. ಹೀಗಿದ್ದರೂ ಪ್ರಸಿದ್ಧ ಮನೋವಿಜ್ಞಾನವೇತ್ತ ಮಾರ್ಜೋರಿ ಬೋಲ್ಟನ್ನನು ನಿರೂಪಿಸಿದ ಪಂಚಸೂತ್ರಗಳನ್ನು ಅನುಸರಿಸಿದರೆ, ಸ್ಥಿರ ಆಲಸಿಗಳೂ ತಮ್ಮ ರೋಗದಿಂದ ದೂರವಿರುವುದು ಸಾಧ್ಯ. ನೂರಕ್ಕೆ ತೊಂಬತ್ತೊಂಬತ್ತರಷ್ಟು ಈ ಸೂತ್ರಗಳು ಪರಿಣಾಮಕಾರಿಯಾಗಿವೆಯೆಂದು ತಿಳಿಯುತ್ತದೆ.

ಆ ಸೂತ್ರಗಳು ಯಾವುವು?

೧. ವಾಸ್ತವಿಕತೆಯನ್ನೆದುರಿಸಿರಿ. ಜೀವನದ ಕಠಿನತೆಗಳು ನಾವವನ್ನು ಎದುರಿಸದೆ ಮ್ಲಾನಿತರಾಗಿ ಉಳಿಯುವಷ್ಟು ಕಠೋರವಾಗಿರುವುದಿಲ್ಲ; ಅವುಗಳಿಂದ ಭಯಪಡಬೇಕಾಗಿಲ್ಲ. ಪರಿಸ್ಥಿತಿಗಳನ್ನು ಸರಿಯಾಗಿ ಅರಿತುಕೊಂಡು, ಅವುಗಳಿಂದ ನಿಮ್ಮನ್ನು ಉದ್ಧರಿಸುವ ಪ್ರಯಾಸ ವಹಿಸಿರಿ.

೨. ಹೊಸ ಹೊಸ ವಿಷಯಗಳಲ್ಲಿ ಆಸಕ್ತಿ ವಹಿಸಿರಿ. ನಿಮ್ಮ ಉದ್ಯೋಗದಿಂದ ನಿಮಗೆ ಸಂಪೂರ್ಣ ಸಂತೋಷವು ದೊರೆಯುವುದಿಲ್ಲವಾದರೆ, ಆತ್ಮಾಭಿವ್ಯಕ್ತಿಯ ಸಂದರ್ಭ ಸಿಗುತ್ತಿಲ್ಲವಾದರೆ, ಚಿಂತಿಸಬೇಡಿರಿ; ಸಾಹಿತ್ಯ, ಸಂಗೀತ, ಕಲೆ, ಶಿಲ್ಪ, ಶೋಧ, ಕೃಷಿ; ಚಿತ್ರಗ್ರಹಣ ಇತ್ಯಾದಿಗಳಲ್ಲಿ ಅಭಿರುಚಿ ತೋರಿಸಿರಿ. ಇವುಗಳಲ್ಲಿ ಒಂದಲ್ಲ ಒಂದು ನಿಮ್ಮನ್ನು ಅವಶ್ಯ ಸಂತುಷ್ಟಗೊಳಿಸುವುದು.

೩. ನಾಲ್ಕು ಜನರಲ್ಲಿ ಬೆರೆಯುವುದನ್ನು ಕಲಿಯಿರಿ; ನಿಮ್ಮ ಮನಸ್ಸು ತೆರೆದು ಮಾತಾಡಿಕೊಳ್ಳಿರಿ. ಇನ್ನೊಬ್ಬರ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನ ಮಾಡಿರಿ. ಆಗ ಅವರೂ ನಿಮ್ಮ ಪ್ರಶ್ನೆಗಳ ಬಗ್ಗೆ ಆಸಕ್ತಿ ವಹಿಸುವರು.

೪. ಪರರಿಗೆ ಹಿತವೆಸಗುವುದರಲ್ಲಿ ಅಭಿರುಚಿಯಿರಲಿ ನಿಮ್ಮಿಂದಲೂ ದುಸ್ಥಿತಿಯಲ್ಲಿರುವ ಅದೆಷ್ಟು ಜನರು ಪ್ರಪಂಚದಲ್ಲಿ ಇರಲಾರರು! ಸಾಧ್ಯವೆನಿಸಿದಷ್ಟು ಅವರಿಗೆ ಸಹಾಯಮಾಡಿರಿ—ಅವರಿಂದಷ್ಟು ಉಪಕೃತರೆನಿಸಿಕೊಳ್ಳುವುದಕ್ಕಲ್ಲ; ಆತ್ಮಸಂತೋಷಕ್ಕಾಗಿ ಮಾತ್ರ.

೫. ಭವಿಷ್ಯವನ್ನು ಕಡೆಗಣಿಸದೆ ಅತ್ತ ಸದಾ ದೃಷ್ಟಿಯಿಡಿರಿ. ಭೂತಕಾಲದ ಹಾನಿ—ಅಭಾವಗಳು, ಅಪಾಯಜನಕ ಪರಿಸ್ಥಿತಿಗಳು ಮತ್ತು ಕಷ್ಟಗಳನ್ನು ನೆನಸಿಕೊಂಡು ಉದಾಸರಾಗಿರುವುದು ಅನ್ಯಾಯವೆಂಬುದನ್ನು ಮರೆಯಬೇಡಿರಿ. ನಿಶ್ಚಿತ ಭೂತವನ್ನು ಮರೆತು ಅನಿಶ್ಚಿತ ಭವಿಷ್ಯದ ಕಡೆಗೆ ಗಮನ ನೀಡಿರಿ ನಿಮ್ಮ ಮನೋಪಟಲದಲ್ಲಿ ಭೂತದ ಚಿತ್ರಗಳು ಅಂಕಿತವಾಗಿರುವಂತೆ ಭವಿಷ್ಯದ ಸುಂದರ ಕಾಲ್ಪನಿಕ ಚಿತ್ರಗಳೂ ಗುರುತಿಸಲ್ಪಡಲಿ.

ಬರಬಹುದಾದ ಕಷ್ಟಗಳು ಮೋಡದ ತುಣುಕಿನ ನೆರಳಿನಂತೆ ಭೀಮಕಾಯವಾಗಿ ತೋರಿಬರುತ್ತವೆ; ಆದರೆ, ಅವು ಅದೇ ನೆರಳಿನಂತೆ ಕ್ಷಣಮಾತ್ರದಲ್ಲಿ ವಿಲೀನವಾಗುತ್ತವೆ. ಈ ಕ್ಷಣಕಾಲದ ಆಪತ್ತನ್ನು ಚಿಂತಿಸುತ್ತ ದುಃಖಿಸುವುದು ಬುದ್ಧಿಮತ್ತೆಯ ಲಕ್ಷಣವಲ್ಲ.

ಪಿಗ್ಗಿ—೩

ಸಿಂಡಿಕೇಟ್ ಬೇಂಕ್

'ದುಡಿಮೆಯೇ ದೇವರು' ಎಂದು ಗೌರವಿಸಲು
ಕಲಿತ ಜನ ದುಡಿತದ ಪ್ರತಿಫಲವನ್ನೂ ಆದರದಿಂದ ಕಾಣುವುದು
ಸಹಜ. ಸಂಪಾದನೆಯೆಲ್ಲವನ್ನೂ ಕೈಗೆ ಬಂದ ಹಾಗೆ
ವೆಚ್ಚಮಾಡಿಬಿಡದೆ ನಾಳೆಗೆಂದು ಸ್ವಲ್ಪವನ್ನಾದರೂ ಕೂಡಿಡುವುದು
ಸಹಾ ಅಷ್ಟೇ ಅಭಿಮಾನದ ಸಂಗತಿ. 'ಇಂದು' ಎಲ್ಲ
ವಿಧವಾಗಿಯೂ ಸುಂದರವಾಗಿ, ಸುಲಭವಾಗಿರಬಹುದು,
'ನಾಳೆ'ಯೂ ಹಾಗಿರಬಹುದೆನ್ನಲು ಸಾಧ್ಯವೆ? ಭವಿಷ್ಯದ ಗರ್ಭದಲ್ಲಿ
ಏನೆಲ್ಲ ಅಡಕವಾಗಿದೆಯೆಂದು 'ಇಂದು' ಹೇಳುವುದೆಂತು?

'ನಾಳೆ'ಗಾಗಿ ನಿಮ್ಮ ದುಡಿತದ ಒಂದಂಶವನ್ನು—ದಿನದಿನವಾಗಿ —
ಕೂಡಿಡುವುದು ನಿಮಗೆ ಅನುಕೂಲವಾಗಿ ತೋರಬಹುದು.
ದುಡಿತದ ಪ್ರತಿಫಲ, ಉತ್ಪತ್ತಿ, ಲಾಭ ಇತ್ಯಾದಿ ದಿನಂಪ್ರತಿ
ಕೈಗೆ ಬರುವಂತಿದ್ದರೆ. ಈ—ದಿನವಹಿ ಉಳಿಸುವ -
ಯೋಜನೆ ಅತ್ಯಂತ ಅನುಕೂಲವೆಂದು ಪ್ರತ್ಯೇಕ ಹೇಳಬೇಕೆಂದಿಲ್ಲ.

ದಿನವಹಿ ಉಳಿಸಲು: **ಪಿಗ್ಗಿ**

— ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 474/1960

ದಿ. ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಉಡುಪಿ— ವಾದಿ.

ಮತ್ತು

ಕೆ. ಕೃಷ್ಣಯ್ಯ ಸೆಟ್ಟಿ ಕೂಡಾ—ಪ್ರತಿವಾದಿರು

ಪ್ರತಿವಾದಿರು—1. ಕೆ. ಕೃಷ್ಣಯ್ಯ ಸೆಟ್ಟಿ ಎಲ್ಲಪ್ಪ ಸೆಟ್ರ ಮಗ—ಉಡುಪಿ ಕಸಬಾ ಆದಿ ಉಡುಪಿ. 3, ಕಾಸಿಂ ಸಾಹೇಬ, ಉಮ್ಮರ್ ಸಾಹೇಬರ ಮಗ – ಕೊಡವೂರು ಗ್ರಾಮ,

ಸದರಿ 1, 3ನೇ ಪ್ರತಿವಾದಿರಿಗೆ —

ಪ್ರತಿವಾದಿರು ವಾದಿ ಬೇಂಕಿಗೆ ತಾರೀಕು 19—6—58ರಲ್ಲಿ ರೂ. 1000.00ಕ್ಕೆ ಬರಕೊಟ್ಟ ಡಿಮಾಂಡ್ ನೋಟಿನ ಅಸಲು ಬಾಕಿ ವ ಬಡ್ಡಿ ಕೂಡಾ ರೂಪಾಯಿ928-72ಕ್ಕೆ ವಾದಿಯು ಪ್ರತಿವಾದಿರ ಮೇಲೆ ಮಾಡಿದ ಸದರಿ ದಾವೆಯು ತಾರೀಕು 10—3—1961ಕ್ಕೆ ತನಿಖೆ ಬಗ್ಗೆ ಇಟ್ಟಿದೆ. ಆ ದಿವಸ ಸದರಿ 1, 3ನೇ ಪ್ರತಿವಾದಿರು ಸ್ವತಹಾ ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಉತ್ತರಿಸದಿದ್ದರೆ ಅವರ ಗೈರ್‌ಹಾಜರಿಯಿಂದ ಸದರಿ ವ್ಯಾಜ್ಯವು ತೀರ್ಮಾನಿಸಲ್ಪಡುವದೆಂದು ಈ ಮೂಲಕ ಸದರಿ 1, 3ನೇ ಪ್ರತಿವಾದಿರಿಗೆ ತಿಳಿಯಪಡಿಸೋಣಾಗಿಯದೆ.

M. Damoder Kamath,
Advocate for Pltf.

ಉಡುಪಿ, ತಾ. 24-2-1961.

ನವಯುಗ ವಾರ ಪತ್ರಿಕೆಗೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ

Edited, Printed & Published by K. H. Shetty, at the Navayuga Press, Udipi, S. India.

40th year of publication. 9-3-1961 ೪೦ನೇ ವರ್ಷ

ಸಂಪುಟ ೪೦ Vol. 40

ನವಯುಗ

ಸಂಚಿಕೆ ೨೬ No. 26

ಬೆಲೆ 0=13

ಪ್ರಚಲಿತ ಪ್ರಸಂಗ

ಕರ ಹೆಚ್ಚಳವಾದರೂ ಬೆಲೆಯೇರುವುದಿಲ್ಲ

ಜೀವನಾವಶ್ಯಕವೆನಿಸಿದ ಕೆಲವು ವಸ್ತುಗಳ ಮೇಲೆ ಹೊರಿಸಿದ ಹೊಸ ಕರಭಾರವು ಅವುಗಳ ಬೆಲೆಯಲ್ಲಿ ಏರುವುದಕ್ಕೆ ಕಾರಣವಾಗುವುದು ಸಾಧ್ಯವಿಲ್ಲ; ಏರಿದ ಪ್ರಮಾಣವು ತೀರ ಅತ್ಯಲ್ಪ. ಆದರೆ, ವ್ಯಾಪಾರಿಗಳು ಮಾತ್ರ ಇದರ ದುರ್ಲಾಭ ಪಡೆಯಲು ಮುಂದಾಗಿದ್ದಾರೆಂದು ವರದಿ ಬಂದಿದೆ.

ಕೇಂದ್ರ ಸರಕಾರದ ಅರ್ಥಮಂತ್ರಿ ಶ್ರೀ ದೇಸಾಯಿಯವರು ಸಂಸತ್ತಿನಲ್ಲಿ ೧೯೬೧-೬೨ರ ಸಾಲಿನ ಮುಂಗಡ ಪತ್ರವನ್ನು ಮಂಡಿಸಿ, ಕೊರತೆಯನ್ನು ತುಂಬಿಕೊಳ್ಳಲು ಕೆಲವೊಂದು ಸರಕುಗಳ ಮೇಲೆ ಹೆಚ್ಚಿನ ಕರವನ್ನು ಘೋಷಿಸಿದ್ದಾರೆ. ಇದರ ಪರಿಣಾಮವಾಗಿ ಜೀವನಾವಶ್ಯಕವಾದ ಪದಾರ್ಥಗಳಲ್ಲಿ ಕೆಲವುಗಳ ಬೆಲೆಯಲ್ಲಿ ಏರಿಕೆಯಾಗಿರುವ ವರದಿಗಳು ಬರತೊಡಗಿವೆ. ಏರಿಕೆಯಾದ ತೆರಿಗೆಯ ಪ್ರಮಾಣವು ಅತ್ಯಲ್ಪ ಪ್ರಮಾಣದ್ದಿದ್ದು, ಜನತೆಯು ತನ್ನ ಉಪಯೋಗಕ್ಕೆ ಕೊಳ್ಳುವ ವಸ್ತುವಿನ ಪ್ರಮಾಣದ ಮೇಲೆ ಯಾವುದೇ ರೀತಿಯ ಪ್ರಭಾವ ಬೀರುವುದು ಸಾಧ್ಯವಿಲ್ಲವೆಂದೂ ಆವಶ್ಯಕ ವಸ್ತುಗಳ ಬೆಲೆಯೇರಿದುದಾದರೆ, ವ್ಯಾಪಾರಿಗಳ ಲಾಭಬಡುಕತನದಿಂದ ಜನತೆಯನ್ನು ಶೋಷಿಸಲು ಪ್ರಯತ್ನಿಸುವರೆಂದೂ ಸರಕಾರಿ ವೃತ್ತಗಳು ಹೇಳುತ್ತವೆ.

ಚಾ, ಕಾಫಿ, ವನಸ್ಪತಿಯ ಉತ್ಪನ್ನಗಳು, ಬೆಂಕಿಪೆಟ್ಟಿಗೆ, ಹತ್ತಿಯ ಬಟ್ಟೆಗಳು, ರೇಯಾನ್ ಇಲ್ಲವೇ ಕೃತ್ರಿಮ ರೇಶ್ಮೆ ಚಿಮಿಣಿ ಎಣ್ಣೆ ಮತ್ತು ಹೊಗೆಸೊಪ್ಪುಗಳು ಜೀವನಾವಶ್ಯಕ ಪದಾರ್ಥಗಳ ಸಾಲಿಗೆ ಸೇರಿದ್ದು ಈ ಬಾರಿ ಕರದ ಅಂಕುಶಕ್ಕೆ ಬಲಿಯಾದುವುಗಳು. ಶಿವಕಾಶಿಯಿಂದ ಬಂದಿರುವ ವರದಿಯಂತೆ ಕಿರುಕುಳ ವ್ಯಾಪಾರಸ್ಥರು ಬೆಂಕಿಪೆಟ್ಟಿಗೆಯೊಂದಕ್ಕೆ ಒಂದು ನಯೇಪೈಸೆಯಂತೆ ಬೆಲೆಯೇರಿಸಿರುವರು. ಆದರೆ, ಬೆಲೆಯೇರಿಸಬೇಕಾದ ಯಾವುದೇ ಕಾರಣವಿರುವುದಿಲ್ಲ. ಕರ ಬಿತ್ತು ಎಂದೊಡನೆಯೇ ಕರದ ಪ್ರಮಾಣವನ್ನು ತಿಳಿಯದೆಯೋ, ಅಧಿಕ ಲಾಭ ಗಳಿಸುವ ಇರಾದೆಯಿಂದಲೋ ತತ್ಕ್ಷಣ ಬೆಲೆಯೇರಿಸಿಬಿಡುವುದು ನಡೆದು ಬಂದ ಕ್ರಮವಾಗಿದೆ. ದೊಡ್ಡ ದೊಡ್ಡ ವ್ಯಾಪಾರಸ್ಥರು ತಾವು ತೆರಬೇಕಾದ ಒಂದು ಸಣ್ಣ ಪ್ರಮಾಣದ ಕರವನ್ನು ತಮ್ಮ ಗಿರಾಕಿಗಳಿಂದ ಕಿರುಕುಳ ವ್ಯಾಪಾರಸ್ಥರಿಗೆ ಹಂಚಿಹಾಕುತ್ತಾರೆ; ಆಗ ಅವರಿಗೆ ಲಾಭವೂ ಆಗುವುದು. ಅದೇ ರೀತಿಯಲ್ಲಿ ಕಿರುಕುಳ ವ್ಯಾಪಾರಸ್ಥರು ತಮ್ಮ ಗಿರಾಕಿಗಳಾದ ಜನಸಾಮಾನ್ಯರ ಮೇಲೆ ಹೇರುತ್ತಾರೆ. ನಾಣ್ಯ ಪದ್ಧತಿಯಂತೆ, ಕಡಿಮೆಯೆಂದರೆ, ಒಂದು ನಯಾಪೈಸದಷ್ಟಾದರೂ ದರವನ್ನವರು ಏರಿಸಿಯೇ ಬಿಡುತ್ತಾರೆ. ಜನತೆಯಾದರೂ ಆವಶ್ಯಕ ಪದಾರ್ಥವೆಂಬುದರಿಂದ ಒಂದು ಪೈಸಕ್ಕೆ ಹಿಂದೆ ಮುಂದೆ ನೋಡುವುದು ಸಾಧ್ಯವಾಗುತ್ತದೆಯೆ? ಇಲ್ಲಿ ತಪ್ಪು ಯಾರದು?

ಉದಾಹರಣೆಗಾಗಿ ಚಹವನ್ನೇ ತೆಗೆದುಕೊಳ್ಳೋಣ. ಈ ತಿಂಗಳ ಮೊದಲನೆ ತಾರೀಕಿನಿಂದ ಸಣ್ಣ ಪ್ಯಾಕೇಟುಗಳಲ್ಲಿ ಅಥವಾ ಡಬ್ಬಿಗಳಲ್ಲಿ ತುಂಬಿಸಿದ ಚಹಾ ಪುಡಿಯ ಮೇಲಿನ ಕರವು ಸಾಮಾನ್ಯವಾಗಿ ಒಂದು ಕಿಲೊಗ್ರಾಮಿಗೆ ಒಂದು ನಯಾ ಪೈಸದಷ್ಟು ಹೆಚ್ಚಾಗುವುದು. ಕಿಲೋಗ್ರಾಮಿನ ಮೇಲೆ ಏರಿದ ಸಾಮಾಶಯದಲ್ಲಿ ಪೊಟ್ಟಣದ ಮೇಲೆ ಏರಬೇಕಾದ ಅಂಶವು ತೀರ ಅಗಣ್ಯವೆಂಬುದನ್ನು ಪ್ರತ್ಯೇಕ ಹೇಳುವ ಜಗತ್ಯವಿಲ್ಲ. ಆದರೆ, ವ್ಯಾಪಾರಸ್ಥರು ತಾವೇ ಹೊರಬೇಕಾದ ಕರಭಾರವನ್ನು ಜನತೆಯ ಮೇಲೆ ಹೇರಿ ಕರವನ್ನು ತುಂಬಿಕೊಳ್ಳುವುದು ಮಾತ್ರವಲ್ಲ, ಅಧಿಕಾಧಿಕ ಲಾಭವನ್ನೂ ಮಾಡುತ್ತಾರೆ. ಕಾಫಿ, ಚಹಗಳಿಗೆ ಕರಯೇರಿದುದು ಹೋಟೇಲುಗಳಲ್ಲಿಯೂ ಇವುಗಳ ದರ ಹೆಚ್ಚುವುದಕ್ಕೆ ಬಹು ದಿವಸಗಳು ತಗಲಲಾರವು ಹೀಗೆಯೇ ಚಿಮಿಣಿ ಎಣ್ಣೆ, ಬಟ್ಟೆಬರೆಗಳ ಸಂಗತಿ ಕೂಡ.

ವ್ಯಾಪಾರಿಯು ತಾನು ನಷ್ಟ ಮಾಡಿಕೊಂಡು ವ್ಯಾಪಾರ ನಡೆಸುವುದು ಸಾಧುವಲ್ಲ. ಆತ ತನ್ನ ಲಾಭವನ್ನು ಕಡಿಮೆ ಮಾಡಿಕೊಳ್ಳಲು ಬಯಸುವುದುಂಟೆ? ಇದರಿಂದಾಗಿಯೇ ಕರಭಾರದಿಂದಾಗುವ ನಷ್ಟವನ್ನು ತುಂಬಿಕೊಳ್ಳಲು ಆತನು ಅದನ್ನು ಗಿರಾಕಿಗಳ ಮೇಲೆಯೇ ಹೇರತೊಡಗುತ್ತಾನೆ. ಆದುದರಿಂದ ಈ ರೀತಿಯಲ್ಲಿ ಅಲ್ಪ ಪ್ರಮಾಣದ ಕರವನ್ನು ಹೇರುವುದರಿಂದ ಅವ್ಯಕ್ತವಾಗಿ ವ್ಯಾಪಾರಸ್ಥರಿಗೆ ಜನತೆಯನ್ನು ಶೋಷಿಸಲು ಅವಕಾಶ ಕೊಟ್ಟಂತಾಗುವುದು ಎಂದರೂ ತಪ್ಪಾಗಲಾರದು. ೬೦ ಕಡ್ಡಿಗಳಿರುವ ಬೆಂಕಿ ಪೆಟ್ಟಿಗೆಗಳ ಮೇಲಿನ ಕರದಲ್ಲಿ ಯಾವುದೇ ಹೆಚ್ಚಳವಾಗದಿರುವುದರಿಂದ ನ್ಯಾಯವಾಗಿ ಅವು ಆರು ನಯೇ ಪೈಸೆಗಳಿಗೇ ಸಿಗಬೇಕು; ೫೦ ಕಡ್ಡಿಗಳಿರುವ ಪೆಟ್ಟಿಗೆಗಳು ೫ ನಯೇ ಪೈಸೆಗೆ ಸಿಗುವಂತೆ ಮಾಡುವುದಕ್ಕಾಗಿ ತುಸು ಕರಭಾರದಲ್ಲಿ ಹೊಂದಾಣಿಕೆಯನ್ನು ಮಾಡಲಾಗಿದೆ ಮಾತ್ರ. ಆದರೆ, ಕಿರುಕುಳ ವ್ಯಾಪಾರಸ್ಥರು ಎಲ್ಲ ತರದ ಬೆಂಕಿಪೆಟ್ಟಿಗೆಯ ದರವನ್ನೂ ನಯಾಪೈಸೆವೊಂದರಂತೆ ಕೆಲವೆಡೆ ಏರಿಸಿರುವರೆಂದು ತಿಳಿಯುತ್ತದೆ.

ಕರಹೇರಿದ ವಸ್ತುಗಳ ಮೂಟೆ ಮಾರುಕಟ್ಟೆಗೆ ಬರಬೇಕಾದರೆ ಇನ್ನೂ ಸ್ವಲ್ಪಕಾಲಬೇಕು. ಆದರೂ ವ್ಯಾಪಾರಿಗಳು ತಮ್ಮಲ್ಲಿರುವ ದಾಸ್ತಾನುಗಳನ್ನೂ ಹೊಸ ದರದಲ್ಲಿಯೇ ಮಾರುತ್ತಾರೆ; ಇಂದಿನ ದಿನಗಳಲ್ಲಿ ದಿನದಿಂದ ದಿನಕ್ಕೆ ಕರವೇರುತ್ತ ಹೋಗುವುದೇ ಹೊರತು ಇಳಿಯುವ ಪ್ರಸಂಗ ಅಪ್ಪಿತಪ್ಪಿಯಾದರೂ ಇಲ್ಲವೆಂಬುದರಿಂದ ವ್ಯಾಪಾರಸ್ಥರಿಗೆಲ್ಲಾ ಲಾಭ ಗಳಿಸಲು ಒಳ್ಳೆಯ ಅವಕಾಶವೆನಿಸುವಂತಾಗಿದೆ. ಸರಕಾರದ ಕಡೆಯಿಂದ ಸದ್ಯ, ಕರ ಹೇರಿದ ಬಗ್ಗೆ ವಿವರಣೆಗಳು ಏನೋ ಪ್ರಕಟವಾಗಿವೆ; ಆದರೆ, ಈ ವಿವರಣೆಗಳನ್ನಿತ್ತ ಮಾತ್ರಕ್ಕೆ ವ್ಯಾಪಾರಸ್ಥರು ಬೆಲೆಯಿಳಿಸುವರೆಂದು ನಂಬುವುದು ಸಾಧ್ಯವಿಲ್ಲ. ಒಂದು ವಸ್ತುವಿನ ಬೆಲೆಯೇರಲು ಕೇವಲ ಕರಭಾರ ಮಾತ್ರ ಕಾರಣವೆನ್ನುವಂತಿಲ್ಲ. ಆದರೂ ಇದನ್ನೇ ಕಾರಣವಾಗಿಟ್ಟುಕೊಂಡು ಲಕ್ಷಾಂತರ ಲಾಭ ಗಳಿಸುವ ದೊಡ್ಡ ವ್ಯಾಪಾರಿಗಳು ಇದ್ದಾರೆಂಬುದನ್ನು ನಾವು ಮರೆಯುವುದೂ ಸಾಧ್ಯವಿಲ್ಲ.

ಅದೇನೇ ಇದ್ದರೂ; ಯಾರೇ ತೆರಬೇಕಾದ ಕರವಿದ್ದರೂ ಕೊಟ್ಟಕೊನೆಯಲ್ಲಿ ಅದನ್ನು ತೆರಬೇಕಾದವನು ಬಳಕೆದಾರನು. ಜೀವನಕ್ಕೆ ಅತ್ಯಾವಶ್ಯಕವಾದ ಪದಾರ್ಥಗಳನ್ನು ಆತ ಕೊಂಡುಕೊಳ್ಳದಿರುವುದು ಸಾಧ್ಯವೆ? ಇಂದಿನ ನಾಗರಿಕ ಯುಗದಲ್ಲಿಯೂ ಆತ ಅನಾಗರಿಕನಂತೆ ಚಿಮಿಣಿ ಎಣ್ಣೆ ಕೊಳ್ಳದಿರುವುದು ಸಾಧ್ಯವೆ? ಬೆಂಕಿ ಉರಿಸದಿರುವುದು ಸಾಧ್ಯವೆ? ಬಟ್ಟೆ ತೊಡದಿರುವುದು ಸಾಧ್ಯವೆ? ಕಾಫಿ, ಚಾ, ಸಿಗರೇಟುಗಳು ಕೂಡ ಇಂದು ಆತನ ಜೀವನಕ್ಕೆ ಆವಶ್ಯಕ ಪದಾರ್ಥಗಳೆಂದು ಪರಿಗಣಿಸಲ್ಪಟ್ಟಿರುವಾಗ, ಉಳಿದುವುಗಳ ಮಾತೇನು?

ಇಲ್ಲಿ ಜನಸಾಮಾನ್ಯರ ಶೋಷಣೆಯಾಗದಂತೆ ನೋಡಿಕೊಳ್ಳುವುದು ಸರಕಾರದ ಕರ್ತವ್ಯ. ವ್ಯಾಪಾರಿಗಳು ಯಥಾರ್ಥವನ್ನು ಮನಗಂಡು ಅನ್ಯಾಯವಾಗಿ ಜನತೆಯಿಂದ ಅಧಿಕ ಬೆಲೆಯನ್ನು ತೆಗೆದುಕೊಳ್ಳುವುದನ್ನು ನಿಲ್ಲಿಸಬೇಕು; ಯಾವುದೇ ಪ್ರಬಲ ಕಾರಣವಿಲ್ಲದೆ ಬೆಲೆಯೇರಿಕೆಗೆ ಆಸ್ಪದ ಕೊಡಬಾರದು. ವ್ಯಾಪಾರವೆಂಬುದು ಡೊಂಬರಾಟವಲ್ಲ. ನ್ಯಾಯಬೆಲೆಗೆ ಜನತೆಯ ಆವಶ್ಯಕತೆಯನ್ನು ಪೂರಯಿಸುವ ವ್ಯಾಪಾರಿ ಸಮಾಜಸೇವಕ; ಆತನೇ ತನ್ನ ಸೇವೆಯಲ್ಲಿ ಕಲಂಕ ತಂದ ಕೊಂಡರೆ, ಆಗ ಸರಕಾರವೇ ಬಲಾತ್ಕಾರದಿಂದಲಾದರೂ ಜನತೆಯ ಶೋಷಣೆ ನಡೆಯದಂತೆ ನೋಡಿಕೊಳ್ಳಬೇಕಾಗುತ್ತದೆ. ಇದಕ್ಕೆ ಅವಕಾಶ ದೊರೆಯದಿರಲಿ.

ಮಂಗಳೂರಲ್ಲಿ ಈಗಾಗಲೇ ತೆರೆಯಲ್ಪಟ್ಟು ಪ್ರಗತಿಯಿಂದ ಮುಂದೆ ಸಾಗುತ್ತಿರುವ ಇನ್ನೊಂದು ಪ್ರಸಿದ್ಧ ಜವುಳಿ ಮಳಿಗೆ—

ಸಾರೀ ಎಂಪೋರಿಯಮ್

ಕೆಥೊಲಿಕ್ ಕ್ಲಬ್ಬಿನ ಎದುರು, ಹಂಪನಕಟ್ಟಾ, ಮಂಗಳೂರು-1

ನಿಮ್ಮ ಉತ್ತಮ ಆಯ್ಕೆಗೆ ಯೋಗ್ಯವೆಂದೆನಿಸಿದ ರೇಶ್ಮೆ ಸೀರೆಗಳೂ, ಹತ್ತಿ ನೂಲಿನ ಸೀರೆಗಳೂ ಸರ್ವೋತ್ಕೃಷ್ಟವಾಗಿವೆ, ಯಾವತ್ತೂ ತರದ ಶರ್ಟಿಂಗ್, ಕೋಟಿಂಗ್, ಚಿಂಟ್ಸ್, ಸಿಲ್ಕ್, ನೈಲಾನ್ ಇತ್ಯಾದಿ ಬಟ್ಟೆಬರೆಗಳಿಗೂ ಸಂದರ್ಶಿಸಿರಿ —

SAREE EMPORIUM

Opposit Catholic Club,
HAMPANKATTA, **MANGALORE—1.**

ESTD 1921

NAVAYUGA
KANNADA WEEKLY,
UDIPI.

Founder
Late Sri A. B. Shetty
Former Minister for Public Health, Govt. of Madras & Govt. of Mysore.

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ
ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೨೧.

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್.
ಬಿ. ಶಾಮರಾಯ ಶೆಟ್ಟಿ, ಬಿ. ಎ., ಎಲ್. ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

●

ಜಾಹೀರಾತು ದರಗಳು.
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50
ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾ ಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಕಥಾವಿಹಾರ:

ದೃಷ್ಟಿಮೀರದ ನೋಟ

ಹೆಚ್ಚಿನ ವಿದ್ಯಾಭ್ಯಾಸದ ಅವಕಾಶವೊದಗಿದಾಗ ಅದರಿಂದ ಕೈತೊಳೆಯಲಿಚ್ಛಿಸದೆ ತನ್ನ ಕೈನಿಲುಕಿದ್ದ ವೀಣಾಳನ್ನು ಲೆಕ್ಕಿಸದ ಗಿರೀಶ ಮರಳಿ ಬಂದ; ಬರುವಷ್ಟರಲ್ಲಿ ವೀಣೆಯನ್ನು ಮತ್ತಾರೋ ಬಾರಿಸುತಿದ್ದುದನ್ನು ಕಂಡ ಆತನಿಗೆ ಸಿಡಿಲೆರಗಿದಂತಾಯಿತು.

ಶ್ರೀ ಬಿ. ಜಿ. ಸತ್ಯಮೂರ್ತಿ.

ಗಿರೀಶ ಬಸ್ಸಿಳಿದು ನಡೆದ.

ಕೈಯಲ್ಲೊಂದು ಕಿಟ್‌ಬ್ಯಾಗ್, ಹೆಗಲಿಗೊಂದು ತೂಗು ಚೀಲ ಇತ್ತು. ರೈಲು ಬಸ್ಸಿನ ದೂರದ ಪ್ರಯಾಣವನ್ನು ಕೆದರಿದ ಕ್ರಾಪು, ಧೂಳು ತುಂಬಿದ ಉಡುಪು, ಪ್ರಯಾಣದಲ್ಲಿ ನಿದ್ದೆ ಇಲ್ಲದೆ ಕಂಗೆಟ್ಟು ಕೆಂಪಡರಿದ ಕಣ್ಣುಗಳು, ಬಾಡಿದ ಮುಖ, ಎಲ್ಲವೂ ಸಾರಿ ಹೇಳುತ್ತಿತ್ತು.

ಆ ಊರು ಬಿಟ್ಟು ಐದಾರು ವರ್ಷಗಳಾಗಿದ್ದುವು. ಆ ಸಣ್ಣ ಊರಿಂದು ಎಷ್ಟೋ ಮಾರ್ಪಾಡು ಪಡೆದು, ನವೋತ್ಸಾಹದಿಂದ ಮುಂದುವರಿದ ಸಣ್ಣ ನಗರದಂತಿತ್ತು. ನೇರ ತಾನು ಆ ಊರಿನಲ್ಲಿದ್ದ 'ಹಳೇಕಟ್ಟೆ' ಬೀದಿಗೇ ನಡೆದ. ಸುಧಾ ದ ಸಣ್ಣ ಕಂಪೊಂಡು ಗೋಡೆಗಳಿಂದ ಆವರಿಸಲ್ಪಟ್ಟ ನಾಗರಿಕ ರೀತಿಯಲ್ಲಿ ಆಕರ್ಷಣೀಯವಾಗಿ ನಿಂತಿದ್ದಿತು.

ಗಿರೀಶನಿದ್ದ ಮನೆಯೂ ಗುರುತು ಸಿಗುವಂತಿಲ್ಲ.

ಇನ್ನ ಒಬ್ಬ ತಾಯಿಯೂ ಅವನೊಟ್ಟಿಗೇ ಇದ್ದಾಳೆ.

ಅವರ ಮನೆಯ ಪಕ್ಕದಲ್ಲೇ ಇದ್ದ ರಾಜೀವಮ್ಮನ ಮನೆಯನ್ನು ಹುಡುಕಿಕೊಂಡೇ ಗಿರೀಶ ಈಗ ಬಂದದ್ದು.

"ರಾಜೀವಮ್ಮ ಈಗ ನನ್ನನ್ನು ಕಂಡರೆ ಏನು ಹೇಳುವರು, ನಾನು ಏನು ಹೇಳಬೇಕು" ಎಂದು ಕಲ್ಪನಾ ಲೋಕದಲ್ಲಿ ರಸ್ತೆಯ ಮಧ್ಯೆ ನಿಂತಿದ್ದ ಅರಿವೂ ಇದ್ದಂತಿರಲಿಲ್ಲ, ಗಿರೀಶನಿಗೆ.

ಮನೆಯಿಂದ ಹೊರಬಂದ ಹೆಂಗಸೊಂದು ಸೋಜಿಗವಾಗಿ ಗಿರೀಶನನ್ನು ನೋಡಿದಳು.

'ಯಾರೋ ಹೊಸಬರು ಪಾಪ!' ಎಂಬ ಅರ್ಥವಿತ್ತು ಅವಳು ಕಂಡ ನೋಟದಲ್ಲಿ. ಗಿರೀಶನೂ ಆಕೆಯ ನೋಟವನ್ನೇ ಹಿಂಬಾಲಿಸಿದ.

'ವೀಣಾ'

'ಅವಳೇ ಇರಬಹುದೇ'!

'ಛೆ! ಅವಳಲ್ಲ!

ವೀಣಾಳಂತೆಯೇ ಸಮವಯಸ್ಕಳಾದ ಆ ತರುಣಿಯನ್ನು ಗಿರೀಶ ನೆಟ್ಟದೃಷ್ಟಿಯಿಂದ ನೋಡುತ್ತಲೇ ಇದ್ದ.

'ಛೆ! ವೀಣಾ ಆಗಿದ್ದರೆ ಹೀಗೆ ನೋಡುತ್ತಾ ನಿಲ್ಲುತ್ತಿದ್ದಳೆ? ನಮ್ಮ ಅಂದಿನ ಸ್ನೇಹ ಇಷ್ಟೊಂದು ಅವಧಿಯಲ್ಲೇ ಮರೆಯುವಂತಹ ಸ್ನೇಹವೇ!'

"ಯಾರು ನೀವು? ಯಾರು ಬೇಕು?"
—ಎಂದರು ವಯಸ್ಸಾದ ಒಬ್ಬ ಗೃಹಿಣಿ.

"ಆ...ಏನಿಲ್ಲ, ಏನಿಲ್ಲ" ಎಂದು ಪೆಚ್ಚಾದ ಗಿರೀಶ.

"ತೊಂದರೆ ಇಲ್ಲ. ಹೇಳಿ ಯಾರು ಬೇಕು ನಿಮಗೆ ಈ ಊರಿಗೆ ಹೊಸಬರಂತೆ ಕಾಣುತ್ತೀರಿ." ಎಂದರು.

ಇನ್ನು ಹೇಳಲೇ ಬೇಕಾದ ಪರಿಸ್ಥಿತಿ ಬಂತು ಗಿರೀಶನಿಗೆ.

"ಇಲ್ಲಿ ರಾಜೀವಮ್ಮ ಅಂತ ಒಬ್ಬ ವಿಧವೆ ಮತ್ತು ಅವರ ಮಗಳು ವೀಣಾ ಅಂತ ಇದ್ದರಲ್ಲಾ, ಅವರಿಲ್ಲವೇ?" ಎಂದ ಗಿರೀಶ.

ಆ ತರುಣಿಗೆ ವೀಣಳು ಗೊತ್ತಿರಬಹುದು, ಎಂತಲೇ ಹೇಳಿದಳು. "ಅಮ್ಮಾ, ನಮ್ಮ ಲತಾ ಟೀಚರ್ ಇರಬಹುದು"

"ನೀನು ಸುಮ್ಮನಿರಮ್ಮಾ ಅವರೆನೋ ಅಥವಾ ಇನ್ನಾರೋ, ವೀಣಾ ಅಂತ ಹೆಸರುಳ್ಳವರು ಎಷ್ಟು ಜನರಿಲ್ಲ". ಎಂದಳು ಆ ತರುಣಿಯ ತಾಯಿ.

ಇದ್ದರೂ ಇರಬಹುದು ವೀಣಾ ಎಸ್. ಎಲ್. ಸಿ. ಕಲಿತ ಹೆಣ್ಣು. ತನ್ನ ತಾಯಿಯನ್ನು ಸಾಕಲಿಕ್ಕಾಗಿ ಉದ್ಯೋಗ ಹಿಡಿದಿರಬಹುದು. ಎನ್ನಿಸಿತು ಗಿರೀಶ

"ಯಾರಮ್ಮಾ ಅವರು" ಎಂದ ಕೇಳಿದ ಗಿರೀಶ.

ಆ ತರುಣಿಯ ತಾಯಿಗೂ ಮಗಳ ಮಾತು ಸಮಂಜಸವೆನಿಸಿರಬೇಕು. ಅಥವಾ ನಡುರಸ್ತೆಯಲ್ಲಿ ನಿಂತು, ಓರ್ವ ಅಪರಿಚಿತನೊಂದಿಗೆ ಎಷ್ಟು ಹೊತ್ತು ಒಣ ಮಾತು ಎಂತಲೂ ಎನಿಸಿರಬೇಕು.

"ನೀವು ಹೇಳಿದಂತೆ ರಾಜೀವಮ್ಮ ಗೀಜೀವಮ್ಮ ಅಂತ ಯಾರೂ ಇಲ್ಲ. ನಮ್ಮ ಸಣ್ಣ ಹುಡುಗಿ ಶಾಲೆಗೆ ಹೋಗ್ತಾಳೆ ಅವಳಿಗೆ ಯಾರೋ ವೀಣಾಂತ ಒಬ್ಬ ಟೀಚರ್ ಇದ್ದಾರಂತೆ. ಬಸ್‌ಸ್ಟಾಂಡಿನ ಪಡುದಿಕ್ಕಿನ ಮೈದಾನದಲ್ಲೇ 'ಕಮಲಾ ಮಾಡಿ' ಹುಡುಗಿಯರ ಶಾಲೆ ಇದೆ ಅಲ್ಲಿ ವಿಚಾರಿಸಿರಿ." ಎಂದು ಚಟ ಚಟನೆ ಒಂದೇ ಸವನೆ ಹೇಳಿ ಅಲ್ಲನಿಲ್ಲದೆ ಮನೆಯೊಳಗೆ ಹೊರಟೇ ಹೋದಳು.

ಆ ತರುಣಿಯೂ ಒಮ್ಮೆ ಅನುಕಂಪದ ದೃಷ್ಟಿಬೀರಿ 'ಹಾಗೇ ಮಾಡಿ' ಎಂದು ಹೇಳಲು ಬಾಯಿಬಾರದೆ ತಾಯಿಯನ್ನೇ ಅನುಸರಿಸಿದಳು.

"ಉಶ್" ಎಂದು ಒಂದು ನೀಳಶ್ವಾಸ ಬಿಟ್ಟು ಗಿರೀಶನೂ ಮುಂದಡಿ ಇಟ್ಟ.

'ಐದಾರು ವರ್ಷಗಳಲ್ಲಿ ಎಷ್ಟೊಂದು ವ್ಯತ್ಯಾಸ!' ಎನ್ನಿಸಿತು ಗಿರೀಶನಿಗೆ.

"ರಾಜೀವಮ್ಮ ಎಷ್ಟು ಒಳ್ಳೆಯ ಹೆಂಗಸು ಪಾಪ! ಅವಳು ತನ್ನ ಮುದ್ದಿನ ಮಗಳ ಸಂಸಾರ ಓರ್ವ ತರುಣನೊಂದಿಗೆ ನಡೆಯಬೇಕೆಂದ ಕನಸಿನ ದಿನಗಳನ್ನು ನೆನೆದು ಸೋರಗುತ್ತಿದ್ದಳು. ಪಾಪ! ವಿಧವೆ ಹೆಂಗಸು ತನ್ನ ಕೊರಳೇ ಕತ್ತು ಬರುವಂತೆ ಯೋಚಿಸಿದ್ದಳು."

'ಈಗ ತಾನೇ ಏನಾಯಿತು? ನಾನು ಬಂದಿರುವುದು ಅದಕ್ಕಾಗಿಯೇ ತಾನೆ. ರಾಜೀವಮ್ಮನ ಕನಸು ನನಸಾಗಿಸುವುದಕ್ಕೇ ಅಲ್ಲವೇ?

'ರಾಜೀವಮ್ಮ ಈಗ ಬದುಕಿರಬಹುದೇ.'

ಅದೇ ತಾನೇ ಗಿರೀಶನ ಡಿಪ್ಲಮೋ ಪರೀಕ್ಷೆ ಮುಗಿದಿತ್ತು.

ರಾಜೀವಮ್ಮ ತನ್ನ ಮಗಳ ಮದುವೆಯ ಬಗ್ಗೆ ಗಿರೀಶನ ತಾಯಿ ಭಾಗೀರಥಮ್ಮನೊಂದಿಗೆ ಒಪ್ಪಿಗೆ ಪಡೆದೂ ಆಗಿತ್ತು.

ವೀಣಾಳಂತೂ ಮನಸಾರೆ ಗಿರೀಶನನ್ನು ಪ್ರೇಮಿಸಿದ್ದಳು.

ಗಿರೀಶನೂ ಅವಳನ್ನು ಪ್ರೇಮಿಸಿದ್ದನು.

ಇನ್ನು ಒಂದೇ ತಿಂಗಳಿತ್ತು ಮದುವೆಗೆ.

ಅಷ್ಟರಲ್ಲೇ ಗಿರೀಶ ಓದುತ್ತಿದ್ದ, ಪಾಲಿಟೆಕ್ನಿಕ್‌ನಿಂದ ಅವನ ಮುಂದಿನ ಓದಿಗಾಗಿ ಶಾಲೆಯ ವೆಚ್ಚದಿಂದಲೇ ಓದಿಸುವ ಸುದ್ದಿಯೂ ಬಂತು.

ಓದು ಮುಗಿದಕೂಡಲೇ ಉದ್ಯೋಗ ಹಿಡಿದು ಮದುವೆಯಾಗುವ ಮನಸ್ಸು ಗಿರೀಶನಿಂದ ದೂರ ಉಳಿಯಿತು.

ಮದುವೆಯಾದರೆ ಕನ್ನ ಓದಿಗೆ ಪೆಟ್ಟು, ಎಂಬ ಮನೋವೃತ್ತಿ ಅವನನ್ನು ಮದುವೆಯಾಗ ಬಿಡಲಿಲ್ಲ.

ಈ ಸುದ್ದಿ ರಾಜೀವಮ್ಮನಿಗೂ ತಿಳಿಸು ಕಂಬನಿಗರೆದು ಯೋಚಿಸಿದರು.

ಕರುಳಿನ ಕರೆ ಅವರ ಯೋಚನೆಯಲ್ಲಿತ್ತು.

ಮಗಳ ಮೇಲಿನ ಮಮಕಾರ ಅವರ ಕಂಬನಿಯಲ್ಲಿತ್ತು.

ಅಳಿಯನ ಮೇಲಿನ ಪೂಜ್ಯಭಾವನೆ ಅವರ ದುಃಖೋದ್ವೇಗದಲ್ಲಿತ್ತು. ಎಲ್ಲವನ್ನೂ ಮೀರಿಸುವ, ತರುಣ ಸಹಜ ಬಿಸಿರಕ್ತದ ಹುಂಬುತನ ನಿನ್ನ ಮಗಳಿಲ್ಲದಿದ್ದರೆ

(೧೧ನೇ ಪುಟ ನೋಡಿರಿ)

ಕಳೆದ 5 ವರ್ಷಗಳ ಅದ್ವಿತೀಯ ಪ್ರಗತಿ!!!

	31-12-1955ರಲ್ಲು ರೂ.	31-12-1960ರಲ್ಲು ರೂ.
1 ತೆತ್ತ ಮೂಲಧನ ಮತ್ತು ಕ್ಷೇಮನಿಧಿ	3,18,000	6,87,000
2 ಗವರ್ನ್‌ಮೆಂಟ್ ಸೆಕ್ಯೂರಿಟೀಸ್ ಇತ್ಯಾದಿ:	6,96 000	45,23,000
3. ಒಟ್ಟು ಸಾಲಗಳು	12 92,000	69,90,000
4 ಒಟ್ಟು ಠೇವಣಾತಿಗಳು	**20,49,000**	**1,17,99,000**
5. ಚಲಾವಣಾ ಭಂಡವಾಳ	**24,55,000**	**1,31,00,000**

ಜನತಾ ಸೇವೆಯ ಮುನ್ನಡೆಯಲ್ಲಿ....

ದಿ. ಪಾಂಗಾಳ ನಾಯಕ್ ಬೇಂಕ್ ಲಿ.,
ರಜಿಸ್ಟರ್ಡ್ ಆಫೀಸು: ಉಡುಪಿ, ದ. ಕನ್ನಡ. ಸ್ಥಾಪನೆ: 1920

ಇತಿಹಾಸ ಪೃಷ್ಠ:

ಸೂರ್ಯ ಮುಳುಗದ ದೇಶ--ದಿಲ್‌ಮುನ್

ಪ್ರಾಚೀನ ಭಾರತೀಯ ಸಂಸ್ಕೃತಿಯು ವಿಶ್ವದ ಬಹುವಿಸ್ತೃತ ಭೂಭಾಗದಲ್ಲಿ ಹರಡಿತ್ತು; ಇಲ್ಲವೇ ಪ್ರಭಾವ ಬೀರಿತ್ತು. ಸೂರ್ಯ ಮುಳುಗದ ದೇಶ 'ದಿಲ್‌ಮುನ್' ಕೂಡ ಇಂತಹ ದೇಶಗಳಲ್ಲಿ ಒಂದು. 'ದಿಲ್‌ಮುನ್' ಒಂದು ಆಫ್ರಿಕನ್ ರಾಷ್ಟ್ರವಾಗಿರಬಹುದೆ?

ಮಾನವ ನಾಗರಿಕತೆ ಮತ್ತು ಸಂಸ್ಕೃತಿ ವಿಕಾಸದ ಪ್ರಾರಂಭಿಕ ಕಾಲವಿಂದಿಗೂ ಕಗ್ಗತ್ತಲೆಯ ಅಂತರಾಳದಲ್ಲಿ ಅಡಗಿದೆ. ಆದರೂ ನದೀ ತಳದ ೬೦ ಅಡಿ ಆಳದಲ್ಲಿ ದೊರೆತ ಮಾನವನ ಎಲುಬು ಮೂಳೆಗಳಿಂದ ಕಡಿಮೆಯೆಂದರೆ ೧೫,೦೦೦ ವರ್ಷಗಳಿಗೆ ಮೊದಲು ಮನುಷ್ಯ ಭೂಮಿಯ ಮೇಲೆ ವಾಸಿಸುತಿದ್ದನೆಂದು ತಿಳಿಯುತ್ತದೆ. ಆತನ ಆಯುಧಗಳು ಕಲ್ಲಿನದಾಗಿದ್ದುವು. ಅವನಿಗೆ ಬೆಂಕಿಯ ಪರಿಚಯವಿತ್ತು. ಗುಹಾ ವಾಸಿಯಾಗಿದ್ದರೂ ಆತ ಕಲಾಪ್ರೇಮಿಯಾಗಿದ್ದ. ಚಿತ್ರಕಲೆಯನ್ನಾತನರಿತಿದ್ದ. ಶಿಕಾರಿಯಾಡಿಯೇ ತನ್ನ ಹೊಟ್ಟೆ ಹೊರೆದುಕೊಳ್ಳುತಿದ್ದ ಈ ರೀತಿಯಾಗಿ ಮಾನವನು ಅದೆಷ್ಟು ಕಾಲ ಬದುಕಿದ್ದನೆಂಬುದಿನ್ನೂ ಅಜ್ಞಾತವಿದೆ.

ಇತಿಹಾಸದ ಮೇಲೆ ಹರಡಿದ್ದ ಪರದೆಯು ಏಳುವಾಗ, ನೀಲ ನದೀತಟ ಹಾಗೂ ಯುಫ್ರೆಟಿಸ್-ಟೈಗ್ರಿಸ್ ನದಿಗಳದಡದಲ್ಲಿ ವಿಶಾಲ ಸಾಮ್ರಾಜ್ಯಗಳು ಸಂಸ್ಥಾಪಿತವಾಗಿರುವುದು ತೋರುತ್ತವೆ. ಇಲ್ಲಿನವರು ಕೃಷಿಯನ್ನು ಮಾಡುತಿದ್ದರು. ಗೋದಿ ಮತ್ತು ಜೋಳಗಳನ್ನು ತಿನ್ನುತಿದ್ದರು. ನೀಲನದೀತಟ ಮತ್ತು ಯುಫ್ರೆಟಿಸ್—ಟೈಗ್ರಿಸ್ ನದಿಗಳ ನಡುವಣ ಇರಾಕ ಸಾಮ್ರಾಜ್ಯಗಳ ನಡುವೆ ಸಂಬಂಧವಿತ್ತೋ ಇಲ್ಲವೋ; ಎರಡು ರಾಜ್ಯಗಳ ಮಧ್ಯೆ ವ್ಯಾಪಾರ ವಹಿವಾಟು ನಡೆಯುತಿತ್ತೊ ಇಲ್ಲವೋ ತಿಳಿದುಬರುವುದಿಲ್ಲ. ಆದರೆ, ಕ್ರಿ. ಪೂ. ೪,೦೦೦ ವರ್ಷಗಳಿಗೆ ಮೊದಲು ಸಾಮ್ರಾಜ್ಯದ ಸಂಸ್ಥಾಪಕರಿದ್ದರು. ಆರ್ಮೇನಿಯಾದ ಪರ್ವತಗಳಲ್ಲಿ ಹುಟ್ಟುವ ಯುಫ್ರೆಟಿಸ್ ನದಿಯ ದಡದಲ್ಲಿ ಸುಮೇರಿಯನ್ ಜನರು ನೆಲಸುತಿದ್ದರು; ಇವರ ಸಾಮ್ರಾಜ್ಯವು ಪರ್ಶಿಯನ್ ಕೊಲ್ಲಿಯ ತನಕವೂ ಪಸರಿಸಿತ್ತು.

ಸುಮೇರಿಯನರು ಕೃಷಿಯನ್ನು ಮಾಡುತಿದ್ದರು. ಅವರ ಆಯುಧ—ಉಪಕರಣಗಳೂ ಕಲ್ಲಿನವಾಗಿದ್ದುವು ಭಿಕ್ಷುಗಳಂತೆ 'ಸಾಂಬಾ'ನ ಜ್ಞಾನವಿತ್ತು; ಆದರೂ ಇವರು 'ಪೆಪಿರಸ್'ನ ಮೇಲೆ ಬರೆಯುತ್ತಿರಲಿಲ್ಲ ಮೆಸಪೊಟೋಮಿಯಾದಲ್ಲಿ ಪೆಪಿರಸ್ ಬೆಳೆಯದಿರುವುದೇ ಇದಕ್ಕೆ ಕಾರಣ. ಇವರ ಲಿಪಿಯು ಚಿತ್ರಲಿಪಿಯಾಗಿತ್ತು. ಮೊದ ಮೊದಲಿಗೆ ಇವರು ಕಲ್ಲುಗಳ ಮೇಲೆ ಬರೆಯುತಿದ್ದರು. ಅನಂತರ ಮಣ್ಣಿನಿಂದ ಮಾಡಿದ ಇಟ್ಟಿಗೆಗಳ ಮೇಲೆ ಒಂದು ಬಗೆಯ ಪೆನ್ಸಿಲಿನಿಂದ ಬರೆಯುತಿದ್ದರು. ಈ ತೆರದ ಇಟ್ಟಿಗೆಗಳು ಇಂದಿಗೂ ಬೇಕಾದಷ್ಟು ದೊರೆಯುತ್ತವೆ. ಈ ಲಿಪಿಯನ್ನು ಓದುವ ಪ್ರಯತ್ನವನ್ನು ಮಾಡಿದ್ದಾರೆ. ಆಗ, ಭಾರತದ ಪರಿಚಯವು ಈ ಜನರಿಗಿರುವುದು ತಿಳಿದಿದೆ, ಭಾರತದೊಡನೆ ಇವರು ವ್ಯಾಪಾರ ಮಾಡುತಿದ್ದರು; ಈ ವ್ಯಾಪಾರವು ಸಮುದ್ರ ಮಾರ್ಗವಾಗಿ ನಡೆಯುತಿತ್ತು ಎಂದು ಗೊತ್ತಾಗಿದೆ.

ಮೊಹೆಂಜೊದಾರೊ ಮತ್ತು ಹರಪ್ಪಾಗಳಲ್ಲಿನ ಸಿಂಧೂ ನದೀ ಕಣಿವೆಯ ನಾಗರಿಕತೆಯ ಸೀಮೆ ವಿಶಾಲವಿತ್ತು. ಲೋಥಾಲ್, ರೋಪಡ್‌ಗಳಲ್ಲಿನ ಅಗೆತಗಳಿಂದ ಈ ಸಂಸ್ಕೃತಿಯು ಗಂಗಾ ನದೀತಟ ಮತ್ತು ಪಶ್ಚಿಮ ಭಾರತಗಳಿಗೂ ಹರಡಿತ್ತೆಂದು ತಿಳಿಯುತ್ತದೆ, ತಂಜಾವೂರು ಮತ್ತು ತಿರುನಲ್ವೇಲಿಗಳಲ್ಲಿ ಲಭಿಸಿದ ಅವಶೇಷಗಳಿಂದ ಇದು ಅಖಿಲ ಭಾರತದಲ್ಲಿ ಹರಡಿದ್ದ ಕಾಲವೊಂದಿತ್ತೆಂದು ಗೊತ್ತಾಗುತ್ತದೆ. ಆದರೂ ಈ ವಿಚಾರವನ್ನು ಪುರಾತತ್ವವೇತ್ತರು ಒಪ್ಪಿಕೊಳ್ಳಲು ಸಂಕೋಚಪಡುತ್ತಾರೆ.

ಸಿಂಧ ಪ್ರಾಂತದಿಂದ ಗಂಗಾ ನದೀ ತಟದ ವರೆಗೆ, ಕಾಬೂಲಿನಿಂದ ಸೌರಾಷ್ಟ್ರದ ತನಕ ಈ ನಾಗರಿಕತೆಯ ಪ್ರಸಾರವಿತ್ತೆಂಬುದರಲ್ಲಿ ಸಂದೇಹವಿಲ್ಲ. ಮೊಹೆಂಜೊದಾರೊ, ಹರಪ್ಪಾ, ಲೋಥಲ್, ರೋಪಡ್‌ಗಳ ಜನರು ಸುಮೇರಿಯನ್ನರಿಗೆ ಪರಿಚಿತರಾಗಿದ್ದರು; ಇವರ ನಡುವೆ ವ್ಯಾಪಾರ ನಡೆಯುತಿತ್ತು; ಲೋಥಲ್ ಒಂದು ಮುಖ್ಯ ಬಂದರವೂ ಆಗಿತ್ತು. ಹರಪ್ಪಾದ ಸುಮಾರು ಮೂವತ್ತು ನಾಣ್ಯಗಳು ಕಿಶ್, ತೇಲ್, ಅಸ್ಮಾರ್ ಮತ್ತಿತರ ಕೇಂದ್ರಗಳಲ್ಲಿ ದೊರೆತಿವೆ. ಈ ಕೇಂದ್ರಗಳು ಆಗಿನ ಸುಮೇರು ದೇಶಕ್ಕೆ ಸೇರಿದ್ದುವು.

ಸುಮೇರಿಯನರೂ ಜಲಪ್ರಳಯದ ಕಥೆಯನ್ನು ಹೇಳುತ್ತಾರೆ. 'ನೋಆ ಮನು'ವಿನ ಬದಲಿಗೆ ಇವರು 'ಜೀಯೂಸೂದ್ರ'ನನ್ನು ನಾಯಕನನ್ನಾಗಿ ಮಾಡಿದ್ದಾರೆ. ಸುಮೇರುವಿನ ಒಬ್ಬ ರಾಜನಾಗಿದ್ದನಿವನು. ನೆರೆಯೇರುವುದಕ್ಕೆ ಮೊದಲು ಜಲದೇವತೆಯು ಈತನಿಗೆ ತೋರಿಸಿಕೊಂಡು 'ಆರ್ಕ'ನಾವೆಯನು ತಯಾರಿಸುವಂತೆ ತಿಳಿಸಿದ. ನೆರ ಕೊನೆಗೊಂಡಿತು. ಜೀಯೂ ಸೂದ್ರ ಬದುಕಿಕೊಂಡನು. ದೇವತೆ ಪ್ರಸನ್ನನಾದನು. ಆತನಿಗೆ ಅಮರತ್ವ ನೀಡಲು ಮುಂದಾದನು; ಆದರೆ ಜೀಯೂಸೂದ್ರ ಅಮರನಾಗಲಾರದಾಗಿದ್ದನು. ಆದುದರಿಂದ ಸುಪ್ರಸನ್ನನಾದ ದೇವನು ಆತನನ್ನು 'ದಿಲ್‌ಮುನ್ ದಿಲ್‌ಮುನ'ಗೆ ಕಳುಹಿಸಿದ ದಿಲ್‌ಮುನ್ ಎಂದರೆ, ಸೂರ್ಯನು ಉದಯಿಸುವಲ್ಲಿನ ಸುಂದರ ದೇಶ. ಅಲ್ಲಿ ಯಾವುದೇ ರೋಗರುಜಿನಗಳಿಲ್ಲ ಮೃತ್ಯುವಿನ ಭಯವೂ ಇಲ್ಲ. ಅದು ಪವಿತ್ರ, ಸ್ವಚ್ಛ, ಪ್ರಕಾಶಮಾನ, ಉಜ್ವಲವಾದ ದೇಶ' ಎಂದು ಏಂಕೀ (ಭಾರತದ ವರುಣ)ಯು ಜೀಯೂ—ಸೂದ್ರನಿಗೆ ಹೇಳಿದನು.

ಸುಮೇರಿಯನ್ ಉಪಾಖ್ಯಾನದಲ್ಲಿ ಏಂಕೀಯ ಮಗಳ ಹೆಸರು 'ನಿನಸಿಕ್' ಎಂದು ಹೇಳಿದೆ. ಪವಿತ್ರ ದೇವಿ ಎಂದು ಇದರ ಅರ್ಥ. ನಿನಸಿಕಳು ತನ್ನ ತಂದೆಯೊಡನೆ ಹೇಳಿದಳು: "ಅಪ್ಪಾ, ದಿಲ್‌ಮುನ್ ಅತ್ಯಂತ ಸುಂದರ ದೇಶ. ಅಲ್ಲಿ ಎಲ್ಲ ವಸ್ತುಗಳೂ ಮನೋಹರವಾಗಿವೆ. ಆದರೇನು, ಸಿಹಿ ನೀರಿನ ಅಭಾವ ಮಾತ್ರ ಅಲ್ಲಿದೆ." ಏಂಕೀಯು ಇದನ್ನು ಕೇಳಿ 'ದಿಲ್‌ಮುನ್'ಗೆ ಧಾರಾಳ ಪ್ರಮಾಣದಲ್ಲಿ ನೀರನ್ನೊದಗಿಸಿದನು. ಅಂದಿನಿಂದ ಅಲ್ಲಿ ಗದ್ದೆಗಳು ಪೈರುಪಚ್ಚೆಗಳಿಂದ ರಾರಾಜಿಸ ತೊಡಗಿದವು.

ಇದೇನೋ ಉಪಾಖ್ಯಾನದ ಕಥೆಯಷ್ಟೆ. ಸುಮೇರು ಮತ್ತು 'ದಿಲ್‌ಮುನ್'ಗಳ ನಡುವೆ ವ್ಯಾಪಾರ ನಡೆಯುತಿತ್ತು ಎಂಬುದಕ್ಕೆ ಐತಿಹಾಸಿಕ ಆಧಾರಗಳೂ ಸಿಗುತ್ತವೆ. ಕ್ರಿ. ಪೂ. ೨೪೫೦ರಲ್ಲಿದ್ದನೆನ್ನಲಾಗುವ ಲಾಗಾಶ್ ವಂಶದ ಮೊದಲ ರಾಜ ಉರನಾನಶೇಯು ಅಭಿಮಾನ ಮತ್ತು ಹೆಮ್ಮೆಯಿಂದ ಹೇಳುತಿದ್ದನಂತೆ: "ದಿಲ್‌ಮುನ್‌ನ ನೌಕೆಗಳು ನಮಗೆ ಕಪ್ಪಗೆ ತರುತ್ತವೆ" ಎಂದು. ಇದರಿಂದ ದಿಲ್‌ಮುನ್ ಒಂದು ವಿಶಾಲ ದೇಶವಾಗಿರಬೇಕು; ಮತ್ತು ಅದರೊಡನೆ ವ್ಯಾಪಾರ ಮಾಡುವುದು ಅಭಿಮಾನಾಸ್ಪದವೆಂದು ಲಾಗಾಶ್ ವಂಶದ ಅರಸರ ತಿಳಿಯುತ್ತಿರಬೇಕೆಂದು ಊಹಿಸಬಹುದು

ಸುಮೇರು ದೇಶದ ಅರಸರಲ್ಲಿ ಸಾರಗನ್ನನು ವಿಖ್ಯಾತನು ಈತನು ತನ್ನ ಸಾಮ್ರಾಜ್ಯವನ್ನು ಬಹಳಷ್ಟು ವಿಸ್ತರಿಸಿದ್ದನು. ಈಗ ಬಗ್ದಾದ್ ಎಂದು ಕರೆಯುವ ನಗರದ ಸ್ಥಳದಲ್ಲಿ ಅಗಾದೆ ಎಂಬ ಒಂದು ನೂತನ ಪಟ್ಟಣವನ್ನು ನಿರ್ಮಿಸಿ, ಅದನ್ನೇ ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. 'ದಿಲ್‌ಮುನ್'ನ ಹಡಗುಗಳು ಅಗಾಡೆಯಲ್ಲಿ ತಂಗುತಿದ್ದುವು; ಬೆಬಿಲೋನಿಯನ್ ಜನರು ಇದೇ ಅಗಾಡೆಯನ್ನು 'ಅಕ್ಕಾಡ್'ವೆನ್ನುತ್ತಾರೆ.

ದಿಲ್‌ಮುನ್ ರಾಜ್ಯವು ಸುಮೇರುವಿಗೆ ಕಪ್ಪಗೆಯನ್ನು ಮಾರಯ್ಸುತಿತ್ತು ಮಾತ್ರವಲ್ಲ; ಅಲ್ಲಿನ ವ್ಯಾಪಾರಿಗಳು ನಾವೆಗಳ ಮೂಲಕ ಆನೆಯ ದಂತ, ದಂತದಿಂದ ತಯಾರಾದ ವಸ್ತುಸಿಚಯಗಳನ್ನು ತರುತಿದ್ದರು. 'ದಿಲ್‌ಮುನ್' ಸುಮೇರುವಿಗಿಂತ ಪೂರ್ವದಲ್ಲಿದೆಯೆಂದು ಹೇಳಲಾಗುತ್ತದೆ; ಇಲ್ಲಿಯೇ ಸೂರ್ಯ ಉದಯವಾಗುತ್ತಾನೆ. 'ದಿಲ್‌ಮುನ್' ಶಬ್ದದ ಅರ್ಥವಾದರೂ ಇದೇ. ಆದುದರಿಂದ ಆನೆಯ ದಂತವನ್ನು ತರುವ 'ದಿಲ್‌ಮುನ್'ನ ವ್ಯಾಪಾರಿಗಳು ಆಫ್ರಿಕೆಯವರಿದ್ದರೆಂದು ಹೇಳಬಹುದಾದರೂ ಅದ ಪೂರ್ವ ದಿಕ್ಕಾಗಲಿಲ್ಲ. ಆನೆಯ ದಂತದಿಂದ ನಿರ್ಮಿತವಾದ ಅನೇಕ ವಸ್ತುಗಳು ಮೊಹೆಂಜದಾರೊ, ಹರಪ್ಪಾ, ಚೇನ್‌ಹೂಡಾಲಿ ಮತ್ತು ಈ ಸಾಮ್ರಾಜ್ಯದ ಅನ್ಯಾನ್ಯ ಸ್ಥಳಗಳಲ್ಲಿ ದೊರೆತಿವೆ.

ಸುಮೇರಿಯನರು 'ದಿಲ್‌ಮುನ್' ದೇಶವನ್ನು ಅತೀವ ಆದರದಿಂದ ನೋಡುತಿದ್ದರು; ಅದನ್ನೊಂದು ದೊಡ್ಡ ಗೌರವಪೂರ್ಣ ದೇಶವೆಂದು ತಿಳಿಯುತಿದ್ದರು. ಅವರ ದೊಡ್ಡ ದೊಡ್ಡ ಹಡಗುಗಳನ್ನು ಸುಮೇರಿಯನರು ಉತ್ಸುಕತೆಯಿಂದ ನಿರೀಕ್ಷಿಸುತಿದ್ದರು. ಅವರ ಹಲವಾರು ಲೇಖಗಳಿಂದ ಈ ಸಂಗತಿ ನಮಗೆ ತಿಳಿಯುತ್ತದೆ.

ಲೋಥಲ್‌ನಲ್ಲಿ ನಡೆದ ಅಗೆತಗಳಿಂದ ಅದು ಇದೇ ಕಾಲದ ಸಿಂಧೂ ಸಾಮ್ರಾಜ್ಯದ ಧಾನ್ಯ ಸಂಗ್ರಹಾಲಯವಾಗಿತ್ತು, ಅತಿದೊಡ್ಡ ಬಂದರವಾಗಿತ್ತು; ಲೋಥಲ್‌ನಿಂದ ಸಿಂಧೂನದೀ ಮುಖದವರೆಗೂ

(೧೦ನೇ ಪುಟ ನೋಡಿರಿ)

ಸ್ಥಾಪನೆ: 1924

ದಿ ಕರ್ಣಾಟಕ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಆಫೀಸು: ಮಂಗಳೂರು—3.

ಈ ಕೆಳಗಿನ ಬಡ್ಡಿದರಗಳಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು:

ಒಂದು ತಿಂಗಳಿಗೆ	.... ಸಾ॥ ನೇಕಡಾ	3-75 ನ ಪೈಸೆ
ಮೂರು ತಿಂಗಳುಗಳಿಗೆ	.... ,,	4-00 ,,
ಆರು ತಿಂಗಳುಗಳಿಗೆ	.... ,,	4 25 ,,
12 ತಿಂಗಳುಗಳಿಂದ 23 ತಿಂಗಳುಗಳ ವರೆಗೆ	.... ,,	4-50 ,,
24 ತಿಂಗಳುಗಳಿಂದ 48 ತಿಂಗಳುಗಳ ವರೆಗೆ	.... ,,	4 75 ,,

"ಹನಿ ಡಿಪೋಸಿಟ್ಸ್"ನಲ್ಲಿ

ನಿಮ್ಮ ದೈನಂದಿನ ಉಳಿತಾಯವನ್ನು ವಿನಿಯೋಗಿಸಿರಿ.

THE KARNATAKA BANK LIMITED.

ವಿಚಾರ ವಿಮರ್ಶ

ಶಿಕ್ಷಣ ಸಂಸ್ಥೆಗಳಿಗೆ ಸಹಾಯಧನ

ಪ್ರಾಥಮಿಕ ಶಿಕ್ಷಣದ ಹೊಣೆಗಾರಿಕೆ ಸರಕಾರದ್ದು. ಆದುದರಿಂದ, ಪ್ರಾಥಮಿಕ ಶಿಕ್ಷಣ ಸಂಸ್ಥೆಗಳಿಗೆ ಸಂಪೂರ್ಣ ಸಹಾಯಧನವನ್ನು ನೀಡುವುದು ಸರಕಾರದ ಕರ್ತವ್ಯ. ಇದರಲ್ಲಿ ಏನಾದರೂ ಕಡಿತ ಮಾಡಿದರೆ, ಅದರ ಪ್ರಭಾವ ಅಧ್ಯಾಪಕರ ಮೇಲೆ ಬೀಳುವುದು ಖಂಡಿತ.

ಶ್ರೀ ಎಸ್ ಗೋಪೀಚಂದ ರಾವ್

ರಾಜ್ಯ ಪುನರ್ಘಟನೆಯ ಕಾಲದಲ್ಲಿ ವಿವಿಧ ಆಡಳಿತೆಯ ವಿಭಾಗಗಳು ಒಂದು ಸೇರಿ ರೂಪಿತವಾದ ರಾಜ್ಯವಿಂದರೆ ಕೇವಲ ಮೈಸೂರು ಮಾತ್ರ. ಇಲ್ಲಿ ಐದು ವಿವಿಧ ರೀತಿಯ ಕಾಯಿದೆ—ನಿಯಮಗಳು ಇದ್ದ ಪ್ರದೇಶಗಳು ಒಟ್ಟು ಸೇರಿದ್ದುವು. ಈಗಾಗಲೇ ಹಲವಾರ ಏಕರೂಪದ ಕಾಯಿದೆ ಕಾನೂನುಗಳನ್ನು ತಯಾರಿಸಲಾಗಿದ್ದರೂ ಇನ್ನೂ ಹಲವಾರು ಆಗ ಬೇಕಾಗಿವೆ. ಇವುಗಳಲ್ಲಿ ಶಿಕ್ಷಣ ಸಂಸ್ಥೆಗಳಿಗೆ ಧನಸಹಾಯ ನೀಡುವ ನಿಯಮಗಳೂ ಒಂದು

ಸಮೀಕರಣ ಸಮಿತಿ

ವಿದ್ಯಾಭ್ಯಾಸದ ಬಗ್ಗೆ ಸಹಾಯ ಧನವನ್ನು ಶಿಕ್ಷಣಸಂಸ್ಥೆಗಳಿಗೆ ನೀಡುವ ನಿಯಮಗಳನ್ನು ಸೂಚಿಸುವಂತೆ ನೇಮಿತವಾದ ಸಮೀಕರಣ ಸಮಿತಿಯು ಎರಡು ವರುಷಗಳಿಗೆ ಮೊದಲೇ ವರದಿಯನ್ನು ಒಪ್ಪಿಸಿತ್ತು. ಈ ವರದಿಯನ್ನು ಮಂತ್ರಿ ಮಂಡಳವು ಪರಿಶೀಲಿಸುತ್ತಿದೆ. ಅಂತೂ ಈ ವರ್ಷದ ಜೂನ್ ತಿಂಗಳ ಒಳಗೆ ಸರಕಾರವು ಒಂದು ಅಂತಿಮ ತೀರ್ಮಾನಕ್ಕೆ ಬರುವುದೆಂದೂ ಜೂನ್ ಮೊದಲನೆ ತಾರೀಕಿನಿಂದ ಈ ಏಕರೂಪದ ನಿಯಮಗಳು ಬರುವುವೆಂದೂ ವಿದ್ಯಾ ಮಂತ್ರಿ ಶ್ರೀ ಗಣಮುಖಿಯವರು ವಿಧಾನ ಪರಿಷತ್ತಿನಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತ ಹೇಳಿದರೆಂದು ವರದಿಯಾಗಿರುತ್ತದೆ.

ಸಮೀಕರಣ ಸಮಿತಿಯು ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಸಂಸ್ಥೆಗಳೆರಡನ್ನೂ ಒಟ್ಟಿಗೆ ಸೇರಿಸಿ ವರದಿಯನ್ನಿತ್ತಿದೆಯೆಂದೂ ಮಾಧ್ಯಮಿಕ ಶಿಕ್ಷಣಕ್ಕೆ ಸಂಬಂಧಿಸಿದ ವರದಿಯು ಖಾಸಗಿ ಶಾಲೆಗಳಿಗೆ ಸಹಾಯಕವಾಗದಂತಿರುವುದರಿಂದ ಆ ಸಿಫಾರಸುಗಳನ್ನು ಸುಧಾರಿಸಲು ಸರಕಾರ ವಿಚಾರ ಮಾಡುತ್ತಿದೆಯೆಂದೂ ತಿಳಿಯುತ್ತದೆ. ಸಮೀಕರಣ ಸಮಿತಿಯು ಮಾಡಿದ್ದ ಸಿಫಾರಸುಗಳು ಯಾವುವು, ಅವುಗಳ ಸ್ವರೂಪವೇನು ಎಂಬುದು ಇನ್ನೂ 'ಸಾಮಾನ್ಯರಿಗೆ' ನಿಲುಕದ ವಿಷಯವಾಗಿದೆ. ಆದರೂ ಈ ಬಗ್ಗೆ ಹಲವಾರು ಊಹಾಪೋಹಗಳು ಎದ್ದಿದ್ದುವು. ನಿಜವಾದಾದರೆ ಶಿಕ್ಷಣ ಕ್ಷೇತ್ರದಲ್ಲಿ ಅನಿಷ್ಟ ವಾತಾವರಣ ಉಂಟಾಗುವುದು ಖಂಡಿತ.

ಮಾಧ್ಯಮಿಕ ಶಾಲೆಗಳು

ಮಾಧ್ಯಮಿಕ ಶಾಲೆಗಳಲ್ಲಿ ಹೆಚ್ಚಾಗಿ ವಿದ್ಯಾರ್ಥಿಗಳಿಂದ ಸಂಬಳವನ್ನು ವಸೂಲು ಮಾಡುತ್ತಿರುವುದರಿಂದ ಉಚಿತ ಶಿಕ್ಷಣಕ್ಕೆ ಅರ್ಹರಾದವರ ಬಗ್ಗೆ ಸರಕಾರದಿಂದ ಪರಿಹಾರಧನ ದೊರೆಯುತ್ತಿರುವುದರಿಂದ, ಈಗ ಕೂಡ ಅವಕ್ಕೆ ಸಂಪೂರ್ಣ ಸಹಾಯಧನ ದೊರೆಯುತ್ತಿಲ್ಲವಾದುದರಿಂದ, ಅವುಗಳ ಪ್ರಶ್ನೆ ಅಷ್ಟೊಂದು ಜಟಿಲವೆನಿಸದು. ಆದರೆ, ಪ್ರಾಥಮಿಕ ಶಿಕ್ಷಣ ಸಂಸ್ಥೆಗಳ ಸ್ಥಿತಿಯು ನೆಟ್ಟಗಿರಬೇಕಾದರೆ, ಆಂಶಿಕ ಸಹಾಯಧನವು ಏನೇನೂ ಸಾಲದೆನ್ನಬೇಕಾಗಿದೆ.

ಮದ್ರಾಸಿನ ಮಾದರಿ

ಮದ್ರಾಸು ಕರ್ನಾಟಕದ ವಿಭಾಗದಲ್ಲಿನ ಪ್ರಾಥಮಿಕ ಶಾಲೆಗಳಲ್ಲಿ ನೂರಕ್ಕೆ ಸುಮಾರು ಐವತ್ತರಷ್ಟು ಖಾಸಗಿ ಶಾಲೆಗಳು. ಉಳಿದುವಲ್ಲಿ ಹೆಚ್ಚಿನವು ಇದುವರೆಗೆ ಜಿಲ್ಲಾಬೋರ್ಡಿನ ಅಂಕಿತದಲ್ಲಿವೆ. ಸ್ಥಳೀಯ ಸಂಸ್ಥೆಗಳ ಆಡಳಿತೆಯಲ್ಲಿ ಕೆಲವು, ಸರಕಾರದ ವಿವಿಧ ಶಾಖೆಗಳ ಅಡಿಯಲ್ಲಿ ಕೆಲವು ಇರುತ್ತವೆ. ಇವುಗಳಲ್ಲಿ ಖಾಸಗಿ ಶಿಕ್ಷಣಸಂಸ್ಥೆಗಳನ್ನು ಬಿಟ್ಟರೆ, ಉಳಿದುವುಗಳು ಸಾರ್ವಜನಿಕ ನಿಧಿಯಿಂದ ನಡೆಸಲ್ಪಡುವುವು; ಆದುದರಿಂದ ಅವುಗಳ ವೆಚ್ಚದ ಬಾಯಿಗೂಡಿಸುವುದು ಸಮಸ್ಯೆಯೆನಿಸುವುದಿಲ್ಲ. ಆದರಲ್ಲೂ ಉಡುಪಿಯ ನಗರ ಸಭೆಯು ತನ್ನ ಆಡಳಿತೆಯ ಪ್ರಾಥಮಿಕ ಶಾಲೆಗಳನ್ನು ಸಂಪೂರ್ಣ ಸಹಾಯ ಧನ ನೀಡದೆ ಹೋದರೆ ಸರಕಾರವೇ ವಹಿಸಿಕೊಳ್ಳಬೇಕೆಂದ ಕೇಳಿಕೊಳ್ಳುತ್ತ ಬಂದಿದೆ. ನಗರಸಭೆಯಂತಹ ಸಾರ್ವಜನಿಕ ನಿಧಿಯಿಂದಲೇ ಪ್ರಾಥಮಿಕ ಶಾಲೆಗಳನ್ನು ನಡೆಸುವುದು ಅಸಾಧ್ಯವೆಂದಿರುವಾಗ ಖಾಸಗಿ ವ್ಯಕ್ತಿಗಳು ಹೇಗೆ ನಡೆಸಿಕೊಂಡು ಬರಬೇಕು ಎಂಬ ಪ್ರಶ್ನೆಯನ್ನು ಉತ್ತರಿಸ ಬೇಕಾಗುತ್ತದೆ.

ಸಧ್ಯ ಮದ್ರಾಸು ಸಹಾಯಧನ ನಿಯಮದಂತೆ ಅಧ್ಯಾಪಕರ ವೇತನ—ತುಟ್ಟಿ ಭತ್ತೆಗಳನ್ನು ಸಂಪೂರ್ಣವಾಗಿ ಸರಕಾರ ವಹಿಸುತ್ತಿದೆಯಲ್ಲದೆ ಆಡಳಿತೆಯು ವೆಚ್ಚದ ಬಗ್ಗೆ ಶಾಲೆಯ ಮಟ್ಟವನ್ನನುಸರಿಸಿ, ಶಾಲಾ ಪರಿಶೀಲನಾಧಿಕಾರಿಗಳ ಸಿಫಾರಸಿನಂತೆ ಆ ಶಾಲೆಗೆ ವೇತನದ ಬಗ್ಗೆ ಕೊಟ್ಟ ಒಟ್ಟು ಸಹಾಯಧನದ ನೇ. 1ಕ್ಕೆ ವಿಾರದಂತೆ ಹೆಚ್ಚಿನ ಸಹಾಯವನ್ನು ಖಾಸಗಿ ಶಾಲೆಗಳಿಗೆ ಮಾಡುತ್ತಿದೆ. ಈ ಸಹಾಯವು ಈಗ, ಹಳೆಯ ವೇತನ ಮಟ್ಟ (೧೧೧-೫೬ರಲ್ಲಿದ್ದುದು)ದಲ್ಲಿಯೇ ಇದುವರೆಗೂ ಕೊಡಲ್ಪಡುತ್ತಿದೆ. ಸಂಬಳ ವಸೂಲು ಮಾಡುತ್ತಿರುವ ಕೆಲವೇ ಶಾಲೆಗಳಿಗೆ ಸರಕಾರವು ಈಗ ಉಚಿತ ಶಿಕ್ಷಣ ಪಡೆಯಲು ಅರ್ಹರಾದವರ ಬಗ್ಗೆ ಪರಿಹಾರ ಧನವನ್ನೂ ನೀಡುತ್ತಿದೆ. ಆದರೆ, ಈಗ ಹರಡಿರುವ ಸುದ್ದಿಯಂತೆ ಅಧ್ಯಾಪಕರ ವೇತನ— ತುಟ್ಟಿಭತ್ತೆಗಳ ಸಂಪೂರ್ಣ ವೆಚ್ಚವನ್ನು ಸರಕಾರ ವಹಿಸುವುದಿಲ್ಲವೆಂದೂ ಅದರ ನೇ. ೯೦ರಷ್ಟು ಮಾತ್ರ ಅದು ನೋಡಿಕೊಳ್ಳುವುದೆಂದೂ ತಿಳಿಯುತ್ತದೆ. ಉಳಿದಂಶವನ್ನು ಶಾಲೆಗಳ ಆಡಳಿತೆಯವರು ಕೂಡಿಸಿ ಕೊಡಬೇಕೆಂದೂ ಹೇಳಲಾಗುತ್ತಿದೆ.

ಖಾಸಗಿ ಆಡಳಿತೆದಾರರು

ಖಾಸಗಿ ಶಾಲೆಗಳಲ್ಲಿ ಹೆಚ್ಚಿನವು ವೈಯ್ಯಕ್ತಿಕ ಆಡಳಿತೆಗೆ ಸೇರಿವೆಯೆಂಬುದನ್ನೂ, ಇಂತಹ ವ್ಯಕ್ತಿಗಳು ಈಗಲೂ ಅಧ್ಯಾಪಕ ವೃತ್ತಿಯಲ್ಲಿಯೇ ಇರುವವರು ಹೆಚ್ಚು ಎಂಬುದನ್ನೂ ಅವರಿಗೆ ಶಾಲೆಯಿಂದಾಗಲೀ ಮತ್ತಿತರ ವಿಧಾನಗಳಿಂದಾಗಲೀ ಇತರ ಹೇಳಬಹುದಾದ ಆದಾಯಗಳಿರುವುದಿಲ್ಲವೆಂಬುದನ್ನೂ ನಾವು ಅವಶ್ಯಗಮನಿಸಬೇಕು. ಹಾಗಿರುವಾಗ, ಅಂತಹ ಆಡಳಿತೆಯವರು ನೂರಕ್ಕೆ ಸುಮಾರು ಹತ್ತರಷ್ಟನ್ನು ಸೇರಿಸಿ ಅಧ್ಯಾಪಕರಿಗೆ ವೇತನ ಕೊಡುವ ಪರಿಸ್ಥಿತಿಯಲ್ಲಿರುವರೆ? ಎಂಬುದನ್ನು ನೋಡಬೇಕು.

ಅಧ್ಯಾಪಕರಿಗೆ ಪೆಟ್ಟು

ಕೆಲಸ ಬೇಕಾದರೆ ಕಲ್ಲಗೊಂಬೆಯ ಕಾಲನ್ನೂ ಹಿಡಿಯಬೇಕಾಗುವ ಈ ದಿನಗಳಲ್ಲಿ ಎಲ್ಲರಂತೆ ಅಧ್ಯಾಪಕರಾದರೂ ಆಡಳಿತೆಯವರ ಮಾತಿಗೆಲ್ಲಾ ಸೈ ಗುಟ್ಟುತ್ತ ಬರಲೇ ಬೇಕಾದ ಪ್ರಮೇಯವೊದಗಿದೆ. ಇನ್ನೂ ಹೊಸ ನಿಯಮಗಳಂತೆ ಸರಕಾರದಿಂದ ಆಡಳಿತೆಗೆ ದೊರೆಯುವ ಸಹಾಯ ಧನದ ಪ್ರಮಾಣವು ಕಡಿಮೆಯಾಯಿತೆಂದರೆ, ಕಡಿಮೆಯಾದ ಅಂಶವನ್ನು ಖಾಸಗಿ ಆಡಳಿತೆಯವರು ಕೂಡಿಸಿಕೊಡುವುದು ಖಂಡಿತಕ್ಕೂ ಅಸಾಧ್ಯವೇ. ಆಗ, ಅನಿವಾರ್ಯವಾಗಿ ಅಧ್ಯಾಪಕರೇ ಈ ನಷ್ಟಕ್ಕೆ ಗುರಿಯಾಗುತ್ತಾರೆ; ಆಗಲೇಬೇಕಾಗುತ್ತದೆ. ಸರಕಾರವು ಸುಳ್ಳು—ವ್ಯವಹಾರ ಮಾಡುವಂತೆ ಅವ್ಯಕ್ತ ರೀತಿಯಿಂದ ಪ್ರೇರೇಪಣೆ ನೀಡುವಂತಾಗುತ್ತದೆ.

ಸರಕಾರದ ಹೊಣೆಗಾರಿಕೆ

ಭಾರತೀಯ ಸಂವಿಧಾನದನ್ವಯ ಪ್ರಾಥಮಿಕ ಶಿಕ್ಷಣದ ಹೊಣೆಗಾರಿಕೆ ರಾಜ್ಯ ಸರಕಾರಕ್ಕೆ ಸೇರಿದುದು. ರಾಜ್ಯದ ಎಲ್ಲಾ ಶಾಲಾಪ್ರಾಯದ ಮಕ್ಕಳಿಗೆ ಅನಿವಾರ್ಯ ಶಿಕ್ಷಣ ಕೊಡಿಸುವುದು ಅದರ ಕರ್ತವ್ಯ. ಅದಕ್ಕಾಗಿ ಪ್ರಾಥಮಿಕ ಶಾಲೆಗಳೇ ಇಲ್ಲದ ಹಳ್ಳಿ ಹಳ್ಳಿಯಲ್ಲಿ ಹೊಸತಾಗಿ ಶಿಕ್ಷಣ ಸಂಸ್ಥೆಗಳನ್ನು ತೆರೆದು ಅವನ್ನು ನಡೆಸಿಕೊಂಡು ಬರುವುದು ಅದರ ಧ್ಯೇಯ. ಈ ಗುರಿ ಮುಟ್ಟಲು ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳಲಾಗಿದೆ. ಒರಿಂದ ೧೧ ವರ್ಷ ಪ್ರಾಯದ ಎಲ್ಲ ಮಕ್ಕಳಿಗೆ ಉಚಿತ—ಅನಿವಾರ್ಯ ಶಿಕ್ಷಣವನ್ನು ನೀಡಲು ಅವಶ್ಯಕ ಪೂರ್ವಭಾವಿ ಕಾರ್ಯಗಳು ನಡೆಯುತ್ತಿವೆ. ಹಾಗಿರುವಾಗ, ಖಾಸಗಿ ಪ್ರಾಥಮಿಕ ಶಾಲೆಗಳು ಇಂದು ಮಾಡುತ್ತಿರುವ ಸೇವೆಯನ್ನು ನಿಲ್ಲಿಸಿದರೆ, ಅಥವಾ ಮಾಡದೆ ಇರುವುದಾದರೆ, ಸರಕಾರ ಈ ಬಗ್ಗೆ ಅವಶ್ಯ ಕೈಹಾಕ ಬೇಕಾಗುವುದು. ಪ್ರಾಥಮಿಕ ಶಿಕ್ಷಣವು ಸಂಪೂರ್ಣ ಸರಕಾರದ ಹೊಣೆ.

ಖಾಸಗಿ ಸಂಸ್ಥೆಗಳಿಗೆ ಪ್ರೋತ್ಸಾಹ

ಆದುದರಿಂದ, ಇಂದು ಖಾಸಗಿ ವ್ಯಕ್ತಿಗಳು ಇಲ್ಲವೆ ಸಂಸ್ಥೆಗಳು ಶಿಕ್ಷಣ ಸಂಸ್ಥೆಗಳನ್ನು ನಡೆಸಿಕೊಂಡು ಬರುತ್ತಿರುವುದಾದರೂ ಸರಕಾರದ ಧ್ಯೇಯಸಾಧನೆಗೆ ಅನುಕೂಲವಾಗಿದೆ. ಅವುಗಳಿಗೆ ಸಂಪೂರ್ಣ ಸಹಾಯವನ್ನು ನೀಡುವುದು ಸರಕಾರದ ಪರಮ ಕರ್ತವ್ಯವಾಗಿದೆ. ವಿದ್ಯಾಕ್ಷೇತ್ರದಲ್ಲಿ ಬಹಳ ಮುಂದುವರಿದ ಮದ್ರಾಸ ರಾಜ್ಯವು ಖಾಸಗಿ ಶಾಲೆಗಳ ಮಹತ್ವವನ್ನರಿತು ಅವಕ್ಕೆ ಸಂಪೂರ್ಣ ಪ್ರೋತ್ಸಾಹ ನೀಡುತಿತ್ತು; ಇಂದಿಗೂ ನೀಡುತ್ತಿದೆ. ಪ್ರಾಥಮಿಕ ಶಿಕ್ಷಣವು ಯಶಸ್ವಿಯಾಗಬೇಕಾದರೆ, ಮೈಸೂರು ಸರಕಾರವೂ ಎಲ್ಲಾ ಖಾಸಗಿ ಪ್ರಾಥಮಿಕ ಶಾಲೆಗಳ ವೆಚ್ಚಕ್ಕೆ ಸಾಕಾಗುವಷ್ಟು ಹಣವನ್ನು ಅವುಗಳ ಆಡಳಿತೆದಾರರಿಗೆ ನೀಡುವುದು ಅತ್ಯಗತ್ಯ; ಅಂದರೆ, ನೂರಕ್ಕೆ ನೂರರಷ್ಟು ಸಹಾಯ ನೀಡುವಂತೆ (ಈಗ ಮದ್ರಾಸ ಕರ್ನಾಟಕ ವಿಭಾಗದಲ್ಲಿರುವಂತೆ) ನಿಯಮಗಳನ್ನು ಇಡಿ ರಾಜ್ಯಕ್ಕೆ ಅನ್ವಯಿಸುವುದು ಅತ್ಯವಶ್ಯ. ಸ್ಥಳೀಯ ಸಂಸ್ಥೆಗಳಿಗೂ ಇದೇ ಕೊಡುಗೆಯನ್ನು ಮಾಡುವುದು ಕೂಡ ಅಪೇಕ್ಷಣೀಯವೆನ್ನಬಹುದು.

ಸರಕಾರದ ಕರ್ತವ್ಯ

ಮಾನ್ಯ ವಿದ್ಯಾಮಂತ್ರಿಗಳು ಮಾಧ್ಯಮಿಕ ಹಾಗೂ ಪ್ರಾಥಮಿಕ ಶಾಲೆಗಳನ್ನು ಏಕದೃಷ್ಟಿಯಿಂದ ಗಮನಿಸಿದಂತೆ ತೋರುವುದಿಲ್ಲ; ಹಾಗೆ ಗಮನಿಸಲೂ ಬಾರದು. ಪ್ರಾಥಮಿಕ ಶಾಲೆಯ ಆಡಳಿತೆಯ ದಟ್ಟದರಿದ್ರತನವನ್ನು ಸರಕಾರ ಅವಶ್ಯಗಮನಿಸಬೇಕು. ಅಂತಹರು ಅಧ್ಯಾಪಕರಿಗೆ ಅವರ ವೇತನದ ಒಂದಂಶವನ್ನು ಕೂಡಿಸಿ ಕೊಡಬೇಕೆಂದು ನಿಯಮ ಮಾಡಿದರೆ, ಅದು ಸಂಪೂರ್ಣ ಹಾಸ್ಯಾಸ್ಪದವೆನಿಸೀತು. ಈಗಾಗಲೇ ಅಧ್ಯಾಪಕರಿಂದ ನಾನಾ ವಿಧವಾಗಿ ಸಹಾಯ ಬೇಡುತ್ತಿರುವ ಆಡಳಿತ ವರ್ಗದವರಿದ್ದಾರೆಂಬುದನ್ನು ನಾವು ನಂಬುವುದಾದರೆ, ಸರಕಾರ ಸಾವಿರಾರು ಅಧ್ಯಾಪಕರ ಹಿತದೃಷ್ಟಿಯಿಂದ, ಪ್ರಾಥಮಿಕ ಶಿಕ್ಷಣದ ಉನ್ನತಿಯ ದೃಷ್ಟಿಯಿಂದ ನೂರಕ್ಕೆ ನೂರರಷ್ಟು ಸಹಾಯ ಧನ ನೀಡುವ ಅವಕಾಶ ಕಲ್ಪಿಸುವುದು ಅಗತ್ಯ ಮಾತ್ರವಲ್ಲ, ನೇರ ಸಂಬಳ ಬಟವಾಡೆ ಮಾಡುವ ವ್ಯವಸ್ಥೆ ಮಾಡುವುದೂ ಅನುಚಿತವಲ್ಲ.

ಇಂದು ಮಿತವಾಗಿ ವ್ಯಯಿಸಿದರೆ, ನಾಳೆ ಹಿತವಾಗಿ ಪರಿಣಮಿಸುವುದು

ಮಿತವ್ಯಯವೇ ಹಿತಜೀವನದ ಹೆದ್ದಾರಿ.

ಮಿತವಾಗಿ ವ್ಯಯಿಸಿರಿ, ಉಳಿಯುವ ಹಣವನ್ನು ಬೇಂಕುಗಳಲ್ಲಿ ಶೇಖರಿಸಿರಿ.

ಕೊಪೋರೇಶನ್ ಬೇಂಕು.

ನಿಮ್ಮ ಹಣಕ್ಕೆ ಸುರಕ್ಷಿತತೆ ಮತ್ತು ಭದ್ರತೆಗಳೊಂದಿಗೆ
ಹೆಚ್ಚಿನ ದರದಲ್ಲಿ ಬಡ್ಡಿ ಕೊಡುವುದು.

ದಿ. ಕೆನರಾ ಬೇಂಕಿಂಗ್ ಕೊಪೋರೇಶನ್ ಲಿಮಿಟೆಡ್

ಸ್ಥಾಪನೆ: 1906 ರಿಜಿಸ್ಟರ್ಡ್ ಆಫೀಸು. **ಉಡುಪಿ,** ಮೈಸೂರು ರಾಜ್ಯ

6 ರಾಜ್ಯಗಳಲ್ಲಿ ಒಟ್ಟು 62 ಶಾಖೆಗಳು — ದೇಶವ್ಯಾದ್ಯಂತ ಏಜನ್ಸಿಗಳು.

ಹರಟೆ

ಹನ್ನೆರಡು ವರುಷ

ಹನ್ನೆರಡು ವರ್ಷವೆಂದರೆ, ಅದೇನೂ ಅಲ್ಪ ಅವಧಿಯೆಂದು ತಿಳಿಯಬೇಡಿ; ಈ ಹನ್ನೆರಡು ವರ್ಷವೇ ಹದಿನೆಂಟು ದಿನಗಳಲ್ಲಿ ಕೌರವರ ಹುಳಗಳನ್ನು ನಾಶ ಮಾಡುವ ಪ್ರೇರೇಪಣೆ ನೀಡಿಲ್ಲವೇ?

ಶ್ರೀ ಎಂ. ರಂಗ ರಾವ್.

ಹನ್ನೆರಡು ವರುಷ! ಹನ್ನೆರಡು ವರುಷಗಳೆಂದರೆ ನಮ್ಮ ನಿಮ್ಮಂಥ ಅಲ್ಪ ಮಾನವರಿಗೆ ಸಣ್ಣ ಕಾಲವೇನಲ್ಲ. ಬಹು ದೊಡ್ಡ ಕಾಲಾವಧಿ.

ನಮ್ಮಜ್ಜನ ಕಾಲದಲ್ಲಿ ಯಾರಾದರೊಬ್ಬ ಯಾವೂರಿಗಾದರೂ ಹೊರಟು ಹೋಗಿ ಹನ್ನೆರಡು ವರುಷಗಳ ವರೆಗೂ ಪತ್ತೆಯಿಲ್ಲದೆ ಹೋದರೆ ತೀರೇಹೋಯಿತು. ಅವನ ಆಶೆ ಬಿಟ್ಟಹಾಗೆಯೇ. ಊರವರೆಲ್ಲ ಸೇರಿ ಅವನಿಗೊಂದು ಉತ್ತರ ಕರ್ಮ ಮಾಡಿಸಿ ಬೊಜ್ಜ ತಿಂದು ತೇಗಿ ಹೋಗಿಬಿಡುತ್ತಿದ್ದರಂತೆ. ಒಂದು ವೇಳೆ ಆತ ಯಾವ ಮೂಲೆಯಲ್ಲಾದರೂ ಬದುಕಿದ್ದರೆ, ಅಲ್ಲಿಯೇ ಕುಟುಂಬ ಮಾಡಿಕೊಂಡಿದ್ದಾನೇ ಹೊರತು ೧೨ ವರುಷಗಳಾದ ಮೇಲೆ ಊರಿಗೆ ಬರಲಾರ. ಅಪ್ಪಿತಪ್ಪಿ ಬಂದರೆ ವಿಧವೆಯಾದ ತನ್ನ ಹೆಂಡತಿಗೇ ಗಂಡನಾಗಬೇಕಾದೀತು ಮತ್ತೆ! ಏಕೆ ಹೇಳುತ್ತೇನೆಂದರೆ—ಹನ್ನೆರಡು ವರುಷಗಳೆಂಬುದು ಎಷ್ಟೊಂದು ದೀರ್ಘ ಕಾಲಾವಧೀ ಅಂತ ಒಂದಿಷ್ಟು ನಿಮ್ಮ ತಲೆಗೆ ಹತ್ತಲೀ ಅಂತ.

ದೊಡ್ಡವರಾರಾದರೂ ಇದನ್ನು ಕೇಳಿ ನನ್ನನ್ನು ಉರಿಗಣ್ಣಿನಿಂದ ನೋಡಿಬಿಡಬೇಡಿರಿ. ನಾನು ಹೇಳಿದ್ದು ದೊಡ್ಡವರ ದೃಷ್ಟಿಯಿಂದಲ್ಲ; ದೊಡ್ಡವರ ದೃಷ್ಟಿಯಲ್ಲಿ ೧೨ ವರುಷಗಳು ಕಾಣಿಸುವುದು ಹಾಗಲ್ಲ. ಉದಾಹರಣೆಗೆ ಎಲ್ಲರಿಗೂ ದೊಡ್ಡವನಾದ ಬ್ರಹ್ಮನ ದೃಷ್ಟಿ ತೆಗೆದುಕೊಳ್ಳಿ. ಅವನಿಗೆ ನಮ್ಮ ೧೨ ವರುಷಗಳೆಂದರೆ ೧೨ ಕ್ಷಣಾರ್ಧ ಕೂಡಾ ಆಗಲಾರದು—ಅವನ ಲೆಕ್ಕಪ್ರಕಾರ. ಅಂತೆಯೇ ನಮ್ಮ ನಿಮ್ಮೊಳಗೆ ದೊಡ್ಡವರಾದ ಮೇಧಾವಿಗಳು, ವಿಜ್ಞಾನಿಗಳು, ರಾಜಕಾರಣಿಗಳು ಮುಂತಾದ ಮಹಾನುಭಾವರುಗಳ ದೃಷ್ಟಿಯಲ್ಲಿ ಕೂಡಾ ಹನ್ನೆರಡು ವರುಷಗಳೆಂದರೆ ಬಹಳ ಸಣ್ಣ ಕಾಲಪರಿಮಿತಿಯೇ ಆಗುತ್ತದಂತೆ. ವಿಜ್ಞಾನಿಗಳು ಸೂಕ್ಷ್ಮಾತಿಸೂಕ್ಷ್ಮ, ಸ್ಥೂಲಾತಿಸ್ಥೂಲ ಪರಮಾಣು—ಪರಮಾಂಡಗಳನ್ನು ತೃಟಿ ವಿಭಾಗಗಳಲ್ಲಿಯೂ, ಕಾಂತಿವೇಗದ ಗಣನೆಗಳಲ್ಲಿಯೂ ಜನಸಾಮಾನ್ಯಾತೀತವಾಗಿಯೇ ಲೆಕ್ಕಿಸುತ್ತಾರೆ. ಅದನ್ನು ಕೇಳಿ ನಾವೇನೋ "ಆಹಾ ಓಹೋ" ಎಂದು ಕಣ್ಣಾಗಲಿಸಿ ಬಾಯಿತೆರೆದೆಯೇ ಹೊರತು ಅಲೆಕ್ಕವನ್ನು ಊಹಿಸುವುದೂ ನಮ್ಮಿಂದಾಗದಪ್ಪ!

ಸ್ವಲ್ಪ ಮಟ್ಟಿಗೆ ನಮ್ಮ ಊಹೆಗೆ ನಿಲುಕುವಂಥಾ ಲೆಕ್ಕವೆಂದರೆ ನಮ್ಮ ಮುಖಂಡ ಬ್ರಹ್ಮರು ಆಗಾಗ ಒತ್ತೊತ್ತಿ ಅರೆದರೆದು ಹೇಳುವಂಥಾದ್ದು. ಅದನ್ನು ಕೇಳಿ ನಾಗರ ಹಾವು ಸಂಗೀತನಾದ ಕೇಳಿ ಎಷ್ಟು ಮಟ್ಟಿಗೆ ಗ್ರಹಿಸಿ ತಲೆಯಲ್ಲಾಡಿಸುವುದೋ ಹಾಗೆಯೇ ನಾವೂ ತಲೆಯಲ್ಲಾಡಿಸುತ್ತೇವೆ—ಹೌದು ಹೌದೂ ಅಂತ. ನಮ್ಮ ಒಪ್ಪಿಗೆಯ ಮತಗಳನ್ನು ಅವರಿವರಿಗೆ ಕೊಡುತ್ತಲೂ ಇದ್ದೇವೆ. ಹೀಗೆ ನಮ್ಮ ಪ್ರಜಾರಾಜ್ಯ ಸಾಗುತ್ತಲೂ ಇದೆ. ಪಂಚವಾರ್ಷಿಕ ಯೋಜನೆ, ಗ್ರಾಮೋದ್ಧರ, ಪಾರಿಶ್ರಾಮಿಕಾಗಾರ, ಭೂಗರ್ಭ ಸಂಪತ್ತು ಹೀಗೆ ಅದೂ ಇದೂ ಅಂತ ಮಧುರ ರಾಗಗಳೂ ಲೆಕ್ಕಗಳೂ ಕೇಳಿಸುತ್ತಲೇ ಇವೆ. ಅವುಗಳಲ್ಲಿ ಕೆಲವು ಕಣ್ಣಿಗೂ ಕಾಣಿಸಿವೆ; ಅನುಭವಕ್ಕೂ ಬಂದಿವೆ; ನಾವದರೊಂದಿಗೆ ಸೇರಿ ಸುಖ–ದುಃಖ—ತಾಪತ್ರಯಗಳಿಂದ ನಿಜಜೀವನವನ್ನು ನಡೆಸುತ್ತಲೂ ಇದ್ದೇವೆ. ಸ್ವಾತಂತ್ರ್ಯ ದೊರೆತಂದಿನಿಂದಲೂ ನಡೆಸುತ್ತಿದ್ದೇವೆ. ಅದಕ್ಕಿಂತ ಮೊದಲಿನ ವಿಷಯ ನೀವು ಕೇಳಬಾರದು, ನಾನು ಹೇಳಬಾರದು. ಏಕೆಂದರೆ ಸ್ವಾತಂತ್ರ್ಯ ಲಾಭಕ್ಕೆ ಪೂರ್ವದಲ್ಲಿ ಅನೇಕ ದಶಕಗಳಿಂದ—ಅಲ್ಲ—ಶತಕಗಳಿಂದಲೇ ಅನುಭವಿಸಿದ ಕಷ್ಟ ನಷ್ಟ ಭ್ರಷ್ಟತೆಗಳು ಉಜ್ವಲ ಚರಿತ್ರೆಯಾಗಿ ಕುಳಿತು ಹೋಯಿತು. ಅದಿನ್ನು ಎದ್ದು ಬರುವುದುಂಟೆ? ಅದನ್ನಿನ್ನು ಪುಸ್ತಕದ ಬದನೇ ಕಾಯಿ ಅಂದರೂ ಪರವಾಯಿಲ್ಲ.

ಆ ಮೇಲಿನ ವಿಷಯ ಉಂಟಲ್ಲವೇ? ಅದೇ ನಮಗೀಗ ಪ್ರಚಲಿತ ವಿಷಯ. ಈ ಹನ್ನೆರಡು ವರುಷ ಕಾಲಾವಧಿಯದು. ಇದರಲ್ಲಿ ನಾನೇನಾದರೂ ಹೊಸ ವಿಷಯ ಹೇಳುತ್ತೇನೆಂದು ಯಾರೂ ಕುತೂಹಲದಿಂದ ಬಾಯಿ ತೆರೆಯಬೇಡಿ. ನಿಮಗೆ ಗೊತ್ತಿಲ್ಲದ್ದು ನನಗೇನು ಗೊತ್ತಿದ್ದೀತು? ಇದ್ದದ್ದನ್ನೆಲ್ಲಾ ಹೇಳಿ ತಲೆ ಹಗುರು ಮಾಡಿಕೊಳ್ಳುತ್ತೇನೆ—ಅಷ್ಟೇ. ಇದನ್ನು ಎಲ್ಲರೂ ಓದಬೇಕೆಂದು ನಾನೇನೂ ಒತ್ತಾಯಪಡಿಸಲಾರೆ. ಬೀದಿ ಬದಿಯಲ್ಲಿ ಚಿಪ್ಪೀ ವಿದ್ಯೆ ಕಾಣಿಸುವವನ ಹಾಗೆ—ಯಾರೂ ಕೇಳಬಹುದು; ಬೇಡದವರು ಬಿಡಬಹುದು. ಇರುವವರೊಳಗೆ ಒಂದಿಷ್ಟು ಶುಭಾಕಾಂಕ್ಷೆಯುಳ್ಳವರಿಗೂ, ನಿನ್ನೆ ಮಾಡಿದ್ದನ್ನು ನೋಡಿದ್ದನ್ನು ಈ ದಿನ ಮರೆತು ಹೋಗುವವರಿಗೂ ನನ್ನ ಈ ಪ್ರಲಾಪವು ಸ್ವಲ್ಪ ಯೋಚನಾಶಕ್ತಿಯನ್ನು ನೀಡಿದರೆ ಸಾಕು. ದುರದೃಷ್ಟವಶಾತ್ ಇದರಲ್ಲಿ ಯಾವ ಹುರುಳೂ ಇಲ್ಲದೇ ಹೋದರೆ "ಅಯ್ಯೋ ಪಾಪ" ಅಂದರೂ ನನಗೊಂದು ತೃಪ್ತಿಯೇ.

ಸರಿ, ಅಸಲು ವಿಷಯ—ಏನೆಂದೆ?

ಆಹ! ನಮಗೆ ಬಂಗಾರದ ನಿಧಿಯಂತಹ ಸ್ವಾತಂತ್ರ್ಯ ಸಿಕ್ಕಿದೆ. ಪ್ರಜಾರಾಜ್ಯದ ಉದಯವಾಗಿದೆ. ಉದಯವಾಗಿ ೧೨ ಗಂಟೆಗಳು—ಅಲ್ಲಲ್ಲ—ವರ್ಷಗಳು ಆಗಿವೆ. ಹಿಂದೆಯೂ ನಮ್ಮ ಭಾರತ ದೇಶದಲ್ಲಿ ಅನೇಕ ಸ್ವತಂತ್ರ ರಾಜ್ಯಗಳಿದ್ದವು; ಚಕ್ರಾಧಿಪತ್ಯಗಳಿದ್ದುವು ಅಳಿದುವು, ಅಳಿದುವು. ಆದರೆ ಅವಾವುದೂ ಪ್ರಜಾರಾಜ್ಯವಾಗಿರಲಿಲ್ಲ. ಈಗಳಾದರೋ ಪ್ರತಿ ಪ್ರಜೆಯೂ ಒಬ್ಬೊಬ್ಬ ರಾಜನಂತೆ. ಪ್ರತಿ ವಯಸ್ಕನ ಕೈಯಲ್ಲಿಯೂ ಒಂದೊಂದು 'ಓಟು' ಎಂಬ ರಾಜಚಿಹ್ನವಿದೆ. ಪ್ರಜೆಗಳ ಇಷ್ಟದಂತೆ ಪ್ರಜೆಗಳ ಪ್ರತಿನಿಧಿಗಳು ರಾಜ್ಯಭಾರ ನಡೆಸುತ್ತಾರೆ. ಅವರು ಕ್ರಮೇಣ ಗರ್ವಿಷ್ಠರಾಗಿ ನಿರಂಕುಶಕ್ಕಿಳಿಯದಂತೆ ಮಾಡಲು ಓಟನಂಕುಶಗಳು ಪ್ರಜೆಗಳ ಕೈಯಲ್ಲಿ ಸಿದ್ಧವಾಗಿಯೇ ಉಂಟು ಈಗ! ಹೀಗೆ ಹಿಂದೆಂದಾದರೂ ಇತ್ತೆ?

ಇಂಥಾ ಗುಣತುಂಬಿದ ಬಂಗಾರದಂತಹ ಸ್ವಾತಂತ್ರ್ಯ ಸುಖದಲ್ಲಿ ನಾವಿರುವಾಗ, "ಅಯ್ಯೊ! ಹನ್ನೆರಡು ವರುಷವಾಯಿತಲ್ಲಾ...." ಎಂಬ ಉದ್ಗಾರ ಕೆಲವರು ತೆಗೆಯುತ್ತಿದ್ದಾರೆ! ಅದಕ್ಕೇ ನಾನೀ ಹನ್ನೆರಡು ವರುಷಗಳ ಲೆಕ್ಕದಲ್ಲಿ, ಮಹತ್ವಕ್ಕೂ ಸಾಮಾನ್ಯತ್ವಕ್ಕೂ ಇರುವ ತಾರತಮ್ಯವನ್ನು ಮೊದಲೇ ನಿಮಗೆ ಹೇಳಿಬಿಟ್ಟದ್ದು.

ಎಷ್ಟೋ ತ್ಯಾಗಗಳಿಂದ ನಾನಾ ರೀತಿಯಿಂದ ನಷ್ಟವಾದ ಮೇಲೆ ದೇಶ ನಮಗೆ ಸಿಕ್ಕಿದೆ. ಸುಖವು ಫಕ್ಕನೆ ಬರಬೇಕೆಂದರೆ ಸಾಧ್ಯವೇ? ಐದು ವರ್ಷ—ಹತ್ತು ವರ್ಷಗಳೆಂದು ನಮ್ಮ ಪ್ರಜಾಧಿಪತಿಗಳು ಸುಖ—ಸುಭಿಕ್ಷಗಳಿಗೆ ಮೆಟ್ಟಿಲಿಡುತ್ತಾ ಬರುತ್ತಿದ್ದಾರಲ್ಲ?

"ಅಯ್ಯೋ! ಹನ್ನೆರಡು ವರ್ಷವಾಯಿತು! ಹನ್ನೆರಡು ಮೆಟ್ಟಿಲು ಕೆಳಗಿಳಿದಂತೆ ಭಾಸವಾಗುತ್ತದಲ್ಲಾ! ಪಾಪಿ ಸಮುದ್ರಕ್ಕಿಳಿದರೂ ಮೊಳಕಾಲುದ್ದ ನೀರೇ ಎಂಬ ಪಾಡಾಯಿತಲ್ಲಾ!" ಎಂದು ಅನೇಕರು ಕೂಗುತ್ತಾರೆ! ನಾನೂ ಒಮ್ಮೆ ಕೂಗಿದೆನನ್ನಿ. ಆಗಲೇ ನನ್ನ ಪುಣ್ಯದಿಂದ ಬಲ್ಲವರ ಯೋಗ ಒಂದಿಷ್ಟು ನನಗೆ ದೊರೆತು ಹಾಗೆ ಹಳಹಳಿಸಿಕೊಳ್ಳುವುದು ಕೇವಲ ಅಜ್ಞಾನೀ ದೃಷ್ಟಿಯೆಂದು ನನಗೆ ಗೊತ್ತಾಯಿತು. ಅಬ್ಬ! ಬ್ರಹ್ಮಾಂಡದೊಳಗಿನ ನನ್ನಂತಹ ಅಲ್ಪ ಪ್ರಾಣಿಗೆ, ತಾನು ಮೇಲೆ ಹೋಗುವುದೋ ಕೆಳಗೆ ಹೋಗುವುದೋ ಗೊತ್ತಾಗಲಿಲ್ಲ! ಅವರು ನನ್ನ ಜ್ಞಾನ ದೃಷ್ಟಿಯನ್ನಿಷ್ಟು ತಿವಿದು ತೆರೆಸಿ ತೋರಿಸಿದ ಮೇಲೆಷ್ಟೇ ತಿಳಿಯಿತು. ಈ ಹನ್ನೆರಡು ವರ್ಷದಲ್ಲಿ ನಾವು ಏರಿದ್ದೇವೆಯೇ ಹೊರತು ಇಳಿಯಲಿಲ್ಲ. ಜೀವನ ಮಟ್ಟವು ಏರಿದೆ. ಭಾರತ ದೇಶದ ಮಹತ್ವವೂ ಏರಿದೆ. ಚೆನ್ನಾಗಿ ಏರಿ ಹಿಮಾಲಯ ಪರ್ವತ ದಾಟಿಗೂ ಏರಿ ಸಾಗಿದೆ. ವಿದೇಶಗಳಿಗೂ ಎಟುಕಿಸಿಕೊಂಡಿದೆ.

ಪಾಪ! ಅಜ್ಞಾನಿಗಳು ಗೋಳಾಡುತಿದ್ದಾರೆ! ಆದಾಯ ಕಡಮೆ, ಖರ್ಚು ಜಾಸ್ತೀ ಅಂತ ಎಲ್ಲಿ ನೋಡಿದರೂ ಗೋಳೇ. ಜನಸಂಖ್ಯೆ ಹೆಚ್ಚಾಗಿ ಇರಲಿಕ್ಕೆ ಮನೆಯಿಲ್ಲಾಂತ ನಗರಗಳಲ್ಲಿ ಬೇರೆ ಗದ್ದಲವೇಳುತ್ತಾ ಇದೆ. ಎಲ್ಲಾ ಪಾಮರ ಜನರು; ಮಧ್ಯಮ ತರಗತಿಯ ಕುಟುಂಬ ರಾಯರುಗಳು. ಒಂದೇ ಮನೆಯೊಳಗೆ ಬೇರೆ ಬೇರೆ ಹತ್ತೆಂಟು ಕುಟುಂಬಗಳನ್ನು ಕೂಡಿ ಹಾಕಿಸಿ ಬಾಡಿಗೆಯಿಂದ ಬದುಕುವ ಪಟ್ಟಣಿಗ ರಾಜನೊಬ್ಬನಾದರೆ, ಪಟ್ಟಣಕ್ಕೆ ದಾಳಿಯಿಟ್ಟು ಸಿನಿಮಾ ಸ್ಟುಡಿಯೋಗಳ ಬಾಗಿಲನ್ನು ಮುತ್ತುವವರೂ, ಇದ್ದದ್ದೆಲ್ಲಾ ಕಳೆದುಕೊಂಡು ಮಹಾ ಮಹಾ ಕಟ್ಟಡಗಳ ಕೂಲಿಗಾರರಾಗಿಯೋ ಮತ್ತೇನಾಗಿಯೋ—ಅಂತೂ ಹಳ್ಳೀ ಖಾಲಿಮಾಡಿ ಬಂದು ಪಟ್ಟಣದ ಬೀದಿ ಬೀದಿ ತಿರುಗುವವರು ಎಷ್ಟು ಮಂದಿಯೋ ಏನೋ! ಕ್ರಮೇಣ ಇವರೆಲ್ಲಾ ಪಟ್ಟಣಿಗರೇ; ನಾಗರೀಕರೇ. ಹೀಗೆಯೇ ನಗರಗಳು ವಿಸ್ತಾರವಾಗುತ್ತಾ ಹಳ್ಳಿಗಳನ್ನು ತಲುಪಿ–ಅವೂ ನಗರವಾಗಿ ಬಿಡುತ್ತವೆ. ಹೀಗೆ ತಾನೇ ಆಗುತ್ತಾ ಇದೆ? ಬೇಸಾಯ ಗೀಸಾಯ ಎಲ್ಲ ದರಲ್ಲಿಗ ತಾಗರಿಕತೆ ತಲೆಹಾಕುತ್ತಾ ಬೆಲೆಯೆ ಏರಿತು, ಸಂಬಳ ಏರಿತು, ಕೂಲಿ ಏರಿತು. ಹೊಸ ಹೊಸ ಫ್ಯಾಶನ್ ಮೂಲೆ ಮೂಲೆಗೂ ವ್ಯಾಪಿಸಿತು.

ಫ್ಯಾಶನ್! ಯಾವ್ಯಾವುದೋ ಫ್ಯಾಷನ್ನುಗಳು ಕೂಡಾ ಹಳ್ಳೀ ಮೂಲೆಗೂ ಮುಟ್ಟಿಬಿಟ್ಟಿವೆ. ಎಲ್ಲಾ ಸಿನೇಮಾದ ವೇಗದಿಂದ. ೬೦ ವಯುಸ್ಸಿನ ಮುದುಕ ಮುದುಕಿಯರು ಕೂಡಾ ಸಿನಿಮಾ ಅಂದರೆ ಕಣ್ಣರಳಿಸಿ ಬಿಡುತ್ತಾರೆ. ಮಗ—ಸೊಸೆ ಆಗಾಗ ಸಿನಿಮಾಕ್ಕೆ ಹೋಗುತ್ತಾ ಇದ್ದರೆ 'ನನಗ್ಯಾಕೆ ಸಿನಿಮಾ' ಅಂತ ಹೊರಬಾಯಿಂದ ಹೇಳುತ್ತಾ ಇದ್ದರೂ "ನೀವು ಸಹಾ ಬನ್ನಿ ಅತ್ತೇ" ಅಂತ ಸೊಸೆ ಕರೆಯೋದಿಲ್ಲಲ್ಲಾ ಅಂತ ಒಳಗೊಳಗೇ ಕರು

(ಆನೇ ಪುಟ ನೋಡಿರಿ)

"ನಚಿಕೇತ"ರ

ಇನ್ನೊಂದು ನವೀನ ಕಾದಂಬರಿ—

ಋಣ ಯಾತ್ರೆ

ಇದೀಗ ಪ್ರಕಟವಾಗಿದೆ

ಬೆಲೆ ರೂ. 1-50 ನ. ಪೈಸೆ.

ಮೊದಲು ಪ್ರಕಟವಾದ ಕಾದಂಬರಿ—

ಭಾವಾರ್ಚನೆ

ಬೆಲೆ ರೂ. 1 25 ನ. ಪೈಸೆ.

ಪ್ರತಿಗಳು ಸಿಗುವ ಸ್ಥಳಗಳು:—

ನವಯುಗ ಪ್ರೆಸ್, ಉಡುಪಿ.

ನವಭಾರತ ಬುಕ್ ಡಿಪೊ, ಉಡುಪಿ.

ದಿ ವಿಜಯ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ಸ್ಥಾಪನೆ: 1931

ಕಾಯಂ ಠೇವಣಾತಿದಾರರಿಗೆ ಸುಸಂದರ್ಭ

ಮೇಲಿನ ಠೇವಣಾತಿ ಬಡ್ಡಿ ದರವನ್ನು 5% ವರೆಗೆ ಹೆಚ್ಚಿಸಲಾಗಿದೆ.

ವಿವರಗಳಿಗೆ ನಮ್ಮ ಶಾಖೆಗಳಲ್ಲಿ ವಿಚಾರಿಸಿರಿ

ನಮ್ಮ ಶಾಖೆಗಳು:—

ಮುಂಬಾಯಿ, ಮಂಗಳೂರು, ಬೆಂಗಳೂರು, ಮೈಸೂರು.

ಮಡಿಕೇರಿ, ಉಡುಪಿ ಇತ್ಯಾದಿ ಇತ್ಯಾದಿ

ಉನ್ನತಿಯೇ ಜೀವನದ ಉದ್ದೇಶ. ಉನ್ನತಿ ಹೊಂದಬೇಕಾದರೆ, ಹೃದಯ ವಿಶಾಲವಾಗಬೇಕು; ಅಂದರೆ, ಹೃದಯದಲ್ಲಿ ಪ್ರೇಮ ತುಂಬಿಬರಬೇಕು. ಆದುದರಿಂದ ಪ್ರೇಮ ರಹಿತ ಜೀವನ ಜೀವನವೆನಿಸಲಾರದು; ಪ್ರೇಮ ರಹಿತನು ಉನ್ನತಿ ಹೊಂದಲಾರನು.

ನವಯುಗ

ವರುಷ	ಉಡುಪಿ	ವಾರ
೪೦	೯-೩-'೬೧	೨೬

ಪ್ರತ್ಯೇಕ ಮತದಾರ ಕ್ಷೇತ್ರ

ದ್ವಿಸದಸ್ಯ ಮತದಾರ ಸಂಘಗಳನ್ನು ವಿಭಜಿಸಿ ಅವನ್ನು ಏಕ ಸದಸ್ಯ ಮತದಾರ ಕ್ಷೇತ್ರವನ್ನಾಗಿ ರಚಿಸುವ ಸಂಬಂಧದ ಮಸೂದೆಯೊಂದು ಭಾರತದ ಸಂಸತ್ತಿನ ಎರಡೂ ಮನೆಗಳಲ್ಲಿ ಸ್ವೀಕಾರವಾಯ್ತು. ಇನ್ನು ರಾಷ್ಟ್ರಪತಿಗಳು ಅದಕ್ಕೊಂದು ಅಂಕಿತ ಹಾಕಿದರೆಂದರೆ, ಕಾರ್ಯ ಸಾಧನೆಯಾದಂತೆಯೇ ಸರಿ. ಇದುವರೆಗೆ ಕೆಲವೊಂದು ಮತದಾರ ಕ್ಷೇತ್ರಗಳನ್ನು ದ್ವಿಸದಸ್ಯ ಮತದಾರ ಸಂಘವನ್ನಾಗಿಟ್ಟುಕೊಂಡು, ಇಲ್ಲಿ ಒಂದು ಸಾಮಾನ್ಯ ಮತ್ತೊಂದು ಕಾದಿಟ್ಟ ಸ್ಥಾನಗಳಿಗೆ ಹೀಗೆ ಎರಡು ಹುದ್ದೆಗಳನ್ನು ಆರಿಸುವ ಕ್ರಮವಿದೆ. ಕಾದಿಟ್ಟ ಸ್ಥಾನಕ್ಕೆ ಪರಿಶಿಷ್ಟ (ಹಿಂದುಳಿದ) ವರ್ಗಕ್ಕೆ ಸೇರಿದವರೇ ಸ್ಪರ್ಧಿಸಬೇಕಾಗಿದೆ. ಹಿಂದುಳಿದ ವರ್ಗಗಳ ಹಿತರಕ್ಷಣೆಗಾಗಿ, ಅವರನ್ನು ಉಳಿದವರ ಸಾಲಿಗೆ ತರುವುದಕ್ಕಾಗಿ ಯಾವುದೇ ಕ್ರಮವನ್ನು ಕೈಗೊಳ್ಳುವುದಾದರೂ ಅದಕ್ಕೆ ವಿರೋಧವಿಲ್ಲ. ಸದ್ಯದ ವಿಧೇಯಕದ ಆಶಯಗಳಲ್ಲಿ, ಹಿಂದುಳಿದ ವರ್ಗಗಳಿಗಾಗಿಯೇ ಕೆಲವೊಂದು ಮತದಾರ ಕ್ಷೇತ್ರಗಳನ್ನು ಮೀಸಲಾಗಿಟ್ಟು, ಹಿಂದುಳಿದ ವರ್ಗಗಳವರು ಆ ಕ್ಷೇತ್ರದ ವಿವಿಧ ಜಾತಿ ಮತಗಳ ಜನರೊಡನೆ ಸಂಪರ್ಕವಿರಿಸಿಕೊಳ್ಳಲು ಅನುಕೂಲವಾಗುವುದೆಂಬುದೂ ಒಂದಾಗಿದೆ. ಇದರಿಂದ ಉಭಯ ವರ್ಗಗಳಲ್ಲಿ ಸಹಕಾರ, ಸ್ನೇಹ, ಸಾಮರಸ್ಯಗಳು ಬೆಳೆದು ಬರಲು ಅನುಕೂಲವಾಗುವುದೆಂದೂ ನಂಬಲಾಗಿದೆ.

ಸಂವಿಧಾನದನ್ವಯ ಹಿಂದುಳಿದವರಿಗೆ ರಕ್ಷಣೆಯನ್ನೂ ಭದ್ರತೆಯನ್ನೂ ನೀಡುವುದಕ್ಕೆ, ಅವರ ಪರಿಸ್ಥಿತಿಯನ್ನು, ಜೀವನ ಮಟ್ಟವನ್ನು ಎತ್ತರಿಸುವುದಕ್ಕೆ ಇಂದಿನ ಕಾಲದಲ್ಲಿ ಹೆಚ್ಚಿನವರಿಂದ ಆಕ್ಷೇಪಬರಲಾರದು. ಹಾಗೆ ಆಕ್ಷೇಪವೆತ್ತುವವರು ಇರಬಹುದಾದರೂ ಅಂತಹರ ಸಂಖ್ಯೆ ಅಗಣ್ಯ. ಆದರೆ, ಒಂದು ಪಂಗಡದ ಉದ್ಧಾರದ ಹೆಸರಿನಲ್ಲಿ ಇನ್ನೊಂದು ಪಂಗಡದವರಿಗೆ ಸಂವಿಧಾನ ಕೊಡಮಾಡಿದ ಮೂಲಭೂತ ಅಧಿಕಾರಗಳನ್ನು ಅಲ್ಲಗಳೆಯುವುದು ಆಭಾಸವೆನಿಸುತ್ತದೆ. ಏಕ ಮತದಾರ ಕ್ಷೇತ್ರದ ವಿಭಜನೆಯಿಂದಲೂ ಇಂತಹ ಅನ್ಯಾಯವಾಗದುಳಿಯದು. ಒಂದು ಕ್ಷೇತ್ರವನ್ನು ಹಿಂದುಳಿದವರಿಗಾಗಿ ಕಾಯ್ದಿರಿಸುವುದೆಂದರೆ ಆ ಕ್ಷೇತ್ರದಲ್ಲಿರುವ ಇತರ ವರ್ಗದವರಿಗೆ ಸ್ಪರ್ಧಿಸಲು ಇರುವ ಅವಕಾಶವನ್ನು ಕಸಿದುಕೊಂಡಂತೆ ಎಂದು ತೋರುತ್ತದೆ. ಈಗ ಕಾದಿಟ್ಟ ಮತದಾರ ಕ್ಷೇತ್ರದಲ್ಲಿರುವವನು ತನಗೆ ಇಷ್ಟಬಂದವರಿಗೆ ಕಾದಿಟ್ಟ ಅಥವಾ ಸಾಮಾನ್ಯ ಸ್ಥಾನಗಳ ಸ್ಪರ್ಧಾಳುವಿಗೆ ಮತವೀಯುವ ಸ್ವಾತಂತ್ರ್ಯ ಪಡೆದಿದ್ದನು. ಇನ್ನುಮುಂದೆ ಆತನ ಈ ಬಗೆಗಿರುವ ಸ್ವಾತಂತ್ರ್ಯವು ಇಲ್ಲದಾಗುವುದು. ಇದೇ ರೀತಿಯ ಕೆಲವೊಂದು ತೊಂದರೆಗಳು ತಲೆದೋರದಿರಲಾರವು.

ಹಿಂದುಳಿದ ವರ್ಗಗಳಿಗಾಗಿ ಈ ರೀತಿಯಲ್ಲಿ ಕೆಲವೊಂದು ಮತದಾರ ಕ್ಷೇತ್ರಗಳನ್ನು ಕಾದಿರಿಸುವುದರಿಂದ ಎರಡು ಬಗೆಯ ಜನತೆಯ ನಡುವೆ ಸಾಮರಸ್ಯವು ಮೂಡುವುದು ಅಸಾಧ್ಯವೆನ್ನುವಂತಿಲ್ಲವಾದರೂ ಅದು ಸಾಧ್ಯವೇ ಎಂದು ಧೈರ್ಯದಿಂದ ಹೇಳುವಂತಿಲ್ಲ. ಪ್ರತ್ಯೇಕ ಮತದಾರ ಸಂಘ ಸ್ಥಾಪನೆಯಿಂದ ಜಾತೀಯತೆಯ ಭಾವವು ಅಳಿದು ಹೋಗುವ ಬದಲು ಮತ್ತಷ್ಟು ಹೆಚ್ಚುವುದೆಂದೇ ಹೇಳಬಹುದು. ಹರಿಜನರಿಗೆ ಪ್ರತ್ಯೇಕ ಶಾಲೆ-ವಸತಿಗೃಹಗಳನ್ನು ಕಟ್ಟಿಸುವುದಕ್ಕಿಂತ ಎಲ್ಲರಿಗಾಗಿ ಒಂದೇ ತರದ ಶಾಲೆ-ವಸತಿ-ಗೃಹ ರಚನೆಯು ಭೇದ ತೊಲಗಿಸಲು ಸಹಕಾರಿಯಾಗಿರುವುದನ್ನು ನಾವು ಪ್ರತ್ಯಕ್ಷ ನೋಡುತ್ತೇವೆ. ಹಾಗೆಯೇ ಜಾತೀಯತೆ ಅಳಿಯಬೇಕೆಂದು ಹೇಳುವ ನಾವು ಜಾತಿಯ ಭೇದವನ್ನು ಶಾಶ್ವತಗೊಳಿಸುವಂತಹ ಕೃತಿಗಿಳಿಯುವುದು ಸರಿಯಾಗಲಾರದು. ಮಹಾತ್ಮಾ ಗಾಂಧೀಜಿಯವರೂ ಪ್ರತ್ಯೇಕ ಮತದಾರರಕ್ಷೇತ್ರ ರಚನೆಯನ್ನು ವಿರೋಧಿಸಿ ಉಪವಾಸ ಮಾಡಿದ್ದರೆಂಬುದನ್ನು ನಾವು ಮರೆಯಬಾರದು. ಜಾತೀಯತೆಯನ್ನು ನಿರ್ಮೂಲ ಮಾಡಲು ಚುನಾವಣೆಗಳಿಗೆ ಉಮೇದುವಾರಿಗಳನ್ನು ಆರಿಸುವಾಗಲೇ ಅಂತಹರಿಗೆ ಪ್ರಾತಿನಿಧ್ಯವನ್ನು ನೀಡುವುದೇ ಹಿತಕರವಿತ್ತು.

ಪ್ರಜಾಪ್ರಭುತ್ವದಲ್ಲಿ ಅಭಿಪ್ರಾಯಕ್ಕೆ ಕೊನೆಯೆಂಬುದಿಲ್ಲವಾದುದರಿಂದ, ಸದ್ಯ ಪ್ರತ್ಯೇಕ ಮತದಾರ ಸಂಘಗಳನ್ನು ಸ್ಥಾಪಿಸುವಂತಾದರೂ ಇದರಿಂದಾಗುವ ಲಾಭಕ್ಕಿಂತ ಹಾನಿಯೇ ಅಧಿಕವೆಂಬುದು ವ್ಯವಹಾರದಲ್ಲಿ ಕಂಡುಬಂದರೆ, ಆಗಲಾದರೂ ತಿದ್ದಿಕೊಳ್ಳುವ ಅವಕಾಶವಿದೆ. ಹಾಗೆ ತಿದ್ದಿಕೊಳ್ಳುವುದಕ್ಕೆ ಮೊದಲು ಅದು ವ್ಯವಹಾರಕ್ಕೆ ಇಳಿಯಬೇಕಾಗಿದೆ. ಅಂತಲೇ ಹಿಂದುಳಿದವರ ಉನ್ನತಿಗಾಗಿ ತಯಾರಿಸಿದ ಈ ಮಸೂದೆಯು ವಿಧೇಯಕದ ರೂಪ ಧರಿಸಿದ ನಂತರ ಪ್ರತ್ಯಕ್ಷ ಪರಿಣಾಮವನ್ನು ಆಸಕ್ತಿಯಿಂದ ಪರಿಶೀಲಿಸಬೇಕಾಗಿದೆ.

ಆಟ್ಲೀ ಪ್ರಶಂಸೆ

ಬ್ರಿಟನ್ನಿನ ಮಾಜಿ ಪ್ರಧಾನಿ ಲೇಬರ್ ಪಕ್ಷದ ಅಗ್ರಣಿ ಲಾರ್ಡ್ ಆಟ್ಲೀಯವರು ಭಾರತದಲ್ಲಿ ಮಾತ್ರವಲ್ಲ ಸಿಲೋನಿನಲ್ಲಿಯೂ ಭಾರತದ ಪ್ರಜಾಪ್ರಭುತ್ವದ ಬಗ್ಗೆ ಪ್ರಶಂಸಾತ್ಮಕ ಮಾತುಗಳನ್ನು ಆಡಿದರು. ಮನೆಗೆ ಬಂದು ಮನೆಯವರ ಮುಖಸ್ತುತಿ ಮಾಡುವ ರೀತಿ ಆಟ್ಲೀಯವರದಲ್ಲ. ತಾನು ಅಧಿಕಾರದಲ್ಲಿದ್ದಾಗ ತನ್ನ ಮೂಲಕ ಸ್ವಾತಂತ್ರ್ಯ ಪಡೆದ ರಾಷ್ಟ್ರವೆಂಬ ಅಭಿಮಾನದಿಂದಲೂ ಹೊರಬಂದ ತುಟಿಮೀರಿದ ಉದ್ಗಾರಗಳವಲ್ಲ. ನಿಜವಾಗಿಯೂ ಭಾರತದಲ್ಲಿ ಪ್ರಜಾಪ್ರಭುತ್ವ ಯಶಸ್ಸಿನ ದಾರಿ ಹಿಡಿದಿದೆಯೆಂಬುದು ವಿಶ್ವವಿದಿತವಿರುವುದು. ಆಶ್ಯನ್ ಸ್ವತಂತ್ರ ರಾಷ್ಟ್ರಗಳಲ್ಲಿ ವಿಘ್ನ ವಿದ್ರೋಹಗಳಿಂದ ತನ್ನ ನೀತಿಗೆ, ಧ್ಯೇಯಕ್ಕೆ ಭಂಗವನ್ನು ತಂದೊಡ್ಡಿಕೊಳ್ಳದೆ ಗುರಿಯತ್ತ ಮುನ್ನಡೆಯುವ ಪ್ರಯತ್ನ ನಡೆಸಿ, ಅದರಲ್ಲಿ ಸಾಫಲ್ಯ ಕಾಣುತ್ತಿರುವ ಏಕಮೇವ ರಾಷ್ಟ್ರವೆಂದರೆ ಭಾರತ ಮಾತ್ರ. ಇದು ಹೊರಗಣವರ ಉಕ್ತಿಗಳಿಂದ ಮಾತ್ರವಲ್ಲ ನಮ್ಮ ಸುತ್ತುಮುತ್ತಲಿನ ರಾಷ್ಟ್ರಗಳ ದುಸ್ಥಿತಿಯನ್ನು ಕಂಡಾಗಲೂ ಮನವರಿಕೆಯಾಗುವುದು. ಅಧಿಕಾರಿಗಳ ದರ್ಪವು ಇಲ್ಲಿ ನಡೆಯುವುದಿಲ್ಲ; ಅಧಿಕಾರವೇ ನ್ಯಾಯವೆನಿಸುವುದಿಲ್ಲ. ಇದಕ್ಕೆ ರಾಷ್ಟ್ರದ ಶಾಸನಾಂಗ ಮತ್ತು ನ್ಯಾಯಾಂಗಗಳು ಬೇರೆ ಬೇರೆಯಾಗಿರುವುದೇ ಕಾರಣ. ನಮ್ಮ ದೇಶದ ನ್ಯಾಯಾಂಗವು ಕಾರ್ಯಾಂಗದ ಹಲವಾರು ಲೋಪದೋಷಗಳನ್ನು ಎತ್ತಿ ತೋರಿಸಿರುವುದನ್ನು ಕಾಣುವಾಗ ನ್ಯಾಯಾಂಗದ ನಿಷ್ಪಕ್ಷಪಾತ ತನವು ಗೋಚರವಾಗುವುದು. ನ್ಯಾಯಾಂಗವು ಬ್ರಿಟಿಷ ನ್ಯಾಯಾಂಗದಂತೆಯೇ ಸತ್ಯನಿಷ್ಠೆಯನ್ನು ಬಹುಮಟ್ಟಿಗೆ ಉಳಿಸಿಕೊಂಡು ಬಂದಿದೆ. ಆದರೂ, ನ್ಯಾಯದಾನ ಶೀಘ್ರವಾಗಬೇಕು; ಅಲ್ಲಿ ವಿಳಂಬಕೂಡದು, ಅದರ ಜತೆಗೆ ನ್ಯಾಯಪಡೆಯಲು ತಗಲುವ ವೆಚ್ಚವು ಕಡಿಮೆಯಾಗಬೇಕು.

ಸಂಕ್ಷಿಪ್ತ ಸುದ್ದಿಗಳು

ಪಂಡಿತ ಪಂತ

ಹಿರಿಯ ರಾಜಕಾರಣಿ ಹಾಗೂ ಮುತ್ಸದ್ದಿಗಳಲ್ಲಿ ಒಬ್ಬರಾಗಿದ್ದ ಪಂಡಿತ ಗೋವಿಂದ ವಲ್ಲಭ ಪಂತರು ಪ್ರಾಯದಲ್ಲಿ ಮುದಿಯರಾಗಿದ್ದಂತೆ ಆಡಳಿತೆಯ ಅನುಭವದಲ್ಲಿಯೂ ಹಳಬರು. ಸರದಾರ ವಲ್ಲಭ ಭಾಯಿಯವರ ಧೋರಣೆಯನ್ನು ಮೆಚ್ಚುತಿದ್ದ ಇವರು ಆಂತರಿಕ ವ್ಯವಹಾರಗಳಲ್ಲಿ ಅತಿ ಚಾಣಾಕ್ಷರು; ಸರದಾರರು ನಿರ್ವಹಿಸುತಿದ್ದ ಗೃಹ ಶಾಖೆಯು ಪಂತರ ಮೇಲ್ವಿಚಾರಣೆಗೆ ಬಂದಿದ್ದರೂ ಕೊನೆಯ ವರೆಗೂ ಉಪಪ್ರಧಾನಿ ಪಟ್ಟಾಭಿಷೇಕ ಅವರಿಗೆ ಆಗಲಿಲ್ಲ. ಸರದಾರರು ದೇಶೀಯ ಸಂಸ್ಥಾನಗಳನ್ನು ಒಕ್ಕೂಟ ಭಾರತದಲ್ಲಿ ವಿಲೀನಗೊಳಿಸಲು ವಿಶ್ವ ಪ್ರಯತ್ನ ಮಾಡಿ ಸಫಲರಾದರು. ಪಂತರು ಭಾಷೆಯ ತಳಹದಿಯಲ್ಲಿ ರಾಜ್ಯ ಪುನರ್ಘಟನೆ ಮಾಡಿದರು. ಪುನರ್ಘಟನೆಯ ಬಗ್ಗೆ ಭಿನ್ನಾಭಿಪ್ರಾಯವಿಲ್ಲವಾದರೂ ಅನುಸರಿಸಿದ ನೀತಿಯಿಂದಾಗಿ ಕೆಲವು ರಾಜ್ಯಗಳ ನಡುವೆ ವಿವಾದವೆದ್ದಿದೆ. ಪಂತರು ದೈವಾಧೀನವಾದುದರಿಂದ ಮುಂದೆ ಆ ಪದವಿಗಡರುವವರು ಈ ವಿವಾದವನ್ನು ಬಗೆಹರಿಸಬೇಕಾಗಿದೆ.

ನೆಹರುರವರಿಗೆ ಆಘಾತ

ತಮ್ಮ ಅಸಾಧ್ಯಶ್ರಮದ ನಡುವೆ ಪ್ರಧಾನಿ ನೆಹರು ತಮಗೆ ಸಹಾಯಕರೊಬ್ಬರನ್ನು ನೇಮಿಸಿಕೊಳ್ಳಲು ಬಯಸುತ್ತಿದ್ದಿರಬಹುದು. ಪಂಡಿತ ಪಂತರನ್ನು ಉಪಪ್ರಧಾನಿಯಾಗಿ ಮಾಡಿಕೊಂಡು ತಮ್ಮ ಭಾರವನ್ನು ತುಸು ಇಳಿಸಲವರು ಹವಣಿಸುತಿದ್ದಾರೆಂಬ ಮಾತೂ ಕೆಲವೊಮ್ಮೆ ಎದ್ದಿತ್ತು. ಆದರೆ, ಪ್ರಾಯಃಪ್ರಾಯದಲ್ಲಿ ತನಗಿಂತಲೂ ಹಿರಿಯರಾದವರಿಗೆ ಮತ್ತಷ್ಟು ಹೊರೆ ಹೊರಿಸ ಬಯಸದೆ ನೆಹರು ಪಂಡಿತ ಪಂತರನ್ನು ಉಪಪ್ರಧಾನಿಯನ್ನಾಗಿ ಮಾಡಿಕೊಳ್ಳಲಿಲ್ಲ; ಆದರೂ ತನ್ನ ಅತಿ ನಿಕಟ ಸಲಹೆಗಾರರನ್ನಾಗಿ ಭಾವಿಸುತಿದ್ದರು. ಪಂತರ ನಿಧನದಿಂದ ದೇಶಕ್ಕಾದ ನಷ್ಟವನ್ನು ಜನತೆ ಸುಲಭದಲ್ಲಿ ಅರಿಯದು; ನೇತಾನಾಯಕ ನೆಹರು ಮಾತ್ರ ಇದರ ಅನುಭವ ಮಾಡಿಕೊಳ್ಳುವುದು ಖಂಡಿತ. ತಮ್ಮ ಬಲಗೈಯಂತಿದ್ದ ಪಂತರ ಅವಸಾನ ಕಾಲದಲ್ಲಿ ಅವರ ಬಳಿ ಇಲ್ಲದಂತಾದುದಕ್ಕೆ ಅವರು ಕೊರಗಬೇಕಾಗಿಲ್ಲ; ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನದಲ್ಲಿ ಭಾಗವಹಿಸಲು ಅವರು ತೆರಳಿರುವರೆಂದು ಪಂತರ ಆತ್ಮ ಅರಿಯದಿರದು.

ಎಲ್ಲರಿಗೂ ತಿಳಿದ ರಹಸ್ಯ

ಪಕ್ಷದೊಳಗಿನ ಭಿನ್ನಾಭಿಪ್ರಾಯವನ್ನು ನೀಗಿಸಲು ಮೈಸೂರು ಮುಖ್ಯಮಂತ್ರಿ ಜತ್ತಿಯವರು ಮಂತ್ರಿ ಮಂಡಳಿಯನ್ನು ವಿಸ್ತರಿಸಿ ನಾಲ್ವರು ಮಂತ್ರಿಗಳನ್ನು ಹೊಸತಾಗಿ ಸೇರಿಸಿಕೊಂಡರು. ಆದರೆ ಈ ವಿಸ್ತರಣೆಯೇ ವಿರೋಧೀ ಪಕ್ಷಗಳ ಅವಿಶ್ವಾಸಕ್ಕೆ ಕಾರಣವಾಗಿದೆ. ಆದುದರಿಂದಲೇ ವಿರೋಧಿ ಪಕ್ಷದವರು ಅವಿಶ್ವಾಸಗೊತ್ತುವಳಿಯನ್ನು ಮಂಡಿಸುವ ಸಾಹಸ ಮಾಡಿದ್ದಾರೆ. ಅದರ ಬಗ್ಗೆ ಚರ್ಚೆಯೂ ನಡೆಯಿತು. ಜತ್ತಿಯವರು ಕಾಂಗ್ರೆಸ್‌ನ ಎಲ್ಲ ಸದಸ್ಯರ ಬೆಂಬಲವನ್ನು ಈಗ ಪಡೆದಿದ್ದಾರೆ. ಅಂತಲೇ ಅವರು ನಿರ್ಭಯರಾಗಿ ಕುಳಿತಿದ್ದಾರೆ ಇದೇ ಗೊತ್ತುವಳಿ ಹಿಂದೆಲ್ಲಿಯಾದರೂ ಮುಂಬರುತಿದ್ದರೆ, ಎಲ್ಲಿ ಉರುಳುತಿದ್ದರೋ! ಅಥವಾ ಮಂತ್ರಿಮಂಡಳಿ ವಿಸ್ತರಣೆಯಲ್ಲಿದೆಯೆನ್ನಲಾದ ರಾಜನೀತಿ ವಿರೋಧಿ ಪಕ್ಷಗಳ ಅವಿಶ್ವಾಸ ಗೊತ್ತುವಳಿಯಲ್ಲಿಯೂ ಇದೆಯೆ? ಮೈಸೂರಿನ ರಾಜಕಾರಣ ಹಿಂದೆಯೂ ರಹಸ್ಯಮಯವಿತ್ತು; ಈಗಲೂ ಹಾಗೆಯೇ ಇದೆ. ಇದು ಎಲ್ಲರಿಗೂ ತಿಳಿದ ರಹಸ್ಯ!

ಕಾಂಗೋವಿನಲ್ಲಿ ಹೋರಾಟ

ವಿಕ್ಷುಬ್ಧ ಕಾಂಗೋವಿನಲ್ಲಿ ಶಾಂತಿಯನ್ನು ಸ್ಥಾಪಿಸಲು ಅವಶ್ಯಬಿದ್ದರೆ ಶಸ್ತ್ರಾಸ್ತ್ರಗಳನ್ನು ಬಳಸಿಕೊಳ್ಳಬಹುದೆಂಬ ನಿರ್ಣಯದಿಂದ ಕಾಂಗೋವಿನಲ್ಲಿ ಬಿರುಗಾಳಿಯೆದ್ದಿದೆ. ಅಶಾಂತಿಗೆ ಕಾರಣಪುರುಷರಾದ ಕಸಾವುಬು—ಮೊಬುಟು ಸಂ. ರಾ. ಪಡೆಯನ್ನೇ ನುಂಗಲು ಹವಣಿಸುತ್ತಿದ್ದಾರೆ. ಡಾಗ್ ಹೆಮ್ಮರ್‌ಶೀಲ್ಡರ ಅಪೇಕ್ಷೆಯಂತೆ ಭಾರತ ಸರಕಾರವು ತಾನು ಈಗಾಗಲೇ ಕೊಟ್ಟಿರುವ ೮೦೦ ಸೈನಿಕರನ್ನಲ್ಲದೆ ಪುನ ಮೂರು ಸಾವಿರ ಸೈನಿಕರನ್ನು ಕಾಂಗೋವಿಗೆ ಕಳಿಸಲು ತಯಾರಿ ನಡೆಸುತ್ತಿದೆ. ಆಗ ಕಾಂಗೋವಿನಲ್ಲಿ ೨೩ ಸಾವಿರ ಸಂ. ರಾ. ಪಡೆಯ ಸೈನಿಕರಾಗುವರು. ಇಷ್ಟರಿಂದ ಕಾಂಗೋವಿನ ಕ್ರಾಂತಿಸ್ವರೂಪದ ಹಿಂಸಾಕಾಂಡವನ್ನು ನಿಲ್ಲಿಸಬಹುದೆಂದು ಡಾಗ್ ಹೆಮ್ಮರ್‌ಶೀಲ್ಡರ ಅಭಿಪ್ರಾಯವಿದೆ. ರೊಚ್ಚಿಗೆದ್ದ ಕಾಂಗೋ ಸೈನಿಕರು ಕೆಲವರು ಸಂ. ರಾ. ಪಡೆಯವರನ್ನು ಸೆರೆಹಿಡಿದಿರುವರೆಂದೂ ವರದಿಗಳಿವೆ.

ಭಲೇ ಬುದ್ಧಿವಂತ

ತನ್ನ ಮುಂಗಡ ಪತ್ರವನ್ನು ಇಡುವ ಅಭ್ಯಾಸವಿಲ್ಲದ ಮುರಾರ್ಜಿದೇಸಾಯಿ ದೇಶದ ಮುಂಗಡ ಪತ್ರವನ್ನು ಸರಿಯಾಗಿಯೇ ಇಡಬಲ್ಲರು. ಆದಾಯವನ್ನು ಕಡಿ

(೭ನೇ ಪುಟಕ್ಕೆ)

ಅಲ್ಲಲ್ಲಿಯ ಸುದ್ದಿಸಾರ

ಕನ್ನಡ ಬಾಂಧವರಲ್ಲಿ ವಿನಂತಿ— ದ. ಕ ಜಿಲ್ಲೆಯ ಪ್ರಾತಿನಿಧಿಕ ಕನ್ನಡ ಸಂಘವೊಂದನ್ನು ಸ್ಥಾಪಿಸುವ ಮುಖ್ಯೋದ್ದೇಶದಿಂದ ಮಂಗಳೂರಿನ ಶ್ರೀಗಳಾದ ಸಂತೋಷ ಕುಮಾರ, ಗುಲ್ವಾಡಿ, ಎ. ಬಾಲಕೃಷ್ಣ ಶೆಟ್ಟಿ ಪೊಳಲಿ ಇವರು ನಿರ್ವಾಹಕರಾಗಿ ವಿನಂತಿ ಪತ್ರವೊಂದನ್ನು ಪ್ರಕಟಿಸಿದ್ದಾರೆ. ಅದರ ಸಾರಾಂಶ ಹೀಗಿದೆ—

ಕರ್ನಾಟಕದ ಸಾರ್ವತ್ರಿಕ ಅಭಿವೃದ್ಧಿಯಲ್ಲಿ ದಕ್ಷಿಣ ಕನ್ನಡದ ಪಾತ್ರ ವಿಶಿಷ್ಟವಾದುದು ಇಂತಹ ಅಮೋಘ ಪರಂಪರೆ ಇರುವ ಈ ಜಿಲ್ಲೆಯಲ್ಲಿ ಕನ್ನಡ ನುಡಿಯ ಬಗ್ಗೆ ತಿಳಿವು, ಆದರ, ಅಭಿಮಾನಗಳನ್ನು ಜಾಗೃತಗೊಳಿಸುವ ಸುಸಂಘಟಿತ ಸಂಘವೊಂದು ಅಗತ್ಯವಾಗಿದೆ. ಅದಕ್ಕಾಗಿ ಸಂಸ್ಥೆ ಒಂದನ್ನು ಸಂಘಟಿಸಲು ಸಂಕಲ್ಪಿಸಿದ್ದೇವೆ. ಈ ಸಂಸ್ಥೆಯ ಪ್ರಧಾನ ಉದ್ದೇಶಗಳು ಹೀಗಿವೆ.

೧. ಕನ್ನಡಸಾಹಿತ್ಯ, ಕಲೆ, ಸಂಸ್ಕೃತಿಗಳ ಸಾರ್ವತ್ರಿಕ ಅಭಿವೃದ್ಧಿ. ೨. ಕನ್ನಡ ಭಾಷಾ ಗೋಷ್ಠಿಗಳು—ಸಾಂಸ್ಕೃತಿಕ ಉತ್ಸವಗಳು. ೩. ಕನ್ನಡ ಗ್ರಂಥಗಳ ಪ್ರಕಟಣೆ. ೪. ಗ್ರಂಥಾಲಯ— ಪತ್ರಿಕೆಗಳ ಸ್ಥಾಪನೆ. ೫. ಸಾಹಿತ್ಯ ಭವನದ ರಚನೆ.

ಈ ಮಹಾ ಪ್ರಯತ್ನಗಳಿಗೆ ಅಖಿಲ ಕರ್ನಾಟಕದ ಹಿರಿಯರೆಲ್ಲರ ಪ್ರೇಮಪೂರ್ಣ ಆಶೀರ್ವಾದವನ್ನೂ ತರುಣರ ಉತ್ಸಾಹಪೂರ್ಣ ಪ್ರೋತ್ಸಾಹ, ಬೆಂಬಲಾದಿಗಳನ್ನೂ ಬಯಸುತ್ತೇವೆ. ಹೆಚ್ಚಿನ ವಿಚಾರಗಳಿಗೂ ಸಲಹೆ ಸೂಚನೆಗಳನ್ನು ಕೊಡಲೂ ವಿಳಾಸ:— ಶ್ರೀರಾಮ ಮಂದಿರ, ಭವಂತಿ ರಸ್ತೆ, ಮಂಗಳೂರು—1.

ಈ ಬಗ್ಗೆ ತಾ 12—3—61ನೇ ಬೆಳಿಗ್ಗೆ 10 ಗಂಟೆಗೆ ಮಂಗಳೂರು ಗವರ್ನಮೆಂಟು ಕಾಲೇಜಿನ ಎಕಾಡಮಿ ಹೋಲಿನಲ್ಲಿ ಸಭೆಯೊಂದನ್ನು ಕರೆಯಲಾಗಿದೆ. ಸಾಹಿತ್ಯ—ಕಲಾಭಿಮಾನಿ ಮಿತ್ರರೆಲ್ಲ ಬರಬೇಕಾಗಿ ವಿನಂತಿಸಲಾಗಿದೆ.

೧೩ನೇ ಅ. ಭಾ. ಸರ್ವೋದಯ ಸಮ್ಮೇಳನ— ಇದೇ ಬರುವ ಎಪ್ರಿಲ್ ತಿಂಗಳ ತಾ. ೧೮, ೧೯ ಮತ್ತು ೨೦ರಲ್ಲಿ ಆಂಧ್ರ ಪ್ರದೇಶದ ಪಶ್ಚಿಮ ಗೋದಾವರಿ ಜಿಲ್ಲೆಯ ಚೆಬ್ರೊಲೂ ಎಂಬ ಊರಿನ ಬಳಿ ನಿರ್ಮಿಸಲ್ಪಡುವ ಸರ್ವೋದಯ ಪುರದಲ್ಲಿ ನಡೆಯುವುದಾಗಿ ನಿಶ್ಚಯಿಸಲಾಗಿದೆ. ಸಮ್ಮೇಳನಕ್ಕೆ ಮುಂಚಿತವಾಗಿ ಆರು ದಿನಗಳ ತನಕ ಸರ್ವ ಸೇವಾ ಸಂಘದ ಅಧಿವೇಶನ ನಡೆಯುವುದು.

ಚೆಬ್ರೊಲೂ ದಕ್ಷಿಣ ರೈಲ್ವೆಯ ವಾಲ್ಟೇರ್ ಲೈನಿನಲ್ಲಿ ವಿಜಯವಾಡದಿಂದ ೯೭ ಕಿಲೋಮೀಟರದ ಅಂತರದಲ್ಲಿದೆ. ಸಮ್ಮೇಳನದ ಕಾಲದಲ್ಲಿ ಅಲ್ಲಿ ಮೈಲ್ ಮತ್ತು ಎಕ್ಸ್‌ಪ್ರೆಸ್ ಗಾಡಿಗಳೂ ನಿಲ್ಲುವಂತೆ ವ್ಯವಸ್ಥೆ ಮಾಡಿಸಲಾಗುತ್ತಿದೆ. ವಿಜಯವಾಡಾ, ಎಲ್ಲೂರು, ಮತ್ತು ತಾಡೇಪಳ್ಳಿ ಗುಡ್ಡಂ ಎಂಬ ಮೂರು ಸ್ಥಾನಗಳಿಂದಲೂ ಮೋಟಾರಿನಿಂದ ಹೋಗಲು ಕೂಡ ಏರ್ಪಾಡು ಮಾಡಲಾಗುವುದು. ಸಮ್ಮೇಳನದ ಸ್ವಾಗತ ಸಮಿತಿಯ ಕಚೇರಿಯು ಈಗಾಗಲೇ ಪ್ರಾರಂಭವಾಗಿದೆ. ಅದರ ವಿಳಾಸವು ನಾರಾಯಣಪುರಂ, ಚೆಬ್ರೊಲು ಮೂಲಕ, ಪಶ್ಚಿಮ ಗೋದಾವರಿ ಜಿಲ್ಲೆ, ಆಂಧ್ರಪ್ರದೇಶವೆಂದಿದೆ. ಪ್ರತಿ ವರ್ಷದಂತೆ ಸ್ವಚ್ಛತಾ ಶಿಬಿರವನ್ನು ಮಾರ್ಚಿ ತಾ ೨೦ರಿಂದ ಏರ್ಪಡಿಸಲಾಗುವುದು. ಅದರಕ್ಕೆ ಎಲ್ಲ ಸರ್ವೋದಯ ಮಂಡಲಗಳು ತಮ್ಮ ಸ್ವಯಂ ಸೇವಕರನ್ನು ಅದಕ್ಕೆ ಕಳುಹಿಸುವುದೆಂದು ಆಶಿಸಲಾಗುತ್ತದೆ.

ಸಮ್ಮೇಳನದಲ್ಲಿ ಭಾಗವಹಿಸಲಪೇಕ್ಷಿಸುವ ಪ್ರತಿನಿಧಿಗಳ ನಿವಾಸದ ವ್ಯವಸ್ಥೆಗಾಗಿ ರೂ. ೩ ಪ್ರತಿನಿಧಿ ಶುಲ್ಕವಾಗಿರಿಸಿದೆ. ಪ್ರತಿ ವರ್ಷದಂತೆ ಪ್ರತಿನಿಧಿಗಳಿಗೆ ಹೋಗಿ ಬರಲು ರೈಲ್ವೆ ರಿಯಾಯತಿ ಸಿಗುವುದು. ಆ ಮೂಲಕ ಒಂದು ಟಿಕೇಟಿನ ದರದಲ್ಲಿ ಹೋಗಿ ಬರುವ ಯಾತ್ರೆಯನ್ನು ಪೂರೈಸಬಹುದು ರೈಲ್ವೆ ರಿಯಾಯತಿ ದೊರಕಿಸಿಕೊಳ್ಳಲು ಮತ್ತು ಪ್ರತಿನಿಧಿಗಳ ಹೆಸರು ದಾಖಲು ಮಾಡಿಸಲು ಪ್ರತಿನಿಧಿ ಶುಲ್ಕವನ್ನು ಕಾರ್ಯದರ್ಶಿ, ಅಖಿಲ ಭಾರತ ಸರ್ವ ಸೇವಾ ಸಂಘ, ಸೇವಾಗ್ರಾಮ (ವರ್ಧಾ, ಮಹಾರಾಷ್ಟ್ರ) ಎಂಬ ವಿಳಾಸಕ್ಕೆ ಮನಿಯಾರ್ಡರ್ ಮೂಲಕ ಕಳುಹಿಸಿದಲ್ಲಿ ರೈಲ್ವೆ ರಿಯಾಯತಿ ಪತ್ರ ಮತ್ತು ಪ್ರತಿನಿಧಿ ಕಾರ್ಡು ಪ್ರತಿನಿಧಿಗಳಿಗೆ ಸಿಗುವುದು. ಈ ವರ್ಷ ರೈಲ್ವೆ ರಿಯಾಯತಿ ಪತ್ರಗಳನ್ನು ಕಳುಹಿಸುವ ಮತ್ತು ರಿಜಿಸ್ಟ್ರೇಶನ್ ಮಾಡುವ ಕೆಲಸವನ್ನು ಬೇರೆ ಬೇರೆ ಕೇಂದ್ರಗಳಲ್ಲಿ ಮಾಡಿಸದೆ ಸೇವಾ ಗ್ರಾಮದಲ್ಲೇ ಮಾಡಿಸುವುದೆಂದು ನಿಶ್ಚಯಿಸಿಯದೆ. ಸಮ್ಮೇಳನದ ಮೂರು ದಿನಗಳಲ್ಲಿ ಭೋಜನ ಮತ್ತು ವಾಸ್ತವ್ಯದ ಬಗ್ಗೆ ಒಟ್ಟು ರೂ. ೫ ತಗಲುವುದು

ಪತ್ರ ವ್ಯವಹಾರ ಹಿಂದಿ ಅಥವಾ ಇಂಗ್ಲಿಷಿನಲ್ಲಿ ಮಾಡಬೇಕು.

ಎ. ಬಿ. ಶೆಟ್ರು ಸ್ಮಾರಕ ನಿಧಿಗೆ ಧನ ಸಹಾಯ

ಶ್ರೀ ಯನ್ ಲೋಕಯ ಶೆಟ್ಟಿ	25.00
,, ಕೆ. ಯಸ್. ರಾಮಣ್ಣ ರೈ	101—00
,, ಕೆ. ಯಸ್. ಪಕ್ಕಳ	51-00
,, ಡಾ। ಕೆ. ಬಿ ಶೆಟ್ಟಿ	250—00
,, ಬಾಡೂರು ಜಗನ್ನಾಥ ರೈ	25—00
,, ಮೂಲ್ಕಿ ರಾಮಣ್ಣ ಶೆಟ್ಟಿ	51—00
,, ಕಯ್ಯಾರ್ ಕಿಞ್ಞಣ್ಣ ರೈ	25-00
,, ಕೆ. ಸಂಜೀವ ಆಳ್ವ	50—00
ಶ್ರೀಮತಿ ಗಂಗಾ ಬಾಯಿ	100-00
	678—00
ಮುಂಚಿನ ವಸೂಲು	7,017—00
ಜುಮ್ಲಾ	ರೂ. 7,695—00

ಕೆ. ಟಿ. ಆಳ್ವ. ಪಿ. ಎಮ್. ಹೆಗ್ಡೆ,
ಅಧ್ಯಕ್ಷ. ಕೋಶಾಧಿಕಾರಿ.
ಮಂಗಳೂರು, 6—3—1961.

ಜಾನುವಾರು ಆಸ್ಪತ್ರೆಗೆ ಶ್ರೀ ಕಿಶನ್ ಚಂದರ ಸಂದರ್ಶನ— ಮೈಸೂರು ಸರಕಾರದ ವ್ಯವಸಾಯ ಖಾತೆಯ ಕಾರ್ಯದರ್ಶಿ ಶ್ರೀ ಟಿ. ವಿ. ರೆಡ್ಡಿಯವರು ಕೇಂದ್ರದ ಆಹಾರ ಮತ್ತು ಕೃಷಿ ಇಲಾಖೆಯ ಜತೆ ಕಾರ್ಯದರ್ಶಿ ಶ್ರೀ ಕಿಶನ್ ಚಂದರೊಡನೆ ತಾ. 3ರಂದು ಮಂಗಳೂರು ಜಾನುವಾರು ಆಸ್ಪತ್ರೆಗೆ ಸಂದರ್ಶನವಿತ್ತು ಅಲ್ಲಿರುವ ಚಿಕಿತ್ಸಾ ಕೇಂದ್ರ, ಕೋಳಿ ಸಾಕಣೆ ಕೇಂದ್ರ ಮತ್ತು ಕೃತಕ ಗರ್ಭಧಾರಣಾ ಕೇಂದ್ರಗಳಲ್ಲಿ ನಡೆಯುತ್ತಿರುವ ಪ್ರಗತಿಪರ ಚಟುವಟಿಕೆಗಳನ್ನು ಕೂಲಂಕುಶವಾಗಿ ಪರಿಶೀಲಿಸಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಗೊಳಿಸಿದರು.

ವಸ್ತುಪ್ರದರ್ಶನದ ಉದ್ಘಾಟನೆ— ಮಂಗಳೂರಿನ ಪರಿಜನ ಬೆನೆಫಿಟ್ (ಶೋ) ಎಕ್ಸಿಬಿಷನ್ ಸಮಿತಿಯವರು ಕೇಂದ್ರ ಮೈದಾನಿನಲ್ಲಿ ವ್ಯವಸ್ಥೆಗೊಳಿಸಿದ ವಸ್ತುಪ್ರದರ್ಶನವೊಂದನ್ನು ಇದೇ ತಾ. 5ರಂದು ಶ್ರೀ ವಿ. ಎಸ್. ಕುಡುವರು ಉದ್ಘಾಟಿಸಿದರು. ಶ್ರೀ ಬಿ. ಮಂಜಯ ಹೆಗ್ಡೆಯವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀ ಎಸ್. ಜೆ ಸಾಲಿಯಾನ್‌ರು ಸ್ವಾಗತಿಸಿದುದಲ್ಲದೆ ಶ್ರೀ ಎಸ್. ಯು. ರಾಮಚಂದ್ರರಾಯರು ಮಾತನಾಡಿದರು ಕೊನೆಗೆ ಶ್ರೀ ಕೆ ಈಶ್ವರನವರು ಧನ್ಯವಾದಗಳನ್ನರ್ಪಿಸಿದರು.

ಕಾರ್ಕಳ ಶ್ರೀ ಭುವನೇಂದ್ರ ಕಾಲೇಜಿನ ವರ್ಧಂತ್ಯುತ್ಸವವು— ಕಳೆದ ತಾ. 28ರಂದು ಮೈಸೂರು ಸರಕಾರದ ಕಾಲೇಜು ಶಿಕ್ಷಣ ಖಾತೆಯ ಡೈರೆಕ್ಟರ್, ಶ್ರೀ ಎಚ್. ಬಿ. ಬೊಂದಾಡೆಯವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಕೆ. ವಾಸುದೇವ ಕಾಮತರು ಸ್ವಾಗತ ಭಾಷಣಮಾಡಿದರು. ಪ್ರಿನ್ಸಿಪಾಲ್ ದಾಮೋದರ ಕಿಣಿಯವರು ವರದಿಯನ್ನೋದಿದರು ಶ್ರೀಮತಿ ಬೊಂದಾಡೆಯವರು ಬಹುಮಾನ ಹಂಚಿದರು. ಶ್ರೀ ಮಹೇಲ್ ಶ್ರೀನಿವಾಸ ನಾಯ್ಕರು ಡಾ। ಟಿ. ಮಾಧವ ಪೈಯವರ ತೈಲ ಚಿತ್ರವನ್ನೂ ಶ್ರೀ ಎಂ. ಡಿ: ಅಧಿಕಾರಿಯವರು ದಿವಂಗತ ಕೆ. ವೆಂಕಟೇಶ ಪ್ರಭುಗಳ ತೈಲ ಚಿತ್ರವನ್ನೂ ಅನಾವರಣ ಮಾಡಿದರು. ಶ್ರೀ ಬೊಂದಾಡೆಯವರು ಕಾಲೇಜಿನ ಪ್ರಗತಿಗಾಗಿ ಮೆಚ್ಚುಗೆ ಸೂಚಿಸಿ ಮಾತನಾಡಿದರು ಧನ್ಯವಾದ, ನಾಟಕ ಪ್ರದರ್ಶನವಾಗಿ ಸಮಾರಂಭ ಕೊನೆಗೊಂಡಿತು,

ಪಡುಕೆರೆತ್ತೂರು—ತಾ. 27—2—61 ರಂದು ಸ್ಥಳೀಯ ಹಾಯರ್ ಎಲಿಮೆಂಟರಿ ಶಾಲಾ ವರ್ಧಂತ್ಯುತ್ಸವವು ಜರಗಿತು. ಪೂರ್ವಾಹ್ನ ಶಿರ್ವದ ಮೆಡಿಕಲ್ ಆಫೀಸರ್ ಡಾ। ವೆಂಕಟಕೃಷ್ಣ ಇವರಿಂದ ಧ್ವಜವಂದನಾ ಕಾರ್ಯವು ನೆರವೇರಿತು ಶ್ರೀ ಡಿ ಪಿ. ಪ್ರಭು ಇವರಿಂದ ಶಾಲಾ ಮಕ್ಕಳಿಗೆ ಸಿಹಿತಿಂಡಿ ಹಂಚೋಣವಾಯ್ತು. ಸಂಜೆ ಉಡುಪಿ ದಕ್ಷಿಣ ಶ್ರೇಣಿಯ ಪರೀಕ್ಷಾಧಿಕಾರಿ ಶ್ರೀ ಎ. ನರಸಿಂಹಯ್ಯ ಇವರ ಅಧ್ಯಕ್ಷತೆಯಲ್ಲಿ ಸಭೆಯು ನೆರವೇರಿತು. ಶ್ರೀ ಕೆ. ವಿ. ಕೃಷ್ಣಯ್ಯನವರು ಸ್ವಾಗತ ಭಾಷಣ ಮಾಡಿದರು. ಮುಖ್ಯೋಪಾಧ್ಯಾಯ ಶ್ರೀ ಕೆ. ಶೇಷಪ್ಪಯ್ಯನವರು ವರದಿವಾಚನ ಗೈದರು. ಶ್ರೀ ಕೆ. ಆನಂದರಾವ್ ಇವರು ಸ್ವಸ್ತಿವಾಚನ ಗೈದರು. ಬಹುಮಾನ ವಿತರಣೆಯಾದ ಬಳಿಕ ನಾಟಕಾದಿ ವಿವಿಧ ವಿನೋದಾವಳಿಗಳಾದುವು.

ದೇಲಂಪಾಡಿ- ಸ್ಥಳೀಯ ಬಯಾದಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಮಂದಿರದಲ್ಲಿ ಕಳೆದ ತಾ. 25ರಂದು "ಚೂಡಾಮಣಿ"ಎಂಬ ಕಥಾ ಭಾಗದ ಯಕ್ಷಗಾನ ತಾಳ ಮದ್ದಳೆಯೊಂದು ಪ್ರಸಿದ್ಧ ಅರ್ಥದಾರಿಗಳ ಕೂಡುವಿಕೆಯಿಂದ ಶ್ರೀ ಶೇರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು.

ಕಾರ್ಯಕ್ರಮವನ್ನು ಶ್ರೀ ಎಂ. ಎಸ್. ರೈಗಳು ವ್ಯವಸ್ಥೆಗೊಳಿಸಿದ್ದರು.

ಬೆಂಗಳೂರಿನಲ್ಲಿ ಯಕ್ಷಗಾನ ಬಯಲಾಟ— ಗುಟ್ಟಹಳ್ಳಿ ಪ್ಯಾಲೇಸ ರೋಡಿನಲ್ಲಿರುವ ಆಂಜನೇಯ ದೇವಸ್ಥಾನದ ಧರ್ಮದರ್ಶಿಗಳ ಸಹಕಾರದಿಂದ ದೇವಸ್ಥಾನದ ಹೊರಂಗಾಣದಲ್ಲಿ ಕಳೆದ ತಾ. 28ರಂದು ಕಾರ್ತವೀರ್ಯಾರ್ಜುನ ಕಾಳಗವೆಂಬ ಯಕ್ಷಗಾನ ಬಯಲಾಟವು ಜರಗಿತು. ಈ ಕಾರ್ಯಕ್ರಮಗಳಲ್ಲಿ ಉಡುಪಿ ಶ್ರೀಗಳಾದ ಕೆ. ನಾರಾಯಣ ಶೆಟ್ರು ಹಾಡುಗಾರಿಕೆ, ಜಿ. ಕೆ. ಶಾಸ್ತ್ರಿಯವರ ಮೃದಂಗ ವಾದನ, ಬಿ ರಾಮಚಂದ್ರ ಇವರ ಚೆಂಡೆವಾದನ ಸರ್ವ ಶ್ರೀಗಳಾದ ಭದ್ರಗಿರಿ ಕೇಶವ ಪೈ, ಬಿ. ಎ. ಎಲ್‌ಎಲ್. ಬಿ ಇವರು ಕರ್ಣನ ಪಾತ್ರವನ್ನೂ ಕೀರ್ತನ ಕೇಸರಿ ಭದ್ರಗಿರಿ ಅಚ್ಯುತ ಪೈಯವರು ಅರ್ಜುನನ ಪಾತ್ರವನ್ನೂ ಭದ್ರಗಿರಿ ಸರ್ವೋತ್ತಮ ಪೈ, ಬಿ. ಎಸ್ ಸಿ ಇವರು ಕೃಷ್ಣನ ಪಾತ್ರವನ್ನೂ ಯಶಸ್ವಿಯಾಗಿ ಅಭಿನಯಿಸಿದ್ದರು.

ಶಾಲಾ ವರ್ಧಂತ್ಯುತ್ಸವ— ಉಡುಪಿಯ ನೋರ್ಡನ್ ಸ್ಕೂಲ್ ಓಫ್ ಕೋಮರ್ಸಿನ ವರ್ಧಂತ್ಯುತ್ಸವವು ಇದೇ ತಾ. 4ರಂದು ಶ್ರೀ ಟಿ. ಆರ್. ಯು. ಪೈ ಇವರ ಅಧ್ಯಕ್ಷತೆಯಲ್ಲಿ ಡಾ। ಎಸ್. ಆರ್. ಪೈ ಸ್ಮಾರಕ ಬಯಲು ರಂಗ ಮಂಟಪದಲ್ಲಿ ನೆರವೇರಿತು. ಹೆಡ್‌ಮಾಷ್ಟರ್ ಶ್ರೀ ಟಿ. ಎ. ವಾಸುದೇವನ್ ಅವರು ಶಾಲಾ ವರದಿಯನ್ನೋದಿದರು ಶ್ರೀ ಯು. ದಾಮೋದರ ಅವರು ಶಾಲಾ ಸ್ವಸ್ತಿವಾಚನ ಮಾಡಿದಕ್ಕೆ ಶ್ರೀ ಬಿ. ಆರ್. ವಿ. ಕಾಮತರು ಉತ್ತರಿಸಿದರು. ಅನಂತರ ಅಧ್ಯಕ್ಷರು ಬಹುಮಾನ ವಿತರಣೆ ಮಾಡಿ ಶಾಲಾ ಪ್ರಗತಿಯನ್ನು ಶ್ಲಾಘಿಸಿ ಮಾತನಾಡಿದರು. ಬಳಿಕ ನಾಟಕ ಪ್ರದರ್ಶನ ನಡೆಯಿತು.

ಮಲ್ಪೆ— ಸ್ಥಳೀಯ ಗವರ್ನಮೆಂಟ್ ಫಿಶರೀಸ್ ಹೈಸ್ಕೂಲಿನ ವಾರ್ಷಿಕೋತ್ಸವವು ಇದೇ ತಾ. 3ರಂದು ಡಿ। ಮುನ್ಸಿಫ್ ಶ್ರೀ ಗಂಗಾಧರ ಎಸ್. ನಾಗವೋತಿ ಇವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸಾರಾ ಎಸ್. ಆಮಿನ್ ಇವರು ಶಾಲಾ ವರದಿವಾಚನ ಮಾಡಿದರು. ಶ್ರೀಮತಿ ಅನಸೂಯಾದೇವಿ ನಾಗವೋತಿಯವರು ಬಹುಮಾನ ವಿತರಣೆಗೈದರು. ಅಧ್ಯಕ್ಷರು ಶಾಲಾ ಏಳಿಗೆಗಾಗಿ ಮೆಚ್ಚುಗೆ ಸೂಚಿಸಿ ಸಂದರ್ಭೋಚಿತ ಭಾಷಣವಿತ್ತರು. ಬಳಿಕ ನಾಟಕ, ಯಕ್ಷಗಾನಾದಿ ಮನರಂಜನಾ ಕಾರ್ಯಕ್ರಮಗಳಾದುವು.

ಮಂಗಳೂರು ಮಂಡಲ ಕಾಂಗ್ರೆಸ್ ಸಮ್ಮೇಳನ— ಕಳೆದ ತಾ. 25 ಮತ್ತು 26 ರಂದು ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿತು ಸಮ್ಮೇಲನವನ್ನು ಶ್ರೀ ಎಂ. ಮಾಧವ ರಾಯರು ಉದ್ಘಾಟಿಸಿದರು. ಆರಂಭದಲ್ಲಿ ಶ್ರೀ ಕೆ. ವಿಶ್ವನಾಥ ಕಾಮತರು ಸ್ವಾಗತ ಭಾಷಣ ಮಾಡಿದರು. ಶ್ರೀ ಬಿ ವೈಕುಂಠ ಬಾಳಿಗ ಎಂ. ಎಲ್ ಎ ಅವರೂ ಮಂಗಳೂರು ನಗರ ಸಭಾಧ್ಯಕ್ಷ ಶ್ರೀ ಮಹೇಲ್ ಶ್ರೀನಿವಾಸ ನಾಯ್ಕ ಅವರೂ ತಮ್ಮ ತಮ್ಮ ಕ್ಷೇತ್ರಗಳ ಉದ್ದಿಮೆ ಕಾರ್ಯಗಳ ವರದಿಯನ್ನಿತ್ತರು. ಅಧ್ಯಕ್ಷರು ಪಕ್ಷಗಳೊಳಗೆ ಗುಂಪುಗಳು ಉಂಟಾಗಿ ಪ್ರಗತಿಗೆ ಧಕ್ಕೆಯಾಗಿರುವುದೆಂದೂ ಈ ವರೆಗೆ ಕಾಂಗ್ರೆಸ್ ಸರಕಾರಗಳು ಸಾಧಿಸಿದ ಕೆಲಸಗಳೇನೆಂಬುದನ್ನು ವಿವರಿಸಿದರು. ಬಳಿಕ ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ಹೆಸರಿಡಬೇಕೆನ್ನುವ, ಚಂದ್ರಗಿರಿಹೊಳೆಯ ಉತ್ತರ ಭಾಗವನ್ನು ದಕ್ಷಿಣ ಕನ್ನಡಕ್ಕೆ ಸೇರಿಸ ಬೇಕೆನ್ನುವ ಇತ್ಯಾದಿ ನಿರ್ಣಯಗಳಾದವು

ಉಡುಪಿ ತಾಲೂಕು ಬೋರ್ಡ್ ಸಭೆಯೊಂದು ತಾ. 24—2—61ರಂದು ಅಧ್ಯಕ್ಷ ಶ್ರೀ ಎಂ. ಮಧ್ವರಾಜರವರ ಅಧ್ಯಕ್ಷತೆಯಲ್ಲಿ ನೆರವೇರಿ 60—61ರ ಹಾಗೂ 61—62ರ ಪರಿಷ್ಕೃತ, ಹಾಗೂ ಅಂದಾಜು ಆಯವ್ಯಯಗಳನ್ನು ಮಂಜೂರು ಮಾಡಲಾಯಿತು.

ಕಾಪು— ಪೊಲಿಪು ಫಿಶರೀಸ್ ಹೈಸ್ಕೂಲಿನ ವಾರ್ಷಿಕೋತ್ಸವವು ಕಳೆದ ತಾ. 26ರಂದು ಉಡುಪಿ ತಾಲೂಕು ಬೋರ್ಡು ಅಧ್ಯಕ್ಷರಾದ ಶ್ರೀ ಎಂ. ಮಧ್ವರಾಜ ಅವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮವಳಿಂದ ವಿಜೃಂಭಣೆಯಿಂದ ನೆರವೇರಿತು.

ಮೆಯಾಗಿ ವೆಚ್ಚವನ್ನು ತುಸು ಹೆಚ್ಚಾಗಿ ತೋರಿಸಿ, ಕೊರತೆಯ ಮುಂಗಡ ಪತ್ರವನ್ನು ಮುಂದಿಡುವುದು ಇವರ ವಿಶೇಷತೆ. ವರ್ಷಾಂತ್ಯದಲ್ಲಿ ಬಹಳ ಕೊರತೆಯು ಅಲ್ಪ ಕೊರತೆಯಾಗಿ ಪರಿಣಮಿಸುವಂತೆ ಮಾಡುವ ನೀತಿಯಿಂದಾಗಿ ಅವರು 'ಭಲೇ ಬುದ್ಧಿವಂತ' ಎನಿಸಿದ್ದಾರೆ. ೧೯೬೦—೬೧ರ ಮುಂಗಡ ಪತ್ರದಲ್ಲಿಯೂ ಇದೇ ನೀತಿಯನ್ನು ಅನುಸರಿಸಿದ್ದರೆ, ೬೦ಕೋಟಿ ಕೊರತೆಯನ್ನು ತುಂಬಿಕೊಳ್ಳಲು ೭೨ಕೋಟಿ ಹೊಸಕರಭಾರವನ್ನು ಹೇರಿರುವುದರಿಂದ ಉಳಿತಾಯವೇ ತೋರಿಬರುವುದೋ ಕಾಣಬೇಕಷ್ಟೆ. ಸಂರಕ್ಷಣಾ ಶಾಖೆಗೆ ರೂ. ೧೫ ಕೋಟಿ ಅಧಿಕ ನೀಡಿದಿಗೊಳಿಸುವುದು ಶಾಂತಿಪ್ರಿಯ ಭಾರತದ ಮುಂಗಡಪತ್ರದ ವೈಶಿಷ್ಟ್ಯ.

ಹಾರಂಗಿ ಅಣೆಕಟ್ಟು

ಕೊಡಗಿನಲ್ಲಿ ಹರಿಯುವ ಕಾವೇರಿ ನದಿಗೆ ಹಾರಂಗಿಯೆಂಬಲ್ಲಿ ಅಣೆಕಟ್ಟನ್ನು ಕಟ್ಟುವ ಯೋಜನೆಯು ಪೂರ್ತಿಯಾಗಿ, ಕೇಂದ್ರದ ಅನುಮತಿಯನ್ನು ಕಾಯುತ್ತಿದೆ. ಇದಕ್ಕೆ ಒಟ್ಟು ೧೧—೧೨ ಕೋಟಿ ರೂಪಾಯಿಗಳ ವೆಚ್ಚ ಬರುವುದೆಂದು ಲೆಕ್ಕ ಹಾಕಲಾಗಿದೆ ಈ ಯೋಜನೆಯು ಕಾರ್ಯರೂಪಕ್ಕೆ ಬಂದಾಗ, ಕಾಫಿ ಅಥವಾ ಅಡಿಕೆ ತೋಟಗಳಿಂದ ಕೂಡಿದ ೯೦೦ ಎಕ್ರೆ ಭೂಮಿಯು ನೀರಡಿ ಮುಳುಗುವುದಾದರೂ ಇದರಿಂದ ಒಂದೂವರೆ ಲಕ್ಷ ಎಕ್ರೆ ಜಮೀನಿಗೆ ನೀರಾವರಿ ಸೌಕರ್ಯ ಪೊದಗುವುದರಿಂದ ಕೈಗೆತ್ತಿಕೊಳ್ಳಲಾಗಿದೆಯೆಂದು ತಿಳಿಯುತ್ತದೆ. ಮುಳುಗಡೆ ಹೊಂದುವ ಭೂಮಿಯ ಮಾಲಿಕರಿಗೆ ಇತರತ್ರ ಕೊಡಲು ಭೂಮಿಯಿದೆಯೆಂದೂ ಗೊತ್ತಾಗಿದೆ. ಆದರೂ ಕೊಡಗಿನಲ್ಲಿ ಈ ಬೃಹದ್ಯೋಜನೆಯ ವಿರುದ್ಧ ಬಲವಾದ ಚಳವಳವೊಂದು ಮುಂದುವರಿಯುತ್ತಿದೆ. ಲೋಕೋಪಯೋಗಿ ಸಚಿವ ಶ್ರೀ ಚೆನ್ನಬಸಪ್ಪನವರು ಈ ವಿಷಯಗಳನ್ನು ವಿಧಾನ ಸಭೆಯಲ್ಲಿ ತಿಳಿಸಿದರು.

ಅಮೆರಿಕೆಯ ವಿದೇಶಾಂಗ ಕಾರ್ಯದರ್ಶಿ ಶ್ರೀ ಡೀನ್ ರಸ್ಕ್

ಅಮೆರಿಕದ ವಿದೇಶಾಂಗ ಮಂತ್ರಿಶಾಖೆಯ ಹೊಸ ಕಾರ್ಯದರ್ಶಿಯಾಗಿ ಡೀನ್ ರಸ್ಕರ ನೇಮಕವನ್ನು ಪ್ರಕಟಿಸುತ್ತ, ಸಂಯುಕ್ತ ಅಧ್ಯಕ್ಷ ಜಾನ್ ಎಫ್. ಕೆನೆಡಿಯವರು, ರಸ್ಕರು ಈ ಪದವಿಗೆ "ಪ್ರಪಂಚ

ಚ ವ್ಯವಹಾರಗಳ ಅಭ್ಯಾಸಿಯ ದೂರದೃಷ್ಟಿಯನ್ನು, ಯುದ್ಧವನ್ನು ಪ್ರತ್ಯಕ್ಷ ಅರಿತಿರುವ ಎಲ್ಲರಲ್ಲೂ ಇರುವ ಶಾಂತಿಯ ಕಳಕಳಿಯನ್ನು ಮತ್ತು ನಮ್ಮ ವಿದೇಶ ಸಂಬಂಧಗಳ ವ್ಯವಹಾರದಲ್ಲಿ ವ್ಯಾವಹಾರಿಕ ಅನುಭವವನ್ನು" ತರುವರು ಎಂದು ಹೇಳಿದರು.

೫೧ ವರ್ಷ ವಯಸ್ಸಿನ, ರಾಜಕಾರಣಿ, ಶಿಕ್ಷಣವೇತ್ತ, ಯೋಧ ಮತ್ತು ಆಡಳಿತಗಾರರಾಗಿರುವ ರಸ್ಕರು, ಅನೇಕ ದೇಶಗಳ ಆವಶ್ಯಕತೆಗಳಿಗೆ ಮತ್ತು ಆಕಾಂಕ್ಷೆಗಳಿಗೆ ಸಂಬಂಧಿಸಿದ ವಿಶಿಷ್ಟವಾದ ಅನುಭವವನ್ನೂ ಈ ಹುದ್ದೆಗೆ ಒದಗಿಸುವರು. ನಾವು ವೇಗವಾದ, ಕ್ರಾಂತಿಕಾರೀ ಪರಿವರ್ತನೆಯ ಯುಗದಲ್ಲಿದ್ದೇವೆ ...ಈ ಪರಿವರ್ತನೆಗಳು ಪ್ರಪಂಚದ ಅನೇಕ ಭಾಗಗಳ ಇತರ ಜನಾಂಗಗಳ ಆಶೆ, ಆಕಾಂಕ್ಷೆಗಳಿಂದ ಉದ್ಭವಿಸುತ್ತವೆ, ಈ ಆಶೆ, ಆಕಾಂಕ್ಷೆಗಳಲ್ಲಿ ನಾವೂ ಸಹಭಾಗಿಗಳಾಗಿದ್ದೇವೆ....ನಮಗೆ ಕ್ರಮಗಳನ್ನು ಕೈಗೊಳ್ಳಲು ಇರುವ ಬೃಹತ್ಪ್ರಮಾಣದ ಸಾಮರ್ಥ್ಯದಿಂದಾಗಿ, ಇತಿಹಾಸವನ್ನು ನಿರ್ಮಿಸುವ ಮತ್ತು ವಿಧ್ಯಮಾನಗಳನ್ನು ರೂಪಿಸುವ ಕಾರ್ಯದಲ್ಲಿ ಮಹತ್ವದ ಪಾತ್ರ ವಹಿಸುವ ಹೊಣೆಗಾರಿಕೆ ನಮ್ಮ ಮೇಲಿದೆ" ಎಂದು ಮಿ. ರಸ್ಕ್ ಹೇಳಿದ್ದಾರೆ.

ಕಾರಂತರ ಪುಸ್ತಕಗಳು

ಅಳಿದ ಮೇಲೆ (ಹೊಸ ಕಾದಂಬರಿ)	2_75
ಸಂಚಯತು (ಕಾದಂಬರಿ)	2_50
ನಮ್ಮ ಸುತ್ತಲಿನ ಕಡಲು	1_75
ಪರಮಾಣು—ಇಂದು--ನಾಳೆ	3_00

ಸಿಗುವ ಸ್ಥಳ:
ನವಭಾರತ ಬುಕ್ ಡಿಪೊ, ಉಡುಪಿ.

'NAVAYUGA' WEEKLY is in the list of periodicals and Newspapers approved for use in Secondary School as per proceedings Roc· No 466 N/50 date 2-12-1950 of the Director of public Instruction Madras·

ಹರಟೆ

(೫ನೇ ಪುಟದಿಂದ)

ಬುವ ಅತ್ತೆಂದಿರು ಎಷ್ಟು ಮಂದಿ ಊರಲ್ಲಿಲ್ಲ? ಏನಾದರೂ ಪುರಾಣದ ಕತೆಯ ಸಿನಿಮಾವೇ ಬಂದುಬಿಟ್ಟರೆ, ಮೊಮ್ಮಕ್ಕಳನ್ನು ಕರೆದುಕೊಂಡು ಹೋಗದಿದ್ದರೆ ಸಮಾಧಾನವೇ ಇಲ್ಲ.

ಹೀಗೆ ಕಳೆದ ಶತಮಾನ ಶತಮಾನಗಳಿಂದ ಮುಂದುವರಿಯದೇ ಇದ್ದ ದೇಶ ಈ ಶತಮಾನದಲ್ಲಿ ಒಂದೆರಡು ದಶಕದೊಳಗೆ, ಎರಡು ಮೂರು ಶತಮಾನಗಳನ್ನೇ ಮುಂದೆ ಹಾರಿಬಿಟ್ಟಿತೂ ಅಂದರೆ, ಇದರ ಕೀರ್ತಿ ವಿಜ್ಞಾನಿಗಳಿಗೇ ಸೇರಬೇಕೆಂತ ಪ್ರಾಂಜಲ ಮನಸ್ಸಿನಿಂದ ಒಪ್ಪಿಕೊಳ್ಳಲೇ ಬೇಕು. ಕಣ್ಣು ಮುಚ್ಚಿ ಒಪ್ಪಿಕೊಳ್ಳುವುದೇನು ಬಂತು - ಕಣ್ಣಿಗೆ ಕಾಣಿಸುತ್ತಲೇ ಇದೆಯಲ್ಲ! ಹೀಗಿದ್ದೂ ಇತ್ತೀಚೆಗೆ ಪ್ಯಾರಿಸಿನಲ್ಲಿ ಕೂಡಿದ ವಿಜ್ಞಾನ ಸಮಿತಿಯಲ್ಲಿ ಮಾತಾಡುತ್ತ ನಮ್ಮ ಶ್ರೀ ಡಾಕ್ಟರ್ ರಾಧಾಕೃಷ್ಣನ್ ಅವರು "ಇದು ಅವಿವೇಕಿಗಳ ಶಕ" ಎಂದು ಉದ್ಗಾರ ತೆಗೆದರಂತೆ ಏ ನಾ ಶ್ಚ ರ್ಯ! ಬಹುಶ್ಯ: ಅವರು ವಿಶಾಲ ದೃಷ್ಟಿಯಿಲ್ಲದೆ ಕಣ್ಣಿಗೆ ಕಣ್ಣಡಕವಿಟ್ಟುಕೊಂಡು-ವಿಜ್ಞಾನಿಗಳ ಶಕ್ತಿಗೊಂದು ಪರಿಮಿತಿಯನ್ನು ಕಲ್ಪಿಸಿ, ಅಣು ಗುಂಡು, ರಾಕೆಟ್ ಬಾಣಗಳಿಂದ ಜಗತ್ತು ನಾಶವಾದರೇನು ಗತಿ ಎಂಬ ಧೋರಣೆಯಲ್ಲಿ ಹಾಗೆ ಹೇಳಿದರಂತೆ.

ಅವರೇನೋ ಒಳ್ಳೇ ಉದ್ದೇಶದಿಂದಲೇ ಹೇಳಿದ್ದಾರೂ, ಅಂಥ ಮಾತು ಮುಂದೇರುವ ಪ್ರಪಂಚಕ್ಕೆ ಅಡ್ಡಗಲ್ಲು ಹಾಕಿದ ಹಾಗೆಂದೇ, ಈಗ ಜ್ಞಾನ ದೃಷ್ಟಿ ಪಡೆದಿರುವ ನನ್ನಂಥವನ ಅಭಿಪ್ರಾಯವಾಗಿದೆ. ಚಂದ್ರಲೋಕಕ್ಕೂ ಅಲ್ಲಿಂದ ಮಂಗಳಾದಿ ಲೋಕಗಳಿಗದಿ ಪ್ರಯಾಣ ಸೌಕರ್ಯವು ಸುಗಮವಾಗಲಿರುವ ಈ ಕಾಲದಲ್ಲಿ ಭೂಮಿಯನ್ನು ಕುರಿತು ಏಕಿಷ್ಟು ಭಯಪಡಬೇಕೊ? ಈಗಾಗಲೇ ಇಲ್ಲಿ ಜನಸಂಖ್ಯೆ ಹೆಚ್ಚಾಗಿದೆ; ಇರಲು ಜಾಗಿಲ್ಲ; ತಿನ್ನಲಿಕ್ಕಂತೂ ದುಡ್ಡೇ ಗತಿ. ಇಂಥಾ ಪರಿಸ್ಥಿತಿ ಬಂದಾಗ ಭೂಭಾರ ಹರಣಕ್ಕೆ ಏನೋ ಒಂದು ಆಗುತ್ತದೆನ್ನುವುದು ಹಳೆಯ ಪದ್ಧತಿಯಾಯಿತು. ಗಾಳಿ, ನೀರು, ಬೆಂಕಿ, ಭೂಕಂಪಾದಿ ಪ್ರಕೃತಿ ಶಕ್ತಿಗಳನ್ನು ಗೆಲ್ಲುವುದು ಮಾನವರಿಂದಾಗದ ಮಾತೋ ಅಥವಾ ವಿಜ್ಞಾನಿಗಳು ಆ ಕಡೆಗೆ ಬುದ್ಧಿ ಓಡಿಸುವುದಿಲ್ಲವೋ ತಿಳಿಯದು. ಹಳೇಕಾಲದಿಂದಲೂ ರೂಢಿಯಾದ ಆ ಪ್ರಕೃತಿ ಶಕ್ತಿಗಳೊಳಗೆ ಬುದ್ಧಿ ಓಡಿಸುವುದೆಂದರೆ ಹಿಂದೆ ಹೋದ ಹಾಗೆ ತಾನೆ! ನಾಚಿಕೆಗೇಡು! ಆ ಗೊಡವೆಯೇ ಬೇಡವೆಂದು ವಿಜ್ಞಾನಿಗಳು ಮುಂದೆ ಮುಂದೆ ಸಾಗುತಿದ್ದಾರೆ. ಆ ಪ್ರಕೃತಿ ಶಕ್ತಿಗಳನ್ನು ಮೀರುವಂತಹ ಅಸ್ತ್ರಗಳನ್ನು ತಯಾರಿಸಿ, ತಾನೇ ಭೂಮಿಯನ್ನು ಸಮುಚ್ಚಟಿಹಾಕಲು ಸಿದ್ಧನಾಗಿಬಿಟ್ಟಿದ್ದಾನೆ ವಿಜ್ಞಾನಿ. ಅಂತೆಯೇ ಮಾನವರಿಗಾಗಿ ಹೊಸ ಗ್ರಹಲೋಕಗಳನ್ನು ತಯಾರಿಸಿಕೊಡುತ್ತಿದ್ದಾನೆ. ಈ ವಿವಾದಾಸ್ಪದವಾದ ಭೂಮಿಪೂರಾ ಸುಡುಮಣ್ಣುಗೊಬ್ಬರವಾದ ಮೇಲೆ, ಮತ್ತೆ ಬೇಸಾಯಕ್ಕದು ದಿವ್ಯಭೂಮಿಯಾಗಿ ಪರಿಣಮಿಸೀತು. ನಾವೆಲ್ಲಾ ಗ್ರಹಾಂತರಗಳಲ್ಲಿ ಕುಶಾಲಾಗಿ ವಿಹರಿಸುತ್ತ ಭೂಮಿಯಲ್ಲಾಗುವ ಯಾಂತ್ರಿಕ ಬೆಳೆಯಿಂದ ಸುಖವಾಗಿರಬಹುದು.

ಹೀಗೆಲ್ಲಾ ದಿವ್ಯಭವಿಷ್ಯಗಳಿರುವ ಅಂತಾರಾಷ್ಟ್ರೀಯ ಸಮಸ್ಯೆಗಳೊಂದಿಗೆ ನಮ್ಮ ಭಾರತವೂ ಹೆಣೆದುಕೊಂಡಿರುವುದರಿಂದ, ಇದೂ ಮೇಲೆ ಮೇಲೆ ಏರಿಕೊಂಡೇ ಹೋಗುತ್ತದೆ; ಹೋಗಲೇಬೇಕು. ಸ್ವಾತಂತ್ರ್ಯ ಸಿಕ್ಕಿ ಹನ್ನೆರಡು ವರುಷಗಳಾದರೂ ರೂಪಾಯಿಗೆ ಆರುಸೇರಕ್ಕಿ ಸಿಕ್ಕುವುದಿಲ್ಲವಲ್ಲಾ ಅಂತ ಹಿಂದಿನ ದೃಷ್ಟಿಯಿಂದ ಅಳುವುದು ಎಂಥ ಮೂಢತನ! ಈಗ ಹೆಚ್ಚೆಚ್ಚು ಬೆಲೆಯೇರುವುದರಲ್ಲೇ ಗೌರವವಿದೆ....

ಆದರೆ ಒಂದು–ಇಲ್ಲಿ ಸಾಹಿತಿಗಳಾರಾದರೂ ಇದ್ದರೆ—ನನ್ನನ್ನು ಮರೆತೆಯಲ್ಲಾ ಎಂದು ನೊಂದುಕೊಂಡಾರು. ಅಂತೆಯೇ ಅವರನ್ನೂ ನೆನೆಸಿ ಸುಮ್ಮನಾಗುತ್ತೇನೆ. ಸಾಹಿತಿಗಳು ಪಾಪ—ಸ್ಥಿರಪ್ರಜ್ಞರು. ಅವರ ಕೃತಿಗಳಿಗೆ ಹಿಂದೆಯೂ ಇಂದೂ ಒಂದೇ ಬಗೆಯ ದರ—ಪ್ರತಿಫಲ ದೊರೆಯುತ್ತಾ ಶಾಂತವಾಗಿಯೇ ಇದೆ ಪರಿಸ್ಥಿತಿ. ಸಾಹಿತಿಗಳ ಹೊಟ್ಟೆಯೂ ಸ್ಥಿತಪ್ರಜ್ಞದ್ದಾಯೂವಾಗಲೂ ಒಂದೇ ಬಗೆಯದು. ಕಾರಣ, ಸಾಹಿತಿಗಳ ಬರವಣಿಗೆಯ ರೋಗವೆಂಬುದು, ರೋಗಿಯ ರೋಗ ವೈದ್ಯನಿಗೆ ಉಪಯೋಗವಾಗುವ ಹಾಗೆ. ಅಂತೆಯೇ ಸಾ ಹಿ ತಿ ಗ ಳು ತ ಮ್ಮ ಬಿ ಡ ದ ರೋಗದೊಂದಿಗೆ ಬೇ ರೆ ೕ ನಾ ದ ರೂ ಕೂಲಿನಾಲಿಮಾಡಿಕೊಂಡು ಎಲ್ಲರ ಹಾಗೆ ಹೆಂಡರುಮಕ್ಕಳೊಂದಿಗೆ ಜೀವನವನ್ನು ಎಳೆದುಕೊಂಡು ಹೋಗುತ್ತಾರೆಂಬುದೇ ಸಮಾಧಾನ ಸಾಕು. ಕೆಲವು ಬುದ್ಧಿವಂತರೆಂಬವರು ಹೇಳುವ ಹಾಗೆ ನಿಜವಾದ ವಿದ್ಯೆ. ಓದು, ಬರೆಹ, ಸಾಹಿತ್ಯ ಜ್ಞಾನ, ವಿವೇಕ – ಇದೆಲ್ಲಾ ಅರ್ಥವಿಲ್ಲದ ಒಣ ಮಾತುಗಳು. ಜನರು ಬುದ್ಧಿವಂತರಾಗಿ ಬುದ್ಧಿವಂತರಿಗೇ ಓಟು ಹಾಕಿ, ಆ ಬುದ್ಧಿವಂತರು ಬಂದು ಈ ದೇಶವನ್ನು ಉದ್ಧಾರಮಾಡುವುದಕ್ಕಿಂತ ಎಷ್ಟೋ ವೇಗದಲ್ಲಿ ವಿಜ್ಞಾನಿಗಳೇ. ಒಂದುಗುಂಡಿ ಒತ್ತಿ ಆ ಕಾರ್ಯಸಾಧಿಸಿ ಬಿಟ್ಟರು. ನಮಗೇಕೆ ಚಿಂತೆ? ಏಕೆ, ಯೋಚನೆ? ಏಕೆ ಗೋಳಾಟ? ನಮ್ಮ ಮುಖಂಡ ಬ್ರಹ್ಮರು ಹೇಳಿದಂತೆ ನಾವು ಕೇಳೋಣ. ಆ ಮುಖಂಡ ಬ್ರಹ್ಮರು ಪ್ರಪಂಚದ ಪ್ರಚಂಡ ಬ್ರಹ್ಮರ ಒತ್ತಡದಂತೆ ವಾಲಿಕೊಂಡು ಹೋಗುತ್ತಾರೆ. ನಾವೇಕೆ ಸುಮ್ಮನೆ ಗಡಿಬಿಡಿಮಾಡಿಕೊಳ್ಳಬೇಕು.

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (1 = 50)

ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ.

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಮಧು ಸಂಚಯ

ಅನುಭವವೆಂಬುದು ನಮ್ಮ ಗುರಿಮುಟ್ಟುವ ದಾರಿಯನ್ನು ಬೆಳಗಿಸಿ ತೋರಿಸಬಲ್ಲ ಪಂಜು.

೦೦ ೦೦

ವಿವಿಧ ಪರೀಕ್ಷೆಗಳ ಹತ್ತಾರು ಪ್ರಮಾಣಗಳನ್ನು ಸಂಪಾದಿಸುವುದರಲ್ಲೇ ಪರೀಕ್ಷೆಗಳ ಮಹತ್ವವಡಗಿಲ್ಲ; ಅದು ಆಚರಣೆ ಮತ್ತು ಚಾರಿತ್ರ್ಯದ ಪಾವಿತ್ರ್ಯದಲ್ಲಿ ಹುದುಗಿಕೊಂಡಿದೆ.

೦೦ ೦೦

ಸಂಯಮ ಮತ್ತು ನಿಯಮಗಳು ಎರಡೂ ನಮ್ಮ ಜೀವನರೂಪೀ ಗಾಡಿಯ ಎರಡು ಚಕ್ರಗಳು. ಇವಿಲ್ಲದೆ ಹೋದರೆ ನಮ್ಮ ಜೀವನವು ನಿಷ್ಪ್ರಯೋಜಕವಾಗುವುದು.

೦೦ ೦೦

ತೊಳೆದ ಮುತ್ತಿನಂತೆ ಸುಂದರವೂ ಸಮುಜ್ವಲವೂ ಆದ ಮಾನವೀಯತಾಪೂರ್ಣ ನಾಗರಿಕರಿರುವ ದೇಶ ಮತ್ತು ಸಂಸ್ಕೃತಿಗಳು ಮಾತ್ರ ಅಮರವಾಗಿ ಉಳಿಯಬಲ್ಲವು.

೦೦ ೦೦

ಧರ್ಮವು ನಮ್ಮನ್ನು ಪರಮಾತ್ಮನತ್ತ ಕರೆದೊಯ್ದು ಮುಟ್ಟಿಸಲು ಸಹಕಾರ ನೀಡುವ ಸೂತ್ರ ಬಂಧನ.

೦೦ ೦೦

ಸಾಧಾರಣ ಮನುಷ್ಯನು ಕುಪಿತನಾದಾಗ ನಿರಾಶನಾದಾಗ, ಅಧೈರ್ಯನಾದಾಗ ಕಟು ವಾಕ್ಯಗಳನ್ನಾಡುವನು; ಆದರೆ, ಸತ್ಯಾರಾಧಕನು ಕೋಪ, ನಿರಾಶೆ ಮತ್ತು ಅಧೈರ್ಯ—ಈ ಮೂರೂ ದೋಷಗಳಿಂದ ವಿಮುಕ್ತನಾಗಿರುವನು.

೦೦ ೦೦

ತನ್ನ ಜಯದ ಮೇಲೆ ವಿಶ್ವಾಸವಿರುವವನೇ ವಿಜಯಿಯಾಗುತ್ತಾನೆ.

೦೦ ೦೦

ದೀರ್ಘಕಾಲದ ವರೆಗೆ ಜೀವಿಸಲು ಎಲ್ಲರೂ ಇಷ್ಟಪಡುತ್ತಾರೆ. ಆದರೆ ಮುದುಕರಾಗಲು ಯಾರಿಗೂ ಇಚ್ಛೆ ಇಲ್ಲ.

೦೦ ೦೦

ಅಸಂತೋಷ ತನ್ನ ಮೇಲಿನ ಅವಿಶ್ವಾಸದ ಫಲ. ಅದು ನಿರ್ಬಲ ಇಚ್ಛೆಯ ರೂಪವಾಗಿದೆ.

ಆಧ್ಯಾತ್ಮಿಕ ವಿಚಾರ

ಭಗವದ್ಗೀತೆಯ ಪ್ರಕಾಶ

ಸತ್ವ, ರಜ, ತಮೋಗುಣಗಳಿಂದ ನಿರ್ಭಾದಿತನಾಗಿ ಸರ್ವ ಜೀವ ಜಂತುಗಳನ್ನೂ ನಡೆಸುವ ಪರಂಜ್ಯೋತಿ ಪರಮಾತ್ಮನನ್ನು ಏಕೋಭಾವದಿಂದ ಭಜಿಸಿದವರು ಆತನಲ್ಲಿ ಲೀನವಾಗುವರು. ತ್ರಿಲೋಕಗಳನ್ನೂ ಆವರಿಸಿದ ಆದ್ಯಂತ ರಹಿತವಾದ ಮಹಾಶಕ್ತಿಯೇ ಪರಮಾತ್ಮ.

ಶ್ರೀ ಎಂ. ಬಿ. ಶಂಕರ ರಾವ್, ಐ. ಎ. ಎಸ್. (ನಿವೃತ್ತ)

ಕಿರಣ ೧೪: ಮನೋಭಾವದ ಮೂರು ಗುಣಗಳು

ಭಗವಾನ:—ಪಾರ್ಥನೇ, ಮುಕ್ತಿಸಾಧನೆಯ ಉತ್ತಮ ಮಾರ್ಗವನ್ನು ತೋರಿಸುತ್ತೇನೆ. ನನ್ನ ಸ್ವಭಾವವನ್ನರಿತು, ಸಂಪೂರ್ಣ ಜ್ಞಾನಿಯಾಗಿ, ಪುನರ್ಜನ್ಮದಿಂದ ಮುಕ್ತನಾಗುವ ಉದ್ದೇಶವನ್ನು ಮನಸ್ಸಿನಲ್ಲಿಟ್ಟು ನನ್ನ ಭಕ್ತನಾಗುವ ವಿವೇಕಿಯು ಮರಣಕ್ಕೆ ಎಂದೂ ಭಯಪಡುವುದಿಲ್ಲ ನನ್ನ ಗರ್ಭವು ನನ್ನ ಮಹಾಸ್ವಭಾವ. ಆದರಲ್ಲಿಯೆ ಜನನದ ಬೀಜವಿದೆ. ಆ ಬೀಜದಿಂದಲೆ ಸೃಷ್ಟಿಯಲ್ಲಿ ಯಾವತ್ತೂ ಜನನಗಳು ಆಗುವವು. ಯಾರ ಗರ್ಭದಿಂದಲಾದರೂ ಜನನವಾಗಲಿ—ಆ ಎಲ್ಲಾ ಜನನಗಳು ನನ್ನ ಮಹಾಸ್ವಭಾವವೆನ್ನುವ ಮಹಾಗರ್ಭದಿಂದಲೇ ಉತ್ಪನ್ನವಾಗುತ್ತಿವೆ ಅದು ಕಾರಣ, ನಾನೇ ಸರ್ವಜೀವ ರಾಶಿಗಳ ಪಿತನು. ಸತ್ವ, ರಜ, ತಮ—ಇವು ಮನೋಭಾವದ ತ್ರಿಗುಣಗಳು. ಚ್ಯುತಿಯಿಲ್ಲದ ಆತ್ಮವನ್ನು ಈ ಮೂರು ಭಾಗಗಳು ಶರೀರಕ್ಕೆ ಬಂಧಿಸುತ್ತವೆ. ಈ ಮೂರು ಗುಣಗಳಲ್ಲಿ ಸತ್ವಗುಣವೇ ಅತ್ಯುತ್ತಮವಾದುದು. ಅದು ಪರಿಶುದ್ಧವಾಗಿಯೂ, ಪ್ರಕಾಶಮಯವಾಗಿಯೂ, ಶಕ್ತಿಯುತವಾಗಿಯೂ ಇದೆ. ಆ ಗುಣದಿಂದ ಸುಖವು ಹುಟ್ಟುವುದು. ಜ್ಞಾನವೂ ಮೊಳೆವುದು ಸಾತ್ವಿಕ ಗುಣದಿಂದಲೇ. ಆಶೆಯು ಮೋಹದ ಆತ್ಮವು. ಆಶೆಯಿಂದ ತೃಷ್ಣೆಯೂ, ಮಾಯೆಯೂ ಅಂಕುರಿಸುತ್ತವೆ ದುರಾಶೆಗಳು ಮೋಹದಿಂದ ಕಟ್ಟಲ್ಪಟ್ಟು ಆತ್ಮವನ್ನು ಸುತ್ತಿ ಮನುಷ್ಯನನ್ನು ದುಷ್ಕರ್ಮಗಳಲ್ಲಿ ಮುಳುಗಿಸುವವು. ಆಗ ಮಾನವನಲ್ಲಿ ಪ್ರಕಾಶವು ಬೀರದು. ನಿಷ್ಕಾಮಪ್ರೇಮದ ಆಶೆಗಳಿಂದ ನಿಷ್ಕಾಮಕರ್ಮಗಳು ಉಂಟಾಗಿ ಜಗತ್ತು ಶೋಭಿಸುವುದು. ಇದು ರಜೋಗುಣದ ಸ್ವಭಾವವು. ತಮೋಗುಣವು ಆಲಸ್ಯವನ್ನು ಮುಂದೊತ್ತಿ ಮಾನವನಲ್ಲಿ ಅಜ್ಞಾನವನು ಕೊಡುವುದು, ಸಂಶಯಗಳನ್ನು ಹುಟ್ಟಿಸುವುದು. ಸತ್ವಗುಣವು ಸುಖಸಂತೋಷಗಳನ್ನು ಬಿಗಿದು ಹಿಡಿಯುವುದು. ರಜೋಗುಣವು ಕರ್ಮಗಳನ್ನು ಸಾಧಿಸುವುದು. ತಮೋಗುಣದಿಂದ ಮೂಢ್ಯತೆಯು ಹೆಚ್ಚಾಗಿ ದುಃಖವು ಪ್ರಾಪ್ತಿಸುವುದು. ಆಲಸ್ಯವನ್ನು ಬಿಟ್ಟಾಗ ತಮೋಗುಣಿಯು ರಜೋಗುಣಿಯಾಗಲು ಶಕ್ಯನು. ರಜ, ತಮ—ಎರಡನ್ನೂ ಬಿಟ್ಟವನು ಸಾತ್ವಿಕನಾಗಿ ಆತನಲ್ಲಿ ಜ್ಞಾನವು ಉದಿಸುವುದು. ರಜೋಗುಣದಿಂದ ಲೋಭ, ವಿಶೇಷ ಚಟುವಟಿಕೆ, ಸಾಹಸ, ಮತ್ತು ಲೆಕ್ಕವಿಲ್ಲದ ಆಶೆಗಳು ಹುಟ್ಟುವವು. ಅವನತಿ ಮತ್ತು ನಾಶವು ತಮೋಗುಣಿಗೆ ಸಿಕ್ಕುವ ಫಲವು. ಸತ್ವಗುಣದವನು ಮರಣಕಾಲದಲ್ಲಿ ಶಾಂತಿಯನ್ನನುಭವಿಸಿ ಸಂಪೂರ್ಣ ಜ್ಞಾನಿಗಳ ವರ್ಗಕ್ಕೆ ಸೇರುವನು. ರಜೋಗುಣಿಯು ಮೋಹಭರಿತನಾಗಿ ನಿಧನಹೊಂದಿದರೆ ಕರ್ಮಕಾರಿಯಾಗಿ ಪುನರ್ಜನ್ಮವನ್ನು ಪಡೆಯುವನು. ತಮೋಗುಣದವನು ಮಾಢ್ಯದಲ್ಲಿದ್ದಾಗಲೇ ಸತ್ತರೆ ವಿವೇಚನಾಬಲವಿರದ ಪ್ರಾಣಿವರ್ಗದಲ್ಲಿ ಜನ್ಮವೆತ್ತುವನು ಸತ್ಕರ್ಮಗಳು ಉತ್ತಮವಾದ ಫಲಗಳನ್ನು ಕೊಡುವವು ದುರಾಶೆಯು ದುಃಖಕ್ಕೆ ಕಾರಣವಾಗುವುದು. ಆಲಸ್ಯದಿಂದ ಅಜ್ಞಾನವು ಹುಟ್ಟಿ ಮನೋಬಲವು ಕುಗ್ಗುವುದು. ಸತ್ವಗುಣದವರಿಗೆ ಉತ್ತಮಸ್ಥಾನವಿದೆ. ರಜೋಗುಣದವರಿಗೆ ನಡುವಿನಸ್ಥಾನ. ತಮೋಗುಣಿಗಳಿಗೆ ಯಾವಾಗಲೂ ಅವನತಿಯು. ಅವರ ನಡತೆಯು ಮರಣಕಾಲದವರೆಗೆ ಸ್ವಚ್ಛವಾಗದು. ಪಾರ್ಥನೇ, ಈ ಮೂರು ಗುಣಗಳೂ ನನ್ನನ್ನು ಬಾಧಿಸುವುದಿಲ್ಲ. ಇದನ್ನು ತಿಳಿದವರು ವಿವೇಕಿಗಳು. ಶರೀರವನ್ನು ಅವಲಂಬಿಸಿದ ಈ ತ್ರಿಗುಣಗಳನ್ನು ಲೆಕ್ಕಿಸದೆ ಶರೀರದಲ್ಲಿ ಅಡಗಿದ್ದ ಆತ್ಮವು 'ಸ್ವತಂತ್ರ'ದಲ್ಲಿ ಇದ್ದರೆ, ಅದು ಇನ್ನೊಮ್ಮೆ ಶರೀರವನ್ನು ಸೇರಿ ಮಾನವನ ಜನನ ಮರಣಗಳಿಗೆ ಅವಕಾಶಕೊಡದು.

ಅರ್ಜುನ—ಪರಮಾತ್ಮನೇ, ನೀನು ವಿವರಿಸಿದ ತ್ರಿಗುಣಗಳನ್ನೂ ಅಲಕ್ಷಿಸಿದವನ ಕುರುಹುಗಳು ಯಾವುವು? ಅವನ ಜೀವನವು ಹೇಗಿರಬೇಕು? ಅವನು ಈ ಮೂರೂ ಗುಣಗಳನ್ನು ದಾಟಿ ಮೇಲೇರುವ ಬಗೆ ಹೇಗೆ? ದಯವಿಟ್ಟು ಅರುಹು.

ಭಗವಾನ—ಅರ್ಜುನನೇ, ಪ್ರಕಾಶ, ಚಟುವಟಿಕೆ, ಮಾಯೆ—ಇವು ಉದಿಸಿದಾಗ ಬೇಸರಿಸದೆ, ಅವುಗಳನ್ನು ತಾನಾಗಿ ಅಪೇಕ್ಷಿಸದೆ ಇರುವ ಮಾನವನು, ಮತ್ತು ಯಾವ ಗುಣಗಳನ್ನೂ ಆಶಿಸದೆ, ನಿಶ್ಚಲನೂ, ಧೃಡಚಿತ್ತನೂ ಆಗಿ ಬೆಳೆಯುವ ಮಾನವನು ಮತ್ತು ಸುಖ ದುಃಖಗಳನ್ನು ಚೈತನ್ಯದಿಂದ ಏಕರೀತಿಯಲ್ಲಿ ಅನುಭವಿಸುವವನೂ, ಅಲ್ಲದೆ ಕಲ್ಲು ಮತ್ತು ಚಿನ್ನಕ್ಕೆ ಒಂದೇ ಬೆಲೆಯನ್ನು ಕಟ್ಟಿ, ಸಂತೋಷಬಂದಾಗ ಹಿಗ್ಗದೇ, ಕಷ್ಟಗಳು ಬಂದಾಗ ಕುಗ್ಗದೇ, ಹೊಗಳಿಕೆಗೆ ಕಿವಿಗೊಡದೇ, ನಿಂದೆಗೆ ಭಯಪಡದೇ, ಮಾನಾಪಮಾನಗಳನ್ನು ಎಣಿಸದೇ—ಸ್ನೇಹಿತರನ್ನೂ, ವೈರಿಗಳನ್ನೂ, ಒಂದೆ ರೀತಿಯಲ್ಲಿ ನಡೆಸಿ, ಅತ್ಯಂತ ಸಾಹಸಕನವನ್ನು ತೋರಿಸದೆ—ಬಾಳುವ ಮಾನವನೂ—ಮೇಲೆ ವಿವರಿಸಿದ ತ್ರಿಗುಣಗಳ ಪ್ರಕಾರವನ್ನು ಹಾರಿ ಮೇಲೆ ಹೋಗುವನು. ಆತನು ಮರಣಕ್ಕೆ ಹೆದರನು. ಸಂಪೂರ್ಣ ಭಕ್ತಿಭಾವದಿಂದ ನನ್ನನ್ನು ಸದಾಕಾಲ ಏಕಾಗ್ರಚಿತ್ತದಿಂದ ಪೂಜಿಸುವನು. ಇಂತಹ ಮಾನವರು ನನ್ನಲ್ಲಿ ಐಕ್ಯರಾಗುವರು.

ಕಿರಣ ೧೫ ಪರಂಜ್ಯೋತಿ ಪರಮಾತ್ಮ

ಭಗವಾನ:- ಬೇರುಗಳು ಮೇಲಿದ್ದು, ಕೊಂಬೆಗಳು ಅಡಿಯಲ್ಲಿರುವ ಜಗದ್ವೃಕ್ಷವು ನಾಶಕ್ಕೆ ಒಳಪಡುವುದಿಲ್ಲ. ಈ ವೃಕ್ಷದ ಎಲೆಗಳು ವೇದಗಳು ಈ ವೃಕ್ಷದ ರಹಸ್ಯವನ್ನರಿತ ಜ್ಞಾನಿಗಳು ಮಾತ್ರ ವೇದಗಳ ಸರಿಯಾದ ಅರ್ಥವನ್ನು ತಿಳಿಯಲು ಶಕ್ಯರು ನೆಲದಲ್ಲಿ ಚಾಚಿರುವ ಈ ಮರದ ಕೊಂಬೆಗಳು ನೆಲದ ಕೆಳಗೂ, ಮೇಲೂ ವಿಸ್ತರಿಸಿವೆ. ತ್ರಿಗುಣಗಳು ಈ ವೃಕ್ಷವನ್ನು ಯಾವಾಗಲೂ ಪೋಷಿಸುತ್ತಿವೆ ಇಂದ್ರಿಯಗಳಿಗೆ ಭಾಸವಾಗುವ ಸಮಸ್ತ ವಸ್ತುಗಳು ಈ ಮರದ ಚಿಕ್ಕೆಗಳು. ಗುಂಪುಗುಂಪಾಗಿರುವ ಈ ಮರದ ಬೇರುಗಳು ಮೇಲಕ್ಕೇರಿದಂತೆ ಕೆಳಗೂ ವಿಸ್ತರಿಸಿರುವವು. ಈ ವಿಧದ ವಿಸ್ತಾರದಿಂದ ಮಾನವ ಜಗತ್ತಿನಲ್ಲಿ ಕರ್ಮಗಳು ಹುಟ್ಟುವವು ಈ ಮರದ ಆಕಾರವೂ ಯಾರಿಗೂ ತಿಳಿದಿಲ್ಲ. ಇದು ಯಾವಾಗ ಹೇಗೆ ಹುಟ್ಟಿತು, ಬೆಳೆಯಿತು ಯಾವಾಗ ಸಾಯುವುದು ಎಂಬುದು ಯಾರಿಗೂ ತಿಳಿಯದ ಸಮಸ್ಯೆ. ಈ ರೀತಿ ಸ್ಥಿರವಾಗಿ ಬೇರೂರಿದ ಈ ವೃಕ್ಷವನ್ನು ಪರಿತ್ಯಾಗವೆನ್ನುವ ಶಕ್ತಿಯುಳ್ಳ ಕೊಡ್ಲಿಯಿಂದ ಕಡಿದರೆ, ಯಾರಿಂದ ಈ ವೃಕ್ಷವು ಉಂಟಾಯಿತೋ ಆ ಪರಂಜ್ಯೋತಿ ಪರಮಾತ್ಮನಲ್ಲಿ ಸಂಪೂರ್ಣ ಶರಣುಹೊಕ್ಕವರು ಪುನರ್ಜನ್ಮವನ್ನು ತಾಳದೆ ಮುಕ್ತಿಯನ್ನು ಪಡೆಯುವರು! ಪರಂಜ್ಯೋತಿ ಪರಮಾತ್ಮನನ್ನು ಭಕ್ತಿಯೋಗದಿಂದ ಭಜಿಸಿ ಅಹಂಕಾರವೂ ಗರ್ವವೂ, ಆಲಸ್ಯವೂ ಇಲ್ಲದ, ದುರ್ಮೋಹಗಳನ್ನು ತ್ಯಜಿಸಿ, ಸುಖದುಃಖಗಳಿಗೆ ಬಲಿಬೀಳದ ಇದ್ದರೆ ಅವರು ನನ್ನನ್ನು ಸೇರಬಂದಾಗುವರು

ನನ್ನನ್ನು ಸೇರದೆ ಇದ್ದವರಿಗೆ ಪುನರ್ಜನ್ಮವು ಉಂಟೆಂಬುದು ಖಚಿತವು. ನನ್ನ ನಾಶವಿಲ್ಲದ ಒಂದೊಂದೇ ಅಣುವು ಜೀವಾತ್ಮನಾಗಿ ಬಂದು ಜಗತ್ತಿನಲ್ಲಿ ಜೀವ ಜಂತುಗಳ ದೇಹಗಳನ್ನು ಸೇರುತ್ತಾ ಇದೆ. ಹಾಗೆ ಸೇರಿದಾಗ, ಮನಸ್ಸು ಅದರ ಭಾವಗಳೂ, ಇಂದ್ರಿಯಗಳೂ, ಪ್ರಕೃತಿ ಸ್ವಭಾವದಲ್ಲಿಯೆ ದೇಹವನ್ನು ಕೂಡುವವು. ನನ್ನ ಅಣುವೇ ದೇಹ ರಚನೆಗೆ ಕಾರಣ. ನನ್ನ ಅಣುವೇ ದೇಹವನ್ನು ತೊಲಗಿಸುವುದು ಈ ಲೀಲೆಯು ಸದಾ ನಡೆಯುತ್ತಲೆ ಇದೆ. ಕಿವಿಗಳಿಂದ ಶ್ರವಣ, ಕಣ್ಣುಗಳಿಂದ ದೃಷ್ಟಿಭೋಗ, ಸ್ಪರ್ಶದಿಂದ ಸಂಯೋಗ, ಜಿಹ್ವೆಯಿಂದ ರುಚಿ, ನಾಸಿಕದಿಂದ ವಾಸನೆ, ಮನಸ್ಸಿನಿಂದ ಭಾವ, ಇವೆಲ್ಲವೂ ನನ್ನಿಂದಲೇ ಉದ್ಭವಿಸುವವು. ಭಕ್ತವ್ಯರು ನನ್ನನ್ನು ತಮ್ಮಲ್ಲಿಯೆ ಕಾಣುವರು. ಆತ್ಮವನ್ನು ಶಿಕ್ಷಣದಲ್ಲಿಡದ ಅವಿವೇಕಿಗಳು ನನ್ನನ್ನು ಮರೆತುಬಿಡುವರು ನನ್ನಿಂದ ಸೂರ್ಯನಲ್ಲಿ ಪ್ರಕಾಶವು ಹುಟ್ಟಿತು. ನನ್ನಿಂದಲೆ ಚಂದ್ರನು ಬೆಳದಿಂಗಳನ್ನು ಸೂಸುತ್ತಿರುವನು. ನನ್ನಿಂದಲೆ ಅಗ್ನಿಯು ಜ್ವಾಲೆಗಳನ್ನು ಹೊರ ಹೊಮ್ಮುತ್ತಿದೆ. ಜಗತನ್ನು ಹೊಕ್ಕು ನನ್ನ ಮಹಾ ಶಕ್ತಿಯಿಂದ ನಾನು ಎಲ್ಲವನ್ನು ಎದರಿಸಿರುವೆನು. ಎಲ್ಲಾ ಔಷಧಗಳು ನನ್ನಿಂದಲೆ ಉತ್ಪನ್ನವಾದವು. ಜೀವನದ ಜ್ಯೋತಿಯಾಗಿ ನಾನು ಮಾನವ ದೇಹಗಳಲ್ಲಿ ಸೇರುತ್ತಲೇ ಇರುವೆನು ಶ್ವಾಸಕೋಶಗಳು ನನ್ನಿಂದಲೆ ಕೆಲಸಮಾಡಲ್ಪಡುವವು. ನನ್ನಿಂದಲೇ ಜ್ಞಾನಕಾರಶಕ್ತಿಯೂ, ತಿಳುವಳಿಕೆಯೂ ಹುಟ್ಟುತ್ತಿವೆ ಜ್ಞಾಪಕಶಕ್ತಿ ತಗ್ಗುವುದು ಬುದ್ಧಿಯು ಭ್ರಾಂತವಾಗುವುದೂ ನನ್ನಿಂದಲೇ. ವೇದಗಳು ನನ್ನನ್ನು ತಿಳಿಸುವವು. ವೇದಾಂತವು ನನ್ನಿಂದ ರಚಿತವಾದುದು. ತ್ರಿಲೋಕಗಳನ್ನು ಆವರಿಸಿದ ಆದಿಯೂ ಅಂತ್ಯವೂ ಇಲ್ಲದ ಮಹಾ ಶಕ್ತಿಯಿಂದ ಪರಿಶುದ್ಧನಾದವನೇ ಪರಂಜ್ಯೋತಿ ಪರಮಾತ್ಮನು. ಸಂಶಯಾತೀತವಾಗಿ ಈ ಯೋಗವನ್ನು ಅರಿತ ಮಾನವ ಶ್ರೇಷ್ಠ ಏಕಾಗ್ರಚಿತ್ತದಿಂದ ನನ್ನನ್ನು ಸದಾ ಪೂಜಿಸುವರು. ನಿರ್ಮೋಹಿಯಾದ ಪಾರ್ಥನೇ, ನಿನಗೆ ಅವಶ್ಯವಿದ್ದುದೆಲ್ಲವನ್ನು ತಿಳಿಸಿದೆನು.

ಕುಮಾರಿ ಬಿಲ್ಲೆಗಳು
(Registered)
ಈ ದೇಶೀಯ ತಯಾರಿಕೆಯ ಗುಣಾಂಶವು ವರ್ಷಗಟ್ಟಲೆಯಿಂದ ವಿಖ್ಯಾತವಾಗಿದೆ ಮತ್ತು ಪ್ರಮುಖ ಕೆಮಿಸ್ಟರಿಂದ ಈ ಕೆಳಗಿನ ದರಗಳಲ್ಲಿ ವಿಕ್ರಯಿಸಲ್ಪಡುತ್ತವೆ. ಟ್ಯೂಬಿಗೆ ರೂ. 4=00 (ಸಾದಾ). ರೂ. 6=00 (ಸ್ಪೆಶಲ್), ರೂ. 9=00 (ಎಕ್ಸ್ಟ್ರಾ ಸ್ಪೆಶಲ್).
P. DEVEE & CO. (M. I.) CALCUTTA—40
ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

Tel: 'BLUEYAGAR' — ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ — Phone 374
ಕೆ. ಆರ್. ಕೆ. ಶೇಟ್ ಡಯಮಂಡ್ ಮಾರ್ಟ್
ಸ್ಥಾಪನೆ 1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು, (ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ) ಮಂಗಳೂರು [ಮಾಲಿಕ ಕೆ. ಕೆ. ಆರ್. ಶೇಟ್

ಪುಸ್ತಕ ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ — ಸಂ. ನ)

ವಿಮರ್ಶೆಯ ಸ್ವರೂಪ: ಬರೆದವರು: ಶ್ರೀ ವಿಜಿ ಅಗ್ನಾರಾಯ. ಪ್ರಕಾಶಕರು: ಸಾಹಿತ್ಯ ಭಂಡಾರ, ಹುಬ್ಬಳ್ಳಿ. ಪುಟಗಳು: ೧೯೦. ಬೆಲೆ. ಸಾದಾ ಪ್ರತಿ ರೂ. ೨-೫೦. ಉತ್ತಮ ಪ್ರತಿ: ರೂ. ೩-೫೦.

ಸಾಹಿತ್ಯದಲ್ಲಿ ಲೇಖಕ ಮತ್ತು ವಾಚಕರಂತೆಯೇ ವಿಮರ್ಶಕನ ಪಾತ್ರವೂ ಬಹುಮುಖ್ಯವಾದುದು. ವಿಶಿಷ್ಟವಾದ ವಿಮರ್ಶೆಗೆ ಸಾಹಿತ್ಯದಲ್ಲಿ ಅಗ್ರಸ್ಥಾನವಿದೆ. ಕನ್ನಡ ಭಾಷೆಯಲ್ಲಿ ವಿಮರ್ಶಾ ಸಾಹಿತ್ಯವು ಬೆಳೆಯಬೇಕಾದಷ್ಟು ಬೆಳೆದಿಲ್ಲವೆಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ರಸಾಸ್ವಾದನೆ ಮಾಡುವ ವಾಚಕನಿಗಿಂತಲೂ ಹೆಚ್ಚಿನ ಸಹೃದಯತೆ ವಿಮರ್ಶಕನಲ್ಲಿರಬೇಕಾಗುತ್ತದೆ. ಈ ತೆರದಲ್ಲಿ ವಿಮರ್ಶಕನಲ್ಲಿರಬೇಕಾದ ಗುಣಗಳನ್ನೂ ಅತನು ಅನುಸರಿಸಬೇಕಾದ ನೀತಿಯನ್ನೂ ವಿವರಿಸುತ್ತ ವಿಮರ್ಶಕರಿಗೆ ಮಾರ್ಗದರ್ಶನಕ್ಕಾಗಿ ಕೆಲವೊಂದು ಸುಪ್ರಸಿದ್ಧ ಗ್ರಂಥಗಳ ವಿಮರ್ಶೆಯನ್ನೂ ಮಾಡಿತೋರಿಸುವ ಈ "ವಿಮರ್ಶೆಯ ಸ್ವರೂಪ"ವೆಂಬ ಪುಸ್ತಕವು ಕನ್ನಡ ಸಾಹಿತ್ಯಕ್ಕೆ ಅಮೂಲ್ಯ ಕಾಣಿಕೆಯಾಗಿದೆ. ಸ್ವಯಂ ಪಂಡಿತರೂ ಉಚ್ಚ ವರ್ಗದ ಸಾಹಿತ್ಯಕಾರರೂ ವಿಮರ್ಶಕರೂ ಆಗಿರುವ ಶ್ರೀ ಅಗ್ನಾರಾಯರು ನಾವಿನ್ನೂ ಕಿರಿಯ ವಿಮರ್ಶಕರಿಗೆ ಸರಿಯಾದ ಮಾರ್ಗದರ್ಶನ ಮಾಡಿದ್ದಾರೆ. ವಿಮರ್ಶೆಗಾಗಿ ಎತ್ತಿಕೊಂಡ ಕೃತಿಗಳಲ್ಲಿ ಆಧುನಿಕ ಕೃತಿಗಳಿಗೇ ಪ್ರಾಧಾನ್ಯ ದೊರೆತಿದೆ. ಸಣ್ಣ ಕತೆಗಳು ಕಾದಂಬರಿಗಳು, ನಾಟಕಗಳು, ಪ್ರಬಂಧ, ಕವಿ—ಕಾವ್ಯವಿಮರ್ಶೆ — ಹೀಗೆ ವಿಮರ್ಶಾತ್ಮಕ ಲೇಖನಗಳು ಇದರಲ್ಲಿ ದೊರೆಯುತ್ತವೆ. ಕೊನೆಯಲ್ಲಿ ಸಾಹಿತ್ಯಾಭ್ಯಾಸಿಗಳು ತಮ್ಮ ಅಭ್ಯಾಸವನ್ನು ಮುಂದುವರಿಸಬೇಕಾದ ಕ್ರಮವನ್ನು ಕೊಟ್ಟಿದ್ದು ಇದು ಅಭ್ಯಾಸಿಗಳಿಗೆ 'ವಿಮರ್ಶೆಯ ಸ್ವರೂಪ'ದ ಸರಿಯಾದ ತಿಳಿವಳಿಕೆಯನ್ನು ಕೊಡುವುದು ನಿಸ್ಸಂಶಯ. ಒಟ್ಟಿನಲ್ಲಿ ಈ ಪುಸ್ತಕವು ಕನ್ನಡ ಸಾಹಿತ್ಯಕ್ಕೊಂದು ಅಪೂರ್ವ ಕಾಣಿಕೆ, ಬೆಳೆದು ಬರುತ್ತಿರುವ ವಿಮರ್ಶಾ ಸಾಹಿತ್ಯಕ್ಕೆ 'ಶಾಂತ ಜನ್ಮ'ವೆಂದು ಹೇಳಬಹುದು.

ಗಾಳಿಪಟ — ಲೇಖಕರು. ಶ್ರೀ ರಾ. ಕು. ಪ್ರಕಾಶಕರು. ಮನೋಹರ ಗ್ರಂಥಮಾಲಾ, ಧಾರವಾಡ. ಪುಟಗಳು ೨೨೩. ಬೆಲೆ: ಸಾದಾಪ್ರತಿ. ರೂ. ೨-೫೦. ಕ್ಯಾಲಿಕೋ ಪ್ರತಿ. ರೂ. ೩-೫೦.

ನಮ್ಮ ದಿನನಿತ್ಯದ ಜೀವನದಲ್ಲಿ ಕ್ಷುಲ್ಲಕವೆನಿಸಲ್ಪಡುವಂಥ ಘಟನೆಗಳು ಹಲವು ಇವುಗಳಲ್ಲಿ ಕೆಲವೊಂದರ ಬಗ್ಗೆಯಾದರೂ ನಾವು ಯೋಚಿಸಿದರೆ, ಅವುಗಳ ಹಿಂದೆ ಮುಂದೆ ವಿಚಾರತರಂಗಗಳು ಏಳುವುದು ಸಹಜ. ಇಂತಹ ವಿಚಾರಗಳ ಬಗ್ಗೆ ತರಂಗಗಳನ್ನೆಬ್ಬಿಸಿ ಒಂದು ವಾಗ್ಜಾಲವನ್ನು ಬೀಸಿ ನಿಬಂಧ ರಚನೆಯನ್ನು ಮಾಡುವಲ್ಲಿ ತಮ್ಮ ಲೇಖನ ಕೌಶಲವನ್ನು ಶ್ರೀ ರಾ. ಕು. ತೋರಿಸಿದ್ದಾರೆ. ಬಾಲಕನಾಡಿಸುವ ಗಾಳಿಪಟವನ್ನು ಕಂಡೊಡನೆಯೇ ನಮ್ಮ ಜೀವನದಲ್ಲಿ ನಾವು ಹಾರಿಸಿದ ಗಾಳಿಪಟದ ಹಿಂದೆ ಮುಂದುಗಳು ನಮಗೆ ಹೊಳೆಯುತ್ತಿರುವುದು ಸಾಧ್ಯವಿಲ್ಲ ಇದೇ ಮಾದರಿಯ ಹದಿನಾರು ನಿಬಂಧಗಳು ಈ ಸಂಕಲನದಲ್ಲಿವೆ, ನಿಬಂಧಗಳ ನಡುವೆ ಅಲ್ಲಲ್ಲಿ ಹಾಸ್ಯದ ಹೊನಲು ಇವುಗಳ ವಾಚನದಲ್ಲಿ ಆತುರವನ್ನು ಹುಟ್ಟಿಸುತ್ತಿವೆ; ಕೆಲವೆಡೆ ಸ್ವಚ್ಛಂದರಗಳೆಯ ನವ್ಯಕಾವ್ಯ ಛಾಯೆಯೂ ನಮಗೆ ಗೋಚರಿಸುತ್ತದೆ ಮಹಾ ಕವಿಗಳ ಉದ್ಧರಣೆ, ಅಲಂಕಾರಗಳನ್ನು ತನ್ನ ಮೂಸೆಯಲ್ಲಿ ಕಡೆದು ಹೊಸ ಮೆರುಗು ಕೊಟ್ಟು ಉಚಿತವರಿತು ಯಥೇಚ್ಛ ಬಳಸಿ ತನ್ನ ನಿಬಂಧಗಳಿಗೆ ಕಳೆಯೇರಿಸುವ ಜಾಣ್ಮೆ ಎಲ್ಲಾ ನಿಬಂಧಗಳಲ್ಲಿಯೂ ನಮಗೆ ತೋರುತ್ತದೆ; ಲೇಖಕರ ಪ್ರಜ್ಞೆಯ ಪರಿಪೂರ್ಣ ನಿದರ್ಶನವಾಗುತ್ತದೆ ತನ್ನ "ಗಾಳಿಪಟ"ಕ್ಕೆ ಬಾಲ, ಪಟ್ಟಿ ತಲೆ, ಹಗ್ಗ ಆಕಾರ ಪ್ರಮಾಣ, ಮಿತಿ ಎಲ್ಲವೂ ಇದ್ದರೂ ಸಾಹಿತ್ಯಾಕಾಶದಲ್ಲಿ ಅತಿಯೆತ್ತರದಲ್ಲಿ ಎಲ್ಲರನ್ನೂ ಆಕರ್ಷಿಸುವಂತೆ ಹಾರಾಡಿಸುವುದರಲ್ಲಿ ಶ್ರೀ ರಾ. ಕು. ಸಂಪೂರ್ಣ ಯಶಸ್ವಿಯಾಗಿದ್ದಾರೆ. ಅವರ ತಿಳಿಯಾದ ಶೈಲಿಯು ಎಂತಹ ಮಂಕನನ್ನು ತಟ್ಟಿದೂಗಿಸಲು ಸಮರ್ಥವಿದೆ. ಕನ್ನಡದಲ್ಲಿ ನಿಬಂಧ ಸಾಹಿತ್ಯವೂ ಬೆಳೆದು ಬರುವುದು ಸಾಧ್ಯವೆಂಬುದನ್ನು 'ಗಾಳಿಪಟ'ವನ್ನು ಓದಿ ಮೆಚ್ಚಿದವರು ತೋರಿಸಿಕೊಡಬೇಕಾಗಿದೆ. ಮನೋಹರ ಗ್ರಂಥಮಾಲೆಯವರು ಈ ಸಂಕಲನವನ್ನು ಪ್ರಕಟಿಸಿ ಕನ್ನಡ ಸಾಹಿತ್ಯಕ್ಕೆ ಉಪಕಾರ ಮಾಡಿದ್ದಾರೆ. ಶ್ರೀ ರಾ. ಕು. ರವರು ಸರಳಸುಂದರ ತಿಳಿಯಾದ ಪರಿಣತ ಶೈಲಿಯಿಂದ ಮುಂದಕ್ಕೂ ಹಲವಾರು ನಿಬಂಧಗಳನ್ನು ಬರೆದು ನಿಬಂಧ ಸಾಹಿತ್ಯವನ್ನು ಬೆಳೆಸಲಿಯೆಂದು ಹಾರೈಸುತ್ತೇವೆ.

ಉದ್ಯಾನ—(ಆಯ್ದು ಬಗೆಯ ಸಾಹಿತ್ಯ ಸಂಗ್ರಹ) ಲೇಖಕರು: ಬೇರೆ ಬೇರೆಯವರು. ಪ್ರಕಾಶಕರು: ವಿಜಯ ಸಾಹಿತ್ಯಮಾಲೆ, ಸುರತ್ಕಲ್ಲು (ದ. ಕ.) ಪುಟಗಳು: ೧೧೨, ಬೆಲೆ: ರೂ ೧-೫೦.

ಹೆಸರೇ ಹೇಳುವಂತೆ ಈ ಪುಸ್ತಕವೊಂದು ಉದ್ಯಾನ. ಒಂದಲ್ಲ ಐದು ಬಗೆಯ ಸಾಹಿತ್ಯ ಪ್ರಾಕಾರಗಳನ್ನು ನಾವಿಲ್ಲಿ ಕಾಣಬಹುದು. 'ಅಂಬಿಕಾತನಯದತ್ತ'ರಿಂದ ತೊಡಗಿ ಅತ್ಯಾಧುನಿಕ ಕವಿಗಳ ಕವನಗಳ ಶ್ರೇಣಿಯೊಂದೆಡೆ, ಗದ್ಯ ಪದ್ಯ ನೃತ್ಯ ರೂಪಕ ಮತ್ತೊಂದೆಡೆ ಶೋಭಿಯಿತ್ತರೆ, ಲಘು ಬರಹ ಮತ್ತು ಕಥೆಗಳು ಬೇರೊಂದೆಡೆ ಮೆರೆಯುತ್ತಿವೆ. ಕಥೆಗಳು ತೀರ ಸಾಮಾನ್ಯವೆನ್ನಬಹುದಾದರೂ ಲಘು ಬರಹಗಳು ತಮ್ಮ ಗುಣವನ್ನುಳಿಸಿಕೊಂಡಿವೆ; ಉದ್ಯಾನದಲ್ಲಿ ಅರಳಿದ ಪರಿಮಳಯುಕ್ತ ಪುಷ್ಪಗಳಾಗಿವೆ. ಕವನ ಮಾಲೆಯು ೬೫ ಪುಟಗಳಷ್ಟು ಉದ್ದವಿದ್ದು ನಾನಾ ಬಗೆಯ ನಾನಾ ಅಭಿರುಚಿಯ ನಾನಾ ವಿಧದವುಗಳಿಲ್ಲಿ ತಲೆಯಿಣುಕಿವೆ. ಶಾಸ್ತ್ರೀಯ ಕವನಗಳಿಂದ ತೊಡಗಿ ನವ್ಯ ಕವಿತೆಗಳು ಇಲ್ಲಿ ಬೆಳಕುಕಂಡಿವೆ. ಇವನ್ನು ಬರೆದ ಕವಿಗಳಲ್ಲಿ ಹೆಚ್ಚಿನವರು ಪ್ರಾರಂಭಿಕಾವಸ್ಥೆಯಲ್ಲಿಯೇ ಇದ್ದಾರೆಂದು ಹೇಳಬೇಕು. ಭಾವ ಪ್ರಧಾನವಾದ ಕವನಗಳೂ ಇಲ್ಲಿ ಇಲ್ಲದಿಲ್ಲ. ಶ್ರೀಗಳಾದ ಬೇಂದ್ರೆ, ವೆಂಕಟರಾಜ, ಯಾದವೇಂದ್ರ, ಟಿ. ಜಿ. ಮುಡೂರು, ತೆಕ್ಕುಂಜೆ, ಮೊದಲಾದವರ ಕೃತಿಗಳು ಅರ್ಥಗರ್ಭಿತವಿವೆ. ಆಖ್ಯಾನಾತ್ಮಕ ಕವನಗಳು 'ರಸಭಾವ ಹೊನಲಾಗಿ" ಹರಿಯುವುದಕ್ಕೆ ಸಾಕಷ್ಟು ಅನುವು ಕೊಟ್ಟಂತೆ ತೋರುವುದಿಲ್ಲ ಆದರೂ ರಸಭಾವಗಳಿಗೆ ಅಭಾವವನ್ನು ತಂದೊಡ್ಡಲಿಲ್ಲವೆಂಬುದು ತೃಪ್ತಿಗೆ ಸಮಾಧಾನ. ಎಲ್ಲಕ್ಕಿಂತಲೂ ಹೆಚ್ಚಾಗಿ ಆದಮೂರು ಹೈಸ್ಕೂಲಿನ ವಿದ್ಯಾರ್ಥಿ ಶ್ರೀ ಎಚ್ ಎನ್. ರಾವ್ ಬಿಡಿಸಿದ 'ನಾದಮಯಿ'ಯ ಚಿತ್ರವು ಉದ್ಯಾನದ ಹೆಬ್ಬಾಗಿಲಲ್ಲಿದ್ದು ಪ್ರವಿಷ್ಠರಾಗುವವರ ಕಣ್ಮನಗಳನ್ನು ಸೂರೆಗೊಳ್ಳುತ್ತದೆ. 'ಉದ್ಯಾನ ವಿಹಾರ ಪ್ರಾರಂಭದಲ್ಲಿದ್ದ ಆಸಕ್ತಿ ನಡುನಡುವೆ ಶಿಥಿಲಗೊಳ್ಳುತ್ತ ಬರುವುದು ದೃಗ್ಗೋಚರವಾಗುತ್ತದೆ. ಈ ರೀತಿಯ ಬಗೆ ಬಗೆಯ ಸಾಹಿತ್ಯ ಸಂಗ್ರಹವೂ ಒಂದು 'ಹೊಸಮಾದರಿ' ಯೆನಿಸಬಹುದು ಸಂಪಾದಕರು ಇನ್ನೂ ಉತ್ತಮ ಕೃತಿಗಳನ್ನು ಸಂಪಾದಿಸಿ ಅವನ್ನು ಬೆಳಕಿಗೆ ತರುವತ್ತ ಗಮನಹರಿಸಿದರೆ, ಎಲ್ಲರಿಗೂ ಸುಕರ.

— **ಗೋರಾ.**

ಪಂಚಾಯತಿಗಳಿಗೆ ಉಪಯುಕ್ತ ಪುಸ್ತಕ

ಮೈಸೂರು ರಾಜ್ಯದ
ಪಂಚಾಯತಿಗಳ
ತೆರಿಗೆಗಳ ಮತ್ತು ಫೀಗಳ
ನಿಯಮಗಳು

ಲೇಖಕರು

ಶ್ರೀ. ಕೆ. ಎಸ್. ಆಳ್ವ, ಬಿ ಎ. ಬಿ, ಎಲ್.

ಎಡ್ವಕೇಟ್, ಮಂಗಳೂರು.

ಬೆಲೆ: ರೂಪಾಯಿ ಎರಡು.

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.



ನವದೆಹಲಿಗೆ ಸಮೀಪವಿರುವ ಓಖ್ಲ ಔದ್ಯಮಿಕ ಕ್ಷೇತ್ರದ ಕಾರಖಾನೆಯೊಂದರಲ್ಲಿ ಸ್ತ್ರೀ ಕರ್ಮಚಾರರು ಆಕಾಶವಾಣಿ ಯಂತ್ರವನ್ನು ಸರಿ ಜೋಡಿಸುವುದರಲ್ಲಿ ತನ್ಮಯರಾಗಿದ್ದಾರೆ.

ಇತಿಹಾಸ ಪೃಷ್ಠ

(೩ನೇ ಪುಟದಿಂದ)

ಟಿಕ್ಕ ಹರಡಿತ್ತು ಎಂದು ಗೊತ್ತಾಗುತ್ತದೆ. ಸುಮೇರಿಯನ್ ಜನರು ಸಿಂಧೂ ದೇಶೀಯರಿಗೆ ಸುಪರಿಚಿತರಾಗಿದ್ದರು, ಎರಡೂ ದೇಶಗಳ ಜನರು ಬಂದು ಹೋಗುತ್ತಿದ್ದರು. 'ದಿಲ್‌ಮುನ್'ನಲ್ಲಿ ಅತಿ ಸುಂದರ ಮನೆಗಳು ರಚಿಸಲ್ಪಡುತ್ತವೆ ಎಂಬ ಸಿಂಧೀಯರ ಅಭಿಲೇಖದಿಂದ ಈ ಸಂಗತಿಯನ್ನು ತಿಳಿಯಬಹುದು.

ಸುಮೇರಿಯನ್ ಜನರ ಮನೆಗಳು ಕಚ್ಚಾ ಇಟ್ಟಿಗೆ ಅಥವಾ ಮಣ್ಣುಗಳಿಂದ ಕಟ್ಟಲ್ಪಡುತ್ತಿದ್ದುವು. ಬೇಯಿಸದೇ ಇರುವ ಇಟ್ಟಿಗೆಗಳಿಂದಲೇ ಹೆಚ್ಚಾಗಿ ನಿರ್ಮಿಸಲ್ಪಡುತ್ತಿದ್ದುವು. ಸಿಂಧೂ ನದೀ ಕಣಿವೆಯ ಮನೆಗಳು ಬೇಯಿಸಿದ ಇಟ್ಟಿಗೆಗಳಿಂದ ತಯಾರಿಸಲ್ಪಡುತ್ತಿದ್ದುವು. ಆದುದರಿಂದ ದಿಲ್‌ಮುನ್‌ನ ಗೃಹಗಳು ಸುಂದರವೂ ಆಕರ್ಷಕವೂ ಆಗಿರುವುದು ಸ್ವಾಭಾವಿಕ.

ಪ್ರಾಚೀನ ಭಾರತೀಯ ನಾಗರಿಕತೆ ಮತ್ತು ಸಂಸ್ಕೃತಿಯು ಎಲ್ಲಿಯೂ ಯುಫ್ರೆಟಿಸ್—ಟೈಗ್ರಿಸ್ ನದಿಗಳ ವರೆಗೂ ವಿಸ್ತರಿಸಿದೆಯೆಂಬುದರಲ್ಲಿ ಈಗ ಯಾವ ಸಂದೇಹವೂ ಉಳಿದಿಲ್ಲ. ಸುಮೇರುವಿನ ಜನರು ಭಾರತದಿಂದಲೇ ಹೋಗಿ ನೆಲೆನಿಂತವರೆನ್ನುವವರೂ ಇದ್ದಾರೆ. ಹೀಗಾದಲ್ಲಿ ತಮ್ಮ ಪೂರ್ವಜರ ದೇಶದ ಮೇಲೆ ಅವರಿಗೆ ಗೌರವಾಭಿಮಾನಗಳು ಹುಟ್ಟುವುದು ಆಶ್ಚರ್ಯವೇನಲ್ಲ. ಆದರೆ ಈ ಸಂಗತಿಯನ್ನು ಖಂಡಿತವಾಗಿ ಒಪ್ಪುವಂತಿಲ್ಲ. ಈಗ, ಕೇವಲ ಪರಿಚಿತ ರಾಷ್ಟ್ರಗಳು ಎಂದು ಮಾತ್ರ ಹೇಳಬಹುದು; ಎರಡರ ನಡುವೆ ವ್ಯಾಪಾರವಾಗುತಿತ್ತು ನಿಜವೇ; ಇವರ ದೇವದೇವತೆಗಳೂ ಒಬ್ಬರೇ ಆಗಿದ್ದರಾದರೂ ಇದನ್ನು ಐತಿಹಾಸಿಕ ತಜ್ಞರು ಈಗ ಹೇಳುವುದಿಲ್ಲ ಆದರೆ, ಸುಮೇರಿಯನ್ ಇಷ್ಟಿತಾ ಲೇಖದಿಂದ ಈ ಸಂಗತಿಯೂ ಅತಿ ನಿಕಟದಲ್ಲಿ ತಥ್ಯವಾಗಿ ಪರಿಣಮಿಸಬಹುದು.

—(ನ. ಭಾ. ಟೈಮ್ಸ್‌ನಿಂದ)

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ಡಾ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ
ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ
0=25 N P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು.
ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ
ನವಭಾರತ ಪುಸ್ತಕ ಭಂಡಾರ, ಉಡುಪಿ

ನವಯುಗ ವಾರ ಪತ್ರಿಕೆಗೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ

ಕಥಾವಿಹಾರ

(೨ನೇ ಪುಟದಿಂದ)

ಇನ್ನೊಬ್ಬಳೆಂಬ ತಿರಸ್ಕಾರ, ವೀಣಾಳಿಗಿಂತ ನನ್ನ ಓದು ಹೆಚ್ಚೆಂಬ ಅಹಂಕಾರ, ಗಿರೀಶನ ನುಡಿಯಲ್ಲಿತ್ತು ಎಂತಲೇ ಹೇಳಿದ.

'ಇದೊಂದನ್ನು ಕ್ಷಮಿಸಿ. ನನ್ನನ್ನು ಬಲಾತ್ಕರಿಸ ಬೇಡಿ.'

ರಾಜೀವಮ್ಮನಿಗೆ ಆ ಸಂದರ್ಭದಲ್ಲಿ ಹೃದಯವನ್ನೇ ಯಾರಾದರೂ ಕಿತ್ತರೂ ಅಷ್ಟು ವೇದನೆಯಾಗುತ್ತಿರಲಿಲ್ಲ.

ಆ ಕ್ಷಣವೇ ಅವರ ಭಾವನೆಯೇ ಬದಲಾಯಿತು.

'ಒಳ್ಳೆಯದಪ್ಪ. ನಿನ್ನ ಓದಿಗೆ ಯಾವ ವಿಘ್ನವೂ ಬಾರದೆ ಇರಲಿ. ದೇವರು ನಿನಗೆ ಒಳ್ಳೆಯದು ಮಾಡಲಿ.' ಎಂದರೇ ಅಲ್ಲಿಂದೆದ್ದು ಹೊರಟರು.

ಹಲವಾರು ನಿಮಿಷ ಗಿರೀಶನಿಗೂ ಆಯ ತಪ್ಪಿದಂತಾಯಿತು. ತನ್ನ ಮಾತಿನಿಂದ ಸಹಿಸಲಾರದ ವೇದನೆಯಾಗಿರುವುದೆಂದು ಅವನೂ ತಿಳಿದ.

ಹುಡುಗಿಯರು, ವೇದನೆ ಪಡುತ್ತಾರೆ ನಿಜ. ಆದರೆ ಮನಮೆಚ್ಚಿದವನು ಮದುವೆಯಾಗಲಿಲ್ಲವೆಂಬ ಕಾರಣದಿಂದ ವೀಣಳ ತಾಯಿಗೇ ಹೆಚ್ಚಿನ ದುಃಖವಾವರಿಸಿರುವುದು ಗಿರೀಶನಿಗೂ ಆಶ್ಚರ್ಯವಾಯಿತು.

ಗಿರೀಶ ತನ್ನ ಓದಿಗಾಗಿ ಬೆಂಗಳೂರು ಸೇರಿಯೇ ಸೇರಿದ.

ಮರುವರ್ಷವೇ ತನ್ನ ತಾಯಿಯನ್ನು ಅಲ್ಲಿಗೇ ಕರೆಸಿಕೊಂಡ.

ಮೇಲಿನ ಹೆಮ್ಮರ ಕಡಿದರೂ, ಬುಡದಿಂದ ಚಿಗುರೊಂದು ಚಿಗುರಿದಂತೆ, ಭಾಗೀರಥಮ್ಮ ವಿಜಯಪುರದಲ್ಲಿರುವವರೆಗೂ ರಾಜೀವಮ್ಮನ ಬತ್ತಿದ ಹೃದಯದಲ್ಲಿ ಎಲ್ಲೋ ಒಂದು ಕಿರುಹಣತೆ ಇದ್ದಂತಿತ್ತು. ಈಗ ಅವರೂ ಆ ಊರನ್ನು ಬಿಟ್ಟ ಕೂಡಲೇ ಅಲ್ಲಿದ್ದ ಚಿಗುರೂ ಕಮರಿ ಹೋಯಿತು.

ಅಂತೆಯೇ ಆ ಕಿರುಹಣತೆಯೂ ನಂದಿತ್ತು.

ಶಾಲೆಯ ಮುಂದಿನ ಮೈದಾನಕ್ಕೆ ಗಿರೀಶ ಬಂದಿದ್ದ.

ಆದೇ ತಾನೇ ಬಾರಿಸಿದ ಶಾಲೆಯ ಗಂಟೆ, ಮಕ್ಕಳ ಆರಚಾಟದಲ್ಲಿ ಲೀನವಾಗಿ ಕ್ರಮೇಣ ಮಾಯವಾಯಿತು.

ನಾಲ್ಕಾರು ಲಂಗ—ದಾವಣಿ ಹಾಕಿದ ಹಕ್ಕಿ—ಹದಿನೈದು ಹುಡುಗಿಯರ ನಡುವೆ ಆದಾರೋ ಹೆಂಗಸೊಬ್ಬಳು ಬರುತ್ತಿದ್ದಳು.

ಅವಳೇ ವೀಣಳೆಂದ ಹತ್ತಾರು ಮಾರಿನಿಂದಲೇ ಗುರುತು ಹತ್ತಿತು. ತನ್ನ ವಿದ್ಯಾರ್ಥಿನಿಯರೊಂದಿಗೆ ಏನೋ ಮಾತಾಡುತ್ತಾ ಬರುತ್ತಿದ್ದಳು. ಆ ಹುಡುಗಿಯರ ಉತ್ಸಾಹ ಅವಳಲ್ಲಿಯೂ ಇದ್ದಂತಿತ್ತು.

ಕೃಶಿಸಿ ಬಲಹೀನಳಾದಳೂ ಅದಾವುದೋ ಶಾಂತಿ ವೀಣಳ ಮುಖದಲ್ಲಿತ್ತು. ಅವಳ ತುಂಬು ಕೇಶರಾಶಿಯ ಮೇಲೆ ಬಿದ್ದ ಹೊಂಗಿರಣಗಳು ಮಿಂಚುತ್ತಿದ್ದುವು. ತಿಳಿನೀಲಿ ಬಣ್ಣದ ಸೀರೆ ಅದಕ್ಕೊಪ್ಪುವ ತಿಳಿಹಳದಿ ರವಕೆ, ಎದ್ದು ಕಾಣುತ್ತಿದ್ದ ಎದೆ, ಮಾಟದ ಮೂಗು ಅವಳ ರೂಪಿಗೆ ಇಂಬುಗೊಟ್ಟಂತಿತ್ತು.

ತಿಳಿಬಾಲಿಕೆಯಂತೆ, ಅದೇ ರೂಪು!

'ಆಹಾ ವೀಣಾ ತನ್ನ ವಶಳಾದಳು. ಇನ್ನು ಮುಂದಿನ ತನ್ನ ಜೀವನ ಹಾಲು-ಜೇನು ಸೇರಿದಂತೆ!

'ನನ್ನನ್ನು ತಿರಸ್ಕರಿಸಿದರೆ.'

'ಇಲ್ಲ ಮನಸಾರೆ ಪ್ರೇಮಿಸಿದ ಹೆಣ್ಣು ಎಂದಿಗೂ ತನ್ನನಲ್ಲನನ್ನು ತಿರಸ್ಕರಿಸುವುದೇ ಇಲ್ಲ.'

'ಅಹ್ಹಹ್ಹಾ....!' ವಿಕಾರ ನಗೆ ಕೇಳಿಸಿದಂತಾಯಿತು.

ಆಶ್ಚರಿಯಿಂದ ವೀಣಾಳತ್ತ ನೋಡಿದ.

'ತನ್ನ ವಿದ್ಯಾರ್ಥಿನಿಯರ ಜೊತೆಗೂಡಿ ಅದಾವುದೋ ಮಾತಿಗೆ ಅವಳೂ ನಗೆಯ ಅಲೆಗಳನ್ನು ಎಬ್ಬಿಸಿದ್ದಳು ನಿಜ! ಆದರೆ ತನ್ನನ್ನು ನೋಡಲಿಲ್ಲ! ಎನ್ನಿಸಿ ನೆಮ್ಮದಿಯೂ ಆಯಿತು ಗಿರೀಶನಿಗೆ.

ಇನ್ನು ತಾನಿರುವಲ್ಲಿಗೆ ವೀಣಾ ಬರಲು ಕೇವಲ ಐದಾರು ಮಾರೇ ಇತ್ತು. ಗಿರೀಶ ಶಿಲಾ ಪ್ರತಿಮೆಯಂತೆ ನಿಂತೇ ಇದ್ದ.

'ಗಂಡು ಮೆಚ್ಚಿದ ಹೆಣ್ಣನ್ನು ಮದುವೆಯಾಗದಿದ್ದರೆ, ಅವಳು ಜೀವನದುದ್ದಕ್ಕೂ ಆ ಗಂಡಿಗಾಗಿ ಕಾದೇ ಕಾಯುತ್ತಾಳೆ.'

'ಅಹ್ಹ....ಹ್ಹಾ...!' ಪುನಃ ನಗೆಯ ಅಲೆಗಳು.

'ಏಕೆ. ನಾನು ಆಡಿದ್ದರಲ್ಲಿ ತಪ್ಪೇನಿದೆ.

—ಎಂದುಕೊಂಡ ಗಿರೀಶ ತನ್ನಲ್ಲಿ ತಾನೇ

'ಹುಚ್ಚ. ನಿನಗೆ ಬುದ್ಧಿ ಕೆಟ್ಟಿದೆ ನೀನು ತಿಳಿದಿರುವಷ್ಟು ವಿವೇಕಹೀನ ಹೆಣ್ಣು ಯಾರೂ ಇಲ್ಲ. ಜನ್ಮತಳೆದ ಹೆಣ್ಣು ತನ್ನ ಯೌವ್ವನಾವಸ್ಥೆಯಲ್ಲಿ ಓರ್ವ ಗಂಡಿನ ಕೈ ಹಿಡಿಯಬೇಕು. ನಿಜ, ಆದರೆ ಗಂಡು ಮಾಡುವ ಸಮಾಜಘಾತಕಕ್ಕೆ ಒಂದು ಮಿತಿಯಿದೆ.'

'ಆದರೆ, ನನ್ನ ಓದು ಸಾಗಬೇಕಿತ್ತಲ್ಲ.'

'ಹೆಣ್ಣು ತನ್ನ ಹೆಣ್ತನವನ್ನು ನಿನಗೆ ತೋರಿಸಿರಬಹುದು. ಅವಳ ಹೃದಯವನ್ನು ನಿನಗಪೀಸಿರಬಹುದು. ಆದರೆ ಅವಳ ವೈಯಕ್ತಿಕ ಸ್ವಾತಂತ್ರ್ಯವು ಅವಳಲ್ಲೇ ಇದೆ. ಅದು ಎಂದೂ ನಿನ್ನದಾಗಲಾರದು.'

'ನಾನು ಅವಳನ್ನು ಪ್ರೀತಿಸಿದ್ದೇನೆ. ಅವಳು ನನ್ನನ್ನೂ ಪ್ರೀತಿಸಿದ್ದಾಳೆ.'

'ಅಂದಮಟ್ಟಿಗೆ ನೀನು ವಿವಾಹವಾಗುವ ತನಕವೂ ಅವಳು ನಿನ್ನನ್ನೇ ನಂಬಿ ಕುಳಿತಿರುತ್ತಾಳೆಂದು ತಿಳಿದೆಯಾ? ಗಂಡೆಂಬ ಯಾವುದಾದರೊಂದು ಪ್ರಾಣಿಯ ಕೈಹಿಡಿಯುವ ಸ್ವಾತಂತ್ರ್ಯ ಅವಳಿಗೆ ಇದ್ದೇ ಇದೆ.'

'ಇಲ್ಲ.. ಇಲ್ಲ....' ಎಂದು ಪ್ರಲಾಪಿಸುತ್ತಿತ್ತು ಅವನ ಮನ. ಆ ವೇಳೆಗೆ ವೀಣಾ ಸಂದೇಹದೃಷ್ಟಿಯಿಂದ ಗಿರೀಶನನ್ನು ನೋಡುತ್ತಾ ನಿಂತೇ ಇದ್ದಳು.

"ಟೀಚರ್ ಯಾರು?"

—ಎಂದು ವಿದ್ಯಾರ್ಥಿನಿಯರು ವೀಣಾಳನ್ನು ಪ್ರಶ್ನಿಸಿದರು.

ಎಚ್ಚರಗೊಂಡ ಗಿರೀಶನ ಬಾಯಿಂದ ಮಾತೇ ಹೊರಡವು. ತುಟಿಗಳೆಲ್ಲಾ ಬಾಗಿ ಅಲುಗಾಡುತ್ತಿದ್ದುವು ಮಾತ್ರ.

"ನೀವು....ನೀವು".

—ಎಂದಳು ವೀಣಾ ತನ್ನ ಕೆಂಪು ತುಟಿಗಳ ಮೇಲೆ ನಗೆ ತಂದುಕೊಂಡು.

"ಹೌದು ವೀಣಾ ನಾನೇ ಗಿರೀಶ."

"ಓಹ್!"

ಎಂದ ಅವಳ ನುಡಿಯಲ್ಲಿ ಅದೇಕೋ, 'ಆ ಪಾಪಿ ನೀವೇನೆ' ಎಂಬ ಅಂತರಾಳದ ಉದ್ವೇಗ ತುಂಬಿದಂತಿತ್ತು.

ಮುಂದೆ ಮಾತೇ ಹೊರಡದೆ ಸುತ್ತಲೂ ಕೌತುಕದಿಂದ ದೃಷ್ಟಿಹಾಯಿಸಿ, ಅವನ ವಿಮಂಚಕ ಪರಿಸ್ಥಿತಿಯ ಸಂಧಿಗ್ಧವನ್ನರಿತ ವೀಣಾಳೂ ತನ್ನ ವಿದ್ಯಾರ್ಥಿನಿಯರನ್ನು ಕುರಿತು, "ನೀವೆಲ್ಲಾ ಹೋಗಿ. ನಾನು ಬರುತ್ತೇನೆ." ಎಂದು ಹೇಳಿದಳು.

ವಿದ್ಯಾರ್ಥಿನಿಯರೆಲ್ಲಾ ಮುಂದೆ ಹೋದರು.

ಗಿರೀಶ—ವೀಣಾ ನಿಧಾನವಾಗಿ ಹೆಜ್ಜೆ ಹಾಕಿದರು.

"ಮನೆಯೆಲ್ಲಿ ವೀಣಾ?"

"ಇಲ್ಲೇ ಹತ್ತಿರ."

"ನೀವು ಬಂದು ಎಷ್ಟು ಹೊತ್ತಾಯಿತು."

ಈಗಲೇ ಸ್ವಲ್ಪ ಹೊತ್ತಾಯಿತು.

—ಎಂದ ಗಿರೀಶ ಮೌನದಲ್ಲೇ ನಡೆದಿದ್ದರು ಇಬ್ಬರೂ.

ಆದರೆ ಅದಾವದೋ ಅಪೂರ್ಣ ತೃಪ್ತಿಯ ಛಾಯೆಯೊಂದು ಮಾತ್ರ ಅವಳ ಮುಖದಲ್ಲಿ ಚಂದ್ರನಲ್ಲಿನ ಚುಕ್ಕೆಯಂತೆ ಅಪೂರ್ಣತೆಯ ಪ್ರತೀಕ ನಿಚ್ಚಳವಾಗಿ ಮೂಡಿತ್ತು.

'ಪ್ರಾಯಶಃ ಅದು ತನ್ನಿಂದಾಗಿಯೇ' ಎಂಬ ಆಲೋಚನೆ ಬಂದರೂ ಯೇಕೋ ಅದು ಅಸತ್ಯವೆಂದು ಗಿರೀಶನಿಗೂ ಅನಿಸಿತ್ತು. ಹಂಚಿನ ಮನೆಯೊಂದು ಬಂತು.

"ಅಗೋ ಅದೇ ನಮ್ಮ ಮನೆ."

—ಎಂದಳು ವೀಣಾ ಬೆರಳುತೋರುತ್ತಾ.

ನಮ್ಮ ಎಂಬ ಶಬ್ದ ವೀಣಾಳ ಮುಖದ ಮೇಲಿನ ಅಪೂರ್ಣತೆಯ ಛಾಯೆಯೊಂದಿಗೆ ಅದಾವುದೋ ವಿಚಿತ್ರ ವೇದನೆಯನ್ನು ತಂದೊಡ್ಡಿತು ಗಿರೀಶನಿಗೆ

ಓರ್ವ ನಲವತ್ತೈದು—ಐವತ್ತರ ಗಂಡು ವ್ಯಕ್ತಿಯೊಂದು ಕಣ್ಣಿಗೆ ಕನ್ನಡಕ ಧರಿಸಿ ಯಾವುದೋ ಪತ್ರಿಕೆ ಓದುವುದರಲ್ಲಿ ತಲ್ಲೀನನಾಗಿದ್ದ.

"ಬನ್ನಿ ಗಿರೀಶ, ಒಳಗೆ ಬನ್ನಿ. ಸೀರೆ ಬದಲಿಸಿ ಬರುತ್ತೇನೆ." ಎಂದು ಒಳಹೋದಳು ವೀಣಾ.

ಸಿಗರೇಟಿಗೆ ಕಡ್ಡಿಗೀರುತ್ತಾ ಗಿರೀಶ ಅಲ್ಲೇ ನಿಂತ.

ಐದಾರು ನಿಮಿಷಗಳಲ್ಲಿ ಶಾಲೆಯ ವಸ್ತ್ರ ಬದಲಿಸಿ, ಮನೆಯಲ್ಲಿ ಉಡುವ ಸಾಧಾರಣ ಸೀರೆ ಕುಪ್ಪಸಗಳನ್ನು ಧರಿಸಿ ಹೊರಬಂದಳು.

ಒಮ್ಮೆಲೇ ಗಿರೀಶನಿಗೆ ವಿದ್ಯುತ್ ಹರಿದಂತಾಯಿತು.

ಸ್ತಬ್ಧನಾಗಿ ನಿಂತೇ ಇದ್ದ.

ಸಿಗರೇಟು ಸೇದುತ್ತಾ ಅಲ್ಲೇ ನಿಂತಿರಬಹುದೆಂದು ತಿಳಿದು "ಕಾಫಿಗೆ ಸ್ಟವ್ ಹತ್ತಿಸಿ ಬರುತ್ತೇನೆ" ಎಂದು ಅಡಿಗೆಯ ಕೋಣೆಗೆ ಹೋದಳು.

ಕಾಲುಗಳು ಅಲ್ಲಿ ನಿಲ್ಲಲಾರದಾದವು ಗಿರೀಶನಿಗೆ.

ಅದೇ ಅವಳ ಕಾಣಿಸಿದ ಕರಿಮಣಿ, ಗರತಿಯ ಬಾಳ್ವೆಯ ಪ್ರತೀಕವಾಗಿತ್ತು. ಎದುರಿಗೇ ಇದ್ದ ತನ್ನಂಥಹ ಇನ್ನೊಂದು ಸಿಂಹ ತನ್ನ ಭದ್ರ ಪಂಜೆಯಲ್ಲಿ ವೀಣಾಳನ್ನು ಹಿಡಿದಿರುವಂತೆ ಕಾಣಿಸಿತು.

'ವೀಣಾಳಿಗೆ ಅಂದಿನ ದೃಷ್ಟಿಯೇ ಇಂದೂ ತನ್ನ ಮೇಲಿದೆ" ಎಂದು ತಿಳಿದ ಗಿರೀಶನಿಗೆ ಇಂದಿನ ದೃಷ್ಟಿಯ ಅರಿವು ಈಗ ಮೂಡಿತು.

ಅಂದಿನ ದೃಷ್ಟಿ ಪ್ರಿಯನಾಗಿ!

ಇಂದಿನ ದೃಷ್ಟಿ ಸಹೋದರನಾಗಿ!

ಅವಳ ಮುಖಬಿಂಬದಲ್ಲಿ ಒಡಮೂಡಿದ್ದ ಅಪೂರ್ಣತೆಯ ಅರಿವೂ ಸಂಪೂರ್ಣವಾಗಿ ಗಿರೀಶನಿಗೆ ಮನದಟ್ಟಾಯಿತು.

ಕಟ್ಟೆಯೊಡೆದು ಬಂದ ಕಂಬನಿ ನೆಲ ಕುರುಳಿತು.

ಸ್ಟವ್ ಹತ್ತಿಸಿ ಬಂದ ವೀಣಾ ಕಾಣದಾದ ಗಿರೀಶನನ್ನು, ಪುನಃ ದೂರದಲ್ಲಿ ನೋಡಿ ಆರ್ತಳಾಗಿ ಕೂಗುತ್ತಿದ್ದಳು.

ಎಂದಿನ ಚಲನೆಗಿಂತ ಇಂದಿನ ಚಲನೆ ತೀವ್ರವಾಗಿತ್ತು, ಗಿರೀಶನಲ್ಲಿ.

ಆ ಶಕ್ತಿ ಅವನದಲ್ಲ!

ಅದಾವುದೋ ಕಂಡೂ ಕಾಣದ ಅವ್ಯಕ್ತ ಶಕ್ತಿ!!

Regd. Trade Mark

ಮಕ್ಕಳ ಮಮತೆಯ

'ಬಿಕ್ಕೊ'ರವರ

ಗ್ಲೂಕೋಸ್ ಕೂಡಿದ ಪೆಪ್ಪರ್ ಮಿಠಾಯಿಗಳು ರುಚಿಕರ, ಸೇವನೆಗೆ ಪ್ರಸಿದ್ಧಿಪಟ್ಟಿವೆ.

'ಬಿಕ್ಕೊ'ರವರ

ಹಣ್ಣಿನ ಶರಬತ್ತುಗಳು

ಅತಿಥಿಗಳ ಆದರದ ಸತ್ಕಾರಕ್ಕೆ ಅತ್ಯನುಕೂಲ.

ತಯಾರಕರು:

ಭಾರತ್ ಇಂಡಸ್ಟ್ರಿಯಲ್ ಎಂಡ್ ಕ್ಯಾನಿಂಗ್ ಕಂಪೆನಿ ಲಿಮಿಟೆಡ್, ಕಾಪು, ದ. ಕ.

The Moolky Bank, Ltd.

MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4%
5 ,, 12	,,	4¼%
13 ,, 24	,,	4½%

ರೂ. 5,000/- ಮತ್ತು ಮೇಲಣ ಡಿಪೋಸಿಟಿಗೆ ¼% ಜಾಸ್ತಿ ಕೊಡಲಾಗುವುದು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ಲೇವಣಾತಿಗೆ ¼%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪ್ರೊಂಜ,
ಮೆನೇಜರ್,

ಮೂಲ್ಕಿ ಬೇಂಕ್ ಲಿ. ಮುಲ್ಕಿ.

NAVAYUGA WEEKLY, UDIPI.
REGD. NO.BG. 176

9–3–1961

LICENSE NO. 31
Licensed to Post without Prepayment

ಬಂಧನ ಮುಕ್ತಿ

ಬಾಹ್ಯ ಬಂಧನಗಳಿಂದ ಮುಕ್ತರಾಗಿರಿ

ಕಾನೂನು—ಕಾಯಿದೆ ಮೊದಲಾದ ಬಾಹ್ಯ ಬಂಧನಗಳು ಪ್ರೇಮ ಮತ್ತು ಸತ್ಯಗಳಿಲ್ಲದೆಡೆ ಕಾಡುತ್ತವೆ. ನಾವು ಬಾಹ್ಯ ಬಂಧನ ಮುಕ್ತರಾಗಬೇಕಾದರೆ ಪ್ರೇಮ ಮತ್ತು ಸತ್ಯಭರಿತ ಸಮಾಜ ಸ್ಥಾಪನೆ ಮಾಡಬೇಕು.

ಮಾನವ ಸಮಾಜದ ಪ್ರಗತಿಯನ್ನು ಕುಂಠಿತಗೊಳಿಸುವ ಕೆಲವೊಂದು ಕಾರಣಗಳು ಪ್ರಗತಿಯುಗದಲ್ಲಿಯೂ ಇರುತ್ತವೆ. ಕೆಲವೊಮ್ಮೆ ಧಾರ್ಮಿಕ ರೂಢಿಗಳು ಅಡ್ಡ ಬಂದರೆ, ಮತ್ತೆ ಕೆಲವೊಮ್ಮೆ ಸಾಮಾಜಿಕ ಕುಪ್ರಥೆಗಳು ಆತಂಕವೊಡ್ಡುತ್ತವೆ. ಇನ್ನು ಕೆಲವು ವೇಳೆ ಆರ್ಥಿಕ ಇಲ್ಲವೇ ರಾಜನೀತಿಕ ಬಂಧನಗಳೂ ಕಾರಣವಾಗಬಹುದು. ಇವುಗಳಿಂದ ಸಮಾಜದ ಪ್ರಗತಿಯು ಹ್ರಾಸಗೊಳ್ಳತೊಡಗುವಾಗ, ಹೊಸ ಆಚಾರವಿಚಾರಗಳು ಜಾಗ್ರತಗೊಳ್ಳುವುದು ಅನಿವಾರ್ಯ. ಪಾರ್ಶ್ವನಾಥ, ಬುದ್ಧ, ಮಹಾವೀರ, ಆಚಾರ್ಯತ್ರಯರು ಮತ್ತು ಮೊನ್ನೆ ಮೊನ್ನೆ ಗಾಂಧೀಜಿ ಮೊದಲಾದವರು ಇವೇ ಮಾದರಿಯ ಕ್ರಾಂತಿಕಾರೀ ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಗಳನ್ನು ಮಾಡಿರುವರು.

ಭೇದಭಾವಗಳು ಬೆಳೆದಂತೆ ವಿಧವಿಧದ ಕರ್ಮಕಾಂಡಗಳು ವೃದ್ಧಿಯಾದಂತೆ, ಜನರು ರೂಢಿ-ಆಚಾರಗಳ ಭಾರದಿಂದ ಕುಸಿದಂತೆ, ಜೀವನ ಮತ್ತು ಕ್ರಿಯೆಗಳ ನಡುವೆ ಬಿರುಕು ವಿಶಾಲವಾದಂತೆ ವಿಚಾರಕರು ಗಂಭೀರರಾಗಿ ಆಲೋಚಿಸ ತೊಡಗಿದರು. ಕಟ್ಟಿದ ಬಂಧನವೆಲ್ಲವನ್ನೂ ಕಳಚಿ ಹಾಕಿ ಹೊಸ ಆಚಾರ-ವಿಚಾರಗಳನ್ನು ಪ್ರತಿಷ್ಠಾಪಿಸಿದರು; ಹೊಸ ಧರ್ಮವನ್ನು ಸಂಸ್ಥಾಪಿಸಿದರು.

ಹಳೆಯ ಗೋಡೆಗಳನ್ನು ಕೆಡೆದು ನೂತನ ಆಚಾರ-ವಿಚಾರಗಳನ್ನು ಪ್ರತಿಷ್ಠಾಪಿಸುವಾಗ, ಆ ವಿಚಾರಕರು ಹೊಸ ಹೆಸರೊಂದನ್ನು ಕೊಡಬೇಕಾಯಿತು. ಜೀವನದೊಡನೆ ಆವಶ್ಯ ಸಂಬಂಧಿಸಿಕೊಂಡಿದ್ದ ಈ ಹೊಸ ವಿಚಾರಗಳು ಕಾಲಕ್ರಮದಲ್ಲಿ ಧರ್ಮವೆಂದು ಕರೆಯಲ್ಪಟ್ಟವು. ಆದರೆ, ಇವೂ ಮುಂದುವರಿಯುವಾಗ, ಕೆಲವು ಹೊಸ ಪಂಥ ಮತ್ತು ಸಂಪ್ರದಾಯಗಳು ಮಿಲನವಾದುವು. ಮೊದ ಮೊದಲು ಪ್ರಾರ್ಥನಾ ಸಮಾಜವನ್ನು ಕೆಲವರು ನಾಸ್ತಿಕರ ಸಂಘವೆನ್ನುತ್ತಿದ್ದರು. ಅವರ ಏಕೇಶ್ವರವಾದ, ಸ್ತ್ರೀಪುರುಷರಲ್ಲಿ ಅಭೇದ, ಸ್ತ್ರೀಶಿಕ್ಷಣ, ಅಸ್ಪೃಶ್ಯತಾ ನಿವಾರಣೆ, ವಿಧವಾ ವಿವಾಹ ಮೊದಲಾದ ಸಾಮಾಜಿಕ ಸುಧಾರಣೆಗಳು ಜನರಿಗೆ ಅಸಹ್ಯವಾಗಿ ಕಾಣುತ್ತಿದ್ದುದೇ ಇದಕ್ಕೆ ಕಾರಣ. ಆದರೆ, ಇಂದು ಪ್ರಾರ್ಥನಾ ಸಮಾಜ ಅಥವಾ ಬ್ರಹ್ಮ ಸಮಾಜವು ಒಂದು ಪಂಥವಾಗಿ ಉಳಿದಿಲ್ಲ; ಅದೊಂದು ವಿಚಾರಧಾರೆ ಮಾತ್ರ.

ನಾಸ್ತಿಕತೆಯ ವ್ಯಾಖ್ಯಾನವು ಬಹು ಸೋಜಿಗವಾಗಿದೆ. ತನಗಿಂತ ಭಿನ್ನ ಆಚಾರ—ವಿಚಾರವುಳ್ಳವರನ್ನೆಲ್ಲಾ ನಾಸ್ತಿಕರೆಂದು ಹೆಸರಿಡಲು ಜನರು ಮುಂದಾಗುತ್ತಾರೆ. ಇಂತಹರು ತಮ್ಮ ತಿಳುವಳಿಕೆಯಡಿಯಲ್ಲಿ ಹುದುಗಿರುವ ಸತ್ಯವನ್ನರಸುವುದರಲ್ಲಿ, ತಮ್ಮ ಜೀವನ ಪ್ರಣಾಲಿಯನ್ನು ಪರಿವರ್ತಿಸುವುದರಲ್ಲಿ ಪ್ರವೃತ್ತರಾಗುವುದಿಲ್ಲ. ಅವರಲ್ಲಿ ತಾವು ತಿಳಿದುಕೊಂಡಿದ್ದೇ ಸರಿ ಎಂಬ ದುರಾಗ್ರಹವಿರುತ್ತದೆ. ತಮ್ಮ ಜೀವನ ಪ್ರವಾಹವನ್ನು ತಿರುಗಿಸಿ ನೇರ ದಾರಿಯಲ್ಲಿ ಮುಂದುವರಿಯುವ ಮಹಾತ್ಮರೂ ಇಲ್ಲದಿಲ್ಲ; ಆದರೆ, ಇವರನ್ನು ಸಮಾಜವು ಬೇಗನೆ ಅರಿತುಕೊಳ್ಳುವುದಿಲ್ಲ. ಇವರನ್ನು ಅದು ಬಹು ರೀತಿಯಿಂದ ಕಾಡುತ್ತದೆ. ವಾಸ್ತವಿಕವಾಗಿ, ವಿಚಾರಕ್ಕನುಸಾರವಾಗಿ ಆಚಾರವನ್ನಿಟ್ಟುಕೊಳ್ಳಬೇಕಾದರೆ, ಶಕ್ತಿ ಬೇಕು; ಇಂತಹ ಶಕ್ತಿ ಸುಧಾರಕರಲ್ಲಿ ಮಾತ್ರ ಇರುವುದು; ಇಡಿ ಸಮಾಜದಲ್ಲಿಯಲ್ಲ. ಆದುದರಿಂದಲೇ ಸುಧಾರಕರು ಹಲವಾರು ತರದ ಆಪತ್ತುಗಳನ್ನು ಎದುರಿಸಬೇಕಾಗುವುದು.

ಧರ್ಮ, ಪಂಥ ಮತ್ತು ಸಮಾಜಗಳು ಒಂದರ ನಂತರ ಒಂದಾಗಿ ಬರುತ್ತವೆ. ಒಂದು ಇನ್ನೊಂದರೊಡನೆ ಸೇರಿಕೊಳ್ಳುತ್ತದೆ; ಆಗ ಹೊಸ ವಿಚಾರತರಂಗಗಳ ಪರಂಪರೆಯು ಏಳುತ್ತದೆ. ಸನಾತನ ಹಿಂದೂ ಧರ್ಮದಿಂದ ಅನೇಕಾನೇಕ ಪಂಥಗಳು ಹುಟ್ಟಿದುವು: ಅವುಗಳೊಡನೆಯೇ ಬೌದ್ಧ, ಜೈನ ಮೊದಲಾದ ಕ್ರಾಂತಿಕಾರೀ ವಿಚಾರಶೀಲ ಮತಗಳೂ ಹೊರಬಂದುವು. ಆದರೆ, ಮುಂದೆ ಅವು ತಮ್ಮ ಕ್ರಾಂತಿಕಾರಿ ಗುಣಗಳನ್ನು ಬಿಟ್ಟು ರೂಢವೆನಿಸಲಾರಂಭಿಸಿದುವು.

ಹೀಗೆಯೇ ಸರ್ವಪ್ರಕಾರಗಳಿಂದಲೂ ಜಡತೆಯು ಬರುವ ಸಂಭವವಿದೆ. ನಾವು ಸದಾ ಸಚೇತರಾಗಿಯೇ ಇರಬೇಕಾಗಿದೆ. ಒಂದು ಆಚಾರ ಅಥವಾ ವಿಚಾರ ಮಾನವ ಸಮುದಾಯಕ್ಕೆ ಪ್ರಗತಿದಾಯಕವೇ ಅಲ್ಲವೇ ಎಂಬತ್ತ ನಾವು ಗಮನ ಹರಿಸುತ್ತಿರಬೇಕು. ವಸ್ತುತಃ ಮೂಲಭೂತ ಸಿದ್ಧಾಂತಗಳು ಬದಲಾಗುವುದಿಲ್ಲ; ಅವು ಸಮಯಾನುಕೂಲವಾಗಿ ವಿಕಸಿತವಾಗುತ್ತ ಬರುತ್ತವೆ. ಆದುದರಿಂದ ನಾವು ನಮ್ಮ ಆಚರಣೆಯನ್ನು ಯಾವಾಗಲೂ ಶುದ್ಧವಾಗಿರಿಸಿಕೊಳ್ಳಬೇಕು.

ಜೀವನದಿಂದ ಧರ್ಮವನ್ನು ಬೇರ್ಪಡಿಸುವುದು ಸಾಧ್ಯವಿಲ್ಲ. ಜೀವನವು ಸ್ವೈರವಾಗಿ ಕೋಡಿಹರಿಯಬಾರದೆಂಬುದಕ್ಕೆ ಧರ್ಮವೊಂದು ತಡೆ. ಧರ್ಮಾಚರಣೆಯು ಜೀವನವನ್ನು ಸಮೃದ್ಧ, ಪುರುಷಾರ್ಥಿ, ಪವಿತ್ರ ಮತ್ತು ಪ್ರಗತಿ ಶೀಲವನ್ನಾಗಿಸುತ್ತದೆ. ಜೀವನಕ್ಕೆ ವ್ಯಾಪಕತೆ ಬರುತ್ತದೆ. ಮನುಷ್ಯನನ್ನು ಸಂಕೋಚಿತ, ಸ್ವಾರ್ಥಿ ಹಾಗೂ ಕ್ರೂರನಾಗುವುದಕ್ಕೆ ಸಹಾಯಕವಾಗಿರುವುದಕ್ಕೆ ಧರ್ಮವೆಂಬ ಹೆಸರು ಕೊಡಲಾಗುವುದಿಲ್ಲ. ಮಾನವನು ಜೀವನವನ್ನು ಬದುಕಲು ಸಾಧ್ಯವಾಗುವಂತೆ ನೆರವಾಗುವ ಆಚಾರ ಮತ್ತು ನಿಯಮಗಳಿಗೆ ಧರ್ಮವೆಂದು ಹೆಸರು.

ಕಾನೂನು, ಪೋಲೀಸು, ಕಚೇರಿ, ಆಸ್ಪತ್ರೆ, ಮೊದಲಾದುವುಗಳು ಹೆಚ್ಚಾಯಿತೆಂದರೆ, ನಾವು ಸಂತುಷ್ಟರಾಗುತ್ತೇವೆ. ಆದರೆ, ಸತ್ಯವಾಗಿ ಹೇಳುವುದಾದರೆ, ಇವುಗಳ ವೃದ್ಧಿಯು ನಮಗೆ ಲಜ್ಜಾಜನಕವಾಗಿದೆ; ದೂಷಣಪ್ರಾಯವಾಗಿದೆ. ಜನರು ಜೀವನದ ಶಾಶ್ವತ ನಿಯಮಗಳನ್ನು ಭಂಗಿಸುತ್ತಾರೆ; ಆಗಲೇ ಕಾನೂನುಗಳು ತಯಾರಿಸಲ್ಪಡುತ್ತವೆ; ಅಲ್ಲದೇ ಕಾಯಿದೆ ಕಾನೂನುಗಳು ಅಧಿಕಾಧಿಕವಾದಂತೆ ಅವುಗಳ ಉಲ್ಲಂಘನೆಯೂ ಹೆಚ್ಚಾಗುತ್ತ ಬರುತ್ತದೆ. ನಾವು ನಿಯಮಾನುಸಾರ ನಡೆಯುವುದಿಲ್ಲ; ಆಗ ಪೋಲೀಸು—ಕಛೇರಿಗಳು ಕಾರ್ಯತತ್ಪರವಾಗುತ್ತವೆ. ಇವೆಲ್ಲವೂ ನಮಗೆ ಶೋಭಾಕರವೆನ್ನಬಹುದೆ? ನಮ್ಮ ಸಮಾಜ ಅದೆಷ್ಟು ಪತಿತವಾಗಿದೆ, ನಾವು ಯಾವ ಪಾತಾಳದಲ್ಲಿ ಬಿದ್ದಿದ್ದೇವೆ ಎಂಬುದನ್ನು ನಾವಿಷ್ಟರಿಂದಲೇ ತಿಳಿಯಬಹುದು. ಇದು ಧರ್ಮದ ಸ್ವರೂಪವಲ್ಲ. ಧರ್ಮವಿರುವಲ್ಲಿ ನ್ಯಾಯವಿರುತ್ತದೆ, ಸತ್ಯವಿರುತ್ತದೆ, ಪ್ರೇಮವಿರುತ್ತದೆ, ಆದರವಿರುತ್ತದೆ. ಸತ್ಯತೆ ಮತ್ತು ಪ್ರೇಮಗಳಿರುವಲ್ಲಿ ಕಾನೂನಿನ ಬಾಹ್ಯ ಬಂಧನಗಳು ಬೇಕಾಗಿಲ್ಲ, ಯುಗಯುಗಗಳಿಂದ ಕ್ರಾಂತಿದರ್ಶಿಗಳಾದ ವಿಚಾರಕರು ಮತ್ತು ಸುಧಾರಕರು ಮಾನವ ಸಮಾಜಕ್ಕೆ ಇದೇ ಪ್ರೇರಣೆಯನ್ನು ನೀಡುತ್ತ ಬಂದಿದ್ದಾರೆ. ಈ ಪ್ರೇರಣೆಗೆ ಮುಪ್ಪು ಎಂಬುದಿಲ್ಲ; ದಿನಗಳೆದಂತೆ ಇದು ಹೊಸ ಹರೆಯವನ್ನು ಹೊಂದುತ್ತದೆ.

ನಿಜವಾದ ಮಾನವರಾಗಿ ನಾವು ಬದುಕಬಯಸುವುದಾದರೆ ನಾವು ರೂಢ ಸಂಪ್ರದಾಯ ಕಾನೂನುಗಳ ಬಾಹ್ಯ ಬಂಧನಗಳಿಂದ ಮುಕ್ತರಾಗಿ ಸತ್ಯ ಮತ್ತು ಪ್ರೇಮ ಬಂಧನಕ್ಕೆ ಈಡಾಗಬೇಕು; ಈ ದಿಸೆಯಲ್ಲಿ ಅಹರ್ನಿಶಿ ಶ್ರಮಿಸಬೇಕು.

(ಸಂಗ್ರಹ)

ಉಡುಪಿ. ಡಿ. ಮು. ಕೋರ್ಟಿನಲ್ಲಿ

S. C. 7/1961

ರಾಮಾಚಾರ್ಯ —ವಾದಿ

ಮತ್ತು

ಶೀನ ಶೆಟ್ಟಿ ಕೂಡಾ — ಪ್ರತಿವಾದಿರು,

ಇವರೊಳಗೆ

1ನೇ ಪ್ರತಿವಾದಿ:— ಗೋವಿಂದ ಶೆಟ್ಟಿ ಸೂರಮ್ಮ ಶೆಟ್ಟಿರ ಮಗ—ಉಡುಪಿ ತಾಲ್ಲೂಕು ನಂಬ್ರ 82ನೇ ಕುದಿ ಗ್ರಾಮದ ಕೊಂಡಾಡಿಯಲ್ಲಿರುವವರು ಇವರಿಗೆ ಜಾಹೀರು ಮೂಲಕ ತಿಳಿಯಪಡಿಸುವ [illegible]—

ವಾದಿಗೆ ನಿಮ್ಮಿಂದ ಸಿಕಾರಿ ಸಂಗರಕ್ಕೆ ಬರತಕ್ಕ ಮೂಲಗೇಣಿ ಬಾಕಿ ಬಗ್ಗೆ ಮಾಡಿದ ಮೇಲ್ಕಂಡ ದಾವೆಯನ್ನು ತಾರೀಕು 13-3-61ಕ್ಕೆ ಇಟ್ಟಿರುತ್ತದೆ. ಆ ಕುರಿತು ನಿಮಗೆ ಉದಾಹರಿಸುವಂತಿದ್ರೆ ಆ ದಿವಸ ಪೂರ್ವಾಹ್ನ 10 ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಜ್ವಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರುಹಾಜರಿಯಿಂದ ಯೇಕ ಪಕ್ಷವಾಗಿ ತೀರ್ಮಾನಿಸಲ್ಪಡುವುದು—

K. Ramakrishna Rao
Vakil for Plaintiff

ಉಡುಪಿ, ತಾ. 28-2-1961

● ● ಲೇವಣಾತಿಗಾಗಿ ಬೇಂಕಿನವರಿಗೆ ಬರಬೇಕಾಗಿಲ್ಲ
● ● ಸರದಿ ತಪ್ಪಿದರೆ ಏನನ್ನೂ ಕಳೆದುಕೊಳ್ಳಬೇಕಾಗಿಲ್ಲ
● ● ಅಗತ್ಯಬಿದ್ದಲ್ಲಿ ಸಾಲಪಡೆಯಲು
ಬೇರೆ ಜವಾಬ್ದಾರಿ ಹುಡುಕ ಬೇಕಾಗಿಲ್ಲ.

ಇದು ಜನಪ್ರಿಯ ದೈನಿಕ ಉಳಿತಾಯ ಯೋಜನೆ:

ಪಿಗ್ಮಿ

(ಒಂದು ರೂಪರೇಖೆ)

ದಿನ ಒಂದಕ್ಕೆ
25 ನಯೆಪೈಸೆ || 1 ರೂಪಾಯಿ
7 ವರುಷಗಳಲ್ಲಿ
ರೂ. 700 || ರೂ. 2,800

ಸಿಂಡಿಕೇಟ್ ಬೇಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಉಡುಪಿ ಡಿ. ಮು. ಕೋರ್ಟಿನಲ್ಲಿ

R. T. A. No. 179/60

ಪೆರ್ಡೂರು ಶ್ರೀ ಅನಂತಪದ್ಮನಾಭ ದೇವರು —ಅರ್ಜಿದಾರರು

ಮತ್ತು

ಕೆ. ಹಿರಿಯಣ್ಣ ಶೆಟ್ಟಿ —ಯೆದ್ರಿ

ಇವರೊಳಗೆ

ಯೆದ್ರಿ—ಕೆ. ಹಿರಿಯಣ್ಣ ಶೆಟ್ಟಿ, ಪೆರ್ಡೂರು ಕಸಬಾ ಗ್ರಾಮ

ಮೇಲ್ಕಂಡ ವ್ಯವಹರಣೆಯಲ್ಲಿ ಯೆದ್ರಿಗೆ ಆಗತಕ್ಕ ನೋಟೀಸು ತಾ. 27-3-61ಕ್ಕೆಯಿಟ್ಟಿರುವದ್ರಿಂದ ಸದ್ರಿ ಯೆದ್ರಿಯು ಆಕ್ಷೇಪ ಹೇಳುವದನ್ನೂ ಆ ದಿವಸ ಸದರಿ ಕೋರ್ಟು ಮುಂದೆ ಹಾಜರಾಗಿ ಜ್ವಾಹಿರುಮಾಡಿಕೊಳ್ಳತಕ್ಕದ್ದು—

P. Padmanabha Rao,
Vakil for Petitioner

UDIPI, Dated, 6—3—61.

Edited, Printed & Published by K. H. Shetty, at the Navayuga Press, Udipi, S. India.

40th year of publication. 16-3-1961 ೪೦ನೇ ವರ್ಷ

ಸಂಪುಟ ೪೦ | Vol. 40

ನವಯುಗ

ಸಂಚಿಕೆ ೨೭ | No. 27

ಬೆಲೆ 0-13

ಪ್ರಚಲಿತ ಪ್ರಸಂಗ:

ಕಾಂಗೋಲೀ ನಾಯಕರ ಅಪಪ್ರಚಾರ

ಸಂಯುಕ್ತ ರಾಷ್ಟ್ರ ಸಂಘದ ಆಶಯದಂತೆ ಭಾರತದ ಬ್ರಿಗೇಡ್ ಕಾಂಗೋವಿಗೆ ತೆರಳಿದೆ. ಇದರಿಂದ, ಅಲ್ಲಿ ಸಂ. ರಾ. ಸಂಘವು ಬಲವಾಗಿ ಬೇರೂರಿದಂತಾಗುವುದರಿಂದ, ಕಾಂಗೋಲೀ ನಾಯಕರು ಮುಂಗಾಣದವರಂತಾಗಿದ್ದಾರೆ. ಇದರ ಪರಿಣಾಮವಾಗಿ ಅವರು ಭಾರತ ವಿರೋಧೀ ಪ್ರಚಾರ ಕಾರ್ಯವನ್ನು ಆರಂಭಿಸಿದಂತೆ ಕಾಣುತ್ತಿದೆ.

ಲುಮುಂಬಾರವರ ಹತ್ಯೆಯಿಂದ ಬಳಿಕ ಕಾಂಗೋದ ವಿದ್ಯಮಾನಗಳು ಅತೀವ ವಿಕೋಪಕ್ಕೆ ಹೋಗಿವೆ. ಸಂಯುಕ್ತ ರಾಷ್ಟ್ರವು ಪ್ರಧಾನ ಕಾರ್ಯದರ್ಶಿ ಶ್ರೀ ಡಾಗ್ ಹೆಮ್ಮರ್‌ಶೀಲ್ಡರಿಗೆ ಅವಶ್ಯಕಂಡರೆ ಅಲ್ಲಿ ಶಸ್ತ್ರಾಸ್ತ್ರಗಳನ್ನು ಉಪಯೋಗಿಸಲು ಅನುಮತಿಯಿತ್ತಿರುವುದು ಎಲ್ಲರಿಗೂ ಗೊತ್ತು. ಇದರಿಂದ ಕುಪಿತಗೊಂಡ ಅಧ್ಯಕ್ಷ ಕಸಾವುಬುರವರು ಸಾರ್ವತ್ರಿಕ ಸೇನೆ ಸೇರುವಂತೆ ಆದೇಶವಿತ್ತಿದ್ದಾರೆ. ಹೆಮ್ಮರ್‌ಶೀಲ್ಡರು ಬೇರೆ ಬೇರೆ ದೇಶಗಳಿಂದ ಸೈನ್ಯವನ್ನು ಕೇಳಿ ಒಟ್ಟುಗೂಡಿಸಿದ್ದಾರೆ. ಕಾಂಗೊ ವಿದ್ಯಮಾನಗಳ ಸಂಬಂಧದಲ್ಲಿ ಸಂ. ರಾ. ದ ಪ್ರಧಾನ ಕಾರ್ಯದರ್ಶಿಗಳ ವಿಶೇಷ ಪ್ರತಿನಿಧಿ ಶ್ರೀ ರಾಜೇಶ್ವರ ದಯಾಳರ ಸೇವೆಯನ್ನು ಇನ್ನೂ ಕೆಲಕಾಲ ತಮಗೆ ನೀಡಬೇಕೆಂದು ಅವರು ಕೇಳಿಕೊಂಡಿದ್ದಾರೆ. ಭಾರತವು ಕೂಡ ಈ ಬಾರಿಯೂ ಸೈನ್ಯವನ್ನು ಕಳಿಸಿಕೊಟ್ಟಿದೆ. ಕಾಂಗೊವಿನಲ್ಲಿ ಈಗ ಸುಮಾರು ೨೩ ಸಾವಿರ ಸಶಸ್ತ್ರ ಸೈನಿಕರು ಸಂ. ರಾ. ಸಂಘದ ಅಧೀನದಲ್ಲಿದ್ದಾರೆ.

ಕಾಂಗೊವಿನಲ್ಲಿ ಸಂಯುಕ್ತ ರಾಷ್ಟ್ರ ಸಂಘದ ಸೈನಿಕರು ಇದ್ದಂತೆಯೇ ಲುಮುಂಬಾರ ಹತ್ಯೆ ನಡೆದುದು ಸಂಘದ ಅಯಶಸ್ವಿತೆಯ ದ್ಯೋತಕವೆಂದು ಆದರ ಪ್ರಧಾನ ಕಾರ್ಯದರ್ಶಿ ಶ್ರೀ ಹೆಮ್ಮರ್‌ಶೀಲ್ಡರು ರಾಜಿನಾಮೆ ಕೊಡಬೇಕೆಂದು ರಶ್ಯವು ಮತ್ತೆ ಪುನಃ ತನ್ನ ವಾದವನ್ನು ಮುಂದಿಟ್ಟಿದೆ; ಅಲ್ಲದೇ ಇದನ್ನು ಸಮರ್ಥಿಸುವಂತೆ ಬೇರೆ ಬೇರೆ ದೇಶಗಳನ್ನು ಕೇಳಿಕೊಂಡಿದೆ. ಆದರೆ, ಶ್ರೀ ಹೆಮ್ಮರ್‌ಶೀಲ್ಡರು ಈ ಘಟನೆಯ ಜವಾಬ್ದಾರರು ಎನ್ನುವುದು ಅಸಾಧ್ಯವಾದುದರಿಂದ, ರಶ್ಯನ್ ಕೇಳಿಕೆಯು ಅಗಣ್ಯವೆನಿಸಿದೆ. ಹೆಮ್ಮರ್‌ಶೀಲ್ಡರಾದರೂ ತಾವು ಸಂ. ರಾ. ಸಂಘವು ತನಗಿತ್ತ ಅಧಿಕಾರ ಕಕ್ಷೆಯನ್ನು ಮೀರಿ ಹೋಗುವುದು ಅಸಾಧ್ಯವಾದುದರಿಂದ ಈ ಭಾಗದಲ್ಲಿ ತಾನು ನಿರಪರಾಧಿಯೆನ್ನುತ್ತಾರೆ. ಈ ವಾದವನ್ನು ಭಾರತವೂ ಸಮರ್ಥಿಸುತ್ತಿದೆ.

ಕಾಂಗೋವಿನಲ್ಲಿ ಪ್ರಧಾನಿ ಲುಮುಂಬಾರ ನಂತರ ಅವರ ಸ್ಥಾನದಲ್ಲಿರುವವರಿಗೆ ಸಂಯುಕ್ತರಾಷ್ಟ್ರ ಸಂಘವು ಸಹಾಯ ನೀಡುವುದೆಂಬೂ ಆದರೆ ಅನಿಶ್ಚಿತ ಪರಿಸ್ಥಿತಿಯಲ್ಲಿರುವ ಕಾಂಗೋವಿನಲ್ಲಿ ಈ ಸ್ಥಾನದಲ್ಲಿ ಯಾರಿದ್ದಾರೆ ಎಂದು ಹೇಳುವುದು ಸಾಧ್ಯವಿಲ್ಲವೆಂದು ಶ್ರೀ ದಯಾಳರ ಹೇಳಿಕೆಯಿದೆ. ಕಾಂಗೋಲಿ ಸೇನೆಯಲ್ಲಿರುವ ಎಲ್ಲ ಬೆಲ್ಜಿಯನರನ್ನು ತೆಗೆದುಹಾಕಬೇಕೆಂದು ಡಾಗ್ ಹೆಮ್ಮರ್‌ಶೀಲ್ಡರು ಶ್ರೀ ಕಸಾವುಬುರರಿಗೆ ಆದೇಶಕಳಿಸಿದ್ದರು; ಅಲ್ಲಿಗೆ ಸೇನೆಯನ್ನು ಪುನರ್ಘಟಿಸುವಂತೆಯೂ ಕೇಳಿಕೊಂಡಿದ್ದರು. ಆದರೆ ಇದಕ್ಕೆ ಉತ್ತರ ರೂಪವಾಗಿ ಕಾಂಗೋಲಿ ರಾಷ್ಟ್ರ ಸೇನೆಯಲ್ಲಿ ಈಗ ಕೇವಲ ೧೪ ಬೆಲ್ಜಿಯನ್ ಅಧಿಕಾರಿಗಳಿದ್ದು ಇವರನ್ನು ಹಿಂತೆಗೆದುಕೊಂಡರೆ, ತಮ್ಮ ಸೈನ್ಯದಲ್ಲಿ ಪುನಃ ತೊಂದರೆಯಾಗಲು ಕಾರಣವಾಗಬಹುದು; ಈ ಸೈನ್ಯದಲ್ಲಿರುವ ಬೆಲ್ಜಿಯನ್ನರನ್ನು ತೆಗೆದುಹಾಕಿ ಕಾಂಗೋಲಿ ಸೈನ್ಯವನ್ನು ಪುನಾರಚಿಸಬೇಕೆಂದೂ ಇದಕ್ಕೆ ಮಾತ್ರ ತಾನು ಒಪ್ಪುವುದಾಗಿಯೂ ಕಸಾವುಬು ಹೇಳಿದ್ದಾರೆ. ಅಲ್ಲದೆ ಕಾಂಗೋದಲ್ಲಿನ ಎಲ್ಲ ರಾಷ್ಟ್ರೀಯ ಸೇನೆಯು ಸಂಪೂರ್ಣವಾಗಿ ತನ್ನ ಕೈಕೆಳಗೆ ಇರುವಂತಾಗಬೇಕೆಂದು ಅವರು ವಾದಿಸಿದ್ದಾರೆ. ಕಾಂಗೊದಲ್ಲಿನ ಸದ್ಯದ ಪರಿಸ್ಥಿತಿಯನ್ನು ಅನಃಲಕ್ಷಿಸಿ, ಈ ಕಠಿಣ ಸನ್ನಿವೇಶದಿಂದ ಪಾರಾಗಲು ಉಪಯುಕ್ತವಾಗುವ ಯಾವುದೇ ಒಡಂಬಡಿಕೆಯನ್ನು ಮಾಡಿಕೊಳ್ಳಲು ತಾನು ಸಿದ್ಧವಿರುವುದಾಗಿ ತಿಳಿಸಿ, ಇದಕ್ಕಾಗಿ ಸೂಕ್ತ ಪ್ರಯತ್ನ ನಡೆಸುವಂತೆ ಶ್ರೀ ಕಸಾವುಬು ಶ್ರೀ ಡಾಗ್ ಹೆಮ್ಮರ್‌ಶೀಲ್ಡರನ್ನು ಕೇಳಿಕೊಂಡಿದ್ದಾರೆ.

ಶ್ರೀ ಹೆಮ್ಮರ್‌ಶೀಲ್ಡರ ಸಂಪೂರ್ಣ ವಿಶ್ವಾಸಕ್ಕೆ ಪಾತ್ರರಾಗಿ ಕಾಂಗೊವಿನಲ್ಲಿ ಅವರ ವಿಶೇಷ ಪ್ರತಿನಿಧಿಗಳಾಗಿರುವ ಶ್ರೀ ದಯಾಳರ ಮೇಲೆ ಕಸವುಬೂ ಉರಿದು ಬಿದ್ದಂತಿದೆ. ಆದುದರಿಂದಲೇ ಶ್ರೀ ದಯಾಳರನ್ನು ಕಾಂಗೋವಿನಿಂದ ಹಿಂತೆಗೆದುಕೊಳ್ಳದಿದ್ದರೆ, ಸಂ. ರಾ. ಸಂಘದೊಡನಿರುವ ತನ್ನ ಎಲ್ಲ ಸಂಬಂಧಗಳನ್ನೂ ಕಾಂಗೊ ಕಡಿದುಕೊಳ್ಳುವುದೆಂದವರು ಬೆದರಿಕೆ ಹಾಕಿದ್ದಾರೆ. ಕಾಂಗೊ ಸರಕಾರದ ಈ ಬೆದರಿಕೆಯು ಕಾಂಗೋಲಿ ಅಧಿಕಾರಿಗಳು ತಮ್ಮ ಬಲವನ್ನು ಹೆಚ್ಚಿಸಿಕೊಳ್ಳುವುದರ ದ್ಯೋತಕವಾಗಿದೆಯೆಂದು ಹೇಳಬಹುದು. ಬನಾನಾ ಮತ್ತು ಮಟಾಡಿ ಎಂಬೆರಡು ಮಹತ್ವದ ಬಂದರಗಳನ್ನು ಸಂ. ರಾ. ಪಡೆಯು ತೆರವುಮಾಡಿ ಕಳೆದವಾರ ಬಂದಿತ್ತು. ಆದರೆ, ಅವನ್ನು ಮರಳಿ ವಶಪಡಿಸಿಕೊಳ್ಳುವುದು ಅಗತ್ಯವೆಂದೂ ಈ ಬಗ್ಗೆ ಅವಶ್ಯಕ ಸಂಧಾನ ಮಾತುಕತೆಗಳು ಕೊನೆಗೊಳ್ಳುವುದಕ್ಕೆ ಬಹುಕಾಲ ಹಿಡಿಯುದೆಂದೂ ಶ್ರೀ ದಯಾಳರೆನ್ನುತ್ತಾರೆ.

ಸಂಯುಕ್ತ ರಾಷ್ಟ್ರಸಂಘದ ಆದೇಶವನ್ನು ಒಪ್ಪಲು ಸಿದ್ಧವಿಲ್ಲದ ಕಾಂಗೊ ಸರಕಾರದ ಮೇಲೆ ಅದು ಆರ್ಥಿಕ ಪ್ರತಿಬಂಧವನ್ನು ಹೇರಲು ಮುಂದುವರಿದಿದೆ. ಅಮೆರಿಕೆಯ ಸರಕಾರವು ಕಾಂಗೊವಿನ ಜನತೆಗಾಗಿ ಸುಮಾರು ನೂರುಸಾವಿರ ಟನ್ ಗೋಧಿಯನ್ನು ಮಟಾಡಿ ಬಂದರಕ್ಕೆ ಕಳಿಸಿಕೊಟ್ಟಿತ್ತು. ಆದರೆ, ಸದ್ಯ ಈ ಬಂದರದಲ್ಲಿ ಸಂ. ರಾ. ಪಡೆಯಿಲ್ಲದಿರುವುದರಿಂದ, ಸ್ವಯಂ ಸಂ. ರಾ. ಸಂಘದ ಕರ್ಮಚಾರಿಗಳೇ ಈ ಗೋಧಿಯನ್ನು ತೆಗೆದುಕೊಳ್ಳುವವರೆಗೆ ಹಡಗದಿಂದ ಇಳಿಸಬಾರದೆಂದು ಅದು ಅಮೆರಿಕೆಯ ಸರಕಾರಕ್ಕೆ ತಿಳಿಸಿದೆ. ಈ ಗೋಧಿಯನ್ನು ಕಾಂಗೋವಿನ ವಿದೇಶ ಮಂತ್ರಿಶಾಖೆಯ ವಿನಂತಿಯ ಮೇರೆಗೆ ರವಾನಿಸಲಾಗಿತ್ತು. ಅಮೆರಿಕೆಯು ಸಂಘದ ಕರ್ಮಚಾರಿಗಳ ಅನುಪಸ್ಥಿತಿಯಲ್ಲಿ ಗೋಧಿಯನ್ನು ಇಳಿಸಿದರೆ, ಅದರ ಜವಾಬ್ದಾರಿಯನ್ನು ತಾನು ಹೊರಲಾರೆನೆಂದೂ ಅದು ಅಮೆರಿಕೆಯ ಏಕಪಕ್ಷೀಯ ನ್ಯಾಯವಾಗುವುದೆಂದೂ ಅದು ಎಚ್ಚರಿಕೆಯಿತ್ತಿದೆ.

ಶ್ರೀ ದೀನದಯಾಳರು ಸದ್ಯ ಲಂಡನ್ನಿನಲ್ಲಿರುವ ಪ್ರಧಾನಿ ನೆಹರುಗಳೊಡನೆ ಕಾಂಗೋವಿನ ಪರಿಸ್ಥಿತಿಯ ಕುರಿತಾಗಿ ವಿಚಾರವಿನಿಮಯ ಮಾಡಿ, ನ್ಯೂಯಾರ್ಕಿಗೆ ತೆರಳಿದರು. ಅಲ್ಲಿ ನಡೆಯುವ ಸಂ. ರಾ. ಸಂಘದ ಸಭೆಗಳಲ್ಲಿ ಉಪಸ್ಥಿತರಿರುವರೆಂದು ತಿಳಿಯುತ್ತದೆ. ಅವರ ಅಭಿಪ್ರಾಯದಂತೆ ಕಾಂಗೊವಿನಲ್ಲಿ ಸಂ. ರಾ. ಸಂಘವು ಕೈಹಾಕದಿದ್ದರೆ, ಅಲ್ಲಿ ಅರಾಜಕತೆಯು ತಲೆದೋರುತಿತ್ತು; ಅಲ್ಲಿ ಈಗ ಒಂದು ರೀತಿಯ ಶಾಂತಿ-ಸುವ್ಯವಸ್ಥೆಗಳು ಇರುವುದಾದರೆ, ಅದಕ್ಕೆ ಈ ಪಡೆಯೇ ಮೂಲಕಾರಣ.

ಕಾಂಗೋವಿನಲ್ಲಿರುವ ಸಂ. ರಾ. ಸೇನೆಯು ತನಗೆ ದೊರೆತ ಅಧಿಕಾರದ ಎಲ್ಲೆಯನ್ನು ಮೀರಿ ಹೋಗಬಾರದು. ಆದರೆ, ಇದು ಕಾಂಗೋಲಿಗಳಿಗೆ ತೃಪ್ತಿಯೆನಿಸುವುದಿಲ್ಲ. ಸಂ. ರಾ. ಪಡೆಗೆ ಕೊಡಲು ಅಧಿಕಾರವಿಲ್ಲದ ಕಾರ್ಯಗಳನ್ನೂ ಮಾಡಿಕೊಡಬೇಕೆಂದು ಅವರು ಕೇಳಿಕೊಳ್ಳುತ್ತಾರೆ. ಉದಾಹರಣೆಗಾಗಿ ಹೇಳುವುದಾದರೆ, ಸಂ. ರಾ. ಸೇನೆಯು ಕಟಾಂಗಕ್ಕೆ ಹೋಗಬೇಕೆಂದು ಬಯಸುವವರಿದ್ದಾರೆ. ಆದರೆ, ಇದು ಎಲ್ಲಾದರೂ ಸಾಧ್ಯವೆ? ಸಂ. ರಾ. ಪಡೆಗೆ ನೀಡಿದ ಅಧಿಕಾರದ ಮಿತಿಯಿಂದ ಹೇಗೆ ಹೋಗುವುದು ಅನ್ಯಾಯವೆನಿಸುವುದಲ್ಲವೆ?

(೧೨ನೇ ಪುಟ ನೋಡಿರಿ)

ಯುಗಾದಿ ಹಬ್ಬದ ವಿಶೇಷ ಆಕರ್ಷಣೆಗಳಿಗಾಗಿ ಸಂದರ್ಶಿಸಿರಿ!

ಸಾರೀ ಎಂಪೋರಿಯಮ್

ಕೆಥೊಲಿಕ್ ಕ್ಲಬ್ಬಿನ ಎದುರು, ಹಂಪನಕಟ್ಟಾ, ಮಂಗಳೂರು-1

ನಿಮ್ಮ ಉತ್ತಮ ಆಯ್ಕೆಗೆ ಯೋಗ್ಯವೆಂದೆನಿಸಿದ ರೇಶ್ಮೆ ಸೀರೆಗಳೂ, ಹತ್ತಿ ನೂಲಿನ ಸೀರೆಗಳೂ ಸರ್ವೋತ್ಕೃಷ್ಟವಾಗಿವೆ, ಯಾವತ್ತೂ ತರದ ಶರ್ಟಿಂಗ್, ಕೋಟಿಂಗ್, ಚಿಂಟ್ಸ್, ಸಿಲ್ಕ್. ನೈಲಾನ್ ಇತ್ಯಾದಿ ಬಟ್ಟೆಬರೆಗಳು ಸದಾ ದೊರೆಯುತ್ತವೆ.

SAREE EMPORIUM

Opposit Catholic Club,
HAMPANKATTA, **MANGALORE—1.**

ESTD. 1921

NAVAYUGA
KANNADA WEEKLY,
UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ
ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೨೧.

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್.
ಬಿ. ಶಾಮರಾಯ ಶೆಟ್ಟಿ, ಬಿ. ಎ., ಎಲ್. ಟಿ.

ಸಂಚಾಲಕ ಸಂಪಾದಕರು:
ಕೆ. ಕೊನ್ನಯ್ಯ ಶೆಟ್ಟಿ.

●

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್) ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್) ಕಲಂ ಇಂಚಿಗೆ ರೂ. 3-50
ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಕಥಾವಿಹಾರ

ಸಾಧಿಸಿದ್ದೇನು?

ಅಧ್ಯಾಪಕ ವೃತ್ತಿಯೆಂಬುದು ವಾಸ್ತವಿಕವಾಗಿ ಗೌರವಪ್ರದವಾಗಿದ್ದರೂ ಹತ್ತು ಸಮಗಾರರ ಕೈಗೆ ಸಿಕ್ಕ ಚರ್ಮವಾದುದರಿಂದ ಮಹತ್ವರಹಿತವೆಂಬಂತಾಗಿದೆ. ಅಧ್ಯಾಪಕನು ಸಂಪತ್ತನ್ನು ಖಂಡಿತಕ್ಕೂ ಸಾಧಿಸಲಾರನು; ಎಂದರೆ, ಅವನು ತನ್ನ ಜೀವನದಲ್ಲಿ ಸಾಧಿಸುವುದೇನು?

ಶ್ರೀ ನಾಗರಾಜ, ಉಜಿರೆ.

ಗಂಟೆ ಒಂಭತ್ತು ಕಳೆದಿತ್ತು!

ಶಾಲೆಗೆ ತಡವಾದೀತು—ನಮ್ಮ ಹೆಡ್ಮಾಸ್ತರರು ಬೇರೆ ರಜೆಯಲ್ಲಿದ್ದಾರೆ, ಬೇಗನೆ ಹೋಗಬೇಕು. ಹುಡುಗರ ಗುಲ್ಲು ಜೋರಾದಾಗ—ಆಚೆ ಮನೆಯ ಲಾಯರ್, 'ಏನ್ರೀ—ಹುಡುಗ್ರು ಸೊಕ್ಕಿದ್ರೂ—ನೋಡ್ತಾ ಇದೀರೋ?'—ಎಂದು ಹೀಯಾಳಿಸುವುದಿದೆಯಂತೆ...ಎಂದು ಆಲೋಚಿಸುತ್ತಾ ಲಗುಬಗೆಯಿಂದ ಹೆಜ್ಜೆಗಳನ್ನು ಹಾಕುತ್ತಿದ್ದೆ ಇನ್ನೂ ಅರು ಫರ್ಲಾಂಗು ಇದೆ.

ಕರ್ವಾಂತರದ ಈ ಚಪ್ಪಲಿ ಬೇರೆ—ಹೊಸತಾದುದರಿಂದ—ಚರ್ಮವನ್ನು ಕಚ್ಚಿ ಹಿಡಿಯುತ್ತಾ ಇದೆ. ಸಮಗಾರನ ಬಳಿ ಅದನ್ನು ಸ್ವಲ್ಪ ಸಡಿಲಮಾಡಿಸಬೇಕು. ಅಂದಹಾಗೆ ಮತ್ತೊಂದೂ ಇದೆ—ಸಡಿಲ ಮಾಡುವಂತಹದು—ನಮ್ಮಾಕೆಯ. ರವಕೆ, ಅದೂ ಬಿಗಿಹಿಡಿಯುತ್ತದಂತೆ. ಸದ್ಯ ಅವಳೇ ಪಾಪ, ನನ್ನಂತೆ ಕಚ್ಚಿಸಿಕೊಳ್ಳಬೇಕಾಗಿಲ್ಲ—ಸಂಜೆ ಒಮ್ಮೆ ದರ್ಜಿವರೆಗೂ ಹೋಗಿ ಬಂದರಾಯ್ತು!

''ಓ ಮಾಸ್ಟ್ರೇ—ಇಲ್ಲಿ ಸ್ವಲ್ಪ ಬನ್ನಿ''

—ಹೋಟೆಲ್ ಮಾಲೀಕ ಹೋಟೇಲೇನೊ ಸಣ್ಣದ—ಕೃಷ್ಣರಾಯರ ಕರೆ. ಆದರೆ ಕಾರಣಕೊಡದೆ ಬನ್ನಿ ಅಂದ್ರೆ ಹ್ಯಾಗೆ!

''ಇಲ್ಲಾ—ಆಗಲೇ ತಡವಾಯ್ತು. ಒಂಬತ್ತೂ ಮುಕ್ಕಾಲು!''

'ಒಂದು ಸ್ವಲ್ಪ ಬಂದು ಬಿಟ್ಟುಹೋಗಿ. ನಮ್ಮ ಗೋಪಿ—ಯಾಕೆ ಶಾಲೆಗೆ ಬರೋದಿಲ್ಲವಂತೆ ಸ್ವಲ್ಪ ಕೇಳಬಿಡಿ, ಮಾಸ್ಟ್ರೇ!''

—ಎಂದು ಮೂಲೆಯಲ್ಲಿ ಅಳುತ್ತಿದ್ದ ಗೋಪಿಯನ್ನು ತೋರಿಸಿದರು. ಮುಖದಲ್ಲಿ ಒಂದಷ್ಟು ಕೊಳೆ-ಅದರ ಮೇಲೆ ಅಂಗಿಯೂ ಅಲ್ಲಲ್ಲಿ ಹೋಟೆಲ್ ಕಾಫಿಯ ವರ್ಣವನ್ನೇ ತಾಳಿದ್ದು—ಅವನೇ ದಿನ ಶಾಲೆಗೆ ಬರಲು—ತಯಾರಿಲ್ಲವೆಂಬುದನ್ನು ಸಾರಿ ಹೇಳುತ್ತಿದ್ದವು.

''ಏನೋ ಗೋಪಿ, ಯಾಕೆ ಬರೋದಿಲ್ಲ ಶಾಲೆಗೆ?''

—ಉಪಾಧ್ಯಾಯವೃತ್ತಿಗೆ ಸೇರಿ, ಬರೇ ಎರಡು ವರ್ಷ ಮಾತ್ರ ಆಗಿದ್ದುದರಿಂದ, ಮಕ್ಕಳನ್ನು ಗದರಿಕೊಳ್ಳದೆ ಮೃದುವಾಗಿಯೇ ಆಕರ್ಷಿಸಬೇಕೆಂಬ ತತ್ವಕ್ಕೆ ಬಲವಾಗಿ ಅಂಟಿಕೊಂಡಿದ್ದೆ.

''ಊ್ಞ... ಊ್ಞ....''

—ಎಂಬುದೊಂದೆ ಗೋಪಿಯ ಉತ್ತರ.

''ಮಾಸ್ಟ್ರೇ—ಆಗ ಇಲ್ಲಿಂದ P. W. D. ಯವರ ಲಾರಿ ಹೋಯ್ತು. ಇಲ್ಲಿ ಹೋಟೇಲಿನ ಹತ್ರ ನಿಲ್ಲಿಸಿ ಚಾ ಕುಡಿದು ಹೋದ್ರು. ಆಗ ಅದರ ಡ್ರೈವರ್ ತಮಾಷೆಗೆಂದು 'ನಮ್ಮ ಜೊತೆಗೆ ಬರ್ತಿಯೋ ಮಗು! ನಿನಗೆ ಮಾರ್ಗ ಮಾಡಲು, ಲೋರಿ ಬಿಡಲು ಕಲಿಸುತ್ತೇನೆ'—ಎಂದು ಅನ್ನುತ್ತಿದ್ದ. ಆದರೆ ಅದನ್ನು ನಿಜವೆಂದೇ ನಂಬದ ಇವನು 'ನಾನೂ ಅವರ ಜೊತೆಗೆ ಹೋಗುತ್ತೇನೆ'—ಎಂದು ಹಟ ಹಿಡಿಯಬೇಕೆ!''

ನನಗೋ ಬಲು ಮೋಜೆನಿಸಿತು. ಆದರೆ ಆ ಸಣ್ಣ ಮಗುವಿನ ಮನಸ್ಸಿನ ಮೇಲೆ ಡ್ರೈವರ್ ಹೇಳಿದ ಮಾತು ಆಚ್ಚೊತ್ತಿದಂತಾಗಿದ್ದು—ಮಾತೇ ಹೊರಡಲಿಲ್ಲ.

''ನೋಡು ಗೋಪಿ ನಿನಗೆ ಗೊತ್ತಿಲ್ಲ—ಈ ಲಾರಿಯವರಿಗೆಲ್ಲಾ ಮಾರ್ಗ ಮಾಡಲು ಗೊತ್ತಿಲ್ಲ. ನೀನು ಅವರ ಜೊತೆಗೆ ಸೇರಿದರೆ ಮಣ್ಣು ಹೊರಲು ಮತ್ತು ಲೋರಿಯ ಧೂಳು ಒರಸುವ ಕೆಲಸ ಕಲಿಸಿಯಾರು! ಡ್ರೈವರ್ ಆಗುವುದರಿಂದೇನು ಬಂತು?''

ಎಂದು ಹೇಳಿ ಗೋಪಿಯೆಡೆಗೆ ನೋಡಿದೆ. ಗೋಪಿ ಅಗಲಿಸಿದ ಕಣ್ಣುಗಳಿಂದ ನನ್ನ ಮಾತುಗಳನ್ನೇ ಆಲಿಸುತ್ತಿದ್ದ ನಾ ಮುಂದುವರಿಸಿದೆ—

''ಇವರಿಗೆ ಮಾರ್ಗಮಾಡಲು, ಸೇತುವೆ ಕಟ್ಟಲು ಪ್ಲಾನು ಹಾಕಿ ಕೊಡುವವರು ಬೇರೆ ಇದ್ದಾರೆ. ಇಂಜಿನೀಯರ್ ಎಂದು ಕರೆಯುತ್ತೇವೆ ಅವರನ್ನು. ಅವರಂತಾಗಲು ನೀನು ಯತ್ನಿಸಬೇಕು. ಹಾಗಾಗಬೇಕಾದರೆ, ನೀನು ಶಾಲೆಗೆ ಬರಬೇಕು. ಇಲ್ಲಿ ಕಲಿತು ಮುಂದಕ್ಕೆ ಇಂಜಿನೀಯರ್ ಆಗುವೆಯಂತೆ. ಬರಿ ಈ ಕೂಲಿಯಾಳುಗಳ ಜೊತೆ ಓಡಿಯಾಡುವುದರಿಂದೇನು ಬರುವುದು?''

ಹುಡುಗನಿಗೆ ನನ್ನ ಮಾತುಗಳು ಒಪ್ಪಿಗೆಯಾದುವೆಂಬುದನ್ನು ಅವನ ಕಣ್ಣುಗಳೇ ಸೂಚಿಸಿದವು. ಕಬ್ಬಿಣ ಬಿಸಿಯಾದಾಗಲೇ ಏಟು ಬೀಳ ಬೇಕಲ್ಲ—ಅದಕ್ಕಾಗಿ ಅಂದೆ

''ಬಾ ಗೋಪಿ. ಮುಖತೊಳೆ. ಶಾಲೆಗೆ ಹೋಗೋಣ'' ಎಂದು ಅವನನ್ನು ಕರೆದೊಯ್ದು, ನಳ್ಳಿಯ ನೀರಿನಲ್ಲಿ ಮುಖ ತೊಳೆದು, ನನ್ನ ಹೆಗಲ ಮೇಲಿದ್ದ, ಬಟ್ಟೆಯಿಂದ ಮುಖವೊರಸುತ್ತಿದ್ದಾಗ, ಗೋಪಿಯ ಕಣ್ಣುಗಳು ಹೊಳೆಯುತ್ತಿದ್ದುದು ನನ್ನ ಗೋಚರಕ್ಕೆ ಬಂತು

ಗೋಪಿ ಕೂಡಲೇ ಒಳಕ್ಕೆ ಹೋಗಿ ತನ್ನ ಚೀಲವೆತ್ತಿಕೊಂಡು ಬಂದ

''ಈ ದಿನ ಬೇಡ ಮಾಸ್ಟ್ರೇ. ಅವನ ಅಂಗಿ ಕೊಳೆಯಾಗಿದೆ. ನಾಳೆ ಕಳುಹಿಸುತ್ತೇನೆ'

ಎಂದು ಕೃಷ್ಣರಾಯರು ಅಂದಾಗ, ಗೋಪಿಯೇ ಉತ್ತರಿಸಿದ—

''ಕೊಳೆಯಿದೆಯೆಂದು ಶಾಲೆಗೆ ತಪ್ಪಿಸಬಾರದು. ಹೋಗುವ ಸಾರ್!''

ಕೃಷ್ಣರಾಯರ ಮುಖ ಪೆಚ್ಚಾಯ್ತು.

ಮೂವತ್ತು ವರ್ಷಗಳ ನಂತರದ ಮಾತು.

ಎಷ್ಟೋ ಊರುಗಳ ನೀರು ಕುಡಿದಾಗಿದೆ. ಅಧಿಕಾರಿಗಳ ಕೃಪೆದೊರೆತಾಗ ಒಳ್ಳೆಯ ಶಾಲೆಗಳು ಸಿಕ್ಕದ್ದೂ ಉಂಟು. ಅವಕೃಪೆಗೆ ಪಾತ್ರನಾದಾಗ ಮಲೇರಿಯದ ಹಾವಳಿಗೆ ತುತ್ತಾದುದೂ ಉಂಟು. ಒಳ್ಳೆಯ ಜನರ ಊರಿಗೆ ಹೋದಾಗ-ಸಾಕಷ್ಟು ಗೌರವವು ಸಿಕ್ಕಿದ್ದೂ ಉಂಟು. ಉಪಾಧ್ಯಾಯರೆಂಬ ಮನ್ನಣೆ ಜೊತೆಗೆ ಅಲ್ಪ ಸ್ವಲ್ಪ ಸಹಾಯವೂ ಸಿಗುತ್ತಿತ್ತು. ಒಂದೂರಲ್ಲಿ ಮಗಳ ಕುತ್ತಿಗೆಗೆ ಹಾಕಿದ ಚಿನ್ನದ ಸರವೂ ಕಳೆದು ಹೋಗಿತ್ತು! ಆಗ ನಮ್ಮಾಕೆಯ ಗೋಳಂತೂ ಹೇಳತೀರದು—ಅಂತೂ ಕಷ್ಟ ನಷ್ಟವೋ ಭ್ರಷ್ಟವೋ ಆಗಿ ಹಲವೂರು ತಿರುಗಿಯಾಗಿದೆ-

ಇಷ್ಟು ವರುಷಗಳ ಸೇವೆಗೆ ಪ್ರತಿಫಲವಿಲ್ಲವೇ? ಇನ್ನು ಆ ಮೂರು ಕಾಸಿನ ಪೆನ್ಶನ್ ಯಾಕೆ ಸಾಕು! ಏನೇ ಆಗಲಿ ಅಂತೂ ಮುಗಿಯಿತಲ್ಲ. ಈ ದಿನ........

ಹೌದ, ಈ ದಿನ ನನ್ನ ಕೊನೆಯ ಸೇವೆಯ ದಿನ...............

ನಾಳೆಯಿಂದ ನಾನು ರಿಟಾಯರ್ಡ್.... ನಿವೃತ್ತ ಅಧ್ಯಾಪಕ.... ಅದು ಮಾರು ದಿನ ಬಿರುದು.... ಕಾಳಿನ ಜೋಳಿಗೆ...

— ಆಲೋಚನೆಯು ದಾರಿಗುಂಟ ಸಾಗಿದ್ದಂತೆ, ಎರೆಹುಳದಂತೆ ಮಂದಗತಿಯಲ್ಲಿ ನಡೆದಿದ್ದೆ. ಹಿಂದಿನಿಂದ ಹುಡುಗರ ಗುಂಪು ಸಾಗಿ ಬರುತಿತ್ತು. ಇಷ್ಟರಲ್ಲಿ ಹಿಂದಿನಿಂದ ಒಂದು ಜೀಪ್ ಬಂದ ಸದ್ದು.... ನಿಂತಿತು.... ಸಂಭಾಷಣೆಯ ಮಾತುಗಳು ಅಸ್ಪಷ್ಟವಾಗಿ ಕೇಳಿಸುತಿತ್ತು....

'ಮಕ್ಕಳೇ ಇದೇನು ಕೈಯಲ್ಲಿ?'

'ನಮ್ಮ ಉಪಾಧ್ಯಾಯರಿಗೆ ಪ್ರೆಸೆಂಟೇಶನ್.... ನಮ್ಮನ್ನು ಬಿಟ್ಟು ಹೋಗುತ್ತಾರಲ್ಲ... ಅದಕ್ಕೆ...'

(೧೧ನೇ ಪುಟ ನೋಡಿರಿ)

ಇಂದು ಮಿತವಾಗಿ ವ್ಯಯಿಸಿದರೆ, ನಾಳೆ ಹಿತವಾಗಿ ಪರಿಣಮಿಸುವುದು
ಮಿತವ್ಯಯವೇ ಹಿತಜೀವನದ ಹೆದ್ದಾರಿ.
ಮಿತವಾಗಿ ವ್ಯಯಿಸಿರಿ; ಉಳಿಯುವ ಹಣವನ್ನು ಬೇಂಕುಗಳಲ್ಲಿ ಶೇಖರಿಸಿರಿ.

ಕೊರ್ಪೊರೇಶನ್ ಬೇಂಕು

ನಿಮ್ಮ ಹಣಕ್ಕೆ ಸುರಕ್ಷಿತತೆ ಮತ್ತು ಭದ್ರತೆಗಳೊಂದಿಗೆ
ಹೆಚ್ಚಿನ ದರದಲ್ಲಿ ಬಡ್ಡಿ ಕೊಡುವುದು.

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
ಸ್ಥಾಪನೆ: 1906 ರಿಜಿಸ್ಟರ್ಡ್ ಆಫೀಸು: **ಉಡುಪಿ**, ಮೈಸೂರು ರಾಜ್ಯ
6 ರಾಜ್ಯಗಳಲ್ಲಿ ಒಟ್ಟು 62 ಶಾಖೆಗಳು — ದೇಶದಾದ್ಯಂತ ಏಜನ್ಸಿಗಳು.

ರವೀಂದ್ರ ವಾಣಿ

ವಿಶ್ವದೊಡನೆ ವ್ಯಕ್ತಿಯ ಸಂಬಂಧ

(ಲೇಖಾಂಕ ೧)

ಪ್ರಕೃತಿ ಮಾನವನನ್ನು ಸ್ವಾಗತಿಸಿತು; ಆತನನ್ನು ಪೋಷಿಸಿತು; ಆತನಿಗೆ ಜೀವನದ ಮೌಲ್ಯಗಳನ್ನು ಬೋಧಿಸಿತು. ಮಾನವನ ಮೊತ್ತ ಮೊದಲ ಗುರು ಪ್ರಕೃತಿ. ಸಂಸ್ಕೃತಿಯ ಬೀಜವನ್ನಾತನಲ್ಲಿ ಬಿತ್ತಿದವಳೇ ಪ್ರಕೃತಿಮಾತೆ.

ಮೂಲ ಲೇಖಕರು: ವಿಶ್ವಕವಿ ರವೀಂದ್ರನಾಥ ಟಾಗೋರ್.

ಅನುವಾದಕರು: ಶ್ರೀ ಕೆ. ಎನ್. ಭಟ್, ಶಿರಾಡಿಪಾಲ್.

ಪ್ರಾಚೀನ ಕಾಲದ ಗ್ರೀಸ ದೇಶದ ಸಭ್ಯತೆಯ ವಿಕಾಸವು ನಗರದ ಆವರಣದೊಳಗಿನ ಕೋಟೆಯಲ್ಲೇ ಆಗಿತ್ತು. ಆ ರೀತಿ ಆಧುನಿಕ ಸಭ್ಯತೆಯು ಪೂರ್ಣವಾಗಿ ಇಟ್ಟಿಗೆ ಮತ್ತು ಕಲ್ಲುಗಳ ನಡುವೆ, ಜನ್ಮವೆತ್ತಿತು. ಬಳಿಕ ಈ ಜಡವಸ್ತುಗಳ ವಾತಾವರಣದಲ್ಲೇ ಅದರ ವಿಕಾಸವಾಯಿತು.

ಮಾನವನ ಮನಸ್ಸಿನ ಮೇಲೆ, ಈ ಪ್ರಾಚೀನ ಸಭ್ಯತೆಯ ಆವರಣದ ಪ್ರಭಾವ ಚೆನ್ನಾಗಿ ಬಿದ್ದಿದೆ. ನಮ್ಮ ವಿಚಾರಗಳ ಮೇಲೆ, ಈ ವ್ಯೂಹ ನೀತಿಯ, ಪ್ರಭಾವ ಅಚ್ಚಳಿಯದೆ ಉಳಿದಿದೆ. ಈ ಪ್ರಭಾವವು ನಾವು ಕಂಡು ಹಿಡಿದ ಆದರ್ಶಗಳನ್ನೂ ಸಹ ಸಂಕುಚಿತವಾದ ಅಡ್ಡಗೋಡೆಗಳ ಮಧ್ಯೆ ನಿಲ್ಲಿಸುವ ಪ್ರೇರಣೆಯನ್ನು ಕೊಡುತ್ತಿದ್ದು ಒಂದರಿಂದ ಮತ್ತೊಂದನ್ನು ಪ್ರತ್ಯೇಕವೆಂಬ, ಸಂಕುಚಿತ ಭಾವನೆಯನ್ನುಂಟುಮಾಡಿ ಪ್ರೋತ್ಸಾಹಿಸುತ್ತಿರುವುದು. ಇದರಿಂದ ನಾವು, ಒಂದು ರಾಷ್ಟ್ರದಿಂದ ಮತ್ತೊಂದನ್ನು ನಮ್ಮ ಜ್ಞಾನದಿಂದ ಮತ್ತೊಬ್ಬನ ಜ್ಞಾನ ಶಕ್ತಿಯನ್ನು ಪ್ರಕೃತಿಯಿಂದ ಮನುಜನನ್ನು ಬೇರೆ ಬೇರೆಯಾಗಿ ಕಂಡು ನೋಡುವ, ಅಭ್ಯಾಸಿಗಳಾಗುತ್ತ, ಇದರಿಂದಾಗಿ ನಾವು ಅರ್ಜಿಸಿದ ವಸ್ತುಗಳಿಗಿಂತ, ಹೊರಗಿರುವ, ಹೊರಗಿನವರ ವಸ್ತುಗಳನ್ನು ಸಂದೇಹ ತುಂಬಿದ ದೃಷ್ಟಿಯಿಂದ ನೋಡುವ ಪ್ರವೃತ್ತಿಯುಂಟಾಗಿ ಆ ಪ್ರವೃತ್ತಿ ನಮ್ಮಲ್ಲಿ ಉಂಟಾಗುವುದು. ಇಂತು ನಮ್ಮ ಸುತ್ತಲೂ ದುರ್ಭೇದ್ಯವಾದ ಅಡ್ಡ ಗೋಡೆಗಳಿದ್ದು, ನಾವು ಅವುಗಳನ್ನು ಭೇದಿಸಿ ಹೊರಗಿನ ಸತ್ಯವನ್ನು ಕಾಣಲಾರೆವು, ಎಂಬ ಭಾವನೆ ಮೊಳೆತು, ನಾವು ಹೊರಗಿನ ಪ್ರಪಂಚವನ್ನು—ಸತ್ಯವನ್ನು ಕಾಣಬೇಕಾದರೆ, ಸಂಘರ್ಷ ರೂಪದ ಯುದ್ಧವನ್ನೇ ಮಾಡಬೇಕಾಗುತ್ತದೆ.

ಪ್ರವಾಸೀ ಆರ್ಯರು ಪ್ರಪ್ರಥಮವಾಗಿ ಈ ದೇಶಕ್ಕೆ ಬಂದಾಗ ಈ ಭೂಮಿಯು ವಿಶಾಲವಾಗಿದ್ದು ವನ ಉಪವನಗಳಿಂದ ಶೋಭಿಸುತ್ತಿತ್ತು. ಈ ಅರಣ್ಯವನೆ ಸ್ಥಾನವನ್ನು ತಮ್ಮ ನಿವಾಸ ಸ್ಥಾನವನ್ನಾಗಿ ಮಾಡಿಕೊಳ್ಳಲು ಈ ಪ್ರವಾಸಿಗಳಿಗೆ ಬಹಳ ಸುಲಭವಾಯಿತು. ನಿಬಿಡಾರಣ್ಯದ ನಡುವೆ ಬೀಡುಬಿಟ್ಟ ಆರ್ಯರನ್ನು ಸೂರ್ಯನ ತಾಪದಿಂದ—ಬಿರುಗಾಳಿಯಿಂದ ರಕ್ಷಿಸಿದ ಈ ನಿಬಿಡಾರಣ್ಯವು ಸರ್ವ ವಿಧದಿಂದಲೂ ಅವರಿಗೆ ಶಾಂತಿಯನ್ನಿತ್ತಿತು. ಅವರ ಪಶುಗಳಿಗೆ ಧಾರಾಳವಾಗಿ ಹುಲ್ಲು ಸಿಕ್ಕುತ್ತಿದ್ದು, ಅಗ್ನಿಯನ್ನು ಪ್ರಜ್ವಲಿಸುವ ಯಜ್ಞಕ್ಕೆ ಬೇಕಾಗ ಸಮಿಧೆಗಳಿಗೂ ಅಲ್ಲಿ ಕೊರತೆ ಇರಲಿಲ್ಲ. ಪರ್ಣಕುಟೀರಗಳನ್ನು ಕಟ್ಟಲು ಬೇಕಾದ ಸಾಮಗ್ರಿಯೆಲ್ಲವೂ ಅವರಿಗೆ ಅಲ್ಲಿಯೇ ದೊರೆಯಿತು. ಈ ಪ್ರಾಕೃತಿಕ ಸೌಂದರ್ಯ—ಸೌಕರ್ಯಗಳನ್ನು ಪಡೆದ' ಆನಂದಪಟ್ಟ ಆರ್ಯರು ಆ ಬಳಿಕ ಗ್ರಾಮ ಗ್ರಾಮಗಳನ್ನೆ ಕಟ್ಟಿದರು ಜನ ವಸತಿ ಹೆಚ್ಚಿದಂತೆ, ಭತ್ತವೇ ಮೊದಲಾದ ಆಹಾರ ಧಾನ್ಯಗಳ ಉತ್ಪಾದನೆಯೂ ಹೆಚ್ಚಿ ಆ ಕಾಡು, ನಾಡಾಗಿ ಬೆಳಗಿತು.

ಇಂತು, ನಮ್ಮ ಭಾರತೀಯ ಸಂಸ್ಕೃತಿಯ ಬೀಜವು ಅರಣ್ಯದಲ್ಲೇ ಮೊಳೆತು, ಬೆಳೆಯಿತು. ಅದರ ಜನ್ಮವೂ ವಿಕಾಸವೂ ಇಂತು ವಿಶೇಷ ಪರಿಸ್ಥಿತಿಗಳಿಂದಲೇ ಆದ ಕಾರಣ, ಈ ಸಂಸ್ಕೃತಿಯ ರೂಪ ರೇಖೆಯೂ ವಿಶೇಷತೆಯಿಂದಲೇ ಕೂಡಿರುವುದು. ಪ್ರಕೃತಿಯ ನೈಜ ವಾತಾವರಣದಲ್ಲಿ ಜೀವಧಾರಣೆ ಮಾಡಿದ ಈ ಸಂಸ್ಕೃತಿಯದೇಕ, ಪ್ರಕೃತಿಯ ಸೌಕರ್ಯಗಳಿಂದ ಬೆಳೆದು ಪುಷ್ಟವಾಯಿತು. ಈ ಪರಿಯಿಂದ ಭಾರತೀಯ ಸಂಸ್ಕೃತಿಯ ಜನನಿಯೇ ಈ ಪ್ರಕೃತಿಯಾಗಿರುವಳು

ಈ ವಿಧದ ವನ್ಯ ಜೀವನವು ಮನುಷ್ಯನ ವಿಚಾರ ಶಕ್ತಿಯನ್ನು ಕುಂಠಿತಗೊಳಿಸುವುದು, ಮತ್ತು ಜೀವನದ ಮಟ್ಟವನ್ನು ಕೀಳ್ಮಟ್ಟಕ್ಕಿಳಿಸಿ ಮನಸ್ಸಿನ ಉದಯೋನ್ಮುಖವಾದ ಭಾವನೆಗಳನ್ನು ನಾಶವಾಡುವುದು ಎಂದು-ಹೇಳಲಾಗುತ್ತಿದೆಯಾದರೂ, ನಮ್ಮ ದೇಶದ ಇತಿಹಾಸವು ಈ ಹೇಳಿಕೆಗೆ ವಿರೋಧ ಸಾಕ್ಷಿಯಾಗಿದೆ—ವನ್ಯ ಜೀವನವು ಮಾನವನ ಮನಃಶಕ್ತಿಯನ್ನು ಕುಂಠಿತಗೊಳಿಸುವ ಬದಲು, ವಿಶೇಷವಾಗಿ ವಿಕಾಸಗೊಳಿಸಲು ಪ್ರೇರಕವಾಯಿತು—ಎಂದು ಇತಿಹಾಸವು ಸಾಕ್ಷಿ ಹೇಳುತ್ತಿದೆ. ಸಜೀವ ಪ್ರಕೃತಿಯು, ನಿರಂತರವಾದ ಸಹವಾಸದ ಫಲದಿಂದ ಮಾನವನ ಸಂಸ್ಕೃತಿಗೆ—'ಕೃಪಣನು ಭಯಭೀತನಾಗಿ ತನ್ನ ನಿಧಿಯನ್ನು ಅಡಗಿಸಿ ಇಡುವಂತೆ, ನಾವು ನಮ್ಮ ತನದ ಮೇಲೆ, ಎಂದರೆ, ಮಾನವತೆಯ, ಧರ್ಮ, ಅಧಿಕಾರದ ಮೇಲೆ, ಆವರಣವನ್ನು ಹಾಕಿ ಮುಚ್ಚಿ ಇಡುವುದು ಆಗತ್ಯವಿಲ್ಲ. ನಾವು ನಮ್ಮ ಸ್ವತ್ವವನ್ನು ಬೇರೆ ಬೇರೆಯಾಗಿ ತಿಳಿದು ಸುರಕ್ಷಿತಪಡಿಸುವುದೂ ಕೂಡ ವ್ಯರ್ಥ, ಎಂಬ ಪಾಠ ದೊರೆಯಿತು. ಅಲ್ಲದೆ, ಮನುಷ್ಯನ ಧ್ಯೇಯವು ಕೇವಲ ಸ್ವತ್ವವನ್ನು ವೃದ್ಧಿಗೊಳಿಸುವುದಕ್ಕಾಗಿ ಅಲ್ಲ; ಸ್ವಾನುಭವ ಜಗದು, ಸಮೀಪಸ್ಥವಾದ, ಚೇತನ, ಅಚೇತನ ವಸ್ತುಗಳೊಡನೆ, ಸಂಮಿಲನಗೊಂಡು, ವಿಕಾಸದ ಪಥಹಿಡಿದು, ಅಭಿವೃದ್ಧಿ ಹೊಂದುವುದೇ ಆಗಿದೆ! ಎಂಬುದು, ಇದೂ ಕೂಡ, ಪ್ರಕೃತಿಯಿಂದ ದೊರೆತ ಪಾಠವಾಗಿದೆ. ಇದಿಷ್ಟು ಮಾನವ ಜೀವಿಗೆ ಯಾವಾಗ ತಿಳಿಯಿತೋ? ಆಗ ಸತ್ಯವೆಂಬ ತತ್ವದಲ್ಲಿ—ಸಂಪೂರ್ಣ ವಿಶ್ವವೇ ಸಮಾವೇಶಗೊಂಡಿದೆ, ಮತ್ತು ಯಾವ ವಸ್ತುವೇ ಆಗಲಿ ಅನ್ಯ ವಸ್ತುಗಳಿಂದ ಪ್ರತ್ಯೇಕವಿದ್ದರೂ, ಅನ್ಯ ವಸ್ತುಗಳ ಸಹಕಾರವಿಲ್ಲದೆ, ವೃದ್ಧಿಯಾಗಲು ಸಾಧ್ಯವಿಲ್ಲ. ಮಾನವರಿಗೂ ಪ್ರಾಣಿಮಾತ್ರಕ್ಕೂ ಸಹ ಇದು ಅನ್ವಯಿಸುತ್ತದೆ. ಸತ್ಯಪ್ರಾಪ್ತಿಯ ನಿಜವಾದ ಮಾರ್ಗವು, ವಿಶ್ವದ ಸರ್ವ ವಿಭೂತಿಗಳೊಡನೆ, ಆತ್ಮಾನುಭೂತಿಯನ್ನು ಪಡೆಯುವುದೇ ಆಗಿದೆ, ಎಂಬುದೂ ಕೂಡ ಗೊತ್ತಾಯಿತು.

ಆತ್ಮ—ವಿಶ್ವಾತ್ಮ ಇವುಗಳಲ್ಲಿ ಸಮಾನತೆಯನ್ನು ಅನುಭವ ಮಾಡುವುದೇ ನಮ್ಮ ಪೂರ್ವಜರಾದ ತತ್ವದರ್ಶಿಗಳಾದ, ವನವಾಸಿಗಳ ಧ್ಯೇಯವಾಗಿತ್ತು. ತಮ್ಮ ಸತತವಾದ ಸಾಧನೆಯಿಂದ ಅವರು, ಈ ಧ್ಯೇಯವನ್ನು ಸಾಧಿಸಿ ತಮ್ಮದನ್ನಾಗಿ ಮಾಡಿಕೊಂಡಿದ್ದರು.

ಕ್ರಮೇಣ, ಗ್ರಾಮ ಗ್ರಾಮಗಳಾಗಿ ಹೆಚ್ಚು ಹಸುರಾದ ಪೈರಿನಿಂದ ಬೆಳಗಿದ ಅರಣ್ಯ ಸ್ಥಳಗಳಲ್ಲಿ ಮತ್ತೆ ಭವ್ಯವಾದ ನಗರಗಳು ನಿರ್ಮಾಣಗೊಂಡವು ಶಕ್ತಿವಂತರಾದ ರಾಜರು ಸಾಮ್ರಾಜ್ಯಗಳನ್ನೂ ಕಟ್ಟಿದರು. ಇವುಗಳ ಮಹಾಶಕ್ತಿಯು ಅಭ್ಯುದಯದಲ್ಲಿ ಬಂದು, ದೂರ ದೂರದ ರಾಷ್ಟ್ರಗಳೂ ಕೂಡ ತಲೆಬಾಗಿ ಪೂಜ್ಯತೆಯನ್ನಿತ್ತವು. ಇಂತಹ ಈ ರಾಜ್ಯಶಕ್ತಿಯ ವೈಭವದ ಮಧ್ಯಾಹ್ನ ಕಾಲದಲ್ಲಿಯೂ ಕೂಡ ಭಾರತದ ಆತ್ಮವು, ತನ್ನ ಹಿಂದಿನ, ಅರಣ್ಯವಾಸಿಗಳಾದ, ಋಷಿ ಶ್ರೇಷ್ಠರ ದರ್ಶನ ಆತ್ಮಜ್ಞಾನ ಹಾಗೂ ಆದರ್ಶಗಳನ್ನು ಮರೆಯಲಿಲ್ಲ. ಮಾತ್ರವಲ್ಲ ಆದರಿಂದಲೇ ಪ್ರಭಾವಿತವಾದ ಭಾರತವು ಆ ಋಷಿಗಳ ಆದರ್ಶದ ಬೆಳಕಿನಲ್ಲೇ ಮುಂದಡಿ ಇಡತೊಡಗಿತು. ರಾಜ ಭವನದಲ್ಲಿದ್ದುಕೊಂಡು, ಭೋಗ ವಿಲಾಸ ಮಗ್ನರಾಗಿದ್ದ ರಾಜರೂ ಕೂಡ, ಪರ್ಣ ಕುಟೀರ ವಾಸಿಗಳ ಜೀವನ, ಸಿದ್ಧಾಂತಗಳನ್ನು ಶ್ರದ್ಧಾಭಕ್ತಿಗಳಿಂದ ಒಪ್ಪಿ ಸ್ವೀಕರಿಸುತ್ತಿದ್ದರು ಮತ್ತು ಈ ಶ್ರದ್ಧಾಭಕ್ತಿಗಳೇ ಸರ್ವಸ್ವವೆಂದು ತಿಳಿದು, ತಮ್ಮ ವಿಚಾರಗಳನ್ನು ಪರಿವರ್ತಿಸಿಕೊಳ್ಳುತ್ತಿದ್ದರು.

ಪಾಶ್ಚಾತ್ಯರಿಗೆ, ಪ್ರಕೃತಿಯ ಮೇಲೆ, ವಿಜಯವನ್ನು ಸ್ಥಾಪಿಸುವ ಗರ್ವವಿರುವುದು. ಇದಕ್ಕೆ ಕಾರಣ ಅಲ್ಲಿಯ ಪರಿಸ್ಥಿತಿಗಳಿಗನುಗುಣವಾಗಿ ಅವರು ಹೀಗೆ ಮಾಡಲು ವಿವಶರಾಗಿರುವುದು. ಅಲ್ಲಿ ಅವರು, ಜೀವನದ ಪ್ರತಿ ಹೆಜ್ಜೆ ಹೆಜ್ಜೆಗೂ ಪ್ರಕೃತಿಯೊಡನೆ, ಸಂಘರ್ಷ ನಡೆಸಬೇಕಾಗುತ್ತದೆ. ಪ್ರಕೃತಿಯನ್ನು ಸೋಲಿಸಿಯೇ ಅವರು ಜೀವನೋಪಯೋಗಿ ಸಾಮಗ್ರಿಗಳನ್ನು ಸಂಗ್ರಹಿಸಬೇಕಾಗುವುದು. ಪಾಶ್ಚಾತ್ಯರ ಈ ಭಾವನೆಯು, ಅಲ್ಲಿಯ ನಗರ ಜೀವನದ ಸಭ್ಯತೆಯಿಂದ ಬಂದುದಾಗಿದೆ. ನಗರ ವಾಸದಲ್ಲಿ ಮನುಷ್ಯನಿಗೆ ಪ್ರಕೃತಿಯ ವರದಾನ, ಶೂನ್ಯವಾಗುವುದು. ಇದರಿಂದಾಗಿ, ವಿಶ್ವಾತ್ಮನಲ್ಲಿ ಇರಬೇಕಾದ ಅವರ ಸಂಬಂಧ ಕಡಿದು ಹೋಗುವುದು. ನಗರವಾಸಿ ಮನುಷ್ಯನು, ತನ್ನ ಮನಸ್ಸಿನ ಸಂಕುಚಿತವಾದ ಕಲ್ಪನೆಯಿಂದಲೇ ತನ್ನ ಜೀವನಕ್ಕೆ ಆನಂದ ನೀಡಬಲ್ಲ ಜ್ಯೋತಿಯನ್ನು ಹುಡುಕಬೇಕಾಗುತ್ತದೆ. ಇಂತು ಪ್ರಕೃತಿಯಿಂದ ವಂಚಿತನಾದ ಮಾನವನ ಜೀವನವು, ಪೂರ್ಣವಾಗಿ ಅಸ್ವಾಭಾವಿಕವಾದ ಸಂಘರ್ಷದ ಶಾಪವನ್ನು ಹೊಂದಿರುತ್ತದೆ.

ನಮ್ಮ ಭಾರತದ ವಿಚಾರ, ದೃಷ್ಟಿ ಇದಕ್ಕೆ ಭಿನ್ನವಾಗಿದೆ ಪ್ರಕೃತಿಯೂ, ಮಾನವನೂ, ಒಂದೇ ವ್ಯಾಪಕವಾದ ಸತ್ಯದ ಅಂಗ ಎಂದು, ಭಾರತದ ವಿಚಾರ—ಸಿದ್ಧಾಂತವಾಗಿದೆ. ಜೀವ ಮತ್ತು ಪ್ರಕೃತಿ ಇವೆರಡರೊಳಗೂ ಐಕ್ಯ ಭಾವನೆಯನ್ನು ಸ್ಥಾಪಿಸುವುದೇ ಭಾರತೀಯ ದರ್ಶನದ ಧ್ಯೇಯವಾಗಿದೆ. ನಮ್ಮ ಬಾಹ್ಯ ಪರಿಸ್ಥಿತಿಗಳು ನಮಗೆ ತೀರಾ ಅಪರಿಚಿತವಾಗಿದ್ದು ವಿಜಾತೀಯವಾಗಿದ್ದರೆ, ಆ ಪರಿಸ್ಥಿತಿಯೊಡನೆ ಹೊಂದಿಕೊಂಡು, ನಡೆಯುವುದು, ಅಸಂಭವವಾಗಬಹುದು. ಪ್ರಕೃತಿಯು, ಪ್ರಯತ್ನವಿಲ್ಲದೆ, ಮನುಷ್ಯನ ಆವಶ್ಯಕತೆಗಳನ್ನು ಪೂರೈಸಲಾರದು, ಇದರಿಂದಾಗಿ ಮಾನವನು ಪ್ರಕೃತಿಯ ವಿರುದ್ಧ ಸ್ವರವೆತ್ತುವುದೂ ಇದೆ. ಪ್ರಕೃತಿಯಿಂದ ಸತ್ಫಲಗಳನ್ನು ಪಡೆಯಲು ಮಾನವನು ಪ್ರಯತ್ನ ಮಾಡಬೇಕಾಗುವುದು. ಈ ಪ್ರಯ

(೧೦ನೇ ಪುಟ ನೋಡಿರಿ)

ಸ್ಥಾಪನೆ: 1924

ದಿ ಕರ್ನಾಟಕ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಆಫೀಸು: ಮಂಗಳೂರು—3.

ಈ ಕೆಳಗಿನ ಬಡ್ಡಿದರಗಳಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು.

ಒಂದು ತಿಂಗಳಿಗೆ	....	ಸಾ॥ ಸೇಕಡಾ	3-75	ನ.ಪೈಸೇ
ಮೂರು ತಿಂಗಳುಗಳಿಗೆ	....	,,	4-00	,,
ಆರು ತಿಂಗಳುಗಳಿಗೆ	....	,,	4 25	,,
12 ತಿಂಗಳುಗಳಿಂದ23 ತಿಂಗಳುಗಳ ವರೆಗೆ	....	,,	4-50	,,
24 ತಿಂಗಳುಗಳಿಂದ 48 ತಿಂಗಳುಗಳ ವರೆಗೆ	....	,,	4 75	,,

"ಹನಿ ಡಿಪೋಸಿಟ್ಸ್" ನಲ್ಲಿ

ನಿಮ್ಮ ದೈನಂದಿನ ಉಳಿತಾಯವನ್ನು ವಿನಿಯೋಗಿಸಿರಿ.

THE KARNATAKA BANK LIMITED.

ಐಕ್ಯಗಾನ:

ಪಶುಪಕ್ಷಿಗಳಿಂದ ಪಾಠ ಕಲಿಯಿರಿ

ನಾವು ನಮಗಿಂತ ಶ್ರೇಷ್ಠ ಜೀವಿಗಳಿಲ್ಲವೆಂದುಕೊಂಡು ಅಭಿಮಾನಪಡುತ್ತೇವೆ. ಆದರೆ, ನಮ್ಮ ತಲೆಯನ್ನೂ ತಗ್ಗಿಸುವಂತೆ ಪಶುಪಕ್ಷಿಗಳು ಬದುಕುತ್ತವೆ. ಅವುಗಳಲ್ಲಿ ಪ್ರಣಯದೊಡನೆ ಹೃದಯಾಂತರಾಳದ ಅನುರಾಗವಿದೆ; ಪದವಿಯ ತೃಷ್ಣೆ, ದ್ವೇಷ, ಮಾತ್ಸರ್ಯ, ಲೋಭ—ಇಲ್ಲವೇ ಇಲ್ಲ.

ಪ್ರಾಣಿಕೋಟಿಗಳಲ್ಲಿ ಮುಂದುವರಿದ ಮಾನವನಿಗೆ ಮಾತ್ರ ನೀತಿಶಾಸ್ತ್ರವಿರುವುದಲ್ಲ ಕಾಡಿನ ಜೀವ ಜಂತುಗಳಿಗೂ ಇದೆಯೆಂದರೆ ನೀವು ವಿಸ್ಮಯಗೊಳ್ಳುವಿರಿ. ಇವೆರಡೂ ನೀತಿಶಾಸ್ತ್ರಗಳು ಒಂದನ್ನೊಂದು ಹೋಲುತ್ತವೆಯೆಂದರೆ ಮತ್ತಷ್ಟು ಆಶ್ಚರ್ಯಪಡುವಿರಿ. ಅರಣ್ಯದ ಜೀವ ಜಂತುಗಳು ಸಾಮಾನ್ಯವಾಗಿ ಆದರಶೀಲ, ಕೋಮಲ ಹೃದಯಿಗಳಾಗಿರುತ್ತವೆ; ವಿವೇಕಿಗಳೂ ಹೌದು. ಇವುಗಳಲ್ಲಿಯೂ ಶಾಂತಿಪ್ರಿಯತೆಯಿದೆ.

ಕೆಲವೊಮ್ಮೆ ಮೃಗಪಕ್ಷಿಗಳು ತಮ್ಮ ಸುರುಚಿ ಮತ್ತು ಗಂಭೀರಾನುಭೂತಿಯನ್ನು ಪ್ರದರ್ಶಿಸುತ್ತವೆ. ಉದಾಹರಣೆಗಾಗಿ, ವಿಶ್ವಾಸಘಾತ ಮಾಡಿದವನಿಗೆ ಮಾನವ ಸಮಾಜದಲ್ಲಿ ಸಿಗುವ ಶಿಕ್ಷೆಗೂ ಮಿಗಿಲಾಗಿ ಪಕ್ಷಿ-ಪಶು ಸಮಾಜದಲ್ಲಿ ದೊರೆಯುತ್ತದೆ. ಅವುಗಳ ಸಮಾಜದಲ್ಲಿ ನೀತಿ ನಿಯಮ ಪಾಲನೆಯು ಸರಿಯಾಗಿ ನಡೆಯುವುದೇ ಇದಕ್ಕೆ ಕಾರಣ. ಇಲ್ಲವಾದರೆ, ನೀತಿಯ ಉಲ್ಲಂಘನೆ ಮಾಡಿದ ಪಶು-ಪಕ್ಷಿಯು ತನ್ನೊಡನೆ ತನ್ನ ಸಮಾಜವನ್ನೂ ಅಪಾಯಕ್ಕೆ ತಳ್ಳುವುದು ಸಾಧ್ಯವೆಂದವು ಅರಿತಿವೆ.

ಪಶುಪಕ್ಷಿಗಳಲ್ಲಿ ಪ್ರತಿಯೊಂದು ಸಮೂಹದಲ್ಲೂ ಪಹರೆದಾರರು ಇದ್ದಾರೆ. ಇವರ ಕರ್ತವ್ಯವೂ ಹಿರಿದಾಗಿರುವುದು. ಒಂದು ಬಾರಿ ಕಾಗೆಗಳ ಕೊತ್ತಳಿಯೊಂದು ಧಾನ್ಯದ ಗದ್ದೆಯನ್ನು ಮುತ್ತಿದುವು. ಅವು ತಮ್ಮ ಪಹರೆದಾರನನ್ನು ಅನತಿ ದೂರದ ಮರದ ಬುಡದಲ್ಲಿ ನಿಲ್ಲಿಸಿ ತಮ್ಮ ಕೆಲಸಕ್ಕೆ ತೊಡಗಿದುವು. ಪಹರೆದಾರ ಕಾಗೆ ಆಲಸಿಯಾಗಿ ನಿದ್ದೆ ಮಾಡತೊಡಗಿತು. ಅಷ್ಟರಲ್ಲಿ ಗದ್ದೆಯ ಯಜಮಾನ ಕೋವಿ ಹಿಡಿದುಕೊಂಡು ಬಂದನು. ಒಂದರ ಹಿಂದೊಂದೆಂಬಂತೆ ಗುಂಡು ಸುರಿಸಿದನು. ಹಲವು ಕಾಗೆಗಳು ಮೃತ್ಯುಮುಖವಾದರೂ ಹತ್ತು-ಹನ್ನೆರಡು ಬದುಕಿ ಹಾರಿ ಹೋದವು. ಅವು ತಮ್ಮ ಪಹರೆದಾರನ ಸಮೀಪ ಬಂದು ಅದನ್ನು ಹಿಂಸಿಸ ತೊಡಗಿದುವು. ಪಹರೆದಾರ ಕಾಗೆ ಯಜಮಾನ ಬಂದುದನ್ನು ಕಂಡು ತನ್ನವರನ್ನು ಕೂಗಿ ಎಚ್ಚರಿಸಬೇಕಾಗಿತ್ತು. ಆದರೆ, ವ್ಯಕ್ತಿಗತ ದೋಷದಿಂದ ಆತ ಕರ್ತವ್ಯ ಪರಾಙ್ಮುಖನಾದುದಕ್ಕೆ ತಕ್ಕ ಶಾಸ್ತಿ ಅದಕ್ಕೆ ಲಭಿಸಿತು.

ಇದೇ ರೀತಿಯ ಇನ್ನೊಂದು ಘಟನೆ ನಡೆಯಿತು. ಒಬ್ಬ ರೈತ ತನ್ನ ಮೈದಾನದಲ್ಲಿ ಸುತ್ತಾಡುತಿದ್ದಾಗ, ಎರಡು ನರಿಗಳು ಆಡ್ಡಾಡುತ್ತಿರುವುದು ಕಂಡಿತು. ಆತ ಮರೆಯಲ್ಲಿ ಅವಿತುಕೊಂಡನು. ಒಂದು ನರಿ ಪೊದರೊಂದರಲ್ಲಿ ಅಡಗಿತು; ಮತ್ತೊಂದು ತೆವರಿಯೆಡೆಯಲ್ಲಿ ಹುದುಗಿತು. ಅಷ್ಟರಲ್ಲಿ ಮೊದಲಿನ ನರಿ ಏನೋ ಕೂಗಿತು. ಆ ಸಮಯದಲ್ಲೇ ಒಂದು ಮೊಲವು ಆ ದಾರಿಯಾಗಿ ಹೆದರಿ ಓಡತೊಡಗಿತು. ತೆವರಿಯೆಡೆಯ ನರಿ ಅದನ್ನು ಬೆನ್ನಟ್ಟಿ ನೆಗೆಯಿತು; ಆದರೆ, ಅದೃಷ್ಟವಶದಿಂದ ಮೊಲ ತಪ್ಪಿಹೋಯಿತು. ಮರೆಯ ನರಿ ಮತ್ತೊಮ್ಮೆ ಕೂಗಿತು. ಆಗ, ಓಡಿಬಂದ ನರಿ ಒಂದುಬಾರಿ ಸುತ್ತಮುತ್ತ ನೋಡಿತು; ಯಾರೂ ಕಾಣದುದನ್ನು ಕಂಡು ರೇಗಿ ಅಡಗಿದ್ದ ನರಿಯೊಡನೆ ಕಾಳಗಕ್ಕೆ ನಿಂತಿತು. ಅವುಗಳ ಹೋರಾಟ ರೈತ ಮರೆಯಿಂದ ಹೊರಬಂದು ಪ್ರಕಟಗೊಳ್ಳುವವರೆಗೂ ನಡೆಯುತಿತ್ತು!

ತಮ್ಮ ಜತೆಗಾರರು ತಮ್ಮನ್ನು 'ಮೂರ್ಖ'ನನ್ನಾಗಿಸುವ ಪ್ರಯತ್ನ ನಡೆಸಿದರೆಂದು ಪಶುಗಳಿಗೆ ತಿಳಿದರೆ, ಅವು ಸೇಡು ತೀರಿಸದೆ ಸುಮ್ಮನಿರವು. ಒಂದು ವಿಶಾಲ ಹತ್ತಿಯ ಹೊಲದ ಬಳಿಯಲ್ಲೇ ಕಾಡು ಇತ್ತು. ಒಂದುದಿನ ಒಂದು ನರಿಯು ಒಂದು ಮೊಲವನ್ನು ಕೊಂದು ಪೊದರೊಂದರಲ್ಲಿ ಅಡಗಿಸಿಟ್ಟಿತು. ಮೊಲ ಬಹಳ ದೊಡ್ಡದಾಗಿತ್ತು, ಅದನ್ನು ಎಳೆಯುವುದೇ ನರಿಗೆ ಮೂಗಿನ ವರೆಗೆ ಬಂದಂತಾಗಿತ್ತು ಅಂತೂ ಎಳೆದು ಇಟ್ಟು ಅದು ಹೊರಟು ಹೋಯಿತು. ಇದನ್ನು ಕಂಡವನೊಬ್ಬ ಆ ಮೊಲದ ಹೆಣವನ್ನು ಜಾರಿಸಿದ; ಅಲ್ಲದೆ ಮುಂದೇನಾಗುವುದೆಂದು ಅಪೇಕ್ಷಿಸುತ್ತಲೇ ಇದ್ದ. ಸ್ವಲ್ಪ ಸಮಯಾನಂತರ, ಅದು ಇನ್ನೊಂದು ನರಿಯನ್ನು ತನ್ನ ಸಂಗಡ ಕರೆದುಕೊಂಡು ಬಂತು ಎರಡೂ ಅಲ್ಲಿ ಇಲ್ಲಿ ಮೂಸಿದುವು. ಆದರೆ, ಏನೂ ವಾಸನೆ ಹತ್ತಲಿಲ್ಲ. ಮೊದಲ ನರಿಯ ಮುಖ ಚಿಂತಾಕ್ರಾಂತವಾದಂತಾದರೆ, ಎರಡನೆಯದು ವ್ಯಗ್ರವಾಯಿತು. ತನ್ನೊಬ್ಬನಿಂದ ಎಳೆಯಲಾಗದೆಂದೋ, ಔತಣಕ್ಕೆಂದೋ ಮೊದಲನೆಯದು ಎರಡನೆಯದನ್ನು ಆದರದಿಂದ ಕರೆತಂದಿತ್ತು. ಪಾಪ, ಇಲ್ಲಿನ ಕಥೆ ಅದಕ್ಕೇನು ಗೊತ್ತು? ಎರಡನೆಯ ನರಿಯು ತನ್ನ ಸ್ನೇಹಿತನ ಮೇಲೆರಗಿತು. ಎರಡರ ನಡುವೆಯೂ ಬಹುಕಾಲ ಕದನ ನಡೆಯುತಿತ್ತು.

ಪ್ರಾಣಿ ಪ್ರಪಂಚದಲ್ಲಿ ನಾಯಕನಿಗೆ ಉನ್ನತಸ್ಥಾನವಿದೆ. ಆತನು ಬೀರಬಲ್ಲನ ಚರ್ಸ್ನ್ಯಾ ಹಾಗೆಯೇ. ಬಹು ಎಚ್ಚರಿಕೆಯಿಂದಾತ ವರ್ತಿಸಬೇಕಾಗುವುದು ಆತನು ತನ್ನ ಕರ್ತವ್ಯಕ್ಕೆ ತಪ್ಪಿದರೆ, ಅವನ ಗುಂಪಿನವು ಅವನನ್ನು ಅಪಮಾನಿಸುತ್ತವೆ. ಒಂದು ರಾಜಹಂಸ ಮೂವತ್ತು ರಾಜಹಂಸಗಳನ್ನು ಕರೆದುಕೊಂಡು ಉತ್ತರಕ್ಕೆ ಹಾರಿಹೋಗುತಿದ್ದುವು. ಅವು ತುಸು ಕೆಳಗಡೆ ಹಾರುತಿದ್ದುವು. ಒಂದು ಗದ್ದೆಯ ಮೇಲ್ಗಡೆಯಿಂದ ನೆಗೆದು ಹೋಗುತ್ತಿರುವಾಗ ರೈತರು ಗುಂಡು ಹಾರಿಸಿದರು. ತತ್‌ಕ್ಷಣ ಹಂಸಗಳಿಗೆ ತಮ್ಮ ನಾಯಕನ ತಪ್ಪನ್ನು ಕಂಡುಕೊಂಡು ಕೂಗಾಡಿ ಆತನನ್ನು ನಿಂದಿಸಿದುವು; ಮತ್ತು ಅಗ್ರಸ್ಥಾನದಿಂದ ಅವನನ್ನು ತಪ್ಪಿಸಿದುವು. ಹೊಸ ನಾಯಕನ ನೇತೃತ್ವದಲ್ಲಿ ಎತ್ತರದಲ್ಲಿ ಹಾರಿ ಅವು ತಮ್ಮ ಯಾತ್ರೆಯನ್ನು ಮುಗಿಸಿದುವು.

ವೈಯಕ್ತಿಕ ನೈರ್ಮಲ್ಯ ಪಶು-ಪಕ್ಷಿ ಜಾತಿಯ ಶಿಷ್ಟಾಚಾರಗಳಲ್ಲಿ ಅಗ್ರಗಣ್ಯವಾಗಿದೆ. ನೈರ್ಮಲ್ಯ ಸಂಬಂಧದ ನಿಯಮ ಪಾಲನೆ ಇವುಗಳಲ್ಲಿ ಸ್ವಾಭಾವಿಕವಾಗಿದೆ ನಾವೆಲ್ಲರೂ ಹೀನದೃಷ್ಟಿಯಿಂದ ನೋಡುವ ಕೊಳಕು ತಿನ್ನುವ ಪಕ್ಷಿಗಳು ವಿಶೇಷ ಸ್ವಚ್ಛವಾಗಿರುತ್ತವೆ. ಒಬ್ಬ ಬೇಟೆಗಾರನು, "ನಾನು ಇನ್ನೂರು ಜಿಂಕೆಗಳನ್ನು ಕಂಡಿದ್ದೇನೆ ಇವುಗಳಲ್ಲಿ ಗಾಯಗೊಂಡವುಗಳನ್ನು ಉಳಿದು ಎಲ್ಲವೂ ತಮ್ಮ ಸೌಂದರ್ಯ ಬಲದಿಂದ ಆಕರ್ಷಿಸಿದುವು" ಎಂದು ಹೇಳುತ್ತಾನೆ. ಸೌಂದರ್ಯೋಪಾಸನೆಯು ವೈಯಕ್ತಿಕ ಆರೋಗ್ಯ ನಿಯಮಪಾಲನೆಯಿಂದ ಮಾತ್ರ ಸಾಧ್ಯವಾಗುವುದು.

ನಮ್ಮ ಸುತ್ತಲೂ ಇರುವ ಕಾಡುಗಳಲ್ಲಿ, ಗದ್ದೆಗಳಲ್ಲಿ, ಅಥವಾ ಆಕಾಶಗಳಲ್ಲಿ ಪಶು-ಪಕ್ಷಿಗಳ ಪ್ರಣಯ ಸಂಬಂಧಿ ಶಿಷ್ಟಾಚಾರವನ್ನು ಕಾಣುತ್ತೇವೆ. ಇವುಗಳ ಪುಂಸ್ತ್ರೀಗಳಲ್ಲಿ ಒಂದು ವಿಧದ ವಿವೇಕಪೂರ್ಣ ಕೋಮಲತೆಯಿರುವುದು ಗೋಚರಿಸುತ್ತದೆ. ಇವುಗಳಲ್ಲಿ ಕೇವಲ ಶಾರೀರಿಕ ಆಕರ್ಷಣೆ ಮಾತ್ರವಲ್ಲ, ಹೃದಯಾಂತರಾಳದ ಅನುರಾಗವೂ ಇದೆಯೆಂಬುದು ಇದರಿಂದ ಗೊತ್ತಾಗುತ್ತದೆ. ಕಾರ್ಡಿನಲ್ ಜಾತಿಯ ಹಕ್ಕಿಯು ವರ್ಷವಿಡಿ ತನ್ನ ಜೀವನ ಸಂಗಾತಿಯನ್ನು ಬದಲಾಯಿಸುವುದಿಲ್ಲ. ಶರದೃತುವಿನ ತಂಪು ರಾತ್ರಿಯಲ್ಲಿ ಅವು ತಮ್ಮ ಪತಿ ಅಥವಾ ಪತ್ನಿಯನ್ನು ನೆನಪಿಸುತ್ತ ಪ್ರೇಮ ಗೀತೆಯನ್ನು ಹಾಡುತ್ತಿರುತ್ತವೆ.

ಸಹಿಷ್ಣುತೆಯು ಶಿಷ್ಟಾಚಾರದ ಬಹುಮೂಲ್ಯ ಲಕ್ಷಣ. ಪಶು ಪಕ್ಷಿಗಳಲ್ಲಿ ಸಹಿಷ್ಣುತಾ ಶಕ್ತಿಯು ಅಸೀಮವಾಗಿದೆ. ಪ್ರಣಯ ಸ್ಪರ್ಧೆಯಿಂದಾಗಿ ಅವುಗಳಲ್ಲಿ ಪರಸ್ಪರ ಹೋರಾಟ ನಡೆಯುತ್ತದೆ; ಆದರೂ ಇವುಗಳಲ್ಲಿ ಸಾಮಾಜಿಕ ದ್ವೇಷವೆಂಬುದಿಲ್ಲ. ವ್ಯಾಪಾರಿಕ ವಿರೋಧವಿಲ್ಲ; ಪದವಿ ಮತ್ತು ಒಡೆತನದ ಬಗ್ಗೆ ಕಾದಾಟವಿರುವುದಿಲ್ಲ. ಅವು ಅವರವರ ಅಧಿಕಾರವನ್ನು ಒಪ್ಪಿಕೊಳ್ಳುತ್ತವೆ. ಅವು ಅಧಿಕಾಧಿಕವಾಗಿ ಹೊಂದಿಕೊಂಡೇ ಜೀವನ ನಡೆಸುತ್ತವೆ.

ಅವುಗಳ ಸಹ ಅಸ್ತಿತ್ವಗುಣದ ಬಗ್ಗೆ ಒಬ್ಬನು ಸುಂದರವಾದ ವರ್ಣನೆಯನ್ನು ಮಾಡುತ್ತ ಹೇಳುತ್ತಾನೆ: ನನ್ನ ಉದ್ಯಾನದಲ್ಲಿ ದೊಡ್ಡ ಒಣಗಿದ ದೇವದಾರದ ಮರವಿತ್ತು. ಅದರಲ್ಲಿ ನೂರಾರು ಪೊಟರೆಗಳಿದ್ದುವು. ೯೩ ಅಡಿ ಎತ್ತರದಲ್ಲಿ ಅತಿ ಮೇಲಿನ, ೩೦ ಅಡಿ ಎತ್ತರದಲ್ಲಿ ಅತಿ ಕೆಳಗಿನ ಕೋಟರವಿದ್ದುವು. ಮರಿಯಿಡುವ ಕಾಲದಲ್ಲಿ ನಾನು ವಿಭಿನ್ನ ಜಾತಿಯ ಜೀವ ಜಂತುಗಳನ್ನು ಆ ಪೊಟರೆಗಳಲ್ಲಿ ಕಂಡೆನು. ಒಂದು ಪೊಟರೆಯಲ್ಲಿ ಎರಡು ಗುಬ್ಬಿಗಳು, ಪಾರಿವಾಳ ದಂಪತಿಗಳು ನಾಲದೆ ಗೂಗೆಗಳೂ ಇದ್ದುವು! ಎಲ್ಲವೂ ಪ್ರೇಮದಿಂದ ಶಾಂತಿಯಿಂದ ದಿನಗಳೆಯುತಿದ್ದುವು.

ಈ ರೀತಿಯ ಜೀವನವನ್ನು ಬದುಕಬೇಕಾದರೆ, ಶಿಷ್ಟಾಚಾರ ಹಾಗೂ ನೀತಿಶಾಸ್ತ್ರಗಳ ಪರಿಚಯ ಅವುಗಳಿಗೆ ಅವಶ್ಯ ಇರಲೇಬೇಕು. ಆದರೆ, ಅದು ಹೇಳಿಕೊಟ್ಟು ಓದಿ ಬಂದುದಲ್ಲ; ತಮ್ಮ ವಿವೇಕಯುತ ಬುದ್ಧಿಯಿಂದ ಕಲಿತುಕೊಂಡದ್ದು. ಮೂಕ ಪಶುಪಕ್ಷಿಗಳೇ ಹೀಗಿರುವಾಗ ವಾಚಾಲರೂ ಪ್ರಾಣಿ ಶ್ರೇಷ್ಠರೂ ಆದ ನಾವು ಹೇಗಿರಬೇಕು?

"ನಚಿಕೇತ"ರ

ಇನ್ನೊಂದು ನವೀನ ಕಾದಂಬರಿ–

ಋಣ ಯಾತ್ರೆ

ಇದೀಗ ಪ್ರಕಟವಾಗಿದೆ.

ಬೆಲೆ ರೂ. 1-50 ನ. ಪೈಸೆ.

ಮೊದಲು ಪ್ರಕಟವಾದ ಕಾದಂಬರಿ–

ಭಾವಾರ್ಚನೆ

ಬೆಲೆ ರೂ. 1 25 ನ. ಪೈಸೆ.

ಪ್ರತಿಗಳು ಸಿಗುವ ಸ್ಥಳಗಳು:–
ನವಯುಗ ಪ್ರೆಸ್, ಉಡುಪಿ,
ನವಭಾರತ ಬುಕ್ ಡಿಪೊ, ಉಡುಪಿ.

ಕಳೆದ 5 ವರ್ಷಗಳ ಅದ್ವಿತೀಯ ಪ್ರಗತಿ!!!

	31-12-1956ರಲ್ಲು ರೂ.	31-12-1960ರಲ್ಲು ರೂ.
1. ತೆತ್ತ ಮೂಲಧನ ಮತ್ತು ಕ್ಷೇಮನಿಧಿ:	3,18,000	6,87,000
2. ಗವರ್ನ್‌ಮೆಂಟ್ ಸೆಕ್ಯೂರಿಟಿಸ್ ಇತ್ಯಾದಿ:	6,96,000	45,23,000
3. ಒಟ್ಟು ಸಾಲಗಳು	12 92,000	69,90,000
4. ಒಟ್ಟು ಠೇವಣಾತಿಗಳು	**20,49,000**	**1,17,99,000**
5. ಚಲಾವಣಾ ಭಂಡವಾಳ	**24,55,000**	**1,31,00,000**

ಜನತಾ ಸೇವೆಯ ಮುನ್ನಡೆಯಲ್ಲಿ....

ದಿ. ಪಾಂಗಾಳ ನಾಯಕ್ ಬೇಂಕ್ ಲಿ.,

ರೆಜಿಸ್ಟರ್ಡ್ ಆಫೀಸು: ಉಡುಪಿ, ದ. ಕನ್ನಡ. ಸ್ಥಾಪನೆ: 1920

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಿಗಳು,
ಫಾರ್ಮುಗಳು,
ದೊರೆಯುತ್ತವೆ.

ವಿಚಾರಿಸಿರಿ—
ನವಯುಗ ಪ್ರೆಸ್, ಉಡುಪಿ

ಜನಾಂಗ ಪರಿಚಯ:

ನಗುವಳು ಹಡತಲೆಯ ಮೃತ್ಯು

ಮಧ್ಯ ಭಾರತದಲ್ಲಿರುವ ಆದಿವಾಸಿ ಬಿಲ್ಲ ಜನಾಂಗದವರು ಮೃತ್ಯುವಿನೊಡನೆ ಆಟವಾಡುತ್ತಾರೆ; ಅವರ ಪ್ರತಿಕೋಪೋದ್ರೇಕಕ್ಕೂ ನರಹತ್ಯೆ ನಡೆಯುವುದುಂಟು. ಅಲ್ಲಿಗೆ ಸಾಮಾಜಿಕ ಸುಧಾರಣೆಯ ಗಾಳಿ ಇನ್ನೂ ಸೋಕಿದಂತಿಲ್ಲ.

ಸಂಗ್ರಹಿಸಿದವರು: ಶ್ರೀ ಗೋರಾ.

ಒಬ್ಬ ಬಿಲ್ಲಜಾತಿಯವನು ಅರಣ್ಯದಲ್ಲಿ ಅಡ್ಡಾಡುತ್ತಿರುವಾಗ ಆತನ ದೃಷ್ಟಿಗೆ ಒಂದು ಮೊಲವು ಬಿತ್ತು. ಆತನೊಡನೆ ಕಣೆಗೋಲು ಇಲ್ಲದಿದ್ದುದರಿಂದ, ಮೊಲವನ್ನು ಹಿಡಿಯುವ ಆತುರದಿಂದ ಅಲ್ಲೇ ತನ್ನೊಡನಿದ್ದ ಸಂಗಾತಿಯೊಡನೆ ಹೇಳಿದನು: ನೋಡು, ನಾನು ಥಕ್ಕನೆ ಮನೆಗೆ ಮರಳಿ ಕಣೆಗೋಲು—ಮೊನೆವಿಲ್ಲುಗಳನ್ನು ತರುತ್ತೇನೆ. ನೀನು ನಾನು ಹಿರುಗಿ ಬರುವ ತನಕ ಮೊಲದ ನಡಿಗೆಯತ್ತ ದೃಷ್ಟಿಯಿಡಬೇಕು.

ಸ್ನೇಹಿತರು ಹೀಗೆ ಆಡಿಕೊಳ್ಳುತಿದ್ದಂತೆಯೇ ಆ ಮೊಲವು ಓಡಿ ಹೋಯಿತು. ಮೊದಲನೆಯ ಬಿಲ್ಲ ಮನೆಗೆ ಹೋಗಿ, ಮೊನೆವಿಲ್ಲು ತಂದು ನೋಡುವಾಗ, ಮೊಲದ ಪತ್ತೆಯಾಗಲಿಲ್ಲ ಆವನು ಕೋಪೋದ್ರೇಕವನ್ನು ತಾಳಿದನು. ಮೊಲವು ದೂರ ಓಡುವುದನ್ನು ತಡೆಯದ ಅರೋಪವನ್ನಾತ ತನ್ನ ಸಂಗಾತಿಯ ಮೇಲೆ ಹೊರಿಸಿದನು; ಆತನ ಮೇಲೆ ಬಾಣಪ್ರಯೋಗವನ್ನೂ ಮಾಡಿದನು. ಇದರಿಂದ ನೋಡನೋಡುತಿದ್ದಂತೆಯೇ ಸಂಗಾತಿಯು ಮೃತ್ಯುಮುಖನಾದನು. ಕೆಲಹೊತ್ತಿನಲ್ಲಿಯೇ ಮೃತಬಿಲ್ಲನ ಸೋದರನಿಗೆ ಈ ಸಂಗತಿ ಗೊತ್ತಾಯಿತು. ಆತನು ಮೊದಲಿನ ಬಿಲ್ಲನು ಸಂಚರಿಸುತಿದ್ದಲ್ಲಿಗೆ ಕೋಪದಿಂದ ಧಾವಿಸಿದನು. ಮಾತ್ರವಲ್ಲ, ಆತನನ್ನು ತನ್ನ ಬಾಣಕ್ಕೆ ಗುರಿಮಾಡಿಯೇ ಬಿಟ್ಟನು. ಆದರೆ, ಮೊದಲಿನವನು ಏತರಲ್ಲೂ ಕಡಿಮೆಯವನಾಗಿರಲಿಲ್ಲ. ಎಂತಲೇ ಆತ ಕೊನೆಯುಸಿರೆಳೆಯುತ್ತಿದ್ದಂತೆ ತಾನೂ ಬಾಣ ಪ್ರಯೋಗಿಸಿದನು. ಹೀಗೆ ಪರಸ್ಪರ ಕಣೆ ತೂರಿದುದರಿಂದ ಇಬ್ಬರೂ ಮೃತರಾದರು.

ತನ್ನ ಪ್ರಾಣವನ್ನು ಕೈಯಲ್ಲಿಟ್ಟು ಗಾಬರಿಪಡುತಿದ್ದ ಮೊಲವು ಅವರ ದೃಷ್ಟಿಯಿಂದ ಮರೆಯಾಗಿತ್ತಾದರೂ ಅದರ ಭಯವಿನ್ನೂ ದೂರವಾಗಿರಲಿಲ್ಲ. ಅದು ತನ್ನಿಂದಾಗಿ ಸಾವನ್ನಪ್ಪಿದ ಮೂವರು ಬಿಲ್ಲರನ್ನು ನೋಡುತ್ತ ಆ ದಾರಿಯಾಗಿ ದೂರ ಪೋಡಿತು.

ಈಗಿನ ಗುಜರಾಥ ಮತ್ತು ಮಧ್ಯ ಪ್ರದೇಶದ ಸಂಧಿ ಸ್ಥಳವೊಂದರಲ್ಲಿ ನಡೆದ ಘಟನೆಯಿದು. ಈ ಪ್ರದೇಶದಲ್ಲಿನ ನೂರರಲ್ಲಿ ತೊಂಬತ್ತು ಜನರು ಆದಿವಾಸಿಗಳು ಇವರ ಜೀವನಕ್ರಮವು ಅತೀವ ಸಹಜವಾಗಿರುವಂತೆಯೇ ಕೊಲೆಯನ್ನೂ ತೀರ ಸಹಜವೆಂಬಂತೆಯೇ ಮಾಡುತ್ತಿರುತ್ತಾರೆ.

ಸಮಾಜ ಶಿಕ್ಷಣಾಧಿಕಾರಿಯ ಸಮ್ಮುಖದಲ್ಲಿಯೂ ಇಂತಹುದೇ ಒಂದು ಘಟನೆ ನಡೆಯಿತು. ಈ ಅಧಿಕಾರಿಯು ಝಾಬುವಾ ಜಿಲ್ಲೆಯ ಅಲಿರಾಜಪುರ ವಿಕಾಸ ಕ್ಷೇತ್ರದ ಒಂದು ಗ್ರಾಮದ ಪರಿಶೀಲನೆಗೆ ತೆರಳಿದಾಗ ಇದು ಘಟಿಸಿತು. ಅವರೊಡನೆ ಚಪರಾಸಿಯೂ ಇದ್ದನು. ಅವರು ಗ್ರಾಮ ನಾಯಕನಲ್ಲಿ ಇಳಿದು ಆತನಿಂದ ಯಥಾಶಕ್ತಿ ಸತ್ಕಾರಪಡೆದರು.

ರಾತ್ರೆ ಹೊತ್ತು ಆ ನಾಯಕನು ಶರಾಬನ್ನು ಕುಡಿದನು. ನಶೆಯೇರಿದಾಗ, ಈ ಇಬ್ಬರನ್ನೂ ಮುಗಿಸಿ ಬಿಟ್ಟರೇನು ಎಂಬ ದುರಾಲೋಚನೆ ಆತನಲ್ಲಿ ಸುಳಿಯಿತು. ಮತ್ತೆ ಹೊತ್ತುಗೊತ್ತುಗಳೆಲ್ಲಿ? ಬಿಚ್ಚುಗತ್ತಿಯನ್ನು ಹಿರಿದು ಆತ ನಿದ್ರಾನಿಮಗ್ನ ಅತಿಥಿ ದ್ವಯರತ್ತ ನೆಗೆದ. ಆತನ ಹೆಂಡತಿಯು ತನ್ನ ಪತಿಯ ವಿಕಾರ ಮೂರ್ತಿಯನ್ನು ಕಂಡು ಎಲ್ಲವನ್ನೂ ಅರಿತುಕೊಂಡು, ಓಡಿಬಂದು ಆತನ ಕೈಯನ್ನು ತಡೆದಳು ಆತ ಮತ್ತಷ್ಟು ಉದ್ವಿಗ್ನನಾಗಿ, ಬಿಡು ಬಿಡೆಲೆ, ಇವರನ್ನು ಈಗಲೇ ಕತ್ತರಿಸಿ ಹಾಕುತ್ತೇನೆ” ಎಂದು ಅರಚಿದ.

ಈ ಗಲ್ಲಿನ ಭರದಲ್ಲಿ ಚಪರಾಸಿಯು ಎಚ್ಚತ್ತು ಸಂಗತಿಯರಿತು ತನ್ನ ಯಜಮಾನನನ್ನು ಎಬ್ಬಿಸಿದ. ಅಧಿಕಾರಿ ಕಣ್ಣುತೆರೆದಾಗ, ಆತನ ಕಂಗಳಿಗೆ ಸಾಕ್ಷಾತ್ ಯಮರಾಜನೇ ಪ್ರತ್ಯಕ್ಷನಾಗಿದ್ದಂತಾಗಿತ್ತು. ಒಂದುಕ್ಷಣ ಆತನು ತನ್ನನ್ನೇ ತಾನು ಮರೆತುಬಿಟ್ಟನು. ಆದರೆ, ಮರುಕ್ಷಣ ಧೈರ್ಯ ತಾಳಿ, ತನ್ನ ಚಪರಾಸಿಯನ್ನು ಗದರಿಸಿದನು—“ಏ, ನನ್ನ ಪಿಸ್ತೂಲನ್ನು ತಾರೋ ಈಗಲೇ ಈತನನ್ನು ಶೂಟ್ ಮಾಡಿಬಿಡುತ್ತೇನೆ.” ಇಷ್ಟನ್ನು ಕೇಳಿದುದೇ ತಡ, ನಾಯಕನ ಉಸಿರು ಕಟ್ಟಿದಂತಾಯಿತು. ಆತ ಗಡಗಡನೆ ನಡುಗತೊಡಗಿದ.

ನಿಜವಾಗಿ ಅಧಿಕಾರಿಯೊಡನೆ ಪಿಸ್ತೂಲು ಇರಲಿಲ್ಲ. ಆದರೆ, ಆ ಕ್ಷಣ ಆವನು ಆ ರೀತಿಯಾಗಿ ವರ್ತಿಸದಿರುತಿದ್ದರೆ, ಅನರಿಬ್ಬರೂ ಯಮನೂರು ಸೇರಿಬಿಡಬೇಕಾಗಿತ್ತು.

ಝಾಬುವಾ ಜಿಲ್ಲೆಯ ಅಲಿರಾಜಪುರದ ಸುತ್ತುಮುತ್ತ ಅಧಿಕ ಸಂಖ್ಯೆಯಲ್ಲಿ ಕೊಲೆಗಳು ನಡೆಯುತ್ತಿತ್ತು ಎಂದು ಹೇಳಲಾಗುತ್ತಿದೆ. ಇಂದಿಗದು ತುಸು ಕಡಿಮೆಯಾಗುತ್ತ ಬರುತ್ತಿದೆಯೆಂಬುದು ಸಂತೋಷಪ್ರದ ವರ್ತಮಾನ. ಆದರೂ ಬಿಲ್ಲರ ಜೀವನದಲ್ಲಿರುವ ಮಾನತೆಗೆ ವಿರುದ್ಧ ಏನಾದರೂ ನಡೆಯಿತೆಂದರೆ, ಅದರ ಅಂತಿಮ ಪರಿಣಾಮವು ಕೊಲೆಯಾಗಿ ತೋರಿಬರುವುದು.

ಬಿಲ್ಲರಿಗೆ ತಮ್ಮದೇ ಆದ ಕೆಲವು ನಿಯಮಗಳಿವೆ ಇವುಗಳಿಗನುಸಾರವಾಗಿ ಅವರು ನಡೆಯಲೇ ಬೇಕಾಗುವುದು. ಈ ನಿಯಮೋಲ್ಲಂಘನೆ ಮಾಡಾಗಲೇ ಕೊಲೆಗಳಂತಹ ದುರ್ಘಟನೆಗಳು ನಡೆಯುತ್ತವೆ. ವಿವಾಹ ಮೊದಲಾದ ವಿಶೇಷ ಸಂದರ್ಭಗಳಲ್ಲಿ ಸಮಾಗಮಿಸಿದ ಅತಿಥಿಗಳಿಗೆ ಮನಃಪೂರ್ತಿ ಶರಾಬನ್ನು ಕುಡಿಸುತ್ತಾರೆ. ಇದಕ್ಕೆ ಏನಾದರೂ ವ್ಯತಿರಿಕ್ತವಾದರೆ, ಅತಿಥಿಗಳು ವ್ಯಂಗ್ಯಬಾಣಬಿಡತೊಡಗುತ್ತಾರೆ. ಕೆಲವೊಮ್ಮೆ ಹೊಡೆಬಡೆದಾಟಗಳು ನಡೆಯುವುದೂ ಇದೆ. ಹಬ್ಬ ಹುಣ್ಣಿಮೆಗಳಲ್ಲಿ ಯಾರ ಗೋಜಿಗೆ ಹೋಗದಿದ್ದರೂ ಕಲಹಗಳೇಳುವುದುಂಟು. ಒಂದು ಹುಡುಗಿಯನ್ನು ಒಬ್ಬನಿಗಿಂತ ಹೆಚ್ಚು ‘ಪ್ರಿಯ’ರು ಬಯಸಿದರೆಂದರೆ, ಆಗಲೂ ಕತ್ತಿಕೋಲುಗಳ ಶಕ್ತಿ ಪ್ರದರ್ಶನ ನಡೆಯುವುದುಂಟು.

ಒಬ್ಬ ಯುವಕ ಒಬ್ಬ ಹುಡುಗಿಯನ್ನು ಹಾರಿಸಿಕೊಂಡು ಓಡಿದನೆಂದರೆ, ಆತನನ್ನು ಹಿಡಿದು, ಪಂಚಾಯತಿಗೆ ಗುರಿಮಾಡಿ ಜುಲುಮಾನೆ ವಿಧಿಸುತ್ತಾರೆ. ಅದರೊಡನೆ, ಆತನು ಹುಡುಗಿಯ ತಂದೆಗೆ ಇಂತಿಷ್ಟು ರೂಪಾಯಿ ಅಪರಾಧ ಕಾಣಿಕೆಯಾಗಿ ತೆರಬೇಕೆಂದೂ ಆಜ್ಞಾಪಿಸುತ್ತಾರೆ. ಅಪರಾಧಿ ಯುವಕನು ಈ ಹಣವನ್ನು ಕೊಡದೆ ಇದ್ದರೆ ಅಥವಾ ಹುಡುಗಿಯನ್ನು ಮರಳಿ ಒಪ್ಪಿಸದಿದ್ದರೆ, ಆತನ ಜೀವಕ್ಕೆ ಸಂಚಕಾರ ಬಂತು ಎಂದು ಅರ್ಥ.

ಕೆಲವೊಮ್ಮೆ ಕೋಳಿ—ಆಡುಗಳನ್ನು ಕದ್ದ ಅಪರಾಧಕ್ಕೂ ಮರಣದಂಡನೆ ವಿಧಿಸಲ್ಪಡುವುದು ಒಂದುರಾತ್ರೆ ಒಬ್ಬ ಬಿಲ್ಲನ ಕೋಳಿಯನ್ನು ಅಪಹರಿಸಿದನೆಂದಿಟ್ಟುಕೊಳ್ಳಿ. ಮರುದಿನ ಪತ್ತೆಯಾದೊಡನೆಯೇ ಬಾಣವೆಸೆದು ಕಳ್ಳನ ಪ್ರಾಣಾಪಹಾರವನ್ನೇ ಆ ಕೋಳಿಯ ಯಜಮಾನ ಮಾಡುತ್ತಾನೆ ಇಂತಹ ಒಂದಲ್ಲ ಹಲವಾರು ಘಟನೆಗಳು ಆ ಪ್ರದೇಶದಲ್ಲಿ ದಿನನಿತ್ಯವೆಂಬಂತೆ ನಡೆದುಬರುತ್ತಿವೆ. ಆದರೆ, ಸಾಮಾನ್ಯವಾಗಿ ಕೊಲೆನಡೆದನಂತರ ಕೊಲೆಗಟುಕನು ಆತ್ಮ ಸಮರ್ಪಣೆ ಮಾಡಿಬಿಡುತ್ತಾನೆ; ತನ್ನ ಅಪರಾಧವನ್ನು ಸ್ವೀಕರಿಸುತ್ತಾನೆ. ಕೆಲವೊಮ್ಮೆ ತಾನು ಉಪಯೋಗಿಸಿದ ಪ್ರತ್ಯೇಕಿಸಿದ ರುಂಡವನ್ನು ಹಿಡಿದುಕೊಂಡು ಸ್ವಯಂ ಪೋಲೀಸು ಠಾಣೆಗೆ ಹೋಗಿ, ಅಲ್ಲಿ ಇವನ್ನು ನಾನೇ ತುಂಡರಿಸಿದೆನೆಂದು ಹೇಳಿಕೊಳ್ಳುವ ಸಂಭಾವಿತನೂ ಇದ್ದಾನೆ.

ಹೊಸ ಸಾಮಾಜಿಕ ವ್ಯವಸ್ಥೆಯಿಂದ ಮತ್ತು ಸಾಮಾಜಿಕ ಕಾರ್ಯಕರ್ತರು ವಹಿಸುವ ಕಾಳಜಿಯಿಂದಾಗಿ ಈಗೀಗ ಇಂತಹ ಘಟನೆಗಳು ನಡೆಯುವುದು ಕಡಿಮೆಯಾಗುತ್ತ ಬಂದಿವೆ. ಆದರೂ ಮೃತ್ಯುವೆಂದರೆ ಇಂದಿಗೂ ಬಿಲ್ಲ ಜನಾಂಗಕ್ಕೆ ಅಂಜಿಕೆಯೆಂಬುದಿಲ್ಲ. ಸಾವು ಉಳಿದವರ ಅಭಿಪ್ರಾಯದಲ್ಲಿ ಮಹತ್ವಪೂರ್ಣವಾಗಿರುವುದಾದರೂ ಬಿಲ್ಲರು ಅದನ್ನು ತೃಣಸಮಾನವೆಂದು ಬಗೆಯುತ್ತಾರೆ. ಇಂತಹ ಅಮಾನುಷ ಜನಾಂಗವೂ ಇಂದಿನ ೨೦ನೆ ಶತಮಾನದಲ್ಲೂ ಇದೆಯೆಂಬುದೇ ಒಂದು ಸೋಜಿಗ.

ವಿನೋದ ವಿಹಾರ

ಓದುವಿರಾದರೆ ನಕ್ಕು ನಲಿಯಬಹುದು....!

ಕಾರುಗಳ ಅವಸ್ಥೆ ಬಗ್ಗೆ ಸುಬ್ಬ ಭಾಷಣ ಬಿಗಿಯುತ್ತ, “ಈಗೀಗ ಕಾರುಗಳ ಅವಸ್ಥೆಯೇ ಅವಸ್ಥೆ ನೋಡಿ. ನಾನು ಎಷ್ಟೋ ಕಾರುಗಳನ್ನು ನೋಡಿದ್ದೇನೆ. ಕೆಲವು ಕಾರುಗಳನ್ನು ನಿಲ್ಲಿಸಬೇಕಾದರೆ (ಅದಕ್ಕೆ ಬ್ರೇಕು ತಾಗುವುದಿಲ್ಲ.) ಅದರಲ್ಲಿ ನಾಯಿಮರಿ ‘ಕೊಂಯ್’ ಎಂದು ಉಸಿರು ಬಿಡಬೇಕು. ಮೊನ್ನೆ ತಾನೆ (2–6–48) ಇನ್ನೊಂದನ್ನು ಕಂಡೆ. ‘ಸಿಗರೇಟ್ ಡಬ್ಬಿ”ಎಂದು ಎಲ್ಲರೂ ಹೇಳುತ್ತಿದ್ದರು. ನಾನು ಕಾಲ್ದಾರಿಯಲ್ಲೇ ನಡೆಯುತ್ತಿದ್ದೆ. ಹಿಂದಿನಿಂದ ಓಡಿ ಓಡಿ ಬಂತದು. ಸ್ವಲ್ಪ ಮುಂದಿನಿಂದ ಇನ್ನೊಂದು ವಾಹನ ಬಂತು. ನನ್ನ ಕಾಲಿಗೆ ತಾಗಿ ಸ್ವಲ್ಪ ಮುಂದೆ (ಹಿಂದಿನಿಂದ ಬಂದ) ಕಾರು ಬ್ರೇಕ್ ಹಾಕಿತು. ಎಂಥ ಶಬ್ದ ಕೇಳುತ್ತೀರಿ? ಸರಿ ಬ್ರೇಕ್ ಹಾಕಿದ್ದಾಯಿತು. ಮತ್ತೆ ಸ್ಟಾರ್ಟ್ ಆಗದು ಅಂಥ ಕಾರುಗಳು ಒಮ್ಮೆ ನಿಂತರೆ (ಅಲ್ಲ, ನಿಲ್ಲಿಸಿದರೆ) ಮತ್ತೆ ಸ್ಟಾರ್ಟ್ ಆಗುವುದಿಲ್ಲ. ಮರುದಿನ ಆ ದಾರಿಯಾಗಿ ಬಂದಾಗ ಅದು ಅಲ್ಲೇ ನಿಂತಿತ್ತು. ಹಾಂ ಇನ್ನೊಂದು ಕೇಳುತ್ತೀರಾ? ನಾನು ಸೈಕಲ್ ಹತ್ತಿಕೊಂಡು ಧಾವಿಸುತ್ತಿದ್ದೆ. ಹಿಂದಿನಿಂದ ಕಾರೊಂದು ಧಾವಿಸಿ ಬಂತು. ಮಧ್ಯದಿಂದ ಬದಿ ಸರಿದೆ; ಅದೂ ಬದಿಗೇನೇ ಬಂತು. ಮುಂದಿನಿಂದಇನ್ನೊಂದು(ಆ ಇಕ್ಕಟ್ಟು ರಸ್ತೆಯಲ್ಲಿ)ಲಾರಿ ಬಂತೊಂದು! ಹಾಂ! ಪರಿಸ್ಥಿತಿ ಗಂಭೀರವೆಂದು ತಿಳಿದುಕೊಂಡೆ—ತೋಡಿಗೆ ಸೈಕಲ್ ತೆಗೆದುಕೊಂಡು ಹೋದೆ. ಹಿಂದಿನಿಂದ ಬಂದ ಕಾರು ತೋಡಿಗೂ ಇಳಿಯಬೇಕೆ? ಇದು ಡ್ರೈವರರ ತಪ್ಪಲ್ಲ! ನಂಗೊತ್ತು! ಕಾರಿನದೇ ಮಿಸ್ಟೇಕ್!” ಶ್ರೀ ಕೆ. ರಮೇಶ ಪೈ.

ದಿ ವಿಜಯ ಬೇಂಕ್ ಲಿಮಿಟೆಡ್
ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ: 1931
ರಿಜಿಸ್ಟರ್ಡ್ ಆಫೀಸು:
ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು-3, ಸೌತ್ ಕೆನರಾ.
ಕಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡ 5ರ ವರೆಗೆ ಹೆಚ್ಚಿಸಲಾಗಿದೆ.
ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ಪಡೆಯುವ ಡಿಪೋಸಿಟುಗಳನ್ನು (Calle Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸೋಣಾಗುತ್ತದೆ.
ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ.

> ಅಭ್ಯಾಸವೆಂಬುದೊಂದು ಉದ್ದನೆಯ ಹಗ್ಗ. ದಿನದಿನವೂ ಅದರೊಳೊಂದು ಗಂಟು ಬೀಳುತ್ತ ಹೋಗುವುದು. ಆದರೆ, ಹಾಕಿದ ಈ ಗಂಟನ್ನು ನಾವು ಬಿಚ್ಚಲಾರೆವೆಂಬುದು ಮಾತ್ರ ಅಪ್ರಿಯ ಸತ್ಯ.

ನವಯುಗ

ವರುಷ	ಉಡುಪಿ	ವಾರ
೪೦	೧೬-೩-'೬೧	೨೭

ದೀಪದಡಿಗೆ......

ಪಂಚ ಶೀಲಗಳ ತಳಹದಿಯ ಸುತ್ತ ವಿಕಾಸಗೊಂಡ ಭಾರತೀಯ ವಿದೇಶ ನೀತಿಯು ವಿದೇಶಗಳಲ್ಲಿ ಪ್ರಶಂಸೆಗೆ ಗುರಿಯಾಗಿರುವುದನ್ನು ಎಲ್ಲರೂ ಮೆಚ್ಚುತ್ತಾರೆ. ಹಲವು ಸಂದರ್ಭಗಳಲ್ಲಿ ಜಾಗತಿಕ ಶಾಂತಿ ರಕ್ಷಣೆಯ ಗುರಿಯುಳ್ಳ ಈ ಧೋರಣೆ ಯಶಸ್ವಿಯೂ ಆಗಿದೆ. ಆದರೆ, ವಿದೇಶಗಳ ಸ್ತುತಿ ಲಭಿಸಿ, ವಿಶ್ವ ಶ್ರೇಷಿಶಮನ ಹೇತುವೆನಿಸಿದ ನಮ್ಮ ಈ ನೀತಿಯು ಸ್ವದೇಶ ರಕ್ಷಣೆಯ ಸಂಬಂಧದಲ್ಲಿ ತೋರಿಸಿದ ಉದಾರತೆ ಅಧಿಕವಾಯ್ತು ಎಂಬುದರ ಮನವರಿಕೆಯಾದುದು ಈಗ್ಗೆ ಒಂದೆರಡು ವರ್ಷಗಳಿಂದ ಅಥವಾ ಚೀನದ ಆಕ್ರಮಣ ನೀತಿ ಬಯಲಿಗೆ ಬಂದನಂತರ ಮಾತ್ರ. ದೀಪದಡಿಗೆ ಕತ್ತಲೆಯೆಂಬಂತೆ ಜಗತ್ತಿಗೆ ದೀಪ ತೋರಿಸಿ ಮಾರ್ಗದರ್ಶನ ಮಾಡುವಂತಿರುವ ಭಾರತೀಯ ವಿದೇಶ ಧೋರಣೆಯು ಸ್ವದೇಶದ ಮಟ್ಟಿಗೆ ಅಂಧಕಾರ ಪಸರಿಸುವುದೇ ಎಂಬ ಸಂದೇಹಕ್ಕೆ ಹುಟವೀಯುವಂತಹ ಘಟನೆಗಳು ಈಗೀಗ ನಡೆಯತೊಡಗಿರುವುದು ದುರದೃಷ್ಟವೆನ್ನಬೇಕು.

ಭಾರತದ ಮೇಲೆ ಆಕ್ರಮಣ ನಡೆಸಿದ ಕಮ್ಯುನಿಷ್ಟ ಚೀನವು ಸೀಮಾ ವಲಯದ ರಾಷ್ಟ್ರಗಳಾದ ನೇಪಾಳ, ಭೂತಾನ ಸಿಕ್ಕಿಂಗಳನ್ನೂ ತನ್ನ ಬಲೆಯೊಳಗೆ ಸಿಲುಕಿಸಿಕೊಳ್ಳಲು ಪ್ರಯತ್ನ ನಡೆಸಿದರೂ ಅದು ವ್ಯರ್ಥಸಾಹಸವಾಯಿತೆಂದು ಮಾತ್ರ ಹೇಳಬಹುದು. ಅಂತೆಯೇ ಬರ್ಮಿಯ ಪ್ರಧಾನಿಯವರನ್ನೂ ತನ್ನ ಇಂದ್ರಜಾಲತನದಿಂದ ಆಕರ್ಷಿಸಲು ಪ್ರಯಾಸಪಟ್ಟ ಚೀನಾದ ಪರಿಶ್ರಮ ಬರ್ಮ—ಭಾರತಗಳ ನಡುವಣ ಸ್ನೇಹ-ಸೌಹಾರ್ದದ ಭಾವನೆಯ ಪರಿಣಾಮವಾಗಿ ನಿಷ್ಫಲಗೊಳ್ಳುವ ಸಂಭವವೇ ತೋರಿಬಂದಿದೆ; ಬರುತ್ತಿದೆ. ಆದರೆ, ಇತ್ತೀಚೆಗೆ ಬಂದಿರುವ ವರದಿಗಳಂತೆ ಕೆಂಪು ಚೀನವು ಪಾಕಿಸ್ತಾನವನ್ನು ಭಾರತದ ವಿರುದ್ಧ ಎತ್ತಿಕಟ್ಟಿ, ಅದನ್ನು 'ಒಳ್ಳೆಯತನ'ದಿಂದ ಕಂಡು, ತನ್ನ ಹೋಳಿಗೆಯನ್ನು ಹೇಗಾದರೂ ಮಾಡಿ ತುಪ್ಪದಲ್ಲಿ ಬೀಳಿಸಲು ಪ್ರಯತ್ನ ನಡೆಸುತ್ತಿದೆ. ಪಾಕಿಸ್ತಾನದ ಅಗ್ರ ನಾಯಕರ ಮಾತಿನಿಂದ ಅದು ಸಂಭವನೀಯವೂ ಆಗಬಹುದು ಎಂಬ ಶಂಕೆ ಮೂಡುತ್ತದೆ.

ಭಾರತದ ಮೇಲಿನ ಚೀನೀಯ ಆಕ್ರಮಣದ ಸಕ್ಕತೆ ಬಹಿರಂಗವಾದಾಗ, ಹೆದರಿದ ಪಾಕಿಸ್ತಾನವು ಅದನ್ನು ವಿರೋಧಿಸುವಂತಹ ಮಾತನ್ನು ಉದ್ಗರಿಸಿದ್ದರು. ತಮ್ಮ ತಮ್ಮೊಳಗೆ ಬಗೆಹರಿಯದ ಸಮಸ್ಯೆಗಳಿದ್ದರೂ ಅವು ತಮಗೆ ಸಂಬಂಧಿಸಿದುವೆಂದೂ ಪರಕೀಯರ ಆಕ್ರಮಣದ ಮುಂದೆ ತಾವು ಏಕಪಕ್ಷೀಯರೆಂದೂ ಅಧ್ಯಕ್ಷ ಆಯೂಬಖಾನರು ಸಾರಿ ಹೇಳಿ, ಭಾರತ—ಪಾಕಿಸ್ತಾನಗಳಿಗೆ ಸಂಯುಕ್ತ ಸಂರಕ್ಷಣಾ ಪಡೆಯೊಂದನ್ನು ರಚಿಸಬೇಕೆಂಬ ವಾದವನ್ನೂ ಮುಂದಿಟ್ಟು ಹೆಚ್ಚು ಸಮಯವಾಗಿಲ್ಲ. ಆದರೆ ಯಾವುದೇ ಸೈನಿಕ ಬಣಗಳಿಗೆ ಸೇರದೆ ಸ್ವತಂತ್ರ ನೀತಿಯುಳ್ಳ ಭಾರತೀಯ ಪ್ರಧಾನಿಯವರು ಇದಕ್ಕೆ ಸಮ್ಮತಿಸಲಿಲ್ಲ. ಮೊದಲೇ ಭಾರತದ ಮೇಲೆ ಸದಾ ಪ್ರತೀಕಾರ ಭಾವನೆಯಿಂದಿರುವ ಪಾಕಿಸ್ತಾನವು ಇದರಿಂದ ತುಸು ಉದ್ರೇಕಗೊಂಡಂತೆ ಕಾಣುತ್ತದೆ. ಎಂತಲೇ ತನಗೆ ಚೀನವಿತ್ತ ಸೀಮಾ ಸಂಬಂಧದ ಮಾತುಕತೆಯ ಆಹ್ವಾನವನ್ನದು ಸ್ವೀಕರಿಸಿದೆ. ಅತಿ ನಿಕಟದಲ್ಲಿಯೇ ಪಾಕ್ ಅಧ್ಯಕ್ಷರು ಪೇಕಿಂಗ್ ದರ್ಶನ ಮಾಡಲಿರುವರು. ಭಾರತದ ಅಧಿಕಾರ ಕಕ್ಷೆಗೆ ಬಾರದಿರುವ ಪಾಕ್—ಚೀನ ಗಡಿಯೆಂಬುದಿಲ್ಲವಾದುದರಿಂದ ಪಾಕಿಸ್ತಾನಕ್ಕೆ ಚೀನದೊಡನೆ ಸೀಮಾಸಂಬಂಧ ಮಾತುಕತೆಯ ಅಗತ್ಯವೇ ಇಲ್ಲವಾದುದರಿಂದ ನಿಯೋಜಿತ ಭೆಟ್ಟಿಯಾಗುವುದಕ್ಕೆ ಮೊದಲೇ—ಅಂದರೆ, ಪ್ರಾರಂಭಿಕಾವಸ್ಥೆಯಲ್ಲಿಯೇ ಭಾರತವು ಪಾಕಿಸ್ತಾನಕ್ಕೆ ಪ್ರತಿಷೇಧ ಸೂಚಿಸಿದೆ. ಆದರೂ ಭಾರತ ವಿರೋಧಿ ಚಟುವಟಿಕೆಗಳಲ್ಲಿ ಆಸಕ್ತಿ ತಳೆದಿರುವಂತೆ ಪಾಕಿಸ್ತಾನವು ಚೀನೀಯ ಪ್ರಧಾನಿಯನ್ನು ಕಾಣಲು ಒಪ್ಪಿಕೊಂಡಿದೆ. ಇಲ್ಲಿ ಭಾರತವನ್ನದು ಸಂಪೂರ್ಣ ಕಡೆಗಣಿಸಿದೆ.

ಚೀನ ಮತ್ತು ಪಾಕಿಸ್ತಾನಗಳೆರಡೂ ಭಾರತದ ಬಗ್ಗೆ ಕೇಡನ್ನುಂಟುಮಾಡಲು ತನ್ಮೂಲಕ ತಮ್ಮ ಹಿತ ಸಾಧಿಸಲು ಹವಣಿಸುತ್ತಿರುವ ರಾಷ್ಟ್ರಗಳು. 'ಸಮಾನ ಶೀಲಂ ವ್ಯಸನೇಷು ಸಖ್ಯಂ" ಎಂಬಂತೆ ಭಾರತಕ್ಕೆ ಉಪದ್ರವ ತಂದು ಹಾಕುವ ಸಮಾನ ಶೀಲದಿಂದ ಇವೆರಡು ಮೈತ್ರಿಯುತ ರಾಷ್ಟ್ರಗಳಾಗುವಂತಿವೆ. ಪಾಕಿಸ್ತಾನವನ್ನು ಒಳ್ಳೆದು ಮಾಡಿಕೊಳ್ಳುವುದರಿಂದ ಮುಂದೆ ಚೀನದ ಭಾರತ ವಿರೋಧಿ ನೀತಿ ಮಾರ್ಗವು ನಿಷ್ಕಂಟಕವಾಗುವುದರಿಂದ ಚೀನವು ಪಾಕಿಸ್ತಾನದ ಬಗೆಗೆ ಸಾಕಷ್ಟು ಉದಾರತೆಯಿಂದ ವರ್ತಿಸಬಹುದು. ಭಾರತದ ಮನನೋಯಿಸಿ ಅದನ್ನು ಹೇಗಾದರೂ ಬಗ್ಗುಬಡಿದು ತಂತಮ್ಮ ಸ್ವಾರ್ಥವನ್ನು ಸಾಧಿಸುವ ಇರಾದೆ ಇಬ್ಬರಲ್ಲಿಯೂ ಇರಬಹುದು. ಇಂತಹ ಗೋಮುಖ ವ್ಯಾಘ್ರಗಳ ನಡುವೆ ಭಾರತವು ನಿಶ್ಚಿಂತವಾಗಿ ದಿನ ದೂಡುವುದು ಸಾಧ್ಯವೆ? ಕೇವಲ ಪ್ರತಿಭಟನೆ ಸೂಚಿಸುವುದರಿಂದ ನಿಯೋಜಿತ ಕಾರ್ಯಕ್ರಮ ನಿಲ್ಲದು. ಆದುದರಿಂದ ಸ್ವದೇಶ ರಕ್ಷಣೆಯ ಗುರುತರ ಭಾರವು ಇಂದು ಭಾರತದ ತಲೆಯಮೇಲಿದೆ. ಅದನ್ನು ಅದು ಯಶಸ್ವಿಯಾಗಿ ನಿರ್ವಹಿಸುವುದು ಅತ್ಯವಶ್ಯವೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಈ ವರ್ಷದ ಮುಂಗಡ ಪತ್ರದಲ್ಲಿ ಸಂರಕ್ಷಣಾವೆಚ್ಚಕ್ಕೆ ಹಿಂದಿಗಿಂತ ಅಧಿಕ ಹಣ ತೆಗೆದಿರಿಸಿದ್ದರೂ ಇಷ್ಟರಿಂದಲೇ ಕಾರ್ಯಸಿದ್ಧಿಯಾಗುವುದೆಂದು ನಂಬಲಾಗದು. ನಮ್ಮ ವಿದೇಶನೀತಿಯನ್ನು ಮೂಲತಃ ಬದಲಾಯಿಸದೆ ಅದರ ಅನುಷ್ಠಾನರೂಪದಲ್ಲಿ ಪರಿವರ್ತನೆ ಅವಶ್ಯವೇ ಎಂಬುದನ್ನು ವಿಮರ್ಶಿಸಿ ನೋಡಬೇಕಾದ ಸಮಯವೀಗ ಪ್ರಾಪ್ತಿಸಿದೆಯೆನ್ನಬೇಕು. ದೀಪದಡಿಗೆ ಕತ್ತಲೆಯಾಗದಂತೆ ದೀಪಹಿಡಿಯುವ ರೀತಿಯನ್ನು ಬೇರೆಮಾಡಬೇಕಾಗಿದೆ. ಈ ಬಗ್ಗೆ ಕೂಲಂಕಷ ವಿಮರ್ಶೆ ನಡೆಸುವುದು ಅತ್ಯವಶ್ಯ.

ಸಂಕ್ಷಿಪ್ತ ಸುದ್ದಿಗಳು

ನಕ್ರೂಮಾರ ನವವಾದ

ಆಫ್ರಿಕೆಯ ಯಾವುದೇ ವಿಷಯದ ಬಗ್ಗೆ ಪ್ರತಿಯೊಂದು ಆಫ್ರಿಕನ್ ರಾಷ್ಟ್ರಕ್ಕೆ ಸ್ವಾಭಿಪ್ರಾಯ ವ್ಯಕ್ತಪಡಿಸುವ ಅಧಿಕಾರವಿದೆಯೆಂಬ ಘಾನಾದ ಪ್ರಧಾನಿ ನುಕ್ರೂಮಾ ಈಗ ಕಾಮನ್‌ವೆಲ್ತಿನಲ್ಲಿ ಹೊಸ ಕೂಗೆಬ್ಬಿಸಿದ್ದಾರೆ. ಯಾವಾಗಲೂ ಆಫ್ರೀಕದ ಬಗ್ಗಿರುವ ಸುದೃಷ್ಟಿಯಿಂದ ವರ್ಣಭೇದನೀತಿಯನ್ನು ವಿರೋಧಿಸುತ್ತ ಬಂದಿರುವ ಆಫ್ರಿಕನ್ ನಾಯಕ ದಕ್ಷಿಣ ಆಫ್ರಿಕೆಯು ತನ್ನ ವರ್ಣನೀತಿಯಲ್ಲಿ ಪರಿವರ್ತನೆ ಮಾಡಿಕೊಳ್ಳಬೇಕೆಂದು ಅದೆಂದೋ ಹೇಳಿದ್ದರು. ಈಗ ಅದು ಹಾಗೆ ಮಾಡದಿದ್ದರೆ, ಒಂದೋ ದ. ಆಫ್ರಿಕೆಯು ಕಾಮನ್‌ವೆಲ್ತಿನಿಂದ ಹೊರ ಹೋಗಬೇಕು; ಇಲ್ಲವೇ ಘಾನವು ಹೊರ ಹೋಗುತ್ತದೆ ಎಂಬ ಘೋಷಣೆ ಮಾಡಿದ್ದಾರೆ. ಇನ್ನೂ ಫಲಿತಕೇಶರಾಗದ ನುಕ್ರೂಮಾರ ಕೂಗು ಸ್ವಾಭಾವಿಕ ಮತ್ತು ಅರ್ಥವತ್ತಾದುದು ನಿಜವಾದರೂ ಅದೇನೋ ತುಸು ಅವಸರದ್ದಾಯ್ತು ಎನ್ನುವವರೂ ಇದ್ದಾರೆ. ಕಾಮನ್‌ವೆಲ್ತಿನಲ್ಲಿ ಈಗ ತೋರಿಬರುವ ಈ ತೆರದ ಬಿಕ್ಕಟ್ಟಿನ ಪ್ರಸಂಗ ಹೇಗೆ ಕೊನೆಗೊಳ್ಳುವುದೆಂದು ಭವಿಷ್ಯವೇ ಹೇಳಬೇಕಾಯ್ತು.

ಮಾನವನಾಗಿ ಬಾಳಬೇಕು

ಒಂದು ದೇಶದ ಪ್ರಗತಿಯು ಕೇವಲ ಭೌತಿಕ ಸಂಪತ್ತಿನಿಂದ ಮಾತ್ರ ಆಗುವುದಿಲ್ಲ; ಸುಸಂಸ್ಕೃತನಾಗರಿಕ ಜನಾಂಗದಿಂದ ಇದು ಸಾಧ್ಯವೆನಿಸುವುದು. ಇಂದು ಭೌತಿಕ ಮತ್ತು ತಾಂತ್ರಿಕ ವಿಜ್ಞಾನಗಳು ರಾಕ್ಷಸಾಕಾರ ದಾಳಿಬೆಳೆದು ಬರುತ್ತಿವೆ. ಇದು ಶುಭ ವಾರ್ತೆಯೇ. ಆದರೆ, ಪಕ್ಷಿಗಳಂತೆ—ಅವುಗಳನ್ನೂ ಮೀರಿಸುವಂತೆ—ಆಕಾಶದಲ್ಲಿ ಹಾರಾಡಬಲ್ಲ, ಮೀನುಗಳಂತೆ ಸಮುದ್ರ ಹೃದಯದಲ್ಲಿ ಸಂಚರಿಸಬಲ್ಲ ಮಾನವ, ಈ ಭೂಮಿಯ ಮೇಲೆ ಮಾನವನಾಗಿ ಬದುಕುವುದು ಹೇಗೆ ಎಂಬುದನ್ನು ಅರಿಯದಿರುವುದು ದೌರ್ಭಾಗ್ಯವಲ್ಲದೆ ಮತ್ತೇನು? ವಿಜ್ಞಾನವು ಹಾನಿಕಾರಕವೆನ್ನುವವರು ಯಾರೊಬ್ಬರೂ ಇಂದಿಲ್ಲ. ಆದರೆ, ವಿಜ್ಞಾನದತ್ತ ಮಾನಹರಿಸುವವನು ತನ್ನನ್ನೂ ತನ್ನ ಜೀವನ ನಡೆಸಬೇಕಾದ ವಿಧಾನವನ್ನೂ ಮರೆತು ಬಿಡಬಾರದು. ಇದಕ್ಕಾಗಿ ಶಾಲೆಗಳಲ್ಲಿ ನೈತಿಕ ಶಿಕ್ಷಣವನ್ನು ನೀಡುವುದು ಹಿತಕರವೆಂದು ಸಂಬಂಧಿಸಿದ ಸಮಿತಿಯೊಂದು ಅಭಿಪ್ರಾಯಪಟ್ಟಿದೆ. ಆದರೆ, ಉತ್ತಮ ನಡತೆ, ಆಚರಣೆ ಮತ್ತು ನೈತಿಕ ತತ್ವ—ಮೌಲ್ಯಗಳ ಕುರಿತು ಅವುಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡವರು ಮಾತ್ರ ನೀಡಬೇಕಾಗುತ್ತದೆ. ಉಪದೇಶಿಸುವಂತೆ ಆಚರಿಸಲಾರದವನ ಮಾತುಗಳಿಂದ ಪ್ರಯೋಜನವಾದರೂ ಏನು? ನೈತಿಕ ಮೌಲ್ಯಗಳ ಅರಿವು ಉಪದೇಶದಿಂದ ಮಾತ್ರ ಬರುವುದಲ್ಲ; ಆಚರಣೆಯ ಮೂಲಕ ಪ್ರದರ್ಶಿಸಿದರೆ ಪರಿಣಾಮಕಾರಿಯಾಗುವುದು. ಆದುದರಿಂದ ಜನಹಿತ ಸರಕಾರ ಈ ದಿಸೆಯಲ್ಲಿ ಸೂಕ್ತ ರೀತಿಯ ಪರ್ಯಾಲೋಚನೆ ನಡೆಸುವುದು ಸ್ವಾಗತಾರ್ಹವಾಗಿದೆ.

ಗ್ರಾಮಾಂತರ ಬೇಂಕಿಂಗ್ ಸೌಕರ್ಯ

ಜನತೆಯಿಂದ ಅಧಿಕಾಧಿಕ ಠೇವುಗಳನ್ನು ಆಕರ್ಷಿಸುವ ಸಲುವಾಗಿ ವಿವಿಧ ಠೇವಣಿಗಳ ಮೇಲೆ ಬೇಂಕುಗಳು ನೀಡುವ ಬಡ್ಡಿಯ ದರವನ್ನು ಏರಿಸಲು ಈಗ ಅನುಮತಿ ದೊರೆತಂತಿದೆ. ಅಶಕ್ತ ಬೇಂಕುಗಳನ್ನು ದೊಡ್ಡ ಬೇಂಕುಗಳೊಡನೆ ವಿಲೀನಗೊಳ್ಳುವಂತೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಗುವುದು. ಬೇಂಕರರು ಮತ್ತು ಅರ್ಥಮಂತ್ರಿ ಶ್ರೀ ಮುರಾರ್ಜಿ ದೇಸಾಯಿಯವರ ನಡುವೆ ಈ ವಿಷಯದಲ್ಲಿ ಬಹಳಕಾಲ ಚರ್ಚೆ ನಡೆಯಿತು. ಗ್ರಾಮಾಂತರ ಪ್ರದೇಶಗಳಲ್ಲಿ ಅಧಿಕ ಸಂಪತ್ತು ಇದ್ದು ಅದನ್ನು ಆಕರ್ಷಿಸಲು ಆ ಪ್ರದೇಶಗಳಲ್ಲಿ ಅಧಿಕಾಧಿಕ ಶಾಖೆಗಳನ್ನು ಬೇಂಕುಗಳು ತೆರೆಯಬೇಕೆಂದೂ ಹೀಗ ಶಾಖೆಗಳನ್ನು ಪ್ರಾರಂಭಿಸಲು ಅನುಮತಿ ನೀಡುವಾಗ ಆಯಾ ಪ್ರದೇಶದ ಚಿಕ್ಕ ಬೇಂಕುಗಳಿಗೇನೇ ಅಪ್ಪಣೆಕೊಡಬೇಕೆಂದೂ ಚರ್ಚೆಯ ನಂತರ ನಿರ್ಧಾರವಾಯಿತು. ದೊಡ್ಡ ಬೇಂಕುಗಳಿಗೆ ಶಾಖೆ ತೆರೆಯುವಾಗ ಬರುವ ವೆಚ್ಚಕ್ಕಿಂತ ಸಣ್ಣ ಬೇಂಕುಗಳು ಮಿತವ್ಯಯದಿಂದ ತೆರೆಯಬಲ್ಲುವೆಂದೂ ಇದರಿಂದ ಅಧಿಕ ಬಡ್ಡಿ ಕೊಡುವುದಕ್ಕೂ ಸಾಧ್ಯವೆಂದೂ ಹೇಳಲಾಗುತ್ತಿದೆ.

ಬಿಕ್ಕಟ್ಟು ಪರಿಹಾರ ಮಾರ್ಗ

ಮಂತ್ರಿ ಮಂಡಳಿಯನ್ನು ವಿಸ್ತರಿಸಿ ಭಿನ್ನಾಭಿಪ್ರಾಯವನ್ನು ಬಗೆಹರಿಸಿಕೊಳ್ಳಬಹುದು ಎಂಬುದನ್ನು ಮೈಸೂರು ಕಾಂಗ್ರೆಸ್ ಮೊತ್ತಮೊದಲು ಮಾದರಿಯಾಗಿ ಪ್ರದರ್ಶಿಸಿಕೊಟ್ಟಿತು. ಮಾದರಿ ಮೈಸೂರಿನ ಈ ಮಾದರಿಯನ್ನು ಅನುಸರಿಸಿಯೇ ಬಿಕ್ಕಟ್ಟನ್ನು ದೂರಮಾಡುವ ಪ್ರಯಾಸ ಆಂಧ್ರ ಪ್ರದೇಶದಲ್ಲೂ ನಡೆಯಿತು. ಹೊಸ ಕಾರ್ಯಕಾರಿಣಿಯನ್ನು ಆರಿಸುವಾಗ ಒಮ್ಮತ ಬರುವಂತೆ ಪ್ರಯತ್ನಿಸಿ ಈ ಸಾಧನೆಯಿಂದಾಗಿ ೧೩ ಸದಸ್ಯರಿರುವ ಮಂತ್ರಿಮಂಡಳದ ಸಂಖ್ಯೆ ೧೬ಕ್ಕೆ ಏರುವುದು ಸಂಭವನೀಯವಾಗಿದೆ. ಇದೇ ತತ್ವವು ಇನ್ನು ಮುಂದೆಯೂ ಅನುಷ್ಠಾನಕ್ಕೆ ಬರುವುದಾದರೆ, ಒಮ್ಮತವಿರುವಲ್ಲಿಯೂ ಮಂತ್ರಿಪದವಿಗಾಗಿ ಉಪಪಕ್ಷಕಟ್ಟಿ ರಾಜಕಾರಣ ನಾಟಕಗಳಲ್ಲಿ ಮತ್ತೊಂದು ನಾಟಕವಾಡುವ ಕಷ್ಟವಹಿಸುವುದೂ ಒಂದು ಸಂಪ್ರದಾಯ ಎಂಬಂತಾಗಬಹುದು.

ಜನಗಣತಿಯ ಅಂಕೆಸಂಖ್ಯೆ

೧೯೬೧ರ ದಶವಾರ್ಷಿಕ ಜನಗಣನೆಯು ಮುಗಿದಿದ್ದು ಈಗ ಅದರ ವಿವರಗಳು ಹೊರಬರತೊಡಗಿವೆ. ಹೊಸ ಅಂಕೆಸಂಖ್ಯೆಗಳಂತೆ ನಮ್ಮ ರಾಜ್ಯದ ಜನಸಂಖ್ಯೆ ೨೩೫ ಲಕ್ಷ. ಇವರಲ್ಲಿ ೧೧೫ ಲಕ್ಷ ಹೆಂಗಸರೂ ೧೨೦ ಲಕ್ಷ ಗಂಡಸರೂ ಇರುವರು. ಒಟ್ಟು ೬೦ ಲಕ್ಷ ಅಕ್ಷರಸ್ಥರಿರುವರು. ನಗರದಲ್ಲಿ ವಾಸಿಸುವವರಲ್ಲಿ ನೂರಕ್ಕೆ ೨೦ರಷ್ಟು ಸಾಕ್ಷರರೆಂದು ತಿಳಿಯುತ್ತದೆ. ೧೯೫೧ರ ಜನಗಣನೆಯ ಆಧಾರದಿಂದ ಸಂಗ್ರಹಿಸಲಾದ ಅಂಕೆಸಂಖ್ಯೆಗಳಂತೆ ರಾಜ್ಯದ ಜನಸಂಖ್ಯೆ ೧೯೪ ಲಕ್ಷವಾಗಿತ್ತು. ಹೀಗಾಗಿ ಈ ಹತ್ತು ವರ್ಷಗಳಲ್ಲಿ ೪೧ ಲಕ್ಷದಷ್ಟು ಜನರು ಹೆಚ್ಚಿದಂತಾಯ್ತು, ಎಂದರೆ ಸೇಕಡಾ ೨೧.೪ರಷ್ಟು. ಇದೇ ರೀತಿ ಉಳಿದ ರಾಜ್ಯಗಳಲ್ಲೂ ಜನಸಂಖ್ಯೆ ಹೆಚ್ಚಿದೆ. ಮದ್ರಾಸದಲ್ಲಿ ಮಾತ್ರ ಹೆಚ್ಚಳ ನೂರಕ್ಕೆ ಹನ್ನೊಂದರಷ್ಟು.

ಅಲ್ಲಲ್ಲಿಯ ಸುದ್ದಿ ಸಾರ

ಎ. ಬಿ. ಶೆಟ್ಟಿ ಸ್ಮಾರಕ ವಿದ್ಯಾರ್ಥಿ ನಿಲಯದ ವಾರ್ಷಿಕೋತ್ಸವ – ಮೈಸೂರು ನಗರದ ಯಾದವಗಿರಿಯಲ್ಲಿರುವ ಈ ವಿದ್ಯಾರ್ಥಿನಿಲಯದ ವಾರ್ಷಿಕೋತ್ಸವ ಹಾಗೂ ವಿದ್ಯಾರ್ಥಿ ಸಂಘದ ಸಮಾರೋಪ ಭಾಷಣ ಸಮಾರಂಭವು ನಿಲಯದಲ್ಲಿ ತಾ 4 3-61 ರಂದು ವಿಜೃಂಭಣೆಯಿಂದ ನೆರವೇರಿತು. ರಾಜ್ಯದ ಹೈಕೋರ್ಟ್ ನ್ಯಾಯಾಧೀಶರಾದ ಜಸ್ಟೀಸ್ ಕೆ. ಎಸ್. ಹೆಗ್ಡೆಯವರು ಸಮಾರೋಪ ಭಾಷಣ ಮಾಡಿದರು. ಮೈಸೂರು ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್ ಡಾ| ಬಿ ಎನ್. ಲಿಂಗರಾಜುರವರು ಅಧ್ಯಕ್ಷತೆ ವಹಿಸಿದ್ದರು ಶ್ರೀಮತಿ ಗೀತಾರವರಿಂದ ಪ್ರಾರ್ಥನೆಯಾದ ಬಳಿಕ ನಿಲಯದ ಕಾರ್ಯದರ್ಶಿ ಶ್ರೀ ಎ. ರಾಮಣ್ಣನವರು ಸ್ವಾಗತಭಾಷಣಮಾಡಿ ಮೈಸೂರಿನಲ್ಲಿ ವಿದ್ಯಾರ್ಥಿಗಳಿಗೆ ಸಾಕಷ್ಟು ಹೋಸ್ಟೆಲ್ ಸೌಕರ್ಯವಿಲ್ಲದುದರಿಂದ ಈ ನಿಲಯವನ್ನು ಸ್ಥಾಪಿಸಲಾಯಿತೆಂದೂ ಇಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೆ ಅವಕಾಶವಿದೆಯೆಂದೂ ಹೇಳಿ ವಿದ್ಯಾರ್ಥಿನಿಲಯಗಳನ್ನು ನಡೆಸುವಾಗ ಬರುವ ತೊಡಕು ತೊಂದರೆಗಳೇನು ಎಂಬುದನ್ನು ವಿವರಿಸಿದರು. ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಶ್ರೀ ತಿಮ್ಮಪ್ಪ ಭಂಡಾರಿಯವರು ವರದಿಯನ್ನೂ ಶ್ರೀ ಮೋಹನ್ ಎಸ್. ಚಂಬಾರವರು ಸಂದೇಶಗಳನ್ನೂ ಓದಿದರು.

ಜಸ್ಟೀಸ್ ಹೆಗ್ಡೆಯವರು ಭಾಷಣಮಾಡುತ್ತಾ ದಿ. ಎ. ಬಿ. ಶೆಟ್ಟರ ಕಾರ್ಯತತ್ಪರತೆ, ದಕ್ಷತೆ, ಶಿಸ್ತು, ವಿದ್ಯಾಸಕ್ತಿ ಮೊದಲಾದ ಗುಣಗಳನ್ನು ವಿವರಿಸಿ ಅವರ ಈ ಗುಣಗಳನ್ನು ಅನುಸರಿಸುವ ಯಾವ ವಿದ್ಯಾರ್ಥಿಯಾಗಲಿ ಯಶಸ್ಸುಗಳಿಸುವುದರಲ್ಲಿ ಸಂದೇಹವಿಲ್ಲವೆಂದರು. ಮೈಸೂರು ನಗರದಲ್ಲಿ ಎಲ್ಲಾ ರೀತಿಯ ಸೌಲಭ್ಯಗಳಿದ್ದರೂ ವಿದ್ಯಾರ್ಥಿಗಳ ಹೋಸ್ಟೆಲ್ ಸೌಕರ್ಯದ ಬಗ್ಗೆ ಗಮನಕೊಡದುದನ್ನು ಕಾಣಬಹುದಾಗಿದೆ, ವಿದ್ಯಾರ್ಥಿಗಳ ಅಶಿಸ್ತಿಗೆ ಯೋಗ್ಯ ವಾತಾವರಣ ಇಲ್ಲದಿರುವುದೇ ಕಾರಣವಾಗಿದೆ, ಎಂದು ಮುಂತಾಗಿ ಹೇಳಿದರು ಅಧ್ಯಕ್ಷ ಡಾ| ಲಿಂಗರಾಜುರವರು ವಿದ್ಯಾರ್ಥಿಗಳು ಯೋಗ್ಯ ಚಟಗಳನ್ನು ಮತ್ತು ಉತ್ತಮ ರೀತಿಯಲ್ಲಿ ಜೀವನ ನಡೆಸುವುದನ್ನು ಅಭ್ಯಸಿಸಬೇಕೆಂದು ಮುಂತಾಗಿ ಹೇಳಿದರು ನಿಲಯದ ವಾರ್ಡನ್ ಶ್ರೀ ಎಮ್. ಎಸ್. ಶ್ರೀಕಂಠನವರು ಧನ್ಯವಾದಗಳನ್ನರ್ಪಿಸಿದರು.

ಎ. ಬಿ. ಶೆಟ್ಟಿ ಮೆಮೋರಿಯಲ್ ಹೋಸ್ಟೆಲ್ ಮೈಸೂರು—2 ಇದು ಸೊಸೈಟಿ ರಿಜಿಸ್ಟ್ರೇಶನ್ ಆಕ್ಟಿನಂತೆ ರಿಜಿಸ್ಟರ್ ಆಗಿರುವುದಾಗಿ ಶ್ರೀ ಎ ರಾಮಣ್ಣನವರು ತಿಳಿಸುತ್ತಾರೆ.

ಸಂತಾಪ ಸೂಚಕ ಸಭೆ—ಉಡುಪಿ ಮಂಡಲಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಇದೇ ತಾ. 7ರಂದು ಭಾರತ ಸರಕಾರದ ಗೃಹ ಮಂತ್ರಿ ಶ್ರೀ ಗೋವಿಂದ ವಲ್ಲಭ ಪಂತರ ನಿಧನದ ಬಗ್ಗೆ ಸಂತಾಪ ಸೂಚಕ ಸಭೆಯೊಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಇದೇ ಸಭೆಯಲ್ಲಿ ಇತ್ತೀಚೆಗೆ ಅಕಾಲ ನಿಧನ ಹೊಂದಿದ ಹಿರಿಯ ಕಾಂಗ್ರೆಸ್ ಕರ್ತರಲ್ಲೊಬ್ಬರಾದ ಪೆರ್ಣಳದ ಶ್ರೀ ಎಸ್. ರಾಘವ ಹೆಗ್ಗಡೆ ಇವರ ನಿಧನಕ್ಕಾಗಿಯೂ ಸಂತಾಪ ಸೂಚಿಸಲಾಯಿತು.

ಸದಸ್ಯರ ವಿಸ್ತರಣೆ—ಉಡುಪಿ ಮಂಡಲ ಕಾಂಗ್ರೆಸ್ ಕಮಿಟಿಗೆ ಈಗಿರುವ 9ಮಂದಿ ಸದಸ್ಯರಲ್ಲದೆ ಪ್ರಾತಿನಿಧ್ಯ ವಿಸ್ತರಣೆಯ ಸಲುವಾಗಿ ಈ ಕೆಳಗಿನ ಇತರ 11ಮಂದಿ ಸದಸ್ಯರನ್ನು ಆರಿಸಲಾಯಿತು; ಡಾ| ವಿ ಜಿ. ಆಚಾರ್ ಶ್ರೀಗಳಾದ ಯು. ಮೋಹನದಾಸ್, ಎಮ್. ಪಿ. ನರಸಿಂಹಮೂರ್ತಿ, ಬಿ. ಜಗನ್ನಾಥ ಹೆಗ್ಡೆ, ಕೆ. ಗೋವಿಂದರಾಯ ಕಾಮತ್, ಎಂ. ಪಿ. ಮಾರ್ಟಿನ್, ಎನ್. ವಿಠಲ ಶೆಟ್ಟಿ, ಕೆ. ವೆಂಕಟ್ರಮಣ ಭಟ್ಟ, ಎಂ. ಜಿ. ಶಣೈ, ಇರ್ವಿನ್ ಅಂದ್ರಾದೆ, ಶ್ರೀಮತಿ ವತ್ಸಲಾ ರಾವ್, ಅಲ್ಲದೆ ಇಪ್ಪತ್ತು ಮಂದಿ ಆಹ್ವಾನಿತ ಸದಸ್ಯರನ್ನೂ ಸಭೆಯಲ್ಲಿ ಆರಿಸಲಾಯಿತು.

ಹೋಟೇಲು ಉದ್ಯಮದ ತರಬೇತಿ ಕೇಂದ್ರ—ಮಣಿಪಾಲದಲ್ಲಿ ಸದ್ಯವೇ ಸ್ಥಾಪಿತವಾಗಲಿರುವ ಕೇಟರಿಂಗ್ ಮತ್ತು ಹೋಟೇಲ್ ಮೆನೇಜ್‌ಮೆಂಟ್ ತರಬೇತಿ ಕೇಂದ್ರದ ವಿಷಯ ಸಮಾಲೋಚನೆ ನಡೆಸಲು ಲಾ ಕಾಂಗ್ರಿಲಾ ಗಾರ್ಡನ್ ಹೌಸ್‌ನಲ್ಲಿ ತಾ. 4ರಂದು ಡಾ| ಟಿ. ಮಾಧವ ಪೈಯವರ ಹಿರಿತನದಲ್ಲಿ ಸಭೆ ಜರಗಿತು. ಕೇಂದ್ರದ ಸಂಚಾಲಕ ಆರ್. ಎಸ್. ಶಿಣೈಯವರು ಕೇಂದ್ರದ ಅಗತ್ಯತೆಯನ್ನು ವಿವರಿಸಿ ಸ್ವಾಗತಿಸಿದರು. ಡಾ| ಕೊಪ್ಪಿಕಾರ್‌ರವರು ಈ ಯೋಜನೆಗೆ ಬರುವ ಅಡ್ಡಿ ಆತಂಕಗಳನ್ನು ವಿವರಿಸಿದರು. ಅಧ್ಯಕ್ಷಸ್ಥಾನದಿಂದ ಡಾ. ಮಾಧವ ಪೈಯವರು 1912ರಲ್ಲಿ ಎಕಾಡೆಮಿಯು ಸ್ಥಾಪಿತವಾದಾಗ ವ್ಯವಹಾರದ ಎಲ್ಲಾ ಕೆಲಸಗಳಿಗೂ ಯೋಗ್ಯ ತರಬೇತಿಯನ್ನೀಯಲು ಯೋಚಿಸಿತ್ತು. ಪ್ರತಿಯೊಂದು ಕೆಲಸ ಮಾಡುವಾಗಲೂ ಆ ಕೆಲಸ ಮಾಡುವವರಿಗೆ ಯೋಗ್ಯ ತರಬೇತಿ ಇತ್ತಲ್ಲಿ ಕೆಲಸವು ನಾಜೂಕಾಗಿಯೂ ತ್ವರಿತವಾಗಿಯೂ ಆಗುವುದೆಂದರು. ಪ್ರತಿಯೊಂದು ಕಾರ್ಯದಲ್ಲೂ ಅಡ್ಡಿ ಆತಂಕಗಳು ಬರುವುದು ಸಹಜವಾದರೂ ಅಂಜುಬುರುಕರಂತೆ ಹೆದರದೆ ಅದನ್ನು ಎದುರಿಸುವುದು ಮಾನವನ ಕರ್ತವ್ಯವೆಂದರು. ಭೋಜನಾ ನಂತರ ಸಭೆಯು ಮುಕ್ತಾಯವಾಯಿತ್ತು.

ವಾರ್ಷಿಕ ಮಹಾಧಿವೇಶನೆ—ಉಡುಪಿಯ ಶ್ರೀ ಬ್ರಹ್ಮ ಬೈದರ್ಕಳ ಧೂಮಾವತಿ ಯಕ್ಷಗಾನ ಸಂಘದ ವಾರ್ಷಿಕ ಮಹಾಧಿವೇಶನವು ಶ್ರೀಶೇಖಪ್ಪನವರ ಹಿರಿತನದಲ್ಲಿ ಜರಗಿತು. ಶ್ರೀಗಳಾದ ಪಾ. ಲ. ನಾ. ಉಪಾಧ್ಯಾಯ, ಬೋಜಪ್ಪ ಸುವರ್ಣ, ಮಾಧವ ಶಣೈ, ಸುಂದರ ಅಮೀನ್, ಕೃಷ್ಣರಾಜ ಹೆಬ್ಬಾರರು, ಗಣಪತಿ ರಾವ್, ಗೋಪಾಲಕೃಷ್ಣ ರಾವ್, ಕೃಷ್ಣ ಉಡುಪ, ಮಾರಪ್ಪ ಸುವರ್ಣ, ಐತು ಸೆಟ್ಟಿಗಾರ, ಶಂಭು ಸೆಟ್ಟಿಗಾರ, ಅಣ್ಣಯನವರನ್ನು ಕಾರ್ಯಕಾರಿ ಸಮಿತಿಗೆ ಆರಿಸಲಾಯಿತು. ಕಳೆದ ವರುಷದಲ್ಲಿದ್ದ ಅಧಿಕಾರಿವರ್ಗವನ್ನೇ ಮುಂದುವರಿಸುವ ಸರ್ವಸಮ್ಮತಿ ದೊರೆಯಿತು.

ಮುಲ್ಕಿ—ತಾ 3ರಂದು ಜರಗಿದ ಗವರ್ನಮೆಂಟ್ ಫಿಶರೀಸ್ ಹ್ಯಾಸ್ಕೂಲಿನ ವಾರ್ಷಿಕೋತ್ಸವದಂದು ಬಹುಮಾನ ವಿತರಣೆ ಮಾಡಿದವರು ಶ್ರೀಮತಿ ಅನಸೂಯಾ ದೇವಿ ನಾಗಮೋತಿಯವರು ಎಂಬುದರ ಬದಲಿಗೆ ಉಡುಪಿ ತಾಲೂಕು ಬೋರ್ಡ್ ಅಧ್ಯಕ್ಷ ಶ್ರೀ ಎಂ. ಮಧ್ವರಾಜರವರು ಎಂಬುದಾಗಬೇಕಾಗಿದೆ.

ಶ್ರೀ ಎಚ್. ತಿಮ್ಮಪ್ಪ ಹೆಗ್ಡೆಯರ ನಿಧನ - ಆಢ್ಯ ಮನೆತನದವರೂ, ಪಟೇಲರೂ ಜಮೀನ್ದಾರರೂ ಆಗಿದ್ದ ಶ್ರೀ ಹಿರೇಬೆಟ್ಟು ತಿಮ್ಮಪ್ಪ ಹೆಗ್ಡೆಯವರು ತಾ 11—3—61 ರಂದು ಮಂಗಳೂರು ವೆನ್‌ಲೋಕ್ ಆಸ್ಪತ್ರೆಯಲ್ಲಿ ಅಕಾಲ ನಿಧನ ಹೊಂದಿದರೆಂದು ತಿಳಿಸಲು ವಿಷಾದವಾಗುತ್ತದೆ. ಅವರ ಅಂತ್ಯಸಂಸ್ಕಾರವು ಮರುದಿನ ಕಂಚಿನ ಬೈಲಿನಲ್ಲಿ ನೆರವೇರಿತು. ದಿವಂಗತರು ಸರಳ ಸಾಧು ಸ್ವಭಾವದವರಾಗಿ ಜನಪ್ರಿಯರಾಗಿದ್ದರು.

ಕರ್ನಾಟಕ ಪ್ರಾಂತ್ಯದ-ಹಿಂದುಳಿದವರ ಪರಿಷತ್ತು ಹುಬ್ಬಳ್ಳಿ-ಕರ್ನಾಟಕ ಪ್ರಾಂತ್ಯದ ಯಾವತ್ತೂ ಕುಂಚಿ ಕೊರವರ, ಕಾಡು ಭಿಕ್ಷುಕರ ಹಾಗೂ ಹಿಂದುಳಿದವರ ಪ್ರಥಮ ಪರಿಷತ್ತು ಇದೇ ಎಪ್ರಿಲ್—ಮೇ ತಿಂಗಳೊಳಗೆ ಜರಗಲಿರುವುದೆಂದೂ ಯಾವತ್ತೂ ಮಹನೀಯರು ಸಹಾಯಮಾಡಿ ಸಹಕರಿಸ ಬೇಕೆಂದೂ ಪರಿಷತ್ತಿನ ಸ್ವಾಗತಾಧ್ಯಕ್ಷ ಶ್ರೀ ಚೆನ್ನಪ್ಪ ಭದ್ರಾಪುರ ಇವರು ವಿನಂತಿಸುತ್ತಾರೆ.

ಕನ್ನಡ ಸಂಘ ರಚಿಸಲು ಸಾಹಿತ್ಯಾಭಿಮಾನಿಗಳ ಸಭೆ—ಯೊಂದು ಮಂಗಳೂರಿನ ಗವರ್ನ್‌ಮೆಂಟ್ ಕಾಲೇಜಿನ ಎಕೆಡೆಮಿ ಹೋಲಿನಲ್ಲಿ ತಾ 12ರಂದು ಶ್ರೀ ತೆಕ್ಕುಂಜೆ ಗೋಪಾಲಕೃಷ್ಣ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎ. ಬಾಲಕೃಷ್ಣ ಶೆಟ್ಟಿ ಪೊಳಲಿ, ಇವರು ಸ್ವಾಗತಿಸಿ ಸಭೆಯ ಉದ್ದೇಶವನ್ನು ನಿವೇದಿಸಿದರು. ಶ್ರೀ ಸಂತೋಷಕುಮಾರ ಗುಲ್ವಾಡಿ ಇವರು ಸಂದೇಶಗಳನ್ನು ಓದಿದರು. ಶ್ರೀಗಳಾದ ಸೇಡಿಯಾಪು ಕೃಷ್ಣಭಟ್ಟ ಅಮ್ಮೆಂಬಳ ಶಂಕರನಾರಾಯಣ ನಾವುಡ, ಪಿ. ಕೆ. ನಾರಾಯಣ, ಬಿ. ಎಮ್. ಇದಿನಬ್ಬ, ಬಿ. ವಿ. ಬಾಳಿಗ, ಕೆ. ಎಸ್. ಪದ್ಮನಾಭ ಆಚಾರ್ಯ, ಕೆ. ವೆಂಕಟ್ರಾಯ ಆಚಾರ್ಯ ಮೊದಲಾದವರು ಸಭಿಕರ ಪರವಾಗಿ ಮಾತನಾಡಿದರು ಬಳಿಕ ಘಟನಾ ಸಮಿತಿ ರಚನೆಯಾಗಿ ಅಧ್ಯಕ್ಷರ ಭಾಷಣದೊಂದಿಗೆ ಸಭೆಯು ಅಂತ್ಯವಾಯಿತು.

ಶ್ರೀ ಉಪ್ಪೂರು ಕೃಷ್ಣ ಶೆಟ್ಟರ ನಿಧನ—ಸ್ವಲ್ಪ ಸಮಯದಿಂದ ಅಸ್ವಸ್ಥರಾಗಿದ್ದ ಶ್ರೀ ಉಪ್ಪೂರು ಕೃಷ್ಣ ಶೆಟ್ಟರು ಉಡುಪಿಯಲ್ಲಿ ತಮ್ಮ ಪುತ್ರ ಎಡ್ವಕೇಟ್ ಶ್ರೀ ಶಿವಾಜಿ ಸೆಟ್ಟರ ಬಿಡಾರದಲ್ಲಿ ತಾ. 13-3-61ನೇ ಸೋಮವಾರ ನಿಧನಗೊಂಡುದುದು ವಿಷಾದಕರವಿದೆ ದಿವಂಗತರು ಪ್ರಸಿದ್ಧ ಮನೆತನಕ್ಕೆ ಸೇರಿದವರೂ ಪ್ರಭಾವಶಾಲಿಗಳೂ ಆಗಿದ್ದರು ಇವರ ಅಂತ್ಯ ಸಂಸ್ಕಾರವು ಉಪ್ಪೂರಿನಲ್ಲಿ ನಡೆಯಿತು. ನಿಧನ ಕಾಲದಲ್ಲಿ ಅವರ ಎಲ್ಲಾ ಮಕ್ಕಳೂ ಹತ್ತಿರವೇ ಇದ್ದರು.

ಅಂಬಲಪಾಡಿ—ಶ್ರೀ ಜನಾರ್ಧನ ಮತ್ತು ಶ್ರೀ ಮಹಾಕಾಳೀ ದೇವಸ್ಥಾನದ ನೂತನ ಧ್ವಜಸ್ತಂಭ ಪ್ರತಿಷ್ಠೆಯು ತಾ. 15-3-61 ರಂದು ನಡೆದು ತಾ. 18ರಂದು ಬ್ರಹ್ಮಕಲಶಾಭಿಷೇಕ ಜರಗಲಿದೆ.

ಏಲಂ ನೋಟೀಸು

ದಿ ಕೆಥೋಲಿಕ್ ಬ್ಯಾಂಕ್ ಲಿಮಿಟೆಡ್, ಶಿರ್ವ.

The Catholic Bank, Ltd, Shirva.

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು, ಸದ್ರಿ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡಕೊಂಡ ಸಾಲವನ್ನು ಕ್ರಮಪ್ರಕಾರ ರಿಜಿಸ್ತ್ರಿ ನೋಟಿಸು ಕೊಟ್ಟಲ್ಲಿ ಕೂಡಾ ಮರುಪಾವತಿ ಮಾಡದಿರುವುದರಿಂದ ಸದ್ರಿಯವರಿಗೆ ವ, ಸದ್ರಿಯವರು ಮೃತಪಟ್ಟಲ್ಲಿ ಸದ್ರಿಯವರ ವಾರೀಸುದಾರರಿಗೆ ಈ ಮೂಲಕ ತಿಳಿಸುವುದೇನೆಂದರೆ:—ಸದ್ರಿಯವರು ಈಡಿಟ್ಟ ನಗಗಳನ್ನು ಇದೇ ತಾರೀಕು 13—4—61ರ ಒಳಗೆ ಬಿಡಿಸದಿದ್ದಲ್ಲಿ ತಾರೀಕು 15—4—61ನೇ ಶನಿವಾರ ಮಧ್ಯಾಹ್ನ ಗಂಟೆ 2ಕ್ಕೆ ಯಾ ನಮಗೆ ಯುಕ್ತಕಂಡ ಇನ್ನಿತರ ದಿನಗಳಲ್ಲಿ ಪುನಃ ನೋಟೀಸು ಕೊಡದೆನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು —

G. L. No.	Name and Address.	Amount
34/2152	ಶ್ರೀ ಲಚ್ಚು ಶೆಟ್ಟಿ S/O ಕುದ್ದು ಶೆಟ್ಟಿ ಪಾದೂರು ಗೋಳಿದಡಿಗುತ್ತು ಪಾದೂರು ಪೋಸ್ಟ್.	25 = 00
36/38	ಶ್ರೀ ರಾಮ ಸೆಟ್ಟಿ N/O ಸೂರು ಸೆಟ್ಟಿ ಕಳತ್ತೂರು ಪಾಮ್ಮನ ಬೆಟ್ಟು, ಕಳತ್ತೂರು ಪೋಸ್ಟ್.	30 = 00
34/2584	ಶ್ರೀ ರುಕ್ಕಯ್ಯ ಪೂಜಾರಿ N/O ಕಾಡ್ಯ ಪೂಜಾರಿ ಕಳತ್ತೂರು ನಲ್ಲೆ ಮನೆ, ಕಳತ್ತೂರು ಪೋಸ್ಟ್	91 = 00
35/730	ಶ್ರೀ ಕುಟ್ಟಿ ಸೆಟ್ಟಿ N/O ಅಚ್ಚಣ್ಣ ಸೆಟ್ಟಿ, ಕಳತ್ತೂರು ಅಶ್ವತ್ಥಗುತ್ತು, ಕಳತ್ತೂರು ಪೋಸ್ಟ್. ದ. ಕ.	140 = 00
996	ಶ್ರೀ ನಾದು ಮುಗೇರ S/O ಕೊರಗ ಮುಗೇರ, ತಂಕರಪಳ್ಕೆ, ಕೊಲುಟ್ಟು, ಶಿರ್ವ ಪೋಸ್ಟ್	22 = 00
1048	ಶ್ರೀ ಸೀನ ನ್ಯಾಕ S O ಕೊಕ್ರ ನ್ಯಾಕ, ಪಯ್ಯಾರ್ ಹೊಸಮನೆ, ಪಾದೂರು ಪೋಸ್ಟ್, ದ. ಕ.	19 = 00
1110	ಶ್ರೀ ಮಾರ್ಸೆಲ್ ಡಿ'ಸೋಜ, S/O ಫ್ರಾನ್ಸಿಸ್ ಡಿ'ಸೋಜ ಕಳತ್ತೂರು ಪಾದೆಮನೆ, ಕಳತ್ತೂರ್ ಪೋಸ್ಟ್, ದ ಕ.	60 = 00
1120	ಶ್ರೀ ಲುವಿಜಾ ಮಿನೇಜಸ್, S/O ಡೊಮಿಂಗ್ ಮಿನೇಜಸ್, ಮೇಲಿನಮನೆ, ಇಳಿಯಕೆರೆ, ಬೈಲೂರು ಪೋಸ್ಟ್, ದ. ಕ.	20 = 00
35/1342	ಶ್ರೀ ಶೇಕು ಹುಸೈನ್ ಸಹೇಬ್ S/O ಸಾಬುಜ್ಜಾನ್ ಸಹೇಬ್ ಸುಂಚಕಲ್, ಶಿರ್ವ. ಪೋಸ್ಟ್ ದ. ಕ.	10 = 00
1473	ಶ್ರೀ ರಘುನಾಥ ನ್ಯಾಕ S/O ಕೊಕ್ರ ನ್ಯಾಕ, ಪಯ್ಯಾರ್ ಹೊಸಮನೆ, ಪಾದೂರು ಪೋಸ್ಟ್ ದ. ಕ.	16 = 00
1604	ಶ್ರೀ ಮರಿಯಣ್ಣ ಅರಾನ್ನ S/O ಸ್ಯಾಮುಸ್ ಅರಾನ್ನ, ನಾರವು, ಶಿರ್ವ ಪೋಸ್ಟ್, ದ. ಕ.	80 = 00
2436	ಶ್ರೀ ಪೌಲು ಮೆಂಡೋನ್ಸ S/O ಡಾವಿದ್ ಮೆಂಡೋನ್ಸ ಸೂಡ, ನಡುಮನೆ, ಸೂಡ ಪೋಸ್ಟ್, ದ. ಕ.	28 = 00
36/32	ಶ್ರೀ ಪುಟ್ಟ ಮೂಲ್ಯ S/O ತ್ಯಾಂಪು ಮೂಲ್ಯ, ಕತ್ತಿಗುಡ್ಡೆ, ಪಾದೂರು ಪೋಸ್ಟ್, ದ ಕ.	85 = 00

Office of The Catholic Bank, Ltd.,
Shirva Branch, S K.
Date 5—3—1961.

(Sd) M. B SHET.
Agent.

ಪುತ್ತೂರು ಡಿ. ಮು ಕೋರ್ಟಿನಲ್ಲಿ

R. E P. 507/60
(O S 252/57)

ಸತ್ಯಭಾಮ ಅಮ್ಮ — ಅರ್ಜಿದಾರ
ದೂಜಿಮಿಂಗೆಲ್ ಶರಾವು ಸಹಾ. ಎದ್ರಿರು.

ಎದ್ರಿರು— 1) ದೂಜಿ ಮಿಂಗೆಲ್ ಶರಾವು, ಹಿರಿಯರ ಹೆಸರು ಗೊತ್ತಿಲ್ಲ. ಹಾಸನ ಜಿಲ್ಲಾ ಕುಂಬಾರ ಹಳ್ಳಿ 4) ಪೆಡ್ರಿ ಶರಾವ್— ದೂಜಿಮಿಂಗೆಲ್ ಶರಾವಿನ ಮಗ—ಕೊಡಗು ಜಿಲ್ಲಾ ಸೋಮವಾರ ಪೇಟೆ—

ಮೇಲಿನ ಅಮಲ್ದಾರಿಯಲ್ಲಿ ದಾಖಲಾದ ಯೇಲಂ ಇಸ್ತಿಹಾರಿನ ಶರಥಗಳನ್ನು ನಿರ್ಣಯಿಸುವ ಬಗ್ಗೂ ಮತ್ತು ಅರ್ಜಿದಾರರಿಗೆ ಯೇಲಂಗೆ ನಿಲ್ಲುವರೆ ಪರ್ಮಿಶನ್ ಕೇಳಿ ಸಹಾ ಮಾಡಿದ ಮೇಲಿನ ಅಮಲ್ದಾರಿಯನ್ನು ನಿಮ್ಮ ನೋಟೀಸಿನ ಬಗ್ಗೆ ತಾರೀಕು 20—3—61ಕ್ಕೆ ಇಟ್ಟಿರುತ್ತದೆ. ಆ ದಿವಸ ನೀವಿಬ್ಬರೂ ಕೋರ್ಟಿನ ಮುಂದೆ ಹಾಜರಾಗಿ ಉದತರಿಸತಕ್ಕದ್ದು ತಪ್ಪಿದ್ದಲ್ಲಿ ನಿಮ್ಮನ್ನು ಶಿಕ್ಷ್ಯಾ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

Sd/-M Sadashiva Rao,
Vakil for Petitioner,

ಪುತ್ತೂರು, ತಾ. 8—3—61.

ಶ್ರೀ ಎ. ಬಿ. ಶೆಟ್ಟಿ
ಸ್ಮಾರಕ ನಿಧಿಗೆ
ಸಹಾಯ ಮಾಡಿರಿ

ವಿಚಾರವರ್ಷ

ಉಪ್ಪು ಮತ್ತು ಅದರ ಉಪವಸ್ತುಗಳು

ಉಪ್ಪಿನ ಬಗ್ಗೆ ನಾವಿಂದು ಸಂಪೂರ್ಣ ಸ್ವಾವಲಂಬಿಗಳು. ಈ ಕೈಗಾರಿಕೆಯಲ್ಲಿ ಲಭಿಸುವ ಉಪವಸ್ತುಗಳು ಇತರ ಉದ್ಯಮಗಳಲ್ಲಿ ಕಚ್ಚಾಮಾಲಾಗಿ ಬಳಸಲ್ಪಡುವುವು. ಇದಕ್ಕೆ ಮತ್ತು ನಿರ್ಯಾತ ಹೆಚ್ಚಿಸುವುದಕ್ಕೆ ಉಪ್ಪಿನ ಕೈಗಾರಿಕೆಯು ಇನ್ನೂ ಬೆಳೆದು ಬರಬೇಕಾಗಿದೆ.

ಸ್ವಾತಂತ್ರ್ಯ ನಂತರದಲ್ಲಿ ಔದ್ಯೋಗೀಕರಣದ ಬೆಳವಣಿಗೆಯಾದಂತೆ, ಅಡಿಗೆ ಉಪ್ಪಿಗೆ ಮಹತ್ವ ಸ್ಥಾನ ದೊರೆಯುತ್ತಿದೆ ಆಹಾರದಲ್ಲಿ ಸೇರಿಸುವಂತಹ ಅಗತ್ಯ ವಸ್ತುವಲ್ಲದೆ, ಅದು ರಾಸಾಯನಿಕ ಕೈಗಾರಿಕೆಯಲ್ಲಿನ ಪ್ರಮುಖ ಕಚ್ಚಾ ಸಾಮಗ್ರಿಯೂ ಆಗುತ್ತಿದೆ.

ವಿಪುಲವಾಗಿ ಅಗತ್ಯವಾಗುವ ಕಚ್ಚಾ ಸಾಮಗ್ರಿಯ ಉತ್ಪಾದನೆ, ಪ್ರಮಾಣೀಕರಣ, ಮತ್ತು ಉಪಯೋಗದ ಕಡೆಗೆ ಈಗ ಹೆಚ್ಚಿನ ಲಕ್ಷ್ಯವನ್ನೀಯಲಾಗುತ್ತಿದೆ. ಕಳೆದ ಹತ್ತು ವರ್ಷಗಳಲ್ಲಿ ಉಪ್ಪಿನ ಉತ್ಪಾದನೆಯನ್ನು ದ್ವಿಗುಣಗೊಳಿಸಲಾಗಿದೆ. ಈಗ ಸುಮಾರು ೧೦ಕೋಟಿ ಮಣ ಉಪ್ಪನ್ನು ತಯಾರಿಸಲಾಗುವುದು

ವಿಶ್ವದಲ್ಲಿ ಇಂದು ಉತ್ಪತ್ತಿಯಾಗುವ ಉಪ್ಪಿನಲ್ಲಿ ಬಹು ಭಾಗವನ್ನು ಕೈಗಾರಿಕೆಯಲ್ಲಿಯೇ ಬಳಸಲಾಗುವುದು. ಉಪ್ಪಿನ ಉತ್ಪಾದನೆಯು ರಾಷ್ಟ್ರದ ಕೈಗಾರಿಕಾ ಪ್ರಗತಿಗೆ ಸೂಚಕವಾಗಿರುವುದು.

ರಸಾಯನ ಶಾಸ್ತ್ರದಲ್ಲಿ ಉಪ್ಪಿಗೆ ಸೋಡಿಯಂಕ್ಲೋರೈಡ್ ಎಂದು ಹೆಸರು. ಉಪ್ಪನ್ನು ಸೋಡಾ ಉಪ್ಪು, (ಸೋಡಿಯಂ ಕಾರ್ಬೋನೇಟ್), ಕಾಸ್ಟಿಕ್ ಸೋಡಾ (ಸೋಡಿಯಂ ಹೈಡ್ರಾಕ್ಸೈಡ್), ಕ್ಲೋರಿನ್, ಹೈಡ್ರೋಕ್ಲೋರಿಕ್ ಆಮ್ಲ, ಮತ್ತು ಸೋಡಿಯಂ ಸಲ್ಫೇಟ್ ಈ ರಾಸಾಯನಿಕ ವಸ್ತುಗಳನ್ನು ತಯಾರಿಸುವುದಕ್ಕಾಗಿ ಕೊಡಲಾಗುತ್ತಿದೆ ಸಾಬೂನು, ಎಣ್ಣೆ, ವರ್ಣವಸ್ತುಗಳು, ಚರ್ಮ, ಹತ್ತಿಯ ಬಟ್ಟೆ, ಕಾಗದ, ಗಾಜು, ಪಿಂಗಾಣಿ, ಲೋಹ ಮೊದಲಾದ ಕೈಗಾರಿಕೆಗಳಲ್ಲಿ ಯಥೇಷ್ಟವಾಗಿ ಉಪ್ಪನ್ನು ಉಪಯೋಗಿಸಲಾಗುತ್ತದೆ. ಸುಮಾರು ೭೩ ಪ್ರಮುಖ ಕೈಗಾರಿಕೆಗಳಲ್ಲಿ ಉಪ್ಪನ್ನು ಅದರ ಶುದ್ಧ ರೂಪದಲ್ಲಿಯೇ ಬಳಸಲಾಗುತ್ತದೆ.

ಉತ್ತಮ ಗುಣಾಂಕದ ಉಪ್ಪು

ವಿವಿಧ ಕೈಗಾರಿಕೆಗಳು ಇಂದು ಉತ್ತಮ ಗುಣಾಂಕದ ಉಪ್ಪಿಗೆ ವಿವಿಧ ಕೈಗಾರಿಕೆಗಳಿಂದ ಬೇಡಿಕೆ ಇರುವುದು. ಮತ್ತು ಕಾಸ್ಟಿಕ್ ಸೋಡಾಗಳ ಉತ್ಪಾದನೆಯಲ್ಲಿ ಹೆಚ್ಚಳವಾಗಲೇ ಬೇಕಾಗಿದೆ. ಸಾಬೂನು ಹತ್ತಿಯ ಬಟ್ಟೆ, ಕಾಗದ ಮತ್ತು ಪಲ್ಪ್ ಕೈಗಾರಿಕೆಗಳಿಗೆ ಕಾಸ್ಟಿಕ್ ಸೋಡಾ ಅತ್ಯಗತ್ಯವಾಗಬೇಕಾಗುವುದು.

ಉಪ್ಪು ಮುಖ್ಯವಾಗಿ ನಮಗೆ ಸಮುದ್ರದ ನೀರಿನಿಂದ ದೊರೆಯುತ್ತದೆ ಈಗ ಪ್ರತಿ ವರ್ಷ ಉತ್ಪತ್ತಿಯಾಗಿರುವ ಉಪ್ಪಿನಲ್ಲಿ ಶೇಕಡಾ ೭೦ರಷ್ಟು ಸಮುದ್ರದ ನೀರಿನಿಂದ ಆಗುತ್ತಿದೆಯೆನ್ನಬಹುದು. ಇನ್ನುಳಿದದ್ದು ಉಪ್ಪು ಮಣ್ಣು (ಶೇ. ೨೫ರಷ್ಟು ಒಳನಾಡಿನ ಉಪ್ಪು ನೀರಿನ ಸರೋವರ (ಶೇ. ೫ರಷ್ಟು) ಕಲ್ಲುಪ್ಪಿನಿಂದ (ಶೇ.೦೬ರಷ್ಟು) ದೊರೆಯುತ್ತದೆ ಗುಜರಾತಿನ ಖರಗೋಡ, ರಾಜಸ್ಥಾನದ ದಿದ್ವಾನ ಮತ್ತು ಪಚಬದ್ರಾ, ಮದರಾಸಿನ ತೂತುಕುಡಿ ಈ ಸ್ಥಳಗಳಲ್ಲಿ ಉಪ್ಪು ಮಣ್ಣು ದೊರೆಯುತ್ತದೆ ರಾಜಸ್ಥಾನದ ಸಂಬಾರ್‌ನಲ್ಲಿ ಮುಖ್ಯವಾಗಿ ಉಪ್ಪು ನೀರಿನ ಸರೋವರವಿರುವುದು. ಹಿಮಾಚಲ ಪ್ರದೇಶದ ಮಂಡಿಯಲ್ಲಿ ಮಾತ್ರವೇ ಕಲ್ಲುಪ್ಪಿನ ಗನಿ ಇರುವುದು. ಈಗ ಉಪ್ಪು ಮುಖ್ಯವಾಗಿ, ಗುಜರಾತ್ ಮಹಾರಾಷ್ಟ್ರ, ಮದರಾಸ್ ಆಂಧ್ರ ಪ್ರದೇಶ ಮತ್ತು ಕೇರಳಗಳಲ್ಲಿ ದೊರೆಯುತ್ತದೆ.

ಸಾಮಾನ್ಯವಾಗಿ ಸಮುದ್ರದ ನೀರನ್ನು ಕೊಪ್ಪರಿಗೆಗಳಲ್ಲಿ ಬಿಸಿಲಿಗಿಟ್ಟು ಉಪ್ಪನ್ನು ಉತ್ಪಾದಿಸಲಾಗುತ್ತದೆ. ಉಪ್ಪಿನ ಹರಳುಗಳು ಸಾಕಷ್ಟು ಗಾತ್ರಕ್ಕೆ ಬಂದಾಗ ಅವುಗಳನ್ನು ಕೊಪ್ಪರಿಗೆಯಿಂದ ತೆಗೆದುಕೊಳ್ಳಲಾಗುವುದು.

ಉಪವಸ್ತುಗಳು

ಸಮುದ್ರದ ನೀರಿನಿಂದ ಉಪ್ಪನ್ನು ತಯಾರಿಸುವಾಗ, ಕೊಪ್ಪರಿಗೆಯಲ್ಲಿ ಉಳಿಯುವ ಗಸಿಯಿಂದ ಕೈಗಾರಿಕೆಗೆ ಬೇಕಾದ ಅನೇಕ ಉಪವಸ್ತುಗಳನ್ನು ತಯಾರಿಸಬಹುದು. ಈ ಗಸಿಯನ್ನು ವಾಣಿಜ್ಯ ಪ್ರಮಾಣದಲ್ಲಿ ಉಪಯೋಗಿಸಿಕೊಳ್ಳುವುದರಿಂದ ಉಪ್ಪಿನ ತಯಾರಿಕಾ ವೆಚ್ಚವು ಕಡಿಮೆಯಾಗುವುದಲ್ಲದೆ, ರಾಸಾಯನಿಕ ಕೈಗಾರಿಕೆಗಳಿಗೆ ಬೇಕಾದ ಕಚ್ಚಾ ಸಾಮಗ್ರಿಗಳೂ ದೊರೆಯುವುದು.

ಸಮುದ್ರದ ನೀರಿನಿಂದ ಉಪ್ಪನ್ನು ತಯಾರಿಸುವಾಗ ದೊರೆಯುವ ಗಸಿಯಿಂದ ವರ್ಷಕ್ಕೆ ಒಟ್ಟು ೩೮ ಲಕ್ಷ ಟನ್ನುಗಳಷ್ಟು 'ಎಪ್ಸಂ' ಉಪ್ಪು ೭.೫ ಲಕ್ಷ ಟನ್ನುಗಳಷ್ಟು ಮೆಗ್ನೀಸಿಯಂ ಕ್ಲೋರೈಡ್ ೬೫,೦೦೦ ಟನ್ನುಗಳಷ್ಟು ಪೊಟಾಸಿಯಂ ಕ್ಲೋರೈಡ್, ೭೦೦೦ ಟನ್ನುಗಳಷ್ಟು ಬ್ರೋಮಿನ್ ದೊರೆಯುವುದು ಸಾಧ್ಯವಿದೆ. ಸಂಬಾರ್ ಸರೋವರದ ನೀರಿನಿಂದ ಉಪ್ಪನ್ನು ತಯಾರಿಸುವಾಗ ಉಳಿಯುವ ಗಸಿಯಿಂದ ೪೫,೦೦೦ ಟನ್ನುಗಳಷ್ಟು ಸೋಡಿಯಂ ಸಲ್ಫೇಟ್ ಮತ್ತು ೩೦,೦೦೦ ಟನ್ನುಗಳಷ್ಟು ಸೋಡಿಯಂ ಕಾರ್ಬೋನೇಟ್ ಮತ್ತು ಸೋಡಿಯಂ ಬೈಕಾರ್ಬೋನೇಟ್ ದೊರೆಯುವುದು.

ಸಂಶೋಧನೆ

ರಾಷ್ಟ್ರೀಯ ಪ್ರಯೋಗ ಶಾಲೆಗಳ ಮಾಲಿಕೆಯಲ್ಲಿ, ಕೇಂದ್ರ ಉಪ್ಪಿನ ಸಂಶೋಧನಾ ಸಂಸ್ಥೆಯನ್ನು ಭಾವನಗರದಲ್ಲಿ ೧೯೫೪ರ ಎಪ್ರಿಲ್ ತಿಂಗಳಲ್ಲಿ ಸ್ಥಾಪಿಸಲಾಯಿತು. ಉಪ್ಪಿನ ಉತ್ಪಾದನೆ ಮತ್ತು ಆ ಕಾಲದಲ್ಲಿ ದೊರೆಯುವ ಉಪವಸ್ತುಗಳ ಸಮರ್ಪಕವಾದ ಉಪಯೋಗ ಇವುಗಳನ್ನು ಕುರಿತು ಈ ಸಂಸ್ಥೆಯು ಪರಿಶೀಲನೆಗಳನ್ನು ನಡೆಸುತ್ತದೆ.

ಉಪ್ಪಿನ ಸಂಶೋಧನಾ ಸಂಸ್ಥೆಯು ಅನೇಕ ಪ್ರಾಮುಖ್ಯ ಸಮೀಕ್ಷೆಗಳನ್ನು ನಿರ್ವಹಿಸಿದೆ. ಸಮುದ್ರದ ನೀರಿನಿಂದ ಪೊಟಾಸಿಯಂ ಕ್ಲೋರೈಡನ್ನು ಪಡೆಯುವುದು, ಸರೋವರದ ನೀರಿನಿಂದ ಸೋಡಿಯಂ ಸಲ್ಫೇಟ್ ಮತ್ತು ಸೋಡಿಯಂ ಕಾರ್ಬೋನೇಟ್‌ಗಳನ್ನು ಪಡೆಯುವ ವಿಧಾನಗಳನ್ನು ಅನ್ವೇಷಿಸಿದೆ. ಭಾರತಕ್ಕೆ ಸೋಡಿಯಂ ಸಲ್ಫೇಟ್ ಅತ್ಯುಪಯುಕ್ತ ಲವಣ. ಅದರ ಉಪಯೋಗ ಎಲ್ಲೆಮೀರಿ ಬೆಳೆಯುತ್ತಿದೆ ಈಗ ನಾವು ಈ ಲವಣವನ್ನು ವಿದೇಶಗಳಿಂದ ತರಿಸಿಕೊಳ್ಳುತ್ತಿದ್ದೇವೆ. ಈ ಸಂಶೋಧನಾ ಸಂಸ್ಥೆಯು ಇನ್ನಿತರ ಉಪವಸ್ತುಗಳನ್ನು ಪಡೆಯುವ ವಿಷಯದಲ್ಲಿಯೂ ಸಂಶೋಧನೆ ನಡೆಸುತ್ತಿದೆ.

ಊಟದಲ್ಲಿ ಉಪಯೋಗಿಸುವ ಉಪ್ಪನ್ನು ತಯಾರಿಸುವ ವಿಧಾನವನ್ನು ಈ ಸಂಸ್ಥೆ ಕಂಡುಹಿಡಿದಿದೆ. ಶೇಕಡಾ ೧೮ರಿಂದ ೧೯ರಷ್ಟು ಸಾರಜನಕ, ಶೇಕಡಾ ೪ರಿಂದ ೫ರಷ್ಟು ಪೊಟಾಷ್ ಉಳ್ಳ ಸಂಮಿಶ್ರ ಕೃತಕ ಗೊಬ್ಬರವನ್ನೂ, ಸಮುದ್ರದ ನೀರಿನಿಂದ ತಯಾರಿಸುವ ವಿಧಾನ ನಮ್ಮ ದೇಶದಲ್ಲಿ ಕೃತಕ ಗೊಬ್ಬರಗಳ ಬೇಡಿಕೆ ಹೆಚ್ಚುತ್ತಿರುವ ದೃಷ್ಟಿಯೂ ಈ ಸಂಸ್ಥೆಯಲ್ಲಿ ಅನ್ವೇಷಣೆಯ ಪ್ರಧಾನ ವಿಷಯವಾಗಿರುವುದು.

ಸಮುದ್ರದ ನೀರಿನ ಉಪ್ಪಿನ ರಫ್ತನ್ನು ದೀರ್ಘಾವಧಿ ಪ್ರಮಾಣಕ್ಕೇರಿಸುವ ಸಲುವಾಗಿ ಹಾಗೂ ಉಪ್ಪಿನ ರಫ್ತಿಗೆ ಎಲ್ಲಾ ಸೌಕರ್ಯಗಳನ್ನು ನೀಡುವ ಸಲುವಾಗಿ ಉಪ್ಪಿನ ರಫ್ತನ್ನು ಸ್ಟೇಟ್ ಟ್ರೇಡಿಂಗ್ ಕಾರ್ಪೋರೇಷನ್ ಸಂಪೂರ್ಣವಾಗಿ ನಿರ್ವಹಿಸುತ್ತಿದೆ. ಉಪ್ಪಿನ ತಯಾರಿಕೆಯಲ್ಲಿ ನಿರತರಾಗಿರುವ ಸಣ್ಣ ಪ್ರಮಾಣದ ಖಾಸಗಿ ಕಾರ್ಖಾನೆಗಳು, ಸಹಕಾರ ಸಂಸ್ಥೆಗಳ ಶ್ರೇಣಿಗಳಲ್ಲಿ ಉಪ್ಪಿನ ಸುಂಕವನ್ನು ವಿಧಿಸಲಾಗುತ್ತಿದೆ. ಈ ಸುಂಕದಿಂದ ಬರುವ ಹಣವನ್ನು ಈ ಕೈಗಾರಿಕೆಯ ಸುಧಾರಣೆಗಾಗಿ ವಿನಿಯೋಗಿಸಲಾಗುವುದು.

ಸರ್ಕಾರದ ಸ್ವಾಮ್ಯದಲ್ಲಿ ಕೆಲಸಮಾಡುವ ಉಪ್ಪಿನ ಕಾರ್ಖಾನೆಗಳಲ್ಲಿ ಸುಮಾರು ೩೦,೦೦೦ ಕಾರ್ಮಿಕರು ಇದ್ದಾರೆ. ಈ ಕಾರ್ಖಾನೆಗಳು, ಗುಜರಾತ್, ಮಹಾರಾಷ್ಟ್ರ, ರಾಜಸ್ಥಾನ, ಮೈಸೂರು ಮದರಾಸ್, ಆಂಧ್ರ ಪ್ರದೇಶ, ಕೇರಳ, ಒರಿಸ್ಸಾ, ಪಶ್ಚಿಮ ಬಂಗಾಳ ಮತ್ತು ಹಿಮಾಚಲ ಪ್ರದೇಶಗಳಲ್ಲಿರುವುವು.

'ಉಪ್ಪಿನ ಯೋಜನೆ'

ಪ್ರಥಮ ಮತ್ತು ದ್ವಿತೀಯ ಯೋಜನೆಗಳ ಕಾಲದಲ್ಲಿ ಭಾರತವು ಉಪ್ಪಿನ ವಿಷಯದಲ್ಲಿ ಸ್ವಪರಿಪೂರ್ಣತೆಯನ್ನು ಸಾಧಿಸಿದೆಯಷ್ಟೇ ಅಲ್ಲ; ಗಮನಾರ್ಹ ಪ್ರಮಾಣದಲ್ಲಿ ಉಪ್ಪನ್ನು ವಿದೇಶಿ ರಾಷ್ಟ್ರಗಳಿಗೆ ರಫ್ತುಮಾಡುತ್ತಿದೆ. ಈ ಕೈಗಾರಿಕೆಯನ್ನು ಇನ್ನೂ ಉತ್ತಮಪಡಿಸಲು ಅನೇಕ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಹಿಮಾಚಲ ಪ್ರದೇಶದ ಉಪ್ಪಿನ ಗನಿಗಳಲ್ಲಿ ಉತ್ಪಾದನೆಯನ್ನು ಹೆಚ್ಚು ಮಾಡುವ ಕ್ರಮಗಳನ್ನು ಕೈಗೊಳ್ಳಲಾಗಿದೆ. ರಾಜಸ್ಥಾನ ಮತ್ತು ಗುಜರಾತಗಳಲ್ಲಿನ ಸರಕಾರಗಳ ಸ್ವಾಮ್ಯದಲ್ಲಿದ್ದ ಉಪ್ಪಿನ ಕಾರ್ಖಾನೆಗಳನ್ನು ಹಿಂದೂಸ್ಥಾನ್ ಸಾಲ್ಟ್ ಕಂಪೆನಿ ಎಂಬ ಸರ್ಕಾರದ ಸ್ವಾಮ್ಯದಲ್ಲಿರುವ ಸಂಸ್ಥೆಗೆ ೧೯೫೮ರ ಜನವರಿಯಿಂದ ವಹಿಸಿಕೊಡಲಾಯಿತು. ಇದು ಉಪ್ಪಿನ ಉತ್ಪಾದನೆ ಮತ್ತು ಉಪವಸ್ತುಗಳ ಉತ್ಪಾದನೆ ಗಳೆರಡಕ್ಕೂ ಗಮನವೀಯುತ್ತದೆ.

ಪಶ್ಚಿಮ ಬಂಗಾಳದ ಸಿಸಿರಗಂಜ್‌ನಲ್ಲಿ ೫೮ ಲಕ್ಷ ರೂ.ಗಳ ಅಂದಾಜು ವೆಚ್ಚದಲ್ಲಿ ತರಬೇತಿ ಹಾಗೂ ಉತ್ಪಾದನಾ ಕೇಂದ್ರವೊಂದನ್ನು ಸ್ಥಾಪಿಸಲು ಮಂಜೂರಾತಿ ದೊರೆತಿದೆ. ಈ ಕೇಂದ್ರದ ಸ್ಥಾಪನೆಯ ಕೆಲಸವು ಈ ವರ್ಷವೇ ಮುಕ್ತಾಯವಾಗುವ ನಿರೀಕ್ಷೆಯಿದೆ. ಈ ಕೇಂದ್ರವು ಯೋಗ್ಯ ವಿಧಾನಗಳಲ್ಲಿ ಉಪ್ಪನ್ನು ತಯಾರಿಸುವುದರಲ್ಲಿ ತರಬೇತಿಯನ್ನು ನೀಡುವುದರ ಜೊತೆಗೆ, ಪಶ್ಚಿಮ ಬಂಗಾಳದ ಸುಂದರ ಬನ್ ಕ್ಷೇತ್ರದಲ್ಲಿ ಉಪ್ಪಿನ ಕೈಗಾರಿಕೋದ್ಯಮವನ್ನು ಅಭಿವೃದ್ಧಿಪಡಿಸುವ ಗುರಿಯನ್ನು ಹೊಂದಿದೆ.



ಕುಮಾರಿ ಬಿಲ್ಲೆಗಳು

(Registered)

ಈ ದೇಶೀಯ ತಯಾರಿಕೆಯ ಗುಣಾಂಶವು ವರ್ಷಗಟ್ಟಲೆಯಿಂದ ವಿಖ್ಯಾತವಾಗಿದೆ ಮತ್ತು ಪ್ರಮುಖ ಕೆಮಿಸ್ಟರಿಂದ ಈ ಕೆಳಗಿನ ದರಗಳಲ್ಲಿ ವಿಕ್ರಯಿಸಲ್ಪಡುತ್ತವೆ.ಟ್ಯೂಬಿಗೆ ರೂ. 4=00 (ಸಾದಾ), ರೂ. 6=00(ಸ್ಪೆಶ್ಯಲ್), ರೂ. 9=00 (ಎಕ್ಸ್ಟ್ರಾ ಸ್ಪೆಶ್ಯಲ್).

P. DEVEE & Co. (M. I.) CALCUTTA—40

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—I.

Tel: 'BLUEYAGAR'. — ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ — Phone: 374.

ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು.[ಮಾಲಿಕ:ಕೆ.ಕೆ.ಆರ್.ಶೇಟ್

ಪರಿಚಯ:

ಇಲ್ಲಿ ಪ್ರತಿಯೊಬ್ಬನಿಗೂ ಸೈಕಲೊಂದಿದೆ

ಯುರೋಪಿನ ಚಿಕ್ಕದೇಶ ಹೊಲ್ಲೆಂಡ್‌ನಲ್ಲಿ ಎಲ್ಲರೂ ಸೈಕಲಿನ ಒಡೆಯರಾಗಿದ್ದಾರೆ. ಅಲ್ಲದೆ, ಮೋಟಾರು ಚಾಲಕರ ಕಣ್ಣುಕಟ್ಟಿಸಿ ಬಿಡುವಷ್ಟು ಚಾಲಾಕಿಗಳಾಗಿದ್ದಾರೆ. ಅತಿಥಿ ಸತ್ಕಾರ ಪ್ರಿಯರಾದ ಡಚ್ಚರು ಸ್ವಾಭಿಮಾನಿಗಳು; ಅಭಿಮಾನಧನರು. ಅವರಿಂದ ನಾವೂ ಪಾಠ ಕಲಿಯಬೇಕು.

ಹೊಲ್ಲೆಂಡು ಒಂದು ಪ್ರಶಾಂತವಾದ–ಅತಿಶಾಂತವಾದ—ದೇಶ. ಆದರೆ, ಅಲ್ಲಿನ ಆ ಅನುಪಮ ಶಾಂತಿ ಮೈದಾನಗಳಲ್ಲಿ ಮೇಯುತ್ತಿರುವ ದನಗಳ ಗೊರಸಿನ ಧ್ವನಿಯಿಂದ ಭಂಗಗೊಳ್ಳುವುದು. ವಾಯುವೇಗದಿಂದ ಚಲಿಸುವ ವಾಹನಗಳ ಗಡಬಡ ಸದ್ದಿನಿಂದಲೂ ನೆಮ್ಮದಿ ಕೆಡುವುದಿದೆ.

ಹೊಲ್ಲೆಂಡನ್ನು ಸಂದರ್ಶಿಸಿದ ಒಬ್ಬನು ಅಲ್ಲಿನ ಹಳ್ಳಿಗಳನ್ನು ಕಂಡು, ಸೌಂದರ್ಯವನ್ನು ಆಸ್ವಾದಿಸಿ ಅದರಲ್ಲೇ ತನ್ಮಯನಾಗದಿರಲಾರನು. ಆದರೆ, ಹೊಲ್ಲೆಂಡಿನ ಬಂದರ ರಾಟರ್ ಡಾಂಗೆ ಕಾಲಿರಿಸಿದನೆಂದರೆ, ಅವನು ಅವಶ್ಯ ವಿಸ್ಮಯಚಕಿತನಾಗಲೇ ಬೇಕು. ಈ ದೊಡ್ಡ ಬಂದರದಲ್ಲಿ ನಾಮಮಾತ್ರಕ್ಕಾದರೂ ಶಾಂತಿ ದೊರೆಯಲಾರದು. ಅಲ್ಲಿ ಎಲ್ಲ ಪ್ರಕಾರದ ಪ್ರಯಾಣಿಕರ ಹಡಗುಗಳು—ದೋಣಿಗಳು, ಸರ್ವವಿಧದ ಎಣ್ಣೆ ಒಯ್ಯುವ, ಸಾಮಾನು ಸಾಗಿಸುವ ಮಚ್ಚಿಗಳೂ ನೌಕೆಗಳು ಒಂದಕ್ಕೊಂದು ಡಿಕ್ಕಿ ಹೊಡೆಯುತ್ತಿರುವಂತಿರುತ್ತವೆ. ಅವು ಪರಸ್ಪರ ಡಿಕ್ಕಿ ಹೊಡೆಯಲು ಮುಂದುವರಿದಾಗ ಅವುಗಳ ಪ್ರಧಾನ ನಾವಿಕರು ಅಟ್ಟಹಾಸ ಮಾಡುತ್ತಾರೆ. ರಾಟರ್ ಡಾಮಿನ ಬಂದರವು ಇಡೀ ಯುರೋಪಿನಲ್ಲೇ ದೊಡ್ಡದಾಗಿದೆ. ದೃಷ್ಟಿಗೆ ನಿಲುಕದಷ್ಟು ಅದರ ವೈಶಾಲ್ಯವಿದೆ.

ಜಲಮಾರ್ಗದ ಆಯಾತ ನಿರ್ಯಾತಗಳು ಬೃಹತ್ತಾಗಿರುವಂತೆಯೇ ಇಲ್ಲಿನ ಭೂಮಾರ್ಗದ ಯಾತಾಯಾತಗಳು ಯಾವುದೇ ದೊಡ್ಡ ನಗರಕ್ಕಿಂತ ಕಡಿಮೆಯೆನಿಸುವುದಿಲ್ಲ. ವಿವಿಧ ದೇಶಗಳ ಕಾರು, ಸೈಕಲುಗಳು ಇಲ್ಲಿನ ಮಾರ್ಗಗಳಲ್ಲಿ ದೃಷ್ಟಿಗೋಚರವಾಗುವುವು. ಆದರೆ, ನಡೆಯುವ ಕ್ರಮವು ಸರ್ವತ್ರ ಏಕ ಪ್ರಕಾರವಾಗಿದೆ. ಮಾರ್ಗದ ಬಲಪಕ್ಕದಲ್ಲಿ ಇವು ಚಲಿಸುತ್ತವೆ. ನಮ್ಮ ದೇಶದಲ್ಲಿ ಎಡಗಡೆ ವಾಹನಗಳು ಸಂಚರಿಸಬೇಕು. ಅಲ್ಲಿ ಬಲಗಡೆಗೆ ಹೋಗುವ ಗಾಡಿಗಳಿಗೆ ತಿರುವಿನಲ್ಲಿ ಪ್ರಥಮ ಪ್ರಾಶಸ್ತ್ಯವು ಸಿಗುವುದು. ಮೋಟಾರು ಚಾಲಕರು ಇವನ್ನು ಅವಶ್ಯ ಗಮನಿಸಬೇಕಾಗುವುದು. ಆದರೆ, ಸೈಕಲು ಸವಾರರನಡುವೆ ಮೋಟಾರು ಚಾಲಕರು ಜಾಣಾಕ್ಷತೆಯಿಂದ ಮುಂದುವರಿಯಬೇಕಾಗುತ್ತದೆ. ಪ್ರತಿಯೊಬ್ಬ ಡಚ್ಚನೂ ಸೈಕಲೊಂದರ ಒಡೆಯನಾಗಿದ್ದಾನೆ. ಪಾದಗಳಿಂದ ಮೆಟ್ಟುವ ಸೈಕಲುಗಳಲ್ಲದೆ ಯಂತ್ರದ ಮೂಲಕ ಓಡುವವೂ ಇರುತ್ತವೆ. ಅಧಿಕ ಜನಸಂದಣಿಯಿರುವ ಮುಂಜಾನೆ ಮತ್ತು ಸಂಜೆಯ ಸಮಯದಲ್ಲಿ ಇವುಗಳ ಸಂಖ್ಯೆ ೨೦ ಇದ್ದರೆ, ಕಾರಿನದು ಕೇವಲ ಒಂದು ಮಾತ್ರ! ನೀವು ಪೂರ್ವಾಹ್ನ ಒಂಬತ್ತು ಮತ್ತು ಅಪರಾಹ್ನ ಐದು ತಾಸುಗಳ ನಂತರ ಕಾರು ಹಿಡಿದುಕೊಂಡು ಈ ರಸ್ತೆಗಳಿಗಿಳಿದಿರೆಂದರೆ, ಸೈಕಲ್ ಸವಾರರು ನಿಮ್ಮನ್ನು ಕಂಗಾಲು ಮಾಡಿಯೇ ತೀರುವರು. ನಾಲ್ಕೂ ಕಡೆಯಿಂದ ಸೈಕಲ್ಲುಗಳು ನಿಮ್ಮ ಕಾರಿನ ಮೇಲೆ ಆಕ್ರಮಣ ಮಾಡಲು ನೆಗೆದು ಬರುತ್ತಿರುವಂತೆ ಭಾಸವಾಗುವುದು, ಅವು ನಿಮ್ಮ ಮುಂದೆ ಹಿಂದೆ ಅಕ್ಕಪಕ್ಕ ಎಲ್ಲಿ ನೋಡಿದಲ್ಲಿ ಸರಿದಾಡುವುವು. ನೀವು ಮುಟ್ಟಬೇಕೆಂದಿದ್ದ ಒಂದು ಸ್ಥಳವನ್ನು ನಿಮ್ಮ ನಂತರ ಹೊರಡಬಹುದಾದ ಸೈಕಲ್ ಸವಾರನು ಮೊದಲು ಮುಟ್ಟಿಬಿಡುತ್ತಾನೆಯೆಂಬುದು ಅದ್ಭುತವೆನಿಸಿದರೂ ಅನತಿಶಯೋಕ್ತಿ.

ಹೊಲ್ಲೆಂಡಿನ ವಾಸ್ತುಕಲೆಯ ಮೇಲೆ ಒಂದು ದೊಡ್ಡ ಪುಸ್ತಕವನ್ನೇ ಬರೆಯಬಹುದು. ಇಲ್ಲಿಯ ಭವನಗಳಿಗೆ ತಮ್ಮದೇ ಆದ ವೈಶಿಷ್ಟ್ಯವಿದೆ. ಹೊಲ್ಲೆಂಡಿನ ಉನ್ನತ ಗುಂಬಜವಿರುವ ಇಗರ್ಜಿಗಳು ಅತ್ಯಂತ ಆಕರ್ಷಕವಿವೆ. ಕಟ್ಟಡಗಳು ಮತ್ತು ಮನೆಗಳ ಕಡುಕೆಂಪು ಬಣ್ಣ. ಅಲ್ಲಲ್ಲಿ ಕರಿಯ ಇಟ್ಟಿಗೆಗಳ ಗೋಡೆಗಳು, ಇವುಗಳ ನಡುವೆ ಕಿಟಕಿಯ ಸುತ್ತಲೂ ಬಳೆದ ನಸುಬಿಳುಪು, ಹೊಸತು ಹಳತೆಂಬ ಭೇದವಿಲ್ಲದೆ ಎಲ್ಲ ಮನೆಗಳಲ್ಲೂ ಅತಿ ವಿಶಾಲವಾದ ಕಿಟಕಿಗಳು; ಕಲ್ಲಿನ ಮಾಡಗಳು, ಉನ್ನತವಾದ ಕಾಲುವೆಗಳು, ಇವುಗಳಲ್ಲಿ ಚಿಕ್ಕಪುಟ್ಟ ಸೇತುವೆಗಳು—ಇವುಗಳು ಎಂತಹನ ಹೃನ್ಮನಗಳನ್ನಾದರೂ ಆಕರ್ಷಿಸಿಯೇ ಬಿಡುವುವು.

ಹೊಲ್ಲೆಂಡಿನ ಮಾರ್ಗಗಳು, ಭವನಗಳು ತೀರ ಸರಳವಾಗಿವೆ. ಇದೇ ಸಾರಳ್ಯವು ಅಲ್ಲಿನ ಮನೆಗಳೊಳಗೂ ನಮಗೆ ಕಾಣುತ್ತದೆ. ಆದರೆ, ಈ ಸರಳತೆಯೇ ನಮ್ಮನ್ನು ಸೆಳೆಯಲು ಸಮರ್ಥವಾಗಿದೆ. ಮೇಜಿನ ಮೇಲೆ ದಪ್ಪವಾದ ಕಂಬಳಿಯನ್ನು ಹಾಸುವ ಕ್ರಮವು ಹೊಸಬರನ್ನು ಅವಶ್ಯ ಆಕರ್ಷಿಸಲೇಬೇಕು. ಹೋಟೇಲು ಮತ್ತು ಉಪಾಹಾರ ಗೃಹಗಳಲ್ಲಿ ಮೇಜಿನ ಮೇಲೆ ದಪ್ಪಗಾದ ಕೆಂಪು ಕಂಬಳಿಯನ್ನು ಹಾಸುವ ಕ್ರಮವಿದೆ. ಇದೇಕೆ ಹೀಗೆ ಎಂದು ನೀವು ಯಾವನಾದರೊಬ್ಬ ಡಚ್ಚನನ್ನು ಪ್ರಶ್ನಿಸಿರಿ. ಆಗ, ಆತ ಹೇಳುತ್ತಾನೆ: "ಅನಾದಿಯಿಂದಲೂ ನಮ್ಮದು ಅದೇ ಕ್ರಮ". ಏಕೆಂದು ಮಾತ್ರ ಆತನರಿಯ. ಇದೇ ಉತ್ತರವನ್ನು ನೀವು ಮನೆಯ ಮೇಜಿನ ಮೇಲೆ ಅಥವಾ ಗೋಡೆಗಳಲ್ಲಿ ಸುಂದರ ಹೂವಿನ ಗಿಡಗಳನ್ನು ನೇತು ಹಾಕುವುದೇಕೆಂದು ಕೇಳಿದರೂ ದೊರೆಯುವುದು. ಒರ್ವ ಡಚ್ಚನು ಅಂದಿದ್ದಾನೆ—ನಮಗೆ ಉದ್ಯಾನಗಳಲ್ಲಿ ಹೂಗಳನ್ನು ಕಾಣುವುದೆಂದರೆ ಪಂಚಪ್ರಾಣಕ್ಕೆ ಸಮ. ಆದರೆ, ರಾತ್ರೆ ಹೊತ್ತು ನಾವದನ್ನು ಕಾಣಲಾರೆವು. ಆದಕ್ಕಾಗಿ ನಮ್ಮ ಮನೆಯನ್ನೂ ತೋಟದಂತೆ ಶೃಂಗರಿಸಿ ಇರುಳೆಲ್ಲಾ ಆನಂದ ತನ್ಮಯರಾಗುತ್ತೇವೆ"

ಡಚ್ಚರು ನಿಜವಾದ ಅತಿಥಿಪ್ರಿಯರು. ನಿರ್ಮಲ ಭಾವನೆಯಿಂದ ಅತಿಥಿಗಳನ್ನು ಸತ್ಕರಿಸುವರು. ಆದುದರಿಂದಲೇ ಒಬ್ಬ ಯಾತ್ರಿಕನಿಗೆ ಹೊಲ್ಲೆಂಡ್ ಬಿಟ್ಟು ಬರುವುದೆಂದರೆ, ಅತೀವ ದುಃಖ. ಯಾರೊಡನೆಯೂ ಹೆಚ್ಚಾಗಿ ಬೆರೆಯದ ಡಚ್ಚರ ಹೃದಯದಲ್ಲಿ ಮಿತ್ರತ್ವದ ಬಗ್ಗೆ ಸದ್ಭಾವನೆಯಿಲ್ಲವೆಂದು ಹೇಳುವುದು ಸರಿಯಲ್ಲ. ಒಂದು ಬಾರಿ ನೀವು ಒಬ್ಬ ಡಚ್ಚನೊಡನೆ ಮಾತಾಡಿದಿರೆಂದರೆ, ಆತ ನಿಮ್ಮ ಆಜನ್ಮ ಮಿತ್ರನಾಗಿ ಹೋಗುತ್ತಾನೆ ಎಲ್ಲ ಡಚ್ಚರ ಗುಣವೂ ಇದೇ,

ಹೊಲ್ಲೆಂಡಿನ ಜನನಿವಾಸಿಗಳ ಸಂಖ್ಯೆಯೂ ಅತೀವ ವಿಶೇಷವಾಗಿದೆ. ಅಲ್ಲಿ ಪ್ರತಿ ಚೌರಸ ಮೈಲಿನಲ್ಲಿ ೬೦೦ ನಾಗರಿಕರು ನೆಲಸುತ್ತಾರೆ ಬೀದಿಯಲ್ಲಿ, ಅಂಗಡಿಗಳಲ್ಲಿ–ಎಲ್ಲಿ ನೋಡಿದರೂ ಅಲ್ಲಿ ಜನರ ತಲೆಗಳೇ ಸಮುದ್ರದ ತೆರೆಗಳಂತೆ ತೋರಿ ಬರುತ್ತವೆ. ಆದರೆ, ನಿಮಗೆ ಯಾವನಾದರೂ ಮಾಲಿಯಿಂದ ಅಥವಾ ಕೂಲಿ ಮಜೂರನಿಂದ ಏನಾದರೂ ಕೆಲಸ ಮಾಡಿಸಬೇಕೆಂದರೆ, ನಿಮ್ಮ ಮನಸ್ಸು ವ್ಯಗ್ರಗೊಳ್ಳುವುದು. ಏಕೆಂದರೆ, ಅಲ್ಲಿ ಇಷ್ಟೊಂದು ಜನಸಂಖ್ಯೆ ಇರುವುದಾದರೂ ಮಜೂರರು, ಕೂಲಿನಾಲಿಗಳು ಬಹು ಅಲ್ಪ. ಹೆಚ್ಚಿನವರೆಲ್ಲರೂ ಪಶುಪಾಲನೆಯಿಂದಲೇ ಬದುಕುವವರು. ಆದುದರಿಂದಲೇ ಡಚ್ಚರು ಇಂದಿಗೂ ಸ್ವಾವಲಂಬಿಗಳಾಗಿರುವರು. ಸ್ವಾವಲಂಬನವೇ ಮೂರ್ತಿಮತ್ತಾಗಿ ಬಂದು ಅಲ್ಲಿ ನೆಲಸಿದೆಯೆನ್ನಬಹುದು.

ಯುರೋಪಿನ ಅತಿ ಚಿಕ್ಕ ದೇಶಗಳಲ್ಲಿ ಒಂದಾದ ಹೊಲ್ಲೆಂಡ್ ಪಶುಪಾಲನೆಗೆ ವಿಶ್ವವಿಖ್ಯಾತವಾಗಿದೆ. ಈ ವೃತ್ತಿಯೇ ಡಚ್ಚರನ್ನು ಅಭಿಮಾನಧನರಾಗಿ, ಸಂಪನ್ನರಾಗಿ ಸ್ವಾವಲಂಬಿಗಳಾಗಿ ಬದುಕಲು ಪ್ರೇರೇಪಿಸುತ್ತಿದೆ.

(ನ. ಭಾ. ಟೈಮ್ಸ್‌ನ ಕೃಪೆಯಿಂದ)

The Moolky Bank, Ltd.
MULKI.
ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4%
5 ,, 12	,,	4¼%
13 ,, 24	,,	4½%

ರೂ. 5,000/- ಮತ್ತು ಮೇಲಣ ಡಿಪೋಸಿಟಿಗೆ ¼% ಜಾಸ್ತಿ ಕೊಡಲಾಗುವುದು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ¼%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ.
ಮೆನೇಜರ್,
ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ
LETTER WRITING MADE EASY
ಸುಲಭದಲ್ಲಿ ಪತ್ರಲೇಖನ
ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ
ಮನೆ ಮದ್ದು
ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಸುಲಭದಲ್ಲಿ ಇಂಗ್ಲಿಷ್
(ENGLISH MADE EASY)
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ
ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N.P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು.
ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ

ನವಯುಗ ವಾರ ಪತ್ರಿಕೆಗೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ

ಪುಸ್ತಕ ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ. — ಸಂ. ನ.)

ಗಾದೆಗಳ ಗೀತೆಗಳು — ರಚಿಸಿದವರು ಶ್ರೀ ಎಚ್. ಎಂ. ರಾಮಾರಾಧ್ಯ (ಪಾಗೀಶ) ಪ್ರಕಾಶಕರು: ಸುದರ್ಶನಂ ಅಂಡ್ ಕಂಪೆನಿ, ಅವೆನ್ಯೂ ರೋಡ್, ಬೆಂಗಳೂರು—೨. ಪುಟಗಳು: ೯೬. ಬೆಲೆ ರೂ ೧ ೫೦.

ಸಾವಿರಾರು ವರ್ಷಗಳ ಜನಜೀವನದ ಸಿಹಿ ಕಹಿ ಅನುಭವಗಳ ಸಾರವನ್ನು ಕಡೆದು ಭಾಷೆಯ ಮಾಳಿಯಲ್ಲಿ ಕಡೆದು ಬಟ್ಟಿಯಿಳಿಸಿದ ರಸಾಯನದಂತೆ ಗಾದೆಗಳು ಹುಟ್ಟಿ ಬಂದಿವೆ. ಇವುಗಳ ಜನಜೀವನವನ್ನು ಕೇಳುವ ಆಕರ್ಷಣೆ, ಆತ್ಮೀಯತೆಯಿದೆ; ಗೌರವಭಾವನೆಯು ಇದ್ದ ನಿಸಂತ್ರದ ಇಂತಹ ಗಾದೆಯು ವಿಚಾರ ವೇದಕ್ಕೆ ಸಮಾನವಾಗಿದೆ. ಪಂಡಿತ, ಪಾಮರ, ಪ್ರಜೆ, ಪ್ರಜಾಪತಿಯಲ್ಲರೂ ಗಾದೆಯ ಮುಂದೆ ತಲೆ ಬಾಗುತ್ತಾರೆ. ಗಾದೆ ಮೆಟ್ಟದವರಿಲ್ಲ, ಹಾದಿ ತುಳಿಯದವರಿಲ್ಲ. ಕನ್ನಡ ನಾಡು ಗಾದೆ ಮಾತುಗಳ ಹಡೆನುಡಿಗಳ ತವರುಮನೆ. ವಿಶಾಲ ಜನಪದದ ನಾಲಿಗೆಯಲ್ಲಿ ನಲಿದಾಡುವ ವಿವಿಧ ಗಾದೆಗಳನ್ನು ಸಂಗ್ರಹಿಸುವ ಕಾರ್ಯ ಸಮುದ್ರವನ್ನು ಆಳೆದಂತಾಗಬಹುದು. ಆದರೂ ಶ್ರೀ ರಾಮಾರಾಧ್ಯರು ಹಲವಾರು ವರ್ಷಗಳ ಪ್ರಯಾಸ-ಪ್ರಯತ್ನಗಳಿಂದ ನೂರಾರು ಗಾದೆಗಳನ್ನು ಸಂಗ್ರಹಿಸಿದರು. ಮಾತ್ರವಲ್ಲ, ಅವನ್ನು ಆದಷ್ಟು ಮಟ್ಟಿಗೆ ರಾಗಯುಕ್ತವಾಗಿ ಹಾಡಲಾಗುವಂತೆ ಗೀತೆಗಳ ರೂಪದಲ್ಲಿ ಪೋಣಿಸಿದರು. ಈ ಗೀತೆಗಳಲ್ಲಿ ವೃತ್ತಿಯಿದೆ, ಅರ್ಥ—ಧ್ವನಿಯಿದೆ; ಹಲವೆಡೆ ಪ್ರಾಸ-ಛಂದಸ್ಸುಗಳ ಹೊಂದಾಣಿಕೆಯೂ ಇದೆ. ಈ ಗೀತೆಗಳನ್ನು ಓದುವಾಗ, ವೀರಶೈವ ಸಂತರ ವಚನಗಳು ಹಾಗೂ ದಾಸವರ್ಯರ ಸುಳಾದಿ ಕೀರ್ತನೆಗಳ ನೆನಪಾಗುತ್ತದೆ. ಎಷ್ಟಿವೂ ಒಂದೇ ರೀತಿಯಲ್ಲಿದೆ "ಹಸುಗಳ ಬಣ್ಣವು ವಿಧವಿಧವಾದರೂ ಹಾಲೆಲ್ಲಾ ಒಂದೇ ಮತಗಳ ಪದ್ಧತಿ ಬೇರೆಯಾದರೂ| ದೇವರೆಲ್ಲ ಒಂದೇ ||" ಎಂಬ ಗಾದೆಯ ಗೀತೆಯು ಯಾವ ಕಾವ್ಯಕ್ಕೂ ಕಡಿಮೆಯಲ್ಲ "ರಮಣೀಯಾರ್ಥ ಪ್ರತಿಪಾದಕ ಶಬ್ದಂ ಕಾವ್ಯಂ" ಆದರೆ, ಈ ಗೀತೆಯಲ್ಲಿ ಕಾವ್ಯದ ಸರ್ವಗುಣಗಳೂ ಅಡಕವಾಗಿವೆಯನ್ನಬೇಕು. ಇದೇ ಮಾದರಿಯ ಶಯ್ಯಾ ರೀತಿಗಳಲ್ಲಿ ಪಾಕಕ್ಕೆ ಬಂದು ಗುಣೋಪೇತವಾಗಿರುವ "ಗಾದೆಗಳ ಗೀತೆಗಳು" ಕನ್ನಡವಾಗ್ದೇವಿಗೆ ಶ್ರೀ ವಾಗೀಶರು ನೀಡಿದ ಅಮರಕಾಣಿಕೆ. ಕನ್ನಡಿಗರೆಲ್ಲರೂ ಈ ಪುಸ್ತಕವನ್ನು ಕೊಂಡುಕೊಂಡು ಆಗಾಗ ಓದುತ್ತ ಇದ್ದರೆ, ಅವರ ಎಲ್ಲ ಸಮಸ್ಯೆಗಳೂ ಶಾಂತರೂಪದಲ್ಲಿ ಪರಿಹಾರಗೊಳ್ಳುವುವು.

ಸ್ವರ್ಗ ಸೋಪಾನ—ಲೇಖಕರು: ಶ್ರೀ ವೈ. ಡಬ್ಲ್ಯೂ. ಜಹಗೀರದಾರ ಪ್ರಕಾಶಕರು: ಜನಳ ಲ್ಯಾಬ್ರ್ಯಂ ಜಮಾಅತ ಪ್ರಕಾಶನ, ಗದಗ, ಪುಟಗಳು: ೯೦. ಬೆಲೆ: ರೂ. ೧—೦೦

ದೇವರೊಬ್ಬನೇ ಆದರೂ, ಆತನನ್ನು ಕಾಣುವ ದೃಷ್ಟಿಗಳು ಬೇರೆ ಬೇರೆ ಯಾದಂತೆ ಧರ್ಮ—ಮತಗಳೂ ಬೇರೆ ಬೇರೆಯಾದುವು. ಇವುಗಳಲ್ಲಿ "ಇಸ್ಲಾಂ" ಧರ್ಮವೂ ಒಂದು. ಭಾರತೀಯ 'ಇಸ್ಲಾಂ' ಧರ್ಮಾನುಯಾಯಿಗಳು ಸಾಧಾರಣೆಯ ಈ ಯುಗದಲ್ಲಿ ತೀರ ಹಿಂದುಳಿದಿರುವರೆಂದು ಹೇಳುತ್ತ, ಅವರಲ್ಲಿ ನವಜಾಗ್ರತಿಯನ್ನು ಹುಟ್ಟಿಸುವ ಉದ್ದೇಶದಿಂದ 'ಸ್ವರ್ಗ ಸೋಪಾನ'ವು ರಚಿತವಾಗಿದೆ. ಇದರಲ್ಲಿ ಸಮಾಜದ ಕಿದಸ್ಯರು ಪ್ರಾಪಂಚಿಕ ಜ್ಞಾನವುಳ್ಳವರಾಗಿ, ಧರ್ಮಾನುಸಾರ ನಡೆದುಕೊಂಡು, ಮಿತವ್ಯಯವನ್ನು ಸಾಧಿಸಿ ಗೌರವಯುತ ಜೀವನವನ್ನು ಬದುಕುವುದು ಹೇಗೆಂಬುದನ್ನು ಮೊದಲನೆಯ ಅಧ್ಯಾಯದಲ್ಲಿ ಸರಿಯಾಗಿ ವಿವರಿಸಲಾಗಿದೆ. ಹಾಗೆಯೇ ಎರಡನೆಯ ಅಧ್ಯಾಯದಲ್ಲಿ ವಿವಿಧ ಹಬ್ಬ ಹುಣ್ಣಿಮೆಗಳಲ್ಲಿ ಇಸ್ಲಾಂ ಧರ್ಮೀಯನು ಮಾಡಬೇಕಾದ ಪ್ರಾರ್ಥನಾದಿಗಳನ್ನೂ ಕೊಡಲಾಗಿದೆ. ಇದರಿಂದ ಕನ್ನಡಿಗ ಇಸ್ಲಾಂ ಧರ್ಮಾನುಯಾಯಿಗಳು ಅವಶ್ಯ ಲಾಭ ಪಡೆಯಬಹುದು ಮಾತ್ರವಲ್ಲದೆ, ಹಳೆಯ ಸಂಪ್ರದಾಯಕ್ಕೆ ಕಟ್ಟುಬಿದ್ದು, ಪರಂಪರೆಯ ಮರೆ ಹೋಗಿ ದಟ್ಟ ದರಿದ್ರರಂತಾಗಿ ಅಗೌರವಿಗಳಾಗಿ ಬಾಳುತ್ತಿರುವ ಎಲ್ಲ ಧರ್ಮಾನುಯಾಯಿಗಳಿಗೂ ನೀತಿಯ ಚೌಕಟ್ಟನ್ನು ಇಲ್ಲಿ ಕಾಣಬಹುದು. ಸರ್ವಧರ್ಮಗಳ ಉದ್ದೇಶವು ಮಾನವತಾ ವಿಕಾಸವೆಂಬುದರಿಂದ, ಮಾನವನು ಸ್ವರ್ಗವನ್ನಡರಲು ಸೋಪಾನ ಬೇರೆ ಬೇರೆಯಾದರೂ ಆ ಸೋಪಾನ ರಚನೆಯ ಮೂಲ ವಸ್ತುಗಳೂ ಒಂದೇ. ಶ್ರೀ ಜಹಗೀರದಾರರು ತಮ್ಮ ಬಾಂಧವರ ಕಷ್ಟಕಾರ್ಪಣ್ಯಗಳನ್ನು ಕಂಡು ಮರುಗಿ ಅವರಿಗೆ ಸಲಹೆ ನೀಡುವಂತೆ, ಅವರ ಬಾಳು ಹಸನಾಗುವುದಕ್ಕೆ ಪ್ರೇರೇಪಣೆ ನೀಡುವಂತೆ ಈ ಗ್ರಂಥವನ್ನು ಸಂಗ್ರಹಿಸಿ ಬರೆದಿದ್ದಾರೆ ಅವರು ಪಟ್ಟ ಶ್ರಮ ಸಾರ್ಥಕವಾಗಬೇಕು ಜನರು ತಮ್ಮ ಉದ್ಧಾರವನ್ನು ತಾವೇ ಮಾಡಿಕೊಳ್ಳಬೇಕು—ಇದಕ್ಕೆ ಪ್ರೇರಕವಾದ ಈ ಗ್ರಂಥ ಅಮೂಲ್ಯ ಸಂಗ್ರಹಣೀಯ.

ಶ್ಲೀಪದ—ಲೇಖಕ ಮತ್ತು ಪ್ರಕಾಶಕ ಡಾ|| ಪಿ. ಕೆ. ಪಿ. ಶರ್ಮ, ಮಂಗಳೂರು—೩. ಪುಟಗಳು: ೩೦. ಬೆಲೆ: ರೂ ೦—೫೦.

"ಶ್ಲೀಪದ" ಅಥವಾ ಸಾಮಾನ್ಯ ಭಾಷೆಯಲ್ಲಿ ಹೇಳುವುದಾದರೆ, "ಆನೆಕಾಲು ರೋಗವು ಇತ್ತೀಚೆಗೆ ಬಹು ವ್ಯಾಪಕವಾಗುತ್ತಿದೆ. ಪ್ರಾರಂಭಿಕಾವಸ್ಥೆಯಲ್ಲಿಯೇ ಇದನ್ನು ತಡೆಯದೆ ಹೋದರೆ, ಮುಂದದು ಗುಣಕಾರಿಯನಿಸದು. ಎಲ್ಲೋಪಥಿಯು ಹಲವಾರು ಭಯಾನಕ ರೋಗಗಳನ್ನು ದೂರೀಕರಿಸುವಲ್ಲಿ ಸಮರ್ಥವಾಗಿದ್ದರೂ 'ಆನೆಕಾಲಿ'ಗೆ ತಕ್ಕುದಾದ ಸಿದ್ಧೌಷಧವನ್ನು ಇನ್ನೂ ಸಂಶೋಧನೆ ಮಾಡಿಲ್ಲ. ಹಾಗಿರುವಾಗ, ಭಾರತೀಯ ವೈದ್ಯಪದ್ಧತಿಗಳಲ್ಲಿಯೇ ಅತಿ ಪ್ರಾಚೀನವಾದ ಆಯುರ್ವೇದ'ದಲ್ಲಿ ಈ ಬಗ್ಗೆ ಉಲ್ಲೇಖಿಸಿದೆ ಉಪಚಾರ ಹಾಗೂ ಚಿಕಿತ್ಸೆಗಳು ಪರಿಣಾಮಕಾರಿಯೆಂದು ತಿಳಿದು ಬರುವುದರಿಂದ, ಈ ಪದ್ಧತಿಯನ್ನು ಅನುಸರಿಸಿಯಾದರೂ ರೋಗ ನಿರ್ಮೂಲನಕ್ಕೆ ಪ್ರಯತ್ನಿಸುವುದು ಜನತೆಯ, ಸರಕಾರದ ಕರ್ತವ್ಯವಾಗಿದೆ. ಈ ಪುಟ್ಟ ಪುಸ್ತಕದಲ್ಲಿ ಚರಕಸುಶ್ರುತಾದಿ ವೈದ್ಯ ಶಿರೋಮಣಿಗಳು ರೋಗ ಲಕ್ಷಣ—ಹಾಗೂ ಉಪಚಾರ ಚಿಕಿತ್ಸಾ ಪ್ರಣಾಳಿಯನ್ನು ಕನ್ನಡದಲ್ಲಿ ವಿವರಿಸಲಾಗಿದೆ. ಮೂಲ ಗ್ರಂಥ ಸಂಸ್ಕೃತದಲ್ಲಿರುವುದರಿಂದ ವಿವರಣೆಯಲ್ಲಿ ಅದರ ಪ್ರಭಾವ ತುಂಬ ಬಿದ್ದಿದ್ದು ಜನಸಾಮಾನ್ಯರಿಗಾಗಿಯೂ ಬರೆದ ಈ ಪುಸ್ತಕ ಅವರ ಪಾಲಿಗೆ ಕಬ್ಬಿಣದ ಕಡಲೆಯಾಗಿದೆ ಸಂಸ್ಕೃತ ಶಬ್ದಗಳಿಗೆ ಪಾಡಿಕೆಯ ಕನ್ನಡ ಪದಗಳನ್ನು ಕೊಡುವ ಪ್ರಯತ್ನ ನಡೆದಿದೆಯಾದರೂ ಅದು ಸಾಲದೆನಿಸುತ್ತದೆ. ಪುಟ ೨೨ರಿಂದ ೨೭ರ ವರೆಗೆ ಕೊಟ್ಟ ಉಪಚಾರಕ್ರಮದಲ್ಲಿದು ಸಂಪೂರ್ಣ ವೇದ್ಯವಾಗುತ್ತದೆ.

ವಿಚಾರವಾಣಿ— ಪುತ್ತೂರಿಂದ ಡಾ| ಯಂ. ಬಿ. ಮರಕಿಣಿಯವರ ಸಂಪಾದಕತ್ವದಲ್ಲಿ ಹೊರಡುತ್ತಿರುವ 'ವಿಚಾರವಾಣಿ' ಸಾಪ್ತಾಹಿಕದ 'ಸಾಹಿತ್ಯ ಸಮ್ಮೇಳನ ಪುರವಣಿ'ಯು ನಮ್ಮ ಕೈಸೇರಿದೆ. ಸಾಹಿತ್ಯ—ಸಾಹಿತ್ಯ ಸಮ್ಮೇಳನಗಳ ಮೇಲೆ ಕ್ಷ—ಕಿರಣ ಬೀರುವ ಕೆಲವು ಲೇಖನಗಳು ಇಲ್ಲಿವೆ. 'ದಕ್ಷಿಣಕನ್ನಡ ಜಿಲ್ಲೆಯ ಈ ದಶಕದ ಬರೆಹಗಾರರು' ಎಂಬ ಲೇಖನವು ಅದೇನೊ ಅಪೂರ್ಣವೆಂಬ ಭಾವನೆ ಉದಯವಾಗುತ್ತಿದೆ. ಸಮ್ಮೇಳನದ ಮಾತು ಮೂರು ದಿನದ ಮಾತುಕತೆಯಾಗಬಾರದೆಂಬ 'ಶ್ರೀ ವೆಂಕಟರಾಜ ಪಾನಸೆಯವರ ವಾದ'ದತ್ತ ಕನ್ನಡಿಗರು ಅವಶ್ಯ ಗಮನಹರಿಸಬೇಕು.

ಸುರಪುರದ ಶ್ರೀ ಭುವನೇಶ್ವರೀ ಪಂಚಾಂಗ—ಜ್ಯೋತಿರ್ವಿದ್ವಾನ್ ಶ್ರೀ ಶೇಷ ಶಾಸ್ತ್ರಿ ಹೆಬ್ಬಾಳ ಸುರಪುರ ಇವರಿಂದ ರಚಿಸಲ್ಪಟ್ಟು (ಸುರಪುರ) ರಂಗಂ ಪೇಟೆಯ ಆರ್ಯವೈಶ್ಯ ಸಂಘದಿಂದ ಪ್ರಕಾಶಿತವಾದ ಪ್ಲವನಾಮ ಸಂವತ್ಸರದ ಪಂಚಾಂಗವನ್ನು ಮುಕ್ತಹಸ್ತದಿಂದ ಸ್ವಾಗತಿಸುತ್ತೇವೆ. ಎಂದಿನಂತೆಯೇ ಉಪಯುಕ್ತ ಜ್ಯೋತಿಷ್ಯ ವಿಚಾರಗಳ ಸಂಗ್ರಹದೊಡನೆ ವರ್ಷ ಭವಿಷ್ಯವೂ ಇತರ ಪಂಚಾಂಗ ವಿಷಯಗಳೂ ಇದರಲ್ಲಿ ಅಡಕವಾಗಿದ್ದು ಹಿಂದೂ ಸಂಪ್ರದಾಯಿಗಳಿಗೆ ಅತ್ಯಂತ ಪ್ರಯೋಜನಕರವಾಗಿದೆ. ಮುಂದಿನ ವರ್ಷ ನಡೆಯಲಿರುವ 'ಅಷ್ಟಗ್ರಹ ಯೋಗ'ದ ಕುರಿತಾದ ಸುದೀರ್ಘ ವಿಚಾರ, ಅದರ ಪರಿಣಾಮಗಳೇ ಪ್ಲವ ಸಂವತ್ಸರದ ವೈಶಿಷ್ಟ್ಯವಾಗಿದೆ. ಈ ಪಂಚಾಂಗದ ಬೆಲೆ ರೂ. ೦—೭೫, ಆವಶ್ಯಕತೆಯುಳ್ಳವರು ಅವಶ್ಯ ಬಳಸಿಕೊಳ್ಳಬಹುದಾದ ಪಂಚಾಂಗಗಳಲ್ಲಿ ಇದೂ ಒಂದಾಗಿದೆ.

— ಗೋರಾ.

ರವೀಂದ್ರವಾಣಿ

(೩ನೇ ಪುಟದಿಂದ)

ತ್ನದಿಂದ, ಆತನಿಗೆ ಸದಾ ಸಫಲತೆ ಲಭಿಸುತ್ತಿರುವುದು ಪ್ರಕೃತಿ, ಮತ್ತು ಮಾನವ ಇವರೊಳಗೆ ಇರುವ ಸೌಹಾರ್ದತೆಯನ್ನು ಈ ವಿಚಾರವು ಸೃಷ್ಟಿಗೊಳಿಸುವುದು ಹೇಗೆಂದರೆ, ಯಾವ ವಸ್ತುವೇ ಆಗಲಿ, ಅಥವಾ ಪ್ರಾಣಿಯೇ ಆಗಲಿ, ಸಹಜವಾಗಿ ನಮ್ಮ ಪ್ರಕೃತಿಯು ಅದಕ್ಕೆ ಹೊಂದಿಕೊಳ್ಳದಿದ್ದರೆ, ನಾವು ಅದನ್ನು ನಮ್ಮದನ್ನಾಗಿ ಮಾಡಿಕೊಳ್ಳಲಾರೆವು.

ಒಂದೇ ಪಥವನ್ನು ನಾವು ಎರಡು ದೃಷ್ಟಿಗಳಿಂದ ನೋಡಬಲ್ಲೆವು. ಮೊದಲನೆಯದು—ನಮ್ಮ ಅಭೀಷ್ಟವು ನಮ್ಮಿಂದ ಬಹಳ ದೂರವಿರುವುದೆಂದು ಭಾವಿಸಿದಾಗ ನಾವು ಅದಕ್ಕಾಗಿ, ನಮ್ಮ ಪಥದ ಮೂಲಕ ಮುಂದುವರಿಯುತ್ತಿರುವಾಗ ಆ ದಾರಿಯ ದೂರವನ್ನು ಹೆಜ್ಜೆ ಹೆಜ್ಜೆಗೂ ಕಡಿಮೆ ಮಾಡುತ್ತ ಅದರ ಮೇಲೆ ವಿಜಯವನ್ನು ಸ್ಥಾಪಿಸಿ, ಆ ದೂರದ ದಾರಿಯನ್ನು ಪರಾಜಿತಗೊಳಿಸುವುದು, ಮತ್ತು ತನ್ಮೂಲಕ ಹರ್ಷಪಡುವುದಾದರೆ—ಎರಡನೆಯ ದೃಷ್ಟಿ—ನಾವು ಹೋಗಬೇಕಾದ, ನಮ್ಮ ದಾರಿ ಯಾವುದಿದೆಯೋ ಆ ದಾರಿಯ ಮೂಲಕ, ನಮ್ಮ ಧ್ಯೇಯ ಸ್ತಂಭದವರೆಗೆ ಮಾತ್ರ ನಾವು ತಲುಪುವ ಉದ್ದೇಶವಿರುವುದು, ಇಲ್ಲಿ ನಮ್ಮ ಧ್ಯೇಯಕ್ಕೇ ಪ್ರಾಧಾನ್ಯ ಹೊರತು, ಪ್ರಯಾಣಿಸಬೇಕಾದ ಮಾರ್ಗದ ದೂರಕ್ಕಲ್ಲ. ಹೀಗೆ ಈ ದೃಷ್ಟಿಯಿಂದ, ನಮ್ಮ ಪ್ರಯಾಣದ ಪ್ರತಿಯೊಂದು ಹೆಜ್ಜೆಯೂ ನಮ್ಮ ಧ್ಯೇಯದ ಸಿದ್ಧಿಗಾಗಿ, ವಿನಿಯೋಗವಾಗಿ ಆ ಧ್ಯೇಯದ ರೂಪವನ್ನೇ ತಳೆಯುತ್ತದೆ. ಮತ್ತು ನಮ್ಮ ಪ್ರತಿಯೊಂದು ಕ್ಷಣವೂ ಗುರಿಮುಟ್ಟುವ ಆನಂದದಿಂದ ತುಂಬುವುದು. ಪ್ರಕೃತಿಯನ್ನು ನಮ್ಮ ಭಾರತದ ಋಷಿ ಶ್ರೇಷ್ಠರು, ಈ ಪರಿಯ ಒಂದು ಸಾಧನವೆಂದು ಭಾವಿಸುತ್ತ ಬಂದಿದ್ದಾರೆ. ನಮ್ಮ ವಿಚಾರ, ಸಿದ್ಧಾಂತಗಳೂ ಪ್ರಕೃತಿ ಮತ್ತು ಮಾನವನಲ್ಲಿ ಸಹಜವಾದ ಸಮಾನತೆ ಇದೆ, ಎಂದು ಒಪ್ಪಿಕೊಂಡಿವೆ.

ಈ ಸಮಾನತೆ ಮನುಷ್ಯನ ವಿಚಾರಶಕ್ತಿಯ ಸ್ರೋತವಾಗಿರುವುದು. ಈ ಕಾರಣದಿಂದಲೇ ಮಾನವನು, ಪ್ರಕೃತಿಯ ಶಕ್ತಿಯಿಂದ, ಅನೇಕ ಅನುಕೂಲತೆಗಳನ್ನು ಪಡೆಯಬಲ್ಲವನಾಗಿದ್ದಾನೆ. ಮಾನವನ ಮತ್ತು ಪ್ರಕೃತಿಯ ಧ್ಯೇಯ ಒಂದೇ ಆಗಿರುವುದು, ಹೊರತು— ಅದರಲ್ಲಿ ಅಸಮಾನತೆ ಇರುವುದಿಲ್ಲ. ಪ್ರಕೃತಿ ಮತ್ತು ಮಾನವನಲ್ಲಿ ದಿವ್ಯವಾದ ಸೌಮ್ಯ ಇದೆ. ಇದು ಸದಾ ಇರತಕ್ಕದ್ದಾಗಿದ್ದು ಎಂದೆಂದಿಗೂ, ಇರಬಲ್ಲುದಾಗಿದೆ.

(ಸಶೇಷ)

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R. E. P. 190/60

O S. 503/51

ಕೃಷ್ಣಪ್ಪ ಪೂಜಾರಿ —ಅರ್ಜಿದಾರ,

ಪದ್ಮಾವತಿ ಕೂಡಾ — ಎದ್ರಿರು.

2ನೇ ಎದ್ರಿ ಸಂಜೀವ ಪೂಜಾರಿ, ಪದ್ಮಾವತಿಯ ಮಗ, ಪುತ್ತೂರು ತಾಲೂಕು ಸರ್ವೆಗ್ರಾಮದಲ್ಲಿರುವವ—

ಇವರಿಗೆ ತಿಳಿಸುವುದೇನೆಂದರೆ,

ಮೃತ 1ನೇ ಎದ್ರಿಯ ವಾರೀಸುದಾರನಾಗಿ 2ನೇ ಎದ್ರಿಯ ಮೇಲೆ ನಡಿಸಿದ ಈ ಅಮಲ್ದಾರಿಯು ತಾ. 16-3-61ಕ್ಕೆ ಇರುವುದರಿಂದ ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ಆ ದಿವಸ ಉಪಸ್ಥಿತಿಕೊಳ್ಳತಕ್ಕದ್ದು.

B. Chidanada Rao,

Vakil for Petitioner.

ಪುತ್ತೂರು, ತಾ. 25—2—61

ಉಡುಪಿ ಡಿ. ಮು. ಕೋರ್ಟಿನಲ್ಲಿ

S E A No 238/1960 S. C. No. 634/1957

ಕೆ. ರಾಮದಾಸ ಭಟ್ಟ —ಅರ್ಜಿದಾರ

ಮತ್ತು

ವಾದಿರಾಜ ಭಟ್ಟ —ಎದ್ರಿಯವರೊಳಗೆ

ಸದ್ರಿ ಅಮಲ್ಜಾರಿಯ ಎದ್ರಿ ಉಡುಪಿ ಕಸಬಾ ಪಡುಪೇಟೆಯಲ್ಲಿರುವ ಕಿನ್ನಿಮೂಲ್ಕಿ ಶ್ಯಾಮಣ್ಣ ಭಟ್ರ ಮಗ ವಾದಿರಾಜ ಭಟ್ಟರಿಗೆ ಈ ಮೂಲಕ ತಿಳಿಸುವುದೇನಂದ್ರೆ—

ಅರ್ಜಿದಾರನು ಮೇಲ್ಕಂಡ ಡಿಕ್ರಿಯ ಅಮಲುಜಾರಿ ಬಗ್ಗೆ ಅರ್ಜಿ ಮಾಡಿರುವುದ್ರಿಂದ ಆ ಮಲುಜ್ಯಾರಿಯೂಕೆ ನಡಿಸ ಕೂಡದೆಂಬ ಸಬಬು ತೋರಿಸಲಿಕ್ಕೆ 1961ನೇ ಇಸವಿ ಮಾರ್ಚ ತಾ 16ಕ್ಕೆ ಈ ಕೋರ್ಟು ಮುಂದೆ ನೀವು ಹಾಜರಾಗಬೇಕಂತ ಇದರಿಂದ ನಿಮಗೆ ನೋಟೀಸು ಕೊಡಲಾಗಿದೆ—

P V. Acharya,

Vakil for Petitioner

ಉಡುಪಿ, ತಾ. 9—3—'61

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ. ನ.

ಮಕ್ಕಳ ಮಮತೆಯ

'ಬಿಕ್ಕೊ'ರವರ

ಗ್ಲೂಕೋಸ್ ಕೂಡಿದ ಪೆಪ್ಪರ್ ಮಿಠಾಯಿಗಳು ರುಚಿಕರ, ಸೇವನೆಗೆ ಪ್ರಸಿದ್ಧಿಪಟ್ಟಿವೆ.

Regd. Trade Mark

BICCO

'ಬಿಕ್ಕೊ'ರವರ

ಹಣ್ಣಿನ ಪಾನಕಗಳು

ಅತಿಥಿಗಳ ಆದರದ ಸತ್ಕಾರಕ್ಕೆ ಅತ್ಯನುಕೂಲ.

ತಯಾರಕರು:

ಭಾರತ್ ಇಂಡಸ್ಟ್ರಿಯಲ್ ಎಂಡ್ ಕ್ಯಾನಿಂಗ್ ಕಂಪೆನಿ ಲಿಮಿಟೆಡ್, ಕಾಪು, ದ. ಕ.

ಕಥಾವಿಹಾರ

(೨ನೇ ಪುಟದಿಂದ)

—ಇನ್ನೀ ಮಾತಿಗೆ ಕಿವಿಕೊಡಬಾರದೆಂದೆನಿಸಿತು. ವೇಗವಾಗಿ ಮುಂದು ವರಿಸಿದೆ —ಆ ಮಾತೇ ಕೇಳದಂತೆ. ಆದರೆ ಶಾಲೆಗೆ ಹೋಗುವ ವರೆಗೂ ಜೀಪ್ ಬರಲೇ ಇಲ್ಲ. ಏಕಪ್ಪಾ... ಅನ್ನಿಸಿತು. ಶಾಲೆ ಹೊಕ್ಕಿದ್ದಂತೂ ಆಯ್ತು.

ಹುಡುಗರೆಲ್ಲ ಪರಲೋಕಕ್ಕೆ ಹೋಗಲಿರುವವನನ್ನು ನೋಡುವಂತೆ, ನೋಡುತ್ತಿದ್ದರು—ಅಗಲಿಸಿದ ಕಂಗಳಿಂದ. ಕಟ್ಟಿ ಹಾಕಿ ತಡೆದಿಟ್ಟ ನೀರು ಈಗ ಹರಿದೇನೋ.... ಮತ್ತೆ ಹರಿದೇನೋ—ಎಂಬ ತವಕದಿಂದೆಂಬಂತೆ, ಅಕರಿಗಳಾಚೆ, ಕಾದು ನಿಂತಂತನ್ನಿಸುತಿತ್ತು. ನಾಲಗೆಗಳು ಹೆಂದಾಡುತ್ತಿರಲಿಲ್ಲ. ಕಣ್ಣುಗಳು ಮೂಕವಾಗಿದ್ದುದರಿಂದ, ನಾವು ಮಾತನಾಡಲಾರೆವಲ್ಲಾ— ಎಂದು ವ್ಯಥೆಗೊಂಡತಿತ್ತು.

—ಇದನ್ನೆಲ್ಲ ಗಮನಿಸಿದ ಮೇಲೆ ಅಲ್ಲಿ ನಿಲ್ಲುವುದಾಗಲಿಲ್ಲ. ನಿಂತರೆ, ಹುಡುಗರಿಗಿಂತ ಮೊದಲು, ನನ್ನ ಕಣ್ಣೀರ ಕನ್ನಂ ಬಾಡಿಯೊಡೆವ ಸಂಭವವಿತ್ತು.

ಆಫೀಸಿನೊಳಗೆ ನಡೆದೆ. ಅಲ್ಲಿ ಬೆಂಚು, ಕುರ್ಚಿ ಸರಿ ಮಾಡುತಿದ್ದ ಹುಡುಗರು ನನ್ನ ಮುಖ ತೋಡಿ 'ಇನ್ನು ನೀವು ನಮ್ಮ ಪಾಲಿಗಿಲ್ಲವಲ್ಲ!' ಎನ್ನುವಂತೆ ಕಾಣುತಿತ್ತು. ಮುಖ ತಿರುಗಿಸಿ ಒಂದು ಕುರ್ಚಿಯೆಡೆಗೆ ಸಾಗಿದೆ. ಉಪಾಧ್ಯಾಯರ ಹಾಜರಿ ಪುಸ್ತಕದಲ್ಲಿ ಸಹಿ ಹಾಕಿದ್ದೂ ಆಯ್ತು.

.... "ಣ್ಣುಗಳು ಮೇಲೆ ಹಂಚಿನ ಮಾಡನ್ನೋ, ಆಫೀಸು ಗೋಡೆಯಲ್ಲಿ ತೂಗಿದ ಚಿತ್ರಪಟಗಳನ್ನೋ ನೋಡುತ್ತಿದ್ದುವು.

"ಢಣ್.... ಢಣ್.... ಢಣ್...."

—ಎಲ್ಲಾ ಮಕ್ಕಳೂ ಶಾಲೆಯೊಳಗೆ ಬಂದರು; ಇನ್ನೊಂದು ಗಂಟೆ ಬಾರಿಸಿದೊಡನೆ "ಜನ ಗಣ ಮನ...." ಪ್ರಾರಂಭವಾಗುವುದು. ಆ ಬಳಿಕ ಸಭೆ..

ಅಧ್ಯಕ್ಷರ ಆಯ್ಕೆ... ಯಥಾಪ್ರಕಾರ ನಮ್ಮ ಹೆಡ್ಮಾಸ್ಟರರೇ ಅಧ್ಯಕ್ಷರು. ಊರ ಮಂದಿಗೆ ಆಮಂತ್ರಣ ಹೋಗಿತ್ತಂತೆ. ಆದರೆ ತಮ್ಮ ವ್ಯವಹಾರದ್ದು ಬರಲು ಪುರುಸೊತ್ತಿಲ್ಲ!

ನಾಲ್ಕೈರು ಮಂದಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ಭಾಷಣ ಮಾಡಿದರು

"ನಮ್ಮ ಗುರುಗಳು ಬಹಳ ಒಳ್ಳೆಯವರು... ಅವರು ಬಿಟ್ಟು ಹೋಗುವುದು ಬಹಳ ದುಃಖದ ಸಂಗತಿ... ಈ ಸಂದರ್ಭದಲ್ಲಿ.... ಏನು ಹೇಳಬೇಕೆಂದು ತಿಳಿಯುವುದಿಲ್ಲ.... ಅಂತೂ ಭಾರೀ ಒಳ್ಳೆಯವರು... ಇತ್ಯಾದಿ... ಇತ್ಯಾದಿ...."

—ಆಗ ಅವರ ಮನಸ್ಸಿನಲ್ಲಿದ್ದ ಮಾತುಗಳು ನೇರವಾಗಿ ನನ್ನ ಹೃದಯವನ್ನು ಪ್ರವೇಶಿಸಿ ಗಾಢ ಪರಿಣಾಮವನ್ನುಂಟು ಮಾಡುತ್ತಿದ್ದುವು.

ನಾನು ನನ್ನ ಮಾತುಗಳಿಗಾಗಿ ಎದ್ದು ನಿಂತೆ.

"ಮಾನ್ಯ ಹೆಡ್ಮಾಸ್ಟರರೇ ನನ್ನ ಪ್ರಿಯ ವಿದ್ಯಾರ್ಥಿಗಳೇ ನಾನು ಈ ವೃತ್ತಿಯನ್ನು ಬಿಟ್ಟು ಮನೆಸೇರಲಿರುವ ಈ ಸಂದರ್ಭದಲ್ಲಿ, ನನಗಿಂತ ಹೆಚ್ಚಿನ ದುಃಖ ನಿಮಗಾಗಿದೆ—ಎಂಬುದು ನನ್ನ ಗಮನಕ್ಕೆ ಬಂದಿದೆ... ಆದರೇನು ಮಾಡೋಣ....ಬಂದದ್ದೆಲ್ಲಾ ಬರಲೇಬೇಕು...ಈ ವರೆಗೆ ನನ್ನ ದೇಹ ಈ ವೃತ್ತಿಯಲ್ಲೇ ಸವೆದಿದೆ....ಆದರೆ ನಾನು ಈ ವರೆಗೆ ಸಾಧಿಸಿದ್ದೇನು?.... ಏನೂ ಇಲ್ಲ. ಆದರೆ ನಿಮ್ಮಂತಹ ಮಕ್ಕಳು ನನ್ನ ಮೇಲೆ ಇಟ್ಟ ಪ್ರೀತಿಯೊಂದು ಮಾತ್ರ ಉಳಿದಿದೆ...ಅಷ್ಟು ಸಾಕು...ಅದೇ ನನ್ನ ಆಸ್ತಿ...ಇತ್ಯಾದಿ.......

—ಹೇಳಿ ಮುಗಿಯಿಸುವಾಗ ಒಂದು ಜೀಪು ಶಾಲೆಯೆದುರು ನಿಂತಿತು.

ವ್ಯಕ್ತಿಯೊಂದಿಳಿದು ಶಾಲೆಗೆ ಬಂತು. ಯಾರೆಂದು ಊಹಿಸಲಾಗಲಿಲ್ಲ. ನನ್ನತ್ತ ಕಡೆಗೊಮ್ಮೆ ನೋಡಿತು. ಮುಖದಲ್ಲಿ ಮೌನಭಾವವಿತ್ತೋ! ತಿಳಿಯಲಾಗಲಿಲ್ಲ. ಹೆಡ್ಮಾಸ್ಟರರ ಕಿವಿಯಲ್ಲೇನೋ ಅಂದಿತು ....ಅವರ ಮುಖ ಅರಳಿತು. ಯಾರೋ ಮಾತಿನ ತೀಟೆ ತೀರಿಸಲು ಬಂದಿರಬೇಕೆನ್ನಿಸಿತು.

"ಈಗ ನಮ್ಮ ಕರಾವಳಿ ರಸ್ತೆಯ ಸ್ಪೆಶ್ಯಲ್ ಇಂಜಿನೀಯರ್‌ರಾದ ಮಿ! ಜಿ. ಕೆ. ರಾವ್, ಅವರು ಈ ಸಂದರ್ಭದಲ್ಲಿ ಒಂದೆರಡು ಮಾತುಗಳನ್ನಾಡಲು ಅಪೇಕ್ಷಿಸುತ್ತಾರೆ"

—ಎಂದಾಗ ಆ ವ್ಯಕ್ತಿ ಎದ್ದು ನಿಂತಿತು. ನಮ್ಮ ಶಾಲೆಯ ಕಾರ್ಯಕ್ರಮದಲ್ಲಿ ಯಾವನೋ ಒಬ್ಬ ಅನಪೇಕ್ಷಿತ ವ್ಯಕ್ತಿಯೇಕೆ ಭಾಗವಹಿಸಬೇಕೆನ್ನಿಸಿತು!

"ನಿವೃತ್ತರಾಗಲಿರುವ ಮೇಸ್ಟ್ರೇ, ಅಧ್ಯಕ್ಷರೇ, ಮಕ್ಕಳೇ, ಶಿವಪೂಜೆಯ ಮಧ್ಯೆ ಕರಡಿಯೇಕೆಂದು ನೀವು ಯೋಚಿಸಬಹುದು. ಆದರೆ ನನಗೂ ಈ ಶಿವಪೂಜೆಯಲ್ಲಿ ಪಾತ್ರವಿದೆಯೆಂದೇ ನಂಬಿದ್ದೇನೆ. ನೀವೂ ನಂಬಲಿದ್ದೀರಿ. ಕೆಲ ವರ್ಷಗಳ ಹಿಂದೆ ನಿಮ್ಮಂತೆಯೇ ನಾನೂ ಓದುತ್ತಿದ್ದಾಗ, ಒಮ್ಮೆ ಮಾರ್ಗ ಮಾಡುವವರ ಜೊತೆಗೆ ಹೋಗುವೆನೆಂದು ಹಟ ಹಿಡಿದಾಗ...."

—ನನಗೆ ಪಕ್ಕನೆ ಹಲ ವರುಷಗಳ ಹಿಂದಿನ ಹೋಟೆಲ್ ಕೃಷ್ಣರಾಯರ ಮಗ ಗೋಪಿಯ ನೆನಪಾಯಿತು!

"ಹೀಗಾಗುವಂತೆ ಸರಿದಾರಿ ತೋರಿಸಿದ, ಗುರುಗಳಿಗೆ ನನ್ನ ಭಕ್ತಿಯ ಅಲ್ಪ ಕಾಣಿಕೆ" – ಎಂದು ಬೇಡವೆಂದರೂ, ನನ್ನ ಬೆರಳಿಗೊಂದು ಉಂಗುರ ತೊಡಿಸಿದಾಗ, ಬೆಳಗ್ಗೆ ಕಾಣಿಸಿದ ಜೀಪೇಕೆ—ಬರಲಿಲ್ಲ— ಎಂಬ ಪ್ರಶ್ನೆಗೆ ಉತ್ತರದೊರೆತಂತಾಯ್ತು. ಕಂಗಳು ತುಂಬಿ ಬಂದುವು!

'ಜೀವನದಲ್ಲಿ ಸಾಧಿಸಿದ್ದೇನು ಅಂದೆಯಲ್ಲಾ? ನೋಡು! ಇಂತಹ ಹಲವಾರು ಮೊಗ್ಗೆಗಳು ಅರಳಿ ಸುಗಂಧ ಬೀರುವುದು ಸಾಲದೆ?"

—ಎಂದಿತು ಮನಸ್ಸು.

ನಾನು ಸೋತಿದ್ದೆ—ನಿಜವಾಗಿಯೂ. ಆದರೆ ಸೋತು ಗೆದ್ದಿದ್ದೆ.

ಆಧ್ಯಾತ್ಮ್ಯ ವಿಚಾರ

ಭಗವದ್ಗೀತೆಯ ಪ್ರಕಾಶ

> ಮಾನವನು ದುರ್ಗುಣಗಳಿಂದ ದೂರವಿದ್ದು ಸದ್ಗುಣಿಯಾಗಬೇಕು; ಸಾತ್ವಿಕಾಹಾರವನ್ನು ಸೇವಿಸಿ ಸತ್ವಗುಣವನ್ನು ಸಾಧಿಸಿ ತನ್ನ ಜೀವನವನ್ನು ಉತ್ತಮವಾಗಿರಿಸಬೇಕು. ಹೀಗಾದಲ್ಲಿ ಆತನು ಮುಕ್ತಿ ಪಡೆಯುವನು; ಇಲ್ಲವಾದರೆ ಮತ್ತೂ ಮತ್ತೂ ತಮೋಯೋನಿಗಳಲ್ಲಿ ಪುನರ್ಜನ್ಮ ಪಡೆಯುತ್ತ ಬನ್ನಬಡುವನು.

ಶ್ರೀ ಎಂ. ಬಿ. ಶಂಕರ ರಾವ್, ಐ. ಎ. ಎಸ್. (ನಿವೃತ್ತ)

ಕಿರಣ ೧೭: ಸುರರೂ ಅಸುರರೂ

ಭಗವಾನ: —ಧೈರ್ಯ, ಹೃದಯಶುದ್ಧತೆ, ಸ್ಥೈರ್ಯ, ಜ್ಞಾನ, ಭಕ್ತಿ, ದಾನ, ಇಂದ್ರಿಯ ನಿಗ್ರಹ, ಯಜ್ಞ, ಶಾಸ್ತ್ರಪಠಣ, ತಪಸ್ಸು, ಸತ್ಯ, ಅಹಿಂಸೆ, ಸಮಾಧಾನ, ತ್ಯಾಗ, ಶಾಂತಿ, ಕರುಣೆ, ಉದಾರತ್ವ, ಮೃದುತ್ವ, ಲಜ್ಜೆ, ಚಿತ್ತಸ್ಥಿರತೆ, ಧೀರತ್ವ, ತಾಳ್ಮೆ, ಪ್ರಯತ್ನ, ಶುಚಿತ್ವ ಮತ್ತು ನಮ್ರತೆ—ಈ ಸದ್ಗುಣಗಳು ದೇವಾಂಶ ಸಂಭೂತರಾದ ಸುರರಲ್ಲಿವೆ. ಹೆಮ್ಮೆ, ಅಹಂಕಾರ, ಶ್ಲಾಘನೆ, ಕೋಪ, ನಿಂದೆ ಮತ್ತು ಅಜ್ಞಾನ—ಈ ದುರ್ಗುಣಗಳು ಅಸುರರ ಗುಣಗಳು. ಸುರರ ಗುಣಗಳಿಂದ ಮೋಕ್ಷವು ಸಿಕ್ಕುವುದು. ಅಸುರರ ಗುಣಗಳಿಂದ ಪುನಃ ಪುನಃ ಜನ್ಮಬಂಧನವಾಗುವುದು. ಅರ್ಜುನನೇ, ನೀನು ದೇವಾಂಶ ಸಂಭೂತನೆಂದು ತಿಳಿ. ಸುರಗುಣದವರು ಸತ್ಕರ್ಮಗಳನ್ನು ಮಾಡುವರು. ಅಸುರರು ಪರಮಾತ್ಮನಲ್ಲಿ ಶಕ್ತಿಯಿಲ್ಲವೆನ್ನುವರು. ಅವರು ದುಷ್ಕರ್ಮಿಗಳು. ಅಸುರ ಗುಣದವರು ಕಾಮನೇ ಜಗತ್ತಿಗೆ ಆಧಾರವೆನ್ನುವರು. ಇವರು ಜಗತ್ತಿಗೆ ವಿರೋಧಿಗಳು. ದುರಾಶೆಗಳಿಗೆ ಬಂಧಿತರಾಗಿ, ಗರ್ವವೇ ಶಕ್ತಿಯೆಂದು ತಿಳಿದು, ಅಜ್ಞಾನಿಗಳಾಗಿ ಸತ್ಯಪಥವೆಂಬುದು ಈ ಜಗತ್ತಿನಲ್ಲಿ ಇಲ್ಲವೆನ್ನುವರು ಕೊನೆಗೆ ತಮ್ಮ ದುರ್ಗುಣಗಳಿಂದಲೇ ನಶಿಸಿಹೋಗುವರು. ಕಾಮಕ್ರೋಧಗಳನ್ನೇ ತಮ್ಮ ಆಧಾರವಾಗಿಟ್ಟುಕೊಂಡು ವಂಚನೆಯಿಂದ ಧನವನ್ನು ಸಂಪಾದಿಸುವರು. "ನಾನು ಈ ದಿನ ಇಷ್ಟು ಸಂಪಾದಿಸಿರುವೆನು. ಇನ್ನೂ ಅಧಿಕ ಧನವನ್ನು ಶೇಖರಿಸುವೆನು. ಈ ಧನವೆಲ್ಲ ನನ್ನದು ಇತರರ ಧನವನ್ನು ಕೂಡ ಲಭಿಸುವೆನು" ಎನ್ನುವರು. "ಈ ಶತ್ರುವನ್ನು ನಿಗ್ರಹಿಸಿದ್ದೇನೆ. ಇತರ ಶತ್ರುಗಳನ್ನೂ ವಧಿಸುವೆನು. ನಾನೇ ಲೋಕಾಧಿಪತಿಯು. ನಾನು ಸುಖ ಸಾಗರದಲ್ಲಿ ತೇಲುತ್ತಿರುವೆನು. ನನ್ನಲ್ಲಿ ಸಂಪತ್ತಿದೆ ಶಕ್ತಿಯಿದೆ, ಎಲ್ಲವೂ ಇದೆ ಎನ್ನುವರು. ನಾನು ದೊಡ್ಡ ಕುಲದವನು, ಐಶ್ವರ್ಯವಂತನು, ನನ್ನಂತೆ ಬೇರಾರೂ ಇಲ್ಲ. ಯಜ್ಞವನ್ನು ಮಾಡಬಲ್ಲೆನು. ದಾನಧರ್ಮಗಳನ್ನು ಮಾಡಬಲ್ಲೆನು" ಎನ್ನುವರು. ತಮ್ಮನ್ನು ತಾವೇ ಹೊಗಳಿಕೊಂಡು ಹೆಮ್ಮೆಯಿಂದ ಅಜ್ಞಾನವನ್ನು ವೃದ್ಧಿಸುವರು. ಇಂತಹ ಪಾಪಿಗಳನ್ನು ನಾನು ಅಸುರ ಗುಣಗಳುಳ್ಳ ಮಾನವರ ಉದರದಲ್ಲಿಯೆ ಪುನಃ ಪುನಃ ಜನ್ಮವಾಗುವಂತೆ ನೋಡಿಕೊಳ್ಳುತ್ತೇನೆ. ಅವರು ಯುಗ ಯುಗಾಂತರಗಳಲ್ಲಾ ನನ್ನನ್ನು ಸೇರರು. ಕೊನೆಗೆ ನರಕವೇ ಅವರ ಗತಿಯು.

ಕಾಮ, ಕ್ರೋಧ, ಮೋಹಗಳಿಂದ ಅಸುರ ಗುಣಗಳು ಹುಟ್ಟುವವು. ಆದುದರಿಂದ ಈ ಮೂರು ವೈರಿಗಳನ್ನು ಮಾನವನು ಮೊದಲು ಜಯಿಸತಕ್ಕದ್ದು. ಇವನ್ನು ಗೆದ್ದವನು ಸತ್ಕರ್ಮಗಳನ್ನು ಮಾಡುವನು ಸುರರ ಗುಣಗಳನ್ನು ಪಡೆಯುವನು ಮುಕ್ತಿಯ ಮಾರ್ಗವನ್ನು ಕಂಡು ಹಿಡಿಯುವನು.

ಕಿರಣ: ೧೮ ತ್ರಿಗುಣಗಳು

ಅರ್ಜುನ: —ಪರಮಾತ್ಮನೇ, ಬರೇ ವಿಶ್ವಾಸದಿಂದಲೂ, ದೃಢಭಕ್ತಿಯಿಂದಲೂ ನಿನ್ನನ್ನು ಪೂಜಿಸುವವರು ತ್ರಿಗುಣಗಳಲ್ಲಿ ಯಾವ ಗುಣಕ್ಕೆ ಸೇರುವರು?

ಭಗವಾನ: —ತನ್ನ ಸ್ವಭಾವಗುಣಗಳನ್ನು ಅನುಸರಿಸಿಯೇ ಮಾನವನು ಭಕ್ತಿಮಾರ್ಗವನ್ನು ಹಿಡಿಯುವನು. ಸತ್ವಗುಣದವರು ಶರೀರಕ್ಕೆ ಶಕ್ತಿಯನ್ನು ಕೊಟ್ಟು,

NAVAYUGA WEEKYL, UDIPI.
REGD. NO.BG. 176

16-3-1961

LICENSE NO. 31
Licensed to Post without Prepayment

ಆರೋಗ್ಯವನ್ನು ವರ್ಧಿಸಿ, ರುಚಿಕರವಾಗಿಯೂ, ಹಿತಕರವಾಗಿಯೂ, ಪಸೆಯುಳ್ಳದ್ದಾಗಿಯೂ ಇರುವ ಆಹಾರ ಪದಾರ್ಥಗಳನ್ನು ಭುಂಜಿಸುವರು. ಉಪ್ಪು, ಹುಳಿ, ಖಾರಗಳು, ಅಧಿಕವಿರುವ ಆಹಾರವನ್ನು ರಜೋಗುಣದವರು ತಿನ್ನುವರು. ರುಚಿಯಿಲ್ಲದ, ತಣ್ಣಗಾದ ಆಹಾರವನ್ನು ತಮೋಗುಣದವರು ಉಪಯೋಗಿಸುವರು. ಸಾತ್ವಿಕರು ಫಲಾಪೇಕ್ಷೆಯಿಲ್ಲದೇ ದಾನಧರ್ಮವನ್ನು ಮಾಡಿ ನಿಷ್ಕಾಮಕರ್ಮಗಳನ್ನೇ ಸಾಧಿಸುವರು. ರಜೋಗುಣದವರು ಫಲಾಪೇಕ್ಷೆಯಿಂದಲೇ ಕಾರ್ಯಗಳನ್ನು ಮಾಡುವರು. ತಮೋಗುಣಿಗಳಲ್ಲಿ ಯಾವಾಗಲೂ ದುರಾಶೆಗಳೇ ಬೆಳೆಯುವವು. ಸತ್ಯವನ್ನು ನುಡಿಯುವುದು, ಹಿತಕರವಾದ ಸಂಭಾಷಣೆಯನ್ನು ಮಾಡುವುದು, ವೇದವನ್ನು ಉಚ್ಚರಿಸುವುದು, ವಾಕಿನ ತಪಸ್ಸೆನ್ನಿಸುವುದು. ಮನಸ್ಸನ್ನು ಗಂಭೀರತೆಯಲ್ಲಿಡುವುದು, ಮೌನವಾಗಿರುವುದು, ಹೃದಯವನ್ನು ಶುದ್ಧೀಕರಿಸುವುದು ಮನಸ್ಸಿನ ತಪಸ್ಸೆನ್ನಿಸುವುದು. ದೇವತೆಗಳನ್ನು ಪೂಜಿಸುವುದು, ಗುರುಗಳನ್ನು ಪೂಜಿಸುವುದು, ಪ್ರಾಮಾಣಿಕರಾಗಿ ಅಹಿಂಸಾ ಧರ್ಮದಲ್ಲಿ ನಡೆವುದು, ಶಾರೀರಕ ತಪಸ್ಸೆನ್ನಿಸುವುದು ಸತ್ವಗುಣದವರಿಗೆ ಈ ಮೂರು ವಿಧಗಳ ತಪವು ಸಾಧ್ಯವಿದೆ. ಜನರಿಂದ ಮಾನ್ಯತೆ ಸಿಕ್ಕಬೇಕೆಂಬ ಅಭಿಲಾಷೆ, ಆಡಂಬರವನ್ನು ಪ್ರದರ್ಶಿಸುವ ಆತುರ, ಮತ್ತು ವಿಶೇಷ ಚಟುವಟಿಕೆ—ಇವುಗಳು ರಜೋಗುಣಗಳಿಗೆ ಒಪ್ಪಿದ ಅಸ್ಥಿರವಾದ ತಪವು, ತನ್ನ ಶರೀರವನ್ನು ತಾನೇ ದಂಡಿಸಿಕೊಂಡು ಇತರರಿಗೆ ಹಿಂಸೆ ಮಾಡುವುದೆ ಗುರಿಯಾಗಿಟ್ಟುಕೊಂಡು ಮಾಡುವ ತಪವು ತಮೋಗುಣಿಗಳಿಗೆ ಒಪ್ಪಿರುತ್ತದೆ. ದಾನವನ್ನು ಸ್ವೀಕರಿಸಲು ಅರ್ಹನಾದವನಿಗೆ ಮಾತ್ರ ದಾನವನ್ನು ಕೊಡುವುದು ಉತ್ತಮರ ಲಕ್ಷಣ. ಫಲಾಪೇಕ್ಷೆಯಿಂದ ದಾನವನ್ನು ಮಾಡುವುದು ಮಧ್ಯಮರ ಲಕ್ಷಣ. ಅಯೋಗ್ಯರಿಗೆ ಅಕಾಲದಲ್ಲಿ ಸಹಾಯ ಮಾಡುವುದು ತಮೋಗುಣಿಗಳ ಅಭ್ಯಾಸವು.

"ಓಂ ತತ್‌ಸತ್" ಎಂಬುದು ಪರಮಾತ್ಮನ ಗುಣಗಳ ಚಿಹ್ನೆ. ಆದುದರಿಂದ "ಓಂ" ಧ್ವನಿಯಿಂದಲೆ ಯಜ್ಞಗಳೂ, ದಾನಗಳೂ, ತಪಸ್ಸೂ ನಡೆಯುವವು. 'ತತ್' ಶಬ್ದವು ಮುಕ್ತಿ ಸಾಧಕರು ನಿಷ್ಕಾಮ ಬುದ್ಧಿಯಿಂದ ಮಾಡುವ ಯಜ್ಞ, ದಾನ ಮತ್ತು ತಪಸ್ಸಿಗೆ ಒಪ್ಪಿದೆ. 'ಸತ್' ಎಂಬ ಶಬ್ದವು ಸತ್ಕರ್ಮಗಳನ್ನು ಸೂಚಿಸುತ್ತಿದೆ. ಭಕ್ತಿಯೂ, ವಿಶ್ವಾಸವೂ ಇಲ್ಲದೇ ಮಾಡಿದ ಎಲ್ಲಾ ಕಾಣಿಕೆಗಳೂ, ಯಜ್ಞಗಳೂ, ನಿರರ್ಥಕವಾಗವವು.

ಇದೂ ಸಂಭವನೀಯ

ವಿಚಿತ್ರವಾದರೂ ಅಸತ್ಯವಲ್ಲ

ಅದ್ಭುತ ಶಿಶು

ಮಗು ಹುಟ್ಟುವಾಗ ಅದರ ಬಾಯಿ ಬಚ್ಚವಾಗಿರುವುದು, ಬಚ್ಚಬಾಯಿಯಿಂದ ನಕ್ಕು ಎಲ್ಲರನ್ನೂ ಆಕರ್ಷಿಸುವುದು ಸ್ವಾಭಾವಿಕ. ಹಾಗೆಯೇ ಆರು ತಿಂಗಳಲ್ಲಿ ಮೂಡಲು ಪ್ರಾರಂಭವಾದ ಹಲ್ಲು ೪-೫ ವರ್ಷಗಳಲ್ಲಿ ಬರುವಷ್ಟು ಬಂದು ಬಾಯನ್ನು ಪೂರ್ಣಗೊಳಿಸುತ್ತವೆ. ಮುಂದೆ ೬-೭ರಲ್ಲಿ ಹಾಲುಹಲ್ಲುಗಳು ಉದುರಿ ಹೊಸ ಹಲ್ಲುಗಳು ಉದಿಸಲು ತೊಡಗಿ ಕ್ರಮೇಣ ೩೨ ಹಲ್ಲುಗಳೂ ಬಾಯನ್ನು ತುಂಬುವುವು. ಅನಂತರ ವೃದ್ಧಾಪ್ಯದ ದೆಸೆಯಿಂದ ಒಸಡು ಸಡಿಲಿ ಹಲ್ಲು ಉದುರಲಾರಂಭಿಸುವುದು. ನೂರು ವರ್ಷದೊಳಗೆ ಎಲ್ಲ ಹಲ್ಲುಗಳು ತಾಳಿ ಹೋಗಿ, ಶತಾಯುಷಿಯಾದ ನಂತರ ಮರಳಿ ಎಳೆಯ ಹಲ್ಲುಗಳು ಉದಯಿಸುತ್ತವೆಯಂತೆ. ಇದು ಸಾಮಾನ್ಯ ಮನುಷ್ಯನ ಹಲ್ಲಿನ ಇತಿಹಾಸ.

ಆದರೆ, ೧೮೩೩ರಲ್ಲಿ ಅಮೇರಿಕೆಯ ವರ್ಜೀನಿಯಾದಲ್ಲಿ ಒಂದು ಮಗು ಹುಟ್ಟಿತು. ಜನ್ಮಕಾಲದಲ್ಲಿಯೇ ಅದರ ಬಾಯಲ್ಲಿ ೩೨ ಹಲ್ಲುಗಳು ಪರಿಪೂರ್ಣವಾಗಿದ್ದುವೆಂದರೆ ನೀವು ಆಶ್ಚರ್ಯಪಡದಿರುವುದಿಲ್ಲ. ಆದರೆ, ಈ ಆಶ್ಚರ್ಯ ಇಷ್ಟರಲ್ಲೇ ಮುಗಿಯಲಿಲ್ಲ. ೬-೭ನೆಯ ವರ್ಷದಲ್ಲಿ ಇವು ಉದುರಲೂ ಇಲ್ಲ. ಹೊಸ ಹಲ್ಲು ಮೂಡಲೂ ಇಲ್ಲ. ಮತ್ತೂ ವಿಸ್ಮಯವೆಂದರೆ, ಆ ಮಗು ಬೆಳೆದು ಮುದುಕನಾದರೂ ಹಲ್ಲು ಉದುರಲಿಲ್ಲ. ಹೀಗೆ ೧೯೩೪ರಲ್ಲಿ ತನ್ನ ೧೦೧ನೆ ಆಯುಸ್ಸಿನಲ್ಲಿ ದಂತ ವಕ್ತ್ರನಾಗಿ ಹುಟ್ಟಿದ್ದ ಆ ಮಗು ಸಾಯುವಾಗಲೂ ಅದರ ಬಾಯಿ ೩೨ ದಾಳಿಂಬದ ಬೀಜಗಳಂತಹ ಹಲ್ಲುಗಳಿಂದ ಕಂಗೊಳಿಸುತಿತ್ತು!

ಇದೂ ಸಾಧ್ಯವೇ, ಶುದ್ಧ ಸುಳ್ಳು ಎನ್ನಬೇಡಿ. ಪ್ರಕೃತಿಯಲ್ಲಿ ಅದೆಷ್ಟು ವಿಕೃತಿಯಿದೆಯೆಂಬುದನ್ನು ಸಂಶೋಧಿಸಿದವರು ಯಾರು? ವಿಚಿತ್ರ ವಿಶ್ವವೆನ್ನುವುದು ಇದನ್ನೇ ಅಲ್ಲವೆ?

ಭವಿಷ್ಯದರ್ಶಿ ವೃಕ್ಷ

ಭವಿಷ್ಯ ಹೇಳುವ ಗಿಡಗಳಿವೆಯೆಂದರೆ ಯಾರಾದರೂ ಹುಚ್ಚು ಎಂದಾರು. ಆದರೆ, ಅದು ಸಂಪೂರ್ಣ ಸತ್ಯ. ನಮ್ಮೂರಲ್ಲಿ ಕೂಡ, ಕಪ್ಪೆಗಳ ಕೂಗಾಟ, ಕರಿಮರದ ಹೂಗಳು ಮಳೆ ಬರುವುದನ್ನು ಮುಂದಾಗಿ ತಿಳಿಸುತ್ತವೆಯೆಂಬ ನಂಬಿಕೆಯಿದೆ ತಾನೆ? ಹಾಗೆಯೇ ಬರ್ಮಾದಲ್ಲಿ ಪಾದಾಕ (ಪಾದ + ಓಕ) ಎಂಬ ಒಂದು ಗಿಡವಿದೆ. ಇದು ಭಾರಮಾಪಕ ಮಾಡುವ ಕೆಲಸವನ್ನು ತಾನೇ ಮಾಡುತ್ತಿದೆ. ಇದರಲ್ಲಿ ಹೂ ಅರಳಿದ ಕೇವಲ ಇಪ್ಪತ್ತನಾಲ್ಕು ತಾಸುಗಳಲ್ಲಿ ಮಳೆಯಾಗುತ್ತದೆಯೆಂಬುದನ್ನು ಪರೀಕ್ಷಿಸಿ ನೋಡಿದ್ದಾರೆ. ಪ್ರಕೃತಿಯ ವಿಲಕ್ಷಣತೆಯೆಂದರೆ ಇದೇ ಅಲ್ಲವೆ?

ಅಪೂರ್ವ ದಂಪತಿಗಳು

ವಿವಾಹ ವಿಚ್ಛೇದನಗಳ ಸಂಖ್ಯೆಯಿಂದು ಹೆಚ್ಚಿರುವುದಾದರೂ ವಿಚ್ಛೇದನ ಮಾಡಿಕೊಂಡ ದಂಪತಿಗಳು ಪುನರ್ವಿವಾಹ ಮಾಡಿಕೊಳ್ಳುವುದನ್ನು ಎಲ್ಲಾದರೂ ಕೇಳಿದ್ದೀರಾ? ಡೆನ್‌ಮಾರ್ಕಿನ ಹಡಗದ ಒಬ್ಬ ತಂಡೇಲನು ೯೨ ವರ್ಷಗಳ ನಂತರ ಪುನರ್ವಿವಾಹ ಮಾಡಿಕೊಂಡನು. ಈತನಿಗೆ ೨೦ನೆಯ ವಯಸ್ಸಿನಲ್ಲಿ ಮದುವೆಯಾಗಿತ್ತು. ೧೮೧೧ರಲ್ಲಿಯೇ ಆತನಿಗೆ ವಿಶ್ವಪರ್ಯಟನ ಮಾಡಬೇಕೆಂಬ ಆತುರ ಹುಟ್ಟಿತು. ಅವನು ತನ್ನ ಇಂಗಿತವನ್ನು ಮಡದಿಗೆ ತಿಳಿಸಲು ಆಕೆ ಆತನೊಡನೆ ಹೊರಡಲು ಸಿದ್ಧಳಿರಲಿಲ್ಲ. ಇದರಿಂದಾಗಿ ಆಕೆಯ ಸುಖಕ್ಕೆ ಭಂಗತರಬಾರದೆಂದು ಆತ ವಿವಾಹ ವಿಚ್ಛೇದನವನ್ನು ಮಾಡಿಕೊಂಡ. ಆತ ತನ್ನ ಪರ್ಯಟನವನ್ನು ಮುಗಿಸಿ ೧೯೧೨ರಲ್ಲಿ ಸ್ವದೇಶಕ್ಕೆ ಮರಳಿದ. ಅಲ್ಲಿಯವರೆಗೆ ಪುನರ್ವಿವಾಹ ಮಾಡಿಕೊಳ್ಳದೆ ಕುಳಿತ ಆ ತನ್ನ ಮೊದಲನೆಯ ಹೆಂಡತಿಯನ್ನೇ ಪುನಃ ಮದುವೆ ಮಾಡಿಕೊಂಡ!

೧೯೧೧ರಲ್ಲಿ ತಮ್ಮ ಪ್ರಥಮ ವಿವಾಹದ ಶತಮಾನೋತ್ಸವವನ್ನು ಅವರಿಬ್ಬರೂ ಆಚರಿಸಿದರು. ಇದಾದ ಒಂದೇ ವರ್ಷದಲ್ಲಿ ಇಬ್ಬರೂ ಕಾಲಾಧೀನರಾದರು.

(ಸಂಗ್ರಹ)

ಪಿಗ್ಗಿ—೪

ಪ್ರಕೃತಿ ಹೇಳುತ್ತಿರುವ ಪಾಠ—

"ಹನಿಗೂಡಿ ಹಳ್ಳ"

ಗಂಭೀರವಾಗಿ ಘೋರ್ಗರೆಯುತ್ತಿರುವ ಸಪ್ತ ಸಾಗರಗಳ ಅಪಾರ ಜಲರಾಶಿಯ ವಿಶಾಲತೆಯನ್ನು ಊಹಿಸಿ;—ಚಿಕ್ಕ ಪುಟ್ಟ ತುಂತುರು ಹನಿಗಳು ಒಂದುಗೂಡಿಯೂದ ವಿಶಾಲ ಜಲಾಶಯವಿದು. ಹಲವು ಹನಿಗಳು ಒಂದಾಗದಿರುತಿದ್ದರೆ ಈ ಸಾಗರಗಳ ಮಾತೇ ಇರಲಿಲ್ಲ ಅಲ್ಲವೆ? ಅಂತಲೆ ನಮ್ಮ ಹಿರಿಯರ ಮುತ್ತಿನಂತಹ ಮಾತು—

"ಹನಿಗೂಡಿ ಹಳ್ಳ"

ಚಿಲ್ಲರೆ ನಯೆಪೈಸಗಳೂ ಹಾಗೆಯೇ. ೨೫ ನಯೆಪೈಸೆ ಬಹಳ ಚಿಕ್ಕ ಮೊತ್ತವಾಗಿರಬಹುದಾದರೂ ಹನಿಗಳೊಂದಾಗಿ ಸಾಗರವಾದಂತೆ ಈ ನಯೆಪೈಸೆಗಳು ಒಟ್ಟುಗೂಡಿದಾಗ ಒಂದು ಸಂಪತ್ತಾಗಬಲ್ಲದು

ಪಿಗ್ಗಿ — ಇದು ನಿಮ್ಮ ಚಿಲ್ಲರೆ ನಯೆಪೈಸೆಗಳನ್ನು ದೊಡ್ಡ ನಿಧಿಯಾಗಿ ಮಾರ್ಪಡಿಸುವುದು.

ಸಿಂಡಿಕೇಟ್ ಬೇಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ಕಾಂಗೋ ಸಮಸ್ಯೆಯನ್ನು ಬಗೆಹರಿಸಬೇಕೆಂದಿದ್ದರೆ, ಕಾಂಗೋಲೀ ನಾಯಕರನ್ನು ದುಂಡು ಮೇಜಿನ ಮಾತುಕತೆಗೆ ಕರೆಯಬೇಕು ಇವರನ್ನು ವಿದೇಶೀ ಹಸ್ತಕ್ಷೇಪದಿಂದ ಮುಕ್ತಗೊಳಿಸಬೇಕು. ಹೀಗೆ ಮಾಡುವುದರಿಂದ ಎಲ್ಲ ನಾಯಕರೂ ಒಂದು ಅಭಿಪ್ರಾಯಕ್ಕೆ ಬರುವಂತೆ ಮಾಡಬಹುದು.

ಈನಡುವೆ ಬ್ರಿಗೇಡಿಯರ್ ಕೆ. ಎ. ಎಸ್. ರಾಜಾರವರ ನಾಯಕತ್ವದಲ್ಲಿ ಭಾರತದ ಸಶಸ್ತ್ರ ಬ್ರಿಗೇಡ್ ಕಾಂಗೊವನ್ನು ಪ್ರವೇಶಿಸಿ ಲಿಯೋಪಾಲ್ಡ ವಿಲೆಗೆ ಮುಟ್ಟುವಂತಿದೆ. ಇವರೊಡನೆ ನಾಲ್ಕು ಸಾವಿರದ ಏಳ್ನೂರು ಸೈನಿಕರಿದ್ದಾರೆ. ಭಾರತದ ಬ್ರಿಗೇಡಿನ ಆಗಮನವನ್ನು ಕಾಂಗೋಲೀ ನಾಯಕರು ಬಲವಾಗಿ ವಿರೋಧಿಸುತಿದ್ದಾರೆ ಮತ್ತು ಭಾರತ ವಿರೋಧೀ ಭಾವನೆಯು ಹರಡುವಂತೆ ಮಾಡುತಿದ್ದಾರೆ ಆದರೆ, ರಾಜಕೀಯ ನಿರೀಕ್ಷಕರ ಅಭಿಪ್ರಾಯದಂತೆ ಭಾರತದ ಈ ಸೇನೆಯ ಆಗಮನದಿಂದ ಅಲ್ಲಿ ಸಂಯುಕ್ತರಾಷ್ಟ್ರ ಸಂಘವು ಸುದೃಢವಾಗಿ ನಿಲ್ಲುವುದಕ್ಕೆ ಸಹಾಯಕವಾಗುವುದು; ಕಾಂಗೋಲಿನಾಯಕರಿಗೆ ಮುಂದಕ್ಕೆ ಬೆದರಿಕೆ ಹಾಕುವ ಧೈರ್ಯವಿನ್ನುಮುಂದೆ ಬರಲಾರದು. ಇದೇ ರೀತಿಯಲ್ಲಿ ಕೆಲವು ರಾಯಭಾರಿ ಕಛೇರಿಗಳವರೂ ಅಭಿಪ್ರಾಯ ಪಡುತ್ತಾರೆ. ಕಾಂಗೋವಿನಲ್ಲಿ ಮುಂದೇನು ಎಂಬುದನ್ನು ಎಲ್ಲರೂ ನಿರೀಕ್ಷಿಸುತಿದ್ದಾರೆ.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ. ಎ.)

ಸಾಮಾನ್ಯ ರೋಗಗಳು
(ಡಾ. ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.
ಪ್ರತಿಗಳು ಸಿಗುವ ಮುಖ್ಯ ಸ್ಥಳ:
ನವಭಾರತ ಪುಸ್ತಕ ಭಂಡಾರ, ಉಡುಪಿ.

Edited Printed & Published by K. H. Shetty, at the Navayuga Press, Udipi, S. India.

40th year of publication. 23-3-1961 ೪೦ನೇ ವರ್ಷ

ಸಂಪುಟ ೪೦ | Vol. 40

ನವಯುಗ

ಸಂಚಿಕೆ ೨೮ | No. 28

ಬೆಲೆ 0=13

ಪ್ರಚಲಿತ ಪ್ರಸಂಗ:

ದ. ಆಫ್ರಿಕೆಯು ಕಾಮನ್‌ವೆಲ್ತ್ ತ್ಯಜಿಸಿತು

> ವರ್ಣಭೇದ ನೀತಿ ಮತ್ತು ಕಾಮನ್‌ವೆಲ್ತ್‌ಗಳಲ್ಲಿ ಯಾವುದಿಷ್ಟವೆಂದು ದಕ್ಷಿಣ ಆಫ್ರಿಕೆಯನ್ನು ಕೇಳಿದಾಗ, ಅದು ತನ್ನ ಅಮಾನವಿಕ ವರ್ಣಭೇದ ನೀತಿಯೆಂದೇ ಉತ್ತರಿಸಿತು. ಮಾನವತಾಪೂರ್ಣ ಜಗತ್ತಿನಲ್ಲಿ ತಾನೆಸಗುತ್ತಿರುವ ಅನ್ಯಾಯವನ್ನದು ಶೀಘ್ರ ಸರಿಪಡಿಸಿಕೊಳ್ಳುವುದು ಅತ್ಯವಶ್ಯ.

ಶ್ರೀ ಗೋರಾ

ಬ್ರಿಟಿಷ ಕಾಮನ್‌ವೆಲ್ತಿನ ರಾಷ್ಟ್ರಗಳ ಪ್ರಧಾನ ಮಂತ್ರಿಗಳ ಪರಿಷತ್ತು ಕಳೆದ ವಾರ ಲಂಡನ್ನಿನಲ್ಲಿ ಸೇರಿತ್ತು. ಪ್ರಚಲಿತ ಸಮ್ಮೇಳನವು ಇಷ್ಟು ಬಾರಿಯವುಗಳಿಗಿಂತ ಹುಸು ತುರಿಸಿನಲ್ಲಿಯೇ ಸಮಾವೇಶಗೊಂಡಿತೆನ್ನಬೇಕು. ಅನೇಕ ವರ್ಷಗಳಿಂದ ಕಾಮನ್‌ವೆಲ್ತಿನ ಸದಸ್ಯ ರಾಷ್ಟ್ರವಾಗಿಯಿಂದಿರುವ ದಕ್ಷಿಣ ಆಫ್ರಿಕೆಯ ನೀತಿಯ ಬಗ್ಗೆ ಬಲವಾದ ವಾದವಿವಾದಗಳು ತೆರೆಯ ಮರೆಯಲ್ಲಿ ನಡೆದಂತೆ ಭಾಸವಾಗುತ್ತದೆ. ವಿಶ್ವದ ಯಾವ ನಾಗರಿಕ ರಾಷ್ಟ್ರದಲ್ಲಿಯೂ ಇಲ್ಲದ ಶ್ವೇತವರ್ಣೀಯರು ಮತ್ತು ಶ್ವೇತವರ್ಣೇತರರು ಎಂಬ ಭೇದಭಾವವು ದಕ್ಷಿಣ ಆಫ್ರಿಕೆಯಲ್ಲಿ ಇನ್ನೂ ಮುಂದುವರಿಯುತ್ತಿರುವುದು ಮಾನವತಾಪ್ರೇಮಿಗಳೆಲ್ಲರಿಗೂ ಒಂದು ಆಹ್ವಾನವೆನ್ನಬಹುದು ಕಳೆದ ಒಂದೆರಡು ವರ್ಷಗಳಲ್ಲಿ ಈ ವರ್ಣಭೇದ ನೀತಿಯು ಭಯಾನಕ ರೂಪಧಾರಣೆ ಮಾಡಿದ್ದನ್ನು ನಾವು ಕಾಣುತ್ತೇವೆ. ಇತ್ತೀಚೆಗೆ ಈ ವಿವಾದವು ಮತ್ತಷ್ಟು ಬೆಳೆದುಬಂದು ಅಲ್ಲಿ ವಿಚಿತ್ರ ಸನ್ನಿವೇಶಗಳೂ ಗಲಭೆ ಗುಲ್ಲುಗಳೂ ನಡೆದುವು. ನಿಜವಾದ ಆಫ್ರಿಕನರಲ್ಲಿರುವ ಮಾನವತೆ ಮತ್ತು ತಾಳುವಿಕೆಗಳ ಸತ್ವಪರೀಕ್ಷೆಯಲ್ಲಿ ಆಗತೊಡಗಿದೆ. ದಕ್ಷಿಣ ಆಫ್ರಿಕೆಯ ಸರಕಾರವು ಆಫ್ರಿಕನ್ನರ ನಿಜವಾದ ಅಧಿಕಾರವನ್ನು ಅಲ್ಲಗಳೆದು ಅಲ್ಲಿ ದಾನವದರ್ಶನವೆಸಗುವಷ್ಟು ಮುಂದುವರಿಯುತ್ತಿರುವುದನ್ನು ನಾವು ಮರೆಯುವಂತಿಲ್ಲ.

ಅಂಧಕಾರಮಯವಾಗಿದ್ದ ವಿಶಾಲ ಆಫ್ರಿಕದಲ್ಲಿ ಅಜ್ಞಾನ, ಅನಾಗರಿಕತೆ, ಅರಾಷ್ಟ್ರೀಯತೆಗಳು ತಾಂಡವವಾಡಿದ್ದ ಕಾಲವೊಂದಿತ್ತು. ಆದರೆ, ಆ ಕಾಲವೀಗ ಗತಕಾಲವಾಗುತ್ತ ಅಲ್ಲಿ ಬಂದು ನೆಲಸಿದ ಬಿಳಿಯರ ಸ್ವಾರ್ಥಸಾಧನೆಗೆ ಲಯಕಾಲ ಸಮೀಪಿಸುತ್ತ ಬರುವಂತಿದೆ. ಆಫ್ರಿಕದಲ್ಲಿ ಇಂದಿಗೂ ವನ್ಯ ಪಶುಗಳಂತೆ ಜೀವನ ನಡೆಸುವವರು ಬಹುಸಂಖ್ಯೆಯಲ್ಲಿ ಇದ್ದಾರೆ. ಎಂತಲೇ ಅಲ್ಲಿನ ಪ್ರತಿಯೊಂದು ಪ್ರಶ್ನೆಯೂ ದೈತ್ಯಾಕಾರವನ್ನು ತಾಳುತ್ತಿದೆ. ಕಾಂಗೊವಿನ ಗೊಂದಲವೊಂದನ್ನೇ ಇದಕ್ಕೆ ಉದಾಹರಣೆಯಾಗಿ ಕೊಡಬಹುದು. ಆದರೆ, ಸುಯೇಜ್ ಕಾಲುವೆಯ ಮಹಾ ಪ್ರಕರಣದಲ್ಲಿ ಸೋಲನ್ನುಂಡ ಬಿಳಿಯರು ಆಫ್ರಿಕೆಯಲ್ಲಿ ತಮ್ಮ ಸ್ವಾರ್ಥ ಸಾಧನೆಗಾಗಿ ಅಲ್ಲಿನವರ ಜೀವ ಹಿಂಡುವ ಧೋರಣೆಯನ್ನಿಟ್ಟುಕೊಳ್ಳುವುದು ಶುದ್ಧ ಅನ್ಯಾಯ.

ದ. ಆಫ್ರಿಕನ್ನರು ಇಂದು ಅಲ್ಲಿ ಬಂದು ನೆಲಸಿರುವ ಬಿಳಿಯರು ಹೊರ ಹೋಗಬೇಕೆನ್ನುವುದಿಲ್ಲ. ಬದಲಿಗೆ, ತಮ್ಮ ದೇಶದಲ್ಲಿ ತಮಗೂ ನ್ಯಾಯವಾದ ಅಧಿಕಾರ ನೀಡಿ ಎಂದು ಮೊಣಕಾಲೂರಿ ಅಂಗಲಾಚಿಯೆಂಬಂತೆ ಬೇಡಿಕೊಳ್ಳುತಿದ್ದಾರೆ. ನಾಗರಿಕ ಜಗತ್ತಿನ ನೀತಿ ಧೋರಣೆಗೆ ವಿರುದ್ಧವಾಗಿ ದಕ್ಷಿಣ ಆಫ್ರಿಕೆಯು ಈ ಬೇಡಿಕೆಯನ್ನು ತಿರಸ್ಕರಿಸಿ, ಅವರ ಮೇಲೆ ಸವಾರಿ ಮಾಡುತ್ತಿರುವುದು ಅವಾಂಛನೀಯ ಮಾತ್ರವಲ್ಲ ಲಾಂಛನೀಯವೂ ಹೌದು. ವಿಶ್ವದ ಅತಿ ವಿಸ್ತಾರವಾದ ಸಾಮ್ರಾಜ್ಯವನ್ನು ಕಟ್ಟಿ, ಕಾಲಕ್ರಮದಲ್ಲಿ ಯುಗಮಾಣಿಯನ್ನು ಮನ್ನಿಸಿ ವಸಾಹತುಗಳಿಗೆಲ್ಲಾ ಸ್ವಾತಂತ್ರ್ಯವೀಯುತ್ತ ಉದಾರ ನೀತಿ ವಹಿಸುತ್ತಿರುವ ಕಾಮನ್‌ವೆಲ್ತಿನ ರಾಣಿ ಬ್ರಿಟನ್ನು ಕೂಡ ವರ್ಣಭೇದ ನೀತಿಯನ್ನು ಮೆಚ್ಚುವುದಿಲ್ಲ. ಹಿಂದಿನ ಕಾಮನ್‌ವೆಲ್ತ್ ಪ್ರಧಾನಿ ಸಮ್ಮೇಳನಗಳಲ್ಲಿಯೂ ಈ ಪ್ರಶ್ನೆಯು ಉದ್ಭವಿಸಿದ್ದರೂ ಆ ಬಗ್ಗೆ ಯಾರೊಬ್ಬರೂ ಪಟ್ಟಾಗಿ ಹಿಡಿದು ನಿಂತಿರುವುದಿಲ್ಲ. ಸೌಹಾರ್ದಮಯವಾಗಿಯೇ ದಕ್ಷಿಣ ಆಫ್ರಿಕೆಯು ತನ್ನ ನೀತಿಯಲ್ಲಿ ಆವಶ್ಯಕ ಪರಿವರ್ತನೆ ಮಾಡಿಕೊಂಡು ಆಫ್ರಿಕನ್ನರ ಬಗ್ಗೆ ಉದಾರ ನೀತಿಯನ್ನು ಅನುಸರಿಸಲು ಮನಸ್ಸುಮಾಡದಿರದು ಎಂದು ಆಶಿಸಿದ್ದರೆ, ಅದು ಇಂದಿಗೂ ನಿಲುಕದ ದೂರದ ನಕ್ಷತ್ರವಾಗಿಯೇ ಉಳಿಯುವಂತಾಯಿತು.

ಆಫ್ರಿಕೆಯ ಸುಜಾಗೃತ ರಾಷ್ಟ್ರಗಳಲ್ಲಿ ಘಾನಾ ಕೂಡ ಒಂದು. ಇದರ ಪ್ರಧಾನಿ ಡಾ। ನುಕ್ರೂಮಾ ತನ್ನ ರಾಷ್ಟ್ರದ ಬಗ್ಗೆ ಹೆಚ್ಚಾಗಿ ಆಲೋಚಿಸುವಂತೆಯೇ ಆಫ್ರಿಕದ ಬಗ್ಗೆ, ಅಫ್ರೇಶ್ಯದ ಕಡೆಗೆ ತನ್ನ ವಿಚಾರ ಶಕ್ತಿಯನ್ನು ಹರಿಯಬಿಡುತ್ತಾರೆ. ದಕ್ಷಿಣ ಆಫ್ರಿಕೆಯ ವರ್ಣಭೇದ ನೀತಿಯಿಂದಾಗಿ ಡಾ। ನುಕ್ರೂಮಾರು ಬಹಳವಾಗಿ ನೊಂದುಕೊಂಡಿದ್ದಾರೆ. ಪರಸ್ಪರ ತಿಳುವಳಿಕೆ ಸೌಹಾರ್ದಗಳು ಬೆಳೆಯುವುದಕ್ಕೆ ಅನುಕೂಲವಾಗಿರುವ ಕಾಮನ್‌ವೆಲ್ತ್ ರಾಷ್ಟ್ರಕೂಟದಲ್ಲಿ ಅಫ್ರೇಶ್ಯದ ರಾಷ್ಟ್ರಗಳೂ ಸದಸ್ಯತೆಯನ್ನು ಪಡೆದಿದ್ದು, ದಕ್ಷಿಣ ಆಫ್ರಿಕೆ ಕೂಡ ಅದರ ಸದಸ್ಯರಾಷ್ಟ್ರವಾಗಿದ್ದು ಅದು ಮಾತ್ರ ವರ್ಣಭೇದ ನೀತಿಯನ್ನು ಬಿಟ್ಟುಕೊಡಲು ಏನೇನೂ ಸಿದ್ಧವಾಗದಿರುವುದನ್ನು ಕಂಡು ಅವರು ಉರಿದೇ ಬಿದ್ದರು. ಭಾರತ, ಮಲಯ, ನೈಜೀರಿಯಾ, ಸಿಂಹಳ-ಎಂದೇನು, ಸ್ವಯಂ ಬ್ರಿಟನ್ನು ಕೂಡ ಈ ನೀತಿಯನ್ನು ಬಿಟ್ಟುಕೊಡುವಂತೆ ಪ್ರತ್ಯಕ್ಷಾಪ್ರತ್ಯಕ್ಷವಾಗಿ ಕೇಳಿಕೊಂಡಿದ್ದುವು ಆದರೂ ದ. ಆಫ್ರಿಕೆಯು ಮಾತ್ರ ತನ್ನ ಈ ವಿಶಿಷ್ಟ ನೀತಿಯಿಂದ ಕೈ ತೊಳೆದುಕೊಳ್ಳಲು ಒಪ್ಪಲಿಲ್ಲ. ಇದನ್ನು ಮನಗಂಡ ಡಾ। ನುಕ್ರೂಮಾ ತಮ್ಮೊಡನೆಯೇ ಸಹಸದಸ್ಯವಾಗಿರುವ ದ. ಆಫ್ರಿಕೆಯು ಆಫ್ರಿಕನ್ನರಿಗೆ ಮಾಡುತ್ತಿರುವ ಅವಹೇಳನವನ್ನು, ಅಪಮಾನವನ್ನು ಸಹಿಸದೆ ಈ ಬಾರಿಯ ಪ್ರಧಾನಿ ಪರಿಷತ್ತಿನಲ್ಲಿ ಬೆದರಿಕೆಯನ್ನೇ ಹಾಕಿದರು ಒಂದೇ ಕಾಮನ್‌ವೆಲ್ತಿನಲ್ಲಿ ಘಾನ ವಿರಬೇಕು; ಇಲ್ಲವೇ ದ. ಆಫ್ರಿಕೆಯಿರಬೇಕು...ಎಂದು. ಇದನ್ನೇ ಹೋಲುವಂತಹ ಮಾತುಗಳನ್ನು ನೈಜೀರಿಯಾವೂ ಆಡಿತ್ತೆಂದು ತಿಳಿಯುತ್ತದೆ. ಭಾರತವು ಇಂತಹ ಭೀಷ್ಮ ಪ್ರತಿಜ್ಞೆಯನ್ನು ಮಾಡದೆ ಹೋದರೂ ದ. ಆಫ್ರಿಕೆಯು ಮನವೊಲಿಸುವಂತೆ ಭಗೀರಥ ಪ್ರಯತ್ನ ನಡೆಸಿರಲೇಬೇಕು; ಹೇಗಿದ್ದರೂ ಅದು ವಿಫಲವಾಯಿತು. ಸದ್ಯದಲ್ಲಿಯೇ ದ. ಆಫ್ರಿಕೆಯು ಕಾಮನ್‌ವೆಲ್ತಿನಿಂದ ಸಿಡಿದು ದೂರ ಹೋಗುವುದು.

ಇದು ವರೆಗೆ ಬ್ರಿಟಿಷ ಡೊಮಿನಿಯನ್ ಆಗಿರುವ ದ. ಆಫ್ರಿಕೆಯು ಮೇ ೩೧ನೇ ದಿನಾಂಕದಿಂದ ಸ್ವತಂತ್ರ ಪ್ರಜಾರಾಜ್ಯವಾಗುವದು. ಪ್ರಾಯಃ ಆ ದಿನದಿಂದಲೇ ಅದು ಕಾಮನ್‌ವೆಲ್ತಿನ ಸಂಬಂಧವನ್ನು ಕಡಿಯುಕೊಳ್ಳುವುದೆಂದು ಅಧಿಕೃತವಾಗಿ ತಿಳಿದು ಬಂದಿದೆ. ದ. ಆಫ್ರಿಕೆಯು ಕಾಮನ್‌ವೆಲ್ತಿನಿಂದ ಹೊರಗೆ ಹೋಗುವುದರಿಂದ ಕೆಲವೊಂದು ರಾಷ್ಟ್ರಗಳು ತುಸು ತೃಪ್ತಿಯ ಉಸಿರು ಬಿಟ್ಟಂತೆ ಕಾಣುತ್ತದೆ. ಘಾನವು ತನ್ನ ವಾದದಲ್ಲಿ ಸದ್ಯ ಯಶಸ್ವಿಯಾಯಿತೇನೋ ಹೌದು; ಆದರೆ, ದ. ಆಫ್ರಿಕೆಯನ್ನು ದೂರವಿರಿಸಿದ ಮಾತ್ರಕ್ಕೆ ವರ್ಣಭೇದ ನೀತಿಯು ದೂರವಾದಂತಾಗಲಿಲ್ಲ; ಮನುಷ್ಯಗೆ ಸಂಹಾರ ಒದಗಿದಂತಾಗಲಿಲ್ಲ. ದ. ಆಫ್ರಿಕೆಯು ಕಾಮನ್‌ವೆಲ್ತಿನ ಸಂಬಂಧವನ್ನು ಕಡಿದುಕೊಂಡರೂ ಅದರ ಸದಸ್ಯ ರಾಷ್ಟ್ರಗಳೊಡನೆ ಆವಶ್ಯಕ ಸಂಪರ್ಕವಿಟ್ಟುಕೊಳ್ಳುವುದಕ್ಕೆ ಅಡ್ಡಿಯಿಲ್ಲ. ಸ್ವಯಂ ಬ್ರಿಟನ್ನಾದರೂ ಆಫ್ರಿಕೆಯೊಡನಿರುವ ತನ್ನ ಸಂಬಂಧವನ್ನು ಬಿಟ್ಟುಕೊಡಲು ಸಿದ್ಧವಿರುವುದಿಲ್ಲವೆಂಬುದು ಖಂಡಿತವೆ.

ಕಾಮನ್‌ವೆಲ್ತಿನಿಂದ ಹೊರಬಂದುದರಿಂದ ದ. ಆಫ್ರಿಕೆಗೆ ಏನೂ ನಷ್ಟವಾಗು

([illegible] ಪುಟ ನೋಡಿರಿ)

ಯುಗಾದಿ ಹಬ್ಬದ ವಿಶೇಷ ಆಕರ್ಷಣೆಗಳಿಗಾಗಿ ಸಂದರ್ಶಿಸಿರಿ!

ಸಾರೀ ಎಂಪೋರಿಯಮ್

ಕೆಥೊಲಿಕ್ ಕ್ಲಬ್ಬಿನ ಎದುರು, ಹಂಪನಕಟ್ಟಾ, ಮಂಗಳೂರು-1

ನಿಮ್ಮ ಉತ್ತಮ ಆಯ್ಕೆಗೆ ಯೋಗ್ಯವೆಂದೆನಿಸಿದ ರೇಶ್ಮೆ ಸೀರೆಗಳೂ, ಹತ್ತಿ ನೂಲಿನ ಸೀರೆಗಳೂ ಸರ್ವೋತ್ಕೃಷ್ಟವಾಗಿವೆ, ಉತ್ತಮ ತರದ ಶರ್ಟಿಂಗ್, ಕೋಟಿಂಗ್, ಚಿಂಟ್ಸ್, ಸಿಲ್ಕ್-ನೈಲಾನ್ ಇತ್ಯಾದಿ ಬಟ್ಟೆಬರೆಗಳು ಸದಾ ದೊರೆಯುತ್ತವೆ.

SAREE EMPORIUM

Opposit Catholic Club.
HAMPANKATTA, MANGALORE-1.

ESTD. 1921

NAVAYUGA
KANNADA WEEKLY,
UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೨೧.

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್.
ಬಿ. ಶಾಮರಾಯ ಶೆಟ್ಟಿ, ಬಿ. ಎ., ಎಲ್. ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

●

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್) ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್) ಕಲಂ ಇಂಚಿಗೆ ರೂ. 3 50
ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಕಥಾ ವಿಹಾರ

ಚಂದಮಾಮ, ಬಾ, ಬಾ

ಡಾಕ್ಟರರ ಡಿಸ್ಪೆನ್ಸರಿಯಿಂದ ತನ್ನ ಮಗುವಿನ ಕಳೇವರವನ್ನು ಹೊತ್ತು ದಾರಿಗಾಣದೆ ಆಕೆ ಮುನ್ನಡೆಯುತ್ತಿದ್ದಳು. ಆಕೆಯ ತಮ್ಮ ಮೌನವಾಗಿ ಹಿಂಬಾಲಿಸುತ್ತಿದ್ದ. ಉದ್ಯಾನದಲ್ಲೊಬ್ಬಾಕೆ ತನ್ನ ಮಗುವನ್ನು 'ಚಂದಮಾಮ, ಬಾ, ಬಾ..........' ಎಂದು ಹಾಡಿ ಆಡಿಸುತ್ತಿದ್ದಳು. ಇದನ್ನು ಕೇಳಿದ ಆಕೆಯ ಹೃದಯವೇಂತಾಗಿರಬೇಡ?

ನಗರದ ಹೊರ ವಲಯದಲ್ಲಿ ಉಷಾಗಂಜ್ ಎಂಬಲ್ಲಿ ಒಂದು ಮನೆ ಇದೆ. ಅಲ್ಲಿ ಹಿಂದುಸ್ಥಾನದ ಓರ್ವ ಸುಪ್ರಸಿದ್ಧ (?) ಡಾಕ್ಟರರು ಪ್ರೈವೆಟ್ ಡಿಸ್ಪೆನ್ಸರಿಯನ್ನು ಇಟ್ಟುಕೊಂಡಿದ್ದಾರೆ. ರಸ್ತೆಯ ಇಕ್ಕಡೆಗಳಲ್ಲಿಯೂ ಬಂಗಲೆಗಳ ಸಾಲುಗಳು, ಮರಗಿಡಗಳ ನೆಳಲಲ್ಲಿ ಅಡಗಿಕೊಂಡಿವೆ. ರಸ್ತೆಯಲ್ಲಿ ಮೌನವಾವರಿಸಿದೆ. ಕೆಲವೊಮ್ಮೆ ಬೆಳಗುತ್ತಿರುವ ದೀಪಗಳನ್ನು ಹೊತ್ತ ಬಸ್ಸುಗಳು ಆ ಚಳಿಗಾಲದ ರಾತ್ರಿಯಲ್ಲಿ ಅತ್ತಿತ್ತ ಸರಸರನೇ ಓಡುತ್ತಿದ್ದಾವೆ.

ಂಂ ಂಂ ಂಂ

ಆಕಾಶದಲ್ಲಿ ಚಂದ್ರಮೂಡಿದ್ದ ಭೂಮಿ ಚಂದ್ರನ ಬೆಳ್ದಿಂಗಳಲ್ಲಿ ಮೈತೊಳೆದು ನಿಂತಿತ್ತು. ಡಾಕ್ಟರರ ಬಂಗಲೆಯ ಹತ್ತಿರದ ಬಂಗಲೆಯ ಉದ್ಯಾನದಲ್ಲಿ ಜನರು ಕುರ್ಸಿಗಳಲ್ಲಿ ಆಸೀನರಾಗಿದ್ದರು. ಅವರ ಪೈಕಿ ಗಟ್ಟಿಮುಟ್ಟಾದ ಒಂದು ಹೆಂಗಸು ಮತ್ತು ೧೫—೧೬ರ ಹರೆಯದ ತುಂಬು ಹುಡುಗಿಯೂ ಇದ್ದರು ಹುಡುಗಿಯ ಕೈಯಲ್ಲಿ ಒಂದು ಪುಷ್ಟಿಯಾದ ಮಗುವಿತ್ತು. ಅಲ್ಲಿಯೇ ಹತ್ತಿರದಲ್ಲಿ ಒಬ್ಬ ಯುವಕ ಸಿಗರೇಟನ್ನು ಎಳೆಯುತ್ತಾ ಏನನ್ನೋ ಚಿಂತಿಸುತ್ತಿದ್ದ.

ಇತ್ತ ಡಾಕ್ಟರರ ಬಂಗಲೆಯ ವಠಾರದಲ್ಲಿ ೪೦ ಮಂದಿಯ ಗುಂಪು ಸೇರಿದೆ. ಅವರಲ್ಲಿ ಗಂಡಸರು, ಹೆಂಗಸರು, ಮಕ್ಕಳು ಎಲ್ಲರೂ ಇದ್ದಾರೆ. ಅವರ ಪೈಕಿ ಕೆಲವರು ಬಹುದೂರದಿಂದ ಬಂದವರೂ ಇದ್ದಾರೆ ಬದುಕಿನ ಹೋರಾಟದಲ್ಲಿ ವೈದ್ಯರ ಸಹಾಯ, ಸಲಹೆ ಅಗತ್ಯವೆಂದು ಮನಗಂಡಿದ್ದೇ ಇದಕ್ಕೆ ಕಾರಣವಿರಬಹುದು ಅಲ್ಲವೇ? ಈ ಮಂದಿ ಸಂಜೆ ೪ ಗಂಟೆಯಿಂದ ಡಾ| ಭಗವಾನ್ ರಾಯರ ದಾರಿ ಕಾಯುತ್ತ ಕೂತಿದ್ದರು: ಸುದೈವದಿಂದ ಸುಮಾರು ರಾತ್ರಿ ಗಂಟೆ ೮ಕ್ಕೆ ಡಾಕ್ಟರರ ಕಾರು ಬಾಗಿಲ ಬಳಿ ಬಂದು ನಿಂತಿತು. ಡಾಕ್ಟರರು ಕಾರಿನಿಂದಿಳಿದು ಬಂಗಲೆಯನ್ನು ಪ್ರವೇಶಿಸಿದರು.

ಡಾ| ಭಗವಾನ್‌ರವರು ಸಾಕಷ್ಟು ಎತ್ತರದ ಆಳು. ಮುಖ ಕೆಂಪಾಗಿ ಹೊಳೆಯುವಂತ್ತದು. ತಲೆಯಿಂದ ಕಾಲವರೆಗೆ ಉತ್ತಮವಾದ ಉಣ್ಣೆಯ ಉಡುಪನ್ನು ಧರಿಸಿಕೊಳ್ಳುತ್ತಾರೆ. ಡಾ| ಸಾಹೇಬರು ನಗರದ ಸರಕಾರೀ ಆಸ್ಪತ್ರೆಯ ಹಿರಿಯ ವೈದ್ಯರು. ಮತ್ತು ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲರೂ ಕೂಡ ಆಗಿದ್ದಾರೆ. ತಿಂಗಳಿಗೆ ಕಡಮೆಪಕ್ಷ ಸುಮಾರು ೮—೧೦ ಸಾವಿರಕ್ಕೆ ಕಮ್ಮಿ ಇಲ್ಲದಷ್ಟು ಗಳಿಸುತ್ತಾರೆ. ಇಷ್ಟು ಆದಾಯ ಸಾಲದೇ ಮನೆಯಲ್ಲಿಯೂ ಪ್ರೈವೇಟ್ ಪ್ರೆಕ್ಟೀಸ್ ಮಾಡುತ್ತಾರೆ, ಅವರ ಸ್ವಂತದ ಡಿಸ್ಪೆನ್ಸರಿಯಲ್ಲಿ ರೋಗಿಯನ್ನು ಪರೀಕ್ಷಿಸಬೇಕೆಂದಾದರೆ ೧೦ ರೂ. ಫೀಸ್ ತೆರಬೇಕು. ಹಾಗೆ ಅವರು ರೋಗಿಯನ್ನು ಚೆನ್ನಾಗಿ ಪರೀಕ್ಷಿಸುತ್ತಾರೆ! ರೋಗಿಯೆಂದಾದರಾಯಿತು. ಅವನ X Ray ಫೋಟೋ ಇಳಿಸುತ್ತಾರೆ. ರಕ್ತ, ಮಲ, ಮೂತ್ರಗಳನ್ನು ಪರೀಕ್ಷೆಗೆ ಗುರಿಪಡಿಸುತ್ತಾರೆ. ಈ ಎಲ್ಲ ಕೆಲಸಗಳಿಗಾಗಿ ಬೇರೆ ಹಲವು ಡಾಕ್ಟರರನ್ನು ನೇಮಕಮಾಡಿಕೊಂಡಿದ್ದಾರೆ ಅವರು ಕಾಗದದ ಚೀಟಿಯ ಮೇಲೆ ಬೇಕಾದ ವಿವರಣೆಯನ್ನು ಬರೆದು ಕೊಡುತ್ತಾರೆ ರೋಗಿಯಾದವ ಡಾ| ಭಗವಾನರ ಕೈಯಲ್ಲಿ ಪರೀಕ್ಷಿಸಿಕೊಳ್ಳಬೇಕೆಂದು ಹೇಳಿದಲ್ಲಿ ಹತ್ತಾರು ರೂಪಾಯಿಗಳನ್ನು ಕೈಯಲ್ಲಿಟ್ಟುಕೊಂಡಿರಬೇಕು.

ಮೊದಲಿನಿಂದಲೂ ಮೃತ್ಯು ಎಂಬ ಶಬ್ದವನ್ನುಚ್ಚರಿಸಿದಾಗ ಮನುಷ್ಯ ಹೆದರುತ್ತಾನೆ. ಆದಕ್ಕಾಗಿ ಆತನು ರೋಗಗಳ ಮೇಲೆ ದೊಡ್ಡ ಯುದ್ಧವನ್ನೇ ಹೂಡಿದ್ದಾನೆ. ಅದನ್ನು ಜಯಿಸುವ ಮಹತ್ವಾಕಾಂಕ್ಷೆ ಅವನಲ್ಲಿ ಇನ್ನೂ ಉಳಿದಿದೆ. ತನ್ನನ್ನು ತನ್ನವರನ್ನು ರೋಗದ ಹಿಡಿತದಿಂದ ಬಿಡುಗಡೆಗೊಳಿಸಲು ಹಣವನ್ನು ನೀರಿನಂತೆ ಖರ್ಚುಮಾಡುವುದು ತನ್ನ ಧರ್ಮವೆಂದು ಅರಿತಿದ್ದಾನೆ. ಅಂತಹ ವಿಶೇಷ ಸಂದರ್ಭಗಳಲ್ಲಿ ಮನೆಮಾರು, ನಾಲಮಾಡಿ, ಚಿನ್ನಾಭರಣಗಳನ್ನೂ ವಿಕ್ರಯಿಸಿ ಧರ್ಮವನ್ನು ಅವನು ಪಾಲಿಸುತ್ತಾನೆ. ಆದಕ್ಕಾಗಿ ಅವನು ಚಿಂತಿಸುತ್ತ ಕೂರುವುದಿಲ್ಲ. ಆದರೆ ಬಡವರು, ಮಧ್ಯಮ ವರ್ಗದವರು ಡಾ. ಭಗವಾನರಂತಹವರನ್ನು ಪ್ರಸನ್ನಗೊಳಿಸಲು ೪೦ ಬೆಳ್ಳಿಯ ನಾಣ್ಯಗಳನ್ನು ಎಲ್ಲಿಂದ ತರಬೇಕು?

ವರ್ಷ ವರ್ಷ ರೋಗಗಳ ಸಂಖ್ಯೆಯು ಹೆಚ್ಚಿದಂತೆ ಡಾಕ್ಟರರ ಬಂಗಲೆಗೆ ಹೊಸತೊಂದು ಕೋಣೆ ಕೂಡುತ್ತದೆ. ಡಾಕ್ಟರರ ಹಿರಿಯ ಹುಡುಗಿಯರಿಗೆ ಹೊಸ ಹೊಸ ಸೀರೆಗಳು ಬರುತ್ತವೆ. ಅವುಗಳನ್ನುಟ್ಟುಕೊಂಡೇ ಅವರು ಕಾಲೇಜಿಗೆ ಹೋಗುವುದು ವಾಡಿಕೆ. ತಮ್ಮ ಸೀರೆಗಳ ಥಳಕಿನಿಂದ ಯುವಕರನ್ನು ತಮ್ಮೆಡೆಗೆ ಆಕರ್ಷಿಸುತ್ತಾರೆ. ಕೆಲವು ದಿನಗಳ ವರೆಗೆ ಆ ಸೀರೆಗಳನ್ನುಟ್ಟುಕೊಂಡು ಆ ಮೇಲೆ ಬಿಸಾಡುವುದು ಅವರಿಗೊಂದು ಆಟ. ಹೀಗೆ ಆದರೇನೇ ಡಾಕ್ಟರರ ಧರ್ಮಪತ್ನಿಯವರು ಪ್ರಸನ್ನವದನರಾಗಿ ಗಂಡನನ್ನು ಹೆಚ್ಚೆಚ್ಚು ಪ್ರೀತಿಸುತ್ತಾರೆ.

ಡಾಕ್ಟರರು ಶ್ರೀಮಂತರಾದಂತೆ ಲೋಭಿಯೂ ಆಗುತ್ತಾರೆ. ಹಾಗೆಯೇ ಅವರು ನಿರ್ದಯ ಕಟುಕರೂ ಆಗಿ ಪರಿಣಮಿಸುತ್ತಾರೆ. ಆದರೂ ಜನರು ಆ ಲೋಭಿ ಕಟುಕರಿಗೆ ಶರಣು ಹೊಡೆದು ಅವರಿಗೆ ಕಪ್ಪಕಾಣಿಕೆಯನ್ನರ್ಪಿಸುತ್ತಾರೆ. ಅವರಿಗೆ ಕೈ ಮುಗಿಯುತ್ತಾರೆ. ಸಮಾಜಕ್ಕೆ ಇಂದು ಇಂತಹ ಡಾಕ್ಟರರ ಆವಶ್ಯಕತೆ ತುಂಬಾ ಇದೆ. ಅವರಿಲ್ಲದೇ ಸಮಾಜ ನಡೆಯಲಿಕ್ಕಿಲ್ಲ. ಸಮಾಜವಾದರೋ ರೋಗಗಳನ್ನು ಜಯಿಸುವ ಮಹತ್ವಾಕಾಂಕ್ಷೆಯಿಟ್ಟು ಹಗಲು ರಾತ್ರಿಯೆನ್ನದೇ ಪರಿಶ್ರಮಿಸುತ್ತಲಿದೆ. ಆ ಮಹದಾಕಾಂಕ್ಷೆಗೆ ಕಾರಣ ಬದುಕಬೇಕೆನ್ನುವುದೆಂದು ಯಾರಿಗೆ ತಿಳಿದಿಲ್ಲ? ಆ ಬದುಕನ್ನು ಅನುಭವಿಸುವುದಕ್ಕಾಗಿಯೇ ಸಮಾಜ ಬೇರೆ ಉಪಾಯಗಾಣದೇ ಡಾಕ್ಟರರಿಗೆ ಶರಣುಹೋಗುವುದು.

ಂಂ ಂಂ

ಅವಳೊಬ್ಬಳು ಬಡ ಹೆಂಗಸು. ಅವಳ ಮಗ ಅನಾರೋಗ್ಯದಿಂದ ಪೀಡಿತನಾಗಿ ಹಲವು ಸಮಯವಾಯಿತು. ಇದಕ್ಕೆ ಮೊದಲು ಆವಳು ತನ್ನ ಮೂರು ಮಕ್ಕಳನ್ನು ಕಳಕೊಂಡಿದ್ದಳು. ಇದಿಗ ತನ್ನ ನಾಲ್ಕನೇ ಮಗುವನ್ನು ಮನುಷ್ಯ-ಸಾಧ್ಯವಾದ ಎಲ್ಲ ಪ್ರಯತ್ನಗಳಿಂದ ಬದುಕಿಸಬಯಸಿದ್ದಾಳೆ. ಆದಕ್ಕಾಗಿ ಸುಮಾರು ೬೦ ಮೈಲು ದೂರದಿಂದ ಬಂದು ಈ ನಗರದಲ್ಲಿ, ಈ ಛಳಿಯಲ್ಲಿ ಒಂದು ಛತ್ರದಲ್ಲಿ ಬಂದು ತಂಗಿದ್ದಾಳೆ ಅವಳೊಟ್ಟಿಗೆ ಅವಳ ತಮ್ಮನಿದ್ದಾನೆ. ಅವನ ತಂದೆಗೆ ಸರಕಾರೀ ನೌಕರನಾದುದರಿಂದ ರಜೆ ಮಂಜೂರಾಗಲಿಲ್ಲ. ಸರಕಾರ ರಾಮರಾಜ್ಯವನ್ನು ಸ್ಥಾಪಿಸಲು ಹಲವು ಯೋಜನೆಗಳನ್ನು ಕೈಗೊಂಡಿಲ್ಲವೆ? ಮಕ್ಕಳ ಅನಾರೋಗ್ಯ ಮತ್ತು ಮೃತ್ಯು ಅದರ ಯೋಜನೆಯನ್ನು ಸಫಲಗೊಳಿಸಲು ಒಂದು ಸಾಧನವೂ ಆಗಬಹುದು. ಆದರ ಯೋಜನೆ ಮತ್ತು ಮಕ್ಕಳ ಆರೋಗ್ಯಕ್ಕೆ ತಾಳಮೇಳವಿಲ್ಲ. ಎರಡನೆಯ ರಾಮರಾಜ್ಯ ಸ್ಥಾಪನೆಯಾಗುವಾಗ ಜನ ಸಂಖ್ಯೆ ಕಡಿಮೆ ಮಾಡುವುದು ಅಗತ್ಯವಲ್ಲವೆ?

ಆ ಹೆಂಗಸೇ ಇಂದು ಈ ಡಿಸ್ಪೆನ್ಸರಿಯಲ್ಲಿ ೪ಗಂಟೆಗಳಿಂದ ಡಾಕ್ಟರರನ್ನು ಕಾದು ಕುಳಿತಿದ್ದಾಳೆ. ಸಾಮಾನ್ಯವಾಗಿ ಸಂಜೆ

(೧೧ನೇ ಪುಟ ನೋಡಿರಿ)

ಇಂದು ಮಿತವಾಗಿ ವ್ಯಯಿಸಿದರೆ, ನಾಳೆ ಹಿತವಾಗಿ ಪರಿಣಮಿಸುವುದು
ಮಿತವ್ಯಯವೇ ಹಿತಜೀವನದ ಹೆದ್ದಾರಿ.
ಮಿತವಾಗಿ ವ್ಯಯಿಸಿರಿ; ಉಳಿಯುವ ಹಣವನ್ನು ಬೇಂಕುಗಳಲ್ಲಿ ಶೇಖರಿಸಿರಿ.

ಕೊರ್ಪೊರೇಶನ್ ಬೇಂಕು

ನಿಮ್ಮ ಹಣಕ್ಕೆ ಸುರಕ್ಷಿತತೆ ಮತ್ತು ಭದ್ರತೆಗಳೊಂದಿಗೆ ಹೆಚ್ಚಿನ ದರದಲ್ಲಿ ಬಡ್ಡಿ ಕೊಡುವುದು.

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
ಸ್ಥಾಪನೆ: 1906 ರಿಜಿಸ್ಟರ್ಡ್ ಆಫೀಸು: ಉಡುಪಿ, ಮೈಸೂರು ರಾಜ್ಯ.
6 ರಾಜ್ಯಗಳಲ್ಲಿ ಒಟ್ಟು 62 ಶಾಖೆಗಳು — ದೇಶದಾದ್ಯಂತ ಏಜನ್ಸಿಗಳು.

ರವೀಂದ್ರ ವಾಣಿ:

ವಿಶ್ವದೊಡನೆ ವ್ಯಕ್ತಿಯ ಸಂಬಂಧ

(ಲೇಖಾಂಕ ೧)

ಪ್ರಕೃತಿಯನ್ನು ಭಾರತೀಯರು ಅರ್ಥಮಾಡಿಕೊಂಡಿರುವಷ್ಟು ಪ್ರಾಯಃ ಮತ್ತಾರೂ ತಿಳಿದುಕೊಂಡಿರುವುದಿಲ್ಲ. ಸೃಷ್ಟಿಯಲ್ಲಿನ ಪ್ರತಿಯೊಂದು ವಸ್ತು ಪಂಚಭೂತಗಳಿಂದ ನಿರ್ಮಿತವಾದುದೆಂದು ಅವರು ಅನಾದಿಯಲ್ಲೇ ಅರಿತು ಅವನ್ನು ಪೂಜಿಸಲು ತೊಡಗಿದ್ದಾರೆ.

ಮೂಲ ಲೇಖಕರು: ವಿಶ್ವಕವಿ ರವೀಂದ್ರನಾಥ ಟಾಗೋರ್
ಅನುವಾದಕರು: ಶ್ರೀ ಕೆ. ಎನ್. ಭಟ್, ಶಿರ್ಲಾಲ್.

"ಪ್ರಕೃತಿಯ ಸಹವಾಸವು ಅರಣ್ಯದಲ್ಲಿ ವಾಸಿಸುವ ಪ್ರಾಣಿಗಳಿಗೆ, ಮತ್ತು ಜಡ ವಸ್ತುಗಳಿಗೆ ಮಾತ್ರ ಲಭಿಸಬೇಕಾದುದು ಹೊರತು, ಮನುಷ್ಯನು ಆ ಪ್ರಕೃತಿಯ ಪಾಶದಿಂದ ಮುಕ್ತನಾಗಿ ಬೇರೆಯೇ ಆಗಿ ಇರತಕ್ಕವನು" ಎಂದು ಪಾಶ್ಚಾತ್ಯರು ಅಭಿಪ್ರಾಯಪಡುತ್ತಾರೆ ಇವರ ಮತದಂತೆ, ಜಗತ್ತಿನ ಚರಾಚರ ಹಾಗೂ ಕೆಳಮಟ್ಟದ ವಸ್ತುಗಳ ಸಂಬಂಧವು ಮಾತ್ರ ಪ್ರಕೃತಿಯೊಡನೆ ಇರತಕ್ಕದ್ದಾಗಿದ್ದು ಬೌಧಿಕ ಹಾಗೂ ವಿವೇಕಸಹಿತವಾದ ಜೀವಿಗಳು, ಅಥವಾ ಅವುಗಳ ಕಾರ್ಯಗಳ ಶ್ರೇಯವು ಮಾತ್ರ ಮನುಷ್ಯನ ಪ್ರಕೃತಿಗೆ ಸಂಬಂಧವುಳ್ಳದ್ದಾಗಿದೆ. ಈ ವಿಚಾರವು 'ಹೂವಿನ ಮೊಗ್ಗು ಅರಳಲಿರುವ ಹೂವಿಗೆ ಸಂಬಂಧಿಸಿದುದಲ್ಲ!' ಎಂದು ಹೇಳುವ ಭ್ರಮೆಯಂತೆಯೇ ಆಗಿರುವುದಲ್ಲದೆ, ಹೂವಿನ ಸೌಂದರ್ಯಕ್ಕೂ ಸುಗಂಧಕ್ಕೂ— ಇರುವ ಸಂಬಂಧ ಪ್ರಪ್ರತ್ಯೇಕವೇ ಆಗಿದೆ, ಎಂದು ಭಾವಿಸುವ ಪ್ರವೃತ್ತಿಯಾಗಿರುವುದು.

ಭಾರತದ ಆತ್ಮಕ್ಕೆ ಇಂತಹ ಪ್ರವೃತ್ತಿ ಎಂದೂ ಬಂದುದಿಲ್ಲ. ಭಾರತದ ಆತ್ಮವು ಪ್ರಕೃತಿಯೊಡನೆ ಸದಾ ಸಮಾನತೆಯನ್ನಿಟ್ಟುಕೊಂಡು, ಅದನ್ನು ಉಳಿಸಿಕೊಂಡು ಬರುತ್ತಿದೆ. ಭಾರತೀಯ ವಿದ್ವಾಂಸರೂ ವಿಮರ್ಶಕರೂ, ಸಕಲ ಜೀವರಾಶಿಗಳಲ್ಲಿ ಮತ್ತು ಪ್ರಕೃತಿಯಲ್ಲಿ, ಆತ್ಮೀಯತೆಯನ್ನೂ ಮತ್ತು ಆತ್ಮನಲ್ಲಿ ಇವೆಲ್ಲವುಗಳ ಸಮಾನತೆ, ಹಾಗೂ ಆತ್ಮೀಯತೆಯನ್ನೂ ಕಂಡು ಒಪ್ಪಿಕೊಂಡು ಬರುತ್ತಿರುವರು.

ಭಾರತವು ಇಡಿ ವಿಶ್ವದ ಬಗೆಗೆ, ಆತ್ಮೀಯತೆಯ ಭಾವನೆಯನ್ನು ಇಟ್ಟುಕೊಂಡು ಬಂದಿರುವುದು, ಕೇವಲ ಕಲ್ಪನೆ, ಎಂದು ಭಾವಿಸಲು, ಸರ್ವಥಾ ಸಾಧ್ಯವಿಲ್ಲ. ಈ ಆತ್ಮೀಯತೆಯನ್ನೇ ಆದರ್ಶವಾಗಿ ತಿಳಿದು, ಭಾರತವು, ತನ್ನ ಹೆಜ್ಜೆ ಹೆಜ್ಜೆಗೂ, ಅನುಸರಿಸುತ್ತ ಪ್ರತಿಯೊಂದು ಕಾರ್ಯದಲ್ಲಿಯೂ ಆಚರಿಸುತ್ತ ಬಂದಿರುವುದು, ಇದು ಭಾರತದ ಶ್ರೇಷ್ಠ ಆದರ್ಶ ಗುಣವಾಗಿದೆ.

ಈ ಆದರ್ಶ ಗುಣವು ಭಾರತಕ್ಕೆ ಅನಾಯಾಸವಾಗಿ ಲಭಿಸಿದುದಲ್ಲ; ಸಂಯಮದಿಂದೊಡಗೂಡಿದ ಜೀವನ ಸತತವಾದ ಅಭ್ಯಾಸ ಮತ್ತು ಶ್ರದ್ಧೆ, ಇವುಗಳ ಸಮನ್ವಯದಿಂದ ಮೂಡಿದ ಪರಮಾರ್ಥ ಭಾವನೆಯ ನಿರಂತರವಾದ ತಪಸ್ಸಿನಿಂದ, ಭಾರತವು ತನ್ನ ಆತ್ಮದಲ್ಲಿ ಇಂತಹ ಅನುಭೂತಿಯನ್ನು ಪಡೆದುಕೊಂಡಿದೆ. ಈ ಅನುಭೂತಿಯ ಕಾರಣದಿಂದಾಗಿ ಭಾರತದ ಆತ್ಮಕ್ಕೆ ವಿಶ್ವದ ಕುರಿತು ಒಂದು ಬಗೆಯ ಆಧ್ಯಾತ್ಮಿಕ ಸ್ಪಂದನದ ಅನುಭವವಾಗ ತೊಡಗಿತು. ಪೃಥ್ವೀ, ಜಲ, ಆಕಾಶ, ಪ್ರಕಾಶ, ಇವುಗಳ ಮೊದಲ್ಗೊಂಡು, ಪತ್ರ ಪುಷ್ಪ ಮೊದಲಾದ ವಸ್ತುಗಳ ವರೆಗಿನ ಉಪಯೋಗವೂ ಕೂಡ, ಒಂದು ಸಲದ, ಪ್ರಯೋಗ ಅಥವಾ ಉಪಯೋಗಮಾಡಿ, ಮತ್ತೆ ತ್ಯಜಿಸುವುದು, ಭಾರತದ ಧ್ಯೇಯವಾಗಿರಲಿಲ್ಲ. ಒಂದು ರಾಗವನ್ನು ಹಾಡಿ ಪೂರ್ಣಗೊಳಿಸಲು, ಅನೇಕ ಸ್ವರಗಳು ಹೇಗೆ ಸಹಾಯಕವಾಗುವುವೋ ಹಾಗೆಯೇ ಪೂರ್ಣತೆಯ ಸಂಶೋಧನೆಗೆ ಈ ಮೇಲೆ ಸೂಚಿಸಿದ, ಹಲವು ವಸ್ತುಗಳು ಭಾರತೀಯರಿಗೆ ಉಪಕರಣಗಳಾಗಿದ್ದುವು.

ಪ್ರಪಂಚದ ತತ್ವಗಳೆಲ್ಲವೂ ಕೂಡ ಮಾನವನ ಜೀವನವನ್ನು ಪರಿಪೂರ್ಣಗೊಳಿಸುವುದಕ್ಕೆ ಅತ್ಯಂತ ಪ್ರಯೋಜನಕಾರಿಯಾಗಿವೆ ಈ ಎಲ್ಲಾ ತತ್ವಗಳ ಐಕ್ಯಕ ಪ್ರಯೋಜನದ ಕುರಿತು ನಾವು ಎಂದೂ ಉದಾಸೀನರಾಗಿರಬಾರದು; ಎಂಬ ಈ ವಿಚಾರ ಭಾರತಕ್ಕೆ ಬಹಳ ಹಿಂದೆಯೇ ತಿಳಿದಿದೆ. ಮಾತ್ರವಲ್ಲ ಈ ಸಂಬಂಧವನ್ನು ಸಶಕ್ತಗೊಳಿಸುವದಕ್ಕಾಗಿ, ನಾವು ಪ್ರಯತ್ನಶೀಲರಾಗಿ ಇರಬೇಕು. ಕೇವಲ ವೈಜ್ಞಾನಿಕ ಸಂಶೋಧನೆಗೆ, ಅಥವಾ ನಮ್ಮ ವ್ಯವಹಾರದ ಉಪಯೋಗಕ್ಕಾಗಿ ಮಾತ್ರವಲ್ಲ; ನಾವು ಈ ಸಂಬಂಧವನ್ನು ಮಹತ್ವದ ಸಿದ್ಧಿಗಾಗಿ ಬಲಪಡಿಸಬೇಕು. ಅಂದರೆ, ಇದರಿಂದ ವಿಶ್ವದ ವಿರಾಟ್‌ರೂಪೀ ಆತ್ಮದೊಡನೆ, ಶಾಂತಿ ಮತ್ತು ಆನಂದದ ಸಹಾನುಭೂತಿಯನ್ನು ನಾವು ಪಡೆಯಬೇಕು ಆದಕ್ಕಾಗಿಯೇ ಈ ಸಂಬಂಧ ಬಲವಾಗಬೇಕು.

ವಿಶ್ವದ ವಿಭೂತಿಗಳ ಇಂದ್ರಿಯಗಳಿಗೆ ಗೋಚರವಾಗುವ, ಯಾವ ಸ್ವರೂಪವಿದೆಯೋ, ವಿಶ್ವದಲ್ಲಿರುವುದು, ಅದು ಮಾತ್ರವಲ್ಲ; ಎಂಬುದು ವೈಜ್ಞಾನಿಕರಿಗೂ ತಿಳಿದಿದೆ. ಪೃಥ್ವಿ ಮತ್ತು ಜಲ, ಇವೆರಡೂ, ಅದೃಶ್ಯ ಶಕ್ತಿಯ ಒಂದು ದೃಶ್ಯರೂಪವಾಗಿ— ಕಾಣಿಸುತ್ತಿವೆ! ಎಂಬುದನ್ನು ವಿಜ್ಞಾನಿಗಳು ಬಲ್ಲರು.

ಯಾವ ಶಕ್ತಿಯು, ಇತರ ವಸ್ತುಗಳಲ್ಲಿ ಬೇರೆ ಬೇರೆ ಸಮಯಗಳಲ್ಲಿ ಬೇರೆ ಬೇರೆ ರೂಪಗಳಿಂದ ಪ್ರಕಟವಾಗುತ್ತಿರುವುದೋ ಈ ಅದೃಶ್ಯ ರೂಪೀ ಮಹಾಶಕ್ತಿಯೇ ಜಲ ವಾಯು ಪೃಥ್ವಿಗಳ ರೂಪದಿಂದ ಕ್ರಿಯಾಶೀಲವಾಗಿದೆ. ಎಂಬುದನ್ನು ವೈಜ್ಞಾನಿಕರ ಹೊರತು, ಆಧ್ಯಾತ್ಮಿಕ ದೃಷ್ಟಿಯಿಂದ ಈ ಜಗತ್ತನ್ನು ನೋಡುವವರೂ ಕೂಡ, ಅನುಭವಮಾಡಿಕೊಳ್ಳಬಲ್ಲರು.

ಈ ಜ್ಞಾನವು ನಮಗೆ, ಈ ಮಹಾ ಶಕ್ತಿಯ ಮೇಲೆ ವಿಜಯ ಪಡೆಯುವ ಭಾವನೆಯನ್ನು ಹುಟ್ಟಿಸುವುದಿಲ್ಲ. ಅಥವಾ ಈ ಶಕ್ತಿಯನ್ನು ನಮ್ಮ ಅಧೀನ ಮಾಡಿಕೊಳ್ಳುವ ಇಚ್ಛೆಯನ್ನೂ ಮೂಡಿಸುವುದಿಲ್ಲ. ಆದರೆ ಇದರಿಂದ ಎರಡು ಸಮಾನ ಶೀಲ ವಸ್ತುಗಳ ಸಂಗಮವಾದಾಗ, ಅಥವಾ ಸಮಾನ ರೂಪಗುಣ ಸಂಪನ್ನರಾದ ಇರ್ವರು ಸ್ನೇಹಿತರು ಒಟ್ಟುಗೂಡಿದಾಗ, ಯಾವ ಬಗ್ಗೆಯ ಆನಂದ ಉಂಟಾಗುವುದೋ, ಅದೇ ರೀತಿಯ ಆನಂದ ಅನುಭವ ನಮ್ಮಲ್ಲಿ ಉಂಟಾಗುವುದು.

ಯಾವ ಮನುಜನ ಪ್ರಪಂಚಜ್ಞಾನವು ಕೇವಲ ವೈಜ್ಞಾನಿಕ ದೃಷ್ಟಿಯಿಂದ ಪರಿಶೀಲಿಸುವಷ್ಟೇ ಪೂರ್ಣವಾಗಿರುವುದೋ, ಅಂಥವನು ಪ್ರಕೃತಿಯ ಲೀಲೆಗಳನ್ನು ಆಧ್ಯಾತ್ಮಿಕ ದೃಷ್ಟಿಯಿಂದ ನೋಡುವವರ ಅನುಭವಗಳ ವಿಚಾರದಲ್ಲಿ ಪೂರ್ಣ ಅನನುಭವಿಯಾಗಿರುತ್ತಾನೆ. ಪ್ರಾಕೃತಿಕ ವಿಭೂತಿಗಳ ಪ್ರಯೋಜನವು ಕೇವಲ ಮನುಷ್ಯನ ಉಪಯೋಗಕ್ಕಾಗಿಯೇ ಅಲ್ಲ: ಎಂಬುದಿದು, ಪ್ರಕೃತಿಯ ಕುರಿತು ಆತ್ಮಾನುಭೂತಿಯುಳ್ಳವರ ಮತವಾಗಿರುವುದು. ಅವರ ದೃಷ್ಟಿಯಲ್ಲಿ ಜಲವು ಕೇವಲ ಮನುಷ್ಯನ ಶರೀರ ಶುದ್ಧಿಯನ್ನು ಮಾತ್ರ ಮಾಡುವುದಕ್ಕಲ್ಲ; ಅದು ಮನುಷ್ಯನ ಹೃದಯವನ್ನೂ ನಿರ್ಮಲಗೊಳಿಸುತ್ತದೆ. ಹೇಗೆಂದರೆ ಅದು ಮನುಷ್ಯನ ಆತ್ಮವನ್ನೂ ಸ್ಪರ್ಶಮಾಡುತ್ತದೆ ಪೃಥ್ವಿಯು ಮಾನವನನ್ನು ಜೊರುವ ಸ್ಥಿರವಾಗಿ ನಿಲ್ಲಿಸುವ,ಉಪಕಾರವನ್ನು ಮಾತ್ರ ಮಾಡುತ್ತಿರುವುದಲ್ಲ, ಪರಂತು ಅದು ಮನುಷ್ಯನ ಮನಸ್ಸನ್ನೂ ಆಹ್ಲಾದಗೊಳಿಸುತ್ತದೆ. ಏಕೆಂದರೆ ಪೃಥ್ವಿಯ ಸ್ಪರ್ಶವು ಕೇವಲ ಭೌತಿಕವಾಗಿರದೆ, ಸಚೇತನವಾದ ಸಂಸ್ಪರ್ಶವಾಗಿದೆ. ಮನುಷ್ಯನು ಪ್ರಕೃತಿಯೊಡನೆ ಈ ಪರಿಯ ಸಚೇತನವಾದ ಸಾಹಚರ್ಯವನ್ನು ಅನುಭವಮಾಡದಿದ್ದರೆ ಆಗ, ಅಂತಹ ಮನುಷ್ಯನಿಗೆ ಈ ಪ್ರಪಂಚವು ಒಂದು ಭಯಾನಕವಾದ ಕಾರಾಗೃಹದಂತೆ ಭಾಸವಾಗುತ್ತದೆ. ಅದರ ಒಂದೊಂದು ಕಣವೂ ಕೂಡ, ಆತನ ಶತ್ರುವಿನಂತೆ ಭಾಸವಾಗುತ್ತದೆ. ಆದರೆ, ಹೀಗೆ ಮಾಡದೆ, ಪ್ರಕೃತಿಯಲ್ಲಿ ಮತ್ತು ಪ್ರಾಣಿ ಮಾತ್ರದಲ್ಲಿ ಆತ್ಮಭಾವವನ್ನು ಕಾಣುವ ಮನುಷ್ಯನಲ್ಲಿ ಮಾತ್ರ, ನಿಜವಾದ ಆತ್ಮ ವಿಕಾಸವಾಗುತ್ತದೆ. ಯಾವ ಸೃಷ್ಟಿಯಲ್ಲಿ ಮಾನವನು ಜನ್ಮವೆತ್ತಿದ್ದಾನೋ, ಆ ಸೃಷ್ಟಿಯ ನಿಜವಾದ ಅರ್ಥವನ್ನು ಹೀಗೆ ಆತ್ಮ ವಿಕಾಸವನ್ನು ಪಡೆದಾಗ ಮಾತ್ರ, ಆತನು ತಿಳಿದುಕೊಳ್ಳಲು ಸಮರ್ಥನಾಗುತ್ತಾನೆ. ಇಷ್ಟು ಮಾತ್ರವಲ್ಲ. ಆತನಿಗೆ ತನ್ನ ನಿಜವಾದ ಅಸ್ತಿತ್ವದ ಜ್ಞಾನವುಂಟಾಗಿ ತನ್ನ ಸಮ, ವಿಷಮ ಪರಿಸ್ಥಿತಿಗಳಲ್ಲಿ ಸಮಭಾವವನ್ನಿರಿಸುವುದು ಸಾಧ್ಯವಾಗುತ್ತದೆ.

"ಮನುಷ್ಯನ ಸುತ್ತಲೂ, ಇರುವ ಪರಿಸರಕ್ಕೊಳಪಟ್ಟಿರುವ, ಪ್ರತಿಯೊಂದು— ಚೇತನ—ಅಚೇತನ ವಸ್ತುಗಳೊಡನೆಯೂ ಮನುಜನಿಗೆ ಆತ್ಮೀಯಭಾವ ಇರಬೇಕು!" ಎಂಬುದಾಗಿ ಭಾರತೀಯ ಸಂಸ್ಕೃತಿಯು, ಮನುಷ್ಯನಿಗೆ, ಮೊಟ್ಟಮೊದಲ ಪಾಠವನ್ನು ಹೇಳಿಕೊಟ್ಟಿದೆ. ಉದಯಿಸುತ್ತಿರುವ ಸೂರ್ಯ ಪ್ರವಹಿಸುತ್ತಿರುವ ಜಲಪ ಸ್ಥಿತವಾದ ಪೃಥ್ವಿ. ಇವುಗಳನ್ನು ಸದಾ ಪೂಜಿಸುತ್ತಿರುವುದೂ ಕೂಡ ಈ ಪವಿತ್ರಭಾವನೆಯಿಂದಲೇ ಆಗಿದೆ.

ಇವೆಲ್ಲವೂ ಸಚೇತನವಾದ ವಿರಾಟ್ ರೂಪೀ ಸತ್ಯದ ಬೇರೆ ಬೇರೆ ರೂಪಗಳಾಗಿವೆ. ಅದೃಶ್ಯರೂಪೀ ಮಹಾಶಕ್ತಿಯು ಈ ಸತ್ಯವನ್ನು ನಮಗಾಗಿ, ನಮ್ಮೊಡನೆ ಸಜೀವವಾಗಿ ಇರಿಸಿದೆ. ಚತುರ್ವೇದಗಳ ಸಾರ ಸರ್ವಸ್ವವೆಂದು ಹೇಳಲಾಗುತ್ತಿರುವ ನಮ್ಮ ಪವಿತ್ರವಾದ ಗಾಯತ್ರೀ ಮಂತ್ರವೂ ಕೂಡ ನಮ್ಮಲ್ಲಿ ಈ ಪವಿತ್ರವಾದ ಭಾವನೆಯನ್ನು ಜಾಗೃತಗೊಳಿಸುವ, ಪ್ರೇರಣೆಯನ್ನು ಕೊಡುತ್ತಿರುವುದು ಈ ಪ್ರೇರಣೆಯು—ಶಕ್ತಿಯುಳ್ಳ ಮಾತ್ರ ನಾವು ನಮ್ಮ ಚೇತನಯುಕ್ತವಾದ ಆತ್ಮದ ಮೂಲಕ ವಿಶ್ವಾತ್ಮನಲ್ಲಿ ಐಕ್ಯಕ ಭಾವನೆಯನ್ನು ಅನುಭವಮಾಡುವ ಪ್ರಯತ್ನ ಮಾಡಬಲ್ಲೆವು. ಇದೂ ಕೂಡ ಆ ಮಹಾ ಶಕ್ತಿಯ ಸೂತ್ರಕ್ಕೆ ಒಳಪಟ್ಟೇ ಇರುವುದು. ಪೃಥ್ವಿ ಜಲ, ಆಕಾಶ, ಇವುಗಳ ನಿರ್ಮಾಣವನ್ನು ಯಾವ ಮಹಾಶಕ್ತಿ ಮಾಡಿದೆಯೋ? ಯಾವ ಶಕ್ತಿಯು ನಮ್ಮ ಆತ್ಮದಲ್ಲಿ—ಜ್ಯೋತಿಯನ್ನು ಬೆಳಗಿಸುತ್ತಿರುವುದೋ? ಆ ಮಹಾಶಕ್ತಿಯ ಅಂಶವು ಪ್ರಕೃತಿಯ ವಿಭೂತಿಗಳಲ್ಲಿ ಸಜೀವವಾಗಿ ಅಡಕವಾಗಿರುವುದು.

ಬೇರೆ ಬೇರೆ ವಸ್ತುಗಳ ಮಹತ್ವವನ್ನು ಪ್ರತ್ಯೇಕ ಪ್ರತ್ಯೇಕವಾಗಿ ಗುರುತಿಸಲು, ಭಾರತವು ಉದಾಸೀನ ಭಾವವನ್ನು ತಳೆದಿದೆ; ಅಥವಾ ಭಾರತಕ್ಕೆ ಈ ಜ್ಞಾನವೇ ಇಲ್ಲ" ಎಂಬ ಈ ಆರೋಪವು ಮಿಥ್ಯಾ ಆರೋಪವಾಗಿದೆ. ಭಿನ್ನತೆಯನ್ನು ಗುರುತಿಸದಿದ್ದರೆ, ಜೀವನ ನಿರ್ವಹಣೆಯೇ ಕಷ್ಟವಾದೀತು. ಈ ಸತ್ಯವೂ ಕೂಡ ಭಾರ

(ನೇ ಪುಟ ನೋಡಿರಿ)

ಕಳೆದ 5 ವರ್ಷಗಳ ಅದ್ವಿತೀಯ ಪ್ರಗತಿ!!!

	31.12.1955ರಲ್ಲು ರೂ.	31.12.1960ರಲ್ಲು ರೂ.
1. ತೆತ್ತ ಮೂಲಧನ ಮತ್ತು ಕ್ಷೇಮನಿಧಿ:	3,18,000	6,87.000
2. ಗವರ್ನ್‌ಮೆಂಟ್ ಸೆಕ್ಯೂರಿಟೆಸ್ ಇತ್ಯಾದಿ:	6,96 000	45 23.000
3. ಒಟ್ಟು ಸಾಲಗಳು	12,92 000	69,90.000
4. ಒಟ್ಟು ಠೇವಣಾತಿಗಳು	**20.49.000**	**1 17.99.000**
5. ಚಲಾವಣಾ ಭಂಡವಾಳ	**24.55.000**	**1 31.00.000**

ಜನತಾ ಸೇವೆಯ ಮುನ್ನಡೆಯಲ್ಲಿ....

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.,

ರೆಜಿಸ್ಟರ್ಡ್ ಆಫೀಸು: ಉಡುಪಿ, ದ. ಕನ್ನಡ. ಸ್ಥಾಪನೆ: 1920

ಪರಿಚಯ:

ಉದ್ಯಮದ ಗಾಳಿ ಸೋಕದ ದೇಶವಿದು!

ಕತ್ತಲೆಯ ಭೂಖಂಡ ಆಫ್ರಿಕೆಯ ಗಿನಿ ಪ್ರಜಾರಾಜ್ಯವು ಮೂರು ವರ್ಷದ ಹಸುಳೆಯಾಗಿದೆ. ಉದ್ದಿಮೆಗಳ ಹೆಸರನ್ನೇ ಕೇಳದ ಇಲ್ಲಿನ ನಾಗರಿಕರು ಅತಿ ನೃಶಂಸರಾಗಿದ್ದಾರೆ. ಇವರನ್ನು ಸಮ ನ್ಯಾಯಮಾರ್ಗದಲ್ಲಿ ಮುಂದೆ ಕರೆದೊಯ್ಯುವುದೇ ಒಂದು ಮಹಾ ಸಾಹಸವೆನ್ನಬಹುದು.

ಪಶ್ಚಿಮ ಆಫ್ರಿಕೆಯ ಗಣರಾಜ್ಯ ಗಿನಿಯ ವಿಸ್ತಾರವು ೯೫ ಸಾವಿರ ಚೌರಸ ಮೈಲುಗಳು; ಆದರೆ, ಜನಸಂಖ್ಯೆ ಮಾತ್ರ ೩೦ ಲಕ್ಷವೆಂದರೆ ನೀವು ವಿಸ್ಮಯ ಪಡದಿರಲಾರಿರಿ. ಇವರಲ್ಲಿ ಒಂಬತ್ತು ಸಾವಿರದಷ್ಟು ಯುರೋಪಿಯನರಿರುವರು. ಕೋನಾಕ್ರಿಯೆಂಬುದು ಗಿನಿ ಪ್ರಜಾರಾಜ್ಯದ ರಾಜಧಾನಿಯೂ ಹೌದು; ಬಂದರವೂ ಹೌದು.

ಸಾಗರ ತೀರದ ಪೋರ್ಚುಗೀಸರು ಆಫ್ರಿಕೆಯ ಗಿನಿಯನ್ನು ಕ್ರಿ. ಶ. ಹದಿನಾಲ್ಕನೆಯ ಶತಮಾನದ ಸುಮಾರಿಗೇನೇ ಕಂಡು ಹಿಡಿದಿದ್ದರು. ಮುಂದೆ ಬ್ರಿಟಿಷ, ಫ್ರೆಂಚ ಹಾಗೂ ಮತ್ತಿತರ ಯುರೋಪ್ಯ ಹಡಗುಗಳು ಇಲ್ಲಿನ ಕರಾವಳಿಯಲ್ಲಿ ತಂಗುತಿದ್ದುವು. ಗಿನಿಯ ನಿರಪರಾಧಿ ಸಾಧು ಜನರನ್ನು ಹಿಡಿದು ಹಡಗುಗಳಲ್ಲಿ ತುಂಬಿಸಿ, ಕೊಂಡೊಯ್ದು ಗುಲಾಮರನ್ನಾಗಿ ಮಾರುತಿದ್ದರು. ಅಮೇರಿಕೆಯ ಸಂಶೋಧನೆಯೂ ಇದೇ ಸಮಯದಲ್ಲಿ ನಡೆದುದರಿಂದ, ಅಲ್ಲಿನ ತೋಟಗಳಲ್ಲಿ ದುಡಿಯಲು ಆವಶ್ಯಕರಾದ ಗುಲಾಮರು ಬೇಕೆಂಬಷ್ಟು ಮಾರಲ್ಪಟ್ಟರು. ಹೀಗೆ ಗುಲಾಮರನ್ನು ಒದಗಿಸುವುದೇ ವ್ಯಾಪಾರವಾಗಿರುವ ಕೆಲವಾರು ಜನರೂ ಇದ್ದರು. ಆದರೆ, ಇಲ್ಲಿ ವಸಾಹತು ಸ್ಥಾಪನೆಯ ಉದ್ದೇಶ ಪ್ರಾರಂಭದಲ್ಲಿ ಯಾರಿಗೂ ಇದ್ದಂತೆ ತೋರುವುದಿಲ್ಲ.

೧೮೫೪ ಮತ್ತು ೬೭ರ ನಡುವೆ ಗಿನಿಯ ಕೆಲವು ನಾಯಕರು ಮತ್ತು ಫ್ರಾನ್ಸಿನ ನಡುವೆ ಒಪ್ಪಂದವೊಂದಾಯಿತು ಇದರಂತೆ ಬೋಕೇಯ ಸ್ವಲ್ಪ ಭೂಭಾಗವು ಫ್ರೆಂಚರ ಬಗಲಿಗೆ ಬಿತ್ತು. ಇಲ್ಲಿಯೇ ಮೊತ್ತಮೊದಲನೆಯ ಬಾರಿಗೆ ದುರ್ಗರಚನೆಯೂ ಆಯಿತು. ಇದನ್ನು ಕಂಡ ಬ್ರಿಟಿಷರು ತಮಗೂ ಒಂದಷ್ಟು ಭೂಮಿ ಗಳಿಸಿಕೊಳ್ಳುವ ಹಂಚಿಕೆ ಮಾಡಿಕೊಂಡರು ೧೮೪೯ರಲ್ಲಿ ಈ ಬಗ್ಗೆ ಬಹಳಷ್ಟು ಪ್ರಯತ್ನ ನಡೆಯಿತಾದರೂ ಬ್ರಿಟಿಷರು ಅಯಶಸ್ವಿಗಳೇ ಆದರು. ೧೮೯೧ರಲ್ಲಿ ಡಾ| ಬಯೋಲರು ಇಲ್ಲಿನ ಪ್ರಥಮ ಲೆಫ್ಟಿನೆಂಟ್ ಗವರ್ನರರಾಗಿ ನೇಮಿತರಾದರು. ಇವರ ನಂತರ ಗವರ್ನರರಾಗಿ ಬಂದ ಶ್ರೀ ಬೈಲರು ಈ ದೇಶದ ಹೆಸರನ್ನು ಗಿನಿಯೆಂಬುದಾಗಿ ಇಟ್ಟರು. ಇವರ ಕಾಲದಲ್ಲಿ ಗಿನಿಯು ಟಿಂಬೊದ ವರೆಗೂ ವಿಸ್ತೃತಗೊಂಡಿತು. ೧೮೯೯ರಲ್ಲಿ ದಕ್ಷಿಣ ಸುಡಾನದ ಕೆಲವು ಜಿಲ್ಲೆಗಳು ಗಿನಿಯಲ್ಲಿ ಸೇರಿಸಲ್ಪಟ್ಟುವು. ೧೯೦೪ರಲ್ಲಿ ಬ್ರಿಟಿಷ್ ದ್ವೀಪ 'ಲೋಸ್' ಕೂಡ ಇದರೊಂದಿಗೆ ಸೇರ್ಪಡೆಗೊಂಡಿತು. ಇಲ್ಲಿಗೆ ಇಂದು ನಾವು ಕಾಣುವ ಗಿನಿಯು ಪೂರ್ಣರೂಪಪಡೆಯಿತು.

೧೯೪೬ರಲ್ಲಿ ಗಿನಿಯನ್ನು ಫ್ರೆಂಚ ಪಶ್ಚಿಮ ಆಫ್ರಿಕೆಯ ಒಂದು ಭಾಗವೆಂಬುದಾಗಿ ಪರಿಗಣಿಸಲಾಯಿತು. ಅನಂತರ ಇಲ್ಲಿ ೬೦ ಜನ ಸದಸ್ಯರಿರುವ ಪ್ರಾದೇಶಿಕ ಎಸೆಂಬ್ಲಿಯೊಂದನ್ನು ರಚಿಸಲಾಯಿತು. ಈ ಬಗ್ಗೆ ನಡೆದ ಚುನಾವಣೆಯಲ್ಲಿ ಗಿನಿ ಪ್ರಜಾತಾಂತ್ರಿಕ ದಳವು ಬಹುಮತವನ್ನು ಗಳಿಸಿತು. ಆಗ ಇದರ ನಾಯಕರಾಗಿದ್ದ ಶ್ರೀ ಸೆಕು ತೊರೆಯವರು ಇಂದು ಗಿನಿಯ ರಾಷ್ಟ್ರಪತಿಗಳಾಗಿದ್ದಾರೆ. ಫ್ರೆಂಚರು ಗಿನಿಯ ನಾಗರಿಕರ ಮೊಣಕೈಗಂಟಿಗೆ ಬೆಲ್ಲ ನೆಕ್ಕಿಸುವುದಕ್ಕಾಗಿ ಹೀಗೆಲ್ಲಾ ಮಾಡಿದ್ದರು. ನಾಗರಿಕರಿಂದ ಚುನಾಯಿತ ಸಂಸತ್ತು ನಾಮ ಮಾತ್ರಕ್ಕಿದ್ದು ಅಲ್ಲಿ ನಿಜವಾಗಿ ಫ್ರೆಂಚ ಗವರ್ನರನ ನಿರಂಕುಶಾಧಿಕಾರವೇ ನಡೆಯುತ್ತಿತ್ತು. ೧೯೫೮ರ ಸಪ್ಟಂಬರ ೨೮ರಂದು ಮೇ| ಜ| ಡಿಗಾಲಿಯವರ ಸಂವಿಧಾನಕ್ಕೆ ವಿರುದ್ಧವಾಗಿ ೯೫.೪ ಸೇಕಡಾ ಮತವಿತ್ತು ತಮ್ಮ ಸ್ವಾತಂತ್ರ್ಯಮಾರ್ಗವನ್ನು ಗಿನಿಯ ನಾಗರಿಕರು ಪ್ರಶಸ್ತಗೊಳಿಸಿದರು. ಅದೇ ವರ್ಷದ ಅಕ್ಟೋಬರ ಎರಡನೇ ದಿನಾಂಕದಂದು ಶ್ರೀ ಸೆಕುತೊರೆಯವರು, ವಿಧಿವತ್ತಾಗಿ ಸ್ವಾತಂತ್ರ್ಯ ಘೋಷಣೆಯನ್ನು ಮಾಡಿದರು.

ಅಧ್ಯಕ್ಷರೇ ಸರ್ವೋಚ್ಚ ಅಧಿಕಾರಿಯೂ ಗಿರುವ ಪ್ರಕಾರದ ಪ್ರಜಾಪ್ರಭುತ್ವವು ಇಲ್ಲಿ ಸ್ಥಾಪಿತಗೊಂಡಿದೆ. ಅಧ್ಯಕ್ಷನು ರಾಜ್ಯ ಪ್ರಮುಖನೂ ಪ್ರಶಾಸನ ಪ್ರಮುಖನೂ ಆಗಿದ್ದಾನೆ. ವಯಸ್ಕ ಮತದಾನ ವಿಧಾನದಿಂದ ಚುನಾಯಿತನಾಗುವ ಈತನ ಅಧಿಕಾರಾವಧಿ ಏಳು ವರ್ಷಗಳ ಕಾಲವಿರುವುದು. ಆಡಳಿತೆಯಲ್ಲಿ ತನಗೆ ಸಹಾಯಕರಾಗಿರಲು ಆತನು ಮಂತ್ರಿಗಳನ್ನು ನೇಮಿಸಿಕೊಳ್ಳುತ್ತಾನೆ. ವೈಧಾನಿಕ ಕಾರ್ಯಗಳಿಗಾಗಿ ಒಂದು ಸಂಸತ್ತು ಇದ್ದು, ಇದರ ಚುನಾಯಿತ ಪ್ರತಿನಿಧಿಗಳು ಐದು ವರ್ಷಗಳ ಕಾಲ ಸದಸ್ಯರಾಗಿ ಉಳಿಯುವರು. ಈ ಸಂಸತ್ತನ್ನು 'ನೇಶನಲ್ ಎಸೆಂಬ್ಲಿ' ಎನ್ನುತ್ತಾರೆ.

"ಪರಿಶ್ರಮ—ನ್ಯಾಯ ಮತ್ತು ಐಕ್ಯ" ಎಂಬುವನ್ನು ಗಿನಿಯು ತನ್ನ ಆದರ್ಶವಾಣಿಯನ್ನಾಗಿಟ್ಟುಕೊಂಡಿದೆ. ಇದರ ರಾಷ್ಟ್ರೀಯ ಧ್ವಜವು ಕೆಂಪು, ಹಳದಿ ಮತ್ತು ಹಸುರು ಬಣ್ಣದ ಪಟ್ಟೆಗಳಿಂದ ಕೂಡಿದೆ.

ಗಿನಿಯು ಆಫ್ರಿಕೆಯ ಐಕ್ಯಕ್ಕೋಸ್ಕರ ತನ್ನ ಸಾರ್ವಭೌಮಾಧಿಕಾರವನ್ನೂ ತ್ಯಜಿಸಲು ಮುಂದಾಗಿರುವುದು ಅತಿ ವಿಶೇಷವಾಗಿದೆ. ಘಾನಾ ಮತ್ತು ಗಿನಿಗಳು ಸಂಯುಕ್ತರಾಷ್ಟ್ರವಾಗುವಂತೆ ಪ್ರಯಾಸವಹಿಸಿದ್ದುವು. ಆದರೆ, ಅದು ಸಂಪೂರ್ಣವಾಗಿ ಯಶಸ್ವಿಯಾಗಿಲ್ಲ.

ಸಮುದ್ರ ಕರಾವಳಿಯ ಭಾಗದ ಗಿನಿ ಭೂಮಿಯು ಅತ್ಯಂತ ಫಲವತ್ತಾಗಿದೆ. ಇಲ್ಲಿ ವಿವಿಧ ಧಾನ್ಯಗಳನ್ನು ಬೆಳೆಸುತ್ತಾರೆ. ಬಾಳೆ ಗಿಡ ಮತ್ತು ತಾಳೆ ಮರಗಳಿಂದ ಕರಾವಳಿ ಪ್ರದೇಶವು ತುಂಬಿ ಹೋಗಿದೆ. ವಿವಿಧ ಎಣ್ಣೆಕಾಳುಗಳಿಂದ ಎಣ್ಣೆ ತಯಾರಿಸಿ ನಿರ್ಯಾತ ಮಾಡುವುದೂ ಇದೆ. ನದೀತಟಗಳಲ್ಲಿ ಹಣ್ಣು ಹಂಪಲುಗಳನ್ನು ಬೆಳೆಸುತ್ತಾರೆ. ಬಂಗಾರ, ಗಜ ಮುತ್ತುಗಳೂ ಇಲ್ಲಿ ದೊರೆಯುತ್ತವೆ. ಆದರೆ, ಬೊಕ್ಸೈಟ್ ಗಿನಿಯ ಪ್ರಧಾನ ಖನಿಜೋತ್ಪತ್ತಿ ಪ್ರತಿ ವರ್ಷ ೪॥ ಲಕ್ಷ ಟನ್ ಬೊಕ್ಸೈಟನ್ನು ಕೆನಡಾಕ್ಕೆ ಗಿನಿಯು ಕಳಿಸಿ ಕೊಡುತ್ತದೆ. ಇದುವರೆಗೆ ಗಿನಿಯಲ್ಲಿ ಒಂದೇ ಒಂದು ಕಾರಖಾನೆಯು ಸ್ಥಾಪನೆಗೊಂಡಿಲ್ಲ. ಆದರೂ ಕಳೆದ ಎರಡು ಮೂರು ವರ್ಷಗಳಿಂದ ಇಲ್ಲಿ ಔದ್ಯೋಗೀಕರಣಕ್ಕೆ ಪ್ರಾರಂಭವಾಗಿದೆ. ಇನ್ನು ಕೆಲವೇ ವರ್ಷಗಳಲ್ಲಿ ಇಲ್ಲಿ ಕೆಲವಾದರೂ ಸ್ವತಂತ್ರ ಕಾರಖಾನೆಗಳು ರಚಿತವಾಗುವ ನಿರೀಕ್ಷೆಯಿದೆ.

ಗಿನಿಯಲ್ಲಿ ಅನೇಕ ಜಾತಿಯ ಜನರಿರುವರು. ಇವರಲ್ಲಿ ಬಾಗಾ, ನಾಲು, ಲಾಯಿಮೆನ್ ಮತ್ತು ತಿಮಿನಿ ವಂಶಗಳು ಮುಖ್ಯವಾದುವುಗಳು. ಈ ನಾಲ್ಕೂ ವಂಶಗಳು ಮೊದಮೊದಲು ತೀರ ಬರ್ಬರವಾಗಿದ್ದುವು; ಕ್ರೂರವಾಗಿದ್ದುವು; ಅನಾಗರಿಕವಾಗಿದ್ದುವು. ಆದರೆ, ಇತ್ತೀಚೆಗೆ ಇವರಲ್ಲಿ ಸುಧಾರಣೆಯ ಸೋಂಕು ಕಾಣುತ್ತಿದೆ. ನಾಗರಿಕತೆಯತ್ತ ಈ ಜನರು ವಾಲುತಿದ್ದು ಆಧುನಿಕ ವಿಚಾರ ಧಾರೆಯನ್ನು ಸ್ವೀಕರಿಸಲು ಮುಂದೆ ಬರುತ್ತಿದ್ದಾರೆ ಗಿನಿಯ ಹೆಚ್ಚಿನ ಜನರು ಕೃಷಿ ಮಾಡುತ್ತಾರೆ. ಒಂದಲ್ಲ ಒಂದು ಬಗೆಯ ಕೃಷಿಯಿಂದಲೇ ಇವರ ಜೀವನ ಸಾಗಬೇಕು ತಾನೆ? ಸಮುದ್ರ ತಟದಲ್ಲಿರುವವರು ಮೀನನ್ನೂ ಹಿಡಿಯುತ್ತಾರೆ.

ಗಿನಿಯು ಸಾಮಾನ್ಯವಾಗಿ ನಿರ್ಜನವಿರುವಂತೆಯೇ ನಿರ್ಧನವೂ ಆಗಿದೆ. ಇದರ ಸಾಂಪತ್ತಿಕ ಸ್ಥಿತಿ ಸಾರವತ್ತಾಗಿಲ್ಲ. ಆದರೂ ಸ್ವಾತಂತ್ರ್ಯಾನಂತರ ರೂಪಿತವಾದ ಪ್ರಜಾ ಸರಕಾರವು ರಾಷ್ಟ್ರದ ಆರ್ಥಿಕೋನ್ನತಿಗಾಗಿ ಪರಿಶ್ರಮವಹಿಸುತ್ತಿದೆ. ಗೋಲಾಕಾರದ ಹುಲ್ಲಿನ ಮಾಡಗುಡಿಸಲುಗಳಲ್ಲಿ ನೆಲಸುತ್ತಿರುವ ಅನಾಗರಿಕ ಜನಾಂಗವನ್ನು ಸುಸಂಸ್ಕೃತಗೊಳಿಸುವುದು ಬಹು ಪ್ರಯಾಸವಾಗಿದೆ.

ಗಿನಿ ಪ್ರಜಾರಾಜ್ಯದಲ್ಲಿ ಗಳಿಯು ಬಹು ಜನಪ್ರಿಯವಾಗಿದೆ. ಅಲ್ಲಿನ ನದಿನದಗಳಲ್ಲಿ ಅತ್ಯಧಿಕ ಸಂಖ್ಯೆಗಳಲ್ಲಿ ಮೊಸಳೆಗಳಿವೆ!

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R. E A. 100/1961 in
R. E. P. 541/59
O. S. 409/58

ಶೀನಪ್ಪ ಗೌಡ —ಅರ್ಜಿದಾರ,

ದುಗ್ಗಪ್ಪ ಗೌಡ ಕೂಡಾ —ಎದ್ರಿರು.

3ನೇ ಎದ್ರಿ—ಬಾಪುಂಞ ಬ್ಯಾರಿ, ಬಡ್ಡ ಬ್ಯಾರಿಗಳ ಮಗ ಪುತ್ತೂರು ತಾಲೂಕು ಕೊಳ್ತಿಗೆ ಗ್ರಾಮದ ಪಾಲತ್ತಡು ಎಂಬಲ್ಲಿ.

ಎದ್ರಿ ಅರ್ಜಿದಾರರ ಸ್ವಾಧೀನವಿದ್ದ ಆಸ್ತಿಯನ್ನು ಆಕ್ರಮವಾಗಿ ಸ್ವಾಧೀನಪೊಂದಿಕೊಂಡಿರುವರೆಂಬುದರಿಂದ, ಅರ್ಜಿದಾರನಿಗೆ ಡೆಲಿವರಿ ಕೊಡಿಸಬೇಕೆಂತ ಮಾಡಿದ ಅರ್ಜಿಯು ನಿಂಮ ಜಾಜ್ತಿ ಬಗ್ಗೆ ತಾರೀಕು 27—3—1961ಕ್ಕೆ ನ್ಯಾದೆಯಿರುವುದರಿಂದ, ಆ ಕುರಿತು ನಿಮಗೇನಾದರೂ ಆಕ್ಷೇಪಣೆಯಿದ್ದಲ್ಲಿ ಆ ದಿವಸ ಬೆಳಿಗ್ಗೆ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟುಮುಂದೆ ಹಾಜರಾಗಿ ಉದಪರಿಸಿಕೊಳ್ಳತಕ್ಕದ್ದೆಂತಲೂ, ತಪ್ಪಿದರೆ ನಿಮ್ಮನ್ನು ಏಕಪಕ್ಷಿಯ ತೀರ್ಮಾನವು ಮಾಡಿ ಮುಂದರಿಸಲಾಗುವುದೆಂತಲೂ ಕೋರ್ಟು ಹುಕುಂಪ್ರಕಾರ ಈ ಮೂಲಕ ತಿಳಿಸಲಾಗಿಯದೆ.

Sd. N. Subramanyam,
Advocate for Petitioner.
ಮೊಕ್ಕಾಂ ಪುತ್ತೂರು, ತಾ. 10-3-1961

ಸ್ಥಾಪನೆ: 1924

ದಿ ಕರ್ನಾಟಕ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಆಫೀಸು: ಮಂಗಳೂರು—3.

ಈ ಕೆಳಗಿನ ಬಡ್ಡಿದರಗಳಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು.

ಒಂದು ತಿಂಗಳಿಗೆ	ಸಾ॥ ನೇಕಡಾ	3-75	ನ.ಪೈಸೇ
ಮೂರು ತಿಂಗಳುಗಳಿಗೆ	,	4-00	,,
ಆರು ತಿಂಗಳುಗಳಿಗೆ	,,	4 25	,,
12 ತಿಂಗಳುಗಳಿಂದ23 ತಿಂಗಳುಗಳ ವರೆಗೆ	,,	4-50	,,
24 ತಿಂಗಳುಗಳಿಂದ 48 ತಿಂಗಳುಗಳ ವರೆಗೆ	,,	4 75	,,

"ಹನಿ ಡಿಪೋಸಿಟ್ಸ್" ನಲ್ಲಿ

ನಿಮ್ಮ ದೈನಂದಿನ ಉಳಿತಾಯವನ್ನು ವಿನಿಯೋಗಿಸಿರಿ.

THE KARNATAKA BANK LIMITED.

ಕಾಸ್ರಗೋಡ ಮು. ಕೋರ್ಟಿನಲ್ಲಿ

O. S. 511/59.
R. E. P. 595/1960

ವೆಂಕಟ್ರಮಣ ಕಡಂಬಳಿತ್ತಾಯ —ಅರ್ಜಿದಾರ

ಮತ್ತು

ರಾಮಕೃಷ್ಣ ಹೆಬ್ಬಾರ ಸಹಾ ರೆಸ್ಪಾಂಡೆಂಟ್ 3ನೇರೆ. ವಾಸ್ತೇವ ಹೆಬ್ಬಾರ 4ನೇರೆ. ವಾಮನ ಹೆಬ್ಬಾರ-ವಾಸುದೇವ ಹೆಬ್ಬಾರ-ಮಕ್ಕಳು ಕಾಸರಗೋಡ ತಾಲ್ಲೂಕು ಅಡೂರು II ಗ್ರಾಮದ ಕಲ್ಲಡೆ ಎಂಬಲ್ಲಿರುವವರು. ಇವರಿಗೆ ತಿಳಿಸುವದೇನೆಂದ್ರೆ—

ಮೇಲ್ಕಂಡ ಡಿಕ್ರಿ ಪ್ರಕಾರ ಬಾಕಿ ಬಹಾ ಆವೆಜಿನ ಅಸಲು ಬಗ್ಗೆ ದಾಕ್ಲು ಮಾಡಿದ ಮೇಲ್ಕಂಡ ಅಮಲ್ದಾರಿಯು ತಾರೀಕು 12_4_61 ಕ್ಕೆ ಇಟ್ಟಿರುವದ್ರಿಂದ ಆ ದಿವಸ ನೀವು ಹಾಜರಾಗದಿದ್ರೆ ನಿಮ್ಮನ್ನು ಎಕ್ಸ್‌ಪಾರ್ಟಿ ಮಾಡಿ ಇತ್ಯರ್ಥಪಡಿಸಲ್ಪಡುವುದೆಂಬ ಈ ಸಂಗ್ತಿ ಯಾ ಮೂಲ್ಕ ತಿಳಿಸೋಣಾಗಿಯದೆ—

(Sd) K.P.V.B. Ejman
Advocate for Petitioner
ಕಾಸರಗೋಡು, ತಾ. 16—3—1961

ಕಲಾಕ್ಷೇತ್ರ:

ಆಫ್ರಿಕೆಯ ಶಿಲಾ ಚಿತ್ರಗಳು

ದಕ್ಷಿಣ ಆಫ್ರಿಕೆಯಲ್ಲಿ ದೊರಿತ ಆದಿಮ ಶಿಲಾ ಚಿತ್ರಗಳು ಭುವನ ಮನೋಹರವಾಗಿವೆ. ಪ್ರಾಗೈತಿಹಾಸಿಕ ಕಾಲಕ್ಕೆ ಸೇರಿದ ಈ ಚಿತ್ರಗಳ ಬಗ್ಗೆ ಕಲಾಕ್ಷೇತ್ರದ ಸರ್ವಮಾನ್ಯ ಸಮೀಕ್ಷಕರೆನಿಸಿದ ಸರ್. ಹರ್ಬರ್ಟ್ ರೀಡ್‌ರವರ ಅಭಿಪ್ರಾಯ ಸಂಗ್ರಹವಿದು.

ದಕ್ಷಿಣ ಆಫ್ರಿಕೆ ಮತ್ತು ಸಹರಾ ಮರುಭೂಮಿ ಪ್ರದೇಶಗಳಲ್ಲಿ ಕೆಲವೊಂದು ಪ್ರಾಚೀನ ಶಿಲ ಚಿತ್ರಗಳು ದೊರಕಿದ್ದು, ಇವು ಪುರಾತತ್ವ ಪ್ರಪಂಚದಲ್ಲಿ ಒಂದು ಬೃಹತ್ ಸಮಸ್ಯೆಯನ್ನು ಮುಂದ ತಂದಿವೆ ಈ ಚಿತ್ರಗಳ ಶೈಲಿಯು ಸ್ಪೇನಿನ ಪೂರ್ವಭಾಗದಲ್ಲಿ ಲೇರಿಡಾದಿಂದ ಕಾಡಿಜ್‌ವರೆಗೆ ಲಭಿಸಿರುವ ಗುಹಾಚಿತ್ರಗಳನ್ನು ಹೋಲುವಂತಿದೆ. ಅಲ್ಲದೇ, ಶಿಲಾ ಪೂರ್ವ ಯುಗದ ಗುಹಾಚಿತ್ರಗಳಿಂದ ಇವನ್ನು ಪ್ರತ್ಯೇಕಿಸುವ ಕೆಲವೊಂದು ವೈಶಿಷ್ಟ್ಯಗಳೂ ಇವುಗಳಲ್ಲಿವೆ. ಈ ಚಿತ್ರಗಳಲ್ಲಿ ಮನುಷ್ಯನು ಏಕಾಕಿಯಾಗಿ ಚಿತ್ರಿಸಲ್ಪಟ್ಟಿಲ್ಲ; ಮನುಷ್ಯನ ಸಾಮೂಹಿಕ ಚಿತ್ರವಿದ್ದು, ಇವುಗಳ ಮೂಲಕ ಅನ್ಯ ಮನುಷ್ಯ ಹಾಗೂ ಪಶುಗಳೊಡನೆ ಆತನಿಗೆ ಸುದೃಢ ಸಂಬಂಧವಿರುವುದನ್ನು ಪ್ರದರ್ಶಿಸುವಂತಿದೆ.

ಈ ಚಿತ್ರಗಳು ಮೈಸೋಲಿಥಿಕ್ ಯುಗಕ್ಕೆ ಸೇರಿದುವೆಂಬ ಸಾಮಾನ್ಯ ನಿರ್ಣಯವನ್ನು ನಾಗರಿಕ ಜಗತ್ತು ಈಗ ಮಾಡಿದೆ. ಪ್ರೊ| ಹಿ. ಬರ್ಕಿಟರ ಅಭಿಪ್ರಾಯದಂತೆ ಈ ಕಾಲದ ಶಿಲಾ ಚಿತ್ರಕಲೆಯ ಉಗಮಸ್ಥಾನವು ಉತ್ತರ ಆಫ್ರಿಕೆಯಾಗಿದ್ದು ಅಲ್ಲಿಂದ ಈ ಶೈಲಿಯು ಉತ್ತರದಲ್ಲಿ ಸ್ಪೇನ್ ಮತ್ತು ದಕ್ಷಿಣದಲ್ಲಿ ದಕ್ಷಿಣ ಆಫ್ರಿಕೆಯ ವರೆಗೂ ಹರಡಿತು. ಏಕೆಂದರೆ, ಈ ಪ್ರದೇಶಗಳಲ್ಲಿ ಲಭ್ಯವಾದ ಚಿತ್ರಗಳಲ್ಲಿ ಸಮಾನತೆಯಿರುವುದು.

ಬುಶ್‌ಮನ್ ಎಂಬ ಆದಿಮ ಜಾತಿಯವರು ಈ ಕಲೆಯನ್ನು ದಕ್ಷಿಣ ಆಫ್ರಿಕೆಯ ಮೂಲ ಜಾತಿಗಳಲ್ಲಿ ಒಂದು. ನೀಗ್ರೊ ಮತ್ತು ಹಟೆಂಟಾಟ್ ಜನಾಂಗಗಳಿಗಿಂತ ಇದು ಭಿನ್ನವಾಗಿದೆ. ಪ್ರಾಯಃ ಶುದ್ಧ ಬುಶ್‌ಮನ್ ಜಾತಿಯವರು ಈಗ ಎಲ್ಲಿಯೂ ಇರುವುದಿಲ್ಲ. ಮಧ್ಯ ಆಫ್ರಿಕೆಯ ಪಿಗ್ಮೀ ಜಾತಿಗಳು ಹೆಚ್ಚಿನ ಮಟ್ಟಿಗೆ ಈ ಚಿತ್ರಕಲೆಯ ಜನ್ಮದಾತರ ಉತ್ತರಾಧಿಕಾರಿಗಳೆನ್ನಬಹುದು. ವಾಸ್ತವಿಕವಾಗಿ ಈ ಚಿತ್ರಕಲಾ ಪ್ರಸಾರಕ್ಕೆ ಕೈ ಹಾಕಿದವರ ವಿವರಗಳು ಅನಿಶ್ಚಿತವಿದೆ. ಈ ಜನರು ನೀಗ್ರೋಗಳಾಗಿದ್ದು ಕರಿಯ ವರ್ಣದವರು ಎಂದು ನಿಶ್ಚಿತವಾಗಿ ಹೇಳುವಂತಿಲ್ಲ. ಅವರು ಚಿತ್ರಿಸಿದ ಚಿತ್ರಗಳಿಂದ ತಿಳಿಯುವ ಕೆಲವು ತಥ್ಯಾಂಶಗಳು ನಮ್ಮನ್ನು ಅಸಮಂಜಸಗೊಳಿಸುವಂತಿವೆ.

ಈ ಶೈಲಿಯ ಲಭ್ಯಚಿತ್ರಗಳನ್ನು ಸಾಮೂಹಿಕವಾಗಿ ಅಚ್ಚು ಹಾಕಿಸುವ ಅವಕಾಶವಿನ್ನೂ ಒದಗಿಲ್ಲ. ಸ್ಪೇನ್, ಸಹರಾ ಮತ್ತು ದಕ್ಷಿಣ ಆಫ್ರಿಕೆಯ ಚಿತ್ರಗಳು ಬೇರೆ ಬೇರೆಯಾಗಿ ಸಂಕಲಿತವಾಗಿ ವಿವೇಚನೆಯೊಂದಿಗೆ ಪ್ರಕಾಶವಾಗುತ್ತಿವೆ. ದ್ವಿತೀಯ ಜಾಗತಿಕ ಯುದ್ಧಾವಧಿಯಲ್ಲಿ (೧೯೪೩ನೇ ಜನವರಿ) ಫೀಲ್ಡ್ ಮಾರ್ಶಲ್ ಸ್ಮಟ್ಸ್ ಎಂಬವನು ದಕ್ಷಿಣ ಆಫ್ರಿಕೆಯಲ್ಲಿ ಪ್ರಾಪ್ತ ಸಾಮಗ್ರಿಯ ಸರ್ವೇಕ್ಷಣೆ ಮಾಡಲು ಶ್ರೀ ಎಚಿ ಬ್ರೆಯಿಲ್ ಎಂಬವನನ್ನು ಆಮಂತ್ರಿಸಿದ್ದನು. ಕೆಲ್ಯೂಟ್ ಗಲ್‌ಬೇಕಿಯನ್ ಫೌಂಡೇಶನ್‌ನ ಸಹಾಯದಿಂದ ಒಂದು ಗ್ರಂಥಮಾಲೆಯ ಪ್ರಕಾಶನವೂ ಆ ಸಮಯದಲ್ಲಿ ಆರಂಭವಾಯಿತು

ಈ ಗ್ರಂಥಮಾಲೆಯಲ್ಲಿ ಇದುವರೆಗೆ ಮೂರು ಚಿತ್ರ ಸಂಗ್ರಹಗಳು ಹೊರಬಂದಿವೆ. ನೈಋತ್ಯ ಆಫ್ರಿಕೆಯ ನಮಿಬ ಮರುಭೂಮಿಯಲ್ಲಿರುವ ಬ್ರೆಂಡ್‌ಬರ್ಗ್ ಪರ್ವತ ಶ್ರೇಣಿಯಲ್ಲಿರುವ ಚಿತ್ರಗಳ ಕುರಿತಾಗಿ ಈ ಸಂಗ್ರಹಗಳಲ್ಲಿ ವಿವರಣೆಯಿದೆ.



ಮೇಲಿನ ಚಿತ್ರದಲ್ಲಿ ಮಹಾರಾಷ್ಟ್ರದ ವಿಶಾಲ ಎಂಬಲ್ಲಿನ ವಿಶಾಲ ಮುಖಿ ಸರ್ವ ವಿವಿಧ ಕರಜನ್ಯ[illegible] ೧೦ರ ಸಂಘದ ಸದಸ್ಯರು ಸಮುದ್ರದಲ್ಲಿ ಹಿಡಿದ ಮೀನುಗಳನ್ನು ಬಲೆಯಿಂದ ಪ್ರತ್ಯೇಕಿಸುವುದನ್ನು ಕಾಣಬಹುದು. ಇಲ್ಲಿಂದ ಮುಂದೆ ಅವನ್ನು ಶೀತ ಸಂಗ್ರಹಾಲಯಗಳಿಗೆ ಒಯ್ಯುವರು.

ಇದೀಗ ತಾನೇ ಬೆಳಕು ಕಂಡ ಮೂರನೆಯ ಸಂಗ್ರಹದಲ್ಲಿ ೧೯೧೮ರಲ್ಲಿ ಲೆಫ್ಟಿನೆಂಟ್ ಮಾನ್ ಜೋಖಮನನು ಟಿಸಿಸಾಬ ನದೀ ಕಣಿವೆಗಳಲ್ಲಿ ಕಂಡುಹಿಡಿದ ಚಿತ್ರಗಳ ವರ್ಣನೆಯಿರುವುದು. "ದಿ ವೈಟ್ ಲೇಡಿ ಆಫ್ ಬ್ರೆಡ್‌ಬರ್ಗ್" (ಬ್ರೆಡ್ ಬರ್ಗನ ಮಹಾ ಶ್ವೇತೆ) ಎಂಬ ಏಬೆಯ ಮೊದಲನೆ ಗ್ರಂಥದ ವಿಷಯಕ ಚಿತ್ರವೂ ಇದರಲ್ಲಿದೆ. ಈ ಮಹಾಶ್ವೇತೆಯ ವರ್ಣನೆಯನ್ನು ಅತ್ಯಂತ ಕಾವ್ಯಮಯ ಭಾಷೆಯಲ್ಲಿ ಏಬೆಯು ಮಾಡಿದ್ದಾನೆ. ಆದರೆ, ೧೯೫೦ರಲ್ಲಿ ಈ ಚಿತ್ರವನ್ನು ನೋಡಿದ ಡಾ| ಕುರ್ನ್‌ಹ ಎಂಬವನು ಇದು ಸ್ತ್ರೀಯ ಚಿತ್ರವೇ ಎಂಬುದರಲ್ಲಿಯೂ ಸಂದೇಹ ವ್ಯಕ್ತಪಡಿಸಿದನು ಹೇಗಿದ್ದರೂ ಆದರಲಯಾತ್ಮಕ ಸುಂದರತೆಯನ್ನು ಕಂಡು ಆತನು ಮುಗ್ಧನಾಗದೆ ಇರಲಾರದನು.

ಏಬೆ ಬ್ರೆಯಿಲ್‌ನು ಒಬ್ಬ ಮಾನವೀಯ ವಿದ್ವಾಂಸನು ಪ್ರಾಗೈತಿಹಾಸಿಕ ಚಿತ್ರಕಲೆಯ ಸಂಶೋಧನಾ ಕಾರ್ಯದಲ್ಲಿ ಆತನದು ಉಲ್ಲೇಖನೀಯ ಸೇವೆ ಆದರೂ ಆತನು ಅತಿ ಭಾವುಕನು ಆದುದರಿಂದಲೇ ಆತನು ವಿವೇಚಿಸಿದ ಶಿಲ್ಪ ಚಿತ್ರಗಳ ವರ್ಣನೆಯಲ್ಲಿ ವೈಜ್ಞಾನಿಕತೆಗಿಂತ ಕಲ್ಪನೆಯೇ ಅತ್ಯಧಿಕವಾಗಿದೆ. ವರ್ಣನಾ ಕಾರ್ಯವು ಸುಗಮವಾಗುವಂತೆ ಚಿತ್ರಬದ್ಧ ಆಕೃತಿಗಳಿಗೆ ಮತ್ತು ದೃಶ್ಯಗಳಿಗೆ ಸುಂದರ ನಾಮಧೇಯಗಳನ್ನಿಡುವುದು ಉಚಿತವೇ. ಆದರೆ, ಏಬೆ ಬ್ರೆಯಿಲನು ವರ್ಣನಾತ್ಮಕ ನಾಮಕರಣದಿಂದಲೇ ಪ್ರಸನ್ನನಾಗುತ್ತಿದ್ದನು; ಅವನು ಚಿತ್ರಗಳ ಬಗ್ಗೆ ಕಾಲ್ಪನಿಕ ವ್ಯಾಖ್ಯೆಗಳನ್ನು ಮಾಡುತಿದ್ದನು. ಈ ವ್ಯಾಖ್ಯೆಗಳು ಭ್ರಮಾತ್ಮಕವೆನಿಸಲಾರವಾದರೂ ದ್ವಿವಿಧಾತ್ಮಕವಾಗಿವೆ. 'ಓಸಿಸಾಬ್ ಘಾಟಿಯ ಒಂದು ಚಿತ್ರವಾದ ಸ್ತ್ರೀಯರ ಮೆರವಣಿಗೆ' ಎಂಬುದರ ಬಗ್ಗೆ ಈತನು ಮಾಡಿರುವ ವಿವರಣೆಯೇ ಇದಕ್ಕೊಂದು ಉದಾಹರಣೆ.

ಇತರ ಚಿತ್ರಗಳಲ್ಲೂ ಏಬೆಯು ಇದೇ ರೀತಿಯ ಕಲ್ಪನೆ ಮತ್ತು ಭಾವುಗಳ ಕತೆಗಳಿಗೆ ಶರಣು ಬಂದಿದ್ದಾನೆ. ಬಲವಾಗಿ ಕೈ ಅಲ್ಲಾಡಿಸುವ ಕೆಲವು ಮನುಷ್ಯರ ಒಂದು ಚಿತ್ರವನ್ನು ಆತ "ವಿವಾದ ಶೀಲ" ಎಂದು ಕರೆದಿದ್ದಾನೆ! ದೈನಿಕ ಜೀವನದ ಘಟನೆಯೊಂದರ ವಿನೋದ ಪೂರ್ಣ ಚಿತ್ರಣ' ಎಂದಿದಕ್ಕೆ ವ್ಯಾಖ್ಯೆ ಮಾಡಿದ್ದಾನೆ. ಆವನ ಅಭಿಪ್ರಾಯದಂತೆ ಈ ಚಿತ್ರದಲ್ಲಿ ಒಬ್ಬನು ತೀವ್ರಾವೇಶದಲ್ಲಿ ಜೋರಾಗಿ ಕೈಯಾಡಿಸುತ್ತ ಬೈಗಳನ್ನು ಗದರಿಕೆಯನ್ನೂ ಸಂಕೇತಿಸುತ್ತಾನೆ ಅದರೊಡನಿರುವ ಒಂದು ಸ್ತ್ರೀ ಚಿತ್ರವು ಯಾವುದೇ ಚಿಂತೆಯನ್ನು ತೋರಿಸಿಕೊಳ್ಳದೆ ಅದನ್ನು ಕೇಳುತಿದ್ದಾಳೆ ಮನೆಯ ಯಜಮಾನನು ಮೆಲ್ಲನೆ ಅಲ್ಲಿಗೆ ಆಗಮಿಸುತ್ತಾನೆ ಮತ್ತೊಬ್ಬ ಕೈಯಾಡಿಸುತ್ತಿರುವ ವ್ಯಕ್ತಿಯು ವಿವಾದದ ಕಾರಣವನ್ನು ತಿಳಿಸುತ್ತಾನೆ ಅಷ್ಟರಲ್ಲಿ ಇನ್ನೊಬ್ಬನು ಮನೆಯ ಮಾಲಿಕನ ಕ್ಷಮೆಯಾಚಿಸುತ್ತಾನೆ.

ಈ ವ್ಯಾಖ್ಯೆಯು ಕಾಲ್ಪನಿಕ ಮತ್ತು ನಿರಾಧಾರವೆಂದು ಮಾತ್ರ ಆಕ್ಷೇಪವಲ್ಲ. ಪ್ರಾಗೈತಿಹಾಸಿಕ ಕಲೆಯ ಪ್ರಕೃತಿಯೊಡನೆ ಈ ವ್ಯಾಖ್ಯೆಗಳ ತಾಳಮೇಳವಿಲ್ಲವೆಂಬುದೇ ವಿಶೇಷವಾಗಿ ಬಂದಿರುವ ಆಪತ್ತು ಈ ಚಿತ್ರಗಳ ಕಾಲದ ಜನತೆಯ ಆಚಾರ ವಿಚಾರ, ರೀತಿರಿವಾಜುಗಳ ಬಗ್ಗೆ ನಿಶ್ಚಿತ ಕಲ್ಪನೆಯು ನಮಗೆ ದೊರೆಯುವ ವರೆಗೆ ಅವುಗಳ ವ್ಯಾಖ್ಯೆಯನ್ನು ಯಾವುದೇ ರೀತಿಯಲ್ಲಿ ಮಾಡುವುದು ತಪ್ಪಲ್ಲವೆಂದು ಏಬೆಯ ಸಮರ್ಥಕರು ವಾದಿಸಬಹುದು. ಸತ್ಯಕ್ಕೆ ಈ ವ್ಯಾಖ್ಯೆ—ವಿವರಣೆಯೇ ಪ್ರಾಮಾಣಿಕವೆಂದು ಒಪ್ಪಿಕೊಳ್ಳಬಹುದು.

ಆದರೆ ಬುಶ್‌ಮನ್ ಜನಾಂಗದ ಕುರಿತಾದ ಕೆಲವು ವಿಚಾರಗಳು ಈಗ ನಿಶ್ಚಿತವಾಗಿ ತಿಳಿದು ಬಂದಿವೆ. ಇವರು ಜೀವನವನ್ನು ಜಾಮುನೆಂದು ತಿಳಿಯುತ್ತಿದ್ದರು. ಇದರಿಂದ ಡಾ| ಕುನ್ಹರು ತೋರಿಸಿದಂತೆ ಇವರ ಚಿತ್ರಗಳು ಪ್ರಕೃತಿಪರವಾಗಿವೆಯೆನ್ನುವುದು. ಸಾಧ್ಯವಿಲ್ಲ. ಬು

(೭ನೇ ಪುಟ ನೋಡಿರಿ)

ಉಡುಪಿ ಡಿ. ಮು. ಕೋರ್ಟಿನಲ್ಲಿ

ಸ್ಮಾಲ ನಂಬ್ರ 15/1961

ದಿ. ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಉಡುಪಿ — ವಾದಿ.

ಮತ್ತು

R. ದೇವದಾಸ ರಾವ್ ಕೂಡಾ — ಪ್ರತಿವಾದಿರು.

ಇವರೊಳಗೆ

1ನೇ ಪ್ರತಿವಾದಿ— R. ದೇವದಾಸ ರಾವ್, ವಿ. ರಾಮಚಂದ್ರ ಪೈಗಳ ಮಗ— ದಿ. ಶಾಂಗಾಳ ನಾಯಕ್ ಬೇಂಕಿನಲ್ಲಿ ಕ್ಲಾರ್ಕ್— ಉಡುಪಿ ಕಸಬಾ,

ಸದರಿ 1ನೇ ಪ್ರತಿವಾದಿಗೆ—

ಪ್ರತಿವಾದಿರು ವಾದಿಗೆ ತಾರೀಕು 30—11—59ರಲ್ಲಿ ರೂಪಾಯಿ 200/-ಕ್ಕೆ ಬರಕೊಟ್ಟ ಡಿಮಾಂಡ್ ನೋಟಿನ ಅಸಲು ಬಾಕಿ ಮತ್ತು ಬಡ್ಡಿ ಕೂಡಾ ರೂಪಾಯಿ 187-64ಕ್ಕೆ ವಾದಿಯು ಪ್ರತಿವಾದಿರ ಮೇಲೆ ಮಾಡಿದ ಸದರಿ ವ್ಯಾಜ್ಯವು ತಾರೀಕು 31-3-61ಕ್ಕೆ ತನಿಖೆ ಬಗ್ಗೆ ಇಟ್ಟಿದೆ. ಆ ದಿವಸ ಸದರಿ 1ನೇ ಪ್ರತಿವಾದಿಯು ಸ್ವತಹಾ ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಉದಹರಿಸದೆಯಿದ್ರೆ ಆತನ ಗೈರ್ ಹಾಜರಿಯಿಂದ ಸದರಿ ವ್ಯಾಜ್ಯವು ತೀರ್ಮಾನಿಸಲ್ಪಡುವದೆಂದು ಸದರಿ 1ನೇ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸೋಣಾಗಿಯದೆ

M Damodar Kamath,
Advocate for Pltf

ಉಡುಪಿ, ತಾರೀಕು 17—3—1961.

ದಿ ವಿಜಯ ಬೇಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ: 1931

ರಿಜಿಸ್ಟರ್ಡ್ ಆಫೀಸು:
ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು-3, ಸೌತ್ ಕೆನರಾ.

ಕಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡ 5ರ ವರೆಗೆ ಹೆಚ್ಚಿಸಲಾಗಿದೆ

ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ಪಡೆಯುವ ಡಿಪೋಸಿಟುಗಳನ್ನು (Calls Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸೋಣಾಗುತ್ತದೆ

ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ

ಸಂಪತ್ತೆಂಬುದು ಬಿಸಿಲ್ಗುದುರೆ. ಅದನ್ನು ನಾವು ಹಿಂಬಾಲಿಸುತ್ತ ಮುಂಬರಿದರೆ, ನಮ್ಮಿಂದದು ದೂರದೂರಕ್ಕೋಡುವುದು. ಅದಕ್ಕೆ ವಿಮುಖರಾಗಿ ನಡೆದರೆ, ನಮ್ಮ ಬೆಂಬಿಡದೆ ಬರುವುದು.

ನವಯುಗ

ವರುಷ	ಉಡುಪಿ	ವಾರ
೪೦	೨೩-೩-'೬೧	೨೪

ಅಮೆರಿಕೆಯ ನಿಲವು

ವಸಾಹತುವಾದದ ಕಡೆಗೆ ಅನಾಸಕ್ತಿಯು ಬೆಳೆದು ಬರುತ್ತಿರುವ ಈ ಕಾಲದಲ್ಲಿಯೂ ಕೆಲವು ಯುರೋಪಿಯನ್ ರಾಷ್ಟ್ರಗಳು ವಸಾಹತುಗಳನ್ನು ಗಟ್ಟಿಯಾಗಿ ತಮ್ಮ ಕಪಿಮುಷ್ಟಿಯಲ್ಲಿಟ್ಟುಕೊಳ್ಳಲು ಬೇಕಾದ ಭಗೀರಥ ಪ್ರಯತ್ನವನ್ನು ಮಾಡುತ್ತಿವೆ. ಇಂತಹ ಸಾಮ್ರಾಜ್ಯಶಾಹಿ ರಾಷ್ಟ್ರಗಳಲ್ಲಿ ಪೋರ್ಚುಗಾಲವು ಒಂದು. ಅಲ್ಲಿ ಕಳೆದ ಮೂವತ್ತು ವರ್ಷಗಳಿಂದಲೂ ತನ್ನ ಅಧಿಕಾರವನ್ನು ಜಮಾಯಿಸಿ, ನಾಗರಿಕ ಜಗತ್ತಿನಲ್ಲಿಯೂ ಒಂದು 'ಅಜ್ಞಾನ'ದ ತವರೂರನ್ನು ಸ್ಥಾಪಿಸುತ್ತಿರುವ ಸಾಲಿಝಾರರ ದಬ್ಬಾಳಿಕೆ ನಡೆದೇ ಇದೆ. ಸ್ವಾಭಾವಿಕವಾಗಿ ಅನೂನವೀರ್ಯತೆಯ ಕೈವಾರಿಗಳಾದ ಸಾಲಿಝಾರರ ಆಡಳಿತೆಯಲ್ಲಿ ವಸಾಹತುಗಳ ನಾಗರಿಕರು ಮೂಲಭೂತ ಮಾನವಾಧಿಕಾರಗಳಿಂದಲೂ ವಂಚಿತರಾಗಿರುವುದು ಮಾತ್ರವಲ್ಲ, ಸ್ವತಃ ಪೋರ್ಚುಗೀಸ ಜನತೆಯೂ ಪೌರಾಧಿಕಾರಗಳನ್ನು ಕಳೆಕೊಂಡಿದ್ದಾರೆ. ತನ್ನ ರಾಷ್ಟ್ರದ, ತನ್ನ ವಸಾಹತು ನಿವಾಸಿಗಳ ರಕ್ತ ಹೀರಿಯೇ ಬೆಳೆದು ಬಂದಿರುವ ಸಾಲಝಾರರು ಭಾರತದಲ್ಲಿನ ಗೋವೆಯು ಕೂಡ ಪೋರ್ಚುಗಾಲದ ಒಂದು ಪ್ರಾಂತ್ಯವೆಂಬ ತತ್ವವನ್ನು ಸಾರಿದ್ದಾರೆ. ಕೆಲವು ವರ್ಷಗಳ ಹಿಂದೆ ಅಮೆರಿಕೆಯ ರಾಜ್ಯಾಂಗ ಕಾರ್ಯದರ್ಶಿಯಾಗಿದ್ದು ಸದ್ಯ ದಿವಂಗತರಾಗಿರುವ ಡಲ್ಲೆಸರೂ ಈ ವಾದಕ್ಕೆ ಪುಷ್ಟಿಯಿತ್ತಿದ್ದರು. ಅಮೆರಿಕೆಯ ಪ್ರಭಾವವು ವಿಶ್ವರಾಜಕಾರಣದ ಮೇಲೆ ಸಾಕಷ್ಟು ಪರಿಣಾಮಕಾರಿಯಾಗಿ ಬೀಳುವುದರಿಂದ ಆದರ ಮಾತಿಗೊಂದು ಬೆಲೆಯಿತ್ತು, ಇಂದಿಗೂ ಇದೆ.

ಅಮೆರಿಕೆಯಲ್ಲಿನ ಪದಾಧಿಕಾರಿಗಳಲ್ಲಿ ತೀವ್ರ ಪರಿವರ್ತನೆಗೊಂಡುದರೊಡನೆ ಅದರ ನೀತಿಯಲ್ಲೂ ಬದಲಾವಣೆಯಾದುದು ಗಮನೀಯವಿದೆ. ಈಗಿನ ಅಮೆರಿಕನ್ ಅಧ್ಯಕ್ಷ ಶ್ರೀ ಕೆನ್ನೆಡಿಯವರು ಹಾಗೂ ಅವರ ಸರಕಾರದ ರಾಜ್ಯಾಂಗ ಕಾರ್ಯದರ್ಶಿ ಶ್ರೀ ಸ್ಟಿವನ್ಸನರು ವಸಾಹತುವಾದದ ಬಗ್ಗೆ ಅಪ್ರಿಯವಾದ ಮಾತುಗಳನ್ನು ಆಡಿದ್ದಾರೆ. ಈ ಮಾತುಗಳು ಅಮೆರಿಕೆಯ ನೀತಿಯನ್ನು ಹೊರಗೆಡಹುತ್ತವೆ. ಶ್ರೀ ಕೆನ್ನೆಡಿಯವರ ಸಂಚಾರಿ ರಾಯಭಾರಿ ಶ್ರೀ ಅವೆರಿಲ್ ಹೆರಿಮನ್‌ರವರು ಈಗ ಭಾರತದಲ್ಲಿದ್ದಾರೆ. ಅವರು ಪ್ರಧಾನಿ ನೆಹರುರವರಿಗೊಂದು ನೂತನ ಸಂದೇಶವನ್ನು ಅಮೆರಿಕನ್ ಅಧ್ಯಕ್ಷರಿಂದ ತಂದಿರುವುದಾಗಿ ಹೇಳಿದ್ದು, ಇಷ್ಟರಲ್ಲಿಯೇ ಅದನ್ನು ಅವರಿಗೆ ಒಪ್ಪಿಸಿದ್ದಾರೆ. ಇದರಲ್ಲಿ ಅಡಕವಾದ ವಿಷಯಗಳನ್ನು ಅಲ್ಲಿಯೇ ಬಿಟ್ಟುಬಿಡಬಹುದಾದರೂ ಶ್ರೀ ಹೆರಿಮನರು ಭಾರತದಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳಲ್ಲಿ ಎರಡು ಅತಿ ಪ್ರಧಾನವಾಗಿವೆ. ವಸಾಹತುಗಳಿಗೆ ಸ್ವಯಂ ನಿರ್ಣಯಾಧಿಕಾರವನ್ನು ಕೊಡಬೇಕು ಎಂಬ ವಾಸ್ತವಿಕ ಹಾಗೂ ನ್ಯಾಯೋಚಿತ ವಾದವನ್ನು ಅಮೆರಿಕೆಯು ಈಗ ಮುಂದಿರಿಸಿರುವುದು ಸಲ್ಲಕ್ಷಣವೆನ್ನಬೇಕಾಗಿದೆ. ಐಸನ್‌ಹಾವರ್ ಮತ್ತು ಕೆನ್ನೆಡಿಯವರ ನೀತಿಯಲ್ಲಿರುವ ಆಕಾಶ—ಪಾತಾಳಗಳಷ್ಟು ಅಂತರವನ್ನು ನಾವು ಮನವರಿಕೆ ಮಾಡಿಕೊಳ್ಳದಿರುವುದು ಸಾಧ್ಯವಿಲ್ಲ. ಗೋವೆಯ ಭವಿಷ್ಯವನ್ನು ಗೋವಾಂತಕರೇ ನಿರ್ಧರಿಸಬೇಕು. ಇವರು ಖಂಡಿತವಾಗಿಯೂ ಭಾರತದಲ್ಲಿ ಸೇರಿಕೊಳ್ಳಲು ಬಯಸುವರೆಂಬುದು ಸೂರ್ಯನಡಿಯ ಸತ್ಯ. ಇದೇ ರೀತಿಯಲ್ಲಿ ಚೀನವು ಭಾರತದ ಮೇಲೆ ಆಕ್ರಮಣ ನಡೆಸಿದೆ ಎಂಬುದನ್ನೂ ಇವರು ಇನ್ನೊಮ್ಮೆ ಪುನರುಚ್ಚರಿಸಿದರು. ಈ ಬಗ್ಗೆ ಭಾರತದ ಕಡೆಗೆ ಅಮೆರಿಕೆಯ ಒಲವು ಈ ಮೊದಲೇ ಇದ್ದಿತ್ತಾದುದರಿಂದ ಕೆನ್ನೆಡಿಯವರು ಹೊಸತನ್ನಾಡಿಸಿದಂತಾಗಲಿಲ್ಲವೆಂಬುದೇನೋ ನಿಜವೇ. ಆದರೂ ಅಮೆರಿಕೆಯು ಭಾರತದ ಕಡೆಗೆ ಅನುಸರಿಸಿದ ನೀತಿಯೇನೆಂಬುದನ್ನು ನಾವು ಸುಸ್ಪಷ್ಟವಾಗಿ ಅರಿತುಕೊಳ್ಳುವಂತಾಯಿತು. ಅಮೆರಿಕೆಯ ಹೊಸ ಸರಕಾರದ ಸಹಾನುಭೂತಿ ಭಾರತಕ್ಕಿದೆಯೆಂಬುದರಲ್ಲಿ ಇನ್ನು ಸಂದೇಹಕ್ಕೆಡೆಯಿಲ್ಲ.

ಅಮೆರಿಕೆಯ ಅಭಿಪ್ರಾಯವೊಂದನ್ನು ಕಟ್ಟಿಕೊಂಡು ಮಾಡುವುದೇನು ಎನ್ನಬಹುದು. ಪೋರ್ಚುಗಾಲದ ಬೆಂಬಲಿಗರೂ ಅದರ ಬೆನ್ನು ಚಪ್ಪರಿಸುವವರೂ ಬಹಳ ಮಂದಿ ಇದ್ದಾರೆ. ಆದರೂ ಅಮೆರಿಕೆಯ ಒಲವು ಅವರಿಂದ ದೂರವಾದುದು ಗಮನಾರ್ಹವಿದೆ. ವಸಾಹತುವಾದಕ್ಕೆ ದಿನದಿಂದ ದಿನಕ್ಕೆ ಪ್ರತಿರೋಧಾಭಿಪ್ರಾಯವು ಬೆಳೆಯುವುದರ ನಿದರ್ಶನವಿದು ಎನ್ನಬಹುದು. ಹೀಗೆಯೇ ಇಂದಿನ ವಿಶ್ವವಾಣಿಗೆ ಒಗ್ಗೊಟ್ಟು ವಿಶ್ವದಲ್ಲಿ ವಸಾಹತುವಾದವು ಎಲ್ಲ ರಾಷ್ಟ್ರಗಳ ಭರ್ತ್ಸನೆಗೆ ಗುರಿಯಾಗುವ ಕಾಲ ನಿಕಟವಾಗುತ್ತ ಬರುತ್ತಿರುವುದರ ಮುನ್ಸೂಚನೆ ಕೆನ್ನೆಡಿಯವರ ಪರಿವರ್ತಿತ ನೀತಿಯೆಂದು ಹೇಳಬಹುದು. ಗೋವೆ ಮಾತ್ರವಲ್ಲ; ಎಲ್ಲ ವಸಾಹತುಗಳೂ ತಮ್ಮ ನಿರಂಕುಶ ಪ್ರಭುಗಳ ಮುಂಗಮುಷ್ಟಿಯಿಂದ ಬಿಡುಗಡೆ ಹೊಂದುವಂತೆ ಅಮೆರಿಕೆ ಹಾಗೂ ಬ್ರಿಟನ್ ಮೊದಲಾದ ಮಹಾರಾಷ್ಟ್ರಗಳು ಪ್ರಯತ್ನಿಸಲಿ; ಅಲ್ಲಿ ನವೆಯುತ್ತ ಪಶು ಜೀವನ ನಡೆಸುವ ನಾಗರಿಕರ ವಿಮೋಚನೆಯಾಗುವಂತಾಗಲಿ.

ಶಿಕ್ಷಕರ ಗೋಳು

ದಮಡಿ ಆದಾಯವಿಲ್ಲದ ಖಾತೆ ಸರಕಾರದಲ್ಲಿರುವುದಾದರೆ ಅದು ಶಿಕ್ಷಣ ವಿಭಾಗವೊಂದೇ. ಇದರಲ್ಲಿ ಕೋಟಿಗಟ್ಟಲೆಯಲ್ಲಿ ಹಣ ವೆಚ್ಚವಾಗುವುದು ಮಾತ್ರವೇ ತೋರುವುದು. ಎಂತಲೇ ಈ ವಿಭಾಗದಲ್ಲಿ ದುಡಿಯುತ್ತಿರುವ ನೌಕರರಿಗೂ ಒಂದು ಕ್ರಮಬದ್ಧವಾದ ರೀತಿಯಲ್ಲಿ ಸಂಬಳ ಬಟವಾಡೆ ಆಗುವುದಿಲ್ಲ. ಈಗ್ಗೆ ಒಂದು—ಎರಡು ತಿಂಗಳುಗಳಿಂದ ಮಾಜಿ ಜಿಲ್ಲಾ ಬೋರ್ಡುಗಳ ಆಡಳಿತೆಯಲ್ಲಿರುವ ಶಾಲೆಗಳ ಶಿಕ್ಷಕರಿಗೆ ವೇತನ ಬಟವಾಡೆಯಾಗಿಲ್ಲವೆಂಬ ದೂರು ದಿನನಿತ್ಯವೆಂಬಂತೆ ಕೇಳಿ ಬರುತ್ತಿದೆ. ಸ್ವಾವಲಂಬನದ ಪಾಠವನ್ನು ಕಲಿಸುವ ಅಧ್ಯಾಪಕನು ತನ್ನ ಸಂಸಾರವನ್ನು ಸಾಗಿಸುವುದಕ್ಕಾಗಿ ಊರ ಸಾಹುಕಾರರ, ವರ್ತಕರ ಶರಣುಹೋಗಿ ತನ್ನತನವನ್ನು ಬದಿಗಿಟ್ಟು ಅಂಗಲಾಚಿ ಕೈಚಾಚುವಂತಹ ಸಂದರ್ಭವನ್ನು ಒದಗಿಸಿ, ಅವರಿಂದ ಸ್ವಾವಲಂಬನ, ಆತ್ಮಗೌರವ— ಆತ್ಮಪ್ರತ್ಯಯಗಳ ಶಿಷ್ಟಾಚಾರಗಳನ್ನು ಮಕ್ಕಳಿಗೆ ಉಪದೇಶಿಸಿ, ಆದರ್ಶ ನಾಗರಿಕರಾಗಿಸುವ ತನ್ನ ಗುರಿಯನ್ನು ಸರಕಾರ ಹೇಗೆ ಸಾಧಿಸಿಕೊಳ್ಳಬಹುದೆಂದು ಸ್ವಯಂ ಸರಕಾರ—ಹಾಗೆಯೇ ಸಂಬಂಧಪಟ್ಟವರು ತೀವ್ರ ಯೋಚಿಸಬೇಕಾದ ವಿಚಾರ. ಉಪದೇಶವನ್ನೂ ಉಪದ್ರವನ್ನೂ ಕೊಡುವಷ್ಟು ಸುಲಭವಾಗಿ ಧಾರಾಳವಾಗಿ ಬೇರೇನನ್ನೂ ಕೊಡಲಾರದ ಪರಿಸ್ಥಿತಿಯಲ್ಲಿ ಮೇಲಧಿಕಾರಿಗಳೂ ಸರಕಾರವು ಇರುವುದಲ್ಲದೆ, ಶಿಕ್ಷಕರ ನ್ಯಾಯವಾದ ಬೇಡಿಕೆಗಳತ್ತ ಎಳ್ಳಷ್ಟೂ ಗಮನವಿತ್ತಂತೆ ತೋರುವುದಿಲ್ಲ. ಮುಖ್ಯವಾಗಿ ವೇತನವನ್ನು ಒಂದು ನಿಶ್ಚಿತ ಕ್ರಮದಲ್ಲಿ ಸುವ್ಯವಸ್ಥಿತವಾಗಿ ಅಧ್ಯಾಪಕರಿಗೆ ಮುಟ್ಟಿಸುವ ವ್ಯವಸ್ಥೆ ಮಾಡದಿರಲು ಮೂಲ ಕಾರಣವಾದ ರಾಜ್ಯ ಸರಕಾರವು ಪಂಚವಾರ್ಷಿಕ ಯೋಜನೆಗಳಲ್ಲಿ ಅನಿವಾರ್ಯ ಉಚಿತ ಶಿಕ್ಷಣ ಎಂದು ಮುಂತಾದ ಆದರ್ಶಗಳನ್ನು ಯಶಸ್ವಿಯಾಗಿ ಹೇಗೆ ನಿರ್ವಹಿಸುವುದೋ ತಿಳಿಯುವುದಿಲ್ಲ; ಸರಕಾರವು ಶಿಕ್ಷಣರಂಗದ ಪಾವಿತ್ರ್ಯವನ್ನು ಕೊಳಕಿನಿಂದ ಔದಾಸೀನ್ಯದಿಂದ ದೂರವಿರಿಸಿ, ಅದರಲ್ಲಿ ನವಶಕ್ತಿ, ನವಚೇತನ ತುಂಬಿ ಹೊಸ ರಕ್ತ ಹರಿಸಲು ಬಯಸುವುದಾದರೆ, ಶಿಕ್ಷಣರಂಗದ ಕಾರ್ಯಕಲಾಪಗಳು ಯಶಸ್ವಿಯಾಗಬೇಕಾದರೆ, ಅದರಲ್ಲಿ ದುಡಿಯುವ ಎಲ್ಲಾ ಆಡಳಿತೆಯ ನೌಕರರಿಗೆ ಕ್ರಮಬದ್ಧವಾಗಿ ನಿಶ್ಚಿತರೂಪದಲ್ಲಿ ವೇತನ ದೊರೆಯುವ ವ್ಯವಸ್ಥೆಯನ್ನು ಅನಿವಾರ್ಯವಾಗಿ ಮಾಡಬೇಕು ಅಲ್ಲದೆ "ನೀ ಕುಟ್ಟಿಲ್ಲ, ನಾ ಉಟ್ಟಿಲ್ಲ"ವೆಂಬ ಗಾದೆಯ ಮಾತನ್ನು ಅನ್ವರ್ಥಗೊಳಿಸಬಾರದು. ಶಿಕ್ಷಕರ ಗೌರವಾದರಗಳ, ಆತ್ಮಪ್ರತ್ಯಯದ ಅವರ ಜೀವನ ಮರಣದ ಪ್ರಶ್ನೆಯಿದಾದುದರಿಂದ ಇತ್ತ ಅವಶ್ಯ ಗಮನ ಹರಿಸಬೇಕು. ಮುಂದಕ್ಕಾದರೂ ಈ ಎಲ್ಲಾ ಕೂಗು—ಮೊರೆಗಳಿಗೆ ಕಾರಣವಾಗಿರುವ ಅವ್ಯವಸ್ಥೆ ತಪ್ಪಿ ಒಂದು ಸುವ್ಯವಸ್ಥೆ ರೂಪುಗೊಳ್ಳುವಂತೆ ಶಿಕ್ಷಣ ವಿಭಾಗ ಮುಂಜಾಗ್ರತೆ ವಹಿಸಬೇಕು. ಇಲ್ಲವಾದರೆ, ಸಹನೆ ಮೀರಿದ ಅಧ್ಯಾಪಕ ವೃಂದದವರೂ ಗಂಭೀರವಾದ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಅನಿವಾರ್ಯವೆನಿಸಬಹುದು— ಇಂತಹ ಅಶುಭಗಳು ದೂರಸರಿಯುವಂತಾಗಲಿ.

ಸಂಕ್ಷಿಪ್ತ ಸುದ್ದಿಗಳು

ಅಧಿಕಾರ ಯಾರಿಗೆ ಬೇಡ?

ನೆಹರು ನಂತರ ಯಾರು ಎಂಬ ಪ್ರಶ್ನೆ ಆಗೊಮ್ಮೆ ಈಗೊಮ್ಮೆ ನಾಗರಿಕ ಭಾರತೀಯ ಜನತೆಯಲ್ಲಿ ಮಿಂಚಿ ಮಾಯವಾಗುತ್ತಿದೆ— ಯಾವ ನಿರ್ಧಾರವಾಗದೇನೇ ಆದರೆ, ನೆಹರು ಇರುವಾಗಲೇ ತಾನು—ತಾನು ಎಂದು ಮೇಲಾಟವಾಡುವವರೂ ಇದ್ದಾರೆಂದು ಈಗಷ್ಟೇ ತಿಳಿಯಿತು. ಕಾಸಿಲ್ಲದವನಿಗೆ ಕಾಸಿನ ಚಿಂತೆ, ಕಾಸಿದ್ದವನಿಗೆ ರೂಪಾಯಿಯ ಚಿಂತೆಯೆಂಬಂತೆ ನಮ್ಮ ನಾಯಕರಲ್ಲಿನ ಮಹತ್ವಾಕಾಂಕ್ಷೆ ಈಗ ಪ್ರಕಟವಾಯಿತು. ಪಂಡಿತ ನೆಹರು ಕೆಲವು ದಿನಗಳ ಮಟ್ಟಿಗೆ ಲಂಡನ್ನಿಗೆ ತೆರಳಿದ ಸಂದರ್ಭ, ನಂತರ ಅನಾರೋಗ್ಯದಿಂದಾಗಿ ಮುರಾರ್ಜಿ ದೇಸಾಯಿಯವರಿಗೆ ತನ್ನ ಕೆಲವೊಂದು ಅಧಿಕಾರಗಳನ್ನು ಇತ್ತಿದ್ದು ಇದರ ಬಗ್ಗೆ ಭವಿಷ್ಯದ ಭವಿಷ್ಯವನ್ನು ಭಾವಿಸಿ ಜಗಜೀವನರಾಂ ಮತ್ತವರ ಸಮರ್ಥಕರು ಅಸಮಾಧಾನ ವ್ಯಕ್ತಪಡಿಸಿದರು. ಕೇವಲ ತಾತ್ಕಾಲಿಕ ವ್ಯವಸ್ಥೆಯ ಬಗ್ಗೆ ಇಷ್ಟೊಂದು ಭಿನ್ನಾಭಿಪ್ರಾಯಪಟ್ಟವರು ಇನ್ನು ಮುಂದೇನು ಮಾಡಲಾರರ? ಅಧಿಕಾರವೆಂದರೆ ಹಾಗೇ ಅಲ್ಲವೆ?

ಕಾಂಗೋವಿನ ಆಡಳಿತ

ವಿಶ್ವಶಾಂತಿದೂತ ನೆಹರು ದೇಶ-ವಿದೇಶಗಳ ಬಗ್ಗೆ ಏಕ ದೃಷ್ಟಿ ಬೀರುವ ಸಜ್ಜನರು. ಕೆಲವೊಮ್ಮೆ ಈ ಸಜ್ಜನಿಕೆ ನಗೆಗೀಡಾಗಲೂಬಹುದು; ವಿಪರೀತಕ್ಕಿಟ್ಟುಕೊಳ್ಳಲೂಬಹುದು. ಕಾಂಗೋವಿನಲ್ಲಿ ನಡೆದಿರುವ ಅಧಿಕಾರದ ಆಂತರಿಕ ಹೋರಾಟಕ್ಕೆ ಅವರು ಒಂದು ಯೋಜನೆಯನ್ನು ಮುಂದಿಟ್ಟಿದ್ದಾರೆ. ಕಾಮನ್‌ವೆಲ್ತ್ ಪ್ರಧಾನಿ ಪರಿಷತ್ತು ಇದನ್ನು ಸರ್ವಾನುಮತದಿಂದ ಸ್ವೀಕರಿಸಿತು. ಯೋಜನೆಯು ಕರಡು ರೂಪದಲ್ಲಿದ್ದಾಗಲೇ ಅಮೆರಿಕೆಯೂ ಇದಕ್ಕೆ ತನ್ನ ಒಪ್ಪಿಗೆಯನ್ನು ಸೂಚಿಸಿತ್ತೆಂದು ತಿಳಿಯುತ್ತದೆ. ಭಾರತದಲ್ಲಿರುವಂತೆ ಫೆಡರಲ್ ಮಾದರಿಯ ಸರಕಾರವನ್ನು ಕಾಂಗೋವಿನಲ್ಲಿ ರಚಿಸಬೇಕು; ಕೇಂದ್ರ ಮತ್ತು ಪ್ರಾದೇಶಿಕ ಸರಕಾರಗಳ ಮೂಲಕ ಅಲ್ಲಿ ರಾಜ್ಯಭಾರ ನಡೆಯಬೇಕು ಎಂದು ಮುಂತಾಗಿ ಈ ಯೋಜನೆಯಲ್ಲಿದೆಯಂತೆ. ಭಾರತದಲ್ಲಿ ದ್ರಾವಿಡ ಕಜಗಂ ಹುಟ್ಟಿಕೊಂಡಿರುವುದನ್ನು ಶ್ರೀ ನೆಹರು ಈ ಯೋಜನೆ ರೂಪಿಸುವಾಗ ಮರೆತಿರಲಾರರು.

ಮಾತು ಮೀರದ ಜನತೆ

ಭಾರತದಲ್ಲಿ ನೆಹರು ಇದ್ದಂತೆ ಪಾಕಿಸ್ತಾನದಲ್ಲಿ ತಾನು ಎಂದು ತಿಳಿದುಕೊಂಡ ಅಧ್ಯಕ್ಷ ಅಯೂಬ ಖಾನರು ಭಾರತ—ಪಾಕಿಸ್ತಾನಗಳ ನಡುವಣ ಸಮಸ್ಯೆಗಳನ್ನು ಬೇಗನೆ ಪರಿಹರಿಸಲು ಉತ್ಸಾಹ ತೋರಿಸಿದ್ದಾರೆ. ಗಂಗಾನದಿಯ ನೀರನ್ನು ಹಂಚಿಕೊಳ್ಳುವ ಕುರಿತಾಗಿ ವ್ಯಾಪಕ ತಳಹದಿಯ ಪರಿಶೀಲನೆ ನಡೆಸಲು ಉಭಯ ರಾಷ್ಟ್ರ ತಜ್ಞರ ಸಮಿತಿಯನ್ನು ನೇಮಿಸುವುದು ಇದೀಗ ನಿರ್ಧಾರವೆಂಬಂತಾಗಿದೆ. ಕಾಶ್ಮೀರದ ಪ್ರಶ್ನೆಯನ್ನೂ ಬಗೆಹರಿಸುವುದು ಇಕ್ಕಡೆಯವರಿಗೂ ಕ್ಷೇಮ ಮತ್ತು ಹಿತಕರವಾದುದರಿಂದ ಅದಕ್ಕೆ ಈಗಲೇ ಸರಿಯಾದ ಸಂದರ್ಭವೆನ್ನುತ್ತಾರೆ ಅವರು. ಪಾಕಿಸ್ತಾನದ ಜನತೆ ತನ್ನ ಮಾತನ್ನು ಅಲ್ಲಗಳೆಯಲಾರದು ಎಂಬ ವಿಶ್ವಾಸ ಅವರಿಗಿದೆ. ಪಾಕ್ ಜನತೆ ತುಸುವಾದರೂ ಸುಖಪ್ರಸನ್ನವಂತಾದದು ಅಯೂಬರ ಸರ್ವಾಧಿಕಾರ ಬಂದನಂತರವೆಂಬುದನ್ನು ಮರೆಯುವಂತಿಲ್ಲ.

ಅಲ್ಲಲ್ಲಿಯ ಸುದ್ದಿ ಸಾರ

ಉಡುಪಿಯಲ್ಲಿ ಶ್ರೀ ಶಂಠಿಯವರು—ಮೈಸೂರು ವಿಧಾನ ಸಭಾಧ್ಯಕ್ಷ ಶ್ರೀ ಎಸ್. ಆರ್. ಕಂಠಿಯವರು ತಾ. 17 ರಂದು ಸ್ಥಳೀಯ ಲಯನ್ಸ್ ಕ್ಲಬ್ ಮತ್ತು ಪೌರಸಭೆಯವರು ಡಾ| ಎಸ್. ಆರ್. ಪೈ ಸ್ಮಾರಕ ಬಯಲು ರಂಗಮಂಟಪದಲ್ಲಿ ಏರ್ಪಡಿಸಿದ ಸಭೆಯಲ್ಲಿ ಮಾತನಾಡುತ್ತಾ ಪ್ರಜಾಪ್ರಭುತ್ವ ಇಂಗ್ಲೆಂಡ್ ಮತ್ತು ನಮ್ಮ ದೇಶದ ರಾಜಕೀಯ ಜೀವನ, ಜನರ ಕರ್ತವ್ಯ, ಪತ್ರಿಕೆಗಳ ಜವಾಬ್ದಾರಿ ಮೊದಲಾದ ಕುರಿತು ಮಾತನಾಡಿದರು. ಉಡುಪಿ ನಗರಸಭೆಯ ಚರಂಡಿ ಯೋಜನೆ, ನೀರು ಸರಬರಾಯಿ ಯೋಜನೆಯ ಕುರಿತು ಸರಕಾರದ ಲಕ್ಷ್ಯವನ್ನು ಸೆಳೆಯುವುದಾಗಿಯೂ ತಿಳಿಸಿದರು. ಆರಂಭದಲ್ಲಿ ಲಯನ್ಸ್ ಕ್ಲಬ್ಬಿನ ಅಧ್ಯಕ್ಷ ಶ್ರೀ ಟಿ. ಎ. ಪೈಗಳು ಶ್ರೀ ಕಂಠಿಯವರ ಪರಿಚಯಮಾಡಿ ಸ್ವಾಗತಿಸಿದರು. ನಗರಸಭಾಧ್ಯಕ್ಷ ಡಾ. ಕೆ. ಎಲ್. ಐತಾಳರು ಮಾನಪತ್ರವನ್ನು ಅರ್ಪಿಸಿದರು. ಸಭಾಧ್ಯಕ್ಷತೆ ವಹಿಸಿದ್ದ ಶ್ರೀ ಟಿ ಎ. ಪೈಗಳು ಭಾಷಣ ಮಾಡುತ್ತಾ ಸ್ಥಿರ ಸರಕಾರವಿಲ್ಲದೆ ಯಾವ ಕೆಲಸವೂ ಅಸಾಧ್ಯವೆಂದೂ ಶಾಸನ ಸಭೆಗಳಿಗೆ ಸದಸ್ಯರಾಗ ತಕ್ಕವರಿಗೆ ಪ್ರಜಾಪ್ರಭುತ್ವದಲ್ಲಿ ಗೌರವವಿರಬೇಕೆಂದೂ ಹೇಳಿದರು.

ಉಡುಪಿ ಮಂಡಲ ಕಾಂಗ್ರೆಸ್. ಸಮಿತಿ–ಇದರ ಸಭೆಯೊಂದು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಶ್ರೀ ಟಿ. ಎ ಪೈಗಳ ಅಧ್ಯಕ್ಷತೆಯಲ್ಲಿ ತಾ. 12-3-61 ರಂದು ನೆರವೇರಿತು. ಪ್ರಾರಂಭದಲ್ಲಿ ಶ್ರೀ ಬಾಂಗಾಳ ಲಕ್ಷ್ಮೀನಾರಾಯಣ ನಾಯ್ಕರ ಅಕಾಲ ನಿಧನಕ್ಕಾಗಿ ದುಃಖ ಸೂಚಕ ಠರಾವು ಶ್ರದ್ಧಾಂಜಲಿ ಪೂರ್ವಕ ಮಂಜೂರಾಯಿತು. ಅಧ್ಯಕ್ಷರು ಮಂಡಲ ಕಾಂಗ್ರೆಸ್‌ಗಳ ಮಹತ್ವದ ಹೊಣೆಯನ್ನು ವಿವರಿಸಿದರು. ಉಡುಪಿ ನಗರ ಸಭಾ ಸದಸ್ಯರು ತಮ್ಮ ಕರ್ತವ್ಯವನ್ನು ಸರಿಯಾಗಿ ನೆರವೇರಿಸುವ ಕುರಿತು ಚರ್ಚೆ ನಡೆಯಿತು. ಬಳಿಕ ಅಜ್ಜರ ಕಾಡಿನಲ್ಲಿ ಆದಷ್ಟು ಬೇಗನೆ ಹೊಸ ಆಸ್ಪತ್ರೆಯ ಕಟ್ಟಡವನ್ನು ಕಟ್ಟಿಸಿ ಸುಸಜ್ಜಿತ ಆಸ್ಪತ್ರೆಯನ್ನು ಸರಕಾರವು ವ್ಯವಸ್ಥೆಗೊಳಿಸಬೇಕೆನ್ನುವ, ಈಗಿನ ಆಸ್ಪತ್ರೆಯ ಕಟ್ಟಡಗಳನ್ನು ಪೌರ ಸಭೆಗೆ ಬಿಟ್ಟುಕೊಡಬೇಕೆನ್ನುವ, ಅಜ್ಜರಕಾಡು ಸ್ಥಳವನ್ನು ಬೇರೆ ಯಾವುದಕ್ಕೂ ಕೊಟ್ಟು ಕೆಡೆಸಮಾಡಬಾರದೆನ್ನುವ ನಗರದ ಹೈವೆ ರಸ್ತೆಗಳನ್ನು ಚೆನ್ನಾಗಿರಿಸುವುದಲ್ಲದೆ ಕಲ್ಸಂಕ ಸೇತುವೆಯನ್ನು ಶೀಘ್ರ ಪುನರ್ನಿರ್ಮಿಸಬೇಕೆನ್ನುವ ನಗರದ ಎಲಿಮೆಂಟರಿ ಶಾಲೆಗಳನ್ನು ಸರಕಾರವೇ ನಡೆಯಿಸಬೇಕೆನ್ನುವ ಮೊದಲಾದ ನಿರ್ಣಯಗಳಾದುವು. ನಗರದ ಅಭಿವೃದ್ಧಿ ಯೋಜನೆಯನ್ನು ತಯಾರಿಸಲು ಶ್ರೀಗಳಾದ ಕೆ. ಕೆ. ಪೈ, ಎಂ. ಆರ್. ಕಾರ್‌ನಾಡ್ ಬಿ ಜೆ. ಹೆಗ್ಡೆ, ಕೆ. ಜಿ. ಕಾಮತ್, ಇಮಾಮ್ ಸಾಹೇಬ್, ಎಂ. ಜಿ. ಶೆಣ್ಯೆ ಮತ್ತು ಡಾ. ಪಿ. ಜಿ. ಆಚಾರ್, ಇವರುಳ್ಳ ಕಮಿಟಿಯೊಂದನ್ನು ರಚಿಸಲಾಯಿತು.

ಶಾಲಾ ವರ್ಧಂತ್ಯುತ್ಸವ—ಉಡುಪಿ ಬೈಲೂರು ಯಂ. ಯಂ. ಕಿರಿಯ ಬುನಾದಿ ಶಾಲೆಯ ಮತ್ತು ಹಳೇ ವಿದ್ಯಾರ್ಥಿ ಸಂಘದ ವರ್ಧಂತ್ಯುತ್ಸವವು ತಾ. 11ರಂದು ಶ್ರೀ ಜಿ. ಎಸ್. ನಾಗಮೋತಿ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಪೂರ್ವಾಹ್ನ ಬೈಲೂರು ಸದಾಶಿವ ಶೆಟ್ಟರಿಂದ ಧ್ವಜವು ಅರಳಿಸಲ್ಪಟ್ಟಿತು. ಅಪರಾಹ್ನದ ಸಮಾರಂಭದಲ್ಲಿ ಡಾ| ಶ್ಯಾಮ ಶೆಟ್ಟರು ಸ್ವಾಗತ ಭಾಷಣ ಮಾಡಿದರು ಮುಖ್ಯೋಪಾಧ್ಯಾಯ ಶ್ರೀ ಗ್ಲೇಡ್ಸನ್ ಜತ್ತನ್ನರಿಂದ ವರದಿವಾಚನ, ಶ್ರೀ ಬಿ ಎಲ್. ಆಚಾರ್ಯರಿಂದ ಸ್ವಸ್ತಿವಾಚನ, ಶ್ರೀ ಪಿ. ಎಂ. ತಂತ್ರಿಯವರಿಂದ ಬಹುಮಾನ ವಿತರಣೆಯಾದ ಬಳಿಕ ಅಧ್ಯಕ್ಷರ ಸಮಯೋಚಿತ ಭಾಷಣವಾದ ತರುವಾಯ ವಿವಿಧ ವಿನೋದಾವಳಿಗಳೂ, ನಾಟಕ ಪ್ರದರ್ಶನಗಳೂ ನಡೆದುವು.

ಶಾಲಾ ವಾರ್ಷಿಕೋತ್ಸವ – ಉಡುಪಿ ಗುಂಡಿಬೈಲು ಕಿರಿಯ ಬುನಾದಿ ಶಾಲೆಯ ವಾರ್ಷಿಕೋತ್ಸವವು ಇದೇ ತಾ. 11ರಂದು ಶ್ರೀ ಹೊಸಬೆಟ್ಟು ರಾಮರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯ ಶ್ರೀ ಪಿ. ನರಸಿಂಹ ಉಪಾಧ್ಯಾಯರು ವರದಿ ವಾಚನ ಮಾಡಿದರು. ಶ್ರೀ ಯು. ಬಿ. ಜಯಂತ ರಾಯರ ಸ್ವಸ್ತಿವಾಚನ ಮಾಡಿದರು. ಬಹುಮಾನ ವಿತರಣೆ, ಅಧ್ಯಕ್ಷರ ಭಾಷಣಗಳಾದ ಮೇಲೆ ನಾಟಕ ಪ್ರದರ್ಶನವೂ ನಡೆಯಿತು ಪೂರ್ವಾಹ್ನ ಶ್ರೀ ಎಚ್. ವಿಜಯೇಂದ್ರ ಮೂರ್ತಿ ಇವರು ಧ್ವಜಾರೋಹಣ ಮಾಡಿದರು. ಶ್ರೀ ಜಗನ್ನಾಥ ಮೆಣ್ಣಾ ಸೆಟ್ಟರು ಮಕ್ಕಳಿಗೆ ಸಿಹಿತಿಂಡಿಯನ್ನು ಹಂಚಿದರು.

ತಾ. 12ರಂದು ಹಳೆಯ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಶ್ರೀ ಜಿ. ಬಿ. ಸವಣೂರರ ನೇತೃತ್ವದಲ್ಲಿ ನೆರವೇರಿತು. ಸಂಘದ ಉಪಾಧ್ಯಕ್ಷ ಶ್ರೀ ಪಿ. ಕೃಷ್ಣಮೂರ್ತಿ ಆಚಾರ್ಯರು ಸ್ವಾಗತಿಸಿದ ಬಳಿಕ ಕೋಶಾಧಿಕಾರಿ ಶ್ರೀ ಪಿ. ಎನ್. ಉಪಾಧ್ಯಾಯರು ವರದಿಯನ್ನೋದಿದರು. ಬಹುಮಾನ ವಿತರಣೆ, ಅಧ್ಯಕ್ಷರ ಭಾಷಣಾನಂತರ ಹಳೆಯ ವಿದ್ಯಾರ್ಥಿಗಳು ನಾಟಕಗಳನ್ನು ಅಭಿನಯಿಸಿದರು. ಬಳಿಕ್ಕ ಸಂಘದ ಮಹಾಧಿವೇಶನ ನಡೆದು ಮುಂದಿನ ವರ್ಷಕ್ಕೆ ಕಾರ್ಯಕಾರಿ ಸದಸ್ಯರನ್ನು ಆರಿಸಿತು.

ವರ್ಧಂತ್ಯುತ್ಸವ – ಉಡುಪಿ ಮುನ್ಸಿಪಲ್ ಮಹಾತ್ಮ ಗಾಂಧಿ ಬುನಾದಿ ಶಾಲಾ ವರ್ಧಂತ್ಯುತ್ಸವವು ಇನೇ ತಾ. 18ರಂದು ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಕೆ. ವಿಟ್ಠಲಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಯೂನಿಯನ್ ಕ್ಲಬ್ಬಿನ ಸಾ. ಸುಂದರರಾಮ ಪೈ ಮೆಮೋರಿಯಲ್ ಸ್ಟೇಜಿನಲ್ಲಿ ಜರಗಿತು. ವರ್ಧಂತ್ಯುತ್ಸವ ಸಮಿತಿಯ ಅಧ್ಯಕ್ಷ ಶ್ರೀ ಕೆ. ಕೆ ಪೈಗಳು ಸ್ವಾಗತಿಸಿದ ಮೇಲೆ ಪ್ರಧಾನಾಧ್ಯಾಪಕ ಶ್ರೀ ಕೆ. ಕೇಶವ ಕುಡುವರು ವರದಿಯನ್ನೋದಿದರು. ಶ್ರೀ ... ಜೆ. ಅಪ್ಪಿಯರಿಂದ ಸಂದೇಶ ವಾಚನವಾದ ಬಳಿಕ ಶ್ರೀ ಟಿ. ವಾಸುದೇವ ರಾಯರು ಸ್ವಸ್ತಿ ವಾಚನ ಮಾಡಿದರು. ಅಧ್ಯಕ್ಷ ಶ್ರೀ ಶೆಟ್ಟಿಯವರು ಬಹುಮಾನ ವಿತರಣೆ ಮಾಡಿ ಕಡ್ಡಾಯ ಶಿಕ್ಷಣ ಯೋಜನೆಯ ಮಹತ್ವ ಆವಶ್ಯಕತೆಯ ಕುರಿತು ಮಾತನಾಡಿದರು. ಧನ್ಯವಾದಸಮರ್ಪಣೆಯ ಬಳಿಕ ಮನರಂಜನಾ ಕಾರ್ಯಕ್ರಮಗಳು ಜರಗಿದುವು. ಅಂದು ಬೆಳಿಗ್ಗೆ ನಗರಸಭಾಧ್ಯಕ್ಷ ಡಾ| ಕೆ ಎಲ್. ಐತಾಳರು ಧ್ವಜಾರೋಹಣ ಮಾಡಿದರು. ಶ್ರೀ ರಾಘವೇಂದ್ರ ಎಸ್. ಕಿಣಿಯವರಿಂದ ಮಕ್ಕಳಿಗೆ ಸಿಹಿತಿಂಡಿ ಹಂಚಲಾಗಿತ್ತು.

ಮಂತ್ರಿ ಬಾಳಿಗರು – ಇದೇ ತಾ. 15ರಿಂದ 21ರ ವರೆಗೆ ಮೈಸೂರು, ಕೊಡಗು, ದ. ಕನ್ನಡ ಮತ್ತು ಹಾಸನ ಜಿಲ್ಲೆಗಳ ಪ್ರವಾಸ ಕಾರ್ಯಕ್ರಮ ಕೈಗೊಂಡಿದ್ದ ಮೈಸೂರು ಸರಕಾರದ ಕಾನೂನು ಮತ್ತು ಮಜೂರ ಮಂತ್ರಿ ಶ್ರೀ ವೈಕುಂಠ ಬಾಳಿಗರು ಇದೇ ತಾ. 18ರಂದು ಉಡುಪಿಗೆ ಆಗಮಿಸಿ ಮಲ್ಪೆ ಬಂದರವನ್ನು ಪರಿಶೀಲಿಸಿ, ಸಂಜೆ ಐಡಿಯಲ್ ಫೊಟೋ ಸ್ಟುಡಿಯೋದಲ್ಲಿ ಜರಗಿದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಜಿಲ್ಲೆಯ ವಿವಿಧ ಅಭಿವೃದ್ಧಿ ಕಾರ್ಯಗಳ ಕುರಿತು ಭಾಷಣವಿತ್ತರು.

ದ ಕ. ಮೊಗವೀರ ಮಹಾಜನ ಸಂಘ ಉಚ್ಚಿಲ—ಈ ಸಂಘದ ಶ್ರೀ ಮಹಾ ಲಕ್ಷ್ಮೀ ದೇವಸ್ಥಾನದಲ್ಲಿ ಇದೇ 31ರಂದು ಮಾಮೂಲಿನಂತೆ ವಾರ್ಷಿಕ ಪೌರ್ಣಮೋತ್ಸವ ಜರಗುವುದೆಂದೂ ಮಹಾಸೇಯರೆಲ್ಲರೂ ಬಂದು ಸಹಕರಿಸಿ ಗಂಧ ಪ್ರಸಾದಗಳನ್ನೂ ಸ್ವೀಕರಿಸಬೇಕೆಂದೂ ಅಧ್ಯಕ್ಷ ಶ್ರೀ ಸಂಕೇಶ ಕೆ. ರಾಮ ಮತ್ತು ಪ್ರಧಾನ ಕಾರ್ಯದರ್ಶಿ ಎಸ್. ಟಿ. ಸಾಲಿಯಾನರು ಅಪೇಕ್ಷಿಸುತ್ತಾರೆ.

ಪಂಡಿತ ಗೋವಿಂದ ವಲ್ಲಭ ಸಂತರ ನಿಧನಕ್ಕಾಗಿ—ದುಃಖ ಸೂಚಿಸುವ ಸಭೆಯೊಂದು ಮಂಗಳೂರು ಕಾಂಗ್ರೆಸ್ ಕಚೇರಿಯಲ್ಲಿ ತಾ. 8ರಂದು ಶ್ರೀ ಕೆ. ಶಂಕರ ಆಳ್ವರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀಗಳಾದ ಕೆ. ಸೂರ್ಯನಾರಾಯಣ ಅಡಿಗ, ಶ್ರೀನಿವಾಸ ನಾಯಕ್, ಬಿ. ಎಮ್. ಇದಿನಬ್ಬ, ಬಿ. ರಾಜೀವ ಭಂಡಾರಿ ಮೊದಲಾದವರ ಭಾಷಣಗಳಾದುವು.

ಮಂಗಳೂರು ತಾಲೂಕು ಬೋರ್ಡ್ ಸಭೆ—ಯು ತಾ. 6ರಂದು ಬೋರ್ಡಿನ ಅಧ್ಯಕ್ಷ ಶ್ರೀ ಬಿ. ರಾಜೀವ ಭಂಡಾರಿ ಇವರ ಅಧ್ಯಕ್ಷತೆಯಲ್ಲಿ ಜರಗಿ, ಶ್ರೀ ಎಮ್. ಆರ್. ಎಚ್. ಪೂಂಜರ ಸೂಚನೆಯಂತೆ ಬಳ್ಕುಂಜೆ ಕರ್ನಿರೆ ಎಲತ್ತೂರು ಅತಿಕಾರಿಬೆಟ್ಟು, ಏಳಿಂಜೆ, ಐಕಳ ಗ್ರಾಮಗಳಿಗೆ ವಿದ್ಯುಚ್ಛಕ್ತಿ ಸರಬರಾಯಿಯನ್ನು ಶೀಘ್ರ ಮಾಡುವಂತೆ ವಿದ್ಯುತ್ ಬೋರ್ಡನ್ನು ಕೇಳಿಕೊಳ್ಳುವ ಡಾ| ರಾಮಣ್ಣ ಸೆಟ್ಟರ ಸಲಹೆಯಂತೆ ಮೋಟಾರ್ ವಿಹಿಕಲ್ ಟೇಕ್ಸ್‌ನಲ್ಲಿ 1957—60ನೇ ದಾ ಮಾ ಶ ಯ ದ ಲ್ಲಿ ಹೆಚ್ಚಿಗೆ ಹಣವನ್ನು ಸರಕಾರ ಕೊಡಬೇಕೆನ್ನುವ ನಿರ್ಣಯಗಳಾದುವು ಅಲ್ಲದೆ ಸುರತ್ಕಲ್ ಹೆಲ್ತ್ ಸೆಂಟರಿಗೆ ಪಣಂಬೂರು, ಮಂಗಲಪೇಟೆ ಜೋಗಟ್ಟೆಗಳಲ್ಲಿ ಸಬ್ ಸೆಂಟರುಗಳನ್ನು ಶ್ರೀ ಯಮ್. ಆರ್. ಎಚ್. ಪೂಂಜರು ಸೂಚಿಸಿದುದನ್ನು ಶ್ರೀ ಶ್ರೀನಿವಾಸ ಕೋಟ್ಯಾನರು ಅನುಮೋದಿಸಿದಂತೆ ಮಂಜೂರು ಮಾಡಲಾಯಿತು. ಉಚ್ಚಿಲಕ್ಕೆ ರೂರಲ್ ಡಿಸ್ಪೆನ್ಸರಿ ಮೊದಲಾದ ಪ್ರಾಮುಖ್ಯ ವಿಷಯಗಳೂ ಮಂಜೂರಾದವು.

ಅಕಾಲ ನಿಧನ—ಬಾಂಗಾಳ ನಾಯಕ್ ಬೇಂಕಿನ ಅಧ್ಯಕರೂ, ಕಟಪಾಡಿ ಎಸ್. ವಿ. ಎಸ್. ಹ್ಯಾಸ್ಕೂಲಿನ ನಿವೃತ್ತ ಹೆಡ್‌ಮಾಸ್ತರರೂ ಆದ ಶ್ರೀ ಬಾಂಗಾಳ ರಾಮದಾಸ್ ನಾಯಕ್‌ರ ಪುತ್ರಿ ಶ್ರೀಮತಿ ಕೆ. ಮುಕ್ತಾ ಕಿಣಿಯವರು ಇದೇ ತಾ. 14ರಂದು 31ನೆಯ ವಯಸ್ಸಿನಲ್ಲಿ ಉಡುಪಿ ಮಿಶನ್ ಆಸ್ಪತ್ರೆಯಲ್ಲಿ ಅಕಾಲ ನಿಧನ ಹೊಂದಿದರೆಂದು ತಿಳಿಸಲು ವಿಷಾದವಾಗುತ್ತದೆ. ಶ್ರೀಮತಿಯವರು ಸೌಜನ್ಯ ಸ್ವಭಾವದವರೂ ಸಾಹಿತ್ಯಾಭಿಮಾನಿಗಳೂ ಆಗಿದ್ದರು.

ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನ, ಮಂಗಳೂರು—ಇವರ ಹಿರಿಯ ವಿದ್ಯಾರ್ಥಿಗಳನ್ನು ಬೀಳ್ಕೊಡುವ ಸಮಾರಂಭವೊಂದು ಇದೇ ತಾ. 15ರಂದು ಶ್ರೀ ಪಿ. ಎಸ್. ತಿಮ್ಮಪ್ಪ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿದಾಗ ಶ್ರೀ ಪೈ. ರಾಜೀವ ಸೆಟ್ಟರು ಸ್ವಸ್ತಿ ವಾಚನ ಮಾಡಿದರು. ಶ್ರೀಗಳಾದ ಬಾಲಕೃಷ್ಣ ಸೆಟ್ಟಿ, ಶ್ರೀನಿವಾಸ ಭಂಡಾರಿ, ಪಾಂಡುರಂಗ ಸೆಟ್ಟಿ, ಸುರೇಂದ್ರ ಸೆಟ್ಟಿ ಇವರು ಭಾಷಣವಿತ್ತರು. ಶ್ರೀಗಳಾದ ಸದಾಶಿವ ಸೆಟ್ಟಿ ಸೀತಾರಾಮ ಸೆಟ್ಟಿ, ಶ್ರೀಕರ ಸೆಟ್ಟಿಯವರು ಸ್ವಸ್ತಿ ವಾಚನಕ್ಕೆ ಉತ್ತರವಿತ್ತರು.

ಮಂಗಳೂರು ತಾಲೂಕು ಕಾಂಗ್ರೆಸ್ ಸಮ್ಮೇಳನವು ತಾ. 2—4—61 ನೇ ಸಂಜೆ 3ಗಂಟೆಗೆ ಸುರತ್ಕಲ್ಲಿನಲ್ಲಿ ಪಂಚಾಯತ್ ಬೋರ್ಡ್ ಶಾಲಾ ವಠಾರದಲ್ಲಿ ಜಿಲ್ಲಾ ಕಾಂಗ್ರೆಸ್‌ನ ಅಧ್ಯಕ್ಷ ಶ್ರೀ ಟಿ ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಮಾಜಿ ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ಬಿ ಮಂಜಯ ಹೆಗ್ಡೆಯವರು ಸಮ್ಮೇಳನವನ್ನು ಉದ್ಘಾಟಿಸುವರು.

ಉಡುಪಿ ನಗರಸಭೆಯ ಅವಸರದ ಸಭೆಯೊಂದು ಉಪಾಧ್ಯಕ್ಷ ಶ್ರೀ ಪಿ. ರಂಗನಾಥ ಶೆಣೈಯವರ ಅಧ್ಯಕ್ಷತೆಯಲ್ಲಿ ತಾ. 13 ರಂದು ಜರಗಿ ದಿನಚರಿ ಮಾರ್ಕೆಟು, ಆಫೀಸು ಕಟ್ಟೋಣ ರಚನೆಗಾಗಿ ಸಿಂಡಿಕೇಟ್ ಬೇಂಕಿನಿಂದ 20ವಾರ್ಷಿಕ ಕಂತುಗಳಿಂದ 5%ರ ಬಡ್ಡಿಯಲ್ಲಿ 1½ಲಕ್ಷ ರೂಪಾಯಿ ಸಾಲ ಪಡೆಯ ಬೇಕೆಂದು ನಿರ್ಧರಿಸಲಾಯ್ತು.

ಅನಂತರ ಅಧ್ಯಕ್ಷ ಡಾ| ಕೆ. ಎಲ್ ಐತಾಳರು ಹ್ವಾಜರಾಗಿ ಸಭಾಧ್ಯಕ್ಷತೆ ವಹಿಸಿದ ಮೇಲೆ ರೂ. 30,56,000 ಖರ್ಚಿನಿಂದ ನಳ್ಳಿನೀರು ಸರಬರಾಯಿ ಯೋಜನೆಯನ್ನು ಬೇಗನೆ ಕೈಗೊಳ್ಳ ಬೇಕೆಂದೂ ಅದಕ್ಕಾಗಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಹಣವನ್ನು ಒದಗಿಸುವಂತೆ ಕೇಳಿಕೊಳ್ಳ ಬೇಕೆಂದೂ ನಿರ್ಧರಿಸಲಾಯ್ತು.

ಕೋಪರೇಶನ್ ಬೇಂಕಿನ –ಅಧ್ಯಕ್ಷರಾಗಿ ಶ್ರೀ ಯು. ಗೋಪಾಲಕೃಷ್ಣ ನಾಯ್ಕರು ಆರಿಸಲ್ಪಟ್ಟಿರುವರೆಂದು ತಿಳಿಯಬರುತ್ತದೆ. ಶ್ರೀ ಬಿ ವೈಕುಂಠ ಬಾಳಿಗರು ಮಂತ್ರಿಗಳಾದುದರಿಂದ ಈ ಸ್ಥಾನ ತೆರವಾಗಿತ್ತು.

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು ಪಾಲುಕೋಟೆ, ಉಡುಪಿ

ಇದರ ಶೇರ್‌ಹೋಲ್ಡರ್ಸ್‌ಗೆ ಕೊಡುವ ಜಾಹೀರು ನೋಟೀಸು—

ಈ ಕಂಪೆನಿಯ ಮೆನೇಜಿಂಗ್ ಡ್ಯಾರೆಕ್ಟರ್ ಶ್ರೀ ಕೆ. ಹೊನ್ನಯ್ಯಸೆಟ್ಟರನ್ನು ಈಗಿನ ಶರ್ತಗಳ ಪ್ರಕಾರವೇ ರೀ ಎಪ್ಪೋಂಟ್‌ಮೆಂಟ್ ಮಾಡಿದ್ದನ್ನು ಮಂಜೂರು ಮಾಡುವಂತೆ 1956 ನೇ ಇಸವಿಯಲ್ಲಿ ಕಂಪೆನಿಗಳ ಕಾಯಿದೆ ಸೆಕ್ಷನ್ 412ರ ಅನುಸಾರವಾಗಿ ಕೇಂದ್ರ ಸರಕಾರಕ್ಕೆ ಅರ್ಜಿಸಲ್ಲಿಸಲಾಗುವುದು.

(ಬೋರ್ಡಿನ ಅನುಮತಿಮೇರೆಗೆ)

(ಸಹಿ) ಕೆ. ಎಚ್. ಸೆಟ್ಟಿ,
ಮೆನೇಜಿಂಗ್ ಡ್ಯಾರೆಕ್ಟರ್.

ತಾ. 18 - 3—1961

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ	4%
5 ,, 12 ,,	4¼%
13 ,, 24 ,,	4½%

ರೂ. 5,000/- ಮತ್ತು ಮೇಲಣ ಡಿಪೋಸಿಟಗೆ ¼% ಜಾಸ್ತಿ ಕೊಡಲಾಗುವುದು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ.
ಮೆನೇಜರ್,

ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಸುಕರ್ಣರ ಸರ್ವ ಪ್ರಯತ್ನ

ಆಫ್ರೇಸ್ಯದಲ್ಲಿ ಆಶಾಂತಿ ಹೆಚ್ಚುತ್ತಿರುವಂತೆ ಬಾಂಡುಂಗ ಸಮ್ಮೇಳನವನ್ನು ನಡೆಸಬೇಕೆಂಬ ಆಶೆಯೂ ಇಲ್ಲಿನ ರಾಷ್ಟ್ರಗಳಲ್ಲಿ ಹೆಚ್ಚುತ್ತಿದೆ. ಇಂಡೊನೇಶ್ಯದ ಅಧ್ಯಕ್ಷ ಡಾ| ಸುಕರ್ಣರು ಈ ಸಮ್ಮೇಳನವನ್ನು ಪುನರಪಿ ಸೇರಿಸಲು ತಕ್ಕ ಪೂರ್ವಸಿದ್ಧತೆಗೆ ತೊಡಗಿದ್ದಾರೆ. ಕಂಬೋಡಿಯಾ ಸಿಂಹಳ ಮತ್ತು ಬರ್ಮಾ, ಸಂಯುಕ್ತ ಅರಬ ರಾಷ್ಟ್ರಗಳಿಂದ ಈಗಾಗಲೇ ಈ ಸಂಬಂಧದ ಪತ್ರಗಳಿಗೆ ಸಮಾಧಾನಕರವಾದ ಉತ್ತರ ಬಂದಿವೆಯೆನ್ನಲಾಗಿದೆ.

ಕೆಲಂಡರ್ ಸ್ವೀಕಾರ

ಈ ಕೆಳಗಿನವರ 1961ನೇ ಇಸವಿಯ ಕೆಲಂಡರ್‌ಗಳನ್ನು ಆದರಪೂರ್ವಕ ಸ್ವೀಕರಿಸಿದ್ದೇವೆ.

1. ವೆಸ್ಟ್ ಕೋಸ್ಟ್ ಪೇಪರ್ ಎಂಡ್ ಸ್ಟೇಶನರ್ಸ್, ಮಂಗಳೂರು.
2. ಶೆಣೈಯವರ ಮಂಗಳೂರು ನಶ್ಯ, ಹಳೆಯಂಗಡಿ.
3. ಬುಶ್ ರೇಡಿಯೊ, ಇಲೆಕ್ಟ್ರೋನಿಕ್ಸ್ ಉಡುಪಿ
4. ಕೊಟ್ಟಾರ್ ನರಸಿಂಹ ಪೈ, ಮಂಗಳೂರು.

ಚಂದಾದಾರರಲ್ಲಿ ವಿನಂತಿ

ಈ ವರೆಗೂ ಚಂದಾ ಹಣವನ್ನು ಕಳುಹಿಸಿ ಕೊಡದ ಚಂದಾದಾರರು ದಯಮಾಡಿ ಈ ತಿಂಗಳಾಂತ್ಯದೊಳಗಾದರೂ ಕಳುಹಿಸಿ ಕೊಡುವಂತೆ ಅಪೇಕ್ಷಿಸುತ್ತೇವೆ. ಚಂದಾ ಹಣವನ್ನು ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ತರದ ಖರ್ಚು ಇಲ್ಲದೆ "ನವಯುಗ"ದ ಲೆಕ್ಕಕ್ಕೆ ಕೊಡಬಹುದು.

ಮೆನೇಜರ್, ನವಯುಗ

'ಕೂಟ' ಜಾತಿಯ ಸಣ್ಣ ಮೀನುಗಳನ್ನು ಮೀನುಗಾರ ಹೆಂಗಸರು ಒಣಗಿಸುತಿದ್ದಾರೆ.

ಅನುಭವ:

ಮಗುವಿನಿಂದ ಪಾಠ

'ರಂಜನ', ಬೆಂಗಳೂರು

ಸಮಾಜ ಸೇವೆಯಲ್ಲಿ ಆರು ತಿಂಗಳು ಟ್ರೈನಿಂಗ್ ಪಡೆದಿದ್ದು, ಮದುವೆಯಾದ ಮೇಲೆ ಗೃಹಕಾರ್ಯದಲ್ಲಿ ವೇಳೆ ಸಿಗದ್ದರಿಂದ ಕೊನೇ ಪಕ್ಕ ಸುತ್ತ ಮುತ್ತಲೂ ಜಗಳವಾಡುತ್ತಿದ್ದ ಜನರಲ್ಲಿ, ಸಮಾಜ, ಐಕ್ಯ ಇವುಗಳ ಬಗ್ಗೆ ಆಗಾಗ್ಗೆ ತಿಳಿಯ ಹೇಳುತ್ತಿದ್ದ ನನ್ನ ಪತ್ನಿಯ ಸುಮಾರು ವರ್ಷದ ಎಡಬಿಡದ ಪ್ರಚಾರದಿಂದಾಗಿ ಅಕ್ಕ—ಪಕ್ಕದವರು ಸ್ವಲ್ಪ ಹದಕ್ಕೆ ಬಂದಿದ್ದರು. ಬಾಡಿಗೆ ಮನೆಯಲ್ಲಿದ್ದರೂ ಜೀವನ ಸುಗಮವಾಗಿತ್ತು.

ಅಂದು ಆಫೀಸಿನಲ್ಲಿ ಅಧಿಕಾರಿಯೊಡನೆ ಯಾವುದೋ ವಿಷಯಕ್ಕೆ ಜಗಳವಾಡಿಕೊಂಡು ಮಧ್ಯಾಹ್ನವೇ ಮನೆಗೆ ಹಿಂತಿರುಗಿದೆ. ಬಾಗಿಲು ಮುಂದಕ್ಕೆ ತಳ್ಳಿ ಮಂಚದಲ್ಲಿ ಕುಳಿತೆ. ಒಳಗಡೆ ಏನೋ ಹಗರಣ ನಡೆಯುತ್ತಿತ್ತು. ಮಾತುಗಳು ಕೇಳಿ ಬರುತ್ತಿದ್ದವು. 'ಛೆ ಎಲ್ಲಿ ಹೋದರೂ ಇದೇ ಗೋಳೆ?' ಎಂದು ಚಿಂತಿಸುತ್ತಿದ್ದೆ. ನನ್ನ ನಾಲ್ಕು ವರ್ಷದ ಮಗಳು ಲೀಲು ಯಾವುದೋ ತಪ್ಪು ಮಾಡಿದ್ದಳು.

"ಹಾಗೇಕೆ ಮಾಡಿದೆ ಲೀಲು?" ಎಂದು ನನ್ನ ಪತ್ನಿ ಕೇಳಿದಾಗ, ತನ್ನದು ತಪ್ಪಿಲ್ಲವೆಂದೇ ವಾದಿಸತೊಡಗಿದ್ದಳು ಲೀಲಾ. ಅದೇನೆಂದು ತಿಳಿಯಲು ಕಿಟಕಿಯ ಬಳಿಗೆ ನಿಂತು ಗಮನಿಸತೊಡಗಿದೆ. ನನ್ನ ಪ್ರವೇಶ ಅವರ ಅರಿವಿಗೆ ಬಂದಿರಲಿಲ್ಲ.

ತಡೆಯುವಷ್ಟು ತಡೆದು ಕೊನೆಗೆ ಕೋಪಗೊಂಡ ನನ್ನಾಕೆ "ತಾಳು ಮಂಕೆ ಎಷ್ಟು ಹೇಳಿದರೂ ನಿನ್ನ ಹಠ ಬಿಡೋಲ್ಲವೇ" ಎಂದು ಹೊಡೆಯಲು ಮುಂದುವರೆದಾಗ ಲೀಲು, ಅಮ್ಮನಕಡೆ ಬೆರಳು ತೋರುತ್ತಾ,

"ನೋಡಮ್ಮಾ ಹೀಗೆಲ್ಲಾ ಆಡಬಾರದು. ನಾವು ಇನ್ನೂ ಬಹಳ ವರ್ಷಗಳು ಒಟ್ಟಿಗೆ ಇರಬೇಕು. ಸಂಘ—ಜೀವನದಲ್ಲಿ ಜಗಳವಿಲ್ಲದ ಐಕ್ಯ ಬೇಕು" ಎಂದಾಗ ಲೀಲು ನನ್ನವಳ ತೋಳ ತೆಕ್ಕೆಯಲ್ಲಿದ್ದಳು. ಆಕೆಯಲ್ಲಿ ಮುಗುಳ್ನಗೆ ಕೋಪದ ಸ್ಥಾನವನ್ನಲಂಕರಿಸಿತ್ತು. ತುಟಿಗಳು ಕೆನ್ನೆಯನ್ನೊತ್ತುತ್ತಿತ್ತು.

ಮೆಲ್ಲನೆ ಬಾಗಿಲು ಮುಂದಿಟ್ಟು ಆಫೀಸಿನ ಕಡೆಗೆ ಹೆಜ್ಜೆ ಹಾಕ ತೊಡಗಿದೆ. ಹೊಸ ಸ್ಫೂರ್ತಿಯ ಆಂಬಾಗಿತ್ತೆನಗೆ.

'NAVAYUGA' WEEKLY is in the list of periodicals and Newspapers approved for use in Secondary School as per proceedings Roc. No 466 N/50 date 2-12-19[illegible] of the Director of public Instruction Madras

ಕವಿತಾ ವಿತಾನ

ಮಮಕಾರದ ಮೋಜು

೧

ಮೋಜಿನ ಮಗುವೆತ್ತಿಕೊಂಡು
  ಗಾಜಿನ ಗೊಂಬೆ,
ಮೋಹದಿ ಮುದ್ದಾಡಿತು ಎನೆ-
  ತಾನದರಂಬೆ.

೨

ಮಮತೆಯ ತೊಟ್ಟಿಲಿಯೂಡಿಸುತಾ-
  ಲಾಪಿಸಿಲಾಲಿ,
ಮೂಡುವ ನಗೆ, ಲೀಲೆಯ ಬಗೆ-
  ಯಾಯಿತುಜೋಲಿ.

೩

ಕಲೆಯಿತು ಮನ ಮರೆಯಿತು ವ್ಯ-
  ವಹಾರದ ಮೋಡಿ;
ಕುಸಿಯಿತು ಕೈ-ಕಾಟದ ತಲೆ-
  ಕೂಟದ ರೂಢಿ.

೪

ಲೀನತೆಯುತಿಯಾಯಿತು ಕೈ-
  ಜಾರಿತು ಗೊಂಬೆ;
ಉರುಳಿತು ಬಿರಿದಳಿಯಿತು ನವ-
  ರೂಪದ ರಂಭೆ.

೫

ಕೂಡಿಸಿ ಮಗು ಜೋಡಿಸಿ ಸಿಡಿ-
  ಗಾಜಿನ ಚೂರ,
ಮಾಡಿತು ಮಣಿ ಮಕರದ ಶೃಂ-
  ಗಾರದ ಹಾರ.

೬

ಧರಿಸುತ ಎದೆ ಮೇಲೆಸೆಯುವ
  ಮಾಲೆಯ ನೋಡಿ,
ಬೀರಿತು ನಗೆ ಮಾತೃತ್ವಕೆ
  ಮೆಚ್ಚಿಗೆಗೂಡಿ.

೭

ಸೋಜಿಗವಿದು ಏ ಮಗುವಿನ
  ಮೋದದ ಮೋಜು;
ಮಾತೃತ್ವದ ಮಮಕಾರದ
  ಗುಟ್ಟಿನ ಗೋಜು.

— ಸಾಗರ್

ಕಲಾಕ್ಷೇತ್ರ

(೫ನೇ ಪುಟದಿಂದ)

ಶ್‌ಮನ್ನರ ದೃಷ್ಟಿಯಲ್ಲಿ ಪ್ರತಿಯೊಂದು ವಸ್ತುವೂ ಯಥಾರ್ಥವಾಗಿದೆ, ಅದು ಪ್ರತೀಕ ಇಲ್ಲವೇ ಭಾವಾತ್ಮಕ ಸಾರವಲ್ಲ; ಪ್ರಾಣವಾದಿ ನೀಗ್ರೋಗಳ ತಿಳುವಳಿಕೆಯಿಂದ ಇದು ಭಿನ್ನವಾಗಿದೆ. ಆದುದರಿಂದ ಅವರು ಬರೆದಿರುವ ಚಿತ್ರಗಳಲ್ಲಿ ಯಥಾರ್ಥತೆ ಮತ್ತು ಯಥಾರ್ಥತೆಯ ಅನುಕರಣೆಗಳಿಗೆ ಮಾತ್ರ ಸ್ಥಾನ ದೊರೆಯಬೇಕು. ಇವುಗಳಲ್ಲಿ ಯಾವುದೇ ಮೂರ್ತಿ ಅಥವಾ ದೇವಿ—ದೇವತೆಗಳಿಲ್ಲ. ಅವರು ಚಿತ್ರಿಸಿದ ಪ್ರತಿಯೊಂದು ಶಿಲಾಚಿತ್ರವೂ ದೈನಿಕ ಜೀವನದ ಅನುಭವವನ್ನು ಸಾರಿ ಪ್ರದರ್ಶಿಸುವಂತಿರಬೇಕು.

ಇನ್ನೊಂದು ವಿಷಯವನ್ನೂ ನಾವು ಗಮನಿಸಬೇಕು. ಈ ಚಿತ್ರಗಳಲ್ಲಿ ಅಂಕಿತವಾಗಿರುವುದು ಒಂದು ತೀರ ಅನಾಗರಿಕ ವನ್ಯ ಜಾತಿಯ ಜೀವನದ ಅನುಭವಗಳು; ಪಶುವಧೆಯಿಂದಲೇ ಬಾಳುವ ಧ್ಯೇಯವಿಟ್ಟುಕೊಂಡವರ ಅನುಭವಗಳು. ಅವರ ಕರ್ಮಕಾಂಡ ಜಾಡೂವೆಲ್ಲವೂ ಪಶುಬಲಿಯ ಆಧಾರದಲ್ಲಿಯೇ ಇರುತ್ತಿದ್ದುವು. ದಕ್ಷಿಣ ಆಫ್ರಿಕೆಯ ಹೆಚ್ಚಿನ ಶಿಲಾಚಿತ್ರಗಳ ವ್ಯಾಖ್ಯೆಯನ್ನು ಈ ತಥ್ಯದ ಆಧಾರದಿಂದ ಮಾಡಬಹುದಾಗಿದೆ. ಈ ಮಾತನ್ನು ಬಿಟ್ಟು ಬಿಡುವುದಾದರೂ ಮೃತ್ಯು ಮತ್ತು ದರ ಭಯ ಭಾವನೆಯೂ ಇನ್ನೊಂದು ಕಾರಣವಾಗ ಬಲ್ಲದು. ಈ ಪ್ರಾಗೈತಿಹಾಸಿಕ ಮಾನವರ ಮನಸ್ಸಿನಲ್ಲಿ ಸದಾ ಇವುಗಳ ನೆರಳು ಬೀಳುತಿದ್ದುವು. ಟಸಿ ಸಾಬ್ ಕಣಿವೆಗಳಲ್ಲಿ ದೊರೆತ ಒಂದು ಚಿತ್ರದಲ್ಲಿ ಮನುಷ್ಯರನ್ನು ನುಂಗುತ್ತಿರುವ ಒಂದು ಆಕೃತಿಯಿರುತ್ತದೆ. ಇದನ್ನು ಮೃತ್ಯು ಎಂದು ಹೆಸರಿಸ ಬಹುದು. ಇದರ ಸಮೀಪದಲ್ಲಿ ಎರಡು ತೆಳ್ಳಗಿನ ಉದ್ದನೆಯ ಜೀವಿಗಳ ಚಿತ್ರವಿದೆ. ಇವನ್ನು ಏಬೆಯು ಪ್ರೇತಾತ್ಮಗಳು ಎಂದು ಕರೆದಿದ್ದಾನೆ. ಆದರೆ, ಈತನ ಅಭಿಮತವನ್ನು ಒಪ್ಪುವಂತಿಲ್ಲ. ಏಕೆಂದರೆ, ಆಸ್ಟ್ರೇಲಿಯಾದಲ್ಲಿ ದೊರಕಿರುವ ಶಿಲಾಚಿತ್ರಗಳಲ್ಲಿಯೂ ಮಾನವ ಶರೀರವನ್ನು ಹಗ್ಗದಂತೆ ತೆಳ್ಳಗಾಗಿ ಗುರುತಿಸಲಾಗಿದೆ. ಇದರಿಂದ ಮಾನವರನ್ನು ತೆಳ್ಳಗಿನ ಗೀಟುಗಳಲ್ಲಿ ಸಂಕೇತಿಸುವುದೂ ಒಂದು ಕಲಾಶೈಲಿಯೆನ್ನಬಹುದು. ಹೀಗೆ ಈ ಚಿತ್ರಗಳ ಆಕಾರ ಮತ್ತು ಮುಖಾಕೃತಿಗಳಲ್ಲಿ ಆಶ್ಚರ್ಯಕರ ವೈವಿಧ್ಯವಿದೆ. ಇವುಗಳಲ್ಲಿ ಚಿತ್ರಕಾರ ತನ್ನ ಕಲ್ಪನಾಶಕ್ತಿಯನ್ನು ಸ್ವಚ್ಛಂದವಾಗಿ ಹರಡಿಸಿದ್ದಾನೆ ಎನ್ನಬಹುದು.

ದಕ್ಷಿಣ ಆಫ್ರಿಕೆಯ ಅಥವಾ ಪ್ರಾಗೈತಿಹಾಸಿಕ ಚಿತ್ರಕಲೆಗಳ ವಾಸ್ತವಿಕ ಅಭಿಪ್ರಾಯ ಯಾವುದು? ಈ ಸಮಸ್ಯೆಯು ಇನ್ನೂ ಬಹುವರ್ಷ ಪುರಾತತ್ವ ಹಾಗೂ ನರವಂಶ ವಿಜ್ಞಾನಗಳ ವಿಶೇಷಜ್ಞರಿಗೆ ತಮ್ಮ ಕಲ್ಪನಾಶಕ್ತಿಯನ್ನು ಉಪಯೋಗಿಸುವ ಅವಕಾಶವನ್ನು ಒದಗಿಸಿಕೊಡುತ್ತದೆ.

ಆದರೂ ನಿಜವಾದ ಕಲಾಕೃತಿಗಳೆಂದು ಅವನ್ನು ತಿಳಿದುಕೊಂಡಲ್ಲಿ ಅವುಗಳ ರಸವನ್ನು ಆಸ್ವಾದಿಸಬಹುದು. ಈ ಚಿತ್ರಗಳ ಸೌಂದರ್ಯ ಮತ್ತು ಓಜಸ್ಸುಗಳನ್ನು ಕಂಡಾಗ ಏಬೆ ಬ್ರೆಯಿಲ್‌ನ ಮನಸ್ಸಿನಲ್ಲಿ ಹುಟ್ಟಿದಂತಹ ಉತ್ಸಾಹ ಮತ್ತು ಆಕರ್ಷಣೆಯನ್ನು ದರ್ಶಕನ ಮನಸ್ಸಿನಲ್ಲಿ ಅವು ಮೂಡಿಸುತ್ತವೆ ಎಂಬುದು ಖಂಡಿತ.

"ನಚಿಕೇತ"ರ
ಇನ್ನೊಂದು ನವೀನ ಕಾದಂಬರಿ—

ಮಣ ಯಾತ್ರೆ

ಇದೀಗ ಪ್ರಕಟವಾಗಿದೆ.
ಬೆಲೆ ರೂ. 1-50 ನ. ಪೈಸೆ.
ಮೊದಲು ಪ್ರಕಟವಾದ ಕಾದಂಬರಿ—

ಭಾವಾರ್ಚನೆ

ಬೆಲೆ ರೂ. 1-25 ನ. ಪೈಸೆ.
ಪ್ರತಿಗಳು ಸಿಗುವ ಸ್ಥಳಗಳು:—
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೋ, ಉಡುಪಿ.

Tel: 'BLUEYAGAR' — ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ — Phone: 374

ಕೆ. ಆರ್. ಕೆ. ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು.[ಮಾಲಿಕ: ಕೆ.ಕೆ.ಆರ್. ಶೇಟ್

ಪುಸ್ತಕ ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ.— ಸಂ, ನ)

ಮದನ ಮೋಹನ ಮಾಲವೀಯರ ಸಂಕ್ಷಿಪ್ತ ಜೀವನ ಚರಿತ್ರೆ:— ಸಂಗ್ರಾಹಕರು ಮತ್ತು ಪ್ರಕಾಶಕರು: ಡಾ| ಐ. ಕೆ. ಪಿ. ಶರ್ಮಾ, ಮಂಗಳೂರು ೩. ಪುಟಗಳು: ೫೬. ಬೆಲೆ: ರೂ. 0=೭೫.

ಕಾಶೀ ಹಿಂದೂ ವಿಶ್ವವಿದ್ಯಾಲಯದ ಸಂಸ್ಥಾಪನೆಗೆ ಕಾರಣೀಭೂತರಾಗಿ ಮರಣಪರ್ಯಂತ ಅದರ ಉನ್ನತಿ ಅಭಿವೃದ್ಧಿಗಳಿಗಾಗಿ ತಮ್ಮ ತನುಮನಧನವನ್ನು ಸವೆಯಿಸಿದ ಮಹಾ ಮೇಧಾವಿ ಪಂಡಿತ ಮದನ ಮೋಹನ ಮಾಲವೀಯರವರ ಪವಿತ್ರ ನಾಮಧೇಯವನ್ನು ತಿಳಿಯದ ಭಾರತೀಯನಿಲ್ಲ. ಅವರ ಉಜ್ವಲ ರಾಷ್ಟ್ರಪ್ರೇಮ, ಧರ್ಮನಿಷ್ಠೆ, ಕ್ರಿಯಾಪಟುತ್ವ, ಅಚಲ ಸಾಧನೆ ಮತ್ತು ಕರ್ತವ್ಯತತ್ಪರತೆಯೇ ಮೊದಲಾದ ಮಹಾಗುಣಗಳು ಕೇವಲ ಭಾರತೀಯರಿಗಲ್ಲ ವಿಶ್ವವಾಸಿಗಳಿಗೆಲ್ಲರಿಗೂ ಅನುಕರಣೀಯವಾಗಿದೆ. ಪ್ರಾಚೀನ ಗುರುಕುಲ ಪದ್ಧತಿಯ ಮತ್ತು ಆಯುರ್ವೇದ ಶಾಸ್ತ್ರಗಳ ಪುನರುತ್ಥಾನಕ್ಕಾಗಿ ಸ್ವಜೀವನವನ್ನು ಮುಡುಪಾಗಿಟ್ಟು, ಭಾರತೀಯರ ಸ್ವರಾಜ್ಯ ಮತ್ತು ಸ್ವಧರ್ಮ ರಕ್ಷಣೆಗಾಗಿ ರಕ್ತಹೀರಿ ಪರಿಶ್ರಮಿಸಿದವರಿವರು. ಇಂತಹ ಪುಣ್ಯಶ್ಲೋಕರಾದ ಪಂಡಿತ ಮಾಲವೀಯರವರ ಜೀವನೇತಿಹಾಸವನ್ನು ಸಂಕ್ಷಿಪ್ತವಾಗಿ ಕನ್ನಡಿಗರಿಗೆ ಒದಗಿಸಿ ಡಾ| ಐ. ಕೆ. ಪಿ. ಶರ್ಮರು ಅವರ ಕೃತಜ್ಞತೆಗೆ ಪಾತ್ರರಾಗಿದ್ದಾರೆ.

ಒಂದು ಬೃಹತ್ ಗ್ರಂಥವಾಗತಕ್ಕ ಚರಿತ್ರೆಯನ್ನು ಕೇವಲ ೫೬ ಪುಟಗಳಲ್ಲಿ ಸಂಗ್ರಹಿಸುವ ಕಷ್ಟ ಪರಿಶ್ರಮಸಾಧ್ಯವೆನಿಸಿವ ಕಾರ್ಯದಲ್ಲಿ ಡಾ| ಶರ್ಮಾ ಯಶಸ್ವಿಯಾಗಿದ್ದಾರೆ. ದಿ| ಮಾಲವೀಯರವರ ಬಾಲ್ಯದಿಂದ ಅವಸಾನದವರೆಗಿನ ಮಹತ್ವಪೂರ್ಣ ಘಟನೆಗಳೆಲ್ಲವನ್ನೂ ಹಸನಾಗಿ ನೇಯ್ದು ತಮ್ಮ ಸುಲಲಿತ ಸುಮಧುರ ಸುಮನೋಹರ ತಿಳಿಗನ್ನಡ ಭಾಷೆಯಲ್ಲಿ ಸಂಗ್ರಹಿಸಿ ನಮ್ಮ ಕೈಗಳಲ್ಲಿ ಇರಿಸಿದ್ದಾರೆ. ಪಂಡಿತ ಮಾಲವೀಯರವರ ಆದರ್ಶಗುಣಗಳ, ಅವರ ಜೀವಿತೋದ್ದೇಶಗಳ ಪ್ರಕಾಶನಕ್ಕೆ ಕೊರತೆಯೊದಗದಂತೆ ನೋಡಿಕೊಂಡು ಅವರ ಆಯುರ್ವೇದ ಪ್ರಿಯತೆಯನ್ನು ಬಲವಾಗಿ ಪ್ರಕಾಶಪಡಿಸಿ ಅದರ ಸಮರ್ಥನೆಯ ಆಭಾಸ ನಮಗೀ ಕಿರುಹೊತ್ತಗೆಯಲ್ಲಿ ಗೋಚರವಾಗುವುದು. ಡಾ. ಶರ್ಮರವರು ಆಯುರ್ವೇದ ಗ್ರಂಥ ಲೇಖನದಲ್ಲಿ ಮಾತ್ರವಲ್ಲ ಇನ್ನಿತರ ಸಾಹಿತ್ಯಕ್ಷೇತ್ರಗಳಲ್ಲಿ ದುಡಿಯುವುದಕ್ಕೂ ಸಮರ್ಥರೆಂಬುದನ್ನು ಈ ಗ್ರಂಥ ಸಾರಿಹೇಳುತ್ತದೆ. ಡಾ| ಶರ್ಮಾ ಅವರು ಇಂತಹ ಉತ್ತಮ ಪುಸ್ತಕಗಳನ್ನು ಕನ್ನಡಿಗರಿಗೆ ಅಧಿಕಾಧಿಕವಾಗಿ ಒದಗಿಸುತ್ತಿರಲಿ; ಅವರಿಗೆ ಕನ್ನಡ ಜನತೆ ಯೋಗ್ಯ ಪ್ರೋತ್ಸಾಹನೀಡಲಿ.

ಮದನ ವಿಜಯ—(ಯಕ್ಷಗಾನ) ಲೇಖಕ: ಶ್ರೀ ಕೆ. ವಿ. ಕೃಷ್ಣಪ್ಪ, ನಂ. 150 ರಂಗಸ್ವಾಮಿ ಗುಡಿ ಬೀದಿ, ಬೆಂಗಳೂರು. ಪ್ರಕಾಶಕರು: ? ಪುಟಗಳು: ೫೭. ಬೆಲೆ: ರೂ. ೧=೫೦.

ತೀರ್ಥಂಕರ ಋಷಭ ಸ್ವಾಮಿಯ ಪುತ್ರ ಮಾನವ ಮದನ ಭರತೇಶ ಚಕ್ರವರ್ತಿಯು ದಿಗ್ವಿಜಯಕ್ಕೆ ಹೊರಟು ಕೊನೆಗೆ ತನ್ನ ಸಹೋದರ ಬಾಹುಬಲಿಯನ್ನು ಗೆದ್ದ ಸನ್ನಿವೇಶವನ್ನು ಯಕ್ಷಗಾನ ರೂಪದಲ್ಲಿ ಈ ಗ್ರಂಥದಲ್ಲಿ ನಿರೂಪಿಸಲಾಗಿದೆ. ಯಕ್ಷಗಾನದ ಪದ್ಯಗಳೊಡನೆ ಅವುಗಳ ಅರ್ಥವಿವರಣೆಯನ್ನೂ ಮಾಡಿರುವುದು ಇಲ್ಲಿ ಕಾಣುವ ಒಂದು ವೈಶಿಷ್ಟ್ಯ. ಪದ್ಯರಚನೆ ಹಾಗೂ ಅರ್ಥವಿವರಣೆಗಳು ಸಾಮಾನ್ಯವಾಗಿವೆ. ಅಚ್ಚಿನ ದೋಷಗಳು ಅಗಣಿತವಿರುವುದು ಪುಸ್ತಕದಲ್ಲಿ ಕಾಣುವ ದೊಡ್ಡ ಕುಂದು. ರತ್ನಾಕರ ವರ್ಣಿಯು ಮಾನವ ಮದನನಾಗಿ ವರ್ಣಿಸಿದ ಭರತೇಶನ ವಿಜಯವೂ ಇದು ಹೌದು; ಜತೆಗೆ ಬಾಹುಬಲಿಯು ಮದನನ ಮೇಲೆ ವಿಜಯಗಳಿಸಿದ ಪ್ರಸಂಗವೂ ಹೌದು. ಈ ಪುಸ್ತಕದ ಆರ್ಥಿಕಮೌಲ್ಯ ಮಾತ್ರ ಹೆಚ್ಚಾಗಿಯೆಂದೇ ಹೇಳಬೇಕು. ಪ್ರಸಿದ್ಧ ಯಕ್ಷಗಾನ ಕೃತಿಕರ್ತೃ ದಿ| ಕೆ. ಪಿ. ವೆಂಕಪ್ಪ ಶೆಟ್ಟರ ಭರತೇಶ ದಿಗ್ವಿಜಯವನ್ನೂ ಈ ಯಕ್ಷಗಾನಪ್ರಸಂಗವಾಡುವವರು ನೋಡಿಕೊಳ್ಳುವುದು ಸೂಕ್ತ.

ಅಮರಗಾನ— ಕವಿ: ಶ್ರೀ ಯು. ವಿ. ನಾಯಕ್. ಪ್ರಕಾಶಕರು: ವಿಚಾರ ಸಾಹಿತ್ಯ ಮಾಲೆ, ಕಿಲ್ಲೂರು, ದ. ಕನ್ನಡ, ಪುಟಗಳು ೩೬. ಬೆಲೆ: ರೂ. 0=೬೨.

ಪ್ರಾಥಮಿಕ ಶಾಲೆಯ ಅಧ್ಯಾಪಕರಾದ ಶ್ರೀ ಯು. ವಿ. ನಾಯಕರ ಈ ಪುಸ್ತಕದಲ್ಲಿ ನಾವು ಇಪ್ಪತ್ತಮೂರು ಗೀತೆಗಳನ್ನು ನೋಡುತ್ತೇವೆ. ಇತಿಹಾಸಕ್ಕೆ ಇತಿಹಾಸಿಕ ವಿಭೂತಿಗಳಿಗೆ ಮಾತ್ರ ಇಲ್ಲಿ ಸ್ಥಾನವನ್ನು ಕಲ್ಪಿಸಿಕೊಟ್ಟಿದೆ. ನಿಜವಾಗಿ ಅಮರರಾಗಿ ಉಳಿದವರ ಕಥನವೇ ಅಮರಗಾನವಾಗಿ ಮೂಡಿರುವುದು ಸಮಾಧಾನಕರವಾಗಿದೆ. ಹೆಚ್ಚಿನ ಗೀತೆಗಳ ಆರಂಭದಲ್ಲಿ ಗೀತ ನಾಯಕರೆನಿಸಿದವರ ಬಗ್ಗೆ ಚುಟುಕಿನಲ್ಲಿ ಪರಿಚಯ ನೀಡಲಾಗಿದೆ. ದ್ವಿಪದಿ, ಷಟ್ಪದಿ, ವರ್ಣವೃತ್ತವೇ ಮೊದಲಾದ ಶಾಸ್ತ್ರೋಕ್ತ ಛಂದಸ್ಸು ಮಾತ್ರವಲ್ಲ ಅನುಕೂಲವಾದ ಇತರ ನವ್ಯ ಛಂದಸ್ಸಿನ ಬೆಡಗನ್ನೂ ಇಲ್ಲಿ ನೋಡಬಹುದು. ಮುಖ್ಯವಾಗಿ ಬುನಾದಿ ಶಾಲೆಗಳ ಉಪಯೋಗಾರ್ಥವಾಗಿ ಬರೆದಿರುವ ಈ ಕವಿತೆಗಳು ಸರಳ ಭಾಷೆಯಲ್ಲಿ ಹಿತವಾಗಿ ಹೊರಬಂದಿವೆ. 'ಶ್ರೀ ವಾಸುದೇವ ಪಂಚಕಂ' ಲೇಖಕರ ವಿದ್ವತ್ತಿಗೆ ಸಾಕ್ಷಿಯಾಗಿದೆ. ಲೇಖಕರ ಶೈಲಿ, ಭಾಷೆ ಮತ್ತು ವಿಷಯ ಕಥನ ಕ್ರಮಕ್ಕೆ ಶಂಕರಾಚಾರ್ಯರ ಕುರಿತಾಗಿ ಬರೆದ ಈ ಒಂದು ಪದ್ಯವನ್ನು ಉದಾಹರಿಸಬಹುದು:

ವಿಶ್ವವು ಮಿಥ್ಯವು ಪ್ರಭು ನಿರ್ಗುಣನು
ಜೀವೇಶ್ವರರೊಂದೇ ಎಂಬುದನು
ತತ್ವದಿ ಸಾರುತ ಮೆರೆದಿಹರು
ಅಪಾರ ಗ್ರಂಥಗಳ ಬರೆದಿಹರು ॥

ಲೇಖಕರು ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಇದನ್ನು ಬರೆದಂತಿದ್ದರೂ ಇದು ಶಿಶುಸಾಹಿತ್ಯವಾಗಲಾರದು; ಬಾಲಸಾಹಿತ್ಯದ ಮಟ್ಟದಿಂದಲೂ ಕೆಲವೆಡೆ ಮೀರಿ ನಿಂತಂತೆ ತೋರುವುದು. ಆದರೂ ಅಮರಕೋಶ ಪ್ರಾರಂಭದಲ್ಲಿ ಕಂಠಪಾಠ ಮಾಡುವುದರಿಂದ ಸಂಸ್ಕೃತ ವಿದ್ಯಾರ್ಥಿಗೆ ಮುಂದೆ ಪ್ರಯೋಜನ ಲಭ್ಯವಾಗುವಂತೆ 'ಅಮರಗಾನ'ವು ವಿದ್ಯಾರ್ಥಿಗಳ ಮುಂದಿನ ಜೀವನ ಉಜ್ವಲವಾಗುವಂತೆ ಪ್ರೇರೇಪಿಸಲು ಸಶಕ್ತವಾಗಬಹುದು

ಬಣ್ಣದ ಬಸವ: (ಮಕ್ಕಳ ಕವನಗಳು) ಲೇಖಕರು: ಶ್ರೀ ಎನ್. ಎಸ್. ರಾಮಸ್ವಾಮಿ. ಪ್ರಕಾಶಕರು: ಅಭ್ಯಾಸಿ ಅಧ್ಯಾಪಕರ ಉದ್ಯೋಗ ಸಂಘ, ಸರಕಾರಿ ಉಪಾಧ್ಯಾಯರ ಮೂಲ ಶಿಕ್ಷಣ ತರಬೇತಿ ವಿದ್ಯಾಲಯ ಹಾಸನ. ಪುಟಗಳು: ೨೪. ಬೆಲೆ. ರೂ. 0=೩೫.

"ಮಕ್ಕಳ ಕವನಗಳು" ಅಡಕವಾಗಿರುವ ಬಣ್ಣದ ಬಸವ ಎಂಬ ಈ ಹೊತ್ತಗೆಯು ೧೬ ಪುಟ್ಟ ಗೀತೆಗಳ ಸಂಕಲನ. ಬಸವ, ಚಿಟ್ಟೆ, ಗಾಂಧಿ, ಉಗಾದಿ, ಚೆಂಡು, ಮಲ್ಲಿಗೆ ಮೊದಲಾದುವುಗಳ ಬಗ್ಗಿರುವ ಈ ಗೀತೆಗಳು ಸರಳ ಶೈಲಿಯಲ್ಲಿ ಬರೆಯಲ್ಪಟ್ಟಿವೆ ಮಕ್ಕಳಿಗೆ ಶಾಲೆಗಳಲ್ಲಿ ಕಲಿಸಲು ಸೂಕ್ತವಾಗಿವೆ. "ಹಳದಿಯ ಹೆಡೆಯನು ಬಿಚ್ಚೋನಾಗ" ಎಂದು ನಾಗನ ಚಿತ್ರವನ್ನು ನೀಲಿ ಬಣ್ಣದಲ್ಲೇ ಬಿಡಿಸಿದ ದಾಖಲೆ ಸರಕಾರ ಪ್ರಕಾಶಿತ ಪಠ್ಯ ಪುಸ್ತಕದಲ್ಲೇ ಇರುವಾಗ, 'ಬಾರೊ ಬಸವ ಬಣ್ಣದವನೆ'; 'ದಟ್ಟಿಯುಟ್ಟು ಕೈಲಿ ಕೋಲು ಹಿಡಿದು ಗಾಂಧಿ' ಎಂದು ಮುಂತಾದೆಡೆ ಅಚ್ಚಿನ ಚಿತ್ರ ಶಬ್ದ ಚಿತ್ರಕ್ಕೆ ವ್ಯತಿರಿಕ್ತವಾಗಿರುವುದು ದೊಡ್ಡ ಅಸಂಭವವೆನಿಸಲಾರದು. ಆದರೂ ಎಳೆಯ ಮಕ್ಕಳ ಹಿತದೃಷ್ಟಿಯಿಂದ ಸಾಧ್ಯವಾದಷ್ಟು ಶಬ್ದ ಚಿತ್ರ ಮತ್ತು ಅಚ್ಚಿನ ಚಿತ್ರಗಳಲ್ಲಿ ಮೇಳವಿರುವಂತೆ ನೋಡಿಕೊಳ್ಳುವುದು ಅವಶ್ಯವೆಂದು ಸೂಚಿಸಬಹುದು. ಇಂತಹ ಹೊಂದಾಣಿಕೆ ಕನ್ನಡದಲ್ಲಿ ಆಗಬೇಕಾದರೆ ಅದೆಷ್ಟು ದಶಕಗಳು ಬೇಕೊ ಎಂಬುದರಿಂದ ಈ ಪುಸ್ತಕ ಪ್ರಕಾಶನವು ಸ್ವಾಗತಾರ್ಹವಿದೆ. ಪ್ರಾಥಮಿಕ ಶಾಲೆಗಳ ಒಂದೆರಡನೆಯ ತರಗತಿಯ ಮಕ್ಕಳಿಗೆ ಕಲಿಸಲು ಮತ್ತು ಕಲಿಯಲು ಅನುಕೂಲವಾಗಿದೆ.

Metric Weights & Measures Conversion Table- By A C. Lakshani. Publishers: Lakshani Publications, Shree Visnu Bhuvan, Plot No 27 A, 21 Brahmanwada Road, Kings circle, Bombay-19. Price: Rs 0-60nP.

ಭಾರತದಲ್ಲಿ ಮೆಟ್ರಿಕ್ ಅಳತೆಗಳನ್ನು ಒಂದೊಂದೇ ಹಂತದಲ್ಲಿ ವ್ಯವಹೃತಗೊಳಿಸುತ್ತ ಬರಲಾಗುತ್ತಿದೆ. ಇದಕ್ಕನುಕೂಲವಾಗಿ ಮೆಟ್ರಿಕ್ ತೂಕ ಮತ್ತು ಅಳತೆಗಳ ಬಗ್ಗೆ ಸಾಕಷ್ಟು ಜ್ಞಾನಭಂಡಾರಗಳನ್ನು ನಮಗೀ ಎಳೆಹೊತ್ತಗೆಯು ನೀಡುತ್ತದೆ. ಇದರಲ್ಲಿ ಬೇಂಕುಗಳು, ವ್ಯಾಪಾರಿಗಳಿಗೆ ಉಪಯುಕ್ತವಾದ ಮೆಟ್ರಿಕ್‌ಪದ್ಧತಿಗೆ ಅಳತೆ ಮತ್ತು ತೂಕಗಳನ್ನು ಪರಿವರ್ತಿಸುವ ಸರಳ ಕೋಷ್ಟಕಗಳು ಸಂಗ್ರಹಿಸಲ್ಪಟ್ಟಿವೆ. ದಪ್ಪಗಾದ ರಟ್ಟಿನಂತಹ ಹಾಳೆಯಲ್ಲಿ ಪುಟ್ಟ ಆಕಾರದಲ್ಲಿರುವ ಈ ಪುಸ್ತಕವು ಅತಿಪ್ರಯೋಜನಕರವಾಗಿದೆ. ಅವಶ್ಯಕತೆಯಿದ್ದವರು ಅವಶ್ಯ ಕೊಂಡುಕೊಳ್ಳಬೇಕಾದ ಕೋಷ್ಟಕ ಸಂಗ್ರಹವಿದು.

—ಗೋರಾ.

ರವೀಂದ್ರ ವಾಣಿ

(೩ನೇ ಪುಟದಿಂದ)

ಕದ ತತ್ವದರ್ಶಿಗಳ ಪ್ರತ್ಯಕ್ಷಾನುಭವದಲ್ಲಿದೆ. ಅವರು—"ಪ್ರಕೃತಿಯ ವಿಭೂತಿಗಳಲ್ಲಿ ಮನುಷ್ಯನ ಸ್ಥಾನವು ಶ್ರೇಷ್ಠವಾದುದೆಂದು" ಮೊದಲೇ ನಿರ್ಧರಿಸಿದ್ದಾರೆ. ಆದರೆ ಈ ಶ್ರೇಷ್ಠತೆಯ ಮಾನದಂಡ ಮಾತ್ರ ಬೇರೆಯೇ ಆಗಿದೆ. ಮನುಷ್ಯನು ಅತ್ಯಧಿಕ ಸಿರಿಸಂಪತ್ತನ್ನು ಸಂಪಾದಿಸಬಲ್ಲನೆಂಬುದರಿಂದ ಶ್ರೇಷ್ಠನೆಂಬುದು ಸರ್ವಥಾ ಅಲ್ಲ; ಹಾಗಾದರೆ ಈ ಮಾನವನ ಶ್ರೇಷ್ಠತೆಯಾವುದು? ಪ್ರಕೃತಿಯ ಸರ್ವಶಕ್ತಿಗಳಲ್ಲಿಯೂ, ಏಕಸೂತ್ರತೆಯನ್ನು ಸ್ಥಾಪಿಸುವ ಬುದ್ಧಿಶಕ್ತಿಯೇ ಮಾನವನ, ಶ್ರೇಷ್ಠತ್ವದ ಮಾನದಂಡವಾಗಿರುವುದು.

ಈ ಕಾರಣದಿಂದಲೇ ಭಾರತವು, ತನ್ನ ಪುಣ್ಯತೀರ್ಥಸ್ಥಳಗಳನ್ನು ಕೂಡ ಪ್ರಕೃತಿ ಸೌಂದರ್ಯದಿಂದ ತುಂಬಿರುವ ಸ್ಥಾನಗಳಲ್ಲಿ ಏರ್ಪಡಿಸಿರುವುದು. ತನ್ನ ಅವಶ್ಯಕತೆಗಳನ್ನು, ಆಸೆ, ಆಕಾಂಕ್ಷೆಗಳನ್ನು ಪೂರೈಸಿಕೊಳ್ಳಲಾರದೆ, ಸಂಕೀರ್ಣವಾದ ಮಾನವನ ಮನಸ್ಸು ಈ ವ್ಯಾವಹಾರಿಕ ಜಗತ್ತನ್ನು ಒಂದು ಕ್ಷಣವಾದರೂ, ಮರೆತು, ವಿಸ್ತಾರವೂ ರಮಣೀಯವೂ ಆದ, ಪ್ರಕೃತಿ ಸೌಂದರ್ಯದಿಂದ ಕಂಗೊಳಿಸುತ್ತಿರುವ, ಪ್ರಕೃತಿ ಲೀಲೆಗಳನ್ನು ನೋಡಿ, ಕಣ್ಮನಗಳನ್ನು ತಣಿಸಿ, ತನ್ನ ಮಹತ್ವವನ್ನು ಗುರುತಿಸಿ, ಆನಂದಿಸಲಿ! ಎಂಬ ಸದುದ್ದೇಶದಿಂದಲೇ ಭಾರತವು, ಅಂತಹ ಅನುಪಮವಾದ, ಪ್ರಕೃತಿಯ ಸಾನ್ನಿಧ್ಯದಲ್ಲಿ ತನ್ನ ತೀರ್ಥಸ್ಥಳಗಳನ್ನು ಸ್ಥಾಪಿಸಿರುವುದು.

ಪ್ರಕೃತಿಗೂ, ನಮಗೂ, ನಾವು ಬಹು ದೂರವೆಂದು ಭಾವಿಸಿ ಸ್ವತಃ ಪ್ರಕೃತಿಯಿಂದ, ಬೇರೆಯೆಂದು, ಯಾವಾಗ ನಾವು ಭಾವಿಸುವೆವೋ? ಮತ್ತು ಕೇವಲ ಮನುಷ್ಯರಾದ ನಾವು ಈ ವಿಶ್ವದ ವಿಭೂತಿಗಳಿಂದ, ತೀರಾ ಅಪರಿಚಿತರಾಗಿ, ಪ್ರತ್ಯೇಕವಾಗಿರುವೆವೋ? ಆಗಲೇ ನಮ್ಮ ಸಮಸ್ಯೆಗಳು ನಮ್ಮ ಮುಂದೆ, ಒಂದೊಂದಾಗಿ ತಲೆಯೆತ್ತಿ ನಿಲ್ಲುವುವು. ಮತ್ತೆ ಈ ಸಮಸ್ಯೆಗಳ ಪರಿಹಾರೋಪಾಯ ಮಾರ್ಗವೂ ಮುಚ್ಚಲ್ಪಟ್ಟಿರುವ ಕಾರಣ ನಾವು ಮಿಥ್ಯಾ (ಕೃತಕ) ಉಪಚಾರಗಳಿಂದ ಪರಿಹಾರಕ್ಕಾಗಿ ಪ್ರಯತ್ನಿಸತೊಡಗುತ್ತೇವೆ. ಆದರೆ ಈ ಉಪಚಾರಗಳಿಂದ ಸಮಸ್ಯೆಗಳು ಪರಿಹಾರವಾಗುವ ಬದಲು, ಎಷ್ಟರಮಟ್ಟಿಗೆ ಜಟಿಲವಾಗುತ್ತವೆಯೆಂದರೆ, ಮತ್ತೆ ಇವುಗಳ ಪರಿಹಾರವೇ ಅಸಾಧ್ಯವಾಗುತ್ತದೆ ಎಂಬ ಈ ವಿಚಾರ ಭಾರತಕ್ಕೆ ಪ್ರಥಮತಃ ತಿಳಿದು ಬಂದಿದೆ.

ಮನುಷ್ಯನು ಪ್ರಕೃತಿ ಮಾತೆಯ ಸೆರಗಿನ ಛಾಯೆಯಿಂದ ದೂರ ಸರಿದು, ಕೇವಲ ಮನುಷ್ಯ ಸಮೂಹದ ಕ್ಷೇತ್ರದಲ್ಲೇ ಕಟ್ಟಲ್ಪಟ್ಟ ಸೂತ್ರದ ಮೇಲೆ, ಯಾವಾಗ ನಡೆಯಲಾರಂಭಿಸುತ್ತಾನೋ, ಆಗ ಆತನು ಸಮತೂಕವು ತಪ್ಪಿ ಹೋಗಿ, ಆ ಸೂತ್ರದ ಮೇಲೆ ಸ್ಥಿರವಾಗಿ ನಿಲ್ಲಲು, ಆತನು ಸರ್ಕಸ್ ಮಾಡಬೇಕಾಗುತ್ತದೆ. ಈ ಸಂಘರ್ಷ ರೂಪದ ಕಷ್ಟ ಅನುಭವವಾದಾಗ ಆತನು ವಿಘಾತನನ್ನು ದೂಷಿಸ್ವರೂಪದ ಕಷ್ಟ ಅನುಭವವಾದಾಗ ಆತನು ವಿಧಾತನನ್ನು ದೂಷಿಸಲು ಆರಂಭಿಸುತ್ತಾನೆ. ಇಷ್ಟಾದರೂ ಕೊನೆಗೂ, ಆತನು ಉರುಳಿ ಬೀಳುವ ಸಂಭವವೇ ಹೆಚ್ಚಾಗಿರುತ್ತದೆ. ಆದರೂ, ಆತನು ತನ್ನ ಮಿಥ್ಯಾ ಅಹಂಕಾರದಿಂದ ಸುಳ್ಳು ಸಂತೋಷವನ್ನು ಅನುಭವಿಸುವ ಪ್ರಯತ್ನಮಾಡಿ ಶಾಂತಿಯನ್ನು ಹೊಂದಲು ಚಡಪಡಿಸುತ್ತಾನೆ. ಇಷ್ಟಾದರೂ, ಆತನಿಗೆ—"ತಾನು ವಿಶ್ವದೊಡನೆ ಒಬ್ಬನೇ ಹೆಣಗಾಡುತ್ತಿದ್ದೇನೆ! ಇಡೀ ಜಗತ್ತೇ ತನ್ನನ್ನು ದೂರೀಕರಿಸಿ, ತನ್ನ ನಾಶಕ್ಕಾಗಿ ಪ್ರಯತ್ನಿಸುತ್ತಿದೆ! ಹೀಗಿದ್ದರೂ, ತಾನು, ತನ್ನ ಸ್ವಸಾಮರ್ಥ್ಯದಿಂದ ಇಷ್ಟರಮಟ್ಟಿಗಾದರೂ ಜೀವಿಸಿದ್ದೇನೆ!" ಎಂಬ ಈ ಆತ್ಮವಂಚನೆಯ ಭಾವನೆ ಮೂಡುತ್ತದೆ. ಮತ್ತೆ ಈ ಮೂಲಕ ಆತನು ಕೃತಕ ಸಂತೋಷವನ್ನು ಅನುಭವಿಸುವ ಪ್ರಯತ್ನ ಮಾಡಲಾರಂಭಿಸುತ್ತಾನೆ.

(ಸಶೇಷ)



ಕುಮಾರಿ ಬಿಲ್ಲೆಗಳು
(Registered)
ಈ ದೇಶೀಯ ತಯಾರಿಕೆಯ ಗುಣಾಂಶವು ವರ್ಷಗಟ್ಟಲೆಯಿಂದ ವಿಖ್ಯಾತವಾಗಿದೆ ಮತ್ತು ಪ್ರಮುಖ ಕೆಮಿಸ್ಟರಿಂದ ಈ ಕೆಳಗಿನ ದರಗಳಲ್ಲಿ ವಿಕ್ರಯಿಸಲ್ಪಡುತ್ತವೆ. ಟ್ಯೂಬಿಗೆ ರೂ. 4=00 (ಸಾದಾ), ರೂ. 6=00 (ಸ್ಪೆಶ್ಯಲ್), ರೂ. 9=00 (ಎಕ್ಸ್ಟ್ರಾ ಸ್ಪೆಶ್ಯಲ್).
P. DEVEE & CO. (M. I.) CALCUTTA—40
ಸ್ಟಾಕಿಸ್ಟರು: ಶಾ ಕಂಪೆನಿ, ಮಂಗಳೂರು—1.

ಕನ್ನಡ ಪುಸ್ತಕಗಳಿಗೆ—
ಮತ್ತು
ಶಾಲೆಗಳಿಗೆ ಬೇಕಾಗುವ
ಯಾವತ್ತೂ ಫಾರ್ಮುಗಳೂ
ಹಾಜರಿ ರಿಜಿಸ್ಟ್ರಗಳೂ
ಕಥೆಕಾದಂಬರಿ ಇತ್ಯಾದಿಪುಸ್ತಕಗಳಿಗೆ
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಆಧ್ಯಾತ್ಮ ವಿಚಾರ

ಭಗವದ್ಗೀತೆಯ ಪ್ರಕಾಶ

ಅಹಂಭಾವವನ್ನು ಹೋಗಲಾಡಿಸಿ, ಆತ್ಮಬಲದಿಂದ ಪರಮಾತ್ಮನಲ್ಲಿ ದೃಢ ಭಕ್ತಿಯಿಟ್ಟು ನಿಷ್ಕಾಮ ಕರ್ಮವನ್ನು ಧೈರ್ಯದಿಂದ ಮಾಡಿದರೆ, ಸಂಪೂರ್ಣ ಶಾಂತಿಯು ಲಭಿಸುವುದು.

ಶ್ರೀ ಎಂ. ಬಿ. ಶಂಕರ ರಾವ್, ಐ. ಎ. ಎಸ್. (ನಿವೃತ್ತ)

ಕಿರಣ ೧೮: ಮುಕ್ತಿ

ಅರ್ಜುನ:—ಪರಮಾತ್ಮನೇ, ಪರಿತ್ಯಾಗವೆಂದರೇನು? ನಿನ್ನಲ್ಲಿ ಲೀನವಾಗುವುದು ಹೇಗೆ? ದಯವಿಟ್ಟು ತಿಳಿಸು.

ಭಗವಾನ:—ದುರಾಶೆಗಳನ್ನು ಬಿಟ್ಟುಬಿಟ್ಟು, ನಿಷ್ಕಾಮ ಕರ್ಮಗಳನ್ನು ಮಾಡಿ, ಸ್ವಧರ್ಮವನ್ನು ಮಾಡುತ್ತಲೇ ಇದ್ದು ತಪವನ್ನು ಸಾಧಿಸಿದರೆ ಪರಿಶುದ್ಧತೆಯು ಪ್ರಾಪ್ತಿಸುವುದು. ಮಾಡಬೇಕಾದ ಕರ್ಮಗಳನ್ನು ಮಾಡಲೇಬೇಕು. ಹಾಗೆ ಮಾಡದಿದ್ದರೆ ಆಲಸ್ಯಕ್ಕೆ ಅವಕಾಶ ಕೊಟ್ಟಂತಾಗುವುದು. ಫಲಾಪೇಕ್ಷೆಯಿಲ್ಲದೆ ಮಾಡುವ ಕರ್ಮಗಳು ಸತ್ವಗುಣವನ್ನು ಬರಮಾಡುವವು. ಆ ಗುಣದಿಂದಲೇ ಕಾಲಕ್ರಮೇಣ ಪರಿತ್ಯಾಗದ ಉತ್ಪತ್ತಿ. ಕರ್ಮ ಬಾಹಿರನಾಗುವುದು ಕೇವಲ ತಪ್ಪು. ನಿಷ್ಕಾಮ ಪ್ರೇಮದಿಂದ ನಿಷ್ಕಾಮ ಕರ್ಮಗಳನ್ನು ಕಷ್ಟಗಳನ್ನು ನಿರೀಕ್ಷಿಸಿ ಮಾಡುತ್ತಾ ಬಂದರೆ ಅದೇ ತ್ಯಾಗವಾಗುವುದು. ಜ್ಞಾನತತ್ವದಲ್ಲಿ ಐದು ವಿಷಯಗಳಿಗೆ—೧. ಕರ್ಮಸ್ಥಾನ. ೨. ಕರ್ಮಕರ್ತ. ೩. ಕರ್ಮೋಪಕರಣಗಳು. ೪. ಕರ್ಮಾಧಿಷ್ಠಾಂಶಗಳು. ೫ ಕರ್ಮದ ಪ್ರಧಾನ ದೇವತೆ. ಮಾನವನು ಮನೋವಾಕ್ಕಾಯಗಳಿಂದ ಮಾಡುವ ಎಲ್ಲಾ ಕರ್ಮಗಳೂ ಜ್ಞಾನತತ್ವದ ಈ ಐದು ವಿಷಯಗಳನ್ನು ಹೊಂದಿವೆ. ಆದುಕಾರಣ, ತನ್ನಿಂದಲೆ ಎಲ್ಲವೂ ಆಗಿ ಬಿಟ್ಟಿತು ಎಂದು ಭಾವಿಸುವ ಅಹಂಕಾರಿಯು ದುಷ್ಕರ್ಮಿಯಾಗುವನು "ನಾನು" ಎಂಬ ಅಹಂಭಾವನೆಯನ್ನು ಬಿಟ್ಟು ಕರ್ಮಗಳನ್ನು ಸಾಗಿಸುವವನು ಮಾನವವಧೆಯನ್ನು ಮಾಡಿದರೂ ಆ ಕೊಲೆಗೆ ಅವನು ಬಾಧ್ಯನಾಗನು. ಜ್ಞಾನ, ಕರ್ಮ ಮತ್ತು ಕರ್ತೃ—ಮೂರು ಒಂದಾಗಿ ಎಲ್ಲಾ ಕಾರ್ಯಗಳು ಮುನ್ನಡೆಯುತ್ತಿವೆ. ಪಡೆದ ಜ್ಞಾನವು ಸುಜ್ಞಾನವಿರಬೇಕು. "ಈ ಕೆಲಸವನ್ನು ನಾನು ಮಾಡಿದೆನು. ಇದು ನನ್ನಿಂದ ಆಯಿತು" ಎಂಬ ಭಾವನೆಯಿಂದ ಮಾಡಿದ ಕಾರ್ಯಗಳು ಆಶಾಬಂಧನದ ಕಾರ್ಯಗಳಾಗುವವು. ಮುಂದಾಗುವ ಹಾನಿಯನ್ನು ಪರಿಗಣಿಸದೆ ಮಾಡುವ ಕಾರ್ಯಗಳು ತಮೋಗುಣಿಗಳಿಗೆ ಒಪ್ಪಿದುವು. ಸಾತ್ವಿಕನಲ್ಲಿ ಅಹಂಕಾರವಿಲ್ಲ. ಆತನಿಗೆ ಸುಖದುಃಖಗಳು ಏಕರೀತಿಯಲ್ಲಿ ತೋರುವವು. ತಮೋಗುಣಿಗೆ ಫಲಾಪೇಕ್ಷೆ ಇದ್ದೇ ಇದೆ. ಆತನು ಸದಾ ಲೋಭಿಯು. ಆತನಿಂದ ಜಗತ್ತಿಗೆ ಸಂಕಷ್ಟಗಳು ಒದಗುವವು ತಮೋಗುಣದವನು ಬುದ್ಧಿಹೀನನೂ, ವಂಚಕನೂ, ಮತ್ಸರಿಯೂ ಆಗಿರುವನು. ಸತ್ವಗುಣದವನಿಗೆ ಧರ್ಮವಾವುದು, ಅಧರ್ಮವಾವುದು ಎಂಬುದು ಸದಾ ಗೋಚರಿಸುವುದು. ಯಾವುದಕ್ಕೆ ಹೆದರಬೇಕು, ಯಾವುದಕ್ಕೆ ಹೆದರಬಾರದು ಎಂಬ ತಾರತಮ್ಯವನ್ನು ಆತನು ತಿಳಿದೇ ಇರುವನು. ರಜೋಗುಣದವನಿಗೆ ಧರ್ಮ ಅಧರ್ಮಗಳ ಗುಣ ಸರಿಯಾಗಿ ತಿಳಿಯುವುದಿಲ್ಲ. ಆತನು ಯಾವಾಗಲೂ ಸಂಶಯಗಳಲ್ಲಿ ತೊಳಲುತ್ತಿರುವನು. ಅಧರ್ಮವನ್ನು ಧರ್ಮವೆಂದು ತಿಳಿದು ಅಸತ್ಯವನ್ನು ಸತ್ಯವೆಂದು ಭಾವಿಸಿ ಜೀವಿಸುವವನು ತಮೋಗುಣದವನಾಗುತ್ತಾನೆ ಸಾತ್ವಿಕನು ದೃಢಮನಸ್ಸಿನವನಾಗಿ, ನಿರ್ಮಲ ಬುದ್ಧಿಯಿಂದ ಅಹಂಭಾವವನ್ನು ತ್ಯಜಿಸಿ ತನ್ನ ಶ್ವಾಸವನ್ನು ರಕ್ಷಿಸಿಕೊಳ್ಳುವನು. ಧನ, ಸುಖ, ಮೋಹಗಳ ಬಂಧನದಲ್ಲಿ ಸಿಲುಕಿದವನು ರಜೋಗುಣಿಯಾಗುವನು. ಅವನ ಆಶೆಗಳು ಹೆಚ್ಚಾಗುತ್ತಾ ಹೋಗುವವು. ಕಾಮ, ಕ್ರೋಧ ಭಯಗಳನ್ನು ತನ್ನ ಆಧಾರವಾಗಿಟ್ಟುಕೊಂಡು ದುಃಖವನ್ನು ಬರಮಾಡಿಕೊಳ್ಳುವ ಮೂರ್ಖನು ತಾಮಸಿಯಾಗುವನು. ಅವನು ಅಸುರವರ್ಗಕ್ಕೆ ಸೇರುವನು.

ತನ್ನ ಆತ್ಮಶೋಧನೆಯಿಂದಲೆ ಪರಿಶುದ್ಧನಾಗುವ ಸಾತ್ವಿಕನಿಗೆ ಮೊದಲು ಮೊದಲು ಕಷ್ಟಗಳು ಸಂಭವಿಸುವವು. ಆ ಕಷ್ಟಗಳು ವಿಷದಷ್ಟು ಕಠಿಣವಾಗಬಹುದು ಆದರೆ ಸಮಯ ಹೋದಂತೆ ಆತನಲ್ಲಿ ಆತ್ಮಜ್ಞಾನವು ಉದಿಸಿ, ಆತನು ಸಂಪೂರ್ಣ ಜ್ಞಾನಿಯಾಗಿ ಅಮೃತದಷ್ಟು ಸವಿಯಾದ ಸುಖವನ್ನು ಪಡೆಯುವನು. ಮಾನವ ಲೋಕದಲ್ಲಿಯೂ, ಸುರಲೋಕದಲ್ಲಿಯೂ ಸತ್ವ, ರಜ, ತಮ ಗುಣಗಳೇ ಮಾನವರನ್ನೂ ಸುರರನ್ನೂ ಬಂಧಿಸಿವೆ. ಸತ್ವಗುಣದಿಂದ ಬಾಳಿ, ಸತ್ಕರ್ಮಗಳನ್ನೇ ಮಾಡಿ, ಅಹಂಕಾರವನ್ನು ಬಿಟ್ಟು, ಮಾಡುವ ಕಾರ್ಯಗಳನ್ನೆಲ್ಲಾ ಪರಮಾತ್ಮನಿಗೆ ಅರ್ಪಿಸಿ ಜೀವನವನ್ನು ಸಾಗಿಸುವವರು ಕ್ರಮೇಣ ತ್ಯಾಗಿಗಳಾಗುವರು. ತ್ಯಾಗವು ಸಂಪೂರ್ಣತೆಯನ್ನು ಹೊಂದಿದಾಗ ದಿವ್ಯದೃಷ್ಟಿಯನ್ನು ಪಡೆಯುವರು. ಏಕಾಂತದಲ್ಲಿ ವಾಸಿಸುವರು. ಬಹಳ ಕಡಿಮೆ ಆಹಾರವನ್ನು ಭುಂಜಿಸುವರು. ಧ್ಯಾನದಲ್ಲಿ ಮಗ್ನರಾಗುವರು. ಮೋಹಪಾಶದಿಂದ ಬಿಡುಗಡೆಯಾಗುವರು. ಹೆಮ್ಮೆ ಮತ್ತು ಕೋಪವನ್ನು ಬಿಡುವರು. ನಿಷ್ಕಾಮಾರ್ಥಿಗಳಾಗಿ ಶಾಂತಿಯನ್ನು ಪಡೆಯುವರು. ನನ್ನಲ್ಲಿ ಐಕ್ಯರಾಗುವರೇ ಸಿದ್ಧರಾಗುವರು. ಎಲ್ಲರೂ ತಮ್ಮಂತೆಯೇ ಎಂದು ವಿಶಾಲ ಹೃದಯದಿಂದ ತಿಳಿಯುವರು. 'ನಾನು' 'ನನ್ನದು' ಎಂಬ ಮಾತುಗಳನ್ನು ಮರೆಯುವರು. ಸತ್ಯವನ್ನು ಕಾಣುವರು. ಕೊನೆಗೆ ನನ್ನಲ್ಲಿ ಕೂಡುವರು.

ಪಾರ್ಥನೇ, ನನ್ನ ಅನುಗ್ರಹದಿಂದ ನೀನು ನನ್ನಲ್ಲಿ ಭಕ್ತಿಭಾವವನ್ನಿಟ್ಟು ಶರಣು ಬಾ. ಆದರೆ "ನಾನು ನನ್ನಿಂದಾದು ಎಂಬ ಅಹಂಭಾವವನ್ನು ಹೋಗಲಾಡಿಸದೆ ಇದ್ದರೆ, ನಾಶಕ್ಕೆ ಒಳಗಾಗುವೆ. "ನಾನು ಯುದ್ಧವನ್ನು ಮಾಡೆನು" ಎಂದು ಹೇಳಬೇಡ. ಸ್ವಭಾವವು ನಿನ್ನನ್ನು ಯುದ್ಧಕ್ಕೆ ಎಳೆಯುವುದು ನೀನು ಕ್ಷತ್ರಿಯನು. ನಾನು ನಿನ್ನಕ್ಷದ್ದು ನಿನ್ನ ಯಂತ್ರವನ್ನು ನಡೆಸುವೆನು. ನಿನ್ನ ಆತ್ಮಬಲದಿಂದ ನನ್ನಲ್ಲಿ ದೃಢ ಭಕ್ತಿಯನ್ನಿಟ್ಟು ನಿಷ್ಕಾಮ ಕರ್ಮಗಳನ್ನು ಧೈರ್ಯದಿಂದ ಮಾಡು. ಆಗ ನಿನಗೆ ಸಂಪೂರ್ಣ ಶಾಂತಿಯು ಒದಗಿ ನೀನು ಮುಕ್ತಿಯನ್ನು ಲಭಿಸುವೆ. ನಾನು ಮಾಡಿದ ಈ ಉಪದೇಶವನ್ನು ಗ್ರಹಣ ಮಾಡಿ ಮುಂದಿನ ಕರ್ಮಗಳನ್ನು ಸಾಧಿಸು. ನಿನ್ನಲ್ಲಿ ನನಗೆ ಗುರುತರ ಪ್ರೇಮವಿದೆ. ಚಿತ್ತವನ್ನೇ ನನ್ನಲ್ಲಿ ಲೀನಮಾಡು. ನನ್ನ ಭಕ್ತನಾಗಿ ನನ್ನ ಪಾದದಡಿಗೆ ಬೀಳು. ನೀನು ಆಗ ನನ್ನಲ್ಲಿ ಸೇರುವೆ. ನೀನು ಮಾಡುವ ಎಲ್ಲಾ ಕಾರ್ಯಗಳನ್ನು ನನಗೆ ಅರ್ಪಿಸು. ಯಾವ ಪಾಪಗಳು ನಿನ್ನನ್ನು ಹಿಂಬಾಲಿಸಿ ಬಂದರೂ, ಅವೆಲ್ಲವನ್ನೂ ದಹಿಸಿ ನಿನ್ನನ್ನು ಮುಕ್ತಿಮಾರ್ಗಕ್ಕೆ ಒಯ್ಯುವೆನು. ನನ್ನನ್ನು ಪೂಜಿಸುವ ಸ್ಥಿರಭಕ್ತರಲ್ಲಿ ಮಾತ್ರ ಈ ರಹಸ್ಯವನ್ನು ನೀನು ಹೇಳಬಹುದು. ನಮ್ಮ ಈ ಪವಿತ್ರ ಪ್ರಶ್ನೋತ್ತರಗಳನ್ನು ಪಠಿಸುವವರಿಗೆ ಜ್ಞಾನೋದಯವಾಗಿ ಅವರು ನನ್ನ ಭಕ್ತರಾಗಬಹುದು. ವಿಶ್ವಾಸದಿಂದ ಈ ನಮ್ಮ ಸಂಭಾಷಣೆಯನ್ನು ಶ್ರವಣಿಸುವವರು ಧನ್ಯರಾಗುವರು. ನಿನ್ನ ಸಂಶಯಗಳು ಈಗ ಸಂಪೂರ್ಣವಾಗಿ ಹೋಗಿರಬಹುದೆಂದು ನಾನು ತಿಳಿಯುತ್ತೇನೆ.

ಅರ್ಜುನ:—ಪರಂಜ್ಯೋತಿಪರಮಾತ್ಮನೇ, ನನ್ನ ಎಲ್ಲಾ ಸಂಶಯಗಳು ಈಗ ತೊಲಗಿದವು. ಅಚ್ಯುತನೇ, ನಿನ್ನ ಪರಮಾನುಗ್ರಹದಿಂದ ನಾನು ನನ್ನನ್ನೂ, ನಿನ್ನನ್ನೂ ತಿಳಿದೆನು. ನೀನು ಹೇಳಿದಂತೆಯೆ ಮಾಡುವೆನು.

ಸಂಜಯ:— ಧೃತರಾಷ್ಟ್ರನೇ, ಕೃಷ್ಣಾರ್ಜುನರ ಈ ಸಂಭಾಷಣೆಯನ್ನು ನಿನಗೆ ಹೇಳಿದೆನು. ನನಗೆ ರೋಮಾಂಚನವಾಗುತ್ತಿದೆ. ವ್ಯಾಸಮುನಿಯ ಕೃಪೆಯಿಂದ ಈ ಗುಪ್ತ ಸಂಭಾಷಣೆಯು ನನಗೆ ಕೇಳಿಬಂತು ಯೋಗೀಶ್ವರನಾದ ಪರಮಾತ್ಮನು ಮಾಡಿದ ಯೋಗೋಪದೇಶವು ನನಗೆ ಭಾಸವಾಯಿತು. ನಾನು ಧನ್ಯನಾದೆನು. ಸಂತೋಷವು ನನ್ನಲ್ಲಿ ಈಗ ಉಕ್ಕುತ್ತಿದೆ. ಯಾವ ಎಡೆಗಳಲ್ಲಿ ಯೋಗೇಶ್ವರನಾದ ಕೃಷ್ಣಪರಮಾತ್ಮನು ಇರುವನೋ, ಯಾವ ಎಡೆಗಳಲ್ಲಿ ಪಾರ್ಥನು ಶಸ್ತ್ರಧಾರಿಯಾಗಿ ನಿಂತಿರುವನೋ, ಆ ಸ್ಥಳಗಳಲ್ಲಿ ಸದಾಕಾಲವೂ ಸಂಪತ್ತು, ಜಯ, ಧನಕನಕ, ಮತ್ತು ಧರ್ಮವು ಪ್ರಕಾಶಿಸುವುದು. ಇದು ನನ್ನ ಸ್ಥಿರನಂಬಿಕೆಯು.

ಇಲ್ಲಿಗೆ ಯೋಗೇಶ್ವರನಾದ ಶ್ರೀಕೃಷ್ಣಪರಮಾತ್ಮನು ಭಕ್ತ ಅರ್ಜುನನಿಗೆ ಬೋಧಿಸಿದ ಗೀತೆಯು ಮುಗಿದುದು. ಎಲ್ಲರಿಗೂ ಸುಖವಾಗಲಿ.



ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ, ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.

ಬೆಲೆ ರೂ. 1-4-0 (1=25).

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆಂಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ. ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.

ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು.

ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ

ಕಥಾವಿಹಾರ

(೨ನೇ ಪುಟದಿಂದ)

ಳಗಂಟೆಯ ಬಳಿಕವೇ ಡಾಕ್ಟರರು ಕಾಣ ಸಿಗುತ್ತಾರೆ ಕೆಲವೊಮ್ಮೆ ಸಾಯಂಕಾಲ ೭ಗಂಟೆಗೆ ಭೇಟಿಯನ್ನಿತ್ತದ್ದೂ ಉಂಟು. ರೋಗಿಗಳು ಡಾಕ್ಟರರ ದಾರಿಯನ್ನು ಕಾಯುತ್ತಿರುವುದು ಅನ್ಯಾಯವಲ್ಲವಷ್ಟೇ! ಡಾಕ್ಟರರು ರೋಗಿಗಳ ಸೇವಕನಾಗಿದ್ದರೆ ಅಹುದು. ಅವರು ರೋಗಿಗಳ ಬರವನ್ನು ಕಾಯುತ್ತಿರಬೇಕಿತ್ತು. ಹಾಗೇನೂ ಇಲ್ಲ. ಅವರು ರೋಗಿಗಳ ನೌಕರರೂ ಅಲ್ಲ. ಸಂಬಂಧಿಕರೂ, ಮಿತ್ರರೂ ಅಲ್ಲವೆಂದಾಗ ಮತ್ತೇತರ ಚಿಂತೆ?

ಅವಕಾಶವಾದಾಗ ಬಂದರಾಯಿತು. ನಿಮಗೆ ಅವರಿಂದ ಚಿಕಿತ್ಸೆಮಾಡಿಸಿಕೊಳ್ಳಬೇಕೆಂದಿದ್ದರೆ ಅವರ ಬರವನ್ನು ಕಾಯುತ್ತಿರಿ, ಅವರು ಬೇಡವೆಂದೆನಿಸಿದರೆ ನಿಮಗಿಷ್ಟ ಬಂದಲ್ಲಿಗೆ ಹೋಗಲು ನಿರ್ಬಂಧವೇನು ಇಲ್ಲ.

ಆ ಹೆಂಗಸಿನ ಕೈಯಲ್ಲಿ ಎಲ್ಲ ಕಾಗದ ಪತ್ರಗಳೂ ಇವೆ. X Ray photo; ರಕ್ತ, ಮಲ, ಮೂತ್ರ ಪರೀಕ್ಷೆಗಳ ವರದಿಯೂ ಇದೆ ಈ ನಾಲ್ಕು ಪತ್ರಗಳ ಮೌಲ್ಯ ೩೦/- ರೂಪಾಯಿ. ಅಷ್ಟನ್ನು ಗಳಿಸಲು ಅವಳು ದಿನಾಲೂ ಕಷ್ಟಪಟ್ಟು ದುಡಿದಿದ್ದಾಳೆ. ಅಷ್ಟು ಹಣಗಳಿಸದಿದ್ದರೆ ಅವಳು ಮಗನ ಚಿಕಿತ್ಸೆ ಮಾಡಿಸುವುದಾದರೂ ಹೇಗೆ? ಆ ಮಗು ಅವಳ ಎದೆಯನ್ನು ಗಟ್ಟಿಯಾಗಿ ಹಿಡಿದು ಮಲಗಿತ್ತು. ಅದಕ್ಕೆ ಅವಳು ತೆಳುವಾದ ಬಟ್ಟೆಯನ್ನು ಹೊದಿಸಿದ್ದಳು. ತುಂಬಾ ಹೊತ್ತಿನಿಂದ ಒಂದೇ ಕಡೆ ಒರಗಿದ್ದುದರಿಂದಲೇ ಏನೋ, ಅದು ಅಳತೊಡಗಿತು. ಹಸಿವೂ ಅದು ಕೂಗಲು ಕಾರಣವಾಗಿದ್ದಿರಬಹುದು. ಸಂಜೆ ಕಳೆದು ರಾತ್ರಿ ಗಂಟೆ ೮ ಆಗಿತ್ತು. ಪೇಟೆ ಅಲ್ಲಿಂದ ೬ ಮೈಲೂ ದೂರ. ತಾಯಿಯ ಮೊಲೆಗಳಲ್ಲಿ ಹಾಲು ಇಲ್ಲ. ಅದಕ್ಕೆ ತಿನ್ನಲು ಅಥವಾ ಕುಡಿಯುವುದಕ್ಕೆ ಕೊಡಲು ಏನೂ ಇಲ್ಲ. ಆದರೂ ಅವಳು ಮಗುವನ್ನು ಸಮಾಧಾನ ಪಡಿಸಲು ಪ್ರಯತ್ನಿಸುತ್ತಾಳೆ. ಆದರೆ ಆಹಾರ ಕೊಡದೇ ಸಮಾಧಾನ ಹೇಳಿದರೆ ಹಸಿವು ನೀಗುವುದೇ?

ರೋಗಿಗಳ ದೊಡ್ಡ ಸಾಲು ನಿಂತಿದೆ. ಅವರು ಒಬ್ಬೊಬ್ಬರಾಗಿ ಕೋಣೆಯೊಳಗೆ ಹೋಗುತ್ತಾರೆ. ಸ್ವಲ್ಪ ಸಮಯ ಕಳೆದ ಮೇಲೆ ಅವರು ಹಿಂದಿರುಗಿ ಬರುತ್ತಾರೆ. ಮೊದಲು ಬಂದವ ಮೊದಲು ಒಳಗೆ ಹೋಗಬೇಕು. ಇತರ ರೋಗಿಗಳ ಸ್ಥಿತಿ ಚಿಂತಾಜನಕವಿದ್ದರೂ ಅಲ್ಲಿಯ ರೂಢಿ. ಒಂದೆರಡು ರೋಗಿಗಳನ್ನು ನೋಡಿ ಮುಗಿಸುವಾಗ ಡಿಸ್ಪೆನ್ಸರಿಯ ಮುಂದೆ ಒಂದು ಜಗಜಗಿಸುವ ಹೊಸ ಕಾರೊಂದು ಬಂದು ನಿಂತಿತು ರೋಗಿಗಳ ದುಃಖಪೂರ್ಣವಾದ ಕರುಣಾರ್ದ್ರ ನೇತ್ರಗಳು ಆ ಕಾರಿನಲ್ಲಿ ಕೂತಿರುವ ಗುಪ್ತಾಂಗಗಳ ರೋಗದಿಂದ ಪೀಡಿತರಾದ ತುಂಬು ಶ್ರೀಮಂತರಾದ ಮಿಲ್ ಮಾಲಕರೆಂಬುದನ್ನು ತಿಳಿದುವು. ಈ ಭಂಡವಾಳಗಾರನು ಹಣದ ಮದನೇರಿ ಹಲವು ನಿರಪರಾಧೀ ಹೆಂಗಸರ ಮಾನ ನಷ್ಟ ಮಾಡಿದ್ದನ್ನು ಆ ದೀನರ ಕಣ್ಣುಗಳು ಗುರುತಿಸಿರ ಬೇಕು. ಅನೇಕ ಮಂದಿ ನಿರಪರಾಧಿ ಜನರ ಮಂಡೆಯನ್ನು ಚೆಂಡಾಡಿದವರೂ ಮನೆಗೆ ಬೆಂಕಿ ಕೊಡಿಸಿದವರೂ ಇವರೇ ಎಂದು ಅವರಿಗೆ ತಿಳಿಯಲಾರದೆ?

ಆ ಕಾರಿನಿಂದ ಡ್ರೈವರ್ ಕೆಳಗಿಳಿದು ಡಾಕ್ಟರರ ಬಂಗಲೆಯ ಬಾಗಿಲಲ್ಲಿ ನಿಂತಿರುವ ನೌಕರರನ್ನು ಕಂಡು ಏನೇನೋ ಮಾತಾಡುತ್ತ ನಿಂತ. ತುಸು ಹೊತ್ತಿನಲ್ಲಿ ನೌಕರ ಒಳಗೆ ಹೋಗಿ ಡಾಕ್ಟರರನ್ನು ಒಂದೆರಡು ಸೆಕುಂಡುಗಳ ಒಳಗೆ ಕರಕೊಂಡು ಹೊರ ಬಂದ. ಡಾಕ್ಟರರು ಕಾರಿನಲ್ಲಿ ಬಂದ ಮಿಲ್ ಮಾಲಕರೊಡನೆ ಏನೇನೋ ಹರಟುತ್ತ ನಿಂತು ತುಂಬ ಸಮಯವನ್ನು ಕಳೆದರು.

ಅತ್ತ ರೋಗಿಗಳು ಮತ್ತು ಮಕ್ಕಳು ಬಳಲಿ ಬೆಂಡಾಗಿದ್ದಾರೆ. ಕಂಕುಳಲ್ಲಿ ಹಿಡಿದು ಕೊಂಡಿರುವ ಮಕ್ಕಳು ಕೂಗ ತೊಡಗಿದ್ದಾವೆ. ಚಳಿಗಾಲದ ರಾತ್ರಿಯಾದುದರಿಂದ ಚಳಿಯೂ ಹೆಚ್ಚುತ್ತಲಿವೆ. ಬಂದ ರೋಗಿಗಳಲ್ಲಿ ಕೆಮ್ಮುಬಾಧೆ ಇಲ್ಲದವರೂ ಛಳಿಯಿಂದಾಗಿ ಕೆಮ್ಮ ತೊಡಗಿದ್ದಾರೆ. ನಿಮೋನಿಯವಿಲ್ಲದವರಿಗೂ ಅದರ ಬಾಧೆ ತಪ್ಪಿತೆ. ಶೀತವಾಗದವರಿಗೆ ಶೀತವಾಯಿತು. ಚಳಿಗಾಲದ ಚಳಿಗಾಳಿಯನ್ನು ಸೇವಿಸಿದ್ದಕ್ಕೆ ಅದು ಪ್ರತಿಫಲವಲ್ಲವೆ?

ಸ್ವಲ್ಪ ಸಮಯದ ನಂತರ ಡಾಕ್ಟರರು ಹೊಸ ಆಗಂತುಕ ವ್ಯಕ್ತಿಯನ್ನು ಕೂಡಿಕೊಂಡು ಮತ್ತೆ ಪುನಃ ಬಂಗಲೆಯೊಳಗೆ ಹೋದರು. ಈ ಆಗಂತುಕ ವ್ಯಕ್ತಿ ಬೇರಾರೂ ಅಲ್ಲ. ಆ ಸಂಸ್ಥಾನದ ರಾಜನ ೧೦ನೆಯ ಪತ್ನಿ ಸುಂದರ ರಮಣಿ. ಡಾಕ್ಟರರು ಅವರನ್ನು ವೈಟಿಂಗ್ ರೂಮಿನಲ್ಲಿ ಕೂರಿಸಿ ಮತ್ತೆ ಮನಃ ಮಾತಿನ ಸರಣಿಯನ್ನು ಆರಂಭಿಸಿದರು. ಡಾಕ್ಟರರ ವೈಟಿಂಗ್ ರೂಮ್ ಬಹಳ ಸುಸಜ್ಜಿತವಾಗಿದ್ದು ಕೇವಲ 'ಸಭ್ಯ'ರನ್ನು ಕೂತುಕೊಳ್ಳಿಸಲು ಮೀಸಲಾಗಿರಿಸಿತ್ತು. ಬಂದ ರಾಣೀಸಾಹೆಬರವರು. "ಹಸಿವು ಚೆನ್ನಾಗಿಲ್ಲ, ತುಂಬ ತಲೆನೋವು, ಸಮಾಗಮದ ಹೊತ್ತಿನಲ್ಲಿ ಬಹುಬೇಗ ಬಳಲುತ್ತೇನೆ. ಜೀವನದಲ್ಲಿ "ಚಾರ್ಮ್" ಎಂಬುದೇ ಇಲ್ಲದಾಗಿದೆ. ಕೆಲವೊಮ್ಮೆ ಗುಡ್ಡಗಾಡುಗಳಲ್ಲಿ ವಾಸವಾಗಿರುವಾ ಎಂದೆನಿಸುತ್ತದೆ." ಇತ್ಯಾದಿ ತನ್ನ ಹೇಳಿಕೆಯನ್ನಿತ್ತು ಮುಗಿಸಿದರು. ಆಮೇಲೆ ಗಡಿಯಾರ ೯ ಗಂಟೆ ಬಾರಿಸಿದಾಗ ರಾಣೀ ಸಾಹೇಬರವರು ಎದ್ದು ತಮ್ಮ ಮನೆಯ ಕಡೆಗೆ ಪ್ರಯಾಣ ಬೆಳೆಸಿದರು.

ಆದರೆ ಪುನಃ ಹತ್ತು ಮಿನಿಟುಗಳು ಕಳೆಯುವಷ್ಟರಲ್ಲಿ ಮತ್ತೊಂದು ಕಾರು ಬಂದಿತು. ಬೆಳ್ಳಗಿನ ಸುಂದರಳಾದ ತನ್ವಂಗಿಯೋರ್ವಳು ತನ್ನ ದೊಡ್ಡದಾದ ಕಣ್ಣುಗಳನ್ನರಳಿಸುತ್ತ ಯಾರನ್ನು ವಿಚಾರಿಸದೇನೆ ಸೀದಾ ಡಾಕ್ಟರರು ಕೂತಲ್ಲಿಗೆ ಹೋದಳು ಡಾಕ್ಟರರು ಅವಳನ್ನು ಬಹುವಿನಯದಿಂದ ಆದರೆ ಬಹು ಗಂಭೀರವಾಗಿಯೂ ಜಾಗ್ರತೆಯಾಗಿಯೂ ಮಾತನಾಡಿಸಿದರು. ಗರ್ಭಪಾತಕ್ಕೆ ಸಂಬಂಧಿಸಿದ ವಿಚಾರ. ಹುಡುಗಿ ಇನ್ನೂ ೨೨ರ ಗೆರೆಯದಾಟಿಲ್ಲ. ಬಹುಶಃ ಇದು ಮೂರನೆಯ ಬಾರಿ, ತನ್ನ ಕಿಸೆ ತುಂಬ ಹಣ ತುಂಬಿಸಿ ಡಾಕ್ಟರರ ಸನ್ನಿಧಿಯಲ್ಲಿ ಹಾಜರಾಗಿದ್ದಾಳೆ.

ಅಷ್ಟರಲ್ಲಿ ಬಂಗಲೆಯೊಳಗಿಂದ ಚಹ ಬಂತು. ರೋಗಿಗಳನ್ನು ಪರೀಕ್ಷಿಸುವ ಕೆಲಸ ನಿಂತು ತುಂಬಾ ಹೊತ್ತಾಗಿದ್ದರೂ ಅದನ್ನು ನಿರ್ಲಕ್ಷಿಸಿ ಇಬ್ಬರೂ ಕೂಡಿ ಚಹವನ್ನು ಕುಡಿದರು. ಡಾಕ್ಟರರು ಅವಳಿಗೆ ಸ್ವಲ್ಪ ತಡೆದು ಬಾ ಎಂದು ಹೇಳಿ ಕಳುಹಿಕೊಟ್ಟರು.

ಆಗಲೇ ಒಂದು ಕೂಗು ಕೇಳಬಂತು. ಮರಣ ಸಂಭವಿಸಿದಾಗ ಬರಬಹುದಾಂಥ ಕೂಗದು. ಆ ಬಡ ಮುದುಕಿಯ ಮಗು ಕಣ್ಣಾಲಿಕೆಗಳನ್ನು ತಿರುಗಿಸತೊಡಗಿತ್ತು. ಅವಳೆಷ್ಟು ವ್ಯಾಕುಲಳಾಗಿದ್ದಾಳೆ! ಗಾಬರಿಗೊಂಡ ಅವಳು ಮಗುವನ್ನೆತ್ತಿಕೊಂಡು ಡಾಕ್ಟರರಿರುವ ಕೋಣೆಯೊಳಗೆ ಓಡಿ ತನ್ನ ಅರ್ಧ ಸತ್ತ ಶಿಶುವನ್ನು ಅವರ ಪಾದಗಳಲ್ಲಿರಿಸಿ ದಮ್ಮಯ್ಯಾ, ನನ್ನ ಮಗುವನ್ನು ಬದುಕಿಸಿ ಕೊಡಿ ಎಂದು ಬೇಡತೊಡಗಿದಳು. ಡಾಕ್ಟರರ ಆ ಮಗುವಿನ ಬಾಬ್ತು ಫೀಸನ್ನು ಮೊದಲೇ ಪಡಕೊಂಡಾಗಿತ್ತು ಸ್ವಲ್ಪ ಹೊತ್ತು ಸುಮ್ಮನಿದ್ದು ಅವರು "ಬೇಸರ ಪಡಬೇಡಿ. ಮಗು ತೀರಿಕೊಂಡಿದೆ" ಎಂದು ಹೇಳಿ ಅವರ ಕಡೆಗೆ ದುರದುರನೆ ನೋಡಿದರು. "ಈ ಮೊದಲು ನೀವು ಏನು ಮಾಡಿದ್ದಿರಿ? ರೋಗ ಕೈಮೀರಿದಾಗ ಮಾತ್ರ ನೀವು ಬರುತ್ತೀರಿ. ಅದಕ್ಕೆ ಮೊದಲೇ ಇಲ್ಲಿಗೆ ಬರಲೇನು ನಿಮಗೆ ಸಂಕಟವೇ?" ಎಂದು ಅವಳನ್ನೇ ಗದರಿಸಿ ಬಿಟ್ಟರು. ಎಂಥ ಅನ್ಯಾಯ ವೈದ್ಯರಾದವರೂ ಹೀಗೆಂದರೆ ಮತ್ತೇನು ಉಳಿಯಿತು? ಹಾಗೆ ಹೇಳುವುದು ಅವರು ಕಲಿತ ವಿದ್ಯೆಯ ಪ್ರಭಾವವೇ? ಅಥವಾ ಗುಣವೇ?

ಡಾಕ್ಟರರ ಆ ನಿರ್ದಯ ಮಾತುಗಳನ್ನು ಕೇಳಿದಾಗ ಆ ಮುದುಕಿಗೆ ಸಿಡಿಲು ಬಡಿದಂತಾಯಿತು. ಅವಳು ಮರು ಮಾತನಾಡದೇ ಮಗುವಿನ ಕಳೇಬರವನ್ನೆತ್ತಿಕೊಂಡು ಹೊರಟಳು. ಅವಳ ಅವಸ್ಥೆಯನ್ನು ಕಂಡ ಅಲ್ಲಿನ ಮಂದಿಯೆಲ್ಲ ಸಹಾನುಭೂತಿಯನ್ನು ವ್ಯಕ್ತಪಡಿಸಿ ಕಣ್ಣೀರು ಸುರಿಸಿದರೂ ಡಾಕ್ಟರರ ಹೃದಯದಲ್ಲಿ ಕರುಣೆಯ ಪಸೆಯೂ ಹುಟ್ಟಲಿಲ್ಲ

ಚಳಿಗಾಲದ ಆ ಬೆಳ್ದಿಂಗಳಲ್ಲಿ ಆ ಹೆಂಗಸು ತನ್ನ ಮೃತ ಆಶೆ—ಅಭಿಲಾಷೆಗಳ ಪ್ರತೀಕವಾದ ಮಗುವಿನ ಹೆಣವನ್ನು ಕೈಗಳಲ್ಲಿ ಹಿಡಿದಪ್ಪಿ ೬ ಮೈಲು ದೂರವಿರುವ ತನ್ನ ಮನೆಕಡೆಗೆ ಸಾಗಿದಳು. ಭಯಭೀತನಾದ, ಚಿಂತಾಕ್ರಾಂತನಾದ ಅವಳ ತಮ್ಮ ಮೌನವಾಗಿ ಅವಳನ್ನು ಹಿಂಬಾಲಿಸುತ್ತಿದ್ದ. ಆದರೆ ಅಲ್ಲೇ ಹತ್ತಿರದಲ್ಲಿ, ಆ ಬಂಗಲೆಯ ಉದ್ಯಾನದಲ್ಲಿ ಪ್ರಸನ್ನವದನಳಾಗಿ ನಿಂತ ಆ ನವಯುವತಿ ತನ್ನ ಹೃಷ್ಟಪುಷ್ಟವಾದ ಮಗುವನ್ನು "ಚಂದಮಾಮ ಬಾ, ಬಾ; ಚಂದಮಾಮ, ಬಾ; ಬಾ," ಎಂದು ಚಂದ್ರನನ್ನು ತೋರಿಸಿ ಕರೆಯ ಎತ್ತಿ ಆಡಿಸುತ್ತಿದ್ದಾಳೆ.

ಮೂಲ: ಡಾ॥ ಮಹೇಂದ್ರ ಭಟ್ನಾಗರ್,
ಅನುವಾದ: ಶ್ರೀ ಕೆ ರಾಮಚಂದ್ರ ಭಟ್.

ಉಡುಪಿ ಡಿ ಮು. ಕೋರ್ಟಿನಲ್ಲಿ

ಸ್ಮಾಲ ನಂಬ್ರ 61/1961

ದಿ. ಕೆನರಾ ಯಿಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಉಡುಪಿ —ವಾದಿ.

ಮತ್ತು

ಆರ್. ಬಿ. ಕಟೀಲ್‌ಕಾರ್ ಕೂಡಾ —ಪ್ರತಿವಾದಿರು.

ಯಿವರೊಳಗೆ —

1ನೇ ಪ್ರತಿವಾದಿ— ಆರ್. ಬಿ. ಕಟೀಲ್‌ಕಾರ್ ಎಲ್. ಎನ್. ಬಿ ಕಟೀಲ್‌ಕಾರ್ರ ಮಗ— ಉಡುಪಿ ಯಿನ್‌ಕಂಟೇಕ್ಸ್ ಆಫೀಸಿನಲ್ಲಿ ಯಿದ್ದವರು— ಉಡುಪಿ ಕಸಬಾ—

ಸದರಿ 1ನೇ ಪ್ರತಿವಾದಿಗೆ—

ಪ್ರತಿವಾದಿರು ವಾದಿ ಬೇಂಕಿಗೆ ತಾರೀಖು 18—7—59ರಲ್ಲಿ ರೂ. 600/—ಕ್ಕೆ ಬರಕೊಟ್ಟ ಡಿಮಾಂಡ್ ನೋಟಿನ ಅಸಲು ಬಾಕಿ ನಬಡ್ಡಿ ಕೂಡಾ ರೂಪಾಯಿ 482.91ಕ್ಕೆ ವಾದಿಯು ಪ್ರತಿವಾದಿರ ಮೇಲೆ ಮಾಡಿದ ಸದರಿವ್ಯಾಜ್ಯವು ತಾರೀಖು 27—3—61ಕ್ಕೆ ತನಿಖೆ ಬಗ್ಗೆ ಯಿಟ್ಟದೆ—ಆ ದಿವಸ ಸದರಿ 1ನೇ ಪ್ರತಿವಾದಿಯು ಸ್ವತಹಾ ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಉದಹರಿಸದೆ ಯಿದ್ರೆ ಆತನ ಗೈರ್ ಹಾಜರಿಯಿಂದ ಸದರಿ ವ್ಯಾಜ್ಯವು ತೀರ್ಮಾನಿಸಲ್ಪಡುವದೆಂದು ಸದರಿ 1ನೇ ಪ್ರತಿವಾದಿಗೆ ಯಿಮೂಲಕ ತಿಳಿಯಪಡಿಸಲಾಗಿಯದೆ.

M. Damoder Kamath,
Advocate for Pltf.

ಉಡುಪಿ, ತಾ. 16—3—61

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R E P 18 61
R. E. P 376/59

ಮಾಧವ ಪೈ —Petitioner.

K ಮುಸ್ಟೈನ್ ಅಬ್ಬ ಕೂಡಾ—
—Respondents

1ನೇ ಎದ್ರಿ ಮುಸ್ಟೈನ್ ಅಬ್ಬ ಕೊಳ್ಕಪ್ಪು ಪಕ್ರಿ ಬ್ಯಾರಿಗಳ ಮಗ ಬಂಟ್ವಾಳ ತಾಲ್ಲೂಕು ಕೆದಿಲ ಗ್ರಾಮದಲ್ಲಿರುವವ ಸದ್ರಿ 1ನೇ ಎದ್ರಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ—

ಅರ್ಜಿದಾರನು ವಾಕ್ಕು ಮಾಡಿದ ಮೇಲ್ಕಂಡ ಅಮಲ್ದಾರಿಯಲ್ಲಿ ನಿಂಮ ಪಕ್ಕಿನ ಕೆದಿಲ ಮತ್ತು ಇಡ್ಕಿದು ಗ್ರಾಮಗಳ ಆಸ್ತಿಗಳನ್ನು ಜಪ್ತಿಪಡಿಸಿರುವುದರಿಂದ ಕೋರ್ಟಿನವರು ಇನ್ನೊಂದು ಹುಕುಂ ಕೊಡುವ ತನಕ ಸದ್ರಿ ಆಸ್ತಿಗಳನ್ನು ಅನ್ಯಥಾ ಪರಾಧೀನ ವಗೈರೆ ಮಾಡಕೂಡದಂತ ತಮಗೆ ಆತಂಕಿಸಲ್ಪಟ್ಟಿರುತ್ತೀರಿ ಮತ್ತು ಸದ್ರಿ ಅರ್ಜಿಯು ತಾರೀಕು 3—4—1961ಕ್ಕೆ ನಿಂಮ ಹಾಜರಾತಿ ಬಗ್ಗೆ ಇಟ್ಟಿರುತ್ತದೆ ಎಂಬುದಾಗಿ ಈ ಮೂಲಕ ತಿಳಿಸಲಾಗುತ್ತದೆ.

॥ ಕೋರ್ಟಿನ ಹುಕುಂ ಪ್ರಕಾರ ॥

S Soorappaya
Vakil for petitioner

ತಾ. 18 3—1961



ಮಕ್ಕಳ ಮಮತೆಯ
'ಬಿಕ್ಕೊ'ರವರ
ಗ್ಲೂಕೋಸ್ ಕೂಡಿದ ಪೆಪ್ಪರ್
ಮಿಠಾಯಿಗಳು ರುಚಿಕರ, ಸೇವನೆಗೆ
ಪ್ರಸಿದ್ಧಿಪಟ್ಟಿವೆ.

Regd. Trade Mark.
BICCO

'ಬಿಕ್ಕೊ'ರವರ
ಹಣ್ಣಿನ ಶರಬತ್ತುಗಳು
ಅತಿಥಿಗಳ ಆದರದ ಸತ್ಕಾರಕ್ಕೆ ಅತ್ಯನುಕೂಲ.

ತಯಾರಕರು:
ಭಾರತ್ ಇಂಡಸ್ಟ್ರಿಯಲ್ ಎಂಡ್ ಕ್ಯಾನಿಂಗ್
ಕಂಪನಿ ಲಿಮಿಟೆಡ್, ಕಾಪು, ದ. ಕ

NAVAYUGA WEEKLY, UDIPI.
REGD. NO.BG. 176
23-3-1961
LICENSE NO. 31
Licensed to Post without Prepayment

ವ್ಯಕ್ತಿ ಪರಿಚಯ:

ಅಣುಶಾಸ್ತ್ರ ಪರಿಣತ ಡಾ| ರಾಜಾರಾಮಣ್ಣ

ಟಾಟಾ ಸಂಶೋಧನಾ ಸಂಸ್ಥೆಯಲ್ಲಿ ದುಡಿದು ಭಾರತೀಯ ಅಣವಿಕ ಆಯೋಗದಲ್ಲಿ ಯಶಸ್ವೀ ವಿಜ್ಞಾನಿಗಳೆನಿಸಿದ ರಾಮಣ್ಣರು ಅಂತಾರಾಷ್ಟ್ರೀಯ ಕೀರ್ತಿಗಳಿಸಿದ್ದಾರೆ.

ನಾರ್ವೆಯ ನೂತನ ಪರಮಾಣು ರಿಯಾಕ್ಟರ್ "ನೊರಾಕಿ"ಯ ವ್ಯವಸ್ಥಾಪಕ ಸಮಿತಿಯ ಅಧ್ಯಕ್ಷರಾಗಿ ಭಾರತದ ಡಾ| ರಾಜಾರಾಮಣ್ಣರು ನಿಯುಕ್ತರಾಗಿದ್ದಾರೆ. ಹೊಸತಾಗಿ ಸ್ವಾತಂತ್ರ್ಯ ಪಡೆದು ಪ್ರಗತಿ ಪಥದಲ್ಲಿ ಧಾವಿಸುತ್ತಿರುವ ಭಾರತವು ಅಣುಶಕ್ತಿ ತಂತ್ರದಲ್ಲಿಯೂ ಸಾಕಷ್ಟು ಮುಂದುವರಿಯುತ್ತಿದೆ, ಹಾಗೂ ಇಲ್ಲಿ ವಿಜ್ಞಾನವೇತ್ತರ ಅಭಾವವಿಲ್ಲವೆಂಬುದನ್ನೂ ಇದು ಸಿದ್ಧಮಾಡಿ ತೋರಿಸುತ್ತದೆ

"ನೋರಾಕಿ"ಯು ನಾರ್ವೆ ಮತ್ತು "ಅಂತಾರಾಷ್ಟ್ರೀಯ ಪರಮಾಣು-ಶಕ್ತಿ ಪ್ರತಿನಿಧಿ"ಗಳ ಸಂಯುಕ್ತ ರೂಪದಿಂದ ನಿರ್ಮಾಣಗೊಂಡಿದೆ. ಎರಡೂ ಒಂದು ಸೇರಿ ಡಾ| ರಾಜಾರಾಮಣ್ಣರನ್ನು ಅಧ್ಯಕ್ಷಪದಕ್ಕೆ ಆರಿಸಿದ ಪರಿಣಾಮವಾಗಿ ಪರಮಾಣು ವಿಜ್ಞಾನಕ್ಷೇತ್ರದಲ್ಲಿ ಭಾರತಕ್ಕೆ ಅಂತಾರಾಷ್ಟ್ರೀಯ ಕೀರ್ತಿ ಲಭಿಸಿದೆಯೆಂದು ತಿಳಿದುಕೊಳ್ಳಬಹುದು.

ಶ್ರೀ ರಾಮಣ್ಣರು ಈ ವಿಧದ ಅಂತಾರಾಷ್ಟ್ರೀಯ ಖ್ಯಾತಿಯನ್ನು ತಮ್ಮ ಎಳೆಯ ಹರೆಯದಲ್ಲಿಯೇ ಪಡೆದಿರುವುದು ಗಮನೀಯವಿದೆ. ಇವರ ಪ್ರಾಯ ಈಗ ಕೇವಲ ೩೬ರಷ್ಟು ಮಾತ್ರ. ೧೯೨೫ರಲ್ಲಿ ಮೈಸೂರು ರಾಜ್ಯದ ಬೆಂಗಳೂರಲ್ಲಿ ಇವರ ಜನನವಾಯಿತು. ಇಲ್ಲಿನ ಬಿಶಪ್ ಕಾಟನ್ ಹೈಸ್ಕೂಲಿನಲ್ಲಿ ಪ್ರಾರಂಭಿಕ ಶಿಕ್ಷಣವನ್ನು ಪಡೆದು, ಅನಂತರ ಮದ್ರಾಸದ ಕ್ರಿಶ್ಚಿಯನ್ ಕಾಲೇಜಿನಲ್ಲಿ ಬಿ. ಎಸ್ ಸಿ. (ಆನರ್ಸ್) ಪದವಿಯನ್ನು ಗಳಿಸಿದರು. ತದುಪರಾಂತದಲ್ಲಿ ತಾತಾರವರ ಶಿಷ್ಯವೃತ್ತಿಯನ್ನು ಪಡೆದು ಲಂಡನ್ನಿಗೆ ತೆರಳಿ, ಅಲ್ಲಿನ ಲಂಡನ್ ವಿಶ್ವವಿದ್ಯಾಲಯದಲ್ಲಿ ಪರಮಾಣವಿಕ ಭೌತಿಕ ಶಾಸ್ತ್ರದಲ್ಲಿ ಪಿ. ಎಚ್. ಡಿ. ಪದವಿಯನ್ನು ಪಡೆದರು.

ಲಂಡನ್ ನಗರದಿಂದ ಹಿಂದಿರುಗಿದ ಬಳಿಕ ಇವರು ೧೯೪೯ರಲ್ಲಿ ಬೊಂಬಾಯಿಯ 'ಟಾಟಾ ಇನ್ಸ್ಟಿಟ್ಯೂಟ್ ಅಫ್ ಫಂಡಮೆಂಟಲ್ ರಿಸರ್ಚ್"ನಲ್ಲಿ ವೈಜ್ಞಾನಿಕ ಕರ್ಮಚಾರಿಯಾಗಿ ಸೇರಿಕೊಂಡರು. ಇದೇ ಸಂಸ್ಥೆಯಲ್ಲಿ ಇವರು ರೀಡರರಾಗಿಯೂ ಕೆಲಕಾಲ ದುಡಿದಿದ್ದರು.

೧೯೫೪ರಲ್ಲಿ ಭಾರತದ ಪರಮಾಣು ಶಕ್ತಿ ಆಯೋಗಕ್ಕೆ ಡಾ| ರಾಮಣ್ಣರ ಸೇವೆಯನ್ನು ವರ್ಗಾಯಿಸಲಾಯಿತು. ಅಂದಿನಿಂದ ಇಂದಿನವರೆಗೂ ಇವರು ಅಟಮಿಕ್ ಎನರ್ಜಿ ಎಸ್ಟಾಬ್ಲಿಷ್‌ಮೆಂಟ್‌ನ ಪರಮಾಣು ಭೌತಶಾಸ್ತ್ರದ ವಿಭಾಗದ ಪ್ರಮುಖರಾಗಿದ್ದಾರೆ.

ಇವರು ಟಾಟಾ ಫಂಡಮೆಂಟಲ್ ಸಂಶೋಧನಾ ಸಂಸ್ಥೆಯ ಭೌತಿಕ ಶಾಸ್ತ್ರೀಯ ವಿಭಾಗದ ಸದಸ್ಯರಾಗಿದ್ದಾರೆ. ಈ ಸಂಸ್ಥೆಯಲ್ಲಿ ಕಾಸ್ಕೇಡ್ ಜನರೇಟರ್ ಎಂಬ ಹೆಸರಿನ ಮನೋರಂಜಕ ಪರಮಾಣು ಕಣ ಗತಿವರ್ಧಕ ಯಂತ್ರವು ಸ್ಥಾಪನೆಗೊಂಡಿದ್ದು, ಇದಕ್ಕೆ ಡಾ ರಾಮಣ್ಣರ ಪರಿಶ್ರಮ ಕಾರ್ಯತತ್ಪರತೆಗಳು ಕಾರಣವಾಗಿವೆ. ಪರಮಾಣು ಶಾಸ್ತ್ರದಲ್ಲಿ ನಿಷ್ಣಾತರಾದ ಇವರು ಹಲವಾರು "ಪೇಪರ್"ಗಳನ್ನು ಬರೆದಿದ್ದಾರೆ.

ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಅಣುಶಕ್ತಿಯ ಬಗ್ಗೆ ಭಾರತದಲ್ಲಿಯೂ ಸಾಕಷ್ಟು ಸಂಶೋಧನೆ—ಪ್ರಗತಿಗಳು ನಡೆಯುತ್ತವೆ—ಭಾರತದಲ್ಲಿಯೂ ಸಮರ್ಥ ಮೇಧಾವಿಗಳು ಇದ್ದಾರೆಂಬುದಕ್ಕೆ ಡಾ| ರಾಮಣ್ಣರು ನಿದರ್ಶನಪ್ರಾಯರಾಗಿದ್ದಾರೆ. ಅವರ ಉನ್ನತಿ ಭಾರತದ ಉನ್ನತಿಯ ದ್ಯೋತಕ.

ಉದ್ಘಾಟನಾದಿನ ರಾಜಧಾನಿಗೆ ಹೊರಡಲುಸಿದ್ಧರಾದ ಶ್ರೀ ಮತ್ತು ಶ್ರೀಮತಿ ಕೆನ್ನಡಿಯವರು.

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ವುದಿಲ್ಲ. ಮುಖ್ಯವಾಗಿ ಬ್ರಿಟನ್ ಅದರೊಡನೆ ಸಂಬಂಧವನ್ನಿಟ್ಟುಕೊಳ್ಳುವರೆಗೆ ಅದಕ್ಕೆ ಯಾವುದೇ ರೂಪದ ಅಪಚಾರವಾಗಲಾರದು. ಈಗ ನಡೆದ ಘಟನೆಯ ವಾಸ್ತವಿಕ ಪರಿಣಾಮವನ್ನು ನಾವು ವಿವೇಚಿಸುವುದಾದರೆ, ಸೌಹಾರ್ದಮಯ ವಾತಾವರಣದಲ್ಲಿ ವರ್ಣಭೇದ ನೀತಿಯನ್ನು ಬಗೆಹರಿಸುವುದಕ್ಕಿರಬಹುದಾಗಿದ್ದ ಮಾರ್ಗವನ್ನು ಮುಚ್ಚಿದಂತಾಗಿ ಇದರ ಪ್ರಭಾವ ತೀಕ್ಷ್ಣವಾಗಿ ನಯದಿರದು. ಕೊಚ್ಚಿಗೇಳಬಹುದಾದ ದ. ಆಫ್ರಿಕ ಈ ಘಟನೆಯ ಪ್ರತೀಕಾರ ಕಾರ್ಯಕ್ರಮಗಳನ್ನು ಕೈಗೊಳ್ಳದೆ ಇರಲಾರದು. ಇದರಿಂದ ಸಂಸ್ಥಿತಿಯು ಮತ್ತಷ್ಟು ವಿಕೋಪಕ್ಕೇ ಹೋದಂತಾಗುವುದಷ್ಟೆ! ಹೀಗಾದಲ್ಲಿ ದ ಆಫ್ರಿಕೆಯನ್ನು ಹೊರಹಾಕಿದ ಧ್ಯಾನದ ಉದ್ದೇಶ ಸಫಲವಾಯಿತೆನ್ನಬಹುದ?

ವರ್ಣಭೇದದ ಅಮಾನುಷ ನೀತಿಯನ್ನು ಬಿಟ್ಟುಕೊಡದವರ ಸಂಪರ್ಕ ತನಗೆ ಬೇಡವೆಂದು ನುಕ್ರೂಮಾ ಹೇಳಬಹುದು. ಕಾಮನ್‌ವೆಲ್ತಿನಲ್ಲಿ ಬರುಕಿನ ಭಯಹುಟ್ಟಿಸಿಯಾದರೂ ದ. ಆಫ್ರಿಕೆಯನ್ನು ಸರಿದಾರಿಗೆ ತರುವ ಪ್ರಯತ್ನವಾಗಿತ್ತದು ಎಂದವರು ಅನ್ನಬಹುದು. ಆದರೆ, ಬೆದರಿಕೆಯ ಮಾತುಗಳು ನಿಜವಾದ ಮಾತುಗಳಷ್ಟೇ ಪರಿಣಾಮ ಮಾಡಿದಾಗ ಈ ಘಟನೆ ನಡೆಯ ಬಾರದಿತ್ತು ಎನಿಸುತ್ತದೆ. ಇದುವರೆಗೆ ಕಾಮನ್‌ವೆಲ್ತ್ ರಾಷ್ಟ್ರಗಳಿಗೆ 'ನಿಮ್ಮ ವರ್ಣಭೇದ ನೀತಿಯನ್ನು ಬಿಟ್ಟುಕೊಡಿರಿ' ಎಂದು ಮುಖಾಮುಖಿಯಾಗಿ ಕೇಳುವ ಅವಕಾಶವಿತ್ತು; ಈಗ ಅದೂ ಕಳೆದು ಹೋದಂತಾಯಿತು.

ಕೆನೆಡದ ಪ್ರಧಾನಿಯವರೆಂದಂತೆ ದ. ಆಫ್ರಿಕೆಯು ಸದ್ಯ ಕಾಮನ್‌ವೆಲ್ತಿನಿಂದ ದೂರ ಸರಿಯುದ ನಿರ್ಧಾರ ಮಾಡಿದರೂ ಮುಂದೆ ಅದು ತನ್ನ ಅಭಿಪ್ರಾಯವನ್ನು ಅವಶ್ಯ ಬದಲಾಯಿಸುವುದೆಂದು ಹಾರಯ್ಸಿದರೆ ಅದು ತಪ್ಪಾಗಲಾರದು.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಪ್ರೊ. ರಾಘವೇಂದ್ರ ಆಚಾರ್ಯ, ಎಂ. ಎ.)

ಸಾಮಾನ್ಯ ರೋಗಗಳು
(ಡಾ| ಕೆ. ಎಲ್. ಐತಾಳ್, ಎಂ. ಬಿ. ಬಿ. ಎಸ್.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಪಟ್ಟಿ, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಒಡೆಸ್ಯಾಲ ಕೃಷ್ಣ ಭಟ್ಟ ಎಲ್. ಎಲ್. ಬಿ.
ಪ್ರತಿಗಳು ಸಿಗುವ ಮುಖ್ಯ ಸ್ಥಳ:
ನವಭಾರತ ಪುಸ್ತಕ ಭಂಡಾರ, ಉಡುಪಿ

ಪಿಗ್ಮಿ—೫

ಪಿಗ್ಮಿ

- ಪಿಗ್ಮಿ ನಿತ್ಯ ಸಂಪಾದನೆಯುಳ್ಳವರ ಆಪ್ತ ಗೆಳೆಯ.
- ಪಿಗ್ಮಿ ಉಳಿತಾಯದ ಪಾಠವನ್ನು ಹೇಳಿಕೊಡುವ ಸದ್ಗುರು.
- ಪಿಗ್ಮಿ ಉತ್ತಮ ಅಭ್ಯಾಸವನ್ನು ಬೆಳೆಸುವ ಸನ್ಮಿತ್ರ
- ಪಿಗ್ಮಿ ಕಷ್ಟಕಾಲದಲ್ಲಿ ನೆರವಾಗುವ ಆಪದ್ಬಂಧು.
- ಪಿಗ್ಮಿ ನಿಮಗೆ ತಿಳಿಯದೆಯೇ ನಿಮ್ಮನ್ನು ಶ್ರೀಮಂತರನ್ನಾಗಿ ಮಾಡುವ ಶಕ್ತಿ.
- ಪಿಗ್ಮಿ ಚಿಕ್ಕ ಉಳಿತಾಯ ಯೋಜನೆಗಳ ಜನಕ.
- ಪಿಗ್ಮಿ ಸಿಂಡಿಕೇಟ್ ಬೇಂಕಿನ ಜನಪ್ರಿಯ ದೈನಿಕ ಉಳಿತಾಯ ಯೋಜನೆ

ದಿನಕ್ಕೆ 25 ನಯಾಪೈಸೆ 7 ವರುಷಗಳಲ್ಲಿ **ರೂ. 700**

ಸಿಂಡಿಕೇಟ್ ಬೇಂಕ್
ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಶ್ರೀ ಎ. ಬಿ. ಶೆಟ್ಟಿ
ಸ್ಮಾರಕ ನಿಧಿಗೆ
ಸಹಾಯ ಮಾಡಿರಿ

Edited Printed & Published by K. H. Shetty, at the Navayuga Press, Udipi, S. India.

40th year of publication. 30-3-1961 ೪೦ನೇ ವರ್ಷ

ಸಂಪುಟ ೪೦ | ಸಂಚಿಕೆ ೨೯

ನವಯುಗ

Vol. 40 | No 29 | ಬೆಲೆ 0=13

ಪ್ರಚಲಿತ ಪ್ರಸಂಗ:

ವಿದೇಶ ಸಹಾಯವನ್ನೇ ನಂಬಿರಬಾರದು

ತಮ್ಮ ಅಭಿವೃದ್ಧಿಗಾಗಿ ವಿದೇಶ ಸಹಾಯವನ್ನು ಪ್ರತೀಕ್ಷಿಸುತ್ತ ಕೂತುಕೊಳ್ಳುವುದು ಸರಿಯಲ್ಲ; ತಮ್ಮ ಆರ್ಥಿಕ ನೀತಿಯನ್ನು ಸ್ವತಂತ್ರವಾಗಿ ಏಶ್ಯನ್ ರಾಷ್ಟ್ರಗಳು ರೂಪಿಸಬೇಕು—ಎಂದು ಇಕಾಫೆ ಅಧಿವೇಶನದಲ್ಲಿ ಅಭಿಪ್ರಾಯಪಡಲಾಯಿತು.

ಏಶ್ಯ ಮತ್ತು ದೂರಪ್ರಾಚ್ಯಗಳಿಗೆ ಸಂಬಂಧಿಸಿದ 'ಇಕಾಫೆ" ಆರ್ಥಿಕ ಆಯೋಗವು ನವದೆಹಲಿಯಲ್ಲಿ ಸೇರಿ; ಈ ದೇಶಗಳ ಆರ್ಥಿಕ ವಿಕಾಸಕ್ಕಾಗಿ ಸಂಪನ್ನ ರಾಷ್ಟ್ರಗಳ ಸಹಾಯವು ಅಪೇಕ್ಷಣೀಯವಾದರೂ ಈ ದೇಶಗಳು ಪಾರಸ್ಪರಿಕ ಉನ್ನತಿಗಾಗಿ ಸ್ವಯಂ ಪರಿಶ್ರಮ ಪಡಬೇಕು; ವಿದೇಶಗಳು ನೀಡುವ ಸಹಾಯಕ್ಕೂ ಒಂದು ಮಿತಿಯಿರುವುದರಿಂದ ಅಲ್ಪವಿಕಸಿತ ದೇಶಗಳು ಜಾಗ್ರತೆಯಿಂದ ತಮ್ಮ ಅರ್ಥವ್ಯವಸ್ಥೆಯನ್ನು ರೂಪಿಸಬೇಕು ಎಂಬುದನ್ನು ಬಲವಾಗಿ ಪ್ರತಿಪಾದಿಸಿತು.

ಈ ಅಧಿವೇಶನದಲ್ಲಿ ಸಂಬಂಧಿತ ರಾಷ್ಟ್ರಗಳ ಆರ್ಥಿಕ ಸ್ಥಿತಿ, ಆರ್ಥಿಕ ಸಹಾಯ, ವ್ಯಾಪಾರ, ಉದ್ಯೋಗ ಮತ್ತು ಪ್ರಾಕೃತಿಕ ಸಾಧನಸಂಪತ್ತುಗಳ ಬಗ್ಗೆ ಹಲವಾರು ಗೊತ್ತುವಳಿಗಳ ಮೇಲೆ ಚರ್ಚೆನಡೆದರೂ ಆರ್ಥಿಕಸ್ಥಿತಿಗತಿಯ ಮೇಲೆ ಬಿಚ್ಚುಮನಸ್ಸಿನ ಚರ್ಚೆ ನಡೆಯಿತು. ಈ ಸಂದರ್ಭದಲ್ಲಿ ಬ್ರಿಟನ್, ಅಮೆರಿಕೆ ಮತ್ತು ರಶ್ಯಗಳ ಪ್ರತಿನಿಧಿಗಳು ತಂತಮ್ಮ ದೇಶಗಳು ಅಲ್ಪವಿಕಸಿತ ದೇಶಗಳ ವಿಕಾಸ ಪ್ರಕ್ರಿಯೆ ಮೇಲೆ ತಳೆದ ಧೋರಣೆಯನ್ನು ವಿಶದವಾಗಿ ಮುಂದಿಟ್ಟರು. ಈ ಮೂರು ರಾಷ್ಟ್ರಗಳೇ ಅತ್ಯಧಿಕ ಪ್ರಮಾಣದಲ್ಲಿ ನೆರವು ನೀಡುತ್ತಿರುವುದರಿಂದ, ಇವುಗಳ ಪ್ರತಿನಿಧಿಗಳ ಅಭಿಪ್ರಾಯಗಳನ್ನು ಅವರ ದೇಶದ ನೀತಿಯೆಂದು ತಿಳಿದರೆ ಅಸ್ವಾಭಾವಿಕವೆನಿಸದು

ಬ್ರಿಟನ್ನಿನ ಡ್ಯೂಕ್ ಆಫ್ ಡೇವನ್‌ಶಯರರು ಬ್ರಿಟನ್ನಿನ ಸಾಧನಗಳ ಬಗ್ಗೆ ಬೇಡಿಕೆಯು ಹೆಚ್ಚುತ್ತಿರುವುದಾದರೂ ಅದೇ ಪ್ರಮಾಣದಲ್ಲಿ ಬ್ರಿಟನ್ನಿನ ಸಾಧನ ಸಂಪತ್ತು ಬೆಳೆಯುತ್ತಿಲ್ಲವೆಂಬುದನ್ನು ತಿಳಿಸಿ ಕೇಗಿದ್ದರೂ ಹಿಂದುಳಿದ ರಾಷ್ಟ್ರಗಳಿಗೆ ಸಹಾಯ ನೀಡುವ ಯೋಜನೆಯನ್ನು ಮುಂದುವರಿಸಲಾಗುವುದೆಂದರು. ಕಳೆದ ಹತ್ತು ವರ್ಷಗಳಲ್ಲಿ ಚೀನವನ್ನುಳಿದ ಏಶ್ಯನ್ ರಾಷ್ಟ್ರಗಳಿಗೆ ಬ್ರಿಟನ್ ಬಂಡವಲ ಹಾಗೂ ಮಂತ್ರಿತರ ವಿಧಾನಗಳಿಂದ ೪೭ ಕೋಟಿ ಪೌಂಡುಗಳಷ್ಟು ಸಹಾಯ ನೀಡಿದೆ ೧೯೫೯ ೬೦ರಲ್ಲಿ ವಿಕಾಸ ಕಾರ್ಯಗಳಿಗಾಗಿ ವಾರ್ಷಿಕ ೪|| ಕೋಟಿ ಪೌಂಡು ಕೊಟ್ಟಿದೆ ಇದರಲ್ಲಿ ಖಾಸಗಿ ಬಂಡವಾಳವು ಸೇರಿಸಲ್ಪಟ್ಟಿಲ್ಲ ಇದನ್ನು ತಿಳಿಸುತ್ತ ಶ್ರೀ ಡ್ಯೂಕರು ಬ್ರಿಟನ್ನಿನ ಪರಿಸ್ಥಿತಿ ಸುಖವಿಲ್ಲವಾದರೂ ಅದು ತನ್ನ ಪೌಂಡು ಸ್ಟರ್ಲಿಂಗ್ ಶಕ್ತಿ ಮತ್ತು ಪ್ರತಿಷ್ಠೆಗಳನ್ನು ರಕ್ಷಿಸಿಕೊಳ್ಳುತ್ತ ಅನಭಿವೃದ್ಧ ದೇಶಗಳ ಪುರೋಭಿವೃದ್ಧಿ ಕಾರ್ಯಗಳಲ್ಲಿ ಶಕ್ತ್ಯನುಸಾರ ಸಹಾಯಮಾಡುವುದು ಎಂಬ ವಿಶ್ವಾಸದಾನಮಾಡಿದರು

ಬ್ರಿಟನ ಪ್ರತಿನಿಧಿಯ ಭಾಷಣದಲ್ಲಿ ಉಲ್ಲೇಖನೀಯ ವಿಷಯ ಮತ್ತೊಂದಿತ್ತು. ಏಶ್ಯನ್ ರಾಷ್ಟ್ರಗಳ ಬಗ್ಗೆ ಸಹಾನುಭೂತಿಯನ್ನು ವ್ಯಕ್ತಪಡಿಸಿದ ಡ್ಯೂಕರು ಕಟುಸತ್ಯವನ್ನೂ ಬಯಲಿಗೆಳೆದರು. ಮುಖ್ಯವಾಗಿ ಜನಸಂಖ್ಯೆಯು ಹೆಚ್ಚಳದ ಪ್ರಶ್ನೆಯನ್ನು ಅವರು ಸುಮ್ಮನೆ ಮುಟ್ಟಿ ಬಿಡಲಿಲ್ಲ. ಕೇವಲ ದಕ್ಷಿಣ ಮತ್ತು ಆಗ್ನೇಯ ಏಶ್ಯನ್ ರಾಷ್ಟ್ರಗಳ ಜನಸಂಖ್ಯೆಯು ಈಗ ೭೬|| ಕೋಟಿಗಳಷ್ಟಿದೆ. ಇಷ್ಟೊಂದು ಉದರಗಳ ಪೂರ್ತಿ ಹೇಗಾಗಬೇಕು ಎಂಬುದು ಅತಿ ವಿಕಟದ ಸಮಸ್ಯೆಯಾಗುತ್ತ ಹೋಗುತ್ತಿದೆ. ವಿಕಾಸಕಾರ್ಯಕ್ರಮಗಳು ಅತೀವ ತೀವ್ರಗತಿಯಿಂದ ಮುಂದುವರಿಯದೆ ಉಳಿದರೆ, ಜನಸಂಖ್ಯೆಯು ಪ್ರಮಾಣವು ಇದೇ ಪ್ರಮಾಣದಲ್ಲಿ ಹೆಚ್ಚುತ್ತ ಹೋದರೆ, ಈ ಸಮಸ್ಯೆ ಮತ್ತಷ್ಟು ಜಟಿಲವಾಗಿ ಪರಿಣಮಿಸುವುದು. ೧೯೮೦ರ ಸುಮಾರಿಗೆ ಒಂದು ಅರಬದಷ್ಟು ಹೊಟ್ಟೆಗಳಿಗೆ ಅನ್ನವನ್ನು ಬೇಕಾಗಬಹುದು ಆದುದರಿಂದ ಕೇವಲ ವಿದೇಶಿಯ ಸಹಾಯವನ್ನೇ ನಂಬಿ ಸುಮ್ಮನಿರುವುದು ದುರದೃಷ್ಟವೆನಿಸೀತು.

ರಶ್ಯವು ದ್ವಿಪಕ್ಷೀಯ ಸಹಾಯ ನೀಡುವುದಕ್ಕೆ ಉತ್ತೇಜನ ಕೊಟ್ಟಿತು. ರಶ್ಯದಿಂದ ಖಾಸಗಿ ಬಂಡವಾಳ



ಭಾರತದಲ್ಲಿ ಪವನ ಶಕ್ತಿಯನ್ನು ಬಳಸಿಕೊಳ್ಳಲು ಯಥೇಷ್ಟ ಅವಕಾಶಗಳಿವೆ ಈ ನೈಸರ್ಗಿಕ ಶಕ್ತಿಯನ್ನು ಕಲ್ಯಾಣಕಾರಕ ಕಾರ್ಯಗಳಿಗೆ ಉಪಯೋಗಿಸುವ ಹಂಚಿಕೆಗಳು ನಡೆಯುತ್ತಿವೆ. ಮೇಲಿನ ಚಿತ್ರದಲ್ಲಿ ಜಯಪುರದ ಒಂದು ಸಮಾಜ ಕಲ್ಯಾಣ ಕ್ಷೇತ್ರದಲ್ಲಿ ಈ ಪವನ ಶಕ್ತಿಯನ್ನು ನೀರೆತ್ತುವುದಕ್ಕೆ ಉಪಯೋಗಿಸುತ್ತಿರುವುದನ್ನು ಕಾಣಬಹುದು.

ಬರುವ ಪ್ರಶ್ನೆಯೇ ಇರುವುದಿಲ್ಲ ಇದುವರೆಗೆ ಕೆಲವೊಂದು ಆಫ್ರಿಕನ್ ದೇಶಗಳೂ ಸೇರಿ ಒಟ್ಟು ೧೧ ರಾಷ್ಟ್ರಗಳಿಗೆ ೧೦ ಅರಬ ರೂಪಾಯಿಗಳನ್ನು ಸಹಾಯವಾಗಿ ಇತ್ತಿದೆ. ರಶ್ಯವು ಇನ್ನೂ ಅಧಿಕ ಮೊತ್ತದಲ್ಲಿ ಸಹಾಯ ನೀಡಲು ಮುಂದೆ ಬರಬಹುದು ಆದರೂ ಅದರ ಪ್ರತಿನಿಧಿಯ ಅಭಿಪ್ರಾಯದಲ್ಲಿ ಹೀಗಾಗಬೇಕಾದರೆ, ನಿಶ್ಶಸ್ತ್ರೀಕರಣ ಪ್ರಶ್ನೆಯು ಬೇಗನೆ ಇತ್ಯರ್ಥಗೊಳ್ಳಬೇಕು. ಸಂಪನ್ನ ರಾಷ್ಟ್ರಗಳು ಶಸ್ತ್ರಾಸ್ತ್ರಗಳಿಗಾಗಿ ವೆಚ್ಚ ಮಾಡುತ್ತಿರುವ ಹಣದ ಶತಾಂಶದಷ್ಟಾದರೂ ಅನಭಿವೃದ್ಧ ರಾಷ್ಟ್ರಗಳ ಕಲ್ಯಾಣಕ್ಕಾಗಿ ಉಪಲಬ್ಧವಿಲ್ಲದಿರುವುದರಿಂದ ಈ ವಿಷಯದಲ್ಲಿ ಹುರುಳಿದೆಯೆನ್ನಬೇಕು

ಈ ರೀತಿಯ ವಿವಾದಗ್ರಸ್ತ ರಾಜನೀತಿಯನ್ನು ಇಕಾಫೆ ಅಧಿವೇಶನದಲ್ಲಿ ಎತ್ತಬಾರದಿತ್ತೆನ್ನುವವರೂ ಇದ್ದಾರೆ ಅಮೆರಿಕೆಯ ಪ್ರತಿನಿಧಿ ಶ್ರೀ ಎಚ್. ಎಲ್. ಪೀಟರ್ಸನ್ನರು ಈ ವಾದಕ್ಕೆ ವಿರೋಧವನ್ನೆತ್ತಿದವರಲ್ಲೊಬ್ಬರು ನಿಶ್ಶಸ್ತ್ರೀಕರಣ ಸಂಬಂಧದಲ್ಲಿ ರಶ್ಯದ 'ನಿಶ್ಶಸ್ತ್ರೀಕರಣ ನೀತಿ'ಯನ್ನು ವಿರೋಧಿಸುವುದು ಅಮೆರಿಕೆಗೆ ಅನಿವಾರ್ಯವೆಂದೆನಿಸಿದೆಯಾದರೂ ಮಾನವ ಕಲ್ಯಾಣಕ್ಕಾಗಿ ನಿಶ್ಶಸ್ತ್ರೀಕರಣದ ಮಹತ್ವವು ಇವರಿಗೂ ಮನಗಂಡಾಗಿದೆ ಈ ತಥ್ಯಾಂಶವನ್ನು ಅಮೆರಿಕೆಯ ಪ್ರತಿನಿಧಿ ಕೂಡ ಪರೋಕ್ಷವಾಗಿ ಮುಂದೆ ಸ್ವೀಕರಿಸಿದರು. ಅವರು ನಿಶ್ಶಸ್ತ್ರೀಕರಣದ ಆರ್ಥಿಕ ಮತ್ತು ಸಾಮಾಜಿಕ ಪರಿಣಾಮಗಳ ಮೇಲೆ ಈಗ ನಡೆಯುತ್ತಿರುವ ರಾಷ್ಟ್ರಸಂಘದ ಅಧ್ಯಯನದ ವಿವರಗಳನ್ನಿತ್ತು ನಿಶ್ಶಸ್ತ್ರೀಕರಣವು ಸಾಧಿಸಲ್ಪಟ್ಟ ನಂತರ ಹಿಂದುಳಿದ ರಾಷ್ಟ್ರಗಳ ಸಹಾಯ ಪ್ರಮಾಣದಲ್ಲಿ ಗಣನೀಯ ಹೆಚ್ಚುವರಿಯಾಗುವುದು ಖಚಿತವಾದುದು ಎಂದು ಒಪ್ಪಿಕೊಂಡರು

ನಿಶ್ಶಸ್ತ್ರೀಕರಣವು ಅಸಾಧಿತವಾದರೆ, ಅದು ಇಂದಿನಂತೆಯೇ ಜೋಲಾಡುತ್ತಿದ್ದರೆ ಏನಾಗುವುದು? ಹಿಂದುಳಿದ ದೇಶಗಳು ತಮ್ಮವೇ ಆದ ಉತ್ತರಗಳನ್ನು ಇದಕ್ಕೆ ಕಂಡುಕೊಳ್ಳಬೇಕಾಗಿದೆ. ಈ ರಾಷ್ಟ್ರಗಳು ಪರಸ್ಪರ ಸಹಕಾರ ಭಾವನೆ

(೧೧ನೇ ಪುಟ ನೋಡಿರಿ)

ESTD. 1921

NAVAYUGA
KANNADA WEEKLY,
UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ
ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೨೧.

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್.
ಬಿ. ಶಾಮರಾಯ ಶೆಟ್ಟಿ, ಬಿ. ಎ., ಎಲ್. ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

●

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್) ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್) ಕಲಂ ಇಂಚಿಗೆ ರೂ. 3 50
ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವಸೌಕರ್ಯವಿರುವುದು.

ಕಥಾವಿಹಾರ:

ತಿಳಿವು ಮೂಡಿದಾಗ...!

ತನ್ನನ್ನು ಕಡೆಗಣಿಸಿ ಪ್ರತ್ಯೇಕ ಮನೆಮಾಡಿದ ತಂಗಿ ಸುಗುಣನನ್ನು ತನ್ನ ಮರೆ ಹೋಗುವಂತೆ ಗೆಯ್ಯುವ ಪ್ರತಿಜ್ಞೆ ಮಾಡಿ ವೀರಣ್ಣ ಯಶಸ್ವಿಯಾಗುವುದರಲ್ಲಿದ್ದ; ಅಷ್ಟರಲ್ಲಿ ಅತನ ಅಹಮಹಮಿಕೆ ಮಾಯವಾಗಿ ತಿಳಿವು ಮೂಡಿತ್ತು; ಆದರೇನು, ಹೊತ್ತು ಮೊತ್ತ ಮೀರಿಹೋಗಿತ್ತು!

ಶ್ರೀ ಎಚ್. ರಾಮಕೃಷ್ಣ ಅಡಿಗ

"ಅಬ್ಬಾ ಆವಳ ಸೊಕ್ಕೇ..." ಉಪ್ಪರಿಗೆಯ ಕಿಟಕಿಯ ಎಡೆಯಿಂದ ಕಣ್ಣಾರಳಿಸಿ ನೋಡುತ್ತಿದ್ದ ವೀರಣ್ಣ. ತಲೆಯ ಮೇಲಿನ ಮೂರು ಪಾತ್ರೆಗಳ ಮೇಲೆ ಬಲಕೈಯನ್ನಿಟ್ಟು ಸೊಂಟದಲ್ಲಿನ ತಪ್ಪಲೆಯ ಮೇಲೆ ಎಡಗೈಯನ್ನಿಟ್ಟು ಬರಬರನೆ ರಭಸದಿಂದ ಬಯಲದಾರಿಯಲ್ಲಿ ನಡೆಯುತ್ತಿದ್ದಳು ಸುಗುಣ. 'ಒಮ್ಮೆಗೆ ಗೆದ್ದೆನಲ್ಲಾ' ಎಂಬ ಸಾಹಸ ಕೃತ್ಯದ ಹೆಮ್ಮೆಯು ಹೊನಲು ನಡಿಗೆಯಲ್ಲಿ ಸ್ಪಷ್ಟವಾಗಿ ತೋರಿಸುತಿತ್ತು. ಗದ್ದೆಯ ಅಂಚುಗಳಲ್ಲಿ ಸಾಗಿ, ಕಿರು ತೋಡನ್ನು ಹಾರಿ, ಮುಂದಿನ ಮಾವಿನ ತೋಪಿನ ಮಧ್ಯೆ ನಡೆದು ಮರೆಯಾಗುವ ತನಕವೂ ಅತ ಆಕೆಯನ್ನು ಕಾಣುತ್ತಲೇ ಇದ್ದ. ಎಷ್ಟುಹೊತ್ತು ಕಂಡನೋ, ಕಾಣುತ್ತಿದ್ದನೋ ಏನೋ ಹೆಂಡತಿ ಬಂದು ಕರೆದು ಎಚ್ಚರಿಸಿದಳು, "ಅತ್ತಿಗೆ ಬಂದು ಹೋದರು"— "ಹೂಂ ಬರುತ್ತೇನೆ ನ್ನು ಕೆಳಗೆ' ಎಂದು ಹೇಳಿ ವೀರಣ್ಣ ಎದ್ದ.

ಮೆಟ್ಟಿಲು ಇಳಿಯಲೆಂದು ತಿರುಗಿ ಒಂದು ಹೆಜ್ಜೆ ಇಟ್ಟಿದ್ದನಷ್ಟೆ. ಮಾಡಿನೆಡೆಯ ಕಿಟಕಿಯಿಂದ ಬಂದ ಮಬ್ಬು ಬೆಳಕಿನಲ್ಲೂ ಸುಗುಣಳ ಹುಡುಗಾಟಿಕೆಯ ಫೋಟೋ ಆತನನ್ನು ತಡೆದು ನಿಲ್ಲಿಸಿತು. ಎರಡು ಹೆಜ್ಜೆ ಮುಂದಿಟ್ಟು, ಹಾಲುಗೆನ್ನೆಯ ಹಸುಳೆಯನ್ನು ಕೈಯಲ್ಲಿ ಹಿಡಿದು, 'ಎಷ್ಟೊಂದು ತುಂಟತನ, ಮುದ್ದು ಮುಖದಲ್ಲಿ ತುಂಬಿ ತುಳುಕುತ್ತಿದೆ! ಕರಿ ನಾಯಿಯ ಕಿವಿಯನ್ನು ಎಳೆದು ಹೇಗೆ ಹಿಡಿದುಕೊಂಡು ನಿಂತಿದ್ದಾಳೆ"—ಹೌದು ಬಾಲ್ಯದಲ್ಲೂ ಆಕೆ ಹಾಗೆಯೇ ಇದ್ದಳು. ಆಕೆಯ ತಂದೆ, ತನ್ನ ಚಿಕ್ಕಪ್ಪ. ಸುಗುಣಳಲ್ಲೇ ತನ್ನ ಜೀವವನ್ನಿಟ್ಟಿದ್ದ. ತನ್ನ ಕಷ್ಟವೆಲ್ಲವನ್ನೂ ಸುಗುಣಳ ಮುಖವನ್ನು ಕಂಡು ಮರೆತಿದ್ದ. ತಾನು ಬೆಂಗಳೂರಿಗೆ ಹೋದರೆ ಆಕೆ ಬರಬೇಕು. ಆಕೆಯನ್ನು ಬಿಟ್ಟು ಒಂದು ಗಳಿಗೆ ಇರುತ್ತಿರಲಿಲ್ಲ, ಚಿಕ್ಕಪ್ಪ ....ಚಿಕ್ಕಪ್ಪ. ಹೂಂ. ಅವರ ಹೆಸರು ಸುಂದರ ರಾಯರೆಂದು. ಹೆಸರು ಮಾತ್ರವಲ್ಲ, ರೂಪ ಕೆಲಸ ಎರಡರಲ್ಲೂ ಸುಂದರ ಎಂದು ಅಕ್ಕ ಪಕ್ಕದ ಯಾರವರೂ ಅಂದುಕೊಳ್ಳುತ್ತಿದ್ದರು. ಸುಗುಣನ ನಾಮಕರಣದಂದು ಅಜ್ಜಿಯಿಟ್ಟ "ಬೋರಕ್ಕ" ಹೆಸರನ್ನು ಹೊಡೆದುಹಾಕಿ, ತಾವೆಲ್ಲೋ ಬೆಂಗಳೂರಿನಲ್ಲಿ ಕೇಳಿದ ಹೆಸರನ್ನು ಇಟ್ಟಿದ್ದರು; ಬಾಯ್ತುಂಬಾ 'ಸುಗುಣ' ಎಂದು ಕರೆದು. ಆದರೆ ಸಂಪೂರ್ಣ ಸುಗುಣ, ಈ ಸುಗಣಳಿಗೆ ಬರಲಿಲ್ಲವಲ್ಲ ಈಗ. ಏಕೆ? ಕೆಲವರು ಆ ಗಂಡನೇ ಅವಳಿಗೆ ಮಂಕೆರಚಿದ ಎನ್ನುತ್ತಿದ್ದರು.

ಆಕೆಯ ಗಂಡ. ಅವನು ಬಂದಾಗ, ವೀರಣ್ಣನಿಗೆ ಎಷ್ಟೊಂದು ಸಂತೋಷವಾಗಿತ್ತು. ಭಾವ ಭಾವ ಎಂದು ಬಾಯ್ತುಂಬ ಕೂಗಿ ಕರೆಯುತ್ತಿದ್ದ. ಕಂಡ ಕಂಡವರಲ್ಲಿ ಭಾವನ ವರ್ಣನೆ ಗುಣ ಕಥನ. ಭಾವನ ಆಗಮನದೊಡನೆ, ಊರಿನವರೂ ತುಂಬಾ ಪರಿವರ್ತನೆಗೊಂಡಿತು. ಭಾವ ಬಂದವನು ತುಂಬಾ ಮುಂದಿಗೆ ವಿದ್ಯೆ ಹೇಳಿಕೊಟ್ಟ. ಉಳುವವರಿಗೆ ಹಾಗಲ್ಲ ಹೀಗೆ ಎಂದು ನವಮಾರ್ಗ ಬೋಧಿಸಿದ ಇಂದು ಎಲ್ಲರೂ ತಮ್ಮ ಕ್ರಮವನ್ನು ಸುಧಾರಿಸಿಕೊಂಡಿದ್ದಾರೆ ಅವನಿಂದಾಗಿ. ಅವನು ಮತ್ತೂ ಒಂದು ಕೆಲಸ ಮಾಡಬೇಕೆಂದೆಣಿಸಿದ್ದ "ನಮ್ಮ ಊರಿನಲ್ಲಿ ಒಂದು ಶಾಲೆ ತೆರೆಯೋಣ" ಎಂದು. ಆ ಬಾಲವೃದ್ಧರಿಗೆ ಆನಂದವಾಯ್ತು ಆದರೆ ಹಣ....ಭಾವ ತುಂಬಾ ಬಡವ. ಅದೇ ಗೀಳು ಹಿಡಿದುದರಿಂದಲೋ ಏನೋ, ಅರೆಹುಚ್ಚನಂತಾದ. ಇದ್ದಕ್ಕಿದ್ದಂತೆ ಒಂದು ದಿನ ಇವನನ್ನು ನಮ್ಮೂರು ಕಳೆದುಕೊಂಡಿತು. ಅವನು ಎಲ್ಲಿ ಹೋದನೋ, ರಾತ್ರಿಯಿದ್ದವ, ಬೆಳಗ್ಗೆ ಯಿರಲಿಲ್ಲ.

ಅವನ ಅಸ್ತಮಾನದ ಬಳಿಕ ಊರಲ್ಲಿ ಹುಟ್ಟಿದ ಸುದ್ದಿಯಿದು. ಸುಗಣಳು ವೀರಣ್ಣನೊಡನೆ ಅದಕ್ಕೆ ಒಪ್ಪಿಗೆಯಿತ್ತಿದ್ದಳು. ಭಾವ ಆ ರಾತ್ರಿ ಸುಗುಣಳೊಡನೆ ಹೇಳಿದನಂತೆ, "ನಿನ್ನ ತಂದೆಯ ಆಸ್ತಿ, ಅಡವಿಟ್ಟಾದರೂ ಎರಡು ಸಾವಿರ ರೂಪಾಯಿ ಕೊಡಿಸು. ಮತ್ತೆ ನಾನೇ ತೀರಿಸುತ್ತೇನೆ" ಎಂದು. ಆದರೆ ಆಸ್ತಿಯೇ ತನ್ನ ಸರ್ವಸ್ವ ಎಂದು ತಿಳಿದ ಸುಂದರ ರಾಯರ ಸ್ವಭಾವ ಅರಿತ ಸುಗುಣ ಒಪ್ಪಲಿಲ್ಲ. "ನಿಮಗೇಕೆ ಅಂತಹ ಕೆಲಸ. ಊರವರನ್ನೇ ಕೂಡಿಸಿ, ಕಟ್ಟಿಸಿ" ಎಂದಳಂತೆ. "ನಮ್ಮವರಲ್ಲಿ ನಾವೇ ಕೆಲಸಕ್ಕೆ ಹೇಳಲೇ" ಅದೇ ಅವಳೊಡನೆ ಆವನಾಡಿದ ಕೊನೆ ಮಾತು. ಮರುದಿನ ಭಾವನನ್ನು ಯಾರೂ ಕಾಣಲಿಲ್ಲ. ಎಲ್ಲಿ ಹೋದನೋ ಯಾವ ಊರೋ.

ಇದಾದ ಕೆಲ ದಿನದಲ್ಲಿ ಸುಗುಣಳ ಪರಿವರ್ತನವಾಯಿತು. ತಂದೆಗೆ ಮಗಳ ದುಃಖ ಸಹಿಸಲಾಗಲಿಲ್ಲ. ಕಂಡು ಕಂಡು ಕೊರಗಿದ. ಹೆಂಡತಿ ಗಂಡನನ್ನು ಕೊಂದಿರಬೇಕು" ಎಂದ, ಹಲವರ ಸಂದೇಹದ ಚುಚ್ಚುನುಡಿಯನ್ನು ಕೇಳಿ ಕೇಳಿ, ಅವನ ಹೃದಯ ನುಚ್ಚುನೂರಾಯಿತು. ಅಂತೆಯೇ ಒಂದು ದಿನ ಅತ ಕಣ್ಣುಮುಚ್ಚಿದ. ಅಲ್ಲಿಗೆ ವೀರಣ್ಣನ ಮೂರು ದೀಪಗಳು ಆರಿದುವು. ಈಗ ಮನೆಯ ಭಾರ ವೀರಣ್ಣನ ಹೆಗಲಮೇಲೆ. ಅನುಭವದ ಸೆರೆ ಕಮ್ಮಿಯಾದ್ದರಿಂದ ಮೊದಮೊದಲು ಕಷ್ಟವಾದರೂ ಅತ, ಹೇಗೋ ಮನೆವಾರ್ತೆ ನಿರ್ವಹಿಸಿಕೊಂಡು ಹೋಗುತ್ತಿದ್ದ.

ಈಗ ಅತ ಮದುವೆಯಾಗಿ ಮೂರು ವರ್ಷ ಸಂದಿತು. ಸುಗುಣ—ವೀರಣ್ಣರ ನಿರ್ಮಲ ಪ್ರೇಮದ ಮಧ್ಯೆ, ಹದಿನಾರು ವರ್ಷದ ಶಾಂತ, ಮಂಜಿನ ಕಿರುಪರದೆಯನ್ನು ಬೀಸಿದಳು. ಅದು ಬೆಳೆಯುತ್ತಾ ಹೋದದ್ದು ಇಂದು ಭೂತಾಕಾರ ತಾಳಿ ನಿಂತಿದೆ.

ಅದಕ್ಕೇ ಸುಗುಣ, ಒಂದು ಬೆಳಗ್ಗೆ, "ಅಣ್ಣ, ನನಗೆ ನಿನ್ನ ಮನೇಲಿರಲು ಸಾಧ್ಯವಿಲ್ಲ. ನನ್ನ ತಂದೆಯ ಆಸ್ತಿಯಿದೆ. ನನಗೆ ಬಿಟ್ಟುಕೊಡು. ನಾನು ಬೇರೆ,ಸುಖವಾಗಿರುತ್ತೇನೆ" ಎಂದಳು. ವೀರಣ್ಣ ಮೊದಲು ಸಮಾಧಾನದ ಮಾತಾಡಿದ. ಸುಗುಣನೆಂಬ ಬೆಂಕಿಗೆ ತುಪ್ಪ ಸುರಿದಂತಾಯ್ತು,ಆ ಮಾತಿನ ಪರಿಣಾಮ. ಆಕೆ ಬೇರೆ ಮೂರು ನಾಲ್ಕು ಪ್ರತಿಷ್ಠಿತ ವ್ಯಕ್ತಿಗಳನ್ನು ಹಿಡಿದು, ಆಸ್ತಿಯನ್ನು ಕೊಡಲೇ ಬೇಕೆಂದಳು. ತನ್ನ ಮುಂದಿನ ಬಾಳನ್ನು ಸುಗಮವಾಗಿ ಸಾಗಿಸಲು ಸಾಧ್ಯವಿಲ್ಲವೆಂದು ಗೊತ್ತಿದ್ದರೂ, ವೀರಣ್ಣ ಆಸ್ತಿಯನ್ನು ಬಿಟ್ಟುಕೊಡಬೇಕಾಗಿ ಬಂತು. ತನಗಿದ್ದ ಚೂರು ಪಾರು ಆಸ್ತಿಯಲ್ಲಿ ಇಂದು ಅವನೆ ಜೀವ ತೇದು, ಹೊಟ್ಟೆ ತುಂಬಿಸಿಕೊಳ್ಳಬೇಕಾಗಿದೆ. ಸುಗುಣಳ ತಂದೆಯದ್ದು ಎಂದೆನ್ನುವ ಕೆಲವು ಪಾತ್ರೆಗಳನ್ನು ಬೇರೆ ತೆಗೆದಿಟ್ಟು ಅತ, ಆ ಕತ್ತಲುಪ್ಪರಿಗೆಗೆ ಬಂದು ಕುಳಿತು, ಹೆಂಡತಿಯೊಡನೆಂದ, "ಅವಳು ಬಂದರೆ ಪಾತ್ರೆ ತೋರಿಸು—ನನ್ನನ್ನು ಕೇಳಿದರೆ, ಇಲ್ಲ—ಪೇಟೆಗೆ ಹೋಗಿದ್ದಾರೆ ಎನ್ನು" ಎಂದಿದ್ದ. ಸುಗುಣಾ ಪಾಲಿಗೆ ಬಂದ ಪಾತ್ರೆಯನ್ನು ಹೊತ್ತು. ತನ್ನ ಸ್ವಂತ ಮನೆ ನಿರ್ಮಾಣದ ಹಂಬಲದಲ್ಲಿ, ಚಿಗರಿ ಮರಿಯಂತೆ ನೆಗೆಯುತ್ತಾ ಸಾಮಾನನ್ನು ಹೊತ್ತು, ಹೊರಟಳು. ವೀರಣ್ಣ ಒಮ್ಮೆಗೆ ಪಾರಾದ.

ಅದೇ ಸುಗುಣಾ, ಐದು ವರ್ಷದ ಹುಡುಗಿಯಾಗಿ ಅವನ ಕೈಯಲ್ಲಿ ನಗುತ್ತಿದ್ದಳು. ತುಂಟತನದ ನಗೆ ಬೀರುತ್ತಿದ್ದಾಳೆ ವೀರಣ್ಣನಿಗರಿಯದಂತೆ ಅವನ ಬಾಯಿಯಿಂದ ನಾಲ್ಕು ಮಾತು ಉದುರಿತು.

(೧೧ನೇ ಪುಟ ನೋಡಿರಿ)

ಇಂದು ಮಿತವಾಗಿ ವ್ಯಯಿಸಿದರೆ, ನಾಳೆ ಹಿತವಾಗಿ ಪರಿಣಮಿಸುವುದು.
ಮಿತವ್ಯಯವೇ ಹಿತಜೀವನದ ಹೆದ್ದಾರಿ.
ಮಿತವಾಗಿ ವ್ಯಯಿಸಿರಿ; ಉಳಿಯುವ ಹಣವನ್ನು ಬೇಂಕುಗಳಲ್ಲಿ ಶೇಖರಿಸಿರಿ.

ಕೊರ್ಪೊರೇಶನ್ ಬೇಂಕು

ನಿಮ್ಮ ಹಣಕ್ಕೆ ಸುರಕ್ಷಿತತೆ ಮತ್ತು ಭದ್ರತೆಗಳೊಂದಿಗೆ ಹೆಚ್ಚಿನ ದರದಲ್ಲಿ ಬಡ್ಡಿ ಕೊಡುವುದು.

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
ಸ್ಥಾಪನೆ: 1906 ರಿಜಿಸ್ಟರ್ಡ್ ಆಫೀಸು: **ಉಡುಪಿ,** ಮೈಸೂರು ರಾಜ್ಯ.
6 ರಾಜ್ಯಗಳಲ್ಲಿ ಒಟ್ಟು 62 ಶಾಖೆಗಳು — ದೇಶದಾದ್ಯಂತ ಏಜನ್ಸಿಗಳು.

ರವೀಂದ್ರ ವಾಣಿ:

ವಿಶ್ವದೊಡನೆ ವ್ಯಕ್ತಿಯ ಸಂಬಂಧ

(ಲೇಖಾಂಕ ೩)

ಪ್ರಕೃತಿಯ ಮೇಲೆ ಪ್ರಭುತ್ವ ಸ್ಥಾಪಿಸುವುದು ಪಾಶ್ಚಾತ್ಯ ಸಂಸ್ಕೃತಿಯ ಉದ್ದೇಶವಾಗಿದ್ದು ಅದು ಬೆಳೆದು ಬಂದಿದ್ದರೆ, ಪ್ರಕೃತಿಯ ರಹಸ್ಯಗಳನ್ನು ಸಂಶೋಧಿಸಿ ಅವನ್ನು ಮಾನವ ಕಲ್ಯಾಣಕ್ಕಾಗಿ ಬಳಸಿಕೊಳ್ಳುವುದು ಭಾರತೀಯ ಸಂಸ್ಕೃತಿಯ ಧ್ಯೇಯವಾಗಿತ್ತು.

ಮೂಲ ಲೇಖಕರು: ವಿಶ್ವಕವಿ ರವೀಂದ್ರನಾಥ ಟಾಗೋರ್
ಅನುವಾದಕರು: ಶ್ರೀ ಕೆ. ಎನ್. ಭಟ್, ಶಿರಾಡಿಪಾಲ್.

ಈ ಕೃತಕ ಸಂತೋಷವು ಬಹಳ ಕಾಲ ಬಾಳುವುದಿಲ್ಲ. ಮನುಷ್ಯನಿಗೆ ತನ್ನ ಅಸ್ತಿತ್ವದ ವ್ಯಾಪಕವಾದ ಪರಿಪೂರ್ಣತೆಯ ಜ್ಞಾನವು ಆಗತ್ಯ ಆಗಬೇಕು. ಭಗೀರಥ ಪ್ರಯತ್ನ ಮಾಡಿದರೂ, ಮನುಷ್ಯನು ತನ್ನ ಮಧು ಕೋಶದಲ್ಲಿ ಒಂದು ಹನಿ ಜೇನನ್ನಾದರೂ ತಯಾರಿಸಲು ಸಾಧ್ಯವಿಲ್ಲ ಎಂಬ ಈ ಜ್ಞಾನ ಆತನಿಗೆ ನೆನಪಿರಬೇಕು. ಜೀವನಕ್ಕೆ ಆಗತ್ಯವಾಗಿ ಬೇಕಾದ ಮಧುವನ್ನು ಆತನು ಹೊರಗಿನ ವನ ಉಪವನಗಳಿಂದ ರಸ ತುಂಬಿದ ಫಲಪುಷ್ಪಗಳಿಂದ ಪಡೆಯಬೇಕಾಗುತ್ತದೆ. ಮನುಷ್ಯನು ಪ್ರಾಣ ಪ್ರದವಾದ ಪ್ರಕೃತಿಯಿಂದ ದೂರ ಸರಿದು ತನ್ನ ಆರೋಗ್ಯವನ್ನು ಹೊಸ ಹೊಸ ಸಂಶೋಧನೆಗಳ ಮೂಲಕ ಸುಧಾರಿಸಿಕೊಳ್ಳಲು ಯಾವಾಗ ಪ್ರಯತ್ನಿಸ ತೊಡಗುತ್ತಾನೋ, ಆಗ ಆತನು ಹುಚ್ಚನಂತಾಗುತ್ತಾನೆ; ಮತ್ತು ತನ್ನನ್ನು ತಾನೇ ದೂಷಿಸಿಕೊಳ್ಳುವ ಕಾಲಬಂದು, ತನ್ನ ಜೀವನದ ಸಂಪತ್ತೆಯನ್ನೇ ಕಳೆದುಕೊಳ್ಳುತ್ತಾನೆ. ಈ ಜ್ಞಾನವೂ ಕೂಡ ಮನುಷ್ಯನಿಗೆ ನೆನಪಿರಬೇಕು.

ಪ್ರಕೃತಿಯು ವಿಶಾಲವೂ ಶಾಂತವೂ ಆದ ಆಶ್ರಯವನ್ನು ಬಿಟ್ಟ ಬಳಿಕ ಆತನ ಸ್ಥಿತಿ ಕರುಣಾಜನಕವಾಗಿ ಕೊನೆಗೆ, ಅದು ನಗ್ನತೆಯನ್ನು ಹೊಂದಿ ನಿರ್ಲಜ್ಜವಾಗುತ್ತದೆ. ಪ್ರಕೃತಿಯ ಆವರಣದಲ್ಲಿ ಮನುಷ್ಯನು, ನಿರಾಡಂಬರ ಯುಕ್ತನಾಗಿದ್ದೂ ಆತನ ಪರಿಸ್ಥಿತಿಯು ಉತ್ತಮವೂ ಗೌರವಯುಕ್ತವೂ ಆಗಿರುತ್ತದೆ. ಆದರೆ ಪ್ರಕೃತಿಯಿಂದ ದೂರ ಸರಿದ ಬಳಿಕ, ಆತನಲ್ಲಿ ಯಾವ ವೈಭವ—ಸಂಪತ್ತುಗಳಿದ್ದರೂ, ಅಸ್ತವ್ಯಸ್ತವಾಗಿ ಹೋದಂತೆ ಭಾಸವಾಗುತ್ತದೆ. ಆತನ, ಹಸಿವು, ತೃಷೆ, ಮೊದಲಾದ ಸಹಜ ಪ್ರವೃತ್ತಿಗಳೂ ಇಮ್ಮಡಿಸಿ, ಹೆಚ್ಚಾಗಿ ಮೀರಿದಪ್ಪಿ ಹೋಗುತ್ತವೆ. ಹೀಗೆ ಮೇರೆದಪ್ಪಿದ, ತನ್ನ ಪ್ರಯೋಜನವನ್ನೂ ಗುರುತಿಸಲಾರದ, ಈ ಸಹಜವಾದ ಇಚ್ಛೆಗಳು ಕೊನೆಗೆ, ಅವುಗಳೇ ಒಂದು ಧ್ಯೇಯವಾಗಿ ಪರಿಣಮಿಸಿ, ಆತನ ಜೀವನದಲ್ಲಿ, ಅಗ್ನಿ ಜ್ವಾಲೆಯನ್ನು ಹೊತ್ತಿಸಿ ಬಿಡುತ್ತವೆ. ಈ ಜ್ವಾಲೆಗಳ ಸ್ವಾಹಾಕಾರದ ಆ ಪರಿಸ್ಥಿತಿಯಲ್ಲಿ ಆತನ ಮೇರೆದಪ್ಪಿದ ಇಚ್ಛೆಗಳು, ರಾಕ್ಷಸೀ ತೃಪ್ತಿಯನ್ನು ಹೊಂದಿ, ಆ, ಆನಂದವನ್ನು ಪಡೆಯುತ್ತವೆ.

ಪ್ರತಿಯೊಂದು ಕಾರ್ಯವನ್ನೂ, ನಾವು ಆಕ್ರಮವಾಗಿ ನೋಡುತ್ತಿರಲು, ಈ ಪರಿಯ ಮಾನಸಿಕ ಸ್ಥಿತಿ ಉಂಟಾಗುತ್ತದೆ; ಮತ್ತು ವಿಪರೀತ ಕಾರ್ಯಾಚರಣೆಗೇ ಪ್ರೇರೇಪಿಸುತ್ತದೆ. ಈ ರೀತಿಯ ಅಕ್ರಮವಾದ ಮನೋಭಾವನೆಗಳು, ಮನುಷ್ಯನು, ಈ ಮೇಲೆ ವಿವರಿಸಿದ ಪರಿಸ್ಥಿತಿಗೆ ಇಳಿದಾಗ ಬರಲಾರಂಭಿಸುತ್ತವೆ. ಆಗ ನಮ್ಮ ಕಾರ್ಯಗಳಲ್ಲಿ ಅಥವಾ ರಚನೆಗಳಲ್ಲಿ ಸ್ವಾಭಾವಿಕತೆ ಇಲ್ಲದಂತಾಗಿ, ಕೃತ್ರಿಮ ಅರ್ಥಾತ್ ಅಸ್ವಾಭಾವಿಕತೆಯೇ ತುಂಬಿ ಬಿಡುತ್ತದೆ. ಇದರಿಂದಲೇ ಮುಂದೆ ಕ್ರಾಂತಿಕಾರೀ ಭಾವನೆ ಹುಟ್ಟುತ್ತದೆ. ಸಾಹಿತ್ಯದಲ್ಲಿ–ಕಲೆಯಲ್ಲಿ ನಾವು ಹೊಸತನ ಅರ್ಥಾತ್–ನವ್ಯತೆಯನ್ನು ಒಡಮೂಡಿಸಲು ಪ್ರಯತ್ನಿಸುವಾಗ ನಾವು ಹಳೆಯದಾದರೂ, ನಿತ್ಯ ನೂತನವಾದ ಸತ್ಯವನ್ನು ಮರೆತು ಬಿಡುವಂತೆ ಆಗುತ್ತದೆ ಈ ಕಾರಣದಿಂದ ನಾವು ಸಾಹಿತ್ಯದಲ್ಲಿಯೂ ಬಾಹ್ಯರೂಪವು ಸಾಮಾನ್ಯವೆಂದು ಕಂಡರೂ, ಆಂತರಿಕ ರೂಪದಿಂದ ಅಸಾಮಾನ್ಯವಾಗಿರುವ ಮನುಷ್ಯನ ವ್ಯಾಪಕ ರೂಪವನ್ನು ಅಡಗಿಸಿ ಬಿಡುತ್ತೇವೆ. ಹೀಗೆ ಆದಾಗ ಮನುಷ್ಯನು ಒಂದು ರೀತಿಯ ಮನೋವೈಜ್ಞಾನಿಕವಾದ ಉಭಯಸಂಕಟಕ್ಕೆ ಒಳಗಾಗುತ್ತಾನೆ; ಅಥವಾ ಅಸಾಧಾರಣವಾದ–ತೀಕ್ಷ್ಣವಾದ ಮನೋಭಾವನೆಗಳ ಪ್ರತೀಕದಂತೆ ತೋರುತ್ತಾನೆ. ಅಸಾಧಾರಣವೆಂತೆಂದರೆ—ಆವೇಶಪೂರ್ಣವಾದ ಭಾವನೆಗಳಲ್ಲಿ, ಅಸ್ವಾಭಾವಿಕತೆಯ ರೂಪದಿಂದ ಧಗಧಗಿಸುತ್ತಿರುವ ಅಗ್ನಿಜ್ವಾಲೆಯಂತೆ, ಆತನ ಮನೋಭಾವನೆಗಳು ವ್ಯಕ್ತವಾಗುತ್ತವೆ. ಹೀಗಾದಾಗ, ಮನುಷ್ಯನ ಆತ್ಮವು, ಅವಕ್ಕೆ ಬೇಕಾದ ಪೋಷಕ ತತ್ವಗಳಿಂದ, ಭೂಮಿಯ ಸಮತಟ್ಟಾದ ಸ್ಥಳದಲ್ಲಿ ವಿಸ್ತರಿಸಿರುವ—ಬೇರುಗಳು ಭೂಮಿಯ ಒಳಭಾಗದಲ್ಲಿ ಪ್ರವಹಿಸುವ ಜಲದಿಂದ ವಂಚಿತವಾಗುವಂತೆ, ವಂಚಿತವಾಗುತ್ತದೆ. ಇಂತಹ ಆತ್ಮವು ಹಸಿವಿನಿಂದ ಆಕ್ರಾಂತವಾಗುತ್ತದೆ. ಈ ಆತ್ಮದ, ಹಸಿವು ತೃಷೆಗಳನ್ನಡಗಿಸುವ ಶಾಂತಿಯನ್ನು ಪಡೆಯುವ, ನಿಜವಾದ ಉಪಾಯವನ್ನು ಕೈಗೊಳ್ಳದೆ, ಮನುಷ್ಯನು ಕ್ಷಣಿಕವಾದ ಕೃತಕ ಉಪಾಯಗಳಿಂದ ಉತ್ತೇಜಿತನಾಗಲು ಪ್ರಯತ್ನಿಸುವನು. ಆಗ ಮನುಷ್ಯನ ದೃಷ್ಟಿಯು ಕ್ಷೀಣವಾಗಿ, ಆತನು ತನ್ನ ಮಹತ್ವವನ್ನೇ ತಿಳಿಯಲಾರದವನಾಗುವನು. ಅರ್ಥಾತ್, ತಾನು ಮಾಡುತ್ತಿರುವ ಕಾರ್ಯಗಳ ವೇಗದ ಮೂಲಕ ತನ್ನ ಪರೀಕ್ಷೆ ಮಾಡಿಕೊಳ್ಳುತ್ತಾನೆಯೇ ಹೊರತು, ಹಿಡಿದ ಕಾರ್ಯವನ್ನು ಪೂರ್ಣಗೊಳಿಸುವುದರಲ್ಲಿ ಆತನಿಗೆ ಉತ್ಸಾಹವಿರುವುದಿಲ್ಲ. ತನ್ನ ಕಾರ್ಯವನ್ನು ತಾನು ಮಾಡಿ ಪೂರ್ಣಗೊಳಿಸಿದ ಬಳಿಕ ಲಭಿಸುವ ವಿಶ್ರಾಂತಿ—ಸಂತೋಷಗಳಿಂದ ಆತನು ವಂಚಿತನಾಗುತ್ತಾನೆ.

ಭಾರತಕ್ಕೆ ಪ್ರಥಮವಾಗಿ ಬಂದ ಪ್ರವಾಸಿಗಳ ಆಗಮನವು ಅಮೇರಿಕದ ಯುರೋಪಿಯನ್ ಪ್ರವಾಸಿಗಳಂತೆಯೇ ಆಗಿತ್ತು. ಅವರಿಗೂ ಅರಣ್ಯದ ಆದಿವಾಸಿಗಳೊಡನೆ–ಸಂಘರ್ಷ ನಡಬೇಕಾದ ಸಂದರ್ಭ ಒದಗಿತ್ತು. ಮನುಷ್ಯ ಮನುಷ್ಯರೊಳಗೆ, ಅಥವಾ ಮನುಷ್ಯ–ಪ್ರಕೃತಿಗಳೊಳಗೆ—ಈ ಪರಿಯ ಸಂಘರ್ಷವು ಕೊನೆತನಕ ನಡೆಯುತ್ತಲೇ ಇತ್ತು; ಹೊರತು, ಇವುಗಳಲ್ಲಿ ಸಮಾನತೆ ಸ್ಥಾಪಿತವಾಗಲಿಲ್ಲ. ಭಾರತದಲ್ಲಾದರೆ, ಸ್ವಲ್ಪ ಮಾತ್ರ ಸಂಘರ್ಷಣೆ ನಡೆದು ಹಿಂಸಾಪ್ರವೃತ್ತಿಯ ಜನರಿಂದ ಕೂಡಿದ್ದ ಅರಣ್ಯಗಳು, ಋಷಿ–ಮುನಿಗಳ ಆಶ್ರಮಗಳಾಗಿ ಪರಿವರ್ತನೆಯಾದವು.

ಅಮೇರಿಕದಲ್ಲಿ ಸಜೀವ, ಶಕ್ತಿ ಸಂಪನ್ನವಾದ ಪ್ರಕೃತಿಯ ಪ್ರಭಾವವು ವಿಶೇಷವಾಗಿ ಮನುಷ್ಯನ ಜೀವನದ ಮೇಲೆ ಪರಿಣಾಮಕಾರಿಯಾಗಲಿಲ್ಲ. ಆದರೆ, ಧನ ಸಂಪತ್ತುಗಳ ವೃದ್ಧಿಗೆ ಮಾತ್ರ ಪ್ರಕೃತಿಯು ಸಹಾಯಕವಾಯಿತು. ಮತ್ತು ಅರಿಗೆ ಸೌಂದರ್ಯದ ಉಪಯೋಗಕ್ಕೂ ಪ್ರಕೃತಿಯು ಪ್ರೇರಕವಾಗಿರಬಹುದು; ಎಂದು ಹೇಳಬಹುದು. ಅಲ್ಲದೆ, ಅಲ್ಲಿಯ, ಕೆಲವು ಕವಿಗಳ ಕವಿತಾಶಕ್ತಿಯನ್ನು ಜಾಗೃತಗೊಳಿಸುವುದಕ್ಕೂ ಪ್ರಕೃತಿಯು ಉಪಯೋಗವಾಗಿರಬಹುದು. ಯಾವ ಪ್ರಕೃತಿಯ ಪ್ರಭಾವವು, ಮನುಷ್ಯನ ಹೃದಯವನ್ನು ಆಧ್ಯಾತ್ಮಿಕ ಶಾಂತಿಯಿಂದ ತುಂಬಿ, ಆತ್ಮವನ್ನು ಪುನೀತಗೊಳಿಸಿ, ತನ್ಮೂಲಕ, ವಿಶ್ವಾತ್ಮನಲ್ಲಿ ಸಂಬಂಧವನ್ನು ಬಲಪಡಿಸುವುದೋ ಅಂತಹ ಪ್ರಕೃತಿಯ ಪ್ರಭಾವ, ಈ ಜನಾಂಗದ ಮೇಲೆ ಪರಿಣಾಮಕಾರಿಯಾಗಲಿಲ್ಲ

'ಈಗ ನಡೆದುದು ಇದಿಷ್ಟೆಲ್ಲ ಉಚಿತವಾಗಿಲ್ಲ' ಎಂದು ನಾನು ಒಂದು ಕ್ಷಣವೂ ಕೂಡ ವಿಚಾರಮಾಡಲಾರೆ, ಅಥವಾ ಭಾವಿಸಲಾರೆ. ಇತಿಹಾಸವು ಸದಾ ಒಂದೇ ರೀತಿಯಾಗಿ ಇರುವುದಿಲ್ಲ. ಆದರ ಪರಿವರ್ತನೆಯ ಕಾರಣದಿಂದ ಕೊನೆಗೆ ನಿಜಸ್ವರೂಪವೇ ನಷ್ಟವಾಗಿ, ಆ ಇತಿಹಾಸದ ರೂಪ ಪರಿವರ್ತನೆಯಾಗುವ ಸಂಭವವಿದೆ ಬೇರೆ

(೧೦ನೇ ಪುಟ ನೋಡಿರಿ)

ಪುತ್ತೂರು ಡಿ. ಮುಂ. ಕೋರ್ಟಿನಲ್ಲಿ

S. C. No. 8/1961.

ಕೊರಗಪ್ಪ ಗೌಡ —ವಾದಿ.

ಮತ್ತು

ಕುಂಭೀತಿ ಹೆಂಗ್ಸು ಕೂಡಾ–ಪ್ರತಿವಾದಿರು.

1ನೇ ಪ್ರತಿವಾದಿ—ಕುಂಭೀತಿ ಹೆಂಗ್ಸು, ಕೆರೆಮುದೇಲು ಅಂಗರ ಗೌಡರ ವಿಧವೆ, ಪುತ್ತೂರು ತಾಲ್ಲೂಕು ಕಡಬ ಕಸಬಾ ಗ್ರಾಮ.
4ನೇ ಪ್ರತಿವಾದಿ—ರಾಮಕ್ಕ, ಕೆರೆಮುದೇಲು ಅಂಗರ ಗೌಡರ ಮಗಳು, ವ, ಕೆಂಚಪ್ಪ ಗೌಡರ ಹೆಂಡ್ತಿ, ಪುತ್ತೂರು ತಾಲ್ಲೂಕು ಬಿಳಿನೆಲೆ ಗ್ರಾಮದಲ್ಲಿರುವವಳು—ಕೂಡಾ.

ಇವರಿಬ್ಬರಿಗೆ — ವಾದಿಕಡೆಯಿಂದ ಈ ಮೂಲಕ ತಿಳಿಯಪಡಿಸುವುದೇನಂದ್ರೆ—

ಮೇಲ್ಕಂಡ ಕೋರ್ಟಿನಲ್ಲಿ ನೀವು ಕೂಡಾ 5 ಜನ ಪ್ರತಿವಾದಿರ ಮೇಲೆ ಗೇಣಿ ಬಾಕಿ ಬಗ್ಗೆ ವಾದಿಯು ದಾಖಲ್ಲು ಮಾಡಿದ ದಾವೆಯು ತಾ. 31—3—1961ರಲ್ಲು ಪೂರ್ವಾಹ್ನ ಘಂಟೆ 11ಕ್ಕೆ ತನ್ನಿಖೆಗೆ ಇಟ್ಟಿದ. ಆ ದಿವಸ ನೀವು ಸ್ವತಹ ವ, ವಕೀಲರ ಮುಖಾಂತರ ಆಗಲೀ ಹಾಜ್ರಾಗಿ ಉತ್ತರಿಸಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಗೈರುಹಾಜರಿಯಿಂದ ಕೋರ್ಟಿನವರಿಗೆ ಯುಕ್ತ ಕಂಡಂತೆ ತೀರ್ಮಾನಿಸೋಣಾದೀತೆಂಬ ಸಂಗ್ತಿಯನ್ನು ನಿಮಗೆ ಈ ಮೂಲ್ಕ ತಿಳಿಸೋಣಾಗಿಯದೆ.

(ಕೋರ್ಟಿನ ಹುಕ್ಕುಂ ಪ್ರಕಾರ)

K. Subramanya Gowda,
Advocate for Plaintiff

ಪುತ್ತೂರು, ತಾ. 16–3–1961

ಸ್ಥಾಪನೆ: 1924

ದಿ ಕರ್ನಾಟಕ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಆಫೀಸು: ಮಂಗಳೂರು—3.

ಈ ಕೆಳಗಿನ ಬಡ್ಡಿದರಗಳಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು.

ಒಂದು ತಿಂಗಳಿಗೆ	.... ಸಾ|| ನೇಕಡಾ	3-75 ನ. ಪೈಸೆ
ಮೂರು ತಿಂಗಳುಗಳಿಗೆ	.... ,,	4-00 ,,
ಆರು ತಿಂಗಳುಗಳಿಗೆ	.... ,,	4 25 ,,
12 ತಿಂಗಳುಗಳಿಂದ 23 ತಿಂಗಳುಗಳ ವರೆಗೆ	,,	4-50 ,,
24 ತಿಂಗಳುಗಳಿಂದ 48 ತಿಂಗಳುಗಳ ವರೆಗೆ	,,	4 75 ,,

"ಹನಿ ಡಿಪೋಸಿಟ್ಸ್" ನಲ್ಲಿ
ನಿಮ್ಮ ದೈನಂದಿನ ಉಳಿತಾಯವನ್ನು ವಿನಿಯೋಗಿಸಿರಿ.

THE KARNATAKA BANK LIMITED.

"ನಚಿಕೇತ"ರ
ಇನ್ನೊಂದು ನವೀನ ಕಾದಂಬರಿ—

ಋಣ ಯಾತ್ರೆ

ಇದೀಗ ಪ್ರಕಟವಾಗಿದೆ.
ಬೆಲೆ ರೂ 1-50 ನ. ಪೈಸೆ.
ಮೊದಲು ಪ್ರಕಟವಾದ ಕಾದಂಬರಿ—

ಭಾವಾರ್ಚನೆ

ಬೆಲೆ ರೂ. 1 25 ನ. ಪೈಸೆ.
ಪ್ರತಿಗಳು ಸಿಗುವ ಸ್ಥಳಗಳು:–
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ಆರೋಗ್ಯ ವಿಜ್ಞಾನ:

ಕೇನ್ಸರಿಗೆ ನೀವು ಹೆದರಬೇಕಿಲ್ಲ

ಕೆಲವು ವರ್ಷಗಳ ಹಿಂದೆ ಅನಿವಾರಕವೆಂದು ತಿಳಿಯಲಾಗಿದ್ದ ಕೇನ್ಸರ್ ಅಥವಾ ಅರ್ಬುದ ರೋಗಕ್ಕೂ ಇಂದು ಪರಿಣಾಮಕಾರಿ ಚಿಕಿತ್ಸೆಯನ್ನು ಕಂಡು ಹಿಡಿಯಲಾಗಿದೆ. ಇನ್ನೂ ಸಂಶೋಧಿಸಲಾಗುತ್ತಿದೆ. ಮುಂದಿನ ಒಂದೆರಡು ದಶಕಗಳಲ್ಲಿ ಇದನ್ನು ನಾಮಾವಶೇಷ ಮಾಡುವುದು ಸಾಧ್ಯ.

ಕೇನ್ಸರ್ ಗುಣಹೊಂದದ ರೋಗವೆಂಬ ಅಭಿಪ್ರಾಯವು ಮೊನ್ನೆ ಮೊನ್ನೆಯವರೆಗೆ ಖಚಿತವಾಗಿದ್ದರೂ ಇದೀಗ ಅದನ್ನೂ ನಿವಾರಿಸಿಕೊಳ್ಳಬಹುದೆಂದು ವಿಶ್ವಸನೀಯವಾಗಿ ತಿಳಿದುಬಂದಿದೆ. ಈ ಬಗ್ಗೆ ನಡೆದ ಸಂಶೋಧನೆಗಳಿಂದಾಗಿ ಈ ಪ್ರಪಂಚದಿಂದಲೇ ಅರ್ಬುದ ರೋಗವನ್ನೂ ನಿರ್ನಾಮಗೊಳಿಸಬಹುದೆಂದು ಹೇಳುವ ಧೈರ್ಯ ಉಂಟಾಗಿದೆ.

ವಿಶ್ವದ ವೈಜ್ಞಾನಿಕರು ಮತ್ತು ಚಿಕಿತ್ಸಕರು ಒಟ್ಟುಗೂಡಿ ಹಲವಾರು ವರ್ಷಗಳಿಂದ ಕೇವಲ ಚಿಕಿತ್ಸೆಯ ಸಂಶೋಧನೆಯಲ್ಲಿ ತಲ್ಲೀನರಾಗಿದ್ದರು. ಸಾಕಷ್ಟು ಪ್ರಯೋಗಗಳ ಅನಂತರ ರಶ್ಯ ಮತ್ತು ಅಮೆರಿಕೆಗಳ ಚಿಕಿತ್ಸಕರು ಹಾಗೂ ಶರೀರ ಶಾಸ್ತ್ರಜ್ಞರು ಸ್ವಲ್ಪಮಟ್ಟಿಗೆ ಯಶಸ್ಸುಗಳಿಸಿದರು. ಇದರ ಪರಿಣಾಮವಾಗಿ ಇಂದು ಹಲವಾರು ಜಾತಿಯ ಅರ್ಬುದ ರೋಗಗಳು ಚಿಕಿತ್ಸೆಯಿಂದ ಪರಿಣಾಮಕಾರಿಯಾಗಿ ಗುಣಹೊಂದುವಂತಹ ಔಷಧಿಗಳು ಲಭ್ಯವಿರುತ್ತವೆ. ಚರ್ಮ, ತುಟಿ, ನಾಲಗೆ, ಗರ್ಭಾಶಯ, ಗುದ, ಪಿಟ್ಯುಟರಿ ಗ್ರಂಥಿ, ದೊಡ್ಡಕರುಳು ಮೊದಲಾದುವುಗಳ ಅರ್ಬುದ ರೋಗ ಹಿಡಿದಾಗ ಪ್ರಾರಂಭಿಕಾವಸ್ಥೆಯಲ್ಲಿ ಚಿಕಿತ್ಸೆಯನ್ನು ಮಾಡಿ ಯಶಸ್ವಿಯಾಗಲು ವೈದ್ಯರು ಸಮರ್ಥರಾಗಿದ್ದಾರೆ. ವಿಭಿನ್ನ ಪ್ರಕಾರದ ಪ್ರಾಣಹಕರ ರಸ ಪದಾರ್ಥಗಳು ಒಂದೇ ಕಾರಣದಿಂದ ಉತ್ಪಾದಿತಗೊಳ್ಳದಿರುವುದರಿಂದ ವಿಜ್ಞಾನಿಗಳ ಈ ಸಂಬಂಧದ ಕಾರ್ಯ ಅತಿ ತೊಡಕಿನದಾಗಿದೆ.

ಕೇನ್ಸರ್ ರೋಗದ ಪ್ರಾರಂಭಿಕ ಅವಸ್ಥೆಗೆ ನಿದಾನವನ್ನರಸಬೇಕಾದರೆ, ೩೫ ವರ್ಷ ಪ್ರಾಯದ ಜನರೆಲ್ಲನ್ನೂ ಸಾರ್ವಜನಿಕ ನಿರೋಧಾತ್ಮಕ ಕೇನ್ಸರ್ ಸಂಬಂಧಿ ವೈದ್ಯಕ ಪರೀಕ್ಷೆಗೆ ಗುರಿಮಾಡಬೇಕಾಗುವುದು. ಚಿಕಿತ್ಸೆಯ ಸಾಫಲ್ಯಕ್ಕೆ ಈ ಪರೀಕ್ಷಣವು ಅತ್ಯಾವಶ್ಯಕವಾಗಿದೆ. ಈ ನಿರೋಧಾತ್ಮಕ ಕಾರ್ಯಕ್ರಮಗಳ ಪರಿಣಾಮವಾಗಿಯೇ ರಶ್ಯದಂತಹ ಕೆಲವು ದೇಶಗಳಲ್ಲಿ ಅರ್ಬುದ ರೋಗವು ದಿನದಿಂದ ದಿನಕ್ಕೆ ಕಡಿಮೆಯಾಗುತ್ತ ಬರುತ್ತಿದೆ.

ಎಲ್ಲಾ ವಿಧದ ಕೇನ್ಸರ್ ರೋಗ ಚಿಕಿತ್ಸೆಗೂ ಗರ್ಭಾಶಯ, ಸ್ತನಗ್ರಂಥಿ, ನಾಲಗೆ, ತುಟಿ, ತೊಗಲು ಮತ್ತು ಗುದ ಮೊದಲಾದುವುಗಳ ಕೇನ್ಸರ್ ರೋಗ ಚಿಕಿತ್ಸೆಯ ಕಡೆಗೆ ಅಧಿಕ ಗಮನವೀಯುವುದು ಅತ್ಯವಶ್ಯವೆಂದೀಗ ಸ್ಪಷ್ಟವಾಗಿ ತಿಳಿದುಬಂದಿದೆ.

ಮಲಕೋಷ್ಟಕ ಮತ್ತು ಕೇನ್ಸರಿನ ಗಾಯಗಳ ಗುರುತುಗಳನ್ನು ಅಧ್ಯಯನದಿಂದ ಕೇನ್ಸರ್ ರೋಗವನ್ನು ಉಪಶಮನಗೊಳಿಸುವುದು ಸುಲಭ ಸಾಧ್ಯವೆಂದು ವಿಜ್ಞಾನಿಗಳು ಅನ್ನುತ್ತಾರೆ. ಹಯೋಡ್ರಾಸ್ಟ್ ಮೊದಲಾದ ವಿಧಾನಗಳಿಂದ ಶರೀರವನ್ನು ಅಪಾರದರ್ಶಕವಾಗಿಸಿ ಹೊಟ್ಟೆ ಅಥವಾ ಶ್ವಾಸಕೋಶಗಳ ಕೇನ್ಸರ್‌ನ ಎಕ್ಸ್—ರೇ ಮೂಲಕ ನಿದಾನಮಾಡುವ ಪದ್ಧತಿಯೂ ಈಗೀಗ ಸಾಕಷ್ಟು ಉನ್ನತವಾಗಿದೆ. ಮಾನವ ಮತ್ತು ಪಶುಗಳ ಟ್ಯೂಮರ್‌ನಾಲಿ ಗ್ರಂಥಿಗಳಲ್ಲಿ ಒಂದು ವಿಷ ಸ್ವಭಾವದ ಜಟಿಲ ಎಲ್ಬುಮೆನ್ (ಮೊಟ್ಟೆಯಂತಹ ಬಿಳಿಯ ಪದಾರ್ಥ) ಇರುವುದಂದೂ ಇದರ ಪ್ರಯೋಗವು ಕೇನ್ಸರ್ ನಿದಾನದಲ್ಲೂ ಅದರ ಪ್ರತಿರೋಧಕ ರಕ್ತಿಯನ್ನು ನಿರ್ಣಯಿಸುವುದರಲ್ಲೂ ಪ್ರಭಾವಶಾಲಿಯಾಗಿದೆಯೆಂದು ಗೊತ್ತಾಗಿದೆ.

ಶ್ವಾಸಕೋಶಗಳ, ಕುತ್ತಿಗೆಯ ಅನ್ನನಾಳ ಮತ್ತು ಹೃದಯ ಕಮಲದ ಅರ್ಬುದ ರೋಗಗಳ ಶಲ್ಯ ಚಿಕಿತ್ಸಾ ಪದ್ಧತಿಯಲ್ಲಿಯೂ ಬಹಳ ಸುಧಾರಣೆಗಳಾಗಿವೆ. ವಿವಿಧ ರೀತಿಯ ಕೇನ್ಸರ್ ಚಿಕಿತ್ಸೆಯಲ್ಲಿ ಇರುವ ಸಮಾನವಾದ ಪದ್ಧತಿಗಳ ಅಧ್ಯಯನ ಹಾಗೂ ಸಾಧಾರಣೆಗಳಿಗಾಗಿ ಬಹು ಪ್ರಯೋಜನವನ್ನು ಪಡೆಲಾಗುತ್ತಿದೆ. ಕೇನ್ಸರಿನ ಎಕ್ಸ್-ರೇ ಚಿಕಿತ್ಸೆಯಲ್ಲಿಯೂ ಸುಧಾರಣೆಗಳು ಆಗಿವೆ. ಸೂಪರ್ ವೋಲ್ಟ್, ರೊಂಟಿಜನ್ ಚಿಕಿತ್ಸೆ, ರೋಟರಿ (ಕಂಠದ ಅನ್ನನಾಳದ ಕೇನ್ಸರ್), ಪೆಂಡುಲಂ (ಟೊಮೊಗ್ರಾಫಿ ಸಿದ್ಧಾಂತಾನುಸಾರ) ಟ್ಯೂಮರ್(ಗ್ರಂಥಿ)ಗಳ ವಿವಿಧ ಭಾಗಗಳ ರೊಂಟಿಜನ್ ಚಿಕಿತ್ಸೆ, ರೇಡಿಯೊ ಸಕ್ರಿಯ ಕೋಬಾಲ್ಟ್ ಮತ್ತು ರೇಡಿಯಂ ಸೂಜಿ ಪ್ರಯೋಗದ ಟೆಲಿಗಾಮಾ ಚಿಕಿತ್ಸೆ, ದೂರದಿಂದ ಗಾಮಾಕಿರಣಗಳನ್ನು ಬೀಳಿಸಿ ಮಾಡುವ ಚಿಕಿತ್ಸೆ), ಶ್ವಾಸಕೋಶ, ಕುತ್ತಿಗೆಯ ಅನ್ನನಾಳ, ಗುದ, ಸ್ತನಗ್ರಂಥಿ ಹಾಗೂ ಶರೀರದ ಅನ್ಯಭಾಗಗಳ ಕೇನ್ಸರ್‌ಗಳ ಸ್ವತಂತ್ರ ಚಿಕಿತ್ಸೆ ಅಥವಾ ಶಲ್ಯ ಚಿಕಿತ್ಸೆಗಳೊಡನೆ ಕೂಡಿಕೊಂಡು ಮಾಡಲ್ಪಡುವ ಚಿಕಿತ್ಸೆಯಲ್ಲಿ ಈ ಎಕ್ಸ್‌ರೇ ಪದ್ಧತಿಗಳಿಂದಾಗಿ ಬಹಳಷ್ಟು ಪ್ರಗತಿಯು ಕಂಡು ಬಂದಿದೆ.

ಕೇನ್ಸರ್ ಮಹಾಮಾರಿಯನ್ನು ವಿರೋಧಿಸಲು ವೈಜ್ಞಾನಿಕರು ನಡೆಸಿದ ಪ್ರಯತ್ನಗಳು ಅಪರಿಮಿತ. ಸ್ತನಗ್ರಂಥಿ ಮತ್ತು ಶಿಶ್ನ ಗ್ರಂಥಿಗಳ ಕೇನ್ಸರ್‌ಗಳಿಗೆ ಕೆಲವು ಶಾರೀರಿಕ ರಸಗಳಿಂದ ಸಿದ್ಧಗೊಳಿಸಿದ ಔಷಧಿಗಳಿಂದಲೂ ಸಾಯ್ಕೊನ್ಯಾಲ್, ಕೋಲ್ಚಿಸಿನ್ ಮತ್ತಿತರ ರಾಸಾಯನಿಕ ಔಷಧಿಗಳಿಂದಲೂ ಚಿಕಿತ್ಸೆ ಮಾಡಬಹುದೇ ಎಂಬುದರ ಸಂಬಂಧದಲ್ಲಿ ಪ್ರಯೋಗಶಾಲೆಗಳಲ್ಲಿ ಅಧ್ಯಯನ ನಡೆಸಲಾಗುತ್ತಿದೆ.

ಚಿಕಿತ್ಸಾಲಯ ಸಂಬಂಧದ ಕೇನ್ಸರ್ ವಿಜ್ಞಾನವು ಈಗೀಗ ಸ್ಪಷ್ಟರೂಪದಲ್ಲಿ ಪ್ರಗತಿಹೊಂದುತ್ತಿದೆ. ಗರ್ಭಾಶಯ, ಸ್ತನಗ್ರಂಥಿ, ಗುದ ಮತ್ತು ತುಟಿಗಳ ಮೇಲೆ ಆಗುವ ಕೇನ್ಸರ್‌ನ ಬಗ್ಗೆ ಐದು ಅಥವಾ ಹತ್ತು ವರ್ಷಗಳ ಚಿಕಿತ್ಸೆಯಿಂದ ೮೦ರಿಂದ ೯೦ ಸೇಕಡಾ ರೋಗಿಗಳು ನಿಜವಾಗಿಯೂ ಗುಣಮುಖರಾಗಿದ್ದಾರೆ.

ಮೇಲೆ ಹೇಳಿದ ವಿವಿಧ ಕೇನ್ಸರ್ ರೋಗವು ಪ್ರಾಥಮಿಕ ಅವಸ್ಥೆಯಲ್ಲಿ ಚಿಕಿತ್ಸೆ ನಡೆಸುವುದರಿಂದ ೭೦ರಿಂದ ೭೦ ಸೇಕಡಾದಷ್ಟು ಗುಣಮುಖವಾಗುತ್ತದೆ. ಶರೀರದ ಒಳಭಾಗದ, ಮುಖ್ಯವಾಗಿ ಹೊಟ್ಟೆಯ, ಕೇನ್ಸರ್ ಮಾತ್ರ ಅಷ್ಟೊಂದು ಸುಲಭದಲ್ಲಿ ಗುಣಹೊಂದುವುದಿಲ್ಲ. ಈ ಅಂತರಿಕಭಾಗದ ಕೇನ್ಸರ್‌ನಲ್ಲಿ ಶೀಘ್ರದಲ್ಲಿ ಸ್ಥಾನಪರಿವರ್ತನೆಯ ಪ್ರವೃತ್ತಿಯುಂಟಾಗುತ್ತದೆ. ಉದರ ಅರ್ಬುದಕ್ಕಾಗಿ ಅಪರೇಶನ್ ಮಾಡಿಸಿಕೊಂಡವರು ಐದು ವರ್ಷಗಳಕಾಲ ಬದುಕಬಲ್ಲವರ ಪ್ರಮಾಣ ಮೊದಲು ನೂರಕ್ಕೆ ೧೦ ಇದ್ದರೆ, ಈಗದು ೩೦ಕ್ಕೆ ಏರಿದೆ.

ಹೊಸತಾಗಿ ಸಂಶೋಧನೆಗೊಂಡ ಕೇನ್ಸರ್ ವಿರೋಧಕ ಚಿಕಿತ್ಸಾ ಪ್ರಣಾಳಿಯು ಎಲ್ಲಾ ಪ್ರಕಾರದ ಕೇನ್ಸರ್‌ಗಳಿಗೂ ಪರಿಣಾಮಕಾರಿಯಾಗಿರುವುದಿಲ್ಲ. ಪ್ರತಿ ಔಷಧಿಯೂ ಒಂದು ಪರಿಸೀಮೆಯ ವರೆಗೆ ಮಾತ್ರ ಪ್ರಭಾವಶಾಲಿಯಾಗ ಬಲ್ಲದು.

ಇಡಿ ಪ್ರಪಂಚದ ವಿಜ್ಞಾನಿಗಳು ರೋಗ ನಿರೋಧಕ ಉಪಾಯಗಳು, ಔಷಧಿಗಳು ಮತ್ತು ಸಮಯ ಸಮಯದಲ್ಲಿ ಆರಿಸಲಾದ ನಿದಾನಗಳಿಂದಾಗಿ ಕೇನ್ಸರ್ ರೋಗವು ಕ್ರಮೇಣ ಅವಶ್ಯ ಇಳಿಮುಖವಾಗುವುದು; ರೋಗಿಯ ಚಿಕಿತ್ಸೆಯಲ್ಲಿ ದೊರೆಯುವ ಸಫಲತೆಯು ಅಧಿಕ ಸ್ಥಾಯಿಯೆನಿಸುವುದು.

ಒಂದಿಷ್ಟು ನಗು

ವಕೀಲ— ಹೆಂಗಸರ ವೇಶದಲ್ಲಿದ್ದ ನಿನ್ನನ್ನು ಪೋಲೀಸರು ಹೇಗೆ ಗುರ್ತಿಸಿದರು?

ಅಪರಾಧಿ—ಬೀದಿಯಲ್ಲಿ ಹೋಗುತ್ತಿದ್ದಾಗ ಬಟ್ಟೆಯಂಗಡಿಯತ್ತ ನಾನು ನೋಡದೆ ಸಾಗಿದುದರಿಂದ!

೦ ೦ ೦

ಪ್ರಶ್ನೆ—ನಮ್ಮ ಭಾಷೆಯನ್ನು ಮಾತೃಭಾಷೆಯೆಂದು ಏಕೆ ಕರೆಯುವದು ಗೊತ್ತೆ?

ಉತ್ತರ—ಹೌದು, ತಂದೆಯವರಿಗೆ ಅದನ್ನು ಉಪಯೋಗಿಸಲು ಅವಕಾಶವೇ ದೊರೆಯದ್ದರಿಂದ!

೦ ೦ ೦

ಮೀರಾ—ನನಗೆ ಅಮಿತ ಆನಂದ ನಾನು ಮೆಚ್ಚಿದವನನ್ನೇ ನಾನು ಮದುವೆಯಾಗಲಿರುವೆ.

ಕುಸುಮ—ನೀನು ತಿಳಿಗೇಡಿ. ಇನ್ನೊಬ್ಬರಿಗೆ ಬೇಕಿರುವವರನ್ನು ಮದುವೆಯಾಗುವದರ ಆನಂದ ಇದರಲ್ಲಿಲ್ಲಿದೆ?

೦ ೦ ೦

"ಗಂಡನಿಗೆ ಊಟ ರುಚಿಸದಿದ್ದರೆ ಏನು ಮಾಡುವೆ" ಆಗ ಮದುವೆಯಾದವಳ ಪ್ರಶ್ನೆ.

"ಆತನಿಗೆ ಕೋಟು ಮತ್ತು ಹೇಟನ್ನು ತೆಗೆದುಕೊಡುವೆ" ಪ್ರಾಯ ಸಂದ ಹೆಂಡತಿಯ ಉತ್ತರ.

೦೦ ೦೦

ಕ್ರಿಸ್‌ಮಸ್ ಪರೀಕ್ಷೆಯಲ್ಲಿ ಬಿರುಗಾಳಿಗೆ ಕಾರಣವೇನೆಂಬ ಪ್ರಶ್ನೆಗೆ ಉತ್ತರವಾಗಿ ವಿದ್ಯಾರ್ಥಿಯೊಬ್ಬನು "ದೇವರಿಗೆ ಗೊತ್ತು. ನನಗೆ ತಿಳಿಯದು. ಶುಭ ಕ್ರಿಸ್‌ಮಸ್" ಎಂದು ಉತ್ತರಿಸಿದನು.

ಪೇಪರ್ ತಿದ್ದಿದ ಅಧ್ಯಾಪಕರು ಹೀಗೆ ಬರೆದಿದ್ದರು. "ದೇವರಿಗೆ ೧೦೦ ಮಾರ್ಕ್ ನಿನಗೆ ಸೊನ್ನೆ, ಹೊಸ ವರ್ಷ ಶುಭವಾಗಲಿ"

ಪುತ್ತೂರು ಡಿ ಮು. ಕೋರ್ಟಿನಲ್ಲಿ
R. E. P. 11/1961
S C 135/58

ವೆಂಕಟ್ರಾಯ —ಅರ್ಜಿದಾರ.
ಶ್ರೀನಿವಾಸ ಭಟ್ಟ ಸಹಾ —ಎದ್ರಿರು

2ನೇ ಎದ್ರಿ ರಾಮದಾಸ ಯಾನೆ ರಾಮಮೂರ್ತಿ, ಅನಂತ ಭಟ್ರ ಮಗ, ಹಿಂದಿ ಪ್ರಚಾರಕ. C/o ಬಾಪೂಜಿ, Fort Koppal ಯಾ ಹೊರಕ್ಕೆ ಪ್ರಕಾರ ತಿಳಿಸುವುದೇನೆಂದರೆ

[illegible]

(Sd) C. S Shastry,
Vakil for Petitioner.

ಪುತ್ತೂರು, ತಾ. 16-3-1961

ಕಳೆದ 5 ವರ್ಷಗಳ ಅದ್ವಿತೀಯ ಪ್ರಗತಿ!!!

		31-12-1955ರಲ್ಲು ರೂ	31-12-1960ರಲ್ಲು ರೂ.
1	ತೆತ್ತ ಮೂಲಧನ ಮತ್ತು ಕ್ಷೇಮನಿಧಿ	3,18,000	6,87,000
2	ಗವರ್ನ್‌ಮೆಂಟ್ ಸೆಕ್ಯೂರಿಟೀಸ್ ಇತ್ಯಾದಿ:	6,96,000	45,23,000
3	ಒಟ್ಟು ಸಾಲಗಳು	12,92,000	69,90,000
4	ಒಟ್ಟು ಠೇವಣಾತಿಗಳು	20,49,000	1,17,99,000
5	ಚಲಾವಣಾ ಭಂಡವಾಳ	24,55,000	1,31,00,000

ಜನತಾ ಸೇವೆಯ ಮುನ್ನಡೆಯಲ್ಲಿ...

ದಿ. ಬಾಂಗಾಳ ನಾಯಕ್ ಬೇಂಕ್ ಲಿ.,

ರೆಜಿಸ್ಟರ್ಡ್ ಆಫೀಸು. ಉಡುಪಿ, ದ ಕನ್ನಡ ಸ್ಥಾಪನೆ: 1920

ಭೂಸುಧಾರಣೆ:

ಪರಿಶೀಲಕ ಸಮಿತಿಯು ವರದಿಯೊಪ್ಪಿಸಿತು

ಧಾರ್ಮಿಕ ಮತ್ತು ಶೈಕ್ಷಣಿಕ ಸಂಸ್ಥೆಗಳ ಭೂಮಿಗೆ ವಿನಾಯತಿಯಿಲ್ಲ, ನಿವ್ವಳ ಆದಾಯದ ಹತ್ತುಪಾಲು ಪರಿಹಾರ, ಇಪ್ಪತ್ತೇಳು 'ಪ್ರಾಮಾಣಿತ ಎಕರೆ' ಪರಮಾವಧಿ ಹಿಡುವಳಿ – ಭೂಸುಧಾರಣೆಯ ಮಸೂದೆಯಲ್ಲಿ ಈ ಉಲ್ಲೇಖನೀಯ ತಿದ್ದುಪಡಿಗಳನ್ನು ಸಮಿತಿಯು ಮಾಡಿದೆ.

ಕಾಂಗ್ರೆಸ್ಸು ಬಹುದಿನಗಳಿಂದ ತರುವೆನೆಂದು ಹೇಳುತಿದ್ದ, ರಾಜ್ಯದ ಜನತೆಯೆಲ್ಲವೂ ಅತಿ ಕುತೂಹಲದಿಂದ ನಿರೀಕ್ಷಿಸುತ್ತಿದ್ದ ಭೂಸುಧಾರಣೆಯ ಸಂಬಂಧದ ಮಸೂದೆಯು ಸಿಲೆಕ್ಟ್ ಕಮಿಟಿಗೆ ಒಪ್ಪಿಸಲಾಗಿತ್ತು. ಈ ಸಮಿತಿಯು ೪೪ಜನ ಸದಸ್ಯರು ಹತ್ತೊಂಬತ್ತು ತಿಂಗಳ ಅವಧಿಯಲ್ಲಿ ೩೪ ಸಲ ಸಭೆಸೇರಿ ಮಸೂದೆಯನ್ನೂ ಪರಿಸ್ಥಿತಿಗಳನ್ನೂ ಅಭ್ಯಸಿಸಿ ಇದೀಗ ತಮ್ಮ ವರದಿಯನ್ನು ಒಪ್ಪಿಸಿದ್ದಾರೆ. ಈ ವರದಿಯನ್ನು ಸರಕಾರವು ರಾಜ್ಯದ ವಿಧಾನಸಭೆ ಮತ್ತು ಪರಿಷತ್ತುಗಳ ಮುಂದಿಟ್ಟಿದೆ.

ಸಿಲೆಕ್ಟ್ ಸಮಿತಿಯು ಹಲವಾರು ಶಿಫಾರಸುಗಳನ್ನು ಮಾಡಿದೆ. ಧಾರ್ಮಿಕ ಮತ್ತು ಶೈಕ್ಷಣಿಕ ಸಂಸ್ಥೆಗಳ ಹಿಡುವಳಿಗಳಿಗೆ ಪರಮಾವಧಿ ಮಿತಿಯಿರಬಾರದೆಂಬವಾದವನ್ನು ಇದು ಸಂಪೂರ್ಣವಾಗಿ ಅಲ್ಲಗಳೆದಿದೆ. ಅಡಿಕೆ ಮತ್ತು ತೆಂಗಿನ ತೋಟಗಳಿಗೆ ಮೂಲ ಮಸೂದೆಯಲ್ಲಿ ಕೊಡಮಾಡಿದ್ದ ವಿನಾಯತಿಯನ್ನೀಗ ಹಿಂದೆಗೆದುಕೊಂಡಿದೆ. ಜಮೀನುಗಳ ವರ್ಗೀಕರಣಕ್ಕೆ ಮಸೂದೆಯಲ್ಲಿ ಭೂಕಮಿಷನಿನ ರಚನೆಗಿದ್ದ ಅವಕಾಶವು ಅನಗತ್ಯವೆಂದು ಅಭಿಪ್ರಾಯಕ್ಕೆ ಬಂದು ಅದರ ಬದಲಿಗೆ ತಾನೇ ರಾಜ್ಯದ ಭೂಮಿಯನ್ನು ವರ್ಗೀಕರಿಸಿ ಅವರ ಆಧಾರ ಸೂತ್ರಗಳನ್ನು ತಿಳಿಸಿದೆ.

ಮೂಲ ಮಸೂದೆಯಲ್ಲಿ ಪರಮಾವಧಿ ಹಿಡುವಳಿಯನ್ನು ನಿರ್ಧರಿಸಲು ಮರಮಾನದ ಆಧಾರವನ್ನು ಹಿಡಿದಿದ್ದರೆ, ಈ ಸಿಲೆಕ್ಟ್ ಕಮಿಟಿಯು ಅದನ್ನು ಒಪ್ಪಿಕೊಳ್ಳದೆ ಹೊಸತಾಗಿ 'ಪ್ರಾಮಾಣಿಕ ಎಕರೆ'ಯನ್ನು ನಿರ್ಧರಿಸಿ ೨೭ ಪ್ರಾಮಾಣಿಕ ಎಕರೆಯು ೫ ಸದಸ್ಯರ ಒಂದು ಕುಟುಂಬದ ಪರಮಾವಧಿ ಹಿಡುವಳಿಯಾಗಿರಬೇಕೆಂದು ಶಿಫಾರಸು ಮಾಡಿದೆ. ಪ್ರಾಮಾಣಿತ ಏಕರೆಯೆಂದರೆ, ಪ್ರಥಮ ದರ್ಜೆಯ (ವರ್ಷದಲ್ಲಿ ಎರಡು ಬತ್ತದ ಬೆಳೆ ಬೆಳೆಸಲು ಸಾಧ್ಯವಿರುವ ನೆಂಜ ಮತ್ತು ನೀರಾವರಿ ಅನುಕೂಲತೆಯಿರುವ ಬಾಗಾಯತು) ಒಂದು ಎಕರೆ ಭೂಮಿ ಅಥವಾ ಇದಕ್ಕೆ ಸಮವಾದ ಇತರ ದರ್ಜೆಯ ಭೂಮಿಯೆಂದು ಸಮಿತಿಯು ಗೊತ್ತುಮಾಡಿ ರಾಜ್ಯದ ಜಮೀನನ್ನು ಏಳು ವರ್ಗಗಳನ್ನಾಗಿ ವಿಂಗಡಿಸಿ ಅವುಗಳ ನಡುವೆ ಸಮಪ್ರಮಾಣಗಳನ್ನು ಗೊತ್ತುಮಾಡಲು ಸೂತ್ರವೊಂದನ್ನು ನೀಡಿದೆ. ಇದರ ನ್ವಯ ಸಾಮಾನ್ಯವಾಗಿ ಚಿಕ್ಕಹಿಡುವಳಿದಾರರ ಮೇಲೆ ಯಾದ ಪರಿಣಾಮವೂ ಬೀಳುವಂತಿಲ್ಲ.

ಐದಕ್ಕಿಂತ ಹೆಚ್ಚು ಸದಸ್ಯರಿರುವ ಕುಟುಂಬವು ಹೆಚ್ಚಿನ ಪ್ರತ್ಯೇಕ ಸದಸ್ಯರಿಗೆ ಎರಡು ಪ್ರಮಾಣಿತ ಏಕರೆಯನ್ನು ಭೂಮಿಯನ್ನು ಹೆಚ್ಚಾಗಿರಿಸಿಕೊಳ್ಳಬಹುದು ಆದರೆ ಹೀಗೆ ಇಟ್ಟುಕೊಳ್ಳುವ ಒಟ್ಟು ಭೂಮಿಯು ಎರಡು ಕೌಟುಂಬಿಕ ಹಿಡುವಳಿಗೆ ಮೀರಬಾರದು ಎಂದು ಸಮಿತಿಯು ಹೇಳಿದೆ. ಅವಿಭಕ್ತ ಸಂತಾನ ಕುಟುಂಬಕ್ಕೆ ಸೇರಿದ ಪ್ರತಿ ಸದಸ್ಯೆ ಇಲ್ಲವೆ ಸದಸ್ಯನು ಪಾಲು ಕೇಳಲು ಮತ್ತು ಕುಟುಂಬದ ಆಸ್ತಿಯಿಂದ ತನ್ನಂಶವನ್ನು ಸ್ವಾಧೀನ ಪಡೆಯಲು ಹಕ್ಕು ನೀಡುವಂತೆ ೧೯೪೯ನೆ ಮದ್ರಾಸು ಅಳಿಯ ಸಂತಾನ ಕಾಯಿದೆಗೊಂದು ತಿದ್ದುಪಡಿ ಮಾಡಬೇಕೆಂದೂ ತಲೆ ಗಣನೆಯಲ್ಲಿ ಪಾಲುವಿಂಗಡಿಸಬೇಕು; ಹಾಗೆ ಪಾಲು ಪಡೆದ ಸದಸ್ಯರ ಅಂಶವು ಅವರ ಸಂಪೂರ್ಣ ಹಕ್ಕಿನ ಆಸ್ತಿಯಾಗಿರಬೇಕು ಎಂದೂ ಹೇಳಿ, ಅವಶ್ಯಕ ತಿದ್ದುಪಡಿಯನ್ನು ಭೂಸುಧಾರಣಾ ಮಸೂದೆಯು ಕಾನೂನಾಗುವುದಕ್ಕೆ ಮೊದಲೇ ಕಾಯಿದೆಯನ್ನಾಗಿ ಮಾಡಬೇಕೆಂದು ಅಭಿಪ್ರಾಯ ಪಟ್ಟಿದೆ.

ಅಸಿಸ್ಟೇಂಟ್ ಕಮಿಶನರರುಗಳನ್ನು ಪಂಚಾಯತಿದಾರರನ್ನಾಗಿ ನೇಮಿಸುವ ಬದಲು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ನ್ಯಾಯಾಧೀಶರನ್ನೇ ಆಸ್ಥಾನದಲ್ಲಿ ನೇಮಿಸಲು ಸಮಿತಿಯು ಶಿಫಾರಸು ಮಾಡಿದೆ. ಪಂಚಾಯತಿಯ ಮುಂದೆ ವಕೀಲರು ಹಾಜರಾಗಲು ಮತ್ತು ಬಡಗೇಣಿದಾರರಿಗೆ ಉಚಿತ ಸಹಾಯ ನೀಡಗಿಸಲು ಸಮಿತಿಯು ಅವಕಾಶವೊದಗಿಸಿದೆ. ಸ್ವಂತ ವ್ಯವಸಾಯಕ್ಕಾಗಿ ವ್ಯಕ್ತಿಗಳು ಮಾತ್ರ ಜಮೀನನ್ನು ಪುನಃ ಸ್ವಾಧೀನಕ್ಕೆ ತೆಗೆದುಕೊಳ್ಳಬಹುದು; ಸಂಸ್ಥೆಗಳಿಗೆ ಇಂತಹ ಅಧಿಕಾರವಿರುವುದಿಲ್ಲ. ಭೂ ಪರಿಮಿತಿಯನ್ನು ಅನುಸರಿಸಿ ಎಲ್ಲ ಖಾಯಂ ಗೇಣಿದಾರರೂ ಜಮೀನಿನ ಒಡೆಯರಾಗಲು ಸಮಿತಿಯು ಅವಕಾಶ ಒದಗಿಸಿದೆ. ಗೇಣಿದಾರರು ನೀಡಬೇಕಾದ ಗೇಣಿಯ ಪ್ರಮಾಣದಲ್ಲಿ ಸಮಿತಿಯು ಯಾವ ಪರಿವರ್ತನೆಯನ್ನೂ ಸೂಚಿಸಿಲ್ಲ. ಜಮೀನುಗಳಿಂದ ಗೇಣಿದಾರರನ್ನು ಹೊರಕ್ಕೆ ಹಾಕಬೇಕೆಂದರೆ, ಒಂದು ವರ್ಷದೊಳಗಾಗಿ ಅರ್ಜಿಯನ್ನು ಹಾಕಬೇಕೆಂದು ಹೇಳಲಾಗಿದೆ.

ಇನ್ನೊಂದು ಉಲ್ಲೇಖನೀಯ ಸಂಗತಿಯೆಂದರೆ ಪರಿಹಾರಕ್ಕೆ ಸಂಬಂಧಿಸಿದುದು. ಸರಕಾರವು ವಶಪಡಿಸಿಕೊಳ್ಳುವ ಪರಮಾವಧಿ ಮಿತಿಯನ್ನು ಮೀರಿದ ಜಮೀನಿಗೆ ಅದರ ವಾರ್ಷಿಕ ನಿವ್ವಳ ಆದಾಯದ ೧೫ ರಷ್ಟು ಪರಿಹಾರ ನೀಡಬೇಕೆಂದ ಮೂಲ ಮಸೂದೆಯಲ್ಲಿ ಹೇಳಲಾಗಿದ್ದು ಇದನ್ನು ಸಮಿತಿಯು ನಿವ್ವಳ ಆದಾಯದ ೧೦ ಪಟ್ಟುಗಳಿಗೆ ಇಳಿಸಿದೆ. ಕೊಡಲಾಗುವ ಪರಿಹಾರ ಧನವು ರೂ. ೧೦ ಸಾವಿರಗಳಿಗೆ ಮೀರದಿದ್ದರೆ ಅದನ್ನು ಏಕಕಂತಿನಲ್ಲಿ ನಗದಿಯಾಗಿ ಕೊಡುವುದಕ್ಕೆ ಅವಕಾಶವೊದಗಿಸಿದೆ. ಇದಕ್ಕಿಂತ ಹೆಚ್ಚಿನದನ್ನು ೨೦ ವರ್ಷಗಳ ನೆಗೋಷಿಯೇಬಲ್ ಬಾಂಡುಗಳ ರೂಪದಲ್ಲಿ ನೀಡಲಾಗುವುದು. ಈ ಬಾಂಡುಗಳಿಗೆ ಸೇಕಡಾ ೪½ ಯಂತೆ ಬಡ್ಡಿ ದೊರೆಯುವುದು.

ಸರಕಾರವು ಭೂಮಾಲಿಕರಿಂದ ವಶಪಡಿಸಿಕೊಳ್ಳುವ ಭೂಮಿಯ ಒಡೆತನವನ್ನು ಪಡೆಯುವ ಗೇಣಿದಾರರು ಆ ಜಮೀನಿನ ಪರಿಹಾರ ಧನವನ್ನು ಸರಕಾರಕ್ಕೆ ನಗದಾಗಿ ಏಕಕಂತಿನಲ್ಲಿ ಅಥವಾ ೨೦ ವಾರ್ಷಿಕ ಕಂತುಗಳಲ್ಲಿ ಒಪ್ಪಿಸಬೇಕಾಗುವುದು. ಆಗ ಈ ಮೊಬಲಗಿಗೂ ಸೇಕಡಾ ೪½ ಯಂತೆ ಬಡ್ಡಿ ಆಕರಿಸಲಾಗುವುದು.

ಶಬ್ದ ಚಿತ್ರ:

ಸಂಚಾರಿ ರಾಯಭಾರಿ - ಹೆರ್ರಿಮನ್

ಶ್ರೀಮಂತ ಕುಲದಲ್ಲಿ ಹುಟ್ಟಿ ಪರಿಶ್ರಮವನ್ನು ಲೆಕ್ಕಿಸದೆ ರಚನಾತ್ಮಕ ಕಾರ್ಯಶೀಲ ಹರ್ರಿಮನ್ನರನ್ನು ಅಮೇರಿಕೆಯ ಅಧ್ಯಕ್ಷ ಕೆನ್ನೆಡಿಯವರು ತಮ್ಮ ಸಂಚಾರಿ ರಾಯಭಾರಿಯನ್ನಾಗಿ ನಿಯಮಿಸಿ, ಸತ್ಕಾರ್ಯಮಗ್ನರಾಗಿದ್ದಾರೆ

ಅಮೇರಿಕೆಯು ತನ್ನ ವಿದೇಶ ನೀತಿಯಲ್ಲಿ ಪರಿವರ್ತನೆ ಮಾಡಿದ ದರಿಂದ ಶ್ರೀ ಎವ್‌ರೆಲ್ ಹೆರ್ರಿಮನರ ಅನೇಕ ದೇಶಗಳ ಸಂಚಾರಕಾರ್ಯಕ್ರಮವು ಮಹತ್ವಪೂರ್ಣವಾಗಿದೆ. ಇವರು ಒಪ್ಪಿಸುವ ವರದಿಯನ್ನನುಲಕ್ಷಿಸಿ ಆ ನೀತಿಯು ಮತ್ತಷ್ಟು ಪರಿವರ್ತನೆಗೊಳ್ಳಲೂ ಬಹುದು. ಇವರು ಸಂಚರಿಸಿದ ಮತ್ತು ಸಂಚರಿಸುತ್ತಿರುವ ರಾಷ್ಟ್ರಗಳ ಇಂಗಿತವನ್ನು ಎಷ್ಟರಮಟ್ಟಿಗೆ ತಿಳಿದುಕೊಂಡಿದ್ದಾರೆಂಬುದನ್ನು ಮುಂದೆ ತಾನೇ ನೋಡಬೇಕು. ಅಮೇರಿಕೆಯ ರಾಜನೀತಿಜ್ಞರಲ್ಲಿ ಒಬ್ಬರೆಂದು ಪರಿಗಣಿತರಾದ ಇವರು ಈ ಮೊದಲೂ ಈಗ ಮಾಡುತ್ತಿರುವಂತಹ ಕಾರ್ಯವನ್ನು ಮಾಡುತ್ತಿದ್ದರು.

ಇಂದು ಶ್ರೀ ಹೆರ್ರಿಮನರು ಅಮೇರಿಕೆಯ ಹೊಸ ಅಧ್ಯಕ್ಷ ಶ್ರೀ ಕೆನ್ನಡಿಯವರ ವಿಶೇಷ ರಾಯಭಾರಿಗಳಾಗಿ ಬೇರೆಬೇರೆ ದೇಶಗಳ ಸರಕಾರಿ ಪ್ರಮುಖರನ್ನು ಭೆಟ್ಟಿಮಾಡುತಿದ್ದಾರೆ. ೨೦ ವರ್ಷಗಳಿಗೆ ಮೊದಲು ಬ್ರಿಟಿಷ ಇತಿಹಾಸದಲ್ಲಿ ಅತ್ಯಂತ ಸಂಕಟಮಯ ಸಂದರ್ಭದಲ್ಲಿ ಅಂದಿನ ಅಮೇರಿಕನ್ ಅಧ್ಯಕ್ಷ ಡಿ| ರೂಸ್ವೆಲ್ಟರು ಬ್ರಿಟಿಷ್ ಪ್ರಧಾನಿ ಚರ್ಚಿಲರೊಡನೆ ಸಮಾಲೋಚನೆ ನಡೆಸಲು ಇವರನ್ನೇ ಅಟ್ಟಿದ್ದರು. ೧೯೪೧ರಲ್ಲಿ ಚರ್ಚಿಲ್ಲರೊಡನೆ ಇವರು ಅನೇಕ ಯಾತ್ರೆಗಳನ್ನೂ ಮಾಡಿದ್ದರು; ಸ್ಟಾಲಿನರನ್ನು ಕಾಣುವಾಗಲೂ ಚರ್ಚಿಲರ ಬಳಿಯಿದ್ದರು. ಜರ್ಮನಿಯೊಡನೆ ಯಾರೊಂದು ವಿಧಾನದಿಂದ ಯುದ್ಧಹೂಡುವ ಹವಣಿಕೆ ಈ ಸಂದರ್ಭದಲ್ಲಾಗಿತ್ತು. ವಾಶಿಂಗ್ಟನ್, ಕ್ಯೂಬೆಕ್ ಮತ್ತು ಕಸಾಬ್ಲಾಂಕಾದಲ್ಲಿ ಸೇರಿದ್ದ ರೂಸ್ವೆಲ್ಟ್, ಚರ್ಚಿಲ್ ಮೊದಲಾದ ಜಾಗತಿಕ ನಾಯಕರ ಭೆಟ್ಟಿಯವೇಳೆ ಶ್ರೀ ಹೆರ್ರಿಮನರೂ ಉಪಸ್ಥಿತರಿದ್ದರು. ಟ್ರೂಮನರು ಅಧ್ಯಕ್ಷರಾದಾಗಲೂ ಇವರ ಅನುಭವಗಳಿಂದ ಲಾಭ ಪಡೆದರು.

ಮಾರ್ಚಿ ೨೨ರಂದು ನವದೆಹಲಿಯಲ್ಲಿ ಮತ್ತು ಅದಕ್ಕೂ ಮೊದಲು ತಾನು ಸಂದರ್ಶಿಸಿದ ಇತರ ಸ್ಥಳಗಳಲ್ಲಿ ಶ್ರೀ ಹೆರ್ರಿಮನರು ಅಮೇರಿಕೆಯ ನೀತಿಯಲ್ಲಾದ ಪರಿವರ್ತನೆಯನ್ನು ಸಂಕೇತಿಸಿದರು. ವಿಕಾಸೋನ್ಮುಖ ದೇಶಗಳಿಗೆ ನೀಡಲಾಗುವ ಆರ್ಥಿಕ ಸಹಾಯಕ್ಕೆ ಅಮೇರಿಕೆಯು ಅಧಿಕ ಗಮನ ನೀಡುವುದು; ಸೈನಿಕ ಸಹಾಯಕ್ಕೆ ಅಮೇರಿಕೆಯು ಅಧಿಕ ಗಮನ ನೀಡದು; ಸೈನಿಕ ಸಹಾಯಕ್ಕೆ ದಿಂಬಲ ಕಡಿಮೆಯೆಂದು ಇವರೆಂದರು. ಸಹಾಯವನ್ನು ಅಪೇಕ್ಷಿಸುವ ದೇಶವು ಸ್ವಾವಲಂಬಿ ಆರ್ಥಿಕ ಆಯೋಜನ ಮತ್ತು ಸಾಮಾಜಿಕ ಪ್ರಗತಿಯ ಕಾರ್ಯಕ್ರಮಗಳಿಗೆ ತೊಡಗಬೇಕೆಂಬ ಅಮೇರಿಕೆಯ ಆಶಯವನ್ನವರು ಹೊರಗೆಡಹಿದರು. ಭಾರತ ಮತ್ತು ಅಮೇರಿಕೆಗಳು ವಿಶ್ವದ ದೊಡ್ಡ ಪ್ರಜಾತಾಂತ್ರಿಕ ದೇಶಗಳಾದುದರಿಂದ ಮತ್ತು ಎರಡರ ಆದರ್ಶ ಮತ್ತು ಸಿದ್ಧಾಂತಗಳಲ್ಲಿ ಸಮಾನತೆ ಇರುವುದರಿಂದ ಇವೆರಡು ರಾಷ್ಟ್ರಗಳ ಸಹಯೋಗವು ಮಹತ್ವಪೂರ್ಣವೆಂದಿರುವರು ಅಭಿಪ್ರಾಯಪಟ್ಟರು. ಇವರು ರಾಜ್ಯಾಂಗ ಕಾರ್ಯದರ್ಶಿ ಶ್ರೀ ಸ್ಟಿವನ್ಸನರು ಅಂಗೋಲಾದ ಕುರಿತಾಗಿ ಆಡಿದ ಮಾತನ್ನು ಗೋವೆಯ ಬಗ್ಗೆಯೂ ಅನ್ವಯಿಸಿ ದಿವಂಗತ ಡೆಲ್ಲೆಸರು ಗೋವೆಯು 'ಪೋರ್ಚುಗಲಿನ ಪ್ರಾಂತ'ವೆಂದು ಭಾರತೀಯರ ಎದೆಯಲ್ಲಿ ಚುಚ್ಚಿದ್ದ ಮುಳ್ಳನ್ನು ಕಿತ್ತುತೆಗೆದರು. ಕಾಶ್ಮೀರದ ಕುರಿತಾಗಿ ಹೇಳುತ್ತ, ಅಮೇರಿಕೆಯು ಭಾರತ—ಪಾಕಿಸ್ತಾನಗಳೆರಡರ ಮಿತ್ರರಾಷ್ಟ್ರವಾದುದರಿಂದ ಇದು ಭಾರತ—ಪಾಕ್‌ಗಳ ಪ್ರಶ್ನೆ ಎಂದು ಹೇ

(ಎನೇ ಪುಟ ನೋಡಿರಿ)

ದಿ ವಿಜಯ ಬೇಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ. 1931

ರಿಜಿಸ್ಟರ್ಡ್ ಆಫೀಸು.

ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,

ಮಂಗಳೂರು 3, ಸೌತ್ ಕೆನರಾ.

ಕಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡ 5ರ ವರೆಗೆ ಹೆಚ್ಚಿಸಲಾಗಿದೆ

ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ಪಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲಾಗುತ್ತದೆ

ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ

ವಿವಾಹದ ಮರುದಿನದೊಳಗೆ ದಂಪತಿಗಳು ತಮ್ಮ ಹಿಂದಿನ ದಿನದ ಇಮ್ಮಡಿ ಅನುಭವವನ್ನು ಪಡೆಯುವರು; ಜವಾಬ್ದಾರಿಯನ್ನು ಹೊತ್ತೊಡನೆಯೇ ಹೊಣೆಗಾರಿಕೆಯ ಅನುಭವವು ಮೊದಲಿಗಿಂತ ಮುಮ್ಮಡಿಯಾಗುವುದು.

ನವಯುಗ

ವರುಷ	ಉಡುಪಿ	ವಾರ
೪೦	೩೦-೩-'೬೧	೨೯

ಸುಪ್ರತಿಷ್ಠೆಯ ಶಾಸನ

ಮೈಸೂರು ರಾಜ್ಯದ ಕೊರತೆಯ ಮುಂಗಡ ಪತ್ರದ ಮೇಲಿನ ಚರ್ಚೆಯು ನಾನಾ ಮುಖವಾಗಿ ನಡೆದು ಟೀಕೆ ಟಿಪ್ಪಣಿಗಳಿಗೆ ಗುರಿಯಾಗಿರುವುದು ಅಲಕ್ಷ್ಯ ಣವೆಂದು ಹೇಳುವಂತಿಲ್ಲ. ರಾಜ್ಯ ಪುನರ್ಘಟನೆಯ ಆರಂಭದಲ್ಲಿ ಡೋಲಾಯಮಾನವಾಗಿದ್ದ ರಾಜ್ಯದ ಆರ್ಥಿಕ ಪರಿಸ್ಥಿತಿ ಈಗೀಗ ಸುದೃಢವಾಗುತ್ತ ಹೋಗುತ್ತಿರುವುದು ಅಭಿಮಾನಾಸ್ಪದವಿದೆ. ಆದರೆ, ಸರಕಾರವು ಕೊರತೆಯ ಮುಂಗಡ ಪತ್ರವನ್ನು ಮುಂದಿಡುತ್ತ ಪಾನಪ್ರತಿಬಂಧವನ್ನು ಮತ್ತೂ ಕೆಲವು ಪ್ರದೇಶಗಳಿಗೆ ವಿಸ್ತೃತಗೊಳಿಸುವುದನ್ನು ಕೆಲವು ಸದಸ್ಯರು ಪ್ರತಿಭಟಿಸಿದರಲ್ಲದೆ ಪಾನ ಪ್ರತಿಬಂಧವನ್ನೇ ಹಾಸ್ಯಾಸ್ಪದ ನೀತಿಯೆಂದು ಉಲ್ಲೇಖಿಸಿದರೆಂದು ವರದಿಗಳು ಬಂದಿವೆ. ಇಂತಹ ಟೀಕಾಕಾರರಲ್ಲಿ ಕಾಂಗ್ರೆಸ್ ಸದಸ್ಯರೂ ಸೇರಿರುವರೆಂದೂ ತಿಳಿದು ಬಂದಿದೆ.

ಪಾನಪ್ರತಿಬಂಧವನ್ನು ವಿರೋಧಿಸುವವರು ತಮ್ಮ ವಾದಕ್ಕೆ ಸಮರ್ಥನೆಯನ್ನು ಒದಗಿಸಿಕೊಂಡಿದ್ದಾರೆ. ರಾಜ್ಯದ ಮುಂಗಡ ಪತ್ರವು ಕೊರತೆಯದಾಗಿರುವಾಗ ಆದರ್ಶದ ಹೆಸರಿನಲ್ಲಿ ಆದಾಯವನ್ನು ಕಡಿಮೆ ಮಾಡಿಕೊಳ್ಳುವುದು ಸರಿಯಲ್ಲ; ಅಮೆರಿಕೆಯಂತಹ ಸಂಪನ್ನ ರಾಷ್ಟ್ರದಲ್ಲಿಯೂ ಪಾನಪ್ರತಿಬಂಧವು ಅಯಶಸ್ವಿಯಾಗಿದೆ; ಕಾನೂನುಗಳ ಬಲಕ್ಕಿಂತ ನೈತಿಕ ಬಲದಿಂದ ಮಾತ್ರ ಇಂತಹ ಶಾಸನ ಯಶಸ್ವಿಯಾಗಬೇಕು—ಎಂದು ಮೊದಲಾಗಿ ಇವರು ವಾದಿಸುತ್ತಾರೆ. ವಿರೋಧಿ ಪಕ್ಷೀಯರಂತೂ ಪಾನ ಪ್ರತಿಬಂಧವೆಂಬುದು "ಕಾಂಗ್ರೆಸ್ಸಿನ ಒಣ ಪ್ರತಿಷ್ಠೆ' ಎಂಬ ಅಡ್ಡ ಹೆಸರನ್ನು ಇಡುವಷ್ಟು ಮುಂದಾಗಿದ್ದಾರೆ. ಈ ಎಲ್ಲ ವಾದಗಳನ್ನೂ ನಾವು ಸ್ವಲ್ಪಸ್ವಲ್ಪವಾಗಿ ಒಪ್ಪಿಕೊಳ್ಳಬಹುದು. ಆದರೆ, ಕಾಲಲ್ಲಿ ಒಂದು ಹುಣ್ಣಾಗಿ ಸರಿಯಾಗಿ ನಡೆಯಲು ಆಗದಂದಾದಲ್ಲಿ ಇಡಿ ಕಾಲನ್ನೇ ತುಂಡರಿಸಿಬಿಡುವುದು ವಿವೇಕಯುತವೆಂದು ಯಾರೂ ಅನ್ನಲಾರರು. ಮದ್ಯಪಾನವು ನೈತಿಕ, ವೈಯಕ್ತಿಕ, ಕೌಟುಂಬಿಕ ಹಾಗೂ ಸಾಮಾಜಿಕ ಅಧಃಪತನಕ್ಕೆ ಕಾರಣವಾಗುವುದೆಂಬುದು ಅಕ್ಷರಶಃ ಸತ್ಯವಾಗಿರುವುದನ್ನು ಎಲ್ಲ ವಿವೇಕಿಗಳೂ ಇಂದು ಒಪ್ಪಿಕೊಂಡಿದ್ದಾರೆ. ನಾರ್ವೆ—ಸ್ವೀಡನ್ ಮೊದಲಾದ ಮದ್ಯಸಾಗರದಲ್ಲಿ ಮುಳುಗೇಳುವ ರಾಷ್ಟ್ರಗಳಲ್ಲಿಯೂ ಪಾನ ನಿಯಂತ್ರಣದ ಗಾಳಿ ಬೀಸುತ್ತಿರುವಂತೆ ಭಾಸವಾಗುತ್ತಿದೆ. ರಶ್ಯದಲ್ಲಿ ಕೂಡ ಮದ್ಯ ಮಾರಾಟದ ಮೇಲೆ ನಿಯಂತ್ರಣವನ್ನು ಹೇರಿದ್ದಾರೆ. ಭಾರತದ ಹಿಂದೂ ಜನರು ಮದ್ಯಪಾನವನ್ನು ದುರ್ವ್ಯಸನವೆಂದೇ ಹಿಂದಿನಿಂದಲೂ ತಿಳಿದುಕೊಂಡು ಬಂದಿದ್ದಾರೆ. ಇಂದಿಗೂ ಪಾನಪ್ರತಿಬಂಧವಿಲ್ಲದಲ್ಲಿ ಕೂಡ ಮದ್ಯದ ವಾಸನೆ ಮೂಸದವರೂ ನಾಕಷ್ಟು ಸಂಖ್ಯೆಯಲ್ಲಿದ್ದಾರೆ. ಹಾಗಿರುವಾಗ ಸುದೃಢ ನಾಗರಿಕ ನಿರ್ಮಾಣದ ಗುರಿಯುಳ್ಳ ಭಾರತದಲ್ಲಿ ಪಾನಪ್ರತಿಬಂಧವು ಅವಶ್ಯ ಯಶಸ್ವಿಯಾಗಬೇಕು; ಅಂತೆಯೇ ನಮ್ಮ ರಾಜ್ಯದಲ್ಲಿ ಕೂಡ. ಈ ವರ್ಷ ಮಂಡ್ಯ ಜಿಲ್ಲೆ ಹಾಗೂ ಮೈಸೂರು ನಗರ ತಾಲೂಕಿಗೂ ಈ ಪ್ರತಿಬಂಧಕ ಕಾಯದೆಯನ್ನು ವಿಸ್ತರಿಸಲಾಗುವುದೆಂದು ತಿಳಿಯುತ್ತದೆ. ಈ ವಿಷಯದಲ್ಲಿ ಸರಕಾರವು ಅತಿ ಮಂದ ಧೋರಣೆಯನ್ನು ಅನುಸರಿಸುತ್ತಿದೆಯೆಂದು ನಿರುಪಾಯವಾಗಿ ಹೇಳಬೇಕಾಗಿದೆ. ರಾಜ್ಯದಾದ್ಯಂತ ಪಾನಪ್ರತಿಬಂಧವಿದ್ದರೆ, ಆಗ ಈ ಸಂಬಂಧದ ಕಾಯದೆಯನ್ನು ಬಿಗಿಯಾಗಿ ಅನ್ವಯಿಸುವುದು ಸಾಧ್ಯ.

ಪಾನಪ್ರತಿಬಂಧ ಶಾಸನವು ಹಾಸ್ಯಾಸ್ಪದವೆನ್ನುವವರ ಮನೋವೃತ್ತಿಯೇ ಹಾಸ್ಯಾಸ್ಪದವಾಗಿದೆ. ಆದರೆ, ಈ ಶಾಸನವು ಊಹಿಸಿದಷ್ಟು ಯಶಸ್ವಿಯಾಗಿಲ್ಲವೆಂಬುದನ್ನು ಅಂಶತಃ ಒಪ್ಪಿಕೊಳ್ಳಬೇಕು. ಇದಕ್ಕಿರುವ ಕಾರಣಗಳಾದರೂ ಹಲವಾರು. ಪಾನಪ್ರತಿಬಂಧಕ್ಕೆ ಅನುಕೂಲ ಕಾಲ ಸನ್ನಿಹಿತವಾಗಿಲ್ಲ; ಅಥವಾ ಅದರಿಂದ ಸರಕಾರಕ್ಕೆ ನಷ್ಟ ಎಂಬ ವಾದಗಳು ಕೇವಲ ಬಾಲಿಶ ವಾದುವುಗಳು. ಸರಕಾರವು ಜನತೆಯನ್ನು ಆದರ್ಶ ಚರಿತ್ರರಾಗುವಂತೆ ಪ್ರೇರೇಪಿಸಬೇಕಾಗುವುದು; ಈ ಸಂಬಂಧದ ಕಂಟಕಗಳನ್ನು ದೂರೀಕರಿಸ ಬೇಕು. ಮುಖ್ಯವಾಗಿ ಬಡವರ ಹಾಗೂ ಮಧ್ಯಮ ವರ್ಗದವರ ಅಧೋಗತಿಗೆ ಕಾರಣವಾದ ಮದ್ಯಪಾನ ನಿರೋಧ ಶಾಸನವನ್ನು ಶೀಘ್ರ ಸಮಗ್ರ ರಾಜ್ಯಕ್ಕೆ ಅನ್ವಯಿಸುವುದರಿಂದ ಅಯಶಸ್ವಿತೆಯು ಬಹ್ವಂಶ ಸರಿಹೋಗಬಹುದು. ಹಾಗೆಯೇ ಈ ಶಾಸನವನ್ನು ಪಾಲಿಸುವಂತೆ ನೋಡುವ ಹೊಣೆಗಾರಿಕೆಯನ್ನು ಸಂಬಂಧಪಟ್ಟ ಇಲಾಖೆಯವರು ಮುತುವರ್ಜಿಯಿಂದ ನಿರ್ವಹಿಸುವುದೂ ಅತ್ಯಗತ್ಯ. ಕಾಂಗ್ರೆಸ್ ಹೂಡಿದ ಚಳವಳಿಯ ಕಾಲದಲ್ಲಿ ಪಾನನಿರೋಧ ಪ್ರಚಾರ ನಡೆದಂತೆಯೇ ಮದ್ಯಪಾನದಿಂದಾಗುವ ಕೆಡುಕುಗಳನ್ನು ಜನತೆಯ ಹೃನ್ಮನಗಳಿಗೆ ನಾಟುವಂತೆ ತಿಳಿಸಬೇಕು. ಕಾಂಗ್ರೆಸ್‌ನ ಉಚ್ಚ ಆದರ್ಶವನ್ನು 'ಒಣ ಪ್ರತಿಷ್ಠೆ" ಎಂದು ಹೆಸರಿಸುವುದರಲ್ಲಿಯೇ ತಮ್ಮ ಪ್ರತಿಷ್ಠೆಯಿದೆಯೆಂದು ತಿಳಿಯುವ ರಾಜಕೀಯ ದುರುದ್ದೇಶ ಪೂರಿತರು ಜನತೆಯ ನಿಮ್ನ ಪ್ರತಿಷ್ಠೆ" ಎಂದರಿತುಕೊಂಡು, ಹಾಸ್ಯಾಸ್ಪದವೆಂದು ಟೀಕಿಸುವ ಕಾಂಗ್ರೆಸಿಗರು ಅದನ್ನು ನ್ಯಾಯೋಸ್ಪದವಾಗುವಂತೆ ಪರಿಶ್ರಮಿಸಿಕೊಂಡು ಸರಕಾರದೊಡನೆ ಸಹಕರಿಸುವುದು ಕಾಲೋಚಿತವಾಗಿದೆ. ಎಲ್ಲಿಯೂ ಸಫಲವಾಗದ ಉಪಯುಕ್ತ ಶಾಸನ ನಮ್ಮ ದೇಶದಲ್ಲಿ ಸಫಲವೆನಿಸುವಂತೆ ಪ್ರಯತ್ನ ನಡೆಸುವುದು ನಮಗೆ ಗೌರವವೇ ಹೊರತು ಅಗೌರವವಲ್ಲ.

ಸಂಕ್ಷಿಪ್ತ ಸುದ್ದಿಗಳು

ಜನವಾಣಿಗೆ ಜಯ

ರಾಜ್ಯದ ಕಾಂಗ್ರೆಸ್ ಶಾಸಕರಲ್ಲಿ ಭಿನ್ನಾಭಿಪ್ರಾಯಗಳು ಬಗೆಹರಿದ ಸಂತೋಷದಿಂದಲೋ ಎನ್ನುವಂತೆ ಮೂರನೆಯ ಯೋಜನೆಯಲ್ಲಿ ಕರ್ನಾಟಕದಲ್ಲಿ ಎರಡು ರೇಲ್ವೆ ದಾರಿಗಳಿಗೆ ಯೋಜನಾ ಆಯೋಗದ ಅನುಮತಿ ಲಭಿಸಿದೆ. ಹಾಸನ—ಮಂಗಳೂರು ಮತ್ತು ಬೆಂಗಳೂರು—ಸೇಲಂ ದಾರಿಗಳಿಗೆ ದೊರೆತ ಮನ್ನಣೆ ಕರ್ನಾಟಕದ ಜನವಾಣಿಗೆ ದೊರೆತ ಗೌರವವೆಂದು ಹೇಳಬೇಕು. ಎರಡೂಕಾಲು ಕೋಟಿ ಕನ್ನಡಿಗರ ಕೂಗಿನ ಒಂದಂಶವಾದರೂ ದಿಲ್ಲಿಗೆ ಕೇಳಿತು ಎಂಬುದಷ್ಟೇ ಸದ್ಯ ಸಮಾಧಾನ.

ಎಲ್. ಎಂ. ಪಿ. ವರ್ಗಗಳು ಬೇಡ

ರಾಜ್ಯದಲ್ಲಿರುವ ವೈದ್ಯರ ಅಭಾವವನ್ನು ದೂರೀಕರಿಸಲು ಎಲ್. ಎಂ. ಪಿ. ವರ್ಗಗಳನ್ನು ತೆರೆಯುವ ಸರಕಾರದ ನಿರ್ಧಾರವು ಬಹಳಷ್ಟು ಟೀಕೆಗೆ ಒಳಗಾಗಿದೆ. ಈ ವರ್ಗಗಳು ಶ್ರೇಯಸ್ಕರವಲ್ಲವೆಂದು ಅವನ್ನು ನಿಲ್ಲಿಸಲಾಗಿದ್ದರೂ ಮತ್ತೂ ಅವನ್ನು ಊರ್ಜಿತಗೊಳಿಸುವುದರ ಔಚಿತ್ಯವೇನೆಂಬ ಸವಾಲು ಮುಂದೆ ಬಂದಿದೆ. ಹೀಗೆ ಪ್ರಶ್ನಿಸುವವರ ಅಂಬೋಣದಂತೆ ಈಗಿನ ವೈದ್ಯಕೀಯ ಕಾಲೇಜುಗಳ ಬಡಾವಣೆ ಮಾಡುವುದು ಮತ್ತು ಹೆಚ್ಚಿನ ಕಾಲೇಜುಗಳನ್ನು ತೆರೆಯುವುದೇ ವೈದ್ಯರ ಅಭಾವ ದೂರೀಕರಿಸಲು ಉತ್ತಮ ಮಾರ್ಗವಾಗಿದೆ.

ಮಂತ್ರಿಸೇರ್ಪಡೆಯಿಲ್ಲ

ಕೇಂದ್ರ ಮಂತ್ರಿ ಮಂಡಳಿಯಲ್ಲಿ ಪರಿಣಾಮಕಾರಿ ಬದಲಾವಣೆಯಾಗುವುದೆಂಬ ವಾರ್ತೆಯು ಹಬ್ಬಿದಂತೆಯೇ ಅದೀಗ ನಿರಾಧಾರವೆಂದೂ ಗೊತ್ತಾಗಿದೆ. ಪಂಡಿತ ಪಂತರ ನಿಧನದಿಂದ ತೆರವಾದ ಸ್ಥಾನಕ್ಕೆ ಹೊರಗಣಿಂದ ಯಾರನ್ನಾದರೂ ಕರೆದುಕೊಳ್ಳುವುದಿಲ್ಲವೆಂದೂ ಸದ್ಯ ತಾತ್ಕಾಲಿಕ ಗೃಹ ಮಂತ್ರಿಗಳೂ ಪಂ. ನೆಹರುರವರ ವಿಶ್ವಾಸಕ್ಕೆ ಪಾತ್ರರೂ ಆಗಿರುವ ಶ್ರೀ ಲಾಲಬಹಾದ್ದುರ ಶಾಸ್ತ್ರಿಯವರೇ ಗೃಹ ಶಾಖೆಯನ್ನು ನಿರ್ವಹಿಸುವರೆಂದೂ ತಿಳಿದು ಬಂದಿದೆ. ಸಂಸತ್ ಕಾಂಗ್ರೆಸ್ ಪಕ್ಷದ ಉಪನಾಯಕರಾಗಿ ಮುರಾರ್ಜಿ ದೇಸಾಯರು ನಿಯುಕ್ತರಾಗುವ ನಿರೀಕ್ಷೆಯಿದೆ.

ಪ್ರತ್ಯೇಕ ಪರೀಕ್ಷೆ ಬೇಕಂತೆ!

ಹಿಂದುಳಿದ ಪಂಗಡಗಳವರನ್ನು ಮುಂದೆ ತರುವುದಕ್ಕೆ ವಿಧಾನ ಸಭಾ ಸದಸ್ಯ ಶ್ರೀ ಬಿ. ರಾಚಯ್ಯನವರು ನವೀನ ವಿಧಾನವೊಂದನ್ನು ಮುಂದೆ ತಂದಿದ್ದಾರೆ: "ಅವರ ಸಲುವಾಗಿಯೇ ಪ್ರತ್ಯೇಕ ಪರೀಕ್ಷೆಗಳನ್ನಿಟ್ಟು ಅವರಲ್ಲಿ ಬುದ್ಧಿವಂತರೂ ದಕ್ಷರೂ ಆದವರಿಗೆ ನೌಕರಿ ಕೊಡಬೇಕು. ಅವರಿಗೆ ಜನಸಂಖ್ಯೆಯ ಆಧಾರದ ಮೇಲೆ ಸಾಕಷ್ಟು ನೌಕರಿಗಳು ದೊರೆಯುವ ವರೆಗೆ ಬೇರೆಯವರಿಗೆ ನೌಕರಿ ಕೊಡಬಾರದು." ಈ ಪರೀಕ್ಷೆಗಳ ಪ್ರಶ್ನೆ ಪತ್ರಗಳನ್ನೂ ತಯಾರಿಸುವವರೂ, ಉತ್ತರ ಪತ್ರ ತಿದ್ದುವವರೂ ಹಿಂದುಳಿದವರೇ ಆಗಬೇಕೆಂದು ಹೇಳಲು ಪ್ರಾಯಃ ಇವರು ಮರೆತಿರಬೇಕೆನಿಸುತ್ತದೆ. ಅಥವಾ.........

ಒರಿಸ್ಸದಲ್ಲಿ ಚುನಾವಣೆ

ಡಾ। ಮೆಹತಾಬರು ತಮ್ಮ ಸಮ್ಮಿಶ್ರ ಸರಕಾರದ ರಾಜೀನಾಮೆಯಿತ್ತುದರಿಂದ ರಾಷ್ಟ್ರಪತಿಗಳ ಆಳಿಕೆಗೆ ಒಳಗಾದ ಒರಿಸ್ಸ ರಾಜ್ಯದಲ್ಲಿ ಮುಂದಿನ ಮೇ—ಜೂನ್ ತಿಂಗಳಲ್ಲಿ ಮಧ್ಯಾವಧಿ ಚುನಾವಣೆಗಳು ನಡೆಯುವುವು. ಮೊದಲು ಮುಂದಿನ ಸಾರ್ವತ್ರಿಕ ಚುನಾವಣೆಗಳು ೧೯೬೨ರ ಆರಂಭದಲ್ಲಿ ನಡೆಯಲಿರುವುದರಿಂದ ಮಧ್ಯಾವಧಿ ಚುನಾವಣೆ ನಡೆಯಲಾರದೆಂದು ಊಹಿಸಲಾಗಿತ್ತು. ಆದರೆ, ಕೇಂದ್ರ ಸರಕಾರವು ಆರು ತಿಂಗಳುಗಳಿಗೆ ಮೀರಿ ರಾಷ್ಟ್ರಪತಿಗಳ ಆಳಿಕೆಯನ್ನಲ್ಲಿ ಇರಗೊಳಿಸ ಬಯಸುವುದಿಲ್ಲವೆಂದು ಈಗ ಗೊತ್ತಾಗಿದೆ.

ಐವರಿಗೊಬ್ಬ ಹೊಸಬ

ಈ ವರ್ಷ ನಡೆದ ಜನಗಣನೆಯ ಅಂಕೆ ಸಂಖ್ಯೆಗಳಂತೆ ಭಾರತದ ಜನಸಂಖ್ಯೆ ೪೪ ಕೋಟಿಗಳಿಗೇರಿದೆ. ಕಳೆದ ಹತ್ತು ವರ್ಷಗಳಲ್ಲಿ ಆದ ಹೆಚ್ಚಳವು ಸೇ. ೨೧·೫ ಇರುತ್ತದೆ. ಉತ್ತರ ಭಾರತದ ಹೆಚ್ಚಿನ ರಾಜ್ಯಗಳಲ್ಲಿ ಏರಿಕೆಯು ದಕ್ಷಿಣದ ರಾಜ್ಯಗಳಿಗಿಂತ ಅಧಿಕವಾಗಿದೆ. ಅಸ್ಸಾಮದಲ್ಲಿ ಸೇ. ೩೪·೪ರಷ್ಟು ಏರಿದ್ದರೆ, ಆಂಧ್ರಪ್ರದೇಶ, ಮದ್ರಾಸ, ಮೈಸೂರುಗಳಲ್ಲಿ ಇದು ಸೇ. ೨೧·೫ಕ್ಕೆ ಆಗಿದೆ.

ವಿಚಿತ್ರ ಕಾರ್ಯಪದ್ಧತಿ

ಮಂತ್ರಿಮಂಡಲವನ್ನು ವಿಸ್ತರಿಸಿ ಆಡಳಿತ ಪಕ್ಷದ ಭಿನ್ನಾಭಿಪ್ರಾಯಗಳನ್ನು ಸರಿಪಡಿಸಿ ಮಾದರಿ ರಾಜ್ಯವೆನಿಸಿದ ಮೈಸೂರು ರಾಜ್ಯವೀಗ ಇನ್ನೊಂದು ಸಂಗತಿಯಲ್ಲೂ ತನ್ನ 'ಮಾದರಿತನ'ವನ್ನು ಪ್ರದರ್ಶಿಸಿದೆ. ೧೯೬೦ನೆ ಸಪ್ತೆಂಬರ ತಿಂಗಳಲ್ಲಿ ನಡೆದ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದವರೆಂದು ಒಂದು ತಾತ್ಕಾಲಿಕ ಪಟ್ಟಿ ೧೯೬೦ನೇ ವರ್ಷಾಂತ್ಯದಲ್ಲಿ ಪ್ರಕಟಗೊಂಡಿದೆ. ಅದರಂತೆ ಅನುತ್ತೀರ್ಣರಾದ ಹುಡುಗರು ಮೊನ್ನೆ ನಡೆದ ಪರೀಕ್ಷೆಗಳಿಗೆ ಕಟ್ಟಿರಬಹುದು. ಆದರೆ, ಈ ನಡುವೆ ಹಿಂದಿನ ಬಾರಿ ಪ್ರಕಟಿಸಿದ ಫಲಿತಾಂಶಕ್ಕೆ ಪೂರಕವೆಂದು ಮತ್ತೆ ಕೆಲವರು ಉತ್ತೀರ್ಣರಾಗಿದ್ದಾರೆಂಬ ಸಂಗತಿಯನ್ನು ಕೇಳಿ ನಗುವುಕ್ಕವಂತಾಗಿದೆ. ಫಲಿತಾಂಶಗಳನ್ನು ತಾಂತ್ರಿಕ ಕಾರಣಗಳಿಂದ ತಡೆಹಿಡಿಯುವ ಕ್ರಮವು ಎಲ್ಲೆಡೆಯಿರುವುದೇ ಹೊರತು ಅವನ್ನು ಕಂತುಕಂತುಗಳಲ್ಲಿ ಪ್ರಕಟಿಸುವ ಪದ್ಧತಿ ಇರುವುದಿಲ್ಲ. ಎಂತಲೇ ಈ ನೀತಿ—ಅಥವಾ ಕ್ರಮವು ಶುದ್ಧ ಹಾಸ್ಯಾಸ್ಪದವೆನಿಸಿವೆ; ಮತ್ತು ರಾಜ್ಯಕ್ಕೇನೇ ಅಗೌರವ ತರುವಂತಹದಿದು. ಈ ಅನಪೇಕ್ಷಿತ ಘಟನೆಗಳು ನಡೆಯಲು ಕಾರಣಗಳೇನೇ ಇದ್ದರೂ ಶಿಕ್ಷಣ ಕ್ಷೇತ್ರದ ಅನಿಶ್ಚಿತತೆ ಮತ್ತು ಅಕ್ಷಮ್ಯ ವಿಲಂಬಗಳು ಹೊಣೆಗೇಡಿತನದ್ದೆನ್ನದೆ ಗತ್ಯಂತರವಿಲ್ಲ. ನಮ್ಮ ರಾಜ್ಯದ ರಾಜಕೀಯ—ಅದರ ಆಡಳಿತೆಯೇ ವಿಲಕ್ಷಣವಾಗಿ ಮುಂದುವರಿಯುತ್ತಿರುವುದು ಶೋಭನೀಯವೆನಿಸದು. ಇಂತಹ "ಮಾದರಿತನ"ವು ಆದರ್ಶತೆಯೆನಿಸದು; ಇದು "ಬೇಜವಾಬ್ದಾರಿತನ"ದ ಪರಮಾವಧಿ. ಹೀಗೆಯೇ ನಡೆಯುವುದಾದರೆ, ಪರೀಕ್ಷೆ ಫಲಿತಾಂಶಗಳ ಸ್ಥಾನಮಾನಗಳು ಎಲ್ಲಿ ಉಳಿದುವು?

ಅಲ್ಲಲ್ಲಿಯ ಸುದ್ದಿ ಸಾರ

ಕನ್ನಡ ಸಾಹಿತ್ಯಾಭಿಮಾನಿಗಳಲ್ಲಿ ವಿನಂತಿ— ಉತ್ತರ ರಾಮ ಕಥೆ ಎಂಬ ಅಪ್ರಕಟಿತ ಕೃತಿಯನ್ನು ಮುದ್ರಿಸಲು ಸಾಹಿತ್ಯಾಭಿಮಾನಿಗಳೂ, ಧರ್ಮ ಪ್ರೇಮಿಗಳೂ ಧನ ಸಹಾಯ ರೂಪದ ಪ್ರೋತ್ಸಾಹ ನೀಡಬೇಕಾಗಿ ಶ್ರೀ ಕೆ. ವೆಂಕಟ್ರಾಯ ಆಚಾರ್ಯ, ವಿಜಯ ಸಾಹಿತ್ಯ ಮಾಲೆ, ಸುರತ್ಕಲ್ ಇವರು ವಿನಂತಿಸುತ್ತಾರೆ

ಶ್ರೀರಾಮ ನಾಮ ಲಿಖಿತ ಜಪ ಮಹಾ ಯಜ್ಞ— ಕಾಸರಗೋಡು ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ತಾ. 20—4—61ರಿಂದ 25—4—61ರ ವರೆಗೆ ಶ್ರೀ ಕಾಶೀ ಮಠಾಧೀಶ ಶ್ರೀಮತ್ ಸುಧೀಂದ್ರ ತೀರ್ಥ ಶ್ರೀ ಪಾದಂಗಳವರ ದಿವ್ಯ ನೇತೃತ್ವದಲ್ಲಿ ಮಹಾ ಯಜ್ಞವು ನೆರವೇರಲಿರುವುದರಿಂದ ಸಮಾಜ ಬಾಂಧವರೆಲ್ಲರೂ ಈ ಮಹತ್ಕಾರ್ಯದಲ್ಲಿ ಸಹಭಾಗಿಗಳಾಗಿ ತನು.ಮನ ಧನಗಳಿಂದ ಸಹಕರಿಸ ಬೇಕೆಂದೂ ಯಜ್ಞ ಸಮಿತಿಯವರು ವಿನಂತಿಸುತ್ತಾರೆ,

ಜಿ. ಕಾಂ. ಕಚೇರಿಯಲ್ಲಿ ಮಂತ್ರಿ ಬಾಳಿಗರ ಭಾಷಣ— ಇದೇ ತಾ. 21ರಂದು ಮೈಸೂರು ಸರಕಾರದ ಕಾನೂನು ಮತ್ತು ಮಜೂರ ಮಂತ್ರಿ ಶ್ರೀ ಬಿ. ವೈಕುಂಠ ಬಾಳಿಗರು ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಭಾಷಣವಿತ್ತರು, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ. ಎ. ಪೈಗಳು ಸ್ವಾಗತಿಸುತ್ತಾ ಮಂಗಳೂರು ಬಂದರದ ಅಭಿವೃದ್ಧಿ ಕಾರ್ಯಕ್ಕಾಗಿ ಒತ್ತಾಯಿಸಬೇಕು, ಅಖಿಲ ಕರ್ನಾಟಕಕ್ಕೆ ಏಕರೂಪದ ಕಾನೂನನ್ನು ಕೂಡಲೇ ಜಾರಿಗೆ ತರಬೇಕು, ಕಾಸರಗೋಡಿನ ಪ್ರಶ್ನೆಯನ್ನು ಬಗೆಹರಿಸಬೇಕು, ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರನ್ನಿಡಬೇಕು ಎಂಬಿತ್ಯಾದಿ ವಿಚಾರಗಳನ್ನು ಪ್ರಸ್ತಾಪಿಸಿದರು, ಮಂತ್ರಿ ಬಾಳಿಗರು ತಕ್ಕ ಉತ್ತರವಿತ್ತ ಬಳಿಕ ಕಾರ್ಯದರ್ಶಿ ಎಂ. ರಮಾನಾಥರು ಧನ್ಯವಾದಗಳನ್ನರ್ಪಿಸಿದರು,

ಶಾಲಾ ವರ್ಧಂತ್ಯುತ್ಸವ— ನೀರೆ ಹೆದ್ದಾರಿ ಬೋರ್ಡ್ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ತಾ. 18ನೇ ಬೆಳಿಗ್ಗೆ ಡಾ। ಎ. ಕೆ. ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಧ್ವಜವಂದನೆಯಾಗಿ ಆಟೋಟಗಳ ಸ್ಪರ್ಧೆ ಜರಗಿದ ಬಳಿಕ ಶ್ರೀ ಸರೋಜಿ ಬಾಕ್ಯಾರು ಚೆಂದಯ ಸೆಟ್ಟರ ಕೃಪೆಯಿಂದ ಸಿಹಿ ತಿಂಡಿ ಹಂಚಲಾಯಿತು. ಸಂಜೆ ಕಾರ್ಕಳ ತಾಲೂಕು ಡೆವೆಲಪ್‌ಮೆಂಟ್ ಬೋರ್ಡ್ ಅಧ್ಯಕ್ಷ ಶ್ರೀ ಎನ್. ಮೋಹನದಾಸ ಅಡ್ಯಾಂತಾಯರ ಅಧ್ಯಕ್ಷತೆಯಲ್ಲಿ ವಾರ್ಷಿಕೋತ್ಸವ ಜರಗಿತು ನೀರೆ ಬೈಲೂರು ಪಂಚಾಯತ್ ಅಧ್ಯಕ್ಷ ಶ್ರೀ ಶೇಖರ ಹೆಗ್ಡೆಯವರು ಸ್ವಾಗತ ಭಾಷಣ ಮಾಡಿದರು, ಶ್ರೀ ಪಿ. ಶಿವಣ್ಣ ಸೆಟ್ಟರು ಸಂದೇಶಗಳನ್ನೂ ಶ್ರೀ ಕೆ. ಲೋಕು ಪೂಜಾರಿಯವರು ಶಾಲಾ ವರದಿಯನ್ನೂ ಓದಿದರು, ಶಾಲಾ ಇನ್ಸ್‌ಪೆಕ್ಟರ್ ಶ್ರೀ ಕೆ. ಗೋಪಾಲ ಮ್ಯೋಲಿಯವರು ಬಹುಮಾನ ವಿತರಣೆ ಮಾಡಿದರು, ಶ್ರೀ ಬಿ. ಗೋವಿಂದ ಪೂಜಾರಿಯವರು ಭಾಷಣಮಾಡಿದ ಮೇಲೆ ಅಧ್ಯಕ್ಷರು ಶಾಲೆಗಳಲ್ಲಿ ವಾರ್ಷಿಕೋತ್ಸವ ಜರಗಿಸುವ ಉದ್ದೇಶ, ಅದರ ಪರಿಣಾಮಗಳನ್ನು ವಿವರಿಸಿ ಈ ವೈಭವಯುತ ವಾರ್ಷಿಕೋತ್ಸವಕ್ಕಾಗಿ ಮೆಚ್ಚುಗೆ ಪ್ರದರ್ಶಿಸಿದರು, ಬಳಿಕ ಮನರಂಜನಾ ಕಾರ್ಯ ಕ್ರಮಗಳಾದುವು,

ಶ್ರೀ ಹಾವಂಜೆ ಭುಜಂಗ ಸೆಟ್ರ ಅಕಾಲ ನಿಧನ— ಉಡುಪಿ ತಾಲೂಕು ಹಾವಂಜೆ ಅಚ್ಚಣ್ಣ ಸೆಟ್ರ ಅಳಿಯ ಭುಜಂಗ ಸೆಟ್ಟರು ತಾ. 24—3—61ರಂದು ತನ್ನ ಹೆಂಡ್ತಿ ಮನೆಯಾದ ಯಡ್ತಿರು ಮನೆಯಲ್ಲಿ ಹೃದಯ ಸ್ತಂಭನದಿಂದ 40ನೇ ವಯಸ್ಸಿನಲ್ಲಿ ನಿಧನ ಹೊಂದಿದರೆನ್ನಲು ವಿಷಾದವಾಗುತ್ತದೆ ಮೃತರಿಗೆ 2 ಗಂಡು ಮಕ್ಕಳೂ 3 ಹೆಣ್ಣು ಮಕ್ಕಳೂಯಿರುತ್ತಾರೆ. ಮೃತರು ದೇಶಾಭಿಮಾನಿಗಳೂ ಜನಪ್ರಿಯರೂ ಸರಳ ಸ್ವಭಾವದರೂ ಧರ್ಮಾಭಿಮಾನಿಗಳೂ ಆಗಿದ್ದು ಅವರ ಸ್ಮಶಾನ ಯಾತ್ರೆಯಲ್ಲಿ ಸುಮಾರು 300ಕ್ಕೂ ಮಿಕ್ಕಿ ಜನರು ನೆರೆದಿದ್ದರು,

ಶಾಲಾ ವಾರ್ಷಿಕೋತ್ಸವ— ಉಡುಪಿ ಮೋಡರ್ನ್ ಹಾಯರ್ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ತಾ. 24ರಂದು ಡಾ. ಆರ್. ಪಿ. ಕೊಪ್ಪಿಕರ್, ಎಮ್. ಎಸ್. ಎಫ್. ಆರ್. ಸಿ. ಎಸ್. ಡೀನ್, ಕಸ್ತೂರ್ಬಾ ಮೆಡಿಕಲ್ ಕಾಲೇಜ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎ. ಜೆ. ಅಲ್ಸೆಯವರು ಸ್ವಾಗತ ಭಾಷಣ ಮಾಡಿದರು. ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಎಚ್. ಎಲ್. ಭಟ್ಟರು ಶಾಲೆಯ ಪ್ರಗತಿಪರವಾದ ವರದಿಯನ್ನೋದಿದರು. ಶ್ರೀ ಎಚ್. ಡಿ. ಎಸ್. ಪೈ, ಮೇನೇಜರ್, ದಿ. ಸಿ. ಪಿ. ಬಿ. ಎಸ್. ಮಂಗಳೂರು ಇವರು ಸ್ವಸ್ತಿವಾಚನ ಮಾಡಿದರು. ಶಾಲಾ ಮುಖ್ಯ ಮಂತ್ರಿಯಾದ ಯು. ಸುರೇಶ ರಾವ್ ಸ್ವಸ್ತಿ ವಾಚನಕ್ಕೆ ಉತ್ತರವನ್ನಿತ್ತರು. ಅಧ್ಯಕ್ಷರ ಭಾಷಣ ವಿವಿಧ ವಿನೋದಾವಳಿಗಳ ನಂತರ ಶಾಲಾ ಬಾಲಕರಿಂದ 'ಅಲೆಕ್ಸಾಂಡರ್' ಎಂಬ ನಾಟಕ ಅಭಿನಯಿಸಲ್ಪಟ್ಟಿತು. ಕೊನೆಯಲ್ಲಿ ಶಾಲಾ ಮುಖ್ಯೋಪಾಧ್ಯಾಯರಾದ ಎಚ್. ಎಲ್ ಭಟ್ಟರು ಧನ್ಯವಾದ ಸಮರ್ಪಿಸಿದರು,

ಹೆತ್ತವರ ದಿನಾಚರಣೆ— ಉಡುಪಿ ಮೋಡರ್ನ್ ಹಾಯರ್ ಎಲಿಮೆಂಟರಿ ಶಾಲೆಯ ಹೆತ್ತವರ ದಿನಾಚರಣೆಯು ತಾ 25ರಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು, ಶಾಲಾ ಮೆನೇಜರರಾದ ಶ್ರೀ ಕೆ. ಜಗನ್ನಾಥ ನಾಯ್ಕರು ಸ್ವಾಗತ ಭಾಷಣ ಮಾಡಿದರು, ದಿ। ರಾಧಾಬಾಯಿ ಇವರ ಭಾವ ಚಿತ್ರವನ್ನು ಶ್ರೀ ಟಿ. ಎ. ಪೈಗಳವರು ಅನಾವರಣಮಾಡಿದರು ಶ್ರೀಮತಿ ಪ್ರೇಮಾ ಎ. ಪೈಗಳು ಬಹುಮಾನ ವಿತರಣೆ ಮಾಡಿದರು ಅಧ್ಯಕ್ಷರ ಭಾಷಣ, ವಿವಿಧ ವಿನೋದಾವಳಿಗಳ ನಂತರ ಶಾಲಾ ಬಾಲಕಿಯರಿಂದ "ವಿಕ್ರಮ ವಿಜಯ" ಎಂಬ ನಾಟಕ ಅಭಿನಯಿಸಲ್ಪಟ್ಟಿತ್ತು. ಕೊನೆಯಲ್ಲಿ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಎಚ್. ಎಲ್. ಭಟ್ಟರು ಧನ್ಯವಾದ ಸಮರ್ಪಿಸಿದರು.

ಹಳೇ ವಿದ್ಯಾರ್ಥಿ ಸಂಘ— ಉಡುಪಿ ಮೋಡರ್ನ್ ಹಾಯರ್ ಎಲಿಮೆಂಟರಿ ಶಾಲೆಯ ಹಳೆ ವಿದ್ಯಾರ್ಥಿ ಸಂಘದ ದಿನಾಚರಣೆಯು ತಾ. 26ರಂದು ಶ್ರೀ ಕೆ. ಸೂರ್ಯನಾರಾಯಣ ಅಡಿಗ, ಎಡ್ವೋಕೇಟ್ ಮಂಗಳೂರು ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಟಿ. ಎ. ಪೈಯವರಿಂದ ಸ್ವಾಗತತ ಭಾಷಣ ನಡೆಯಿತು, ಶ್ರೀ ಎ. ಜೆ. ಅಲ್ಸೆಯವರು ಶಾಲಾ ಹಸ್ತ ಪತ್ರಿಕೆಯನ್ನು ಉದ್ಘಾಟಿಸಿದರು, ಶ್ರೀಮತಿ ಸರೋಜಿನಿ ದೇವಿ ಅಡಿಗರು ಬಹುಮಾನ ವಿತರಣೆ ಮಾಡಿದರು, ಅಧ್ಯಕ್ಷರ ಭಾಷಣ ವಿವಿಧ ವಿನೋದಾವಳಿಗಳ ನಂತರ ಹಳೆ ವಿದ್ಯಾರ್ಥಿ ಮತ್ತು ಅಧ್ಯಾಪಕರಿಂದ "ಒಂದೇ ಲೋಟ" ಎಂಬ ಸಾಮಾಜಿಕ ನಾಟಕವು ಅಭಿನಯಿಸಲ್ಪಟ್ಟಿತು, ಕೊನೆಯಲ್ಲಿ ಶಾಲಾ ಮೆನೇಜರಾದ ಶ್ರೀ ಕೆ. ಜಗನ್ನಾಥ ನಾಯ್ಕರು ಧನ್ಯವಾದ ಸಮರ್ಪಿಸಿದರು,

ಉಪಾಹಾರ ಸತ್ಕಾರ— ಶ್ರೀ ಕೆ. ಎ. ಶೆಟ್ಟರು ಉಡುಪಿ ಲಾ ಕಾಲೇಜಿನ ಹತ್ತಿರ ನೂತನವಾಗಿ ಕಟ್ಟಿಸಿದ ಕೃಷ್ಣ ಕುಂಜ ಗೃಹ ಪ್ರವೇಶ ಸಂಬಂಧ ತಾ. 27ನೇ ಸಂಜೆ ಉಪಾಹಾರ ಸತ್ಕಾರ ಸಮಾರಂಭವೊಂದನ್ನು ಏರ್ಪಡಿಸಿದ್ದರು, ಇದಕ್ಕೆ ನಗರದ ಮತ್ತು ಹೊರಗಿನ ಹಲವಾರು ಮಹನೀಯರು ಆಗಮಿಸಿದ್ದರು, ಕೃಷ್ಣಕುಂಜವು ಶ್ರೀ ಕಾಪು ಪುರುಷೋತ್ತಮ ಶೆಟ್ರ ಮೇಲ್ವಿಚಾರಣೆಯಲ್ಲಿ ಆಧುನಿಕ ರೀತಿಯಲ್ಲಿ ಕಟ್ಟಿಸಿದ ಕಲಾಪೂರ್ಣ ಮಂದಿರವಾಗಿದ್ದು ಚಿತ್ತಾಕರ್ಷಕವಾಗಿದೆ, ಮುಂಚಿನ ದಿನ ಗೃಹ ಪ್ರವೇಶವು ವಿಧಿಪೂರ್ವಕ ನೆರವೇರಿಸಲ್ಪಟ್ಟಿತ್ತು

ಸ್ವಾಮಿ ಚಿನ್ಮಯಾನಂದರು— ಇದೇ ತಾ. 26ನೇ ಬೆಳಿಗ್ಗೆ ಉಡುಪಿ ಚಿನ್ಮಯ ಯಜ್ಞ ಸಮಿತಿಯ ನೇತೃತ್ವದಲ್ಲಿ ಶ್ರೀ ವರದೇಂದ್ರ ಕಲಾಮಂದಿರದಲ್ಲಿ ಬರಲಾಗುತ್ತಿರುವ ಸಮಾಜಕ್ಕಾಗಿ ಸನಾತನದ ಅನುಕೂಲ್ಯತೆಗಳ ಕುರಿತು ವಿಚಾರಪೂರ್ಣ ಭಾಷಣವಿತ್ತರು, ಆರಂಭದಲ್ಲಿ ಶ್ರೀ ಟಿ ಎ. ಪೈಗಳು ಸ್ವಾಮಿಯವರನ್ನು ಸ್ವಾಗತಿಸಿ ತೈಲಚಿತ್ರವೊಂದನ್ನು ಅರ್ಪಿಸಿದರು, ಡಾ। ಲಕ್ಷ್ಮೀನಾರಾಯಣನವರು ಪರಿಚಯ ಭಾಷಣಮಾಡಿದರು, ಕೊನೆಯಲ್ಲಿ ಶ್ರೀ ಪಿ. ರಂಗನಾಥ ಶೆಣೈಯವರು ಧನ್ಯವಾದವನ್ನರ್ಪಿಸಿದರು.

ಬೆಳ್ಮಣ್ಣು— ಇಲ್ಲಿಯ ಪುನಾರು ಕರೆಯ ಸರಕಾರಿ ಕಿರಿಯ ಪ್ರಾಥಮಿಕ ಶಾಲಾ ನೂತನ ಕಟ್ಟಡದ ಉದ್ಘಾಟನಾ ಸಮಾರಂಭವು ಡಾ। ಕೊರಡ್ಕಲ್ ವೆಂಕಟರಾಯರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನೆರವೇರಿತು. ಶಾಲಾ ಇನ್ಸ್‌ಪೆಕ್ಟರ್ ಶ್ರೀ ಗೋಪಾಲ ಮ್ಯೊಲಿಯವರು ಕಟ್ಟಡದ ಉದ್ಘಾಟನೆ ಮಾಡಿದರು. ಶ್ರೀ ಬಿ ವೆಂಕಟರಾಯರು ಸ್ವಾಗತಿಸಿದರು. ಶಾಲಾ ಉಪಾಧ್ಯಾಯಿನಿ ಕುಮಾರಿ ಬಿ. ಶಾರದಾ ಬಾಯಿಯವರು ವರದಿಯನ್ನೋದಿದರು. ಶ್ರೀ ಲಕ್ಷ್ಮಣನಾಯ್ಕರು ಭಾಷಣವಿತ್ತರು. ಕೊನೆಗೆ ಮಕ್ಕಳ ವಿವಿಧ ವಿನೋದಾವಳಿಗಳಾದುವು.

ಉಡುಪಿ ಡಿ. ಮು. ಕೋರ್ಟಿನಲ್ಲಿ

R. I. A. No. 284/61 in
O. P. No. 38/1959.

ಮೀನಾಕ್ಷಿ ಯಾನೆ ರಮಾಬಾಯಿ
—ಅರ್ಜಿದಾರಳು.

ಮೇಲಿನ O. P. No. 38/59ನೇ ಅರ್ಜಿಗೆ ಕಾರಣವಾದ ಅರ್ಜಿದಾರಳ ಗಂಡ ಹಾಲ್ ಮೃತಪಟ್ಟಿರುವ ದಿ. ಮಂಜುನಾಥ ಮೋಟರ್ ಸರ್ವಿಸ್— ಇದರ ಪ್ರೊಪ್ರೈಟರ್—ಕೆ. ಗೋಪಾಲ ಶೆಟ್ರ ಬಾಬ್ತು ಅವರಿಗೆ ಬರಬೇಕಾದ ಸಾಲದ ಬಾಬ್ತು ಅರ್ಜಿದಾರಳಿಗೆ ಈ ಮುಂಚೆ ಕೊಡೋಣಾದ ಸಕ್ಸೇಶನ್ ಸರ್ಟಿಫಿಕೇಟಿನಲ್ಲಿ ಈ ಅರ್ಜಿ ಪಟ್ಟಿಗೆ ಕಾಣಿಸಿದ ಯಾವತ್ತು ಸಾಲಗಳು ಬಿಟ್ಟು ಹೋಗಿರುವುದರಿಂದ ಅದನ್ನು ಸದ್ರಿ ಸರ್ಟಿಫಿಕೇಟಿನಲ್ಲಿ ಕೂಡಿಸಿಕೊಂಡು ಮೇಲಿನ ಸಕ್ಸೇಶನ್ ಸರ್ಟಿಫಿಕೇಟು Extend ಮಾಡಿ ಕೊಡಿಸಬೇಕಾಗಿ ಅರ್ಜಿದಾರಳು ಮೇಲಿನ ಅರ್ಜಿಮಾಡಿರುತ್ತಾಳಾಗಿಯೂ ಮತ್ತು ಸದ್ರಿ R. I. A. 284/61ನೇ ಅರ್ಜಿಯು ತಾ. 8-4-61ಕ್ಕೆ ಇಟ್ಟಿರುತ್ತದ್ದಾಗಿಯೂ ಆಕ್ಷೇಪ ಹೇಳತಕ್ಕವರು ಇರುವ ಪಕ್ಷದಲ್ಲಿ ಸದ್ರಿ ಕೋರ್ಟಿನ ಮುಂದೆ ಸದ್ರಿ ದಿವಸ ಹಗಲು 10 ಗಂಟೆಗೆ ಹಾಜರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಯಾವತ್ತು ಜನರಿಗೆ ಈ ಮೂಲಕ ತಿಳಿಸೋಣಾಗುತ್ತದೆ.

(By order of the Court.)

B. Ananda Shetty,
Advocate for Petitioner.

ಉಡುಪಿ, 28-3-1961.

ವಿಜಯ ಬೇಂಕ್ ಲಿಮಿಟೆಡ್, ಬೈಂದೂರು.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬೇಂಕಿನಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ಮರುಪಾವತಿ ಮಾಡುವರೆ ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡಾಗ್ಯೂ ಅಸ್ಲು, ಬಡ್ಡಿ ಯಾವುದನ್ನೂ ಈ ತನಕ ಕೊಡದೆ ಬಾಕಿಮಾಡಿಕೊಂಡಿರುವುದರಿಂದಲೂ, ಅಲ್ಲದೆ ಕೆಲವರಿಗೆ ಬಿಟ್ಟಿರುವ ನೋಟೀಸುಗಳು ಕಾರಣಾಂತರಗಳಿಂದ ನಮಗೇನೇ ವಾಪಾಸು ಬಂದಿರುವುದರಿಂದಲೂ, ಸದ್ರಿಯವರು ನಮ್ಮಲ್ಲಿ ಈಡಿಟ್ಟಿರುವ ಚಿನ್ನಾಭರಣ ನಗಗಳನ್ನು ಇದೇ ಎಪ್ರಿಲ್ ತಿಂಗಳು ತಾರೀಕು 8ನೇ ಶನಿವಾರ ಅಪರಾಹ್ನ ಗಂಟೆ 2.00ಕ್ಕೆ ಯಾ ಬೇಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬೇಂಕಿನ ವಠಾರದಲ್ಲಿ ಬಹಿರಂಗವಾಗಿ ಹರಾಜುಮಾಡಲಾದೀತು ತಿಳಿದಿರಲಿ.

ಸಾಲದ ಜಂಜ್ರಾ ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು.
96/58	ಯರುಕೋಣ ಕುಪ್ಪಯ್ಯ ಶೆಟ್ಟಿ, ದುಗ್ಗಪ್ಪ ಶೆಟ್ರ ಅಳಿಯ ಹೇರೂರು ಗ್ರಾಮ, ಪೋಸ್ಟು ನಾವುಂದ.	302—29
125/58	ವಿಕ್ಟರ್ ಫೆರ್ನಾಂಡಿಸ್, ಜೋನಿ ಫೆರ್ನಾಂಡಿಸರ ಮಗ, ಬೈಂದೂರು	20—14
317/58	ಲಸ್ಟೀರಿ ಉಸ್ಮಾನ್ ಸಾಹೇಬ್, ಅಲ್ಲಿ ಸಾಹೇಬರ ಮಗ, ಬೈಂದೂರು.	123—06
373/58	ಬಿ. ಎಮ್. ರಾಮಚಂದ್ರ, ಹನುಮಂತ ಶೇರಿಗಾರರ ಮಗ, ಪೋಸ್ಟ್ ಮಯ್ಯಾಡಿ.	19—75
432/58	ಟಿ. ಎಸ್. ಶೀನಪ್ಪ ಶೆಟ್ಟಿ, ನಾಗಯ್ಯ ಶೆಟ್ರ ಅಳಿಯ, ತಗ್ಗರ್ಸೆ ಗ್ರಾಮ, ಪೋಸ್ಟ್ ಮಯ್ಯಾಡಿ.	48—30
860/58	— Do —	1052—36
634/58	ಬಿ. ದೇವಪ್ಪ ಶೇರೆಗಾರ್, ವೆಂಕಟ್ರಮಣ ಶೇರೆಗಾರರ ಮಗ, ಬಾಡ ಬೈಂದೂರು.	35—77
638/58	ಅಪ್ಪಯನ ತಿಮ್ಮಪ್ಪ ಶೇರೆಗಾರ, ನಾಗಪ್ಪ ಶೇರೆಗಾರರ ಮಗ, ಪಡುವರಿ ಗ್ರಾಮ, ಪೋಸ್ಟು ಪಡುವರಿ.	119—94
667/58	ಹುಣ್ಣಿಮನೆ ಕುಪ್ಪ, ರಾಮ ಮೈಕಲರ ಅಳಿಯ, ತಗ್ಗರ್ಸೆ ಗ್ರಾಮ ಪೋಸ್ಟು; ಮಯ್ಯಾಡಿ.	15—57
703/58	ಎಚ್ ರಾಮ, ಪಿಯೋನ್, ಬ್ಲೋಕ್ ಡೆವೆಲಪ್‌ಮೆಂಟ್ ಆಫೀಸ್, ಬೈಂದೂರು	14—14
704/58	ಎ. ಯು. ಜೋನ್, ಬೋನರ ಮಗ, ಅತ್ತಾಡಿ. ಪೋಸ್ಟ್ ಶಿರೂರು.	34—00
914/58	ಬಾಲಯ್ಯ ಶೆಟ್ಟಿ, ಮಂಜಯ ಶೆಟ್ರ ಅಳಿಯ, ಕುಂಚೊಳ್ಳಿ ಮನೆ ಬೈಂದೂರು, ಸೂರುಕುಂದ, ಪೋಸ್ಟ್ ಮಯ್ಯಾಡಿ.	53—03
918/58	ಬಿ. ಪುರುಷೋತ್ತಮ ಜೋಶಿ, ಕುಪ್ಪ ಜೋಶಿಯರ ಮಗ, ಬಾಡ, ಬೈಂದೂರು.	124—15
977/59	ಮೊವಡ ಅಬ್ದುಲ್ ಕಾದಿರ್ ಸಾಹೆಬ್, ಮೊವಡ ಮೊಹಮ್ಮದ್ ಮೀರಾ ಸಾಹೇಬರ ಮಗ, ಕೇರಿ, ಬೈಂದೂರು.	505—94
1061/58	ಟಿ. ಎ. ಶ್ರೀನಿವಾಸ ಶೇಟ್, ಅಮ್ಮಯ ಶೇಟರ ಮಗ, ಬೈಂದೂರು.	55—63
1421/58	ಉಮ್ಮಣ್ಣ ಶೆಟ್ಟಿ, ವೆಂಕಪ್ಪ ಶೆಟ್ರ ಅಳಿಯ, ಉಮ್ಮಣ್ಣ ಶೆಟ್ರ ಮನೆ, ಶಿರೂರು.	157—27
1376/58	ಬಿ. ಪುರುಷೋತ್ತಮ ಜೋಶಿ, ಕುಪ್ಪ ಜೋಯಿಸರ ಮಗ, ಬಾಡ, ಬೈಂದೂರು.	417—60

ದಿ ವಿಜಯ ಬೇಂಕ್ ಲಿಮಿಟೆಡ್, ಬೈಂದೂರು.

BYNDOOR
27—3—1961

H. Vittal Naik,
Agent.

ನಿಮಗೂ ತಿಳಿದಿರಲಿ:

ಚುನಾವಣಾ ಪ್ರಚಾರ ಹೇಗಿರಬೇಕು?

ತಾ. ೨೯ರಂದು ಮಂಗಳೂರಿನಲ್ಲಿ "ಅಮೆರಿಕದ ಅಧ್ಯಕ್ಷ ಚುನಾವಣೆ" ಎಂಬ ಪ್ರದರ್ಶನವು ಉದ್ಘಾಟಿತವಾಯಿತು. ಮದ್ರಾಸಿನ ಅಮೆರಿಕನ್ ವಾರ್ತಾ ಸಂಸ್ಥೆಯ ಗ್ರಂಥ ಭಂಡಾರದ ಡೈರೆಕ್ಟರ್ ಮಿಸ್ ಸಿಸಿಲಿಯಾ ಎಸ್. ಜಾನ್ಸನ್‌ರು ಪ್ರದರ್ಶನದ ಪರಿಚಯವಿತ್ತರು. ಈ ಸಂಬಂಧದ ವಿಶೇಷ ಲೇಖನವಿದು.

ಅಮೆರಿಕೆಯ ಚುನಾವಣಾ ಪ್ರಚಾರವು ಹಿಂದಿಗಿಂತ ಇಂದು ಬಹಳಷ್ಟು ಸುಧಾರಿಸಿದೆ. ಹಿಂದೆ ಉಪಯೋಗಿಸುತ್ತಿದ್ದ ಕಠೋರವಾಕ್ಯಗಳು, ಹುರಿಯಾಳಿನ ಖಾಸಗಿ ಜೀವನ ಮತ್ತು ವ್ಯಕ್ತಿತ್ವಗಳನ್ನು ಖಂಡಿಸುವ ಕ್ರಮಗಳು ಇಂದು ಸಾಮಾನ್ಯವಾಗಿ ಅದೃಶ್ಯವಾಗಿವೆ.

ಪ್ರಚಂಡ ಪ್ರತಿಸ್ಪರ್ಧೆಯನ್ನು ಇದಿರಿಸಬೇಕಾದಲ್ಲಿ ಹುರಿಯಾಳುಗಳು ಚುನಾವಣಾ ಪ್ರಚಾರ ಕಾರ್ಯದಲ್ಲಿ ನಿರಂತರ ಶ್ರಮಿಸಬೇಕಾಗುತ್ತದೆ ಎಡೆಬಿಡದೆ ಸಂಚರಿಸುತ್ತ ನೂರಾರು ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ ಭಾಗವಹಿಸುವುದು, ವೇದಿಕೆಗಳು, ರೇಡಿಯೋ ಕೇಂದ್ರಗಳು ಮತ್ತು ಟೆಲಿವಿಜನ್ ಕೇಂದ್ರಗಳ ಮೂಲಕ ಹಲವಾರು ಭಾಷಣಗಳನ್ನು ಮಾಡುವುದು ಇವರಿಗೆ ಅವಶ್ಯವೆನಿಸುವುದು.

ಅಧ್ಯಕ್ಷ ಸ್ಥಾನದ ಹುರಿಯಾಳುಗಳು ಚುನಾವಣಾ ಪ್ರಚಾರದ ವಿಶೇಷ ಗಾಡಿಗಳಲ್ಲಿ ಅಥವಾ ವಿಮಾನಗಳಲ್ಲಿ ಅಧಿಕಾಧಿಕ ಸಂಸ್ಥಾನಗಳಲ್ಲಿ ಸಂಚರಿಸುತ್ತಾರೆ. ಇವರ ಜತೆಗೆ ಪತ್ರಿಕೆಗಳ ಮತ್ತು ಆಕಾಶವಾಣಿಗಳ ಪ್ರತಿನಿಧಿಗಳು, ರಾಜಕೀಯ ಸಲಹೆಗಾರರು ಮತ್ತು ಚುನಾವಣಾ ಪ್ರಚಾರ ಕಾರ್ಯಕರ್ತರೂ ಇರುತ್ತಾರೆ.

ಹಿಂದಿನ ಕಾಲದಲ್ಲಿ ರಾಷ್ಟ್ರದ ಎರಡು ಉನ್ನತ ಪದವಿಗಳ ಹುರಿಯಾಳುಗಳು ಸಾಮಾನ್ಯವಾಗಿ ಸ್ಥಳೀಯ ಹುರಿಯಾಳುಗಳಿಗೆ ಅನುಮೋದನೆ ನೀಡುತ್ತ ದೊಡ್ಡ ನಗರಗಳಲ್ಲಿ ಚಿಕ್ಕ ಭಾಷಣಗಳನ್ನು ಮಾಡುತ್ತ ವೇಗದಲ್ಲಿ "ವಿಜಲ್ ಸ್ಟಾಪ್" ರೇಲ್ವೆ ಸಂಚಾರ ಮಾಡುತ್ತಿದ್ದರು. ಹುರಿಯಾಳುಗಳು ಈ ರೀತಿಯಲ್ಲಿ ಸುಮಾರು ಇಪ್ಪತ್ತು ಭಾಷಣಗಳನ್ನು ಪ್ರತಿ ದಿನ ಕೊಡಬಹುದು ಇಂತಹ ಭಾಷಣ ಪ್ರಣಾಲಿಯಲ್ಲಿ ಕೊನೆಯಲ್ಲಿ ಒಂದು ದೊಡ್ಡ ಭಾಷಣವನ್ನು ಏರ್ಪಡಿಸಲಾಗುವುದು. ಈ ನಗರದಲ್ಲಿ ಮೋಟಾರು ಮೆರವಣಿಗೆಯನ್ನು ಮೋಟಾರುಗಳ ಮೂಲಕ ಚುನಾವಣಾ ಪ್ರಚಾರವನ್ನು ಮಾಡಲಾಗುವುದು.

'ವಿಜಲ್ ಸ್ಟಾಪ್' ಮತ್ತು ಹುರಿಯಾಳುಗಳ ಪ್ರತ್ಯಕ್ಷ ಪ್ರಚಾರಾಗಮಕ್ರಮವು ಇಂದಿಗೂ ಚುನಾವಣಾ ಪ್ರಚಾರದ ಒಂದಂಗವಾಗಿದೆ. ಈಗ ಹುರಿಯಾಳುಗಳಿಗೆ ಆಕಾಶವಾಣಿ ಮತ್ತು ಟೆಲಿವಿಜನ್ ಮೂಲಕ ಲಕ್ಷಗಟ್ಟಲೆ ಮತದಾರರನ್ನು ಪ್ರಭಾವಿಸಲು ಸಾಧ್ಯವಾಗುವಂತಾಗಿದೆ.

ಪತ್ರಿಕೆಗಳು ರಾಜಕೀಯ ಘಟನೆಗಳನ್ನು ಸಮಗ್ರವಾಗಿ ಪ್ರಕಟಿಸಿ ಪ್ರಚಾರದಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಚುನಾವಣೆಗಳು ಸಮೀಪವಾಗುತ್ತ ಬಂದಂತೆ ಪತ್ರಿಕೆಗಳು ಭಾಷಣಗಳು, ಸಂದರ್ಶನಗಳು ಹಾಗೂ ಪಕ್ಷದ ಕಾರ್ಯಕ್ರಮಗಳಿಗೆ ಬಹುಭಾಗವನ್ನು ಮೀಸಲಿಡುತ್ತವೆ. ರಾಜಕೀಯ ವ್ಯಕ್ತಿಗಳಿಗೆ ಮತ್ತು ಕಾರ್ಯಕಲಾಪಗಳಿಗೂ ಪತ್ರಿಕೆಗಳು ಸ್ಥಳವನ್ನು ಒದಗಿಸುತ್ತವೆ.

ಚುನಾವಣಾ ಪ್ರಚಾರಾವಧಿಯಲ್ಲಿ ಪ್ರತಿ ಹುರಿಯಾಳುವೂ ಮತದಾರನಿಗೆ ಪರಿಚಿತನಾಗುವನು. ಆತನು ವ್ಯಕ್ತಪಡಿಸಿದ ಪ್ರತಿಯೊಂದು ವಿಚಾರವೂ ಪತ್ರಿಕೆಗಳಲ್ಲಿ ವರದಿಯಾಗುವುದು. ರಾಷ್ಟ್ರೀಯ ಹುದ್ದೆಗೆ ಸ್ಪರ್ಧಿಸುವ ವ್ಯಕ್ತಿ ದೇಶೀಯ ಮತ್ತು ಅಂತಾರಾಷ್ಟ್ರೀಯ ವಿಷಯಗಳ ಬಗ್ಗೆ ಆತನ ವಿಚಾರಗಳನ್ನು ವ್ಯಕ್ತಪಡಿಸಬೇಕೆಂದು ಎಲ್ಲೆಡೆಗಳಿಂದಲೂ ಆತನ ಮೇಲೆ ಒತ್ತಡವನ್ನು ಹೇರಲಾಗುವುದು.

ಈತನಿಗೆ ವಿದೇಶ ವ್ಯವಹಾರ, ಅರ್ಥಶಾಸ್ತ್ರ ಮತ್ತು ಸಾಮಾಜಿಕ ಸಮಸ್ಯೆಗಳ ಪರಿಚಯವಿರಬೇಕಾಗುತ್ತದೆ. ತನ್ನ ಪಕ್ಷದ ಮುಖಂಡರ ಅಭಿಪ್ರಾಯವೇನೆಂದು ಆಗಾಗ ವಿಚಾರಿಸುತ್ತಿರಬೇಕು. ತನ್ನ ಪಕ್ಷದ ಧೋರಣೆಯು ತನ್ನ ಚುನಾವಣಾ ಕ್ಷೇತ್ರದ ಮತದಾರರ ವಿಚಾರಗಳಿಗೆ ಹಾಗೂ ತನ್ನ ವಿಶ್ವಾಸಗಳಿಗೆ ವಿರೋಧವಿದ್ದರೆ ತನ್ನ ಧೋರಣೆಯನ್ನು ಬಿಟ್ಟುಕೊಡುವ ಪ್ರಸಂಗವು ಅವನಿಗೆ ಬರಬಹುದು. ಕೊನೆಯಲ್ಲಿ ಜನತೆಯ ಮತ್ತು ತನ್ನ ವಿಚಾರಗಳನ್ನು ಮಿಲನಗೊಳಿಸಿ ಹೊಸ ಧೋರಣೆಯನ್ನೇ ಆತನು ರೂಪಿಸಬೇಕಾಗುತ್ತದೆ.

ತೀವ್ರ ಪ್ರಚಾರದ ಘಟ್ಟವು ಪ್ರಾರಂಭವಾದಾಗ, ಹುರಿಯಾಳುಗಳು ತಮ್ಮ ಸ್ಥಿರತೆ ಧೈರ್ಯಗಳನ್ನೂ ಒತ್ತಡಗಳನ್ನು ಎದುರಿಸಬಲ್ಲ ಸ್ವಸಾಮರ್ಥ್ಯವನ್ನೂ ಮತದಾರರಿಗೆ ಪ್ರತ್ಯಕ್ಷೀಕರಿಸುತ್ತಾರೆ. ಇದೇ ಸಮಯದಲ್ಲಿ ಅವರ ಹಿಂದಿನ ದಾಖಲೆಗಳ ಪರಿಶೀಲನೆಯು ನಡೆಯುವುದು. ಎಲ್ಲಾ ಮತದಾರರಿಗೂ ಹುರಿಯಾಳುಗಳು ರಾಷ್ಟ್ರವನ್ನು ಎದುರಿಸುತ್ತಿರುವ ಪ್ರಾಮುಖ್ಯ ಪ್ರಶ್ನೆಗಳ ಬಗೆಗೆ ತಳೆದ ಧೋರಣೆಯನ್ನು ಅರಿತುಕೊಳ್ಳುವ ಅವಕಾಶ ಲಭಿಸುವುದು. ರಾಜಕೀಯ ಪಕ್ಷಗಳು ಮತ್ತು ಹುರಿಯಾಳುಗಳು ಮಾಡುವ ಪ್ರಯತ್ನಗಳಲ್ಲದೆ ಮಹಿಳಾ ಮತದಾರ ಸಂಘ ಮುಂತಾದ ಪಕ್ಷಾತೀತ ಸಂಘಗಳು ಅಮೆರಿಕೆಯ ನಾಗರಿಕರಿಗೆ ಮತದಾನ ಮಾಡಲು ಅವರಿಗಿರುವ ಹಕ್ಕು ಮತ್ತು ಕರ್ತವ್ಯಗಳ ಪರಿಜ್ಞಾನವನ್ನೀಡುತ್ತವೆ.

ಮತದಾರರನ್ನು ವೈಯಕ್ತಿಕವಾಗಿ ಒಲಿಸಿಕೊಳ್ಳುವುದು ಅಮೆರಿಕೆಯ ಚುನಾವಣೆಗಳ ಪ್ರಚಾರದಲ್ಲಿ ಪ್ರಭಾವಶಾಲಿ ವಿಧಾನವಾಗಿದೆ. ಹುರಿಯಾಳು ಹಾಗೂ ಪಕ್ಷದ ಕಾರ್ಯಕರ್ತರು ಸಾಧ್ಯವಿದ್ದಷ್ಟು ಮತದಾರರನ್ನು ಕಂಡು ಮಾತಾಡುವರು. ಮತದಾರರು ತಮ್ಮ ಹೆಸರನ್ನು ಸರಿಯಾಗಿ ನೋಂದಾಯಿಸುವಂತೆ ಮತ್ತು ಚುನಾವಣೆಯ ದಿನ ಮತದಾನದ ಸ್ಥಳಕ್ಕೆ ಬರುವಂತೆ ಮಾಡಲು ಪಕ್ಷದ ಕಾರ್ಯಕರ್ತರು ದುಡಿಯುತ್ತಾರೆ. ರಾಷ್ಟ್ರದ ಸಂಸ್ಥಾಪನೆಯ ಆದಿಕಾಲದಲ್ಲಿ ಹುರಿಯಾಳುಗಳು ಇಷ್ಟು ಪ್ರಬಲವಾಗಿ ಮುಂದೊತ್ತಿ ಪ್ರಚಾರ ಕಾರ್ಯವನ್ನು ನಡೆಸುವ ಪದ್ಧತಿಯಿರಲಿಲ್ಲ.

ಶಬ್ದ ಚಿತ್ರ

(ಆನೇ ಪುಟದಿಂದ)

ಳ ಇದರಿಂದ ಅಮೆರಿಕೆಯು ದೂರ ನಿಲ್ಲುವುದು ಎಂಬ ನಿಶ್ಚಯವನ್ನು ಪಾಕಿಸ್ತಾನಕ್ಕೆ ತಿಳಿಸಿದರು.

೧೯೪೩ರಲ್ಲಿ ಇವರು ರಶ್ಯದಲ್ಲಿ ಅಮೆರಿಕೆಯ ರಾಯಭಾರಿಗಳಾಗಿದ್ದರು. ೧೯೪೬ರಲ್ಲಿ ಸ್ವಲ್ಪ ಸಮಯ ಬ್ರಿಟನ್ನಿನಲ್ಲಿಯೂ ಇದೇ ಹುದ್ದೆಯಲ್ಲಿದ್ದರು. ಅಲ್ಲಿಂದ ಮರಳಿದ ನಂತರ ಅಧ್ಯಕ್ಷ ಟ್ರೂಮನರ ಸರಕಾರದಲ್ಲಿ ವ್ಯಾಪಾರ ಕಾರ್ಯದರ್ಶಿಯಾದರು. ೧೯೫೫ರಿಂದ ೫೮ರ ವರೆಗೆ ನ್ಯೂಯಾರ್ಕಿನ ಗವರ್ನರರಾಗಿದ್ದರು. ಈ ಸಮಯದಲ್ಲಿ ಶಾಲೆ ಮತ್ತು ಕಾಲೇಜುಗಳಿಗೆ ರಾಜ್ಯ ಮತ್ತು ಕೇಂದ್ರಗಳಿಂದ ದೊರೆಯುವ ಸಹಾಯ ಧನದಲ್ಲಿ ಹೆಚ್ಚಳ, ರಾಜ್ಯ ಕರ್ಮಚಾರಿಗಳ ವೇತನದಲ್ಲಿ ಆಧಿಕ್ಯ, ಸಾಮಾಜಿಕ ಹಿತದ ಕಾನೂನುಗಳ ವಿಸ್ತಾರ ಮೊದಲಾದ ಅನೇಕ ಲೋಕೋಪಯೋಗಿ ಕಾರ್ಯಗಳಲ್ಲಿ ತೊಡಗಿದರು.

೬೯ ವರ್ಷ ವಯಸ್ಸಿನ ಶ್ರೀ ಹೆರ್ರಿಮನರು ಕಠೋರ ಪರಿಶ್ರಮಿಗಳು, ಪ್ರಾಮಾಣಿಕ ವ್ಯಕ್ತಿ, ತೀವ್ರ ಬುದ್ಧಿವಂತರು, ಪರಿಶ್ರಮವರಿಯದ ಕರ್ತವ್ಯ ಪರಾಯಣ ಪ್ರಶಾಸಕರೆಂದು ಮಾನ್ಯರಾಗಿದ್ದಾರೆ. ಇವರು ಒಬ್ಬ ಶ್ರೀಮಂತ ರೇಲ್ವೆ ಲೈನ್ ತಯಾರಿಸುವ, ಬಂಡವಳ ವಿನಿಯೋಗದ ಕೆಲಸ ಮಾಡುತ್ತಿದ್ದವನ ಪುತ್ರರು. ಶ್ರೀಮಂತರಾದವನು ಪ್ರಪಂಚದಲ್ಲಿ ಒಂದಲ್ಲ ಒಂದು ರಚನಾತ್ಮಕ ಕಾರ್ಯ ಮಾಡಬೇಕೆನ್ನುವವರಲ್ಲಿ ಶ್ರೀ ಹೆರ್ರಿಮನ್ ಒಬ್ಬರು.

ಯೇಲ್ ವಿಶ್ವವಿದ್ಯಾಲಯದ ಪದವೀಧರರಾದ ಇವರು ವಿಶ್ವವಿದ್ಯಾಲಯದ ಪ್ರವೀಣ ಕ್ರೀಡಾಪಟುಗಳಾಗಿದ್ದರು. ಮುಂದೆ ಪೋಲೋ ಮತ್ತು ಕ್ರಯಿಂಗ್‌ಗಳಲ್ಲಿ ಇವರು ನುರಿತ ಆಟಗಾರರಾದರು. ೨೧ನೆಯ ವಯಸ್ಸಿನಲ್ಲಿಯೇ ಇವರು ರೇಲು ಮಾರ್ಗ ಮತ್ತು ಹಡಗು ನಿರ್ಮಾಣ ಉದ್ಯಮಗಳಲ್ಲಿ ಪ್ರಮುಖರಾದರು. ಮೊದಲು ರಿಪಬ್ಲಿಕನರಾಗಿದ್ದ ಹೆರ್ರಿಮನ್ ೧೯೨೮ರಲ್ಲಿ ಡೆಮೊಕ್ರೆಟಿಕ್ ಪಕ್ಷವನ್ನು ಸೇರಿದರು. ರೂಸ್ವೆಲ್ಟರ ಮೊದಲ ಅಧ್ಯಕ್ಷತಾವಧಿಯಲ್ಲಿ ಮೊತ್ತಮೊದಲಿಗೆ ಸರಕಾರಿ ಸೇವೆಯಲ್ಲಿ ಸೇರ್ಪಡೆಹೊಂದಿದರು. ನೇಶನಲ್ ರಿಕವರಿ ಎಡ್ಮಿನಿಸ್ಟ್ರೇಶನ್‌ನಲ್ಲಿ ಸೇವೆಗೆ ತೊಡಗಿದ ಹೆರ್ರಿಮನ್ ಉನ್ನತ ಪದವಿಗಳಿಗೇರುತ್ತ ಬಂದರು. ಕುದುರೆ ಸವಾರಿಯೆಂದರೆ ಪಂಚಪ್ರಾಣವಾದ ಹೆರ್ರಿಮನ್‌ರಿಗೆ ಮೊದಲ ಹೆಂಡತಿಯಲ್ಲಿ ಇಬ್ಬರು ಪುತ್ರಿಯರಿದ್ದಾರೆ.

ಮಕ್ಕಳ ಮಮತೆಯ Regd. Trade Mark.

'ಬಿಕ್ಕೊ'ರವರ

ಗ್ಲೂಕೋಸ್ ಕೂಡಿದ ಪೆಪ್ಪರ್ ಮಿಠಾಯಿಗಳು ರುಚಿಕರ, ಸೇವನೆಗೆ ಪ್ರಸಿದ್ಧಿಪಟ್ಟಿವೆ.

BICCO

'ಬಿಕ್ಕೊ'ರವರ

ಹಣ್ಣಿನ ಶರಬತ್ತುಗಳು

ಅತಿಥಿಗಳ ಆದರದ ಸತ್ಕಾರಕ್ಕೆ ಅತ್ಯನುಕೂಲ.

ತಯಾರಕರು:

ಭಾರತ್ ಇಂಡಸ್ಟ್ರಿಯಲ್ ಎಂಡ್ ಕ್ಯಾನಿಂಗ್ ಕಂಪೆನಿ ಲಿಮಿಟೆಡ್, ಕಾಪು, ದ. ಕ.

ವಿನೋದ ಹರಟೆ:

ಕಂಗಾಲುಗೊಳಿಸಿದ ಕಳ್ಳತನ!

ಒಂದು ಮೂಲೆಯಲ್ಲಾದ ಭಾರಿ ಕಳ್ಳತನದ ಸುದ್ದಿ ಗಾಳಿಯಲ್ಲಿ ಬಿಟ್ಟ ಕಸ್ತೂರಿಯಂತೆ ಊರೆಲ್ಲ ಹಬ್ಬಿ ಉಲ್ಲೋಲಕಲ್ಲೋಲವನ್ನೇ ಮಾಡಿತು. ಆದರೆ, ಯಾರು ಕಳ್ಳ, ಏನು ಕದ್ದ ಎಂಬತ್ತ ಯಾರೂ ಗಮನ ಹರಿಸದೆ ಹೋದರು.

ಶ್ರೀ ಎಚ್. ಗೋಪಾಲ ಭಟ್ಟ

ಕಳ್ಳ, ಕಳ್ಳ! ಒಬ್ಬನ ಬಾಯಿಂದ ಹೊರಟ ಪದಗಳು ಊರನ್ನೇ ತಲ್ಲಣಿಸಿದುವು. 'ಭಾರೀ ಕಳ್ಳತನವಂತೆ' ಅಂದ ಒಬ್ಬ. 'ಇದುವರೆಗೆ ಅಂಥ ಕಳ್ಳತನ ನಡೆದೇ ಇಲ್ಲವಂತೆ' ಎಂದ ಮತ್ತೊಬ್ಬ. 'ಅತಿ ಭಯಂಕರ ಕಳ್ಳನಂತೆ' ಎಂದ ಮಗದೊಬ್ಬ. ಅಗದೀರ್‌ನಲ್ಲಿ ಭೂಕಂಪವಾದಂತೆಯೇ ನಗರದಲ್ಲೂ ಜನತೆ ಈ ವಿಚಾರ ತಿಳಿದು ಕಂಪಿಸತೊಡಗಿತು. ಗಡಗಡನೆ ನಡುಗತೊಡಗಿದರು, ಕೆಲವರು ಅಳತೊಡಗಿದರು. ಇನ್ನು ಕೆಲವರು ಆಶ್ಚರ್ಯ ಸೂಚಿಸಿದರು. ಅಂತೆಗಳ ಸಂತೆಯೇ ಜರುಗಿತು. ಪ್ರತಿ ಬಾಯಲ್ಲಿಯೂ ಒಂದೇ ಮಂತ್ರ; ಮಂತ್ರಕ್ಕಿಂತಲೂ ಹೆಚ್ಚಾಗಿ ಉಗುಳೇ ಬೀಳಲಾರಂಭಿಸಿತು. ಆದರೂ ನಿಜವಾದ, ಸ್ಪಷ್ಟವಾದ ವಿಚಾರ ಒಬ್ಬನಿಗೂ ತಿಳಿಯಲಿಲ್ಲ. ನಗರದ ವೀರ ಜನತೆ ಕಳ್ಳತನದ ವಿಚಾರ ಕೇಳಿ ಸುಮ್ಮನೆ ಕುಳಿತೀತೆ? ಎಲ್ಲರೂ ಇದ್ದಕ್ಕಿದ್ದಂತೆ ಕಳ್ಳತನ ನಡೆದಲ್ಲಿಗೆ ಓಡತೊಡಗಿದರು—ಓಟದ ಸ್ಪರ್ಧೆಗೆ ಭಾಗವಹಿಸುವವರಂತೆ ಎಲ್ಲರಲ್ಲೂ ಉತ್ತರನ ಹಾಗೂ ಅವನಪ್ಪನ ಪೌರುಷಗಳು ಎದ್ದು ಕಾಣತೊಡಗಿದುವು. ಅವರೆಲ್ಲಾ ಆ ಭಯಂಕರ ಕಳ್ಳನನ್ನು ಹಿಡಿದು, ಗುದ್ದಿ, ಕೊಂದು ನೀರಿನಲ್ಲಿ ಅದ್ದಿ ಬಿಸುಡಬೇಕೆಂಬ ನಿರ್ಧಾರ ಮಾಡಿಕೊಂಡೇ ಓಡತೊಡಗಿದರು.

ಶಾಲಾ ಕಾಲೇಜುಗಳ ವಿದ್ಯಾರ್ಥಿಗಳೆಲ್ಲಾ ತಮ್ಮ ಪುಸ್ತಕಗಳನ್ನೆಸೆದು ಓಡಿದರು. ಉಪಾಧ್ಯಾಯರು ಸೀಮೆ ಸುಣ್ಣ ಸಮೇತರಾಗಿ ಧಾವಿಸಿದರು. ಕಾಲೇಜಿನ ಕ್ಯಾಂಟೀನುಗಳಲ್ಲಿ ಸಿಗರೇಟು ಸೇದುತ್ತಾ ಹರಟೆ ಕೊಚ್ಚುತ್ತಿದ್ದ ಹೀರೋಗಳು ಕಾಫಿ ಯ ಲೋಟಾಗಳನ್ನೆತ್ತಿಕೊಂಡೇ ಓಡಿದರು. ಮೇದಂಗಳು ಮಕ್ಕಳೊಂದಿಗೆ ಮನೆಗಳಿಗೆ ಓಡಿದರು. ವ್ಯಾಪಾರಿಗಳು ಅಂಗಡಿ ಮುಚ್ಚಿ ಬೀಗದ ಕೈ ಗೊಂಚಲಿನೊಂದಿಗೇ ಓಡಿದರು. ಹೋಟೆಲುಗಳಲ್ಲಿದ್ದ ಗಿರಾಕಿಗಳು ಬಿಲ್ಲು ಕೊಡದೇ ಓಡಿದರು. ಮಿತ್ರಸಮಾಜದಲ್ಲಿ ಊಟ ಬಡಿಸುತ್ತಿದ್ದ ಭಟ್ಟರುಗಳೆಲ್ಲಾ ತಮ್ಮ ಕೈಯಲ್ಲಿದ್ದ ಅನ್ನ ಸಾರುಗಳನ್ನೆಸೆದು ಕಳ್ಳತನವಾದ ಸ್ಥಳಕ್ಕೆ ಹಾರಿದ್ದಂತೆಯೇ ಹೊರಟರು. ಮನೆಗಳಲ್ಲಿ ಅಡಿಗೆ ಮಾಡುತ್ತಿದ್ದ ಹೆಂಗಸರೆಲ್ಲಾ ಹೆದರಿ ಉಪ್ಪಿನ ಬದಲು ಸಕ್ಕರೆಯನ್ನು ಹಾಕಿ ಬಾಗಿಲನ್ನು ಭದ್ರಪಡಿಸಿ ಕುಳಿತರು. ಮೆಡಿಕಲ್ ಕಾಲೇಜಿನಲ್ಲಿ ಹೆಣ ಕೊಯ್ಯುತ್ತಿದ್ದ ವಿದ್ಯಾರ್ಥಿಗಳು ಚಾಕು ಸಮೇತರಾಗಿ ಧಾವಿಸಿದರು. ಆಸ್ಪತ್ರೆಗಳಲ್ಲಿದ್ದ ರೋಗಿಗಳೆಲ್ಲಾ ಜೀವಂತರಾಗಿ ಕಿವಿ ನಿಮಿರಿಸಿಕೊಂಡು ತೆರಳಿದರು. ಡಾಕ್ಟರ್, ನರ್ಸುಗಳು ಸ್ಟೆತೋಸ್ಕೋಪ್, ಬೇಸಿನ್‌ಗಳೊಂದಿಗೇ ಹೊರಟರು. ಮಾರ್ಕೆಟ್ಟಿನಲ್ಲಿ ಚೌಕಾಶಿ ಮಾಡುತ್ತಿದ್ದವರೆಲ್ಲಾ ವ್ಯಾಪಾರಿಗಳು ಕೇಳಿದಷ್ಟು ಹಣ ಕೊಟ್ಟು ವಿಚಾರ ತಿಳಿಯಲು ಹೊರಟರು. ಮುದುಕರೆಲ್ಲಾ ಹುಡುಗರಾಗಿ ಓಡತೊಡಗಿದರು. ದೇವಸ್ಥಾನಗಳಿಂದ ಪೂಜಾರಿಗಳೂ, ಭಕ್ತರೂ ದೇವರನ್ನು ಬಿಟ್ಟೇ ಓಡಿದರು. ನಲ್ಲಿಯ ಬಳಿ ನೀರಿಗಾಗಿ ಜಗಳ ಕಾಯುತ್ತಿದ್ದ ನಲ್ಲಿಯವರೆಲ್ಲಾ ಬಿಂದಿಗೆ ಸಮೇತರಾಗಿ ಗಂಡಸರ ಮಧ್ಯೆ ತೂರಿ ನಡೆದರು. ಸಾಲಿಗರು ಸಾಲಗಾರರ ಮನೆಯಿಂದ ಅವರನ್ನು ಹೆಚ್ಚು ಪೀಡಿಸದೇ ಓಡಿ ಹೋದರು.

ಈ ಗಲಾಟೆಕೇಳಿ ಆಗಸರು ಬಟ್ಟೆ ಬಿಸುಟೇ ಹೋದರು. ನಾಪಿತರು ಅರ್ಧ ಕ್ಷೌರಮಾಡಿ ಓಡಿದರು. ಅಳತೆ ತೆಗೆದುಕೊಳ್ಳುತ್ತಿದ್ದ ದರ್ಜಿಗಳು ಟೇಪು ಸಮೇತರಾಗಿ ಓಡಿದರು. ಆತ್ಮಹತ್ಯೆಗೆಂದು ಹೊರಟಿದ್ದಾತ ಹಗ್ಗ ಸಮೇತನಾಗಿ ಕಳ್ಳತನ ನಡೆದಲ್ಲಿಗೆ ಓಡಿಹೋಗಬೇಕೇ?

ಗುಡ್ಡವನ್ನು ಅಳೆಯುತ್ತಿದ್ದ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳು ಸರಪಳಿಯನ್ನು ಹಿಡಿದುಕೊಂಡೇ ಕಳ್ಳನನ್ನು ಕಟ್ಟಿಹಾಕಲು ಹೊರಟರಲ್ಲಾ! ಈ ಮಧ್ಯೆ ಬಿಳಿ ಹಾಳೆಗೆ ಮಸಿ ಹಾಕುತ್ತಿದ್ದ ಸಾಹಿತಿಯೂ ಲೇಖನಿ ಸಮೇತನಾಗಿ ಓಡಿ ಹೋದನಲ್ಲಾ!

ಅಬ್ಬಾ, ಏನು ಜನ! ಏನು ಗಲಾಟೆ! ನಗರದ ಸಣ್ಣ ಪುಟ್ಟ ದೊಡ್ಡ ಜನರೆಲ್ಲಾ ಒಂದೆಡೆ ಸೇರಿದ್ದಾರೆ. ನಿದ್ರಿಸುತ್ತಿದ್ದ ಪೋಲೀಸರೆಲ್ಲಾ ಎಚ್ಚೆತ್ತು ಕಳ್ಳತನವಾದಲ್ಲಿಗೆ ಹೊರಡಲು ಸನ್ನಾಹ ಮಾಡುತ್ತಿದ್ದಾರೆ- ಆದರೆ ಇನ್ನೂ ಹೊರಟಿಲ್ಲ. ಕಳ್ಳತನವಾದ ಸ್ಥಳದಲ್ಲಿ ನೆರೆದಿದ್ದ ಜನಕ್ಕೆ ಕಳ್ಳಯಾರು? ಏನು ಕದ್ದ? ಎಂಬ ವಿಚಾರಗಳಾದರೂ ತಿಳಿಯಬೇಕೇ! ಅಂತೂ ಎಲ್ಲರೂ ನೀಳುಸಿರು ಬಿಡುತ್ತಾ ನಿಂತಿದ್ದರು. ಬಗೆ ಬಗೆಯ, ತರತರದ ಜನಗಳೆಲ್ಲಾ ಅಲ್ಲಿ ನಿಂತಿದ್ದರು. ಹೆಣ್ಣುಗಂಡುಗಳೆಲ್ಲಾ ಸೇರಿದ್ದರು. ಗುಂಪಿನ ಮಧ್ಯೆ ಒಬ್ಬ ಹುಡುಗನ ಮುಖದಲ್ಲಿ ರಕ್ತ ಸುರಿಯುತ್ತಿತ್ತು, ಬಾಯಿಯಿಂದ ಹಲ್ಲು ಉದುರಿತ್ತು, ತಲೆಯ ಕೂದಲು ಕೆದರಿತ್ತು, ಹಾಕಿದ್ದ ಬಟ್ಟೆ ಹರಿದಿತ್ತು, ಮೈಯೆಲ್ಲಾ ಜಿವೆತಿತ್ತು. ನೆರೆದಿದ್ದ ನಾಗರಿಕ ಜನತೆ ಆತನೇ ಕಳ್ಳನೆಂಬ ನಿರ್ಧಾರಕ್ಕೆ ಆಗಲೇ ಬಂದಿತ್ತು. ಆ ಕಳ್ಳನನ್ನು ಹಿಡಿದಿದ್ದ ದೊಡ್ಡ ಮನುಷ್ಯನೂ ಅಲ್ಲೇ ಇದ್ದ. ಎಲ್ಲರಿಗೂ ಆತನನ್ನು ಹೊಗಳಲು ಬಾಯಿ ಸಾಲದು. ಹುಡುಗನನ್ನು ತೆಗಳಲು, ಬೈಯಲು ನಾಲಿಗೆಯ ಉದ್ದ ಸಾಲದು, ಅವನಿಗೆ ಹೊಡೆಯಲು ಕೈಯ ಶಕ್ತಿ ಸಾಲದು. ಅಂತೂ ಆ ಹುಡುಗನನ್ನು ಜೀವನ್ಮರಣಗಳ ಮಧ್ಯೆ ಉಯ್ಯಾಲೆಯಾಡಿಸಿದರು ಇನ್ನೂ ಹೊಡೆಯುತ್ತಲೇ ಇದ್ದರು. ಇದ್ದಕ್ಕಿದ್ದಂತೆಯೇ ಎಲ್ಲರ ದೃಷ್ಟಿಯೂ ಬೇರೆಡೆಗೆ ಹೊರಳಿತು.



ದಿ| ಗೋವಿಂದ ವಲ್ಲಭ ಪಂತರ ಅಂತಿಮ ಸಂಸ್ಕಾರದ ವೇಳೆ ಭಾರತೀಯರು ಅವರಿಗೆ ಗೌರವಾರ್ಪಣೆ ಮಾಡಿದರು.

ಯಾರು? ಪೋಲೀಸರು ಬಂದರೇ? ಅಲ್ಲ, ಹಣ್ಣು ಹಣ್ಣು ಮುದುಕರೊಬ್ಬರು ಓಡಿ ಓಡಿ ಬರುತ್ತಿದ್ದರು. ಮಂಜಿನಂತೆ ಬಿಳುಪಾದ ಅವರ ತಲೆಗೂದಲು ಗಾಳಿಗೆ ಹಾರಾಡುತಿತ್ತು. ಕೈಯಲ್ಲಿದ್ದ ದೊಣ್ಣೆ ಹಿಂದೆಮುಂದೆ ರಭಸದಿಂದ ಬೀಸುತಿತ್ತು. ಓಡಿ ಬಂದರು ಓಡೋಡಿ ಬಂದರು. ಮಿಲ್ಖಾಸಿಂಗ್‌ಗಿಂತಲೂ ವೇಗವಾಗಿ ಓಡಿ ಬಂದರು. ರಾಕೆಟ್ಟಿನ ವೇಗದಲ್ಲೇ ಬಂದರು ಪಾಪ! ಆಯಾಸದಿಂದ ಬಳಲಿ ಬೆಂಡಾಗಿದ್ದರು. ಮೈಯಲ್ಲಿ ಬೆವರಿಳಿದು ನೀರಿನಿಂದ ಎದ್ದು ಬಂದವರಂತೆಯೇ ಕಂಡು ಬಂದರು. ತೊಟ್ಟ ಉಡುಪು ಮೈಗೆ ಬಿಗಿಯಾಗಿ ಅಂಟಿತ್ತು. ಎದೆ ಜೋರಾಗಿ ಬಡಿಯುತಿತ್ತು. ಓಡಿ ಬಂದವರು ಒಂದು ನಿಮಿಷ—ಒಂದೇ ಒಂದು ನಿಮಿಷ ವಿಶ್ರಾಂತಿ ಪಡೆದರು.... ವಿಚಾರ ತಿಳಿಯಬೇಕೆನ್ನುವ ಕುತೂಹಲ ಅವರಲ್ಲಿ ಕೆರಳಿ ನಿಂತಿತ್ತು. ಹಲ್ಲಿಲ್ಲದ ಬಾಯಲ್ಲಿ "ಏನಪ್ಪಾ ಸಮಾಚಾರ?" ಎಂದು ಕೇಳಿದರು ನೆರೆದಿದ್ದ ಮಹಾ ಜನತೆಯಲ್ಲಿ.

"ಕಳ್ಳ ಸ್ವಾಮಿ, ಕಳ್ಳ."—ಗುಂಪಿನಿಂದ ಉತ್ತರ ಬಂತು.

"ಕಳ್ಳ? ಏನಪ್ಪಾ ಕದ್ದ?"

ಏನು ಕದ್ದ? ಒಬ್ಬರಿಗೂ ತಿಳಿಯದು. ಮುಖ ಮುಖ ನೋಡಿಕೊಂಡರು—'ಕಳ್ಳತನ' ಮಾಡಿದ್ದ ಹುಡುಗನನ್ನು ನೋಡಿ ಆ ವೃದ್ಧರಿಗೆ ಸಂಕಟವಾಗದಿರದು—ಗುಂಪಿನ ಮೌನವನ್ನು ಭೇದಿಸಿ ಜೋರಾಗಿ ಕೇಳಿದರು. "ಏನು ಕದ್ದ?"

ಕಳ್ಳನನ್ನು ಹಿಡಿದ ಶೂರ ಉತ್ತರಿಸಿದ—"ನನ್ನ ಸಿಗರೇಟು ಪ್ಯಾಕನ್ನು ಕದ್ದ".

"ಅಬ್ಬಾ ಎಂಥಾ ಭಯಂಕರ ಕಳ್ಳತನ ಇದು!" ಮುದುಕ ವ್ಯಂಗ್ಯವಾಗಿ ನಕ್ಕು ಹೇಳಿದರು—ಹುಡುಗನ ತಲೆಯನ್ನು ಸವರಿಸಿದರು. ಅವರ ಕಣ್ಣೀರು ಹುಡುಗನ ಮುಖವನ್ನು ತೊಳೆಯಿತು. ನಾಗರಿಕ ಜನತೆ ಅಧೋವದನರಾಗಿ ನಿಂತರು—ಮುದುಕನ ಮುಂದೆ.

ಪಾಪ! ಆ ಭಯಂಕರ ಕಳ್ಳ ಆಸ್ಪತ್ರೆ ಸೇರಿದ.

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4%
5 ,, 12	,,	4¼%
13 ,, 24	,,	4½%

ರೂ. 5,000/- ಮತ್ತು ಮೇಲಣ ಡಿಪೋಸಿಟಿಗೆ ¼% ಜಾಸ್ತಿ ಕೊಡಲಾಗುವುದು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ	2½%
ಚಾಲ್ತಿ ಲೇವಣಾತಿಗೆ	½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್,
ಮೂಲ್ಕಿ ಬೇಂಕ್ ಲಿ. ಮುಲ್ಕಿ.

Tel: 'BLUEYAGAR'. — ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ — Phone. 374

ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು [ಮಾಲಿಕ: ಕೆ ಕೆ ಆರ್ ಶೇಟ್

ರವೀಂದ್ರ ವಾಣಿ:

(೪ನೇ ಪುಟದಿಂದ)

ಬೇರೆ ಪರಿಸ್ಥಿತಿಗಳಲ್ಲಿ ಸಿಲುಕಿದ ಮಾನವನು ತನ್ನ ವಿಶೇಷವಾದ ಪರಿಸ್ಥಿತಿಗಳೊಡನೆ, ಮುಂದುವರಿದನು. ಈ ಭಿನ್ನ ಪರಿಸ್ಥಿತಿಗಳು ಒಂದಕ್ಕೊಂದು ವಿರೋಧವಾಗಿರದೆ ಅನುಕೂಲವಾಗಬೇಕು. ಆಗ ಮಾನವತೆಯು ಬೆಳವಣಿಗೆಯಾಗಬಹುದು. ನಾನು ಈಗ ಹೇಳುತ್ತಿರುವುದರ ಒಟ್ಟು ಅಭಿಪ್ರಾಯವೇನೆಂದರೆ—'ಭಾರತಕ್ಕೆ ಪ್ರಾಚೀನ ಕಾಲದ ! ತನ್ನ ಪ್ರಗತಿಯ ಕಾಲದಲ್ಲಿ ಯಾವ ಯಾವ ಉಪಕರಣಗಳು ಲಭಿಸಿದ್ದವೋ ಯಾವ ವಿಶೇಷ ಪರಿಸ್ಥಿತಿಗಳು ಬಂದೊದಗಿದ್ದವೋ, ಅವುಗಳನ್ನೆಲ್ಲ ಭಾರತವು ಚೆನ್ನಾಗಿ ಉಪಯೋಗಿಸಿಕೊಂಡಿರುವುದು. ತನಗೊದಗಿದ ಪರಿಸ್ಥಿತಿ ಮತ್ತು ಅವಕಾಶಗಳನ್ನು ಆಳವಾಗಿ ವಿಮರ್ಶಿಸಿದ ಭಾರತವು ಬಹು ಕಷ್ಟವನ್ನು ಅನುಭವಿಸಿತು; ತನ್ನ ಅಸ್ತಿತ್ವವನ್ನು ಅರ್ಥಮಾಡಿಕೊಳ್ಳಲು ಬಹಳ ಪ್ರಯತ್ನ ನಡೆಸಿತು. ಇಷ್ಟು ಮನನಮಾಡಿದ ಬಳಿಕ ಯಾವ ಸತ್ಫಲ ದೊರೆಯಿತೋ? ಯಾವ ಸಿದ್ಧಾಂತ ಸಿದ್ಧವಾಯಿತೋ? ಅದು ಮಾನವ ಸಮಾಜಕ್ಕೆ ಎಂದಿಗೂ ಅನುಪಯೋಗಿಯಾಗಿಲ್ಲ. ಹೀಗೆ ಭಾರತವು ತನ್ನ ಪರಿಸ್ಥಿತಿಗಳನ್ನು ಚೆನ್ನಾಗಿ ಅರ್ಥಮಾಡಿಕೊಂಡು ಮುಂದೆ ಸಾಗಿತು.

ಮಾನವ ಸಮಾಜದ ವಿಕಾಸವು ಭಿನ್ನ ಭಿನ್ನ ಪರಿಸ್ಥಿತಿಗಳಲ್ಲಿ ಆ ಪರಿಸ್ಥಿತಿಗಳಿಗೆ ತಕ್ಕಂತೆ ಆಗಿರುವುದು. ಇತಿಹಾಸದಿಂದ ತಿಳಿದುಬರುವುದು. 'ಯಾವ ತತ್ವಗಳ ಸಾಮಂಜಸ್ಯದಿಂದ ಮಾನವನ ಜೀವನವು ವಿಷಮವಾಗುವುದೋ, ಆ ವಿವಿಧ ತತ್ವಗಳೂ ಮಾನವನ ಪೂರ್ಣವಿಕಾಸದದಾರಿಯಲ್ಲಿ ಅತ್ಯಾವಶ್ಯಕವಾಗಿರುತ್ತವೆ ಬತ್ತ, ಗೋದಿ, ಜೋಳ, ಹಣ್ಣು, ತರಕಾರಿ ಮೊದಲಾದ ಬೇರೆ ಬೇರೆ ವಸ್ತುಗಳು—ಒಟ್ಟಾಗಿ, ಅಥವಾ ಬೇರೆ ಬೇರೆಯಾಗಿ ಹೇಗೆ ಊಟ ಸಿದ್ಧವಾಗುವುದೋ ಹಾಗೆಯೇ ಈ ತತ್ವಗಳೂ ಮಾನವನ ಪೂರ್ಣ ವಿಕಾಸಕ್ಕೆ ಅಗತ್ಯವಾಗಿ ಬೇಕಾಗಿವೆ.

ಸಂಸ್ಕೃತಿಯೆಂದರೆ, ಅದೊಂದು ಪಡಿಯಚ್ಚಿನಂತಿರುವುದು. ಅದನ್ನು ಪ್ರತಿಯೊಂದು ಮತದವರೂ ಕೂಡಾ, ತಂತಮ್ಮ ಸರ್ವ ಶ್ರೇಷ್ಠವಾದ ಆದರ್ಶದಿಂದ ನಿರ್ಮಾಣಮಾಡುತ್ತಾರೆ.

ಅದರಲ್ಲಿ ಅವರವರ ಸ್ತ್ರೀಪುರುಷರೆಲ್ಲರ ಜೀವನದ ರೂಪರೇಖೆ ಕಂಡುಬರುವುದು. ಆಯಾ ಜಾತಿಗಳ ಸಾಮಾಜಿಕ ಸಮಸ್ಯೆಗಳು, ನಿಯಾಮಕ ಸಭೆಗಳು, ಶುಭ ಅಶುಭ ಇತ್ಯಾದಿ ನಿರ್ಧಾರ, ಮತ್ತು ಪ್ರತ್ಯಕ್ಷ ಅಥವಾ ಪರೋಕ್ಷವಾದ ಶಿಕ್ಷಣ, ಇವೆಲ್ಲ ಆಯಾ ಸಂಸ್ಕೃತಿಯ ಮೂಲವಾದ ಆದರ್ಶದ ಜ್ಯೋತಿಯಂತೆ, ನಡೆಯುತ್ತವೆ. ಪಾಶ್ಚಾತ್ಯರ ಆಧುನಿಕ ಸಂಸ್ಕೃತಿಯು, ಸಂಘಟಿತ ಪ್ರಯತ್ನಗಳ ಮೂಲಕ, ಮನುಷ್ಯನ ಶಾರೀರಿಕ ಬೌದ್ಧಿಕ ಅಥವಾ ನೈತಿಕ ಮಟ್ಟವನ್ನು ಉತ್ತಮಗೊಳಿಸಲು, ಸಾಹಸ ಪಡುತ್ತಾರೆ. ಆ ರಾಷ್ಟ್ರದ, ವಿಶಾಲವಾದ ಸಂಘಟಿತ ಶಕ್ತಿಯು ಅವರಿಗೆ ತಮ್ಮ ಪರಿಸ್ಥಿತಿಗಳ ಮೇಲೆ, ವಿಜಯ ಸಂಪಾದಿಸಲು, ಸಮರ್ಥರನ್ನಾಗಿ ಮಾಡುತ್ತದೆ. ಅವರ ಉದ್ಯೋಗ; ಧಂಧೆಗಳೆಲ್ಲವೂ ಪ್ರಕೃತಿಯೊಡನೆ, ವೈರ ಸಾಧಿಸುವಂತೆ ಸೆಣಸಾಡುವುದು, ಮತ್ತು ನೆರೆಯ ರಾಷ್ಟ್ರದವರನ್ನು ಸೋಲಿಸುವುದು, ಈ ಉದ್ದೇಶದ ಸಾಧನೆಗಾಗಿಯೇ ನಡೆಯುತ್ತವೆ. ಅವರ ಉಪಕರಣ, ಯಂತ್ರಗಳು—ಮತ್ತು ಸಂಘಟನೆ, ಇವುಗಳೆಲ್ಲ ಈ ಮೇಲಿನ ಉದ್ದೇಶ ಪೂರ್ತಿಗಾಗಿಯೇ ಪ್ರತಿ ದಿನವೂ ಹೆಚ್ಚುತ್ತ ಹೋಗಿ ಸಶಕ್ತವಾಗುತ್ತಿವೆ. ಅವರ ಈ ಸಂಘಟನೆ, ಹಾಗೂ ಸಂಗ್ರಹದ ಗತಿಯು, ತೀವ್ರ ವೇಗದಿಂದ ಹೆಚ್ಚುತ್ತಿದೆ. ಈ ಸಂಘಟನೆ ಮತ್ತು ಸಂಗ್ರಹದ ಸಫಲತೆಯು, ನಿಜವಾಗಿಯೂ, ಮನುಷ್ಯನ ಸಂಘ ಶಕ್ತಿಯ ಆಶ್ಚರ್ಯಕರವಾದ ಪ್ರದರ್ಶನವಾಗಿದೆ. ಪ್ರಕೃತಿಯ ಮೇಲೆ ಮನುಷ್ಯನ ಪ್ರಭುತ್ವವನ್ನು ಸ್ಥಾಪಿಸಿ, ಮತ್ತು ಈ ಪಥದಲ್ಲಿ ಬರುವ ಎಲ್ಲಾ ಎಡರುಗಳನ್ನೂ ತೊಡೆದು ಹಾಕುವ ಯೋಗ್ಯತೆಯನ್ನು ಪ್ರದರ್ಶಿಸುತ್ತ ಪಾಶ್ಚಾತ್ಯರ ಸಂಸ್ಕೃತಿಯು ಈ ದಿಶೆಯಲ್ಲಿ ಸಫಲವಾಗುತ್ತ ಸಾಗುತ್ತಿದೆ.

ಪ್ರಾಚೀನ ಭಾರತದ ಸಭ್ಯತೆಯ ಆದರ್ಶವು ಇದಕ್ಕೆ ಭಿನ್ನವಾಗಿತ್ತು. ಉಚ್ಚ ಮಟ್ಟದ ಸಂಸ್ಕೃತಿಯ ಸ್ಥಾಪನೆಗಾಗಿ ಭಾರತವು ಸಾಧನೆಮಾಡಿತು. ಭಾರತದ ಉದ್ದೇಶವು ಶಕ್ತಿಯನ್ನು ವರ್ಧಿಸುವುದಾಗಿರಲಿಲ್ಲ. ತನ್ನ ಸಂಪತ್ತು ಹಾಗೂ ಜನಶಕ್ತಿಯನ್ನು ಸಂಘಟಿಸಿ ಪರರಾಷ್ಟ್ರಗಳ ಮೇಲೆ ಆಕ್ರಮಣ ಮಾಡುವ ಮನಸ್ಸು ಭಾರತಕ್ಕೆ ಇರಲಿಲ್ಲ. ಸಂಪತ್ತನ್ನು ಹೆಚ್ಚಿಸುವುದಕ್ಕಾಗಿ, ಸಂಘಟನೆಯ ಮೂಲಕ ಯಾವ ಉದ್ಯೋಗವನ್ನೂ ಭಾರತವು ಕೈಗೊಳ್ಳಲಿಲ್ಲ. ರಾಜ್ಯ ಸಂಪಾದನೆಯ ಆಸೆಯಿಂದ ಸೈನ್ಯಬಲ ಹೆಚ್ಚಿಸುವ ಮಹತ್ವಾಕಾಂಕ್ಷೆ ಕೂಡ ಭಾರತದ ಮನಸ್ಸನ್ನು ಚಂಚಲಗೊಳಿಸಲಿಲ್ಲ. ಭಾರತದ ಆದರ್ಶವು ಇವೆಲ್ಲವುಗಳಿಗಿಂತ ಬೇರೆಯೇ ಆಗಿತ್ತು. ಇಂತಹ ಆದರ್ಶದ ಸ್ಥಾಪನೆಗಾಗಿ ಭಾರತದ ಪ್ರತಿಭಾವಂತ ವಿಬುಧ ಶ್ರೇಷ್ಠರು. ಏಕಾಂತ ಸ್ಥಳವಾದ ಅರಣ್ಯವನ್ನೇ ಆಶ್ರಯಿಸಿದರು. ಈ ಅರಣ್ಯದಲ್ಲಿ ಪ್ರಕೃತಿಯ ರಹಸ್ಯಗಳನ್ನು ಸಂಶೋಧಿಸಿ, ಮಾನವನ ಕಲ್ಯಾಣಕ್ಕಾಗಿ ಅವರು ಸಂಪಾದಿಸಿದ ನಿಧಿಯಾಗಿತ್ತು. ಇದಕ್ಕಾಗಿ ಭಾರತವು ಮಾಡಿದ ತ್ಯಾಗವು ಅಪೂರ್ವವಾಗಿದೆ, ಈ ತ್ಯಾಗವು ಭಾರತಕ್ಕೆ ಹೆಮ್ಮೆ ಪಡುವಂತಹುದಾಗಿದೆ. ಹೀಗೆ ಗಳಿಸಿದ ಈ ಆಧ್ಯಾತ್ಮಿಕ ದೃಷ್ಟಿಯ ಸಂಪಾದನೆಯಿಂದ, ಮಾನವನಿಗೆ ದೊರೆತ ಸಂತೋಷ ಯಾವುದಿದೆಯೋ? ಅದು ಅನುಪಮವಾಗಿಯೂ ಅನಂತವಾಗಿಯೂ ಇದೆ.

ಭಾರತದಲ್ಲಿ ಮಹಾತ್ಮರು ಮೇಧಾವಿಗಳು ಸಾಹಸಿಗಳೇ ಮೊದಲಾದ ಅನೇಕ ವ್ಯಕ್ತಿಗಳೂ ಆದಿಯಿಂದಲೂ ಇದ್ದರು. ರಾಜನೀತಿಜ್ಞರು, ಮಹಾ ರಾಜರು ಮತ್ತು ಸಾಮ್ರಾಟರೂ ಇದ್ದರು. ಆದರೆ ಇವರೊಳಗೆ—'ಭಾರತೀಯತೆಯ ಪ್ರತಿನಿಧಿ' ಯೆಂಬ ಸಮ್ಮಾನ ಯಾರಿಗೆ ದೊರೆತಿದೆ? ಎಂಬ ಪ್ರಶ್ನೆಗೆ ಆ ಸನ್ಮಾನ ಋಷಿಗಳಿಗೆ ದೊರೆತಿದೆ! ಎಂದು ಉತ್ತರ ಬರುವುದು, ಋಷಿಗಳೇ ಭಾರತೀಯತೆಯ ಪ್ರತಿನಿಧಿಗಳಾಗಿದ್ದರು ಇವರು ಜ್ಞಾನದ ಮೂಲಕ ಆತ್ಮಾನುಭೂತಿಯನ್ನು ಪಡೆದ ತತ್ವದರ್ಶಿಗಳಾಗಿದ್ದರು. ಅಂದರೆ, ಪರಮಾತ್ಮನಲ್ಲಿ ಸಮಭಾವನೆಯನ್ನು ಕಂಡು, ತಮ್ಮ ಅಂತಃಪ್ರದ "ಸ್ವ ದಿಂದ ಅವರು ಪೂರ್ಣ ದೃಢತೆಯನ್ನು ಸ್ಥಾಪಿಸಿ, ಕೊಂಡಿದ್ದರು.

> ಸಂಪ್ರಾಪ್ಯೈನಂ ಋಷಯೋ ಜ್ಞಾನ
> ತೃಪ್ತಾಃ, ಕೃತಾತ್ಮಾನೋ ವೀತರಾಗಾಃ,
> ತೇ ಸರ್ವಗಂ ಸರ್ವತಃ ಪ್ರಾಪ್ಯ ಧೀರಾಃ
> ಸರ್ವಮೇವಾ ವಿಶಂತಿ !

ಹೃದಯದಲ್ಲಿಯೇ ಆತ್ಮದ ಸ್ಥಿತಿಯನ್ನು ಕಂಡು ಅನುಭವಿಸಿ ಅರ್ಥ ಮಾಡಿಕೊಳ್ಳುತ್ತಿದ್ದ ಅವರು ಬಾಹ್ಯ ಜಗತ್ತಿನ ಆಸೆ ಆಕಾಂಕ್ಷೆಗಳಿಂದ ವಿರಕ್ತರಾಗಿರುತ್ತಿದ್ದರು. ಅವರ ಆತ್ಮಾನುಭೂತಿಯಿಂದಲೇ ಅವರಿಗೆ ಪೂರ್ಣ ಶಾಂತಿ ಲಭಿಸುತ್ತಿತ್ತು. ಆ ಋಷಿಗಳು ಬ್ರಹ್ಮಜ್ಞಾನವನ್ನು ಹೊಂದಿ ಸ್ಥಿರ ಶಾಂತಿಯನ್ನು ಅನುಭವಿಸಿದವರಾಗಿದ್ದರು. ಅವರ ಮನಸ್ಸು ವಿಶ್ವಾತ್ಮದೊಡನೆ ಸೇರಿ ವಿಶ್ವದ ಹೃದಯದಲ್ಲಿ ಪ್ರವೇಶಗೊಂಡಿದುದಾಗಿತ್ತು.

ಮನುಷ್ಯನು, ತನ್ನ ಕರ್ಮಗಳಷ್ಟೇ ದೊಡ್ಡವನಾಗಿರದೆ, ಅದಕ್ಕಿಂತಲೂ ದೊಡ್ಡವನಾಗಿದ್ದಾನೆ ಆತನ ಪ್ರವೃತ್ತಿ ನಿವೃತ್ತಿ ವಿನಾಶ ಮೊದಲಾದ ಎಲ್ಲಾ ಕಾರ್ಯಗಳೂ, ಆತನ ಒಳಗೇ ಅಡಕವಾಗಿವೆ. ಈ ಕಾರಣದಿಂದ ಮನುಷ್ಯನು ವ್ಯಕ್ತಿತ್ವಕ್ಕಿಂತ ದೊಡ್ಡವನಾಗಿಲ್ಲ. ಮನುಷ್ಯನು ತನ್ನ ಆತ್ಮವನ್ನು ಕ್ಷುದ್ರವಾದ ಆಚಾರ ವಿಚಾರಗಳ ಆವರಣಕ್ಕೆ ಒಳಪಡಿಸಿದಾಗ ಮತ್ತು ಸಂಸಾರಿಕ ಮೋಹವು ಆತನ ದೃಷ್ಟಿಯನ್ನು ಮಂದಗೊಳಿಸಿದಾಗ ಆತನ ವ್ಯಾಪಕವಾದ ಪವಿತ್ರವಾದ ಆತ್ಮವು ತನ್ನ ಶ್ರೇಷ್ಠತೆಯನ್ನು ಕಳೆದುಕೊಳ್ಳುತ್ತದೆ. ಮನುಷ್ಯನ ಆತ್ಮವು ಸರ್ವಸ್ವತಂತ್ರವಾಗಿದೆ. ಅದು ಯಾವುದೇ ಶಕ್ತಿ ವ್ಯಕ್ತಿಗಳ ಅಧೀನಕ್ಕೆ ಒಳಪಟ್ಟಿರುವುದಿಲ್ಲ. ಆದರೆ, ಆತ್ಮವು ಸದಾ ಪ್ರೇಮಿಯಾಗಿರುವುದು. ಪ್ರೇಮವೇ ಅದರ ಮುಖ್ಯ ತತ್ವವಾಗಿದೆ. ಆತ್ಮದ ಪರಿಪೂರ್ಣತೆಯು, ಪ್ರೇಮದಲ್ಲೇ ಇರುವುದಾಗಿದೆ—"ಪೂರ್ಣ ಮಿಲನ"ವೆಂದರೆ ಇದೇ ಅರ್ಥವಾಗಿರುವುದು. ಮಿಲನ ಅಥವಾ ವಿಲಯ ಇವೆರಡು ಪ್ರಕ್ರಿಯೆಗಳ ಅಂತ್ಯದಲ್ಲಿ ಆತ್ಮವು ವಿಶ್ವದ ಆತ್ಮನಲ್ಲಿ ವಿಲೀನವಾಗುತ್ತದೆ. ಆತ್ಮದ ಜೀವನವೆಂದರೆ ಇದೇ ಆಗಿರುವುದು.

ಮನುಷ್ಯನು ಪರರನ್ನು ಪತನಗೊಳಿಸಿ, ಅಪಮಾನಗೊಳಿಸಿ ತಾನು ಮೇಲೇರಬೇಕೆಂದು ಬಗೆದು, ತನ್ನ ಉನ್ನತಿಯ ದರ್ಪವನ್ನು ತೋರಿಸಲು ಸುತ್ತಮುತ್ತಿನ ವ್ಯಕ್ತಿಗಳನ್ನು ಕಡೆಗಣಿಸಿ ಶತ್ರುತ್ವವನ್ನು ತೋರಿಸುವ ಪ್ರವೃತ್ತಿಯು ಆತನ ಪ್ರಕೃತಿಗೆ ವಿರೋಧವಾಗುತ್ತದೆ. ಈ ಕಾರಣದಿಂದ ಉಪನಿಷತ್ತುಗಳಲ್ಲಿ ಮನುಷ್ಯ ಜೀವನದ ಅಂತಿಮ ಸಿದ್ಧಿಯನ್ನು ಪಡೆದ ಮಹಾತ್ಮರನ್ನು ಮಾತ್ರ "ಪ್ರಶಾಂತಾಃ ಯುಕ್ತಮನಾಃ" ಎಂಬ ಶಬ್ದಗಳಿಂದ ಸಂಬೋಧಿಸಿದ್ದಾರೆ. (ಸಶೇಷ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ಮನೆಯಿಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: **ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್**
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಪಥ್ಯದ ಹರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ
0=25 N P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು.

ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ



ಕಥಾವಿಹಾರ

(೨ನೇ ಪುಟದಿಂದ)

ಅಬ್ಬಾ ನಿನ್ನ ಸೊಕ್ಕೇ! ಇದೆನ್ನೆಲ್ಲಾ ಹಾರಿಸಿ, ನನ್ನ ಕಾಲು ಬುಡಕ್ಕೆ ಬೀಳುವಂತೆ ಮಾಡದಿದ್ದರೆ, ನನ್ನ ಹೆಸರು ವೀರಣ್ಣನಲ್ಲ. ಹೆಂಗಸರು ಹೇಳಿದಾಗೆ ಕೇಳಬೇಕು. ಹೆಂಗಸೊಬ್ಬಳೇ ಮನೆಮಾಡುವುದು ನೋಡಿಕೊಳ್ಳುತ್ತೇನೆ, ಹುಂ...ಒಬ್ಬಳೇ ಬಂತ್ತಾಳಂತೆ. ವೀರಣ್ಣ ಫೋಟೊ ತೆಗೆದೊಗೆದ ಚಿಂದಿ ವಸ್ತ್ರದ ರಾಶಿಯ ಮೇಲೆ, ಕವುಚಿ ಬಿತ್ತದು. ಮೈಮನವೆಲ್ಲವೂ ಬಿಸಿ ರಕ್ತದಿಂದ ಕುದಿಯುತಿತ್ತು. ತನ್ನನ್ನು ನರಕಕ್ಕೆ ದೂಡಿ ಹೋದಳಲ್ಲಾ ಎಂದು ಮತ್ತು ಮತ್ತು ಮನ ನುಡಿಯುತಿತ್ತು. ಅಲ್ಲಿ ನಿಲ್ಲಲಾರದೆ ವೀರಣ್ಣ ಹೊರಟು ಕೆಳಗೆ ಬಂದ, ಒಂದೊಂದೇ ಮೆಟ್ಟಲನ್ನಿಳಿದ.

ಅಂದಿನಿಂದ ಕೆಲವು ದಿನಗಳ ತನಕ ಪ್ರತೀಕಾರವನ್ನು ನೆನೆ ನೆನೆದು ವೀರಣ್ಣ ನೋತಿದ್ದ. ನಿಂತಲ್ಲಿ ಕುಳಿತಲ್ಲಿ ಅದೇ ಯೋಚನೆ—ಸುಗುಣಾಳನ್ನು ಹೇಗಾದರೂ ಮಾಡಿ, ತನ್ನ ಮನೆಗೆ ತಂದಿರಿಸಿ ಆಕೆಯ ಸ್ಥಿರ ಚರಸೊತ್ತುಗಳನ್ನು ವಶಪಡಿಸಿಕೊಳ್ಳುವ ಬಗೆ ಹೇಗೆ?—ಎಂದು ಈ ಮಧ್ಯೆ ಸುಗುಣಾಳು ತನ್ನ ಮನೆಯಲ್ಲಿ ಆಳುಗಳನ್ನಿರಿಸಿಕೊಂಡು ಬೇಸಾಯ ಮಾಡಿಕೊಳ್ಳುತ್ತಾಳಂತೆ—ಅವಳಿಗೇನು? ಇಲ್ಲಿಗಿಂತ ಅಲ್ಲೇ ಸುಖವಾಗಿದ್ದಾಳೆ. ಶಾಂತಳೊಡನೆ ವೀರಣ್ಣ ದುಡೀಲಿ. ಗದ್ದೆಗಿಳಿಯದೆ ತಿರುಗಾಡಿ ಕೊಬ್ಬಿದ ಮೈ ಕರಗಲಿ ... ಮತ್ತಿನ್ನೆಷ್ಟೋ ಅಂತಹದೇ ಮಾತು ಕೇಳಿ ಕೇಳಿಸದಂತೆ ವೀರಣ್ಣನ ಹೃದಯ ಕುದಿಯುತಿತ್ತು. ಅಸಹಾಯನಾಗಿ, ಯಾವ ದಾರಿಯೂ ತೋರದೆ ಅಲ್ಲಿ ಇಲ್ಲೆಂದು ಅಲೆಯ ಹತ್ತಿದ. ನಾಲ್ಕಾರು ಮಂದಿಯೊಡನೆ ಸಮಾಲೋಚಿಸಿದ್ದ, ಸಂತೆಗೆಂದು ಹೋದವ, ವಕೀಲರನ್ನು ಕಂಡು ಮಾತಾಡಲು ಬಯಸಿದ. ಅದಕ್ಕಾಗಿ ಊರ ಗೌಡರನ್ನು ತನ್ನ ವಶಪಡಿಸಿಕೊಳ್ಳಲೆಂದು ಅಲೆಯ ತೊಡಗಿದ. ಇದೇ ಎಲ್ಲಾ ಅವನ ದಿನದ ಕೆಲಸ.

ಆ ವರ್ಷ ಮಳೆ ಬೇಗನೆ ಬಂದು, ಊರ ಬತ್ತಿದ ಕೆರೆತೊರೆಗಳನ್ನು ತುಂಬಿಸಿತು. ರೈತರು ಗದ್ದೆಯನ್ನುಳದು ದುಡಿಯುವ ಕಾಲ ಬೇಗ ಬಂತೆಂದು ಸಂತೋಷಗೊಂಡರು. ಕೆಲವರು ತನ್ನ ಕೆಲಸ ಏನೂ ಆಗಿರಲಿಲ್ಲ —ಇಷ್ಟು ಬೇಗ ಯಾಕೆ ಬಂತಪ್ಪಾ ಮಳೆ —ಎಂದು ದೂರಿದರು. ಅದರಲ್ಲಿ ವೀರಣ್ಣನ ಹೆಂಡತಿ ಶಾಂತಾಳೂ ಒಬ್ಬಳು. ಅಕ್ಕಿಯ ಚೀಲಗಳು ಮುಗಿಯುತ್ತಾ ಬರುತ್ತಿರುವುದನ್ನು ಕಂಡು ಆಕೆ ಒಂದುದಿನ ಗಂಡನೊಡನೆ ಅಂದಳು—ನೀವು ಅಲ್ಲಿ ಇಲ್ಲಿ ಅಂತ ತಿರುಗುತ್ತಾ ಇರಿ. ಇಲ್ಲಿ ಇದ್ದ ಚೂರುಪಾರು ಗದ್ದೆಗಳೆಲ್ಲ ಬಳಿದು ಹೋಗಲಿ. ನನಗೇನು?...ನಿಮಗೆ ಅಷ್ಟೊಂದು ತಿಳೀದೆ? ಹೂಡಲಿಕ್ಕೊಂದು ಆಳನ್ನು ಕರೆದರೆ ಸಾಕು. ಮತ್ತೆಲ್ಲ ಕೆಲಸ ನಾವೇ ಮಾಡುವ. ಕೂಲಿಗೆ ಅಕ್ಕಿಯೂ ಇಲ್ಲ—ಅರೆಹರಿದ ಧೂಳು ತುಂಬಿದ ಕೋಟನ್ನು ಹಾಕಿ, ಸಂತೆಗೆ ಹೊರಡಬೇಕೆಂದಿದ್ದ ವೀರಣ್ಣ, ಎತ್ತಿದ ಕೋಟನ್ನು ಅಲ್ಲೇ ಇಟ್ಟು ಹೇಳಿದ—ದುಡಿಯದೆ ಏನು ಧಾಡಿಯೋ ನೀನು ಇಳಿಯುವುದು ಬೇಡ. ಕಡೆಗೆ ತಂದಿಯೊದೀತು. ಗಂಡ ತನ್ನನ್ನು ಅಣಕಿಸುವನೆಂದು, ಬಸಿರಿ ಶಾಂತ ಒಳಗೆ ಹೋದಳು. ಅಲ್ಲಿಗೆ ಅಂದಿನ ಪ್ರಕರಣ ಮುಗಿಯಿತು.

ವೇಲ್ಮನೆ ಬೋರ, ಕೆಳಮನೆ ತಿಮ್ಮ, ಬೆಟ್ಟದಮನೆ ಸೋಮ, ಒಬ್ಬೊಬ್ಬರೆ ಬಂದು, ವೀರಣ್ಣ ಚಿಕ್ಕ ಹುಡುಗನನ್ನು ಹಾಕಿಕೊಂಡು ಉಳುವುದನ್ನು ಕಂಡರು. ನಕ್ಕರು. ಅನುಭವದ ನಾಲ್ಕಾರು ಮಾತಾಡಿದರು. ಹಾಗೆ ಮಾಡು, ಹೀಗೆ ಮಾಡು—ಎಂದರು. ತನಗಿಂತ ಕಿರಿಯರೂ ಬುದ್ಧಿ ಹೇಳುವುದನ್ನು ಕಂಡು ವೀರಣ್ಣ ನಾಚಿದ. ಮರುಗಳಿಗೆ ಅವನಿಗೆ ಸುಗುಣಳ ಮೇಲೆ ದ್ವೇಷ ಹುಟ್ಟಿತು. ಅವನ ದೇಹವನ್ನು ತುರಿಯ ತೊಡಗಿತು.

ಸುಗುಣಳೂ ಆದಷ್ಟು ಕೂಲಿಗಳನ್ನು ಹಾಕಿಕೊಂಡು ಬೇಸಾಯ ಸಾಗಿಸಿದಳು. ಅವಳಿಗೇನೂ ಸಂತಸ—ಒಬ್ಬಳು ಊರ ಮುದುಕಿಯನ್ನು ತನ್ನ ಮನೆಗೆ ನಿತ್ಯ ರಾತ್ರಿ ಮಲಗಲು ಬರಹೇಳಿದ್ದಾಳೆ. ಅವಳಿಗೇನಾದರೂ ಊಟತಿಂಡಿ ಕೊಡುತ್ತಾಳೆ. ದಿನಗಳು ಅವಳಿಗೆ ತಿಳಿಯದಂತೆಯೇ ಕಳೆದು ಹೋಗುತ್ತಿವೆ

ವೀರಣ್ಣನಿಗೂ ಹಾಗೇ ದಿನಗಳುರುಳಿದುದೂ ಗೊತ್ತಾಗಲಿಲ್ಲ. ಆತನ ಮಗ ಶ್ಯಾಮ ನಾಲ್ಕು ವರ್ಷದವನಾಗಿದ್ದಾನೆ, ಈಗ ಆ ಮಗುವಿನ ಅಂದಚೆಂದ ಕಂಡು,ಅವನ ಹೊಟ್ಟೆ ಮತ್ತು ಮತ್ತು ಉರಿಯ ಹತ್ತಿದೆ ಈಗಲೂ ಗದ್ದೆಗೆ ಕೆಸರು ತುಳಿಯ ಹೋಗಬೇಕೆ? ಸುಗಣಳ ಆಸ್ತಿ ತನಗೆ ಸಿಕ್ಕಿದ್ದರೆ, ಕೂತು ತಿನ್ನುವ ಅನ್ನ ನಮಗೆಲ್ಲ— ಈ ಬಾರಿ ವೀರಣ್ಣ ಸುಮ್ಮನಿರಲಿಲ್ಲ, ಒಂದು ಉಪಾಯವನ್ನು ಹೂಡಿ, ತಿಮ್ಮಪ್ಪನನ್ನು ತನ್ನ ಪಕ್ಷವಹಿಸಿ ಹೋರಾಡಲು ಕೇಳಿಕೊಂಡು, ಹತ್ತು ರೂಪಾಯಿ ಅವನ ಕೈಯಲ್ಲಿಟ್ಟ. ಗುಟ್ಟನ್ನು ಮೆಲ್ಲನೆ ಒಪ್ಪತ್ತು ಕುಳಿತು ಕಿವಿಯೊಳಗೆ ಉಸುರಿದ. ಪ್ರತಿಯಾಗಿ ತಿಮ್ಮಪ್ಪನೂ ಹೇಳಿದ "ನಾನು ಈ ಕಾರ್ಯದಲ್ಲಿ ಜಯಿಸದಿದ್ದರೆ, ನನ್ನ ಹೆಸರು ತಿಮ್ಮಪ್ಪನೇ ಅಲ್ಲ" ಎಂದು ಆದರೆ ಅದನ್ನು ಸರಿಯಾಗಿ ನಿಶ್ಚಯಿಸಿದಳು ವೀರಣ್ಣ ಅಲ್ಲ—ಸುಗುಣಾ.

ಅಂದು ಆ ಮುದುಕಿ ತುಸು ತಡವಾಗಿಯೇ ಮನೆಗೆ ಬಂದಳು ಅಲ್ಲಲ್ಲಿನ ನೂತನ ಕತೆಯಾಗಿ, ಸುಗುಣಾ ಆಕೆಗೆ ಒತ್ತಾಯಮಾಡಿ ಊಟ ಹಾಕಿದಳು. ಮಲಗುವಾಗ ಹನ್ನೊಂದು ಗಂಟೆಯಿರಬಹುದು ಸುಗುಣನಿಗೆ ಸರಿಯಾಗಿ ನಿದ್ದೆ ಹತ್ತಿತ್ತು. ಹೊರಗಿನಿಂದ ಒಂದೇ ಸವನೆ ಬಾಗಿಲು ಬಡಿಯುವ ಸದ್ದು ಕೇಳಿಸಿತು ಹೆದರಿದ ಮುದುಕಿ ಸುಗುಣಮ್ಮಾ ಎಂದು ಕೂಗಿ ಕರೆದಳ. ಹೊರಗೆ ಬರುವಾಗ ಸುಗುಣಾ ದೊಣ್ಣೆ ಹಿಡಿದೇ ಬಂದಿದ್ದಳು ಹೆಬ್ಬಾಗಿಲ ಬಳಿ ನಿಂತು ಕೇಳಿದಳು....ಗಡಸುದನಿಯಿಂದ "ಯಾರದು ಬಾಗಿಲು ಬಡಿಯೋದು" ಎಂದು. "ನಾನು ತಿಮ್ಮಪ್ಪ ಅಷ್ಟೇ ಗಟ್ಟಿಯಾಗಿ ಉತ್ತರ ಬಂದಿತ್ತು. "ಹಂ" ಸುಗುಣ ಮೆಲ್ಲನೆ ರಾಗತೆಗೆದಳು. "ಹಂ ಎಂದರೆ...ನಿಮ್ಮಂತವರು ಹುಟ್ಟಿ ನಮ್ಮ ಊರ ಮಾನ ತೆಗೀತೀರಿ. ಬೇಗ ಬೊಗಳು ಮನೆಯೊಳಗೆ ಯಾವನಿದ್ದಾನೆ ನನಗೆಲ್ಲ ಗೊತ್ತು." ಸುಗುಣ ಸ್ವಲ್ಪ ಹೆದರಿದಳು. ಸ್ವಲ್ಪ ಹೊತ್ತು ಮೌನ, ಒಳಗೆ ಮಿಣಿ ಮಿಣಿ ದೀಪ ಉರಿಯುತ್ತಿತ್ತು. ಹೊಗೆ ಮೆಲ್ಲನೆ ಕೀಡುತ್ತಿತ್ತು ಅಷ್ಟೇ ಮೆಲ್ಲನೆ ಮೃದುವಾಗಿ ಆಕೆ ಹೇಳಿದಳು "ಹಾಗೆಂದರೆ ಏನು ತಿಮ್ಮಪ್ಪ ನಿಮ್ಮಂತವರು ಬದುಕ್ಕಿದ್ದರಿಂದ ಊರಿನಲ್ಲಿ ಮಾನವಂತರಿರದಂತಾಗಿದೆ ಈಗ ನೀನೇ ಹೀಗೆ ಹೇಳ ಹೊರಟರೆ ಸಳ್ಳು ಸುಳ್ಳು ......" ಧ್ವನಿ ತಗ್ಗಿಸಿ ಅವನೆಂದ "ನನಗೆ ಗೊತ್ತು. ವೀರಣ್ಣ ಎಲ್ಲ ಕತೆ ಹೇಳಿದ್ದಾನೆ. ಏನೆಂಬುದು. ಬಾಗಿಲು ತೆಗೀತೀಯೋ, ಒಡೆದು ಒಳಗೆ ಬರಲೋ? ಮೈ ಮೇಲೆ ಒಂದು ತುಂಡು ಕಂಬಳಿಯೂ ಇಲ್ಲ. ಹೊರಗಿಲ್ಲಿ ನಿಲ್ಲಲಿಕ್ಕೆ ಸ್ಥಳವೂ ಇಲ್ಲ." ಮಳೆಗಾಳಿ ಒಂದೇ ಸವನೆ ರಭಸದಿಂದ ಬರತೊಡಗಿತು. ಸುಗುಣ ತಿಮ್ಮಪ್ಪನ ಲೂಟಿಯಿಂದ ಪಾರಾಗುವ ಬಗೆ ಯೋಚಿಸಿದಳು. ತಿಮ್ಮಪ್ಪನೆಂದರೆ ಮೊದಲಿನಿಂದಲೂ ಆಕೆಗೆ ಭಯ ಅದಕ್ಕೆ ಅವನ ನಡತೆಯೇ ಕಾರಣ. ಎಲ್ಲಿ ಜಗಳವಾಗಲಿ, ಅಲ್ಲಿ ಆತನಿದ್ದಾನೆ. ಯಾವುದಾದರೂ ಒಂದು ಪಕ್ಷ ಹಿಡಿದು ಮುಂದೆ ಬರುತ್ತಾನೆ. ಸರಿ. ಗೆದ್ದನೆಂದರೆ ಅವನ ಅಂದಿನ ಅಂಗಿ ಕಿಸೆ ತುಂಬಾ ಹಣದ ನಾಣ್ಯಗಳು. ಅಂದೇ ಸಂಜೆ ಅಷ್ಟನ್ನೂ ನ್ಯೂಯೋರ್ಕ್ ಅರಳೆ ಧಾರಣೆಗೆ ಸುರಿಯುವ ಅದರಲ್ಲಿ ಸ್ವಲ್ಪ ಬೇಸರವಾದರೆ ಇಸ್ಪೀಟ್ ಆಟದ ಆರಂಭ ನಾಲ್ಕು ಮಂದಿಯನ್ನು ಕರೆದುಕೊಂಡು ಕುಳಿತನೆಂದರೆ, ಕಿಸೆ ಬರಿದಾಗುವ ತನಕ ಏಳುವುದಿಲ್ಲ. ಅದನ್ನೆಲ್ಲ ತಿಳಿದೇ ಸುಗುಣ ಒಳಗೆ ಹೋಗಿ ಇಪ್ಪತ್ತು ರೂಪಾಯಿ ತಂದಳು. "ತಿಮ್ಮಪ್ಪ ಇಗೋ ಈ ದುಡ್ಡು ತೆಗದುಕೊ. ಸುಮ್ಮನೆ ಅಲ್ಲದಿದ್ದ ಕೆಲಸಕ್ಕೆ ದುಡುಕಬೇಡ. ನಿನ್ನಂಥ ತಿಳಿದವನೂ ಹೀಗೆ ಮಾಡಿದರೆ" ಮೊದಲು ಹಿಂಜರಿದರೂ, ಕೊನೆಗೆ ತಿಮ್ಮಪ್ಪ ಬಲಗೈಯಲ್ಲಿ ಕಿಟಿಕಿಯ ಎಡೆಯಿಂದ ಬಿದ್ದ ರೂಪಾಯಿ ನೋಟನ್ನ ಜೇಬಿಗೆ ಸುರುವಿಕೊಂಡು ನಡೆದ."ಹಣಾಗಿಣ ಬೇಕಾದರೆ ಕೊಡುತ್ತೇನೆ" ಉಪಚಾರಕ್ಕೆ ಮಾತಾಡಿದಳು ಸುಗುಣಾ. ಅಂತೂ ಆ ದಿನದ ಆಪತ್ತಿನಿಂದ ಪಾರಾದಳು. ಆದರೆ ಆಗಾಗ ತಿಮ್ಮಪ್ಪ ಮನೆಯ ಕಡೆ ಬರಹತ್ತಿದ. ಒಂದು ದಿನ ಆತ ಉದ್ರೇಕಿತನಾಗಿ ಆಕೆಯ ಕಡೆಗೆ ಬಂದ. ಸುಗುಣಾ ಕೂಗಿ ಅಂದಳು. "ತಿಮ್ಮಪ್ಪ ನಿನ್ನ ದಾರೀಲೀ ನೀನು ಹೋದರೆ ಹಾಗೆ ಅಲ್ಲದಿದ್ದರೆ ನಾಳೆ ನಿನಗೆ ಒಂದು ಪೈ ಸಿಗಲಿಕ್ಕಿಲ್ಲ. ನನ್ನ ಪ್ರಾಣ ಉಳಿಯಲಿಕ್ಕಿಲ್ಲ." "ನಮಗೇನು ಧರ್ಮಕ್ಕೆ ದುಡ್ಡು ಕೊಡ್ತಿದಾಳೆ, ನಿಮ್ಮ ಸುದ್ದಿಗೆ ಬರೋಲ್ಲ' ಎಂದಿದ್ದ.

ವೀರಣ್ಣನಿಗೆ ಬಂದ ಸುದ್ದಿಯೇ ತುಸು ಬೇರೆ. ಅದಕ್ಕೆ ಆತ ಬಣ್ಣ ಬಳಿದು ಹೇಳಿದ್ದ ಬೇರೆ "ಸುಗುಣ ನಾಲ್ಕು ತಿಂಗಳ ಬಸುರಿ......ಯಂತೆ" ಆ ಸುದ್ದಿ ಕಿವಿಯಿಂದ ಕಿವಿಗೆ ಹಬ್ಬಿ, ಊರ ಬಾವಿಕಟ್ಟೆಯಿಂದ ಹಿಡಿದು ಪೇಟೆಯ ಸಂತೆಯ ತನಕವೂ ತುಂಬಿತ್ತು.

ಯಾರು ಏನು ಹೇಳಿಕೊಂಡರೆ ನನಗೇನು ಅಲ್ಲವೂ ಸೂರಜ್ಜಿ. ಆಡುವವರ ಬಾಯಿಗೆ ನಮ್ಮ ಬೀಗವೆ'? ಒಮ್ಮೆ ಸುಗುಣ ಆ ಮುದುಕಿ ಹತ್ತಿರ ಹೇಳಿದಳು. ಆದರೆ ಅದರ ಪರಿಣಾಮ ಕೆಲವೇ ದಿನಗಳಲ್ಲಿ ತಿಳಿದು ಬಂತು. ಆಕೆಯ ಮನೆಯನ್ನು ಜನರು ಊರ ಹೊಲೆಗೇರಿಯೆಂದು ತಿಳಿದಿರಬೇಕು. ದಿನಕ್ಕೊಬ್ಬರೂ ಅತ್ತ ಸುಳಿಯುತ್ತಿರಲಿಲ್ಲ. ಒಮ್ಮೆ ಸುಗುಣನಿಗೆ ಒಂದು ವರ್ತಮಾನ ಬಂತು. "ಆಕೆಯನ್ನ ಜಾತಿಯಿಂದ ಹೊರಹಾಕಬೇಕು" ಎಂದು ಇದನ್ನು ಕೇಳಿ ಸುಗುಣ ಸಿಂಹಿಣಿಯಂತಾದಳು ಆದರೇನು ಮಾಡಲಿ? ಬಂದವರಿಗೆಲ್ಲ ಬೈದು ಕಳಿಸಿದಳು. ಸಂಧಾನಕ್ಕೆ ಹೋಂಗೊಡದೆ ಗಟ್ಟಿಯಾಗಿ ಕುಳಿತುಕೊಂಡಳು. ದಿನಗಳು ಮಾತ್ರ ಒಂದರ ಹಿಂದೊಂದು ಉರುಳುತಿದ್ದುವು. ಈ ಮಧ್ಯೆ ಸುಗುಣನಿಗೆ ಪಡಬಾರದ ಕಷ್ಟಗಳು ಬಂದು ಮುತ್ತಿಕೊಂಡವು. ಆಕೆಯ ಬೆಳೆ ಹಾಳಾಗ ಬರಹತ್ತಿತ್ತು. ವರ್ಷದಿಂದ ವರ್ಷಕ್ಕೆ ಭತ್ತ, ಹುಲ್ಲು. ಅದು ಇದಿನ್ನದೆ ಕಳವಾಗ ತೊಡಗಿತು. ಮೇಯಬಿಟ್ಟ ದನ ಎಮ್ಮೆಗಳು ಹೇಳದೆ ಕೇಳದೆ ನಾಪತ್ತೆಯಾಗುತ್ತಿದ್ದವು. ಇದನ್ನೆಲ್ಲ ಸಹಿಸದೆ ಮನೆಯೊಂದನ್ನಿಟ್ಟುಕೊಂಡು ಕೆಲ ಆಸ್ತಿಯನ್ನು ಮಾರಿದಳು ನಾಲ್ಕು ಸಾವಿರಕ್ಕೆ ಹಣವನ್ನು ಮನೆಯಲ್ಲಿಟ್ಟು ಕೊಂಡು ತನಗೆ ಸಾಯುವ ತನಕ ಕೂತುಂಡರೂ ಸಾಲದೇ ಸೂರಜ್ಜಿ' ಎನ್ನುತ್ತಿದ್ದಳು ಆದರೆ ಸಾಕಾಗುವಂತಾಗಲಿಲ್ಲ. ಆಕೆಗೆ ತಿಳಿಯದಂತೆ ಒಂದು ದಿನ ಅದು ಮಾಯವಾಗಿತ್ತು. ಸುಗುಣ ಚರಿಗೆಯಲ್ಲೇ ಒಂದೆರಡು ತಿಂಗಳು ದೂಡಿದಳು ಈ ವಿಷಯ ಯಾರಿಗೂ ತಿಳಿಸಲಿಲ್ಲ. ಆಕೆ. ಊರಿಗೆ ಮಾತ್ರ ಅದು ತಿಳಿದಿತ್ತು." ಸಂಪೂರ್ಣ ನಾಶವಾದರೂ ಅಣ್ಣನ ಬುಡಕ್ಕೆ ಹೋಗ್ತಾಳೋ ಇಲ್ಲವೋ ನೋಡೋಣ" ಎನ್ನುತ್ತಿದ್ದರು.

ಅದೊಂದು ದಿನ ಸುಗುಣಳ ಹೃದಯ ಕರಗಿತು ತನ್ನಿಂದ ತಾನೆ "ನಾನು ಊರು ಬಿಟ್ಟು ಹೋಗುತ್ತೇನೆ... .. ಪರಲೂ

— ಕುಮಾರಿ ಚಿತ್ರಿಗಳು —

(Registered)

ಈ ದೇಶೀಯ ತಯಾರಿಕೆಯು ಗುಣಾಂಶವು ವರ್ಷಗಟ್ಟಲೆಯಿಂದ ವಿಖ್ಯಾತವಾಗಿದೆ ಮತ್ತು ಪ್ರಮುಖ ಕೆಮಿಸ್ಟರಿಂದ ಈ ಕೆಳಗಿನ ದರಗಳಲ್ಲಿ ವಿಕ್ರಯಿಸಲ್ಪಡುತ್ತವೆ. ಟ್ಯೂಬಿಗೆ ರೂ. 4=00 (ಸಾದಾ), ರೂ. 6=00(ಸ್ಪೆಶ್ಯಲ್), ರೂ. 9=00 (ಎಕ್ಸ್ಟ್ರಾ ಸ್ಪೆಶ್ಯಲ್).

P. O. VEE & Co. (M. I.) CALCUTTA—4

ಪ್ರತಿನಿಧಿ: ಷಾ ಕಂಪೆನಿ, ಮಂಗಳೂರು—1.



NAVAYUGA WEEKLY, UDIPI. **30-3-1961** **LICENSE NO. 31**
REGD. NO.BG. 176 Licensed to Post without Prepayment

ರಿಗೆ ಯಾರ ಮನೆಯಲ್ಲಾದರೂ ಅಡಿಗೆ ಮಾಡಿಕೊಂಡು ಜೀವಿಸುತ್ತೇನೆ" ಎಂದಳು ಮುದುಕಿಯ ಹತ್ತಿರ. "ಹೌದಮ್ಮ ನೀವು ಯಾರ ಮೇಲೆ ವೈರ ಕಟ್ಟಿಕೊಂಡಿದ್ದೀರಿ. ಅವರಿಂದು ದಿವಾಳಿಯಾಗುವಂತಿದ್ದಾರೆ. ಎರಡು ಮೂರು ಸಾವಿರ ರೂಪಾಯಿ ಸಾಲವಾಗಿದೆ. ಅಂತಹ ಕಷ್ಟದ ಸಮಯದಲ್ಲಾದರೂ ಅಣ್ಣನ ಮುಖ ಕಂಡು ಎರಡು ಮಾತಾಡಿ ಬರಬಾರದೋ" ಆ ಮಾತು ಸುಗುಣಳಿಗೆ ಸರಿಯೆಂದು ತೋರಿತು. "ಹೂಂ ನಾನು ಅವನ ಹತ್ತಿರ ಹೇಳಿ; ಬೆಳಗ್ಗೆ ಹೊರಡುತ್ತೇನೆ. ಎರಡು ದಿನದ ಮೇಲೆ ಪುನಃ ಬಂದು ಸಾಮಾನು ತೆಗೆದುಕೊಂಡು ಹೋಗುತ್ತೇನೆ. ಅಷ್ಟರ ವರೆಗೆ ಮನೆಯ ಹತ್ತಿರ ಇದ್ದು ಬಿಡು ಎಂದಳು.

ನಾಲ್ಕು ಫರ್ಲಾಂಗ್ ದೂರದ ಅಣ್ಣನ ಮನೆಯನ್ನು ಕಾಣದೆ, ಏಳೆಂಟು ವರ್ಷಗಳು ಕಳೆದು ಹೋಗಿರ ಬಹುದು. ಆಕೆ ಮನೆಯಿಂದ ಹೊರಗೆ ಹೊರಟದ್ದೇ ಯಾರೂ ಕಂಡಿರಲಿಕ್ಕಿಲ್ಲ. ಈಗ ಮತ್ತೇನಾದರೂ ಅಂದಾರು ಎಂದು ಒಳದಾರಿಯಲ್ಲಿ ಹೊರಟಳು. ಅಣ್ಣನನ್ನು ಕಾಣಲೆಂದು, ಎರಡು ಮಾತಾಡಿ ಬರಲೆಂದು ನಡೆನಡೆದು ಮನೆಯ ಹಿಂದಿನ ಮರದಡಿ ಬಂದಳು. ಮನೆಯಿಂದ ಕೇಳಿಸಿದ ಗರ್ಜನೆಯ ಮಾತುಗಳು ಆಕೆಯನ್ನು ಅಲ್ಲೇ ನಿಲ್ಲಿಸಿದುವು. ಮೊದಮೊದಲು ಅಸ್ಪಷ್ಟವಾಗಿ ಕೇಳಿ ಬಂದ ಮಾತುಗಳು ಸ್ಪಷ್ಟವಾಗಿ ಕೇಳತೊಡಗಿದವು. "ಅವರಿರಲಿ ಇಲ್ಲದೆ ಇರಲಿ ನೀವು ಜಪ್ತಿಮಾಡಿ ಇದ್ದ ಬಿದ್ದ ಪಾತ್ರೆ ಪರಡಿಗಳನ್ನು ತೆಗೆದು ಕೊಂಡು ಹೋಗುತ್ತೇವೆ" ಆಕೆ ಅಲ್ಲೇ ನಿಂತು ಮನೆಯ ಬಾಗಿಲನ್ನು ನೋಡುತ್ತಿದ್ದಳು. ಬಾಗಿಲು ತೆರೆಯಿತು. ಹೆಗಲ ಮೇಲೆ ತಲೆ ಮೇಲೆ ದೊಡ್ಡ ದೊಡ್ಡ ಬೋಗುಣಿ, ಚರಿಗೆಗಳನ್ನು ಹೊತ್ತುಕೊಂಡು ಅಣ್ಣ ಹೊರಗಾದ. ಆಕೆ ಅಲ್ಲೇ ನಿಂತಳು. ಅಣ್ಣ ಎದುರು ಬಂದವ, ಸದ್ದು ಮಾಡದೆ, ಆಕೆಯನ್ನೊಮ್ಮೆ ಕಂಡು ಮುಂದರಿದ. ಸುಗುಣಳೂ ಉಸಿರೆತ್ತದೆ ಹಿಂಬಾಲಿಸಿದಳು. ಒಂದೆರಡು ಫರ್ಲಾಂಗ್ ಕಳೆದಿರ ಬಹುದು, ತಪ್ಪಲ ದಾರಿಯಲ್ಲಿ ಹೋಗುವಾಗ ಬಯಲಾಟಿಯ ಮನೆಯ ಮಾತು ಕೇಳಿಸುತ್ತಿತ್ತು. "ಏ....ಅಲ್ಲಿ ನೋಡಿ, ಅಲ್ಲಿ ರಾಣಿ ಇಬ್ಬರೂ ಹೋಗುತ್ತಿದ್ದಾರೆ......" ಹುಡುಗರ ಮಾತು ಕೇಳಿ ಯುವಕರೂ ಬಂದು ನೋಡಿದರು. "ಹೋ......ಬಾರೋ........" ತಮಾಷೆಯ ರಾಗ ಹೊರಟಿತು. ಒಬ್ಬಳು ಮುದುಕಿ ಬಂದು ಅಂದಳು— "ಏನಾ, ಅವರು ಅಣ್ಣ-ತಂಗಿ ಅಲ್ಲವೆ. ಅಷ್ಟಲ್ಲಾ ನಗಾಡಲಿಕ್ಕೆ ಒಂದೇ ಮನೆಯವರಲ್ಲವ...." ಮುಕ್ಕಳು ಯುವಕರು ನಾಚಿ ಒಳಹೋದರು. ದಾರಿ ಸಾಗುತಿತ್ತು ತೋಡನ್ನು ದಾಟಿ, ಮಾವಿನ ತೋಪಿನ ದಾರಿ ಹಿಡಿಯುವಾಗ ಸುಗುಣಳ ತುಟಿಯೊಡೆಯಿತು "ಅಣ್ಣ ನನ್ನದು ತಪ್ಪಾಯ್ತು ಏನು ತಪ್ಪಿದರೂ ಮರೀ ಬೇಕು. ಕಾಲುಡಿತೀನಿ" ಉಕ್ಕಿ ಬಂದ ದುಃಖ ಮುಂದೆ ಮಾತಾಡಲೆಡೆಯೀಯಲಿಲ್ಲ. ತಿರುಗಿ ನಿಂತ ವೀರಣ್ಣ ಹೇಳಿದ "ನಿನ್ನದೆಂತಹದು ಸಂಪೂರ್ಣ ನನ್ನದೇ ತಪ್ಪು ಸುಗುಣಾ ನೀನು ನನ್ನಿಂದಲೇ ಈ ಸ್ಥಿತಿಗೆ ಬಂದೆ. ನಾನೂ ಹಾಳಾದೆ ನೋಡು ನನ್ನ ಸ್ಥಿತಿ" ಹೃದಯವನ್ನು ಹರಿದು ತೆಗೆದು ಹೊರಗಿಟ್ಟು ನುಡಿಯುವವನಂತೆ ಆತ ನುಡಿದ. ಸುಗುಣಳಿಗೆ ತನ್ನ ಬಗೆಗೆ ನಾಚಿಕೆಯಾಯಿತು ಗಂಡಿನೆದುರು ಹೆಣ್ಣಿನ ಹೋರಾಟವೇ? ಎಂದು ಸುತ್ತಲಿನ ನಿಸರ್ಗ ಸಮೂಹ ಪ್ರಶ್ನಿಸಿದಂತಾಯಿತು.

ಇಬ್ಬರೂ ನಿಂತಿದ್ದರು. ಸುಗುಣ ಮುಂದಾಗಿ ಮನೆಯ ದಾರಿ ಹಿಡಿದಳು "ಹೂಂ" ಎಂದು ದೃಢ ನಿಟ್ಟುಸಿರುಬಿಟ್ಟು. ವೀರಣ್ಣ "ಹೂಂ," ಎಂದನೋ, ಅದೇ ಪ್ರತಿಧ್ವನಿಸಿತೋ ತಿಳಿಯದು, ಅಂತೂ ಅವಳನ್ನು ಹೆಜ್ಜೆಯ ಹಿಂದೆ ಹೆಜ್ಜೆಯಿಟ್ಟು ಆಕೆಯನ್ನು ಹಿಂಬಾಲಿಸಿದ ನಡಿಗೆಯಲ್ಲಿ ಆಕೆ ನಡೆದ ದಾರಿಯಲ್ಲೇ ನಡೆಯುತ್ತೇನೆಂಬ ನೊಗದ ದೃಢ ನಿರ್ಧಾರವೋ ಏನೋ ಹೊರಲಾರದೆ ಬೋಗುಣಿಯೊಂದನ್ನು ಮುಂದೆ ನೀಡಿದ. ಆಕೆ ತನಗರಿಯದಂತೆಯೇ ಅದನ್ನು ಹಿಡಿದುಕೊಂಡು ನಡೆದಳು,

ಮಾವಿನ ತೋಪಿನಿಂದ ಅವರು ಮರೆಯಾಗುವುದನ್ನೇ ಕಾಯುತ್ತ ಮರದಲ್ಲಿ ಕೂತಿದ್ದ, ಹಕ್ಕಿಗಳು ಒಮ್ಮೆಲೇ ಚೀಂಗುಟ್ಟುತ್ತ ಬತ್ತದ ಗದ್ದೆಗೆ ಹಾರಿದುವು. ಬೀಸಿ ಬಂದ ತಂಗಾಳಿಗೆ ತುಂಬಿದ ಭಾರವನ್ನು ಹೊತ್ತು ತೂನೆಯುವ ಬತ್ತದ ತೆನೆಗಳು ಒಂದೊಂದಾಗಿ ತಲೆತಗ್ಗಿಸಿದವು. ಅಣ್ಣ ತಂಗಿಯರ ಸ್ಥಿತಿಯನ್ನ ಕಂಡು ನಾಚಿಕೊಂಡೋ, ಹಿಗ್ಗಿಕೊಂಡೋ ಯಾರಿಗೆ ಗೊತ್ತು? ಸೂರ್ಯ ಮುಳುಗುವುದರೊಳಗೆ ಕೊನೆಯ ತುತ್ತನ್ನು ತಿಂದು, ಗೂಡುಸೇರುವೆವು ಎಂದು ಬಯಸಿ ಅವಸರದಲ್ಲಿ ಅತ್ತಿತ್ತ ಹಾರಾಡುವ ಹಕ್ಕಿಯ ಕೂಗು ಮಾತ್ರ ಎಲ್ಲೆಡೆಯಿಂದಲೂ ಕೇಳುತ್ತಿತ್ತು. 'ಚೀಂವ್ ಚೀಂವ್, ಎಂದು. ಬೆಟ್ಟ ತಿಟ್ಟಗಳೂ, ಕಾಡು ಮೇಡುಗಳೂ ಚೇತನಗೊಂಡು ತಾವೂ ಚೀಂವ್ ಚೀಂವ್ ಎಂದುವು — ಸಂತೋಷದಿಂದಲೋ ಏನೋ! ಆದರೆ ಇದಾವುದರಗೊಡವೆಯೂ ಇಲ್ಲದೆ ಹೊತ್ತು ಮಾತ್ರ ಮುಳುಗಿತ್ತು.

—— —

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ಯನ್ನು ಬೆಳೆಸಬೇಕು. ಏಶ್ಯನ್ ದೇಶಗಳು ಮುಕ್ತಮಾರುಕಟ್ಟೆ ಮೊದಲಾದ ಸಂಘಟನಾ ಕಾರ್ಯಗಳಲ್ಲಿ ತೊಡಗುವ ಕಾಲ ಈಗ ಸನ್ನಿಹಿತವಾಗಿದೆ. ಏಶ್ಯನ್ ಸಾಮಾನ್ಯ ಮಾರುಕಟ್ಟೆಯು ಯುರೋಪೀಯ ಮಾರುಕಟ್ಟೆಯಷ್ಟು ವ್ಯಾಪಕವಾಗಲಾರದಾದರೂ ಸೀಮಿತ ಕ್ಷೇತ್ರಗಳ ಮಟ್ಟಿಗಾದರೂ ಈ ವಿಧದ ವ್ಯಾಪಾರಿಕ ಸಂಘಟನೆಯು ಸ್ಥಾಪಿತವಾಗುವುದರಿಂದ ಏಶ್ಯನ್ ರಾಷ್ಟ್ರಗಳಲ್ಲಿ ಒಂದು ತರದ ಆತ್ಮವಿಶ್ವಾಸ ಉದಯವಾಗುವುದು; ಇದೇ ಕಾಲಕ್ರಮದಲ್ಲಿ ವ್ಯಾಪಕರೂಪ ಪಡೆಯಬಲ್ಲುದು.

ಎರಡನೆಯದಾಗಿ ಅಂತಾರಾಷ್ಟ್ರೀಯ ವ್ಯಾಪಾರಪದ್ಧತಿಯಲ್ಲಿ ಆಮೂಲಾಗ್ರ ಪರಿವರ್ತನೆಯಾಗಬೇಕು. ಹೆಚ್ಚಿನ ಏಶ್ಯನ್ ದೇಶಗಳು ಉದ್ದಿಮೆಗಳಿಗೆ ಬೇಕಾದ ಕಚ್ಚಾಪದಾರ್ಥಗಳನ್ನಷ್ಟೇ ನಿರ್ಯಾತ ಮಾಡುತ್ತವೆ. ಸಿದ್ಧ ಮಾಲುಗಳನ್ನೂ ಬಂಡವಾಳ ವಸ್ತುಗಳನ್ನೂ ವಿದೇಶಗಳಿಂದ ಮುಖ್ಯವಾಗಿ ಪಾಶ್ಚಾತ್ಯ ರಾಷ್ಟ್ರಗಳಿಂದ ತರುತ್ತವೆ. ಈಗ ಇಂತಹ ಬೇಡಿಕೆಯು ೨೦ ಅರಬ ಡಾಲರ್‌ಗಳ ಮೌಲ್ಯದ್ದಿದೆ; ಇದೇ ೧೯೭೦ಕ್ಕೆ ಮೂರುಪಟ್ಟು ಹೆಚ್ಚುವುದೆಂದು ಲೆಕ್ಕಹಾಕಲಾಗಿದೆ. ಇದರಿಂದ ವಿಭಿನ್ನ ದೇಶಗಳ ವ್ಯಾಪಾರದಲ್ಲಿ ದೀರ್ಘಕಾಲಿಕ ರೂಪ ಕೊಡುವುದು ಅಗತ್ಯವೆನ್ನಬಹುದು.

ಭಾರತ—ಜಪಾನ್ ವ್ಯಾಪಾರ ಒಡಂಬಡಿಕೆಯನ್ನು ಈ ಬಗ್ಗೆ ಉದಾಹರಿಸಬಹುದು. ಆಸ್ಟ್ರೇಲಿಯಾ ಮತ್ತು ರಶ್ಯಗಳೊಡನೆ ಇದೇ ಮಾದರಿಯ ಒಪ್ಪಂದವನ್ನು ಭಾರತವು ಮಾಡಿಕೊಂಡಿದ್ದು ಇದು ಸಫಲವಾಗುತ್ತಿದೆ. ಭಾರತದ ವಾಣಿಜ್ಯ ಮತ್ತು ಉದ್ಯೋಗಖಾತೆಯ ಉಪಮಂತ್ರಿ ಶ್ರೀ ಸತೀಶ ಚಂದ್ರರು ಈ ಕಾರಣದಿಂದಲೇ ಈ ವಿಧದ ವ್ಯಾಪಾರಿಕ ಆವಶ್ಯಕತೆಯನ್ನು ಬಲವಾಗಿ ಸಮರ್ಥಿಸಿದರು. ಶ್ರೀ ಸತೀಶ ಚಂದ್ರರು ಅನ್ನುವಂತೆ ಈ ವಿಧದ ಒಪ್ಪಂದದಗಳಿಂದ ಇಂತಹ ಕಾಲದಲ್ಲಿ ಇಂಥಹ ವಸ್ತುವು ಇಂತಹ ದೇಶದಿಂದ ಉಪಲಬ್ಧವಾಗುವುದೆಂಬ ವಿಶ್ವಾಸವು ಆಯಾತಮಾಡಿಕೊಳ್ಳುವ ದೇಶಕ್ಕಿರುತ್ತದೆ. ಹೀಗೆಯೇ ನಿರ್ಯಾತದ ಸಂಬಂಧದಲ್ಲಿ ಈ ಮಾದರಿಯ ಒಡಂಬಡಿಕೆಗಳು ಪರಿಣಾಮಕಾರಿಗಳೆನಿಸುತ್ತವೆ.

ಇಕಾಫೆ ಅಧಿವೇಶನದಿಂದ ಸಂಪನ್ನ ರಾಷ್ಟ್ರಗಳು ಹಿಂದುಳಿದ ದೇಶಗಳಿಗೆ ನಾನಾ ವಿಧದ ಸಹಾಯ ನೀಡಲು ನಿರಾಕರಿಸಿಲ್ಲವಾದರೂ ಅದನ್ನು ಬೆಂಬಲಿಸಿದರಾದರೂ ಬಹುಕಾಲದ ಮಟ್ಟಿಗೆ ವಿದೇಶಿಯರನ್ನೇ ನಂಬಿಕೊಳ್ಳುವುದು ಸರಿಯಲ್ಲ. ಆರ್ಥಿಕ ಕ್ಷೇತ್ರದಲ್ಲಿಯೂ ಸ್ವಾವಲಂಬನೆ ಸ್ವನಿರ್ಭರತೆಗಳು ಅತ್ಯವಶ್ಯವೆಂಬ ನಿತ್ಯಸತ್ಯವನ್ನು ಏಶ್ಯನ್ ರಾಷ್ಟ್ರಗಳಲ್ಲಿ ಮೂಡಿಸುವ ಪ್ರಯತ್ನ ನಡೆಸಿದುವು, ಇತ್ತ ಏಶ್ಯನ್ ರಾಷ್ಟ್ರಗಳು ಆತ್ಮಾಶಕ್ತಿಯಿಂದ ಗಮನಹರಿಸ ಬೇಕಾಗಿದೆ.

ಕುಂದಾಪುರ Assistant Commissioner ಕೋರ್ಟಿನಲ್ಲಿ

O. P. 91/61

ಡಾಕ್ಟರ್ ಕೃಷ್ಣ [illegible] —ಅರ್ಜಿದಾರ.

1. [illegible] ಗಂಗೆ ಮಗಳು, 2 [illegible] 1ನೆಯವಳ ಮಗ, ಉಡುಪಿ [illegible] ಗ್ರಾಮದಲ್ಲಿರುವವರು —ಎದುರುದಾರರು.

ಎದುರುದಾರರಿಗೆ ತಾ. 21-8-56 ರಲ್ಲಿ [illegible] ಆಸ್ತಿಯ [illegible] ಬಗ್ಗೆ ಅರ್ಜಿದಾರನು ಎದುರುದಾರರ ಮೇಲೆ [illegible] ಅರ್ಜಿಯು 2ನೇ ಎದುರುದಾರ [illegible] ಬಗ್ಗೆ ತಾ. 6-4-61ಕ್ಕೆ [illegible] 2ನೇ ಎದುರುದಾರ ತಾ. [illegible] ದಿವಸ ಬೆಳಗ್ಗೆ 11 ಗಂಟೆಗೆ [illegible] ಉಡುಪಿ [illegible] ಹಾಜರಾಗತಕ್ಕದ್ದು. ತಪ್ಪಿದ್ದ್ರೆ ಅವನ ಗೈರ್ ಹಾಜರಿಯಿಂದ ಸದ್ರಿ ಅರ್ಜಿ ತೀರ್ಮಾನಿಸಲಾಗುವುದು.

K. L. Aithal,
Vakil for Petitioner.

ಉಡುಪಿ, ತಾ. 23—3—61

ಪಿಗ್ಮಿ—೫

ಪಿಗ್ಮಿ

- ಪಿಗ್ಮಿ ನಿತ್ಯ ಸಂಪಾದನೆಯುಳ್ಳವರ ಆಪ್ತ ಗೆಳೆಯ.
- ಪಿಗ್ಮಿ ಉಳಿತಾಯದ ಪಾಠವನ್ನು ಹೇಳಿಕೊಡುವ ಸದ್ಗುರು.
- ಪಿಗ್ಮಿ ಉತ್ತಮ ಅಭ್ಯಾಸವನ್ನು ಬೆಳೆಸುವ ಸನ್ಮಿತ್ರ.
- ಪಿಗ್ಮಿ ಕಷ್ಟಕಾಲದಲ್ಲಿ ನೆರವಾಗುವ ಆಪದ್ಬಂಧು.
- ಪಿಗ್ಮಿ ನಿಮಗೆ ತಿಳಿಯದೆಯೇ ನಿಮ್ಮನ್ನು ಶ್ರೀಮಂತರನ್ನಾಗಿ ಮಾಡುವ ಶಕ್ತಿ.
- ಪಿಗ್ಮಿ ಚಿಕ್ಕ ಉಳಿತಾಯ ಯೋಜನೆಗಳ ಜನಕ.
- ಪಿಗ್ಮಿ ಸಿಂಡಿಕೇಟ್ ಬೇಂಕಿನ ಜನಪ್ರಿಯ ದೈನಿಕ ಉಳಿತಾಯ ಯೋಜನೆ.

ದಿನಕ್ಕೆ 25 ನಯಾಪೈಸೆ 7 ವರುಷಗಳಲ್ಲಿ **ರೂ. 700**

ಸಿಂಡಿಕೇಟ್ ಬೇಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

(ಯು.ರಾಘವೇಂದ್ರ ಆಚಾರ್ಯ,ಎಂ.ಎ.)

ಸಾಮಾನ್ಯ ರೋಗಗಳು

(ಡಾ. ಕೆ.ಎಲ್.ಐತಾಳ್,ಎಂ.ಬಿ.ಬಿ.ಎಸ್

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.

ಪ್ರತಿಗಳು ಸಿಗುವ ಮುಖ್ಯ ಸ್ಥಳ:
ನವಭಾರತ ಪುಸ್ತಕ ಭಂಡಾರ, ಉಡುಪಿ.

Edited Printed & Published by K. H. Shetty, at the Navayuga Press, Udipi, S. India.

40th year of publication. 6-4-1961 ೪೦ನೇ ವರ್ಷ

ಸಂಪುಟ ೪೦ Vol. 40

ನವಯುಗ

ಸಂಚಿಕೆ ೩೦ No. 30

ಬೆಲೆ 0=13

ಪ್ರಚಲಿತ ಪ್ರಸಂಗ:

ಜಾತೀಯ ಸಂಸ್ಥೆಗಳಿಗೆ ಪ್ರತಿಬಂಧ

ಮಿಂಚಿನ ವೇಗದಿಂದೋಡುವ ಪ್ರಪಂಚದಲ್ಲಿ ಮಾನವನ ಜೀವನ ಕ್ರಮವೂ ಅದರಂತೆಯೇ ಮುಂದುವರಿಯಬೇಕು; ಸಮಾಜ ವಿಕಾಸಕ್ಕೆ ಘಾತುಕವೆನಿಸಿದ ಜಾತೀಯ ಭಾವನೆಯು ದೂರವಾಗಬೇಕು. ಜಾತೀಯ ಸಂಸ್ಥೆಗಳಿಗೆ ಪ್ರತಿಬಂಧ ಹೇರುವುದರಿಂದ ಈ ನಿರೀಕ್ಷಿತ ಪರಿಣಾಮ ದೊರೆಯಬಹುದೆ?

ಜಾತೀಯ ಸಂಸ್ಥೆಗಳನ್ನು ಪ್ರತಿಬಂಧಿಸಬೇಕೆಂಬ ವಿಚಾರಕ್ಕೆ ಇತ್ತೀಚೆಗೆ ಅತ್ಯಧಿಕ ಗಮನವು ಭಾರತದಲ್ಲಿ ಹರಿಯುತ್ತಿದೆ ಸರ್ವರಿಗೂ ಸಮಾನಾವಕಾಶವನ್ನು ಇತ್ತು 'ಜಾತ್ಯತೀತ ರಾಷ್ಟ್ರ'ವೆಂದು ಘೋಷಿಸಿಕೊಂಡಿರುವ ಭಾರತದಲ್ಲಿ ಜಾತೀಯ ಸಂಸ್ಥೆಗಳಿಗೆ ಹಾಗೂ ಪಕ್ಷಗಳಿಗೆ ಯಾವ ಬೆಲೆಯೂ ರಾಷ್ಟ್ರೀಯ ಮಟ್ಟದಲ್ಲಿ ಇಲ್ಲವೇ ಇಲ್ಲ. ಸರಕಾರವು ಸರ್ವಸಮತಾ ಭಾವವನ್ನು ಪ್ರದರ್ಶಿಸ ಬೇಕಾಗುತ್ತದೆಯಾದುದರಿಂದ ಅದು ಯಾವುದೇ ಒಂದು ಜಾತಿಯ ಮುಂದೆ ತಲೆತಗ್ಗಿಸುವುದು ಸಾಧುವೆನಿಸುವುದಿಲ್ಲ.

ಪ್ರಪಂಚವು ಮಿಂಚಿನ ವೇಗದಿಂದ ಮುಂದುವರಿಯುತ್ತಿರುವಾಗ, ಅದನ್ನು ಸಾಧ್ಯವಾದಷ್ಟು ಅನುಸರಿಸಿಕೊಂಡು ಹೋಗುವುದು ಬುದ್ಧಿವಂತಿಗೆಯ ಲಕ್ಷಣ. ಹಾಗೆಂದು ಆಧುನಿಕತೆ ಮಾತ್ರ ಸತ್ಯ ಮತ್ತು ನಿತ್ಯವೆಂದೂ ಪ್ರಾಚೀನತೆಯು ಮಿಥ್ಯ ಮತ್ತು ಅನಿತ್ಯವೆಂದೂ ಹೇಳದಂತಾಗುವುದಿಲ್ಲ. ಮಾನವ ಸಮಾಜದ ಬೆಳವಣಿಗೆಯಲ್ಲಿ ಅಡಕವಾಗಿರುವ ಮೌಲಿಕ ತತ್ವಗಳು ಒಂದೇ. ಅವು ಯಾವ ಕಾಲಕ್ಕೂ ರೂಪಾಂತರಗೊಳ್ಳುವುದಿಲ್ಲ. ಆದರೆ, ದಿನ ಹೋದಂತೆ, ಅವು ನಾಗರಿಕತೆಯ ಮಟ್ಟಲೇರಿದಂತೆ ಈ ಮೂಲ ತತ್ವಗಳನ್ನು ಅನುಸರಿಸುವ ಕ್ರಮದಲ್ಲಿ ಪರಿವರ್ತನೆಯಾಗುತ್ತ ಬರುತ್ತದೆ ಅಷ್ಟೆ. ಕನಕದಾಸರು ಹಾಡಿದಂತೆ "ಎಲ್ಲರು ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ." ಆದರೆ, ಪ್ರತಿಯೊಬ್ಬರು ಮಾಡುವ ಕಾರ್ಯವಿಧಾನಗಳು ಮಾತ್ರ ಬೇರೆಬೇರೆಯಾಗಿರಬಹುದು ಅಷ್ಟೆ. ಅಂತೆಯೇ ಯಾವುದೇ ಒಂದು ಜಾತಿ ಇನ್ನೊಂದು ಜಾತಿಯನ್ನು ಹಿಂಸಿಸಬೇಕು, ಅದನ್ನು ನೋಯಿಸಬೇಕು ಎಂದಾಗಲೀ ಒಂದು ಧರ್ಮವು ಮತ್ತೊಂದು ಧರ್ಮವನ್ನು ತೆಗಳಬೇಕು ಎಂದಾಗಲೀ ಹೇಳುವುದಿಲ್ಲ. ಎಲ್ಲ ಧರ್ಮಗಳ ಸಾರವು ಒಂದೇ; ಅವೆಲ್ಲವುಗಳ ಗುರಿಯೂ ಒಂದೇ. ಪ್ರತಿ 'ಜಾತಿ ಮತ' ಉದ್ದೇಶವೂ ಒಂದೇ. ಆದರೆ, ಆ ಉದ್ದೇಶವನ್ನು ಕಾರ್ಯಗತಗೊಳಿಸುವ ವಿಧಾನದಲ್ಲಿ ಅಂತರವಿದ್ದೇ ತೀರಬೇಕು. ಇಲ್ಲವಾದರೆ ಪ್ರತ್ಯೇಕತೆಯಾದರೂ ಯಾಕೆ?

ಆದರೆ, ಧರ್ಮದ ಹೆಸರಿನಲ್ಲಿ, ಜಾತಿಯ ಹೆಸರಿನಲ್ಲಿ ನಡೆಯುವಷ್ಟು ಗೊಂದಲಗಳು ಪ್ರಾಯಃ ಇನ್ನಾವುದರ ಬಗ್ಗೆಯೂ ತಲೆದೋರುವುದಿಲ್ಲ. ನೊನ್ನೆ ಮೊನ್ನೆಯವರೆಗೂ ಪರದಾಸ್ಯ ಶೃಂಖಲೆಯಿಂದ ಬಂಧಿತರಾಗಿರುವ ಭಾರತೀಯರಲ್ಲಿ ಧಾರ್ಮಿಕ ಮತ್ತು ಜಾತೀಯ ಭಾವನೆಗಳು ಒಂದು ರೀತಿಯಲ್ಲಿದೆ. ಕೆಲವೊಮ್ಮೆ ಈ ಭಾವನೆಯು ಉದ್ರೇಕಗೊಂಡು ಆಗ ಬಾರದ ಅನಾಹುತಗಳಿಗೂ ಕಾರಣವಾಗುತ್ತದೆ. ಇತ್ತೀಚೆಗೆ ಜಬ್ಬಲಪುರದಲ್ಲಿ ಆದ ದೊಂಬಿ ಹಾಗೂ ಇದಕ್ಕೆ ಪ್ರತಿಯಾಗಿ ಎಂಬಂತೆ ಕರಾಚಿಯಲ್ಲಿನ ಭಾರತೀಯ ರಾಯಭಾರಿ ಕಛೇರಿಯ ಬಳಿಯಾದ ಗೊಂದಲಗಳು ಯಾವುದೇ ರಾಷ್ಟ್ರಕ್ಕೆ ಕೀರ್ತಿ ತರುವಂತಹುದಲ್ಲ. ಒಂದು ಜಾತಿಯವರಿದುರು ಮತ್ತೊಂದು ಜಾತಿಯವರನ್ನು ಎತ್ತಿಕಟ್ಟಿ ತಮ್ಮ ರಾಜಕೀಯ ಬೇಳೆ ಬೇಯಿಸಿದ ವಿದೇಶೀಯ ಆಡಳಿತದಾರರು ನಮ್ಮಲ್ಲಿ ಜಾತೀಯ ಬೀಜವನ್ನು ಹುಲುಸಾಗಿ ಬಿತ್ತಿಯೇ ಹೋದರೆನ್ನಬಹುದು. ಭಾರತವು ವಿಭಜನೆಗೊಳ್ಳುವುದಕ್ಕೆ ಇದ್ದ ಪ್ರಬಲ ಕಾರಣಗಳಲ್ಲಿ ಜಾತೀಯತೆಯೂ ಒಂದಾಗಿದೆ ಎಂಬುದು ಎಲ್ಲರಿಗೂ ತಿಳಿದಿರುವ ರಹಸ್ಯ.

ಸಮಾಜವು ಪರಿವರ್ತನಶೀಲವಾಗಿದೆ. ಒಂದು ಕಾಲದಲ್ಲಿ ಉತ್ತಮ ಸಾಮಾಜಿಕ ವ್ಯವಸ್ಥೆಯೆಂಬ ಕೀರ್ತಿಗೆ ಪಾತ್ರವಾದ ಜಾತೀಯ ಪದ್ಧತಿ ಇಂದು ನಮ್ಮ ಪ್ರಗತಿಗೆ ಬಾಧಕವಾಗುವಂತಹ ದಾರುಣ ಪರಿಸ್ಥಿತಿಗೆ ಇಳಿದಂತಿದೆ. ವಿವಿಧ ಜಾತಿಯ ಧರ್ಮದ ನಾಗರಿಕರು ನೆಲಸಿಕೊಂಡಿರುವ ಭಾರತದಲ್ಲಿ ಇಂತಹ ಸಂಕುಚಿತ ಭಾವನೆಗಳಿಂದ ಹಾನಿತಟ್ಟುವುದೇ ಅಧಿಕಾಂಶವಿದೆ. ಈ ಜಾತೀಯತೆಯ ಪ್ರಶ್ನೆ ರಾಜಕೀಯ ಕ್ಷೇತ್ರಕ್ಕೆ ಇಳಿದರಂತೂ ಮತ್ತೆ ಮೊದಲೇ ಕೋಳಕಾಗಿರುವ ನಮ್ಮ ರಾಜಕಾರಣ ನೆಗೆಣಿಗಂಜಳವಾಗುವುದು. ಆದುದರಿಂದಲೇ ಪ್ರಜಾಪ್ರಭುತ್ವ ಜಾತ್ಯತೀತ ಭಾರತದಲ್ಲಿ ಜಾತೀಯ ಪಕ್ಷಗಳಿಗೆ ಪ್ರತಿಬಂಧ ಹೇರುವುದಕ್ಕೆ ಪಾರ್ಲಿಮೆಂಟ್ ಸದಸ್ಯರನೇಕರ ಬೆಂಬಲವಿದೆ.

ಇತ್ತೀಚೆಗೆ ಸೇರಿದ ಸಂಸತ್ ಕಾಂಗ್ರೆಸ್ ಸದಸ್ಯರ ಸಭೆಯಲ್ಲಿ ಶ್ರೀ ಜಗನ್ನಾಥ ಪಹಾಡಿಯವರು ಜಾತೀಯ ಸಂಸ್ಥೆಗಳಿಗೆ ಚುನಾವಣೆಯಲ್ಲಿ ಸ್ಪರ್ಧಿಸದಂತೆ ಪ್ರತಿಬಂಧ ಹೇರುವ ಸಂಬಂಧದಲ್ಲಿ ಒಂದು ಗೊತ್ತುವಳಿಯನ್ನು ಮುಂದಿಟ್ಟರು. ಇದರ ಬಗ್ಗೆ ಹೆಚ್ಚಿನ ಸದಸ್ಯರು ಅನುಕೂಲಾಭಿಪ್ರಾಯ ಪಟ್ಟಂತೆ ವರದಿಯಾಗಿದೆ. ಜಾತೀಯ ಚಟುವಟಿಕೆಗಳಲ್ಲಿ ತೊಡಗುವುದರಿಂದ ಸ್ವಯಂ ಜಾತೀಯವಾದಿಗಳಿಗೆ ಮಾತ್ರವಲ್ಲ, ಸಮಗ್ರ ದೇಶದ ಮೇಲೆಯೂ ದುಷ್ಪರಿಣಾಮ ಬೀಳುವುದು. ಅಗರೋಕ್ಷವಾಗಿ ನಮ್ಮ ಐಕ್ಯವನ್ನು ಮುರಿದು ಛಿನ್ನತೆಯಿದೆಯೆಂಬುದನ್ನು ಬಹಿರಂಗಗೊಳಿಸಿ ನಮ್ಮ ಶತ್ರುಗಳ ಶಕ್ತಿಯನ್ನು ಹೆಚ್ಚಿಸಿದಂತಾಗುವುದು. ದೇಶದ ಒಕ್ಕಟ್ಟನ್ನು ಬಲಪಡಿಸುವುದರಲ್ಲಿಯೇ ನಮ್ಮ ಭವಿಷ್ಯವಿದೆ; ಹಿತವಿದೆ. ಆಧುನಿಕ ಜಗತ್ತಿನಲ್ಲಿ ಬಾಳಬೇಕೆಂದಿರುವವರು ಸಂಕುಚಿತ ಮನೋವೃತ್ತಿಯನ್ನು ಪರಿತ್ಯಜಿಸಬೇಕು; ಉದಾರ ಹೃದಯಾಂತಃಕರಣರಾಗಬೇಕು.

"ನಮ್ಮ ಜನರು ಇನ್ನೂ ತಾವು ಮಧ್ಯಯುಗದಲ್ಲಿದ್ದವರಂತೆ ವರ್ತಿಸುತ್ತಿರುವುದು ಎಂದಿಗೂ ಸರಿಯೆನಿಸಲಾರದು. ಅವರು ಆಧುನಿಕಕಾಲದ ಕರೆಗೆ ಓಗೊಟ್ಟು ಅದಕ್ಕೆ ಹೊಂದಿಕೊಂಡು ಬಾಳುವುದಕ್ಕೆ ರೂಢಿಸಿಕೊಳ್ಳಬೇಕು." ಎಂದ ಪ್ರಧಾನಿ ನೆಹರುರವರ ಉದ್ಗಾರ ಜಾತ್ಯಂಧರನ್ನು ಎಚ್ಚರಿಸಬೇಕಾಗಿದೆ. ಜಾತೀಯ ಸಂಸ್ಥೆಗಳಿಗೆ ಪ್ರತಿಬಂಧವನ್ನು ಹೇರುವುದು ಅಥವಾ ಚುನಾವಣೆಗಳಲ್ಲಿ ಸ್ಪರ್ಧಿಸುವ ಅವಕಾಶವನ್ನು ಅವುಗಳಿಗೆ ನೀಡದಿರುವುದು ಸಂವಿಧಾನಕ್ಕೆ ಸರಿಯಾಗಿರುವುದೇ ಎಂಬುದನ್ನು ಮೊದಲು ವಿವೇಚಿಸಿ ತಿಳಿದುಕೊಳ್ಳಬೇಕಾಗುತ್ತದೆ. ಕೇವಲ ಪ್ರತಿಬಂಧವನ್ನು ಹೇರುವುದರಿಂದ ಮಾತ್ರವೇ ನಿರೀಕ್ಷಿತ ಫಲ ಪ್ರಾಪ್ತಿಯಾಗುವುದೆಂದು ಹೇಳುವುದಕ್ಕೆ ಬಾರದು. ಆದುದರಿಂದ ಜಾತೀಯ ಭೂತವನ್ನು ಹೊಡೆದೋಡಿಸಲು ಸಾಧ್ಯವಿರುವ ಎಲ್ಲ ಉಪಾಯಗಳನ್ನೂ ನಾವು ಮಾಡಬೇಕಾಗಿದೆ. ಈ ಜಾತೀಯತೆಯ ನಿರ್ಮೂಲನಕ್ಕೆ ಜನತೆಯ ಸಹಾಯದಿಂದ ಕಾಂಗ್ರೆಸ್ಸಿಗರು ಕಾರ್ಯಪ್ರವೃತ್ತರಾಗಬೇಕೆಂದು ಪ್ರಧಾನಿ ನೆಹರೂ ಕರೆಯಿತ್ತಿದ್ದಾರೆ.

ಪ್ರಧಾನಿ ನೆಹರೂರವರ ಕರೆಯೇನೋ ಸ್ವಾಭಾವಿಕವಾದುದು; ಅವಶ್ಯಕವಾದುದು ಮತ್ತು ಸಕಾಲಿಕವಾದುದು. ಮುಸ್ಲಿಂ ಲೀಗು ಬೊಂಬಾಯಿಯ ಕಾರ್ಪ

೮ನೇ ಪುಟ ನೋಡಿರಿ

A NEW BOOK WITHIN THE REACH OF EVERYBODY

"LETTER WRITING MADE EASY"

(75 EVERY DAY LETTERS)

(Written by An Experienced Teacher.)

Useful to one and all, the teacher, the student and the layman.

Price: Rs. 1=25. (Postage extra)

If Rs.1=50 is sent by M.O one copy will be sent by B.P.

Copies can be had from the Publishers:

Navayuga Enterprise Ltd. Udipi.

and also from:

M/s Indian Industrials & Agencies, Mangalore-1.

M/s Navabharat Book Depot, Udipi.

ESTD. 1921

NAVAYUGA
KANNADA WEEKLY, UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ
ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೨೧.

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್.
ಬಿ. ಶಾಮರಾಯ ಶೆಟ್ಟಿ, ಬಿ. ಎ., ಎಲ್. ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

●

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3 50
ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ದರಬಾಬಿಗಳನ್ನಾಗಲೀ ಹಿಂದಿ ಕೆಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮಾ ಮಾಡುವ ಸೌಕರ್ಯವಿರುವುದು.

ಕಥಾವಿಹಾರ

ಕಾಡು ಮನುಷ್ಯರು......!

ಪ್ರೀತಿ—ಪ್ರೇಮವೆಂಬ ಸಿಹಿಯಾದ ಶಬ್ದಗಳಿಂದ ತಾನು ನೇಯ್ದು ಬಲೆಗೆ ಸೆಳೆದ ಮೋಹನ ಕೊನೆಗೂ ಪದ್ಮಳ ಕೈಬಿಟ್ಟ; ತನ್ನ ಹೃದಯ—ಶೀಲಗಳನ್ನು ಅತನಿಗಾಗಿ ಮಾರಿಕೊಂಡ ಪದ್ಮ ಅವನ ದೃಷ್ಟಿಗೆ ಕಾಡುಮನುಷ್ಯಳಾಗಿ ಕಂಡಳು.

ಶ್ರೀಮತಿ ಯಶೋದಾ ಯನ್. ಜೆನ್ನಿ.

ಅವನು ದಿನಾಲೂ ಆ ದಾರಿಯಿಂದ ನಡೆಯುತ್ತಿದ್ದಾಗ ನಿತ್ಯವೂ ಪುಸ್ತಕಗಳ ಹೊರೆಯೊಂದಿಗೆ ಭಾರವಾದ ಹೆಜ್ಜೆಗಳನ್ನಿಡುತ್ತಿದ್ದ ಅವಳನ್ನು ಸಂಧಿಸುತ್ತಿದ್ದ. ಅವಳು....ಅವನನ್ನು ನೋಡುತ್ತಿದ್ದಳೋ.... ಇಲ್ಲವೋ........ಆದರೆ ಅವಳ ನೋಟದ ಅರ್ಥ ಅವನಿಗಾಗುತ್ತಿರಲಿಲ್ಲ. ಅಥವಾ ಆ ನೋಟಕ್ಕೆ ಅರ್ಥವಿರಲಿಲ್ಲವೋ ಏನೋ... ಅವನನ್ನು ನೋಡಿದರೂ ಬರೇ ನೋಟ ಅಷ್ಟೆ. ಅದಕ್ಕೆ ಯಾವ ಭಾವವೂ ಇರಲಿಲ್ಲ.

ಆದರೆ...ಅವನಿಗೆ...ಹಾಗಲ್ಲ. ಅವಳನ್ನು ನೋಡಿದಾಗಲೆಲ್ಲ ಮೈಯಲ್ಲಿ ವಿದ್ಯುತ್ ಸಂಚಾರವಾದಂತಾಗುತಿತ್ತು. ಕಣ್ಣುಗಳು ಹೊಳೆಯುತ್ತಿದ್ದವು. ಯಾವುದೋ ಒಂದು ರೀತಿಯ ಆತುರ ಕಾತರತೆಗಳಿಂದ ಅವಳನ್ನು ಈಕ್ಷಿಸುತ್ತಿದ್ದ. ಆದರೆ ಅವಳ ಆ ನೋಟದ ಮುಗ್ಧತೆ ತನ್ನ ಹಂಬಲ ಅರ್ಥವಾಗದ ಆ ಮುಗ್ಧತೆ ಅವನಿಗೆ ವಿಚಿತ್ರವೆನಿಸುತಿತ್ತು. ಆದರೂ...ಆ ಮುಗ್ಧತೆಯಲ್ಲೇ ಒಂದು ಮೋಹಕ ಸೌಂದರ್ಯವಿತ್ತು. ಅಲ್ಲವೆ? ಅದೂ ಅವನಿಗೆ ಗೊತ್ತಿತ್ತು.

ಅವಳಿಗೆ ಅವನಲ್ಲಿ ಕಂಡುದು ಇಷ್ಟೆ— ಒಬ್ಬ ಯುವಕ, ಗಂಡಸು ಇಲ್ಲವೇ ಹುಡುಗ, ಅಪರೂಪವಾಗಿ ಕಣ್ಣಿಗೆ ಬೀಳುವ ಅವನ ಕೈಯಲ್ಲಿರುವ ಪುಸ್ತಕಗಳಿಂದ ಏನೋ ಕಲಿಯುತ್ತಿರಬಹುದು ಎಂದು. ಅದಕ್ಕಿಂತ ಹೆಚ್ಚಿಗೆ ತಿಳಿಯುವ ಕುತೂಹಲವೂ ಆಕೆಯಲ್ಲಿರಲಿಲ್ಲ ಅಲ್ಲದೆ ಆ ಕುತೂಹಲಕ್ಕೆ ಅರ್ಥವೂ ಇರಲಿಲ್ಲ.

ಆದರೆ ಅವನು ಹಾಗಲ್ಲ. ಅವಳ ವಿಚಾರವಾಗಿ ಅವನಿಗೆಲ್ಲ ಗೊತ್ತಿದೆ. ಅಲ್ಲ ಗೊತ್ತುಮಾಡಿಕೊಂಡಿದ್ದ. ಯಾರ್ಯಾರೊಡನೆಯೋ ವಿಚಾರಿಸಿ ಕೇಳಿ ತಿಳಿದಿದ್ದ.

ಅವಳ ಹೆಸರು ಪದ್ಮ. ಅಲ್ಲೇ ಹತ್ತಿರವಿರುವ ಹೈಸ್ಕೂಲಿಗೆ ಹೋಗುತ್ತಿದ್ದಳು. ವರ್ಷ ಹದಿನಾರೋ, ಹದಿನೆಂಟೋ.... ತಾಯಿ ವಿಧವೆ. ಅನ್ಯರ ಮನೆಯಲ್ಲಿ ಅಡುಗೆಗೆ ನಿಂತು ತನ್ನ ಏಕಮಾತ್ರ ಕುವರಿಯನ್ನು ಅಕ್ಕರೆಯಿಂದ ರಕ್ಷಿಸುತ್ತಿದ್ದಳು. ಪದ್ಮ ಅತಿ ಸುಂದರಿ ಆಗಿದ್ದಳೋ....ಇಲ್ಲವೋ...ಆದರೆ ಅವನ ಪಾಲಿಗೆ ಮಾತ್ರ ಆಕೆ ಮನಸೆಳೆಯುವ ಮೋಹಿನಿಯಾಗಿ ಕಂಡಳು. ಇನ್ನು ತಾಟಸ್ಥ್ಯ ಧೋರಣೆಯಿಂದಿರುವುದು ಅವನಿಗೆ ಸರಿಯೆನಿಸಲಿಲ್ಲ ಸಾಧ್ಯವೂ ಇರಲಿಲ್ಲವೇನೋ... ಮೊದಲ ಬಾರಿ ಅದೂ ಹೆಚ್ಚು ಜನಸಂಚಾರವಿಲ್ಲದ ಆ ರಸ್ತೆಯಲ್ಲಿ ಯುವಕನೋರ್ವನ ಒರಟು ಆದರೂ ಮೆತ್ತಗೆ ಕೇಳಿಸಬೇಕೆಂದು ಕರೆದ. "ಪದ್ಮ" ಎಂಬ ಧ್ವನಿ ಆಕೆ ಬೆಚ್ಚಿ ಬೀಳುವಂತೆ ಮಾಡಿತು. ಆಕೆ ಅವನನ್ನು ನೋಡಿದಳು ಆ ನೋಟದಲ್ಲಿನ ಬೆದರಿಕೆ ಅವನಿಗೆ ನಗು ಬರಿಸಿದರೂ ಅವನು ನಗಲಿಲ್ಲ. ನಗುವನ್ನು ತಡೆದುಕೊಂಡೇ ನಯವಾಗಿ ಕೇಳಿದ

"ಇವತ್ತು ನಿಮ್ಮ ಶಾಲೆ ಬಿಟ್ಟದ್ದು ತುಂಬ ತಡ ಅಂತ ಕಾಣುತ್ತೆ ಅಲ್ವೇ?"

"ಹ್ಞ........ಹೌದು......." ಆಕೆ ತಡೆದು ಉತ್ತರಿಸಿದಳು.

"ಏನಾದರೂ ವಿಶೇಷವಿತ್ತೇ"

"ಇಲ್ಲ....ಪರೀಕ್ಷೆ ಹತ್ತಿರ ಬಂತೂಂತ ಶಾಲೆ ಬಿಟ್ಟ ಮೇಲೂ ಕೆಲವು ಪಾಠ ಹೇಳಿ ಕೊಡ್ತಿದ್ದಾರೆ ಅಷ್ಟೆ.'' ಆಕೆ ಅವನನ್ನು ನೋಡುತ್ತಲೇ ಉತ್ತರಿಸಿದಳು. ಆ ನೋಟದಲ್ಲ ಯಾವ ವಿಶೇಷತೆಯೂ ಇರಲಿಲ್ಲ. ಭಯವೂ ಮಾಯವಾಗಿತ್ತು. ಹೀಗೆ ಮೊದಲು ಮಾಡಿದ ಅವನ ಪರಿಚಯ ತಾನಾಗಿಯೋ ಅಥವಾ ಅವನ ಪ್ರಯತ್ನದಿಂದಾಗಿಯೋ ಸ್ನೇಹವಾಗಿ ಪರಿಣಮಿಸಿತು.

ಅವಳಿಗೆ ಆತನೊಂದಿಗೆ ಮಾತನಾಡುವುದಕ್ಕೇನೋ ಅಡ್ಡಿ, ಆತಂಕಗಳಿವೆ ಎನಿಸಲಿಲ್ಲ. ಆದರೂ ದಿನ ಬರುತ್ತಾ ಆತ ಹೆಚ್ಚು ಹೆಚ್ಚಾಗಿ ತೋರುತ್ತಿದ್ದ ಸಲಿಗೆ ಮಾತ್ರ ಅಸಹ್ಯವೆನಿಸಿತು. ಭಯವೆನಿಸಿತು ವಿಚಿತ್ರವಾಗಿಯೂ ತೋರಿತು. ಆದರೂ ಆಕೆ ಏನನ್ನೂ ವಿರೋಧಿಸಲಿಲ್ಲ. ಅವಳ ಮನದಲ್ಲೇನಿದೆಯೆಂದು ಅವನಿಗೂ ತಿಳಿಯಲಿಲ್ಲ. ಆ ದಿನ.... ...ದುರ್ದಿನವೋ........ ಸುದಿನವೋ.......ಆದರೂ ಆತ ಆ ದಿನಕ್ಕಾಗಿ ಎಷ್ಟೊಂದು ಸಮಯದಿಂದ ಹಂಬಲಿಸಿದ್ದನೆಂದು ಅವಳಿಗೆ ಹೇಗೆ ಗೊತ್ತು? ಮೋಹನನ ಪಾಲಿಗಂತೂ ಮೋಹಿಸಿದ ಹಕ್ಕಿ ಬಲೆಯಲ್ಲಿ ಬಿದ್ದಿತ್ತು ಅಷ್ಟೆ. ಬರಿಯ ಸರಳ ಸ್ನೇಹದಿಂದೆಂಬಂತೆ ಸಲಿಗೆ ಬೆಳೆಸಿ ಮನವೊಲಿಸಿ ಹರಟೆಗಾಗಿ ಎಂದು ಕರೆದೊಯ್ಯುತ್ತಿದ್ದ ನಿರ್ಜನ ಪ್ರದೇಶದ ಬಂಡೆ ಕಲ್ಲಿನ ಬಳಿ ಆ ದಿನ........ಪದ್ಮ ಆ ಮೊದಲು ಸಂಕೋಚದಿಂದ ಆ ಮೇಲೆ ಭಯದಿಂದ ಅನಂತರ ಅಚ್ಚರಿಯಿಂದ ತನ್ನ ಸ್ನೇಹವನ್ನು ಮುರಿಯಲೆತ್ನಿಸಿದಳು.

ಆದರೆ ತುಂಬ ಅನುಭವಿಯಾದ ಆ ಮಾತಿನ ಜಾಣ ಅರಿಯದ ಹೆಣ್ಣನ್ನು ಬಹಳ ಸುಲಭವಾಗಿ ಸೋಲಿಸಿತ್ತು. ಅಂದಿನ ಅವನ ವಾಕ್ ವೈಖರಿ ಪದ್ಮಳನ್ನು ಮೂಕಿಯನ್ನಾಗಿ ಮಾಡಿತ್ತು. ಆದರೆ ಅವನ ಗಂಟೆಗಟ್ಟಲೆಯ ಕಂಠ ಶೋಷಣೆ ವ್ಯರ್ಥವಾಗಿರಲಿಲ್ಲ. ಪದ್ಮ ಯಾವುದೋ ಕನಸಿನ ಲೋಕಕ್ಕೆ ತೆರಳಿದ್ದಳು. ಅವಳು ಆನಂದದಿಂದಲೋ, ಉನ್ಮಾದದಿಂದಲೋ, ಅಥವಾ ಅತಿಯಾದ ಅಚ್ಚರಿಯಿಂದಲೋ ಮೂಕಿಯಾಗಿದ್ದಳು.

ಒಂದು ಗಂಟೆಯ ಅವನ ವಾಕ್ ಪ್ರವಾಹದಲ್ಲಿ ಅವಳ ಮನದಲ್ಲಿ ಹರಿಯುತ್ತಿದ್ದ ವಾಕ್ಯಗಳೆರಡೇ ಎರಡು.

"ಪದ್ಮ! ನಾನು ನಿನ್ನನ್ನು ಮದುವೆಯಾಗ್ತೇನೆ. ನನ್ನ ಹತ್ತಿರ ತುಂಬ ಹಣವಿದೆ. ವಿದ್ಯೆಯಿದೆ. ನಿನ್ನನ್ನು ನೋಡಿ ನಾನು ಭ್ರಮಿತನಾಗಿದ್ದೇನೆ. ನಿನಗಾಗಿ ಏನನ್ನೂ ಮಾಡುವೆ. ಏನು ಬೇಕಾದರೂ ಮಾಡುವೆ."

. ಪ್ರಪಂಚವನ್ನೇ ಅರಿಯದ ಪದ್ಮಳಿಗೆ ಹಿಂದಿನ ದಿನವೇ ತಾಯಿ ಪ್ರಪಂಚ ಜ್ಞಾನವನ್ನು ಹೃದಯ ತಡೆಯದೆ ಬಣ್ಣಿಸಿದರು. "ಪದ್ಮ! ನೀನು ಒಳ್ಳೆಯವನೊಬ್ಬನ ಕೈಹಿಡಿಯಬೇಕೆಂದು ನನಗೆ ತುಂಬ ಆಶೆಯಿತ್ತು. ಆದರೆ.... ಪದ್ಮ! ಬಡವರ ಹೆಣ್ಣಿನ ಕೈಹಿಡಿಯಲು ಯಾರು ಮುಂದೆ ಬರುತ್ತಾರೆ? ನೀನು ಹತಭಾಗ್ಯೆಯಾಗಿ ಹುಟ್ಟಿರುವೆ ಮಗು."

(೧೧ನೇ ಪುಟ ನೋಡಿರಿ)

ಸ್ಥಾಪನೆ: 1924

ದಿ ಕರ್ನಾಟಕ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಆಫೀಸು: ಮಂಗಳೂರು—3.

ಈ ಕೆಳಗಿನ ಬಡ್ಡಿ ದರಗಳಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು

ಒಂದು ತಿಂಗಳಿಗೆ	....	ಸಾ|| ಸೇಕಡಾ	3-75	ನ.ಪೈಸೆ.
ಮೂರು ತಿಂಗಳುಗಳಿಗೆ	....	,,	4-00	,,
ಆರು ತಿಂಗಳುಗಳಿಗೆ	....	,,	4·25	,,
12 ತಿಂಗಳುಗಳಿಂದ23 ತಿಂಗಳುಗಳ ವರೆಗೆ	....	,,	4-50	,,
24 ತಿಂಗಳುಗಳಿಂದ 48 ತಿಂಗಳುಗಳ ವರೆಗೆ	....	,,	4·75	,,

"ಹನಿ ಡಿಪೋಸಿಟ್ಸ್" ನಲ್ಲಿ

ನಿಮ್ಮ ದೈನಂದಿನ ಉಳಿತಾಯವನ್ನು ವಿನಿಯೋಗಿಸಿರಿ.

THE KARNATAKA BANK LIMITED.

ಅಮೃತಾಂಜನ
ಎಲ್ಲಾ ನೋವುಗಳಿಗೆ ಸಿದ್ಧೌಷಧ

ಎಲ್ಲಾ ತರದ ಸಿಡಿತ ಮತ್ತು ನೋವುಗಳಿಗೆ

50 ವರ್ಷ ಪ್ರಾಯದ

ಪಾಕೆಟ್-ಡಾಕ್ಟರ್

ರವೀಂದ್ರ ವಾಣಿ:

ವಿಶ್ವದೊಡನೆ ವ್ಯಕ್ತಿಯ ಸಂಬಂಧ

(ಲೇಖಾಂಕ ೪)

> ವಿಶ್ವದ ಅಸಂಖ್ಯ ರೂಪಗಳಿಂದ ಪ್ರಕಟಗೊಳ್ಳುವ ಶಕ್ತಿ ಮಾನವನಲ್ಲಿಯೂ ಪ್ರಕಟವಾಗಿದೆ. ಅದರ ನೆರಳಲ್ಲಿ ಅಮೃತವಿದೆ, ಜೀವನವಿದೆ; ಮೃತ್ಯುವೂ ಇದೆ. ಜೀವನವೇ ಮೃತ್ಯುವಾಗಿದೆ. ಆದುದರಿಂದ ಜೀವನ ಮತ್ತು ಮರಣಗಳನ್ನು ಸಮಾನದೃಷ್ಟಿಯಿಂದ ಸ್ವೀಕರಿಸಬೇಕು.

ಮೂಲ ಲೇಖಕರು: ವಿಶ್ವಕವಿ ರವೀಂದ್ರನಾಥ ಟಾಗೋರ್.
ಅನುವಾದಕರು: ಶ್ರೀ ಕೆ. ಎನ್. ಭಟ್, ಶಿರಾಡಿಪಾಲ್.

“ಸೂಜಿಯ ಸಣ್ಣ ತೂತಿನ ಮೂಲಕ ಒಂದು ವೇಳೆ ಒಂಟೆಯೂ ಪ್ರವೇಶಿಸಿ ಹೋಗಬಹುದೆಂದರೂ ಸ್ವರ್ಗ ಸಾಮ್ರಾಜ್ಯದಲ್ಲಿ ಧನಿಕನ ಪ್ರವೇಶವು ಅಸಂಭವವಾಗಿರುವುದು” ಎಂಬ ಈ ಮಾತನ್ನು ಈಸಾಮಸೀಹನು ಹೇಳಿರುವನು. ನಿಜವಾಗಿಯೂ ಈ ಮಾತಿನಲ್ಲಿ ಸತ್ಯದ ಛಾಯೆ ಇರುವುದು. ಈ ಮೇಲಿನ ವಾಕ್ಯದಿಂದ ನಮಗೆ ತಿಳಿಯುವ ಒಟ್ಟು ಅಭಿಪ್ರಾಯವೇನೆಂದರೆ – ಯಾವ ಸಂಪತ್ತನ್ನು ನಾವು ನಮಗಾಗಿಯೇ ಸಂಗ್ರಹಿಸುತ್ತೇವೋ, ಅದು ನಮ್ಮನ್ನು ಅನ್ಯರಿಂದ ಬೇರ್ಪಡಿಸಲು ಸಹಾಯಕವಾಗುತ್ತದೆ ನಮ್ಮ ಸಂಪತ್ತಿಗಿಂತ ಹೆಚ್ಚಿನದು ಬೇರೊಂದಿಲ್ಲ ಎಂಬಂತೆ ನಮಗನಿಸುತ್ತದೆ. ಧನ ಸಂಪಾದನೆಯಲ್ಲೇ ತಲ್ಲೀನನಾಗಿರುವ ವ್ಯಕ್ತಿಯ ಅಹಂಭಾವವು, ಅವನನ್ನು ಸಮತಾ ಭಾವಪೂರ್ಣವಾದ ಆಧ್ಯಾತ್ಮಿಕ ಜಗತ್ತಿನ ದ್ವಾರದ ಮೂಲಕ ಪ್ರವೇಶಿಸಲು, ಅಸಮರ್ಥನನ್ನಾಗಿ ಮಾಡುತ್ತದೆ. ಧನಲೋಭಿಯಾದ ಆ ವ್ಯಕ್ತಿಯು, ತನ್ನ ಧನ ಸಂಪತ್ತಿನ ಸಂಕೀರ್ಣವಾದ ಆವರಣದೊಳಗೆ ತನ್ನನ್ನು ತಾನೇ ಬಂಧಿಸಿಕೊಳ್ಳುತ್ತಾನೆ. ಇದಕ್ಕಾಗಿ ಉಪನಿಷತ್ತುಗಳ ರಹಸ್ಯವು “ವಿಶ್ವಾತ್ಮನನ್ನು ಗುರುತಿಸಲು ಸರ್ವ ಭೂತಗಳಲ್ಲಿಯೂ, ಆತ್ಮೀಯತೆಯ ಭಾವವನ್ನಿಡು.” ಎಂಬ ಪರವನ್ನೂ ಬೋಧಿಸುತ್ತದೆ. ಧನಲೋಭದಿಂದ ನಾವು ಅಲ್ಪ ವಸ್ತು ವಿಷಯಗಳ ಲೋಭಮೋಹದಲ್ಲಿ ಸಿಲುಕಿ ಮಹತ್ವವನ್ನು ಕಳೆದುಕೊಳ್ಳಲಾರಂಭಿಸುತ್ತೇವೆ ಪೂರ್ಣವೆಂಬುದು ಯಾವುದಿದೆಯೋ, ಅದನ್ನು ಹೊಂದಲು, ಈ ಪರಿಯಿಂದ ಮುಂದುವರಿದರೆ ಸಾಧ್ಯವಿಲ್ಲ.

ಯುರೋಪಿನ ಕೆಲವು ಆಧುನಿಕ ವಿಮರ್ಶಕರು, ನಮ್ಮ ಉಪನಿಷತ್ತುಗಳಿಂದ ಜ್ಞಾನಗ್ರಹಣ ಮಾಡಿಯೂ, ಅದರ ಉಲ್ಲೇಖಮಾಡಿ, ಕೃತಜ್ಞತೆಯನ್ನ ಸೂಚಿಸಲು ಸಂಕೋಚ ಪಡುತ್ತಾರೆ. ಗಹನವಾದ ಉಪನಿಷತ್ತುಗಳ ಸಾರವನ್ನು ಸರಿಯಾಗಿ ಅರ್ಥವಿಸಲು ಅವರಿಗೆ ಸಾಧ್ಯವಾಗುವುದಿಲ್ಲ. ಈ ಕಾರಣದಿಂದ ಅವರು ತಮ್ಮ ಕಿಂಚಿತ್ ಜ್ಞಾನದಿಂದ “ಭಾರತದ ಬ್ರಹ್ಮನೆಂದರೆ ಕೇವಲ ಕಲ್ಪನೆಯ ಒಂದು ವಸ್ತು! ಮತ್ತು ಭಾರತೀಯ ಜ್ಞಾನವು ಜಗತ್ತಿನ ಸಮಸ್ತ ವಸ್ತುಗಳ ನಿಷೇಧದಿಂದಲೇ ಸ್ಥಾಪಿತವಾಗುತ್ತದೆ.” ಎಂದು ಭಾವಿಸುತ್ತಾರೆ ಭಾರತದ ಕೆಲವು ವಿಚಾರವಂತರು ಕೂಡ, ಹೀಗೆಯೇ ಭಾವಿಸುವ ಸಂಭವವಿದೆ. ಆದರೆ ಭಾರತೀಯ ವಿಚಾರ ವಿಮರ್ಶೆ ಮಾತ್ರ ಈ ಮೇಲಿನ ಭಾವನೆಗೆ ಅನುಕೂಲವಾಗಿ ಸರ್ವಥಾ ಇಲ್ಲ. ಭಾರತವು ಅನಂತವೂ ವ್ಯಾಪಕವೂ ಆದ ಆ ಮಹಾ ಚೇತನವನ್ನು ಸೃಷ್ಟಿಯ ಪ್ರತಿಯೊಂದು ಕಣ, ಕಣ,ಗಳಲ್ಲಿ ಅಣು ತೃಣಗಳಲ್ಲಿ ಕೂಡ, ಕಂಡುಕೊಳ್ಳುತ್ತ ಅದನ್ನು ತನ್ನ ಹೃದಯದಿಂದ ಸ್ಪರ್ಶಿಸಲು ಸಾಧನಾರೂಪೀ ತಪಸ್ಸನ್ನು ಮಾಡುತ್ತದೆ. ಈ ಸಾಧನಾ ರೂಪದ ತಪಸ್ಸೇ ಭಾರತೀಯ ಜೀವನದ ಮಾರ್ಗದರ್ಶಕವಾಗಿರುವುದು.

“ಈಶಾವಾಸ್ಯಮಿದಂ ಸರ್ವಂ ಯತ್ಕಿಂಚಿತ್ ಜಗತ್ಯಾಂ ಜಗತ್” ಜಗತ್ತಿನ ಪ್ರತಿಯೊಂದು ವಸ್ತುವಿನಲ್ಲೂ ಈಶ್ವರನು ವಾಸ ಮಾಡುತ್ತಿದ್ದಾನೆ! ಎಂಬ ಈ ಭಾವನೆಯಿಂದಲೇ ಉಪನಿಷತ್ತು ಪ್ರಾರಂಭವಾಗಿದೆ.

“ಯೋದೇವೋಗ್ನೌ, ಯೋಪ್ಸುಯೋ ವಿಶ್ವಂಭುವನ ಮಾವಿವೇಶ, ಯೋಔಷಧೀಶು, ಯೋವನ ಸ್ಪತಿಷು, ತಸ್ಮೈ ದೇವಾಯ ನಮೋನಮಃ॥ ಅಗ್ನಿಯಲ್ಲಿಯೂ ಜಲದಲ್ಲಿಯೂ, ಸಕಲ ಚರಾಚರ ವಿಶ್ವದಲ್ಲಿಯೂ ಮತ್ತು ಔಷಧಿ ವನಸ್ಪತಿಗಳಲ್ಲಿಯೂ ಇರುವ ಆ ದೇವತೆಗೆ ನಾನು ಪ್ರಣಾಮಗಳನ್ನರ್ಪಿಸುತ್ತೇನೆ. ಈ ರೀತಿ ಉಪನಿಷತ್ತುಗಳಲ್ಲಿ ದಿವ್ಯ ಭಾವನೆ ಇರುವುದು. ಹೀಗಿರಲು, ಈಶ್ವರನು ನಿಷೇಧಾತ್ಮಕವಾದ ಈ ಜಗತ್ತಿನ ಭ್ರಾಂತಿಯನ್ನವಲಂಬಿಸಿ ಹೇಗೆ ಇರಬಲ್ಲನು? ನಾವು ಈಶ್ವರನನ್ನು ಸರ್ವ ವ್ಯಾಪಕನಾದವನೆಂದು ಮಾತ್ರ ಭಾವಿಸುವುದಲ್ಲ; ವಿಶ್ವದ ಪ್ರತಿಯೊಂದು ಕಣದಲ್ಲಿಯೂ ಇರುವನೆಂದು ಭಾವಿಸಿ ವಂದಿಸುತ್ತೇವೆ. ಉಪನಿಷತ್ತಿನ ಜ್ಞಾನದಿಂದ ಪ್ರಭಾವಿತನಾದ ಮನುಷ್ಯನ ಮನಸ್ಸು ವಿಶ್ವದ ವಿಭೂತಿಗಳ ಬಗೆಗೆ ಶ್ರದ್ಧೆಯನ್ನು ತಳೆದಿರುತ್ತದೆ. ಪ್ರತಿಯೊಂದು ವಸ್ತುವಿನಲ್ಲಿಯೂ ದೇವರಿದ್ದಾನೆಂದು, ಈ ಶ್ರದ್ಧೆ ಆ ದೈವವನ್ನು ಆರಾಧಿಸುತ್ತದೆ. ಹೀಗೆ ಶ್ರದ್ಧಾನ್ವಿತವಾದ ಮನುಷ್ಯನ ಮನಸ್ಸಿಗೆ ಒಂದು ಪರಮ ಸತ್ಯದ ಅಧಿಕಾರ ಜ್ಯೋತಿಯು, ಸಂಪೂರ್ಣ ವಿಶ್ವವನ್ನೇ ಸತ್ಯವನ್ನಾಗಿ ಪರಿವರ್ತಿಸುತ್ತದೆ ಈ ಜ್ಞಾನವು ಮನಸ್ಸಿಗೆ ಖಚಿತವಾಗಿ ತಿಳಿದ ಬಳಿಕ ಭಕ್ತಿ ಭಾವ ಹುಟ್ಟುತ್ತದೆ. ಆಗ ನಾವು “ನಮೋ ನಮಃ” ಎಂದು ಸರ್ವವ್ಯಾಪಕವಾದ ಆದ ಆ ಶಕ್ತಿಯನ್ನು ವಂದಿಸುತ್ತೇವೆ. ಆನಂದದಿಂದ ವೈದಿಕ ಋಷಿಗಳು ಸಂಪೂರ್ಣ ವಿಶ್ವವನ್ನೇ ಸಂಬೋಧಿಸಿ— “ಶೃಣ್ವಂತು ವಿಶ್ವೇ ಅಮೃತಸ್ಯ ಪುತ್ರಾಃ ಆಯೆ ದಿವ್ಯ ಧಾಮಾನಿ ತಸ್ಥುಃ ವೇದಾಹಮೇತಂ ಪುರುಷಂ ಮಹಾಂತ ಮಾದಿತ್ಯ ವರ್ಣಂ ತಮಸಃ ಪರಸ್ತಾತ್!” ಅರ್ಥಾತ್—ಹೇ ಅಮೃತ ಪುತ್ರರೇ ನೀವು ದಿವ್ಯ ಧಾಮದಲ್ಲಿರುವಿರಿ ಅಂಧಕಾರಹೀನವಾದ ಯಾವ ಜ್ಯೋತಿಯಿಂದ ನೀವು ಶೋಭಿಸುತ್ತಿರುವಿರೋ ಆ ದಿವ್ಯ ಜ್ಯೋತಿಯನ್ನು ನಾನು ಬಲ್ಲೆ!, ಎಂದು ಹೇಳುತ್ತಾರೆ. ಇಂತಹ ಈ ಆನಂದಾನುಭವವು ಆ ಸುಜ್ಯೋತಿಯ ಸಾಕ್ಷಾತ್ ಆನುಭವ ಪಡೆದ ಮಹಾತ್ಮರಿಗೆ ಮಾತ್ರ ಬರುವುದು ಈ ವ್ಯಾಖ್ಯಾನದಲ್ಲಿ ತಿಳಿವಮಾತ್ರವೂ ಅಸ್ಪಷ್ಟತೆ ಇಲ್ಲ. ಇಂತಹ ಆನಂದವು ಎಂದಿಗೂ ಕಾಲ್ಪನಿಕವಾಗಲಾರದು.

ಮಹಾತ್ಮಾ ಬುದ್ಧನು ಉಪನಿಷತ್ತಿನ ನೀತಿಬೋಧೆಯನ್ನು ಜೀವನದಲ್ಲಿ ಕಾರ್ಯಾನ್ವಿತ ಮಾಡಿಕೊಳ್ಳುವ ಕಲೆಯನ್ನು ಅಭ್ಯಸಿಸಿದ ಬಳಿಕ ಯಾವ ಸಂದೇಶವನ್ನು ಕೊಟ್ಟಿದ್ದನೋ, ಅದರಲ್ಲಿಯೂ ಈ ಆದರ್ಶದ ವ್ಯಾಖ್ಯಾನ ಮಾಡಿದ್ದನು— “ಭೂಮಿ ಅಥವಾ ಆಕಾಶದಲ್ಲಿ ದೂರ ಅಥವಾ ಸಮೀಪ ದೃಶ್ಯ ಯಾ ಅದೃಶ್ಯವಾಗಿ ಏನು ಇರಬಹುದೋ ಅದರ ಕುರಿತು ಪವಿತ್ರವಾದ ಪ್ರೇಮ ಭಾವನೆಯನ್ನಿಡು. ಹೃದಯದಲ್ಲಿ ದ್ವೇಷ ಅಥವಾ ಹಿಂಸೆಯ ಭಾವನೆ ಜಾಗೃತವಾಗಲು ಎಡೆಕೊಡಬೇಡ. ಜೀವನದ ಪ್ರತಿಯೊಂದು ಕಾರ್ಯದಲ್ಲಿಯೂ, ಕುಳಿತುಕೊಳ್ಳುವಾಗ ಏಳುವಾಗ – ಮಲಗುವಾಗ ಏಳುವಾಗ ಹೀಗೆ ಸದಾ ಈ ಪವಿತ್ರ ಭಾವನೆ ಪೂರ್ಣವಾಗಿ ತುಂಬಿಕೊಂಡಿರುವುದೇ ಬ್ರಹ್ಮ ವಿಹಾರವಾಗಿದೆ. ಅದನ್ನ ಬೇರೆ ಶಬ್ದಗಳಿಂದ ಹೇಳುವುದಾದರೆ, ಜೀವನದ ಈ ಗತಿಯಿಂದ ಆತ್ಮನಲ್ಲಿ ಬ್ರಹ್ಮಾನಂದ ಸಂಚಾರದ ಅನುಭವ ಮಾಡಿಕೊಳ್ಳಬಹುದು” ಇದೇ ಬುದ್ಧನ ಸಂದೇಶದ ಸಾರಾಂಶವಾಗಿದೆ.

ಈ ಬ್ರಹ್ಮನೆಂದರೆ ಯಾರು? ಈ ಬ್ರಹ್ಮನ ಆತ್ಮನೆಂದರೇನು? ಎಂಬದಕ್ಕೆ ಉಪನಿಷತ್ತುಗಳ ಪ್ರಕಾರ “ಯಶ್ಚಾಯ ಮಸ್ಮಿನ್ನಾಕಾಶೇ ತೇಜೋಮಯಃ ಪುರುಷಃ ಸರ್ವಾನುಭೂಃ’ ಎಂದರೆ ಯಾವುದು ಆಕಾಶದಲ್ಲಿ ತೇಜೋಮಯವೂ ಅಮೃತಮಯವೂ ಆಗಿರುವುದೋ ಮತ್ತು ಯಾವುದು ವಿಶ್ವಚೇತನವಾಗಿರುವುದೋ ಅದೇ ಬ್ರಹ್ಮವಾಗಿದೆ. ಉಪನಿಷತ್ತಿನ ಹೇಳಿಕೆಯಂತೆ, ಆಕಾಶದಲ್ಲಿ ಮಾತ್ರವಲ್ಲ; ನಮ್ಮ ಅಂತಃಕರಣದಲ್ಲಿ ತೇಜೋಮಯನೂ — ಅಮೃತಮಯನೂ ಆದ ಯಾವ ಪುರುಷನಿರುವನೋ ಮತ್ತು ಯಾವುದು ವಿಶ್ವಚೇತನದ ಸ್ರೋತವಾಗಿದೆಯೋ ಅದೇ ಪರಬ್ರಹ್ಮವಾಗಿದೆ. ಈ ವ್ಯಾಪಕವಾದ ಚೇತನವನ್ನು ಅನುಭವ ಮಾಡಲು ನಾವು ನಮ್ಮ ಆಂತರಿಕ ಚೇತನದಿಂದ ವಿಶ್ವದ ಪುನೀತವಾದ ಚೇತನದೊಡನೆ, ಸಮಭಾವವನ್ನು ಸ್ಥಾಪಿಸಬೇಕಾಗಿದೆ ಮಾನವನ ಅಭ್ಯುದಯದ ನಿಜವಾದ ಅರ್ಥವು ಈ ವಿಶ್ವ ಚೇತನದ ಉದಯ ಮತ್ತು ವಿಸ್ತಾರವೇ ಆಗಿರುವುದು. ನಮ್ಮ ಸಾಹಿತ್ಯ ಕಲೆ, ವಿಜ್ಞಾನ ಮತ್ತು ದರ್ಶನ, ಇವೆಲ್ಲವೂ ಈ ಚೇತನವನ್ನು ವಿಸ್ತಾರಗೊಳಿಸುವ ಉದ್ದೇಶವನ್ನೇ ಸಾಧಿಸುತ್ತಿವೆ. ನಮ್ಮ

೧೦ನೇ ಪುಟ ನೋಡಿರಿ

WARNING NOTICE.

All concerned are hereby informed that the properties of Late Shri Baikadi Vaman Padiyar are in dispute. Any person purchasing, giving loans on the strength of it to his widow i) Mrs. Marthi Bai, ii) his second son B. Krishna Padiyar iii) B. Dinanath Padiyar or any other claimant will do so at his own risk and responsibility. There is a claim of Rupees Three Thousand and nine hundred with interest thereon besides the share. Till claims reach a settlement any deal in the said properties will be considered null and void.

Sd. B. R. Padiyar
(B. R. Padiyar,
Son of Late B. V. Padiyar.)
Dt. 31st March '61.

ಕಳೆದ 5 ವರ್ಷಗಳ ಅದ್ವಿತೀಯ ಪ್ರಗತಿ!!!

	31.12.1956ರಲ್ಲಿ ರೂ.	31.12.1960ರಲ್ಲಿ ರೂ.
1 ತೆತ್ತ ಮೂಲಧನ ಮತ್ತು ಕ್ಷೇಮನಿಧಿ.	3,18,000	6,87,000
2 ಗವರ್ನ್‌ಮೆಂಟ್ ಸೆಕ್ಯೂರಿಟಿಸ್ ಇತ್ಯಾದಿ:	6,96 000	45,23,000
3. ಒಟ್ಟು ಸಾಲಗಳು	12,92 000	69,90,000
4. ಒಟ್ಟು ಠೇವಣಾತಿಗಳು	20,49,000	1,17,99,000
5 ಚಲಾವಣಾ ಭಂಡವಾಳ	24,55,000	1,31,00,000

ಜನತಾ ಸೇವೆಯ ಮುನ್ನಡೆಯಲ್ಲಿ....

ದಿ. ಪಾಂಗಾಳ ನಾಯಕ್ ಬೇಂಕ್ ಲಿ.,
ರೆಜಿಸ್ಟರ್ಡ್ ಆಫೀಸು: ಉಡುಪಿ, ದ. ಕನ್ನಡ. ಸ್ಥಾಪನೆ: 1920



ಆರೋಗ್ಯ ನಿಧಾನ:

ಶಕ್ತಿವರ್ಧಕ ಆಹಾರಾಂಶ - ಸಕ್ಕರೆ

ಸಕ್ಕರೆಯನ್ನು ರುಚಿಗಾಗಿ ಮಾತ್ರ ತಿನ್ನಬೇಕೆಂಬುದು ತಪ್ಪು ತಿಳುವಳಿಕೆ ಮನಸ್ಸಿನ ಆಯಾಸವನ್ನು ಮಾನಸ ಚಿಕಿತ್ಸೆಯಿಂದ ದೂರ ಮಾಡುತ್ತೇವೆಂಬುದೂ ಭ್ರಾಂತಿಯಾಗಿದೆ ಡಾ। ಪೆಟ್ರಿಸರು ಈ ಲೇಖದಲ್ಲಿ ಸಕ್ಕರೆಯನ್ನು ಶರೀರಕ್ಕೆ ಮಾತ್ರವಲ್ಲ ಮೆದುಳಿಗೂ ಅತಿ ಉಪಯುಕ್ತ ಪದಾರ್ಥವೆಂಬುದನ್ನು ಸಿದ್ಧಮಾಡಿ ಕೊಟ್ಟಿದ್ದಾರೆ.

ಯಾವಾಗಲೂ ಆಯಾಸಗೊಂಡಿರುವುದು, ಮುಂಜಾನೆ ಎದ್ದೊಡನೆಯೇ ತಲೆನೋವು ಮತ್ತು ಶರೀರ ಭಾರವಾದಂತೆನಿಸುವುದು, ಹಾಸಿಗೆ ಬಿಟ್ಟೇಳುವುದಕ್ಕೇನೇ ಮನಸ್ಸು ಒಡಂಬಡದಿರುವುದು, ಕೆಲಸಕಾರ್ಯದಲ್ಲಿ ಬಹು ಬೇಗನೆ ಆಲಸ್ಯವೊಳದೋರುವುದು, ಯಾವುದೇ ಒಂದು ವಸ್ತುವಿನಲ್ಲಿ ಆಸಕ್ತಿಯಿಲ್ಲದಿರುವುದು—ಇವು ಒಂದೊಂದೇ ಹಾನಿಕಾರಕವಿವೆ ಅಲ್ಲದೇ ಇವೆಲ್ಲವೂ ಒಬ್ಬನಲ್ಲಿ ಮನೆಮಾಡಿದುವೆಂದರೆ, ಆತನು ಪೌಹಾರಿ ವೈದ್ಯರ ಮನೆ ಹೋಗಿಯೇ ಹೋಗುತ್ತಾನೆ ಇಂತಹ ರೋಗಗಳಿಗೆ ತಿನ್ನುವುದರಿಂದ ಅದವಾರ ಸೌಷಧಿ ಸೇವನೆಯಿಂದ ಗುಣವು ಖಾವಾಗುವುದಿಲ್ಲ ಡಾಕ್ಟರಂದರೂ "ಮನೆಗೆ ಹೋಗಿ ನಿಶ್ಚಿಂತರಾಗಿರಿ, ಎಲ್ಲವೂ ಸರಿಹೊಂದುವುದು" ಎಂದು ಹೇಳಿ ಕಳುಹಿಸುವುದುಂಟು

ನಿಮ್ಮಲ್ಲಿ ಉಪರ್ಯುಕ್ತ ಲಕ್ಷಣಗಳು ಇರುವುದಾದರೆ, ನೀವು 'ಹೈಪೊಗ್ಲಿಸೇಮಿಯಾ' ರೋಗಕ್ಕೆ ಆಹುತಿಯಾಗಿದ್ದೀರಿ ಎಂದು ತಿಳಿಯಿರಿ ಹೆದರಬೇಡಿ, ರೋಗದ ಹೆಸರು ಕೇಳಿದೊಡನೆಯೇ ಕಂಗಾಲಾಗಬೇಡಿರಿ ಸಾಧಾರಣ ಭಾಷೆಯಲ್ಲಿ ಹೇಳುವುದಾದರೆ, ನಿಮ್ಮ ಶರೀರದಲ್ಲಿ ಸಕ್ಕರೆಯ ಅಭಾವವಿದೆಯೆಂದು ಹೇಳಬಹುದು. ಇದರಿಂದ ನಿಮ್ಮ ಮೆದುಳು, ಹೃದಯ ಮತ್ತು ಮೂತ್ರಪಿಂಡಗಳು ಸಮರ್ಪಕ ರೀತಿಯಲ್ಲಿ ಕೆಲಸ ಮಾಡುವುದಿಲ್ಲ ಇಂತಹ ಸ್ಥಿತಿಯು ಶಾರೀರಿಕ ದೃಷ್ಟಿಯಿಂದ ಮಾತ್ರವಲ್ಲ ಸಾಮಾಜಿಕ ಮತ್ತು ಪಾರಿವಾರಿಕ ದೃಷ್ಟಿಯಿಂದಲೂ ಕಷ್ಟಪ್ರದವಾಗಿದೆ, ಹಾನಿಕರವಾಗಿದೆ ಇಪ್ಪತ್ತನಾಲ್ಕು ತಾಸೂ ಗ್ಲಾನಿಯಿಂದಿರುವುದು, ಪ್ರಫುಲ್ಲತೆಯ ಅಭಾವ ಮತ್ತು ಸಿಡಿಮಿಡಿಗೊಳ್ಳುವಿಕೆಗಳು ಸಾಮಾಜಿಕತೆ ಹಾಗೂ ಲೋಕಪ್ರಿಯತೆಯ ಶತ್ರುಗಳಾಗಿವೆ

ಡಾ| ಸಿಡ್ನಿ ಎ ಪೋರ್ಟಿಸ್ ಎಂಬವರು ಪ[illegible] ಅತ್ಯಧಿಕ ಆಯಾಸಪಡುವವರ ಕಾರಣವೇನೆಂಬುದನ್ನು ಅರಿಯಲು [illegible] ಜೀವನವನ್ನೇ ಮುಡಿಪಾಗಿಟ್ಟರು. ಇವರ ಅಭಿಪ್ರಾಯದಂತೆ ಕಚೇರಿ ಗೃಹಿಣಿಯರು, ಶಿಕ್ಷಕರು, ಆಫೀಸುಗಳಲ್ಲಿ ಕೆಲಸ ಮಾಡುವವರು, ಎಲ್ಲಾ ಉದ್ಯೋಗಗಳಲ್ಲಿಯೂ ಎಲ್ಲಾ ವರ್ಗಗಳ ಜನರು ಈ ರೋಗಕ್ಕೆ ತುತ್ತಾಗುತ್ತಾರೆ

ಈ ರೋಗ ಪೀಡಿತರಲ್ಲಿ ಹೆಚ್ಚಿನ ಜನರು ಆಯಾಸದಿಂದಲೇ ಇರುತ್ತಾರೆ. ಸೂರ್ಯಾಸ್ತ ಏರತ್ತ ಬಂದಂತೆ ಶ್ರಾಂತ ಕ್ಲಾಂತರಾಗುತ್ತಾರೆ. ಮಧ್ಯಾಹ್ನದ ಭೋಜನಾನಂತರ ಆರೋಗ್ಯವು ತುಸು ಸುಧಾರಿಸಿದಂತೆ ತೋರುತ್ತದೆ ಆದರೆ, ಮೂರು ನಾಲ್ಕು ತಾಸುಗಳೊಳಗೇನೇ ಅವರು ಮರಳಿ ಶಿಥಿಲಗೊಂಡಂತಾಗುತ್ತಾರೆ. ಸಂಜೆ ಭೋಜನವಾದ ಮೇಲೆ ಆ ಕ್ಲಾಂತಿಯು ದೂರವಾದಂತಾಗುವುದು ಆದರೆ ಇಂತಹ ಜನರು ಬೆಳಗ್ಗೆ ಮಾತ್ರ ಶಿರೋವೇದನೆಯೊಡನೆಯೇ ಏಳುತ್ತಾರೆ ಎದ್ದ ಸ್ವಲ್ಪ ಸಮಯಾನಂತರ ನೋವು ದೂರವಾಗುತ್ತದೆ; ಸಂಜೆಯಾದೊಡನೆಯೇ ಅದು ಪುನಃ ಪ್ರಾರಂಭವಾಗುವುದು. ಆಗಾಗ ಕ್ಲಾಂತಿಯೊಡನೆ ಅತ್ಯಧಿಕ ಅಶಕ್ತತೆ, ಅಂಜಿಕೆ, ಬೆವರಿಳಿಯುವಿಕೆಗಳು ಕಾಣಿಸಿಕೊಳ್ಳುವುವು ತಮ್ಮ ತಲೆಯ ಎರುಟು ಒಡೆದು ಅದರೊಳಗಿನಿಂದ ಏನೋ ಹೊರಗೆ ಸರಿಯುತ್ತಿರುವಂತೆ ಭಾಸವಾಗುವುದೂ ಉಂಟು.

ರಕ್ತದಲ್ಲಿ ಶರ್ಕರಾಂಶವು ಕಡಿಮೆಯಾದುದರಿಂದ ಈ ತೆರದ ಲಕ್ಷಣಗಳು ಗೋಚರವಾಗುತ್ತವೆ ಎಂದು ಡಾ| ಪೋರ್ಟಿಸ್‌ರ ಅಭಿಮತ. ಭೋಜನವಾದೊಡನೆಯೇ ಶರೀರಕ್ಕೆ ಶರ್ಕರೆಯ ಹೊಸ 'ಕೋಟಾ' ದೊರೆಯುವುದರಿಂದ ಆ ಲಕ್ಷಣಗಳು ಮಾಯವಾಗುತ್ತವೆ, ಆದರೆ, ಸ್ವಲ್ಪ ಹೊತ್ತಿನಂತರ ರಕ್ತದಿಂದ ಸಕ್ಕರೆಯು ತೀವ್ರ ಗತಿಯಿಂದ ಹೊರಬೀಳುವುದರಿಂದ ಅವೇ ಲಕ್ಷಣಗಳು ಮರಳಿ ಗೋಚರಿಸುತ್ತವೆ

ನಮ್ಮ ಮೆದುಳು ಪೌಷ್ಟಿಕ ತತ್ವಗಳ ಪರಿವರ್ತನೆ ಅಥವಾ ಅಭಾವಕ್ಕೆ ಪ್ರತಿಯಾಗಿ ಅತ್ಯಂತ ಸಂವೇದನ ಶೀಲವಾಗಿದೆ ಸಕ್ಕರೆಯು ಮೆದುಳಿಗೆ ಅತಿ ಮಹತ್ವಪೂರ್ಣ ಪದಾರ್ಥವಾಗಿದೆ. ರಕ್ತದಲ್ಲಿ ಸಕ್ಕರೆಯ ಅಂಶವು ಪರ್ಯಾಪ್ತವಾಗದಿರುವಾಗ, ಮೆದುಳು ಸಮರ್ಪಕವಾಗಿ ತನ್ನ ಕಾರ್ಯವನ್ನು ಮಾಡಲಾರದು ಇದರಿಂದಾಗಿ ಮನುಷ್ಯನು ಅತಿ ಶೀಘ್ರದಲ್ಲಿ ಕ್ಲಾಂತನಾಗಿ ಹೋಗುವನು

ಶರೀರದಲ್ಲಿರುವ ಕ್ಲೋಮ ಗ್ರಂಥಿಯು ರಕ್ತದಲ್ಲಿ ಸಕ್ಕರೆಯ ಪ್ರಮಾಣವನ್ನು ನಿಯಂತ್ರಿಸುತ್ತದ ಇದರ ಮೂಲಕವೇ ಇನ್ಸುಲಿನ್ ನಿರ್ಮಾಣವೂ ಆಗುತ್ತದೆ ಸಕ್ಕರೆಯನ್ನು ಸುಟ್ಟು ಶಕ್ತಿಯಾಗಿ ಪರಿವರ್ತಿತಗೊಳಿಸುವುದು ಇನ್ಸುಲಿನ್‌ನ ಕೆಲಸ. ಕ್ಲೋಮಗ್ರಂಥಿಗಳು ಸರಿಯಾಗಿ ಕಾರ್ಯವೆಸಗದಿದ್ದರೆ, ಇನ್ಸುಲಿನ್ ಪರ್ಯಾಪ್ತ ಪ್ರಮಾಣದಲ್ಲಿ ಉತ್ಪನ್ನವಾಗದು, ಮತ್ತು ಸಕ್ಕರೆಯ ಪ್ರಮಾಣವೂ ಅಸ್ತವ್ಯಸ್ತವಾಗುವುದು. ಈ ಕಾರಣದಿಂದಲೇ 'ಸಿಹಿಮೂತ್ರ' ರೋಗವು ಕಾಣಿಸಿಕೊಳ್ಳುವುದು

ಇದಕ್ಕೆ ವಿರುದ್ಧವಾಗಿ ಕ್ಲೋಮ ಗ್ರಂಥಿಯು ಅಧಿಕ ತೀವ್ರತೆಯಿಂದ ಕೆಲಸಕ್ಕೆ ತೊಡಗಿದರೆ, ಸಕ್ಕರೆಯ ಅಂಶವು ಬಹು ಬೇಗನೆ ಭಸ್ಮವಾಗುವುದು ಇದರಿಂದಲೇ ಮಾನವನು 'ಹೈಪೊಗ್ಲಿಸೇಮಿಯಾ'ಕ್ಕೆ ಬಲಿ ಬೀಳುತ್ತಾನೆ.

ಒಬ್ಬ ಯುವಕನಲ್ಲಿ ಈ ರೋಗವು ಕಾಣಿಸಿಕೊಂಡಿತೆಂದರೆ, ಆತನು ಯಾವುದೇ ಕೆಲಸ ಮಾಡಲು ಅಸಮರ್ಥನಾಗುವನು. ಅವನು ಬಹಿರಂಗದಲ್ಲಿ ತಾನು ಉಲ್ಲಾಸದಿಂದಲೇ ಕಾರ್ಯಪ್ರವೃತ್ತನಾದೆನೆಂದು ತೋರಿಸಿಕೊಳ್ಳಬಹುದಾದರೂ ನರನಾಡಿಗಳ ಮೇಲೆ ಈ ಭಾರವು ದುಷ್ಪ್ರಭಾವವನ್ನು ಬೀರುವುದು. ಇಂತಹ ವ್ಯಕ್ತಿ ಮನೆಗೆ ಮರಳಿದನಂತರ ಮನೆಯವರ ಮೇಲೆ ಎರಗಿ ಬೀಳುತ್ತಾನೆ ಸಾಮಾನ್ಯತಃ ಮಿತಿಮೀರಿ ಹೊಗೆ ಸೇವನೆಯನ್ನೂ ಮಾಡುತ್ತಾನೆ.

ಇದರಿಂದ ದೂರವಿರುವುದು ಅಸಾಧ್ಯವೇನಲ್ಲ ಮಾನಸಿಕ ಉದ್ವೇಗಗಳೆಲ್ಲವನ್ನೂ ದೂರವಿಡುವುದು ಇದಕ್ಕೆ ತಾರಕೋಪಾಯವಾಗಿದೆ ಆದರೆ, ಇದು ಯಾವಾಗಲೂ ಸಂಭವನೀಯವಾಗಿರುವುದಿಲ್ಲ ಆದರೂ ಸುಪ್ರಾಪ್ಯ ಭೋಜನ, ಅಲ್ಪ ಧೂಮ್ರಪಾನ ಹಾಗೂ ಮಾನಸಿಕ ಶಾಂತಿ ಮೊದಲಾದುವುಗಳನ್ನು ಹೊಂದಿಸಿಕೊಳ್ಳಬಹುದು. ಆದರೆ, ರೋಗಿಗೆ ನಿಶ್ಚಿಂತೆಯಿಂದಿರುವ ಉಪದೇಶವಿತ್ತು ಸ್ವಯಂ ನಿಶ್ಚಿಂತರಾಗುವ ವೈದ್ಯರು ಈ ಸಂಬಂಧದಲ್ಲಿ ಏನೂ ಮಾಡಲಾರರು ರೋಗಿಯ ಶಾರೀರಿಕ ಪರಿಸ್ಥಿತಿಯಿಂದ ಅವರ ಕೆಲಸವೂ ಕೆಲವೊಮ್ಮೆ ಅಸಂಬದ್ಧವಾಗುವುದಿದೆ

ಡಾ। ಪೋರ್ಟಿಸರು ಈ ಪ್ರಕಾರವಾದ ಹಲವಾರು ರೋಗಿಗಳನ್ನು ಪರೀಕ್ಷಿಸಿದ್ದಾರೆ. ಅವರ ರಕ್ತದಲ್ಲಿ ಸಕ್ಕರೆಯ ಅಂಶ ಬಹಳಷ್ಟು ಕಡಿಮೆಯಿರುವುದನ್ನು ಕಂಡುಕೊಂಡಿದ್ದಾರೆ ಈ ರೋಗಿಗಳಿಗೆ ಉಪಹಾರದ ಅವಶ್ಯಕತೆ ಬಹಳವೆಂದಿವರು ಹೇಳಿದ್ದಾರೆ. ಬೆಳಗ್ಗೆ ಮತ್ತು ಸಂಜೆ ಸಾಕಷ್ಟು ಪ್ರಮಾಣದಲ್ಲಿ ಉಪಹಾರ ಸೇವಿಸದೆ ಇದ್ದರೆ, ಅವರ ದೇಹಸ್ಥಿತಿ ಬಹಳಷ್ಟು ಕಂಗೆಡುವುದು. ಯಕೃತ್ತಿನಲ್ಲಿ ೧೨ ತಾಸುಗಳ ವರೆಗೆ ಬೇಕಾದ ಸಕ್ಕರೆಯು ಶೇಖರಿಸಲ್ಪಡುತ್ತದೆ, ಆದಕ್ಕೆ ಉಪಾಹಾರದಿಂದ ಊಟದ ಸಮಯದ ವರೆಗೆ ಅವಶ್ಯಕವಾದಷ್ಟು ಸಕ್ಕರೆಯು ಅವಶ್ಯ ದೊರೆಯಬೇಕಾಗುತ್ತದೆ.

ಕ್ಲಾಂತರಾಗಿರುವುದರಿಂದ ಹೆಚ್ಚಿನವರು ಧೂಮ್ರಪಾನಕ್ಕೆ ತೊಡಗುತ್ತಾರೆ ಪ್ರಾರಂಭದಲ್ಲಿ ಇದರಿಂದ ತುಸು ಲಾಭವಾಗುವುದು. ಆದರೆ, ತಂಬಾಕುವನ್ನು ಹೆಚ್ಚಾಗಿ ಸೇವಿಸುವುದರಿಂದ ಸಕ್ಕರೆಯ ಪ್ರಮಾಣ ಕಡಿಮೆಯಾಗುತ್ತದೆ ನಿರಂತರ ಹೊಗೆ ಸೇವನೆ ಮಾಡುವವನಿಗೆ ಕ್ಲಾಂತಿಯ ಅನುಭವವು ಹೆಚ್ಚಾಗುವುದು, ಕೆಮ್ಮು ಬರುವುದು, ಕೆಲವೊಮ್ಮೆ ಕಣ್ಣಿಗಿನ ಬೆವರು ಹೊರಬರುವುದು. ಆತನು ಸದಾ ಅಶಾಂತನಾಗಿಯೇ ಇರುತ್ತಾನೆ

ಕ್ಲಾಂತಿ ಮತ್ತು 'ಹೈಪೊಗ್ಲಿಸೇಮಿಯಾ'ದ ಚಿಕಿತ್ಸೆಯಲ್ಲಿ ಪಥ್ಯವೇ ಮಹತ್ವಪೂರ್ಣವಾಗಿದೆ. ದಿನದಲ್ಲಿ ಕೆಲವು ಬಾರಿ ಮಿತಾಹಾರ ಸೇವನೆಯು ಉಪಯುಕ್ತವಾಗಿದ ಪಚನದ ಮೇಲೆ ಮೆಲ್ಲ ಮೆಲ್ಲನೆ ಸಕ್ಕರೆಯು ದೊರೆಯುವಂತಹ ಆಹಾರವನ್ನೇ ಸೇವಿಸುವುದು ಯುಕ್ತ. ಚಾ–ಕಾಫಿ, ಮುರಬ್ಬ ಅಥವಾ ಶರಬತ್ತು ಹಾಗೂ ಜೇನುತುಪ್ಪಗಳಿಂದ ದೊರೆಯುವ ಶರ್ಕರವು ರಕ್ತದಲ್ಲಿ ಬಹು ತೀವ್ರವಾಗಿ ಸೇರಿಕೊಳ್ಳುವುದು, ಅಷ್ಟೇ ಶೀಘ್ರವಾಗಿ ಮಾಯವಾಗುವುದು. ಆದುದರಿಂದ ಸಕ್ಕರೆಯನ್ನು ಈ ರೂಪದಲ್ಲಿ ಸೇವಿಸುವುದು ಅನುಚಿತವೆನ್ನಬಹುದು.

ಕಿತ್ತಳೆಯ ರಸ, ರೊಟ್ಟಿ ಮತ್ತು ಬೆಣ್ಣೆಗಳೊಡನೆ ಟೋಸ್ಟುಗಳನ್ನು ಉಪಾಹಾರವಾಗಿ ತೆಗೆದುಕೊಳ್ಳುವುದುಯುಕ್ತ. ಎಂಟು-ಒಂಬತ್ತು ತಾಸಿನೊಳಗೆ ಬಿಸ್ಕಿಟು ಮತ್ತು ಹಾಲುಗಳನ್ನು ಸೇವಿಸಬೇಕು ಮಧ್ಯಾಹ್ನದ ಭೋಜನವನ್ನು ಬೇಕೆಂಬಷ್ಟು ಮಾಡಬೇಕು ಸಿಹಿತಿಂಡಿಗಳನ್ನು ತಿನ್ನಬಾರದು ಅಪರಾಹ್ನದಲ್ಲಿ ಅಲ್ಪಾಹಾರ ಮತ್ತು ಅದರ ನಂತರ ರಾತ್ರೆಯ ಊಟಗಳು ಸರಿಯಾದ ಆಹಾರ ಸೇವನೆ. ರಾತ್ರೆಯ ಊಟದಲ್ಲಿ ರಸವತ್ತಾದ ತರಕಾರಿ, ಹುರಿದ ಆಲೂ, ಗಜ್ಜರಗಾಯಿ, ರೊಟ್ಟಿ ಮತ್ತು ಬೆಣ್ಣೆಗಳು ಇರುವುದು ಲಾಭದಾಯಕವಾಗಿದೆ ರಾತ್ರೆಯ ಊಟವನ್ನು ಬೇಗನೆಮಾಡಿ ರಾತ್ರೆ ತಡವಾಗಿ ಮಲಗುವವರು ಆ ನಡುವೆ ಹಾಲ, ಟೋಸ್ಟು ಮೊದಲಾದುವನ್ನು ಸೇವಿಸುವುದು ಅವಶ್ಯವಾಗಿದೆ

ಈ ರೀತಿಯ ಪಥ್ಯದಿಂದಿರುವುದರಿಂದ ಮತ್ತು ತಮ್ಮ ಆಹಾರ-ವಿಹಾರಗಳಲ್ಲಿ ಪರಿವರ್ತನೆ ಮಾಡುವುದರಿಂದ ಸ್ವಯಂ ವ್ಯಕ್ತಿಯೇ ಈ ರೋಗದಿಂದ ಮುಕ್ತನಾಗುವುದು ಸಾಧ್ಯವಿದೆ ನೀವೂ ಈ ರೋಗಪೀಡಿತರಿರುವಿರಾದರೆ ಈ ಪಥ್ಯವನ್ನು ಅನುಸರಿಸಿ ಅದರಿಂದ ಬಿಡುಗಡೆ ಹೊಂದಿರಿ

ಇಂದು ಮಿತವಾಗಿ ವ್ಯಯಿಸಿದರೆ, ನಾಳೆ ಹಿತವಾಗಿ ಪರಿಣಮಿಸುವುದು

ಮಿತವ್ಯಯವೇ ಹಿತಜೀವನದ ಹೆದ್ದಾರಿ.

ಮಿತವಾಗಿ ವ್ಯಯಿಸಿರಿ, ಉಳಿಯುವ ಹಣವನ್ನು ಬೇಂಕುಗಳಲ್ಲಿ ಶೇಖರಿಸಿರಿ.

ಕೊಪೊರೇಶನ್ ಬೇಂಕು

ನಿಮ್ಮ ಹಣಕ್ಕೆ ಸುರಕ್ಷತತೆ ಮತ್ತು ಭದ್ರತೆಗಳೊಂದಿಗೆ
ಹೆಚ್ಚಿನ ದರದಲ್ಲಿ ಬಡ್ಡಿ ಕೊಡುವುದು.

ದಿ. ಕೆನರಾ ಬೇಂಕಿಂಗ್ ಕೊಪೊರೇಶನ್ ಲಿಮಿಟೆಡ್

ಸ್ಥಾಪನೆ 1906 ರಿಜಿಸ್ಟರ್ಡ್ ಆಫೀಸು: ಉಡುಪಿ, ಮೈಸೂರು ರಾಜ್ಯ

6 ರಾಜ್ಯಗಳಲ್ಲಿ ಒಟ್ಟು 62 ಶಾಖೆಗಳು — ದೇಶದಾದ್ಯಂತ ಏಜನ್ಸಿಗಳು.

ನವಯುಗ ವಾರ ಪತ್ರಿಕೆಗೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ

> ತೆವಳಿ ತುಳುಕುವ ನೀರಿನಲ್ಲಿ ಪ್ರತಿಬಿಂಬ ಕಾಣದು; ಕುಪಿತ ವೇಳೆಯಲಿ ನಮ್ಮ ಒಳಿತು ಕೆಡುಕು ನಮಗೆ ಗೋಚರಿಸದು.

ನವಯುಗ

೪೦ ವರುಷ	ಉಡುಪಿ ೭-೪-'೬೧	ವಾರ ೨೯

ಸಾರಿಗೆ ದರ ಹೆಚ್ಚಳ

ದ್ವಿತೀಯ ಪಂಚವಾರ್ಷಿಕ ಯೋಜನೆಗೆ ಹಣವನ್ನು ಒದಗಿಸುವ ಸದುದ್ದೇಶದಿಂದ ೧೯೫೯ರ ದಶಂಬರದಲ್ಲಿ ಮಂಡಿಸಲಾದ ಮೈಸೂರು ಮೋಟಾರು ಪ್ರಯಾಣ ಮತ್ತು ಸಾಗಾಟ ದರಗಳ ತಿದ್ದುಪಡಿ ಮಸೂದೆಯು ಎರಡನೆಯ ಯೋಜನೆ ಮತ್ತು ಮೂರನೆಯ ಯೋಜನೆಗಳ ಸಂಧಿ ಸಮಯದಲ್ಲಿ ಮಂಜೂರಾಯಿತು. ಇದರನ್ವಯ ಪ್ರಯಾಣಿಕರು, ಲಗ್ಗೇಜು ಮತ್ತು ಸಾಮಾನುಗಳ ಸಾಗಾಟದ ಮೇಲೆ ಹೊಸತಾಗಿ ಕರಭಾರವು ಬೀಳುವುದು. ಬಸ್ಸುಗಳಲ್ಲಿ ಸಂಚಾರ ಮಾಡುವ ಪ್ರಯಾಣಿಕರ ಮೇಲೆ ಸೇ. ಹತ್ತರಷ್ಟು ಹಾಗೂ ಸಾಮಾನು ಸಾಗಾಟ ದರದ ಮೇಲೆ ನೂರಕ್ಕೆ ಮೂರರಷ್ಟು ಹೊಸತಾಗಿ ಕರವು ಆಕರಿಸಲ್ಪಡುವುದು. ಈ ವಿಧೇಯಕದ ಬಗ್ಗೆ ವಿಧಾನ ಸಭೆಯಲ್ಲಿ ಬಹಳಷ್ಟು ಭಿನ್ನಾಭಿಪ್ರಾಯವಿದ್ದರೂ ಮಂಜೂರಾತಿಯನ್ನು ಪಡೆದೇಬಿಟ್ಟಿತು. ದ್ವಿತೀಯ ಯೋಜನೆಯ ಬಾಯಿ ಕೂಡಿಸಬೇಕಾದ ವಿಧೇಯಕ ತೃತೀಯ ಯೋಜನೆಗಾದರೂ ಉಪಯೋಗಕ್ಕೆ ಬರುವಂತಾಯಿತು. ರಾಜ್ಯದ ಮುಂಗಡ ಪತ್ರದ ಕೊರತೆಯನ್ನು ಈ ಕರವೀಗ ದೂರಮಾಡಬಲ್ಲುದು.

ರಾಜ್ಯದಲ್ಲಿ ನಾಗರಿಕತೆ ಬೆಳೆದಂತೆ ಸಾರಿಗೆ ಸಂಪರ್ಕದ ವ್ಯವಸ್ಥೆಯೂ ಅಭಿವೃದ್ಧಿ ಹೊಂದಬೇಕಾದುದು ಅನಿವಾರ್ಯವೇ. ಹಿಂದೆ ಎತ್ತಿನ ಗಾಡಿ—ಜಟಕಾ ಬಂಡಿಗಳು ಮಾಡುತ್ತಿದ್ದ ಸಾರಿಗೆಯ ಕಾರ್ಯಕ್ಷೇತ್ರವನ್ನಿಂದು ಬಸ್ಸು—ಕಾರುಗಳು ಆಕ್ರಮಿಸಿವೆ. ಸಾಮಾನ್ಯವಾಗಿ ಅನ್ನಾಹಾರಗಳಂತೆಯೇ ಬಸ್ಸುಗಳ ಪ್ರಯಾಣವು ಜನಜೀವನದ ಅತ್ಯವಶ್ಯ ಅಂಗವಾಗಿ ಪರಿಣಮಿಸಿದೆಯೆಂಬುದನ್ನು ಯಾರೂ ಅಲ್ಲಗಳೆಯಲಾರರು. ಪ್ರಯಾಣ ಮತ್ತು ಸಾಮಾನು ಸಾಗಾಟದ ಮೇಲೆ ಹೇರಿದ ಈ ಕರಭಾರವು ಬಸ್ಸು—ಲಾರಿಗಳ ಮಾಲೀಕರ ಮೇಲೆ ಬೀಳದೆ ಮಧ್ಯಮ ಹಾಗೂ ನಿಮ್ನ ವರ್ಗದ ಮೇಲೆಯೇ ಬೀಳುವುದೆಂಬುದು ಸ್ವಯಂಸಿದ್ಧ. ಶ್ರೀಮಂತ ವರ್ಗದವರು ಹೆಚ್ಚಾಗಿ ಮೋಟಾರು ಕಾರುಗಳಲ್ಲಿಯೇ ಪ್ರಯಾಣಿಸುವುದು ರೂಢಿಯಾದುದರಿಂದ ಹೆಚ್ಚಿನ ಭಾರ ಬೀಳುವುದು ಇತರರ ಮೇಲೆಯೇ ಎಂಬುದು ನಿರ್ವಿವಾದ. ಹೀಗಿರುವುದರಿಂದ ಮೊದಲೇ ತಮ್ಮ ಜೀವನಕ್ಕಾಗಿ ಕೈಕಾಲು ಬಡಿಯುತ್ತಿರುವ ಈ ವರ್ಗದ ಜನತೆಯ ಮೇಲೆ ಈ ತೆರದ ಪರೋಕ್ಷ ತೆರಿಗೆಯನ್ನು ಹೇರಿದುದು ಸಮಂಜಸವೆನಿಸಲಾರದು. ಗ್ರಾಮೀಣ ಪ್ರದೇಶಗಳಿಗೆ ಬಸ್ಸುಗಳೇ ಸಂಚಾರ ಮಾಧ್ಯಮವಾಗಿರುವುದರಿಂದ ಈ ಕರವು ಸೂಕ್ತವಾದುದೆನ್ನುವುದು ಸಾಧ್ಯವಿಲ್ಲ. ಇಷ್ಟು ಮಾತ್ರವಲ್ಲ, ಈ ಕರಾಕರಣೆಯಲ್ಲಿ ಯಾವುದೇ ಪ್ರದೇಶದ ಸಾರಿಗೆಯ ಬಗ್ಗೆ ವಿನಾಯತಿ ನೀಡದಿರುವುದರಿಂದ, ನಗರಗಳಲ್ಲಿ ದುಡಿಯುವ ನೌಕರರು ಬಸ್ಸುಗಳಲ್ಲಿ ಪ್ರಯಾಣಿಸಿ ದಿನವೂ ಬರಬೇಕಾದರೆ, ಅವರ ಪ್ರಯಾಣ ವೆಚ್ಚವೂ ನೂರಕ್ಕೆ ಹತ್ತರಷ್ಟು ಏರಿದಂತಾಗುವುದು. ಸರಕಾರವೇ ತನ್ನ ಎಲ್ಲ ನೌಕರರ ವೇತನದಲ್ಲಿ ನೂರಕ್ಕೆ ಹತ್ತರಷ್ಟು ಹೆಚ್ಚಳವನ್ನು ಮಾಡದಿರುವಾಗ, ಉಳಿದ 'ಸಾಮಾನ್ಯ ಜನರ' ಪರಿಸ್ಥಿತಿಯನ್ನು ಬೇರೆ ಹೇಳಬೇಕಾಗಿಲ್ಲ. ಜನಸಾಮಾನ್ಯರು ಬಸ್ಸುಗಳಲ್ಲಿ ವಿನೋದಾರ್ಥ ಪ್ರಯಾಣ ಮಾಡುವುದಿಲ್ಲ; ಆವಶ್ಯಕ ಕಾರ್ಯಭಾರಗಳಿಗಾಗಿ ಮಾತ್ರ ಬಸ್ಸು ಹತ್ತುತ್ತಾರೆ ಆದುದರಿಂದ ಸಿನೆಮಾ—ನಾಟಕಗಳನ್ನು ನೋಡುವುದು, ಶೃಂಗಾರ ಸಾಧನಗಳನ್ನು ಬಳಸುವುದು ಮೊದಲಾದ ವಿಷಯ ಸುಖ ಸಾಧನಗಳಂತೆ ಇದರ ಬಳಕೆಯನ್ನು ಕಡಿಮೆ ಮಾಡುವಂತೆಯೂ ಇರುವುದಿಲ್ಲ. ಶ್ರೀಮಂತ ವರ್ಗದವರು ತಂತಮ್ಮ ಅಥವಾ ಬಾಡಿಗೆಯ ಕಾರುಗಳಲ್ಲಿ ಯಾವುದೇ ಹೆಚ್ಚಿನ ವೆಚ್ಚವಿಲ್ಲದೆ ತಿರುಗುವಾಗ ಇತರರು ತಮ್ಮ ವಾಹನಗಳಾದ ಬಸ್ಸುಗಳಲ್ಲಿ ಪ್ರಯಾಣಿಸಲು ಅಧಿಕ ಹಣ ತೆರಬೇಕೆಂಬುವುದು ಶೋಭನೀಯವಲ್ಲ; ಮಾನನೀಯವೂ ಅಲ್ಲ.

ರೇಲ್ವೆ ಪ್ರಯಾಣಿಕರ ಮೇಲೆ ಕರ ಹೇರುವಾಗ ಕೆಲವೊಂದಾದರೂ ವಿನಾಯತಿಯನ್ನು ಕೇಂದ್ರ ಸರಕಾರವು ಕೊಟ್ಟಿದೆ. ಸಬರ್ಬನ್ ಪ್ರದೇಶಗಳನ್ನು ಹೊಸ ಕರದಿಂದ ಬಿಟ್ಟು ಬಿಟ್ಟಿದೆ. ಆದರೆ, ಸಿಟಿ ಬಸ್ಸುಗಳ ದರವು ಇನ್ನು ಏರುವುದು ಖಂಡಿತವೇ. ಹಳ್ಳಿಗಳಿಂದ ನಗರಗಳಿಗೆ ದುಡಿಯಲು ತೆರಳುವ ನೌಕರರು ಹಾಗೂ ವಿದ್ಯಾಭ್ಯಾಸಕ್ಕಾಗಿ ಹೋಗುವ ವಿದ್ಯಾರ್ಥಿಗಳು ಕೂಡ ಈ ಹೊಸ ಕರವನ್ನು ತೆರಲೇಬೇಕಾಗುತ್ತದೆ. ಎಂದರೆ, ಮಧ್ಯಮ ವರ್ಗದ ಜನರೆಲ್ಲರೂ ಈ ಕರವನ್ನು ಅನಿವಾರ್ಯವಾಗಿ ಕೊಡುವಂತಾಗುತ್ತದೆ. ಜೀವನದ ಆವಶ್ಯಕ ಸಾಧನಗಳಲ್ಲಿ ಆಹಾರ ಪದಾರ್ಥಗಳಷ್ಟೇ ಪ್ರಾಮುಖ್ಯ ಈ ಸಂಚಾರ—ಸಾಗಾಟಕ್ಕೂ ಇರುವುದರಿಂದ ಸರಕಾರವು ಹೇಳಲು ನಿರ್ಧರಿಸಿದ ಈ ಕರವು ನಿಜವಾಗಿಯೂ ಜನತೆಗೆ ಭಾರವೆನಿಸುವುದು; ಅವರನ್ನು ಕಂಗಾಲುಗೊಳಿಸುವುದು. ಈ ದೃಷ್ಟಿಯಿಂದ ಸರಕಾರವು ಈ ವಿಧೇಯಕದಲ್ಲಿ ಸೂಚಿಸಲಾದ ಕರಭಾರವನ್ನು ಪುನರ್ವಿಮರ್ಶಿಸುವುದು ಅಪೇಕ್ಷಣೀಯ; ಇಲ್ಲವಾದರೆ, ಮೊದಲೇ ಕರಭಾರದಿಂದ ನೊಂದ ಜನತೆಯ ಗೋಳು ಮತ್ತಷ್ಟು ಹೆಚ್ಚುವುದು ಖಂಡಿತ.

ಅಲ್ಯುಮಿನಿಯಂ ಕಾರ್ಖಾನೆ

'ರೆನಾಲ್ಡ್ಸ್ ಇಂಟರ್ ನೇಶನಲ್' ಸಂಸ್ಥೆಯವರೊಡನೆ ಮೈಸೂರಿನ ಮುಖ್ಯಮಂತ್ರಿ ಜತ್ತಿಯವರು ಕಾರವಾರದಲ್ಲಿ ಸುಮಾರು ೮೦ ಕೋಟಿ ರೂಪಾಯಿಯ ವೆಚ್ಚದಿಂದ ಒಂದು ಅಲ್ಯುಮಿನಿಯಂ ಕಾರಖಾನೆಯನ್ನು ಸ್ಥಾಪಿಸುವ ವಿಷಯದಲ್ಲಿ ಮಾತುಕತೆ ನಡೆಸಿದರೆಂಬ ವಾರ್ತೆ ಕೇಳಿದ ವೇಳೆ ಈ ಕಾರಖಾನೆಯ ಸ್ಥಾಪನೆಯ ವಿಚಾರದಲ್ಲಿದ್ದ ಸಂದೇಹ ತುಸು ದೂರವಾಗುತ್ತದೆ. ಆದರೂ ಕಾರ್ಯವಾದ ಮೇಲೆಯೇ ಆಯಿತು ಎಂದು ಹೇಳಿಕೊಳ್ಳಲು ಅರ್ಹವಾದ ಘಟನೆಗಳಿಗೆ ಹೆಸರಾದ ನಮ್ಮ ಸರಕಾರವನ್ನು ಈ ವಿಷಯದಲ್ಲಿ ಈಗಲೇ ನಂಬುವುದು ಸಾಧ್ಯವಿಲ್ಲ. ಎರಡನೆಯ ಯೋಜನೆಯಂತ್ಯದಲ್ಲಿ ಸ್ಥಾಪಿತವಾಗುವುದೆಂದು ಗೋಕರ್ಣದ ಅಲ್ಯುಮಿನಿಯಂ ಕಾರಖಾನೆ ಕೈಬಿಟ್ಟು ವರುಷವೊಂದಾಯಿತು. ಸದ್ಯ ವಿದ್ಯುಚ್ಛಕ್ತಿಯ ಅಭಾವವನ್ನು ಎದುರಿಸುತ್ತಿರುವ ನಮ್ಮ ರಾಜ್ಯ ಅಲ್ಯುಮಿನಿಯಂ ಕಾರಖಾನೆಗೆ ೬೦ ಸಾವಿರ ಕಿಲೋವಾಟ್‌ಗಳಷ್ಟು ಶಕ್ತಿಯನ್ನು ಮುಂದಿನ ವರ್ಷದೊಳಗೆ ಒದಗಿಸುವುದು ಸಾಧ್ಯವೆ? ಶರಾವತಿ ಯೋಜನೆಯಿಂದ ಇಷ್ಟು ಶೀಘ್ರದಲ್ಲಿ ಅಷ್ಟು ಶಕ್ತಿ ಲಭಿಸಲಾರದು. ಕಾಳಿ ನದಿಯ ಯೋಜನೆಯಿನ್ನೂ ಅಂತಿಮ ರೂಪಕ್ಕೆ ಬಂದಿಲ್ಲ. ಸಾರಿಗೆ ಸಂಪರ್ಕ ಸಮರ್ಪಕವಾಗಿಲ್ಲ. ಬಂದರ ಅಭಿವೃದ್ಧಿಯು ಮಾತು ಪಿಸು ಮಾತ್ರ. ಹಾಗಿರುವಾಗ, ನಮ್ಮ ಸರಕಾರದ ಘೋಷಣೆ ಹಾಗೂ ಧೋರಣೆಗಳು ನಿಜವೆಂದಾದರೆ, ಅದರ ಕಟ್ಟಿಗೆ ತಲೆದೂಗಬೇಕು. ಅದು ಬಿಟ್ಟು ಡೊಂಬರಾಟವಾಡುವುದಾದರೇ ಅದಕ್ಕೆ ತಕ್ಕ ಮದ್ದರೆಯಲು ಕನ್ನಡಿಗರು ಸಿದ್ಧರಾಗಬೇಕು.

ಮಂಗಳೂರು ತಾಲೂಕು ಕಾಂಗ್ರೆಸ್ ಸಮ್ಮೇಳನವು—ಸುರತ್ಕಲ್ ಪಂಚಾಯತ್ ಬೋರ್ಡಿನ ಪರಾರದಲ್ಲಿ ಇದೇ ತಾ. ೨ರಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಬೋರ್ಡಿನ ಮಾಜಿ ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆಯವರಿಂದ ಉದ್ಘಾಟಿಸಲ್ಪಟ್ಟಿತು. ಸ್ವಾಗತಸಮಿತಿಯ ಅಧ್ಯಕ್ಷ ಶ್ರೀ ಎ. ಶಂಕರ ಆಳ್ವರು ಸ್ವಾಗತಭಾಷಣ ಗೈದರು. ಉದ್ಘಾಟಕ ಶ್ರೀ ಹೆಗ್ಡೆಯವರು ಇದೀಗ ಪ್ರಾರಂಭವಾಗಿರುವ ತೃತೀಯ ಯೋಜನೆಯ ಯಶಸ್ವಿಗಾಗಿ ಸರ್ವರೂ ಸಹಕರಿಸಿ ದುಡಿಯಬೇಕೆಂದರು. ಅಧ್ಯಕ್ಷ ಶ್ರೀ ಪೈಗಳು ನಮ್ಮಿಂದ ಚುನಾಯಿತರಾಗಿ ಅಧಿಕಾರಸ್ಥಾನದಲ್ಲಿರುವವರು, ಜನತೆಯ ಬೇಡಿಕೆಗಳನ್ನು ಸರಿಯಾಗಿ ಗಮನಿಸುವುದಿಲ್ಲವೆಂಬ ದೂರು ಕೇಳಬರುತ್ತಿದೆ ಎಂದೂ ಮುಂದೆ ಬರುವ ಚುನಾವಣೆಯಲ್ಲಿ ಜನತೆಯ ಹಿತಾಕಾಂಕ್ಷಿಗಳಾದ ಸಮರ್ಥರನ್ನೇ ನಾವು ಚುನಾಯಿಸಬೇಕೆಂದೂ ಜನಜೀವನವನ್ನು ಸಮೃದ್ಧಗೊಳಿಸಲು ಎಲ್ಲರ ಪ್ರಯತ್ನವು ಮುಖ್ಯವೆಂದೂ ನಮ್ಮ ಸಮಸ್ಯೆಗಳನ್ನು ತಿಳಿದುಕೊಂಡು ಮುಂದಿನ ಕಾರ್ಯಕ್ರಮ ಕೈಗೊಳ್ಳಲು ಇಂತಹ ಸಮ್ಮೇಳನಗಳು ಅಗತ್ಯವೆಂದೂ ಹೇಳಿದರು. ಬಳಿಕ ಮುಂದಿನ ಚುನಾವಣೆಯಲ್ಲಿ ಸ್ಥಳೀಯರಿಗೇ ಅವಕಾಶ ಕಲ್ಪಿಸಬೇಕೆನ್ನುವ, ಪಾನನಿರೋಧವನ್ನು ಪರಿಣಾಮಕಾರಿಯಾಗಿ ಜ್ಯಾರಿಗೊಳಿಸಬೇಕೆನ್ನುವ ಮೊದಲಾದ ನಿರ್ಣಯಗಳಾದುವು. ರಾತ್ರಿ ಯಕ್ಷಗಾನ ಕಥಾಕಾಲಕ್ಷೇಪವಿತ್ತು. ಶ್ರೀ ಬಿ. ನಾರಾಯಣರಾಯರು ಅಂತ್ಯದಲ್ಲಿ ಧನ್ಯವಾದವನ್ನು ಸಮರ್ಪಿಸಿದರು.

ಬಹುಮಾನ— ಪ್ರಸಿದ್ಧ ಕವಿ ಶ್ರೀ. ಎಸ್. ವೆಂಕಟರಾಜರ 'ಮಾನಸ ಗಂಗೆ' ಎಂಬ ಕವಿತಾ ಸಂಕಲನಕ್ಕೆ ಮೈಸೂರು ಸರಕಾರದಿಂದ 750ರೂಪಾಯಿ ಬಹುಮಾನ ದೊರಕಿದೆ

The Moolky Bank Limited, Mulki.

(Incorporated in India. Liability of Shareholders Limited)

* * * * *

DIRECTORS' 31ST ANNUAL REPORT.

1. Your Directors have pleasure in presenting herewith the Audited Balance Sheet and the Profit & Loss account for the year ended 31st December 1960 of your Bank, together with their 31st Annual Report.

2. The result of the Bank's working for the period under review is a net profit of:

	Rs.	6,997 - 03
Add: Amount brought forward from last year	Rs.	223 - 37
Total	Rs.	7,220 - 40

The following appropriations have been made or are recommended by your Directors:—

(a)	To Statutory Reserve Fund	Rs.	2,000 - 00	
(b)	To provision for Income Tax	Rs.	2,000 - 00	
(c)	Bad Debts Reserve	Rs.	700 - 00	
(d)	Dividend 5%	Rs.	2,395 - 50	7,095 - 50
	Leaving a balance to be carried forward			Rs. **124 - 90**

3. We take this opportunity to thank you and the various constituents of the Bank for their increased confidence and patronage. We desire to place on record the appreciation of the work of the Manager and the Members of the Staff.

(By order of the Board)

Office of the Bank, Mulki,
Date: 13—2—1961.

(Sd.) N. M. Adyanthaya,
President.

THE MOOLKY BANK, LIMITED, MULKI.

(INCORPORATED IN INDIA. LIABILITY OF SHAREHOLDERS LIMITED)

BALANCE SHEET AS AT 31st DECEMBER 1960

31st Dec 1959 Rs nP	CAPITAL & LIABILITIES	Rs nP	Rs nP
	1 Capital		
2,00,000 - 00	Authorised Capital - 8 000 Shares of Rs 25/- each ...		2,00,000 00
1,00,000 - 00	Issued Capital 4 000 Shares of Rs 25/- each		1,00,000 - 00
79,850 00	Subscribed Capital - 3 194 Shares of Rs 25/- each		79,850 - 00
	Called-Up and Paid Up Capital - 3 194 Shares of Rs 25/- each at Rs 15/- per Share .	47,910 - 00	
49,510 - 00	*Add* Calls in Advance ...	1,600 - 00	49,510 - 00
	2 Reserve Fund and other Reserves		
	Statutory Reserve (Under Section 17) ...	19 000 - 00	
18,600 - 00	Other Reserves	2,300 - 00	21,300 - 00
	3 Deposits and other Accounts		
	Fixed Deposits	3,10,722 - 84	
	Savings Bank Deposits	31,947 - 88	
2,96,473 - 87	Current Accounts, Contingency Accounts etc	28,207 - 80	3,70,878 - 52
	4 Borrowings from other Banking Companies, Agents etc		
	i) In India	Nil	
N l	ii) Outside India	Nil	Nil
	Particulars		
	i) Secured (by Fixed Deposits)	Nil	
Nil	ii) Unsecured	Nil	Nil
Nil	5 Bills Payable		Nil
	6 Bills for Collection being Bills Receivable as per contra		
	i) Payable in India	Nil	
738 - 17	ii) Payable Outside India . .	Nil	Nil
	7 Other Liabilities		
	Unclaimed Dividends	1,243 - 29	
12,371 - 80	Other Liabilities	14,460 - 32	15,703 - 61
Nil	8. Acceptances, Endorsements and other obligations as per contra		Nil
	9 Profit and Loss		
	As per last Balance Sheet	223 - 37	
	Less Appropriations Dividends	—	
	Bonus to Staff	—	
	Provision for Income-tax ...	—	
		223 - 37	
	Add Profit for the year brought from the Profit & Loss A/c ..	6,997 - 03	
		7,220 - 40	
	Less Proposed Appropriations		
	Statutory Reserve Fund ... 2 000/-		
	Provision for Income tax 2,000/-		
223 - 37	Bad Debt Reserve 700/-	4,700 - 00	2,520 - 40
	10 Contingent Liabilities		
Nil	Amount due on Partly Paid Equity shares Rs 500 - 00		Nil
3,77,917-21	Total ..		4,59,912-53

31st Dec 1959 Rs nP	PROPERTY & ASSETS	Rs nP	Rs nP
	1 Cash		
29,544 - 84	In hand and with Reserve Bank and State Bank ...		49,501 - 31
	2 Balances with other Banks		
	i) In India—On Current Account	33,282 - 22	
	On Fixed Deposits	10,000 - 00	
43 413 - 99	ii) Outside India	Nil	43,282 - 22
Nil	3 Money at call and Short Notice		Nil
	4 Investments at cost		
	i) Securities of the Central and State Govts. and other Trustee Securities of the face value of Rs.55,500/- ...	55,323 - 12	
	ii) Shares Fully paid-up Preference shares... 19,731 - 50		
	Equity shares fully paid 4,400 - 00		
	Equity shares partly paid . 500 - 00	24,631 - 50	
	iii) Debentures or Bonds	Nil	
65,079 - 62	iv) Other Investments v) Gold ...	Nil	79 954 - 62
	5 Advances (Other than bad and doubtful debts for which provision has been made to the satisfaction of the Auditor)		
	(1) Loans, Cash, Credits, Overdrafts, etc		
	i) In India	2,79,517 - 00	
	ii) Outside India	Nil	
	(2) Bills Discounted and Purchased (Excluding Treasury Bills of the Central & State Govts)		
	i) Payable in India	Nil	
2,31,166 - 32	ii) Payable Outside India ...	Nil	2,79,517 - 00
	Particulars of Advances (See Schedule 1)		
	6 Bills Receivable being Bills for Collection, as per contra		
	i) Payable in India	Nil	
738 - 17	ii) Payable Outside India	Nil	Nil
Nil	7 Constituents' Liabilities, Acceptances, Endorsements and other obligations. per contra		Nil
Nil	8 Premises less Depreciation		Nil
	9 Furniture and Fixtures (at cost)	2,327 - 53	
	Add Additions during the year	446 - 80	
		2,774 - 33	
	Less Sale	50 - 00	
		2,724 - 33	
	Depreciation		
	Up to last Balance Sheet ... 1,136 - 53		
1,191 - 00	During the year . . 192 - 80	1,329 - 33	1,395 - 00
	10 Other Assets (including Silver)		
	Interest Receivable	4,736 - 23	
6,783 - 27	Advance Income Tax	1,526 - 15	6,262 - 38
Nil	11 Non-Banking Assets acquired in satisfaction of claims		Nil
3,77,917-21	Total ...		4,59,912-53

OFFICE OF THE BANK } (Sd) P S HEGDE (Sd) K SANJIVA SHETTY } Directors

(Sd) N M ADYANTHAYA

(Sd) M R H PUNJA
Manager

Rs nP	Expenditure	
11,234 78	1. Interest paid on Deposits, Borrowings, etc.	14,078 - 41
	2. Salaries and Allowances and Provident Fund.	
5,053 - 00	(Includes salary of Rs 2,400/- paid to the Manager)	5,536 - 50
224 - 00	3. Directors' and Local Committee Members' fees and allowances	248 - 00
1,465 - 86	4. Rent Taxes, Insurance and Lighting ...	1,187 - 47
300 - 50	5. Law Charges	Nil
265 - 00	6. Postage Telegrams and Stamps	180 - 55
125 - 00	7. Auditor's Fees	125 - 00
121 - 75	8 Depreciation on and repairs to the Banking Company's property	192 - 80
733 - 11	9. Stationery, Printing, Advertisement, etc	947 - 81
Nil	10. Loss from sale of or dealing with non-banking assets	Nil
924 - 55	11. Other expenditure	667 - 58
3,506 - 73	12. Balance of Profit	6,997 - 03
23,954-28	Total ..	30,161 - 15

Rs nP	Income	
	(Less provision made during the year for Bad and doubtful debts and other usual or necessary provisions)	
19,918 - 92	1 Interest and Discount	25,649 - 98
2,259 - 90	2 Commission, Exchange and Brokerage ...	2,877 - 48
Nil	3 Rents	Nil
Nil	4 Net Profit on sale of Investments, Gold and Silver, Land, Premises and other assets (Not credited to reserves or any particular Fund or Account)	Nil
Nil	5 Net Profit on revaluation of Investments, Gold and Silver, Land, Premises and other assets (Not credited to reserves or any particular Fund or Account)	Nil
Nil	6 Income from non banking assets and profit from sale of or dealing with such assets	Nil
1,775 - 46	7 Other receipts	1,633 - 69
23,954-28	Total ...	30,161 - 15

OFFICE OF THE BANK.
MULKI
Date 13—2—1961

(Sd.) P. S HEGDE
„ M SHANKER SHETTY
„ M. D ADAPPA

(Sd.) K. SANJIVA SHETTY
„ A DODDANNA SHETTY
} Directors.

(Sd) N M. ADYANTHAYA.
President

(Sd) M. R H. PUNJA.
Manager.

SCHEDULE—1.

31st Dec 1959 Rs. nP.	PARTICULARS OF ADVANCES	Rs nP.
2,06,101 - 76	i) Debts considered good in respect of which the Banking Company is fully secured ...	2,37,302 - 79
Nil	ii) Debts considered good for which the Banking Company holds no other security than the debtor's personal security ...	Nil
25 064 56	iii) Debts considered good secured by the personal liabilities of one or more parties in addition to the personal security of the Debtors ...	41,592 - 65
Nil	iv) Debts considered doubtful or bad not provided for ...	621 - 56
7,508 - 98	v) Debts due by Directors or Officers of the Banking Company or any of them either severally or jointly with any other persons ...	6,693 - 95
Nil	vi) Debts due by Companies or Firms in which the Directors of the Banking Company are interested as Directors, Partners or Managing Agents or in case of Private Companies as members ...	Nil
8 247 - 46	vii) Maximum total amount of Advances including temporary Advances made at any time during the year to Directors or Managers or Officers of the Banking Company or any of them either severally or jointly with any other persons ...	7,508 - 98
Nil	viii) Maximum total amount of Advances including temporary advances granted during the year to the Companies or Firms in which the Directors of the Bank are interested as Directors Partners or Managing Agents or in the case of Private Companies, as members ...	Nil
Nil	ix) Due from Banking Companies ...	Nil

AUDITOR'S CERTIFICATE

I have audited the annexed Balance Sheet of Moolky Bank Ltd, as on 31—12—1960 and also the annexed Profit and Loss Account of the Bank for the year ending on that date and I report that

(a) I have obtained all the information and explanations which to the best of my knowledge and belief, were necessary for the purpose of my audit and have found them to be satisfactory,

(b) The transactions of the Bank which have come to my notice, have been within the powers of the Bank,

(c) In my opinion, proper books of account as required by law have been kept by the Bank so far as appears from my examination of those books

(d) The Bank's Balance Sheet and Profit and Loss Account dealt with by this report are in agreement with the books of Account,

(e) In my opinion, and to the best of my information, and according to the explanations given to me, the said accounts give the information required by the Companies Act 1956 in the manner so required for Banking Companies and on such basis, the said Balance Sheet gives a true and fair view of the state of affairs of the Bank as on 31—12—1960 and the Profit and Loss Account gives a true and fair view of the profit for the year ending on that date

MANGALORE,
9—2—1961

(*Sd*) V. M. Shetty,
Chartered Accountant.

ಅಲ್ಲಲ್ಲಿಯ ಸುದ್ದಿಸಾರ

'ಅಮೇರಿಕದ ಅಧ್ಯಕ್ಷ ಚುನಾವಣೆ ಪ್ರದರ್ಶನದ ಉದ್ಘಾಟನೆ–ಕಳೆದ ತಾ. 29ರಂದು ಮಂಗಳೂರು ಗವರ್ನ್‌ಮೆಂಟ್ ಕಾಲೇಜಿನ ಸಭಾಸದನದಲ್ಲಿ ಮದರಾಸಿನ ಯುನೈಟೆಡ್ ಸ್ಟೇಟ್ಸ್‌ನ ವಾರ್ತಾ ಇಲಾಖೆಯವರು ಏರ್ಪಡಿಸಿದ ಅಮೇರಿಕದ ಅಧ್ಯಕ್ಷ ಚುನಾವಣೆ ಎಂಬ ಪ್ರದರ್ಶನವೊಂದನ್ನು ಡಾ| ಟಿ ಎಂ. ಎ. ಪೈಯವರ ಅಧ್ಯಕ್ಷತೆಯಲ್ಲಿ ಡಿಪ್ಯುಟಿ ಕಮಿಷನರ್ ಶ್ರೀ ಸಿ. ಜೆ. ಪದ್ಮನಾಭನವರು ಉದ್ಘಾಟಿಸಿದರು. ಮಿಸ್. ಸಿಸಿಲಿಯಾ ಎಫ್ ಜೋನ್‌ಸನ್ ಅವರು ಸ್ವಾಗತಿಸಿ ಅಮೇರಿಕ ಸರಕಾರದ ಅಧ್ಯಕ್ಷತೆಯ ಕುರಿತು ಸವಿವರ ಮಾಹಿತಿಯನ್ನಿತ್ತರು. ಶ್ರೀ ಸಿ. ಜೆ. ಪದ್ಮನಾಭರವರು ಪ್ರದರ್ಶನವನ್ನು ಉದ್ಘಾಟಿಸುತ್ತಾ ಈ ವಾರ್ತಾಸಂಸ್ಥೆಯವರು ಸ್ಥಳೀಯ ಮ್ಯೂಸಿಯಂಗೆ ಪುಸ್ತಕ ದಾನವಿತ್ತುದಕ್ಕಾಗಿ ಅಭಿನಂದಿಸಿದರು. ಅಧ್ಯಕ್ಷ ಡಾ. ಪೈಗಳು ಅಮೇರಿಕದಲ್ಲಿನ ಪ್ರಜಾಪ್ರಭುತ್ವ ಪದ್ಧತಿಯನ್ನೂ ಅಲ್ಲಿನ ತನ್ನ ಅನುಭವಗಳನ್ನೂ ವಿವರಿಸಿದರು.

ಅ. ಕ. ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಮಂಗಳೂರಿಗೆ! — ಚಿಕ್ಕಮಗಳೂರಿನ ಕಲಾ ಸೇವಾ ಸಂಘದವರು ಏರ್ಪಡಿಸಿದ ಅಖಿಲ ಕರ್ನಾಟಕ ನಾಟಕ, ಸಂಗೀತ, ನೃತ್ಯ ಸ್ಪರ್ಧೆಯು ಬಯಲು ರಂಗಮಂಟಪದಲ್ಲಿ ಕಳೆದ ತಾ 19—2—1961 ರಿಂದ ತಾ 18—3—61ರ ವರೆಗೆ ಯಶಸ್ವಿಯಾಗಿ ಜರಗಿದ್ದು, ನೃತ್ಯ ವಿಭಾಗದ ಪ್ರಥಮ ಬಹುಮಾನವು ಮಂಗಳೂರಿನ ಮಾಸ್ಟರ್ ವಿಠಲ್‌ರ ಶಿಷ್ಯೆ ಕುಮಾರಿ ಚಂದ್ರಾವಳಿಗೆ ದೊರಕಿರುದು ತುಂಬಾ ಸಂತೋಷದ ಸಮಾಚಾರ ಸ್ಪರ್ಧೆಯಲ್ಲಿ ವಿಜಯಿಗಳಾದವರಿಗೆ ತಾರೀಕು 19_3_1961ರಲ್ಲಿ ವಿಧಾನ ಸಭಾಧ್ಯಕ್ಷ ಶ್ರೀ ಎಸ್. ಆರ್. ಕಂಠಿಯವರ ಹಸ್ತದಿಂದ ಬಹುಮಾನ ವಿತರಣೆಯಾಯಿತು.

ಚುನಾವಣೆ—ಕಡಿಯಾಳಿ ಯು. ಎ. ಶಾಲೆಯ ಹಳೆಯ ವಿದ್ಯಾರ್ಥಿ ಸಂಘದ ಕಾರ್ಯಕಾರಿ ಸಮಿತಿಯು ಸಭೆ ಸೇರಿ ಶ್ರೀ ಕೆ. ಕೆ. ಪೈ ಅವರನ್ನು ಅಧ್ಯಕ್ಷರಾಗಿ, ಶ್ರೀ ಕು. ಶಿ. ಹರಿದಾಸ ಭಟ್ಟರನ್ನು ಉಪಾಧ್ಯಕ್ಷರಾಗಿ, ಶ್ರೀ ಎಸ್. ಗೋಪೀಚಂದರಾವ್ ಇವರನ್ನು ಪ್ರಧಾನ ಕಾರ್ಯದರ್ಶಿಯಾಗಿ, ಶ್ರೀ ಕೆ ಗೋಪಾಲಕೃಷ್ಣ ಉಪಾಧ್ಯರನ್ನು ಉಪಕಾರ್ಯದರ್ಶಿಯಾಗಿ ಮತ್ತು ವಿ. ಗುರುರಾಜ ಭಟ್ಟರನ್ನು ಕೋಶಾಧಿಕಾರಿಯಾಗಿ ಆರಿಸಿತು. ಸಂಘದ ಆಶ್ರಯದಲ್ಲಿ ಪುಸ್ತಕ ಭಂಡಾರವೊಂದನ್ನೂ ಮೈಸೂರು ಹಿಂದೀ ಪ್ರಚಾರ ಪರಿಷತ್ತಿನ ಪ್ರಥಮ ವರ್ಗವನ್ನೂ ತೆರೆಯಲು ನಿರ್ಧರಿಸಿತು.

ಶ್ರೀರಾಮನವಮಿ ಪೂಜೆ – ಶ್ರೀರಾಮನವಮಿಯ ಉತ್ಸವದ ಅಂಗವಾಗಿ ಉಡುಪಿಯ ಶ್ರೀ ಬ್ರಹ್ಮ ಚೈತನ್ಯರ ಧಾಮಾವತಿ ಸಂಘದವರು ಶ್ರೀ ರಾಮ ಪಟ್ಟಾಭಿಷೇಕ ಎಂಬ ಯಕ್ಷಗಾನ ಕೂಟವನ್ನು ಜರಗಿಸಿದರು. ಶಿವಪುರ ಶ್ರೀ ಸೂರಣ್ಣ ಸೆಟ್ಟರೇ ಮೊದಲಾದ ಅರ್ಥದಾರಿಗಳು ಭಾಗವಹಿಸಿದ್ದರು.

ವಡಭಾಂಡೇಶ್ವರ- ಸ್ಥಳೀಯ ಬಲರಾಮ ದೇವಸ್ಥಾನಕ್ಕೆ ಜೀರ್ಣೋದ್ಧಾರ ಸಮಿತಿಯವರು ಒದಗಿಸಿ ಕೊಟ್ಟ ವಿದ್ಯುತ್ ಪೂರೈಕೆಯ ಉದ್ಘಾಟನಾ ಸಮಾರಂಭವು ಕಳೆದ ತಾ 26ರಂದು ಶ್ರೀ ಎ. ಜೆ. ಆಲ್ವೆಯವರ ಅಧ್ಯಕ್ಷತೆಯಲ್ಲಿ ಉಡುಪಿ ನಗರ ಸಭಾಧ್ಯಕ್ಷ ಡಾ| ಕೆ. ಎಲ್. ಐತಾಳರಿಂದ ಜರಗಿಸಲ್ಪಟ್ಟಿತು.

ದೇಲಂಪಾಡಿ—ಸ್ಥಳೀಯ ಪಂಚಾಯತ್ ಬೋರ್ಡಿಗೆ ಒಂದು ರೇಡಿಯೋ ಸೆಟ್ಟನ್ನು ಸರಕಾರದಿಂದ ಒದಗಿಸಲಾಗಿದ್ದು ಕಳೆದ ವಾರ ಅದರ ಉದ್ಘಾಟನೆಯು ನೆರವೇರಿತು. ದೇಲಂಪಾಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಮಂದಿರದಲ್ಲಿ ಕಳೆದ ದಿನಾಂಕ 20 ರಂದು ವಿಭೀಷಣ ನೀತಿ, ತಾಳಮದ್ದಳೆಯೊಂದು ಸಂಘದ ಅಧ್ಯಕ್ಷರಾದ ಶ್ರೀ ಶೀರಿಕ್ಕಾಡು ಮಾಸ್ತರ್ ವಿಷ್ಣುಭಟ್ಟರ ಅಧ್ಯಕ್ಷತೆಯಲ್ಲಿ ಪ್ರದರ್ಶಿಸಲ್ಪಟ್ಟಿತು.

ಸಂಕ್ಷಿಪ್ತ ಸುದ್ದಿಗಳು

ಆಳ್ವರ ಅನುಭವ

ಕನ್ನಡನಾಡಿನ ಸಮಸ್ಯೆಗಳ ಬಗ್ಗೆ ದೃಷ್ಟಿಹರಿಸುವ ಕೆಲವೇ ಪ್ರತಿನಿಧಿಗಳಲ್ಲಿ ಶ್ರೀ ಜೋಕಿಂ ಆಳ್ವರೂ ಒಬ್ಬರು. ಬೆಳಗಾಂ ಜಿಲ್ಲೆಯ ಬೈಲಹೊಂಗಳ ಪ್ರದೇಶವು, ಅದರ ಹೆಸರೇ ಸೂಚಿಸುವಂತೆ, ಹೊನ್ನಿನ ಕಳ ಎಂದವರು ಕಂಡುಕೊಂಡರು. ಭಾರತದ ಸಾರವತ್ ಭೂಮಿಗಳ ಸಾಲಿನಲ್ಲಿ ಇದೂ ಬರುತ್ತದೆ; ಬಂದಲ್ಲಿ ಉತ್ತಮ ಬೆಳೆ ಬೆಳೆಸುತ್ತದೆ. ಆದರೆ, ಉತ್ತಮ ಬೀಜಗಳು, ಬುಲ್ ಡೋಜರ್‌ಗಳು ಮತ್ತು ಸಣ್ಣ ನೀರಾವರಿ ಸೌಕರ್ಯಗಳನ್ನು ಮಾತ್ರ ಒದಗಿಸಿಕೊಡಬೇಕು. ಅಧಿಕ ಉತ್ಪಾದನೆ— ಆಹಾರ ಸ್ವಾವಲಂಬನೆಯ ಮಂತ್ರವುಚ್ಚರಿಸುವ ಸರಕಾರ ಶ್ರೀ ಆಳ್ವರ ಈ ಸತ್ಯ ಅಭಿಪ್ರಾಯಕ್ಕೆ ಮನ್ನಣೆ ನೀಡುವುದಕ್ಕೆ ಇನ್ನೆಷ್ಟು ಚುನಾವಣೆಗಳು ಬೇಕಾದೀತು?

ಮೈಸೂರು ರಾಜ್ಯ ಸಂಗೀತ ನಾಟಕ ಎಕೆಡೆಮಿ—ಇವರು ಶ್ರೀ ಆರ್. ವಿ. ಶೇಷಾದ್ರಿ ಗವಾಯಿ ಅವರ ಸಂಗೀತ ಕಲಾರವಿಂದ ಪುಸ್ತಕಕ್ಕೆ ರೂ. 500ನ್ನು ಧನ ಸಹಾಯ ಮಾಡಿರುತ್ತಾರೆ.

ರಜತ ಮಹೋತ್ಸವ -- ಕುಂದಾಪುರ ಟೌನ್ ಪಂಚಾಯತದ ರಜತ ಮಹೋತ್ಸವವು ತಾ 29_3 61ರಿಂದ ತಾ. 4.4.61ರ ವರೆಗೆ ವಿವಿಧ ಕಾರ್ಯಕ್ರಮಗಳಿಂದ ವಿಜೃಂಭಣೆಯಿಂದ ನೆರವೇರಿತು. ಪ್ರಾರಂಭೋತ್ಸವವನ್ನು ಪಂಚಾಯತ್ ಆಫೀಸು ಪ್ರಾಕಾರದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಭದ್ರಾವತಿಯ ಟೌನ್ ಮುನ್ಸಿಪಲ್ ಅಧ್ಯಕ್ಷ ಶ್ರೀ ಬಿ. ಮಾಧವ ಆಚಾರ್ಯರು ನೆರವೇರಿಸಿದರು. ಕುಂದಾಪುರ ಟೌನ್ ಪಂಚಾಯತ್ ಅಧ್ಯಕ್ಷ ಶ್ರೀ ಗಣಪತಿ ಶೇಟ್ ಅವರು ಸ್ವಾಗತ ಭಾಷಣ ಮಾಡಿದರು

ಸಮಾರೋಪ ಸಮಾರಂಭವು ಮೈಸೂರು ರಾಜ್ಯದ ಗ್ರಾಮ ಕೈಗಾರಿಕೆ ಮತ್ತು ಖಾದಿ ಬೋರ್ಡಿನ ಅಧ್ಯಕ್ಷ ಶ್ರೀ ಎಚ್. ಸಿದ್ಧವೀರಪ್ಪ ಇವರ ಅಧ್ಯಕ್ಷತೆಯಲ್ಲಿ ಜರಗಿತು. ತಾಲೂಕು ಬೋರ್ಡ್ ಸದಸ್ಯ ಶ್ರೀ ಬಿ. ಶಿನರಾಮ ಸೆಟ್ಟಿ ಇವರು ಬಹುಮಾನ ವಿತರಣೆ ಮಾಡಿದರು. ಪ್ರತೀ ದಿನ ದಿನ ಸಂಜೆ ವಿವಿಧ ಮನರಂಜನೆಯ ಕಾರ್ಯಕ್ರಮಗಳಿದ್ದುವು.

ಕೆಮ್ಮಣ್ಣು—ಇಲ್ಲಿ ಇತ್ತೀಚೆಗೆ ನಡೆದ ಗ್ರಾಮನಾಯಕರ ಶಿಕ್ಷಣ ಶಿಬಿರದ ಸಮಾರೋಪ ಭಾಷಣ ಮಾಡುತ್ತಾ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ. ಎ. ಪೈಗಳವರು ಶಿಕ್ಷಣವೇ ಪ್ರಗತಿಯ ಮುಖ್ಯ ಸಾಧನವೆಂದೂ ನಮ್ಮ ಬಡ ದೇಶದಲ್ಲಿ ಜನರಿಗೆ ಸಾಕಷ್ಟು ಪ್ರಪಂಚಜ್ಞಾನವಿಲ್ಲವೆಂದೂ ಹೇಳಿ ನಮ್ಮಲ್ಲಿಯ ನೈಸರ್ಗಿಕ ಸಂಪತ್ತನ್ನು ನಮ್ಮ ಉಪಯೋಗಕ್ಕೆ ಹೇಗೆ ಅಳವಡಿಸಿಕೊಳ್ಳಬಹುದೆಂಬ ಕುರಿತು ಹಲವಾರು ಸಲಹೆ ಸೂಚನೆಗಳನ್ನಿತ್ತರು. ಆರಂಭದಲ್ಲಿ ಶ್ರೀ ಕೆ. ಎ ರಾಯರು ಸ್ವಾಗತಿಸಿದರು ಬೆಳ್ಮಣ್ಣಿನ ಶ್ರೀ ಪಿ. ಅನಂದನವರು ಭಾಷಣವಿತ್ತರು ಜಿಲ್ಲಾ ಕಾಂಗ್ರೆಸಿನ ಸಂಘಟನಾ ಕಾರ್ಯದರ್ಶಿ ಶ್ರೀ ಬಿ. ನಾರಾಯಣ ನಾಯಕರು ಬಹುಮಾನ ಹಂಚಿದರು, ಅಂತ್ಯದಲ್ಲಿ ಗ್ರಾಮ ಸೇವಕ ಶ್ರೀ ವೆಂಕಟರಾಮು ರವರು ಅಭಾರ ಸೂಚಿಸಿದರು.

ಧರ್ಮಾರ್ಥ ದಂತ ಚಿಕಿತ್ಸಾ ಶಿಬಿರದ ಉದ್ಘಾಟನೆ—ಬೈಲಹೊಂಗಲದ ಆರೋಗ್ಯ ಸೇವಾ ಸಂಘದ ವತಿಯಿಂದ ತಾ 15ರಂದು ಶ್ರೀ ದುರದುಂಡೀಶ್ವರ ಮಹಾಂತ ಶಿವಯೋಗಿಗಳಿಂದ ಯಶಸ್ವಿಯಾಗಿ ಜರಗಿತು. ಶ್ರೀಗಳವರು ಆರೋಗ್ಯ ಸೇವಾ ಸಂಘಕ್ಕೆ ಶುಭಕೋರಿ ಚಿಕಿತ್ಸಕರಾದ ಡಾ| ರಾಮಣ್ಣವರ ದಂಪತಿಗಳನ್ನು ಆಶೀರ್ವಾದಿಸಿದರು. ಡಾ| ರಾಮಣ್ಣವರ ಅವರು ಧರ್ಮಾರ್ಥ ದಂತ ಚಿಕಿತ್ಸೆಯ ಬಗ್ಗೆ ವಿವರಗಳನ್ನಿತ್ತು ಭಾಷಣ ಮಾಡಿದರು. ಶ್ರೀ ಎಚ್. ಎಸ್. ಮೆಟಗುಡ್, ಡಾ| ಜಿ ಜಿ. ಭಟ್, ವೈದ್ಯ, ಎಂ. ಎಲ್. ಹೊಸೂರು, ಶ್ರೀ ತಲ್ಲೂರ ರಾಯನ ಗೌಡ, ಮೊದಲಾದವರು ಸಂದರ್ಭೋಚಿತ ಭಾಷಣ ಮಾಡಿದರು. ಅ ಬಳಿಕ ಹಲವರು ಈ ಶಿಬಿರದ ಪ್ರಯೋಜನ ಪಡೆದರು

ಪೇಚಿನಲ್ಲಿ ನೆಹರು

ಗೋವಿಂದ ವಲ್ಲಭ ಪಂತರೊಡನೆ ಪ್ರಧಾನಿ ನೆಹರು ತನ್ನ ಮನಶ್ಶಾಂತಿಯನ್ನೂ ಕಳೆದುಕೊಳ್ಳುವಂತಾಗಿದೆ. ಸಂಸತ್ ಕಾಂಗ್ರೆಸ್ ಪಕ್ಷದ ಉಪನಾಯಕರಾಗಿದ್ದ ಪಂತರ ನಿಧನದಿಂದ ತೆರವಾದ ಸ್ಥಾನವನ್ನು ಪೂರ್ತಿಗೊಳಿಸುವವರು ಯಾರು? ಮುರಾರ್ಜಿಯೋ, ಜಗಜೀವನರಾಮರೋ ಅಥವಾ ಲಾಲ ಬಹದೂರ ಶಾಸ್ತ್ರಿಯೋ ಎಂಬ ಮಹಾ ಪ್ರಶ್ನೆಗೆ ನೆಹರು ಉತ್ತರವನ್ನೀಗ ನೀಡಬೇಕಾಗುತ್ತದೆ. ತನ್ನ ಗೈರುಹಾಜರಿಯಲ್ಲಿ ಮುರಾರ್ಜಿಯವರನ್ನು ಹಂಗಾಮಿ ನಾಯಕನಾಗಿ ನೇಮಿಸಿದುದರ ಕಹಿ ಅನುಭವವನ್ನು ನೆಹರು ಇಷ್ಟರಲ್ಲೇ ಮರೆತಿರಲಾರರು. ಉಪನಾಯಕನ ಆಯ್ಕೆಯೇ ಇಷ್ಟೊಂದು ತಲೆಕರಡಾದರೆ ಇನ್ನು ನಾಯಕನ ಆಯ್ಕೆ ಅನಿವಾರ್ಯವೆಂದೆನಿಸಿದಾಗ...?— ಇದಕ್ಕೆ ಉತ್ತರ ಹೇಳಬೇಕಾದವರು ಯಾರು?

ರಾಜಸತ್ತೆಯಲ್ಲಿ ಆಸಕ್ತಿಯೆ?

ಬಸ್ತಾರದ ಮಹಾ ರಾಜರಾಗಿದ್ದ ಪ್ರತಾಪ ಭಂಜದೇವರನ್ನು ಪದಚ್ಯುತಗೊಳಿಸಿ, ಅವರನ್ನು ಸೆರೆಯಲ್ಲಿಟ್ಟಾಗ ನಿರೀಕ್ಷಿಸದಿದ್ದ ಸನ್ನಿವೇಶವೊಂದನ್ನು ಮಧ್ಯ ಪ್ರದೇಶ ಸರಕಾರವು ಎದುರಿಸಬೇಕಾಯಿತು. ಪಂತರಿಗೆ ಮೊದಲು ಕೇಂದ್ರ ಗೃಹ ಮಂತ್ರಿಯಾಗಿ ಈಗ ಮಧ್ಯ ಪ್ರದೇಶದ ಮುಖ್ಯ ಮಂತ್ರಿಯಾಗಿರುವ ಡಾ| ಕೈಲಾಸನಾಥ ಕಟ್ಜು ಅವರು ಹೊಸ ಸಮಸ್ಯೆಯನ್ನು ಎದುರಿಸಬೇಕಾಗಿ ಬಂದಿದೆ. ತಮ್ಮ ದೊರೆಯ ಬಂಧನದಿಂದ ರೊಚ್ಚಿಗೆದ್ದ ಸಾವಿರ ಸಂಖ್ಯೆಯ ಆದಿವಾಸಿಗಳು ಸರಕಾರಕ್ಕೆ ವಿರುದ್ಧ ನಿಂತಿರುವ ಅಪೂರ್ವ ಘಟನೆಯೊಂದು ನಡೆದು ಪರಸ್ಪರ ಚಕಮಕಿಯು ಚಿಂತೆಗೆ ಕಾರಣವಾಗಿದೆ. ಮಹಾರಾಜರನ್ನು ಬಂಧಮುಕ್ತಗೊಳಿಸ ಬೇಕೆಂಬ ಕೇಳಿಕೆಗಳ ಘೋಷಣೆ ಎಬ್ಬಿಸುವ ಇವರನ್ನು ಸಮಾಧಾನಕ್ಕೆ ತರುವುದೇ ಬಹು ಪ್ರಯಾಸವಾಗಿದೆ ಕೇಂದ್ರ ಗೃಹ ಮಂತ್ರಿ ಶಾಸ್ತ್ರೀಯವರೂ ಇಲ್ಲಿಗೆ ಸಮಾಗಮಿಸಿ ವಿಚಾರವನ್ನು ತಿಳಿದು ಕೊಂಡರು. ಭಾರತದ ರಾಜರು ಮಾಜಿಯಾದರೂ ಇಂದಿಗೂ ಅವರ ಹಿಂಬಾಲಕರು ಇದ್ದಾರೆ ಎಂಬುದಕ್ಕೆ ಅನ್ಯ ನಿದರ್ಶನ ಬೇಕೆ?

ಕುಹಕಿಗಳ ಕಾರಸ್ಥಾನ

ಕಾಂಗೊವಿನಲ್ಲಿ ಶಾಂತಿಯನ್ನು ಪ್ರಸ್ಥಾಪಿಸಲು ತೆರಳಿದ ಭಾರತೀಯ ಸೈನಿಕರು ತಮ್ಮ ಕರ್ತವ್ಯ ನಿಷ್ಠೆಯನ್ನು ತೋರಿಸುತಿದ್ದಾರೆ. ಈ ಕ್ಷೇತ್ರದಲ್ಲಿ ಭಾರತವು ತನ್ನ ಸೇವೆಯಿಂದ ವಿಶ್ವದಲ್ಲಿಯೇ ಪ್ರತಿಷ್ಠೆಯನ್ನು ಗಳಿಸುತ್ತಿರುವುದನ್ನು ಕಾಣಲಾಗದ ಸಂ. ರಾ ಸಂಘದ ಕೆಲವು ಸದಸ್ಯರಾಷ್ಟ್ರಗಳು ವಿಘ್ನ ವಿಧ್ವಂಸಗಳನ್ನು ತಂದು ಹಾಕತೊಡಗಿವೆ. ಕಟಾಂಗ ಪ್ರಾಂತಕ್ಕೆ ಹೊರಟಿದ್ದ ಸೇನೆಯು ವಿಮಾನ ನಿಲ್ದಾಣವನ್ನು ಪ್ರವೇಶಿಸುತ್ತಿರುವಾಗ ಕಾಂಗೊಲಿ ಸೈನಿಕರು ಬಂದೂಕುಗಳನ್ನು ತೋರಿಸಿ ಬೆದರಿಸಿದರೆಂದೂ ಆಗ ಈ ಸೈನಿಕರು ಬೇರೊಂದು ದಾರಿಯಾಗಿ ಕಟಾಂಗಕ್ಕೆ ತೆರಳಿದರೆಂದೂ ಗೊತ್ತಾಗಿದೆ ರಹಸ್ಯವೆನಿಸಿದ ಈ ವಿಷಯವನ್ನು ಕಾಂಗೋಲಿ ಸೈನಿಕರಿಗೆ ತಿಳಿಸಿದವರು ಯಾರೆಂಬುದು ಸಂದೇಹಾಸ್ಪದವಿದೆ. ಅವರೂ ಸಂ. ರಾ. ಸಂಘದ ವೇತನ ವಿತರಣ ಅಧಿಕಾರಿಗಳೇ ಇದನ್ನು ಸ್ಫೋಟಗೊಳಿಸಿದರೆಂದು ಭಾರತಕ್ಕೆ ಅಗೌರವತರುವುದೇ ಈ ಕುಹಕಿಗಳ ಉದ್ದೇಶವೆಂದೂ ತಿಳಿದು ಬರುತ್ತದೆ.

ಹಿಂದುಳಿದವರ ರಾಜ್ಯ

ಕೇಂದ್ರ ಸರಕಾರದ ಸಹಾಯ ಧನವನ್ನು ಪಡೆಯುವಲ್ಲಿ ತನ್ನ ಜನಸಂಖ್ಯೆಯ ಸೇಕಡಾ ತೊಂಬತ್ತರಷ್ಟು ಹಿಂದುಳಿದವರೆಂದು ಮೈಸೂರು ರಾಜ್ಯವು ಸಾರಿದೆ ಎಂದು ಲೋಕ ಸಭೆಯಲ್ಲಿ ಶ್ರೀ ದಾತಾರರು ತಿಳಿಸಿದ್ದಾರೆ. ಈ ಪ್ರಶ್ನೆಯನ್ನು ಸಮಗ್ರವಾಗಿ ಪರಿಶೀಲಿಸಲು ರಾಜ್ಯ ಸರಕಾರವು ಈಗ ಒಂದು ಸಮಿತಿಯನ್ನು ನೇಮಿಸಿದೆ. ಸಮಿತಿಯ ವರದಿಯು ಕೈಸೇರಿದನಂತರ ಯಾವುದೊಂದು ಜಾತಿಯ ಹಿಂದುಳಿದ ಸ್ಥಿತಿಯನ್ನು ಯಾವ ಆಧಾರದ ಮೇಲೆ ಗೊತ್ತುಪಡಿಸಬೇಕೆಂಬುದನ್ನು ಅದು ಗೊತ್ತುಪಡಿಸುವುದು ಎಂದರು. ಕೇಂದ್ರ ಸರಕಾರವು ಹಿಂದುಳಿದ ವರ್ಗಗಳ ಯಾದಿಯನ್ನು ಇರಿಸಿಕೊಂಡಿಲ್ಲವೆಂದೂ ರಾಜ್ಯ ಸರಕಾರಗಳು ಇರಿಸಿಕೊಂಡ ನಿಯಮಗಳನ್ವಯ ಸಹಾಯಧನವೇ ಮೊದಲಾದುವನ್ನು ಹಂಚುವುದೆಂದೂ ಆದರೂ 'ಹಿಂದುಳಿದ ಪರಿಸ್ಥಿತಿ'ಯನ್ನು ಗೊತ್ತುಪಡಿಸಿದ ಯೋಗ್ಯ ಕ್ರಮವೊಂದನ್ನು ಕೇಂದ್ರವು ಪರಿಶೀಲಿಸುತ್ತಿದೆಯೆಂದೂ ಶ್ರೀಮತಿ ವೈಯೊಲೆಟ್ ಆಳ್ವರು ಹೇಳಿದರು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ಬಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ
ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕಕಳಿಸಲಾಗುವುದು.
ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ

ವಿಚಿತ್ರ ಸತ್ಯ:

ಮಕ್ಕಳು ಮರಿಮಕ್ಕಳೇ ಇಲ್ಲಿನ ಪ್ರಜೆಗಳು!

ನಿರ್ಜನವಾಗಿದ್ದ ಪಾಮರ್‌ಸ್ಟನ್ ದ್ವೀಪಗಳಿಗೆ ತೆರಳಿ ಅಲ್ಲಿ ನೆಲಸ ತೊಡಗಿದ ವಿಲಿಯಂ ಮಾಸ್ಟರ್ಸನು ಅಲ್ಲಿ ಒಂದು ಹೊಸ ವಿಚಿತ್ರ ಸಾಮ್ರಾಜ್ಯ ಕಟ್ಟಿದನು. ಈ ಸಾಮ್ರಾಜ್ಯದ ಪ್ರಜೆಗಳೆಲ್ಲರೂ ರಾಜನ ಮಕ್ಕಳು ಮರಿಮಕ್ಕಳೇ ಆಗಿರುವರೆಂಬುದು ವಿಚಿತ್ರವಾದರೂ ಸತ್ಯ.

"ನನ್ನ ಮಾತೇ ವೇದದ ಮಾತಾಗಿ ಪರಿಣಮಿಸುವ, ನನ್ನ ಇಚ್ಛಾನುಸಾರ ಕಾರ್ಯ ನಡೆಸಲು ಅವಕಾಶವಿರುವ ಒಂದು ಸ್ವರ್ಗಲೋಕವನ್ನು ಕಟ್ಟುವ ಸಲುವಾಗಿ ನಾನು ಹೊರಡುತ್ತೇನೆ. ಆ ನನ್ನ ಲೋಕಕ್ಕೆ ಅನಾಮಂತ್ರಿತರು ಪಾದಾರ್ಪಣ ಮಾಡಿದರೆಂದರೆ, ಅವರನ್ನು ಮಾರಿಗೌತಣವಿಕ್ಕುತ್ತೇನೆ" ಎಂಬ ಉದ್ಗಾರ ನಾಟಕೀಯವೆಂದು ನಿಮಗೆ ತೋರಬಹುದು. ಆದರೆ, ಈ ನಾಟಕೀಯೋಕ್ತಿಯನ್ನು ತನ್ನ ಜೀವನ ನಾಟಕದಲ್ಲಿ ಪ್ರತ್ಯಕ್ಷ ಕಾರ್ಯಕೃತಗೊಳಿಸಿದವನೊಬ್ಬನಿರುವನೆಂದರೆ, ನೀವು ನಂಬಲು ಹಿಂಜರಿಯಬೇಡಿರಿ.

ಇಂದಿಗೆ ಸುಮಾರು ೧೦೦ ವರ್ಷಗಳಿಗೆ ಮೊದಲು ಇಂಗ್ಲೆಂಡಿನ ಯುವಕನಾಗಿದ್ದ ವಿಲಿಯಂ ಮಾಸ್ಟರ್ಸ್ ಎಂಬವನ ಉದ್ಗಾರವಾಗಿತ್ತು ಇದು. ಈತನು ಬುದ್ಧಿಕುಶಲನು; ಉನ್ಮತ್ತತೆಯು ಸೋಕೂ ತಗಲದವನು. ಒಂದು ದಿನ ವಿಲಿಯಮ್ ಮಾಸ್ಟರ್ಸನು ತನ್ನ ಮನೆಮಂದಿಗೆ ತಿಳಿಸದೆ ಬ್ರಿಸ್ಟಲ್‌ನಿಂದ ಸಿಡ್ನಿಗೆ ಹೋಗುವ ಹಡಗವೊಂದನ್ನು ಹತ್ತಿ ತನ್ನ ಕನಸಿನ ಸ್ವರ್ಗಲೋಕಕ್ಕೆ ಪ್ರಯಾಣಿಸಿದನು. ವಿಶಾಲವಾದ ಪ್ರಶಾಂತ ಸಾಗರದ ಒಂದು ನಡುಗುಡ್ಡೆಯ ಕಿನಾರೆಯಲ್ಲಿ ಹಡಗ ಚಲಿಸುತಿದ್ದಂತೆ ಈತನು ತನ್ನ ಸಹಯಾತ್ರಿಗಳ ಸಂಗದೂರೆದು ಅಲ್ಲಿಯೇ ಯಾರಿಗೂ ಅರಿಯದಂತೆ ಇಳಿದುಬಿಟ್ಟನು. ಅಲ್ಲಿ ಆತನನ್ನು ಎಸ್ಥರ್ ಎಂಬ ಸುಂದರ ಯುವತಿಯು ನಗುಮೊಗದಿಂದ ಎದುರ್ಗೊಂಡು ಸಮೀಪದ ಪೆನ್‌ರಾಯಿನ್ ನಡುಗುಡ್ಡೆಗೆ ಕರೆದೊಯ್ದಳು. ಅಲ್ಲಿ ಇವರಿಬ್ಬರ ವಿವಾಹವಾಯಿತು.

ಆದರೆ, ಪೆನ್‌ರಾಯಿನ್‌ನ ಸಾಮಾಜಿಕ ಪದ್ಧತಿ ಅತೀವ ವಿಚಿತ್ರವಿತ್ತು. ಅಲ್ಲಿ ಒಬ್ಬ ಹೆಂಗಸಿನ ಮೇಲೆ ಎಲ್ಲ ಪುರುಷರಿಗೂ ಸಮಾನ ಅಧಿಕಾರವಿತ್ತು. ಹಾಗಾಗಿ ಮಕ್ಕಳ ಅಪ್ಪಂದಿರು ಯಾರು ಎಂಬುದು ಯಾರಿಗೂ ಗೊತ್ತಿರದೆ ಅವರೆಲ್ಲರೂ ಅಲ್ಲಿನ ಎಲ್ಲ ಪುರುಷ ಸಮಾಜದ ಮಕ್ಕಳೆಂದು ಪರಿಗಣಿಸಲ್ಪಡುತಿದ್ದರು. ಇದರಿಂದ ರೋಷಗೆದ್ದ ವಿಲಿಯಂ ಅಲ್ಲಿಂದ ೫೦೦ ಮೈಲು ದೂರದಲ್ಲಿದ್ದ, ನಿರ್ಜನ ಪಾಮರ್‌ಸ್ಟನ್ ನಡುಗುಡ್ಡೆಯನ್ನು ಕಂಡು ಹಿಡಿದು, ಅಲ್ಲಿಗೆ ಬಂದು ಸಂಸಾರ ಹೂಡಿದನು. ಆ ದಂಪತಿಗಳೂ ಸ್ಥರಳ ತಂಗಿ ಎಡೆಲಿನ್‌ಳೂ ಒಂದು ಚಿಕ್ಕನಾವೆಯಲ್ಲಿ ಕುಳಿತು ಈ ನಡುಗುಡ್ಡೆಯಲ್ಲಿ ನೆಲಸತೊಡಗಿದರು.

ಇರುವುದಕ್ಕೆ ಮನೆಯೂ ಬೇಕಲ್ಲ? ಅಂತೂ ಇಂತೂ ಒಂದು ಜೋಪಡಿ ಸಿದ್ಧವಾಯಿತು. ಎಸ್ಥರ್ ಆ ಸಮಯದಲ್ಲಿ ಗರ್ಭವತಿಯಾಗಿದ್ದುದರಿಂದ ಆಕೆಯ ತಂಗಿಯು ವಿಲಿಯಮನಿಗೆ ಬಹು ಸಹಾಯ ಮಾಡಿದಳು. ಅಲ್ಲಿ ಯಾವುದೇ ಆಹಾರ ವಸ್ತುಗಳು ಬೆಳೆಯದಿದ್ದುದರಿಂದ ಬೆಳೆಸುವವರೆಗೆ ಮೀನು ಹಿಡಿದು ತಿಂದು ಬದುಕತೊಡಗಿದರು. ಎಸ್ಥರ್‌ಳ ಪ್ರಸೂತಿ ದಿನ ನಿಕಟವಾಗಿದ್ದಂತೆ ವಿಲಿಯಮನು ಮರಳಿ ಚಿಂತೆಗ ಗುರಿಯಾದನು. ಪ್ರಸೂತಿ ಶುಶ್ರೂಷೆಯು ಅವರಾರಿಗೂ ಗೊತ್ತಿರಲಿಲ್ಲ. ಈ ದ್ವೀಪದಲ್ಲಿ ಅವರಾದಿರೂ ಇದ್ದುದು ಮೂವರೇ. ಬಹು ಯೋಚನೆಮಾಡಿದ ಅನಂತರ ಮಾನಿ ಹಿಂದ್ವೀಪಕ್ಕೆ ತೆರಳಿ ತನ್ನ ಅತ್ತಿಗೆಯನ್ನು ಕರೆತನ್ನಿ ಎಂದು ಎಸ್ಥರ್ ಹೇಳಿದಳು. ವಿಲಿಯಮನು ಉತ್ತರಕ್ಕೆ ಯಾತ್ರೆಮಾಡಿ ನಾಜೋಮಿಯೆಂಬ ಹೆಸರಿನ ಆ ಅತ್ತಿಗೆಯನ್ನು ಕರೆದು ತಂದನು.

ಪುತ್ರೋತ್ಸವದ ಛಂದದಲ್ಲಿ ವಿಲಿಯಮನಿಗೆ ತನ್ನ ಸ್ವರ್ಗಲೋಕ ಸ್ಥಾಪನೆಯ ನಿರ್ಧಾರ ನೆನಪಾಯಿತು. ಆತನು ಉಳಿದಿಬ್ಬರನ್ನೂ ಮದುವೆಯಾದನು. ಒಂದೇ ವರ್ಷದಲ್ಲಿ ನಾಜೋಮಿಯಲ್ಲಿ ಆವಳಿ ಗಂಡು ಮಕ್ಕಳೂ ಎಡೆಲಿನಳಿಗೆ ಮಗಳೂ, ಎಸ್ಥರಳಿಗೆ ಎರಡನೆಯ ಮಗನೂ ಜನಿಸಿದರು. ವಿಲಿಯಮನ ಕುಟುಂಬ ಈಗ ಬಳೆಯುತ್ತ ಬಂತು. ದೊಡ್ಡ ಮನೆಯು ಆಗತ್ಯವೆನಿಸಿತು. ಬಿರುಗಾಳಿಯಿಂದ ಸಿಡಿದ ನೌಕೆಗಳ ಮೋಪನ್ನು ಸಂಗ್ರಹಿಸಿ ಮನೆಯ ಬಡಾವಣೆಯನ್ನು ಆತ ಮಾಡಿದನು.

೧೮೬೧ರಲ್ಲಿ ಬ್ರಿಟಿಷ ಯುದ್ಧ ನೌಕೆಯೊಂದು ಆ ದ್ವೀಪದಲ್ಲಿ ಲಂಗರೂರಿದಾಗ ವಿಲಿಯಮನ ಪರಿವಾರದಲ್ಲಿ ೨೩ ಜನರಿದ್ದುದನ್ನು ಆದರ ನಾವಿಕನು ಕಂಡಿದ್ದನು. ಇಷ್ಟೊಂದು ದೂರದ ದ್ವೀಪದಲ್ಲಿಯೂ ಸುಲಕ್ಷಣವಾಗಿ ಇಂಗ್ಲಿಷ್ ಮಾತಾಡುವುದನ್ನು ನೋಡಿ ಆತನು ವಿಸ್ಮಯಚಕಿತನಾದನು. ನಾವಿಕನು ಇಂಗ್ಲೆಂಡಿಗೆ ಮರಳಿ ವಿಲಿಯಮನ ದ್ವೀಪದ ಸಂಗತಿಯನ್ನು ತಿಳಿಸಿದಾಗ, ಅದನ್ನು ಕೇಳಿ, ಕೆಲವಾರು ಸಂಸಾರಗಳು ಅಲ್ಲಿ ನೆಲೆನಿಲ್ಲಲು ಹೊರಟುವು ಆದರೆ, ವಿಲಿಯಮನು ಯಾರೊಬ್ಬರಿಗೂ ಆಶ್ರಯವೀಯಲು ನಿರಾಕರಿಸಿದನು. ತನ್ನ ಸಾಮ್ರಾಜ್ಯದಲ್ಲಿ ಏಕಮಾತ್ರ ಅಧಿಪತಿಯಾಗಿ ಇರಬೇಕೆಂದೇ ಆತನ ಹಂಬಲವಿತ್ತು.

ಹೀಗೆಯೇ ಇರಲು ಆತನ ಮೂವರು ಪತ್ನಿಯರಿಗೂ ಮಕ್ಕಳು ಏಕಪ್ರಕಾರವಾಗಿ ಜನಿಸುತ್ತ ಬಂದು ನಡುಗುಡ್ಡೆಯ ಜನಸಂಖ್ಯೆ ಬೆಳೆಯಿತು. ಬಾಹ್ಯ ಪ್ರಪಂಚದಿಂದ ಅಲ್ಲಿಗೆ ಯಾರೂ ಬರುವಂತಿರಲಿಲ್ಲ. ಬಂದವರನ್ನು ಓಡಿಸುತ್ತ ನಡೆದರೆ, ತನ್ನ ಪುತ್ರ ಪುತ್ರಿಯರ ವಿವಾಹ ಹೇಗೆಮಾಡಬೇಕು ಎಂಬ ವಿಚಾರ ಆತನನ್ನು ಕಾಡತೊಡಗಿತು. ಬಹುವಾಗಿ ಯೋಚಿಸಿ ಈ ಸಮಸ್ಯೆಯನ್ನೂ ಆತ ಬಗೆ ಹರಿಸಿದನು. ತನ್ನ ಮಗ ವಿಲಿಯಮನ ಮದುವೆಯನ್ನು ಎಡೆಲಿನಳ ಮಗಳೊಡನೆ ಮಾಡುವ ಆಜ್ಞೆಯಿತ್ತನು. ಮುಂದೆ ತಮ್ಮ ಗಂಡು ಮಕ್ಕಳಿಗೆ ತಮ್ಮ ಹೆಣ್ಣು ಮಕ್ಕಳನ್ನೇ ಕೊಟ್ಟು ವಿವಾಹ ನಡೆಸ ತೊಡಗಿದರು. ಆದರೆ, ಒಂದೇ ತಾಯಿಯಲ್ಲಿ ಹುಟ್ಟಿದ ಖಾಸ ಅಣ್ಣ ತಂಗಿಯರ ವಿವಾಹ ನಡೆಯುತ್ತಿರಲಿಲ್ಲ. ಇದರಿಂದಾಗಿ ಮತ್ತೊಂದು ಪ್ರಶ್ನೆ ಎದ್ದು ತೋರಿತು. ವಿವಾಹದ ಉದ್ದೇಶಕ್ಕಾಗಿ ತನ್ನ ಎಲ್ಲಾ ಮಕ್ಕಳ ಹೆಸರು, ಅವರ ತಾಯಿಯ ಹೆಸರು, ಜನನ ತಾರೀಕುಗಳನ್ನು ಬರೆದಿಡುವುದು ಆಗತ್ಯವಾಯಿತು. ಯಾರೋ ಒಬ್ಬ ನಾವಿಕ ದಾನವಿತ್ತಿದ್ದ ನೋಟು ಪುಸ್ತಕದಲ್ಲಿ ಆವನೇ ಕೊಟ್ಟಿದ್ದ ಸೀಸದ ಕಡ್ಡಿಯಿಂದ ಈ ವಿವರಗಳನ್ನು ನಮೂದಿಸಿಕೊಂಡನು.

ವಿಲಿಯಂ ಮಾಸ್ಟರನ ವಿಸ್ತೃತ ಸಂಸಾರ ಹಾಗೂ ಆಧಿಪತ್ಯ ನಿರಾತಂಕವಾಗಿ ಮುಂದುವರಿಯುತ್ತಿತ್ತು. ೧೮೮೮ರಲ್ಲಿ ೧೬ ಗಂಡಸರು ೮ ಹೆಂಗಸರು ತುಂಬಿದ ಆಂಗ್ಲೇಯರ ಹಡಗ ಅಲ್ಲಿ ಬಂದು ನಿಂತಿತು. ಮಾಸ್ಟರ್ಸನು ತನ್ನ ಮಕ್ಕಳು—ಮೊಮ್ಮಕ್ಕಳ ಸಹಾಯದಿಂದ ಅವರೊಡನೆ ಹೋರಾಡಿದನು. ನಡೆದ ಘರ್ಷಣೆಯಲ್ಲಿ ಮೂರು-ನಾಲ್ಕು ಜನರು ಪಂಚತ್ವವನ್ನೈದಿದರು; ಉಳಿದವರು ಕಾಲಿಗೆ ಬುದ್ಧಿ ಹೇಳಿದರು. ಮರುದಿನವೇ ವಿಲಿಯಂ ಮಾಸ್ಟರ್ಸನು ರಾರಟೋಂಗಾಕ್ಕೆ ಹೋಗಿ ತನ್ನ ದ್ವೀಪಕ್ಕೆ ತಾನೇ ಸ್ವಾಮಿಯೆಂಬುದಕ್ಕೆ ಅವರ ಅನುಮತಿ ಬೇಡಿದನು. ಅಲ್ಲಿನ ರಾಜನೇ ಆತನೆಂದು ಸ್ವೀಕೃತವಾಯಿತು. ಆ ಸಮಯದಲ್ಲಿ ಆತನಿಗೆ ೮೬ ಮಕ್ಕಳೂ ೪೭ ಮೊಮ್ಮಕ್ಕಳೂ ಇದ್ದರು! ದ್ವೀಪದ ಜನಸಂಖ್ಯೆ ೧೩೭ ಇತ್ತು. ೧೮೮೮ರಲ್ಲಿ ಈ ಸಂಖ್ಯೆ ೧೭೨ ಆಗಿತ್ತು. ಇವರಲ್ಲಿ ಕೆಲವರು ಸಮೀಪದ ದ್ವೀಪಗಳಲ್ಲಿ ವಾಸಿಸಲು ತೆರಳಿದ್ದರು. ೧೮೯೯ರಲ್ಲಿ ವಿಲಿಯಮನು ಮಲಗಿದ್ದಲ್ಲಿಯೇ ಮೃತ್ಯುವನ್ನಪ್ಪಿದನು. ಆಗ ಆತನ ಸಂತಾನದವರ ಸಂಖ್ಯೆ ೪೫೩ ಆಗಿತ್ತು! ಇವನ ನಂತರ ಹಿರಿಯ ಮಗ ವಿಲಿಯಮನು ದ್ವೀಪದ ಆಡಳಿತವನ್ನು ನಿರ್ವಹಿಸಿದನು. ಇವನಿಗೆ ೨೨ ಮಕ್ಕಳು ಹುಟ್ಟಿದರು.

೧೯೪೬ರಲ್ಲಿ ಈ ವಿಲಿಯಮನೂ ಕಾಲವಶನಾದನು. ಆಗ, ಬ್ರಿಟಿಷ ಅಧಿಕಾರಿಗಳು ಇಲ್ಲಿ ಜನಗಣನೆಯನ್ನು ಮಾಡಿದರು. ಈ ದ್ವೀಪಗಳ ಒಟ್ಟು ಜನಸಂಖ್ಯೆ ೫,೧೦೦ ಇತ್ತು! ಈ ಸಂಖ್ಯೆ ಒಂದೂವರೆಯಷ್ಟಿಗಿರಬಹುದು. ಇಂದು ಪಾಮರ್‌ಸ್ಟನ್ ದ್ವೀಪಗಳ ಒಡೆಯ ನೇಡ್ ಮಾಸ್ಟರ್ಸ್. ಈತನೂ ನನ್ನ ಅಜ್ಜನಂತೆಯೇ ಅಲ್ಲಿಯ ಆಡಳಿತೆಯನ್ನು ನಿರ್ವಹಿಸುತಿದ್ದಾನೆ. ಒಂದೇ ಸಂಸಾರದ ಅಧಿಕಾರವಿರುವ ಬ್ರಿಟಿಷ್ ಕಾಮನ್‌ವೆಲ್ತಿನಲ್ಲಿರುವ ಏಕಮೇವ ದ್ವೀಪವೆಂದರೆ, ಇದೊಂದೇ.

(ವಿವಿಧ ಮೂಲಗಳಿಂದ)

ಅಮೇರಿಕೆಯ ಖಜಾನೆಯ ಕಾರ್ಯದರ್ಶಿ ಶ್ರೀ ಡಗ್ಲಾಸ್ ಡಿಲ್ಲಿಯಾನ್

ಕನ್ನಡ ಪುಸ್ತಕಗಳಿಗೆ—
ಮತ್ತು
ಶಾಲೆಗಳಿಗೆ ಬೇಕಾಗುವ
ಯಾವತ್ತೂ ಫಾರ್ಮುಗಳೂ
ಹಾಜರಿ ರಿಜಿಸ್ಟ್ರಿಗಳೂ
ಕಥೆಕಾದಂಬರಿ ಇತ್ಯಾದಿಪುಸ್ತಕಗಳಿಗೆ
ನವಭಾರತ ಪುಸ್ತಕ ಭಂಡಾರ
ಉಡುಪಿ

ದಿ ವಿಜಯ ಬೇಂಕ್ ಲಿಮಿಟೆಡ್
ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ: 1931
ರಿಜಿಸ್ಟರ್ಡ್ ಆಫೀಸು:
ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು 3, ಸೌತ್ ಕೆನರಾ.
ಕಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡ 5ರ ವರೆಗೆ ಹೆಚ್ಚಿಸಲಾಗಿದೆ.
ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ಪಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸೋಣಾಗುತ್ತದೆ.
ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ.

ಕುಮಾರಿ ಚಿತ್ರಗಳು
(Registered)
ಈ ದೇಶೀಯ ತಯಾರಿಕೆಯು ಗುಣಾಂಶವು ವರ್ಣಗಟ್ಟಲೆಯಿಂದ ವಿಖ್ಯಾತವಾಗಿವೆ ಮತ್ತು ಪ್ರಮುಖ ಕೆಮಿಸ್ಟರಿಂದ ಈ ಕೆಳಗಿನ ದರಗಳಲ್ಲಿ ವಿಕ್ರಯಿಸಲ್ಪಡುತ್ತವೆ. ಟ್ಯೂಬಿಗೆ ರೂ. 4=00 (ಸಾದಾ), ರೂ. 6=00(ಸ್ಪೆಶಲ್), ರೂ. 9=00 (ಎಕ್ಸ್ಟ್ರಾ ಸ್ಪೆಶಲ್).
P. DEVEE & Co. (M. 1.) CALCUTTA- 4
ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ರವೀಂದ್ರ ವಾಣಿ

೬ನೇ ಪುಟದಿಂದ

ಅಂತರಿಕ ಚೇತನವನ್ನು ವಿಶ್ವವ್ಯಾಪಕವಾದ ಚೇತನದೊಡನೆ, ವಿಸ್ತಾರಗೊಳಿಸುವುದೇ ನಮ್ಮ ಜ್ಞಾನವಿಜ್ಞಾನಗಳ ಧ್ಯೇಯವಾಗಿದೆ ಈ ವಿಸ್ತಾರವನ್ನು ದೊರಕಿಸಿಕೊಳ್ಳಲು ನಾವು ತ್ಯಾಗಮಾಡಬೇಕಾಗುತ್ತದೆ

ಆತ್ಮಾರ್ಪಣ, ಅಥವಾ ಆತ್ಮ ವಿಸರ್ಜನವೇ ಈ ತ್ಯಾಗವಾಗಿದೆ ವಿಸರ್ಜನದ ಮೂಲಕವೇ ನಾವು ಆತ್ಮಾನುಭೂತಿಯನ್ನು ಪಡೆಯಬಲ್ಲೆವು ಉಪನಿಷತ್ತುಗಳ ಉಪದೇಶವು— "ತ್ಯಕ್ತೇನ ಭುಂಜೀಥಾ" ಅಂದರೆ, ನೀನು—ತ್ಯಾಗಮಾಡಿದ ಬಳಿಕ ಭೋಗಪಡು "ಮಾಗೃಧಃ ಕಸ್ಯ ಸ್ವಿದ್ಧನಮ್" ಪರರ ಧನವನ್ನು ಅಪೇಕ್ಷಿಸಿ ಆಸೆಪಡಬೇಡ, ಎಂದು ಬೋಧಿಸುತ್ತಿರುವುದು. ಗೀತೆಯಲ್ಲಿ ಕೂಡ, "ನಾವು ಫಲದ ಆಸೆಯನ್ನಿಡದೆ, ನಿಷ್ಕಾಮ ಕರ್ಮ ಮಾಡಬೇಕು" ಎಂದು ಹೇಳಿದೆ

ಹೊರಗಿನ ದೇಶದ ಕೆಲವರು "ಈ ನಿಷ್ಕಾಮ ಬಾವನೆಯೆಂದರೆ, ಈ ಜಗತ್ತನ್ನು ಮಿಥ್ಯಾ ಮಾಯಾ ಜಗತ್ತೆಂದು ಭಾವಿಸುವುದೇ ಆಗಿದೆ" ಎಂಬ ಅಭಿಪ್ರಾಯಪಡುತ್ತಾರೆ ಆದರೆ ಸತ್ಯ ಬೇರೆಯೇ ಇರುವುದು.

ಯಾವ ಮನುಷ್ಯನು ಸ್ವಾರ್ಥಿಯಾಗಿ ಅಥವಾ ಅಹಂಕಾರಿಯಾಗಿ ಇರುತ್ತಾನೋ ಅವನು ಪರರನ್ನು ಮತ್ತು ಅನ್ಯರ ವಸ್ತುಗಳ ಕುರಿತು ತುಚ್ಛ ಭಾವನೆಯುಳ್ಳವನಾಗಿ ಹೀನವಾಗಿ ಕಾಣುತ್ತಾನೆ ನಮಗಿಂತ ಬೇರೆಯಾದ ಅಂದರೆ, ಪರರ, ಅಥವಾ ಇತರ ವಸ್ತುಗಳ ಯೋಗ್ಯತೆಯನ್ನು ತಿಳಿದುಕೊಳ್ಳಬೇಕಾದರೆ, ನಾವು ನಮ್ಮ ಅಹಂಭಾವವನ್ನು ಬಿಡಬೇಕಾಗುತ್ತದೆ ಮತ್ತು ಸ್ವಪ್ರಧಾನ ಭಾವನೆಗಳನ್ನೂ ನಿಯಂತ್ರಣಗೊಳಿಸಬೇಕಾಗುತ್ತದೆ, ನಮ್ಮ ಸಾಮಾಜಿಕ ಕಾರ್ಯಗಳ ಸಾಧನೆಗಾಗಿಯೂ ನಾವು ಈ ನಿಯಂತ್ರಣವನ್ನು ಪಾಲಿಸಬೇಕಾಗುತ್ತದೆ. ಜೀವನವನ್ನು ವ್ಯಾಪಕವನ್ನಾಗಿ ಮಾಡುವ ಪ್ರತಿಯೊಂದು ಕಾರ್ಯ ಅಥವಾ ಪ್ರಯತ್ನದಲ್ಲಿ ಕೂಡ ನಾವು ಇನ್ನೊಬ್ಬರಿಗೆ ಕೊಟ್ಟಬಳಿಕ ಪಡೆಯುವ ಪ್ರಯತ್ನ ಮಾಡಬೇಕು, ಇದು ಪ್ರಾಮುಖ್ಯವಾದುದಾಗಿದೆ. ಮಾತ್ರವಲ್ಲ ಪರರೊಡವೆಗಳ ಮೇಲಿನ ಮೋಹವನ್ನೂ ತ್ಯಜಿಸಬೇಕು ಇದನ್ನೇ "ತ್ಯಾಗದಿಂದ ಭೋಗಪೊಂದು" ಎನ್ನುವುದರ ಅರ್ಥವೆಂದು ಭಾವಿಸಬೇಕು ಮಾನವನ ಪ್ರಯತ್ನಗಳ ಗುರಿ, ತನ್ನ ಚೇತನವನ್ನು ವಿಶ್ವದೊಡನೆ, ವಿಶ್ವದ ಸಂಪರ್ಕದಲ್ಲಿ ಅನುದಿನವೂ ವಿಸ್ತಾರಗೊಳಿಸಬೇಕಾದುದೇ ಆಗಿದೆ

ಭಾರತವು ಈ ಅಸೀಮ ತತ್ವಗಳನ್ನು ಶೂನ್ಯವೆಂದು ಎಂದೂ ಭಾವಿಸಲಿಲ್ಲ. ಭಾರತದ ಋಷಿಗಳು ಸದಾ—"ಈ ಅನಂತ ಶಕ್ತಿಯ ಜ್ಞಾನವೇ ಜೀವನದ ನಿಜವಾದ ಅರ್ಥವಾಗಿದೆ ಮತ್ತು ಅದನ್ನು ತಿಳಿದುಕೊಳ್ಳದಿರುವುದೇ ಮಹಾ ವಿನಾಶವಾಗಿದೆ!" ಎಂದು ಹೇಳುತ್ತಲೇ ಬಂದಿರುವರು. ಆದರೆ ಇಲ್ಲಿ ಅದನ್ನು ತಿಳಿದುಕೊಳ್ಳುವುದೆ ಹೇಗೆ? ಎಂಬ ಪ್ರಶ್ನೆ ಬರುತ್ತದೆ ಇದಕ್ಕೆ ಋಷಿವರರು ಉತ್ತರ ಕೊಡುತ್ತಾರೆ "ಭೂತೇಷು ಭೂತೇಷು ವಿಚಿಂತ್ಯ" ಎಂದರೆ ಅದನ್ನು ಸರ್ವತ್ರವಾಗಿ ಸರ್ವ ವಸ್ತುಗಳಲ್ಲಿಯೂ ಭಾವಿಸಿ ತಿಳಿದುಕೊ!" ಕೇವಲ ಪ್ರಕೃತಿಯಲ್ಲಿಯೇ ಅಲ್ಲ; ಪರಿವಾರದಲ್ಲಿ ಸಮಾಜದಲ್ಲಿ ರಾಜ್ಯದಲ್ಲಿ ಈ ವಿಶ್ವಚೇತನವನ್ನು ಸರ್ವಾಂತರ್ಗತವಾಗಿದೆಯೆಂದು ಎಷ್ಟರಮಟ್ಟಿಗೆ ನಾವು ಅರ್ಥಮಾಡಿಕೊಳ್ಳುವೆವೋ ನಮ್ಮ ಜೀವನವೂ ಅಷ್ಟೇ ಸಮರ್ಥವೂ ಸಶಕ್ತವೂ ಆಗಬಹುದು ಇದನ್ನು ಅರ್ಥಮಾಡಿಕೊಳ್ಳದಿದ್ದರೆ ಅದರ ಪರಿಣಾಮ, ವಿನಾಶದ ಹೊರತು ಮತ್ತೇನೂ ಇಲ್ಲ.

ಹಿಂದೆ ಒಂದು ಕಾಲದಲ್ಲಿ ನಮ್ಮ ದೇಶದ ದಾರ್ಶನಿಕ ಕವಿಗಳು ಭಾರತದ ಶೋಭಿಸುತ್ತಿರುವ ವಿಶಾಲವಾದ ಆಕಾಶದ ಕೆಳಗೆ ನಿಂತು ವಿಶ್ವಪ್ರೇಮದಿಂದ ಮೈಮರೆತು ವಿಶ್ವಪ್ರೇಮಿ ಹೃದಯದಿಂದ ಸ್ವಾಗತಿಸುತ್ತಿದ್ದರು ಈ ಕಲ್ಪನೆಯು ಹೃದಯವು ಆನಂದದಿಂದ ತುಂಬಿ ಮಾನವತೆಯ ಆಶಾಮಯವಾದ ಭವಿಷ್ಯದ ಸ್ವಪ್ನಗಳಿಂದ ತುಂಬುವುದು. ನಮ್ಮ ಋಷಿಗಳ ಉದ್ಗಾರವು ಆನಂದೋನ್ಮಾದದಿಂದ ಹೊರಟ ಪ್ರಲಾಪವಲ್ಲ ಅವರು ಮನುಷ್ಯನ ಛಾಯೆಯನ್ನು ಪ್ರಕೃತಿಯ ದರ್ಪಣದಲ್ಲಿ ಅತ್ಯಂತ ದೊಡ್ಡ ಗಾತ್ರದಲ್ಲಿ ನೋಡಲು ಪ್ರಯತ್ನ ಮಾಡಿರಲಿಲ್ಲ. ಪ್ರಕೃತಿಯ ಛಾಯೂ ಪ್ರಕಾಶದ ರಂಗಮಂಟಪದ ಮೇಲೆ ಮನುಷ್ಯನ ಅತಿ ರಂಜಿತ ಭಾವನೆಗಳ ಅಭಿನಯವನ್ನು ಚಿತ್ರಿಸುವ ಕಲ್ಪನೆಯನ್ನು ಅವರು ಸ್ವಪ್ನದಲ್ಲೂ ಕಂಡಿರಲಿಲ್ಲ. ಇದಕ್ಕೆ ಬದಲಾಗಿ ಅವರು ಮನುಷ್ಯನು ತನ್ನ ಸಂಕೀರ್ಣವಾದ ಸಂಕುಚಿತ ಭಾವನೆಯನ್ನು ಬಿಟ್ಟು ಮೇಲೆ ಬಂದು ಮಾನವತೆಯಿಂದ ಎತ್ತರಕ್ಕೇರಿ— ವಿಶ್ವದೊಡನೆ, ಆತ್ಮೀಯತೆಯನ್ನು ವರ್ಧಿಸುವ ಸಂದೇಶವನ್ನೂ ಅವರು ಕೊಟ್ಟಿದ್ದರು. ಹೀಗೆ ಮಾಡುವುದು ಇದು ಕೇವಲ ಕಲ್ಪನೆಯ ಆಟವಾಗಿರಲಿಲ್ಲ ಬದಲು ಈ ಸಂದೇಶದ ಉದ್ದೇಶವು "ಮನುಷ್ಯನ ಚೇತನವು ಪ್ರಕೃತಿಯ ಅತಿ ರಂಜಿತ ರಹಸ್ಯಮಯ ಜಾಲದಿಂದ ಮುಕ್ತಿಯನ್ನು ಪಡೆಯಲಿ"—ಎಂಬುದೂ ಆಗಿತ್ತು

ನಮ್ಮ ಈ ತತ್ವದರ್ಶಿಗಳು ತಮ್ಮ ಹೃದಯಾಂತರಾಳದಲ್ಲಿ "ಯಾವ ಶಕ್ತಿಯು ವಿಶ್ವದ ಅಸಂಖ್ಯ ರೂಪಗಳಿಂದ ಗತಿಶೀಲವಾಗಿ ಪ್ರಕಟವಾಗುತ್ತಿರುವುದೋ ಆ ಶಕ್ತಿಯೇ ಮನುಷ್ಯನಲ್ಲಿಯೂ ಪ್ರಕಟವಾಗಿದೆ ಇವೆರಡರೊಳಗೆ ಐಕ್ಯ ಸಂಬಂಧವಿದೆ. ಅವರ ದೃಷ್ಟಿಯಲ್ಲಿ ಮೃತ್ಯು ಕೂಡ ಈ ಸಂಬಂಧವನ್ನು ತಪ್ಪಿಸಲಾರದು. "ಯಸ್ಯ ಛಾಯಾ ಮೃತಂ ಯಸ್ಯ ಮೃತ್ಯುಃ" ಅದರ ಛಾಯೆಯಲ್ಲಿಯೇ ಅಮೃತವಿದೆ. ಜೀವನವಿದೆ! ಮತ್ತು ಅದರಲ್ಲೇ ಮೃತ್ಯುವೂ ಇದೆ" ಎಂಬುದನ್ನು ಚೆನ್ನಾಗಿ ಅವರು ತಿಳಿದುಕೊಂಡಿದ್ದರು. ನಮ್ಮ ಋಷಿಗಳ ಸಂದೇಶ ಇದೇ ಆಗಿದೆ, ಅವರು ಜೀವನ ಮೃತ್ಯು ಇವೆರಡರೊಳಗೆ ಸಹಜವಾದ ವಿರೋಧ ಭಾವನೆಯನ್ನೇ ಕಾಣಲಿಲ್ಲ. ಅವರು ದೃಢ ವಿಶ್ವಾಸದೊಡನೆ—"ಪ್ರಾಣೋ ಮೃತ್ಯುಃ" ಜೀವನನೇ ಮೃತ್ಯುವಾಗಿದೆ!—ಎಂದು ಹೇಳಿ ಅವರು ಜೀವನದ ಪ್ರತಿಯೊಂದು ರೂಪವನ್ನೂ ಪ್ರತಿಯೊಂದು ಪರಿವರ್ತನೆಯನ್ನೂ ಸಹರ್ಷ ಸ್ವಾಗತಿಸಿದರು. ಅರ್ಥಾತ್, ಜನನವನ್ನೂ, ಮರಣವನ್ನೂ ಅವರು ಒಂದೇ ದೃಷ್ಟಿಯಿಂದ ಸ್ವಾಗತಿಸಿದರು ಅವರ ದೃಷ್ಟಿಯಲ್ಲಿ ಜನನ—ಮರಣವೆಂದರೆ, ಸಮುದ್ರದ ರಭಸದಿನದ ಬರುವ ಮತ್ತು ಹೋಗುವ ಅಲೆಗಳಂತೆಯೇ ಆಗಿದೆ. ಹೀಗೆ ಆಗುತ್ತಿರುವ ಆಗಮನದ ಯೂ ನಿರ್ಗಮನದಿಂದ ಯಾವ ರೀತಿಯ ಹಾನಿಯೂ ಇಲ್ಲ ಉಪನಿಷತ್ತು ಹೀಗೆ ಹೇಳುತ್ತಿದೆ-- "ಸರ್ವವೂ ಆ ಅಮರವಾದ ವ್ಯಾಪಕವಾದ ಜೀವನದಿಂದ ಜೀವವನ್ನು ಪಡೆಯುತ್ತಿದೆ, ಮತ್ತು ಹಿಂದಿನಿಂದಲೂ ಪಡೆಯುತ್ತಿದೆ. ಏಕೆಂದರೆ ಜೀವನದ ಸ್ವರೂಪವು ಅತ್ಯಂತ ವಿಶಾಲವಾದುದಾಗಿದೆ.

ಪೂರ್ವಜರು ಪ್ರಯತ್ನದಿಂದ ಸಂಪಾದಿಸಿದ ಈ ಜ್ಞಾನ ಸಂದೇಶವನ್ನು ನಾವು ಪುನಃ ಈಗ ಸಜೀವಗೊಳಿಸಬೇಕಾದುದು ನಮ್ಮ ಪವಿತ್ರವಾದ ಧರ್ಮವಾಗಿದೆ ಇದು ಕೇವಲ ತಾರ್ಕಿಕ ಯಾ ಭಾವನಾತ್ಮಕ ಸಂದೇಶವಾಗಿಲ್ಲ ಜೀವನದ ಆಚರಣೆಗಳ ಮೇಲೆ ಇದರ ಆಳವಾದ ಪ್ರಭಾವವಿರುವುದು ಆದುದರಿಂದ ಇದನ್ನು ಕಾರ್ಯರೂಪಕ್ಕೆ ತರಬಹುದು ಉಪನಿಷತ್ತುಗಳಲ್ಲಿ—"ಸರ್ವ ವ್ಯಾಪೀ ಸ ಭಗವಾನ್ ತಸ್ಮಾತ್ ಸರ್ವಗತಃ ಶಿವಃ ॥ ಪರಮಾತ್ಮನು ಸರ್ವ ವ್ಯಾಪಕನಾಗಿದ್ದಾನೆ. ಆದುದರಿಂದ ಅವನು ಸರ್ವ ಪ್ರಾಣಿಗಳಲ್ಲಿಯೂ, ಕಲ್ಯಾಣ ರೂಪಧಾರಣೆ ಮಾಡಿಕೊಂಡಿರುತ್ತಾನೆ. ಎಲ್ಲಾ ಪ್ರಾಣಿಗಳಲ್ಲಿಯೂ, ಜ್ಞಾನ, ಪ್ರೇಮ ಮತ್ತು ಸೇವೆಗಳ ಮೂಲಕ ಸಮಭಾವವನ್ನಿಡುವುದು ಮತ್ತು ಈ ಪರಿಯಿಂದ ತನ್ನ ಅಸ್ತಿತ್ವವನ್ನು ಅನುಭವ ಮಾಡುವುದೇ ಮಾನವ ಧರ್ಮದ ಸರ್ವ ಶ್ರೇಷ್ಠ ತತ್ವವಾಗಿದೆ ಇದರ ಸಾರಾಂಶ ರೂಪವಾಗಿ ಉಪನಿಷತ್ತುಗಳಲ್ಲಿ "ಪ್ರಾಣೋ ವಿರಾಟ್" ಎಂದು ಹೇಳಿರುವರು

— ಸಂಪೂರ್ಣಂ —

ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

(ಯು. ರಾಘವೇಂದ್ರ ಆಚಾರ್ಯ, ಎಂ ಎ.)

ಸಾಮಾನ್ಯ ರೋಗಗಳು

(ಡಾ ಕೆ ಎಲ್ ಐತಾಳ, ಎಂ ಬಿ ಬಿ ಎಸ್
ಜನರಿಗೆ ತಗಲುವ ಹಲವಾರು ಸಾಮಾನ್ಯ
ರೋಗಗಳ ಹುಟ್ಟು, ಕಾರಣ ಮತ್ತು ನಿವಾರ
ಣೋಪಾಯಗಳನ್ನು ಸೂಚಿಸುವ ಉಪಯುಕ್ತ
ಪುಸ್ತಕ

ಭೌತಿಕ ದರ್ಶನ

ಒಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್ ಬಿ.
ಪ್ರತಿಗಳು ಸಿಗುವ ಸ್ಥಳ:
ನವಭಾರತ ಪುಸ್ತಕ ಭಂಡಾರ, ಉಡುಪಿ

ಮಕ್ಕಳ ಮಮತೆಯ Regd. Trade Mark.

'ಬಿಕ್ಕೊ'ರವರ

ಗ್ಲೂಕೋಸ್ ಕೂಡಿದ ಪೆಪ್ಪರ್
ಮಿಠಾಯಿಗಳು ರುಚಿಕರ, ಸೇವನೆಗೆ
ಪ್ರಸಿದ್ಧಿಪಟ್ಟವೆ.

BICCO

'ಬಿಕ್ಕೊ'ರವರ

ಹಣ್ಣಿನ ಶರಬತ್ತುಗಳು
ಅತಿಥಿಗಳ ಆದರದ ಸತ್ಕಾರಕ್ಕೆ ಅತ್ಯನುಕೂಲ.

ತಯಾರಕರು.

ಭಾರತ್ ಇಂಡಸ್ಟ್ರಿಯಲ್ ಎಂಡ್ ಕ್ಯಾನಿಂಗ್
ಕಂಪೆನಿ ಲಿಮಿಟೆಡ್, ಕಾಪು, ದ ಕ.

ಪಂಚಾಯತಿಗಳಿಗೆ ಉಪಯುಕ್ತ ಪುಸ್ತಕ

ಮೈಸೂರು ರಾಜ್ಯದ

ಪಂಚಾಯತಿಗಳ

ತೆರಿಗೆಗಳ ಮತ್ತು ಫೀಗಳ

ನಿಯಮಗಳು

ಲೇಖಕರು,

ಶ್ರೀ. ಕೆ ಎಸ್. ಆಳ್ವ ಬಿ ಎ ಬಿ, ಎಲ್.
ಎಡ್ವಕೇಟ್, ಮಂಗಳೂರು,

ಬೆಲೆ ರೂಪಾಯಿ ಎರಡು

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ ನ.

Tel 'BLUEYAGAR'. — ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ — Phone 374

ಕೆ. ಆರ್. ಕೆ. ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ 1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು, (ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ) ಮಂಗಳೂರು [ಮಾಲಿಕ. ಕೆ ಕೆ ಆರ್ ಶೇಟ್

ಕಥಾವಿಹಾರ

[೨ನೇ ಪುಟದಿಂದ]

ಆ ವರೆಗೂ ಯಾವ ಯೋಚನೆಗಳಿಗೂ ಎಡೆಯಿಲ್ಲದ ಪದ್ಮಳ ಮೆದುಳು ಮೊದಲ ಬಾರಿ ಯೋಚಿಸಿತು. ಆದರೆ.... ಇಂದು ಪದ್ಮ ಹತಭಾಗ್ಯೆಯಾಗಿರಲಿಲ್ಲ. ಶ್ರೀಮಂತ ವಿದ್ಯಾವಂತ ಯುವಕನೊಬ್ಬ ಕೈಹಿಡಿಯಲು ಮುಂದಾಗಿದ್ದ. ಒಂದು ದೃಷ್ಟಿಯಲ್ಲಿ ನೋಡಿದರೆ ಪದ್ಮಳನ್ನು ನೋಡಿದರೆ ಶುದ್ಧ ಮಗುವೆನ್ನಬಹುದಿತ್ತು. ಅವಳಿಗೆ ವರ್ಷ ಹದಿನೆಂಟು ಸವಿಾಪಿಸಿದರೂ ಏನೂ ಅರಿಯದ ಮುಗ್ಧ ಹೆಸುಳೆಯಾಗಿಯೇ ಬೆಳೆದಿದ್ದಳು. ತಾನೆಷ್ಟು ಕಷ್ಟನಷ್ಟಗಳನ್ನನುಭವಿಸಿದ್ದರೂ ಆ ತಾಯಿ ಮುದ್ದಿನ ಮಗಳನ್ನು ಮುಳ್ಳು ಸೋಕದ ಗುಲಾಬಿ ಹೂವಿನಂತೆಯೇ ರಕ್ಷಿಸಿದ್ದರು.

ಮೂಕಿಯಾಗಿ ಅರ್ಥವಿಲ್ಲದ ನಾಚಿಕೆಯಿಂದ ಬೆರಗಾಗಿ ಕುಳಿತ ಪದ್ಮಳ ಕೈಯನ್ನು ಶ್ರೀಮಂತ ಮೋಹನ ಹಿಡಿದಿದ್ದ. ಪದ್ಮ ಬೆಚ್ಚಿದಳು.

ಆದರೆ....ಮೋಹನ ಬೆದರಲಿಲ್ಲ.

"ಪದ್ಮಾ! ಮದುವೆ ಎಂದರೆ ಇಷ್ಟೇನೇ. ಇದಕ್ಕೇನೇ ನಾವು ಬೇಗನೆ ಮದುವೆಯಾಗಿ ಬಿಡೋಣ. ನಿನ್ನ ತಾಯಿಯ ಕಷ್ಟವೂ ನೀಗಿಬಿಡುತ್ತೆ."

ಎಷ್ಟೊಂದು ಸುಲಭವಾಗಿ ಆಡಿದ್ದ ಮಾತು!

ಪದ್ಮ....ನಂಬಿದಳೋ....ಇಲ್ಲವೋ.... ಆದರೆ ಸುಲಭವಾಗಿ ಮೋಹನನೆಣಿಸಿದ್ದಕ್ಕಿಂತಲೂ ಅತಿ ಸುಲಭವಾಗಿ ಅವನ ಬಲೆಯಲ್ಲಿ ಬಿದ್ದಳು.

ಎಷ್ಟೊಂದು ವಿಚಿತ್ರ ಹೆಣ್ಣುಗಳಿರುತ್ತವೆ! ಮೋಹನ ತನ್ನೊಳಗೆ ಗೊಣಗಿಕೊಂಡು ನಕ್ಕ.

ದಿನಗಳುರುಳಿದವು. ತಿಂಗಳುಗಳುರುಳಿದವು. ಮನೆಯ ಆರ್ಥಿಕ ವ್ಯವಸ್ಥೆ ಮಗಳ ಪ್ರಾಯ ಇವೆಲ್ಲ ನೋಡಿದ ತಾಯಿಗೆ ಪದ್ಮಳನ್ನು ಇನ್ನು ಮುಂದಕ್ಕೆ ಓದಿಸುವುದು ಸೂಕ್ತವೆನಿಸಲಿಲ್ಲ. ಪದ್ಮ ಆ ದಿನ ....ಇನ್ನು ತನಗೂ ಶಾಲೆಗೂ ಯಾವ ಸಂಬಂಧವೂ ಇಲ್ಲವೆಂದು ನಿರ್ಧರಿಸಲ್ಪಟ್ಟ ದಿನ ತನ್ನ ಮನದಿನಿಯನ ಭೇಟಿಗಾಗಿ ತುಂಬ ಹಂಬಲಿಸಿದಳು. ಹುಡುಕಿದಳು. ಆದರೆ... ಒಂದು ವಾರದಿಂದುಂಟಾದ ನಿರಾಸೆಯೇ ಅಂದೂ ಅವಳ ಪಾಲಿಗೊದಗಿತ್ತು.

ಮನೆಗೆ ಬಂದಾಗ ತಾಯಿ ಕೇಳಿದ ಹತ್ತಾರು ಪ್ರಶ್ನೆಗಳಿಗೆ ಅರ್ಥವಿಲ್ಲದ ಅಳುವೇ ಪದ್ಮಳ ಉತ್ತರವಾಗಿತ್ತು. ಆದರೆ ಅದಕ್ಕೂ ಅರ್ಥವನ್ನು ಕಲ್ಪಿಸಿದ ತಾಯಿ ನಗುತ್ತಲೇ ಹೇಳಿದರು. "ಪದ್ಮ! ಶಾಲೆ ಅಂದರೆ ಅಷ್ಟು ಅಳುತ್ತಾರೆಯೇ? ನಾವೆಲ್ಲ ನಾಲ್ಕಕ್ಷರ ಕೂಡ ಕಲಿತಿಲ್ಲ. ನೀನೇನೋ ಪುಣ್ಯವಂತೆ, ಇಷ್ಟಾದರೂ ಓದುವಂತಾಯ್ತು." ಪದ್ಮ ಮೌನವಾಗಿದ್ದಳು. ಆ ಮೇಲೂ ಆಕೆಯ ಸಮಯ ಹೆಚ್ಚಾಗಿ ಅರ್ಥವಿಲ್ಲದ ಮೌನದಿಂದಲೇ ಕಳೆಯತೊಡಗಿತು.

ಆದರೆ ಆ ಮೌನಕ್ಕೂ ಅಂತ್ಯವಿದೆ ಎನ್ನುವಂತೆ ಪದ್ಮ ಮದುವೆಯ ದಿನಗಳನ್ನೆಣಿಸುವ ಸಮಯ ಬಂತು. ಎರಡು ಕಡೆಯ ವೆಚ್ಚವನ್ನೂ ಹೊರಲೊಪ್ಪಿದ ದೂರದ ಯಾವುದೋ ಊರಿನ ಸಾಹುಕಾರರೊಂದಿಗೆ ಪದ್ಮಳ ಮದುವೆ ನಿಶ್ಚಯವಾಗಿತ್ತು. ವೆಂಕಪ್ಪಯ್ಯನವರು ಮುಖ ನೋಡಿಯೇ ಮೊಗದಿರುವಿದ ವಿಧವೆ ತಾಯಿಯ ಹಿತೋಪದೇಶವನ್ನು ಲಕ್ಷಿಸದೆ ಪದ್ಮ ಮದುವೆಗೊಪ್ಪಿದಳು. ತಾಯಿಯನ್ನು ಬಲಾತ್ಕಾರದಿಂದಲೇ ಒಪ್ಪಿಸಿದ್ದಳು.

ಎರಡು ತಿಂಗಳುಗಳಿಂದ ಆಸೆಯಿಂದ ಕಾದ ತನ್ನ ಮನದಿನಿಯ, ಹೃದಯ ದೇವತೆ ತನ್ನ ಸರ್ವಸ್ವವೆಂದು ತಿಳಿದ ಮೋಹನ ಕೊನೆಗೂ ಮದುವೆಯಾದ ಎಂಬುದನ್ನು ತಿಳಿದ ಪದ್ಮಳ ಹೃದಯ ನುಚ್ಚುನೂರಾಗಿತ್ತು. ಅಲ್ಲಿ ಆಗ ಉಳಿದುದು ಬರಿಯ ಶೂನ್ಯತೆಯ ಭಾರವನ್ನು ಹೊತ್ತ ಬರಡು ಹೃದಯದ ದೇಹಮಾತ್ರ.

ಪದ್ಮಳಿಗೆ ಮೋಹನ ಸರ್ವಸ್ವವಾಗಿದ್ದ. ಎಂತಲೇ ಸರ್ವಸ್ವವನ್ನೂ ಅರ್ಪಿಸಿದ್ದಳು. ಆದರೆ ಮೋಹನ ಶ್ರೀಮಂತ ವಕೀಲರ ಏಕಮಾತ್ರ ಕುವರನಾಗಿ ಸ್ವೇಚ್ಛೆಯಿಂದ ಬೆಳೆದ ಜವಾಬ್ದಾರಿ ಇಲ್ಲದ ಯುವಕನಾಗಿ ತನ್ನ ಜೀವನದಲ್ಲಿ ಸುಳಿದ, ಸುಳಿಯುತ್ತಿರುವ ಹತ್ತಾರು ಹೆಣ್ಣುಗಳಿಗೆ ಒಲಿದಂತೆ ಪದ್ಮಳಿಗೂ ಒಂದು ಪತಂಗವಾಗಿ ಒಲಿದಿದ್ದ. ಹೊರತು ಅಲ್ಲಿ ಹೃದಯ ಎಂಬುದರ ಪ್ರಶ್ನೆಯೇ ಇರಲಿಲ್ಲ. ವಿದ್ಯಾವತಿಯಾದ ಮುಗ್ಧ ಹೆಣ್ಣಿಗೆ ಮನಸೋತು ಅವಳನ್ನೊಲಿಸುವ ಸಲುವಾಗಿ ಪ್ರೀತಿ, ಪ್ರೇಮ, ಎಂಬ ಸಿನಿಮಾ ಶಬ್ದಗಳನ್ನುಪಯೋಗಿಸಿ ಪ್ರೇಮಗೀತೆಗಳನ್ನು ಹಾಡಿ ಪದ್ಮಳನ್ನೊಲಿಸಿದ್ದನೇ ಹೊರತು, ಮಾತಿಗೂ ಕೃತಿಗೂ ಸಂಬಂಧವಿರಬೇಕೆಂಬ ಹುಚ್ಚುತನಕ್ಕೆ ಆತ ಶರಣಾಗುತ್ತಿರಲಿಲ್ಲ.

ಆದರೆ ಪದ್ಮ....ಹೃದಯವಿಲ್ಲದ ಅವನಿಗಾಗಿ ತನ್ನ ಹೃದಯವನ್ನೆ ಕಳಕೊಂಡ ಕಲ್ಲುಗೊಂಬೆಯಾಗಿದ್ದಳು.

ಎಪ್ಪತ್ತರ ಸಾಹುಕಾರ ವೆಂಕಪ್ಪಯ್ಯನವರ ನಾಲ್ಕುಮಾರು ಹಿಂದಿನಿಂದ ತಲೆತಗ್ಗಿಸಿ ಹಿಂಬಾಲಿಸಿದ ಪದ್ಮ ನಿರ್ಜೀವ ಯಂತ್ರವಾಗಿದ್ದಳು. ವಿಧವೆ ತಾಯಿ ಕಣ್ಣೀರೊರಸಿಕೊಂಡು ಹರಸಿದ್ದರು.

ಗಾಳಿಸೇವನೆಗೆಂದು ಬಂಡೆಕಲ್ಲಿನ ಬಳಿ ಕುಳಿತ ಆ 'ಶೋಕಿ ದಂಪತಿ'ಗಳು ಈ ಅನುಪಮ ನೋಟವನ್ನು ನೋಡಿ ಒಬ್ಬರನ್ನೊಬ್ಬರು ನೋಡಿ ನಕ್ಕರು.

"ಅಲ್ಲಿ ನೋಡೇ ಪ್ರಭಾ...ಕಾಡುಮನುಷ್ಯರು"

ಪದ್ಮ ಹಿಂತಿರುಗಿ ನೋಡಿದಾಗ ಅವನ ಕಣ್ಣುಗಳಿಗೆ ಮಿಂಚುಸೋಕಿಂತಾಯ್ತು. ಅದೇ ಬಂಡೆಕಲ್ಲಿನ ಬಳಿಯೇ ಅಂದು ಪದ್ಮ ಶೀಲದೊಂದಿಗೆ ತನ್ನ ಹೃದಯವನ್ನೂ ಬಿಟ್ಟು ತೆರಳಿದ್ದಳು.

ಒಂದಿಷ್ಟು ನಗು

ಪ್ರಶ್ನೆ—ಅತೀ ಶ್ರೀಮಂತ ಆದರೆ ನಿಜ ಪ್ರೇಮಿಯಲ್ಲ; ಅತೀ ಬಡವ ಆದರೆ ನಿಜವಾದ ಪ್ರೇಮಿ. ಇವರಿಬ್ಬರಲ್ಲಿ ಯಾರನ್ನು ಮದುವೆಯಾಗಬೇಕು?

ಉತ್ತರ—ಬಡವನನ್ನು ಪ್ರೀತಿಸಿ, ಶ್ರೀಮಂತನನ್ನು ಮದುವೆಯಾಗಬೇಕು!

ಂ ಂ ಂ ಂ

ಆಕೆ(ಸಿಟ್ಟಿನಿಂದ)—ಇದೇನು? ನಾನು ಕೇಳಿದ್ದೊಂದೂ ಈ ಅಂಗಡಿಯಲ್ಲಿ ದೊರೆಯುವದಿಲ್ಲ?

ಅಂಗಡಿಯವ(ನಗುತ್ತಾ)— ನಾವು ತುಂಬಾ ವಿನಯಿಗಳಾದ್ದರಿಂದ.

ಂ ಂ ಂ ಂ

ಒಬ್ಬ ತಲೆ ಸರಿಯಿಲ್ಲದವನಿಗೆ ಒಂದು ಪತ್ರ ಬಂತು. ಅದನ್ನು ಒಡೆದು ನೋಡುವಾಗ ಒಳಗೆ ಏನೂ ಬರೆಯದ ಬಿಳಿ ಕಾಗದ ಮಾತ್ರ ಇತ್ತು.

'ಕಾಗದ ಯಾರು ಬರೆದದ್ದು?' ಹತ್ತಿರದಲ್ಲಿದ್ದವರು ಪ್ರಶ್ನಿಸಿದರು.

"ನನ್ನ ತಮ್ಮನಿರಬೇಕು, ಆತನೊಡನೆ ಜಗಳವಾಗಿ ನಾವು ಮಾತಾಡುವದಿಲ್ಲ"

ಂ ಂ ಂ ಂ

ಹೆಂಡತಿ—(ಆಫೀಸಿಗೆ ಹೊರಟ ಗಂಡನನ್ನು ಕುರಿತು) ಹಣ ಮಾತಾಡುವದೇ?

ಗಂಡ—ಹಾಗೆ ಹೇಳುತ್ತಾರೆ.

ಹೆಂಡತಿ—ಹಾಗಾದರೆ ನೀವು ಆಫೀಸಿಗೆ ಹೋಗುವಾಗ ಮನೆಯಲ್ಲಿ ಒಬ್ಬಳೇ ಇರುವ ನನ್ನೊಡನೆ ಮಾತಾಡಲು ಸ್ವಲ್ಪ ಹಣ ಕೊಟ್ಟು ಹೋಗಿರಿ.

ಂ ಂ ಂ ಂ

ಹುಡುಗ—ನಮ್ಮ ಮದುವೆಗೆ ನಿಮ್ಮ ತಂದೆ ತಾಯಿ ಒಪ್ಪಿರುವರೆ?

ಹುಡುಗಿ—ಇನ್ನೂ ಇಲ್ಲ. ತಂದೆ ಇನ್ನೂ ಅಭಿಪ್ರಾಯ ವ್ಯಕ್ತಮಾಡಿಲ್ಲ; ವ್ಯಕ್ತಮಾಡಿದೊಡನೆ ಅದನ್ನು ವಿರೋಧಿಸಲು ತಾಯಿ ಕಾದಿದ್ದಾಳೆ.

ಂ ಂ ಂ ಂ

ಅತ—ನಿಮ್ಮ ಮಗಳ ಮದುವೆ ನಿರ್ಧಯವಾದ್ದು. ತಪ್ಪಿಹೋಯಿತೆಂಬ ವರ್ತಮಾನ ಹಾಗಾದರೆ ಸುಳ್ಳು!

ತಂದೆ—ವರ್ತಮಾನವೇನೇ ಇರಲಿ. ಇಕೆ ಇತ್ತಲಾಗಿ ತೋರ ಬೆಳೆದ ಕಾರಣ ಹುಡುಗ ಹಾಕಿದ ಉಂಗುರ ತೆಗೆಯಲಾಗದೆ ಮದುವೆಗೆ ಒಪ್ಪಬೇಕಾಯಿತು!

ಹನಿ ಕಥೆ.

ಭಕ್ತ ಹೃದಯ

ಒಮ್ಮೆ ಒಬ್ಬ ಶಿಷ್ಯನು ತನ್ನ ಗುರುವನ್ನು ಕುರಿತು ಈ ಜಗತ್ತಿನಲ್ಲಿ ಅತ್ಯಂತ ದೊಡ್ಡ ವಸ್ತು ಯಾವುದೆಂದು ಪ್ರಶ್ನಿಸಿದನು. ಗುರುವು ಈ ಪ್ರಪಂಚದಲ್ಲಿ ಭೂಮಿಯೇ ನಮಗೆ ಕಾಣುವ ಎಲ್ಲಾ ವಸ್ತುಗಳಿಗಿಂತ ದೊಡ್ಡದು. ಆದರೆ ಭೂಮಿಗಿಂತ ಎಷ್ಟೋ ಪಾಲು ಸಮುದ್ರ ದೊಡ್ಡದು. ಸಮುದ್ರಕ್ಕಿಂತ ಎಷ್ಟೋ ಪಾಲು ಆಕಾಶ ದೊಡ್ಡದು. ಆದರೆ ಆಕಾಶ ಮತ್ತು ಭೂಮಿಯನ್ನು ತನ್ನ ಎರಡು ಹೆಜ್ಜೆಗಳಿಂದ ಅಳೆದ ವಾಮನನಾದ ಭಗವಂತ ಇದೆಲ್ಲವುಗಳಿಗಿಂತಲೂ ದೊಡ್ಡವ. ಅಂಥಾ ಚಿನ್ಮಯ, ಅಖಂಡ ಭಗವಂತನಿಗೆ ತನ್ನ ಹೃದಯದಲ್ಲಿ ಸ್ಥಾನವಿತ್ತು ತನ್ನ ಹೃದಯದಲ್ಲಿ ಬಂಧಿಸಿಟ್ಟಿರುವ ಭಕ್ತನ ಹೃದಯವೇ ಜಗತ್ತಿನಲ್ಲಿ ಅತೀ ದೊಡ್ಡದು ಎಂದರು.

The Moolky Bank, Ltd.
MULKI.
ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ	4%
5 ,, 12 ,,	4¼%
13 ,, 24 ,,	4½%

ರೂ. 5,000/- ಮತ್ತು ಮೇಲಣ ಡಿಪೋಸಿಟಗೆ ¼% ಜಾಸ್ತಿ ಕೊಡಲಾಗುವುದು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ	2½%
ಚಾಲ್ತಿ ಠೇವಣಾತಿಗೆ	¼%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪ್ರಾಂಜ.
ಮೆನೇಜರ್,
ಮೂಲ್ಕಿ ಬೇಂಕ್ ಲಿ. ಮುಲ್ಕಿ.

"ನಚಿಕೇತ"ರ
ಇನ್ನೊಂದು ನವೀನ ಕಾದಂಬರಿ—
ಋಣ ಯಾತ್ರೆ
ಇದೀಗ ಪ್ರಕಟವಾಗಿದೆ.
ಬೆಲೆ ರೂ. 1-50 ನ. ಪೈಸೆ.
ಮೊದಲು ಪ್ರಕಟವಾದ ಕಾದಂಬರಿ—
ಭಾವಾರ್ಚನೆ
ಬೆಲೆ ರೂ. 1 25 ನ. ಪೈಸೆ.
ಪ್ರತಿಗಳು ಸಿಗುವ ಸ್ಥಳಗಳು:—
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

NAVAYUGA WEEKLY, UDIPI. 6-4-1961 LICENSE NO. 31
REGD. NO.BG. 176 Licensed to Post without Prepayment

ವಸ್ತು - ವಾಸ್ತವ

೧

ಎಲೆಯ ಮರೆಯ
ತೆರೆಯ ಸರಿಸಿ
ಮೂಡಿ ಬಂದಳು
ಬೆಳೆದು ಬೆಡಗು
ಒಣ್ಣವೆರಸಿ
ನಿಮಿರಿ ನಿಂದಳು.

೨

ಒಂದು ಎರಡು
ಕೆಲವು ಹಲವು
ಎಸಳನೆಸೆದಳು
ಹೆಸರು ಆರಳು
ಬರಲು ಮುಗುಳು
ಮುಗುದೆಯಾದಳು.

೩

ಚೆಲುವ ಚದರಿ
ಕಂಪಗೆದರಿ
ನಕ್ಕುನಲಿದಳು
ಹರಯ ಹೇರಿ
ಬಿಂಕ ಬೀರಿ
ತಲೆಯ ತೂಗಿದಳು.

೪

ಹಗಲು ಸರಿದು
ಕತ್ತಲಳಿದು
ದಿನವು ಬದಲಿತು
ಬೆಡಗು ಬಣ್ಣ
ಬಿಂಕ ಭಂಗಿ
ಮಾಯ ವಾಯಿತು.

೫

ಮಾಸಿ ಮುದುರಿ
ಹಳಸಿ ಕಮರಿ
ಕಾಯ ಕುಸಿಯಿತು.
ನಗುವು ನಲಿವು
ಚೆಲುವು ಕಂಪು
ಕಾಣೆಯಾಯಿತು.

೬

ವಾರ ಹಾರಿ
ವರುಷ ಜಾರಿ
ಕಾಲ ಕಳೆಯಿತು
ಮನಸುಮಾತ್ರ
ಮಬ್ಬರ ಚಿತ್ರ
ಮರೆಯದಾಯಿತು.

೭

ವಸ್ತು ಉಳಿದು
ವ್ಯಕ್ತಿ ಅಳಿದು
ಸ್ವ[illegible]
[illegible]
ವಾಸ್ತವಿಕವು
[illegible]

—ಸಾಗರ್.

ಕಾರಂತರ ಪುಸ್ತಕಗಳು

ಅಳಿದ ಮೇಲೆ (ಹೊಸ ಕಾದಂಬರಿ)	2_75
ಸಂಚಯಿತ (ಕಾದಂಬರಿ)	2_50
ನಮ್ಮ ಕುಸ್ತಲಿನ ಕರಲು	1_75
ಸರಿಮೂಲ—ಇಂದು—ನಾಳೆ	3_00

ಸಿಗುವ ಸ್ಥಳ:
ನವಭಾರತ ಬುಕ್ ಡಿಪೋ, ಉಡುಪಿ.

ಪುಸ್ತಕ ವಿಮರ್ಶೆ

[ವಿಮರ್ಶೆಗಾಗಿ ಪುಸ್ತಕಗಳನ್ನು ಕಳು ಹಿಸುವವರು ಎರಡೆರಡು ಪ್ರತಿಗಳನ್ನು ಕಳು ಹಿಸಬೇಕಾಗಿ ವಿನಂತಿ.— ಸಂ. ನ.

ಅಬೋಲೀನ—(ಎಂಟು ಸಣ್ಣ ಕತೆಗಳ ಸಂಗ್ರಹ). ಬರೆದವರು: ಶ್ರೀ ಯಶವಂತ ಚಿತ್ತಾಲ. ಪ್ರಕಾಶಕರು: ಮನೋಹರ ಗ್ರಂಥಮಾಲಾ, ಧಾರವಾಡ. ಪುಟಗಳು: ೧೭೧ ಬೆಲೆ: ಸಾದಾಪ್ರತಿ ರೂ. ೨-೫೦; ಕ್ಯಾಲಿಕೊ ಪ್ರತಿ ರೂ. ೩-೫೦.

ಈ ಸಂಗ್ರಹದಲ್ಲಿ ಮೂರು ಬಗೆಯ ಕಥೆಗಳಿವೆ. ಮೊದಲನೆಯದರಲ್ಲಿ ಕಥೆಗಾರರ ಬಾಲ್ಯದ ಅನುಭವದಿಂದ ಬರೆದ ಅಬೋಲಿನ, ಮುದಿ ಹುಚ್ಚು ಮತ್ತು ರಾಧಕ್ಕನ ಮನೋರಥಗಳು; ಎರಡನೆಯ ಹಂತದಲ್ಲಿ ಭಾವಕಥೆಗಳಾದ ಅಡ್ಡ ಬಿದ್ದ ಮರ, ಖಾಲಿ ಕೋಣೆ ಮತ್ತು ಅಪರಿಚಿತರ ಎಂಬವು, ವ್ಯಂಗ್ಯಪ್ರಧಾನವಾದ ಮೂರನೆಯ ವಿಭಾಗದಲ್ಲಿ ಮಲ್ಲಿನಾಥ ಮತ್ತು ಗಾನಪ್ರಿಯ ಶಂಭು ಶಾಸ್ತ್ರಿಗಳು ಬರುತ್ತವೆ. ಮುಗ್ಧ ಹುಡುಗಿ ಅಬೋಲೀನಳನ್ನು ಹೆದರಿಸಿ ಬೆದರಿಸಿ ಆಕೆಯನ್ನು ಕೈ ಹಿಡಿದು, ಮುಂದೆ ಸಖ್ಯ ಸಂಗತಿ ಬಯಲಾದಾಗ, ಆಕೆಯ ಆತ್ಮಹತ್ಯೆಗೆ ಕಾರಣನಾದ ಮನವೇಲನ ರಾಕ್ಷಸೀ ಕೃತ್ಯ. ಹೂವಿನಂತಹ ಹುಡುಗಿ ಕೆಲವೇ ದಿನಗಳಲ್ಲಿ ಪೃಥ್ವಿಯಿಂದ ಉದುರಿ ಹೋಗುವಂತಾದ ಘಟನೆ 'ಅಬೋಲೀನ'ದಲ್ಲಿ ಹೊರಪಡುತ್ತದೆ. ಅಂಥಹುದೇ ರೀತಿಯಲ್ಲಿ "ಮುದಿ ಹುಚ್ಚು" ಕಥೆಯಲ್ಲಿ ಮಂಜುನಾಥ ಶೆಟ್ಟರ ಮುಗ್ಧತೆ—ಸುಶೀಲಕ್ಕನ ಔದ್ಧತ್ಯಗಳು; ತನ್ನ ಮಗಳಿಗೆ ವರನನ್ನರಸುವ ರಾಧಕ್ಕನ ಕಡೆಗೆ ಸವತಿತೋರುವ ಮತ್ಸರ'ರಾಧಕ್ಕನ ಮನೋರಥ'ದಲ್ಲಿ ವಾಚಕರ ಸ್ಮೃತಿಪಟಲದಲ್ಲ ಅಚ್ಚಳಿಯದೆ ಅಂಕಿತವಾಗುತ್ತದೆ. ಸುರೇಶ ಮತ್ತು ನಿರ್ಮಲೆಯರ ಸಮರಸದ ಬದುಕಿಗೆಮರದಂತಿದ್ದ ಅಜ್ಜ ಅಡ್ಡಬೀಳುವ ಸನ್ನಿವೇಶ 'ಅಡ್ಡ ಬಿದ್ದ ಮರ'ದಲ್ಲಿ ತನ್ನ ಮನಸ್ಸಿನ ಖಾಲಿ ಕೋಣೆಯನ್ನು ತುಂಬುವನೆಂಬ ಆಸೆಯಿಂದ ಅನಂತನ ನಿರೀಕ್ಷೆ ಮಾಡಿ ಕೊನೆಗೆ ಆತ ಸತ್ತುದರಿಂದ ಕೋಣೆ ಸದಾ ಖಾಲಿ ಎಂದು ಕಂಡು ಕಂಬನಿಕರೆದ ನಿರ್ಮಲೆಯ ಚಿತ್ರ 'ಖಾಲಿಕೋಣೆಯಲ್ಲಿ, ವ್ಯವಸ್ಥಿತ ಜೀವನವನ್ನು ಬದುಕುತ್ತಿರುವ ರಾಮಕೃಷ್ಣ—ಜಾನಕಿಯರನ್ನು ಜೀವಿಸುವವರಿಗಷ್ಟೇ ಜೀವನದ ಮೇಲೆ ಅಧಿಕಾರವಿದೆಯೆನ್ನುವವರು ಜೀವಂತ ಪ್ರತಿಮೆಯಾಗಿಸುವ ಸಾಂಕೇತಿಕ ಸನ್ನಿವೇಶ 'ಅಪರಿಚಿತರು' ಎಂಬುದರಲ್ಲಿ ವ್ಯಕ್ತವಾಗುತ್ತದೆ. ಏನೂ ತಿಳಿಯದೆ ಎಲ್ಲವನ್ನೂ ತಿಳಿದಿರುವೆನೆಂಬ ಸೋಗಿನಿಂದ ಮೆರೆದಾಡುವವರ ವ್ಯಕ್ತಿ ಚಿತ್ರ ಕೊನೆಯ ಎರಡು ಕಥೆಗಳಲ್ಲಿವೆ.

ಮೊದಲ ಪ್ರಕಾರದ ಕಥೆಗಳು ಉತ್ತರ ಕನ್ನಡದ ಹಳ್ಳಿಯ ವಾತಾವರಣಕ್ಕೆ ಸಂಬಂಧಿಸಿದಂತೆಯೂ ಉಳಿದುವು ನಾಗರಿಕ ಜೀವನಕ್ಕೆ ಹೊಂದಿಕೊಳ್ಳುವಂತೆಯೂ ಬರೆಯಲ್ಪಟ್ಟಿವೆ. ಕಥೆಗಳು ಸಾಕಷ್ಟು ದೀರ್ಘವಾಗಿಯೇ ಇದ್ದು ಪ್ರತಿವಾಕ್ಯವೂ ಮುಂದೇನು ಎಂಬುದನ್ನು ತಿಳಿಯಬೇಕೆನ್ನುವ ಆತುರಾತಿರೇಕವನ್ನು ಹುಟ್ಟಿಸುತ್ತಿವೆ. ಎಂತಲೇ ಶ್ರೀ ಯಶವಂತ ಚಿತ್ತಾಲರ ಕಥನ ಶೈಲಿ ಸಣ್ಣ ಕಥೆಗಳಲ್ಲಿ ಸಂಪೂರ್ಣ ಯಶಸ್ವಿಯಾಗಿದೆ. ಅಬೋಲೀನ, ಮಂಜುನಾಥ ಶೆಟ್ಟಿ ಮತ್ತು ರಾದಕ್ಕನವರು ಮುಗ್ಧತೆಯ ಪ್ರತಿಮೂರ್ತಿಗಳಂತೆ ಬಿಳಿಯದ್ದುದನ್ನೆಲ್ಲಾ ಹಾಲೆಂದು ತಿಳಿಯುವಷ್ಟು ಸರಳ ವ್ಯಕ್ತಿಗಳಾಗಿ ಚಿತ್ರಿಸಲ್ಪಟ್ಟಿದ್ದರೆ, ಮನವೇಲ, ಸುಶೀಲಕ್ಕ ಮತ್ತು ಯಮುನಾ ಆ ಮುಗ್ಧತೆಯ ದುರ್ಲಾಭವನ್ನು ಪಡೆಯುವ ರಾಕ್ಷಸೀ ಮನೋವೃತ್ತಿಯುವರಾಗಿ ಕಾಣುತ್ತಾರೆ. ಇದೇ ರೀತಿಯಲ್ಲಿ ಎಲ್ಲ ಕಥೆಗಳ ಪಾತ್ರಗಳೂ ಸಚೇತವಾಗಿ ಚಿರಂತನ ಮೂರ್ತಿಗಳಾಗಿ ರೂಪಿತರಾಗಿರುವುದು ದೃಗ್ಗೋಚರವಾಗುತ್ತದೆ! ಕಥೆ ಹೇಳುವಲ್ಲಿ ಅವಶ್ಯ ಬೇಕಾದ ಸರಳತೆ, ಅಚ್ಚುಕಟ್ಟುತನ ಆಕರ್ಷಕತೆಯೆಲ್ಲವೂ ಮುಖ್ಯವಾಗಿ ಹೃದಯ ಸ್ಪರ್ಶತೆ ಇಲ್ಲಿವೆ. ಈ ಕಾರಣಗಳಿಂದಲೇ ಶ್ರೀ ಚಿತ್ತಾಲರ ಈ ಕೃತಿ ಉತ್ತಮ ಕೃತಿಗಳಲ್ಲಿ ಒಂದೆನಿಸುತ್ತದೆ. ಇವರಿಂದ ಇನ್ನೂ ಹೆಚ್ಚಿನ ಕಥೆಗಳನ್ನು ನಿರೀಕ್ಷಿಸಬಹುದು.

ಗೋರಾ.

೧ನೇ ಪುಟದಿಂದ

ರೇಶನ್ ಚುನಾವಣೆಗಳಲ್ಲಿ ನಾಲ್ಕು ಸ್ಥಾನಗಳನ್ನು ಗಳಿಸಿದೊಡನೆಯೇ ಸಿಡಿಮಿಡಿಗೊಳ್ಳುವ ಕಾಂಗ್ರೆಸ್ಸು ಕೇರಳದಲ್ಲಿ ಕಮ್ಯುನಿಸ್ಟರನ್ನು ಎದುರಿಸಲು ಅದೇ ಜಾತೀಯ ಸಂಸ್ಥೆಯೊಡನೆ ಒಪ್ಪಂದ ಮಾಡಿಕೊಂಡುದನ್ನೂ ಮುಂದೆ ಮಂತ್ರಿ ಮಂಡಳ ರಚನೆಯ ವೇಳೆ ಕುಸು ಕಟಿಪಿಟಿ ಎದ್ದುದನ್ನೂ ನಾವು ಮರೆಯುವಂತಿಲ್ಲ. ಕಾಂಗ್ರೆಸ್ಸಿನ ಈ ತೆರೆದ ವರ್ತನೆಯಿಂದಾಗಿಯೇ ಮುಸ್ಲಿಂ ಲೀಗಿಗೆ ಅದರ ಬೆಂಬಲವಿದೆ ಎಂಬ ಊಹನೆಗೂ ಆಧಾರ ಸಿಗುತ್ತದೆ. ಒಂದು ಕಾಲದಲ್ಲಿ ಚೀನವನ್ನು ಗೌರವ ದೃಷ್ಟಿಯಿಂದ ಕಂಡು ಅದರ ನುಣ್ಣನೆಯ ಮಾತಿನ ಬಣ್ಣ ಬಯಲಾದಾಗ ಅರಿವು ಮೂಡಿದಂತೆ ಜಾತೀಯ ಸಂಸ್ಥೆಗಳನ್ನು ಈಗಿಂದೀಗಲೇ ಮುರಿಯದೆ ಹೋದರೆ, ಮುಂದೆ ನಾಗರ ಹಾವಿಗೆ ವಿಷವೆರೆದಂತಾಗುವುದು. ಆದರೆ, ಚುನಾವಣೆಯ ವೇಳೆ ಗೆದ್ದುಬರಬೇಕೆಂಬ ಅಭಿಲಾಷೆಯಿಂದ ಕಾಂಗ್ರೆಸ್ಸಾದರೂ ಜಾತೀಯತೆಗೇನೇ ನೀಡಬಾರದಷ್ಟು ಪ್ರಾಶಸ್ತ್ಯ ನೀಡುತ್ತಿರುವಂತೆ ತೋರುತ್ತದೆ. ಜಾತೀಯ ಸಂಸ್ಥೆಗಳನ್ನು ಪ್ರತಿಬಂಧಿಸಲು ಬಯಸುವ ಕಾಂಗ್ರೆಸ್ಸಿಗರು ಜಾತೀಯತೆಗೆ ಯಾವುದೇ ರೀತಿಯ ಪ್ರೋತ್ಸಾಹ ಯಾವುದೇ ಕಾರಣಗಳಿಂದ ಕೊಡಬಾರದು. ಸ್ವಯಂ ಈ ನೀತಿಯನ್ನು ಅನುಸರಿಸಿ ಮುಂದೆ ಅವಶ್ಯ ಕಂಡರೆ, ಶಾಸನ ರೂಪಕ್ಕೆ ತರುವುದರಿಂದ ಪ್ರಯೋಜನಕಾರಿಯಾಗಬಹುದು. ಇಲ್ಲವಾದರೆ, ಪಾನಪ್ರತಿಬಂಧದ ಶಾಸನದಂತೆ ಕಾಗದ ಪತ್ರಗಳಲ್ಲಿ ಮಾತ್ರ ಯಶಸ್ವಿಯಾದೀತು.



ವರ್ಜೀನಿಯದ ಸ್ಕಾಟ್ ಕೇಂಪಿನಲ್ಲಿ ಹಾರಿಸಲು ಸಿದ್ಧಪಡಿಸಿದ ಉಪಗ್ರಹ.

ಪಿಗ್ಮಿ—೫

ಪಿಗ್ಮಿ

O ಪಿಗ್ಮಿ ನಿತ್ಯ ಸಂಪಾದನೆಯುಳ್ಳವರ ಆಪ್ತ ಗೆಳೆಯ.
O ಪಿಗ್ಮಿ ಉಳಿತಾಯದ ಪಾಠವನ್ನು ಹೇಳಿಕೊಡುವ ಸದ್ಗುರು.
O ಪಿಗ್ಮಿ ಉತ್ತಮ ಅಭ್ಯಾಸವನ್ನು ಬೆಳೆಸುವ ಸನ್ಮಿತ್ರ.
O ಪಿಗ್ಮಿ ಕಷ್ಟಕಾಲದಲ್ಲಿ ನೆರವಾಗುವ ಆಪದ್ಬಂಧು.
O ಪಿಗ್ಮಿ ನಿಮಗೆ ತಿಳಿಯದೆಯೇ ನಿಮ್ಮನ್ನು ಶ್ರೀಮಂತರನ್ನಾಗಿ ಮಾಡುವಶಕ್ತಿ.
O ಪಿಗ್ಮಿ ಚಿಕ್ಕ ಉಳಿತಾಯ ಯೋಜನೆಗಳ ಜನಕ.
O ಪಿಗ್ಮಿ ಸಿಂಡಿಕೇಟ್ ಬೇಂಕಿನ ಜನಪ್ರಿಯ ದೈನಿಕ ಉಳಿತಾಯ ಯೋಜನೆ.

ದಿನಕ್ಕೆ 25 ನಯಾಪೈಸೆ 7 ವರುಷಗಳಲ್ಲಿ ರೂ. 700

ಸಿಂಡಿಕೇಟ್ ಬೇಂಕ್
ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಶ್ರೀ ಎ. ಬಿ. ಶೆಟ್ಟಿ ಸ್ಮಾರಕ ನಿಧಿಗೆ ಸಹಾಯ ಮಾಡಿರಿ

Edited Printed & Published by K. H. Shetty, at the Navayuga Press, Udipi, S. India.

40th year of publication. 13-4-1961 ೪೦ನೇ ವರ್ಷ

ಸಂಪುಟ ೪೦ — **ನವಯುಗ** — Vol. 40

ಸಂಚಿಕೆ ೩೧ — No. 31

ಬೆಲೆ 0=13

ಪ್ರಚಲಿತ ಪ್ರಸಂಗ:

ಭಾರತೀಯತೆಯನ್ನು ಬೆಳೆಸಿಕೊಳ್ಳಿರಿ

ಪ್ರತ್ಯೇಕತೆಯಿಂದ ಏಕತೆಯತ್ತ ಸರಿದು ನಮ್ಮೆಲ್ಲರ ಭಾವನಾತ್ಮಕ ಐಕ್ಯವನ್ನು ಸಂಸ್ಥಾಪಿಸುವ ಆವಶ್ಯಕತೆ ಇಂದು ಎಂದಿಗಿಂತ ಅಧಿಕವಾಗಿದೆ. ಇದನ್ನು ನಾವು ಸಾಧಿಸದೆ ಹೋದರೆ, ನಮ್ಮ ಭವಿಷ್ಯವು ಮಣ್ಣುಪಾಲಾಗುವುದರಲ್ಲಿ ಸಂದೇಹವಿಲ್ಲ.

ಅಮೆರಿಕೆಯ ಅಧ್ಯಕ್ಷ ಕೆನ್ನೆಡಿಯವರು ವೈಟ್ ಹೌಸಿನಲ್ಲಿ ತನ್ನ ಮೇಜಿನ ಮುಂದೆ ಕಾರ್ಯತತ್ಪರರಾಗಿದ್ದಾರೆ.

ಸಾಂಪ್ರದಾಯಿಕತೆ ಮತ್ತು ಪ್ರತ್ಯೇಕತೆಗಳ ಪ್ರೇರಕ ಶಕ್ತಿಗಳನ್ನು ತಡೆಹಿಡಿದು ಅವನ್ನು ಉನ್ಮೂಲನ ಮಾಡದೆ ಹೋದರೆ, ಭಾರತವು ನಾಶಹೊಂದುವುದು. ಜಾತಿ ಮತ್ತು ಧರ್ಮಗಳ ಗೋಡೆಯು ಜನರನ್ನು ಪ್ರತ್ಯೇಕಿಸುತ್ತಿದ್ದು ಇದನ್ನು ಮಟ್ಟ ಮಲಗಿಸುವುದು ಮಹಾ ಸಾಹಸದ ಕಾರ್ಯವಾಗಿದೆ. ಕಳೆದ ೩೦-೪೦ ವರ್ಷಗಳಲ್ಲಿ ನಾವು ಈ ಬಗ್ಗೆ ಸ್ವಲ್ಪ ಪ್ರಯಾಸ ವಹಿಸಿದ್ದೇವೆ ನಿಜವೇ; ಆದರೆ, ಅದು ಏನೇನೂ ಸಾಲದು. ಆಗಾಗ, ನಾವು ಈ ದಿಸೆಯಲ್ಲಿ ಹಿಂದುಳಿದಿರುವೆವೆ ಎಂಬ ಪ್ರಶ್ನೆ ನಮ್ಮ ಮುಂದೆ ನಿಲ್ಲುವುದು. ಐಕ್ಯ ಮತ್ತು ರಾಷ್ಟ್ರೀಯತೆಯನ್ನು ಕಳೆದುಕೊಂಡರೆ, ಭಾರತವು ತನ್ನ ಅಖಂಡ ರೂಪವನ್ನು ಕಳೆದುಕೊಂಡು ಭಿನ್ನ ಭಿನ್ನವಾಗುವುದು. ಆಗ ಅದರ ಸ್ವಾತಂತ್ರ್ಯವೂ ಅಪಾಯದ ಘಟ್ಟ ಮುಟ್ಟುವುದು.

ಜಬ್ಬಲಪುರದ ದುರ್ಘಟನೆಯಿಂದ ನಾವು ಪಾಠಕಲಿಯಬೇಕು. ಈ ಘಟನೆ ಅತ್ಯಂತ ಅಪಮಾನಜನಕವಾಗಿದೆ. ಮಧ್ಯಪ್ರದೇಶದಲ್ಲಿದ್ದ ಈ ಗಲಭೆಗಳು ಭಾರತದ ಸ್ವಾತಂತ್ರ್ಯಾನಂತರದ ೧೩ ವರ್ಷಗಳಲ್ಲಿ ಅತಿ ಭೀಕರವಾದುವು. ಇದು ಅತೀವ ಲಜ್ಜಾಸ್ಪದವಾಗಿದೆ; ವಿಶ್ವದೆದುರು ನಾವು ತಲೆವಾಗುವಂತೆಸಗಿದೆ. ವಿದೇಶಗಳಿಗೆ ಹೋದಾಗ ಇದೇ ಪ್ರಶ್ನೆಯನ್ನು ಹಾಕಿದರೆ ಇದಕ್ಕೆ ಏನೆಂದು ಉತ್ತರಿಸಬೇಕೋ ತಿಳಿಯದಾಗಿದೆ. ಈ ಘಟನೆಗಳು ಭಾರತದ ಭಾವನೆಯನ್ನು ಪ್ರತಿಬಿಂಬಿಸುವುವಾದರೆ, ನಮ್ಮ ನಾಶ ಅತಿ ನಿಕಟದಲ್ಲಿದೆ ಎಂಬುದು ದಿಟ. ನಾವು ಸ್ವತಂತ್ರರಾಗಿರಬೇಕೆಂದು ಆಶಿಸುವುದಾದರೆ, ಭಾರತದ ಏಕತೆಯ ಬಗ್ಗೆ ಅಹೋರಾತ್ರಿ ಚಿಂತಿಸಬೇಕು. ಭಾರತೀಯ ಏಕತೆಯು ಕೇವಲ ನಕ್ಷೆಯಲ್ಲಿಲ್ಲ; ದೇಶದ ಬೇರೆ ಬೇರೆ ಸಮಸ್ಯೆಗಳನ್ನು ಏಕ ಮತದಿಂದ ಬಗೆಹರಿಸಿಕೊಳ್ಳುವುದರಲ್ಲಿದೆ.

ಭಾರತವು ವಿಭಿನ್ನತಾಪೂರ್ಣ ದೇಶವೆಂಬುದು ನಿಜ. ಇಲ್ಲಿ ಅನೇಕ ಧರ್ಮಗಳಿವೆ. ಪ್ರತಿ ಮತಾವಲಂಬಿಗಳೂ ಬಹಳ ಸಂಖ್ಯೆಯಲ್ಲಿದ್ದಾರೆ. ಹಿಂದೂ, ಮುಸ್ಲಿಮ್, ಸಿಕ್ಖ, ಕ್ರೈಸ್ತ, ಪಾರ್ಸಿ, ಬೌದ್ಧ, ಜೈನ ಮೊದಲಾದೆಲ್ಲವೂ ಭಾರತೀಯ ಧರ್ಮಗಳೇ ಎಂಬುದನ್ನು ಮರೆಯಬಾರದು. ನಾವು ಇವೆಲ್ಲವನ್ನೂ ಅವಶ್ಯ ಗೌರವಿಸಬೇಕಾಗಿದೆ. ಆದರೆ, ಕೆಲವೊಮ್ಮೆ ಕೆಲವರು ಧರ್ಮ ಅಥವಾ ಜಾತಿಯ ಹೆಸರಿನಲ್ಲಿ ಉತ್ಪಾತವೆಬ್ಬಿಸುತ್ತಾರೆ; ಇದರಿಂದ ಸ್ವಾರ್ಥಸಾಧನೆ ಮಾಡಿಕೊಳ್ಳುತ್ತಾರೆ. ಇಂತಹ ಹವ್ಯಾಸವು ಭಾರತೀಯ ಏಕತೆಗೊಡ್ಡಿದ ವಿಘ್ನವಿದ್ದಂತೆ; ಇದರಿಂದ ದೇಶದ ಸ್ವಾತಂತ್ರ್ಯಕ್ಕೆ ಧಕ್ಕೆ ತಗಲುವುದು. ಈ ತೆರದ ಮತಭೇದವೆಲ್ಲವನ್ನೂ ಮರೆತುಬಿಡುವ ವರೆಗೆ ನಮ್ಮಲ್ಲಿ ಒಮ್ಮತವು ಮೂಡಿ ಬರುವ ವರೆಗೆ ನಾವು ಸಂಪೂರ್ಣವಾಗಿ ಅಭಿವೃದ್ಧಿ ಹೊಂದಲಾರೆವು. ಈಗ ನಡೆದ ಗೊಂದಲದಂತಹ ಗೊಂದಲಗಳಿಂದ ದೇಶವು ಅಸ್ತಿತ್ವವನ್ನು ಕಳೆದುಕೊಂಡು ದಾರುಣ ಸ್ಥಿತಿಗೆ ಮುಟ್ಟುವುದು.

ಅತಿಯಾದ ಜಾತಿ ಮತ ಪ್ರೇಮವನ್ನು ವ್ಯಕ್ತಪಡಿಸುವುದರಿಂದ ನಮ್ಮ ಅಜ್ಞಾನವು ಮಾತ್ರ ಪ್ರಕಟವಾಗುವುದು. ಮಾನವನು ಎದುರುಬಿದ್ದು ಒಬ್ಬರನೊಬ್ಬರು ಹಗೆಯಿಂದ ಕಾಣುವುದು, ಕೊಲ್ಲುವುದು ಎಲ್ಲವೂ ಅಸಭ್ಯ ಮತ್ತು ಕ್ರೂರವ್ಯವಹಾರವೆನಿಸುತ್ತದೆ. ಇಂತಹವರಿಗೆ ಸೂಕ್ತ ದಂಡನೆ ವಿಧಿಸಬೇಕು. ಸಂಪ್ರದಾಯ ಶರಣತೆ ಮತ್ತು ಪರಸ್ಪರ ಹತ್ಯಾಕಾಂಡವೆನ್ನುವುದು ಇಂದಿಗೆ ಹಳೆಯ ಮಾತುಗಳಾಗಿವೆ. ಸಾಂಪ್ರದಾಯಿಕ ಕಟ್ಟಳೆಯ ಭಯಾನಕತೆಯನ್ನು ಹೋಗಲಾಡಿಸುವವನು ಅತಿ ಎಚ್ಚರದಿಂದಿರಬೇಕಾಗುತ್ತದೆ. ಗಲಭೆಯ ಸ್ಥಳವಾದ ಜಬ್ಬಲಪುರದ ಜನರು ಕೂಡ ಭಾರತೀಯ ಏಕತೆ ಮತ್ತು ಸ್ವಾತಂತ್ರ್ಯಗಳ ಮೇಲೆ ಇದು ಮಾಡುತ್ತಿರುವ ಹಾನಿಯೆಷ್ಟೆಂದು ಊಹಿಸಿದಂತಿಲ್ಲ. ಉಚಿತಾನುಚಿತವನ್ನು ತಿಳಿದುಕೊಳ್ಳದೆ ಒಬ್ಬರೊಡನೊಬ್ಬರು ಹೊಡೆದಾಡುವುದು, ಒಂದು ಪಕ್ಷದವರು ಮತ್ತೊಂದರೊಡನೆ ಗುದ್ದಾಡುವುದು ಲಜ್ಜೆಗೇಡಿತನದ ಪರಮಾವಧಿಯಾಗಿದೆ.

ರಾಷ್ಟ್ರೀಯ ಐಕ್ಯದ ಪ್ರಕ್ರಿಯೆಗಳಿಗೆ ಪ್ರೋತ್ಸಾಹನೀಡುವುದು ಅಥವಾ ನಮ್ಮವರನ್ನು ಬೇರೆ ಬೇರೆಯಾಗಿ ವಿಂಗಡಿಸುವ ಶಕ್ತಿಯನ್ನು ಸರ್ವನಾಶಪಡಿಸುವುದು ಇದರಿಂದ ಜಾತಿ ಮತಗಳ ಗೋಡೆಯನ್ನು ಉರುಳಿಸುವುದು ಅತ್ಯಂತ ಮಹತ್ವಪೂರ್ಣ ಕೆಲಸ. ನಮ್ಮ ದೇಶದಲ್ಲಿ ಕಾಣಿಸಿಕೊಳ್ಳುವ ರಾಷ್ಟ್ರೀಯತೆಯ ವಿಕಾಸವು ಆಗಬೇಕಾದಷ್ಟು ಆಗಿಲ್ಲ. ಕ್ಷೇತ್ರೀಯ ರಾಷ್ಟ್ರೀಯತೆ, ಪಂಜಾಬಿ ರಾಷ್ಟ್ರೀಯತೆ, ಬಂಗಾಳಿ ರಾಷ್ಟ್ರೀಯತೆ, ಕರ್ನಾಟಕ ರಾಷ್ಟ್ರೀಯತೆ ಎಂದು ಬೇರೆ ಬೇರೆ ಹೆಸರುಗಳು ನಮ್ಮಲ್ಲಿವೆ. ಅಲ್ಲದೆ, ಜಾತೀಯ ರಾಷ್ಟ್ರೀಯತೆಯು ಇದರೊಡನೆ ಸೇರಿಕೊಳ್ಳುತ್ತದೆ. ಹಿಂದೂ ರಾಷ್ಟ್ರೀಯತೆ, ಮುಸ್ಲಿಂ ರಾಷ್ಟ್ರೀಯತೆ ಸಿಕ್ಖ ರಾಷ್ಟ್ರೀಯತೆ ಎಂದು ಮೊದಲಾಗಿ ನಾವು ಪ್ರತ್ಯೇಕತೆಯನ್ನು ಮಾಡುತ್ತ ಬಂದರೆ ಇಡಿಯ ಭಾರತವೇ ಹಾಳಾಗಿ ಹೋದೀತು. ಇಂತಹ ಸಂಕುಚಿತ ಪ್ರವೃತ್ತಿಗಳಿಂದ ಒಂದು ಧರ್ಮ ಇನ್ನೊಂದರ ವಿರುದ್ಧ ನಿಲ್ಲುವುದು; ಒಂದು ಪ್ರಾಂತ ಮತ್ತೊಂದು ಪ್ರಾಂತವನ್ನು ಕೆಣಕುವುದು; ಒಂದು ಭಾಷೆ ಉಳಿದ ಭಾಷೆಯನ್ನು ಉದ್ರೇಕಿಸುವುದು. ಈ ಸಂಕುಚಿತ ಪ್ರವೃತ್ತಿಯೆಂಬ ಗೋಡೆಯನ್ನು ನಾವು ಕೆಡವಿ ಹಾಕದಿದ್ದರೆ, ನಾವೆಲ್ಲರೂ ಹಾಳಾಗುವುದರಲ್ಲಿ ಸಂದೇಹವೆಲ್ಲಿದೆ? ಇದನ್ನು ಕಾರ್ಯಗತಗೊಳಿಸುವುದು ಮಹಾ ಸಾಹಸವಾಗಿದೆ; ಆದರೂ ನಾವು ಇದನ್ನು ಮಾಡಲೇಬೇಕಾಗಿದೆ. ಭಾರತ ಸೇವಕ ಸಮಾಜವು ಯಾವುದೇ ಸಂಕುಚಿತತೆಯಿಂದ ಕೂಡಿಲ್ಲ; ರಾಜಕೀಯ ಪಕ್ಷಗಳಿಗೆ ಅಂಟಿಕೊಂಡಿಲ್ಲ. ಭಾರತದ ಏಕೀಕರಣಕ್ಕಾಗಿ ಈ ಸಂಸ್ಥೆಯು ಕಾರ್ಯವೆಸಗಬಲ್ಲದು.

ಭಾರತ ಸೇವಕ ಸಮಾಜವು ಸರಕಾರಿ ಕಾರ್ಯಾಲಯಗಳ ಕಾರ್ಯಪದ್ಧತಿಯನ್ನು ಅನುಕರಿಸುವುದು ಉಚಿತವಲ್ಲ. ರಾಜಕೀಯ ಪಕ್ಷಗಳನ್ನು ಸೇರುವವರಿಗೆ ಇದು ಮಾಧ್ಯಮವೆನಿಸಬಾರದು. ಜನರಿಗೆ ಶಾರೀರಿಕ ಶ್ರಮಪಡುವ ಅವಕಾಶವನ್ನು ಒದಗಿಸಿಕೊಡಬೇಕೆಂಬ ಮಹೋದ್ದೇಶದಿಂದ ಈ ಸಮಾಜ ಸ್ಥಾಪನೆಯಾಗಿದೆ. ಇದಕ್ಕೆ ಸರಕಾರದಿಂದ ನೇರವಾಗಿ ಧನಸಹಾಯವು ಲಭಿಸುವುದಿಲ್ಲ; ಆದರೂ ಶಿಬಿರವೇ ಮೊದಲಾದವುಗಳಿಗೆ ಆರ್ಥಿಕ ನೆರವು ಸಿಗುತ್ತದೆ. ಆದರೆ, ವಾಸ್ತವಿಕವಾಗಿ ಭಾರತ ಸೇವಕ ಸಮಾಜವು ಸರಕಾರದ ಸಹಾಯವನ್ನು ನಿರೀಕ್ಷಿಸಬಾರದು; ಅದು ಸ್ವಾವಲಂಬಿಯಾಗಿ ಬೆಳೆದುಬರಬೇಕು.

ಭಾರತ ಸೇವಕ ಸಮಾಜವು ಒಂದು ವಿಕೇಂದ್ರಿತ ಸಂಸ್ಥೆ. ಇದು ಜನತೆಯನ್ನು ಗ್ರಾಮ ಗ್ರಾಮದಲ್ಲಿ ನಗರ ನಗರದಲ್ಲಿ

(೧೬ನೇ ಪುಟ ನೋಡಿರಿ)

ESTD. 1921

NAVAYUGA
KANNADA WEEKLY, UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ
ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೨೧.

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್.
ಬಿ. ರಾಮರಾಯ ಶೆಟ್ಟಿ, ಬಿ. ಎ., ಎಲ್. ಟಿ.

ಸಂಚಾಲಕ ಸಂಪಾದಕರು:
ಕೆ. ಕೊನ್ನಯ್ಯ ಶೆಟ್ಟಿ.

●

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್) ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್) ಕಲಂ ಇಂಚಿಗೆ ರೂ. 3 50
ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ 0-13

[illegible]

ಕಥಾವಿಹಾರ

ನಡುಗುವ ಹೆಜ್ಜೆ

> ಪರಮೂನಿಗೆ ಪಾರ್ವತಿ ಮಿಲ್ಲಿನಲ್ಲಿ ಕೆಲಸವೇನೋ ಕೊಡಿಸಿದಳು. ಆದರೆ, ಇದೇ ಆಕೆಯ ಅವನತಿಗೆ ಕಾರಣವಾಯಿತು. ಆತ ತಾನು ಒಲಿದು ವರಿಸಿದಾಕೆಯನ್ನು ಕೆಲವೊಂದು ಬೆಳ್ಳಿಯ ತುಣುಕುಗಳಿಗಾಗಿ ಮಾಲಿಕ ಆಮ್ಮಕಲಾಲನಿಗೊಪ್ಪಿಸಿ, ತಾನು ಅಮಲು ಸೇವಿಸಿ ತನ್ನನ್ನೇ ಮರೆತಿದ್ದ!

ಮೂಲ: ಡಾ| ಮಹೇಂದ್ರ ಭಟ್ನಾಗರ.
ಅನುವಾದ: ಶ್ರೀ ಕೆ. ರಾಮಚಂದ್ರ ಭಟ್, ಬಿ. ಎ.

ಪಾರ್ವತಿ ಪೇಟೆಗೆ ಬಂದು ಒಂದು ತಿಂಗಳಾಗುತ್ತ ಬಂತು. ಪೇಟೆಯಲ್ಲಿ ಸ್ವತಂತ್ರವಾಗಿ, ಸುಖವಾಗಿ ಜೀವನವನ್ನು ನಡೆಸಬಹುದೆಂಬ ಭರವಸೆಯಿಂದಲೇ ಅವಳು ಹಳ್ಳಿಯಿಂದ ಪೇಟೆಗೆ ಬಂದದ್ದು. ಮಿಲ್ಲು ಮತ್ತು ಕಾರ್ಖಾನೆಗಳ ಕಪ್ಪಾದ ಕುಲುಮೆಗಳಿಂದ ಹೊರಟ ಹೊಗೆಯಿಂದ ತುಂಬಿದ ಪೇಟೆಗೆ ಅವಳನ್ನು ಕರೆದೊಯ್ದುದು ಅವಳಲ್ಲಿಯೇ ನೆಲೆಯಾಗಿ ನಿಂತ ಅತ್ಯಾಶೆ, ಸಂಪಾದನೆಯ ಅಭಿಲಾಷೆ ಎಂದರೆ ನೀವು ಬೆರಗಾಗಬೇಕಿಲ್ಲ.

ಪಾರ್ವತಿ ತುಂಬು ಹರೆಯದವಳು. ಅವಳಿಗೆ ೨ ವರ್ಷ ಪ್ರಾಯದ ಒಬ್ಬ ಮಗನೂ ಇದ್ದಾನೆ. ಅವನು ಘುಗ್ಗ. ಅದೇ ಅವಳು ಅವನನ್ನು ಪ್ರೀತಿಯಿಂದ ಕರೆಯುತಿದ್ದ ಹೆಸರು. ಅವನಿಗೂ ಅವಳ ಮೊದಲಿನ ಗಂಡನಿಗೂ ಇದ್ದ ಸಂಬಂಧ ಯಾವಾಗಲೋ ಕಡಿದು ಹೋಗಿತ್ತು. ಘುಗ್ಗ ಇನ್ನೂ ಗರ್ಭಾವಸ್ಥೆಯಲ್ಲೇ ಇರುವಾಗ ಅವಳನ್ನು ಬಿಟ್ಟು ಅವಳ ಗಂಡ ಓಡಿ ಹೋಗಿದ್ದ. ತರುವಾಯ ಎರಡು ವರ್ಷಗಳ ತನಕ ಅವನ ಬರವನ್ನು ಕಾಯುತ್ತ ಕುಳಿತಳು. ಕೊನೆಗೆ ಜೀವನ ನೌಕೆಯನ್ನು ನಡೆಯಿಸಿಕೊಂಡು ಹೋಗಲಿಕ್ಕೆ ಅವಳು ಹೊಸ ದಾರಿಯನ್ನು ಹುಡುಕಬೇಕಾಯಿತು.

ನಗರದ ಹೊರಗೆ ಮಜೂರರ ಕೇರಿಯಲ್ಲಿ ಒಂದು ಚಿಕ್ಕ ಮನೆಯನ್ನು ಬಾಡಿಗೆಗೆ ಗೊತ್ತುಮಾಡಿ ಅಲ್ಲಿಯೇ ಪಾರ್ವತಿ ತನ್ನ ಸಂಸಾರವನ್ನು ನಡೆಸತೊಡಗಿದಳು. ಕೆಲವು ದಿನಗಳ ತನಕ ಮಿಲ್ಲಿನಲ್ಲಿ ಅವಳು ನೌಕರಿಯನ್ನು ಮಾಡಿದಳು. ಆದರೆ ಅದನ್ನು ಅವಳು ಬಿಡಬೇಕಾಗಿ ಬಂತು. ಹಳ್ಳಿಯ ವಾತಾವರಣದಲ್ಲಿದ್ದವರಿಗೆ ನಗರದ ವಾತಾವರಣ ಬಹಳ ಕಷ್ಟದಾಯಕವಾಗಿ ತೋರಿದರೆ ಅದರಲ್ಲಿ ತಪ್ಪಿಲ್ಲ. ಹಳ್ಳಿಯ ಜೀವನದ ಸರಳತೆ, ನಿಷ್ಕಪಟಭಾವ ಪೇಟೆಗೆ ಹೇಳಿಸಿದ್ದಲ್ಲ. ಪೇಟೆಗೆ ಬೇಕಾದುದು ಠೀಕು ಠಾಕು. ವಂಚಕ ಪ್ರವೃತ್ತಿ. ಆದ್ದರಿಂದ ಅವಳಿಗೆ ಇಲ್ಲಿಯ ಜೀವನ ಕಷ್ಟದಾಯಕವಾಗಿ ತೋರಿದುದು ಸಹಜ. ಮಿಲ್ಲಿನ ಪೋಲಿ ತರುಣರು ಅವಳನ್ನು ಕಂಡಕಂಡಾಗ ಪೀಡಿಸತೊಡಗಿದರು. ಮಿಲ್ಲುಗಳ ಮಾಲಕರು ದೇವಪುತ್ರರೇನೂ ಅಲ್ಲವಷ್ಟೆ! ಅವರು ಕೂಡ ಕಾಮಕ್ಕೆ ಬಲಿಯಾಗುವವರು. ತಮ್ಮ ಗೌರವಕ್ಕೆ ಕಲಂಕ ಒದಗದಂತೇ ಕಾಮವಾಸನೆಯನ್ನು ತೃಪ್ತಿಪಡಿಸುವುದಕ್ಕಾಗಿ ಮಿಲ್ಲಿನಲ್ಲಿ ನೌಕರಿಯಲ್ಲಿರುವ ಸುಂದರ ಯುವತಿಯರನ್ನು ಒದಗಿಸಿ ಕೊಡುವಂತೇ ಅವರು ಹಲವು ಹಸ್ತಕರನ್ನು ನೇಮಿಸಿಕೊಂಡಿದ್ದರು. ಅಂತಹ ಏಜಂಟರ ದೃಷ್ಟಿ ಪಾರ್ವತಿಯ ಮೇಲೆ ಬೀಳದೇ ಇದ್ದೀತೆ? ಅವರೂ ಹಲವು ದಿನಗಳಿಂದ ಅವಳಿಗೆ ತೊಂದರೆ ಕೊಡತೊಡಗಿದ್ದರು. ಅವರ ಉಪಟಳವನ್ನು ತಾಳಲಾರದೇ ಕೊನೆಗೊಮ್ಮೆ ನೌಕರಿಗೆ ನಮಸ್ಕಾರ ಹೊಡೆದೇ ಬಿಟ್ಟಳು.

ನೌಕರಿ ಬಿಟ್ಟರೇನು? ಹೊಟ್ಟೆ ಹೊರೆಯಬೇಕಲ್ಲ? ಅದಕ್ಕಾಗಿ ಅವಳು ಓರ್ವ ಸಾಹುಕಾರನ ಮನೆಯಲ್ಲಿ ಮುಸುರಿ ತಿಕ್ಕುವ ಕೆಲಸವನ್ನು ವಹಿಸಿಕೊಂಡಳು. ೫ ಮನೆಗಳ ಕೆಲಸ ಕೈಕೊಂಡು ಅವಳೊಬ್ಬಳೇ ಸುಮಾರು ೨೫ ರೂ. ಸಂಪಾದಿಸತೊಡಗಿದಳು. ಪಾರ್ವತಿ ಮತ್ತು ಘುಗ್ಗಯರಿಗೆ ಈ ತೆರನಾದ ಜೀವನದಿಂದ ವಿಶೇಷ ಸಂತೋಷ ಮತ್ತು ತೃಪ್ತಿ ಸಿಗಲಿಲ್ಲವಾದರೂ ಅವರಿಗೆ ಇದರಿಂದ ನಿರಾಶೆ ದುಃಖ ಉಂಟಾಗಿಲ್ಲವೆಂದು ಹೇಳಬಹುದು.

ನೆರೆಮನೆಯ ಪರಮೂ ಒಬ್ಬ ಕೂಲಿಯಾಳಾಗಿದ್ದ. ಅವನ ಪ್ರಾಯ ೨೩-೨೪ ಆಗಿರಬಹುದು. ಒಂದು ದಿನ ಅಕಸ್ಮಾತ್ ಇವರಿಬ್ಬರೂ ಪರಿಚಯ ಮಾಡಿಕೊಳ್ಳುವಂತಾಯಿತು. ಅವನು ನೋಡಲಿಕ್ಕೆ ಹಳ್ಳಿಗನಂತಿದ್ದ. ಅವನ ದೃಷ್ಟಿಯಲ್ಲಿ ಪಾರ್ವತಿ ಚಕೋರಿ ಮತ್ತು ಮಾಟಗಾತಿಯಂತೇ ಕಾಣುತಿದ್ದಳು. ಕೊಳಕಾದ ಶರ್ಟು ಮತ್ತು ದಪ್ಪನಾದ ಧೋತಿಯನ್ನುಟ್ಟುಕೊಂಡು ಬರಿತಲೆಯಲ್ಲಿ ದಿನಾಲೂ ಎರಡು ಮೂರಾವರ್ತಿ ಪಾರ್ವತಿಯನ್ನು ಭೇಟಿಯಾಗಿ ಮಾತನಾಡಿಸುತ್ತಿದ್ದ.

ಕಡು ಬೇಸಗೆ ಕಳೆಯುತ್ತಿರುವಂತೇ ಅರಬ್ಬೀ ಸಮುದ್ರದ ಕಡೆಯಿಂದ ಹೊರಟ ಮುಸೂನು ಗಾಳಿ ಉನ್ಮತ್ತಭಾವದಿಂದ ಪಾರ್ವತಿಯ ಸೆರಗು ಮತ್ತು ಲಂಗವನ್ನು ಮೇಲಕ್ಕೆ ಹಾರಿಸತೊಡಗಿತು. ಪಾರ್ವತಿ ಆ ಗಾಳಿಯಲ್ಲಿ ಬಹು ಕಷ್ಟದಿಂದ ತನ್ನ ಅಂಗಾಂಗಗಳನ್ನು ಮರೆಮಾಡಲು ಪ್ರಯತ್ನಿಸಿದರೂ ಹಲವಾರು ಬಾರಿ ಸೋತು ಹೋಗುತ್ತಿದ್ದಳು. ಅದಕ್ಕಾಗಿ ಕೆಲವೊಮ್ಮೆ ಅವಳು ಬಟ್ಟೆಯನ್ನು ಮೈಗೆ ಸುತ್ತಿಕೊಂಡೇ ಕೆಲಸಕ್ಕೆ ಹೋಗುತ್ತಿದ್ದಳು. ಛಳಿಗಾಳಿ ಮೈಗೆ ಸೋಂಕಿದಾಗ ಶರೀರವೂ ಚಂಚಲವಾಗುವುದು. ಮನಸ್ಸೂ ಭಾವನಾಪರವಶವಾಗುವುದು. ಅದಕ್ಕೆ ಸರಿಯಾಗಿ ಎಂಬಂತೇ ಸಾಯಂಕಾಲದ ಕಪ್ಪು ಮೋಡಗಳು, ಅವುಗಳ ಗರ್ಜನೆ ಮತ್ತು ತುಂತುರು ಸುರಿಮಳೆ, ಅದರ ರಿಮು ಝಿಮು ನಾದ ಪಾರ್ವತಿಯ ಕಣ್ಣು ಮತ್ತು ಮನಸ್ಸಿನಲ್ಲಿ ಒಂದು ಅಜ್ಞಾತ ಸಂತೋಷಭಾವ ಮತ್ತು ಉನ್ಮತ್ತತೆಯನ್ನು ತುಂಬಿದ್ದುವು.

ಅಂದು ರಮೇಶ ಬಾಬೂಗಳ ಮನೆ ಕೆಲಸ ಮುಗಿಸಿಕೊಂಡು ಅವಳು ಬರುವಾಗ ಬಿರುಸಾಗಿ ಬೀಸಿದ ಗಾಳಿ ಮತ್ತು ಮಳೆಯಲ್ಲಿ ಅವಳು ತೋಯ್ದು ಹೋದಳು. ಅವಳು ಮನಸ್ಸುಮಾಡುತ್ತಿದ್ದರೆ ಯಾವುದಾದರೊಂದು ಅಂಗಡಿಯ ಗೋಡೆಯ ಬಳಿ, ಅಥವಾ ಮನೆಯ ಜಗಲಿಯಲ್ಲಿ ನಿಂತು ಮಳೆಗಾಳಿ ನಿಂತಮೇಲೆ ಬರಬಹುದಿತ್ತು. ಆದರೆ ಅಂದು ಮಾತ್ರ ಅವಳಿಗೆ ಮಳೆನೀರಲ್ಲಿ ತೊಯ್ದುಕೊಳ್ಳುವುದರಲ್ಲಿ ವಿಶೇಷವಾದ ಸುಖವೆನಿಸಿತ್ತು; ತೃಪ್ತಿ ಸಿಗುವಂತಿತ್ತು. ಅಂದಮೇಲೆ ಅವಳೇಕೆ ತನ್ನನ್ನು ಗಾಳಿ ಮಳೆಯಿಂದ ರಕ್ಷಿಸಿಕೊಂಡಾಳು?

ಅವಳ ಬಟ್ಟೆ ಒದ್ದೆಯಾಗಿ ಮೈಗೆ ಅಂಟಿಕೊಂಡು ಅವಳ ಅಂಗಾಂಗಗಳ ಏರಿಳಿತಗಳನ್ನು ತೋರಿಸುತ್ತಿತ್ತು. ಅವಳ ಆಕರ್ಷಕ, ಗಟ್ಟಿಮುಟ್ಟಾದ ದೇಹವನ್ನು ಕಂಡು ಪರ

೧೧ನೇ ಪುಟ ನೋಡಿರಿ

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ: ಬಡ್ಡಿ ಸೇಕಡಾ 5ರಂತೆ: ರೂ. 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100—00 ಒದಗಿಸುವುದು.

ಕರೆ, ಚಿಕ್ಕ ಮ್ಯಾದೆ, ಸಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಸೇಕಡಾ 5¼ರ ವರೆಗೆ.

ತಾ 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK LTD.
Estd: 1920

ಅಭಿಪ್ರಾಯ:

ಭಾರತದ ಸಾಕ್ಷರತೆ ಅತೃಪ್ತಿಕರವಿದೆ!

೧೯೬೧ರಲ್ಲಿ ನಡೆದ ಜನಗಣನೆಯಲ್ಲಿ ದೊರೆತ ವಿವರಗಳು ಸಾಕ್ಷರತೆಯ ಮಟ್ಟಿಗೆ ಅತೀವ ಅತೃಪ್ತಿಕರವಾಗಿವೆ. ಶಿಕ್ಷಣಕ್ಷೇತ್ರದಲ್ಲಿ ಬಲವತ್ತರ ಕ್ರಾಂತಿಯಾಗದೆ ಹೋದರೆ, ನಾವು ಈ ಮಟ್ಟಿಗೆ ಬಹಳ ಹಿಂದುಳಿಯುವೆವು.

೧೯೬೧ರ ಜನಗಣನೆಯ ವಿವರಗಳು ಈಗ ಸಂಪೂರ್ಣವಾಗಿ ಹೊರಬರತೊಡಗಿವೆ. ಇವುಗಳಲ್ಲಿ ವಿದ್ಯಾಭ್ಯಾಸ ಬಲ್ಲವರ ಸಂಬಂಧದ ಅಂಕೆ ಸಂಖ್ಯೆಗಳತ್ತ ದೃಷ್ಟಿ ಹಾಯಿಸುವುದು ಅತ್ಯವಶ್ಯ. ಜನಗಣನೆಯ ಅಧಿಕಾರಿಗಳು ಅನ್ನುವಂತೆ ನಾವೂ ಒಪ್ಪುವಂತೆ ಕಳೆದ ದಶಕದಲ್ಲಿ ಭಾರತದಾದ್ಯಂತ ಸಾಕ್ಷರತೆಯ ಪ್ರಮಾಣವು ತೀರ ಮಂದಗತಿಯಿಂದ ಮುಂದುವರಿದಿದೆ. ಜನಗಣನೆಯ ಬಗ್ಗೆ ಓದು ಬರಹ ಬಲ್ಲವರೆಲ್ಲರನ್ನೂ ಸಾಕ್ಷರರೆಂದು ತೆಗೆದುಕೊಳ್ಳಲಾಗಿದೆ. ಜನಗಣಕರ ಕ್ರಿಯಾಲೋಪದಿಂದ ಎಲ್ಲ ನಾಗರಿಕರಿಗೂ, ನಿಮಗೆ ಓದು ಬರಹ ಬರುವುದೇ, ಎಂದು ಪ್ರಶ್ನಿಸಲಾಗಿಲ್ಲವೆನ್ನುವುದಾದರೂ ಇದರಿಂದ ಸಾಕ್ಷರ ಸಂಖ್ಯೆಯು ಕಡಿಮೆಯಾಗುವುದಿಲ್ಲ. ಏಕೆಂದರೆ, ನಾಲ್ಕಕ್ಷರ ಬಲ್ಲವರೆಲ್ಲರನ್ನೂ ಸಾಕ್ಷರರೆಂದು ಬರೆದುಕೊಳ್ಳುವುದೇ ರೂಢಿಯಾಗಿದೆ. ಹೀಗಿದ್ದರೂ ಕಳೆದ ಹತ್ತು ವರ್ಷಗಳಲ್ಲಿ ಸಾಕ್ಷರತೆಯಲ್ಲಾದ ಪ್ರಗತಿ ತೀರ ಅತ್ಯಲ್ಪವೆಂದು ಹೇಳುವುದು ಅನಿವಾರ್ಯವಾಗುವುದು. ದೇಶದ ಒಂದೆರಡು ರಾಜ್ಯಗಳನ್ನುಳಿದರೆ, ಎಲ್ಲಾ ರಾಜ್ಯಗಳಲ್ಲಿಯೂ ಈ ಪ್ರಮಾಣವು ಅತೀವ ಮಂದಗತಿಯಿಂದಲೇ ಸಾಗಿದೆಯೆನ್ನಬೇಕು. ಈ ಸಂಖ್ಯೆ ನಮ್ಮನ್ನು ದಿಗಿಲುಗೊಳಿಸದಿರಲಾರದು.

ಇಡಿಯ ಭಾರತದಲ್ಲಿ ಪ್ರತಿವರ್ಷ ನೂರಕ್ಕೆ .೭ರಂತೆ ಸಾಕ್ಷರತೆಯು ಏರಿದೆ. ಪುರುಷರಲ್ಲಿ ಇದು .೯ ಇದ್ದರೆ ಸ್ತ್ರೀಯರಲ್ಲಿ ಕೇವಲ .೫ ಮಾತ್ರ; ಒಟ್ಟಿನಲ್ಲಿ ೧೯೫೧ರಲ್ಲಿ ಸಾಕ್ಷರತೆಯ ಪ್ರಮಾಣ ೧೬.೬ ಇದ್ದು, ಇದು ಈಗ ೨೩.೭ಕ್ಕೆ ಏರಿದೆ. ಈ ಲೆಕ್ಕದಲ್ಲಿ ಐದು ವರ್ಷಕ್ಕೆ ಕೆಳಗಿನ ಮಕ್ಕಳು ಶಾಲೆಗೆ ಹೋಗುವುದು ಅಸಾಧ್ಯವಾದುದರಿಂದ ಅದನ್ನು ಬಿಟ್ಟುಬಿಡಬಹುದು. ಇಂತಹ ಮಕ್ಕಳ ಸಂಖ್ಯೆಯು ೧೯೫೧ರಲ್ಲಿ ಒಟ್ಟು ಜನತೆಯ ೧೩.೫ ಇತ್ತು. ಇಂದಿಗೂ ಮಕ್ಕಳ ಸಂಖ್ಯೆಯು ಇದೇ ಪ್ರಮಾಣದಲ್ಲಿದೆಯೆಂದಿಟ್ಟುಕೊಳ್ಳುವುದಾದರೆ, ಆಗ ಸಾಕ್ಷರತೆಯ ದಾಮಾಶಯವು ಈಗ ೨೭.೪ ಆಗುವುದು. ಇದು ೧೯೫೧ರಲ್ಲಿ ೧೯.೧ ಇತ್ತು. ನಮ್ಮ ದೇಶದ ಒಟ್ಟು ಜನತೆಯಲ್ಲಿ ಸಾಕ್ಷರತೆಯು ಹೆಚ್ಚಿದೆ. ಹಿಂದಿಗಿಂತ ಅಧಿಕ ಜನರು ಓದು ಬರಹ ಬಲ್ಲವರಾಗಿದ್ದಾರೆ ಎಂದು ಸಮಾಧಾನಪಟ್ಟುಕೊಳ್ಳುವವರೂ ಇದ್ದಾರೆ. ಆದರೆ, ವಾಸ್ತವಿಕ ಚಿತ್ರ ಇದಕ್ಕೆ ವಿಪರೀತವಿದೆ. ಜನತೆಯಲ್ಲಿ ಐದು ವರ್ಷ ಪ್ರಾಯಕ್ಕೆ ಮೀರಿದ ನಿರಕ್ಷರ ಸಂಖ್ಯೆ ಇಂದು ಹೆಚ್ಚಿದೆ. ೧೯೫೧ರಲ್ಲಿ ಆರು ಕೋಟಿ ಜನರು ಓದು ಬರಹ ತಿಳಿದಿದ್ದರು. ಇವರ ಸಂಖ್ಯೆ ೧೦.೩ ಕೋಟಿಗಳಿಗೇರಿದೆ. ಆದರೆ ಅದರೊಡನೆಯೇ ನಿರಕ್ಷರ ಸಂಖ್ಯೆಯೂ ೨೪.೮ ಕೋಟಿಯಿಂದ ಸುಮಾರು ೨೭.೯ ಕೋಟಿಗಳ ಗಡಿಯನ್ನು ಮುಟ್ಟಿದೆ. ಎಂದರೆ, ಈ ಪ್ರಾಯದ ನಿರಕ್ಷರರ ಸಂಖ್ಯೆಯು ೨ ಕೋಟಿಯಷ್ಟು ಹೆಚ್ಚುವಳಿಯನ್ನು ತೋರಿಸುತ್ತದೆ. ಇದನ್ನು ನಾವು ಪ್ರಗತಿಯೆನ್ನುವುದು ಸಾಧ್ಯವೆ?

ಪ್ರತ್ಯೇಕ ರಾಜ್ಯಗಳಲ್ಲಿನ ಸಾಕ್ಷರತೆಯ ಪ್ರಮಾಣವನ್ನು ನಾವು ಗಮನಿಸಿದರೆ, ಅಂದು ಹಿಂದುಳಿದಿದ್ದ ರಾಜ್ಯಗಳು ಇಂದಿಗೂ ಹಿಂದುಳಿದಿವೆ. ಅಂದು ಮೊದಲನೆಯ ಸ್ಥಾನದಲ್ಲಿದ್ದ ಕೇರಳವು ಇಂದು ಸೇ. ೪೬.೨ ರಷ್ಟನ್ನು ಸಾಕ್ಷರತೆಯಿಂದ ಕೂಡಿ ಎರಡನೆಯ ಸ್ಥಾನಕ್ಕಿಳಿದಿದೆ. ಅಂದು ಎರಡನೆಯದಾಗಿದ್ದ ಭಾರತದ ರಾಜಧಾನಿ ಇಂದು ಅಗ್ರಪಟ್ಟಕ್ಕೇರಿದೆ. ೧೯೫೧ರಲ್ಲಿ ಐದನೆಯ ಸ್ಥಾನದಲ್ಲಿದ್ದ ಮದ್ರಾಸು ಮೂರನೆಯದಕ್ಕೆ ನೆಗೆದಿದೆ. ಹಿಂದೀ ಭಾಷೆಯಾಡುವ ರಾಜ್ಯಗಳು ಹಿಂದೆಯೂ ಹಿಂದುಳಿದಿದ್ದು ಅವು ಇಂದಿಗೂ ಅದೇ ಗತಿಯಲ್ಲಿ ಸಾಗುತ್ತಿವೆ. ಬಿಹಾರ—೧೨.೨, ಉತ್ತರ ಪ್ರದೇಶ—೧೦.೮; ಮಧ್ಯ ಪ್ರದೇಶ—೯.೮, ಮತ್ತು ರಾಜಸ್ಥಾನ—೮.೯ ಸೇಕಡವಾರು ಸಾಕ್ಷರತೆಯನ್ನು ಪಡೆದಿದ್ದು, ಈ ರಾಜ್ಯಗಳಲ್ಲಿ ಒಂದಕ್ಕಾದರೂ ಇಂದಿಗೂ ರಾಷ್ಟ್ರೀಯ ಪ್ರಮಾಣ ಮಟ್ಟವನ್ನು ಮುಟ್ಟುವುದು ಸಾಧ್ಯವಾಗಲಿಲ್ಲ. ಇವುಗಳ ಸಾಕ್ಷರತೆಯು ಸೇ. ೨೦ಕ್ಕೂ ಕಡಿಮೆಯಿರುವುದು ಶೋಚನೀಯ. ಈಗ, ಹಿಂದೀ ಭಾಷಾ ಪ್ರದೇಶದಲ್ಲಿ ಪುರುಷರಲ್ಲಿ ನಾಲ್ಕರಲ್ಲೊಬ್ಬನೂ, ಸ್ತ್ರೀಯರಲ್ಲಿ ಹದಿನೈದರಲ್ಲಿ ಒಬ್ಬಳೂ ಓದುವುದನ್ನು ಮತ್ತು ಬರೆಯುವುದನ್ನು ಅರಿತಿರುವರು. ೧೭ ಕೋಟಿ ಜನಸಂಖ್ಯೆಯುಳ್ಳ ಈ ಪ್ರದೇಶದಲ್ಲಿ ನಿರಕ್ಷರತೆಯನ್ನು ದೂರ ಮಾಡುವುದಕ್ಕೆ ಇನ್ನೆಷ್ಟು ವರ್ಷ ಬೇಕಾಗಬಹುದು ಎಂಬುದು ಕಲ್ಪನಾತೀತವಾಗಿದೆ. ೭.೪ ಕೋಟಿ ಜನಸಂಪತ್ತಿರುವ ಭಾರತದ ಅತಿದೊಡ್ಡದಾದ, ಅತಿ ಜನನಿಬಿಡವಾದ ಉತ್ತರ ಪ್ರದೇಶವೊಂದರಲ್ಲಿಯೇ ಆರು ಕೋಟಿ ಓದು ಬರಹ ಬಾರದವರಿದ್ದಾರೆ ಎನ್ನುವುದು ವಿಲಕ್ಷಣವಾಗಿ ಕಾಣುವುದಿಲ್ಲವೆ? ನಾಲ್ಕು ಕೋಟಿ ಪುರುಷರಲ್ಲಿ ಒಂದು ಕೋಟಿ ೩| ಕೋಟಿ ಸ್ತ್ರೀಯರಲ್ಲಿ ೫೫ ಲಕ್ಷ ಅಕ್ಷರಸ್ಥರು ಇಲ್ಲಿ ಇದ್ದಾರೆ. ಬಿಹಾರದ ಪರಿಸ್ಥಿತಿ ಇದಕ್ಕಿಂತ ತುಸು ಉತ್ತಮವಿದೆಯಾದರೂ ಮಧ್ಯಪ್ರದೇಶ ಮತ್ತು ರಾಜಸ್ಥಾನಗಳ ಗತಿ ಮತ್ತಷ್ಟು ದುರಂತವಾಗಿದೆ.

ಮೈಸೂರು ರಾಜ್ಯದ ಅಂಕೆ ಸಂಖ್ಯೆಗಳು ಕೂಡ ತೃಪ್ತಿಪಟ್ಟುಕೊಳ್ಳುವಂತಿಲ್ಲ. ೧೯೫೧ರಲ್ಲಿ ಸೇ. ೧೯.೩ ಸಾಕ್ಷರತೆಯ ಪ್ರಮಾಣವಿತ್ತು. ಇದು ಪುರುಷರಲ್ಲಿ ೨೯.೧ ಮತ್ತು ಸ್ತ್ರೀಯರಲ್ಲಿ ೯.೨ ಆಗಿತ್ತು. ಈಗ ಈ ಪ್ರಮಾಣವು ಪುರುಷರಲ್ಲಿ ೩೭, ಸ್ತ್ರೀಯರಲ್ಲಿ ೧೪.೨ ರಷ್ಟಾಗಿದೆ, ಎಂದರೆ ಒಟ್ಟಿನಲ್ಲಿ ೨೫.೧ ಮಾತ್ರ. ಹತ್ತು ವರ್ಷದಲ್ಲಾದ ಪ್ರಗತಿಯೆಂದರೆ, ೫.೮ರಷ್ಟು! ಇದೇ ರೀತಿಯಲ್ಲಿ ನಾವು ಪ್ರಗತಿ ಪಡೆಯುವತ್ತ ನಡೆದರೆ, ಮೈಸೂರು ರಾಜ್ಯಕ್ಕೆ ಮಾತ್ರವಲ್ಲ ಭಾರತದ ಹೆಚ್ಚಿನ ರಾಜ್ಯಗಳಿಗೆ ಸಂಪೂರ್ಣ ಸಾಕ್ಷರತೆಯು ಹರಡಬೇಕಾದರೆ, ಒಂದು ಶತಮಾನವೂ ಸಾಲದು ಎನಿಸುತ್ತದೆ.

೧೯೬೬ರ ಒಳಗೆ ಎಂದರೆ, ತೃತೀಯ ಪಂಚವಾರ್ಷಿಕ ಯೋಜನಾವಧಿಯಲ್ಲಿ ಭಾರತದ ಎಲ್ಲ ರಾಜ್ಯಗಳೂ ೬ರಿಂದ ೧೧ ವರ್ಷದ ಮಕ್ಕಳಿಗೆಲ್ಲರಿಗೂ ಕಡ್ಡಾಯ ಶಿಕ್ಷಣವನ್ನು ನೀಡುವ ಯೋಜನೆಯನ್ನು ಸ್ವೀಕರಿಸಿವೆ, ಮತ್ತು ಅದನ್ನು ಕಾರ್ಯಕೃತಗೊಳಿಸಲು ಸಾಕಷ್ಟು ಪ್ರಯಾಸ ವಹಿಸುತ್ತಿವೆ. ಕಳೆದ ದಶಕದಲ್ಲಿ ವಿದ್ಯಾಭ್ಯಾಸಕ್ಕೆ ಸಾಕಷ್ಟು ಪ್ರಾಶಸ್ತ್ಯವನ್ನು ಕೊಡಲಾಗಿದ್ದರೂ ಅಂದಿಗಿಂತ ಇಂದು ಪ್ರಬುದ್ಧ ಅನಕ್ಷರಸ್ಥರ ಸಂಖ್ಯೆ ಹೆಚ್ಚಿರುವಾಗ, ನಮ್ಮ ಮುಂದಿನ ಯೋಜನೆಗಳು ಈ ಕ್ಷೇತ್ರದ ಮಟ್ಟಿಗೆ ಧೀಮಾಕಾರವನ್ನು ತಾಳಬೇಕಾಗಿದೆಯೆನಿಸುತ್ತದೆ. ಜನಗಣನೆಯ ಅಂಕೆಗಳನ್ನು ಮತ್ತಷ್ಟು ಸರಿಯಾಗಿ ಅವಲೋಕಿಸುವಾಗ ನಮ್ಮ ವಿದ್ಯಾಭ್ಯಾಸ ಪ್ರಗತಿಯು ಇರುವೆಯ ನಡಿಗೆಗಿಂತಲೂ ನಿಧಾನವಾಗಿ ಮುಂದುವರಿಯುತ್ತದೆ. ಒಂದು ದೇಶದಲ್ಲಿ ಪುರುಷರಲ್ಲಿ ಮುಕ್ಕಾಲು ಪಾಲು ಹಾಗೂ ಸ್ತ್ರೀಯರಲ್ಲಿ ಅರ್ಧದಷ್ಟು ಅವರೂ ಓದು ಬರಹ ಬಲ್ಲವರಿಲ್ಲವೆಂದಾದರೆ, ಅಂತಹ ದೇಶದಲ್ಲಿ ಯಾವ ಯೋಜನೆಯಾದರೂ ಯಶಸ್ವಿಯಾಗುವುದು ಸಾಧ್ಯವಿಲ್ಲ.

ನಮ್ಮ ಸರಕಾರವು ತಾನು ಹಿಂದಿನ ಯೋಜನೆಗಳಲ್ಲಿ ವಿದ್ಯಾಭ್ಯಾಸ ಮತ್ತು ನಿರುದ್ಯೋಗ ನಿವಾರಣೆಗಳ ಸಲುವಾಗಿ ಅದೆಷ್ಟೇ ಹಣ ವೆಚ್ಚಮಾಡಿದ್ದರೂ ಅದು ಸಾಲುವಂತಾಗಲಿಲ್ಲ. ಈ ಎರಡೂ ಸಂಪೂರ್ಣ ಯಶಸ್ವಿಯಾಗದ ಹೊರತು ಇತರ ಯಾವುದೇ ಯೋಜನೆಯು ಫಲಪ್ರದವೆನಿಸಲಾರದು. ಅಶನ, ವಸನ ಮತ್ತು ವಸತಿಗಳ ನಂತರ ಅಗ್ರಗಣ್ಯ ಸ್ಥಾನವನ್ನು ಪಡೆಯುವ ಶಿಕ್ಷಣವು ರಾಷ್ಟ್ರದ ಉನ್ನತಿಯ ಪ್ರತೀಕವಾಗಿದೆ. ಈಗ ತೊಡಗುವ ಅನಿವಾರ್ಯ ಶಿಕ್ಷಣದ ಪ್ರಭಾವದಿಂದಲಾದರೂ ಮುಂದಿನ ಜನಗಣನೆಯ ಅವಧಿಯಲ್ಲಿ ಈ ಕ್ಷೇತ್ರದಲ್ಲಿ ಬಲವತ್ತರ ಕ್ರಾಂತಿಯು ನಡೆಯುವುದು ಅತ್ಯವಶ್ಯವಾಗಿದೆ, ಅನಿವಾರ್ಯವಾಗಿದೆ.

ಉಡುಪಿ ಡಿ. ಮು. ಕೋರ್ಟಿನಲ್ಲಿ

S C 102/1959

S. E. P. 119/1961

A. ಅನಂತರಾಮ ಭಟ್ಟ —ಅರ್ಜಿದಾರ,
ಮತ್ತು
ಮುದ್ದಣ್ಣ ಶೆಟ್ಟಿ —ಯದ್ರಿ.
ಇವರೊಳಗೆ—

ಯದ್ರಿ.—ಮುದ್ದಣ್ಣ ಶೆಟ್ಟಿ, ವೆಂಕಪ್ಪ ಶೆಟ್ರ ಮಗ, ಶಾಲಾ ಮಾಸ್ಟರ್, ಉಡುಪಿ ತಾಲ್ಲೂಕು ಮಣಿಪುರ ಗ್ರಾಮದಲ್ಲಿರುವವ— ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ:—

ಕೈಹಿಡಿ ವಾರಂಟು ಮೂಲಕ ಆವೇಜನ್ನು ಬರಮಾಡಿಕೊಳ್ಳುವರೇ ಮೇಲ್ಕಂಡ ಅನುಲ್ಲಾರಿಯನ್ನು ಅರ್ಜಿದಾರನು ಮಾಡಿರುವುದರಿಂದ, ಈ ಕುರಿತು ನಿಮಗೇನಾದ್ರೂ ಆಕ್ಷೇಪವೆ ಉದಾಹರಿಸುವಂತಿದ್ರೆ, ತಾ. 29-5-61 ಕ್ಕೆ ಪೂರ್ವಾಹ್ನ 10 ಗಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗತಕ್ಕದ್ದು.

K. Ramakrishna Rao,
Vakil for Petitioner.

ಉಡುಪಿ, ತಾ. 4—1—1961

ಸ್ಥಾಪನೆ. 1924

ದಿ ಕರ್ನಾಟಕ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಆಫೀಸು: ಮಂಗಳೂರು—3.

ಈ ಕೆಳಗಿನ ಬಡ್ಡಿದರಗಳಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು.

ಒಂದು ತಿಂಗಳಿಗೆ	...	ಸಾ|| ಸೇಕಡಾ	3-75	ನ ಪೈಸೆ.
ಮೂರು ತಿಂಗಳುಗಳಿಗೆ	....	,,	4-00	,,
ಆರು ತಿಂಗಳುಗಳಿಗೆ	....	,,	4 25	,,
12 ತಿಂಗಳುಗಳಿಂದ 23 ತಿಂಗಳುಗಳ ವರೆಗೆ	...	,,	4-50	,,
24 ತಿಂಗಳುಗಳಿಂದ 48 ತಿಂಗಳುಗಳ ವರೆಗೆ	....	,,	4 75	,,

"ಹನಿ ಡಿಪೋಸಿಟ್ಸ್"ನಲ್ಲಿ

ನಿಮ್ಮ ದೈನಂದಿನ ಉಳಿತಾಯವನ್ನು ವಿನಿಯೋಗಿಸಿರಿ.

THE KARNATAKA BANK LIMITED.

ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

(ಯು ರಾಘವೇಂದ್ರ ಆಚಾರ್ಯ, ಎಂ ಎ.)

ಸಾಮಾನ್ಯ ರೋಗಗಳು

(ಡಾ ಕೆ ಎಲ್ ಐತಾಳ, ಎಂ. ಬಿ ಬಿ. ಎಸ್

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.

ಪ್ರತಿಗಳು ಸಿಗುವ ಸ್ಥಳ.

ನವಭಾರತ ಪುಸ್ತಕ ಭಂಡಾರ, ಉಡುಪಿ

ರಹಸ್ಯ ಭೇದ:

ವಿಚಿತ್ರ ಪ್ರಾಣಿ - ಹಿಮಮಾನವ

ಹಿಮಾಲಯದ ಹಿಮದಲ್ಲಿ ಕಂಡುಬಂದಿರುವ ಹಿಮ ಮಾನವರ ಕುರುಹುಗಳು ಕುತೂಹಲಕಾರಿಯಾಗಿವೆ. ಸದ್ಯ ಈ ಹಿಮ ಮಾನವರ ಶೋಧನೆಗಾಗಿ ಬಹು ಸಾಹಸ ಪಡಲಾಗುತ್ತಿದೆ.

"ರಂಜನೆ"— ಬೆಂಗಳೂರು.

ನೂರು ವರ್ಷಗಳಿಂದಲೂ ಹಿಮ-ಮಾನವ ಯಾ ಯೇತಿಯ ಬಗ್ಗೆ ಸಂಶೋಧನೆಗಳು ಪರ್ವತಾರೋಹಿ ತಂಡದವರಿಂದ ನಡೆಯುತ್ತಲೇ ಇದೆ. ಆದರೆ ಇದುವರೆಗೆ ಸರಿಯಾದ ಉತ್ತರ ದೊರಕಿಲ್ಲ.

ಹಿಮ-ಮಾನವನ ಕುರಿತು ಮತ್ತೊಮ್ಮೆ ಈಗ ಪ್ರಯಾಣವನ್ನು ಶ್ರೀ ಎಡ್ಮಂಡ್ ಹಿಲ್ಲರಿ ತಮ್ಮ ಮುಂದಾಳತ್ವದಲ್ಲಿ ೧೮ ಜನ ಅನುಯಾಯಿಗಳೊಡನೆ, ಅತ್ಯುತ್ತಮ ಕೆಮರಾ (ಛಾಯಾಗ್ರಾಹಕ) ತಂತಿಗಳು, ಹಾಗು ಮತ್ತು ಬರಿಸುವ ಗುಂಡುಗಳೊಡನೆ ಕೈಗೊಂಡಿರುವರು.

ಹಿಮ-ಮಾನವನನ್ನು ಮತ್ತು ಬರಿಸುವ ಗುಂಡುಗಳಿಂದ ಮೂರ್ಛೆಗೊಳಿಸಿ ಹಿಡಿಯಲಸಾಧ್ಯವಾದರೆ ಅವನ ಉತ್ತಮ ಛಾಯಾಚಿತ್ರವನ್ನಾದರೂ ತೆಗೆದುಕೊಳ್ಳುವ ಆಸೆಯುಳ್ಳವರಾಗಿ ಹೇಗಾದರಾಗಲಿ ಎಲ್ಲ ಯಾತ್ರೆಗಳಿಗಿಂತಲೂ ಈ ಸಲದ ತಂಡ ಗೌರಿ ಶಂಕರದ ನೆರಳಿನಿಂದ ಹೊರಬರುವಾಗ ಶತಮಾನಗಳಿಂದಲೂ ಬಗೆಹರಿಸಲಾರದಾದ ಹಿಮ-ಮಾನವನ ಸಂಪೂರ್ಣ ವಿಚಾರವನ್ನೊಳಗೊಂಡ ಪುರಾವೆಗಳನ್ನು ಪಡೆಯುವ ಹಿಮದ ಮೇಲ್ಭಾಗದ 'ರಹಸ್ಯ ಪ್ರಪಂಚ"ದಲ್ಲಿ ವಾಸಿಸುವ ಈ ವಿಚಿತ್ರ—ಬಹು ನಾಚಿಗೆಯ ಪ್ರಾಣಿಯನ್ನು ಮೊದಲಿಗೆ ಮತ್ತು ಯಾವಾಗಲೂ ಪೂರ್ಣ ಗುರುತಿಸುವಂತಹ ಇಲ್ಲವೇ ಈತನ ಬಗ್ಗೆ ಇರುವ ಪುರಾಣ ಕತೆಗಳನ್ನು ಸಂಪೂರ್ಣವಾಗಿ ತೊಡೆಯುವ ಉದ್ದೇಶದಿಂದ ಹೊರಟಿದೆ.

ಆದರೆ ಈ ಸಮಸ್ಯೆ ನಿಲ್ಲುತ್ತದೆಯೆ? ...

ಹೊಸ ಪ್ರಪಂಚ ಹಿಮ-ಮಾನವನ ಹೆಸರು ಕೇಳುವುದಕ್ಕೆ ಬಹು ಮುಂಚಿನಿಂದಲೂ ಪೂರ್ವ ನೇಪಾಳದ ದೇಶೀಯರು, ಸಿಕ್ಕಿಂ ಹಾಗು ಟಿಬೇಟಿನ ಸುತ್ತಿನವರೂ ಈ ಮನುಷ್ಯನನ್ನು ಕಂಡು ತಮ್ಮದೇ ಆದ ಹೆಸರುಗಳಿಂದ ಕರೆಯುತ್ತಿರುವರು. ಪಾಶ್ಚಾತ್ಯ ಪರ್ವತಾರೋಹ ತಂಡದವರು ಕೊಟ್ಟ 'ಅವಲಕ್ಷಣದ ಹಿಮ-ಮಾನವ" (ಅಬಾಮಿನಬಲ್ ಸ್ನೋಮ್ಯಾನ) ತೀರ ಇತ್ತೀಚಿನ ಹೆಸರಾಗಿದೆ.

೧೯೨೧ರಲ್ಲಿ ಕಲ್ಕತ್ತದ 'ಸ್ಟೇಟ್ಸ್‌ಮನ್' ಪತ್ರಿಕೆಯಲ್ಲಿ ಶ್ರೀ ಹೆನ್ರಿ ನ್ಯೂಮನ್ ಬರೆಯುತ್ತಾ ಗೌರೀಶಂಕರ ಪರಿಶೋಧನೆ ತಂಡದ ಸದಸ್ಯ ಕರ್ನಲ್ ಸಿ. ಎ. ಹೊವಾರ್ಡ್‌ಬರಿಯವರು 'ಮಾನವ ಹೆಜ್ಜೆ' ಯಂತಹ ಕಾಲುಬಾರಿಯನ್ನು ೧೦,೦೦೦ ಅಡಿ ಮೇಲಿನ 'ಪೂರ್ವ ರಾಂಗ್‌ಬಕ್ ಗ್ಲಾಸಿಯರ್'ನಲ್ಲಿ ಕಂಡಂತೆ ಹೇಳಿರುವರು.

ಹಿಮ ಮಾನವನ ಬಗ್ಗೆ ಪ್ರಚಾರ ಹೆಚ್ಚಿದಂತೆಲ್ಲಾ ಬೇರೆ ಬೇರೆ ದೇಶದ ಲೆಕ್ಕವಿಲ್ಲದಷ್ಟು ಜನ ಅದನ್ನು ನೋಡಿದಂತೆಯೂ ಅದರ ದಾರಿ ಕಂಡುಹಿಡಿದಂತೆಯೂ ಮತ್ತು ಆ ಪ್ರಾಣಿಯೊಡನೆ ಹೋರಾಟ ನಡೆಸಿದಂತೆಯೂ ತಿಳಿದುಬಂದಿದೆ. ಅವರ ಹೇಳಿಕೆಗಳ ಪ್ರಕಾರ ಹಿಮ—ಮಾನವನ ನಿಮಂಡೆ ಬಾಲವಿರುವ ಚತುಷ್ಪಾದ ಪ್ರಾಣಿಯಿಂದ ಹಿಡಿದು ಭಯಂಕರ ಎತ್ತರದ ಕಾಡು—ಮನುಷ್ಯನ ವರೆಗೂ ಇದೆ.

ಆದರೆ ಅಧಿಕೃತ ಅಂಶಗಳು ಬಹಳ ಅಲ್ಪವಿವೆ.

೧. ಮೊದಲ ಲಿಖಿತ ದಾಖಲೆ ೧೮೮೭ರಲ್ಲಿ ಕರ್ನಲ್ ಡಬ್ಲು ಎ. ವಾಡಲ್ಸ್ ಬರೆದ 'ಹಿಮಾಲಯದಲ್ಲಿನ ಸಾಹಸಗಳು' ನಲ್ಲಿ ಕಾಣಸಿಗುವುದು. ಅದರಲ್ಲಿ ವಾಡಲ್ಸ್‌ರು ಬಹು ಸೂಕ್ಷ್ಮವಾಗಿ ಯೇತಿಯ ಪಾದ ಗುರುತುಗಳನ್ನು ಸೂಚಿಸುತ್ತಾರೆ.

೨. ಯೇತಿಯದೆಂದು ಅಭಿಪ್ರಾಯ ಪಡಲಾದ ಎರಡು ತಲೆ ಬುರುಡೆಗಳು, ದೊರಕಿವೆ. ಒಂದು ಕಾಮ್‌ಜಂಗ್ ಆಶ್ರಮದಲ್ಲೂ ಮತ್ತೊಂದು ಪಾಂಗ್ ಬೋಚೆ ಆಶ್ರಮದಲ್ಲೂ ಇದೆ. ಇವೆರಡೂ ಅಕ್ಕ ಪಕ್ಕದ ಆಶ್ರಮಗಳಿದ್ದು ಪೂರ್ವ ನೇಪಾಳದ ನಾಮ್ಚೆ ಬಜಾರಿನ ಹತ್ತಿರದಲ್ಲಿವೆ.

ಈ ಎರಡು ತಲೆ ಬುರುಡೆಗಳಲ್ಲಿ ಅದ್ಭುತ ಕಾಣಸಿಗದಿದ್ದರೂ ತಲೆಯ ಗಾತ್ರ ಹಾಗೂ ತಲೆಯನ್ನು ಮುಚ್ಚಿ ಬೆಳೆದಿರುವ ಕೂದಲುಗಳಿಂದಾಗಿ ಸಂದೇಹ ಹಾಗು ವಿವಾದಗಳು ವಿಪರೀತವಿವೆ.

ಪ್ರಪಂಚದಲ್ಲಿ ಕಾಣಸಿಗುವ ಕಾಡು ಮನುಷ್ಯನಿಗಿಂತ ಹೆಚ್ಚು ಈ ತಲೆ ಬುರುಡೆಯ ಆಕಾರ ಬೆಳೆದು ನಿಂತಿದೆ. ಕಿವಿಯ ಮೇಲೂ ಬಹಳ ಎತ್ತರದವರೆಗೂ ಇವುಗಳ ಆಕಾರ ಬೆಳೆದಿದ್ದು ಈ ಅನುಮಾನಕ್ಕೆ ಆಸ್ಪದವನ್ನು ಕೊಟ್ಟಿದೆ.

ಸಂಶಯಗ್ರಸ್ಥ ಸಂಗಡಕ್ಕೆ ಸೇರಿದ ಕೆಲವರು ಇದನ್ನು ತಲೆ ಬುರುಡೆಯೇ ಅಲ್ಲವೆಂದೂ ಯಾವುದೋ ಪ್ರಾಣಿಯ ಹಿಂಭಾಗದಿಂದ ಮಾಂಸ ಹಾಗು ಚರ್ಮದ ಭಾಗವನ್ನು ತೆಗೆದು ಶಿರಸ್ತ್ರಾಣದಂತೆ ಜೋಡಿಸಿ ಅಲಂಕರಿಸಲಾಗಿದೆಯೆಂದು ಹೇಳುತ್ತಾರೆ. ಆ ವಿಧವಾದ ಊಹೆಗೆ ಕಾರಣವನ್ನು ಮಾತ್ರ ಅವರು ಹೇಳಲರಿಯರು.

ಎರಡೂ ಬುರುಡೆಗಳು ೨೦೦ ವರ್ಷಗಳ ಹಿಂದಿನವಿರಬಹುದು. ಅವನ್ನು ಹಳೇ ಸಂಪ್ರದಾಯದಂತೆ ಸಕಲ ರೋಗ ನಿವಾರಕವೆಂದೂ ಉಪಯೋಗಿಸುತ್ತಿಲ್ಲ, ಇಲ್ಲವೇ ಸನ್ಯಾಸಿಗಳು ದುಷ್ಟ-ಶಕ್ತಿಗಳನ್ನು ಓಡಿಸಲೂ ಉಪಯೋಗಿಸುತ್ತಿಲ್ಲ. ಅವನ್ನು ಆಶ್ರಮದವರು ಅರೆ ಬೆಲೆಬಾಳುವ ಕುತೂಹಲಕಾರಕ ಪ್ರಾಚೀನ ಅವಶೇಷವಾಗಿ ಕಾಪಾಡುತ್ತಿರುವರು.

ಪ್ರಪಂಚದ ಯಾವ ಪ್ರಾಣಿಯಲ್ಲೂ ಕಾಣ ಸಿಗದಿರುವಂತಹ ಕೆಂಪು-ಕಂದು ಬಣ್ಣದ ಕೂದಲು ಬುರುಡೆಯ ಮೇಲೆ ಇರುವುದರಿಂದ ಸಂಶಯ ಗ್ರಸ್ತ ತಂಡದವರ ಮಾತುಗಳು ಹುಸಿಯೆಂದು ತಿಳಿಯುವುದು.

೩. ೧೯೩೭ರಲ್ಲಿ ಸರ್ ಜಾನ್ ಹಂಟ್ ರವರು ಜೇಮು ಕಣಿವೆಯಲ್ಲಿ ಯೇತಿಯ ಪಾದ ಚಿನ್ಹೆಗಳನ್ನು ಕಂಡಂತೆ ಹೇಳಿರುವರು.

೪. ಗೌರಿಶಂಕರ ಪರಿಶೋಧನೆಯ ತಂಡದ ಶ್ರೀ ಎರಿಕ್ ಶಿಪ್ಟನ್ ೧೯೫೧ ರಲ್ಲಿ ಯೇತಿಯ ಪಾದ ಚಿಹ್ನೆಗಳನ್ನು ಛಾಯಾ ಚಿತ್ರ ತೆಗೆದುಕೊಂಡರು. ಅದರಲ್ಲಿ ಒಂದು ಬಹಳ ಚೆನ್ನಾಗಿ ಕಾಣಿಸುವಂತಹುದಿದೆ. ಅದರ ಉದ್ದ ೧೩ ಇಂಚುಗಳೂ ಅಗಲ ೬ ಇಂಚುಗಳೂ ಇದ್ದವು. ಶಿಪ್ಟನ್‌ರ ಹೇಳಿಕೆಯಂತೆ ದಾಟುಗಾಲಿನ ಅಳತೆ (ಒಂದು ಹೆಜ್ಜೆಯಿಂದ ಮತ್ತೊಂದು ಹೆಜ್ಜೆಯ ದೂರ) ಮೂವತ್ತು ಇಂಚುಗಳೂ ಇದ್ದವು.

ಶ್ರೀ ಅಲಾಸ್ಟಿಯರ್ ಕ್ರಾವ್ ಎಂಬ ಪರ್ವತಾರೋಹಿ ಹಾಗು ಬೇಟೆಯಾಡುವ ಉತ್ಸಾಹಿ ಹಿಮ-ಮಾನವನನ್ನು ಕಂಡಂತೆಯೂ ಅದರ ಪಾದ ಚಿನ್ಹೆಗಳನ್ನು ಛಾಯಾ ಚಿತ್ರ ತೆಗೆದರೆಂದೂ ಹೇಳಿರುವರು.

ಕ್ರಾವ್‌ರವರ ಹೇಳಿಕೆ ಪ್ರಕಾರ "ಅದು ನಾಲ್ಕು ಕಾಲಿನಲ್ಲೂ ನಡೆಯುತ್ತದೆ ಕಪ್ಪು ಅಥವಾ ಅಚ್ಚು-ಕಂದು ಬಣ್ಣದ ಉಣ್ಣೆಯಿಂದ ಮುಚ್ಚಿಕೊಂಡಿರುವುದು... ಅದರ ತಲೆ ಗುಂಡಾಗಿದ್ದು ಬೆಳ್ಳನೆಯ ಮುಖವಿದೆ. ಕಿವಿಗಳು ಬುರುಡೆಗೆ ಸೇರಿಕೊಂಡಂತಿದೆ........, ಸುಮಾರು ೫ ಅಡಿ ಉದ್ದನೆಯ ಸಣಕಲ ಶರೀರವೆಂದು ತಿಳಿದು ಬರುತ್ತದೆ ಅದರ ಪಾದ ಚಿಹ್ನೆಗಳು ಅರ್ಧ ಪ್ರಾಣಿಯಂತೆಯೂ ಅರ್ಧ ಮಾನವನಂತೆಯೂ ಇತ್ತು ಎನ್ನುತ್ತಾರೆ.

ಈ ಎಲ್ಲ ಕತೆಗಳಿಂದ ಇಂತಹ ಒಂದು ಪ್ರಾಣಿ ಇರಲೇ ಬೇಕು ಎಂದು ತಿಳಿಯುವುದು. ಆದರೆ ಅದೆಂತಹ ಜಾತಿಯದು?

ಹಿಮಾಲಯದ ಪೂರ್ವ ನಿವಾಸಿಗಳು ಯೇತಿಯ ಇರುವಿಕೆಯನ್ನು ಒಪ್ಪಿಕೊಳ್ಳುತ್ತಾರೆ. ಅಲ್ಲದೆ ಪಾಶ್ಚಾತ್ಯರ ಅಪನಂಬಿಕೆಯನ್ನು ಕೇಳಿ ಆಶ್ಚರ್ಯಪಡುತ್ತಾರೆ.

ಯೇತಿಯ ಈ ಅದ್ಭುತಗಳೂ ಹಾಗೂ ರೋಮಾಂಚಕಗಳನ್ನು ಒಳಗೊಂಡಿರುವ ಈ ಹಿಮ-ಮಾನವನ ಹೆಜ್ಜೆಗಳು, ಹಿಮಗಳಲ್ಲೇ ಕಂಡು ಬಂದಿರುವುದರಿಂದ ಈ ಪ್ರಾಣಿ ಹಿಮದಲ್ಲೇ ವಾಸಿಸಬಹುದೆ? ಎಂದು ತರ್ಕಿಸುತ್ತಾರೆ.

ಆದರೆ ಇದು ನಿಜವೆ?

ಈ ಪ್ರಾಣಿ ಚತುಷ್ಪಾದಿಯೇ ದ್ವಿಪಾದಿಯೇ? ಏನೇ ಇರಲಿ, ಹೊಟ್ಟೆಗೆ ತಿನ್ನಲೇ ಬೇಕು. ಈಗ ದೊರಕಿರುವ ಹೆಜ್ಜೆ ಗುರುತುಗಳ ಮಾಹಿತಿಗಳು ಅಲ್ಲದೇ ತಲೆ ಬುರುಡೆಗಳು ಅದರದೇ ನಿಜವಾದ ಪಕ್ಷದಲ್ಲಿ ಅದು ಸಾಕಷ್ಟು ಆಹಾರವನ್ನು ಸೇವಿಸುವಂತಹುದೇ ಇರಬೇಕು. ಇದು ಸಸ್ಯಾಹಾರಿಯೋ ಮಾಂಸಾಹಾರಿಯೋ ಇಲ್ಲ ಸರ್ವ ಭಕ್ಷಕವೋ ಆಗಲಿ ಯಾವಾಗಲೂ ಹಿಮ ಕೂಡಿರುವ ಪ್ರದೇಶಗಳಲ್ಲಿ ಸಾಕಷ್ಟು ಆಹಾರ ಸಿಗುವುದು ಕಷ್ಟವೇ ಅಹುದು.

ಆದ್ದರಿಂದ ಈ ಪ್ರಾಣಿಗಳು ಹಿಮದ ಪ್ರದೇಶಗಳ ಕೆಳಗೆ ಜೀವಿಸುವುದಿದ್ದು ಸಮಯ ಬಂದಾಗ, ಆಹಾರ ಸಿಗಬಹುದಾದಾಗ ಮೇಲಿನ ಪ್ರದೇಶಗಳಿಗೆ ಸಾಗುವುದಿರಬಹುದೆ?

ಹಿಮಾಲಯದ ತಪ್ಪಲು ಪ್ರದೇಶಗಳಲ್ಲಿ ವಾಸಿಸುವ ವಿವಿಧ ಬೆಟ್ಟ ಜನರು ಹೇಳುವ ಮಾನವ— ಪ್ರಾಣಿ, ಮತ್ತೆ ಕೆಲವರು ಹೇಳುವ 'ಕಲ್ಲು—ಮನುಷ್ಯ' ಬೇರೆ ಕೆಲವರು 'ದನ-ಕರುಗಳ ವಿರೋಧಿ ಪ್ರಾಣಿ' ಅಲ್ಲದೇ ಟಿಬೇಟಿಯನ್ನರು ಹೇಳುವ 'ಹಿಮ—ಮಾನವ' ಇವೆಲ್ಲವೂ ಬೇರೆ ಬೇರೆ ಹೆಸರುಗಳಿಂದ ಕರೆಯಲ್ಪಡುವ ಒಂದೇ ಪ್ರಾಣಿಯೇ—ಜೀವಿಯೆ?

ಕರ್ನಲ್ ಹೋವರ್ಡ್ ಬರೆಯುವ 'ಮನುಷ್ಯನ ಹೆಜ್ಜೆಯ ಸ-ರಿಯುವಂತಹ ಹಿಮ—ಮಾನವ, ಎರಿಕ್ ಶಿಪ್ಟನ್‌ರ ಛಾಯಾ ಚಿತ್ರದಲ್ಲಿರುವ ಅಗಲ ಹೆಜ್ಜೆಯ ಐದು ಬೆರಳು ಹೊಂದಿರುವ ದ್ವಿಪಾದ ಪ್ರಾಣಿ, ಅಲ್ಲದೇ ಸರ್ ಜಾನ ಹಂಟ್ ಕಂಡ ದ್ವಿಪಾದ ಜಾರಿಯ ಪಾದ ಚಿಹ್ನೆಗಳೂ ಇವೆಲ್ಲದರ ಜೊತೆಗೆ ವಿವಿಧ ಜನರ, ವಿವಿಧ ಕತೆಗಳೊಡನೆ ಕುತೂಹಲಕಾರಿಯಾದ ಈ ಯೇತಿಯ ಸಂಪೂರ್ಣ ವಿವರಗಳ ಬಗ್ಗೆ ಹಿಲ್ಲರಿಯವರ ಈ ಯಾತ್ರೆ ಪೂರ್ಣ ಪ್ರಕಾರ ಬೇರೆ ಜಗತ್ತಿಗೆ ಆಶ್ಚರ್ಯವನ್ನುಂಟು ಮಾಡಬಹುದೇ—?

(ಆಧಾರದಿಂದ)

ದಿ ವಿಜಯ ಬೇಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ: 1931

ರಿಜಿಸ್ಟರ್ಡ್ ಆಫೀಸು:
ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು -3, ಸೌತ್ ಕೆನರಾ.

ಕಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡ 5ರ ವರೆಗೆ ಹೆಚ್ಚಿಸಲಾಗಿದೆ.

ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ಪಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲಾಗುತ್ತದೆ.

ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ.

ಪಂಚಾಯತಿಗಳಿಗೆ ಉಪಯುಕ್ತ ಪುಸ್ತಕ

ಮೈಸೂರು ರಾಜ್ಯದ
ಪಂಚಾಯತಿಗಳ
ತೆರಿಗೆಗಳ ಮತ್ತು ಫೀಗಳ
ನಿಯಮಗಳು.

ಲೇಖಕರು:
ಶ್ರೀ. ಕೆ. ಎಸ್. ಆಳ್ವ, ಬಿ.ಎ.,ಬಿ.,ಎಲ್.
ಎಡ್ವಕೇಟ್, ಮಂಗಳೂರು.

ಬೆಲೆ: ರೂಪಾಯಿ ಎರಡು.

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರಗತಿ ಪಥ:

ಭಾರತೀಯ ವಿಮಾನ ಪಡೆಯ ಬೆಳವಣಿಗೆ

ಏಪ್ರಿಲ್ ಮೊದಲನೆ ದಿನಕ್ಕೆ ನಮ್ಮ ವಿಮಾನ ಪಡೆಯು ರೂಪಿತಗೊಂಡು ೨೮ ವರ್ಷಗಳು ತುಂಬಿದುವು ಈ ಅವಧಿಯ ಅರ್ಧಾಂಶ ಬ್ರಿಟಿಷರ ಆಡಳಿತೆಯಲ್ಲಿ ಕುಂಟುತ್ತ ಸಾಗಿದ್ದರೂ ಆನಂತರ ಅದು ತೀವ್ರತರವಾಗಿ ಬೆಳೆಯುತ್ತ ಬಂದಿದೆ. ಈ ಲೇಖನದಲ್ಲಿ ನಮ್ಮ ವಿಮಾನ ಪಡೆಯಬೆಳವಣಿಗೆಯನ್ನು ವಿವೇಚಿಸಿದ

ವಿಂಗ್ ಕಮಾಂಡರ್ ವೇದ್ ಪಿ ಭಾಸಿನ್.

ಇಂದಿಗೆ ಭಾರತೀಯ ವಿಮಾನ ಪಡೆಗೆ ೨೮ ವರ್ಷಗಳಾಗುತ್ತದೆ. ದೇಶದ ರಕ್ಷಣಾ ಪಡೆಗಳಲ್ಲಿ ಅತ್ಯಂತ ಕಿರಿಯದಾದ ಈ ಪಡೆಯ ಇತಿಹಾಸದಲ್ಲಿ ಇನ್ನೊಂದು ವರ್ಷ ಉರುಳಿಹೋಗಿದೆ ಈ ವರ್ಷದಲ್ಲಿ ಈ ಪಡೆಯು ಆಧುನಿಕ ತಂತ್ರಗಳನ್ನು ವಿಧಾನಗಳನ್ನು ಅಳವಡಿಸಿಕೊಂಡಿದೆ, ಬೆಳೆದಿದೆ, ಕ್ರೋಡೀಕರಣ ಮತ್ತು ತರಬೇತಿಯಲ್ಲಿಯೂ ಪ್ರಗತಿಯನ್ನು ಸಾಧಿಸಿದೆ.

ಸ್ವತಂತ್ರ ಭಾರತದ ಜೀವನದಲ್ಲಿ, ದೇಶದ ಸಮಗ್ರತೆಯನ್ನು ಎದುರಿಸುತ್ತಿರುವ ಅಪಾಯಗಳು, ಎಂದೂ, ಇಂದಿನ ದಿನಗಳಷ್ಟು ಭೀಕರವಾಗಿದ್ದಿರಲಿಲ್ಲ ಅದೇ ಸಮಯದಲ್ಲಿ, ಭಾರತೀಯ ವಿಮಾನಪಡೆ ರಾಷ್ಟ್ರದ ಆವಶ್ಯಕ ಸಮಯಗಳಲ್ಲಿ ದೇಶದ ರಕ್ಷಣೆಯ ವ್ಯೂಗಾವಲು ಪಡೆಯಾಗಿ, ಇಂದಿನಷ್ಟು ಪ್ರಮುಖ ಪಾತ್ರವನ್ನು ಎಂದೂ ಪಡೆದಿದ್ದಿಲ್ಲ ಗಾತ್ರದಲ್ಲಿ ಭಾರತೀಯ ವಿಮಾನ ಪಡೆಯು, ವಿಶ್ವದ ಪ್ರಮುಖ ರಾಷ್ಟ್ರಗಳ ವಿಮಾನಪಡೆಗಳಿಗೆ ಸರಿಸಾಗಲಾರದೆಂಬುದರಲ್ಲಿ ಅನುಮಾನವಿಲ್ಲವಾದರೂ, ಕಾರ್ಯದಕ್ಷತೆಯಲ್ಲಿ, ನಿಷ್ಠೆ ಮತ್ತು ನಿರ್ಧಾರೀ ಕ್ರಿಯೆಯಲ್ಲಿ ಅದ ಅವುಗಳಿಗೆ ಹಿಂದುಳಿದಿಲ್ಲ

ವಾರ್ಷಿಕೋತ್ಸವಗಳು, ವ್ಯಕ್ತಿಯ ಜೀವನದಲ್ಲಿದ್ದಂತೆಯೇ ಸಂಸ್ಥೆಯ ಜೀವನದಲ್ಲಿಯೂ, ಹಿಂದೆ ನಿರ್ವಹಿಸಿದ ಕೆಲಸಗಳ ಪುನರಾವಲೋಕನ ಮಾಡಿಕೊಳ್ಳುವಂತಹ ಅವಕಾಶವಾಗಿರುವುದು. ಭಾರತೀಯ ವಿಮಾನ ಪಡೆಯ ಉಗಮ ಮತ್ತು ಬೆಳವಣಿಗೆಯ ಕತೆಯು ಭಾರತದ ವಿಮಾನ ಬಲದ ಕತೆಯೇ ಆಗಿದೆ. ಪರಾಕ್ರಮ ಪ್ರಯತ್ನಗಳು, ಸರಿಸಾಟಿಯಿಲ್ಲದ ಉತ್ಸಾಹ ಮತ್ತು ಬದ್ಧಕಂಕಣ ಸೇವೆಯೇ ಭಾರತೀಯ ವಿಮಾನಪಡೆಯ ಕತೆಯಲ್ಲಿನ ಪ್ರಧಾನಾಂಶಗಳು

ಭಾರತೀಯ ವಿಮಾನ ಪಡೆಯು ಜನ್ಮತಳೆದದ್ದು ೧೯೩೩ರ ಏಪ್ರಿಲ್ ೧ರಂದು ಅಗ್ರಗಣ್ಯ ರಾಷ್ಟ್ರನಾಯಕರಾದ ಪಂಡಿತ ಮೋತಿಲಾಲ್ ನೆಹರೂರವರೊಡನೆ ಸಂಬಂಧವಿಟ್ಟುಕೊಂಡಿದ್ದ ಸುಪ್ರಸಿದ್ಧ ಸ್ಕೀನ್ ಸಮಿತಿಯ ಶಿಫಾರಸಿಗನ್ವಯ ಈ ಪಡೆಯು ರೂಪು ತಾಳಿತು ಆಗ ಕ್ರಾನ್‌ವೆಲ್‌ನಲ್ಲಿ ಪದವಿ ಪಡೆದ ೬ ಮಂದಿ ಭಾರತೀಯ ಅಧಿಕಾರಿಗಳು, ೧೯ ಮಂದಿ 'ಹವಾಯಿ ಸಿಪಾಯಿ'ಗಳು ಕೆಲವು ಹಳೆಯ ಮಾದರಿಯ 'ಏಪಿಟಸ್' ವಿಮಾನಗಳಿದ್ದವು. ಇದೊಂದು ಐತಿಹಾಸಿಕ ಘಟನೆ, ಭಾರತದ ರಾಷ್ಟ್ರೀಯ ವಿಮಾನ ಬಲದ ಬುನಾದಿಯನ್ನು ಅಂದು ಹಾಕಲಾಯಿತು. ಅಲ್ಪ ಪ್ರಮಾಣದಲ್ಲಿ ಒಂದು ತುಕ್ಕಡಿಯಿಂದ ಆರಂಭಗೊಂಡ ಈ ಪಡೆಯು, ಪ್ರಾರಂಭದ ಘಟ್ಟದಲ್ಲಿ ಅದು ಅವ್ಯಕ್ತವಾಗಿಯೇ ಪ್ರಬುದ್ಧವಾಯಿತು ಮತ್ತೆರಡು ತುಕ್ಕಡಿಗಳನ್ನು ವೃದ್ಧಿಗೊಳಿಸಿಕೊಳ್ಳಲು ಭಾರತೀಯ ವಿಮಾನಪಡೆಗೆ ೫ ವರ್ಷಗಳೇ ಬೇಕಾದುವು ಈ ಮೂರು ತುಕ್ಕಡಿಗಳೂ ಸೇರಿ ಮೊದಲನೆಯ ಸ್ಕ್ವಾಡ್ರನ್ ಆಯಿತು.

೧೯೩೭ರಲ್ಲಿ ಅವಿಭಕ್ತ ಭಾರತದಲ್ಲಿ ವಾಯುವ್ಯ ಗಡಿಗಳಲ್ಲಿ ನಡೆಸಿದ ಮಿಲಿಟರಿ ಕಾರ್ಯಾಚರಣೆ, ಮತ್ತೆ ೧೯೩೯ರಲ್ಲಿ ರೊಚ್ಚಿಗೆದ್ದಿದ್ದ ಗುಡ್ಡಗಾಡಿನ ಜನರ ಮೇಲೆ ನಡೆಸಿದ ಕಾರ್ಯಾಚರಣೆ, ಭಾರತೀಯ ವಿಮಾನ ಪಡೆಯ ಸೈನಿಕರಿಗೆ, ಸೇನೆಯ ಕಾರ್ಯಾಚರಣೆಯಲ್ಲಿ ಅನುಸರಿಸಬೇಕಾದ ತಂತ್ರ-ವಿಧಾನಗಳಲ್ಲಿ ಪ್ರಾಯೋಗಿಕ ಅನುಭವವನ್ನು ತಂದುಕೊಟ್ಟಿತು —ಅದು ಅವರ ಕ್ರಿಯಾಪ್ರಧಾನ ಮಿಲಿಟರಿ ಕಾರ್ಯಾಚರಣೆಗಳಲ್ಲಿ ಪ್ರಥಮಾನುಭವವಾಗಿತ್ತು. ಭಾರತೀಯ ವಿಮಾನಪಡೆಯು ಆಗ ಉನ್ನತ ಮಟ್ಟದ ಪಡೆಯೆನ್ನಿಸಿಕೊಂಡಿತಾದರೂ, ಅದರ ಗಾತ್ರ ಪ್ರಮಾಣವೇನೂ ಹೆಚ್ಚಲಿಲ್ಲ ೧೯೩೯ರಲ್ಲಿ ವಿಶ್ವದ ದ್ವಿತೀಯ ಮಹಾಸಮರ ಆರಂಭವಾದಾಗ, ಭಾರತೀಯ ವಿಮಾನ ಪಡೆಯಲ್ಲಿದ್ದವರೆಂದರೆ, ೧೬ ಮಂದಿ ಅಧಿಕಾರಿಗಳು, ೨೬೯ ಮಂದಿ ವೈಮಾನಿಕರು, ಕೆಲವೊಂದು ವಿಮಾನಗಳು ಕಾಲಕ್ರಮದಲ್ಲಿ ಸ್ವಯಂ ಸೇವಾಮೀಸಲು ಪಡೆಗಳಿಗೆ ಮತ್ತು ಸೈನಿಕ ವಿದ್ಯಾರ್ಥಿಗಳಿಗೆ ತರಬೇತಿಯನ್ನು ನೀಡಲು ಶಾಲೆಯೊಂದನ್ನು ತೆರೆದದ್ದು, ತೀರ ಪ್ರದೇಶದಲ್ಲಿ ಅಲ್ಲಲ್ಲಿ ರಕ್ಷಣೆಗಾಗಿ ವಿಮಾನ ಪಡೆಯ ತುಕ್ಕಡಿಗಳನ್ನು ಸಂಸ್ಥಾಪಿಸಿದ್ದು, ಭಾರತೀಯ ವಿಮಾನಪಡೆಯ ಬೆಳವಣಿಗೆಯ ಇತಿಹಾಸದಲ್ಲಿ ಮೈಲಿಗಲ್ಲುಗಳೆನ್ನಬಹುದು ಜಪಾನೀಯರು ಭಾರತಕ್ಕೆ ಹಾಕಿದ ಬೆದರಿಕೆ, ನಮ್ಮ ವಿಮಾನಪಡೆಯು, ಸಜ್ಜುಗೊಂಡು ಬೆಳೆಯುವುದಕ್ಕೆ ಬೆಂಬಲವಿತ್ತಿತೆನ್ನಬಹುದು.

ಬರ್ಮಾ ರಂಗ

ಪೆರಲ್ ಬಂದರಿನಲ್ಲಿ ದಾಳಿಯಾದ ಒಂದು ವಾರದೊಳಗೆ ಭಾರತೀಯ ವಿಮಾನ ಪಡೆಯು, ಬರ್ಮಾ ಯುದ್ಧರಂಗದಲ್ಲಿ ಮಿತ್ರ ರಾಷ್ಟ್ರಗಳ ವಿಮಾನ ಪಡೆಗಳೊಂದಿಗೆ ಸೇರಿಕೊಂಡು ಪ್ರಧಾನಪಾತ್ರವನ್ನು ನಿರ್ವಹಿಸಬೇಕಾಯಿತು ಆಗ ಭಾರತೀಯ ವಿಮಾನಪಡೆಯು ಯುದ್ಧರಂಗದಲ್ಲಿನ ಕಾರ್ಯಾಚರಣೆಗಳಲ್ಲಿ ಮತ್ತಷ್ಟು ಪ್ರಾಯೋಗಿಕ ಅನುಭವವನ್ನು ಗಳಿಸಿಕೊಂಡಿತು. ಈ ಪಡೆಯವರಿಗೆ 'ರಾಯಲ್" ಎಂಬ ಪದವನ್ನೂ ಸೇರಿಸಿದ್ದು ಜಪಾನಿನಲ್ಲಿ ಆಕ್ರಮಣ ನಡೆಸಿದ ಕಾಮನ್‌ವೆಲ್ತ್ ಪಡೆಗಳಲ್ಲಿ ಭಾರತೀಯ ಪಡೆಯ ಒಂದು ತುಕ್ಕಡಿಯನ್ನು ಸೇರಿಸಿಕೊಂಡಿದ್ದು ಭಾರತೀಯ ಪಡೆಯು ಬರ್ಮಾರಂಗದಲ್ಲಿ ನಡೆಸಿದ ಮಹತ್ತರ ಕಾರ್ಯಾಚರಣೆಗೆ ಪುರಸ್ಕಾರವನ್ನೀಯುವ ಕ್ರಮಗಳಾಗಿವೆ



ಭಾರತೀಯ ವಿಮಾನ ಪಡೆಯ ಹಂಟರ್ ಜೆಟ್ ವಿಮಾನಗಳು.

ಯುದ್ಧಾನಂತರದ ಅವಧಿ

ಭಾರತೀಯ ವಿಮಾನ ಪಡೆಯಲ್ಲಿ ೯ ಸ್ಕ್ವಾಡ್ರನ್‌ಗಳಿದ್ದವು ೧೦ನೆಯ ಸ್ಕ್ವಾಡ್ರನ್—ಸಾರಿಗೆ ಸ್ಕ್ವಾಡ್ರನ್—ಆರಂಭಗೊಳ್ಳುತ್ತಿದ್ದ ಸಮಯದಲ್ಲಿ ವಿಶ್ವಸಮರವು ಮುಕ್ತಾಗೊಂಡಿತು ಯುದ್ಧಾನಂತರದ ಕಾಲದಲ್ಲಿ, ವಿಮಾನ ಪಡೆಯ ವಿಸ್ತರಣೆಗಿಂತ, ಅದರ ಭಾರತೀಕರಣಕ್ಕೆ ಅತ್ಯಂತ ಪ್ರಾಧಾನ್ಯವನ್ನೀಯಲಾಯಿತು ಈ ವಿಮಾನ ಪಡೆಯಲ್ಲಿ ಶಿಕ್ಷಕರು, ತಾಂತ್ರಿಕರು ಮತ್ತು ಅತ್ಯಗತ್ಯ ಸಿಬ್ಬಂದಿ ಮಹತ್ತಾದ ಪ್ರಮುಖ ಸ್ಥಾನಗಳನ್ನು ಅಲಂಕರಿಸಿದ್ದ ರಾಯಲ್ ವಿಮಾನ ಪಡೆಯ ಅಧಿಕಾರಿಗಳ ಬದಲು ಸೂಕ್ತರಾದ ಭಾರತೀಯ ಅಧಿಕಾರಿಗಳನ್ನು ನೇಮಿಸಲಾಯಿತು ಭಾರತಕ್ಕೆ ಸ್ವಾತಂತ್ರ್ಯ ಲಭ್ಯವಾದ ವೇಳೆ ಈ ಕಾರ್ಯ ವಿಧಾನವು ಪುಟಗೊಂಡಿತು. ೧೯೫೪ರಲ್ಲಿ ದಿವಂಗತ ಸರ್ ಮಾರ್ಷಲ್ ಸುಬ್ರೊತೋ ಮುಕರ್ಜಿಯವರು ಪ್ರಧಾನ ದಂಡನಾಯಕನ ಅಧಿಕಾರವನ್ನು ಸ್ವೀಕರಿಸಿದಾಗ ಭಾರತೀಯ ವಿಮಾನ ಪಡೆಯಲ್ಲಿ ಭಾರತೀಕರಣ ಮುಕ್ತಾಯಗೊಂಡಿತು.

ಸ್ವಾತಂತ್ರ್ಯದ ಫಲಸ್ವರೂಪವಾಗ ಆದ ದೇಶವಿಭಜನೆಯೇ ಅನೇಕ ಭೀಕರ ಸಮಸ್ಯೆಗಳಿಗ ಎಡೆಗೊಟ್ಟಿತು ಭಾರತೀಯ ವಿಮಾನ ಪಡೆಯು ತನ್ನೆರಡು 'ಸ್ಕ್ವಾಡ್ರನ್"ಗಳನ್ನು ಕಳೆದುಕೊಂಡದಷ್ಟೇ ಅಲ್ಲ, ಎಲ್ಲಾ ತರಬೇತಿ ಸಂಸ್ಥೆಗಳು ಮತ್ತು ಖಾಯಂ ವಿಮಾನ ಪಡೆಗಳು ಠಾಣೆಗಳನ್ನೂ ಕಳೆದುಕೊಂಡಿತು, ಅವೆಲ್ಲವೂ ಪಾಕೀಸ್ಥಾನದ ಪಾಲಿಗೆ ಹೋದ ಭೂಭಾಗದಲ್ಲಿದ್ದವು. ಈ ಘಟನೆಗಳಿಂದ ಜರ್ಝರಿತಗೊಂಡ ಭಾರತೀಯ ವಿಮಾನ ಪಡೆಯು ಬಲಿಯಲು, ತ್ವರಿತ ಪ್ರಗತಿಯನ್ನು ಸಾಧಿಸದೆ ಗತ್ಯಂತರವಿಲ್ಲವಾಯಿತು.

ಬೃಹತ್ ಪ್ರಮಾಣದ ನಿರಾಶ್ರಿತರ ಸಾಗಣೆ, ಕಾಶ್ಮೀರದ ರಕ್ಷಣೆ ಈ ಕಲಸಗಳನ್ನು ಭಾರತೀಯ ವಿಮಾನ ಪಡೆಗೆ ಒಂದಾದ ಮೇಲೊಂದರಂತೆ ವಹಿಸಲಾಯಿತು—ಅದೂ ದೇಶವು ಸ್ವಾತಂತ್ರ್ಯ ಗಳಿಸಿದ ಮೊದಲನೆಯ ವರ್ಷವೇ ಭಾರತೀಯ ವಿಮಾನಪಡೆ ಈ ಕೆಲಸಗಳನ್ನು ಯಶಸ್ವಿಯಾಗಿ ನಿರ್ವಹಿಸಿದೆ ಭಾರತೀಯ ವಿಮಾನ ಪಡೆಯು ಸಾವಿರಾರು ನಿರಾಶ್ರಿತರಿಗೆ, ವಿಮಾನಗಳಲ್ಲಿ ಅನ್ನಾಹಾರಗಳನ್ನು ಒದಗಿ ಸಾವಿರಾರು ಮಂದಿ ಗುಡ್ಡಗಾಡಿನ ಆಕ್ರಮಣಕಾರರ ಗುಂಡೇಟಿಗೆ ಬಲಿಯಾಗುವುದನ್ನು ತಪ್ಪಿಸಿದೆ

ಜೆಟ್ ವಿಮಾನ ಬಲ

ಆಧುನಿಕ ಕಾಲದ ಪ್ರಗತಿಗನುಗುಣವಾಗಿ ಭಾರತೀಯ ವಿಮಾನ ಪಡೆಯು ವಾಸ್ತವವಾಗಿ ಸಂಪೂರ್ಣ ಜೆಟ್ ವಿಮಾನ ಬಲವಾಗಿ ಮಾರ್ಪಾಟು ಮಾಡಿಕೊಂಡಿದೆ ತಿಪ್ಪನ್ ಎಂಜಿನ್‌ಗಳುಳ್ಳ ಹಾರ್ವರ್ಡ್, ಹರಿಕೇನ್, ಡಕೋಟಾ, ವೆನ್‌ಜೆನ್ಸ್, ಸ್ಪಿಟ್ ಫೈರ್ ಮತ್ತು ಟೆಂಪೆಸ್ಟ್, ಮೊದಲಾದ ವಿಮಾನಗಳು ಭಾರತೀಯ ವಿಮಾನ ಪಡೆಗಳಲ್ಲಿ ಸೇವೆಸಲ್ಲಿಸಿವೆ ೧೯೪೮ರಲ್ಲಿ ಪ್ರಥಮ ಜೆಟ್‌ಚಾಲಿತ 'ವ್ಯಾಂಪೈರ್" ಗಳು ಈ ಪಡೆಗೆ ಸೇರಿದವು ಅಂದಿನಿಂದೀಚೆಗೆ, ಭಾರತೀಯ ವಿಮಾನ ಪಡೆಯಲ್ಲಿ ಸತತವಾಗಿ ಆಧುನಿಕ ಪರಿಕರ ವ್ಯವಸ್ಥೆಯುಳ್ಳ ವಿಮಾನಗಳು ಬಂದು ಸೇರುತ್ತಿವೆ ಇಂ

(೮೬ನೇ ಪುಟ ನೋಡಿರಿ)

ಸ್ವಲ್ಪ ಸ್ವಲ್ಪವಾಗಿ, ಅಲ್ಲೊಮ್ಮೆ ಇಲ್ಲೊಮ್ಮೆ, ನೀವು ಉಳಿಸುತ್ತಿರುವ ಹಣವು
ಬೇಗ ಬೇಗನೆ ವೃದ್ಧಿಗೊಂಡು, ನಿಮ್ಮ ಭವಿಷ್ಯದ ಭದ್ರತೆಯು
ಹೆಚ್ಚೆಚ್ಚಾಗಿ ಪರಿಣಮಿಸುವಂತೆ

ಕೊರ್ಪೊರೇಶನ್ ಬೇಂಕು

ನಿಮ್ಮ ಸೇವಿಂಗ್ಸ್ ಬೇಂಕ್ ಎಕೌಂಟುಗಳ ಮೇಲೆ ಇನ್ನು ಮುಂದಕ್ಕೆ
ಸಾಲಿಯಾನ್ ಸೇಕಡಾ 3 ರ ದರದಲ್ಲಿ ನಿಮಗೆ ಬಡ್ಡಿ ಕೊಡುವೆವು

ವಿವರಗಳಿಗೆ ವಿಚಾರಿಸಿರಿ

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ಸ್ಥಾಪನೆ 1906) (ರಿಜಿಸ್ಟರ್ಡ್ ಆಫೀಸು ಉಡುಪಿ)

ಆಡಳಿತ ಆಫೀಸು ಮಂಗಳೂರು – I

ಆತ್ಮ ವಿಶ್ವಾಸವಿಲ್ಲದವನು ಪರರಲ್ಲಿ ವಿಶ್ವಾಸವಿಡುವುದು ಅಸಾಧ್ಯ. ಪರರಲ್ಲಿ ವಿಶ್ವಾಸವಿಡುವುದಕ್ಕಾಗಿ ಆತ್ಮ ವಿಶ್ವಾಸವನ್ನು ಬೆಳೆಸಿಕೊಳ್ಳಬೇಕು. ವಿಶ್ವಾಸವೇ ಫಲದಾಯಕ.

ನವಯುಗ

೪೦ ವರುಷ	ಉಡುಪಿ ೧೩-೪-'೬೧	ವಾರ ೩೦

ಸಮರ್ಪಕತೆ ಬೇಕು

ಮೈಸೂರು ವಿಧಾನ ಮಂಡಳದಲ್ಲಿ ಶಿಕ್ಷಣ ಶಾಖೆಯ ಬೇಡಿಕೆಯ ಮೇಲೆ ನಡೆದ ಚರ್ಚೆಯ ಮೇಲೆ ಉತ್ತರ ಕೊಡುತ್ತ ಸಚಿವ ಶ್ರೀ ಅಣ್ಣಾರಾವ್ ಗಣಮುಖಿಯವರು ತನ್ನ ಶಾಖೆಯ ಮೇಲೆ ಮಾಡಲಾದ ಟೀಕೆಗಳನ್ನು ನಿರಾಕರಿಸಿದರೂ. ಇಲಾಖೆಯ ಕಾರ್ಯ ಬಾಹುಲ್ಯದಿಂದಾಗಿ ಕೆಲವೆಡೆ ಕೆಲಸಗಳು ಸರಿಯಾಗಿ ನಡೆದಿಲ್ಲವೆಂಬುದನ್ನು ಒಪ್ಪಿಕೊಂಡರು. ಕೆಲಸದ ಪ್ರಮಾಣವು ಅಗಾಧವಾಗಿದ್ದರೂ ಸಿಬ್ಬಂದಿ ಸಾಕಷ್ಟಿಲ್ಲದಿದ್ದುದರಿಂದ ಹೀಗಾಯಿತು ಎಂಬ ಅಭಿಪ್ರಾಯವನ್ನಿವರು ಹೊರಗೆಡಹಿದುದು ಎಷ್ಟು ಉಚಿತವೆನ್ನುವುದು ಆಲೋಚ್ಯವಾಗಿದೆ. ಶಿಕ್ಷಣ ಶಾಖೆಯು ನಾಡಿನ ಭವಿಷ್ಯದ ನಾಗರಿಕರಾದ ಇಂದಿನ ಎಳೆಯರಿಗೆ ಮಾರ್ಗದರ್ಶಕವಿದ್ದು, ಅದರಲ್ಲಿ ಸಮರ್ಪಕತೆ ಹಾಗೂ ಪರಿಪೂರ್ಣತೆಯಿರಬೇಕೆಂದು ಅಪೇಕ್ಷಿಸುವುದು ಅನಿವಾರ್ಯ. ಇಂದು ಶಿಕ್ಷಣ ವಿಭಾಗದ ಕಾರ್ಯಭಾರಗಳನ್ನೂ ಅದು ನಡೆಯುತ್ತಿರುವ ರೀತಿಯನ್ನೂ ನಾವು ಅವಲೋಕಿಸುವುದಾದರೆ, ಶ್ರೀ ಮಲ್ಲಾರಾಧ್ಯರ ಭಾಷೆಯಲ್ಲಿ ಇಲ್ಲಿ ಹೊಲಸು ತುಂಬಿದೆ ಎಂದೇ ಹೇಳಬೇಕಾಗುತ್ತದೆ. ಶಿಕ್ಷಣ ವಿಭಾಗದಲ್ಲಿರುವಂತೆಯೇ ಲೋಪ ದೋಷಗಳು ಎಲ್ಲ ಶಾಖೆಗಳಲ್ಲಿ ಇರಬಹುದಾದರೂ ಪವಿತ್ರವಾದ ವಿದ್ಯಾಕ್ಷೇತ್ರದಲ್ಲಿ ಬೇರೆ ಬೇರೆ ಕಾರಣಗಳಿಂದ ಕೊಳೆ ಹರಿಯ ಬಿಡುವುದು ಅಕ್ಷಮ್ಯ ಅಪರಾಧವಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೊದಲು ಆಯಾ ಆಡಳಿತ ವಿಭಾಗದವರು ತಮ್ಮ ಆಡಳಿತೆಗೆ ಸಂಬಂಧಿಸಿದ ಶಾಲೆಗಳ ರಜಾಪಟ್ಟಿಯನ್ನು ತಯಾರಿಸುವ ಕ್ರಮವಿದ್ದರೂ ಈಗ್ಗೆ ಎರಡು ವರ್ಷಗಳಿಂದ ಇಲಾಖೆಯೇ ಏಕತೆಯನ್ನು ತರಲು ಒಂದೇ ತೆರದ ರಜೆಯ ಪಟ್ಟಿಯನ್ನು ಕೊಡುವ ಕ್ರಮವು ಬಂತು. ಖಾಸಗಿ ಪ್ರಾಥಮಿಕ ಶಾಲೆಗಳಿಗೆ ೧೯೬೧ನೆ ವರ್ಷಕ್ಕೆ ಸಂಬಂಧಪಟ್ಟ ಸಾರ್ವತ್ರಿಕ ರಜಾ ಪಟ್ಟಿಯಾಗಲೀ ಜಿಲ್ಲಾ ವಿದ್ಯಾಧಿಕಾರಿಗಳು ಕೊಡುವ ಸೆಕ್ಷನಲ್ ರಜೆಯ ಪಟ್ಟಿಯಾಗಲಿ ಈಗ ಮೂರು ತಿಂಗಳುಗಳು ಕಳೆದರೂ ಎಲ್ಲರ ಕೈ ಸೇರಿಲ್ಲವೆಂದು ತಿಳಿಯುತ್ತದೆ. ಆದರ ನಡುವೆ ಶಾಲಾ ಮೆನೇಜರರು ಕೊಡಬಹುದಾದ ಕೆಲವು ದಿನಗಳ ರಜೆಯನ್ನು ಯಾವ ಯಾವ ದಿನದಂದು ಕೊಡಲಿರೆಂದು ತಿಳಿಸಬೇಕೆಂದು ಆಜ್ಞೆ ಬಂದಿದೆಯೆಂದು ತಿಳಿಯುತ್ತೇವೆ. ಸರಕಾರಿ ರಜೆ ಯಾವುದಕ್ಕಿದೆ, ಜಿಲ್ಲಾ ವಿದ್ಯಾಧಿಕಾರಿಗಳು ಯಾವ ದಿನಕ್ಕೆ ರಜೆ ಮಾನ್ಯ ಮಾಡಿದ್ದಾರೆಂದು ತಿಳಿಯದೆ ಆಡಳಿತೆಯವರು ಯಾವುದಕ್ಕೆಂದು ತಿಳಿಸುವುದಾದರೂ ಹೇಗೆ? ಈ ಕಾರ್ಯಲೋಪಕ್ಕೆ ಕಾರಣರಾರೆಂದು ಸರಿಯಾಗಿ ತಿಳಿಯುವುದಿಲ್ಲವಾದರೂ ಶಿಕ್ಷಣ ವಿಭಾಗವು ಇದಕ್ಕೆ ಹೊಣೆಗಾರವಿರುವುದೆಂದು ನಾವು ಭಾವಿಸುತ್ತೇವೆ. ಶಿಕ್ಷಕರಿಗೆ ಸಕಾಲದಲ್ಲಿ ವೇತನವು ದೊರೆಯುವಂತೆ ಮಾಡುವುದರಲ್ಲಿ ಸರಕಾರದ ಬೇಜವಾಬ್ದಾರಿತನವು ಈಗೀಗ ಜನಜನಿತವಾಗಿದೆ. ರಾಜ್ಯದ ಕೆಲವೊಂದು ಪ್ರದೇಶದಲ್ಲಿ ಶಿಕ್ಷಕರ ತೀವ್ರ ಅಭಾವವಿರುವುದನ್ನು ಹೋಗಲಾಡಿಸಲು ಸರಕಾರವು ಕೈಕೊಂಡ ಕಾರ್ಯಕ್ರಮಗಳು ತೃಪ್ತಿಕರವೆಂದು ಹೇಳಬರುವುದಿಲ್ಲ. ಪ್ರಾಥಮಿಕ ಶಿಕ್ಷಣವು ರಾಷ್ಟ್ರದ ಬುನಾದಿ ಹಾಕುವುದೆಂಬುದನ್ನು ನಾವು ಒಪ್ಪಿಕೊಳ್ಳುವುದಾದರೆ, ಈ ಶಿಕ್ಷಣ ಸಂಸ್ಥೆಗಳು ಸಮರ್ಪಕವಾಗಿ ಕಾರ್ಯತತ್ಪರವಾಗುವಂತೆ, ಕ್ರಮಬದ್ಧತೆಯನ್ನು ರೂಪಿಸಿಕೊಳ್ಳುವುದು ಸರಕಾರದ ಕರ್ತವ್ಯವಾಗಿದೆ. ಉಚಿತ ಅನಿವಾರ್ಯ ಶಿಕ್ಷಣವೆಂದು ಆದರ್ಶಗಳನ್ನು ಮುಂದಿಟ್ಟು ಮಕ್ಕಳನ್ನು ಶಾಲೆಗಳಿಗೆ ಕರೆತಂದು ಅಲ್ಲಿ ಸಾಕಷ್ಟು ಸಂಖ್ಯೆಯ ಅಧ್ಯಾಪಕರನ್ನು ನೇಮಿಸದೆ, ಸಾಕಷ್ಟು ಸ್ಥಳಾವಕಾಶವನ್ನು ಒದಗಿಸದೆ ಉಳಿದರೆ ಅಂತಹ ಶಿಕ್ಷಣ ಫಲಪ್ರದವಾಗುವುದೆಂಬುದರಲ್ಲಿ ವಿಶ್ವಾಸವಿಲ್ಲ ಮಾನ ಮಂತ್ರಿಗಳೇ ಅನ್ನುವಂತೆ ಮುಂದಿನ ವರ್ಷ ಹೊಸತಾಗಿ ೨೨೨ ಶಾಲೆಗಳನ್ನು ತೆರೆಯಲಾಗುವುದು; ಹೊಸತಾಗಿ ತೆರೆಯುವ ಶಾಲೆಗಳಿಗಷ್ಟೆ ಹೊಸ ಕಟ್ಟಡಗಳನ್ನು ಒದಗಿಸಲಾಗುವುದು. ಆಗ, ಮುನ್ನೂರು ಜನಸಂಖ್ಯೆಯುಳ್ಳ ಪ್ರತಿ ಹಳ್ಳಿಯಲ್ಲಿಯೂ ಒಂದೊಂದು ಶಾಲೆ ತೆರೆದಂತಾಗುವುದೇನೋ ಸರಿಯೆ. ಆದರೆ, 'ಅನೇಕ ಕಡೆಗಳಲ್ಲಿ ಉಪಾಧ್ಯಾಯರಿಲ್ಲ, ಉಪಕರಣಗಳಿಲ್ಲ ಮತ್ತು ಕಟ್ಟಡಗಳಿಲ್ಲ' ಎಂಬುದು ಸ್ವಲ್ಪಮಟ್ಟಿಗಾದರೂ ಸರಿಯಾದುದರಿಂದ ಈ ಅಭಾವ ಅಥವಾ ಕರ್ತವ್ಯಲೋಪ ಮುಂದೆಯೂ ತುಂಬಿಬರುವಂತಿಲ್ಲ. ಹೀಗೆಲ್ಲ ಇರುವುದಾದರೆ, ಅನಿವಾರ್ಯ ಶಿಕ್ಷಣದ ಅರ್ಥವೇನು? ಸರಿಯಾದ ಶಿಕ್ಷಣ ದೊರೆಯದಿದ್ದ ಮೇಲೆ ಈ ಯೋಜನೆಯ ಉದ್ದೇಶವೇನು ಎಂಬುದು ಅರಿವಾಗುವುದಿಲ್ಲ.

ಶಿಕ್ಷಣ ಶಾಖೆಯು ಸಿಬ್ಬಂದಿಗಳ ಅಭಾವದಿಂದ ಕಾರ್ಯನಿರ್ವಹಿಸುವುದರಲ್ಲಿ ನಿಧಾನ ಮಾಡುತ್ತಿದೆಯೆಂದು ಹೇಳಿದ ಸಚಿವರಿಗೆ ಸಿಬ್ಬಂದಿಯನ್ನು ನೇಮಿಸಿಕೊಳ್ಳುವುದು ಇಲಾಖೆಯ ಕರ್ತವ್ಯವೆಂದು ಸೂಚಿಸಬೇಕಾಗಿದೆ. ವಿದ್ಯಾವಂತ ನಿರುದ್ಯೋಗಿಗಳು ಬೇಕಷ್ಟಿರುವುದರಿಂದ ಸಿಬ್ಬಂದಿಗೆ ಜನ ದೊರೆಯುವುದು ಕಷ್ಟವಾಗದು. ಶಿಕ್ಷಣದ ಪ್ರಸಾರ ಹೆಚ್ಚುತ್ತ ಬಂದಂತೆ, ಶಿಕ್ಷಣ ಪ್ರಸಾರವು ಅನಿವಾರ್ಯವಾಗುತ್ತ ಬಂದಂತೆ ಅದಕ್ಕೆ ಪರ್ಯಾಪ್ತ ಪ್ರಮಾಣದಲ್ಲಿ ಸಿಬ್ಬಂದಿಯನ್ನು ನೇಮಿಸಿಕೊಳ್ಳುವುದು ಸರಕಾರದ ಕೆಲಸ. ಇದಕ್ಕೆ ವ್ಯತಿರಿಕ್ತವಾಗಿ ನಡೆಯುವುದರಿಂದ ಶಿಕ್ಷಣ ಶಾಖೆಯಲ್ಲಿಯೇ ಅಸಮರ್ಪಕತೆ—ಅನಿಶ್ಚಿತತೆಗಳು ತಲೆದೋರಿ ಸೋಮಾರಿತನವೆ ನೆಲೆವೀಡಾಗಿ ರಾಷ್ಟ್ರಘಾತುಕವೆನಿಸುವುದು. ಅದುದರಿಂದ ಶಿಕ್ಷಣ ಶಾಖೆಯು ತ್ವರಿತಗತಿಯಲ್ಲಿ ಎಚ್ಚತ್ತು ತನ್ನ ಕರ್ತವ್ಯವನ್ನು ಮಾಡಬೇಕಾದುದು ಅಪೇಕ್ಷಣೀಯ.

ಹೆಮ್ಮರ್‌ಶೀಲ್ಡರ ನಿವೃತ್ತಿ?

ಅಮೆರಿಕೆಯಲ್ಲಿ ಕೆನ್ನೆಡಿಯವರು ಅಧಿಕಾರಕ್ಕೆ ಬಂದನಂತರ ವಿಶ್ವಶಾಂತಿ-ನಿಶ್ಶಸ್ತ್ರೀಕರಣ ಮೊದಲಾದ ಉಚ್ಚ ವಿಚಾರಗಳಿಗೆ ಇರುವ ಸ್ಥಾನವು ಇನ್ನೂ ಉಚ್ಚವಾಗುತ್ತಿರುವಂತೆ ತೋರುತ್ತಿದೆ. ವಿಶ್ವಸಂಸ್ಥೆಯ ಕಾರ್ಯಕಲಾಪಗಳು ನಿರ್ವಿಘ್ನವಾಗಿ ಮುಂದುವರಿದರೆ ಮಾತ್ರ ಇದು ಸಾಧ್ಯವೆಂಬುದು ನಿಸ್ಸಂದೇಹ. ಸದ್ಯ ಯುಕ್ತರಾಷ್ಟ್ರ ಸಂಘದ ಪ್ರಧಾನ ಕಾರ್ಯದರ್ಶಿಯಾಗಿರುವ ಶ್ರೀ ಡಾಗ್ ಹೆಮ್ಮರ್ ಶೀಲ್ಡರ ಮೇಲೆ ರಶ್ಯ ಮತ್ತಿತರ ಕಮ್ಯುನಿಸ್ಟ್ ರಾಷ್ಟ್ರಗಳ ವಿರೋಧವು ಬೆಳೆಯುತ್ತಿದ್ದು, ಅವು ಶ್ರೀ ಡಾಗರ ರಾಜಿನಾಮೆಯ ಬೇಡಿಕೆಯನ್ನು ಪದೇ ಪದೇ ಮುಂದಿಡುತ್ತಿವೆ. ಆದರೆ, ಐಸನ್ ಹಾವರರು ಅಮೆರಿಕನ್ ಅಧ್ಯಕ್ಷರಾಗಿದ್ದಾಗ ಇದಕ್ಕೆ ಹೆಚ್ಚಿನ ಬೆಲೆ ಕೊಡುತ್ತಿರಲಿಲ್ಲ. ಈಗಿನ ಅಧ್ಯಕ್ಷ ಕೆನ್ನೆಡಿಯವರು ಶ್ರೀ ಹೆಮ್ಮರ ಶೀಲ್ಡರು ಒತ್ತಾಯದಿಂದ ರಾಜಿನಾಮೆ ನೀಡಬೇಕೆಂಬುದನ್ನು ಒಪ್ಪದೆ ಹೋದರೂ ಸ್ವಯಂ ಶ್ರೀ ಡಾಗ್ ಹೆಮ್ಮರ ಶೀಲ್ಡರು ನಿವೃತ್ತರಾಗ ಬಯಸಿದರೆ, ಆಫ್ರೀಕ್ಯ ರಾಷ್ಟ್ರದವನೊಬ್ಬನನ್ನು ಆ ಸ್ಥಾನಕ್ಕೆ ಏರಿಸಲು ಯೋಚಿಸುತಿದ್ದಾರೆ. ತಮ್ಮ ಮಿತ್ರ ರಾಷ್ಟ್ರಗಳ ಸಲಹೆಯನ್ನೂ ಈ ಬಗ್ಗೆ ಪಡೆಯ ತೊಡಗಿದ್ದಾರೆ. ಈಗ ಸಂಯುಕ್ತ ರಾಷ್ಟ್ರ ಸಂಘದ ಜಾಗತಿಕ ಕೃಷಿ—ಆಹಾರ ಸಂಸ್ಥೆಯ ಡೈರೆಕ್ಟರರಾದ ಭಾರತದ ಶ್ರೀ ಬಿ ಆರ್. ಸೇನರು ಈ ಸ್ಥಾನಕ್ಕೇರುವ ಸಂಭವವು ಈಗ ಹೆಚ್ಚಿದೆ. ಅಮೆರಿಕೆಯು ಇವರಿಗೆ ಅನುಕೂಲಾಭಿಪ್ರಾಯ ಕೊಟ್ಟಿದೆ; ರಶ್ಯದ ವಿರೋಧವೂ ಇರಲಾರದು. ಆದರೆ, ತನ್ನ ಅವಧಿ ಮುಗಿಯುವವರೆಗೆ ಹುದ್ದೆಯನ್ನು ಬಿಡಲಾರೆನೆಂದ ಶ್ರೀ ಹೆಮ್ಮರ್ ಶೀಲ್ಡರು ತಮ್ಮ ನಿರ್ಧಾರವನ್ನು ಬದಲಿಸಿಯಾರೆ? ಕಾದು ನೋಡಬೇಕಷ್ಟೆ.

ನಾಯಕ್ ಬೇಂಕಿನ '೬೦ರ ವರದಿ

೧೯೨೦ರಲ್ಲಿ ಸ್ಥಾಪನೆಗೊಂಡು ಎರಡು ಮೂರು ವರ್ಷಗಳಿಂದ "ಉನ್ನತಿ ಪಥದತ್ತ ಧಾವಿಸುತ್ತಿರುವ ದಿ ಪಾಂಗಾಳ ನಾಯಕ್ ಬೇಂಕಿನ ೧೯೬೦ನೇ ವರ್ಷಕ್ಕೆ ಸಂಬಂಧಿಸಿದ ಸಾಲ ಮೂಲ ಹಾಗೂ ಲಾಭನಷ್ಟಗಳ ಲೆಕ್ಕಗಳಿಂದ ಕೂಡಿದ ವರದಿಯನ್ನು ಸಂತೋಷದಿಂದ ಸ್ವಾಗತಿಸುತ್ತೇವೆ. ೧೩೨ ಲಕ್ಷ ಒಟ್ಟು ವ್ಯವಹಾರ ವಿರುವ ಈ ಬೇಂಕು ಈ ವರ್ಷ ೧೩೭ ಸಾವಿರ ರೂ. ಗಳ ಲಾಭವನ್ನು ಗಳಿಸಿದೆ. ವ್ಯವಹಾರವು ಕಳೆದ ವರ್ಷಕ್ಕಿಂತ ಸೇ ೨೮ರಷ್ಟು ಮತ್ತು ಲಾಭವು ಸೇ ೧೧೦ರಷ್ಟು ಹೆಚ್ಚಳವನ್ನು ಸೂಚಿಸುತ್ತಿರುವುದು ಅಭಿನಂದನದ ಸಂಗತಿ. ರೂ ೫ ಲಕ್ಷ ಪಾಲು ಬಂಡವಾಳವಿದ್ದು ೧,೮೭,೫೦೦ ರೂಪಾಯಿಗಳ ಕ್ಷೇಮ ನಿಧಿಯೇ ಇರುವುದು. ೧೧೮ ಸಾವಿರ ರೂಪಾಯಿಗಳಷ್ಟು ವರದಿ ವರ್ಷದಲ್ಲಿ ಠೇವಣಾತಿ ಇತ್ತು. ಇದು ಕಳೆದ ವರ್ಷ ರೂ ೯೪ ಲಕ್ಷವಿತ್ತು. ಲಾಭಾಂಶವು ಈ ವರ್ಷದಲ್ಲಿ ಹಿಂದಿನ ವರ್ಷಕ್ಕಿಂತ ಇಮ್ಮಡಿಯಾಗಿದ್ದರೂ ಆದಾಯ ತೆರಿಗೆಯೇ ಮೊದಲಾದುವಕ್ಕೆ ರೂ. ೯೭ ಸಾವಿರದಷ್ಟು ತೆಗೆದಿರಿಸಿದುದರಿಂದ, ಪಾಲುಗಾರರಿಗೆ ಹಂಚಲು ಉಳಿದ ಹಣದ ಪ್ರಮಾಣವು ಕಡಿಮೆಯಾಯಿತು. ಆದರೂ ಸೇ. ೮ರಂತೆ (ಆದಾಯ ತೆರಿಗೆಗೆ ಒಳಪಟ್ಟು) ಡಿವಿಡೆಂಡ್ ಹಂಚಲು ಬೇಂಕು ಸಮರ್ಥವಾಗಿದೆ. ವರದಿ ವರ್ಷದಲ್ಲಿ ಭದ್ರಾವತಿ ಮತ್ತು ತುಮಕೂರುಗಳಲ್ಲಿ ಬೇಂಕು ಹೊಸ ಶಾಖೆಗಳನ್ನು ತೆರೆದಿದ್ದು ಇವು ದಿನೇ ದಿನೇ ಅಭಿವೃದ್ಧಿ ಹೊಂದುತ್ತಿವೆಯೆಂದು ವರದಿ ಸೂಚಿಸುತ್ತದೆ. ವರ್ಷಾಂತ್ಯದಲ್ಲಿ ಬೇಂಕಿಗೆ ೧೯ ಶಾಖೆಗಳಿವೆ. ಇವುಗಳಲ್ಲಿ ೧೬ ಮೈಸೂರು ರಾಜ್ಯದಲ್ಲೂ ೩ ಕೇರಳ ರಾಜ್ಯದಲ್ಲೂ ಇವೆ. ಮೊದಲು ಸಾಮಾನ್ಯ ಮಟ್ಟದಲ್ಲಿದ್ದ ಬೇಂಕು ಈಗ್ಗೆ ಕೆಲವು ವರ್ಷಗಳಿಂದ ತೀವ್ರ ಪ್ರಗತಿ ಹೊಂದುವುದಕ್ಕೆ ಕಾರಣರಾದ ಬೇಂಕಿನ ಡೈರೆಕ್ಟರ ಮಂಡಳಿಯನ್ನು ಮತ್ತು ಜನರಲ್ ಮೆನೇಜರ್ ಶ್ರೀ ಕೆ. ಎಸ್. ಕಾಮತ್ ಇವರನ್ನೂ ಹೃತ್ಪೂರ್ವಕ ಅಭಿನಂದಿಸುತ್ತೇವೆ. ಮುಂದಿನ ವರ್ಷದಲ್ಲಾದರೂ ಬೇಂಕಿಗೆ ಶೆಡ್ಯೂಲ್ಡ್ ಬೇಂಕಾಗಿ ಮಾನ್ಯತೆ ದೊರೆಯಲೆಂದು ಹಾರೈಸಿ, ಬೇಂಕು ನಾಡಿಗರಿಗೆ ಉತ್ತಮ ಬೇಂಕಿಂಗ್ ಸೌಲಭ್ಯಗಳನ್ನು ಒದಗಿಸಿ ನಾಡಸೇವೆಯನ್ನು ಮಾಡಲಿ ಎಂದು ಅಭಿಲಷಿಸುತ್ತೇವೆ.

ಸಂಕ್ಷಿಪ್ತ ಸುದ್ದಿಗಳು

ಬಣ್ಣದ ನುಡಿ

ಆಡಿದ ಮಾತನ್ನು ಹಿಂತೆಗೆದು ಕೊಳ್ಳುವುದು ಅಸಾಧ್ಯವಾದರೂ ಅದಕ್ಕೆ ವ್ಯಾಖ್ಯೆ ಬರೆದು ಅದರ ಅರ್ಥ ಕೆಡಿಸುವುದು ಸಾಧ್ಯ. ಅಂತೆಯೇ ಕಾಂಗ್ರೆಸ್ ಅಧ್ಯಕ್ಷ ಶ್ರೀ ಸಂಜೀವ ರೆಡ್ಡಿಯವರು ಹತ್ತು ವರ್ಷಗಳಿಗಿಂತ ಹೆಚ್ಚು ಅಧಿಕಾರ ಸ್ಥಾನದಲ್ಲಿದ್ದ ಕಾಂಗ್ರೆಸಿಗರು ಹೊರಬರಬೇಕೆಂದು (ಪಂಡಿತ ನೆಹರುಗಳಂತಹ ಕೆಲವರಿಗೆ ಇದು ಅನ್ವಯಿಸುವುದಿಲ್ಲ.) ಗತ್ತಿನಿಂದ ಹೇಳಿ ಈಗ ನುಣುಚಿಕೊಳ್ಳುವ ಪ್ರಯತ್ನ ಮಾಡುತಿದ್ದಾರೆ. ಈ ಮಾತನ್ನು ಕಟ್ಟುನಿಟ್ಟಾಗಿ ಅನುಸರಿಸಬೇಕಿಲ್ಲ; ಹೊಸಬರಿಗೆ ಸ್ಥಾನ ಕಲ್ಪಿಸಿಕೊಡುವುದೇ ಇದರ ಹಿಂದಿರುವ ಉದ್ದೇಶ. ಮೂರರಲ್ಲಿ ಒಂದರಷ್ಟು ಹೊಸಬರನ್ನೇ ತರಲು ಕಾಂಗ್ರೆಸ್ಸು ಪ್ರಯತ್ನಿಸುತ್ತಿದೆ ಎಂದೀಗ ಶ್ರೀ ರೆಡ್ಡಿಯವರು ತನ್ನ ಸೂತ್ರಕ್ಕೆ ವೃತ್ತಿಯನ್ನೂ ಟೀಕೆಯನ್ನೂ ಬರೆಯತೊಡಗಿದ್ದಾರೆ.

ಜಾತೀಯವಾದದ ಭೂತ

ಭಾರತದ ಜಬ್ಬಲಪುರದ ಜಾತೀಯ ಗಲಭೆ ಪಾಕಿಸ್ತಾನದ ಕರಾಚಿಯಲ್ಲಿ ಅದಕ್ಕಾದ ಪ್ರತೀಕಾರಗಳಿಂದ ನೊಂದ ಏಕಮೇವ ನಾಯಕರೆಂದರೆ, ನೆಹರು. ಜಾತೀಯತೆಯೊಂದು ಶಾಪವೆಂದು ತಿಳಿದ ಪಂ. ನೆಹರು ಜಾತೀಯ ಸಂಸ್ಥೆಗಳು ಮುಂದಿನ ಚುನಾವಣೆಗಳಲ್ಲಿ ಸ್ಪರ್ಧಿಸದಂತೆ ಅವಕ್ಕೆ ಮುಟ್ಟುಗೋಲು ಹಾಕುವ ಕುರಿತು ಯೋಚಿಸುತಿದ್ದಾರೆ. ಜಾತೀಯತೆಯನ್ನು ಮುಂದಿಟ್ಟು ಚುನಾವಣೆಯನ್ನು ಎದುರಿಸುವವರನ್ನು ತಡೆಯುವುದು ಅನ್ಯಾಯವೆಂಬ ರಾಜಾಜಿಯವರ ಅಭಿಪ್ರಾಯ ಶ್ರೀ ನೆಹರುರನ್ನು ಪೇಚಿಗೆ ಸಿಕ್ಕಿಸಿರಬೇಕು. ಇದಕ್ಕಿಂತಲೂ ಮುಖ್ಯವಾಗಿ ಈಗ ನೆಹರುರವರನ್ನು ಚುಚ್ಚಿದುದೆಂದರೆ, ದೆಹಲಿಯಲ್ಲಿ ನಡೆದ ಉಪಚುನಾವಣೆಯಲಿ ಕಾಂಗ್ರೆಸ್ ಅಭ್ಯರ್ಥಿ

ಅಲ್ಲಲ್ಲಿಯ ಸುದ್ದಿ ಸಾರ

ಬೀಳ್ಕೊಡುವ ಸಮಾರಂಭ-ಉಡುಪಿ ಮೋಡರ್ನ್ ಹಾಯರ್ ಎಲಿಮೆಂಟರೀ ಶಾಲಾ 8ನೇ ತರಗತಿಯ ಮಕ್ಕಳನ್ನು ಬೀಳ್ಕೊಡುವ ಸಮಾರಂಭವು ತಾ. 6-4-61ರಂದು ಉಡುಪಿ ತಾಲೂಕು ಬೋರ್ಡು ಸದಸ್ಯ ಶ್ರೀ ಪಿ. ಶಿವಾಜಿ ಶೆಟ್ಟಿ, ಬಿ. ಎ. ಎಲ್ ಎಲ್. ಬಿ. ಇವರ ಅಧ್ಯಕ್ಷತೆಯಲ್ಲಿ ಜರಗಿತು ಅಧ್ಯಕ್ಷರ ಆಸನ ಸ್ವೀಕಾರವಾದ ಬಳಿಕ ಶಾಲಾ ಮೆನೇಜರರಾದ ಶ್ರೀ ಕೆ. ಜಗನ್ನಾಥ ನಾಯ್ಕರು ಸ್ವಾಗತಿಸಿದರು. ಅಧ್ಯಕ್ಷರಿಂದ 8ನೇ ತರಗತಿಯ ಮಕ್ಕಳು ಶಾಲೆಗೆ ಕೊಟ್ಟ ಸರ್ ಎಮ್. ವಿಶ್ವೇಶ್ವರಯ್ಯನವರ ಭಾವ ಚಿತ್ರವು ಅನಾವರಣ ಮಾಡಲ್ಪಟ್ಟಿತು. ವಿದ್ಯಾರ್ಥಿಗಳಿಂದ ಶಾಲಾ ಜೀವನದ ಕುರಿತು ಭಾಷಣವಾದ ಬಳಿಕ ಶಾಲಾ ಅಧ್ಯಾಪಕರಾದ ಶ್ರೀ ಕೆ. ಕಮಲಾಕ್ಷ ಮಲ್ಯ, ಮತ್ತು ಶ್ರೀ ಯು. ರತ್ನಾಕರ ಅಡಿಗರಿಂದ ಹಿತವಚನಗಳು ಹೇಳಲ್ಪಟ್ಟು, ಅಧ್ಯಕ್ಷರ ಭಾಷಣ, ಲಘುಪಹಾರ, ಮತ್ತು ಫೋಟೋ ಕಾರ್ಯಕ್ರಮಗಳ ಬಳಿಕ ಶಾಲಾ ಮೆನೇಜರರಿಂದ ಧನ್ಯವಾದ ಸಮರ್ಪಿಸಲ್ಪಟ್ಟು ಸಭೆಯು ಮುಕ್ತಾಯವಾಯಿತು.

ಸೋತುದು ಮಾತ್ರವಲ್ಲ ಜನಸಂಘದ ಹುರಿಯಾಳು ಅರಿಸಿ ಬಂದುದು!

ರಾಷ್ಟ್ರೀಯ ಐಕ್ಯ ಸಾಧನೆ

ವಿಚಾರವಂತರು ತಮಗೆ ಒಪ್ಪಿಗೆಯಿಲ್ಲವಾದರೂ ಅನಿವಾರ್ಯವಾಗಿ ಕೆಲವೊಮ್ಮೆ ತಮ್ಮ ವಿಚಾರಧಾರೆಗೆ ವಿರುದ್ಧವಾಗಿ ನಡೆಯಬೇಕಾಗುತ್ತದೆ. ಭಾರತದಲ್ಲಿ ಭಾಷಾ ತಳಹದಿಯಲ್ಲಿ ರಾಜ್ಯ ಪುನರ್ವಿಂಗಡಣೆ ಮಾಡಲು ಅನುಕೂಲಾಭಿಪ್ರಾಯವಿರದ ನೆಹರು ಇಂತಹುದೇ ಒಂದು ಪೇಚಿನಲ್ಲಿ ಬಿದ್ದು, ಆಂಧ್ರ ರಾಜ್ಯಸ್ಥಾಪನೆಗೆ ಒಪ್ಪಿದರು. ಇದರಿಂದಾಗಿ ಮುಂದೆ ರಾಜ್ಯಗಳ ರೂಪವೇ ಬದಲಾಗುವಂತಾಯಿತು. ಭಾಷಾ ರಾಜ್ಯಗಳ ನಿರ್ಮಾಣವೇ ರಾಷ್ಟ್ರೀಯ ಐಕ್ಯನಾಶಕ್ಕೆ ಕಾರಣವೆಂಬುದು ಕೇರಳದ ರಾಜ್ಯಪಾಲ ಶ್ರೀ ವಿ. ವಿ. ಗಿರಿಯವರ ಅಭಿಪ್ರಾಯ ಮಾತ್ರವಲ್ಲ, ನೆಹರುರವರದೂ ಆಗಿತ್ತು. ಅದಕ್ಕಾಗಿಯೇ ಅವರು ವಲಯಗಳನ್ನು ರಚಿಸಿದರು. ಆದರೆ, ಈ ವಲಯ ಸಮಿತಿಗಳು ಊಹಿಸಿದಷ್ಟು ಉಪಯೋಗಕ್ಕೆ ಬರಲಿಲ್ಲ.

ಬಣ್ಣ ಬದಲಾಯಿಸಿದರು

ಸಾರ್ವತ್ರಿಕ ಚುನಾವಣೆಗಳು ಸಮೀಪಿಸುತ್ತ ಬಂದರೆ, ರಾಜಕೀಯ ಪಟುಗಳ ಬಣ್ಣವೂ ಬದಲಾಯಿಸ.ತ್ತ ಬರತೊಡಗಿದೆ. ದ್ರಾವಿಡ ಮುನ್ನೇತ್ರ ಕಜಗಂ ನ ನಾಯಕರಲ್ಲಿ ಒಬ್ಬರಾದ ಶ್ರೀ ಇ ವಿ ಕೆ.ಸಂಪತ್ತರು ತನ್ನ ಪಕ್ಷಕ್ಕೆ ರಾಜಿನಾಮೆ ಯಿತ್ತು ಹೊರಬಂದಿದ್ದಾರೆ ಇವರೊಡನೆ ೧೧೦ ಮಂದಿ ಇತರ ಕಿರು ಮುಖಂಡರೂ ಪಕ್ಷತ್ಯಾಗ ಮಾಡಿದ್ದಾರೆ ಇವರಲ್ಲಿ ಎಂ ಪಿ; ಎಂ. ಎಲ್. ಎ ಗಳೂ ಇದ್ದು ಇವರೆಲ್ಲರೂ ಮುಂದೆ ಯಾವ ಪಕ್ಷವನ್ನು ಸೇರುವರೆಂದು ಇನ್ನೂ ತಿಳಿದಿಲ್ಲ. ರಾಜಕಾರಣಿಗಳೆಂದರೆ ಓತಿಕ್ಯಾತಗಳೇ ಎಂಬ ಭಾವನೆ ಜನಮನದಲ್ಲಿ ಅಧಿಕ ವಾಗುತ್ತ ಬರುತ್ತಿದೆ.

ಬಹಿರಂಗೆ ಒತ್ತಡ

ದಕ್ಷಿಣ ಆಫ್ರಿಕೆಯ ವಿರುದ್ಧ !ಆರ್ಥಿಕ ಬಹಿಷ್ಕಾರಹಾಕಬೇಕು, ಅದಕ್ಕೆಎಣ್ಣೆಯ ಪೂರಯ್ಕೆ ತಡೆ ಹಿಡಿಯ ಬೇಕು; ಅದರ ಹಡಗುಗಳಿಗೆ ಬಂದರು ಸೌಕರ್ಯವನ್ನೂ ವಿಮಾನ ನಿಲ್ದಾಣ ಸೌಕರ್ಯವನ್ನೂ ಕೊಡಬಾರದು ಅದರೊಡನೆನಿರುವ ಎಲ್ಲ ವ್ಯಾಪಾರವನ್ನೂ ! ನಿಲ್ಲಿಸಿ ಬಿಡಬೇಕು. ಎಂದು ಮುಂತಾಗಿ ಅವರು ವಿವಿಧ ದೇಶಗಳಿಗೆ ತಿಳಿಸಿದ್ದಾರೆ. ಹೀಗೆ !ಹೊರಗಿನಿಂದ ಬಹಿಷ್ಕರದ ಒತ್ತಡವು ಮಿತಿ ಮೀರುವುದರಿಂದ ವೆರ್ವೋರ್ಡರ ಸರಕಾರವು ಅಹಿಂಸಾತ್ಮಕವಾಗಿ ಉರುಳುವುದೆಂದು ಅವರ ನಂಬಿಕೆ.

ಉಳ್ಳಾಲ ಸೋಮೇಶ್ವರ— ಶ್ರೀ ಸೋಮನಾಥ ದೇವಸ್ಥಾನದಲ್ಲಿ ವರ್ಷಂಪ್ರತಿ ಜರಗುವ ಉತ್ಸವವು ತಾ. 30—3—61ರಂದು ಧ್ವಜಾರೋಹಣವಾಗಿ ತಾ. 3—4—61 ರಂದು ಆರಡ ಅವಭೃತ ಸ್ನಾನದೊಂದಿಗೆ ಧ್ವಜಾ ಅವರೋಹಣವಾಗಿ ಮುಕ್ತಾಯಗೊಂಡಿತ್ತು. ಇದರ ಅಂಗವಾಗಿ ತಾ. 1-4-61 ರಂದು ವಿದ್ವಾನ್ ಸುಬ್ಬಣ್ಣ ರೈಯವರ ಅಧ್ಯಕ್ಷತೆಯಲ್ಲಿ ಶ್ರೀ ಕಯ್ಯಾರ್ ಕಿಂಞಣ್ಣ ರೈಯವರು "ಕಠೋಪನಿಷತ್ತು" ವಿಷಯದಲ್ಲಿ ಭಾಷಣವನ್ನಿತ್ತರು. ಬಳಿಕ ಮೈಸೂರಿನ ಕುಮಾರಿ ರುಕ್ಮಿಣಿಯವರಿಂದ ಸಂಗೀತ ಕಚೇರಿಯೂ ಶ್ರೀ ಕೆ. ವಾಸುದೇವರಾಯರ ಶಿಷ್ಯರಾದ ಬೇಬಿ ಶಾಂತ, ಬೇಬಿ ಉಷ ಯವರಿಂದ ಹಾಡುಗಾರಿಕೆಯೂ ಕುಮಾರಿ ಅರುಣ ರೈಯವರಿಂದ ವಾಯಿಲಿನ ವಾದನವೂ ಜರಗಿತು. ತಾ. 3—4—61ರಂದು ನುರಿತ ಅರ್ಥದಾರಿಗಳಿಂದ "ಸುಭದ್ರ ಪರಿಣಯ" ನೆಂಬ ಯಕ್ಷಗಾನ ಕೂಟ ನೆರವೇರಿತು.

ಕರ್ನಾಟಕ ಕಲೋದ್ಧಾರಕ ಸಂಘ

ಧಾರವಾಡದ ಈ ಸಂಘದ ವಾರ್ಷಿಕ ಸಾಧಾರಣ ಸಭೆಯು ದಿ. ೨೬—೩—೬೧ರಂದು ಸೇರಿತ್ತು. ಸಭೆಯಲ್ಲಿ ಮೊದಲಿಗೆ ೧೯೫೯ ಮತ್ತು ೧೯೬೦ನೇಯ ವರುಷಗಳ ವರದಿ ಹಾಗೂ ಲೆಕ್ಕ ಪತ್ರಗಳು ಸ್ವೀಕೃತವಾದವು. ಈ ಎರಡು ವರ್ಷಗಳಲ್ಲಿ ೧೪ ನಾಟಕ ಪ್ರಯೋಗಗಳನ್ನು ಕೈಕೊಂಡುದಲ್ಲದೆ ಜಾಸನ ನಾಟಕ ಸ್ಪರ್ಧೆಯಲ್ಲಿ ಮೂರು ಸಲ ಸತತವಾಗಿ ಪ್ರಥಮ ಸ್ಥಾನವನ್ನು ಪಡೆದು, ರೋಲಿಂಗ್ ಶೀಲ್ಡನ್ನು ಗೆದ್ದು ತಂದುದೂ ಸರಕಾರ ಹಾಗೂ ಶೈಕ್ಷಣಿಕ ಸಂಸ್ಥೆಗಳ ಪರವಾಗಿ ನಾಟಕಗಳನ್ನಾಡಿ ಅವಕ್ಕೆ ಆರ್ಥಿಕ ಬಲವನ್ನು ಒದಗಿಸಿ ಕೊಟ್ಟುದೂ, ವರದಿಯಲ್ಲಿ ಬಂದ ಮುಖ್ಯ ವಿಷಯಗಳಾಗಿದ್ದುವು.

ಹೊಸ ವರ್ಷಕ್ಕೆ ಶ್ರೀ ಆರ್. ಎಸ್. ಬಂಗೇರ ಅವರೇ ಅಧ್ಯಕ್ಷರಾಗಿ ಮುಂದುವರಿಯಬೇಕೆಂದು ನಿರ್ಣಯವಾಯಿತು. ಇತರ ಪದಾಧಿಕಾರಿಗಳ ಆಯ್ಕೆ ಈರೀತಿಯಾಗಿ ನಡೆಯಿತು. ಉಪಾಧ್ಯಕ್ಷರು ಶ್ರೀ ಕೆ ಜಿ. ಜೋಶೀ ಕಾರ್ಯಾಧ್ಯಕ್ಷರು ಶ್ರೀ ಬಾಸ್ಕರ ಗೋಖಲೆ, ಲೆಕ್ಕ ಪರೀಕ್ಷರು. ಶ್ರೀ ಸಾ ಅ. ಜೊಸಕೆಲೆ ಕೋಶಾಧಿಕಾರಿಗಳು. ಶ್ರೀಸ್ವಾಮಿರಾಯ ಕಾಲಗಿ ಕಾರ್ಯದರ್ಶಿಗಳು, ಶ್ರೀ ಎಸ್. ಸಿ. ಬನವಾಸಿ ಮತ್ತು ಎಸ್. ದಿ. ಆಡೂರ ಕಾರ್ಯ ಸಮಿತಿಯ ಸದಸ್ಯರು ಸೌ. ಮಾಲತೀ ತಟ್ಟಿ ಸರ್ವ ಶ್ರೀ ಮಹದೇವ, ಮನಸೂರ ಶ್ರೀನಿವಾಸ ಪಾವನೂರೆ, ರಾಘವೇಂದ್ರ ಮಾಸೂರ ಮತ್ತು ಜನಾರ್ಧನ ನಾಪಡ.

೧೯೬೧ರಲ್ಲಿ ಆರು ನಾಟಕಗಳು ಪ್ರಯೋಗ ದಾಖಲೂರ ಶತಮಾನೋತ್ಸವದ ಆಚರಣೆ, ಶಾಲಾ ವಿದ್ಯಾರ್ಥಿಗಳಿಗೆ ನಾಟಕ ತರಬೇತಿ, ನಾ ಟ ಕ ಗ್ರಂ ಥಾ ಲ ಯ: ಸ್ಥಾಪನೆ ಮತ್ತು ಪರದೆ ವಗೈರೆ ರಂಗ ಭೂಮಿಯ ಸಲಕರಣೆಗಳನ್ನು ಕೊಳ್ಳುವುದು ಈ ಕಾರ್ಯಕ್ರಮವನ್ನು ಇದೇ ಸಭೆಯಲ್ಲಿ ರೂಪಿಸಲಾಯಿತು.

ಸ್ವತಂತ್ರ ಪಕ್ಷದ ಕಾರ್ಯಕಾರಿ ಸಮಿತಿಯ ಸಭೆಯು ತಾ. 3 4-61 ರಂದು ಶ್ರೀ ಜೆ ಎಮ್. ಲೋಬೋ ಪ್ರಭುಗಳ ಅಧ್ಯಕ್ಷತೆಯಲ್ಲಿ ಜರಗಿ "ಈಗಿರುವ ಹಕ್ಕುಗಳ ದಿನಾಚರಣೆ'ಯನ್ನು ಇದೇ ಎಪ್ರಿಲ್ ತಿಂಗಳ 30ರಂದು ಜಿಲ್ಲೆಯ ಅದ್ಯಂತ್ಯದಲ್ಲಿ ಆಚರಿಸಿ ಆ ಮೂಲಕ ಮೈಸೂರು ಭೂಸುಧಾರಣೆಯ ಮಸೂದೆಗೆ ವಿರೋಧವನ್ನು ವ್ಯಕ್ತಪಡಿಸಬೇಕೆಂದು ನಿರ್ಣಯಿಸಲಾಯಿತು ಈಗಿನ ಹೊಸ ಮಸೂದೆಯು ಇತರ ರಾಜ್ಯಗಳಂತೆ, ಈಗ ಜ್ಯಾರಿಯಲ್ಲಿರುವ ಪಾತ್ಯಾಲಿಕ ಶಾಸನಗಳಿಗಿಂತ ವಿಶೇಷವಾದ ಹಕ್ಕುಗಳನ್ನಾಗಲೀ, ಸವಲತ್ತನ್ನಾಗಲೀ, ಬೇಸಾಯ ಮಾಡುವ ವಕ್ಲುಗಳಿಗೆ ಕೊಡುವುದಿಲ್ಲ. ಅವರ ಬದಲಿಗೆ ಹೊಸ ಮಸೂದೆಯಿಂದಾಗಿ ಹೊಸ ರೀತಿಯ ನಂಬ್ರಗಳಾಗಿ ಅವರು ಕೋರ್ಟಿಗೆ ಹೋಗುವಂತಾಗುವುದಲ್ಲದೆ, ಅಧಿಕಾರಿಗಳ ಮಧ್ಯಸ್ಥಿಕೆಗಳೂ, ಅಸ್ಥಿಸ್ವಾಧೀನತೆಗಾಗಿ ಭೂಮಾಲಿಕರಿಗೆ ಕೊಡಬೇಕಾದ ಪರಿಹಾರ ಧನಕ್ಕಾಗಿ ತೆರಬೇಕಾದ ತೆರಿಗೆಗಳೂ ಅವರನ್ನು ತೊಂದರೆಗೀಡು ಮಾಡುವುದು. ಇದಲ್ಲದೆ ಭೂಮಾಲಿಕರಿಗಿತ್ತಿರುವ ಭೂಮಿಯನ್ನಪುನಃ ಪಡೆವ ಹಕ್ಕಿನಿಂದಾಗಿ ಚಾಲಗೇಣಿ ಹಕ್ಕನ್ನೂ ಕಳೆದುಕೊಳ್ಳುವ ಸಂಭವವೂ ಇದೆ. ಅದ್ದರಿಂದ ಸ್ವತಂತ್ರ ಪಕ್ಷವು ಈಗಿನ ರೈತರೆಲ್ಲರಿಗೂ ಈ ಕೆಳಗಿನ ಹಕ್ಕುಗಳಿರಬೇಕೆಂದು ವತ್ತಾಯಿಸುತ್ತದೆ.

(i) ಈಗ ಬೇಸಾಯ ಮಾಡುತ್ತಿರುವ ರೈತರೆಲ್ಲರೂ ತಮ್ಮ ತಮ್ಮ ಹಿಡುವಳಿಯಲ್ಲಿ ಶಾಶ್ವತವಾಗಿ ನ್ಯಾಯವಾದ ಗೇಣಿಯನ್ನು ಕೊಡುತ್ತ ಮುಂದೆಯೂ ಇರುವಂತಾಗಬೇಕು.

(ii) ಬೇಸಾಯ ಮಾಡುವ ಭೂಮಾಲಿಕರು ಈಗಿನ ಹಿಡುವಳಿಯನ್ನು ತಮ್ಮ ಸ್ವಾಧೀನದಲ್ಲಿಟ್ಟುಕೊಂಡು ಕ್ರಮಾಗತವಾಗಿ ಬಂದಿರುವ ಕ್ರಮದಲ್ಲೇ ಬೇಸಾಯ ಮಾಡುವ ಅಧಿಕಾರವುಳ್ಳವರಾಗಬೇಕು. ಮತ್ತು ಆ ಮೂಲಕ ಅವರು ಸರಿಯಾದ ಮುಬಂದತ್ತ ವಹಿಸಿ ಹಿಡುವಳಿಯನ್ನು ತುಂಡು ತುಂಡುಮಾಡಿ ಹಂಚುವುದರಿಂದ ಉಂಟಾಗುವ ನಿರುದ್ಯೋಗವನ್ನೂ ನಿವಾರಿಸುವಂತಾಗಬೇಕು ಎಂದು ನಿರ್ಣಯಿಸಲಾಯಿತು.

ಸಿದ್ಧಾಪುರ— ಉತ್ತರಕನ್ನಡ ಜಿಲ್ಲೆಯ ಸಿದ್ಧಾಪುರದಲ್ಲಿ ಇದೇ ತಾ. 6ರಂದು ಡಾ| ಎಂ. ಪ್ರಭಾಕರ ಸೆಟ್ಟರ ಜ್ಯೋತಿ ಕ್ಲಿನಿಕ್ ಇದರ ಪ್ರಾರಂಭೋತ್ಸವವು ಅಲ್ಲಿಯ ತಾಲೂಕು ಬೋರ್ಡ್ ಅಧ್ಯಕ್ಷ ಶ್ರೀ ಗಣೇಶ ಎನ್. ಹೆಗ್ಡೆಯವರಿಂದ ನೆರವೇರಿಸಲ್ಪಟ್ಟಿತು.

ಶ್ರೀ ಎ. ಬಿ. ಶೆಟ್ಟಿ ಸ್ಮಾರಕ ವಿದ್ಯಾರ್ಥಿ ನಿಲಯ—ಸಮಿತಿಯ ಸಭೆಯು ಇತ್ತೀಚೆಗೆ ಸೇರಿ ನಿಲಯಕ್ಕೆ ಸದಸ್ಯರನ್ನು ಸೇರಿಸಬೇಕೆಂದು ತೀರ್ಮಾನಿಸಿತು. ಆದರಂತೆ ಪ್ರದಾನ್ಯ, ಪೋಷಕ, ಆಶ್ರಯದಾತ, ಆಜೀವ ಹಾಗೂ ಸಾಮಾನ್ಯ ಹೀಗೆ 5 ವರ್ಗದ ಸದಸ್ಯರಾಗಬಹುದಾಗಿದೆ ಮೊದಲಿನ ನಾಲ್ಕು ವರ್ಗಕ್ಕೆ ಕ್ರಮವಾಗಿ 1,000, 500, 250, ಮತ್ತು 100 ರೂಪಾಯಿಗಳು ಶುಲ್ಕ. ಸಾಮಾನ್ಯ ಸದಸ್ಯತನಕ್ಕೆ ವಾರ್ಷಿಕ ಶುಲ್ಕ ರೂ. 12ರಂತೆ. ಸಂಸ್ಥೆಯ ಮೇಲಿನ ಅಭಿಮಾನವುಳ್ಳವರೆಲ್ಲರೂ ಸದಸ್ಯರಾಗುವುದರ ಮೂಲಕ ಸಂಸ್ಥೆಯನ್ನು ಬಲಪಡಿಸಬೇಕಾಗಿ ಕೋರಲಾಗಿದೆ. ಫಾರಂಗಳನ್ನು ಶ್ರೀ ಎಂ. ರಾಮಣ್ಣ, ಕಾರ್ಯದರ್ಶಿ, ಎ ಬಿ. ಸೆಟ್ಟಿ, ಮೆಮೋರಿಯಲ್ ಹೋಸ್ಟೆಲ್ ಮೈಸೂರು — 3. ಇವರಿಂದ ಪಡೆಯಬಹುದು.

ದ. ಕ. ಬ್ರಾಹ್ಮಣರ ಸಂಘ, ಬೊಂಬಾಯಿ—ಇದರ ವಾರ್ಷಿಕೋತ್ಸವ ಮತ್ತು ರಾಮನವಮಿ ಸಮಾರಂಭಗಳು ಸಂಘದ ಗೋಕುಲ ಕಟ್ಟಡದಲ್ಲಿ ಮಾರ್ಚ 25ರಂದು ನೆರವೇರಿತು. ಈ ಸಂದರ್ಭದಲ್ಲಿ ಕೈ ಕಸಬಿನ ವಸ್ತು ಪ್ರದರ್ಶನವೊಂದುಮೊಂಬರಿಂದ ವ್ಯವಸ್ಥಾಪಿಸಲ್ಪಟ್ಟು, ಅದರ ಉದ್ಘಾಟನೆಯು ಪದ್ಮಶ್ರೀ. ಕೆ. ಕೆ. ಹೆಬ್ಬಾರರಿಂದ ಗೀತ ಗೋವಿಂದ ಸಭಾ ಸದನದಲ್ಲಿ ನೆರವೇರಿಸಲ್ಪಟ್ಟಿತು.

ಕಾರ್ಯಕ್ರಮವು ಹೆಂಗಸರು ಮತ್ತು ಮಕ್ಕಳಿಂದ ರಾಮಧ್ಯಾನದೊಂದಿಗೆ ಪ್ರಾರಂಭಿಸಲ್ಪಟ್ಟು, ಪ್ರದರ್ಶನಕ್ಕೆ ಸಂದರ್ಶಿಸಿದ ಬಳಿಕ ಯು. ಆರ್. ಅಚಾರ್ ಮತ್ತು ಸಹೋದರರಿಂದ ವ್ಯವಸ್ಥೆ ಮಾಡಲ್ಪಟ್ಟ ಭೋಜನ ನಡೆಯಿತು. ಇದಕ್ಕೆ ಆರುನೂರಕ್ಕೂ ಪೆಚ್ಚಿನ ಅತಿಥಿಗಳು ಆಗಮಿಸಿದ್ದರು. ಸಂಜೆ ಉಪಾಹಾರವಾದ ಬಳಿಕ ಪದ್ಮಶ್ರೀ ಬಹುಮಾನ ಪಡೆದ ಶ್ರೀ ಕೆ. ಕೆ. ಹೆಬ್ಬಾರರನ್ನು ಗೌರವಿಸಲಾಯಿತು. ಈ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಆರ್. ಆರ್. ಮೇಲ್ಮನೆಯವರು ವಹಿಸಿದ್ದರು. ಶ್ರೀಮತಿ ಎ. ಆರ್. ಮೇಲ್ಮನೆಯವರು ಸಂನ್ಯಾಟನಗಳಲ್ಲಿಯೂ ಪ್ರದರ್ಶಕರಲ್ಲಿಯೂ ಗೆದ್ದವರಿಗೆ ಪಾರಿತೋಷಕಗಳನ್ನು ಹಂಚಿದರು ಕಾರ್ಯದರ್ಶಿಗಳು ಅತಿಥಿಗಳ ಪರಿಚಯ ಭಾಷಣಮಾಡಿದರು. ಪದ್ಮಶ್ರೀ ಹೆಬ್ಬಾರರೂ ಶ್ರೀ ಆರ್. ಆರ್. ಮೇಲ್ಮನೆಯವರೂ ಚಿಕ್ಕ ಭಾಷಣಮಾಡಿ, ಸಂಘದವರು ತಮಗಿತ್ತ ಗೌರವಕ್ಕಾಗಿ ಆಭಾರ ಸೂಚಿಸಿದರು. ಬಳಿಕ ಶ್ರೀಮತಿ ಲಲಿತ ರಾಯರಿಂದ ಧನ್ಯವಾದ ಸಮರ್ಪಣೆಯಾಗಿ ಮಕ್ಕಳಿಂದ ಜನಪದ ನೃತ್ಯ, ಮಹಾಲಿಂಗೇಶ್ವರ ಯಕ್ಷಗಾನ ಕಲಾಕೇಂದ್ರದಿಂದ ರಾಮ ಪಟ್ಟಾಭಿಷೇಕ ಬಯಲಾಟ ನಡೆಯಿತು.

ಶ್ರೀ ಬಿ. ಎಮ್. ಕಾರಿಯಪ್ಪನವರಿಗೆ ಕೊಲೊಂಬೊ ಯೋಜನೆಯ ಫೆಲೊಶಿಪ್ ಗೌರವ—ನವದೆಹಲಿಯಲ್ಲಿರುವ ಭಾರತದ ಕ್ಷಯರೋಗ ಸಮಿತಿಯ ಕಾರ್ಯದರ್ಶಿ ಶ್ರೀ ಬಿ. ಎಮ್. ಕಾರಿಯಪ್ಪ ಇವರನ್ನು ಬರುವ ಸಪ್ಟಂಬರ್ ತಿಂಗಳಲ್ಲಿ ಟೊರೊಂಟೊದಲ್ಲಿ ಜರಗಲಿರುವ ಹದಿನೇಳನೇಯ ಅಂತಾರಾಷ್ಟ್ರೀಯ ಕ್ಷಯರೋಗ ಪರಿಷತ್ತಿಗೆ ಕೆನೆಡಾಕ್ಕೆ ತೆರಳಲು ಭಾರತ ಸರಕಾರವು ಕೊಲಂಬೊ ಯೋಜನೆಯ ಫೆಲೊಶಿಪ್ ಗೌರವವನ್ನು ದಯಪಾಲಿಸಲು ಆರಿಸಿದೆ.

ಶ್ರೀ ಕಾರಿಯಪ್ಪನವರು ಅಂತರಾಷ್ಟ್ರೀಯ ಹೆಲ್ತ್ ಎಜ್ಯುಕೇಶನ್ ಕಮಿಟಿಯ ಯೂನಿಯನಿನ ಸದಸ್ಯರು. ಅವರು ಕ್ಷಯರೋಗದ ವಿರುದ್ಧ ಹೋರಾಡುವ ಅಧಿಕಾರೇತರಸಂಸ್ಥೆಗಳ ಪಾತ್ರದ ಕುರಿತು ಟೊರೊಂಟೊ ಪರಿಷತ್ತಿನಲ್ಲಿ ಪತ್ರವೊಂದನ್ನು ಓದುವರು. ಅಲ್ಲದೆ ಅವರು ಕೆನೆಡಾದಲ್ಲಿರುವ ಟಿ. ಬಿ. ಸಂಸ್ಥೆ ಮತ್ತು ಅಧಿಕಾರೇತರಸಂಘಗಳನ್ನು ಯುನೈಟೆಡ್ ಸ್ಟೇಟ್ಸ್ ಓಫ್ ಅಮೆರಿಕದ ರಾಷ್ಟ್ರೀಯ ಕ್ಷಯರೋಗ ಸಂಸ್ಥೆಯ ಆಮಂತ್ರಣದಂತೆ ಸಂದರ್ಶಿಸಲಿರುವರು. ಭಾರತ ಸರಕಾರದಿಂದ ಆರಿಸಲ್ಪಟ್ಟ ಇತರ ಪ್ರತಿನಿಧಿಗಳೆಂದರೆ ಭಾರತದ ಆರು ಜನ ಡಾಕ್ಟರರು ಶ್ರೀ ಕಾರಿಯಪ್ಪನವರು ಅಂತರಾಷ್ಟ್ರೀಯ ಕ್ಷಯರೋಗ ಪ್ರತಿಬಂಧಕ ಸಮಿತಿಯ ಈಸ್ಟರ್ನ್ ರೀಜನಲ್ ಕಮಿಟಿಯ ಕಾರ್ಯದರ್ಶಿ ಮತ್ತು ಕೋಶಾಧಿಕಾರಿಯಾಗಿದ್ದು ಇದೇ ಪರಿಷತ್ತಿನ ವೇಳೆ ಅದರ ಅಸಾಂಪ್ರತ ಸಭೆಯೊಂದು ಟೊರೊಂಟೊದಲ್ಲಿ ಜರಗಲಿರುವುದು. ಈ ಕಮಿಟಿಯು ಹಿಂದಿನ ಸಭೆಯು 1960ನೇ ಮೇ ತಿಂಗಳಲ್ಲಿ ಆಸ್ಟ್ರೇಲಿಯಾದ ಸಿಡ್ನಿಯಲ್ಲಿ ಜರಗಿತ್ತು.

ಶ್ರೀ ಇರ್ವಾಡಿ ಆನಂದ ಸೆಟ್ಟಿರು—ಇದೇ ಏಪ್ರಿಲ್ 1ರಿಂದ 3ವರ್ಷಗಳ ವರೆಗೆ ಪಬ್ಲಿಕ್ ಪ್ರೊಸೆಕ್ಯೂಟರರಾಗಿ .ನೇಮಿಸಲ್ಪಟ್ಟಿದ್ದಾರೆ.

ಶ್ರೀ ಎಮ್ ವೆಂಕಟರಾಯ ಕಾಮತರು—ಇದೇ ತಾ 1ರಿಂದ 3ವರ್ಷಗಳ ವರೆಗೆ ಸರಕಾರಿ ವಕೀಲರಾಗಿ ನೇಮಕಗೊಂಡಿದ್ದಾರೆ.

ಕಿದಿಯೂರು— ಉಡುಪಿ ಸುಂದರ ಕ್ಲೋತ್ ಸ್ಟೋರ್ಸ್‌ನ ಶ್ರೀ ಕೆ. ಜಿ. ಸುಂದರ ರಾಯರು ತಮ್ಮ ಪುತ್ರ ಚಿ ವಿಷ್ಣುಮೂರ್ತಿ ರಾಯರಿಗೆ ಇದೇ ತಾ. 5ನೇ ಬೆಳಿಗ್ಗೆ ಜರಗಿದ ಬ್ರಹ್ಮೋಪದೇಶದ ಸಂಬಂಧ ಅದೇ ಸಂಜೆ ಕಿದಿಯೂರಿನ ಕಲಾಮಂದಿರಂ ನಿವಾಸದಲ್ಲಿ ಉಪಾಹಾರ ಸಮಾರಂಭವನ್ನು ಏರ್ಪಡಿಸಿದ್ದರು.

ಕನ್ನಡ ಪುಸ್ತಕಗಳಿಗೆ—
ಮತ್ತು
ಶಾಲೆಗಳಿಗೆ ಬೇಕಾಗುವ
ಯಾವತ್ತೂ ಫಾರ್ಮುಗಳೂ
ಹಾಜರಿ ರಿಜಿಸ್ಟ್ರಿಗಳೂ
ಕಥೆಕಾದಂಬರಿ ಇತ್ಯಾದಿಪುಸ್ತಕಗಳಿಗೆ
ನವಭಾರತ ಪುಸ್ತಕ ಭಂಡಾರ
ಉಡುಪಿ

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಿಗಳು,
ಫಾರ್ಮುಗಳು,
ದೊರೆಯುತ್ತವೆ.
ವಿಚಾರಿಸಿರಿ—
ನವಯುಗ ಪ್ರೆಸ್, ಉಡುಪಿ

ಶಬ್ದ ಚಿತ್ರ:

ಶ್ರೀ ಚೆಂಗಲರಾಯ ರೆಡ್ಡಿ

ಉತ್ಪಾದನಾಮಂತ್ರಿಗಳಾಗಿ ಅನುಭವ ಪಡೆದ ಶ್ರೀ ರೆಡ್ಡಿಯವರು ಲಾಲ ಬಹದೂರ ಶಾಸ್ತ್ರಿಯವರು ನೋಡಿಕೊಂಡಿದ್ದ ವಾಣಿಜ್ಯ ಮತ್ತು ಉದ್ದಿಮೆ ಶಾಖೆಯ ಜವಾಬ್ದಾರಿ ಹೊರಲು ಸಮರ್ಥರು.

ಶ್ರೀ ಲಾಲ ಬಹದೂರ ಶಾಸ್ತ್ರಿಯವರಿಗೆ ಗೃಹಶಾಖೆಯನ್ನಿತ್ತ ನಂತರ ಅವರು ಮೊದಲು ನೋಡಿಕೊಳ್ಳುತ್ತಿದ್ದ ವಾಣಿಜ್ಯ ಮತ್ತು ಉದ್ದಿಮೆಶಾಖೆಗಳನ್ನು ಮೈಸೂರಿನ ಶ್ರೀ ಕೆ. ಸಿ. ರೆಡ್ಡಿಯವರಿಗೆ ಕೊಡಲಾಯಿತು. ಇದಕ್ಕೆ ಮೊದಲಿನವರು ಜನಕಾರ್ಯ, ವಸತಿ ಮತ್ತು ಪೂರೈಕೆಯ ಮಂತ್ರಿಗಳಾಗಿದ್ದರು. ಕೇಂದ್ರ ಉತ್ಪಾದನಾ ಮಂತ್ರಿಗಳಾಗಿ ಅನುಭವಗಳಿಸಿದ ಶ್ರೀ ರೆಡ್ಡಿಯವರು ತಮ್ಮ ಹೊಸ ಶಾಖೆಯ ಜವಾಬ್ದಾರಿಗಳನ್ನು ಯಥೋಚಿತವಾಗಿ ನಿರ್ವಹಿಸುವರೆಂಬುದರಲ್ಲಿ ಸಂಶಯವಿಲ್ಲ.

ಮೊತ್ತಮೊದಲಿಗೆ ೧೯೫೨ರಲ್ಲಿ ಉತ್ಪಾದನಾ ಮಂತ್ರಿಗಳಾಗಿ ಕೇಂದ್ರ ಸಂಪುಟದಲ್ಲಿ ಸೇರಿಕೊಂಡರು. ಪೂರ್ಣ ಐದು ವರ್ಷಗಳ ವರೆಗೆ ಅಲ್ಲಿ ಅವರು ದುಡಿದರು. ಈ ಅವಧಿಯಲ್ಲಿ ಅನೇಕ ದೊಡ್ಡ ಕಾರಖಾನೆಗಳು ಸ್ಥಾಪಿತವಾದುವು; ಹಲವಾರು ಕಾರಖಾನೆಗಳ ವಿಸ್ತರಣೆಯೂ ನಡೆಯಿತು. ಭೋಪಾಲದ ದೊಡ್ಡ ವಿದ್ಯುತ್ ಯಂತ್ರೋಪಕರಣಗಳ ಕಾರಖಾನೆಯ ಪ್ರಾರಂಭವು ಇವರಿಂದಲೇ ಆಯ್ತು. ಪೆನ್ಸಿಲಿನ್ ಫೇಕ್ಟರಿ, ಸಿಂಧ್ರಿಯ ಗೊಬ್ಬರದ ಕಾರಖಾನೆ, ವಿಶಾಖ ಪಟ್ಟಣದ ಹಡುಗು ನಿರ್ಮಾಣ ಕಾರಖಾನೆ, ಮೆಶಿನ್‌ಟೂಲ್ಸ್ ಕಾರಖಾನೆ, ಕೇಬಲ್ ಫೇಕ್ಟರಿ ಮೊದಲಾದ ಅನೇಕ ಉದ್ದಿಮೆ ಸಂಸ್ಥೆಗಳ ವಿಸ್ತರಣೆಯೂ ಇವರ ಅಧಿಕಾರದಲ್ಲೇ ನಡೆಯಿತು.

ಕಿರಿಯ ಉದ್ದಿಮೆಗಳ ವಿಕಾಸದೊಂದಿಗೆ ಇವರು ಎಲ್ಲ ರಾಜ್ಯಗಳಲ್ಲೂ ಸಂಚರಿಸಿ, ಖಾದಿ ಮತ್ತು ಗ್ರಾಮೋದ್ಯೋಗ, ಕೈಗಾರಿಕೆ, ರೇಶ್ಮೆ ಉತ್ಪಾದನೆಯ ಉದ್ಯೋಗ ಸಂಬಂಧದ ಯೋಜನೆಗಳನ್ನು ಕಾರ್ಯಾನ್ವಿತಗೊಳಿಸುವ ಪರಿಸ್ಥಿತಿಗಳನ್ನು ಅಭ್ಯಯಸ ನಡೆಸಿದರು. ಲಘು ಉದ್ಯೋಗಗಳಲ್ಲಿ ಇವರಿಗೆ ಅತೀವ ಆಸಕ್ತಿಯಿತ್ತು. ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸಲು ಬೃಹತ್ ಉದ್ಯಮಗಳಿಗಿಂತ ಕಿರಿಯ ಉದ್ದಿಮೆಗಳೇ ಸಾಧಕವೆಂಬುದನ್ನವರು ಕಂಡುಕೊಂಡಿದ್ದರು. ಇವರು ಈ ಶಾಖೆಯ ಮಂತ್ರಿಗಳಾಗಿರುವಾಗ, ಗೃಹ ಉದ್ಯೋಗ ವಿಕಾಸಕ್ಕಾಗಿ ಒಂದು ಕೇಂದ್ರೀಯ ಸಮಿತಿಯೂ ಸ್ಥಾಪಿಸಲ್ಪಟ್ಟಿದೆ.

ಉದ್ಯೋಗಗಳ ವಿಕಾಸ ಮತ್ತು ಉತ್ಪಾದನೆಯಲ್ಲಿ ಹೆಚ್ಚಳವಾಗಬೇಕಾದರೆ, ಮಜೂರರ ಸಹಕಾರ ಅತ್ಯವಶ್ಯವೆಂದು ಶ್ರೀ ರೆಡ್ಡಿ ತಿಳಿಯುತ್ತಾರೆ. ೧೯೫೮ರಲ್ಲಿ ರಾಷ್ಟ್ರೀಯ ಉತ್ಪಾದನಾ ಕ್ಷಮತಾ ಪರಿಷತ್ ಸ್ಥಾಪನೆಗೊಂಡಿತು. ಇದರಲ್ಲಿ ಸರಕಾರ, ಮಿಲ್ ಮಾಲಿಕರು ಮತ್ತು ಮಜೂರರ ಪ್ರತಿನಿಧಿಗಳನ್ನೂ ಸೇರಿಸಿಕೊಳ್ಳಲಾಗಿದೆ. ಇದರ ಸ್ಥಾಪನೆಗಾಗಿ ಶ್ರೀ ರೆಡ್ಡಿಯವರು ತಾವು ಉತ್ಪಾದನಾ ಮಂತ್ರಿಗಳಾಗಿದ್ದಾಗಲೇ ಸಾಕಷ್ಟು ಭೂಮಿಕೆಯನ್ನು ಹಾಕಿದ್ದರು.

ದೇಶದ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಔದ್ಯೋಗಿಕ ಯೋಜನೆಗಳಲ್ಲಿ ವಿದೇಶೀ ನಾಣ್ಯಗಳ ಅಭಾವವು ಕಾಣಿಸಿಕೊಂಡಾಗ ಇವರು ರಶ್ಯ, ಪಶ್ಚಿಮ ಜರ್ಮನಿ, ಬ್ರಿಟನ್, ಫ್ರಾನ್ಸ್, ಸ್ವಿಜರ್‌ಲೆಂಡ್, ಮತ್ತು ಚೆಕೊಸ್ಲೊವಾಕಿಯಾ ದೇಶಗಳನ್ನು ಸಂಚರಿಸಿ, ಗನಿ ಎಣ್ಣೆ ಶೋಧನೆ, ಕನ್ನಡಕದ ಗಾಜು, ಮೆಶಿನ್ ಟೂಲ್ಸ್ ಭಾರವಾದ ಮೆಶಿನುಗಳು ಮತ್ತು ಹಡಗು ನಿರ್ಮಾಣ ಮೊದಲಾದ ಉದ್ಯಮಗಳ ವಿಕಾಸಕ್ಕಾಗಿ ವಿದೇಶ ಸಹಾಯವನ್ನು ಪಡೆದು ಬರುವುದರಲ್ಲಿ ಯಶಸ್ವಿಯಾದರು.

೧೯೫೭ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಗಳಲ್ಲಿ ಮೈಸೂರಿನ ಕೋಲಾರ ಮತದಾರ ಕ್ಷೇತ್ರದಿಂದ ಸಂಸತ್ತಿಗೆ ಆರಿಸಿ ಬಂದ ಶ್ರೀ ಚೆಂಗಲರಾಯ ರೆಡ್ಡಿಯವರು ಕೇಂದ್ರೀಯ ಸಚಿವ ಸಂಪುಟದಲ್ಲಿ ಜನಕಾರ್ಯ, ವಸತಿ ಮತ್ತು ಪೂರೈಕೆಯ ಮಂತ್ರಿಗಳಾಗಿ ನೇಮಿತರಾದರು. ಮೃದು ಭಾಷೆ-ಭಾಷಣ ಮತ್ತು ಕಷ್ಟವನ್ನು ಸಹಿಸುತ್ತ ಕಠೋರ ಪರಿಶ್ರಮ ಪಡುವ ಸ್ವಭಾವದ ಶ್ರೀ ರೆಡ್ಡಿಯವರು ಲೋಕ ಸಭೆ ಮತ್ತು ರಾಜ್ಯಸಭೆಗಳ ಸದ್ಭಾವನೆಗೆ ಪಾತ್ರರಾಗಿದ್ದಾರೆ. ಇವರ ಕಾರ್ಯ ದಕ್ಷತೆ ಮತ್ತಿತರ ಸದ್ಗುಣಗಳಿಂದಲೇ ಇವರಿಗೆ ಈಗ ಹೊಸ ಜವಾಬುದಾರಿಯನ್ನು ಹೊರುವ ಅವಕಾಶ ಬಂದಿದೆ.

೧೯೫೨ರಲ್ಲಿ ಕೇಂದ್ರ ಮಂತ್ರಿಮಂಡಲದಲ್ಲಿ ಸೇರ್ಪಡೆ ಹೊಂದುವುದಕ್ಕೆ ಮೊದಲು ೧೯೪೭ರಿಂದ ೫೨ರ ವರೆಗೆ ಮೈಸೂರಿನ ಮುಖ್ಯಮಂತ್ರಿಗಳಾಗಿದ್ದರು, ೧೯೪೬ರಿಂದ ೫೦ರ ವರೆಗೆ ಇವರು ಭಾರತೀಯ ಸಂವಿಧಾನ ಸಮಿತಿಯ ಸದಸ್ಯರಾಗಿದ್ದರು ೧೯೪೭ರಲ್ಲಿ ಮೈಸೂರಿನಲ್ಲಿ ಉತ್ತರದಾಯಿ ಸರಕಾರ ಸ್ಥಾಪನೆಯಾಗಬೇಕೆಂಬ ಸತ್ಯಾಗ್ರಹದಲ್ಲಿ ಅಗ್ರಪಾತ್ರ ವಹಿಸಿದ್ದರು. ೪೪—೪೫ರಲ್ಲಿ ಅಖಿಳಭಾರತ ರಿಯಾಸತ್ ಜನತಾ ಸಮ್ಮೇಳನದ ಕಾರ್ಯಕಾರಿ ಪರಿಷತ್ತಿನ ಸದಸ್ಯರಾಗಿ, ಅಂತಾರಾಷ್ಟ್ರೀಯ ಖನಿಜ ಸಮ್ಮೇಳನದಲ್ಲಿ ಭಾಗವಹಿಸುವವರಾಗಿ ಬ್ರಿಟನ್ ಮತ್ತಿತರ ಯೂರೋಪ್ಯ ದೇಶಗಳಲ್ಲಿ ಸಂಚರಿಸಿದ್ದರು. ೧೯೩೭ರಿಂದ ೫೨ರ ವರೆಗೆ ಇವರು ಮೈಸೂರ್ ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿಯ ಸದಸ್ಯರಾಗಿಯೂ ಮೈಸೂರು ಕಾಂಗ್ರೆಸ್ಸಿನ ಸಂಸತ್ ಪಕ್ಷದ ನಾಯಕರಾಗಿಯೂ ಇದ್ದರು. ೧೯೩೭—೩೮ ಮತ್ತು ೧೯೪೬—೪೭ರಲ್ಲಿ ಮೈಸೂರು ಕಾಂಗ್ರೆಸ್ಸಿನ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದರು.

೫೯ ವರ್ಷ ಪ್ರಾಯದ ಶ್ರೀ ರೆಡ್ಡಿಯವರು ೨೮ ವರ್ಷ ಹರೆಯದಲ್ಲೇ ಮೈಸೂರು ವ್ಯವಸ್ಥಾಪಕ ಸಭೆಯ ಸದಸ್ಯರಾಗಿದ್ದರು. ಮುಂದೆ ೧೯೩೭ರ ವರೆಗೆ ವಿಧಾನ ಸಭೆಯ ಸದಸ್ಯರಾಗಿದ್ದರು. ೧೯೫೨ರಿಂದ ೫೭ರ ವರೆಗೆ ಇವರು ರಾಜ್ಯ ಸಭೆಯ ಸದಸ್ಯರಾಗಿದ್ದರು. ಅನುಭವಿ ರಾಜನೀತಿಜ್ಞರ ಸಾಲಿನಲ್ಲಿ ಶ್ರೀ ಚೆಂಗಲರಾಯ ರೆಡ್ಡಿಯವರು ಪರಿಗಣಿತರಾಗಿದ್ದಾರೆ.

೧೯೦೨ರ ಮೇ ಎರಡನೆಯ ದಿನ ರಾಜಪೇಟೆಯಲ್ಲಿ ಶ್ರೀ ರೆಡ್ಡಿಯವರು ಹುಟ್ಟಿದರು. ಮದ್ರಾಸದ ಪಚಯಿಯಪ್ಪ ಕಾಲೇಜ್ ಮತ್ತು ಲಾ ಕಾಲೇಜುಗಳಲ್ಲಿ ಇವರು ಉಚ್ಚ ಶಿಕ್ಷಣವನ್ನು ಪಡೆದರು. ಮಕ್ಕಳೊಡನೆ ಆಡುವುದೆಂದರೆ ಇವರಿಗೆ ಬಹಳ ಇಷ್ಟ. ಕಿರುಗಾಟ ಮತ್ತು ತೋಟಗಾರಿಕೆಗಳಲ್ಲಿ ಇವರಿಗೆ ಅನುರಾಗ ಅಧಿಕ ಜೀವನ ಚರಿತ್ರೆ ಮತ್ತು ಔದ್ಯೋಗಿಕ ಪುಸ್ತಕಗಳನ್ನು ಇವರು ವಿಶೇಷವಾಗಿ ಮೆಚ್ಚುತ್ತಾರೆ.

ಪ್ರಗತಿ ಪಥ

(೫ನೇ ಪುಟದಿಂದ)

ದು ವಿಶ್ವದಲ್ಲೇ ಉತ್ತಮವೆಂದು ಖ್ಯಾತಿವೆತ್ತ ಫೈಟರ್ ಮತ್ತು ಬಾಂಬರ್ ವಿಮಾನಗಳು ಈ ಪಡೆಯಲ್ಲಿವೆ ಅದೇ ಸಮಯದಲ್ಲಿ ತರಬೇತಿ, ಸಲಕರಣೆ ಮತ್ತು ಸಂರಕ್ಷಣೆ—ಮೇಲ್ವಿಚಾರಣೆಯಲ್ಲಿಯೂ ಆಧುನಿಕ ವ್ಯವಸ್ಥೆಯನ್ನು ಭಾರತೀಯ ವಿಮಾನ ಪಡೆಯು ಅಳವಡಿಸಿಕೊಂಡಿದೆ. ವಿಮಾನ ಪಡೆಯ ಶಾಲೆ ಮತ್ತು ಕಾಲೇಜುಗಳಿಂದ ಪ್ರತಿ ವರ್ಷ ತರಬೇತಿ ಪಡೆದ ವಿದೇಶಿ ಅಭ್ಯರ್ಥಿಗಳು ಇತರ ರಾಷ್ಟ್ರಗಳಲ್ಲಿ ಭಾರತೀಯ ವಿಮಾನ ಪಡೆಗೆ ಕೀರ್ತಿ ಪ್ರತಿಷ್ಠೆಗಳನ್ನು ತಂದು ಕೊಟ್ಟಿರುವರು.

ಶಾಂತಿ ಸಂದೇಶ ವಾಹಕ

ಭಾರತೀಯ ವಿಮಾನ ಪಡೆಯು ಮಿತ್ರರಾಷ್ಟ್ರಗಳ ವಿಮಾನ ಪಡೆಗಳೊಂದಿಗೆ ಸೌಹಾರ್ದ ನಿಯೋಗಗಳನ್ನು ವಿನಿಮಯ ಮಾಡಿಕೊಂಡಿವೆ. ಇದರಿಂದ ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಈ ಪಡೆಯು ತುಂಬಾ ಗೌರವ ಪಡೆದುಕೊಂಡಿದೆ. ಇಂಡೋನೇಷಿಯಾ, ಘಾನಾ ಮತ್ತು ಈಜಿಪ್ಟ್ ಮಿತ್ರರಾಷ್ಟ್ರಗಳ ವಿಮಾನ ಪಡೆಗಳ ಸಿಬ್ಬಂದಿಗೆ ಭಾರತೀಯ ವಿಮಾನ ಪಡೆಯು ತರಬೇತಿಯನ್ನು ಕೊಟ್ಟಿದೆ, ಕೊಡುತ್ತಿದೆ. ಭಾರತೀಯ ವಿಮಾನ ಪಡೆಗೂ ಇತರ ದೇಶಗಳ ವಿಮಾನ ಪಡೆಗಳಿಗೂ ಇರುವ ಸದ್ಭಾವನೆ ಮತ್ತು ಪರಸ್ಪರ ಸಹಕಾರವನ್ನು ಇದು ವ್ಯಕ್ತಪಡಿಸುತ್ತದೆ.

ಸ್ವಾತಂತ್ರ್ಯನಂತರದಲ್ಲಿ ಆರಂಭವಾದ ಆಕ್ಸಿಲರಿ ಸ್ಕ್ವಾಡ್ರನ್ ಮತ್ತು ಎನ್. ಸಿ. ಸಿ. (ಯೂಥ) ಸ್ಕ್ವಾಡ್ರನ್‌ಗಳು ತ್ವರಿತ ಗತಿಯಲ್ಲಿ ಪ್ರಗತಿ ಗೊಳ್ಳುತ್ತಿವೆ. ಇವು ಭಾರತೀಯ ವಿಮಾನ ಪಡೆಯ ಶಕ್ತಿ ಸಂಪತ್ತಿಗೆ ಬೆಂಬಲವಾಗಿರುವುವು. ಭಾರತೀಯ ವಿಮಾನ ಪಡೆಯು ಸರ್ವತೋಮುಖ ಪ್ರಗತಿಯನ್ನು ಸಾಧಿಸಿದೆ, ಸಾಧಿಸುತ್ತಿದೆಯೆನ್ನಲಡ್ಡಿಯಿಲ್ಲ.

ಸಂಘಟಿತ ಬಲ

ಸ್ವತಂತ್ರ ಭಾರತದ ವಿಮಾನ ಪಡೆಯು, ಮಾತೃಭೂಮಿಯ ರಕ್ಷಣೆಗಾಗಿ ತನ್ನ ಶಕ್ತಿ ಸಾಮರ್ಥ್ಯವನ್ನು ಸಂವರ್ಧಿಸಿಕೊಂಡಿದೆ. ದೇಶದ ಸ್ವಾತಂತ್ರ್ಯ ರಕ್ಷಣೆಗಾಗಿ ಸಜ್ಜುಗೊಂಡಿದೆ. ಈ ಪಡೆಯು ಶಿಸ್ತು, ಕರ್ತವ್ಯ ನಿಷ್ಠೆಯ ಪರಂಪರೆಯನ್ನು ಬೆಳೆಸಿಕೊಂಡು ಬಂದು, ದೇಶದ ಮೆಚ್ಚುಗೆಗೆ, ಪ್ರೀತಿಗೆ ಪಾತ್ರವಾಗಿದೆ.

ಏರ್ ಮಾರ್ಷಲ್ ಎಸ್. ಮುಖರ್ಜಿಯವರ ಆಕಸ್ಮಿಕ ನಿಧನದಿಂದ ಭಾರತೀಯ ವಿಮಾನ ಪಡೆಗೆ ಭರಿಸಲಾರದ ನಷ್ಟವಾಗಿದೆ. ವಿಮಾನ ಬಲದ ಇಂದಿನ ಅಭಿವೃದ್ಧಿಗೆ ಅವರು ತುಂಬಾ ಶ್ರಮಿಸಿದವರು. ಆದರೆ, ಇಲ್ಲಿ ಸಮಾಧಾನ ಪಡಬಹುದಾದ ಅಂಶವೆಂದರೆ, ವಿಖ್ಯಾತ ವೈಮಾನಿಕರೂ, ನುರಿತ ಆಡಳಿತ ತಜ್ಞರೂ ಆದ ಏರ್ ಮಾರ್ಷಲ್ ಎ. ಎಂ. ಎಂಜಿನಿಯರ್ ಅವರು ಅವರ ಸ್ಥಾನವನ್ನಾಕ್ರಮಿಸಿ ಈ ಪಡೆಯನ್ನು ಮುನ್ನಡೆಸುತ್ತಿರುವುದು. ಭಾರತೀಯ ವಿಮಾನ ಪಡೆಯೊಂದಿಗೆ ಬೆಳೆದು ಬಂದಿರುವ ಅವರ ನೇತೃತ್ವದಲ್ಲಿ ಪಡೆಯು ಮತ್ತಷ್ಟು ಪ್ರಗತಿಯನ್ನು ಸಾಧಿಸುವುದರಲ್ಲಿ ಸಂಶಯವಿಲ್ಲ.

ಸಾರ್ವಜನಿಕರ ನಿರಂತರ ಬೆಂಬಲದೊಂದಿಗೆ ಭಾರತೀಯ ವಿಮಾನ ಪಡೆಯು ರಾಷ್ಟ್ರದ ಸೇವೆಯಲ್ಲಿ ದಿಟ್ಟತನದಿಂದ ನಿರತವಾಗಿದೆ. ತನ್ನ ಸಲಕರಣೆಗಳನ್ನು ಶಕ್ತಿ ಸಂಪತ್ತುಗಳನ್ನು ವರ್ಧಿಸಿಕೊಂಡು ಕರ್ತವ್ಯಮುಖವಾಗಿ ಮತ್ತಷ್ಟು ದಕ್ಷತೆಯಿಂದ ಮುಂದುವರಿಯುತ್ತಿದೆ.

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ
ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ.	ಬಿಳಿ ಕಾಗದ.

120 ಪುಟಗಳು.	ಒಂದೂಕಾಲು ರೂಪಾಯಿ ಬೆಲೆ.

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

ಮಾರಾಟಗಾರರು: ನವಭಾರತ ಬುಕ್ ಡಿಪೊ, ಉಡುಪಿ.

ಶ್ರೀ ರಾಮಕೃಷ್ಣ ಪರಮಹಂಸರು ಕಂಡ

ಶ್ರೀರಾಮ

ಮಾನವರು ಪರಮಾತ್ಮನನ್ನು ಅವರವರ ಅಭಿರುಚಿಗಳಿಗೆ ತಕ್ಕಂತೆ ಪೂಜಿಸುವರು. ಮಹರ್ಷಿಗಳು ಜ್ಞಾನಮಾರ್ಗವನ್ನು ಕೈಗೊಂಡು ದೇಶವನ್ನು ಉದ್ಧರಿಸಿದರು. ಭರದ್ವಾಜ ಮುನಿಯು ರಾಘವನನ್ನು ಸಚ್ಚಿದಾನಂದನೆಂದು ವಿವರಿಸಿದನು. ಇನ್ನು ಕೆಲವರಿಗೆ ರಾಮನು ಬರೇ ದಶರಥನ ಪುತ್ರ. ಈ ಇಡೀ ಜಗತ್ತು ಶ್ರೀ ರಾಮಚಂದ್ರನ ಅಯೋಧ್ಯೆಯೆಂದು ಶ್ರೀ ರಾಮಕೃಷ್ಣ ಪರಮಹಂಸರು ಹೇಳುತ್ತಾ ಇದ್ದರು. ಶ್ರೀರಾಮನು ಆಸ್ಥಾನಾರೂಢನಾದಾಗ ಶತರವಿಗಳ ಪ್ರಕಾಶದಿಂದ ಶೋಭಿಸುತ್ತಿದ್ದನು ಎಂದು ಪರಮಹಂಸರು ಭಾವಿಸುತ್ತಿದ್ದರು. ಶ್ರೀರಾಮನಲ್ಲಿ ಶರಣು ಬಂದರೆ ಚಿತ್ತದಲ್ಲಿರುವ ಸಂಶಯಗಳು ದೂರವಾಗುವುವು ಎನ್ನುತ್ತಿದ್ದರು. "ರಮಯತೀ ರಾಮಃ" ಎಂಬುದಾಗಿ ತುಳಸೀದಾಸನೂ ವಾಲ್ಮೀಕಿಯೂ ರಾಮನಾಮವನ್ನು ಹಾಡಿದರು. "ಅಸುರರ ನಾಶಕ್ಕಾಗಿ ಜನ್ಮವೆತ್ತಿದ ನೀನು ಹಗಲು ಹೊತ್ತಿನಲ್ಲಿ ಏಕೆ ಹುಟ್ಟಿದೆ? ರವಿವಂಶ ಸಂಭೂತನಾದುದರಿಂದಲೇ ಇರಬಹುದು" ಎಂದು ಒಬ್ಬ ಸಂಶಯವುಳ್ಳವನು ಶ್ರೀ ರಾಮಚಂದ್ರನಲ್ಲಿ ಪ್ರಶ್ನಿಸಿದಾಗ ಶ್ರೀ ರಾಮಚಂದ್ರನು ಉತ್ತರವಿತ್ತದ್ದು ಈ ರೀತಿ—"ನಿನ್ನ ಮಾತು ಸರಿ; ಅಸುರ ನಾಶಕ್ಕೆ ರಾತ್ರಿಯ ಕಾಲವೇ ಪ್ರಶಸ್ತವಾದುದು. ಮುಂದಿನ ಯುಗದಲ್ಲಿ ನಾನು ಕೃಷ್ಣನಾಗಿ ಅವತರಿಸುವಾಗ ನನ್ನ ತಪ್ಪನ್ನು ತಿದ್ದಿಕೊಂಡು ರಾತ್ರಿಕಾಲದಲ್ಲೇ ಜನ್ಮವೆತ್ತುವೆನು". ಶ್ರೀರಾಮನಲ್ಲಿ ಎಷ್ಟು ದೀನತ್ವವಿದ್ದಿತ್ತು ಎಂಬುದನ್ನು ಈ ವಿಷಯದಿಂದ ನಾವು ಅರಿತುಕೊಳ್ಳಬಹುದು" ಎಂಬುದಾಗಿ ಶ್ರೀ ರಾಮಕೃಷ್ಣ ಪರಮಹಂಸರು ಪದೇ ಪದೇ ಹೇಳುತ್ತಿದ್ದರು.

ಎಂ. ಬಿ. ಶಂಕರ ರಾವ್, ಐ.ಎ.ಎಸ್.
(ನಿವೃತ್ತ)

"ನಚಿಕೇತ"ರ
ಇನ್ನೊಂದು ನವೀನ ಕಾದಂಬರಿ—
ಋಣ ಯಾತ್ರೆ
ಇದೀಗ ಪ್ರಕಟವಾಗಿದೆ.
ಬೆಲೆ ರೂ. 1-50 ನ. ಪೈಸೆ.
ಮೊದಲು ಪ್ರಕಟವಾದ ಕಾದಂಬರಿ—
ಭಾವಾರ್ಚನೆ
ಬೆಲೆ ರೂ. 1-25 ನ. ಪೈಸೆ.
ಪ್ರತಿಗಳು ಸಿಗುವ ಸ್ಥಳಗಳು:—
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ಪುಸ್ತಕ ವಿಮರ್ಶೆ

[ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ.— ಸಂ. ನ.

God and His Manifestations Man and his Actions (Teachings from Gita for Layman) By Sri K. R. K. Bhat Published by Mrs. Asha K. R. K. Bhat, Gagan Mahal Road, Hyderabad. Pages: 24. Price: 40nP.

ವಿಶ್ವರಾಜ್ಯ ವಿಶ್ವಬಂಧುತ್ವಗಳಿಗೆ ಸರಿಹೊಂದುವಂತೆ ಒಂದು ಧರ್ಮ ಗ್ರಂಥವು ಬೇಕಾದರೆ, ಅದಕ್ಕೆ ಭಗವದ್ಗೀತೆಯೇ ಸಮರ್ಥವಾದುದು ಮಹಾಭಾರತ ಮಹಾ ಕಾವ್ಯದ ಒಂದಂಗವಾಗಿರುವ ಇದರ ಹಿರಿಮೆಯು ವರ್ಣನಾತೀತವಾದುದ್ದು, ಚರ್ಚಾತೀತವಾದುದು; ಸರ್ವಮಾನ್ಯವಾದುದು. ಗೀತೆಯಲ್ಲಿ ನಿರೂಪಿಸಲ್ಪಟ್ಟ ತತ್ವಗಳು ವಿಶಾಲವಾಗಿವೆ; ವಿಶ್ವಮಾನ್ಯವಾಗಿವೆ; ಅಮೃತವಾಗಿವೆ. ಅವು ಯಾವುದೇ ಒಂದು ಗುಂಪಿಗೆ, ಮತಕ್ಕೆ, ವರ್ಣಕ್ಕೆ, ದೇಶಕ್ಕೆ, ಕಾಲಕ್ಕೆ ಪರಿಸೀಮಿತವಾಗಿರುವುದಿಲ್ಲ. ಉಪನಿಷತ್ತುಗಳಲ್ಲಿ ವಿವರಿಸಿದ ತತ್ವಗಳನ್ನೇ ಆಧರಿಸಿರುವ ಈ ತತ್ವಗಳು ಪ್ರತಿಯೊಬ್ಬನಿಗೂ ನಿಲುಕುವಂತಿವೆ. ಗೀತೆಯ ಅಧ್ಯಯನ ಮನನ ಮತ್ತು ಆಚರಣೆಗಳು ತೃಪ್ತಿ, ಶಾಂತಿ, ಸ್ವಾತಂತ್ರ್ಯ, ರಕ್ಷಣೆ ಮತ್ತು ಸಮರ್ಪಕತೆಗಳಿಗೆ ಹೇತುವಾಗಿದೆ.

ಈ ದೃಷ್ಟಿಯಿಂದ ಗೀತೆಯ ಪ್ರಚಾರ ಜಗತ್ತಿನ ಮನೆಮನೆಯಲ್ಲೂ ಆಗಬೇಕು; ಅದರ ತತ್ವಗಳು ಅನುಷ್ಠಾನಕ್ಕೆ ಬರಬೇಕು. "ಓಂ" ಮತ್ತು "ಓಂ ತತ್ ಸತ್"ಗಳ ಪಂಚ್ಞಾನ ಎಲ್ಲರಲ್ಲಿಯೂ ಮೂಡಬೇಕು. ಆಗಲೇ ಮಾನವ ಸಮಾಜದ ಕಲ್ಯಾಣವಾದೀತು. ಈಗಾಗಲೇ ಕನ್ನಡದಲ್ಲಿ 'ಗೀತಾ ಲಹರಿ' ಮತ್ತು ಗೀತೆ ತೋರಿದ ಬೆಳಕು' ಎಂಬೆರಡು ಕಿರುಹೊತ್ತಿಗೆಗಳನ್ನು ರಚಿಸಿದ ಶ್ರೀ ಕೆ. ಆರ್. ಕೆ. ಭಟ್ಟರು ಕನ್ನಡೇತರರಿಗೆ ಸಹಾಯವಾಗಲೆಂದು ಈ ಕಿರುಹೊತ್ತಿಗೆಯನ್ನು ಬರೆದಿದ್ದಾರೆ. ಗೀತೆಯು ಉಪದೇಶಿಸುವ ಮುಖ್ಯ ನೀತಿಗಳನ್ನು ಅವರ ತತ್ವಗಳನ್ನು ಅತಿ ಸಂಗ್ರಹವಾಗಿ ಇಲ್ಲಿ ಕೊಟ್ಟಿದ್ದಾರೆ. ಇದು ಭಗವದ್ಗೀತೆಯನ್ನು ಪರಿಸುವ—ಅಧ್ಯಯನ ನಡೆಸುವ ಆಸಕ್ತಿಯನ್ನು ಕೆರಳಿಸಲು ಸಶಕ್ತವಾಗಿದೆ. ಮೂಲವನ್ನು ಓದುವುದಕ್ಕೆ ಅಸಮರ್ಥರಾದವರಾದರೂ ಇದರ ಸದುಪಯೋಗವನ್ನು ಮಾಡಿಕೊಂಡಲ್ಲಿ ಅವರ ಜೀವನ ಹಸನಾಗುವುದು. ಅಷ್ಟೊಂದು ಪ್ರಭಾವಬೀರುವ ಶಕ್ತಿ ಈ ಎಳೆಯ ಪುಸ್ತಕಕ್ಕಿದೆ. ಈ ಪುಸ್ತಕವನ್ನು ಮಾರಿಬರುವ ಹಣವು ಎಳೆಯರಲ್ಲಿ ಗೀತೆಯ ಪ್ರಚಾರಕ್ಕೆ ಮೀಸಲಾಗಿರುವುದರಿಂದ ಈ ವ್ಯಾಪಾರ ಕಾರ್ಯದಲ್ಲಿ ಪ್ರವೃತ್ತರಾಗುವುದು ಎಲ್ಲರ ಕರ್ತವ್ಯವಾಗಿದೆ.

ಶ್ರೀ ಶಂಕರ ಜಯಂತೀ ಸಭಾ— ಬಾಳೆಕುದುರು ಮಠ, ಹಂಗಾರಕಟ್ಟೆ—ಇದರ ೧೪ನೆಯ ವರ್ಷಕ್ಕೆ ಸಂಬಂಧಿಸಿದ ಸಂಕ್ಷಿಪ್ತ ವರದಿಯು ಕೈಸೇರಿದೆ. ಶ್ರೀ ಮಚ್ಛಂಕರಾಚಾರ್ಯರ ಜಯಂತ್ಯುತ್ಸವವನ್ನು ಆಚರಿಸುವುದರೊಡನೆ ಶ್ರೀಮದಾಚಾರ್ಯರಿಂದ ಬರೆಯಲ್ಪಟ್ಟ ವಿವಿಧ ಗ್ರಂಥಗಳು ಹಾಗೂ ಮತ್ತಿತರ ಧರ್ಮಗ್ರಂಥಗಳ ಅಧ್ಯಯನಾಸಕ್ತಿಯನ್ನು ಹುಟ್ಟಿಸುವ ಉದ್ದೇಶವುಳ್ಳ ಈ ಸಭೆಯ ಕಾರ್ಯಕಲಾಪಗಳು ಶ್ಲಾಘನೀಯವಿವೆ. ಇದರ ಕಾರ್ಯಕ್ರಮಗಳು ಸಾಕಷ್ಟು ವಿಸ್ತಾರಗೊಂಡು ಸಭೋದ್ದೇಶಗಳು ಯಶಸ್ವಿಯಾಗಲೆಂದು ಹಾರೈಸುತ್ತೇವೆ.

—ಗೋರಾ.

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ
ಮನೆ ಮದ್ದು
ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್.ಐ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು.
ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಸುಲಭದಲ್ಲಿ ಇಂಗ್ಲಿಷ್
(ENGLISH MADE EASY)
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ
ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು.
ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ

ಮಧು ಸಂಚಯ

ಗೆಳೆಯರ ಬಳಗ ಬೆಳೆಯಬೇಕಾದರೆ ನಿನ್ನೆಡೆಗೆ ಬರುವವರನ್ನು ಟೀಕಿಸದಿರು; ಅವರ ಮಾತಿಗೆ ತಲೆದೂಗಿ ಕೈಚಪ್ಪಾಳೆ ಹಾಕು!

oo oo

ಪ್ರತಿಭಾವಂತನಿಗೆ ಗೆಳೆಯರು ಕಡಿಮೆ. ಹುಲಿ ಸಿಂಹಗಳು ಯಾವಾಗಲೂ ಒಂಟಿಯಾಗಿಯೇ ಇರುತ್ತವೆ.

oo oo

ನಾಲಮಾಡಿ ತಿಂದು ಸಾಲದ ಬಗ್ಗೆ ಚಿಂತಿಸುತ್ತಾ ಬೆಳಗ್ಗೆ ಏಳುವದಕ್ಕಿಂಥಾ ರಾತ್ರೆ ಉಪವಾಸ ಮಲಗುವುದು ಹಿತಕರ.

oo oo

ನಿನ್ನ ತಪ್ಪನ್ನು ಬಯಲಿಗೆಳೆದು ಅದನ್ನು ಇತರರ ಮುಂದೆ ಟೀಕಿಸು. ಆದರಿಂದ ಇತರರನ್ನು ಸನ್ಮಾರ್ಗಕ್ಕೆ ಸುಲಭದಲ್ಲಿ ಹಚ್ಚುವಿ.

oo oo

ಸುಖಕರವಾಗಿ ಜೀವಿಸಬೇಕೆನ್ನುವ ತತ್ವಕ್ಕಿಂಥಾ ಮನಃಪ್ಪನಾಗಿ ಸಾಯಬೇಕೆನ್ನುವ ತತ್ವ ಹಿರಿದು.

ನಂಬಿಕೆಯೇ ಶಕ್ತಿಯ ಮೂಲ; ಅಪನಂಬಿಕೆಯೇ ನಿರ್ಬಲತೆಯ ಜಾಲ.

oo oo

ಸತತ ಸಾಧನೆಯೇ ನಿರಂತರ ಜಯದ ತಳಹದಿ.

oo oo

ತೃಪ್ತಿಯೆಂಬುದು ರೋಗಿಯ ರೋಗ ನಿವಾರಣೆಯ ದಿವ್ಯೌಷಧ. ನಿರೋಗಿಯ ಸರ್ವ ಸುಖದ ಆಹಾರ.

oo oo

ತಪ್ಪನ್ನು ಒಪ್ಪಿಕೊಳ್ಳಲು ಹಿಂಜರಿಯುವವನ ಜೀವನವು ನಿಂತ ಮೆಟ್ಟಲಲ್ಲೇ ಕೊಳೆಯ ಬೇಕಾಗುತ್ತದೆ.

oo oo

ಹಣವನ್ನಾಧರಿಸಿದ ಸುಖ ಶಾಂತಿ, ಹಣದ ಚೀಲದಂತೆಯೇ ಜಡ ಮತ್ತು ಭಾರ. ನೀತಿಯನ್ನು ಆಧರಿಸಿದ ಸುಖ, ಶಾಂತಿ ಬೆಳಕು, ಗಾಳಿಗಳಂತೆ ಹಗುರ ಮತ್ತು ಹರ್ಷದಾಯಕ.

oo oo

ಹಣ ತೆತ್ತರೂ ಕೊಳ್ಳಲಾರದ ವಸ್ತುಗಳ ಬಗ್ಗೆ ಎಚ್ಚರವಿರಲಿ. ಹಣ ತೆತ್ತರೂ ಸರಿಪಡಿಸಲಾರದ ತಪ್ಪುಗಳ ಬಗ್ಗೆ ಭಯವಿರಲಿ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ. ನ.

Tel: 'BLUEYAGAR'. — ಚಿನ್ನ ಮುತ್ತು ವಜ್ರಗಳ ಆಧುನಿಕ ತವರುಮನೆ — Phone: 374.
ಕೆ. ಆರ್. ಕೆ. ಶೇಟ್ ಡಯಮಂಡ್ ಮಾರ್ಟ್
ಸ್ಥಾಪನೆ:1919] ಚಿನ್ನ ಮುತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು.[ಮಾಲಿಕ: ಕೆ.ಕೆ.ಆರ್.ಶೇಟ್

ಸಾಹಿತ್ಯ ಕ್ಷೇತ್ರ:

ಸುರಲೋಕದ ಇಂದ್ರ - ಸಾಹಿತ್ಯಕಾರ

ಸಾಹಿತ್ಯಕಾರ ಜನಜೀವನದ ರೋಷ—ದ್ವೇಷ ವಿಷವನ್ನು ಸೇವಿಸುವ ನೀಲಕಂಠನಾಗಬೇಕು—ಆಗ ಮಾತ್ರ ಅವನ ಕೃತಿ ಮಾನವ ಧರ್ಮದ ಉದಾತ್ತ ಸಂದೇಶವನ್ನು ನೀಡಬಲ್ಲುದು. ಅವನು ಸ್ವರ್ಗೀಯ ಸುಖವುಣ್ಣುತ್ತ ಸುರಲೋಕದ ಇಂದ್ರನಾಗಬಲ್ಲನು.

ಶ್ರೀ ಸಿದ್ಧರಾಜ ಬಾಳೇಕುಂದ್ರಿ ಬೆಳಗಾಂವಿ.

ಈ ಜಗತ್ತಿನಲ್ಲಿ ಸುಖ ಬಯಸುವವರ ಸಂಖ್ಯೆ ಹೆಚ್ಚಾಗಿದೆ. ಸುಖಜೀವನದ ಸಿದ್ಧಾಂತಗಳನ್ನು ಅರಿಯದೆ ಜನ ಸುಖಜೀವನಕ್ಕಾಗಿ ಹಂಬಲಿಸುವವರು. ಆದರೆ ನಿಜವಾದ ಸುಖಜೀವಿಗಳು ಈ ಜಗತ್ತಿನಲ್ಲಿ ಯಾರು? ಶ್ರೀಮಂತರೆ, ರಾಜಕಾರಣಿಗಳೆ, ನಾಯಕರೆ ಸುಖಜೀವಿಗಳೆಂದು ನಾವು ತಿಳಿದುಕೊಂಡಿದ್ದರೆ ಅದು ಸರ್ವಥಾ ತಪ್ಪು: ಈ ಜಗತ್ತಿನಲ್ಲಿ ಸಾಹಿತಿಗಳಷ್ಟೇ ಸುಖಜೀವಿಗಳು. ಹರಕು ಬಟ್ಟೆ, ಎಣ್ಣೆಗಾಣದ ತಲೆ, ಮೊದಲಾದ ಬಹಿರಂಗ ಆಕಾರವುಳ್ಳ ಸಾಹಿತಿ ಸುಖಜೀವಿ, ಸುಖಲೋಕದ ಇಂದ್ರನೆಂದರೆ ನೀವು ನಗಬಹುದು. ಲೇಖಕನೇ ನಿಜವಾದ ಸುಖಜೀವಿ ಹೇಗೆಂಬುದನ್ನು ನಾವು ಇಲ್ಲಿ ತಿಳಿದುಕೊಳ್ಳುವಾ.

ಸಮಸ್ತ ಸುಖಗಳ ಸಂಪೂರ್ಣ ವೈಚಾರಿಕ ಪವಿತ್ರತೆ ಸತ್ಯತೆ ಹಾಗೂ ಸಾಧನೆಯಲ್ಲಿ ನಿರತನಾದ, ಲೇಖಕನ ಜೀವನದಲ್ಲಿ ಮೇಲಿನ ಮೂರು ಸಂಗತಿಗಳು ಪ್ರಯೋಪ್ತವಾಗಿರುವವು ಲೇಖಕ ತನ್ನ ವಿಚಾರಗಳಲ್ಲಿ ಸರ್ವಸ್ವತಂತ್ರನಾಗಿರುವನಲ್ಲದೆ ಕಲೆಯನ್ನು ಅಭಿವ್ಯಕ್ತಗೊಳಿಸುವುದರಲ್ಲಿ ನಿಪುಣನಾಗಿರುವನು. ಲೇಖಕನು ಯಾರ ಬಂಧನದಲ್ಲೂ ಇರುವದಿಲ್ಲ; ಆದ್ದರಿಂದ ಅವನು ವಿಚಾರಲೋಕದಲ್ಲಿ ಸಚ್ಚಿದಾನಂದ ಸ್ವರೂಪದ ದಿವ್ಯಾನಂದವನ್ನು ಪಡೆಯುವ ಆನಂದಜೀವಿಯಾಗಿದ್ದಾನೆ ಲೇಖಕನಿಗಾಗಿ ಪ್ರಕೃತಿ ಹಾಗೂ ಕಲ್ಪನಾಲೋಕದ ಬಾಗಿಲುಗಳೆಲ್ಲ ಸದಾ ಅವನಿಗಾಗಿ ತೆರೆದಿರುವವು. ಒಂದು ವೇಳೆ ಬಾಗಿಲು ಮುಚ್ಚಿದರೂ ಸಹ ಲೇಖಕ ತನ್ನ ಲೆಕ್ಕಣಿಕೆಯ ಕೀಲಕೈಯಿಂದ ಮುಚ್ಚಿದ ಬಾಗಿಲನ್ನು ತೆರೆಯಬಲ್ಲನು. ರವಿ ಕಾಣದ್ದನ್ನು ಕವಿ ಕಾಣಬಲ್ಲ. ಕಲ್ಪನಾಶಕ್ತಿಯು ಅವನಿಗೆ ಎಲ್ಲ ಲೋಕಗಳಲ್ಲಿ ದಿವ್ಯತೆಯನ್ನು ಕಣ್ಣೆದುರು ತಂದು ನಿಲ್ಲಿಸುವದು. ಹೃದಯದಿಂದ ಉಗಮ ಹೊಂದಿದ ಪವಿತ್ರ ಭಾವನಾಗಂಗೆ ಅವನ ಅದ್ಭುತ ಕಲ್ಪನಾ ಸುಂದರಿಯನ್ನು ಭಾವನಾಗುಣ ಸಂಪನ್ನೆಯನ್ನಾಗಿ ಮಾಡುವದು. ಪ್ರತಿಯೊಬ್ಬ ಲೇಖಕನಾಗಲಿ ಸಾಹಿತಿಯಾಗಲಿ ತನ್ನ ಬಗ್ಗೆ ತನ್ನ ಲೇಖನ ಕಲೆಯ ಬಗ್ಗೆ ಇರುವ ಮಹತ್ವ ಹಾಗು ಗೌರವವನ್ನು ಕಳೆದುಕೊಳ್ಳಬಾರದು. ಏಕೆಂದರೆ ಲೇಖಕ ಕೋಟಿ ಕೋಟಿ ಹೃದಯಗಳ ಹೃದಯೇಶ್ವರ. ಲೇಖಕ ಯಾವದೇ ಕಾರಣದಿಂದ ಧನಿಕ ವ್ಯಕ್ತಿಯ ಪ್ರಭಾವಕ್ಕೆ ಒಳಗಾಗಿ ತನ್ನ ಆತ್ಮವಂಚನೆಗೆ ಗುರಿಯಾಗಿ ಸಾಹಿತ್ಯ ಸೃಷ್ಟಿಯನ್ನು ಆರಂಭಿಸಿದರೆ ಅವನ ಸಾಹಿತ್ಯದಲ್ಲಿ ಜೀವನ ಸತ್ಯತೆಯಿರುವುದಿಲ್ಲ. ಇಂಥ ಲೇಖಕನು ಆತ್ಮಿಕ ಸುಖ ಆನಂದವನ್ನು ಪಡೆಯಲಾರ

ಆಂಗ್ಲ ಸಾಹಿತ್ಯದ ಸುಪ್ರಸಿದ್ಧ ಕಾದಂಬರಿಕಾರೆಯಾದ ಮೇರಿ ಕೊರೆಲಿನ ತನ್ನ ಅನುಭವಗಳನ್ನು ಜಗತ್ತಿನ ಜನರಿಗೆ ತಿಳಿಸುತ್ತಾ ಈ ವಿಷಯವನ್ನೂ ತಿಳಿಸಿದ್ದಾಳೆ—ಲೇಖಕನ ಜೀವನದಲ್ಲಿ ದೊರೆಯುವ ಆತ್ಮಿಕ ಸುಖ ಆನಂದ ಅತುಲನೀಯವಾಗಿದೆ. ಮೇರಿ ಕೊರಲಿನಳ ವಿಚಾರವನ್ನೂ ನಾವು ಸ್ವಲ್ಪ ಸಮಯದವರೆಗೆ ಕೂಲಂಕಷವಾಗಿ ವಿಚಾರಿಸಿದರೆ ಅವಳ ಅಭಿಪ್ರಾಯ ಸರಿಯಾಗಿದೆಂದು ಒಪ್ಪದೆ ಗತ್ಯಂತರವಿಲ್ಲ.

ಕರ್ನಾಟಕದಲ್ಲಿ ಲೇಖನ ವೃತ್ತಿಯ ಮೇಲೆ ಜೀವಿಸುವ ಸಾಹಿತಿಗಳು ಬಹಳ ಕಡಿಮೆ ಲೇಖಕನ ಜೀವನ ಹೇಗಿದೆಂಬುದನ್ನು ವಿಚಾರಿಸುವಾ. ಸಾಹಿತ್ಯ ಕೃತಿಗಳ ರಚನೆಯಿಂದ ಜೀವನ ನಿರ್ವಹಿಸುವ ಸಾಹಿತಿ ವಿಚಾರ ಯಂತ್ರದಂತೆ ಬರೆಯತೊಡಗಿದರೆ ಅವನ ಸಾಹಿತ್ಯದಲ್ಲಿ ಸಜೀವತೆ ಎಷ್ಟು ಪಟ್ಟು ಸತ್ಯವಾಗಿ ಚಿತ್ರಿಸಲಾಗಿದೆಂಬುದನ್ನು ಹೇಳುವದು ಕಠಿಣ. ಪ್ರಕಾಶಕರಿಂದ ತೊಂದರೆಗೊಳಗಾದ ಲೇಖಕ ತನ್ನ ಸಾಹಿತ್ಯ ಕೃತಿಗಳನ್ನು ಕಾಯಿಪಲ್ಲೆಯಂತೆ ಮಾರಿದರೆ ಪ್ರಕಾಶಕ ಶ್ರೀಮಂತನಾಗಬಹುದು; ಆದರೆ ಲೇಖಕನ ಅಂತರಂಗ ಹಾಗೂ ಬಹಿರಂಗ ಜೀವನ ದ್ರರಿದ್ರತೆಯ ಬೀಡಾಗುವದು. ಇಂಥ ಲೇಖಕ ಸಮಾಜಕ್ಕೆ ಆದಾವ ಬಗೆಯ ಜೀವನ ಸಂದೇಶವನ್ನು ಕೊಡಲು ಸಮರ್ಥನಾಗಬಲ್ಲ! ಪ್ರಸಿದ್ಧಿಗೆ ಬರಬೇಕೆನ್ನುವ ಹುಚ್ಚು ಹಂಬಲವನ್ನಿಟ್ಟುಕೊಂಡ ಲೇಖಕ ದುಡ್ಡಿದ್ದ ಧನಿಕರ ಬೆನ್ನುಹತ್ತಿದ್ದರೆ ಧನಿಕರ ಜೀವನ ಚರಿತ್ರೆಯನ್ನು ಅವರಿಗೆ ಪ್ರಿಯವಾಗುವಂತೆ ಅವರ ದುಷ್ಕರ್ಮಗಳನ್ನು ಮುಚ್ಚಿ ಜಗ ಮೆಚ್ಚುವಂತೆ ಬರೆದರೆ ಸಾಹಿತ್ಯ ಶಾರದೆಗೆ ದ್ರೋಹ ಬಗೆದಂತೆ ಸರಿ. ಇಂಥ ಲೇಖಕ ಆತ್ಮಿಕ ಆನಂದ ಸುಖಕ್ಕೆ ಎರವಾಗುವನಲ್ಲದೆ ಅವನ ಜೀವನವನ್ನು ತಾನೆ ಅಸಂತೋಷಕ್ಕೆ ಗುರಿಮಾಡಿಕೊಳ್ಳುತ್ತಾನೆ. ಇಂಥ ಲೇಖಕರ ದೃಷ್ಟಿಕೋನ ಬದಲಾಗುವದಕ್ಕೆ ತಡವಾಗುವದಿಲ್ಲ. ಈ ದೃಷ್ಟಿಕೋನ ಪರಿವರ್ತನೆ ಅವರ ಭಾಗ್ಯವನ್ನೆ ಬದಲಾಯಿಸುವದು. ಕರ್ನಾಟಕದ ಸುಪ್ರಸಿದ್ಧ ಕವಿಗಳೊಬ್ಬರು ತಮ್ಮ ಮನೆಯ ಅಡಚಣಿಗೆ ಬೇಸತ್ತು. ಅಮೌಲ್ಯವಾದ ಒಂದು ಸಾಹಿತ್ಯಕೃತಿಯನ್ನು ಪ್ರಕಾಶಕನಿಗೆ ಕೇವಲ ೫೦ ರೂಪಾಯಿಗಳಿಗೆ ಮಾರಿದರಲ್ಲದೆ ಎಲ್ಲ ಹಕ್ಕುಗಳನ್ನು ಕಳೆದುಕೊಂಡರು

ಆಂಗ್ಲ ಸಾಹಿತಿ ರಾಬರ್ಟ ಬರ್ನ್ಸನಿಗೆ ಆರಂಭದಲ್ಲಿ ಸಮಾಜದ ಪ್ರತಿಷ್ಠಿತ ಪ್ರಭಾವಶಾಲಿ ವ್ಯಕ್ತಿಗಳು ಬಹು ವಿಧವಾಗಿ ಗೌರವವನ್ನು ಕೊಟ್ಟರು. ಆದರೆ ಅದೇ ರಾಬರ್ಟ ಬರ್ನ್ಸನು ರೋಗಿಯಾಗಿ ಹಾಸಿಗೆಯನ್ನು ಹಿಡಿದು ಮೃತ್ಯುವಿನ ದಿನವನ್ನು ಎಣಿಸುವ ಸಮಯದಲ್ಲಿ ಒಬ್ಬ ಪ್ರತಿಷ್ಠಿತ ವ್ಯಕ್ತಿ ಸಹ ಅವನ ಹತ್ತರ ಬಾರದೆ ಅವನ ಖಾಲಿನ ಯಾತನೆಯನ್ನು ಭೋಗಿಸಲು ಅವನೊಬ್ಬನನ್ನೆ ಬಿಟ್ಟರು. ಇಂಥ ಸಮಯದಲ್ಲಿ ಕೇವಲ ೫ ಪೌಂಡುಗಳಿಗಾಗಿ ತನ್ನ ಪ್ರಕಾಶಕನಲ್ಲಿ ಕೈ ಮುಂದೊಡ್ಡುವ ಪ್ರಸಂಗ ಈ ಮಹಾ ಸಾಹಿತಿಗೆ ಬಂದಾಗ ಅವನ ಪ್ರತಿಷ್ಠಿತ ಮಿತ್ರವೃಂದ ಅವನಿಂದ ದೂರ ಏಕೆ ಹೋದರು?

ರಾಬರ್ಟಬರ್ನ್ಸನ ಜೀವನದಿಂದ ನಮ್ಮ ಲೇಖಕರು ಏನನ್ನು ಕಲಿಯಬೇಕೆಂಬ ವಿಚಾರ ಇಲ್ಲಿದೆ. ಲೇಖಕನು ಸಫಲತೆಗಾಗಿ ಎಂದಿಗೂ ಸಮಾಜದಲ್ಲಿ ಪ್ರತಿಷ್ಠಿತ ವ್ಯಕ್ತಿಗಳನ್ನು ಅವಲಂಬಿಸಬಾರದು. ಲೇಖಕ ಇದರಿಂದ ತನ್ನ ಆಂತರಿಕ ಸುಖವನ್ನು ಕಳೆದುಕೊಳ್ಳುವನಲ್ಲದೆ ಅದ್ಭುತ ಕಲ್ಪನಾಶಕ್ತಿ, ಪವಿತ್ರ ಭಾವನಾ ಗಂಗೆಯನ್ನು ಕಳೆದುಕೊಂಡು ಸತ್ವಪೂರ್ಣ ಸಾಹಿತ್ಯವನ್ನು ಸೃಜಿಸುವದರಲ್ಲಿ ಅಸಮರ್ಥನಾಗುವನು. ಮಾನಸಿಕ ಸ್ವಾಸ್ಥ್ಯವನ್ನು ಕಳೆದುಕೊಂಡ ಅವನು ಸುಂದರ ವಿಚಾರಗಳಲ್ಲಿ ತಲ್ಲೀನನಾಗುವದಾದರು ಹೇಗೆ? ನಿಜವಾದ ಸಾಹಿತಿಯು ತನ್ನ ಜೀವನದ ಸರ್ವಾಧಿಕ ಸಂತೋಷಪ್ರದ ಅನುಭವಗಳನ್ನು ಪಡೆದುಕೊಂಡು ಎರಡನೆಯವರ ನಿರಾಶೆಗೊಂಡ ಮನಕ್ಕೆ ಸಂತೋಷ ಸಾಂತ್ವನಗಳನ್ನು ನೀಡಬೇಕು. ಇದೇ ಸಫಲ ಲೇಖಕನ ಲಕ್ಷಣ. ಅರಬಸ್ತಾನದ ಒಬ್ಬ ಶರಣರು ಹೇಳಿದ ಸ್ವಂತವಾಗಿ ತಿಳಿದುಕೊಳ್ಳುವದು ನಿಜವಾಗಿಯೂ ಒಳ್ಳೆಯದು; ಆದರೆ ಸಂಸಾರದಲ್ಲಿ ಎರಡನೆಯವರಿಗೆ ಅವರ ಅನುಭೂತಿಗಳನ್ನು ಕೊಡುವದು ಮಹಾನತೆಯಾಗಿದೆ ಎಂಬ ಮಾತು ಸಾಹಿತಿಗಳಿಗೆ ಅನ್ವಯಿಸುವದು.

ದೈವೀರೂಪದಿಂದ ಮಹಾ ಆತ್ಮಿಕ ಸುಖ ಪಡೆಯುವ ಲೇಖಕನ ಜೀವನ ಮಹಾನ್ ಸಂಘರ್ಷಣೆಯಲ್ಲಿರುವದು. ಈ ಸಂಘರ್ಷಣೆ ಲೇಖನ ವ್ಯವಸಾಯದಲ್ಲಿ ಜನಜನಿತವಾಗಿದೆ. ಲೇಖಕನ ಜೀವನದಲ್ಲಿ ಇದೊಂದು ಕಟು ಪ್ರಸಂಗವೆಂದು ಹೇಳಬೇಕು. ಜೀವನದಲ್ಲಿಯ ಎಡರು ತೊಡರುಗಳನ್ನು ಎದುರಿಸಿ, ಕಷ್ಟಗಳ ಅಗ್ನಿಯಲ್ಲಿ ಬಂಗಾರದಂತೆ ಕರಗಿ ಹೊಳೆಯುವ ಲೇಖಕನೇ ಪರರ ಪೀಡೆಯನ್ನು ದೂರಮಾಡುವ ಜೀವನೋದ್ಧಾರಕ ಸಾಹಿತ್ಯವನ್ನು ಸೃಷ್ಟಿಸಬಲ್ಲ. ಇಂಥ ಸಾಹಿತ್ಯ ರಚನೆಯಲ್ಲಿಯೇ ಅಧಿಕ ಸಂತೋಷವನ್ನು ಅವನು ಪಡೆಯಬಲ್ಲ. ಸುಂದರ ಕಲ್ಪನೆ, ಆದರ್ಶ ಭಾವನೆ, ಅಂತರಂಗದ ಐಸಿರಿಯನ್ನು ಪಡೆದ ಲೇಖಕನು ನಿಜವಾಗಿಯೂ ಶ್ರೀಮಂತನೆ. ಅವನು ಎಂದಿಗೂ ರತ್ನಖಚಿತ ಮನೆಯಲ್ಲಿ ಪಂಚ ಪಕ್ವಾನಗಳನ್ನು ತಿನ್ನಲು ಬಯಸುವದಿಲ್ಲ.

ಲೇಖಕನು ಕೀರ್ತಿಶನಿಯ ಬೆನ್ನು ಹತ್ತಬಾರದು. ಪ್ರಸಿದ್ಧನಾಗುವ ಹಸಿವು ಎಂದಿಗೂ ಹತ್ತಬಾರದು. ಸಮಕಾಲೀನ ಸಾಹಿತಿಗಳೊಡನೆ ಸ್ಪರ್ಧೆಯನ್ನು ಆರಂಭಿಸಬಾರದು. ಸಮಕಾಲೀನ ಲೇಖಕರ ಟೀಕೆಯಲ್ಲಿ ಲೇಖಕನು ಅರ್ಧ ಆಯುಷ್ಯವನ್ನು ಕಳೆದರೆ ಅವನಿಂದ ಜೀವನೋದ್ಧಾರಕ ಸಾಹಿತ್ಯಸೃಷ್ಟಿಯಾಗಲಾರದು ಲೇಖಕನಿಗೆ ಮಹಾನ' ಸಾಹಿತಿಯಾಗುವ ಅಭಿಲಾಷೆ ಇದ್ದರೆ ಎಮರ್‌ಸನ್‌ನ ಕಿವಿಮಾತನ್ನು ಹೀಗೆ ಆಲಿಸಬೇಕು. "ನಿಮಗೆ ಮಹಾನರಾಗಬೇಕೆನ್ನುವ ಆಶೆ ಇದ್ದರೆ ನೀವು ನಿಮ್ಮ ದಾರಿಯಲ್ಲಿ ಒಬ್ಬರೆ ಹೋಗಿರಿ. ಅಶಕ್ತರಾಗಿ ಜಗತ್ತಿಗೆ ಬುದ್ಧಿ ಹೇಳಲು ಹೋಗಬೇಡಿರಿ." ಲೇಖಕರು ಈ ಮಾತನ್ನು ನಿತ್ಯ ಮನನ ಮಾಡಿಕೊಳ್ಳಬೇಕು. ಇದರಿಂದ ದೊರೆಯುವ ಆನಂದವು ಧನಿಕರಿಗೆ ನಾಯಕರಿಗೆ ಬೆಳ್ಳಿ ಬಂಗಾರದಿಂದ ಕೊಂಡುಕೊಳ್ಳಲು ಸಿಗುವದಿಲ್ಲ. ಸಾಹಿತಿಯು ಈ ಆನಂದಾನುಭೂತಿಯಲ್ಲಿ ಭೌತಿಕ ಸುಖ ಸಾಧನಗಳನ್ನು ತುಲನಾತ್ಮಕವಾಗಿ ನೋಡುವದು ಅನುಚಿತ. ಲೇಖಕನಲ್ಲಿ ಕಲ್ಪನೆ ಮತ್ತು ಅನುಭೂತಿ ಇದ್ದರೆ, ಅವನ ವಿಚಾರ ಪವಿತ್ರ ಹಾಗು ಪರಮ ಪೂಜ್ಯವಾಗಿದೆ. ಮಾನವ ಕಲ್ಯಾಣದ ಆದರ್ಶಯಾವ ಲೇಖಕನ ಹೃದಯದಲ್ಲಿ ಇದೆಯೋ ಅವನು ತನ್ನ ವಾಚಕ ವೃಂದಕ್ಕೆ ಸ್ವರ್ಗೀಯ ಸುಖ ಮತ್ತು ಆನಂದವನ್ನು ಕೊಡಬಲ್ಲ. ಇಂಥ ಜೀವನ ಸುಖ ಲೇಖಕನಿಗಲ್ಲದೆ ಮತ್ತಾರಿಗೂ ಸಿಗುವದಿಲ್ಲ. ಎರಡನೆಯವರ ಪೀಡೆಯನ್ನು ದೂರ ಮಾಡುವವನ ಪೀಡೆಯನ್ನು ದೇವರೆ ದೂರ ಮಾಡುವನು ಎಂಬ ಗಾದೆಯು ಲೇಖಕನಿಗೆ ಸಮರ್ಪಕವಾಗಿದೆ.

ಲೇಖಕ ಜನಜೀವನದ ರೋಷ ಹಗೆತನಗಳ ವಿಷವನ್ನು ಸೇವಿಸುವ ನೀಲಕಂಠನಾಗಬೇಕು. ಅಂದರೆ ಮಾತ್ರ ಅವನ ಸಾಹಿತ್ಯ ಯುಗ ಯುಗಗಳಿಗೆ ಮಾನವ ಧರ್ಮದ ಉದಾತ್ತ ಸಂದೇಶವನ್ನು ಕೊಡಬಲ್ಲದು. ಅಂಥ ಸಾಹಿತ್ಯ ನಿರ್ಮಾಣದಲ್ಲಿಯೇ ಅವನಿಗೆ ಸ್ವರ್ಗೀಯ ಸುಖ ದೊರೆಯುವದು. ಆಗ ಲೇಖಕ ಸ್ವರ್ಗ ಸುಖಲೋಕದ ಇಂದ್ರನಾಗಬಲ್ಲ.

ಮಕ್ಕಳ ಮಮತೆಯ
Regd. Trade Mark.
'ಬಿಕ್ಕೊ'ರವರ
ಗ್ಲೂಕೋಸ್ ಕೂಡಿದ ಪೆಪ್ಪರ್
ಮಿಠಾಯಿಗಳು ರುಚಿಕರ, ಸೇವನೆಗೆ
ಪ್ರಸಿದ್ಧಿಪಟ್ಟಿವೆ.
BICCO
'ಬಿಕ್ಕೊ'ರವರ
ಹಣ್ಣಿನ ಶರಬತ್ತುಗಳು
ಅತಿಥಿಗಳ ಆದರದ ಸತ್ಕಾರಕ್ಕೆ ಅತ್ಯನುಕೂಲ.
ತಯಾರಕರು:
ಭಾರತ್ ಇಂಡಸ್ಟ್ರಿಯಲ್ ಎಂಡ್ ಕ್ಯಾನಿಂಗ್
ಕಂಪನಿ ಲಿಮಿಟೆಡ್, ಕಾಪು, ದ. ಕ.

ನವಯುಗ ವಾರ ಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

ಕಥಾವಿಹಾರ

೨ನೇ ಪುಟದಿಂದ

ಮ ಬೇರೆಗಾದ ಅವನಿನ್ನು ಸುಮ್ಮನೆ ಇರಲಾರ. ಅವಳು ತನ್ನ ಮನೆಯ ಮುಂಭಾಗದಿಂದ ಹಾದು ಹೋಗುವಾಗಂತೂ ಅವನು ಮೋಹಿತನಾದ. ಅವನು ಭಾವನಾಪರವಶನಾಗಿ "ಪಾರ್ವತಿ ನೀನೆಷ್ಟು ಚಂದವಾಗಿ ತೋರುತ್ತೀ? ಗೊತ್ತೇ? ಆದರೆ ನೀನು ಮಳೆಯಲ್ಲಿ ನನೆಯುತ್ತ ಬರುತ್ತಿಯಲ್ಲ, ಏಕೆ?" ಎಂದು ಕೇಳಿಬಿಟ್ಟ.

ಪಾರ್ವತಿ ನಾಚಿ ತಲೆ ತಗ್ಗಿಸಿ ತನ್ನ ಮನೆಯ ಕಡೆಗೆ ತೆರಳಿದಳು. ಆದರೆ ಪರಮೂ ಅವಳನ್ನು ತಡೆದು ಹೇಳಿದ— "ಈಗೀಗ ನನಗೆ ಒಬ್ಬಂಟಿಗನಾಗಿರಲು ಏನೋ ನೂ ಮನಸ್ಸು ಒಪ್ಪುವುದಿಲ್ಲ".

"ಅದಕ್ಕೆ ನಾನೇನು ಮಾಡಲಿ ಅಂತೀಯೂ?"

"ಕೆಲಸವಿದ್ದರೆ ನನ್ನನ್ನೂ ಕರಕೊಂಡು ಹೋಗು. ಹೊರೆ ಹೊರುವುದು ನನಗೆ ಕಷ್ಟವಾದ ಕೆಲಸ."

"ಗಂಡಸಾಗಿ ಹೊರೆ ಹೊರುವುದು ಕಷ್ಟವೇ?"

"ನೀನು ನನ್ನೊಂದಿಗೆ ಇದ್ದರೆ ಅದೆಷ್ಟರ ಕೆಲಸ?"

"ನಾನು ಬಂದರೆ ಮಾತ್ರ ಹಾಗೇನು?"

"ಹೌದು."

"ನಿಜವೇ?"

"ನಿಜ, ಖಂಡಿತವಾಗಿಯೂ ನಿಜ."

"ನನ್ನಿಂದ ಹೊರೆ ಹೊರಲಾಗದು. ನೀನು ನನ್ನ ಸಂಗಡ ಮುಸುರೆ ತಿಕ್ಕುವ ಕೆಲಸ ಮಾಡುವಿಯಾದರೆ ಬಾ ನನ್ನ ಆಕ್ಷೇಪವಿಲ್ಲ."

"ಆದರೆ ......"

"ಅದೇನು ಆದರೆ?"

ಪಾರ್ವತಿ ಪರಮೂನನ್ನು ಕೆಣಕಿ ಮನೆಯೊಳಗೆ ಹೋದಳು. ಪರಮೂ ಒಂದು ವಿಚಿತ್ರವಾದ ಕಾಲ್ಪನಿಕ ಸ್ವರ್ಗವನ್ನು ಸೃಷ್ಟಿಸಿ ಅದರಲ್ಲಿ ವಿಹರಿಸತೊಡಗಿದ. "ನಾನು ಅವಳನ್ನೇಕೆ ಮದುವೆಯಾಗಬಾರದು! ಹುಡುಗಿ ಗಟ್ಟಿಮುಟ್ಟಾಗಿ ಚಂದವಾಗಿದ್ದಾಳೆ." ಇತ್ಯಾದಿ ಕಲ್ಪನಾ ತರಂಗಗಳು ಅವನ ಮನಸ್ಸಿನಲ್ಲಿ ಏಳತೊಡಗಿದುವು.

ಇದನ್ನೆಲ್ಲ ಹೊಂಚುಹಾಕಿ ನೋಡುತ್ತಲಿದ್ದ ವಠಾರದ ಹೆಂಗಸರು ಪಾರ್ವತಿಯನ್ನು ಕಂಡಕಂಡಾಗ ಕೆಣಕಿ ಮಾತಾಡತೊಡಗಿದರು. ಅವರ ಮಟ್ಟಿಗೆ ಪರಮೂ ಪಾರ್ವತಿಯ ಮನೆಗೆ ಬರುವುದು, ಅವಳಲ್ಲಿ ಸರಸ ಸಲ್ಲಾಪ ಮಾಡುವುದು ಸರಿದೋರುತ್ತಿರಲಿಲ್ಲ. ಅದು ಅವರ ಕಣ್ಣನ್ನು ಕುಕ್ಕಿದಂತಾಗುತ್ತಿತ್ತು. ಪರಮೂ—ಪಾರ್ವತಿಯ ಪರಿಚಯು ನಿಕಟವಾಗುತ್ತ ಹೋದಂತೆ ಹೆಂಗಸರು ಅವಳನ್ನು ಗೇಲಿಮಾಡುವುದೂ ಚುಚ್ಚು ಮಾತುಗಳಿಂದ ಅವಳನ್ನ ಪೀಡಿಸುವುದೂ ತಮ್ಮ ನಿತ್ಯದ ಕೆಲಸವೆಂದ. ಭಾವಿಸಿ ಹಾಗೆಯೇ ಮಾಡತೊಡಗಿದರು.

"ಪಾರ್ವತಿ, ನೀನು ಮದುವೆಯಾಗಬಹುದಲ್ಲ?" ಇಂತಹ ಪ್ರಶ್ನೆ ಹಲವಾರು ಬಾರಿ ಪಾರ್ವತಿಯ ಮನಸ್ಸಿನಲ್ಲಿ ಎದ್ದಿತ್ತು ಆದರ ಪರಿಣಾಮ.ವೆಂಬಂತೇ ಅವಳು ಪರಮೂನನ್ನು ಕಂಡಾಗ ಮುಗುಳು ನಗೆಯನ್ನು ಬೀರತೊಡಗಿದ್ದಳು.

ಪಾರ್ವತಿ ಪರಮೂನನ್ನು ವಿವಾಹವಾದಳು. ಹಾಳು ಹಂಪೆಯೂದ ಅವಳ ಬಾಳು ಪುನಃ ಫಲವತ್ತಾಗಿ, ರಸಪೂರ್ಣವಾಗಿ ಬೆಳಗತೊಡಗಿತು. ಆದರೆ ಮದುವೆಯಾದ ಮೇಲೆ ಪರಮೂ ದಿನದಿಂದ ದಿನಕ್ಕೆ ಆಲಸಿಯಾಗುತ್ತ ಹೋದ. ಕ್ರಮೇಣ ಅವನಿಗೆ ಪಾರ್ವತಿಯೊಂದಿಗೆ ಕೆಲಸಕ್ಕೆ ಹೋಗುವ ಇಚ್ಛೆಯೂ ಇಲ್ಲದಾಯಿತು. ಒಂಟಿಯಾಗಿ ಪಾರ್ವತಿಯೇ ಮನೆಯ ಮತ್ತು ಹೊರಗಿನ ಕೆಲಸಗಳನ್ನು ಮಾಡುವ ಪ್ರಸಂಗ ಬಂದೊದಗಿತು. ಅದನ್ನು ನೋಡಿ ತಾಳಲಾರದೇ ಪಾರ್ವತಿ ಪರಮೂನಲ್ಲಿ ಹೇಳಿದಳು

"ಪರಮೂ, ನೀನು ಮಿಲ್ಲುಗಳಲ್ಲಿ ನೌಕರಿ ಮಾಡಬಹುದಲ್ಲಾ?"

"ಅಲ್ಲಿ ನನಗೆ ನೌಕರಿ ಕೊಡುವವರು ಯಾರು? ದಿನಾ ನೌಕರಿ, ನೌಕರಿ ಎಂದು ಹುಡುಕುತ್ತ ಹೋಗುತ್ತಿದ್ದೇನಲ್ಲ?"

"ನನ್ನೊಂದಿಗೆ ಬಂದರೆ ನಿನಗೆ ಮಿಲ್ಲಿನಲ್ಲಿಯೇ ನೌಕರಿ ಸಿಗುವುದು."

"ನೀನು ದೊಡ್ಡ ದೊರೆ ಮಹಿಷಿಯಲ್ಲವೆ? ನೌಕರಿ ತೆಗೆಸಿ ಕೊಡುತ್ತಾಳಂತೆ,"

"ಅಲ್ಲ ನೀನು ಏನೆಂದು ತಿಳಕೊಂಡಿದ್ದೀಯೂ?.... ....ಮೊದಲು ನಾನು ಮಿಲ್ಲಿನಲ್ಲಿ ನೌಕರಿಯಲ್ಲಿದ್ದವಳು."

"ಹಾಗಾದರೆ ನಾಳೆ ಹೋಗೋಣ"

ಬೆಳಗಾದ ಕೂಡಲೇ ಎಲ್ಲರೂ ತಮ್ಮ ತಮ್ಮ ಕೆಲಸಕ್ಕೆ ಹೋದರು. ಪರಮೂ ತಲೆ ಮೇಲೆ ಪಗಡೀ ಕಟ್ಟಿ, ಬೆಳ್ಳಗಾದ ಬಟ್ಟೆಗಳನ್ನು ತೊಟ್ಟು ಪಾರ್ವತಿಯ ಬರವನ್ನು ಕಾಯುತ್ತ ಕೂತ.

ಸಮಯಕ್ಕೆ ಸರಿಯಾಗಿ ಬಂದು ಪಾರ್ವತಿ ಪರಮೂನನ್ನು ಕರಕೊಂಡು ಹೋದಳು. ಚಿಮಿಣಿ ಭಟ್ಟಿ ಹತ್ತಿರ ಬಂದ ಹಾಗೆ ಹೊಗೆ ಹೆಚ್ಚು ಕಪ್ಪಾಗ ತೊಡಗಿತು, ಅದನ್ನು ಕಂಡ ಪರಮೂ ಧೈರ್ಯಗುಂದಿದರೂ ಧೈರ್ಯತಾಳಿ ಪಾರ್ವತಿಯೊಂದಿಗೆ ಮಿಲ್ಲಿನ ಮಹಾ ದ್ವಾರವನ್ನು ದಾಟಿ ಒಳಗೆ ಪ್ರವೇಶಿಸಿದ.

ಸುಮಾರು ಒಂದು ಘಂಟೆ ಕಳೆದ ಬಳಿಕ ಅವರು ಪ್ರಸನ್ನವದನರಾಗಿ ಹೊರಟರು.

ಪಾರ್ವತಿ ತನ್ನ ಪ್ರಯತ್ನ ಫಲಿಸಿದ್ದಕ್ಕಾಗಿ ತುಂಬಾ ಸಂತೋಷಪಟ್ಟಳು ಅದನ್ನು ಕಂಡ ಪರಮೂ ಅವಳನ್ನು ಹೊಗಳುತ್ತ ಹೀಗೆಂದ:—"ನಿನ್ನಲ್ಲಿ ಯಾವುದೋ ಒಂದು ಅದ್ಭುತವಾದ ಮಂತ್ರಶಕ್ತಿ ಇದೆಯೆಂದು ತೋರುತ್ತದೆ. ಇಲ್ಲವಾದಲ್ಲಿ ನನಗೆ ನೌಕರಿ ಎಲ್ಲಿಂದ ಸಿಗಬೇಕು?"

"ಥುತ್, ತೊಲಗಾಚೆ. ಹೊಗಳು ಭಟ್ಟ". ಪಾರ್ವತಿ ಅವನ ಬಾಯಿ ಮುಚ್ಚಿಸಿದಳು. ಆ ವೇಳೆ ಇಬ್ಬರೂ ಬೇಗ ಬೇಗನೆ ಹೆಜ್ಜೆ ಹಾಕುತ್ತ ಮನೆಕಡೆ ಹೋದರು. ಮನೆಗೆ ಬಂದೊಡನೆ ಪರಮೂ ಮಾತನಾಡಲು ಆಕ್ರಮಿಸುತ್ತ ಪಾರ್ವತಿಯೊಡನೆ ಕೇಳಿದ "ಪಾರ್ವತಿ, ನೀನೂ ಮಿಲ್ಲಿನಲ್ಲಿ ನೌಕರಿ ಮಾಡಬಹುದಲ್ಲ? ಮಾಲಕರು ನಿನಗೂ ನೌಕರಿ ಕೊಡಬೇಕೂ ಅಂತ ಇದ್ದರು".

"ನನಗೆ ಆ ನೌಕರಿ ಬೇಕಾಗಿಲ್ಲ" ಪಾರ್ವತಿ ರೇಗಿದ ದನಿಯಲ್ಲಿ ಹೇಳಿದಳು.

"ಏಕೆ ಬೇಡ? ತುಂಬಾ ಹಣ ಸಿಗುವುದಿಲ್ಲವೇ?" ಮನೆಗೆ ಬಂದ ತಾಯಿಯನ್ನು ಕಂಡ ಪುಗ್ಗಿ ಅಮ್ಮ ಅಮ್ಮ ಎಂದು ಕೂಗುತ್ತ ಬಂದ. ತಾಯಿ ಅವನನ್ನ ಪ್ರೀತಿಯಿಂದ ಎತ್ತಿಕೊಂಡು ಮುದ್ದಿಟ್ಟಳು.

ಒಂದು ತಿಂಗಳು ಕಳೆಯುವಷ್ಟರಲ್ಲಿ ಪರಮೂ ತುಂಬಾ ಸುಧಾರಿಸಿದ. ಸಾಕಷ್ಟು ಹುಶಾರೂ ಆದ. ಕ್ರಮೇಣ ಅವನಿಗೆ ಸಿನೆಮಾದ ಹುಚ್ಚು ಹಿಡಿಯಿತು ಜೂಜಾಡುವುದರಲ್ಲಿ ಕೈಪಳಗಿಸಿಕೊಂಡ ನೇಂದಿ ಕುಡಿಯುವುದರಲ್ಲಿ ಮೊದಲನೆಯ ಸ್ಥಾನವನ್ನು ಗಳಿಸಿದ. ಈ ಎಲ್ಲ ದುರಭ್ಯಾಸಗಳಿಂದಾಗಿ (?) ತಿಂಗಳ ಸಂಬಳ ಖರ್ಚಾಗುತಿತ್ತು. ಮನೆಗೆ ಒಂದು ಪೈ ಕೂಡ ಸಲ್ಲುತ್ತಿರಲಿಲ್ಲ. ಅದೂ ಸಾಲದೇ ಪಾರ್ವತಿಗೆ ಪೆಟ್ಟಿನ ಪೂಜೆ ಸಲ್ಲಿಸುವುದು ಅವನ ದಿನ ನಿತ್ಯದ ಕೆಲಸವಾಯಿತು. ಹಲವು ಬಾರಿ ಗಂಡ ಹೆಂಡರಲ್ಲಿ ಜಗಳವೂ ಆಯಿತು. ಪಾರ್ವತಿಯ ಮೈಯಲ್ಲಿ ಗಂಡನ ಹೊಡೆತಗಳ ನಿಶಾನೆ ಅಚ್ಚಳಿಯದಂತೆ ಉಳಿಯಿತು. ಆದರೂ ಪ್ರತಿದಿನ ಪಾರ್ವತಿಯಲ್ಲಿ ಹಣ ಬೇಡಿ ಅವಳನ್ನು ಕಾಡುತ್ತಿದ್ದ. ಅವಳು ಆಪದ್ಧನವಾಗಿರಿಸಿದ್ದ ಹಣ, ಜೂಜಿನಲ್ಲಿ ಸೋತಿತು. ಕುತ್ತಿಗೆಯಲ್ಲಿ ಬಹು ಕಷ್ಟದಿಂದ ಉಳಿಯಬಿಟ್ಟ ಚಿನ್ನಾಭರಣಗಳನ್ನು ಸೇರು ಮಾಡುವ ಆಲೋಚನೆ ಪರಮೂನಿಗೆ. ಆದರೆ ಈ ಮಧ್ಯ ಅವನನ್ನು ಮಿಲ್ಲಿನ ಮಾಲಕ ಸಂಧಿಸಿ ಸಂಧಾನ ಪ್ರಯತ್ನ ನಡೆಸಿದನು. ರಾಧಾರಮಣ: ಮಿಲ್ ಮಾಲಕ ಪಾರ್ವತಿಯ ಶರೀರವನ್ನು ಕೊಂಡುಕೊಳ್ಳುವ ಸಲುವಾಗಿ ಪರಮೂನಲ್ಲಿ ಕೇಳಿದ —

"ಈ ವಿಚಾರದಲ್ಲಿ ನೀನು ಹೇಳುವುದಾದರೂ ಏನು"

"ಸ್ವಾಮಿ"

"ಒಂದು ರಾತ್ರೆಗೆ 10 ರೂಪಾಯಿ ಆಸ್ತು ನಿನಗೆ"

"ಹತ್ತು ರೂಪಾಯಿ"

"ಹೌದು, ಹತ್ತು ರೂಪಾಯಿ."

'ಹತ್ತು ರೂಪಾಯಿ' ಅನ್ನುವಾಗ ಪರಮೂನಿಗೆ ಶರಾಬಿನ ವಾಸನೆಯೋ, ಸಿನಮೋ ಆಗಿರಬೇಕು. ಆದುದರಿಂದಲೇ ಅವನು ರಾಧಾ ರಮಣನಿಗೆ ಒಪ್ಪಿಗೆಯನ್ನಿತ್ತ. ಮಾತು ಕೊಟ್ಟ ಮೇರೆಗೆ ಪರಮೂ ಪಾರ್ವತಿಯನ್ನು ಕರಕೊಂಡು ಹೋದ. ಬೆಳ್ಳಿಯ ಕೆಲವು ತುಂಡುಗಳಿಗಾಗಿ ಒರ್ವ ಬಡ ಹೆಂಗಸಿನ ನಾರೀತ್ವ ವಿಕ್ರಯಿಸಲ್ಪಟ್ಟಿತು. ಏನನ್ಯಾಯ? ಅನ್ಯಾಯವೆಂದು ಪರಿತಪಿಸುವುದಾದರೂ ಏತಕ್ಕಾಗಿ? ಇಂದು ಅಂತಹ ಒಂದಲ್ಲ ಸಾವಿರಾರು ಅಬಲೆಯರ ತಾರುಣ್ಯ ಮತ್ತು ಪಾತಿವ್ರತ್ಯದ ಕ್ರಯವಿಕ್ರಯ ಒಂದಲ್ಲ ಇನ್ನೊಂದು ವಿಧಾನದಲ್ಲಿ ಆಗುತ್ತಿಲ್ಲವೆ?

ಸ್ತಂಭದಂತೆ ಸ್ತಬ್ಧವಾಗಿರುವ ಆಕಾಶದಲ್ಲಿ ಕತ್ತಲೆ ಹೆಚ್ಚ ತೊಡಗಿತ್ತು. ಅಂಧಕಾರ ಘನೀಭೂತವಾಗಿತ್ತು. ಮಿನುಗುತ್ತಿರುವ ಅಸಂಖ್ಯಾತ ನಕ್ಷತ್ರಗಳು ಆ ಗಾಡಾಂಧಕಾರದಲ್ಲಿ ಲೀನವಾಗಿ ಐಕ್ಯವಾಗಿ ಹೋಗುವ ಅಪೇಕ್ಷೆಯನ್ನು ವ್ಯಕ್ತಪಡಿಸುತ್ತಿದ್ದುವು. ಅಂತಹ ವೇಳೆಯಲ್ಲಿ ಪಾರ್ವತಿ ಮಿಲ್ ಮಾಲಕ ರಾಧಾರಮಣನೊಂದಿಗೆ ಮೋಟರು ಕಾರಿನಲ್ಲಿ ನಿಶ್ಚೇಷ್ಟಿತಳಾಗಿ ಬಿದ್ದುಕೊಂಡಿದ್ದಳು. ಕಾರು ವೇಗವಾಗಿ ದಾರಿ ಸಾಗುತ್ತಿತ್ತು.

ರಾತ್ರೆ ಸುಮಾರು ೧೨ ಗಂಟೆಯ ಹೊತ್ತು. ಬೇಸಗೆ, ಸೆಕೆ ಪುನಃ ಬಂದಂತೆ ಭಾಸವಾಗುತಿತ್ತು. ಕಾರಣ ಅಂದು ಗಾಳಿಯ ನಡೆ ಇರಲಿಲ್ಲ ಗಾಳಿಯೊಂದಿಗೆ ಹೃದಯವೂ ತನ್ನ ಕೆಲಸವನ್ನು ನಿಲ್ಲಿಸುವ ಹವ್ಯಾಸವನ್ನು ಮಾಡುವಂತಿತ್ತು. ಇಟ್ಟ ಹೆಜ್ಜೆ ಇಟ್ಟಲ್ಲೇ. ಮುನ್ನಡೆ, ಪ್ರಗತಿ ಇಲ್ಲ. ಮಾರ್ಗ ಭವಿಷ್ಯದ ಭಯಂಕರವಾದ ಕಲ್ಪನೆಗಳಿಂದ ಅವರುದ್ಧವಾಗಿತ್ತು. ಆದರೆ ಪರಮೂ ಮಾತ್ರ ಶರಾಬಿನ ಅಮಲಿನಲ್ಲಿ ಮೈಮರೆತವನಾಗಿ ನಡಗುವ ಹೆಜ್ಜೆಗಳನ್ನಿಡುತ್ತ ಕೈಯಲ್ಲಿ ೫ ರೂಪಾಯಿಗಳನ್ನು ಹಿಡಿದು ಒಟಗುಟ್ಟುತ್ತ ಮನೆ ಕಡೆಗೆ ಮೆಲ್ಲನೇ ಸಾಗಿದ್ದ.

The Moolky Bank, Ltd.

MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4%
5 ,, 12	,,	4¼%
13 ,, 24	,,	4½%

ರೂ. 5,000/- ಮತ್ತು ಮೇಲಣ ಡಿಪೋಸಿಟಿಗೆ ¼% ಜಾಸ್ತಿ ಕೊಡಲಾಗುವುದು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ರೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ
ಮೆನೇಜರ್,

ಮೂಲ್ಕಿ ಬೇಂಕ್ ಲಿ. ಮುಲ್ಕಿ.



ಕುಮಾರಿ ಬಿಲ್ಲೆಗಳು

(Registered)

ಈ ದೇಶೀಯ ತಯಾರಿಕೆಯ ಗುಣಾಂಶವು ವರ್ಷಗಟ್ಟಲೆಯಿಂದ ವಿಖ್ಯಾತವಾಗಿದೆ ಮತ್ತು ಪ್ರಮುಖ ಕೆಮಿಸ್ಟರಿಂದ ಈ ಕೆಳಗಿನ ದರಗಳಲ್ಲಿ ವಿಕ್ರಯಿಸಲ್ಪಡುತ್ತವೆ.ಟ್ಯೂಬಿಗೆ ರೂ. 4=00 (ಸಾದಾ). ರೂ. 6=00(ಸ್ಪೆಶಲ್), ರೂ ೮=00 (ಎಕ್ಸ್ಟ್ರಾ ಸ್ಪೆಶಲ್).

P. DEVEE & CO. (M. I.) CALCUTTA-4

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.





ಮಹಾತ್ಮಾ ಗಾಂಧಿಯವರ ಸಮಾಧಿ ನಿರ್ಮಾಣ

ದೇಶಲಿಯ ಪ್ರಜೆಗಳು ಮತ್ತು ಇತರ ಅತಿಥಿಗಳು, ಇದೇ ಜನವರಿ ೩೦ರಂದು ಸ್ಮಾರಕ ದಿನವನ್ನು ಆಚರಿಸಿ, ರಾಜಘಾಟಿಗೆ ಹೋಗಿ ಮಹಾತ್ಮಾ ಗಾಂಧಿಯವರ ಸಮಾಧಿಗೆ ಗೌರವವಂದನೆ ಸಲ್ಲಿಸಿದರು. ಈ ಸಮಾಧಿಯು ಸ್ಥಳ ಹೊಸ ರೂಪು ತಾಳುತ್ತಿರುವುದನ್ನು ಅಂದು ಅವರು ವೀಕ್ಷಿಸಿರುವರು.

ಮಹಾತ್ಮಾ ಗಾಂಧಿಯವರ ಸಮಾಧಿಯಾಗಿರುವ ಈ ಸ್ಥಳದಲ್ಲಿ ಶಾಶ್ವತವಾದ ಸ್ಮಾರಕವನ್ನು ನಿರ್ಮಿಸುವ ಕೆಲಸ ಈಗ ಆರಂಭವಾಗಿದೆ. ಕಳೆದ ಹಲವಾರು ವರ್ಷಗಳಿಂದ ಸಾಮಾನ್ಯ ಜನರಿಂದ ಹಿಡಿದು, ವಿಖ್ಯಾತ ವಿದೇಶೀ ಅತಿಥಿಗಳವರೆಗೆ ಲಕ್ಷಾಂತರ ಜನ ಅಲ್ಲಿಗೆಹೋಗಿ ಮಹಾತ್ಮರಿಗೆ ಗೌರವವನ್ನು ಸಮರ್ಪಿಸುತ್ತಿದ್ದಾರೆ. ಮಹಾತ್ಮಾಜಿಯವರು ಭಾರತೀಯರಲ್ಲಿ ಸ್ವಾತಂತ್ರ್ಯ ಹಾಗೂ ರಾಷ್ಟ್ರೀಯ ಭಾವನೆಯನ್ನು ಪ್ರಚೋದಿಸಿದರಲ್ಲದೆ, ಸಂತ್ರಸ್ತ ವಿಶ್ವಕ್ಕೆ ಶಾಂತಿ ಹಾಗೂ ಸಹೋದರ ಬಾಳ್ವೆಯ ಸಂದೇಶವನ್ನು ನೀಡಿರುವರು.

ರಾಜಘಾಟ್ ಇಂದು, ಭಾರತೀಯರಷ್ಟೇ ಅಲ್ಲ, ಭಾರತಕ್ಕೆ ಭೇಟಿ ಕೊಡುವ ವಿದೇಶೀ ಪ್ರಮುಖರೆಲ್ಲರೂ ಭೇಟಿ ಕೊಡುವಂತಹ ಸ್ಥಳವಾಗಿರುವುದು, ಅವರ ಪ್ರವಾಸ ಕಾರ್ಯಕ್ರಮದಲ್ಲಿ ಅದು ಸೇರಿರುವುದು. ರಾಜಘಾಟಿನಲ್ಲಿ ನಿರ್ಮಾಣವಾಗುವ ಮಹಾತ್ಮಾಜೀಯವರ ಸಮಾಧಿಯಲ್ಲಿ ಮೂರು ಮುಖ್ಯಾಂಶಗಳಿರುವುದು. ಅವು ಮಧ್ಯಭಾಗದಲ್ಲಿನ ಸಮಾಧಿ ಮೂರು ಕಡೆ ಹಚ್ಚಹಸುರಿನ ಹುಲ್ಲು ಮೈದಾನ, ಭಾರತೀಯ ಹಾಗೂ ವಿದೇಶೀ ಪ್ರಮುಖರು ನೆಟ್ಟ ಬಗೆ ಬಗೆಯ ವೃಕ್ಷಗಳು. ಇವೆಲ್ಲಾ ಒಟ್ಟುಗೂಡಿ ಒಂದು ಶಾಂತಮಯ ವಾತಾವರಣವನ್ನು ಕಲ್ಪಿಸುತ್ತವೆ.

ರಾಜಘಾಟಿನಲ್ಲಿ ಸಮಾಧಿಯ ನಿರ್ಮಾಣ ಕೆಲಸವು ಕಳೆದ ವರ್ಷ ಮೇ ತಿಂಗಳಲ್ಲಿ ಆರಂಭವಾಯಿತು. ಮುಂಬೈನ ವಾಸ್ತುಶಿಲ್ಪ ಶ್ರೀ ಜಿ.ಎಂ ಭೂತ ಅವರು ಈ ಸಮಾಧಿ ನಿರ್ಮಾಣಕ್ಕೆ ಸಂಬಂಧಪಟ್ಟ ನಕ್ಷೆಯನ್ನಿತ್ತಿರುವರು ಈ ಬಗೆಗೆ ನಡೆದ ಸ್ಪರ್ಧೆಗೆ ಬಂದಿದ್ದ ೧೦೧ ನಕ್ಷೆಗಳಲ್ಲಿ ಶ್ರೀ ಜಿ. ಎಂ ಭೂತ ಅವರ ನಕ್ಷೆಯನ್ನು ಆರಿಸಿಕೊಳ್ಳಲಾಗಿದೆ.

ಈ ಸ್ಮಾರಕದ ಮುಖ್ಯ ಲಕ್ಷಣಗಳು ಮಧ್ಯದ ಮುಖ್ಯ ಸಮಾಧಿಯು ೮ ಅಡಿ ಅಗಲ ೮ ಅಡಿ ಉದ್ದ ಮತ್ತು ೧೫ ಅಂಗುಲ ಎತ್ತರದ ಕರಿಯ ಗ್ರಾನೈಟ್ ಕಲ್ಲಿನಿಂದಾಗಿರುವುದು. ಈ ಕಲ್ಲನ್ನು ಅತ್ಯುತ್ತಮ ರೀತಿಯಲ್ಲಿ ನಯಗೊಳಿಸಲಾಗಿರುವುದು. ೪೦ x ೫ ಚೌಕದ ಜಾಗದಲ್ಲಿ ಮಧ್ಯೆ ಸಮಾಧಿ ಇರುವುದು. ಈ ಜಾಗವನ್ನು ಬೂದು ಗ್ರಾನೈಟ್‌ನಲ್ಲಿ ಕಟ್ಟಲಾಗುವುದು. ಅದರ ಸುತ್ತ ಅಮೃತ ಶಿಲೆಯಿಂದ ಅಡ್ಡ ಗೋಡೆಗಳನ್ನು ನಿರ್ಮಿಸಲಾಗುವುದು.

ಸಮಾಧಿ ಹಾಗೂ ಅದರ ಸುತ್ತಿನ ಸ್ಥಳವು ೩೫೪ ಅಡಿ ಚೌಕದ ಜಾಗದ ಮಧ್ಯೆ ಇರುವುದು ಸಮಾಧಿಯ ಒಳಗೆ ಹೋಗುವ ಕಾಲುದಾರಿಯೂ ಅಲ್ಲಿದ್ದು ಅವುಗಳ ಇಕ್ಕೆಲಗಳಲ್ಲಿಯೂ ಮರಗಿಡಗಳಿರುವುವು.

ಭಿತ್ತಿ ಚಿತ್ರ ಮತ್ತು ವಾಸ್ತು ಶಿಲ್ಪಗಳು

ಹೊರಾಂಗಣದ ಸುತ್ತಲೂ ೧೨ ಅಡಿ ಎತ್ತರದ ಕಲ್ಲು ಮತ್ತು ಇಟ್ಟಿಗೆಯ ಗೋಡೆಯಿರುವುದು. ಈ ಗೋಡೆಗಳ ಒಳಭಾಗದಲ್ಲಿ ಭಿತ್ತಿ ಚಿತ್ರಗಳು ಮತ್ತು ಮಹಾತ್ಮಾಜಿಯವರ ಸಂದೇಶಗಳು ಇರುವುವು. ಗೋಡೆಯ ಸುತ್ತ ಹೂ ಗಿಡಗಳನ್ನು ಬೆಳೆಸಲಾಗುವುದು. ಸಮಾಧಿಗೆ ನಾಲ್ಕು ಕಡೆ ಪ್ರವೇಶ ದ್ವಾರಗಳಿವೆ ಅವನ್ನು ಆಕರ್ಷಕ ವಾಸ್ತು ಶಿಲ್ಪದ ರೀತಿಯಲ್ಲಿ ನಿರ್ಮಿಸಲಾಗುವುದು.

ಈ ಅಂಗಣದ ಹೊರಗಡೆ ೧೭ ಅಡಿ ಚದುರದ ಒಪ್ಪಾರಗಳಿರುವುವು. ಅವು ಸರಳ ರೀತಿಯಲ್ಲಿ ನಿರ್ಮಿಸಲ್ಪಟ್ಟಿದ್ದು, ಅಲ್ಲಿಗೆ ಭೇಟಿ ಕೊಟ್ಟವರು ಧ್ಯಾನ ಮತ್ತು ಅಧ್ಯಯನ ನಡೆಸಲು ಅನುಕೂಲವಾಗಿದೆ ಸುಮಾರು ೫೧ ಎಕರೆಗಳ ನಿವೇಶನದಲ್ಲಿ ನಡೆಯುವ ನಿರ್ಮಾಣ ಕಾರ್ಯದಲ್ಲಿ ಇದು ಮೊದಲನೆಯ ಘಟ್ಟವಾಗಿರುವುದು.

ರಾಷ್ಟ್ರೀಯ ಉಧ್ಯಾನವನ

ಕಾಲಕ್ರಮದಲ್ಲಿ ದೆಹಲಿಯ ಗೇಟಿನ ಕಡೆಗಿರುವ ೧೭೦ ಎಕರೆಗಳಷ್ಟು ಭೂಮಿಯನ್ನು ಸ್ಮಾರಕವನ ಮತ್ತು ರಾಷ್ಟ್ರೀಯ ಉದ್ಯಾನವನವನ್ನಾಗಿ ಅಭಿವೃದ್ಧಿಪಡಿಸಲಾಗುವುದು. ಅದರಲ್ಲಿ ಕೃತಕ ಕಾಲುವೆಗಳು ಮತ್ತು ದ್ವೀಪಗಳನ್ನು ಸೃಜಿಸಲಾಗುವುದು. ಈ ನಿರ್ಮಾಣವೆಲ್ಲವನ್ನೂ ಸಮಾಧಿ ಸ್ಥಳವು ದೂರದಿಂದಲೇ ಕಾಣುವಂತೆ ಕೈಗೊಳ್ಳಲಾಗಿರುವುದು. ಸ್ಮಾರಕ ಸಮಾಧಿಯ ನಿರ್ಮಾಣಕಾರ್ಯ ಮುಂದಿನ ವರ್ಷ ಮುಗಿಯುವ ನಿರೀಕ್ಷೆಯಿದೆ. ಮೂರನೆಯ ಒಂದು ಭಾಗದಷ್ಟು ಕೆಲಸ ಈಗಾಗಲೇ ಮುಕ್ತಾಯಗೊಂಡಿದೆ.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. P. 15/1961

ಅರ್ಜಿದಾರರು 1. ರವಿದಾಸ ಹೆಗ್ಡೆ, 2 ಬಾಬುರಾಯ ಹೆಗ್ಡೆ, 3. ರಾಧಾ ಬಾಯಿ, 4. ಮೈನರ ಪ್ರೇಮಾ ಬ್ಯಾ, 5. ಮೈನರ ವಿಷ್ಣುದಾಸ ಹೆಗ್ಡೆ, 6. ಮೈನರ ಗುಂಡುರಾಯ ಹೆಗ್ಡೆ, 7. ಮೈನರ ಮಮತಾ ಬ್ಯಾ, 8. ಮೈನರ ಭಾರತಿ ಬ್ಯಾ, 9. ಮೈನರ ಸುಶಾಂತಿ ಬ್ಯಾ, 10. ಮೈನರ ನಾಗೇಶ ಹೆಗ್ಡೆ, 11. ರಾಜೀವಿ ಬ್ಯಾ,

ಎದ್ರಿ ಇಲ್ಲ

ಸದ್ರಿ ಅರ್ಜಿದಾರರು ಈ ಮೂಲಕ ಜಾಹೀರುಮಾಡಿಕೊಳ್ಳುವುದೇನೆಂದರೆ—

1ರಿಂದ 10ನೇ ವರೆಗಿನ ಅರ್ಜಿದಾರರ ತಂದೆ ವ 11ನೇ ಅರ್ಜಿದಾರಳ ಗಂಡ ಮೃತ ಮಹೂರ್ ಜಾನ ಸುಬ್ರಾಯ ಹೆಗ್ಡೇರು ದಿ. ನ್ಯೂಗಾರ್ಡಿಯನ್ ಆಫ್ ಇಂಡಿಯಾ ಲೈಫ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಈಗ ಲೈಫ್ ಇನ್ಶೂರೆನ್ಸ್ ಕಾರ್ಪೋರೇಶನ್ ಆಫ್ ಇಂಡಿಯಾ ಇವರಲ್ಲಿ ನಂಬ್ರ 2356ನೇಗೆ ಜೀವ ವಿಮಾ ಮಾಡಿದ ಕುರಿತು, ಮೃತ ಹೆಸರಲ್ಲಿರುವ ರೂ. 1706-50ನ್ನು ಪಡೆಕೊಳ್ಳುವರೆ ಅರ್ಜದಾರರ ಹೆಸರಿಗೆ ಸಾಕ್ಸಿಸ್ ಸರ್ಟಿಫಿಕೇಟು ಕೊಡಿಸ ಬೇಕೆಂತ ಅರ್ಜಿದಾರರು ದಾಖ್ಲುಮಾಡಿದ ಮೇಲಿನ ಅರ್ಜಿಯು ತಾ 30—5—61ಕ್ಕೆ ಮೇಲಿನ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುತ್ತದೆ. ಆ ಕುರಿತು ಬೇರೆಯವರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿನ್ನ ಹಗಲು 11 ಗಂಟೆಗೆ ಮೇಲಿನ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಲಾಗಿದೆ.

(Sd) C V. Aithal
Advocate for Petr.
Coondapoor, Date 6-4-1961

31—12—1960ರಂದು

ನಿಮ್ಮ ಬೇಂಕು

ಅಧಿಕೃತ ಭಂಡವಾಳ	ರೂ.	1,00,00,000
ತೆತ್ತ ಮತ್ತು ಪಾಲು ಭಂಡವಾಳ	ರೂ.	50,00,000
ಸಾವತಿಯಾದ ಭಂಡವಾಳ	ರೂ.	47,21,419
ಕ್ಷೇಮನಿಧಿ (ಶೇರ್ ಪ್ರೀಮಿಯಂ ಸಹಿತ)	ರೂ.	42,50,471
ಠೇವಣಾತಿ	ರೂ.	18,86,89,176

ಸಿಂಡಿಕೇಟ್ ಬೇಂಕ್

ಒಟ್ಟು ಶಾಖೆಗಳು 141

ಟಿ. ಎ. ಪೈ, ಬಿ.ಕೊಂ (ಬೊಂ.)
ಎ ಐ ಐ ಬಿ, ಎಫ್.ಆರ್ ಇ ಎಸ್ ಲಂಡನ್)
ಜನರಲ್ ಮೆನೇಜರ್.

ಡಾ| ಟಿ. ಎಂ. ಎ. ಪೈ.
ಎಂ.ಬಿ.,ಬಿ.ಎಸ್.,
ಮೆನೇಜಿಂಗ್ ಡೈರೆಕ್ಟರ್.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್,
ರಿಜಿಸ್ಟರ್ಡ್ ಆಫೀಸು: ಮುಕುಂದ ನಿವಾಸ, ಉಡುಪಿ, (ಮೈಸೂರು ರಾಜ್ಯ).
ಸ್ಥಾಪನೆ: ೧೯೨೫.

(೧ನೇ ಪುಟದಿಂದ)

ಸಂಘಟಿಸುವುದು. ಹಾಗಿರುವಾಗ ಇದು ರಾಷ್ಟ್ರದ ಹಿತವನ್ನು ಅನುಲಕ್ಷಿಸುವುದು ಅದೆಷ್ಟು ಮುಖ್ಯವೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಈ ಸಮಾಜವು ಪಕ್ಷಾತೀತವಾಗಿದೆ; ಜಾತ್ಯತೀತವಾಗಿದೆ; ಧರ್ಮಾತೀತವಾಗಿದೆ. ಹಾಗಿರುವಾಗ ವಿವಿಧ ರಾಜಕೀಯ ಪಕ್ಷಗಳಿಗೆ ಸೇರಿದವರೂ ಭಾರತ ಸೇವಾ ಸಮಾಜದಲ್ಲಿ ಸೇರಿಕೊಳ್ಳುತ್ತಾರೆ. ಇದೆಷ್ಟರ ಮಟ್ಟಿಗೆ ಉಚಿತವೆಂಬುದನ್ನು ಎಲ್ಲರೂ ಪರ್ಯಾಲೋಚಿಸಬೇಕು; ರಾಜಕಾರಣಗಳಿಂದ ಸಮಾಜದ ಮೇಲೆ ದುಷ್ಪರಿಣಾಮ ಬೀಳುವ ಸಂಭವವಿದೆಯೆಂಬುದನ್ನು ನಾವು ಮರೆಯುವಂತಿಲ್ಲ.

ಇಂದು ನಾವು ಜಾತೀಯತೆ, ಧರ್ಮೀಯತೆ ಪ್ರಾಂತೀಯತೆ ಹಾಗೂ ಭಾಷೀಯತೆಯ ವಿರುದ್ಧ ಯುದ್ಧ ಹೂಡಿದ್ದೇವೆ ಅಥವಾ ಸಂಕುಚಿತತೆಯ ವಿರುದ್ಧ ಅಸ್ತ್ರವೆತ್ತಿದ್ದೇವೆ. ಈ ಮಹಾ ಸಮರದಲ್ಲಿ ನಾವು ವಿಜಯಿಗಳಾದೆವೆಂದರೆ, ನಮ್ಮ ಭೌತಿಕ ಸ್ವಾತಂತ್ರ್ಯವನ್ನು ನಾವು ಉಳಿಸಿಕೊಳ್ಳುವೆವು. ಇಲ್ಲವಾದರೆ, ದಾಸಾನುದಾಸರಾಗಿ ನವೆಯುವೆವು. ಆದುದರಿಂದ "ಭಾರತೀಯತೆ"ಯನ್ನು ಉಳಿಸಿಕೊಂಡು ಒಂದೇ ಭಾವದಿಂದ ಐಕ್ಯಗಾನವನ್ನು ಹಾಡುವುದು—ಐಕ್ಯಭಾವದಿಂದ ಇರುವುದು ನಮ್ಮೆಲ್ಲರ ಕರ್ತವ್ಯ. ಇದರ ಕಾರ್ಯಾಚರಣೆಯಲ್ಲಿಯೇ ನಮ್ಮ ಉಳಿವು—ಅಳಿವುಗಳು ಅಡಗಿವೆ.

(ಪ್ರಧಾನಿ ನೆಹರೂರ ಭಾಷಣದಿಂದ)

Edited Printed & Published by K. H. Shetty, at the Navayuga Press, Udipi, S. India.

40th year of publication. 20-4-1961 ೪೦ನೇ ವರ್ಷ

ಸಂಪುಟ ೪೦ ಸಂಚಿಕೆ ೩೨

ನವಯುಗ

Vol. 40 No. 32 ಬೆಲೆ 0=13

ಪ್ರಚಲಿತ ಪ್ರಸಂಗ:

ಕಮ್ಯುನಿಸ್ಟರಲ್ಲಿ ತೀವ್ರ ಬಿರುಕು

ದೇಶ ಭದ್ರತೆಯ ಉದ್ದೇಶದ ಡಾಂಗೆ ಮತ್ತು ಅಧಿಕಾರ ಲಾಲಸ ರಣದಿವೆಯವರ ರಾಜಕೀಯ ನೀತಿಯಲ್ಲಿ ಭಿನ್ನಾಭಿಪ್ರಾಯ ಹುಟ್ಟಿಕೊಂಡಿತ್ತು. ಇದು ಸದ್ಯ ತುಸು ತಿಳಿಯಾದಂತೆ ಭಾಸವಾದರೂ ಅಳಿಯದ ಕುತ್ತವಾಗುವುದು ನಿಸ್ಸಂಶಯ.



ಭಿಲೈ ಉಕ್ಕಿನ ಕಾರಖಾನೆಯ ಒಂದು ದೃಶ್ಯ.

ಭಾರತದ ಕಮ್ಯುನಿಸ್ಟ್ ಪಕ್ಷವು ವಿಜಯವಾಡದಲ್ಲಿ ನಿರ್ಮಿಸಿದ ಲುಮುಂಬಾ ನಗರದಲ್ಲಿ ತನ್ನ ಹತ್ತು ದಿವಸಗಳ ಸಮ್ಮೇಳನವನ್ನು ನಡೆಸಿತು. ಇದುವರೆಗೂ ಗುಪ್ತವಾಗಿ ನಡೆಯುತಿದ್ದ ಇಂತಹ ಸಮ್ಮೇಳನದ ಕಾರ್ಯಕಲಾಪಗಳು ಈ ಬಾರಿ ಬಹಿರಂಗವಾಗಿ ನಡೆದುದು ಹಾಗೂ ರಶ್ಯದ ಕಮ್ಯುನಿಸ್ಟ್ ಪಕ್ಷದ ಪ್ರಣೇತರಲ್ಲಿ ಒಬ್ಬರಾಗಿ, ಪ್ರಧಾನಿ ಕ್ರುಶ್ಚೇವರ ಬಲಗೈಬಂಟರೆಂತಿರುವ ಶ್ರೀ ಸುಸ್ಲೋವರು ಇಲ್ಲಿ ಉಪಸ್ಥಿತರಿರುವುದು ಈ ಬಾರಿಯ ವೈಶಿಷ್ಟ್ಯವೆನ್ನಬಹುದು. ಮುಖ್ಯವಾಗಿ ರಾಜಕೀಯ ಪ್ರಶ್ನೆಗಳ ಮೇಲೆ ತಯಾರಿಸಲಾದ ಗೊತ್ತುವಳಿಗಳಲ್ಲಿ ಭಿನ್ನಾಭಿಪ್ರಾಯವು ತಲೆದೋರಿದುದರಿಂದಾಗಿ ಈ ಪಕ್ಷದಲ್ಲಿಯೂ ತೀವ್ರವಾದ ಬಿರುಕು ಕಾಣಿಸಿಕೊಳ್ಳುತ್ತಿರುವುದು ಈಗ ಪ್ರಕಟವಾದಂತಾಗಿದೆ. ಇದೇ ಮಾದರಿಯ ಒಡಕು ಈ ಮೊದಲೂ ತಲೆದೋರಿತ್ತಾದರೂ ಸುದೈವದಿಂದ ಅಂದದು ಹೊಂದಾಣಿಕೆಯಾಗಿತ್ತು; ಆದರೂ ಇದೇ ಬಿರುಕು ಈಗ ಮತ್ತಷ್ಟು ಪ್ರಬಲಗೊಂಡಿದೆ.

ಕಮ್ಯುನಿಸ್ಟ್ ಪಕ್ಷದಲ್ಲಿ ಈಗ ಎರಡು ಗುಂಪುಗಳು ತಲೆಯೆತ್ತಿವೆ. ಡಾಂಗೆ ಮತ್ತು ಅಜಯ ಘೋಷರು ಒಂದು ಗುಂಪಿನ ನಾಯಕರೆಂತಿದ್ದು ಪ್ರಧಾನಿ ನೆಹರುರವರ ವಿದೇಶ ನೀತಿಯನ್ನು ಬೆಂಬಲಿಸಿ, ರಾಷ್ಟ್ರೀಯ ಐಕ್ಯಕ್ಕಾಗಿ ಸಮ್ಮಿಲಿತ ಪ್ರಯತ್ನ ನಡೆಸಬೇಕೆಂಬುದನ್ನು ಇವರು ಪ್ರತಿಪಾದಿಸಿದರೆ, ರಣದಿವೆ—ಭೂಪೇಶಗುಪ್ತರು ಮತ್ತೊಂದು ಪಂಗಡದ ಮುಖಂಡರಾಗಿ ಸಮಾಜವಾದವನ್ನು ಕಾರ್ಯಾಚರಣೆಗೆ ತರಲು ಕಾಂಗ್ರೆಸ್ಸೇತರ ಪಕ್ಷಗಳ ಏಕ್ಯರಂಗ ರಚಿಸಲು, ಕಾಂಗ್ರೆಸ್ಸಿಗೆ ವಿರೋಧವಾಗಿ ಹೋರಾಡಲು ಬದ್ಧ ಕಂಕಣವಾಗಿದ್ದಾರೆ. ಕಾಂಗ್ರೆಸ್ಸೇತರ ಪಕ್ಷಗಳಲ್ಲಿ ಸಮಾಜವಾದಿ ಪಕ್ಷವೊಂದು ಮಾತ್ರ ಕಮ್ಯುನಿಸ್ಟರು ಬಯಸುವ ಸಮಾಜವಾದ ಸ್ಥಾಪನೆಯನ್ನು ಬಯಸುವುದಾದರೂ ಅದು ಇವರೊಂದಿಗೆ ಸೇರಿಕೊಳ್ಳುವ ಅಥವಾ ಇವರಿಗೆ ಸಹಾಯ ನೀಡುವ ನಿರೀಕ್ಷೆಯೂ ಇರುವುದಿಲ್ಲ. ಹಾಗಿರುವಾಗ ಶ್ರೀ ರಣದಿವೆಯವರು ಬಯಸುವಂತೆ ಸಂಯುಕ್ತರಂಗವು ರೂಪಗೊಳ್ಳುವುದಾದರೂ ಹೇಗೆ? ಪಂಜಾಬಿ ಸುಬಾದ ಸ್ಥಾಪನೆ, ಕೇಂದ್ರ ಸರಕಾರದ ಆಡಳಿತೆಯಲ್ಲಿರುವ ಪ್ರದೇಶಗಳಲ್ಲಿ ಜವಾಬ್ದಾರಿಯುತ ಸರಕಾರ ಸ್ಥಾಪನೆ, ಪರಿಶಿಷ್ಟ ಜನಾಂಗ ಮತ್ತು ಹಿಂದುಳಿದ ವರ್ಗಗಳಿಗೆ ಇನ್ನೂ ಹೆಚ್ಚಿನ ಸಹಾಯ ನೀಡುವುದು ಮೊದಲಾದುವು ಕೂಡಿರುವ ಶ್ರೀ ರಣದಿವೆಯವರ ಗೊತ್ತುವಳಿಯಲ್ಲಿ ಇದಕ್ಕೆ ಏನಾದರೂ ಪರಿಹಾರ ಇರಬಹುದು. ಇದೇ ಉದ್ದೇಶಗಳನ್ನು ನಾವು ಇನ್ನೊಂದು ರೀತಿಯಲ್ಲಿ ನೋಡುವುದಾದರೆ, ಭಾಷೀಯತೆ, ಹಿಂದುಳಿದವರಿಗೆ ಸೌಲಭ್ಯ ಮೊದಲಾದುವುಗಳಿಗೆ ಪ್ರೋತ್ಸಾಹವಿತ್ತು ಇವುಗಳಿಂದ ಜನಾನುರಾಗವನ್ನು ಪಡೆದು, ಅಧಿಕಾರಗ್ರಹಣ ಮಾಡುವ ದೂರಾಲೋಚನೆಯನ್ನು ಶ್ರೀ ರಣದಿವೆಯವರು ಮಾಡುತಿದ್ದಾರೆ. ಕಾಂಗ್ರೆಸ್ಸಿನ ಆಂತರಿಕ ಕಲಹದಿಂದಾಗಿ ಕಮ್ಯುನಿಸ್ಟರ ನಾಯಕತ್ವದ ಸಂಯುಕ್ತರಂಗಕ್ಕೆ ತುಸು ಬಲ ಬಂದರೂ ಬರಬಹುದು. ಪಂಡಿತ ನೆಹರುರವರ ವಿದೇಶ ನೀತಿಗೆ ಬೆಂಬಲ ನೀಡುವ ಪ್ರಸ್ತಾಪವು ಪ್ರಶಂಸನೀಯವಾಗಿದೆ. ನೆಹರುರವರ ನೀತಿಯೆಂದರೆ ಕಾಂಗ್ರೆಸ್ಸಿನ ನೀತಿಯಾಗಿದೆ.

ಭಾರತೀಯ ಕಮ್ಯುನಿಸ್ಟ್ ಪಕ್ಷವು ಔದ್ಯಮಿಕ ಕರ್ಮಚರರು ತಮಗಾಗಿ ಸ್ಥಾಪಿಸಿಕೊಂಡ ಪಕ್ಷವೆಂಬಂತಿದೆ. ಆದುದರಿಂದ, ಅದು ಔದ್ಯಮಿಕ ರಂಗವು ಇನ್ನೂ ಬಾಲ್ಯಾವಸ್ಥೆಯಲ್ಲಿರುವ ಭಾರತದಲ್ಲಿ ಕೇವಲ ಅಲ್ಪ ಜನಾಭಿಪ್ರಾಯವನ್ನು ಪ್ರತಿಬಿಂಬಿಸುತ್ತದೆ ಎಂದು ಹೇಳಬಹುದು. ಈ ರಂಗದಲ್ಲಿಯಾದರೂ ಅದು ಎಲ್ಲರ ಅನುರಾಗಕ್ಕೆ ಪಾತ್ರವಾಗಿದೆ ಎನ್ನುವುದು ಸಾಧ್ಯವಿಲ್ಲ. ಈ ಪಕ್ಷವಾದರೂ ತನ್ನ ರಾಜಕೀಯ ಹಿತವನ್ನು ಗಮನಿಸುವಷ್ಟು ತಮ್ಮ ಹಿತವನ್ನು ಬಯಸುವುದಿಲ್ಲವೆಂದು ಈಗೀಗ ಕರ್ಮಚಾರಿಗಳು ತಿಳಿದಿದ್ದಾರೆ. ಇದನ್ನೂ ಗಮನಿಸಿಕೊಂಡ ಪಕ್ಷವು ತನ್ನ ಪ್ರಭಾವವನ್ನು ಬೀರಲು ಅನ್ಯ ಕ್ಷೇತ್ರವನ್ನು ಅರಸಿಕೊಳ್ಳಬೇಕಾಗಿದೆ. ಇದರಿಂದಾಗಿಯೇ ಅದು ವಿದ್ಯಾವಂತ ನಿರುದ್ಯೋಗಿಗಳು, ಭಾಷಾವಾದಿಗಳು, ಜಾತೀಯವಾದಿಗಳು - ಮೊದಲಾದ ಸ್ವಲಾಭ ದೃಷ್ಟಿಯುಳ್ಳವರತ್ತ ದೃಷ್ಟಿ ಹರಿಸತೊಡಗಿದೆ. ಕೇರಳದಲ್ಲಿ ಅಧಿಕಾರಕ್ಕೆ ಕಮ್ಯುನಿಸ್ಟರು ಬರುವುದಕ್ಕೆ ಅಲ್ಲಿನ ಕಾಂಗ್ರೆಸ್ ಪಕ್ಷದ ನಿರ್ಬಲತೆಯೇ ಕಾರಣವಾಯಿತಲ್ಲದೆ ಪಕ್ಷದ ಉದ್ದೇಶಗಳಿಗೆ ಜನತೆ ಮಾರುಹೋಗಿಲ್ಲ. ಆದುದರಿಂದಲೇ ಕಮ್ಯುನಿಸ್ಟರ ಆಡಳಿತೆಯಿಂದ ನೊಂದ ಕೇರಳದ ಜನತೆಯು ಅವರನ್ನು ಗದ್ದುಗೆಯಿಂದಿಳಿಸುವುದರಲ್ಲಿ ಯಶಸ್ವಿಯಾಯಿತು. ಇದರಿಂದಾಗಿ ಆಡಳಿತೆಯನ್ನು ನಿರ್ವಹಿಸಲು ವಿಧಾನ ಸಭೆ ಅಥವಾ ಪಾರ್ಲಿಮೆಂಟಿನಲ್ಲಿ ಬಹುಮತವೊಂದೇ ಸಾಲದು, ಭಾರತೀಯ ಸಂಸ್ಕೃತಿಗೆ, ಭಾರತೀಯ ಸಮಾಜ ಪದ್ಧತಿಗೆ ಸರಿಹೊಂದುವ ಧ್ಯೇಯ ಧೋರಣೆಗಳೂ ರಾಜಕೀಯ ಪಕ್ಷದಲ್ಲಿರಬೇಕು ಎಂಬುದು ತಿಳಿಯುತ್ತದೆ. ಇದನ್ನು ಸಾಧಿಸುವ ಸಲುವಾಗಿಯೇ ಭಾರತೀಯರಲ್ಲಿ ಭೇದಭಾವಗಳನ್ನು ಹುಟ್ಟಿಸುವ ಪ್ರಯತ್ನ ನಡೆಸಹತ್ತಿದೆ. ಶಾಂತಮಯ ಸಮಾಜ ಪದ್ಧತಿಯನ್ನು ಒಡೆದು ವರ್ಗ ಕಲಹವನ್ನು ಹುಟ್ಟಿಸಹತ್ತಿದೆ. ಸ್ವಾರ್ಥಪ್ರಿಯರಿಗೆ ಅವರ ಸ್ವಾರ್ಥ ಸಾಧನೆಯನ್ನು ಮಾಡಿಕೊಡುವ ಆಸೆಯನ್ನು ತೋರಿಸಿ, ಅವರೆಲ್ಲರನ್ನು ತಮ್ಮ ಹಸ್ತಗತರನ್ನಾಗಿ ಮಾಡುವ ಮಹಾ ಸಾಹಸ ಪಡುತಿದ್ದಾರೆ. ಆದರೆ, ಭಾರತದಲ್ಲಿ ಈ ತೆರದ ವರ್ಗ ಕಲಹಗಳಿಗೆ ಮಾನ್ಯತೆ ದೊರೆಯಲಾರದು. ನಾವು ಇಂತಹ ಕಲಹಗಳನ್ನು ಬಯಸುವುದೂ ಇಲ್ಲ; ನಮ್ಮಲ್ಲಿ ಕಮ್ಯುನಿಸ್ಟರು ಹಿಂಡುವ ಹುಳಿ ಪ್ರಭಾವ ಬೀರುವುದೂ ಸಾಧ್ಯವಿಲ್ಲ.

ರಾಜಕೀಯ ದುರುದ್ದೇಶಯುತರಾಗಿ ತನ್ನ ಸ್ವಾರ್ಥಕ್ಕಾಗಿ ರಾಷ್ಟ್ರಘಾತುಕ ಕಾರ್ಯಗಳಿಗೆ ತೊಡಗಲು ಹಿಂಜರಿಯದ ಕಮ್ಯುನಿಸ್ಟ್ ಪಕ್ಷವು ಯಾವುದೇ ಮಾರ್ಗವನ್ನು ಹಿಡಿದರೂ ಯಶಸ್ವಿಯಾಗುವುದು ಸಾಧ್ಯವಿಲ್ಲ. ಭಾರತದಲ್ಲಿದ್ದು ವಿದೇಶೀಯರ ಹಸ್ತಕರಂತೆ ಇರುವ ಈ ಪಕ್ಷಕ್ಕೆ ಸದ್ಯ ಜನಾನುರಾಗವು ಹ್ರಾಸಗೊಳ್ಳುತ್ತ ಬರುತ್ತಿದೆ ಎಂಬುದಕ್ಕೆ ಇತ್ತೀಚೆಗೆ ದೇಶದ ಹಲವೆಡೆ ನಡೆದ ಮರು ಚುನಾವಣೆಗಳಲ್ಲಿ ಅದು ಸೋಲುಂಡುದೇ ಸಾಕ್ಷಿಯಾಗಿದೆ. ಆಂಧ್ರ, ಕೇರಳ, ಬೊಂಬಾಯಿಗಳಲ್ಲಿ ತಲೆಯೆತ್ತದಷ್ಟು ಹಿನ್ನಡೆದ ಇವರು ಇನ್ನೂ ತಲೆಯೆತ್ತದಂತೆ ನೋಡಿಕೊಳ್ಳುವುದು ರಾಷ್ಟ್ರಪ್ರೇಮಿ.ಗಳ ಕರ್ತವ್ಯವಾಗಿದೆ. ದೇಶದ ಹಿರಿಯ ರಾಜಕೀಯ ಪಕ್ಷವಾದ ಕಾಂಗ್ರೆಸ್ಸು ಜಾತೀಯ ಪಕ್ಷಗಳಿಗೆ ಚುನಾವಣೆ

(೯ನೇ ಪುಟ ನೋಡಿರಿ)

ESTD. 1921

NAVAYUGA
KANNADA WEEKLY, UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ
ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೨೧.

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್.
ಬಿ. ಶಾಮರಾಯ ಶೆಟ್ಟಿ, ಬಿ. ಎ., ಎಲ್. ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

●

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್) ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್) ಕಲಂ ಇಂಚಿಗೆ ರೂ. 3-50
ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಕಥಾವಿಹಾರ:

ಜೀವನ ಸಂಧ್ಯಾರಾಗ

ಶ್ರೀನಾಥನ ತಂಗಿ ಉಷೆಯ ಜೀವವನ್ನು ಬದುಕಿಸಿದ್ದ ಮನಿಪರ್ಸು ಸೀತಮ್ಮನ ಹಿರೀ ಮಗ ವಸಂತನ ಪ್ರಾಣಕ್ಕೆ ಸಂಚಕಾರ ತಂದಿತ್ತು. ಸತ್ಯ ಸಂಗತಿ ಇಕ್ಕಡೆಗೂ ಅರಿತಾಗ ಅದೊಂದು ಉತ್ತಮ ಕಾದಂಬರಿಯ ವಸ್ತುವೇ ಆಗಿತ್ತು!

"ರಂಜನೆ", ಬೆಂಗಳೂರು.

"ಕಡ್ಲೆಪುರಿ, ಕಡ್ಲೆಪುರಿ", ಆ ತರುಣನ ಬಾಯಿಯಿಂದ ಶಬ್ದ ಒಂದೇ ಸಮನೆ ಹೊರಡುತ್ತಿತ್ತು. ಜನ ಸೇರಿದ್ದರೂ ಸಣ್ಣ ಡಬ್ಬದಲ್ಲಿ ತುಂಬಿದ್ದ ಕಡ್ಲೆಪುರಿ ಖರ್ಚಾಗಿರಲಿಲ್ಲ. ಆತನ ಆಶಾದಾಯಕ ದೃಷ್ಟಿ ಹತ್ತಿರ ಸುಳಿದಾಡುತ್ತಿದ್ದವರ ಮೇಲೆಲ್ಲಾ ಬೀಳುತ್ತಿತ್ತು; ಆದರೆ ಅವರು ತನ್ನ ದಾಟ ದಾಕ್ಷಿಣ ಕುಸಿದು ಬಿದ್ದು ಮತ್ತೊಬ್ಬರ ಮೇಲೇರುತ್ತಿತ್ತು. "ಗರ ಮಾಗರಂ ಕಡ್ಲೆಪುರಿ, ಬನ್ನಿ ಸಾರ್" ಎಂದು ಅವನಿಗರಿವಿಲ್ಲದಂತೇ ಮಾತು ಹೊರಡುತ್ತಿತ್ತು.

ಒಳ್ಳೆ ಕಾಲು ಹಾದಿಯ ಪಕ್ಕದಲ್ಲೇ ಕಾದು ಕುಳಿತಿದ್ದ ಆ ತರುಣ ಸುಸಂಸ್ಕೃತನಂತೆ ಕಾಣುತ್ತಿದ್ದ. ವಿದ್ಯಾವಂತನಿರಬಹುದೆಂದು ಅತನ ಮುಖ ವರ್ಚಸ್ಸು ತೋರುತ್ತಿತ್ತು, ಬಡತನದ ಕುರುಹನ್ನು ಹರಕು ಬಟ್ಟೆ ಸೂಚಿಸುತ್ತಿತ್ತು. ವನ ವಿಹಾರಕ್ಕಾಗಿ ಬರುವವರ ಆಕರ್ಷಣೀಯ ಬಟ್ಟೆ ಬೆಡಗು ಆತನನ್ನು ಚುಚ್ಚುತ್ತಿತ್ತು, "ತಾನೇಕೆ ಈ ಸ್ಥಿತಿಗಿಳಿದೆ? ನಮ್ಮಪ್ಪನೇಕೆ ಸ್ವಲ್ಪ ಆಸ್ತಿ ಇಡಬಾರದಿತ್ತು?" ಎಂದು ತನ್ನ ಅವಸ್ಥೆಗೆ ನಿಟ್ಟುಸಿರುಗರೆಯುತ್ತಿದ್ದನು.

ಸುಮಾರು ೨೨ ವಸಂತ ಋತುಗಳನ್ನು ಕಂಡಿರಬಹುದಾದ ಆ ತರುಣ ವಿದ್ಯಾವಂತನೇ ಹೌದು! ಆದರೆ ವಿಧಿ ಅವನನ್ನು ಈ ವ್ಯಾಪಾರಕ್ಕೆ ಇಳಿಸಿತ್ತು. ತಂದೆ-ತಾಯಿಗಳನ್ನು ಚಿಕ್ಕಂದಿನಲ್ಲಿಯೇ ಕಳೆದುಕೊಂಡು ಬಿ. ಎ ಪದವೀಧರನಾದ ಶ್ರೀನಾಥ್ ಕಡು ಬಡವನಾಗಿದ್ದನು. ಓದುವಾಗ ಪರಾನ್ನ ನೆರವಿತ್ತರೂ ಪ್ರಶಸ್ತಿ ಪಡೆದ ಮೇಲೆ ನೌಕರಿಗಾಗಿ ಅಲೆದಲೆದು ಕೆಲಸವೂ ಸಿಗದೆ ಪರಾನ್ನವೂ ಇಲ್ಲದೇ ಬಡವಾಗಿದ್ದನು. ಒಬ್ಬಿಬ್ಬರು ತಮ್ಮ ಮಕ್ಕಳಿಗೆ ಪಾಠ ಹೇಳಿ ಕೊಡಲು ಕರೆದರು. ಒಮ್ಮೆ ಕಬ್ಬನ್ ವನದಲ್ಲಿ ಕಂಡ 'ಖಾರಾಪುರಿ' ವ್ಯಾಪಾರ ಸುಲಭವಾಗಿ ಕಂಡಿತು, ಹೆಚ್ಚು ಬಂಡವಾಳವೂ ಬೇಕಿರಲಿಲ್ಲ. ಅಂದಿನಿಂದ ಪ್ರತಿ ಭಾನುವಾರ ಕಬ್ಬನ್ ವನಕ್ಕೆ 'ಖಾರಾಪುರಿ'ಯೊಡನೆ ಹೋಗುತ್ತಿದ್ದ. ತಾಯ್ತಂದೆಯರಿಲ್ಲವಾದರೂ ತಂಗಿಯೊಬ್ಬಳನ್ನು ಹೊಂದಿದ್ದ ಶ್ರೀನಾಥ್ ಅವಳಿಗಾದರೂ ಕಷ್ಟಪಡಬೇಕಿತ್ತು.

ಆ ಭಾನುವಾರ ಬಹು ಬೇಸರವಾಗಿತ್ತವನಿಗೆ. ಸರಿಯಾಗಿ ಒಂದು ರೂಪಾಯಿಯ ವ್ಯಾಪಾರವಾಗಿರಲಿಲ್ಲ. ಉಷಾಳಿಗೆ ನಾಳೆ ಹುಟ್ಟುಹಬ್ಬ, ಅವಳಂದು ಹಾಸಿಗೆ ಹಿಡಿದಿದ್ದಾಳೆ. "ಆಸ್ಪತ್ರೆಗೆ ಬೇಗ ಹೊರಟು ತಂಗಿಯನ್ನು ಡಾಕ್ಟರರಿಗೆ ತೋರಿಸಬೇಕು ನಾಳೆ ಹಬ್ಬದ ಕುರುಹಾಗಿ ಒಂದು ಒಳ್ಳೇ ಲಂಗವನ್ನಾದರೂ ಹೊಲಿಸಬೇಕು." ನಾನಾ ಯೋಚನೆಗಳಿಂದ ಶ್ರೀನಾಥ ಸಪ್ಪೆ ಮೋರೆಯೊಡನೆ ಕುಳಿತಿದ್ದ.

ಸಂಜೆ ಸೂರ್ಯ ತನ್ನ ಹೊಂಗಿರಣಗಳನ್ನು ಬಿಡುತ್ತಿದ್ದ. ಆಗಲೆ ಮನೆಗೆ ಹಿಂತಿರುಗಲು ಮನಸ್ಸುಮಾಡಿದ್ದ. ಆದರೆ ಜೇಬೊಳಗೆ ಸರಿಯಾಗಿ ಒಂದು ರೂಪಾಯಿ ಇರಲಿಲ್ಲ. ಅದು ಡಾಕ್ಟರರ ಸಂಭಾವನೆಗೇ ಸಾಲುವುದಿಲ್ಲ. ಇನ್ನು ತಂಗಿಯ ಬಟ್ಟೆ, ಇತರ ಖರ್ಚುಗಳಿಗೇನು ಮಾಡುವುದು?. ಶ್ರೀನಾಥನ ತಲೆ ಸಿಡಿಯುತ್ತಿತ್ತು. ಅಷ್ಟರಲ್ಲಿ ಒಬ್ಬ ಶ್ವೇತ ವಸ್ತ್ರಧಾರಿ ಪುರಿಗಾಗಿ ಕೂಗಿದ. ಸಂತಸದಿಂದ ಶ್ರೀನಾಥ ಮುನ್ನುಗ್ಗಿದ. ಒಂದಾಣೆಗೆ ಕೊಡು ಅವರೆಂದರು. ಅವರಿಗೆ ಕೊಡುವಷ್ಟರಲ್ಲಿ ಮತ್ತೊಬ್ಬ ಬಂದ. ಒಬ್ಬರಾದ ಮೇಲೊಬ್ಬರು ಗುಂಪು ಕೂಡಿದರು, ಶ್ರೀನಾಥನ ಅದೃಷ್ಟ ಒದಗಿ ಬಂದಂತಿತ್ತು.

ಶ್ರೀನಾಥನ ಮುಖ ಪ್ರಫುಲ್ಲಿತವಾಗಿತ್ತು. ಜನರೆಲ್ಲರೂ ಚದುರಿದ್ದರು. ಹಣ ಎಣಿಸಿ ನೋಡಿದಾಗ ಮೂರು ರೂಪಾಯಿ ಹನ್ನೊಂದಾಣೆ. ಶ್ರೀನಾಥನ ಎದೆಯುಬ್ಬಿತು ಹೊರಡಲು ಮೇಲೆದ್ದ.... "ಇದೇನು ಪರ್ಸು? ಯಾರದು?" ಶ್ರೀನಾಥನ ಬಾಯಿಂದ ಮೆಲ್ಲನೆ ಹೊರಬಿತ್ತು. ತಿಂದೆಸೆದ ಕಾಗದಗಳ ಮಧ್ಯೆ ಬಿದ್ದಿದ್ದ ಪರ್ಸು ಕೈಗೆತ್ತಿಕೊಂಡ. ಯಾರೂ ಗಮನಿಸಿದಂತಿರಲಿಲ್ಲ. "ಈಗೇನ ಮಾಡುವುದು? ಯಾರದಿದು? ಎಷ್ಟು ಹಣವಿರಬಹುದು? ಪಾಪ ಯಾತಕ್ಕಾಗಿ ಇಟ್ಟುಕೊಂಡಿದ್ದರೋ?"... ಈಗೇನು ಮಾಡುವುದು? ಅವರು ಪುನಃ ಹುಡುಕಿಕೊಂಡು ಬರುವವರೆಗೂ ಕಾದು ಕುಳಿತು ಅವರ ಸ್ವತ್ತು ಹಿಂತಿರುಗಿಸಿ ಹೊರಡುವುದೇ?... ನನ್ನನ್ನೇ ಚಾತಕ ಪಕ್ಷಿಯಂತೆ ಎದುರು ನೋಡುತ್ತಿರುವ ತಂಗಿಯ ಬಳಿಗೆ ಹೋಗಬೇಕೆ? ಇಷ್ಟು ಹೊತ್ತಿಗೆ ಅವಳ ಮೈ ಹೇಗಿರುತ್ತದೆಯೋ?.... ಗಂಜಿ ಕುಡಿದಿರುವಳೋ ಇಲ್ಲವೋ?.... ಡಾಕ್ಟರರು ಎಲ್ಲಾದರೂ ಹೊರಟು ಹೋದರೇನು ಗತಿ? ಚರ್ಚೆ ಬಿಡುವಿಲ್ಲದಂತೆ ಸಾಗಿತ್ತು. ದಾರಿಹೋಕರೊಬ್ಬರನ್ನು ಕೇಳಿದ "ಘಂಟೆ ಎಷ್ಟು ಸಾರ್?"...."ಆರೂವರೆ" ಅವರುತ್ತರ ಶ್ರೀನಾಥನಿಗೆ ಗರಬಡಿದಂತೆ ಮಾಡಿತು. "ಇನ್ನರ್ಧ ಘಂಟೆಗೆ ಆಸ್ಪತ್ರೆ ಬಂದ್!" ಅನಂತರ ತಂಗಿಗೆ ಔಷಧ ಸಿಗುವುದಿಲ್ಲ. ಈ ಪರ್ಸಿನೊಳಗಿನ ಹಣ ಆತನ ತಂಗಿ ಉಷೆಯ ಪ್ರಾಣವನ್ನು ಅಂದು ಉಳಿಸಿತು.

ಆ ದಿನ ಶ್ರೀ ನಾಥನ ಜೀವಿತದ ಪರ್ವದಿನ. ಪರ್ಸಿನ ಒಳಗಡೆ ಪದರವಿರುವುದು ತಿಳಿಯಿತು. ಮೊದಲಿನಿಂದಲೂ ಊದಿಕೊಂಡು ಅನುಮಾನಾಸ್ಪದವಾಗಿದ್ದ ಅದರ ಮೇಲಿನ ಸಹಜ ಕುತೂಹಲ ಕೆರಳಿತು.... ಚರ್ಮದ ಪದರ ಬಿಡಿಸಿದಂತೆಲ್ಲಾ ಕಾಗದದ ಪದರಗಳು ಕಾಣಿಸಿಕ್ಕವು. ನೂರು ರೂ. ಗಳ ಹಸಿರು ನೋಟುಗಳು ಒಂದು, ಎರಡು....ಹದಿಮೂರು, ಅಬ್ಬ ಒಂದು ಸಾವಿರದ ಮೂರುನೂರು! ಯಜಮಾನನಿಲ್ಲದ ಲಕ್ಷ್ಮಿಗೆ ಒಡೆಯದೊರಕಿದ. ಚಿಕ್ಕಂದಿನಿಂದಲೇ ಸರಸ್ವತಿ ಒಲಿದಿದ್ದು ಲಕ್ಷ್ಮಿ ಕಟಾಕ್ಷವಿಲ್ಲದೇ ಒಣಗುತ್ತಿದ್ದ....ಬತ್ತುತ್ತಿದ್ದ ಸಾಹಿತ್ಯ ಇದೊಮ್ಮೆ ಚಿಗುರತೊಡಗಿತು. ಉಕ್ಕಿ ಹರಿಯತೊಡಗಿತು.

೦೦ ೦೦

"ಶ್ರೀ ನಾಥ ಪ್ರಕಾಶನ" ಮನೆ ಮುಂದೆ ಹಲಗೆ ಬಂದ. ಎರಡೂವರೆ ವರ್ಷವಾಯಿತು. ಇದೀಗ ತಂಗಿ ಉಷಾಳಿಗೆ ಲಗ್ನವಾಗಿ ಪತಿಗೃಹ ಸೇರಿದ್ದಾಳೆ. ಶ್ರೀ ನಾಥನಿಗೊಂದು ಮನೆಯಿದೆ. ಅವನಿಗಾಗಿ ಒಂದು ಮುದ್ರಣಾಲಯ ಎಡಬಿಡದೆ ಕೆಲಸ ಮಾಡುತ್ತಿದೆ. ಶ್ರೀ ನಾಥನಿಂದು ನಾಡ ಉಜ್ವಲ ಸಾಹಿತಿ. ಆತನ ಪುಸ್ತಕ ಮುದ್ರಣಗಳ ಮೇಲೆ ಮುದ್ರಣಗಳನ್ನು ಕಾಣುತ್ತಿದೆ........ಅವೆಲ್ಲಾ— 'ಆ ಮನಿಪರ್ಸ್'ನಿಂದಲೇ ಎಂದವನ ನಂಬಿಕೆ. ತನ್ನ ಜೀವನದ ಹರಿಗೋಲಾಗಿ ಬಂದ ಆ ಪರ್ಸ್ ದೇವರ ಗೂಡಿನಲ್ಲಿದೆ. ದೇವರಿಗೆ ಪೂಜೆ ನಡೆನಂತೆ ಪ್ರತೀ ದಿನ ಅದಕ್ಕೂ ಪೂಜೆ ನಡೆಯುತ್ತದೆ.

(೧೧ನೇ ಪುಟ ನೋಡಿರಿ)

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ರೇವಣಿ ಮಾಡಿರಿ: ಬಡ್ಡಿ ಸೇಕಡಾ 5ರಂತೆ: ರೂ. 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100—00 ಒದಗಿಸುವುದು.

ಕರೆ, ಚಿಕ್ಕ ಮ್ಯಾದೆ, ನಿರಖು ರೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಸೇಕಡಾ 5¼ರ ವರೆಗೆ.

ತಾ 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK LTD.
Estd: 1920

ರವೀಂದ್ರ ವಾಣಿ:

ಆತ್ಮಬೋಧ

(ಲೇಖಾಂಕ ೧)

> ಪಶುಗಳಿಗೂ ಮಾನವರಿಗೂ ಇರುವ ಮಹದಂತರವೊಂದೇ—ಆತ್ಮಬೋಧ "ತನ್ನ ಆತ್ಮವನ್ನು ತಿಳಿದುಕೋ, ಅಥವಾ ಸರ್ವ ಮನುಷ್ಯರಲ್ಲಿ ಇರುವ ಏಕೈಕ ಸತ್ಯದ ಮೂಲವನ್ನು ಗುರುತಿಸು" ಎಂದು ಉಪನಿಷತ್ತು ಹೇಳುತ್ತದೆ. ಆತ್ಮಜ್ಞಾನಿಗಳನ್ನೇ ನಾವು ಮಹಾತ್ಮರೆನ್ನುತ್ತೇವೆ.

ಮೂಲ ಲೇಖಕರು: ವಿಶ್ವಕವಿ ರವೀಂದ್ರನಾಥ ಟಾಗೋರ್.
ಅನುವಾದಕರು: ಶ್ರೀ ಕೆ. ಎನ್. ಭಟ್, ಶಿರಾಡಿಪಾಲ್.

ಪ್ರಾಚೀನ ಭಾರತದ ಜೀವನ–ಆದರ್ಶವು ತನ್ನ ಆತ್ಮಬೋಧದ [ಆತ್ಮದ ತಿಳಿವಿನ) ಕ್ಷೇತ್ರವನ್ನು ಸಮಸ್ತ ಜಗತ್ತಿನಲ್ಲಿ ವಿಸ್ತಾರಗೊಳಿಸಿ, ಸರ್ವ ಚೇತನನೂ ಸರ್ವ ವ್ಯಾಪಕನೂ ಆದ ಬ್ರಹ್ಮನಲ್ಲಿ ವಿಹಾರ ಮಾಡುವುದು, ಮತ್ತು ಆ ಬ್ರಹ್ಮಜ್ಞಾನದಲ್ಲೇ ತಲ್ಲೀನತೆಯನ್ನು ಹೊಂದಿ ಪರಮ ಆನಂದದ ಅನುಭೂತಿಯನ್ನು ಅನುಭವಿಸುವುದು; ಈ ಪಥದಲ್ಲೇ ಮುಂದೆ ಸಾಗಿದ್ದಿತು, ಎಂಬುದನ್ನು ನಾವು ಈಗ ತಿಳಿದಿದ್ದೇವೆ. ಇಂತಹ ಈ ಆದರ್ಶವು ಮನುಷ್ಯನ ಯೋಗ್ಯತೆಗೆ ಮೀರಿದುದು, ಎಂದು ಹೇಳಲ್ಪಡಬಹುದಾದರೂ; ಈ ಬ್ರಹ್ಮಾನಂದವು ಆತ್ಮ ಬೋಧದ ವಿಸ್ತಾರದಿಂದ ಪಡೆದು ಬಂದ ಅನುಭವವಾಗಿತ್ತು. ಈ ಕಾರ್ಯವನ್ನು ಬಾಹ್ಯ ಜಗತ್ತಿನ ಸಂಪರ್ಕದಿಂದ ಪ್ರಾರಂಭ ಮಾಡಿದ್ದೇ ಆದರೆ, ಆಗ ಅದಕ್ಕೆ ಎದುರಾಗುವ ಪ್ರಕ್ರಿಯೆಗಳಿಗೆ ಕೊನೆಯೇ ಇಲ್ಲವೆಂದಾಗಬಹುದು. ಅಂದರೆ ಈ ಪ್ರಯತ್ನವು ಸಮುದ್ರದ ಅಲೆಗಳನ್ನು ಬೇರೆಬೇರೆಯಾಗಿ ಹಿಡಿದು, ಇಂಗಿಸಿ, ಪುನಃ ಸಮುದ್ರತೀರಕ್ಕೆ ತಳ್ಳಿ ಬಿಡುವ ವ್ಯರ್ಥ ಪ್ರಯತ್ನದಂತೆ ಆಗಬಹುದು. ಎಲ್ಲವನ್ನೂ ನಮ್ಮಲ್ಲಿಯೇ ತುಂಬಿಕೊಳ್ಳುವ ಪ್ರಯತ್ನ ಮಾಡುತ್ತಿರುವ ನಾವು ಏನನ್ನೂ ತುಂಬಿಕೊಳ್ಳಲಾರದೆ, ಕೊನೆಗೆ ಎಲ್ಲವನ್ನೂ ಕಳೆದುಕೊಳ್ಳುವ ಸ್ಥಿತಿಗೆ ತಲಪುತ್ತೇವೆ, ಎಂಬಂತೆ ಕಂಡುಬಂದರೂ, ಇದು ಸಂಪೂರ್ಣವಾಗಿ ಹಾಗೆ ಆಗಲಾರದು. ಈ ಪರಿಸ್ಥಿತಿ ನಮಗೆ ಕಾಣುವಷ್ಟು ಕಠಿಣವಾಗಿಲ್ಲ.

ಮನುಷ್ಯನು ಪ್ರತಿ ದಿನವೂ ತನ್ನ ಕಾರ್ಯಕ್ಷೇತ್ರವನ್ನು ವಿಸ್ತಾರಗೊಳಿಸುತ್ತ ತನ್ನ ಹೊಣೆಗಾರಿಕೆಯ ಭಾರವನ್ನು ಒಂದು ರೀತಿಯ ಸಮತೋಲದಲ್ಲಿ ನಿಲ್ಲಿಸುವ ಪ್ರಯತ್ನ ಮಾಡುತ್ತಾನೆ. ಮನುಷ್ಯನ ದಿನನಿತ್ಯದ ಸಮಸ್ಯೆ ಇದೇ ಆಗಿರುತ್ತದೆ. ಈ ಸಮಸ್ಯೆಯನ್ನು ಬಗೆಹರಿಸಲು, ಮನುಷ್ಯನು ಸದಾ ಪ್ರಯತ್ನ ಮಾಡುತ್ತಿರುತ್ತಾನೆ. ಆದರೆ ಅತನ ಭಾರ ಕಡಿಮೆಯಾಗುವ ಬದಲು ಮತ್ತೂ ಹೆಚ್ಚುತ್ತಲೇ ಇರುತ್ತದೆ. ವಿವಿಧ ಪ್ರಕಾರದ ಹಲವು ಜವಾಬ್ದಾರಿಗಳನ್ನು ಹೊತ್ತ ಮನುಷ್ಯನು ಅವುಗಳನ್ನು ಸಮತೋಲದಲ್ಲಿ ನಿಲ್ಲಿಸಿ, ಒಂದು ರೀತಿಯ ವ್ಯವಸ್ಥೆ ಮಾಡಿ, ಜೀವನ ಪಥದಲ್ಲಿ ಮುಂದುವರಿಯುವುದು ಬಹಳ ಕಠಿಣವೆನಿಸುತ್ತದೆ. ಆದರೆ, ಅತನು ಆಗ "ಇದಕ್ಕೆ ಒಂದು ವ್ಯವಸ್ಥೆಯನ್ನು ನಿರ್ಮಿಸಿದರೆ, ತನ್ನ ಭಾರ ಕಡಿಮೆ ಆಗಬಹುದು" ಎಂದೇ ತಿಳಿದುಕೊಳ್ಳುತ್ತಾನೆ. ಆದರೆ ಇಷ್ಟು ತಿಳಿದ ಮೇಲೂ, ವಿಷಮ ಪರಿಸ್ಥಿತಿಗಳಿಂದ ಆ, ಭಾರ, ವಿಶೇಷ ಹೆಚ್ಚಿದಾಗ- ಮನುಷ್ಯನಿಗೆ ಕೂಡಲೇ "ಈ ವ್ಯವಸ್ಥೆ ಇನ್ನೂ ಸರಿಯಾಗಿ ಆಗಿಲ್ಲ" ಎಂದು ತಿಳಿದು ಬರುತ್ತದೆ. ಆಗ ಒಡನೆಯೇ ಅತನು ಪುನಃ ವ್ಯವಸ್ಥೆಗಾಗಿ ಪ್ರಯತ್ನಿಸುತ್ತಾನೆ. ಈ ವ್ಯವಸ್ಥೆಯು ಪ್ರಯತ್ನ ರೂಪೀಸಂಶೋಧನೆ ಯಾವುದಿದೆಯೋ ಅದುವೇ ಸಮಾನತೆ, ಎಂಬ ಹೆಸರಿನಿಂದ ಕರೆಯಲ್ಪಡುವುದು. ಸಮಾನತೆಯ ಅಥವಾ ಐಕ್ಯ ಭಾವನೆಯ ಸಂಶೋಧನೆಯೇ ಇದಾಗಿರುವುದು. ನಾವು ನಮ್ಮ ಬಾಹ್ಯ ಉಪಕರಣಗಳ, ಕೆಲಸ ಕಾರ್ಯಗಳ ಅವ್ಯವಸ್ಥೆಯನ್ನು ಅಂತರಂಗದ ಏಕೈಕ ಸೂತ್ರದ ಸಹಾಯದಿಂದ, 'ಸುವ್ಯವಸ್ಥೆ ಅಥವಾ ಸಮಾನತೆಯನ್ನು ಸ್ಥಾಪಿಸಲು ಪ್ರಯತ್ನ ಮಾಡುತ್ತಿರುತ್ತೇವೆ. 'ಈ ಪ್ರಯತ್ನದಿಂದ ಆ ಏಕೈಕ ತತ್ವವನ್ನು ಸಂಶೋಧಿಸುವುದೆಂದರೆ, ನಮಗೆ ಸರ್ವಸ್ವವನ್ನೂ ಪಡೆದಂತೆ, ಮತ್ತು ಇದೇ ನಮ್ಮ ಅಂತಿಮ ಧ್ಯೇಯವಾಗಿದೆ, ಎಂಬ ಜ್ಞಾನ ಉಂಟಾಗುತ್ತದೆ. ಈ ಅದ್ವೈತದ ಆಧಾರವು, ಅನೇಕ ರೂಪಗಳಿಂದ ಇದ್ದರೂ ಎಲ್ಲದರಲ್ಲಿಯೂ ಇರುವ ಸತ್ಯವೇ ಆಗಿರುವುದು. ಇದರ ಅಸ್ತಿತ್ವವು ಅನೇಕ ಘಟನೆಗಳಿಂದಾಗಿದೆ. ಆದರೆ, ಆ ಸತ್ಯವು ಮಾತ್ರ ಒಂದೇ ಆಗಿದೆ.

ಪಶುಬುದ್ಧಿಯು ಕೇವಲ ಘಟನೆಗಳನ್ನಷ್ಟೇ ಗುರುತಿಸಬಲ್ಲದು. ಆದರೆ ಮನುಷ್ಯನ ಬುದ್ಧಿಗೆ ಅದರ ಆಚೆಗಿರುವ ಸತ್ಯದ ವರೆಗೆ ತಲಪುವ ಯೋಗ್ಯತೆ ಇರುವುದು. ಮರದಿಂದ ಹಣ್ಣು ತಾನಾಗಿ ಕೆಳಗೆ ಉದುರಿ ಬೀಳುತ್ತದೆ. ಆಕಾಶದಿಂದ ಭೂಮಿಗೆ ಮಳೆ ತಾನಾಗಿ ಬೀಳುತ್ತದೆ. ಇಂತಹ ಎಷ್ಟೋ ಘಟನೆಗಳಿವೆ. ಈ ಘಟನೆಗಳ ಇತಿಹಾಸವನ್ನು ಸಂಗ್ರಹಿಸತೊಡಗಿದರೆ, ಅದಕ್ಕೆ ಅಂತ್ಯವೇ ಇಲ್ಲವೆಂದಾಗಬಹುದು. ಆದರೆ, ಈ ಘಟನೆಗಳ ಮೂಲ ಸಿದ್ಧಾಂತಗಳನ್ನು ಒಂದು ಸಲ ತಿಳಿದುಕೊಂಡ ಮೇಲೆ ಮತ್ತೆ ಈ ಘಟನೆಗಳನ್ನು ಪರಿಶೀಲಿಸುವುದು ಅಗತ್ಯವಿಲ್ಲದಂತಾಗುತ್ತದೆ. ಅರ್ಥಾತ್ ನಾವು ಅನೇಕ ಘಟನೆಗಳಿಂದ ಕೂಡಿದ ಏಕೈಕ ಸತ್ಯವನ್ನು ಕಂಡು ಹಿಡಿಯುತ್ತೇವೆ. ಸತ್ಯದ ಈ ಪರಿಚಯ ಲಾಭವು ಮನುಷ್ಯನ ಮನಸ್ಸಿಗೆ ಮುಕ್ತಿಯನ್ನಿತ್ತು ದಿವ್ಯವಾದ ಆನಂದವನ್ನುಂಟುಮಾಡುವುದು. ಈ ಘಟನೆಗಳೆಂದರೆ, ಅವುಗಳ ಮುಕ್ತಾಯಕ್ಕೆ ಅಂತ್ಯವಾಗುತ್ತವೆಯೇ ಹೊರತು, ಅದಕ್ಕಿಂತ ಮುಂದುವರಿಯಲಾರವು. ಆದರೆ ಸತ್ಯದ ಮಾರ್ಗವು ಮನುಷ್ಯನ ಮುಂದೆ ಆಕಾಶದ ಮಾರ್ಗವನ್ನೇ ತೆರೆದಿಡುತ್ತದೆ. ಮತ್ತೆ ಅದು ನಮ್ಮನ್ನು ಅನಂತ ಪಥದ ಮೂಲಕ ಕರೆದುಕೊಂಡು ಹೋಗುತ್ತದೆ. ಇದಕ್ಕಾಗಿಯೇ ಡಾರ್ವಿನ್‌ನಂತಹ ಒಬ್ಬ ತಾತ್ವಿಕ ಮನುಷ್ಯನೂ ಕೂಡ, ಪ್ರಾಣಿ ಶಾಸ್ತ್ರದ ಒಂದು ಸಾಧಾರಣ ಸತ್ಯವನ್ನೂ ಸಹ ತಿಳಿದುಕೊಂಡು ಅಲ್ಲಿಗೇ ತೃಪ್ತಿಪಡದೆ, ಮತ್ತೂ ಮುಂದುವರಿಯುತ್ತಾನೆ. ಯಾವ ವಸ್ತು ವಿಷಯಕ್ಕಾಗಿ ಅತನು ತನ್ನ ಜ್ಞಾನ ಜ್ಯೋತಿಯನ್ನು ಪ್ರಜ್ವಲಿಸಿದ್ದನೋ ಅದರಿಂದ, ಆ ವಸ್ತುವಿನ ಹೊರತು, ಆದರೆ, ದೂರ, ಸಮೀಪದ ಎಲ್ಲಾ ವಸ್ತುಗಳ ಮೇಲೂ, ಆ ಜ್ಞಾನ ಪ್ರಭೆ ಪ್ರಕಾಶಿತವಾಗುವುದು. ಈ ಪ್ರಕಾಶವು ಮಾನವಜೀವನದ ಸಮಸ್ತ ವಿಚಾರ ಧಾರೆಗಳ ಮೇಲೆ, ಪ್ರಕಾಶ ಬೀರುತ್ತದೆ. ಸತ್ಯವು ಎಲ್ಲಾ ಘಟನೆಗಳಿಗೂ ಮೀರಿನಿಂತು, ಎಲ್ಲಾ ದಿಕ್ಕುಗಳನ್ನೂ ದಾಟಿ, ಅನಂತ ಪಥವನ್ನು ಸಂಕೇತದಿಂದ—ತೋರಿಸುವುದು. ಆದರೆ, ಈ ಅನಂತಪಥವನ್ನು ದುರ್ಬಲವಾದ ಬಾಹ್ಯ ಚಕ್ಷುಗಳು ನೋಡಲಾರವು.

ಈ ವಿಚಾರ, ಜ್ಞಾನದ ಸಂಬಂಧದಲ್ಲಿ ಸತ್ಯವಾಗಿರುವಂತೆ, ಅನುಭವದ ವಿಚಾರದಲ್ಲೂ ಸತ್ಯವಾಗಿದೆ. ಮನುಷ್ಯನಿಗೆ ಆ ಸತ್ಯದ ನಿಜಸ್ವರೂಪದ ಅನುಭವವಾಗಬೇಕು. ಹೀಗಾಗಬೇಕಾದರೆ, ಮನುಷ್ಯನ ದೃಷ್ಟಿಯು ವಿಸ್ತೃತವಾಗಿ ಆ ದರ್ಶನ ಶಕ್ತಿ ಲಭಿಸಬೇಕು. ಮತ್ತು ಆ ಧ್ಯೇಯವೇ ಪರಮ ಧ್ಯೇಯವಾಗಬೇಕು. ಈ ಧ್ಯೇಯವೇ ನಮ್ಮ ಉಪನಿಷತ್ತುಗಳಲ್ಲಿ ಹೇಳಿರುವ ಅಧಿಕಾರವಾಗಿದೆ. ಇದನ್ನು ಉಪನಿಷತ್ತುಗಳಲ್ಲಿ—"ತನ್ನ ಆತ್ಮವನ್ನು ತಿಳಿದುಕೋ! ಅಥವಾ ಸರ್ವ ಮನುಷ್ಯರಲ್ಲಿರುವ ಆ ಏಕೈಕ ಸತ್ಯದ ಮೂಲವನ್ನು ಗುರುತಿಸು." ಎಂದು ಹೇಳಿರುವರು.

ನಮ್ಮ ಅಹಂಕಾರದ ಮೂಲಕ ಉದ್ಭವಿಸಿದ ನಮ್ಮ ಪ್ರವೃತ್ತಿಗಳು ಅಥವಾ ಸ್ವಾರ್ಥ ಭಾವನೆಯ ;ನಮ್ಮ ಅಪೇಕ್ಷೆಗಳು, ಇವು ಆತ್ಮದ ನಿಜಸ್ವರೂಪವನ್ನು ಹೊಗೆಯಿಂದ ಒಂದು ವಸ್ತು ಮುಚ್ಚಿಹೋಗುವಂತೆ ಮುಚ್ಚಿಬಿಡುತ್ತವೆ. ಆದರೆ, ನಮಗೆ ಆತ್ಮಾನುಭೂತಿ ಉಂಟಾದಾಗ ನಮ್ಮ ಆತ್ಮವು ಆ ಅಹಂಕಾರದ ಪರದೆಯನ್ನು ಹರಿದೊಗೆದು, ಸ್ವಯಂ ಪ್ರಕಾಶಿತವಾಗುತ್ತದೆ. ಹೀಗೆ ಆಗುತ್ತಿರಲು ನಾವು ಸಂಪೂರ್ಣ ವಿಶ್ವವನ್ನು ಆತ್ಮೀಯ ಭಾವನೆಯಿಂದ ನೋಡಲು ಸಮರ್ಥರಾಗುತ್ತೇವೆ. ನಮ್ಮ ಆತ್ಮ ವ ಸ್ತು ವಿಶ್ವಾತ್ಮನಲ್ಲಿ ಯಾವ ಸಮಾನತೆ ಇದೆಯೋ ಅದು ನಮ್ಮನ್ನು ವಿಶ್ವದ ಆತ್ಮೀಯರನ್ನಾಗಿ ಮಾಡುತ್ತದೆ.

ಮಕ್ಕಳು ಬೇರೆ ಬೇರೆ ಅಕ್ಷರಗಳನ್ನು ಗುರುತಿಸುವಾಗ ಅವರಿಗೆ ಅದರಿಂದ ಆನಂದವಾಗುವುದಿಲ್ಲ. ಏಕೆಂದರೆ, ಈ ಅಕ್ಷರ ಜ್ಞಾನವನ್ನು ತಿಳಿದುಕೊಳ್ಳುವಾಗ ಅವರು ಅದರಿಂದ, ಯಾವುದೇ ಪೂರ್ಣವಾದ ಜ್ಞಾನವನ್ನು ಪಡೆಯಲಾರರು. ಇದರಿಂದ ಅವರ ಮನಸ್ಸು ನಿರೋತ್ಸಾಹಗೊಳ್ಳುತ್ತದೆ. ಆದರೆ, ಆ ಮಕ್ಕಳು, ಅಕ್ಷರಗಳನ್ನು ಕೂಡಿಸಿ, ಒಂದು ಪದ, ವಾಕ್ಯ, ಮಾಡಲು ಸಮರ್ಥರಾಗಿ, ಆ ವಾಕ್ಯದಿಂದ, ಭಾವ, ಅರ್ಥ ಇತ್ಯಾದಿಗಳು ಹುಟ್ಟಿ ಅದನ್ನು ತಿಳಿದುಕೊಳ್ಳಲು ಸಮರ್ಥರಾದಾಗ ಮಾತ್ರ ಅವರು ಆನಂದಿತರಾಗುತ್ತಾರೆ. ಇದೇ ರೀತಿ, ನಮ್ಮ ಆತ್ಮವು ಸಂಕೀರ್ಣವಾದ ಬಂಧನದಲ್ಲಿ ಸಿಲುಕಿದ್ದಾಗ ತನ್ನ ವಿಶೇಷತೆಯನ್ನು ಕಳೆದುಕೊಳ್ಳುತ್ತದೆ. ಆದರ ವಿಶೇಷತೆಯು, ಅದ್ವೈತದಲ್ಲೇ ಇರುವುದು. ಆತ್ಮವು ವಿಶ್ವದ ಬಗೆಗೆ ಸಮಭಾವವನ್ನಿರಿಸಿದ ಬಳಿಕವೇ ತನ್ನ ನಿಜ ಸ್ವರೂಪದ ಜ್ಞಾನವನ್ನು ಹೊಂದುತ್ತದೆ. ಮತ್ತು— ಆಗ ಅದು ಆನಂದದ ಅನುಭೂತಿಯನ್ನು ಪಡೆಯುತ್ತದೆ. ಪ್ರಕೃತಿಯ ವ್ಯಾಪಕವಾದ ಸಮಾನತೆಯ ಸಿದ್ಧಾಂತವನ್ನು ಮನುಷ್ಯನು ಎಲ್ಲಿಯ ವರೆಗೆ ತಿಳಿದುಕೊಳ್ಳಲಿಲ್ಲವೋ ಅಲ್ಲಿಯ ತನಕ ಅತನು, ಭಯ ಸಂಶಯಗಳಿಂದ ಆಕ್ರಾಂತನಾಗಿರುತ್ತಿದ್ದನು, ಮತ್ತು ಅತನಿಗೆ ಜಗತ್ತು ಅಪರಿಚಿತವಾಗಿ ಕಾಣಿಸುತ್ತಿತ್ತು. ಕೊನೆಗೆ ಅತನಲ್ಲಿ ಉಂಟಾದ ಜ್ಞಾನೋದಯದಿಂದ ಅತನು ತನ್ನ ಅಂತಃಕರಣ ಮತ್ತು ವಿಶ್ವದ ವ್ಯವಸ್ಥೆ ಇವುಗಳ ನಡುವೆ, ಯಾವ ಸಾಮ್ಯವಿದೆ? ಎಂಬುದನ್ನು ತಿಳಿದುಕೊಂಡನು. ಮನುಷ್ಯನನ್ನು ಈ ಜಗತ್ತಿಗೆ ಕಳುಹಿಸಿರುವ ಆ ಶಕ್ತಿಯ ಸೂತ್ರವೂ ಇದೇ ಆಗಿರುವುದು. ಈ ವಿಷಯದ ಜ್ಞಾನ ತಿಳಿದ ಕೂಡಲೇ

(೯ನೇ ಪುಟ ನೋಡಿ)

ಸ್ಥಾಪನೆ: 1924

ದಿ ಕರ್ನಾಟಕ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಆಫೀಸು: ಮಂಗಳೂರು—3.

ಈ ಕೆಳಗಿನ ಬಡ್ಡಿದರಗಳಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು:

ಒಂದು ತಿಂಗಳಿಗೆ	.... ಸಾ॥ ಸೇಕಡಾ	3-75	ನ.ಪೈಸೆ
ಮೂರು ತಿಂಗಳುಗಳಿಗೆ	.... ,,	4-00	,,
ಆರು ತಿಂಗಳುಗಳಿಗೆ	.... ,,	4 25	,,
12 ತಿಂಗಳುಗಳಿಂದ 23 ತಿಂಗಳುಗಳ ವರೆಗೆ	,,	4-50	,,
24 ತಿಂಗಳುಗಳಿಂದ 48 ತಿಂಗಳುಗಳ ವರೆಗೆ	,,	4 75	,,

"ಹನಿ ಡಿಪೋಸಿಟ್ಸ್" ನಲ್ಲಿ

ನಿಮ್ಮ ದೈನಂದಿನ ಉಳಿತಾಯವನ್ನು ವಿನಿಯೋಗಿಸಿರಿ.

THE KARNATAKA BANK LIMITED.

ಅಭಿಪ್ರಾಯ:

ನೈತಿಕತೆ ಬೆಳೆದುಬರಬೇಕು

ಪ್ರಜಾಪ್ರಭುತ್ವ ಭಾರತವು ಸರ್ವಸಂಪನ್ನವಾಗಬೇಕಾದರೆ, ಅದರ ರಾಜಕಾರಣ-ಸರಕಾರಗಳು ಪವಿತ್ರವಿರಬೇಕು. ಧಾರ್ಮಿಕರಾದ ಶಾಸಕರು, ಸತ್ಯವಂತರಾದ ಮಂತ್ರಿಗಳು, ನೀತಿವಂತರಾದ ಅಧಿಕಾರಿಗಳು, ದೇಶಭಕ್ತಿಯುಳ್ಳ ಪ್ರಜೆಗಳು ಒಗ್ಗೂಡಿದರೆಂದರೆ, ಆಗ ರಾಷ್ಟ್ರಕಲ್ಯಾಣವಾಗುವುದು

ಪಂಡಿತ ಬಿ ಲಕ್ಷ್ಮಣದೇವ, ವಿದ್ಯಾರ್ಥಿ, ಮಂಗಳೂರು

ಬ್ರಿಟಿಷರ ಪಾಶವೀ ಬಂಧನದಿಂದ ಬಿಡುಗಡೆ ಹೊಂದಿದ ಭಾರತ "ಪ್ರಜಾಪ್ರಭುತ್ವ" ತತ್ವದ ತಳಹದಿಯಲ್ಲಿ ಸರಕಾರವನ್ನು ರಚಿಸಿ ಪ್ರಜಾ ಕೋಟಿಯ ಜೀವನ ಮಟ್ಟವನ್ನೇರಿಸಲು ಪ್ರಯತ್ನಿಸುತ್ತಿದೆ. ಪಂಡಿತ ಜವಾಹರಲಾಲ ನೆಹರುರವರು ತನ್ನ ಜೀವನ ಸರ್ವಸ್ವವನ್ನಿಂದು ರಾಷ್ಟ್ರದ ಪುನಾರಚನಾ ಕಾರ್ಯಕ್ಕೆ ಅರ್ಪಿಸಿ ದುಡಿಯುತ್ತಿದ್ದಾರೆ. ಅವರೊಂದಿಗೆ ನಿರ್ಭೀತಿ— ನಿಸ್ವಾರ್ಥ—ಹಾಗೂ ನಿಷ್ಕಳಂಕ ಮನೋವೃತ್ತಿಯಿಂದ ಸಹಕರಿಸುವ ನೈಷ್ಟಿಕ ದೇಶಪ್ರೇಮಿಗಳು ಇಂದಿಗೆ ಎಷ್ಟು ಮಂದಿ ಇದ್ದಾರೆ? ಅಂತಹ ಮಹಾ ಕಾರ್ಯಕರ್ತರಿರುತಿದ್ದಲ್ಲಿ ಬಿಡಿಸಲಾರದೆ ಹಳೆಯದಾಗಿರುವ ಹಲವಾರು ಕಠಿಣ ಸಮಸ್ಯೆಗಳು ಉಳಿಯುತ್ತಿದ್ದುವೇ?

ಪ್ರಥಮ ಮತ್ತು ದ್ವಿತೀಯ ಯೋಜನೆಗಳು ಕೊನೆಗೊಂಡು ಇದೀಗ ತೃತೀಯ ಯೋಜನೆಯನ್ನು ರೂಪಿಸಿ ಸಮಗ್ರ ರಾಷ್ಟ್ರವು ಭರದಿಂದ ಅಣಿಯಾಗಿದೆ. ನಮ್ಮ ಮಹಾನ್ ಯೋಜನೆಗಳ ರೂಪರೇಖೆಗಳ ಬಹಿರಂಗ ಚಿತ್ರವು ಅತ್ಯಂತ ಆಕರ್ಷಣೀಯವಾಗಿ ಕಂಡುಬರುತ್ತದೆ. ಮೊದಲೇ ವಿವಿಧ ಕರಭಾರವನ್ನು ಹೊತ್ತ ರೈತ ಮತ್ತು ವ್ಯಾಪಾರಿ ಜನತೆ ಪ್ರಥಮ ಪಂಚವಾರ್ಷಿಕ ಯೋಜನೆಯ ಪ್ರತಿ ಕ್ರಿಯೆಯಿಂದ ಕಿಂಚಿತ್ತಾದರೂ ಆರ್ಥಿಕ ಪ್ರಗತಿ ಸಾಧಿಸಬಹುದೆಂದು ನಂಬಿ ಮಹಾ ಚುನಾವಣೆಯಲ್ಲಿ ತಮ್ಮ ಅಮೂಲ್ಯ ಮತಗಳನ್ನು ಕೊಟ್ಟು ದೇಶದಲ್ಲಿ ಕಾಂಗ್ರೆಸ್ ಮಂತ್ರಿಮಂಡಲವನ್ನು ಕಟ್ಟಿಕೊಟ್ಟಿತು. ಆದರೆ?

ನಿತ್ಯ ಜೀವನದ ಸರ್ವಸಾಮಾನ್ಯ ವಸ್ತುಗಳ ಮೇಲೂ ಅತ್ಯಧಿಕ ಕರವನ್ನು (ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷವಾಗಿ) ಹೊತ್ತುಕೊಳ್ಳುವ ಸ್ಥಿತಿಯೇ ಪುನರಾವರ್ತನೆಯಾಯಿತು. ಆದರೂ ಜನತೆಯು ಕಾಂಗ್ರೆಸ್ ಸರಕಾರಕ್ಕೆ ತನ್ನ ನಿಷ್ಠೆಯನ್ನು ಸಮರ್ಪಿಸುತ್ತಾ ಬಂದಿದೆ ದ್ವಿತೀಯ ಪಂಚವಾರ್ಷಿಕ ಯೋಜನೆಯ ಪ್ರತಿಫಲವಾಗಿ ಹಲವಾರು ದೊಡ್ಡ ಕಾರ್ಖಾನೆಗಳು, ಮಾರ್ಗ ಸೌಕರ್ಯಗಳು, ಸೇತುವೆ ಇತ್ಯಾದಿಗಳು ಆಗಿವೆ. ಇದು ಪ್ರಶಂಸನೀಯ ಅತಿ ಚಿಕ್ಕ ಹಳ್ಳಿಯಲ್ಲಿಯೂ ಅಂಚೆಕಟ್ಟೆಗಳಿವೆ, ಟೂರಿಂಗ್ ಟಾಕಿಗಳಿವೆ! ಜನತೆಯು ಸಾಕಷ್ಟು ಉಪಯೋಗಿಸುವುದಿಲ್ಲವಾದರೂ ಸಾವಿರಾರು ರೂಪಾಯಿ ವೆಚ್ಚಮಾಡಿ ನಿರ್ಮಿಸಿದ ಸಮಾಜ ಮಂದಿರಗಳಿವೆ. ಪರಂತು? ಹೊಟ್ಟೆಯ ಹಸಿವು ನೀಗಲು ಬೇಕಾದ ನಿತ್ಯ ಆಹಾರ ವಸ್ತುಗಳ, ಬಟ್ಟೆಬರೆಗಳ, ಇತರ ಸಾಮಗ್ರಿ—ಸಲಕರಣೆಗಳ ಬೆಲೆ ಪ್ರತಿ ನಿಮಿಷಕ್ಕೆ ಏರುತ್ತಲೇ ಇದೆ.

ಈ ಸಮಸ್ಯೆಯನ್ನು ಬಗೆಹರಿಸುವವರು ಯಾರು? ರಾಜಕೀಯ ಪಕ್ಷಗಳು ತಮ್ಮ ರಾಷ್ಟ್ರದ ಅವನತಿಯನ್ನು ಎಂದಿಗೂ ಬಯಸುವುದಿಲ್ಲ ರಾಷ್ಟ್ರದ ಜನಜೀವನವು ಶೋಚನೀಯ ಪರಿಸ್ಥಿತಿಯಲ್ಲಿರುವ ಈ ಕಾಲದಲ್ಲಿ ಸರಕಾರ ಸ್ಥಾಪಿಸಿದ ಕಾಂಗ್ರೆಸಿಗರಾದ ನಾವು ಯಾರು ಹೇಗಿರಬೇಕೆಂಬ ಪ್ರಶ್ನೆಯು ಇಂದಿಗೆ ನಮ್ಮ ಮುಂದೆ ನಿಲ್ಲುತ್ತದೆ. ದೇಶದ ಪುನಾರಚನೆಗಾಗಿ ಅನೇಕ ಭೌತಿಕ ಸಂಪತ್ತುಗಳನ್ನು ಸಮೃದ್ಧಿಗೊಳಿಸುವ ಪ್ರತಿಯೊಂದು ಯೋಜನೆಗೂ ಪ್ರಮುಖ ಸ್ಥಾನವನ್ನು ಕೊಡಲಾಗುತ್ತಿದೆ. ಆದರೆ ಇದಕ್ಕಿಂತ ಅತ್ಯಂತ ಮಹತ್ವ ಹಾಗೂ ಅಭೇದ್ಯವಾಗಿರುವ ಇನ್ನೊಂದು ಮಹಾಸಾಧನದ ಕೊರತೆಯಿದೆಯೆಂಬುದನ್ನು ನಾವು ಮರೆಯುತ್ತೇವೆ.

ಕೇವಲ ರಾಜನೈತಿಕ ತತ್ವಗಳ ವಾದ-ವಿವಾದಗಳಿಂದ ಕಾಲಯಾಪನೆ ಮಾಡುವುದಕ್ಕಿಂತಲೂ ಶಾರೀರಿಕ—ಮಾನಸಿಕ—ಆತ್ಮಿಕ ಮತ್ತು ನೈತಿಕ ಪವಿತ್ರತೆಯನ್ನು ಹೆಚ್ಚಿಸಿ ಅವುಗಳನ್ನು ಕಾಪಾಡಿಕೊಂಡು ಬರುವುದೇ ಭಾರತ ರಾಷ್ಟ್ರದ ಪ್ರಗತಿಗೆ ಬೇಕಾಗಿರುವ ಮಹಾ ಸಾಧನ ಪ್ರತಿಯೊಬ್ಬ ವ್ಯಕ್ತಿಯ ಜೀವನಕ್ರಮ ಹಾಗೂ ಕಾರ್ಯಕಲಾಪಗಳಲ್ಲಿರುವ ಪವಿತ್ರತೆ ಅಥವಾ ಅಪವಿತ್ರತೆಯೇ ದೇಶದ ಉನ್ನತಿ ಅಥವಾ ಅವನತಿಗೆ ಕಾರಣವಾಗುತ್ತದೆ. ಇಂತಹ ನೈತಿಕ ತತ್ವಗಳನ್ನು ತಮ್ಮ ಅನುದಿನದ ಜೀವನದಲ್ಲಿ ಅಳವಡಿಸಿಕೊಂಡಿರುವವರೇ ಕಾಂಗ್ರೆಸ್ಸಿನ ನೇತೃತ್ವವನ್ನು ವಹಿಸಿಕೊಳ್ಳುವವರಾಗಿರಬೇಕು ತಮ್ಮ ಸ್ವಾರ್ಥಸಾಧನೆಗಾಗಿ ಕಾಂಗ್ರೆಸ್ ಸೇರುವವರನ್ನು ನಾವು ಮನ್ನಿಸುವುದಾದರೆ, ಜೀವಮಾನವನ್ನೆಲ್ಲಾ ಕಾಂಗ್ರೆಸ್ಸಿನ ಏಳಿಗೆಗೆ ಅರ್ಪಿಸಿದ್ದರೂ ಮೂಲೆಗೆ ತಳ್ಳಲ್ಪಟ್ಟಿರುವ ಅದೆಷ್ಟೋ ಕಾಂಗ್ರೆಸ್ ಕಾರ್ಯಕರ್ತರ ಸ್ಥಾನಮಾನವೇನು? ಸಮಗ್ರ ವಿಶ್ವದ ಸರ್ವತೋಮುಖವಾದ ಕಲ್ಯಾಣವನ್ನೇ ಬಯಸುವುದೇ ಸದಾ ತನ್ನ ಧ್ಯೇಯವನ್ನಾಗಿಟ್ಟುಕೊಂಡಿರುವ ದೇಶ ಭಾರತ ಆದುದರಿಂದಲೇ ನಮ್ಮ ವೀರ ದೇಶವು "ಏತದ್ದೇಶಪ್ರಸೂತಸ್ಯ ಸಕಾಶದಗ್ರಜನ್ಮನಃ ಸ್ವಂ ಸ್ವಂ ಚರಿತ್ರನ್ ಶಿಕ್ಷೇರನ್ ಪೃಥಿವ್ಯಾಂ ಸರ್ವ ಮಾನವಾ" (ಮನು) ಎಂದು ಪ್ರಶಂಸಿಸಲ್ಪಡುತ್ತಿದೆ. ಪರೋಪಕಾರಿ ಭಾವನೆಯಿಂದ ಪ್ರೇರಿತವಾಗಿರುವ ಭಾರತ ಭೂಮಿಯು ಸದಾ ಕಾಲದಿಂದಲೂ "ಕೃಣ್ವಂತೋ ವಿಶ್ವಮಾರ್ಯಮ್ ಅಪಘ್ನಂತೋ ಅರಾವ್ಣಃ" (ಋಗ್ವೇದ). 'ವಿಶ್ವವನ್ನೇ ಆರ್ಯರನ್ನಾಗಿ ಮಾಡಿರಿ; ದುಷ್ಟರನ್ನು ನಾಶ ಮಾಡಿರಿ!'' ಎಂಬ ಅಮರ ಸಂದೇಶವನ್ನು ಲೋಕಕ್ಕೆ ಸಾರಿ ಹೇಳುತ್ತಾ ಬಂದಿರುತ್ತದೆ. ಇಲ್ಲಿ 'ಆರ್ಯ'ರೆಂದರೆ'ಶ್ರೇಷ್ಠ'ರು, ಯಾವಾಗಲೂ ತಮ್ಮ ಉನ್ನತಿಯೊಂದಿಗೆ ಸರ್ವರ ಉನ್ನತಿಗಾಗಿ ಶ್ರಮಿಸುತ್ತಿರುವವರು ಎಂದರ್ಥ. 'ದುಷ್ಟರು' ಎಂದರೆ ರಾಷ್ಟ್ರದ ಸಾಮೂಹಿಕ ಜೀವನದ ಪ್ರಗತಿಯನ್ನು ಯಾವುದಾದರೊಂದು ರೀತಿಯಿಂದ ತಡೆಗಟ್ಟಿ ಕೇವಲ ತನ್ನ ವೈಯಕ್ತಿಕ ಸುಖಸೌಭಾಗ್ಯಗಳಿಗೋಸ್ಕರ ರಾಷ್ಟ್ರದ್ರೋಹವೆಸಗುವವರು ಎಂದು ಅರ್ಥ. ಭಾರತದ ಭಾಗ್ಯ ನಿರ್ಮಾಣವಾಗಬೇಕಾದರೆ ಇಂತಹ ಕ್ಷುದ್ರ ಹಾಗೂ ನಿರ್ಬಲ ಮನೋವೃತ್ತಿಯವರು ನಿಜವಾದ ದೇಶ ನಿಷ್ಠಾವಂತರ ಗುಂಪಿನಿಂದ ದೂರ ಸರಿಯಬೇಕಾಗಿದೆ. ಇಲ್ಲದಿದ್ದರೆ ಭಾರತ ದೇಶದ ಸ್ವಾತಂತ್ರ್ಯವು ವಿಪತ್ತಿನ ದವಡೆಯಲ್ಲಿ ಪುನಃ ಸಿಲುಕಿ ಬೀಳುವುದು.

ನಾವು ಸಂಪಾದಿಸಿದ ರಾಷ್ಟ್ರಸ್ವಾತಂತ್ರ್ಯಕ್ಕೆ ಲಕ್ಷಾಂತರ ಭಾರತೀಯ ನರನಾರಿಯರು ಹಸುಗೂಸುಗಳು ಪ್ರಾಣವನ್ನು ತೆತ್ತಿದ್ದಾರೆ ಅಂತಹ ಅಮೂಲ್ಯವಾದ ಸ್ವಾತಂತ್ರ್ಯದ ಭದ್ರತೆಗಾಗಿ ಪ್ರತಿಯೊಂದು ಕ್ಷೇತ್ರದಲ್ಲಿ ರಚನಾತ್ಮಕ ಕಾರ್ಯಗಳನ್ನು ಪಕ್ಷ ಅಥವಾ ಜನಾಂಗ ಭೇದವಿಲ್ಲದೆ ಮುಂದುವರಿಸುವವರೂ, ತಮ್ಮ ವ್ಯಕ್ತಿಗತ ಉನ್ನತಿಗಿಂತ ಸಮಷ್ಟಿಯ ಏಳಿಗೆಗಾಗಿ ಶ್ರಮಿಸುತ್ತಿರುವವರೂ ಶ್ರೇಷ್ಠರೆನ್ನಿಸಿಕೊಳ್ಳುತ್ತಾರೆ. ಇಂತಹವರೆ ಕಾಂಗ್ರೆಸ್ ಸಂಸ್ಥೆಯ ಭವಿಷ್ಯದ ಪ್ರಗತಿಗೆ ಆಧಾರಸ್ತಂಭಗಳಾಗಬಲ್ಲರು.

ನಮ್ಮ ದೇಶದ ಘಾತುಕತನದ ಮಾನಸಿಕ ನಿರ್ಬಲತೆಯನ್ನು ನಾವು ಇನ್ನಾದರೂ ಬಿಡಬೇಕು. ಎದುರಲ್ಲಿ 'ಭಾಯಿ ಭಾಯಿ' ಎಂದು ಬೆನ್ನಲ್ಲಿ ಇರಿಯುವಂತಹ ರಾಜಕಾರಣಿಗಳ ಸಹವಾಸ ನಮಗಿನ್ನು ಬೇಡ. ಹಿಮಾಲಯದ ಬಳಿ ವೀರ ಜ

(೯ನೇ ಪುಟ ನೋಡಿರಿ)

ಹಾಲಿವುಡ್ಡಿನ ನಟ ಪಾಲ್ ಹೆನ್ರೀಡರು ತಂದೆಗಿರಬಹುದಾದ ಸಹಜಾಭಿಮಾನದಿಂದ ಮಗಳು ಮಿಮಿಯು ಗೆದ್ದ ಪಾರಿತೋಷಕಗಳನ್ನು ಈಕ್ಷಿಸುತ್ತಿದ್ದಾರೆ

"ನಚಿಕೇತ"ರ

ಇನ್ನೊಂದು ನವೀನ ಕಾದಂಬರಿ—

ಋಣ ಯಾತ್ರೆ

ಇದೀಗ ಪ್ರಕಟವಾಗಿದೆ.

ಬೆಲೆ ರೂ 1-50 ನ ಪೈಸೆ.

ಮೊದಲು ಪ್ರಕಟವಾದ ಕಾದಂಬರಿ—

ಭಾವಾರ್ಚನೆ

ಬೆಲೆ ರೂ 1-25 ನ ಪೈಸೆ

ಪ್ರತಿಗಳು ಸಿಗುವ ಸ್ಥಳಗಳು –

ನವಯುಗ ಪ್ರೆಸ್, ಉಡುಪಿ.

ನವಭಾರತ ಬುಕ್ ಡಿಪೊ, ಉಡುಪಿ,

ಸ್ವಲ್ಪ ಸ್ವಲ್ಪವಾಗಿ, ಅಲ್ಲೊಮ್ಮೆ ಇಲ್ಲೊಮ್ಮೆ, ನೀವು ಉಳಿಸುತ್ತಿರುವ ಹಣವು ಬೇಗ ಬೇಗನೆ ವೃದ್ಧಿಗೊಂಡು, ನಿಮ್ಮ ಭವಿಷ್ಯದ ಭದ್ರತೆಯು ಹೆಚ್ಚೆಚ್ಚಾಗಿ ಪರಿಣಮಿಸುವಂತೆ

ಕೊರ್ಪೊರೇಶನ್ ಬೇಂಕು

ನಿಮ್ಮ ಸೇವಿಂಗ್ಸ್ ಬೇಂಕ್ ಎಕೌಂಟುಗಳ ಮೇಲೆ ಇನ್ನು ಮುಂದಕ್ಕೆ ಸಾಲಿಯಾನ್ ಸೇಕಡಾ **3** ರ ದರದಲ್ಲಿ ನಿಮಗೆ ಬಡ್ಡಿ ಕೊಡುವುದು.

ವಿವರಗಳಿಗೆ ವಿಚಾರಿಸಿರಿ.

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ಸ್ಥಾಪನೆ: 1906) (ರಿಜಿಸ್ಟರ್ಡ್ ಆಫೀಸು. **ಉಡುಪಿ**)

ಆಡಳಿತ ಆಫೀಸು ಮಂಗಳೂರು—1

ಇತಿಹಾಸ ಪೃಷ್ಠ:

ಕಲಂಗಾದ ಅಜೇಯ ದುರ್ಗ

ಆಧುನಿಕ ಯುದ್ಧೋಪಕರಣಗಳಿಂದ ಕೂಡಿದ್ದ ಆಂಗ್ಲ ಸೇನೆಯಿಂದಲೂ ಅಜೇಯವೆನಿಸಿದ ಕೋಟೆ ಗೋರಖಪುರದಲ್ಲಿತ್ತು; ಬೆರಳ ಸಂಖ್ಯೆಯ ಸೈನಿಕರ ಸಹಾಯದಿಂದ ಬ್ರಿಟಿಷರ ಸೈನ್ಯಸಾಗರವನ್ನೂ ಎದುರಿಸಿದ ವೀರ ಬಲಭದ್ರ ಸಿಂಹನ ಸಾಹಸ ಮೆಚ್ಚತಕ್ಕುದು

ಆಂಗ್ಲೇಯರು ನಮ್ಮ ಭಾರತವನ್ನು ಆಳುತ್ತಿದ್ದ ಕಾಲವದು. ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸುವುದೇ ಆಗ ಅವರ ಮುಖ್ಯೋದ್ದೇಶವಾಗಿತ್ತು. ಸಾಮ, ದಾನ, ಭೇದ ಮತ್ತು ದಂಡಗಳ ಆಶ್ರಯ ಪಡೆದು ಅವರು ಮುಂದುವರಿಯುತ್ತಲೇ ಇದ್ದರು. ಎಲ್ಲೆಲ್ಲಿಯೂ ಕೊಲೆ ಸುಲಿಗೆಗಳೇ ನಡೆಯುತಿದ್ದುವು. ಪ್ಲಾಸಿಯ ಕದನಾನಂತರ ಈ ಘಟನೆಯ ವರೆಗೆ(೧೮೧೪) ಸುಮಾರು ಹದಿನೈದು ಅರಬ ರೂಪಾಯಿಗಳು ಇಂಗ್ಲೆಂಡನ್ನು ಸೇರಿದ್ದುವು.

ರಾಜ್ಯ ವಿಸ್ತಾರ ಲಾಲಸೆಯಿಂದ ಕಂಪೆನಿ ಸರಕಾರದ ಗೃಧ್ರ ದೃಷ್ಟಿ ನೇಪಾಲದ ಮೇಲೂ ಬಿತ್ತು. ನೇಪಾಲವನ್ನು ಸ್ವಾಧೀನಪಡಿಸಿಕೊಳ್ಳಬೇಕೆಂಬ ಆಸೆ ಅವರಿಗೆ ಆಯಿತು. ಆದರೆ, ಶೋಷಕರಿಗೂ ಅತ್ಯಾಚಾರಿಗಳಿಗೂ ಒಂದಲ್ಲ ಒಂದು ಪ್ರಕಾರದ ನೆವನ ಬೇಕಾಗುವುದು ಸಹಜ. ಅಂತೆಯೇ ಕಂಪೆನಿ ಸರಕಾರವು ಯಾವ ಕಾರಣವನ್ನು ಹಿಡಿದು ಮುಂದುವರಿಯಬಹುದೆಂದು ಯೋಚಿಸತೊಡಗಿತು. ಸುದೈವದಿಂದ ಆ ವ್ಯಾಜ ದೊರೆಯಲು ಹೆಚ್ಚು ಸಮಯ ಬೇಕಾಗಲಿಲ್ಲ.

ಸಾರಣ ಮತ್ತು ಗೋರಖಪುರ ಜಿಲ್ಲೆಗಳಲ್ಲಿ ನೇಪಾಳ ರಾಜ್ಯದ ಸೀಮೆಯು ಆ ಸಮಯದಲ್ಲಿತ್ತು. ಆದರೆ, ಈ ಸೀಮಾ ಪ್ರದೇಶದ ಸ್ವಲ್ಪ ಭೂಮಿಯ ಕುರಿತಾಗಿ ಕಂಪೆನಿ ಸರಕಾರ ಹಾಗೂ ನೇಪಾಳಗಳ ನಡುವೆ ವಿವಾದವೆದ್ದಿತ್ತು. ಕಂಪೆನಿಗೆ ಅರಸುತಿದ್ದ ನಿಧಿಯೇ ಕಾಲಿಗೆಡವಿದಂತಾಯಿತು. ತೃಣವನ್ನೇ ತಾಳ ವೃಕ್ಷವನ್ನಾಗಿ ರೂಪಿಸುವ ಸಾಹಸವನ್ನದು ಕೈಗೊಂಡಿತು.

ಎರಡೂ ರಾಷ್ಟ್ರಗಳ ನಡುವೆ ಪಂಜಾಬದ ಸತ್ಲೆಜ್ ನದಿಯಿಂದ ಹಿಡಿದು ಬಿಹಾರದ ಕೋಶಿ ನದಿಯ ವರೆಗೆ ೬೦೦ ಮೈಲುಗಳ ಗಡಿಯಿತ್ತು. ಈ ಸರಹದ್ದಿನಲ್ಲಿ ಐದು ಸೇನಾ ಠಾಣೆಗಳನ್ನು ನಿರ್ಮಿಸಿ ಐದೂ ಕಡೆಗಳಿಂದ ನೇಪಾಳದ ಮೇಲೆ ಆಕ್ರಮಣ ನಡೆಸುವಂತೆ ವ್ಯವಸ್ಥೆ ಮಾಡಿದರು. ಇಂಗ್ಲಿಷರ ಮೂವತ್ತು ಸಾವಿರ ಸೇನೆಯನ್ನು ಕೇವಲ ಹನ್ನೆರಡು ಸಾವಿರ ನೇಪಾಲಿ ಸೈನಿಕರು ಎದುರಿಸಬೇಕಿತ್ತು. ನೇಪಾಲದೊಡನೆ ಒಳ್ಳೆಯ ಶಸ್ತ್ರಾಸ್ತ್ರಗಳಿರಲಿಲ್ಲ; ಧೂರ್ತತೆಯೂ ಇರಲಿಲ್ಲ.

ಮೇಜರ್ ಜನರಲ್ ಜಿಲಸ್ಪಿಯು ನೇಪಾಲೀ ಸೀಮೆಯನ್ನು ದಾಟಿ ಡೆಹರಾಡೂನಿಗೆ ಹೋದಾಗ ಆತನಿಗೆ ಗಡಿಪ್ರದೇಶದಲ್ಲಿ ಕಲಂಗಾವೆಂಬ ಪ್ರಾಚೀನ ಭಗ್ನ ಕೋಟೆಯೊಂದು ಸಿಕ್ಕಿತು. ಇದರಲ್ಲಿ ಮುನ್ನೂರು ಸೈನಿಕರು ಇದ್ದು ಬಲಭದ್ರ ಸಿಂಹಥಾಪೆಯೆಂಬವನ್ನು ಇದರ ನಾಯಕತ್ವ ವಹಿಸಿದ್ದನು. ಇವನೊಡನೆ ಬಿಲ್ಲು ಬಾಣಗಳು ಈಟಿ ಬರ್ಚಿಗಳು ಮತ್ತು ಸ್ವಲ್ಪ ಹಳೆಯ ಕಾಲದ ಬಂದೂಕುಗಳು ಇದ್ದುವು. ಯುದ್ಧದ ಸಂಭವವೇ ಇರದ ಕಾರಣ ಈ ಸೈನಿಕರೆಲ್ಲರೂ ತಮ್ಮ ಹೆಂಡತಿ ಮಕ್ಕಳೊಡನೆ ನಿಶ್ಚಿಂತರಾಗಿ ಬದುಕುತಿದ್ದರು. ಯುದ್ಧದ ಸಮಾಚಾರವು ಸಿಕ್ಕಿದೊಡನೆಯೇ ಭದ್ರಸಿಂಹನು ಕೋಟೆಯ ರಿಪೇರಿಗೆ ಮೊದಲು ಮಾಡಿದನು. ಮಕ್ಕಳು–ಹೆಂಗಸರಿಗೆ ಚಿಂತೆಯಾವರಿಸಿತು. ಆಂಗ್ಲ ಕೇಪ್ಟನನಾದ ಮಾವ್ರೋಬ್ರಿಯು ಮೂವತ್ತೈದುನೂರು ಸೈನಿಕರು ಮತ್ತು ತೋಪುಗಳೊಡನೆ ಅಕ್ಟೋಬರ ೩೧ರಂದು ಸುತ್ತಮುತ್ತ ಆಕ್ರಮಣ ನಡೆಸಿದ್ದರಿಂದ ಅವರನ್ನು ಸುರಕ್ಷಿತವಾಗಿ ನೇಪಾಲಕ್ಕೆ ಮುಟ್ಟಿಸುವುದೂ ಅಸಾಧ್ಯವಾಗಿತ್ತು. ‘ತನ್ನಿಂದ ಅಧಿಕ ಬಲಶಾಲಿಯಾದ ಶತ್ರುವಿನೊಂದಿಗೆ ಸೋಲನ್ನೊಪ್ಪಿಕೊಳ್ಳುವುದು ಅಪಮಾನವಲ್ಲ’’ ಎಂಬ ಸಂದೇಶವೂ ಭದ್ರ ಸಿಂಹನ ಕೈಸೇರಿತ್ತು. ಇದಕ್ಕೆ ಅನುರೂಪವಾಗಿ, “ಗೋರಖಪುರದ ಸರಕಾರವು ಕದನವೆಸಗದೆ ಕೋಟೆಯನ್ನು ಸ್ವಾಧೀನಗೊಳಿಸಲಿ: ಇದರಿಂದ ನಿನಗೇ ಹಿತ” ಎಂದೂ ಹೇಳಲಾಗಿತ್ತು.

ಇದರಿಂದ ಬಲಭದ್ರ ಸಿಂಹ ಎಳ್ಳನಿತೂ ಅಂಜಲಿಲ್ಲ. “ಇದಕ್ಕೆ ಉತ್ತರವನ್ನು ನಾಳೆ ರಣರಂಗದಲ್ಲಿ ಕೊಡುತ್ತೇನೆ. ನಿಮ್ಮನ್ನು ಸ್ವಾಗತಿಸಲು ನೇಪಾಲಿ ಈಟಿಗಳು ಸಿದ್ಧವಾಗಿವೆಯೆಂದು ನಿನ್ನ ಯಜಮಾನನಿಗೆ ತಿಳಿಸು” ಎಂದಾತ ದೂತನೊಡನೆ ಹೇಳಿಕಳಿಸಿದನು.

ರಣಭೇರಿಯು ಮರುದಿನ ಮೊಳಗಿತು. ಮಾವ್ರೋಬ್ರಿಯು ಕಲಂಗಾದ ಕೋಟೆಯ ಮೇಲೆ ತೋಫಿನ ಮಳೆ ಸುರಿಸಿ ಯುದ್ಧವನ್ನು ಪ್ರಾರಂಭಿಸಿದನು. ತನ್ನ ಎಲ್ಲ ಸೇನೆಯೊಡನೆ ದುರ್ಗವನ್ನು ಮುತ್ತಿದನು. ಇದಕ್ಕೆ ಉತ್ತರರೂಪವಾಗಿ ಕೋಟೆಯೊಳಗಿನಿಂದಲೂ ಗುಂಡುಗಳು ಹಾರಿದುವು. ಮಾವ್ರೋಬ್ರಿಯ ಅಟ್ಟಹಾಸ ದಿಗ್ದೆಸೆಗಳಲ್ಲಿ ಪ್ರತಿಧ್ವನಿಸಿತು. ಆದರೆ ಆತನ ಈ ವಿಕಟಾಟ್ಟಹಾಸವು ಸ್ವಲ್ಪ ಹೊತ್ತಿನಲ್ಲೇ ಧೂಳಿಧೂಸರವಾಯ್ತು. ನಡೆದ ದಾಳಿಯಿಂದ ಕೋಟೆಯು ಸ್ವಲ್ಪವಾದರೂ ಹಾಳಾಗಲಿಲ್ಲ. ಆತನಿಗೆ ಅಸಫಲತೆಯೇ ಲಭಿಸಿತು. ಇದರಿಂದಾಗಿ ಮಾವ್ರೋಬ್ರಿಯು ನಿರಾಶನಾಗಿ ಮರಳಿಹೋದನು.

ಜನರಲ್ ಜಿಲಸ್ಪಿಗೆ ಈ ಪರಾಜಯದ ದುರ್ವಾರ್ತೆಯು ತಲುಪಿದೊಡನೆಯೇ ರೋಷಾವೇಶದಿಂದ ಆರ್ಭಟಿಸಿದನು. ಬಹುದೊಡ್ಡ ಸೇನೆಯೊಡನೆ ಆತ ಮುಂದುವರಿದನು. ತನ್ನ ಸೇನೆಯನ್ನು ನಾಲ್ಕು ವಿಭಾಗಮಾಡಿ ಕಲಂಗಾವನ್ನು ನಾಲ್ದೆಸೆಯಿಂದಲೂ ಮುತ್ತುವಂತೆ ಆದೇಶವಿತ್ತನು. ಕೋಟೆಯ ಮೇಲೆ ತೋಪುಗಳ ಹೊಡೆತ ಸಾಗಿದಂತೆಯೇ ಒಳಗಿನಿಂದಲೂ ಅಂತಹುದೇ ಉತ್ತರವು ಬಂದಿತು. ಕೋಟೆಯ ಗೋಡೆಯ ಸಮೀಪ ಹೋಗಲು ಪ್ರಯತ್ನಿಸುತಿದ್ದ ಆಂಗ್ಲ ಸೈನಿಕ ಅಲ್ಲಿಯೇ ಮಲಗಿಬಿಡುತಿದ್ದನು. ಹಲವಾರು ಪ್ರಯತ್ನ ನಡೆದರೂ ಆತನೂ ಯುದ್ಧದಲ್ಲಿ ಪರಾಜಿತನಾದನು.

ತನಗುಂಟಾದ ಸೋಲಿನಿಂದ ಜಿಲಿಸ್ಪಿಯು ಬೇಸರ ಪಡಲಿಲ್ಲ; ಬದಲಿಗೆ ಉತ್ತೇಜಿತನಾದನು. ಆತನು ಮೂರು ಕಂಪೆನಿಗಳ ಬಿಳಿಯ ಸಿಪಾಯಿಗಳೊಡಗೂಡಿ ದುರ್ಗದ ಹೆಬ್ಬಾಗಿಲತ್ತ ಧಾವಿಸಿದನು. ಈ ಭಯಾನಕ ಆಕ್ರಮಣವನ್ನು ಎದುರಿಸುವುದು ಕಲಾಂಗದ ಶಕ್ತಿಗೆ ಮೀರಿದ್ದಾಗಿತ್ತು. ಅದರ ಗೋಡೆಯ ಕಲ್ಲುಗಳು ಗಿರ್‌ಗಿರೆಂದು ಉರುಳಿದುವು. ಬೆರಳ ಸಂಖ್ಯೆಯ ಗೋರಖ ವೀರರ ಮುಖದ ಮೇಲೆ ಒಂದು ಕ್ಷಣ ಉದಾಸೀನತೆಯು ಆವರಿಸಿತು. ಅದೇ ಸಮಯದಲ್ಲಿ ಎಲ್ಲ ನೇಪಾಲಿ ಹೆಂಗಸರು ಮುರಿದ ಗೋಡೆಗಳ ಮೇಲೆ ನಿಂತು ಆಂಗ್ಲ ಸೈನಿಕರ ಮೇಲೆ ಗುಂಡು ಹಾರಿಸಿದರು; ಕಲ್ಲುಗಳ ಭಯಂಕರ ಮಳೆಗರೆದರು. ಇದನ್ನು ಕಂಡು ಎಲ್ಲರೂ ವಿಸ್ಮಿತರಾದರು. ಈ ಘಟನೆಯಿಂದ ಬಿಳಿಯ ಸೇನೆಯ ಗತಿಯಲ್ಲಿ ಮತ್ತಷ್ಟು ನಿಧಾನವಂಕುರಿಸಿತು. ಕೋಪ ಮತ್ತು ನಿರಾಶೆಯಿಂದ ಜಿಲಸ್ಪಿಯು ಹುಚ್ಚನಾದನು; ಬಿಚ್ಚುಗತ್ತಿಯನ್ನು ಬೀಸುತ್ತ ಆತ ಬಾಗಿಲೆಡೆಗೆ ಧಾವಿಸಿದನು; ಆದರೆ, ಒಬ್ಬ ಗೋರಖನ ಗುಂಡಿಗಾಹುತಿಯಾಗಿ ಮಾರ್ಗ ಮಧ್ಯದಲ್ಲಿ ಮಲಗಿಬಿಟ್ಟನು.

ಅನಂತರ ನವಂಬರ ೨೪ರಂದು ದಿಲ್ಲಿ ಕೇಂದ್ರದ ಸಹಾಯದಿಂದ ಮಾವ್ರೋಬ್ರಿಯು ಮರಳಿ ತೋಪುಗಳಿಂದ ಕೂಡಿ ಕಲಂಗಾದ ಮೇಲೆ ಬಲವತ್ತರವಾದ ಆಕ್ರಮಣ ನಡೆಸಿದನು. ಎಲ್ಲೆಡೆಯೂ ಮೃತ್ಯುವಿನ ವಿಕರಾಳ ತಾಂಡವ ನೃತ್ಯ ನಡೆಯಿತು.

ಕ್ರಮೇಣ ಕೋಟೆಯೊಳಗಿನ ಜನರ ಸಂಖ್ಯೆ ಕಡಿಮೆಯಾಗ ತ್ತ ಬಂತು ಗುಂಡೆಸೆತವೂ ಇಳಿಮುಖವಾಯಿತು. ಆದರೂ ಆಕ್ರಮಣಕ್ಕೆ ದೊರೆಯುವ ಪ್ರತ್ಯುತ್ತರವು ಹಿಂದಿನಂತೆಯೇ ಬಿಗುವಾಗಿತ್ತು. ಬಾಣ ವರ್ಷವು ತೀವ್ರವಾಗುತ್ತ ನಡೆಯಿತು; ಬಾಣಗಳು ಕಡಿದು ಬಿದ್ದಾಗ ಕಲ್ಲುಗಳ ಮಳೆಗೆ ಪ್ರಾರಂಭವಾಯಿತು. ಈ ಬಾರಿಯೂ ನಡೆದ ಒಂದು ತಿಂಗಳ ಯುದ್ಧದಲ್ಲಿ ಗೋರಖರೇ ಗೆದ್ದು ಬಿಟ್ಟರು.

ವಿವಶವಾದ ಆಂಗ್ಲಸೇನೆಯು ಡೆಹರಾಡೂನಿಗೆ ಹಿಂತಿರುಗುವ ತಯಾರಿ ನಡೆಸಿತು. ಅಷ್ಟರಲ್ಲಿ ಒಬ್ಬ ಗುಪ್ತಚಾರನು ಬಂದು ಕೋಟೆಯೊಳಗಡೆ ನೀರ ತೊಟ್ಟೂ ಇಲ್ಲವೆಂದೂ ಗೋರಖ ಜನರು ಹೊರಗಿನಿಂದ ನೀರುತರುತ್ತಿರುವರೆಂದೂ ಮಾವ್ರೋಬ್ರಿಗೆ ತಿಳಿಸಿದನು. ಮಾವ್ರೋಬ್ರಿಯು ಆ ಕೂಡಲೇ ನೀರ ಆಶ್ರಯದ ಮೇಲೆ ತನ್ನ ಪ್ರಭುತ್ವವನ್ನು ಜಮಾಯಿಸಿದನು.

ಈಗ ಕೋಟೆಯ ಆಂತರಿಕ ಸ್ಥಿತಿ ಹದಗೆಟ್ಟಿತು. ಗಾಯಾಳು ಯುವಕರು, ಅರೆಸತ್ತ ಮಹಿಳೆಯರು ಮತ್ತು ಮಕ್ಕಳು ನೀರಿಗಾಗಿ ಚೀತ್ಕರಿಸತೊಡಗಿದರು. ಹೊರಗಡೆ ಆಂಗ್ಲ ಸೇನೆಯು ಕೋಟೆಗೆ ಮುತ್ತಿಗೆ ಹಾಕಿತು.

ಬಲಭದ್ರ ಸಿಂಹನು ತನ್ನ ೭೦ ಸಹಚರರೊಡನೆ ನಾಲ್ಕು ದಿನವನ್ನು ಹೇಗೋ ಮಾಡಿ ಕಳೆದನು. ಐದನೆಯ ದಿನ ಕೋಟೆಯ ಬಾಗಿಲನ್ನು ತೆರೆಯುವುದೇ ಸರಿ ಎಂದು ನಿಶ್ಚೈಸಿದನು. ಸಾಯಲೇಬೇಕಾದಾಗ ವೀರರಂತೆ ಹೋರಾಡಿ ಸಾಯುವುದಕ್ಕೆ ಅಡ್ಡಿಯೇನು? ಕೋಟೆಯ ಮೇಲಿನಿಂದ ಸುರಿಯುವಬಾಣಗಳೂ ನಿಂತುವು; ಗುಂಡು ಮಳೆಯೂ ನಿಂತಿತು. ಬಲಭದ್ರ ಸಿಂಹನು ಆತ್ಮ ಸಮರ್ಪಣೆ ಮಾಡಲು ಬಯಸುವನೆಂದು ಮಾವ್ರೋಬ್ರಿಯು ಆತನು ತನ್ನ ಸೈನಿಕರಿಗೆ ಯುದ್ಧಸ್ತಂಭನ ಮಾಡಲು ಆದೇಶವಿತ್ತನು.

ತೋಪುಗಳ ಹೊಡೆತದಿಂದ ತೆರೆಯದ ಬಾಗಿಲು ತನಗೆ ತಾನಾಗಿಯೇ ತೆರೆಯಲ್ಪಟ್ಟುದನ್ನು ಕಂಡು ಎಲ್ಲರೂ ಸ್ತಂಭೀಭೂತರಾದರು. ಅದರಿಂದ ಬಲಭದ್ರಸಿಂಹನು ಹೊರಬಂದನು. ಆತನ ಭುಜದ ಮೇಲೆ ಬಂದೂಕು, ಕೈಯಲ್ಲಿ ಹಿರಿದ ಕತ್ತಿ, ಸೊಂಟದಲ್ಲಿ ಬರ್ಚಿ, ತಲೆಯಲ್ಲಿ ಉಕ್ಕಿನ ಛತ್ರಗಳಿದ್ದುವು. ಆತನ ಹಿಂದೆ ಗಾಯಾಳುಗಳೂ ಇತರ ಸೈನಿಕರೂ ಇದ್ದರು. ಎಲ್ಲರ ಮುಖವೂ ನೀರಡಿಕೆಯಿಂದ ಕಂದಿಹೋಗಿತ್ತು.

ಬಲಭದ್ರಸಿಂಹನು ಆಂಗ್ಲ ಸೇನೆಯ ನಡುವೆ ದಾರಿಮಾಡಿಕೊಳ್ಳುತ್ತ ಸೈನಿಕ ರೀತಿಯಿಂದ ಮುನ್ನಡೆದನು. ಆತನ ವರ್ತನೆ ಉದ್ಧಟತನದ್ದೆಂದು ಕಂಡರೂ ಆತನನ್ನು ತಡೆಯುವ ಧೈರ್ಯವೂ ಯಾರಿಗೂ ಇರಲಿಲ್ಲ.

ಕೋಟೆಯೊಳಗಿಂದ ಹೊರಬಂದವರೆಲ್ಲರೂ ಮೊದಲು ನೀರಜರಿಯಲ್ಲಿ ಹೊಟ್ಟೆತುಂಬ ನೀರು ಕುಡಿದರು. ಅನಂತರ ಬಲಭದ್ರಸಿಂಹನು ಮಾವ್ರೋಬ್ರಿಯ ಕಡೆಗೊಂದುಬಾರಿ ನೋಡಿದನು. ತನ್ನ ಖಡ್ಗವನ್ನು ಝಳಪಿಸುತ್ತ, ‘ಕರ್ನೇಲ್, ಕಲಂಗಾವು ಅಜೇಯವಾಗಿದೆ. ನಾವೀಗ ಎಲ್ಲರೂ ಕೋಟೆಯಿಂದ ಹೊರಗೆ ಬಂದಿರುವೆವು ನೀವು ಅಪೇಕ್ಷಿಸುವುದಾದರೆ, ಒಳಗೆ ಹೋಗಿ ಅದನ್ನು ಸ್ವಾಧೀನಪಡಿಸಬಹುದು” ಎಂದು ಗರ್ಜಿಸಿದನು. ಅನಂತರ ಆತನು ತನ್ನ ಸಂಗಡಿಗರೊಡನೆ ದಟ್ಟಡವಿಯೊಳಗೆ ಅದೃಶ್ಯನಾದನು.

ದಿ ವಿಜಯ ಬೇಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ: 1931

ರಿಜಿಸ್ಟರ್ಡ್ ಆಫೀಸು:

ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್.

ಮಂಗಳೂರು-3, ಸೌತ್ ಕೆನರಾ.

ಕಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡ 5ರ ವರೆಗೆ ಹೆಚ್ಚಿಸಲಾಗಿದೆ.

ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ಪಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸೋಣಾಗುತ್ತದೆ.

ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ.

> ತಾನು ಅಜ್ಞಾನಿಯೆಂಬುದರ ಅರಿವೇ ನಿತ್ಯ ಜ್ಞಾನೋದಯದ ಪ್ರಥಮ ಸೋಪಾನ. ತಾನು ಜ್ಞಾನಿಯೆಂದು ತಿಳಿಯುವುದೇ ಮಾನವನ ಪತನಕ್ಕೆ ಕಾರಣ.

ನವಯುಗ

೪೦ ವರುಷ	ಉಡುಪಿ ೨೦-೪-'೬೧	ವಾರ ೩೨

ವರ್ಣಭೇದ ನೀತಿ

ವಿಜ್ಞಾನವು ಬೆಳೆಯುತ್ತ ಹೋದಂತೆ ಪ್ರಪಂಚ ಸಂಕುಚಿತವಾಗುತ್ತ ಬರುತ್ತಿದೆ. ವಿಶ್ವದ ಯಾವುದೇ ಒಂದು ಮೂಲೆಯಲ್ಲಾಗುವ ಸುಖದುಃಖಗಳ ಪರಿಣಾಮ ಇಂದು ಇಡಿ ವಿಶ್ವದ ಮೇಲೆ ಆಗುವಂತಿದೆ. ಸರ್ವಸಮತಾಭಾವನೆಯು ದಿನದಿಂದ ದಿನಕ್ಕೆ ಹೆಚ್ಚುತ್ತ ಬರುತ್ತಿದೆ. ಇಡಿಯ ವಿಶ್ವವು ಒಂದೇ ಎಂಬ ಐಕ್ಯಭಾವವು ತೋರಿಕೆಯ ಮಟ್ಟಿಗಾದರೂ ಇಂದು ಕಾಣಿಸಿಕೊಳ್ಳುವ ಸ್ಥಿತಿ ತಲೆದೋರಿದೆ. ಹಾಗಾಗಿ ವಿಶ್ವಸಂಸ್ಥೆಯ ಕರ್ತವ್ಯದ ಪ್ರಮಾಣವೂ ಇಂದು ಅದೆಷ್ಟೋ ಪಾಲು ಹೆಚ್ಚಿದೆ; ಇನ್ನೂ ಹೆಚ್ಚುತ್ತಿದೆ. ಆದರೆ, ಊರಿಗೊಂದು ದಾರಿಯಾದರೆ ಪೋರನಿಗೆ ಮತ್ತೊಂದು ದಾರಿ ಎನ್ನುವಂತೆ ವಿಶ್ವದ ಕೆಲವೊಂದು ರಾಷ್ಟ್ರಗಳು ತಮ್ಮ ಒಣ ಪ್ರತಿಷ್ಠೆಯನ್ನುಳಿಸಿಕೊಳ್ಳಲು ತಮ್ಮ ಹಳೆಯ ಕಾಲದ ವ್ಯವಹಾರ ನೀತಿಗೆ ಭದ್ರವಾಗಿ ಅಂಟಿಕೊಳ್ಳಲು ಹವಣಿಸುತ್ತಿವೆ. ಪೋರ್ಚುಗಲದ ವಸಾಹತುವಾದ, ದಕ್ಷಿಣ ಆಫ್ರಿಕೆಯ ವರ್ಣಭೇದ ನೀತಿ ಳು ಇದಕ್ಕೆ ಜ್ವಲಂತ ಉದಾಹರಣೆಗಳು.

ದಕ್ಷಿಣ ಆಫ್ರಿಕೆಯ ಶ್ವೇತ—ಶ್ವೇತೇತರ ನೀತಿ ಇಂದು ನಿನ್ನೆಯದಲ್ಲ. ಮಹಾತ್ಮಾ ಗಾಂಧೀಜಿಯವರನ್ನು ಮಹಾತ್ಮರ ಸ್ಥಾನಕ್ಕಡರುವಂತೆ ಸಗಿದ ನೀತಿಯಿದು. ಪ್ರಾಯಃ ದ. ಆಫ್ರಿಕೆಯಲ್ಲಿ ಈ ಭೇದವಿದ್ದಿಲ್ಲವಾದರೆ, ಮಹಾತ್ಮಾಗಾಂಧಿಯವರ 'ವ್ಯಕ್ತಿತ್ವದರ್ಶನವೂ ಆಗುತಿದ್ದಿಲ್ಲವೇನೊ! ಏನೇ ಇರಲಿ, ವರ್ಣಭೇದ ನೀತಿಗೆ ಬಲವತ್ತರವಾದ ವಿರೋಧ ಇಂದಲ್ಲ, ಬಹುಕಾಲದ ಹಿಂದೆಯೇ ಹುಟ್ಟಿಕೊಂಡಿದ್ದು ಇಂದದು ರಾಕ್ಷಸಾಕಾರವನ್ನು ತಾಳುತ್ತಿದೆ. ಪ್ರಪಂಚದ ಬೇರಾವ ದೇಶದಲ್ಲಿಯೂ ಕಾಣದ ಈ ವಿಚಿತ್ರ ನೀತಿ ಇಲ್ಲಿ ಮಾತ್ರ ಅಜೇಯವೆಂಬಂತೆ ತನ್ನ ಅಹಂಭಾವನನ್ನು ಪ್ರದರ್ಶಿಸುತ್ತಿದೆ. ತಾನು ಈ ಬಗ್ಗೆ ಯಾರ ಮುಂದೆಯೂ ತಲೆತಗ್ಗಿಸಲಾರೆನೆಂದು ಹೇಳಿ, ದಕ್ಷಿಣ ಆಫ್ರಿಕೆಯು ಇದನ್ನು ಮತ್ತಷ್ಟು ಬಲಪಡಿಸುತ್ತ ಬರುತ್ತಿರುವುದು ಸರ್ವವಿದಿತವಿದೆ. ಆದರೆ, ಪ್ರಧಾನಿ ವೆರ್ವೋರ್ಡರು ಈ ಬಗ್ಗೆ ತಾಳುವ ನಿಲುಮೆಯ ಬಗ್ಗೆ ದೃಢವಾಗಿ ಅಂಟಿಕೊಳ್ಳುವ ಯೋಚನೆ ಮುಂದುವರಿಸುತ್ತಿರುವಾಗಲೇ ವಿಶ್ವನಾಗರಿಕರಲ್ಲಿ ಈ ಧೋರಣೆಯು ಅಸಹ್ಯವೆಂಬ ಭಾವನೆ ಮಿಂಚಿನ ವೇಗದಿಂದ ಪ್ರಸಾರವಾಗುತ್ತಿದೆ. ಇದಕ್ಕೆ ನಿದರ್ಶನವಾಗಿ ಈ ಬಾರಿಯ ಕಾಮನ್‌ವೆಲ್ತ್ ಪ್ರಧಾನಿ ಪರಿಷತ್ತು ಮತ್ತು ವಿಶ್ವಸಂಸ್ಥೆಯ ಸಾಮಾನ್ಯಸಭೆಯ ಗೊತ್ತುವಳಿಗಳನ್ನು ಉಲ್ಲೇಖಿಸಬಹುದು. ದಕ್ಷಿಣ ಆಫ್ರಿಕೆಯು ಈ ಭೇದನೀತಿಯ ಬಗ್ಗೆ ಬ್ರಿಟನ್ನ ಅನುಕೂಲಾಭಿಪ್ರಾಯ ತಳೆಯುದಿದ್ದರೂ ಈ ಮೊದಲು ಅದನ್ನು ಪ್ರತ್ಯಕ್ಷವಾಗಿ ಖಂಡಿಸಲು ಮುಂದೆ ಬರುತ್ತಿರಲಿಲ್ಲ. ಆದರೆ, ಈ ಸಲದ ಕಾಮನ್‌ವೆಲ್ತ್ ಸಮ್ಮೇಳನದ ಪರಿಣಾಮವಾಗಿ ದಕ್ಷಿಣ ಆಫ್ರಿಕೆಯು ಉಪಾಯಗಾಣದೆ ತನ್ನ ಸ್ನೇಹಿತರಿಂದ ದೂರಸರಿಯಲೇಬೇಕಾಯಿತು. ಆದರೂ ತಮ್ಮ ಧೋರಣೆಯನ್ನು ಬದಲಿಸಲು ಒಪ್ಪದ ದ. ಆಫ್ರಿಕೆಯ ಪದಾಧಿಕಾರಿಗಳು ನಮ್ಮ ಒಳಿತಿಗಾಗಿಯೇ ಕಾಮನ್‌ವೆಲ್ತಿನಿಂದ ಹೊರಬರುವೆವೆಂದು ಉದ್ಗರಿಸಿದರು. ವರ್ಣಭೇದ ನೀತಿಯಿಂದಲೇ ತಮ್ಮ ಒಳಿತಾಗುವುದೆಂದು ಇವರು ಭಾವಿಸಿದಂತಿದೆ. ಪ್ರಧಾನಿ ವೆರ್ವೋರ್ಡರ ದೃಢನಿರ್ಧಾರವೇನೇ ಇದ್ದರೂ ಅವರ ಧೋರಣೆಯ ಬಗ್ಗೆ ಇಂದು ಯಾರಿಗೂ ಸಹಾನುಭೂತಿ ಉಳಿದಿಲ್ಲವೆಂಬುದಕ್ಕೆ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಗೊತ್ತುವಳಿಯೇ ಸಾಕ್ಷಿ. ಅದು ತನ್ನ ಸದಸ್ಯ ರಾಷ್ಟ್ರಗಳಿಗೆ ದಕ್ಷಿಣ ಆಫ್ರಿಕೆಯ ವರ್ಣ ಭೇದ ಕಾಯಿದೆಯನ್ನು ಕೊನೆಗೊಳಿಸಲು ಪ್ರತಿಪ್ರತ್ಯೇಕವಾಗಿ ಮತ್ತು ಸಾಮೂಹಿಕವಾಗಿ ಕ್ರಮಗಳನ್ನು ಕೈಗೊಳ್ಳಬೇಕೆಂದು ಕೇಳಿಕೊಂಡಿದೆ. ವಿಶೇಷ ರಾಜಕೀಯ ಸಮಿತಿಯಲ್ಲಿ ಇದು ಸಾಕಷ್ಟು ಬಹುಮತದಿಂದ ಸ್ವೀಕಾರವಾಗಿ ಸಾಮಾನ್ಯ ಸಭೆಯಲ್ಲಿ ೯೫ ಮತಗಳಿಂದ ಮಂಜೂರಾಯಿತು. ಕೇವಲ ಪೋರ್ಚುಗಾಲವು ಮಾತ್ರ ವಿರುದ್ಧ ಮತವಿತ್ತಿತೆನ್ನುವಾಗ, ಅದರ ವರ್ತನೆಯ ಬಗ್ಗೆ ವಿಶೇಷ ಟೀಕೆ ಅನಗತ್ಯ. ಈ ಗೊತ್ತುವಳಿಯನ್ನು ಭಾರತ, ಸಿಲೋನ್, ಅಫಘಾನಿಸ್ಥಾನ, ಮಲಯ ಮತ್ತು ಇಂಡೋನೇಶಿಯಾಗಳು ಮಂಡಿಸಿದ್ದುವು.

ದಕ್ಷಿಣ ಆಫ್ರಿಕೆಯ ವರ್ಣ ಭೇದನೀತಿಯಿಂದು ಅಸಹನೀಯವಾಗಿ ಪರಿಣಮಿಸಿದೆ. ಇಡಿಯ ಪ್ರಪಂಚದಲ್ಲಿ ಯಾರಿಗೂ ಬೇಡವಾದ ಒಂದು ನೀತಿ ಕೇವಲ ದಕ್ಷಿಣ ಆಫ್ರಿಕೆಗೆ ಬೇಕಾಗಿದೆಯೆಂದರೆ, ತನ್ನ ಧೋರಣೆಯಲ್ಲಿ ದ. ಆಫ್ರಿಕೆಯು ಅಚಲ ವಿಶ್ವಾಸವಿಟ್ಟಿದೆ ಎಂದು ಅರ್ಥ. ಇದಕ್ಕಾಗಿ ಅದರ ಸಾಹಸವನ್ನು ಕೊಂಡಾಡಲೇಬೇಕು. ಆದರೆ, ಎಲ್ಲರೂ ತಿರಸ್ಕಾರ ಭಾವದಿಂದ ಕಾಣುತ್ತಿರುವುದನ್ನು ಕೇವಲ ಒಬ್ಬನೇ ತನ್ನ ಆತ್ಮತೃಪ್ತಿಗಾಗಿ ಬಯಸುವುದು ಸಮತಾ ಭಾವದ ಈ ಯುಗದಲ್ಲಿ ಶುದ್ಧ ಅವಿವೇಕವೆನ್ನಲೇಬೇಕು. ದಕ್ಷಿಣ ಆಫ್ರಿಕೆಯ ಮೇಲೆ ನಾನಾ ಪರಿಯ ದಿಗ್ಬಂಧನ ಹೇರುವುದಕ್ಕೆ ತೊಡಗಿದರೆಂದರೆ, ಆಗ ಅದು ಅನಿವಾರ್ಯವಾಗಿ ತನ್ನ ನೀತಿಯಲ್ಲಿ ಪರಿವರ್ತನೆಗೊಳಿಸಬೇಕಾಗಿ ಬರಬಹುದು. ವರ್ಣಭೇದ ನೀತಿಯು ದಕ್ಷಿಣ ಆಫ್ರಿಕೆಯ ಆಂತರಿಕ ನೀತಿಯಾದುದರಿಂದ ಆ ಬಗ್ಗೆ ಯಾರೂ ಏನೂ ಮಾಡುವಂತಿಲ್ಲವಾದರೂ ಪರೋಕ್ಷವಾಗಿ ವಿವಿಧ ಕ್ರಮ ಕೈಗೊಳ್ಳುವುದು ನ್ಯಾಯೋಚಿತವಾದುದು. ಈ ರೀತಿಯ ಒತ್ತಾಯ—ದಿಗ್ಬಂಧನಗಳು ಕೂಡಲೇ ಸಫಲವಾದಾವೆಂದು ಹೇಳುವುದು ಕಷ್ಟ; ಆದರೂ ವರ್ಣಭೇದ ನೀತಿಗೂ ಅವಸಾನವಿದೆ; ಅದು ಅತಿ ನಿಕಟ ಬರುತ್ತಿದೆ ಎಂದು ಆ ಅಮಾನುಷ ನೀತಿಯ ಹಸ್ತಕರು ತಿಳಿದುಕೊಳ್ಳುವುದು ಅಪೇಕ್ಷಣೀಯ.

ಪರಿಪಕ್ವತೆ ಎಂದು?

ಇದುವರೆಗಿನ ಹಲವು ಅಧಿವೇಶನಗಳಲ್ಲಿ ಚರ್ಚೆಗೆ ಎತ್ತಿಕೊಂಡು ಪರಸ್ಪರ ವಾಗ್ವಾದಗಳಿಗೆ ಎಡೆಕೊಟ್ಟು, ಯಾವುದೇ ನಿರ್ಧಾರಕ್ಕೆ ಬಾರದೆ ಮನಸ್ತಾಪದಲ್ಲಿಯೇ ಪರ್ಯವಸಾನಗೊಂಡ ನಮ್ಮ ರಾಜ್ಯದ ಹೆಸರಿನ ಸಂಬಂಧದ ಗೊತ್ತುವಳಿಯೊಂದು ಈ ಬಾರಿಯೂ ಮುಂದೆ ಬಂದಿದೆ. ಹೊಸ ರಾಜ್ಯ ಸ್ಥಾಪನೆಯಾಗಿ ವರ್ಷ ಐದು ಸಂದರೂ ಒಂದು ಚುನಾವಣೆ ಕೊನೆಗೊಂಡು ಇನ್ನೊಂದು ಸಮೀಪಿಸುತ್ತಿರುವುದಾದರೂ ಈ ಬಗ್ಗೆ ಅಂತಿಮ ನಿರ್ಧಾರವಾಗದಿರುವುದು ವಿಲಕ್ಷಣವೆನ್ನಿಸುತ್ತದೆ. ವಿವಾದಾತೀತವಾದ ರಾಜ್ಯದ ಹೆಸರಿನ ಸಂಬಂಧದ ಗೊತ್ತುವಳಿಗೆ ಕನ್ನಡ ಜನತೆಯಲ್ಲಿ ಅತ್ಯಧಿಕ ಬೆಂಬಲವಿರುವುದು ಖಂಡಿತವೇ. ಸಾಹಿತ್ಯ ಸಮ್ಮೇಳನಗಳಲ್ಲಿಯೂ ಪ್ರತಿವರ್ಷವೆಂಬಂತೆ ಈ ಗೊತ್ತುವಳಿಯು ಮಂಜೂರಾಗುತ್ತಿದೆ. ವಿರೋಧಿ ಪಕ್ಷದ ಸದಸ್ಯರು ಈ ವಿಷಯವನ್ನು ಚರ್ಚೆಗೆ ಎತ್ತಿಕೊಳ್ಳುವುದರಲ್ಲೇ ತೃಪ್ತರಾಗದೆ ಮತಕ್ಕೆ ಹಾಕಿ ಒಂದು ನಿರ್ಧಾರಕ್ಕೆ ಬರುವ ಯೋಚನೆ ಮಾಡಬೇಕು. ಆಗ ಗೊತ್ತುವಳಿ ಸ್ವೀಕೃತವಾಗದೆ ಹೋದರೂ ಎಷ್ಟು ಜನರು ಈ ಹೆಸರಿನ ಬಗ್ಗೆ ಆಕ್ಷೇಪವೆತ್ತುವರೆಂಬುದಾದರೂ ವ್ಯಕ್ತವಾಗುವುದು. ಈ ಕುರಿತಾದ ನಿರ್ಧಾರಕ್ಕೆ ಬರಲು ಇನ್ನೂ ಸಮಯ ಪರಿಪಕ್ವವಾಗಿಲ್ಲವೆಂದು ದಿನ ದೂಡುವುದೆಂದರೆ, ಕನ್ನಡಿಗರನ್ನು ವಂಚಿತರಾಗಿಸಿದಂತೆ; ಸರಕಾರಿ ಪಕ್ಷವೂ ಈ ಬಗ್ಗೆ ತನ್ನ ಸದಸ್ಯರಿಗೆ ಸ್ವತಂತ್ರ ಮತಾಧಿಕಾರವನ್ನಿತ್ತು ಜನತಾ ಪ್ರತಿನಿಧಿಗಳ ನೈಜ ಅಭಿಪ್ರಾಯ ತಿಳಿದುಕೊಳ್ಳಲು ಪ್ರಯತ್ನಿಸಬೇಕು.

ಸಿಂಡಿಕೇಟ್ ಬೇಂಕ್

'ಸಿಂಡಿಕೇಟ್ ಬೇಂಕ್' ಎಂಬ ಹೆಸರಿನಿಂದ ಜನಜನಿತವಾಗಿರುವ 'ದಿ ಕೆನರಾ ಇಂಡಸ್ಟ್ರಿಯಲ್ ಅಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್'ನ ೧೯೬೦ನೆ ವರ್ಷದ ಪ್ರಗತಿಯು ಅಭಿಮಾನಾಸ್ಪದವಿದೆ. ಜನತೆಗೆ ಉಪಯುಕ್ತವಾದ ಪಿಗ್ಮಿ, ಕ್ಯುಮುಲೆಟಿವ್ ಡಿಪೋಜಿಟ್, ಸೇವಿಂಗ್ಸ್ ಬೇಂಕ್, ಕೇಶ್ ಸರ್ಟಿಫಿಕೇಟ್ ಮೊದಲಾದ ಬೇಂಕಿಂಗ್ ಸೇವೆಗಳೊಡನೆ ಈ ವರ್ಷದಲ್ಲಿ 'ಇನ್ವೆಸ್ಟರ್ಸ್ ಏಜನ್ಸಿ' ಎಂಬ ಭಾರತಕ್ಕೇನೇ ಹೊಸತಾದ ಪ್ರಣಾಳಿಕೆಯೊಂದನ್ನು ವ್ಯವಹೃತಗೊಳಿಸಿದೆ. ವರದಿ ವರ್ಷದಲ್ಲಿ ಕೇರಳದ ಏಶಿಯಾಟಿಕ್ ಮರ್ಕಂಟೈಲ್ ಬೇಂಕನ್ನು ತನ್ನಲ್ಲಿ ವಿಲೀನಗೊಳಿಸಿಕೊಂಡುದರಿಂದ ಅದು ಇದುವರೆಗೆ ಒಟ್ಟು ಐದು ಚಿಕ್ಕ ಬೇಂಕುಗಳ ಸಾಲ ಮೂಲಗಳನ್ನು ತನ್ನಲ್ಲಿ ಸೇರಿಸಿಕೊಂಡಂತಾಯ್ತು. ಈ ವರ್ಷ ಕೆಲವೊಂದು ಶಾಖೆಗಳಲ್ಲಿ ಮಹಿಳಾ ಬೇಂಕಿಂಗ್ ವಿಭಾಗವನ್ನು ತೆರೆದಿದೆ. ವರ್ಷಾಂತ್ಯದಲ್ಲಿ ದಕ್ಷಿಣ ಭಾರತದ ವಿವಿಧೆಡೆಗಳಲ್ಲಿ ೧೪೯ ಶಾಖೆಗಳಿದ್ದು ಇವುಗಳಲ್ಲಿ ಮೂವತ್ತಕ್ಕೂ ಮಿಕ್ಕಿದವು ಕೇವಲ ಗ್ರಾಮೀಣ ಪ್ರದೇಶಗಳಲ್ಲಿ, ಕೆಲವೊಂದು ೫ ಸಾವಿರಕ್ಕೂ ಕಡಿಮೆ ಜನಸಂಖ್ಯೆಯ ಹಳ್ಳಿಗಳಲ್ಲಿವೆ. ಇವುಗಳಿಂದಾಗಿ ಗ್ರಾಮೀಣ ಜನತೆಯಲ್ಲಿಯೂ ಬೇಂಕಿಂಗ್ ಅಭ್ಯಾಸವು ಅಂಕುರಿಸಲು ಬಹು ವರ್ಷಗಳಿಂದ ಸಿಂಡಿಕೇಟು ಶ್ರಮಿಸುತ್ತಿದೆ. ೮,೦೦೦ ರೂಪಾಯಿಗಳ ತೆತ್ತ ಬಂಡವಾಳದಿಂದ ೩೫ ವರ್ಷಗಳಿಗೆ ಮೊದಲು 'ಪಿಗ್ಮಿ'ಯಾಗಿ ರೂಪ ಪಡೆದ ಸಿಂಡಿಕೇಟ್ ಬೇಂಕು ಇಂದು ರೂ. ೪೭ ಲಕ್ಷ ತೆತ್ತ ಬಂಡವಾಳವನ್ನು ಪಡೆದಿದೆ. ರೂ. ೪೫ ಲಕ್ಷ ಕ್ಷೇಮ ನಿಧಿಯಿದೆ. ಒಟ್ಟು ಠೇವಣಾತಿಗಳು ರೂ. ೧೯ ಕೋಟಿಗಳು. ಒಟ್ಟು ವ್ಯವಹಾರವು ರೂ. ೨೩ ಕೋಟಿಗಳಷ್ಟು. ಕಳೆದ ವರ್ಷ ರೂ ೨೦ ಲಕ್ಷ ಲಾಭ ದೊರೆತರೆ, ಅದು ಇಂದು ರೂ. ೨೫ ಲಕ್ಷಗಳಿಗೇರಿದೆ. ತನ್ನ ೩೬೬೯ ಬಂಡವಾಳದಾರರಿಗೆ ಒಟ್ಟು ಸೇಕಡಾ ೨೦ರಂತೆ ಲಾಭಾಂಶವನ್ನು ಹಂಚಲು, ಮತ್ತು ತನ್ನ ೧,೬೦೬ ನೌಕರರಿಗೆ ಬೋನಸಾಗಿ ರೂ. ೧॥ ಲಕ್ಷಗಳನ್ನು ನೀಡಲು ಬೇಂಕು ನಿರ್ಧರಿಸಿದೆ. ನಮ್ಮ ಸರಕಾರವು ಗ್ರಾಮೀಣ ಪ್ರದೇಶಗಳಲ್ಲಿ ಅಧಿಕಾಧಿಕ ಶಾಖೆಗಳನ್ನು ತೆರೆದು ಹಳ್ಳಿಗರಲ್ಲಿ, ಎಂದರೆ, ನಿಜವಾದ ಭಾರತೀಯರಲ್ಲಿ ಬೇಂಕಿಂಗ್ ಅಭ್ಯಾಸವನ್ನು ಬೆಳೆಸಬೇಕೆಂದು ಸ್ಟೇಟ್ ಬೇಂಕ್ ಆಫ್ ಇಂಡಿಯಾದ ಮೂಲಕ ಪ್ರಯತ್ನಿಸುತ್ತಿರುವುದನ್ನು ಕಾಣುವಾಗ, ನಮ್ಮ ಜಿಲ್ಲೆಯ ಎಲ್ಲೆಡೆಯಲ್ಲೂ ಶಾಖೆಗಳನ್ನು ಹರಡಿಸಿರುವ ಸಿಂಡಿಕೇಟ್ ಬೇಂಕು ನಮ್ಮ ಹಳ್ಳಿಗರಲ್ಲಿ ಅದನ್ನು ಈಗಾಗಲೇ ಹುಟ್ಟಿಸಿದೆ ಎಂದು ಧೈರ್ಯವಾಗಿ ಹೇಳಬಹುದು.

ದಕ್ಷಿಣ ಭಾರತದ ತುಂಬ ಹರಡಿರುವ ಬಹು ಶಾಖೆಗಳಿಂದ ಅವಶ್ಯಕ ಸೌಲಭ್ಯಗಳನ್ನು ತನ್ನ ಗಿರಾಕಿಗಳಿಗೆ ನೀಡಲು ಸಿಂಡಿಕೇಟು ಸರ್ವಸಮರ್ಥವಾಗಿದೆ. ಬೇಂಕಿನ ಪ್ರಗತಿಯ ಕುರಿತಾಗಿಯೇ, ಅದರಿಂದ ಜನತೆಗೆ ದೊರಕಿಸಬಹುದಾದ ಸೌಕರ್ಯಗಳ ಬಗ್ಗೆಯೇ ಆಲೋಚಿಸಿ ಸರಿಯಾದ ದಾರಿಯಲ್ಲಿ ಹೆಜ್ಜೆಯಿಟ್ಟು, ಬೇಂಕಿಗೂ ಜನರಿಗೂ ಸಮಾನಮಟ್ಟದಲ್ಲಿ ಲಾಭ ದೊರಕಿಸುವ ಮೆನೇಜಿಂಗ್ ಡೈರೆಕ್ಟರ್ ಡಾ। ಮಾಧವ ಪೈ; ಜನಜೀವನದ ಸರ್ವಕ್ಷೇತ್ರಗಳಲ್ಲಿ ರಾಜಕಾರಣದಿಂದ ಹಿಡಿದು ಆಧ್ಯಾತ್ಮಿಕತೆಯ ವರೆಗೆ—ಆಸಕ್ತಿ ವಹಿಸಿ ಜನಸೇವೆಯೇ ಜನಾರ್ದನ ಸೇವೆಯೆಂದು ತಿಳಿದು ಜನಪ್ರಿಯತೆಗಳಿಸಿರುವ ಜನರಲ್ ಮೆನೇಜರ್ ಶ್ರೀ ಟಿ. ಎ. ಪೈ ಮತ್ತು ದಕ್ಷ ಆಡಳಿತಗಾರರೂ ಸೌಮ್ಯ ಸ್ವಭಾವದವರೂ ಆದ ಡಿಪ್ಯುಟಿ ಜನರಲ್ ಮೆನೇಜರ್ ಶ್ರೀ ಕೆ. ಕೆ. ಪೈ ಅವರ ಸಮರ್ಥ ಯೋಜನೆ ಹಾಗೂ ಪ್ರಶಾಸನಗಳಿಂದ ದಿನದಿಂದ ದಿನಕ್ಕೆ ಬೃಹದಾಕಾರ ತಾಳುತ್ತಿರುವ ಸಿಂಡಿಕೇಟ್ ಬೇಂಕು ಸರ್ವತೋಮುಖ ಅಭಿವೃದ್ಧಿ ಹೊಂದಲಿ; ನಾಡಿಗರಿಗೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಸೇವೆ ಸಲ್ಲಿಸಲು ಸಶಕ್ತವಾಗಲಿ.

ಶಂಕು ಸ್ಥಾಪನೆ — ಉಡುಪಿ ಅಜ್ಜರಕಾಡಿನಲ್ಲಿ ನಿರ್ಮಾಣವಾಗಲಿರುವ ನೂರು ಹಾಸಿಗೆಗಳ ಸರಕಾರಿ ಆಸ್ಪತ್ರೆ ಕಟ್ಟಡಕ್ಕೆ ಇದೇ ಬರುವ ಮೇ ೫ನೇ ತಾರೀಕಿನಂದು ಮೈಸೂರಿನ ಮುಖ್ಯಮಂತ್ರಿ ಶ್ರೀ ಬಿ. ಡಿ. ಜತ್ತಿಯವರು ಶಂಕು ಸ್ಥಾಪನೆ ಮಾಡಲಿರುವರೆಂದೂ ಆರೋಗ್ಯ ಮಂತ್ರಿ ಡಾ. ಕೆ. ಕೆ. ಹೆಗ್ಡೆಯವರು ಶಂಕು ಸ್ಥಾಪನಾ ಸಮಾರಂಭದ ಅಧ್ಯಕ್ಷತೆ ವಹಿಸಲಿರುವರೆಂದೂ ಶ್ರೀ ಅದಮಾರು ಶ್ರೀಪಾದಂಗಳವರು ಪತ್ರಿಕಾ ಪರಿಷತ್ತಿನಲ್ಲಿ ಹೇಳಿ ಈ ಆಸ್ಪತ್ರೆ ನಿರ್ಮಾಣ ಕಾರ್ಯದ ಪೂರ್ವೇತಿಹಾಸವನ್ನು ವಿವರಿಸಿದರು.

ಅಲ್ಲಲ್ಲಿಯ ಸುದ್ದಿ ಸಾರ

ಡಾ| ಮೋದಿಯವರಿಗೆ ಸತ್ಕಾರ— ಮಂಗಳೂರಿನ ಕರ್ನಾಟಕ ಪೊಲಿಟೆಕ್ನಿಕ್‌ನಲ್ಲಿ 635 ಜನರಿಗೆ ಕಣ್ಣಿನ ಶಸ್ತ್ರ ಚಿಕಿತ್ಸೆಗೈದು, 4,000ಕ್ಕೂ ಮಿಕ್ಕಿದ ಜನರ ನೇತ್ರ ಪರೀಕ್ಷೆ ಮಾಡಿ ಉಚಿತ ನೇತ್ರದಾನ ಶಿಬಿರ ನಡೆಸಿದ ಪದ್ಮಶ್ರೀ ಡಾ| ಎಂ. ಸಿ. ಮೋದಿ ಹಾಗೂ ಅವರ ಸಂಗಡಿಗರನ್ನು ತಾ. 17ರಂದು ಮೋಹಿನಿ ವಿಲಾಸದಲ್ಲಿ ನೇತ್ರ ಶಸ್ತ್ರಚಿಕಿತ್ಸಾ ಶಿಬಿರ ಸಮಿತಿಯವರು ಸತ್ಕರಿಸಿ ಗೌರವಿಸಿದರು. ಶ್ರೀ ಕೆ. ಸೂರ್ಯನಾರಾಯಣ ಅಡಿಗ ಮತ್ತು ಶ್ರೀ ಮಹೇಶ್ ಶ್ರೀನಿವಾಸ ನಾಯ್ಕರು ಡಾ| ಮೋದಿಯವರಿಗೆ ಸಭಿಕರ ಪರಿಚಯ ಮಾಡಿಸಿದರು. ಉಪಾಹಾರವಾದ ಬಳಿಕ ಶ್ರೀ ಅಡಿಗರು ಶಿಬಿರವನ್ನು ಯಶಸ್ವಿಯಾಗಿಸಲು ನೆರವಾದವರಿಗೆಲ್ಲಾ ವಂದನೆಗಳನ್ನು ಅರ್ಪಿಸಿದರು. ಡಾ| ಮೋದಿಯವರು ಇಲ್ಲಿಯ ಶಿಬಿರವು ಚೆನ್ನಾಗಿ ನಡೆದು ಜಯಶೀಲವಾಗಿರುವುದೆಂದೂ ಉತ್ತಮ ಕೆಲಸಗಳಿಗೆ ದುಡ್ಡು ತಾನಾಗಿ ಒದಗುವುದೆಂದೂ ಆದರೆ ಉತ್ತಮ ಕೆಲಸಗಾರರ ಅಭಾವ ಇದ್ದರೂ ಇಲ್ಲಿ ಎಲ್ಲವೂ ಸುಸೂತ್ರವಾಗಿ ನಡೆದಿವೆಯೆಂದು ಹೇಳಿದರು.

ಆಕಸ್ಮಿಕ ನಿಧನ— ಮಂಗಳೂರಿನ ಸ್ಟೇಟ್ ಪೆಪ್ಪರ್ ಡೆವಲಪ್‌ಮೆಂಟ್ ಆಫೀಸರ್ ಶ್ರೀ ಕೆ. ಸಂಜೀವ ಸೆಟ್ಟರ ಪತ್ನಿ ಶ್ರೀಮತಿ ಗಿರಿಜಾ ಬಾಯಿಯವರು ಇದೇ ತಾ. 14ರಂದು ತಮ್ಮ ಪತಿಯೊಂದಿಗೆ ಕಾರ್ಕಳಕ್ಕೆ ಹೋದ ಸಂದರ್ಭದಲ್ಲಿ ರಕ್ತದ ಒತ್ತಡದಿಂದಾಗಿ ಕಾರ್ಕಳ ಸರಕಾರಿ ಆಸ್ಪತ್ರೆಯಲ್ಲಿ ಮರಣ ಹೊಂದಿದರೆಂದು ತಿಳಿಸಲು ವಿಷಾದವಾಗುತ್ತದೆ. ದಿವಂಗತೆಯವರು ಕಾರ್ಕಳದ ಸುಪ್ರಸಿದ್ಧ ವಕೀಲ್ ದಿ| ಎಸ್. ನಂಜಪ್ಪ ಸೆಟ್ಟರ ಪುತ್ರಿ. ಮರಣ ಕಾಲಕ್ಕೆ ಇವರಿಗೆ 46 ವರ್ಷ ವಯಸ್ಸಾಗಿತ್ತು. ಇವರಿಗೆ ಇಬ್ಬರು ಪುತ್ರರೂ ಮೂವರು ಪುತ್ರಿಯರೂ ಇದ್ದು ಒಬ್ಬಳಿಗೆ ಇದೇ ತಾ. 30ಕ್ಕೆ ವಿವಾಹ ಕೂಡಾ ನಿಶ್ಚಯವಾಗಿರುತ್ತದೆ.

ಕಾರ್ಕಳ— ಮಾರ್ಚ ತಾ 17ರಿಂದ ನಡೆಯುತ್ತಿದ್ದ ಅಖಿಲ ಕರ್ನಾಟಕ ವಸ್ತು ಪ್ರದರ್ಶನದ ಸಮಾರೋಪ ಸಮಾರಂಭವು ಇದೇ ತಾ. 12ರಲ್ಲಿ ತಹಶಿಲ್ದಾರ್ ಶ್ರೀ ಎ. ಎಸ್. ಡಿಸೋಜ ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ಎಡ್ವಕೇಟ್ ಶ್ರೀ ಎಸ್. ಎಮ್. ಅಡ್ಯಂತಾಯರು ಸ್ವಾಗತಿಸಿದ ಬಳಿಕ ಶ್ರೀ ಆರ್. ಆರ್. ಕುಂಜೂರರು ವರದಿಯನ್ನೋದಿದರು. ಇಲ್ಲಿಯ ಪ್ರಸಿದ್ಧ ಶಿಲ್ಪಿಗಳಾದ ಶ್ರೀ ಗೋಪಾಲ ಶಾನುಭಾಗರಿಗೆ ಶ್ರೀ ಬೈಕಾಡಿ ವಾಸುದೇವ ರಾಯರು ಗೌರವಾರ್ಪಣೆ ಸಲ್ಲಿಸಿದರು. ಶ್ರೀ ಶಾನುಭಾಗರು, ಅದಕ್ಕಾಗಿ ಕೃತಜ್ಞತೆ ವ್ಯಕ್ತಪಡಿಸಿ ಮಾತನಾಡಿದರು. ಶ್ರೀಮತಿ ನಿರ್ಮಲಾ ಅಡ್ಯಂತಾಯರು ಪಾರಿತೋಷಕ ವಿತರಣೆಗೈದರು. ಫಸ್ಟ್ ಕ್ಲಾಸ್ ಮೆಜಿಸ್ಟ್ರೇಟ್ ಶ್ರೀ ಎಮ್. ರಾಮಚಂದ್ರ ರಾಯರು ಸಮಾರೋಪ ಭಾಷಣವಿತ್ತರು. ಕೊನೆಗೆ ಶ್ರೀ ಕೆ ವಿ. ಎಸ್. ಉಪಾಧ್ಯರು ಆಭಾರ ಮನ್ನಿಸಿದರು

ಕಾರ್ಕಳ ಪುತ್ತೂರು ದ್ವಿಸದಸ್ಯ ಕ್ಷೇತ್ರಗಳ ಪುನರ್ವಿಂಗಡಣೆ— ಮುಂಬರುವ ಮಹಾ ಚುನಾವಣೆಯಲ್ಲಿ ದ್ವಿಸದಸ್ಯ ಕ್ಷೇತ್ರಗಳನ್ನು ರದ್ದು ಮಾಡಲಾಗುವುದರಿಂದ ಕಾರ್ಕಳ ಮತ್ತು ಪುತ್ತೂರುಗಳಲ್ಲಿದ್ದ ಎರಡು ದ್ವಿಸದಸ್ಯ ಕ್ಷೇತ್ರಗಳನ್ನು ಪುತ್ತೂರು, ಸುಳ್ಯ, ಕಾರ್ಕಳ, ಮೂಡಬಿದ್ರೆ ಎಂಬ ಏಕ ಸದಸ್ಯತನದ ನಾಲ್ಕು ಕ್ಷೇತ್ರಗಳನ್ನಾಗಿ ಪುನರ್ವಿಂಗಡಿಸಲಾಗಿದೆ.

ಇದರಲ್ಲಿ ಪುತ್ತೂರು ಮತ್ತು ಮೂಡಬಿದ್ರೆ ಕ್ಷೇತ್ರದ ಸ್ಥಾನಗಳನ್ನು ಪರಿಶಿಷ್ಟ ವರ್ಗದವರಿಗಾಗಿ ಕಾದಿರಿಸಲೂ ತೀರ್ಮಾನಿಸಲಾಗಿದೆ ಎಂದು ತಿಳಿದು ಬರುತ್ತದೆ.

ಸುಬ್ರಹ್ಮಣ್ಯ ಶ್ರೀಮದ್ವಿಶ್ವಜ್ಞ ತೀರ್ಥ ಪಾದಂಗಳವರು ಮತ್ತು ಶ್ರೀಗಳವರ ಶಿಷ್ಯ ಶ್ರೀ ಶ್ರೀ ಮದ್ವಿದ್ಯಾಸಿಂಧು ತೀರ್ಥ ಶ್ರೀ ಶ್ರೀ ಪಾದಂಗಳವರು ಶ್ರೀ ಸುಬ್ರಹ್ಮಣ್ಯ ಮಠದಲ್ಲಿ ತಾ. 28-4-61ರಿಂದ 3-5-61ರ ವರೆಗೆ ಶ್ರೀ ನರಸಿಂಹ ಜಯಂತಿ ಮಹೋತ್ಸವ ಕಾಲದಲ್ಲಿ ಜ್ಯೋತಿಷ್ಟೋಮ ಸೋಮಯಾಗ ಎಂಬ ಮಹಾಯಾಗವನ್ನು ವೇದಮೂರ್ತಿ ಅಲೆವೂರು ಶ್ರೀ ಸೀತಾರಾಮಾಚಾರ್ಯ ಉಡುಪಿ ಇವರಿಂದ ನೆರವೇರಿಸಲು ನಿಶ್ಚಯಿಸಿರುತ್ತಾರೆ. ಈ ಸಂದರ್ಭದಲ್ಲಿ ವೇದಾಧ್ಯಯನ, ಪುರಾಣ ವಾಚನ, ಭಾಗವತ ಸಪ್ತಾಹ ಮೊದಲಾದ ಧಾರ್ಮಿಕ ಕಾರ್ಯಕ್ರಮಗಳೂ, ಹರಿಕಥೆ, ಭಾಷಣ, ನಾಟಕ ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳೂ ನಡೆಯಲಿವೆ.

ಸುರತ್ಕಲ್— ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನತೀರ್ಥ ಸ್ವಾಮಿಗಳವರು ತಮ್ಮ ಗುರುವರ್ಯ ಶ್ರೀ ವಿದ್ಯಾಪೂರ್ಣತೀರ್ಥ ಶ್ರೀಪಾದಂಗಳವರ ಸಾಂವತ್ಸರಿಕ ಆರಾಧನೆಯನ್ನು ತಾ. 2ರಂದು ಸುರತ್ಕಲ್ ಶ್ರೀ ಕೃಷ್ಣಾಪುರ ಮಠದಲ್ಲಿ ಮಹಾಸಂತರ್ಪಣೆ, ಬಡವರಿಗೆ ಅನ್ನದಾನಾದಿ ಸತ್ಕಾರ್ಯಗಳಿಂದ ವಿಜೃಂಭಣೆಯಿಂದ ನೆರವೇರಿಸಿದರು.

ದುರ್ಗಾ ಕ್ಲಿನಿಕ್ ಪ್ರಾರಂಭೋತ್ಸವ— ಇದೇ ತಾ 19ನೇ ಸಂಜೆ ಹುಬ್ಬಳ್ಳಿಯ ದಾಜಿಬಾನ್ ಪೇಟೆಯಲ್ಲಿ ಡಾ| ವೈ. ಬಿ. ಸೆಟ್ಟರ ದುರ್ಗಾ ಕ್ಲಿನಿಕ್ ಎಂಬ ಚಿಕಿತ್ಸಾಲಯದ ಪ್ರಾರಂಭೋತ್ಸವವು ಶ್ರೀ ಬಿಂದುರಾವ್. ಎ. ದೇಸಾಯಿಯವರ ಅಧ್ಯಕ್ಷತೆಯಲ್ಲಿ ಪ್ರಪಂಚ ಪತ್ರಿಕೆಯ ಸಂಪಾದಕ ಶ್ರೀ ಪಾಟೀಲ ಪುಟ್ಟಪ್ಪನವರಿಂದ ನೆರವೇರಿಸಲ್ಪಟ್ಟಿತು.

ಮಣಿಪಾಲ— ಕಳೆದ ತಾ. 31ರಂದು ಲಾ ಶಾಂಗ್ರಿಲಾ ಗಾರ್ಡನಿನಲ್ಲಿ ಸೇರಿದ ಸಭೆಯಲ್ಲಿ ಎಕಾಡೆಮಿಯ ರಿಜಿಸ್ಟ್ರಾರ್ ಡಾ. ಟಿ. ಎಂ. ಎ. ಪೈಯವರು ಕೇಟರಿಂಗ್ ಮತ್ತು ಹೊಟೇಲ್ ಮೆನೇಜ್‌ಮೆಂಟ್ ತರಬೇತಿ ಕೇಂದ್ರವನ್ನು ಉದ್ಘಾಟಿಸಿದರು. ಮಿ| ಫಿಲಿಫ್ ಮೋರ್ಗನ್‌ವಿಟ್ಸರು ಅಮೇರಿಕದಲ್ಲಿ ಹೊಟೇಲು ಉದ್ಯಮವನ್ನು ಪ್ರಸ್ತಾಪಿಸಿ ಇಂತಹ ಕೇಂದ್ರವು ಅಗತ್ಯವೆಂದರು. ಪ್ರಾರಂಭದಲ್ಲಿ ಶ್ರೀಯುತ ಆರ್. ಎಸ್. ಶೆಣೈಯವರು ಸ್ವಾಗತಿಸಿ ಕೇಂದ್ರದ ಉದ್ದೇಶವನ್ನು ವಿವರಿಸಿದರು. ಅಂತ್ಯದಲ್ಲಿ ಶ್ರೀ ರಾಮದಾಸ ಶೆಣೈಯವರು ಧನ್ಯವಾದಗಳನ್ನರ್ಪಿಸಿದರು.

ಮಣಿಪಾಲದ ಬುನಾದಿ ಪ್ರಾಥಮಿಕ ಶಾಲೆಯ ವಾರ್ಷಿಕ ದಿನಾಚರಣೆಯು ತಾ. 2ರಂದು ಶ್ರೀ ವಾಸುದೇವಾಚಾರ್ಯ, ಬಿ ಎ., ಬಿ ಟಿ., ಇವರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯ ಶ್ರೀ ಅಣ್ಣಪ್ಪ ಪ್ರಭುಗಳು ಸ್ವಾಗತ ಭಾಷಣ ಮಾಡಿ, ಶಾಲಾ ವರದಿಯನ್ನೋದಿದರು. ಸಭಿಕರ ಪರವಾಗಿ ಶ್ರೀ ನಾರಾಯಣ ಕೃಷ್ಣ ಕುಡುವರು ಭಾಷಣ ಮಾಡಿದರು. ಸಂದರ್ಭೋಚಿತವಾಗಿ ಅಧ್ಯಕ್ಷರ ಭಾಷಣವಾದ ಮೇಲೆ ಮಕ್ಕಳ ವಿವಿಧ ಚಟುವಟಿಕೆಗಳ ಪ್ರದರ್ಶನ, ನಾಟಕಾಭಿನಯಗಳಾದ ಬಳಿಕ ಶ್ರೀ ಪಾ. ಲ. ನಾ. ಉಪಾಧ್ಯಾಯರು ಧನ್ಯವಾದಾರ್ಪಣೆ ಮಾಡಿದರು.

ಕಡಂದಲೆ— ಪೋಸ್ರಾಲ್ ಎಯಿಡೆಡ್ ಹಾ. ಎ. ಶಾಲಾ ವರ್ಧಂತ್ಯುತ್ಸವವು ತಾ. 10—4—61ರಂದು ವಿಜೃಂಭಣೆಯಿಂದ ಜರಗಿತು. ಸಮಾರಂಭದ ಅಧ್ಯಕ್ಷತೆಯನ್ನು ಕಾರ್ಕಳ ತಾಲೂಕು ಬೋರ್ಡು ಅಧ್ಯಕ್ಷರಾದ ಶ್ರೀ ಎಸ್. ಮೋಹನ್‌ದಾಸ್ ಅಡ್ಯಂತಾಯರು ವಹಿಸಿದ್ದರು. ಅಂದಿನ ಪೂರ್ವಾಹ್ನದ ಕಾರ್ಯಕ್ರಮ ಧ್ವಜ ವಂದನೆ ಮೊದಲಾದವುಗಳ ಅಧ್ಯಕ್ಷತೆಯನ್ನು ಮುಂಡ್ಕೂರು ಪಂಚಾಯತ್ ಬೋರ್ಡು ಚೇಯರ್‌ಮೇನ್ ಶ್ರೀಯುತ ಶಿವಣ್ಣ ಶೆಟ್ಟರು ವಹಿಸಿದ್ದರು ಕಾರ್ಯಕ್ರಮದಂತೆ ಸಮಾರಂಭವು ಜರಗಿ ಶಾಲಾ ಬಾಲಕಿಯರಿಂದ "ಪುನರ್ಮಿಲನ"ವೆಂಬ ಕನ್ನಡ ನಾಟಕವೂ ಶಾಲಾ ಬಾಲಕರಿಂದ "ಸತ್ತ್ಯೋಗು ಸತ್ಯನಾದಿ" ಎಂಬ ಸಾಮಾಜಿಕ ತುಳು ನಾಟಕವೂ ಅಲ್ಲದೆ ಇತರ ಅನೇಕ ಮನೋರಂಜನೆಯ ಕಾರ್ಯಕ್ರಮಗಳೂ, ಜರಗಿದುವು. ಶಾಲಾ ಕಮಿಟಿಯವರಿಂದ ಬಾಲಕ ಬಾಲಕಿಯರಿಗೆ ಸಿಹಿತಿಂಡಿ ಹಂಚುವಪರ್ದು ಬಹಳ ಶ್ಲಾಘನೀಯವಾಗಿತ್ತು.

ಉಡುಪಿ ನಗರ ಸಭೆ— ಯ ಅವಸರದ ಸಭೆಯೊಂದು ನಗರ ಸಭಾಧ್ಯಕ್ಷ ಡಾ. ಕೆ. ಎಲ್. ಪಿತಾಳರ ಅಧ್ಯಕ್ಷತೆಯಲ್ಲಿ ಜರಗಿ 1960—61ರ ಪರಿಷ್ಕೃತ ಮತ್ತು 61—62ರ ಆಯವ್ಯಯ ಬಜೆಟನ್ನು ಮಂಜೂರು ಮಾಡಲಾಯಿತು. ಸೆಂಟ್ರಲ್ ಪಾರ್ಕಿನ ನಗರ ರಚನಾ ಕೆಲಸವನ್ನು ಪೂರ್ತಿಮಾಡಲು ರೂ. 30,000ದ ಹೆಚ್ಚಿನ ವೆಚ್ಚ ಮಂಜೂರುಗೊಳಿಸಲಾಯಿತು. ಇದನ್ನು ರಾಜ್ಯ ಸರಕಾರದಿಂದ ಸಾಲ ಪಡೆಯಬೇಕಾಗಿಯೂ ನಿರ್ಣಯಿಸಲಾಯ್ತು. ಸರಕಾರಿ ಆಸ್ಪತ್ರೆಯ ವಠಾರದ ಕೊಳಕು ನೀರನ್ನು ಮಾರ್ಗದ ಬದಿಯ ಚರಂಡಿಗೆ ಹರಿಯಬಿಡದಂತೆ ನೋಡಿಕೊಳ್ಳಬೇಕಾಗಿ ಆಸ್ಪತ್ರೆ ಡಾಕ್ಟರರನ್ನು ಕಮಿಶನರ ಮೂಲಕ ವಿನಂತಿಸಬೇಕೆಂದಾಯಿತಲ್ಲದೆ ಹೊಟೆಲ್ ಮಾಲಿಕರೂ ಕೌಟುಂಬಿಕ ಮನೆಯವರೂ ತಮ್ಮ ತಮ್ಮ ವಠಾರಗಳ ಕೊಳಕು ನೀರನ್ನು ರಸ್ತೆ ಚರಂಡಿಗಳಿಗೆ ಹರಿಯಬಿಡದಂತೆ ಗಮನವೀಯುವರೆ ಕಮಿಶನರಿಗೆ ಆದೇಶವೀಯಲಾಯಿತು.

ಮೈಸೂರು ಭೂ ಸುಧಾರಣಾ ಮಸೂದೆ— ಇದರ ಪರಿಶೀಲಕ ಸಮಿತಿಯವರು ಮಾಡಿರುವ ಶಿಫಾರಸುಗಳು ಧಾರ್ಮಿಕ ಸಂಸ್ಥೆಗಳಿಗೆ ತೀವ್ರ ನಿರಾಶೆಯನ್ನುಂಟುಮಾಡಿರುವುದಾಗಿಯೂ ನಮ್ಮ ಸರಕಾರವು ಮದ್ರಾಸು ಕೇರಳ ಸರಕಾರಗಳು ಕೊಡುವಷ್ಟರ ಮಟ್ಟಿನ ಸವಲತ್ತುಗಳನ್ನಾದರೂ ಕೊಡಬೇಕೆಂಬುದಾಗಿಯೂ ಇತ್ತೀಚೆಗೆ ಜರಗಿದ ಪತ್ರಿಕಾ ಪರಿಷತ್ತಿನಲ್ಲಿ ಉಡುಪಿ ಅದಮಾರು ಮಠದ ಶ್ರೀ ವಿಬುಧೇಶ ತೀರ್ಥ ಶ್ರೀಪಾದಂಗಳವರು ಹೇಳಿಕೆಯೊಂದನಿತ್ತರು. ಸಮಾಜಕ್ಕೆ ಅವಶ್ಯವಾಗಿರುವ ಧಾರ್ಮಿಕ ಸಂಸ್ಥೆಗಳ ಸ್ಥಾನ ಮಾನಗಳಿಗೆ ಚ್ಯುತಿ ತರುವುದು ಯೋಗ್ಯವಲ್ಲವೆಂದೂ ಅಭಿಪ್ರಾಯಪಟ್ಟರು.

ವರ್ಗಾವರ್ಗಿ— ಮಂಗಳೂರಿನ ಎಡಿಶನಲ್ ಸಬ್ ಮೆಜಿಸ್ಟ್ರೇಟ್ ಶ್ರೀ ಎಸ್. ನಾರಾಯಣ ಸೆಟ್ಟರು ಬಳ್ಳಾರಿಗೆ ವರ್ಗಾಯಿಸಲ್ಪಟ್ಟು ಅವರ ಸ್ಥಾನಕ್ಕೆ ಬಳ್ಳಾರಿಯಿಂದ ಶ್ರೀ ಪಂಪಾವತಿ ಶಾಸ್ತ್ರಿಯವರು ಮಂಗಳೂರಿಗೆ ವರ್ಗಾಯಿಸಲ್ಪಟ್ಟಿದ್ದಾರೆ.

ನೇಮಕ— ಉಡುಪಿಯಲ್ಲಿ ಡಿಸ್ಟ್ರಿಕ್ಟ್ ಮುನ್ಸಿಫರಾಗಿದ್ದ ಶ್ರೀ ಜೆ. ಎಸ್. ನಾಗಮೋತಿಯವರು ಮಂಗಳೂರಿನ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಾಗಿ ತಾತ್ಕಾಲಿಕವಾಗಿ ನೇಮಿಸಲ್ಪಟ್ಟಿರುವರು. ಶ್ರೀ ಮಹಮ್ಮದ್ ಅಬಿಬುಲ್ಲಾ ಫರೋಕಿಯವರು ರಜೆಯಲ್ಲಿ ಹೋದುದರಿಂದ ಆ ಸ್ಥಾನವು ತೆರವಾಗಿತ್ತು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫರ ಚಾರ್ಜನ್ನು ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫರೇ ವಹಿಸುವರೆಂದು ತಿಳಿದು ಬರುತ್ತದೆ.

ಭಜನಾ ಮಂದಿರದ ವಾರ್ಷಿಕೋತ್ಸವ— ಉಡುಪಿ ಪೋಲಿಸ್‌ವಸತಿಯ ಶ್ರೀ ಮಾರಿಕಾಂಬಿಕ ಭಜನಾ ಮಂದಿರದ ವಾರ್ಷಿಕೋತ್ಸವವು ವಕೀಲ್ ಶ್ರೀ ಬಿ. ಶೀನಪ್ಪ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಇದೇ ತಾ 7 ರಂದು ನೆರವೇರಿತು ಶ್ರೀ ಎಚ್. ವೆಂಕಟೇಶ ನಾಯ್ಕರು ಸ್ವಾಗತಿಸಿದರು. ಶ್ರೀ ಕಮಲಾಕರ ಶೇಟ್‌ರವರು ವರದಿಯನ್ನೋದಿದರು. ಸಭಿಕರಲ್ಲಿ ಶ್ರೀಗಳಾದ ಎಸ್. ಬಿ. ಪದ್ಮನಾಭ ಸೆಟ್ಟಿಗಾರ, ಸುಂದರ ಬಿ ಉದ್ಯಾವರ, ಎಸ್. ವಿಠಲ್ ಸೆಟ್ಟಿಗಾರ, ಎನ್ ವಿ. ರಾವ್, ಇವರು ಭಾಷಣವಿತ್ತರು. ಅಧ್ಯಕ್ಷ ಶ್ರೀ ಹೆಗ್ಡೆಯವರು ಭಜನಾ ಮಂದಿರಗಳ ಪ್ರಾಮುಖ್ಯತೆಯನ್ನು ಹೇಳಿ ಈ ಸಂಸ್ಥೆಯು ಮಾಡುತ್ತಿರುವ ಜನಪ್ರಿಯ ಕಾರ್ಯ ಚಟುವಟಿಕೆಗಳನ್ನು ಅಭಿನಂದಿಸಿದರು. ಶ್ರೀ ಕೆ. ಎ. ದೇವದಾಸರು ಕೃತಜ್ಞತೆಗಳನ್ನರ್ಪಿಸಿದರು.

ಸಂಕ್ಷಿಪ್ತ ಸುದ್ದಿಗಳು

ಚರ್ಚಿಲ್ಲರಿಗೆ ಆಮಂತ್ರಣ

ಜಾಗತಿಕ ಯುದ್ಧದ ವೇಳೆ ಪಶ್ಚಿಮ ರಾಷ್ಟ್ರಗಳ ಪ್ರತಿಷ್ಠೆಯೊಡನೆ ಪಾಶ್ಚಾತ್ಯ ಜನತೆಯನ್ನೂ ಉಳಿಸಿದ ಕೀರ್ತಿ ಬ್ರಿಟನ್ನಿನ ವಿನ್‌ಸ್ಟನ್ ಚರ್ಚಿಲ್ಲರಿಗೆ ಸೇರಲೇಬೇಕು. ಅವರು ಪ್ರಧಾನಿಯಾಗಿ ರಣರಂಗದ ಸೂತ್ರಧಾರಿಯಾಗಿ ಆ ಸಮಯದಲ್ಲಿ ದುಡಿದಿದ್ದರು. ಎಂತಲೇ ಅವರ ಮೇಲೆ ಮಿತ್ರ ರಾಷ್ಟ್ರಗಳಿಗೊಂದು ಗೌರವ. ಇದೀಗ ೮೦ ವರ್ಷಗಳಿಗೂ ಮೀರಿದ ಚರ್ಚಿಲ್ಲರು ಅಮೇರಿಕೆಯಲ್ಲಿ ಸಂಚರಿಸುತ್ತಿದ್ದಾರೆ. ವಾಶಿಂಗ್‌ಟನ್ನಿನಲ್ಲಿ ಬಂದಿಳಿದ ಅವರನ್ನು ಅಧ್ಯಕ್ಷ ಕೆನ್ನೆಡಿಯವರು ಆಮಂತ್ರಿಸಿದರು; ಆದರೆ, ಅದೇನು ಕಾರಣವೋ ಚರ್ಚಿಲ್ಲರು ಅದನ್ನು ನಿರಾಕರಿಸಿದರು. ಆದರೂ ಕೆನ್ನೆಡಿ ಬಿಡಲಿಲ್ಲ; 'ಭೀಕರ ವಿಪನ್ನಾವಸ್ಥೆಯಲ್ಲಿ ಪಾಶ್ಚಾತ್ಯರನ್ನು ರಕ್ಷಿಸಿದ ವಿಭೂತಿ' ಎಂಬ ಸಂದೇಶವನ್ನು ಕಳಿಸಿಕೊಟ್ಟರು

ಯುನೈಟೆಡ್ ನೇಶನ್ಸಿನ ಪ್ರಧಾನ ಕಾರ್ಯದರ್ಶಿ ಡಾಗ್ ಹೆಮ್ಮರ್‌ಶೀಲ್ಡರ ವಿನಂತಿಯಂತೆ ಕಾಂಗೋವಿಗೆ ಕಳುಹಿಸಲ್ಪಟ್ಟ ೩೮೦೦ ಭಾರತದ ಸೈನಿಕರ ದಳಪತಿ ಕೆ. ಎ. ಎಸ್. ರಾಜ

ಕೋಲಾರದ ಗನಿಗಳು

ಮೈಸೂರು ವಿಧಾನ ಸಭೆಯಲ್ಲಿ ಚರ್ಚೆಗೆ ಕಾರಣವಾದ ವಿಷಯಗಳಲ್ಲಿ ಕೋಲಾರದ ಚಿನ್ನದ ಗನಿಗಳೂ ಒಂದು ಕೇಂದ್ರ ಸರಕಾರದ ವಶಕ್ಕೆ ಈ ಗನಿಗಳ ಉದ್ಯಮವನ್ನು ಒಪ್ಪಿಸುವ ಕುರಿತು ವಿಚಾರ ವಿಮರ್ಶೆ ನಡೆಯುತ್ತಿದೆ ಎಂಬ ವರ್ತಮಾನವೇ ಇದಕ್ಕೆ ಕಾರಣ. ಕೆಂಗಲ್ ಹನುಮಂತಯ್ಯನವರ ಪ್ರಯತ್ನ—ಸಾಹಸಗಳಿಂದ ರಾಷ್ಟ್ರೀಕೃತವಾದ ಈ ಗನಿಗಳು ಸದ್ಯ ಲಾಭದಾಯಕವಾಗಿ ಕೆಲಸ ಮಾಡುತ್ತಿಲ್ಲವೆಂದು ತಿಳಿಯುತ್ತದೆ ಮುಖ್ಯಮಂತ್ರಿ ಜತ್ತಿಯವರು ಕೇಂದ್ರದಿಂದ ಸಹಾಯ ದೊರೆಯದಿದ್ದರೆ, ಅದನ್ನು ನಷ್ಟದಲ್ಲಿ ನಡೆಸಿಕೊಂಡು ಹೋಗುವುದಾಗುವುದಿಲ್ಲವೆಂದು ಹೇಳಿದ್ದಾರೆ. ಮಾರುಕಟ್ಟೆಯ ಬೆಲೆ ಮತ್ತು ಅಂತಾರಾಷ್ಟ್ರೀಯ ಬೆಲೆಗಳಲ್ಲಿ ಬಹಳಷ್ಟು ಅಂತರವಿರುವುದೇ ಈ ಹಾನಿಗೆ ಕಾರಣವೆಂದು ತಿಳಿಯುತ್ತದೆ.

ಅಂದಾಜು ಸಮಿತಿಯ ಸಿಫಾರಸು

ಜೀವವಿಮಾ ಕಾರ್ಪರೇಶನು ತೃತೀಯ ಯೋಜನಾವಧಿಯಲ್ಲಿ ರೂ. ೩೨೫ ಕೋಟಿ ಸರಕಾರಿ ಹಾಗೂ ಮಾನ್ಯತೆ ಪಡೆದ ಸಾಲಪತ್ರಗಳಲ್ಲಿ ತೊಡಗಿಸಬಹುದೆಂದು ಮೊದಲು ಊಹಿಸಲಾಗಿತ್ತು. ಆದರೆ, ಲೋಕಸಭೆಯ ಅಂದಾಜು ಸಮಿತಿಯು ರಾಷ್ಟ್ರೀಕರಣದ ಉದ್ದೇಶವು ಇನ್ನೂ ಉತ್ತಮವಾಗಿ ಈಡೇರಲು ಮತ್ತು ಔದ್ಯಮೀಕರಣದ ಪ್ರಾದೇಶಿಕ ಅಸಮತೋಲನೆಯನ್ನು ನಿವಾರಿಸಲು ಬಂಡವಾಳ ವಿನಿಯೋಗಕ್ಕೆ ದೊರೆಯುವ ಎಲ್ಲ ಹಣವನ್ನೂ ತನ್ನ ವಶಕ್ಕೆ ತೆಗೆದುಕೊಳ್ಳಬೇಕೆಂದು ಸರಕಾರಕ್ಕೆ ಸಲಹೆ ನೀಡಿದೆ. ಇದರಿಂದ ರೂ. ೧೩೦ ಕೋಟಿ ಪ್ರಚಲಿತ ಯೋಜನೆಗೆ ಅಧಿಕ ದೊರೆಯುವುದೆಂದೂ ಬಂಡವಾಳ ವಿನಿಯೋಗಕ್ಕೆ ತಲೆ ಹಾಕುವುದು ಕಾರ್ಪರೇಶನಿಗೆ ತಪ್ಪುವುದೆಂದೂ ಅಭಿಪ್ರಾಯ ಪಟ್ಟಿದೆ.

ಪುನರ್ನಿವೇಶನ

ಸ್ಥಾನಪಲ್ಲಟರಿಗೆ ನವಜೀವನಾವಕಾಶ

ವಿಭಜನೆಯ ಪರಿಣಾಮವಾಗಿ ಭಾರತ ಎದುರಿಸಬೇಕಾಗಿ ಬಂದ ಸಮಸ್ಯೆಗಳಲ್ಲಿ ಸ್ಥಾನಪಲ್ಲಟರ ಪುನರ್ನಿವೇಶನವು ಅಗ್ರಗಣ್ಯವಾಗಿದೆ. ಈ ಬೃಹತ್ ಸಮಸ್ಯೆಯನ್ನು ಭಾರತವು ತೃಪ್ತಿಕರವಾಗಿ ನಿರ್ವಹಿಸಿದೆ ಎಂಬುದು ಅಭಿಮಾನಾಸ್ಪದ. ಈ ಹದಿನಾಲ್ಕು ವರ್ಷಗಳಲ್ಲಿ ನಡೆದ ಪುನರ್ನಿವೇಶನ ಕಾರ್ಯಕ್ರಮಗಳ ಸಾರಾಂಶವನ್ನು ಈ ವಿಶೇಷ ಲೇಖನದಲ್ಲಿ ಕೊಡಲಾಗಿದೆ.

ಇನ್ನು ಕೆಲವೇ ತಿಂಗಳಲ್ಲಿ ಪಶ್ಚಿಮ ಬಂಗಾಳದಲ್ಲಿ ಶಿಬಿರಗಳಲ್ಲಿ ವಾಸಿಸುತ್ತಿರುವ ಸುಮಾರು ಒಂದು ಲಕ್ಷ ಜನ ಸ್ಥಾನಪಲ್ಲಟರು ತಮಗಾಗಿ ಸಿದ್ಧವಾಗಿರುವ ಖಾಯಂ ಆದ ಮನೆಗಳಿಗೆ ತೆರಳಲಿದ್ದಾರೆ. ಅಲ್ಲಿಗೆ ಸುಮಾರು ೧೪ ವರ್ಷಗಳ ಹಿಂದೆ ಪ್ರಾರಂಭವಾದ ಮಹತ್ತರ ಪುನರ್ವಸತಿ ಕಾರ್ಯವು ಪೂರ್ಣಗೊಳ್ಳಲಿದೆ.

ದೇಶದ ವಿಭಜನೆಯ ಸಮಯದಲ್ಲಿ ತಮ್ಮ ಮನೆ ಮಠಗಳನ್ನು ಆಸ್ತಿಪಾಸ್ತಿಗಳನ್ನು ತೊರೆದು ಸುರಕ್ಷತೆಗಾಗಿ ಭಾರತಕ್ಕೆ ಬಂದ ತೊಂಬತ್ತು ಲಕ್ಷ ಜನರು ನಿರಾಶ್ರಿತರೆಂಬುದಾಗಿ ಪರಿಗಣಿಸಲ್ಪಟ್ಟರು. ಜೀವನದಲ್ಲಿ ಹೊಸ ಅಧ್ಯಾಯವನ್ನು ಪ್ರಾರಂಭಿಸಲು ಸಾಧ್ಯವಾಗುವಂತೆ ಇವರೆಲ್ಲರಿಗೂ ಈಗ ಪುನರ್ವಸತಿ ಸೌಲಭ್ಯಗಳನ್ನು ಒದಗಿಸಿಕೊಡಲಾಗಿದೆ. ಈ ನಿರಾಶ್ರಿತರಲ್ಲಿ ೫೦ ಲಕ್ಷ ಜನರು ಪಶ್ಚಿಮ ಪಾಕಿಸ್ಥಾನದಿಂದ ಬಂದವರು.

ತೊಂಬತ್ತು ಲಕ್ಷ ಜನರು! ಜಗತ್ತಿನ ಅನೇಕ ರಾಷ್ಟ್ರಗಳಲ್ಲಿನ ಜನಸಂಖ್ಯೆಗೆ ಸರಿಸಮಾನವಾದ ಇಷ್ಟು ಜನರು ತಮ್ಮದೆನ್ನುವ ಮನೆಮಠಗಳನ್ನು ಬಿಟ್ಟು ಬಂದರು. ಈ ನಿರಾಶ್ರಿತರನ್ನು ಬರಮಾಡಿಕೊಂಡು ಅನ್ನ, ವಸತಿ ಬಟ್ಟೆ ಬರೆಗಳನ್ನು ಒದಗಿಸಿ ತಮ್ಮ ಜೀವನದಲ್ಲಿ ಹೊಸ ಅಧ್ಯಾಯವನ್ನು ಪ್ರಾರಂಭಿಸಲು ಅವಕಾಶ ಕಲ್ಪಿಸಿಕೊಡಲು ಸರ್ಕಾರದವರು ನಡೆಸಿದ ಪ್ರಯತ್ನಗಳು ಸ್ಮರಣೆಗೆ ಬರದೇ ಇರುವು.

ಪಶ್ಚಿಮ ಪಾಕಿಸ್ಥಾನದಿಂದ ಬಂದ ಸ್ಥಾನಪಲ್ಲಟರಿಗಾಗಿ ಸುಮಾರು ೨೦೦ ಪರಿಹಾರ ಶಿಬಿರಗಳು ತೆರೆಯಲ್ಪಟ್ಟವು. ಒಂದು ಸಮಯದಲ್ಲಂತೂ ಈ ಶಿಬಿರಗಳಲ್ಲಿ ವಾಸಿಸುತ್ತಿದ್ದಾಗ ನಿರಾಶ್ರಿತರ ಸಂಖ್ಯೆ ೯.೫ ಲಕ್ಷಗಳಿಗೆ ಏರಿತ್ತು. ಪಂಜಾಬಿನ ಕುರುಕ್ಷೇತ್ರದಲ್ಲಿ ಏರ್ಪಡಿಸಿದ್ದ ಶಿಬಿರದಲ್ಲಿ ೨೫ ಲಕ್ಷ ಜನ ಪುರುಷರು, ಮಹಿಳೆಯರು ಮತ್ತು ಮಕ್ಕಳು ವಾಸಿಸುತ್ತಿದ್ದರು. ಅಂದರೆ ದೇಶದ ದೊಡ್ಡ ದೊಡ್ಡ ನಗರಗಳಲ್ಲಿ ವಾಸಿಸುವಷ್ಟೇ ಜನರು ಈ ಶಿಬಿರದಲ್ಲಿದ್ದರು. ಇಷ್ಟು ಜನ ನಿರಾಶ್ರಿತರಿಗೆ ಅನ್ನ, ವಸತಿ ವಸ್ತ್ರಗಳನ್ನು ಪೂರೈಸುವುದು ಸಣ್ಣ ವಿಷಯವಲ್ಲ. ಜೊತೆಗೆ ಶಿಬಿರವಾಸಿಗಳ ಆರೋಗ್ಯ, ಶಿಬಿರಗಳ ಸ್ವಚ್ಛತೆ—ಇವುಗಳನ್ನು ಉಪೇಕ್ಷಿಸುವಂತಿರಲಿಲ್ಲ. ಸಾಂಕ್ರಾಮಿಕ ರೋಗಗಳ ಉಪದ್ರವವೂ ಈ ಶಿಬಿರಗಳಿಗೆ ಬಾರದಂತೆ ಮಾಡಿದ್ದು ಗಮನಾರ್ಹವಾದ ಅಂಶ. ಪೂರ್ವ ಪಾಕಿಸ್ಥಾನದಿಂದ ಬಂದ ಸ್ಥಾನಪಲ್ಲಟರಿಗಾಗಿ ೨೧೨ ಶಿಬಿರಗಳು ಏರ್ಪಟ್ಟಿದ್ದವು. ಒಂದು ಸಮಯದಲ್ಲಿ ಈ ಶಿಬಿರಗಳಲ್ಲಿ ಸುಮಾರು ೩.೫೬ ಲಕ್ಷ ಜನ ಸ್ಥಾನಪಲ್ಲಟರು ವಾಸಿಸುತ್ತಿದ್ದರು.

ಶಿಬಿರಗಳು ವ್ಯವಸ್ಥೆಯ ನಂತರ ಸ್ಥಾನಪಲ್ಲಟರ ಪುನರ್ವಸತಿ ಕಾರ್ಯವನ್ನು ತಡಮಾಡದೆ ಕೈಗೊಳ್ಳುವುದು ಅವಶ್ಯವಾಯಿತು. ಸ್ಥಾನಪಲ್ಲಟರಿಗೆ ಗದ್ದೆ, ಹೊಲಗಳು, ಕಾರ್ಖಾನೆಗಳು, ವ್ಯಾಪಾರ, ಉದ್ಯೋಗ ಧಂದೆ— ಈ ಮುಂತಾದುವುಗಳಲ್ಲಿ ಕೆಲಸಗಳನ್ನು ಒದಗಿಸಿ ಕೊಡಬೇಕಾಯಿತು. ಜೊತೆಗೆ ಅವರಿಗಾಗಿ ಹೊಸ ವೃತ್ತಿ ಮಾರ್ಗಗಳನ್ನೇ ಸೃಜಿಸಬೇಕಾಯಿತು.

ಪಶ್ಚಿಮ ಪಾಕಿಸ್ಥಾನದಿಂದ ಬಂದ ಸ್ಥಾನಪಲ್ಲಟರ ಪೈಕಿ ೫.೭೮ ಲಕ್ಷ ಕುಟುಂಬಗಳು ಬೇಸಾಯವನ್ನವಲಂಬಿಸಿವೆ. ಸುಮಾರು ೧೭.೬ ಲಕ್ಷ ಪಕ್ಕಾ ಎಕರೆಗಳ ಜಮೀನನ್ನೂ ೧.೬ ಲಕ್ಷ ಕಚ್ಚಾ ಎಕರೆಗಳ ಜಮೀನನ್ನೂ ೩೬ ಲಕ್ಷ ರೂ.ಗಳ ಬೆಲೆ ಬಾಳುವ ತೋಟಗಳನ್ನೂ ಸ್ಥಾನಪಲ್ಲಟರಿಗೆ ಕೊಡಲಾಯಿತು. ಪೂರ್ವ ಪಾಕಿಸ್ಥಾನದಿಂದ ಬಂದ ನಿರಾಶ್ರಿತರ ಪೈಕಿ ೩.೨ ಲಕ್ಷ ಕುಟುಂಬಗಳು ಬೇಸಾಯವನ್ನವಲಂಬಿಸಿವೆ.

ಬೇಸಾಯಗಾರರು ಎತ್ತುಗಳನ್ನೂ ನೇಗಿಲು ಮುಂತಾದ ಉಪಕರಣಗಳನ್ನೂ ಕೊಳ್ಳಲು ಅನುಕೂಲವಾಗುವಂತೆ ಹಾಗೂ ಮೊದಲನೆಯ ಫಸಲು ಬರುವ ವರೆಗೆ ಅವರ ಅನ್ನ ಬಟ್ಟೆಗಳಿಗೆ ತೊಂದರೆಯಾಗದಂತೆ ಸಾಲಗಳನ್ನು ಕೊಡಲಾಯಿತು. ಸುಮಾರು ೩೩.೬ ಕೋಟಿ ರೂಗಳ ಮೌಲ್ಯದಷ್ಟು ಸಾಲಗಳನ್ನು ಕೊಡಲಾಗಿದೆ. ನಗರ ಪ್ರದೇಶಗಳಲ್ಲಿ ಸ್ಥಾನಪಲ್ಲಟರು ವಿವಿಧ ವ್ಯಾಪಾರ, ಉದ್ಯೋಗ ಧಂದೆಗಳನ್ನು ಕೈಕೊಳ್ಳಲು, ಕಾರ್ಖಾನೆಗಳನ್ನು ಸ್ಥಾಪಿಸಲು ಸಾಧ್ಯವಾಗುವಂತೆ ಸಾಲಗಳನ್ನು ಕೊಡಲಾಯಿತು. ವಿಶೇಷ ರೀತಿಯ ಮಾರುಕಟ್ಟೆಗಳನ್ನು ನಿರ್ಮಿಸಿ ಅಂಗಡಿಗಳನ್ನು ನಿರಾಶ್ರಿತ ವ್ಯಾಪಾರಿಗಳಿಗೆ ರಿಯಾಯಿತಿ ದರದಲ್ಲಿ ಬಾಡಿಗೆಗೆ ಕೊಡಲಾಯಿತು. ಸ್ಥಾನಪಲ್ಲಟರಿಗೆ ಭಾರಿಪ್ರಮಾಣದಲ್ಲಿ ಉದ್ಯೋಗವಕಾಶ ಕಲ್ಪಿಸಲಾಯಿತು.

ಸ್ಥಾನಪಲ್ಲಟರ ಮಕ್ಕಳಿಗೆ ವಿದ್ಯಾಭ್ಯಾಸ ಸೌಕರ್ಯ ಒದಗಿಸುವುದು ಮತ್ತು ಯುವಕ ಯುವತಿಯರಿಗೆ ವೃತ್ತಿ ಶಿಕ್ಷಣ ನೀಡುವುದು ಅವಶ್ಯವಾಯಿತು ಜೊತೆಗೆ ಸಹಸ್ರಾರು ಜನ ಅನಾಥ ಮಹಿಳೆಯರನ್ನು ಮತ್ತು ಮಕ್ಕಳ ಯೋಗ ಕ್ಷೇಮವನ್ನು ನೋಡಿಕೊಳ್ಳುವುದೂ ಅಗತ್ಯವಾಯಿತು. ನಿರಾಶ್ರಿತರ ಮಕ್ಕಳಿಗಾಗಿ ಶಾಲಾ ಕಾಲೇಜುಗಳು ವೃತ್ತಿ ಶಿಕ್ಷಣ ಸಂಸ್ಥೆಗಳನೂ ತೆರೆಯಲಾಯಿತು.

ಸ್ಥಾನಪಲ್ಲಟ ಬಾಲಕ ಬಾಲಿಕೆಯರಿಗಾಗಿ ಶಿಕ್ಷಣ ಸಂಸ್ಥೆಗಳಲ್ಲಿ ವಿಶೇಷ ತರಗತಿಗಳನ್ನೂ ಏರ್ಪಡಿಸಲಾಯಿತು. ಅಗತ್ಯವಿದ್ದ ವಿದ್ಯಾರ್ಥಿಗಳಿಗೆ ವ್ಯಾಸಂಗ ವೇತನಗಳನ್ನೂ ಪಠ್ಯ ಪುಸ್ತಕಗಳನ್ನೂ ಕೊಡಲಾಯಿತು. ಪಶ್ಚಿಮ ಪಾಕಿಸ್ಥಾನದಿಂದ ಬಂದ ವಿದ್ಯಾರ್ಥಿಗಳಿಗಾಗಿ ೫೩೦ ಪ್ರಾಥಮಿಕ ಹಾಗೂ ಸೆಕೆಂಡರಿ ಶಾಲೆಗಳನ್ನೂ ಪೂರ್ವ ಪಾಕಿಸ್ಥಾನದಿಂದ ಬಂದ ಸ್ಥಾನಪಲ್ಲಟರಿಗಾಗಿ ಸುಮಾರು ೬೦೦ ಪಾಠಶಾಲೆಗಳನ್ನೂ ತೆರೆಯಲಾಯಿತು. ಸ್ಥಾನಪಲ್ಲಟರಿಗಾಗಿ ಹೊಸ ಆಸ್ಪತ್ರೆಗಳನ್ನೂ ಚಿಕಿತ್ಸಾಲಯಗಳನ್ನೂ ಆರೋಗ್ಯ ಕೇಂದ್ರಗಳನ್ನೂ ಸ್ಥಾಪಿಸಲಾಯಿತು. ೧೩೦ ಸಾಂಸ್ಕೃತಿಕ ಸಂಸ್ಥೆಗಳೂ ಉದಯಿಸಿದವು.

ಪಶ್ಚಿಮ ಪಾಕಿಸ್ಥಾನದಿಂದ ಬಂದಿರುವ ಸ್ಥಾನಪಲ್ಲಟರಿಗಾಗಿ ೧೦೦ ಉಪನಗರಗಳೂ ಸ್ಥಾಪನೆಯಾದವು. ಈ ನಗರ ಮತ್ತು ವಸತಿಗಳಲ್ಲಿ ಸುಮಾರು ೨ ಲಕ್ಷ ಮನೆಗಳು ನಿರ್ಮಿಸಲ್ಪಟ್ಟಿವೆ. ಪೂರ್ವ ಪಾಕಿಸ್ಥಾನದಿಂದ ಬಂದ ಸ್ಥಾನಪಲ್ಲಟರಿಗಾಗಿ ೪.೨ ಲಕ್ಷ ಮನೆಗಳುಳ್ಳ ಸುಮಾರು ೪೦೦ ಉಪನಗರಗಳೂ ಕಾಲೋನಿಗಳೂ ಸ್ಥಾಪನೆಯಾಗಿವೆ.

ಈ ಉಪನಗರಗಳು ಮತ್ತು ಕಾಲೋನಿಗಳು ಶಾಲೆಗಳು, ಚಿಕಿತ್ಸಾಲಯಗಳು ಮತ್ತು ಮಾರುಕಟ್ಟೆಗಳಿಂದ ಸಜ್ಜುಗೊಂಡಿವೆ. ಅನೇಕ ಮನೆಗಳನ್ನು ಸ್ಥಾನಪಲ್ಲಟರೇ ಕಟ್ಟಿಕೊಂಡಿದ್ದಾರೆ. ಸರ್ಕಾರದವರು ಮನೆ ಕಟ್ಟಲು ಅಗತ್ಯವಾದ ಸಾಮಗ್ರಿಗಳನ್ನು ಕೊಳ್ಳಲು ಸಾಲಗಳನ್ನು ಕೊಟ್ಟಿರುವರು.

ದೇಶದ ವಿಭಜನೆಯ ಸಮಯದಲ್ಲಿ ಕುಟುಂಬಗಳಿಂದ ಬೇರ್ಪಟ್ಟ ನಿರಾಶ್ರಿತರ ಮಹಿಳೆಯರು ಮತ್ತು ಮಕ್ಕಳ ಯೋಗಕ್ಷೇಮಕ್ಕಾಗಿ ಯೋಗಕ್ಷೇಮ ಕೇಂದ್ರಗಳನ್ನು ಸ್ಥಾಪಿಸಲಾಯಿತು. ಈ ಕೇಂದ್ರಗಳಲ್ಲಿ ಮಹಿಳೆಯರಿಗೆ ಕೆಲವು ವೃತ್ತಿಗಳಲ್ಲಿ ತರಬೇತಿ ನೀಡಲಾಯಿತು. ಹಾಗೂ ಮಕ್ಕಳಿಗೆ ಶಿಕ್ಷಣ ಕಲಿಸಲಾಯಿತು.

ಈ ತೊಂಬತ್ತು ಲಕ್ಷ ಜನರ ಪುನರ್ವಸತಿ ಕಾರ್ಯದ ಒಂದು ವಿಶೇಷಾಂಶವೆಂದರೆ: ಭಾರತವು ಯಾವ ರಾಷ್ಟ್ರದ ನೆರವನ್ನೂ ಪಡೆಯದೆಯೇ ಒಂಟಿಯಾಗಿ ಇಡಿ ಜವಾಬ್ದಾರಿಯನ್ನು ವಹಿಸಿಕೊಂಡಿದ್ದು ಈ ಹಣಕಾಸಿನ ವರ್ಷದ ಅಂತ್ಯದ ವೇಳೆಗೆ ಸ್ಥಾನಪಲ್ಲಟರ ಪುನರ್ವಸತಿಗಾಗಿ ಸುಮಾರು ೩೮೩ ಕೋಟಿ ರೂಗಳ ಹಣ ವೆಚ್ಚವಾಗಲಿದೆ. ವಿಶ್ವದ ಉಳಿದ ಭಾಗಗಳಲ್ಲಿ ನಿರಾಶ್ರಿತರ ಸಮಸ್ಯೆಗಳನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಬಗೆಹರಿಸಲಾಗುತ್ತಿದೆ. ಆದರೆ ಭಾರತವು ಯಾವದೊಂದು ವಿದೇಶೀ ನೆರವನ್ನೂ ನೆಚ್ಚಿಕೊಳ್ಳಲಿಲ್ಲ.

ಒರಿಸ್ಸಾ ಮತ್ತು ಮಧ್ಯಪ್ರದೇಶ ರಾಜ್ಯಗಳಲ್ಲಿ ಸುಮಾರು ೩೦ ಸಹಸ್ರ ಚದರ ಮೈಲಿಗಳಷ್ಟು ವಿಸ್ತಾರದ ದಂಡಕಾರಣ್ಯವನ್ನು ಅಭಿವೃದ್ಧಿಪಡಿಸಿ ಅಲ್ಲಿ ಸ್ಥಾನಪಲ್ಲಟರನ್ನು ನೆಲಸುವಂತೆ ಮಾಡುವುದಕ್ಕಾಗಿ ಒಂದು ಕಾರ್ಯಯೋಜನೆಯನ್ನು ಸಿದ್ಧಪಡಿಸಲಾಗಿದೆ. ಪೂರ್ವಪಾಕಿಸ್ಥಾನದಿಂದ ಬಂದಿರುವ ಸ್ಥಾನಪಲ್ಲಟರಿಗೆ ಜಮೀನುಗಳನ್ನು ಕೊಡಲಾಗಿದೆ ಅವರು ಅಭಿವೃದ್ಧಿ ಪಡೆಯುದೇ ಇರುವ ಈ ದಂಡಕಾರಣ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಅವಕಾಶ ಕಲ್ಪಿಸಿಕೊಡಲಾಗಿದೆ.

ಈ ಪುನರ್ವಸತಿ ಕಾರ್ಯಕ್ರಮದ ಇನ್ನೊಂದು ವೈಶಿಷ್ಟ್ಯವೆಂದರೆ: ಆಸ್ತಿ ಪಾಸ್ತಿಗಳನ್ನು ತೊರೆದುಬಂದ ಸ್ಥಾನಪಲ್ಲಟರಿಗೆ ಸರ್ಕಾರದವರು ಪರಿಹಾರ ಧನವನ್ನು ಕೊಡುವುದು. ೫ ಲಕ್ಷ ಜನ ಹಕ್ಕುದಾರರ ಪೈಕಿ ಇಲ್ಲಿಯವರೆಗೆ ೪½ ಲಕ್ಷ ಜನರಿಗೆ ಪರಿಹಾರಧನವನ್ನು ಕೊಡಲಾಗಿದೆ. ಅವರಿಗೆ ೧೮೨ ಕೋಟಿ ರೂಗಳನ್ನು ನಗದಿನ ರೂಪದಲ್ಲಿಯೂ ಮನೆಗಳು ಮತ್ತು ಜಮೀನುಗಳ ರೂಪದಲ್ಲಿಯೂ ಕೊಡಲಾಗಿದೆ.

ಹೌರದಲ್ಲಿನ ವೃತ್ತಿಪರ ಶಾಲೆಯಲ್ಲಿ ಪಶ್ಚಿಮ ಪಾಕಿಸ್ತಾನದಿಂದ ಬಂದ ನಿರಾಶ್ರಿತೆಯೊಬ್ಬಳು ಹೊಲಿಗೆಯನ್ನು ಕಲಿಯುತ್ತಿರುವುದು.

ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

(ಯು.ರಾಘವೇಂದ್ರ ಆಚಾರ್ಯ,ಎಂ.ಎ.)

ಸಾಮಾನ್ಯ ರೋಗಗಳು

(ಡಾ. ಕೆ ಎಲ್. ಐತಾಳ,ಎಂ.ಬಿ.ಬಿ.ಎಸ್

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರೆ ಕೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.

ಪ್ರತಿಗಳು ಸಿಗುವ ಮುಖ್ಯ ಸ್ಥಳ:

ನವಭಾರತ ಪುಸ್ತಕ ಭಂಡಾರ, ಉಡುಪಿ.

ರವೀಂದ್ರ ವಾಣಿ

(೩ನೇ ಪುಟದಿಂದ)

ಮನುಷ್ಯನು ಆನಂದ ತುಂದಿಲನಾದನು. ಏಕೆಂದರೆ ಆಗ ಆತನಿಗೆ, ತನ್ನಿಂದ ದೂರದ ಸಮೀಪದ ಎಲ್ಲಾ ವಸ್ತುಗಳಲ್ಲಿಯೂ, ತನ್ನ ಪ್ರತಿಛಾಯೆಯೇ ಕಾಣಿಸ ತೊಡಗಿತು.

ಒಂದು ವಸ್ತುವಿನ ಪರಿಚಯವನ್ನು ನಾವು ಪಡೆದಾಗ—ಅದರಲ್ಲಿ ಯಾವುದಾದರೊಂದು, ತತ್ವವು ನಮ್ಮದಾಗಿದ್ದು ನಮ್ಮ ಅಂಶದಿಂದ ಕೂಡಿರುವುದು, ನಮಗೆ ತಿಳಿದು ಬರುತ್ತದೆ. ಈ ಪರಿಯಿಂದ ನಾವು ನಮ್ಮ ಸುತ್ತು ಮುತ್ತಿನ ವಸ್ತುಗಳಲ್ಲಿ ನಮ್ಮ ಪ್ರತಿಛಾಯೆಯನ್ನು ಕಂಡು, ಆನಂದಿತರಾಗುತ್ತೇವೆ. ಆದರೆ, ಕೇವಲ ಈ ಪರಿಯ ಸಂಬಂಧದಿಂದ, ನಾವು ಈ ಸ್ನೇಹ ಸಂಬಂಧವನ್ನು ಬಲಪಡಿಸಿದಂತೆ ಆಗುವುದಿಲ್ಲ. ಪರಂತು ಈ ಸಂಬಂಧವು ಪ್ರೇಮದ ಮೂಲಕವೇ ಪೂರ್ಣತೆಯನ್ನು ಹೊಂದುತ್ತದೆ. ಪ್ರೇಮದ ವಿಚಾರದಲ್ಲಿ ಭೇದ ಭಾವವಿಲ್ಲದಿರುವುದರಿಂದ ಪೂರ್ಣತೆಯನ್ನು ಹೊಂದಿದ ಮಾನವನ ಆತ್ಮವು ತನ್ನ ಅಂತಿಮ ಸಿದ್ಧಿಯನ್ನು ಪಡೆಯುತ್ತದೆ ಮತ್ತು ಅಸೀಮದಲ್ಲಿ ತನ್ನ ದೃಷ್ಟಿಯನ್ನಿಟ್ಟು ಆ ಪಥವನ್ನು ಸ್ಪರ್ಶಿಸಲಾರಂಭಿಸುತ್ತದೆ. ಮನುಷ್ಯನ ಆತ್ಮವು ಬಹು ದೂರದ ಸಂಬಂಧವುಳ್ಳದ್ದಾಗಿರುವುದಲ್ಲದೆ. ಈ ಆತ್ಮವು ವಿಶ್ವಾತ್ಮನ ಒಂದು ಅಂಶವೂ ಆಗಿದೆ, ಎಂಬ ಈ ಜ್ಞಾನವನ್ನು ಪ್ರೇಮವು ಮನುಷ್ಯನಿಗೆ ಬೋಧಿಸುತ್ತದೆ.

ಸಮಾನತೆಯ ಈ ಅನುಭವವು ಮನುಜನ ಆತ್ಮದಲ್ಲಿ ಸದಾಜಾಗೃತವಾಗಿದ್ದು ಸಾಹಿತ್ಯ ಕಲೆ, ವಿಜ್ಞಾನ ಮತ್ತು ಧರ್ಮ ಇವುಗಳ ಮೂಲಕ ಪ್ರಕೃತಿಯೊಡನೆ, ತನ್ನ ಸಂಪರ್ಕವನ್ನು ಸ್ಥಿರಗೊಳಿಸುತ್ತ ಇರುತ್ತದೆ. ಇಂತು ಆಗುತ್ತಿರುವಾಗ ನಮ್ಮ ಮಹತ್ವಪೂರ್ಣವಾದ ಆತ್ಮವು ಪ್ರೇಮದ ನಿಜ ರೂಪವನ್ನು ತಿಳಿದು ಅಹಂಕಾರವನ್ನು ತ್ಯಜಿಸಿ ಆತ್ಮದ ನಿಜವಾದ ಅರ್ಥವನ್ನು ವ್ಯಕ್ತಗೊಳಿಸುವುದು.

ನಮ್ಮ ಪ್ರಾಚೀನ ತತ್ವದರ್ಶಿಗಳ ಪ್ರೇಮ ಪಥದಲ್ಲಿ ಆತ್ಮವು ಕಷ್ಟಗಳನ್ನು ಸಹಿಸಿತು. ಶಾರೀರಿಕ ಪೀಡೆಯನ್ನೂ ಅನುಭವಿಸಿತು. ಕೊನೆಗೆ ಮೃತ್ಯುವನ್ನೂ ಆಹ್ವಾನಿಸಿತು. ಇಂತು, ನಮ್ಮ ತತ್ವದರ್ಶಿಗಳು ಆತ್ಮದ ಪೂರ್ಣ ಪರಿಚಯವನ್ನು ಮಾಡಿಕೊಂಡರು. ಮತ್ತು ಆತ್ಮೀಯ ಜೀವನವನ್ನು ನಡೆಸಿ ಮಾನವತೆಯ ಅಂತಿಮ ಧ್ಯೇಯ—ಸತ್ಯಗಳನ್ನು ದೃಢಗೊಳಿಸಿದರು. ಇದಕ್ಕಾಗಿಯೇ ನಾವು ಅವರನ್ನು ಮಹಾ ಆತ್ಮವನ್ನು ಪಡೆದ—'ಮಹಾತ್ಮರು" ಎಂಬ ಗೌರವದಿಂದ ಸಂಬೋಧಿಸುತ್ತೇವೆ. (ಸಶೇಷ)

ನವಯುಗ ವಾರ ಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

ಅಭಿಪ್ರಾಯ

(೪ನೇ ಪುಟದಿಂದ)

ನಾಂಗ ಟಿಬೇಟಿನವರ ಕಗ್ಗೊಲೆಯಾದಾಗಲೂ ನಮ್ಮಲ್ಲಿನ "ಶಾಂತ್ಯೆಸುವ ಧೋರಣೆ" ಫಲಕಾರಿಯಾಯಿತೇ? ಬೇರಾದುದಕ್ಕಿಂತಲೂ ಹೆಚ್ಚಿನ ಸವಲತ್ತುಗಳನ್ನು ಒಂದೊಂದಾಗಿ ಕೊಡುತ್ತಾ ಬಂದರೂ ಈಗ ಬಂಗಾಲದ ಒಂದು ತುಂಡನ್ನು ನುಂಗಿಕೊಳ್ಳಲು ಯತ್ನಿಸುವಾಗ ಅದಕ್ಕೂ "ತಥಾಸ್ತು" ಎನ್ನಬಹುದೇ? ಎಂಬ ಸಂಶಯವನ್ನು ನಿವಾರಿಸುವವರು ಇಂದಿನ ಭಾರತ ಜನಾಂಗಕ್ಕೆ ಬೇಕಾಗಿದೆ.

ಯುವಕ–ಯುವತಿಯರಲ್ಲಿ ಒಂದು ತರದ ಸ್ವೇಚ್ಛಾ ಭಾವನೆಗಳೂ, ಸಾರ್ವಜನಿಕ ಕಾರ್ಯ ಕ್ಷೇತ್ರದಲ್ಲಿ ಮುಂದಡಿ ಇಡುವುದರಲ್ಲಿ ಒಂದು ವಿಧ ನಿರ್ಬಲತೆ ಅಥವಾ ಮಾನಸಿಕ ಸಂಕೋಚವೂ, ಇರಬಾರದು. ಉತ್ತಮರಲ್ಲಿರುವ ಶ್ರೇಷ್ಠ ಗುಣಗಳನ್ನು ತಮ್ಮ ಅನುದಿನದ ಜೀವನದಲ್ಲಿ ಅಳವಡಿಸಿಕೊಳ್ಳಲಿಕ್ಕೆ ಯತ್ನಿಸಬೇಕು. ಇನ್ನೊಬ್ಬರಲ್ಲಿ ದೋಷಗಳನ್ನೇ ಹುಡುಕಿ ಹೆಕ್ಕಿಕೊಂಡು ಅವುಗಳ ಕುರಿತಾಗಿಯೇ ಚರ್ಚಿಸುತ್ತಾ ಕಾಲ ಕಳೆಯುವಂತಹ ನಿಷ್ಕ್ರಿಯ ಮನೋವೃತ್ತಿ ಯುವಕ ಯುವತಿಯರಲ್ಲಿ ಇರಲೇ ಬಾರದು. ಏಕೆಂದರೆ ಇಂದಿನ ತರುಣ-ತರುಣಿಯರೇ ಮುಂದಿನ ಭಾರತದ ರಕ್ಷಕರಾಗಿರುತ್ತಾರೆ. ಆದುದರಿಂದ ನಮ್ಮ ರಾಷ್ಟ್ರದ ತರುಣ—ತರುಣಿಯರಿಗೆ ಪರಿ ಪಕ್ವವಾದ ರಾಜಕೀಯ ತತ್ವ ಮಾತ್ರವಲ್ಲ ನೈತಿಕ ಜೀವನಕ್ರಮವನ್ನೂ ಮುಂದಟ್ಟು ಮಾಡಿ ಅವರಲ್ಲಿ ಪ್ರಬಲವಾದ ಸಂಘಟನಶಕ್ತಿಯನ್ನು ಸಮೃದ್ಧಿಗೊಳಿಸಬೇಕು. ಇಂತಹ ಪ್ರಭಾವ ಶಾಲಿಜ್ಞಾನ ಶಕ್ತಿಯುಳ್ಳ ಮುಂದಾಳುಗಳ ನೇತೃತ್ವವು ಇಂದಿನ ಕಾಂಗ್ರೆಸ್ಸಿಗೆ ಬೇಕಾಗಿದೆ.

ಭಾರತ ದೇಶವು ಆದಿಯಿಂದಲೂ ಜಗತ್ತಿಗೆ "ಜೀವನದ ಪವಿತ್ರತೆ"ಯ ಮಾರ್ಗದರ್ಶನವನ್ನು ಮಾಡುತ್ತಾ ಬಂದಿದೆ ನಮ್ಮ ಮಾತೃಭೂಮಿಯ ಈ ಪರಂಪರೆಯನ್ನು ರಕ್ಷಣೆ ಮಾಡುವುದು ಇಂದಿನ ನಮ್ಮ ಯುವಕ-ಯುವತಿಯರ ಆದ್ಯ ಕರ್ತವ್ಯವೆಂಬುದನ್ನು ನೆನಪಿನಲ್ಲಿಟ್ಟುಕೊಂಡು ನಮ್ಮ ಪ್ರತಿಯೊಂದು ಗ್ರಾಮ ಹಾಗೂ ತಾಲೂಕು ಕೇಂದ್ರಗಳಲ್ಲಿ ಯುವಕ ಕಾಂಗ್ರೆಸನ್ನು ತ್ವರಿತದಿಂದ ಸ್ಥಾಪಿಸ ಬೇಕು.

ವಿವಿಧ ಭಾವನಾತ್ಮಕವಾದ ಘೋಷಣೆಗಳನ್ನು ಮಾಡುತ್ತಾ ಬಹಿರಂಗದಲ್ಲಿ ನಾವು ಅಂತಾರಾಷ್ಟ್ರೀಯ ಖ್ಯಾತಿಯನ್ನು ಪಡೆಯಬಹುದು. ಆದರೆ ವರ್ತಮಾನ ಕಾಲದಲ್ಲಿ ಪ್ರತಿಯೊಬ್ಬ ವಿದೇಶೀಯನೂ ಭಾರತ ದೇಶದ ಕುರಿತು ಒಳಗಿಂದೊಳಗೆ ದಿನೇ ದಿನೇ ಹಿತ ಶತ್ರುತ್ವವನ್ನೇ ಸಾಧಿಸಿಕೊಂಡು ಬಂದಿರುತ್ತಾನೆ. ಇಂತಹ ಹಿತ ಶತ್ರುತ್ವವು ಎಂದಾದರೊಂದುದಿನ "ಅತ್ತ ಕಾಶ್ಮೀರ ಇತ್ತ ಗೋವೆ ಸಾಲದುದಕ್ಕೆ ಮಧ್ಯೆ ನೇಪಾಳ" ಇವು ಮೂರರ ಮಧ್ಯೆ ಪಾಕಿಸ್ಥಾನದ ನಿರಂತರದ ಕೇಳಿಕೆಗಳೇ ಮೊದಲಾದುವುಗಳನ್ನು ಮುಂದೆ ಮಾಡಿ ರಾಜಕೀಯ ಗತ್ತುಗಾರಿಕೆಯನ್ನು ಸಾಧಿಸಿಕೊಳ್ಳುವಂತಹ ಕರಾಳ ರೂಪವನ್ನು ಧರಿಸದಿರಲಾರದು. ಹೀಗಾಗದಂತೆ ನಿರ್ಭೀತ — ಧೀರೋದಾತ್ತ ತನದಿಂದ ಮುಂದಡಿಯಿಡಬಲ್ಲ ಮಹಾನ್ ಧೈರ್ಯಶಾಲಿ ಪ್ರಭೃತಿಗಳು ನಮ್ಮ ಕಾಂಗ್ರೆಸ್ಸನ್ನು ಎತ್ತಿಹಿಡಿಯಬೇಕಾಗಿದೆ ದಿವಂಗತ ಶ್ಯಾಮಪ್ರಸಾದ ಮುಖರ್ಜಿಯವರ ದೂರದೃಷ್ಟಿಯುಕ್ತವಾದ ಭವಿಷ್ಯದ ಸೂಚನೆಗಳನ್ನೂ ಕಡೆಗಣಿಸಿದುದರ ಕಹಿ ಗುಳಿಗೆ ಕೆಲವನ್ನು ನಾವೀಗ ನುಂಗುತಿದ್ದೇವೆ ಮುಂದಕ್ಕಾದರೂ ಈ ರೀತಿ ಆಗಬಾರದು. ಸರ್ವೋತ್ಕೃಷ್ಟವಾದ ಪ್ರಭಾವೀ ಶಕ್ತಿಯುಳ್ಳ ಕಾಂಗ್ರೆಸಿನ ನೇತೃತ್ವದಲ್ಲಿ ಭಾರತೀಯ ಯುವಕ—ಯುವತಿಯರನ್ನು ತರಬೇತುಗೊಳಿಸುವವರೇ ನಮಗಿಂದು ಬೇಕಾಗಿದೆ.

ವ್ಯಕ್ತಿ ಜೀವನದ ಪವಿತ್ರತೆಯನ್ನು ಕಾಪಾಡಿಕೊಂಡು ನಾವೆಲ್ಲರೂ ದೇಶಕ್ಕೊದಗುವ ಗಂಡಾಂತರವನ್ನು ಎದುರಿಸಲಿಕ್ಕೆ ಕಾಂಗ್ರೆಸಿಗೆ ಸೇರೋಣ. ಪವಿತ್ರಾತ್ಮರು ಕಾಂಗ್ರೆಸಿನಲ್ಲಿದ್ದು ಯುವಕ—ಯುವತಿಯರ ನೇತೃತ್ವವನ್ನು ವಹಿಸಬೇಕು. ತ್ಯಾಗಮಯ ಜೀವನ ಮನೋವೃತ್ತಿಯುಳ್ಳ ಮುಖಂಡರ ಮುಂದಾಳ್ತನವು ಕಾಂಗ್ರೆಸ್ ಪಕ್ಷದಲ್ಲಿಯೂ ಇಂತಹ ಕರ್ಮಯೋಗ ಬುದ್ಧಿಯುಳ್ಳ ಪ್ರತಿನಿಧಿತ್ವ ಕಾಂಗ್ರೆಸ್ ಸರಕಾರದಲ್ಲಿಯೂ ಇದ್ದರೆ ಭವ್ಯಭಾರತವನ್ನು ಕಟ್ಟಬೇಕೆಂದಿರುವ ನಮ್ಮೆಲ್ಲರ ಕನಸು ನನಸಾಗುವುದು. 'ರಾಮರಾಜ್ಯ'ದ ಹೆಸರು ಹೇಳಿ 'ವಿರಾಮರಾಜ್ಯ'ದಲ್ಲಿ ಇರುವಂತಾಗಬಾರದು.

ಭಾರತದ ಸಕಲ ಶ್ರೇಯೋಭಿವೃದ್ಧಿಗಾಗಿ ಜನಿಸಿ ದೇಶವನ್ನು ಪರದಾಸ್ಯ ಬಂಧನದಿಂದ ವಿಮುಕ್ತಗೊಳಿಸಿ ಭಾರತ ಜನಾಂಗವನ್ನು ಜಗತ್ತಿನ ಮುಂದೆ ಪ್ರಗತಿ ಪಥದಲ್ಲಿರಿಸಲು ಮಹಾ ಸಾಹಸದಿಂದ ಮುಂದುವರಿಯುತ್ತಿರುವ ಭಾರತದಲ್ಲಿ "ಧಾರ್ಮಿಕರಾದ ಶಾಸಕರು, ಸತ್ಯವಂತರಾದ ಮಂತ್ರಿಗಳು, ನೀತಿವಂತರಾದ ಅಧಿಕಾರಿಗಳು, ದೇಶಭಕ್ತಿಯುಳ್ಳ ಪ್ರಜೆಗಳು ಅತ್ಯವಶ್ಯರಾಗಿದ್ದಾರೆ.

"ಅಸ್ಮಾಕಂ ವೀರಾ ಉತ್ತರೇ ಭವಂತು."

ಜೈ ಹಿಂದ್!

ಪ್ರಚಲಿತ ಪ್ರಸಂಗ:

(೧ನೇ ಪುಟದಿಂದ)

ಯಲ್ಲಿ ಭಾಗವಹಿಸುವ ಅಧಿಕಾರವನ್ನು ಕಿತ್ತುಕೊಳ್ಳಲು ಹವಣಿಸುತ್ತಿರುವುದನ್ನು ವಿರೋಧಿಸುವವರು ಕೆಲವರಾದರೂ ಇರಬಹುದು; ಆದರೆ, ರಾಷ್ಟ್ರದೊಳಗೇನೇ ಇದ್ದು ರಾಷ್ಟ್ರದ್ರೋಹವೆಸಗುವುದಕ್ಕೂ ಸಿದ್ಧರಾಗಿ ನಿಂತಿರುವ ಕಮ್ಯೂನಿಸ್ಟ್ ಪಕ್ಷವನ್ನು ನಿಜವಾದ ರಾಷ್ಟ್ರಪ್ರೇಮಿಗಳು ಬೆಂಬಲಿಸಲಾರರು.

ಕಾಂಗ್ರೆಸಿನಲ್ಲಿದ್ದ ದುರ್ಬಲತೆಯಿಂದಲೇ ಹಿಂದೊಮ್ಮೆ ಕೇರಳದಲ್ಲಿ ಕಮ್ಯುನಿಸ್ಟರು ಗದ್ದುಗೆಗೇರಿದರು. ಕಾಂಗ್ರೆಸ್ಸಿಗರಲ್ಲಿ ತನ್ನ ಅಪರಾಧವು ಮನವರಿಕೆಯಾದಾಗ ಅವರೆಲ್ಲರೂ ಒಂದಾಗಿ ದುಡಿದುದರಿಂದ ಕಮ್ಯುನಿಸ್ಟರು ಪತನಹೊಂದಿದರು. ಭಾರತವೊಂದು ಪ್ರಜಾಪ್ರಭುತ್ವವಾದಿ ರಾಷ್ಟ್ರ, ಅದಕ್ಕೊಂದು ಸಂವಿಧಾನವಿದೆ; ಸಂವಿಧಾನಕ್ಕನುಸಾರವಾಗಿ ಅದು ಆಡಳಿತೆ ನಡೆಸ ಬೇಕಾಗಿದೆ. ತನ್ನ ರಕ್ಷಣೆಯನ್ನೂ ಅದು ಮಾಡಿಕೊಳ್ಳ ಬೇಕಾಗಿದೆ ಸಂವಿಧಾನವನ್ನು ಮೂಲೆಗೆ ತಳ್ಳಿ ತನ್ನ ಸ್ವಾರ್ಥಸಾಧನೆಯನ್ನು ಮಾಡಿ, ಪಕ್ಷಸಂಘಟನೆಗಾಗಿ ಸಾರ್ವಜನಿಕ ಸಂಪತ್ತಿನ ದುರುಪಯೋಗ ಮಾಡಿದ ಕಮ್ಯುನಿಸ್ಟರು ತಮ್ಮ ಬಣ್ಣದ ಮಾತುಗಳಿಂದ ಭಾರತೀಯರನ್ನು ವಂಚಿಸುವ ಪ್ರಯತ್ನದಲ್ಲಿರುವರು. ಮುಂದಿನ ಸಾರ್ವತ್ರಿಕ ಚುನಾವಣೆಗಳು ಸಮೀಪಿಸುತ್ತ ಬರುವುದರಿಂದ, ಈ ವಿಜಯವಾಡದ ಅಧಿವೇಶನವು ಮತ್ತೂ ಮಹತ್ವಪೂರ್ಣವಾಗಿದೆ. ಆದರೆ, ಹುಲಿ ಚರ್ಮ ಹೊದ್ದ ನರಿಯಂತಿರುವ ಕಮ್ಯುನಿಸ್ಟರನ್ನು ನೆಚ್ಚಿ ತಮ್ಮನ್ನು ತಾವಾಗಿಯೇ ಪರದಾಸ್ಯದಲ್ಲಿ ಕೆಡಹಿಸಿ ಕೊಳ್ಳುವಷ್ಟು ತಿಳಿಗೇಡಿಗಳು ನಾವಲ್ಲವೆಂದ ಭಾರತೀಯರು ಸಿದ್ಧ ಮಾಡಿ ತೋರಿಸ ಬೇಕಾಗಿದೆ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

ಮಕ್ಕಳ ಮಮತೆಯ
Regd. Trade Mark
'ಬಿಕ್ಕೊ'ರವರ
ಗ್ಲೂಕೋಸ್ ಕೂಡಿದ ಪೆಪ್ಪರ್
ಮಿಠಾಯಿಗಳು ರುಚಿಕರ, ಸೇವನೆಗೆ
ಪ್ರಸಿದ್ಧಿಪಟ್ಟಿವೆ.
BICCO
'ಬಿಕ್ಕೊ'ರವರ
ಹಣ್ಣಿನ ಶರಬತ್ತುಗಳು
ಅತಿಥಿಗಳ ಆದರದ ಸತ್ಕಾರಕ್ಕೆ ಅತ್ಯನುಕೂಲ.
ತಯಾರಕರು:
ಭಾರತ್ ಇಂಡಸ್ಟ್ರಿಯಲ್ ಎಂಡ್ ಕ್ಯಾನಿಂಗ್
ಕಂಪೆನಿ ಲಿಮಿಟೆಡ್, ಕಾಪು, ದ. ಕ.

Tel: 'BLUEYAGAR'. — ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ — Phone: 374.
ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್
ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು.[ಮಾಲಿಕ:ಕೆ.ಕೆ.ಆರ್.ಶೇಟ್

ವಿಜ್ಞಾನ ವಿಸ್ಮಯ:

ರಾಸಾಯನಿಕ ಯುದ್ಧವು ಸಂಭವನೀಯ

ವಿಜ್ಞಾನವು ಪ್ರಗತಿ ಹೊಂದುವುದರೊಡನೆ ಯುದ್ಧದ ಭೀಷಣತೆಯೂ ಅಧಿಕವಾಗುತ್ತಿದೆ. ಇನ್ನೊಂದು ಯುದ್ಧವು ನಡೆಯಿತೆಂದರೆ ಅದು ಅಣು ಯುದ್ಧಕ್ಕೂ ಮಿಗಿಲಾಗಿ ಸರ್ವನಾಶಕ್ಕೆ ಕಾರಣವಾಗುವುದು ಖಂಡಿತ.

ಎ + ಬಿ + ಸಿ = ಯುದ್ಧ ಎಂಬುದು ಯುದ್ಧದ ಹೊಸ ಸೂತ್ರವಾಗಿದೆ. ಎ = ಅಟಂಬಾಂಬು; ಬಿ = ಬೆಕ್ಟೀರಿಯಾಲೊಜಿ ಮತ್ತು ಸಿ = ಕೆಮಿಸ್ಟ್ರಿ ಎಂದು ಈ ಸಂಕೇತಗಳ ವಿವರ. ಅಣುಶಾಸ್ತ್ರ, ಕೀಟಾಣು ಮತ್ತು ರಸಾಯನ ಶಾಸ್ತ್ರಗಳು ಯುದ್ಧದ ವಿಭೀಷಣತೆಯನ್ನು ಕಡಿಮೆ ಮಾಡುವುದನ್ನು ಬಿಟ್ಟು ಅದನ್ನು ಮತ್ತಷ್ಟು ಹೆಚ್ಚಿಸಿದೆ. ಮಾರಕ ಶಸ್ತ್ರಾಸ್ತ್ರಗಳ ವೃದ್ಧಿಯು ಅನಿಯಮಿತವಾಗಿ ಹೆಚ್ಚಿರುವುದರಿಂದ ಇನ್ನು ಮುಂದಿನ ಯುದ್ಧಗಳು ರಾಸಾಯನಿಕ ಗ್ಯೇಸುಗಳ ಬಲವನ್ನು ನೆಚ್ಚಿಕೊಂಡೇ ನಡೆಯುವುವು ಎಂದು ಊಹಿಸಲು ಆಸ್ಪದವಿದೆ. ಪರ್ಯಾಪ್ತ ಪ್ರಮಾಣದಲ್ಲಿ ಸೇನೆಯನ್ನಿಟ್ಟುಕೊಳ್ಳುವುದು, ಟ್ಯಾಂಕರುಗಳು ತೋಪುಗಳನ್ನು ಕೊಂಡುಕೊಳ್ಳಲು ವೆಚ್ಚಮಾಡುವುದು—ಇವುಗಳಿಗಿಂತ ಕೀಟಾಣು ಮತ್ತು ರಾಸಾಯನಿಕ ಯುದ್ಧಕ್ಕೆ ಖರ್ಚು ಕಡಿಮೆಯಾಗುವುದು; ಮತ್ತು ಇದರ ವಿಸ್ತಾರವೂ ಅತಿ ಕಡಿಮೆಯಾಗುವುದು.

ಅಣುಶಾಸ್ತ್ರಕ್ಕಿಂತ ಕೀಟಾಣು ಮತ್ತು ರಾಸಾಯನಿಕ ಯುದ್ಧದ ಪ್ರಕ್ರಿಯೆಗಳು ಹೆಚ್ಚು ಮಹತ್ವಪೂರ್ಣವಾಗಿವೆಯೇ ಎಂಬುದು ಸಂದೇಹಾಸ್ಪದ. ಆದರೂ ಇವುಗಳೆರಡರ ಪ್ರಕ್ರಿಯೆಗಳು ಅಧಿಕ ಸಂಹಾರಕವಾಗಿವೆ ಮತ್ತು ರಹಸ್ಯಮಯವಾಗಿವೆ. ಇವುಗಳಿಂದ ಬದುಕುಳಿಯುವುದು ಸಾಧ್ಯವಾಗಿದೆ; ಆದರೆ, ಬದುಕುವ ಹಂಚಿಕೆಯನ್ನು ಯೋಜಿಸುವುದಕ್ಕೆ ಮೊದಲೇ ಸರ್ವನಾಶಹೊಂದುವ ಕ್ಷಣವು ಮುಂದೆ ಬರುವುದು.

ಮೊದಲನೆಯ ಮಹಾಯುದ್ಧದನಂತರ ಗ್ಯೇಸುಗಳು ಮತ್ತು ಕೀಟಾಣುಗಳ ಯುದ್ಧಸಂಬಂಧಿ ಪ್ರಯೋಗಗಳ ಮೇಲೆ ಹೇರಿದ ತಡೆಯಿಂದ ಇವುಗಳ ಉತ್ಪಾದನೆಯು ನಿಂತುಹೋಗಲಿಲ್ಲ; ಆದರೆ ಶಕ್ತಿಶಾಲಿ ರಾಷ್ಟ್ರಗಳಲ್ಲಿ ಇಂದಿಗೂ ಗುಪ್ತರೂಪದಲ್ಲಿ ಈ ವಿಷಯಕ ಪರೀಕ್ಷಣೆ ಮತ್ತು ಇವುಗಳ ಉತ್ಪಾದನೆಯು ನಿರಾತಂಕವಾಗಿ ನಡೆಯುತ್ತಿವೆ.

ರಾಸಾಯನಿಕ ಯುದ್ಧವನ್ನು ಮಾನವನು ಆದಿಕಾಲದಿಂದಲೇ ಅರಸಿಕೊಳ್ಳಲು ತೊಡಗಿದ್ದಾನೆ. ಬೆಂಕಿಯ ಪ್ರಯೋಗವನ್ನು ಕಂಡುಕೊಂಡೊಡನೆಯೇ ವನ್ಯಮೃಗಗಳನ್ನು ಉಸಿರುಕಟ್ಟಿಸಿಕೊಲ್ಲಲು ಆತ ಹೊಗೆ ಬಳಸಿಕೊಳ್ಳಲು ತೊಡಗಿದನು. ವಿಷಯುಕ್ತ ಹಾಲನ್ನು ಸುರಿದು ನೀರಿನ ಮೂಲವನ್ನು ಕೆಡಿಸಲು, ವಿಷ ಸವರಿದ ಬಾಣಗಳಿಂದ ತನ್ನ ಶತ್ರುಗಳನ್ನು ನಾಶ ಮಾಡಲು ಆದಿಮ ಮನುಷ್ಯನು ಅರಿತಿದ್ದ.

ಕಾಲಕ್ರಮದಲ್ಲಿ ರಸಾಯನ ಜ್ಞಾನವು ವಿಕಸಿತವಾದಂತೆ ಯುದ್ಧ ನೀತಿಯಲ್ಲಿ ಕೂಡ ವ್ಯಾಪಕ ಪರಿವರ್ತನೆಯಾಯಿತು. ರಾಜನೀತಿಯಲ್ಲಿ ವಿಷಪ್ರಯೋಗಕ್ಕೆ ಮಹತ್ವಪೂರ್ಣ ಸ್ಥಾನವಿದೆ. ಚಾಣಕ್ಯನು 'ಪರಘಾತ ಪ್ರಯೋಗ' ಮಾಡಲು ಕಾಲಕೂಟ ವಿಷವನ್ನು ಸೂಚಿಸಿದ್ದಾನೆ. ಜಲಕೂಪ, ಸರೋವರ ಮತ್ತು ಜಲಾಶಯಗಳನ್ನು ವಿಷಯುಕ್ತ ಮಾಡುವುದು, ವಿಷಪೂರಿತ ಹೊಗೆಯನ್ನು ಪ್ರಯೋಗಿಸುವುದು, ವಿಷಭೋಜನ ಮೊದಲಾದುವುಗಳನ್ನು ತಯಾರಿಸುವುದು, ಶತ್ರುಸೇನೆಯಲ್ಲಿ ಚರ್ಮ ವಮನಾದಿ ರೋಗಗಳನ್ನು ಹುಟ್ಟಿಸುವುದು—ಮೊದಲಾದ ಉಪಾಯಗಳನ್ನು ಸಲಹೆಮಾಡಿದ್ದಾನೆ. ಯುನಾನ್, ಅಸ್ಸೀರಿಯಾ ಮತ್ತು ಚೀನ ಮೊದಲಾದ ದೇಶಗಳ ಪ್ರಾಚೀನ ನಾಗರಿಕತೆಯಲ್ಲಿ ಇದೇ ರೀತಿಯ ರಾಸಾಯನಿಕ ಯುದ್ಧ ಪ್ರಯೋಗಗಳ ವಿವರಣೆಯು ನಮಗೆ ದೊರೆಯುತ್ತದೆ. ರೋಮ್ ಮತ್ತು ಯುನಾನ್‌ಗಳ ಯುದ್ಧಗಳಲ್ಲಿಯೂ ತೀಕ್ಷ್ಣಕನಾಗ ಮತ್ತು ವಿಷಾಕ್ತ ಹೊಗೆಯ ಪ್ರಯೋಗಗಳ ಉಲ್ಲೇಖವಿದೆ. ಕಥಿಜದ ಸೇನಾಪತಿ ಮಹಾರಬಲನ ಪ್ರಸಂಗದಲ್ಲಿ ಶತ್ರುಸೇನೆಯನ್ನು ಮದೋನ್ಮತ್ತಗೊಳಿಸುವುದಕ್ಕಾಗಿ ಮೋಸದಿಂದ ತೀವ್ರ ಮದ್ಯವನ್ನು ಕುಡಿಸಿದ ರೋಚಕ ಘಟನೆಯು ವರ್ಣಿತವಾಗಿದೆ. ಶರಾಬಿನಲ್ಲಿ 'ಮನದ್ರಾಗೋರ'ವೆಂಬ ವಿಷಬಳ್ಳಿಯ ರಸವನ್ನು ಮಿಶ್ರಮಾಡಿ ಇಟ್ಟು ತನ್ನ ಸೇನೆಗೆ ಶಿಬಿರವನ್ನು ಬಿಟ್ಟು ಹೊರಬರಲು ಆತನು ಆದೇಶವಿತ್ತನು. ಶತ್ರುಸೇನೆಯು ಶಿಬಿರಹೊಕ್ಕು ಅಲ್ಲಿನ ಶರಾಬನ್ನು ಕಂಡು, ಮನವನ್ನು ತಡೆಯಲಾರದೆ ಅದನ್ನು ಕುಡಿದು ದೀರ್ಘ ನಿದ್ರೆಯಲ್ಲಿ ಬಿದ್ದರು. ಆಗ ಮಹಾರಬಲನು ಬಂದು ನಿದ್ರಿಸುತಿದ್ದ ಅಮಲುಖೋರ ಶತ್ರು ಸೈನಿಕರನ್ನು ಸಂಪೂರ್ಣ ನಾಶ ಮಾಡಿಬಿಟ್ಟನು.

ಇಪ್ಪತ್ತನೆಯ ಶತಮಾನದ ಆರಂಭ ಕಾಲದಲ್ಲಿ ಪಾಶ್ಚಾತ್ಯ ವೈಜ್ಞಾನಿಕರು ರಾಸಾಯನಿಕ ದ್ರವ ಮತ್ತು ಗ್ಯೇಸುಗಳ ಸಂಬಂಧದಲ್ಲಿ ಹಲವಾರು ಪ್ರಯೋಗಗಳನ್ನು ನಡೆಸಿ ಸಫಲರಾದರು. ಇವು ಈ ದ್ರವ ಹಾಗೂ ಗ್ಯೇಸುಗಳು ಪರೀಕ್ಷಣ ಶಾಲೆಗಳಿಂದ ಹೊರಬಂದು ಕಾರಖಾನೆಗಳಲ್ಲಿ ನಿರ್ಮಾಣವಾಗತೊಡಗಿ ಶಕ್ತಿಶಾಲಿ ರಾಷ್ಟ್ರಗಳ ಸೈನ್ಯಶಕ್ತಿಯಲ್ಲಿ ಅನಿವಾರ್ಯವಾಗಿ ಮಹತ್ವಪೂರ್ಣ ಅಂಗವಾಗಿ ಪರಿಣಮಿಸಿದೆ.

ಇಪ್ಪತ್ತನೆಯ ಶತಮಾನದಲ್ಲಿ ರಾಸಾಯನಿಕ ಯುದ್ಧವನ್ನು ೧೯೧೫ರಲ್ಲಿ ಜರ್ಮನಿಯು ವಿಸ್ತೃತ ರೂಪದಲ್ಲಿ ಪ್ರಾರಂಭಿಸಿತು. ಕ್ಲೋರಿನ್ ಅನಿಲವನ್ನು ಇದಕ್ಕೆ ಮಾಧ್ಯಮವಾಗಿ ಆರಿಸಲಾಯಿತು. ವಾತಾವರಣದಲ್ಲಿ ವಿಷವನ್ನು ಚೆಲ್ಲಿ ಶತ್ರುವಿನ ಕಡೆಗೆ ಗಾಳಿಯ ಮೂಲಕ ಅಟ್ಟಲಾಯಿತು. ಈ ಅದ್ಭುತ ಮತ್ತು ಆಕಸ್ಮಿಕ ಪ್ರಯೋಗದಿಂದ ಮಿತ್ರ ರಾಷ್ಟ್ರಗಳು ಚಕಿತರಾದರು. ಮುಂದೆ ಎರಡೂ ಕಡೆಯವರು ರಾಸಾಯನಿಕ ಯುದ್ಧವನ್ನು ತೊಡಗಿದರು. ಎರಡನೆಯ ಮಹಾ ಯುದ್ಧದ ಸಮಯದಲ್ಲಿ ವಿಷ-ಅನಿಲಗಳು ಎರಡೂ ಕಡೆಯವರೊಡನೆ ಇತ್ತು. ಆದರೆ, ಅವುಗಳ ಪ್ರಯೋಗ ಮಾಡುವುದಕ್ಕೆ ಯಾರಿಗೂ ಸಾಹಸವಾಗಲಿಲ್ಲ.

ಪ್ರಥಮ ಲೋಕ ಯುದ್ಧ ಸಮಾಪ್ತಿಯ ವರೆಗೆ ೪೬ ಗ್ಯೇಸುಗಳ ಮೇಲೆ ಪ್ರಯೋಗಗಳು ನಡೆದಿದ್ದುವು. ಗ್ಯೇಸನ್ನು ಹೊರಚೆಲ್ಲುವ ಪ್ರಾಚೀನ ವಿಧಾನವು ಗಾಳಿಯನ್ನು ಹೊಂದಿಕೊಂಡಿತ್ತು. ಮುಂದೆ ಇದರಲ್ಲಿ ಬಹಳಷ್ಟು ಸುಧಾರಣೆಯಾಗುತ್ತಬಂದು ಈಗ ಗ್ಯೇಸುಗಳನ್ನು ಆಕಾಶಬುಟ್ಟಿ, ಬಾಂಬು ಮತ್ತು ಗಾಳಿಯ 'ಸ್ಪ್ರೇ' ಗಳ ಮೂಲಕ ಶತ್ರು ಸೈನ್ಯದ ಮೇಲೆ ಪ್ರಯೋಗಿಸಬಹುದಾಗಿದೆ. ಗುಣಗಳನ್ನು ಹೊಂದಿಕೊಂಡು ಈ ಬಗೆಯ ಗ್ಯೇಸುಗಳಲ್ಲಿ ಐದು ಬಗೆಗಳಿರುತ್ತವೆ.

ಉಸಿರುಕಟ್ಟಿಸುವ ಗ್ಯೇಸುಗಳಲ್ಲಿ ಫೋಸ್‌ಜೀನ್ 'ಕ್ಲೋರೋಮಿಕ್ರೀನ್' ಅತಿ ಮುಖ್ಯವಾಗಿದೆ. ಇದನ್ನು ಹೊರಬಿಟ್ಟಾಗ ಗ್ಯೇಸು ಶ್ವಾಸಕೋಶಗಳನ್ನು ಹೊಕ್ಕು ಅಲ್ಲಿ ತುಂಬಿಕೊಳ್ಳುತ್ತದೆ; ಆಗ ಮಾನವ ಸಾಯುತ್ತಾನೆ.

'ಲಾಕ್ರೀಮ್ಯೆಟರಿ' ವರ್ಗದ ಗ್ಯೇಸುಗಳು ಅಧಿಕ ವಿಷಯುಕ್ತವಾಗಿರುವುದಿಲ್ಲ. ಆದರೆ, ಇದರ ಸ್ಪರ್ಶಮಾತ್ರದಿಂದ ಕಣ್ಣುಗಳಲ್ಲಿ ನೀರು ಸುರಿಯಲು ಪ್ರಾರಂಭವಾಗುತ್ತದೆ. ಈಗ ಈ ವಿಧದವುಗಳನ್ನು ಹೆಚ್ಚಾಗಿ ಪೋಲೀಸುವಿಭಾಗದವರು ಮಾತ್ರ ಪ್ರಯೋಗ ಮಾಡುತ್ತಾರೆ. ಇವು ಅಶ್ರುವಾಯು ಪ್ರಯೋಗವೆಂಬ ಹೆಸರಿನಲ್ಲಿ ಪ್ರಖ್ಯಾತವಿವೆ. ಸರ್ನುಟೆಟರ್ ಗ್ಯೇಸುಗಳಲ್ಲಿ 'ಡಿಫೋನಿಲ್ ಕ್ಲೋರಿಅರ್ ಸೀನೇ' ಎಂಬುದು ಮುಖ್ಯ. ಇದರಿಂದ ವಮನಕ್ಕೆ ಶತ್ರುಗಳನ್ನು ತೊಡಗಿಸುತ್ತಾರೆ. ಚರ್ಮಸುಡುವ ಗ್ಯೇಸುಗಳ ಪ್ರಭಾವ ಹೆಚ್ಚಾಗಿ ಸ್ಥಾಯಿಯಾಗುತ್ತ ಬರುತ್ತಿದೆ. ಇದರಿಂದ ಚರ್ಮದಲ್ಲಿ ವಿಪರೀತ ದಾಹವು ಉಂಟಾಗುವುದು. ಶರೀರದಲ್ಲಿ ಕಲೆಗಳು ತಲೆದೋರುವುವು. ರಕ್ತಕೋಶವು ನಷ್ಟವಾಗಿ ಶರೀರದಲ್ಲಿ ವಿಷವು ಜಮೆಯಾಗುವುದು. 'ಬ್ಲಿಸ್ಟರ್' ಗ್ಯೇಸುಗಳಲ್ಲಿ ಮಸ್ಟರ್ಡ್ ಮತ್ತು ಲೆವಿಸೈಟ್ ಪ್ರಮುಖವಾಗಿವೆ.

'ರಕ್ತಸಾಯ' ಗ್ಯೇಸುಗಳಲ್ಲಿ ಹೆಚ್ಚಾಗಿ ಸಿಯೆನಾಯಿಡ್ ಮಿಶ್ರಮಾಡುತ್ತಾರೆ. ಇವು ಬೇಗನೆ ಪ್ರಭಾವ ಬೀರುತ್ತವೆ; ಇವುಗಳ ವಿಷವೂ ಇವು ತರವಾಗಿವೆ. ಸಂಹಾರಕ ಶಕ್ತಿಯೂ ಅಧಿಕ ತರವಿದೆ. ಆದುದರಿಂದಲೇ ಇದನ್ನು ಹೆಚ್ಚಾಗಿ ಉಪಯೋಗಿಸುವುದಿಲ್ಲ.

ಪ್ರಥಮ ಜಾಗತಿಕ ಯುದ್ಧಾನಂತರ ಯುದ್ಧದಲ್ಲಿ ಗ್ಯಾಸುಗಳನ್ನು ಪ್ರಯೋಗಿಸಬಾರದು ಎಂಬುದರ ಬಗ್ಗೆ ಬಹು ಚರ್ಚೆ ನಡೆಯಿತು. ವರ್ಸಾಯಿ ಒಪ್ಪಂದದ ೧೭೧ನೆಯ ಅನುಚ್ಛೇದದಲ್ಲಿ 'ಎಸ್ಫಿಕ್ಸಿಯೇಟ್" ಮೊದಲಾದ ವಿಷಯುಕ್ತ ಗ್ಯೇಸುಗಳ ಅಥವಾ ಅದೇ ಮಾದರಿಯ ಇತರ ಗ್ಯೇಸುಗಳನ್ನು ನಿರ್ಮಾಣ ಮಾಡುವುದು ಇಲ್ಲವೆ ಆಯಾತ ಮಾಡುವುದು ನಿಷಿದ್ಧವೆಂದು ಹೇಳಲಾಗಿದೆ. ಆದರೆ, ಮುಸಲೋನಿಯು ೧೯೩೫ರಲ್ಲಿ

(೧೨ನೇ ಪುಟ ನೋಡಿರಿ)

ಎಸ್.ಆರ್.
ಅತ್ಯುತ್ತಮ ಬೀಡಿಗಳು

ದ.ಕ. ಸಬೋರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ

O.S. No. 105|1960

ಹೊನ್ನಯ್ಯ ಶೆಟ್ಟಿ —ವಾದಿ

ಮತ್ತು

ನರ್ಸು ಶೆಟ್ಟಿ, ಕೂಡಾ —ಪ್ರತಿವಾದಿರು

1ನೇ ಪ್ರತಿವಾದಿ—ನರ್ಸು ಶೆಟ್ಟಿ, ಪದ್ದು ಶೆಡ್ತಿ ಮಗ,

6ನೇ ಪ್ರತಿವಾದಿ —ಪ್ರಭಾಕರ, ಉಗ್ಗಪ್ಪ ಶೆಟ್ಟಿ ಮಗ

ಉಡ್ಪಿ ತಾಲ್ಲೂಕು ನಡ್ಸಾಲು ಗ್ರಾಮದಲ್ಲಿರುವವರು

ಮೇಲಿನ ದಾವೆಯಲ್ಲಿ ವಾದಿ ಮತ್ತು ಪ್ರತಿವಾದಿಯರು ಕುಟುಂಬದ ಬಾಬ್ತು ಯಾವತ್ತೂ ಸೊತ್ತುಗಳನ್ನು ಹಿಸೆ ಸಿಗಬೇಕೆಂದು ವಗೈರೆ ನಿವೃತ್ತಿ ಕೇಳಿ ದಾಖಲ್ಲು ಮಾಡಿದ ದಾವೆಯೂ ಮತ್ತು ಕುಂದಾಪುರ ಅಸಿಸ್ಟೆಂಟ್ ಕಮಿಶನರ ಕೋರ್ಟು O. P. 120/61ರಲ್ಲಿ ಕಟ್ಟಿದ ರೂಪಾಯಿ 267/-ನ್ನು ಜಪ್ತಿ ಬಗ್ಗೆ ದಾಖಲ್ಲು ಮಾಡಿದ R. I. A. 464/61ನೇ ಅರ್ಜಿಯೂ ತನ್ನಿಗೆ ತಾರೀಕು 6—6—1961ಕ್ಕೆ ಮೇಲಿನ ಕೋರ್ಟಿನಲ್ಲಿ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಗಳಿದ್ದರೆ ಸದ್ರಿ ದಿವಸ ಮೇಲಿನ ಕೋರ್ಟು ಮುಂದೆ ಹಗಲು ಘಂಟೆ 11ಕ್ಕೆ ನೀವು ಖುದ್ದಾಗಲೀ ಯಾ ವಕೀಲರ ಮುಖಾಂತರವಾಗಲೀ ಹಾಜರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದು. ತಪ್ಪಿದಲ್ಲಿ ನಿಮ್ಮ ಗೈರುಹಾಜರಿಯಲ್ಲಿ ವ್ಯಾಜ್ಯವನ್ನೂ, ಅರ್ಜಿಯನ್ನೂ ತೀರ್ಮಾನ ಮಾಡೋಣಾದೀತೆಂದು ತಿಳಿಯ ತಕ್ಕದ್ದು.

(ಕೋರ್ಟು ಹುಕುಂ ಪ್ರಕಾರ)

B. M. Hegde
Advocate for Plaintiff
Mangalore, Date 10—4—1961

ಕಥಾವಿಹಾರ

(೨ನೇ ಪುಟದಿಂದ

ಶ್ರೀ ನಾಥನಂದು ಪಡಸಾಲೆಯಲ್ಲಿ ಹಸ್ತ ಪ್ರತಿಯೊಂದನ್ನು ಪರಿಶೀಲಿಸುತ್ತಿದ್ದ. ತನ್ನ ಬಾಳ ದೀವಿಗೆಯಾಗಿ ಬಂದ ಪರ್ಸ್ಸಿನ ಕತೆಯದು. ಆದರೆ ಉತ್ತರಾರ್ಧ ವೇನು? ಎಂದು ಅವನಿಗೆ ತಿಳಿಯಲಿಲ್ಲ. ಕಿಟಕಿಯತ್ತ ದೃಷ್ಟಿಸಿದ....

ಒಬ್ಬ ಬಡ ಹೆಂಗಸು ಬಾಗಿಲಿನಲ್ಲಿ ನಿಂತಿದ್ದಳು. ಬಟ್ಟೆಬರೆ ಬಡತನದ ಕುರುಹನ್ನು ತೋರುತ್ತಿತ್ತು. ಮೈ ಮುಖದ ವರ್ಚಸ್ಸು ಉಚ್ಚ ಕುಲವನ್ನು ಸೂಚಿಸುತ್ತಿತ್ತು. "ಸ್ವಾಮಿ....ಸ್ವಾಮಿ"

ಮುಂದೆ ಬರೆಯಲಾಗದಿದ್ದ ಶ್ರೀ ನಾಥ ಹೊರ ಬಂದ.

"ಸ್ವಾಮಿ ನಮ್ಮದೊಂದು ಬಡ ಕುಟುಂಬವಿದೆ. ಮನೆಯಲ್ಲಾರು ಸಂಪಾದಿಸುವವರಿಲ್ಲ. ನನಗೊಂದು ಕೆಲಸಕೊಡಿ. ಮನೆ ಕೆಲಸ, ಯಾವಕೆಲಸಕ್ಕೂ ಸಿದ್ಧ. ಸಂಬಳ ಹೆಚ್ಚಿಗೆ ಬೇಡ ಸ್ವಾಮಿ, ದಯವಿಟ್ಟು ಒಪ್ಪಿಕೊಳ್ಳಿ....ದಯವಿಟ್ಟು"

ಶ್ರೀ ನಾಥನೂ ಯೋಚಿಸಿದ. ತಂಗಿ ಮನೆಯಿಂದ ಗಂಡನ ಮನೆಗೆ ಹೋದ ಮೇಲೆ ಮನೆಗೆ ಅಂಥ ಒಬ್ಬರ ಅವಶ್ಯಕತೆ ಇದೆ.

"ಸ್ವಾಮಿ ದಯವಿಟ್ಟು ಬೇಡವೆನ್ನಬೇಡಿ, ಮನೆಯಲ್ಲಿ ಮೂರು ಹೃದಯಗಳ ರಕ್ತವಾಡಬೇಕು."

ಆಕೆಯ ವಿಷಯ ಸ್ವಲ್ಪ ಸ್ವಲ್ಪವಾಗಿ ಕೇಳಿ ತಿಳಿದುಕೊಂಡ ಶ್ರೀ ನಾಥ "ಆಗಲಮ್ಮ ನಾಳೆನಿಂದ ಕೆಲಸಕ್ಕೆ ಬನ್ನಿ."

"ಇಂದೇ ಶುಕ್ರವಾರವಾಗಿದೆಯಣ್ಣಾ, ಸಾರಿಸಿ ಗುಡಿಸಿ ಹೋಗುವೆ, ಲಕ್ಷ್ಮಿ ಮನೆಗೆ ಬರುವ ಕಾಲ......."

ಸೀತಮ್ಮ ಒಮ್ಮೊಮ್ಮೆ ಅನಿವಾರ್ಯದಿಂದ ಬರಲಾಗದಿದ್ದಾಗ ಕುಸುಮ ಆಕೆಯ ಹದಿನಾರು ವರ್ಷದ ಮಗಳು ಬಂದು ಕೆಲಸ ಮುಗಿಸಿಕೊಟ್ಟು ಹೋಗುತ್ತಿದ್ದಳು. ಪ್ರತಿ ದಿನವೂ ಕುಸುಮಳೇ ಬರಬಾರದೆ ಎಂದು ಒಮ್ಮೊಮ್ಮೆ ಶ್ರೀನಾಥನಿಗೆ ಯೋಚನೆ ಬರುತ್ತಿದ್ದುದೂ ಉಂಟು.

ತನ್ನ ದುರ್ಭಾಗ್ಯದ ಬಾಗಿಲನ್ನು ಮುಚ್ಚಿ ಭದ್ರಪಡಿಸಿದ್ದ ಅದೃಷ್ಟ ದೇವತೆಯಾದ ಆ ಮನಿ ಪರ್ಸನ್ನು ಪೂಜೆಯ ನಂತರ ಕಣ್ಣಿಗೆ ಒತ್ತಿಕೊಳ್ಳುವುದು ಅವನ ದಿನಚರಿ. ಅಂದೂ ಅಂತೆಯೇ ಲಕ್ಷ್ಮೀ ಸ್ತೋತ್ರ ಮಾಡುತ್ತಾ ಪರ್ಸನ್ನು ಹಣೆಗೆ ತಗಲಿಸಿದ.

ಅಕಸ್ಮಾತ್ ಒಳಗೆ ಬಂದ ಸೀತಮ್ಮ ಆ ದೃಶ್ಯವನ್ನು ಕಂಡು ಆವಾಕ್ಕಾದರು. ದೃಷ್ಟಿಸಿ ನೋಡಿದರು, ಮತ್ತೂ ನೋಡಿದರು. ಅವರಿನ್ನೂ ಅಲ್ಲಿಂದ ಕಣ್ಣನ್ನು ತಿರುಗಿಸಿರಲಿಲ್ಲ. ಕರ್ತವ್ಯ ಮುಖದಿಂದ ಹಿಂತಿರುಗಿದ ಶ್ರೀನಾಥನಿಗೆ ಸೀತಮ್ಮ ಪರ್ಸನ್ನು ದಿಟ್ಟಿಸುತ್ತಿದ್ದುದು ಗೋಚರಿಸಿತು. ಆಕೆ ಏಕೆ ಹಾಗೆ ನೋಡುತ್ತಿದ್ದಾಳೆ. ಅದನ್ನೇಕೆ ನಾನು ಪೂಜಿಸುವೆನೆಂದೊ? ಸೀತಮ್ಮ ಅಲ್ಲಿ ಹೆಚ್ಚು ಕಾಲ ನಿಲ್ಲದೆ ಎದ್ದು ಹೋದಳು. ಮರುದಿನ ಆಕೆಯೂ ಇಲ್ಲ; ಕುಸುಮಳೂ ಇಲ್ಲ.

ಶ್ರೀನಾಥನಿಗೆ ತುಸು ಹೆದರಿಕೆಯೇ ಆಯಿತು. ಕಾದು ಕಾದು ಕೊನೆಗೆ ತಾನೇ ಸೀತಮ್ಮನ ಮನೆಕಡೆ ಹೆಜ್ಜೆ ಹಾಕಿದ.

ಮನೆಗೆ ಹಾಕಿದ್ದ ಬೀಗ ಕಂಡು ಶ್ರೀನಾಥನಿಗೆ ವಿಷಯ ಇನ್ನೂ ನಿಗೂಢವಾಗತೊಡಗಿತು. ಪಕ್ಕದ ಮನೆಯವರನ್ನು ಕೇಳಿದ "ಏನ್ರಮ್ಮಾ ಇಲ್ಲಿದ್ದ ಸೀತಮ್ಮನವರೆಲ್ಲಿ?"

ಮನೆಯಾಕೆ ಹೇಳಿದಳು "ಏನೋ ಗೊತ್ತಾಗಲಿಲ್ಲಪ್ಪಾ. ನಿನ್ನೆ ಬೆಳಗಿನ ವರೆಗೂ ಎಂದಿನಂತಿದ್ದವರು ಮಧ್ಯಾಹ್ನದ ಹೊತ್ತಿಗೆ ಮನೆಯನ್ನು ಖಾಲಿ ಮಾಡಿದ್ದರು. ಎಲ್ಲಾ ಸಾಮಾನುಗಳನ್ನು ಹಾಕಿಕೊಂಡು ಗಾಡಿಯಲ್ಲಿ ಹೊರಡಲು ತಯಾರಿದ್ದರು. ಮನೆಯ ಬಾಕಿ ಎಲ್ಲ ಕೊಟ್ಟರು 'ಎಲ್ಲಿಗೇ ಸೀತಮ್ಮಾ?' ಎಂದಾಗ 'ಊರಿನಿಂದ ಟೆಲಿಗ್ರಾಂ ಬಂದಿದೆ' ಎಂದು ಸರಿಯಾಗಿ ಉತ್ತರಿಸದೆ ಒಂದು ಕಾಗದ ಕೊಟ್ಟುಹೋಗಿದ್ದಾರೆ ನಿಮಗೆ ತಲಪಿಸಲು" ಎಂದು ಮನೆಯೊಳಕ್ಕೆ ಹೋಗಿ ಒಂದು ಲಖೋಟೆಯನ್ನು ತಂದುಕೊಟ್ಟಳು.

ಶ್ರೀನಾಥನ ಎದೆ ಬಿರುಸಿನಿಂದ ಅಡತೊಡಗಿತು. ಮರುಮಾತಾಡದೆ ಮನೆ ಕಡೆ ತಿರುಗಿದ ತನಗರಿವಿಲ್ಲದೇ.

ಪತ್ರ ಸುಮಾರು ಉದ್ದವಿತ್ತು:

ಮಹನೀಯರೇ,

ನಾವೇಕೆ ಊರು ಬಿಡಬೇಕು? ನಮಗೇ ತಿಳಿಯದಾಗಿದೆ. ಆದರೆ ಆ ರೀತಿ ಹೊರಡುವ ಮುನ್ನ ಈ ಕತೆಯನ್ನು ಹೇಳಲೇ ಬೇಕೆಂಬ ಆಸೆಯಿಂದ ಬರೆದಿರುವೆ.

ನಾವು ಮೈಸೂರಿನಲ್ಲಿ ಸ್ವಲ್ಪ ಸ್ಥಿತಿವಂತರಾಗಿಯೇ ಇದ್ದೆವು. ಮಕ್ಕಳ ತಂದೆ ಸತ್ತು ಎರಡು ವರ್ಷವಾಗಿತ್ತಷ್ಟೆ, ಅಷ್ಟರಲ್ಲೇ ಗಂಡು ದಿಕ್ಕಿಲ್ಲದ ಆಸ್ತಿ ಕರಗತೊಡಗಿತ್ತು. ಆದ್ದರಿಂದ ತಮ್ಮನಲ್ಲಿಗೆ ಹೋಗಿ ಸೇರಿದೆವು. ಒಂದು ದಿನ ...

ಆ ದಿನ, ಕಾಲ ರುದ್ರನೋಪಾದಿಯಂತಿದ್ದ ದಿನ ಅದು ತಮ್ಮ ಹೊಲ ಕೊಳ್ಳಲಿಕ್ಕೆಂದು ೨ ಸಾವಿರ ರೂ. ತಂದಿದ್ದ. ಸೋಮವಾರ ಊರು ಬಿಡಬೇಕಿತ್ತು. ತಂದ ಹಣವನ್ನು ಡ್ರಾಯರದಲ್ಲಿಟ್ಟ. ಆಗ ವಸಂತನೂ ಅಲ್ಲಿದ್ದ. ಸೋಮವಾರ ಹಣ ನೋಡುವಲ್ಲಿ ಇರಲಿಲ್ಲ. ಎಲ್ಲರಲ್ಲಿಯೂ ವಿಚಾರಿಸಿ ನಂತರ ತಿಂಡಿಗಾಗಿ ಆಗಾಗ್ಗೆ ಪುಡಿಗಾಸುಗಳನ್ನು ಎತ್ತಿಹಾಕುತ್ತಿದ್ದ ವಸಂತನ ಮೇಲೆ ದೃಷ್ಟಿ ತಿರುಗಿತು. ಹತ್ತಾರು ಬಾಸುಂಡೆಗಳು ಬಿದ್ದರೂ ಬಾಯಿ ಬಿಡದಿದ್ದ ವಸಂತನ ನಡತೆಯಿಂದಾಗಿ ತಮ್ಮನ ಕೋಪ ಉದ್ರಿಕ್ತವಾಗಿತ್ತು. ನಾನು ಹೆಚ್ಚು ಹೊತ್ತು ತಾಳಲಾಗದೆ ಮಗನನ್ನೆತ್ತಿಕೊಂಡು ಶೈತ್ಯೋಪಚಾರ ಮಾಡಿದೆ. ತಮ್ಮನ ಮೇಲೂ ಸಾಕಷ್ಟು ರೇಗಾಡಿದೆ. ಆದರೇನು? ವಸಂತನ ಮೈ ಕೈ ಬಾತುಕೊಂಡಿತ್ತು.

ಅಂದು ಮಲಗಿದ ವಸಂತ ಮತ್ತೆ ಮೇಲೇಳಲಿಲ್ಲ. ಜ್ವರ ವಿಪರೀತವಾಗಿತ್ತು. ಕನಸಿನಲ್ಲಿ ಕನವರಿಸಿದ "ಹೊಡಿಬೇಡಿ ಮಾವಯ್ಯ ಅಮ್ಮನಾಣೆ ರೂಪಾಯಿ ತೆಕ್ಕೊಳ್ಳಿಲ್ಲ. ಅಮ್ಮ ಬಿಡ್ಸಮ್ಮಾ" "ನಾನು ಕಳ್ಳನಲ್ಲ ಎಂದು ಸಾರಿ ಕಣ್ಮುಚ್ಚಿದ. ಅಂದಿನಿಂದ ನಾನು ತಮ್ಮನನ್ನು ಬಿಟ್ಟು ಕೂಲಿನಾಲಿ ಮಾಡಿ ದಿನದೂಡುತ್ತೇನೆ.

ತಮ್ಮ ದೇವರ ಗೂಡಿನಲ್ಲಿದ್ದ ಹಣದ ಪರ್ಸಿನಲ್ಲೇ ನನ್ನ ತಮ್ಮನ ಹಣವಿಟ್ಟಿದ್ದುದು, ಅದು ತಮಗೆ ಬಂದ ಬಗೆ.......?

—ಇತಿ...

—ಪತ್ರ ಓದಿ ಶ್ರೀನಾಥನ ಕಣ್ಣಿನಲ್ಲಿ ನೀರೂರಿತು. ನನ್ನನ್ನು ಸೀತಮ್ಮ ಕಳ್ಳತನಕ್ಕಾಗಿ ಆರೋಪಿಸಿರುವುದು ಅಪರೋಕ್ಷವಾಗಿ ಮನದಟ್ಟಾಗಿತ್ತು. ಸೀತಮ್ಮನನ್ನು ಕಂಡು ನಿಜಾಂಶವನ್ನು ತಿಳಿಸಬೇಕೆಂದು ಮನಸ್ಸು ಒಂದು ವಿಧವಾದ ವೇದನೆಯೊಡನೆ ಹೇಳಿತು. ಅಂದು ಉಷಾಳನ್ನು ಬದುಕಿಸಿದ ಪರ್ಸು ಅಂತಹದೇ ಒಂದು ಮಗುವಿನ ಮರಣಕ್ಕೆ ಕಾರಣವಾಗಿತ್ತು.

ಹುಚ್ಚನಂತಾದ ಶ್ರೀನಾಥನ ಎಡೆಬಿಡದ ಪ್ರಯತ್ನದಿಂದಾಗಿ ಸೀತಮ್ಮನ ನೆಲೆ ಕಾಣ ಸಿಕ್ಕಿತು. ಶ್ರೀನಾಥನ ಮುಖ ಕಂಡೊಡನೆ ಕುಸುಮಳ ಮುಖ ಕೆಂಪಗಾಯಿತು ಅದು ಕೋಪ ಹಾಗು ನಾಚಿಕೆಗಳ ಸಮ್ಮಿಳಿತವಾಗಿತ್ತು ಆಕೆ ಒಳಗೋಡಿದಳು. ಸಮಯವರಿತು ಸತ್ಯ ಸಂಗತಿ ತಿಳಿಸಿ ಶ್ರೀನಾಥ ಹೇಳಿದ.

"ನಿಮ್ಮ ಅಭ್ಯಂತರವಿಲ್ಲದಿದ್ದರೆ ನಿಮ್ಮ ಮಗಳನ್ನು ನನ್ನ ಖರ್ಚಿನಲ್ಲಿ ನಾನೇ ಲಗ್ನವಾಗುವೆ, ಮಗನೆಂದು ಆಶೀರ್ವದಿಸಿ-"

ಸೀತಮ್ಮನ ಬಾಯಿಂದ ಮಾತುಗಳು ಬರಲಿಲ್ಲ. ಮೊದಲಿಗೆ ಆಕೆ ನಂಬದಿದ್ದರೂ ಮುಂದೆ ನಂಬಲೇ ಬೇಕಾಯ್ತು. ಆಕೆಯ ನಯನಗಳಿಂದ ಬಿಸಿ ನೀರು ತೊಟ್ಟಿಕ್ಕಿತು. ದುಃಖದ ಉಪ್ಪು ನೀರಲ್ಲ. ಆನಂದದ ಅಮೃತ.

೦೦ ೦೦

ದಿಕ್ಕಿಲ್ಲದೇ ಅಲೆಯುತ್ತಿದ್ದ ಸೀತಮ್ಮನ ತಮ್ಮ ಇಂದು ಶ್ರೀ ನಾಥನ ಆಶ್ರಯ ಪಡೆದಿದ್ದಾನೆ. ಅವನಿಂದ ಇಂದು ಸತ್ಯ ಹೊರಬಿದ್ದಿದೆ.

"ತನ್ನ ಅತ್ತಿಗೆಯ ಮೇಲೆ ತಪ್ಪುಹೊರಿಸಲು ಆತನ ಹೆಂಡತಿ ಏಳು ನೂರು ರುಪಾಯಿ ಎತ್ತಿ ಹಾಕಿದಳು. ಭಾನುವಾರ ಡ್ರಾಯರದಲ್ಲಿಡಲು ಮರೆತು ತೆಗೆದುಕೊಂಡುಹೋದ ಪರ್ಸನ್ನು ಕಬ್ಬನ್ ವನದಲ್ಲಿ ಬೀಳಿಸಿಕೊಂಡು, ಇನ್ನು ಬಾಯಿಬಿಟ್ಟರೆ ತನಗಾಗುವ ಶಾಸ್ತಿಗೆ ಹೆದರಿ ಬಾಯಿ ಮುಚ್ಚಿ ಕುಳಿತಳು. ಕಷ್ಟಕಾಲ ಬಂದಾಗ ಹಿಂದೆ ತಾನು ಮಾಡಿದ ಪಾಪಕೃತ್ಯಕ್ಕೆ ಪಶ್ಚಾತ್ತಾಪ ಪಟ್ಟಳು"

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ 4%
5 ,, 12 ,, 4¼%
13 ,, 24 ,, 4½%

ರೂ. 5,000/- ಮತ್ತು ಮೇಲಣ ಡಿಪೋಸಿಟಗೆ ⅛% ಜಾಸ್ತಿ ಕೊಡಲಾಗುವುದು.

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜಾ
ಮೆನೇಜರ್.

ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್.ಐ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ
ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು.
ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ

NAVAYUGA WEEKLY, UDIPI.
REGD. NO.BG. 176

20-4-1961

LICENSE NO. 31
Licensed to Post without Prepayment

ಹೀಗೂ ಇದೆ--

ಚೆನ್ನನ ಮೇಡೆ ಭಾಷಣ

ಶ್ರೀ ಶಿವಶಂಕರ

ತಾನು ದೊಡ್ಡ ಭಾಷಣಕಾರನೆಂದು ಚೆನ್ನಾಗಿ ಚೆನ್ನ ಹೇಳುತ್ತಿದ್ದ. ಅವನು ಗಂಟೆಗಟ್ಟಲೆ ಮಾತಾಡ ಬಲ್ಲನಂತೆ, ಸಭಿಕರು ಇರಲಿ, ಇಲ್ಲದಿರಲಿ, ಕೈಚಪ್ಪಾಳೆ ಹೊಡೆಯಲಿ, ಬೊಬ್ಬೆ ಹೊಡೆಯಲಿ ಶಿಳ್ಳೆ ಹಾಕಲಿ, ಏನೇ ಮಾಡಲಿ, ಅದಕ್ಕೆಲ್ಲ ಆತ ಜಗ್ಗುವವನಲ್ಲವಂತೆ, ಅಳುಕುವವನಲ್ಲವಂತೆ ಅನೇಕ ತರದ ವೇದಿಕೆಗಳನ್ನು ಆತನು ಮೆಟ್ಟಿದ್ದಾನಂತೆ. ರಾಜಕೀಯ ವೇದಿಕೆಗಳೆಂದರೆ ಆತನಿಗೆ ಬಹಳ ಇಷ್ಟವಂತೆ. ಅದರಲ್ಲೂ ಬೇಸಿಗೆ ಕಾಲದಲ್ಲಿ ಮಾತಾಡುವದೆಂದರೆ ಆತನಿಗೆ ಬಹಳ ಸಂತೋಷ. ಗಟ್ಟಿಯಾಗಿ, ದಂಗು ಬಡಿಯುವಂತೆಯೂ ಆತ ಮಾತಾಡ ಬಲ್ಲನಂತೆ. ಆದರೆ ಇತ್ತೀಚಿಗೆ ಅವನಿಗೆಲ್ಲೂ ಗಿರಾಕಿ ಬಂದಿರಲಿಲ್ಲ. ಹೀಗೆ ದಿವಸ ಲೆಕ್ಕ ಹಾಕುತ್ತಿದ್ದ ದಿನವಹಿಯತ್ತ ನೋಡಿದಾಗ ಮೇ ಒಂದನೆ ತಾರೀಕು ಆದಿತ್ಯವಾರ ಇರುವದು ನೋಡಿ ಅವನ ಸಂತೋಷಕ್ಕೆ ಪಾರವೇ ಇಲ್ಲವಾಯ್ತು. ಆನಂದದ ಕೋಳಿ ಕೂಗಿತು

ಮಠದ ಸುತ್ತಿನಲ್ಲಿ ದಿನಾಂಕ ಒಂದರಂದು ಮೇ ದಿನದ ನಿಮಿತ್ತ ಬಹಳ ಮಂದಿ ಭಾಷಣ ಹೊಡೆಯುತ್ತಾರೆಂಬುದು ಚೆನ್ನನಿಗೆ ಗೊತ್ತು. ಅಂದು ಅವನೂ ಠೀವಿಯಿಂದ ಅತ್ತ ಪಾದ ಬೆಳೆಸಿದ. ಧ್ವನಿವರ್ಧಕದಿಂದ ಶಬ್ದ ಕೇಳಿ ಬರುತ್ತಿತ್ತು. ಶೀಘ್ರ, ಅತ್ತ ಹೋಗೋಣವೆಂದು ಹೆಜ್ಜೆ ಇಟ್ಟಿದ್ದ ಆದರೆ ಅಷ್ಟರಲ್ಲಿ ಹಾಗೆ ಹೋಗುವದು ಅಪ್ರದಕ್ಷಿಣೆ, ಇದು ಶುಭ ಸೂಚನೆ ಅಲ್ಲವೆಂದು ದೂರ ದಾರಿಯಾದರೂ ಚಿಂತಿಲ್ಲವೆಂದು ಬೇಗಬೇಗನೆ ನಡೆಯಲಾರಂಭಿಸಿದ. ಮೇಜು, ಕುರ್ಚಿ ಧ್ವನಿವರ್ಧಕ ಇತ್ಯಾಗಳೆಲ್ಲಾ ಸಜ್ಜಾಗಿದ್ದುವಲ್ಲದೆ ಹೆಚ್ಚಿನ ಭಾಷಣಕಾರರು ಸಿದ್ಧವಾಗಿದ್ದರು

ಕತ್ತಲಾದೊಡನೆ ಭಾಷಣವಾಗರಂಭವಾಯಿತು. ಒಬ್ಬರು ಕೈ ಕೈ ಹೊಡೆದು ಮಾತಾಡಿದರು, ಇನ್ನೊಬ್ಬರು ಮೇಜಿಗೆ ಹೊಡೆದರು. ಮತ್ತೊಬ್ಬರು "ಕಾಂಗ್ರೆಸ್ಸೇ ಸಮತಾವಾದವನ್ನೊಪ್ಪಿದೆ. ನಮ್ಮ ಹಿಂದುಗಡೆ ಕಳ್ಳ ಹೆಜ್ಜೆಯನ್ನಿಟ್ಟುಕೊಂಡವರು ಬರುತ್ತಿದ್ದಾರೆ. ನಾವು ಹೇಳದಂತೆ ಜನತಾ ಚೀನಾದ ಪ್ರಧಾನಿಯವರೂ ಭಾರತದ ಪ್ರಧಾನಿಯವರೂ ಕೂತುಕೊಂಡು ಮಾತಾಡಿದರು...." ಹೇಳಿದಾಗ ಚೆನ್ನನ ತಾಳ್ಮೆ ತಪ್ಪಿತು. ಅವನು ವೇದಿಕೆಯತ್ತ ಕಾಲು ಹಾಕಿದ. ಅವನ ಪರಿಚಯ ಇದ್ದ ಹಾಗೂ ಅನಂತರದ ಭಾಷಣಕಾರರು ಅವನನ್ನು ಹಿಡಿದಿಟ್ಟರು. ಅವನು ಸುಮ್ಮಗೆ ಬಿಡುತ್ತಾನೇನು? ಅವನಿಗೆ ವೇದಿಕೆಯಾಗಲೀ, ಧ್ವನಿವರ್ಧಕವಾಗಲೀ ಅನಾವಶ್ಯಕ. ಅಲ್ಲೇ ಆರಂಭಿಸಿದ.

"ಕರ್ಮಕಾರರೇ, ಕೂಲಿಕಾರರೇ, ಮೇಲಿನ ಭಾಷಣಕಾರರು ಹೇಳಿದಂತೆ ಚೀನೀ ಪ್ರಧಾನಿ ನಮ್ಮ ಪ್ರಧಾನಿ ನೆಹ್ರೂರವರೊಂದಿಗೆ ಕೂತುಕೊಂಡು ಮಾತಾಡಿದ್ದಲ್ಲ. ಆ ಚೀನಿಕಾರನನ್ನು ಇಲ್ಲಿಗೆ ಕರೆತರಿಸಿ (ತಲೆ ತುರಿಸಿಕೊಂಡು) ಭೀಮೂರಿ ಹಾಕಿ ಕಳುಹಿಸಿದ್ದಾರೆ. ನೀವೇ ಹೇಳಿ, ನಮ್ಮ ಪ್ರಧಾನಿ ಉದ್ದವೋ, ಅವರ ಪ್ರಧಾನಿ ಉದ್ದವೋ? ಈ ಕುಂಟರನ್ನು ನಂಬಬಹುದೇನು? ನೋಡಿ, ಆ ಚೀನಿಯರ ನೃತ್ಯಕ್ಕೆ ಸರಿಯಾಗಿ ಈ ಕಮ್ಯೂನಿಸ್ಟರು ತಾಳ ಹಾಕುತ್ತಿದ್ದಾರೆ; ಹಿಂಬದಿ ಗಾಯನ (ಗಾರ್ದಭ ರಾಗ ಅನ್ನಬೇಡಿ) ಒದಗಿಸುತ್ತಿದ್ದಾರೆ.

ಈ ಚೀನಿಕಾರಿಗಳಾದರೋ ಇಲ್ಲಿಗೆ ಚಿಟ್ಟಿಗಳ ಬೇಟೆಗೆ ಬರುತ್ತಾರಂತೆ! ಆ ಭೂಭಾಗ ತಮ್ಮದು ಈ ಭೂಭಾಗ ನಮ್ಮದು ಎನ್ನುತ್ತಾ ನಮ್ಮ ಸೈನಿಕರನ್ನು ಕೊಲ್ಲುತ್ತಾ ಇತ್ತ ಬರುತ್ತಿದ್ದಾರೆ. ಅವರ ಯೋಚನೆಯ ಅನುಸಾರಕರಾದ ಈ ಕಮ್ಯೂನಿಸ್ಟರು ಇಲ್ಲೇ ಇರುವಾಗ ಅವರೇತಕ್ಕಾಗಿ ಆ ವೇಷಗಳಲ್ಲಿ ಇತ್ತ ಬರಬೇಕೋ! ನಾಕಾಣೆ...."

ಹೀಗೆ ಚೆನ್ನ ಮುಂದರಿಯುತ್ತಿದ್ದಾಗ ಮೇಡೆ (ತಮಿಳು ಮೇಡೆ ಅಂದರೆ ಕನ್ನಡ ವೇದಿಕೆ) ಬರಿದಾಗಿತ್ತು, ಸಭಿಕರೂ ತೆಳ್ಳಗಾಗಿದ್ದರು. ಅವನ ಮಾತಿಗೆ ದೇವಸ್ಥಾನದ ಘಂಟೆ ಹೂಂಗುಟ್ಟುತಿತ್ತು.

ಶ್ರೀ ಎ. ಬಿ. ಶೆಟ್ಟಿ
ಸ್ಮಾರಕ ನಿಧಿಗೆ
ಸಹಾಯ ಮಾಡಿರಿ

ವಿಜ್ಞಾನ ವಿಸ್ಮಯ

(೧ನೇ ಪುಟದಿಂದ)

ಇಥಿಯೋಪಿಯಾ ಸಮರದಲ್ಲಿ 'ಮಸ್ಟರ್ಡ್ ಗ್ಯಾಸು"ಗಳನ್ನು ಪ್ರಯೋಗಿಸಿದನು. ಕೀಟಾಣು ಗ್ಯಾಸ್‌ಗಳ ಮೇಲೆ ಪ್ರಯೋಗ ಮಾಡುತ್ತ, ಸ್ನಾಯು ಗ್ಯಾಸುಗಳೊಡನೆ ಹೋಲಿಸುವಾಗ ಎಲ್ಲ ಉಳಿದ ಗ್ಯಾಸುಗಳು ಕೀಳ್ಮಟ್ಟದವೆಂದು ವಿಜ್ಞಾನಿಗಳು ಕಂಡುಕೊಂಡರು. ಈ ಗ್ಯಾಸುಗಳು ವರ್ಣರಹಿತ, ಪರಿಮಳ ರಹಿತ ಮತ್ತು ಒಂದು ಮಿತ ಸಮಯದ ವರೆಗೆ ಪ್ರಭಾವಶಾಲಿಗಳಾಗಿರುವವುಗಳೆಂದು ಸಿದ್ಧ ಮಾಡಿದರು. ಇದರ ಪ್ರಯೋಗದಿಂದ ಶರೀರದ ನಾಡಿಗಳು ಒಡೆಯತೊಡಗುತ್ತವೆ. ಅಧಿಕ ಪ್ರಮಾಣದಲ್ಲಿ ಯಾರ ಮೇಲಾದರೂ ಇವನ್ನು ಪ್ರಯೋಗಿಸಿದರೆ ಅವರು ಖಂಡಿತಕ್ಕೂ ಮೃತ್ಯುವಶರಾಗುತ್ತಾರೆ.

ದ್ವಿತೀಯ ಜಾಗತಿಕ ಸಮರ ಪ್ರಾರಂಭವಾಗುವಾಗ ಇಕ್ಕಡೆಯವರಲ್ಲೂ ವಿಷಯುಕ್ತ ಗ್ಯಾಸುಗಳ ಭಂಡಾರವಿದ್ದುವು. ಗ್ಯಾಸು ಯುದ್ಧ ಮಾಡಲು ಅವರು ಸಿದ್ಧರಾಗಿಯೂ ಇದ್ದರು. ಆದರೆ ಗ್ಯಾಸು ಯುದ್ಧದಲ್ಲಿ ಶತ್ರು ಪಕ್ಷದ ಶಕ್ತಿಯೆಷ್ಟೆಂಬುದರ ಪರಿಜ್ಞಾನವಿಲ್ಲದುದರಿಂದ ಹಾಗೂ ಈ ಯುದ್ಧದಲ್ಲಿ ರಕ್ಷಿಸಿಕೊಳ್ಳುವ ಉಚಿತ ಸಾಧನಗಳ ಅಭಾವವಿದ್ದುದರಿಂದ ಅವು ಪ್ರಯೋಗಕ್ಕೆ ಇಳಿಯಲಿಲ್ಲ. ಮಹಾಯುದ್ಧ ಸಮಾಪ್ತವಾದನಂತರ ಈ ಬಗ್ಗೆ ಸಂಶೋಧನೆಗಳು ನಡೆದುವು. ಅವಿನ್ನೂ ಕೊನೆಗೊಂಡಿಲ್ಲ. ಇಂತಹ ಗ್ಯಾಸುಗಳ ಶೋಧ ಮತ್ತಷ್ಟು ನಡೆಯುತ್ತ ಇದೆ. ಶತ್ರು ಸೇನೆಯನ್ನು ಸಂಪೂರ್ಣ ನಾಶಮಾಡದೆ ಸ್ವಲ್ಪ ಸಮಯದ ವರೆಗೆ ನಿರ್ಬಲಗೊಳಿಸುವುದು ಈಗ ಸಾಧ್ಯವೆನಿಸಿದೆ.

ಹೀಗೆ ಹೊಸತಾಗಿ ಕಂಡುಹುಡುಕಿದ ಗ್ಯಾಸುಗಳನ್ನು 'ಸಾರ್ಕೊಕೆಮಿಕಲ್ಸ್' ಎನ್ನುತ್ತಾರೆ. ಮೇಜೆಲೈನ್, ನೆ ಫೆಡ್ರೈನ್ ಲೀಸರ್ಜಿಕ್ ಎಸಿಡ್ ಮತ್ತು ಅಂತಹುದೇ ಔಷಧಿಗಳಿಂದ ಈ ಹೊಸ ಗ್ಯಾಸುಗಳನ್ನು ತಯಾರಿಸಲಾಗುತ್ತಿದೆ.

ಈ ಗ್ಯಾಸುಗಳ ಪರಿಣಾಮ ಎರಡು ವಿಧಗಳಲ್ಲಿ ಆಗುತ್ತದೆ. ಕೆಲವು ಗ್ಯಾಸುಗಳು ಸ್ವಲ್ಪ ಸಮಯ ಮಾನಸಿಕ ಶಕ್ತಿಯ ಮೇಲೆ ಆಘಾತವನ್ನುಂಟು ಮಾಡುತ್ತವೆ. ಪ್ರಭಾವಿತವ್ಯಕ್ತಿಯ ಇಚ್ಛಾಶಕ್ತಿಯನ್ನೇ ಅವು ನಷ್ಟಪಡಿಸುತ್ತವೆ. ಎರಡನೆ ವರ್ಗದ ಗ್ಯಾಸುಗಳ ಶಾರೀರಿಕ ವಿಕಾರ (ಉದಾಹರಣೆಗಾಗಿ ರಕ್ತಕ್ಷಯ, ಪಕ್ಷಾಘಾತ, ಅಂಗವನ್ನು ನಿಶ್ಚೇಷ್ಟಿತಗೊಳಿಸುವುದು, ಶರೀರದಲ್ಲಿ ಬಗೆಬಗೆಯ ಪೀಡೆಗಳು ತಲೆದೋರುವುದು)ವನ್ನುಂಟು ಮಾಡುತ್ತವೆ.

ಶಸ್ತ್ರೋಪಯೋಗವನ್ನು ವಿಜಯದಾಸೆಯಿಂದ ಮಾಡುತ್ತಾರೆ. ಆದುದರಿಂದ ಸೈನಿಕ ದೃಷ್ಟಿಯಿಂದ ಇವುಗಳ ಉಪಯೋಗವು ಎಷ್ಟರ ಮಟ್ಟಿಗೆ ಆಗುವುದೆಂದು ಹೇಳುವುದು ಕಠಿನ. ಏಕೆಂದರೆ, ಇವುಗಳಿಂದ ತಪ್ಪಿಸಿಕೊಳ್ಳುವ ಮತ್ತು ಇವುಗಳಿಗೆ ಪ್ರತೀಕಾರವೆಸಗುವ ಉಪಾಯಗಳೂ ಸುಧಾರಿಸುತ್ತಿವೆ. 'ಇಲೆಕ್ಟ್ರಾನಿಕ್ಸ್'ನಿಂದ ಇವುಗಳನ್ನು ಕಂಡು ಹಿಡಿಯುವುದು ಸರಳವೆನಿಸಿದೆ.

ರಾಸಾಯನಿಕ ಗ್ಯಾಸುಗಳಲ್ಲಿ ಯಾವುದು ಎಷ್ಟು ಮಾರಕ ಅಥವಾ ಸಂಹಾರಕವೆಂಬುದರ ವಿಸ್ತೃತ ಜ್ಞಾನವು ಇನ್ನೂ ಆಗಿಲ್ಲ. ನಿವಾರಣೋಪಾಯವಿಲ್ಲದ ಕೆಲವು ಗ್ಯಾಸುಗಳು ಈಗ ಕೆಲವು ರಾಷ್ಟ್ರಗಳಲ್ಲಿವೆ. ಈ ಗ್ಯಾಸುಗಳ ಪ್ರಭಾವ ಮತ್ತು ಈ ಬಗೆ ನಡೆದ ವ್ಯಾಪಕ ಪ್ರಯೋಗಗಳನ್ನು ನೋಡುತ್ತ ಹೇಳುವುದಾದರೆ, ಭಾವೀ ಯುದ್ಧದಲ್ಲಿ ರಾಸಾಯನಿಕ ಗ್ಯಾಸುಗಳ ಪ್ರಯೋಗ ನಡೆಯಿತೆಂದರೆ, ಅದು ಅಣುಯುದ್ಧಕ್ಕಿಂತಲೂ ಅಧಿಕ ವಿನಾಶಕಾರಿ ಮತ್ತು ಸರ್ವನಾಶಕಾರಿ ಯಾಗುವುದೆಂದು ಹೇಳಬಹುದು.

ವರ್ಜೀನಿಯದ ಪ್ಲೈಟ್ ಕೇಂಪಿನಲ್ಲಿ ಉಪಗ್ರಹ ಹಾರಿಸಿದಾಗ ತೆಗೆದ ಚಿತ್ರ

ಸಿಂಡಿಕೇಟ್ ಬೇಂಕ್

ನಿಮ್ಮ ಕಷ್ಟಾರ್ಜಿತ ಹಣವನ್ನು ನಾಳೆಗೆಂದು ನೀವು ಉಳಿಸಲು ಬಯಸುವಾಗ ಅದರ ಭದ್ರತೆ ಮತ್ತು ಅದಕ್ಕೆ ಸಿಗುವ ಬಡ್ಡಿಯ ಕಡೆಗೆ ನೀವು ಸಹಜವಾಗಿ ಗಮನ ಕೊಡುತ್ತೀರಿ

ಉತ್ತಮ ಭದ್ರತೆ ಯೋಗ್ಯ ಬಡ್ಡಿ

ಸಿಂಡಿಕೇಟ್ ಬ್ಯಾಂಕ್ ಠೇವಣಾತಿಗಳ ಮೇಲಿನ ಬಡ್ಡಿಯ ದರವನ್ನು ಹೆಚ್ಚಿಸಿದ್ದು, ಸೇವಿಂಗ್ಸ್ ಬ್ಯಾಂಕಿನ ಮೇಲೆ ಶೇಕಡಾ ಮೂರರಷ್ಟು ಚಕ್ರ ಬಡ್ಡಿಯನ್ನು ಕಾಯಂ ಠೇವಣಾತಿಯ ಮೇಲೆ ಮತ್ತೂ ಹೆಚ್ಚಿನ ದರದಲ್ಲಿಯೂ ಬಡ್ಡಿಯನ್ನು ಕೊಡಲು ನಿರ್ಧರಿಸಿದೆ.

ಕಾಯಂ ಠೇವಣಾತಿಯ ಮೇಲಿನ ವಿವಿಧ ಅವಧಿಗಳ ಬಡ್ಡಿಯ ದರವನ್ನು ನಿಮಗೆ ಸಮೀಪವಿರುವ ನಮ್ಮ 141 ಶಾಖೆಗಳಲ್ಲೊಂದರಲ್ಲಿ ದಯದೂಡಿ ವಿಚಾರಿಸಿರಿ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ರಜಿಸ್ಟರ್ಡ್ ಆಫೀಸು: ಮುಕುಂದ ನಿವಾಸ, ಉಡುಪಿ.
ಸ್ಥಾಪನೆ: 1925.

ನವಯುಗಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ

Edited Printed & Published by K. H. Shetty, at the Navayuga Press, Udipi, S. India.

40th year of publication. 27-4-1961 ೪೦ನೇ ವರ್ಷ

ಸಂಪುಟ ೪೦ Vol. 40

ನವಯುಗ

ಸಂಚಿಕೆ ೩೩ No. 33

ಬೆಲೆ 0=13

ಪ್ರಚಲಿತ ಪ್ರಸಂಗ:

ಮೈಸೂರಿನ ಕಡ್ಡಾಯ ಶಿಕ್ಷಣ ಯೋಜನೆ

ತೃತೀಯ ಯೋಜನಾವಧಿಯಲ್ಲಿ ೬ರಿಂದ ೧೧ ವರ್ಷದ ಮಕ್ಕಳಿಗೆ ಉಚಿತ ಅನಿವಾರ್ಯ ಶಿಕ್ಷಣ ನೀಡುವ ಯೋಜನೆಯು ಮೈಸೂರು ರಾಜ್ಯದ ಮುಂದಿದೆ. ಯೋಜನೆಯ ಬಾಹ್ಯ ರೂಪವು ಅನಿವಾರ್ಯ ಶಿಕ್ಷಣದ ಯಶಸ್ವಿತೆಗೆ ಪೋಷಕವಾಗಿಲ್ಲವೆಂದೇ ಹೇಳಬೇಕಾಗುತ್ತದೆ

೧೯೬೧ರ ಮೈಸೂರು ಪ್ರಾಥಮಿಕ ಶಿಕ್ಷಣ ಮಸೂದೆಯು ವಿಧಾನ ಸಭೆಯಲ್ಲಿ ಮಂಡಿಸಲ್ಪಟ್ಟು, ಅದರ ಮೇಲೆ ಚರ್ಚೆಯು ನಡೆಯಿತು. ಸರ್ವಸಾಮಾನ್ಯವಾಗಿ ಚರ್ಚೆಯಲ್ಲಿ ಭಾಗವಹಿಸಿದ ವಿವಿಧ ಪಕ್ಷಗಳಿಗೆ ಸೇರಿದ ಸದಸ್ಯರೆಲ್ಲರೂ ಈ ಮಸೂದೆಯನ್ನು ಮನಃಪೂರ್ವಕವಾಗಿ ಸ್ವಾಗತಿಸಿದರು ವಿರೋಧೀ ಪಕ್ಷದ ನಾಯಕರಾದ ಶ್ರೀ ಜೆ. ಬಿ. ಮಲ್ಲಾರಾಧ್ಯರು ಗ್ರಾಮವಾಸಿಗಳ ಬೆಂಬಲವಿಲ್ಲದೆ ಈ ಮಸೂದೆಯಲ್ಲಿ ಅಡಕವಾದ ಕಡ್ಡಾಯ ಶಿಕ್ಷಣವು ಫಲಕಾರಿಯಾಗುವುದಿಲ್ಲವೆಂದು ಹೇಳಿ, ಶಿಕ್ಷಣದ ಬಗ್ಗೆ ಗ್ರಾಮವಾಸಿಗಳಲ್ಲಿ ಉತ್ಸಾಹ ಹುಟ್ಟಿಸುವುದಕ್ಕೆ ಅವಶ್ಯಕ ಪೂರ್ವಭಾವೀ ಕ್ರಮಗಳನ್ನು ಕೈಗೊಂಡಿಲ್ಲವೆಂದು ದೂರಿದರು. ತಮ್ಮ ಮಕ್ಕಳನ್ನ ಶಾಲೆಗೆ ಕಳಿಸಲು ತಪ್ಪಿದ ರಕ್ಷಕರಿಗೆ ನೀಡುವ ಶಿಕ್ಷೆಯು ಉಗ್ರವಾಗಿರಬೇಕೆಂದು ಇವರು ಅಭಿಪ್ರಾಯಪಟ್ಟರು.

ಈ ವಿಧೇಯಕದಲ್ಲಿ ಆರರಿಂದ ಹನ್ನೊಂದು ವರ್ಷ ವಯಸ್ಸಿನ ಮಕ್ಕಳಿಗೆ ಕಡ್ಡಾಯ ಶಿಕ್ಷಣವನ್ನು ನೀಡುವ ಹಂಚಿಕೆಯಿದೆ. ರಾಜ್ಯದಲ್ಲಿ ಕಡ್ಡಾಯ ಶಿಕ್ಷಣವನ್ನು ಉಚಿತವಾಗಿ ನೀಡುವುದಕ್ಕೆ ಅನುಕೂಲವಾಗುವಂತೆ ವಿಧೇಯಕವನ್ನು ಮಂಜೂರುಮಾಡಲು ಕೇಂದ್ರ ಸರಕಾರವು ಇತ್ತ ಆದೇಶವನ್ನು ಈ ವಿಧೇಯಕವು ಎತ್ತಿತೋರಿಸಿದೆ ಮೂರನೆಯ ಪಂಚವಾರ್ಷಿಕ ಯೋಜನೆಯ ಅಂತ್ಯದೊಳಗೆ ೬ರಿಂದ ೧೧ ವರ್ಷದೊಳಗಿನ ಮಕ್ಕಳಿಗೆಲ್ಲ ಶಿಕ್ಷಣವನ್ನು ಕೊಡುವುದಕ್ಕೆ ನಿರ್ಧರಿಸಿದೆ

ಈಗ ಮೈಸೂರು ರಾಜ್ಯದ ವಿವಿಧ ಪ್ರದೇಶಗಳಲ್ಲಿ ಬೇರೆ ಬೇರೆ ರೀತಿಯ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದ ನಿಯಮಗಳಿವೆ. ಭಾರತ ಸರಕಾರವು ಒಂದು ಮಾದರಿ ವಿಧೇಯಕವನ್ನು ರಾಜ್ಯಸರಕಾರಕ್ಕೆ ಕಳಿಸಿದ್ದು, ಇದರನ್ವಯ ಇಡಿ ರಾಜ್ಯದಲ್ಲಿ ಏಕರೂಪದ ಪ್ರಾಥಮಿಕ ಶಿಕ್ಷಣ ನಿಯಮಗಳನ್ನು ರೂಪಿಸುವುದು ಅನಿವಾರ್ಯವಾಗಿದೆ.

ಈ ವಿಧೇಯಕಕ್ಕೆ ಆರ್ಥಿಕ ಜ್ಞಾಪಕಪತ್ರವೊಂದನ್ನು ಜೋಡಿಸಲಾಗಿದೆ. ಇದರಲ್ಲಿ ನಮೂದಿಸಿದಂತೆ ೧೯೬೫—೬೬ರಲ್ಲಿ ರಾಜ್ಯದ ಜನಸಂಖ್ಯೆಯು ೨೬೨.೪ ಲಕ್ಷವಾಗುವುದು. ಇವರಲ್ಲಿ ೬ರಿಂದ ೧೧ ವಯಸ್ಸಿನ ೩೪ ಲಕ್ಷ ಮಕ್ಕಳಲ್ಲಿ ನೂರಕ್ಕೆ ಹತ್ತರಂತೆ ದೈಹಿಕ ಊನವಿದ್ದವರೆಂದು ಹೇಳಬಹುದಾದರೂ ಉಳಿದವರು ೩.೨ ಲಕ್ಷವಾಗುವರು. ಇವರಲ್ಲಿ ಈಗ ೨೧.೪ ಲಕ್ಷದಷ್ಟು ಮಕ್ಕಳು ಶಾಲೆಗೆ ಹೋಗುತ್ತಿರುವುದರಿಂದ ಇನ್ನು ಹತ್ತು ಲಕ್ಷದಷ್ಟು ಮಕ್ಕಳಿಗೆ ಶಿಕ್ಷಣದ ಸೌಕರ್ಯವನ್ನು ಒದಗಿಸಬೇಕಾಗುವುದು. ಹೆಚ್ಚಿನ ಮಕ್ಕಳಿಗಾಗಿ ಶಾಲೆಗಳಲ್ಲಿ ಸುಮಾರು ೨೫ ಸಾವಿರ ಅಧ್ಯಾಪಕರನ್ನು ಪಂಚವಾರ್ಷಿಕ ಯೋಜನಾವಧಿಯಲ್ಲಿ ನೇಮಿಸಬೇಕಾಗುವುದು ಆಗ ಸರ್ವಸಾಧಾರಣವಾಗಿ ಅಧ್ಯಾಪಕ ವಿದ್ಯಾರ್ಥಿಗಳ ನಿಷ್ಪತ್ತಿಯು ೧.೪೦ ಆಗುವುದು.

ಮೂರನೆಯ ಯೋಜನಾವಧಿಯಲ್ಲಿ ಕಡ್ಡಾಯ ಶಿಕ್ಷಣದ ಸಲುವಾಗಿ ೮೧೦ ಲಕ್ಷ ರೂಪಾಯಿಗಳನ್ನು ವ್ಯಯಿಸಲು ನಿರ್ಧರಿಸಲಾಗಿದೆ. ಈ ಮೊತ್ತದಲ್ಲಿ ೧೯೬೧—೬೨ನೆ ವರ್ಷಕ್ಕೆ ರೂ. ೪೧ ಲಕ್ಷವನ್ನು ತೆಗೆದಿರಿಸಿದೆ ರೂ ೬೩೪ ಲಕ್ಷಗಳನ್ನು ಇಡಿ ಯೋಜನೆಯ ಅವಧಿಯಲ್ಲಿ ಹೆಚ್ಚಿನ ಅಧ್ಯಾಪಕರನ್ನು ನೇಮಿಸಿಕೊಳ್ಳಲು ವಿನಿಯೋಗಿಸಲಾಗಿಟ್ಟಿದ್ದು ಇದರಲ್ಲಿ ೧೧ ಲಕ್ಷವನ್ನು ಮುಂದಿನ ಶೈಕ್ಷಣಿಕ ವರ್ಷದಲ್ಲಿ ಬಳಸಿಕೊಳ್ಳಲಾಗುವುದು. ಮೂರನೆಯ ಯೋಜನೆಯಲ್ಲಿ ಅನಿವಾರ್ಯ ಶಿಕ್ಷಣದ ಬಗ್ಗೆ ಕೇವಲ ರೂ. ೩೮ ಲಕ್ಷದಷ್ಟನ್ನು ಕೇಂದ್ರ ಸರಕಾರವು ರಾಜ್ಯಕ್ಕೆ ಸಹಾಯ ರೂಪದಲ್ಲಿ ನೀಡುವುದೆಂದು ಅಂದಾಜು ಹಾಕಲಾಗಿದೆ.



ಅಮೇರಿಕೆಯ ಶ್ವೇತಭವನದತ್ತ ತೆರಳಿದ ಕಿಕ್ಕಿರಿದ ಜನ ಸಂದಣಿಯ ನಡುವೆ ನಡೆಯುತ್ತಿರುವ ಸೈನಿಕ ಪರೇಡು.

ಮೂರನೆಯ ಪಂಚವಾರ್ಷಿಕಯೋಜನೆಯ ಅಂತ್ಯದಲ್ಲಿ ಸಂಪೂರ್ಣ ಹಣವೂ ವೆಚ್ಚವಾಗಲಿದೆ. ಕೇಂದ್ರ ಸರಕಾರದ ಸಹಾಯವು ದೊರೆಯದೆ ಹೋದರೆ, ಪ್ರತಿ ವರ್ಷಕ್ಕೆ ರೂ. ೨೫೦ ಲಕ್ಷದಷ್ಟು ಹೆಚ್ಚಿನ ಖರ್ಚನ್ನು ರಾಜ್ಯಸರಕಾರವು ನೋಡಿಕೊಳ್ಳಬೇಕಾಗುವುದು ಈಗ ನಿರ್ದೇಶಿಸಲಾದ ಈ ಹಣವು ರೂ. ೭೫೪ ಲಕ್ಷ ಪ್ರಾಥಮಿಕ ಶಿಕ್ಷಣ ಮತ್ತು ೩೬ ಲಕ್ಷ ಅಧ್ಯಾಪಕರ ತರಬೇತಿಗೆ ಸಾಮಾನ್ಯವಾಗಿ ತಗಲುವ ವೆಚ್ಚವನ್ನು ಹೊರತಾಗಿದೆ ಎಂದರೆ, ರಾಜ್ಯ ಸರಕಾರವು ಈಗ, ಒಟ್ಟು ಪ್ರಾಥಮಿಕ ಶಿಕ್ಷಣಕ್ಕಾಗಿ ರೂ. ೭೧೦ ಲಕ್ಷದಷ್ಟನ್ನು ಪ್ರತಿವರ್ಷ ವ್ಯಯಿಸುತ್ತಿದ್ದರೆ, ಮೂರನೆಯ ಯೋಜನಾಂತ್ಯದ ನಂತರ ರೂ, ೧೦೪೦ ಲಕ್ಷದಷ್ಟನ್ನು ತೆಗೆದಿರಿಸಬೇಕಾಗುವುದು.

ಕಡ್ಡಾಯ ಶಿಕ್ಷಣದ ಶಾಸನವನ್ನು ಉಲ್ಲಂಘಿಸುವುದು ಅಪರಾಧವೆಂದು ಪರಿಗಣಿಸಲಾಗುತ್ತದೆ. ಇಂತಹ ಅಪರಾಧಗಳನ್ನು ವಿಚಾರಣೆ ನಡೆಸಲು ಪ್ರಾಥಮಿಕ ಶಾಲಾ ಪಂಚಾಯತು ನ್ಯಾಯಾಲಯಗಳನ್ನು ಸ್ಥಾಪಿಸಲಾಗುವುದು ಈ ನ್ಯಾಯಾಲಯದಲ್ಲಿ ಗ್ರಾಮ ಪಂಚಾಯತಿನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು, ಜಿಲ್ಲಾ ವಿದ್ಯಾಧಿಕಾರಿಗಳು ನಾಮಕರಣಮಾಡುವ ಮಹಿಳಾ ಸದಸ್ಯರೊಬ್ಬರು ಇರುತ್ತಾರೆ. ಕಡ್ಡಾಯ ಶಿಕ್ಷಣ

(೭ನೇ ಪುಟ ನೋಡಿರಿ)

'ನಚಿಕೇತ'ರ ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.

120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟು ಮಾಡಬಹುದು

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ, ಉಡುಪಿ

ಮಾರಾಟಗಾರರು: ನವಭಾರತ ಬುಕ್ ಡಿಪೊ, ಉಡುಪಿ.

ESTD. 1921

NAVAYUGA
KANNADA WEEKLY,
UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೨೧.

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್.
ಬಿ. ರಾಮರಾಯ ಶೆಟ್ಟಿ, ಬಿ. ಎ., ಎಲ್. ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್) ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್) ಕಲಂ ಇಂಚಿಗೆ ರೂ. 3 50
ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ ನವಯುಗದ ಖಾತೆಗೆ ಜಮಾ ಮಾಡುವ ಸೌಕರ್ಯವಿರುವುದು.

ಕಥಾವಿಹಾರ:

ಇದು ಯಾವ ತಿಂಗಳು?

ತನ್ನ ಪ್ರೇಮದ ವಿಧಾನ ಸೌಧಕ್ಕೆ ಬೋಂಬು ಎಸೆದ ಮಧುವಿನ ಮೇಲೆ ಕೋಪ ತಾಳಿದ ಮೃದುಲಳನ್ನು ನೋಡ ಬಂದ ಡಾಕ್ಟರು ಶಾಂತಗೊಳಿಸಿದ ಸ್ಟೆತೊಸ್ಕೋಪ್ ತರಲು ಮರೆತ ಆತ ನಾಡಿ ಮುಟ್ಟಿಯೇ ರೋಗ ಪರೀಕ್ಷೆ ಮಾಡಿ ಔಷಧಿಯಿತ್ತ.

ಶ್ರೀ ಸಾಗರ್, ಉಡುಪಿ.

ಕಡಲಿಂದ ಕರೆಗೆ ಬೀಸಿ ಬರುವ ಗಾಳಿಯಂತೆ ಅಡಿಗೆ ಕೋಣೆಯ ಹೊಸ್ತಿಲಿಗೆ ಬಂದು "ಅಮ್ಮಾ?" ಎಂದಳು ಮಗಳು. ಪುಣ್ಯ ಜೀವಿಯು ಮಿಡಿದ ಮೇಘ—ಮಲ್ಹಾರದ ಮೊರೆಗೆ ಸುರಿದ ಮಳೆಯಿಂದ, ಬರಗಾಲ ಒಡೆದು ಬಗಡಾದ ಭೂಮಿ ಪಡೆಯುವ ತಂಪು ಆ ಅಡಿಗೆಯ ಮನೆಯಲ್ಲೊಮ್ಮೆ ಹರಡಿತು. ಒಲೆಯ ಬಳಿಯಲ್ಲೇ ಬಹಳ ಹೊತ್ತು ಅಡ್ಡಾಡಿದ್ದರಿಂದ ಬೋಳು ಹಣೆಯಲ್ಲಿ ಒಸರಿದ್ದ ಬೆವರನ್ನು ಬೆನ್ನ ಮೇಲೆ ಬಿದ್ದು ಕಚ್ಚಿಕೊಂಡಿದ್ದ ತನ್ನ ಬಿಳಿಯ ಬಟ್ಟೆಯ ಸೆರಗಿನಿಂದ ಒರಸಿಕೊಳ್ಳುತ್ತಾ "ಹ್ಞಾಂ" ಎಂದು ಓಗೊಟ್ಟಳು ತಾಯಿ. ಅದೊಂದು ಹೂಂಕಾರದಲ್ಲಿ ಆಶಾವಾದದ ಭಾವವೆಲ್ಲಾ ಜೀವಗೊಂಡಿತ್ತು. ಗಂಡ ಮಾಧವ ರಾಯರಿಗೆ ಜವ್ವನದಲ್ಲೇ ಜನ ಕಳುಹಿಸಿದ್ದ ಜವರಾಯ. ಮತ್ತೆ ಕಾವೇರಿಯಮ್ಮನವರ—ಬದುಕಿಗೆ ಬೆಳಕನ್ನು ನೀಡಬಲ್ಲ ಶಕ್ತಿ ಅವರ ಏಕಮಾತ್ರ ಪುತ್ರಿ. ತನ್ನ ಕರುಳಿನ ಕುಡಿ ಚಿಗುರುವ ಸುಸಮಯ ಸನ್ನಿಹಿತವಾಗಿತ್ತು. ಆದರೂ ಹೇಳಬೇಕಾದ ವಿಷಯವನ್ನು ನೇರವಾಗಿ ಸೂಚಿಸಲು ಮನಸ್ಸಿಲ್ಲದ, ಬಿರಿದ ತುಟಿ, ಮಿನುಗುವ ಕಣ್ಣುಗಳಿಂದ ಅಲ್ಲೇ ನಿಂತು ತನ್ನನ್ನೇ ನೋಡುತ್ತಿದ್ದ ಕುವರಿಯ ಗಲ್ಲದ ಕಲರವವನ್ನು ಮತ್ತೆ ಆಲಿಸುವ ಆಸೆಯಿಂದ ಪ್ರಶ್ನಿಸಿದರು ಕಾವೇರಿಯಮ್ಮ "ಹೇಸರ ಕತ್ತೆಗಳೂ ಹೊರಲಾರದಷ್ಟು ಭಾರದ ಪುಸ್ತಕಗಳನ್ನು ಹಾಗೆ ಹೊತ್ತುಕೊಂಡರೆ ಇನ್ನೂ ಬೆಳೆಯಬೇಕಾದ ನಿನ್ನ ಎದೆಗೆ ತ್ರಾಸವಾಗುವುದಿಲ್ಲವೇನಮ್ಮಾ?" ಬಾಹುಗಳ ಬುಟ್ಟಿಯೊಳಗೆ ಹಿಡಿಯಬಹುದಾದಷ್ಟು ಪುಸ್ತಕಗಳನ್ನು ಹೇರಿಕೊಂಡಿದ್ದಳು ಆ ವಿದ್ಯಾರ್ಥಿನಿ. "ನಮ್ಮ ಶಿಕ್ಷಕರೆಲ್ಲಾ ಬೆಳಗಿನಿಂದ ಸಂಜೆಯತನಕ ನೋಟ್ಸ್ ಬರೆಸಿದರೆ ಪುಸ್ತಕಗಳನ್ನು ಹೊಂದದೆ ಮತ್ತೇನು ಮಾಡಲಮ್ಮಾ?" ಮರುಪ್ರಶ್ನೆ ಹಾಕಿದಳು ಮಗಳು. ಮಾತು ಮುಗಿಯುವಷ್ಟರಲ್ಲೇ ಕೇಳಿದರು ತಾಯಿ "ಅಂದ್ರೆ ಲೆಕ್ಚರ್ ಮಾಡೋದಿಲ್ಲವೇ?" 'ಮೊಶನಾಡಲು ಪ್ರಯತ್ನ ಮಾಡ್ತಾರಮ್ಮಾ" ಎಂದು ತೇಪೆಹಾಕಿದಳು ಮಗಳು. ಎಷ್ಟೆಂದರೂ ತಾನು ವಿದ್ಯಾರ್ಥಿನಿಯಲ್ಲವೆ? "B. A, M. A. ಮಾಡಿ ದವಡೆಗೆ ಹೊಡೆದರೂ ಎರಡಕ್ಷರ ಸರಿಯಾಗಿ ಬೊಗಳಲಿಕ್ಕೆ ಬಾರದಿದ್ದರೆ ನಿಮ್ಮಂತಹವರಿಗೆ ವಿದ್ಯೆ ಕಲಿಸಿ ಯಾವ ಪೀಠದಲ್ಲಿಟ್ಟು ಪೂಜೆ ಮಾಡಬೇಕೋ ನೀನೇ ಹೇಳು?" ತನ್ನನ್ನೆ ತಪ್ಪಿತಸ್ಥಳನ್ನಾಗಿ ಮಾಡಿದ ತಾಯಿಯನ್ನು ಕೇಳಿದಳು "ದನ ಹಾಲು ಕೊಡದಿದ್ದರೆ ಕರುವಿಗೆ ಯಾಕಮ್ಮಾ ಹೊಡೆಯಬೇಕು?" "ಹಾಲುಕೊಡದ ದನದ ಕರು ಕೂಡಾ ದನವಾದ ಮೇಲೆ ಹಾಲು ಕೊಡೋದಿಲ್ಲ" ಎಂದರು ಕಾವೇರಿಯಮ್ಮ. ತನಗೆ ಸಿಕ್ಕಿದ್ದ ಹೊಸ ಅಸ್ತ್ರದಿಂದ ತಾಯಿಯನ್ನು ಗೆಲ್ಲುವ ಹುಮ್ಮಸ್ಸು ಹುಟ್ಟಿ "ನಿಂಗೊಂದು ಸಂತೋಷದ ಸಮಾಚಾರ ತಿಳಿಸಬೇಕೂಂತ ಇದ್ದೆ ಅದಕ್ಕೆ ಸರಿಯಾದ ಸಂದರ್ಭ ಒದಗಿಸಿಕೊಟ್ಟಿದ್ದಕ್ಕಾಗಿ ಮಾತೆಯೇ ಇದೋ ನಿನಗೆ ನನ್ನ ಅಭಿನಂದನೆಗಳು ಸಲ್ಲುತ್ತವೆ" ಎಂದು ನಾಟಕದ ಧಾಟಿಯಲ್ಲಿ ನಾಯಕನ ಭಂಗಿಯನ್ನಿತ್ತು—ನಿಂತಳು. ಕಾಲೇಜಿನ ವಿದ್ಯಾರ್ಥಿನಿ, ರೂಪರಾಣಿ ಎಂದ ಮೇಲೆ ನಟಿಯೂ ಇರಬಹುದು ಆಕೆ. ಮಗಳ ನಟನೆಗೆ ಸಂತೋಷಗೊಂಡು ಕಾವೇರಿಯಮ್ಮ ಕೇಳಿದರು "ಏನೇ ಅದು?" ತಾಯಿಯ ತವಕವನ್ನು ಕಂಡು ಅಷ್ಟರವರೆಗೂ ಅಪ್ಪಿಕೊಂಡಿದ್ದ ತನ್ನ ಪುಸ್ತಕಗಳನ್ನು ಕೆಳಗಿಟ್ಟು ತಾಯಿಯ ಕೊರಳನ್ನು ತನ್ನ ಕೈಗಳಿಂದ ಬಿಗಿಸುತ್ತಿ ಕೇಳಿದಳು "ಹೇಳಿದರೆ ನಂಗೇನು ಕೊಡುತ್ತೀಯಮ್ಮಾ?" ತಾನೂ ಮಗಳ, ಬಾಲರವಿಗೆ ಹಿಡಿದ ಕನ್ನಡಿಯಂತೆ ಹೊಳೆಯುವ ಕೆನ್ನೆಗಳನ್ನು ಚಿವುಟ ಹೇಳಿದರು 'ನಿನಗೂ ಒಂದು ಶುಭವಾರ್ತೆಯನ್ನು ತಿಳಿಸುತ್ತೇನೆ." "ಹಾಗಾದರೆ ಹೇಳ್ತೀನೆ—ನಂಗೆ ಭಾಷಣ ಸ್ಪರ್ಧೆಯಲ್ಲಿ ಮೊದಲನೆ ಬಹುಮಾನ ಬಂದಿದೆ ಅಮ್ಮಾ" ಕಾವೇರಿಯಮ್ಮ ಕಣ್ಣುಬಿಟ್ಟು ಬಾಯಿ ಅಗಲಿಸಿ ಕೇಳಿದರು—"ಹೌದೆ?". 'ಮತ್ತೆ ಅರ್ಧಗಂಟೆ ಕಾಲ ಭಡಿಮಳೆ ಸುರಿದ ಹಾಗೆ ಭಾಷಣ-ಬಿಗಿದ್ರೆ ಎಲ್ಲಿ ಹೋಗ್ತಾರೆ ಬಹುಮಾನ ಕೊಡದೆ?" ಪ್ರಾಮಾಣಿಕವಾದ ಕೆಲಸಕ್ಕೆ ತಕ್ಕ ಫಲ ಸಿಗಬೇಡವೇ? ಮುಂದುವರಿಸಿ ಕೇಳಿದಳು "ಈಗ ಹೇಳಮ್ಮಾ ನಂಗೆ ಯಾವ ಪಟ್ಟ ಕಟ್ಟುತ್ತೀಂತ?" ಸೋಲಿನಲ್ಲೂ ಸವಿಯನ್ನು ಕಾಣುವವರಂತೆ "ನೀನಿಷ್ಟು ಜಾಣೇಂತ ನಂಗೆ ಗೊತ್ತಿರ್ಲಿಲ್ಲ ಕ್ಷಮಿಸಮ್ಮ" ಎಂದರು ಕಾವೇರಮ್ಮ "ಅಯ್ಯಯ್ಯೊ ಕ್ಷಮಿಸುವ ಮಾತೇನಮ್ಮಾ ಬಂತು? ಕ್ಷಮೆ ಕೊಡಬೇಕಾದವರು ಕೇಳುವುದು ಸರಿಯಲ್ಲ. ಹೋಗ್ಲಿ ಬಿಡಮ್ಮ ಶುಭಸಂಗ್ತಿ ಅಂದಿಯಲ್ಲಾ ಏನದು ಹೇಳು?" ತಾಯಿಯು ತಿಳಿಸಲಿರುವುದನ್ನು ಕೇಳುವ ಕುತೂಹಲದಿಂದ ಕಿವಿನಿಮಿರಿಸಿ ನಿಂತಳವಳು. "ಅಷ್ಟು ಸುಲಭವಾಗಿ ತಿಳಿಸುವ ವಿಚಾರವಲ್ಲ ಅದು—ಮೊದ್ಲು ಮುಖ ತೊಳ್ಕೊಂಡು ಬಟ್ಟೆ ಬದಲಿಸಿಕೊಂಡು ಮೇಲಿರು. ಅಲ್ಲಿಗೇ ಕಾಫಿ ತಂದ ಕೊಡ್ತೇನೆ ಆಗ್ಲೇ ವಿಷಯವನ್ನು ತಿಳಿಸುತ್ತೇನೆ" ಎಂದವರೇ ಮರೆತದ್ದನ್ನು ಜ್ಞಾಪಿಸಿಕೊಂಡವರಂತೆ "ನೋಡು ನಿಂಗೊಂದು ಕಾಗ್ದ ಬಂದಿದೆ, ಆ ಸ್ಟೂಲಿನ ಮೇಲಿಟ್ಟಿದ್ದೇನೆ ತೆಗೆದುಕೋ" ಎಂದು ಹೇಳಿ ಪುನಃ ತನ್ನ ಅಡಿಗೆ ಮನೆ ವ್ಯವಹಾರದಲ್ಲಿ ಮಗ್ನರಾದರು. ತಾಯಿ ಮಕ್ಕಳ ಸಂಭಾಷಣೆಗೆ ಅಲ್ಪ ವಿರಾಮ ಬಿತ್ತು.

ಮಿಂಚುಳ್ಳಿ ನೀರಿಗೆ ಬಿದ್ದು ಮೀನನ್ನು ಕಚ್ಚಿಕೊಂಡು ಹಾರುವಂತೆ ತನಗೆ ಬಂದ ಪತ್ರವನ್ನು ಎತ್ತಿಕೊಂಡು ವಿಳಾಸ ನೋಡಿ ಅರುಣ ಪಲ್ಲವಗಳೆಡೆಯಿಂದ ಒಂದೇ ಗೊಂಚಲ ಮೂರು ಮುಗುಳುಗಳು ಒಂದರನಂತರ ಮತ್ತೊಂದು ಕ್ರಮವಾಗಿ ಅರಳುವಂತೆ ಮುಚ್ಚಿ ತೆರೆಯುವ ತುಟಿಗಳಿಂದ ಮೆಲ್ಲನೆ ಒಂದೊಂದಾಗಿ ತನ್ನ ಹೆಸರಿನ—ಮೂರು ಅಕ್ಷರಗಳನ್ನು ಉಚ್ಚರಿಸಿದಳು "ಮೃ—ದು—ಲ." ಬರೆದಿದ್ದ ಅಕ್ಷರಗಳು ಕಾಗೆಯ ಕಾಲಿನ ಆದರ್ಶವನ್ನು ಅನುಸರಿಸಿದ್ದರೂ ಓದಿದಾಕೆಯ ಕಣ್ಣಿಗೆ ಕಾಮ ಕೂಡಿಸಿದ ಮುತ್ತಿನ ಮಾಲೆಯಂತೆ ತೋರಿದುವು. ಮನಸು ಮಣಿಯಿತು. ಲಕೋಟೆ ಎದೆಯನ್ನು ಏರಿತು. ಎದೆ ಹೊಡೆದ ಏಟನ್ನು ತಾಳಲಾರದೆ ಅಲ್ಲಿಂದ ಹಾರಿತು ತುಟಿಯ ಬಾಗಿಲಿಗೆ. ಲಕೋಟೆಯನ್ನು ಯಾವಕಡೆಯಲ್ಲಿ ಮುಚ್ಚಿರುವರೋ ಅದೇ ಕಡೆಯಲ್ಲಿ ತೆರೆಯುವ ಕಾಲಾವಕಾಶವಾಗಲೀ ತಾಳ್ಮೆಯಾಗಲೀ ಇಲ್ಲದೇ ಹೋದುದರಿಂದ ಬದಿಯಿಂದಲೇ ಹರಿದು, ತನ್ನೆರಡು ಬೆರಳುಗಳ ಜಂಟಿ ಸಾಹಸದಿಂದ ಪತ್ರವನ್ನು ಹೊರಗೆ ತಂದಳು. ಅಷ್ಟರೊಳಗೆ, ಭಾವುಕ ಮನಸ್ಸು ಸ್ವಪ್ನ ಸಾಮ್ರಾಜ್ಯದ—ಸೋಪಾನಗಳನ್ನೇರುವಂತೆ ಮೃದುಲ ಮಹಡಿಯ ಮೆಟ್ಟಿಲುಗಳನ್ನು ಹತ್ತಿ ಬಂದಿದ್ದಳು. ಇನ್ನೇನು ಮಡಚಿದ್ದನ್ನು ಬಿಚ್ಚಿ ಓದುವುದು ಮಾತ್ರ ಉಳಿದಿತ್ತು. ಅದಕ್ಕೆ ತನ್ನ ಖಾಸಗಿ ಕೋಣೆಯೇ ಸರಿಯಾದ ಸ್ಥಳವೆಂಬುದಾಗಿ ಕಂಡದ್ದರಿಂದ ಮೃದುಲ ಮಿಂಚಿನಂತೆ ಸರಿದಳು. ಬಾಗಿಲನ್ನು ತೆರೆದಳು; ಮುಚ್ಚಿದಳು.

(೧೧ನೇ ಪುಟ ನೋಡಿರಿ)

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ: ಬಡ್ಡಿ ಸೇಕಡಾ 5ರಂತೆ: ರೂ 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100—00 ಒದಗಿಸುವುದು.

ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಸೇಕಡಾ 5¼ರ ವರೆಗೆ.

ತಾ. 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK LTD.
Estd: 1920

ಜನಾಂಗ ಪರಿಚಯ:

ಭಾರತೀಯ ಸಂಸ್ಕೃತಿಯುಳ್ಳ ಲಾವೋಸ್

ರಾಜಕಾರಣದಲ್ಲಿ ಶಕ್ತಿ ಸಂಪನ್ನ ರಾಷ್ಟ್ರಗಳ ಶಕ್ತಿ ಪರೀಕ್ಷೆಗೆ ಕೇಂದ್ರದಂತಿರುವ ಲಾವೋಸ್‌ನ ಜನರು ಚೀನವಂಶೀಯರಾದರೂ ಅವರ ಮೇಲೆ ಪ್ರಾಚೀನ ಭಾರತೀಯ ಸಂಸ್ಕೃತಿಯ ಛಾಯೆ ಇಂದಿಗೂ ಅಳಿಯದುಳಿದಿದೆ.

ಮಹಿಳಾರಾಜ್ಯದ ಹೆಸರನ್ನು ನಾವು ದಂತಕಥೆಗಳಲ್ಲಿ ಕೇಳಿದ್ದೇವೆ. ಅಂತಾರಾಷ್ಟ್ರೀಯ ಕೋಲಾಹಲಕ್ಕೆ ಕಾರಣವಾದ ಲಾವೋಸಿನಲ್ಲಿ ಇಂದಿಗೂ ಮಹಿಳಾ ರಾಜ್ಯವಿದೆಯೆಂಬುದನ್ನು ನೀವು ನಂಬದಿರಬಹುದು. ಅಲ್ಲಿನ ರೇಡ್ ಅಥವಾ ಖಾಸಿ ಜನಾಂಗಗಳಲ್ಲಿ ಇಂದಿಗೂ ಸ್ತ್ರೀಯರೇ ಪಾರುಪತ್ಯಗಾರರು. ಕುಟುಂಬದ ಸಂಪತ್ತು ಅವರ ಹೆಸರಿನಲ್ಲೇ ಇರುತ್ತದೆ. ಆಕೆಯೇ ಅದನ್ನು ಮಾರುವ ಮತ್ತು ತನ್ನ ಹೆಸರಿನಲ್ಲಿ ಕೊಳ್ಳುವ ಅಧಿಕಾರವಿಟ್ಟುಕೊಂಡಿದ್ದಾಳೆ. ತನ್ನ ಪರಿವಾರಕ್ಕೆ ಯಾವುದು ಬೇಕಾಗಿದೆ, ಅದನ್ನು ಕೊಂಡುಕೊಳ್ಳಬಹುದೇ ಇಲ್ಲವೇ ಎಂಬುದನ್ನು ಆಕೆಯೇ ಅಧಿಕೃತವಾಗಿ ನಿರ್ಣಯಿಸಬಲ್ಲಳು.

ಲಾವೋಸಿನ ಪುರುಷರು ಸ್ತ್ರೀಯರನ್ನು ಬಹಳವಾಗಿ ಗೌರವಿಸುತ್ತಾರೆ. ಪುರುಷನೊಬ್ಬನಿಗೆ ಏನನ್ನಾದರೂ ಕೊಂಡುಕೊಳ್ಳಬೇಕೆನಿಸಿದರೆ, ಅಥವಾ ಶರಾಬು ಕುಡಿಯಬೇಕೆನಿಸಿದರೆ, ಸ್ತ್ರೀಯ ಅನುಮತಿಯನ್ನು ಮೊದಲಿಗೆ ಪಡೆದುಕೊಳ್ಳಬೇಕಾಗುತ್ತದೆ. ಈ ವಿಷಯಗಳಲ್ಲಿ ಸ್ತ್ರೀಯರು ಉದಾರಿಗಳಾಗಿ ವರ್ತಿಸಿ ಅನುಮತಿಯನ್ನು ಕೊಟ್ಟುಬಿಡುತ್ತಾರೆ.

ಉತ್ಸವ ಅಥವಾ ಪೂಜೆಗಳ ವೇಳೆಯಲ್ಲಿ ಶರಾಬು ಕುಡಿಯುವ ಕ್ರಮವಿಲ್ಲಿದೆ. ಆದರೆ, ಮೊತ್ತಮೊದಲಿಗೆ ಯಜಮಾನಿಯು ತಾನು ಕುಡಿದು ಅನಂತರ ತನ್ನ ಹೆಣ್ಮಕ್ಕಳಿಗೆ ಮತ್ತು ಮರಿ ಹೆಣ್ಮಕ್ಕಳಿಗೆ ಶರಾಬನ್ನು ಕೊಡುತ್ತಾಳೆ. ಸ್ತ್ರೀ ಜಾತಿಯೆಲ್ಲವೂ ಕುಡಿದಾದ ಮೇಲೆಯೇ ಪುರುಷರಿಗೆ ಅವಕಾಶವೊದಗುತ್ತದೆ.

ಲಾವೋಸ್‌ನಲ್ಲಿ ಸ್ತ್ರೀಯರಿಗಿಂತ ಪುರುಷರ ಸಂಖ್ಯೆಯೇ ಹೆಚ್ಚು. ಆದುದರಿಂದಲೇ ವಿವಾಹಗಳು ನಾರಿಯರಿಗೆ ಅಧಿಕ ಮಹತ್ವವಿದೆ. ವಿವಾಹದ ಸಲಹೆ ತರುವವರೊಡನೆ ಆಕೆಯು 'ತೂಕ-ಅಳತೆ' ಮಾಡಬಹುದು. ಆದರೆ, ವಿವಾಹ ಪ್ರಸಂಗದಲ್ಲಿ ಮಹಿಳೆಯೇ ಮೊದಲು ಮುಂದಾಗಬೇಕು. ಒಬ್ಬ ಹುಡುಗನನ್ನು ಪ್ರೇಮಿಸಿದ ಲಾವೋಸಿನ ಹುಡುಗಿಯು ಆತನನ್ನು ವರಿಸಲು ಮೊದಲು ತನ್ನ ಕುಟುಂಬದ ಯಜಮಾನಿಯ ಅನುಮತಿಯನ್ನು ಬೇಡುತ್ತಾಳೆ. ಇದು ಪ್ರಾಪ್ತಿಯಾದ ಮೇಲೆ ಆಕೆ ಕೆಲವು ವೀಳ್ಯದೆಲೆ ಮತ್ತು ತುಸು ಖಾದ್ಯ ಪದಾರ್ಥಗಳನ್ನು ತೆಗೆದುಕೊಂಡು ವರನ ಮನೆಗೆ ತೆರಳುತ್ತಾಳೆ. ವರನಾಗುವವನು ಇವನ್ನು ಸ್ವೀಕರಿಸಿದನೆಂದರೆ, ವಿವಾಹವು ನಿಶ್ಚಿತವಾದಂತೆಯೇ ಆಯಿತು.

ಮೋಯಿ ಎಂಬ ಒಂದು ಜಾತಿ ಇಲ್ಲಿದೆ. ಈ ಜಾತಿಯ ಪುರುಷನು ಕನ್ಯೆಯನ್ನು ಹಣಕೊಟ್ಟೇ(?) ಅರಸಿಕೊಳ್ಳಬೇಕಾಗುತ್ತದೆ. ಆಕೆಯನ್ನು ಸಂತುಷ್ಟಗೊಳಿಸುವುದಕ್ಕಾಗಿ ಆಕೆಗಿಷ್ಟವಾದ ಆಭರಣಗಳನ್ನು ಬಹಳಷ್ಟು ಕೊಡಿಸಬೇಕಾಗುವುದು. ಬಲಿಕೊಡುವ ಪದ್ಧತಿಯೂ ಈ ಜನರಲ್ಲಿದೆ. (ಸ್ತ್ರೀಯರೇ ಪ್ರಧಾನರಾದುದರಿಂದ ಲಾವೋಸಿನಲ್ಲಿ ಅವರೇ ಪೂಜಾರ್ಚನೆಗಳನ್ನು ನಡೆಸುತ್ತಾರೆ.) ಪೂಜಾರಿಗಳೇ ಸ್ವಯಂ ದೇವತೆಗಳ ಸಂತೋಷಕ್ಕಾಗಿ ಬಲಿಯೀಯುತ್ತಾರೆ; ಪೂಜೆ ಮಾಡುತ್ತಾರೆ. ಸಾಮಾನ್ಯವಾಗಿ ಪ್ರತಿ ಹಳ್ಳಿಯಲ್ಲಿಯೂ ದೇವ ಮಂದಿರಗಳು ದೃಗ್ಗೋಚರವಾಗುತ್ತವೆ.

ಮಿಯೊ ಕೂಡ ಇಲ್ಲಿನ ಮಹತ್ವಪೂರ್ಣ ಜಾತಿಯಾಗಿದೆ. ಸಮುದ್ರದ ದಡದಿಂದ ಇವರು ಬಹಳ ಒಳನಾಡಿನಲ್ಲಿ ವಾಸಿಸುವರಾದರೂ ಈ ಜಾತಿಯ ಹೆಂಗಸರು ನಾವಿಕ ಕನ್ಯೆಯರಂತೆಯೇ ಉಡುಪು ಧರಿಸುತ್ತಾರೆ. ಇವರು ಚೀನಾದ ಮೂಲನಿವಾಸಿಗಳು. ಬಟ್ಟೆ ಧರಿಸುವ ಕ್ರಮಗಳಿಗನುಸಾರವಾಗಿ ಇವರನ್ನು ಹಲವು ಜಾತಿಗಳಲ್ಲಿ ವಿಂಗಡಿಸಬಹುದು. ಕೆಂಪು ಬಟ್ಟೆಯವರು, ಕರಿಕೋರೆಯವರು, ಗುಲಾಬಿ ವಸ್ತ್ರಧಾರಿಗಳು ಹೀಗೆಯೇ ಈ ಜನರಲ್ಲಿ ಹಲವಾರು ಜಾತಿಗಳು ಇರುತ್ತವೆ— ಇವರ ಹೆಸರುಗಳೂ ಇವನ್ನೇ ಹೊಂದಿಕೊಂಡಿರುತ್ತವೆ.

ಲಾವೋಸಿನ ಇತಿಹಾಸವು ಕಾಲಗರ್ಭದಲ್ಲಿ ಅಡಗಿದೆ. ಆದರೂ ಇಲ್ಲಿನ ಕ್ರಮಬದ್ಧ ರಾಜಕೀಯ ಇತಿಹಾಸವು ಸಾಕಷ್ಟು ಪ್ರಾಚೀನವಾಗಿದೆ. ೧೩೫೩ರಲ್ಲಿ ಫಾಂಗ್(?) ಚಾವೊ ಎಂಬವನು ಇಲ್ಲಿ ಸ್ವತಂತ್ರ ರಾಜ್ಯವನ್ನು ಸ್ಥಾಪಿಸಿದನು. ೧೮ನೆಯ ಶತಮಾನದಲ್ಲಿ ಸಯಾಮವು ಇದರ ಬಹುಭಾಗಗಳನ್ನು ಗೆದ್ದುಕೊಂಡಿತು; ಅಲ್ಲದೆ ಇದರ ಆಗ್ನೇಯ ಭಾಗವನ್ನು ಅನ್ನಂ (ಈಗ ವಿಯತನಾಮ) ರಾಜ್ಯದ ದೊರೆಯು ಹಸ್ತಗತ ಮಾಡಿಕೊಂಡನು. ಉತ್ತರದ ಲುವಾಂಗ್ ಪ್ರಬಾಂಗ್ ಪ್ರಾಂತವೇನೋ ಸ್ವತಂತ್ರವಾಗಿತ್ತು. ಆದರೆ, ೧೮೩೦ರಲ್ಲಿ ಅದನ್ನೂ ಅನ್ನಂ ಗೆದ್ದುಕೊಂಡಿತು.

೧೮೯೩ರಲ್ಲಿ ಫ್ರೆಂಚರು ಅನ್ನಂನಲ್ಲಿ ತಮ್ಮ ಧ್ವಜವನ್ನು ಹಾರಿಸ ತೊಡಗಿದರು. ಆದರೊಡನೆ, ಸಯಾಮವು ಗೆದ್ದುಕೊಂಡಿದ್ದ ಲಾವೋಸಿನ ಭಾಗವನ್ನೂ ವಶಪಡಿಸಿಕೊಂಡರು. ಸಾಮ್ರಾಜ್ಯವಾದಿ ಫ್ರೆಂಚರು ಇಷ್ಟರಿಂದಲೇ ಸಮಾಧಾನ ಪಡಲಿಲ್ಲ. ೧೯೦೪ರಲ್ಲಿ ಲುವಾಂಗ್-ಪ್ರಬಾಂಗವನ್ನೂ ಸ್ವಾಧೀನ ಮಾಡಿಕೊಂಡರು.

ದ್ವಿತೀಯ ಲೋಕಯುದ್ಧದಲ್ಲಿ ಸಂಪೂರ್ಣ ಲಾವೋಸಿನ ಮೇಲೆ ಜಪಾನು ಅಧಿಕಾರ ಜಮಾಯಿಸಿತು. ಅದರ ಅಧೀನದಲ್ಲಿಯೇ ಅಲ್ಲಿ ಸರಕಾರ ಸ್ಥಾಪನೆಯಾಯಿತು. ೧೯೪೫ರ ಆಗಸ್ಟದಲ್ಲಿ ಜಪಾನು ಅಸ್ತ್ರ ಬದಿಗಿಟ್ಟ ನಂತರವೂ ಇದೇ ಸರಕಾರವು ಸ್ವತಂತ್ರ ರೂಪವನ್ನು ತಾಳಿತು. ಆದರೆ, ೧೯೪೬ರಲ್ಲಿ ಫ್ರಾನ್ಸ್ ಪುನಃ ಇದನ್ನು ಗೆದ್ದುಕೊಂಡಿತು. ಜುಲೈ ೧೯೪೯ರಂದು ಒಂದು ಒಪ್ಪಂದವಾಗಿ ಫ್ರೆಂಚ ಸಾಮ್ರಾಜ್ಯದ ಅಧೀನದಲ್ಲಿ ಅಲ್ಲೊಂದು ಸ್ವತಂತ್ರ ಸರಕಾರವು ರಚಿತವಾಯಿತು. ಆದರೆ, ಆ ಸಮಯದಲ್ಲಿಯೂ ಫ್ರೆಂಚ ಸೇನೆಯು ಅಲ್ಲಿ ಉಳಿಯಿತು.

ಲಾವೋಸಿನ ಈ ಸ್ವತಂತ್ರ ಸರಕಾರದಲ್ಲಿ ಲುವಾಂಗ ಪ್ರಬಾಂಗದ ರಾಜವಂಶಕ್ಕೆ ಸೇರಿದ ಸಿಬಾವಾಂಗ್‌ಬಾಂಗ್ ಎಂಬವರು ಸರ್ವೋಚ್ಚ ಅಧಿಕಾರಿಗಳಾಗಿ, ರಾಜಕುಮಾರ ಸೋವುವಾನಾ ಫೋಮಾ ಅವರು ಪ್ರಧಾನಿಗಳಾಗಿ ನಿಯುಕ್ತರಾದರು. ಆದರೆ, ಲಾವೋಸಿನ ಭೂಮಿಯ ಮೇಲೆ ಫ್ರೆಂಚರು ಇರುವುದನ್ನು, ಫ್ರಾನ್ಸನ್ನು ಸಮರ್ಥಿಸುವ ಸರಕಾರದ ನೀತಿಯನ್ನು ಮೆಚ್ಚದ ಪ್ರಧಾನಮಂತ್ರಿಯ ಸೋದರ ರಾಜಕುಮಾರ ಸೋವುಫಾನೋಂಗ್ ವಾನರು ಆ ರಾಜ್ಯವನ್ನು ಸ್ವೀಕರಿಸಲು ಒಪ್ಪದೆ ವಿಯೆತಮಿಂಹನ ಸಹಾಯದಿಂದ ಒಂದು ಹೊಸ ಸರಕಾರವನ್ನು ಸ್ಥಾಪಿಸಿದರು. ಈ ಸರಕಾರದ ಕೇಂದ್ರವು ಉತ್ತರ ವಿಯತನಾಮದಲ್ಲಿತ್ತು. ಈತನು ಹಲವುಬಾರಿ ಲಾವೋಸಿನ ಮೇಲೆ ಆಕ್ರಮಣ ನಡೆಸಿದನು; ಅದರಲ್ಲಿ ಯಶಸ್ಸೂ ಗಳಿಸಿದನು.

ಇಲ್ಲಿನ ಕೋಲಾಹಲಕ್ಕೆ ಮೂಲ ಕಾರಣವಿದೇ ಎನ್ನಬಹುದು. ೧೯೫೪ರ ಜುಲೈಯಲ್ಲಿ ಭಾರತದ ಅಧ್ಯಕ್ಷತೆಯಲ್ಲಿ ಇಲ್ಲಿ ಅಂತಾರಾಷ್ಟ್ರೀಯ ಶಾಂತಿ ಆಯೋಗವು ರಚಿತವಾಯಿತು. ಇದು ಶಾಂತರೀತಿಯಲ್ಲಿ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸಿತು. ಫ್ರೆಂಚಸೇನೆ ಲಾವೋಸಿನಿಂದ ಹೊರ ಹೋಯಿತು. ವಿಯೆತಮಿನ್ಹ ಸಮರ್ಥಕ ಸೇನೆಯೂ ಲಾವೋಸಿನಿಂದ ದೂರವಾಯಿತು.

೧೯೫೮ರಲ್ಲಿ ಇಲ್ಲಿ ಚುನಾವಣೆಗಳು ನಡೆದವು. ಆದರೆ, ಚುನಾವಣೆಗಳ ನಂತರ ಇಲ್ಲಿನ ಪರಿಸ್ಥಿತಿ ಮತ್ತಷ್ಟು ಕೆಟ್ಟಿತು. ಇಂದಿಗೂ ಇದು ವಿಶ್ವದ ಎರಡು ಶಕ್ತಿಶಾಲಿ ರಾಷ್ಟ್ರಗಳ ಶಕ್ತಿ ಪರೀಕ್ಷೆಗೆ ಕೇಂದ್ರವಾಗಿ ಉಳಿದಿದೆ.

ಭೌಗೋಲಿಕ ದೃಷ್ಟಿಯಲ್ಲಿ ಲಾವೋಸಿನ ಉತ್ತರ ಭಾಗವು ಪರ್ವತ ಶ್ರೇಣಿಗಳಿಂದ ಕೂಡಿದೆ; ನದಿಗಳ ಆಳವಾದ ಕಣಿವೆಗಳಿವೆ; ತೇಗಿನ ಅರಣ್ಯಗಳಿವೆ. ದಕ್ಷಿಣದ ಮೈದಾನುಗಳಲ್ಲಿ ಪಶುಪಾಲನೆಯು ಮುಖ್ಯ ವ್ಯವಸಾಯ. ಉತ್ತರದ ಪರ್ವತ ಶ್ರೇಣಿಯೊಂದು ಚೀನ ಮತ್ತು ಬರ್ಮಾಗಳಿಂದ ಲಾವೋಸನ್ನು ಪ್ರತ್ಯೇಕಿಸುತ್ತದೆ.

ಅಕ್ಕಿಯೇ ಲಾವೋಸಿನ ಪ್ರಧಾನೋತ್ಪತ್ತಿ. ಜೋಳ, ಚಾ, ರಬ್ಬರು ಎಳ್ಳು ಮತ್ತು ಕಬ್ಬುಗಳೂ ಇಲ್ಲಿ ಬೆಳೆಯುತ್ತವೆ. ಖನಿಜ ಪದಾರ್ಥಗಳಿಗೂ ಇಲ್ಲಿ ಕೊರತೆಯಿಲ್ಲ. ಆದರೆ, ಅಧಿಕ ಪ್ರಮಾಣದ ಖನಿಜ ಸಂಪತ್ತು ಇಂದಿಗೂ ಭೂಗರ್ಭದಲ್ಲಿ ಅಡಗಿದೆ. ಟಿನ್ ಒಂದನ್ನು ಮಾತ್ರ ಹೆಚ್ಚಾಗಿ ಈಗ ತೆಗೆಯಲಾಗುತ್ತಿದೆ.

ಲಾವೋಸಿನ ಅಧಿಕಸಂಖ್ಯಾಕ ಜನರು ಬೌದ್ಧರು; ಹೀನಯಾನ ಸಂಪ್ರದಾಯಕ್ಕೆ ಸೇರಿದವರು. ಲಾವೋಸಿಗೆ ಎರಡು ರಾಜಧಾನಿಗಳಿವೆ. ವಿಯನ್‌ಚಿಯಾನ್ ಒಂದಾಗಿದ್ದು ಇಲ್ಲಿಂದ ಪ್ರಶಾಸನವು ನಡೆಯುತ್ತದೆ. ಇಲ್ಲಿಯೇ ವಿಧಾನ ಮಂಡಳವೂ ಇದೆ. ಎರಡನೆಯದು ಲುವಾಂಗ್ ಪ್ರಬಾಂಗವಿದ್ದು ಇಲ್ಲಿ ಅರಮನೆಯಿರುವುದು.

ಚಂದ್ರನು ಬೆಳಗುವ ರಾತ್ರಿಯಲ್ಲಿ ಹುಡುಗಿಯರು ಪ್ರೇಮಪರ್ವವನ್ನು ಆಚರಿಸುವ ಹಬ್ಬವೊಂದು ಲಾವೋಸಿನಲ್ಲಿ ಬಹು ದೊಡ್ಡದಾಗಿದೆ. ಇನ್ನೊಂದು ಉತ್ಸವವು ಉತ್ಸವದಂತಿಲ್ಲವಾದರೂ ಲಾವೋಸಿನ ಜನ ಮನದಲ್ಲಿ ಉಚ್ಚ ಸ್ಥಾನವನ್ನು ಗಳಿಸಿದೆ. ಅರಮನೆಯ ಆನೆಯನ್ನು ಸ್ನಾನಕ್ಕೋಸ್ಕರ ನದೀ ದಡಕ್ಕೆ ಕರೆದೊಯ್ಯುವಾಗ, ಅಥವಾ ಮಂದಿರಗಳ ಮುಂದೆ ಉಣ್ಣಲು ನಿಂತಾಗ, ಲುವಾಂಗ ಪ್ರಬಾಂಗದಲ್ಲಿ ಒಂದು ಉತ್ಸವದ ಗಲಾಟೆಯೇ ನಡೆಯುತ್ತದೆ. ಮಾರ್ಗಗಳು ಪ್ರೇಕ್ಷಕರಿಂದ ಕಿಕ್ಕಿರಿಯುತ್ತದೆ. ಒಂದು ಕಡೆಯಿಂದ ಇನ್ನೊಂದು ಕಡೆಗೆ ತೆರಳುವುದೂ ಇಲ್ಲಿ ಅಸಂಭವವಾಗುತ್ತದೆ.

ಚೀನ ಮತ್ತು ಭಾರತೀಯ ಸಂಸ್ಕೃತಿಗಳ ಸಮ್ಮಿಶ್ರಣವನ್ನು ನಾವು ಲಾವೋಸಿನಲ್ಲಿ ನೋಡಬಹುದು. ಇಲ್ಲಿನ ಹೆಚ್ಚಿನ ನಿವಾಸಿಗಳು ಚೀನೀವಂಶಜರು; ಆದರೆ ಅವರ ಮೇಲೆ ಭಾರತೀಯ ಸಂಸ್ಕೃತಿ ಅಚ್ಚಳಿಯದ ಪ್ರಭಾವ ಬೀರಿದೆ. ಕ್ರಿಸ್ತಶಕದ ಆರಂಭ ಕಾಲದಲ್ಲಿ, ಭಾರತ ಮತ್ತು ಲಾವೋಸ್‌ಗಳ ನಡುವೆ ಸಾಂಸ್ಕೃತಿಕ ಸಂಬಂಧವಿತ್ತು. ಅಲ್ಲಿನ ಧರ್ಮ, ಕಲೆ, ದರ್ಶನ ಎಲ್ಲವುಗಳಲ್ಲಿಯೂ ಇಂದಿಗೂ ಭಾರತೀಯತೆಯ ಮುದ್ರೆಯು ಎದ್ದು ತೋರುತ್ತಿದೆ.

ಸ್ಥಾಪನೆ: 1924

ದಿ ಕರ್ನಾಟಕ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಆಫೀಸು: ಮಂಗಳೂರು—3.

ಈ ಕೆಳಗಿನ ಬಡ್ಡಿ ದರಗಳಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು.

ಒಂದು ತಿಂಗಳಿಗೆ	.... ಸಾ॥ ಸೇಕಡಾ	3-75	ನ.ಪೈಸೆ
ಮೂರು ತಿಂಗಳುಗಳಿಗೆ	.... ,,	4-00	,,
ಆರು ತಿಂಗಳುಗಳಿಗೆ	.... ,,	4 25	,,
12 ತಿಂಗಳುಗಳಿಂದ 23 ತಿಂಗಳುಗಳ ವರೆಗೆ	,,	4-50	,,
24 ತಿಂಗಳುಗಳಿಂದ 48 ತಿಂಗಳುಗಳ ವರೆಗೆ	,,	4 75	,,

"ಹಸಿ ಡಿಪೋಸಿಟ್ಸ್" ನಲ್ಲಿ

ನಿಮ್ಮ ದೈನಂದಿನ ಉಳಿತಾಯವನ್ನು ವಿನಿಯೋಗಿಸಿರಿ.

THE KARNATAKA BANK LIMITED.

ರವೀಂದ್ರ ವಾಣಿ:

ಆತ್ಮಬೋಧ

(ಲೇಖಾಂಕ ೨)

ಮಾನವನಲ್ಲಿ ಅನೇಕ ದೌರ್ಬಲ್ಯಗಳಿವೆ ಆತನಿಗೆ ಆತ್ಮದ ನಿಜ ಸ್ವರೂಪದ ಪರಿಚಯವಾಗುವ ವರೆಗೆ ಅವನ ಆವಶ್ಯಕತೆಗಳಿಗೆ ಕೊನೆಯೆಂಬುದೂ ಇಲ್ಲ. ಆದುದರಿಂದ ಆತ್ಮ ಜ್ಞಾನ ಗಳಿಸಿದವನು ಮಾತ್ರ ಅಲೌಕಿಕಾನಂದ ಗಳಿಸಬಲ್ಲನು

ಮೂಲ ಲೇಖಕರು. ವಿಶ್ವಕವಿ ರವೀಂದ್ರನಾಥ ಟಾಗೋರ್.
ಅನುವಾದಕರು ಶ್ರೀ ಕೆ. ಎನ್. ಭಟ್, ಶಿರುಡಿಪಾಲ್.

ಒಂದು ಉಪನಿಷತ್ತಿನಲ್ಲಿ ಈ ರೀತಿಯ ಒಂದು—ವ್ಯಾಖ್ಯಾನವಿದೆ— "ನೀನು ನಿನ್ನ ಪುತ್ರನನ್ನು ಅವನು ನಿನ್ನ ಪುತ್ರನೆಂಬುದರಿಂದ ಪ್ರೇಮದಿಂದ ಕಾಣುವುದಲ್ಲ, ನೀನು ಅವನಲ್ಲಿ ತನ್ನ ಆತ್ಮದ ಒಂದು ಅಂಶವನ್ನೇ ಕಾಣುತ್ತಿರುವೆ! ಅಥವಾ ಅದರ ಪ್ರತಿಬಿಂಬವನ್ನು ಕಾಣುತ್ತಿರುವೆ! ಅದಕ್ಕಾಗಿಯೇ ಪುತ್ರನನ್ನು ನೀನು ಪ್ರೇಮದಿಂದ ನೋಡುತ್ತಿರುವೆ!" ಈ ವ್ಯಾಖ್ಯಾನದ ಅರ್ಥವೇನೆಂದರೆ— ಯಾರನ್ನು ನಾವು ಪ್ರೇಮ ಹೃದಯದಿಂದ ಪ್ರೇಮದೃಷ್ಟಿಯಿಂದ ನೋಡುವೆವೋ ಅಂಥವರಲ್ಲಿ ನಮ್ಮ ಆತ್ಮದ ರೂಪವನ್ನು ಕಾಣುತ್ತೇವೆ. ಈ ಪರಮ ಸತ್ಯವೇ ನಮ್ಮ ಅಸ್ತಿತ್ವದ ಆಧಾರಸ್ತಂಭವಾಗಿದೆ ಯಾವ ಪರಮಾತ್ಮನು ನಮ್ಮ ಹೃದಯದಲ್ಲಿ ವಾಸವಾಗಿರುವನೋ—ಅವನೇ ನಮ್ಮ ಪುತ್ರನ ಹೃದಯದಲ್ಲೂ ಇರುವನು. ತನ್ನ ಪುತ್ರನಲ್ಲಿ ಪ್ರೇಮಭಾವವನ್ನಿಡುವ ಪ್ರವೃತ್ತಿಯು ಈ ಸತ್ಯಾನುಭವದ ಪರಿಣಾಮವೇ ಆಗಿರುವುದು. ನಮ್ಮ ಪುತ್ರಪ್ರೇಮ, ಅಥವಾ ಮಿತ್ರಪ್ರೇಮವು ಪ್ರಾಯಃ ನಮ್ಮ ಆತ್ಮವು ವಿಶೇಷವಾಗಿ ವಿಕಾಸಗೊಳ್ಳುವ ಮಾರ್ಗದಲ್ಲಿ ಬಾಧಕವಾಗುವುದು. ಆದರೂ, ಇದರ ಪ್ರಯೋಜನ ಮಹತ್ವಪೂರ್ಣವಾಗಿಯೇ ಇರುವುದು. ಅರ್ಥಾತ್, ತನ್ನವರನ್ನು ಪ್ರೇಮದಿಂದ ಕಾಣುವ ಈ ಪ್ರವೃತ್ತಿಯೇ ಮುಂದೆ ಪರರನ್ನೂ ಆತ್ಮೀಯತೆಯಿಂದ ಕಾಣುವುದರ ಮೊದಲ ಹೆಜ್ಜೆಯಾಗಿರುತ್ತದೆ. ಅಲ್ಲದೆ, ನಮ್ಮ ಆತ್ಮದ ಸಹಜ ಸ್ವಭಾವವನ್ನು ಇದು ಪ್ರಥಮವಾಗಿ ಇಂತು ಪ್ರಕಟಿಸುವುದು. ಈ ಪ್ರಥಮ ಪ್ರೇಮಾನುಭವದ ಆಧಾರವೇ ನಮಗೆ ಪರಮ ಸತ್ಯದ ಸಾಕ್ಷಾತ್ಕಾರವನ್ನು ತೋರಿಸುವುದು. ಅಹಂಕಾರವನ್ನು ತ್ಯಜಿಸಿ, ಪರರಲ್ಲಿ ಸಮ ಭಾವವನ್ನಿಟ್ಟು ಪ್ರೇಮದಿಂದ ವರ್ತಿಸಿದರೆ, ನಮಗೆ ಆಗ ಆತ್ಮಾನಂದದ ಅನುಭವವಾಗುವುದು. ಮಾತ್ರವಲ್ಲ, ಈ ಪ್ರೇಮವು ನಮಗೆ ದಿವ್ಯ ದೃಷ್ಟಿಯನ್ನೂ ನವ್ಯ ಶಕ್ತಿಯನ್ನೂ ನೀಡುವುದು. ಆದರೆ ನಾವು ಪ್ರೇಮದ ವಿಶಾಲವಾದ ದೃಷ್ಟಿಯನ್ನು ಸಂಕುಚಿತಗೊಳಿಸಿದ್ದೇ ಆದರೆ, ಈ ಪ್ರೇಮವು ತನ್ನ ನಿಜಸ್ವರೂಪವನ್ನೇ ಕಳೆದುಕೊಳ್ಳುತ್ತದೆ. ಆಗ ನಮ್ಮ ಸ್ನೇಹವು ಸಂಕುಚಿತವಾಗಿ ಕೃತಕವಾಗಿ ಮಾರ್ಪಡುತ್ತದೆ. ಇದರಿಂದಾಗಿ, ನಮ್ಮ ಪರಿವಾರ, ಬಂಧುಬಾಂಧವರೊಡನಿರಬೇಕಾದ ಸಂಬಂಧವೂ ಸ್ವಾರ್ಥ ಭಾವನೆಯಿಂದ ತುಂಬಿ ಹೋಗುತ್ತದೆ. ಆಗ ನಮ್ಮ ಕ್ಷೇತ್ರವು, ಭಯ, ಮತ್ತು ಸಂಶಯದ ಗೋಡೆಗಳನ್ನು ನಮ್ಮೆದುರು ತಂದು ನಿಲ್ಲಿಸುವುದು ಅಂದರೆ, ನಾಲ್ಕು ಗೋಡೆಗಳ ನಡುವೆ ಪ್ರಜ್ವಲಿಸುತ್ತ ತನ್ನ ಕೆನ್ನಾಲಗೆಗಳನ್ನು ಚಾಚುತ್ತ ಇರುವ ಅಗ್ನಿಜ್ವಾಲೆಗೆ ಇದು, ಸಮವೆನಿಸುವುದು. ಆದರೆ, ಕೊನೆಗೆ ಈ ಸ್ವಾರ್ಥಭಾವನೆಯು ಅಗ್ನಿಜ್ವಾಲೆಯು ಅವಸಾನ ಹೊಂದುವ ಮೊದಲು ನಿಜವಾದ ಪ್ರೇಮದ ಆನಂದವನ್ನು, ಆ ಆನಂದದ ಕಲ್ಪನೆಯನ್ನಾದರೂ ಅದು ಒಡಮೂಡಿಸದೆ ಇರುವುದಿಲ್ಲ. ‡

ಉಪನಿಷತ್ತುಗಳಲ್ಲಿ– "ವಿಶ್ವಚೇತನದ ಬೀಗದ ಕೈ ಯೆಂಬುದೇ ಆತ್ಮಚೇತನವಾಗಿದೆ" ಎಂದು ಹೇಳಿದೆ. ತನ್ನ ಆತ್ಮವನ್ನು "ತನಗಿಂತ ಬೇರೆ' ಎಂದು ತಿಳಿದುಕೊಳ್ಳುವುದೇ ಬ್ರಹ್ಮಜ್ಞಾನದ ಪ್ರಾರಂಭದ ಮೆಟ್ಟಿಲಾಗಿರುವುದು.— ನಮ್ಮ ನಿಜವಾದ ಸ್ವರೂಪವು ನಮ್ಮ ಆತ್ಮದಲ್ಲಿದೆ.' ಎಂಬ ಈ ಜ್ಞಾನವು ನಮ್ಮಲ್ಲಿ ಶ್ರದ್ಧಾಪೂರ್ವಕವಾಗಿ ಹುಟ್ಟಬೇಕು. "ಈ ಸಂಸಾರದ ಲಾಭನಷ್ಟ, ದುಃಖ, ದಾರಿದ್ರ್ಯಗಳಿಂದ ಜನನ—ಮರಣವೆಂಬ ಕ್ರಿಯೆಗಳಿಂದ, ಅಹಂಕಾರ ದರ್ಪಗಳಿಂದ ನಮ್ಮ ಆತ್ಮವು ಅತಿ ಮೇಲ್ಮಟ್ಟದಲ್ಲಿದೆ, ಇವುಗಳು ನಮ್ಮ ಆತ್ಮವನ್ನು ಸ್ಪರ್ಶಿಸಲಾರವು" ಎಂಬುದನ್ನು ತಿಳಿದುಕೊಂಡಾಗ ಮಾತ್ರ ಈ ಮೇಲೆ ವಿವರಿಸಲ್ಪಟ್ಟ ದಿವ್ಯ ಜ್ಞಾನ, ನಮಗೆ ಪ್ರಾಪ್ತವಾಗುತ್ತದೆ.

ರೂ ೮,೦೦೦ ವೆಚ್ಚದಲ್ಲಿ ಬೆಂಗಳೂರಲ್ಲಿ ಕಟ್ಟಲಾದ ಅಲ್ಪಾದಾಯವುಳ್ಳವರ ಮನೆಯ ಚಿತ್ರವಿದು.

ಕೋಳಿಯ ಮರಿಯು, ಕಾರಾಗೃಹರೂಪವಾದ ತನ್ನ ಮೊಟ್ಟೆಯಿಂದ ಮುಕ್ತಿ ಹೊಂದಿ ಹೊರಗೆ ಬಂದಾಗ—ಅದು, "ಈ ಮೊಟ್ಟೆಯು ಗೂಡು. ಇನ್ನು ತನ್ನ ಜೀವನಕ್ಕೆ ಅಗತ್ಯವಿಲ್ಲ" ಎಂದು ತಿಳಿದುಕೊಳ್ಳುತ್ತದೆ. ಆ ಮೊಟ್ಟೆಯ ಆವರಣವು ಈಗ ಮೃತ ವಸ್ತುವಾಗಿದೆ. ಅದರಲ್ಲಿ ವೃದ್ಧಿ—ವಿಕಾಸಗಳಾವುವೂ ಇಲ್ಲ. ಇಂತಹ ಆ ಗೂಡು, ಎಷ್ಟೇ ಸುಂದರವಾಗಿ ನಯವಾಗಿ ತೋರುತ್ತಿದ್ದರೂ, ಸ್ವತಂತ್ರಜೀವನದ ಪೂರ್ಣತೆಯನ್ನು ಪಡೆಯಲು ಅದನ್ನು ಒಡೆದು ಹೊರಗೆ ಬರಲೇಬೇಕು ಇದೇ ರೀತಿ ಮನುಷ್ಯನಿಗೂ ವಿಶ್ವಾತ್ಮನಲ್ಲಿ ವಿಲನ ಹೊಂದುವ ಸ್ವಾತಂತ್ರ್ಯವನ್ನು ಪಡೆಯಲು, ತನ್ನ ದೈಹಿಕ ಬಂಧನಗಳನ್ನು—ಕಿತ್ತೊಗೆಯಲೇಬೇಕಾಗುತ್ತದೆ ಆಗ ಜೀವನದ ಧ್ಯೇಯವು ಪೂರ್ಣವಾಗುತ್ತದೆ, ಮತ್ತು ಸಂಪೂರ್ಣ ವಿಶ್ವದೊಡನೆ ಸಮಭಾವವು ಸ್ಥಾಪಿತವಾಗುತ್ತದೆ.

ನಮ್ಮ ತತ್ವದರ್ಶಿಗಳಾದ ಪೂರ್ವಜರು ಈ ಜಗತ್ತನ್ನು ಸಾಂಸಾರಿಕ ಸಂಬಂಧವನ್ನು ತ್ಯಜಿಸಿ ಶೂನ್ಯತೆಯತ್ತ ಸಾಗಬೇಕೆಂದು, ಎಲ್ಲಿಯೂ ಹೇಳಿಲ್ಲ; ಎಂಬುದನ್ನು ನಾನು ಮೊದಲೇ ಹೇಳಿದ್ದೇನೆ. ಆದರೆ— ಅವರ ಉದ್ದೇಶವು ಆತ್ಮಜ್ಞಾನವನ್ನು ಉಂಟುಮಾಡುವುದು, ಅಥವಾ ಈ ಜಗತ್ತನ್ನು ಪೂರ್ಣ ಸತ್ಯದ ದೃಷ್ಟಿಯಿಂದ ತಿಳಿದುಕೊಳ್ಳುವುದು, ಇದೇ ಆಗಿತ್ತು. ಈಸಾ ಮಸೀಹನೂ ಕೂಡ—"ವಿನಯ ಸೌಜನ್ಯಗಳಿಂದ ಕೂಡಿದ ವ್ಯಕ್ತಿಯು ಸೌಭಾಗ್ಯಶಾಲಿಯಾಗುವನು. ಅಂಥವನೇ ಈ ಪೃಥ್ವಿಯಲ್ಲಿ ದೇವನಾಗುತ್ತಾನೆ!" ಎಂದು ಹೇಳಿರುವುದನ್ನು ನೋಡುವಾಗ ಆತನಿಗೂ ಈ ಆತ್ಮಜ್ಞಾನದ ತಿಳುವಳಿಕೆ ಪೂರ್ಣವಾಗಿತ್ತು ಎಂದು ತಿಳಿದುಬರುವುದು ಆತನು ಈ ಸತ್ಯವನ್ನೇ ಘೋಷಿಸಿರುವನು—'ಅಹಂಕಾರ ದರ್ಪಗಳನ್ನು ತ್ಯಜಿಸಿದ ಬಳಿಕವೇ ಮನುಷ್ಯನು ಮಾನವನಾಗಿ ಕೊನೆಗೆ ದೇವನಾಗುತ್ತಾನೆ!' ಆಗ ಆತನಿಗೆ ಈ ಜಗತ್ತಿನಲ್ಲಿ ತನ್ನ ಸ್ಥಾನವನ್ನು ನಿರ್ಧರಿಸಲು ಏನೂ ಕಷ್ಟವಾಗುವುದಿಲ್ಲ. ಆತನು ಸರ್ವತ್ರ ಸ್ವಯಂ ಸುರಕ್ಷಿತನಾಗುತ್ತಾನೆ ಆತನ ಆತ್ಮಕ್ಕೆ ವಿಶ್ವಾತ್ಮನಲ್ಲಿ ಸೇರಿಕೊಳ್ಳುವ ಪೂರ್ಣ ಅಧಿಕಾರವಿರುತ್ತದೆ ಅಹಂಕಾರದ ಮಿಥ್ಯಾದರ್ಪ ಅಭಿಮಾನಗಳು ಆತ್ಮದ ಪೂರ್ಣವಿಕಾಸಕ್ಕೆ ತಡೆಯನ್ನೊಡ್ಡುತ್ತವೆ ಸಂಪೂರ್ಣ ವಿಶ್ವದೊಡನೆ ಸಮ ಭಾವನ್ನಿರಿಸುವ ಕಾರ್ಯದಲ್ಲಿ ಅಡ್ಡಿ ಆತಂಕಗಳನ್ನೊಡ್ಡುತ್ತವೆ.

ಸಾಧು ಸಿಂಹನಿಗೆ ಉಪದೇಶಕೊಡುವಾಗ ಮಹಾತ್ಮಾ ಬುದ್ಧನು—"ಕರ್ಮವನ್ನು ತ್ಯಜಿಸಬೇಕೆಂಬ ಉಪದೇಶವನ್ನು ನಾನು ಕೊಡುತ್ತಿರುವುದು ನಿಜ, ಆದರೆ ಇಲ್ಲಿ ನಾನು ನಿಷೇಧಿಸುತ್ತಿರುವ ಕರ್ಮವೆಂದರೆ, ಮನೋವಚನ ವಾಕ್ ಕಾಯಗಳಿಂದ ಮತ್ತು ರೂಪ ದೃಷ್ಟಿಯಿಂದಲೂ, ಕಲ್ಯಾಣರಹಿತವಾದ ಕರ್ಮವನ್ನು ಮಾಡಬೇಡ, ಎಂಬುದೇ ಆಗಿದೆ "ತ್ಯಾಗಮಾಡು" ಎಂಬ ಉಪದೇಶವನ್ನೂ ನಾನು ಕೊಡುತ್ತಿದ್ದೇನೆ. ಆದರೆ ಈ ತ್ಯಾಗವು, ಅಹಂಕಾರ ದುರುದ್ದೇಶ, ವಿಷಯ ಲಾಲಸೆ, ದುಷ್ಕೃತ್ಯ ಮತ್ತು ಅಜ್ಞಾನ, ಇವುಗಳನ್ನು ತ್ಯಜಿಸುವುದೇ ಆಗಿದೆ, ಹೊರತು, ಪ್ರೇಮ, ಕ್ಷಮಾದಾನ, ಸತ್ಯ, ಕರುಣೆ, ಇವುಗಳನ್ನಲ್ಲ!" ಎಂದು ಹೇಳಿರುವನು.

ಬುದ್ಧನು ಪ್ರಚಾರಮಾಡಿದ ಮುಕ್ತಿ ಎಂದರೆ—'ಅಜ್ಞಾನರೂಪೀ ಅವಿದ್ಯೆಯಿಂದ ವಿಮುಕ್ತಿ ಹೊಂದು!' ಎಂಬುದೇ ಆಗಿತ್ತು. ಅಜ್ಞಾನವು ನಮ್ಮ ಅನುಭವಗಳನ್ನು ಅಂಧಕಾರದ ಮಡಿಲಲ್ಲಿ ತಳ್ಳಿಬಿಡುತ್ತದೆ, ಮತ್ತು ಲೋಭ ಮೋಹ ಕ್ರೌರ್ಯಾದಿಗಳೂ ಇದರಿಂದಲೇ ಉದ್ಭವಿಸುತ್ತವೆ. ಮನುಷ್ಯನಿಗೆ ತನ್ನ ಸಿದ್ಧಾವಸ್ಥೆಯಲ್ಲಿ ತನ್ನ ಶಾರೀರಿಕ ಮಾನಸಿಕ ಚಟುವಟಿಕೆ

(೧ನೇ ಪುಟ ನೋಡಿರಿ)

ಸ್ವಲ್ಪ ಸ್ವಲ್ಪವಾಗಿ, ಅಲ್ಲೊಮ್ಮೆ ಇಲ್ಲೊಮ್ಮೆ, ನೀವು ಉಳಿಸುತ್ತಿರುವ ಹಣವು
ಬೇಗ ಬೇಗನೆ ವೃದ್ಧಿಗೊಂಡು, ನಿಮ್ಮ ಭವಿಷ್ಯದ ಭದ್ರತೆಯು
ಹೆಚ್ಚೆಚ್ಚಾಗಿ ಪರಿಣಮಿಸುವಂತೆ

ಕೊರ್ಪೊರೇಶನ್ ಬೇಂಕು

ನಿಮ್ಮ ಸೇವಿಂಗ್ಸ್ ಬೇಂಕ್ ಎಕೌಂಟುಗಳ ಮೇಲೆ ಇನ್ನು ಮುಂದಕ್ಕೆ
ಸಾಲಿಯಾನ್ ಸೇಕಡಾ **3** ರ ದರದಲ್ಲಿ ನಿಮಗೆ ಬಡ್ಡಿ ಕೊಡುವುದು

ವಿವರಗಳಿಗೆ ವಿಚಾರಿಸಿರಿ

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ಸ್ಥಾಪನೆ: 1906) (ರಿಜಿಸ್ಟರ್ಡ್ ಆಫೀಸು. ಉಡುಪಿ
ಆಡಳಿತ ಆಫೀಸು: ಮಂಗಳೂರು —1

ವಿಚಾರ ವರ್ಷ

ಜೀವನದ ನಿಜರೂಪ - ರಸಾತ್ಮಕತೆ

ರಸಾತ್ಮಕತೆಯು ಸೌನ್ದರ್ಯದ ಲಕ್ಷಣ ಮಾತ್ರವಲ್ಲ ಜೀವನದ ನಿಜಸ್ವರೂಪವೂ ಹೌದು! ರಸದಿಂದಲೇ ಪ್ರಪಂಚವು ವಿಕಸಿತವಾಗುತ್ತದೆ, ಆನಂದಮಯವಾಗುತ್ತದೆ. ಚತುರ್ವೇದಿ ಗಿರಿಧರ ಶರ್ಮಾ ಎಂಬ ಆಧ್ಯಾತ್ಮಿಕವಾದಿಗಳು ಈ ಕಥನವನ್ನು ಸಮರ್ಥಿಸುವ ವೈಖರಿಯನ್ನು ಪ್ರಕೃತ ಲೇಖನದಲ್ಲಿ ಕಾಣಬಹುದು.

ಆನೀದವಾತಂ ಸ್ವಧಯಾ ತದೇಕಂ ತಸ್ಮಾದ್ಧಾನ್ಯನ್ನ ಪರಂ ಕಿಂಚನಾಸ।
ಏಕಂ ವಾ ಇದಂ ವಿಬಭೂವ ಸರ್ವಂ ||

ಎಂದು ಋಗ್ವೇದವು ಸೃಷ್ಟಿಯ ಏಕಮಾತ್ರ ಮೂಲ ತತ್ತ್ವವನ್ನು ಘಂಟಾಘೋಷವಾಗಿ ಸಾರಿ ಹೇಳಿದೆ. ಇದನ್ನೇ ನೂರಾರು ಬಾರಿ ಶ್ರುತಿಗಳೂ ಪುನರುಚ್ಚರಿಸಿವೆ. ಈ ಮೂಲ ತತ್ತ್ವ ಸರ್ವ ಅವಸ್ಥೆಗಳಿಗೆ ಪರವಾದುದು; ಅದರಲ್ಲಿ ಯಾವುದೇ ಗುಣ ಅಥವಾ ಧರ್ಮಗಳು ಇಲ್ಲ. ಆದುದರಿಂದಲೇ ಅದು ಇಂದ್ರಿಯ ಗೋಚರವಾಗುವುದಿಲ್ಲ; ಮನಸ್ಸಿನ ಒಳಗಡೆ ಪ್ರವೇಶಿಸುವುದಿಲ್ಲ.--
"ನ ತತ್ರ ಚಕ್ಷುರ್ಗಚ್ಛತಿ, ತವಾಗ್ಗಚ್ಛತಿ, ನೋ ಮನಃ"

ಸರ್ವ ಅವಸ್ಥಾ ಬಾಹಿರವಾಗಿರುವುದರಿಂದ ಮೂಲ ತತ್ತ್ವಕ್ಕೊಂದು ನಾಮಕರಣವೂ ಆಗಿಲ್ಲ; ಅಥವಾ ಯಾವುದಾದರೂ ಗುಣಧರ್ಮಗಳಲ್ಲಿ ಅದನ್ನು ಅಂತರ್ಗತ ಮಾಡುವುದೂ ಸಾಧ್ಯವಿಲ್ಲ. ಆದರೆ, ಈ ಮೂಲ ತತ್ತ್ವದ ಆಧಾರದಿಂದಲೇ ಉಳಿದ ಎಲ್ಲ ಸಂಗತಿಗಳೂ ನಡೆಯುತ್ತವೆ. ಇದರಿಂದಾಗಿ, ಶ್ರುತಿಗಳಲ್ಲಿ 'ರಸ'ವೆಂಬ ಶಬ್ದ ಪ್ರಯೋಗವನ್ನು ಈ ಅರ್ಥದಲ್ಲಿ ಮಾಡಿದ್ದಾರೆ—"ರಸೋ ವೈ ಸಃ"

ಸೃಷ್ಟಿಯ ಮೂಲ ತತ್ತ್ವಕ್ಕೆ 'ರಸ'ವೆಂಬ ಶಬ್ದವು ಪ್ರಯೋಗವಾಗಲು ಯಾವ ಆಧಾರವಿದೆಯೆಂದು ವಿಚಾರಿಸುವುದು ಅವಶ್ಯ. ಶಬ್ದ ಕಾಲ್ಪನಿಕವಾದರೂ ಮೂಲಭೂತ ಕಲ್ಪನೆಯು ಒಂದು ಆಧಾರವಿಲ್ಲದೆ ಬರಲಾರದು. ಇಲ್ಲಿ 'ರಸ' ಶಬ್ದವು ಆನಂದ ಶಬ್ದ ವಾಚಕವಾಗಿದೆ. ಏಕೆಂದರೆ, ಮೂಲತತ್ತ್ವದ ಆನಂದ ರೂಪತೆಯು ಅನೇಕ ಯುಕ್ತಿಗಳಿಂದ ಸಿದ್ಧವಾಗುತ್ತದೆ.

ಶಾಸ್ತ್ರಗಳಲ್ಲಿ ಆನಂದವನ್ನು ಎರಡು ಸ್ವರೂಪಗಳಲ್ಲಿ ವರ್ಣಿಸಿದ್ದಾರೆ. ಮನಸ್ಸಿನಲ್ಲಿ ಯಾವುದೇ ಪ್ರಕಾರದ ಚಂಚಲತೆಯು ಕಾಣಿಸಿಕೊಳ್ಳದೆ ಇರುವ ಸ್ಥಿತಿಗೆ ಶಾಂತ್ಯಾನಂದವೆಂದೂ ಹೊಸ ಹೊಸ ವಸ್ತುಗಳನ್ನು ಪ್ರಾಪ್ತಿಯ ಭಾವವು ಮನಸ್ಸಿನಲ್ಲಿ ಅಂಕಿತವಾದರೆ, ಅಂತಹಸ್ಥಿತಿಗೆ ಸಮೃದ್ಧ್ಯಾನಂದವೆಂದೂ ಹೇಳುತ್ತಾರೆ.

ಈ ಎರಡು ವಿಧದ ಆನಂದಗಳಲ್ಲಿ ನಮ್ಮ ಶಾಸ್ತ್ರಗಳು ಶಾಂತ್ಯಾನಂದವನ್ನೇ ಹೆಚ್ಚಿನದೆಂದು ತಿಳಿಯುತ್ತವೆ. ವಿಲಾಸೀ ಮನುಷ್ಯನೂ ಆನಂದಪ್ರದ ಆಮೋದ ಪ್ರಮೋದಗಳನ್ನು ಬಿಟ್ಟು ಶಯನವನ್ನೇ ಬಯಸುವುದು ಈ ವಾದಕ್ಕೆ ಪ್ರಮಾಣವಾಗಿದೆ. ಶಯನದಿಂದ ಯಾವ ರೀತಿಯಲ್ಲೂ ಸಮೃದ್ಧ್ಯಾನಂದವು ಉಂಟಾಗುವುದಿಲ್ಲ; ಆದರೆ, ಶಾಂತ್ಯಾನಂದ ಪ್ರಮಾಣವು ಅತ್ಯಧಿಕವಿದೆ. ಇದರಿಂದಾಗಿ ಶಾಂತ್ಯಾನಂದದ ಸ್ಥಾನವೇ ಪ್ರಧಾನವೆಂದು ಹೇಳಬಹುದು.

ಪ್ರಪಂಚದ ಎಲ್ಲೆಡೆಯಲ್ಲೂ ಶಾಂತ್ಯಾನಂದವು ತುಂಬಿರುವುದನ್ನು ನೋಡಬಹುದು. ಪರಸ್ಪರ ವಿರುದ್ಧ ಸ್ವಭಾವಗಳು ಕೂಡ ಒಂದು ಪ್ರಕಾರದಿಂದ ಸಹಯೋಗವನ್ನು ಪಾಲಿಸಿಕೊಂಡು ಜಗತ್ತಿನಲ್ಲಿ ಶಾಂತಿ ವ್ಯವಸ್ಥೆ ಮಾಡುತ್ತಿರುವುದನ್ನು ನಾವು ಕಾಣಬಹುದು. ಉದಾಹರಣೆಗಾಗಿ, ನೀರು ಮತ್ತು ಅಗ್ನಿಗಳನ್ನು ತೆಗೆದುಕೊಳ್ಳಿರಿ. ಇವು ಪರಸ್ಪರ ವಿರುದ್ಧ ತತ್ತ್ವಗಳು. ಆದರೆ ಗ್ರೀಷ್ಮ ಋತುವಿನಲ್ಲಿ ಅಗ್ನಿಯು ತಪಿಸುತ್ತಿರುವಾಗ, ಜಗತ್ತಿನ ಶಾಂತಿಯನ್ನು ಭಂಗಿಸಲುದ್ಯುಕ್ತವಾಗುವಾಗ ನೀರು ಮಳೆಯ ರೂಪದಲ್ಲಿ ಪೊತವಿಗೆ ಸುರಿದು ಶಾಂತಿ ವ್ಯವಸ್ಥೆಯನ್ನು ಮಾಡಲು ಮುಂದೆ ಬರುತ್ತದೆ. ಹಾಗೆಯೇ ನೀರು ಅತ್ಯಧಿಕವಾಗಿ ಸುರಿದು ಪ್ರಪಂಚವೆಲ್ಲವನ್ನೂ ಒದ್ದೆಮಾಡಿ ಶಾಂತತೆಯನ್ನು ಕೆಡಿಸುತ್ತಿರುವಾಗ, ಅಗ್ನಿಯು ಅದನ್ನು ಶೋಷಿಸಿ ಶಾಂತಿಸ್ಥಾಪಿಸುತ್ತದೆ. ಹೀಗೆ ಪ್ರತಿಯೊಂದು ತತ್ತ್ವದಲ್ಲಿಯೂ ಶಾಂತಿರೂಪ ಆನಂದವು ಅನುಸ್ಯೂತವಾಗಿರುವುದು ದೃಗ್ಗೋಚರವಾಗುತ್ತದೆ. ಕಾರಣದಿಂದಲೇ ಕಾರ್ಯಗಳಲ್ಲಿ ಧರ್ಮ ಪ್ರಾದುರ್ಭಾವವಿರುತ್ತದೆ; ಆದುದರಿಂದ ಕಾರಣಗಳನ್ನೇ ಆನಂದರೂಪವೆಂದು ತಿಳಿಯುವುದು ಅನುಚಿತವಾಗದು.

ಸಮೃದ್ಧ್ಯಾನಂದದ ಸ್ವರೂಪವೇನೆಂಬುದೂ ವಿಚಾರ್ಯ. "ಯೋ ವೈ ಭೂಮಾ ತತ್ಸುಖಂ, ಯದಲ್ಪಂ ತದ್ದುಃಖಂ" (ಅಂದರೆ, ಮಹತ್ತಿಕೆಯಲ್ಲಿ ಸುಖವಿದೆ; ಅಲ್ಪತೆಯಲ್ಲಿ ದುಃಖವಿದೆ) ಎಂದು ವೇದಗಳು ಹೇಳುತ್ತವೆ. ಒಬ್ಬ ಮನುಷ್ಯನಲ್ಲಿ ಸಂಪತ್ತು, ಪಶು, ಭೂಮಿ ಮೊದಲಾದುವುಗಳು ಹೆಚ್ಚಿನ ಪ್ರಮಾಣದಲ್ಲಿದ್ದರೆ, ಆತನು ತಾನು ಸುಖಿ ಎಂದು ತಿಳಿಯುತ್ತಾನೆ. ಹಾಗೆಯೇ ಇವಾವೂ ಇಲ್ಲದವನು ತಾನು ದುಃಖಿತೆಯೆಂದು ನೋಯುತ್ತಿರುತ್ತಾನೆ. ಒಬ್ಬನಿಗೆ ಮನೆ, ಭೂಮಿ, ಹಣ ಯಾವುದೇ ವಸ್ತುವು ಲಭಿಸಿತೆಂದರೆ, ಆಗ ಆತನು ಆನಂದೋನ್ಮತ್ತನಾಗುತ್ತಾನೆ. ಕಳೆದುಕೊಂಡನೆಂದರೆ, ತತ್ಕ್ಷಣ ಶೋಕಾಕುಲನಾಗುತ್ತಾನೆ. ಹೀಗೆ ಮಹತ್ತಿಕೆಯಿಂದಾಗಿ ಚಿತ್ತದಲ್ಲಿ ಆಗುವ ಉಲ್ಲಾಸವನ್ನೇ ಸಮೃದ್ಧ್ಯಾನಂದವೆಂದು ಹೇಳುವುದು ಸಮುಚಿತವಿದೆ.

ವ್ಯಾವಹಾರಿಕ ಆತ್ಮಕ್ಕೆ ಐದು ಕಲೆಗಳು ಇವೆ. ಇವುಗಳಲ್ಲಿ ಐದನೆಯದಾದ ಸಂಪತ್ತಿರೂಪದ ಕಲೆಯು ತನ್ನ ಸಂಪತ್ತಿಯಲ್ಲಿಯೂ ವ್ಯಾಪ್ತವಾಗಿದೆ. ಒಂದು ಹೊಸ ವಸ್ತುವು ನಮ್ಮ ಕೈಸೇರಿತೆಂದರೆ, ಆಗ ವ್ಯಾವಹಾರಿಕ ಆತ್ಮದ ಐದನೆಯ ಕಲೆಯು ಅದನ್ನು ತನ್ನ ಸ್ವರೂಪದಲ್ಲಿ ಪ್ರವೇಶಿಸಲು ವಿಸ್ತೃತವಾಗುತ್ತದೆ. ಆನಂದದ ಅನುಭವದ ಹೇತು ಇದೇ. ನಮ್ಮ ಸಂಪತ್ತಿಯ ಒಂದಂಶ ಹೊರಬಂದಾಗ, ಆ ಕಲೆಯು ಕ್ಷೀಣವಾಗುವುದರಿಂದ, ನಮಗೆ ದುಃಖಾನುಭವವಾಗುತ್ತದೆ.

ಮಹತ್ತಿಕೆಯಲ್ಲಿ ಆನಂದ ಮತ್ತು ಅಲ್ಪತೆಯಲ್ಲಿ ದುಃಖವಿದೆಯೆಂಬುದು ಇದರಿಂದ ಸ್ಪಷ್ಟವಾಯಿತು. ಸೃಷ್ಟಿಯ ಮೂಲ ತತ್ತ್ವ ಪರಮ ಮಹಾನ್ ಆಗಿದೆ; ವಿಭು, ಎಂದರೆ, ಸರ್ವತ್ರ ವ್ಯಾಪಕವಾಗಿದೆ. ಆಗ ಅದರ ಪರಮಾನಂದ ರೂಪತೆಯಲ್ಲಿ ಸಂಶಯ ಪಡುವುದು ಸಾಧ್ಯವಿರುವುದಿಲ್ಲ.

ಮನುಷ್ಯನಲ್ಲಿ ಜ್ಞಾನಶಕ್ತಿ, ಬಲಶಕ್ತಿ ಅಥವಾ ಪ್ರಭುತ್ವ ಶಕ್ತಿ ಅಧಿಕವಾಗಿದ್ದರೆ, ಆತನು ಅಧಿಕ ಆನಂದವನ್ನು ಅನುಭವಿಸುತ್ತಾನೆ. ಬಲವಂತನೂ ಧನವಂತನೂ ಯುವಕನೂ ಆದ ಮನುಷ್ಯನು ಆನಂದದ ಚರಮಸೀಮೆಯನ್ನು ಮುಟ್ಟುತ್ತಾನೆಂದು ತೈತ್ತಿರೀಯೋಪನಿಷತ್ತಿನಲ್ಲಿ ಸ್ಪಷ್ಟವಾಗಿ ಹೇಳಿದೆ. ಇವನ ಆನಂದದ ನೂರರಷ್ಟು ಗಂಧರ್ವರಿಗೆ, ಇದರಿಂದ ನೂರುಪಾಲು ಪಿತೃಗಳು ದೇವರು ಮೊದಲಾದರಿಗಿರುವುದೆಂದು ಅಲ್ಲಿ ಉಲ್ಲೇಖಿಸಲಾಗಿದೆ. ಶಕ್ತಿಯ ಹೆಚ್ಚಳವಾದಂತೆಯೇ ಆನಂದದ ಪ್ರಮಾಣವೂ ಅಧಿಕವಾಗುವುದು. ಸರ್ವ ಶಕ್ತಿ ಸಂಪನ್ನವಾದ ಮೂಲ ತತ್ತ್ವಕ್ಕಿಂತ ಹೆಚ್ಚಿನ ಶಕ್ತಿ ಬೇರಿಲ್ಲವೆಂದಾಗ, ಅದು ಪರಮಾನಂದ ಸ್ವರೂಪವೆನಿಸುವುದರಲ್ಲಿ ವಿವಾದ ವೇತರದು?

ಪ್ರತಿಯೊಂದು ಪ್ರಾಣಿಯೂ ಸದಾ ಆನಂದವಾಗಿರಲು ಬಯಸುತ್ತದೆ. ಆನಂದದ ಅನುಭವವಾಗುವಲ್ಲಿ ಪ್ರೇಮವೂ ಇರುತ್ತದೆ. ಆದುದರಿಂದ ಆನಂದ—ಪ್ರೇಮಗಳು ಒಂದೇ. ಪ್ರಭುತ್ವ ಮತ್ತು ಜ್ಞಾನಗಳೆಂಬ ಎರಡು ಅನುಭವಗಳು ಪ್ರಪಂಚದಲ್ಲಿ ಬರುತ್ತವೆ. ಇವೇ ನಮಗೆ ಸದಾ ಪ್ರಿಯವಾಗಿರುತ್ತವೆ. ನಮ್ಮಲ್ಲಿ ಯಾವಾಗಲೂ ಇವುಗಳ ಸಂಗ್ರಹಣಾ ಪ್ರವೃತ್ತಿಯಿರುತ್ತದೆ. ಈ ಪ್ರಿಯತೆಯೊಡನೆ ಇವುಗಳ ಆನಂದರೂಪತೆಯೂ ಸಿದ್ಧವಾಗುತ್ತದೆ. ಇವುಗಳಲ್ಲಿ ಆನಂದರೂಪತೆಯಿರುವಾಗ, ಇವುಗಳ ಮೂಲತತ್ತ್ವದಲ್ಲಿಯೂ ಆನಂದರೂಪತೆಯಿರಬೇಕು.

ಜಗತ್ತಿನ ಮೂಲತತ್ತ್ವವೇ ಆತ್ಮರೂಪವನ್ನು ತಾಳಿ ನಮ್ಮ ಶರೀರದಲ್ಲಿ ಕೂತಿದೆಯೆಂದು ವೈದಿಕ ಸಿದ್ಧಾಂತ ಸಾರುತ್ತದೆ. ಆತ್ಮದ ರೂಪದ ಬಗ್ಗೆ ನಾವು ವಿ

(೬ನೇ ಪುಟ ನೋಡಿರಿ)

ಹೊಸ ಪುಸ್ತಕ
ಅಮೇರಿಕದ ಆರು ಮಂದಿ ಪ್ರಖ್ಯಾತ ಕಥೆಗಾರರ ಆರು ಉತ್ತಮ ಕಥೆಗಳ ಸುಂದರ ಕಥಾಸಂಕಲನ
ಅಮೆರಿಕದ ಆರು ಕತೆಗಳು
ಅಮೆರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ
ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ.ಎ.
ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ.
ಬೆಲೆ: ರೂ. 1=75; ಬಿಳಿ ಕಾಗದ!
ರೂ.೨ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು
ವ್ಯಾಪಾರಿಗಳಿಗೆ ಧಾರಾಳ ಕಮಿಷನ್
ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್ ಉಡುಪಿ.
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಅಂದವಾದ ಮನೆಗಳಿಗೆ! ಆಕರ್ಷಕವಾದ ಆಫೀಸುಗಳಿಗೆ!!
ಸುಸಜ್ಜಿತವಾದ ಆಸ್ಪತ್ರೆಗಳಿಗೆಲ್ಲಾ ಬೇಕಾಗುವ
ಖೀರ್ರಾರವರ ಉಕ್ಕಿನ
"ಮಿಡ್ಜೆಟ್" 50"×30"×17" ಪೊಪ್ಯುಲರ್ 65"×33"×19"
ಯುಟಿಲಿಟೀ 78"×36"×19" ವಾರ್ಡ್ರೋಬ್ 78"×39"×24"
ಸಾದಾ ಮತ್ತು ಒಳಗಡೆ ಲೋಕರ್, ಮತ್ತು ಕನ್ನಡಿಗಳುಳ್ಳ ಕಪಾಟುಗಳು ವಗೈರೆ ಎಲ್ಲಾ ತರದ ಉಕ್ಕಿನ ಫರ್ನಿಚರ್‌ಗಳು.
"ರೇಲೀಸ್" & "ಉಷಾ" ಟೇಬಲ್ ಮತ್ತು ಸೀಲಿಂಗ್ ಫೇನ್‌ಗಳು.
—— ದ್ವಿಮುಖವಾಗಿರುವ "ಸೋಫಾ ಹಾಗೂ ಹಾಸಿಗೆ" ——
ಮದುವೆ ಸಮಾರಂಭಗಳಿಗೆ ಉಡುಗರೆ ಸಾಹಿತ್ಯಗಳು ನಮ್ಮ ವೈಶಿಷ್ಟ್ಯ.
ಹೆಚ್ಚಿನ ವಿವರಗಳಿಗೆ:
ಶಾಸ್ತ್ರಿ ಮತ್ತು ಕಂಪೆನಿ, ಹಂಪನ್‌ಕಟ್ಟೆ, ಮಂಗಳೂರು.
Phone: 788 Grams: "SHASTRYCO"

> ತನ್ನಲ್ಲಿ ದಿವ್ಯ ಪ್ರಕಾಶ ಸಂಚಯವಿರುವವನು ಮಾತ್ರವೇ ನಾಯಕನಾಗುವ ಅರ್ಹತೆ ಪಡೆಯಬಲ್ಲ. ಒಬ್ಬ ಕುರುಡನು ಇನ್ನೊಬ್ಬ ಕುರುಡನಿಗೆ ಅದೇನು ಮಾರ್ಗದರ್ಶನ ಮಾಡಬಲ್ಲ?

ನವಯುಗ

೪೦ ವರುಷ	ಉಡುಪಿ ೨೭-೪-'೬೧	ವಾರ ೩೩

ವಿದ್ಯುದ್ಯೋಜನೆಗಳು

ಕೇಂದ್ರ ಸರಕಾರದ ನೀರಾವರಿ ಮತ್ತು ವಿದ್ಯುಚ್ಛಕ್ತಿ ಶಾಖೆಯ ಉಪಮಂತ್ರಿಗಳಾದ ಮಾನ್ಯ ಶ್ರೀ ಹಾಥಿಯವರು ಲೋಕಸಭೆಯಲ್ಲಿ ಕಳೆದ ವಾರ ಮಾತನಾಡುತ್ತ ಎರಡನೆಯ ಪಂಚವಾರ್ಷಿಕ ಯೋಜನಾವಧಿಯಲ್ಲಿ ಸುಮಾರು ಹದಿನೆಂಟು ವಿದ್ಯುದ್ಯೋಜನೆಗಳು ತಡೆಹಿಡಿಯಲ್ಪಟ್ಟವು ಅಥವಾ ಅವುಗಳಿಗೆ ನೀಡಲಾದ ಪ್ರಾಶಸ್ತ್ಯವನ್ನು ಕಡಿಮೆ ಮಾಡಲಾಯಿತು ಎಂದು ಹೇಳಿದರು. ಈ ಎಲ್ಲ ಯೋಜನೆಗಳು ನಿಜಸ್ವರೂಪದಲ್ಲೇ ಕಾರ್ಯಕೃತವಾಗುತಿದ್ದರೆ, ಸುಮಾರು ೧೧½ ಲಕ್ಷ ಕಿಲೋವಾಟ್‌ಗಳಷ್ಟು ಶಕ್ತಿಯು ಲಭಿಸುತಿತ್ತು. ಈ ಯೋಜನೆಗಳು ಕಾರ್ಯಕೃತವಾಗದಿರುವುದಕ್ಕೆ ವಿದೇಶ ವಿನಿಮಯದ ಅಭಾವವೇ ಕಾರಣವೆಂದೂ ಮಾನ್ಯ ಮಂತ್ರಿಗಳು ತಿಳಿಸಿದರು. ರಿಹಂದ ಮತ್ತು ಕೊಯಿನ ವಿದ್ಯುದ್ಯೋಜನೆಗಳೂ ಉಕ್ಕು ಮತ್ತಿತರ ನಿರ್ಮಾಣ ಸಾಮಗ್ರಿಗಳ ಅಭಾವದಿಂದ ಪ್ರಭಾವಿತವಾಗದುಳಿಯಲಿಲ್ಲ. ಮೂರನೆಯ ಯೋಜನೆಯಲ್ಲಾದರೂ ಹಿಂದೆ ತಡೆಹಿಡಿಯಲ್ಪಟ್ಟ ಯೋಜನೆಗಳನ್ನೂ ಪೂರ್ಣಗೊಳಿಸಲು ಅವಶ್ಯಕ ಕಾರ್ಯಕ್ರಮಗಳನ್ನು ಕೈಗೊಳ್ಳದೆ ಹೋದರೆ, ದೇಶದಲ್ಲಿ ವಿದ್ಯುತ್ತಿನ ಅಭಾವವು ಎದ್ದು ತೋರುವುದು ಖಂಡಿತವೆ. ಯೋಜಕರು ಒಂದರಿಂದ ನಲ್ವತ್ತು ಕಿಲೋವಾಟ್‌ಗಳ ಶಕ್ತ್ಯುತ್ಪಾದನೆಯ ಯೋಜನೆಗಳಿಗಾಗಿ ೧½ ಕೋಟಿ ರೂಪಾಯಿಗಳನ್ನು ತೆಗೆದಿರಿಸಿದುದು ಮತ್ತು ಮೂರನೆಯ ಯೋಜನೆಯಲ್ಲಿ ೧೧೮ ಲಕ್ಷ ಕಿ. ವಾ. ವಿದ್ಯುತ್ತಿನ ಉತ್ಪಾದನೆಯ ಗುರಿಯನ್ನು ೧೨೭ ಲಕ್ಷ ಕಿ. ವಾ. ಗಳಿಗೆ ಏರಿಸಿದುದು ಸಂತೋಷದ ಸಂಗತಿಗಳು.

ಆಧುನಿಕ ಕಾಲದಲ್ಲಿ ವಿದ್ಯುತ್ತಿನ ಆವಶ್ಯಕತೆಯನ್ನು ಎಷ್ಟೆಂದು ಬಣ್ಣಿಸಬೇಕಾಗಿಲ್ಲ. ಸಾಮಾನ್ಯವಾಗಿ ಎಲ್ಲರೂ ವಿದ್ಯುತ್ತಿನ ಬಳಕೆಯಿಂದಾಗುವ ಪರಿಣಾಮವನ್ನು ಅರಿತಿರುವರು. ಅದರಲ್ಲೂ ಔದ್ಯಮಿಕ ರಂಗದ ಪ್ರಗತಿ ಪಥದಲ್ಲಿ ಪಾದಾರ್ಪಣೆ ಮಾಡುತ್ತಿರುವ ಭಾರತದಲ್ಲಿ ವಿದ್ಯುದುತ್ಪಾದನೆಯ ಕಾರ್ಯವು ತ್ವರಿತಗತಿಯಲ್ಲಿ ಮುಂದುವರಿಯಬೇಕಾದುದು ಅತ್ಯವಶ್ಯ. ಕೈಗಾರಿಕೋದ್ಯಮಗಳಲ್ಲಿ ಮಾತ್ರವಲ್ಲ, ನೀರಾವರಿಯ ಸೌಕರ್ಯವನ್ನು ಒದಗಿಸಿ ವ್ಯವಸಾಯ ಕ್ಷೇತ್ರದಲ್ಲೂ ವಿದ್ಯುತ್ ಪ್ರಭಾವ ಬೀರಿ, ರಾಷ್ಟ್ರದ ಉನ್ನತ ಪಥ ಗಮನದಲ್ಲಿ ಸಾಕಷ್ಟು ಆಶಾದಾಯಕ ಪರಿಣಾಮ ಮಾಡಬಲ್ಲುದು. ಆದರೆ, ನಮ್ಮ ದೇಶದ ವಿದ್ಯುತ್ ಪೂರೈಕೆ ತೃಪ್ತಿಕರವಾಗಿ ಇಲ್ಲವೆಂದು ಹೇಳಲು ಬೇಸರವಾಗುತ್ತದೆ. ದಕ್ಷಿಣದ ರಾಜ್ಯಗಳಲ್ಲಿ ಆಂಧ್ರ ಪ್ರದೇಶ ಮತ್ತು ಕೇರಳಗಳ ಸ್ಥಿತಿಯು ಸಾಮಾನ್ಯ ತೃಪ್ತಿಕರವಿದೆಯೆನ್ನುವಂತಿದ್ದರೂ ಮದ್ರಾಸು ಮತ್ತು ಮೈಸೂರುಗಳ ಸ್ಥಿತಿ ಹಾಗಿಲ್ಲ. ಮದ್ರಾಸು ರಾಜ್ಯವು ವಿದ್ಯುತ್ ಪೂರೈಕೆಯಲ್ಲಿ ಇಡಿಯ ದೇಶದಲ್ಲಿ ಮೂರನೆಯ ಸ್ಥಾನವನ್ನಡರಿದ್ದರೂ ಬೇಸಗೆಯ ಕಾಲದಲ್ಲಿ ತನ್ನ ಗಿರಾಕಿಗಳಿಗೆ ಬೇಕಷ್ಟು ವಿದ್ಯುಚ್ಛಕ್ತಿಯನ್ನು ಒದಗಿಸಲು ತನ್ನ ಅಸಮರ್ಥತೆಯನ್ನು ಪ್ರಕಟಿಸಿದೆ. ಔದ್ಯಮಿಕ ಕ್ಷೇತ್ರದ ತನ್ನ ಗಿರಾಕಿಗಳಿಗೆ ಅದು ಈ ವರ್ಷದ ಮೇ ಮೊದಲ ದಿನದಿಂದ ನೂರಕ್ಕೆ ೫೦ರಷ್ಟು ಕಡಿತಕ್ಕೆ ಸಿದ್ಧರಾಗಿರಬೇಕೆಂಬ ಎಚ್ಚರಿಕೆಯನ್ನು ಕೊಟ್ಟಿದೆ. ಹಳ್ಳಿಹಳ್ಳಿಗಳಿಗೂ ವಿದ್ಯುತ್ತಿನ ಸೌಲಭ್ಯವನ್ನೊದಗಿಸಿದ ಮದ್ರಾಸದಲ್ಲೇ ಈ ಗತಿಯಾದರೆ ಅದರ ಪರಿಣಾಮ ಭೀಕರವಾಗದುಳಿಯುವುದು ಸಾಧ್ಯವಿಲ್ಲ.

ಮೈಸೂರಿನ ಮುಖ್ಯಮಂತ್ರಿ ಶ್ರೀ ಜತ್ತಿಯವರು ಬಿಜಾಪುರದಲ್ಲಿ ಮಾತನಾಡುತ್ತ ರಾಜ್ಯದ ಮೂರನೆಯ ಯೋಜನೆಗೆ ಮೀಸಲಾಗಿಟ್ಟ ಹಣದಲ್ಲಿ ೭೦ ಕೋಟಿ ರೂಪಾಯಿಗಳಷ್ಟನ್ನು (ಎಂದರೆ, ರಾಜ್ಯದ ಯೋಜನೆಯ ಒಟ್ಟು ವೆಚ್ಚದ ಸೇ. ೨೭½ ಯಷ್ಟು) ಕೇವಲ ವಿದ್ಯುದ್ಯೋಜನೆಗಳಿಗೆ ವ್ಯಯಿಸಲಾಗುವುದೆಂದು ತಿಳಿಸಿದರು. ಈಗತಾನೇ ಪ್ರಾರಂಭಿಕಾವಸ್ಥೆಯಲ್ಲಿರುವ ತುಂಗಭದ್ರ ಮತ್ತು ಶರಾವತಿ ಕಣಿವೆಯ ವಿದ್ಯುದ್ಯೋಜನೆಗಳು ಮೂರನೆಯ ಯೋಜನಾವಧಿಯಲ್ಲಿ ಪೂರ್ಣರೂಪಕ್ಕೆ ಬಂದಾಗ, ಹೈದರಬಾದ ಕರ್ನಾಟಕ ಮತ್ತು ಬೊಂಬಾಯಿ ಕರ್ನಾಟಕ ಪ್ರದೇಶಗಳ ಪರಿಸ್ಥಿತಿಯು ಸುಧಾರಿಸುವುದು ಖಂಡಿತವೇ. ಇದರೊಡನೆಯೇ ಕಾಳೀ ನದೀಯೋಜನೆಯನ್ನೂ ಕೈಕೊಂಡ ಪಕ್ಷದಲ್ಲಿ ವಿದ್ಯುತ್ತಿನ ಅಭಾವವು ಹೆಚ್ಚಿನಮಟ್ಟಿಗೆ ದೂರವಾದಂತಾಗುವುದು. ವ್ಯವಸಾಯ ಕ್ಷೇತ್ರದಲ್ಲಿ ಮಾತ್ರವಲ್ಲದೆ ಔದ್ಯಮಿಕ ರಂಗದಲ್ಲಿಯೂ ನಾವು ಬಲವತ್ತರವಾದ ಕ್ರಾಂತಿಯೆಬ್ಬಿಸುವುದು ರಾಷ್ಟ್ರದ ಅಭಿವೃದ್ಧಿಯ ದೃಷ್ಟಿಯಿಂದ ಅಪೇಕ್ಷಣೀಯವೆಂಬುದರಿಂದ ನಿಯೋಜಿತ ವಿದ್ಯುದ್ಯೋಜನೆಗಳು ನಿಯೋಜಿತ ವೇಳೆಯೊಳಗೆ ಪರಿಸಮಾಪ್ತವಾಗುವುದು ಅತ್ಯವಶ್ಯವಿದೆ. ಇದಕ್ಕಾಗಿ ಆವಶ್ಯಕ ಉಕ್ಕಿನ ಪೂರೈಕೆಯಾಗಲೀ ಯಂತ್ರ ಸಾಧನಗಳ ನಿರ್ಯಾತವಾಗಲಿ ತಡೆಹಿಡಿಯಲ್ಪಡುವುದು ಅನುಚಿತವಿದೆ. ವಿದೇಶ ವಿನಿಮಯವಿಲ್ಲವೆಂಬ ಒಂದೇ ಕಾರಣದಿಂದ ಇಂತಹ ಅತ್ಯುಪಯುಕ್ತ ಹಾಗೂ ಲಾಭದಾಯಕವಾದ ಶಕ್ತ್ಯುತ್ಪಾದನೆಯ ಯೋಜನೆಗಳು ಕೆಡೆಯಬಾರದು; ಅದಕ್ಕೆ ಬೇಕಾದ ಸಕಲ ಸಲಕರಣೆಗಳನ್ನು ಒದಗಿಸುವುದು ಸರಕಾರದ ಪರಮ ಕರ್ತವ್ಯ. ದಕ್ಷಿಣದ ರಾಜ್ಯಗಳಲ್ಲಿ ಸರ್ವಕಾಲದಲ್ಲಿಯೂ ಬಳಕೆದಾರರಿಗೆ ಬೇಕಷ್ಟು ಶಕ್ತಿಯನ್ನು ಒದಗಿಸಬೇಕೆಂದಿದ್ದರೆ, ಈ ನಾಲ್ಕು ರಾಜ್ಯಗಳಿಗೆ ಸಾಮಾನ್ಯ ಗ್ರಿಡ್ ಒಂದನ್ನು ಸ್ಥಾಪಿಸಬೇಕು ಎಂಬ ವಾದವೂ ಕೇಳಿ ಬರುತ್ತಿದೆ. ಇದು ತೋರಿಕೆಯ ಮಟ್ಟಿಗೆ ಉನ್ನತಾದರ್ಶವಾಗಿ ಕಂಡರೂ ಅದೆಷ್ಟರ ವರೆಗೆ ವ್ಯವಹಾರ್ಯ ಮತ್ತು ಸಂಭವನೀಯವೆಂಬುದು ವಿಚಾರಾರ್ಹವಾಗಿದೆ.

ಸಂಕ್ಷಿಪ್ತ ಸುದ್ದಿಗಳು

ಉಚ್ಚ ವಿಚಾರ ಮಾಲೆ

ರಾಷ್ಟ್ರೀಯ ಐಕ್ಯವನ್ನಿಂದು ಪ್ರತಿಯೊಬ್ಬರೂ ಬಯಸುತ್ತಾರೆ; ಆದರೆ, ಅದಕ್ಕಾಗಿ ಕಾರ್ಯತತ್ಪರರಾಗಲು ಯಾರೂ ಮುಂದೆ ಬರುತ್ತಿಲ್ಲ. ಜಬ್ಬಲಪುರದಲ್ಲಿ ನಡೆದ ಜಾತೀಯ ಗೊಂದಲದಿಂದ ನೊಂದವರು ಹಲವರಿರಬಹುದು; ಆದರೆ, ಅಲ್ಲಿನ ಕಾಂಗ್ರೆಸಿಗರ ಅಕರ್ಮಣ್ಯತೆಯನ್ನು ಕಂಡು ಮರುಗಿದವರೆಂದರೆ ಪ್ರಧಾನಿ ನೆಹರು ಮಾತ್ರ. ಉಚ್ಚ ಮನೋವೃತ್ತಿಯವರ ವಿಚಾರವೂ ಉಚ್ಚವಾಗಿರುತ್ತದೆ. ಅವರು ಎಲ್ಲರೂ ತಮ್ಮಂತೆಯೇ ಉಚ್ಚ ಆದರ್ಶವಾದಿಗಳಾಗಬೇಕೆಂದು ಬಯಸುತ್ತಾರೆ; ಪರಂತು, ಅವರ ಉಚ್ಚ ಆದರ್ಶಗಳಿಗೆ ಮಾರುಹೋಗಿ ಉಚ್ಚರ ಸಾಲಿನಲ್ಲಿ ಸೇರುವ ಯೋಗ್ಯರ ಸಂಖ್ಯೆಯೆಷ್ಟು? ಎಂತಲೇ ಜಬ್ಬಲಪುರದ ದುರಂತ ಮಧ್ಯಪ್ರದೇಶಕ್ಕೆ ಮಾತ್ರವಲ್ಲ, ಅಖಂಡ ಭಾರತಕ್ಕೇನೇ, ಭಾರತದ ಏಕತೆಗೇನೇ ಕಲಂಕಪ್ರಾಯವೆನ್ನುವಂತಾಯಿತು.

ಸತ್ಸಂಪ್ರದಾಯ ಸ್ಥಾಪನೆ

ಸರ್ವೋದಯ ಸಮ್ಮೇಳನವು ಆಂಧ್ರ ಪ್ರದೇಶದ ಚಿಟ್ಟೇಲುವಿನ ಬಳಿಯ 'ಸರ್ವೋದಯ ನಗರ'ದಲ್ಲಿ ಸಮಾವೇಶಗೊಂಡಿತು. ರಾಷ್ಟ್ರಪತಿ ಡಾ॥ ರಾಜೇಂದ್ರ ಪ್ರಸಾದರು ತನ್ನ ಸದ್ಯದ ಅಧಿಕಾರಾವಧಿ ಮುಗಿದ ಬಳಿಕ ಸರ್ವೋದಯಕ್ಕಾಗಿ ದುಡಿಯುವ ಆಶಯವನ್ನೂ ಈ ಸಮ್ಮೇಳನದಲ್ಲಿ ಹೊರಗೆಡಹಿದರು. ಡಾ। ಪ್ರಸಾದರು ಮುಂದೆಯೂ ತನ್ನ ಹುದ್ದೆಗೆ ಸ್ಪರ್ಧಿಸುವ ವಿಚಾರದಲ್ಲಿ ಹಲವಾರು ರೀತಿಯ ಊಹಾಪೋಹಗಳ ನಡೆದಿದ್ದುವಾದರೂ ಆ ಬಗ್ಗೆ ಖಚಿತ ಉತ್ತರವಿದುವರೆಗೆ ದೊರೆಯಲಿಲ್ಲ. ಆದರೆ, ಈ ಸಮ್ಮೇಳನದಲ್ಲಿ ಅವರು ವ್ಯಕ್ತಪಡಿಸಿದ ಅಭಿಪ್ರಾಯದಂತೆ ಈಗಾಗಲೇ ೧೦ ವರ್ಷಗಳ ಕಾಲ ಉನ್ನತಾಧಿಕಾರದಲ್ಲಿ ಮೆರೆದಾಡಿದವರು ಮುಂದೆ ಅದಕ್ಕೆ ಅಂಟಲಾರರೆಂದು ಧೈರ್ಯವಾಗಿ ಹೇಳಬಹುದು. ಪ್ರತಿಯೊಂದು ವಿಚಾರಗಳ ಬಗ್ಗೆಯೂ ಅತಿ ಉದಾರ ನೀತಿಯನ್ನು ತಳೆದ ಭಾರತೀಯ ಸಂವಿಧಾನವು ವಿಧಾನ ಸಭೆ—ಮಂಡಳ, ಲೋಕಸಭೆ, ರಾಜ್ಯಸಭೆಗಳ ಸದಸ್ಯತ್ವಕ್ಕಾಗಲೀ, ರಾಷ್ಟ್ರದ ಉನ್ನತ ಅಧಿಕಾರಿ ಪದವಿಗಳಿಗಾಗಲೀ ಯಾವ ಪ್ರಕಾರದ ಕಾಲಮಿತಿಯನ್ನೂ ಹಾಕಿಲ್ಲ. ಆದರೂ ಡಾ॥ ಪ್ರಸಾದರಂತಹ ರಾಷ್ಟ್ರದ ಹಿರಿಯ ನಾಯಕಮಣಿಗಳೂ ಅಧಿಕಾರಿಗಳೂ ಆಗಿರುವವರು ಸ್ವೇಚ್ಛೆಯಿಂದ ನಿವೃತ್ತರಾಗಬಯಸಿ ಸತ್ಸಂಪ್ರದಾಯವೊಂದನ್ನು ಹಾಕಿ ತೋರಿಸಲು ಮಾಡಿದ ನಿರ್ಧಾರ ಹಾಗೂ ಅವರು ಮುಂದಿಟ್ಟುಕೊಂಡ ಉದ್ದೇಶ ಸ್ವಾಗತಾರ್ಹವಾಗಿದೆ. ರಾಜಕೀಯ ಅಧಿಕಾರಕ್ಕೆ ಅಂಟಿಕೊಂಡವರು ಅದನ್ನು ಬಿಟ್ಟುಕೊಟ್ಟು ಹೊಸಬರಿಗೆ ಅವಕಾಶ ತೆರವು ಮಾಡಿಕೊಡುವಂತೆ ಪ್ರೇರೇಪಿಸುವಲ್ಲಿ ಡಾ। ಪ್ರಸಾದರು ಬೇರೆಯವರಿಗೆ ಮಾರ್ಗದರ್ಶಕರಾಗುವುದು ಸತ್ಸಂಪ್ರದಾಯ ಸ್ಥಾಪನೆಯಾಗಿದೆ.

ಸೌಮ್ಯ ಕ್ರಾಂತಿಯಾಗಬೇಕು

ಒಳ್ಳೆಯವರು ಎಲ್ಲಿದ್ದರೂ ಒಳ್ಳೆಯ ಮಾತುಗಳನ್ನೇ ಆಡುತ್ತಾರೆ; ಒಳ್ಳೆಯ ವಿಚಾರಗಳನ್ನೇ ಹೊರಗೆಡಹುತ್ತಾರೆ. ಜಯಪ್ರಕಾಶ ನಾರಾಯಣರು ಎಲ್ಲಿಯೇ ಇರಲಿ ತಮ್ಮ ಒಳ್ಳೆಯತನವನ್ನವರು ತೋರಿಸಿಯೇ ತೋರಿಸುತ್ತಾರೆ. ದೇಶದಲ್ಲಿ ಅಡಿಯಿಂದ ಸ್ವರಾಜ್ಯದ ಸೌಧವನ್ನು ನಿರ್ಮಿಸುವುದು ಗ್ರಾಮ ಸ್ವರಾಜ್ಯ ಕಲ್ಪನೆಯ ಅರ್ಥ. ಇದಕ್ಕಾಗಿ ಪಕ್ಷಾತೀತ ವ್ಯವಸ್ಥೆಯಾಗಬೇಕು; ಇಂದಿನ ಪಾರ್ಲಿಮೆಂಟರಿ ಪದ್ಧತಿಯ ದೋಷಗಳೂ ದೂರವಾಗಬೇಕು. ಜನಸೌಮ್ಯ ಕ್ರಾಂತಿಗೆ ಅಣಿಯಾಗಬೇಕು ಎಂದು ಮುಂತಾದ ತಮ್ಮ ವಿಚಾರವನ್ನವರು ಬಯಲು ನುಡಿದ್ದಾರೆ. ರಾಜಕೀಯದ ಅಮಲು ಕುಡಿದವರು ರಾಜಕೀಯವೇ ಬೇಡವೆಂದು ಈ ಸರ್ವೋದಯ ನಾಯಕನ ಮಾತುಗಳತ್ತ ಕಿವಿಯರಳಿಸದೆ ಹೋದರೂ ವಿಚಾರವಂತರ ಮನಸ್ಸಿನಲ್ಲಿ ಇವು ಪ್ರಭಾವ ಬೀರ ತೊಡಗಿದರೆ, ಅದೇ ತೃಪ್ತಿ.

ಸಂಚಾರಕ್ಕೆ ಪರಿಮಿತಿ

ಮಂತ್ರಿಪದವಿಗೂ ಸಂಚಾರ ಕಾರ್ಯಕ್ರಮಕ್ಕೂ ಇರುವ ನಂಟು ಮೈಸೂರು ರಾಜ್ಯದಲ್ಲಿ ಬಲವತ್ತರವಾದಂತೆ ಇದ್ದುದರಿಂದ ಅದರ ವಿವರವನ್ನು ವಿಧಾನಸಭೆಯ ಮುಂದೆ ಇಡಬೇಕಾಯಿತು. ರಾಜ್ಯದ ಹಿತದೃಷ್ಟಿಯಿಂದ ಮಂತ್ರಿಗಳು ಸಂಚಾರ ಕೈಗೊಳ್ಳುವುದು ವಿಲಕ್ಷಣವೆನಿಸದಿದ್ದರೂ ಈ ಸಂಚಾರಗಳಿಗೆ ಮಿತಿಯಿರಬೇಕಾದುದು ನ್ಯಾಯವೆಂದು ಕೆಲವರ ಅಂಬೋಣ. ಮತದಾರರ ನನ್ನ ಸೇವಕರಾದ ಮಂತ್ರಿಗಳು ಮತದಾರರೇ ಭೆಟ್ಟಿಕೊಟ್ಟು ಬಾಗಿಲು ತೆರೆಯಲಿಕ್ಕೋ ಕಲ್ಲುಹಾಕಲಿಕ್ಕೋ ಕರೆಕಳಿಸಿದಾಗ ಒಲ್ಲೆನೆನ್ನುವುದು ಅನ್ಯಾಯವೆನ್ನುವವರೂ ಮತ್ತೆ ಕೆಲವರು. ತನ್ನ ಬೆವರಿನ ಬೆಲೆಯು ಅಡಿಗಲ್ಲು ಹಾಕಲು ಬಾಗಿಲುಗಳನ್ನು ತೆರೆಯಲಿಕ್ಕೇನೇ ವೆಚ್ಚವಾಗುವುದನ್ನು ಕಾಣುವಾಗ, ಬಡ ತೆರಿಗೆದಾರ ತುಸು ಕಣ್ಣು ಕೆಂಪಗೆ ಮಾಡುವುದು ಪಾಪಕೃತ್ಯವಾಗದು.

ಭಾರತೀಯ ಧ್ರುವವೀರ

ಲೋಕಕಣ್ಣು ತೆರೆದ ನಂತರವಾದರೂ ನಿದ್ರೆಯಿಂದೇಳುವ ಬುದ್ಧಿ ಭಾರತಕ್ಕಿದೆಯೆಂಬುದಕ್ಕೆ ಚೀನ=ಭಾರತಗಳ ಸೀಮಾ ವಿವಾದವೇ ಸಾಕ್ಷಿ. ಪ್ರಪಂಚದ ಹಲವಾರು ರಾಷ್ಟ್ರಗಳವರು ದಕ್ಷಿಣ ಧ್ರುವವನ್ನು ತಲುಪಿ ಮರಳಿದ ನಂತರ ಈಗ ಒಬ್ಬ ಭಾರತೀಯನೂ ಅಲ್ಲಿ ಹೋಗಿ ೯೫ ದಿನ ವಿದ್ದನೆಂಬ ವಾರ್ತೆ ಆತನ ಸಾಹಸ ಪ್ರಶಂಸೆಗೆ ಕಾರಣವಾಗಿದೆ. ಲಾಸ್ ಎಂಜಲೀಸ್‌ನ ಕೆಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ಸಂಶೋಧನೆ ನಡೆಸುತ್ತಿರುವ ಮೂವತ್ತೆರಡು ವರ್ಷದ ಶ್ರೀ ಗಿರಿರಾಜ ಸಿಂಗ ಸಿರೋಹಿಯವರೇ ಈ ಧ್ರುವವೀರರು. ಅಮೆರಿಕೆಯ ರಾಷ್ಟ್ರೀಯ ವೈಜ್ಞಾನಿಕ ನಿಧಿಯು ಆರಂಭಿಸಿದ ವೈಜ್ಞಾನಿಕ ಸಂಶೋಧನಾ ತಂಡದ ಸದಸ್ಯರಾಗಿ ಇವರು ದಕ್ಷಿಣ ಧ್ರುವವನ್ನು ಹೊಕ್ಕು ರೋಮಾಂಚನಕಾರೀ ಅನುಭವಗಳನ್ನು ಪಡೆದರು.

ಅಲ್ಲಲ್ಲಿಯ ಸುದ್ದಿ ಸಾರ

ಬೆಂಗಳೂರು ದಕ್ಷಿಣ ಕನ್ನಡಿಗರ ಸಂಘದ ವಾರ್ಷಿಕೋತ್ಸವ— ಈ ತಾ. 15ರಂದು ಬೆಂಗಳೂರು ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ವಿಧಾನ ಸಭಾಧ್ಯಕ್ಷ ಶ್ರೀ ಎಸ್. ಆರ್. ಕಂಠೀರವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಸಂಘದ ಅಧ್ಯಕ್ಷ ಡಾ। ನಾಗಪ್ಪ ಆಳ್ವ, ಎಮ್. ಎಲ್. ಎ. ಅವರು ಸ್ವಾಗತ ಭಾಷಣಮಾಡಿ ಸಂಘದ ಆವಶ್ಯಕತೆ ಉದ್ದೇಶಗಳನ್ನು ವಿವರಿಸಿ ಸಂಘವು ಇದುವರೆಗೆ ಮಾಡಿರುವ ಮತ್ತು ಮುಂದೆ ಮಾಡಲಿರುವ ಕೆಲಸ ಕಾರ್ಯಗಳನ್ನು ತಿಳಿಸಿದರು. ಅಧ್ಯಕ್ಷ ಕಂಠಿಯವರು ದಕ್ಷಿಣ ಕನ್ನಡಿಗರ ಸಾಹಸ ದಕ್ಷತೆಗಳನ್ನು ಶ್ಲಾಘಿಸಿ ಮಾತನಾಡಿ, ಛದ್ಮವೇಷ ಸ್ಪರ್ಧೆಯಲ್ಲಿ ಭಾಗವಹಿಸಿದವರಿಗೆ ಬಹುಮಾನ ಹಂಚಿದರು. ಬಳಿಕ ಮನೋರಂಜನಾ ಕಾರ್ಯಕ್ರಮಗಳು ಜರಗಿದವು. ಕೊನೆಗೆ ಶ್ರೀ ಐ. ವ್ಯಾಸರಾಯರು ಧನ್ಯವಾದಗಳನ್ನು ಅರ್ಪಿಸಿದರು.

ಜಿಲ್ಲಾ ವ್ಯವಸಾಯ ಸಂಘದ ಸ್ಥಾಪನೆ— ದ. ಕ. ಜಿಲ್ಲಾ ಕೃಷಿ ಇಲಾಖೆಯ ಅಧಿಕಾರಿಗಳ ಕಚೇರಿಯಲ್ಲಿ ತಾ. 16ರಂದು ನಿವೃತ್ತ ಅಸಿಸ್ಟೆಂಟ್ ಕಮಿಶನರ್ ಶ್ರೀ ಪಿ. ಎಸ್. ತಿಮ್ಮಪ್ಪ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿದ ಜಿಲ್ಲೆಯ ಕೃಷಿಕರ ಸಭೆಯಲ್ಲಿ ಜಿಲ್ಲಾ ವ್ಯವಸಾಯ ಸಂಘವೊಂದನ್ನು ಸ್ಥಾಪಿಸಲಾಯಿತು. ಜಿಲ್ಲಾ ಕೃಷಿ ಅಧಿಕಾರಿಗಳು ಈ ಸಂಘದ ಉದ್ದೇಶಾದಿಗಳನ್ನು ವಿವರಿಸಿ ಸಂಘದ ನಿಬಂಧನೆಗಳನ್ನು ಸಭೆಯ ಮುಂದಿಟ್ಟರು. ಈ ವಿಷಯವನ್ನು ಸಭೆಯಲ್ಲಿ ಚರ್ಚಿಸಿ, ನಿಯಮಾವಳಿಗಳನ್ನು ಮಂಜೂರು ಮಾಡಲಾಯಿತು.

ಈ ಸಂಘಕ್ಕೆ ಶ್ರೀ ಪಿ. ಎಸ್. ತಿಮ್ಮಪ್ಪ ಶೆಟ್ರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ರಾಮಚಂದ್ರ ಆಚಾರ್ಯರನ್ನು ಉಪಾಧ್ಯಕ್ಷರನ್ನಾಗಿಯೂ, ಮತ್ತು ಶ್ರೀ ಪಿ. ಎಸ್. ಗಣಪತಿ ಭಟ್ಟರವರನ್ನು ಕಾರ್ಯದರ್ಶಿಯವರನ್ನಾಗಿಯೂ ಸರ್ವಾನುಮತದಿಂದ ಆರಿಸಲಾಯಿತು. ಅಲ್ಲದೆ ಶ್ರೀಗಳಾದ ಕೆ. ಸಂಜೀವ ಸೆಟ್ಟಿ, ಜಿ. ಎಸ್. ಎ. ಶೇಕಬ್ಬ, ಕೆ. ವಾಮನ ಶರ್ಮರನ್ನು ಕಾರ್ಯನಿರ್ವಾಹಕ ಸಮಿತಿಗೂ, ಶ್ರೀಗಳಾದ ಎ. ಶಿವಶಂಕರರಾವ್, ಬಿ. ವಿಶ್ವನಾಥ ಶೆಟ್ಟಿ, ಹರಿಶ್ಚಂದ್ರ ಸಂಪಿಗೆತ್ತಾಯರನ್ನು ಸಂಪಾದಕ ಸಮಿತಿಗೂ, ಶ್ರೀಗಳಾದ ಬಿ. ಸುಬ್ಬಯ್ಯ ಹೆಗ್ಡೆ, ಎಂ.ಡಿ. ಅಧಿಕಾರಿ, ಚಂದ್ರಶೇಖರ ಐತ್ತಾಳರನ್ನು ಆಡಳಿತ ಸಮಿತಿಗೂ ಆರಿಸಲಾಯಿತು.

ಮೈಸೂರು ವ್ಯವಸಾಯ ಸಂಘಕ್ಕೆ ಶ್ರೀಗಳಾದ ಪಿ. ಎಸ್. ತಿಮ್ಮಪ್ಪ ಶೆಟ್ಟಿ, ಮತ್ತು ಪಿ. ಎಸ್. ಗಣಪತಿ ಭಟ್ಟರನ್ನು ಜಿಲ್ಲಾ ಪ್ರತಿನಿಧಿಗಳಾಗಿ ಆರಿಸಲಾಯಿತು. ಅಧ್ಯಕ್ಷರ ಭಾಷಣಾ ನಂತರ ಧನ್ಯವಾದ ಅರ್ಪಿಸಲಾಯಿತು.

ಕನ್ನಡ ಸಾಹಿತ್ಯ ಸಂಘ, ರಂಗಂಪೇಟೆ—ಎಪ್ರಿಲ್ ದಿನಾಂಕ 16, 17ರಂದು ಮೇಲ್ಕಂಡ ಸಂಘದ ವಾರ್ಷಿಕೋತ್ಸವ ಮತ್ತು ವಸಂತ ಸಾಹಿತ್ಯೋತ್ಸವವು ವಿಜೃಂಭಣೆಯಿಂದ ನೆರವೇರಿತು. ಶ್ರೀ ಎಂ. ವಿ. ಚಕ್ರವರ್ತಿಗಳು ಮುಖ್ಯ ಅತಿಥಿಗಳಾಗಿ ದಯಮಾಡಿಸಿದ್ದರು.

ಮೊದಲದಿನ ಶ್ರೀ ಎಂ. ಆರ್. ಬುದ್ಧಿವಂತ ಸೆಟ್ಟಿಯವರು ಮಾನ್ಯ ಅತಿಥಿಗಳ ಪರಿಚಯಮಾಡಿ ಕೊಟ್ಟ ಮೇಲೆ ಶ್ರೀ ಚಕ್ರವರ್ತಿಯವರು "ಕನ್ನಡದಲ್ಲಿ ಶಬ್ದ ಸಾಹಿತ್ಯ" ಎಂಬ ವಿಷಯವಾಗಿ ಭಾಷಣವನ್ನಿತ್ತರು. ಮರುದಿನ ಶ್ರೀ ಅತಿಥಿಗಳು "ವಾಲ್ಮೀಕಿ ರಾಮಾಯಣ" ಎಂಬ ವಿಷಯವಾಗಿ ಮಾತನಾಡಿದರು. ಬಾಲಕಿಯರ ನೃತ್ಯ, ಪ್ರೌಢ ಶಾಲೆಯ ವಿದ್ಯಾರ್ಥಿಗಳಿಂದ "ವಾರಸುದಾರ" ಎಂಬ ಏಕಾಂಕ ನಡೆದವು. ಕಾರ್ಯದರ್ಶಿಗಳ ಆಭಾರ ಮನ್ನಣೆಯೊಂದಿಗೆ ಸಭೆ ಮುಕ್ತಾಯವಾಯಿತು.

ಹಿರಿಯಡ್ಕ—ಸ್ಥಳೀಯ ಶ್ರೀ ವೀರಭದ್ರ ದೇವಸ್ಥಾನದಲ್ಲಿ ಇದೇ ತಾ. 30—4—61 ರಿಂದ ತಾ. 5—5—61ರ ವರೆಗೆ ಕಾಲಾವಧಿ ರಥೋತ್ಸವವು ಜರಗಲಿರುವುದೆಂದೂ, ಭಕ್ತರೆಲ್ಲರೂ ಬಂದು ಶ್ರೀಮುಡಿ ಗಂಧ, ಪ್ರಸಾದಗಳನ್ನು ಸ್ವೀಕರಿಸಿ ದೇವರ ಕೃಪೆಗೆ ಪಾತ್ರರಾಗಬೇಕೆಂದೂ ಮೆನೇಜಿಂಗ್ ಟ್ರಸ್ಟಿ ಶ್ರೀ ಎ. ಜಗಂಜೀವ ಆಳ್ವರು ಅಪೇಕ್ಷಿಸುತ್ತಾರೆ.

ಪುತ್ತೂರು—ಈ ಕ್ಷೇತ್ರದಲ್ಲಿಯ ಸಣ್ಣ ನೀರಾವರಿ ಯೋಜನಾ ಸಪ್ತಾಹವು ಇಲ್ಲಿಯ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಕೆ. ಐತ್ತಪ್ಪ ರೈಗಳ ಅಧ್ಯಕ್ಷತೆಯಲ್ಲಿ ನೆರವೇರಿತು. ಅಸಿಸ್ಟೆಂಟ್ ಇಂಜಿನಿಯರ್ ಶ್ರೀ ಜಿ. ಅಬ್ದುಲ್ ಕರೀಮ್ ಅವರು ಮೊದಲ ಹಾಗೂ ಎರಡನೆಯ ಯೋಜನೆಗಳಲ್ಲಿ ಮಾಡಿದ ಕೆಲಸಗಳ ವಿವರಗಳನ್ನಿತ್ತರು. ಯೋಜನೆಯ ಅವಶ್ಯಕತೆಗಳ ಕುರಿತು ಶ್ರೀಗಳಾದ ಬಿ. ರಾಮಚಂದ್ರರಾಯರೂ, ಪದ್ಮಯ್ಯ ಗೌಡರೂ ಮಾತನಾಡಿದರು.

ಕುಂಜಾಲು—ಇಲ್ಲಿಯ ವಿಶ್ವಕೀರ್ತಿ, ಹಾ. ಎ. ಶಾಲೆಯ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಕಾರ್ಕಳ ತಾಲೂಕು ಬೋರ್ಡು ಸದಸ್ಯ ಡಾ. ಎ. ಕೆ. ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ತಾ 15ರಂದು ನೆರವೇರಿತು. ಕಾರ್ಯದರ್ಶಿ ಶ್ರೀ ಎಚ್. ರಘುರಾಮ ಹೆಗ್ಡೆಯವರು ಸ್ವಾಗತಿಸಿ ವರದಿವಾಚನ ಮಾಡಿದರು. ಶ್ರೀಗಳಾದ ಬಿ. ಪದ್ಮನಾಭ ಸೋಮಯಾಜಿ, ಎಚ್. ಚಂದಯ್ಯ ಶೆಟ್ಟಿ ಮೊದಲಾದವರು ಮಾತನಾಡಿದರು. ಅಧ್ಯಕ್ಷರ ಭಾಷಣ ಧನ್ಯವಾದ ಸಮರ್ಪಣೆ ಆದ ಬಳಿಕ ಯಕ್ಷಗಾನ ಬಯಲಾಟ ಹಳೇವಿದ್ಯಾರ್ಥಿ ಯಕ್ಷಗಾನ ಕಲಾಮಂದಿರದಿಂದ ನೆರವೇರಿತು.

ಮಲೆನಾಡು ಪರಿಷತ್ತು—ಮಲೆನಾಡು ಪರಿಷತ್ತಿನ ಸ್ವಾಗತ ಸಮಿತಿಯವರು ಇದೇ ಬರುವ ಮೇ 14ರಂದು ಕೊಡಗಿನ ಮಡಿಕೇರಿಯಲ್ಲಿ ಪರಿಷತ್ತನ್ನು ನೆರವೇರಿಸಲು ನಿರ್ಣಯಿಸಿದ್ದಾರೆ. ಮಲೆನಾಡಿನ ಅಭಿವೃದ್ಧಿ ಸಮಸ್ಯೆಯನ್ನು ಈ ಪರಿಷತ್ತಿನಲ್ಲಿ ಚರ್ಚಿಸಲಾಗುವುದು.

ಡಿಲ್ಲಿಯ ಯೋಜನಾ ಸಮಿತಿಯ ಸದಸ್ಯರು ಶ್ರೀ ಟಿ. ಎನ್. ಸಿಂಘರು ಪರಿಷತ್ತನ್ನು ಉದ್ಘಾಟಿಸಲಿಕ್ಕೂ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರು ಪರಿಷತ್ತಿನ ಅಧ್ಯಕ್ಷತೆ ವಹಿಸಲಿಕ್ಕೂ ಒಪ್ಪಿರುವರು. ಈ ಪರಿಷತ್ತಿಗೆ ಮೈಸೂರು ವಿಧಾನ ಮಂಡಳದ ಮೆಂಬರರೂ ಮೈಸೂರು ಮಲೆನಾಡು ಕ್ಷೇತ್ರವನ್ನು ಪ್ರತಿನಿಧಿಸುವ ಪಾರ್ಲಿಮೆಂಟ್ ಸದಸ್ಯರೂ ಮಲೆನಾಡು ಜಿಲ್ಲೆಗಳ ಇತರ ಪ್ರತಿನಿಧಿಗಳೂ ಬಂದು ಭಾಗವಹಿಸುವ ನಿರೀಕ್ಷೆ ಇದೆ. ಮಲೆನಾಡು ಜಿಲ್ಲೆಯ ಪ್ರತಿನಿಧಿಗಳೆಲ್ಲರೂ ಸಕ್ರಿಯ ಸಹಕಾರ ಮತ್ತು ಬೆಂಬಲವಿತ್ತು ಪರಿಷತ್ತನ್ನು ಯಶಸ್ವಿಗೊಳಿಸುವಂತೆ ಕೋರಲಾಗಿದೆ ಎಂದು ಸ್ವಾಗತ ಸಮಿತಿಯ ಅಧ್ಯಕ್ಷ ಶ್ರೀ ಬಿ ಎಸ್. ಕುಶಾಲಪ್ಪನವರು ಪತ್ರಿಕಾ ಪ್ರಕಟಣೆ ಹೊರಡಿಸಿದ್ದಾರೆ.

ಮುಂಡ್ಕೂರು—ಸ್ಥಳೀಯ ಬೋರ್ಡ್ ಹಾ. ಎ ಶಾಲೆಯ ವಾರ್ಷಿಕೋತ್ಸವವು ತಾ. 15ರಂದು ಕಾರ್ಕಳ ತಾಲೂಕು ಬೋರ್ಡ್ ಅಧ್ಯಕ್ಷ ಶ್ರೀ ಮೋಹನದಾಸ ಅಡ್ಯಂತಾಯರ ಅಧ್ಯಕ್ಷತೆಯಲ್ಲಿ ನೆರವೇರಿತು. ಕಾರ್ಕಳ ತಾ॥ ಬೋರ್ಡ್ ಸದಸ್ಯೆ ಶ್ರೀಮತಿ ವಸಂತಿ ಎನ್. ಮುಂಡ್ಕೂರ್‌ರವರು ಧ್ವಜಾರೋಹಣಗೈದರು. ಮಂಗಳೂರು ತಾ॥ ಬೋರ್ಡ್ ಅಧ್ಯಕ್ಷ ಶ್ರೀ ಬಿ ರಾಜೀವ ಭಂಡಾರಿಯವರು ಬಹುಮಾನ ವಿತರಣೆ ಮಾಡಿದರು. ಮೈಸೂರಿನ "ವಿಜಯ" ದಿನ ಪತ್ರಿಕಾ ಸಂಪಾದಕ ಹಳೆ ವಿದ್ಯಾರ್ಥಿ ಶ್ರೀ ಎ. ರಾಮಣ್ಣನವರು ಸ್ವಸ್ತಿ ವಾಚನ ಮಾಡಿದರು. ಶಾಲಾ ಮುಖ್ಯೋಪಧ್ಯಾಯ ಶ್ರೀ ಕೆ. ಶಿವರಾಮ ಹೆಗ್ಡೆಯವರು ಶಾಲಾ ವರದಿಯನ್ನೋದಿದರು. ಅಧ್ಯಕ್ಷರ ಭಾಷಣದ ಬಳಿಕ ಶಾಲಾ ಸಮಿತಿ ಅಧ್ಯಕ್ಷ ಶ್ರೀ ಎಂ. ಶಿವಣ್ಣ ಶೆಟ್ಟರು ಧನ್ಯವಾದ ಅರ್ಪಿಸಿದರು. ಬಳಿಕ ನಾಟಕಾದಿ ವಿವಿಧ ವಿನೋದಾವಳಿಗಳು ಜರಗಿದವು.

ಸತ್ಕಾರ—ಹೆಚ್ಚಿನ ವ್ಯಾಸಂಗ ಮುಗಿಸಿ ಅಮೇರಿಕದಿಂದ ಹಿಂದಿರುಗಿ ಬಂದಿರುವ ಇಲೆಕ್ಟ್ರಿಕಲ್ ಇಂಜಿನಿಯರ್ ಶ್ರೀ ಅನಂತ ಶಾನುಭೋಗ್ ಇವರನ್ನು ಸತ್ಕರಿಸುವ ಸಮಾರಂಭವೊಂದು ಇದೇ ತಾ. 25ನೇ ಸಂಜೆ ಉಡುಪಿಯ ಸಿಟೀಬೀದಿನಲ್ಲಿರುವ ಮೊಡರ್ನ್ ಸ್ಟೋರ್ಸ್ ಕಟ್ಟಡದಲ್ಲಿ ಜರಗಿತು. ಸಮಾರಂಭದ ಅಧ್ಯಕ್ಷತೆಯನ್ನು ಎಮ್. ಜಿ. ಎಮ್ ಕಾಲೇಜಿನ ಪ್ರೊ॥ ಯು. ಎಲ್. ಆಚಾರ್ಯರು ವಹಿಸಿದ್ದರು. ಶ್ರೀ ಅಮ್ಮುಂಜೆ ಅನಂತ ನಾಯಕರು ಸ್ವಾಗತಿಸಿದರು.

ವುಡ್‌ಲೇಂಡ್ಸ್ ಹೋಟೆಲ್—ಮಂಗಳೂರಿನ ಬಂಟ್ಸ್ ಹೋಸ್ಟೆಲ್ ರಸ್ತೆಯಲ್ಲಿ ಶ್ರೀ ವೈ. ವಾಸುದೇವ ಭಟ್ ಮತ್ತು ಸಹೋದರರಿಂದ ನವೀನವಾಗಿ ಅತ್ಯಾಧುನಿಕ ಮಾದರಿಯಲ್ಲಿ ಕಟ್ಟಿಸಲ್ಪಟ್ಟ ಊಟ ಮತ್ತು ವಸತಿ ಮಂದಿರವಾದ ವುಡ್‌ಲೇಂಡ್ಸ್ ಹೋಟೇಲಿನ ಪ್ರಾರಂಭೋತ್ಸವವು ತಾ. 25ನೇ ಸಂಜೆ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಸ್ವಾಗತ ಸತ್ಕಾರವಾದ ಬಳಿಕ ಮಾಸ್ಟರ್ ವಿಠಲ್ ಮತ್ತು ಪಾರ್ಟಿಯವರಿಂದ ನೃತ್ಯ ಪ್ರದರ್ಶನವು ಜಯಶೀಲವಾಗಿ ಜರಗಿತು.

ಸುಸಜ್ಜಿತವಾದ ಈ ಹೋಟೇಲ್ ಪ್ರವಾಸಕರಿಗೆ ಅತ್ಯನುಕೂಲವಾಗಿ ನಗರದ ಪ್ರಶಾಂತ ವಾತಾವರಣದಲ್ಲಿದೆ. ಓಪನ್ ಏರ್ ಥಿಯೇಟರಿನ ಸೌಕರ್ಯವಿದ್ದು ಮದುವೆ, ಸಾಮೂಜಿಕ ಸಮಾರಂಭಗಳನ್ನು ವ್ಯವಸ್ಥೆಗೊಳಿಸಲು ಅನುಕೂಲವಾಗಿದೆ. ಹೋಟೇಲ್ ಉದ್ಯಮದಲ್ಲಿ ವಿಶಾಲ ಅನುಭವವಿರುವ ದಕ್ಷರಾದ ಶ್ರೀ ವೈ. ವಾಸುದೇವ ಭಟ್ ಮತ್ತು ಸಹೋದರರ ಈ ನೂತನ ಸಾಹಸವು ಅಭಿನಂದನೀಯವಾಗಿದೆ.

ಮೈಸೂರು ರಾಜ್ಯಪಾಲ—ಶ್ರೀ ಮಂಗಲದಾಸ ಪಕ್ವಾಸರರು ಇದೇ ತಾ. 28ನೇ ಮಧ್ಯಾಹ್ನ ಧರ್ಮಸ್ಥಳಕ್ಕೆ ಆಗಮಿಸಿ ಅನೇ ಸಂಜೆ ಹೊಸತಾಗಿ ಕಟ್ಟಿಸಲ್ಪಟ್ಟಿರುವ ಧರ್ಮಛತ್ರದ ಉದ್ಘಾಟನೆ ಮಾಡಲಿರುವರು.

ಅ. ಭಾ. ಕಾಂಗ್ರೆಸ್ ಅಧ್ಯಕ್ಷ—ಶ್ರೀ ಎನ್. ಸಂಜೀವ ರೆಡ್ಡಿಯವರು ಮೇ. ತಿಂಗಳ ಆರಂಭದಲ್ಲಿ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲಾ ಸಂಚಾರ ಕೈಗೊಳ್ಳಲಿರುವರೆಂದೂ ತಾ. 6ನೇ ಸಂಜೆ 3½ ಗಂಟೆಗೆ ಮಂಗಳೂರಿನ ಕಸ್ತೂರ್ ಬಾ ಮೆಡಿಕಲ್ ಕಾಲೇಜಿನ ಶೋತೃ ಮಂದಿರದಲ್ಲಿ ಕಾಂಗ್ರೆಸ್ ಕಾರ್ಯಕರ್ತರನ್ನು ಉದ್ದೇಶಿಸಿ ಭಾಷಣಮಾಡಲಿರುವರೆಂದೂ 6 ಗಂಟೆಗೆ ಕೇಂದ್ರ ಮೈದಾನಿನಲ್ಲಿ ಸಾರ್ವಜನಿಕ ಭಾಷಣ ಮಾಡಲಿರುವರೆಂದೂ ತಿಳಿದು ಬರುತ್ತದೆ.

ಶ್ರೀ ಅಂಬಾಡಿಬೇಡು ನಾರಾಯಣ ಸೆಟ್ಟರ ನಿಧನ— ಕಟಪಾಡಿ ಅಂಬಾಡಿಬೇಡು ದಿ. ಮಂಜಯ್ಯ ಸೆಟ್ಟರ ಅಳಿಯ ಬಂಡ್ಸಾಲೆ ನಾರಾಯಣ ಶೆಟ್ಟರು ಇದೇ ತಾ. 17ನೇ ರಾತ್ರಿ ತಮ್ಮ 69ನೇ ಪ್ರಾಯದಲ್ಲಿ ಮೆದುಳು ರೋಗದಿಂದ ಅಕಸ್ಮಾತ್ತಾಗಿ ಮರಣ ಹೊಂದಿದರೆಂದು ತಿಳಿಸಲು ವಿಷಾದವಾಗುತ್ತದೆ. ದಿವಂಗತರು ಪ್ರಸಿದ್ಧ ಬಂಟ ಮನೆತನದವರೂ, ಧೈರ್ಯಶಾಲಿಗಳೂ, ಉದ್ಯೋಗ ಶೀಲರೂ, ಸಾಹಸಿಗಳೂ ಪರೋಪಕಾರಿಗಳೂ ಆಗಿದ್ದು ಜನಪ್ರಿಯರಾಗಿದ್ದರು. ಉದಾರ ಹೃದಯಿಗಳಾದ ಇವರು ಜೀವನದ ಸಿಹಿಕಹಿಗಳನ್ನು ಬಲ್ಲವರಾಗಿದ್ದು ಅನುಭವಶಾಲಿಗಳಾಗಿದ್ದರು. ಉತ್ತಮ ಪಂಚಾಯಿತೆದಾರರಾಗಿಯೂ ಹೆಸರುಗಳಿಸಿದ್ದರು.

ಜನರಿಗೂ ಹೆದರುತ್ತಾರೆ!

ಮೈಸೂರು ವಿಧಾನ ಸಭೆಯಲ್ಲಿ ವಿರೋಧೀ ಪಕ್ಷದ ನಾಯಕರಾಗಿ ಶ್ರೀ ಜೆ. ಬಿ. ಮಲ್ಲಾರಾಧ್ಯರು ಆಯ್ಕೆಗೊಂಡಿದ್ದಾರೆ. ಶ್ರೀ ಮಲ್ಲಾರಾಧ್ಯರ ನಾಯಕತ್ವದಲ್ಲಿ ಮುಂದುವರಿಯುವುದು ಅಸಾಧ್ಯವೆಂದೂ ಆದುದರಿಂದ ಒಂದೇ, ನಾಯಕತ್ವದಲ್ಲಿ ಬದಲಾವಣೆಯಾಗಬೇಕು ಇಲ್ಲವೇ ತಮ್ಮ ರಾಜಿನಾಮೆಯನ್ನು ಸ್ವೀಕರಿಸಬೇಕು ಎಂದು ಹಿಂದಿನ ನಾಯಕ ಶ್ರೀ ಬಿ. ಕೆ. ಪುಟ್ಟರಾಮಯ್ಯನವರು ಹೇಳುತ್ತಾರೆ. "ಸುಮಾರು ೩೦ ವರ್ಷಗಳ ಕಾಲ ಬ್ರಿಟಿಷ ಸರಕಾರದ ಕೈಕೆಳಗೆ ಕೆಲಸಮಾಡಿ ಭಾರತ ಸ್ವಾತಂತ್ರ್ಯವನ್ನು ವಿರೋಧಿಸಿದಂತಹರನ್ನು ನಮ್ಮ ಪಕ್ಷದ ಮುಖಂಡರೆಂದು ಹೇಳಿಸಿಕೊಂಡರೆ, ಜನ ನಮಗೆ ಏನೆಂದಾರು?" ಎಂದವರು ಪ್ರಶ್ನಿಸುತ್ತಾರೆ.

ಲಾವೋಸದಲ್ಲಿ ಯುದ್ಧ ವಿರಾಮ

ಲಾವೋಸದಲ್ಲಿ ಕೆಲವು ದಿನಗಳಿಂದ ನಡೆದು ಬಂದ ಗೊಂದಲವು ಯುದ್ಧ ವಿರಾಮದಿಂದಾಗಿ ನಿಂತಂತಾಯಿತು. ಬ್ರಿಟನ್ ಮತ್ತು ರಶಿಯಾಗಳು ಒಂದು ಸಂಯುಕ್ತ ಪ್ರಕಟಣೆಯನ್ನು ಹೊರಡಿಸಿ ಅಲ್ಲಿ ಯುದ್ಧ ವಿರಾಮ ಮಾಡಬೇಕೆಂಬ ಸಂಯುಕ್ತ ಪ್ರಕಟಣೆಯನ್ನು ಭಾರತದ ಪ್ರಧಾನಮಂತ್ರಿ ಶ್ರೀ ನೆಹರುರವರಿಗೆ ಒಪ್ಪಿಸಿದರು. ಯುದ್ಧ ವಿರಾಮ ಕೈಗೊಂಡುದನ್ನು ಮೇಲ್ವಿಚಾರಣೆ ಮಾಡಲು, ಲಾವೋಸದ ಸಂಬಂಧವಾಗಿ ನೇಮಿಸಲ್ಪಟ್ಟ ಅಂತರಾಷ್ಟ್ರೀಯ ಮೇಲ್ವಿಚಾರಣಾ ಆಯೋಗದ ಸಭೆಯನ್ನು ಪುನಃ ಸೇರಿಸಬೇಕೆಂದು ಈ ಎರಡೂ ರಾಷ್ಟ್ರಗಳು ಭಾರತವನ್ನು ಕೇಳಿಕೊಂಡಿವೆ.

ಶ್ರೀ. ಎ. ಬಿ. ಸೆಟ್ರ ಸ್ಮಾರಕ ನಿಧಿಗೆ ಧನಸಹಾಯ.

ಶ್ರೀ. ಯಂ. ಪ್ರತಾಪಚಂದ್ರ ಶೆಟ್ರು, ಮದ್ರಾಸು	500	0	0
ಶ್ರೀ ಜಸ್ಟಿಸ್ ಕೆ. ಯಸ್. ಹೆಗ್ಡೆಯವರು, ಬೆಂಗಳೂರು	250	0	0
ಶ್ರೀ. ಸಿ ಟಿ ಆಳ್ವರು, ಮಂಗಳೂರು	25	0	0
ಶ್ರೀ. ಕರಿಯಂಗಳ ಐತಪ್ಪ ಪೂಂಜರು	25	0	0
ಶ್ರೀ. ಕೆ. ಹೊನ್ನಯ್ಯ ಶೆಟ್ರು, ನವಯುಗ, ಉಡುಪಿ	25	0	0
ಜುಮ್ಲಾ	825	0	0
ಮುಂಚಿನ ಜಮೆ	7.695	0	0
ಒಟ್ಟು ಜುಮ್ಲಾ	8,520	0	0

ಮಂಗಳೂರು, ತಾ. 21-4-61 — ಕೆ. ಟಿ. ಆಳ್ವ, ಅಧ್ಯಕ್ಷ. — ಪಿ. ಯಮ್. ಹೆಗ್ಡೆ, ಕೋಶಾಧಿಕಾರಿ.

ಸೂಚನೆ: – ಸಹಾಯಧನವನ್ನು ಉದಾರಿಗಳು ಬೇಗನೆ Sri P. M, Hegde, Kodiyalbail, Mangalore—3 ಯವರಿಗೆ ಕಳುಹಿಸಿ ಕೊಡಬೇಕಾಗಿ ವಿನಂತಿ.

ಜೀವನದ ವಿವಿಧ ಘಟನೆಗಳನ್ನು ಹೃದಯ ಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಒಂದಿಷ್ಟು ನಗು

ಕೆಂಪು ಸೀರೆಯುಟ್ಟ ಆಧುನಿಕ ಸಿಂಗಾರದ ಸುಂದರಿಯೊಬ್ಬಳು ಬಸ್ಸಿನಲ್ಲಿ ಕೂತಳು. ಹತ್ತಿರದಲ್ಲಿದ್ದ ಯುವಕನು ದೂರ ಸರಿದು, ನಾನು ದೂರವಿರುವದು ಲೇಸು. ಇಲ್ಲದಿದ್ದರೆ ಬೆಂಕಿ ತಗಲೀತು" ಎಂದನು.

ಯುವತಿಯು ಆತನನ್ನು ಒಮ್ಮೆ ನೋಡಿ "ಹೆದರಬೇಡಿ. ಹಸಿ ಸೌದೆಗೆ ಬೆಂಕಿ ಹಿಡಿಯದು" ಎಂದಳು.

೦೦ ೦೦

ಯಜಮಾನಿ— ನಮ್ಮಲ್ಲಿ ನೀನು ಸುಖವಾಗಿರಬಹುದು. ನಾವು ಗಂಡ ಹೆಂಡತಿಯರು ಇಬ್ಬರೇ ಇರುವದು. ನಿನಗೆ ಕಿರುಕುಳ ಕೊಡಲು ಮಕ್ಕಳಿಲ್ಲ.

ಅಡಿಗೆಯವಳು— ನನಗೆ ಮಕ್ಕಳೆಂದರೆ ತುಂಬಾ ಪ್ರೀತಿ ನನಗಾಗಿ ನೀವು ನಿಯಂತ್ರಣ ಹಾಕಿಕೊಳ್ಳಬೇಡಿ.

೦೦ ೦೦

ರಾಮು— ನನ್ನ ಹೆಂಡತಿ ತುಂಬಾ ಓದಿದವಳು. ಜಾಣೆ, ಆಕೆ ಯಾವ ವಿಚಾರದಲ್ಲಾದರೂ ಗಂಟೆ ಗಂಟೆಗಳ ವರೆಗೆ ಮಾತಾಡಬಲ್ಲಳು.

ಶ್ಯಾಮು—ಅದೇನು ಮಹಾ? ನನ್ನ ಹೆಂಡತಿ ವಿಚಾರವಿಲ್ಲದೆಯೇ ಗಂಟೆ ಗಂಟೆಗಳ ವರೆಗೆ ಮಾತಾಡುತ್ತಾಳೆ!

೦೦ ೦೦

ನನ್ನ ೨೦ನೇ ವಯಸ್ಸಿನಲ್ಲಿ ನಾನು ಶ್ರೀಮಂತನಾಗಬೇಕೆಂದು ನಿಶ್ಚಯಿಸಿದೆ.

ಆದರೆ ನೀನು ಶ್ರೀಮಂತನಾದಂತೆ ತೋರುವದಿಲ್ಲ.

ಶ್ರೀಮಂತನಾಗಲಿರುವ ಕಷ್ಟಕ್ಕಿಂಥಾ ನನ್ನ ನಿಶ್ಚಯ ಬದಲಾಯಿಸುವದು ಸುಲಭವಾಗಿ ತೋರಿತು.

೦೦ ೦೦

ಗಂಡ—ಯಾರವನು?

ಹೆಂಡತಿ—ನನಗೆ ಗೊತ್ತಿಲ್ಲ.

ಗಂಡ—ನೀನು ಆತನನ್ನು 'ಡಾರ್ಲಿಂಗ್' ಎಂದು ಕರೆದಂತೆ ಕೇಳಿದೆ.

ಹೆಂಡತಿ— ಹೌದು. ಆತನ ಹೆಸರು ಗೊತ್ತಿಲ್ಲದ್ದರಿಂದ ಹಾಗೆ ಕರೆದೆ.

೦೦ ೦೦

ಆತ—ನನಗೆ ಐವತ್ತು ರೂಪಾಯಿ ಸಾಲ ಕೊಡುವಿಯಾ?

ಈತ—ಕೊಡಲಾರೆ. ಏಕೆಂದರೆ ಯಾರಾಗಲೂ ಸಾಲ ಕೊಟ್ಟರೆ ಗೆಳೆತನ ಮುರಿದು ಹೋಗುತ್ತೆ.

ಆತ—ನಾವೇನು ಅಷ್ಟು ದೊಡ್ಡ ಗೆಳೆಯರಲ್ಲದಿರುವಾಗ ಭಯವೇಕೆ?

ವಿಚಾರವರ್ಷ

(೫ನೇ ಪುಟದಿಂದ)

ಚಾರ ಮಾಡುವಾಗ, ಅದರ ಆನಂದರೂಪತೆಯು ಮುಂದಿಟ್ಟಾಗುವುದು. ಆತ್ಮಕ್ಕೆ ಅನುಕೂಲವಾದ ಚೇತನ ಅಥವಾ ಅಚೇತನಗಳ ಮೇಲೆ ನಮಗೆ ಪ್ರೇಮವು ಹುಟ್ಟುತ್ತದೆ; ಪ್ರತಿಕೂಲವಾಗಿರುವುದರಿಂದ ಪ್ರೇಮದ ಸ್ಥಾನವನ್ನು ದ್ವೇಷವು ಆಕ್ರಮಿಸುತ್ತದೆ. ಈ ಸಂಗತಿಯನ್ನು ವೇದಗಳೂ ಹಲವಾರು ಬಾರಿ ಸ್ಪಷ್ಟಗೊಳಿಸಿವೆ.

ನವಾ ಅರೇ ಪತ್ಯುಃ ಕಾಮಾಯ ಪತಿಃ ಪ್ರಿಯೋ ಭವತಿ; ಆತ್ಮನಸ್ತು ಕಾಮಾಯ ಪತಿಃ ಪ್ರಿಯೋ ಭವತಿ; ನ ವಾ ಅರೇ ಸರ್ವಸ್ಯ ಕಾಮಾಯ ಸರ್ವಂ ಪ್ರಿಯಂ ಭವತಿ; ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತಿ ||

(ಪತ್ನಿಯಲ್ಲಿರುವ ಪತಿಪ್ರೇಮ ಪತಿಗಾಗಿ ಅಲ್ಲ; ಹಾಗೆಯೇ ಪತಿಯಲ್ಲಿ ಪತ್ನಿಯ ಬಗ್ಗೆ ಇರುವ ಪ್ರೇಮ ಪತ್ನಿಗಾಗಿ ಅಲ್ಲ; ತನ್ನ ಇಚ್ಛಾಪೂರ್ತಿಗಾಗಿ ಈ ಪ್ರೇಮವಿರುತ್ತದೆ) ಇತ್ಯಾದಿಯಾಗಿ ಪುತ್ರ, ಮಿತ್ರ ಎಲ್ಲರ ಬಗ್ಗೂ ಹೇಳಿ, ಶ್ರುತಿಯು ತನ್ನ ಕಾಮನಾಪೂರ್ತಿಗಾಗಿಯೇ ಎಲ್ಲರಲ್ಲಿಯೂ ಪ್ರೇಮ ಹುಟ್ಟುತ್ತದೆ ಎಂದು ಸಾರಿದೆ. ಆದುದರಿಂದ ಪ್ರೇಮದ ಮುಖ್ಯಸ್ಥಾನ ಆತ್ಮ; ಇದೇ ಆನಂದಮಯವಾಗಿದೆ, ಅನುಭವಸಿದ್ಧ ಮಾತೂ ಇದೇ. ಪರತತ್ವ ಇಲ್ಲವೇ ಮೂಲತತ್ವವು ಆತ್ಮಕ್ಕಿಂತ ಬೇರೆಯಲ್ಲದ ಕಾರಣ ಅದರ ಆನಂದರೂಪತೆಯು ಸುಸ್ಪಷ್ಟವಾಗುತ್ತದೆ.

ಪ್ರಪಂಚದಲ್ಲಿರುವ ದುಃಖಗಳಲ್ಲಿ ಮರಣಕ್ಕಿಂತ ಪ್ರಬಲವಾದುದಿಲ್ಲ. ಮೃತ್ಯು ಅಭಾವರೂಪವಾಗಿದೆ. ಇದು ದುಃಖ ಸ್ವರೂಪವಾಗಿರುವಾಗ, ಅದಕ್ಕೆ ವಿಪರೀತವಾಗಿ, ತತ್ವ ಪ್ರಭುತ್ವವು ಅವಶ್ಯ ಆನಂದ ಸ್ವರೂಪವಾಗಿದೆ. ಈ ಸ್ಥಿತಿಯಲ್ಲಿರುವ ಶುದ್ಧ ಸತ್ತಾರೂಪ ಮತ್ತು ತನ್ನ ಪ್ರವೇಶದಿಂದ ಎಲ್ಲರಿಗೂ ಸತ್ತತೆಯನ್ನು ಒದಗಿಸುವ ಸದ್ರೂಪವನ್ನು 'ಆನಂದ'ವೆಂದು ಹೇಳಲೇ ಬೇಕಾಗುತ್ತದೆ.

ಹೀಗೆ ಅನೇಕ ಉಕ್ತಿಗಳಿಂದ ಮೂಲ ತತ್ವದ ರಸರೂಪತೆ, ಆನಂದ ರೂಪತೆಗಳು ಸಿದ್ಧವಾಗುತ್ತವೆ. ಇದೇ ಆಧಾರದ ಮೇಲೆ ಶ್ರುತಿಯು ಮೂಲತತ್ವವನ್ನು ರಸರೂಪ ಅಥವಾ ಆನಂದ ರೂಪವೆಂದು ಉಲ್ಲೇಖಿಸಿದೆ.

ಬುಧನಸುತ್ತು ನೆಗೆಯಲು ಪ್ರಯತ್ನಿಸಿದ ಚಾರಿತ್ರಿಕ "ಹಾಂ" ಯಾನದ ಉಡುಗೆ ತೊಡಿಗೆಯಲ್ಲಿ

ಪ್ರೀತಿಯ ಗುರಿ

(ಶ್ರೀ ರಾಮಕೃಷ್ಣ ಪರಮಹಂಸರ ಉದ್ಗಾರ)

ಪರರಿಗೆ ಒಳ್ಳಿತವನ್ನು ಬಯಸುವುದೇ ಪ್ರೀತಿಯೆನಿಸುವುದು. ನಿದ್ರಿತನ ಬಾಯಿಯಲ್ಲಿ ಕೊಳಕು ನೀರನ್ನು ಸುರಿದರೆ, ಆತನಿಗೆ ಅದರ ವಾಸನೆಯು ಎಂದೂ ಗೋಚರಿಸದು. ಜಾಗರದಲ್ಲಿರುವಾಗ ಮಾನವನು ಜಂಬದ ಮಾತುಗಳನ್ನಾಡಿ ಅಹಂಕಾರ ದರ್ಪವನ್ನು ಬೀರಿ ಗರ್ವಿಷ್ಠನಾಗುವುದು ರೂಢಿ. ತಪವನ್ನು ಕೈಗೊಂಡವನು ಸ್ತ್ರೀವ್ಯಾಮೋಹದಿಂದ ದೂರವಿದ್ದು, ಲೋಭತ್ವವನ್ನು ಸಂಪೂರ್ಣವಾಗಿ ತ್ಯಜಿಸುವನು. ಒಮ್ಮೆ ಉಗುಳಿ ಬಿಟ್ಟ ವಸ್ತುವನ್ನು ಇನ್ನೊಮ್ಮೆ ಭುಂಜಿಸುವುದು ಸರಿಯಲ್ಲ. ಕರುಣೆಯು ದೇವಾಂಶಸಂಭೂತವಾದ ಸದ್ಗುಣವು. 'ನಾನು ಕರುಣಿಸಿದೆ' ಎಂಬುದಾಗಿ ಹಿಗ್ಗುವ ಮಾನವನು ಹುಚ್ಚನು. ಶ್ರೀರಾಮನ ಸಂಕಲ್ಪವಿರುವಲ್ಲಿ ಪ್ರೀತಿಯಿದ್ದೇಯಿದೆ. ಸತ್ವಶಾಲಿಯಾದ ಗೃಹಸ್ಥನಿಗೆ ತನ್ನ ಕುಟುಂಬವನ್ನು ಸಂರಕ್ಷಿಸುವುದು ಆತನಲ್ಲಿರುವ ಪ್ರೀತಿ ಧರ್ಮದ ಮುಖ್ಯ ಲಕ್ಷಣವು. ಧನವಿಲ್ಲದೆ ಆತನು ತನ್ನವರನ್ನು ಪ್ರೀತಿಪೂರ್ವಕವಾಗಿ ಸಂರಕ್ಷಿಸುವ ಬಗೆ ಹೇಗೆ? ಪಕ್ಷಿಗಳು ಕೂಡ ತಮ್ಮ ಮರಿಗಳನ್ನು ಸಂರಕ್ಷಿಸುವುದಕ್ಕಾಗಿ ಮುಂದಾಗಿ ಆಹಾರ ಧಾನ್ಯಗಳನ್ನು ಸಂಗ್ರಹಿಸಿಡುತ್ತವೆ. ಭವಿಷ್ಯದ ತಿಳುವಳಿಕೆಯನ್ನು ಗೃಹಸ್ಥನು ಎಂದೂ ಮರೆಯಬಾರದು. ನಿಷ್ಕಾಮ ಪ್ರೀತಿಯಿಂದ ಶ್ರದ್ಧೆಯಿಂದ ಪರಮಾತ್ಮನಲ್ಲಿ ಶರಣು ಹೋಗಿ ತನ್ನ ನಿತ್ಯಕರ್ಮಗಳನ್ನು ಮಾನವನು ಮಾಡಿಯೇ ತೀರಬೇಕು. ಸರ್ವರಲ್ಲೂ ಪ್ರೀತಿ ಭಾವವನ್ನಿಟ್ಟು, ಸರ್ವರಿಗೂ ಸುಖವನ್ನು ಬಯಸಿ, ಪರೋಪಕಾರವೇ ಪರಮಾತ್ಮನ ಸೇವೆಯೆಂದು ನಿಶ್ಚಲಚಿತ್ತದಿಂದ ಅರಿತುಕೊಂಡು ನಿತ್ಯಕರ್ಮಗಳನ್ನು ಸಾಧಿಸುವವನು ಪರಮಾತ್ಮನ ಅನುಗ್ರಹಕ್ಕೆ ಪಾತ್ರನಾಗುವನು. ಅವನು ಕೀರ್ತಿಯನ್ನು ಬಯಸಲಾರನು. ಸ್ವಾರ್ಥವನ್ನು ಸಂಪೂರ್ಣವಾಗಿ ದೂರಮಾಡುವವನು ಅಂತಹ ಮಾನವನ ಆತ್ಮಬಲವು ವೃದ್ಧಿಸುವುದು ನಿಶ್ಚಯವು. ಆತನು ಪರಮಾತ್ಮನನ್ನು ತನ್ನ ಚಿತ್ತದಲ್ಲಿ ಕಂಡು ಶಾಂತಿ ಹೊಂದಬಹುದು.

ಹೆತ್ತವರು ತಮ್ಮ ಮಕ್ಕಳನ್ನು ಪ್ರೀತಿಸಿ ಮುದ್ದಾಡುವುದು ಪರಮಾತ್ಮನ ಕೃಪೆಯಿಂದಲೇ ಎನ್ನಬೇಕು. ಆ ಪ್ರೀತಿಯು ನಿಷ್ಕಾಮ ಪ್ರೇಮವೆನ್ನಿಸುವುದು. ಈ ರೀತಿಯ ಗೃಹಸ್ಥರ ಕುಟುಂಬ ಪ್ರೇಮಶಕ್ತಿಯಿಂದ ಸೃಷ್ಟಿಯು ರಚಿಸಲ್ಪಟ್ಟಿದೆ. ಸೃಷ್ಟಿಕರ್ತನ ಉದ್ದೇಶವೂ ಪ್ರೇಮವೇ. ಪ್ರೇಮವು ಕರುಣೆಯಿಂದ ಜನಿತವಾದುದು. ಪರಮಾತ್ಮನೇ ಕರುಣಾಸಾಗರನು. ಕಷ್ಟದಲ್ಲಿ ಬಳಲುವವರನ್ನು, ಕಷ್ಟದ ಮಡುವಿನಿಂದ ಬಿಡುಗಡೆಗೊಳಿಸುವ ಕರುಣೆಯು ಪ್ರೇಮಭಾವದ ಮುಖ್ಯ ಲಕ್ಷಣವು. ಈ ಲಕ್ಷಣದಲ್ಲಿಯೇ ಪರಮಾತ್ಮನ ಪರಮ ವಾಸಸ್ಥಾನವು.

—ಎಂ. ಬಿ. ಶಂಕರ ರಾವ್
ಐ. ಎ. ಎಸ್. (ನಿವೃತ್ತ)

ದಿ ವಿಜಯ ಬೇಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ: 1931

ರಿಜಿಸ್ಟರ್ಡ್ ಆಫೀಸು:
ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು-3, ಸೌತ್ ಕೆನರಾ.

ಕಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡ 5ರ ವರೆಗೆ ಹೆಚ್ಚಿಸಲಾಗಿದೆ.
ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ಪಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲಾಗುತ್ತದೆ.
ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ.

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (1 = 50)

ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ.
ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಇದು ನಿಮಗೂ ತಿಳಿದಿರಲಿ

ವಿಲಕ್ಷಣ ಮೃತ್ಯುಪತ್ರ

ಯುಗೊಸ್ಲಾವಿಯಾದ ಒಬ್ಬ ಭಾರಿ ಕುಡುಕ ತನ್ನ ಮೃತ್ಯುಪತ್ರವನ್ನು ಬರೆಸಿದ. ಇದರಲ್ಲಿ ತನ್ನನ್ನು ಎಲ್ಲರೂ ಆಜನ್ಮ ಪ್ರಾರ್ಕವಾಗಿ ಕುಡುಕನೆಂದೇ ತಿಳಿಯಬೇಕೆಂದೂ ಬೇರಾವ ರೀತಿಯಲ್ಲೂ ತನ್ನನ್ನು ಕರೆಯಬಾರದೆಂದೂ ಆತನ ಅಂತಿಮ ಕಾಲದ ಇಚ್ಛೆಯನ್ನು ವ್ಯಕ್ತಪಡಿಸಿದ. ಮೃತ್ಯುವಿಗೆ ಕೆಲವು ದಿನ ಮೊದಲು ಬರೆಸಿದ ಈ ಪತ್ರದಲ್ಲಿ ತನ್ನ ಮರಣದ ವಾರ್ಷಿಕ ದಿನದಂದು ತನ್ನ ಗೋರಿಯನ್ನು ಶರಾಬಿನಿಂದ ತೊಳೆಯಬೇಕು; ನಗರದಲ್ಲಿ ಆರ್ಥಿಕ ಮುಗ್ಗಟ್ಟಿನಿಂದಾಗಿ ಕುಡಿಯಲು ಅಸಮರ್ಥರಾದ ಕುಡುಕರಿಗೆ ಉದರಪೂರ್ತಿಯಾಗಿ ಶರಾಬು ಒದಗಿಸಬೇಕು ಎಂದು ಕಾಣಿಸಲಾಗಿತ್ತು. ಈ ಕುಡುಕ ಮಹಾಶಯ ಇಹಲೋಕವನ್ನು ಬಿಟ್ಟು ಇದೀಗ ೯೬ ವರ್ಷವಾಯಿತು; ಆದರೂ ಇಂದಿಗೂ ಆ ನಿಶ್ಚಿತ ದಿನದಂದು ಆತನ ವಾರೀಸು ಪತ್ರಕ್ಕನುಸಾರವಾಗಿ ಆ ಗೋರಿಗೆ ಶರಾಬಿನ ಸ್ನಾನವಾಗುತ್ತಿದೆ; ಬಡ ಕುಡುಕರಿಗೆ ಯಥೇಷ್ಟ ಮದ್ಯವು ಕುಡಿಯಲು ಲಭಿಸುತ್ತಿದೆ!

ಅದ್ಭುತ ಪುಸ್ತಕ

ಎರಡು ವರ್ಷಗಳಿಗೆ ಮೊದಲು ಅಮೆರಿಕೆಯ ಒಬ್ಬ ಕೈದಿಯು ಒಂದು ಅದ್ಭುತ ಪುಸ್ತಕವನ್ನು ಬರೆದನು. ತಾನು ಮೋಸದ ಚೆಕ್ಕುಗಳನ್ನು ವಟಾಯಿಸಿದ ಬಗ್ಗೆ, ಟ್ರೆಜರಿಗಳನ್ನು ಒಡೆದ ಚಾಣಾಕ್ಷತನ, ಬೀಗ ಮುದ್ರಿತವಾದ ಮನೆ ಮಠಗಳ ಒಳಗೆ ಪ್ರವೇಶಿಸುವುದರಲ್ಲಿ ತಾನು ತೋರಿಸಿದ ಚಳಕ ಇವೇ ಮೊದಲಾದುವನ್ನು ಆತ ಈ ಪುಸ್ತಕದಲ್ಲಿ ವಿವರಿಸಿದ್ದ. ಪುಸ್ತಕವು ಮಾರುಕಟ್ಟೆಗೆ ಬಂದೊಡನೆಯೇ ಆ ಸಂಬಂಧದಲ್ಲಿ ಎಲ್ಲೆಲ್ಲೂ ಕೋಲಾಹಲವೆದ್ದಿತು. ಆದರ ಒಂದು ಪ್ರತಿ ಪೋಲೀಸು ವಿಭಾಗದ ಕೈಸೇರಿತು. ಲೇಖಕ ಮಹಾಶಯನನ್ನು ಪೋಲೀಸರು ಬಂಧಿಸಿದರು. ಆತನಿಗೆ ಅತಿ ದೊಡ್ಡ ಪ್ರಮಾಣದಲ್ಲಿ ರೊಕ್ಕವನ್ನು ಕೊಟ್ಟು, ಪುಸ್ತಕದ 'ಕಾಪಿರೈಟ್'ನ ಅಧಿಕಾರವನ್ನು ಕೊಂಡುಕೊಂಡರು; ತಾನಿನ್ನು ಆ ಬಗೆಯ ಪುಸ್ತಕವನ್ನು ಮುಂದಕ್ಕೆ ಬರೆಯುವುದಿಲ್ಲ ಎಂದು ಕರಾರು ಪತ್ರವನ್ನಾತ ಬರೆದುಕೊಡಬೇಕಾಯಿತು. ಪೇಟೆಗೆ ಬಂದಿದ್ದ ಪುಸ್ತಕದ ಎಲ್ಲ ಪ್ರತಿಗಳನ್ನೂ ಪೋಲೀಸು ವಿಭಾಗವು ಕೊಂಡುಕೊಂಡಿತು. ಹೀಗೆ ಪುಸ್ತಕದ ಪ್ರತಿಗಳು ಮಾಯವಾದುವು. ಆದರೆ, ಆದರಿಂದ ಲೇಖಕನಿಗೆ ಸುಮ್ಮನೆ ಕುಳಿತು ತಿನ್ನುವಷ್ಟು ಸಂಪತ್ತು ದೊರೆಯಿತು!

ಪ್ರೆಸ್ ಪಾಸ್

ಬರ್ನಾರ್ಡ್ ಶಾ ಒಂದು ಪತ್ರಿಕೆಯ ಸಂಗೀತ ಸಮಾಲೋಚಕರಾಗಿದ್ದ ಕಾಲವದು. ಒಂದು ದಿನ ಅವರು ಮಾರ್ಗದಲ್ಲಿ ಎಲ್ಲಿಗೋ ಹೋಗುತಿದ್ದಾಗ, ಒಬ್ಬ ಭಿಕ್ಷುಕನು ತನ್ನ ಸುಮಧುರ ಕಂಠದಿಂದ ಹಾಡುತ್ತಿರುದನ್ನು ಕಂಡು ಆತನ ಬಳಿಯಲ್ಲಿಯೇ ನಿಂತರು. ಗಾಯನವು ಸಮಾಪ್ತವಾಯಿತೆಂದ ಬಳಿಕ, ಆ ಭಿಖಾರಿಯು ಎಲ್ಲರೊಡನೆಯೂ ಭಿಕ್ಷೆ ಬೇಡಿದನು. ಅಂತೆಯೇ ಶಾರು ಹೊತ್ತಿನಲ್ಲಿ ಶಾರವರ ಬಳಿಗೂ ಬಂದನು. ಶಾರಿಂದ ಯಾವುದೇ ರೀತಿಯಲ್ಲಿ ಹಣದೊರೆಯದಿರಲು ಆತ ವ್ಯಂಗ್ಯಬಾಣ ಬಿಟ್ಟ "ಏನು ಸ್ವಾಮಿ, ಸಂಗೀತ ಕಛೇರಿಗೆ ಬಂದಿದ್ದೀರಿ; ಆದರ, ಟಿಕೇಟಿನ ಹಣಕೊಡುವ ಮನಸ್ಸಿಲ್ಲ!" ಶಾರವರು ನಗುತ್ತ ಉತ್ತರಿಸಿದರು: "ತಮ್ಮಾ, ನಾನೊಬ್ಬ ಪತ್ರಗಾರ! ಪ್ರೆಸ್ ಪಾಸಿದ್ದುದರಿಂದ ಬಂದಿದ್ದೇನೆ!"

ರಜಾಕ್ಕೆ ಕಾರಣ

ಸದಾ ಉರಿ ಮುಖಮಾಡಿಕೊಂಡು ತನ್ನ ನೌಕರನ ಮೇಲೆ ಸಿಡಿಮಿಡಿಗೊಳ್ಳುವ ಅಧಿಕಾರಿಯು ನಾಲ್ಕು ವಾರಗಳ ರಜೆಯನ್ನು ಅನುಭೋಗಿಸಿ ತಮ್ಮ ಕಾರ್ಯಕ್ಕೆ ಹಾಜರಾದರು. ಅವರ ಬರವನ್ನೇ ನಿರೀಕ್ಷಿಸುತಿದ್ದ ಅವರ ನೌಕರ ತಕ್ಷಣವೇ ಒಂದು ತಿಂಗಳ ರಜೆಯನ್ನು ಮುಂದಿಟ್ಟು ಹೇಳಿದ. "ಸರ್, ನನಗೆ ಒಂದು ತಿಂಗಳ ರಜಾ ಬೇಕಾಗಿದೆ........" ಅಧಿಕಾರಿ ಕನ್ನಡಕವನ್ನು ಕಿತ್ತು ಮೇಜಿನ ಮೇಲೆ ಭರದಿಂದ ಎಸೆದು ಹುಬ್ಬೇರಿಸುತ್ತ ಗುಡುಗಾಡಿದರು: "ಏನಯ್ಯ, ನಾನು ನಾಲ್ಕುವಾರ ಆಫೀಸಿನ ಮೆಟ್ಟಲೇ ಹತ್ತಲಿಲ್ಲ. ಅಷ್ಟು ರಜಾ ನಿನಗೆ ಸಾಕಾಗುವುದಿಲ್ಲವೆ?" ಅಧಿಕಾರಿಯ ಕೆಂಗಣ್ಣುಗಳು ಕೋರೈಸುತಿದ್ದುವು. ನೌಕರ ಅತೀವ ಮೆತ್ತಗಿನ ಸ್ವರದಲ್ಲಿ ಹೇಳಿದ: "ಸ್ವಾಮಿ, ನಿಮ್ಮ ಆರೋಗ್ಯ ಕಣ್ಣಿಗಿರಲು ನಾನು ರಜಾದ ಮೇಲೆ ಹೋಗುತ್ತೇನೆ!"

ರವೀಂದ್ರ ವಾಣಿ

(೪ನೇ ಪುಟದಿಂದ)

ಗಳು ಹೇಗೆ ತಿಳಿಯುವುದಿಲ್ಲವೋ ಹಾಗೆಯೇ ತನ್ನ ಅಜ್ಞಾನಮಯವಾದ ಜೀವನದಲ್ಲಿ ಆತ ಏನನ್ನೂ ತಿಳಿದುಕೊಳ್ಳಲಾರನು. ಇಷ್ಟು ಮಾತ್ರವಲ್ಲ; ಆತನು ತನ್ನ ಅವರಣದಲ್ಲೇ ತನ್ನನ್ನು ಕೈದಿಯನ್ನಾಗಿ ಮಾಡಿಕೊಳ್ಳುತ್ತಾನೆ. ಆತನ, ಶಕ್ತಿ, ಅನುಭವ, ಇತ್ಯಾದಿಗಳು ತನ್ನ ಪರಿಸ್ಥಿತಿಗಳಲ್ಲಿ ಮಹತ್ವವನ್ನು ತಿಳಿದುಕೊಂಡು, ಮುನ್ನಡೆಯಲು ಜಾಗೃತವಾಗಿರುವುದಿಲ್ಲ. ಆತನು ತನ್ನ ಆತ್ಮದ ನಿಜ ಸ್ವರೂಪವನ್ನೂ ತಿಳಿದುಕೊಳ್ಳಲಾರದವನಾಗುತ್ತಾನೆ.

ಒಂದು ಸಲ ನಾನು ಬಂಗಾಲದ ಒಂದು ಗ್ರಾಮದಲ್ಲಿ ಬೇರೆ ಬೇರೆ ಪಂಥಗಳ ಸಂತರೀರ್ವರನ್ನು ಭೇಟಿ ಮಾಡಿದ್ದೆ. ಆಗ ಅವರೊಡನೆ ನಾನು ಕೇಳಿದೆ—"ಸ್ವಾಮಿ, ತಾವು ತಮ್ಮ ಧರ್ಮದ ವಿಶೇಷತೆಯ ಕುರಿತು ಹೇಳಬಲ್ಲಿರಾ?" ಆಗ ಆ ಇಬ್ಬರಲ್ಲಿ ಓರ್ವ ಸಾಧು ಸ್ವಲ್ಪ ತಡೆದು ಸಂಕೋಚಪಡುತ್ತ ಹೀಗೆ ಉತ್ತರ ಕೊಟ್ಟನು—"ನೀವು ಕೇಳಿದುದರ ವ್ಯಾಖ್ಯಾನವು ಸ್ವಲ್ಪ ಕಠಿಣವಾಗಿರುವುದು." ಆಗ ಮತ್ತೊಬ್ಬನು—"ಇದು ಅಷ್ಟೇನೂ ಕಠಿಣವಾಗಿಲ್ಲ. ಪ್ರಪ್ರಥಮವಾಗಿ ನಮ್ಮ ಗುರುಗಳ ಆಶ್ರಯದಲ್ಲಿ ನಾವು ನಮ್ಮ ಆತ್ಮವನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡುತ್ತೇವೆ ನಾವು ಈ ಪ್ರಯತ್ನದಲ್ಲಿ ಜಯಶೀಲರಾದಾಗ ಎಲ್ಲಾ ಪ್ರಾಣಿಗಳಲ್ಲಿಯೂ ವಾಸವಾಗಿರುವ ಪರಮಾತ್ಮನ ಜ್ಞಾನವು ನಮಗೆ ತಿಳಿದು ಬರುವುದು" ಎಂದನು. ಆಗ ನಾನು—"ಹಾಗಾದರೆ ತಾವು ತಮ್ಮ ಈ ವಿಚಾರ ಸಿದ್ಧಾಂತವನ್ನು ಎಲ್ಲೆಡೆಗಳಲ್ಲೂ ಏಕೆ ಪ್ರಚಾರ ಮಾಡುವುದಿಲ್ಲ?" ಎಂದು ಕೇಳಿದೆ. ಆಗ ಅವರು—"ಯಾರಿಗೆ ಬಾಯಾರಿಕೆ ಉಂಟಾಗುವುದೋ ಅವರು ಸ್ವತಃ ನದಿಯ ಬಳಿಗೆ ಹೋಗಿಯೇ ಹೋಗುತ್ತಾರೆ" ಎಂದರು. ಆಗ ನಾನು—"ಹಾಗಾದರೆ ಯಾರಾದರೂ, ನದಿಯ ಹತ್ತಿರಕ್ಕೆ ಹೋಗಿದ್ದಾರೆಯೇ?" ಎಂದೆ. ಈ ನನ್ನ ಪ್ರಶ್ನೆಗೆ, ಅವರು ಮುಗುಳು ನಗುತ್ತ ನಿಧಾನವಾಗಿ ದೃಢ ಸ್ವರದಿಂದ—"ಎಲ್ಲರೂ ಹೋಗಲೇ ಬೇಕು" ಎಂದರು.

ಹೀಗೆ ಹೇಳಿದ ಬಂಗಾಲದ ಈ ಆತ್ಮಜ್ಞಾನಿಯು ನಿಜವಾದ ಆತ್ಮ ಜ್ಞಾನಿಯಾಗಿದ್ದನು. ಮನುಷ್ಯನು ತನಗೆ ಬೇಕಾದ ಅನ್ನ ವಸ್ತ್ರಗಳ ಸಂಪಾದನೆಗಿಂತ ಹೆಚ್ಚಾಗಿ ತನ್ನ ಆತ್ಮದ ಹಸಿವನ್ನು ಹಿಂಗಿಸಲು ತೀರ್ಥಯಾತ್ರೆ ಮಾಡುತ್ತಾನೆ. ಮಾನವನ ಇತಿಹಾಸವು ತನ್ನ ಅಮರ ಆತ್ಮದ ಅನುಭೂತಿಗಾಗಿ ಮಾಡಿದ ಯಾತ್ರೆಗಳ ಇತಿಹಾಸವಾಗಿದೆ. ಮನುಷ್ಯನು ದೊಡ್ಡ ದೊಡ್ಡ ಸಾಮ್ರಾಜ್ಯಗಳನ್ನು ಕಟ್ಟಿದನು. ಮತ್ತೆ ತನ್ನ ಹಸ್ತದಿಂದಲೇ ಅವುಗಳ ನಾಶವನ್ನೂ ಮಾಡಿದನು. ವೈಭವದ ಸ್ವರ್ಗವನ್ನೂ ನಿರ್ಮಿಸಿದನು; ಕೊನೆಗೆ ಮೋಹರಹಿತವಾದ ತನ್ನ ಹಸ್ತದಿಂದಲೇ ಅದನ್ನೂ ಮಣ್ಣು ಗೂಡಿಸಿ ಬಿಟ್ಟನು. ತಾನು ಕನಸಿನಲ್ಲಿ ಕಂಡ ಕಲ್ಪನೆಯ ವಿಶಾಲವಾದ ವೈಭವ ರೂಪಗಳನ್ನು ನೆನೆದು, ಹಳೆಯ ಆಟದ ಸಾಮಾನುಗಳನ್ನು ನಾಶಮಾಡುವಂತೆ, ಮನುಷ್ಯನು ಎಲ್ಲವನ್ನೂ ನಾಶ ಮಾಡಿದನು. ಅನೇಕ ವರ್ಷಗಳ ಮಹಾ ತಪಸ್ಸಿನಿಂದ ನಿರ್ಮಿಸಿದ ಕಲಾಕೃತಿಗಳನ್ನೂ ಕೂಡ, ಕರುಣೆ ಇಲ್ಲದೆ ಧ್ವಂಸ ಮಾಡಿದ ಮನುಷ್ಯನು ಹೊಸ ಕಲ್ಪನೆಯಿಂದ ಹೊಸ ರೀತಿಯಿಂದ ಕಲಾಕೃತಿಗಳ ನಿರ್ಮಾಣ ಮಾಡಲು, ಪ್ರಯತ್ನ ಮಾಡತೊಡಗಿದನು. ಇವೆಲ್ಲವನ್ನೂ ವಿಮರ್ಶಿಸಿ, ವಿಚಾರ ಮಾಡಿದಾಗ—"ಮನುಷ್ಯನು ಒಂದು ಯುಗದಿಂದ ಮತ್ತೊಂದು ಯುಗಕ್ಕೆ ಹೋಗುತ್ತಿರುವಾಗ ಪ್ರತಿಕ್ಷಣವೂ ಹೆಜ್ಜೆ ಹೆಜ್ಜೆಗೂ, ತನ್ನ ನಿಜ ಸ್ವರೂಪವನ್ನು ತಿಳಿದುಕೊಳ್ಳಲು, ಆತ್ಮ ಬೋಧದ ಕೊನೆಯ ಹಂತಕ್ಕೆ ತಲುಪುತ್ತಲೇ ಇರುವನು, ಎಂದು ತಿಳಿದು ಬರುತ್ತಿದೆ. ಅಲ್ಲದೆ, ಆತ್ಮವು ಮನುಷ್ಯನ ಈ ನಿರ್ಮಾಣ, ಉದ್ಯೋಗ ಕಲ್ಪನೆ, ವಿನಾಶ, ಇವುಗಳೆಲ್ಲವುಗಳಿಗಿಂತಲೂ ಉಚ್ಚ ಮಟ್ಟದ್ದಾಗಿರುವುದು, ಎಂದೂ ಮನವರಿಕೆಯಾಗುವುದು. ಈ ಪರಿಯ ಈ ಆತ್ಮಾಭಿಮುಖವಾದ ಯಾತ್ರೆಯಲ್ಲಿ—ವಿಧ್ವಂಸ ವಿನಾಶಗಳು ಕೂಡ ತಡೆಯನ್ನುಂಟು ಮಾಡಲಾರವು.

ಮನುಷ್ಯನ ತಪ್ಪು ಒಪ್ಪು, ಜಯ, ಅಪಜಯ ಇವುಗಳಿಗೆ ಅಂತ್ಯವೆಂಬುದೇ ಇಲ್ಲ. ಆತನ ಮಾರ್ಗವು ಪ್ರಾಚೀನ ಅವಶೇಷಗಳಿಂದ ಅವ್ಯವಸ್ಥೆಗಳಿಂದ ತುಂಬಿಕೊಂಡು ಇರುವುದು. ಆತನ ಕಷ್ಟ ದುಃಖ ಇವುಗಳ ಯಾತನೆಯು ಪ್ರಸವವೇದನೆಗಿಂತ ಕಡಿಮೆಯಾಗಿಲ್ಲ. ಆದರೆ, ಆತನ ಧ್ಯೇಯವು ಮಾತ್ರ ಮಹಾ ಧ್ಯೇಯವಾಗಿ ಉಚ್ಚ ಮಟ್ಟದಲ್ಲಿದೆ. ಈ ಕಷ್ಟ, ದುಃಖ, ಯಾತನೆಗಳು ಆತನ ಭೂಮಿಕೆ ಮಾತ್ರವಾಗಿವೆ. ಮನುಷ್ಯನು ಅನೇಕ ಬಲಿದಾನಗಳನ್ನು ನೀಡಿರುವನು; ಇನ್ನೂ ಕೂಡ ಈ ಬಲಿದಾನದ ಆಧಾರದ ಮೇಲೆಯೇ ಆತನು ಮುಂದುವರಿಯುತ್ತಿದ್ದಾನೆ.

ಮನುಷ್ಯನು ತನ್ನ ಅಂತಃಕರಣದಲ್ಲಿ ಅನಿರ್ವಚನೀಯ ಆತ್ಮಿಕ ಆನಂದವನ್ನು ಒಂದು ಕ್ಷಣವಾದರೂ ಅನುಭವಿಸದಿದ್ದರೆ ಈ ಪೂಜೆ, ಈ ಅನುಷ್ಠಾನ ಈ ಸಾಧನೆ ಇವೆಲ್ಲವೂ ನಿಷ್ಫಲವಾಗಿ ಅಸಹ್ಯವಾಗದೆ ಇರುವುದಿಲ್ಲ. ಕಷ್ಟದುಃಖಾದಿಗಳ ಮೂಲಕ ಬಲಿದಾನಗಳ ಮೂಲಕ ಯಾವ ಶಕ್ತಿಯು ನಮ್ಮ ಪರೀಕ್ಷೆಗೆ ತೆಗೆದುಕೊಳ್ಳುತ್ತಿರುವುದೋ ಆ ದಿವ್ಯ ಶಕ್ತಿಯೇ ಆತ್ಮಶಕ್ತಿಯಾಗಿರುವುದು. ಕಷ್ಟಗಳ ಮೂಲಕ ಪರೀಕ್ಷೆ ಮಾಡಿದ ಈ ಶಕ್ತಿಯು ತ್ಯಾಗದ ಮೂಲಕ ತನ್ನ ಅಕ್ಷಯ ಕೋಶದ ಅಸ್ತಿತ್ವವನ್ನು ಪ್ರಕಟಿಸುವುದು. ಈ ಆತ್ಮಬೋಧದ ಮಾರ್ಗದ ಮೂಲಕ ಮುಂಬರುವ ಪಥಿಕರು ಈ ಕಡೆಗೇ ಬರುತ್ತಿರುವರು. ಮತ್ತು ಅವರು ಈ ಜಗತ್ತಿನ ತಮ್ಮ ಭಾಗದ ನಿಜವಾದ ವರದಾನವನ್ನು ಪಡೆಯಲು ಮುಂದೆ ಮುಂದೆ ಬರುತ್ತಿರುವರು. ಅವರ ಆತ್ಮಬೋಧಶಕ್ತಿಯು ಪ್ರತಿಕ್ಷಣಕ್ಷಣಕ್ಕೆ ಹೆಚ್ಚುತ್ತಿರುವುದು. ಮತ್ತು ಅತ್ಯಂತ ಉಚ್ಚ ಮಟ್ಟದ ಸಮತೆಯನ್ನು ಹೊಂದಲು ಅವರ ಯಾತ್ರೆಯು ಸದಾ ಮುನ್ನಡೆಯಿಂದ ಸಾಗುತ್ತಲೇ ಇರುವುದು. ಅವರು ಏಕೈಕ ಕೇಂದ್ರವಾದ, ಆದರೆ, ಸಮಸ್ತದಲ್ಲೂ ವ್ಯಾಪ್ತವಾಗಿರುವ ಸತ್ಯದ ಸನ್ನಿಧಾನಕ್ಕೆ ಪ್ರತಿಕ್ಷಣಕ್ಷಣವೂ ತಮ್ಮ ಯಾತ್ರೆಯನ್ನು ಮುಂದುವರಿಸುತ್ತಲೇ ಇರುವರು.

ಮಾನವನ ದೌರ್ಬಲ್ಯಗಳಿಗೆ ಅಂತ್ಯವೇ ಇಲ್ಲ. ಆತನಿಗೆ ತನ್ನ ಆತ್ಮದ ನಿಜ ಸ್ವರೂಪದ ಪರಿಚಯವಾಗುವ ವರೆಗೆ ಆತನ ಆವಶ್ಯಕತೆಗಳಿಗೆ ಕೊನೆಯೆಂಬುದೇ ಇಲ್ಲ. ಅಲ್ಲಿಯ ವರೆಗೆ ಆತನ ದೃಷ್ಟಿಯಲ್ಲಿ ಈ ಜಗತ್ತು ಪ್ರವಾಹಯುಕ್ತವಾದ ಭಂಡಾರವಾಗಿರುವುದು; ಮಾತ್ರವಲ್ಲ, ಇದೊಂದು ತಿಳಿಯಲಾಗದ ಪವಾಡವೆಂಬಂತೆ ತೋರುವುದು. ಆದರೆ ಯಾವ ಮನುಷ್ಯನು ಆತ್ಮ ಬೋಧವನ್ನೂ ಪಡೆದಿರುತ್ತಾನೋ ಆತನಿಗೆ ಸಮಸ್ತ ವಿಶ್ವದ ಒಂದು ನಿಶ್ಚಿತ, ಕೇಂದ್ರ ಯಾವುದಿದೆಯೋ ಅದು ಕಾಣಿಸತೊಡಗುವುದು. ಸರ್ವ ಚರಾಚರ ಪ್ರಾಣಿ ವಸ್ತುಗಳ ಸ್ಥಾನವೂ ಕೂಡ ಈ ಕೇಂದ್ರದ ಪರಿಸರದೊಳಗೇ ಅಡಕವಾಗಿರುವುದು. ಈ ಕೇಂದ್ರದಿಂದಲೇ ಮನುಷ್ಯನು ಸಮತಾ ಪೂರ್ಣವಾದ ಜೀವನದ ವರದಾನವನ್ನೂ ಮತ್ತು ಆತ್ಮಾನಂದದ ಅನುಭವವನ್ನೂ ಹೊಂದಬಲ್ಲನು:— (ಸಶೇಷ).



ಮಕ್ಕಳ ಮಮತೆಯ
'ಬಿಕ್ಕೊ'ರವರ
ಗ್ಲೂಕೋಸ್ ಕೂಡಿದ ಪೆಪ್ಪರ್
ಮಿಠಾಯಿಗಳು ರುಚಿಕರ, ಸೇವನೆಗೆ
ಪ್ರಸಿದ್ಧಿಪಟ್ಟಿವೆ.

Regd. Trade Mark
BICCO

'ಬಿಕ್ಕೊ'ರವರ
ಹಣ್ಣಿನ ಶರಬತ್ತುಗಳು
ಅತಿಥಿಗಳ ಆದರದ ಸತ್ಕಾರಕ್ಕೆ ಅತ್ಯನುಕೂಲ.
ತಯಾರಕರು:
ಭಾರತ್ ಇಂಡಸ್ಟ್ರಿಯಲ್ ಎಂಡ್ ಕ್ಯಾನಿಂಗ್
ಕಂಪೆನಿ ಲಿಮಿಟೆಡ್, ಕಾಪು, ದ. ಕ.

ಅನುಭವ:

ಅಪರಾಧಿಯ ಮನೋವೇದನೆ

ಅನಿವಾರ್ಯವಾಗಿದ್ದರೂ ಮಾಡಿದ ಅಪರಾಧವು ಅಪರಾಧವೇ ಅಲ್ಲವೇ? ಎಂತಲೇ ಅದು ಕೊನೆಗೆ ಮನಸ್ಸನ್ನೇ ದಹಿಸ ತೊಡಗುವುದು.

"ರಂಜನೆ", ಬೆಂಗಳೂರು.

ಹುಬ್ಬಳ್ಳಿಯಿಂದ ನಮ್ಮ ಅಕ್ಕ ತನ್ನ ನಾಲ್ಕು ವರ್ಷದ ಮಗು ರಘು, ಹಾಗೂ ಸುಮಾರು ಒಂದೂವರೆ ವರ್ಷದ ಕೈ ಮಗು ವೆಂಕಟೇಶನೊಡನೆ ಬಂದು ಅಂದಿಗೆ ಮೂರು ದಿನಗಳಾಗಿತ್ತು. ಒಮ್ಮೆ ಒಬ್ಬರಲ್ಲಿಗೆ ಆ ವೆಂಕಟೇಶ ಹೋದನೆಂದರೆ ಅವರಿಂದ ಕೆಳಗಿಳಿಯುವ ಅಭ್ಯಾಸವೇ ಅವನಿಗೆ ಹಿಡಿಸುತ್ತಿರಲಿಲ್ಲ. ಹಾಗೇನಾದರೂ ಇಳಿಸಲು ಪ್ರಯತ್ನಪಟ್ಟರೂ ಮುಖಗಂಟು ಬೀಳುತ್ತಿತ್ತಲ್ಲದೇ ದೊಡ್ಡ ಅಳುವಿನ ರಾದ್ಧಾಂತವೇ ಆಗುತ್ತಿತ್ತು. ಆಗ ತಾಯಿಯಲ್ಲದೆ ಬೇರೆ ಯಾರೂ ಸಂತೈಸಲಸಾಧ್ಯವಾಗುತ್ತಿತ್ತು.

ಅಂದು ಮುರಲಿ ನನ್ನನ್ನು ಬೆಳಗಿನ ಚಿತ್ರಕ್ಕೆ ಕರೆದಿದ್ದ. ಗಂಟೆ ಒಂಬತ್ತೂವರೆಯಾಗಿತ್ತು. ನನ್ನ ವೇಷ ಬದಲಿಸಿಕೊಂಡು ಹೊರಡಲು ಸಿದ್ಧವಾಗುವ ವೇಳೆಗೆ ಸರಿಯಾಗಿ ಅಕ್ಕ ಹೆಚ್ಚು ಕೆಲಸವಿದ್ದುದರಿಂದ.

"ಸ್ವಲ್ಪ ಹೊತ್ತು ಎತ್ತಿಕೊಂಡಿರು ಮಾಧು, ಈಗಲೇ ಬಂದೆ."

—ಎಂದು ಹೇಳುತ್ತಾ ಮಗುವನ್ನು ಕೈಗಿತ್ತು ಅಡಿಗೆ ಮನೆಗೆ ಸಾಗಿದಳು.

ಬೆಳಗು ಸೂರ್ಯನ ಬಿಸಿಲು ಅಷ್ಟು ಚುರುಕು ಏರಿಲ್ಲದ ಹೊತ್ತು. ಪುಟ್ಟ ಮಗು ಶುಚಿಯಾಗಿ ಕೈಲಿರುವಾಗ,ಉಲ್ಲಾಸದಿಂದಲೇ ನಮ್ಮ ತೋಟದಲ್ಲಿ ಒಮ್ಮೆ ಸುತ್ತಾಡಿಸಿ ಬಂದೆ. ಆ ವೇಳೆಗಾಗಲೆ ಮೂರು ನಾಲ್ಕು ಡಜನ್‌ಗಳಷ್ಟು ಬಾರಿಯಾದರೂ ಹಾಲು ಗಲ್ಲಕ್ಕೆ ಮುತ್ತಿಟ್ಟಿದ್ದೆ—ಪ್ರಕೃತಿಯ ವಿಕೃತಿ ಅದಕ್ಕೆ ಉತ್ತೇಜನ ಕೊಟ್ಟಿತ್ತು—ಗಂಟೆ ಹತ್ತಕ್ಕೆ ಬಂತು. ಅಕ್ಕ ಬರಲೂ ಇಲ್ಲ, ಬರುವ ಸೂಚನೆಗಳೂ ಕಂಡುಬರಲಿಲ್ಲ. ನಾನೇ ಒಮ್ಮೆ ಒಳಗೆ ಹೋಗಿ ನೋಡಿಬಂದೆ. ಚಪಾತಿ ಲಟ್ಟಿಸುತ್ತಿದ್ದ ಅಕ್ಕ ಹೊರ ಬರಬೇಕಾದರೆ ಕೊನೇ ಪಕ್ಷ ಅರ್ಧ ಗಂಟೆಯಾದರೂ ಬೇಕಾಗುವುದೆಂದು ತಿಳಿಯಲು ವೇಳೆಯಾಗಲಿಲ್ಲ.

ಅತ್ತ ನನಗಾಗಿ ಸಿನಿಮಾ ಮಂದಿರದಲ್ಲಿ ಮುರಲಿ ಕಾಯುತ್ತಿರುತ್ತಾನೆ. ತಡವಾದರೆ ಅವನಿಂದ ಸೊಗಸಾದ ಛೀಮಾರಿ ಗ್ಯಾರಂಟಿ. ಇತ್ತ ನಾನು 'ಸಿನಿಮಾಗೆ ಹೋಗಬೇಕು' ಎಂದರೆ ತೀರಿತು "ಪರೀಕ್ಷೆಗೆ ಒಂದು ವಾರ ಇಟ್ಟುಕೊಂಡು ಸಿನಿಮಾ ನೋಡಬೇಕೋ?" ಎಂಬ ರಸ ಬೈಗುಳ.

ದೇವರು ನನ್ನ ಮೊರೆ ಕೇಳದನೋ(?) ಎಂಬಂತೆ ಒಮ್ಮೆಗೇ ಮಗು ಅಳತೊಡಗಿತು. ನಾನೆಷ್ಟು ರಮಿಸಿದರೂ ಮಗುವಿನ ಅಳು ನಿಲ್ಲಲಿಲ್ಲ. ಮತ್ತೊಮ್ಮೆ ತೋಟವನ್ನು ಸುತ್ತಿಸಿದೆ. ಹೂಗಳನ್ನು ತೋರಿಸಿದೆ. ಬೊಂಬೆ ಕೊಟ್ಟೆ. ಏನು ಮಾಡಿದರೂ ನಿಲ್ಲಲಿಲ್ಲ. ಮಗುವಿನ ರಾದ್ಧಾಂತ ಅಕ್ಕನಿಗೆ ಕೇಳಿರಲೇ ಬೇಕು.

ಅಕ್ಕ ಕೆಲಸ ಅಮ್ಮನಿಗೇ ವಹಿಸಿಕೊಟ್ಟು ಹಿಟ್ಟಿನ ಕೈಲೇ ಓಡಿ ಬಂದಳು.

"ಕೊಡು ಮಾಧು, ಇನ್ನು ನೀನು ಏನು ಮಾಡಿದರೂ ಅಳು ನಿಲ್ಲಿಸೋಲ್ಲ"- ಎಂದು ಮಗುವನ್ನು ಕರೆದುಕೊಂಡಳು.

ಸದ್ಯ ಬದುಕಿದೆಯಾ ಬಡಜೀವವೇ! ಎಂದು ಬೇಗ ಓಡಿದೆ.ಬೈಗಳ ಸುರಿಮಳೆ ನಡದೇ ಇತ್ತು ಮಗುವಿಗೆ. ಸಿನಿಮಾ ಸೇರುವ ವೇಳೆ ಸರಿಯಾಗಿತ್ತು. ಚಿತ್ರವೂ ಚೆನ್ನಾಗಿತ್ತು.

ಮನೆಗೆ ಬಂದು ಊಟ ಮಾಡಿದ ಮೇಲೆ ಕೊಠಡಿಯಲ್ಲಿ ಓದಲು ತೊಡಗಿದ್ದೆ.

ಅಂಗಳದಲ್ಲಿ ಮಗುವಿಗೆ ಮುಖ ತೊಳೆದು ಬೇರೆ ಬಟ್ಟೆ ತೊಡಿಸಲು ಬಟ್ಟೆ ಕಳಚಿದ ಅಕ್ಕ ಅಮ್ಮನಿಗೆ ಅಷ್ಟೆಯಿಂದ ಹೇಳುತ್ತಿದ್ದಳು.

"ಇದೇನೆ ಅಮ್ಮಾ? ಮಗುವಿನ ತೊಡೆ ನೀಲಿ ಬಣ್ಣಕ್ಕಿದೆ, ಏನೋ ಕಚ್ಚಿರಬೇಕು ನೋಡೆ!!"

ಅಮ್ಮ ಮಗುವನ್ನು ನೋಡಿರಬೇಕು. ಅಂತಲೇ ಕಾಣುತ್ತೆ.ತುಸು ಸಮಯದ ಅನಂತರ ಯಾರೋ ಬಲವಾಗಿ ಚಿಗಟಿರಬೇಕು ಕತ್ತೆ ನಿನೇನಾದರೂ............?"

"ಇಲ್ಲಮ್ಮಾ ನಾನೇನು........"

ಅಕ್ಕ ಕೃತ್ರಿಮವಿಲ್ಲದ ಗಂಭೀರತೆಯಿಂದ ಹೇಳುತ್ತಿದ್ದಳು.

—ಎದೆ ಢವ—ಢವಗುಟ್ಟತೊಡಗಿತು. ಪುಸ್ತಕ ಎದೆಯ ಮೇಲಿಟ್ಟುಕೊಂಡು ಮೆಲ್ಲಗೆ ಹಾಸಿಗೆಯ ಮೇಲೆ ಉರುಳಿದೆ. ಅಪರಾಧಿಯ ಸ್ವಯಂ ವೇಧನೆ ಒಮ್ಮೆ ಮನಸ್ಸಿಗೆ ಹೊಕ್ಕು ದೇಹವನ್ನು ವಿದ್ಯುತ್ ವೇಗದಲ್ಲೊಮ್ಮೆ ಅಲುಗಿಸಿತ್ತು.

ಮಧು ಸಂಚಯ

ತನ್ನನ್ನು ಹೊಗಳಿಕೊಳ್ಳುವವನು ದೊಡ್ಡದಾಗಿ ತೋರಬೇಕೆಂದು ಹಂಬಲಿಸುವ ಚಿಕ್ಕ ಮನುಷ್ಯ.

oo oo

ಕ್ರೀಡಾಪಟುವು ತಪ್ಪು ಹೆಜ್ಜೆ ಹಾಕಿದರೆ ಬಹುಮಾನ ಕೈತಪ್ಪುತ್ತದೆ; ಸ್ಥಿತಿವಂತನು ತಪ್ಪು ಹೆಜ್ಜೆ ಹಾಕಿದರೆ ಕೀರ್ತಿ ಅಳಿಯುತ್ತದೆ. ಮನುಷ್ಯನು ಸ್ವಾರ್ಥಿಯಾದರೆ ಮಾನವಕುಲ ನಾಶವಾಗುತ್ತದೆ.

oo oo

ಆಟದ ಮುನ್ನ ಕೆಲಸಮಾಡು, ಆನಂದದ ಮುನ್ನ ಕರ್ತವ್ಯಕ್ಕೆ ಕಿವಿಗೊಡು. ಸ್ವಾರ್ಥದ ಮುನ್ನ ಪರಾರ್ಥ ಬಯಸು.

oo oo

ನಮ್ಮ ಕಿವಿಗಳನ್ನು ಸರಿಯಾಗಿ ಸಾವಧಾನವಾಗಿ ಉಪಯೋಗಿಸದಿರುವದೇ ದ್ವೇಷ ವೈಷಮ್ಯಗಳಿಗೆ ಪ್ರಥಮ ಕಾರಣ.

oo oo

ದೈವಿಕವಾದ ಒಳ್ಳೆಯದನ್ನು ಮಾಡಿದರೆ ಜೀವನಕ್ಕೆ ಅಮರ ಆನಂದ ಲಭಿಸುತ್ತದೆ. ಅಮರ ಆನಂದವೇ ಉತ್ತಮ ಮನುಷ್ಯನ ನೈಸರ್ಗಿಕ ಸ್ಥಿತಿ.

oo oo

ವರ್ತಮಾನದಲ್ಲಿ ಎದುರಿಸುವ ಕಷ್ಟದಿಂದ ಮನುಷ್ಯನ ಶಕ್ತಿ ಕುಸಿಯುವದಿಲ್ಲ. ಬದಲು ಬೆಳೆಯುತ್ತದೆ. ಆದರೆ ಭವಿಷ್ಯದ ಕಷ್ಟದ ಭಯದಿಂದ ಆತನು ಸೊರಗಿ ನಿಃಶಕ್ತನಾಗುತ್ತಾನೆ. ಒಂದು ಶರೀರಕ್ಕೆ ಹದವರಿತ ವ್ಯಾಯಾಮದಂತೆ ಮತ್ತೊಂದು ಅರ್ಥಹೀನ ಗಾಳಿಗೆ ಗುದ್ದಿದಂತೆ.

oo oo

ಜೀವಂತವಿರುವಾಗ ಒಳ್ಳೆಯ ಮಾತಾಡದೆ ಕಡೆಗಣಿಸುವ, ಆದರೆ ಸತ್ತನಂತರ ಆತನ ಗುಣಗಾನ ಮಾಡಿ ಸಮಾಧಿ ರಚಿಸುವ ಸ್ವಾರ್ಥಿ ಕೃಪಣರಗಿಂಥಾ ಹೀನ ಜನ ಬೇರಿಲ್ಲ.

oo oo

ನೀನು ಉದಾರಿಯಾಗಿರಬೇಕು. ದಯೆ, ಕರುಣೆ ತುಂಬಿದವನಾಗಿರಬೇಕು. ಆದರೆ ಇತರರಿಗಾಗಿ; ನಿನಗಾಗಿ ಎಂದೂ ಕೂಡದು.

oo oo

ಅಧರ್ಮಿಯೊಡನೆ ಧರ್ಮದಿಂದ ಹಿಂಸಕನೊಡನೆ ಅಹಿಂಸೆಯಿಂದ ವರ್ತಿಸುವದು ನಿಜ ಮನುಷ್ಯತ್ವ.

The Moolky Bank, Ltd.

MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ 4%
5 ,, 12 ,, 4¼%
13 ,, 24 ,, 4½%

ರೂ. 5,000/- ಮತ್ತು ಮೇಲಣ ಡಿಪೋಸಿಟಿಗೆ ¼% ಜಾಸ್ತಿ ಕೊಡಲಾಗುವುದು.

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ¼%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯು. ಆರ್. ಯಚ್. ಪೂಂಜ,
ಮೆನೇಜರ್.

ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE AESY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೇಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N.P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕಕಳಿಸಲಾಗುವುದು.
ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು.ರಾಘವೇಂದ್ರ ಆಚಾರ್ಯ,ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ಐತಾಳ,ಎಂ.ಬಿ.ಬಿ.ಎಸ್
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.

ಪ್ರತಿಗಳು ಸಿಗುವ ಮುಖ್ಯ ಸ್ಥಳ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ಕಥಾವಿಹಾರ

(೨ನೇ ಪುಟದಿಂದ)

ಅಗಳಿಯನ್ನು ಬಿಗಿದಳು. ತಾಯಿ ಮಕ್ಕಳಿಬ್ಬರೇ ಇರುವ ಮನೆಯಲ್ಲಿ ಪತ್ರವನ್ನು ಓದುವುದಕ್ಕೆ ಏಕಾಂತವಾದರೂ ಏಕೆ? ಅದರಲ್ಲಿ ರಾಜಕಾರಣದ ರಹಸ್ಯವಡಗಿತ್ತೇ? ಅಥವಾ ಕಳ್ಳಸಂತೆಯ ವ್ಯವಹಾರ ನಡೆದಿತ್ತೇ? ಎರಡೂ ಅಲ್ಲ ಅದರಲ್ಲಿ ಅವಳ ಹೃದಯ ವ್ಯಾಪಾರದ ಚಿಹ್ನೆ ಚಿತ್ರಿತವಾಗಿರಬಹುದು. ಆದರೂ ಜನ್ಮವಿತ್ತವಳೂ ಕಾಣಬಾರದ ಕೃತಿಯೇ ಅದು? ಅಲ್ಲವೆಂಬುದು ಆಕೆಗೂ—ವೇದ್ಯವಾಗಿರಬೇಕು. ಹಾಕಿದ ಅಗಳಿಯನ್ನು ಮತ್ತೆ ತೆರೆದಳು. ಸುಖವನ್ನು ಕೊಡುವ ಪ್ರಮೇಯವಾದುದರಿಂದ ಅದನ್ನು ವಿಚಾರಿಸುವ ಪ್ರಶಸ್ತವಾದ ಪೂರ್ವರಂಗ ತನ್ನ ಮಂಚದ ಮೇಲಿನ ಸ್ಪಂಜಿನ ಹಾಸಿಗೆ ಎಂದು ತೀರ್ಮಾನಿಸಿ ಕೈಕಾಲು ಚೆಲ್ಲಿ ಹೊರಳಿದಳು. ಮೃದುಲ ಮುಚ್ಚಿದ್ದುದನ್ನು ಬಿಚ್ಚಿದಳು. ಗೀಚಿದ್ದುದನ್ನು ಓದಿದಳು.

ಮೃದುಲ—

ಈ ಪತ್ರವನ್ನು ನಾನು ಯಾಕೆ ಬರೆದೆನೆಂಬುದರ ಕಾರಣ ನಿನಗೆ ಶೀಘ್ರದಲ್ಲಿಯೇ ತಿಳಿಯಲಿದೆ. ಸಂಕ್ಷಿಪ್ತವಾಗಿ ನಾನು ನಿನ್ನ ಮುಂದಿಡುವ ಕೇಳಿಕೆ ಇದು—ಹಿಂದಿನದನ್ನು ಮರೆತು ಬಿಡು. ಇಂದು ನಿನ್ನನ್ನು ನೋಡಿ ಮೆಚ್ಚಿಕೊಳ್ಳಲು ಬರುವ ವರನೊಂದಿಗೆ ವಿವಾಹವಾಗಿ ಸುಖವಾಗಿರು. ನನ್ನ ವರ್ತನೆ ನಿನಗೆ ಸರಿದೋರದಲ್ಲಿ ಕ್ಷಮಿಸಿಬಿಡು.

ಇತಿ ನಿನ್ನ ಶ್ರೇಯೋಭಿಲಾಷಿ—ಮಧು.

ಕಂಪಿಸುವ ಕೈಗಳಿಂದ ಪತ್ರ ಕುಸಿಯಿತು. ಹೃದಯದ ಹಂಡೆಯಲ್ಲಿ ನೀರು ಕುದಿಯಿತು. ಕಂಗಾಲದ ಕಣ್ಣುಗಳಿಂದ ಕಂಬನಿ ಸುರಿಯಿತು. ತಾನು ಬಿಚ್ಚುತ್ತಿದ್ದುದು ಪ್ರಿಯ ಬರೆದ ಪ್ರಣಯ ಪತ್ರವಿರುವ ಕಾಗದದ ಚೀಲವನ್ನಲ್ಲ ಕಾಲ ಕಳುಹಿದ ಕಾರ್ಕೋಟಕನಿರುವ ಬುಟ್ಟಿಯನ್ನು ಎಂಬುದು ಆ ಮುಗ್ಧ ರಾಧೆಗೆ ಆಗ—ತಿಳಿದಿರಲಿಲ್ಲ. ತಿಳಿದಾಗ ಕೆಲಸ ಕೆಟ್ಟಿತ್ತು. ಕೋಟು ಹಾಕಿ ಕೈಕೊಡುವ ಕಿಸೆಗಳ್ಳರೂ,—ಓಟು ತೆಗೆದುಕೊಂಡು ಮೋಸಮಾಡುವ ರಾಜಕಾರಣಿಗಳೂ, ಲಂಚ ತೆಗೆದುಕೊಂಡು ಹೊಂಡಕ್ಕಿಳಿಸುವ ರಕ್ಷಣಾಧಿಕಾರಿಗಳೂ, ನೀರುಕೊಟ್ಟು ರಕ್ತ ಹೀರುವ ವ್ಯಾಪಾರಿಗಳೂ ಕಾವಿಯುಟ್ಟು ಸೀರೆ ಬಿಚ್ಚುವ ಸನ್ಯಾಸಿಗಳೂ, ಸಾಲಕೊಟ್ಟು ಭೂಮಿ ಬರೆಸಿಕೊಳ್ಳುವ ಧನಿಕರೂ, ಕಥೆ ಹೇಳಿ ಕಳ್ಳುಕುಡಿಯುವ ಸಾಹಿತಿಗಳೂ ಏಕ ಕಾಲಕ್ಕೆ ಅವಳ—ಕಣ್ಣಿನ ಮುಂದೆ ಒಂದು ಸಿನಿಮಾ ತೋರಿಸಿದರು. ಅವಳ ಮನಸ್ಸಿನಲ್ಲಿ ಕ್ರೂರ ಮೃಗಜಂತುಗಳಿಂದನಿಬಿಡವಾದ ಕಾಡೂ, ಮೋಸ, ವಂಚನೆ, ದ್ರೋಹ, ದುಷ್ಟತನಗಳ ರಾಕ್ಷಸ ವೃತ್ತಿಯಿಂದ ಪೀಡೆ, ಪಿಶಾಚಿ, ಪಾಪಿ, ಪಾತಕಿ ಮೊದಲಾದ ಖಳ ನಾಯಕರು ಗಹಗಹಿಸಿ ನರ್ತಿಸುವ ನಾಡೂ ನೆರೆದುವು. ತಿರಸ್ಕಾರದ ಆವರಣ ಆವರಿಸಿತು. ನಿರಾಶೆಯ ನಿಶಿ ಕವಿಯಿತು. ಆಕೆಯ ಪ್ರೇಮದ ವಿಧಾನ ಸೌಧಕ್ಕೆ ಬೆಂಕಿ ಬಿತ್ತು. ಅದರೊಂದಿಗೆ ತನ್ನ ಬರಡು ಬದುಕಿನ ಒಡಕು ಮಡಿಕೆಯನ್ನು ಹೊಳೆವ ಮನಸ್ಸು ಮುಂದೆ ಬಂತು. ಹಾಳು ಬಾವಿಯನ್ನು ಶೋಧಿಸುವ, ಹಗ್ಗವನ್ನು ಹುಡುಕುವ, ಇಲಿ ಪಾಷಾಣವನ್ನು ಕ್ರಯಕ್ಕೆ ತರಲು ಪೇಟೆಗೆ ಹೋಗುವ ತಾಕತ್ತು ಅವಳ ಅಂಗಾಂಗಗಳಲ್ಲಿ ಉಳಿದಿರಲಿಲ್ಲ. ಹಾಸಿಗೆಯಲ್ಲೇ ಮಲಗಿ ಆ ಅನಾಥೆ ಸಾಧಿಸಬಲ್ಲ ಕಾರ್ಯವಾದರೂ ಏನು? ಆಕೆಯ ಕೈಗೆ ಸಿಕ್ಕಿದ ವಸ್ತುಗಳೆಂದರೆ ಅಲ್ಲೆ ಬಿದ್ದಿದ್ದ ಪತ್ರ; ಅದನ್ನವಳು ಕ್ಷಣ ಮಾತ್ರದಲ್ಲಿ ಚಿತ್ರಹಿಂಸೆಗೆ ಗುರಿಮಾಡಿ ಬಿಸುಟಳು; ಅವಳ ತಲೆಯ ಆಶ್ರಯದಲ್ಲಿದ್ದ ದಿಂಬು; ಅದನ್ನು ಎಷ್ಟೋ ಸಲ ಹಿಚುಕಿದ್ದಾಯಿತು. ಎದೆಯ ಮೇಲೆ ಹರಿದಾಡುತ್ತಿದ್ದ ಜಡೆಗಳೆರಡು. ಅವುಗಳನ್ನು ಬಿಚ್ಚಿ ಕೆದರಿಕೊಂಡಳು ಕಣ್ಣುಗಳನ್ನು ತಿಕ್ಕಿಕೊಂಡು ಕೆಂಪುಮಾಡಿಕೊಂಡಳು, ಕಣ್ಣು ನೀರಿನಲ್ಲಿ ಕೈತೊಳೆದಳು, ಅಲ್ಲಿದ್ದ ಮೇಜು ಕುರ್ಚಿಗಳೂ, ಪೇಪರು, ಪುಸ್ತಕಗಳೂ, ಚಪ್ಪಲಿ, ಹವಾಯಿಗಳೂ, ಕನ್ನಡಿ ಹಣಿಗೆಗಳೂ, ಫೋಟೊ, ಕೆಲಂಡರುಗಳೂ ಕರಗಿ ನೀರಾಗುವಂತೆ ಗೋಳೋ ಎಂದು ಅತ್ತಳು

ಆ ಆರ್ತನಾದ ಗೋಡೆ, ಮಾಡುಗಳನ್ನು ಬಡಿದು ಕಿಟಕಿ ಬಾಗಿಲುಗಳನ್ನು ತೆರೆದು, ಮಾಳಿಗೆಯ ಮೆಟ್ಟಿಲುಗಳನ್ನು ಇಳಿದು, ಅಡಿಗೆ ಮನೆಗೂ ಧಾವಿಸಿತು. ಕಾವೇರಿಯಮ್ಮನವರ ಕಿವಿಗಳನ್ನೂ ಹೊಕ್ಕಿತು. ಅದನ್ನು ಕೇಳಿ ಒಂದು ಕ್ಷಣವೂ ಅಲ್ಲಿರಲಾಗದೆ ಒಂದೇ ಜಿಗಿತಕ್ಕೆ ಮಹಡಿಯ ಮೆಟ್ಟಿಲುಗಳನ್ನು ಏರಿ ಮಗಳ ಅಂತಃಪುರ ದ್ವಾರವನ್ನು ಸೇರಿದರು. ಬಾಗಿಲನ್ನು ತೆರೆದಾಗ ಮೃದುಲ ಮಹಿಷ ಮರ್ದಿನಿಯಾಗಿ ಮಂಚದ ಮೇಲೆ ಮಲಗಿದ್ದುದು ಕಂಡಿತು. ಮಂಚದ ಬಳಿಬಂದು ಬೆನ್ನು ಹಾಕಿ ಮಲಗಿದ್ದ ಮಗಳನ್ನು ಮಗ್ಗುಲು ಬದಲಾಯಿಸುವಂತೆ ಮೈದಡವುತ್ತಾ ಕೇಳಿದರು ಕಾವೇರಿಯಮ್ಮ "ಮೃದುಲಾ ಏನೇ ಇದು ಅವತಾರ?" ಮೃದುಲ ಮಗ್ಗುಲು ಬದಲಿಸಲೂ ಇಲ್ಲ ಮಾತನಾಡಲೂ ಇಲ್ಲ. ಅಳುವನ್ನೇ ಮುಂದುವರಿಸಿ ಬಿಕ್ಕಳಿಸುತ್ತಿದ್ದಳು. ಅಳುವಿನ ರಾಗಕ್ಕೆ ಸರಿಯಾಗಿ ತಾಳ ಹಾಕುತ್ತಲಿತ್ತು ಆಕೆಯ ದೇಹ. ಆ ಪರಿಸ್ಥಿತಿಯಲ್ಲಿ ತಾಯಿ ಮಕ್ಕಳ ಸಮಸ್ಯೆಯನ್ನು ಪರಿಹರಿಸಲು ಸಚಿವರಾರೂ ಅಲ್ಲಿ ಹೋಗಲಿಲ್ಲ. ನಿಜ ಸ್ಥಿತಿಯನ್ನು ಮಗಳಿಗೆ ಹೇಗೆ ತಿಳಿಸಲಿ ಎಂಬುದು ಕಾವೇರಿಯಮ್ಮನವರಿಗೆ ತೋರಲಿಲ್ಲ ಹಾಗೆಂದು ತಿಳಿಸದೆ ಗತ್ಯಂತರವೂ ಇರಲಿಲ್ಲ. ಮತ್ತೆ ಮಗಳ ತಲೆಗೂದಲನ್ನು ನೇವರಿಸುತ್ತಾ—ಹೇಳಿದರು." ಮೃದುಲ ಇಂದು ನಿನ್ನನ್ನು ನೋಡಲು ಯಾರೋ ಒಬ್ಬರು 'ಬರುತ್ತೇನೆ' ಅಂತ ಕಾಗದ ಬರೆದಿದ್ದರು. ಅದನ್ನೇ ಶುಭ ಸಮಾಚಾರ ಅಂದದ್ದು ನಾನು ಇನ್ನೇನು ಅವರು ಬರುವ ಹೊತ್ತಾಯಿತು." ಅಷ್ಟರಲ್ಲಿ ಕಾರು ಬಂದು ಕೆಳಗೆ ನಿಂತ ಶಬ್ದವೂ ಅದರ ವಿದ್ಯುತ್ ತೂರ್ಯವೂ ಕೇಳಿಸಿತು. ಮಧು ಬರೆದುದೂ ತಾಯಿ ಹೊರೆದದ್ದೂ ಒಂದೇ ಮಾತು. ಅಜೀರ್ಣದಿಂದ ಓಕರಿಸಿ ಕಾರುವವರಂತೆ ಹೇಳಿದಳು ಮೃದುಲ" ಅವರು ನನ್ನನ್ನು ನೋಡಲು ಬರುತ್ತಿಲ್ಲವಮ್ಮಾ ಸುಡಲು ಬರುತ್ತಿದ್ದಾರೆ." ಆಗಲೇ ಕಸಿವಿಸಿಯಾಗಿದ್ದ ಕಾವೇರಮ್ಮ ತಪ್ಪಿಯೂ, ಎಂದೂ ಒಂದಕ್ಷರ ಕೆಟ್ಟಮಾತನ್ನಾಡದ ಮೃದುಲ ಇಂದು ಈ ರೀತಿ ಏಕೆ ಆಡುವಳೋ, ಮಾಡುವಳೋ ಎಂಬುದರ ತಲೆಬುಡ ಕಾಣದ್ದೆ ತನ್ನ ಅಸಹಾಯಕತೆಯನ್ನು ಮೈ, ಮಾತುಗಳೆರಡರಲ್ಲೂ ಮೂಡಿಸಿ "ಮೃದುಲ ಅವರು—ಬಂದಾಯಿತು, ದಯಮಾಡಿ, ಅಲಂಕರಿಸಿಕೊಂಡು ಸಿದ್ಧಳಾಗು ಮಗು, ನನ್ನ ಮರ್ಯಾದೆಯನ್ನು ಉಳಿಸು ಮಗಳೇ" ಎಂದು ಅಂಗಲಾಚಿ ಅವಸರವಾಗಿ, ಒದ್ದೆಯಾದ ಕಣ್ಣುಗಳನ್ನು ಒರಸಿಕೊಂಡು ಕೆಳಗಿಳಿದು ಹೋದರು ಹೆತ್ತಾಕೆಯ ಮಾನಾಪಮಾನದ ಪರಿವೆಯಾಗಲೀ ಕರುಳಿನ ವೇದನೆಯ ಅರಿವಾಗಲೀ ಪ್ರಣಯ ಭಂಗದ ಗುಂಗಿನಲ್ಲಿ ಒದ್ದಾಡುತ್ತಿದ್ದ ಈ ಜೂಲಿಯೆಟಳ ಹೃದಯದಲ್ಲಿ ಸುಳಿಯಲಿಲ್ಲ. ಅವಳ ನಿರ್ಧಾರದ ಡೋಲಕ ಹುಟ್ಟು ಸಾವುಗಳ ಮಧ್ಯೆ ಆವರ್ತಿಸುತ್ತಿದುದು ಯಾರಿಗೂ ಗೋಚರಿಸಲಿಲ್ಲ. ಸ್ವಯಂ ಸೇವಕರೂ ಆ ದಿನ ರಜೆಯಲ್ಲಿದ್ದರಬೇಕು. ಹಾಸಿಗೆ ತಲೆದಿಂಬುಗಳು—ಮಾತ್ರ ಆಕೆಯ ಆಕ್ರಮಣವನ್ನು ಮೌನವಾಗಿಯೇ ಸಹಿಸಿಕೊಂಡಿದ್ದುವು.

ಕಾವೇರಿಯಮ್ಮನವರು ಮಗಳು ಸಿದ್ಧಳಾಗಿರಬಹುದೆಂದು ಮತ್ತೊಮ್ಮೆ ಮೇಲೆ ಬಂದು ನೋಡಿದರು. ಮೊದಲಿನ ದೃಶ್ಯವೇ ಸ್ಥಿರವಾಗಿತ್ತು ಮಗನೂ ಮಗಳೂ ಒಬ್ಬಳೇ ಆಗಿದ್ದ ಮೃದುಲ ತಂದೆಯೂ ತಾಯಿಯೂ ಆಗಿದ್ದ ಕಾವೇರಿಯಮ್ಮನವರು ಮತ್ತೊಮ್ಮೆ ಉದ್ಗಾರವೆತ್ತಲು ಕಾರಣಳಾದಳು.—"ನನ್ನನ್ನು ಕೊಲ್ಲುವೆಯಾ ಕಂದಾ" ತಾಯಿ ಗದ್ಗದಿಸಿದರು. ಮೌನವೇ ಉತ್ತರಿಸಿತು. "ಅವರವರ ತಲೆಗೆ ಅವರವರ ಕೈ" ಎಂದು. ಕಾವೇರಿಯಮ್ಮ ಬಂದಂತೆ ಹಿಂದೆ ಹೋದರು. ವಧುಪರೀಕ್ಷೆಗೆ ಬಂದವರೊಡನೆ ಮತ್ತೇನನ್ನೂ ಹೇಳಲು ತೋಚದೆ "ನನ್ನ ಮಗಳನ್ನು ಕಾಪಾಡುವಿರಾ ಡಾಕ್ಟರರೇ" ಎಂಬುದಾಗಿ ಬೇಡಿಕೊಂಡರು. ಕಾಪಾಡೋಣವೇ ತನ್ನ ವೃತ್ತಿಯ ಧ್ಯೇಯವೆಂದು ಡಾಕ್ಟರರಿಗೆ ತಿಳಿದಿತ್ತು. ತನ್ನ ಪರಿಚಯವನ್ನು ಸ್ವಯಂ ಮಾಡಿಕೊಟ್ಟಿದ್ದ ಅವರು ಕೇಳಿದರು—"ನಿಮ್ಮ ಮಗಳಿಗೆ ಏನಾಗಿದೆ ಅಮ್ಮಾ?" ಅಮ್ಮ ಉತ್ತರಿಸಿದರು "ಈ ತನಕ ಅವಳಿಗೆ ಯಾವ ಖಾಯಿಲೆಯೂ ಇರಲಿಲ್ಲ, ಸ್ವಲ್ಪ ಹೊತ್ತಿನ ಮೊದಲು ಕಾಲೇಜಿನಿಂದ ಬಂದು ನನ್ನೊಡನೆ ಮಾತನಾಡಿದಾಗಲೂ ಸುಖವಾಗಿದ್ದಳು. ಆ ಮೇಲೆ ಮಾಳಿಗೆ ಹತ್ತಿದವಳಿಗೆ ಏನಾಯಿತೋ ಕಾಣೆ. ಇದ್ದಕ್ಕಿದ್ದ ಹಾಗೆ ಹೀಗೆ ಆಗಿಬಿಟ್ಟಿದೆ" 'ಹೀಗೆ ಅಂದರೆ ಹೇಗೆ? ಏನು ಜ್ವರ ಬರುತ್ತಿದೆಯೋ ಅಥವಾ ತಲೆ ನೋವಾಗುತ್ತದೆಯೋ ಅಲ್ಲ ಹುಳದ ಬಾಧೆಯಿದೆಯೋ ಹೇಳುವಿರಾ?" "ಯಾವುದರ ಕಾಟ, ಏನು ಯಾವ ಖಾಯಿಲೆ ಅಂತ ಅವಳು ಹೇಳುವುದಿಲ್ಲ. ಫಕ್ಕನೆ ಹೀಗೆ ಆಗ್ಬೇಕಿದ್ರೆ ಪಿಶಾಚಿ ಉಪದ್ರವಿದ್ದರೂ ಇರಬಹುದು" "ಛಿ! ಛಿ! ಪಿಶಾಚಿ ಗಿಶಾಚಿ ಎಲ್ಲ ಸುಳ್ಳಮ್ಮ. ಎಲ್ಲ ಮನಸ್ಸಿನ ವಿಕಲ್ಪ ಅಷ್ಟೆ." "ಅದೆಲ್ಲ ನಂಗೆ ಗೊತ್ತಿಲ್ಲ ಡಾಕ್ಟ್ರೇ. ದಯವಿಟ್ಟು ನೀವೇ ಒಮ್ಮೆ ನೋಡಿ ಹೇಳಿದರೆ ಆಗುತ್ತಿತ್ತು" ಮತ್ತೆ! ನೋಡದೆ ಹೇಳಲು ಅವರೇನು ಜ್ಯೋತಿಷಿಯೇ? ಕರ್ತವ್ಯವಿಟ್ಟುಕೊಂಡೇ ಹಿಂಬಾಲಿಸಿದರು ವೈದ್ಯ ಮಹಾಶಯರು ರೋಗಿಯ ಬಳಿಗೆ. "ಇಲ್ಲಿ ನೋಡು ಮೃದುಲ ಡಾಕ್ಟರರು ಬಂದಿದ್ದಾರೆ ಸ್ವಲ್ಪ ಪರೀಕ್ಷಿಸಿ ನೋಡಲೇನು?" ಮೊದಲಿನಂತೆ ಮಲಗಿದ್ದ ಮಗಳೊಡನೆ ಕೇಳಿದರು ಕಾವೇರಿಯಮ್ಮ. ಮುಖವನ್ನೂ ತಿರುಗಿಸದೆ ಮೃದುಲ ಮತ್ತೊಮ್ಮೆ ಶಾಂತಿ ಮಾಡಿದಳು "ನನ್ನ—ಡಾಕ್ಟರರು ಈಗ ಡೆವಿಲ್ ಆಗಿದ್ದಾರಮ್ಮ" ಅಲ್ಲೇ ಇದ್ದ ಡಾಕ್ಟರರಿಗೆ ಇಂಜೆಕ್ಷನ್ ಚುಚ್ಚಿದ ಹಾಗಾಯಿತು. ಪುಕ್ಕಟೆಯಾಗಿ ಸಿಕ್ಕಿದ್ದರಿಂದ ಉಮೇದು ಬಂದಿತೋ—ಏನೋ ಅವಳ ಕೈಯನ್ನೆತ್ತಿಕೊಂಡು ನಾಡಿ ಪರೀಕ್ಷೆ ಮಾಡಿಯೇ ಬಿಟ್ಟರು. ಅವರು ತನ್ನ ಸ್ಟೆತೋಸ್ಕೋಪು ತಂದಿರಲಿಲ್ಲ. ತಂದಿದ್ದರೆ ಎದೆಯ ಮೇಲೂ ಪ್ರಯೋಗ ನಡೆಸಿಬಿಡುತ್ತಿದ್ದರು. ಖಾಯಿಲೆಯ ಪತ್ತೆ ಹತ್ತಿದವರಂತೆ ಕಾವೇರಿಯಮ್ಮನವರನ್ನು ಬಾಗಿಲಿನ ಹತ್ತಿರ ಕರೆದುಕೊಂಡು ಬಂದು ಅವರ ಕಿವಿಯಲ್ಲಿ ಏನನ್ನೊ ತುಂಬಿಸಿ ಒಂದು ಲೋಟ ನೀರು ತರುವಂತೆ ಹೇಳಿ ಅವರನ್ನು ಕೆಳಗೆ ಕಳುಹಿಸಿ ರೋಗಿ ಮಲಗಿದ ರೀತಿಯನ್ನೇ ದೃಷ್ಟಿಸುತ್ತಾ ಮಂಚದ ಕಡೆಗೆ ಸರಿದರು—ಡಾಕ್ಟ್ರು.

ಏನು ಕಂಡಿತೋ ತಿಳಿಯದು ಮೃದುಲ ಮಲಗಿದ್ದರೆ ಅವಳ ಪಕ್ಕದಲ್ಲೇ ಕುಳಿತು ಮೈಗೆ ಮೈ ತಗಿಸಿ ಅವಳ ಹಣೆಯಲ್ಲಿ ಹೊರಳಿದ್ದ ಕುರುಳನ್ನು ತನ್ನ ಬೆರಳುಗಳಿಂದ ಸುರುಳಿಯಾಗಿ ಉರುಳಿಸುತ್ತಾ ಮೂಗನ್ನೊಮ್ಮೆ ಮೀಟಿ ತನ್ನ ಮತ್ತು ಆಕೆಯ ಮುಖಗಳ ಮಧ್ಯೆ ವಾಯುದೇವನ ಸಂಚಾರಕ್ಕೆ ಮಾತ್ರ ಎಡೆಕೊಟ್ಟು "ಮೃದುಲ" ಎಂದರು ಡಾಕ್ಟರರು. ಪರವಾಗಿಲ್ಲ ಅಷ್ಟರಲ್ಲೇ ಅವಳ ಹೆಸರನ್ನೂ ತಿಳಿದುಕೊಂಡಿದ್ದಾರೆ. ಅಷ್ಟು ಸಲುಗೆಯೊಂದ ವ

Tel: 'BLUEYAGAR'. — ಚಿನ್ನ ಮುತ್ತು ವಜ್ರಗಳ ಆಧುನಿಕ ತವರುಮನೆ — Phone: 374.

ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ:1919] ಚಿನ್ನ ಮುತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು.[ಮಾಲಿಕ:ಕೆ.ಕೆ.ಆರ್.ಶೇಟ್

NAVAYUGA WEEKLY, UDIPI.
REGD. NO.BG. 176

27-4-1961

LICENSE NO. 31
Licensed to Post without Prepayment

ಶಿಸಲು ಆವಳೇನು ಇವರ ಪತ್ನಿಯೇ?'— ತನ್ನ ಮೂಗಿಗಾದ ಸ್ಪರ್ಶವೂ ಕಿವಿಗೆ ಕೇಳಿಸಿದ ನಾದವೂ ಚಿರಪರಿಚಿತವಾಗಿದ್ದುದನ್ನು ಕಂಡು ಚಕಿತಳಾಗಿ ಮೃದುಲ ಕಣ್ಣು ತೆರೆದು ನೋಡಿದಳು. ಉನ್ಮತ್ತಳಾಗಿ ಡಾಕ್ಟರರನ್ನು ಬಾಚಿ ಎದೆಯ ಮೇಲೆಳೆದು ತಬ್ಬಿಕೊಂಡು ವಾಯುದೇವನ ಸಂಚಾರವನ್ನು ತಡೆದು "ಮಧು" ಎಂದಳು. ಮತ್ತೆ ಸುಧಾರಿಸಿಕೊಂಡು "ಮಧು ಏನಿದೆಲ್ಲಾ? "ಯಾವುದು?" "ನನ್ನನು ನೋಡಲು ಬಂದವರು ನೀವೇನೇನೂ?" "ಹೌದು" "ಮೆಚ್ಚಿಕೆಯಾಯಿತೇ?" "ಆಯಿತು". "ನನಗೆ ಪತ್ರಬರೆದದ್ದೇಕೆ' ಕೇಳಿದಳು ಮೃದುಲ. ಮಧುಸೂದನನೂ ಕೇಳಿದ "ಇದು ತಿಂಗಳು ಯಾವುದು?' ಸುಲಭವಾದ ಪ್ರಶ್ನೆಗೆ ನೇರವಾದ ಉತ್ತರ "ಏಪ್ರಿಲ್" "ನೀನು?" ಮೃದುಲ ಏನು ಹೇಳಲೂ ತಿಳಿಯದೆ ಮಧುಸೂದನನ ಮುಖವನ್ನೇ ನೋಡಿದಳು — ಉತ್ತರವನ್ನೂ ಆತನೆ ಇತ್ತ—"Fool" ಮೃದುಲ ತಕ್ಷಣ ಅಂದಳು "Fool ನಿಮ್ಮ ಹೆಂಡತಿ" ಮಧು ಆಪಕ್ಕಿಂತಲು ವೇಗವಾಗಿ ಬಂದ "ನೀನೆ" "ಮದುವೆಯಾಗುವ ಮೊದಲು ನನ್ನನ್ನು ಹೆಂಡತಿ ಅಂತ ಹೇಳಲು ನಾಚಿಕೆಯಾಗುವುದಿಲ್ಲವೇ ನಿಮಗೆ?" "ಮದುವೆಯಾಗುವ ಮೊದಲು ನನ್ನನ್ನು ಅಪ್ಪಿಕೊಳ್ಳಲು ನಾಚಿಕೆಯಾಗುವುದಿಲ್ಲವೇ ನಿನಗೆ?" ನಾಚಿಕೆ ಇದ್ದರೆ ತಾನೆ ಆಗೋದು ಇಬ್ಬರು ನಕ್ಕರು. ಮೃದುಲ ಮೇಲೆದ್ದು ಅಸ್ತವ್ಯಸ್ತವಾದ ಅದೇ ವೇಶದಲ್ಲಿ ಮಹಡಿಯಿಂದ ಕೆಳಗಿಳಿದು ಬಂದು, ನೀರು ಹಿಡಿದುಕೊಂಡು ಮೇಲೆ ಬರಲು ಅಣಿಯಾಗಿದ್ದ ತಾಯಿಯೊಡನೆ "ಅಮ್ಮಾ ಹಾಲು" ಎಂದು ಕೇಳಿದಳು ತಾಯಿ ತಬ್ಬಿಬ್ಬಾಗಿ "ಯಾರಿಗೆ?" ಎಂದರು "ಅವರಿಗೆ" ಅಂದಳು ಮೃದುಲ. ಯಾವುದೂ ತಿಳಿಯದವರಂತೆ ಮಗಳ ಮುಖವನ್ನೇ ನೋಡಿದರು ಕಾವೇರಿಯಮ್ಮ. ಮಗಳು ಕೇಳಿದಳು "ಅಮ್ಮಾ ಇದು ತಿಂಗಳು ಯಾವುದು?" 'ಏಪ್ರಿಲ್ ಅಲ್ಲವೇ?" "ನೀನು?" ಉತ್ತರ ಬರಲಿಲ್ಲ ತಾಯಿಯಿಂದ. ಮೃದುಲ ತಾನೇ ಉತ್ತರಿಸಿದಳು "Fool" ಕಾವೇರಿಯಮ್ಮ ನಿಜವಾಗಿಯೂ ಹುಚ್ಚಳಾಗಿದ್ದರು.



ಭಾರತೀಯ ನೌಕಾ ಸೇನೆಯ ಪ್ರಪ್ರಥಮ ವಿಮಾನ ವಾಹಕ ನೌಕೆ—ಐ. ಎನ್. ಎಸ್. ವಿಕ್ರಾಂತ

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ದ ಕಾರ್ಯಕ್ರಮವು ಪರಿಣಾಮಕಾರಿಯಾಗಿ ಅನ್ವಯಿಸುವಂತೆ ನೋಡಿಕೊಳ್ಳಲು 'ಹಾಜರಿ ಅಧಿಕಾರಿ'ಗಳನ್ನು ನೇಮಿಸಲಾಗುವುದು.

ಅನಿವಾರ್ಯವಾಗಿ ಶಿಕ್ಷಣ ನೀಡಬೇಕೆಂಬ ತತ್ವವನ್ನು ಯಾರೂ ವಿರೋಧಿಸುವಂತಿಲ್ಲ. ಆದರೆ, ಪ್ರಾಥಮಿಕ ಶಿಕ್ಷಣದ ಪ್ರಗತಿಯು ಕುಂಟುತ್ತ ಸಾಗುತ್ತಿರುವುದಕ್ಕೆ ಹಲವಾರು ಅಡಚಣೆಗಳು ಇರುತ್ತವೆ. ಅವನ್ನು ಮೊತ್ತಮೊದಲಿಗೆ ದೂರೀಕರಿಸದೆ ಇದ್ದರೆ ಸಾಕಷ್ಟು ಪರಿಣಾಮಕಾರಿಯಾಗಿ ಈ ಸಮಸ್ಯೆಯನ್ನು ಬಿಡಿಸುವುದು ಸಾಧ್ಯವಾಗದು. ಕಡ್ಡಾಯವಾಗಿ ನೀಡಲು ನಿಯೋಜಿಸುವ ಶಿಕ್ಷಣವು ಯಶಸ್ವಿಯಾಗಿ ನಿರ್ವಹಿಸಲ್ಪಡಬೇಕಾದರೆ, ಪ್ರತಿ ಶಾಲೆಯಲ್ಲಿಯೂ ವಿದ್ಯಾರ್ಥಿಗಳ ಸಂಖ್ಯೆಗೆ ಸಾಕಷ್ಟು ಅಧ್ಯಾಪಕರು ನೇಮಿಸಲ್ಪಡಬೇಕು. ಆದರೆ, ಸದ್ಯ ಕೇವಲ ಮರಾಠಿ ಶಾಲೆಗಳಲ್ಲಿ ಮಾತ್ರವಲ್ಲ ಕನ್ನಡ ಶಾಲೆಗಳಲ್ಲೂ ಅಧ್ಯಾಪಕರಿಲ್ಲದ ಸಂದರ್ಭಗಳು ಉಂಟು ಎಂಬುದನ್ನು ಒಪ್ಪಿಕೊಂಡ ಶಿಕ್ಷಣ ಸಚಿವರು ಇದೇ ರೀತಿಯಲ್ಲಿ ಮುಂದುವರಿದರೆ, ವಿದ್ಯಾರ್ಥಿಗಳ ಹೆಸರನ್ನು ಶಾಲೆಯಲ್ಲಿ ಹೆಚ್ಚಿಸುವುದರಿಂದಲೇ ಏನು ಪುರುಷಾರ್ಥ ಲಭಿಸೀತೆಂದು ಊಹಿಸಬೇಕು. ಶಾಲೆಯೆಂಬುದು ಆಟದ ಮನೆ ಮಾತ್ರವಲ್ಲ; ಪಾರದ ಮನೆಯೂ ಹೌದು ಎಂಬುದನ್ನು ಒಪ್ಪಿಕೊಳ್ಳುವುದಾದರೆ, ಅಧ್ಯಾಪಕರಿಲ್ಲದ ಪಾರ ಶಾಲೆ, ಡಾಕ್ಟರರಿಲ್ಲದ ವೈದ್ಯ ಶಾಲೆಗಳೆರಡೂ ಸಮಾನವಾಗುವುದನ್ನು ತಪ್ಪಿಸಬೇಕು.

ಪ್ರಾಥಮಿಕ ಶಾಲೆಗಳ ಅಧ್ಯಾಪಕರೂ ಈ ಶಾಸನದ ಯಶಸ್ಸಿಗೆ ಕಾರಣವಾಗುವುದರಿಂದ ಅವರಿಗೆ ಪ್ರೋತ್ಸಾಹಕಾರಕವಾದ ಯಾವುದೇ ಅಂಶಗಳು ಈ ವಿಧೇಯಕದಲ್ಲಿ ಇಲ್ಲ. ಅಧ್ಯಾಪಕರ ಸಾಮಾಜಿಕ ಅಂತಸ್ತು, ಸಂಬಳ ಸಾರಿಗೆ ಮೊದಲಾದುವುಗಳಲ್ಲಿ ಹೆಚ್ಚಳವಾಗುವುದು ಅವಶ್ಯವೆಂದೆನಿಸುತ್ತದೆ. ಶಾಲೆಗಳ ಕಟ್ಟಡ ಮತ್ತು ಸಲಕರಣೆಗಳು, ಗ್ರಾಮಾಂತರ ಪ್ರದೇಶಗಳಲ್ಲಿ ತೆರೆದ ಮತ್ತು ತೆರೆಯಲ್ಪಡುವ ಶಾಲೆಗಳ ಅಧ್ಯಾಪಕರಿಗಾಗಿ ವಸತಿ ಸೌಕರ್ಯ ಇತ್ಯಾದಿಗಳನ್ನು ಒದಗಿಸುವ ಬಗ್ಗೆ ಮುತುವರ್ಜಿ ವಹಿಸದಿರುವುದು ಶೋಚನೀಯವಾಗಿದೆ

ಮುಖ್ಯವಾಗಿ, ಗ್ರಾಮಾಂತರ ಪ್ರದೇಶಗಳ ಜನರ ಜೀವನಮಟ್ಟವು ಏರದಿರುವುದರಿಂದಲೇ ಅಲ್ಲಿನ ಹೆತ್ತವರು ತಮ್ಮ ಮಕ್ಕಳ ಶಿಕ್ಷಣದಲ್ಲಿ ಆಸಕ್ತಿ ತೋರುತ್ತಿಲ್ಲ ಮತ್ತು ನಗರ ಪ್ರದೇಶಗಳಲ್ಲಿ ಕೂಡ, ನಗರ ಜೀವನ ಮಟ್ಟದ ಏರಿಕೆ ಹಾಗೂ ಆದಾಯದ ಇಳುವರಿಯಿಂದಾಗಿ ಬಡ ಜನತೆಯು ಶಿಕ್ಷಣಕ್ಕೆ ಪ್ರಾಶಸ್ತ್ಯ ನೀಡುತ್ತಿಲ್ಲವೆಂಬುದು ನಗ್ನ ಸತ್ಯವಾಗಿದೆ. ಉಣ್ಣುವುದಕ್ಕೂ ಇಲ್ಲದ ತಾಯ್ತಂದೆಗಳು ಮಗುವನ್ನು ಶಾಲೆಗೆ ಕಳುಹಿಸುವುದಾದರೂ ಹೇಗೆ? ಅಥವಾ ನ್ಯಾಯಾಲಯ ಹೇರಬಹುದಾದ ದಂಡನೆಯನ್ನು ಅನುಭವಿಸುವುದಾದರೂ ಎಂತು? ಆದುದರಿಂದ, ಪ್ರಾಥಮಿಕ ಶಾಲೆಯ ಮಕ್ಕಳಿಗೆ ಮಧ್ಯಾಹ್ನ ಊಟದ ವ್ಯವಸ್ಥೆ, ಅವಶ್ಯಕತೆಯಿದ್ದವರಿಗೆ ಬಟ್ಟೆ ಬರೆಗಳು ಸ್ಲೇಟು ಪುಸ್ತಕಗಳ ಪೂರೈಕೆ—ಇಷ್ಟನ್ನಾದರೂ ಮಾಡುವುದು ಅತ್ಯಗತ್ಯವೆನಿಸುತ್ತದೆ. ಭಾರತದಂತಹ ಆರ್ಥಿಕವಾಗಿ ದರಿದ್ರ ದೇಶದಲ್ಲಿ ಅಕ್ಷರ ತಿಂದು ಉದರ ಪೂರ್ತಿಯಾಗುವಂತಿಲ್ಲವೆಂಬುದನ್ನು ನಾವು ಅವಶ್ಯ ಗಮನಿಸಬೇಕು. ಈ ದೃಷ್ಟಿಯಿಂದ ರಾಜ್ಯದ ವಿದ್ಯಾಮಸೂದೆಯನ್ನು ಇದೇನೋ ಕೇಂದ್ರ ಸರಕಾರದ ಬಲತ್ಕಾರಕ್ಕೆ ಬಲಿಬಿದ್ದು ಮುಂದೆ ತಂದಂತೆ ತೋರುತ್ತದೆಯೇ ಹೊರತು ರಾಜ್ಯದ ಅನಕ್ಷರಸ್ಥರ ಸಮಸ್ಯೆಗಳನ್ನು ಅಧ್ಯಯನ ನಡೆಸಿ, ಅವನ್ನು ದೂರೀಕರಿಸಿ ತನ್ಮೂಲಕ ಪ್ರಜಾಭಿಪ್ರಾಯವನ್ನು ಗಳಿಸಿ ಉಚಿತ ಅನಿವಾರ್ಯ ಶಿಕ್ಷಣಯೋಜನೆಯು ಫಲಕಾರಿಯಾಗುವಂತೆ ಮಾಡುವ ಉದ್ದೇಶದಿಂದಲ್ಲವೆಂದು ಹೇಳಲೇ ಬೇಕಾಗುವುದು. ಈಗ ನಿಯೋಜಿಸಿದ ರೂಪದ ಕಡ್ಡಾಯ ಶಿಕ್ಷಣ ಮಸೂದೆಯು ಪ್ರಶಂಸನೀಯವಾಗಿ ಕಾರ್ಯಗತವಾಗುವುದು ಅಸಾಧ್ಯವೆಂದೇ ಹೇಳಬೇಕು.

—ಗೋರಾ

"ನಚಿಕೇತ"ರ
ಇನ್ನೊಂದು ನವೀನ ಕಾದಂಬರಿ—
ಋಣ ಯಾತ್ರೆ
ಇದೀಗ ಪ್ರಕಟವಾಗಿದೆ.
ಬೆಲೆ ರೂ. 1-50 ನ. ಪೈಸೆ.
ಮೊದಲು ಪ್ರಕಟವಾದ ಕಾದಂಬರಿ—
ಭಾವಾರ್ಚನೆ
ಬೆಲೆ ರೂ. 1-25 ನ. ಪೈಸೆ.
ಪ್ರತಿಗಳು ಸಿಗುವ ಸ್ಥಳಗಳು.—
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ಹೆಚ್ಚು ಬಡ್ಡಿಯನ್ನು ಗಳಿಸಿರಿ.

- ಮೂರು ದಿನಗಳು ಬೇಕಾದರೂ ಆಗಿರಲಿ; ನಿಮ್ಮ ಹಣವು ಬಡ್ಡಿಯನ್ನು ಗಳಿಸುತ್ತಿರಲಿ.
- ಒಂದು ನಿಯಮಿತ ಅವಧಿಗೆ ನಿಮ್ಮ ಹಣವನ್ನು ಕಾಯಂ ಠೇವಣಾತಿಯಲ್ಲಿಡಿರಿ.
- ಠೇವಣಾತಿಯ ಅವಧಿಯು ಹೆಚ್ಚಾದಂತೆ ಬಡ್ಡಿಯ ದರದಲ್ಲಿಯೂ ಹೆಚ್ಚಳವಾಗುವುದು.

ಕಾಯಂ ಠೇವಣಾತಿಗೆ ವಿವಿಧ ಅವಧಿಯ ಬಡ್ಡಿ ದರಗಳು:

(i)	31 ದಿನಗಳ ಮೇಲೆ 60 ದಿನಗಳ ವರೆಗೆ	3½%
(ii)	61 ದಿನಗಳ ಮೇಲೆ 90 ದಿನಗಳ ವರೆಗೆ	3¾%
(iii)	91 ದಿನಗಳ ಮೇಲೆ 12 ತಿಂಗಳುಗಳ ವರೆಗೆ	4%
(iv)	12 ತಿಂಗಳುಗಳ ಮೇಲೆ 24 ತಿಂಗಳುಗಳ ವರೆಗೆ	4¼%
(v)	24 ತಿಂಗಳುಗಳ ಮೇಲೆ 48 ತಿಂಗಳುಗಳ ವರೆಗೆ	4½%
(vi)	48 ತಿಂಗಳುಗಳ ಮೇಲೆ 60 ತಿಂಗಳುಗಳ ವರೆಗೆ	4¾%
(vii)	60 ತಿಂಗಳುಗಳ ಮೇಲೆ	5¼%

ನಮ್ಮ 141 ಶಾಖೆಗಳಲ್ಲಿ ನಿಮಗೆ ಸಮೀಪವಿರುವ ಶಾಖೆಯೊಂದನ್ನು ಸಂದರ್ಶಿಸಿರಿ
ಒಟ್ಟು ಠೇವಣಾತಿಗಳು ರೂ 18 ಕೋಟಿಗೂ ಮಿಕ್ಕಿದೆ.
ಸಿಂಡಿಕೇಟ್ ಬ್ಯಾಂಕ್
ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ರಿಜಿಸ್ಟರ್ಡ್ ಕಾರ್ಯಾಲಯ: ಮುಕುಂದ ನಿವಾಸ, ಉಡುಪಿ.

ಪಂಚಾಯತಿಗಳಿಗೆ ಉಪಯುಕ್ತ ಪುಸ್ತಕ
ಮೈಸೂರು ರಾಜ್ಯದ
ಪಂಚಾಯತಿಗಳ
ತೆರಿಗೆಗಳ ಮತ್ತು ಫೀಗಳ ನಿಯಮಗಳು.
ಲೇಖಕರು:
ಶ್ರೀ. ಕೆ. ಎಸ್. ಆಳ್ವ, ಬಿ.ಎ.,ಬಿ.ಎಲ್.
ಎಡ್ವಕೇಟ್, ಮಂಗಳೂರು.
ಬೆಲೆ: ರೂಪಾಯಿ ಎರಡು.
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಯುಗ ವಾರ ಪತ್ರಿಕೆಗೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ

Edited Printed & Published by K. H. Shetty, at the Navayuga Press, Udipi, S. India.

ಸಂಪುಟ ೪೦ ಸಂಚಿಕೆ ೩೪

ನವಯುಗ

Vol. 40 No. 34 ಬೆಲೆ 0=13

ಪ್ರಚಲಿತ ಪ್ರಸಂಗ

ರಾಜ್ಯಕ್ಕೆ ಹೆಸರಿಡುವ ಪ್ರಶ್ನೆ

ಮುಂದಿನ ಅಧಿವೇಶನದ ವರೆಗೆ ಮುಂದುವರಿದ ರಾಜ್ಯದ ಹೆಸರಿನ ಸಂಬಂಧದ ಗೊತ್ತುವಳಿಗೆ ಆ ನಡುವೆ ಅನುಕೂಲ ವಾತಾವರಣ ನಿರ್ಮಿಸಬೇಕಾಗಿದೆ. ಅದಕ್ಕೂ ಹೆಚ್ಚಾಗಿ ಸಮಗ್ರ ರಾಜ್ಯದ ಭಾಷೆ ಕನ್ನಡವಾಗಬೇಕೆಂಬುದಕ್ಕೆ ಬೆಂಬಲ ಪಡೆಯುವುದು ಅತ್ಯವಶ್ಯವಾಗಿದೆ.

ಹರಿಹಂಚಾಗಿದ್ದ ಕನ್ನಡನಾಡು ಒಂದಾದ ನಂತರ ರಾಜ್ಯದ ವಿಧಾನ ಸಭೆಯಲ್ಲಿ ಮುಂದೆ ಬರುತ್ತಿರುವ ಖಾಸಗಿ ಗೊತ್ತುವಳಿಗಳಲ್ಲಿ ರಾಜ್ಯದ ಹೆಸರನ್ನು 'ಕರ್ನಾಟಕ'ವೆಂದು ಬದಲಾಯಿಸುವಂತೆ ಕೇಂದ್ರ ಸರಕಾರವನ್ನು ಕೇಳಿಕೊಳ್ಳುವುದೂ ಒಂದಾಗಿ. ಪರಿಣಮಿಸಿದೆ. ರಾಜ್ಯವು ಏಕೀಕೃತವಾಗಿ ನಾಲ್ಕೂವರೆ ವರ್ಷ ಸಂದರೂ ಈ ಬಗ್ಗೆ ಯಾವುದೇ ನಿರ್ಧಾರವಾಗದುಳಿದುದು ಜನತಾ ಪ್ರತಿನಿಧಿಗಳ ಅಸಮರ್ಥತೆಯನ್ನೇ ತೋರಿಸುತ್ತದೆ. ಈ ಬಾರಿಯಾದರೂ ಈ ಸಂಬಂಧದ ಗೊತ್ತುವಳಿಯ ಮೇಲೆ ಚರ್ಚೆ ನಡೆದು ಪೆಟ್ಟೊಂದು ತುಂಡೆರಡು ಆದೀತು ಎಂದು ಆಶಿಸಿದ್ದ ಕೆಲವರ ಮನಸ್ಸಿಗೆ ಬಿಸಿನೀರು ಸುರಿದಂತಾಗಿದೆ. ಮುಂದಿನ ಅಧಿವೇಶನದ ವರೆಗೆ ಮುಂದುವರಿಸಲ್ಪಟ್ಟ ಈ ಗೊತ್ತುವಳಿಯು ಅದು ವರೆಗೆ ಜೀವಂತ ಉಳಿಯುವುದೆಂಬ ಆಶಾಂಕುರ ಮಾತ್ರ ಉಳಿಯುವಂತಾಗಿದೆ

ರಾಜ್ಯ ಪುನರ್ಘಟನೆಯ ಸಮಯದಲ್ಲಿ ಮುಂದೆಬಂದ ಕೆಲವೊಂದು ಭಿನ್ನಾಭಿಪ್ರಾಯಗಳಿಂದ ರಾಜ್ಯದ ಹೆಸರನ್ನು 'ಮೈಸೂರು' ಎಂದೇ ಇಟ್ಟುಬಿಡಲಾಯಿತು. ಪ್ರಜಾಪ್ರಭುತ್ವದಲ್ಲಿ ಯಾವುದೇ ಒಂದು ನಿರ್ಧಾರವು ಶಾಶ್ವತವಾಗಿರಬೇಕಾಗಿಲ್ಲ; ಪ್ರಜಾಮತಕ್ಕನುಸಾರ ಅದು ಕಾಲಕಾಲಕ್ಕೆ ಬದಲಾಗಬಹುದೆಂಬ ಉಪದೇಶದಿಂದ ರಾಜ್ಯವೊಂದಾಗಲೆಂಬ ಉದ್ದೇಶದಿಂದ ಆ ಬಗ್ಗೆ ಹೆಚ್ಚಿನ ಜಗಳಕಾಯದೆ ಕನ್ನಡ ಜನತೆ ಸುಮ್ಮನುಳಿಯಿತು. ಆದರೆ, ಪೂರ್ವಗ್ರಹಪೀಡಿತರಾದ ಕೆಲವರನ್ನುಳಿದರೆ, ಕನ್ನಡಿಗರೆಲ್ಲರೂ ಒಕ್ಕೊರಲಿನಿಂದ ಹೇಳುತ್ತಾರೆ, ನಮ್ಮ ರಾಜ್ಯ ಕರ್ನಾಟಕ; ಮೈಸೂರಲ್ಲ ಎಂದು. ಹೆಸರಿನ ವಿಷಯಕ್ಕೆ ಮಹತ್ವನೀಡಬಾರದೆಂಬ ಪರೋಪದೇಶ ಪಂಡಿತರೂ ಇದ್ದಾರೆ. ಅವರು ಮಜ್ಜಿಗೆಗೆ ಗತಿಯಿಲ್ಲವಾದರೂ ಕ್ಷೀರಸಾಗರ ಭಟ್ಟನೆಂದು ಕರೆಸಿಕೊಳ್ಳಲು ಬಯಸುವವರೇ ಹೆಚ್ಚಿನವರು ಎಂಬುದನ್ನು ಅರಿತುಕೊಳ್ಳಬೇಕು.

ಕನ್ನಡ ಭಾಷೆಯೇ ಪ್ರಧಾನವಾಗಿರುವ ನಮ್ಮ ರಾಜ್ಯದ ಹೆಸರು 'ಕರ್ನಾಟಕ'ವೆಂದೇ ಹಿಂದಿನಿಂದಲೂ ಪ್ರಸಿದ್ಧವಾದುದು ಮತ್ತು ಇಂದಿಗೂ ಅದು ಕರ್ನಾಟಕವೆಂದೇ ಇರಬೇಕಾದುದು ಇದೀಗ ಸಾಮಾನ್ಯ ಒಪ್ಪಿತವಾದ ವಿಷಯ. ಆದರೆ, ನಮ್ಮ ಶಾಸಕರು ಮಾತ್ರ ಅದಾವುದೋ ಅವರ್ಣನೀಯ ದಾಕ್ಷಿಣ್ಯಕ್ಕೆ ಸಿಕ್ಕಿಬಿದ್ದು ಈ ವಿಷಯದಲ್ಲಿ ಮೀನ ಮೇಷ ಎಣಿಸುತ್ತಿದ್ದಾರೆ. ಅವರ ಈ ರೀತಿಯ ವರ್ತನೆಯು ಕೆಲವರ ಪ್ರಕೋಪಕ್ಕೂ ಕಾರಣವಾಗಿದೆ. ಈ ಸಲದ ಚರ್ಚೆಯವೇಳೆಯೂ ರಾಜ್ಯವನ್ನು ಒಡೆದುಬಿಡಿರಿ ಎಂಬ ಬಡಿವಾರವೂ ಒರ್ವ ಮಾನ್ಯ ಸದಸ್ಯರ ಬಾಯಿಂದ ಹೊರಟಿತೆಂದರೆ, ಇದೆಷ್ಟು ಅಪಹಾಸ್ಯಕರವೆಂದು ಊಹಿಸಬಹುದು. ಈ ಬಾರಿ ಉಡುಪಿ—ಮಣಿಪಾಲದಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಭಾಷಣದಲ್ಲೂ ಕರ್ನಾಟಕವನ್ನು ಒಡೆದು ಎರಡುಮಾಡುವ ಬಗ್ಗೆ ಒಳಗಿಂದೊಳಗೆ ಮಸಲತ್ತು ನಡೆಯುತ್ತಿರುವುದರ ಕುರಿತು ಶ್ರೀ ಅ. ನ. ಕೃ. ಎಚ್ಚರಿಕೆಯಿತ್ತಿದ್ದರು. ಸಾಹಿತ್ಯ ಪರಿಷತ್ತು ಇದನ್ನು ಸ್ವೀಕರಿಸಿದ್ದರೂ ಹಳೆಯ ಮೈಸೂರಿನ ಕೆಲವರಲ್ಲಿ ಇಂದಿಗೂ ಮೈಸೂರಿನ ವ್ಯಾಮೋಹ ದೂರವಾಗಿಲ್ಲವೆಂಬುದು ಖೇದನೀಯ. ತಾವು ಮೈಸೂರಿನ ಮಹಾರಾಜರನ್ನು ಕರ್ನಾಟಕ ಸಿಂಹಾಸನಾಧೀಶ್ವರರೆಂದು ಗೌರವಿಸುತ್ತಿದ್ದ ಭಕ್ತಿ ಭಾವವನ್ನೂ ಇವರು ಸಂಪೂರ್ಣ ಮರೆತಂತಿದೆ. ಮೈಸೂರಿನ ಮಹಾರಾಜರು ಕರ್ನಾಟಕ ಸಿಂಹಾಸನಾಧೀಶರು 'ಕರ್ನಾಟಕ' ಮಾತ್ರ 'ಮೈಸೂರು' ಎಂದು ವಾದಿಸುವ ಇವರ ತರ್ಕ ತೀರ ವಿಚಿತ್ರವಾಗಿದೆ.

ರಾಜ್ಯದ ಹೆಸರನ್ನು ಬದಲಾಯಿಸುವುದು ಬಹುಮತದಿಂದ ನಿರ್ಣಯಿಸುವ ಕೆಲಸವಲ್ಲ; ಅದನ್ನು ಸರ್ವಾನುಮತದಿಂದ ಗೊತ್ತುಪಡಿಸಬೇಕೆಂಬುದು ಅಪೇಕ್ಷಣೀಯವೇ. ಇದಕ್ಕಾಗಿ ರಾಜ್ಯದಲ್ಲಿ ಅನುಕೂಲ ಪರಿಸ್ಥಿತಿಯನ್ನು ಮುಂದಿನ ಅಧಿವೇಶನದೊಳಗೆ ನಿರ್ಮಿಸುವುದು ಸಾಧ್ಯವಾದರೆ, ಹಾಗೆಯೇ ಮಾಡುವವೆಂದು ಶ್ರೀ ವೀರಣ್ಣಗೌಡರು ಆಶ್ವಾಸನೆಯಿತ್ತರೆಂದು ತಿಳಿಯುತ್ತದೆ. ಅದೇನೇ ಇದ್ದರೂ ಕಾಂಗ್ರೆಸ್ ಪಕ್ಷವು ಈ ಬಗ್ಗೆ ಮತುವರ್ಜಿಯನ್ನು ವಹಿಸದ ವರೆಗೆ ಅನುಕೂಲಾಭಿಪ್ರಾಯ ಹುಟ್ಟುವುದು ಸಾಧ್ಯವಿಲ್ಲ. ಮುಂದಿನ ವರ್ಷ ಸಾರ್ವತ್ರಿಕ ಚುನಾವಣೆಗಳೂ ಸಮೀಪಿಸುತ್ತಿರುವುದರಿಂದ, ಈಗಾಗಲೇ ಪತ್ರಿಕೆಗಳ ಮೂಲಕ ಸಾಹಿತ್ಯ ಸಮ್ಮೇಳನದ ಮೂಲಕ ಪ್ರಕಟವಾದ ಜನಾಭಿಪ್ರಾಯಕ್ಕೆ ಮನ್ನಣೆ ದೊರೆಯುವುದೆಂದು ಆಶಿಸಬೇಕಾಗಿದೆ. ರಾಜ್ಯ ಸರಕಾರವು ನಿರ್ದಿಷ್ಟ ನಿಲುಮೆಯನ್ನು ಈ ಕುರಿತು ಇಟ್ಟುಕೊಂಡು ಜನತೆಯ ಆಶಯವನ್ನು ಪೂರೈಸಿಕೊಡುವುದು ಸೂಕ್ತವಾಗಿದೆ.



ಅಮೆರಿಕದ ವಿಜ್ಞಾನಿಗಳು ಚಿಂಪಂಜಿ ಮಂಗವನ್ನು ಇಟ್ಟು ಪ್ರಯೋಗಾರ್ಥವಾಗಿ ಹಾರಿಸಿ ಮರಳಿದ ಉಪಗ್ರಹ

ರಾಜ್ಯದ ಹೆಸರನ್ನು ಬದಲಾಯಿಸುವುದರ ಬಗ್ಗೆ ಸಾಕಷ್ಟು ಮಾತಾಡುತ್ತಿರುವ ನಮ್ಮ ಶಾಸಕರು ಕನ್ನಡವನ್ನು ರಾಜ್ಯಭಾಷೆಯನ್ನಾಗಿ ಘೋಷಿಸುವಂತೆ ಕೇಳಿಕೊಳ್ಳುವುದರಲ್ಲಿ ಆಸಕ್ತಿ ವಹಿಸುತ್ತಿಲ್ಲ. ರಾಜ್ಯದ ನಾಮಧೇಯವನ್ನು ಬದಲಾಯಿಸುವುದರಿಂದ ಪ್ರತ್ಯಕ್ಷವಾಗಿ ಯಾರಿಗೂ ಉಪಕಾರವಾಗದು. ಆಡಳಿತಕ್ಕೆ ಕನ್ನಡವನ್ನೇ ಬಳಸಿಕೊಳ್ಳುವುದರಿಂದ ಇಂಗ್ಲಿಷ್ ತಿಳಿಯದ ಅಸಂಖ್ಯ ಪ್ರಜಾಕೋಟಿಯ ವ್ಯವಹಾರವು ಸರಳವಾಗುವುದು. ನಮ್ಮ ನೆರೆಯ ರಾಜ್ಯಗಳೆಲ್ಲವೂ ತಂತಮ್ಮ ಪ್ರಾದೇಶಿಕ ಭಾಷೆಯನ್ನೇ ಆಡಳಿತ ಭಾಷೆಯನ್ನಾಗಿ ಮಾಡಿವೆ. ಕನ್ನಡದ ಭಾಗವಾಗಿ ಅನ್ಯಾಯವಾಗಿ ಕೇರಳದಲ್ಲಿ ಸೇರಿಕೊಂಡ ಶುದ್ಧ ಕನ್ನಡದ ನೆಲ ಕಾಸರಗೋಡಿನಲ್ಲಿಯೂ ಕೇರಳ ಸರಕಾರ ಕನ್ನಡವನ್ನು ಮೂಲೆಗೆ ತಳ್ಳಿ, ಮಲಯಾಳಂನ್ನು ಹೆಚ್ಚಲು ಸಾಹಸಪಡುತ್ತಿರುವುದನ್ನು ಕಂಡೂ ನಮ್ಮ ಸರಕಾರ ಕೈಕಟ್ಟಿಕೊಂಡು, ಕನ್ನಡವನ್ನು ರಾಜ್ಯದ ಅಧಿಕೃತ ಭಾಷೆಯನ್ನಾಗಿ ಘೋಷಿಸಲು ಹಿಂದೆ ಮುಂದೆ ನೋಡುವುದು ಲಜ್ಜಾಸ್ಪದವಿದೆ. ಕನ್ನಡವಲ್ಲಿ ಮಾತನಾಡಲು ಹಿಂಜರಿಯುವ ಸಚಿವರು ನಮ್ಮ ರಾಜ್ಯದ ಪ್ರಶಾಸನ ಸೂತ್ರವನ್ನು ಹಿಡಿದಿರುವುದು, ಕನ್ನಡಕ್ಕೆ ಆಗುತ್ತಿರುವ ಅಪಮಾನವನ್ನು ಕಂಡೂ ಸುಮ್ಮನುಳಿದಿರುವು

(೧೨ನೇ ಪುಟ ನೋಡಿರಿ)

ESTD. 1921

NAVAYUGA
KANNADA WEEKLY,
UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೨೧.

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್.
ಬಿ. ಶಾಮರಾಯ ಶೆಟ್ಟಿ, ಬಿ. ಎ., ಎಲ್. ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

●

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್) ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್) ಕಲಂ ಇಂಚಿಗೆ ರೂ. 3-50
ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಹಣವನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡಬಹುದಾಗಿರುವುದು.

ಧಾರಾವಾಹಿ ಕಾದಂಬರಿ

ಯಮುನ ನೆರಳು

ಮೂಲ ಲೇಖಕರ: **ಶ್ರೀ ಎಂ. ಎಲ್. ಪಾಂಡೇಯ.**
ಅನುವಾದಕರು: **ಶ್ರೀ ಎಸ್. ಎಂ. ಶೆಟ್ಟಿ, ಶಿವಪುಂಜೆ ಪರಾರಿ.**

೧

"ಕೃಷ್ಣಗಡದಲ್ಲಿ ಈ ವರೆಗೆ ನಡೆದ ಕೊಲೆಗಳನ್ನು ನೋಡುವಾಗ ನನಗೆ ತುಂಬಾ ಆಶ್ಚರ್ಯವಾಗುತ್ತದೆ. ಅವರ ಶವಗಳನ್ನು ನಾನು ನನ್ನ ಕಣ್ಣುಗಳಿಂದಲೇ ಕಂಡಿದ್ದೇನೆ. ಶರೀರದಲ್ಲಿ ಯಾವೊಂದೂ ಕಲೆಯೂ ಗಾಯವೂ ಇಲ್ಲದೆ ಅವರ ಕೊಲೆಗಳು ಹೇಗಾಗುತ್ತವೆಂಬ ರಹಸ್ಯವೇ ನನಗೆ ತಿಳಿಯದಾಗಿದೆ. ಹಲವಾರು ಜನರ ಅಕಾರಣ ಕೊಲೆ, ಅದೂ ಒಂದೇ ರೀತಿಯಲ್ಲಿ, ತುಂಬಾ ಆಶ್ಚರ್ಯಮಯವಾಗಿದೆ, ಹಾಗೂ ರಹಸ್ಯಮಯವಾಗಿದೆ. ಇಂದಿನ ವರೆಗೂ ದೊಡ್ಡ ದೊಡ್ಡ ಡಾಕ್ಟರುಗಳು ಮತ್ತು ಪ್ರಖ್ಯಾತ ಸಿ. ಐ. ಡಿ. ಯವರಿಂದಲೂ ಈ ಕೊಲೆಯ ಸಮಂಜಸ ಕಾರಣಗಳನ್ನು ಕಂಡು ಹಿಡಿಯಲಾಗಲಿಲ್ಲ. ಇಂದಿನ ವರೆಗೂ ಪತ್ತೆಯಾಗದೆ ಅದೃಶ್ಯವಾಗಿರುವ ರಾಜಾರಾಮಪಾಲ ಸಿಂಹರ ಕೊಲೆಯು ಮತ್ತೂ ವಿಸ್ಮಯಕರವಾಗಿದೆ ಅವರ ಶವದ ಪತ್ತೆ ಕೂಡಾ ಇಲ್ಲ" ಎಂದಳು ರಾಣಿ ಇಲಾವತೀ.

"ಈ ವಿಷಯದಲ್ಲಿ ನಾನು ನಿಮಗೆ ಪೂರ್ಣರೂಪದಲ್ಲಿ ಸಹಕರಿಸುತ್ತೇನೆ. ಕೊಲೆ ಮಾಡಲ್ಪಟ್ಟ ರೀತಿಗಳು ನಿಜವಾಗಿಯೂ ವಿಚಿತ್ರ ಹಾಗೂ ಆಶ್ಚರ್ಯಪೂರಿತವಾಗಿವೆ" ಎಂದ ರಾಜ ಕುಮಾರ ಪ್ರತಾಪ ಸಿಂಹ.

"ಕೊಲೆಯಾಗಿರುವ ಶವದ ದೇಹದಲ್ಲಿ ಎಲ್ಲಿಯಾದರೂ ಒಂದು ಕಾಗದವಿರುತ್ತದೆ. ಹಾಗೂ ಕಾಗದದಲ್ಲಿ ಚಿತ್ರವಿಚಿತ್ರವಾದ ಸಣ್ಣ ಸಣ್ಣ ವಾಕ್ಯಗಳು ಅರ್ಥಪೂರ್ಣವಾಗಿ ಬರೆಯಲ್ಪಟ್ಟಿರುತ್ತವೆ. ಕೊನೆಗೆ ಹಸ್ತಾಕ್ಷರದ ಸ್ಥಳದಲ್ಲಿ 'ಸ್ಯಾಹ-ನಕಾಬ್', ಎಂದು ಬರೆಯುತ್ತಾರೆ" ಎಂದಳು ರಾಣಿ.

"ನಿಜವಾಗಿಯೂ ಇದರಲ್ಲಿ ವಿಚಿತ್ರ ರಹಸ್ಯವಡಗಿದೆ. ಈ ಕೊಲೆಗಾರರನ್ನು ಪತ್ತೆ ಹಚ್ಚಲು ತುಂಬಾ ಕಷ್ಟಕ್ಕೊಳಗಾಗಬೇಕಾಗಬಹುದು. ನನಗೆ ಎಲ್ಲದಕ್ಕಿಂತ ಹೆಚ್ಚಿನ ದುಃಖವೆಂದರೆ ರಾಜಾರಾಮಪಾಲರ ಚಿರ ನಿದ್ರಾಸ್ವೀಕರಣೆ. ಪಾಪ! ಅವರಿಗೆ ಲಗ್ನವೇ ಅಶುಭವಾಯಿತು" ರಾಜ ಕುಮಾರನೆಂದ. ಸಜಲನೇತ್ರೆಯಾಗಿ ರಾಣಿ, "ಹೌದು, ಅವನ ನವಯೌವನದಲ್ಲಿಯಾದ ಮೃತ್ಯು ನಿಜವಾಗಿಯೂ ಬಹಳ ದುಃಖಮಯವಾಗಿದೆ" ಎಂದಳು.

"ನೀವು ನಿಮ್ಮ ಇಲಾಖೆಗೆ ಮರಳಿ ಹೋಗುವಿರಂತಲ್ಲಾ? ನೀವು ಸ್ವಲ್ಪ ಹೊಸ ಸ್ಥಳವನ್ನು ಕೊಳ್ಳುವಿರೆಂಬುದಾಗಿ ಕೇಳಿದೆ.

"ಹೌದು, ಬಹಳ ಬೇಗ ಹೋಗಬೇಕೆಂದಿದ್ದೆ. ಆದರೆ ಈ ಕೊಲೆಗಳು ನನ್ನ ತಲೆ ಕೆಡಿಸಿವೆ. ಯಾವ ಕಾರ್ಯಕ್ಕೂ ಉತ್ಸಾಹವಿಲ್ಲ. ನಿಮಗೂ ನಿಮ್ಮ ಕಾರ್ಯಕ್ಕಾಗಿ ಅವಸರವಿರಬಹುದು".

"ಹಾಂ, ನಾನು ನಿಮ್ಮ ಆದೇಶದ ಪ್ರತೀಕ್ಷೆ ಮಾಡುತ್ತಿದ್ದೇನೆ."

"ನೀವು ನನ್ನ ಸ್ವಾಮಿಗಳಂತೆ, ನಿಮಗೆಂತಹ ಆದೇಶ? ನಿಮ್ಮ ವಿವಾಹ ಕಾರ್ಯ ಬೇಗ ಮುಕ್ತಾಯಗೊಳ್ಳಲೆಂದು ನಾನೂ ಹಾರೈಸುತ್ತೇನೆ. ಇಲಾಖೆಗೆ ಹಿಂತಿರುಗಿದ ನಂತರ ನಾನು ಮೊತ್ತಮೊದಲು ಇದೇ ಕೆಲಸವನ್ನು ಮಾಡುತ್ತೇನೆ."

ರಾಜ ಕುಮಾರನು ಎದ್ದು ಪ್ರಣಾಮ ಮಾಡಿ ತನ್ನ ಹ್ಯಾಟನ್ನು ಹಿಡಿದುಕೊಂಡು ಹೊರಟನು. ಹೊರಗೆ ಹಂತಕ್ಕಿಳಿವಲ್ಲಿ ಕುಮಾರಿ ಮಾಯಾವತಿ ಭೆಟ್ಟಿಯಾದಳು. ಇಬ್ಬರ ಕೈಗಳೂ ಒಮ್ಮೆಲೇ ಎತ್ತಲ್ಪಟ್ಟವು. ಒಬ್ಬರಿಗೊಬ್ಬರು ನಮಸ್ಕರಿಸಿದರು—"ತಾಯಿಯವರಲ್ಲಿ ಏನೆಲ್ಲಾ ದೂರು ಕೊಟ್ಟಿರಿ?" ನಗುತ್ತಾ ಕೇಳಿದಳು ಮಾಯ.

"ಅಂತಹ ವಿಷಯವೇನೂ ಇಲ್ಲ. ಇತ್ತೀಚೆಗಿನ ವಿಚಿತ್ರ ಮೃತ್ಯುವಿನ ವಿಷಯ ಮಾತಾಡುತ್ತಲಿದ್ದೆವು." ರಾಜ ಕುಮಾರ್ ಮುಗುಳು ನಗುತ್ತಾ ಉತ್ತರಿಸಿದ.

"ಹಾಂ, ಇದೂ ಒಂದು ರೀತಿಯ ಸಾರ್ವಜನಿಕ ರೀತಿಯಲ್ಲಿ ಭಯಂಕರವಾಗಿ ಹಬ್ಬಿಕೊಂಡಿದೆ. ಇದನ್ನು ತಡೆಗಟ್ಟುವ ಔಷಧಿ ಪೋಲೀಸರಲ್ಲೂ ಇಲ್ಲ ಡಾಕ್ಟರಲ್ಲೂ ಇಲ್ಲ" ವ್ಯಂಗ್ಯವಾಗಿ ನುಡಿದಳು ಮಾಯೆ.

"ಆದರೆ ಮಾಡುವುದಾದರೂ ಏನು? ಕೊಲೆಯಾದ ಶವದಲ್ಲಿ ಒಂದು ಕಲೆಯಾಗಲೀ ಗಾಯವಾಗಲೀ ಇರುವುದಿಲ್ಲ. ಎಲ್ಲಕ್ಕಿಂತ ಆಶ್ಚರ್ಯವೆಂದರೆ ರಾಜಾರಾಮಪಾಲ ಸಿಂಹರದ್ದು. ಅವರ ಕಳೇಬರದ ಪತ್ತೆ ಕೂಡಾ ಆಗಲಿಲ್ಲ."

ರಾಜರಾಮಪಾಲ ಸಿಂಹರ ಕೊಲೆಯ ಕುರಿತು ಕೇಳಿದ ಕೂಡಲೇ ಕುಮಾರಿ ಮಾಯಾ ಬೆಚ್ಚಿ ಬಿದ್ದಳು. ಅವಳ ಮುಖ ವಿವರ್ಣವಾಯಿತು—"ಹಾಗಾದರೆ ನೀವು ಯಾವ ನಿರ್ಧಾರಕ್ಕೆ ಬಂದಿರಿ! ಕೊಲೆಗೆ ಯಾವುದಾದರೂ ಕಾರಣವಿರಬಹುದೇ? ವಿನಾ ಕಾರಣ ಯಾರೂ ಕೊಲೆ ಮಾಡಲಿಕ್ಕಿಲ್ಲ.

"ನನ್ನ ನಿರ್ಧಾರದಿಂದ ಏನಾಗಬಹುದು? ಆದರೆ, ಜನರೂ ಈ ವಿಷಯದಲ್ಲಿ ಯಾವುದೊಂದು ನಿರ್ಧಾರವನ್ನು ಕೊಡುವುದಿಲ್ಲ. ವಿಷಪಾನವೆಂದು ಶೋಧನೆ ಮಾಡಿದರೆ ಅದನ್ನು ಸ್ಥಿರಪಡಿಸಲಾಗಲಿಲ್ಲ. ಅಲ್ಲದೆ, ಶವದ ಮೈಯ್ಯಲ್ಲಿ ಯಾವುದೊಂದೂ ಗಾಯವು ಕಾಣಲೊಲ್ಲದು. ಹಾಗಾದರೆ ಅಕಸ್ಮಾತ್ ಹೇಗೆ ದೈವಾಧೀನರಾದರು ಎಂಬುದೇ ಆಶ್ಚರ್ಯಾಂಕಿತವಾಗಿದೆ."

"ಈ ರಹಸ್ಯವು ಭೇದಿಸಲ್ಪಡುವುದೆಂದು ತಾವು ನಂಬುತ್ತೀರೇನು?"

"ಪ್ರಪಂಚದಲ್ಲಿ ಕೃತ್ರಿಮ ಯಾ ನೈಸರ್ಗಿಕ ರಹಸ್ಯಗಳು ಮಾನವನ ಪ್ರಯತ್ನದಿಂದ ಭೇದಿಸಲ್ಪಟ್ಟೇ ತೀರುವುವು." ಎನ್ನುತ್ತಾ ರಾಜಕುಮಾರನು ಟೊಪಲಿಗೋಸ್ಕರ ಕಿಸೆಗೆ ಕೈ ಹಾಕಿದನು. ಟೊಪಲಿನೊಡನೆ ಕಾಗದವೂ ಹೊರ ಬಂತು. ಕಾಗದವನ್ನು ಓದುತ್ತಲೇ ಮುಖದಲ್ಲಿ ಭಯದ ಮಿಂಚು ಹೊಳೆದು ಶರೀರವು ಕಂಪಿಸತೊಡಗಿತು. ಅವನ ಸ್ಥಿತಿಯನ್ನು ನೋಡಿ ಮಾಯಾ ಕುಮಾರಿಯು ಆತನ ಕೈಯ್ಯಲ್ಲಿದ್ದ ಪತ್ರವನ್ನು ಪಡಕೊಂಡು ತಾನೂ ಓದಿ ತುಂಬಾ ಭಯ ವಿಹ್ವಲಿತಿಯಾದಳು. ಆ ಕಾಗದವು ದುಷ್ಟರಾದ "ಸ್ಯಾಹ—ನಕಾಬ್" ದಳದವರದಾಗಿದ್ದು ಪತ್ರದ ಮೇಲ್ಗಡೆ ಕಪ್ಪು ನಕಾಬನ (ಮುಖವಾಡ) ಚಿತ್ರ. ಕೆಳಗಡೆ ಅದೇ 'ಸ್ಯಾಹ—ನಕಾಬ್' ಎಂಬ ಸಹಿ. ಪತ್ರವು ಈ ರೀತಿ ಬರೆಯಲ್ಪಟ್ಟಿತ್ತು—

ಸಾವಧಾನ ರಾಜಕುಮಾರ!
ವಿವಾಹ ಅಥವಾ ಮೃತ್ಯು!
—ಸ್ಯಾಹ—ನಕಾಬ್.

ಮಾಯಾವತಿ ತನ್ನ ಕೈ ಹಿಡಿದು ಮೇಲಕ್ಕೆ ಬರುವಂತೆ ಸಂಕೇತ ಮಾಡಿದಳು. ಅವನು ತೆಪ್ಪಗೆ ಮೇಲೆ ಬಂದನು. ರಾಜಕುಮಾರನು ಈ ರೀತಿ ತನ್ನ ಮಗಳೊಡನೆ ತನ್ನ ಕೋಣೆಗೆ ಪ್ರವೇಶಿಸಿದುದನ್ನು ಕಂಡು ರಾಣಿಯು ಹೆದರಿ ಎದ್ದು ಕುಳಿತಳು. ಮಾಯವತಿಯು ಆ ಕಾಗದವನ್ನು ತಾಯಿಗೆ ಕೊಟ್ಟಳು.

ತಾಯಿಯು ಪತ್ರವನ್ನು ಓದುತ್ತಾ, "ಹಾಯ್—ರಾಮ್" ಎಂದು ದಢಾಲ್ಲನೆ ಬಿದ್ದು ಬಿಟ್ಟಳು. "ಈ ದುಷ್ಟರಿಗೆ ಬೇಕಾಗಿದೆಯಾದರೂ ಏನು?" ಕಂಪಿತ ಸ್ವರದಲ್ಲಿ ನುಡಿದಳು ರಾಣಿ—"ನನ್ನ ಹಿರಿಯ ಮಗಳು ಯಮುನಳಂತೂ ಇವರ ದೆಸೆಯಿಂದಲೇ ವಿಧವೆಯಾದಳು—ಈಗ ಅವರು.... ಭಗವಂತಾ....ನನ್ನ ಕಿರಿಯ ಮಗಳ ಹಣೆ ಬರಹವನ್ನು ಹಾಗೆ ಮಾಡಬೇಡ."

ರಾಜಕುಮಾರನು ಈಗ ಸ್ಮೃತಿಚಿತ್ತನಾದನು. ತನ್ನ ಅಲ್ಪ ಅಂಜಿಕೆಯನ್ನು ದೂರೀಕರಿಸುತ್ತಾ—"ಈ ಪತ್ರವು ನನ್ನ ಕಿಸೆಗೆ ಹೇಗೆ ಬಂತು?" ಎಂದು ಯೋಚನಾಮಗ್ನನಾದನು.

"ಮನೆಯಿಂದ ಹೊರಟನಂತರ ತಾವು

(೧೧ನೇ ಪುಟ ನೋಡಿರಿ)

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ: ಬಡ್ಡಿ ಸೇಕಡಾ 5ರಂತೆ: ರೂ. 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100—00 ಒದಗಿಸುವುದು.

ಕರ್ರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಜೊತೆ ಆಕರ್ಷಣೀಯ ಶರ್ತಗಳು: ಬಡ್ಡಿ ಸೇಕಡಾ 5¼ರ ವರೆಗೆ.

ತಾ. 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK LTD.
Estd: 1920

ರವೀಂದ್ರ ವಾಣಿ:

ಆತ್ಮಬೋಧ

(ಲೇಖಾಂಕ ೬)

ನಮ್ಮ ದುರ್ಬಲತೆಗಳಿಂದ ವಿಶ್ವಾತ್ಮನಿಂದ ದೂರವಾಗುವ ನಾವು ಕಲ್ಯಾಣವೆನಿಸಿದುದನ್ನು ಮಾತ್ರ ನಮಗೆ ಅನುಗ್ರಹಿಸೆಂದು ಆತನನ್ನು ಬೇಡುತ್ತೇವೆ 'ಕಲ್ಯಾಣ'ವೆ ಹಸಿವು ತೃಷೆಗಳಿಂದಿರುವವರೇ ಧನ್ಯರು. ಶಾಂತಿ, ಪ್ರೇಮ, ಸಮಾನತೆಗಳಿಗೆ ಕಲ್ಯಾಣವೇ ಮೂಲ, ಅದರಿಂದಲೇ ಆತ್ಮಬೋಧವಾಗುತ್ತದೆ

ಮೂಲ ಲೇಖಕರು: ವಿಶ್ವಕವಿ ರವೀಂದ್ರನಾಥ ಟಾಗೋರ್
ಅನುವಾದಕರು ಶ್ರೀ ಕೆ. ಎನ್ ಭಟ್ ಶಿ, ರಾಡಿಸಾಲ್.



ವಿಶ್ವಕವಿ ರವೀಂದ್ರರು ನ್ಯೂಯೋರ್ಕನ್ನು ಸಂದರ್ಶಿಸಿದ್ದಾಗ ಸ್ಕಲ್ಪ್ಟರ್ ಅರ್ನೆಸ್ಟ್ ಡ್ಯೂರಿಗ್ ಎಂಬ ಕಲಾವಿದರು ಅವರ ಅರ್ಧಾಕೃತಿಯ ಪ್ರತಿಮೆಯನ್ನು ತಯಾರಿಸಿದ್ದರು.

ಒಂದು ಕಾಲದಲ್ಲಿ ಈ ಪೃಥ್ವಿಯು ಚಂಚಲ ವಸ್ತುಗಳಿಂದ ಕೂಡಿದ್ದು ಅದಕ್ಕೆ ಯಾವುದೇ ರೀತಿಯ ಒಂದು ಆಕಾರವಿರಲಿಲ್ಲ. ಭಾವಿ ಪೃಥ್ವಿಯ ಕಣ ಕಣಗಳು ಪ್ರಚಂಡ ತಾಪದ ಕಾರಣದಿಂದ, ಅಸ್ತವ್ಯಸ್ತವಾಗಿ ಬಿದ್ದಿದ್ದುವು ಯಾವುದೇ ನಿಶ್ಚಿತ ರೂಪವಾಗಲೀ ಧ್ಯೇಯವಾಗಲೀ ಇಲ್ಲದ, ಈ ಪೃಥ್ವಿಯು, ಅಗ್ನಿಯ ರೂಪದಿಂದ ಗತಿಶೀಲವಾಗಿಯೇ ಇದ್ದಿತು ಮತ್ತೆ ನಿಧಾನವಾಗಿ, ಚದುರಿಹೋಗಿದ್ದ ಎಲ್ಲಾ ವಸ್ತುಗಳನ್ನೂ ಒಟ್ಟುಗೂಡಿಸುತ್ತಿದ್ದ ಒಂದು ಅದೃಶ್ಯ ಶಕ್ತಿಯು, ಈ ಚದುರಿಬಿದ್ದಿದ್ದ ಕಣ ಕಣಗಳೆಲ್ಲವನ್ನೂ ಒಟ್ಟುಗೂಡಿಸಿ ಒಂದು ಗೋಲಾಕಾರದ ಪೃಥ್ವಿಯನ್ನಾಗಿ ಮಾಡಿತು ಆಗ ಇದಕ್ಕೆ ಸೂರ್ಯನ ಪರಿಸರದಲ್ಲಿ, ತಿರುಗುತ್ತಿರುವ ನಕ್ಷತ್ರಗಳ ನಡುವೆ ಒಂದು ಯೋಗ್ಯ ಸ್ಥಾನವು, ವಜ್ರಗಳ ಕಂಠಹಾರದಲ್ಲಿ ನೀಲಮಣಿಗೆ ಸ್ಥಾನ ದೊರೆಯುವಂತೆ, ಲಭಿಸಿತು.

ನಮ್ಮ ಪರಿಸ್ಥಿತಿಯೂ ಇದೇ ರೀತಿಯಾಗಿದೆ. ನಮ್ಮ ಅಜ್ಞಾನದಿಂದ ಉದ್ಭವಿಸಿದ ವಿಷಯವಾಸನೆ, ಮತ್ತು ಕೆಟ್ಟ ಆಕಾಂಕ್ಷೆಗಳು ತೀವ್ರವಾಗಿ ಯಾವಾಗ ಸರ್ವತ್ರ ವ್ಯಾಪಿಸುವುವೋ ಆಗ ನಾವು ಏನನ್ನೂ ಗ್ರಹಣ ಮಾಡಿಕೊಳ್ಳಲಾರದವರಾಗುತ್ತೇವೆ. ಮತ್ತು ಏನನ್ನೂ ಪರರಿಗೆ ಕೊಡಲೂ ಸಾಧ್ಯವಿಲ್ಲದವರಾಗುತ್ತೇವೆ. ಆದರೆ, ಆತ್ಮನಿಗ್ರಹದ ಶಕ್ತಿಯ ಮೂಲಕ ನಾವು ನಮ್ಮ ಆತ್ಮದಲ್ಲೇ ನಮ್ಮ ಕೇಂದ್ರವನ್ನು ಕಂಡುಕೊಳ್ಳಬಲ್ಲೆವು ಈ ಜ್ಞಾನದಿಂದ ಉಂಟಾದ ಶಕ್ತಿಯು ಸಂಘರ್ಷಶೀಲವಾದ ತತ್ವಗಳನ್ನು ಒಟ್ಟುಗೂಡಿಸಿ ಸಮಾನತೆಯನ್ನು ಸ್ಥಾಪಿಸಬಲ್ಲುದು. ಅರ್ಥಾತ್, ಚೆದುರಿಹೋಗಿದ್ದ ತತ್ವರೂಪೀ ಕಣಗಳನ್ನು ಒಟ್ಟುಗೂಡಿಸಿ ಏಕತ್ವವನ್ನು ಸ್ಥಾಪಿಸಬಲ್ಲುದು. ಆಗ ಅಸ್ತವ್ಯಸ್ತವಾಗಿದ್ದ ನಮ್ಮ ಜ್ಞಾನ, ನೆನಪು, ಇವು ಆತ್ಮ ಬೋಧದ ರೂಪವನ್ನು ಪಡೆಯುತ್ತವೆ ಮತ್ತು ನಮ್ಮ ಹೃದಯದಲ್ಲಿ ಉದಿಸುವ ಕ್ಷಣಿಕ ಸುಖಾಪೇಕ್ಷೆಗಳು ಶಾಶ್ವತವಾದ ದಿವ್ಯ ಪ್ರೇಮವಾಗಿ ಪರಿವರ್ತನೆಗೊಂಡು ಪೂರ್ಣತೆಯನ್ನು ಪಡೆಯುತ್ತವೆ. ಇದರಿಂದ ನಮ್ಮ ವಿಚಾರಗಳು, ಅಥವಾ ಕಾರ್ಯಗಳು ಒಂದಕ್ಕೊಂದು ಹೊಂದಿಕೊಂಡು ನಮ್ಮ ಆಂತರಿಕವಾದ ಸಮಾನತೆಯ ಒಂದು ಭಾಗವಾಗಿ ನಿಲ್ಲುತ್ತವೆ. ಹೀಗಾಗುವಾಗ ನಮ್ಮ ಪ್ರತಿಯೊಂದು ಕಾರ್ಯವೂ ಧ್ಯೇಯವೂ ಅಮರತೆಯ ಕಡೆಗೆ ಮುಂದುವರಿಯುತ್ತದೆ ಎಂಬಂತೆ ಭಾಸವಾಗುವುದು.

ಉಪನಿಷತ್ತುಗಳು ಬಲಪೂರ್ವಕವಾಗಿ "ತಮೇವೈಕಂ ಜಾನಥ ಆತ್ಮಾನಮ್" ಅಂದರೆ ಆ ಏಕೈಕವಾದ ಆತ್ಮವನ್ನು ತಿಳಿದುಕೊ! "ಅಮೃತಸ್ಯೈಷ ಸೇತುಃ" ಅಮರತೆಯೆಡೆಗೆ ಕರೆದುಕೊಂಡು ಹೋಗಲು ಇದೇ ಸೇತುವೆಯಾಗಿದೆ" ಎಂದು ಬೋಧಿಸುತ್ತವೆ.

ಮನುಷ್ಯನ ಒಳಗಿರುವ ಆ ಆತ್ಮನನ್ನು ತಿಳಿದುಕೊಳ್ಳುವುದೇ ಮಾನವನ ಅಂತಿಮ ಧ್ಯೇಯವಾಗಿದೆ ಸತ್ಯವೆಂಬುದೇ ಆತ್ಮ! ಆತ್ಮೀಯ ಜೀವನದ ಸ್ವರ್ಗ ದ್ವಾರವನ್ನು ತೆರೆಯುವ ನಿಧಿಯೇ ಇದಾಗಿರುವುದು. ಜಗತ್ತಿನ ಅನೇಕ ಆಕರ್ಷಣೆಗಳ ಹಿಂದೆ, ಹುಚ್ಚು ಹುಚ್ಚಾಗಿ—ಓಡುತ್ತಿರುವ ಮನುಷ್ಯನಿಗೆ ಅನೇಕ ಇಚ್ಛೆಗಳು ಇರುತ್ತವೆ ಆದರೆ ಆತನ ಒಳಗೆ ಯಾವುದು ಒಂದೇ ಒಂದು ಎಂಬುದಿದೆಯೋ ಕೊನೆಗೆ ಅದನ್ನು ಕಂಡು ಹಿಡಿಯಲು ಆತ ಪ್ರಯತ್ನಿಸುತ್ತಾನೆ ಜ್ಞಾನ ಪ್ರೇಮಗಳೊಡನೆ,ಜೀವನದ ಅಂತಿಮ ಧ್ಯೇಯವಾದ, ಆತ್ಮಬೋಧವನ್ನು ಪಡೆಯುವುದೇ ಮಾನವನ ಪರಮ ಧ್ಯೇಯವಾಗಿದೆ ಬಾಹ್ಯ ಪರಿಸರದೊಳಗೆ ಆತ್ಮೀಯತೆಯಿಂದ, ಸಮಾನತೆಯಿಂದ ಯಾರು ವರ್ತಿಸುವನೋ ಅಂಥವನಿಗೆ ಆಗ ಆತ್ಮಾನಂದವುಂಟಾಗುವುದು ಉಪನಿಷತ್ತುಗಳು—"ಏಕಂ ರೂಪಂ ಬಹುಧಾ ಯಃ ಕರೋತಿ ತಮಾತ್ಮಸ್ಥಂ ಯೇಽನುಪಶ್ಯಂತಿ ಧೀರಾಃ ತೇಷಾಂ ಸುಖಂ ಶಾಶ್ವತಂ ನೇತರೇಷಾಮ್" ಅರ್ಥಾತ್ ವಿಶ್ವದಲ್ಲಿ ಅನೇಕ ರೂಪಗಳಿಂದ ಪ್ರಕಟವಾಗುತ್ತಿರುವ ಏಕರೂಪೀ ಆತ್ಮನು ತನ್ನೊಳಗೂ ಇರುವನು — ಎಂಬುದನ್ನು ಯಾರು ದೃಢವಾಗಿ ತಿಳಿದುಕೊಳ್ಳುತ್ತಾನೋ ಅಂತಹ ಪ್ರಶಾಂತ ಮನಸ್ಸಿನ ಮಾನವನಿಗೆ ಮಾತ್ರ ಶಾಶ್ವತ ಸುಖ ಲಭಿಸುವುದು ಎಂದು ಹೇಳುತ್ತವೆ. ಈ ಜ್ಞಾನವುಳ್ಳ ಮನುಷ್ಯನು ಆತ್ಮಸ್ಥ ಜಗತ್ತಿನ ವಿವಿಧ ಮಾರ್ಗಗಳಲ್ಲಿ ಸಂಚರಿಸುತ್ತ ಎಲ್ಲದರಲ್ಲಿಯೂ ಇದ್ದುಕೊಂಡು, ಅದ್ವೈತದ ಸಂಶೋಧನೆಯಲ್ಲಿ ತೊಡಗಿರುತ್ತಾನ ಇದೇ ಆತನ ಪ್ರಕೃತಿಯಾಗಿರುವುದು. ಆತನ ಆನಂದವು ಇದೇ ಆಗಿರುವುದು. ಆದರೆ ನಾಲ್ಕು ಮುಖದ ಮಾರ್ಗದಲ್ಲಿ ಸಂಚರಿಸುವ ಆತನು ಆತ್ಮ ಜ್ಯೋತಿಯಿಂದ ಪ್ರಕಾಶಿತನಾಗದಿದ್ದರೆ, ತನ್ನ ಧ್ಯೇಯಪ್ರಾಪ್ತಿಯವರೆಗೆ ತಲಪಲಾರನು. ಆತ್ಮ ಜ್ಯೋತಿಯ ಪ್ರಕಾಶದಿಂದ ಮಾತ್ರ ಆತನಿಗೆ ತನ್ನ ಮಾರ್ಗ ಕಾಣಬಹುದಾಗಿದೆ ಇಂತಹ ಪರಮಧ್ಯೇಯದ ಮಾರ್ಗವನ್ನು ತನ್ನ ಅಂತರಾತ್ಮನ ಮೂಲಕ ಕಂಡು ಹಿಡಿಯಬಹುದೇ ಹೊರತು, ಬಾಹ್ಯ ಪ್ರಯತ್ನಗಳಿಂದ ಸಾಧ್ಯವಿಲ್ಲ. ಬಾಹ್ಯ ಪ್ರದರ್ಶನಕ್ಕೆ ಕಾಣದ ಅಂತರ್ಜ್ಞಾನದಿಂದ ಮಾತ್ರ ಇದು ಸಾಧ್ಯವಾಗುತ್ತದೆ. ನಮ್ಮ ಕಣ್ಣುಗಳು ಒಂದು ಅಖಂಡ ವಸ್ತುವನ್ನು ನೋಡುವವೇ ಹೊರತು, ಅದನ್ನು ತುಂಡು ತುಂಡು ಮಾಡಿ ಅಲ್ಲ ಒಂದು ವೇಳೆ, ಒಂದು ವಸ್ತು ಹಲವು ಚೂರು ಚೂರುಗಳಾಗಿದ್ದರೆ, ನಾವದನ್ನು ಒಟ್ಟುಗೂಡಿಸಿಯೇ ನೋಡಿ ಗುರುತಿಸಬೇಕಾಗುವುದು ಇದನ್ನು ನೋಡುವಾಗ, ನೋಡತಕ್ಕ ವಸ್ತುವಿನ ಕುರಿತು, ನಮ್ಮ ಸಮಭಾವ ಜಾಗೃತವಾಗಿರುತ್ತದೆ ಅಂತರ್ಜ್ಞಾನದ ಮೂಲಕ ನಮಗೆ ಆತ್ಮ ಬೋಧ ಉಂಟಾಗುವುದೂ ಕೂಡ ಇದೇ ರೀತಿಯಾಗಿದೆ ಪರಮಾತ್ಮನೊಡನೆ, ಆತ್ಮದ ಸಹಜವಾದ ಸಮಭಾವದ ಅನುಭೂತಿಯ ಹೊರತು ಇದು ಸಾಧ್ಯವಿಲ್ಲ

ಉಪನಿಷತ್ತಿನಲ್ಲಿ—"ವಿಶ್ವದ ವಿವಿಧ ಕರ್ಮಗಳಲ್ಲಿ ಯಾವುದು ಸ್ವಯಂ ಪ್ರಕಟವಾಗುವುದೋ ಆ ಶಕ್ತಿಯೇ ಮನುಷ್ಯನ ಹೃದಯದಲ್ಲಿಯೂ, ವಾಸವಾಗಿರುತ್ತದೆ. ಅದೇ ದೇವತ್ವವಾಗಿದೆ ಮನಸ್ಸಿನ ಸಾಧನೆ, ಮತ್ತು ಅನುಭೂತಿಯ ಮೂಲಕ ಯಾರು ಈ ಅಂತರಾತ್ಮನನ್ನು ತಿಳಿದುಕೊಳ್ಳುತ್ತಾನೋ ಅಂಥವನು ಅಮರ ಪದವನ್ನು ಹೊಂದುತ್ತಾನೆ" ಎಂದು ಹೇಳಿದೆ. ಆತ್ಮನು "ವಿಶ್ವಕರ್ಮ'ನಾಗಿರುವನ ವಿಶ್ವದ ವಿವಿಧ ರೂಪ, ಚಟುವಟಿಕೆ ಶಕ್ತಿಗಳಲ್ಲಿ ಆತ್ಮನ ರೂಪ ಪ್ರಕಟವಾಗುವುದು. ಈ ಕಾರಣದಿಂದ ಪ್ರಕೃತಿಯ ರಾಜ್ಯದಲ್ಲಿ ನಾವು ಸತ್ಯದ ಸಂಶೋಧನೆಯಲ್ಲಿ ತೊಡಗಿದಾಗ—ವಿಜ್ಞಾನದ ಮೂಲಕವಾದರೆ, ನಿಧಾನವಾಗಿ ಈ ಸಂಶೋಧನೆ ನಡೆದೀತು ಆದರ ಆಧ್ಯಾತ್ಮಿಕ ದೃಷ್ಟಿಯಿಂದ ಈ ಸಂಶೋಧನೆ ನಡೆಸಿದ್ದೇ ಆದರೆ, ಆ ಶೋಧವು ನೇರವಾಗಿ ಅಂತರ್ಜ್ಞಾನದ ಮೂಲಕ ಆಗುವುದು [illegible] ನಿಧಾನವಾಗಿ ಜ್ಞಾನವೃದ್ಧಿ ಮಾಡಿಕೊಳ್ಳುತ್ತ ನಾವು ಅದರ ಸಂಶೋಧನೆಯಲ್ಲಿ ತೊಡಗಿದರೆ ,ವರ್ಷ ವರ್ಷಗಳ ರೂಪದಲ್ಲೂ, [illegible] ಏಕೆಂದರೆ ಅದು ಅನೇಕ ರೂಪಗಳಲ್ಲಿದ್ದೂ ಏಕರೂಪನಾಗಿರುವುದು. ಅದನ್ನು ನಾವು ನಮ್ಮ ಹೃದಯ ಅದವಾ ಆತ್ಮವೆಂದು ಭಾವಿಸಿಯೇ ಹೊರವುಳ್ಳೆವು ನಮ್ಮ ಅಹಂಕಾರವನ್ನು ತ್ಯಜಿಸಿ ನಾವು ಯಾವಾಗ

(೧೨ನೇ ಪುಟ ನೋಡಿರಿ)

ಸ್ವಲ್ಪ ಸ್ವಲ್ಪವಾಗಿ, ಅಲ್ಲೊಮ್ಮೆ ಇಲ್ಲೊಮ್ಮೆ, ನೀವು ಉಳಿಸುತ್ತಿರುವ ಹಣವು
ಬೇಗ ಬೇಗನೆ ವೃದ್ಧಿಗೊಂಡು, ನಿಮ್ಮ ಭವಿಷ್ಯದ ಭದ್ರತೆಯು
ಹೆಚ್ಚೆಚ್ಚಾಗಿ ಪರಿಣಮಿಸುವಂತೆ

ಕೊರ್ಪೊರೇಶನ್ ಬೇಂಕು

ನಿಮ್ಮ ಸೇವಿಂಗ್ಸ್ ಬೇಂಕ್ ಎಕೌಂಟುಗಳ ಮೇಲೆ ಇನ್ನು ಮುಂದಕ್ಕೆ
ಸಾಲಿಯಾನ್ ಸೇಕಡಾ 3 ರ ದರದಲ್ಲಿ ನಿಮಗೆ ಬಡ್ಡಿ ಕೊಡುವುದು

ವಿವರಗಳಿಗೆ ವಿಚಾರಿಸಿರಿ.

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ಸ್ಥಾಪನೆ 1906) (ರಿಜಿಸ್ಟರ್ಡ್ ಆಫೀಸು ಉಡುಪಿ
ಆಡಳಿತ ಆಫೀಸು: ಮಂಗಳೂರು—1

ವಿಚಾರವರ್ಷ

ಸಲ್ಲದ ಕೆಲಸ - ಆತ್ಮತಿರಸ್ಕಾರ

ನಿರ್ಬಲ ವ್ಯಕ್ತಿ ಅಸಹಾಯಕ ಪರಿಸ್ಥಿತಿಗೆ ಕಾಲಿರಿಸಿದಾಗ ಆತ್ಮತಿರಸ್ಕಾರ ಮಾಡಿಕೊಳ್ಳುವುದು ಇದೆ. ಆದರೆ, ಏನೂ ಇಲ್ಲದ, ಏತಕ್ಕೂ ಸಲ್ಲದ, ಏನನ್ನೂ ಮಾಡಲೊಲ್ಲದ ವ್ಯಕ್ತಿ ಪ್ರಪಂಚದಲ್ಲಿ ಇಲ್ಲ. ಆತ್ಮವಿಶ್ವಾಸವುಳ್ಳವನು ತನ್ನ ಭವಿಷ್ಯವನ್ನು ರೂಪಿಸುವ ಶಕ್ತಿಯನ್ನು ಗಳಿಸುತ್ತಾನೆ.

ಪ್ರಪಂಚದಲ್ಲಿ ಬಗೆಬಗೆಯ ಜನರಿದ್ದಾರೆ; ಇರುವುದೂ ಸಹಜ. ಸಾಕಷ್ಟು ಭಾವುಕರೂ ಕಲ್ಪನಾಶೀಲರೂ ಸ್ನೇಹ ಸ್ವಭಾವದವರೂ ಕೆಲವರಿದ್ದಾರೆ. ಅವರ ಮೆದುಳೂ ಬಹು ತೀವ್ರಗಾಮಿಯಿರುತ್ತದೆ; ಅವರ ತಿಳುವಳಿಕೆ, ವಸ್ತುಜ್ಞಾನವು ಅಸೀಮವಿರಬಹುದು. ಆದರೆ, ಇವರಲ್ಲಿಯೇ ಕೆಲವರು ಸದಾ ನಿರಾಶರಾಗಿರಬಹುದು; ಯಾವುದಾದರೂ ಸಂಕಟಕ್ಕೆ ಸಿಲುಕಿಬಿಟ್ಟರೆಂದರೆ, ಕೈಕಾಲೇ ಉಡುಗಿದವರಂತಾಗಬಹುದು; ಅವರ ಸ್ವರ ಬಹಳಷ್ಟು ಇಳಿದುಹೋಗಬಹುದು. ಇದೇ ಸ್ವಭಾವದವರೊಬ್ಬರು ಆಗಾಗ ಹೇಳುತ್ತಿರುತ್ತಾರೆ: "ಜೀವನವೇ ಭಾರವೆನಿಸಿದೆ. ನನ್ನೊಡನೆ ಐದನೆ ವರ್ಗದ ಸರ್ಟಿಫಿಕೇಟೂ ಇಲ್ಲ; ಒಂದರ್ಧ ಹೊತ್ತಾದರೂ ದುಡಿದು ಗಳಿಸುವ ದೇಹ ಇದಲ್ಲ. ವ್ಯಾಪಾರ ವ್ಯವಸಾಯವು ನನ್ನ ಆಜನ್ಮ ಶತ್ರು. ಹೀಗಿರುವಾಗ, ನಾನು ಮಾಡುವುದಾದರೂ ಏನು? ನನ್ನಂತನಿಗೆ ನೌಕರಿ ಕೊಡುವವರಾದರೂ ಯಾರು" ಎಂದು ಹೇಳುತ್ತ ಕಣ್ಣೀರು ಮಿಡಿಯುತ್ತಾರೆ.

ತಮ್ಮ ಹೀನತೆ, ವಿವಶತೆ ಮತ್ತು ನಿಸ್ಸಹಾಯತೆಗಳ ಬಗ್ಗೆ ಅವರಷ್ಟೇ ಅಳುವುದಲ್ಲ, ಅವರ ಆ ಹೀನ—ದೀನ ದುರವಸ್ಥೆಯ ಕಥೆಯನ್ನು ನಮ್ಮ ಮುಂದೂ ಬಿಚ್ಚಿ ನಮ್ಮನ್ನೂ ಶೋಕಾತಿರೇಕಕ್ಕೆ ಕೆಡಹುತ್ತಾರೆ. ಆದರೆ, ಈ ರೀತಿಯ ಆತ್ಮ ತಿರಸ್ಕಾರವು ಘಾತಕವಾಗಿದೆ. ಜೀವನವೆಂದೊಡನೆಯೇ ಕಠಿಣತೆಗಳು ತಲೆದೋರುತ್ತವೆ; ಆದರೆ, ಅವುಗಳಿಂದ ಬೆದರಿ ತಮ್ಮ ಅವಹೇಳನೆಯನ್ನು ತಾವೇ ಮಾಡಿಕೊಳ್ಳುವುದು ತಮ್ಮನ್ನು ತಾವೇ ಶಪಿಸಿಕೊಳ್ಳುವುದು ಅನುಚಿತ. ಸಂಕಟ ಮತ್ತು ಬಾಧೆಗಳಿಗೆ ಇರುವ ಮಹತ್ವವು ಅತ್ಯಲ್ಪ. ಇವನ್ನು ನಾವು ಹೇಗೆ ಕಂಡುಕೊಳ್ಳುವೆವೆಂಬುದಷ್ಟೆ ಮುಖ್ಯ.

ನೆರೆಮನೆಯಲ್ಲಿ ಒಬ್ಬ ಗೃಹಸ್ಥರಿದ್ದಾರೆ. ಅವರಿಗೆ ಐವರು ಹೆಣ್ಣುಮಕ್ಕಳು. ದೊಡ್ಡವಳಿಗೆ ಪ್ರಾಯ ೧೭ ವರ್ಷ. ಸಮಾಜವು ಒಂದು ಹುಡುಗಿಯೆಂದರೆ, ಸಾವಿರಗಟ್ಟಳೆ ರೂಪಾಯಿ ವೆಚ್ಚದ ಬಾಬು ಎಂದು ಹೇಳುತ್ತದೆ. ಇವರೊಡನೆ ಈ ಕುರಿತಾಗಿ ಯಾರಾದರೂ ಪ್ರಶ್ನಿಸಿದರೆ, ಅವರು ಸರಳವಾದ ಉತ್ತರವನ್ನೇ ಕೊಡುತ್ತಾರೆ: "ಏನೆನ್ನುತ್ತೀರಿ ಸ್ವಾಮಿ.? ಇವರ ಮದುವೆಯಾಗಬೇಕಾದರೆ, ಇನ್ನೂ ಹತ್ತು ವರ್ಷ ಕಳೆಯಬೇಕು. ಅಷ್ಟು ಹೊತ್ತಿನಲ್ಲಿ ಈ ಜಗತ್ತು—ಸಮಾಜ ವ್ಯವಸ್ಥೆಯನ್ನು ಮುಟ್ಟುವುದೆಂದು ಹೇಳುವುದು ಹೇಗೆ? ಹಾಗಿರುವಾಗ, ನಾನು ಈ ಬಗ್ಗೆ ಈಗಾಗಲೇ ಏಕೆ ಚಿಂತನಾಗಬೇಕು? ನನಗೆ ಬಾಲವಿವಾಹದಲ್ಲಿ ವಿಶ್ವಾಸವಿಲ್ಲ; ಜಾತಿ—ಕೋಮುಗಳಲ್ಲೂ ಇಲ್ಲ. ಹುಡುಗಿ ಓದುಬರಹ ಕಲಿತುಕೊಳ್ಳಲಿ. ತನಗೆ ಅನುರೂಪ ವರನನ್ನು ವರಿಸಲಿ. ನಾನೇನೋ ಅವರ ಲಾಲನೆ ಪಾಲನೆಯನ್ನು ಶಕ್ತ್ಯನುಸಾರ ಮಾಡುತ್ತೇನೆ. ನನ್ನ ಕೈಲಿರುವುದು ಅಷ್ಟೆ."

ಈ ವಾದವು ವ್ಯಾವಹಾರಿಕ ದೃಷ್ಟಿಯಲ್ಲಿ ಎಷ್ಟರಮಟ್ಟಿಗೆ ಸರಿ ಇಲ್ಲವೆ ತಪ್ಪು ಎಂಬುದು ಅನ್ಯವಿಚಾರ. ಆದರೆ, ಅವರ ಮನಸ್ಸು ಶಾಂತವಾಗಿದೆಯೆಂಬುದನ್ನಿದು ತೋರಿಸುತ್ತದೆ. ನನ್ನ ಹೆಚ್ಚಿನ ಅಶಾಂತತೆಯ ಸ್ವರೂಪವೂ ಇದೇ ಮಾದರಿಯವು. ಇವನ್ನು ಆಲೋಚಿಸುತ್ತ ನಾವು ಕಣ್ಣೀರ್ಗರೆಯಬಹುದು; ಇಲ್ಲವೇ ಮೌನವಾಗಿ ಯೋಚಿಸಿ ಪರಿಹಾರವನ್ನೂ ಅರಸಬಹುದು.

ಪ್ರಪಂಚದಲ್ಲಿ ಎದುರಿಸಲಾಗದ ಕಷ್ಟವೆಂಬುದಿಲ್ಲ. ದೊಡ್ಡ ದೊಡ್ಡ ಕಷ್ಟಗಳು ನಮ್ಮನ್ನು ಆಹ್ವಾನಿಸಬಹುದು; ಅವನ್ನು ಧೈರ್ಯ ಸಾಹಸಗಳೊಡನೆ ಎದುರಿಸಲೂಬಹುದು. ನಮ್ಮ ಹೃದಯದಲ್ಲಿರುವ ಆತ್ಮವಿಶ್ವಾಸವು ಯಾವ ಮಹತ್ಕಾರ್ಯವನ್ನೂ ಮಾಡಿಸಬಹುದು.

ಸಂಕಟದ ವೇಳೆ ನಿರಾಶಾವಾದಿಗಳಾಗಿ ನಕಾರಾತ್ಮಕ ದೃಷ್ಟಿಕೋಣವಿರುವರೂ ಕೆಲವರಿರಬಹುದು. ಇಂತಹರನ್ನು ಏನಾದರೂ ಕಷ್ಟವು ಕಾಡತೊಡಗಿದೊಡನೆಯೇ ತಮ್ಮ ದುರದೃಷ್ಟಕ್ಕಾಗಿ ಅವರು ಮರುಗುತ್ತಾರೆ; ಅಥವಾ ಪರಿಸ್ಥಿತಿಯನ್ನು ಶಪಿಸುತ್ತಾರೆ. ಇನ್ನೇನನ್ನೂ ಅವರು ಮಾಡಲಾರದೆಹೋದರೂ ತಮ್ಮ ನಿರ್ಬಲತೆ ಮತ್ತು ಕೊರತೆಗಳನ್ನು ನೆನೆನೆನೆದು ಅರೆಜೀವವಾಗುತ್ತಾರೆ, ಇವರ ಜೀವನವು ನಿರಾಶಾಮಯ ಅಂಧಕಾರದಲ್ಲಿಯೇ ಮುಂದುವರಿಯುತ್ತದೆ.

ಯಾರ ಜೀವನವೂ ಪರಿಪೂರ್ಣವಾಗಿಲ್ಲವೆಂಬುದನ್ನಿವರು ತಿಳಿಯುವುದಿಲ್ಲ. ಹಾಲಿನಿಂದ ತೊಳೆಯಲ್ಪಟ್ಟವರು ಯಾರಿಲ್ಲವೆಂಬುದನ್ನಿವರು ಅರಿಯುವುದಿಲ್ಲ. ಹಾಗಿರುವಾಗ ತಾನು ಅನ್ಯರಿಗಿಂತ ಹೀನವೆಂದು ಹೇಳಿಕೊಳ್ಳುವುದು ಅನ್ಯಾಯ. ಹೀಗೆಂದ ಮಾತ್ರಕ್ಕೆ ಮಾನವ ತನ್ನ ದುರ್ಬಲತೆಗಳನ್ನು ಗಮನಿಸಿಯೂ ನಿಶ್ಚಿಂತನಾಗಿರಬೇಕೆಂದು ಅರ್ಥವಲ್ಲ. ಆತ್ಮತಿರಸ್ಕಾರದ ಘಾತಕ ಮನೋವೃತ್ತಿಯಿಂದ ದೂರವುಳಿಯಬೇಕು; ತನ್ನ ಕೊರತೆಗಳ ಬಗ್ಗೆ ಸತತ ಜಾಗರೂಕನಾಗಿದ್ದು, ಆ ಕೊರತೆಗಳನ್ನು ದೂರಮಾಡಬೇಕು.

ನೀವು ಕೂಡ ನಿಮ್ಮ ಚಾರಿತ್ರಿಕ ಅಥವಾ ವ್ಯಕ್ತಿತ್ವ ಸಂಬಂಧದ ಅಭಾವಗಳನ್ನು ದೂರಮಾಡಲು ತಯಾರಾಗಿರಿ. ಇದರ ಮೊದಲ ಹಂತವಾಗಿ ನಿಮ್ಮನ್ನು ನೀವೇ ನಿಂದಿಸಿಕೊಳ್ಳುವುದನ್ನು, ನಿಮ್ಮ ಕೊರತೆಯ ಬಗ್ಗೆ ಕರುಬಿ ಚಿಂತಿಸುವುದನ್ನು ಬಿಟ್ಟುಬಿಡಿರಿ. ಪ್ರತಿಯೊಬ್ಬರ ಜೀವನದಲ್ಲಿಯೂ ಶಾಪ ಮತ್ತು ವರದಾನಗಳಿರುತ್ತವೆ; ಆದರೆ, ಸಾಮಾನ್ಯತಃ ಜೀವನದಲ್ಲಿ ಒಂದರಿಂದ ಒಂದು ಅಮೂಲ್ಯ ವರದಾನವು ಬಿದ್ದುಕೊಂಡಿರುತ್ತದೆ. ಹೃತ್ಪೂರ್ವಕ ಆ ವರದಾನವನ್ನು ಸ್ವೀಕರಿಸಿ ಉಪಯೋಗಿಸುವುದಷ್ಟೆ ನಿಮ್ಮ ಕೆಲಸ.

ಮಹರ್ಷಿ ಟಾಲ್‌ಸ್ಟಾಯರ ಜೀವನದಲ್ಲಿ ಒಂದು ರೋಚಕ ಪ್ರಸಂಗ ನಡೆಯಿತು. ಅವರ ಬಳಿಗೆ ಒರ್ವ ನವಯುವಕನು ಬಂದು ಹೇಳಿದನು: "ಜೀವನದಲ್ಲಿ ನನಗೆ ನಿರಾಸೆ ಬಂದೊದಗಿದೆ. ನನ್ನ ಬಳಿ ಈಗ ಏನೊಂದೂ ಉಳಿದಿಲ್ಲ. ಇದರಿಂದ ಆತ್ಮಹತ್ಯೆಯೇ ಉಚಿತವೆಂದು ತೋರುತ್ತದೆ. ಇದಕ್ಕಿಂತ ಹಿತವಾದುದು ಮತ್ತಾವುದು?" ಆಗ ಮಹರ್ಷಿಗಳು ನಕ್ಕು ಹೇಳಿದರು: "ತಮ್ಮ ನನ್ನ ಪರಿಚಯದ ಒಬ್ಬ ವ್ಯಾಪಾರಿಯಿದ್ದಾನೆ. ಅವನಿಗೆ ಎರಡು ಕಣ್ಣುಗಳು ಬೇಕಾಗಿವೆ. ಇದಕ್ಕಾಗಿ ಆತ ಇಪ್ಪತ್ತು ಸಾವಿರ ರೂಪಾಯಿಗಳನ್ನು ಕೊಡುತ್ತಾನೆ. ಎರಡು ಕೈಗಳೂ ದೊರೆತುವೆಂದರೆ, ನಲ್ವತ್ತು ಸಾವಿರ ಕೊಡಬಲ್ಲ. ಹಾಗೆಯೇ ಎರಡು ಕಾಲುಗಳೂ ಸಿಕ್ಕಿದರೆ ಅವಕ್ಕೂ ನಲ್ವತ್ತು ಸಾವಿರ ಕೊಡುತ್ತಾನೆ. ಏನಪ್ಪಾ, ನಿನ್ನ ಯಾವುದಾದರೂ ಅಂಗವನ್ನು ನೀನು ಮಾರಬಯಸುವೆಯ?"

ನವ ಯುವಕನು ಕಕ್ಕಾಬಿಕ್ಕಿಯಾಗಿ ಹೇಳಿದ— ಅಂಗಗಳನ್ನು ಹೇಗೆ ತಾನೆ ಮಾರಲಿ?" ಮಹರ್ಷಿಯವರ ಮುಖದಲ್ಲಿ ಮುಗುಳ್ನಗೆಯೊಂದು ಚಿಮ್ಮಿತು. "ಅಗೆ, ಹಾಗಾದರೆ, ನಿನ್ನೊಡನೆ ಏನೂ ಇಲ್ಲವೆಂದು ಹೇಗೆ ನೀನು ಹೇಳುತ್ತಿ?" ಎಂದು ಸವಾಲು ಹಾಕಿದರವರು.

ಸಾಮಾನ್ಯವಾಗಿ ಇಂದಿನ ನವಯುವಕರ ಪರಿಸ್ಥಿತಿ ಇದೇರೀತಿ ಇರುತ್ತದೆ. ನಾವು ಅದೇನನ್ನೋ ಗಳಿಸುತ್ತೇವೆ; ಆದರೂ ನಮ್ಮಲ್ಲಿ ಏನೂ ಇಲ್ಲವೆಂದು ಕರುಬುತ್ತೇವೆ.

ಜೀವನದಲ್ಲಿ ಸಿಹಿ—ಕಹಿ ಅನುಭವಗಳೆಲ್ಲ ಬರುತ್ತವೆ. ಎರಡರ ಹಿಂದೆಯೂ ಒಂದು ಎಚ್ಚರಿಕೆಯಿದೆ. ಸುಖಸಮೃದ್ಧಿಯ ಸುಖ ದಿನಗಳು ಆನಂದವನ್ನು ಅನುಭೋಗಿಸಲು ಹೇಳುತ್ತವೆ; ಆನಂದದ ಭರದಲ್ಲಿ ಕರ್ತವ್ಯ ಚ್ಯುತನಾಗದೆ ಅಹಂಕಾರ ಪಡಬೇಡವೆಂದು ಸಾರುತ್ತವೆ. ಇದಕ್ಕೆ ವಿಪರೀತವಾಗಿ ಕಟು ಅನುಭವಗಳಿಂದ ಜೀವನದ ವಾಸ್ತವಿಕತೆಯು ಪರಿವೆಯಾದಾಗ, ಮುಂದೆ ಮತ್ತಷ್ಟು ಜಾಗರೂಕರಾಗಿರಬೇಕೆಂಬ ಪಾಠವು ದೊರೆಯುತ್ತದೆ. ಜೀವನದ ಅನುಭವಗಳಿಂದ ಪಾಠಕಲಿಯುವುದು ಲಾಭದಾಯಕವಿದೆ.

ಮೂರನೆಯದಾಗಿ ನೀವು ಯಾವುದೇ ಕಾರಣಗಳಿಂದ ಆಲಸ್ಯವನ್ನು ಬೆಳೆಸಿಕೊಳ್ಳಬೇಡಿರಿ. ನಿಷ್ಕ್ರಿಯ ವ್ಯಕ್ತಿ ಸದಾ ನಿರಾಶಾವಾದಿಯಾಗಿರುತ್ತಾನೆ. ವಿಚಾರಶೀಲನಾಗತೊಡಗಿದಾಗಲೂ ಆತ ನಿರುಪಯುಕ್ತ ಸಂಗತಿಗಳ ಬಗ್ಗೆ ಆಸಕ್ತಿ ತೋರಿಸುತ್ತಾನೆ. ಸತತ ಕಾರ್ಯನಿರತನಾದವನು ಸದೈವ ಉತ್ಸಾಹ ಮತ್ತು ಸ್ಫೂರ್ತಿಯ ಸೆಲೆಯಂತಿರುತ್ತಾನೆ.

ಸೇವಾಕಾರ್ಯವು ನಾಲ್ಕನೆಯ ಉಪಾಯ. ಇದರಿಂದ ವ್ಯಕ್ತಿಯಲ್ಲಿ ಸದ್ಗುಣ ವಿಕಾಸವಾಗುತ್ತದೆ. ವಿಶ್ವದ ವಿರಾಟ ವೈಭವ ಮತ್ತು ವಸುಧೈವಕುಟುಂಬಕಂ ಎಂಬುದರ ಪರಿಜ್ಞಾನವಾಗುತ್ತದೆ! ಜೀವನದ ಏಕಾಂತತೆ ಮತ್ತು ನೀರಸತೆಯನ್ನು ದೂರೀಕರಿಸಲು ಸೇವೆಯೊಂದು ಸಾಧನ. ತಾವು ಬಯಸಿದ ಉದ್ಯೋಗವನ್ನು ಪಡೆದವರು ಅತಿ ವಿರಳ. ಉದಾಹರಣೆಗೆ, ಒಬ್ಬನಿಗೆ ಅಧ್ಯಾಪಕನಾಗಬೇಕೆಂಬ ತೀವ್ರೇಚ್ಛೆಯಿತ್ತು. ಆದರೆ, ಪರಿಸ್ಥಿತಿಯ ಒತ್ತಡಗಳಿಂದ ಆತ ಗುಮಾಸ್ತೆಯಾಗಿ ಸೇರಿಕೊಂಡ. ತನ್ನ ಆಶೆ ಈಡೇರದ ಚಿಂತೆಯನ್ನಾತ ಬಿಡುವು ಸಮಯದಲ್ಲಿ ಮಕ್ಕಳಿಗೆ ಶಿಕ್ಷಣವಿತ್ತು ದೂರೀಕರಿಸುತ್ತಿದ್ದಾನೆ.

ಆದುದರಿಂದ ನಮ್ಮ ಜೀವನದಲ್ಲಿ ನಾವು ನಿರಾಶೆ ಹೊಂದಬಾರದು; ಆತ್ಮವನ್ನು ತಿರಸ್ಕರಿಸಬಾರದು. ದೊರೆತ ಸದವಕಾಶಗಳನ್ನು ಸದುಪಯೋಗಪಡಿಸಿಕೊಂಡು ಚಿರ ಅಭಿಲಷಿತ ಸ್ವಪ್ನಗಳಿಗೆ ಸಾಕಾರ ರೂಪಕೊಡುವುದಕ್ಕೆ ಪ್ರಯತ್ನ ನಡೆಸುತ್ತಿರಬೇಕು. ಆಗ ಪರಿಸ್ಥಿತಿಗಳು ನಿಮಗೆ ಅನುಕೂಲವಾಗಿ ಬರುವುವು. ಭವಿಷ್ಯವು ನೀವೆಂದಂತೆ ನಡೆದುಕೊಳ್ಳುವುದು.

ಅಂದವಾದ ಮನೆಗಳಿಗೆ! ಆಕರ್ಷಕವಾದ ಆಫೀಸುಗಳಿಗೆ!!
ಸುಸಜ್ಜಿತವಾದ ಆಸ್ಪತ್ರೆಗಳಿಗೆಲ್ಲಾ ಬೇಕಾಗುವ
ಖೀರಾರವರ ಉಕ್ಕಿನ
"ಮಿಡ್ಜೆಟ್" 50" × 30" × 17" ಪೊಪ್ಯುಲರ್ 65" × 33" × 19"
ಯುಟಿಲಿಟೀ 78" × 36" × 19" ವಾರ್ಡ್ರೊಬ್ 78" × 39" × 24"
ಸಾದಾ ಮತ್ತು ಒಳಗಡೆ ಲೋಕರ್, ಮತ್ತು ಕನ್ನಡಿಗಳುಳ್ಳ, ಕಪಾಟುಗಳು ವಗೈರೆ ಎಲ್ಲಾ ತರದ ಉಕ್ಕಿನ ಫರ್ನಿಚರ್‌ಗಳು.
"ರೇಲೀಸ್" & "ಉಷಾ" ಟೇಬಲ್ ಮತ್ತು ಸೀಲಿಂಗ್ ಫೇನ್‌ಗಳು.
— ದ್ವಿಮುಖವಾಗಿರುವ "ಸೋಫಾ ಹಾಗೂ ಹಾಸಿಗೆ" —
ಮದುವೆ ಸಮಾರಂಭಗಳಿಗೆ ಉಡುಗರೆ ಸಾಹಿತ್ಯಗಳು ನಮ್ಮ ವೈಶಿಷ್ಟ್ಯ.
ಹೆಚ್ಚಿನ ವಿವರಗಳಿಗೆ: ಶಾಸ್ತ್ರಿ ಮತ್ತು ಕಂಪೆನಿ, ಹಂಪನ್‌ಕಟ್ಟೆ, ಮಂಗಳೂರು.
Phone: 788 Grams; "SHASTRYCO"

ದೇಶ ಪರಿಚಯ

ಪಶ್ಚಿಮ ಆಫ್ರಿಕೆಯ ಸಿಯೇರಾ ಲಿಯೋನ್

ಗುಲಾಮರ ಆವಾಸಸ್ಥಾನವಾಗಿ, ಬ್ರಿಟಿಷ ವಸಾಹತುವಾಗಿದ್ದ ಸಿಯೇರಾ ಲಿಯೋನ್ ಮೊನ್ನೆ ಮೊನ್ನೆ ಸ್ವತಂತ್ರವಾಯಿತು. ಆರ್ಥಿಕವಾಗಿಯೂ ಹಿಂದುಳಿದ ಇದು ಆರ್ಥಿಕ ಸ್ವಾತಂತ್ರ್ಯಕ್ಕಾಗಿ ಭರದಿಂದ ಹೋರಾಡುವುದು ಅವಶ್ಯ.

ಮೊನ್ನೆ ಎಪ್ರಿಲ್ ೨೭ನೆ ದಿವಸ ಆಫ್ರಿಕಾ ಖಂಡದಲ್ಲಿ ಒಂದು ಹೊಸ ದೇಶವು ಉದಯಿಸಿತು. ಪಶ್ಚಿಮ ಆಫ್ರಿಕೆಯ ಅತ್ಲಾಂತಿಕ ಸಾಗರದ ಕಿನಾರೆಯಲ್ಲಿ 'ಸಿಯೇರಾ ಲಿಯೋನ್' ಎಂಬುದೇ ಹೊಸ ರಾಜ್ಯ. ಇದರ ಉತ್ತರ ಮತ್ತು ವಾಯುವ್ಯದಲ್ಲಿ ಗಿನಿಗಣ ರಾಜ್ಯ ಮತ್ತು ಆಗ್ನೇಯದಲ್ಲಿ ಆಫ್ರಿಕೆಯ ಪ್ರಾಚೀನ ಪ್ರಜಾಸತ್ತೆಯಾದ ಲೈಬೀರಿಯಾ ದೇಶಗಳಿವೆ.

ಈ ಹೊಸ ದೇಶದ ವಿಸ್ತಾರವು ೨೮ ಸಾವಿರ ವರ್ಗ ಮೈಲುಗಳಿವೆ. ನಮ್ಮ ದೇಶದ ಪಶ್ಚಿಮ ಬಂಗಾಳದ ವಿಸ್ತೀರ್ಣಕ್ಕಿಂತಲೂ ಇದು ಕಡಿಮೆ. ಇಲ್ಲಿನ ಜನಸಂಖ್ಯೆ ಸುಮಾರು ೨೫ ಲಕ್ಷ ಎಂದರೆ, ನಮ್ಮ ಜಮ್ಮೂ ಮತ್ತು ಕಾಶ್ಮೀರಗಳಷ್ಟು ಮಾತ್ರ. 'ಸಿಯೇರಾ ಲಿಯೋನ್'ನ ಸ್ಥಾಪನೆಯ ವಿಚಾರದಲ್ಲಿಯೂ ಒಂದು ಕಥೆಯಿದೆ. ೧೮ನೆ ಶತಮಾನಾಂತ್ಯದಲ್ಲಿ ಗುಲಾಮರನ್ನು ಬಿಡುಗಡೆಗೊಳಿಸುವ ಬಗ್ಗೆ ಆಂದೋಲನವು ಇಂಗ್ಲೆಂಡಿನಲ್ಲಿ ನಡೆಯಿತು. ಇದರಿಂದಾಗಿ ಮುಕ್ತರಾದ ಗುಲಾಮರನ್ನು ಪುನರ್ನಿವೇಶನಗೊಳಿಸುವುದೇ ಒಂದು ಸಮಸ್ಯೆಯಾಯಿತು. ಅಮೇರಿಕೆಯಿಂದ ಬಿಡುಗಡೆಯಾದ ಗುಲಾಮರನ್ನು ತಂದು ಲೈಬೀರಿಯಾದಲ್ಲಿ ನೆಲಸಿದಂತೆ ಇಂಗ್ಲೆಂಡಿನಿಂದ ಬಂದ ಗುಲಾಮರನ್ನು ನಿವಾಸಿತಗೊಳಿಸಲು 'ಸಿಯೇರಾ ಲಿಯೋನ್'ನ ಸ್ಥಾಪನೆಯಾಯಿತು. ಈ ಉದ್ದೇಶದಿಂದಲೇ ಇಲ್ಲಿನ ರಾಜಧಾನಿ ಫ್ರೀಟೌನ್‌ನ ನಿರ್ಮಾಣವೂ ಆಯಿತು. ಮುಕ್ತರಾದ ಗುಲಾಮರು ಇಲ್ಲಿ ನೆಲಸಿದುದರಿಂದ ಫ್ರೀಟೌನ್ ಎಂಬ ಹೆಸರು ಇದಕ್ಕೆ ಅನ್ವರ್ಥವಾಯಿತು. 'ಸಿಯೇರಾ ಲಿಯೋನ್'ನ ಹೆಸರಿನಲ್ಲಿಯೂ ಒಂದು ವಿನೋದವಿದೆ. ೧೪೬೦ರಲ್ಲಿ ಇಲ್ಲಿಗೆ ಒರ್ವ ಪೋರ್ಚುಗೀಸ ನಾವಿಕನು ಬಂದಾಗ, ಸಿಂಹವನ್ನು ಹೋಲುವ ಪರ್ವತಾವಳಿಗಳನ್ನು ಕಂಡನಂತೆ. ಆಗ ಈತನ ಮುಖದಿಂದ ಅರಿವಿಲ್ಲದಂತೆಯೇ 'ಸಿಯೇರಾ ಲಿಯೋನ್' ಎಂಬ ಉದ್ಗಾರ ಹೊರಟಿತಂತೆ! ಈ ಪೋರ್ಚುಗೀಸ ಶಬ್ದದ ಅರ್ಥ ಸಿಂಹಾಕೃತಿಯ ಪರ್ವತ ಎಂದು. ಕಾಲಕ್ರಮದಲ್ಲಿ ದೇಶಕ್ಕೂ ಇದೇ ಹೆಸರು ಬಂತು.

ಮೊದಲೇ ಹೇಳಿದಂತೆ 'ಸಿಯೇರಾ ಲಿಯೋನ್'ನ ಸ್ಥಾಪನೆಯಾದುದು ಗುಲಾಮರ ನಿವಾಸಕ್ಕಾಗಿ ಮಾತ್ರ. ೧೮೦೮ರ ವರೆಗೆ ಇಲ್ಲಿನ ಆಡಳಿತ ವ್ಯವಸ್ಥೆಯು ಒಂದು ಕಂಪೆನಿಯ ಮೂಲಕ ನಡೆಯುತಿತ್ತು. (ಭಾರತದಲ್ಲಿಯೂ ಈಸ್ಟ್ ಇಂಡಿಯಾ ಕಂಪೆನಿಯ ಆಡಳಿತವು ಇತ್ತು) ಅನಂತರ ೧೮೦೮ರಲ್ಲಿ ಇದನ್ನು ಅರಸೊತ್ತಿಗೆಯ ಅಡಿಯ ದೇಶವೆಂದು ಉದ್ಘೋಷಿಸಲಾಯಿತು.

೧೮೬೩ರಲ್ಲಿ ಇಲ್ಲಿ ವೈಧಾನಿಕ ಸುಧಾರಣೆಯ ಕ್ರಮವು ಪ್ರಾರಂಭವಾಯಿತು. ೧೯೫೧ರ ಸಂವಿಧಾನದಿಂದ ಸಿಯೇರಾ ಲಿಯೋನ್ ಉಪನಿವೇಶ ಮತ್ತು ಸಂರಕ್ಷಿತ ಪ್ರದೇಶಗಳೆರಡೂ ಏಕ ವ್ಯವಸ್ಥೆಯೊಳಗೆ ಅಂತರ್ಗತವಾದುವು ೧೯೫೩ರಿಂದ ಕಾರ್ಯಕಾರಿ ಪರಿಷತ್ತಿನಲ್ಲಿ ಆಫ್ರಿಕನರೂ ಸಮ್ಮಿಲಿತಗೊಳಿಸಲ್ಪಟ್ಟರು. ೧೯೫೭ರ ವಿಧಾನ ಸಭೆಯಲ್ಲಿ ಆಫ್ರಿಕನರು ಬಹುಮತಗಳಿಸಿದರು ೫೮ರ ವಿಧಾನಸಭೆಯಲ್ಲಿ ಆಫ್ರಿಕನ್ ಸದಸ್ಯರ ಸಂಖ್ಯೆಯನ್ನು ಮಾತ್ರ ಹೆಚ್ಚಿಸಲಾಯಿತು. ೫೭ರಲ್ಲಿ ವಿಧಾನ ಸಭೆಗೆ ಪ್ರತಿನಿಧಿ ಸಭೆಯೆಂದು ನಾಮಕರಣ ಮಾಡಲಾಯಿತು. ಇದರ ೫೭ ಸದಸ್ಯರಲ್ಲಿ ೩೯ ಜನರನ್ನು ಕರತೆರುವ ವಯಸ್ಕರು ಆರಿಸುತಿದ್ದರು. ೫೮ರ ಜನವರಿಯಿಂದ ಕಾರ್ಯಕಾರಿ ಪರಿಷತ್ತಿನಲ್ಲಿ ಎಲ್ಲ ಸದಸ್ಯರೂ ಆಫ್ರಿಕನರೇ ಆಗ ತೊಡಗಿದರು. ೧೯೬೦ರ ಮಾರ್ಚ–ಎಪ್ರಿಲ್ ತಿಂಗಳಲ್ಲಿ ಲಂಡನಿನಲ್ಲಿ ಸೇರಿದ ಸಮ್ಮೇಳನದಲ್ಲಿ ಬ್ರಿಟನ್ನು ಎಪ್ರಿಲ್ ೨೭ರಂದು 'ಸಿಯೇರಾ ಲಿಯೋನ್'ಗೆ ಸ್ವಾತಂತ್ರ್ಯ ನೀಡುವ ಘೋಷಣೆಯನ್ನು ಮಾಡಿತು. ಹೀಗೆ ಇದು ಪಾರತಂತ್ರ್ಯದ ಸಂಕೋಲೆಯಿಂದ ಸ್ವತಂತ್ರತೆಯತ್ತ ಅತಿ ವೇಗದಿಂದ ಧಾವಿಸಿತು. ಎಪ್ರಿಲ್ ೨೭ರಿಂದ ಇಲ್ಲಿನ ಪ್ರಧಾನ ಮಂತ್ರಿಗಳಾದ ಸರ್ ಮಿಲ್ಟನ್ ಮರ್ಗಯಿರವರು ತನ್ನ ದೇಶದ ಹೊರೆಯನ್ನು ಹೊತ್ತುಕೊಂಡಿರುವರು.

'ಸಿಯೇರಾ ಲಿಯೋನ್' ಬಹು ಬೇಗನೆ ಸ್ವತಂತ್ರವಾಯಿತೇನೋ ನಿಜವೆ; ಆದರೆ, ಘಾನವು ಇದಕ್ಕೂ ತ್ವರಿತಗತಿಯಲ್ಲಿ ಬಂಧನವನ್ನು ಕಿತ್ತೊಗೆಯಿತು. (ಘಾನಾವು ೧೯೫೭ರಲ್ಲೇ ಸ್ವತಂತ್ರವಾಯಿತು) ಸಿಯೇರಾ ಲಿಯೋನ್‌ನಲ್ಲಿ ಎರಡು ಪಂಗಡದ ಜನತೆಯಿರುವುದೇ ಇದಕ್ಕೆ ಕಾರಣ ಸಮುದ್ರತಟದಲ್ಲಿ ಗುಲಾಮರ ರೂಪದಲ್ಲಿ ಹೊರದೇಶಗಳಿಂದ ಬಂದವರೊಂದು ಪಂಗಡವಾದರೆ, ಆದಿಕಾಲದಿಂದಲೂ ದೇಶದ ಆಂತರಿಕ ಭಾಗದಲ್ಲಿಯೇ ನೆಲಸಿಕೊಂಡಿರುವವರು ಇನ್ನೊಂದು ಪಂಗಡದವರು. ಇವರೊಳಗೆ ಮತ್ತೈಕ್ಯವಾಗುತ್ತಿರಲಿಲ್ಲ. ಆದರೆ, ಈಗ ಆ ಸ್ಥಿತಿಯಿರುವುದಿಲ್ಲ. ಸಿಯೇರಾ ಲಿಯೋನ್‌ನ ಎಲ್ಲ ರಾಜಕೀಯ ಪಕ್ಷಗಳು ಲಂಡನ್ನಿನಲ್ಲಿ ಕಳೆದ ವರ್ಷ ಸಮಾವೇಶಗೊಂಡ ಸಮ್ಮೇಳನದಲ್ಲಿ ಏಕಸ್ವರದಲ್ಲಿ ಸ್ವಾತಂತ್ರ್ಯದ ಬೇಡಿಕೆಯನ್ನು ಮುಂದಿಟ್ಟದ್ದುವು ಇಡಿಯ ಆಫ್ರಿಕದಲ್ಲಿಯೇ ಬರದಿಂದ ಬೀಸತೊಡಗಿದ ಸ್ವಾತಂತ್ರ್ಯದ ಬಿರುಗಾಳಿ ಇದರ ಮೇಲೆಯೂ ಪ್ರಭಾವಬೀರದುಳಿದೀತೆ?

ಗಣರಾಜ್ಯ ದಿನೋತ್ಸವದ ವೇಳೆ ಭಾರತದ ರಾಜಧಾನಿಯಲ್ಲಿ ವಿವಿಧ ಜಾನಪದ ನೃತ್ಯಗಳು ನಡೆಯುವ ಸಂಪ್ರದಾಯವಿದೆ ಈ ವರ್ಷ ಮಹಾರಾಷ್ಟ್ರದ ಮೀನುಗಾರ ಪಂಗಡದವರು ತಮ್ಮ ಜೀವನಕ್ಕೆ ಸಂಬಂಧಿಸಿದ ಒಂದು ನೃತ್ಯವನ್ನು ಅಭಿನಯಿಸಿದರು. ಇದರ ಒಂದು ನೋಟವನ್ನು ಮೇಲಿನ ಚಿತ್ರದಲ್ಲಿ ಕಾಣಬಹುದು.

ಉತ್ತರ ಭಾಗ, ದಕ್ಷಿಣ ಭಾಗ ಮತ್ತು ಆಗ್ನೇಯ ಭಾಗವೆಂದು ಸಿಯೇರಾಲಿಯೋನನ್ನು ಆಡಳಿತ ಸೌಕರ್ಯಕ್ಕಾಗಿ ಮೂರು ವಿಭಾಗಗಳನ್ನಾಗಿ ಮಾಡಿದ್ದಾರೆ ಸಮುದ್ರ ತೀರದಲ್ಲಿ ಭೂಮಿಯು ಸಮತಲವಾಗಿದೆ. ಆದರೆ, ಪಶ್ಚಿಮ ಮತ್ತು ದಕ್ಷಿಣ ಮೂಲೆಗಳಲ್ಲಿ ಪರ್ವತಮಾಲೆಗಳಿವೆ. ಇವುಗಳಲ್ಲಿ ಹಲವಾರು ನದಿಗಳಿವೆ. ಸಿಯೇರಾ ಲಿಯೋನ್ ಮತ್ತು ಶೇರ್ ಬ್ರೊ ಎಂಬ ಹೆಸರಿನ ನದಿಗಳಲ್ಲಿ ದೂರದ ವರೆಗೆ ಹಡಗಗಳೂ ಚಲಿಸುತ್ತವೆ. ರಾಜಧಾನಿಯಾಗಿರುವ ಫ್ರೀಟೌನ್ ಉತ್ತಮ ಬಂದರ ಸ್ಥಳವೂ ಹೌದು ಇದರಂತಹ ಸುಂದರ ಬಂದರವು ಇಡಿಯ ಆಫ್ರಿಕದಲ್ಲಿಯೇ ಬೇರೆ ಇಲ್ಲವೆಂದು ಹೇಳುತ್ತಾರೆ.

ಭಾರತದಂತೆಯೇ ಸಿಯೇರಾಲಿಯೋನ್ ಕೂಡ ಕೃಷಿ ಪ್ರಧಾನವಾದ ದೇಶ. ನೂರರಲ್ಲಿ ೮೦–೯೦ರಷ್ಟು ಜನರು ಕೃಷಿಯಿಂದಲೇ ಜೀವಿಸುತ್ತಾರೆ. ಧಾನ್ಯಗಳೂ ತೆಂಗೂ ಇಲ್ಲಿಯ ಪ್ರಧಾನ ಬೆಳೆಗಳು. ಕೋಕೊ, ಕಾಫಿಗಳೂ ಬೆಳೆಯುತ್ತವೆ. ಸ್ವಲ್ಪ ಸಮಯದ ವರೆಗೆ ಇದು ಅಕ್ಕಿಯನ್ನು ನಿರ್ಯಾತಗೊಳಿಸುತಿತ್ತು; ಆದರೆ, ಈಗ ಅದಕ್ಕೆ ಅನ್ಯದೇಶಗಳಿಂದ ಅಕ್ಕಿಯನ್ನು ಪಡಕೊಳ್ಳುವುದು ಅವಶ್ಯವಾಗಿದೆ.

'ಸಿಯೇರಾ ಲಿಯೋನ್'ನ ಭೂಮಿಯು ಖನಿಜ ಸಂಪತ್ತಿನ ದೃಷ್ಟಿಯಿಂದ ಸಂಪನ್ನವಾಗಿದೆ. ವಜ್ರವೇ ಮುಖ್ಯ ಖನಿಜ. ಇಲ್ಲಿಂದ ವಜ್ರವು ರಫ್ತು ಆಗುತ್ತದೆ. ಕಬ್ಬಿಣ ಮತ್ತು ಕ್ರೋಮ್ಯೂಟ್‌ಗಳು ಹೊರಗೆ ಕಳಿಸುವ ಅನ್ಯ ಖನಿಜಗಳು ಈ ದೇಶದ ಆದಾಯದ ಸ್ರೋತವು ಸರ್ವಸಾಮಾನ್ಯವಾಗಿ ಖನಿಜ ಪದಾರ್ಥಗಳೇ ಆಗಿವೆ.

ಆಂಗ್ಲೇಯರಿಂದ ಇಲ್ಲಿ ಇಂಗ್ಲಿಷ್ ಭಾಷೆಯು ವಿಕಾಸವಾಗಿತ್ತು. ಅದೇ ಈಗ ದೇಶದ ಸರಕಾರಿ ಭಾಷೆಯೂ ಆಗಿದೆ. ದಕ್ಷಿಣದಲ್ಲಿ ಮೇಂಡೆ ಮತ್ತು ಉತ್ತರದಲ್ಲಿ ತೇಮನೆ ಎಂಬ ದೇಶೀಯ ಭಾಷೆಗಳು ಮಾತಾಡಲ್ಪಡುತ್ತವೆ.

ರಾಜಕೀಯ ಸ್ವಾತಂತ್ರ್ಯದ ಸುವರ್ಣ ಪ್ರಭಾತದನಂತರ ಸಿಯೇರಾ ಲಿಯೋನ್ ಕೂಡ ಅನ್ಯ ದೇಶಗಳಂತೆ ಆರ್ಥಿಕ ಸ್ವಾಧೀನತೆಯತ್ತ ಬರದಿಂದ ಮುಂದಡಿಯಿಡುವುದೆಂದು ಆಶಿಸಬಹುದು.

ಸ್ಥಾಪನೆ: 1924

ದಿ ಕರ್ನಾಟಕ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ರಿಜಿಸ್ಟರ್ಡ್ & ಹೆಡ್ ಆಫೀಸು: ಡೊಂಗರಕೇರಿ, ಮಂಗಳೂರು–3.

ಈ ಕೆಳಗಿನ ಏರಿಸಿದ ಬಡ್ಡಿದರಗಳಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು.

ಒಂದರಿಂದ ಎರಡು ತಿಂಗಳುಗಳ ವರೆಗೆ	ಸಾ॥ ಸೇಕಡಾ	3-75	ನ.ಪೈಸೆ
ಮೂರರಿಂದ ಐದು ತಿಂಗಳುಗಳ ವರೆಗೆ	,,	4-25	,,
ಆರು ತಿಂಗಳುಗಳಿಂದ 12 ತಿಂಗಳುಗಳ ವರೆಗೆ....	,,	4 50	,,
12 ತಿಂಗಳು ಮಿಕ್ಕಿ 24 ತಿಂಗಳುಗಳ ವರೆಗೆ	,,	4-75	,,
24 ತಿಂಗಳು ಮಿಕ್ಕಿ 48 ತಿಂಗಳುಗಳ ವರೆಗೆ	,,	5 00	,,
48 ತಿಂಗಳುಗಳಿಗೆ ಮಿಕ್ಕಿ	,,	5-25	,,

ಸೇವಿಂಗ್ಸ್ ಬ್ಯಾಂಕ್ ಬಡ್ಡಿ ದರವನ್ನು ಸಾ. ಸೇಕಡ 2½% ರಿಂದ 3¼%ಗೆ ಏರಿಸಲಾಗಿವೆ.

THE KARNATAKA BANK LIMITED.

ಡಿ. ಕೆ. ಭಾರದ್ವಾಜರ

ಇಂಗ್ಲಿಷ್, ಇಂಗ್ಲಿಷ್-ಕನ್ನಡ

ಡಿಕ್ಶನರಿ

ಬೆಲೆ: ರೂ ನಾಲ್ಕು.

ಐದು ರೂಪಾಯಿ ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಕೊಪ್ಪರಿಗೆಯಷ್ಟು ಹಾಲು ಕೆಡಿಸಲು ಎಳ್ಳಿನಷ್ಟು ಹುಳಿ ಸಾಕು. ಸದ್ಗೃಹಸ್ಥನನ್ನು ದುರ್ಮಾರ್ಗಕ್ಕೆಳೆಯಲು ಒಂದೇ ಒಂದು ದುರ್ವ್ಯಸನ ಸಾಕು.

ನವಯುಗ

೪೦ ವರುಷ	ಉಡುಪಿ ೪-೫-'೬೧	ವಾರ ೩೪

ಭಾಷಾ ಅಲ್ಪಸಂಖ್ಯಾಕರು

ಭಾಷಾ ಅಲ್ಪಸಂಖ್ಯಾಕರ ಹಿತರಕ್ಷಣಾ ಸಂಬಂಧದಲ್ಲಿ ಶ್ರೀ ಬಿ. ಮಲಿಕರು ಸಲ್ಲಿಸಿದ ಮೂರನೆಯ ವರದಿಯು ಸದ್ಯ ಭಾರತದ ವಿವಿಧ ರಾಜ್ಯಗಳಲ್ಲಿ ನಡೆಯುತ್ತಿರುವ ವಿದ್ಯಮಾನಗಳಿಂದ ಭಾಷಾ ಅಲ್ಪ ಸಂಖ್ಯಾಕರ ಮೇಲೆ ಬೀಳುವ ಪ್ರಭಾವ ಮತ್ತು ಪರಿಣಾಮಗಳನ್ನು ಎತ್ತಿ ತೋರಿಸುತ್ತದೆ. ಎಲ್ಲ ರಾಜ್ಯಗಳಲ್ಲೂ ಸರ್ವಸಾಧಾರಣವಾಗಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಮಾತೃಭಾಷೆಯಲ್ಲೇ ನೀಡಲಾಗುವುದಾದರೂ ಮಾಧ್ಯಮಿಕ ಹಂತದಲ್ಲಿ ತರಬೇತಾದ ಅಲ್ಪಸಂಖ್ಯಾಕರ ಭಾಷೆಯ ಅಧ್ಯಾಪಕರ ಅಭಾವವಿದೆಯೆಂದೂ ಇದನ್ನು ದೂರೀಕರಿಸುವುದಕ್ಕಾಗಿ ಪಕ್ಕದ ರಾಜ್ಯಗಳ ಸಹಕಾರ ಪಡೆಯಬೇಕೆಂದೂ ಈ ವರದಿಯು ಹೇಳುತ್ತದೆ. ಇದನ್ನು ಸಾಧಿಸಿಕೊಳ್ಳಬೇಕಾದುದು ಪ್ರತಿರಾಜ್ಯ ಸರಕಾರದ ಕರ್ತವ್ಯವೆಂದು ಬೇರೆ ಹೇಳಬೇಕಾಗಿಲ್ಲ. ಶಿಕ್ಷಣದ ಫಲಪ್ರದತೆಗೆ ಇದು ಅಮೂಲ್ಯ ಸಾಧನವಾಗಿದೆ.

ಈ ಅಲ್ಪ ಸಂಖ್ಯಾಕರು ಅನುಭವಿಸುವ ಕಷ್ಟ ಇಷ್ಟರಲ್ಲೇ ಮುಗಿಯಲಿಲ್ಲ. ಮಾಧ್ಯಮಿಕ ಶಿಕ್ಷಣಾನಂತರ ಉಚ್ಚ ಶಿಕ್ಷಣಕ್ಕಾಗಿ ವಿಶ್ವವಿದ್ಯಾಲಯಗಳನ್ನು ವಿದ್ಯಾರ್ಥಿಗಳು ಸೇರುತ್ತಾರೆ. ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ರಾಜ್ಯದ ಭಾಷೆಯನ್ನೇ ಮಾಧ್ಯಮವನ್ನಾಗಿಸುವ ಚಳವಳಿ ಮತ್ತು ಆತುರಗಳಿಂದ ಅದು ಸಾಧಿತವಾಯಿತೆಂದರೆ, ಆಗ ಈ ವಿದ್ಯಾರ್ಥಿಗಳು ಬಹಳ ಬವಣೆಪಡಬೇಕಾಗುವುದು. ಸದ್ಯ ಎಲ್ಲ ವಿಶ್ವವಿದ್ಯಾಲಯಗಳ ಬೋಧ ಭಾಷೆಯು ಇಂಗ್ಲಿಷೇ ಆದುದರಿಂದ ಭಾಷಾ ಅಧಿಕ ಸಂಖ್ಯಾಕರ ಷ್ಟೇ ಅಲ್ಪ ಸಂಖ್ಯಾಕರೂ ಕಷ್ಟವನುಭವಿಸಿದರೆ ಸಾಕಾಗುವುದು. ವಿಶ್ವವಿದ್ಯಾಲಯ ಶಿಕ್ಷಣ ಮಾಧ್ಯಮವು ರಾಜ್ಯ ಭಾಷೆಯಾಗಿ ಮಾರ್ಪಟ್ಟಾಗ ಅಲ್ಪ ಸಂಖ್ಯಾಕರು ಪೇಚಿಗೆ ಬೀಳುವರು. ಅವರು ನೆರೆಯ ರಾಜ್ಯಗಳಿಗೆ ತೆರಳಿ, ಅಲ್ಲಿ ತಮ್ಮ ಶಿಕ್ಷಣವನ್ನು ಮುಂದುವರಿಸಿ ಪದವೀಧರರಾಗಿ ಮರಳಬಹುದು. ಆದರೆ, ಹೀಗೆ ಅನ್ಯ ರಾಜ್ಯಗಳ ವಿಶ್ವವಿದ್ಯಾಲಯಗಳ ಪದವಿಗಳನ್ನು ಮನ್ನಿಸುವಷ್ಟು ಸೌಜನ್ಯವ ನ್ನೆಲ್ಲ ರಾಜ್ಯಗಳೂ ತೋರಿಸುತ್ತಿವೆಯೆ? ರಾಜ್ಯ ಸರಕಾರದಲ್ಲಿ ನೌಕರಿ ಸಿಗಬೇಕಾದರೆ, ರಾಜ್ಯಭಾಷೆಯ ಪರಿಜ್ಞಾನ ಅವಶ್ಯ ಬೇಕು. ಮತ್ತು ರಾಜ್ಯದ ವಿಶ್ವವಿದ್ಯಾನಿಲಯದ ಪದವೀಧರರೇ ಆಗಿರಬೇಕು ಎಂಬ ನಿಬಂಧನೆ ಕೆಲವೆಡೆ ಇರುವುದು. ಆಗ, ಇಂತಹ ವಿದ್ಯಾರ್ಥಿಗಳ ಸ್ಥಿತಿಯೇನು? ತಾವು ಸೇರಿದ ರಾಜ್ಯದಲ್ಲಿ ನೌಕರಿಯಿಲ್ಲ; ಬೇರೆ ರಾಜ್ಯದಲ್ಲಿ ಸ್ಥಾನವಿಲ್ಲವೆಂಬಂತಾಗಿ ಬಾವಲಿಯಂತೆ ಒದ್ದಾಡಿಕೊಂಡಿರಬೇಕಾಗುತ್ತದೆ. ಕೇಂದ್ರ ಸರಕಾರಿ ನೌಕರಿಯು ಕೆಲ್ಲ ಸೇರಲು ಇದರಿಂದ ಅಡ್ಡಿಯಿಲ್ಲವಾದರೂ ಅಂತಹ ನೌಕರಿ ಸ್ಥಾನಗಳು ಎಷ್ಟು? ಇದೊಂದು ಗಂಭೀರವಾಗಿ ಪರಿಶೀಲಿಸಬೇಕಾದ ಪ್ರಶ್ನೆ. ಭಾಷಾ ಅಲ್ಪಸಂಖ್ಯಾಕರ ಅಭಿವೃದ್ಧಿ ಮತ್ತು ಭವಿಷ್ಯಗಳ ಕುರಿತು ಚಿಂತಿಸುವಾಗ ಅವಶ್ಯ ಬಗೆಹರಿಸಬೇಕಾದ ಸಮಸ್ಯೆ.

ಒಂದು ರಾಜ್ಯದ ಸರಕಾರದ ನೌಕರಿಯಲ್ಲಿ ಆ ರಾಜ್ಯದ ಭಾಷೆ ಬಲ್ಲವರೇ ಇರಬೇಕು; ರಾಜ್ಯದ ನಾಗರಿಕರಿಗೇನೇ ಅಗ್ರಪ್ರಾಶಸ್ತ್ಯ ನೀಡಬೇಕು ಎಂಬುದು ಸರಿಯೇ. ಈ ವಾದವನ್ನು ಅಲ್ಲಗಳೆಯುವುದು ಸರ್ವಥಾ ಅಸಾಧ್ಯ. ಭಾಷಾ ಅಲ್ಪಸಂಖ್ಯಾಕರೂ ರಾಜ್ಯಕ್ಕೇ ಸೇರಿದವರೆಂಬುದನ್ನು ನಾವು ಮರೆಯುವಂತಿಲ್ಲ. ಆದುದರಿಂದ ಇಂತಹರ ನೇಮಕಕ್ಕೆ ವಿಘ್ನ ತರುವ ತಾಂತ್ರಿಕ ತೊಂದರೆಗಳನ್ನು ದೂರ ಮಾಡಬೇಕಾಗಿದೆ. ಅಥವಾ ಒಂದೇ ಕಾಲೇಜದಲ್ಲಿ ಎರಡು ಭಾಷೆಗಳಲ್ಲಿಯೂ (ಅಲ್ಪ ಸಂಖ್ಯಾಕರ ಮತ್ತು ಬಹು ಸಂಖ್ಯಾಕರ) ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಬೇಕು. ಆದರೆ, ಇದು ಆರ್ಥಿಕ ಮತ್ತು ವ್ಯಾವಹಾರಿಕ ದೃಷ್ಟಿಯಿಂದ ಅಸಾಧ್ಯವೆಂಬುದು ಖಂಡಿತ. ಪ್ರಾಥಮಿಕ ವಿದ್ಯಾಭ್ಯಾಸವನ್ನೇ ಸುಸೂತ್ರವಾಗಿ ಸಾಧಿಸುವುದು ನಮ್ಮಿಂದ ಅಸಾಧ್ಯವಾದಾಗ, ಇಂತಹ ಆದರ್ಶಗಳನ್ನು ನಾವು ಕಾರ್ಯರೂಪಕ್ಕೆ ತರುವುದು ಖಂಡಿತಕ್ಕೂ ಅಸಾಧ್ಯ. ಈಗ ನೌಕರಿಗೆ ಸೇರುವುದಕ್ಕೆ ಪೂರ್ವಭಾವಿಯಾಗಿ ನಡೆಯುವ ಎಲ್ಲ ಪರೀಕ್ಷೆಗಳೂ ಇಂಗ್ಲಿಷ್ ಮಾಧ್ಯಮದಲ್ಲಿರುವುದರಿಂದ, ಎಲ್ಲರಿಗೂ ಸಮಾನ ಪರಿಶ್ರಮ ತೊಡಕು ಇದೆ. ಮುಂದೆ ಆಡಳಿತ ಮತ್ತು ಶಿಕ್ಷಣ ವಿಭಾಗಗಳಲ್ಲಿ ರಾಜ್ಯದ ಪ್ರಾದೇಶಿಕ ಭಾಷೆಯು ಇಂಗ್ಲಿಷಿನ ಸ್ಥಾನವನ್ನು ಆಕ್ರಮಿಸ ತೊಡಗುವುದು ನಿಶ್ಚಯವೇ; ಆಗ ಭಾಷೇಯತೆಯ ದುಷ್ಪರಿಣಾಮವೂ ಅತಿರೇಕಕ್ಕೆ ಮುಟ್ಟುವುದು. ರಾಜ್ಯದ ಭಾಷಾ ಅಲ್ಪ ಮತ್ತು ಬಹುಸಂಖ್ಯಾಕರ ನಡುವೆ ಸಂಬಂಧ—ತಿಳುವಳಿಕೆ ಹೆಚ್ಚಿ ಪರಸ್ಪರ ಕಷ್ಟ ಸುಖಗಳ ಪರಿಚಯಮಾಡಿಕೊಂಡು ಸಾಮರಸ್ಯದಿಂದಿರುವುದು ಸಮಸ್ಯೆಗೆ ಅರ್ಧಮಾತ್ರ ಪರಿಹಾರ. ರಾಜ್ಯದ ಆಂತರಿಕ ವ್ಯವಹಾರ ಭಾಷೆಯ ಅಭಿವೃದ್ಧಿಯ ಸಮಸ್ಯೆಗಳು ಹಾಗೆಯೇ ಉಳಿಯುವುವು. ದೇಶದ ಬೇರೆ ಬೇರೆಡೆಗಳಲ್ಲಿ ದೂರದೃಷ್ಟಿಯಿರದ ರಾಜಕಾರಣಿಗಳು ಭಾಷೀಯತೆ-ಪ್ರಾಂತೀಯತೆಯನ್ನೇ ಪರ್ವತಾಕಾರವಾಗಿ ಅಶಾಂತಿಯನ್ನು ಹರಡಿಸಲು ಮುಂದಾಗುತಿದ್ದಾರೆ; ಹಾಗೆಯೇ ದೂರದೃಷ್ಟಿಯುಳ್ಳ ನಾಯಕಮಣಿಗಳು ಇದರ ಹಾನಿಯನ್ನು ಮುಂದಿಟ್ಟು ಮಾಡಿಕೊಡುತಿದ್ದಾರೆ. ಅಸ್ಸಾಮದಲ್ಲಿ ನಡೆದ ಭಾಷಾಗೊಂದಲದಿಂದ ಲಾಭಪಡೆದವರು ಯಾರು? ಇಂಗ್ಲಿಷಿನ ಸ್ಥಾನವನ್ನು ಹಿಂದಿಗೆ ನೀಡಬೇಕು ಎಂಬ ಆತುರವು ದೇಶದಾದ್ಯಂತ, ಮುಖ್ಯವಾಗಿ ಹಿಂದೀ ಭಾಷಾ ಪ್ರದೇಶದಲ್ಲಿದೆಯಾದರೂ ಈ ಬಗ್ಗೆ ಪಡುವ ಅವಸರವು ಅನರ್ಥಕ್ಕಾವೆಡೆಸುತ್ತದೆ. ಇಡಿಯ ಭಾರತದಲ್ಲಿ ಒಂದೇ ಭಾಷಾಮಾಧ್ಯಮವಿರುವುದರಿಂದ ಒಂದು ರಾಜ್ಯದ ಜನರು ಮತ್ತೊಂದು ರಾಜ್ಯದಲ್ಲಿಯೂ ಉದ್ಯೋಗಕ್ಕೆ ಸೇರಿಕೊಳ್ಳುವ ಅವಕಾಶವಿದೆ. ಆದರೆ, ಮಾನ್ಯತೆ ಪಡೆದ ಎಲ್ಲ ಶಿಕ್ಷಣ ಪ್ರಸಾರ ಸಂಸ್ಥೆಗಳು, ಸರಕಾರಿ ವಿಭಾಗ ಮತ್ತು ವಿಶ್ವವಿದ್ಯಾಲಯಗಳ ಪದವಿಗಳನ್ನು ದೇಶದ ಎಲ್ಲ ಸರಕಾರಗಳೂ ವಿಶ್ವವಿದ್ಯಾಲಯಗಳೂ ಮನ್ನಿಸುವುದು ಅವಶ್ಯವಿದೆ. ಹೀಗಾದಲ್ಲಿ ಸಮಸ್ಯೆ ತುಸು ಲಘುವಾದೀತು.

ಚಿಕ್ಕ ನೀರಾವರಿ ಯೋಜನೆ

ದೇಶದ ಪ್ರಮುಖ ಸಮಸ್ಯೆ ಆಹಾರದ ಪ್ರಶ್ನೆಯನ್ನು ಉತ್ತರಿಸುವಲ್ಲಿ ನೀರಾವರಿ ಯೋಜನೆಗಳ ಪಾತ್ರ ಬಹು ಹಿರಿದು. ದೊಡ್ಡ ನೀರಾವರಿ ಯೋಜನೆಗಳು ಸಾವಿರಾರು ಎಕ್ರೆ ಜಮೀನಿಗೆ ನೀರನ್ನೊದಗಿಸಬಹುದಾದರೂ ಅವುಗಳಿಗೆ ಮಾಡಬೇಕಾದ ವೆಚ್ಚ ಮತ್ತು ಅವು ಫಲಪ್ರದಾಯಕವೆನಿಸಲು ತಗಲುವ ಕಾಲಾವಧಿಯು ಅತ್ಯಧಿಕ. ನಮ್ಮ ದೇಶದ ಎಲ್ಲೆಡೆಗೂ ಕೇವಲ ದೊಡ್ಡ ಯೋಜನೆಗಳಿಂದಲೇ ನೀರ ಸೌಕರ್ಯವೊದಗಿಸುವುದು ಅಸಾಧ್ಯವಾದುದರಿಂದ ಚಿಕ್ಕ ನೀರಾವರಿ ಯೋಜನೆಗಳು ಅವಶ್ಯವೆನಿಸುತ್ತವೆ; ಅಭಿವೃದ್ಧಿ ಸಾಧಕವೆನಿಸಿದ ನಮ್ಮ ಪಂಚವಾರ್ಷಿಕ ಯೋಜನೆಗಳಲ್ಲಿ ಇವುಗಳಿಗೂ ಗಣನೀಯ ಸ್ಥಾನವನ್ನೀಗ ಒದಗಿಸಲಾಗಿದೆ. ಮೈಸೂರು ರಾಜ್ಯದಲ್ಲಿ ನೀರಾವರಿ ಸೌಲಭ್ಯವಿರುವ ಭೂಮಿ ಅತ್ಯಲ್ಪವೆಂದು ಅಂಕೆ ಸಂಖ್ಯೆಗಳೇ ಸಾರುತ್ತಿರುವಾಗ, ಇಲ್ಲಿ ದೊಡ್ಡ ನದಿಗಳ ಸಂಖ್ಯೆ ಕಡಿಮೆಯಾಗಿ ಚಿಕ್ಕ ಹೊಳೆಗಳೇ ಅಧಿಕವಿರುವಾಗ ಇಂತಹ ಯೋಜನೆಗಳು ಅತ್ಯವಶ್ಯವೆಂದು ಬೇರೆ ಬರೆಯಬೇಕಾಗಿಲ್ಲ. ಹಿಂದಿನ ಕಾಲದಲ್ಲಿ ಸಾಮಾಜಿಕ ಜೀವನವು ಸುವ್ಯವಸ್ಥಿತವಾಗಿದ್ದಾಗ ಚಿಕ್ಕ ತೋಡು, ಹೊಳೆಗಳಿಗೆ ಕಟ್ಟಹಾಕಿ, ಕೆರೆ—ಬಾವಿಗಳ ಕೆಸರು ತೆಗೆಯಿಸಿ ಊರ ಜನರು ನೀರಿನ ಸೌಕರ್ಯವನ್ನು ಮಾಡಿಕೊಳ್ಳುತ್ತಿದ್ದರು. ಆದರೆ, ಇತ್ತೀಚೆಗಿನ ಕೆಲವು ದಶಕಗಳಿಂದ ಹಳ್ಳಿಗಳ ಜೀವನವು ಕೆಟ್ಟು ಹೋಗಿ ಅನೈಕ್ಯ ಭಿನ್ನಾಭಿಪ್ರಾಯಗಳಿಂದಾಗಿ ಈ ಸಾಹಸವೆಲ್ಲ ನಿಂತು ಹೋಯಿತು. ಎಲ್ಲದಕ್ಕೂ ಸರಕಾರದ ಮುಖವನ್ನೇ ನೋಡುವ ಹವ್ಯಾಸ ಬಲಿಯಿತು. ಇದನ್ನು ತಿಳಿದೋ ಏನೋ, ಸರಕಾರವು ಈಗ ಈ ಕಾರ್ಯಕ್ಕೂ ತೊಡಗಿದೆ. ಇದಕ್ಕಾಗಿ ಲಕ್ಷಗಟ್ಟಲೆಯ ಹಣ ವೆಚ್ಚ ಮಾಡಲು ಮುಂದೆ ಬಂದಿದೆ. ಸರಕಾರದ ಈ ಯೋಜನೆಯು ಸ್ವಾಗತಾರ್ಹವಾಗಿರುವಂತೆಯೇ ನಮ್ಮ ಹಳ್ಳಿಗಳ ಜನರು ಒಮ್ಮತದಿಂದ ಇದರ ಸದುಪಯೋಗವನ್ನು ಮಾಡಿಕೊಳ್ಳಲು ಮುಂದೆ ಬರುವುದೂ ಅತ್ಯಗತ್ಯ. ತಮ್ಮ ಊರಲ್ಲಿ ಊರಿನ ಭೂಮಿಗೆ ನೀರನ್ನೊದಗಿಸಬಹುದಾದ ಯೋಜನೆಗಳನ್ನು ಪ್ರಾರಂಭಿಸುವುದರಲ್ಲಿ ಅಧಿಕಾರಿಗಳೊಡನೆ ಸಂಪೂರ್ಣ ಸಹಕಾರದಿಂದ ವರ್ತಿಸಿ ತನ್ಮೂಲಕ ಚಿಕ್ಕ ನೀರಾವರಿ ಯೋಜನೆಯ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವುದು; ದೇಶದಲ್ಲಿ ಹೆಚ್ಚುತ್ತಿರುವ ಹೊಟ್ಟೆಗಳಿಗೆ ಅನ್ನ ದೊರೆಯುವಂತೆ ಪರಿಶ್ರಮದಿಂದ ದುಡಿದು ದೇಶದ ಉತ್ಪಾದನೆಯನ್ನು ಹೆಚ್ಚಿಸುವುದು ಅಪೇಕ್ಷಣೀಯವಿದೆ. ನಮ್ಮ ಆವಶ್ಯಕತೆಗಳಿಗಾಗಿ ಪರದೇಶಗಳನ್ನು ಬಹುಕಾಲ ಹೊಂದಿಕೊಂಡಿರುವುದು ಅಸಾಧ್ಯವಾದುದರಿಂದ ಮತ್ತು ಹಾಗೆಯೇ ಮುಂದುವರಿಯುವುದು ಹಾನಿಕಾರಕವಾದುದರಿಂದ ನಾವು ಸ್ವಾವಲಂಬನದ ಮಹತ್ವವನ್ನರಿತು ನಮ್ಮ ಸರಕಾರವು ಒದಗಿಸುತ್ತಿರುವ ಸೌಲಭ್ಯಗಳನ್ನು ಸಂಪೂರ್ಣ ಸದುಪಯೋಗ ಪಡಿಸಿಕೊಂಡು ವೈಯಕ್ತಿಕ ಹಾಗೂ ರಾಷ್ಟ್ರೀಯ ಜೀವನವನ್ನು ಎತ್ತರಿಸಲು ಬದ್ಧಕಂಕಣರಾಗಬೇಕು. ನಮ್ಮ ವ್ಯಕ್ತಿಗತ ದುರ್ಬಲತೆಗಳೆಲ್ಲವನ್ನೂ ಬದಿಗೊತ್ತಿ ಏಕಮತದಿಂದ ಒಮ್ಮನಸ್ಸಿನಿಂದ ದುಡಿದು ಯಶಸ್ವಿಯಾಗಬೇಕು.

ಸಂಕ್ಷಿಪ್ತ ಸುದ್ದಿಗಳು

ರೇಯೊನ್ ಕಾರಖಾನೆ

ಮೈಸೂರು ರಾಜ್ಯದ ಆರ್ಥಿಕ ಪ್ರಗತಿಯಲ್ಲಿ ಮಹತ್ವದ ಸ್ಥಾನ ವಹಿಸಬಲ್ಲ ರೇಯೊನ್ ಕಾರ್ಖಾನೆಯೊಂದು ಉತ್ತರ ಕನ್ನಡ ಜಿಲ್ಲೆಯ ಕಳತೂರಿನಲ್ಲಿ ಸ್ಥಾಪಿತವಾಗುವುದು. ಕೇಂದ್ರ ಕೈಗಾರಿಕೆಯ ಮಂತ್ರಿ ಶ್ರೀ ಮನುಭಾಯಿಶಹ ಅವರು ಇದರ ಶಂಕುಸ್ಥಾಪನೆ ಮಾಡಿದರು. ಸುಮಾರು ಹತ್ತು ಕೋಟಿ ರೂಪಾಯಿಗಳ ವೆಚ್ಚ ಬರುವ ಎಂಬಾಸೆಲ್ ಎಂಬ ಫ್ರೆಂಚ ಸಂಸ್ಥೆಯೊಂದರ ಸಹಾಯ ಪಡೆಯುವ ಈ ಕಾರಖಾನೆಯು ೧೯೬೩ರಲ್ಲಿ ಉತ್ಪಾದನೆಗೆ ತೊಡಗುವ ನಿರೀಕ್ಷೆಯಿದೆ. ಪ್ರಾರಂಭದಲ್ಲಿ ಇದು ೧೧೦ ಟನ್ ರೇಯೊನ್ ಪಲ್ಪನ್ನು ತಯಾರಿಸುವುದು. ಶ್ರೀ ಎಸ್. ವಿ. ವಿಶ್ವನಾಥ ಎಂಬವರು ಈ ಕಾರಖಾನೆಯ ಸ್ಥಾಪನೆಗೆ ಮುಂದುವರಿದು ಬಂದಿದ್ದಾರೆ.

ತಾಂತ್ರಿಕ ತರಬೇತಿ

ಭಾರತದಲ್ಲಿ ತಾಂತ್ರಿಕ ಶಿಕ್ಷಣವನ್ನು ಅಧಿಕಾಧಿಕವಾಗಿ ನೀಡಲಾಗುತ್ತಿದೆಯಾದರೂ ನಮ್ಮ ತಂತ್ರಜ್ಞರ ಸಂಖ್ಯೆಯು ನಮಗೆ ಬೇಕಾಗುವಷ್ಟಿಲ್ಲದಂತಾಗಿದೆ. ದೇಶದಲ್ಲಿ ಸ್ಥಾಪಿತವಾಗುತ್ತಿರುವ ಅಸಂಖ್ಯಾತ ಕೈಗಾರಿಕೆಗಳನ್ನು ನಡೆಸಲು ಲಕ್ಷಾಂತರ ಇಂಜಿನಿಯರರು ಹಾಗೂ ತಂತ್ರಜ್ಞರು ಬೇಕಾಗಿದ್ದಾರೆ. ಇವರನ್ನು ತಯಾರಿಸಿದರೆ, ಕೈಗಾರಿಕೋದ್ಯಮದ ಅಭಿವೃದ್ಧಿಯೂ ಸಾಧ್ಯವೆನಿಸುತ್ತದೆ. ಕೇವಲ ವಿದೇಶೀಯ ತಜ್ಞರನ್ನೇ ನಾವು ಅವಲಂಬಿಸುವುದು ಸರಿಯಲ್ಲ. ಪ್ರಾರಂಭದಲ್ಲಿ ಅವರ ನೆರವನ್ನು ನಾವು ಪಡೆಯಬಹುದಾದರೂ ಕೆಲವರ್ಷಾನಂತರವಾದರೂ ನಮ್ಮವರೇ ಅದನ್ನು ನಡೆಸಿಕೊಂಡು ಬರುವಂತಾಗಬೇಕು. ಇದರಿಂದಾಗಿ ತಾಂತ್ರಿಕ ಶಿಕ್ಷಣದೊಡನೆ ಕಾರಖಾನೆಗಳಲ್ಲಿ ತರಬೇತಿಗಾಗಿ ಯುವಕರನ್ನು ತೆಗೆದುಕೊಳ್ಳುವ ಕ್ರಮವನ್ನೂ ಹೆಚ್ಚಿಸಬೇಕು.

ಉಪನಾಯಕ ಪ್ರಶ್ನೆ

ಭಾರತದ ಸಂಸತ್ತಿನ ಉಪನಾಯಕರ ಪ್ರಶ್ನೆಯನ್ನು ಬಗೆಹರಿಸುವುದು ಪಕ್ಷದ ಪ್ರಚಲಿತ ಸಂವಿಧಾನ ಮತ್ತು ಪರಿಸ್ಥಿತಿಯಿಂದ ಅಸಾಧ್ಯವಾಗಿ ಪರಿಣಮಿಸುವಂತಿದೆ. ಉಪನಾಯಕನನ್ನು ಆರಿಸಲು ನಾಯಕ ನೆಹರುರವರಿಗೇನೇ ಸಂಪೂರ್ಣ ಅಧಿಕಾರ ವಹಿಸಲಾಗಿತ್ತಾದರೂ ಅವರಿದನ್ನು ಒಪ್ಪಲಿಲ್ಲ. ಎಂದರೆ, ಎರಡು ಸಭೆಗೆ ಇಬ್ಬರು ಉಪನಾಯಕರನ್ನು ಆರಿಸಲು ಅವಕಾಶವೊದಗುವಂತೆ ಸಂವಿಧಾನ

ಅಲ್ಲಲ್ಲಿಯ ಸುದ್ದಿಸಾರ

ದ. ಕನ್ನಡಿಗರ ಸಂಘದ ಮಹಾಸಭೆ—ಬೆಂಗಳೂರಲ್ಲಿರುವ ದ. ಕನ್ನಡಿಗರ ಸಂಘದ ಮಹಾಸಭೆಯು ಕಳೆದ ತಾ. 23ರಲ್ಲಿ ಬೆಂಗಳೂರು ಸಿಂಧಿ ಛತ್ರದಲ್ಲಿ ಸಂಘದ ಅಧ್ಯಕ್ಷ ಡಾ. ಕೆ. ನಾಗಪ್ಪ ಆಳ್ವ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ನೆರವೇರಿತು. ಕಾರ್ಯದರ್ಶಿ, ಶ್ರೀ ಐ. ವ್ಯಾಸರಾಯರು ವಾರ್ಷಿಕ ವರದಿಯನ್ನೋದಿದರು. ಬಳಿಕ ಜಿಲ್ಲೆಯ ಪ್ರಮುಖರನೇಕರು ಭಾಷಣಮಾಡಿ ಸಂಘದ ಕಡೆಯಿಂದ ಸಾರ್ವಜನಿಕ ಹೋಸ್ಟೆಲ್ ಒಂದನ್ನು ಆರಂಭಿಸಬೇಕೆಂದೂ, ಸಂಘಕ್ಕೆ ಒಂದು ನಿವೇಶನವನ್ನು ಪಡೆಯಬೇಕೆಂದೂ, ಮುಂತಾಗಿ ಹಲವಾರು ಸಲಹೆ ಸೂಚನೆಗಳನ್ನಿತ್ತರು. ಅಧ್ಯಕ್ಷ ಡಾ. ಆಳ್ವರು ಸಲಹೆಗಳಿಗಾಗಿ ಆಭಾರ ಸೂಚಿಸಿ ಜೂನ್ ತಿಂಗಳೊಳಗಾಗಿ ಹೋಸ್ಟೆಲ್ ತೆರೆಯುವ ಪ್ರಯತ್ನ ಮಾಡುವುದಾಗಿಯೂ, ಇದಕ್ಕೆ ಸರಕಾರವು ಮುಕ್ಕಾಲಂಶದಷ್ಟು ಸಹಾಯಧನ ಕೊಡುತ್ತಾರೆಂಬುದಾಗಿಯೂ, ವ್ಯಕ್ತಪಡಿಸಿದರು. ತರುವಾಯ ಮುಂದಿನ ವರ್ಷಕ್ಕೆ ಈ ಕೆಳಗಿನವರು ಕಾರ್ಯಕಾರಿ ಸಮಿತಿಗೆ ಚುನಾಯಿತರಾದರು.

ಡಾ. ಕೆ. ನಾಗಪ್ಪ ಆಳ್ವ(ಅಧ್ಯಕ್ಷ) ಶ್ರೀಗಳಾದ ಪಿ. ರಾಘವೇಂದ್ರರಾವ್ ಮತ್ತು ಎಮ್. ಎಸ್. ರಾಮನ್, (ಉಪಾಧ್ಯಕ್ಷರು) ಐ. ವ್ಯಾಸರಾವ್, (ಕಾರ್ಯದರ್ಶಿ), ನರಸಿಂಹರಾವ್ (ಜೊತೆ ಕಾರ್ಯದರ್ಶಿ) ಜೆ. ಆರ್. ಬೀಡು (ಕೋಶಾಧಿಕಾರಿ) ಎಚ್. ಕೆ. ರಾವ್, ವೆಂಕಟರಮಣ ಕಾರಂತ, ಜೆ.ಎಸ್. ಬಲ್ಲಾಳ್, ಡಾ. ಬಿ. ಕೆ. ಮಾರ್ಲ, ಅಮರನಾಥ್, ಬಿ. ಭವಾನಿ ಶಂಕರರಾವ್, ಶ್ರೀಮತಿ ನಳಿನಿ, ಡಿ. ಕೃಷ್ಣ, ಶ್ರೀಮತಿ ಪಾರ್ವತಿ ಡಿ. ಸೆಟ್ಟಿ, ಶ್ರೀಮತಿ ರಾಧಾ, ಎಸ್. ನಾಯಕ್, (ಮೆಂಬರರು). ಕಡೆಗೆ ಶ್ರೀ ಕೆ. ಬಾಲಕೃಷ್ಣರಾವ್, ಎಮ್. ಎಲ್ ಸಿ. ಮತ್ತು ಅವರ ಸಂಗಡಿಗರಿಂದ ಯಕ್ಷಗಾನ ಕಥಾಕಾಲಕ್ಷೇಪ ನಡೆಯಿತು. ಇದರ ಅಧ್ಯಕ್ಷತೆಯನ್ನು ಬೆಂಗಳೂರು ಆಕಾಶವಾಣಿಯ ಸ್ಟೇಶನ್ ಡ್ಯಾರೆಕ್ಟರ್, ಶ್ರೀ ಎ. ಎಮ್. ನಟೇಶರವರು ವಹಿಸಿದ್ದರು.

ಕ್ಕೆ ತಿದ್ದುಪಡಿ ಮಾಡುವ ಸಲಹೆ ಅಂಗೀಕಾರವಾಯಿತು. ಇವರ ಕಾಲಾವಧಿಯ ನಿರ್ಣಯವೂ ಆಗಬೇಕಾಗಿದೆ. ಅವಶ್ಯಕತೆ ಬೀಳುವಾಗ ನಿಯಮಾವಳಿಯನ್ನು ಬದಲಿಸುವುದು ತಪ್ಪಲ್ಲವಾದರೂ ಪದೇ ಪದೇ ಸಂವಿಧಾನಕ್ಕೆ ತಿದ್ದುಪಡಿ ಮಾಡುತ್ತಾ ಬರುವುದೂ ಸಮಂಜಿತವಲ್ಲ.

ರಿಟ್ ಅರ್ಜಿ ತಿರಸ್ಕೃತ

ಎಲ್ಲರ ಕುತೂಹಲ ಕೆರಳಿಸಿದ ರಾಜಾಜಿಯವರು ತನ್ನ ಪೆನ್‌ಶನಿನ ಮೇಲೆ ಆದಾಯ ತೆರಿಗೆ ವಿಧಿಸುವುದರ ವಿರುದ್ಧ ಮದ್ರಾಸ್ ಉಚ್ಚ ನ್ಯಾಯಾಲಯದಲ್ಲಿ ಹಾಕಿದ ರಿಟ್ ಅರ್ಜಿಯ ನಿರ್ಣಯವು ಅವರಿಗೆ ಅನುಕೂಲವಾಗಿ ಹೊರಬರಲಿಲ್ಲ. ಮೂಲಭೂತ ಹಕ್ಕುಗಳಿಗೆ ವ್ಯತ್ಯಯವನ್ನುಂಟು ಮಾಡುವಂತಹ ಕಾಯಿದೆಗಳನ್ನು ಬಿಟ್ಟು ಇತರ ಮೊದಲಿನ ಎಲ್ಲ ಕಾಯಿದೆಗಳಿಗೂ ಅಂತಾರಾಜ್ಯ ವ್ಯಾಪಾರ ಅಥವಾ ಸರಕು ಖರೀದಿಗಳ ಮೇಲೆ ಹೇರುವ ಕರಗಳನ್ನು ಳಿದು ಇತರ ಕರಗಳಿಗೂ ಸಂವಿಧಾನದ ರಕ್ಷಣೆಯಿದೆ. ಇದರಿಂದಾಗಿ ರಾಜಾಜಿಯವರ ವಾದದಲ್ಲಿ ಹುರುಳಿಲ್ಲವೆಂದು ನ್ಯಾಯಾಲಯವು ಅಭಿಪ್ರಾಯಪಟ್ಟಿದೆ. ಭಾರತದ ಭೂತಪೂರ್ವ ಗವರ್ನರ ಜನರಲ್ ಆಗಿ ರಾಜಾಜಿ ರೂ. ೧೫೦೦೦ ಪೆನ್‌ಶನ್ ಪಡೆಯುತ್ತಿದ್ದು ಇದರ ಮೇಲೆ ಆರು ತಿಂಗಳುಗಳಿಗೆ ರೂ. ೫೦೦ರ ಆದಾಯ ತೆರಿಗೆಯನ್ನು ಮದ್ರಾಸು ಕಾರ್ಪರೇಶನ್ ವಿಧಿಸುವುದರ ವಿರುದ್ಧ ರಾಜಾಜಿಯವರು ರಿಟ್ ಅರ್ಜಿ ಸಲ್ಲಿಸಿದ್ದರು.

ಅಂಗವಿಕಲರ ಶಿಕ್ಷಣ

ಅಂಗವಿಕಲರ ಶಿಕ್ಷಣದ ಬಗ್ಗೆ ಸರಕಾರವು ಪ್ರಯತ್ನ ಪಡುತ್ತಿರುವುದಾದರೂ ಅದನ್ನು ವಿಸ್ತೃತಗೊಳಿಸುವುದು ಅವಶ್ಯ. ಕೇಂದ್ರ ಶಿಕ್ಷಣ ಮಂತ್ರಿ ಡಾ| ಶ್ರೀಮಾಲಿಯವರು ಈ ಅಂಗವಿಕಲರ ಶಿಕ್ಷಣಕ್ಕೆ ಪ್ರಾಧಾನ್ಯ ನೀಡುವ ಕುರಿತು ಒತ್ತಾಯ ಮಾಡಿದರು. ಇವರಿಗಾಗಿ ಪ್ರತ್ಯೇಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವುದನ್ನು ಶ್ರೀಮಾಲಿ ವಿರೋಧಿಸುತ್ತಾ ಒಂದಲ್ಲ ಒಂದು ದಿನ ಇವರು ಸಾಮಾನ್ಯ ಮಕ್ಕಳೊಡನೆಯೇ ಕುಳಿತು ಕಲಿಯುವುದು ಮತ್ತು ಸೇರಿ ದುಡಿಯುವುದು ಅನಿವಾರ್ಯವೆಂದು ಹೇಳಿದರು. ವಿಶ್ವವಿದ್ಯಾಲಯ ಶಿಕ್ಷಣದ ಅವಧಿಯಲ್ಲಿ ಅಂಗವಿಕಲ ವಿದ್ಯಾರ್ಥಿಗಳಿಗೆ ಉಚಿತ ಛಾತ್ರವೃತ್ತಿಯನ್ನು ಒದಗಿಸುವ ಸೌಕರ್ಯವನ್ನು ಸರಕಾರವು ನೀಡುತ್ತಿದೆ.

ಮುಂಬಯಿ "ರಾಜಾಪುರ ಸಾರಸ್ವತ ಸಂಘ"ದ— ವಾರ್ಷಿಕ ಮಹಾಸಭೆಯು ತಾ. 22—4—61ರಂದು ಶ್ರೀ ಕೆ. ಅಪ್ಪ ನಾಯಕ್, ಬಿ. ಎ. ಬಿ. ಕಾಮ್., ಎಲ್. ಎಲ್. ಬಿ. ಇವರ ಅಧ್ಯಕ್ಷತೆಯಲ್ಲಿ ಫೋರ್ಬಸ್ ಹಾಲಿನಲ್ಲಿ ಯಶಸ್ವಿಯಾಗಿ ಜರಗಿತು. ಗೌ|| ಕಾರ್ಯದರ್ಶಿ ಶ್ರೀ ವಿ. ಡಿ. ಪ್ರಭುರವರಿಂದ ಗತವರ್ಷದ ವರದಿವಾಚನವಾದ ಬಳಿಕ ಕೋಶಾಧಿಕಾರಿಗಳಾದ ಶ್ರೀ ಯಸ್. ಯಸ್. ನಾಯಕ್‌ರವರು ಸಂಘದ ಲೆಖ್ಖ ಪತ್ರಗಳನ್ನು ಸಭೆಯ ಮುಂದಿಡಲಾಗಿ ಸರ್ವಾನುಮತದಿಂದ ಮಂಜೂರು ಮಾಡಲಾಯಿತು.

ಮುಂದಿನ ಎರಡು ವರ್ಷಗಳ ವ್ಯವಸ್ಥಾಪಕ ಸಮಿತಿಯ ಸದಸ್ಯರನ್ನಾಗಿ ಗಣ್ಯ ಹಾಗೂ ನುರಿತ ಕಾರ್ಯಕರ್ತರೆನಿಸಿರುವ ಹದಿನೇಳು ಮಂದಿ ಸದಸ್ಯರನ್ನು ಚುನಾಯಿಸಲಾಯಿತು

ಸಮಾಜದ ವಿದ್ಯಾರ್ಥಿಗಳಿಗೆ ಕೊಡುವ ವೇತನದ ಬಗ್ಗೆ ಚರ್ಚೆನಡೆದು, ಕಾಲೇಜುಗಳಲ್ಲಿ ಅಭ್ಯಾಸಿಸುತ್ತಿರುವ ಯೋಗ್ಯ ವಿದ್ಯಾರ್ಥಿಗಳಿಗೆ ಹಾಗೂ ಹೈಸ್ಕೂಲುಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಪೈಕಿ ಕೇವಲ ಮಜೂರಿಯಿಂದ ಕಾಲಕ್ಷೇಪ ಮಾಡುತ್ತಿರುವವರ ಮಕ್ಕಳಿಗೆ ಮಾತ್ರ (ಲೋನ್, ಕೊಡಬೇಕಾಗಿಯೂ ಮತ್ತು ಸ್ತ್ರೀ ಶಿಕ್ಷಣಕ್ಕೆ ಉತ್ತೇಜನ ಕೊಡುವುದರ ಸಲುವಾಗಿ ಹೈಸ್ಕೂಲಿನ 9 — 10 — 11 ಈ ತರಗತಿಗಳಲ್ಲಿ ಓದುತ್ತಿರುವ ವಿದ್ಯಾರ್ಥಿನಿಯರಿಂದ ಬಂದ ಅರ್ಜಿಗಳ ಪೈಕಿ ಹೆಚ್ಚು ಗುಣಗಳನ್ನು ಪಡೆದ ಮೂರು ವಿದ್ಯಾರ್ಥಿನಿಯರಿಗೆ (ಪ್ರತೀ ತರಗತಿಯ) ರೂ. 18—00ರಂತೆ ಧರ್ಮಾರ್ಥ ವಿ. ವೇತನ ಕೊಡಬೇಕಾಗಿಯೂ ನಿರ್ಣಯಿಸಲಾಯಿತು. ಇದಲ್ಲದೆ ತಾಂತ್ರಿಕ (Engineering) ಶಿಕ್ಷಣ ಪಡೆಯುವವರಿಂದ ಅರ್ಜಿಗಳು ಬಂದಲ್ಲಿ ಅಂತಹ ಅರ್ಜಿಗಳಿಗೆ ಹೆಚ್ಚಿನ ಗಮನ ಕೊಡಬೇಕೆಂದು ನಿಶ್ಚಯಿಸಲಾಯಿತು.

ಈ ಮೇಲಿನ ವಿದ್ಯಾರ್ಥಿ ವೇತನವನ್ನು ಪಡೆಯಲು ಅರ್ಹರಾದ ವಿದ್ಯಾರ್ಥಿ— ವಿದ್ಯಾರ್ಥಿನಿಯರು ಹಾಗೂ ದಿ|| ನೀರೆ ಶ್ಯಾಮ ನಾಯಕ್‌ರವರ ಸ್ಮರಣಾರ್ಥ ಇಟ್ಟಿರುವ ಧರ್ಮಾರ್ಥ ವಿ. ವೇತನವನ್ನು ಪಡೆಯುವಸಲುವಾಗಿ, ಸಂಸ್ಕೃತ, ಪೌರೋಹಿತ್ಯ ಯಾ ಜೋತಿಷ್ಯ ಇವನ್ನು ಅಭ್ಯಾಸಿಸುವವರು ಜುಲಾಯಿ ತಾ. 15ರ ಒಳಗೆ ತಮ್ಮ ತಮ್ಮ ಅರ್ಜಿಯನ್ನು ಸಂಘದ ಆಫೀಸಿಗೆ ತಲಪುವಂತೆ ಕಳುಹಿಸಬೇಕಾಗಿ ನಿಶ್ಚಯಿಸಲಾಯಿತು.

ಕೊನೆಯದಾಗಿ ಸಭಿಕರ ಭಾಷಣ, ಅಧ್ಯಕ್ಷರ ಭಾಷಣ ಮತ್ತು ಧನ್ಯವಾದ (ಗೌರವ ಕಾರ್ಯದರ್ಶಿಯವರಿಂದ) ಬಳಿಕ ಲಘುಪಹಾರ ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯಗೊಂಡಿತು

ಉಡುಪಿ ಲಯನ್ಸ್ ಕ್ಲಬ್—ಇದರ ಹೊಸ ವರ್ಷದ ಆಡಳಿತ ಸಮಿತಿಗೆ ಈ ಕೆಳಗಿನ ಸದಸ್ಯರು ಆಯ್ಕೆ ಹೊಂದಿದ್ದಾರೆ. ಶ್ರೀ ಕೆ. ಎಸ್. ಕಾಮತ್ (ಅಧ್ಯಕ್ಷ) ಶ್ರೀಗಳಾದ ಟಿ. ಎ. ಪೈ, ಜಿ. ಎಸ್. ನಗರ್‌ಕಾರ್ (ಕಾರ್ಯದರ್ಶಿಗಳು) ಎಚ್. ಎನ್. ರಾವ್ (ಕೋಶಾಧಿಕಾರಿ) ಎನ್ ವಿ. ಕಾಮತ್, ಕು. ಶಿ. ಹರಿದಾಸ ಭಟ್ಟ, ಬಿ. ಜಗನ್ನಾಥ್ ಹೆಗ್ಡೆ (ಉಪಾಧ್ಯಕ್ಷರು) ಎನ್. ಎಸ್. ಪಕ್ಕಳ, (ಲಯನ್ ಟೇಮರ್) ಯು. ಕೆ. ಕಿಣಿ, ಎಸ್. ಅನಂತ ನಾಯಕ್, ಎಸ್. ಕೆ. ಅಮಿನ್, ರಮೇಶ ನಾಯಕ್, ಬಿ. ಸಂಜೀವ ಹೆಗ್ಡೆ, ಪಿ. ಮೋಹನ ಕುಡುವ (ಡೈರೆಕ್ಟರರು).

ಕಸ್ತೂರ್ಬಾ ಹೊಸ್ಪಿಟಲಿನ ಉದ್ಘಾಟನೆ— ಮಣಿಪಾಲದಲ್ಲಿ ಕಸ್ತೂರ್ಬಾ ಮೆಡಿಕಲ್ ಕಾಲೇಜ್ ಮತ್ತು ದ. ಕ. ಜಿಲ್ಲಾ ಮೆಡಿಕಲ್ ರಿಲೀಫ್ ಸೊಸೈಟಿಯವರ ಸಂಯುಕ್ತ ನೇತೃತ್ವದಲ್ಲಿ ನಿರ್ಮಾಣವಾಗಲಿರುವ ಕಸ್ತೂರ್ಬಾ ಹೊಸ್ಪಿಟಲಿನ ಉದ್ಘಾಟನೆಯು ಇದೇ ತಾ. 7ನೇಯ ಬೆಳಿಗ್ಗೆ ಅಖಿಲಭಾರತ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎನ್. ಸಂಜೀವ ರೆಡ್ಡಿಯವರಿಂದ ನೆರವೇರಿಸಲ್ಪಡುವುದು. ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಎಸ್. ನಿಜಲಿಂಗಪ್ಪನವರು ವಹಿಸುವರು. ಈ ಆಸ್ಪತ್ರೆಯು ಪ್ರಕೃತ 150 ಬೆಡ್‌ಗಳುಳ್ಳದ್ದಾಗಿ ಯಥಾವಕಾಶವಾಗಿ 1,000 ಬೆಡ್‌ಗಳ ದೊಡ್ಡ ಆಸ್ಪತ್ರೆಯಾಗುವುದೆಂದು ತಿಳಿದು ಬರುತ್ತದೆ.

ಸ್ಥಾಪಕರ ದಿನಾಚರಣೆ— ಎಕೇಡೆಮಿ ಓಫ್ ಜನರಲ್ ಎಡ್ಯುಕೇಶನಿನ ಸಂಸ್ಥೆಗಳನ್ನು ಸ್ಥಾಪಿಸಿದ ಡಾ| ಟಿ. ಎಂ. ಎ. ಪೈಗಳ 64ನೇ ಹುಟ್ಟು ಹಬ್ಬದ ದಿನಾಚರಣೆಯು ಸತ್ಕಾರ ಸಮಿತಿಯ ಆಶ್ರಯದಲ್ಲಿ ಎಪ್ರಿಲ್ 3ರಂದು ಉಡುಪಿಯ ಮುಕುಂದ ನಿವಾಸದಲ್ಲಿ ಶ್ರೀ ಆರೂರು ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಆರಂಭದಲ್ಲಿ ಬೇರೆ ಬೇರೆ ಸಂಘಸಂಸ್ಥೆಗಳಿಂದ ಡಾ| ಪೈಗಳಿಗೆ ಹಾರಾರ್ಪಣೆ ನಡೆಯಿತು. ಬಳಿಕ ಸತ್ಕಾರ ಸಮಿತಿಯ ಪರವಾಗಿ ಶ್ರೀ ಟಿ ಎ. ಪೈಗಳು ಸ್ವಾಗತ ಭಾಷಣ ಮಾಡುತ್ತಾ ಡಾ| ಪೈಗಳಲ್ಲಿರುವ ಗುಣಾದರ್ಶಗಳನ್ನೂ ಕರ್ತೃತ್ವ ಶಕ್ತಿ ಸಾಮರ್ಥ್ಯಗಳನ್ನೂ ಕಾರ್ಯದಕ್ಷತೆಯನ್ನೂ ಅವರು ಸ್ಥಾಪಿಸಿದ ಸಿಂಡಿಕೇಟ್ ಬ್ಯಾಂಕ್, ಎಂ. ಜಿ. ಎಂ. ಕಾಲೇಜ್, ಕಸ್ತೂರ್ಬಾ ಮೆಡಿಕಲ್ ಕಾಲೇಜ್ ಮೊದಲಾದ ಶೈಕ್ಷಣಿಕ ಸಂಸ್ಥೆಗಳ ಪೂರ್ವೇತಿಹಾಸವನ್ನೂ ಈಗಿನ ಪ್ರಗತಿಯನ್ನೂ ವಿವರಿಸಿದರು. ತರುವಾಯ ಡಾ| ಜಿ. ಬಿ. ವೆಲಿಯತ್ ಮತ್ತು ಕು. ಶಿ. ಹರಿದಾಸ ಭಟ್ಟರು ಡಾ| ಪೈಗಳಲ್ಲಿರುವ ಮಹಾತ್ಮ, ವ್ಯವಹಾರಿಕ ಜಾಣ್ಮೆ ಸತತ ಕಾರ್ಯಶೀಲತೆ ಮೊದಲಾದವುಗಳ ಕುರಿತು ಭಾಷಣವಿತ್ತರು. ಡಾ| ಪೈಗಳು ಉತ್ತರಕೊಡುತ್ತಾ ತಮ್ಮ ಎಲ್ಲಾ ಸಂಸ್ಥೆಗಳ ಶ್ರೇಯಸ್ಸು ಜನತೆಯ ಸಹಾಯ ಸಹಕಾರಗಳಿಂದಲೇ ಸಾಧ್ಯವಾಯಿತೆಂದೂ ಸತ್ಕಾರ್ಯಗಳಿಗೆ ಯಾವಾಗಲೂ ಜನಗ ಪ್ರೋತ್ಸಾಹ ನೀಡುತ್ತದೆಂದೂ ಹೇಳಿ ಕೃತಜ್ಞತೆಗಳನ್ನು ಅರ್ಪಿಸಿದರು. ಅಧ್ಯಕ್ಷ ಶ್ರೀ ಆರೂರು ಡಾ| ಪೈಗಳ ಪ್ರತಿಭೆ. ಎಲ್ಲರೊಡನೆ ಗೆಳೆತನ ಒಲವು, ಸಂಪಾದಿಸುವ ವಿಶಾಲ ಮನೋಭಾವಾದಿಗಳನ್ನು ಕೊಂಡಾಡಿ ಮಾತನಾಡಿದರು. ಕೊನೆಗೆ ಎ. ಜಿ. ಅಲ್ಸೆಯವರು ಧನ್ಯವಾದಗಳನ್ನರ್ಪಿಸಿದರು. ಕಾರ್ಯಕ್ರಮಗಳ ಸೂತ್ರಧಾರತ್ವವನ್ನು ಶ್ರೀ ಟಿ. ರಮೇಶ್ ಪೈಗಳು ಕಲಾತ್ಮಕವಾಗಿ ನೆರವೇರಿಸಿದರು.

ಎಕೇಡೆಮಿ ಓಫ್ ಜನರಲ್ ಎಡ್ಯುಕೇಶನ್—ಇದರ ಸುಪ್ರೀಮ್ ಗವರ್ನಿಂಗ್ ಬೋಡಿಯ ಸಭೆಯು ಕಳೆದ ತಾ. 30ರಂದು ಮುಕುಂದ ನಿವಾಸದಲ್ಲಿ ಉಪಾಧ್ಯಕ್ಷ ಶ್ರೀ ಆರೂರು ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಆರಂಭದಲ್ಲಿ ಕಸ್ತೂರ್ಬಾ ಮೆಡಿಕಲ್ ಕಾಲೇಜ್ ಟ್ರಸ್ಟಿನ ಅಧ್ಯಕ್ಷರಾಗಿದ್ದ ಡಾ| ಯಂ. ಪಿ. ಮಲ್ಯ ಎಮ್. ಬಿ ಎಮ್. ಕಾಲೇಜ್ ಟ್ರಸ್ಟಿನ ಅಧ್ಯಕ್ಷರಾಗಿದ್ದ ಶ್ರೀ ಕೊಟ್ಟಿಕಾರ್ ಪದ್ಮನಾಭ ಪೈ ಇವರ ನಿಧನದ ಬಗ್ಗೆ ದುಃಖ ಸೂಚಿಸಲಾಯಿತು. ಅಮೇರಿಕದ ಪ್ರಖ್ಯಾತ ಇಂಜಿನೀಯರ್ ಶ್ರೀ ಫಿಲಿಪ್ ಮಾರ್ಕೋ ವಿಡ್ಸ್ ಇವರಿಗೆ ಎಕೇಡೆಮಿಯ ಗೌರವ ಫೆಲೋಶಿಪ್ ಕೊಡುವ ನಿರ್ಣಯವಾದ ಬಳಿಕ ರಿಜಿಸ್ಟ್ರಾರ್ ಟಿ. ಎಂ. ಎ. ಪೈಗಳವರು ಎಕೇಡೆಮಿಯ ಶೈಕ್ಷಣಿಕ ಸಂಸ್ಥೆಗಳ ಪ್ರಗತಿಪರ ವರದಿಯನ್ನು ಓದಿದರು. ಅಧ್ಯಕ್ಷ ಭಾಷಣವಾದ ಮೇಲೆ ಶ್ರೀ ಟಿ. ರಮೇಶ್ ಪೈಗಳವರು ಧನ್ಯವಾದಗಳನ್ನರ್ಪಿಸಿದರು.

ಆರೋಗ್ಯ ಮಂತ್ರಿ ಡಾ. ಕೆ. ಕೆ. ಹೆಗ್ಡೆ—ಯವರು ಇದೇ ತಾ 2ಕ್ಕೆ ಮಂಗಳೂರಿಗೆ ಬಂದು ತಾ 10ರ ವರೆಗೆ ಜಿಲ್ಲಾ ಸಂಚಾರ ಮಾಡಲಿರುವರು. ತಾ 5ನೇ ಸಂಜೆ ಗಂಟೆ 5ಕ್ಕೆ ಹೆಲ್ತ್, ಎಜುಕೇಶನ್ ಎಂಡ್ ಸೋಶಿಯಲ್ ವೆಲ್‌ಫೇರ್ ಸೊಸೈಟಿಯ ಮೂಲಕ ಉಡುಪಿ ಅಜ್ಜರಕಾಡಿನಲ್ಲಿ ನವೀನವಾಗಿ ಕಟ್ಟಲ್ಪಡುವ ಸರಕಾರಿ ಆಸ್ಪತ್ರೆ ಕಟ್ಟಡಕ್ಕೆ ಮುಖ್ಯಮಂತ್ರಿ ಶ್ರೀ ಬಿ. ಡಿ ಜತ್ತಿಯವರಿಂದ ಶಂಕುಸ್ಥಾಪನೆಯಾಗಲಿರುವ ಸಮಾರಂಭದ ಅಧ್ಯಕ್ಷತೆ ವಹಿಸುವರು.

ಉಪಾಹಾರ ಸಮಾರಂಭ— ಶ್ರೀ ಮೂನಂಜೆ ಶೇಷಗಿರಿರಾಯರು ತಮ್ಮ ಪುತ್ರ ಶ್ರೀ ಕೃಷ್ಣಮೂರ್ತಿ ರಾಯರಿಗೆ ಶ್ರೀ ವಕೀಲ್ ಪಿ. ಸಂಜೀವರಾಯರ ಪುತ್ರಿ ಸೌ ಕುಮುದಿನಿಯೊಂದಿಗೆ ಆದ ವಿವಾಹವಾದ ಸಂಬಂಧ ಉಡುಪಿ ಕಡಿಯಾಳಿಯಲ್ಲಿರುವ ದುರ್ಗಾನಿವಾಸದಲ್ಲಿ ತಾ 2ನೇ ಸಂಜೆ ಉಪಾಹಾರ ಸಮಾರಂಭವೊಂದನ್ನು ಏರ್ಪಡಿಸಿದ್ದರು. ಇದಕ್ಕೆ ಮಾನನೀಯರನೇಕರು ಆಗಮಿಸಿದ್ದು ವಧೂವರರನ್ನು ಆಶೀರ್ವದಿಸಿದರು.

ಮೇ ದಿನಾಚರಣೆ—ಇದೇ ತಾ. 1ನೇ ಸಂಜೆ ಉಡುಪಿ ಇಗರ್ಜಿ ವಠಾರದಲ್ಲಿ ಉಡುಪಿ ಡೊನ್ ಬೊಸ್ಕೊ ಕ್ಲಬ್ ಮತ್ತು ವ್ಯಾ. ಸಿ. ಡಬ್ಲ್ಯು. ಸಂಯುಕ್ತ ಆಶ್ರಯದಲ್ಲಿ ಶಾಲಾ ಇನ್ಸ್‌ಪೆಕ್ಟರ್ ಶ್ರೀ ಬಿ. ಪಿಂಟೊ ಇವರ ಅಧ್ಯಕ್ಷತೆಯಲ್ಲಿ ಮೇ ದಿನಾಚರಣೆಯು ಆಚರಿಸಲ್ಪಟ್ಟಿತು. ದಿನಾಚರಣೆಯ ಅಂಗವಾಗಿ ಕ್ಲಬ್ಬಿನ ಕಲಾವಿದರು ಶ್ರೀ ಸಂತಾನ ಡಿಸೋಜರು ಬರೆದ ಮಣ್ಣಿನ ಗೊಂಬೆ ಎಂಬ ತುಳು ನಾಟಕವನ್ನು ಅಭಿನಯಿಸಿದರು.

ಶ್ರೀ ಎ. ಬಿ. ಶೆಟ್ಟಿ
ಸ್ಮಾರಕ ನಿಧಿಗೆ
ಸಹಾಯ ಮಾಡಿರಿ

'ನಚಿಕೇತ'ರ ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ
ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.

120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

ಮಾರಾಟಗಾರರು: ನವಭಾರತ ಬುಕ್ ಡಿಪೊ, ಉಡುಪಿ.

ಶುದ ಹರಟೆ

ಸುಲಭಸಾಧ್ಯ ಪುರಾಣಂ

ಹೆಚ್ಚಿನದನ್ನು ಬಯಸದೆ ಸಿಕ್ಕಿದುದನ್ನು ನಿರಾಕರಿಸದೆ ಅದರಿಂದಲೇ ತೃಪ್ತನಾಗುವ ದೇವರು ಶಿಲಾಮೂರ್ತಿಯಾಗಿಯೇ ಇರುವುದು ಉಚಿತವೆನ್ನುತ್ತಾರೆ, ಹರಟೆಗಾರರು.

ದೇವರು ಸರ್ವಾಂತರ್ಯಾಮಿಯೆಂಬುದನ್ನು ಪ್ರಾಥಮಿಕ ಶಾಲೆಯ ಒಂದೆರಡನೆ ವರ್ಗದಲ್ಲಿಯೇ ಕಲಿತುಕೊಂಡಿದ್ದರೂ ಅದರ ಅರ್ಥವೇನೆಂದು ಮಾತ್ರ ಆಗ ತಿಳಿದಿರಲಿಲ್ಲ. ಮುಂದೆ "ಅಣುರೇಣು ತೃಣ ಕಾಷ್ಠಗಳಲಿರುವವನವನು, ಕಣ್ಣುಗಳನು ತೆರೆದವಗೆ ಗೋಚರಿಸುತಿಹನು" ಎಂಬ ಕವಿ ಮಾತನ್ನೂ ಇದಕ್ಕೆ ಪಂಡಿತರು ಮಾಡಿದ ವ್ಯಾಖ್ಯಾನದಿಂದಲೂ ಕೇವಲ ಎರಡೇ ಕಣ್ಣುಗಳಿರುವ ನನಗೆ ಆತನನ್ನು ಕಾಣುವ ಕಷ್ಟ ತಪ್ಪಿತು ಎಂಬ ಸಮಾಧಾನವಾಯಿತು. ಎಲ್ಲೆಲ್ಲಿಯೂ ಇರುವನು ಎಂದು ಹೆಸರಿಸಿದ ಪರಿಯನ್ನು ರಂಗಸ್ಥಳದ ಕಂಬವಲ್ಲದ ಕಂಬವೊಂದರಲ್ಲಿ ಮಾತ್ರ ತೋರಿಸಲು ಶಕ್ತನಾದ ಬಯಲಾಟದ ಪ್ರಹ್ಲಾದ, ಹರಿಯು ಶೃಂಗಾರ ಅಪೂರ್ಣವಾಗಿದ್ದು ಆತ ಚೌಕಿಯಲ್ಲಿಯೇ ಉಳಿದಿದ್ದುದರಿಂದ ನಿರಾಶೆಗೊಂಡ ಘಟನೆಯೊಂದು ನೆನಪಿಗೆ ಬಂದಾಗ, ಈ ಪ್ರಹ್ಲಾದನು ತ್ರಿನೇತ್ರನಾಗಿಲ್ಲವೆಂಬುದರ ಸತ್ಯಾನುಭವವಾಯಿತು. ಆದುದರಿಂದ ಬುದ್ಧಿ ಬೆಳೆಯುತ್ತ ಬಂದಂತೆ ವಿಚಾರಶಕ್ತಿ ಬಲಿಯುತ್ತ ಹೋದಂತೆ ದೇವರಾದವರು ಪರರಿಂದ ಮಾಡಿಸುವ ಕಾರ್ಯಗಳನ್ನು ಸ್ವಯಂ ಮಾನವರು ಸ್ವಹಸ್ತಗಳಿಂದಲೇ ಪೂರೈಸುವ ಈ ಕಲಿಯುಗದಲ್ಲಿ ದೇವರು ಕಲ್ಲಗೊಂಬೆಗಳಾಗಿ ದೇವಾಲಯಗಳಲ್ಲಿ ಕುಳಿತರು ಎಂಬ ವಿಚಾರ ಸ್ಫುರಿಸಿತು. ಹರಿಶ್ಚಂದ್ರನ ದಾನಶೀಲತೆಯಿಂದ ಕಲ್ಪತರು ಸ್ವರ್ಗಕ್ಕೆ ಓಡಿ ಹೋಯ್ತು, ಸ್ಪರ್ಶಮಣಿ ಕಲ್ಲಾಯ್ತು, ಚಂದನ ಮರವಾಯ್ತು ಎಂದು ಕೇಳುತ್ತೇವೆ. ಹಾಗೆಯೇ ದೇವರು ಕಲ್ಲಾಗಿ ಹೋದರು—ಎಂಬ ಸಿದ್ಧಾಂತ ಮಾಡುವುದು ಸ್ವಾಭಾವಿಕವೇ

ಇಂತಹ ಜೀವವಿಲ್ಲದ ದೇವರಿಗೆ ನಾನಾ ವಿಧದ ಅಭಿಷೇಕ, ನೈವೇದ್ಯ, ಅರ್ಚನೆಗಳು ನಡೆಯುವುದನ್ನು ಕಾಣುವಾಗ ಯಾವನೇ ವಿವೇಕಿಯು ಎದೆ ಧಸಲ್ಲೆನ್ನಬೇಕು. ಉಣ್ಣದ ಅಂಗಕ್ಕೆ ಬೋನವ ಹಿಡಿಯುವುದರಿಂದ ಸಮಯ ನಷ್ಟವಾದೀತೇ ಹೊರತು ಬೋನ ಹಾರಿ ಹೋಗುವುದಿಲ್ಲ. ಮದುವೆ ಮುಂಜಿಗಳ ಸೀಸನ್ ಹೊರತು ಉಳಿದ ಕಾಲಗಳಲ್ಲಿ ಬೀದಿಯಲ್ಲಿ ಹಾರುವ ಹೂಗಳು ಕಲ್ಲಗೊಂಬೆಯನ್ನು ಅಲಂಕರಿಸಲಿ; ಕಸದಲ್ಲಿಯೂ ರಸವನ್ನು ಬಿಟ್ಟನಲ್ಲಿಯೂ ಮೂರು ಬೆಳೆಯನ್ನು, ಪೊಟ್ಟುಬಾವಿಯಲ್ಲೂ ನೀರನ್ನು ಕೇವಲ ಅಂಕೆಸಂಖ್ಯೆಗಳ ಬಲದಿಂದ ಕಾಣುವ ಸಾಮರ್ಥ್ಯವಿರುವ ಸ್ವತಂತ್ರ ಭಾರತೀಯರು ತಮ್ಮ ಸಹಜ ಸೌಂದರ್ಯೋಪಾಸನೆಗೆ ಅದನ್ನು ಮಾತ್ರ ಕೈಯಾಗಿಸಲಿ; ಅದರಲ್ಲೇ ತನ್ಮಯರಾಗಲಿ. ಆದರೆ, ನೀರೇ ಸಿಗದಲ್ಲಿ ನೀರಾಭಿಷೇಕ, ಇನ್ನು ತುಪ್ಪ, ಬೆಣ್ಣೆ, ಎಣ್ಣೆ, ಜೇನುತುಪ್ಪ, ಹಾಲು ಕೆಲವೆಡೆ ರಜತ ಕನಕಗಳ ಅಭಿಷೇಕವನ್ನು ದೇವರಿಗೆ ಮಾಡಿಸುವ ಕ್ರಮಗಳು ನಿಜವಾಗಿಯೂ .ನಿರರ್ಥಕವೇ ಸರಿ. "ನೀವು ಮನೆಯಲ್ಲೇ ಇರಿ; ಕೊಲ್ಲಾಪುರದ ಮಹಾಲಕ್ಷ್ಮಿಗೆ ಅಭಿಷೇಕ ಮಾಡಿಸಿರಿ." ಎಂಬ ಮಾದರಿಯ ಜಾಹಿರಾತುಗಳನ್ನು ಕಂಡು ಕಸಿವಿಸಿಯಾಗುತ್ತಿದೆ. ದೇವರ ಈ ಗೊಂಬೆಗಳಿಗೆ ಮಾನವನಿಗೂ ಭಕ್ಷ್ಯದ ಪದಾರ್ಥಗಳನ್ನು ಮೆತ್ತಿ ಅವನ್ನು ವ್ಯರ್ಥಮಾಡುವುದು ಎಂಜಲೆಲೆಯಲ್ಲಿ ಆಹಾರ ವಸ್ತುಗಳನ್ನು ಬಿಸುಡುವುದಕ್ಕಿಂತ ಹೀನ. ಎರಡನೆಯದು ನಾಯಿ—ಕಾಗೆಗಳ ಹೊಟ್ಟೆಯನ್ನಾದರೂ ತಣಿಸಬಲ್ಲುದು; ಆದರೆ ಮೊದಲನೆಯ ಅಪರಾಧಿಗಳು ನಾಯಿ ಕಾಗೆಗಳಿಗಿಂತ ಕಡು ಕಷ್ಟದವರು. ಅದರಲ್ಲೂ ಮನೆಯಲ್ಲೇ ಕುಳಿತು ಪುತ್ತಳಿ ಭಕ್ತರ ಪರವಾಗಿ ಅಭಿಷೇಕ ಸೇವೆ ಮಾಡುವವರು ತಮ್ಮ ಉದರ ಸೇವೆಯನ್ನೂ ಸರಿಯಾಗಿ ಮಾಡಿಕೊಳ್ಳುತ್ತಾರೆ ಎನ್ನುವುದು ಸಿದ್ಧಾಂತ. ಭಕ್ತ ಮಹಾ ಜನರು ತಮ್ಮ ಮನೆಯಲ್ಲೇ ಕುಳಿತು ಅಭಿಷೇಕ ಸೇವೆ ನಡೆಯಲಿಯೆಂದು ಆಜ್ಞೆಯಿತ್ತರೆ, 'ಆಯಿತು' ಎಂದು ಮನೆಯಲ್ಲೇ ಕುಳಿತವರ ಉತ್ತರ ಸಿಗುವುದು ಅಪರೂಪವಲ್ಲ. ದೇವರು ಸರ್ವಾಂತರ್ಯಾಮಿಯಾದ ಪಂಡರ ಮನೆಗಳಲ್ಲಿ ಸದಾ ಪ್ರಸನ್ನನಾಗಿಯೇ ದೇವರಲ್ಲವಾದರೆ ದಿಂಡರು) ಇದ್ದ 'ಇರುತ್ತಾರೆ, ದೇವರ ಹೆಸರಿನಲ್ಲಿ ಈ ದಿಂಡರು ಆ ಸೇವೆಯತ್ತು ಮಾಡಿಸಿಕೊಂಡರೆ, ಎಲ್ಲರಲ್ಲಿಯೂ ಇರುವ ಆತನಿಗೇನೇ ಸೇರಬೇಕಷ್ಟೆ? ಭಕ್ತ ಮಹಾಜನರಿಗಾದರೂ ನಾಲ್ಕೈದು ರೂಪಾಯಿಗಳೊಳಗೇ ದೇವರ ಮಹಾ ಸೇವೆಯನ್ನು ಕುಳಿತಲ್ಲಿಂದಲೇ ಮಾಡಿಸುವ ಮಿತವ್ಯಯ—ಅಥವಾ ಅಲ್ಪ ಉಳಿತಾಯ ಯೋಜನೆಯು ಲಾಭದಾಯಕವಾಗಿ ಕಂಡರೆ ಸರಿಯೇ. ಆತನಿಗೆ ಕೊಟ್ಟನೆಂಬ ತೃಪ್ತಿ— ಸಮಾಧಾನ. ಈತನಿಗೆ ತನ್ನ ಬಲೆಗೆ ಪ್ರಾಣಿಬಿತ್ತಲ್ಲ ಎಂಬ ಸಮಾಧಾನ ಉಭಯತರರಿಗೂ ಸುಪ್ರಸನ್ನತೆ. ಮೂಕ ದೇವರ ಗೊಂಬೆ ಮಾತಾಡುವುದುಂಟೆ, ಬಂತು, ಇಲ್ಲ ಎಂತ! ಮಾನವನೇ 'ಅಸ್ತು' ಎಂದು ವರದಾನ ನೀಡುವವಷ್ಟು ಮುಂದಾಗುವಾಗ ಆತನ ಆವಶ್ಯಕತೆಯಾದರೂ ಏನಿದೆ? ಆತನು ಸಹನಾಪೂರ್ಣ ಕಲ್ಲಗೊಂಬೆ—ಶಿಲಾ ಮೂರ್ತಿಯಾಗಿರುವುದರಿಂದಲೇ ಇದನ್ನೆಲ್ಲಾ ನೋಡಿ ಸಹಿಸಿಕೊಳ್ಳುತ್ತಿದ್ದಾನೆ. ತನ್ನ ಮೈಮೇಲೆ ಸಿಕ್ಕಿದ್ದನ್ನು ಮೆತ್ತಿ ಹಾರುವ ನೊಣಗಳನ್ನು ಓಡಿಸಲು ಡಿ. ಡಿ. ಟಿ ಚಿಮುಗಿಸಿ ವಾಸನೆ ಬರಿಸಿದರೂ ಆತ ಮೌನನಾಗಿದ್ದಾನೆ—ಸುಖ ದುಃಖ ಎಲ್ಲವನ್ನೂ ಸಮಾನವೆಂದು ಬಗೆದು. ಬಾವಲಿಗಳ ಗಾನವನ್ನು ಸವಿಯುತಿದ್ದಾನೆ, ಕತ್ತಲೆಯ ಗುಡಿಯೊಳಗೆ, ಕತ್ತಲೆಯ ಕೋಳಿಗೂಡಿನೊಳಗೆ ಅದೇಷ್ಟೋ ಶತಶತ ವರ್ಷಗಳಿಂದ ಉಪಸ್ಥಿತನಿದ್ದಾನೆ. ನಾವು ಹೇಳಿದ ಹಾಗೆ ಕೋಣ ಕೇಳದೆ ಹೋದರೆ, ಕೋಣ ಹೋದತ್ತ ನಾವು ಹೋಗಬೇಕೆಂಬ' ಲೋಕ ನ್ಯಾಯದಂತೆ ದೇವರು ಹೇಳಿದಂತೆ ನಾವು ನಡೆಯಲು ಸಿದ್ಧರಿಲ್ಲದಾಗ, ಮಾನವರು ಭಕ್ತಿಭಾವದಿಂದ ತನ್ನನ್ನು ಕಾಣುತ್ತಿರುವುದನ್ನೇ ತನ್ನ ಸೌಭಾಗ್ಯವೆಂದುಕೊಂಡು ಆತ ದೊರಕಿಸಿದ ದ್ರವ್ಯಗಳಿಂದ ಇಷ್ಟಾರ್ಥ ಸಿದ್ಧಿಯಾಯಿತೆಂದು ತೃಪ್ತಿಪಟ್ಟುಕೊಳ್ಳಬೇಕು. ಆತನು ದೃಢಕಾಯನೂ ನಿರಾಮಯನೂ ಆದ ಪಾಷಾಣ ಹೃದಯಿಯಾಗಿಲ್ಲವಾದರೆ, ಅವನೆಂದೋ ಇಹಲೋಕ ತ್ಯಾಗಮಾಡಿ ಮುಕ್ತನಾಗುತಿದ್ದ. ನೀವೇನೆನ್ನುತ್ತೀರಿ? —ರಾಶಿ.

ಅಮೇರಿಕೆಯ ಅಣುಶಕ್ತಿ ತಜ್ಞ ಡಾ। ಎಡ್ವರ್ಡ್ ಟೆಲ್ಲರ್ ಪಿಯಾನೋ ಬಾರಿಸುತ್ತಿರುವುದು.

ಕನ್ನಡ ಪುಸ್ತಕಗಳಿಗೆ—
ಮತ್ತು
ಶಾಲೆಗಳಿಗೆ ಬೇಕಾಗುವ
ಯಾವತ್ತೂ ಫಾರ್ಮುಗಳೂ
ಹಾಜರಿ ರಿಜಿಸ್ಟ್ರಗಳೂ
ಕಥೆಕಾದಂಬರಿ ಇತ್ಯಾದಿಪುಸ್ತಕಗಳಿಗೆ
ನವಭಾರತ ಪುಸ್ತಕ ಭಂಡಾರ
ಉಡುಪಿ

ವಿಶ್ವದಲ್ಲೆಲ್ಲಾ ಕವೀಂದ್ರ ರವೀಂದ್ರರ
ಶತಮಾನೋತ್ಸವ ಆಚರಿಸಲ್ಪಡುತ್ತಿದೆ.
ಈ ಸುಮುಹೂರ್ತದಲ್ಲಿ
ವಿಶ್ವಕವಿ ಟಾಗೋರರ ಪುಣ್ಯಸ್ಮರಣೆಗಾಗಿ
ಪ್ರಕಟವಾದ ಕಿರುಗಾಣಿಕೆಗಳು
ಚಿತ್ರಾಂಗದೆ
(ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಅವರಿಂದ ಅನುವಾದಿತ)
ರವೀಂದ್ರನಾಥರ ಕಿರುಗತೆಗಳು
ಶ್ರೀ ಹನುಮಂತ ರಾವ್ ಮೊಂಜರೇಕರ, ಕಾರವಾರ ಅವರಿಂದ ಅನುವಾದಿತ
ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್,
ನವಯುಗ ಪ್ರೆಸ್, ಉಡುಪಿ.

ದಿ ವಿಜಯ ಬೇಂಕ್ ಲಿಮಿಟೆಡ್
ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ: 1931
ರಿಜಿಸ್ಟರ್ಡ್ ಆಫೀಸು:
ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು-3, ಸೌತ್ ಕೆನರಾ.
ಕಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡ 5ರ ವರೆಗೆ ಹೆಚ್ಚಿಸಲಾಗಿದೆ.
ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ಪಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲಾಗುತ್ತದೆ.
ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ.

ಅಭಿಪ್ರಾಯ:

ಮುಂಬಯಿ ಕನ್ನಡಿಗರ ಡೈರೆಕ್ಟರಿ

ಮುಂಬಯಿಯ ಕರ್ನಾಟಕ ಸಂಘವು ಮುಂಬಯಿಯ ಕನ್ನಡಿಗರ ಡೈರೆಕ್ಟರಿಯನ್ನು ಪ್ರಕಟಿಸಿದೆ. ಇದರ ಕಾರ್ಯವು ಯಶಸ್ವಿಯಾಗಿ ನಡೆದಿಲ್ಲ; ಸಮಗ್ರ ಕನ್ನಡಿಗರ ಡೈರೆಕ್ಟರಿ ಇದಾಗಿಲ್ಲವೆನ್ನುತ್ತಾರೆ, ಲೇಖಕರು.

ಶ್ರೀ ಬಿ. ರಾಘವ ರಾವ್, ಮುಂಬಯಿ.

ಸುಮಾರು ಹತ್ತು ವರ್ಷಗಳಿಂದ ನಾವು ಕೇಳುತ್ತ ಬಂದಿರುವ ಒಂದು ಮಾತು; ಮುಂಬಯಿಯಲ್ಲಿ ಸುಮಾರು ಮೂರು ಲಕ್ಷಕ್ಕು ಮೀರಿ ಕನ್ನಡಿಗರಿದ್ದಾರೆನ್ನುವದು. ಮುಂಬಯಿಯಲ್ಲಿರುವ ಕನ್ನಡಿಗರ ಒಂದು ನಿರ್ದಿಷ್ಟ ಸಂಖ್ಯೆ ಸಿಗಬೇಕೆಂದು ಮತ್ತು ನಮ್ಮವರ ಪರಿಚಯ ಬೆಳೆಸಿಕೊಳ್ಳಬೇಕೆನ್ನುವ ಉದ್ದೇಶವಿರಿಸಿಕೊಂಡು ಕರ್ನಾಟಕ ಸಂಘವು "ಕನ್ನಡಿಗರ ಕೈಪಿಡಿ"ಯ ಒಂದು ಸಾಹಸಕ್ಕೆ ನಾಲ್ಕು ವರ್ಷಗಳ ಹಿಂದೆ ಕೈಹಾಕಿತು. ಮೂಲತಃ ಅದರ ಉದ್ದೇಶವು ಕನ್ನಡದಲ್ಲಿಯೇ ಇದನ್ನು ಪ್ರಕಟಿಸಬೇಕೆನ್ನುವದಾಗಿತ್ತು. ಆದರೆ ಈಗ ಕೆಲವು ಕಾರಣಗಳನ್ನು ಮುಂದಿರಿಸಿ ಇಂಗ್ಲೀಷಿನಲ್ಲಿ ರೂಪತಾಳಿ ಹೊರ ಬಿದ್ದಿದೆ.

ಮುಂಬಯಿಯ ಕನ್ನಡ ಜನತೆಯ ಸಂಘಟನೆಗೆ ನೆರವಾಗಬಲ್ಲ ಈ ಒಂದು ಉತ್ತಮ ಕೆಲಸ ಹೀಗಾಗ ಬಾರದಿತ್ತು. ಸಂಸ್ಮರಣೀಯವಾಗಿ ಚಿರಕಾಲವುಳಿಯಬಲ್ಲ ಈ ಸಾಹಸದ ಹಿಂದೆ ಹಲವಾರು ಮಂದಿಯ ಪರಿಶ್ರಮದ ಫಲವಿದೆ, ಈ ಕಾರ್ಯಕ್ಕೆ ಕನ್ನಡಿಗರಿಂದ ಸಂಪೂರ್ಣ ಸಹಕಾರ ದೊರೆತಿದೆ. ಹೆಚ್ಚಿನ ಎಲ್ಲಾ ಕನ್ನಡ ಸಂಘಗಳು ಈ ಕಾರ್ಯದಲ್ಲಿ ನೆರವಾಗಿವೆ. ಆಯಾಯ ಸ್ಥಳಗಳ ಸಂಘಗಳು ಸ್ಥಾನಿಕ ಸ್ಥಳಗಳಲ್ಲಿರುವ ಕನ್ನಡಿಗರ ಹೆಸರು, ವಿಳಾಸಗಳನ್ನು ಒಪ್ಪಿಸಿವೆ. ಗಿರಣಿ ಕಾರ್ಖಾನೆಗಳಿಂದ ಕನ್ನಡಿಗರ ಹೆಸರು ವಿಳಾಸಗಳನ್ನು ಪಡೆಯಲಾಗಿದೆ. ಹೀಗಿದ್ದೂ ಇಲ್ಲಿ ಪ್ರಕಟಿಸಲ್ಪಟ್ಟುದು ಕೇವಲ ಹತ್ತೊಂಭತ್ತು ಸಾವಿರ ಮಂದಿಯ ಹೆಸರು, ವಿಳಾಸಗಳು. ಲಕ್ಷಾಂತರ ಮಂದಿ ಎಲ್ಲಡಗಿದ್ದಾರೆಯೋ ತಿಳಿಯದು. ಕರ್ನಾಟಕ ಸಂಘವು 'ಕೈಪಿಡಿ'ಯ ನಾಲ್ಕನೆಯ ವಿಭಾಗದಲ್ಲಿ ಇಪ್ಪತ್ತೈದು ಸಾವಿರ ಮಂದಿಯ ಹೆಸರುಗಳಿವೆಯೆಂದು ದಿಟ್ಟತನದಿಂದ ಸಾರಿದೆ. ಈ ಇಪ್ಪತ್ತೈದು ಸಾವಿರದಲ್ಲೂ ಐದಾರು ಸಾವಿರ ಮಂದಿಯ ಹೆಸರು ಎಲ್ಲಿದೆಯೋ?

ಕರ್ನಾಟಕ ಸಂಘವು ಇದರ ಮೂಲಕ ಸಾಧಿಸಿದ್ದೇನು? ಸಾರ್ವಜನಿಕರ ಹಣವನ್ನು ದುರ್ವ್ಯಯ ಮಾಡಿದ್ದು. ತಮ್ಮ ಬಾಯಿ ಬಡಕತನದ ಪ್ರದರ್ಶನ ಮಾಡಿಕೊಂಡುದು. ಯಾರದೋ ಹಣ, ಯಾರದೋ ಪರಿಶ್ರಮದ ಮೂಲಕ ತಮ್ಮ ಪ್ರಚಾರ ಕಾರ್ಯವನ್ನು ಬಿರುಸಾಗಿ ನಡೆಸಿದ್ದು. ಈ ಕೈಪಿಡಿಯ ನೆವನದಿಂದ ಸಂಬಳ ಮತ್ತು ಗಿಂಬಳವನ್ನುಗಿಟ್ಟಿಸಿ ಕೊಂಡದ್ದು.

ಕನ್ನಡ ನಾಡಿನಿಂದ ಜೀವನೋಪಾಯಕ್ಕಾಗಿ ಮುಂಬಯಿಗೆ ಬಂದು, ಇಲ್ಲಿ ತಮ್ಮ ವಿದ್ಯೆಯನ್ನು ಮುಂದುವರಿಸಲು ಪ್ರಯತ್ನಿಸುವವರು ಬಹು ಮಂದಿ ಇದ್ದಾರೆ. ಅವರಿಗೆ ಬೇಕಾದ ಸೌಕರ್ಯ ಸಿಗುತ್ತಲಿಲ್ಲ. ಒಂದು ರಾತ್ರಿಕಾಲೇಜು ಇರುತ್ತಿದ್ದರೆ, ಕನ್ನಡೇತರ ವಿದ್ಯಾರ್ಥಿಗಳಿಗೂ ಇದರಿಂದ ಪ್ರಯೋಜನವಿತ್ತು. ಹಲವಾರು ಸಂಸ್ಥೆಗಳು ಈ ಕುರಿತು ಈಗಾಗಲೇ ಧರೆವಸೆಯುತ್ತಿದ್ದರೂ, ಯಾವ ಸಂಸ್ಥೆಯೂ ಈ ತನಕ ಆಸಕ್ತಿ ವಹಿಸಿಲ್ಲ. ಕರ್ನಾಟಕ ಸಂಘವು ಈ ಅಯಶಸ್ವೀ ಕೆಲಸವನ್ನು ಬದಿಗಿರಿಸಿ ಕಾಲೇಜಿನ ಕುರಿತು ಪ್ರಯತ್ನಿಸಬಹುದಿತ್ತು. ಆದರೆ ಕರ್ನಾಟಕ ಸಂಘದ ಆಡಳಿತ ಮಂಡಳಿಗೆ, ಬಡ ವಿದ್ಯಾರ್ಥಿಗಳಿಗೆ ಸೌಕರ್ಯ ಕಲ್ಪಿಸಿಕೊಡಬೇಕೆನ್ನುವ ಇಚ್ಛೆಯಿಲ್ಲ. ಬಡ ಕನ್ನಡ ಜನತೆಯೊಡನೆ ಸೌಹಾರ್ದ ಭಾವನೆಯಿರಿಸಿಕೊಳ್ಳಬೇಕೆಂದಿಲ್ಲ. ದುಡ್ಡಿರುವ ಗಣ್ಯ ವ್ಯಕ್ತಿಗಳೊಡನೆ ಬೆರೆಯಬೇಕು ಮತ್ತು ಆ ವರ್ತುಲದಲ್ಲಿ ಸದಾಕಾಲ ಮೆರೆದಾಡುತ್ತಿರಬೇಕೆನ್ನುವ ಚಾಪಲ್ಯ ಇದೆ; ಅವರೊಡನೆ ಸರಿಸಮಾನತೆಯನ್ನು ಗಳಿಸಿಕೊಂಡು ಮೆರೆದಾಡುತ್ತಿರಬೇಕೆನ್ನುವ ಬಯಕೆಯೂ ಇದೆ. ಡಿಗ್ರಿ ಪಡೆಯದ ಕನ್ನಡಿಗನು ಕನ್ನಡಿಗನೇ ಅಲ್ಲ ಎನ್ನುವ ಕೀಳು ಭಾವನೆಯೂ ಇದೆ. ಸ್ವಾರ್ಥ ಸಾಧಕರು ಹಲವು ಮಂದಿ ಇದರಲ್ಲಿ ಬೆರೆತಿದ್ದಾರೆ. ಅಂತಹ ಜನರ ಮೂಲಕ ಹಣವು ದುರ್ವ್ಯಯವಾಗದೆ ಇನ್ನೇನಾದೀತು?

ಉದ್ಘಾಟನಾ ಸಮಾರಂಭದ ದಿನ ಮುಂಬಯಿಯ ಸರ್ವಶ್ರೀಗಳೆಲ್ಲ ಆಗಮಿಸಿದ್ದು ಕರ್ನಾಟಕ ಸಂಘದ ಈ ಸಮಾರಂಭವನ್ನು ಪಾವನಗೊಳಿಸಿದ್ದರು. ಮುಖ್ಯ ಮಂತ್ರಿ ಚವ್ಹಾಣರ ಸಮ್ಮುಖದಲ್ಲಿ ದಿವ್ಯ ಭೋಜನ ನಡೆಯಿತು. ದರ ತಲೆ ಒಂದಕ್ಕೆ ಏಳು ರೂಪಾಯಿ.

ಕನ್ನಡಿಗರು ತಮ್ಮ ಸುತ್ತಲಿನ ಸ್ಥಳಗಳನ್ನು ಸಂದರ್ಶಿಸಿ ಹೆಸರು, ವಿಳಾಸಗಳನ್ನು ಕಳಿಸಿಕೊಟ್ಟಾಗಲೂ ಸರಿಯಾದ ಕೆಲಸ ಆಗಲಿಲ್ಲ. ಇಲ್ಲಿ ಭಾಂಡುಪ್ ಕನ್ನಡ ಸಂಘವು ರಿಜಿಸ್ಟರ್ಡ್ ಆಗಿದೆಯೆನ್ನುವದನ್ನು ಇವರು ಸರಿಯಾಗಿ ತಿಳಿದಂತಿಲ್ಲ. (ಈ ಸಂಘದ ಕಾರ್ಯಕರ್ತರೊಬ್ಬರು ಡೈರೆಕ್ಟರಿ ಕಮಿಟಿಯಲ್ಲೂ ಇದ್ದಾರೆ) ಮುಂಬಯಿಯ ಎಷ್ಟು ಕಾಲೇಜುಗಳಲ್ಲಿ ಕನ್ನಡ ಸಂಘಗಳಿವೆ ಎನ್ನುವ ಮಾಹಿತಿಯನ್ನೂ ಇವರು ತಿಳಿದು ಕೊಳ್ಳಲಿಲ್ಲ

ಒಂದಲ್ಲ, ಎರಡಲ್ಲ, ನೂರಾರು ರೀತಿ ಕನ್ನಡಿಗರ ಕಣ್ಣಿಗೆ ಮಣ್ಣೆರಚುವ ಕ್ರಮವು ನಡೆದಿರುವುದನ್ನು ಪುಟ ಪುಟಗಳಲ್ಲಿ ಕಾಣಬಹುದು ಈ ಕೆಲಸಕ್ಕೆ ಶ್ರೇಯಸ್ಸು ದೊರಕಲೆಂದು ಲಕ್ಷೋಪ ಲಕ್ಷ ರೂಪಾಯಿಗಳ ಸಂಗ್ರಹವೂ ಆಯಿತು. ಒಂದೆಡೆ ಧನ ಬಲ ದೊರಕಿತು. ಇನ್ನೊಂದೆಡೆ ಅಪಾರ ಉತ್ಸಾಹದಿಂದ ನೆರವಾಗ ಬಲ್ಲ ಜನ ಬಲವೂ ದೊರಕಿತು. ಆದರೂ ದುರ್ದೈವೀ ಕನ್ನಡಿಗರು ಯಾವುದೇ ವಿಷಯದಲ್ಲಿ ಭಾಗ್ಯವಂತರಾಗಿಲ್ಲ. ಮೈಸೂರಿನ ರಾಜಕೀಯದಲ್ಲಿ ಅವರಿಗೆ ಸುಖವಿಲ್ಲ. ಭಾಷೆಯ ಕುರಿತು ಕಚ್ಚಾಟ ತಪ್ಪುವುದಿಲ್ಲ. ಸಾಹಿತ್ಯ ಕ್ಷೇತ್ರದ ಕುರುಕ್ಷೇತ್ರ ಅಡಗುವದಿಲ್ಲ. ಮತ ದ್ವೇಷ ನಿಂತಿಲ್ಲ. ಎಲ್ಲಾ ಬಿಟ್ಟು ಈ ಧನ ಬಲ ಮತ್ತು ಜನ ಬಲ ಕೂಡಿದಾಗ ಗುಣಬಲ ಕೂಡಿಬರುವದಿಲ್ಲ

ವಿಶಾಲ ಮುಂಬಯಿಯಲ್ಲಿ ವಿದ್ಯಾವಂತ ಕನ್ನಡಿಗರಿದ್ದಾರೆ. ಸಾರ್ವಜನಿಕ ಚಟುವಟಿಕೆಗಳಲ್ಲಿ ಭಾಗ ವಹಿಸುವ ತರುಣರ ಬಳಗ ನಮ್ಮಲ್ಲಿ ಬಹಳವಿದೆ. ಸಾಮಾಜಿಕ ಕೆಲಸಗಳನ್ನು ಹುರುಪಿನಿಂದ ಮಾಡುವ ಕನ್ನಡಿಗರಿಗೆ ಕೊರತೆಯಿಲ್ಲ. ಆದರೂ ಕೆಲವು ಕುಹಕಿಗಳ, ಸ್ವಾರ್ಥ ಸಾಧಕರ, ಜನಸೇವೆಯ ಸೋಗು ತಳೆದ ವಂಚಕರ ವರ್ತನೆಗಳಿಂದ ಈ ಹುರುಪು ಉತ್ಸಾಹಗಳು ಅಳಿದು ಹೋಗುತ್ತಿವೆ. ಇದಕ್ಕೆ ಕಾರಣ, ಕನ್ನಡಿಗರಲ್ಲಿರುವ ಅತೀ ವಾತ್ಸಲ್ಯ ಪ್ರಿಯತೆಯಾಗಿರಬಹುದು. ಸಂಕುಚಿತ ಮನಸ್ಸಿನ ಕಾರಣವೂ ಇರಬಹುದು. ಅನ್ಯ ಭಾಷಾ ಜನರಿಂದ ಕನ್ನಡಿಗರು ಪಾಠ ಕಲಿತು ಜಾಗ್ರತವಾಗುವುದು ಅವಶ್ಯವೆನಿಸುತ್ತದೆ. ಕನ್ನಡ ಪ್ರೇಮಿಗಳ ನೆರವಿನಿಂದ ಕರ್ನಾಟಕ ಸಂಘವು ಕೈಕೊಂಡ ಈ ಡೈರೆಕ್ಟರಿಯ ಕೆಲಸವನ್ನು ಬೇರೆ ಸಂಸ್ಥೆಗಳು ಮಾಡಲು ಹವಣಿಸಿದ್ದರೂ ಕರ್ನಾಟಕ ಸಂಘವು ಈ ಕುರಿತು ಪ್ರಯತ್ನವನ್ನು ನಡೆಸಿದೆಯೆನ್ನುವುವನ್ನು ತಿಳಿದು ಇದಕ್ಕೆ ನೆರವಾಗಲು ಮುಂದೆ ಬಂದವು. ಆದರೆ, ದುರ್ದೈವದಿಂದ ಈ ಪ್ರಯತ್ನದ ಸದುಪಯೋಗವಾಗಲಿಲ್ಲ.

ಕನ್ನಡಿಗರು ಎಲ್ಲ ಭೇದಭಾವನೆಯನ್ನು ಒಂದಾಗಿ ದುಡಿಯ ಬೇಕು. ಕನ್ನಡ ನಾಡಿಗೆ, ನುಡಿಗೆ ಜನರಿಗೆ ಅಪಚಾರವೆಸಗುವ ಯಾವ ಕೆಲಸದಲ್ಲೂ ತೊಡಗದೆ ಉತ್ಕರ್ಷಕ್ಕಾಗಿ ಹೋರಾಡ ಬೇಕು.



ಅಮೇರಿಕೆಯ ಹೆಚ್ಚು ಭಾರವನ್ನು ಹೊರಬಲ್ಲ ನೂತನಮಾದರಿಯ ವಿಮಾನ ಒಂದು ಹಾರುವುದನ್ನು ಕಾಣಬಹುದು.

ಹೊಸ ಪುಸ್ತಕ

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ.ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ

ಬೆಲೆ: ರೂ. 1=75; ಬಿಳಿ ಕಾಗದ!
ರೂ. ಎರಡನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್ ಉಡುಪಿ.
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಮಕ್ಕಳ ಮಮತೆಯ
'ಬಿಕ್ಕೊ'ರವರ
ಗ್ಲೂಕೋಸ್ ಕೂಡಿದ ಪೆಪ್ಪರ್ ಮಿಠಾಯಿಗಳು ರುಚಿಕರ, ಸೇವನೆಗೆ ಪ್ರಸಿದ್ಧಿಪಟ್ಟಿವೆ.
'ಬಿಕ್ಕೊ'ರವರ
ಹಣ್ಣಿನ ಶರಬತ್ತುಗಳು
ಅತಿಥಿಗಳ ಆದರದ ಸತ್ಕಾರಕ್ಕೆ ಅತ್ಯನುಕೂಲ.

Regd. Trade Mark
BICCO

ತಯಾರಕರು:
ಭಾರತ್ ಇಂಡಸ್ಟ್ರಿಯಲ್ ಎಂಡ್ ಕ್ಯಾನಿಂಗ್
ಕಂಪೆನಿ ಲಿಮಿಟೆಡ್, ಕಾಪು, ದ. ಕ.

ವಸಂತ ಕಥೆ-ಕಾದಂಬರಿಗಳ ಮಾಸ ಪತ್ರಿಕೆ.
ವಾ. ಚಂದಾ ರೂ. 8. ಬಿಡಿಪ್ರತಿ 75 ಪೈಸೆ
ಮಾದರಿ ಸಂಚಿಕೆಗೆ 75ನ.ಪೈ. ಕಳುಹಿಸಿರಿ
1-ಪಾರ್ಕ್ ರಸ್ತೆ — ಬೆಂಗಳೂರು-2.

ರವೀಂದ್ರ ವಾಣಿ

(೩ನೇ ಪುಟದಿಂದ)

ಅದರ ಸಮೀಪಕ್ಕೆ ಹೋಗುವೆವೋ ಆಗ ನಮಗೆ, ಆ ಸತ್ಯದ, ದಿವ್ಯ ಪ್ರೇಮದ ಆನಂದದ ಅನುಭವವಾಗುವುದು. ಈ ಅನುಭವವೇ ನಮ್ಮಲ್ಲಿ ಆತ್ಮ ಬೋಧವನ್ನು ಮೂಡಿಸುವುದು.

'ಹೇ ಸ್ವಯಂ ಪ್ರಕಾಶವುಳ್ಳವನೇ! ನೀನು ನನ್ನ ಹೃದಯದಲ್ಲಿ ಪ್ರಕಾಶಿತನಾಗು!" ಎಂಬುದಾಗಿ ! ನಮ್ಮ ಋಷಿಗಳು ಮಾಡಿರುವ ಮರ್ಮಸ್ಪರ್ಶಿಯಾದ ಪ್ರಾರ್ಥನೆ ಬಹುಶಃ ಮತ್ತಾರೂ ಮಾಡಿರುವುದಿಲ್ಲ. ನಮ್ಮ ಎಲ್ಲಾ ದುಃಖಗಳಿಗೂ, "ಅಹಂ" ಮೂಲವಾಗಿದೆ. ಈ ಅಹಂ ಎಂಬುದು ದುರ್ದಿನೀತವಾಗಿ ಸಂಕುಚಿತ ಭಾವನೆಯುಳ್ಳದ್ದಾಗಿದ್ದು ತನ್ನ ಹೊರತು ಇತರರ ಗುಣ, ಧರ್ಮಗಳನ್ನು ನೋಡುವಲ್ಲಿ ಕುರುಡಾಗಿರುತ್ತದೆ. ನಮ್ಮ ಈ ಅಹಂಕಾರವು ನಮ್ಮ ವಿಕಂಪಾದೀ ಸ್ವರಗಳನ್ನೇ ಆಲಾಪನೆ ಮಾಡಿಸುವುದು. ಈ ವೀಣೆಯು ಅಸೀಮವಾದ ದಿವ್ಯ ನಾದವನ್ನು ಹುಟ್ಟಿಸುವ ತಂತಿಗಳಿಂದ ಕೂಡಿಲ್ಲ. ಅಸಂತೋಷ, ಕಷ್ಟ, ದುಃಖಾದಿಗಳಿಂದ ಉಂಟಾದ ಬಳಲಿಕೆ, ಮತ್ತು ಕಳೆದುಹೋದ ವಿಷಯಗಳ ಕುರಿತು ನಿರರ್ಥಕವಾದ ಚಿಂತೆ, ಹಾಗೂ, ಭವಿಷ್ಯದ ನಿಷ್ಕಾರಣವಾದ ಯೋಚನೆ ಇತ್ಯಾದಿಗಳು ನಮ್ಮ ಹೃದಯವನ್ನು ನಡುಗಿಸಿಬಿಡುತ್ತವೆ ನಮ್ಮ ಆತ್ಮವನ್ನು ವಿಶ್ವಾತ್ಮನಲ್ಲಿ ಐಕ್ಯಗೊಳಿಸದಿರುವುದೂ, ಆತ್ಮ ಪ್ರಕಾಶವು ಹೃದಯದಲ್ಲಿ ಮೂಡದಿರುವುದೂ ಹೀಗಾಗುವುದರ ಮುಖ್ಯ ಕಾರಣವಾಗಿದೆ. ಹೀಗೆ ವಿಷಮ ಪರಿಸ್ಥಿತಿ ಉಂಟಾದಾಗ—ನಾವು—'ರುದ್ರ! ಯತ್ತೇ ದಕ್ಷಿಣಂ ಮುಖಂ ತೇನ—ಮಾಂ ಪಾಹಿ ನಿತ್ಯಮ್' ಅರ್ಥಾತ್ ಹೇ ರುದ್ರ! ನೀನು ನಿನ್ನ ಮಂದಹಾಸದಿಂದ ನಮ್ಮನ್ನು ನಿತ್ಯವೂ ರಕ್ಷಿಸು!' ಎಂದು ಪ್ರಾರ್ಥಿಸುತ್ತೇವೆ. ತನ್ನ ಸ್ವಂತ ತೃಪ್ತಿಯನ್ನು ಮಾತ್ರ ಅಪೇಕ್ಷಿಸುವುದು, ಮತ್ತು ದುರಪೇಕ್ಷೆಗಳ ಬೆನ್ನ ಹಿಂದೆ ಹೋಗುವುದು, ಇತ್ಯಾದಿಗಳು, ಧನ ಸಂಗ್ರಹದ ಅಹಂಕಾರವನ್ನು ಹುಟ್ಟಿಸುತ್ತವೆ. ಆಗ ಕಠಿಣ ಪರಿಸ್ಥಿತಿ ಉಂಟಾದರೆ—ನಾವು—"ಹೇ ರುದ್ರ! ನಮ್ಮನ್ನು ರಕ್ಷಿಸಿ, ನಮ್ಮ ಆತ್ಮವನ್ನು ಎಚ್ಚರಿಸು!' ಎಂದು ಪ್ರಾರ್ಥಿಸುತ್ತೇವೆ. "ಅಸತ್ಯದಿಂದ ಸತ್ಯದೆಡೆಗೆ, ಕತ್ತಲೆಯಿಂದ ಬೆಳಕಿಗೆ, ಮೃತ್ಯುವಿನಿಂದ ಅಮರತೆಯ ಡೆಗೆ, ನಮ್ಮನ್ನು ಕರೆದುಕೊಂಡು ಹೋಗು" ಎಂಬುದಿದು, ಪ್ರಾರ್ಥನೆಯಾಗಿದೆ. ಆದರೆ ಇದು ಇಂತು ಈಡೇರುವುದ ಮಾತ್ರ ಬಹು ಕಠಿಣವಾಗಿದೆ. ಸತ್ಯ ಮತ್ತು ಅಸತ್ಯ—ಮೃತ್ಯು – ಹಾಗೂ ಅಮರತೆ, ಇವುಗಳೊಳಗೆ ಬಹುದೂರವಿದೆ. ಈ ದೂರವನ್ನು ಯಾವ ದಾರಿಯಿಂದ ನಡೆದು ತಲಪಬಹುದು? ನಿಜವಾಗಿಯೂ ಇದು ಬಹಳ ಕಠಿಣವಾದುದು. ಆದರೆ ಸ್ವಯಂ ಪ್ರಕಾಶವುಳ್ಳ ಪರಮಾತ್ಮನು ನಮ್ಮ ಹೃದಯದಲ್ಲಿ ತನ್ನ ಪ್ರಕಾಶವನ್ನು ಪ್ರಕಾಶಿಸಿದರೆ, ಆಗ, ಈ ಕಾರ್ಯವು ಏನೂ ಕಠಿಣವೆನಿಸುವುದಿಲ್ಲ. ಒಂದೇ ಕ್ಷಣದಲ್ಲಿ ಇದು ಬಹು ಸುಲಭವೆನಿಸುವುದು. ಋಷಿಗಳು 'ನಮ್ಮ ಪಾಪಗಳೆಲ್ಲವನ್ನೂ ನಿರ್ಮೂಲಗೊಳಿಸು!'

ಎಂದು ಪ್ರಾರ್ಥಿಸುತ್ತಾರೆ. ಏಕೆಂದರೆ, ಮನುಷ್ಯನು ಪಾಪಮಯವಾದ ಕಾರ್ಯಗಳನ್ನು ಮಾಡುವಾಗ ತನ್ನ ಆತ್ಮಕ್ಕೆ ವಿರೋಧವಾಗಿ ವರ್ತಿಸಿ, ಈ ವ್ಯಾವಹಾರಿಕ ಜಗತ್ತಿನ ಸಂಕೀರ್ಣ ಭಾವನೆಗಳೊಳಗಾಗುತ್ತಾನೆ ಆಗ ಅಹಂ ಭಾವಪೂರ್ಣವಾದ ಸ್ವಾರ್ಥವು ಆತ್ಮನನ್ನು ಗೆಲ್ಲುವುದು. ಪಾಪವು ನಮ್ಮ ಅಂತಃಕರಣದ ನೈರ್ಮಲ್ಯವನ್ನು ಕದಡಿ ಬಿಡುತ್ತದೆ. ಪಾಪಮಯವಾದ ಭಾವನೆ ಜಾಗೃತವಾದಾಗ ನಾವು, ನಮ್ಮ ಮನಸ್ಸು ಕ್ಷಣಿಕ ಸುಖ ಭೋಗಗಳನ್ನು ಅಪೇಕ್ಷಿಸುವುದು ಕ್ಷಣಿಕ ಸುಖ ಭೋಗಗಳಲ್ಲಿ ಯಾವ ಮೋಹ ಕತೆಯೂ ಇರುವುದಿಲ್ಲ. ಆದರೆ ಆಗ ನಮ್ಮ ಇಚ್ಛೆಯು, ಅವರಲ್ಲೇ ಹಿತವಾದ ಮೋಹಕತೆ ಇದೆ, ಎಂದು ಭಾವಿಸುವುದು. ಈ ಕಾರಣದಿಂದ ಅದು ಆಕರ್ಷಣೀಯವಾಗಿ ತೋರುವುದು. ಬಹಳವಾಗಿ ಹಸಿವಾದಾಗ ನಾವು ಸಾಮಾನ್ಯ ವಸ್ತುವನ್ನೂ ಮಹತ್ವದ್ದಾಗಿ ಭಾವಿಸುವಂತೆ, ನಮ್ಮ ಇಚ್ಛೆಯು ಕ್ಷಣಿಕ ಸುಖಭೋಗವನ್ನೇ ಮಹತ್ವದ್ದೆಂದು ಎಣಿಸುವುದು. ಚಿಕ್ಕವನನ್ನು ದೊಡ್ಡವನೆಂದು ಭಾವಿಸುವ, ಅಲ್ಪ ವಸ್ತುಗಳಿಗೆ ಮಹತ್ವ



ಅಮೇರಿಕೆಯ ಅಣುಚಾಲಿತ ಸಬ್ ಮೆರೈನ್ ಒಂದನ್ನು ನೀರಿಗಿಳಿಸುವುದನ್ನು ಕಾಣಬಹುದು.

ವನ್ನು ಕೊಡುವ ಈ ನಮ್ಮ ಪ್ರವೃತ್ತಿಯು ನಮ್ಮ ಜೀವನದ ಸಮಾನತೆಯನ್ನು ಹೆಜ್ಜೆ ಹೆಜ್ಜೆಗೂ ನಷ್ಟಗೊಳಿಸುವುದು. ನಾವು ವಸ್ತುಗಳ ನಿಜವಾದ ರೂಪವನ್ನು ಗುರುತಿಸಲಾರದ, ಜೀವನದ ವಿವಿಧ ವಿದ್ರೋಹೀ ಭಾವನೆಗಳಿಂದ-ಮೋಹಗೊಳ್ಳುತ್ತೇವೆ. ನಮ್ಮ ವಿವಿಧ ಪ್ರವೃತ್ತಿಗಳನ್ನು ಏಕೈಕವಾದ ಆತ್ಮದ ಅಧಿಕಾರಕ್ಕೆ ಒಳಪಡಿಸಲಾರದ ಕಾರಣದಿಂದ ನಾವು ವಿಶ್ವಾತ್ಮನಿಂದ ಬೇರೆಯಾಗಿರುವ ತೀಕ್ಷ್ಣವಾದ—ಅನುಭವವನ್ನು ಹೊಂದುತ್ತೇವೆ. ಆಗ ನಾವು-"ವಿಶ್ವಾನಿ ದೇವ ಸವಿತುರ್ದುರಿತಾನಿ ಪರಾಸುವ, ಯದ್ಭದ್ರಂತನ್ನ ಆಸುವ"—ಅರ್ಥಾತ್ ಹೇ ಜನಕ! ನಮ್ಮ ಪಾಪಗಳೆಲ್ಲವನ್ನೂ ದೂರಗೊಳಿಸು! ಯಾವುದು ಕಲ್ಯಾಣವಾಗಿರುವುದೋ ಅದನ್ನು ಮಾತ್ರ ನಮಗೆ ಕರುಣಿಸು! ,, ಎಂದು ಪ್ರಾರ್ಥಿಸುತ್ತೇವೆ.

ಈ ಕಲ್ಯಾಣವೇ ನಮ್ಮ ಆತ್ಮದ ನಿಜವಾದ ಆಹಾರವಾಗಿದೆ. ಭೋಗದ ಅಪೇಕ್ಷೆಯು, ನಮ್ಮನ್ನು ಲಾಲಸೆಗಳಲ್ಲಿ ಕೈದಿಯನ್ನಾಗಿ ಮಾಡುತ್ತದೆ. ಆದರೆ, ಕಲ್ಯಾಣ ಬಾವನೆಯ ಮೂಲಕ ನಾವು ಈ ಸೆರೆಯಿಂದ ಹೊರಗೆ ಬಂದು ಸರ್ವತ್ರ ಪ್ರೇಮಿಗಳಾಗ ಬಹುದು. ಮಗ, ತನ್ನ ಮಾತೆಯ ಗರ್ಭದಲ್ಲಿ ಆಕೆಯ ಜೀವನದಿಂದಲೇ ರಸವನ್ನು ಪಡೆದು, ಪುಷ್ಟಿಯಾಗುವಂತೆ, ನಮ್ಮ ಆತ್ಮವು ಕಲ್ಯಾಣಕಾರೀ ಭಾವನೆಗಳೆಂಬ ತಂತುಗಳ ಮೂಲಕವೇ ಅಮರತೆಯನ್ನು ಪಡೆಯಲು ಸಮರ್ಥವಾಗುತ್ತದೆ. ಇದಕ್ಕೆ ಇದೇ ಮಾಧ್ಯಮವಾಗಿದೆ. ಆತ್ಮವು ಇದೇ ರೀತಿ ವಿಶ್ವಾತ್ಮನಿಂದ ಜೀವನವನ್ನೂ ಪಡೆದು ಪುಷ್ಟವಾಗುತ್ತದೆ. "ಯಾರು ಕಲ್ಯಾಣದ ಹಸಿವು ತೃಷೆಗಳಿಂದ ಇರುವರೋ ಅವರೇ ಧನ್ಯರು!', ಎಂದು ಹೇಳಿರುವ ಮಾತು ಆಗ ಸಾರ್ಥಕವಾಗುವುದು. ಕಲ್ಯಾಣವೇ ಆತ್ಮದ ದಿವ್ಯ ಭೋಜನವಾಗಿದೆ. ಇದರ ಹೊರತು ಮನುಷ್ಯನು ನಿಜವಾದ ಸಂತೋಷವನ್ನು ಹೊಂದಲಾರನು. ಇದರ ಹೊರತು ಯಾವ ಪ್ರಯತ್ನವೂ ಮನುಷ್ಯನಿಗೆ ಆತ್ಮೀಯ ಜೀವನ ನಡೆಸುವ ದಾರವನ್ನು ಹೇಳಿ ಕೊಡಲಾರದು.

ಋಷಿಗಳು—"ನಮಃಶಂಭವಾಯ ಚ! ನಮ ಶಂಕರಾಯ ಚ! ನಮಃ ಶಿವಾಯ ಚ: ಶಿವತರಾಯ ಚ ಅರ್ಥಾತ್, "ನಮ್ಮ ಜೀವನಕ್ಕೆ ಆನಂದ ಪ್ರವಾಹವನ್ನು ಪ್ರವಹಿಸುವ ಆತನನ್ನೂ ನಾವು ವಂದಿಸುತ್ತೇವೆ. ನಮ್ಮ ಕಲ್ಯಾಣಕಾರೀ ಭಾವನೆಗಳು ಎಲ್ಲಿಂದ ಉದಯವಾಗುವುವೋ ಆ ಕಲ್ಯಾಣ ಮೂರ್ತಿಗೆ ನಾವು ವಂದಿಸುತ್ತೇವೆ. ಯಾರು ಕಲ್ಯಾಣ ರೂಪನೂ ಅತಿಶಯ ಕಲ್ಯಾಣ ಕಾರಕನೂ ಆಗಿರುವನೋ ಆತನಿಗೆ ನಾವು ವಂದನೆಗಳನ್ನರ್ಪಿಸುತ್ತೇವೆ" ಎಂದು ಪ್ರಾರ್ಥಿಸುತ್ತಾರೆ. ಶಾಂತಿ, ಪ್ರೇಮ, ಸಮಾನತೆ, ಮೊದಲಾದ ದಿವ್ಯ ಭಾವನೆಗಳ ಪ್ರೇರಕ ಶಕ್ತಿಯೇ ಇದಾಗಿರುವುದು!

(ಶೇಷ)

The Moolky Bank, Ltd.

MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4%
5 ,, 12	,,	4½%
13 ,, 24	,,	4¾%

ರೂ 5,000/- ಮತ್ತು ಮೇಲಣ ಡಿಪೋಸಿಟಿಗೆ ¼% ಜಾಸ್ತಿ ಕೊಡಲಾಗುವುದು.

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ಠೇವಣಾತಿಗೆ ¼%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ. ಮೆನೇಜರ್.

ಮೂಲ್ಕಿ ಬೇಂಕ್ ಲಿ. ಮುಲ್ಕಿ.



ಬದಲಾವಣೆಗೆಂದೊ ಒಮ್ಮೆ
ಎಸ್. ಆರ್. ಬೀಡಿಯನ್ನು
ಬಳಸಿ ನೋಡಿರಿ,
ಅಂದರೆ ನೀವು ತಪ್ಪದೆ ಅದನ್ನೇ
ಎಂದೆಂದಿಗೂ ಕೊಂಡು
ಕೊಳ್ಳುವಿರಿ.

S.R. BEEDI WORKS,
UDIPI, S.K.

ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತವೆ.

ಉಡುಪಿ ತಾಲ್ಲೂಕು ತಹಶೀಲ್ದಾರರ Fair Rent ಕೋರ್ಟಿನಲ್ಲಿ

O·P· 13/61

ಕುಶಲಾವತಿ ಸೆಡ್ತಿ - ಸೀತಮ್ಮ ಸೆಡ್ತಿರ ಮಗಳು ಹಾಲಿ ಮದ್ರಾಸ್ ಪಟ್ಟಣದಲ್ಲಿರುವವರು —ಅರ್ಜಿದಾರಳು

ಅಂತಯ ಸೆಟ್ಟಿ — ನಂದಿಯಪ್ಪ ಸೆಟ್ರ ಮೊಮ್ಮಗ ಉಡುಪಿ ತಾಲ್ಲೂಕು ಬೊಮ್ಮರಬೆಟ್ಟು ಗ್ರಾಮದ ಮೂಡು ಕೈರಾಳಿಯಲ್ಲಿರುವವರು —ಎದ್ರಿ

ಎದ್ರಿರು ಅರ್ಜಿದಾರರೊಳಗೆ ಚಾಲಗೇಣಿಗೆ ಅನುಭವಿಸಿಕೊಂಡು ಬರುವ ಆಸ್ತಿಯ ಬಾಬ್ತು ನ್ಯಾಯಗೇಣಿ ನಿರ್ಣಯದ ಬಗ್ಗೆ ಅರ್ಜಿದಾರರು ಮಾಡಿರುವ ಅರ್ಜಿಯು ತಾ: 19—5—61 ಕ್ಕೆ ಇಟ್ಟಿದೆ. ಆ ದಿವಸ ಬೆಳಿಗ್ಗೆ 11 ಗಂಟೆಗೆ ಎದ್ರಿರು ಸದ್ರಿ ಕೋರ್ಟಿನಲ್ಲಿ ಹಾಜರಾಗತಕ್ಕದ್ದು. ತಪ್ಪಿದ್ರೆ ಎದ್ರಿರ ಗೈರು ಹಾಜರಿಯಲ್ಲಿ ಅರ್ಜಿಯನ್ನು ತೀರ್ಮಾನಿಸಲ್ಪಡುವುದು,

K L· Aithal
Vakil for Petitioner

ಉಡುಪಿ, ತಾ. 25—1—61

ಧಾರಾವಾಹಿ ಕಾದಂಬರಿ

(೨ನೇ ಪುಟದಿಂದ)

ಯಾರ‍್ಯಾರ ಭೆಟ್ಟಿಯನ್ನು ಪಡೆದಿರಿ?" ಎಂದಳು ಕುಮಾರಿ ಮಾಯಾ.

"ಯಾರ ಭೆಟ್ಟಿಯನ್ನೂ ಮಾಡಿಲ್ಲ."

"ಎಲ್ಲಿಯಾದರೂ ನಿಂತಿದ್ದರೆ....!"

"ಹೌದು, ಹೌದು; ಸ್ವಲ್ಪ ಸಮಯದವರೆಗೆ ಕಾರನ್ನು ನಿಲ್ಲಿಸಿ ಬೀಡಿ ಅಂಗಡಿಗೆ ಹೋಗಿ ಸಿಗರೇಟು ಕೊಂಡಿದ್ದೆ" ರಾಜಕುಮಾರನೆಂದ.

"ಸರಿ; ಅಲ್ಲಿಯೇ ಯಾರಾದರೂ ಈ ಕಾಗ್ದವನ್ನು ನಿಮ್ಮ ಜೇಬಿಗೆ ತುರುಕಿಸಿರಬಹುದು—" ಎಂದಳು ರಾಣಿ." ಏನೇ ಇರಲಿ ಪೋಲೀಸರಿಗೆ ವರ್ತಮಾನವನ್ನು ಕೊಡಿರಿ."

ಅನಂತರ ಈ ಬಗ್ಗೆ ಫೋನಿನ ಮುಖಾಂತರ ಸುಪರಿಂಟೆಂಡೆಂಟರಿಗೆ ಸೂಚಿಸಲಾಯ್ತು. ಸೂಚನೆ ಸಿಗುತ್ತಲೇ ಅವರು ಸಿ. ಐ. ಡಿ. ಇನ್ಸ್‌ಪೆಕ್ಟರ್ ರಮಾಕಾಂತರನ್ನು ಘಟನಾ ಸ್ಥಳಕ್ಕೆ ಕಳುಹಿಸಿದರು.

ರಮಾಕಾಂತರು ನೇರವಾಗಿ ರಾಣಿಯ ಬಂಗಲೆಗೆ ಹೋದರು. ರಾಜಕುಮಾರನು ಕಾರನ್ನು ಸ್ವತಃ ತಾನೇ ಡ್ರೈವ್ ಮಾಡಿಕೊಂಡು ಬಂದುದರಿಂದ ಡ್ರೈವರನ ಮೇಲೆ ಸಂಶಯ ಬರುವಂತಿರಲಿಲ್ಲ. ಬೀಡಿ ಅಂಗಡಿಗೆ ಹೋಗಿ ಪತ್ತೆ ಹಚ್ಚುವುದು ಸಂಗತವಲ್ಲ. ಕೊನೆಗೆ ರಾಜಕುಮಾರನಿಗೆ ಸಮಾಧಾನ ಹಾಗೂ ಸುಚೇತವಾಗಿರಲು ಹೇಳಿ ಅವರು ಹೊರಡಲನುವಾದರು. ಆಗ ರಾಣಿಯು—ತಾವು ಒಪ್ಪಿದರೆ ರಾಜಕುಮಾರನನ್ನು ದಯವಿಟ್ಟು ಬಂಗಲೆಗೆ ತಲ್ಪಿಸಿ ಅನಂತರ ಹೋಗಿ, ನಾನೂ ನನ್ನ ಎರಡಾಳುಗಳನ್ನು ತಮ್ಮೊಡನೆ ಕಳುಹಿಸುತ್ತೇನೆ.

ರಾಣಿಯ ಮಾತುಗಳನ್ನು ಕೇಳಿ ರಾಜಕುಮಾರನು ನಕ್ಕು ಬಿಟ್ಟನು. "ಬೇಡ ನಾನೋರ್ವನೇ ಹೋಗುತ್ತೇನೆ" ಎಂದಳು. ಆದರೆ ರಾಣಿ ಸಾಹೇಬಳು ಒಪ್ಪಳು. ಕೊನೆಗೆ ರಮಾಕಾಂತರು ರಾಜಕುಮಾರನೊಂದಿಗೆ ಹೋಗುವುದಾಗಿ ತೀರ್ಮಾನವಾಯ್ತು.

ರಾಜಕುಮಾರನನ್ನು ಬಂಗಲೆಯಲ್ಲಿ ಬಿಟ್ಟು ಎಚ್ಚರಿಕೆ ಕೊಟ್ಟು ರಮಾಕಾಂತರು ಕಚೇರಿಗೆ ಹೋದರು.

೨

ದಿ ದಲಿತ ಎಂಡ್ ಕಂಪನಿಯ ಮೆನೇಜಿಂಗ್ ಡ್ಯಾರೆಕ್ಟರರಾದ ಠಾಕೂರ್ ದಲಿತ ಸಿಂಹರವರು ತನ್ನ ಸಹಕಾರಿಗಳೊಡನೆ ಯಾವುದೋ ಒಂದು ಖಾಸಾ ವಿಷಯದ ಬಗ್ಗೆ ಚರ್ಚಿಸುತ್ತಿದ್ದರು. ಸ್ವಲ್ಪ ಸಮಯ ಯೋಚನಾ ಕ್ರಾಂತನಾಗಿ—"ರಾಜಾರಾಮಪಾಲ ಸಿಂಹರ ಮೃತ್ಯುವಿನಿಂದಾಗಿ ಇಡಿ ನಗರವೇ ಭಯಭೀತ ಹಾಗೂ ದುಃಖಪೂರ್ಣವಾಗಿದೆ. ಅಲ್ಲದೆ ಈ ಸಾಯುವವರ ರಹಸ್ಯವನ್ನು ಕಂಡು ಹಿಡಿಯಬೇಕೆಂದು ಅದು ಬಯಸುತ್ತದೆ. ಪೂರ್ಣ ಪೊಲೀಸು ಇಲಾಖೆಯೇ ಈ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಿದೆ. ಎಲ್ಲರೂ ರಾಜರಾಮಪಾಲ ಸಿಂಹರ ಶವದ ಪತ್ತೆ ಹಿಡಿಯಬೇಕೆಂದು ಅಪೇಕ್ಷಿಸುತ್ತದೆ ಮತ್ತು......"

ಮಧ್ಯದಲ್ಲೇ ನುಡಿದರು ರಾಮಸಿಂಹ—"ಪ್ರಯತ್ನ ಪಡಲಿ, ಇಲ್ಲಿಯ ಪೊಲೀಸು ಖಾತೆಯೇನು? ಸಮಸ್ತ ಭಾರತದ ಪೊಲೀಸು ಖಾತೆಗಳು ಒಟ್ಟಾದರೂ ವ್ಯರ್ಥವಾದೀತು ಯಾಕೆಂದರೆ—ಕೊಲೆಗಾರರು ತಮ್ಮ ರಕ್ಷಣೆಯ ಉಪಾಯವನ್ನು ಕಂಡುಕೊಂಡಿರುತ್ತಾರೆ. ಅದುದರಿಂದಲೇ ಅವರು ಕೊಲೆಯ ಮೇಲೆ ಕೊಲೆಯಂತೆ ವಿಪರೀತ ಕೊಲೆ ಮಾಡುತ್ತಿದ್ದಾರೆ. ಡಾಕ್ಟರುಗಳು ಮತ್ತು ಪೋಲೀಸರು ಇದೇನೆಂದು ತಿಳಿಯದೆ ನಿರಾಶರಾಗಿದ್ದಾರೆ."

"ಏನೇ ಆಗಲಿ ನಮಗೇಕೆ ಬೇಕು? ಊರಿನ ವಿಷಯ? ಬ್ಯಾಂಕಿಗೆ ನಮ್ಮ ವ್ಯವಹಾರದಲ್ಲಿ ಅಪಾರ ನಷ್ಟವಾಗಿದೆ. ಅದನ್ನು ಪೂರೈಸುವುದಕ್ಕೆ ತಾವು ಯಾವ ಯಾವ ಉಪಾಯವನ್ನು ಕಂಡು ಹಿಡಿದಿದ್ದೀರಿ? ನನ್ನ ಮಿದುಳು ಕೆಲಸವೇ ಮಾಡದು."

"ನಾವು ಯಾವಾಗಲೂ ನಿಮ್ಮ ಆಜ್ಞಾನುಸಾರವಾಗಿ ಕೆಲಸ ಮಾಡಲು ಸಿದ್ಧರಿದ್ದೇವೆ. ನೀವು ಹೇಳಿದ ಹಾಗೆ ಮಾಡುವೆವು. ಆದರೆ ಬೇಂಕಿನ ಈ ಸ್ಥಿತಿಯಲ್ಲಿ ಅದನ್ನು ಪೂರೈಸುವ ಕಾರ್ಯವನ್ನಾದರೂ ಹೇಗೆ ಮಾಡಬೇಕು? ನೀವೇ ಆಲೋಚಿಸಿ ರಾಣಿ ಇಲಾವತಿಯೊಡನೆ ನಾವು ಸಾಲ ಕೇಳಿದರೆ ಅವಳು ಖಂಡಿತ ಆಗುವುದಿಲ್ಲವೆಂದೇ ಅನ್ನುತಾಳೆ. ಬ್ಯಾಂಕಿನ ಸ್ಥಿತಿಗತಿ ಒಳ್ಳೆಯದಿಲ್ಲವೆಂದು ಆಕೆಗೆ ತಿಳಿದಿದೆ. ನನ್ನ ಅಭಿಪ್ರಾಯವೇನೆಂದರೆ ಬೇರೆ ಕಡೆಯಿಂದ ಹಣದ ಆಶಯವನ್ನು ಮಾಡುವುದು ವ್ಯರ್ಥವೆಂದೇ ಕಾಣುವುದು.

"ನೀನು ಹೇಳುವುದೇನೋ ಸರಿ ಆದರೂ ನಾವು ಪ್ರಯತ್ನ ಏಕೆ ಮಾಡಬಾರದು? ಕೇಳು, ಕುಮಾರಿ ಮಾಯಾವತಿಯ ಲಗ್ನ ರಾಜಕುಮಾರನೊಡನೆ ಬಹಳ ತೀವ್ರತೆಯಿಂದ ನಡೆಯುವುದೆಂದು ವರ್ತಮಾನವಿದೆ. ಅದು ನಿಜವೇ?" ದಲಿತಸಿಂಹ ರಾಮ ಸಿಂಹನ ಕಡೆ ನೋಡುತ್ತಾ ಎಂದನು.

"ತಮಗಿದು ಹೊಸ ವಾರ್ತೆಯೇನು? ಅಲ್ಲಿ ವಿವಾಹ ಸಿದ್ಧತೆಯೂ ಮುಗಿಯುತ್ತಾ ಬಂದಿದೆ. ಇಷ್ಟು ತಡವೇಕೆಂದು ತಿಳಿಯಲಿಲ್ಲವಲ್ಲ!"

"ರಾಜಕುಮಾರಿ ಯಮುನಳ ಬಗ್ಗೆ ಏನೂ ತಿಳಿಯಲಿಲ್ಲ. ಅವಳ ಮಾನಸಿಕ ಸ್ಥಿತಿ ಈಗ ಹೇಗಿದೆಯೆಂದು ತಿಳಿಯದು."

"ಅವಳನ್ನು ರಾಜಾರಾಮ ಸಿಂಹರ ವಿಯೋಗವೇ ತಿನ್ನುತ್ತಲಿದೆ ಪ್ರಾಯಶಃ ಆಕೆ ತನ್ನ ಪತಿ ವಿಯೋಗದಿಂದಾಗಿ ಬದುಕಲಾರಳು. ತಾಯಿ ಇಲಾವತಿ ಬಹಳ ಎಚ್ಚರಿಕೆಯಿಂದ ಮಗಳನ್ನು ನೋಡಿಕೊಳ್ಳುತಿದ್ದಾಳೆ. ಅವಳ ಮನೋವೇದನೆಯನ್ನು ಪೂರ್ಣ ರೀತಿಯಿಂದ ದೂರಮಾಡುತ್ತಾಳೆ. ಇಲ್ಲದಿದ್ದಲ್ಲಿ ಅವಳು ಎಂದೋ ಸತ್ತು ಹೋಗುತ್ತಿದ್ದಳು" ಎಂದ ಆತ್ಮರಾಮ.

"ನಿಸ್ಸಂದೇಹವಾಗಿ ಅವಳಿಗೆ ತನ್ನ ಪತಿಯಲ್ಲಿ ಅಗಾಧ ಪ್ರೇಮವಿತ್ತು. ಆದರೆ ಆಕೆಯ ವಿವಾಹವೇ ಅಶುಭವಾಯ್ತು." ಎಂದು ದಲಿತ ಸಿಂಹನು ವ್ಯಂಗ್ಯವಾಗಿ ನುಡಿದನು. ಅವನ ತುಟಿಗಳಲ್ಲಡಗಿದ ಮುಗುಳ್ನಗೆಯನ್ನು ಕಂಡು ಅವನ ಸಹಚರರು ಸತ್ಯವೆಂಬಂತೆ ತಲೆಯಲ್ಲಾಡಿಸಿದರು.

"ಇತ್ತೀಚೆಗೆ ಕೆಲವು ತಿಂಗಳಿಂದ ತಾವು ತಿರುಗಾಡಲೂ ಹೋಗುವುದಿಲ್ಲ. ಮನೆಯಿಂದ ಆಫೀಸಿಗೆ ಆಫೀಸಿನಿಂದ ಮನೆಗೆ ಹೋಗುತ್ತೀರಿ. ಈ ಏಕಾಂತ ಜೀವನ ತಮಗೆ ಹೇಗೆ ಒಗ್ಗುತ್ತದೆ?" ವಿಚಾರಿಸಿದ ರಾಮಸಿಂಹ.

"ಅಲ್ಲ ಏಕಾಂತ ಜೀವನವಲ್ಲ. ನನ್ನ ಮುಂದೆ ಹಲವಾರು ಜಟಿಲ ಸಮಸ್ಯೆಗಳಿವೆ. ಅದನ್ನು ಬಿಡಿಸಲು ಕುಳಿತರೆ ತಿರುಗಾಡಲು ಏಕೆ ಹೊತ್ತು ಹೊತ್ತಿನ ಅನ್ನ ಕೂಡಾ ತಿನ್ನಲು ಮರೆವು ಉಂಟಾಗುತ್ತದೆ."

"ಆದರೆ ಬ್ಯಾಂಕಿನ ಬಗ್ಗೆ ತಮ್ಮ ಯುಕ್ತಿ ಸಫಲವಾಗುವುದರಲ್ಲಿ ನನಗೆ ವಿಶ್ವಾಸವಿಲ್ಲ" ಎಂದ ಆತ್ಮಾರಾಮ.

ಒಳ್ಳೆದು, ನಾವು ಒಂದು ಕೆಲಸ ಮಾಡುವ ಫಲಕ ದಾರಿಯನ್ನು ಕರೆದು ಅವನಿಗೆ ಈ ಎಲ್ಲಾ ವಿಷಯಗಳನ್ನು ತಿಳಿಸಿ ಮಾಯಾವತಿಯನ್ನು ಪ್ರೇಮಿಸಲು ಹೇಳುವುದು. ಮುಂದೆ ಹಣದ ಬಗ್ಗೆ ಏನೆಂದು ಯೋಚಿಸುವ."

"ಆದರೆ ಕುಮಾರಿ ಮಾಯಾವತಿಯೊಡನೆ ಯಾವಾಗಲೂ ಪ್ರಾಣಪಾಸ ಹಾಗೂ ದಾಮೋದರ ಸ್ವರೂಪರೆಂಬರೀರ್ವರು ಅಂಗ ರಕ್ಷಕರಿರುತ್ತಾರೆ. ಅವರಲ್ಲಿ ನಮ್ಮ ಬೇಳೆ ಬೇಯಲಿಕ್ಕಿಲ್ಲ." ಎಂದು ಪ್ರತ್ಯುತ್ತರವಿತ್ತ.

"ಮಾಯಾವತಿಯೊಡನೆ ಕೂಡಿಕೊಂಡಿರಲು ತುಂಬಾ ಕಷ್ಟವೆಂಬುದನ್ನು ನಾನು ಒಪ್ಪುತ್ತೇನೆ. ಆದರೆ ಪ್ರಯತ್ನ ಮಾಡುವುದು ತಪ್ಪೇನು? ಈ ಯುಕ್ತಿ ವಿಫಲವಾದರೆ ಬೇರೆ ಉಪಾಯ ಕಂಡು ಹಿಡಿಯುವ.'

"ಯಾವ ಕೆಲಸ ಮಾಡುವುದಾದರೂ ಬೇಗ ಮಾಡಬೇಕು. ಹಾಗಲ್ಲದಿದ್ದರೆ ಅವಳ ಲಗ್ನದ ನಂತರ ಎಲ್ಲವೂ ನಿರರ್ಥಕವಾಗಬಹುದು.' ಎಂದು ಸೂಚನೆ ಕೊಟ್ಟ ರಣವೀರಸಿಂಹ.

'ಅದೆಲ್ಲಾ ನಿಮ್ಮನ್ನು ಹೊಂದಿಕೊಂಡಿದೆ. ನನ್ನ ಅಭಿಪ್ರಾಯವೆಂದರೆ ಫೋನ್ ಮಾಡಿ ಫಲಕದಾರಿ ಸಿಂಹನನ್ನು, ಕೂಡಲೇ ಬರ ಹೇಳುವುದು ಉತ್ತಮ' ದಲಿತ ಸಿಂಹನೆಂದನು.

ಕೂಡಲೇ ರಣ ವೀರಸಿಂಹನು ಫೋನ್ ಮಾಡಿ ಫಲಕದಾರಿಗೆ ಬರಲು ಸೂಚನೆ ಇತ್ತ. ಸ್ವಲ್ಪ ಸಮಯದಲ್ಲಿ ಒಬ್ಬ ದಷ್ಟಪುಷ್ಟ ಗ್ರಾಮೀಣ ನವಯುವಕನು ಅಲ್ಲಿಗೆ ಬಂದನು. "ಬನ್ನಿ ಬನ್ನಿ' ಎಂದು ಎಲ್ಲರೂ ನವ ಯುವಕನನ್ನು ಸ್ವಾಗತಿಸಿದರು. ಆ ಯುವಕನೇ ಫಲಕದಾರಿ ಸಿಂಹ—"ಈ ಸಮಯದಲ್ಲಿ ಕೂಡಲೇ ನನ್ನನ್ನು ಬರ ಹೇಳಲು ಕಾರಣವೇನು? ಏನಾದರೂ ವಿಶೇಷ ಕಾರ್ಯವಿಲ್ಲ ತಾನೇ!" ಕುರ್ಚಿಯಲ್ಲಿ ಆರಾಮಿಸುತ್ತಾ ಫಲಕದಾರಿ ಸಿಂಹ ಕೇಳಿದ.

"ಕಾರ್ಯವೇನೂ ವಿಶೇಷವಾದುದು. ತಾವು ತಮ್ಮ ಬುದ್ಧಿ ಕೌಶಲ್ಯದಿಂದ ಮೊದಲೇ ತಿಳಿದುಕೊಂಡಿದ್ದೀರಿ. ತಮಗೆ ಒಪ್ಪಿಸುವ ಕಾರ್ಯವನ್ನು ತಾವು ಧೈರ್ಯ ಹಾಗೂ ತತ್ಪರತೆಯಿಂದ ಪೂರೈಸುವಿರಾಗಿ ನಾವು ನಂಬುತ್ತೇವೆ."

"ನಾನು ಮಾಡಬೇಕಾದ ಕೆಲಸವಾದರೂ ಏನು? ಎಂದ ಫಲಕಧಾರಿ.

"ನಿಮ್ಮ ಕಾರ್ಯವೆಂದರೆ ಆದಷ್ಟು ಬೇಗ ಕುಮಾರಿ ಮಾಯಾವತಿಯೊಡನೆ ಸಲಿಗೆ ಬೆಳೆಸುವುದು. ಹಾಗೂ ನಮ್ಮ ಬೇಂಕ್ ಫೇಲ್ ಆಗದಂತೆ ಮಾಡುವುದಕ್ಕಾಗಿ ಅವಳಿಂದ ಹಣ ದೊರಕಿಸುವುದು" ಎಂದು ದಲಿತ ಸಿಂಹನು ತಿಳಿಸಿದನು.

"ಆದರೆ ಅವಳ ಲಗ್ನವು ಶೀಘ್ರದಲ್ಲಿಯೇ ಜರಗಲಿದೆ ಅಲ್ಲದೆ ಅವಳ ಅಂಗರಕ್ಷಕರು ಅವಳನ್ನು ನೆರಳಿನಂತೆ ಹಿಂಬಾಲಿಸುತ್ತಿದ್ದಾರೆ" ಎಂದು ನಿರಾಶಾಮುಖವಾಗಿ ನುಡಿದ ಫಲಕದಾರಿ.

"ತಾವು ಎಂತಹ ಮಾತನ್ನು ಆಡುವಿರಿ? ಲಕ್ಷ ಜನರು ಅವಳನ್ನು ಹಿಂಬಾಲಿಸಿದರೆ ಏನು? ನಮ್ಮ ಗುಂಪು ಎಂದೂ ಎಲ್ಲಿಯೂ, ಸೋಲಲಿಲ್ಲ ವಿಜಯವೇ ನಮ್ಮ ಗುರಿ—"

ಮಧ್ಯದಲ್ಲೇ ಫಲಕದಾರಿ—"ಅಂದರೆ... ಸಾರಾಂಶ ತಾವು ನನ್ನನ್ನು ಶಾಂತಿಯಿಂದ ಕುಳಿತುಕೊಳ್ಳಲು ಬಿಡಲಿಕ್ಕಿಲ್ಲ. ತಮ್ಮ ಇಚ್ಛೆಯಂತೆ ಆಗಲಿ. ನಾನು ಸಿದ್ಧನಿದ್ದೇನೆ. ಆದರೆ ಅವಳ ವಿವಾಹವು ಸದ್ಯದಲ್ಲೇ ಜರಗಿದರೆ ನಾನು ವಿಫಲನಾಗಬೇಕಾಗುತ್ತದೆ."

"ನೀನೊಬ್ಬ ಪೂರ್ಣ ಮೂರ್ಖ. ಎಂತಹ ವಿವಾಹ.... ಯಾರ ಮದುವೆ? ದೇವರ ಕೃಪೆಯಿಂದ ನಿನ್ನ ಕೆಲಸವು ಪೂರೈಸುವ ಮೊದಲು ಅವಳ ಲಗ್ನವು ನೆರವೇರಲಾರದು. ನೀನು ನಿಶ್ಚಿಂತನಾಗಿರು." ಎಂದ ರಾಮಸಿಂಹ.

'ಈ ಕೆಲಸವನ್ನಂತೂ ಫಲಕದಾರಿಗೆ ಒಪ್ಪಿಸಿಯಾಯ್ತು. ಇನ್ನೊಂದು ಯುಕ್ತಿಯನ್ನು ಮಾಡಿನೋಡಬೇಕು" ಎಂದ ದಲಿತಸಿಂಹ.

"ರಾಮ ಸಿಂಹ, ನೀನು ರಾಣಿಯವರಲ್ಲಿ ಸಾಲ ಕೇಳಲು ಹೋಗು ರಣವೀರ ಸಿಂಹ, ನೀನು ಹೆಸರು ಬದಲಿಸಿ ಕುಮಾರಿ ಯಮುನಳಿಗೆ ಭೇಟಿಯಾಗಿ ಅವಳೊಡನೆ ಮದುವೆಯ ಪ್ರಸ್ತಾಪ ಮಾಡು."

"ವಾಹ್, ವಾಹ್, ನಿಮ್ಮ ಕೊನೆಯ ಯುಕ್ತಿಯನ್ನು ಯಮುನಾ ಕುಮಾರಿಯು ಕರ್ಮನಿರಿತವಾಗಿ ಸ್ವೀಕರಿಸಬಹುದು. ಅದು ಸಫಲವಾಗುವುದರಲ್ಲಿ ಸಂದೇಹವಿಲ್ಲ. ಎಂದು ವ್ಯಂಗ್ಯವಾಗಿ ನುಡಿದ ರಾಮಸಿಂಹ.

"ಸುಮ್ಮನಿರು" ಎಂದು ಉಚ್ಛ ಸ್ವರದಲ್ಲಿ ಹೇಳಿದ ದಲಿತಸಿಂಹ. ನೀನು ಕೂಡಲೇ ರಾಣಿಯವರ ಬಳಿ ಹೋಗಿ, ಸಮಯ ನಿಶ್ಚಯಿಸಿ ಅವರೊಡನೆ ಮಾತಾಡು. ಬ್ಯಾಂಕಿನ ಸ್ಥಿತಿಯನ್ನು ಪ್ರಸ್ತಾಪಿಸಿ ಸಾಲ ಕೇಳು."

(ಮುಂದುವರಿಯುವುದು)

Tel: 'BLUEYAGAR'. — ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ — Phone: 374.
ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್
ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು.[ಮಾಲಿಕ:ಕೆ.ಕೆ.ಆರ್.ಶೇಟ್

NAVAYUGA WEEKLY, UDIPI.
REGD. NO.BG. 176

4—5—1961

LICENSE NO. 31
Licensed to Post without Prepayment

ಪ್ರೇಕ್ಷಣೀಯ ಸ್ಥಳ:

ಬುದ್ಧ ಜಯಂತಿ ಸ್ಮಾರಕ ಉದ್ಯಾನವನ

ದೆಹಲಿಗೆ ಹೋಗುವಿರಾದರೆ, ರಾಜಘಾಟ್, ಕುತುಬ್ ಮಿನಾರ್, ಜುಮ್ಮಾ ಮಸೀದಿ, ಕೆಂಪು ಕೋಟೆಗಳೊಡನೆ ಬುದ್ಧ ಜಯಂತಿ ಸ್ಮಾರಕ ಉದ್ಯಾನವನವನ್ನೂ ನೋಡಲು ಮರೆಯಬೇಡಿರಿ. ಮನಮೋಹಕವಾದ ಈ ಉದ್ಯಾನ ದೆಹಲಿಯ ಕೋಲಾಹಲದ ನಡುವೆಯೂ ಪ್ರಶಾಂತತೆಯನ್ನು ಹರಡುವಂತಿದೆ.

ದೆಹಲಿಗೆ ಹೋಗುವವರು ನೋಡಬಯಸುವ ಸ್ಥಳಗಳೆಂದರೆ ಮುಖ್ಯವಾಗಿ ರಾಷ್ಟ್ರಪತಿ ಭವನ, ಕುತುಬ್‌ಮಿನಾರ್, ಕೆಂಪು ಕೋಟೆ, ಜುಮ್ಮಾ ಮಸೀದಿ, ಅಶೋಕಾ ಹೋಟೆಲ್ ಇತ್ಯಾದಿ. ಇವುಗಳ ಒಂದು ಸೂಕ್ಷ್ಮ ದರ್ಶನವನ್ನು ಪಡೆಯಬಹುದಾದ ಎತ್ತರದ ಒಂದು ಸ್ಥಳವೆಂದರೆ ಇದೀಗ ದೆಹಲಿ ರಿಜ್ ಬಳಿ ಎತ್ತರದಲ್ಲಿರುವ ಬುದ್ಧ ಜಯಂತಿ ಉದ್ಯಾನವನ.

ರಾಷ್ಟ್ರಪತಿ ಭವನದಿಂದ ಪಶ್ಚಿಮಕ್ಕೆ ಎರಡು ಮೈಲಿ ದೂರದಲ್ಲಿರುವ ಈ ಸುಂದರ ಉದ್ಯಾನ ವನವನ್ನು ಭಗವಾನ್ ಬುದ್ಧನ ಸ್ಮರಣಾರ್ಥವಾಗಿ ಸಿದ್ಧಗೊಳಿಸಲಾಯಿತು. ಒಂದು ದೃಷ್ಟಿಯಿಂದ ಈ ಉದ್ಯಾನವನ ಭಗವಾನ್ ಬುದ್ಧನ ತತ್ವ ಬೋಧೆಗಳನ್ನೇ ನೆನಪಿಗೆ ತಂದು ಕೊಡುತ್ತದೆಯೇನೋ ಅನಿಸುತ್ತದೆ. ನಿರ್ಲಿಪ್ತವಾದರೂ ಪ್ರತ್ಯೇಕವಲ್ಲದ ಒಂದು ಸ್ಥಾನ ನ ಅನರದು. ನಗರದ ಗುಜುಗುಜು ವಾತಾವರಣ ತುಂಬ ಸಮೀಪವಾದರೂ ಇಲ್ಲಿಯ ವಾತಾವರಣ ಮಾತ್ರ ತುಂಬಾ ಪ್ರಶಾಂತ.

೧೯೫೬ರಲ್ಲಿ ಭಗವಾನ್ ಬುದ್ಧನ ಜನ್ಮದಿನೋತ್ಸವದ ೨೫೦೦ನೆಯ ಶತಮಾನೋತ್ಸವವನ್ನು ಆಚರಿಸಿದಾಗ ನಾಡಿನ ರಾಜಧಾನಿಯಲ್ಲಿ ಭಗವಾನ್ ಬುದ್ಧನಿಗೆ ಒಂದು ಯೋಗ್ಯ ಸ್ಮಾರಕವನ್ನು ಏರ್ಪಡಿಸಬೇಕೆಂಬ ಯೋಜನೆ ಫಲವಾಗಿ ಈ ಉದ್ಯಾನವನ ರೂಪುಗೊಂಡಿತು.

ಎತ್ತರದ ಗುಡ್ಡ ಪ್ರದೇಶ 'ರಿಜ್'. ಈ ಗುಡ್ಡ ಪ್ರದೇಶದ ಗ್ರಾಮ್ಯ ವಾತಾವರಣದ ಮಧ್ಯೆ ಈ ಉದ್ಯಾನವನವಿದೆ. ಪ್ರಧಾನಿಗಳು ಇದರ ಶಂಕುಸ್ಥಾಪನೆಯನ್ನು ನೆರವೇರಿಸಿದ ಮೇಲೆ ವಿಸ್ತೃತವಾದ ಯೋಜನೆ ತಯಾರಾಯಿತು. ೧೯೫೯ರಲ್ಲಿ ಉದ್ಯಾನವನ ನಿರ್ಮಿಸುವ ಕಾರ್ಯ ಆರಂಭವಾಗಿ ಇದೀಗ ೪೪ ಎಕರೆಗಳಷ್ಟು ಭೂಮಿಯಲ್ಲಿ ಉದ್ಯಾನವನ ನಿರ್ಮಾಣ ಕಾರ್ಯದ ಪ್ರಪ್ರಥಮ ಘಟ್ಟ ಮುಗಿದಿದೆ.

ಉದ್ಯಾನವನ ಎಷ್ಟು ಸೊಗಸಾಗಿ ನಿರ್ಮಿತವಾಗಿದೆಯೆಂದರೆ ನೈಸರ್ಗಿಕವಾಗಿರುವ ಗುಡ್ಡದ ಸಾಲಿಗೆ ಅದು ಹೊಂದಿಕೊಂಡಿದೆ. ಹೊಸದಾಗಿ ನಿರ್ಮಿಸಲ್ಪಟ್ಟಿರುವ 'ಲಾನ್'ಗಳು, ಹೊಸದಾಗಿ ಬೆಳೆದಿರುವ ನೆರಳು ಕೊಡುವ ಮತ್ತು ತಂಪುಗೊಡುವ ಮರಗಳು, ಅವುಗಳ ತುಂಬಾ ಕಣ್ಮನಗಳನ್ನು ಸೆಳೆಯುವ ಹೂರಾಶಿ, ಅಲ್ಲಲ್ಲೇ ತುಂಬಾ ಜಾಣ್ಮೆಯಿಂದ ನಿರ್ಮಿಸಿರುವ ಕಲ್ಲಿನ ಗೂಡುಗಳು ಮತ್ತು ನೀರಿನ ಕಾಲುವೆ—ಇವುಗಳೆಲ್ಲ ನಿಜಕ್ಕೂ ಮನಮೋಹಕವಾಗಿವೆ.

ವೃಕ್ಷಗಳ ಪೈಕಿ ಅಶೋಕ, ಪಲಾಶ್ ಮತ್ತು ಚಂಪಕ ಜಾತಿಗಳಿಗೆ ಸೇರಿದ ಮರಗಳು ತುಂಬಾ ಆಕರ್ಷಣೀಯವಾಗಿವೆ. ಭಗವಾನ್ ಬುದ್ಧ ಯಾವ ವೃಕ್ಷದ ಕೆಳಗೆ ಕುಳಿತು ಜ್ಞಾನೋದಯವನ್ನು ಪಡೆದನೋ ಆ ಬೋಧಿ ವೃಕ್ಷ ಸಹ ಈ ಉದ್ಯಾನವನದಲ್ಲಿದೆ.

ಈ ತನಕ ಒಟ್ಟು ಸುಮಾರು ೬೦೦ ವೃಕ್ಷಗಳನ್ನು ಇಲ್ಲಿ ಬೆಳೆಸಲಾಗಿದೆ. ಹುಲ್ಲು ಹಾಸಿಗೆಗಳ—'ಲಾನ್'—ವಿಸ್ತೀರ್ಣ ಸುಮಾರು ೯½ ಎಕರೆಗಳಷ್ಟಿದೆ. ಒಟ್ಟು ೧೪ ಶಿಲಾಗೂಡುಗಳು ನಿರ್ಮಿತವಾಗಿವೆ ಮತ್ತು ಜಪಾನಿನ ಮಾದರಿಯಲ್ಲಿ ಒಂದು ಹೂತೋಟವನ್ನೂ ಇಲ್ಲಿ ಬೆಳೆಸಲಾಗುವುದು.

ಇಲ್ಲಿಯ ಇನ್ನೊಂದು ದೊಡ್ಡ ಆಕರ್ಷಣೆಯೆಂದರೆ ಉದ್ಯಾನವನದ ಮಧ್ಯದಲ್ಲಿ ಹಾದು ಹೋಗುವ ೨,೦೦೦ ಅಡಿ ಉದ್ದದ ನೀರಿನ ಕಾಲುವೆ. ಈ ನಾಲೆ ಹುಟ್ಟುವ ಕೊಳ, ಕೃತಕ ಕಾರಂಜಿಯಿಂದ ನಿರ್ಮಿತವಾದುದು. ಇಲ್ಲಿಗೆ ೧೫೬ ಅಡಿ ಎತ್ತರದ ಆರು ಜಲಪಾತಗಳಿಂದ ನೀರು ಬಂದುಬೀಳುತ್ತದೆ.

ಉದ್ಯಾನದ ನಿರ್ಮಾಣಕಾರ್ಯದ ಎರಡನೆಯ ಘಟ್ಟದಲ್ಲಿ ಈ ನಾಲೆಯ ಉದ್ದವನ್ನು ಇನ್ನೂ ೨,೪೦೦ ಅಡಿಗಳಷ್ಟು ಹೆಚ್ಚಿಸಲಾಗುವುದು. ಜೊತೆಗೆ ಜಲಪಾತಗಳ ಮತ್ತು ಸೇತುವೆಗಳ ಸಂಖ್ಯೆಯೂ ಹೆಚ್ಚುವುದು. ಅಲ್ಲದೆ ದ್ವಿತೀಯ ಘಟ್ಟದಲ್ಲಿ ಇನ್ನೂ ೧,೩೦೦ ಮರಗಳನ್ನು ಬೆಳೆಸಲಾಗುವುದಲ್ಲದೆ ೬.೨ ಎಕರೆಗಳಷ್ಟು ಹೆಚ್ಚಿನ ಭೂಮಿಯಲ್ಲಿ ಹುಲ್ಲು ಬೆಳೆಸಲಾಗುವುದು.

ದ್ವಿತೀಯ ಘಟ್ಟದಲ್ಲಿ ನಡೆಯುವ ಇನ್ನೊಂದು ಮುಖ್ಯ ಕಾರ್ಯವೆಂದರೆ ಭಗವಾನ್ ಬುದ್ಧನ ಸ್ಮಾರಕ ನಿರ್ಮಾಣ. ಈ ಸ್ಮಾರಕ ಶಂಕದಾಕಾರದಲ್ಲಿ ೩೦ ಅಡಿಗಳಷ್ಟು ಎತ್ತರವಿರುವುದು; ಅದರ ಕೆಳಗೆ ಅದಕ್ಕೆ ಆಧಾರವಾಗಿ ೬೫ ಅಡಿ ಅಡ್ಡಳತೆಯ ಧರ್ಮ ಚಕ್ರವೊಂದಿರುತ್ತದೆ.

ಮುಂದೆ ದ್ವಿತೀಯ ಘಟ್ಟದ ಕಾರ್ಯ ಮುಗಿದ ಮೇಲೆ ಕ್ರಮವಾಗಿ ಗುಡ್ಡದ ಪಕ್ಕಕ್ಕಿರುವ ಪ್ರದೇಶವನ್ನೂ ಈ ಉದ್ಯಾನವನಕ್ಕೆ ಸೇರಿಸಲಾಗುವುದು. ಆಗ ೪೦೦ ಎಕರೆಗೂ ಹೆಚ್ಚು ಪ್ರದೇಶವನ್ನೊಳಗೊಳ್ಳುವ ಈ ಉದ್ಯಾನವನ ನಾಡಿನಲ್ಲೇ ಅತ್ಯಂತ ಹಿರಿಯ ಉದ್ಯಾನವನಗಳಲ್ಲೊಂದಾಗುತ್ತದೆ.

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ದು ವಿಷಾದಕ್ಕೆ ಕಾರಣವೆನಿಸಿದೆ.

ಕನ್ನಡದಲ್ಲಿ ಶಬ್ದ ಸಂಪತ್ತಿಯಿಲ್ಲ; ಟೈಪ್‌ರೈಟರ್ ಇಲ್ಲ ಎಂದು ಮುಂತಾದ ನೆವನಗಳನ್ನು ಮುಂದೊಡ್ಡಿ ಕನ್ನಡವನ್ನು ಹಿಂದೆ ತಳ್ಳುವುದು ಕನ್ನಡದ ಬಗ್ಗೆ ಅವರಿಗಿರುವ ಜುಗುಪ್ಸೆ ಮತ್ತು ಅಜ್ಞಾನಗಳನ್ನಷ್ಟೇ ಪ್ರದರ್ಶಿಸುತ್ತವೆ. ಮಿತಿಮೀರಿದ ಭಾಷಾ ವ್ಯಾಮೋಹವು ಹಾನಿಕಾರಕವೆಂಬುದು ನಿಜ; ಆದರೆ, ಕನ್ನಡವು ರಾಜ್ಯಭಾಷೆಯಾಗಬೇಕೆನ್ನುವುದು ಭಾಷೆಯ ಮೇಲಿನ ವ್ಯಾಮೋಹದಿಂದಲ್ಲ; ಇಂಗ್ಲಿಷ್ ಭಾಷೆಯ ಪರಿಜ್ಞಾನ ಸಾಕಷ್ಟಿಲ್ಲದ ಲಕ್ಷಾಂತರ ಕನ್ನಡಿಗರು ಮತ್ತು ಅವರ ಸರಕಾರದ ನಡುವಣ ಸಂಬಂಧ ಸಾಕಷ್ಟು ತಿಳಿಯಾಗಿರಬೇಕು; ಸರಕಾರವು ಸಮರ್ಥ ಸೇವೆಯನ್ನು ಜನತೆಗೆ ನೀಡಬೇಕು; ಜನತೆ ಅದನ್ನು ಪಡೆಸಿಕೊಳ್ಳಬೇಕು ಎಂಬ ಘನೋದ್ದೇಶದಿಂದ. ಎಲ್ಲ ರಾಜ್ಯಗಳಲ್ಲಿಯೂ ಸರಳವಾಗಿ ಮುಂದುವರಿಯಬಹುದಾದ ಈ ಸಾಧನೆ ನಮ್ಮ ರಾಜ್ಯದಲ್ಲಿ ಮಾತ್ರ ಆಗಲಾಗದೆಂಬರೆ, ಇದು ಪೌರುಷದ ಮಾತೆನಿಸಲಾರದು. ಹಿಂದೀಭಾಷೆಯನ್ನು ಕಲಿಯಬೇಕೆಂದು ಹಿಂದೊಮ್ಮೆ ಆಜ್ಞೆ ಮಾಡಿದ ನಮ್ಮ ಸರಕಾರ ರಾಜ್ಯದ ವ್ಯವಹಾರ ಕನ್ನಡದಲ್ಲಿ ನಡೆಯಬೇಕೆಂದು ಅದೇಕೆ ಹೇಳದಾಗಿದೆಯೋ ತಿಳಿಯದು.

ಇನ್ನೊಂದು ಪ್ರಶ್ನೆಯೆಂದರೆ, ಶಿಕ್ಷಣದ ಮಾಧ್ಯಮ. ದಕ್ಷಿಣ ಭಾರತದ ಹೆಚ್ಚಿನ ವಿಶ್ವವಿದ್ಯಾಲಯಗಳ ಉಪಕುಲಪತಿಗಳು ಪ್ರಾದೇಶಿಕ ಭಾಷೆಗಳಲ್ಲಿ ಆವಶ್ಯಕ ಸಾಹಿತ್ಯ ಸಾಮಗ್ರಿ ಸಿದ್ಧವಾಗುವ ವರೆಗೆ ಇಂಗ್ಲಿಷ್ ಭಾಷೆಯು ಮಾಧ್ಯಮವೇ ಮುಂದುವರಿಯಬೇಕೆಂದು ಅಭಿಪ್ರಾಯಪಟ್ಟದ್ದಾರೆ. ರಾಜ್ಯ ಸರಕಾರವು ಸ್ವಾಯತ್ತ ಸಂಸ್ಥೆಗಳಾದ ಇವುಗಳ ಮೇಲೆ ಒತ್ತಾಯ ಹೇರಲಾರದಾದರೂ ತಾನೇ ರಾಜ್ಯ ಭಾಷೆಯನ್ನಾಗಿ ಅದನ್ನು ಅಂಗೀಕರಿಸದಿರುವಾಗ ಸಲಹೆ ನೀಡುವುದಾದರೂ ಅಪಹಾಸ್ಯವೆನಿಸುವುದಿಲ್ಲವೆ?

ಈ ಯೆಲ್ಲವನ್ನೂ ನಾವು ಗಮನಿಸಿದರೆ ಮೊತ್ತಮೊದಲಿಗೆ ರಾಜ್ಯ ಭಾಷೆ ಕನ್ನಡವೆಂದು ಘೋಷಿಸಿ, ಅದನ್ನು ಸಮಗ್ರ ರಾಜ್ಯದಲ್ಲಿ ಅನುಷ್ಠಾನಕ್ಕೆ ತರುವಂತೆ ನಮ್ಮ ಪ್ರತಿನಿಧಿಗಳು ಸರಕಾರದ ಮೇಲೆ ಒತ್ತಾಯ ಹೇರಬೇಕು; ಅದರೊಡನೆ ರಾಜ್ಯದ ಹೆಸರನ್ನು ಕರ್ನಾಟಕವಾಗಿಸಬೇಕು. ಮುಂದಿನ ವಿಧಾನ ಸಭಾಧಿವೇಶನದೊಳಗೆ ಇದಕ್ಕೆ ಬೇಕಾದ ವ್ಯಾಪಕರೀತಿಯ ಪ್ರಚಾರ ಕರ್ನಾಟಕದ ಮೂಲೆಮೂಲೆಯಲ್ಲಿ ಆಗಬೇಕು. ಕಾಂಗ್ರೆಸ್ಸೂ ಈ ಕುರಿತಾಗಿ ಗಂಭೀರ ಪರ್ಯಾಲೋಚನೆ ಮಾಡಬೇಕು.

—ಗೋರಾ.

ಸೇವಿಂಗ್ಸ್ ಬ್ಯಾಂಕ್ ಖಾತೆ
ಬಡ್ಡಿಯ ದರವನ್ನು ಹೆಚ್ಚಿಸಲಾಗಿದೆ.

3%

[ಬಡ್ಡಿಯನ್ನು ಆರು ತಿಂಗಳಿಗೊಮ್ಮೆ ಜಮೆಮಾಡಲಾಗುವುದು.]

- ಕೇವಲ ಐದು ರೂಪಾಯಿಗಳಿಂದ ಖಾತೆಯನ್ನು ಪ್ರಾರಂಭಿಸಬಹುದು.
- ೨೫ ನ. ಪೈಸೆಗಳಷ್ಟನ್ನು ಜಮೆಮಾಡಬಹುದು.
- ವಾರಕ್ಕೆ ಒಂದು ಸಾವಿರ ರೂಪಾಯಿಗಳಿಗಿಂತ ಹೆಚ್ಚಿಗೆ ಹಣವನ್ನು ವಾಪಾಸು ಪಡೆಯಲು ಏಳು ದಿನಗಳ ಮುಂಚಿತ ನೋಟೀಸಿನ ನಿಯಮಕ್ಕೊಳಪಟ್ಟು ನಿಮಗೆ ಬೇಕೆನಿಸಿದಾಗ ನಿಮ್ಮ ಹಣವನ್ನು ವಾಪಾಸು ಪಡೆಯಬಹುದು.

ಸೇವಿಂಗ್ಸ್ ಬ್ಯಾಂಕ್ ಖಾತೆ
ತೆರೆಯಿರಿ
ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. -ಸಂ.ನ.

ಪಂಚಾಯತಿಗಳಿಗೆ ಉಪಯುಕ್ತ ಪುಸ್ತಕ
ಮೈಸೂರು ರಾಜ್ಯದ
ಪಂಚಾಯತಿಗಳ
ತೆರಿಗೆಗಳ ಮತ್ತು ಫೀಗಳ
ನಿಯಮಗಳು.
ಲೇಖಕರು:
ಶ್ರೀ. ಕೆ. ಎಸ್. ಆಳ್ವ, ಬಿ.ಎ., ಬಿ.ಎಲ್.
ಎಡ್ವಕೇಟ್, ಮಂಗಳೂರು.
ಬೆಲೆ: ರೂಪಾಯಿ ಎರಡು.
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

Edited Printed & Published by K. H. Shetty, at the Navayuga Press, Udipi, S. India.

40th year of publication. 11-5-1961 ೪೦ನೇ ವರ್ಷ

ಸಂಪುಟ ೪೦ Vol. 40

ನವಯುಗ

ಸಂಚಿಕೆ ೩೫ No. 35

ಬೆಲೆ 0=13

ಪ್ರಚಲಿತ ಪ್ರಸಂಗ

ವರದಕ್ಷಿಣಾ ಪ್ರತಿಬಂಧಕ ವಿಧೇಯಕ

ಸಂಸತ್ತಿನ ಉಭಯ ಸಭೆಗಳಲ್ಲಿರುವ ಭಿನ್ನಾಭಿಪ್ರಾಯ ನೀಗಿಸಲು ವರದಕ್ಷಿಣೆ ಕೇಳುವುದನ್ನೂ ದಂಡನಾರ್ಹವೆಂದು ಪರಿಗಣಿಸಿ ರಾಜ್ಯ ಸರಕಾರದ ಅನುಮತಿಯಿಂದ ಮಾತ್ರವೇ ಮುಂದುವರಿಯಬೇಕೆಂಬ ತಿದ್ದುಪಡಿಯನ್ನು ಸರಕಾರವು ಮುಂಡಿಸಿದೆ.

ವರದಕ್ಷಿಣೆ ಪ್ರತಿಬಂಧಕ ವಿಧೇಯಕದ ಕೆಲವೊಂದು ಅನುಚ್ಛೇದಗಳ ಬಗ್ಗೆ ಸಂಸತ್ತಿನ ಉಭಯ ಸಭೆಗಳ ಅಭಿಪ್ರಾಯಗಳಲ್ಲಿ ಭಿನ್ನತೆಯಿರುವುದರಿಂದ ರಾಷ್ಟ್ರಪತಿಗಳು ಎರಡೂ ಸಭೆಗಳ ಸಂಯುಕ್ತಾಧಿವೇಶನವನ್ನು ಕರೆದಿದ್ದಾರೆ. "ವರದಕ್ಷಿಣೆ"ಯ ವಿವರಣೆಯನ್ನು "ಪ್ರತ್ಯಕ್ಷ ಅಥವಾ ಪರೋಕ್ಷರೂಪದಿಂದ ಕೊಡಲ್ಪಟ್ಟ ವರದಕ್ಷಿಣೆ" ಎಂದು ಹೇಳಿ ಅಧಿಕ ಸ್ಪಷ್ಟಗೊಳಿಸಬೇಕು ಮತ್ತು ವಿವಾಹದ ವೇಳೆ ಈಯಲಾದ ಉಡುಗೊರೆ ಮೊದಲಾದುವುಗಳನ್ನು ವಿಧೇಯಕದಿಂದ ಮುಕ್ತಗೊಳಿಸಬೇಕು ಎಂದು ರಾಜ್ಯಸಭೆಯ ಮೊದಲ ಅಭಿಪ್ರಾಯವಿತ್ತು. ಇದಕ್ಕೆ ಒಪ್ಪದ ಲೋಕಸಭೆಯು ವರದಕ್ಷಿಣೆ ಕೇಳುವವರಿಗೆ ಶಿಕ್ಷೆ ವಿಧಿಸುವ ವಿಷಯದಲ್ಲಿ ಉಗ್ರನೀತಿಯನ್ನು ಬಯಸಿತ್ತು. ಇದು ರಾಜ್ಯಸಭೆಗೆ ಸ್ವೀಕೃತವಾಗಿರಲಿಲ್ಲ.

ಸಂಯುಕ್ತಾಧಿವೇಶನದಲ್ಲಿ ಕೇಂದ್ರ ಕಾಯದೆಯ ಮಂತ್ರಿ ಶ್ರೀ ಅಶೋಕ ಕುಮಾರ ಸೇನರು ಭಿನ್ನಾಭಿಪ್ರಾಯಕ್ಕೆ ಸಂಬಂಧಿಸಿದ ಅನುಚ್ಛೇದಗಳು ಮತ್ತು ಅವುಗಳಿಗೆ ಬಂದ ತಿದ್ದುಪಡಿಗಳ ಕುರಿತಾದ ಚರ್ಚೆಯನ್ನು ಪ್ರಾರಂಭಿಸಿದರು: "ಜನಮತದ ಮೇಲೆ ಪ್ರಭಾವ ಬೀರುವುದು ಮತ್ತು ಇಂದು ವರದಕ್ಷಿಣೆಯನ್ನು ತೆಗೆದುಕೊಳ್ಳುವವರ ಮೇಲೆ ಒತ್ತಾಯ ಹೇರುವುದು ಪ್ರತಿಬಂಧಕ ವಿಧೇಯಕದ ಉದ್ದೇಶ. ವಿಧೇಯಕವು ಸ್ವೀಕೃತವಾದೊಡನೆಯೇ ವರದಕ್ಷಿಣೆ ಸ್ವೀಕರಿಸುವ ಪದ್ಧತಿಯೇ ನಿಂತು ಹೋಗುವುದೆಂದು ನಾನು ನಂಬುವುದಿಲ್ಲ. ಕಾನೂನು ಮಾಡುವುದರಿಂದ ಪರಂಪರೆ ಹೋಗುವುದಿಲ್ಲ. ಆದರೆ, ಸಮಾಜದ ವಿಚಾರ ಧಾರೆಯನ್ನು ಪರಿವರ್ತಿಸುವ ಉದ್ದೇಶದಿಂದ ಮಾತ್ರ ನಾವೀ ವಿಧೇಯಕವನ್ನು ಮುಂದಿಡುತಿದ್ದೇವೆ."

"ಸಾಮಾಜಿಕ ಕೆಡುಕುಗಳನ್ನು ದೂರ ಮಾಡುವುದು ಅವಶ್ಯ; ಇದಕ್ಕೆ ಕಾಯದೆಗಳನ್ನು ರೂಪಿಸುವುದೂ ಅಪೇಕ್ಷಣೀಯ. ಆದರೆ, ದಮನಕ್ಕೆ ಕಾರಣವಾಗುವ ವಿಧೇಯಕಗಳನ್ನು ನಾವು ತರಬಯಸುವುದಿಲ್ಲ. ಅಪ್ರಾಮಾಣಿಕ ವ್ಯಕ್ತಿಗಳು ಕಾನೂನಿನ ದುರುಪಯೋಗ ಮಾಡಿಕೊಳ್ಳದಂತೆ ಅದರಲ್ಲಿ ಆವಶ್ಯಕ ಸಂರಕ್ಷಣೆಗಳನ್ನು ವ್ಯವಸ್ಥಿತಗೊಳಿಸಬೇಕು. ವರದಕ್ಷಿಣಾ ಪ್ರತಿಬಂಧಕ ವಿಧೇಯಕದ ಕೆಲವೊಂದು ಅನುಚ್ಛೇದಗಳ ಕುರಿತು ಭಿನ್ನಾಭಿಪ್ರಾಯವಿರುವುದಾದರೂ ಒಟ್ಟಿನಲ್ಲಿ ವರದಕ್ಷಿಣೆಯ ಬಗ್ಗೆ ವಿರೋಧ ಕಂಡುಬಂದಿದೆ. ಕಾನೂನಿನ ಉದ್ದೇಶದಲ್ಲಿ ಏಕಮತವಿದೆ; ಭಿನ್ನಾಭಿಪ್ರಾಯವಿರುವುದು ಕೇವಲ ಅದರ ಸ್ವರೂಪದಲ್ಲಿ."

ವರದಕ್ಷಿಣಾ ಪದ್ಧತಿಯ ಇತಿಹಾಸವನ್ನು ವಿವರಿಸುತ್ತ "ಮೊತ್ತಮೊದಲಲ್ಲಿ ಇದರ ಉದ್ದೇಶದಲ್ಲಿ ಒಳಿತಿತ್ತು. ಹೆಮ್ಮಕ್ಕಳಿಗೆ ತಮ್ಮ ಕಾಯ್ದಂದೆಯರ ಸಂಪತ್ತಿನಲ್ಲಿ ಅಧಿಕಾರವಿಲ್ಲದ ವೇಳೆ ಹೆತ್ತವರು ಅವರಿಗೆ ವಿವಾಹದ ಅವಸರದಲ್ಲಿ ಈ ರೀತಿಯ ಉಡುಗೊರೆಗಳನ್ನು ನೀಡಲು ಬಯಸುತಿದ್ದರು. ಆದರೆ, ಈ ಉಪಹಾರವು ಸ್ವೇಚ್ಛೆಯಿಂದ ಕೊಡಲ್ಪಡುತಿತ್ತು. ಇದು 'ಸ್ತ್ರೀ ದಾನ'ದ ರೂಪವನ್ನು ಹೊಂದಿತ್ತು. ಪರಂತು, ಈ ಸತ್ಸಂಪ್ರದಾಯವು ಈಗಿನ ದಿನಗಳಲ್ಲಿ ಅತೀವ ಕೆಟ್ಟದಾಗಿ ಪರಿಣಮಿಸಿದೆ. ಈ ಕುಪ್ರಥೆಯನ್ನು ಆದಷ್ಟು ಶೀಘ್ರವಾಗಿ ಕೊನೆಗಾಣಿಸುವುದರಲ್ಲೇ ನಮ್ಮ ಭವಿಷ್ಯವಡಗಿದೆ ಎಂಬಂತಾಗಿದೆ. ಆದರೂ ಈ ಉಡುಗೊರೆಗಳ ಮೇಲೆ ಸಂಪೂರ್ಣ ಪ್ರತಿಬಂಧ ಹೇರುವ ಇರಾದೆಯು ಸರಕಾರಕ್ಕಿಲ್ಲ"ವೆಂದರು.

"ವರದಕ್ಷಿಣೆ"ಯ ಕಕ್ಷೆಯೊಳಗೆ ಏನೇನು ಬರುತ್ತದೆ; ಈ ಶಬ್ದದ ಅರ್ಥವೇನು? ಎಂಬುದು ಮುಖ್ಯ ವಿಧೇಯಕದ ಎರಡನೆಯ ಅನುಚ್ಛೇದದಲ್ಲಿ 'ಕೊಂಡುಕೊಂಡ ಬೆಲೆ' ಎಂಬಿದನ್ನು ಹೇಳಲಾಗಿದೆ. ವಿವಾಹವು ಕೊಂಡುಕೊಳ್ಳುವಂತಾಗಬಾರದೆಂದು ಕಾನೂನು ಬಯಸುತ್ತದೆ. ಈ ಸಂಬಂಧದಲ್ಲಿಯೇ ದಂಡನೆಯೂ ವಿಧಿತವಾಗಿದೆ; ಉಪಹಾರಗಳ ಮೇಲಲ್ಲ. ಕುರೀತಿಯನ್ನು ದೂರೀಕರಿಸುವ ಉತ್ಸಾಹದಲ್ಲಿ ನಾವು ಅತ್ಯಂತ ಅಪೇಕ್ಷಣೀಯವಾದ ಉಡುಗೊರೆಗಳನ್ನೂ ಪ್ರತಿಬಂಧಿಸಿದಲ್ಲಿ ಅದು ಅಶುಭವೆನಿಸುವುದು"—ಎಂದು ಶ್ರೀ ಸೇನರು ವಿವರಿಸಿದರು.

"ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ" ಶಬ್ದಗಳಲ್ಲಿ ವಿಶೇಷ ಅಂತರವೇನೂ ಇರುವುದಿ

(೧೦ನೇ ಪುಟ ನೋಡಿರಿ)



ಮಣಿಪಾಲದ ಕಸ್ತೂರ್ಬಾ ಜನರಲ್ ಆಸ್ಪತ್ರೆಯನ್ನು ಉದ್ಘಾಟಿಸಿದ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎನ್. ಸಂಜೀವ ರೆಡ್ಡಿ.

ವಿಶ್ವಕವಿ ಟಾಗೋರರ ಪುಣ್ಯಸ್ಮರಣೆಗಾಗಿ
ಅವರ ಶತಮಾನೋತ್ಸವದ ಸುಸಂದರ್ಭದಲ್ಲಿ
ಪ್ರಕಟವಾದ ಕಿರುಗಾಣಿಕೆಗಳು

ಚಿತ್ರಾಂಗದೆ

ಬೆಲೆ: ೬೦ ನ. ಪೈಸೆ
(ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಅವರಿಂದ ಅನುವಾದಿತ)

ರವೀಂದ್ರನಾಥರ ಕಿರುಗತೆಗಳು

ಬೆಲೆ: ೫೦ ನ. ಪೈಸೆ.
(ಶ್ರೀ ಹನುಮಂತರಾವ್ ಮೊಂಜರೇಕರ, ಕಾರವಾರ ಅವರಿಂದ ಅನುವಾದಿತ)
ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್,
ನವಯುಗ ಪ್ರೆಸ್, ಉಡುಪಿ.

ESTD. 1921

NAVAYUGA
KANNADA WEEKLY,
UDIPI.

Founder,
Late Sri A. B. Shetty
Former Minister for Public Health, Govt. of Madras & Govt. of Mysore.

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರತಿ ಗುರುವಾರ
ಉಡುಪಿಯಿಂದ ಹೊರಡುವ
ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೨೧.

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್.
ಬಿ. ಶಾಮರಾಯ ಶೆಟ್ಟಿ, ಬಿ. ಎ., ಎಲ್. ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

●

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3 50
ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾ ಹಣವನ್ನಾಗಲೀ ಜಾಹೀರಾತಿನ ಹಣವನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಧಾರಾವಾಹಿ ಕಾದಂಬರಿ

ಯಮುನ ನೆರಳು

ಮೂಲ ಲೇಖಕರ : ಶ್ರೀ ಎಂ. ಎಲ್. ಪಾಂಡೇಯ.
ಅನುವಾದಕರು: ಶ್ರೀ ಎಸ್. ಎಂ. ಶೆಟ್ಟಿ, ಶಿನುಂಜೆ ಹರಿಹರಿ.

(ಕಳೆದ ಸಂಚಿಕೆಯಿಂದ)

ಇಂದೋರಿನಿಂದ ಸ್ವಲ್ಪ ದೂರದಲ್ಲಿ ಒಂದು ನಿರ್ಜನ ಪ್ರದೇಶವು ಮಹೇಂದ್ರಗಡವೆಂಬ ಹೆಸರಿನಿಂದ ಪ್ರಸಿದ್ಧವಿದೆ. ಈ ಸ್ಥಳವು ಪುರಾತನ ರಾಜಗಡಿ ಸೀಮೆಯಾಗಿದೆ. ಅದರ ಈಗಿನ ಸ್ವಾಮಿ ಜಯವಂತನೆಂಬ ಒಬ್ಬ ಚಿತ್ರಗಾರ. ಅವನು ಬರೇ ಚಿತ್ರ ಬರೆಯುವವನು. ಆದರೆ ಅದರಿಂದ ಅವನು ಜೀವನ ನಡೆಸುವುದಿಲ್ಲ. ಇದಕ್ಕಿಂತ ಹೆಚ್ಚು ಯಾರೂ ಜಯಂತನ ಬಗ್ಗೆ ತಿಳಿದಿಲ್ಲ. ಅವನ ಮುಖ ಚರ್ಯೆಯಿಂದ ಸಭ್ಯನಾಗಿಯೂ ಶಿಷ್ಟಾಚಾರ ಸಂಪನ್ನನಾಗಿಯೂ ಕಾಣುತ್ತಾನೆ. ಅವನು ಹೆಚ್ಚಾಗಿ ತನ್ನ ಗಡಿಯ ಸುಂದರ ನೈಸರ್ಗಿಕ ಪ್ರದೇಶದಲ್ಲಿಯೇ ಇರುತ್ತಾನೆ. ಆದರೆ ಕೆಲವೊಮ್ಮೆ ತನ್ನ ಮುಶ್ಕಿ ಕುದುರೆಯಲ್ಲಿ ಕುಳಿತುಕೊಂಡು ಸವಾರಿಗೆ ಹೋಗುವುದೂ ಉಂಟು. ಈತನ ಗಡಿಯು ಹೊರಗೆ ಹಾಳು ಬಿದ್ದಂತೆ ಕಾಣುವ ಒಳಗೆ ಅತ್ಯಂತ ಸುಂದರವಾದ ಭವನದಲ್ಲಿ ಓರ್ವನೇ ಪಾಳಿ ನವಳೇಂದ್ರನೆಂಬ ನೌಕರನೊಡನೆ ವಾಸಿಸುತ್ತಿದ್ದನು. ಭವನದ ಮಹಡಿಯಲ್ಲಿ ತುಂಬಾ ಕೋಣೆಗಳಿವೆ. ಅವುಗಳಿಗೆ ನಾನಾ ಬಣ್ಣಗಳನ್ನು ಸವರಲಾಗಿತ್ತು ಅದು ಸುಂದರವಾದ ಫರ್ನೀಚರುಗಳಿಂದ ಸುಶೋಭಿತವಾಗಿತ್ತು. ಆದರೆ ಜಯಂತನು ಇರುವ ಕೋಣೆಗೆ ಕೆಂಪು ಬಣ್ಣ ಕೊಡಲ್ಪಟ್ಟಿತ್ತು. ಅದರ ಕೆಳಗಿನ ಭಾಗದಲ್ಲಿ ಜಯಂತನ ಅನ್ಯ ನೌಕರರು ವಾಸಿಸುತ್ತಿದ್ದರು. ಇವರ ಹೊರತು ಅತ್ತ ಬರಹೋಗುವವರು ಯಾರೂ ಇರಲಿಲ್ಲ.

ಪ್ರಕೃತಿಯು ಆ ಸ್ಥಳಕ್ಕೆ ಸೌಂದರ್ಯವನ್ನು ಸಂಪೂರ್ಣ ಧಾರೆಯೆರೆದಿದ್ದಿತು. ಅಲ್ಲಿಯ ರಮಣೀಯ ಸೌಂದರ್ಯವು ಮನೋಹಕವಾಗಿತ್ತು. ಗಡಿಗೆ ಹೊಂದಿಕೊಂಡಿರುವ ಗುಡ್ಡಗಳ ಶ್ರೇಣಿ ಹಾಗೂ ಅದರ ಗರ್ಭ ಸ್ಥಳದಲ್ಲಿ ಹರಿಯುವ ನದಿಯ ದೃಶ್ಯವು ಮನೋಹರವಾಗಿತ್ತು.

ಜಯಂತನ ಕೋಣೆಯಲ್ಲಿ ಒಂದು ವಿಶೇಷ ಯಂತ್ರ ಇರಿಸಲ್ಪಟ್ಟಿತು. ಅದು ವಿದ್ಯುತ್ತಿನ ಮುಖಾಂತರ ನಡೆಯಲ್ಪಡುತ್ತಿತ್ತು. ದಿನದ ಹೆಚ್ಚಿನ ಸಮಯವನ್ನು ಅವನು ಯಂತ್ರದ ಮುಂದೆ ಕುಳಿತು ಸಂಕೇತವನ್ನು ಬರೆಯುತ್ತಾ ಕಳೆಯುತ್ತಿದ್ದನು. ಈಗ ಸಹ ಗಂಟೆ ಆಡಕಾರಣ ಜಯಂತನು ಮೆಶೀನು ಸ್ಟಾರ್ಟ್ ಮಾಡಿದನು ಯಂತ್ರದಲ್ಲಿರುವ ಒಂದು ಚಕ್ರದಲ್ಲಿ ಕೆಂಪು, ನೀಲಿ, ಹಸುರು, ಹಳದಿ ಕಿರಣಗಳ ಬಣ್ಣಗಳಿಂದ ಸಂಕೇತವನ್ನು ಬರೆದು ತೆಗೆದುಕೊಳ್ಳ ತೊಡಗಿದನು. ತದನಂತರ ಬೆಲ್ ಬಾರಿಸಿದನು. ಕೂಡಲೇ ಜಯಂತನ ನೇಪಾಳಿ ನೌಕರ ನವಲೇಂದನು ಬಂದು ಅವನ ಇದಿರಿನಲ್ಲಿ ನಿಂತನು.

"ನಾಳೆ ಬೆಳಗ್ಗೆ ಆರು ಗಂಟೆಗೆ ಕುದುರೆಯನ್ನು ಸಿದ್ಧಪಡಿಸು. ನೀನೂ ನನ್ನೊಡನೆ ಬರಬೇಕು" ಎಂದು ತಿಳಿಸಿದನು ಜಯಂತ.

ಸನ್ಮಾನ ಸೂಚಕವಾಗಿ ತಲೆಯಲ್ಲಾಡಿಸಿ ನವಲೇಂದ್ರನು ಬಾಗಿಲು ಮುಚ್ಚಿ ಹೊರ ಹೋದನು. ಅವನು ಕೋಣೆಯಿಂದ ಹೊರಬರುತ್ತಲೇ ಹೊರಬಾಗಿಲಲ್ಲಿ ಬೆಲ್ ಬಾರಿಸತೊಡಗಿತು. ನವಲೇಂದ್ರನು ಕೂಡಲೇ ಬಾಗಿಲು ತೆರೆದಾಗ ಅಲ್ಲಿ ಒಬ್ಬ ಬಿಳಿ ಮುಖವಾಡ ಧರಿಸಿದ್ದ ಮನುಷ್ಯನು ನಿಂತಿದ್ದನು. ಅವನನ್ನು ಕಂಡಕೂಡಲೇ ನವಲೇಂದ್ರನು ಆದರ ಪೂರ್ವಕವಾಗಿ ನಮಸ್ಕರಿಸಿದನು. ಮುಖವಾಡ ಧರಿಸಿದ ಮನುಷ್ಯನು ಒಳಗೆ ಪ್ರವೇಶಿಸಿದನು. ಅಂತೆಯೇ ನವಲೇಂದ್ರನೊಡನೆ ಮಹಡಿಯೇರತೊಡಗಿದನು.

ಮೇಲೆ ಬಂದ ನವಲೇಂದ್ರನು ಮುಖವಾಡ ಧರಿಸಿದವನನ್ನು ಹೊರಗೆ ನಿಲ್ಲಿಸಿ, ತಾನು ಜಯಂತನ ಕೋಣೆಗೆ ಹೋಗಿ ಮುಖವಾಡಧಾರಿ ಬಂದ ಸಮಾಚಾರವನ್ನು ತಿಳಿಸಿದನು. ಅನಂತರ ಕ್ಷಣದಲ್ಲೇ ಹೊರಬಂದು ಮುಖವಾಡದವನನ್ನು ಒಳಗೆ ಹೋಗಲು ಸಂಕೇತ ಮಾಡಿದನು. ಒಳಗೆ ಹೋದ ಕೂಡಲೇ ಮುಖದಿಂದ ಮುಖವಾಡ ತೆಗೆದು — "ತಮಗೆ ತುಂಬಾ ಸಮಯ ನನ್ನ ಪ್ರತೀಕ್ಷೆ ಮಾಡಬೇಕಾಯಿತು.. ಕ್ಷಮಿಸಿ" ಎಂದ.

"ದಾಮೋದರ್ ಕೆಲವೊಮ್ಮೆ ನೀನು ಬಹಳ ಆಲಸ್ಯದಿಂದ ಕೆಲ್ಸ ಮಾಡುತ್ತಿ; ಇಷ್ಟು ತಡವೇಕಾಯ್ತು?" ಎಂದ ಜಯಂತ.

"ಕ್ಷಮಿಸಿ, ಪ್ರಾಣದಾಸರಿಗೆ ಸಮಾಧಾನಮಾಡಿ ಬರಲು ಇಷ್ಟು ತಡವಾಯಿತು. ಅವರು ನನ್ನನ್ನು ಹೋಗಗೊಡಲಿಲ್ಲ. ಬಹಳ ಕಷ್ಟದಿಂದ ಒಪ್ಪಿಸಿ ಬಂದಿದ್ದೇನೆ." ಎಂದ ದಾಮೋದರ.

"ಯಾವ ಬಗ್ಗೆ ಸಮಾಧಾನ ಮಾಡಲು ಇಷ್ಟು ತಡವಾಯ್ತು?"

ಫಲಕದಾರಿಯನ್ನು ಮನೆಗೆ ಬರಗೊಡಬಾರದು ಎಂಬ ವಿಷಯದಲ್ಲಿ ಅವರನ್ನು ಸಮಾಧಾನಗೊಳಿಸಬೇಕಾಯ್ತು."

'ಯಾಕೆ"

"ಅವನೋರ್ವ ಅವಿಶ್ವಾಸೀ ಮನುಷ್ಯ. ಮಾಯಾವತಿಯನ್ನು ಮಂಕು ಮಾಡಲು ಪ್ರಯತ್ನಿಸುತ್ತಾನೆ ಅವನು ಮುಂದಕ್ಕೂ ಹಿತಕರನಾಗುವವನಲ್ಲ."

"ರಾಜ ಕುಮಾರಿಯ ವಿಚಾರ ಹೇಗಿದೆ?'

"ನೋಡುವಾಗ ಒಂದು ತರಹ ಕಾಣುತ್ತಾಳೆ. ಹೊಸ ಪ್ರೇಮದ ನೆರೆಯಲ್ಲಿ ತೇಲಿ ಹೋಗಿ ರಾಜಕುಮಾರ ಪ್ರತಾಪ ಸಿಂಹನನ್ನು ಮರೆಯುವ ಸಂಭವವೂ ಇದೆ.'

"ನೀನು ಆದಷ್ಟು ಪ್ರಯತ್ನ ಮಾಡಿ ಶೀಘ್ರದಲ್ಲಿಯೇ ಮಾಯಾವತಿಯ ಲಗ್ನವು ರಾಜಕುಮಾರ ಪ್ರತಾಪ ಸಿಂಹರೊಡನೆ ನೆರವೇರಿಸಬೇಕೆಂದೇ ನನ್ನ ಮನೋಭಿಪ್ರಾಯ.' ಜಯಂತನೆಂದ.

"ನಾನೂ ಹಾಗೆಯೇ ಯೋಚಿಸಿ ಪ್ರಾಣದಾಸ ಹಾಗೂ ರಾಣಿ ಸಾಹೇಬರಿಗೆ ತಿಳಿಸಿದ್ದೇನೆ ಆದರೆ ರಾಣಿಯು ತನ್ನ ಇಲಾಖೆಗೆ ಹೋಗಿ ಬರುವ ಮುಂಚೆ ಲಗ್ನವಾಗುವ ಸಂಭವವೂ ಇಲ್ಲ" ಎಂದ ದಾಮೋದರ.

"ಆಗಲಿ, ನೀನು ಈ ಬಗ್ಗೆ ಚಿಂತೆ ಮಾಡುವ ಆವಶ್ಯಕತೆಯಿಲ್ಲ. ಹಾಂ, ರಾಜಾ ಸಾಹೇಬರ ಆಕಸ್ಮಿಕ ಮೃತ್ಯು ಹಾಗೂ ಅವರ ಪತ್ತೆ ಇಲ್ಲದ ಶವದ ಬಗ್ಗೆ ಏನೇನು ಕಾರ್ಯ ಮಾಡಿದ್ದಿ?"

"ನಾನು ಸರಕಾರದವನಂತೆಯೂ ಪರಿಶೀಲನೆ ನಡೆಸಿದೆ. ಆದರೆ ಯಾವ ನಿಷ್ಕರ್ಷಕ್ಕೂ ಈ ವರೆಗೆ ಬರಲಾಗಲಿಲ್ಲ ಅತಿ ಜಟಿಲ ಸಮಸ್ಯೆಯಾಗಿದೆ. ಈ ಬಗ್ಗೆ ಏನಾದರೂ ತಿಳಿದರೆ ಮೊತ್ತ ಮೊದಲು ತಮಗೆ ತಿಳಿಸುತ್ತೇನೆ. ಈಗ ನಾನು ಹೋಗಬೇಕು. ಪ್ರತಿಯೊಂದು ಮಾತನ್ನು ವಯರ್‌ಲೆಸ್ ಮುಖಾಂತರ ತಿಳಿಸುತ್ತೇನೆ" ಎಂದು ಜಯಂತನಿಗೆ ವಂದಿಸಿ ದಾಮೋದರನು ಹೊರಟು ಹೋದನು.

ಅವನು ಹೋಗುತ್ತಲೆ ನವಲೇಂದ್ರನು ಬಂದು ಪುನಃ ಬಾಗಿಲು ಮುಚ್ಚಿ ಬೀಗ ಹಾಕಿದನು. ಬಹಳ ರಾತ್ರಿಯಾಗಿತ್ತು. ಆದುದರಿಂದ ನವಲೇಂದ್ರನೂ ಮಲಗ ಹೋದನು. ಜಯಂತನೂ ನಿದ್ರಿಸಿದನು.

ಪ್ರಾತಃಕಾಲ ಜಯಂತನು ಏಳುವಾಗ ಐದು ಗಂಟೆಯಾಗಿತ್ತು. ಪ್ರಾತಃವಿಧಿಗಳನ್ನು ತೀರಿಸಿ ಡ್ರೆಸ್ ಧರಿಸಿ ಹೊರಗೆ ಬರುವಾಗ ಎರಡು ಕುದುರೆಗಳನ್ನು ಸಿದ್ಧಪಡಿಸಿ

(೧೧ನೇ ಪುಟ ನೋಡಿರಿ)

ಸ್ವಲ್ಪ ಸ್ವಲ್ಪವಾಗಿ, ಅಲ್ಲೊಮ್ಮೆ ಇಲ್ಲೊಮ್ಮೆ, ನೀವು ಉಳಿಸುತ್ತಿರುವ ಹಣವು ಬೇಗ ಬೇಗನೆ ವೃದ್ಧಿಗೊಂಡು, ನಿಮ್ಮ ಭವಿಷ್ಯದ ಭದ್ರತೆಯು ಹೆಚ್ಚೆಚ್ಚಾಗಿ ಪರಿಣಮಿಸುವಂತೆ

ಕೊರ್ಪೊರೇಶನ್ ಬೇಂಕು

ನಿಮ್ಮ ಸೇವಿಂಗ್ಸ್ ಬೇಂಕ್ ಎಕೌಂಟುಗಳ ಮೇಲೆ ಇನ್ನು ಮುಂದಕ್ಕೆ ಸಾಲಿಯಾನ್ ಸೇಕಡಾ **3** ರ ದರದಲ್ಲಿ ನಿಮಗೆ ಬಡ್ಡಿ ಕೊಡುವುದು.

ವಿವರಗಳಿಗೆ ವಿಚಾರಿಸಿರಿ:

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ಸ್ಥಾಪನೆ: 1906) (ರಿಜಿಸ್ಟರ್ಡ್ ಆಫೀಸು: **ಉಡುಪಿ**
ಆಡಳಿತ ಆಫೀಸು: **ಮಂಗಳೂರು – 1**

ರವೀಂದ್ರ ವಾಣಿ:

ಆತ್ಮಬೋಧ

(ಲೇಖಾಂಕ ೩)

ಮಾನವ ಹೃದಯವು ಆತ್ಮೋನ್ಮುಖವಾದಾಗ, ಅದಕ್ಕೆ ಅಮರತೆಯ ಅನಂದ ಜ್ಯೋತಿಯು ಕಂಡು ಬರುವುದು. ಆಗ, ಪರಮಾತ್ಮಶಕ್ತಿಯ ಅರಿವಾಗುವುದು. ಆತ್ಮರೂಪದ ಪರಮಾತ್ಮಶಕ್ತಿಯೇ ವಿಶ್ವಾತ್ಮನೊಡನೆ ಮಿಲನಗೊಳ್ಳುವುದು.

ಮೂಲ ಲೇಖಕರು: ವಿಶ್ವಕವಿ ರವೀಂದ್ರನಾಥ ಟಾಗೋರ್.
ಅನುವಾದಕರು: ಶ್ರೀ ಕೆ. ಎನ್. ಭಟ್, ಶಿರಾಡಿಪಾಲ್.

ಮನುಷ್ಯನು ತನ್ನ ಜೀವನದ ಪೂರ್ಣ ವಿಕಾಸದೆಡೆಗೆ ತಲಪಲು ಆತುರನಾಗಿದ್ದಾನೆ. ಈ ಆತುರವೇ ಆತನಿಗೆ, ಧನ, ಶಕ್ತಿಗಳನ್ನು ಸಂಪಾದಿಸಲು, ಪ್ರೇರೇಪಿಸುವುದು. ಧನ, ಮತ್ತು ಶಕ್ತಿ ಸಂಗ್ರಹದಿಂದ, ಪೂರ್ಣ ವಿಕಾಸವು ಲಭಿಸಲಾರದು. ಎಂಬುದನ್ನು ಮನುಷ್ಯನು ತಿಳಿದುಕೊಳ್ಳುವುದಿಲ್ಲ. ಈ ವಿಕಾಸವು ಆಂತರಿಕವಾದ ಪ್ರಕಾಶದಿಂದ ಮಾತ್ರ ಲಭಿಸುವುದು ಸಾಧ್ಯವೇ ಹೊರತು ಬಾಹ್ಯ ಸಾಧನೆಗಳಿಂದಲ್ಲ. ಮನುಷ್ಯನ ಪೂರ್ಣ ವಿಕಾಸವು ಆತನ ಅಂತಃಕರಣದಲ್ಲಿ ಆತ್ಮರೂಪೀ ಪರಮಾತ್ಮನು ಪ್ರಕಾಶಿತನಾಗುವುದರಿಂದ ಆಗುವುದು; ಎಂದು ತಿಳಿದುಬರುವುದು. ಆಗ ಆತನು, ಆತನ ಅಂತಃಕರಣದಲ್ಲಿ ಈಶ್ವರನಿಂದ ಸ್ವಯಂ ಪ್ರಕಾಶ ಪಡೆದು, ಪ್ರಕಾಶಹೊಂದಿದ ಆತ್ಮದ ಪ್ರಕಾಶದಲ್ಲಿ— ಪ್ರಾರ್ಥನೆ ಮಾಡುತ್ತಾನೆ. ಹೀಗೆ ಮಾಡುತ್ತಿರುವಾಗ ಮನುಷ್ಯನು ಪೂರ್ಣ ಮನುಷ್ಯನಾಗುತ್ತಾನೆ. ಆತನಿಗೆ ಆತ್ಮದರ್ಶನದ ಪೂರ್ಣ ಅನುಭವವಾಗುತ್ತದೆ. ಸ್ವಯಂ ಪ್ರಕಾಶವುಳ್ಳ ವಿಶ್ವಾತ್ಮನಲ್ಲಿ ಇರುವ ಆತ್ಮದ ಸಂಬಂಧದ ಅನುಭವವಾಗುತ್ತದೆ. ಮನುಷ್ಯನು ಸಂಪೂರ್ಣವಾಗಿ ಈ ಪ್ರಕಾಶದಲ್ಲಿ ಬಾರದಿರುವುದೇ ಆತನ ಎಲ್ಲಾ ದುಃಖಗಳಿಗೂ ಮೂಲವಾಗಿದೆ. ಆತನು ತನ್ನ ಛಾಯೆಯ ಕತ್ತಲೆಯಲ್ಲಿಯೇ ತನ್ನ ಸ್ವಾರ್ಥ ಭಾವನೆಗಳ ಹಿಂದೆ, ಸೋತು ಹೋಗುತ್ತಾನೆ. ಆತನು ತನ್ನ ವ್ಯಕ್ತಿಗತ ಪರಿಸ್ಥಿತಿಗಳ ಹೊರಗೆ ಇಣಿಕಿಯೂ ನೋಡಲಾರನು. ಈ ಕಾರಣದಿಂದ, ಆತನ ಹೃದಯದ ಮೂಲಕ ಈ ಪ್ರಾರ್ಥನೆ ಹೊರಡುವುದು—"ಹೇ ದೇವ! ನೀನು ನನ್ನಲ್ಲಿ ಪ್ರಕಾಶವನ್ನು ತುಂಬಿಸು! ಈ ರೀತಿಯಿಂದ ಆತ್ಮ ಪ್ರಕಾಶದಲ್ಲಿ ಮುಂದೆ ಬರುವ ಮನುಷ್ಯನ, ಹಸಿವು ತೃಷೆ ಧನ ಸಂಗ್ರಹಾದಿ ಎಲ್ಲಾ ಅಪೇಕ್ಷೆಗಳೂ ಹಿಂದೆ ಬೀಳುತ್ತವೆ. ಮತ್ತು ಆತ್ಮ ಪ್ರಕಾಶದ ಇಚ್ಛೆಯೇ ಬಲವಾಗುತ್ತದೆ. ಏಕೆಂದರೆ ಇದು ಆತನ ಪ್ರಕೃತಿ ಸಿದ್ಧವಾದ ಇಚ್ಛೆಯಾಗಿರುತ್ತದೆ. ಇದಕ್ಕೆ ಬಾಹ್ಯ ಪರಿಸ್ಥಿತಿಗಳಿಂದ ಉತ್ತೇಜನ ಸಿಕ್ಕಬೇಕಾದ ಅಗತ್ಯವಿಲ್ಲ.

ಅವ್ಯಕ್ತವು ವ್ಯಕ್ತವಾಗುವ ವಸ್ತುಗಳಲ್ಲಿ ಪ್ರದರ್ಶಿತವಾಗುವಂತೆ, ಅಮರತೆಯು ಸೀಮಾಬದ್ಧವಾದ ಪ್ರಕೃತಿಯಲ್ಲಿ ಪ್ರಕಾಶಿತವಾಗುವುದು. ಇದು ಸಂಪೂರ್ಣ ಸೃಷ್ಟಿರಚನೆಯ ಮೂಲವಾಗಿದೆ. ಈ ಸ್ವಭಾವವು ಸಮಸ್ತದಲ್ಲಿಯೂ ವಿಶ್ವದ ಪ್ರಕೃತಿಯಲ್ಲಿಯೂ, ಮನುಷ್ಯನ ಆತ್ಮದಲ್ಲಿಯೂ ಕೂಡ ಇರುವುದು. ಈ ಕಾರಣದಿಂದಲೇ ಒಂದು ಆತ್ಮವು ಮತ್ತೊಂದು ಆತ್ಮನಲ್ಲಿ ತನ್ನ ಪ್ರತಿಬಿಂಬದ, ಆತ್ಮೀಯತೆಯ ಭಾವನೆಯನ್ನೂ ತಳೆದಿರುತ್ತದೆ. ಸ್ವತಂತ್ರವಾದ ಈ ಭಾವನಾರೂಪೀ ಇಚ್ಛೆಯು ತಾನು ಸ್ವೇಚ್ಛೆಯಿಂದ ಮಾಡಿದ ಆತ್ಮಾರ್ಪಣದ ಮೂಲಕ ಪಡೆದ ಪುರಸ್ಕಾರವನ್ನು ಪೂರ್ಣ ಹೊಂದಲು ಅಧಿಕಾರ ಪಡೆಯುತ್ತದೆ.

ವಿಶ್ವದ ಒಡೆಯನು, ಮನುಷ್ಯನ ಆತ್ಮವನ್ನು ತನ್ನ ಶಾಸನದಿಂದ ಮುಕ್ತಗೊಳಿಸಿರುವನು. ತನ್ನ ದೈಹಿಕ, ಯಾ ಮಾನಸಿಕ ಕಾರ್ಯಗಳಲ್ಲಿ ಪ್ರಕೃತಿಯ ಸಹಯೋಗವನ್ನವಲಂಬಿಸಿರುವಾಗ ಆತನಿಗೆ ವಿಶ್ವಶಕ್ತಿಯ ಸಹಾಯ ಪಡೆಯಬೇಕಾಗುತ್ತದೆ. ಆತ್ಮಕ್ಕೆ ಪ್ರಭುವಿನ ಛತ್ರ ಛಾಯೆಯಲ್ಲಿರಲು, ಅಥವಾ ಇಲ್ಲದಿರಲು, ಪೂರ್ಣ ಸ್ವಾತಂತ್ರ್ಯವಿದೆ. ಈ ಕ್ಷೇತ್ರವು ಪ್ರೇಮದಿಂದ ವಿಜಯ ಸಂಪಾದಿಸುವ ಕ್ಷೇತ್ರವಾಗಿದೆ. ಇಲ್ಲಿ ಪ್ರೇಮವು ಪ್ರಭುವಾಗಿ ಬರುವುದಲ್ಲ; ಅದು ಅತಿಥಿಯಾಗಿ ಬರುವುದು. ಈ ಕಾರಣದಿಂದ ಪ್ರೇಮವು ಅಂತರಾತ್ಮನ ಕರೆಯನ್ನು ಸತ್ಕಾರವನ್ನೂ ನಿರೀಕ್ಷಿಸುತ್ತ ಇರುತ್ತದೆ. ಮನುಷ್ಯನ ಆತ್ಮ ಸಾಮ್ರಾಜ್ಯದಲ್ಲಿ ವಿಶ್ವದೊಡೆಯನು, ತನ್ನ ಅನುಶಾಸನವನ್ನು ಜಾರಿಗೊಳಿಸಿರುವುದಿಲ್ಲ. ಆದರೆ ಸಮಸ್ತ ಶಕ್ತಿಗಳೂ, ಸ್ವನಿಯಂತ್ರಿತವಾಗಿರುತ್ತವೆ. ಆದರ ಪ್ರಾಂತ್ಯದೊಳಗೆ, ಸೌಂದರ್ಯ ಸಾಮ್ರಾಜ್ಯವೇ ನೆಲಸಿರುವುದು. ಅದು ಪ್ರಥಮ ಪ್ರೇಮ ಸಂದೇಶದಂತೆ ಆಗಮಿಸುವುದು.

ಆತ್ಮದ ಈ ಕ್ಷೇತ್ರದಲ್ಲಿ ವಿಶ್ವದೊಡೆಯನು ನಿದ್ರೋಹದ ಅಧಿಕಾರವನ್ನು ಕೊಟ್ಟಿರುವಂತೆ ತೋರುವುದು. ಅಂದರೆ, ಕೇವಲ ಮನುಷ್ಯನ ಆತ್ಮದಲ್ಲಿ ಮಾತ್ರ, ಅಸತ್ಯ ಅಸಮಾನತೆ, ಮತ್ತು ಅರಾಜಕತೆ ಇವುಗಳು ಇರುತ್ತವೆ. ಇಲ್ಲಿ ವಿಶ್ವದೊಡೆಯನು ಕೇವಲ ಸಾಕ್ಷಿಯಾಗಿ ನಿಂತು ನೋಡುತ್ತಿರುತ್ತಾನೆ, ಅಷ್ಟೆ! ಈ ಅನ್ಯಾಯ ಅರಾಜಕತೆಗಳು ಮೇರೆ ಮೀರಿ ನಿಂತಾಗ ನಾವು—"ಒಂದು ವೇಳೆ ದೇವರು ಇರುವನೆಂದಾದರೆ, ಇಂತಹ ಅನ್ಯಾಯ ನಡೆಯುತ್ತಿತ್ತೇ?" ಎನ್ನುತ್ತೇವೆ. ಆದರೆ ಇಲ್ಲಿ ದೇವರು ಕೇವಲ ಸಾಕ್ಷಿಯಾಗಿ ನಿಂತು ನೋಡುತ್ತಿರುತ್ತಾನೆ! ಎಂಬುದರಲ್ಲಿ—ಸಂದೇಹವಿಲ್ಲ. ಪ್ರೇಮಿಯಾದ ನಮ್ಮ ಆತ್ಮದ ದ್ವಾರವನ್ನು ನಾವು ಮುಚ್ಚಿ ಬಿಟ್ಟರೆ, ಅದನ್ನು ಬಲಪೂರ್ವಕವಾಗಿ ದೇವರು ತೆರೆದು ಕೊಡಲು ಬರುವುದಿಲ್ಲ. ಅಂತೆಯೇ ನಾವು ಮಾಡುತ್ತಿರುವ ಅನ್ಯಾಯಗಳನ್ನು ಶಾಂತತೆಯೊಡನೆ ಆತ ನೋಡುತ್ತಿರುತ್ತಾನೆಯೇ ಹೊರತ, ತಡೆಯಲು ಬರುವುದಿಲ್ಲ ಆತ್ಮವು ಕೇವಲ ಪ್ರೇಮದಿಂದ ಪ್ರೇರಣೆಯನ್ನು ಪಡೆದಿರುತ್ತದೆ, ಹೊರತು ಅನ್ಯ ವಿಚಾರಗಳಿಂದ ಅಲ್ಲ; ಅದು ಪ್ರೇಮದಿಂದಲೇ ಪೂರ್ಣತೆಯನ್ನು ಹೊಂದಿ. ಸ್ವತಂತ್ರವಾದ ಇಚ್ಛೆಯಿಂದಲೇ ಪರಮಾತ್ಮನೊಡನೆ ವಿಶ್ವಾತ್ಮನೊಡನೆ ವಿಲೀನವಾಗಬೇಕು.

ಯಾರ ಆತ್ಮವು ಈ ಪರಿಯಿಂದ ಪರಮಾತ್ಮನಲ್ಲಿ ವಿಲೀನವಾಗಿರುವುದೋ ಆತನು ಮಾನವನ ಉದ್ಯಾನದ ಸುಗಂಧ ಪುಷ್ಪದಂತೆ ಆಗುವನು. ಏಕೆಂದರೆ ಈ ಮಿಲನದಲ್ಲಿ ಜನ್ಮ ಸಾರ್ಥಕತೆಯ ಆತ್ಮಾನುಭವ ಉಂಟಾಗುವುದು. ಪಂಕ್ತಿ ಮನುಷ್ಯನ ಅಂತಃಕರಣದಿಂದ ವಿಶ್ವಾತ್ಮನ ಕಡೆಗೆ, ಮನುಷ್ಯ ಪ್ರೇಮವು ವಿಶ್ವದ ಅಮರ ಪ್ರೇಮದೊಡನೆ, ಆತ್ಮೀಯತೆಯನ್ನು ಹೊಂದುತ್ತದೆ. ಈ ಕಾರಣದಿಂದಲೇ ಭಗವದ್ಭಕ್ತರಾದವರಿಗೆ ನಮ್ಮ ದೇಶದಲ್ಲಿ ಇಷ್ಟೊಂದು ಆದರ, ಸಮ್ಮಾನ ಲಭಿಸಿತು. ಪಾಶ್ಚಾತ್ಯರು ಈ ಭಾವನೆಯುಳ್ಳವರನ್ನು ಪಾಖಂಡಿಗಳು ಎನ್ನಬಹುದು. ಆದರೆ, ನಮ್ಮ ಈ ಸಂತ ಭಕ್ತರಲ್ಲಿ ಪರಮಾತ್ಮನ ಪೂರ್ಣ ಆನಂದವು ಪುಷ್ಟಿತವಾಗಿರುವುದನ್ನು ಅನುಭವದಿಂದ ತಿಳಿಯ ಬಹುದು. ಅವರ ಪ್ರೇಮವು ಭಗವದ್ ಪ್ರೇಮದಿಂದ ಉಜ್ವಲವಾಗುತ್ತದೆ. ಅದರ ಪ್ರಕಾಶದಲ್ಲಿ ನಮ್ಮ ಪ್ರೇಮ ವಿಕಸಿತವಾಗುತ್ತದೆ. ನಮ್ಮ ಜೀವನದ ಆಂತರಿಕ ಭಾವನೆಗಳು, ಸುಖದುಃಖಾದಿ ಅನುಭವಗಳು ಈ ದಿವ್ಯ ಪ್ರೇಮದ ಲೀಲೆಯನ್ನು ಸ್ಪರ್ಶಿಸಲು ನಾಲ್ಕೂ ಕಡೆಗಳಿಂದ ಏಕತ್ರಿತವಾಗಿ ಯಾವ ಅಭಿನಯವನ್ನು ಮಾಡುವುವೋ ಅದರ ಛಾಯೆಯನ್ನೇ ನಾವು ಭಗವದ್ ಪ್ರೇಮಿಗಳ ಜೀವನದಲ್ಲಿ ಕಾಣುತ್ತೇವೆ.

ಈ ಅನಂತ ರಹಸ್ಯದ ಸ್ಪರ್ಶವು ನಮ್ಮ ಸಾಧಾರಣ ಪ್ರವೃತ್ತಿಯವರ ಸಂಗೀತ ಸ್ವರದಲ್ಲಿ ಕಟ್ಟಲ್ಪಟ್ಟಿರುತ್ತದೆ. ಸಮಸ್ತ ವೃಕ್ಷಗಳಲ್ಲಿ ನಕ್ಷತ್ರಗಳಲ್ಲಿ, ಪರ್ವತ ಶ್ರೇಣಿಗಳಲ್ಲಿ ನಮಗೆ ಒಂದು ಅಪೂರ್ವವಾದ ಭಾವ ಪ್ರತಿಮೆಯ ಅಸ್ತಿತ್ವವು ಭಾಸವಾಗತೊಡಗುವುದು. ಈ ಭಾವ ರೂಪೀ ಪ್ರತಿಮೆ ಯಾವುದೋ ಒಂದು ರಹಸ್ಯದ ವಿಚಾರವನ್ನು ಹೇಳಲು ತವಕಪಡುತ್ತಿರುವಂತೆ ಭಾಸವಾಗುವುದು. ಆದರೆ ಅದು ಹೇಗೆ? ಎಂಬುದನ್ನು ಶಬ್ದಗಳಿಂದ ಹೇಳಲು ಸಾಧ್ಯವಿಲ್ಲ. ಮನುಷ್ಯನ ಆತ್ಮವು ತನ್ನ ಅಹಂಕಾರದ ಪರದೆಯನ್ನು ಕಿತ್ತೊಗೆದು, ತನ್ನ ಪ್ರೇಮ ಪ್ರಭುವಿನ ಮುಂದೆ ಯಾವಾಗ ಹೋಗಿ ನಿಲ್ಲುವುದೋ ಆಗ ಆ ಪ್ರಭುವು ನಿತ್ಯ ನೂತನನಾದ ರಚನೆಗಳ ಮಧ್ಯದಲ್ಲಿ ತಲ್ಲೀನನಾಗಿರುವುದು ಕಂಡುಬರುವುದು. ಮತ್ತು ತನ್ನ ಕಲೆಗಾರಿಕೆಯಿಂದ ಆತನು ಅನೇಕ ರೂಪಗಳಿಂದ ಪ್ರಕಟನಾಗುವುದು ಕಂಡು ಬರುವುದು. ಆತನ ಈ ಪ್ರತಿಯೊಂದು ರೂಪದಲ್ಲಿಯೂ ಮನಮೋಹಕವಾದ ಸೌಂದರ್ಯವಿದ್ದು ಅದು ಹೆಚ್ಚುತ್ತಾ ಇರುವುದು. ನಮ್ಮ ಪ್ರೇಮಿಯಾದ ಆತ್ಮವು ಈ ದಿವ್ಯ, ನೂತ

(೧೧ನೇ ಪುಟ ನೋಡಿ)

ಸ್ಥಾಪನೆ: 1924

ದಿ ಕರ್ನಾಟಕ ಬ್ಯಾಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬ್ಯಾಂಕ್)

ರಿಜಿಸ್ಟರ್ಡ್ & ಹೆಡ್ ಆಫೀಸು: ಡೊಂಗರಕೇರಿ, ಮಂಗಳೂರು—3.

ಈ ಕೆಳಗಿನ ಏರಿಸಿದ ಬಡ್ಡಿದರಗಳಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು.

ಒಂದರಿಂದ ಎರಡು ತಿಂಗಳುಗಳ ವರೆಗೆ	....	ಸಾ॥ ಸೇಕಡಾ	3-75	ನ.ಪೈಸೆ
ಮೂರರಿಂದ ಐದು ತಿಂಗಳುಗಳ ವರೆಗೆ	....	,,	4-25	,,
ಆರು ತಿಂಗಳುಗಳಿಂದ 12 ತಿಂಗಳುಗಳ ವರೆಗೆ....		,,	4 50	,,
12 ತಿಂಗಳು ಮಿಕ್ಕಿ 24 ತಿಂಗಳುಗಳ ವರೆಗೆ		,,	4-75	,,
24 ತಿಂಗಳು ಮಿಕ್ಕಿ 48 ತಿಂಗಳುಗಳ ವರೆಗೆ		,,	5·00	,,
48 ತಿಂಗಳುಗಳಿಗೆ ಮಿಕ್ಕಿ	....	,,	5-25	,,

ಸೇವಿಂಗ್ಸ್ ಬ್ಯಾಂಕ್ ಬಡ್ಡಿ ದರವನ್ನು
ಸಾ. ಸೇಕಡ 2½% ರಿಂದ 3½%ಗೆ ಏರಿಸಲಾಗಿದೆ.

THE KARNATAKA BANK LIMITED.

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ: ಬಡ್ಡಿ ಸೇಕಡಾ ೭ರಂತೆ: ರೂ. 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100—00 ಒದಗಿಸುವೆವು.

ಕಡೆ, ಚಿಕ್ಕ ಮ್ಯಾದೆ, ಸ್ಥಿರ ಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಸೇಕಡಾ 5½ರ ವರೆಗೆ.

ತಾ. 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK LTD.

Estd: 1920

ಜ್ಞಾನವೆಂದರೆ ವಿವೇಕ. ಅಕ್ಷರಜ್ಞಾನದಿಂದ ವಿವೇಕ ಶಕ್ತಿ ಬರಲಿಲ್ಲ ವೆಂದಾದರೆ, ಅದು ಜ್ಞಾನವೆನಿಸದು; ಕಲಿತುಕೊಂಡ ಮೂರ್ಖತೆ.

ನವಯುಗ

೪೦ ವರುಷ	ಉಡುಪಿ ೧೧-೫-೬೧	ವಾರ ೩೫

ಮೋತಿಲಾಲ ನೆಹರು

ಭಾರತವು ತನ್ನ ಇರ್ವರು ಕೀರ್ತಿವೆತ್ತ, ಪ್ರತಿಭಾಶಾಲಿಗಳೆನಿಸಿದ ನಾಯಕಮಣಿಗಳ ಶತ ಸಾಂವತ್ಸರಿಕೋತ್ಸವವನ್ನು ಆಚರಿಸುತ್ತಿದೆ. ತಮಗಾಗಿ ತಮ್ಮ ಜನತೆಗಾಗಿ ತ್ಯಾಗ, ಸೇವೆ ಮೊದಲಾದ ಸದ್ಗುಣಗಳಿಂದ ದುಡಿದ ಭಾರತರತ್ನಗಳನ್ನು ಸ್ಮರಿಸುತ್ತಿದೆ. ಇವರಲ್ಲಿ ನಮ್ಮ ಇಂದಿನ ಪ್ರಧಾನಿಗಳಾದ ಜವಾಹರಲಾಲರ ಪೂಜ್ಯ ತಂದೆ ಪಂಡಿತ ಮೋತಿಲಾಲರು ಒಬ್ಬರು. ಮೋತಿಲಾಲರು ಶ್ರೀಮಂತ ಕುಲಕ್ಕೆ ಸೇರಿದವರು. ಅವರು ವೈಭವದ ಜೀವನವನ್ನು ಬಾಳುತಿದ್ದರು. ತಮ್ಮ ಪುತ್ರ ಜವಾಹರರನ್ನೂ ಅವರು ಅದೇ ರೀತಿ ಬೆಳೆಸುತಿದ್ದರು. ೧೯೧೦ರಲ್ಲಿ ಸಂಯುಕ್ತ ಪ್ರಾಂತದ ಶಾಸನ ಸಭಾ ಸದಸ್ಯರಿವರಾದರೂ ರಾಜಕಾರಣದಲ್ಲಿ ಮುಂದುವರಿಯಲಿಲ್ಲ. ಭಾರತದ ಸ್ವಾತಂತ್ರ್ಯಾಂದೋಲನದಲ್ಲಿ ಇವರು ಸೇರಿಕೊಂಡಿದ್ದರೂ ಆ್ಯನಿ ಬೆಸೆಂಟ್ ಹಾಗೂ ಮಹಾತ್ಮಾ ಗಾಂಧಿಯವರು ಈ ರಂಗದಲ್ಲಿ ಕಾರ್ಯ ಪ್ರವೃತ್ತರಾದ ನಂತರವೇ ಮೋತಿಲಾಲರು ಪ್ರತ್ಯಕ್ಷವಾಗಿ ಇದರಲ್ಲಿ ತೊಡಗಿದರು. ಮೋತಿಲಾಲರು ತ್ಯಾಗ ಶೀಲತೆಗೆ ಹೆಸರಾದವರು. ತಾವು ವಕೀಲವೃತ್ತಿಯಿಂದ ಸಂಪಾದಿಸಿದ ಕೋಟಿಗಟ್ಟಲೆಯ ಹಣವನ್ನು ತಮ್ಮ ವಸ್ತು ಒಡವೆಗಳನ್ನು ತ್ಯಜಿಸಿ, ತನ್ನ ಶ್ರೀಮಂತ ಜೀವನವನ್ನು ಬಿಟ್ಟುಕೊಟ್ಟು ಸ್ವಾತಂತ್ರ್ಯ ಸಮರದಲ್ಲಿ ಧುಮುಕಿ ಬಂಧವಿಮೋಚನೆಗಾಗಿ ಹೋರಾಡಿದ ಮೋತಿಲಾಲರ ಮನಃಪರಿವರ್ತನೆಯು ಒಂದು ಇಂದ್ರ ಜಾಲದಂತೆ ಕಂಡರೂ ಅದು ಪರಿಣಾಮದಾಯಕವಾಗಿತ್ತು. ತನ್ನ ಪುತ್ರ ಮತ್ತು ಪುತ್ರಿಯರನ್ನು ದೇಶದ ಸೇವೆಯಲ್ಲಿ ತೊಡಗಿಸಿ ಅವರಲ್ಲಿ ರಾಷ್ಟ್ರೀಯ ಭಾವನೆಗಳು ಹುಟ್ಟುವಂತೆಸಗಿ ಅದರಿಂದಲೇ ತೃಪ್ತಿಪಟ್ಟುಕೊಳ್ಳದೆ ತಾನೂ ರಾಷ್ಟ್ರ ಸೇವೆಗೆ ಟೊಂಕ ಕಟ್ಟಿದರು. ದೇಶಬಂಧು ಚಿತ್ತರಂಜನದಾಸರೊಡಗೂಡಿ ಸ್ವರಾಜ್ಯ ಪಕ್ಷದ ಅಧ್ಯಕ್ಷರಾಗಿ, ಪಾರ್ಲಿಮೆಂಟರಿ ಕ್ಷೇತ್ರಗಳಲ್ಲಿ ಕಾಂಗ್ರೆಸ್ಸು ಉನ್ನತವಾಗುವಂತೆ ಮಾಡಿದರು. ಕೇಂದ್ರ ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ನಾಯಕರಾಗಿ, ಅಖಿಲ ಭಾರತೀಯ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಮೋತೀಲಾಲರು ತನ್ನ ಉಜ್ವಲ ಕರ್ತವ್ಯದಕ್ಷತೆಯನ್ನೂ ಕಾರ್ಯ ತತ್ಪರತೆಯನ್ನೂ ಸೇವಾ ಮನೋವೃತ್ತಿಯನ್ನೂ ತೋರಿಸಿದರು. ತನ್ನ ಅತುಲನೀಯ ವಾದ ವೈಖರಿ, ಅಸಮಾನ ಮೇಧಾವಿತನ ಮತ್ತು ಅನುಪಮ ಬುದ್ಧಿ ಚಾತುರ್ಯಗಳಿಂದ ಸ್ವದೇಶ ಹಿತೈಷಿಗಳಾಗಿದ್ದ ಮೋತಿಲಾಲರನ್ನು ಕಂಡು ವಿದೇಶೀಯರೂ ಬೆಕ್ಕಸ ಬೆರಗಾಗುತಿದ್ದರು. ಭಾರತದ ತುಂಬ ಎದ್ದಿದ್ದ ನಿಸ್ಸತಂತ್ರ್ಯಾಂದೋಲನದ ಪರಿಣಾಮವಾಗಿ ತಮ್ಮ ಜೀವಿತಾವಧಿಯಲ್ಲಿಯೇ ಭಾರತವು ಸ್ವತಂತ್ರವಾಗುವುದೆಂದು ನಂಬಿದ್ದವರಲ್ಲಿ ಮೋತಿಲಾಲರೂ ಒಬ್ಬರು. ನಮ್ಮ ಇಂದಿನ ರಾಷ್ಟ್ರಪತಿಗಳು ಯುವಕರಾಗಿದ್ದಾಗ ಮೋತಿಲಾಲರು ಇವರೊಡನೆ ಹೇಳಿದ್ದರಂತೆ— "ಭಾರತವು ನನ್ನ ಕಣ್ಣ ಮುಂದೆಯೇ ಸ್ವಾತಂತ್ರ್ಯವಾಗುವುದು; ಮತ್ತು ನಾನೇ ಅದರ ಪ್ರಥಮ ರಾಷ್ಟ್ರಾಧ್ಯಕ್ಷನಾಗುವೆ" ಎಂದು. ಮೋತಿಲಾಲರ ಈ ಒಂದು ಆಸೆಯು ಕೈಗೂಡಲಿಲ್ಲ. ಅವರು ಪರಲೋಕ ವಾಸಿಗಳಾಗಿ ಹಲವು ವರ್ಷಗಳ ನಂತರವೇ ಭಾರತ ಸ್ವತಂತ್ರವಾಯಿತು. ಆದರೂ ಇದರಿಂದ ಮೋತಿಲಾಲರ ಸತ್ ಹೃದಯ ಮತ್ತು ಸತ್ ಕಾಮನೆಗಳ ಪರಿಚಯವು ನಮಗಾಗುವುದು. ಮೋತಿಲಾಲರ ರಾಷ್ಟ್ರೀಯ ಭಾವನಾನುಸಾರ ಬೆಳೆಯಲ್ಲಿ ಬೆಳಗಿದ ಜವಾಹರಲಾಲರು ತನಗಿಂತ ಹೆಚ್ಚಾಗಿ ಭಾರತದ ಬಗ್ಗೆ ಕಾಳಜಿ ವಹಿಸುತ್ತ ದುಡಿಯುತ್ತಿರುವುದು ನಮ್ಮ ಸೌಭಾಗ್ಯ. ವಿಶ್ವದ ಎಲ್ಲ ರಾಷ್ಟ್ರಗಳಲ್ಲಿಯೂ ಪ್ರಶಂಸಾರ್ಹರಾದ ನೆಹರುರವರನ್ನು ನಮಗಿತ್ತ ಮೋತಿಲಾಲರು ಪ್ರಾತಃಸ್ಮರಣೀಯರು. ಅವರ ಜೀವನದ ಸುಸ್ಮರಣೆಯಿಂದ ನಮ್ಮಲ್ಲೂ ನಿಸ್ವಾರ್ಥತೆ, ತ್ಯಾಗ ಶೀಲತೆ ಮತ್ತು ಸೇವೆಯ ಭಾವನೆಗಳು ಉದ್ಭೂತವಾಗಲಿ. ತನ್ಮೂಲಕ ರಾಷ್ಟ್ರೋನ್ನತಿಯ ಮಹಾಕಾರ್ಯದಲ್ಲಿ ನಿರ್ವಂಚನೆಯಿಂದ ದುಡಿಯುವ ಸೌಭಾಗ್ಯ ನಮ್ಮದಾಗಲಿ.

ರವೀಂದ್ರನಾಥ ಟಾಗೋರ್

ಮೋತಿಲಾಲರು ರಾಜ್ಯಕೀಯದಲ್ಲಿ ಆಚಂದ್ರಾರ್ಕ ಚಿರಸ್ಥಾಯಿಯಾಗಿ ದುಡಿದರೆ, ಸಾಹಿತ್ಯದೇವಿಯ ಆರಾಧನೆಯಲ್ಲಿಯೇ ತನ್ನ ಆಯುಸ್ಸನ್ನು ಸವೆಸಿದವರು ರವೀಂದ್ರನಾಥ ಟಾಗೋರರು. ಇವರ ಗೀತಾಂಜಲಿಗೆ ನೋಬೆಲ್ ಪಾರಿತೋಷಕ ೧೯೧೩ರಲ್ಲಿ ಲಭಿಸಿದ ಮೇಲಂತೂ ರವೀಂದ್ರರು ಕವೀಂದ್ರರಾಗಿ ದಿಗ್ದೇಶಗಳಲ್ಲಿ ಸುವಿಖ್ಯಾತರಾದರು. ಭಾರತವು ರಾಜಕೀಯವಾಗಿ ಪರಾಧೀನವಾಗಿದ್ದರೂ ದಾಸ್ಯದಿಂದ ತ್ರಸ್ತವಾಗಿದ್ದರೂ ಅನಾದಿಯಾದ ಭಾರತೀಯ ಆತ್ಮಶ್ರೀಯು ಅಚ್ಯುತವಿರುವುದೆಂಬುದನ್ನು ತನ್ನ ಸಾರಸ್ವತ ಸಾಧನೆಯಲ್ಲಿ ಬಹಿರಂಗಪಡಿಸಿದರು. ಕವಿತೆ, ಗೀತೆ, ಕಾದಂಬರಿ, ಸಣ್ಣ ಕಥೆ, ನಾಟಕ ಮೊದಲಾದ ಸಾಹಿತ್ಯದ ಸರ್ವಪ್ರಕಾರಗಳಲ್ಲಿಯೂ ಪ್ರಶಂಸಾರ್ಹ ಸೇವೆಯನ್ನು ಸಲ್ಲಿಸಿದವರು ಇವರು. ವಿಶ್ವಕವಿಗಳೆಂದು ವಿಶ್ವವಂದ್ಯರಾದ ರವೀಂದ್ರನಾಥ ಟಾಗೋರರಲ್ಲಿ ರಾಷ್ಟ್ರೀಯತೆಯು ತುಂಬಿ ತುಳುಕಾಡುತಿತ್ತು. ರಾಷ್ಟ್ರೀಯ ಶಿಕ್ಷಣವನ್ನು ನೀಡುವುದಕ್ಕಾಗಿಯೇ ಅವರು ಶಾಂತಿನಿಕೇತನವನ್ನು ಸ್ಥಾಪಿಸಿದರು. ಇದೇ ಆದರ್ಶ ಪಾಠಶಾಲೆಯು ಬೃಹದ್ರೂಪದರಿಸಿ ಇಂದು ವಿಶ್ವಭಾರತಿ ವಿಶ್ವವಿದ್ಯಾಲಯವೆಂಬ ಹೆಸರಿನಿಂದ ಟಾಗೋರರ ನೆನಪನ್ನು ಮಾಡಿಕೊಡುತ್ತಿದೆ. ಮಾನವೀಯತೆಯ ಕೈವಾರಿಗಳಾಗಿ ಸರ್ವಬಂಧ ವಿಮುಕ್ತವಾದ ಪ್ರಪಂಚವನ್ನು ಅನನ್ಯ ಮನಸ್ಸಿನಿಂದ ಸೇವಿಸುತ್ತ ಬಂದು ಎಲ್ಲದರಲ್ಲಿಯೂ ಒಳಿತನ್ನು ಕಂಡು ಹಾಡುವ ಕಾವ್ಯರ್ಷಿ ಟಾಗೋರರನ್ನು ಭಾರತೀಯರು ಮಾತ್ರವಲ್ಲ, ಇಡಿಯ ಮಾನವ ಸಮಾಜವೇ ಗೌರವಿಸುತ್ತದೆ. ಇವರ ಸಾಹಿತ್ಯ ಕೃತಿಗಳು ಕಾಣುವ ಮಾರ್ದವತೆ, ಭಾವ ಸ್ಪಂದನ ಮೊದಲಾದ ಅಲೌಕಿಕ ಗುಣಗಳಿಂದ ಜನಮನದ ಹೃತ್ತಂತ್ರಿಯನ್ನು ಮಿಡಿದು ಭಾವಪರವಶಗೊಳಿಸುತ್ತವೆ. 'ರವೀಂದ್ರ ಸಾಹಿತ್ಯ'ವೆಂಬ ಸಾಹಿತ್ಯ ಪ್ರಕಾರವೇ ಹುಟ್ಟಿಕೊಳ್ಳುವಂತಾಗಿದೆ. ೪೪ ಕೋಟಿ ನಾಲಿಗೆಗಳು ಹಾಡುವ "ಜನ ಗಣ ಮನ" ಕವಿತೆಯೊಂದೇ ಕವಿಯ ಜನಪ್ರಿಯತೆಗೆ, ಅವರ ಯೋಗ್ಯತಾದರ್ಶನಕ್ಕೆ ಸಾಕಾಗುವಂತಿದೆ. ಕಾವ್ಯಗಂಗೆಯಲ್ಲಿಯೇ ಮುಳುಗಿ ಅದರೊಳಗಿಂದಲೇ ಅಖಂಡ ವಿಶ್ವವನ್ನು ಸಂಚರಿಸಿ ಸತ್ಯವನ್ನರಸಿ ಅದು ಪ್ರತಿಪಾದಿಸುವ ಅತ್ಯದ್ಭುತ ಶಕ್ತಿಸಂಪನ್ನ ಟಾಗೋರರು ಕಾವ್ಯರ್ಷಿಯೂ ಹೌದು; ರಸರ್ಷಿಯೂ ಹೌದು. ಈ ಮಹಾತ್ಮರು ಇಂದು ನಮ್ಮ ಸಮ್ಮುಖದಲ್ಲಿಲ್ಲವಾದರೂ ಅವರು ಹಾಡಿದ ಹಾಡು ಇಂದಿಗೂ ಗುಂಯ್‌ಗುಡುತ್ತಿವೆ; ಅದನ್ನು ಯಥಾವತ್ತಾಗಿ ಅರ್ಥವಿಸಿಕೊಂಡು ನಮ್ಮ ಜೀವನವನ್ನೂ ರಸಮಯ—ಸೇವಾಮಯ—ತ್ಯಾಗಮಯ ಮಾಡಿಕೊಳ್ಳುವುದು ಅತ್ಯವಶ್ಯವಿದೆ. ರಾಷ್ಟ್ರ ಪುರುಷರ ಜೀವನದಿಂದ ನಾವೂ ಸ್ಫೂರ್ತಿಯನ್ನು ಪಡೆದು, ನಮ್ಮ ರಾಷ್ಟ್ರದ ಕೀರ್ತಿ ಧ್ವಜವನ್ನು ಮುಗಿಲೆತ್ತರದಲ್ಲಿ ಹಾರಾಡುವಂತೆಸಗಲು, ನಮ್ಮ ಉನ್ನತಿಯನ್ನು ಸಾಧಿಸಿಕೊಳ್ಳಲು ಬದ್ಧಕಂಕಣರಾಗಬೇಕು.

ಮೋತಿಲಾಲ್ ನೆಹರು

ಸಂಕ್ಷಿಪ್ತ ಸುದ್ದಿಗಳು

ಮಾನಸಿಕ ಏಕತೆಯಿಲ್ಲ

ವಿವಿಧ ಕ್ಷೇತ್ರಗಳಲ್ಲಿ ಮೈಸೂರು ರಾಜ್ಯವು ಇತ್ತೀಚೆಗಿನ ವರ್ಷಗಳಲ್ಲಿ ಸಾಕಷ್ಟು ಪ್ರಗತಿಹೊಂದಿದೆಯೆಂದು ಕಾಂಗ್ರೆಸ್ ಅಧ್ಯಕ್ಷ ಶ್ರೀ ಸಂಜೀವ ರೆಡ್ಡಿಯವರ ಅಭಿಪ್ರಾಯ. ಆರ್ಥಿಕವಾಗಿ ರಾಜ್ಯವು ಹಿಂದಿಗಿಂತ ಮುಂದುವರಿದಿದ್ದರೂ ಏಕೀಕರಣಾನಂತರ ಕರ್ನಾಟಕದ ಜನತೆಯ ಮಾನಸಿಕ ಏಕೀಕರಣವಾಗಿಲ್ಲ. ಹಳೆಯ ಮೈಸೂರಿನಲ್ಲಿ ಸೇರಿದ ಪ್ರದೇಶಗಳ ಜನರಲ್ಲಿ ಪ್ರಾದೇಶಿಕ ಭಾವನೆಯು ಮುಂದುವರಿಯುತ್ತಿರುವುದು ಮಾತ್ರ ಬಹು ಶೋಚನೀಯವೆಂದು ಅವರು ಹೇಳಿದರು.

ಶೋಂಬೆಯವರ ವಿಚಾರಣೆ

ಕಟಾಂಗದ ಅಧ್ಯಕ್ಷರಾಗಿದ್ದು ಕಾಂಗೋ ವಿದ್ಯಮಾನಗಳಲ್ಲಿ ಮಹತ್ವದ ಪಾತ್ರವನ್ನು ವಹಿಸಿದ ಶ್ರೀ ಶೋಂಬೆಯವರು ಈಗ ಬಂಧನದಲ್ಲಿ ಸಿಕ್ಕಿಬಿದ್ದಿದ್ದಾರೆ. ಕಾಂಗೋದ ಅಧ್ಯಕ್ಷರಾಗಿದ್ದ ದಿ| ಪೆಟ್ರಿಸ್ ಲುಮುಂಬರವರನ್ನು ಕೊಲೆ ಮಾಡಿದರೆಂಬ ಆರೋಪವನ್ನು ಇವರ ಮೇಲೆ ಹೊರಿಸಿ, ಅವರನ್ನು ವಿಚಾರಣೆಗೆ ಒಳಪಡಿಸಲಾಗುತ್ತಿದೆಯೆಂದು ತಿಳಿಯುತ್ತದೆ.

ಸಮಾಜವಾದಿಗಳ ಅಂಬೋಣ

ಮುಂಬರುವ ಸಾರ್ವತ್ರಿಕ ಚುನಾವಣೆಯಲ್ಲಿ ಸ್ಪರ್ಧಿಸಲು ಹುರಿಯಾಳುಗಳನ್ನು ಆರಿಸುವ ಸಂಬಂಧದಲ್ಲಿ ನಿರ್ದಿಷ್ಟ ನಿಲುಮೆಯನ್ನು ತಳೆಯಬೇಕೆಂದು ಕಾಂಗ್ರೆಸ್ಸಿನ ಸಮಾಜವಾದಿ ಪಂಗಡವು ತಿಳಿಸಿದೆ. ಉಚ್ಚ ಮಟ್ಟದ ಮೇಧಾಶಕ್ತಿಯುಳ್ಳ ಮತ್ತು ಗಮನಾರ್ಹ ಕಾರ್ಯ ಸಾಧಿಸಿದ ಹುರಿಯಾಳುಗಳಿಗಾಗಿ ಒಟ್ಟು ಸಂಖ್ಯೆಯಲ್ಲಿ ಕನಿಷ್ಠ ನೂರಕ್ಕೆ ೨೦ರಷ್ಟಾದರೂ ಕಾದಿರಿಸಬೇಕೆಂದು ಈ ಸಮಿತಿಯು ಕೇಳಿಕೊಂಡಿದೆ. ರಾಷ್ಟ್ರ ರಕ್ಷಣೆ ಮತ್ತು ಜಾತೀಯತೆಯ ಉಚ್ಚಾಟನೆಗೆ ಅಸ್ಥೆಯಿಂದ ದುಡಿಯುವೆನೆಂಬ ಪ್ರತಿಜ್ಞೆಯನ್ನು ಹುರಿಯಾಳುಗಳಿಂದ ಮಾಡಿಸಿಕೊಳ್ಳಬೇಕೆಂದು ಈ ಸಂಗಡದ ಅಭಿಪ್ರಾಯವಿದೆ.

ಅದುರು ಸಾಗಿಸಲು ರೋಪ್‌ವೇ

ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿರುವ ಕಬ್ಬಿಣದ ಮತ್ತು ಮ್ಯಾಂಗನೀಸ ಅದುರುಗಳನ್ನು ಬಂದರುಗಳಿಗೆ ಸಾಗಿಸುವ ಸಲುವಾಗಿ 'ರೋಪ್‌ವೇ'ಯನ್ನು ರಚಿಸಲು ಮೈಸೂರು ಸರಕಾರ ನಿರ್ಧರಿಸಿದೆ. ಈ ಸಂಬಂಧದಲ್ಲಿ ಸಲಹೆ ನೀಡಲು ಸ್ವೀಡಿಶ್ ತಂತ್ರಜ್ಞರು ಪರಿಶೀಲನೆ ನಡೆಸಿದ್ದು ಅವರು ಪ್ರಾರಂಭಿಕ ವರದಿಯೊಂದನ್ನು ಈಗಾಗಲೇ ಒಪ್ಪಿಸಿದ್ದಾರೆ.

ಡಾಕ್ಟರರ ಅಭಾವ ನಿವಾರಣೆ

ಭಾರತದ ಎಲ್ಲ ರಾಜ್ಯಗಳಲ್ಲಿಯೂ ಡಾಕ್ಟರರ ಅಭಾವವಿದೆಯಾದರೂ ಒರಿಸ್ಸ ರಾಜ್ಯದಲ್ಲಿ ಇದು ಅತ್ಯಧಿಕವಿದೆ. ಇತರಿಂದಾಗಿ ರಾಜ್ಯ ಸರಕಾರವು ಪಶ್ಚಿಮ ಬಂಗಾಳ ಸರಕಾರಕ್ಕೆ ಒಂದು ಪತ್ರ ಬರೆದು ೩೦೦ ವೈದ್ಯರನ್ನು ಕಳಿಸುವಂತೆ ಕೇಳಿಕೊಂಡಿದೆ. ಅಲ್ಲದೆ, ಸದ್ಯ ಕೇಂದ್ರದ ಆಡಳಿತೆಯಲ್ಲಿರುವ ಒರಿಸ್ಸದಲ್ಲಿ ನಿವೃತ್ತರಾದ, ೬೦ ವರ್ಷಗಳಿಗೆ ಮೀರದ ಡಾಕ್ಟರರನ್ನು ಮರಳಿ ನೌಕರಿಗೆ ಸೇರಿಸಿಕೊಳ್ಳುವ ಯೋಜನೆ ನಡೆದಿದೆ; ಈ ಹುದ್ದೆಯ ವೇತನವನ್ನೂ ಸುಧಾರಿಸಿದೆ.

ಬಂಟರ ಯಾನೆ ನಾಡವರ ಸಂಘ, ಮುಂಬಯಿ—ಇದೇ ಮೇ ತಿಂಗಳ ತಾ. 14ನೇ ಆದಿತ್ಯವಾರ ಅಪರಾಹ್ನ ಗಂಟೆ 2-30ಕ್ಕೆ ಮೇಲಿನ ಸಂಘದ ಸ್ನೇಹ ಸಮಾರಂಭ ಕೂಟ ಮತ್ತು 33ನೇ ವಾರ್ಷಿಕ ಮಹಾ ಸಭೆಯು ಶಿವಾಜಿ ಪಾರ್ಕಿನಲ್ಲಿರುವ ಭಾರತ್ ಸ್ಕ್ವಾಟ್ಸ್ ಹೋಟಲಿನಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಕೆ. ವಿಟ್ಠಲ ಶೆಟ್ರ ಅಧ್ಯಕ್ಷತನದಲ್ಲಿ ಜರಗಲಿರುವುದರಿಂದ ಸ್ವಜಾತಿ ಬಂಧುಗಳೆಲ್ಲಾ ಸಕುಟುಂಬಿಕರಾಗಿ ಚಿತ್ತೈಸಿ ಅಂದಿನ ಕಾರ್ಯಕಲಾಪಗಳನ್ನು ಚೆಂದಾಗಿಸಿ ಕೊಡಬೇಕಾಗಿ ಗೌ| ಪ್ರ. ಕಾರ್ಯದರ್ಶಿ ಶ್ರೀ ಮಾಲ್ಕಿಗಂಗಯ ಶೆಟ್ಟರು ವಿನಂತಿಸುತ್ತಾರೆ.

ಜ್ಯೋತಿಷ್ಯ ನಿಮ್ಮ ಜೀವನಕ್ಕೆ ಸಂಬಂಧಿಸಿದ ೬ ಪ್ರಶ್ನೆಗಳನ್ನು ಸೀಲು ಮಾಡಿದ ಲಕೋಟೆಯಲ್ಲಿ ಕಳುಹಿಸಿ. ಅವನ್ನು ಒಡೆಯದೆಯೇ ದೇವೀ ಉಪಾಸನೆಯಿಂದ ಉತ್ತರವನ್ನು ರೂ. 2ಕ್ಕೆ ವಿ. ಪಿ. ಮಾಡಲಾಗುವುದು.

ಶ್ರೀ ಗಾಯತ್ರಿ ಮಂತ್ರಾಲಯ
ಪೋಸ್ಟ್ ಬಾಕ್ಸ್ 808 — ಬೆಂಗಳೂರು–೩.

ಗ್ರಾಮೀಣ ಪ್ರದೇಶಗಳ ವೈದ್ಯಕೀಯ ಸೇವೆ.

ಜಯಶೀಲ ಸಹಕಾರೀ ಸಾಹಸ

ಹಳ್ಳಿಗಳ ವೈದ್ಯಕೀಯ ಸವಲತ್ತುಗಳ ಅಭಾವ ಒಂದು ತಲೆಶೂಲೆಯಾಗಿ ನಿಂತಿರುವುದು ಎಲ್ಲರೂ ಒಪ್ಪತಕ್ಕ ಮಾತು. ಸರಕಾರ ತನ್ನ ಪಾಲಿನ ಕರ್ತವ್ಯವನ್ನು ನೆರವೇರಿಸಲು ಯತ್ನಿಸುತ್ತಿರುವುದಾದರೂ

ಡಾ| ಕೆ. ಮೋಹನದಾಸ ಪೈ,
ಬಿ ಎಸ್‌ಸಿ., ಎಂ. ಬಿ., ಬಿ. ಎಸ್.
(ಅಲೆವೂರು ಕೇಂದ್ರ)

* *

ಜನಸಂಖ್ಯೆಯ ಹೆಚ್ಚಳ, ಸುಖೀಜೀವನದ ಆಶೆ ಆಕಾಂಕ್ಷೆಗಳ ಒತ್ತಡ—ಇವುಗಳು ಹೆಚ್ಚೆಚ್ಚು ವೈದ್ಯಕೀಯ ಸವಲತ್ತುಗಳನ್ನು ಅನಿವಾರ್ಯವನ್ನಾಗಿ ಮಾಡಿವೆ ಸರಕಾರ ನಿರ್ಮಿಸಿದ ಆಸ್ಪತ್ರೆಗಳಲ್ಲಿ ಡಾಕ್ಟರರ ಅಭಾವವಿರುವುದನ್ನು ಮೈಸೂರು ಮಾನ್ಯ ಆರೋಗ್ಯಸಚಿವರು ಇತ್ತೀಚೆಗೆ ನಿವೇದಿಸಿ

ಡಾ| ಕೆ ಜೆ ಕಿಣಿ,
ಎಲ್. ಎಂ ಪಿ.
(ಕಟಪಾಡಿ ಕೇಂದ್ರ)

* *

ಕೊಂಡಿದ್ದಾರೆ. ಈ ರೀತಿ ಡಾಕ್ಟರುಗಳ ಅಭಾವವಿರುವಾಗ ಬರೇ ಆಸ್ಪತ್ರೆಗಳನ್ನು ಹೆಚ್ಚಿಸುವುದರಿಂದ ಜನತೆಗೆ ಉಪಯೋಗವಾದರೂ ಹೇಗಾಗಬೇಕು?

ಈ ಪರಿಸ್ಥಿತಿಯಲ್ಲಿ ಮಣಿಪಾಲದ ಸಹಕಾರೀ ಸಾಹಸ ಕಾಲೋಚಿತವಾಗಿ ಮುಂದೆ ಬಂದಿದೆ. ಇದೇ ಸಹಕಾರೀ ಪ್ರಯತ್ನದಿಂದಾದ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ತಜ್ಞ ಡಾಕ್ಟರುಗಳ ಸೇವೆಯನ್ನು

ಡಾ| ಕೆ. ವಿಠಲ ಶೆಟ್ಟಿ,
ಎಲ್. ಎಂ. ಪಿ.
(ಕಾಪು ಕೇಂದ್ರ)

* *

ಪಡೆದು ಸಿದ್ಧವನ್ನಾಗಿರಿಸಿದ ಮೇಲೆ ಈಗ ಈ ಪ್ರಸಿದ್ಧ ಪರಿಣತ ವೈದ್ಯರ ಕಾರ್ಯಾಚರಣೆಗೆ ರಂಗಭೂಮಿಯೆಂಬಂತೆ ಕಸ್ತೂರ್ಬಾ ಆಸ್ಪತ್ರೆ ಮೂಡಿಬಂದಿದೆ.

ಕಸ್ತೂರ್ಬಾ ಜನರಲ್ ಆಸ್ಪತ್ರೆಯ ಪ್ರಯೋಜನವನ್ನು ಪಡೆಯಲನುಕೂಲವಾಗುವಂತೆ ನಾಲ್ಕುವಿಧದ ಸದಸ್ಯತನವಿರುವ ಸಹಕಾರೀ ಘಟನೆಯೊಂದನ್ನು ರೂಪಿಸಿಕೊಳ್ಳಲಾಗಿದೆ. ರೂ. ಒಂದು ಸಾವಿರ, ಐನೂರು, ಇನ್ನೂರೈವತ್ತು ಮತ್ತು ನೂರರ ನಾಲ್ಕು ವರ್ಗದ ಸದಸ್ಯತನವಿದೆ. ಸದಸ್ಯತನದ ಶುಲ್ಕವನ್ನು ಏಕ ಗಂಟಿನಿಂದಾಗಲೀ, ಕಂತುಗಳಿಂದಾಗಲೀ ತೆರಬಹುದು. ಹಾಗೆಯೇ ಈ ಸದಸ್ಯರು ಜೀವಮಾನವಿಡೀ ಈ ಆಸ್ಪತ್ರೆಯ ಸದುಪಯೋ

ಡಾ| ಕೆ. ಕೆ ಶೆಟ್ಟಿ.
ಎಲ್. ಐ ಎಂ.
(ಪಡುಬಿದ್ರೆ ಕೇಂದ್ರ)

* *

ಗವನ್ನು ಪಡೆಯಬಹುದು. ಮೊದಲನೆಯ ಮೂರು ವರ್ಗದ ಸದಸ್ಯತನದ ಮೇಲೆ, 'ಎ' ವರ್ಗದಲ್ಲಿ 500, 'ಬಿ' ವರ್ಗದಲ್ಲಿ 1000, 'ಸಿ' ವರ್ಗದಲ್ಲಿ 2500 ಹೀಗೆ ನಿಯಂತ್ರಣವನ್ನು ಹಾಕಲಾಗಿದೆ. 'ಎ' ವರ್ಗದ ಸದಸ್ಯರಿಗೆ ಎಲ್ಲಾ ವೈದ್ಯಕೀಯ ಸೇವೆಯು ಮುಫತ್ತಾಗಿ ದೊರೆಯುವಂತೆಯೇ ಉಳಿದ ವರ್ಗಗಳಲ್ಲಿನ ಸದಸ್ಯರಿಗೂ ಸಾಮಾನ್ಯ ಚಿಕಿತ್ಸೆ, ಔಷಧಿ, ಸಲಹೆ ಪರೀಕ್ಷೆಗಳು ಧರ್ಮಾರ್ಥವಾಗಿ ಲಭಿಸುತ್ತವಲ್ಲದೆ ವಿಶೇಷ ಚಿಕಿತ್ಸೆಗೆ ಕ್ರಮವಾಗಿ ಶೇಕಡಾ 50, 25 ಮತ್ತು 12½ಯಷ್ಟು ರಿಯಾಯಿತಿಯೂ ಸಿಗುವುದು ಪರಂತು ಬಡವರಿಗೆ ಧರ್ಮಾರ್ಥವಾಗಿ ಚಿಕಿತ್ಸೆಯನ್ನೊದಗಿಸುವುದೇ ಪ್ರಾಮುಖ್ಯ ಧ್ಯೇಯವಾಗಿದೆ

ಈ ಸಹಕಾರೀ ಸಾಹಸದಿಂದ ಉತ್ತೇ

ಡಾ| ರಾಮದಾಸ ಎಂ ಪೈ,
ಎಂ ಬಿ., ಬಿ ಎಸ್.
(ಕಡೆಕಾರ್ ಕೇಂದ್ರ)

* *

ಜಿತರಾದ ಅನೇಕ ಡಾಕ್ಟರರು ಈಗಾಗಲೇ ಆಸುಪಾಸಿನ ಹಳ್ಳಿ-ಪಳ್ಳಿಗಳಲ್ಲಿ ಸೇವೆಯನ್ನು ಸಲ್ಲಿಸುತ್ತಾ ಬರುತ್ತಿರುವರು. ನಮ್ಮ ಧುರೀಣರು 'ಸಹಕಾರೀ ಸಂಪದ' (Co-operative Common-wealth)ವಾಗಿ ನಮ್ಮ ರಾಷ್ಟ್ರವನ್ನು ಪರಿವರ್ತಿಸಬೇಕೆಂಬ ಧ್ಯೇಯವನ್ನಿಟ್ಟುಕೊಂಡಿರುವಾಗ ಮಣಿಪಾಲದಲ್ಲಿ ನಡೆಯುತ್ತಿರುವ ಈ ಸಹಕಾರೀ ಪ್ರಯತ್ನವು ಸಕಾಲಿಕವೂ ಪ್ರಯೋಜಕವೂ ಆಗಿದೆ.

— ಸಂದೇಶಗಳು —

ವೈದ್ಯಕೀಯ ಅವಶ್ಯಕತೆಗಳ ಕಡೆಗೆ ಅಧಿಕಾಧಿಕ ಗಮನಕೊಡಬೇಕೆಂಬ ಬೇಡಿಕೆ ಹೆಚ್ಚುತ್ತಿರುವಾಗ ಮಣಿಪಾಲದಲ್ಲಿ ಆಸ್ಪತ್ರೆಯನ್ನು ಪ್ರಾರಂಭಿಸಿದ ನಿಮ್ಮ ಕಾರ್ಯವು ಕಾಲೋಚಿತವೂ ಶ್ಲಾಘ್ಯವೂ ಆಗಿದೆ.

ಮೊರಾರ್ಜಿ ದೇಸಾಯಿ
ಭಾರತದ ಆರ್ಥಿಕ ಸಚಿವ.

○ ○ ○

"ಈ ಆಸ್ಪತ್ರೆಯ ಸ್ಥಾಪನೆಗೆ ಮಣಿಪಾಲಕ್ಕಿಂತ ಉತ್ತಮ ಅಸರೆ ಬೇರೆ ಸಿಗಲಾರದು."

ಡಿ. ಸಿ. ಪಾವಟೆ, ವೈಸ್ ಛಾನ್ಸಲರ್,
ಕರ್ನಾಟಕ ಯೂನಿವರ್ಸಿಟಿ.

ಆಕ್ಸಲರಿ ನರ್ಸಸ್ ತರಬೇತಿ ಕೇಂದ್ರ



ಗ್ರಾಮೀಣ ಹೆರಿಗೆ ಕೇಂದ್ರ—ಕಾಪು
(ಇಂತಹ ಕೇಂದ್ರಗಳು ಅಲೆವೂರು, ಕಡೆಕಾರು, ಕಟಪಾಡಿ, ಪಡುಬಿದ್ರೆ, ಮಣಿಪಾಲಗಳಲ್ಲಿಯೂ ಇವೆ)

ಶ್ರೀ ಸೋದೆ ವಾದಿರಾಜ ಮಠದ ಶ್ರೀ ವಿಶ್ವೋತ್ತಮತೀರ್ಥ ಶ್ರೀಪಾದಂಗಳವರು ದಾನವಾಗಿತ್ತ, ಒಂದು ಲಕ್ಷ ರೂಪಾಯಿ ವೆಚ್ಚದ ಮಹಿಳಾ ಆಸ್ಪತ್ರೆಯ ಕಟ್ಟಡದ ಶಂಕುಸ್ಥಾಪನೆಯನ್ನು ಶ್ರೀಮತಿ ಇಂದಿರಾ ಗಾಂಧಿಯವರು ನೆರವೇರಿಸುತ್ತಿರುವುದು.

ಕಸ್ತೂರ್ಬಾ ಜನರ

ವೈದ್ಯಕೀಯ, ಇಂಜಿನಿಯರಿಂಗ್, ಇನ್ನಿತರ ಉಚ್ಚಮಟ್ಟದ ಶಿಕ್ಷಣ ಹಾಗೂ ಸಾಮಾಜಿಕ ಸೇವಾ ಕ್ಷೇತ್ರಗಳ ಪ್ರಮುಖ ಕೇಂದ್ರವೆನಿಸಿ ಆಧುನಿಕ ತಕ್ಷಶಿಲೆಯೆಂದು ಕರೆಯಲ್ಪಡುತ್ತಿರುವ ಮಣಿಪಾಲದಲ್ಲಿ ಇದೀಗ 150 ಹಾಸಿಗೆಗಳುಳ್ಳ ಸುಸಜ್ಜಿತವಾದ ಹೊಸ ಆಸ್ಪತ್ರೆಯೊಂದು ಪ್ರಾರಂಭವಾಗಿದೆ. ಇದೇ ಮೇ ದಿನಾಂಕ ೭ ರಂದು ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸಿನ ಅಧ್ಯಕ್ಷ ಶ್ರೀ ನೀಲಂ ಸಂಜೀವ ರೆಡ್ಡಿಯವರು ಕರ್ನಾಟಕ ಪ್ರದೇಶ ಕಾಂಗ್ರೆಸಿನ ಅಧ್ಯಕ್ಷ ಶ್ರೀ ಸಿದ್ಧವ್ವನಹಳ್ಳಿ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಈ ಹೊಸ ಆಸ್ಪತ್ರೆಯ ಕಟ್ಟಡದ ಉದ್ಘಾಟನೆಯನ್ನು ಮಾಡಿದರು. ಆರುನೂರು ಹಾಸಿಗೆಗಳನ್ನು ಅಳವಡಿಸಿಕೊಳ್ಳಲು ರೂಪಿಸಿರುವ ಈ ಆಸ್ಪತ್ರೆಯ ಕಟ್ಟಡದಲ್ಲಿ ಮುಂದೆ ಸಾವಿರ ಹಾಸಿಗೆಗಳನ್ನು ಒದಗಿಸಿಕೊಂಡು ಅತ್ಯಾಧುನಿಕ ಬೃಹತ್ ಆಸ್ಪತ್ರೆಯನ್ನಾಗಿ ಮಾರ್ಪಡಿಸಿಕೊಳ್ಳಲು ಅವಕಾಶವನ್ನು ಕಲ್ಪಿಸಿಕೊಳ್ಳಲಾಗಿದೆ.

ಕಸ್ತೂರ್ಬಾ ಆಸ್ಪತ್ರೆಯು ಸಾರ್ವಜನಿಕರಿಗೆ ವೈದ್ಯಕೀಯ ಸೇವೆಯ ಸೌಲಭ್ಯಗಳನ್ನು ಒದಗಿಸಿಕೊಡುವುದರ ಜೊತೆಗೆ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳಿಗೆ ಪ್ರತ್ಯಕ್ಷ ವೈದ್ಯಕೀಯ ಶಿಕ್ಷಣವನ್ನು ಪಡೆಯಲೂ ಸಹಕಾರಿಯಾಗುವುದು. ಪ್ರಸಿದ್ಧ ವೈದ್ಯಕೀಯ ತಜ್ಞರನ್ನೊಳಗೊಂಡಿರುವ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಶಿಕ್ಷಕರ ಸೇವೆಯ ಸೌಲಭ್ಯವು ಕಸ್ತೂರ್ಬಾ ಆಸ್ಪತ್ರೆಗೆ ದೊರಕುತ್ತಿರುವುದರಿಂದ ಉನ್ನತ ಮಟ್ಟದ ಚಿಕಿತ್ಸೆ ಆರೈಕೆಗಳಿಗೂ ಧಾರಾಳ ಅವಕಾಶ ಸಿಗುವುದು. ಈಗಾಗಲೇ ಬಳಕೆಯಲ್ಲಿರುವ ನರ್ಸ್‌ಗಳ ತರಬೇತಿಯ ಕಾರ್ಯಕ್ರಮಕ್ಕೂ ಈ ಹೊಸ ಆಸ್ಪತ್ರೆಯು ಹೆಚ್ಚಿನ ಅನುಕೂಲತೆಗಳನ್ನೊದಗಿಸಿಕೊಡುವುದು.

ರೋಗ ಮತ್ತು ವೇದನೆಗಳ ನಿವಾರಣೆಯ ಸದುದ್ದೇಶದಿಂದ ಸಹಕಾರೀ ತತ್ವದ ನೆಲೆಯಲ್ಲಿ ರೂಪುಗೊಳ್ಳುತ್ತಿರುವ ಕಸ್ತೂರ್ಬಾ ಆಸ್ಪತ್ರೆಯು ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜು ದ. ಕ. ಜಿಲ್ಲಾ ಮೆಡಿಕಲ್ ರಿಲೀಫ್ ಸೊಸೈಟಿ ಮತ್ತು ಮೆಡಿಕಲ್ ರಿಲೀಫ್ ಟ್ರಸ್ಟ್ ಇವುಗಳ ಸಂಯುಕ್ತ ಪರಿಶ್ರಮದ ಕಾಣಿಕೆಯಾಗಿದೆ.

ಶ್ರೀ ಸೋದೆ ಮಠದ ಶ್ರೀ ವಿಶ್ವೋತ್ತಮ ತೀರ್ಥ ಶ್ರೀ ಪಾದಂಗಳವರು.
ಮೆಡಿಕಲ್ ರಿಲೀಫ್ ಸೊಸೈಟಿ ಮತ್ತು ಮೆಡಿಕಲ್ ಟ್ರಸ್ಟಿನ ಅಧ್ಯಕ್ಷರು.

‡ ‡ ‡

ಹುಟ್ಟು

ದಕ್ಷಿಣ ಕನ್ನಡ ಜಿಲ್ಲೆಯ ಉತ್ತರ ಭಾಗದ ಉಡುಪಿ, ಕುಂದಾಪುರ, ಕಾರ್ಕಳ ಹಾಗೂ ನೆರೆಯ ಉತ್ತರ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳ ಸುಮಾರು ಹತ್ತು ಲಕ್ಷ ಜನತೆಗೆ ಉನ್ನತ ಮಟ್ಟದ ವೈದ್ಯಕೀಯ ಚಿಕಿತ್ಸೆ ಆರೈಕೆಗಳನ್ನು ಒದಗಿಸಿಕೊಡಬಲ್ಲ ಒಂದು ಉತ್ತಮ ಆಸ್ಪತ್ರೆಯ ಆವಶ್ಯಕತೆಯನ್ನು ಮನಗಂಡು 1956ರಲ್ಲಿ ಸ್ಥಾಪನೆಯಾದ ಮೆಡಿಕಲ್ ರಿಲೀಫ್ ಸೊಸೈಟಿಯು ಈ ದಿಸೆಯಲ್ಲಿ ಕಾರ್ಯೋನ್ಮುಖವಾಗಿ ದುಡಿಯತೊಡಗಿತು. ಉನ್ನತ ಮಟ್ಟದ ವೈದ್ಯಕೀಯ ಸೌಲಭ್ಯಗಳೆಂದರೆ ಸುಸಜ್ಜಿತವಾದ ಆಸ್ಪತ್ರೆಯ ಕಟ್ಟಡ ಮತ್ತು ಆಧುನಿಕ ಸಲಕರಣೆಗಳು ಮಾತ್ರವಲ್ಲ. ಅವುಗಳಿಗಿಂತಲೂ ಪ್ರಾಮುಖ್ಯವಾದುದು ತಜ್ಞ ವೈದ್ಯರ ನೆರವು. ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ತಜ್ಞ ವೈದ್ಯರ ಸೇವೆಯ ಸೌಲಭ್ಯದ ಅನುಕೂಲತೆಯಿದ್ದುದರಿಂದ ಇಂತಹ ಒಂದು ಆಸ್ಪತ್ರೆಯನ್ನು ಮಣಿಪಾಲದಲ್ಲಿ ಸ್ಥಾಪಿಸಬೇಕೆಂದು ನಿರ್ಧರಿಸಲಾಯಿತು.

ಜನತೆ ಮತ್ತು ಸರಕಾರಗಳ ನೆರವಿನಿಂದ ಸಹಕಾರೀ ತತ್ವದ ನೆಲೆಯಲ್ಲಿ ಈ ಯೋಜನೆಯನ್ನು ಕಾರ್ಯರೂಪಕ್ಕಿಳಿಸಿ, ನಾಲ್ಕು ವರ್ಗದ ಸದಸ್ಯರನ್ನು ಸೇರಿಸಿಕೊಳ್ಳುವ ಕಾರ್ಯವನ್ನು ಪ್ರಾರಂಭಿಸಲಾಯಿತು. ಈ ರೀತಿಯ ಪ್ರಯತ್ನಗಳು ಅಮೇರಿಕಾದಂತಹ ಮುಂದರಿದ ನಾಡುಗಳಲ್ಲಿ ಮಾತ್ರವಲ್ಲದೆ ನೆರೆಯ ಸಿಲೋನಿನಲ್ಲಿ ಸಹಾ ಸಫಲಗೊಂಡುದನ್ನು ನಾವು ಕಾಣಬಹುದು.

ನಾಲ್ಕೆಡೆಗಳಿಂದಲೂ ಸಹಕಾರವು ತುಂಬಿ ಬಂದುದರಿಂದ 50 ಹಾಸಿಗೆಗಳುಳ್ಳ ಆಸ್ಪತ್ರೆಯನ್ನೂ ಅದಕ್ಕೆ ಹೊಂದಿಕೊಂಡು ಕುಟುಂಬ ಯೋಜನಾ ಕೇಂದ್ರವನ್ನೂ ರೂಪಿಸಿಕೊಳ್ಳಲು ಸಾಧ್ಯವಾಯಿತು. ವೈಯಕ್ತಿಕವಾಗಿ ಅಲ್ಲದೆ ಸಾಂಘಿಕವಾಗಿ ಉಡುಪಿಯ ಕೆಲವು ಸಂಸ್ಥೆಗಳೂ ತಮ್ಮ ಶಿಬಂದಿಗೆ ಈ ಆಸ್ಪತ್ರೆಯ ಸೌಲಭ್ಯವನ್ನು ಒದಗಿಸಿ ಕೊಡಲು ಮುಂದಾದುವು. ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ತಜ್ಞ ವೈದ್ಯಕೀಯ ಶಿಬಂದಿಯು ನೀಡಿದ ಅತ್ಯುತ್ತಮ ಸೇವೆಯ ಫಲವಾಗಿ ಹೆಚ್ಚು ಹೆಚ್ಚು ಜನರು ಈ ಆಸ್ಪತ್ರೆಯ ಪ್ರಯೋಜನವನ್ನು ಪಡೆಯಲು ಮುಂದಾದರು. ಪರಿಣಾಮವಾಗಿ ಪೂರ್ವ ಕಲ್ಪನೆಯ ಬೃಹದಾಕಾರದ ಆಸ್ಪತ್ರೆಯ ಪ್ರಥಮ ಹಂತವಾಗಿ ಇದೀಗ 150 ಹಾಸಿಗೆಗಳುಳ್ಳ ಆಸ್ಪತ್ರೆಯು ಉದ್ಘಾಟನೆಗೊಳ್ಳುತ್ತಿರುವುದು. ಉಡುಪಿ ರೋಟರಿ ಕ್ಲಬ್ಬಿನ ಸಮಾಜ ಸೇವಾ ಸಮಿತಿಯು ಕ್ಲಬ್ಬಿನ ಹೆಸರಿನಲ್ಲಿ ಒಂದು ಬ್ಲೋಕನ್ನು ಕಟ್ಟಿಕೊಡಲು ಮುಂದಾಗಿದೆ. ದಿವಂಗತ ಡಾ. ಎಸ್. ಆರ್. ಪೈ ಸ್ಮಾರಕ ಸಮಿತಿಯವರು ಒಂದು ಅತ್ಯಾಧುನಿಕ ಒಪರೇಶನ್ ಥಿಯೇಟರನ್ನು ಒದಗಿಸಲು ನಿರ್ಧರಿಸಿರುವರು. ಇಂತಹ ಅನೇಕ ಸಂಘ ಸಂಸ್ಥೆಗಳು ತಮ್ಮ ನೌ[...]ರಿಗಾಗಿ ಸ್ಪೆಶಲ್ ವಾರ್ಡುಗಳನ್ನು [...]ಸಲು ಮುಂಬಂದಿವೆ.

ಗ್ರಾಮಾಂತರ ಪ್ರದೇಶಗಳಲ್ಲಿ ವೈದ್ಯಕೀಯ ಸೇವೆ

ಹಳ್ಳಿ ವಲಯಗಳಲ್ಲಿ ವಿಸ್ತೃತ [...]ಯಲ್ಲಿ ವೈದ್ಯಕೀಯ ಸೇವೆಯನ್ನೊ[...] ಕೊಡಲು ಮೆಡಿಕಲ್ ರಿಲೀಫ್ ಟ್ರ[...] ಎಂಬ ಅಂಗ ಸಂಸ್ಥೆಯು ಈ ಕಾ[...]ಲ್ಲಿ ಸಹಭಾಗಿಯಾಗಿ ದುಡಿಯುತ್ತ[...] ಮೆಡಿಕಲ್ ರಿಲೀಫ್ ಟ್ರಸ್ಟ್ ಆಸು[...]ನ ಗ್ರಾಮಗಳಲ್ಲಿ ಆಸ್ಪತ್ರೆಗಳನ್ನೂ [...] ಮತ್ತು ಕುಟುಂಬ ಯೋಜನಾ ಕೇಂ[...]ಗಳನ್ನೂ ನಡೆಸುವ ಕಾರ್ಯಕ್ರಮವನ್ನು[...]



ಕಸ್ತೂರ್ಬಾ ಜನರಲ್ ಆಸ್ಪತ್ರೆಯ ಹೊ[...]
ಆರೋಗ್ಯಕರ ಹವೆಗೆ ಹೆಸರಾದ ಮಣಿಪಾಲದಲ್ಲಿ ರೂಪುಗೊಂಡ ಈ ಆಸ್ಪತ್ರೆಯು ಪೂ[...] ಇದಕ್ಕೆ ಸುಮಾರು ಐವತ್ತು ಲಕ್ಷ ರೂಪಾಯಿ ವೆಚ್ಚವಾಗುವುದು. ಅತ್ಯಾಧುನಿಕ ಸಾ[...] ಈ ಆಸ್ಪತ್ರೆಯು ದಕ್ಷಿಣ ಭಾರತದ ಪ್ರಮುಖ ಆಸ್ಪತ್ರೆಗ[...]

ಮೆಡಿಕಲ್[...]

ಟ್ರ[...]

ಶ್ರೀ ಸೋದೆ ವಾದಿರಾಜ ಮಠದ [...]

ಶ್ರೀ ಪೇಜಾವರ ಮಠದ ಶ್ರೀ ವಿ[...]

ಶ್ರೀ ಅದಮಾರು ಮಠದ ಶ್ರೀ [...]

ಶ್ರೀ ಟಿ. ಎ. ಪೈ, ಬಿ. ಕಾಂ., [...]

ಡಾ| ಟಿ. ಯಂ. ಎ. ಪೈ, ಯಂ.[...]

ಡಾ| ಕೆ. ಯಲ್. ಐತಾಳ, ಯ[...]

ಶ್ರೀ ಬಿ. ಯಲ್. ಯಸ್. ರೈ, [...]

ಶ್ರೀಮತಿ ಜಲಜಾಕ್ಷಿ, ಎ. ಯಲ್[...]

ಡಾ| ಕೆ. ಮೋಹನದಾಸ ಪೈ, [...]

ಶ್ರೀ ಪಾಂಗಾಳ ಜನಾರ್ದನ ನಾ[...]

ಮದ್ರಾಸಿನ ಮಾಜಿ ಗವರ್ನರ್ ಶ್ರೀ ಶ್ರೀಪ್ರಕಾಶರವರು ಮಣಿಪಾಲದ ಕುಟುಂಬ ಯೋಜನಾ ಕೇಂದ್ರವನ್ನು ಉದ್ಘಾಟಿಸುತ್ತಿರುವುದು.

ಆಸ್ಪತ್ರೆ, ಮಣಿಪಾಲ

ಜನರಿಗೆ ಧರ್ಮಾರ್ಥ ಚಿಕಿತ್ಸೆಯನ್ನೊದಗಿಸುವುದೇ ಕಸ್ತೂರ್ಬಾ ಆಸ್ಪತ್ರೆಯ ಉದ್ದೇಶವಾಗಿದೆ- ದಾರಿದ್ರ್ಯ, ಅಜ್ಞಾನ ಮತ್ತು ನೋವು ನರಳುವಿಕೆಗಳಿಂದ ವಿಮುಕ್ತರಾದ ಸುಖೀ ರಾಷ್ಟ್ರ ರಚನೆಯ ಮಹಾ ಕಾರ್ಯದಲ್ಲಿ ಮಣಿಪಾಲದ ಸಂಘ ಸಂಸ್ಥೆಗಳು ಬಹು ಮುಖವಾಗಿ ದುಡಿಯುತ್ತಿವೆ. ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯು ಈ ಸದುದ್ದೇಶದಿಂದ ಪ್ರೇರಿತವಾಗಿ ಜನ್ಮವೆತ್ತಿದೆ; ಬೆಳೆದು ಬರುತ್ತಿದೆ.

...ಿದೆ. ಆಲೆವೂರು, ಕಡೆಕಾರು, ಕಟ...
... ಕಾಪು, ಪಡುಬಿದ್ರಿ ಮಣಿಪಾಲಗ...
...ವೆಲ್‌ಫೇರ್ ಎಕ್ಸ್‌ಟೆನ್‌ಶನ್ ಪ್ರೋ...
...ನವರಿಂದ ಸ್ಥಾಪಿಸಲ್ಪಟ್ಟ ಹೆರಿಗೆ ಕೇಂ...
...ನ್ನು ಸೆಂಟ್ರಲ್ ಸೋಶಿಯಲ್ ವೆ...
...ರ್ ಬೋರ್ಡ್ ಮತ್ತು ರಾಜ್ಯ ಸ...
...ದ ನೆರವಿನಿಂದಲೂ ಸ್ಥಳೀಕ ವೈದ್ಯ...
...ಕಾರದಿಂದಲೂ ನಡೆಸುತ್ತಾ ಬರು...
...ಗ್ರಾಮಾಂತರ ಪ್ರದೇಶಗಳಲ್ಲಿ ನಡೆ...
...ರುವ ಈ ಕಾರ್ಯಕ್ರಮ ಯಶಸ್ವಿ...
...ನಡೆಯೆಂಬುದಕ್ಕೆ ಈ ಹೆರಿಗೆ ಕೇಂದ್ರ...
...ಲ್ಲದ 2003 ಹೆಂಗೆಗಳೂ ಇಲ್ಲಿನ...
...ಗಿತ್ತಿಯರ ನೆರವಿನಿಂದಾದ 1077...
... ಹೆಂಗೆಗಳೂ ನಿದರ್ಶನಗಳಾಗಿವೆ. ಈ...
...ಕಿತ್ಸಾಲಯಗಳಲ್ಲಿ ಬಡ ಸ್ತ್ರೀಯರಿಗೆ 10 ದಿನಗಳ ವರೆಗೆ ಉಚಿತ ಚಿಕಿತ್ಸೆ, ಆಹಾರವನ್ನೊದಗಿಸಲಾಗುತ್ತಿದೆ. ಮಣಿಪಾಲದಲ್ಲಿ ಒಂದು ಕುಟುಂಬ ಯೋಜನಾ ಕೇಂದ್ರವು ನಡೆಯುತ್ತಿದ್ದು ಉಳಿದೆಡೆಗಳಿಗೂ ಇದನ್ನು ವಿಸ್ತರಿಸುವ ಯೋಜನೆ ಇದೆ.

ಹೀಗೆ ಸರ್ವ ಸಲಕರಣೆಗಳಿಂದ ಸುಸಜ್ಜಿತವಾದ ಮತ್ತು ವೈದ್ಯಕೀಯ ತಜ್ಞರ ಬಳಗವನ್ನೊಳಗೊಂಡ ಅತ್ಯುನ್ನತ ಮಾದರಿಯ ಬೃಹದಾಸ್ಪತ್ರೆಯು ಈ ಭಾಗದ ಜನತೆಯ ವೈದ್ಯಕೀಯ ಅನುಕೂಲತೆಗಳನ್ನೊದಗಿಸಿಕೊಡಲು ಶಕ್ತವಾಗುವುದು. ವಿಶೇಷ ರೀತಿಯ ವೈದ್ಯಕೀಯ ಸೇವೆಗೆ ಅನುಕೂಲತೆಯುಳ್ಳವರು ಯಥೋಚಿತ ಆರ್ಥಿಕ ಪ್ರತಿಫಲವನ್ನು ನೀಡಬೇಕಾಗುವುದಾದರೂ ಪ್ರಾಮುಖ್ಯವಾಗಿ ಬಡ



...ಿರ ಹಾಸಿಗೆಗಳನ್ನೊಳಗೊಳ್ಳಲಿದ್ದು ...ು ತಜ್ಞ ಡಾಕ್ಟರುಗಳಿಂದ ಕೂಡಿರುವ ...ದು.

ಸಂದೇಶಗಳು

“ಕಸ್ತೂರ್ಬಾ ಜನರಲ್ ಆಸ್ಪತ್ರೆಯು ಆ ಪ್ರದೇಶದ ಜನರ ಸೇವೆಯನ್ನು ನಿರಂತರ ಸಲ್ಲಿಸುತ್ತಿರಲಿ ಎಂದು ಆಶಿಸುತ್ತೇನೆ.”

ಭಾರತದ ಅಧ್ಯಕ್ಷ
ರಾಜೇಂದ್ರ ಪ್ರಸಾದರು

o o o

....ಕಸ್ತೂರ್ಬಾ ಆಸ್ಪತ್ರೆಯು ಆ ಪ್ರದೇಶದ ಜನರ ವೈದ್ಯಕೀಯ ಸವಲತ್ತುಗಳನ್ನು ಪೂರೈಸಿಕೊಡುವುದು ಎಂದು ಆಶಿಸುತ್ತೇನೆ.

ಡಾ। ಎಸ್. ರಾಧಾಕೃಷ್ಣನ್
ಭಾರತ ಉಪರಾಷ್ಟ್ರಪತಿ.

o o o

“ಮಣಿಪಾಲದಲ್ಲಿ ಉದ್ಘಾಟನೆಯಾಗಲಿರುವ ಕಸ್ತೂರ್ಬಾ ಜನರಲ್ ಆಸ್ಪತ್ರೆಗೆ ಪ್ರಧಾನ ಮಂತ್ರಿಯವರ ಶುಭಾಶಯಗಳು.”

ಭಾರತದ ಪ್ರಧಾನ ಮಂತ್ರಿಗಳ ಪ್ರೈವೇಟ್ ಸೆಕ್ರೆಟರಿ.

o o o

“ಸಮಾರಂಭವು ಯಶಸ್ವಿಯಾಗಲೆಂದು ಹಾರೈಸುತ್ತೇನೆ.”

ಬಿ. ಡಿ ಜತ್ತಿ,
ಮೈಸೂರು ಮುಖ್ಯ ಮಂತ್ರಿ.

o o o

ಕಸ್ತೂರ್ಬಾ ಜನರಲ್ ಆಸ್ಪತ್ರೆಯ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಶ್ರೀ ಸಿದ್ಧವ್ವನ ಹಳ್ಳಿ

ನಿಜಲಿಂಗಪ್ಪ

o o o

ಭಾರತದಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ದೈಹಿಕ ಮತ್ತು ನೈತಿಕ ರೋಗಿಗಳ ಸಂಖ್ಯೆಯನ್ನು ಕಾಣುವಾಗ ಹೆಚ್ಚೆಚ್ಚು ವೈದ್ಯರ ಮತ್ತು ಆಸ್ಪತ್ರೆಗಳ ಅವಶ್ಯಕತೆಯಿದೆಯೆಂಬುದನ್ನು ಅಲ್ಲಗಳೆಯಲಾಗುವುದಿಲ್ಲ. ವೈದ್ಯಕೀಯ ಸೌಕರ್ಯಗಳ ಅಭಾವವನ್ನು ಸಾಧ್ಯವಾದಷ್ಟು ಮಟ್ಟಿಗೆ ಹೋಗಲಾಡಿಸುವಲ್ಲಿ ಕಸ್ತೂರ್ಬಾ ಜನರಲ್ ಆಸ್ಪತ್ರೆ ಸಹಕಾರಿಯಾಗಲೆಂದು ಪ್ರಾರ್ಥಿಸುವೆನು.”

ವಲೇರಿಯನ್ ಕಾರ್ಡಿನಲ್ ಗ್ರೇಸಿಯಸ್
ಮುಂಬಯಿಯ ಆರ್ಚ್‌ಬಿಷಪ್ ಸ್ವಾಮಿಗಳು.

o o o

ಒಟ್ಟಿನಲ್ಲಿ ಭಾರತವು ವೈದ್ಯಕೀಯ ಚಿಕಿತ್ಸೆ ಮತ್ತು ಸೌಲಭ್ಯಗಳ ಕೊರತೆಯಿಂದ ಕುಂದಿದೆ. ಈ ಕೊರತೆಯನ್ನು ಹೋಗಲಾಡಿಸುವ ಯಾವುದೇ ಉದ್ಯಮವು ಸ್ವಾಗತಾರ್ಹವಾದುದು. ಅತ್ಯಾವಶ್ಯಕವಾದ ಈ ಕೆಲಸಕ್ಕೆ ಡಾ| ಪೈಗಳೂ ಅವರ ಸಹೋದ್ಯೋಗಿಗಳೂ ಶ್ರಮಿಸಿದುದು ಅಭಿನಂದನೀಯವಾದುದು.

ಈ ಆಸ್ಪತ್ರೆಯು ಅಲ್ಲಿಗೆ ಬರುವ ಜನರ ಸಾಂತ್ವನಕ್ಕೆ ಸಹಕಾರಿಯಾಗಲಿ. ಅಲ್ಲಿನ ಡಾಕ್ಟರರ ಬಳಗ ಸೇವೆಯ ಸ್ಫೂರ್ತಿಯಿಂದ ದುಡಿಯಲಿ. ಜನರ ಸೇವೆಯು ಈ ಆಸ್ಪತ್ರೆಯ ಮೂಲಕ ಚಿರಂತನವಾಗಿ ನಡೆಯಲಿ.

ರಾಜಕುಮಾರಿ ಅಮೃತ ಕೌರ್
ಅಧ್ಯಕ್ಷೆ, ರೆಡ್ ಕ್ರಾಸ್ ಸೊಸೈಟಿ.

ಮಣಿಪಾಲದಲ್ಲಿ ನೀವು ಕಟ್ಟಿದ ಶೈಕ್ಷಣಿಕ ಮತ್ತು ಸಾಮಾಜಿಕ ಸಂಸ್ಥೆಗಳು ಬೃಹತ್ತರ ಸಾಧನೆಗಳಾಗಿವೆ. ಈ 150 ಹಾಸಿಗೆಗಳ ಹೊಸ ಆಸ್ಪತ್ರೆ ನಿಮ್ಮ ಕಿರೀಟಕ್ಕೆ ಪೋಣಿಸಿದ ಇನ್ನೊಂದು ಮಣಿ. ಶ್ರೀ ಶ್ರೀ ವಿಶ್ವೋತ್ತಮ ತೀರ್ಥ ಶ್ರೀಪಾದಂಗಳವರ ನೇತೃತ್ವದಲ್ಲಿ ನೀವೂ ನಿಮ್ಮ ಸಹೋದ್ಯೋಗಿಗಳೂ ಒಂದಾಗಿ ದುಡಿಯುವ ಮೆಡಿಕಲ್ ರಿಲೀಫ್ ಸೊಸೈಟಿಯ ಕಾರ್ಯವು ಅಭಿನಂದನೀಯ. ನಿಮ್ಮ ಕೈಗೆ ಎಟಕದಿರುವುದು ಏನೂ ಇಲ್ಲವೆಂದೆನಿಸುತ್ತದೆ. ನಿಮ್ಮ ಎಲ್ಲಾ ಕನಸುಗಳು ನನಸಾಗಲಿ. ನನ್ನ ಹಾರ್ದಿಕ ಶುಭಾಶಯಗಳು.

ಯುಸ್. ವಿ. ಕೃಷ್ಣಮೂರ್ತಿ ರಾವ್
ಡೆಪ್ಯುಟಿ ಚಯರ್‌ಮ್ಯಾನ್
ರಾಜ್ಯಸಭೆ, ನ್ಯೂಡಿಲ್ಲಿ.

o o o

ನಿಮ್ಮ ಸಾಹಸವನ್ನು ಅಭಿನಂದಿಸುವೆನು.

ಕೆ. ಸಿ. ರೆಡ್ಡಿ
ವಾಣಿಜ್ಯ ಮತ್ತು ಕೈಗಾರಿಕಾ ಸಚಿವರು.

o o o

“ಈ ಸಮಾರಂಭಕ್ಕೆ ನನ್ನ ಶುಭಾಶಯಗಳನ್ನು ಅರ್ಪಿಸಲು ಆನಂದವೆನಿಸುತ್ತದೆ.”

ಡ. ಪ ಕರಮರಕರ,
ಭಾರತದ ಆರೋಗ್ಯ ಸಚಿವರು.

o o o

“ಕೇವಲ ಕಲ್ಲು ಮಣ್ಣುಗಳಿಂದಕೂಡಿಕೊಂಡಿದ್ದ ಗುಡ್ಡ ಪ್ರದೇಶವೊಂದು ನಿಮ್ಮ ಹಸ್ತಸ್ಪರ್ಶದಿಂದ ಚೈತನ್ಯ ಸ್ಫೂರ್ತಿಗಳನ್ನು ಪಡೆದ ವಿದ್ಯಾಕ್ಷೇತ್ರವಾಗಿದೆ.”

ಕೆ. ಹನುಮಂತಯ್ಯ.

o o o

“ಈ ಆಸ್ಪತ್ರೆಯ ಆರಂಭವು ಜನತೆಯ ಆರೋಗ್ಯಾಭಿವೃದ್ಧಿಯತ್ತ ಇಟ್ಟ ಒಂದು ಪ್ರಮುಖ ಹೆಜ್ಜೆ.”

ಜಿನಾಬಾಯಿ ದೇವಿದಾಸ್,
ಮಾಜಿ ಮೇಯರ್, ಬೆಂಗಳೂರು.

o o o

“ಮನಸ್ಸು ಮತ್ತು ಪ್ರಯತ್ನಗಳಿದ್ದರೆ ಅಸಾಧ್ಯವಾದುದನ್ನು ಕೂಡಾ ಸಾಧ್ಯಗೊಳಿಸಬಹುದೆಂಬುದನ್ನು ತೋರಿಸಲು ನಿಮ್ಮ ಮಹತ್ಕಾರ್ಯಗಳು ನಿದರ್ಶನಗಳಾಗಿವೆ.”

ಜಸ್ಟೀಸ್ ಯನ್ ಸೋಮಸುಂದರಂ
ಮದ್ರಾಸು.

o o o

“ವೈದ್ಯಕೀಯ ಸೌಕರ್ಯಗಳನ್ನೊದಗಿಸಿಕೊಡಲು ಸರಕಾರವು ಪೂರ್ಣ ಗಮನವನ್ನೀಯುತ್ತಿರುವುದಾದರೂ ಸಾರ್ವಜನಿಕರ ಸಹಕಾರ ಈ ಕ್ಷೇತ್ರದಲ್ಲಿ ಅತ್ಯವಶ್ಯವಿದೆ. ಅಂತಲೇ ಮಣಿಪಾಲದ ಈ ಉದ್ಯಮವು ಸ್ಮರಣೀಯವೂ ಬೇರೆ ಸಂಘ ಸಂಸ್ಥೆಗಳಿಗೆ ಅನುಕರಣೀಯವೂ ಆಗಿದೆ.”

ಎಸ್. ವಿ. ರಾಮಸ್ವಾಮಿ,
ಕೇಂದ್ರ ಸಚಿವರು.

o o o

“ನಿಮ್ಮ ದಕ್ಷ ಮಾರ್ಗದರ್ಶನದಲ್ಲಿ ಈ ಆಸ್ಪತ್ರೆಯು ವಿದ್ಯಾರ್ಥಿಗಳ ವೈದ್ಯಕೀಯ ಶಿಕ್ಷಣವನ್ನು ಹಾಗೂ ರೋಗಪೀಡಿತ ಜನತೆಯ ದುಃಖನಿವಾರಣೆಯನ್ನು ಸಾಧಿಸುವುದರಲ್ಲಿ ಸಂದೇಹವಿಲ್ಲ”

ಲೆ| ಕ। ವಿ. ಶ್ರೀನಿವಾಸನ್
ಡೈರೆಕ್ಟರ್ ಜನರಲ್ ಆಫ್ ಹೆಲ್ತ್
ಸರ್ವಿಸಸ್, ನ್ಯೂಡಿಲ್ಲಿ.

o o o

“ಅದರ ಆರಂಭದ ದಿನಗಳಿಂದಲೂ ನನಗೆ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ನಿಕಟ ಪರಿಚಯವಿದೆ. ಅದು ಸಾಧಿಸುತ್ತಿರುವ ಪ್ರಗತಿಯನ್ನು ಕಂಡು ಆನಂದಭರಿತನಾಗಿದ್ದೇನೆ. ಇದೆಲ್ಲ ನಿಮ್ಮ ಮತ್ತು ನಿಮ್ಮ ಸಹೋದ್ಯೋಗಿಗಳ ಪರಿಶ್ರಮದಿಂದ ಮಾತ್ರ ಸಾಧ್ಯವೆನಿಸಿತು.”

ಡಾ|| ಯು. ಕೃಷ್ಣರಾವ್
ಸ್ಪೀಕರ್, ಮದ್ರಾಸ್ ವಿಧಾನಸಭೆ.



ಸುಪ್ರಸಿದ್ಧ ಸರ್ಜನ್ ಡಾ| ಎ. ವಿ. ಬಾಳಿಗಾರವರು ಕಸ್ತೂರ್ಬಾ ಆಸ್ಪತ್ರೆಯ ಶಂಕುಸ್ಥಾಪನೆಯನ್ನು ಮಾಡುತ್ತಿರುವುದು.

...ಟ್ರಸ್ಟ್...
...ಳಿ
...ಮ ತೀರ್ಥ ಶ್ರೀಪಾದಂಗಳವರು.
...
...ಪಾದಂಗಳವರು.
...ಶ್ರೀಪಾದಂಗಳವರು.
... ಯುಫ್. ಆರ್. ಇ. ಯಸ್.
...ರ್.
...ಸ್.
...ಯುಲ್,
...ರ್.
... ವಿ, ಬಿ. ಯಸ್.

ಕಸ್ತೂರ್ಬಾ ಜನರಲ್ ಆಸ್ಪತ್ರೆಯ ವೈದ್ಯಕೀಯ ಮಂಡಲಿ

ಡಾ| ಟಿ ಥೋಮಸ್,
ಎಂ.ಬಿ.,ಬಿ ಎಸ್.,
ಯಫ್.ಆರ್.ಸಿ.ಯಸ್.

ಡಾ| ಎಂ ಕೃಷ್ಣಸ್ವಾಮಿ,
ಎಂ ಬಿ.,ಬಿ ಎಸ್.,ಎಂ.ಆರ್.ಸಿ.ಪಿ.,
ಡಿ ಸಿ ಎಚ್ (ಫಿಜಿಶಿಯನ್)

ಡಾ| ಕೆ ರಾಜಗೋಪಾಲ,
ಎಂ ಎಸ್‌ಸಿ.,ಎಂ ಬಿ.,ಬಿ.ಎಸ್.,
ಎಫ್ ಐ ಸಿ (ಬಯೊ ಕೆಮಿಸ್ಟ್ರಿ)

ಡಾ| ಎ. ಕೃಷ್ಣ ರಾವ್,
ಎಂ ಎಸ್‌ಸಿ., ಎಂ ಬಿ.,ಬಿ ಎಸ್.,
(ಬ್ಲಡ್ ಬ್ಯಾಂಕ್)

ವೆಲ್ಲೂರು ಮೆಡಿಕಲ್ ಕಾಲೇಜು ಆಸ್ಪತ್ರೆಯಲ್ಲಿ ಸುಪ್ರಸಿದ್ಧ ಥೊರಾಸಿಕ್ ಸರ್ಜನ್ ಡಾಕ್ಟರ್ ಬೆಟ್ಸ್ ಇವರ ನೇತೃತ್ವದಲ್ಲಿ ಹಲವಾರು ವರುಷಗಳ ಅನುಭವವನ್ನೂ ಅಮೇರಿಕದಲ್ಲಿ ವಿಶೇಷ ತರಬೇತಿಯನ್ನೂ ಪಡೆದಿರುವ ಭಾರತದ ಸುಪ್ರಸಿದ್ಧ ಥೊರಾಸಿಕ್ ಸರ್ಜನ್ ಡಾ| ಥೋಮಸ್‌ರವರು ಕಸ್ತೂರ್ಬಾ ಆಸ್ಪತ್ರೆಯ ಪ್ರಮುಖ ಡಾಕ್ಟರಾಗಿರುವರು.

ಡಾ| ಪಿ. ಎಸ್ ಶ್ರೀನಿವಾಸರಾವ್,
ಬಿ ಎಸ್‌ಸಿ.,ಎಂ ಬಿ.,ಬಿ ಎಸ್.,
ಡಿ ಒ (ನೇತ್ರತಜ್ಞ)

ಡಾ| ಎಲಿಜಬೆತ್ ಥೋಮಸ್,
ಎಂ ಡಿ (ಪೆಥಾಲಜಿ)

ಡಾ| ಶ್ರೀಮತಿ ಎ ಪದ್ಮಾರಾವ್,
ಎಂ ಡಿ, ಡಿ ಜಿ ಒ.

ವಿಶಿಷ್ಟ ನೆಲ - ಮಣಿಪಾಲ

ಇಪ್ಪತ್ತೇಳು ವರುಷಗಳ ಹಿಂದೆ ಅಜ್ಞಾತ ಹಳ್ಳಿಯಾಗಿದ್ದು, ಇಂದು ಭಾರತದಲ್ಲಿ ಮಾತ್ರವಲ್ಲ ಅಮೇರಿಕಾ ಮೊದಲಾದ ಪಾಶ್ಚಾತ್ಯ ರಾಷ್ಟ್ರಗಳಲ್ಲಿಯೂ ಖ್ಯಾತವೆನಿಸಿದ ಮಣಿಪಾಲದ ಕಥೆ ನಮ್ಮ ಕಣ್ಣ ಮುಂದೆ ನಡೆದ ನಡೆಯುತ್ತಿರುವ ಮಹಾ ಸಾಧನೆಯೊಂದರ ಜೀವಂತ ನಿದರ್ಶನ. ಹಿಂದೆ ವಿದ್ಯಾರಣ್ಯರು ವಿಜಯನಗರವನ್ನು ರಾಜಧಾನಿಯನ್ನಾಗಿ ಆಯ್ದುಕೊಂಡಂತಹ ಮಾದರಿಯ ಘಟನಾ ವಿಶೇಷವೊಂದು ಮಣಿಪಾಲದ ಆಯ್ಕೆಗೂ ಕಾರಣವಾಯಿತೆಂಬುದು ಒಂದು ವಿಸ್ಮಯಕಾರಕ ಸತ್ಯ ಸಂಗತಿ. ಹುಲಿ ಜಿಂಕೆಗಳೊಂದಾಗಿ ಮೈತ್ರಿಯಿಂದ ಸರಸವಾಡುತ್ತಿದ್ದ ಸ್ಥಳ ವಿಶೇಷ ವಿದ್ಯಾರಣ್ಯರ ಮನವನ್ನಾಕರ್ಷಿಸಿತೆಂಬುದು ಗತ ಚರಿತ್ರೆಯ ಮಾತಾದರೆ ಸುಂದರ ಹಕ್ಕಿಗಳು ಗಾಳಿಗೆ ಮೈಯೊಡ್ಡಿ ನಿಂದು ನಲಿದಾಡುತ್ತಿದ್ದ ನೆಲ ಮಹಾತ್ಮ್ಯೆ ಪೈ ಸಹೋದರರಲ್ಲೊಬ್ಬರ ಚಿತ್ತವನ್ನಾಕರ್ಷಿಸಿತು ಎಂಬುದು ಮೊನ್ನೆ ಮೊನ್ನೆಯೆಂಬಂತೆ ನಡೆದ ಘಟನೆಯಾಗಿದೆ.

ಅದೊಂದು ಸಾಯಂಕಾಲ, ಸಾಯಂಕಾಲದ ವಿಹಾರಾರ್ಥಕ್ಕೆಂದು ಪೈ ಸಹೋದರರು ಬಂದಿದ್ದರು—ಉಡುಪಿಯಿಂದ ಎರಡು ಮೈಲು ದೂರದ ಈ ಬೆಟ್ಟ ಪ್ರದೇಶಕ್ಕೆ. ಕೆಳಗೆ ಕುಂಡೇಲಕಾಡು. ಹಗಲು ಹೊತ್ತಿನಲ್ಲೇ ನಿರ್ಭಯವಾಗಿ ಗಸ್ತು ಹೊಡೆಯುತ್ತಿದ್ದ ಹುಲಿರಾಯನ ತವರ್ಮನೆ. ಒಂದೆರಡು ಮೈಲುಗಳ ಅಕ್ಕಪಕ್ಕಗಳಲ್ಲಿ ಶಿವಳ್ಳಿ ಪೆರಂಪಳ್ಳಿ ಮಾಹೆಳ್ಳಿ ಮೊದಲಾದ ಹೆಸರೇ ಸೂಚಿಸುವ ಹಳ್ಳಿಗಳು. ಈ ಮಧ್ಯೆ ಪ್ರಕೃತಿ ಮಾತೆಯ ನೊಸಲಿನಂತೆ ಎದ್ದು ಕಾಣುವ ವಿಸ್ತಾರವಾದ ಮುರಕಲ್ಲ ಮೈದಾನು ಮಣಿಪಾಲ. ಮುರಕಲ್ಲ ಮೈದಾನವೆಂಬುದಕ್ಕಿಂತಲೂ ಒಳ್ಳೆಯ ಕೆಲಸಕ್ಕಾಗಿ ಪ್ರಕೃತಿ ದೇವಿ ನೀಡಿದ ವೈದಾನವೆಂಬುದೇ ಸಮಂಜಸವೋ ಏನೋ.

ಪೈಸೋದರರು ಕುಳಿತು ಆ ಮಾತು ಈ ಮಾತು ಆಡುತ್ತಿದ್ದಂತೆ ದಿವಂಗತ ಉಪೇಂದ್ರ ಅನಂತ ಪೈ (ಡಾ| ಮಾಧವ ಪೈಗಳ ಅಣ್ಣ, ಟಿ ಎ. ಪೈಗಳ ತೀರ್ಥರೂಪರು) ಎದ್ದು ನಡೆಯ ತೊಡಗಿದರು. ಅನತಿ ದೂರದಲ್ಲಿ ಚಲಿಲಿಗುಡುತ್ತಾ ಆಡುತ್ತಿದ್ದ ಹಕ್ಕಿಗಳ ರಮಣೀಯ ನರ್ತನ ಅವರ ಮನಸ್ಸನ್ನು ಆ ಕಡೆಗೆ ಸೆಳೆದಿತ್ತು. ದಿವಂಗತರು ಕಂಡರು ಏನನ್ನ? ತಿಳಿನೀರಿನಲ್ಲಿ ಮಿಂದು ರೆಕ್ಕೆ ಜಾಡಿಸುವ, ಮತ್ತೆ ಹಾರಿ ಮತ್ತೆ ಬಂದೆರಗುವ ಅಪೂರ್ವ ಹಕ್ಕಿಗಳನ್ನು, ವಿಸ್ತಾರವಾದ ಮರಳುಗಾಡಿನಂತಿರುವ ಈ ಮುರಕಲ್ಲ ಗುಡ್ಡದಲ್ಲಿ ತಿಳಿನೀರ ಜಲಾಶಯವನ್ನೇ! ಭಗೀರಥನು ಗಂಗಾಜಲವನ್ನೆತ್ತಿಕೊಂಡಂತೆ ಭಕ್ತನು ಪ್ರಸಾದವನ್ನೆತ್ತಿಕೊಂಡಂತೆ ಅಲ್ಲಿನ ಜಲನೆಲಗಳನ್ನು ಉಪೇಂದ್ರ ಅನಂತ ಪೈಗಳೆತ್ತಿಕೊಂಡರು. ಅನಂತನಾದ ಆನಂದದಿಂದ ಅವರ ಹೃದಯ ಆಗ ನರ್ತಿಸಿರಬೇಕು.

ಇದು ಇಂದಿನ ಈ ಆಧುನಿಕ ಮಣಿಪಾಲಕ್ಕೆ ನಾಂದಿಯನ್ನಿಟ್ಟ ಸತ್ಯಕಥೆ. ಅಂದಿನಿಂದ ಆರಂಭವಾದ ಪ್ರಗತಿ ಮುಂದುವರಿಯುತ್ತಾ ಬಂದಿದೆ. ಪ್ರಾಥಮಿಕ ಶಾಲೆಯಿಂದಾರಂಭಿಸಿ ಮೆಡಿಕಲ್ ಎಂಜಿನಿಯರಿಂಗ್ ಕಾಲೇಜಿನ ವರೆಗೆ ಇಂದದು ಅಖಿಲ ಭಾರತದಿಂದ ಮಾತ್ರವಲ್ಲ ಪರನಾಡುಗಳಿಂದಲೂ ವಿದ್ಯಾರ್ಜನೆಗೆ ಬಂದಿರುವ ವಿದ್ಯಾರ್ಥಿಗಳ ಗುರುಕುಲ, ಪುಣ್ಯಭೂಮಿ ಈ ವಿಶಿಷ್ಟ ಹಿನ್ನೆಲೆಯುಳ್ಳ, ಕಸ್ತೂರ್ಬಾ ಜನರಲ್ ಆಸ್ಪತ್ರೆ ರಾಜಕುಮಾರಿ ಅಮೃತಕೌರ್ ಅವರು "ಇದು ನಿಸರ್ಗ ರಮಣೀಯವಾದ ಶುದ್ಧ ಹವೆಯುಳ್ಳ ಪ್ರಶಾಂತ ಸ್ಥಳ" ಎಂದು ಸಮುಚಿತವಾಗಿ ಕರೆದ ಈ ಮಣಿಪಾಲದಲ್ಲಿ ರೂಪುಗೊಳ್ಳುತ್ತಿದೆ.

ಸಂದೇಶಗಳು

"ನೀವು ಮಾಡುತ್ತಿರುವ ಉತ್ತಮ ಕೆಲಸವನ್ನು ಕಣ್ಣಾರೆ ಕಂಡಿರುವ ನಾನು ನಿಮ್ಮ ಪ್ರಯತ್ನಗಳು ನಿರಂತರ ಯಶಸ್ಸು ಕಾಣಲಿ ಎಂದು ಹಾರೈಸುತ್ತಾ ನನ್ನ ಶುಭಾಶಯಗಳನ್ನು ಕಳುಹಿಸುವೆನು."

ಬಿ ಗೋಪಾಲ ರೆಡ್ಡಿ,
ಕೇಂದ್ರ ಸಚಿವರು.

"ಮಣಿಪಾಲವು ಇಂದು ಸರ್ವತೋಮುಖವಾಗಿ ಅಭಿವೃದ್ಧಿ ಹೊಂದುತ್ತಿದೆ. ಕಸ್ತೂರ್ಬಾ ಜನರಲ್ ಆಸ್ಪತ್ರೆಯ ಉದ್ಘಾಟನೆಯು ಈ ಪ್ರಗತಿಯಲ್ಲೊಂದು ಪ್ರಮುಖ ಹೆಜ್ಜೆಯಾಗಿದೆ. ಕಸ್ತೂರ್ಬಾ ಮೆಡಿಕಲ್ ಕಾಲೇಜು ಮತ್ತು ಮೆಡಿಕಲ್ ಸೊಸೈಟಿಯ ಈ ಸಫಲ ಉದ್ಯಮವನ್ನು ನಾನು ಅಭಿನಂದಿಸುತ್ತೇನೆ"

ಡಾ. ಕೆ. ಕೆ. ಹೆಗ್ಡೆ,
ಮೈಸೂರು ಆರೋಗ್ಯ ಸಚಿವರು.

o o o

"ನಿಮ್ಮ ಮತ್ತು ನಿಮ್ಮ ರಚನಾತ್ಮಕ ಚಟುವಟಿಕೆಗಳ ಚಿರಪರಿಚಿತನಾಗಿರುವ ನನಗೆ ಕೆಲವೇ ವರುಷಗಳಲ್ಲಿ ನೀವು ಮಣಿಪಾಲವನ್ನು ಒಂದು ವಿದ್ಯಾಕ್ಷೇತ್ರವನ್ನಾಗಿ ಮಾರ್ಪಡಿಸುವಿರಿ ಎಂಬುದರಲ್ಲಿ ಎಳ್ಳಷ್ಟು ಸಂದೇಹವಿಲ್ಲ."

ಯಚ್. ಯಂ. ಚೆನ್ನಬಸಪ್ಪ,
ಮೈಸೂರು ಗೃಹಸಚಿವರು.

o o o

"ಈ ಹೊಸ ಆಸ್ಪತ್ರೆಯ ಉದ್ಘಾಟನೆಯ ವಾರ್ತೆ ನನಗೆ ಆನಂದವನ್ನುಂಟುಮಾಡಿದೆ."

ಎಂ ಭಕ್ತವತ್ಸಲಂ,
ಮದ್ರಾಸಿನ ಸಚಿವರು.

o o o

"ಕಸ್ತೂರ್ಬಾ ಜನರಲ್ ಆಸ್ಪತ್ರೆಯನ್ನು ಸ್ಥಾಪಿಸುವುದರಲ್ಲಿ ನಿಮ್ಮ ಪ್ರಯತ್ನವು ಸಫಲವಾದುದನ್ನು ಕಂಡು ನನಗೆ ತುಂಬಾ ಸಂತೋಷವೆನಿಸಿದೆ. ಅತ್ಯಾಧುನಿಕ ಸಲಕರಣೆಗಳಿಂದಲೂ ತಜ್ಞವೈದ್ಯರಿಂದಲೂ ಕೂಡಿಕೊಂಡು ಈ ಆಸ್ಪತ್ರೆಯು ಒಂದು ಮಾದರಿ ಸಂಸ್ಥೆಯೆನಿಸುವುದು ಎಂದು ನಂಬುತ್ತೇನೆ.

ಯಚ್ ಕೆ. ವೀರಣ್ಣ ಗೌಡ,
ಮೈಸೂರು ಸಚಿವರು.



ಕಸ್ತೂರ್ಬಾ ಮೆಡಿಕಲ್ ಕಾಲೇಜಿನ
ಫಿಜಿಯಾಲಜಿ ಬ್ಲೋಕಿನ ವಿಹಂಗಮ ನೋಟ.

ಅಲ್ಲಲ್ಲಿಯ ಸುದ್ದಿಸಾರ

ಉಡುಪಿ ಸರಕಾರಿ ಆಸ್ಪತ್ರೆಯ ಹೊಸ ಕಟ್ಟಡದ ಶಂಕುಸ್ಥಾಪನೆಗೈದ ಮುಖ್ಯಮಂತ್ರಿ ಶ್ರೀ ಬಿ. ಡಿ. ಜತ್ತಿ

ಉಡುಪಿ ಸರಕಾರಿ ಆಸ್ಪತ್ರೆಯ ಹೊಸ ಕಟ್ಟಡದ ಶಂಕು ಸ್ಥಾಪನೆ— ಉಡುಪಿಯ ಅಜ್ಜರಕಾಡಿನಲ್ಲಿ ನೂತನವಾಗಿ ಕಟ್ಟಲ್ಪಡುವ ಸರಕಾರಿ ಆಸ್ಪತ್ರೆಯ ಹೊಸ ಕಟ್ಟಡದ ಶಂಕುಸ್ಥಾಪನಾ ಸಮಾರಂಭವು ಇದೇ ತಾ. ೬ನೇ ಸಂಜೆ ಮೈಸೂರಿನ ಮುಖ್ಯ ಮಂತ್ರಿ ಶ್ರೀ ಬಿ. ಡಿ. ಜತ್ತಿಯವರಿಂದ ಆರೋಗ್ಯ ಮಂತ್ರಿ ಡಾ| ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಪ್ರಾರ್ಥನೆಯಾದ ಬಳಿಕ ಹೆಲ್ತ್ ಎಜ್ಯುಕೇಶನ್ ಎಂಡ್ ಸೋಶಿಯಲ್ ವೆಲ್‌ಫೇರ್ ಸೊಸೈಟಿಯ ಉಪಾಧ್ಯಕ್ಷರಾದ ಶ್ರೀ ಯು. ಎಸ್. ನಾಯಕ್ ಎಂ. ಎಲ್. ಎ. ಅವರು ಅತಿಥಿಗಳಿಗೆ ಸ್ವಾಗತವಿತ್ತು ಹಾರಾರ್ಪಣೆಗೈದರು. ಜಿಲ್ಲಾ ವೈದ್ಯಾ-

ಶಂಕುಸ್ಥಾಪನಾ ಸಮಾರಂಭದ ಅಧ್ಯಕ್ಷತೆ ವಹಿಸಿದ ಆರೋಗ್ಯಮಂತ್ರಿ ಡಾ. ಕೆ. ಕೆ. ಹೆಗ್ಡೆ

ಧಿಕಾರಿ ಡಾ| ಎ ತಿಮ್ಮಪ್ಪಯ್ಯನವರು ಸ್ವಾಗತ ಭಾಷಣ ಮಾಡುತ್ತ ಸರಕಾರಿ ಆಸ್ಪತ್ರೆಗಳಲ್ಲಿ ನಡೆದಿರುವ ಅಭಿವೃದ್ಧಿ ಕೆಲಸಗಳನ್ನು ವಿವರಿಸಿದರಲ್ಲದೆ ಈ ಹೊಸ ಆಸ್ಪತ್ರೆಗೆ ಸರಕಾರವು ರೂ. 7,67,500ನ್ನು ಖರ್ಚು ಮಾಡಲಿರುವುದೆಂದೂ ಒಂದು ಲಕ್ಷ ರೂಪಾಯಿಯನ್ನು ಸ್ಥಳೀಯ ಕಮಿಟಿಯವರು ಸಂಗ್ರಹಿಸಿಕೊಟ್ಟಿರುವುದು ಸ್ಮರಣೀಯವೆಂದೂ ಹೇಳಿದರು. ಡಾ| ಟಿ ಎನ್. ಕಣ್ಣನ್ ಸಂಬಿಯಾರರು ಸಂದೇಶಗಳನ್ನು ಓದಿದರು. ಸಮಿತಿಯ ಕಾರ್ಯದರ್ಶಿ ಶ್ರೀ ಕೆ. ವರದರಾಯ ಪೈಯವರು ಸಮಿತಿಯ ವರದಿಯನ್ನೋದಿದರು. ಶ್ರೀ ಪಿ ಆರ್. ಶೆಣೈಯವರು ಮುಖ್ಯ ಮಂತ್ರಿಗಳಿಗೂ, ಶ್ರೀ ಪಿ. ಶಿವಾಜಿ ಸೆಟ್ಟರು ಆರೋಗ್ಯ ಮಂತ್ರಿಗಳಿಗೂ ಸಮಿತಿಯ ಪತಿಯಿಂದ ಮಾನಪತ್ರಗಳನ್ನು ಒಪ್ಪಿಸಿದರು. ಸಮಿತಿಯ ಅಧ್ಯಕ್ಷರಾದ ಅದಮಾರು ಮಠದ ಶ್ರೀ ಪಾದಂಗಳವರು ಮುಖ್ಯಮಂತ್ರಿ ಜತ್ತಿಯವರು ಶಂಕುಸ್ಥಾಪನೆ ಮಾಡುವಂತೆ ಕೇಳಿಕೊಳ್ಳುತ್ತ ಈ ಆಸ್ಪತ್ರೆಯ ಪೂರ್ವೇತಿಹಾಸವನ್ನು ವಿವರಿಸಿ ಸಂದರ್ಭೋಚಿತ ಮಾತುಗಳನ್ನಾಡಿದರು.

ಮಂತ್ರಿ ಜತ್ತಿಯವರು ಶಂಕುಸ್ಥಾಪನೆ ಮಾಡಿ ಸರಕಾರದ ಇಂತಹ ಕಾರ್ಯಗಳಲ್ಲಿ ಜನರಿಗೆ ತಮ್ಮದೆಂಬ ಆಸಕ್ತಿ ಹುಟ್ಟಬೇಕಾದರೆ ಸಾರ್ವಜನಿಕರೂ ಹಣ ಸಂಗ್ರಹಿಸಿಕೊಡುವುದು ಅಗತ್ಯ. ಅಲ್ಲದೆ ಹೀಗೆ ಮಾಡಿದರೆ ಕೆಲಸವೂ ಬೇಗನೆ ಸಾಗುತ್ತದೆ. ಹೊಸ ಆಸ್ಪತ್ರೆ ಕಟ್ಟಡಕ್ಕಾಗಿ ಅಜ್ಜರಕಾಡಿನ ಈ ಜಾಗವು ಅತ್ಯುತ್ತಮವಿದ್ದು, ಜಿಲ್ಲೆಯ ಇತರ ಅನೇಕ ಪ್ರಗತಿಪರ ಕೆಲಸಗಳಿಗೆ ದುಡಿದಂತೆ ನಿಮ್ಮವರೇ ಆದ ಇಲ್ಲಿಯ ಪರಿಸ್ಥಿತಿಯನ್ನರಿತ ಆರೋಗ್ಯ ಮಂತ್ರಿಗಳು ಈ ಆಸ್ಪತ್ರೆಗಾಗಿ ತುಂಬಾ ಆಸಕ್ತಿ ವಹಿಸಿದ್ದಾರೆ. ಮಣಿಪಾಲದಲ್ಲಿ ಮೆಡಿಕಲ್ ಕಾಲೇಜ್ ಇರುವಾಗ ಉಡುಪಿಯಲ್ಲಿ ಸರಕಾರಿ ಮೆಡಿಕಲ್ ಸ್ಕೂಲನ್ನು ತೆರೆಯುವ ಇಚ್ಛೆ ಸರಕಾರಕ್ಕಿಲ್ಲ ತಾಲೂಕು ಕೇಂದ್ರದಲ್ಲಿ ನಿರ್ಮಾಣವಾಗುವ ಈ ಆಸ್ಪತ್ರೆಯ ಪ್ರಯೋಜನವನ್ನು ಸರ್ವರೂ ಪಡೆಯುವಂತಾಗಲಿ ಎಂದು ಮುಂತಾಗಿ ಹೇಳಿ ಮಂಗಳೂರು ಬಂದರು, ಕಡ್ಡಾಯ ಶಿಕ್ಷಣವ ಕುರಿತು ಪ್ರಸ್ತಾಪಿಸಿ, ಈ ಆಸ್ಪತ್ರೆಗೆ ಸಾರ್ವಜನಿಕರು ನಿಧಿ ಸಂಗ್ರಹಿಸಿ ಕೊಟ್ಟ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. [ಅಧ್ಯಕ್ಷ ಡಾ| ಕೆ. ಕೆ. ಹೆಗ್ಡೆಯವರು ಈಗಿರುವ ಸರಕಾರಿ ಆಸ್ಪತ್ರೆಯ ನಿಕೃಷ್ಟ ಪರಿಸ್ಥಿತಿ ಹೊಸ ಆಸ್ಪತ್ರೆಗಾಗಿ ನಡೆದ ಪ್ರಯತ್ನ, ಉಡುಪಿ ನಗರಕ್ಕೆ ನೀರು ಸರಬರಾಯಿ ಯೋಜನೆಗೆ ಸರಕಾರವು ಕೊಡಬಹುದಾದ ಸಾಲದ ಸೌಲಭ್ಯ ಮುಂತಾದುವುಗಳನ್ನು ವಿವರಿಸಿ ಭಾಷಣವಿತ್ತರು. ಅಂತ್ಯದಲ್ಲಿ ಸಮಿತಿಯ ಜೊತೆ ಕಾರ್ಯದರ್ಶಿ ಶ್ರೀ ಎನ್ ಸೀತಾರಾಮ ಕಾಮತರು, ಆಭಾರ ಸೂಚಿಸಿದರು ಶಂಕು ಸ್ಥಾಪನೆಗೆ ಮುಖ್ಯ ಮಂತ್ರಿಗಳಿಗೆ ಕೊಡಲಾದ ಬೆಳ್ಳಿಯ ತಾಪೆಯನ್ನು ಏಲಂ ಹಾಕಲಾಗಿ ಅದನ್ನು ಶ್ರೀ ಯು. ಎಸ್. ನಾಯಕ್‌ರು 601ರೂ.ಗೆ ವಹಿಸಿಕೊಂಡರು ರಾತ್ರಿ ಕುಂದಾಪುರದ ಕಲಾವಿದರಿಂದ ಯಕ್ಷಗಾನ ಬಯಲಾಟ ನಡೆಯಿತು.

ವಾರ್ಷಿಕೋತ್ಸವ — ಆದಿಉಡುಪಿ ಹಾ. ಎ. ಶಾಲಾ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಶ್ರೀ ಪೂರ್ಣಪ್ರಜ್ಞ ಕಾಲೇಜಿನ ಪ್ರಾಧ್ಯಾಪಕ ವಿದ್ವಾನ್ ಎಚ್. ರಾಮರಾವ್ (ನಿವೃತ್ತ ಜಿಲ್ಲಾ ವಿದ್ಯಾಧಿಕಾರಿ), ಇವರ ಅಧ್ಯಕ್ಷತೆಯಲ್ಲಿ ಇದೇ ತಾ 8ರಂದು ವಿಜೃಂಭಣೆಯಿಂದ ನೆರವೇರಿತು. ಅಧ್ಯಾಪಕ ಶ್ರೀ ಕೆ ಕೃಷ್ಣರಾಜ ಭಟ್‌ರು ಸ್ವಾಗತ ಭಾಷಣಮಾಡಿ ವರದಿ ವಾಚನಮಾಡಿದರು. ಶ್ರೀ ಕೆ. ಗೋಪಾಲ ಶೆಟ್ಟರು ಸ್ಥಳಿಕರ ಪರವಾಗಿ ಮಾತಾಡಿದರು. ಅಧ್ಯಕ್ಷರ ಭಾಷಣವಾದ ಬಳಿಕ ಅಧ್ಯಾಪಕ ಶ್ರೀ ಎಮ್. ಶೇಖರ ಶೆಟ್ಟರು ಧನ್ಯವಾದ ಸಮರ್ಪಿಸಿದರು. ಕೊನೆಗೆ ಹಳೇ ವಿದ್ಯಾರ್ಥಿಗಳು "ಸೌಭಾಗ್ಯರತ್ನ" ಎಂಬ ಸಂಗೀತ ನಾಟಕವನ್ನು ಅಭಿನಯಿಸಿದರು.

ಜಿಲ್ಲಾ ಹರಿಜನ ಸೇವಾ ವೃತ್ತಿಯವರ ಸಮ್ಮೇಳನವನ್ನು— ತಾ. 8 ರಂದು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ನಿಜಲಿಂಗಪ್ಪನವರು ಮಂಗಳೂರಿನ ಗಣಪತಿ ಹೈಸ್ಕೂಲಿನಲ್ಲಿ ಉದ್ಘಾಟಿಸಿದರು. ಶ್ರೀ ಕೆ. ಕೆ. ಶೆಟ್ಟಿ, ಎಮ್. ಎಲ್. ಸಿ.ಯವರು ಅಧ್ಯಕ್ಷತೆ ವಹಿಸಿದ್ದರು. ಪ್ರಾರಂಭದಲ್ಲಿ ಶ್ರೀ ಮಂಜಪ್ಪ ಉಳ್ಳಾಲ್, ಎಮ್. ಎಲ್. ಎ.ರವರು ಸ್ವಾಗತಿಸಿದರು. ಪ್ರದೇಶ ಕಾಂಗ್ರೆಸ್ ಸಮಿತಿಯ ಉಪಾಧ್ಯಕ್ಷ ಡಾ ಕೆ. ನಾಗಪ್ಪ ಆಳ್ವರು ಭಾಷಣ ಮಾಡಿದರು. ಸಂಘದ ಅಧ್ಯಕ್ಷ ಶ್ರೀ ಎ. ಕೇಶವ ಕುಮಾರ್ ಅವರು ಧನ್ಯವಾದಗಳನ್ನರ್ಪಿಸಿದರು.

ಕಸ್ತೂರ್ಬಾ ಜನರಲ್ ಆಸ್ಪತ್ರೆಯ ಉದ್ಘಾಟನೆ— ಇದೇ ತಾ. 7ನೇ ಬೆಳಿಗ್ಗೆ 150 ಬೆಡ್‌ಗಳುಳ್ಳ ಕಸ್ತೂರ್ಬಾ ಜನರಲ್ ಆಸ್ಪತ್ರೆಯು ಕಾಂಗ್ರೆಸ್ ಅಧ್ಯಕ್ಷ ಶ್ರೀ ಎನ್ ಸಂಜೀವ ರೆಡ್ಡಿಯವರಿಂದ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಲ್ಪಟ್ಟಿತು ಡಾ| ಟಿ. ಎಂ. ಎ. ಪೈಯವರು ಸ್ವಾಗತ ಭಾಷಣ ಮಾಡುತ್ತಾ ಇಲ್ಲಿಯ ಮೆಡಿಕಲ್ ಕಾಲೇಜಿನ ಪ್ರಗತಿಪರವೃತ್ತಾಂತ ಉನ್ನತ ಮಟ್ಟದ ಆಸ್ಪತ್ರೆಯ ಆವಶ್ಯಕತೆಗಳನ್ನು ತಿಳಿಯಾರೆ ಕೇಳಿದ್ದರೂ ಇಂದು ಕಣ್ಣಾರೆ ಕಂಡು ತುಂಬಾ ಸಂತೋಷಗೊಂಡಿದ್ದೇನೆ ಸರಕಾರಿ ಸಾಹಸದ ಕೆಲಸವನ್ನು ಇಲ್ಲಿಯವರು ಡಾ| ಮಾಧವ ಪೈಗಳ ಸಮರ್ಥ ನೇತೃತ್ವದಲ್ಲಿ ಸಹಕಾರಿ ಸಾಹಸದ ಮೂಲಕ ಸಾಧಿಸಿ ದೇಶಕ್ಕೇನೆ ಆದರ್ಶಪ್ರಾಯರಾಗಿದ್ದಾರೆ ಇಲ್ಲಿಯ ಮೆಡಿಕಲ್ ಕಾಲೇಜುಗಳೆಲ್ಲಾ ಅತ್ಯುನ್ನತ ಮಟ್ಟದ್ದಾಗಿದೆ ಎಂಬುದನ್ನು ನಮ್ಮ ನಡುವೆ ಇರುವ ರಾಜ್ಯದ ಆರೋಗ್ಯ ಮಂತ್ರಿಗಳು ಹೇಳಿದ್ದುದನ್ನು ತಿಳಿಸಲು ಸಂತೋಷವಾಗುತ್ತದೆ. ಸುಸಜ್ಜಿತವಾದ ಆಸ್ಪತ್ರೆಯು ಮೆಡಿಕಲ್ ಕಾಲೇಜಿಗೂ, ಸಾರ್ವಜನಿಕರಿಗೂ ಅತ್ಯಂತ ಸಹಕಾರಿಯಾಗಿದೆ. ಇತರ ಕಡೆಗಳಂತೆ ತಜ್ಞ ಡಾಕ್ಟರರು ಯೋಗ್ಯ ಸಲಕರಣೆಗಳಿಂದಾಗಿ ಇಲ್ಲಿಯ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಗಳಲ್ಲಿ ಯಾವ ಅಭಾವವೂ ಇರುವುದಿಲ್ಲ ಇದಕ್ಕಾಗಿ ಡಾ| ಪೈಯವರು ಅಭಿನಂದನೀಯರು ಇಂತಹ ಸುಸಜ್ಜಿತವಾದ ಕಾಲೇಜಿಗೆ ಖಾಸಗಿ ಪ್ರಯತ್ನಕ್ಕೆ ಮೈಸೂರು ಸರಕಾರವು ಸರ್ವ ಸಹಾಯ, ಬೆಂಬಲ ಕೊಡುವುದು ಅತ್ಯಾವಶ್ಯಕ. ಅಖಿಲ ಭಾರತ ಖ್ಯಾತಿ ಪಡೆದ ಮಣಿಪಾಲದಲ್ಲಿ ದಾದಿಯವರ ಟ್ರೈನಿಂಗ್ ಕಾಲೇಜ್ ಸ್ಥಾಪಿಸುವುದೂ ಯೋಗ್ಯ ಎಂದುಹೇಳಿ ಈ ಹೊಸ ಆಸ್ಪತ್ರೆಯು ಪ್ರಗತಿಯಿಂದ ಪ್ರಗತಿಗೆಸಾಗಿ ಬೃಹತ್ ಆಸ್ಪತ್ರೆಯಾಗಲೆಂದು ಹಾರೈಸಿದರು. ಮೆಡಿಕಲ್ ರಿಲೀಫ್ ಸೊಸೈಟಿಯ ಅಧ್ಯಕ್ಷರಾದ ಸೋದೆ ಶ್ರೀಪಾದಂಗಳವರೂ ಉಪಾಧ್ಯಕ್ಷರುಗಳಾದ ಪೇಜಾವರ ಮತ್ತು ಅದಮಾರು ಮಠದ ಶ್ರೀ ಪಾದಂಗಳವರೂ ಡಾ ಪೈಗಳ ದಕ್ಷ ನೇತೃತ್ವ, ಆಸ್ಪತ್ರೆಯ ಆವಶ್ಯಕತೆಗಳನ್ನು ಹೇಳಿ ನೂತನ ಆಸ್ಪತ್ರೆಗೆ ಶುಭಾ ಆಶೀರ್ವಾದ ಮಾಡಿದರು. ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು ಮಾತನಾಡುತ್ತಾ ಮಣಿಪಾಲದ ಸಂಸ್ಥೆಗಳ ಪ್ರಗತಿಯ ಕುರಿತು ನಾನು ಸದಾ ಆಸಕ್ತಿ ಇದ್ದವನು ಇಲ್ಲಿಯ ಮೆಡಿಕಲ್ ಕಾಲೇಜು ಆರಂಭದಿಂದಲೂ ತನ್ನ ಸರ್ವೋನ್ನತ ಮಟ್ಟವನ್ನು ಕಾಯ್ದುಕೊಂಡು ಬಂದಿರುವುದಕ್ಕಾಗಿ ಆಡಳಿತ ಮಂಡಳಿಯವರೂ ಡಾಕ್ಟರುಗಳೂ ಅಭಿನಂದನೀಯರು ಬೆಳೆದುಬರುತ್ತಿರುವ ಇಲ್ಲಿಯ ಕಾಲೇಜುಗಳನ್ನು ಕಾಣುವಾಗ ಮಣಿಪಾಲಿಗೆ ಬೇಗನೆ ವಿಶ್ವವಿದ್ಯಾಲಯ ಆಗುವ ಶುಭಚಿಹ್ನೆ ತೋರುತ್ತಿದೆ ಎಂದರು ಮಠಾಧಿಪತಿಗಳು ಇಂತಹ ಸಾರ್ವಜನಿಕ ಕೆಲಸಗಳಿಗೆ ನೆರವಾಗುತ್ತಿರುವುದನ್ನು ಶ್ಲಾಘಿಸಿದರು. ಶ್ರೀ ಟಿ ಎ ಪೈಗಳು ಆಸ್ಪತ್ರೆಗೆ ಸಹಾಯಧನವಿತ್ತವರ ಹೆಸರುಗಳನ್ನು ಓದಿ ಹೇಳಿದರು. ಕೆಲವರು ಸಭೆಯಲ್ಲಿಯೇ ತಮ್ಮ ಕೊಡುಗೆಯನ್ನಿತ್ತರು. ಈ ವರೆಗೆ ರೂ ಏಳು ಲಕ್ಷಕ್ಕೂ ಮಿಕ್ಕಿ ಸಂಗ್ರಹವಾಗಿದ್ದು 600 ಬೆಡ್‌ಗಳುಳ್ಳ ದೊಡ್ಡ ಆಸ್ಪತ್ರೆಯಾಗಿ ಬೆಳೆಯುವಾಗ ಸುಮಾರು 50 ಲಕ್ಷ ರೂಪಾಯಿ ಖರ್ಚಾಗಬಹುದೆಂದು ಶ್ರೀ ಟಿ. ಎ. ಪೈಗಳು ಹೇಳಿ ಧನ್ಯವಾದ ಸಮರ್ಪಿಸಿದರು. ತನ್ನ ಕೊಡುಗೆಯನ್ನು ರೂ. 25 ಸಾವಿರಕ್ಕೆ ಏರಿಸಿದನ್ನು ಬಹಿರಂಗಗೊಳಿಸಿದರು.

ವರ್ಧಂತ್ಯುತ್ಸವ— ಪಟ್ಲ ರೋಕವಾನ್ನ ತೀರ್ಥ ಹಾ. ಎ. ಶಾಲೆಯ ವಾರ್ಷಿಕೋತ್ಸವವು ಇದೇ ತಾ. 7ರಂದು ಉಡುಪಿ ಉತ್ತರಶ್ರೇಣಿಯ ಶಾಲೆಗಳ ಹಿರಿಯ ಪರಿಕ್ಷಾಧಿಕಾರಿ ಶ್ರೀ ವೈ. ಗೋಪಾಲ್ ಇವರ ಅಧ್ಯಕ್ಷತೆಯಲ್ಲಿ ಜರಗಿತು, ಶಾಲಾ ರೇಖಕ ಶ್ರೀ ಮರ್ಣೆ ಗೋವಿಂದ ಶೆಟ್ಟರು ಸ್ವಾಗತ ಭಾಷಣ ಮಾಡಿದರು. ಮುಖ್ಯ ಅಧ್ಯಾಪಕ ಶ್ರೀ ಯಂ. ವಾಸುದೇವ ಭಟ್ಟರು ಶಾಲೆಯ ಪ್ರಗತಿಪರ ವರದಿಯನ್ನೋದಿದರು. ಶ್ರೀ ಹಿರೇಬೆಟ್ಟು ಸದಾಶಿವ ಹೆಗ್ಡೆಯವರು, ಶ್ರೀ ಪಿ ಶ್ರೀಪತಿರಾಯರು ಶಾಲೆಗೆ ಕಾಣಿಕೆಯಾಗಿ ಬರೆದುಕೊಟ್ಟ ನೆಹರೂರವರ ಭಾವಚಿತ್ರವನ್ನು ಅನಾವರಣ ಗೈದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಶಾಲೆಯ ಉನ್ನತಿಯನ್ನು ಪ್ರಶಂಸಿಸಿ, ಹಳ್ಳಿಗಳಲ್ಲಿ ವಿದ್ಯಾಪ್ರಸಾರವಾಗುವಂತೆ ನೋಡಲು ಜನರನ್ನು ಕೇಳಿಕೊಂಡರು ಕಡ್ಡಾಯ ಪ್ರಾಥಮಿಕ ಅಭ್ಯಾಸದ ಕ್ರಮ ಕಟ್ಟಳೆಗಳ ಕುರಿತು ವಿವರಣೆಯನ್ನಿತ್ತು ಪ್ರಾಮುಖ್ಯತೆಯನ್ನು ತಿಳಿಸಿದರು. ಧನ್ಯವಾದಾರ್ಪಣೆಯಾದ ಬಳಿಕ ಶಾಲಾ ಬಾಲಕಿ, ಬಾಲಕರು ಶ್ರೀ ಮರ್ಣೆ ವಾಸುದೇವ ಭಟ್ಟರು ಬರೆದ "ಡಾರಿ ಸಿಸ್ಟಮ್ ಮುರ್ದಾಬಾದ್" ಎಂಬ ಸಾಮಾಜಿಕ ನಾಟಕವನ್ನೂ, "ಸೇಡಿನ ಕಿಡಿ" ಎಂಬ ಚಾರಿತ್ರಿಕ ನಾಟಕವನ್ನೂ ಪ್ರೇಕ್ಷಕರು ಮೆಚ್ಚುವಂತೆ ಅಭಿನಯಿಸಿದರು.

ಟಾಗೋರರ ಶತಮಾನೋತ್ಸವ— ಜಿಲ್ಲಾ ರವೀಂದ್ರನಾಥ್ ಶತಮಾನೋತ್ಸವ ಸಮಿತಿಯ ಪತಿಯಿಂದ ಮಂಗಳೂರು ಗವರ್ನ್‌ಮೆಂಟ್ ಕಾಲೇಜಿನ ಸಭಾ ಮಂದಿರದಲ್ಲಿ ಶತಮಾನೋತ್ಸವ ಕಾರ್ಯಕಲಾಪಗಳನ್ನು ತಾ 8ನೇ ಸಂಜೆ ಶ್ರೀ ಎಸ್ ನಿಜಲಿಂಗಪ್ಪನವರು ಆರೋಗ್ಯ ಮಂತ್ರಿ ಡಾ| ಕೆ. ಕೆ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಉದ್ಘಾಟನೆ ಮಾಡಿದರು. ಶತಮಾನೋತ್ಸವ ಕಮಿಟಿಯ ಅಧ್ಯಕ್ಷ ಶ್ರೀ ಸಿ. ಜೆ. ಪದ್ಮನಾಭನವರು ಸ್ವಾಗತ ಭಾಷಣ ಮಾಡಿದರು. ಶ್ರೀ ಕೋಟ. ಶಿವರಾಮ ಕಾರಂತರು ಟಾಗೋರರ ಕುರಿತು ಭಾಷಣವಿತ್ತರು. ಅಧ್ಯಕ್ಷರ ಭಾಷಣವಾದ ಮೇಲೆ ಶ್ರೀ ಮುಳೇಲ್ ಶ್ರೀನಿವಾಸ ನಾಯಕರು ಆಭಾರ ಮನ್ನಿಸಿದರು. ಕೊನೆಗೆ ಶ್ರೀ ಶೇಣಿ ಗೋಪಾಲ ಕೃಷ್ಣ ಭಟ್ಟರಿಂದ ರವೀಂದ್ರರ ಜೀವನದ ಕುರಿತಾದ ಹರಿಕಥೆ ನಡೆಯಿತು. ಶತಮಾನೋತ್ಸವದ ಕಾರ್ಯಕ್ರಮಗಳು ತಾ. 11ರ ತನಕ ನಡೆಯಲಿರುವುವು.

TB Seal Design
Delhi artist wins the prize

Design for the TB Seal for the Twelfth TB Seal Sale Campaign, organised by the Tuberculosis Association of India, has now been selected. Out of 201 entries received from 80 artists the design depicting 'an age-old Indian Folk Dance with the dancer on horseback, the theme of which symbolises vitality and energy" submitted by Mrs. Mehroo J. Wadia, New Delhi, has been selected as the suitable one.

The prize amount of the Seal design is Rs. 500/-. For the Twelfth TB Seal Sale Campaign the poster and placard will be of the TB Seal design. The Twelfth TB Seal Sale Campaign will commence on October 2, 1961.

TB Seals will sell at Ten Naye Paise each.

ನವಯುಗ ವಾರ ಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಾಹಿಸಿ.

Tel: 'BLUEYAGAR'. — ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ — Phone: 374.

ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು.[ಮಾಲಿಕ:ಕೆ.ಕೆ ಆರ್.ಶೇಟ್

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ಲ್ಲ. ಆದರೆ, ಪ್ರವರ ಸಮಿತಿಯು ಇವಕ್ಕೆ ಅಗ್ರಸ್ಥಾನವಿತ್ತಿದೆ; ಹಾಗೆಯೇ ರಾಜ್ಯ ಸಭೆ ಕೂಡ ಇವನ್ನು ಇರಿಸಬೇಕೆಂದು ಅಭಿಪ್ರಾಯಪಟ್ಟಿದೆ. ಇದರಿಂದ ಜನತೆಯ ಮೇಲೆ ಪ್ರಭಾವಬೀರುವುದು ಸಾಧ್ಯವಾಗಬಹುದು"—ಎಂದು ಅವರು ತಾನೂ ಇದಕ್ಕೆ ಬೆಂಬಲ ನೀಡುವುದಾಗಿ ಹೇಳಿದರು.

ಶಿಕ್ಷೆಗೆ ಸಂಬಂಧಿಸಿದ ಅನುಚ್ಛೇದಗಳನ್ನು ವಿವರಿಸುತ್ತ ಶ್ರೀ ಸೇನರು, "ವ್ಯಕ್ತಿಗತ ಅಧಿಕಾರದ ಮೇಲೆ ಅತರ್ಕಸಂಗತವಾದ ಪ್ರತಿಬಂಧವನ್ನು ಹೇರಿದಂತಾಗುವುದರಿಂದ ಉಚಿತ ಉಪಕಾರಗಳನ್ನು ತಡೆ ಹಿಡಿಯುವುದು ನ್ಯಾಯೋಚಿತವೆ ಎಂಬುದ ತಲ್ಲಿ ಸಂದೇಹವಿದೆ. ಪೋಲಿಸರು ಮದುವೆ ಚಪ್ಪರವನ್ನು ಸುತ್ತುತ್ತಿರುವರೆಂಬ ಹೆದರಿಕೆ ಜನತೆಗಿರಬಾರದು. ಹಳ್ಳಿಗಳಲ್ಲಿರುವ ಜಗಳ ಮತ್ತು ಪಂಗಡಗಳನ್ನು ನಾವೆಲ್ಲರೂ ಬಲ್ಲೆವು ಆದುದರಿಂದಲೇ ಉಪಹಾರ ಕೊಡುವುದನ್ನು ದಂಡಾರ್ಹವೆಂದು ಪರಿಗಣಿಸ ಬಾರದೆಂದು ಲೋಕ ಸಭೆ ಬಯಸುತ್ತದೆ; ಆದರೆ, ರಾಜ್ಯ ಸಭೆಗೆ ಇದು ಒಪ್ಪಿಗೆಯಿಲ್ಲ. ಇದರಿಂದ ಎರಡೂ ಸಭೆಗಳ ನಡುವೆ ಸಾಮಂಜಸ್ಯವನ್ನು ತರಬೇಕಾಗಿದೆ."

ಭಿನ್ನಾಭಿಪ್ರಾಯದ ಇನ್ನೊಂದು ಮುಖ್ಯ ಅನುಚ್ಛೇದವೆಂದರೆ ನಾಲ್ಕನೆಯದು. ಲೋಕಸಭೆಯು ಇದನ್ನು ಇರಗೊಳಿಸಿದರೆ, ರಾಜ್ಯಸಭೆಯು ಕಿತ್ತು ಹಾಕಿತು. ಇದರಲ್ಲಿ ವರದಕ್ಷಿಣೆ ಕೇಳುವುದೂ ದಂಡಾರ್ಹವೆಂದು ಪರಿಗಣಿತವಾಗಿದೆ. ಇದನ್ನು ವಿರೋಧಿಸುವವರು, ಮುಖ್ಯವಾಗಿ ಈ ಅನುಚ್ಛೇದದಿಂದ ದೇಶದಲ್ಲಿ ವ್ಯಾಜ್ಯಗಳು ಬೆಳೆಯುವುದಕ್ಕೆ ಅವಕಾಶ ನೀಡಿದಂತಾಗುವುದು, ಅಶಾಂತನಾದ ಕನ್ಯಾಪಿತೃ ಬೇರೆಯವರನ್ನು ಕಷ್ಟಕ್ಕೀಡುಮಾಡಲು ಹವಣಿಸಬಹುದು ಎನ್ನುತ್ತಾರೆ. ಇದನ್ನು ಶಿಕ್ಷಾರ್ಹಗೊಳಿಸದೆ ಹೋದರೆ, ಕಾನೂನು ನಿರ್ಮಾತರುವರದಕ್ಷಿಣೆ ಯ ಕುಪ್ರಥೆಯನ್ನು ನಿಲ್ಲಿಸುವುದಕ್ಕೆ ಗಂಭೀರ ಕಾರ್ಯಕ್ರಮ ಕೈಗೊಂಡಂತಾಗಲಿಲ್ಲವೆನ್ನು ದೂರುವುದಕ್ಕೆ ಅವಕಾಶವಿದೆಯೆನ್ನುತ್ತಾರೆ ಇನ್ನೊಂದು ಪಕ್ಷದವರು.

ಈಗ ಎದ್ದಿರುವ ಸಮಸ್ಯೆಯನ್ನು ಹೋಗಲಾಡಿಸಲು ಸರಕಾರವು ಒಂದು ತಿದ್ದುಪಡಿಯನ್ನು ತಂದಿದೆ. ಇದರಂತೆ ಅನುಚ್ಛೇದ ೪ ಮೂಲರೂಪದಲ್ಲಿಯೇ ಉಳಿಯುವುದು. ಆದರಲ್ಲಿ ಒಂದು ಶರ್ತವನ್ನು ಜೋಡಿಸಲಾಗುವುದು. ಯಾವುದಾದರೂ ನ್ಯಾಯಾಲಯವು ರಾಜ್ಯ ಸರಕಾರ ಅಥವಾ ಅದು ಸಾಮಾನ್ಯ ಆದೇಶದಿಂದ ನಿಯುಕ್ತಗೊಳಿಸುವ ಅಧಿಕಾರಿಯ ಪೂರ್ವ ಅನುಮತಿಯನ್ನು ತೆಗೆದುಕೊಳ್ಳದೆ ಈ ಅನುಚ್ಛೇದಾಂತರ್ಗತ ಅಪರಾಧವನ್ನು ದಂಡನೀಯವೆಂದು ತಿಳಿಯಲಾಗದು—ಎಂಬ ತಿದ್ದುಪಡಿಯನ್ನು ಸರಕಾರವು ಮಂಡಿಸಿದೆ. ಪ್ರಾಯಃ ಇದು ಸ್ವೀಕಾರವಾಗುವ ನಿರೀಕ್ಷೆಯೂ ಇದೆ.

ರವೀಂದ್ರ ವಾಣಿ

(೬ನೇ ಪುಟದಿಂದ)

ನ ರೂಪವನ್ನು ನೋಡುನೋಡುತ್ತಾ ಮುಗ್ಧಭಾವವನ್ನು ತಳೆಯುವುದು.

ಮನುಷ್ಯನ ಹೃದಯವು ಅನೇಕ ಭೋಗಗಳನ್ನು ಹೊಂದಿ ಕೊನೆಗೆ ಯಾವಾಗ ಆತ್ಮೋನ್ಮುಖವಾಗುವುದೋ ಆಗ ಅದಕ್ಕೆ ಅಮರತೆ, ಯ ಆನಂದ ಜ್ಯೋತಿಯು ಸ್ವಭಾವತಃ ಕಂಡು ಬರುವುದು. ಜೀವನದ ವಿವಿಧ ರೀತಿಯ ಸಂಘರ್ಷಣೆ, ದ್ವಂದ್ವಮಯ ಯಾತನೆಗಳು ಇವೆಲ್ಲವೂ ಶಾಂತವಾದ ಬಳಿಕ ಜ್ಞಾನ ಪ್ರೇಮ, ಮತ್ತು ಕ ಇವುಗಳು ಸಂಗಮಗೊಳ್ಳುತ್ತವೆ. ಸುಖದುಃಖಗಳನ್ನು ಸಮವೆಂದು ಭಾವಿಸುವ ಜ್ಞಾನ ಉಂಟಾಗಿ ಭೋಗ—ಮತ್ತು ತ್ಯಾಗ ಇವುಗಳು ಕಲ್ಯಾಣಕಾರೀ ಭಾವನೆಯಿಂದ ಐಕ್ಯಕವಾಗುತ್ತವೆ. ಸೀಮಾಬದ್ಧ, ಮತ್ತು ಅಸೀಮ, ಇವೆರಡೂ ಪ್ರೇಮದಿಂದ ತುಂಬುತ್ತವೆ. ಈ ವೇಳೆ ಪ್ರತಿಯೊಂದು ಚಣವೂ ಅನಂತ ಸಂದೇಶವನ್ನು ಕೊಡುತ್ತಿರುವುದು. ನಿರ್ಗುಣನೂ ಸುಗಂಧಿತ ಪುಷ್ಪರೂಪದಲ್ಲಿ ಕಾಣತೊಡಗುವನು. ನಿರಾಕಾರನೂ ಅನಂತನೂ ಆದ ಪರಮಾತ್ಮನು ನಮ್ಮ ಜನಕನಂತೆ ನಮ್ಮನ್ನು ತನ್ನ ಭುಜಗಳ ಮೇಲೆ ಕುಳ್ಳಿರಿಸಿಕೊಂಡು ಕೊನೆಗೆ ನಮ್ಮ ಮಿತ್ರನಂತೆ ನಮ್ಮೊಂದಿಗೇ ಇರುತ್ತಾನೆ. ಇದೆಲ್ಲವೂ ನಮ್ಮ ಆತ್ಮರೂಪೀ ಪರಮಾತ್ಮನ ಶಕ್ತಿಯೇ ಆಗಿರುವುದು. ಇದು ಅನಂತಪಥದ ಮೂಲಕ ವಿಶ್ವಾತ್ಮನೊಡನೆ ಮಿಲನಗೊಂಡು ಸಮಭಾವವನ್ನು ಸ್ಥಾಪಿಸುವುದು. ಎಂದಿನ ವರೆಗೆ ಇಂತು ಈ ಸಮಭಾವವು ಸ್ಥಾಪಿತವಾಗುವುದಿಲ್ಲವೋ, ಅಂದಿನ ವರೆಗೆ ನಮ್ಮ ಜೀವನವು ದಿವ್ಯ ಜೀವನವೆನಿಸದು. ನಮಗೆ ಈ ಜಗತ್ತು ಒಂದು ಯಂತ್ರದಂತೆ ಭಾಸವಾಗುವುದು. ನಾವು ಸಹಜವಾಗಿ ನಮ್ಮ ಕಾರ್ಯಗಳನ್ನು ನೆರವೇರಿಸಿಕೊಳ್ಳಲಾರದವರಾಗುತ್ತೇವೆ. ಕಷ್ಟರೂಪೀ ಪ್ರಹಾರಗಳನ್ನು ತಡೆಯಲೋಸುಗ—ತನ್ನ ರಕ್ಷಣೆಯ ಸಾಮಗ್ರಿಗಳನ್ನು ಸಂಗ್ರಹಿಸಬೇಕಾಗುತ್ತದೆ. ವಿಶ್ವಾತ್ಮನಲ್ಲಿ ನಮ್ಮ ಸಮಭಾವ ಸ್ಥಾಪಿತವಾಗುವ ವರೆಗೆ, ನಮ್ಮ ಪ್ರಾಕೃತಿಕ ಪರಿಸ್ಥಿತಿಗಳಲ್ಲಿ ಮತ್ತು ಜೀವನಕ್ಷೇತ್ರದಲ್ಲಿ ಕೂಡ ಈ ಜಗತ್ತು ನಮಗೆ ಅನುಕೂಲವಾಗಿದೆ; ಎಂಬುದನ್ನು ತಿಳಿದುಕೊಳ್ಳಲಾರೆವು.

(ಸಶೇಷ)

ರವೀಂದ್ರರ ಉದ್ಗಾರಗಳು

ಭೂಮಿಯು ಕಂಬನಿಗಳೇ ಅಕೆಯ ಮುಗುಳ (ನಗು)ನ್ನು ಅರಳಿಸಿಟ್ಟಿವೆ!

೦೦ ೦೦

ಸೂರ್ಯ ಅಸ್ತಮನಾದನೆಂದು ಕಂಬನಿ ತುಂಬಿಕೊಂಡರೆ ನಕ್ಷತ್ರಗಳ ನೋಟವು ತಪ್ಪುವದು.

೦೦ ೦೦

ಜಗತ್ತು ಆಗಂತುಕನೆಂದು ಸ್ವಪ್ನ ಕಂಡಿದ್ದೆ. ಎಚ್ಚರವಾದಾಗ ಆತ್ಮೀಯರು ನಾವೆಂದು ತಿಳಿಯಿತು.

೦೦ ೦೦

ಅಹೀ ಎತ್ತರವಿದೆಯೆಂದು ನಿನ್ನ ಪ್ರೇಮವನ್ನು ಆದರ ಮೇಲೆ ಕುಳ್ಳಿರಿಸದಿರು.

೦೦ ೦೦

ನಿನ್ನ ನಿಜ ರೂಪ, ಯಾ ಗುಣವನ್ನು ನೀನು ನೋಡಲಾರೆ. ನೀನು ನೋಡುತ್ತಿರುವದು ನಿನ್ನ ನೆರಳನ್ನು!

೦೦ ೦೦

ಕಣ್ಣಿಗೆ ರೆಪ್ಪೆ ಆಸರೆಯಾಗಿರುವಂತೆ ಕೆಲಸಕ್ಕೆ ವಿಶ್ರಾಂತಿ.

೦೦ ೦೦

ಓ ಸೌಂದರ್ಯವೇ, ನಿನ್ನನ್ನು ನೀನು ಪ್ರೇಮದಲ್ಲಿ ಕಾಣಬೇಕಾಗಿದೆಯಲ್ಲದೆ ಕನ್ನಡಿಯ ಪ್ರಶಂಸೆಯಲ್ಲಿಲ್ಲ.

೦೦ ೦೦

ಜೀವನದ ಹೆಗ್ಗಳಿಕೆ ಜಗತ್ತಿನ ಬೇಡಿಕೆಯಲ್ಲಿ; ಜೀವನದ ಮೌಲ್ಯ ಪ್ರೇಮದ ಕಾಣಿಕೆಯಲ್ಲಿ.

೦ ೦

ಹೊಟ್ಟೆಯಲ್ಲಿ ಅಜೀರ್ಣವಿಟ್ಟುಕೊಂಡು ಆಹಾರವನ್ನು ಶಪಿಸದಿರು.

೦ ೦

ಸೂರ್ಯನಿಗಿಂತ ದೊಡ್ಡವಾದ ನಕ್ಷತ್ರಗಳಿದ್ದರೂ ಮಿಣುಕು ಹುಳಗಳಂತೆ ಕಾಣಿಸಿಕೊಳ್ಳಲು ನಾಚುವದಿಲ್ಲ.

೦ ೦

ಮೊನೆಯಾದ ಆದರೂ ವಿಶಾಲತೆ ಇಲ್ಲದ ಮನಸ್ಸು ಸೂಜಿಯಂತೆ ಎಲ್ಲೆಡೆಯೂ ಚುಚ್ಚಿಕೊಳ್ಳುವದಲ್ಲದೆ ಮುಂದರಿಯದು.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R. E. P. 572/60

O. S. 383/59

ಬಂಟವಾಳ ಶ್ರೀ ಮಹಾಮಾಯಿ ದೇವರ ಭಂಡಾರ —ಅರ್ಜಿದಾರ.

ಕೊಳ್ಕಿರೆ ಶ್ರೀ ನರಸಿಂಹ ದೇವರ ಭಂಡಾರ ಕೂಡಾ —ಎದ್ರಿರು.

೨ನೇ ಎದ್ರಿ ನಾರಾಯಣ ಪ್ರಭು, ಮೈನರ ಗಾರ್ಡಿಯನ್ ರಾಮಚಂದ್ರ ಪ್ರಭು ಅನಂತ ಪ್ರಭುಗಳ ಮಗ, ಮಂಗಳೂರು ಬಜಾರಿನ ತ್ರಿಶಿಲೇಶ್ವರ ದೇವಸ್ಥಾನದ ಬಳಿ ಆಣೆಮಾರು ಕಂಪಾಂಡಿನಲ್ಲಿ

—ಇವರಿಗೆ ತಿಳಿಸುವುದೇನೆಂದರೆ.

ಡಿಕ್ರಿಗೆ ಜವಾಬ್ದಾರಿ ಇರುವ ಆಸ್ತಿ ವಿಲೆವಾರಿನ ಬಗ್ಗೆ ಅರ್ಜಿದಾರ ದಾಖಲುಮಾಡಿದ ಈ ಅಮಲ್ದಾರಿಯು ತಾ. 2—6—61ಕ್ಕೆ ಇರುವುದರಿಂದ ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ಆ ದಿವಸ ಉಪಸ್ಥಿತರಿರಿಸಿಕೊಳ್ಳತಕ್ಕದ್ದು.

ಬಿ. ಚಿದಾನಂದ ರಾವ್,

ಅರ್ಜಿದಾರನ ವಕೀಲ್.

ಪುತ್ತೂರು, ತಾ 22—4—61

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R. E. P. 547/1960

O. S. 443/1955.

ಶಿವಪ್ಪ —ಅರ್ಜಿದಾರ.

ಮುಚ್ಚು ಕೊರಪೊಳು ಹೆಂಗಸಿನ ಮಗಳು, ಬೆಳ್ತಂಗಡಿ ತಾಲೂಕು ಮೇಲಂತಬೆಟ್ಟು ಗ್ರಾಮದ ಸೂಜೋದಿ —ಎದ್ರಿ.

—ಎದ್ರಿಗೆ ತಿಳಿಸುವುದೇನೆಂದರೆ ಸ್ಥಿರಾಸ್ತಿ ಜಪ್ತಿ ಪಡಿಸುವ ಬಗ್ಗೆ ಅರ್ಜಿದಾರನು ದಾಖಲು ಮಾಡಿದ ಈ ಅಮಲ್ದಾರಿಯು ತಾರೀಕು 31-5-61ಕ್ಕೆ ಇರುವುದರಿಂದ ಆ ಕುರಿತು ಆಕ್ಷೇಪಣೆ ಇದ್ದಲ್ಲಿ ಅ ದಿವಸ ಉಪಸ್ಥಿತರಿಸಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲಾದೀತು.

B. Chidananda Rao,

Vakil for Petitioner.

ಪುತ್ತೂರು, ತಾ. 24-3 61.

ದಿ ವಿಜಯ ಬೇಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ: 1931

ರಿಜಿಸ್ಟರ್ಡ್ ಆಫೀಸು:

ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,

ಮಂಗಳೂರು-3, ಸೌತ್ ಕೆನರಾ.

ಕಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡ 5¼ರ ವರೆಗೆ ಹೆಚ್ಚಿಸಲಾಗಿದೆ.

ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ಪಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸೋಣಾಗುತ್ತದೆ.

ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ.

ಅಂದವಾದ ಮನೆಗಳಿಗೆ! ಆಕರ್ಷಕವಾದ ಆಫೀಸುಗಳಿಗೆ!!

ಸುಸಜ್ಜಿತವಾದ ಆಸ್ಪತ್ರೆಗಳಿಗೆಲ್ಲಾ ಬೇಕಾಗುವ

ಶೀರಾರವರ ಉಕ್ಕಿನ

"ಮಿಡ್ಜೆಟ್" 50" × 30" × 17" ಪೋಪ್ಯುಲರ್ 65" × 33" × 19"

ಯುಟಿಲಿಟೀ 78" × 36" × 19" ವಾರ್ಡ್ರಬ್ 78" × 39" × 24"

ಸಾದಾ ಮತ್ತು ಒಳಗಡೆ ಲೋಕರ್, ಮತ್ತು ಕನ್ನಡಿಗಳುಳ್ಳ ಕಪಾಟುಗಳು ವಗೈರೆ ಎಲ್ಲಾ ತರದ ಉಕ್ಕಿನ ಫರ್ನಿಚರ್‌ಗಳು.

"ರೇಲೀಸ್" & "ಉಷಾ" ಟೇಬಲ್ ಮತ್ತು ಸೀಲಿಂಗ್ ಫೇನ್‌ಗಳು.

— ದ್ವಿಮುಖವಾಗಿರುವ "ಸೋಫಾ ಹಾಗೂ ಹಾಸಿಗೆ" —

ಮದುವೆ ಸಮಾರಂಭಗಳಿಗೆ ಉಡುಗರೆ ಸಾಹಿತ್ಯಗಳು ನಮ್ಮ ವೈಶಿಷ್ಟ್ಯ.

ಹೆಚ್ಚಿನ ವಿವರಗಳಿಗೆ: ಶಾಸ್ತ್ರಿ ಮತ್ತು ಕಂಪೆನಿ, ಹಂಪನ್‌ಕಟ್ಟೆ, ಮಂಗಳೂರು.

Phone: 788 Grams; "SHASTRYCO"

ಯಮುನ ನೆರಳು

(೨ನೇ ಪುಟದಿಂದ)

ನಿಂತಿದ್ದನು. ಜಯಂತನು ತನ್ನ ಪ್ರೀತಿಯ ಮುಷ್ಕಿ ಕುದುರೆಯ ಕೊರಳದೊಗಲಿಗೆ ಸಪ್ಪಳವೇಳುವಂತೆ ಪ್ರೀತಿಯಿಂದ ಹೊಡೆದು ಆರೋಹಣ ಮಾಡಿದನು. ನವಲೇಂದ್ರನೂ ತನ್ನ ಕುದುರೆಯನ್ನು ಹತ್ತಿ ಜಯಂತನೊಡನೆ ಸಾಗಿದನು. ಇಬ್ಬರೂ ಬೇರೆ ಬೇರೆ ದಾರಿಗಳಿಂದ ಸವಾರಿ ಬೆಳೆಸಿ, ಒಂದೆಡೆ ಎರಡು ಮೂರು ಮರಗಳಿಂದ ಕೂಡಿ ಚಪ್ಪರದಂತಿರುವ ಸ್ಥಳದಲ್ಲಿ ಒಟ್ಟಾದರು. ಈ ಸ್ಥಳವು ಪೇಟೆಯ ಮಾರ್ಗದಿಂದ ದೂರದಲ್ಲಿತ್ತು. ಅವರು ಕೂಡಿದ ಸ್ಥಳದ ಒಂದು ಬದಿಯಲ್ಲಿ ದಟ್ಟವಾದ ಹಚ್ಚ ಹಸುರು ಬಣ್ಣದ ಗಿಡಮರಗಳಿದ್ದುವು. ಇನ್ನೊಂದು ಬದಿಯಲ್ಲಿ ಹರಿಯುವ ನದಿಯ ಕಲಕಲರವು ಮನಸ್ಸನ್ನು ಸೂರೆಗೊಳ್ಳುತ್ತಿತ್ತು. ಈ ದೃಶ್ಯವು ಜಯಂತನ ಮನವನ್ನಾಕರ್ಷಿಸಿತು. ಆವನು ಅದನ್ನೇ ನೋಡುತಿದ್ದನು. ಅಷ್ಟರಲ್ಲಿ ಎದುರುಗಡೆ ಗಿರಣಿಯ ಹೊಗೆಯಂತೆ ದೂಳು ಏಳುವುದು ಕಂಡುಬಂತು.

ಮೊದಮೊದಲು ಜಯಂತನಿಗೆ ಆಶ್ಚರ್ಯವಾಯಿತು. ಸ್ವಲ್ಪ ಸಮಯದ ಅನಂತರ ಒಂದು ಕುದುರೆ ಅವರಿದ್ದೆಡೆಗೆ ಧಾವಿಸಿ ಬರುವುದು ಗೋಚರಿಸಿತು. ಕುದುರೆ ಒಂಟಿಯಾಗಿರಲಿಲ್ಲ. ಅದರ ಬೆನ್ನ ಮೇಲೆ ಕುಳಿತ ಯುವತಿಯು ಕುದುರೆಯ ಕುತ್ತಿಗೆಯನ್ನಪ್ಪಿಕೊಂಡಿದ್ದಳು. ಜಯಂತನೂ ಕೂಡಲೇ ಕುದುರೆಯಿಂದ ಕೆಳಕ್ಕೆ ಹಾರಿ ಬಹಳ ತತ್ಪರತೆಯಿಂದ ಓಡಿ ಕುದುರೆಯ ಲಗಾಮನ್ನು ಹಿಡಿದು ನಿಲ್ಲಿಸಿದನು. ಜಯಂತನೊಡನೆ ಕುದುರೆಯಿಂದಿಳಿದಿದ್ದ ನವಲೇಂದ್ರನು ಬಹಳ ಸಮಾಧಾನದಿಂದ ಕುದುರೆಯಿಂದ ಬೀಳತೊಡಗುತ್ತಿದ್ದ ಯುವತಿಯನ್ನು ಹಿಡಿದೆತ್ತಿ, ಮಾರ್ಗದಿಂದಾಚೆ ಕೊಂಡುಹೋಗಿ ಹುಲ್ಲಿನ ಮೇಲೆ ಮಲಗಿಸಿದನು.

ಯುವತಿಯು ಮೂರ್ಛಿತಳಾಗಿದ್ದಳು. ನವಲೇಂದ್ರನು ಕುದುರೆಯ ಲಗಾಮನ್ನು ಜಯಂತನಿಂದ ಪಡಕೊಂಡನು. ಜಯಂತನು ನಿಧಾನವಾಗಿ ಯುವತಿಯ ಕಡೆ ಸರಿಯತೊಡಗಿದನು. ಸ್ವಲ್ಪ ಸಮಯದ ಅನಂತರ ಆಕೆಗೆ ಸ್ಮೃತಿ ಬಂತು. ಎದ್ದು ನಿಂತು—"ನಿಸ್ಸಂದೇಹವಾಗಿ ತಾವು ನನ್ನನ್ನು ಮೃತ್ಯುವಿನ ಮುಖದಿಂದ ಬದುಕಿಸಿದಿರಿ. ನಿಮಗೆ ಹೇಗೆ ಕೃತಜ್ಞತೆ ಅರ್ಪಿಸಬೇಕೋ ತಿಳಿಯದಾಗಿದೆ." ಎಂದು ಯುವತಿ ನಾಚುತ್ತಾ ನುಡಿದಳು.

"ಕೃತಜ್ಞತೆಯ ಆವಶ್ಯಕತೆಯಿಲ್ಲ. ನಾನು ಮಾನವ ಧರ್ಮದ ಪಾಲನೆ ಮಾಡಿದ್ದೇನೆ. ನಿಮಗೆ ಗಾಯವಾಗಲಿಲ್ಲವಲ್ಲ, ಅದೇ ದೇವರ ದಯೆ."

"ನಾನು ನಿಮ್ಮ ಶುಭನಾಮವನ್ನು ಕೇಳಬಹುದೇನು?" ಎಂದು ಯುವತಿ ಅನುರಾಗ—ಪೂರ್ವ ದೃಷ್ಟಿಯಿಂದ ಜಯಂತನನ್ನು ನೋಡುತ್ತಾ ಹೇಳಿದಳು.

"ಕ್ಷಮಿಸಿ, ನನ್ನ ಹೆಸರು ಮತ್ತು ಪರಿಚಯ ಕೊಡುವಷ್ಟು ನಾನು ಯೋಗ್ಯನಲ್ಲ." ಎಂದ ಜಯಂತ.

"ನನ್ನ ಜೀವವನ್ನು ಬದುಕಿಸಿದವರ ಹೆಸರು ಕೂಡಾ ತಿಳಿಯಲು ನನ್ನಿಂದಾಗಲಿಲ್ಲ ಎಂಬ ದುಃಖ ನನಗಾಗುತ್ತದೆ."

"ತಾವು ದುಃಖ ಪಡಬೇಕಾಗಿಲ್ಲ. ನನ್ನ ಹೆಸರು ತಿಳಿಯುವುದರಿಂದ ತಮಗೆ ಏನೊಂದೂ ಪ್ರಯೋಜನ ಸಿಗಲಾರದು ..." ಎಂದು ಜಯಂತನು ಹೇಳುತ್ತಿದ್ದಂತೆಯೇ ಆವರಿಗೆ ಇನ್ನೂ ಹಲವಾರು ಅಶ್ವಸವಾರರು ಅಲ್ಲಿಗೆ ಬರುವಂತೆ ಕಂಡಿತು. ಅಷ್ಟರಲ್ಲಿ ಅಲ್ಲಿಗೆ ಮೂವರು ಅಶ್ವಸವಾರರು ಬಂದರು. ಮೂವರೂ ಬಹಳ ಹೆದರಿದ್ದರು. ಅವರು ಯುವತಿಯೊಂದಿಗೆ ಬಂದವರಾಗಿದ್ದರು. ಅವರು ಇಂದು ಬೇರೆ ಬೇರೆಯಾಗಿದ್ದ ಕಾರಣ ತುಂಬಾ ಭಯಭೀತರಾಗಿದ್ದರು. ಬರುತ್ತಲೇ ಒಬ್ಬರು—"ಈಶ್ವರನಿಗೆ ಧನ್ಯವಾದ. ಏಕೆಂದರೆ ತಾವು ಸುರಕ್ಷಿತರಾಗಿದ್ದೀರಿ. ನಡೆಯಿರಿ. ನಾನು ಮೊದಲೇ ಹೇಳಿದ್ದೆ ಈ ಕುದುರೆ ದುಷ್ಟವಾದುದು ಎಂದು."

"ಇವರಿಗೆ ನಾವೆಲ್ಲರೂ ಕೃತಜ್ಞರಾಗಿರಬೇಕು. ಯಾಕೆಂದರೆ ಇವರು ನನ್ನನ್ನು ರಕ್ಷಿಸಿದವರು." ಎಂದು ಜಯಂತನನ್ನು ತೋರಿಸುತ್ತಾ ನುಡಿದಳು ಯುವತಿ.

ಯುವತಿಯ ಮಾತನ್ನು ಕೇಳಿ ಎಲ್ಲರೂ ಜಯಂತನಿಗೆ ಅಭಿವಂದನೆ ಮಾಡಿದರು. ಅವರಲ್ಲೊಬ್ಬನು—"ಈ ಸಮಯ ದೇವದೂತನಂತೆ ಬಂದು ಕುಮಾರಿ ಮಾಯಾವತಿಯ ಜೀವರಕ್ಷಣೆ ಮಾಡಿದ್ದಕ್ಕೆ ನಾವು ನಿಮಗೆ ತುಂಬಾ ಕೃತಜ್ಞರು" ಎಂದ.

"ನಾನು ನನ್ನ ಧರ್ಮಪಾಲನೆ ಮಾಡಿದ್ದೇನೆ. ಆದುದರಿಂದ ನೀವು ಕೃತಜ್ಞರಾಗುವ ಆವಶ್ಯಕತೆಯಿಲ್ಲ" ಎಂದ ಜಯಂತ.

"ನಾನು ನಿಮ್ಮ ಪರಿಚಯವನ್ನು ಕೇಳಬಹುದೇನು?"

"ಇಲ್ಲ. ನನ್ನನ್ನು ಕ್ಷಮಿಸಿ"

"ಒಂದು ವೇಳೆ ನಿಮ್ಮನ್ನು ಭೇಟಿಯಾಗಬೇಕೆಂದು ಆಶಿಸಿದರೆ ನಾವು ಬರಬಹುದೇನು?'

"ಸಾಧ್ಯವೇ ಇಲ್ಲ. ಬರಲೇ ಕೂಡದು' ಎಂದು ಜಯಂತನು ಕುದುರೆಯ ಬೆನ್ನೇರಿ ಎಲ್ಲರಿಗೂ ನಮಸ್ಕರಿಸಿದನು. ಅನಂತರ ತನ್ನ ನೌಕರ ನವಲೇಂದ್ರನೊಂದಿಗೆ ಹೊರಟು ಹೋದನು.

ಜಯಂತನು ಹೋದ ನಂತರ ಎಲ್ಲರೂ ತಮ್ಮ ಕುದುರೆಯ ಬೆನ್ನೇರಿ, ತಾವು ಬಂದ ದಿಕ್ಕಿಗೆ ಹೊರಟರು. ಹೋಗುವಾಗ ಅವರಲ್ಲಿ ಒಬ್ಬನು—"ನಿಮಗೆ ಅವನು ಹೆಸರು ತಿಳಿಸಲಿಲ್ಲವೇನು?" ಎಂದು ಕೇಳಿದನು.

"ಇಲ್ಲ ನಾನು ಬಹಳ ವಿಚಾರಿಸಿದೆ ಆದರೆ ಅವನು ನಕಾರವನ್ನೇ ಹೇಳಿದನು. ಫಲಕಧಾರಿ ಸಿಂಹ, ನಿಮಗಾದರೂ ಈ ಮನುಷ್ಯನ ಪರಿಚಯವಿದೆ ತಾನೇ."

"ಇಲ್ಲ, ಇಂದಿನ ವರೆಗೆ ಕಾಣದ ನಾನು ಇಂದೇ ಆತನನ್ನು ಕಂಡಿದ್ದು. ಆದರೆ ಪ್ರಾಣದಾಸ್‌ಜೀ ಅವನ ಮುಖದಲ್ಲಿ ಎಂತಹ ವೀರತ್ವದ ಮಿನುಗು ವಿರಾಜಮಾನವಾಗಿತ್ತು!"

"ನಾನು ಈ ವರೆಗೆ ಇಂತಹ ಗಂಭೀರ ಪ್ರವೃತ್ತಿಯ ಹಾಗೂ ಸಭ್ಯವ್ಯಕ್ತಿಯನ್ನು ಕಂಡಿಲ್ಲ. ಅವನು ಹೆಸರು ಏಕೆ ತಿಳಿಸಲೊಲ್ಲನೋ ನನಗರಿಯದು."

"ಅವನ ಹೆಸರಿನಲ್ಲಿಯೂ ಯಾವುದೋ ಒಂದು ರಹಸ್ಯವಿರುವ ಸಂಭವವಿದೆ." ಫಲಕಧಾರಿ.

ಇವರಲ್ಲಿ ಬೇರೆ ಬೇರೆ ವಾರ್ತೆಗಳು ಚರ್ಚಿಸಲ್ಪಡುತ್ತಿದ್ದರೂ ರಾಜಕುಮಾರಿ ಆ ವ್ಯಕ್ತಿ ಯಾರು? ಎಂದೇ ಯೋಚಿಸುತ್ತಿದ್ದಳು ಅಂತೂ ತನ್ನ ಬಂಗಲೆಯನ್ನು ಯೋಚನೆಯಲ್ಲಿಯೇ ತಲಪಿದಳು. ಫಲಕಧಾರಿಯು ಅಭಿವಂದನೆ ಮಾಡಿ ತನ್ನ ಮನೆಗೆ ಹೊರಟು ಹೋದನು. ಇತರರು ಕುದುರೆಗಳನ್ನು ನೌಕರರ ಕೈಯ್ಯಲ್ಲಿ ಕೊಟ್ಟು ಬಂಗಲೆಯೊಳಗೆ ನಡೆದರು. ರಾಜಕುಮಾರಿಗೆ ವ್ಯಕ್ತಿಯ ಕುರಿತು ಬಹಳ ಕುತೂಹಲ ಹುಟ್ಟಿದುದರಿಂದ ವಸ್ತ್ರ ಬದಲಾಯಿಸುವ ಮುಂಚೆಯೇ ದಾಮೋದರ ಸ್ವರೂಪರನ್ನು ಬರಹೇಳಿದಳು. ಆತನಾದರೋ ತತ್‌ಕ್ಷಣವೇ ಬಂದನು—"ಇವತ್ತು ಕುದುರೆಯ ದುಷ್ಟತನವೂ ಗೊತ್ತಾಯ್ತು. ಆದರೆ ಈ ದಿನ ನನ್ನ ಜೀವ ರಕ್ಷಣೆಮಾಡಿದ ಮನುಷ್ಯನಾರು? ತಾವು ಅವನನ್ನು ಬಲ್ಲಿರೇ?"

"ಅವನನ್ನು ಕಾಣದೆ ನಾನು ಹೇಗೆ ಹೇಳಬಹುದು. ಅವನ ರೂಪಾಕೃತಿಯನ್ನು ವಿವರಿಸಿರಿ"

"ನೋಡುವಾಗ ಹಾಗೂ ಅವನು ಧರಿಸಿರುವ ವಸ್ತ್ರ ರೀತಿಯಿಂದ ರಜಪೂತನಂತೆ ಕಾಣುವನು. ತೆಳ್ಳಗಿನ ದೇಹದ ಒಳ್ಳೇ ಸುಂದರ ಪುರುಷ. ಮುಷ್ಕಿ ಕುದುರೆಯ ಸವಾರ. ಅವನೊಡನೆ ಮತ್ತೊಬ್ಬ ಯುವಕನಿದ್ದನು. ಅವನು ಸೊಂಟದಲ್ಲಿ ತುಂಬಿದ ರಿವಾಲ್ವರ್ ಇತ್ತು. ಆತನು ನೋಡಲು ಗೂರ್ಖನಂತೆ ಕಂಡುಬರುತ್ತಿದ್ದನು."

"ಹಾಗಾದರೆ ಅವನು ತನ್ನ ಹೆಸರನ್ನು ನಿಮಗೆ ತಿಳಿಸಲಿಲ್ಲ. ಮುಗುಳ್ನಗುತ್ತಾ ದಾಮೋದರನೆಂದನು.

"ಇಲ್ಲ ಹೇಳಲಿಲ್ಲ, ಪ್ರಾಣದಾಸರೂ ತುಂಬಾ ವಿಚಾರಿಸಿದರು ಆದರೂ ಅವನು ಹೇಳಲೊಪ್ಪಲಿಲ್ಲ"

"ಆಗಲಿ, ನಾನು ತಿಳಿಸುತ್ತೇನೆ. ಅವನು ಇಲ್ಲಿಂದ ಸ್ವಲ್ಪ ಮೈಲುಗಳ ದೂರದಲ್ಲಿದ್ದಾನೆ. ಜಯಂತ್ ಪೈಂಟರ್' ಎಂಬ ಹೆಸರಿನಿಂದ ಪ್ರಸಿದ್ಧನಾಗಿದ್ದಾನೆ. ಬಹಳ ಒಳ್ಳೇಯ ಚಿತ್ರಕಾರನಂತೆ.

'ತಾವು ಅವರನ್ನು ಒಳ್ಳೇ ರೀತಿಯಿಂದ ಕೂಲಂಕುಶವಾಗಿ ಬಲ್ಲಿರೇನು?

"ಅಂದರೆ! ನಾನು ತಿಳಿಸಿದ್ದು ಅವನ ಬಾಹ್ಯ ಪರಿಚಯ. ಇವಿಷ್ಟೆ ನನಗರಿದುದು. ವಿನಹ ಬೇರೇನೂ ತಿಳಿಯದು.

'ಒಂದು ವೇಳೆ ನಾನು ಅವನೊಡನೆ ಸಿಗಲು ಅಪೇಕ್ಷಿಸಿದರೆ....!"

"ಸರ್ವಥಾ ಅಸಂಭವ! ಅವನು ಯಾರೊಡನೆಯೂ ಕೂಡಿಕೊಂಡಿರುವುದಿಲ್ಲ. ಅಲ್ಲದೆ ಯಾರಾದರೂ ಅವನಿದ್ದಲ್ಲಿಗೆ ಹೋದರೆ ದುಃಖಿತನಾಗುತ್ತಾನೆ.

"ಇವನು ವಿಚಿತ್ರ ಮನುಷ್ಯನಾಗಿದ್ದಾನೆ" ಎಂದಳು ರಾಜಕುಮಾರಿ.

"ಏನೇ ಇರಲಿ!'

"ಒಳ್ಳೇದು ನೋಡಿಕೊಂಡರೆ ಸರಿ" ಎಂದು ಹೇಳಿ ತಾನು ವಸ್ತ್ರ ಬದಲಿಸಲು ಕೋಣೆಯೊಳಗೆ ಹೋದಳು.

(ಮುಂದುವರಿಯುವುದು)

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4%
5 ,, 12	,,	4¼%
13 ,, 24	,,	4½%

ರೂ. 5,000/- ಮತ್ತು ಮೇಲಣ ಡಿಪೋಸಿಟಿಗೆ ¼% ಜಾಸ್ತಿ ಕೊಡಲಾಗುವುದು.

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಶಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್.

ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಮಕ್ಕಳ ಮಮತೆಯ
'ಬಿಕ್ಕೊ'ರವರ
ಗ್ಲೂಕೋಸ್ ಕೂಡಿದ ಪೆಪ್ಪರ್ ಮಿಠಾಯಿಗಳು ರುಚಿಕರ, ಸೇವನೆಗೆ ಪ್ರಸಿದ್ಧಿಪಟ್ಟವೆ.

Regd. Trade Mark
BICCO

'ಬಿಕ್ಕೊ'ರವರ
ಹಣ್ಣಿನ ಶರಬತ್ತುಗಳು
ಅತಿಥಿಗಳ ಆದರದ ಸತ್ಕಾರಕ್ಕೆ ಅತ್ಯನುಕೂಲ.

ತಯಾರಕರು:
ಭಾರತ್ ಇಂಡಸ್ಟ್ರಿಯಲ್ ಎಂಡ್ ಕ್ಯಾನಿಂಗ್
ಕಂಪೆನಿ ಲಿಮಿಟೆಡ್, ಕಾಪು. ದ. ಕ.

"ನಚಿಕೇತ"ರ
ಇನ್ನೊಂದು ನವೀನ ಕಾದಂಬರಿ—
ಮಣಿ ಯಾತ್ರಿ
ಇದೀಗ ಪ್ರಕಟವಾಗಿದೆ.
ಬೆಲೆ ರೂ. 1-50 ನ. ಪೈಸೆ.
ಮೊದಲು ಪ್ರಕಟವಾದ ಕಾದಂಬರಿ—
ಭಾವಾರ್ಚನೆ
ಬೆಲೆ ರೂ. 1-25 ನ. ಪೈಸೆ.
ಪ್ರತಿಗಳು ಸಿಗುವ ಸ್ಥಳಗಳು:—
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

NAVAYUGA WEEKLY, UDIPI. **REGD. NO.BG. 176**

11—5—1961

LICENSE NO. 31
Licensed to Post without Prepayment

ರೋಚಕ ಪ್ರಸಂಗ:

ಗುರುದೇವರ ರೋಚಕ ಜೀವನ

ಗುರುದೇವರೊಡನೆ ಯಾರೋ ಒಬ್ಬರು ಪ್ರಶ್ನಿಸಿದರು: ತಾವು ಯಾವುದಾದರೊಂದು ಮಹಾಕಾವ್ಯವನ್ನು ಬರೆದರೆ, ಮಹಾಕವಿಯೆನಿಸಬಹುದಲ್ಲ?

ಕವೀಂದ್ರರು ಕಾವ್ಯಮಯ ಭಾಷೆಯಲ್ಲೇ ಉತ್ತರವಿತ್ತರು: ನಾನೊಂದು ಭವ್ಯ ಮಹಾಕಾವ್ಯವನ್ನು ಬರೆಯಬೇಕೆಂದಿದ್ದೆ. ಅದನ್ನು ಲಿಖಿಸುವ ಪ್ರಯತ್ನ ನಡೆಸುವಾಗ, ನನ್ನ ಮಹಾಕಾವ್ಯದ ದೇವಿ ಸರಸ್ವತಿಯ ನೂಪುರಗಳಿಗೆ ತಾಗಿ ಅದು ಖಂಡ ಖಂಡವಾಯಿತು. ಪರಿಣಾಮವಾಗಿ, ಅದು ನೂರಾರು ಗೀತೆಗಳ ರೂಪದಲ್ಲಿ ಚೆಲ್ಲಿ ಹೋಯಿತು.

○ ○

ಸುಪ್ರಸಿದ್ಧ ಕಾದಂಬರಿಕಾರ ಶರಶ್ಚಂದ್ರರು ಸಾಹಿತ್ಯ ಗೋಷ್ಠಿಯೊಂದಕ್ಕೆ ಹೋಗುತಿದ್ದರು. ಜೋಡನ್ನು ಅಲ್ಲಿ ಕದ್ದುಕೊಂಡೊಯ್ಯುವವರೂ ಇರುತ್ತಾರೆ ಎಂದು ಜನರು ಅವರಿಗೆ ಹೇಳಿದರು. ಇದರಿಂದ ಶರಚ್ಚಂದ್ರರು ಗಾಬರಿಯಾದರೂ ಒಂದು ಉಪಾಯ ಹೂಡಿದರು. ಒಂದು ಪತ್ರಿಕೆಯಲ್ಲಿ ಮೆಟ್ಟುಗಳನ್ನು ಕಟ್ಟಿ ತಮ್ಮ ಬಗಲಲ್ಲಿ ಇರಿಸಿಕೊಂಡು ಒಳಹೋದರು. ಇದು ರವೀಂದ್ರನಾಥರಿಗೆ ಹೇಗೋ ಗೊತ್ತಾಯಿತು. ಸಾಹಿತ್ಯ ಗೋಷ್ಠಿಯು ಮುಕ್ತಾಯಗೊಂಡನಂತರ ಶರತ್ ಹೊರ ಬರುತ್ತಿರುವಾಗ ರವೀಂದ್ರರು ಪ್ರಶ್ನಿಸಿದರು— ಬಗಲಲ್ಲಿ ಏನದು ಶರತ್?

ಶರತ್ ತುಸು ಗಡಿಬಿಡಿಯಾದರು. ಇದನ್ನು ಕಂಡ ರವೀಂದ್ರರೇ ಮುಂದರಿಸಿದರು: ಏನೋ ಪುಸ್ತಕವಿರಬೇಕಲ್ಲವೆ?

ಶರತ್ ಹೇಳಿದರು— 'ಹೌದು, ಹೌದು. ಪುಸ್ತಕ.

ಆಗ ರವೀಂದ್ರನಾಥರು ಪುಸ್ತಕದ ಹೆಸರೇನೆಂದು ಕೇಳಿದರು; ಶರತ್ ಕಕ್ಕಾಬಿಕ್ಕಿಯಾದರು. ರವೀಂದ್ರರೇ ಈಗ ಹೇಳಿದರು: 'ಪುಸ್ತಕವನ್ನು ಅಡಗಿಸುವ ಅಗತ್ಯವೇನು? 'ಪಾದುಕಾಪುರಾಣ'ವಲ್ಲವೇನು? ಅದಿಲ್ಲದೆ ಯಾರ ಕೆಲಸವೂ ನಡೆಯದು."

ಇದನ್ನು ಕೇಳಿದ ಶರತ್‌ರಿಂದ ನಗುವುದೂ ಅಸಾಧ್ಯವಾಯಿತು.

○ ○ ○

ಗುರುದೇವರ ಅಂತಿಮ ದರ್ಶನ ಮಾಡುವ ಸೌಭಾಗ್ಯವು ಶ್ರೀ ಬನಾರಸೀದಾಸ ಚತುರ್ವೇದಿಗಳಿಗೆ ದೊರೆತಾಗ ಅವರ ನೇತ್ರಜ್ಯೋತಿಯು ಮಂದವಾಗುತ್ತ ಬಂದಿತ್ತು. ಚತುರ್ವೇದಿಗಳು ಅವರ ಪಾದ ಸ್ಪರ್ಶ ಮಾಡಿದೊಡನೆಯೇ ಗುರುದೇವರೆಂದರು:—ನಿನ್ನ ಎತ್ತರವನ್ನು ಕಂಡೇ ಬನಾರಸೀದಾಸನೆಂದು ತಿಳಿದುಬಿಟ್ಟೆ.

○ ○ ○

ಒಮ್ಮೆ ಒಬ್ಬ ಕವಿಯು ತನ್ನ ಕವಿತೆಗಳ ಪುಸ್ತಕವೊಂದನ್ನು ಗುರುದೇವರಿಗೆ ಕಳಿಸಿದನು. ಮುಖ ಪೃಷ್ಠದ ಮೇಲೆ ಲೇಖಕನ ಹೆಸರಿನ ಮುಂದೆ "ಟಾಗೋರರ ಪ್ರತಿಸ್ಪರ್ಧಿ" ಎಂದು ಬರೆಯಲಾಗಿತ್ತು. ಕವಿಯು ಗುರುದೇವರೊಡನೆ ಇದಕ್ಕಾಗಿ ಅನುಮತಿಯನ್ನೂ ಯಾಚಿಸಿದ್ದನು. ಅದೇನು ಅನುಮತಿಯಿತ್ತರೋ ತಿಳಿಯದು. ಒಂದು ದಿನ ಆಶ್ರಮದಲ್ಲಿ ಒಂದು ಕವಿತೆಯನ್ನು ಹಾಡುತ್ತಿರುವಾಗ, ಹೊರಗಣಿಂದ ನಾಯಿಯೊಂದು ಬೊಗಳುವುದು ಕೇಳಿಸಿತು. ಇದನ್ನು ಕೇಳಿದ ಕವೀಂದ್ರರು "ಮೊದಲು ನನ್ನ ಪ್ರತಿಸ್ಪರ್ಧಿಯ ಮಾತನ್ನು ನಿಲ್ಲಿಸು" ಎಂದು ನೆರೆದ ಸಜ್ಜನರೊಡನೆ ಹೇಳಿದರು.

○ ○

ಗುರುದೇವರಿಗೆ ಮಾವಿನ ಹಣ್ಣುಗಳೆಂದರೆ, ಬಹು ಇಷ್ಟ. ಚೀನದಲ್ಲಿರುವಾಗ ಜನರಿಗಿದು ಗೊತ್ತಾಯಿತು. ಸುದ್ದಿ ನೆಗೆನೆಗೆದು ಫಿಲಿಪ್ಪಾಯಿನ್ ದ್ವೀಪಗಳ ವರೆಗೂ ಹರಡಿತು. ಇಲ್ಲಿಂದ ಒಂದು ತಂತಿ ಬಂತು: ಮಾವಿನ ಹಣ್ಣು ಕಳಿಸುತಿದ್ದೇವೆ; ಹಣಕ್ಕಾಗಿಯಲ್ಲ; ತಿನ್ನುವುದಕ್ಕಾಗಿ.

ಮಾವಿನ ಹಣ್ಣುಗಳು ಕೈಸೇರಿದುವು. ಅತಿ ಆಸೆಯಿಂದ ತಿನ್ನಲು ಕುಳಿತರು. ಅವುಗಳಲ್ಲಿ ಚೂರಿಯಿಂದ ಕತ್ತರಿಸಿ ತಿನ್ನಲಾರದಷ್ಟು ಕತ್ತವಿತ್ತು. ಗುರುದೇವರದನ್ನು ಶಿವಲಿಂಗದಂತೆ ತನ್ನ ಸಮ್ಮುಖದಲ್ಲಿರಿಸಿ ಕರಬದ್ಧ ನಮಸ್ಕಾರ ಮಾಡಿ ಕುಳಿತುಬಿಟ್ಟರು. ಅವರೊಡನೆ ಕೇಳಿದಾಗ, ಅಭಿನಯದೊಡನೆ ಉತ್ತರಿಸಿದರು—ಇವರಿಗೆ ನಮಸ್ಕರಿಸುತಿದ್ದೇನೆ. ಇವರು ನನ್ನ ದೊಡ್ಡಣ್ಣ.

: ಕತ್ತಗಳು ತನ್ನ ಗಡ್ಡಕ್ಕಿಂತಲೂ ಉದ್ದವೆಂಬುದನ್ನಿವರು ಈ ರೀತಿ ವ್ಯಕ್ತಪಡಿಸಿದರು!

○ ○ ○

ಒಂದುಬಾರಿ ಗುರುದೇವರು ಬಹಳ ಜಡ್ಡು ಹಿಡಿದು ಮಲಗಿಬಿಟ್ಟರು. ಕೆಲವು ದಿನಗಳಲ್ಲಿ ಆರೋಗ್ಯ ಸುಧಾರಿಸಿದಾಗ, ತನ್ನ ಸೇವೆ ಮಾಡುತ್ತಿದ್ದ ಒಬ್ಬ ಸಜ್ಜನನೊಡನೆ ಹೇಳಿದರು—ಆನಂದಿತ ರವೀಂದ್ರನಾಥ ರೋಗಪೀಡಿತ ರವೀಂದ್ರನಾಥನನ್ನು ನೋಡುತಿದ್ದಾನೆ!

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. S. 378/60

ನಾರಾಯಣ ಶೆಟ್ಟಿ —ವಾದಿ.

ಪಣನಬ್ಬ ಯಾನೆ ಅಬ್ಬು ಬ್ಯಾರಿ ಸಹಾ —ಪ್ರತಿವಾದಿರು.

ಸಪ್ಲಿಮೆಂಟಲ್ ಪ್ರತಿವಾದಿರು:

8. ಪಮ್ಮಬ್ಬ—ಕಾದ್ರಿ ಬ್ಯಾರಿ ಮಗ—

9. ಮ್ಯಾನರ ಅಬ್ದುಲ್ ಖಾದ್ರಿ, ಪಮ್ಮಬ್ಬನ ಮಗ, ಗಾರ್ಡಿಯನ ತಂದೆ ಪಮ್ಮಬ್ಬ 8ನೇ ಪ್ರತಿವಾದಿ—

ಇವರಿಗೆ ಕೋರ್ಟು ಹುಕ್ಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ತಾರೀಕು 13—5—42ರಲ್ಲು ವಾದಿ ಮತ್ತು ಪಕ್ಕಿ ಬ್ಯಾರಿ ಮಾಡಿಕೊಂಡ ರಜಿಸ್ತ್ರು ನಿಶಿಂ ವ್ಯಾಜ ಗೇಣಚೀಟು ಪ್ರಕಾರ ತಾ 31—3—60ಕ್ಕೆ ಬರತಕ್ಕ ಗೇಣಿ ಬಾಕಿಗೆ ನಿಮ್ಮ ಮೇಲೆ ಕೊಡಾ ಮಾಡಿದ ಮೇಲಿನ ದಾವೆಯನ್ನು ತಾ 9—6—61ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಇಟ್ಟಿರುತ್ತದೆ. ಆ ದಿವಸ ಈ ಕೋರ್ಟಿನ ಮುಂದೆ ಹಾಜರಾಗಿ ಉದಹರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಶಿವ್ವಾ ಮಾಡಿ ಯುಕ್ತಕಂಡಂತೆ ತೀರ್ಮಾನಿಸಲಾದೀತು.

Sd/ M. Sadashiva Rao,
Vakil for Plaintiffs.

ಪುತ್ತೂರು, 9—4—61

ಠೇವಣಾತಿಗಳ ಮೇಲೆ ಅಧಿಕ ಬಡ್ಡಿ

ಸೇವಿಂಗ್ಸ್ ಖಾತೆ
3 %

ಕಾಯಂ ಠೇವಣಾತಿ
5¼ %

ಅಖಿಲ ಭಾರತ ಇಂಟರ್-ಬ್ಯಾಂಕ್ ಒಪ್ಪಂದದ ಮೇರೆಗೆ ಸೇವಿಂಗ್ಸ್ ಖಾತೆಯ ಮೇಲಿನ ಬಡ್ಡಿಯ ದರವನ್ನು 3%ಕ್ಕೆ ಏರಿಸಲಾಗಿದೆ ಎಂದು ತಿಳಿಸಲು ನಮಗೆ ತುಂಬಾ ಸಂತೋಷವಾಗುತ್ತಿದೆ.

ಅಂತೆಯೇ ಕಾಯಂ ಠೇವಣಾತಿಗಳ ಮೇಲೆ ಅತ್ಯಾಕರ್ಷಕ ಬಡ್ಡಿಯನ್ನು ನೀಡಲಾಗುವುದು— 5 ವರುಷ ಅವಧಿಗೆ 5¼% ವರೆಗೆ.

ಹೆಚ್ಚಿನ ವಿವರಗಳಿಗೆ ನಿಮಗೆ ಸಮೀಪವಿರುವ ನಮ್ಮ 141 ಶಾಖೆಗಳಲ್ಲೊಂದರಲ್ಲಿ ವಿಚಾರಿಸಿರಿ.

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್: ಮುಕುಂದ ನಿವಾಸ, ಉಡುಪಿ.

ಸ್ಥಾಪನೆ: 1925.

ಉಡ್ಪಿ ತಾಲೂಕು ನಂಬ್ರ 93ನೇ ಮಜೂರು ಗ್ರಾಮ ಪಂಚಾಯತ್ ಕೋರ್ಟಿನಲ್ಲಿ

ಸಿವಿಲ್ ವ್ಯಾಜ್ಯದ ನಂಬ್ರ **1/1961**

ಲೋಕು ಸೆಟ್ಟಿ, ಇನ್ನಂಜೆ ಗ್ರಾಮದ ಮಜಂಬುನಲ್ಲಿರುವ ಲಿಂಗು ಸೆಟ್ಟಿಯ ಮಗ ಉಡ್ಪಿ ತಾಲೂಕು—ವಾದಿ

1) ಉಡ್ಪಿ ತಾಲೂಕು 93ನೇ ಮಜೂರು ಗ್ರಾಮದ ಗುಂಡು ಸ್ವಾಯ್ಯನ ಮಗ ಕಾಡ್ಸ ನಾಯ್ಕ.

2) ಉಡ್ಪಿ ತಾಲೂಕು 93ನೇ ಮಜೂರು ಗ್ರಾಮದ 1ನೇ ಪ್ರತಿವಾದಿಯ ಹೆಂಡತಿ ನರ್ಸಿ ಹೆಂಗ್ಸು ಎಂಬವರು (ಪ್ರತಿವಾದಿಗಳು).

ಮೇಲ್ಕಾಣಿಸಿದ ದಾವೆಯಲ್ಲಿ ಹೆಸರು ಕಾಣಿಸಿದ ಪ್ರತಿವಾದಿಯರ ಮೇಲೆ ವಾದಿಯು ರೂಪಾಯಿ 98—0—0 (ತೊಂಬತ್ತೆಂಟಕ್ಕೆ) ದಾವಾ ಹೂಡಿರುತ್ತಾರೆ.

1ನೇ ಪ್ರತಿವಾದಿಯು ದಾವಾ ದಾಖಲಿನ ಲಾಗಾಯ್ತು ಊರಿನಲ್ಲಿ ಇಲ್ಲದ ಕಾರಣ ನೋಟೀಸು ಜ್ಯಾರಿ ಬಗ್ಗೆ ಅನಾನುಕೂಲವಾದ ಪ್ರಯುಕ್ತ ಈ ಮೂಲಕ ತಿಳಿಯಪಡಿಸುವುದೇನೆಂದರೆ ಸದ್ರಿ ದಾವೆಯಲ್ಲಿ ಉದಾಹರಣೆ ಕೊಡುವ ಬಗ್ಗೆ ತಾ. 29—6—1961ಕ್ಕೆ ಇಟ್ಟಿರುತ್ತದೆ. ಸದ್ರಿ ದಿವಸ ಹಾಜರಾಗಿ ಉದಾಹರಣೆ ಕೊಡಲು ತಪ್ಪಿದ್ದಲ್ಲಿ ಕೋರ್ಟಿಗೆ ಯುಕ್ತ ಕಂಡ ರೀತಿಯಲ್ಲಿ ತೀರ್ಮಾನಿಸಲಾಗುವುದೆಂದು ಈ ಮೂಲಕ ತಿಳಿಸಲಾಗುತ್ತದೆ.

P. Narayana Shetty,
Chairman.
Majur Village Panchayat Office,
S. K.

ಮಜೂರು, 22—4—1961.

Edited Printed & Published by K. H. Shetty, at the Navayuga Press, Udipi, S. India.

40th year of publication. 18-5-1961 ೪೦ನೇ ವರ್ಷ

ಸಂಪುಟ ೪೧ Vol. 41

ನವಯುಗ

ಸಂಚಿಕೆ ೩೫ No. 35

ಬೆಲೆ 0=13

ಪ್ರಚಲಿತ ಪ್ರಸಂಗ

ಪರ್ವತಾರೋಹಣ ಸಂಸ್ಥೆಗಳು

> ಇಪ್ಪತ್ತೈದು ಸಾವಿರ ಅಡಿಯೆತ್ತರದ ಅನ್ನಪೂರ್ಣಾ ಶಿಖರವನ್ನು ಏರಿದ ಭಾರತೀಯರ ತಂಡವು ಪರ್ವತಾರೋಹಣವೂ ಒಂದು ಅಮೋಘ ಕಲೆಯೆಂದು ತೋರಿಸಿತು. ಭಾರತದಲ್ಲಿ ಪರ್ವತಾರೋಹಣದ ಬಗ್ಗೆ ಶಿಕ್ಷಣ ನೀಡುವ ಮತ್ತು ಆರೋಹಣ ಮಾಡುವ ಸಂಸ್ಥೆಗಳು ಹೆಚ್ಚಾಗಬೇಕು.

ಪಶ್ಚಿಮ ನೇಪಾಳದಲ್ಲಿರುವ ಅನ್ನಪೂರ್ಣಾ ೩ ಎಂಬ ಹಿಮಾಲಯ ಪರ್ವತದ ಶಿಖರವನ್ನು ಭಾರತೀಯ ಪರ್ವತಾರೋಹಿಗಳ ತಂಡವೊಂದು ಏರಿ ಅಪೂರ್ವ ದಾಖಲೆಯನ್ನು ನಿರ್ಮಿಸಿತು. ೨೪,೮೫೮ ಅಡಿ ಎತ್ತರದ ಈ ಶಿಖರಾರೋಹಣದ ಸಾಫಲ್ಯವು ಕಳೆದ ಆರುವರ್ಷಗಳಲ್ಲಿ ಭಾರತದಲ್ಲಿ ಪರ್ವತಾರೋಹಣ ಕಾರ್ಯದಲ್ಲಿ ನಡೆದ ಮತ್ತು ಈಗ ನಡೆಯುತ್ತಿರುವ ಪ್ರಗತಿ ಮತ್ತು ಸಾಹಸಗಳಿಗೆ ಜ್ವಲಂತ ನಿದರ್ಶನವೆನ್ನಬೇಕು. ಕಳೆದವರ್ಷ ಗೌರೀಶಂಕರ ಶಿಖರವನ್ನು ಹತ್ತುವ ಬಗ್ಗೆ ಮಾಡಿದ ಪ್ರಯತ್ನವಾದರೂ ಪರ್ವತಗಳನ್ನು ಹತ್ತುವುದೂ ಒಂದು ಕಲೆ, ಇದನ್ನೂ ಅಭ್ಯಾಸ ಬಲದಿಂದಲೇ ಅರಗಿಸಿಕೊಳ್ಳಬೇಕು ಮತ್ತು ಇದರ ಅಭ್ಯಾಸಕ್ರಮವಾದರೋ ತೀರ ಸರಳವೆಂಬುದನ್ನು ಇದನ್ನು ಕುದೃಷ್ಟಿಯಿಂದ ನೋಡುವಂತಿಲ್ಲವೆಂಬುದನ್ನು ತೋರಿಸಿ ಕೊಟ್ಟಿತು. ಅಂದು ಅಭಿವೃದ್ಧಿಯ ಒಂದು ಮೆಟ್ಟಿಲನ್ನು ಭಾರತವು ಏರಿದ್ದರೆ, ಅನ್ನಪೂರ್ಣಾದ ಯಶಸ್ವೀ ಆರೋಹಣವು ಮತ್ತೊಂದು ಹೆಜ್ಜೆ ಮೇಲೇರಿಸಿದೆ. ವಿರುದ್ಧ ಭಾರತೀಯ ಪರ್ವತಾರೋಹಿತಂಡದ ನಾಯಕ ಲೇ|| ಕೊಹಿಲಿ ಮತ್ತವರ ಸಂಗಡಿಗರು ಅಸಾಧ್ಯ ಶಿಖರದಲ್ಲಿ ತಮ್ಮ ಧೈರ್ಯ ಮತ್ತು ಸಾಹಸಗಳ ಬಲದಿಂದ ಕೆಚ್ಚೆದೆಯ ಕಲಿಗಳಾಗಿ ಭಾರತೀಯರಲ್ಲೂ ಪರ್ವತಾರೋಹಣದ ಆಸಕ್ತಿಯಿದೆ; ತಮ್ಮ ಕಾರ್ಯದಲ್ಲಿ ಸಫಲತೆ ಪಡೆಯುವ ಕಸುವಿದೆಯೆಂಬುದನ್ನು ಪ್ರಪಂಚಕ್ಕೆ ತೋರಿಸಿ ಕೊಟ್ಟಿದ್ದಾರೆ; ನಮ್ಮ ಪರ್ವತಾರೋಹಿಗಳಿಗೆ ಸಮುನ್ನತ ಸಂಪ್ರದಾಯವನ್ನು ಹಾಕಿ ಕೊಟ್ಟಿದ್ದಾರೆ.

ತಂಡದ ನಾಯಕ ಕೊಹಿಲಿಯವರು ಈ ಸಫಲತೆಗಳಿಸಿದ ಕೀರ್ತಿಗೆ ಪಾತ್ರರಾದರೂ ಈ ಆರೋಹಣ ಕಾರ್ಯವನ್ನು ವ್ಯವಸ್ಥೆಗೊಳಿಸಿದ ಹಿಮಾಲಯನ್ ಇನ್ಸ್ಟಿಟ್ಯೂಟ್ ಕೂಡ ಅಭಿನಂದನಾರ್ಹವಾಗಿದೆ. ಪರ್ವತಗಳನ್ನು ಹತ್ತುವುದಕ್ಕೆ ಪ್ರೋತ್ಸಾಹ ನೀಡುವಂತೆ ಈ ಸಂಸ್ಥೆಯು ದೇಶದ ಬೇರೆ ಬೇರೆ ಕಡೆಗಳಿಗೆ ಶಿಕ್ಷಕ ವರ್ಗವನ್ನು ಕಳುಹಿಸುತ್ತ ತನ್ನ ಕಾರ್ಯಕ್ಷೇತ್ರವನ್ನು ದಿನೇ ದಿನೇ ವಿಸ್ತರಿಸುತ್ತಿರುವುದು ಶುಭದಾಯಕವಿದೆ. ಆಸೇತು ಹಿಮಾಚಲ ಹರಡಿರುವ ಪರ್ವತಾವಳಿಗಳಲ್ಲಿ ಸಾವಿರಾರು ಶಿಖರಗಳಿದ್ದು ಅವನ್ನು ಏರುವ ಅವಕಾಶವು ಪ್ರತಿಯೊಬ್ಬ ಭಾರತೀಯನಿಗೂ ಲಭ್ಯವಿದೆ. ದೊರೆತ ಈ ಸದವಕಾಶವನ್ನು ಸದುಪಯೋಗಪಡಿಸಿಕೊಳ್ಳುವುದು ನಮ್ಮ ಪಾಲಿಗೆ ಸೇರಿದೆ.

ಪರ್ವತಾರೋಹಣವೊಂದು ಸಾಹಸದ ಕಾರ್ಯ. ಇದನ್ನು ದುರ್ಬಲ ಹೃದಯರು ಮಾಡುವುದು ಸಾಧ್ಯವಿಲ್ಲ, ಸೃಷ್ಟಿಯ ವಿಚಿತ್ರ ಸೌಂದರ್ಯವನ್ನು, ಅದ್ಭುತ ಅಸ್ತಿತ್ವವನ್ನು ನಾವು ತಿಳಿದುಕೊಳ್ಳುವುದರಿಂದ ಮನಸ್ಸು ಪ್ರಸನ್ನವಾಗುವುದು; ಹೃದಯ ತಂಪಾಗುವುದು. ದೊಡ್ಡ ದೊಡ್ಡ ಬಂಡೆಕಲ್ಲುಗಳನ್ನು ಹತ್ತುವಾಗ ಪ್ರಯಾಸವೆನಿಸಿದರೂ ನಮ್ಮ ಉದ್ದೇಶವು ಈಡೇರಿತೆಂದರೆ, ಅದರ ಮೇಲೆ ಆರಾಮವಾಗಿ ಮಂಡಿಸಿ ನಾಲ್ಕೂನಿಟ್ಟಿಗೆ ದೃಷ್ಟಿ ಹಾಯಿಸಿದಾಗ, ಕಂಪು ಹೊತ್ತು ತಂಪಾಗಿ ಬೀಸುವ ಗಾಳಿಗೆ ಮೆಯ್ಯೊಡ್ಡಿದ್ದಾಗ ಅನುಭವಿಸುವ ಆನಂದ ಬ್ರಹ್ಮಾನಂದಕ್ಕೇನೂ ಕಡಿಮೆಯದಲ್ಲ. ಅಲ್ಲದೇ ಪರ್ವತಾರೋಹಣದ ವೇಳೆ ಅತೀವ ಜಾಗ್ರತೆಯುಳ್ಳಿರಬೇಕಾಗುವುದರಿಂದ ಏಕಾಗ್ರತೆಯ ಪಾಠವೂ ನಮಗೆ ದೊರೆಯುವುದು; ಕ್ರಮಬದ್ಧತೆ, ಪರಿಶ್ರಮ ಶೀಲತೆಯ ಉಪಯುಕ್ತತೆಯ ಅರಿವಾಗುವುದು. ಜೀವನದ ಕಷ್ಟ — ನಷ್ಟಗಳನ್ನು ಬದಿಗಿಟ್ಟು ಒಂದಲ್ಪಕಾಲ ತನ್ನನ್ನೇ ತಾನು ಮರೆತು ಪ್ರಕೃತಿಯ ವಿಶಾಲೋದರದಲ್ಲಿ ವಿಲೀನ ಹೊಂದುವ ಸಂದರ್ಭ ನಮಗೆ ದೊರೆಯುವುದು.

ಸಾಹಸ ಕೃತ್ಯಗಳನ್ನು ಮೆಚ್ಚುವವರು ಇಂತಹ ಆರೋಹಣ ಕೂಟಗಳನ್ನು ರಚಿಸಿಕೊಳ್ಳಬಹುದು. ಈ ಬಗೆಯ ಕೂಟಗಳು ಭಾರತದ ತುಂಬ ಸ್ಥಾಪಿತವಾಗಬೇಕು. ಇವಕ್ಕೆ ಬೇಕಾದ ತಾಂತ್ರಿಕ ಮಾರ್ಗದರ್ಶನವನ್ನು ಮಾಡುವುದಕ್ಕೆ ಹಿಮಾಲಯನ್ ಇನ್ಸ್ಟಿಟ್ಯೂಟ್ ಸದಾ ಸಿದ್ಧವಿದೆ. ಕೆಲವು ಸಮಯದ ಹಿಂದೆ ಕೇರಳ ಸ್ಪೋರ್ಟ್ಸ್ ಕೌನ್ಸಿಲ್ ಆರೋಹಣ ಸಂಬಂಧದಲ್ಲಿ ಎರಡು ವಾರಗಳ ತರಬೇತಿಯ ಕಾರ್ಯಕ್ರಮವನ್ನಿಟ್ಟು ಕೊಂಡಿತ್ತು. ಹಿಮಾಲಯನ್ ಇನ್ಸ್ಟಿಟ್ಯೂಟಿನ ಪರವಾಗಿ ಇಬ್ಬರು ಶೇರ್ಪಾ ಜನಾಂಗದ ಆರೋಹಕ ವಿದ್ಯಾತಜ್ಞರು ಇದರಲ್ಲಿ ಭಾಗವಹಿಸಿದ್ದರು. ಕೇರಳದ ಈ ಸಂಸ್ಥೆಯ ಸಾಧನೆಯು ದೇಶದ ಉಳಿದ ಭಾಗಗಳಿಗೂ ಮಾರ್ಗದರ್ಶನವಾಗುವಂತಾಗಬೇಕು.

ಗೌರೀಶಂಕರದ ಆರೋಹಣದ ಬಗ್ಗೆ ತೊಡಗಿದ್ದ ಭಾರತೀಯ ಪರ್ವತಾರೋಹಿಗಳ ನಾಯಕ ಬ್ರಿಗೇಡಿಯರ್ ಜ್ಞಾನಸಿಂಘರು ವಿಶ್ವವಿದ್ಯಾಲಯಗಳಲ್ಲಿ ಪರ್ವತಾರೋಹಣ ಕ್ಲಬ್‌ಗಳು ನಿರ್ಮಾಣಗೊಳ್ಳುವಂತಾಗಬೇಕೆಂದು ಕೆಲವು ಸಮಯಕ್ಕೆ ಮೊದಲು ಅಭಿಪ್ರಾಯ ಪಟ್ಟಿದ್ದರು. ನಮ್ಮ ವಿಶ್ವವಿದ್ಯಾಲಯ ಮತ್ತು ಇತರ ಶೈಕ್ಷಣಿಕ ಸಂಸ್ಥೆಗಳು ಅಂಗೀಕರಿಸಬಹುದಾದ ಸಲಹೆಯಿದು. ಕೇವಲ ಆಟ ಓಟಗಳಲ್ಲಿಯೇ ತೃಪ್ತಿಪಟ್ಟುಕೊಳ್ಳುವುದು ಸರಿಯಲ್ಲ. ಆಟ-ಓಟಗಳಿಂದ ಕಲಿಯಬಹುದಾದುದಕ್ಕಿಂತಲೂ ನಮಗೆ ಆರೋಹಣ ವಿದ್ಯೆಯಿಂದ ತಿಳಿದುಕೊಳ್ಳಬಹುದಾದ ವಿಷಯಗಳು ಅನೇಕವಿವೆ. ವಿವಿಧ ರೀತಿಯ ಆಟಗಳಿಂದ ಮುಖ್ಯವಾಗಿ ದೈಹಿಕ ಚಟುವಟಿಕೆಗಳಿಗೆ ಮಾತ್ರ ಅವಕಾಶ ದೊರೆತಂತಾಗುವುದು. ಆದರೆ, ಶಿಖರಾರೋಹಣದಿಂದ ಶರೀರದ ಸಕಲ ಬಾಹ್ಯಾಂಗಗಳಿಗೆ ಮಾತ್ರವಲ್ಲ ಅಂತರಂಗಗಳಿಗೂ ಒಂದು ಬಗೆಯ ವ್ಯಾಯಾಮ—ಆನಂದ ಲಭಿಸುವುದು. ಮನಸ್ಸು ಕ್ರಮಬದ್ಧತೆಯನ್ನು ಅನುಸರಿಸಲೇ ಬೇಕಾಗುವುದು. ಆರೋಹಕನು ಪೃಥ್ವಿಯಿಂದ ಎತ್ತರದ ಶಿಖರವನ್ನು ಹತ್ತಿದನೆಂದರೆ ತಾನೊಂದು ಅಮರ ಸಾಧನೆಯನ್ನು ಮಾಡಿದ ತೃಪ್ತಿಯ ನೆಲೆ ಆತನಲ್ಲಿ ಮೂಡುವುದು; ತನ್ನಲ್ಲಿ ಆತ್ಮವಿಶ್ವಾಸವು ಬೆಳೆಯುವುದಕ್ಕೆ ಅವಕಾಶ ಸಿಗುವುದು. ಮಾನವನ ಸಾಧನೆಯ ಬಗ್ಗೆ ಆಸಕ್ತಿ ಹುಟ್ಟುವುದು. ದೈಹಿಕ ಹಾಗೂ ಮಾನಸಿಕ ಬಲ ಸಮೃದ್ಧವಾಗುವುದು.

ನಮ್ಮ ಯುವ ಜನಾಂಗವು ಕೇವಲ ಆಟ ಓಟಗಳಲ್ಲಿಯೇ ತೃಪ್ತಿಪಟ್ಟುಕೊಳ್ಳದೆ ಅಲ್ಲಲ್ಲಿ ಚಿಕ್ಕ ಪುಟ್ಟ ಆರೋಹಕ ಸಂಸ್ಥೆಗಳನ್ನು ಸ್ಥಾಪಿಸಿಕೊಳ್ಳುವುದು ಮತ್ತು ಅವಕಾಶ ಕೂಡಿ ಬಂದಾಗ ತಮಗೆ ಸಮೀಪವಿರುವ ಬೆಟ್ಟಗಳನ್ನೋ ಬಂಡೆಗಳನ್ನೋ ಹತ್ತುವುದರಲ್ಲಿ ತೊಡಗುವುದು ಅಪೇಕ್ಷಣೀಯವಿದೆ. ಪ್ರಕೃತಿಯ ನಿಜಸ್ಥಿತಿಯನ್ನು ಅದರ ನೈಜ ಸೌಂದರ್ಯವನ್ನು ಭೂಮಿಯ ಕೆಳಗೆ ನಿಂತು ನೋಡಿದರೆ ಸಾಲದು; ಭೂಮಿ ತಳದಿಂದ ಮೇಲೇರಿ ಅಲ್ಲಿಂದ ಕೆಳಗೆ ನೋಡಬೇಕು. ಆಗ ಕಾಣುವ ದೃಶ್ಯ ರುದ್ರ ಗಂಭೀರವೆನಿಸಿದರೂ ಪ್ರಕೃತಿಯ ವಿರಾಟಾಕಾರ ದರ್ಶನವಾಗುತ್ತದೆ. ಪರಮಾತ್ಮನ ಸಾಕ್ಷಾತ್ಕಾರವಾದ ಆನಂದವೇ ಆಗ ನಮ್ಮ ಪಾಲಿಗೆ ಬರುತ್ತದೆ.

ಗುಲಾಮ ಪದ್ಧತಿಯನ್ನು ಕಿತ್ತೊಗೆಯಲು ಬದ್ಧಕಂಕಣರಾದ ಅಮೆರಿಕನ್ ಅಧ್ಯಕ್ಷ ಅಬ್ರಾಹಂ ಲಿಂಕನ್ನರ ಮೂರ್ತಿಯೊಡನೆ ಅವರ ಜೀವನ ಚರಿತ್ರೆ ಬರೆದ ಕವಿ ಸಾಂಡ್‌ಬರ್ಗ್ ನಿಂತಿರುವುದನ್ನು ಇಲ್ಲಿ ಕಾಣಬಹುದು.

ESTD. 1921

NAVAYUGA
KANNADA WEEKLY,
UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೨೧.

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್.
ಬಿ. ಶಾಮರಾಯ ಶೆಟ್ಟಿ, ಬಿ. ಎ., ಎಲ್. ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

●

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್) ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್) ಕಲಂ ಇಂಚಿಗೆ ರೂ. 3-50
ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಧಾರಾವಾಹಿ ಕಾದಂಬರಿ

ಯಮುನ ನೆರಳು

ಮೂಲ ಲೇಖಕರು: **ಶ್ರೀ ಎಂ. ಎಲ್. ಪಾಂಡೇಯ.**
ಅನುವಾದಕರು: **ಶ್ರೀ ಎಸ್. ಎಂ. ಶೆಟ್ಟಿ, ಶಿವಮುಂಜೆ ಪೆರಾರ.**

(ಕಳೆದ ಸಂಚಿಕೆಯಿಂದ)

— ೪ —

ರಾಣಿ ಇಲಾವತಿ ತನ್ನ ಕೋಣೆಯಲ್ಲಿ ಕುಳಿತುಕೊಂಡು ಏನೋ ಯೋಚನಾಕ್ರಾಂತಳಾಗಿದ್ದಳು. ಅಷ್ಟರಲ್ಲಿ ನೌಕರನು ಬೆಳ್ಳಿಯ ತಟ್ಟೆಯಲ್ಲಿ ಯಾರದೋ ಬೇಟಿಗೆ ಬಂದವರ ವಿಸಿಟಿಂಗ್ ಕಾರ್ಡ್ ತಂದೊಪ್ಪಿಸಿದನು. ಓದಿಕೊಂಡನಂತರ ರಾಣಿಯು ಅವರನ್ನು ಒಳ ಕರೆತರುವಂತೆ ತಿಳಿಸಿದಳು. ಸ್ವಲ್ಪವೇ ಸಮಯದಲ್ಲಿ ಆತ್ಮರಾಮ ಹಾಗೂ ರಾಮಸಿಂಹರು ಕೋಣೆಯನ್ನು ಪ್ರವೇಶಿಸಿದರು. ಇಬ್ಬರೂ ಆದರ ಪೂರ್ವಕವಾಗಿ ರಾಣಿಗೆ ನಮಸ್ಕರಿಸಿ, ರಾಣಿಯು ಆರಾಮ ಸಂಕೇತದಂತೆ ಕುರ್ಚಿಯ ಮೇಲೆ ಕುಳಿತರು.

"ಏನು ಬರೋಣವಾಯ್ತು" ರಾಣಿಯು ಪ್ರಶ್ನಿಸಿದಳು.

"ಶ್ರೀ ದಲಿತಸಿಂಹರು ನೀವಿದ್ದೆಡೆಗೆ ಹೋಗ ಹೇಳಿದರು"

"ಯಾಕೆ? ಕಾರಣವಾದರೂ ಏನು? ವಿಸ್ಮಿತಳಾಗಿ ಕೇಳಿದಳು ರಾಣಿ.

"ಹುಜೂರ್ ನಿಮಗೆ ಬ್ಯಾಂಕಿನ ಸದ್ಯದ ಸ್ಥಿತಿ ತಿಳಿದಿದೆ" ಎಂದ ಆತ್ಮರಾಮ.

"ಮೈಲ್‌ನಲ್ಲಿ ಕಳುಹಿಸಿದ್ದ ಹಣಕ್ಕೆ ಡಕಾಯಿತರು ಬಿದ್ದು ಅಪಹರಿಸಿದರು. ಆದರಲ್ಲಿ ಹಣದ ಬದಲು ರುಂಡವಿಲ್ಲದ ಶವವು ಸಿಕ್ಕಿದ್ದು ಆಶ್ಚರ್ಯವಾಗಿದೆ. ಬ್ಯಾಂಕಿನ ನಾಲ್ಕು ಲಕ್ಷ ರೂಪಾಯಿಗಳು ಈ ರೀತಿಯಾಗಿ ಅಪಹರಿಸಲ್ಪಟ್ಟವು. ಬ್ರಾಂಚ್‌ಗಳಿಗೆ ಹೆಡ್ ಆಫೀಸಿನಿಂದ ಕಳುಹಿಸಿದ ಹಣದ ಬದಲು ಶವ ಸಿಕ್ಕಿ ಹಣ ಕಾಣದಾಗುವ ವಿಷಯ ನಿಜವಾಗಿಯೂ ವಿಪರೀತವಾಗಿದೆ. ಹಾಗೂ ವಿಚಿತ್ರವಾಗಿದೆ. ಈ ದರೋಡೆಯ ಬಗ್ಗೆ ತಾವು ಸಮಾಚಾರ ಪತ್ರಿಕೆಗಳಿಂದ ಅರಿತಿರಬಹುದು."

"ಹಾಂ, ಅದೆಲ್ಲಾ ನನಗೆ ಗೊತ್ತು." ಎಂದಳು ರಾಣಿ.

"ಹೂಂ ಎಂದ ರಾಮಸಿಂಹ" ನಿಜವಾಗಿಯೂ ಈ ದರೋಡೆಯಿಂದಾಗಿ ದಲಿತಸಿಂಹರ ಬೆನ್ನೆಲುಬೆ ಮುರಿದಂತಾಗಿದೆ. ಎಲ್ಲಿಂದಲೂ ಬೇಗ ಹಣಸಿಕ್ಕುವ ಆಶೆ ಇಲ್ಲ. ಬೇಗನೇ ಹಣ ಸಿಗದಿದ್ದರೆ ಬೇಂಕು ಫೇಲಾಗುವುದರಲ್ಲಿ ಸಂದೇಹವಿಲ್ಲ. ತಾವು ಬೇಂಕಿನ ಚೆಯರ್‌ಮೇನ್ ಆಗಿದ್ದೀರಿ ಆದುದರಿಂದ ಮೆನೇಜಿಂಗ್ ಡೈರೆಕ್ಟರ್‌ರವರು ತಮ್ಮತ್ತ ನಮ್ಮನ್ನು ಕಳುಹಿಸಿದ್ದಾರೆ. ಈ ಸಂದರ್ಭದಲ್ಲಿ ತಾವೇ ಸ್ವಲ್ಪ ಆರ್ಥಿಕ ನೆರವನ್ನೀಯಬೇಕಾಗಿದೆ. ನಾವೆಲ್ಲರೂ ಕೂಡಿ ಬೇಂಕು ಫೇಲಾಗುವುದನ್ನು ತಪ್ಪಿಸಬೇಕಾಗಿದೆ. ನಿಮ್ಮಿಂದ ಸಿಕ್ಕಿದ ಆರ್ಥಿಕ ನೆರವನ್ನು ಸಾಲರೂಪವಾಗಿ ಬೇಂಕು ಸ್ವೀಕರಿಸುತ್ತದೆ. ನಿಮ್ಮ ಸಾಲವನ್ನು ಶೀಘ್ರತೆಯಿಂದ ತೀರಿಸುವ ಆಶೆಯೂ ಇದೆ."

"ನನಗೆ ಬಹಳ ದುಃಖವಾಗುತ್ತದೆ. ನಾನು ನಿಮಗೆ ಸಹಾಯಮಾಡಲು ಅಸಮರ್ಥಳು. ನನ್ನ ಹತ್ತಿರ ಹಣವೇನೋ ಇದೆ. ಆದರೆ ವೆಚ್ಚ ಮಾತ್ರ ಬಹಳವಾಗಿದೆ."

"ಹಾಗಾದರೆ ನಾವು ನಿರಾಶರಾಗಿ ಹಿಂತಿರಳಬೇಕಾಗುತ್ತದೆ" ರಾಮಸಿಂಹನೆಂದ.

"ಪ್ರಸ್ತುತ ಸ್ಥಿತಿಯೇ ಹಾಗಿದೆ" ಎಂದಳು ರಾಣಿ.

"ಒಳ್ಳೆದು" ಎಂದು ರಾಮಸಿಂಹ, ಆತ್ಮರಾಮರು ರಾಣಿಗೆ ವಂದಿಸಿ ಹೊರಹೊರಟರು. ದಾರಿಯಲ್ಲಿ ಆತ್ಮರಾಮನೊಡನೆ —"ನೋಡಿದೆಯೇನು ರಾಣಿಯವರ ಉತ್ತರ. ನಾನು ಮೊದಲೇ ದಲಿತಸಿಂಹರಿಗೆ ಹೇಳಿದೆ. ಅವರು ಕೇಳಲಿಲ್ಲ. ರಾಣಿಯೇ ಏನು? ಯಾರೂ ಸಹ ಈ ಬೇಂಕಿನ ಸ್ಥಿತಿಯನ್ನು ಅರಿತವರು ಸಾಲಕೊಡಬಹುದೇನ? ಅಂತೂ ಇಲ್ಲಿಗೆ ಬಂದು ಮುಖ ಸಪ್ಪಗೆ ಮಾಡಿಕೊಂಡು ಹೋಗುವಂತಾಯ್ತು."

"ಇನ್ನೂ ಈ ಕೆಲಸ ಏನು ಮಾಡಿದರೂ ಪೂರ್ತಿಯಾಗುವಂತಿಲ್ಲ. ಹಾಂ ಆದರೆ ಎಲ್ಲಿಯಾದರೂ ಫಲಕಾರಿಯ ಕಾರ್ಯ ಕೌಶಲ್ಯದಿಂದ, ಆವನೇನು ಮಾಡಬಲ್ಲನೆಂದು ನೋಡುವ" ಅಂದ ಆತ್ಮರಾಮ.

"ಇರಲಿರಲಿ, ನಿಮ್ಮ ಯುಕ್ತಿಯು ಭಂಡಾರ. ರಾಣಿಯು ನಕಾರ ಉತ್ತರ ಕೊಟ್ಟ ನಂತರ ಮಗಳು ಎಲ್ಲಿಂದ ಹಣ ತರಲು ಸಾಧ್ಯ? ಈ ದಲಿತ ಸಿಂಹರು ಎಲ್ಲಿಂದ ನಿಷ್ಪ್ರಯೋಜಕ ಯುಕ್ತಿ ಭಂಡಾರ ತರುತ್ತಾರೋ? ದೇವರೇ ಬಲ್ಲ." ಎಂದು ಅನ್ಯ ಮನಸ್ಕನಾಗಿ ನುಡಿದ ರಾಮಸಿಂಹ.

"ಆದರೆ ನಾವು ಮೊದಲೇ ಒಂದು ನಿಸ್ಕರ್ಷೆ ಮಾಡಲು ಹೇಗೆ ಸಾಧ್ಯ?"

"ಒಳ್ಳೆಯದಷ್ಟು ಹೊಸ ಯುಕ್ತಿಯನ್ನು ಮಾಡಿನೋಡಿ" ರಾಮಸಿಂಹನೆಂದ.

ಈರ್ವರೂ ಬಸ್ಸಿನಲ್ಲಿ ಕುಳಿತು ದಲಿತಸಿಂಹನ ಬಂಗಲೆಯನ್ನು ತಲಪಿದರು. ಇವರನ್ನು ನೋಡುತ್ತಲೇ ದಲಿತ ಸಿಂಹರು —"ಏನಾಯ್ತು ಹೋದ ಕೆಲಸ" ಎಂದರು.

"ಆಗುವುದೇನು ಮಣ್ಣು, ನಾನು ಮೊದಲೇ ಹೇಳಿದಂತಾಯ್ತು. ಅಲ್ಲಿಗೆ ಹೋಗಿ ಮಾತನಾಡಿದುದರಿಂದ ನಮ್ಮ ಮಾತೂ ಹಾಳಾಯ್ತು." ರಾಮಸಿಂಹ ಉತ್ತರಿಸಿದ.

"ಈಗೇನು ಮಾಡುವುದು" ಅಂದರು ದಲಿತಸಿಂಹರು. ಅವರ ಮುಖದಲ್ಲಿ ಉದಾಸೀನತೆಯ ಹಾಗೂ ಚಿಂತೆಯ ರೇಖೆಗಳು ಸ್ಪಷ್ಟವಾಗಿ ಕಂಡುಬರುತಿದ್ದವು.

"ಈಗ ನಾನು ಹೇಳಿದಂತೆ ತಾವು ಮಾಡಿನೋಡಿರಿ" ಎಂದ ರಾಮಸಿಂಹ.

"ಇರಲಿ, ರಾಣಿ ಏನು ಹೇಳಿದಳು?"

"ಹೇಳುವುದೇನು? ಅವಳ ದೃಷ್ಟಿಯು ಮಾಯಾವತಿಯ ಲಗ್ನದ ಕಡೆಗಿದೆ. ಅವಳ ವಿವಾಹ ಮುಗಿಯುವ ವರೆಗೆ ಅವಳೇನೂ ಮಾಡಲಾರಳು." ಎಂದ ಆತ್ಮರಾಮ.

"ಹೂಂ, ನೀವು ಶಾಂತಚಿತ್ತರಾಗಿರಿ. ನಾನು ಹೇಗೆ ಲಗ್ನವಾಗುತ್ತದೆಯೆಂಬುದನ್ನು ನೋಡಿಕೊಳ್ಳುತ್ತೇನೆ" ಎಂದ ರಾಮಸಿಂಹ.

"ನಾನು ನಿಮ್ಮ ಮಾತನ್ನು ಒಪ್ಪಿಕೊಳ್ಳುತ್ತೇನೆ" ಎಂದು ರಾಮಸಿಂಹರಿಗೆ ಉತ್ತರ ಕೊಟ್ಟು ಆತ್ಮರಾಮನ ಕಡೆಗೆ ತಿರುಗಿ "ಹಾಂ ಆತ್ಮರಾಮ, ನೀನು ನಿನ್ನ ಕಾರ್ಯವನ್ನು ಮರೆಯಬೇಡ" ಎಂದನು.

"ನನ್ನ ಬಗ್ಗೆ ನೀವು ನಿಶ್ಚಿಂತೆಯಿಂದಿರಿ" ಎಂದುತ್ತರವಿತ್ತ ಆತ್ಮರಾಮ.

"ಈಗ ತಂಬಾ ಹೊತ್ತಾಯ್ತು. ನಾನು ಹೋಗುತ್ತೇನೆ. ನಾಳೆ ಪುನಃ ಸಿಗು

(೧೧ನೇ ಪುಟ ನೋಡಿರಿ)

ಸ್ಥಾಪನೆ: 1924

ದಿ ಕರ್ನಾಟಕ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ರಿಜಿಸ್ಟರ್ಡ್ & ಹೆಡ್ ಆಫೀಸು: **ಡೊಂಗರಕೇರಿ, ಮಂಗಳೂರು—3.**

ಈ ಕೆಳಗಿನ ಏರಿಸಿದ ಬಡ್ಡಿದರಗಳಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು.

ಒಂದರಿಂದ ಎರಡು ತಿಂಗಳುಗಳ ವರೆಗೆ	....	ಸಾ|| ಸೇಕಡಾ	3-75	ನ.ಪೈಸೆ
ಮೂರರಿಂದ ಐದು ತಿಂಗಳುಗಳ ವರೆಗೆ	....	,,	4-25	,,
ಆರು ತಿಂಗಳುಗಳಿಂದ 12 ತಿಂಗಳುಗಳ ವರೆಗೆ	....	,,	4 50	,,
12 ತಿಂಗಳು ಮಿಕ್ಕಿ 24 ತಿಂಗಳುಗಳ ವರೆಗೆ	....	,,	4-75	,,
24 ತಿಂಗಳು ಮಿಕ್ಕಿ 48 ತಿಂಗಳುಗಳ ವರೆಗೆ	....	,,	5-00	,,
48 ತಿಂಗಳುಗಳಿಗೆ ಮಿಕ್ಕಿ	....	,,	5-25	,,

ಸೇವಿಂಗ್ಸ್ ಬ್ಯಾಂಕ್ ಬಡ್ಡಿ ದರವನ್ನು
ಸಾ. ಸೇಕಡ 2½% ರಿಂದ 3¼%ಗೆ ಏರಿಸಲಾಗಿದೆ.

THE KARNATAKA BANK LIMITED.



ಹೃದಯಕ್ಕೆ ಬೆಳಕು:

ಆತ್ಮೋದ್ಧಾರ ಮತ್ತು ಸೇವಾಜೀವನ

ಪುಣ್ಯ ಪಾಪಗಳೆಂಬುವು ಈ ಪ್ರಪಂಚದಿಂದ ಹೊರತಾಗಿಲ್ಲ. ಪ್ರಗತಿಗೆ ಅಡ್ಡಿಯಾಗುವುದೇ ಪಾಪ, ಅಭಿವೃದ್ಧಿಗೆ ಪೂರಕವೆನಿಸುವುದೇ ಪುಣ್ಯ. ಇದನ್ನು ಎಲ್ಲರೂ ಅನುಷ್ಠಾನಕ್ಕೆ ತರಲೆತ್ನಿಸುವುದೇ ಆತ್ಮೋದ್ಧಾರಕ್ಕೆ ಸಾಧನವಾದ ಅನಂತ ಸೇವೆ.

"ರಂಜನೆ", ಬೆಂಗಳೂರು.

ಲೋಕದಲ್ಲಿ ಹುಟ್ಟು ಸಾವುಗಳ ಅಂಜಿಕೆಯಂಥ ಬೇರೊಂದು ಅಂಜಿಕೆ ಯಾರಲ್ಲೂ ಇಲ್ಲ. ಆದರೆ ಇದು ಕೇವಲ ದೇಹಕ್ಕೇ ಹೊರತು ಆತ್ಮಕ್ಕಲ್ಲ ಎನ್ನುವುದು ಸೂಕ್ಷ್ಮವಾಗಿ ನೋಡಿದರೆ ಮಾತ್ರ ಅರಿಯಬಹುದಿದೆ.

ಆತ್ಮನು ಚೇತನ ಹಾಗು ಅವಿನಾಶನು. ದೇಹದಿಂದ ಮೊದಲುಗೊಂಡು ನಿದ್ದೆಯ ವರೆಗಿನ ಯಾವ ವಸ್ತುವೂ ಆತ್ಮನಲ್ಲ. ಮನುಷ್ಯ ಬುದ್ಧಿಯ ತಿಳಿವು ಪಡೆದು ತನ್ನ ಮನಸ್ಸಿನ ಒಳಗಡೆ ನೋಡಿದಾಗ ಆತನಿಗೆ ಪ್ರತಿಬಿಂಬಿಸುವುದೇ ಆತ್ಮ.

ಪ್ರತಿಯೊಬ್ಬನಲ್ಲೂ ಆತ್ಮವಿದೆ ಎಂದು ಆಧ್ಯಾತ್ಮದಲ್ಲಿ ಹೇಳುತ್ತದೆ. ಕರ್ಮಗಳನ್ನು ಮಾಡುವುದಕ್ಕಾಗಿಯೂ ಅದರ ಫಲಗಳನ್ನು ಅನುಭವಿಸುವುದಕ್ಕಾಗಿಯೂ ಪ್ರತಿಯೊಬ್ಬನೂ ಹುಟ್ಟುತ್ತಾ ಸಾಯುತ್ತಾ ಇರುತ್ತಾನೆ. ನಿಷ್ಠೆಯಿಂದ ನಡೆಸುವ ಯಾವೊಂದು ಕರ್ಮವೂ ಪಾಪಪುಣ್ಯಗಳ ಹೆಸರನ್ನು ಪಡೆಯುವುದಿಲ್ಲ. ವಾಸ್ತವದಲ್ಲಿ ಪಾಪ ಪುಣ್ಯ ಸತ್ಯ ಸಂಗತಿಗಳಲ್ಲ; ಮಾನವ ಪ್ರಾಣಿಯಿಂದ ಮನುಷ್ಯನಾದ ಗ ತನ್ನ ಜೀವನದ ಬಗ್ಗೆ ಹೆದರಿಕೆಯಿಂದ ಸೃಷ್ಟಿಸಿದ ಶಬ್ದಗಳಿವು. ಪ್ರಪಂಚದಲ್ಲಿ ಕ್ರಿಯೆಯೇ ಜೀವಿಗಳ ಮೂಲ ಧರ್ಮವಾಗಿರುವಲ್ಲಿ ಯಾವೊಂದು ಕ್ರಿಯೆ ಒಳ್ಳೆಯದು, ಅಥವಾ ಕೆಟ್ಟದು ಎಂಬುದು ಹೇಗೆ? ಇನ್ನೊಬ್ಬರಿಂದ ತನಗೆ ಕೇಡುಂಟಾಗುವ ಕಾರ್ಯಮಾಡುವುದಕ್ಕೆ "ಪಾಪ" ಎಂಬ ಶಬ್ದ ಹುಟ್ಟಿಸಲ್ಪಾಯಿತು. ಸ್ವಾರ್ಥವನ್ನು ಮರೆತು ನಡೆದಾಗ ಪಾಪ ಪುಣ್ಯಗಳೆರಡೂ ಮಂಜಿನಂತೆ ಕರಗಿ ನೀರಾಗುವುದು.

ಎಂದು ಅವನು ಸಂಪೂರ್ಣ ಜ್ಞಾನಿಯಾದ ಗುರುವಿನಿಂದ ಉಪದೇಶ ಪಡೆದು ಪಂಚ ಕೋಶಗಳನ್ನೂ (ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ ಹಾಗೂ ಆನಂದಮಯ ಇವು ಪಂಚ ಕೋಶಗಳು) ತಾನಲ್ಲವೆಂದೂ ಮನಸ್ಸಿನಲ್ಲಿ ಬೇರೂರಿಸಿಕೊಳ್ಳುವನೋ ಅಂದು ಆ ಪಂಚ ಕೋಶಗಳ ಮರೆಯಲ್ಲಿರುವ ಆತ್ಮನನ್ನು ಕಂಡು, ತನ್ನ ನಿಜಸ್ವರೂಪವನ್ನು ಮರೆತು ಹೋಗಿದ್ದವನು ಹುಟ್ಟು ಸಾವುಗಳಿಂದ ಮುಕ್ತನಾಗುವನು; ಅದೇ ಅವನ ಆತ್ಮೋದ್ಧಾರದ ನಾಂದಿ.

ತನ್ನೊಳಗಿನ ಆತ್ಮನನ್ನು ಪಂಚ ಕೋಶಗಳ ಸಂಬಂಧದಿಂದ ಬಿಡಿಸಿಕೊಂಡು 'ತತ್ವಮಸಿ' ಮೊದಲಾದ ಮಹಾ ವಾಕ್ಯಗಳ ಮೂಲಕ ತಾನು ಬ್ರಹ್ಮನೆಂಬ ಜ್ಞಾನ ಪಡೆದು ಹುಟ್ಟು ಸಾವುಗಳ ತೊಡಕನ್ನು ಕಳಚಿಕೊಂಡು ಆಗಲೇ ಅಲ್ಲಿಯೇ ಪರಬ್ರಹ್ಮನಾಗುತ್ತಾನೆ.

ಇದನ್ನೇ ಹದಿನಾಲ್ಕನೇ ಶತಮಾನದ ಲಲ್ಲಯೋಗೀಶ್ವರಿ ಹೀಗೆ ಹೇಳುತ್ತಾರೆ:

"ಸ್ಥೂಲವಾದ ವಿಶ್ವವು ಮಾಯೆಯಿಂದ ರೂಪುಗೊಂಡಿದೆ. ಜ್ಞಾನವೆಂಬ ನೀರಿನಿಂದ ಕೂಡಿದೆ. ಆ ನೀರು ಹೆಪ್ಪುಕಟ್ಟಿಕೊಂಡಿದೆ. ಚಿತ್ತೆಂಬ ಸೂರ್ಯ ಆ ಮಂಜುಗಡ್ಡೆಯ ಮೇಲೆ ಬೆಳಗಲಾಗಿ ಜಡವಾದ ವಿಶ್ವ, ಹೆಪ್ಪುಕಟ್ಟಿಕೊಂಡಿರುವ ಜ್ಞಾನ, (ವಿಮರ್ಶೆಯಿಲ್ಲದ ಜ್ಞಾನ), ಸಂಸಾರದಿಂದ ಕೂಡಿರುವ ಜೀವಾತ್ಮ ಇವು ಮೂರೂ ಅಜ್ಞಾನವೆಂಬ ಬಾಧ್ಯದಿಂದ ಬಿಡುಗಡೆಯನ್ನು ಹೊಂದಿ ಶಿವನೆಂಬ ನೀರಾಗುತ್ತದೆ. ಆಗ ಆತ್ಮೋದ್ಧಾರವಾಗುತ್ತದೆ."

ಶಾಸ್ತ್ರಜ್ಞಾನದಿಂದ ಮಾತ್ರ ಆತ್ಮೋದ್ಧಾರ ಯಾ ಶಿವತ್ವ ಸಿದ್ಧಿಸದು. ಆ ಸಿದ್ಧಿಗೆ ಅಭ್ಯಾಸಬಲವೂ ಅಗತ್ಯ. ಪರಮಾತ್ಮನ ವ್ಯಾಪ್ತಿ ಪಡೆಯಲು ಪ್ರಾಣಶಕ್ತಿ ಹಾಗೂ ಚಿತ್ತಗಳ ಐಕ್ಯ ಏರ್ಪಡಬೇಕು.

ತನ್ನ ಮತ್ತು ಇತರ ಸುಖ ದುಃಖಗಳು ಒಂದೇ ಎಂದು ಯಾಂಗೆ ಸಾಮಾನ್ಯವಾಗಿ—ಅಭಿನ್ನವಾಗಿ ಅನುಭವಕ್ಕೆ ಬರುತ್ತದೋ ಅಂತಹ ಅದ್ವೈತ ಭಾವನೆಯಲ್ಲಿ ಜೀವನಿಗೆ ಈಶನು ಸಾಕ್ಷಾತ್ಕೃತನಾಗುವನು.

ಸಪ್ತಾಂಗ ತ್ಯಾಗಗಳಾದರೆ ಆತ್ಮೋದ್ಧಾರಕ್ಕೆ ಪುಟ ಕೊಡುತ್ತದೆ.

"ಪ್ರತಿಯೊಂದು ಆತ್ಮವೂ ಅಜ್ಞಾನದ ಮೋಡದಿಂದ ಆವರಿಸಲ್ಪಟ್ಟಿರುವ ಸೂರ್ಯ. ಒಂದು ಆತ್ಮಕ್ಕೂ ಮತ್ತೊಂದು ಆತ್ಮಕ್ಕೂ ಇರುವ ವ್ಯತ್ಯಾಸ ಆ ಮೋಡಗಳ ಹೆಚ್ಚು ಕಡಮೆಯಲ್ಲಿ ಇದೆ"

—ಎಂದು ರಾಮಕೃಷ್ಣರು ಹೇಳಿದ ಮಾತು ಈ ಸಮಯದಲ್ಲಿ ಮನಸ್ಮೃತಿಗೆ ಬರುವುದು.

ಎಲ್ಲರ ಆತ್ಮದ ಶಕ್ತಿ ಒಂದೇ ಆದರೆ ಅದನ್ನು ಸುತ್ತುವರಿದಿರುವ ಹೊಲಸಿನಿಂದ ಆತ್ಮದ ನೈಜ ಪ್ರಭಾವ ಕುಂದುವುದಿದೆ.

'ದ್ವೈತ—ಅದ್ವೈತ, ದೇವತೆಗಳ ಪೂಜೆ—ನಾಸ್ತಿಕತೆ, ಯಾವುದನ್ನೂ ನಾನು ತ್ಯಜಿಸುವುದಿಲ್ಲ. ಶಿಷ್ಯನಾಗಬಯಸುವವನು ತನ್ನ ಶೀಲವನ್ನು ಆದಷ್ಟು ವಿಶಾಲವಾಗಿಯೂ, ಆಳವಾಗಿಯೂ ಮಾಡಲು ಪ್ರಯತ್ನಪಡುವುದು ಅವನ ಮುಖ್ಯ ಗುರಿಯಾಗಿರಬೇಕು.'

ಹಿರಿಯರು ಹೇಳಿರುವ ಇಂತಹ ಶಿಷ್ಯನಾಗದ ಹೊರತು ಸೇವೆಯಲ್ಲಿ ಆತನ ಆರ್ಹತೆ ಹೆಚ್ಚಿರುವುದಿಲ್ಲ.

ಯಾವುದು ಪ್ರಗತಿಗೆ ಅಡ್ಡಿಯನ್ನುಂಟು ಮಾಡುವುದೋ ಅದೆಲ್ಲಾ ಪಾಪವೆಂಬ ಯಾವುದು ನಮ್ಮ ಅಭಿವೃದ್ಧಿಗೆ ಸಹಾಯಕವಾಗುವುದೋ, ಐಕ್ಯವನ್ನುಂಟು ಮಾಡುವುದೋ ಅದೆಲ್ಲಾ ಪುಣ್ಯವೆಂಬ ತಿಳುವಳಿಕೆಯನ್ನು ಕಳಚಿ ಹಾಕಿ ಪರಬ್ರಹ್ಮತ್ವವನ್ನು ಪಡೆಯಲು ಸಹಾಯ ಮಾಡುವುದು ನಿಜವಾದ ಆತ್ಮೋದ್ಧಾರ ಹಾಗೂ ಅನಂತ ಸೇವೆ.

ಹನಿಗತೆ:—

ಸಾಕ್ಷಾತ್ಕಾರ

ಮಹಾಕವಿ ತುಳಸಿದಾಸರು ಯೋಚನಾಮಗ್ನರಾಗಿ ಗಂಗಾನದಿಯ ತೀರದಲ್ಲಿ ನಡೆದು ಹೋಗುತ್ತಿದ್ದರು. ಶವ ಸಂಸ್ಕಾರ ಮಾಡುವ ನದಿ ಘಾಟಿನಲ್ಲಿ ಹೆಂಗಸೊಬ್ಬಳು ತನ್ನ ಮೃತನಾದ ಗಂಡನ ಶವದ ಪಕ್ಕದಲ್ಲಿ ಕುಳಿತಿದ್ದಳು. ಮದುವೆಗೆ ಸಿಂಗರಿಸಿಕೊಂಡಂತೆ ಆಕೆ ಸರ್ವಾಲಂಕಾರ ಭೂಷಿತೆಯಾಗಿದ್ದಳು.

ತುಳಸಿದಾಸರನ್ನು ಕಂಡು ಆಕೆ ಎದ್ದು ನಮಸ್ಕರಿಸಿ, 'ಪ್ರಭೂ, ನನ್ನ ಗಂಡನೊಡನೆ ಸ್ವರ್ಗಕ್ಕೆ ಹೋಗುವಂತೆ ನನ್ನನ್ನು ಆಶೀರ್ವದಿಸಿರಿ" ಎಂದಳು!

'ಮಗಳೇ, ಏಕೆ ಇಷ್ಟು ಅವಸರಪಡುವೆ? ಸ್ವರ್ಗವನ್ನು ರಚಿಸಿದವನಿಂದಲೇ ಈ ಜಗತ್ತೂ ಸೃಷ್ಟಿಯಾಗಿಲ್ಲವೇ?"

'ಸ್ವರ್ಗ ನನಗೆ ಬೇಕಿಲ್ಲ ಪ್ರಭೂ, ನನಗೆ ನನ್ನ ಪತಿಯನ್ನು ಪಡೆಯಬೇಕಿದೆ'.

ತುಳಸಿದಾಸರು ಮುಗುಳು ನಗೆ ನಕ್ಕು ಹೇಳಿದರು "ನಿನ್ನ ಮನೆಗೆ ಹಿಂತಿರುಗಿ ಹೋಗು ಮಗಳೆ! ಈ ತಿಂಗಳು ಮುಗಿಯುವದರೊಳಗೆ ನಿನ್ನ ಗಂಡನು ದೊರೆಯುವನು!"

ಆ ಹೆಂಗಸು ತುಳಸಿದಾಸರ ಮಾತನ್ನು ನಂಬಿ ಗಂಡನು ಬರುವನೆಂಬ ಸಂತೋಷ ತಂದುಕೊಂಡು ತನ್ನ ಮನೆಗೆ ಹಿಂತಿರುಗಿದಳು.

ಪ್ರತಿದಿನ ತುಳಸಿದಾಸರು ಆಕೆಯ ಮನೆಗೆ ಬಂದು ವೇದಾಂತ ತತ್ವದರ್ಶನಗಳನ್ನು ಹೇಳಿಕೊಡ ತೊಡಗಿದರು. ತುಳಸಿದಾಸರ ಬೋಧನೆಯಿಂದ ಆಕೆಗೆ ಜೀವನದ ಗುರಿ ನಿಲುವುಗಳ ಅರಿವಾಯಿತು. ಆಕೆಯ ಹೃದಯ ಪರಮ ಭಕ್ತಿ ಪ್ರೇಮಗಳಿಂದ ತುಂಬಿತು. ಆಕೆ ಅಪ್ರತಿಮ ಭಕ್ತೆಯಾದಳು.

ಒಂದು ತಿಂಗಳು ಮುಗಿಯುವದರೊಳಗಾಗಿ ನೆರೆಮನೆಯವರು ಆಕೆಯಲ್ಲಿಗೆ ಬಂದು, "ನಿನ್ನ ಗಂಡನು ಪುನಹ ಬಂದಿರುವನೇ?" ಎಂದು ಕುಚೋದ್ಯದಿಂದ ಪ್ರಶ್ನಿಸಿದರು.

ಮಹಿಳೆಯು ಮುಗುಳು ನಗೆ ನಕ್ಕು ನುಡಿದಳು. "ನಾನು ನನ್ನ ಗಂಡನನ್ನು ಪಡೆದೆ!"

ನೆರೆಮನೆಯ ಮಹಿಳೆಯರು ಆಶ್ಚರ್ಯಚಕಿತರಾಗಿ, "ಹಾಗಾದರೆ ಅವನೆಲ್ಲಿ?" ಎಂದು ಪ್ರಶ್ನಿಸಿದರು.

"ನನ್ನ ಪುರುಷನು ನನ್ನ ಹೃದಯದಲ್ಲಿ ನನ್ನೊಡನೆ ಐಕ್ಯನಾಗಿ ವಿರಾಜಿಸುತ್ತಿದ್ದಾನೆ" ಎಂದಳು ಆಕೆ.

—ರವೀಂದ್ರನಾಥ ಟಾಗೋರ್.

ಹೊಸ ಪುಸ್ತಕ

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ.ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ.

ಬೆಲೆ: ರೂ. 1=75; ಬಿಳಿ ಕಾಗದ!
ರೂ.2ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್ ಉಡುಪಿ.
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಅಂದವಾದ ಮನೆಗಳಿಗೆ! ಆಕರ್ಷಕವಾದ ಆಫೀಸುಗಳಿಗೆ!!

ಸುಸಜ್ಜಿತವಾದ ಆಸ್ಪತ್ರೆಗಳಿಗೆಲ್ಲಾ ಬೇಕಾಗುವ

ಖೀರಾರವರ ಉಕ್ಕಿನ

"ಮಿಡ್ಜೆಟ್" 50" × 30" × 17" ಪೋಪ್ಯುಲರ್ 65" × 33" × 19"
ಯುಟಿಲಿಟೀ 78" × 36" × 19" ವಾರ್ಡ್ರೋಬ್ 78" × 39" × 24"

ಸಾದಾ ಮತ್ತು ಒಳಗಡೆ ಲೋಕರ್, ಮತ್ತು ಕನ್ನಡಿಗಳುಳ್ಳ ಕಪಾಟುಗಳು ವಗೈರೆ ಎಲ್ಲಾ ತರದ ಉಕ್ಕಿನ ಫರ್ನಿಚರ್‌ಗಳು.

"ರೇಲೀಸ್" & "ಉಷಾ" ಟೇಬಲ್ ಮತ್ತು ಸೀಲಿಂಗ್ ಫೇನ್‌ಗಳು.

—— ದ್ವಿಮುಖವಾಗಿರುವ "ಸೋಫಾ ಹಾಗೂ ಹಾಸಿಗೆ" ——

ಮದುವೆ ಸಮಾರಂಭಗಳಿಗೆ ಉಡುಗರೆ ಸಾಹಿತ್ಯಗಳು ನಮ್ಮ ವೈಶಿಷ್ಟ್ಯ.

ಹೆಚ್ಚಿನ ವಿವರಗಳಿಗೆ: ಶಾಸ್ತ್ರಿ ಮತ್ತು ಕಂಪೆನಿ, ಹಂಪನ್‌ಕಟ್ಟೆ, ಮಂಗಳೂರು

Phone: 788 Grams; "SHASTRYCO

ರವೀಂದ್ರ ವಾಣಿ: ೯

ಪಾಪ ಮತ್ತು ಅದರ ಸಮಸ್ಯೆ

ಜೀವನವು ಒಂದು ನದಿಯಂತೆ. ನೀರು ಅತ್ತಿತ್ತ ಹರಿಯದಂತೆ ತಡೆಹಿಡಿಯುವ ತಟಗಳೇ ಅದು ಮುಂದೆ ಪ್ರವಹಿಸುವಂತೆ ಪ್ರೇರೇಪಿಸುವಂತೆ ಮಾನವ ಜೀವನ ನದಿಯನ್ನು ಅತ್ತಿತ್ತ ಹರಿಯಗೊಡದ ಕಷ್ಟ ಕಾರ್ಪಣ್ಯಗಳೇ ಜೀವನದ ವಿಕಾಸಕ್ಕೆ ಕಾರಣವಾಗಿವೆ.

ಮೂಲ ಲೇಖಕರು: ವಿಶ್ವಕವಿ ರವೀಂದ್ರನಾಥ ಟಾಗೋರ್.
ಅನುವಾದಕರು: ಶ್ರೀ ಕೆ. ಎನ್. ಭಟ್, ಶಿರಾಡಿಪಾಲ್.

ಈ ಜಗತ್ತಿನಲ್ಲಿ ಪಾಪವು ತುಂಬಿಕೊಂಡಿರುವುದೇಕೆ? ಎಂಬ ಪ್ರಶ್ನೆಯು, ಈ ಜಗತ್ತಿನಲ್ಲಿ ಅಪೂರ್ಣತೆ ಏಕಿದೆ? ಅಥವಾ ಈ ಪ್ರಪಂಚದ ಸೃಷ್ಟಿ ಏಕೆ ಆಗಿದೆ? ಎಂಬೀ ಪ್ರಶ್ನೆಗಳಿಗೆ ಸರಿಸಮಾನವಾಗಿದೆ. ಜಗತ್ತು ಈ ಪರಿಯಿಂದಿಲ್ಲದಿರುತ್ತಿದ್ದರೆ, ಇಲ್ಲಿ ಯಾವುದೂ ಸರಿಯಾಗಿ, ನಡೆಯಲಾರದು. ಎಂಬುದನ್ನು ನಾವು ಒಪ್ಪಿಕೊಳ್ಳಬೇಕು ಸೃಷ್ಟಿಯು ಅಪೂರ್ಣವಾಗಿಯೇ ಇದ್ದು ಮತ್ತೆ ನಿಧಾನವಾಗಿ ವಿಕಸಿತವಾಗುತ್ತ ಹೋಗುವುದು, ಇದು ಅನಿವಾರ್ಯವಾಗಿತ್ತು. ಈ ಜಗತ್ತಿನಲ್ಲಿ ನಾವು ಇರುವುದು ಏಕೆ? ಎಂಬ ಈ ಪ್ರಶ್ನೆಯೂ ನಿರರ್ಥಕವಾಗಿರುವುದು.

ಈ ಮೇಲಿನ ಯಾವ ಪ್ರಶ್ನೆಗಳೂ ಸರಿಯೆನಿಸಲಾರವು—'ಅಪೂರ್ಣತೆ ಯಾವುದಿದೆಯೋ? ಇದೇ ಅಂತಿಮ ಸತ್ಯವಾಗಿರುವುದೇ' ಎಂಬ ಈ ಪ್ರಶ್ನೆಯು ಸರಿಯಾದುದಾಗಿದೆ. ಪಾಪವು ಅನಿವಾರ್ಯವೂ ಸ್ವಾಭಾವಿಕವೂ, ಆಗಿರುವುದೇ? ಎಂಬ ಪ್ರಶ್ನೆಗೆ ನಾವು ಒಂದು ನದಿಯ ಉದಾಹರಣೆಯನ್ನು ತೆಗೆದುಕೊಳ್ಳಬಹುದು.

ನದಿಗೆ ಒಂದು ಮೇರೆ ಇರುವುದು. ಅದರ ಎರಡು ಬದಿಗಳಲ್ಲೂ ನೀರನ್ನು ತಡೆಯಬಲ್ಲ ತಟಗಳಿವೆ. ಆದರೆ ಈ ತಟಗಳೇ ಆ ನದಿಯ ರೂಪವೇ? ಅಥವಾ ನದಿಯ ತಟಗಳಲ್ಲೇ ನದಿಯ—ನಿಜ ರೂಪವಿರುವುದೇ? ಪ್ರವಹಿಸುವ ನೀರನ್ನು ಅತ್ತಿತ್ತ ಹೋಗದಂತೆ, ತಡೆಯಬಲ್ಲ ಈ ತಟಗಳು ನದಿಯ ಪ್ರವಾಹವನ್ನು ಮುಂದೆ ಸಾಗಿಸಲು ಸಹಾಯಕವಾಗಿಲ್ಲವೇ?

ಇದೇ ರೀತಿ ಜಗತ್ತಿನ ಪ್ರತಿಯೊಂದು ವ್ಯಾಪಾರಕ್ಕೂ ಮೇರೆ ಇದೆ. ನಿಯಮಗಳಿವೆ. ಇವುಗಳಿಲ್ಲದಿರುತ್ತಿದ್ದರೆ ಜಗತ್ತಿನ ಸ್ಥಿತಿ, ತಟಸ್ಥವಾಗುತ್ತಿತ್ತು. ಆದರೆ, ಈ ಮೇರೆ ಅರ್ಥಾತ್ ತಟಗಳು ಜಗತ್ತನ್ನು ತಡೆಯುವುದಕ್ಕಾಗಿಯೇ ಇರುವುದಲ್ಲ; ಪೂರ್ಣತೆಯ ಕಡೆಗೆ ತೆಗೆದುಕೊಂಡು ಹೋಗಲಿಕ್ಕಾಗಿ ಇರುತ್ತವೆ. ಕಷ್ಟ ದುಃಖಗಳು ತುಂಬಿಕೊಂಡಿರುವುದೇ ಈ ಪ್ರಪಂಚದ ಒಂದು ಚಮತ್ಕಾರವಲ್ಲ. ಜಗತ್ತಿನ ಒಂದು ರೀತಿಯ ವ್ಯವಸ್ಥೆ, ಸೌಂದರ್ಯ, ಪ್ರೇಮ, ಆನಂದ ಮತ್ತು ಕಲ್ಯಾಣ, ಇವೆಲ್ಲವುಗಳಿಂದ ಈ ಜಗತ್ತು ಚಮತ್ಕಾರಪೂರ್ಣವಾಗಿದೆ. ಮನುಷ್ಯನ ಹೃದಯದಲ್ಲಿ ಈಶ್ವರನು ವಾಸವಾಗಿರುವನು! ಎಂಬ ಈ ಕಲ್ಪನೆಯು, ವಿಶೇಷವಾದ ಒಂದು ಚಮತ್ಕಾರವಾಗಿರುವುದು.

ಮನುಷ್ಯನು ತನ್ನ ಜೀವನದ ಆಳದಲ್ಲಿ ಇಳಿದು, 'ಯಾವುದು ಅಪೂರ್ಣವೆಂದು ತೋರುವುದೋ ಅದು ಪೂರ್ಣತೆಯ ಸಂಕೇತವಾಗಿ ವಿಕಸಿತವಾಗುವ ರೂಪದ ಪ್ರದರ್ಶನವಾಗಿದೆ, ಎಂದು ಅನುಭವಮಾಡಿಕೊಂಡನು. ಆಲಾಪನೆಯ ಮೂಲಕ ವಿಕಸಿತವಾಗುತ್ತಿರುವ ಒಂದು ರಾಗವು ಅವರ ಭಿನ್ನಭಿನ್ನವಾದ "ಸರಿಗಮ" ಮೊದಲಾದ ಸ್ವರಗಳಿಂದಲೇ ಹೇಗೆ ಪೂರ್ಣವಾಗಿ ಗುರುತಿಸಲ್ಪಡುವುದೋ—ಹಾಗೆಯೇ ಅಪೂರ್ಣತೆಯು ಅನುಭವವನ್ನು ಕೊಡುವುದು. ಯಾವುದು ಸೀಮಾಬದ್ಧವಾಗಿ ತೋರುವುದೋ—ಅದು ಆ ಸೀಮೆಗಳೊಳಗೇ ಕಟ್ಟಲ್ಪಟ್ಟಿಲ್ಲ ಎಂಬೀ ಸಮಸ್ಯೆಯನ್ನು ಮನುಷ್ಯನು ತನ್ನ ಅನುಭವದಿಂದಲೇ ಬಗೆಹರಿಸಿಕೊಂಡನು. ಅದರಲ್ಲಿ ಚಲನೆ ಇರುವುದು. ಪ್ರತಿಕ್ಷಣಕ್ಷಣಕ್ಕೂ ಅದು ತನ್ನಬಂಧನವನ್ನು ಕಿತ್ತೊಗೆಯುತ್ತ ಮುನ್ನಡೆಯುತ್ತಿರುವುದು ನಿಜವಾದ ಒಟ್ಟಿನ ಅಭಿಪ್ರಾಯವೆಂದರೆ—ಅಪೂರ್ಣತೆಯು ಪೂರ್ಣತೆಯನ್ನು ನಿಷೇಧಿಸುವುದಕ್ಕಲ್ಲ; ಸೀಮಿತವು ಅಸೀಮದ ವಿರೋಧಕ್ಕಾಗಿ ಅಲ್ಲ. ವಸ್ತುತಃ ಒಂದು ವಸ್ತು ಅಪೂರ್ಣವಾಗಿದ್ದರೂ, ಅದರ ಭಿನ್ನ ಭಿನ್ನ ಅಂಗಗಳು ಪೂರ್ಣತೆಯನ್ನು ಪ್ರದರ್ಶಿಸುವುವು. ಸೀಮಿತದಲ್ಲಿಯೂ ಅಸೀಮತೆ ಕಂಡು ಬರುವುದು.

ಆನಂದವು ನಮ್ಮ ಜೀವನದ ಧ್ಯೇಯವಾಗಿರುವಂತೆ ದುಃಖವು ನಮ್ಮ ಜೀವನಕ್ಕೆ ಶಾಶ್ವತವಾಗಿ ಅಂಟಿಕೊಂಡು ಬರುವುದಿಲ್ಲ. ದುಃಖವನ್ನು ಅನುಭವಿಸುತ್ತಿರುವಾಗಲೂ ನಾವು—'ಈ ದುಃಖ ಶಾಶ್ವತವೇನಲ್ಲ!', ಎಂದು ಭಾವಿಸುತ್ತೇವೆ. ಬುದ್ಧಿವಂತರೂ ಒಂದೊಂದು ಸಲ ತಪ್ಪು ಮಾಡುವಂತೆ, ದುಃಖವು ಬರುತ್ತಿರುವುದು. ವಿಜ್ಞಾನದ ಇತಿಹಾಸವೂ ತಪ್ಪುಗಳಿಂದ ಮುಕ್ತವಾಗಿಲ್ಲ. ಆದರೂ ಇದು ತಪ್ಪುಗಳಿಂದಲೇ ಕೂಡಿರುವುದು. ಎಂದು ಭಾವಿಸಲಾಗುವುದಿಲ್ಲ. ವಿಕಾಸಶೀಲವಾದ ಸತ್ಯ ಯಾವುದಿದೆಯೋ ಅದು ವಿಜ್ಞಾನದ ಇತಿಹಾಸದಲ್ಲಿ ಸ್ಮರಣೀಯವಾಗಿರುವುದಲ್ಲದೆ, ಅವರಲ್ಲಿ ಒದಗಿಬಂದ ಅಸತ್ಯವಲ್ಲ. ಅಸತ್ಯವು ಅಶಾಶ್ವತವಾದುದು. ಅಂತೆಯೇ ಮನುಷ್ಯನಿಂದಾಗುವ ತಪ್ಪುಗಳೂ ಶಾಶ್ವತವಾಗಿರುವುದಿಲ್ಲ. ಛತ್ರದಲ್ಲಿ ತಂಗಿ ಸ್ವಲ್ಪ ಹೊತ್ತು ಇದ್ದು ಕೂಡಲೇ ಹೊರಟು ಹೋಗುವ ಪಥಿಕನಂತೆ, ಅಸತ್ಯವು ಸತ್ಯದಿಂದ ಕೂಡಲೇ ಪ್ರತ್ಯೇಕಿಸಲ್ಪಡುವುದು.

ಜಗತ್ತಿನ ವಿಚಾರ ವಿಮರ್ಶೆಯಲ್ಲಿ ಲೋಪದೋಷಗಳು ಎಷ್ಟೋ ಕಂಡು ಬರುವವು. ಆದರೂ, ಇವೆಲ್ಲ ಅಸ್ಥಾಯಿಯಾಗಿಯೇ ಇರುವುವು. ಹಾಗೆಯೇ ಮಾನವನಲ್ಲಿ ಮೂಡುವ ದುರ್ವಿಚಾರ, ದುರಾಗ್ರಹಗಳೂ ಕೂಡ ಅಶಾಶ್ವತವಾಗಿರುತ್ತವೆ. ಈ ಅಸ್ಥಿರತೆಯೇ ಅವುಗಳ ಪ್ರಕೃತಿಯಾಗಿರುವುದು. ಏಕೆಂದರೆ, ಹಿತದೊಡನೆ ಅಹಿತ, ಸತ್ಯದೊಡನೆ ಅಸತ್ಯ ಹೆಚ್ಚು ಕಾಲ ಸಮಭಾವದಿಂದ ಇರಲಾರದು ಪ್ರತಿಕ್ಷಣಕ್ಷಣವೂ, ಹಿತವು ಅಹಿತವೊಡನೆ, ಸತ್ಯವು ಅಸತ್ಯದೊಡನೆ, ಸಂಘರ್ಷ ಮಾಡುತ್ತ ಅದನ್ನು ಬದಲಾಯಿಸುವ ಪ್ರಯತ್ನದಲ್ಲಿರುವುದು ಆದರೆ, ನಾವು ಇದನ್ನು ಸರಿಯಾಗಿ ತಿಳಿದುಕೊಳ್ಳದೆ, ದೋಷಗಳನ್ನೇ ಸ್ಥಿರವೆಂದು ನಂಬಿ, ಅದರ ಮಹತ್ವವನ್ನೇ ಹೆಚ್ಚಿಸುತ್ತಿರುತ್ತೇವೆ. ಆದರೆ, ಅಸತ್ಯವು ಸದಾ, ಸತ್ಯ ರೂಪದಲ್ಲಿ ಪರಿವರ್ತನೆ ಹೊಂದುತ್ತ ಅಥವಾ ನಾಶ ಹೊಂದುತ್ತಲೇ ಇರುವುದು, ಇದು, ಸತ್ಯವಾಗಿದೆ ಆಕಾಶ, ಪ್ರಕಾಶ, ಜಲ, ಇವುಗಳಿಗೆ ಬಲವಾದ ತಡೆಗಳಿದ್ದರೂ, ಅವು ಹೇಗೆ, ತಂತಮ್ಮ ಸಂಜೀವಿನೀ ಶಕ್ತಿಯನ್ನು ಕಳೆದುಕೊಳ್ಳಲಾರವೋ ಹಾಗೆಯೇ ದೋಷಗಳು ಎಷ್ಟೇ ಇದ್ದರೂ ಅವುಗಳ ರೂಪ ವಿಶಾಲವಾಗಿದ್ದರೂ, ನಮ್ಮ ಗುಣಗಳನ್ನೂ ಜೀವನದ ಪ್ರವಾಹವನ್ನೂ ಅವು ಯಶಸ್ವಿಯಾಗಿ ತಡೆಯಲಾರವು.

ಒಂದು ವಿಷಯ, ಅಥವಾ ವಸ್ತುವನ್ನು ದೋಷಪೂರ್ಣವಾದುದೆಂದು ತಿಳಿದುಕೊಳ್ಳಲು, ನಾವು ಯಾವ ಅಳತೆಗೋಲನ್ನು ತೆಗೆದುಕೊಳ್ಳುವೆವೋ ಅದು ದೋಷಪೂರ್ಣವಾಗಿರುವುದು. ಇಂತು ಈ ಉಪಕ್ರಮದಲ್ಲಿ ಕೆಲವು ಗಣನೀಯ ವಸ್ತುಗಳು ಮಹತ್ವಪೂರ್ಣವಾದವುಗಳೆಂದು ನಾವು ತಿಳಿದುಕೊಳ್ಳುತ್ತೇವೆ. ಆದರೆ ಇದು ಸರಿಯಲ್ಲ. ಅರ್ಥಾತ್ ನಾವು ತಿಳಿದುಕೊಂಡಿರುವ ವಿಷಯ ಅದು ಪೂರ್ಣವಾದ ಮಹತ್ವದಿಂದ ಪೂರ್ಣವಾಗಿರದೆ ಅಂಶತ ಮಾತ್ರ ಇರುವುದು. ಒಬ್ಬ (ಸಿ. ಐ. ಡಿ) ಗುಪ್ತ ಪೋಲೀಸಿನವನಿಗೆ ಅಪರಾಧವನ್ನು ಪತ್ತೆ ಮಾಡುವ ಅವಕಾಶ ಸಿಕ್ಕಿದಾಗ ಆತನು ತಾನು ಪತ್ತೆ ಮಾಡಬೇಕಾದ ಘಟನೆಯನ್ನು ತನ್ನ ಜೀವನ ಮರಣ ವೆಂಬಂತೆ ಎಣಿಸಿಕೊಂಡು ಶೋಧಮಾಡುತ್ತಾನೆ. ಆ ಘಟನೆಯು ಬಹು ಕೆಟ್ಟ ಘಟನೆಯಾದರೂ ಸಾಮಾಜಿಕ ವ್ಯವಸ್ಥೆಯಲ್ಲಿ ಆ ಘಟನೆಯು ಎಷ್ಟೊಂದು ಮಹತ್ವಪೂರ್ಣವಾಗಿದೆ! ಎಂಬುದು, ಆತನ ಕಲ್ಪನೆಗೆ ಬರುವುದಿಲ್ಲ.

ವಿಜ್ಞಾನವು ಪ್ರಾಣಿವರ್ಗದ ಜೀವನ ಸಂಘರ್ಷವನ್ನು ಕಂಡುಹಿಡಿದು ಚಿತ್ರಿಸುವಾಗ, ಅದರಲ್ಲಿ ಕೊಲ್ಲುವ ಕಚ್ಚುವ, ಕಾದಾಡುವ ಈ ಪ್ರವೃತ್ತಿಗಳಿಗೇ ಪ್ರಾಧಾನ್ಯವಿದೆ! ಎಂದು ತಿಳಿದುಕೊಳ್ಳುವುದು. ಆದರೆ, ಈ ದೃಶ್ಯ ಚಿತ್ರಗಳನ್ನು ಸ್ಥಿರವೆಂದು ಸದಾ ನಂಬುವುದು, ಗಾಳಿಗೆ ಹಾರಿ ಮಾಯವಾಗುವ ಕರ್ಪೂರವನ್ನು ಸ್ಥಿರವೆಂದು ತಿಳಿಯುವಷ್ಟು ತಪ್ಪಾಗುವುದು. ಪ್ರಕೃತಿಯಲ್ಲಿ ಈ ಪರಿಯ ಜೀವನ ಸಂಘರ್ಷ ಮಾತ್ರವಲ್ಲ; ಜೀವನೋಪಯೋಗೀ ಸಂಜೀವಿನೀ ಶಕ್ತಿಯೂ ವಿಪುಲವಾಗಿದೆ. ಈ ಸಂಘರ್ಷದೊಡನೆ, ಹೊಸ ಜೀವನ ಶಕ್ತಿಯನ್ನು ನೀಡಬಲ್ಲ ಪ್ರೇಮ ಮತ್ತು ಆತ್ಮತ್ಯಾಗ ಭಾವನೆಯೂ ಇರುವುದು.

ನಾವು ನಮ್ಮ ದೃಷ್ಟಿಯನ್ನು ದೃಷ್ಟಿರೂಪೀ ಜ್ಞಾನವನ್ನೂ ಆ ಜ್ಞಾನಪ್ರಕಾಶವನ್ನು ಮೃತ್ಯುವಿನ ರೂಪದ ಮೇಲೆ ಕೇಂದ್ರೀಕರಿಸಿ ನೋಡುತ್ತಿದ್ದರೆ, ಆಗ ನಮಗೆ ಮೃತ್ಯುವಿನ ಹೊರತು ಮತ್ತೇನೂ ಕಾಣದು. ಆಗ ನಮಗೆ ಈ ಜಗತ್ತು ಒಂದು ದೊಡ್ಡ ಭಯಾನಕವಾದ ಕಾರಾಗೃಹದಂತೆ, ಭಾಸವಾಗ ಬಹುದು. ಆದರೆ ಜೀವನದ ಯಾತ್ರೆ ಮಾಡುತ್ತಿರುವ ನಮ್ಮ ಮೇಲೆ ಈ ಮರಣದ ಕಲ್ಪನೆಗೆ, ವಿಶೇಷವಾಗಿ ಪ್ರಭಾವ ಬೀರುವುದಿಲ್ಲ; ಆದರಿಂದ ನಾವು ವಿಶೇಷವಾಗಿ ವಿಚಲಿತವಾಗುವುದೂ ಇಲ್ಲ. ಮರಣವೆಂದರೆ ಬಹು ಅಸ್ಪಷ್ಟವಾಗಿರುವುದೆಂಬುದರಿಂದ ಹೀಗಾಗುವುದಿಲ್ಲ. ಮರಣವು ಜೀವನದ ನಿಷೇಧಾತ್ಮಕವಾದ ಒಂದು ರೂಪವಾಗಿರುವುದರಿಂದ ಹೀಗಾಗುವುದು. ನಾವು ನೋಡುತ್ತಿರುವಾಗ ಕಣ್ಣಿನ ರೆಪ್ಪೆಯನ್ನು ಹಲವು ಸಲ ಮುಚ್ಚಿ ಮುಚ್ಚಿ ತೆರೆಯುತ್ತೇವೆ. ಆದರೂ ಇಲ್ಲಿ ನಾವು ನೋಡುವ ಕ್ರಿಯೆಗೇ ಪ್ರಾಧಾನ್ಯ ಹೊರತು, ಮುಚ್ಚಿ ತೆರೆಯುವ ಕ್ರಿಯೆಗೆ ಹೇಗೆ ಪ್ರಾಧಾನ್ಯ ಇಲ್ಲವೋ ಹಾಗೆಯೇ ಜೀವನದಲ್ಲಿ ಜೀವನಕ್ಕೇ ಪ್ರಾಧಾನ್ಯವಿರುವುದು. ಮೃತ್ಯುವು ಜೀವನದಲ್ಲಿ ಈ ಮೇಲಿನ ಮುಚ್ಚಿ ತೆರೆಯುವ ಕ್ರಿಯೆಯಂತೆ, ಅಪ್ರಾಧಾನ್ಯವಾಗಿರುವುದು.

(ಸಶೇಷ)

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ: ಬಡ್ಡಿ ಸೇಕಡಾ 5ರಂತೆ: ರೂ. 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100—00 ಒದಗಿಸುವುದು.

ಕರೆ, ಚಿಕ್ಕ ಪ್ಯಾಸ್, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಸೇಕಡಾ 5¼ರ ವರೆಗೆ.

ತಾ. 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK LTD.

Estd: 1920

ಸೂಚನೆ

"ನವಯುಗ"ದಲ್ಲಿ ಪ್ರಕಟನೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

ಕಾರಂತರ ಪುಸ್ತಕಗಳು

ಅಳಿದ ಮೇಲೆ (ಹೊಸ ಕಾದಂಬರಿ)	2_75
ಪಂಚಮುಖ (ಕಾದಂಬರಿ)	2_50
ನಮ್ಮ ಸುತ್ತಲಿನ ಕಡಲು	1_75
ಪರಮಾಣು—ಇಂದು—ನಾಳೆ	8_00

ಸಿಗುವ ಸ್ಥಳ:
ನವಭಾರತ ಬುಕ್ ಡಿಪೊ, ಉಡುಪಿ.

ವಿಚಾರ ವರ್ಷ:

ನಡುಕ ಬರಿಸುವ ಭೂಕಂಪನಗಳು

ವಿಜ್ಞಾನವು ಸತ್ಯ ಶೋಧನೆಗೆ ತೊಡಗಿದಂತೆ ಪ್ರಾಚೀನ ಕಲ್ಪನೆಗಳು ದೂರವಾಗುತ್ತ ಬಂದುವು. ಭೂಕಂಪದ ಬಗ್ಗೆಯೂ ನಮ್ಮ ಪೂರ್ವಜರ ಕಲ್ಪನೆಯನ್ನು ವಿಜ್ಞಾನವು ತಲೆಕೆಳಗಾಗಿಸದೆ ಬಿಟ್ಟೀತೆ?

ಪೌರಾಣಿಕರ ಅಧಿಕಾರ ಕಕ್ಷೆಯಿಂದ ವಿಜ್ಞಾನಿಗಳು ಈಗಾಗಲೇ ಹಲವಾರು ಪ್ರಶ್ನೆಗಳನ್ನು ಸೆಳೆದುಕೊಂಡಿದ್ದಾರೆ. ಇವುಗಳಲ್ಲಿ ಭೂಕಂಪವೂ ಒಂದು. ಮಹಾಶೇಷನು ತಲೆ ತಗ್ಗಿಸುವಾಗ ಅಥವಾ ದಿಗ್ಗಜಗಳು ಕುಂಭಸ್ಥಳವನ್ನು ಸಂಕೋಚಗೊಳಿಸಿದಾಗ ಭೂಕಂಪವಾಗುತ್ತಿತ್ತೆಂಬುದನ್ನು ನಿಶ್ಚಿತಪಡಿಸುವುದು ಮಹಾ ಮಹಾ ವಿದ್ವಾಂಸರಿಗೂ ಅಸಾಧ್ಯವೆನಿಸಿತ್ತು. ಆದರೆ, ಇಂದು ಭೂಕಂಪವು ಪ್ರಾಕೃತಿಕ ಘಟನೆಯೆಂಬುದನ್ನು ಪುಟ್ಟ ಬಾಲಕನೂ ಹೇಳಬಲ್ಲ.

ಹೀಗಿದ್ದರೂ ವೈಜ್ಞಾನಿಕರು ಇಂದಿಗೂ ಭೂಕಂಪದ ನಿಜವಾದ ಕಾರಣವನ್ನು ಹೇಳಲು ಸಾಮರ್ಥ್ಯ ಪಡೆದಿಲ್ಲ. ಇದುವರೆಗೆ ತಿಳಿದು ಬಂದಿರುವುವುಗಳನ್ನು ಹೀಗೆ ಹೇಳಬಹುದು.

(ಅ) ತಣ್ಣಗಾಗುವ ಪ್ರಕ್ರಿಯೆಯಿಂದ ಪೃಥ್ವಿಯು ಕೆಲವೆಡೆ ಅಧಿಕ ಸಂಕೋಚಗೊಳ್ಳುತ್ತದೆ, ಮತ್ತೆ ಕೆಲವೆಡೆ ಅಲ್ಪ. ಇದರಿಂದಾಗಿ ಭೂಪಟಲವು ಕ್ಷತ-ವಿಕ್ಷತವಾಗುತ್ತದೆ. ಈ ಪ್ರಕ್ರಿಯೆಯ ಆಘಾತದಿಂದಲೇ ಪ್ರಾಯಃ ಭೂಕಂಪವಾಗುತ್ತದೆ.

(ಆ) ಕೆಲವೊಮ್ಮೆ ಭೂಗರ್ಭದಲ್ಲಿ ಸೇರಿಕೊಂಡ ನೀರು ಉಗಿಯ ರೂಪ ಧರಿಸುತ್ತದೆ. ಆಗ, ಭೂಗರ್ಭದ ಧಾತು ನಿರ್ಮಿತ ಬಂಡೆಗಳು ಕರಗುತ್ತವೆ. ಈ ಉಗಿ ಮತ್ತು ದ್ರವಗಳು ಹರಡುತ್ತ ಭೂಪಟಲದ ಮೇಲೆ ಆಘಾತವನ್ನು ಮಾಡಿದಾಗ, ಪೃಥ್ವಿಯಲ್ಲಿ ಕಂಪನವುಂಟಾಗುತ್ತದೆ.

(ಇ) ಆಗಾಗ, ಜ್ವಾಲಾಮುಖಿಯು ವಿಸ್ಫೋಟಗೊಳ್ಳುವಾಗ ಆಗುವ ಭೀಷಣ ಗಡಬಡ ಶಬ್ದದಿಂದ ನಾದದ ಅಲೆಗಳು ಎದ್ದು ಇವುಗಳ ಶಕ್ತಿಯಿಂದಲೂ ಭೂಮಿ ನಡುಗತೊಡಗುವುದು.

ಮೊದಲೆರಡು ಕಾರಣಗಳಿಂದಾಗುವ ಭೂಕಂಪಗಳನ್ನು ಅಭಿವಿವರ್ತನಿಕ ಭೂಕಂಪವೆಂದೂ ಮೂರನೆಯ ಕಾರಣದಿಂದಾಗುವುದನ್ನು ಜ್ವಾಲಾಮುಖೀಯ ಭೂಕಂಪವೆಂದೂ ಹೆಸರಿಸುತ್ತಾರೆ.

ಭೂಮಿಯ ಅಂತರಾಳದಲ್ಲಿ ಅಧಿಕ ಭಾರದಿಂದಾಗಿ ಬಂಡೆಗಳು ಯಾವಾಗಲೂ ಒಡೆದು ಕೆಳಗೆ ಕುಸಿಯುತ್ತ ಹೋಗುತ್ತವೆ. ಒಡೆಯುವ ಶಿಲೆಗೆ ಸಮೀಪವಿರುವ ಭೂಭಾಗವು ಅಧಿಕವಾಗಿ ಕಂಪಿತವಾಗುವುದು.

ಕೆಲವು ಸಾವಿರ ವರ್ಷಗಳಿಗೆ ಮೊದಲು ಭೂಕಂಪಗಳು ಅಧಿಕ ಭಯಂಕರವಾಗಿದ್ದುವೆಂದು ವಿಜ್ಞಾನಿಗಳು ಹೇಳುತ್ತಾರೆ. ಆಗ, ಭೂಮಿಯು ಇಂದಿಗಿಂತ ಹೆಚ್ಚು ಬಿಸಿಯಾಗಿದ್ದು ಬಂಡೆಗಲ್ಲುಗಳು ಒಡೆಯುತ್ತಿದ್ದುವು; ಹೊಸ ಹೊಸ ಪರ್ವತಗಳು ನಿರ್ಮಾಣಗೊಳ್ಳುವುದು ಆಗ ಸಾಮಾನ್ಯ ವಿಷಯವಾಗಿತ್ತು.

ಜ್ವಾಲಾಮುಖೀಯ ಭೂಕಂಪಗಳು ಬಹು ವಿಸ್ತಾರಕ್ಕೆ ಹರಡುವುದಿಲ್ಲ. ಅವು ಕೇವಲ ಸೀಮಿತ ಪ್ರದೇಶದ ಮೇಲೆ ಮಾತ್ರ ಪ್ರಭಾವ ಬೀರುವುವು. ಸಾಮಾನ್ಯವಾಗಿ ರುದ್ರ ಭಯಾನಕವಾದ ದುಷ್ಪರಿಣಾಮಕ್ಕೆ ಕಾರಣೀಭೂತವಾದ ಭೂಕಂಪಗಳೆಲ್ಲವೂ ಭೂಗರ್ಭದೊಳಗಿನ ಬಂಡೆಗಳು ಒಡೆಯುವುದರಿಂದಲೇ ಆಗುತ್ತವೆ.

ಭೂಕಂಪದ ಕೇಂದ್ರ ಸ್ಥಾನ ಭೂಮಿಯ ಮೇಲ್ಪದರಿನಿಂದ ಬಹು ಆಳದಲ್ಲಿರುವುದೆಂದು ಜನರು ಸಾಮಾನ್ಯವಾಗಿ ತಿಳಿಯುತ್ತಾರೆ. ಆದರೆ, ಭೂಗರ್ಭ ಶಾಸ್ತ್ರವೇತ್ತರು ಸಂಶೋಧನೆಗಳನ್ನು ನಡೆಸಿ ಹೈಪೋ (ಭೂಕಂಪದ ಕೇಂದ್ರ ಸ್ಥಾನ)ವು ಹೆಚ್ಚೆಂದರೆ, ಮೇಲ್ಮೈಳದಿಂದ ೨೦ ಮೈಲುಗಳಡಿಯಲ್ಲಿರುವುದೆಂದು ಕಂಡು ಹಿಡಿದಿದ್ದಾರೆ. ಪ್ರಾಯಃ ೫ರಿಂದ ೧೦ ಮೈಲುಗಳ ಆಳದಲ್ಲಿ ಬಂಡೆಗಳು ಒಡೆದು ಕುಸಿಯುತ್ತವೆ. ಹೈಪೋ ಕೇಂದ್ರದ ನೇರ ಮೇಲಿರುವ ಸ್ಥಾನವನ್ನು ಭೂಕಂಪದ ಅಧಿಕೇಂದ್ರವೆನ್ನುತ್ತಾರೆ. ಭೂಕಂಪನದಿಂದ ಪೃಥ್ವಿಯಲ್ಲಿ ಮೂರು ವಿಧದ ತರಂಗಗಳು ಉತ್ಪನ್ನವಾಗುತ್ತವೆ.

(ಅ) ಧರಾತಲದ ತರಂಗಗಳು:— ಈ ತರಂಗಗಳು ಭೂಮಿಯ ಮೇಲ್ಪದರಿನಲ್ಲಿ ಮುಂದುವರಿಯುವುವು. ಭೂಕಂಪದ ಸಮಯ ನಮ್ಮ ಅನುಭವಕ್ಕೆ ಬರುವ ಕಂಪನವೆಂದರೆ ಇದೇ. ಉತ್ಪತ್ತಿಸ್ಥಾನದಿಂದ ಭೂಕಂಪಕೇಂದ್ರಕ್ಕೆ ಬಂದು, ಭೂಮಿಯ ಹೊರಭಾಗದಲ್ಲಿ ಸುತ್ತುವರಿಯುತ್ತದೆ. ಇದರಿಂದಾಗಿಯೇ ಈ ತರಂಗಗಳ ಪ್ರಭಾವವು ಕೆಲವೆಡೆ ದುಬಾರಿಯಾಗಿ ಬೀಳುವುದೂ ಇದೆ. ಇವು ಪ್ರತಿ ಸೆಕುಂದಿಗೆ ಎರಡು ಮೈಲು ದೂರ ಧಾವಿಸುತ್ತವೆ. ಬಹು ಆಳದವರೆಗೆ ಇವುಗಳ ಪ್ರಭಾವ ಪರಿಣಾಮ ಬೀಳುವುದೂ ಇಲ್ಲ. ಕೆಳ ಕೆಳಗೆ ಇಳಿದಂತೆ ಇವು ಶಾಂತವಾಗುತ್ತ ಬರುತ್ತದೆ. ಜನ—ಧನ ನಷ್ಟವು ಹೆಚ್ಚಾಗಿ ಈ ವಿಧದ ತರಂಗಗಳಿಂದಲೇ ಆಗುವುದು.

(ಆ) ಪ್ರಧಾನ ಅಥವಾ ದೀರ್ಘ ತರಂಗಗಳು:— ತೆರೆಗಳ ದಿಕ್ಕಿನಲ್ಲಿ ಅಣುಗಳು ಈ ತರಂಗಗಳ ಮೂಲಕ ಕಂಪಿಸ ತೊಡಗುತ್ತವೆ. ಒಂದು ರಬ್ಬರಿನ ತುಂಡನ್ನು ಇಕ್ಕಡೆಗಳಿಂದಲೂ ನಾವು ಹಿಡಿದೆಳೆದರೆ, ರಬ್ಬರಿನ ಉದ್ದಕ್ಕೆ ಎಳೆತ ಬೀಳುವುದು. ಪ್ರಧಾನ ತರಂಗಳಲ್ಲಿಯೂ ಇದೇ ರೀತಿ ತರಂಗಗಳ ಉದ್ದಕ್ಕೆ ಕಂಪನವಾಗುವುದು. ಮಧ್ಯ ಭಾಗದ ಧನತ್ವಯು ಅಧಿಕವಾದಂತೆ ಕಂಪನ ಲಹರಿಗಳು ಅಷ್ಟೇ ವೇಗಯುತವಾಗುತ್ತವೆ. ಈ ತರಂಗಗಳ ವೇಗವು ಮಧ್ಯ ಭಾಗದಲ್ಲಿ ೫ರಿಂದ ೯ ಮೈಲುಗಳಷ್ಟು ಒಂದು ಸೆಕುಂದಿಗೆ ಇರುವುದು.

(ಇ) ಅನುಪ್ರಸ್ಥ ತರಂಗಗಳು: ರಬ್ಬರಿನ ಒಂದು ತೆಳ್ಳಗಿನ ಉದ್ದದ ತುಂಡನ್ನು ಉದ್ದಕ್ಕೆ ಎಳೆಯುವ ಬದಲು ವಿರುದ್ಧ ಕಡೆಗಳನ್ನು ಒಂದು ಗೂಡು ಮ್ಯಾಂತೆ ಎಳೆದರೆ, ಆಗ ತರಂಗಗಳು ಏಳುವುವು. ಆದರೆ, ಇವುಗಳ ವೇಗವು ಪ್ರಧಾನ ತರಂಗಗಳಿಗಿಂತ ಕಡಿಮೆ. ಇವು ದ್ರವಗಳ ಮೂಲಕ ಪ್ರವಹಿಸುವುದಿಲ್ಲ.

ಭೂಕಂಪ ನಡೆಯುವ ಭೂಮಿಯ ಚಿತ್ರವನ್ನು ನಾವು ಅವಲೋಕಿಸುವಾಗ ಕೆಲವೆಡೆ ವಿಶೇಷ ರೂಪದಲ್ಲಿ ಅವು ಸಂಭವಿಸುತ್ತವೆ; ಮತ್ತೆ ಕೆಲವೆಡೆ ಅಪರೂಪವಾಗಿ ಪರ್ವತ ಮತ್ತು ಸಮುದ್ರ ತಟಗಳಿಗೂ ಭೂಕಂಪಕ್ಕೂ ನಿಕಟ ಸಂಬಂಧವಿದೆಯೆಂದು ಅಧ್ಯಯನದಿಂದ ತಿಳಿದು ಬಂದಿದೆ. ಭೂಮಿಯಲ್ಲಿ ಭೂಕಂಪ ಕ್ಷೇತ್ರವು ಎರಡು ಪಟ್ಟಿಗಳಲ್ಲಿ ಹಂಚಿಹೋಗಿದೆ. ಒಂದು ಶಾಂತಸಾಗರವನ್ನು ಸುತ್ತುವರಿದಿದೆ. ಇದೇ ಪ್ರದೇಶದಲ್ಲಿ ಜ್ವಾಲಾಮುಖಿ ಪರ್ವತಗಳಿವೆ.

ಇನ್ನೊಂದು ಪಟ್ಟಿಯು ಹೊಸತಾಗಿ ನಿರ್ಮಿತವಾದ ನೆರಿಗೆ ಪರ್ವತಗಳ ಸಾಲಿನಲ್ಲಿ ಭೂಮಧ್ಯ ರೇಖೆಗೆ ಸಾಮಾನ್ಯ ಸಮಾನಾಂತರವಾಗಿದೆ. ಇದರ ಬಹುಭಾಗ ಜ್ವಾಲಾಮುಖಿ ಕ್ಷೇತ್ರಗಳಿಂದ ಸಾವಿರಾರು ಮೈಲು ದೂರವಿದೆ. ಭೂಮಧ್ಯಸಾಗರದ ಕ್ಷೇತ್ರ ಮತ್ತು ಹಿಮಾಲಯ ಪರ್ವತಗಳೂ ಈ ಪಟ್ಟಿಯೊಳಗೆ ಬರುತ್ತವೆ.

ಭೂಕಂಪಗಳು ಅಧಿಕಾಧಿಕವಾಗಿ ಸಂಭವಿಸುತ್ತಿರುವ ಜಪಾನ್, ಇಟೆಲಿ, ಯೂನಾನ್ ಮೊದಲಾದ ದೇಶಗಳಲ್ಲಿ ಸಹನಾಶಕ್ತಿಯು ಸ್ವಾಭಾವಿಕವಾಗಿ ಜನರಲ್ಲಿ ಬಂದಿದೆ. ಇಡಿಯ ಪ್ರಪಂಚದಲ್ಲಿ ಅತ್ಯಧಿಕ ಭೂಕಂಪ ಸಂಭವಿಸುವ ದೇಶವೆಂದರೆ ಜಪಾನ್. ಇದರ ರಾಜಧಾನಿ ಟೋಕಿಯೋವಿನಲ್ಲಿ ಪ್ರತಿ ಎರಡು—ಮೂರು ದಿನಗಳಿಗೊಂದು ಭೂಕಂಪವಾಗುವುದು. ಭೂಕಂಪದ ಅನುಭವದಿಂದ ಇದರಿಂದ ಹೆಚ್ಚಿನ ಪರಿಣಾಮಕ್ಕೆ ಗುರಿಯಾಗದಂತಹ ರೀತಿಯಲ್ಲಿ ಜನರು ತಮ್ಮ ಮನೆಗಳನ್ನು ಕಟ್ಟಿಕೊಳ್ಳುತ್ತಾರೆ. ಭಾರತದಂತಹ ರಾಷ್ಟ್ರದಲ್ಲಿ ಭೂಕಂಪವಾಗುವುದು ಅಪರೂಪಕ್ಕೊಮ್ಮೆ. ಇದರಿಂದಾಗಿ ಅವುಗಳಿಂದಾಗುವ ಹಾನಿಯಾದರೂ ಅತ್ಯಧಿಕವಾಗುವುದು. ೧೯೩೪ರಲ್ಲಿ ನಡೆದ ಬಿಹಾರದ ಭೂಕಂಪದ ನೆನಪನ್ನು ಮಾಡಿಕೊಂಡರೆ, ನಮ್ಮ ಮೈ ಇಂದಿಗೂ ಜುಮ್ಮೆನ್ನುವುದು. ಅಸಾಮಿನಲ್ಲಿ ೧೮೯೭ರಲ್ಲಿ ಆದ ಕಂಪನವು ಮಾನವೀಯ ಹಾಸದಲ್ಲಿ ಅತಿ ವಿಧ್ವಂಸಕಾರಿಯಾಗಿತ್ತು ಎನ್ನಲಾಗುತ್ತಿದೆ.

ಅಧಿಕ ಭೂಕಂಪ ನಡೆಯುವ ದೇಶಗಳಲ್ಲಿ ನಿಯತ ಅವಧಿಯೊಳಗೆ ಭೂಕಂಪವು ಪುನರಾವೃತ್ತಿಗೊಳ್ಳುತ್ತಿರುವುದು ಕಂಡು ಬರುತ್ತದೆ. ಜಪಾನಿನ ಭೂಕಂಪೇತಿಹಾಸವನ್ನು ನಾವು ಅಭ್ಯಸಿಸುವಾಗ ಅಲ್ಲಿ ಪ್ರತಿ ೧೦ನೆಯ ವರ್ಷದಲ್ಲಿ ಬಹು ದೊಡ್ಡ ಭೂಕಂಪವಾಗುವುದೆಂದು ತಿಳಿಯುತ್ತದೆ. ಈ ದೊಡ್ಡ ಭೂಕಂಪವು ಸಾಮಾನ್ಯತಃ ಚಳಿಗಾಲದಲ್ಲೇ ಸಂಭವಿಸುವುದು. ಅಮಾವಾಸ್ಯೆ ಇಲ್ಲವೇ ಪೂರ್ಣಿಮೆಯ ದಿವಸ ಇದು ಘಟಿಸುವ ಸಂಭವ ಹೆಚ್ಚು. ಭಾರತದಲ್ಲಿ ವಿಧ್ವಂಸಕಾರಿ ಭೂಕಂಪಗಳು ಹಿಮಾಲಯದ ತಪ್ಪಲ ಸಮೀಪದಲ್ಲಿಯೇ ನಡೆಯುತ್ತವೆ.

ಸಾವಿರಾರು ವರ್ಷಗಳ ಪರಿಶ್ರಮದಿಂದ ನಿರ್ಮಿಸಿದ ಸೊತ್ತುಗಳನ್ನು ಭೂಕಂಪಗಳು ಕ್ಷಣ ಮಾತ್ರದಲ್ಲಿ ನಷ್ಟಗೊಳಿಸುತ್ತವೆ. ಜೀವನ ಕ್ಷಣಿಕವೆಂಬ ಪಾಠವನ್ನು ಕಲಿಸುತ್ತವೆ. ಆದರೆ, ಇದರಿಂದ ಕೆಲವೊಂದು ಹಿತಕಾರೀ ಪರಿಣಾಮಗಳೂ ಇವೆ. ಭೂಮಿಯ ಮೇಲ್ಭಾಗದಲ್ಲಿರುವ ಸರ್ವ ಪ್ರಕಾರದ ವಿಕಾರಗಳು—ಪರ್ವತ, ಬಯಲು, ಸರೋವರ, ಕೊಲ್ಲಿ, ದ್ವೀಪ ಮೊದಲಾದುವುಗಳು— ಭೂಕಂಪಗಳಿಂದಲೇ ಆದುವು. ಭೂಗರ್ಭದಲ್ಲಿ ಬಹು ಆಳದಲ್ಲಿ ಹುದುಗಿರುವ ವಿವಿಧ ಪ್ರಕಾರದ ಧಾತುಗಳ ಸೆಲೆಯನ್ನು ಭೂಕಂಪ ಪ್ರಕ್ರಿಯೆಯೇ ಧರಾತಳಕ್ಕೆ ಸಮೀಪ ತರುತ್ತದೆ. ಮಾನವನು ಅವನ್ನು ಅತೀವ ಸುಲಭವಾಗಿ ಉಪಯೋಗಿಸಿಕೊಳ್ಳಬಹುದು.

ಸ್ವಲ್ಪ ಸ್ವಲ್ಪವಾಗಿ, ಆಲ್ಲೊಮ್ಮೆ ಇಲ್ಲೊಮ್ಮೆ, ನೀವು ಉಳಿಸುತ್ತಿರುವ ಹಣವು
ಬೇಗ ಬೇಗನೆ ವೃದ್ಧಿಗೊಂಡು, ನಿಮ್ಮ ಭವಿಷ್ಯದ ಭದ್ರತೆಯು
ಹೆಚ್ಚೆಚ್ಚಾಗಿ ಪರಿಣಮಿಸುವಂತೆ

ಕೊಪೊರೇಶನ್ ಬೇಂಕು

ನಿಮ್ಮ ಸೇವಿಂಗ್ಸ್ ಬೇಂಕ್ ಎಕೌಂಟುಗಳ ಮೇಲೆ ಇನ್ನು ಮುಂದಕ್ಕೆ
ಸಾಲಿಯಾನ್ ಸೇಕಡಾ 3 ರ ದರದಲ್ಲಿ ನಿಮಗೆ ಬಡ್ಡಿ ಕೊಡುವುದು.

ವಿವರಗಳಿಗೆ ವಿಚಾರಿಸಿರಿ:

ದಿ. ಕೆನರಾ ಬೇಂಕಿಂಗ್ ಕೊಪೊರೇಶನ್ ಲಿಮಿಟೆಡ್

(ಸ್ಥಾಪನೆ: 1906) (ರಜಿಸ್ಟರ್ಡ್ ಆಫೀಸು: **ಉಡುಪಿ**

ಆಡಳಿತ ಆಫೀಸು: **ಮಂಗಳೂರು—1**

ಕಾಮ ವಿಜ್ಞಾನದ ಮಾಹಿತಿಗಾಗಿ ಡಾ| ಎಂ. ಗೋಪಾಲಕೃಷ್ಣ ರಾಯರಿಂದ ಸಂಪಾದಿತವಾದ

ಕಲಿಯುಗ

ಸಂಪುಟವನ್ನು ಅವಶ್ಯ ಓದಿರಿ.
ಉತ್ತಮವಾಗಿ ಬೈಂಡು ಮಾಡಿದ
ವರ್ಷ, ವರ್ಷಗಳ ಸಂಚಿಕೆಗಳು.
ನೂತನ ದಂಪತಿಗಳಿಗಂತೂ ಬೇಕಾದ
ಅಪೂರ್ವ ಸಂಗ್ರಹ.
ಪ್ರತಿ ಸಂಪುಟದ ಬೆಲೆ ರೂ. 4=50
ಅಂಚೆ ವೆಚ್ಚ ರೂ. 1=50.
ಕೆಲವೇ ಪ್ರತಿಗಳಿವೆ. ತ್ವರೆ ಮಾಡಿರಿ

ನವಭಾರತ ಪುಸ್ತಕ ಭಂಡಾರ,
ಉಡುಪಿ.

ವರ್ಗ—ಊಳಿಗ

ಮೊದಲಾದ ಯಾವತ್ತೂ ತರದ

ಎಕೌಂಟ್ ಪುಸ್ತಕಗಳು

ಶಾಲಾ ರಿಜಿಸ್ಟ್ರಗಳು,
ಫಾರ್ಮುಗಳು,
ದೊರೆಯುತ್ತವೆ.

ವಿಚಾರಿಸಿರಿ—
ನವಯುಗ ಪ್ರೆಸ್, ಉಡುಪಿ

> ಪರೀಕ್ಷೆಯಲ್ಲಿ ಉತ್ತೀರ್ಣನಾಗುವುದೇ ವಿದ್ಯಾಭ್ಯಾಸದ ಚರಮ ಉದ್ದೇಶವಲ್ಲ; ಬುದ್ಧಿಯ ವಿಕಾಸವಾಯಿತೆಂದರೆ, ಆಗಲೇ ವಿದ್ಯಾರ್ಥಿಯ ಸಾರ್ಥಕವಾದಂತೆ.

ನವಯುಗ

೪೦ ವರುಷ	ಉಡುಪಿ ೧೮-೫-'೬೧	ವಾರ ೩೬

ಭಾವಾವೇಶ ಕೂಡದು

ರಾಜ್ಯದ ಮುಖ್ಯಮಂತ್ರಿ ಶ್ರೀ ಬಿ.ಡಿ. ಜತ್ತಿಯವರು ಇತ್ತೀಚೆಗೆ ಒಂದೆಡೆ ಭಾಷಣ ಮಾಡುತ್ತಿರುವಾಗ "ಹಿಂದುಳಿದವರು ಮುಂದುವರಿಯುವ ಉದ್ವೇಗದಲ್ಲಿ ಈಗಾಗಲೇ ಮುಂದುವರಿದವರನ್ನು ದೂಷಿಸುವುದು ಸರಿಯಲ್ಲ. ಇತರರ ಸಹಾನುಭೂತಿಯನ್ನು ಗಳಿಸದೆ ಹೋದರೆ ಹಿಂದುಳಿದವರು ಅದೆಷ್ಟೇ ಪ್ರಯತ್ನ ನಡೆಸಿದರೂ ಮುಂದುವರಿಯುವುದು ಸಾಧ್ಯವಿಲ್ಲ" ಎಂದು ಅಭಿಪ್ರಾಯಪಟ್ಟಿದ್ದಾರೆ. ನಿಜವಾದ ಹಿಂದುಳಿದವರು ಆರ್ಥಿಕವಾಗಿ, ಸಾಮಾಜಿಕವಾಗಿ ಮುಂದುವರಿಯಬೇಕೆಂಬ ಮಾತು ವಿವಾದಾತೀತವಾಗಿದೆ. ಇದು ಬಹು ಸಮಯದ ಹಿಂದೆಯೇ ನಾವು ಒಪ್ಪಿಕೊಂಡ ಮಾತು. ಆದರೆ, ಹಿಂದುಳಿದವರನ್ನು ವರ್ಗೀಕರಿಸುವುದು ಹೇಗೆ ಎಂಬ ಒಂದಂಶಮಾತ್ರ ಇನ್ನೂ ತೀರ್ಮಾನಕ್ಕೆ ಬಾರದ, ಒಮ್ಮತಕ್ಕೆ ನಿಲುಕದ ಪ್ರಶ್ನೆಯಾಗಿದೆ.

ನಮ್ಮ ಸಂವಿಧಾನದಲ್ಲಿ ಪ್ರತಿಯೊಬ್ಬ ನಾಗರಿಕನಿಗೂ ಸಮಾನಾವಕಾಶವನ್ನು ಕೊಡಮಾಡಲಾಗಿದೆ. ಹಾಗಿದ್ದರೂ ರಾಜ್ಯ ಸರಕಾರಕ್ಕೆ 'ಹಿಂದುಳಿದವರು' ತನ್ನ ರಾಜ್ಯದಲ್ಲಿದ್ದಾರೆಂದು ಕಂಡು ಬಂದರೆ, ಅವರಿಗೆ ವಿಶೇಷ ರಕ್ಷಣೆ ನೀಡುವ ಅವಕಾಶವಿದೆ. ಈಗ ಜಾತೀಯ ತಳಹದಿಯಲ್ಲಿ ಈ ಹಿಂದುಳಿದವರು ಯಾರೆಂಬುದನ್ನು ನಿರ್ಧರಿಸುವ ತತ್ವವನ್ನು ಅನುಸರಿಸಲಾಗುತ್ತಿದ್ದು ಇದು ದೋಷಪೂರ್ಣವಾಗಿದೆಯೆಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಜಾತೀಯತೆಯೊಂದು ಪರಂಪರೆಯೇ ಹೊರತು ಅದು ಹಿಂದುಳಿದಿರುವಿಕೆಯ ಮಾನದಂಡವಾಗುವುದು ಸಾಧ್ಯವಿಲ್ಲ. ಜಾತೀಯತೆಯನ್ನು ಅನುಲಕ್ಷಿಸಿ ನಾವಿಂದು ಯಾರೊಬ್ಬನಿಗೂ ಮನ್ನಣೆ ಕೊಡುವುದಿಲ್ಲ. ನಮ್ಮ ಭಾರತವನ್ನು ಜಾತ್ಯತೀತರಾಷ್ಟ್ರವನ್ನಾಗಿ ಕಟ್ಟುವುದು ನಮ್ಮ ಉದ್ದೇಶವಿರುವಾಗ, ಜಾತೀಯತೆಯಿಂದ ಆಗುತ್ತಿರುವ ಅನಾಹುತಗಳನ್ನು ನಾವು ಕಾಣುತ್ತಿರುವಾಗ ಜಾತಿಯಿಂದ ಮುಂದುವರಿದವರು— ಹಿಂದುಳಿದವರು ಎಂಬ ನೀತಿಯನ್ನು ನಿರ್ಧರಿಸುವುದು. ಸಂವಿಧಾನವು ಕೊಡಮಾಡಿದ ಅವಕಾಶವನ್ನು ಸರಿಯಾಗಿ ಉಪಯೋಗಿಸಲಾಗುತ್ತಿಲ್ಲ. ಶಿಕ್ಷಣ, ದಾರಿದ್ರ್ಯ, ಶ್ರೀಮಂತಿಕೆ, ನೌಕರಿ, ಉದ್ಯೋಗ—ಇಂಥ ವಿಷಯಗಳಲ್ಲಿ ಕೇವಲ ಒಂದು ಜಾತಿಯವರ ಪಾಲಿಗೆ ಮಾತ್ರ ಸೇರಿದ್ದ ಗುತ್ತಿಗೆಗಳಲ್ಲ. ಎಲ್ಲ ಜಾತಿಗಳ ಜನರಲ್ಲಿಯೂ ಇವುಗಳಲ್ಲಿ ಮುಂದುವರಿದವರೂ ಇದ್ದಾರೆ; ಹಿಂದುಳಿದವರೂ ಇದ್ದಾರೆ. ಹಾಗಿರುವಾಗ ಒಂದು 'ಮುಂದುವರಿದ ಜಾತಿ'ಯಲ್ಲಿ ಹುಟ್ಟಿದನೆಂಬ ಒಂದೇ ಕಾರಣದಿಂದ ಒಬ್ಬ ಬಡವನನ್ನು ಹಿಂದಕ್ಕೆ ತಳ್ಳುವುದು ಸಾಮಾಜಿಕ ಅನ್ಯಾಯವಾಗಿದೆ. ಹಿಂದುಳಿದವರಾಗಲೀ ಮಾನ್ಯ ಮಂತ್ರಿಗಳೆಂದಂತೆ ತಾವು ಮುಂದುವರಿಯುವ ಭರದಲ್ಲಿ ಇತರರನ್ನು ಎದುರಿಸಿ ನಡೆಯುವುದರಿಂದ ಸಾಮಾಜಿಕ ದುಷ್ಪರಿಣಾಮವಾಗುತ್ತದೆ. ಇದರಿಂದ ಯಾರೇ ಆಗಲಿ, ತಮ್ಮ ಅನರ್ಹತೆಯನ್ನು ಮತ್ತು ಸಂಕಷ್ಟಗಳನ್ನು ದೂರಮಾಡುವಾಗ, ಮತ್ತೊಬ್ಬರನ್ನು ಅದಕ್ಕೆ ತಳ್ಳುವಂತೆ ಉದ್ವೇಗಪಡಬಾರದು; ಭಾವಾವೇಶಕ್ಕೆ ಗುರಿಯಾಗಬಾರದು.

ಪರರ ಸಹಾನುಭೂತಿಯನ್ನು ಗಳಿಸುವುದರಿಂದಲೇ ಉದ್ದೇಶ ಸಾಧನೆಯ ಮಾರ್ಗ ಸುಗಮವಾಗುವುದೆಂಬುದು ನಾವು ಕಂಡುಕೊಂಡ ಸತ್ಯ. ಕೆಲವು ದಶಕಗಳ ಹಿಂದೆ ನಮ್ಮಲ್ಲಿ ಮನೆಮಾಡಿದ್ದ ಅಸ್ಪೃಶ್ಯತೆಯ ಬಗ್ಗೆ ಇಂದು ನಮ್ಮ ವಿಚಾರಧಾರೆ ಹೇಗಿದೆ? ಮಹಾತ್ಮಾ ಗಾಂಧಿಯವರ ಕಾರ್ಯಸಾಧನೆಯಿಂದ ಸಹಸ್ರಾರು ವರ್ಷಗಳಿಂದಲೂ ರಕ್ತಗತವಾಗಿ ಧರ್ಮ ಸಮ್ಮತವಾಗಿ ಬಂದಿರುವ ಈ ಪ್ರಶ್ನೆ ಇಂದು ಸರಳವಾಗುತ್ತ ಬರುತ್ತಿದೆ. ಇನ್ನು ಕೆಲವು ದಶಕಗಳಲ್ಲಿ ಅಸ್ಪೃಶ್ಯತೆಯು ದೂರವಾಗುವುದೆಂದು ಹಾರೈಸಬಹುದು. ಇದಕ್ಕೆ ಅಸ್ಪೃಶ್ಯರೆನಿಸಿದವರ ಸಾಧನೆಯಷ್ಟೇ ಕಾರಣವಲ್ಲ; ಅನ್ಯರು ಅವರ ದುರವಸ್ಥೆಯ ಬಗ್ಗೆ ಕನಿಕರಗೊಂಡು ತಮ್ಮ ವಿಚಾರವನ್ನೇ ಪರಿವರ್ತಿಸಿದುದೇ ಮುಖ್ಯ ಕಾರಣವಾಗಿದೆ. ಹೀಗೆ ಸವರ್ಣೀಯರ ಉದಾರತೆ ಮತ್ತು ಪ್ರೀತಿ ವಿಶ್ವಾಸಗಳಿಂದಲೇ ಈ ಸಮಸ್ಯೆ ದೂರವಾಗುತ್ತಿದೆ. ಇದೇ ಮಾದರಿಯಲ್ಲಿ ಹಿಂದುಳಿದವರನ್ನು ಮುಂದೆ ತರುವ ಕೆಲಸವೂ ಆಗಬೇಕಾಗಿದೆ. ಆರ್ಥಿಕ ಪ್ರಾಧಾನ್ಯವಿರುವ ಈ ಯುಗದಲ್ಲಿ ಒಂದು ಕುಟುಂಬದ ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗಳನ್ನೇ ಹಿಂದುಳಿದವರು ಯಾರು ಎಂದು ನಿರ್ಧರಿಸುವ ಮಾನದಂಡವೆನಿಸಬೇಕು. ರಾಜ್ಯಸರಕಾರ ಈಗ ಈ ಬಗ್ಗೆ ಅನುಸರಿಸುತ್ತಿರುವ ನೀತಿಯನ್ನು ಅವಶ್ಯ ಬದಲಾಯಿಸಬೇಕು ಹಾಗೆಯೇ, ಹಿಂದುಳಿದವರು ತಮಗೆ ಸರಕಾರವು ನೀಡುತ್ತಿರುವ ರಕ್ಷಣೆಯನ್ನು ನಂಬಿ ಭಾವಾವೇಶಯುತರಾಗಿ ವರ್ತಿಸುವುದನ್ನೂ ನಿಲ್ಲಿಸಬೇಕು. ಹೊಸ ಸಮಾಜರಚನೆಯ ಕಾರ್ಯದಲ್ಲಿ ಎಲ್ಲರೂ ಒಂದುಗೂಡಿ ಸಹಯೋಗ ನೀಡಬೇಕು.

ಪ್ರಗತಿಮಾರ್ಗ

೧೯೬೧ರ ಜನಗಣತಿಯಿಂದ ಭಾರತೀಯರೆಲ್ಲರೂ ಒಂದು ಸತ್ಯವನ್ನು ಕಂಡುಕೊಂಡಂತಾಗಿದೆ. ಅದರಲ್ಲಿ ದೊರೆತ ಅಂಕೆ ಸಂಖ್ಯೆಗಳು ನಮ್ಮನ್ನು ಮುಖ್ಯವಾಗಿ ನಮ್ಮ ನಾಯಕರನ್ನು ಚಿಂತೆಗೆ ಗುರಿಮಾಡಿವೆ. ಪ್ರತಿ ವರ್ಷವೂ ಸುಮಾರು ನೂರಕ್ಕೆ ಎರಡರಂತೆ ಏರುತ್ತಿರುವ ನಮ್ಮ ಜನಸಂಖ್ಯೆಯು ಮಹಾರಾಷ್ಟ್ರೀಯ ಸಮಸ್ಯೆಯಾಗಿದೆ. ಇದನ್ನು ಕೆಲವು ವರ್ಷಗಳ ಹಿಂದೆ ಕಂಡುಕೊಂಡ ನಮ್ಮ ನಾಯಕರು ಉತ್ಪಾದನೆಯ ಹೆಚ್ಚಳವನ್ನು ಸಾಧಿಸಲು ಹೆಣಗುತ್ತಿರುವಂತೆಯೇ ಕುಟುಂಬ ಯೋಜನೆಯ ಕಡೆಗೆ ಜನಮತವನ್ನು ಪಡೆಯಲು ಪ್ರಯತ್ನ ನಡೆಸುತ್ತಿದ್ದಾರೆ. ಮಿತಿಮೀರಿ ಬೆಳೆಯುತ್ತಿರುವ ಈ ಜನಸಂಖ್ಯೆಯನ್ನು ನಾವು ಇದೇ ಪ್ರಮಾಣದಲ್ಲಿ ಮುಂದೆಯೂ ಬೆಳೆಯಗೊಟ್ಟರೆ, ನಮ್ಮ ಅಭಿವೃದ್ಧಿ ಯೋಜನೆಗಳಿಂದ ಅಧಿಕಗೊಳ್ಳುವ ಸಂಪತ್ತೆಲ್ಲವೂ ಈ ಅವಧಿಯಲ್ಲಿ ಹೆಚ್ಚಿದ ಜನಸಂಖ್ಯೆಯ ಪಾಲನೆಗೆ ಮಾತ್ರ ಸಾಕಾದೀತು; ಆಗ, ನಮ್ಮ ಪ್ರಗತಿ ಅಸಾಧ್ಯವೇ. ಇದನ್ನು ತಡೆದು ನಾವು ಸರ್ವತೋಮುಖ ಅಭಿವೃದ್ಧಿ ಮಾಡಿಕೊಳ್ಳಬೇಕಾದರೆ, ಒಂದೇ ನಮ್ಮ ಯೋಜನೆಯ ಪ್ರಮಾಣವನ್ನು ಹೆಚ್ಚಿಸಬೇಕು; ಇಲ್ಲವೇ ಜನಸಂಖ್ಯೆಯ ಹೆಚ್ಚಳವನ್ನು ತಡೆಹಿಡಿಯಬೇಕು. ಆಂತರಿಕ ಸಂಪತ್ತುಗಳಿಂದ, ಯೋಜನೆಯ ರೂಪವನ್ನು ಇನ್ನೂ ಬೃಹತ್ತಾಗಿಸುವುದು ಅಸಾಧ್ಯವೆಂಬುದರಿಂದ ನಮ್ಮ ಮುಂದಿರುವ ಪರಿಹಾರ ಮಾರ್ಗ ಒಂದೇ— ಕುಟುಂಬ ಯೋಜನೆ. ಕುಟುಂಬ ಯೋಜನೆಯ ಬಗ್ಗೆ ಭಾರತೀಯರಲ್ಲಿರುವ ಭಾವನೆಗಳು ಏನೇ ಇರಲಿ, ಜನಸಂಖ್ಯೆಯ ಹೆಚ್ಚಳವನ್ನು ತಡೆಹಿಡಿಯುವ ಏಕಮೇವ ಉಪಾಯವು ಇದೊಂದೇ ಆದುದರಿಂದ ಈ ಕಡೆಗೆ ಅನುಕೂಲಾಭಿಪ್ರಾಯ ಮೂಡಿಸುವುದು ಅತ್ಯವಶ್ಯವಾಗಿದೆ. ಆದರಿಂದ ಅನುಚಿತ ಪರಿಣಾಮವಾಗದಂತೆ ಎಚ್ಚರವಹಿಸುವುದೂ ಅಗತ್ಯವಾಗಿದೆ.

ಸಂಕ್ಷಿಪ್ತ ಸುದ್ದಿಗಳು

ಸೌಲಭ್ಯ ಸಾಲದು

ಭಾರತದ ಮಹಿಳೆಯರಲ್ಲಿ ಸುಶಿಕ್ಷಿತರ ಸಂಖ್ಯೆ ಕಡಿಮೆಯಿರುವುದರಿಂದ ಸ್ತ್ರೀ ವಿದ್ಯಾಭ್ಯಾಸದತ್ತ ತೀವ್ರ ಗಮನ ಹರಿಸುವುದು ಅನಿವಾರ್ಯವಾಗಿದೆ. ಇದಕ್ಕಾಗಿ ಭಾರತದ ಮೂರನೆಯ ಯೋಜನೆಯಲ್ಲಿ ಮಹಿಳಾ ಶಿಕ್ಷಣದಲ್ಲಿ ಸಾಧಿಸಬೇಕಾದ ಗುರಿಯನ್ನು ಎತ್ತರದಲ್ಲಿ ನಿಟ್ಟುಕೊಂಡಿದೆ. ಗುರಿಯು ಹೆಚ್ಚಿನದಾಗಿದ್ದರೂ ಅದನ್ನು ಸಾಧಿಸಲು ಮೀಸಲಾಗಿಟ್ಟ ಹಣವು ಕಡಿಮೆಯೆನಿಸುವುದರಿಂದ ಈ ಮೊತ್ತವನ್ನು ಹೆಚ್ಚಿಸಬೇಕೆಂದು ಮಹಿಳಾ ಶಿಕ್ಷಣದ ರಾಷ್ಟ್ರೀಯ ಮಂಡಳವು ಶಿಫಾರಸು ಮಾಡಿದೆ. ತೃತೀಯ ಯೋಜನೆಯಲ್ಲಿ ಮಹಿಳೆಯರು ಮತ್ತು ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ಕೈಕೊಳ್ಳಬೇಕಾದ ವಿಶೇಷ ಕಾರ್ಯಕ್ರಮಗಳಿಗೆ ೧೧ ಕೋಟಿ ರೂಪಾಯಿಗಳನ್ನು ತೆಗೆದಿರಿಸಿದೆ.

ಕೊಲೆಗಡುಕರಿಗೆ ಶಿಕ್ಷೆ

ಸಿಂಹಳದ ಹಿಂದಿನ ಪ್ರಧಾನಿ ದಿವಂಗತ ಭಂಡಾರ ನಾಯಕೆಯವರನ್ನು ಕೊಲೆಮಾಡುವ ಸಂಚಿನಲ್ಲಿ ಸೇರಿದುದಕ್ಕಾಗಿ ಬುದ್ಧರಕ್ಷಿತ ಥೇರೋ ಇವರಿಗೆ ಮರಣ ದಂಡನೆಯನ್ನು ವಿಧಿಸಲಾಗಿದ್ದು ಜೂನ್ ೨೦ರಂದು ಗಲ್ಲಿಗೇರಿಸಲಾಗುವುದು. ಬೌದ್ಧಯತಿಯ ವೇಷದಲ್ಲಿ ವರಿಷ್ಠ ನ್ಯಾಯಾಲಯದ ಪಂಜರದಲ್ಲಿ ನಿಂತಿರುವ ಥೇರೊರನ್ನು ಬೇಡಿತೊಡಿಸಿ ಕರೆದೊಯ್ಯಲಾಯಿತು. ಪ್ರಧಾನ ಮಂತ್ರಿಗಳ ಕೊಲೆಗೆಯ್ದ ಸೋಮಾರ ಮಾಥೋರೋ ಹಾಗೂ ಎಚ್. ಪಿ. ಜಯವರ್ಧನೆಯವರಿಗೂ ಮರಣ ದಂಡನೆಯನ್ನು ವಿಧಿಸಲಾಗಿದೆ. ಬುದ್ಧರಕ್ಷಿತರು ಈ ಶಿಕ್ಷೆಯ ವಿರುದ್ಧ ಅರ್ಜಿಸಲ್ಲಿಸುವರೆಂದೂ ಉಳಿದಿಬ್ಬರು ಕ್ರಿಮಿನಲ್ ಅಪೀಲಿನ ಕೋರ್ಟಿಗೆ ಅರ್ಜಿ ಸಲ್ಲಿಸುವರೆಂದೂ ತಿಳಿದು ಬಂದಿದೆ.

ಕೃಷಿಗೆ ಮಹತ್ವ

ಭಾರತವು ಕೃಷಿ ಪ್ರಧಾನ ದೇಶವಾಗಿರುವುದರಿಂದ ಇದರ ಅಭಿವೃದ್ಧಿಗೆ ಔದ್ಯಮಿಕ ಪ್ರಗತಿಗಿಂತ ವ್ಯವಸಾಯಾಭಿವೃದ್ಧಿಯೇ ಪರಿಣಾಮಕಾರಿಯಾಗಿದೆ; ನಮ್ಮ ರೈತ ಜನರಲ್ಲಿ ಜಾಗ್ರತಿಯನ್ನುಂಟುಮಾಡಿ ಅವರಿಗೆ ಅಧಿಕಾಧಿಕ ಸೌಕರ್ಯಗಳನ್ನು ಒದಗಿಸುವುದರಿಂದ ಮಾತ್ರ ಈ ತೆರದ ಅಭಿವೃದ್ಧಿ ಸಾಧ್ಯವಾಗಿದೆ. ಇಂತಹ ಮಹತ್ವಪೂರ್ಣ ಪ್ರಗತಿಯನ್ನು ಸಾಧಿಸುವಲ್ಲಿ ಗ್ರಾಮ ಪಂಚಾಯತಿ, ಸಹಕಾರಿ ಸಂಘಗಳು, ನಿಯಂತ್ರಿತ ಪೇಟೆ ಮೊದಲಾದ ಸಾರ್ವಜನಿಕ ಸಂಸ್ಥೆಗಳು ವಿಶೇಷ ಆಸಕ್ತಿಯನ್ನು ತಳೆಯಬೇಕು— ಎಂದು ಶ್ರೀ ಮುರಾರ್ಜಿ ದೇಸಾಯರು ಗದಗದಲ್ಲಿ ಭಾಷಣ ಮಾಡುತ್ತ ಹೇಳಿದರು.

ಪ್ರತ್ಯೇಕ ಘಟಕ-ಗೋವೆ

ಪೋರ್ಚುಗೀಸ ಮುಷ್ಟಿಯಿಂದ ಹೊರಬಂದನಂತರ ಗೋವೆ, ದೀವ ಮತ್ತು ದಮನ್‌ಗಳು ಭಾರತ ಒಕ್ಕೂಟದಲ್ಲಿನ ಪ್ರತ್ಯೇಕ ಘಟಕವಾಗುವುದೆಂದು ಪ್ರಧಾನಿ ನೆಹರು ಉದ್ಗರಿಸಿದ್ದರು. ಈ ಘೋಷಣೆಯಿಂದ ಮಹಾರಾಷ್ಟ್ರೀಯರು ದಿಗಿಲುಗೊಂಡಂತವರಾದರೂ ಇದನ್ನು ಪೋರ್ಚುಗೀಸ ವಸಾಹತುಗಳ ಜನತೆಯು ಮನಃಪೂರ್ವಕವಾಗಿ ಸ್ವಾಗತಿಸಿದೆ. ಕೇಂದ್ರ ಸರಕಾರವು ಗೋವಾ ಪ್ರದೇಶದ ಜನತೆಯನ್ನು ಕಡೆಗಣಿಸಿಲ್ಲವೆಂಬುದಕ್ಕೆ ಪ್ರಧಾನಿ ನೆಹರುರವರ ಹೇಳಿಕೆಯು ಸುಸ್ಪಷ್ಟ ಆಧಾರವೆಂದು ಅದು ಸಂತುಷ್ಟವಾಗಿದೆ.

ದ. ಆಫ್ರಿಕೆಗೆ ಬಹಿಷ್ಕಾರ

ಆಫ್ರಿಕನ್ ರಾಷ್ಟ್ರಗಳ ನಾಯಕರು ಒಂದು ಸಮ್ಮೇಳನವನ್ನು ನಡೆಸಿದ್ದಾರೆ. ದಕ್ಷಿಣ ಆಫ್ರಿಕೆಯ ವರ್ಣಭೇದ ನೀತಿಯನ್ನು ಈ ಸಮ್ಮೇಳನವು ಬಲವಾಗಿ ಖಂಡಿಸಿತು. ದಕ್ಷಿಣ ಆಫ್ರಿಕೆಯ ಮೇಲೆ ರಾಜಕೀಯ ಹಾಗೂ ಆರ್ಥಿಕ ನಿರ್ಬಂಧನೆಗಳನ್ನು ಸಾಮೂಹಿಕವಾಗಿಯೂ ಹಾಗೂ ವೈಯಕ್ತಿಕವಾಗಿಯೂ ಕೂಡಲೇ ಹೇರಬೇಕೆಂದು ಆಫ್ರಿಕೆಯಲ್ಲಿಯ ಎಲ್ಲ ಸರಕಾರಗಳಿಗೂ ಅದು ಕರೆಯಿತ್ತಿತು. ಹಿಂದಿನ ದೌರ್ಬಲ್ಯ, ಪ್ರಮಾದಗಳೇನೇ ಇದ್ದರೂ ಕಾಂಗೋ ಸಮಸ್ಯೆಗೆ ನಿಜವಾದ ಪರಿಹಾರವನ್ನು ಕಂಡು ಹಿಡಿಯಲು ಸಂಯುಕ್ತ ರಾಷ್ಟ್ರ ಸಂಸ್ಥೆಯು ಏಕಮೇವ ಸಂಸ್ಥೆಯಾಗಿದೆ ಎಂದೂ ಈ ಪರಿಷತ್ತು ತನ್ನ ವಿಶ್ವಾಸವನ್ನು ದೃಢಪಡಿಸಿತು.

ರಾಜಕಾರಣ ಬೇಡ

ಪಂಚಾಯತ ರಾಜ್ಯ ಸ್ಥಾಪನೆ ಸಾಗುತ್ತಿರುವಾಗ, ಪಂಚಾಯತ ಬೋರ್ಡುಗಳ ಮಹತ್ವವು ಹೆಚ್ಚುತ್ತಿದೆ. ಪಂಚಾಯತಿಗಳ ಚುನಾವಣೆಗಳಲ್ಲಿ ರಾಜಕೀಯ ಪಕ್ಷಗಳ ತಳಹದಿಯ ಮೇಲೆ ಸ್ಪರ್ಧೆ ನಡೆಸಬಾರದು; ಎಲ್ಲ ರಾಜಕೀಯ ಪಕ್ಷಗಳು ಈ ವಿಚಾರಕ್ಕೆ ಒಪ್ಪಿಕೊಂಡು ಅದಕ್ಕನುಸರಿಸಿ ನಡೆದುಕೊಳ್ಳಬೇಕು ಎಂದು ಈ ದಿನ ಸೇರಿದ ಅಖಿಲ ಭಾರತ ಪಂಚಾಯತ ಪರಿಷತ್ತಿನ ಬಹಿರಂಗಾಧಿವೇಶನದಲ್ಲಿ ಅಂಗೀಕರಿಸಿದ ಒಂದು ಗೊತ್ತುವಳಿಯಲ್ಲಿ ಕೇಳಿಕೊಳ್ಳಲಾಗಿದೆ.

ಅಲ್ಲಲ್ಲಿಯ ಸುದ್ದಿ ಸಾರ

ಎಕೆಡೆಮಿ ಗೌರವ ಸದಸ್ಯತನ— ಇದೇ ತಾ. ೭ರಂದು ಅಮೇರಿಕದ ನ್ಯೂಯಾರ್ಕಿನ ಶ್ರೀ ಫಿಲಿಪ್ ಮಾರ್ಕೋವಿಟ್ಸ್ ಇವರಿಗೆ ಮಣಿಪಾಲ ಎಕೆಡೆಮಿ ಒಫ್ ಜನರಲ್ ಎಡ್ಯುಕೇಶನ್‌ನವರು ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಸಭಾ ಭವನದಲ್ಲಿ ಗೌರವಸದಸ್ಯತನವನ್ನೀಯುವ ಸಮಾರಂಭವೊಂದನ್ನು ಏರ್ಪಡಿಸಿದ್ದರು. ರಿಜಿಸ್ಟ್ರಾರ್ ಡಾ! ಟಿ. ಎಂ. ಎ. ಪೈಯವರು ಸ್ವಾಗತ ಭಾಷಣ ಮಾಡಿ ಇಂಜಿನಿಯರ್ ಫಿಲಿಪ್ ಮಾರ್ಕೋವಿಟ್ಸ್‌ರು ಮಣಿಪಾಲ ಇಂಜಿನಿಯರಿಂಗ್ ಕಾಲೇಜಿಗೆ ಮಾಡಿದ ಸಲಕರಣೆ ದಾನವನ್ನು ಪ್ರಸ್ತಾಪಿಸಿದರು. ಎಕೆಡೆಮಿಯ ಅಧ್ಯಕ್ಷ ಶ್ರೀ ಎ. ಎಸ್. ಕುಡುವರು ಮಾರ್ಕೋವಿಟ್ಸ್‌ರಿಗೆ ಗೌರವ ಸದಸ್ಯತನವನ್ನೊಪ್ಪಿಸಿದರು. ಸಭಾಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರು ಮಾರ್ಕೋವಿಟ್ಸ್‌ರ ವಿಶಾಲ ಸೇವಾಭಾವವನ್ನೂ ಅಮೆರಿಕನರ ಉದಾರತೆಯನ್ನೂ ವಿವರಿಸಿ ಭಾಷಣವಿತ್ತರು.

ಫಿಲಿಪ್ ಮಾರ್ಕೋವಿಟ್ಸರು ಉತ್ತರಿಸುತ್ತ ಇಲ್ಲಿಯಜನರ ತೃಪ್ತಿ ಶಾಂತಿಯಿಂದಲೂ ಅಮೆರಿಕದಲ್ಲಿ ಅತೃಪ್ತಿ ಹೆಚ್ಚಿದೆಯೆಂದೂ ನಾನಿಲ್ಲಿಗೆ ಬರುವಾಗ ಇಲ್ಲಿನ ಪರಿಸ್ಥಿತಿಯು ಅರಿವು ಇರಲಿಲ್ಲವೆಂದೂ ಇಲ್ಲಿನ ಕಾರ್ಯಕರ್ತರ ಕಾರ್ಯೋತ್ಸಾಹವನ್ನು ನೋಡಿ ನನಗೆ ಆನಂದವಾಗಿರುವುದೆಂದೂ ಹೇಳಿ ತಮಗೆ ಕೊಟ್ಟ ಗೌರವಕ್ಕಾಗಿ ಕೃತಜ್ಞತೆಗಳನ್ನರ್ಪಿಸಿದರು. ಅಂತ್ಯದಲ್ಲಿ ಶ್ರೀ ಟಿ. ರಮೇಶ ಪೈಗಳು ಧನ್ಯವಾದಗಳನ್ನರ್ಪಿಸಿದರು.

ಭಾವಚಿತ್ರ ಅನಾವರಣ ಸಮಾರಂಭ— ಮಂಗಳೂರಿನ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನಿನ ಆಡಳಿತ ಕಚೇರಿಯ ಮಹಾಡದಲ್ಲಿ ತಾ. ೧೫ರಂದು ಬೇಂಕಿನ ಅಧ್ಯಕ್ಷರಾಗಿದ್ದ ದಿ| ಡಾ| ಯು. ಪಿ. ಮಲ್ಯರ ಭಾವಚಿತ್ರದ ಅನಾವರಣ ಸಮಾರಂಭವು ಸ್ಟೇಟ್ ಟ್ರೇಡಿಂಗ್ ಕೊರ್ಪೊರೇಶನ್ ಒಫ್ ಇಂಡಿಯಾದ ಅಧ್ಯಕ್ಷ ಶ್ರೀ ಸಿ. ಎಮ್. ಪೂಣಚ್ಚರಿಂದ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಸಮಾರಂಭದ ಅಧ್ಯಕ್ಷತೆಯನ್ನು ಮೈಸೂರಿನ ಕಾನೂನು ಮತ್ತು ಕಾರ್ಮಿಕ ಮಂತ್ರಿ ಶ್ರೀ ಬಿ. ವೈಕುಂಠ ಬಾಳಿಗರು ವಹಿಸಿದ್ದರು. ಬೇಂಕಿನ ಅಧ್ಯಕ್ಷರಾದ ಶ್ರೀ ಯು. ಗೋಪಾಲ ಕೃಷ್ಣ ನಾಯಕರು ಸ್ವಾಗತ ಭಾಷಣಮಾಡಿ ಡಾ. ಮಲ್ಯರ ಗುಣಾದರ್ಶ, ಅವರು ಮಾಡಿರುವ ಸೇವಾಕಾರ್ಯಗಳನ್ನು ವಿವರಿಸಿದರು. ಅಧ್ಯಕ್ಷ ಮಂತ್ರಿ ಬಾಳಿಗರು ಡಾ. ಮಲ್ಯರ ವ್ಯಕ್ತಿತ್ವದ ಕುರಿತು ಭಾಷಣವಿತ್ತರು. ಅಂತ್ಯದಲ್ಲಿ ಬೇಂಕಿನ ಜನರಲ್ ಮೆನೇಜರ್ ಶ್ರೀ ವಿ. ಆರ್ ಕಾಮತರು ಧನ್ಯವಾದಾರ್ಪಣೆ ಮಾಡಿದರು.

ಗೌರವಾರ್ಥ ಯಕ್ಷಗಾನ— ಇದೇ ತಾ. ೮ನೇ ರಾತ್ರಿ ಮಂಗಳೂರಿನ ಶರವು ಶ್ರೀ ಮಹಾಗಣಪತಿ ದೇವಸ್ಥಾನದಲ್ಲಿ ಶರವು ಯಕ್ಷಗಾನ ಸಂಘದವರು ಪ್ರದೇಶ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರ ಗೌರವಾರ್ಥವಾಗಿ ಯಕ್ಷಗಾನ ಕಾರ್ಯಕ್ರಮವೊಂದನ್ನು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿಸಿದರು. ಶ್ರೀ ಕೆ. ಬಾಲಕೃಷ್ಣ ರಾವ್, ಎಮ್. ಎಲ್. ಸಿ. ಅವರು ಪ್ರಾರಂಭದಲ್ಲಿ ಸ್ವಾಗತಭಾಷಣ ಮಾಡಿ, ಅಂತ್ಯದಲ್ಲಿ ಧನ್ಯವಾದಗಳನ್ನರ್ಪಿಸಿದರು.

ಹೋಟೇಲ್ ಎವರ್ ಗ್ರೀನ್‌ನ ಉದ್ಘಾಟನೆ— ಮಂಗಳೂರಿನ ಬಲ್ಮಠ ರೋಡಿನಲ್ಲಿ ಡಾ. ಅಡಪ್ಪರ ನರ್ಸಿಂಗ್ ಹೋಮ್‌ನ ಬಳಿ ನವೀನವಾಗಿ ಕಟ್ಟಿಸಲ್ಪಟ್ಟ ಹೊಟೇಲ್ ಎವರ್ ಗ್ರೀನ್ ಎಂಬ ವಸತಿ ಮಂದಿರದ ಉದ್ಘಾಟನಾ ಸಮಾರಂಭವು ತಾ. 14ನೇ ಸಂಜೆ ಡಾ. ಎಮ್. ಡಿ. ಅಡಪ್ಪರಿಂದ ನೆರವೇರಿಸಲ್ಪಟ್ಟಿತು. ಸಮಾರಂಭದ ಅಧ್ಯಕ್ಷತೆಯನ್ನು ನಿವೃತ್ತ ಜಿಲ್ಲಾ ಮತ್ತು ಸೆಶ್ಯನ್ ಜಡ್ಜರಾದ ರಾವ್ ಬಹದ್ದೂರ್ ಎಮ್. ರಾಮಚಂದರ್‌ರವರು ವಹಿಸಿದ್ದರು. ಹೊಟೇಲ್ ಮಾಲಿಕರಾದ ಜನಾಬ್ ಸಿ. ಕೆ. ಅಬ್ದುಲ್ ಖಾದರ್ ಹಾಜಿಯವರು ಅತಿಥಿಗಳನ್ನು ಸ್ವಾಗತಿಸಿ ಹೂಮಾಲೆ ಹಾಕಿ ಗೌರವಿಸಿದರು. ಜ| ಬಿ. ಎಮ್. ಇದಿನಬ್ಬನವರು ಭಾಷಣ ಮಾಡಿದರು. ಬಳಿಕ ಜ| ಮಾಹಿಮ್ ಕುಟ್ಟಿಯವರು ಕೃತಜ್ಞತೆಗಳನ್ನರ್ಪಿಸಿದರು.

ವಿದ್ಯಾದಾನ ಉಚಿತ ಪ್ರಸಾದ ನಿಲಯ ಹುಬ್ಬಳ್ಳಿ— ಇದೇ ಬರುವ ಜೂನ ತಿಂಗಳ ೨೦ನೇ ತಾರೀಕಿನಿಂದ ಪ್ರತಿವರ್ಷದಂತೆ ಇಲ್ಲಿಯ ವಿದ್ಯಾದಾನ ಉಚಿತ ಪ್ರಸಾದ ನಿಲಯದಲ್ಲಿ ಉಚಿತ ವಸತಿ, ದೀಪ, ಊಟ ಮೊದಲಾದ ಸೌಕರ್ಯಗಳನ್ನು ಒದಗಿಸಲಾಗುವದು. ಸ್ಥಳೀಯ ಎಲ್ಲಾ ಶಾಲೆ-ಕಾಲೇಜುಗಳಲ್ಲಿ ಕಲಿಯುತ್ತಿರುವ ಸರ್ವಮತದ ಬಡ ವಿದ್ಯಾರ್ಥಿಗಳಿಗೆ ಪ್ರವೇಶವುಂಟು. ಸೇರ ಬಯಸುವವರು ನಿಲಯದ ಕಾರ್ಯದರ್ಶಿ ಎಸ್. ಎಸ್. ಅಗಸರ, ನೀಲ ಜಿಟ್ ರೋಡ ಹುಬ್ಬಳ್ಳಿ ಇವರಿಗೆ ನಿರ್ದಿಷ್ಟವಾದ ಅರ್ಜಿ ಫಾರ್ಮುಗಳಲ್ಲಿ ವಿವರ ತುಂಬಿ ಜೂನ ೫ ರೊಳಗಾಗಿ ಕಳಿಸಬೇಕು. ಅರ್ಜಿ ಫಾರ್ಮುಗಳು ನಿಲಯದ ಆಫೀಸಿನಲ್ಲಿ ಒಂದು ರೂಪಾಯಿಗೊಂದರಂತೆ ದೊರೆಯುತ್ತವೆ. ಈ ಮೊದಲೇ ನಿಲಯದಲ್ಲಿದ್ದ ವಿದ್ಯಾರ್ಥಿಗಳು ಮುಂದಿನ ವರ್ಷದ ಬಗ್ಗೆ ತಮ್ಮ ಪ್ರವೇಶವನ್ನು ಸ್ಥಿರಪಡಿಸಿಕೊಳ್ಳಬೇಕೆಂದು ಸಂಚಾಲಕರು ತಿಳಿಸುತ್ತಾರೆ.

ವಾರ್ಷಿಕೋತ್ಸವ— ದ. ಕ. ಜಿಲ್ಲಾ ನೋನ್ ಗಜೆಟೆಡ್ ಅಧಿಕಾರಿಗಳ ಸಂಘದ ವಾರ್ಷಿಕೋತ್ಸವವು ತಾ. 14ರಂದು ಮಂಗಳೂರಲ್ಲಿ ಗವರ್ನ್‌ಮೆಂಟ್ ಕಾಲೇಜಿನ ಸಭಾ ಮಂದಿರದಲ್ಲಿ ಸಂಘದ ಅಧ್ಯಕ್ಷ ಶ್ರೀ ಎಸ್. ಗೋಪಾಲ್‌ಕೃಷ್ಣರವರ ಅಧ್ಯಕ್ಷತೆಯಲ್ಲಿ ಸಂಭ್ರಮದಿಂದ ನೆರವೇರಿತು. ಅಧ್ಯಕ್ಷರಿಂದ ಸ್ವಾಗತ ಭಾಷಣವಾದ ಬಳಿಕ ಶ್ರೀ ಎಸ್. ನರ್ಸಪ್ಪಯ್ಯ ಎಮ್. ಎಲ್ ಸಿ. ರವರು ಭಾಷಣ ಮಾಡುತ್ತಾ ಎನ್. ಜಿ ಓ ಗಳ ಕಷ್ಟಗಳಿಗೆ ವಸ್ತುಗಳ ಬೆಲೆ ಏರಿ ಹಣದ ಬೆಲೆ ತಗ್ಗಿದುದೇ ಕಾರಣವೆಂದೂ ಅವರು ತಮ್ಮ ಬೇಡಿಕೆಗಳನ್ನು ಘಟನಾತ್ಮಕ ರೀತಿಯಲ್ಲಿ ಪಡೆಯಬೇಕೆಂದೂ ಮುಂತಾಗಿ ಹೇಳಿದರು. ಮಾಜಿ ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಗಡೆಯವರು ಮಾತನಾಡುತ್ತಾ ಕೇಂದ್ರ ಮತ್ತು ರಾಜ್ಯ ಸರಕಾರಿ ನೌಕರರ ವೇತನದಲ್ಲಿ ವಿಶೇಷ ಅಂತರವಿರುವುದೆಂದೂ, ಈ ಅಸಮಾನತೆಯನ್ನು ಪರಿಹರಿಸುವುದು ಅಗತ್ಯವೆಂದೂ ಎನ್. ಜಿ. ಒ ಗಳು ತಮ್ಮ ಕರ್ತವ್ಯವನ್ನು ತ್ವರಿತವಾಗಿ ನೆರವೇರಿಸಬೇಕೆಂದೂ ಮುಂತಾಗಿ ಹೇಳಿದರು. ಬಳಿಕ ಗಜಾನನ ರಾವ್ ಪಂಡಿತ್ ಎಮ್. ಎಲ್. ಎ. ರವರು ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನ ವಿತರಣೆ ಮಾಡಿದರು. ಅಧ್ಯಕ್ಷ ಭಾಷಣಾನಂತರ ಕಾರ್ಯದರ್ಶಿ ಶ್ರೀ ಕೆ. ವಿ. ಮಯ್ಯರು ಆಭಾರ ಸೂಚಿಸಿದರು. ಕೊನೆಗೆ ನಾಟಕಾದಿ ಮನೋರಂಜನಾ ಕಾರ್ಯಕ್ರಮಗಳು ಜರಗಿದುವು ಈ ದಿನ ನಡೆದ ಎನ್. ಜಿ. ಓ. ಗಳ ಸಮ್ಮೇಳನದಲ್ಲಿ ಸರಕಾರವು ಮಂಜೂರು ಮಾಡಿದ ಪರಿಷ್ಕೃತ ವೇತನವು ಈಗಿನ ಪರಿಸ್ಥಿತಿಯಲ್ಲಿ ತೃಪ್ತಿಕರವಲ್ಲವೆಂಬ ನಿರ್ಣಯವನ್ನು ಮಾಡಿದೆ.

ಸೌಟರ್ ವಾಚನ ಮಂದಿರದ ಮತ್ತು ಕ್ಲಬ್ಬಿನ ದಿನಾಚರಣೆಯು ತಾ. 18ರಂದು ಸರಕಾರಿ ಕಾಲೇಜಿನ ಸಭಾಭವನದಲ್ಲಿ ಶ್ರೀ ಎಫ್. ಎಕ್ಸ್. ಡಿ. ಪಿಂಟೊ, ಎಂ. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ವಿಜೃಂಭಣೆಯಿಂದನೆರವೇರಿತು.

ನಾರಾವಿ— ಇದೇ ತಾ 9ರಂದ ಒಂದು ಲಕ್ಷ ರೂಪಾಯಿ ಖರ್ಚಿನಲ್ಲಿ ಕಟ್ಟಲಿರುವ ಸರಕಾರಿ ಆಸ್ಪತ್ರೆಯ ನೂತನ ಕಟ್ಟಡದ ಶಂಕುಸ್ಥಾಪನೆಯನ್ನು ಮೈಸೂರು ಆರೋಗ್ಯ ಸಚಿವ ಡಾ. ಕೆ. ಕೆ. ಹೆಗ್ಡೆಯವರು ನೆರವೇರಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಎಸ್. ಮುಕುಂದ ರಾವ್, ಎಮ್. ಎಲ್. ಸಿ. ಯವರು ವಹಿಸಿದ್ದರು. ಶ್ರೀ ಎ. ಕೃಷ್ಣ ಭಟ್ಟರು ಸ್ವಾಗತ ಮಾಡಿದರು. ಶ್ರೀ ಎನ್. ಮಂಜುನಾಥ ಪೈಯವರು ಪಂಚಾಯತುಗಳ ಪರಿಯಿಂದ ಮಾನಪತ್ರವನ್ನರ್ಪಿಸಿದರು. ಭಾಷಣಗಳಾದ ಮೇಲೆ, ಶ್ರೀ ಧರ್ಮಪಾಲ ಜೈನಿಯವರು ಆಭಾರ ಮನ್ನಿಸಿದರು.

ಮೂಡಬಿದ್ರಿ— ಇದೇ ತಾ. 8ರಂದು ಸ್ಥಳೀಯ ಸಮಾಜ ಮಂದಿರದಲ್ಲಿ ಟಾಗೋರರ ಶತಮಾನೋತ್ಸವವು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ನಿಜಲಿಂಗಪ್ಪನವರಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀವಾಸುದೇವ ಪೈಯವರು ಸ್ವಾಗತಿಸಿದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ. ಟಿ. ಎ. ಪೈ, ಡಾ! ನಾಗಪ್ಪ ಆಳ್ವ ಎಂ. ಎಲ್. ಎ. ಮೊದಲಾದವರು ಟಾಗೋರರ ಸಾಹಿತ್ಯ, ವ್ಯಕ್ತಿತ್ವದ ಕುರಿತು ಭಾಷಣವಿತ್ತರು. ಶ್ರೀ ಎಸ್. ಡಿ. ಸಾಮ್ರಾಜ್ಯರವರು ಕೃತಜ್ಞತೆಗಳನ್ನರ್ಪಿಸಿದರು.

ಕಟಪಾಡಿ— ಇದೇ ತಾ. ೫ರಂದು ಮೈಸೂರಿನ ಮುಖ್ಯಮಂತ್ರಿ ಶ್ರೀ ಬಿ. ಡಿ. ಜತ್ತಿಯವರು ಕುಟುಂಬ ಯೋಜನಾ ಕೇಂದ್ರವನ್ನು ಉದ್ಘಾಟಿಸಿದರು. ಆನಂತರ ಎಸ್. ವಿ. ಎಸ್. ಹಾ. ಎ. ಶಾಲೆಯಲ್ಲಿ ಆರೋಗ್ಯ ಸಚಿವ ಡಾ. ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಡಾ. ಟಿ. ಎಂ. ಎ ಪೈಯವರು ಸ್ವಾಗತ ಭಾಷಣ ಮಾಡಿದರು. ಏಣಗುಡ್ಡೆ ಪಂಚಾಯತ್ ಅಧ್ಯಕ್ಷ ಶ್ರೀ ವೈ. ವಿಟ್ಠಲ ಹೆಗ್ಡೆಯವರು ಮಂತ್ರಿಗಳಿಗೆ ಮಾನಪತ್ರವನ್ನು ಒಪ್ಪಿಸಿದರು. ಡಾ. ಪದ್ಮಾರಾವ್ ರವರು ಕುಟುಂಬ ಯೋಜನೆಯ ಸೂಕ್ಷ್ಮ ಮಾಹಿತಿಯನ್ನಿತ್ತರು. ಮಂತ್ರಿದ್ವಯರ ಭಾಷಣಗಳಾದ ಮೇಲೆ ಡಾ. ಕೆ. ಜಿ. ಶೆಣೈಯವರು ಧನ್ಯವಾದಗಳನ್ನಿತ್ತರು.

ಕಡಿರುದ್ಯಾವರ— ಇದೇ ತಾ. 8ರಂದು ಇಲ್ಲಿಯ ಕ. ಸ. ಶಾಲೆಯಲ್ಲಿ ವಿಶ್ವಕವಿ ರವೀಂದ್ರನಾಥ ಟಾಗೋರರ ಶತಮಾನೋತ್ಸವ ಮತ್ತು ಶಾಲಾ ವಾರ್ಷಿಕೋತ್ಸವವು ಡಾ| ಸುರತ್ಕಲ್ ಶ್ರೀನಿವಾಸ ರಾವ್ ಮುಂಡಾಜೆ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಟಾಗೋರರ ಸಾಹಿತ್ಯ ಮತ್ತು ಜೀವನದ ಕುರಿತು ಶ್ರೀಗಳಾದ ಕೆ. ಎನ್. ಭಟ್ ಶಿರಾಡಿಪಾಲ್, ಯು. ವಿ. ನಾಯಕ್, ಕೆ. ಆರ್. ಪ್ರಭು ಇವರು ಭಾಷಣ ಮಾಡಿದರು. ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆಯಾದ ಬಳಿಕ ವಿವಿಧ ವಿನೋದಾವಳಿ ನಾಟಕಾಭಿನಯ ಅಧ್ಯಕ್ಷರ ವಿಚಾರ ಪೂರ್ಣ ಭಾಷಣಗಳಾದುವು.

ಹೊಸ ಡಿವಿಜನಲ್ ಆಫೀಸು ಕಟ್ಟಡದ ಉದ್ಘಾಟನೆ— ಇದೇ ತಾ. 17ನೇ ಸಂಜೆ ಲೈಫ್ ಇನ್ಶ್ಯೂರೆನ್ಸ್ ಕೊರ್ಪೊರೇಶನಿನ ಉಡುಪಿ ಅಜ್ಜರ ಕಾಡಿನಲ್ಲಿ ನೂತನವಾಗಿ ಕಟ್ಟಲಾದ ಮೂರು ಅಂತಸ್ತಿನ ಕಟ್ಟಡದ ಉದ್ಘಾಟನಾ ಸಮಾರಂಭವು ಮೈಸೂರಿನ ಕಾನೂನು ಮತ್ತು ಕಾರ್ಮಿಕ ಮಂತ್ರಿ ಶ್ರೀ ಬಿ. ವೈಕುಂಠ ಬಾಳಿಗರಿಂದ ನೆರವೇರಿಸಲ್ಪಟ್ಟಿತು. ಸಮಾರಂಭದ ಅಧ್ಯಕ್ಷತೆಯನ್ನು ಎಲ್. ಐ. ಸಿ. ಯ ಚೇರ್‌ಮೇನ್ ಶ್ರೀ ಪಿ. ಎ. ಗೋಪಾಲ ಕೃಷ್ಣನ್ ಅವರು ವಹಿಸಿದ್ದರು (ವಿವರವನ್ನು ಮುಂದಿನ ಸಂಚಿಕೆಯಲ್ಲಿ ಕೊಡಲಾಗುವುದು)

ವಾರ್ಷಿಕೋತ್ಸವ— ಉಡುಪಿಯ ಶ್ರೀ ಬ್ರಹ್ಮ ಬೈದರ್ಕಳ ಧೂಮಾವತಿ ಯಕ್ಷಗಾನ ಸಂಘದ ವಾರ್ಷಿಕೋತ್ಸವವು ನಗರ ಸಭಾಪತಿ ಡಾ. ಕೆ. ಯಲ್. ಐತಾಳರವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಅಧ್ಯಕ್ಷ ಶ್ರೀ ಪಾ. ಲ. ನಾ. ಉಪಾಧ್ಯಾಯರು ಸ್ವಾಗತ ಭಾಷಣ ಮಾಡಿದ ಬಳಿಕ, ಗೌರವ ಲೆಕ್ಕಪತ್ರ ಪರಿಶೋಧಕ ಶ್ರೀ ಯು. ವಾಸುದೇವಾಚಾರ್ಯರು ಸಂದೇಶ ವಾಚನ ಜರಗಿಸಿದರು ವರದಿವಾಚನವಾದ ಬಳಿಕ ಅಧ್ಯಕ್ಷರು ಯಕ್ಷಗಾನ ಕಲೆಯ ನಿಜಸ್ವರೂಪವನ್ನು ಪ್ರಸ್ತಾಪಿಸಿ ಸಂಘದ ಶ್ಲಾಘನೀಯ ಚಟುವಟಿಕೆಗಳಿಗೆ ಜನರ ಬೆಂಬಲ ದೊರೆಯುವುದು ಸಹಜವೆಂದರು. ಬಳಿಕ ಸದಸ್ಯರಿಂದ ಯಕ್ಷಗಾನ ಬಯಲಾಟವು ನಡೆಯಿತು.

ಜ್ಯೋತಿಷ್ಯ ನಿಮ್ಮ ಜೀವನಕ್ಕೆ ಸಂಬಂಧಿಸಿದ ೬ ಪ್ರಶ್ನೆಗಳನ್ನು ಸೀಲು ಮಾಡಿದ ಲಕೋಟೆಯಲ್ಲಿ ಕಳುಹಿಸಿ. ಅದನ್ನು ಒಡೆಯದೆಯೇ ದೇವೀ ಉಪಾಸನೆಯಿಂದ ಉತ್ತರವನ್ನು ರೂ. 2ಕ್ಕೆ ವಿ. ಪಿ. ಮಾಡಲಾಗುವುದು.

ಶ್ರೀ ಗಾಯತ್ರಿ ಮಂತ್ರಾಲಯ

ಪೋಸ್ಟ್ ಬಾಕ್ಸ್-808 —ಬೆಂಗಳೂರು-2.

ಸಹಕರಿಸಿರಿ!

'ನವಯುಗ'ದ ಚಂದಾ ಹಣ ಬಾಕಿ ಇರುವ

ಚಂದಾದಾರರು

ದಯಮಾಡಿ ಬಾಕಿಯನ್ನೆಲ್ಲಾ ಆದಷ್ಟು ತ್ವರ್ಯ ಕಳುಹಿಸಿಕೊಟ್ಟು ಸಹಕರಿಸಿ

ಪ್ರೋತ್ಸಾಹಿಸುವಂತೆ ವಿನಂತಿ

ನವೀನ ಕಾದಂಬರಿ ಹೊಸ ಪುಸ್ತಕ

ಮೋಹದ ಮಹಾಜಾಲ

ಅದ್ಭುತ ಸಾಹಸ-ಶೋಧದ ಕಾದಂಬರಿ

ಬರೆದವರು: ವೀರಪ್ಪ ಯಗಟಿ, ಬಿ. ಎ., ಎಲ್‌ಎಲ್. ಬಿ, ವಕೀಲ, ಹಾವೇರಿ

ಈ ಕಾದಂಬರಿಯಲ್ಲಿ ಸತ್ಯಾಸತ್ಯಗಳ ತಾರತಮ್ಯವೂ, ಸನ್ಮಾರ್ಗ ದುರ್ಮಾರ್ಗಗಳ ಪರಿಣಾಮಗಳೂ ಪಾತ್ರಗಳ ಪ್ರತ್ಯಕ್ಷ ವರ್ತನೆಗಳ ಮೂಲಕ ಚಿತ್ರಿಸಲ್ಪಟ್ಟಿವೆ. ಮನುಷ್ಯನಿಗೆ ಸಮಾಜದ ವ್ಯವಹಾರದಲ್ಲಿ ಎದುರಾಗುವ ಬಿಕ್ಕಟ್ಟಿನ ಪ್ರಸಂಗಗಳು ಹೇಗೆ ದೈವ ಕೃಪೆಯಿಂದ ಹಾಗು ಸಭ್ಯ ವರ್ತನೆಯಿಂದ ಪರಿಹಾರವಾಗುವವೆಂಬುದು ಕಥಾರಹಸ್ಯದ ಮೂಲಕ ವ್ಯಕ್ತಮಾಡಲ್ಪಟ್ಟಿವೆ. ಮನುಷ್ಯ ಸ್ವಭಾವದ ವಿವಿಧ ಮನೋವೃತ್ತಿಗಳು ಆಳವಾಗಿ ವರ್ಣಿಸಲ್ಪಟ್ಟಿವೆ. ಪ್ರಸಂಗಾನುಸಾರವಾಗಿ ನೀತಿ ತತ್ವ ಬೋಧೆಯು ಮನೋವೇದ್ಯವಾಗುವಂತೆ ವಿವರಿಸಲ್ಪಟ್ಟಿದೆ. ರಸವತ್ತಾದ ಕಥಾಭಾಗವು ಮನೋಹರವಾದ ಶೈಲಿಯಲ್ಲಿ ರೂಪಿಸಲ್ಪಟ್ಟಿರುವುದರಿಂದ ಓದುಗರು ಅದನ್ನು ಓದಲು ಪ್ರಾರಂಭಿಸಿದರೆ ಪೂರ್ತಿಗೊಳಿಸುವ ವರೆಗೆ ಬಿಡುವಂತಿಲ್ಲ.

ಇದರಲ್ಲಿ ವರ್ಣಿತವಾದ ಅದ್ಭುತ ಸಾಹಸ, ಅಪರಾಧ ಶೋಧಗಳು ಓದುಗರಿಗೆ ಆಶ್ಚರ್ಯ, ಕುತೂಹಲಗಳನ್ನುಂಟುಮಾಡುವವು. ಈ ವರೆಗೆ ರಚಿತವಾದ ಕಾದಂಬರಿಗಳಲ್ಲಿ ಇದು ಶ್ರೇಷ್ಠವಾದದು

ಬಿಳಿ ಕಾಗದ. ಬೆಲೆ: ರೂ. 1—12—0 (1·75)

ಪ್ರತಿಗಳಿಗೆ— ನವಯುಗ ಪ್ರೆಸ್, ಉಡುಪಿ.

ಅಥವಾ ನವಭಾರತ ಪುಸ್ತಕ ಭಂಡಾರ, ಉಡುಪಿ.

ನಿಸರ್ಗ ದರ್ಶನ:

ಕಾಶ್ಮೀರ ನಿಮ್ಮನ್ನು ಕರೆಯುತ್ತಿದೆ!

ನಂದನವನ ಸದೃಶವಾದ ಕಾಶ್ಮೀರದ ಉಪವನ ಹಾಗೂ ಮತ್ತಿತರ ಸುಂದರ ಪ್ರಾಕೃತಿಕ ದೃಶ್ಯಗಳು ವರ್ಷಂಪ್ರತಿ ಸಾವಿರಾರು ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಒಂದಲ್ಲ ಒಂದುದಿನ ನೀವೂ ಅದರ ಕರೆಗೆ ಓಗೊಡುವ ಉದಾರತೆ ತೋರಿಸುವಿರಿ.

ಬೇಸಿಗೆಯ ಬಿಸಿಲು ಆರಂಭವಾದಂತೆ ಬಯಲಿನ ಜನ ಪರ್ವತ ಧಾಮಗಳ ಕಡೆಗೆ ದೃಷ್ಟಿಹೊರಳಿಸುತ್ತಾರೆ. ಕೆಲವು ದಿನಗಳು ಅಥವಾ ವಾರಗಳ ಮಟ್ಟಿಗೆ ಅಲ್ಲಿಗೆ ಹೋಗಿ ತಂಗಿ ಬರಬೇಕು, ತಂಪು ಹವಾಗುಣದ ಪ್ರಯೋಜನ ಪಡೆಯಬೇಕು ಎನ್ನುವವರಿಗೆ ಕಾಶ್ಮೀರ ಒಂದು ದೊಡ್ಡ ಆಕರ್ಷಣೆ.

ಅಲ್ಲಿಯ ಬೆಟ್ಟ ಗುಡ್ಡಗಳು ಮತ್ತು ರಮ್ಯ ಪ್ರಕೃತಿ ಸೌಂದರ್ಯ, ಆ ತಂಪಾದ ಸರೋವರಗಳು ಮತ್ತು ನದಿಗಳು, ಇವುಗಳೆಲ್ಲ ಪ್ರವಾಸಿಗರ ಮನಸ್ಸನ್ನು ಸೂರೆಗೊಳ್ಳುತ್ತವೆ.

ತುಂಬ ಎತ್ತರದಲ್ಲಿರುವ ಈ ಪ್ರದೇಶದ ಸುತ್ತ ಪರ್ವತಗಳಿವೆ. ಶ್ರೀನಗರದಂತಹ ಪ್ರವಾಸಿಗಳನ್ನಾಕರ್ಷಿಸುವ ಇನ್ನೂ ಹಲವಾರು ಕೇಂದ್ರಗಳಿವೆ. ಮೊಘಲ್ ಉದ್ಯಾನವನಗಳು, ಸರೋವರಗಳು, ಮಧ್ಯೆ ಹರಿದು ಹೋಗುವ ಜೀಲಂ ನದಿ, ಇವುಗಳಿಂದ ಕೂಡಿರುವ ಶ್ರೀನಗರವಂತೂ ಪ್ರವಾಸಿಗರಿಗೆ ತುಂಬಾ ಅಚ್ಚುಮೆಚ್ಚಿನ ಕೇಂದ್ರ. ಅಲ್ಲಿ ಬಿಡಾರ ಮಾಡಿದರೆ ಆಗ್ನೇಯಕ್ಕೆ ೬೦ ಮೈಲಿಗಳ ದೂರದಲ್ಲಿರುವ ಪಹಲಗಾಮ್, ಗುಲ್ಮಾರ್ಗ್ ಮತ್ತು ಸೋನಾಮಾರ್ಗ್ ಇತ್ಯಾದಿ ಪ್ರೇಕ್ಷಣೀಯ ಸ್ಥಳಗಳಿಗೂ ಹೋಗಿಬರಬಹುದು

ಆರ್ಥಿಕ ದೃಷ್ಟಿಯಿಂದ ಪ್ರವಾಸೋದ್ಯಮಕ್ಕೆ ಮಹತ್ವದ ಸ್ಥಾನವಿದೆ. ಎಂದೇ ಕೇಂದ್ರ ಹಾಗೂ ರಾಜ್ಯಸರಕಾರಗಳು ಪ್ರವಾಸಿ ಸೌಕರ್ಯಗಳ ಅಭಿವೃದ್ಧಿಗೆ ವಿಶೇಷ ಗಮನ ಕೊಡುತ್ತವೆ. ಇತ್ತೀಚೆಗಂತೂ ಸಾಮಾನ್ಯ ಪ್ರವಾಸಿಗರಿಗೂ ಅನೇಕ ಸೌಕರ್ಯಗಳನ್ನು ಒದಗಿಸಿಕೊಡುವ ದೃಷ್ಟಿಯಿಂದ ಹಲವಾರು ವ್ಯವಸ್ಥೆಗಳನ್ನು ಮಾಡಲಾಗಿದೆ.

೧೯೪೭ರಿಂದೀಚೆಗೆ ಕಾಶ್ಮೀರಕ್ಕೆ ಹೋಗುವ ಪ್ರವಾಸಿಗರ ಸಂಖ್ಯೆ ಕ್ರಮೇಣ ಹೆಚ್ಚುತ್ತಾ ಹೋಗಿದೆ. ೧೯೪೭ರಲ್ಲಿ ೧೮,೬೦೦ ಜನ ಮಾತ್ರ ಕಾಶ್ಮೀರಕ್ಕೆ ಪ್ರವಾಸಿಗಳಾಗಿ ಹೋಗಿ ಬಂದರು; ಈಗ ಹೋಗಿ ಬರುವವರ ಸಂಖ್ಯೆ ಸರಾಸರಿ ೭೦,೦೦೦ದಷ್ಟಾಗಿದೆ.

ಕಾಶ್ಮೀರಕ್ಕೆ ರಸ್ತೆಯ ಮೂಲಕ ಹೋಗಲು ಅನುಕೂಲವಾಗುವ ಸೌಕರ್ಯಗಳು ತುಂಬಾ ಹೆಚ್ಚಿವೆ. ಪ್ರವಾಸಿ ಬಸ್‌ಗಳು ಪಠಾನ್ ಕೋಟ್‌ನಿಂದ ಆರಂಭವಾಗಿವೆ. ಕಾಶ್ಮೀರಕ್ಕೆ ಹೋಗುವವರು ರೈಲಿನಲ್ಲಿ ಪಠಾನ್ ಕೋಟ್‌ಗೆ ಬಂದು ಮುಂದೆ ಬಸ್ಸಿನಲ್ಲಿ ಹೋಗಬೇಕು. ೭,೦೦೦ ಅಡಿಗಳಷ್ಟು ಎತ್ತರದಲ್ಲಿ ಜವಾಹರ್ ಸುರಂಗ ನಿರ್ಮಿಸಿರುವುದರಿಂದಾಗಿ ದೂರ ಕೂಡ ಬಹಳ ಕಡಿಮೆಯಾಗಿದೆ. ಈ ಸುರಂಗ ನಿರ್ಮಾಣ ನಿಜಕ್ಕೂ ಒಂದು ಎಂಜಿನಿಯರಿಂಗ್ ಸಾಹಸವೆನ್ನಬೇಕು.

ವಿಮಾನದಲ್ಲಿ ಪ್ರಯಾಣ ಮಾಡುವವರು ದೆಹಲಿಯಿಂದ ನೇರವಾಗಿ ಶ್ರೀನಗರಕ್ಕೆ ಬಂದಿಳಿಯಬಹುದು. ಈ ಎರಡು ನಗರಗಳ ಮಧ್ಯೆ ವೈಕೌಂಟ್ ವಿಮಾನಗಳ ಸಂಚಾರವಿದೆ. ಅತ್ಯಂತ ಕಡಿಮೆ ಸಮಯದಲ್ಲಿ ಸುಖಾಸೀನರಾಗಿ ಪ್ರವಾಸ ಕೈಗೊಳ್ಳಬಹುದು.

ಪ್ರವಾಸಿಗರ ಅನುಕೂಲಕ್ಕಾಗಿಯೇ ಶ್ರೀನಗರದಲ್ಲಿ ಭಾರಿ ಸ್ವಾಗತ ಕಚೇರಿಯೊಂದನ್ನು ಸ್ಥಾಪಿಸಲಾಗಿದೆ. ಇಲ್ಲಿ ತಮಗೆ ಬೇಕಾದ ಅನುಕೂಲಗಳ ಬಗ್ಗೆ ಪ್ರವಾಸಿಗರು ಮಾಹಿತಿ ಪಡೆಯಬಹುದು. ಈ ಕೇಂದ್ರಕ್ಕೆ ಸೇರ್ಪಗೊಂಡು ಒಂದು ಹಾಸ್ಟಲ್ ಇದೆ. ತಮಗೆ ತಂಗಲು ಒಂದು ಕಡೆ ಅವಕಾಶ ದೊರಕುವ ವರೆಗೆ ಈ ಹಾಸ್ಟಲ್‌ನಲ್ಲಿ ಇಳಿದುಕೊಂಡಿರಬಹುದು. ನಗರದಲ್ಲಿರುವ ಹೋಟೇಲುಗಳಲ್ಲಿ ಇಳಿದುಕೊಳ್ಳುವ ಸೌಕರ್ಯವನ್ನಾದರೂ ಕೇಳಬಹುದು ಅಥವಾ ಜೀಲಂ ನದಿಯ ಮೇಲೆ ವಿಹಾರಕ್ಕಿರುವ ಹೌಸ್ ಬೋಟ್‌ಗಳಲ್ಲಿ ತಂಗುವ ಸೌಕರ್ಯವನ್ನಾದರೂ ಕೇಳಬಹುದು.

ಇತರ ಕಡೆಗಳಲ್ಲಿರುವ ಡಾಕ್ ಬಂಗಲೋಗಳು ಮತ್ತು ಪ್ರವಾಸೀ ಕುಟೀರಗಳ ಫಲವಾಗಿಯೂ ಪ್ರವಾಸಿ ಸೌಕರ್ಯಗಳು ಹೆಚ್ಚಿವೆ. ಲೋಲಾಬ್ ಕಣಿವೆ ಪ್ರದೇಶಗಳಂತಹ ಪ್ರವಾಸಿ ಕೇಂದ್ರಗಳು ಕೆಲವು ಹೊಸದಾಗಿ ಹುಟ್ಟಿಕೊಂಡಿದ್ದು ಕಾಶ್ಮೀರದ ಪ್ರವಾಸಿಗೆ ವೈವಿಧ್ಯಗಳನ್ನು ಒದಗಿಸುತ್ತಿವೆ.

ಟ್ರೆಕಿಂಗ್ ಇತ್ಯಾದಿ ಕಾರ್ಯ ಚಟುವಟಿಕೆಗಳೂ ಇಲ್ಲಿಯ ಒಂದು ದೊಡ್ಡ ಆಕರ್ಷಣೆ ಈಜುವುದು ಕುದುರೆ ಸವಾರಿ, ಮೀನು ಹಿಡಿಯುವುದು, ಗಾಲ್ಫ್ ಇತ್ಯಾದಿ ಕ್ರೀಡೆಗಳ ಆನಂದವೂ ಹೇರಳವಾಗಿ ದೊರಕುತ್ತದೆ. ಮೀನು ಹಿಡಿಯುವ ಹವ್ಯಾಸದವರಿಗಂತೂ ಈ ಪ್ರದೇಶ ಒಂದು ಸ್ವರ್ಗವಾಗಿದೆ.

ಪುರಾತನ ದೇವಾಲಯಗಳು, ಕಾಶ್ಮೀರದ ಕುಶಲಕಲೆಗಳು ಈ ಪ್ರದೇಶ ಮತ್ತಿತರ ಆಕರ್ಷಣೆಗಳು, ಹಣ್ಣುಹಂಪಲುಗಳು, ಬಗೆ ಬಗೆಯ ಹೂಗಳು ಇವುಗಳ ರುಚಿ ಹಾಗೂ ಸೌಂದರ್ಯ ಕವಿಗಳು ಮತ್ತು ರಸಿಕರ ಮನಸ್ಸನ್ನು ಸೂರೆಗೊಂಡಿವೆ.

ನೀವೂ ಒಮ್ಮೆ ಈ ಸುಂದರ ಪ್ರದೇಶಕ್ಕೆ ಹೋಗಿ ಜೀವನವನ್ನು ಸಾರ್ಥಕ ಪಡಿಸಿಕೊಳ್ಳಬಾರದೇಕೆ? ಎಂದು ಕರೆಕೊಡುತ್ತಿದೆ ಸುಂದರ ಕಾಶ್ಮೀರ.

ನಯನಾಕರ್ಷಕ ಕಾಶ್ಮೀರದಲ್ಲಿ ಜೀಲಂ ನದಿಯು ಹರಿಯುತ್ತದೆ. ಎಂಬತ್ತು ಮೈಲು ಉದ್ದ, ೨೦-೨೫ ಮೈಲು ಅಗಲವಿರುವ ಇದರ ಕಣಿವೆಯು ಸಮುದ್ರ ತಳದಿಂದ ೬,೦೦೦ ಅಡಿ ಎತ್ತರವಿದೆ. ಇದು ಸಸ್ಯ ಶ್ಯಾಮಲವಾಗಿದ್ದು ಒಂಬತ್ತು ತಿಂಗಳ ಕಾಲ ಹಿಮಾಚ್ಛಾದಿತವಾಗುತ್ತಿದೆ. ಈ ಕಣಿವೆಯಲ್ಲಿನ ಬೆಟ್ಟಗಳ ಹಿನ್ನೆಲೆಯಲ್ಲಿ ನಿರ್ಮಿಸಲಾದ ನಿಶತ್ ಉಪವನವನ್ನು ಈ ಚಿತ್ರದಲ್ಲಿ ನೋಡಬಹುದು

ಕವಿತಾ ವಿತಾನ:

ಬಾರಮ್ಮ ಸರಸೋತಿ

ಬಾರವ್ವ ಸರಸೋತಿ
ನನ್ ಕೂಡೆ ಕರ್‌ಕೋತಿ
(ಎನ್ನಾಬ್ಯಾಡ ಇವನ್ಯಾವ ಕೋತಿ!)
ಸಜ್ಜಿದ ಮಂದಿರಾ ಇ
ಇಲ್ಲನೀ ಬಂದಿರಾ ಇ ||

ಈ ಮನ್ಯೇಮಾನ ಸರ್ ಮೋರ
ನೀನಿದ್ರಾ ಹನ್ನಾ
ನೀನಿದ್ರೆ ನಾಮನ್ನಾ
ನೀಮುನ್ದ್ರೆ ಎಲ್ಲಾ ದ್ವನ್ನಾ ||

— ಪಾ. ಚಂದ್ರಶೇಖರ ಚಡಗ

— ರಸ ಬಿಂದು —

ಸಂಸ್ಥೆಗೂ ವ್ಯಕ್ತಿಯಂತೆ ಹೃದಯವಿದೆ. ಆತ್ಮವಿದೆ. ವ್ಯಕ್ತಿ ಸಂಸ್ಥೆ ಸೇರಿದ ಬಳಿಕ ಅದರ ಆತ್ಮದೊಡನೆ ಸಮರಸವಾಗದಿದ್ದರೆ ಇಬ್ಬರಿಗೂ ಕೇಡು ಮಾತ್ರವಲ್ಲ, ಅವಿದ್ದ ನೆಲಕ್ಕೂ ನಷ್ಟ.

ನವಯುಗ ವಾರ ಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಿಶ್ವಕವಿ ಟಾಗೋರರ ಪುಣ್ಯಸ್ಮರಣೆಗಾಗಿ
ಅವರ ಶತಮಾನೋತ್ಸವದ ಸುಸಂದರ್ಭದಲ್ಲಿ
ಪ್ರಕಟವಾದ ಕಿರುಗಾಣಿಕೆಗಳು

ಚಿತ್ರಾಂಗದೆ

ಬೆಲೆ: ೬೦ ನ. ಪೈಸೆ.
(ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಅವರಿಂದ ಅನುವಾದಿತ)

ರವೀಂದ್ರನಾಥರ ಕಿರುಗತೆಗಳು

ಬೆಲೆ: ೯೦ ನ. ಪೈಸೆ.
(ಶ್ರೀ ಹನುಮಂತರಾವ್ ಮೊಂಜರೇಕರ, ಕಾರವಾರ ಅವರಿಂದ ಅನುವಾದಿತ)
ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್,
ನವಯುಗ ಪ್ರೆಸ್, ಉಡುಪಿ.

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!
ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)
ಬರೆದವರು: ಎಸ್. ಗೋಪಾಲಕೃಷ್ಣ ಭಟ್, ವಿದ್ವಾನ್, ವಿಶಾರದ.
ಬೆಲೆ: ರೂ. ೧—೮—೦ (1 = 50)
ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.
ದೊರೆವ ಸ್ಥಳ.
ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಅಭಿಪ್ರಾಯ

ಪರಿಣಾಮಕಾರಿ ಶಿಕ್ಷಣ ಬೇಕು

ಕಡ್ಡಾಯ ಶಿಕ್ಷಣದ ಹೆಸರಿನಲ್ಲಿ ಶಿಕ್ಷಣದ ಮೌಲ್ಯಗಳು ಇಳಿಯಬಾರದು: ಶಿಕ್ಷಣಸ್ತರವನ್ನು ಳಿಸಿಕೊಂಡು ಬರಬೇಕಾದರೆ, ಅಧ್ಯಾಪಕ—ವಿದ್ಯಾರ್ಥಿ ದಾಮಾಶಯವು ಆರ್ಥಿಕ ಉಳಿತಾಯಕ್ಕೆ ಮಾತ್ರ ಕಾರಣವಾಗಿದ್ದರೆ ಸಾಲದು, ವ್ಯಾವಹಾರಿಕವೂ ಎನಿಸಬೇಕು.

ಶ್ರೀ ಗೋರಾ

ತೃತೀಯ ಪಂಚವಾರ್ಷಿಕ ಯೋಜನಾವಧಿಯಲ್ಲಿ ೬ ರಿಂದ ೧೧ ವರ್ಷದ ಮಕ್ಕಳಿಗೆಲ್ಲರಿಗೂ ಅನಿವಾರ್ಯ ಶಿಕ್ಷಣವನ್ನು ಕೊಡುವ ಸಲುವಾಗಿ ತ್ವರಿತಗತಿಯಿಂದ ಸಿದ್ಧತೆಗಳು ಭಾರತದ ವಿವಿಧ ರಾಜ್ಯಗಳಲ್ಲಿ ನಡೆಯುತ್ತಿವೆ. ನಮ್ಮ ರಾಜ್ಯದಲ್ಲಿಯೂ ಈ ಸಂಬಂಧದ ಕಡ್ಡಾಯ ಶಿಕ್ಷಣ ವಿಧೇಯಕವು ರೂಪುಗೊಂಡು ಸದ್ಯದಲ್ಲೇ ಅದು ಕಾನೂನಾಗಿ ವ್ಯವಸ್ಥಿತಗೊಳ್ಳಲಿದೆ.

ಪ್ರಜಾಪ್ರಭುತ್ವದಲ್ಲಿ ಎಲ್ಲ ಮಕ್ಕಳಿಗೂ ಶಿಕ್ಷಣ ನೀಡಬೇಕೆನ್ನುವ ವಿಶಾಲ ಧೋರಣೆಯನ್ನು ಇಟ್ಟುಕೊಳ್ಳುವುದು ಅತಿ ಅಪೇಕ್ಷಣೀಯವಾಗಿದೆ. ಅಜ್ಞಾನ ಮತ್ತು ಅಸಭ್ಯತೆಗಳಿಗೆ ಅಶಿಕ್ಷಣವೇ ಹೇತುವಾಗುವುದೆಂಬುದರಿಂದ ಶಿಕ್ಷಣದಿಂದಲೇ ಮಾನವನ ವಿಕಾಸವೆಂಬುದನ್ನು ಅವಶ್ಯ ಒಪ್ಪಲೇ ಬೇಕು. ಆದುದರಿಂದ ಕಡ್ಡಾಯ ಶಿಕ್ಷಣದ ಯೋಜನೆಯನ್ನು ಮುಕ್ತಹಸ್ತದಿಂದ ಸ್ವಾಗತಿಸುವುದು ನಾಗರಿಕರೆಲ್ಲರ ಆದ್ಯ ಕರ್ತವ್ಯ. ಕನ್ನಡಿಗರೂ ಈ ಯೋಜನೆಯನ್ನು ಅವಶ್ಯ ಸ್ವಾಗತಿಸುತ್ತಾರೆ.

ಆದರೆ, ಯೋಜನೆಯಲ್ಲಿ ಶಿಕ್ಷಣ ನೀಡುವ ಇರಾದೆಯೊಂದನ್ನೇ ಸರಕಾರವಿರಿಸಿಕೊಂಡಿದೆ; ಅದು ನೀಡುವಷ್ಟು ಶಿಕ್ಷಣವು ಪರಿಣಾಮಕಾರಿಯಾಗಬೇಕು; ಪ್ರತಿಯೊಂದು ಮಗುವೂ ಶಿಕ್ಷಣದಿಂದ ಸಂಪೂರ್ಣ ಪ್ರಯೋಜನ ಪಡೆಯಬೇಕು ಎಂಬತ್ತ ಸಾಕಷ್ಟು ಗಮನವೀಯದಿರುವುದು ವಿಷಾದನೀಯ. ಶಾಲೆಗೆ ತಮ್ಮ ಮಕ್ಕಳನ್ನು ಕಳಿಸಲು ನಿರಾಕರಿಸಿದವರಿಗೆ–ತಪ್ಪಿದವರಿಗೆ ದಂಡನೆಯನ್ನು ನೀಡುವ ವಿಧೇಯಕದಲ್ಲಿ ಅದಕ್ಕೆ ಮೂಲಕಾರಣವಾದ ದಾರಿದ್ರ್ಯದ ನಿವಾರಣೆಗೆ ಯಾವ ಪರಿಹಾರವನ್ನೂ ವಿಧಿಸುವುದಿಲ್ಲ. ಗ್ರಾಮಕ್ಕೊಂದು ಶಾಲೆಯೆಂಬ ತತ್ವದ ತಳಹದಿಯಲ್ಲಿ ೩೦೦ ಜನಸಂಖ್ಯೆಯಿರುವ ಹಳ್ಳಿಗಳಲ್ಲಿ ಪ್ರಾಥಮಿಕ ಶಾಲೆಯೊಂದನ್ನು ತೆರೆಯುವ ಉದಾರತೆ ಸರಕಾರದ್ದಿರುವುದಾದರೂ ಅಷ್ಟೂ ಜನಸಂಖ್ಯೆಯಿಲ್ಲದ ಹಳ್ಳಿಗಳ ಬಗ್ಗೆ ಯಾವ ವಿನಾಯತಿಯನ್ನೂ ತೋರಿಸಲಾಗುವುದಿಲ್ಲ. ಹೆತ್ತವರ ಬಡತನ, ಶಾಲೆಯ ದೂರತೆಯ ಸಮಸ್ಯೆಗಳ ಪರಿಹಾರವನ್ನು ಕಂಡುಹಿಡಿಯದೆ ಹೋದರೆ, ಈ ಯೋಜನೆ ಜನನಿರೋಧದಂತೆಯೇ ಅಂಕೆ-ಸಂಖ್ಯೆಗಳಲ್ಲಿ ಮಾತ್ರ ಯಶಸ್ವಿಯಾಗುವ ಸಂಭವವೇ ಹೆಚ್ಚು.

ಇಷ್ಟು ಮಾತ್ರವಲ್ಲ ಅನಿವಾರ್ಯ ಶಿಕ್ಷಣದ ಪರಿಣಾಮವಾಗಿ ೪೦ ಮಂದಿ ವಿದ್ಯಾರ್ಥಿಗಳಿಗೊಬ್ಬ ಅಧ್ಯಾಪಕನೆಂಬ ನಿಯಮವು ಜ್ಯಾರಿಗೆ ಬರಲಿದೆ. ಎಂದರೆ, ಒಬ್ಬ ಅಧ್ಯಾಪಕ ಕಡಿಮೆಯೆಂದರೆ ೪೦ರಿಂದ ಸುಮಾರು ೬೦ ಮಕ್ಕಳಿಗೆ ಕಲಿಸಬೇಕಾಗುತ್ತದೆ. ಮಾದರಿ ಮೈಸೂರಲ್ಲಿ ಡಾಕ್ಟರರಿಲ್ಲದ ಮದ್ದು ದೊರೆಯದ ಆಸ್ಪತ್ರೆಗಳಿರುವಂತೆಯೇ ಅಧ್ಯಾಪಕರಿಲ್ಲದ ಶಾಲೆಗಳೂ ಇವೆಯೆಂಬುದು ಸತ್ಯಕ್ಕೆ ದೂರವಲ್ಲ. ಆದರೆ, ಅಧ್ಯಾಪಕರೇ ಇಲ್ಲದ, ಪರ್ಯಾಪ್ತ ಸಂಖ್ಯೆಯಷ್ಟು ಅಧ್ಯಾಪಕರಿಲ್ಲದ ಶಾಲೆಗಳಲ್ಲಿ ಶಿಕ್ಷಣದ ಮಟ್ಟ ಯಾವರೀತಿಯಿದ್ದೀತು? ಹಾಗೆ ಶಿಕ್ಷಣ ನೀಡುವುದರಿಂದ ಯಾವ ಪ್ರಯೋಜನ ದೊರೆತೀತು ಎಂಬುದು ಗಂಭೀರ ಪ್ರಶ್ನೆ.

ಹೈಸ್ಕೂಲು ಮತ್ತು ಪ್ರಾಥಮಿಕ ಶಾಲೆಗಳ, ಸರಕಾರಿ ಮತ್ತು ಖಾಸಗಿ ಶಾಲೆಗಳ ಶಿಕ್ಷಣದ ಮಟ್ಟವನ್ನು ನಾವು ವಿಮರ್ಶಿಸುವುದಾದರೆ, ಎರಡನೆಯ ಪಂಗಡದ ಶಾಲೆಗಳ ವಿದ್ಯಾರ್ಥಿಗಳು ಮೊದಲನೆಯವರಿಗಿಂತ ತುಸುವಾದರೂ ಬುದ್ಧಿವಂತರು ಎಂಬುದನ್ನು ಕಂಡುಕೊಳ್ಳಬಹುದು. ಹೈಸ್ಕೂಲಿನ ಮೂರನೆಯ ಫಾರ್ಮಿನ ಮತ್ತು ಪ್ರಾಥಮಿಕ ಶಾಲೆಯ ೮ನೆ ತರಗತಿಯ ವಿದ್ಯಾರ್ಥಿಗಳಲ್ಲಿ ಪ್ರಾಥಮಿಕ ಶಾಲೆಯವನೇ ಸಾಮಾನ್ಯವಾಗಿ ಅಧಿಕ ಜ್ಞಾನ ಗಳಿಸುತ್ತಾನೆ ಎಂಬುದು ಸುಶ್ರುತ. ಎಂದರೆ, ಪ್ರಾಥಮಿಕ ಶಾಲೆಗಳಲ್ಲಿ ಅಧ್ಯಾಪಕ ವಿದ್ಯಾರ್ಥಿ ದಾಮಾಶಯು ಕಡಿಮೆಯಿರುವುದರಿಂದ ವೈಯಕ್ತಿಕ ಗಮನವನ್ನು ಅಧ್ಯಾಪಕನು ನೀಡಲು ಸಶಕ್ತನಾಗಿರುವುದೇ ಈ ತೆರದ ಮೇಲ್ಮಟ್ಟಕ್ಕೆ ಕಾರಣವೆಂಬುದು ಸತ್ಯ. ಹಾಗಿರುವಾಗ, ವಿದ್ಯಾರ್ಥಿ—ಅಧ್ಯಾಪಕ ದಾಮಾಶಯವು ಒಂದು ಮಿತ ಪ್ರಮಾಣದಲ್ಲಿದ್ದರೆ ಮಾತ್ರ ಶಿಕ್ಷಣ ಪರಿಣಾಮಕಾರಿಯಾಗುವುದು ಸಾಧ್ಯ.

ನಾವು ಗಮನಿಸಬೇಕಾದ ಪ್ರಶ್ನೆಗಳು ಅನೇಕವಿರುವುದರಿಂದ ಕೇವಲ ಶಿಕ್ಷಣದ ಬಗ್ಗೆಯೇ ಎಲ್ಲ ಹಣವನ್ನೂ ವಿನಿಯೋಗಿಸಬೇಕೆಂಬ ವಾದ ಅನರ್ಥಕಾರಿ. ಆದರೂ ಶಿಕ್ಷಣದ ಪರಿಣಾಮವು ಕೆಟ್ಟದಾದರೆ, ಅದು ರಾಷ್ಟ್ರಕ್ಕೇನೇ ಗಂಡಾಂತರಕಾರಿಯಾದುದರಿಂದ ಆದಷ್ಟು ಮಿತ ವೆಚ್ಚದಲ್ಲಿ ಉತ್ತಮ ಶಿಕ್ಷಣ ಸೌಕರ್ಯ ಒದಗಿಸಬೇಕಾಗಿದೆ. ಅಧ್ಯಾಪಕನೊಬ್ಬನು ಪ್ರಾರಂಭಿಕ ತರಗತಿಯಲ್ಲಿ ೪೦—೬೦ ಮಕ್ಕಳಿಗೆ ಪರಿಣಾಮಕಾರಿಯಾಗಿ ಶಿಕ್ಷಣ ನೀಡಬಲ್ಲನೆಂಬುದು ನಂಬಿಕೆಗೆ ನಿಲುಕದ ಸಂಗತಿ. ಶಿಕ್ಷಣ ಕ್ಷೇತ್ರದಲ್ಲಿ ಬಹುದಶಕಗಳಿಂದ ಮುಂದುವರಿದು ಶಿಕ್ಷಣವು ಸ್ಥಿರಕ್ಷಗಳಾಗಿ ಬಾದಿರುವ ಕೆಲವು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಇದು ಶಕ್ಯವೆನಿಸಬಹುದು. ಆದರೆ, ಅಮೆರಿಕೆಯಲ್ಲಿ ಗೋಧಿ ಬೆಳೆಯುವುದೆಂದು ಕರ್ನಾಟಕದ ಗದ್ದೆಗಳಲ್ಲೂ ಅದನ್ನು ಬಿತ್ತಿದರೆ, ಮೊಳೆಯಲಾರದು. ಹೇಳಿ ಕೇಳಿ ಶಿಕ್ಷಣದ ಗಂಧಗಾಳಿಯೂ ಸೋಂಕದ ನಮ್ಮ ಗ್ರಾಮೀಣ ಜನತೆಯಲ್ಲಿ ಶಿಕ್ಷಣದ ಬಗ್ಗೆ ಆಸಕ್ತಿ ಹುಟ್ಟಿಸುವುದಕ್ಕೇನೇ ಭಗೀರಥ ಪ್ರಯತ್ನ ಬೇಕಾಗಿರುವಾಗ, ಅಂತಹ ವಾತಾವರಣದಲ್ಲಿ ಹುಟ್ಟಿ ಬೆಳೆದುಬಂದ ಮಕ್ಕಳನ್ನು ಸುಶಿಕ್ಷಿತಗೊಳಿಸುವುದು ಹುರಿಗಡಲೆ ಜಗಿದಷ್ಟು ಸುಲಭವಲ್ಲ.

ಆದುದರಿಂದ, ನೀಡುವ ಶಿಕ್ಷಣ ಪ್ರಭಾವಶಾಲಿಯೆನಿಸಬೇಕಾದರೆ, ಅಧ್ಯಾಪಕ ವಿದ್ಯಾರ್ಥಿ ದಾಮಾಶಯದಲ್ಲಿ ಸ್ವಲ್ಪ ಉದಾರತೆ ತೋರಬೇಕು. ೧ರಿಂದ ೪ನೆಯ ತರಗತಿಗಳ ಮಟ್ಟಿಗಾದರೂ ಇದು ೧:೨೫, ಹೆಚ್ಚೆಂದರೆ, ೧:೩೦ ರಷ್ಟು ಇರಬೇಕು. ಇದನ್ನು ಮೀರಿದರೆ, ಸದ್ಯದ ಪರಿಸ್ಥಿತಿಯಲ್ಲಿ ಶಿಕ್ಷಣ ಸಫಲವಾಗುವುದಿಲ್ಲ. ೫ರಿಂದ ೭ನೆ ವರ್ಗಗಳ ವರೆಗೆ ಇದು ೧:೩೦, ಅಥವಾ ೧:೩೫ರಂತೆ ಇರಬಹುದು. ಹೈಸ್ಕೂಲು ವರ್ಗಗಳಲ್ಲಿ ಮಾತ್ರವೇ ೧:೪೦ ರಿಂದ ೧:೪೫ರ ವರೆಗೆ ನಿಯತಗೊಳಿಸಬಹುದು. ಬಾಲ್ಯಕಾಲದಲ್ಲಿ ನೀಡುವ ಶಿಕ್ಷಣವು ಮುಂದಿನ ವಿದ್ಯಾಭ್ಯಾಸಕ್ಕೆ ಪಂಚಾಂಗ ಹಾಕುವುದರಿಂದ ರಾಷ್ಟ್ರದ ಭಾವೀ ಅಭ್ಯುದಯ ಮತ್ತು ಉನ್ನತಿಯನ್ನು ಸಾಧಿಸುವ ವಿಶಾಲೋನ್ನತ ದೃಷ್ಟಿಯಿಂದ ವಿದ್ಯಾರ್ಥಿ ಅಧ್ಯಾಪಕ ದಾಮಾಶಯವನ್ನು ನಿಯತಗೊಳಿಸಬೇಕೇ ಹೊರತು, ಇರುವ ಮೂರು ಕಾಸಿನಲ್ಲಿ ಸಾವಿರ ಜನರಿಗೆ ಊಟ ಹಾಕುವ ಆಲೋಚನೆ ಮಾಡಬಾರದು. ಹಾಕುವ ಊಟಕ್ಕೆ ಭಕ್ಷ್ಯಭೋಜ್ಯಗಳೇ ಬೇಕಾಗಿಲ್ಲ; ರುಚಿಕರವಾದ ಅಂಬಲಿಯಾದರೂ ಸಾಕು. ಆ ಅಂಬಲಿಯನ್ನೂ ಎಲ್ಲರಿಗೂ ದೊರಕಿಸಲು ಸಾಧ್ಯವಿಲ್ಲದೆ ಹೋದರೆ, ಯೋಜಕನೇ ಉನ್ಮತ್ತನಾಗುತ್ತಾನೆ. ನೂರನ್ನಾಡಿ ಒಂದನ್ನು ಮಾಡುವುದಕ್ಕಿಂತ ಆಡಿದ ಒಂದನ್ನು ಸಾಧಿಸುವುದು ಶ್ರೇಯಸ್ಕರ. ಹಾಲು ಕೊಡದ ಸಾವಿರ ದನಗಳಿಗಿಂತ ಹಾಲು ಕೊಡುವ ಒಂದೇ ಒಂದು ದನವಿರುವುದು ಉತ್ತಮ. ಕಡ್ಡಾಯ ಶಿಕ್ಷಣದ ಹೆಸರಿನಲ್ಲಿ ಶಿಕ್ಷಣದ ಮೂಲ ಲಕ್ಷ್ಯ ಹಾಗೂ ಧ್ಯೇಯಗಳಿಗೆ ಕಲಂಕವೆರಚುವ ಹವ್ಯಾಸ ಮಾಡುವುದು ಆಕ್ಷೇಪಣೀಯ. ಮಕ್ಕಳ ಹೆತ್ತವರೂ ಶಿಕ್ಷಣ ಶಾಖೆಯ ಅಧಿಕಾರಿಗಳೂ ಈ ವಿಷಯದತ್ತ ಅವಶ್ಯ ತಮ್ಮ ಮನಸ್ಸನ್ನು ಹರಿಸಬೇಕು.

ನಡೆ—ನುಡಿ

ಒಂದು ಊರಲ್ಲಿ ಒಬ್ಬ ಪ್ರಖ್ಯಾತ ವೈದ್ಯನಿದ್ದನು. ಆತನಿಗೆ ತುಂಬಾ ವಯಸ್ಸಾದ್ದರಿಂದ ಆತನು ಯಾವ ರೋಗಿಗಳನ್ನೂ ನೋಡಲು ತನ್ನ ಮನೆಯಿಂದ ಹೊರಗೆ ಹೋಗುತ್ತಿರಲಿಲ್ಲ. ಒಮ್ಮೆ ಒಬ್ಬ ಬಹು ದೂರದ ಕಾಯಿಲಸ್ಥನು ಆತನ ಹತ್ತಿರ ಬಂದನು. ಮುದುಕ ವೈದ್ಯನು ಆತನನ್ನು ಪರೀಕ್ಷಿಸಿ ಕೆಲವು ಔಷಧಿಗಳನ್ನು ಕೊಟ್ಟು ಯಾವ ಪಥ್ಯವಿರಬೇಕೆಂಬುದನ್ನು ತಿಳಿದುಕೊಳ್ಳಲು ಒಂದು ವಾರ ಕಳೆದು ಬರುವಂತೆ ಹೇಳಿದನು.

ರೋಗಿಯು ಒಂದು ವಾರ ಕಳೆದ ನಂತರ ತನ್ನ ತಂದೆಯೊಡನೆ ವೈದ್ಯನಲ್ಲಿಗೆ ಬಂದನು. ವೈದ್ಯನು ರೋಗಿಯನ್ನು ನೋಡಿ 'ನೀನು ಕಾಕಂಬಿಯನ್ನು ತಿನ್ನಬಾರದು. ಅದೇ ಕಾಯಿಲೆ ಗುಣವಾಗಲಿರುವ ಪಥ್ಯ' ಎಂದನು.

ಇದನ್ನು ಕೇಳಿದ ರೋಗಿಯ ತಂದೆಯು, "ಈ ಮಾತನ್ನು ನೀವು ಅಂದೇ ಹೇಳಬಹುದಿತ್ತಲ್ಲ' ಎಂದು ಕೇಳಿದನು. ಅದಕ್ಕೆ ವೈದ್ಯನು 'ಹೌದು ಹೇಳಬಹುದಿತ್ತು. ಆದರೆ ಆ ದಿನ ನನ್ನ ಈ ಕೋಣೆಯಲ್ಲಿ ಕಾಕಂಬಿಯ ರಾಶಿಯೇ ಇತ್ತು. ಆದ್ದರಿಂದ ರೋಗಿಗೆ ನೀನು ಕಾಕಂಬಿ ತಿನ್ನಬಾರದೆಂದು ಹೇಳಿದ್ದರೆ ಆತನಿಗೆ ನಂಬಿಕೆಯಾಗುತ್ತಿರಲಿಲ್ಲ. ವೈದ್ಯರು ಮಾತ್ರ ಬೇಕಾದಷ್ಟು ಕಾಕಂಬಿಯನ್ನು ತಿನ್ನುತ್ತಾರೆ. ನನಗೆ ತಿನ್ನಬೇಡವೆನ್ನುತ್ತಾರೆ' ಎಂಬ ಅಭಿಪ್ರಾಯ ರೋಗಿಯಲ್ಲಿ ಬರುತಿದ್ದುದಲ್ಲದೆ ನನ್ನ ಔಷಧಿಯ ಮೇಲಿನ ವಿಶ್ವಾಸವೂ ಇಲ್ಲವಾಗುತ್ತಿತ್ತು' ಎಂದನು.

ನಾವು ಮೊದಲು ವರ್ತಿಸಿ ಇನ್ನೊಬ್ಬರಿಗೆ ಆದರಂತೆ ವರ್ತಿಸಲು ಹೇಳಬೇಕು.

ದಿ ವಿಜಯ ಬೇಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ: 1931

ರಿಜಿಸ್ಟರ್ಡ್ ಆಫೀಸು:

ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,

ಮಂಗಳೂರು-3, ಸೌತ್ ಕೆನರಾ.

ಕಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡ 5½ರ ವರೆಗೆ ಹೆಚ್ಚಿಸಲಾಗಿದೆ. ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ಪಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸೋಣಾಗುತ್ತದೆ.

ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ.

Tel: 'BLUEYAGAR'. — ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ — Phone: 374.

ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು.[ಮಾಲಿಕ: ಕೆ.ಕೆ.ಆರ್.ಶೇಟ್

ಪುಸ್ತಕ ವಿಮರ್ಶೆ:

ಕವಿ ವೆಂಕಟರಾಜರ ಮಾನಸಗಂಗೆ

(ಪ್ರಕಾಶಕರು: ಶ್ರೀ ಕೃಷ್ಣ ಪ್ರಕಾಶನ, ಉಡುಪಿ.
ಪುಟಗಳು: ೧೪೪. ಬೆಲೆ: ರೂ. ೩—೦೦)

> ಕುಡಿಯಲೆಂದು ಕೈ ಬೊಗಸೆಗೊಂಡು ಕಣ್ಣಿಟ್ಟು ಕಾಯಬೇಕು
> ಬಡವರೇನು? ನೀರಡಸಿದಂತು ಹೊಸ ರುಚಿಯನರಿಯಬೇಕು!! (ಪುಟ ೯೫)

ಹೊಸಗನ್ನಡ ಸಾಹಿತ್ಯದ ಕಾದಂಬರಿಗಳ ಪ್ರಚಲಿತ ಯುಗದಲ್ಲಿ ಕಾವ್ಯಗಳಿಗೆ ಅಥವಾ ಕವನ ಸಂಕಲನಗಳಿಗೆ ಸಮುಚಿತ ಸ್ವಾಗತ ಕನ್ನಡಿಗರಿಂದ ದೊರೆಯುತ್ತಿಲ್ಲ. ಪ್ರತಿಭಾ ಸಂಪನ್ನ ಕವಿಗಳು ನಮ್ಮಲ್ಲಿರುವರಾದರೂ ಅವರ ಕೃತಿಗಳಿಗೆ ಪ್ರೋತ್ಸಾಹ ಲಭಿಸುತ್ತಿಲ್ಲ. ಆದರೂ ಕನ್ನಡದ ಕವಿಗಳು ತಮ್ಮ ಪ್ರತಿಭೆಯನ್ನು ಹೊರಗೆಡಹಲಿರುವ ವಿಘ್ನ ವಿಡ್ಡೂರಗಳೆಲ್ಲವಕ್ಕೂ ಎದೆಗೊಟ್ಟು ಸಹಿಸಿ ತಮ್ಮ ಕರ್ತವ್ಯವೆಂಬಂತೆ ಕನ್ನಡ ವಾಗ್ದೇವಿಯ ಸೇವೆಯನ್ನು ಮಾಡುತ್ತಿರುವುದು ಪ್ರಶಂಸನೀಯ. ಇಂತಹ ಬೆರಳೆಣಿಕೆಯವರ ಕವಿಗಳಲ್ಲಿ ಶ್ರೀ ವೆಂಕಟರಾಜರೂ ಒಬ್ಬರು.

ಕವಿ ಶ್ರೀ ಎಸ್. ವೆಂಕಟರಾಜರ 'ಮಾನಸ ಗಂಗೆ'ಗೆ ರಾಜ್ಯಸರಕಾರದ ರೂ. ೭೫೦ರ ಪಾರಿತೋಷಕ ದೊರೆತ ಮೇಲೆ ಅವರತ್ತ ದೃಷ್ಟಿಹಾಯಿಸುವವರ ಸಂಖ್ಯೆ ಹೆಚ್ಚಬಹುದು. ಆದರೆ, ಸುಮಾರು ಕಾಲು ಶತಮಾನದಿಂದಲೂ ಸಾಹಿತ್ಯ ಸೇವೆಯನ್ನು ಮಾಡುತ್ತ ಬಂದ ಶ್ರೀ ವೆಂಕಟರಾಜರಿಗೆ ಇದೇನೂ ಹೆಚ್ಚಿನ ಸನ್ಮಾನವೆನಿಸುವುದಿಲ್ಲ. ತಮ್ಮ ಗೀತೆಗಳನ್ನು 'ಕವಿತಾ ಕಾಮಿನಿ" ಯೆಂಬ ಹೆಸರಿನಲ್ಲಿ ಎರಡು ಭಾಗಗಳಾಗಿ, ಗೀತನಾಟಕಗಳನ್ನು 'ಅಮೃತಲಹರಿ'ಯಲ್ಲಿ ಸಂಗ್ರಹಿಸಿ, ಶ್ರೇಷ್ಠ ವರ್ಗದ ಕವಿಗಳ ಸಾಲಿನಲ್ಲಿ ಸೇರಲು ಅರ್ಹತೆ ಪಡೆದವರು ಶ್ರೀ ವೆಂಕಟರಾಜರು. ಸ್ವಯಂ ಭಾವಜೀವಿಗಳಾದ ಇವರ ಕೃತಿಗಳು ವಸ್ತುನಿಷ್ಠತೆಗಿಂತಲೂ ಭಾವನಿಷ್ಠತೆಯನ್ನು ಚೆನ್ನಾಗಿ ಉಳಿಸಿಕೊಂಡಿವೆ. ಇದಕ್ಕೆ ಜ್ವಲಂತ ನಿದರ್ಶನವಾಗಿ ನಿಂತಿದೆ ಸದ್ಯದ ಕೃತಿ 'ಮಾನಸ ಗಂಗೆ'.

"'ಮುಂಬೆಳಕು ತೋರುತಿದೆ ತಂಗಾಳಿ ಬೀಸುತಿದೆ ಹೊಂಗದಿರು ಕಾದಿಹುದು ಸೆರಗು ಹಾಸಿ; ತುಂಬಿ ತುಂಬುರನು ತಂಬೂರಿ ಮಿಂಟುತಲಿರಲು ಏಕೆ ಕಣ್ಮುಗಿದು ಕುಳಿತಿರುವೆ ಕಾವ್ಯಋಷಿ? ಕಾವ್ಯ ಮಂದಾಕಿನಿಯೊಳಿಳಿಯು ಬಾರ, ಕವಿಯೆ! ರಸಮಂದಿರಕೆ ಮಿಂದು ಬಾರ" ಎಂದು ಕವಿಯನ್ನು ರಸಿಕರು ಆಹ್ವಾನಿಸುತ್ತಾರೆ. ಸೃಷ್ಟಿಯ ವಿವಿಧ ನೈಸರ್ಗಿಕ ಸೌಂದರ್ಯವನ್ನು ಕಂಡು ಕವಿಹೃದಯ ಎಂದಿಗೂ ಸುಮ್ಮನಿರದು; ಅದು ಗಾನಾಮೃತ ವರ್ಷವನ್ನು ಸುರಿಸತೊಡಗುವುದು.

೫೯ ಗೀತೆಗಳ ಈ ಸಂಕಲನದ ಹೆಚ್ಚಿನ ಗೀತೆಗಳು ಭಾವ ಗೀತೆಗಳೇ ಆಗಿವೆ. 'ಗೌರಿ ವಾರ್ಷಿಕ' ಮೊದಲಾದ ಒಂದೆರಡು ಗೀತೆಗಳಲ್ಲಿ ನವ್ಯ ಕವಿತೆಯ ಛಾಯೆ ಕಾಣುವಂತಿದ್ದರೂ ಉಳಿದುವುಗಳಲ್ಲಿ ಇಂತಹ ನವ್ಯತೆಯಿಲ್ಲ; ದಿವ್ಯತೆ ಹಾಗೂ ಸೇವಗಳು ಮಾತ್ರವಿವೆ. ಸೃಷ್ಟಿಯನ್ನು ಪ್ರಕೃತಿಮಾತೆಯಾಗಿ ನಾವು ಭಾವಿಸುವುದಾದರೆ, ಇಲ್ಲಿಯ ಭಾವಗೀತೆಗಳಿಗೆ ತಕ್ಕ ಒನ್ನೆಲೆ ಲಭಿಸಿದಂತಾಗುವುದು. ಗಂಡು ಹೆಣ್ಣಿನ ಸಂಬಂಧ ಹೇಗಿರಬೇಕೆಂಬ ಕವಿಯ ಆಶಯ ಹೀಂತಿದೆ:

ಒಂದು ಗುಟುಕಿನಮೃತ ಕೊಡು
ಎಂದೆಂದಿಗು ಮರೆಯಲಾರೆ
ಬಂಧು ಬಳಗವೇಕೆ? ಬಿಡು
ನದಿಯ ತೀರ ನಲಿದು ಬಾರೆ
(ಪುಟ ೭)

ಎಂದು ಪತ್ನಿಯನ್ನು ಆಹ್ವಾನಿಸಿ,

ನಾನು ನೀನು ಮೆಚ್ಚಿನಲಿ
ಬದುಕು ಬಲೆಯ ಬೀಸಬೇಕು
ಏನೆ ಬರಲಿ ಸುತ್ತುಸುಳಿ
ಕೂಡಿ ಕಡಲನೀಸ ಬೇಕು!! (ಪುಟ ೮)

ಎಂದು ಭರತವಾಕ್ಯ ನುಡಿಸಿದ್ದಾರೆ. ದಂಪತಿಗಳಲ್ಲಿರಬೇಕಾದ ಅನ್ಯೋನ್ಯತೆ ಇದಕ್ಕಿಂತ ಏನು ಭಿನ್ನವಿದೆ? ಇದೇ ಮಾದರಿಯನ್ನು ನಾವು ಎಲ್ಲ ಕವಿತೆಗಳಲ್ಲಿಯೂ ನೋಡಬಹುದು.

ವರ್ಣನಾತ್ಮಕ ಗೀತೆಗಳೂ ಈ ಸಂಗ್ರಹ ಇಲ್ಲವೆಂದಿಲ್ಲ. ಶಿಶಿರರ್ತು ವರ್ಣನೆ ಹರಿಹರನ ಗಿರಿಜಾ ಕಲ್ಯಾಣದಲ್ಲಿ ಅದ್ಭುತ ರೀತಿಯಿಂದ ಬಂದಿದೆ. 'ಶಿಶಿರಗಾನ'ದ ವರ್ಣನೆಯೇನೂ ಇದಕ್ಕಿಂತ ಕಡಿಮೆಯಿಲ್ಲ.

ಸುಖಶಕೊರನ ಬೆರಳ ತುದಿಯಿಂ
ಕರುಳ ತಂತಿಯ ಮೀಂಟುತ
ನವ ಶಿಖಾಂತದ ಬಿಸಿಯ ರಳುತದ
ಬೋಗುಣಿಯ ಬಾಯಿಂಬುತ ಶಿಶಿರರಾ
ವುತ ಬಂದನಂತೆ! (ಪುಟ ೧೫)

ಈತನ ಆಗಮನದಿಂದ

ಚಳಿಯ ಛಾರಕೆ ಹೊದೆದ ಹಚ್ಚಡ
ಹಗುರ ಹಪ್ಪಳ ವಾಗಿದೆ...!
(ಪುಟ ೧೬)

ಎಂತಹ ನೈಜ ವರ್ಣನೆ!

ಇಂದಿನ ದಿನದಲ್ಲಿ ಬರವಿಲ್ಲದಿರುವುದೆಂದರೆ ಕಸಿಕರಿಗೆ ಮಾತ್ರ. ಆದರೆ, ಇದೆಂತಹ ಕನಿಕರ?

'ವಿನಯವಾವರಣದಲಿ
ವಿಷವ ತುಂಬಿದ ಹೊದಿಕೆ
ಹಚ್ಚಡವಿದೆಂದು ಕೊಡ—
ಲಿರುವ ಕಾರುಣ್ಯ!... (ಪುಟ ೩೫)

ನಿತ್ಯ ಜೀವನದಲ್ಲಿ ಕಾಣುವ ಸತ್ಯಕ್ಕೆ ಇದು ಅತಿ ನಿಕಟವಿದೆ ಯೆನಿಸುವುದಿಲ್ಲವೆ?

ಶ್ರೀ ವೆಂಕಟರಾಜರ ವರ್ಣನಾ ಚಮತ್ಕಾರ, ವಿಸ್ತಾರ ಮತ್ತದನ್ನು ವಸ್ತುವಿಗೆ ಹೊಂದಿಸುವ ಜಾಣ್ಮೆಯು ಹೆಚ್ಚಿನ ಕವನಗಳಲ್ಲಿ ಕಂಡುಬರುತ್ತದೆ. "ರಸೋ ವೈಸಃ" ಎಂಬುದನ್ನು ಇದಕ್ಕೆ ಉದಾಹರಿಸಬಹುದು:

"ಮೂಡು ಬಾನ ಬಂಗಾರ ಬೆಳಕು ಹೊಳೆ
ಯಾಗಿ ಹರಿದು ಬಂತು"

ನಾಡಿನೆದೆಯ ತಂಬೂರಿ ಮೀಂಟಿ ಹೊಸ ಹಾಡು ಹರಿದು ಬಂತು" (ಪುಟ ೯೩)

ಹಾಡು ಹರಿದುಬಂದ ಗುಂಗಿನಲ್ಲಿ ತನ್ನನ್ನೇ ತಾನು ಮರೆತು ಓದುಗನನ್ನು ಕವಿ ಎಚ್ಚರಿಸಬೇಕಾಗುತ್ತದೆ.

ಕುಡಿಯಲೆಂದು ಕೈ ಬೊಗಸೆಗೊಂಡು ಕ
ಣ್ಣಿಟ್ಟು ಕಾಯಬೇಕು..........
ಜಡದಗೌರಿ ಕೈಲಾಸವೇರಿ ಶಿವ
ನೊಡನೆ ಕೂಡ ಬೇಕು! (ಪುಟ ೯೫)

ಕೆಲವೊಮ್ಮೆ ಕವಿ ಪ್ರಾಸಕ್ಕೆ ಮಾರು ಹೋದಂತೆ ಭಾಸವಾಗುತ್ತದೆ; ಆದರೆ, ಪ್ರಾಸದೊಡನೆ ಓಟವನ್ನೂ ಅರ್ಥವನ್ನೂ ಕೆಡಿಸದ ಅದ್ಭುತ ಕೌಶಲ್ಯವನ್ನು ನಾವಿಲ್ಲಿ ಕಾಣಬಹುದು:

ವನವಾಗಿ ಪುಣ್ಯಪಾವನವಾಗಿ ಸತ್ಯ ಜೀ
ವನವಾಗಿ ಬೆಳೆದು ಬಂತು!
ತನಗಾಗಿ ತಾನೆಂಬ ಮನವರಿಕೆಯೆಲ್ಲಮೇಲ್
ಮೆಲನೆ ಪರಿಗಳೆದು ಬಂತು! (ಪುಟ ೯೬)

ಇದೇ ರೀತಿಯಲ್ಲಿ ಇಲ್ಲಿನ ಪ್ರತಿಯೊಂದು ಕವನವೂ ವಾಚಕನಲ್ಲಿ ಓದುವ ಕುತೂಹಲವನ್ನು ಕೆರಳಿಸುತ್ತದೆ. ಭಾವವನ್ನೂ ಅರ್ಥವನ್ನೂ ಕೊಂಡನೆಂದರೆ, ಹೊನ್ನದು ಕವಿಮ್ಮತ್ತಾದಂತಾಗುತ್ತದೆ. ಕಾವ್ಯಾಮೃತವನ್ನು ಸವಿಯ ಬಯಸುವವರು ಕೈಬೊಗಸೆ ಮಾಡಿ ಕಣ್ಣಿಟ್ಟು ಕಾದುಕೊಂಡಿರಬೇಕು; ಬಡವರೇ ಇರಲಿ ಬಲ್ಲಿದರೇ ಇರಲಿ, ನೀರಡಸಿದವರು ಹೊಸರುಚಿಯನ್ನು ಅರಿತುಕೊಳ್ಳಲು ಪ್ರಯತ್ನಿಸಬೇಕು. ಆಗ, ಒಡಲು ತುಂಬಿ ಮನ ತುಂಬಿ ಸುಖದ ಹಂಬಲವೂ ತೀರುವುದು; ಜಡದಗೌರಿ ಕೈಲಾಸವೇರಿ ಶಿವನೊಡನೆ ಕೂಡುವುದು!

'ಮಾನಸ ಗಂಗೆ' ಕವಿಮಾನಸದಿಂದ ಬಹುಧಾರೆಯಾಗಿ ಪ್ರಾದುರ್ಭವಿಸಿ, ಕೊನೆಗೆ ಒಂದಾಗಿ 'ಶಿವ'ನಲ್ಲಿ ಕೂಡುತ್ತದೆ. ಕಣ್ಣಿಗೆ ಕಂಡ ರೂಪ ವೈಭವ, ಅದನ್ನು ಚಿತ್ರಿಸುವ ಕಲ್ಪನಾ ವೈಭವ, ಆ ಕಲ್ಪನೆಗಳ ಹಿಂದಿರುವ ನೈಜ ಭಾವಸ್ಪಂದನ, ಆ ಭಾವಸ್ಪಂದನದ ಅಂತಃಪ್ರಕಾರದಂತಿರುವ ಅಂತರಾರ್ಥ ಎಲ್ಲವನ್ನೂ ತನ್ನಲ್ಲಿ ಅರಗಿಸಿಕೊಂಡು ಸಹೃದಯರನ್ನು ಅಪೂರ್ವ ರಸಖುಷಿಯ ನಿತ್ಯಾಲೋಕ್ಷತ್ರ ಆವಾಸಕ್ಕೆ ಸೆಳೆದೊಯ್ಯುತ್ತದೆ

ಮುಂದೆ ರೆಕ್ಕೆಯಿಡುವ ಮುನ್ನ
ಒಮ್ಮೆ ಹಿಂದೆ ತಿರುಗಿನೋಡು,
ನಂದು ತಿರುವ ದೀಪವಿದಕೆ
ಇಷ್ಟು ತೈಲವಿಕ್ಕಿ ಹೊರಡು!
ನಂದಿತೇನು? ನಂದಲಿಲ್ಲ—
ಬದುಕಿನ ನಂದಾದೀಪ!
ಎಂದು ತೀರದ ನ್ಯತ ಧಾರೆ
ಹೊಂದಿರುವುದು ಬೀಜರೂಪ!
(ಪುಟ ೧೪೩,೪೪)

'ಮಾನಸಗಂಗೆ'ಯನ್ನು ಓದಿದ ನಂತರ ನಮ್ಮ ಮನಸ್ಸಿನಲ್ಲಿ ಅಂಕುರಿಸಿದ ದಿವ್ಯತೆಯ ದರ್ಶನ ನಮ್ಮಲ್ಲಿ ಸದಾ ಬೀಜರೂಪದಲ್ಲಿಯೇ ನಿಲ್ಲುವುದು ಖಂಡಿತ.

—ಗೋಪೀಚಂದ ರಾವ್.

"ನಚಿಕೇತ"ರ
ಇನ್ನೊಂದು ನವೀನ ಕಾದಂಬರಿ—
ಋಣ ಯಾತ್ರೆ
ಇದೀಗ ಪ್ರಕಟವಾಗಿದೆ.
ಬೆಲೆ ರೂ. 1-50 ನ. ಪೈಸೆ.
ಮೊದಲು ಪ್ರಕಟವಾದ ಕಾದಂಬರಿ—
ಭಾವಾರ್ಜನೆ
ಬೆಲೆ ರೂ. 1-25 ನ. ಪೈಸೆ.
ಪ್ರತಿಗಳು ಸಿಗುವ ಸ್ಥಳಗಳು:—
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ಡಿ. ಕೆ. ಭಾರದ್ವಾಜರ
ಇಂಗ್ಲಿಷ್, ಇಂಗ್ಲಿಷ್-ಕನ್ನಡ
ಡಿಕ್ಷನರಿ
ಬೆಲೆ: ರೂ. ನಾಲ್ಕು.
ಐದು ರೂಪಾಯಿ ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಲಾಗುವುದು.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ
LETTER WRITING MADE EASY
ಸುಲಭದಲ್ಲಿ ಪತ್ರಲೇಖನ
ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).
ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ
ಮನೆ ಮದ್ದು
ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆಂಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು.
ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ! ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಸುಲಭದಲ್ಲಿ ಇಂಗ್ಲಿಷ್
(ENGLISH MADE EASY)
ಎಂಬ ಆಂಗ್ಲ ಸ್ವಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ
ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು.
ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.
ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ. ಎ.)
ಸಾಮಾನ್ಯ ರೋಗಗಳು
(ಡಾ. ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ
ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.
ಪಂಚಾಯತಿಗಳಿಗೆ ಉಪಯುಕ್ತ ಪುಸ್ತಕ
ಮೈಸೂರು ರಾಜ್ಯದ
ಪಂಚಾಯತಿಗಳ
ತೆರಿಗೆಗಳ ಮತ್ತು ಫೀಗಳ
ನಿಯಮಗಳು.
ಲೇಖಕರು:
ಶ್ರೀ. ಕೆ. ಎಸ್. ಆಳ್ವ, ಬಿ. ಎ. ಬಿ. ಎಲ್
ಎಡ್ವಕೇಟ್, ಮಂಗಳೂರು.
ಬೆಲೆ: ರೂಪಾಯಿ ಎರಡು.
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

ಯಮುನ ನೆರಳು

(೩ನೇ ಪುಟದಿಂದ)

ವೆನು. ಫಲಕದಾರಿ ಸಿಂಹನನ್ನು ಕರೆದು ವಿಷಯ ತಿಳಿದುಕೊಳ್ಳಿರಿ. ಅದಕ್ಕೆ ತಕ್ಕಂತೆ ನಾನೂ ಕೆಲಸ ಮಾಡುತ್ತೇನೆ” ಎಂದ ರಾಮಸಿಂಹ.

“ಒಳ್ಳೇದು ನಾನಿಂದೇ ಫಲಕದಾರಿಯನ್ನು ಕರೆದು ವಿಚಾರಿಸುವೆನು.”

ಮಾತಿನ ಮಾಲೆಯು ಮುಗಿಯುತ್ತಿರುವಾಗಲೇ ಫಲಕದಾರಿಯು ಕಾಣಿಸಿಕೊಂಡನು. ಮಾತ್ರವಲ್ಲದೆ— “ನನ್ನ ಕೆಲಸ ಸಫಲವಾಗುವುದೆಂಬ ಆಶೆಯು ನನಗಿಲ್ಲಪ್ಪ ಯಾಕೆಂದರೆ ಪ್ರಾಣದಾಸ ಮತ್ತು ದಾಮೋದರ ಸ್ವರೂಪರು ಒಂದರೆ ಕ್ಷಣವೂ ಅವಳನ್ನು ಅಗಲುವುದಿಲ್ಲ.”

“ನೋಡಿ, ತಾವೀಗಲೇ ಧೈರ್ಯ ಬಿಟ್ಟು ಬಿಡುತ್ತಿದ್ದೀರಿ. ಒಳ್ಳೇದು, ಮಾಯಾವತಿಯ ವ್ಯವಹಾರವು ಹೇಗಿದೆ? ಅದನ್ನಾದರೂ ತಿಳಿಸಿ.”

“ನನ್ನ ಇರುವಿಕೆ ಅವಳಿಗೆ ಕೆಡುಕಾಗಿ ತೋರುವುದಿಲ್ಲವೆಂದು ನೋಡುವಾಗ ತಿಳಿಯುತ್ತದೆ. ಮಾತಿನಲ್ಲಿ ನನ್ನೊಡನೆ ಪ್ರೇಮಪೂರಿತಳಂತೆ ವರ್ತಿಸುತ್ತಾಳೆ. ಆದರೆ ಅವರೀರ್ವರಿಂದ ಭಯ ಉಂಟಾಗುತ್ತದೆ. ಪ್ರಾಣದಾಸರು ಅಷ್ಟೊಂದು ಚತುರರಲ್ಲ ಆದರೆ ದಾಮೋದರ ಸ್ವರೂಪರು ಆಪತ್ತಿನ ದೇವತೆಯಾಗಿದ್ದಾರೆ. ಅವನಿದಿರು ನನ್ನ ಎಲ್ಲಾ ಧೈರ್ಯಗಳೂ ಉಡುಗಿ ಹೋಗುತ್ತವೆ. ಇನ್ನೊಂದು ಕೆಡುಕೆಂದರೆ ನಾಳೆದು ಮಾಯಾವತಿಯ ಲಗ್ನವು ಜರಗಲಿದೆ. ಅದರಿಂದ ಅವಳ ಪ್ರೇಮಪೂರಿತ ವಾಕ್ಯಗಳು ನನಗೆ ಡಂಭಾಚಾರಗಳಂತೆ ಕಾಣುತ್ತವೆ. ಕಾರಣ—ಆಕೆಗೆ ನನ್ನಲ್ಲಿ ಪ್ರೇಮವಿದ್ದಿದ್ದರೆ ಎಂದೂ ಲಗ್ನಕ್ಕೆ ಒಪ್ಪುತ್ತಿರಲಿಲ್ಲ. ಇದೆಲ್ಲಾ ಡಂಭಾಚಾರ. ಈ ಕೆಲಸಕ್ಕಾಗಿ ತುಂಬಾ ಅವಕಾಶಬೇಕು. ಆದರೆ ಈ ಕಥೆ ನಾಳೆದು ಮುಗಿಯಲೇ ಬೇಕಾಗಿದೆ. ಅಷ್ಟರಲ್ಲಿ ಏನು ತಾನೇ ಮಾಡಲು ಸಾಧ್ಯವಿದೆ!”

“ವಾಸ್ತವವಾಗಿ ಈ ವಿವಾಹವು ನಿಮ್ಮ ಕಾರ್ಯಕ್ಕೆ ತಡೆಯನ್ನುಂಟು ಮಾಡುತ್ತದೆ ಅದಕ್ಕೇನು ಉಪಾಯ!’ ಎಂದು ಚಿಂತಿತನಾದ ದಲಿತಸಿಂಹ.

“ಹಾಂ! ಹಾಗಾದರೆ ಒಂದು ವೇಳೆ ನನ್ನ ಕೆಲಸ ಪೂರೈಸುವುದೆಂಬ ಭರವಸೆ ನನಗಿದೆ.” ಎಂದ ಫಲಿಕದಾರಿ.

“ಆಗಬಹುದು, ರಾಮಸಿಂಹರು ಮೊದಲೇ ಹೇಳುತ್ತಿದ್ದಾರೆ. ಹಾಗೆ ಮಾಡಿದರೆ ನಿಮಗೂ ತುಂಬಾ ಅವಕಾಶ ಸಿಕ್ಕುತ್ತದೆ.” ದಲಿತ ಸಿಂಹರೆಂದರು.

ತದನಂತರ ಮಿತ್ರವೃಂದವು. ಚದುರಿತು.

೦೦ ೦೦

ಕುಮಾರಿ ಮಾಯಾವತಿಯ ಲಗ್ನವು ಮುಂದಿನ ಸೋಮವಾರ ದಿನ ಆಗಲಿದ್ದಿತು. ಆದುದರಿಂದ ಬಂಗಲೆಯಲ್ಲಿ ತುಂಬಾ ಅವಸರವಾಗಿ ಹಾಗೂ ಉತ್ಸಾಹಪೂರಿತವಾಗಿ ಭರದಿಂದ ಕೆಲಸಗಳು ನಡೆಯುತ್ತಿದ್ದವು. ಎಲ್ಲಾ ಕೋಣೆಗಳೂ ಅತಿಥಿಗಳಿಂದ ತುಂಬಲ್ಪಟ್ಟಿತ್ತು. ಲಾನಿನಲ್ಲಿ (ಮೈದಾನು) ಹಲವಾರು ಡೇರೆಗಳು ಕಾಣುತ್ತಿದ್ದವು. ಹಲವಾರು ಕಡೆಗಳಿಂದ ವಾದ್ಯಮೇಳ ಬಾರಿಸಲ್ಪಡುತ್ತಿತ್ತು. ಅತಿಥಿ ಅಭ್ಯಾಗತರ ಮನೋರಂಜನಾರ್ಥವಾಗಿ ಸಿನೇಮಾ ವ್ಯವಸ್ಥೆ ಮಾಡಲಾಗಿತ್ತು. ಅರ್ಥಾತ್ ರಾಣಿಯ ಇಲಾಖೆಯು ಸಂಪೂರ್ಣ ರೀತಿಯಲ್ಲಿ ವಿನೋದ ನಗರಿಯಾಗಿ ಪರಿವರ್ತಿಸಲ್ಪಟ್ಟಿತ್ತು.

ದಾಮೋದರ ಸ್ವರೂಪರು ಮತ್ತು ಪ್ರಾಣದಾಸರು ಅತಿಥಿಗಳನ್ನು ಸ್ವಾಗತಿಸುವುದರಲ್ಲಿ ತಲ್ಲೀನರಾಗಿದ್ದರು ನೌಕರರಿಗೆಲ್ಲಾ ಹೊಸ ಹೊಸ ಕೆಲಸಗಳನ್ನು ಒಪ್ಪಿಸಲಾಗಿತ್ತು. ಪತಿ ವಿಯೋಗದಿಂದ ಅಧೀರಳಾದ ಕುಮಾರಿ ಯಮುನಳನ್ನು ಬಿಟ್ಟು ಎಲ್ಲರೂ ಸಂತೋಷ ಮಗ್ನರಾಗಿದ್ದರು. ರಾಣಿ ಬಹಳವಾಗಿ ತಿಳಿಸಿ ಸಮಾಧಾನ ಪಡಿಸಿದರೂ ದುಃಖ ಪೀಡಿತಳಾದ ಆಕೆಯು ಸಂತೋಷ ಸಮಾರಂಭದಲ್ಲಿ ಭಾಗಿಯಾಗಲಿಲ್ಲ ಮದುವೆಯ ಗಳಿಗೆಯ ಸಮಯದಲ್ಲಿ ಯಮುನಳನ್ನು ಕರೆದಾಗಲೂ ಅವಳು ತನ್ನ ಕೋಣೆಯನ್ನು ಬಿಟ್ಟು ಕದಲಲಿಲ್ಲ. ತನ್ನ ವಿವಾಹ ಸಮಾರಂಭದಲ್ಲಿ ಅಕ್ಕ ಭಾಗವಹಿಸದೆ ಇದ್ದುದರಿಂದ ಮಾಯಾವತಿಗೆ ತುಂಬಾ ದುಃಖವಾಯ್ತು.

ಉಪಾಯವಿಲ್ಲದೆ ಮದುವೆಯ ನಿಯಮಗಳನ್ನು ಶುರುಮಾಡಲಾಯ್ತು. ದಿಬ್ಬಣ ಬರಲಿಕ್ಕಿದುದರಿಂದ ಎಲ್ಲರೂ ದಿಬ್ಬಣದ ಪ್ರತೀಕ್ಷೆ ಮಾಡುತ್ತಿದ್ದರು. ಅಷ್ಟರಲ್ಲಿ ವಾದ್ಯದ ಶಬ್ದವು ಮದುವಣಿಗನ ಬರುವಿಕೆಯನ್ನು ಸೂಚಿಸಿತು. ಅಲ್ಪ ಸಮಯದಲ್ಲಿಯೇ ಮೇಳವು ಬಾಗಿಲಿಗೆ ಬರಲು, ದ್ವಾರಾಚಾರಕ್ಕಾಗಿ ಮದುವಣಿಗನನ್ನು ಹೊರಗೆ ಕರೆತರಲಾಯ್ತು. ಮದುಮಗನು ಹಂತವನ್ನೇರಿ ಮೇಲೆ ಹೋಗಲು ‘ಝೂನ್’’ ಎಂಬ ಶಬ್ದದೊಂದಿಗೆ ಎಲ್ಲಾ ದೀಪಗಳೂ ಒಮ್ಮೆಲೇ ಆರಿದವು. ಕೂಡಲೇ ಮದುಮಗನು ಭೂಮಿಗೆ ಬೀಳುವುದನ್ನು ಕಂಡರು. ದಾಮೋದರರು ಹೆದರಿ ಬೀಳುತ್ತಿದ್ದ ರಾಜಕುಮಾರ ಪ್ರತಾಪ ಸಿಂಹರನ್ನು ತನ್ನ ಬಾಹುಗಳಿಂದ ಬಿಗಿದಪ್ಪಿ, ಎತ್ತಿಕೊಂಡು ಹೋಗಿ ಸೋಫಾದಲ್ಲಿ ಮಲಗಿಸಿದರು. ರಾಜಕುಮಾರರು ಮೂರ್ಛೆ ಹೋದ ಕಾರಣ ಡಾಕ್ಟರನ್ನು ಕೂಡಲೇ ಕರೆತರಲಾಯ್ತು. ಡಾಕ್ಟರರು ಬರುವ ಮುಂಚೆಯೇ ರಾಜಕುಮಾರನು ಅಂತಿಮ ಶ್ವಾಸವನ್ನು ಬಿಟ್ಟು ಬ್ರಹ್ಮಾನಂದ ಲೀನನಾದನು. ಪೋಲೀಸರಿಗೆ ಈ ಬಗ್ಗೆ ವರ್ತಮಾನ ಕೊಡಲಾಯ್ತು.

ರಾಜಕುಮಾರನ ಶವದ ತನಿಖೆ ನಡೆಸುವಾಗ ಅವರ ಮೇಲಿನ ಕಿಸೆಯಲ್ಲಿ ಒಂದು ಚೂರು ಕಾಗದ ಸಿಕ್ಕಿತು. ಅದರ ಮೇಲೆ ಕಪ್ಪು ಮುಖವಾಡದ ಚಿತ್ರ. ಸಹಿಯ ಸ್ಥಳದಲ್ಲಿ ‘ಸ್ಯಾಹ—ನಕಾಬ್’ ಎಂದು ಬರೆಯಲ್ಪಟ್ಟು ಮಧ್ಯದಲ್ಲಿ ಒಂದು ಸಂಕ್ತಿ ಈ ರೀತಿ ಬರೆಯಲ್ಪಟ್ಟಿತ್ತು.

“ನೀನು ಅಂತಿಮ ಗೀತವನ್ನು ಹಾಡಿದಿ.”

(ಮುಂದುವರಿಯುವುದು)

ಮಧು ಸಂಚಯ

ಕಾಣಿಕೆ ಕೈಯಲ್ಲಿದ್ದರೆ ಯಾವ ಬಾಗಿಲಿನಲ್ಲೂ ಹೆಚ್ಚು ಕಾಯಬೇಕಾಗಿಲ್ಲ.

೦ ೦ ೦ ೦

ಪಟ್ಟಣದಲ್ಲಿ ಬಾಲವಾಗಿರುವದಕ್ಕಿಂಥಾ ಹಳ್ಳಿಯಲ್ಲಿ ತಲೆಯಾಗಿರುವದು ಲೇಸು.

೦ ೦ ೦ ೦

ಮನಬಂದಂತೆ ಮಾತಾಡುವವನು ಮನ ನೋಯುವುದನ್ನು ಕೇಳಬೇಕಾಗುತ್ತದೆ.

೦ ೦ ೦ ೦

. ಬಡವರ ವಿಚಾರ ಇತರರಿಗೆ ತಿಳಿದಿರುವದಿಲ್ಲ. ಶ್ರೀಮಂತರ ವಿಚಾರ ಅವರಿಗೇ (ಶ್ರೀಮಂತರಿಗೆ) ತಿಳಿದಿರುವದಿಲ್ಲ.

೦ ೦ ೦ ೦

ಹಣವಿಲ್ಲದಿದ್ದರೆ ಏನೂ ನಡೆಯದು; ದೇವರ ಮುಂದೆ ಕಣ್ಣೀರಿಡುವೆನೆಂದು ದೇವಸ್ಥಾನಕ್ಕೆ ಹೋಗಲೂ ಹಣಬೇಕು!

೦ ೦ ೦ ೦

ಬಡತನವನ್ನು ಸಹಿಸಿಕೊಂಡು ಸರಿದಾರಿಯಲ್ಲಿ ನಡೆಯುವವರು ಹಲವು ಜನರಿದ್ದಾರೆ ಆದರೆ ಶ್ರೀಮಂತಿಕೆಯನ್ನು ಉಳಿಸಿಕೊಂಡು ಸರಿದಾರಿಯಲ್ಲಿ ಯಾರು ಇಲ್ಲ.

೦ ೦ ೦ ೦

ಹರಿದ ಅಂಗಿ, ಸುಂದರಿ ಹುಡುಗಿ ಎಲ್ಲರ ಗಮನವನ್ನು ಸೆಳೆಯುತ್ತವೆ!

೦ ೦ ೦ ೦

ಎಲ್ಲರನ್ನೂ ಆಳುತ್ತಿರುವವರೂ ಕೂಡ ಹೆಣ್ಣಿನ ದಾಸ್ಯಕ್ಕೆ ಒಳಗಾಗಿದ್ದಾರೆ!

೦ ೦ ೦ ೦

ಹೆಣ್ಣು ಇಲ್ಲದೆ ಜಗ ನಡೆಯದು ಆದ್ದರಿಂದಲೇ ದೇವರೂ ಹೆಣ್ಣು ಕಟ್ಟಿಕೊಂಡಿದ್ದಾನೆ!

೦ ೦ ೦ ೦

ಹೆಂಗಸಿನ ಮುಖ ನೋಡಿದರೆ ಆಕೆಯ ಗಂಡ ಇಂಥವನೆಂದು ಹೇಳಬಹುದು ಗಂಡನ ಜಟ್ಟಿ ನೋಡಿದರೆ ಆತನ ಹೆಂಡತಿ ಇಂಥವಳೆಂದು ಹೇಳಬಹುದು.

೦ ೦ ೦ ೦

ಹೊರಗೆ ಸುತ್ತಾಡುವ ಹುಡುಗಿ, ಮುಳ್ಳು ಬೇಲಿಯ ಮೇಲಿನ ಸೀರೆ ಚೆನ್ನಾಗಿ ಹಿಂತಿರುಗುವದಿಲ್ಲ.

೦ ೦ ೦ ೦

ದೊರೆ ಆಗಿ ಬಾಳಬೇಕೆಂದಿರುವವನು ಬಹುದಿನ ಗುಲಾಮನಾಗಿ ದುಡಿಯಬೇಕಾಗುತ್ತದೆ.

೦ ೦ ೦ ೦

ದೇವರು ಮನುಷ್ಯನಿಗೆ ಕೊಟ್ಟ ನೆರಳೊಂದೇ—ಮೃತ್ಯು. ಆದರೆ ಮನುಷ್ಯನು ಜೀವನದಲ್ಲಿ ಅನೇಕ ನೆರಳುಗಳನ್ನು ತಾನೇ ಸೃಷ್ಟಿಸಿಕೊಂಡು ಹಲವು ಬಾರಿ ಸಾಯುತ್ತಾನೆ.

೦ ೦ ೦ ೦

ವರ್ಷಕ್ಕೆ ಐನೂರು ರೂಪಾಯಿಯಲ್ಲಿ ಜೀವಿಸಲಾರದವನು ಸಾವಿರ ರೂಪಾಯಿಗಳಿದ್ದರೂ ಜೀವಿಸಲಾರ. ಸುಖದ ಬೆನ್ನು ಹಿಡಿದವನಿಗೆ ಎಷ್ಟಿದ್ದರೂ ಅಷ್ಟೇ

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4%
5 ,, 12	,,	4¼%
13 ,, 24	,,	4½%

ರೂ. 5,000/- ಮತ್ತು ಮೇಲಣ ಡಿಪೋಸಿಟಿಗೆ ¼% ಜಾಸ್ತಿ ಕೊಡಲಾಗುವುದು.

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣದ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ, ಮೆನೇಜರ್.

ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಬದಲಾವಣೆಗೆಂದು ಒಮ್ಮೆ ಎಸ್. ಆರ್. ಬೀಡಿಯನ್ನು ಬಳಸಿ ನೋಡಿರಿ, ಅಂದರೆ ನೀವು ತಪ್ಪದೆ ಅದನ್ನೇ ಎಂದೆಂದಿಗೂ ಕೊಂಡು ಕೊಳ್ಳುವಿರಿ.

S.R. BEEDI WORKS,
UDIPI, S.K.

ಎಲ್ಲಾ ಅಂಗಡಿಗಳಲ್ಲಿಯೂ ಮಾರಲ್ಪಡುತ್ತವೆ.

ವಸಂತ ಕಥೆ-ಕಾದಂಬರಿಗಳ ಮಾಸ ಪತ್ರಿಕೆ.
ವಾ. ಚಂದಾ ರೂ.8. ಬಿಡಿಪ್ರತಿ 75 ನೈಸೆ
ಮಾದರಿ ಸಂಚಿಕೆಗೆ 75 ನ.ಪೈ. ಕಳುಹಿಸಿರಿ
1—ಪಾರ್ಕ್ ರಸ್ತೆ — ಬೆಂಗಳೂರು-2.

NAVAYUGA WEEKLY, UDIPI.
REGD. NO. BG. 176

18–5–1961

LICENSE NO. 31
Licensed to Post without Prepayment

ವ್ಯಕ್ತಿ ಪರಿಚಯ

ಸ್ವಯಂ ಭೂ ರಾಷ್ಟ್ರಪತಿ - ಶ್ರೀ ಶೋಂಬೆ

ವಿಲಾಸ ಪ್ರಿಯರಾದ ಶೋಂಬೆ ಮೂರು ಬಾರಿ ದಿವಾಳಿಯೆದ್ದರೂ ಇಂದು ರಾಜಕಾರಣದಲ್ಲಿ ವಿಶ್ವವಿದಿತರಾಗಿದ್ದಾರೆ. ಬಂಧಿತರಾದ ಶೋಂಬೆಯವರ ಮುಂದಿನ ಅವಸ್ಥೆಯೇನೆಂಬುದು ಇನ್ನೂ ಅಗೋಚರವಿದೆ.

ಕೊಕ್ವಿಲಹಾಟ್‌ವಿಲೆಯಲ್ಲಿ ಸಮಾವೇಶಗೊಂಡಿದ್ದ ಕಾಂಗೋನಾಯಕರ ಸಮ್ಮೇಳನದಲ್ಲಿ ಕಾಂಗೋ ಸಮಸ್ಯೆಗಳನ್ನು ದೂರಮಾಡುವ ಉಪಾಯಗಳನ್ನು ಹುಡುಕಬಹುದೆಂದು ಯೋಜಿಸಲಾಗಿತ್ತು. ಆದರೆ ಶೋಂಬೆಯವರ ವಿಚಾರಧಾರೆಯು ಪರಿಹಾರ ಮಾರ್ಗದಲ್ಲಿ ಬಾಧಕವಾಗಿ ನಿಂತಿತು. ಶ್ರೀ ಶೋಂಬೆಯವರು ತನ್ನ ನೀತಿಯನ್ನು ಪರಿವರ್ತಿಸಿಕೊಳ್ಳಬೇಕು; ಇದಕ್ಕೆ ತಪ್ಪಿದರೆ ಸಮ್ಮೇಳನಾನಂತರ ಅವರನ್ನು ಮುಕ್ತಸಂಚಾರಕ್ಕೆ ಬಿಡುವುದು ಹಾನಿಕಾರಕವೆಂಬುದರಿಂದ ಕೈದುಗೊಳಿಸಬೇಕಾಗುವುದೆಂದು ಅವರಿಗೆ ಎಚ್ಚರಿಕೆಯನ್ನೂ ನೀಡಲಾಗಿತ್ತು. ಶ್ರೀ ಶೋಂಬೆಯವರನ್ನು ಯಾವ ಕಾರಣಗಳಿಂದ ಬಂಧಿಸಲಾಯಿತೆಂಬುದು ಸರಿಯಾಗಿ ತಿಳಿದುಬಂದಿಲ್ಲ. ಹಾಗೆಯೇ ತನ್ನ ಬಂಧನದಿಂದ ಶೋಂಬೆಯವರು ತಮ್ಮ ವಿಚಾರಧಾರೆಯನ್ನು ಬದಲಾಯಿಸುವರೆ, ಇಲ್ಲವೇ ಹಠಸ್ವಭಾವಿಗಳೂ ಮಹತ್ವಾಕಾಂಕ್ಷಿಗಳೂ ಆದ ಇವರ ಭಾವಿ ಕಾರ್ಯಕ್ರಮಗಳ ಮೇಲೆ ಯಾವ ಪರಿಣಾಮವು ಬೀಳಬಹುದೆಂದು ಈಗಲೇ ಹೇಳ ಬರುವುದಿಲ್ಲ.

ಕಟಾಂಗದ "ಸ್ವಯಂ ಭೂ ರಾಷ್ಟ್ರಪತಿ" ಶ್ರೀ ಶೋಂಬೆಯವರು ಮಹತ್ವಾಕಾಂಕ್ಷಿಯಾಗಿರುವಂತೆಯೇ ಬೆಲ್ಜಿಯನರ ಕೈಗೊಂಬೆಯಾಗಿದ್ದಾರೆ. ಈ ಬೆಲ್ಜಿಯನರ ಆದೇಶದಿಂದಲೇ ಇವರು ಸಂಯುಕ್ತ ರಾಷ್ಟ್ರ ಸಂಘವನ್ನೂ ದೂರಿದ್ದಾರೆ. ಶ್ರೀ ಕಸಾವುಬು ಮತ್ತು ಯುಕ್ತ ರಾಷ್ಟ್ರ ಸಂಘಗಳು ನಡುವೆ ರಾಷ್ಟ್ರ ಸಂಘದ ಗೊತ್ತುವಳಿಯನ್ನು ಕಾರ್ಯಾನ್ವಯಗೊಳಿಸುವ ಸಂಬಂಧದಲ್ಲಾದ ಒಪ್ಪಂದವನ್ನೂ ಶ್ರೀ ಶೊಂಬೆ ಕಾಂಗೋ ಸಮ್ಮೇಳನದಲ್ಲಿ ಟೀಕಿಸದೆ ಉಳಿಯಲಿಲ್ಲ. ತನ್ನ ಬೇಳೆಯು ಬೇಯದೆ ಇದ್ದುದರಿಂದ ಸಿಟ್ಟಿಗೆದ್ದ ಶೋಂಬೆ ಸಮ್ಮೇಳನ ತ್ಯಾಗ ಮಾಡಿದರು. ಇಷ್ಟರಿಂದಲೇ ತೃಪ್ತರಾಗದೆ ಕಸಾವುಬು ಕಾಂಗೋವಿನ ಸ್ವಾತಂತ್ರ್ಯವನ್ನು ಸಂಯುಕ್ತ ರಾಷ್ಟ್ರ ಸಂಘಕ್ಕೆ ಮಾರಿಬಿಟ್ಟಿದ್ದಾರೆ ಎಂಬ ಆರೋಪ ಹೊರಿಸಿದರು. ಕಾಂಗೋ ಸಂಕಟ ಪರಿಹಾರಕ್ಕೆ ಶೋಂಬೆ ಅಡ್ಡಗಾಲು ಹಾಕುತ್ತಿರುವರು ಎಂಬ ಅಭಿಪ್ರಾಯ ಸಮ್ಮೇಳನದಲ್ಲಿ ಹುಟ್ಟಿತು. ಕಾಂಗೋವಿನ ವಿದೇಶ ಮಂತ್ರಿ ಶ್ರೀ ಬೋಂಬೊಕೊರವರು ಕಾಂಗೋ ಸಮ್ಮೇಳನವನ್ನು ಹಾಳುಗೆಡಹುವ ಸಲುವಾಗಿಯೇ ಕುಕ್ವಿಲಹಾಟ್ ವಿಲೆಗೆ ಶೋಂಬೆ ಬಂದಿರುವರೆಂದು ನಿಂದಿಸಿದರು. ಶ್ರೀ ಶೋಂಬೆಯವರೊಡನೆ ಹತ್ತು ಜನ ಬೆಲ್ಜಿಯನ್ ಸಲಹೆಗಾರರೂ ಸಮ್ಮೇಳನ ದಸ್ಥಳಕ್ಕೆ ಬಂದುದರಿಂದ ಇವರ ವರ್ತನೆಯೆಲ್ಲವೂ ಸಲಹೆಗಾರರ ಸಲಹೆಯಂತೆಯೇ ನಡೆಯಿತು ಎಂದು ಹೇಳಬೇಕಾಗಿದೆ. ಶ್ರೀ ಶೋಂಬೆಯವರು ತನ್ನ ಕಾರ್ಯಾಲಯದಲ್ಲಿ ಹಾಗೂ ಪ್ರೈವೇಟ್ ಚೇಂಬರಿನಲ್ಲಿ ಬೆಲ್ಜಿಯನ್ ದೊರೆಯ ಮೂರಡಿ ಅಳತೆಯ ಚಿತ್ರವನ್ನು ತೂಗಹಾಕಿದ್ದಾರೆ! ಆಗಾಗ ಪತ್ರಿಕಾ ಸಮ್ಮೇಳನವನ್ನು ಕರೆಯುವ ಅಭ್ಯಾಸವುಳ್ಳ ಶ್ರೀ ಶೋಂಬೆಯವರು ಅಲ್ಲಿ ಬೆಲ್ಜಿಯನ್ ಸಲಹೆಗಾರರು ತಯಾರಿಸಿಕೊಟ್ಟ ಹೇಳಿಕೆಯನ್ನು ತಮ್ಮ ಹೆಸರಿನಲ್ಲಿ ಓದುತ್ತಾರೆ! ಇದರಿಂದಾಗಿಯೇ ಬೆಲ್ಜಿಯನರು ಇವರನ್ನು 'ಕಟಾಂಗದ ನಾಯಕ ಮತ್ತು ಜನಪ್ರಿಯ ರಾಷ್ಟ್ರಪತಿ' ಎಂದು ಗೌರವಿಸುತ್ತಾರೆ.

ಕಾಂಗೋವಿನ ದೇಶಭಕ್ತ ಪ್ರಧಾನಿ ದಿ. ಪೆಟ್ರಿಸ್ ಲುಮುಂಬಾರ ಪ್ರಾಣಶತ್ರು ಶೋಂಬೆಯವರು ಲುಮುಂಬಾ ಇಲ್ಲವೆಂದಾದರೆ, ತನ್ನ ಕಾರ್ಯಗಳೆಲ್ಲವೂ ಕೈಗೂಡುವುದೆಂದು ತಿಳಿದಿದ್ದರು. ಸೆರೆಯಾಳಾದ ಲುಮುಂಬಾರನ್ನು ಇವರ ಆದೇಶದಿಂದಲೇ ಕೊಲ್ಲಲಾಯಿತೆಂದೂ ಇದರಿಂದಲೇ ಈ ಹತ್ಯೆಯ ಸಂಪೂರ್ಣ ವಿಚಾರಣೆಯಾಗಬೇಕೆಂಬುದನ್ನು ಇವರು ಬಲವಾಗಿ ವಿರೋಧಿಸುತ್ತಾರೆಂದೂ ತಿಳಿಯುತ್ತದೆ.

೪೧ ವರ್ಷ ಪ್ರಾಯದ ಶ್ರೀ ಶೋಂಬೆಯವರು ಇಷ್ಟರಲ್ಲಿಯೇ ಮೂರು ಬಾರಿ ತಾನು 'ದಿವಾಳಿ'ಯೆಂದು ಘೋಷಿಸಿಕೊಂಡಿದ್ದಾರೆ. ಆದರೂ ಒಂದು ವರ್ಷದ ಹಿಂದೆ ಇವರು ಹೆಸರು ವರ್ತಮಾನ ಪತ್ರಿಕೆಗಳಲ್ಲಿ ದೊಡ್ಡ ಅಕ್ಷರಗಳಿಂದ ಅಚ್ಚಾಯಿತು. ಹೊಸತಾಗಿ ಸ್ವತಂತ್ರವಾದ ಕಾಂಗೋವಿನ ಕಟಾಂಗ ಪ್ರಾಂತದ ಪ್ರಧಾನ ಮಂತ್ರಿಯೆನಿಸಿದ ಬಳಿಕ ಪ್ರಥಮ ಪ್ರಸಿದ್ಧಿ ಇವರಿಗೆ ದೊರೆಯಿತು. ಸ್ವತಂತ್ರವಾದ ಒಂದೇ ವಾರದೊಳಗೆ ಬೆಲ್ಜಿಯನರ ಷಡ್ಯಂತ್ರದಲ್ಲಿ ಸೇರಿಕೊಂಡು ಕಟಾಂಗವನ್ನು ಪ್ರತ್ಯೇಕ ಸ್ವತಂತ್ರ ರಾಷ್ಟ್ರವೆಂದು ಘೋಷಿಸಿದರು. ಸ್ವತಂತ್ರ ಕಾಂಗೊವಿನ ಸ್ವಾತಂತ್ರ್ಯವನ್ನೂ ಏಕತೆಯನ್ನೂ ಅಪಾಯಕ್ಕೆ ತಳ್ಳಿ ಹಾಕಿದರು; ಇದರೊಡನೆ ವಿಘಟನಾ ಕಾರ್ಯಗಳಿಗೆ ಪ್ರೋತ್ಸಾಹವಿತ್ತು ಕಾಂಗೋವನ್ನೇ ಒಂದು ಸಮಸ್ಯೆಯನ್ನಾಗಿ ಮಾಡಿದರು. ಮಾತಿನಲ್ಲಿ ಬುದ್ಧಿವಂತರೂ ವಿಚಾರ ಶೀಲರೂ, ಚತುರರೂ ಆದ ಶೋಂಬೆಯವರನ್ನು ಕಂಡು ಕೆಲವೊಮ್ಮೆ ಬೆಲ್ಜಿಯನ್ ಸಲಹೆಗಾರರೂ 'ಈ ಮನುಷ್ಯ ತನ್ನ ಮಹತ್ವಾಕಾಂಕ್ಷೆಗಳಿಗಾಗಿ ನಮ್ಮಿಂದ ಲಾಭವೆತ್ತುತ್ತಿರುವನಾದರೂ ನಮ್ಮ ಸ್ವಾರ್ಥಸಾಧನೆಗೆ ಭಂಗಮಾಡುತಿದ್ದಾನೆ' ಎಂದು ಉದ್ಗರಿಸುತ್ತಾರೆ. ಕಟಾಂಗದ ೨೦೦ ಪ್ರಭಾವಶಾಲಿ ಜನಮುಖಂಡರು ಶ್ರೀ ಶೋಂಬೆಯವರನ್ನು ಸದಾ ಸಮರ್ಥಿಸುತ್ತಾರೆ

೧೨ ವರ್ಷಗಳಿಗೆ ಹಿಂದೆ ಮೊತ್ತಮೊದಲು ಬೆಲ್ಜಿಯಮಿಗೆ ತೆರಳಿದ ಇವರು ಲೋಕಲ್ ಟ್ರೈನಿನಲ್ಲಿ ಎರಡನೆಯ ದರ್ಜೆಯಲ್ಲಿ ಸಂಚರಿಸಿದರು. ಅತಿ ಸಂಪನ್ನ ಕಾಂಗೋ ಪರಿವಾರದಲ್ಲಿ ಇವರು ಜನಿಸಿದ್ದರು. ಶ್ರೀಮಂತ ಕುಟುಂಬಕ್ಕೆ ಸೇರಿದ ಇವರು ವಿಲಾಸಪ್ರಿಯರಾಗಿದ್ದರು. ಒಂದು ಕಾಲದಲ್ಲಿ ಶೋಂಬೆ ಅಂತಃಪುರದಲ್ಲಿ ೩೦೦ ಸುಂದರಿಯರಿದ್ದರೆಂದು ಹೇಳುತ್ತಾರೆ. ಇದರಿಂದ ಇವರ ತಂದೆಯವರ ವ್ಯಾಪಾರವು ಮುಳುಗಿತು; ಮೂರು ಬಾರಿ ದಿವಾಳಿ ಅರ್ಜಿ ಸಲ್ಲಿಸಬೇಕಾಯಿತು

ಶ್ರೀ ಶೋಂಬೆ ಹೈಸ್ಕೂಲ್ ಶಿಕ್ಷಣವನ್ನು ಪಡೆದನಂತರ ಪತ್ರವ್ಯವಹಾರ ಮೂಲಕ ವ್ಯವಸಾಯ ಸಂಬಂಧಿ ಶಿಕ್ಷಣವನ್ನು ಪಡೆದರು. ತಾಯ್ತಂದೆಯವರು ಇವರನ್ನು ಯುರೋಪಿನ ಯಾತ್ರೆಗೆ ಕಳಿಸಿದರು. ಸ್ವಜಾತೀಯ ಯುವತಿಯೊಡನೆ ಇವರ ವಿವಾಹವೂ ಆಯ್ತು. ಆಕೆಯಲ್ಲಿ ಎಂಟು ಮಕ್ಕಳು ಹುಟ್ಟಿದರು.

೧೯೫೧ರಲ್ಲಿ ಬೆಲ್ಜಿಯನ್ ಸರಕಾರವು ಇವರನ್ನು ಕಟಾಂಗದ ಪ್ರಾಂತೀಯ ಪರಾಮರ್ಶ ಸಮಿತಿಯ ಸದಸ್ಯರನ್ನಾಗಿ ಆರಿಸಿತು. ಮೂರು ವರ್ಷಾನಂತರ ಗವರ್ನ ಮೆಂಟ್ ಕೌನ್ಸಿಲಿನ ಸದಸ್ಯರಾದರು. ಕೊನಾಟಕ್ ಪಕ್ಷದ ಗೊಂಬೆರೂಪದಲ್ಲಿ ಅಧ್ಯಕ್ಷರಾದ ನಂತರ ಇವರು ರಾಜಕಾರಣದಲ್ಲಿ ಕ್ರಿಯಾತ್ಮಕವಾಗಿ ದುಮುಕಿಬಂತಾದರು. ಈ ಪಕ್ಷವು ಕಟಾಂಗದ ತೋಟದ ಮಾಲಿಕರ ಮತ್ತು ಗನಿ ಒಡೆಯರ ರದ್ದಾಗಿದೆ. ಕಳೆದ ವರ್ಷ ಕಟಾಂಗದ ವ್ಯವಸ್ಥಾಪಕ ಸಭೆಗೆ ನಡೆದ ಚುನಾವಣೆಯಲ್ಲಿ ಇವರ ಕೊನಾಟಕ್ ಪಕ್ಷಕ್ಕೆ ಬಹುಮತ ದೊರೆಯಿತು.; ಇವರು ಸರಕಾರ ರಚಿಸಿದರು; ಪ್ರಧಾನ ಮಂತ್ರಿಯಾದರು ಈ ಘಟನಾನಂತರವೇ ಶೋಂಬೆಯವರ ಹೆಸರು ಜಗಜ್ಜನಿತವಾಯಿತು.



ಆಕಾಶ ಬಾಣಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸಲು ಉಪಯೋಗಿಸುವ ಯಂತ್ರ.

- ಠೇವಣಾತಿಗಾಗಿ ಬೇಂಕಿನವರೆಗೆ ಬರಬೇಕಾಗಿಲ್ಲ
- ಸರದಿ ತಪ್ಪಿದರೆ ಏನನ್ನೂ ಕಳೆದುಕೊಳ್ಳಬೇಕಾಗಿಲ್ಲ
- ಅಗತ್ಯಬಿದ್ದಲ್ಲಿ ಸಾಲಪಡೆಯಲು ಬೇರೆ ಜವಾಬ್ದಾರಿ ಹುಡುಕಬೇಕಾಗಿಲ್ಲ.

ಇದು ಜನಪ್ರಿಯ ದೈನಿಕ ಉಳಿತಾಯ ಯೋಜನೆ:

ಪಿಗ್ಮಿ
(ಒಂದು ರೂಪರೇಖೆ)
ದಿನ ಒಂದಕ್ಕೆ

25 ನಯೆಪೈಸೆ | 1 ರೂಪಾಯಿ

7 ವರುಷಗಳಲ್ಲಿ

ರೂ. 700 | ರೂ. 2,800

ಸಿಂಡಿಕೇಟ್ ಬೇಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಹಾರ್ಮೋನಿಯಮ್
ಬೋಧನ ಕ್ರಮ

ಎಂಬ ಶ್ರೀ. ಎ. ರಾಮಪ್ಪನವರಿಂದ ರಚಿತವಾದ

ಕನ್ನಡ ಸಂಗೀತ ಪುಸ್ತಕವು
ನಮ್ಮಲ್ಲಿ ದೊರೆಯುತ್ತದೆ.

ಬೆಲೆ ರೂ. 2. V. P. ಮಾಡುವುದಿಲ್ಲ. ರೂ. 2=50 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಬುಕ್ ಡಿಪೊ, ಉಡುಪಿ.

Edited Printed & Published by K. H. Shetty, at the Navayuga Press, Udipi, S. India.

40th year of publication. 25-5-1961 ೪೦ನೇ ವರ್ಷ

ಸಂಪುಟ ೪೧ Vol. 41

ನವಯುಗ

ಸಂಚಿಕೆ ೩೬ No. 36

ಬೆಲೆ 0=13

ಪ್ರಚಲಿತ ಪ್ರಸಂಗ

ವಿಚಾರ ಸಂಕಿರಣ ಮತ್ತು ಗೋಷ್ಠಿಗಳು

ವಿಚಾರಸಂಕಿರಣಗಳು ಹೆಚ್ಚುಹೆಚ್ಚಾಗಿ ನಡೆಯುತ್ತ ಬಂದಂತೆ ಅವುಗಳ ಮೌಲ್ಯವೂ ಇಳಿಯುತ್ತ ಬರುತ್ತದೆ. ಸರಕಾರವು ಇವನ್ನು ವ್ಯವಸ್ಥಿತಗೊಳಿಸುವಲ್ಲಿ ಸಮರ್ಪಕ ವಿಧಾನಗಳನ್ನು ರೂಪಿಸದಿರುವುದರಿಂದಲೇ ಹೀಗಾಗುತ್ತದೆ.

ಜನಾಭಿಪ್ರಾಯವನ್ನು ತಿಳಿದುಕೊಂಡು ಅವೆಲ್ಲವನ್ನೂ ತೂಗಿ ನೋಡಿ ಯುಕ್ತಾಯುಕ್ತತೆಗಳನ್ನು ಮನಗಂಡು ಅವುಗಳಿಂದ ಲಾಭ ಪಡೆದು ಸೂಕ್ತ ಕಾನೂನುಗಳನ್ನು ತಯಾರಿಸುವ ಪರಿಪಾಠವಿಟ್ಟುಕೊಳ್ಳುವುದನ್ನು ಯಾರೊಬ್ಬ ವಿವೇಕಿಯೂ ವಿರೋಧಿಸಲಾರನು. ಆದರೆ, ಈ ಜನಾಭಿಪ್ರಾಯವನ್ನು ಕ್ರೋಢೀಕರಿಸುವ ವಿಧಾನವು ಹೇಗೆಂಬ ಸಮಸ್ಯೆಗೆ ಇದುವರೆಗೆ ಎಲ್ಲಿಯೂ ಉತ್ತರ ದೊರೆತಂತಿಲ್ಲ. ಒಂದು ರಾಜ್ಯದಲ್ಲಿ ಇಲ್ಲವೇ ರಾಷ್ಟ್ರದಲ್ಲಿ ನಿರ್ಮಿತವಾದ ಶಾಸನವು ಯಶಸ್ವಿಯಾಗಬೇಕಾಗಿದ್ದರೆ ಅದಕ್ಕೆ ಜನಮನ್ನಣೆ ಅವಶ್ಯ ಬೇಕು. ಜನತೆಯ ಅಭಿಪ್ರಾಯವನ್ನು ಹೊಂದಿಸಿಕೊಂಡು ರಚಿತವಾದ ಯಾವುದೇ ಒಂದು ಶಾಸನವು ಅರ್ಧಾಂಶದಷ್ಟು ಸಫಲವಾದಂತೆಯೇ ಸರಿ. ಆದರೆ, ನಮ್ಮ ರಾಜ್ಯ ಸರಕಾರ ಈ ತತ್ವವನ್ನು ಬಿಟ್ಟು ಮೊದಲಾಗಿ ಶಾಸನವನ್ನು ತಯಾರಿಸಿ, ಅನಂತರ ಅದಕ್ಕೆ ಸಂಬಂಧಿಸಿದ ಜನಮತವನ್ನೂ, ಅದರಿಂದ ಏಳಬಹುದಾದ ಸಮಸ್ಯೆಗಳನ್ನೂ ಕಲೆಹಾಕಿ, ಶಾಂತಮಯವಾಗಿದ್ದ ವಾತಾವರಣವನ್ನು ಆ ಕಾಲದಲ್ಲಿ ಕಲಂಕವೆಬ್ಬಿಸಲು ಹವಣಿಸುತ್ತಿರುವುದು ಮತ್ತು ಸರ್ವರಿಗಳು ಸುಂದರೂ ತನ್ನ ಮುಂದಿರುವ ಸಮಸ್ಯೆಗಳನ್ನು ಪರ್ಯಾಲೋಚನೆಯಲ್ಲಿಯೇ ಪರ್ಯವಸಾನಗೊಳಿಸುವಂತೆ ಮಾಡುವುದೂ ಶುಭ ಸೂಚಕವೆನ್ನುವುದು ಸರಿಯಾಗಲಾರದು.

ನವ್ಯತೆಯ ಅಥವಾ ನವ ಪ್ರಯೋಗದ ದೃಷ್ಟಿಯಿಂದ ಇದ್ದ ವ್ಯವಸ್ಥೆಯನ್ನು ತತ್‌ಕ್ಷಣ ಬರ್ಖಾಸ್ತುಗೊಳಿಸಿ, ಮುಂದಿನ ವ್ಯವಸ್ಥೆಯಾಗುವವರೆಗಿನ ಮಧ್ಯಾವಧಿಯಲ್ಲಿ ಜನ ಜುಗುಪ್ಸೆಗೊಳ್ಳುವಂತಹ ವಾತಾವರಣವನ್ನು ನಿರ್ಮಿಸುವುದರಿಂದ ಯಾರಿಗೂ ಏನೂ ಪ್ರಯೋಜನವಿಲ್ಲ; ಜನಸಮೂಹಕ್ಕಾದರೂ ಇದರಿಂದ ಅನಾನುಕೂಲಗಳೇ ಹೆಚ್ಚುವುದು ಎಂಬುದು ಅನುಭವದ ಮಾತಾಗಿದೆ. ಪಂಚಾಯತು ರಾಜ್ಯಸ್ಥಾಪನೆಯ ಆದರ್ಶದ ಹೆಸರಿನಲ್ಲಿ ಮೊದಲಿದ್ದ ಜಿಲ್ಲಾ ಬೋರ್ಡುಗಳನ್ನು ರದ್ದುಗೊಳಿಸಿ ಬಹುಕಾಲ ಪಂಚಾಯತು ಚುನಾವಣೆ ನಡೆಯದೆ ಉಳಿದಿದ್ದ ಸನ್ನಿವೇಶವನ್ನು, ಮತ್ತೀಗ ತಾಲೂಕು ಬೋರ್ಡುಗಳ ರಚನೆಗೊಂಡಿದ್ದರೂ ಅವುಗಳ ಕರ್ತವ್ಯನಿರ್ವಹಣೆಯಲ್ಲಿರುವ ಅಡಚಣೆಗಳತ್ತ ಸೂಕ್ತ ಗಮನ ಹರಿಸದಿರುವುದನ್ನು ನಾವು ಮರೆಯುವಂತಿಲ್ಲ. ರದ್ದಾದ ಜಿಲ್ಲಾ ಬೋರ್ಡು ಇನ್ನೂ ಕೆಲವೊಂದು ಕಾರ್ಯಗಳನ್ನು ಹಿಂದಿನಂತೆಯೇ ನಿರ್ವಹಿಸುತ್ತಿದೆಯೆಂದರೆ, ಸತ್ತ ಹೆಣವು ಜೀವಂತ ಮನುಷ್ಯನಂತೆಯೇ ಕೆಲಸ ಮಾಡುತ್ತಿದೆ ಎಂಬಂತೆ. ಇದು ಶೋಭನೀಯವಲ್ಲ. ಜಿಲ್ಲಾ ಬೋರ್ಡುಗಳ ಅಂಕಿತದಲ್ಲಿರುವ ಶಾಲೆಗಳ ಆಡಳಿತೆಯ ವ್ಯವಸ್ಥೆಯೇನು ಎಂಬುದರ ಬಗ್ಗೆ ಎದ್ದಿದ್ದ ಹಗರಣ ಇನ್ನೂ ಮುಗಿಯುವ ಲಕ್ಷಣಗಳು ಗೋಚರಿಸುತ್ತಿಲ್ಲ. ಹಾಗೋ ಹೀಗೋ ಎಂಬ ವಾದವಿವಾದಗಳಲ್ಲಿ ತೂಗಾಡುವ ತೊಟ್ಟಿಲಲ್ಲಿ ಉಯ್ಯಾಲಾಡುತ್ತಿದೆ—ಈ ಪ್ರಶ್ನೆ ಸದ್ಯವೇ ಸಾರ್ವತ್ರಿಕ ಚುನಾವಣೆಯೊಂದು ನೆರವೇರುವುದರಿಂದ ಈ ಮಂತ್ರಿ ಮಂಡಳ ಅಧಿಕಾರಾವಧಿಯಲ್ಲಿ ಪ್ರಶ್ನೆ ಪ್ರಶ್ನೆಯಾಗಿಯೇ ಉಳಿಯುವ ಸಂಭವವೇ ಹೆಚ್ಚು.

ವಿವಿಧ ಉದ್ದೇಶಗಳ ಹೆಸರಿನಲ್ಲಿ ಸಪ್ತಾಹಗಳನ್ನು ಆಚರಿಸುವುದು ಅಭ್ಯಾಸವಾಗಿ ರಕ್ತಗತವಾಗಿ ಬಂದಿರುವಂತೆಯೇ ಸದ್ಯದ ದಿನಗಳಲ್ಲಿ ವಿಚಾರ ಸಂಕಿರಣಗಳೂ ರಕ್ತಗತವಾಗಿ ಬಿಡುವಂತಿವೆ. ಈ ವಿವಿಧ ಚರ್ಚಾಗೋಷ್ಠಿ ಅಥವಾ ವಿಚಾರಸಂಕಿರಣಗಳಿಗಾಗಿ ರಾಜ್ಯ ಸರಕಾರ ಲಕ್ಷಗಟ್ಟಲೆಯಲ್ಲಿ ಹಣ ವೆಚ್ಚಮಾಡುತ್ತಿದೆ. ಆದರೆ ಈ ವಿಚಾರ ಗೋಷ್ಠಿಗಳು ನಡೆಯುವುದ್ಯಾವಾಗ ಎಂದು ಅಲ್ಲಿ ನಡೆಯುವುದೇನು ಎಂಬುದನ್ನು ನಾವು ತಿಳಿದುಕೊಂಡರೆ, ಇವುಗಳಿಗಾಗಿ ಮಾಡುವ ಖರ್ಚು ಸಮುದ್ರದ ನೀರಿನಲ್ಲಿ ಹುಳಿ ಹಿಂಡಿದಂತೆ ಅಥವಾ ನೀರ ಮೇಲೆ ಮಾಡಿದ ಹೋಮದಂತೆ ಅಪರ ದಂಡ’ವೆಂಬುದರ ಮನವರಿಕೆಯಾಗುವುದು. ವಿದ್ಯಾಭ್ಯಾಸದ ಕ್ರಮದಲ್ಲಿ—ಪಾಠಪಟ್ಟಿಯಲ್ಲಿ ಪರಿವರ್ತನೆ ನಡೆಸುವ ಸಲುವಾಗಿ ಅಭ್ಯಾಸ ಪತ್ರಿಕೆಯನ್ನು ತಯಾರಿಸಿ, ಅದನ್ನು ಮಾನ್ಯ ಮಾಡಿದ ನಂತರವೇ ಆ ಬಗ್ಗೆ ಅಧ್ಯಾಪಕರ ವಿಚಾರ ಸಂಕಿರಣ ನಡೆದ ಸಂದರ್ಭಗಳು ಹಲವಾರು. ಈ ವಿಚಾರ ಸಂಕಿರಣದಲ್ಲಿ ವ್ಯಕ್ತವಾದ ಅನುಭವೀ ಅಧ್ಯಾಪಕರ ಅಮೂಲ್ಯ ಸಲಹೆ ಸೂಚನೆಗಳನ್ನು ಅಭ್ಯಾಸಪತ್ರಿಕೆಯಲ್ಲಿ ಅಳವಡಿಸಿಕೊಳ್ಳುವುದರಿಂದ ನಿಜವಾಗಿ ಉಪಯೋಗವಿದ್ದರೂ ಅವು ಹೊರಬರುವುದಕ್ಕೆ ಮೊದಲೇ ಪಾಠಪಟ್ಟಿಯ ಅಂತಿಮ ರೂಪರೇಷೆ ಅಂಕಿತವಾಗಿ ಅದಕ್ಕನುಗುಣವಾಗಿ ಪಠ್ಯ ಪುಸ್ತಕಗಳ ರಚನೆಯೂ ಮುಗಿದಾಗಿರುತ್ತದೆ. ಹಾಗಾದರೆ, ವಿಚಾರ ಸಂಕಿರಣಗಳಿಂದ ಪಡೆಯಬಹುದಾದ ಪುರುಷಾರ್ಥವೇನು? ಅವುಗಳಿಗೆ ವ್ಯಯಿಸಿದ ಹಣವು ಯಾವ ಉಪಯೋಗಕ್ಕೆ ಬಿತ್ತು? ಜನತೆಯು ಬೆವರನ್ನು ಇಳಿಸಿ ಗಳಿಸಿದ ಸಂಪಾದನೆಯಲ್ಲಿ ತನ್ನ ಬಾಯಿಕಟ್ಟಿ ಸರಕಾರದ ಬೊಕ್ಕಸಕ್ಕೆ ತುಂಬಿಸುವ ಕರದ ಹಣ ಹೀಗೆ ವ್ಯರ್ಥವೆಂಬಂತೆ ಪೋಲಾಗುವುದು ಮಹಾ ಅನ್ಯಾಯ. ಜನಬಲವೂ ಬುದ್ಧಿಯೂ ವ್ಯರ್ಥ ಹರಿಯುವುದು ಮಹಾ ನಷ್ಟ.

ಇದೇ ರೀತಿಯಲ್ಲೀಗ ಕಡ್ಡಾಯ ಶಿಕ್ಷಣದ ಸಂಬಂಧದಲ್ಲಿ ವಿಚಾರಗೋಷ್ಠಿಗಳು ಅಲ್ಲಲ್ಲಿ ನಡೆಯಲು ಪ್ರಾರಂಭಿಸಿದೆ. ಈ ಗೋಷ್ಠಿಗಳು ಜಿಲ್ಲೆಯ ಹಲವಾರು ಕಡೆಗಳಲ್ಲಿ ನಡೆಯುತ್ತವೆ. ಇವುಗಳಲ್ಲಿ ಎಲ್ಲಾ ಅಧ್ಯಾಪಕರೂ ಭಾಗವಹಿಸಬೇಕಾಗುವುದು. ಅವರಿಗೆ ಪ್ರಯಾಣಭತ್ತೆ ಅಥವಾ ಮತ್ತಿತರ ಭತ್ತೆ ಕೊಡಲಾಗುವುದಿಲ್ಲ. ರಾಷ್ಟ್ರ ನಿರ್ಮಾಪಕರೆಂಬ ಹೆಸರಿಗೆ ಪಾತ್ರರಾದ ಅಧ್ಯಾಪಕರು ಸ್ವಂತಖರ್ಚಿನಿಂದ ಬಂದರು ಎಂದಾದರೂ ಈ ಗೋಷ್ಠಿಗಳ ಪರಿಣಾಮವೇನು? ರಾಜ್ಯಪಾಲರು ಕಡ್ಡಾಯ ಶಿಕ್ಷಣಕ್ಕೆ ಸಂಬಂಧಿಸಿದ ಮಸೂದೆಗೆ ಈಗಾಗಲೇ ಮನ್ನಣೆಯಿತ್ತಿದ್ದಾರೆ. ಆದುದರಿಂದ ಅದರ ಬಗ್ಗೆ ತುಟಿ ಬಿಚ್ಚುವಂತಿಲ್ಲ. ತತ್ಸಂಬಂಧದ ಕಾರ್ಯಾಚರಣೆಯ ಪಟ್ಟಿಗೆ ಮಾತ್ರ ಇಲ್ಲಿ ಚರ್ಚಿಸಬಹುದು. ಇವೂ ಈಗಾಗಲೇ ರಚಿತವಾಗಿವೆ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಅನಿವಾರ್ಯ ಶಿಕ್ಷಣವು ಮಹತ್ವದ ಪಾತ್ರ ವಹಿಸಿದೆಯೆಂಬುದು ನಿರ್ವಿವಾದ. ಇದನ್ನು ಕಾರ್ಯಾಚರಣೆಗೆ ತರಬೇಕು; ಇದಕ್ಕೆ ಅಧಿಕಾರಿಗಳೂ ಅಧ್ಯಾಪಕರೂ ಪಂಚಾಯತುಗಳೂ ಮಾತ್ರವಲ್ಲ ಸಮಸ್ತ ನಾಗರಿಕರೂ ಶಕ್ತಿಮೀರಿ ಶ್ರಮಿಸಿ, ಅನಕ್ಷರತೆಯನ್ನು ದೂರೀಕರಿಸುವ ಮಹಾ ಸಾಹಸದ ಮತ್ತು ಪ್ರಶಂಸನೀಯವಾದ ಕಾರ್ಯದಲ್ಲಿ ಸಹಯೋಗ ನೀಡಬೇಕು. ಆದರೆ, ಇದರ ವ್ಯವಹಾರದಲ್ಲಿ ಬರುವ ವಿಘ್ನವಿಡ್ಡೂರಗಳನ್ನು ಪರಿಹರಿಸಲು ಸೂಕ್ತಕ್ರಮವನ್ನು ಕೈಗೊಳ್ಳುವುದು ಬೇಡವೆ?

ಬಡ ಮಕ್ಕಳಿಗೆ ಮಧ್ಯಾಹ್ನದ ಊಟ, ಪುಸ್ತಕ ಹಾಗೂ ಅಧ್ಯಯನದ ಸಲಕರಣೆಗಳು, ಅರಿವೆ ಅಂಗಿ ಮೊದಲಾದುವುಗಳನ್ನು ಒದಗಿಸುವ ಪ್ರಶ್ನೆ ಬಗೆಹರಿಯದುದು ಇದಕ್ಕಿಂತಲೂ ಒದಗಿಸುವ ಸೌಕರ್ಯಗಳನ್ನು ಸಕಾಲದಲ್ಲಿ ಪೂರೈಸಿಕೊಡುವುದು ಮತ್ತೂ ಗಹನವಾದುದು ‘ಸಮಯದ ಬೆಲೆ’ಯತ್ತ ವಿಶೇಷ ರೀತಿಯ ಮಹತ್ವನೀಡಲು ಅಂತಹ ಕೊಳ್ಳುವವರೆಗೆ ಸುಖವಿಲ್ಲ. ಕ್ರಮಪ್ರಕಾರವಾಗಿ ನೀಡಬೇಕಾದ ವೇತನ ನೀಡುವ ಅನುಕೂಲ್ಯವೊದಗಿಸಲು ಸಾಧ್ಯವಿಲ್ಲದ ಸರಕಾ

(೯ನೇ ಪುಟ ನೋಡಿರಿ)

ಸಹಕಾರಿ ಕೃಷಿ ವಲಯದಲ್ಲಿ ಇಬ್ಬರು ರೈತರು ಆಸಕ್ತಿಯಿಂದ ದುಡಿಯುತಿದ್ದಾರೆ.

ESTD. 1921

NAVAYUGA
KANNADA WEEKLY, UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ
ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೨೧.

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್.
ಬಿ. ಶಾಮರಾಯ ಶೆಟ್ಟಿ, ಬಿ. ಎ., ಎಲ್. ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

●

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್) ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್) ಕಲಂ ಇಂಚಿಗೆ ರೂ. 3-50
ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಧಾರಾವಾಹಿ ಕಾದಂಬರಿ

ಯಮುನ ನೆರಳು

ಮೂಲ ಲೇಖಕರು: **ಶ್ರೀ ಎಂ. ಎಲ್. ಪಾಂಡೇಯ.**
ಅನುವಾದಕರು: **ಶ್ರೀ ಎಸ್. ಎಂ. ಶೆಟ್ಟಿ, ಶಿವಮುಂಜೆ ಪರಾರಿ.**

(ಕಳೆದ ಸಂಚಿಕೆಯಿಂದ)

— ೫ —

ರಾಜಕುಮಾರರ ಕೊಲೆಯ ಮರುದಿವಸ ಬೆಳಿಗ್ಗೆ ಸಿ. ಐ. ಡಿ. ಹಾಗೂ ಅನೇಕ ಪೋಲೀಸು ಕರ್ಮಚಾರಿಗಳು ರಾಣಿಯ ಕೊಠಡಿಗೆ ಬಂದರು. ಪ್ರತಾಪಸಿಂಹರ ಹೆಣವನ್ನು ದಹನಮಾಡದೆ ಹಿಂದಿನ ರಾತ್ರಿಯಿಂದ ಪೊಲೀಸರು ಕಾವಲು ನಿಂತಿದ್ದರು. ಅಂದಿನ ತನಿಖೆಯನ್ನು ಇಂದಿಗೆ ಇಡಲಾಯ್ತು. ದಾಮೋದರರು ನಮ್ಮ ಪೂರ್ವ ಪರಿಚಿತ ಜಯಂತರನ್ನು ಕಾಯುತ್ತ ನಿಂತಿದ್ದರು. ತನಿಖೆ ಮೊದಲಾಗುವ ಮೊದಲೇ ಅವರು ಬಂದಿದ್ದರೆ ಒಳ್ಳೇದಿತ್ತು. ಏಕೆಂದರೆ ಪೋಲೀಸರು ಯಾ ಡಾಕ್ಟರರು ತಮ್ಮ ಕಾನೂನುಗಳನ್ನುಪಯೋಗಿಸಿ ಕೊಲೆಗಾರನ ಪತ್ತೆಹಿಡಿಯುವುದನ್ನು ಕಷ್ಟತರವಾಗಿ ಮಾಡುವುದಾಗಲೀ ಅಸಂಭವವನ್ನಾಗಿ ಮಾಡುವುದನ್ನಾಗಲೀ ಅವರು ತಡೆಗಟ್ಟುತ್ತಿದ್ದರು.

ವಾಚಕರು ಉತ್ಸಾಹದಿಂದಿರಬಹುದು. ಆದಕಾರಣ ದಾಮೋದರ ಸ್ವರೂಪರ ಹಾಗೂ ಜಯಂತರ ವಾಸ್ತವಿಕ ಪರಿಚಯವನ್ನು ಕೊಡಲಪೇಕ್ಷಿಸುತ್ತೇನೆ. ಜಯಂತರು ಕೆಲವು ದಿನಗಳಿಂದ 'ಗುಪ್ತ ಪತ್ತೇದಾರಿ' ಕೆಲಸವನ್ನು ಮನೋರಂಜನಾರ್ಥವಾಗಿ, ಅಪಾಯಗಳನ್ನೆದುರಿಸಿ ಕೊಲೆಯ ಹಾಗೂ ದರೋಡೆಯ ತನಿಖೆ ನಡೆಸಿ ಅದರ ಮೂಲವನ್ನು ಕಂಡುಹಿಡಿಯುತ್ತಿದ್ದರು. ದಾಮೋದರರು ಅವರ ಮಿತ್ರರಂತೆಯೇ ಹತ್ತಿರದವರಾಗಿದ್ದರು. ಜಯಂತರ ಹುಟ್ಟೂರು ಪ್ರಯಾಗ.

"ಯಮುನ ನೆರಳು" ಕಪ್ಪು ಮುಖವಾಡದ ರೂಪದಲ್ಲಿ ಕೊಲೆಮಾಡುವುದನ್ನು ಕಂಡು ಅವರು ಸಚೇತರಾದರು. ರಾಜಾ ರಾಮಪಾಲ ಸಿಂಹರ ಆಕಸ್ಮಾತ್ ಅದೃಶ್ಯದ ವರ್ತಮಾನ ಕೇಳಿ ಅವರು ವಿಚಲಿತರಾದರು. ಅಲ್ಲದೆ ಅಂದೇ ಅವರು ಮಹೇಂದ್ರಗಡಕ್ಕೆ ಬಂದು ಪುರಾತನ ಗಡಿಪ್ರದೇಶವನ್ನು ಕೊಂಡುಕೊಂಡು ನೆಲೆನಿಂತರು. ಅವರ ಆದೇಶದಂತೆ ದಾಮೋದರರು ರಾಣೀ ಇಳಾವತಿಯಲ್ಲಿ ಕೆಲಸಕ್ಕೆ ನಿಂತರು. ಯಾಕೆಂದರೆ ಅವರಿಗೆ ವಿಶ್ವಾಸವಿತ್ತು. ರಾಜಾ ರಾಮಪಾಲರ ಪತ್ನಿ ಯಾದ ಕುಮಾರಿ ಯಮುನಾ, ರಾಣಿ ಇಳಾವತಿಯ ಮಗಳು ಹಾಗೂ ಕುಮಾರಿ ಮಾಯಾವತಿಯ ಅಕ್ಕಳಾಗಿದ್ದಳು. ಕುಮಾರಿ ಯಮುನಾ-ಯಾ-ಕುಮಾರಿ ಮಾಯಾವತಿಯ ಸಂಪರ್ಕದಲ್ಲಿ ಇರುವುದರಿಂದ ಒಂದಲ್ಲ ಒಂದು ದಿನ ಈ ರಹಸ್ಯೋದ್ಘಾಟನೆ ಆಗುವುದೆಂಬ ಭರವಸೆ ಜಯಂತರಿಗಿತ್ತು. ಆದುದರಿಂದಲೇ ದಾಮೋದರರನ್ನು ಅಲ್ಲಿ ನೌಕರನನ್ನಾಗಿ ಮಾಡಿ, ತಾನು ಚಿತ್ರಕಾರನಂತೆ ನಿರ್ಜನ ಪ್ರದೇಶದಲ್ಲಿ ವಾಸಿಸುತ್ತಿದ್ದರು.

ದಾಮೋದರರು ಇಂದು ಅವರ ನಿರೀಕ್ಷಣೆಯಲ್ಲಿಯೇ ಇದ್ದರು. ಸ್ವಲ್ಪವೇ ಸಮಯದಲ್ಲಿ ಅವರು ಪಾರ್ಸಿ ವೇಷ ಧರಿಸಿ ಅಲ್ಲಿಗೆ ಆಗಮಿಸಿದರು. ಅವರು ತನ್ನ ಮಿತ್ರರೆಂದು ಎಲ್ಲರಿಗೂ ತಿಳಿಸಿದರು ದಾಮೋದರರು. ಇವರು ಬೈರ್‌ಗಡ ರಿಯಾಸತಿನ ಗುಪ್ತ ಪೋಲೀಸು ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಸಂಯೋಗವಶ ಪ್ರಯಾಗಕ್ಕೆ ಬಂದಿದ್ದರು. ನಿನ್ನೆಯ ಘಟನೆಯನ್ನು ಕಂಡು ಕರೆಸಿದುದಾಗಿ ತಿಳಿಸಿದರು ಆದರೆ ಪೋಲೀಸರು ಜಯಂತರನ್ನು ಒಳ್ಳೆಯ ರೀತಿಯಲ್ಲಿ ಪರಿಚಯ ಮಾಡಿಕೊಂಡಿದ್ದರು. ದಾಮೋದರರನ್ನೂ ಪೋಲೀಸರು ಅರಿತಿದ್ದರು. ಅವರು ಬರುತ್ತಲೆ ಅಧಿಕಾರಿ ವರ್ಗವು ಅಭಿನಂದನೆ ಮಾಡಿ ಅವರಿಗೆ ಆಸನ ಮಾಡಿಕೊಟ್ಟಿತು. ರಾಣಿ ಮುಂತಾದವರು ಅವರನ್ನು ಪಾರ್ಸಿ ಗುಪ್ತಚಾರನೆಂದೇ ತಿಳಿದಿದ್ದರು.

ಆಸನದಲ್ಲಿ ಮಂಡಿಸಿದ ನಂತರ ಜಯಂತರು ದಾಮೋದರರೊಡನೆ —"ಹೇಳು, ಏನು ವಿಷಯ!" ಎಂದು ಕೇಳಿದರು.

ದಾಮೋದರರು ನಡೆದ ಸಂಗತಿಗಳನ್ನು ವಿವರವಾಗಿ ತಿಳಿಸಿ ರಾಜಕುಮಾರರಿಂದ ಸಿಕ್ಕಿದ ಕಾಗದವನ್ನು ಕೊಟ್ಟು, ರಾಜಕುಮಾರರ ಡ್ರೈವರನನ್ನೂ, ಕ್ಲೀನರನನ್ನೂ ಕೈಕಾಲು ಕಟ್ಟಿ, ಬಾಯಿ ಬಿಗಿದು ಗ್ಯಾರೇಜಿನಲ್ಲಿ ಹಾಕಿದುದನ್ನು ವಿವರವಾಗಿ ತಿಳಿಸಿದರು

"ಅಂಯ್" ಎಂದು ಜಯಂತರು ಬೆಚ್ಚಿಬಿದ್ದು "ಮತ್ತೆ ದಿಬ್ಬಣದ ಸಮಯದಲ್ಲಿ ಕಾರನ್ನು ಯಾರು ಡ್ರೈವ್ ಮಾಡುತ್ತಿದ್ದರು?" ಎಂದರು.

"ನೋಡಿದ ಕೆಲವಂದಿ ಅವರ ಡ್ರೈವರನೇ ಕಾರನ್ನು ನಡೆಸುತ್ತಿದ್ದನು ಎನ್ನುವರು. ಇದೇ ಒಂದು ಆಶ್ಚರ್ಯವಾಗಿದೆ" ಎಂದರು ದಾಮೋದರರು.

"ಡ್ರೈವರನ್ನು ಎಲ್ಲಿದ್ದಾನೆ? ಅವನನ್ನು ವಿಚಾರಿಸಿದಿರೇನು?"

"ಇಷ್ಟರ ವರೆಗೆ ವಿಚಾರಣೆ ನಡೆಸಲಿಲ್ಲ ಕಾರಣ ಅವನು ಈಗ ಮಾತಾಡುವಷ್ಟು ಶಕ್ತನಲ್ಲ. ಸಂಯೋಗ ವಶದಿಂದ ಬೆಳಿಗ್ಗೆ ಅಡುಗೆಯವನು ಅವನ ಕೋಣೆಗೆ ಹೋದಾಗ ನರಳುವ ಶಬ್ದವನ್ನು ಒಳಗಿನಿಂದ ಕೇಳಿ ಅಡುಗೆಯವನಿಗೆ ಕೋಣೆಯೊಳಗಿನ ಸ್ಥಿತಿ ಅಚ್ಚರಿಯನ್ನುಂಟು ಮಾಡಿತು." ಹೊರಗಿನಿಂದ ಬೀಗವಿದೆ ಒಳಗೆ ಯಾರು" ಎಂದು ಜೋರಾಗಿ ಕೂಗಿದ. ಉತ್ತರವಿಲ್ಲ ಅವನ ಕೂಗನ್ನು ಕೇಳಿ ಎಲ್ಲಾ ನೌಕರರು ಒಟ್ಟಾದರು. ಆದರೆ ಮಾಡುವುದೇನು ಕಟ್ಟಕಡೆಗೆ ಬೀಗ ಒಡೆದ. ಒಳಗೆ ಕಾಣಲಾಗಿ ಡ್ರೈವರ್ ಮತ್ತು ಕ್ಲೀನರ್ ಮೊದಲು ತಿಳಿಸಿದ ಅವಸ್ಥೆಯಲ್ಲಿದ್ದರು, ಇಬ್ಬರೂ ಅಚೇತನರಾಗಿದ್ದುದರಿಂದ ಅವರ ವಿವರಣೆ ತೆಗೆದುಕೊಂಡಿಲ್ಲ."

ಅನಂತರ ಜಯಂತನಿಗೆ ಮೆಲ್ಲನೆ ಒಂದು ಕಾರ್ಡು ಕೊಟ್ಟು 'ದಲಾ ಬಹದೂರ್'ನೆಂಬ ಹೆಸರಿನ ಈ ಕಾರ್ಡು ಕ್ಲೀನರನ ತಲೆಯ ಮೇಲ್ಗಡೆ ಬಿದ್ದಿತ್ತು." ಎಂದರು ದಾಮೋದರರು.

ದಲಾ ಬಹದೂರ್‌ನ ಹೆಸರನ್ನು ಕಾರ್ಡಿನಲ್ಲಿ ಕಾಣುತ್ತಲೇ ಜಯಂತರು ಆಶ್ಚರ್ಯದಿಂದ ಬೆಚ್ಚಿ ಬಿದ್ದು —ದಲಾ ಬಹದೂರ್"! ಎಂದರು. ಆಗ ದಾಮೋದರರು "ಹೌದು ದಲಾ ಬಹದೂರ್‌ನು ಎರಡನೆ ಜನ್ಮ ತಾಳಿದ್ದಾನೆ" ಎಂದರು. "ಆಗಲಿ ನೋಡಿಕೊಳ್ಳುವ" ಎಂದು ಗಂಭೀರ ಪೂರ್ವಕವಾಗಿ ನುಡಿದರು. ಜಯಂತ್ ಅವರ ಕಣ್ಣುಗಳು ಮಿನುಗ ತೊಡಗಿದವು.

ದಾಮೋದರರಿಗೆ ತನ್ನ ಮಿತ್ರನ (ಸ್ವಾಮಿ) ಮಾತನ್ನು ಪುನರುಚ್ಚಾರ ಮಾಡುವಾಗ ಸಂತೋಷವಾಗುತ್ತಿತ್ತು. ಅವರೂ ಹೇಳಿದರು—"ನಿಸ್ಸಂದೇಹವಾಗಿ ಮುಂದೆ ನೋಡಿಕೊಳ್ಳುವ. ಈ ದಲಾ ಬಹದೂರ್‌ನು ಇಲಹಾ ಬಾದಿನ ಪೋಲಿಸರಿಗೆ ಚಳ್ಳೆಹಣ್ಣು ತಿನ್ನಿಸಿದ್ದಾನೆ. ಹಾಗೂ ನಿದ್ದೆಕೆಡಿಸಿದ್ದಾನೆ. ಈ ಸಲ ಅವನು ಪಾರಾಗುವಂತಿಲ್ಲ. ಇಂದಲ್ಲ ನಾಳೆ ಅವನ ಕೈಗಳಿಗೆ ಸಂಕೋಲೆ ಬಿಗಿಯಲೇ ಬೇಕು. ಸ್ವಲ್ಪ ಸಮಯದ ನಂತರ ಶೂಲಕ್ಕೆ ಹಾಕಬೇಕು. ನಿಮ್ಮ ಮುಂದೆ ಅವನು ಖಂಡಿತವಾ

(೧೧ನೇ ಪುಟ ನೋಡಿರಿ)

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ರೇವಣೆ ಮಾಡಿರಿ: ಬಡ್ಡಿ ಸೇಕಡಾ 5ರಂತೆ: ರೂ. 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100—00 ಒದಗಿಸುವುದು.

ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಸೇಕಡಾ 5¾ರ ವರೆಗೆ.

ತಾ. 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK LTD.
Estd: 1920

ರವೀಂದ್ರ ವಾಣಿ: ೧೦

ಪಾಪ ಮತ್ತು ಅದರ ಸಮಸ್ಯೆ

> ಜೀವನವು ಒಂದು ವೀಣೆಯಂತೆ. ವೀಣಾನಾದವು ಅಶುದ್ಧವಾಯಿತೆಂದರೆ, ವಾದಕನ ವಿಷಯದಲ್ಲಿ ಮಾತ್ರವೇ ಸಂದೇಹ ಹುಟ್ಟುವುದು; ವೀಣೆಯ ಮೇಲಲ್ಲ. ಹಾಗೆಯೇ ಜೀವನವು ನಿರ್ದೋಷವಾಗಿದೆ; ನಿಷ್ಪಾಪವಾಗಿದೆ—ಹೀಗೆಯೇ ಇದು ಮುಂದುವರಿಯುತ್ತದೆ.

ಮೂಲ ಲೇಖಕರು: ವಿಶ್ವಕವಿ ರವೀಂದ್ರನಾಥ ಟಾಗೋರ್.
ಅನುವಾದಕರು: ಶ್ರೀ ಕೆ. ಎನ್. ಭಟ್, ಶಿರಾಡಿಪಾಲ್.

ಜೀವನವು ತನ್ನ ವಿಕಸಿತ ಕಾಲದಲ್ಲಿ ಮೃತ್ಯುವಿಗೆ ಮಹತ್ವವನ್ನು ಕೊಡುವುದಿಲ್ಲ. ಮರಣದ ಮುಂದೆಯೂ ಅದು ನಗುತ್ತ ನಲಿಯುತ್ತಲಿರುವುದು. ಮೃತ್ಯುವಿಗೀಡಾಗುವ ಕೊನೆಯ ಗಳಿಗೆಯ ವರೆಗೂ ಜೀವನವು ನಿರ್ಮಾಣ ಸಂಗ್ರಹಗಳಲ್ಲಿ ತೊಡಗಿರುತ್ತದೆ. ಮೃತ್ಯುವನ್ನು ಜೀವನದಿಂದ ಪ್ರತ್ಯೇಕವಾಗಿ ನೋಡಿದಾಗ ಮಾತ್ರ ನಮಗದು ಭಯಾನಕವಾಗಿ ಕಾಣಿಸುವುದು. ಜೀವನದ ವಿಸ್ತೃತ ರೂಪವನ್ನು ನಾವು ನೋಡದಿದ್ದಾಗ ಮಾತ್ರ ನಮಗೆ ಹಾಗೆನಿಸುವುದು. ಆದರೆ ವಿಚಾರ ಮಾಡಿ ನೋಡಿದರೆ, ಮೃತ್ಯು ಜೀವನದ ಒಂದು ಅಂಶ ಮಾತ್ರವಾಗಿರುವುದು.

ನಾವು ಒಂದು ಸಣ್ಣ ಬಟ್ಟೆಯ ತುಂಡನ್ನು ಸೂಕ್ಷ್ಮ ದರ್ಶಕದಿಂದ ನೋಡಿದಾಗ—ಅದರ ಹೆಣಿಗೆ ನಮಗೆ ಛಿದ್ರ ಛಿದ್ರಗಳಾಗಿ ಒಂದು ದೊಡ್ಡ ಬಲೆಯಂತೆ ಕಾಣಿಸುವುದು. ಅದನ್ನು ನೋಡುತ್ತಿದ್ದಾಗ ನಾವು ಬೆಚ್ಚಿ ಬೀಳುವಂತಾಗುತ್ತದೆ. ಆದರೆ ಇದು ಆ ಬಟ್ಟೆಯ ತುಂಡಿನ ಸಹಜವಾದ ರೂಪವಲ್ಲ. ಹಾಗೆಯೇ ಮೃತ್ಯುವೂ ಜೀವನದ ನಿಜ ಸ್ವರೂಪವಲ್ಲ. ನೀಲಾಕಾಶವು ನೀಲ ರಹಿತವಾದ, ಪ್ರಾಣಿ ಅಥವಾ ಪಕ್ಷಿಗಳನ್ನು ನೀಲ ಬಣ್ಣಕ್ಕೆ ಹೇಗೆ ಪರಿವರ್ತಿಸಲಾರದೋ ಹಾಗೆಯೇ ಮೃತ್ಯುವು—ಜೀವನವನ್ನು ತನ್ನ ಛಾಯೆಯಿಂದ ಪರಿವರ್ತನೆಗೊಳಿಸಲಾರದು.

ನಡೆಯುವ ಪ್ರಯತ್ನ ಮಾಡುತ್ತಿರುವ ಒಂದು ಪುಟ್ಟ ಮಗುವನ್ನು ನೋಡಿದಾಗ ಅದರ ಆ ಪ್ರಯತ್ನ ನಮಗೆ ಬಹಳ ಕರುಣಾಜನಕವಾಗಿ ಕಾಣಿಸುವುದು. ತನ್ನ ಪ್ರಯತ್ನದಲ್ಲಿ ಸಫಲವಾಗದೆ ಅದು ಎಷ್ಟೋ ಸಲ ಬೀಳುವುದು. ಮತ್ತು ಏಳುವುದು. ಆದರೆ ಎರಡು ಹೆಜ್ಜೆ ಕೂಡ ಅದು ಮುನ್ನಡೆಯಲಾರದು. ಪ್ರತಿಸಲ ಸೋಲನ್ನು ಅನುಭವಿಸುತ್ತಿದ್ದರೂ, ಆ ಮಗು ಆನಂದ ಉತ್ಸಾಹಗಳಿಂದ ಅದೇ ಪ್ರಯತ್ನವನ್ನು ಪುನಃ ಮಾಡುತ್ತಲೇ ಇರುವುದು. ಮಗುವು ಪ್ರತಿಸಲವೂ ತನಗುಂಟಾದ ಸೋಲನ್ನು ಮರೆತು, ತನ್ನ ಪ್ರಯತ್ನ—ವಿಜಯದ ಕಡೆ ಮಾತ್ರ ದೃಷ್ಟಿಯಿಟ್ಟು ಮತ್ತೆ ಮತ್ತೆ ಪ್ರಯತ್ನ ಮಾಡುವುದು. ಈ ಪ್ರಯತ್ನ ಮಾಡುವಾಗ ಒಂದೆರಡು ಹೆಜ್ಜೆ ಮುನ್ನಡೆದರೂ ಸಾಕು, ಆಗ, ಆ ಮಗು, ಆನಂದದಿಂದ ಕೈತಟ್ಟಿ ನಗುವುದು. ನಮ್ಮ ಜೀವನದ ಕಷ್ಟ ದುಃಖಾದಿಗಳಿಗೆ, ಈ ಮಗುವಿನ ಉದಾಹರಣೆ - ನಮಗಿದು, ಅನುಕರಣೀಯವಾಗಿರುವುದು. ಜೀವನದ— ಕಷ್ಟ ದುಃಖಗಳು ಈ ಮಗುವಿನ ಸ್ಥಿತಿಯಂತೆಯೇ ನಮಗೆ ಭಾಸವಾಗುತ್ತವೆ.

ಪ್ರತಿ ದಿನವೂ ನಮ್ಮ ಜ್ಞಾನ, ಶಕ್ತಿ ಯೋಗ್ಯತೆ ಇವುಗಳು ಅಪೂರ್ಣವಾಗಿಯೇ ಇವೆ; ಎಂದು ಭಾಸವಾಗುವಂತಹ ಎಷ್ಟೋ ಘಟನೆಗಳು ನಮ್ಮ ಜೀವನದಲ್ಲಿ ನಮಗೆ ಎದುರಾಗುತ್ತವೆ. ಆದರೆ, ಈ ಘಟನೆಗಳು ನಮ್ಮ ಮುಂದೆ ನಮ್ಮ ಅಯೋಗ್ಯತೆಯನ್ನು ಮಾತ್ರ ಪ್ರದರ್ಶಿಸುತ್ತ ಇರುತ್ತವೆಯೆಂದಾದರೆ, ಆಗ ನಾವು ಪೂರ್ಣವಾಗಿ ನಿರಾಶರಾಗಿ ಹೋಗುತ್ತೇವೆ. ಇನ್ನು ನಾವು ಜೀವಂತವಿದ್ದೂ ಫಲವಿಲ್ಲ, ಎಂಬಂತೆ, ಭಾಸವಾಗುವುದು. ಈ ಅನುಭವ ನಮಗೆ ಉಂಟಾಗದಿರುವುದಿಲ್ಲ. ನಮ್ಮ ನಿತ್ಯದ ಕಾರ್ಯಕ್ಷೇತ್ರದಲ್ಲಿಯೇ ನಮಗೆ ನಮ್ಮ ದುರ್ಬಲತೆ ಹಾಗೂ ಕಷ್ಟದ ಅನುಭವವಾಗುವುದು. ಆದರೆ ಜೀವನವು ನಮಗೆ—"ನಿನಗೆದುರಾಗುತ್ತಿರುವ ಈ ಘಟನೆಗಳನ್ನು ವ್ಯಾಪಕವಾದ ದೃಷ್ಟಿಯಿಂದ ನೋಡು" ಎಂಬ ಪ್ರೇರೇಪಣೆಯನ್ನು ಕೊಡುವುದು. ಈ ಪ್ರೇರೇಪಣೆಯೇ ನಮ್ಮನ್ನು ಪ್ರಚಲಿತ ವಿಷಯಗಳಿಂದ ಮೇಲ್ಪಟ್ಟದ್ದಲ್ಲಿ ವಿಚಾರಮಾಡುವ ಶಕ್ತಿಯನ್ನು ಕೊಡುವುದು. ಆಗ ನಮಗೆ ನಮ್ಮ ಅಂತಃಕರಣದೊಳಗೆ ಆಶಾಜ್ಯೋತಿಯ ಪ್ರಕಾಶ ಕಂಡುಬರುವುದು. ಇದರಿಂದ ನಾವು ನಮ್ಮ ವರ್ತಮಾನಕಾಲದ ಸ್ಥಿತಿಗಳಿಗೇ ಅಂಟಿಕೊಂಡಿರದೆ, ಭವಿಷ್ಯದ ಆಲೋಚನೆಯಲ್ಲಿ ತೊಡಗಿ ಮುನ್ನಡೆಯುವಂತಾಗುವುದು. ಇದೊಂದು ರಹಸ್ಯವಾಗಿದೆ. ಈ ರಹಸ್ಯವೇ ಅಮರತೆಯ ಬಗೆಗೆ ನಮಗಿರುವ ಶ್ರದ್ಧೆಯನ್ನು ತೋರ್ಪಡಿಸುವುದು. ಈ ಶ್ರದ್ಧೆಯು, ನಮ್ಮ ತಪ್ಪು ಅಥವಾ ಅಯೋಗ್ಯತೆ, ಇದೇ ಸತ್ಯ, ಮತ್ತು ಸ್ಥಿರವಾದುದು, ಎಂದು ಯಾವಾಗಲೂ ಭಾವಿಸುವುದಿಲ್ಲ. ಈ ಶ್ರದ್ಧೆಯೇ ಮನುಷ್ಯನಲ್ಲೂ ಈಶ್ವರನಲ್ಲೂ ಏಕಾತ್ಮಭಾವ ಇರುವುದನ್ನು ಒಪ್ಪಿಕೊಳ್ಳುವುದು. ಮತ್ತು ಇದರ ಸುಂದರ ಸ್ವಪ್ನಗಳು ಸತ್ಯವಾಗುತ್ತಿರುವುದು ನಮಗೆ ಕಾಣಿಸುವುದು.

ಅಸೀಮದ ಕಡೆಗೆ ಜ್ಞಾನದೃಷ್ಟಿಯನ್ನು ಹೊರಳಿಸಿದಾಗ ಮಾತ್ರ ನಮಗೆ, ಸತ್ಯದ ದರ್ಶನವಾಗುವುದು. ಸತ್ಯವು ವರ್ತಮಾನಕಾಲದ ಸಂಕೀರ್ಣ ಸ್ಥಿತಿಗೆ ಒಳಪಟ್ಟಿರುವುದಿಲ್ಲ. ಅಥವಾ ನಮ್ಮ ತಾತ್ಕಾಲೀನ ಭೋಗಗಳಿಗೂ ಸಂಬಂಧಿಸಿಲ್ಲ. ನಮಗೆ ಜೀವನದಲ್ಲಿ ಸತ್ಯವು ನಾವು ತಿಳಿದುದಕ್ಕಿಂತ ತಿಳಿಯದೆ ಇರುವುದರಲ್ಲಿ ಹೆಚ್ಚಾಗಿದೆ, ಎಂದು ಭಾಸವಾಗುವುದು. ಅದು ನಮಗೆ ತೋರುತ್ತಿರುವ ರೂಪಕ್ಕಿಂತ ಅದೃಶ್ಯ ರೂಪದಲ್ಲೇ ಅದರ ವಾಸ್ತವಿಕವಾದ ರೂಪವಿದೆ. ನಮ್ಮ ಜೀವನವು ವಿಸ್ತೃತವಾಗಿ ಅಸೀಮದ ಮುಂದೆ, ನಿಲ್ಲುವಂತಹುದಾಗಿದ್ದು ಅಮರತೆಯ ಕಡೆಗೇ ಗತಿಶೀಲವಾಗಿದೆ. ಇದರಿಂದಾಗಿ ನಮ್ಮ ಜೀವನದ ಆಕಾಂಕ್ಷೆಗಳು, ಹೆಚ್ಚಾಗಿ ಅಸೀಮಿತ ವಿಸ್ತಾರದ ಕಡೆಗೆ ತಿರುಗುತ್ತಿವೆ. ತನ್ನ ಜೀವನಯಾತ್ರೆಯಲ್ಲಿ ಮುನ್ನಡೆಯುತ್ತಿರುವ ಮನುಷ್ಯನಿಗೆ, ಸತ್ಯದ ತಿಳಿವು ಉಂಟಾದಮೇಲೆ, ತಾನು ಸೀಮಾಬದ್ಧವಾದ ಮರುಸ್ಥಳದಲ್ಲಿ ಸಂಚಾರ ಮಾಡುತ್ತಿಲ್ಲ! ಎಂಬ ಅನುಭವವಾಗುವುದು. ಈ ಜ್ಞಾನವು ಆತನನ್ನು ಮತ್ತೂ ಎತ್ತರಕ್ಕೆ ತೆಗೆದುಕೊಂಡು ಹೋಗುವುದು.

ದೋಷಯುಕ್ತವಾದ ಯಾವುದೇ ಕಾರ್ಯಗಳೂ, ಯಾವ ಪರಿಸ್ಥಿತಿಯಲ್ಲಿಯೂ, ಜೀವನದಗತಿಯನ್ನು ಮತ್ತು ಜೀವನದ ಶ್ರೇಷ್ಠತೆಯನ್ನು ಪೂರ್ಣವಾಗಿ ತಡೆಹಿಡಿಯಲಾರವು. ಏಕೆಂದರೆ, ಅವಗುಣಗಳನ್ನು ಕಳೆದು, ಸುಗುಣಗಳಿಂದ ಪರಿವರ್ತಿಸಿ ಮುಂದುವರಿಯಬೇಕು. ಅಲ್ಲದೆ, ಅವಗುಣಗಳು ಸುತ್ತುಗಟ್ಟಿ ಅಲ್ಲಿಯೇ ಸಂಘರ್ಷ ಮಾಡಲಾರವು, ಮಾಡಿದರೂ ಫಲಿಸಲಾರದು. ಒಂದು ವೇಳೆ ಯಾವುದಾದರೊಂದು ಚಿಕ್ಕ ದೋಷವು ನಿಂತೇಬಿಟ್ಟಿತೆಂದರೆ, ಕೆಲವು ಕಾಲದ ಮೇಲೆ ಅದು ಬಹಳ ಆಳಕ್ಕಿಳಿದು, ಕೊನೆಗೆ ತಾನಾಗಿ ಬೇರುಗಳನ್ನೇ ಕತ್ತರಿಸುವುದು.

ವೀಣೆಯು, ಅಥವಾ ಕೊಳಲಿನ ಸ್ವರವು ತನ್ನ ವಿಸಂವಾದೀ ಸ್ವರಗಳಿಂದ ಮತ್ತೊಬ್ಬನನ್ನು ಸಂತಾಪಗೊಳಿಸುವುದೆಂದು, ಮನುಷ್ಯನು ಹೇಗೆ ವಿಶ್ವಾಸಪಡುವುದಿಲ್ಲವೋ ಹಾಗೆಯೇ ಅವಗುಣಗಳ ಮೇಲೂ, ಆತನು ವಿಶ್ವಾಸ ಪಡುವುದಿಲ್ಲ. ಈ ಪ್ರಪಂಚದಲ್ಲಿ ತುಲನಾತ್ಮಕವಾಗಿ ನೋಡಿದರೆ, ಸಮತೆಗಿಂತ ವಿಷಮತೆಯೇ ಹೆಚ್ಚಾಗಿದೆ, ಎಂದು ತೋರುವುದು. ಓರ್ವ ಸ್ವರ ಸಾಧಕನ ಹಿಂದೆ ನೂರಾರು ಕರ್ಕಶ ಸ್ವರಗಳನ್ನೆಬ್ಬಿಸುವವರೂ ಇರುವರು. ಆದರೆ ಈ ಶುದ್ಧಾಶುದ್ಧತೆಯ ಮಧ್ಯದಲ್ಲಿಯೂ ಮನುಷ್ಯನಿಗೆ, ವೀಣಾ ವಾದಕನ ಹೊರತು ವೀಣೆಯ ವಿಚಾರದಲ್ಲಿ ಸಂದೇಹ ಬರುವುದಿಲ್ಲ. ಮನುಷ್ಯನು ಪ್ರತ್ಯಕ್ಷವಾದ ವಿಷಮ ಅನುಭವದ ಮಾನದಂಡದಿಂದ, ಅಪ್ರತ್ಯಕ್ಷವಾದ ಭವಿಷ್ಯವನ್ನು ಅಳೆಯಲಾರನು. ಭವಿಷ್ಯದ ಪೂರ್ಣತೆಯನ್ನು ಸಮರ್ಥಿಸುವ ಭಾವನೆಗಳು ವರ್ತಮಾನ ಕಾಲದ ಅಪೂರ್ಣತೆಗಳನ್ನು ಮುಚ್ಚಿಬಿಡುತ್ತವೆ

ಜೀವನವೆಂದರೆ ಇದೊಂದು ಅಭಿಶಾಪವೆಂದು ತಿಳಿದುಕೊಳ್ಳುವ ಜನರೂ ಇರುವರೆಂಬುದರಲ್ಲಿ ಸಂದೇಹವಿಲ್ಲ. ಆದರೆ ಈ ನಿರಾಶಾವಾದಿಗಳ ಮಾತಿಗೆ ಎಲ್ಲರೂ ಕಿವಿಗೊಡಲಾರರು. ಈ ನಿರಾಶೆಗೂ ಏನಾದರೂ ಕಾರಣಗಳಿರುತ್ತವೆ. ಆದರೆ ಜೀವನವು ಸದಾ ಆಶಾವಾದಿಯಾಗಿರುವುದು. ಅದು ಹೀಗೆಯೇ ಮುಂದುವರಿಯ ತಕ್ಕುದಾಗಿದೆ. ನಿರಾಶೆಯೆಂಬುದು ಮಾನಸಿಕ ರೋಗದ ಒಂದು ಲಕ್ಷಣವಾಗಿದೆ. ಸ್ವಾಸ್ಥ್ಯಪ್ರದ ಭೋಜನದಲ್ಲಿ ಅರುಚಿ, ಮತ್ತು ವೈರಾಗ್ಯ ಜೀವನದಲ್ಲಿ ರುಚಿ, ಇವು ಇದರ ಲಕ್ಷಣಗಳು.

(೧೧ನೇ ಪುಟ ನೋಡಿರಿ)

MAHATMA GANDHI MEMORIAL COLLEGE, UDIPI
P. O. KUNJIBETTU (SOUTH KANARA).

The College will reopen for new admissions to the Pre-University and First Year Degree Classes on Monday, 12th June, 1961. Regular work will start from 24th June, 1961.

The following courses of the Mysore University are offered:—

1. Pre-University:
   i) Physics, Chemistry, Mathematics
   ii) Physics, Chemistry, Biology
   iii) History, Economics, Logic
   iv) History, Economics, Commerce
2. First year B. A.
   i) Economics, History (Major) and Political Science (Minor)
   ii) Economics, English (Major) and Political Science (Minor)
3. First year B. Sc.
   i) Mathematics, Statistics (Major), Economics (Minor)
   ii) Mathematics, Physics (Major), Chemistry (Minor)
   iii) Physics, Chemistry (Major), Mathematics (Minor)
   iv Botany, Zoology (Major) Chemistry (Minor)
4. First year B. Com.
   Advanced Banking and Banking Law as Special Subject.

The College has a fine Library and well laid-out play-fields, factilities for NCC Training and a wide range of extra-curricular activities. Hostel accomodation is available for Boys and Girls.

A large number of scholarships and fee concessions are offered in the College, including special half-fee concessions in the Pre-University Class to candidates who have secured between 70 and 74 per cent in the School Leaving Certificate Examination and full-fee concessions to those who have secured 75 per cent and above.

Application Forms for admission and prospectus are available in the College Office on all working days and may be obtained by post on sending a self-addressed envelope with 8 nPs. stamps. Applications duly filled should reach the Principal along with a registration fee of Rs. 3/- within 15 days after the publication of the results.

M. G. M. College UDIPI
13—5—1961

H Sunder Rao,
Principal.

ವಸಂತ ಕಥೆ-ಕಾದಂಬರಿಗಳ ಮಾಸ ಪತ್ರಿಕೆ.
ವಾ.ಚಂದಾ ರೂ.8. ಬಿಡಿಪ್ರತಿ 75 ಪೈಸೆ
ಮಾದರಿ ಸಂಚಿಕೆಗೆ 75ನ.ಪೈ. ಕಳುಹಿಸಿರಿ
1-ಪಾರ್ಕ್ ರಸ್ತೆ—ಬೆಂಗಳೂರು-2.

ಸಮ್ಮೇಳನ ವರದಿ:

ಸರ್ವೋದಯ ಸಮ್ಮೇಳನದ ಸಂದೇಶ

ಎಪ್ರಿಲ್ ಮೂರನೆಯ ವಾರದಲ್ಲಿ ಆಂಧ್ರದ ಉಂಗತ್ತೂರಿನಲ್ಲಿ ಸರ್ವೋದಯ ಸಮ್ಮೇಳನ ನಡೆಯಿತು. ಭೂದಾನ, ಶಾಂತಿಸೇನೆ ಮತ್ತು ಲೋಕಸ್ವರಾಜ್ಯದ ಕಾರ್ಯವನ್ನು ಸರ್ವಸೇವಾ ಸಂಘವು ಮುಂದುವರಿಸುತ್ತಿದೆ.

ಶ್ರೀ ಎಸ್. ಯು. ರಾಮಚಂದ್ರ ರಾವ್.

ಕಳೆದ ತಾ. ೧೮ರಿಂದ ೨೦ರ ತನಕ ಅ. ಭಾ. ಸರ್ವೋದಯ ಸಮ್ಮೇಲನವು ಆಂಧ್ರ ಪ್ರದೇಶದ ಪಶ್ಚಿಮ ಗೋದಾವರಿ ಜಿಲ್ಲೆಯ ಉಂಗತ್ತೂರು ಎಂಬ ಹಳ್ಳಿಯಲ್ಲಿ ಜರಗಿತು. ಆ ಗ್ರಾಮವು ಸಮ್ಮೇಲನದ ಒಂದೆರಡು ವಾರಗಳಲ್ಲಿ ಒಂದು ಚಿಕ್ಕ ಪಟ್ಟಣವೇ ಆಗಿತ್ತು. ತಾಳೆಮರದ ಮಡಲುಗಳಿಂದ ಆಚ್ಛಾದಿತ ಮಂಟಪಗಳಂತೆ ವಸತಿಗಳಲ್ಲಿ ಹಿಂದೂಸ್ಥಾನದ ದೂರ ದೂರ ಪ್ರದೇಶಗಳಿಂದ ಆಗಮಿಸಿದ್ದ ಸಹಸ್ರಾರು ಅತಿಥಿಗಳು ಉಳಕೊಂಡಿದ್ದರು. ಸಾವಿರಾರು ಮಂದಿ ಒಮ್ಮೊಮ್ಮೆಯೇ ಭೋಜನಗೈಯ್ಯುತಿದ್ದರು. ಟಪ್ಪಾಲು ಆಫೀಸು, ತಂತಿ ಕಚೇರಿ, ಆಸ್ಪತ್ರೆ, ಅಗ್ನಿಶಾಮಕ ಸಿಬ್ಬಂಧಿ, ವಾಹನ ಇತ್ಯಾದಿಗಳ ವ್ಯವಸ್ಥೆಗಾಗಿ ಪೋಲೀಸು ಬಂದೋಬಸ್ತು ಇದ್ದವು. ಆ ದಿನಗಳಲ್ಲಿ ಉಂಗತ್ತೂರು "ಸರ್ವೋದಯಪುರಮ್"ನಲ್ಲಿ ಒಂದು ನವೀನ ಜೀವನ ವ್ಯವಸ್ಥೆಯೇ ಆರಂಭವಾಗಿತ್ತು. ರೈಲ್ವೆಯವರೂ ಒಂದು ಸ್ಥಾಯಿ ಪ್ಲೇಟ್‌ಫೋರ್ಮ್ ತಯಾರಿಸಿ "ಸರ್ವೋದಯಪುರಮ್" ಎಂಬ ಹೆಸರಿನ ಒಂದು ಸ್ಟೇಶನನ್ನೆ ರಚಿಸಿದ್ದರು. ಸಮ್ಮೇಲನದ ಅವಧಿಯಲ್ಲಿ ಆ ಚಿಕ್ಕ ಸ್ಟೇಶನಿನಲ್ಲೂ ರೈಲಿನ ಟಪ್ಪಾಲು (ಮೈಲ್) ಮತ್ತು ಎಕ್ಸ್‌ಪ್ರೆಸ್ ಗಾಡಿಗಳು ತಂಗುತ್ತಿದ್ದವು.

ಈ ವರ್ಷದ ಸಮ್ಮೇಲನವು ಹದಿಮೂರನೇ ವಾರ್ಷಿಕ ಸರ್ವೋದಯ ಸಮ್ಮೇಲನವು. ಭೂದಾನ ಚಳವಳಿಯು ಪ್ರಾರಂಭವಾಗಿ ಒಂದು ದಶಕವು ಕಳೆಯಿತು. ಈ ಸಮ್ಮೇಲನವು ಸರಕಾರ, ಸಂಸ್ಥೆ, ಭೂದಾನ ಕಾರ್ಯಕರ್ತರು ಇವರೆಲ್ಲರದೂ ಸಮ್ಮೇಲನವಾಗಿತ್ತು. ರಾಷ್ಟ್ರಪತಿ ಡಾ। ರಾಜೇಂದ್ರ ಪ್ರಸಾದರೂ ರಾಜ್ಯಪಾಲ ಶ್ರೀ ಭೀಮಸೇನ ಸಾಚಾರ್, ಆಂಧ್ರದ ಮುಖ್ಯಮಂತ್ರಿ ಶ್ರೀ ಸಂಜೀವಯ್ಯ, ಕೇಂದ್ರದ ಅಭಿವೃದ್ಧಿ ಮಂತ್ರಿ ಶ್ರೀ ಎಸ್. ಕೆ. ಡೇ, ರಾಷ್ಟ್ರೀಯ ಯೋಜನಾ ಸಮಿತಿಯ ಸದಸ್ಯರಾದ ಶ್ರೀ: ಮನ್ನಾರಾಯಣರೂ ಆಗಮಿಸಿ ಸಮ್ಮೇಲನವನ್ನು ಆಶೀರ್ವದಿಸಿದ್ದಾರೆ, ರಾಜಕಾರಣವು ಇಂದಿನ ನಾಗರಿಕ ಜೀವನದ ನಿತ್ಯದ ಉಸಿರೆಂದು ಭಾವಿಸುತ್ತಿರುವ ಶ್ರೀ ಜಯಪ್ರಕಾಶ ನಾರಾಯಣರು ಸಮ್ಮೇಲನದ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದರು. ನಾನು ರಾಜಕಾರಣವನ್ನು ಬಿಟ್ಟೆನೆಂಬುದರ ಅರ್ಥ—ಪಕ್ಷದ ರಾಜಕಾರಣ—ಅಧಿಕಾರ ಸ್ಥಾನವನ್ನು ಆಕ್ರಮಿಸುವ ರಾಜಕಾರಣ-ಬಿಟ್ಟೆನೆಂದಿಷ್ಟೆ ತಿಳಿದುಕೊಳ್ಳಬೇಕು. ಪ್ರಜಾಕರ್ತವ್ಯ—ನಾಗರಿಕ ನೀತಿ ಲೋಕಶಕ್ತಿಯನ್ನು ಪ್ರಸ್ಥಾಪಿಸುವ ಪರಿಶುದ್ಧ ರಾಜಕಾರಣವನ್ನು ಸಮರ್ಥರೀತಿಯಲ್ಲಿ ಪ್ರಸ್ಥಾಪಿಸದೆ, ಯಾವ ಲೋಕಸೇವೆಯೂ ಫಲಪ್ರದವಾಗಲಾರದು" ಎಂಬುದನ್ನು ಅವರು ಸ್ಪಷ್ಟಪಡಿಸಿದ್ದಾರೆ. ಸಮ್ಮೇಲನ ಅಧ್ಯಕ್ಷರ ಸ್ಪಷ್ಟೀಕರಣಕ್ಕನುಸಾರವಾಗಿ ಸರ್ವಸೇವಾಸಂಘದ ಈ ವರ್ಷದ ನಿವೇದನೆಯೂ ತಯಾರಾಗಿತ್ತು. ರಾಜಕಾರಣದಲ್ಲಿ ನುರಿತವರಾದ ಶ್ರೀ ಶಂಕರರಾವ್ ದೇವ್, ಅವರು ಆ ನಿವೇದನೆಯನ್ನು ಸ್ಪಷ್ಟೀಕರಿಸಿ ವಿವರಿಸಿದರು. ಮಾತ್ರವಲ್ಲದೆ, ಒರಿಸ್ಸಾ ಪ್ರಾಂತದ ಮುಖ್ಯಮಂತ್ರಿ ಪದವಿಯನ್ನೂ ಅನುಭವಿಸುತ್ತಿದ್ದು, ಅದನ್ನು ನಿಸ್ಸಂಕೋಚವಾಗಿ ತ್ಯಜಿಸಿ ಸರ್ವೋದಯ ಸೇವಾಕಾರ್ಯಕ್ಕೆ ತೊಡಗಿರುವ ಶ್ರೀ ನಭಕೃಷ್ಣ ಚೌಧರಿ, ಅವರು ಈ ವರ್ಷ ಅಖಿಲ ಭಾರತ ಸರ್ವಸೇವಾಸಂಘದ ಅಧ್ಯಕ್ಷರಾಗಿ ಸರ್ವಾನುಮತದಿಂದ ನಿವಾಚಿತರಾಗಿದ್ದರು.

ಸರ್ವೋದಯ ಸಮ್ಮೇಲನದ ಜೊತೆಗೇನೇ ಆಂಧ್ರ ರಾಜ್ಯ ಗ್ರಾಮ ಪಂಚಾಯಿತಿ ಸಮ್ಮೇಲನವೂ ಶ್ರೀ ಜಯಪ್ರಕಾಶ ನಾರಾಯಣರವರ ಅಧ್ಯಕ್ಷತೆಯಲ್ಲೆ ನಡೆಯಿತು. ಕೇಂದ್ರ ವಿಕಾಸ ಮಂತ್ರಿಗಳಾದ ಶ್ರೀ ಎಸ್. ಕೆ. ಡೇ ಅವರು ಮಾರ್ಗದರ್ಶನ ಮಾಡಿದರು.

ಅಖಿಲಭಾರತ ಶಾಂತಿಸೈನ್ಯದ 'ರ್‍ಯಾಲಿ' ಯೂ ನಡೆಯಿತು. ಸುಮಾರು ೭೦೦—೭೦೦ ಮಂದಿ ಸ್ತ್ರೀಪುರುಷ ಶಾಂತಿ ಸೈನಿಕರು, ಶಾಂತಿ ಸೈನಿಕರ ಸೂಚಕವಾದ ಹಳದಿ ಚೌಕ ಬಟ್ಟೆಯನ್ನು ತಲೆಗೆ ಕಟ್ಟಿಕೊಂಡು ಎರಡು ದಿನ ಮುಂಜಾನೆ "ಕೂಚ್" ನಡೆಯುವ ಕಾರ್ಯವನ್ನು ಮಾಡಿದ್ದರು. ಒಂದೆರಡುಸಾಸು ಸ್ವಚ್ಛತಾ ಸೇವಾಕಾರ್ಯವನ್ನೂ ಮಾಡಿದರು. ಸುಮಾರು ಒಂದು ತಿಂಗಳೊಪ್ಪತ್ತು "ಸಫಾಯಿ" ಸ್ವಚ್ಛತಾ ಕಾರ್ಯದಲ್ಲಿ ತೊಡಗಿದ್ದ ಸಫಾಯಿ ಸೇವಕರು ಉತ್ತಮ ರೀತಿಯಲ್ಲಿ ಸೇವೆ ಸಲ್ಲಿಸಿದರು. ಶ್ರೀ ಕೃಷ್ಣದಾಸಶಾಹ ಎಂಬವರು ಅವರ ಮುಖ್ಯಸ್ಥರಾಗಿದ್ದರು. ಸಮ್ಮೇಲನದ ದಿನಗಳಲ್ಲೆ ಅಖಿಲ ಭಾರತ ಸ್ವಚ್ಛತಾ ಸಮ್ಮೇಲನವು ಕೂಡ ಮಹಾರಾಷ್ಟ್ರದ ಮುಖಂಡರಾದ ಶ್ರೀ ಅಪ್ಪಾಸಾಹೇಬ ಪಟವರ್ಧನ ಅವರ ಅಧ್ಯಕ್ಷತೆಯಲ್ಲಿ ಜರಗಿತ್ತು.

ಉಂಗತ್ತೂರಿಗೆ ಬಹು ದೂರವಿರದ ಭೀಮಾವರಮ್ ಎಂಬಲ್ಲಿ ಪ್ರಾಕೃತಿಕ ಚಿಕಿತ್ಸಾ ಸಮ್ಮೇಲನವೂ ಶ್ರೀ ಶ್ರೀಮನ್ನಾರಾಯಣ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಆರ್ಯ ನಾಯಕಮ್ ಅವರು ಮಾರ್ಗದರ್ಶನ ಮಾಡಿದ್ದರು.

ಸರ್ವೋದಯ ಸಮ್ಮೇಲನದ ಯೋಜನೆಯನ್ನೆಲ್ಲ ಶ್ರೀ ಪ್ರಭಾಕರಜೀ ಎಂಬ ಬರೇ ಮೈನಸು, ಚಿಕ್ಕ ಆಕೃತಿಯ ವ್ಯಕ್ತಿ ಮಾಡಿದ್ದರು. ಅವರ ಲೋಕಪ್ರಿಯತೆ, ಕಲ್ಪಕತೆ ಮತ್ತು ಸಂಘಟನಾ ಶಕ್ತಿಯು ಎಲ್ಲವನ್ನೂ ಸಾಧಿಸಿತ್ತು. ಅಷ್ಟೆಲ್ಲ ಇದ್ದರೂ ಸಮ್ಮೇಲನ ಸ್ಥಾನದಲ್ಲಾಗಲಿ ಸಭಾಸ್ಥಾನದಲ್ಲಾಗಲಿ ಅವರು ಕಾಣಿಸಿಕೊಂಡದ್ದೇ ಅಪರೂಪ. ಆದರೆ ಅವರ ಹೆಸರನ್ನು ಮಾತ್ರ ರಾಷ್ಟ್ರಪತಿ, ಮುಖ್ಯ ಮಂತ್ರಿಗಳಿಂದ ಹಿಡಿದು ಸಾಮಾನ್ಯ ಜನರೂ ಆಡುತ್ತಿದ್ದರು. ಅಡಿಗೆ ಊಟದ ವ್ಯವಸ್ಥೆ ಉತ್ತಮವಾಗಿತ್ತು.

ಹತ್ತು ವರ್ಷಗಳ ಹಿಂದೆ ಭೂದಾನ ಕ್ರಾಂತಿಯು ಪ್ರಾರಂಭವಾದ ಆಂಧ್ರ ಪ್ರದೇಶದಲ್ಲೇ ಈ ಸಲದ ೧೩ನೇ ಸರ್ವೋದಯ ಸಮ್ಮೇಲನವು ಜರಗಿತ್ತು. ಅಂತಹ ಮಹಾ ಸಂದರ್ಭದಲ್ಲಿ ಮುಂದಿನ ವರ್ಷಕ್ಕೆ ಅ. ಭಾ. ಸರ್ವಸೇವಾ ಸಂಘವು ಸರ್ವೋದಯ ಸಮ್ಮೇಲನದ ಸನ್ಮುಖದಲ್ಲಿ ಕಾರ್ಯಕರ್ತರ ಹಾಗೂ ಜನತೆಯ ಸಲುವಾಗಿ ಭೂದಾನ, ಶಾಂತಿಸೇನೆ ಮತ್ತು ಲೋಕ ನೀತಿ ಎಂಬ ತ್ರಿವಿಧ ಕಾರ್ಯಕ್ರಮವನ್ನು ಮಂಡಿಸಿತು. ಭೂದಾನದ ಮೂಲಕ ದೇಶದಲ್ಲೆಲ್ಲ ಅಹಿಂಸಕ ಕ್ರಾಂತಿಯ ಒಂದು ಹೆಜ್ಜೆಯನ್ನು ಇಡಲಾಗಿದೆ. ಗಾಂಧಿಜೀಯವರ ಸ್ವರ್ಗವಾಸದ ತರುವಾಯ ರಾಷ್ಟ್ರದಲ್ಲೆಲ್ಲ ನಿರಾಶೆಯ ವಾತಾವರಣವು ವ್ಯಾಪಿಸಿಕೊಂಡಿದ್ದಾಗ ಭೂದಾನ ಯಜ್ಞವು ಸರ್ವೋದಯದ ಕಡೆಯಲ್ಲಿ ಒಂದು ನಿಶ್ಚಿತ ಹೆಜ್ಜೆಯನ್ನೆತ್ತಿ ಹೊಸ ಆಶೆಯನ್ನುಕ್ಪನ್ನ ಮಾಡಿತು. ಗಾಂಧಿಜೀಯವರು ಸತ್ಯಾಗ್ರಹದ ಮೂಲಕ ರಾಜನೈತಿಕ ಕ್ಷೇತ್ರದಲ್ಲಿ ಅಹಿಂಸೆಯ ಪ್ರವೇಶವನ್ನು ಮಾಡಿಸಿದರು. ತನ್ನ ಪ್ರತಿಯೊಂದು ಚಳವಳ ಮತ್ತು ರಚನಾತ್ಮಕ ಕಾರ್ಯಕ್ರಮಗಳ ಮೂಲಕ ದೇಶದಲ್ಲೆಲ್ಲ ಲೋಕ ಶಕ್ತಿಯನ್ನು ಜಾಗ್ರತಗೊಳಿಸಿದ್ದರು. ಸ್ವರಾಜ್ಯ ಪ್ರಾಪ್ತಿಯ ಬಳಿಕ ಭೂದಾನ ಚಳವಳವು ಆರ್ಥಿಕ ಸಮಾನತೆ ಹಾಗೂ ಹಿಂಸಕ ಶಕ್ತಿಯಿಂದ ನಿರಪೇಕ್ಷಿತ ಲೋಕ ಶಕ್ತಿಯ ನಿರ್ಮಾಣದ ಮಾರ್ಗವನ್ನು ತೆರೆಯಿತು.

ಆರ್ಥಿಕ ಕ್ಷೇತ್ರದಲ್ಲಿ ಮೌಲ್ಯ ಪರಿವರ್ತನೆಯೊಂದೇ ನಮ್ಮ ಗುರಿ ಸಾಧನೆಗೆ ಪರ್ಯಾಪ್ತವಾಗದು. ಈಗ ದೇಶದಲ್ಲಿ ಪ್ರ

(೯ನೇ ಪುಟ ನೋಡಿರಿ)

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕೊಕ್ಕರ್ಣೆ ಪಂಚಾಯ್ತು ಕೋರ್ಟು C.S 16/ 1955 R. E. P. 33/1961

ಮೂಡೂರು ಶೀನಪ್ಪ ಶೆಟ್ಟಿ —ಅರ್ಜಿದಾರ

ಮತ್ತು

ರಾಮಣ್ಣ ಶೆಟ್ಟಿ —ಎದುರಿ

ಇವರೊಳಗೆ—

ಎದುರಿ—ರಾಮಣ್ಣ ಶೆಟ್ಟಿ, ಗಿರಿಯನ್ನ ಶೆಟ್ಟಿ ರ ಮಗ—ಉಡುಪಿ ತಾಲೂಕು ಚೇರ್ಕಾಡಿ ಗ್ರಾಮದ ಪೇತ್ರಿಯಲ್ಲಿರುವವರು— ಇವರಿಗೆ ನೋಟೀಸು ಜಾರಿ ಮಾಡುವುದೇನೆಂದ್ರೆ—

ಮೇಲ್ಕಂಡ ಡಿಕ್ರಿ ಹಣವನ್ನು ಬರಮಾಡಿಕೊಳ್ಳುವರೇ ನಿಮ್ಮ ಜಾಬ್ತು ಸ್ಥಿರಾಸ್ತಿ ಜಪ್ತಿ ಅರ್ಜಿ ಹಾಕಿಕೊಂಡ ಮೇಲ್ಕಂಡ ಅರ್ಜಿಯನ್ನು ತಾರೀಕು 1—6—1961ಕ್ಕೆ ಬಿಟ್ಟಿರುತ್ತದೆ. ಆಕ್ಷೇಪಣೆ ಇರುವದ್ದಾದರೆ ಆ ದಿವಸ ಪೂರ್ವಾಹ್ನ 10 ಗಂಟೆಗೆ ಕೋರ್ಟು ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು.

K. Ramakrishna Rao,
Vakil for Petitioner.

ಉಡುಪಿ, ತಾರೀಕು 15—5—1961

ಸ್ಥಾಪನೆ: 1924

ದಿ ಕರ್ಣಾಟಕ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ರಿಜಿಸ್ಟರ್ಡ್ & ಹೆಡ್ ಆಫೀಸು: ಡೊಂಗರಕೇರಿ, ಮಂಗಳೂರು—3.

ಈ ಕೆಳಗಿನ ಏರಿಸಿದ ಬಡ್ಡಿದರಗಳಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು.

ಒಂದರಿಂದ ಎರಡು ತಿಂಗಳುಗಳ ವರೆಗೆ	.... ಸಾ|| ಸೇಕಡಾ	3-75	ನ.ಪೈಸೆ
ಮೂರರಿಂದ ಐದು ತಿಂಗಳುಗಳ ವರೆಗೆ	,,	4-25	,,
ಆರು ತಿಂಗಳುಗಳಿಂದ 12 ತಿಂಗಳುಗಳ ವರೆಗೆ....	,,	4-50	,,
12 ತಿಂಗಳು ಮಿಕ್ಕಿ 24 ತಿಂಗಳುಗಳ ವರೆಗೆ	,,	4-75	,,
24 ತಿಂಗಳು ಮಿಕ್ಕಿ 48 ತಿಂಗಳುಗಳ ವರೆಗೆ	,,	5-00	,,
48 ತಿಂಗಳುಗಳಿಗೆ ಮಿಕ್ಕಿ	,,	5-25	,,

ಸೇವಿಂಗ್ಸ್ ಬ್ಯಾಂಕ್ ಬಡ್ಡಿ ದರವನ್ನು ಸಾ. ಸೇಕಡ 2½% ರಿಂದ 3½%ಗೆ ಏರಿಸಲಾಗಿದೆ.

THE KARNATAKA BANK LIMITED.

ಪ್ರಕಟಣೆ

'ಸಚೇತನ' ಕಥಾ ಸ್ಪರ್ಧೆ

ಕನ್ನಡ ಕತೆಗಾರರನ್ನು ಪ್ರೋತ್ಸಾಹಿಸುವುದಕ್ಕಾಗಿ 'ಸಚೇತನ'ದ ಪರವಾಗಿ ಒಂದು ಕಥಾ ಸ್ಪರ್ಧೆಯನ್ನು ಏರ್ಪಡಿಸಲಾಗುವುದು. ಕನ್ನಡ ಬರಹಗಾರರೆಲ್ಲರೂ ಈ ಸ್ಪರ್ಧೆಯಲ್ಲಿ ಭಾಗವಹಿಸಲರ್ಹರಾಗಿರುವರು. ಉತ್ತಮ ಕತೆಗಾರರಿಗೆ ಈ ಕೆಳಗಿನಂತೆ ಬಹುಮಾನ ಕೊಡಲಾಗುವುದು.

ಪ್ರಥಮ ಬಹುಮಾನ ರೂ. 100—00
ದ್ವಿತೀಯ ಬಹುಮಾನ ರೂ. 50—00
ತೃತೀಯ ಬಹುಮಾನ ರೂ. 25—00

ಸ್ಪರ್ಧೆಗೆ ಕಳುಹಿಸಲಾಗುವ ಕತೆಯು ಯಾವುದೇ ಭಾಷೆಯಿಂದ ಭಾಷಾಂತರಿಸಲ್ಪಟ್ಟಿರಬಾರದು. ಅಪ್ರಕಟಿತವಾಗಿರಬೇಕು. ಕತೆಯನ್ನು ಸ್ಪಷ್ಟವಾಗಿ ಕಾಗದದ ಒಂದೇ ಮಗ್ಗುಲಲ್ಲಿ ಬರೆಯತಕ್ಕದ್ದು. ಕತೆಗಾರರ ಪೂರ್ಣ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆದಿರಬೇಕು. ಪ್ರತಿಯೊಂದು ಕತೆಯ ಹೆಸರಿನ ಸಮೀಪವೇ 'ಸಚೇತನ'ದ ಕಥಾ ಸ್ಪರ್ಧೆಗಾಗಿ ಎಂದು ಬರೆಯಬೇಕು. ಬಹುಮಾನ ಪಡೆದ ಕತೆಗಳನ್ನು 'ಸಚೇತನ'ದಲ್ಲಿ ಪ್ರಕಟಿಸಲಾಗುವುದು. ಸ್ಪರ್ಧೆಗೆ ಬಂದ ಕತೆಗಳಲ್ಲಿ ಬಹುಮಾನ ಪಡೆಯದ ಕತೆಗಳನ್ನೂ—ಉತ್ತಮವೆಂದು ಕಂಡುಬಂದರೆ—ಯಥಾವಕಾಶವಾಗಿ ಪ್ರಕಟಿಸಲಾಗುವುದು. ಕತೆಗಳನ್ನು ಪರಿಶೀಲಿಸಲಿರುವ ಮೂರುಮಂದಿ ನ್ಯಾಯಾಧೀಶರದೇ ಕೊನೆಯ ನಿರ್ಧಾರವೆಂದೂ ಪ್ರತಿಯೊಬ್ಬ ಸ್ಪರ್ಧಿಯೂ ತಿಳಿದಿರತಕ್ಕದ್ದು. ಸ್ಪರ್ಧೆಗಾಗಿ ಕಳುಹಿಸಲಾಗುವ ಕತೆಗಳನ್ನು ತಾ. 30-6-61 ರ ಮೊದಲು ನಮ್ಮ ಕೈ ಸೇರುವಂತೆ ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕು.

ಸಂಪಾದಕ 'ಸಚೇತನ'
ಚೇತನ ಪಬ್ಲಿಕೇಶನ್ಸ್
ಪೊ. ಬಾ. ನಂ.10,091 ಮುಂಬಯಿ—1.

ಗೃಹಸೌಂದರ್ಯ

ನಿಮ್ಮ ಮನೆಯನ್ನು ಅಲಂಕರಿಸಿರಿ

ಬಣ್ಣ ಬಣ್ಣದ ಗಿಡಗಳನ್ನು ಮನೆಯ ಮುಂದೆ ನಾಟಿ ಬೆಳೆಸುವುದರಿಂದ ಗೃಹವಾಸಿಗಳ ಮನಸ್ಸು ಸುಪ್ರಸನ್ನವಾಗುವುದು; ಮನೆಯ ಸೌಂದರ್ಯವೂ ಇಮ್ಮಡಿಸುವುದು; ಇದಕ್ಕೇನೂ ವೆಚ್ಚ ಅಧಿಕವಾಗುವುದಿಲ್ಲ; ಆದರೆ ಆಸಕ್ತಿ ಮಾತ್ರ ಬೇಕು.

ಬಣ್ಣ ಬಣ್ಣದ ಗಿಡಗಳು ಎಲೆಬಿಟ್ಟು ನಿಂತಾಗ ಯಾರ ಮನಸ್ಸು ಪ್ರಸನ್ನವಾಗುವುದಿಲ್ಲ? ಕಲೇಡಿಯಂ, ಕೊಲಿಸಿಯಂ, ಕ್ರೋಟನ್ ಮತ್ತು ಟರೇಡೀಕಾಂಸಿಯಾ ವರ್ಜಿನಿಯಾ ಮೊದಲಾದುವು ವರ್ಣರಂಜಿತ ಗಿಡಗಳಾಗಿವೆ.

ಕಲೋಡಿಯಂ ಗಿಡದ ಎಲೆಗಳು ಬಹಳ ಅಗಲವಿರುತ್ತವೆ. ಹಚ್ಚಹಸುರಿನ ಎಲೆಯಲ್ಲಿ ಎದ್ದು ತೋರುವ ಕೆಂಪು ಗೀಟುಗಳು ಗಿಡದ ಸೌಂದರ್ಯವನ್ನು ಹೆಚ್ಚಿಸುತ್ತವೆ. ಇದು ಅತಿ ಕೋಮಲವಾದ ಗಿಡ. ಜೂನ್ ತಿಂಗಳಲ್ಲಿ ಇದರ ಬೇರನ್ನು ತೊಟ್ಟಿಯಲ್ಲಿ ಹಾಕಿಟ್ಟರೆ, ಅಗಸ್ಟ್ ಮೊದಲ ವಾರದಲ್ಲಿ ಇದರ ಗಿಡವು ಎದ್ದು ತೋರುವುದು. ಗೆಡ್ಡೆಯನ್ನು ನಾಟುವುದಕ್ಕೆ ಒಂಬತ್ತು ಅಂಗುಲದ ತೊಟ್ಟಿ ಸಾಕಾಗುವುದು. ಇದರಲ್ಲಿ ಗೊಬ್ಬರ ಮಣ್ಣು ಮತ್ತು ಮಳಲನ್ನೂ ಸುರಿದಿರಬೇಕು.

ಕಾಂಡ ಒಡೆಯುವ ತನಕ ತೊಟ್ಟಿಯನ್ನು ನೆರಳಿನಲ್ಲಿ ಉದಯ ಸೂರ್ಯನ ಪ್ರಕಾಶ ದೊರೆಯುವಲ್ಲಿ ಮಡಗಬೇಕು. ಇದರಿಂದ ಎಲೆಗಳ ವರ್ಣ ಕಡುವಾಗಿ ನೋಡಲು ಸುಂದರವೆನಿಸುವುದು. ಇದು ವರ್ಷಋತುವಿನ ಸುಂದರ ಗಿಡವಾಗಿ ಬೆಳೆಯುವುದು. ಮಳೆಗಾಲ ಕಳೆದ ನಂತರ ಕಲೋಡಿಯಂನ ಎಲೆಗಳು ಮುದುಡ ತೊಡಗುತ್ತವೆ. ಆಗ ನೀರನ್ನು ಗೊಬ್ಬರ ಸೇರಿಸಿ ಸುರಿಯುವುದರಿಂದ ಮೂಲವು ದೃಢವಾಗುವುದು. ಬಣ್ಣವು ಎಳದಾಗಿ ಬೂದು ಬಣ್ಣಕ್ಕೆ ಪರಿವರ್ತಿತಗೊಳ್ಳುವುದು. ಪ್ರತಿ ಮೂರು ದಿನಗಳಿಗೊಮ್ಮೆ ಎರಡು ವಾರಗಳ ವರೆಗೆ ಗೊಬ್ಬರ ನೀರು ಹಾಕಿ ಕೆಲದಿನಗಳ ನಂತರ ಗೆಡ್ಡೆಗಳನ್ನು ಮಣ್ಣಿನಿಂದ ತೆಗೆದು ಒಣ ಹೊಯ್ಗೆ ತುಂಬಿದ ಪೆಟ್ಟಿಗೆಗಳಲ್ಲಿ ತುಂಬಿಸಿ; ನೆರಳಿರುವ ಸ್ಥಳದಲ್ಲಿ ಇಟ್ಟರೆ, ಅದನ್ನು ಮುಂದಿನ ವರ್ಷವೂ ಮಳೆಗಾಲದಲ್ಲಿ ಉಪಯೋಗಿಸಿಕೊಳ್ಳಲು ಅನುಕೂಲವಾಗುವುದು. ಗೆಡ್ಡೆಯನ್ನು ಒಳ್ಳೆಯ ಆಹಾರ ಹಾಕಿ ಬೆಳೆಸುವುದರಿಂದ, ಅದು ಅಧಿಕ ಸುಂದರ ಮತ್ತು ದೊಡ್ಡ ಎಲೆಗಳನ್ನು ಬಿಡುವುದು.

ಕೋಲಿಯಸ್ ಕೂಡ ಒಂದು ರಂಗಿನ ಗಿಡವಾಗಿದೆ. ಇದನ್ನು ನವಂಬರದಿಂದ ಮಾರ್ಚಿ ತಿಂಗಳ ವರೆಗೆ ಮುಖಮಂಟಪದಲ್ಲಿ ತೊಟ್ಟಿಗಳಲ್ಲಿಡಬಹುದು. ಇಲ್ಲವೇ ಶೃಂಗರಿಸುವುದಕ್ಕೂ ಉಪಯೋಗಿಸಬಹುದು. ಇದನ್ನು ಬೀಜದ ಮೂಲಕ ಬೆಳೆಸಬಹುದು.

ಕೋಲಿಯಸ್‌ನ ಬೀಜವನ್ನು ಮಳೆಗಾಲದಲ್ಲಿ ಬಿತ್ತುತ್ತಾರೆ. ೩ ಅಥವಾ ೪ ಅಂಗುಲ ಎತ್ತರಕ್ಕೆ ಗಿಡ ಬೆಳೆದೊಡನೆಯೇ ಅದರ ತಲೆಯನ್ನು ಕತ್ತರಿಸಿ ತೆಗೆಯುತ್ತಾರೆ ಇದರಿಂದ ಗಿಡವು ಉದ್ದವಾಗಿ ಬೆಳೆಯದೆ ಅಡ್ಡಕ್ಕೆ ವಿಸ್ತಾರವಾಗಿ ಬೆಳೆಯುತ್ತದೆ. ಗಿಡವು ಬಲಿತೊಡನೆಯೇ ೮ ಅಥವಾ ೧೦ ಅಂಗುಲೆತ್ತರದ ತೊಟ್ಟಿಯಲ್ಲಿರಿಸಿ ಬೆಳೆಸಬೇಕು. ಇದರ ಚಿಕ್ಕ ಗೆಲ್ಲುಗಳನ್ನೂ ಕತ್ತರಿಸಿ ವರ್ಷಾ ಕಾಲದಲ್ಲಿ ನೆಡುವುದೂ ಸಾಧ್ಯವಿದೆ.

ಕೋಲಿಯಂನ ಎಲೆಗಳು ಅಗಲವಾಗಿಯೂ ಸುಂದರ ವರ್ಣರಂಜಿತವಾಗಿಯೂ ಇರುತ್ತವೆ. ಬಿಳಿ—ಕೆಂಪು, ಬೂದು-ಹಸುರು, ಗುಲಾಬಿ—ಬಿಳಿ ಮೊದಲಾಗಿ ಸಂಗೀತವರ್ಣಯುಕ್ತವಾದ ಎಲೆಗಳು ಮನೋಹರವಿರುತ್ತವೆ. ಗ್ರೀಷ್ಮ ಋತುವಿನಲ್ಲಿ ಇದರ ಎಲೆಗಳು ಒಣಗಲಾರಂಭಿಸುತ್ತವೆ. ನವಂಬರದಲ್ಲಿ ಗಿಡದ ಕೆಲವು ಗೆಲ್ಲುಗಳನ್ನು ಕತ್ತರಿಸಿ ಕುಂಡಿಗಳಲ್ಲಿ ನೆಡಬಹುದು. ಸೆಖೆಗಾಲದಲ್ಲಿ ಇದು ಎಲೆ ಬಿಡುವುದಿಲ್ಲ. ವರ್ಷಋತು ಬಂದೊಡನೆಯೇ ಗೆಲ್ಲುಗಳನ್ನು ನೆಟ್ಟು ಬೆಳೆಸಬಹುದು. ಈ ಗೆಲ್ಲು ತನ್ನ ಮೂಲ ಗಿಡದ ಬಣ್ಣದ ಎಲೆಗಳನ್ನೇ ಬಿಡುವುದು.

ಕ್ರೋಟನ್ನಿನ ಎಲೆಗಳು ವಿಭಿನ್ನವರ್ಣದವುಗಳಾಗಿರುತ್ತವೆ. ಒಂದು ಗಿಡದ ಕೆಳಗಿನ ಎಲೆಗಳ ವರ್ಣವೊಂದು ಹಾಗೂ ಮೇಲಿನ ಎಲೆಗಳದ್ದು ಇನ್ನೊಂದು ಆಗುವುದೂ ಇದೆ. ದೆಹಲಿಯಂತಹ ಊರುಗಳಲ್ಲಿ ಕ್ರೋಟನನ್ನು ಬೆಳೆಸಬಹುದು. ಸೆಖೆಯು ವಿಪರೀತವಾದಾಗ, ಅದನ್ನು ತಂಪಾದ ಮತ್ತು ನೆರಳಿರುವ ಕಡೆಗಳಲ್ಲಿ ಇಟ್ಟರೆ ಸರಿ. ಬಹಳ ಚಳಿ ಪ್ರಾರಂಭವಾದೊಡನೆಯೇ ತೊಟ್ಟಿಗಳನ್ನು ಮಾಡಿನ ಮೇಲೆ ಇಲ್ಲವೇ ಚಪ್ಪರದ ಮೇಲೆ ಮಡಗಿದರೆ ಮುಗಿಯಿತು. ಬೇರಿನ ಮೇಲೆ ಕಾಂಡವನ್ನು ತೊಟ್ಟಿಯ ಪ್ರಮಾಣದಷ್ಟು ಎತ್ತರಕ್ಕೆ ಒಣ ಹುಲ್ಲು ಸುತ್ತುವುದರಿಂದ ಚಳಿಯ ಪ್ರಭಾವವು ಇದಕ್ಕೆ ತಟ್ಟುವುದಿಲ್ಲ.

ಕ್ರೋಟನ್ನಿನ ಎಲೆಗಳನ್ನು ಪ್ರತಿವಾರ ಶುದ್ಧ ನೀರಿನಿಂದ ತೊಳೆಯುತ್ತಿರಬೇಕು. ಇದರಿಂದ ಧೂಳು ದೂರವಾಗುವುದು. ಹೀಗೆ ಮಾಡದೆ ಇದ್ದರೆ, ಜಮೆಯಾದ ಧೂಳು ಎಲೆಗಳನ್ನು ಕೆಡಿಸುವುದು. ಸೆಖೆಗಾಲದಲ್ಲಿ ವಾರಕ್ಕೆರಡಾವರ್ತಿ ತೊಳೆದು ಗಿಡಕ್ಕೆ ನೀರು ಹೊಯ್ಯಬೇಕು. ಈ ಗಿಡಗಳ ಆರೈಕೆಯನ್ನು ಸರಿಯಾಗಿ ಮಾಡುವುದರಿಂದ ಇಡಿ ವರ್ಷವೂ ಅಂದ ಕಾಣುವಂತೆ ಇರಿಸಬಹುದು. ರೆಂಬೆಗಳನ್ನು ಕಡಿದು ಇವನ್ನು ಮಳೆಗಾಲದಲ್ಲಿ ನೆಟ್ಟು ಅಭಿವೃದ್ಧಿಗೊಳಿಸಬಹುದು. ನೆರಳು ನೀಡುವ ಮರಗಳ ಕೆಳಗೆ ಚಿಕ್ಕಚಿಕ್ಕ ಮಣ್ಣು ರಾಶಿಗಳನ್ನು ರಚಿಸಿ ಅವುಗಳಲ್ಲಿ ಸಣ್ಣ ಪ್ರಮಾಣದ ಕ್ರೋಟನ್‌ಗಳನ್ನು ನೆಡುವುದರಿಂದ ಉದ್ಯಾನದ ಸೌಂದರ್ಯ ಇಮ್ಮಡಿಯಾಗುವುದು. ತೊಟ್ಟಿಗಳಲ್ಲಿ ಬೆಳೆಸಿದ ಗಿಡಗಳನ್ನು ನೆರಳಲ್ಲಿಡುವುದರಿಂದ ಅದರ ಶೋಭೆ ಅಧಿಕಗೊಳ್ಳುವುದು.

ಕ್ರೋಟನ್‌ನಲ್ಲಿ ಹಲವಾರು ಬಗೆಯ ಗಿಡಗಳಿವೆ, ಸಣ್ಣ ಎಲೆಯ, ತಿರುಚಿದ ಎಲೆಯ, ಹಸುರು ಮೊದಲಾದ ವಿವಿಧ ವರ್ಣಗಳ ಎಲೆಯ ಗಿಡಗಳಿವೆ. ವರ್ಷಾ ಕಾಲದಿಂದ ತೊಡಗಿ ಚಳಿಗಾಲ ಪ್ರಾರಂಭದ ವರೆಗೆ ಈ ತೊಟ್ಟಿಗಳನ್ನು ಹೊರಗೆ ಇಡಬಹುದು.

ಟರೇಡೀಕಾಂಸಿಯಾ ವರ್ಜೀನಿಯಾದ ಎಲೆಗಳು ಉದ್ದ ಮತ್ತು ಮೊನಚಾಗಿವೆ. ಮೇಲ್ಗಡೆ ಹಸುರು ಮತ್ತು ಒಳಬದಿ ನೇರಳೆ ಬಣ್ಣದ ಎಲೆಗಳು ಇದರವು. ತೊಟ್ಟಿಗಳಲ್ಲಿ ಇಲ್ಲವೇ ಭೂಮಿಯಲ್ಲಿ ಇದನ್ನು ನೆಡಬಹುದು. ಈ ಗಿಡವು ಬಹು ಬೇಗನೆ ದೊಡ್ಡದಾಗುತ್ತದೆ. ಮಳೆಗಾಲದಲ್ಲಿ ಗೆಲ್ಲು ಕಡಿದು ನಾಟಿದರೆ ಕೆಲವೇ ದಿನಗಳಲ್ಲಿ ಬೇರುಬಿಟ್ಟು ಬಲಗೊಳ್ಳುವುದು. ಒಂದೇ ವರ್ಷದಲ್ಲಿ ಒಂದು ಒಳ್ಳೆಯ ಗಿಡ ತಯಾರಾಗುವುದು.

ದ್ವಿವರ್ಣ ಪತ್ರಗಳಿರುವುದರಿಂದ ಇದು ಬಹು ಜನಪ್ರಿಯವಾಗಿದೆ. ಇದರಿಂದಾಗಿಯೇ ತೋಟಗಳಲ್ಲಿ ಇದು ರಾರಾಜಿಸುತ್ತದೆ. ಇದು ಬಿಳಿ ಬಣ್ಣದ ಹೂ ಬಿಡುವುದು. ಹಸುರು ಮತ್ತು ನೇರಳೆ ವರ್ಣದ ಎಲೆಗಳ ಮರೆಯಲ್ಲಿ ಶ್ವೇತವರ್ಣದ ಹೂಗಳು ಸುಂದರವಾಗಿ ತೋರುತ್ತವೆ.

ಡಿ. ಕೆ. ಭಾರದ್ವಾಜರ
ಇಂಗ್ಲಿಷ್, ಇಂಗ್ಲಿಷ್-ಕನ್ನಡ
ಡಿಕ್ಷನರಿ
ಬೆಲೆ: ರೂ. ನಾಲ್ಕು.
ಐದು ರೂಪಾಯಿ ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಲಾಗುವುದು.
ನವಭಾರತ ಪುಸ್ತಕ ಭಂಡಾರ ಉಡುಪಿ.



ಬ್ರಹ್ಮಹತ್ಯೆ ಮಾಡಿದವನಿಗೆ, ಮದ್ಯಪಾನ ಮಾಡಿದವನಿಗೆ, ಕಳ್ಳತನ ಮಾಡಿದವನಿಗೆ, ವ್ರತಭಂಗ ಗೆಯ್ದವನಿಗೆ ಪ್ರಾಯಶ್ಚಿತ್ತವೆಂಬುದಿದೆ; ಆದರೆ, ಕೃತಘ್ನತೆಯನ್ನು ತೋರಿಸಿದವನಿಗೆ ಯಾವುದೇ ಪ್ರಾಯಶ್ಚಿತ್ತವಿಲ್ಲ.

ನವಯುಗ

೪೦ ವರುಷ	ಉಡುಪಿ ೨೫-೫-'೬೧	ವಾರ ೩೭

ವ್ಯರ್ಥಕೋಪಾಟೋಪ

ಸಾಕ್ಷರತೆಯ ಪ್ರಮಾಣ ಬಹು ಕಡಿಮೆಯಿರುವ ಭಾರತದಲ್ಲಿ ಮಹಿಳೆಯರ ಶಿಕ್ಷಣದತ್ತ ಹರಿಯಬೇಕಾದಷ್ಟು ಗಮನ ಹರಿದಿಲ್ಲವೆಂಬುದು ನಿಜವೆ. ಪುರುಷರಿಗಿಂತ ಸ್ತ್ರೀಯರಲ್ಲಿ ವಿದ್ಯಾವಂತರ ಪ್ರಮಾಣ ಅಲ್ಪವೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಇದರಿಂದಾಗಿ ಮಹಿಳೆಯರಲ್ಲಿಯೂ ಶಿಕ್ಷಣದ ಕಡೆಗೆ ಆಸಕ್ತಿ ಕೆರಳಿಸುವ ಹಲವಾರು ಯೋಜನೆಗಳನ್ನು ಸರಕಾರವು ನಡೆಸುತ್ತಿದೆ. ಹೀಗಿದ್ದರೂ ಭಾರತೀಯ ಜನತೆಯಲ್ಲಿ ಹೆಮ್ಮಕ್ಕಳನ್ನು ಶಾಲೆಗೆ ಕಳಿಸುವುದರ ಬಗ್ಗೆ ವಿಶೇಷ ಉದಾರನೀತಿ ಕಾಣಿಸುವುದಿಲ್ಲ. ಏನಾದರೂ ಗಂಡನ ಮನೆ ಸೇರಿ, ಆತನ ರಕ್ಷಣೆಯಲ್ಲಿ ದಿನ ದೂಡುವವಳಾಕೆ; ಆಕೆಗೆ ಅಕ್ಷರಾಭ್ಯಾಸವೇಕೆ ಎನ್ನುವವರು ಇಂದಿಗೂ ಇಲ್ಲದಿಲ್ಲ. ಇಂತಹ ಹೆತ್ತವರ ದೃಷ್ಟಿಕೋಣವು ಪರಿವರ್ತಿತವಾಗುವುದು ಅತ್ಯವಶ್ಯ. ನವದೆಹಲಿಯಲ್ಲಿ ಇತ್ತೀಚೆಗೆ ಸೇರಿದ ಮಹಿಳಾ ಶಿಕ್ಷಣದ ರಾಷ್ಟ್ರೀಯ ಮಂಡಳದಲ್ಲಿ ಮಾತನಾಡಿದ ಶ್ರೀಮತಿ ದುರ್ಗಾಬಾಯಿ ದೇಶಮುಖರು ಮಹಿಳೆಯರ ಶಿಕ್ಷಣದ ಕಡೆಗೆ ಸರಕಾರ ಉದಾಸೀನತೆಯನ್ನು ತೋರಿಸುತ್ತಿದೆಯೆಂದು ದೂರಿದರು. ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ಮೊದಲು ರೂ. ೯೦ ಕೋಟಿಯನ್ನು ಮಹಿಳೆಯರ ವಿಶೇಷ ಶಿಕ್ಷಣಕ್ಕೆ ತೆಗೆದಿರಿಸಲು ಯೋಜಿಸಿದ್ದರೂ ಈಗ ಕೇವಲ ೧೧ ಕೋಟಿ ರೂಪಾಯಿಗಳು ಮಾತ್ರವೇ ಇದಕ್ಕೆ ದೊರೆತಿರುವುದನ್ನವರು ಉಲ್ಲೇಖಿಸಿ, ಇದರಿಂದ ನಾರೀ ಸಮಾಜಕ್ಕೊಂದು ಅಪಮಾನವಾಯಿತೆಂದು ತಿಳಿದಿದ್ದಾರೆ. ಆದರೆ, ಶ್ರೀಮತಿ ದೇಶಮುಖರಂತಹ ಸುಶಿಕ್ಷಿತ ಮಹಿಳೆಯು ಈ ರೀತಿಯಲ್ಲಿ ಅಸಮಾಧಾನಗೊಂಡು ನಾರಿಯರಲ್ಲಿ ಸರಕಾರದ ಯೋಜನೆ--ಮತ್ತದರ ಕಾರ್ಯಸಾಧನೆಯ ಬಗ್ಗೆ ವಿರೋಧಾಭಿಪ್ರಾಯ ಹುಟ್ಟುವಂತೆ ಪ್ರೇರೇಪಣೆ ನೀಡುವುದು ಸಮಂಜಸವಲ್ಲ.

ಮೊತ್ತಮೊದಲು ಶಿಕ್ಷಣ ಖಾತೆಯು ಮೂರನೆಯ ಯೋಜನೆಯಲ್ಲಿ ರೂಪಾಯಿ ೯೦೦ ಕೋಟಿಯ ಬೇಡಿಕೆಯನ್ನು ಮುಂದಿಡುವಾಗ ಇದರ ಹತ್ತರಲ್ಲೊಂದಂಶದಷ್ಟು ಎಂದರೆ, ೯೦ ಕೋಟಿ ರೂಪಾಯಿಗಳನ್ನು ಮಹಿಳೆಯರ ವಿಶೇಷ ಶಿಕ್ಷಣಕ್ಕೆ ತೆಗೆದಿರಿಸಬೇಕೆಂದು ನಿಗದಿಯಾಗಿತ್ತು. ಆದರೆ, ಶಿಕ್ಷಣ ಖಾತೆಯ ಬೇಡಿಕೆಯಲ್ಲೇ ಭಾರಿಯ ಕಡಿತವಾಗಿ ಅದನ್ನು ಕೇವಲ ರೂ. ೪೦೦ ಕೋಟಿಗಳಿಗಿಳಿಸಿದಾಗ ಇನ್ನೊಂದು ಬಾಬಿನಲ್ಲಿಯೂ ಗಣನೀಯ ಇಳುವರಿಯಾಗಲೇ ಬೇಕಾಯಿತು. ಕಾರಣಾಂತರಗಳಿಂದ ಯೋಜನೆಯಲ್ಲಿ ಅಧಿಕವಾಗಿರುವ ವಿವಿಧ ಕಾರ್ಯಕ್ರಮಗಳಿಗೆ ಅಗ್ರಪ್ರಾಶಸ್ತ್ಯ ನೀಡುತ್ತ ಬಂದಂತೆ ಇದಕ್ಕೆ ದೊರೆತ ಹಣ ಕೇವಲ ೧೧ ಕೋಟಿ ರೂಪಾಯಿಗಳು ಮಾತ್ರ. ಈ ಇಳಿತವನ್ನು ಕಂಡು ನಿರಾಶೆಯಿಂದ ರೊಚ್ಚಿಗೇಳುವುದು ಸ್ವಾಭಾವಿಕವಾದರೂ ಇಡಿಯ ರಾಷ್ಟ್ರದ ಆವಶ್ಯಕತೆಯನ್ನು ಗಮನಿಸಿ ಸಮಾಧಾನ ಪಟ್ಟುಕೊಳ್ಳುವುದು ಅಪೇಕ್ಷಣೀಯವಾಗಿದೆ. ಯೋಜನಾ ಆಯೋಗವು ಕೇವಲ ಮಹಿಳೆಯರ ವಿಶೇಷ ಶಿಕ್ಷಣವನ್ನಷ್ಟೆ ಲಕ್ಷ್ಯಿಸಿದರೆ ಸಾಲದು. ಇಡಿಯ ಭಾರತದ ಹಿತಚಿಂತನೆಯನ್ನು ಮಾಡಿ, ಸಮಗ್ರ ಭಾರತೀಯರ ಅಭ್ಯುದಯವನ್ನು ಹಾರಯ್ಸಬೇಕಾದ ಯೋಜನಾ ಆಯೋಗವು ಮಹಿಳೆಯರನ್ನು ಅಪಮಾನಗೊಳಿಸಿದೆಯೆಂಬುದು ಮಿಥ್ಯಾರೋಪವಾಗಿದೆ. ತೃತೀಯ ಯೋಜನಾವಧಿಯಲ್ಲಿ ೬ರಿಂದ ೧೧ ವರ್ಷ ಪ್ರಾಯದ ಮಕ್ಕಳಿಗೆ ಅನಿವಾರ್ಯ ಉಚಿತ ಶಿಕ್ಷಣವನ್ನು ನೀಡುವ ಮಹೋದ್ದೇಶವನ್ನು ನಾವು ಇಟ್ಟುಕೊಂಡಿದ್ದೇವೆ. ಈಗ ಶಾಲೆಗೆ ಹೋಗದಿರುವ ಮಕ್ಕಳಲ್ಲಿ ಹೆಮ್ಮಕ್ಕಳೇ ಅಧಿಕ ಸಂಖ್ಯಾಕರಿರುವುದರಿಂದ, ಶಿಕ್ಷಣಕ್ಕಾಗಿ ವೆಚ್ಚವಾಗುವ ಸುಮಾರು ೪೦೦ ಕೋಟಿ ರೂಪಾಯಿಗಳಲ್ಲಿ ನೂರು ಕೋಟಿ ರೂಪಾಯಿಗಳು ಹೆಮ್ಮಕ್ಕಳ ವಿದ್ಯಾಭ್ಯಾಸಕ್ಕಾಗಿಯೇ ಖರ್ಚಾಗುವುದೆಂದು ಅಂದಾಜು ಮಾಡಿದ್ದಾರೆ. ಸುಮಾರು ಒಂದು ಕೋಟಿ ಮಹಿಳೆಯರು ಈ ಅವಧಿಯಲ್ಲಿ ಶಿಕ್ಷಣ ಪಡೆಯುತ್ತಾರೆ. ಹೀಗೆಯೇ ಹೈಸ್ಕೂಲು ಮತ್ತು ವಿಶ್ವವಿದ್ಯಾಲಯ ಶಿಕ್ಷಣದಲ್ಲಿಯೂ ಮಹಿಳೆಯರಿಗಾಗಿ ಹೆಚ್ಚು ಹಣವು ವ್ಯಯವಾಗುತ್ತದೆ. ಮಹಿಳೆಯರ ಸಾಮಾನ್ಯ ಶಿಕ್ಷಣದ ಸಲುವಾಗಿಯೇ ಮೂರನೆಯ ಯೋಜನೆಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ಸಂಪತ್ತು ವ್ಯಯವಾಗುವುದು. ಇದರಿಂದ ಯೋಜನಾ ಆಯೋಗವಾಗಲೀ ಶಿಕ್ಷಣ ಶಾಖೆಯಾಗಲೀ ಮಹಿಳೆಯರನ್ನು ಅಪಮಾನಗೊಳಿಸುವ, ಅವರನ್ನು ನಿರ್ಲಕ್ಷಿಸುವ ದುರುದ್ದೇಶವನ್ನಿಟ್ಟುಕೊಂಡಿದೆಯೆಂದು ತಿಳಿಯುವುದು ಸಮಂಜಸವೆನಿಸದು. ಇದನ್ನು ಶ್ರೀಮತಿಯವರು ತಿಳಿದುಕೊಳ್ಳಬೇಕಿತ್ತು.

ಮಹಿಳೆಯರ ವಿಶೇಷ ಶಿಕ್ಷಣದ ಬಗ್ಗೆ ದ್ವಿತೀಯ ಯೋಜನೆಯಲ್ಲಿ ಕೇವಲ ೫ ಕೋಟಿ ರೂಪಾಯಿಗಳನ್ನು ಒದಗಿಸಲಾಗಿತ್ತು ನಮ್ಮ ಮೂರನೆಯ ಯೋಜನೆಯ ಆಕಾರವು ಎರಡನೆಯುದಕಿಂತ ಹಿರಿದಾಗಿರುವುದರಿಂದಲೇ ಈ ಬಾರಿ ಈ ಬಾಬಿಗೆ ೧೧ ಕೋಟಿ ರೂಪಾಯಿಗಳನ್ನು ತೆಗೆದಿರಿಸಲು ಅವಕಾಶವೊದಗಿತು. ಮಹಿಳೆಯರ ವಿಶೇಷ ಶಿಕ್ಷಣದತ್ತ ಅಧಿಕಾಧಿಕ ಗಮನ ಹರಿಸಬೇಕಾದದು ಅವಶ್ಯವೆಂದು ಒಪ್ಪಿಕೊಳ್ಳಲೇ ಬೇಕೆಂಬುದರಲ್ಲಿ ವಿವಾದದ ಅಂಶವಿರುವುದಿಲ್ಲ. ಆದರೂ ಇದಕ್ಕಿಂತಲೂ ಪ್ರಧಾನವಾದ ಸಮಸ್ಯೆಗಳು ನಮ್ಮ ಮುಂದಿರುವಾಗ, ಅವನ್ನು ಕಡೆಗಣಿಸುವುದು ಸಾಧುವೆಂದು ಯಾರೂ ಹೇಳಲಾರರು. ಒಂದು ಯೋಜನೆಯಲ್ಲಿ ನಿಗದಿಗೊಳಿಸುವ ವೆಚ್ಚಗಳ ಪ್ರಮಾಣವು ಅವುಗಳ ಮಹತ್ವವನ್ನು, ಲಭ್ಯವಿರುವ ಸಾಧನ ಸಂಪತ್ತಿಯನ್ನು ಹೊಂದಿಕೊಂಡಿದೆ. ಇವೆಲ್ಲವನ್ನೂ ಕೂಲಂಕಷವಾಗಿ ವಿಮರ್ಶಿಸಿಯೇ ಯೋಜನಾ ಆಯೋಗವು ತನ್ನ ಕರ್ತವ್ಯವನ್ನು ನಿರ್ವಹಿಸುತ್ತಿದೆ. ಹಾಗಿರುವಾಗ ಅದರ ಕೃತ್ಯವನ್ನು ಅನ್ಯಾಯ ಹಾಗೂ ಅಪಮಾನವೆಂದು ದೂರಿ ರೇಗಿಕೊಳ್ಳುವುದು ವಿವೇಕವಲ್ಲ. ಈ ಸತ್ಯ ಸಂಗತಿಯನ್ನು ತಿಳಿದಾಗಲೂ ಶ್ರೀಮತಿಯವರು ಸಮಾಧಾನ ಪಟ್ಟುಕೊಳ್ಳಬೇಕಿತ್ತು. ಇನ್ನಾದರೂ ಸಮಾಧಾನ ಪಡುವಂತಾಗಲಿ.

ಉಪಾಯವಾವುದು?

ಮಾನ್ಯ ಮಂತ್ರಿ ಚೆನ್ನಬಸಪ್ಪನವರು ವಹಿಸಿಕೊಂಡನಂತರ ಗೃಹಶಾಖೆಯಲ್ಲೊಂದು ನವಚೇತನ ಹರಿದು ಬಂದಂತಾಗಿದೆ. ಮದ್ಯಪಾನ ಪ್ರತಿಬಂಧಕ ಶಾಸನವನ್ನು ಯಶಸ್ವಿಗೊಳಿಸುವ ಸದುದ್ದೇಶದಿಂದ, ರಾಜ್ಯದಲ್ಲಿ ಶಾಂತಿ-ಸುವ್ಯವಸ್ಥೆಯನ್ನು ಸ್ಥಾಪಿಸುವ ಸದಿಚ್ಛೆಯಿಂದ ಅವರು ವಿಶೇಷ ಗುಪ್ತಚರರ ಪಡೆಯೊಂದನ್ನು ರಚಿಸಿರುವರೆಂದು ಕೇಳಿಬರುತಿತ್ತು. ಈಗ, ಅವರು ಪಾನಪ್ರತಿಬಂಧ ಕಾಯಿದೆಯನ್ನು ಬಿಗಿಗೊಳಿಸಲು ಹವಣಿಸಿ ರಾಜ್ಯದ ಒಂದೊಂದೇ ಜಿಲ್ಲೆಗೆ ಭೆಟ್ಟಿಯೀಯುವರೆಂಬ ವದಂತಿಯಿದೆ. ಮಾನ್ಯಮಂತ್ರಿವರ್ಯರ ಈ ಮಹಾಯೋಜನೆಯನ್ವಯ ಮೊತ್ತಮೊದಲಿಗೆ ಸಂದರ್ಶನವೀಯುವುದು ದಕ್ಷಿಣ ಕನ್ನಡ ಜಿಲ್ಲೆಗೆಂದು ತಿಳಿಯುತ್ತದೆ; ಮತ್ತು ಅವರ ಸಂದರ್ಶನ ವೇಳೆಯೂ ನಿಶ್ಚಿತವಾಗಿದೆ. ಮಂತ್ರಿವರ್ಯರ ಈ ಉದ್ದೇಶವು ಘನವಾದುದು ಮತ್ತು ಮಹತ್ವಪೂರಿತವಾದುದು. ಆದರೆ, ತಾನು ಹೇಳಿ ಬರುವಾಗ, ಪ್ರತಿಬಂಧಕಾಯದೆಯನ್ನು ಉಲ್ಲಂಘಿಸುವಂತಹ ಕಾರ್ಯಕಲಾಪಗಳು ನಡೆಯಲಾರವೆಂದು ಅವರು ತಿಳಿದಿರಬೇಕಾಗಿತ್ತು. ಪೋಲೀಸು ಶಾಖೆಯು ಈ ಬಗ್ಗೆ ಕಾರ್ಯಕ್ರಮವು ಕೈಗೊಳ್ಳುತ್ತಿರುವುದೆಂದು ತಿಳಿದೂ ತಿಳಿದು ಸಾಮಾನ್ಯ ಗುಡಿಕೈಗಾರಿಕೆಯಂತೆ ಬೆಳೆದು ಬಂದು ಹರಡಿರುವ ಈ ಕಾಯದೆಯನ್ನು ಉಲ್ಲಂಘನೆಯು ಮಂತ್ರಿವರ್ಯರ ದೃಷ್ಟಿಗೆ ಬೀಳುವುದೆಂದು ನಂಬುವುದು ಕಷ್ಟ. ಹಿಂದಿನ ಕಾಲದಲ್ಲಿ ರಾಜರು ವೇಶಪಲ್ಲಟಿಸಿ ತಿರುಗಿ ರಾಜ್ಯದ ಆಗುಹೋಗುಗಳನ್ನು ತಿಳಿದುಕೊಳ್ಳುತಿದ್ದರಂತೆ. ಈಗಲೂ ಹಾಗೆ ಮಾಡಬಹುದೆಂದರೆ, ಅದು ರಾಜಸತ್ತೆಯ ಯುಗ; ಆತನೇನು ಮಾಡಿದರೂ ಕೇಳುವಂತಿರಲಿಲ್ಲ; ಈಗಲಾದರೋ ಪ್ರಜಾಸತ್ತೆಯ ಕಾಲ. ಮಂತ್ರಿಗಳು ಏನು ಮಾಡಿದರೂ 'ಅದನ್ನು ರಹಸ್ಯದಲ್ಲಿಟ್ಟುಕೊಳ್ಳುವುದು ಸಾಧ್ಯವಿಲ್ಲ; ಜನತೆಗೋ ಅವರ ಪ್ರತಿನಿಧಿಗಳಿಗೋ ತಿಳಿಸಲೇ ಬೇಕಾಗುತ್ತದೆ. ಕಳ್ಳನು ಹೇಳಿಬಂದರೆ, ಆತನ ಕೈಗೆ ದೊರೆಯುವಂತೆ ಚಿನ್ನಾಭರಣಗಳನ್ನು ಎದುರಿಡುವಷ್ಟು ಅವಿವೇಕಿಗಳೂ ವಿಚಾರ ಶೂನ್ಯರೂ ಆಧುನಿಕ ಯುಗದಲ್ಲಿರಲಾರರು. ಎಂತಲೇ ಮಾನ್ಯಮಂತ್ರಿಗಳ ಆಶಯ ಹಿರಿದಾದರೂ ಅದರ ಪರಿಣಾಮ ಅತಿ ಕಿರಿದಾಗುವುದು ಖಂಡಿತವೇ. ಪಾನಪ್ರತಿಬಂಧ ಕಾಯದೆ ಯಶಸ್ವಿಯಾಗುವುದು ಅಪೇಕ್ಷಣೀಯವೆಂಬುದರಿಂದ ಇದಕ್ಕೆ ಅನುಕೂಲವಾದ ಕಾರ್ಯಕ್ರಮಗಳನ್ನು ಯುಕ್ತಿಯಿಂದ ನಿಯೋಜಿಸಿಕೊಳ್ಳಬೇಕಾಗುತ್ತದೆ. ಹಾಕಿದ ಬೇಲಿಯು ಭದ್ರವಾಗಿರುವಂತೆ ನೋಡಿಕೊಳ್ಳುವುದೇ ಹೊಲ ಸೋಲು ಹೋಗದಂತೆ ತಡೆಯುವ ಉತ್ತಮ ಉಪಾಯವಲ್ಲವೆ?

ಸಂಕ್ಷಿಪ್ತ ಸುದ್ದಿಗಳು

ಪ್ರಬಲಾಸ್ತ್ರ ಪ್ರಯೋಗ

ಕಾಂಗ್ರೆಸ್ಸು ಇನ್ನೂ ಹೆಚ್ಚಿನ ರಾಜ್ಯಗಳನ್ನು ನಿರ್ಮಿಸಲು ಸಾಧ್ಯವಿಲ್ಲವೆಂದು ಹೇಳುತಿದ್ದಂತೆಯೇ ಬೊಂಬಾಯಿಯ ವಿಭಜನೆಯಾಯಿತು. ನಾಗಪ್ರದೇಶ ಪ್ರತ್ಯೇಕ ಘಟಕವಾಯಿತು. ಇದರಿಂದ ಉತ್ಸಾಹಗೊಂಡಗೊಳ್ಳುತ್ತಿರುವ ಅಕಾಲಿ ದಳದವರು ಪ್ರತ್ಯೇಕ ಪಂಜಾಬಿ ಸುಬಾವನ್ನೇಕೆ ಕೊಡಬಾರದು ಎಂದು ವಾದಿಸಿ ಹೋರಾಡುತ್ತಾರೆ. ಇತ್ತೀಚೆಗೆ ಫತ್ತೇಸಿಂಗ—ನೆಹರು ಭೇಟಿಯು ನಿಷ್ಫಲವೆಂದೆನಿಸಿದ್ದರಿಂದ—ನೆಹರು ರಾಜ್ಯ ರಚನೆಗೆ ಅನುಕೂಲಾಭಿಪ್ರಾಯ ವ್ಯಕ್ತಪಡಿಸದ್ದರಿಂದ—ಫತ್ತೇಸಿಂಗರು ತನ್ನವರ ತೃಪ್ತಿಗಾಗಿಯಾದರೂ ಮತ್ತೊಂದು ದಾರಿ ಹಿಡಿಯಲೇ ಬೇಕಾಯ್ತು. ಮೊದಲೊಮ್ಮೆ ಆಮರಣ ಅನ್ನ ಸತ್ಯಾಗ್ರಹವನ್ನು ಮಾಡಿ ತುಸು ಕಂಗಾಲುಗೊಳಿಸಿದ ಇವರು ಮರಳಿ ಈ ಪ್ರಬಲಾಸ್ತ್ರವನ್ನು ಪ್ರಯೋಗಿಸಬೇಕೇ ಎಂದು ಯೋಚಿಸುತ್ತಿದ್ದಾರೆ ಅವರ ಈ ವಿಚಾರಕ್ಕೆ ಅವರೇ ಉತ್ತರ ಕಂಡು ಹಿಡಿಯಬೇಕು.

ಏನೂ ಇಲ್ಲವೆಂಬುದಕ್ಕಿಂತ....

ಮಹಿಳೆಯರಲ್ಲಿ ಸುಶಿಕ್ಷಿತರ ಸಂಖ್ಯೆ ವಿರಳವಿರುವಂತೆಯೇ ಸುಶಿಕ್ಷಿತ ಮಹಿಳೆಯರಲ್ಲಿ ಶಿಕ್ಷಕಿಯರಾಗಿ ದುಡಿಯಲು ಮುಂದೆ ಬರುವವರೂ ಕಡಿಮೆ. ಮೈಸೂರಿನ ಶೈಕ್ಷಣಿಕ ಶಾಖೆಯ ಮಂತ್ರಿ ಶ್ರೀ ಅಣ್ಣಾರಾವ್ ಗಣಮುಖಿಯವರು ಎಸ್. ಎಸ್. ಸಿ. ಉತ್ತೀರ್ಣರಾದ ಸ್ತ್ರೀಯರು ಈ ಹುದ್ದೆಗೆ ಬರುವುದಿಲ್ಲವಾದುದರಿಂದ ಮುಲ್ಕಿ ಪರೀಕ್ಷೆಯಲ್ಲಿ ಸಂಕ್ಕಿಂತ ಹೆಚ್ಚು ಗುಣ ಪಡೆದವರನ್ನು ಶಿಕ್ಷಕಿಯರ ಜಾಗೆಗೆ ನೇಮಿಸಲು ಸರಕಾರ ವಿಚಾರಿಸುತ್ತಿದೆಯೆಂದಿದ್ದಾರೆ. ರಾಜ್ಯದಲ್ಲಿ ಎಂ. ಬಿ. ಬಿ. ಎಸ್. ವೈದ್ಯರ ಅಭಾವ ನೀಗಿಸಲು ಎಲ್. ಎಂ. ಪಿ. ಕೋರ್ಸನ್ನು ಪುನಃ ಪ್ರಾರಂಭಿಸುವಂತೆಯೇ ಶಿಕ್ಷಣ ಶಾಖೆಯ ಈ ವಿಚಾರ. 'ಏನೂ ಇಲ್ಲವೆಂಬುದಕ್ಕಿಂತ ಏನಾದರೂ ಇದೆ' ಎಂಬುದು ಉತ್ತಮವಾದರೆ, ರಾಜ್ಯ ಸರಕಾರದ ಯೋಚನೆ ಫಲಕಾರಿಯಾದರೆ ಲಾಭವಿದೆ; ಇಲ್ಲವಾದರೆ ನಷ್ಟ ಖಂಡಿತ.

ಬೇಡವಾದ ಉಪದೇಶ

ಭಾರತದ ಅರ್ಥ ಮಂತ್ರಿ ಮುರಾರ್ಜಿ ದೇಸಾಯಿಯವರು ಬೊಂಬಾಯಿಯಲ್ಲಿ ಯಶಸ್ವೀ ಮುಖ್ಯ ಮಂತ್ರಿಯೆನಿಸದೆ ಹೋದರೂ ಕೇಂದ್ರದಲ್ಲಿ ಪ್ರಭಾವೀ ಅರ್ಥ ಮಂತ್ರಿಯೆನಿಸಿದ್ದಾರೆ. ನೆಹರುಗಳ ನಂತರ ಯಾರು ಎಂಬ ಪ್ರಶ್ನೆ ಅವರಿಗೆ ಕೇಳಿದರೆ, ಅದರ ಚಿಂತೆ ನಿಮಗೀಗ ಏಕೆ? ಎಂದು ಮಾತು ಹಾರಿಸಿ ಇವರು ಮೆಲ್ಲನೆ ತನ್ನತ್ತ ಬೊಟ್ಟು ಮಾಡುವ ಸಂಭವವೇ ಹೆಚ್ಚು. ಯೋಗ್ಯವಿದ್ದುದನ್ನು ಬಿಡಬಾರದು: ಸತ್ಯವನ್ನೇ ಕಟ್ಟಿಕೊಳ್ಳಬೇಕು; ಅದನ್ನೇ ಎತ್ತಿ ಹಿಡಿಯ ಬೇಕು ಎಂಬ ಅಪ್ರಿಯ ಸತ್ಯವನ್ನವರು ಬೆಳಗಾಂವಿಯಲ್ಲಿ ಉಪದೇಶಿಸಿದರು. ಯೋಗ್ಯತೆಯ ಸ್ಥಾನಮಾನ ಹೀನವಾಗುತ್ತ "ಪ್ರಭಾವ"ವೇ ಪರಿಣಾಮಕಾರಿಯಾಗುವ ಈ ಕಾಲದಲ್ಲಿ ಸತ್ಯಕ್ಕೆ ಉಳಿಗಾಲವಿಲ್ಲವೆಂಬುದನ್ನು ಅರಿತೂ ... ಇವರು ಮೈಸೂರು ರಾಜ್ಯಕ್ಕೆ ಬೇ

ಅಲ್ಲಲ್ಲಿಯ ಸುದ್ದಿ ಸಾರ

'ಜೀವನ ಕೃಷ್ಣ'ದ ಉದ್ಘಾಟನೆ— ಲೈಫ್ ಇನ್ಶೂರೆನ್ಸ್ ಕೊರ್ಪೊರೇಶನಿನ ಉಡುಪಿ ವಿಭಾಗದ ಹೊಸ ಕಟ್ಟಡ 'ಜೀವನ ಕೃಷ್ಣ'ದ ಉದ್ಘಾಟನಾ ಸಮಾರಂಭವು ಇದೇ ತಾ. 17ರಂದು ಮಂತ್ರಿ ಶ್ರೀ ಬಿ. ವೈಕುಂಠ ಬಾಳಿಗರಿಂದ ನೆರವೇರಿಸಲ್ಪಟ್ಟಿತು. ಉಡುಪಿ ಡಿವಿಜನಿನ ಅಸಿಸ್ಟೆಂಟ್ ಡಿವಿಜನಲ್ ಮೆನೇಜರ್ ಶ್ರೀ ಇ. ಯು. ಜಕೋಬ್ ಅವರು

ತವಾದ ಶತ್ರೋಪದೇಶವೇ ಸಿಗಿದುದರಿಂದ ಸ್ವಲ್ಪ ಚಿಂತಾರೋಗವನ್ನು ಹರಡಿದ್ದಾರೆ. ನಮಗರಿಯದೆ ಪ್ರೇಮ ಸಂದೇಶವನ್ನು ಬೀರಿ ಗಲಿಬಿಲಿ ಗೊಳಿಸಿದ್ದಾರೆ.

ದ. ಕೋರಿಯಾದಲ್ಲಿ ಕ್ರಾಂತಿ

ಒಳಗಿಂದೊಳಗೇ ಹೊಗೆಯಾಡುತಿದ್ದ ದಕ್ಷಿಣ ಕೋರಿಯ ಒಮ್ಮಿಂದೊಮ್ಮೆಗೆ ಬುಗಿಲ್‌ಗೊಂಡು ಅಲ್ಲಿ ಸೈನಿಕ ಕ್ರಾಂತಿಯೂ ಯಿತು. ಪ್ರಧಾನಿ ಡಾ. ಜಾನ್‌ಚಾಂಗರು ಯಾವ ಬುದ್ಧಿವಂತಿಕೆಯನ್ನು ತೋರಿಸಿಕೊಂಡಾದರೂ ಈ ದಂಗೆಯನ್ನು ಅಡಗಿಸಲು ಅಸಮರ್ಥರಾಗಿ ಅಡಗಿಕೊಂಡರು. ಸೈನಿಕ ಕ್ರಾಂತಿಯನ್ನು ಅಲ್ಲಿನ ಹೆಚ್ಚಿನ ಜನ ಬೆಂಬಲಿಸಿದಂತೆ ತೋರಿದುದರಿಂದ ಕ್ರಾಂತಿಯು ಸಫಲವಾಯಿತೆಂದೇ ಹೇಳಬೇಕು. ಲಂಚಗೂಳಿತನ ನಿರ್ಮೂಲನ, ಪ್ರಜಾಪ್ರಭುತ್ವ ಪುನಸ್ಥಾಪನೆ ಮತ್ತು ಕಮ್ಯುನಿಜಂ ವಿರೋಧಗಳನ್ನೇ ಧ್ಯೇಯವಾಗಿರಿಸಿದ ಈ ಸೈನ್ಯಕ್ರಾಂತಿಯ ನೇತಾರ ಲೆ|ಜ| ಡೋಯುಂಗ ಚಾಂಗರು ಮುಂದಿನ ವ್ಯವಸ್ಥೆ ಮಾಡಲಿದ್ದಾರೆ. ಡಾ. ಚಾಂಗರು ಬುದ್ಧಿವಂತರಾದುದರಿಂದಲೇ ಕ್ರಾಂತಿ ಸಫಲವಾಯಿತೆಂದು ತಿಳಿದೊಡನೆಯೇ ತಮ್ಮ ಮಂತ್ರಿಮಂಡಳಿಯ ರಾಜಿನಾಮೆಯನ್ನೊಪ್ಪಿಸಿದರು!

ಜರಿಯ ಮೇಲೆ ಜಜ್ಜರಿ

ಭಾರತದಲ್ಲಿಯೇ ವಿಲೀನರಾಗಿ ಹೋದ ಪಂಡಿತ ಜವಾಹರಲಾಲರು ಮೊದಲು ಭಾರತದ ಬಗ್ಗೆ ಕಟ್ಟಿದ್ದ ಕನಸುಗಳು ಅದೇ ರೂಪದಲ್ಲಿ ಇಂದಿಗೂ ಉಳಿಯುವಂತಾಗಿದೆ, ಇಷ್ಟು ಮಾತ್ರವಲ್ಲ, ದೇಶವು ಸಮೃದ್ಧಿಯ ಪಥದತ್ತ ಮುನ್ನುಗ್ಗಬೇಕೆಂದು ಶ್ರಮಿಸುತ್ತಿರುವಾಗ ಸಂಕುಚಿತ ಪ್ರವೃತ್ತಿಗಳಿಂದಾಗಿ ಭಾರತೀಯರು ವಿಘ್ನವಿಧ್ವಂಸಗಳನ್ನು ಒಡ್ಡುತ್ತಿರುವುದು ಅವರ ವಿಪಂಚನೆಗೆ ಕಾರಣವಾಗಿದೆ. ಅಸ್ಸಾಮದಲ್ಲಿ ಬಂಗಾಳಿ—ಅಸಾಮಿ ಭಾಷಾವಾದಿಗಳ ವಾದ ವಿವಾದ—ಕಾಚಾರ ಸಂಗ್ರಾಮ ಪರಿಷತ್ತು ನಡೆಸುತ್ತಿರುವ ಚಳವಳ— ಇವುಗಳು ಜಾತೀಯತೆ, ಭಾಷೀಯತೆ ಮತ್ತು ಪ್ರತ್ಯೇಕತೆಯನ್ನು ಹೆಚ್ಚಿಸುತ್ತಿವೆ. ಇಂತಹ ಚಳವಳಗಳಿಂದ ಕಾರ್ಯಸಾಧನೆಯಾಗುವುದಿಲ್ಲ; ಬದಲು ಅವನ್ನು ತಡೆಗಟ್ಟಲು ಕೋಟ್ಯಂತರ ಹಣ ವೆಚ್ಚವಾಗುವುದು— ಮತ್ತೊಂದು ಖೇದನೀಯ ಸಂಗತಿ.

'NAVAYUGA' WEEKLY is in the list of periodicals and Newspapers approved for use in Secondary School as per proceedings Roc· No· 466 N/50 date 2-12-1950 of the Director of public Instruction Madras·

ಶುಭ ಸಂದೇಶಗಳನ್ನು ಓದಿದರು. ಉಡುಪಿ ಸೀನಿಯರ್ ಡಿವಿಜನಲ್ ಮೆನೇಜರ್ ಶ್ರೀ ಟಿ. ಆರ್. ಎ. ಪೈಯವರು ಸ್ವಾಗತ ಭಾಷಣ ಮಾಡುತ್ತಾ ವಿಮಾ ರಾಷ್ಟ್ರೀಕರಣದ ಬಳಿಕ ಉಡುಪಿ ಡಿವಿಜನಲ್‌ನಲ್ಲಿ ಹೆಚ್ಚೆಚ್ಚಾಗಿ ಆದ ವಿಮಾ ವ್ಯವಹಾರದಲ್ಲಿ ಕಾಲಂಶದಷ್ಟು ದ. ಕ. ಜಿಲ್ಲೆಯೊಂದರಿಂದಲೇ ಬಂದಿರುವುದೆಂದೂ ಉಡುಪಿ ವಿಭಾಗದ ಶಾಖಾ ಕಚೇರಿಗಳ ವಿವರ, ಉಡುಪಿಯ ಹಿಂದಿನ–ಇಂದಿನ ಖ್ಯಾತಿ ಮೊದಲಾದುವನ್ನು ವಿವರಿಸಿದರು. ಮಂತ್ರಿ ಬಾಳಿಗರು ಜೀವವಿಮೆಯು ರಾಷ್ಟ್ರೋನ್ನತಿಗೆ ಉತ್ತಮ ಸಾಧನವಾಗಿರುವುದರಿಂದ ವಿಮಾಧಿಕಾರಿಗಳೂ ಜನರೂ ವಿಶೇಷ ಕಾರ್ಯವೆಸಗಬೇಕೆಂದೂ 40,000ಚ. ಪೈಲು ವಿಸ್ತಾರದ ಈ ವಿಭಾಗದಲ್ಲಿ ಒಂದಂಶ ಮಲೆನಾಡಾದರೂ ರಾಷ್ಟ್ರೀಕರಣದ ಬಳಿಕ ವಿಮಾ ಪ್ರಗತಿ ಅದುದು ಅಭಿನಂದನೀಯವೆಂದೂ ದಕ್ಷಿಣ ಕನ್ನಡಿಗರು ಜೀವ ವಿಮಾ ಕ್ಷೇತ್ರದಲ್ಲಿ ಹಿಂದಿನಿಂದಲೂ ಮಾಡಿರುವ ಸೇವಾಕಾರ್ಯವು ಪ್ರಶಂಸನೀಯವೆಂದೂ ಹೇಳಿ ಸುಮಾರು 8ಲಕ್ಷ ವೆಚ್ಚ ಮಾಡಿ ಕಟ್ಟಿದ ಹೊಸ ಕಟ್ಟಡದ ಉದ್ಘಾಟನೆಯನ್ನು ನೆರವೇರಿಸಿದರು. ಅಧ್ಯಕ್ಷತೆ ವಹಿಸಿದ್ದ ಲೈಫ್ ಇನ್ಶೂರೆನ್ಸ್ ಕೋರ್ಪೋರೇಶನಿನ ಅಧ್ಯಕ್ಷ ಶ್ರೀ ಪಿ. ಎ. ಗೋಪಾಲ್‌ಕೃಷ್ಣ ಐ. ಸಿ. ಎಸ್. ಅವರು ಭಾಷಣ ಮಾಡುತ್ತಾ ಉಡುಪಿ ಡಿವಿಜನು ಮಾಡಿರುವ ಪ್ರಗತಿಯನ್ನೂ ಉಡುಪಿಯು ಈಚೆಗೆ ವಿದ್ಯಾಕ್ಷೇತ್ರದಲ್ಲಿ ಮುಂದುವರಿದುದನ್ನೂ ಪ್ರಸ್ತಾಪಿಸಿದರು. ಜೋನಲ್ ಮೆನೇಜರ್ ಶ್ರೀ ಎಚ್. ಬಲರಾಮರಾಯರು ಕೊನೆಗೆ ಕೃತಜ್ಞತೆಗಳನ್ನರ್ಪಿಸಿದರಲ್ಲದೆ ಅನಿರೀಕ್ಷಿತ ಮಳೆ ಬಂದುದರಿಂದ ಬಂದ ಅತಿಥಿಗಳಿಗೆ ಉಂಟಾದ ಅನಾನುಕೂಲತೆಗಳಿಗಾಗಿ ಬೇಸರ ವ್ಯಕ್ತಪಡಿಸಿದರು (ಕಟ್ಟಡದ ಹೊರ ಪಠಾರದಲ್ಲಿ ವಿಶಾಲ ಸಭಾವ್ಯವಸ್ಥೆ ಮಾಡಲಾಗಿತ್ತು. ಆದರೆ ಮಳೆಯ ದೆಸೆಯಿಂದ ಸಮಾರಂಭ ಬೊಂಬೈ ಲೈಫ್ ಕಟ್ಟಡದಲ್ಲಿ ಜರಗಿತು)

ಡಾ| ಎನ್. ಬಿ. ಸೆಟ್ಟರ ನಿಧನ— ಮದ್ರಾಸಿನಲ್ಲಿ ಡಾ| ಸುಂದರ ವದನಂ ನರ್ಸಿಂಗ್ ಹೋಮ್‌ನಲ್ಲಿ ಜನಪ್ರಿಯ ಡಾಕ್ಟರರಾಗಿದ್ದ ದ. ಕ ಜಿಲ್ಲೆಯ ಡಾ| ನಿಟ್ಟೆ ಬಾಬಣ್ಣ ಸೆಟ್ಟರು ಕಳೆದ ತಾ. 4ರಂದು ಮದ್ರಾಸಿನಲ್ಲಿ ಅಕಾಲ ನಿಧನರಾದುದು ಅತ್ಯಂತ ವಿಷಾದಕರವಿದೆ. ದಿವಂಗತರು ಮದರಾಸಿನಲ್ಲಿ ವಿಶೇಷ ಜನಾನುರಾಗ ಗಳಿಸಿ ಪ್ರಸಿದ್ಧರಾಗಿದ್ದರು.

ದ. ಕ. ಜಿಲ್ಲಾ ಕಾಂಗ್ರೆಸ್ ಸಮಿತಿಯ ಮಹಾಸಭೆಯು ಇದೇ ತಾ. 28ನೇ ಆದಿತ್ಯವಾರ ಮಧ್ಯಾಹ್ನ 2 ಗಂಟೆಗೆ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಭೂ ಸುಧಾರಣಾ ಮಸೂದೆ ಮೊದಲಾದ ಕುರಿತು ಪರ್ಯಾಲೋಚಿಸಲು ಸೇರಲಿರುವುದು.

ಕನ್ನಡ ಸಂಘದ ಮಹಾಸಭೆಯು ಮಂಗಳೂರು ಗವರ್ನ್‌ಮೆಂಟ್ ಕಾಲೇಜಿನಲ್ಲಿ ಇದೇ ತಾ 14ರಂದು ಶ್ರೀ ತೆಕ್ಕುಂಜೆ ಗೋಪಾಲಕೃಷ್ಣ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿ ಸಂಘದ ಘಟನೆಯನ್ನು ಅಂಗೀಕರಿಸಲಾಯಿತು. 1961—62ನೇ ವರ್ಷಕ್ಕೆ ಶ್ರೀ ತೆಕ್ಕುಂಜೆ ಗೋಪಾಲಕೃಷ್ಣ ಭಟ್, ಅಧ್ಯಕ್ಷ, ಶ್ರೀ ಎ. ಬಾಲಕೃಷ್ಣ ಸೆಟ್ಟಿ ಪೊಳಲಿ, ಕಾರ್ಯದರ್ಶಿ, ಶ್ರೀ ಸಂತೋಷ ಕುಮಾರ, ಗುಲ್ವಾಡಿ, ಕೋಶಾಧಿಕಾರಿ ಮತ್ತಿತರು ಸದಸ್ಯರಾಗಿರುವ ಕಾರ್ಯಕಾರಿ ಸಮಿತಿಯೊಂದನ್ನೂ ಆರಿಸಲಾಯಿತು.

ಪೆಥೋಲೊಜಿ ಬ್ಲೋಕಿನ ಶಂಕುಸ್ಥಾಪನೆ— ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಪೆಥೋಲೊಜಿ ಬ್ಲೋಕಿನ ಶಂಕುಸ್ಥಾಪನಾ ಸಮಾರಂಭವು ಇದೇ ತಾ. 24ನೇ ಸಂಜೆ ಕೇಂದ್ರ ಸರಕಾರದ ಮಂತ್ರಿ ಶ್ರೀ ಬಿ. ಎನ್. ದಾತಾರ್ ಅವರಿಂದ ನೆರವೇರಿಸಲ್ಪಟ್ಟಿತು. ರಾಜ್ಯದ ಮಂತ್ರಿ ಶ್ರೀ ಎಚ್. ಎಮ್. ಚೆನ್ನ ಬಸಪ್ಪನವರು ಅಧ್ಯಕ್ಷತೆ ವಹಿಸಿದ್ದರು.

ಜಿಲ್ಲಾ ಹೆಲ್ತ್ ಆಫೀಸರರಿಗೆ ವಿದಾಯಕೂಟ— ದ. ಕ. ಜಿಲ್ಲಾ ಹೆಲ್ತ್ ಆಫೀಸರರಾದ ಡಾ| ಬಿ. ರಾಮರಾಯರಿಗೆ ವರ್ಗವಾದ ಪ್ರಯುಕ್ತ ಅವರಿಗೆ ಕಂಡ್ಲೂರಿನ ಮೆಡಿಕಲ್ ಆಫೀಸರರಾದ ಡಾ| ಎನ್. ಆರ್. ಅಣ್ಣಂತಾಯರ ಅಧ್ಯಕ್ಷತೆಯಲ್ಲಿ ಕುಂದಾಪುರದಲ್ಲಿ ತಾ 12ರಂದು ವಿದಾಯ ನೀಡಲಾಯಿತು. ಶಂಕರ ನಾರಾಯಣ, ಡಾ| ಬಿ. ರಾಮರಾವ್, ಶ್ರೀ ಸೀತಾರಾಮ ಶೆಟ್ಟಿ, ಸೀನಿಯರ್ ಹೆಲ್ತ್ ಇನ್ಸ್‌ಪೆಕ್ಟರ್ ಶ್ರೀ ಸುಬ್ಬರಾವ್, ಶ್ರೀ ನಾರಾಯಣ ಮುಂತಾದವರು ಶ್ರೀಯುತರ ಗುಣಗಾನ ಗೈದರು. ಅಧ್ಯಕ್ಷರ ಸಂದರ್ಭೋಚಿತ ಭಾಷಣದ ತರುವಾಯ ಭೋಜನಕೂಟದೊಂದಿಗೆ ಸಭೆಯು ಮುಕ್ತಾಯಗೊಂಡಿತು.

ದಾಸ ಪ್ರಕಾಶದಲ್ಲಿ ಮಕ್ಕಳ ಕೂಟ— ದಾಸ ಪ್ರಕಾಶ ಸಾಮೂಹಿಕ ಹೋಟೇಲುಗಳ ಮಾಲೀಕರಾದ ಶ್ರೀ ಕೆ. ಸೀತಾರಾಮರಾಯರು ಇದೇ ತಾ. 15 ಮತ್ತು 16ರಂದು ಉದಕ ಮಂಡಲ ದಾಸ ಪ್ರಕಾಶದಲ್ಲಿ ರಾಜ್ಯಪಾಲ ಶ್ರೀ ವಿಷ್ಣುರಾಮ ಮೇಧಿ ಇವರ ಅಧ್ಯಕ್ಷತೆಯಲ್ಲಿ ಮಕ್ಕಳ ಕೂಟವನ್ನು ವಿಜೃಂಭಣೆಯಿಂದ ಜರಗಿಸಿದರು. 200ಕ್ಕೂ ಮಿಕ್ಕಿ ಮಕ್ಕಳು 50ತರದ ಪಂದ್ಯಾಟದಲ್ಲಿ ಭಾಗವಹಿಸಿದ್ದರು ಒಂದೂವರೆ ಸಾವಿರಕ್ಕೂ ಮೇಲ್ಪಟ್ಟು ಜನರು ಸೇರಿದ್ದರು. ಶ್ರೀ ಕೆ. ಸೀತಾರಾಮರಾಯರು ಸ್ವಾಗತ ಭಾಷಣ ಮಾಡುತ್ತಾ ಮಕ್ಕಳ ಕೂಟದ ಸೂಕ್ಷ್ಮ ಪ್ರಗತಿಯನ್ನು ವಿವರಿಸಿದರು. ಸಮಿತಿಯ ಅಧ್ಯಕ್ಷರಾದ ಶ್ರೀ ಸದಗೋಪನ್‌ರವರು ಮಕ್ಕಳ ಕೂಟದ ಉದ್ದೇಶವನ್ನೂ ಶ್ರೀ ಸೀತಾರಾಮರಾಯರ ಸಾಂಸ್ಕೃತಿಕ ಚಟುವಟಿಕೆಗಳನ್ನೂ ವಿವರಿಸಿದರು. ಶ್ರೀ ಮೇಧಿಯವರು ಅಧ್ಯಕ್ಷ ಭಾಷಣ ಮಾಡುತ್ತಾ ಶ್ರೀ ಸೀತಾರಾಮರಾಯರ ಕಾರ್ಯಭಾರವನ್ನು ಪ್ರಶಂಸಿದರು. ಶ್ರೀಮತಿ ಮೇಧಿಯವರು ಬಹುಮಾನ ವಿತರಣೆ ಮಾಡಿದರು. ನಂತರ ಲೋಕಸಭಾ ಸದಸ್ಯ ಶ್ರೀ ಎನ್. ಲಿಂಗನ್ ಇವರು ಧನ್ಯವಾದಗಳನ್ನರ್ಪಿಸಿದರು.

ಕಡ್ಡಾಯ ಶಿಕ್ಷಣ ಚರ್ಚಾಗೋಷ್ಠಿಯು— ತಾ. 18ರಂದು ಮಂಗಳೂರಿನ ಹೆಮ್ಮಕ್ಕಳ ಸರಕಾರಿ ಸೆಕೆಂಡರಿ ಹಾಗೂ ತರಬೇತಿ ಶಾಲೆಯಲ್ಲಿ ಡಾ| ಟಿ. ಎಂ. ಎ. ಪೈಯವರಿಂದ ಉದ್ಘಾಟಿಸಲ್ಪಟ್ಟಿತು. ಸಮಾರಂಭದ ಅಧ್ಯಕ್ಷತೆಯನ್ನು ವಿದ್ಯಾಂಗದ ಜತೆ ಡೈರೆಕ್ಟರ್ ಶ್ರೀ ಪಿ. ಜಿ. ಶಿವರಾವ್ ಅವರು ವಹಿಸಿದ್ದರು. ವಿದ್ಯಾಂಗದ ಡಿಪ್ಯುಟಿ ಡೈರೆಕ್ಟರ್ ಶ್ರೀ ಎಚ್. ವಿ. ಶ್ರೀರಂಗ ರಾಜ್ ಅವರು ಅತಿಥಿಗಳ ಪರಿಚಯ ಮಾಡಿಸಿದರು. ಜಿಲ್ಲಾ ವಿದ್ಯಾಧಿಕಾರಿ ಶ್ರೀ ಕೆ. ವಿಠಲ್ ಶೆಣೈಯವರು ಸ್ವಾಗತ ಭಾಷಣ ಗೈದರು. ಡಾ| ಪೈಗಳು, ಉದ್ಘಾಟನಾ ಭಾಷಣದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸದ ಹಲವು ಸಮಸ್ಯೆಗಳನ್ನು ವಿವರಿಸಿ ಕಡ್ಡಾಯ ಶಿಕ್ಷಣ ಯೋಜನೆಗೆ ಸಹಕಾರ ಕೊಡುವುದು ಅಗತ್ಯವೆಂದರು. ಅಧ್ಯಕ್ಷ ಭಾಷಣವಾದ ಮೇಲೆ ಶ್ರೀ ಶ್ರೀನಿವಾಸರಾಯರು ಧನ್ಯವಾದ ಅರ್ಪಿಸಿದರು.

ಚರ್ಚಾಗೋಷ್ಠಿಯ ಸಮಾರೋಪ ಸಮಾರಂಭವು ತಾ. 19ರಂದು ಶ್ರೀ ಎಚ್. ವಿ. ಶ್ರೀರಂಗ ರಾಜ್ ಅವರ ಅಧ್ಯಕ್ಷತೆಯಲ್ಲಿ ಜರಗಿ ಜಿಲ್ಲಾ ವಿದ್ಯಾಧಿಕಾರಿ ಶ್ರೀ ಕೆ. ವಿಟ್ಠಲ ಶೆಣೈಯವರಿಂದ ಸ್ವಾಗತ, ಮಾಜಿ ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆ, ಶ್ರೀ. ಕೆ. ಆರ್. ಆಚಾರ್ ಎಂ. ಪಿ. ಅವರಿಂದ ಭಾಷಣಗಳಾದುವು.

ಯಕ್ಷಗಾನ ಸಂಘದ ವಾರ್ಷಿಕೋತ್ಸವ— ದೇಲಂಪಾಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದ ವಾರ್ಷಿಕೋತ್ಸವವು ಇದೇ ತಾ 16ರಂದು ಸಂಘದ ಯಕ್ಷಗಾನ ಕಲಾಮಂದಿರದಲ್ಲಿ ಜರಗಿತು. ಉತ್ಸವದ ಅಂಗವಾಗಿ ರಾತ್ರಿ ಭೀಷ್ಮಾರ್ಜುನ ಎಂಬ ಯಕ್ಷಗಾನ ಕೂಟವು ಪ್ರಸಿದ್ಧ ಅರ್ಥಧಾರಿಗಳ ಕೂಡುವಿಕೆಯಿಂದ ಜರಗಿಸಲ್ಪಟ್ಟಿತು. ಶ್ರೀಕೃಷ್ಣ ವಿಜಯ ಎಂಬ ನಾಟಕವನ್ನು ಸಹಾ ಸಂಘದ ಕಲಾವಿದರು ಅಭಿನಯಿಸಿದರು. ಆರಂಭದಲ್ಲಿ ಶ್ರೀ ರಮಾನಂದ ಬನಾರಿಯವರು ಸ್ವಾಗತಿಸಿದರಲ್ಲದೆ ಅಂತ್ಯದಲ್ಲಿ ಶ್ರೀ ಗೋವಿಂದ ಭಟ್ಟರು ವಂದನಾರ್ಪಣೆ ಗೈದರು.

ಸ್ವತಂತ್ರ ಪಕ್ಷದ ಪ್ರಸಾರ ಕಾರ್ಯಕ್ರಮ— ತಾ. 16–5–61ಲ್ಲಿ ಸ್ವತಂತ್ರ ಪಕ್ಷದ ಸ್ಟೇಟ್ ಪ್ರೊಪಗಂಡ ವ್ಯಾನು ಅಡ್ಯಾರು, ಫರಂಗಿಪೇಟೆ, ತುಂಬೆ, ಬ್ರಹ್ಮರಕುಟ್ಲು ಬಿ. ಸಿ. ರೋಡ್, ಪಾಣೆಮಂಗೂರು ರುನಿಂದ ತಲಪ್ಪಾಡಿ, ಬರಿಯೂರು, ನೇರಳಕಟ್ಟೆ, ಕಡೆಕ್ಯಾರಿಕ್ಕಾಗಿ ಮಂಚಿ, ಇರ, ನೂಜಿಬೈಲು ಕಾಡುಮಠ, ಮಂತುಂಡೆಯಿಂದ ವಿಟ್ಲಕ್ಕಾಗಿ ವೀರಕಂಬಕ್ಕಾಗಿ ಪಾಣೆಮಂಗ್ಳೂರಿನಿಂದ— ಮಂಗಳೂರಿಗೆ ತಲಪಿರುತ್ತದೆ. ಮೇಲಂಕಂಡ ಸ್ಥಳಗಳಲ್ಲಿ ಘೋಷಣೆ ಮಾಡುತ್ತಾ ಸ್ವತಂತ್ರ ಪಕ್ಷದ ಧ್ಯೇಯ ಧೋರಣೆಗಳನ್ನು ವಿವರಿಸುತ್ತಾ ಪಕ್ಷದ ಉದ್ದೇಶವನ್ನು ಪ್ರಸಾರ ಮಾಡಿದರು. ಅಲ್ಲಿಯ ಪಕ್ಷದ ಕಾರ್ಯಕರ್ತರೆಲ್ಲಾ ಭಾಗವಹಿಸಿದ್ದರು.

ತಾ. 9ರಿಂದ 14ರ ತನಕ ಉಡುಪಿ ತಾಲೂಕಿನ ಉಡುಪಿ, ಮಲ್ಪೆ, ಮಣಿಪಾಲ, ಉದ್ಯಾವರ, ಕಟಪಾಡಿ, ಪಡುಬಿದ್ರಿ, ಶಿರ್ವ, ಮಂಗಳೂರು ತಾಲೂಕು, ಮೂಲ್ಕಿ ಸೂರತ್ಕಲ್, ಕಟೀಲು, ಬಜಪೆ ಮೊದಲಾದ ಹಲವಾರು ಕೇಂದ್ರಗಳಲ್ಲಿ ಪ್ರಚಾರ ಕಾರ್ಯ ಮಾಡಲಾಗಿದೆ.

ಮಲ್ಪೆಯಲ್ಲಿ ಸಿಂಡಿಕೇಟ್ ಕಟ್ಟಡದ ಪ್ರಾರಂಭೋತ್ಸವ— ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟಿನ ಮಲ್ಪೆಯ ಹೊಸ ಆಫೀಸು ಕಟ್ಟಡದ ಪ್ರಾರಂಭೋತ್ಸವವು ಇದೇ ತಾ 22ರಂದು ಮೈಸೂರು ಸರಕಾರದ ಪಬ್ಲಿಕ್ ವರ್ಕ್ಸ್ ಮಂತ್ರಿ ಶ್ರೀ ಎಚ್. ಕೆ. ವೀರಣ್ಣ ಗೌಡರಿಂದ ನೆರವೇರಿಸಲ್ಪಟ್ಟಿತು. ಬೇಂಕಿನ ಅಧ್ಯಕ್ಷ ಡಾ. ಟಿ. ಎಂ. ಎ. ಪೈಯವರು ಸ್ವಾಗತ ಭಾಷಣ ಮಾಡುತ್ತಾ ಬೇಂಕಿನ ವಿಶಿಷ್ಟತೆಯನ್ನು ವಿವರಿಸಿದರು. ಮಂತ್ರಿ ಶ್ರೀ ಗೌಡರು ಸಿಂಡಿಕೇಟ್ ಬೇಂಕಿನ ವಿವಿಧ ಯೋಜನೆಗಳನ್ನೂ ಸೇವಾ ಕಾರ್ಯವನ್ನೂ, ಬೇಂಕು ದೇಶಕ್ಕೂ ಸರಕಾರಕ್ಕೂ ನೀಡುತ್ತಿರುವ ನೆರವಿನ ಬೆಂಬಲಗಳನ್ನೂ ಪ್ರಸ್ತಾಪಿಸಿ ಮೆಚ್ಚುಗೆಯನ್ನು ವ್ಯಕ್ತಪಡಿಸಿ ಉದ್ಘಾಟನಾ ಕಾರ್ಯವನ್ನು ನೆರವೇರಿಸಿದರು. ಬೇಂಕಿನ ಜನರಲ್ ಮೆನೇಜರ್ ಶ್ರೀ ಟಿ. ಎ. ಪೈಯವರು ಧನ್ಯವಾದಗಳನ್ನರ್ಪಿಸಿದರು.

ಯಶಸ್ವೀ ವಿದ್ಯಾರ್ಥಿ— ಕಳೆದ ಫೆಬ್ರವರಿ ತಿಂಗಳಲ್ಲಿ ನಡೆದ ಮೈಸೂರು ಹಿಂದೀ ಪ್ರಚಾರ ಪರಿಷತ್ತಿನ ಪ್ರವೇಶ ಪರೀಕ್ಷೆಯಲ್ಲಿ ತರಬೇತಿ ಪಡೆದ ಶ್ರೀ ಎಂ. ರಮೇಶ ಪಡಿಯಾರರು ಅಖಿಲ ಪರಿಷತ್ತಿನಲ್ಲಿಯೇ ಪ್ರಪ್ರಥಮ ಸ್ಥಾನವನ್ನು ಗಳಿಸಿದ್ದಾರೆ. ಹಿಂದೀ ಪ್ರಥಮಾ ಪರೀಕ್ಷೆಯಲ್ಲಿಯೂ ಇವರು ಇಡಿಯ ಪರಿಷತ್ತಿನಲ್ಲಿ ತೃತೀಯ ಸ್ಥಾನವನ್ನು ಪಡೆದಿದ್ದರು.

ಸ್ವೀಕಾರ— ಮಂಗಳೂರಿನ ಪಿ. ವಿ. ಎಸ್. ಬೀಡಿಸ್ ಪ್ರೈವೇಟ್, ಲಿಮಿಟೆಡ್. ಇವರ ಏಪ್ರಿಲ್ 61 ಮಾರ್ಚ 62ರ ಚಿತ್ತಾಕರ್ಷಕ ಕೆಲಂಡರನ್ನು ಆತ್ಮಾದರದಿಂದ ಸ್ವೀಕರಿಸಿದ್ದೇವೆ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. –ಸಂ.ನ·

"ನಚಿಕೇತ"ರ

ಇನ್ನೊಂದು ನವೀನ ಕಾದಂಬರಿ—

ಮಣ ಯಾತ್ರೆ

ಇದೀಗ ಪ್ರಕಟವಾಗಿದೆ.

ಬೆಲೆ ರೂ. 1-50 ನ. ಪೈಸೆ.

ಮೊದಲು ಪ್ರಕಟವಾದ ಕಾದಂಬರಿ—

ಭಾವಾರ್ಚನೆ

ಬೆಲೆ ರೂ. 1-25 ನ. ಪೈಸೆ.

ಪ್ರತಿಗಳು ಸಿಗುವ ಸ್ಥಳಗಳು:–

ನವಯುಗ ಪ್ರೆಸ್, ಉಡುಪಿ.

ನವಭಾರತ ಬುಕ್ ಡಿಪೊ ಉಡುಪಿ,

ಪರಿಚಯ

ಅಮೆರಿಕೆಯ ಉಪರಾಷ್ಟ್ರಪತಿ - ಜಾನ್ಸನ್

ಅಧ್ಯಕ್ಷ ಕೆನ್ನೆಡಿಯವರ ಪ್ರತಿನಿಧಿಯಾಗಿ ಏಶ್ಯನ್ ರಾಷ್ಟ್ರಗಳ ಆರ್ಥಿಕ ಸ್ಥಿತಿಗತಿಗಳನ್ನು ಅರಿತುಕೊಳ್ಳಲು ಬಂದಿರುವ ಉಪರಾಷ್ಟ್ರಪತಿ ಜಾನ್ಸನ್‍ರವರು ಭಾರತವನ್ನೂ ಸಂದರ್ಶಿಸಿದರು. ಇವರ ಭೇಟಿ ನಮ್ಮ ಮೂರನೆಯ ಯೋಜನೆಯ ಮೇಲೆ ಪ್ರಭಾವ ಬೀರುವುದು ನಿಶ್ಚಿತ.

ಇಂದಿನ ರಾಜನೀತಿಯಲ್ಲಿ ಗುಪ್ತಚಾರಿಗಳ ಪಾತ್ರ ಮಹತ್ವಪೂರ್ಣವಾಗಿದೆ; ಅಭಿನ್ನವಾಗಿ ಮುಂದುವರಿದಿದೆ. ಆದರೆ, ಗುಪ್ತಚಾರಿಗಳನ್ನೇ ನಂಬಿಕೊಂಡು ಮುಂದುವರಿಯುವುದರಿಂದ ಗಂಡಾಂತರಕ್ಕೆ ಗುರಿಯಾಗಬೇಕಾಗುತ್ತದೆ ಎಂಬುದು ಖಂಡಿತ. ಇದಕ್ಕೊಂದು ನಿದರ್ಶನವಾಗಿ ನಿಂತಿದೆ ಕ್ಯೂಬಾದಿಂದ ಅಮೆರಿಕೆಯು ಕಲಿತ ಪಾಠ. ಏಶ್ಯ, ಆಫ್ರಿಕಾ ಮತ್ತು ಲೆಟಿನ್ ಅಮೆರಿಕೆಗಳಲ್ಲಿ ದಿನದಿಂದ ದಿನಕ್ಕೆ ಪಸರಿಸುತ್ತಿರುವ 'ಕಮ್ಯುನಿಜಂ'ನ್ನು ತಡೆಗಟ್ಟಬೇಕಾದರೆ, ಅಲ್ಲಿನ ನಿರ್ಬಲ ರಾಷ್ಟ್ರಗಳ ಆರ್ಥಿಕ ಸ್ಥಿತಿ ಸರ್ವ ಪ್ರಕಾರದಲ್ಲೂ ಉನ್ನತವಾಗಬೇಕೆಂದು ಅಮೆರಿಕೆಯು ತಿಳಿದಿದೆ. ಸಂತುಷ್ಟ ಮತ್ತು ಸಮುನ್ನತ ಸಮಾಜ ರಚನೆಯು 'ಕಮ್ಯುನಿಜಂ'ದ ಏಕಮಾತ್ರೋದ್ದೇಶದಿಂದ ಪರ್ಯಾಯವಾಗಿದೆ; ಇದು ಆರ್ಥಿಕ ಸಹಾಯದಿಂದಲೇ ಸಫಲವಾಗುವುದು ಸಾಧ್ಯ.

ಅಮೆರಿಕೆಯ ಉಪರಾಷ್ಟ್ರಪತಿ ಶ್ರೀ ಲಿಂಡನ್ ಜಾನ್ಸನ್‍ರವರ ಭಾರತದ ಪ್ರಚಲಿತ ಸಂಚಾರವು ಉಪರ್ಯುಕ್ತ ಕಾರ್ಯಕ್ರಮದ ಅಂಗವಾಗಿದೆ. ಅನಭಿವೃದ್ಧ ಮತ್ತು ಅಲ್ಪವಿಕಸಿತ ರಾಷ್ಟ್ರಗಳಿಗೆ ಧನ ಸಹಾಯವನ್ನು ನೀಡುವುದರಲ್ಲಿ ರಾಷ್ಟ್ರಪತಿ ಕೆನೆಡಿಯವರು ವಹಿಸುತ್ತಿರುವ ಆಸ್ಥೆಗೆ ಇದೂ ಒಂದು ದೃಷ್ಟಾಂತ. ತಾನು ಅಧಿಕಾರ ಗದ್ದುಗೆಗೇರಿದ ಕೇವಲ ನೂರು ದಿನಗಳೊಳಗೆ ಇವರು ಉಪರಾಷ್ಟ್ರಪತಿಗಳನ್ನು ಏಶ್ಯ ಸಂಚಾರ ಮಾಡಿಕೊಂಡು ಅಲ್ಲಿನ ಸ್ಥಿತಿಗತಿಗಳನ್ನು ಅರಿತುಕೊಂಡು ಬರುವಂತೆ ನಿಯೋಜಿಸಿದರು.

ಭಾರತದ ಆರ್ಥಿಕ ಸಮಸ್ಯೆ ಮತ್ತು ಆರ್ಥಿಕ ಪ್ರಗತಿಯನ್ನು ಪ್ರತ್ಯಕ್ಷ ಅಧ್ಯಯನ ನಡೆಸುವುದಕ್ಕಾಗಿಯೇ ಜಾನ್ಸನರು ಭಾರತ ಯಾತ್ರೆಗೆ ತೊಡಗಿದ್ದಾರೆ. ಇವರ ಆಗಮನವು ಅಮೆರಿಕೆಯ ವಿದೇಶ ಕಾರ್ಯದಲ್ಲಿ ಶ್ರೀ ಡೀನ್ ರಸ್ಕ್‌ರವರ ವಿಚಾರಗಳಿಗೆ ಅನುರೂಪವಾಗಿದೆ. ಶ್ರೀ ರಸ್ಕರು ಇತ್ತೀಚೆಗೆ ಅಮೆರಿಕೆಯ ವಾಣಿಜ್ಯ ಮಂಡಲವನ್ನು ಸಂಬೋಧಿಸುತ್ತ, "ವಿದೇಶಗಳಿಗೆ ಆರ್ಥಿಕ ಸಹಾಯ ನೀಡುವುದನ್ನು ರಾಷ್ಟ್ರೀಯ ಆವಶ್ಯಕತೆಯೆಂದು ತಿಳಿಯಬೇಕು. ನಮ್ಮ ಸಹಾಯವು ಪ್ರಭಾವಶಾಲಿಯಾಗಬೇಕೆಂದು ನಾವು ಬಯಸುವುದಾದರೆ, ಸಹಾಯ ನಿರೀಕ್ಷಿಸುವ ದೇಶಗಳಿಗೆ ತೆರಳಿ, ಅಲ್ಲಿನ ಯೋಜನೆಗಳ ಅಂಕೆ-ಸಂಖ್ಯೆಗಳನ್ನು ಕಲೆಹಾಕಬೇಕಾಗುವುದು" ಎಂದಿದ್ದರು.

ಏಶ್ಯ ಸಂಚಾರದವೇಳೆ ತಾಯಿಪೆಹ್‍ನಿಂದ ಭಾರತಕ್ಕೆ ತೆರಳುವ ಸಂದರ್ಭದಲ್ಲಿ ಶ್ರೀ ಜಾನ್ಸನರು "ರಾಷ್ಟ್ರಪತಿ ಕೆನೆಡಿಯವರ ಪರವಾಗಿ ನಾವು ನಮ್ಮ ಸ್ನೇಹಿತರೊಡನೆ ಮೈತ್ರಿಯಿಂದಲೇ ಇರುವೆವು ಎಂಬ ಆಶ್ವಾಸನವನ್ನು ನೀಡಬಯಸುತ್ತೇನೆ. ಈಗಲೂ ನಾವು ನಿಮಗೆ ಸಹಾಯ ನೀಡುತಿದ್ದೇವೆ; ಮುಂದಕ್ಕೂ ಕೊಡುತ್ತೇವೆ" ಎಂದು ಶ್ರೀ ಜಾನ್ಸನ್ ಉದ್ಗರಿಸಿದ್ದರು.

೫೨ ವರ್ಷದ ಜಾನ್ಸನ್ ಕಳೆದ ೨೩ ವರ್ಷಗಳಿಂದ ಸಂಸದೀಯ ಕಾರ್ಯಗಳ ಅನುಭವ ಪಡೆಯುತ್ತ ಬಂದಿದ್ದಾರೆ. ಲಿಂಡನ್ ಜಾನ್ಸನರು ಜನಿಸಿದ ಸಮಯದ ಲ್ಲೇ ಅವರ ಅಜ್ಜ ಭವಿಷ್ಯನುಡಿದಿದ್ದರು: "ಒಂದಲ್ಲ ಒಂದು ದಿನ ಈತ ಸೆನೇಟರ್ ಆಗುತ್ತಾನೆ" ಎಂದು. ಶ್ರೀ ಜಾನ್ಸನರು ಅಮೆರಿಕೆಯ ಉಪರಾಷ್ಟ್ರಪತಿಗಳಾಗಿ ಆ ಮಾತನ್ನು ಸಂಪೂರ್ಣ ಸತ್ಯವನ್ನಾಗಿಸಿದರು. "ಊಹಾಪೋಹೆಗಳ ವಿಜ್ಞಾನ"ವೆಂದು ಇವರು ರಾಜನೀತಿಯನ್ನು ಹೆಸರಿಸುತ್ತಾರೆ. ಇದರಿಂದಲೇ ಇವರದರ ಮಧ್ಯಸ್ಥಿಕೆ ಮಾರ್ಗಿಯಾಗಿರಲು ಬಯಸುತ್ತಾರೆ.

ರಾಷ್ಟ್ರೀಯ ಉಡ್ಡಯನ ಮತ್ತು ಅಂತರಿಕ್ಷ ಪರಿಷತ್ತಿನ ಅಧ್ಯಕ್ಷ ಶ್ರೀ ಜಾನ್ಸನರು: "ಅಂತರಿಕ್ಷ ಆಯೋಗದ ಎದುರು ಪೃಥ್ವಿಯಮೇಲೆ ನಮ್ಮ ರಾಷ್ಟ್ರೀಯ ಭೇದ ಅಗಣ್ಯ ಶಾಂತಿ ಸಂರಕ್ಷಕದ ರೂಪದಲ್ಲಿ ಅಂತರಿಕ್ಷದ ಮೇಲೆ ವಿಜಯ ಪ್ರಸ್ಥಾಪಿಸಬೇಕಾದರೆ, ಎಲ್ಲ ಜನರ ಸಹಕಾರವೂ ಬೇಕಾಗುವುದು" ಎಂದು ತಿಳಿದುಕೊಂಡಿದ್ದಾರೆ ಬುದ್ಧ, ಟಾಗೋರ್ ಮತ್ತು ಗಾಂಧೀಜಿಯವರ ದೇಶ ಭಾರತದ ವಿಚಾರ ಧಾರೆಯು ತನ್ನ ವಿಚಾರ ಧಾರೆಗೆ ಅತಿ ನಿಕಟವಿದೆಯೆಂಬನ್ನವರು ಅನುಭವದಿಂದ ತಿಳಿದುಕೊಳ್ಳಬಲ್ಲರು

ಶ್ರೀ ಜಾನ್ಸನ್‍ರವರೊಡನೆ ಅವರ ಶ್ರೀಮತಿಯವರೂ ಭಾರತಕ್ಕೆ ಸಮಾಗಮಿಸಿದ್ದಾರೆ. ನಿರಂತರ ೨೩ ವರ್ಷಗಳಿಂದ ಇವರು ತಮ್ಮ ಪತಿಯ ರಾಜನೀತಿಯ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ ಶ್ರೀ ಜಾನ್ಸನರು ತಾನು ಆರಿಸಿ ಬಂದ ಟೆಕ್ಸಾಸಿನ ಜನತೆಯ ಸಫಲ ಪ್ರತಿನಿಧಿಯಾಗಿ ದುಡಿದುದರ ಯಶಸ್ಸಿನ ಬಹುಭಾಗ ಅವರ ಶ್ರೀಮತಿಯವರಿಗೆ ಸಲ್ಲಬೇಕು. ೪೮ ವರ್ಷದ ಈ ಮಹಿಳೆಯಲ್ಲಿ ಶಾಲೀನತೆ ಮತ್ತು ಸುಂದರತೆಗಳು ಮನೆ ಮಾಡಿವೆ. "ಲೇಡಿ ಬರ್ಡ್" ಎಂಬ ಉಪನಾಮ ಇದರಿಂದಲೇ ಇವರಿಗೆ ಬಂತು. ೧೯೩೪ರಲ್ಲಿ ಇವರು ವಾಶಿಂಗಟನ್ನಿಗೆ ಬಂದಾಗ ಮಿತ್ರನೊಬ್ಬ ಜಾನ್ಸನರನ್ನು ಭೇಟಿಯಾಗುವಂತೆ ತಿಳಿಸಿದನು. ಆನನು ಕೂಲದಿಂದ ಹಾಗೆ ಮಾಡಲಾಗದಿದ್ದರೂ ಎರಡು ತಿಂಗಳಾನಂತರ ಶ್ರೀ ಜಾನ್ಸನರು ಇವರನ್ನರಸಿ ಬಂದರು. ಆಗಲೇ ಇವರು ವಿವಾಹ ಬಂಧಿತರಾದರು. ಪತಿಗಾಗಿ ಶಾಂತ ಮತ್ತು ಸುಖದ ಗಾರ್ಹಸ್ಥಿಕ ಜೀವನವನ್ನು ನಡೆಸುವುದು, ಇದರಿಂದ ಅವರು ತಮ್ಮ ಕಾರ್ಯಕಲಾಪಗಳನ್ನು ನಿರಾಪದವಾಗಿ ಪೂರೈಸುವುದಕ್ಕೆ ಅವಕಾಶ ಕಲ್ಪಿಸಿಕೊಡುವುದೇ ಶ್ರೀಮತಿಯವರ ಜೀವನದ ಮುಖ್ಯಧ್ಯೇಯ.

ಪ್ರಪಂಚದ ಪ್ರಮುಖದೇಶವೊಂದರ ಪ್ರತಿನಿಧಿಯು ಆರ್ಥಿಕ ಸಹಾಯೋದ್ದೇಶದ ಆಗಮನವು ನಮ್ಮ ಮೂರನೆಯ ಯೋಜನೆಗೆ ಶುಭಸಂಕೇತ ಸೂಚಕವಾಗಿದೆಯೆಂದು ತಿಳಿಯಲಾಗುತ್ತದೆ.

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆಂಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—

ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—

ದಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ. ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.

ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 NP ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು. ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಅಂತಿಮ ವ್ಯಾಪಾರ

ಕಲ್ಲು ಹಾಕಿದ ರಸ್ತೆಯಲ್ಲಿ ಬೆಳಗ್ಗಿನ ಹೊತ್ತಿನಲ್ಲಿ ನಡೆಯುತ್ತಾ, "ಬನ್ನಿ, ನನ್ನನ್ನು ಬಾಡಿಗೆಗೆ ಪಡೆದುಕೊಳ್ಳಿ" ಎಂದು ಜೀವನ ಭಾರದಿಂದ ನಾನು ಕೂಗಿದೆ.

ಕೈಯಲ್ಲಿ ಖಡ್ಗವನ್ನು ಹಿಡಿದು, ರತ್ನ ಖಚಿತ ರಥದಲ್ಲಿ ಕುಳಿತು, ರಾಜ್ಯದ ಅರಸನು ಆ ದಾರಿಯಾಗಿಬಂದು ನನ್ನ ಕೈಹಿಡಿದು. "ನಾನು ಅಧಿಕಾರ ಬಲದಿಂದ ನಿನ್ನನ್ನು ಬಾಡಿಗೆಗೆ ಪಡೆಯುವೆ" ಎಂದನು

ಆದರೆ ರಾಜನ ಅಧಿಕಾರ ನಡೆಯಲಿಲ್ಲ ಮಾನವತೆ ಅಧಿಕಾರಕ್ಕೆ ಬಗ್ಗದೆಂದರಿತು ನಿರಾಶನಾಗಿ ಅರಸನು ತನ್ನ ರಥದಲ್ಲಿ ಕುಳಿತು ಮುಂದರಿದನು.

೦ ೦ ೦

ಬಿಸಿಲು ಭೀಕರವಾಗಿತ್ತು. ರಸ್ತೆಯ ಎರಡೂ ಪಕ್ಕದ ಮನೆಗಳ ಬಾಗಿಲುಗಳು ಮುಚ್ಚಿದ್ದವು. ನಾನು ಕಿರು ಬೀದಿಗಳಲ್ಲಿ ಅಲೆದಾಡುತ್ತಿದ್ದೆ. ವಯಸ್ಸಾದ ಮನುಷ್ಯನೊಬ್ಬನು ನನ್ನ ಹತ್ತಿರ ಬಂದನು ಅತನ ಕುತ್ತಿಗೆಯಲ್ಲಿ ಹಣದ ಚೀಲ ನೇತಾಡುತಿತ್ತು. ಆತನು ನನ್ನನ್ನು ನೋಡಿ, "ನನ್ನ ಹಣದ ಬಲದಿಂದ ನಿನ್ನನ್ನು ಬಾಡಿಗೆಗೆ ಪಡೆಯುವೆ" ಎಂದು ಆತನು ಹೇಳಿ ತನ್ನ ನಾಣ್ಯಗಳನ್ನು ಒಂದೊಂದಾಗಿ ಎಣಿಸತೊಡಗಿದನು. ಆದರೆ ಸ್ವತಂತ್ರ ಪ್ರವೃತ್ತಿಯ ನಾನು ಬೇರೆಡೆ ಸಾಗತೊಡಗಿದೆ.

೦ ೦ ೦

ಸಂಧ್ಯಾ ಸಮಯವಾಗಿತ್ತು. ತೋಟದ ಬೇಲಿಯಲ್ಲಿ ಹೂಗಳು ಹೇರಳ ಅರಳಿದ್ದವು. ಸುಂದರಿಯಾದ ಯುವತಿಯೊಬ್ಬಳು ಹೂತೋಟದಲ್ಲಿ ಸುತ್ತುತ್ತಿದ್ದಳು. ಆಕೆ ನನ್ನನ್ನು ನೋಡಿ ಮುಗುಳುನಗೆ ನಕ್ಕು. "ನನ್ನ ನಗುವಿನಿಂದ ನಿನ್ನನ್ನು ನಾನು ಬಾಡಿಗೆಗೆ ಪಡೆಯುವೆ" ಎಂದಳು. ನಾನು ಅಚಲನಾಗಿದ್ದೆ. ಆಕೆಯ ನಗು ನಿಂತಿತು. ಕಣ್ಣಲ್ಲಿ ಕಂಬನಿ ಒಸರಿತು. ಆಕೆ ಮಬ್ಬುಗತ್ತಲೆಯಲ್ಲಿ ನಿಟ್ಟುಸಿರು ಬಿಡುತ್ತಾ ಒಬ್ಬಳೇ ಹಿಂತಿರುಗಿದಳು.

೦ ೦ ೦

ಮುಳುಗುವ ಸೂರ್ಯನ ಕಡೇ ಕಿರಣಗಳು ಸಮುದ್ರ ತಟದ ಮರಳಿನ ಮೇಲೆ ಮಿನುಗುತ್ತಿದ್ದವು. ಸೂರ್ಯನ ಕಿರಣದಿಂದ ಹೊಂಬಣ್ಣ ಪಡೆದ ತೆರೆಗಳು ಲಾಸ್ಯವಾಡುತ್ತಿದ್ದವು. ಕರಾವಳಿಯ ಮರಳಿನಲ್ಲಿ ಮಗುವೊಂದು ಸಮುದ್ರ ಚಿಪ್ಪುಗಳನ್ನು ಸಂಗ್ರಹಿಸಿ ಆಟವಾಡುತಿತ್ತು. ನಾನು ಹತ್ತಿರ ಹೋದಾಗ ಮಗುವು ತಲೆ ಎತ್ತಿ ನನ್ನನ್ನು ಪರಿಚಯವಿರುವಂತೆ ನೋಡುತ್ತಾ ನಿಷ್ಕಲ್ಮಷ ನಗುವನ್ನು ಬೀರಿತು. "ಏನೂ ಕೊಡದೆ ನಿನ್ನನ್ನು ಬಾಡಿಗೆಗೆ ಪಡೆಯುವೆ" ಎಂದು ಆ ನಗು ಹೇಳುತಿತ್ತು.

೦ ೦ ೦

ಅಂದಿನಿಂದ ಮಗುವಿನ ಆಟದ ತತ್ವವನ್ನರಿತು ಈ ಜಗತ್ತಿನಲ್ಲಿ ವರ್ತಿಸಿರುವ ನಾನು ಸರ್ವ ಬಂಧನಗಳಿಂದ ಬಿಡುಗಡೆಗೊಂಡು ಮುಕ್ತನಾಗಿರುವೆ.

— ರವೀಂದ್ರನಾಥ ಟಾಗೋರ್.

ನವಯುಗ ವಾರ ಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

ಸಮ್ಮೇಳನ ವರದಿ

(೪ನೇ ಪುಟದಿಂದ)

ಚಲಿತವಾಗಿರುವ ಜಾತಿವಾದ, ಸಂಪ್ರದಾಯವಾದ ಮತ್ತು ಭಾಷಾವಾದಗಳು ಲೋಕ ಸ್ವರಾಜ್ಯ ನಿರ್ಮಾಣಕ್ಕೆ ಬಾಧಕವಾಗಿವೆ. ಸೇವಾ ಗ್ರಾಮದ ಕಳೆದ ಸರ್ವೋದಯ ಸಮ್ಮೇಲನದ ಅನಂತರ ದೇಶದಲ್ಲಿ ಕೆಲವು ಶೋಚನೀಯ ಘಟನೆಗಳು ಸಂಭವಿಸಿರುತ್ತವೆ. ಅಸ್ಸಾಮಿನ ಪ್ರಾಂತವಾದ ದಂಗೆ, ಜಬಲ್ಪುರ ಇತ್ಯಾದಿ ಭಾಗಗಳಲ್ಲಿನ ಸಂಪ್ರದಾಯವಾದ ಇವು ಭಯಂಕರ ದೃಶ್ಯವನ್ನು ತೋರಿಸಿವೆ. ಅವು ಪ್ರತಿಯೊಬ್ಬ ನಾಗರಿಕನಿಗೂ ಚಿಂತಾಜನಕವು. ಅಹಿಂಸಕ ಸಮಾಜ ರಚನೆಯ ಕಾರ್ಯದಲ್ಲಿ ನಾವು ಇನ್ನೂ ಎಷ್ಟು ಹಿಂದುಳಿದಿದ್ದೇವೆ ಎಂಬುದು ಆದರಿಂದ ನಮಗೆ ವ್ಯಕ್ತವಾಗುವುದು. ಅಂಥ ದುರ್ಘಟನೆಗಳ ನಿವಾರಣೋಪಾಯವೆಂದರೆ ವ್ಯಾಪಕ ಲೋಕ ಶಿಕ್ಷಣ, ಪಾರಸ್ಪರಿಕ ವಿಶ್ವಾಸ ಮತ್ತು ಸೌಹಾರ್ದತೆಯನ್ನು ಹೆಚ್ಚಿಸುವುದರಿಂದಲೂ ತ್ಯಾಗ, ಬಲಿದಾನಗಳಿಂದಲೂ ಮಾತ್ರ ಶಾಂತಿಸೇನೆ ಮತ್ತು ಸರ್ವೋದಯ ಪಾತ್ರಗಳಲ್ಲಿ ಅಂಥಾ ಗುಣಗಳನ್ನು ಪ್ರಕಟಗೊಳಿಸುವ ಸಾಮರ್ಥ್ಯವಿದೆ.

ಇಂದು ಲೋಕದಲ್ಲಿ ಶಾಂತಿಗಾಗಿ ಆಕಾಂಕ್ಷೆಯು ಹೆಚ್ಚುತ್ತ, ಅದಕ್ಕಾಗಿ ಸರ್ವತ್ರ ಪ್ರಯತ್ನಗಳೂ ಆಗುತ್ತಿವೆ. ಇಂಥಾ ಸಂದರ್ಭದಲ್ಲಿ ಜಗತ್ತಿನ ಶಾಂತಿಪ್ರಿಯರ ಲಕ್ಷ್ಯವು ಸಹಜವಾಗಿ ಭಾರತದ ಕಡೆಗೆ ಆಕೃಷ್ಟವಾಗುತ್ತದೆ. ಭಾರತದ ಅಹಿಂಸಾತ್ಮಕ ಪ್ರಯೋಗದಿಂದ ವಿಶ್ವಶಾಂತಿಯ ವಿಚಾರವನ್ನು ಸ್ಥಿರಗೊಳಿಸಲು ತುಂಬ ಸಹಾಯವು ಸಿಗುವುದೆಂದು ನಾವೆಲ್ಲರೂ ಅಪೇಕ್ಷಿಸುತ್ತೇವೆ. ಕಳೆದ ಡಿಶಂಬರ ೧೯೬೦ರ ಕೊನೆಯ ವಾರದಲ್ಲಿ ಗಾಂಧೀಗ್ರಾಮದಲ್ಲಿ ಸೇರಿದ “ವಾರ್ ರೆಸಿಸ್ಟರ್ಸ್ ಇಂಟರ್ನೇಶನಲ್” ಸಮ್ಮೇಳನವೂ ಅಂತರ್ ರಾಷ್ಟ್ರೀಯ ಶಾಂತಿಸೇನೆಯೊಂದನ್ನು ಸ್ಥಾಪಿಸುವ ತನ್ನ ಇಚ್ಛೆಯನ್ನು ಪ್ರಕಟಪಡಿಸಿದೆ. ಅದರಿಂದಾಗಿ ನಮ್ಮ ಹೊಣೆಗಾರಿಕೆಯು ಇನ್ನಷ್ಟು ಹೆಚ್ಚಿದೆ.

ಚಂಬಲ್‌ಘಾಟಿನಲ್ಲಿ ಡಕಾಯಿತರ ಆತ್ಮಸಮರ್ಪಣೆಯು ಈ ವರ್ಷದ ಐತಿಹಾಸಿಕ ಹಾಗೂ ಅಪೂರ್ವ ಘಟನೆಯಾಗಿರುತ್ತದೆ. ಡಕಾಯಿತರ ಸಮಸ್ಯೆಯನ್ನು ಸುಶಾಸನ ಮತ್ತು ಸುಪ್ರಬಂಧಗಳ ಸಾಮಾನ್ಯ ಸಮಸ್ಯೆಯೆಂದು ತಿಳಿಯುವುದು ಅವಿವೇಕವಾಗಿದೆ. ಅದನ್ನು ನೈತಿಕ ಸಾಧನೆಗಳಿಂದಲೇ ಪರಿಹರಿಸಲಾಗುವದು. ಸಮಾಜ ದ್ರೋಹಿ, ದುಷ್ಟ ಜನರೆಂದು ನಾವು ತಿಳಿದಿರುವವರ ಮೇಲೂ ಸದ್ಭಾವನೆ, ಸಜ್ಜನತೆಗಳಿಂದ ಎಂಥಾ ಪ್ರಭಾವವುಂಟಾಗಬಹುದೆಂಬುದಕ್ಕೆ ಇದು ಒಂದು ಉಜ್ವಲ ಉದಾಹರಣೆಯು.

ಅಹಿಂಸಕ ಕ್ರಾಂತಿಯು ಪ್ರಕ್ರಿಯೆಯು ಶಿಕ್ಷಣಾತ್ಮಕವಾಗಿರುತ್ತದೆ. ಶಿಕ್ಷಣದ ಮೂಲಕವೇ ನಾವು ಲೋಕಮಾನಸದ ವಿಕಾಸವನ್ನು ಸಾಧಿಸಬಹುದು. ಮುಂಬರುವ ಸಾರ್ವತ್ರಿಕ ಚುನಾವಣೆಯು ಲೋಕಶಿಕ್ಷಣಕ್ಕೆ ಒಂದು ಸುಸಂದರ್ಭವು. ಸತ್ತಾವಾದಿ ರಾಜನೀತಿಯಿಂದ ಸದಾ ದೂರವಿರುವುದೇ ಸರ್ವಸೇವಾಸಂಘದ ನೀತಿಯಾಗಿರುತ್ತದೆ. ಆದರೆ ಲೋಕಶಕ್ತಿಯು ಪ್ರಕಟಗೊಳ್ಳಲು ಸಿಗಬಹುದಾದ ಪ್ರತಿಯೊಂದು ಸಂದರ್ಭದಲ್ಲಿ ಪ್ರಯೋಜನವನ್ನೂ ಪಡೆಯಬೇಕು. ಚುನಾವಣೆಯ ಸಂಬಂಧದಲ್ಲಿ, ಲೋಕ ಶಿಕ್ಷಣದ ಮೂಲಕ ಕಿಂಚಿತ್ ನಿಶ್ಚಿತ ಆಚಾರ ಮಿತಿಯ ಪ್ರಚಾರ ಮಾಡುವುದು, ಹಾಗೂ ಜನತೆಯು ತನ್ನ ಮತದಾರ ಮಂಡಲದ ಮೂಲಕ ಉಮೇದ್ವಾರರನ್ನು ನಿಲ್ಲಿಸುವ ಶಿಕ್ಷಣವನ್ನು ಪಡೆಯುವಂತೆ ಮಾಡುವುದು ನಮ್ಮ ಕಾರ್ಯಕ್ರಮವಾಗಿರಬೇಕು.

ಶೋಷಣವಿಹೀನ ಶಾಸನ ಮತ್ತು ಸಮಾಜದ ಗುರಿ ತಲ್ಪಲು ನಾವು ಇನ್ನೂ ಸಾಕಷ್ಟು ದೂರವಿದ್ದೇವೆ. ಮಾರ್ಗವೂ ಸುಲಭವಲ್ಲ; ಆದರೂ ಭೂದಾನ, ಶಾಂತಿಸೇನೆ ಮತ್ತು ಲೋಕ ಸ್ವರಾಜ್ಯದ ತ್ರಿವಿಧ ಕಾರ್ಯಕ್ರಮಗಳು ನಮ್ಮ ಮುಂದಿವೆ. ಅದರ ಮೂಲಕ ಆ ಕಡೆಗೆ ನಾವು ಮುಂದುವರಿಯಬಲ್ಲೆವು. ಜನಶಕ್ತಿ ನಿರ್ಮಾಣದ ಈ ಮಹಾಯಜ್ಞ ಕಾರ್ಯದಲ್ಲಿ ರಾಷ್ಟ್ರದ ಎಲ್ಲ ನಾಗರಿಕರೂ ತಮ್ಮ ಯೋಗದಾನವನ್ನು ಅವಶ್ಯವಾಗಿ ಕೊಡಬೇಕು; ತದ್ರೀತಿಯಲ್ಲಿ ಗಾಂಧೀಜಿಯವರ ಕಲ್ಪನೆಯ ಸ್ವರಾಜ್ಯವನ್ನು ಸ್ಥಾಪಿಸಲು ತಮ್ಮ ಸಂಪೂರ್ಣ ಸಹಾಯವನ್ನು ಕೊಡಬೇಕೆಂದು ಸರ್ವ ಸೇವಾ ಸಂಘವು ವಿನಂತಿಸುತ್ತದೆ.

ಮಧುಸಂಚಯ

ನಿಜವಾದ ಸುಖವನ್ನು ಬಯಸುವವರು ಸತ್ಯಸಂಧರಾಗಿರಬೇಕು; ಅದರೊಂದಿಗೆ ಉತ್ತಮತೆಯನ್ನೂ ಉಳಿಸಿಕೊಂಡು ಬರಬೇಕು.

೦೦ ೦೦

ಒಬ್ಬ ಮನುಷ್ಯನಿಗೆ ಯಾವುದಾದರೊಂದು ವಸ್ತುವಿನ ಅಭಾವವಿದೆಯೆಂದಾದರೆ, ಆತನಲ್ಲಿ ಬೇರೊಂದು ವಸ್ತು ಅಧಿಕ ಪ್ರಮಾಣದಲ್ಲಿರಲೇಬೇಕು ಅಧಿಕವಿರುವುದನ್ನು ಇತರರಿಗೆ ಕೊಟ್ಟು ಅವರಿಂದಗೆ ಬೇಕಾದುದನ್ನುಕೊಳ್ಳಬೇಕು ಎಂಬುದೇ ವಿಧಿನಿಯಮ.

೦೦ ೦೦

ಮೃತ್ಯುವಿನಲ್ಲಿ ಜೀವನವನ್ನು, ಜೀವನದಲ್ಲಿ ಮೃತ್ಯುವನ್ನು ವೀಕ್ಷಿಸುವ ಶಕ್ತಿ ಸಂಪನ್ನನೇ ಉತ್ತಮ ಕವಿಯೆನಿಸಿಕೊಳ್ಳಲು ಅರ್ಹನಾಗಿದ್ದಾನೆ.

೦೦ ೦೦

ಬಡವನಾದವನು ದೀನನಾಗಿರಬಾರದು; ಶ್ರೀಮಂತರು ಉನ್ಮತ್ತರಾಗಬಾರದು.

೦೦ ೦೦

ನಾರಿ ಮತ್ತು ಪುಷ್ಪಗಳು ಆಕರ್ಷಕವಾಗಿದ್ದರೂ ಅವುಗಳಲ್ಲಿ ಒಂದೇ ಒಂದು ಅಂತರವಿದೆ. ಪುಷ್ಪವು ನಿಜರೂಪದಲ್ಲಿ ಸುಗಂಧ ಹರಡಿಸುವುದು; ನಾರಿಯು ಭಾವರೂಪದಲ್ಲಿಯೂ ಸುಗಂಧಬೀರಬಲ್ಲಳು.

೦೦ ೦೦ ೦೦

ಸಂಪತ್ತು ಒಂದು ಬಿಸಿಲ್ಗುದುರೆ. ನಾವದನ್ನು ಹಿಂಬಾಲಿಸುತ್ತ ಮುಂದುವರಿದರೆ, ಅದು ನಮ್ಮಿಂದ ದೂರ ದೂರಕ್ಕೆ ಓಡುವುದು. ನಾವದಕ್ಕೆ ವಿಮುಖರಾಗಿ ನಡೆದರೆ, ಅದು ನಮ್ಮ ಬೆಂಬಿಡದೆ ಬರುವುದು.

೦೦ ೦೦ ೦೦

೦ ೪

ಇಂದ್ರಿಯ ಸಂಯಮ ಹಿತಕಾರಿ; ವಾಕ್ ಸಂಯಮ ಮಂಗಲಕಾರಿ; ವಿಚಾರ ಸಂಯಮ ಸುಖಕಾರಿ; ಸರ್ವ ವಸ್ತು ಸಂಯಮ ಕಲ್ಯಾಣಕಾರಿ. ಸರ್ವ ವಸ್ತು ಸಂಯಮಿಯು ಸರ್ವ ದುಃಖಗಳಿಂದ ದೂರನಾಗಿರುತ್ತಾನೆ.

೦ ೦

ಸಲಹೆಗಳೇನೋ ನೂರಾರು ಬರಬಹುದು; ಅವುಗಳಲ್ಲಿ ಲಾಭಪ್ರದವಾದುವನ್ನು ಆರಿಸಿಕೊಳ್ಳುವ ಶಕ್ತಿ ಬುದ್ಧಿವಂತರಲ್ಲಿ ಮಾತ್ರವಿರುವುದು

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ರದಿಂದ ಯಾವುದೇ ಕಾರ್ಯವು ಹೊತ್ತಿನಲ್ಲಿ ಆಗುವುದೆಂದು ನಂಬುವುದು ಕಷ್ಟ. ಅನಿವಾರ್ಯ ಶಿಕ್ಷಣದ ಯೋಜನೆಯು ಯಶಸ್ವಿಯಾಗಲು ಅಧ್ಯಾಪಕರನ್ನು ಸರಕಾರವು ತರಬೇತಿಗೊಳಿಸುವುದು; ಶಾಲೆಯ ಕಟ್ಟಡವನ್ನು ಜನತೆ ಒದಗಿಸಬೇಕಾಗುವುದು. ಈ ವಿಷಯವನ್ನು ಗ್ರಾಮಸ್ಥರಿಗೆ ತಿಳಿಸಬೇಕೇ ಹೊರತು ಅಧ್ಯಾಪಕರ ಗೋಷ್ಠಿಯಲ್ಲಿ ಮಾತ್ರವಲ್ಲ. ಸಾಮಾನ್ಯವಾಗಿ ಹೆಚ್ಚಿನ ಜನರಿಲ್ಲದ ಚಿಕ್ಕ ಪುಟ್ಟ ಹಳ್ಳಿಗಳ ಬಡ ಜನತೆಯಿಂದ, ವಿದ್ಯೆಯ ಬಗ್ಗೆ ಸದಭಿಪ್ರಾಯವಿಲ್ಲದ ಅಜ್ಞ ಜನತೆಯಿಂದ ಈ ಯೋಜನೆಯು ಅದೆಷ್ಟು ಪೂರೈಸಲ್ಪಟ್ಟೀತೋ ಹೇಳುವುದು ಅಸಾಧ್ಯ. ಶಾಲೆಗೆ ಮಗುವನ್ನು ಕಳಿಸದ ಅಪರಾಧಕ್ಕಾಗಿ ವಿಧಿಸಲಾದ ದಂಡವನ್ನೂ ತೆರಲು ನಿರಾಕರಿಸಿದವರು ಸದ್ಯ ಕಡ್ಡಾಯ ಶಿಕ್ಷಣಕ್ಷೇತ್ರದಲ್ಲಿ ಇಲ್ಲವೆನ್ನುವಂತಿಲ್ಲ. ಇದರಿಂದಲೇ ಅದು ಕಾಗದ ಪತ್ರಗಳಲ್ಲಿ ಮಾತ್ರ ನಿಂತಿತ್ತು. ಪಂಚಾಯತು ನಿರ್ಧರಿಸುವ ದಂಡನೆಯನ್ನು ಅನುಭವಿಸಲು ಸಿದ್ಧನಾಗುವವನು ಮಗುವನ್ನು ಶಾಲೆಗೆ ಕಳಿಸಲೂ ಮುಂದಾಗುತ್ತಾನೆ. ಆದುದರಿಂದಲೇ ಇರಬೇಕು, ಈ ಯೋಜನೆ ಇಷ್ಟವೇ ಕಾಯಿದೆಯನ್ನು ಕಟ್ಟುನಿಟ್ಟಾಗಿ ಅನುಸರಿಸುವ ಹಠಸಾಧ್ಯ ಸರಕಾರಕ್ಕಿರಲಾರದು. ಮಂಗಳೂರಿನಲ್ಲಿ ನಡೆದ ಕಡ್ಡಾಯ ಶಿಕ್ಷಣ ಚರ್ಚಾಗೋಷ್ಠಿಯಲ್ಲಿ ಪ್ರಾಥಮಿಕ ವಿದ್ಯಾ ಇಲಾಖೆಯ ಜ್ಯೊಂಟ್ ಡೈರೆಕ್ಟರ್ ಶ್ರೀ ಜಿ. ಪಿ. ಶಿವರಾಮರು, “ಈ ಜಿಲ್ಲೆಯಲ್ಲಿ ಸೇ. ೯೦ರಷ್ಟು ಮಕ್ಕಳಾದರೂ ಶಾಲೆಗೆ ಸೇರುವಂತೆ ಪ್ರಯತ್ನಿಸಬೇಕು”ಎಂದು ನುಡಿದುದು ಈ ಅಭಿಪ್ರಾಯವನ್ನು ಪ್ರತಿಬಿಂಬಿಸುವಂತಿದೆ. ಆದರೆ, ವಿಚಾರ ಗೋಷ್ಠಿಯಲ್ಲಿ ಮುಂದೆ ಬಂದ ಸರಕಾರೇತರ ವಿಚಾರಗಳೆಲ್ಲವೂ ವಿಚಾರ ಮಾಡತಕ್ಕದಾಗಿಯೇ (ಕೊನೆಯ ವರೆಗೂ?) ಉಳಿಯುವುದು ತಪ್ಪಲಾರದು. ಹಾಗಾದರೆ, ಈ ವಿಚಾರ ಸಂಕಿರಣಗಳಿಗಾಗಿ ಮಾಡುವ ವೆಚ್ಚ ಪಡುವ ತ್ರಾಸ ಯಾರ ಉಪಕಾರಕ್ಕಾಗಿ?

— ಗೋರಾ.

ಹನಿಗತೆ

‘ಹಲ್ಲು ನೋವಾದರೆ...’

ಆಚಾರ್ಯ ಕ್ಷಿತಿಲೋಹನ ಸೇನರೊಮ್ಮೆ ‘ಶಾಂತಿನಿಕೇತನ’ದ ವಿದ್ಯಾರ್ಥಿಗಳ ಮುಂದೆ ಮಹಾತ್ಮಾ ಕಬೀರರ ಕುರಿತಾದ ಭಾಷಣ ಮಾಡುತ್ತಿದ್ದರು. ಏತನ್ಮಧ್ಯೆ ಅವರಿಗೆ ಒಂದು ದಿನ ಹಲ್ಲಿನಲ್ಲಿ ಪೀಡೆಯಾಗಲು ಆರಂಭವಾಯಿತು. ಅತಏವ ಆ ದಿನ ಅವರಿಂದ ಭಾಷಣಮಾಡಲು ಸಾಧ್ಯವಾಗಲಿಲ್ಲ.

ಗುರುದೇವ ರವೀಂದ್ರನಾಥ ಟಾಗೋರರು ಈ ಸಂದರ್ಭವನ್ನು ಹಿಡಿದು, ಅವರನ್ನು ಕುರಿತು, “ಈ ಹೊತ್ತು ಭಾಷಣ ಕಾರ್ಯಕ್ರಮವೇಕೆ ಆಗಲಿಲ್ಲ?” ಎಂದು ಕೇಳಿಯೇ ಬಿಟ್ಟರು

“ಈ ದಿನ ಹಲ್ಲುನೋವು ಇದ್ದುದರಿಂದ ಭಾಷಣ ಮಾಡಲಾಗಲಿಲ್ಲ....” ಕ್ಷಿತಿಸೇನರು ಮಾರ್ಮಿಕವಾಗಿ ಟಾಗೋರರ ಪ್ರಶ್ನೆಗೆ ಉತ್ತರವಿತ್ತರು.

ಕೂಡಲೇ ಗುರುದೇವರು ವಿನೋದಪೂರ್ಣವಾಗಿ ನುಡಿದರು: ‘ತಮ್ಮದು ಭಾಷಣ ಮಾಡುವುದಷ್ಟೇ. ಕೆಲಸ ಹೊರತು ಕೇಳುವವರನ್ನು ಕಚ್ಚುವುದಲ್ಲ...”

ಇದಕ್ಕೆ ನೆರೆದ ನೆರವಿಯ ಮುಖದ ಮೇಲೆ ನಗೆಯ ಮಿಂಚು ಮಿಂಚಿತು.

— ಕೆ. ರಮೇಶ ಪೈ, ಉಡುಪಿ.

ಸ್ವಲ್ಪ ಸ್ವಲ್ಪವಾಗಿ, ಅಲ್ಲೊಮ್ಮೆ ಇಲ್ಲೊಮ್ಮೆ, ನೀವು ಉಳಿಸುತ್ತಿರುವ ಹಣವು
ಬೇಗ ಬೇಗನೆ ವೃದ್ಧಿಗೊಂಡು, ನಿಮ್ಮ ಭವಿಷ್ಯದ ಭದ್ರತೆಯು
ಹೆಚ್ಚೆಚ್ಚಾಗಿ ಪರಿಣಮಿಸುವಂತೆ

ಕೊರ್ಪೊರೇಶನ್ ಬೇಂಕು

ನಿಮ್ಮ ಸೇವಿಂಗ್ಸ್ ಬೇಂಕ್ ಎಕೌಂಟುಗಳ ಮೇಲೆ ಇನ್ನು ಮುಂದಕ್ಕೆ
ಸಾಲಿಯಾನ್ ಸೇಕಡಾ 3 ರ ದರದಲ್ಲಿ ನಿಮಗೆ ಬಡ್ಡಿ ಕೊಡುವುದು.

ವಿವರಗಳಿಗೆ ವಿಚಾರಿಸಿರಿ:

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ಸ್ಥಾಪನೆ: 1906) (ರಿಜಿಸ್ಟರ್ಡ್ ಆಫೀಸು: ಉಡುಪಿ
ಆಡಳಿತ ಆಫೀಸು: ಮಂಗಳೂರು—1

ದಿ ವಿಜಯ ಬೇಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ: 1931

ರಿಜಿಸ್ಟರ್ಡ್ ಆಫೀಸು:
ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು-3, ಸೌತ್ ಕೆನರಾ.

ಕಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡ 5¼ರ ವರೆಗೆ ಹೆಚ್ಚಿಸಲಾಗಿದೆ.
ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ಪಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲಾಗುತ್ತದೆ.

ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ.

ವಿಚಾರವರ್ಷ:

ಚಿಂತೆಯಿಂದಲೇ ಆನಂದ ಪ್ರಾಪ್ತಿ

"ಕಂಟಕೇನೈವ ಕಂಟಕಂ" ಎಂಬಂತೆ ಚಿಂತೆಯಿಂದಲೇ ಚಿಂತೆಯ ಉನ್ಮೂಲನ—ಎಂದು ಪ್ರಸಿದ್ಧ ಫ್ರೆಂಚ ಮನೀಷಿ ಫ್ರಾನ್ಸ್ವ ಮೋರಿಯೋಕರು ಹೇಳುತ್ತಾರೆ. ಇದು ಕೇವಲ ಕ್ರೈಸ್ತರಿಗೆ ಮಾತ್ರವಲ್ಲ ಸರ್ವ ಧರ್ಮಾವಲಂಬಿಗಳಿಗೂ ಗುಣಕಾರಿಯಾಗಿದೆ.

"ಜೀವನದ ಗೋಧೂಳಿ ವೇಳೆಯಲ್ಲಿ ಯೇಸುವಿನಲ್ಲಿ ನಿಮಗೇಕಿಷ್ಟು ಶ್ರದ್ಧೆ ಹುಟ್ಟಿತು?" ಎಂದು ಯಾರಾದರೂ ನನ್ನೊಡನೆ ಪ್ರಶ್ನಿಸಿದರೆ, ನಾನು ನೀಡುವ ಉತ್ತರವಿದು: "ಆತನು ನನ್ನನ್ನು ಚಿಂತಾಬಂಧನದಿಂದ ಮುಕ್ತಗೊಳಿಸಿದ್ದಾನೆ."

ಚಿಂತೆ ಮತ್ತು ಚಿತ್ತಗಳ ನಡುವಣ ಸಂಬಂಧವು ಬಹಳ ಗಾಢವಾಗಿದೆ. ಎಳವೆಯಿಂದಲೇ ಜೀವನದಲ್ಲಿ ಚಿಂತೆಯು ಪ್ರವೇಶಿಸತೊಡಗುತ್ತದೆ. ರಾತ್ರಿಯ ನೀರವತೆಯಲ್ಲಿ ಯಾರಾದರೂ ಮೆಟ್ಟಲೇರುತ್ತಿದ್ದರೆ, ಆಗ ಏಳುವ ಗಡಬಡ ಶಬ್ದವು ನಮ್ಮನ್ನು ಅದೆಷ್ಟು ಕಂಗಾಲುಗೊಳಿಸುತ್ತದೆ!

ರಾತ್ರಿಯುದ್ದ ಕಂಪಿಸುತ್ತ ಉರಿಯುತ್ತಿರುವ ದೀಪದ ಬೆಳಕಿನಲ್ಲಿ ಗೋಡೆಯ ಮೇಲೆ ನರ್ತಿಸುತ್ತಿರುವ ನೆರಳನ್ನು ಕಂಡು ಭಯಭೀತರಾಗಿ ನಾವು ಬಿಟ್ಟ ಬಿಸಿಯುಸಿರ ಬೇಗೆಯನ್ನು ನೆನಪಿಸಿದಾಗ ಎದೆ ಜುಮ್ಮೆನ್ನುವುದಿಲ್ಲವೆ? ನಮ್ಮಲ್ಲಿ ಕೆಲವರು ನಿರ್ಬಲ ಮಕ್ಕಳಾಗಿದ್ದರು; ಓದಿನಲ್ಲಿ ಹಿಂದುಳಿದಿದ್ದರು; ಆದರೆ ತರಗತಿಯಲ್ಲಿ ಮಾತ್ರ ಅಧ್ಯಾಪಕರು ತಮ್ಮ ನಿರ್ಬಲತೆಯನ್ನರಿತು ತಮ್ಮೊಡನೆ ಯಾವುದೇ ಪ್ರಶ್ನೆಗಳನ್ನು ಕೇಳದಿರಲೆಂಬಂತೆ ಸದಾ ಮಗ್ನರಾಗಿರುವಂತೆ ನಟಿಸುತ್ತಿದ್ದರು!

ನಿಜವಾಗಿಯೂ ಹೆಚ್ಚಿನ ಮಕ್ಕಳ ಜೀವನದಲ್ಲಿ ಚಿಂತೆಯು ಅವಿಭಾಜ್ಯ ಅಂಗವಾಗಿದೆ; ಒಂದು ಸ್ಥಾಯಿ ಅವಸ್ಥೆಯಾಗಿದೆ. ರಾತ್ರೆ ಮಗುವನ್ನು ತನ್ನ ಪಕ್ಕದಲ್ಲಿ ಮಲಗಿಸಿಕೊಂಡು ಮಗು ಹೆದರಿ ಎದ್ದು ಕುಳಿತಾಗ, ಬೆನ್ನು ತಟ್ಟುತ್ತ ಶಾಂತವಾಗಿ "ಹೆದರಿದೆಯಾ ಮಗು? ನಾನು ಹತ್ತಿರವಿದ್ದೇನೆ; ಮಲಗು" ಎಂದು ಸಮಾಧಾನಪಡಿಸುವ ತಾಯಿಯ ಮಮತೆಯಿಲ್ಲವಾದರೆ ಈ ಚಿಂತೆಯು ಬಾಲಕನನ್ನು ಹುಚ್ಚನನ್ನಾಗಿಯೇ ಮಾಡುವುದು.

ಚಿಂತೆಯು ಬಾಹ್ಯಪ್ರದೇಶದಿಂದ ಬಂದುದಲ್ಲ. ದೇಶ-ಕಾಲಗಳೊಡನೆ ಇದರ ಸಂಬಂಧವಿಲ್ಲ—ಎಂಬುದನ್ನು ಬಾಲ್ಯದ ಈ ಅನುಭೂತಿಗಳು ಸಿದ್ಧಮಾಡುತ್ತವೆ. ನಾನು ಮಧ್ಯಮ ವರ್ಗದ ಸುಖೀ ಪರಿವಾರದಲ್ಲಿ ಹುಟ್ಟಿದ ಮಗುವಾಗಿದ್ದೆ. ಆಗ ನನ್ನ ದೇಶವಾದ ಫ್ರಾನ್ಸು ತನ್ನ ಶಕ್ತಿಯ ಪರಮೋತ್ಕರ್ಷ ಸೀಮೆಯನ್ನಡರಿತ್ತು. ಆದರೆ, ತನ್ನ ಪ್ರೌಢಾವಸ್ಥೆಯ ಸಕಲ ಚಿಂತೆಗಳೂ ಬೀಜರೂಪದಲ್ಲಿ ಬಾಲ್ಯಾವಸ್ಥೆಯಲ್ಲಿಯೇ ತೋರುತ್ತಿದ್ದುವು. ಕಿಶೋರಾವಸ್ಥೆಯಲ್ಲಿ ನಾನು ಸಂಪೂರ್ಣ ಸ್ವತಂತ್ರನಾಗಿದ್ದೆ.

೧೯೧೪ರಲ್ಲಿ ಪ್ರಾರಂಭವಾದ ಯಾತನಾಯುಗವು ನಮ್ಮ ಚಿಂತನೆಗಳ ಮೇಲೆ ಪ್ರಭಾವ ಬೀರಲಿಲ್ಲವೆಂದು ಇದರ ಅರ್ಥವಲ್ಲ. ತನ್ನ ಅಸ್ತಿತ್ವದ ವಿಷಯದಲ್ಲಿ ಮಾನವನಿಗೆ ಇರುವ ಭಯವು ಮತ್ತು ವರ್ತಮಾನ ಯುಗಗಳ ನಡುವೆ ಸಂಬಂಧವಿಲ್ಲವೆಂದೂ ನನ್ನ ಅಭಿಪ್ರಾಯವಲ್ಲ. ಆದರೆ, ಐತಿಹಾಸಿಕ ಘಟನೆಯು ಅದೆಷ್ಟು ವಿಷಮ ಹಾಗೂ ವಿಷಾದಪೂರ್ಣವಿದ್ದರೂ ಅವನ್ನೇ ಚಿಂತೆಗಳಿಗೆ ಮೂಲವೆಂದು ಹೇಳಬರುವುದಿಲ್ಲ.

ಇತಿಹಾಸದಲ್ಲಿ ಸರ್ವತೋಮುಖ ಸುಖಮಯ ಮತ್ತು ಶಾಂತಿಮಯ ಯುಗವೆಂದು ಕರೆಯುತ್ತಿದ್ದ ಸಮಯದಲ್ಲೂ ಮಾನವನು ಚಿಂತಾಗ್ರಸ್ತನಾಗಿ ವ್ಯಗ್ರನಾಗಿದ್ದನು. ತಾನು ಪ್ರೇಮವಿತ್ತರೂ ತನಗೆ ಪ್ರೇಮಸಿಗಲಿಲ್ಲ; ತಾನು ಬೇಡವೆಂದರೂ ಯಾರೋ ಒಬ್ಬರು ತನಗೆ ಪ್ರೇಮಾರ್ಪಣೆ ಮಾಡುತ್ತಾರೆ, ಮೊದಲು ಮಕ್ಕಳು ಮರಿಗಳಿದ್ದುವು, ಅವು ಈಗ ಉಳಿಯಲಿಲ್ಲ. ಮೊದಲಲ್ಲಿ ಆತ ದೃಢಕಾಯನಾಗಿದ್ದು ಆರೋಗ್ಯದಿಂದಿದ್ದ; ಆದರೆ, ಈಗ ಹಲ್ಲಿಲ್ಲ-ಇವೇ ಮೊದಲಾದುವು ಅವನ ಚಿಂತೆಗೆ ಕಾರಣವಾಗಿದ್ದುವು.

ಈಗ ನಿಮಗೆ ಆನಂದದ ಮಾರ್ಗವಾವುದೆಂದು ಹೇಳುತ್ತೇನೆ. ನನ್ನ ಅಭಿಪ್ರಾಯದಲ್ಲಿ ಕ್ರೈಸ್ತನಿಗೆ ಇಲ್ಲವೇ ಬೇರೆ ಬೇರೆ ಧರ್ಮಾನುಯಾಯಿಗಳಿಗೆ ಮಾತ್ರ ದೊರೆಯುವ ಆನಂದ ದರ್ಶನವದು. ನಿಜ ಹೇಳುವುದಾದರೆ, ಪ್ರಾಯವು ಹೆಚ್ಚುತ್ತ ಹೋದಂತೆ ಬಂಧನವೂ ಶಿಥಿಲವಾಗುತ್ತ ಬಂದಿದೆ.

ಯೇಸುಯೆಂದರೆ ಸಂಕಟ ಕಾಲದಲ್ಲಿ ನಮ್ಮನ್ನುಳಿಸಲು ತನ್ನನ್ನು ನಿಲ್ಲಿಸುವ ಗೋಡೆಯಲ್ಲ; ನಮ್ಮ ಮನಸ್ಸಿನಲ್ಲಿ ಚಿಂತೆಗಳು ಚಿರಸಂಚಾರ ನಡೆಸುತ್ತಿದ್ದ ಯೌವನ ಕಾಲದಲ್ಲಿ ನಾವು ಯೇಸುವಿನಿಂದ ವಿಮುಖರಾಗಿದ್ದೆವು. ನಮ್ಮ ಚಿಂತೆಗಳೂ ಅಂಜಿಕೆಗಳೂ ಪರಮಾತ್ಮನಿಗೆ ಜನ್ಮವಿತ್ತುವು ಎಂದು ಹೇಳುವುದು ಶುದ್ಧ ಅವಿವೇಕ. ಏಕೆಂದರೆ ಇವು ನಮ್ಮನ್ನು ಆತನಿಂದ ದೂರವಿರಿಸುವುವು.

ಹಾಗಾದರೆ, ಯೌವನದಲ್ಲಿ ಕಾಣಲಾರದ ವೃದ್ಧಾಪ್ಯದಲ್ಲಿ ನೋಡಬಲ್ಲ ಆ "ಪರಮಾತ್ಮ" ಎಂದರೆ ಯಾರು? ಯೌವನದಲ್ಲಿ ನನಗೆ ಸುಖ ಶಾಂತಿಗಳಲ್ಲಿ ಆಸಕ್ತಿಯಿರಲಿಲ್ಲ. ಇವುಗಳಿಂದ ರಸಾಸ್ವಾದ ಮಾಡಲು ಕಲಿಯ ಬೇಕಾಗುವುದು. ಇದನ್ನು ಕಲಿಯಲು ಬಹುದೀರ್ಘ ಸಮಯ ತಗಲುವುದು. ನನ್ನ ಸ್ವಂತ ಅನುಭವಗಳಿಂದನಿದನ್ನು ಅನ್ನುತ್ತಿದ್ದೇನೆ. ಯುವಕನಾಗಿದ್ದಾಗ, ನನಗೆ ಚಿಂತೆಗಳೂ ಬಹುಪ್ರಿಯವಾಗಿದ್ದುವು; ಪರಮಾತ್ಮನಿಗಿಂತಲೂ ಅಧಿಕ ಪ್ರೀತಿ ಪಾತ್ರವಾಗಿತ್ತು.

ಯೇಸು ಕ್ರಿಸ್ತನು ಒಮ್ಮೆ ಒಬ್ಬಾಕೆ ನಾರಿಯೊಡನೆ ಕೇಳಿದನು: "ಪರಮಾತ್ಮನ ವರದಾನವನ್ನು ನೀನು ತಿಳಿದಿರುವೆಯ"? ಪರಮಾತ್ಮನ ವರದಾನವೆಂದರೇನು? ಚಿಂತೆಯ ವಿರುದ್ಧ ವಸ್ತು ಶಾಂತಿ. "ನಾನು ನಿನಗೆ ಶಾಂತಿದಾನ ಮಾಡುವೆನು; ನನ್ನ ಶಾಂತಿಯನ್ನು ನೀಡುವೆನು"—ಎಂದು ಯೇಸು ಶೂಲವೇರುವುದಕ್ಕೆ ಹಿಂದಿನ ರಾತ್ರಿ ಉದ್ಘರಿಸಿದ್ದನು. ಈ ಶಾಂತಿಯನ್ನು ನಾವು ಬಯಸುವುದಿಲ್ಲ. ಈ ಶಾಂತಿ ನಮ್ಮನ್ನು ಭಯಭೀತಗೊಳಿಸುವುದು. ಸತ್ಯ ಹೇಳುವುದಾದರೆ, ನಾವು ಶಾಂತಿಪ್ರಿಯರಲ್ಲ. ನಮ್ಮಲ್ಲಿನ ಹೆಚ್ಚಿನ ಜನರ ಹಾರ್ದಿಕ ಕಾಮನೆಯನ್ನು ಫ್ರೆಂಚ ಲೇಖಕ ಶಾತೋಬ್ರಿಯ ವಾಕ್ಯದಲ್ಲಿ ಹೇಳಬಹುದು. "ಎದ್ದೇಳು, ಹೇ ಚಿರಪ್ರತೀಕ್ಷಿತ ಬಿರುಗಾಳಿಯೇ ಎದ್ದೇಳು' ಎಂದು.

ಕ್ರೈಸ್ತ ಇಲ್ಲವೇ ಇತರ ಧರ್ಮವೇ ಒಂದು ಚಿಂತೆಯ ರೂಪವೆಂದು ನೀವನ್ನಬಹುದು. ಆದರೆ, ಈ ರೀತಿ ತಿಳಿದುಕೊಳ್ಳುವುದು ತಪ್ಪು. ನನ್ನ ತಂದೆಯ ಮನೆಯಲ್ಲಿ ಹಲವು ಖಂಡಗಳಿವೆ ಎಂದು ಪ್ರಭು ಹೇಳುತ್ತಾನೆ. ಇವುಗಳಲ್ಲಿ ಒಂದು ಭಾಗ ಚಿಂತೆ ಮತ್ತು ಭಯವುದ್ದು. ಭಕ್ತಿ ಪ್ರಧಾನ ಧರ್ಮಗಳೆಲ್ಲವೂ ಮುಕ್ತಿಯನ್ನು ಪರಮಾತ್ಮನ ಆವಾಸಸ್ಥಾನವೆಂದು ಮನ್ನಿಸಿವೆ. ಈ ಪ್ರಾಸಾದ ಅಹೇತುಕವಾಗಿರುತ್ತದೆ. ಇದರಿಂದ, ಈ ಭಯವು ಸಾಧಕರನ್ನು ಒಂದು ಪಡೆ ಬಡೆಯುತ್ತದೆ; "ನನಗೆ ಪರಮಾತ್ಮನ ಕೃಪೆಯೇ ಅಲಭ್ಯವಾದರೆ?" ಎಂಬ ಚಿಂತೆ ನಮ್ಮನ್ನು ಕವಿಯುವುದು.

ಮೋಕ್ಷದ ಹಂಬಲವು ಕೆಲವೊಮ್ಮೆ ಅತ್ಯಂತ ಪೀಡಾದಾಯಕ ರೋಗದ ರೂಪವನ್ನು ತಾಳುತ್ತವೆ. ಈ ಕಾರಣದಿಂದಲೇ ಹಲವಾರು ಶ್ರದ್ಧಾಳುಗಳು ಧರ್ಮದಿಂದ ದೂರಹೋಗುತ್ತಾರೆ. ಕ್ರೈಸ್ತ ಧರ್ಮವನ್ನು ತ್ಯಜಿಸಿ ಮಾರ್ಕ್ಸ್ ವಾದವನ್ನು ಆಶ್ರಯಿಸಲು ತೊಡಗಿದ ನನ್ನ ಸ್ನೇಹಿತರೊಬ್ಬರು ನನ್ನೊಡನೆ ಹೇಳಿದ್ದರು: 'ಸಾಮ್ಯವಾದದಲ್ಲಿ ಸರ್ವೋತ್ಕೃಷ್ಟ ಗುಣವೊಂದಿದೆ. ಇದರಿಂದಲೇ ಈಗ ನನ್ನನ್ನು ಮುಕ್ತಿಯ ಚಿಂತೆ ಕಾಡುವುದಿಲ್ಲ".

ಈ ಬಗೆಯ ಚಿಂತೆಗಳಿಗೆ ಪರಿಣಾಮಕಾರಿ ಔಷಧಿಯೊಂದು ನನ್ನ ಬಳಿಯಿದೆ. ಇನ್ನೊಂದು ಬಗೆಯ ಚಿಂತೆಯೇ ಈ ಮದ್ದು. ಚಿಂತೆಯಿಂದಲೇ ಚಿಂತೆಗೆ ಉಪಚಾರ ಮಾಡಬೇಕು. ಇದನ್ನು ಒಂದು ಬಗೆಯ "ಆಧ್ಯಾತ್ಮಿಕ ಹೋಮಿಯೋಪಥಿ" ಎಂದು ಬೇಕಾದರೆ ಕರೆಯಿರಿ.

ನೀವು ನಿಮ್ಮ ಚಿಂತೆಗಳತ್ತ ನೋಡುವುದನ್ನು ಬಿಟ್ಟು ಅನ್ಯರ ಚಿಂತನೆಗಳಲ್ಲಿ ಶ್ರದ್ಧೆ ವಹಿಸಿ. ಕರುಣೆಯ ರೂಪಕ್ಕೆ ಚಿಂತೆಯನ್ನು ಪರಿವರ್ತಿಸಿದರೆ, ಆಗ ಚಿಂತೆಯು ಪರಾಜಿತವಾಗಿ ನಮ್ಮ ವಶವಾಗುವುದು. ಕರುಣೆಯ ಆಗಿಯನ್ನು ತೊಟ್ಟು ಲಕ್ಷ್ಯವನ್ನು ಪರಾರ್ಥದಲ್ಲಿ ಕೇಂದ್ರಿತವಾಗಿರಿಸಿಕೊಂಡರೆ ನಮ್ಮ ಮುಂದಿನ ಚಿಂತೆಯು ದೂರವಾಗುವುದು.

"ಅನ್ಯರಿಗುಳಿದುದೆಲ್ಲವೂ ನರಕ"ವೆಂದು ಸಾತ್ರನು ಹೇಳಿದ್ದನು. ಆದರೆ, ನಿಜವಾದ ಕ್ರೈಸ್ತನು "ಅನ್ಯರನ್ನುಳಿದುದೆಲ್ಲವೂ ಕ್ರಿಸ್ತ" ಎನ್ನುತ್ತಾನೆ. ಯೇಸುವಿನ ಈ ವ್ಯಾಪಕ ವ್ಯಾಖ್ಯೆಯನ್ನು ನಾವು ಒಪ್ಪಿಕೊಂಡೆವಾದರೆ, ಚಿಂತೆಯ ಸೀಮೆಯನ್ನು ವಿಸ್ತರಿಸುವುದು, ಅದನ್ನು ಸ್ವಾರ್ಥದಿಂದ ಪರಾರ್ಥದಲ್ಲಿ ಕೇಂದ್ರೀಕರಿಸುವುದು ಸಫಲವಾಗುವುದು.

(೧೨ನೇ ಪುಟ ನೋಡಿರಿ)

(೨ನೇ ಪುಟದಿಂದ)

ಕುಡಿಯುವವನು ತನ್ನ ಕುಡಿತದ ಚಟಕ್ಕಾಗಿ ಎಷ್ಟರ ಮಟ್ಟಿಗೆ ಹಂಬಲಿಸುವನೋ ನಿರಾಶೆಯೂ ಇದೇ ರೀತಿಯ ಅಸ್ವಾಭಾವಿಕವಾದ ಉದಾಸೀನತೆಯನ್ನು ಹೆಚ್ಚಿಸುವುದು. ಜೀವನವು ಒಂದು ವೇಳೆ ಅಭಿಶಾಪವಾಗಿದ್ದರೆ, ಅದನ್ನು ಹಾಗೆಂದು ಯಾರೂ ಹೇಳಬೇಕಾಗಿರುವುದಿಲ್ಲ. ಅದು ತಾನಾಗಿಯೇ ಪ್ರಕಟವಾಗ ಬಹುದು. ಜೀವನವನ್ನು ಅಭಿಶಾಪವೆಂದು ಹೇಳುವುದು, ಯಾವನಾದರೂ, ಸಭ್ಯನಾದ ವ್ಯಕ್ತಿಯ ಮೇಲೆ, ಆತ್ಮಘಾತದ ಆರೋಪವನ್ನು ಹೊರಿಸಿದಂತೆ, ಆಗುವುದು. ಜೀವನದ ಅಸ್ತಿತ್ವವು ತನ್ನ ಮೇಲಿನ ದೋಷಾರೋಪಣೆಗಳನ್ನು ಸದಾ ಖಂಡಿಸುತ್ತಲೇ ಇರುವುದು. (ಸಶೇಷ)

ಜ್ಯೋತಿಷ್ಯ ನಿಮ್ಮ ಜೀವನಕ್ಕೆ ಸಂಬಂಧಿಸಿದ 5 ಪ್ರಶ್ನೆಗಳನ್ನು ನೀಲು ಮಾಡಿದ ಲಕೋಟೆಯಲ್ಲಿ ಕಳುಹಿಸಿ. ಅದನ್ನು ಒಡೆಯದೆಯೇ ದೇವೀ ಉಪಾಸನೆಯಿಂದ ಉತ್ತರವನ್ನು ರೂ. 2ಕ್ಕೆ ವಿ. ಪಿ. ಮಾಡಲಾಗುವುದು.

ಶ್ರೀ ಗಾಯತ್ರಿ ಮಂತ್ರಾಲಯ

ಪೋಸ್ಟ್ ಬಾಕ್ಸ್-308 —ಬೆಂಗಳೂರು-2.

ಅಂದವಾದ ಮನೆಗಳಿಗೆ! **ಆಕರ್ಷಕವಾದ ಆಫೀಸುಗಳಿಗೆ!!**

ಸುಸಜ್ಜಿತವಾದ ಆಸ್ಪತ್ರೆಗಳಿಗೆಲ್ಲಾ ಬೇಕಾಗುವ

ಕ್ಷೀರಾರವದ ಉಕ್ಕಿನ

"ಮಿಡ್ಜೆಟ್" **50" × 30" × 17"** ಪೊಪ್ಯುಲರ್ **65" × 33" × 19"**

ಯುಟಿಲಿಟೀ **78" × 36" × 19"** ಪಾರ್ಕ್ಸೈಡ್ **78" × 39" × 24"**

ಸಾದಾ ಮತ್ತು ಒಳಗಡೆ ಲೋಕರ್, ಮತ್ತು ಕನ್ನಡಿಗಳುಳ್ಳ ಕಪಾಟುಗಳು ವಗೈರೆ ಎಲ್ಲಾ ತರದ ಉಕ್ಕಿನ ಫರ್ನಿಚರ್‌ಗಳು.

"ರೇಲೀಸ್" & "ಉಷಾ" ಟೇಬಲ್ ಮತ್ತು ಸೀಲಿಂಗ್ ಫೇನ್‌ಗಳು.

—— ದ್ವಿಮುಖವಾಗಿರುವ "ಸೋಫಾ ಹಾಗೂ ಹಾಸಿಗೆ" ——

ಮದುವೆ ಸಮಾರಂಭಗಳಿಗೆ ಉಡುಗರೆ ಸಾಹಿತ್ಯಗಳು ನಮ್ಮ ವೈಶಿಷ್ಟ್ಯ.

ಹೆಚ್ಚಿನ ವಿವರಗಳಿಗೆ: **ಶಾಸ್ತ್ರಿ ಮತ್ತು ಕಂಪೆನಿ,** ಹಂಪನ್‌ಕಟ್ಟೆ, ಮಂಗಳೂರು

Phone: 788 Grams; "SHASTRYCO

ಯಮನ ನೆರಳು

(೨ನೇ ಪುಟದಿಂದ)

ಗಿಯೂ ಇಂಗುತಿಂದ ಮಂಗನಂತೆ ಆಗುತ್ತಾನೆ''.

"ದಾಮೋದರ್!" ಜಯಂತರು ಸಿಡಿಮಿಡಿಗುಟ್ಟುತ್ತಾ ಜೋರಾಗಿ ನುಡಿದರು. ವ್ಯರ್ಥವಾಗಿ ಮಾತಾಡಿ ಕಾಲಹರಣ ಮಾಡುವ ಸಮಯವಿದಲ್ಲ. ಕೊಲೆಗಾರನು ಬೇರೆ ಯಾವುದಾದರೂ ಕುರುಹು ಬಿಟ್ಟು ಹೋಗಿದ್ದಾನೇನು?"

"ಇಲ್ಲ ಬೇರೇನೂ ನನಗೆ ಸಿಗಲಿಲ್ಲ. ಆದರೆ ಇದು ಖಂಡಿತವಾಗಿಯೂ ದಲಾ ಬಹದೂರನದೇ ಕೆಲಸ.

"ಆಗಿರಬಹುದು, ಒಳ್ಳೇದು, ಡ್ರೈವರ್ ಮತ್ತು ಕ್ಲೀನರನನ್ನು ಕರೆಸು."

ಈ ಮಾತು ನಡೆಯುತ್ತಲೇ ಗುಪ್ತ ಪೋಲೀಸು ಇನ್ಸ್‌ಪೆಕ್ಟರ್ ಮಿ। ರಮಾಕಾಂತರು ಸ್ವಲ್ಪ ಜನರೊಡನೆ ಘಟನಾ ಸ್ಥಳಕ್ಕೆ ಬಂದರು. ಜಯಂತರಿಗೆ ವಂದಿಸಿ ಬಳಿಯಲ್ಲಿಯೇ ಕುಳಿತುಕೊಂಡರು. ಮೇಜಿನ ಮೇಲಿದ್ದ ದಲಾ ಬಹದೂರನ ವಿಸಿಟಿಂಗ್ ಕಾರ್ಡನ್ನು ನೋಡಿ ಬೆಚ್ಚಿಬಿದ್ದರು. ಕಾರಣ, ಇವರೂ ಒಮ್ಮೆ ದಲಾ ಬಹದೂರನ ಕೈವಶವಾಗಿದ್ದರು. ಇದರಿಂದ ಅವರಿಗೆ ತುಂಬಾ ಅವಮಾನವಾಗಿತ್ತು. ರಮಾಕಾಂತರು ಪುರಾತನ ರೀತಿಯ ಅನುಭವೀ ಆಫೀಸರರಾಗಿದ್ದರು. ಒಳ್ಳೇ ಕೆಲಸದಿಂದ ಇತ್ತೀಚೆಗೆ ಅವರಿಗೆ "ರಾಯ ಬಹದ್ದೂರ್" ಎಂಬ ಬಿರುದೂ ಸಿಕ್ಕಿತು. ಆದರೆ ಮನಸ್ಸಿನಲ್ಲಿ ಅವರು ದಲಾ ಬಹದೂರ್‌ನ ಮೂರ್ತಿಯನ್ನು ಕಡೆಯುತ್ತಿದ್ದರು. ದಲಾ ಬಹದೂರನು ಅಧುನಿಕ ಚತುರ ದರೋಡೆಗಾರನೆಂದ, ಅವರು ಚೆನ್ನಾಗಿ ಅರಿತಿದ್ದರು. ಅಲ್ಲದೆ ಅವನನ್ನು ಹಿಡಿಯಲು ಅಧುನಿಕ ವಿಚಾರ ವಿಧಿಮಾಯಗಳೇ ಬೇಕೆಂದೂ ತಿಳಿದಿದ್ದರು. ರಮಾಕಾಂತರ ಯೋಚನಾ ವಿವೇಕದಲ್ಲಿ ಈ ಯಾವೊಂದೂ ನಿಯಮಗಳೂ ಬಂದಿರಲಿಲ್ಲ. ಆದುದರಿಂದ ಅವರು "ಶೇರ್ ಲಾಕ್ಸ್ ಹೋಮ್ಸ್" ಪುಸ್ತಕಗಳನ್ನು ಓದುತ್ತಿದ್ದರು. ಓದಿ ಬಹಳ ಪ್ರಮುಖ್ಯ ವಿಷಯಗಳನ್ನು ನೆನಪಿನಲ್ಲಿಟ್ಟುಕೊಳ್ಳುತ್ತಿದ್ದರು. ಎಲ್ಲಿಯಾದರೂ ಹೊಸ ರೀತಿಯ ದರೋಡೆ ನಡೆದರೆ ತನ್ನ ಶಕ್ತಿ ಕೌಶಲ್ಯವನ್ನು ತೋರಿಸುವರು.

ಈ ಕೆಲಸವು ದಲಾ ಬಹದೂರನೆಂದು ತಿಳಿದ ಕೂಡಲೇ ಅವನನ್ನು ಹಿಡಿದು ತನ್ನ ಪುರಾತನ ಅವಮಾನದ ಕಪ್ಪು ತಲೆಯನ್ನು ಒರಸಿ ತೆಗೆಯಬೇಕೆಂದು ಸ್ವಪ್ನದಲ್ಲಿದ್ದರು. ಆದರೆ ತನಗಿಂತಲೂ ಮೊದಲು ಬಂದ ಜಯಂತರನ್ನು ಕಂಡು ಅವರಿಗೆ ಚೇಳು ಕುಟುಕಿದಂತಾಯ್ತು. ನಮಸ್ಕಾರದ ತದನಂತರ– "ಜಯಂತಜೀ ಈ ಕೇಸಿನಲ್ಲಿ ತಾವು ತಲೆ ಕೆಡಿಸಿಕೊಳ್ಳಬೇಕಾದ ಪ್ರಮೇಯವಿಲ್ಲ. ಸಂಯೋಗವಶದಿಂದ ಹಲವಾರು ವರ್ಷಗಳ ನಂತರ ದಲಾ ಬಹದೂರನನ್ನು ಹಿಡಿಯುವ ಕೆಲಸವು ನನ್ನ ಪಾಲಿಗೆ ಬಂದಿದೆ. ಅವನನ್ನು ಹಿಡಿದು ನನ್ನ ಪೂರ್ವ ಅವಮಾನದ ಕಲೆಯನ್ನು ಒರಸಬೇಕೆಂದು ನಿರ್ಧರಿಸಿದ್ದೇನೆ. ಈ ಸಲ ನಾನು ಅವನನ್ನು ಹಿಡಿಯದಿದ್ದರೆ ನನ್ನ ಹೆಸರು ರಮಾಕಾಂತನಲ್ಲ!"

ಜಯಂತರು ಈ ಡಂಭಾಚಾರದ ನುಡಿಗಳನ್ನು ಕೇಳಿ ಮುಗುಳ್ನಕ್ಕರು. ಏನೂ ನುಡಿಯಲಿಲ್ಲ. ಈ ಮಧ್ಯೆ ದಾಮೋದರರು ಡ್ರೈವರ್ ಮತ್ತು ಕ್ಲೀನರನನ್ನು ಕರೆಕೊಂಡು ಬಂದರು ಡ್ರೈವರನು.

"ರಾಜ ಕುಮಾರರ ದಿಬ್ಬಣ ಹೊರಡುವುದರಲ್ಲಿತ್ತು. ನಾನು ಕಾರು ಸಿದ್ಧ ಮಾಡಿ ನಿಂತಿದ್ದೆ. ಅಷ್ಟರಲ್ಲಿ ಓರ್ವನು ಬಂದು ಊರಿನಿಂದ ತನ್ನ ತಾಯಿ ಮತ್ತು ಓರ್ವ ಸ್ತ್ರೀ ಬಂದಿರುವುದಾಗಿ ಅಲ್ಲದೆ ತನ್ನ ಕೋಣೆಯ ಹತ್ತಿರ ನಿಂತಿರುವುದಾಗಿ ತಿಳಿಸಿದನು. ಹೋಗಿ ಬಾಗಿಲು ತೆರೆಯ ಹೇಳಿದನು. ನೋಡಿದರೆ ಇಡಿ ನಮ್ಮ ಇಲಾಖೆಯವರು ದಿಬ್ಬಣ ನೋಡಲು ತೋರಣದ ಹತ್ತಿರ ನಿಂತುಕೊಂಡಿದ್ದರು ನಾನು ನನ್ನ ಕೋಣೆಯ ಬಳಿ ಹೋದೆ. ಅಷ್ಟರಲ್ಲಿ ಯಾರೋ "ಯಾವುದೋ ಭಾರವಾದ ವಸ್ತುವಿನಿಂದ ನನ್ನ ಕಪಾಲಕ್ಕೆ ಹೊಡೆದರು. ನಾನು ಮೂರ್ಛಿತನಾದೆ. ಸ್ವಲ್ಪ ಸಮಯದ ನಂತರ ಸ್ಮೃತಿ ಬಂದು ನೋಡಲು ನನ್ನನ್ನು ಕೈಕಾಲು ಬಂಧಿಸಲ್ಪಟ್ಟು ಕೋಣೆಯೊಳಗೆ ಹಾಕಲ್ಪಟ್ಟಿತ್ತು. ನನ್ನ ಬಾಯೊಳಗೆ ರುಮಾಲನ್ನು ತುರುಕಿಸಿದ್ದರು. ಆದುದರಿಂದ ಬೊಬ್ಬಿಡಲು ಅಸಾಧ್ಯವಾಯ್ತು."

ಕ್ಲೀನರನ ಹೇಳಿಕೆಯೂ ಹೆಚ್ಚು ಕಡಿಮೆ ಅವನದ್ದಂತೆಯೇ ಇತ್ತು. ಡ್ರೈವರನ್ನು ಕರೆದುಕೊಂಡ ವ್ಯಕ್ತಿಯು ಕ್ಲೀನರನಿಗೆ ಡ್ರೈವರನು ಕರೆಯುವನೆಂಬುದಾಗಿ ತಿಳಿಸಿದನು. ಡ್ರೈವರನ ಕೋಣೆಗೆ ಹೋದ ಕೂಡಲೇ ಇಬ್ಬರು ಹಿಡಿದು ಕೈಕಾಲುಗಳನ್ನು ಕಟ್ಟಿ, ಬಾಯಿಗೆ ರುಮಾಲು ತುರುಕಿಸಿ, ಅಧಿಕಾರದಿಂದ ನೆಲಕ್ಕೆ ತಳ್ಳಿ ಬಿಟ್ಟರು. ತದನಂತರ ಹೊರಟು ಹೋದರು. ಬೆಳಿಗ್ಗೆ ಅವರ ನರಳುವಿಕೆಯಿಂದಲೇ ಒಳಗೆ ಯಾರೋ ಇರುವ ಶಬ್ದವಾದುದು.

ವಿಷಯ ಸ್ಪಷ್ಟವಿತ್ತು. ಯಾರೋ ದುಷ್ಟರು ಡ್ರೈವರ್ ಮತ್ತು ಕ್ಲೀನರರನ್ನು ಕಟ್ಟಿ ಹಾಕಿ ತಾವವರ ಸ್ಥಾನವನ್ನು ಆಕ್ರಮಿಸಿದ್ದರು. ಅವಸರವಾದ ಕಾರಣ ಮತ್ತು ಆ ರಾತ್ರಿಯನ್ನು ಅವರು ಧ್ಯಾನಪೂರ್ವಕವಾಗಿ ನೋಡಲಿಲ್ಲ. ರಾಜ ಕುಮಾರರ ಕೊಲೆಯಾದ ನಂತರ ಯಾರೂ ಅವರನ್ನು ಗಮನಿಸಲೇ ಇಲ್ಲ.

"ನೀವು ಅವರಲ್ಲೋರ್ವನ ಹೆಸರನ್ನಾದರೂ ಬಲ್ಲಿರೇನು?" ರಮಾಕಾಂತರೆಂದರು.

"ಅವರಲ್ಲಿ ಒಬ್ಬನು ಇನ್ನೊಬ್ಬನನ್ನು 'ಮೈಕೂ' ಎಂದು ಸಂಬೋಧಿಸುತ್ತಿದ್ದನು" ಎಂದ ಕ್ಲೀನರ್.

"ಓಹೋ, ಲಫಂಗನೊಡನೆ ಅವನ ಮಿತ್ರನೂ ಒಬ್ಬ ಇದ್ದ. ಜಯಂತಜೀ, ತಾವವರ ಹೆಸರನ್ನು ಕೇಳಿದಿರಲ್ಲ.... ಮೈಕೂ.... ಎಂದು. ಮೊದಲು ಅವನನ್ನು....ಅವನಿಂದಾಗಿ ದಲಾ ಬಹದೂರನನ್ನು ಹಿಡಿಯುವುದು ಬಹು ಸುಲಭ" ಎನ್ನುತ್ತಾ ರಮಾಕಾಂತರು ಸಂತೋಷದಿಂದ ಪುಟಿಯುತ್ತಿದ್ದರು

ಜಯಂತರವರು ಸುಮ್ಮನಿರಲಾರದೆ ಮುಗುಳ್ನಗುತ್ತಾ— "ಮಿ। ರಮಾಕಾಂತ್; ನಿಮ್ಮ ಮಾತು ಸತ್ಯ. ಮೊದಲು ಮೈಕೂನನ್ನು ಬಂಧಿಸಿ."

"ಹೌದು, ಒಂದು ಸಮಯದಲ್ಲಿ ಒಂದೇ ಕೆಲಸ ಮಾಡಲು ಸಾಧ್ಯ. ಆದುದರಿಂದ ಕಾರ್ಯದ ಸೂತ್ರವನ್ನು ಘಟನೆ ಹೊಂದಿಸಿ, ಪೂರ್ತಿಯಾಗುವಂತೆ ಮಾಡಬೇಕಾಗುತ್ತದೆ........ ಹಾಂ ಕ್ಲೀನರ್ ಮತ್ತೇನಾಯಿತು?" ಎಂದರು ರಮಾಕಾಂತರು.

"ಸ್ವಾಮಿ, ಬಾಗಿಲು ಮುಚ್ಚಿದ ನಂತರ ಪುನಃ ಇನ್ನು ಯಾರೋ ಈರ್ವರು ಅಲ್ಲಿಗೆ ಬಂದಂತೆ ಭಾಸವಾಯ್ತು. ಮೈಕೂನ ಮಿತ್ರ ಮೈಕೂನೊಡನೆ "ಸರ್ದಾರರಿಗೆ ಫೋನ್ ಮಾಡಿ, ಇಲ್ಲಿ ಎಲ್ಲಾ ಸರಿಯಾಗಿದೆ, ಅವರ ಕೆಲಸ ಸರಿಯಾಗಲಿ ಎಂದು ತಿಳಿಸು" ಎಂದನು.

"ಹಾಂ, ಒಳ್ಳೇದೇ ಆಯಿತು. ಟೆಲಿಫೋನ್ ಆಫೀಸಿನಿಂದ ತಿಳಿಯಬಹುದು, ಎಲ್ಲಿಂದ ಎಲ್ಲಿಗೆ ಫೋನ್ ಮಾಡಿದುದು ಎಂದು. ಹಾಂ, ಮತ್ತೇನಾಯ್ತು?" ರಮಾಕಾಂತರು ಕ್ಲೀನರನೊಡನೆ ಕೇಳಿದರು.

'ಬಾಗಿಲಿನೆಡೆಯಿಂದ ನಮ್ಮ ಬಂಧಿಸಲ್ಪಟ್ಟ ಪರಿಯನ್ನು ಚೆನ್ನಾಗಿ ಕಂಡು ಮಿತ್ರರೊಡನೆ— 'ನಡೆಯಿರಿ, ದಿಬ್ಬಣ ಹೊರಡುತ್ತಲಿದೆ, ಅವರೊಡನೆ ನಡೆಯಿರಿ, ಎಂದರು. ಎಲ್ಲರೂ ಅಲ್ಲಿಂದ ಹೊರಟು ಹೋದರು."

"ನೋಡಿ ಕೊಲೆಗಾರನ ಹಾಗೂ ಅವನ ಸಹಾಯಕರ ಹೆಸರುಗಳು ಸಿಕ್ಕಿದವು. ಈ ವಿಷಯ ಹೆಚ್ಚು ಪೇಚಾಟದ್ದಲ್ಲ. ಟೆಲಿಫೋನಿನಿಂದ ತಿಳಿಸಿದ್ದು! ಇದು ನಿಮಗೆ ತಿಳಿಯದಂತಹ ಯಾವುದೋ ಒಂದು ಶಸ್ತ್ರದಿಂದ ಕೊಲೆ ಮಾಡಲಾಯ್ತು. ಇನ್ನುಳಿದುದು ಕೊಲೆಯ ಉದ್ದೇಶ. ದಲಾ ಬಹದೂರನಂತಹ ದರೋಡೆಗಾರನಿಗೆ ಬೇರೆ ಉದ್ದೇಶವೇನಿದೆ? ನಿಮ್ಮ ಅಭಿಪ್ರಾಯವೇನು? ಮಿ। ಜಯಂತ್?"

"ನಾನೀಗಲೇ ಯಾವೊಂದೂ ಅಭಿಪ್ರಾಯವನ್ನು ಕೊಡಲಾರೆ."

"ಆಶ್ಚರ್ಯನಾಗಿದೆ. ನನಗಂತೂ ದರೋಡೆಯ ವಿನಾ ಬೇರೆ ಯಾವ ಕಾರಣವೂ ಕಂಡುಬರುವುದಿಲ್ಲ."

ರಮಾಕಾಂತರು ರಾಜಕುಮಾರರ ಜೇಬನ್ನು ಪತ್ತೆ ಮಾಡತೊಡಗಿದರು. ಇದನ್ನು ನೋಡಿ ಜಯಂತರು ಕಿಲಕಿಲನೇ ನಕ್ಕುಬಿಟ್ಟರು. ನಗುವನ್ನು ಕೇಳಿ "ನೀವೇತಕ್ಕೆ ನಗುವಿರಿ" ಎಂದು ಕೇಳಿದರು ರಮಾಕಾಂತರು.

"ರಾಜಕುಮಾರರು ಸಾವಿನ ಮುಂಚೆ ಸಂಪೂರ್ಣ ಎಚ್ಚರವಾಗಿದ್ದರು. ಅವರ ಜೇಬಿಗೆ ಯಾರಾದರೂ ಕೈ ಹಾಕಿದ್ದರೆ ಅದು ಗೊತ್ತಾಗುತ್ತಿತ್ತು. ಸತ್ತ ಕೂಡಲೇ ದಾಮೋದರರು ರಾಜಕುಮಾರನ ಬಳಿಯಲ್ಲೇ ಇದ್ದರು. ತದನಂತರ ಈಗಿನವರೆಗೆ ಪೋಲೀಸು ಪಹರೆ ಇತ್ತು. ಸತ್ತನಂತರ ಕೊಲೆಗಾರನಿಗೆ ಸಾನಿಧ್ಯಕ್ಕೆ ಬರಲು ಅಸಾಧ್ಯ. ಮೊದಲೇ ಜೇಬನ್ನು ಕತ್ತರಿಸುತ್ತಿದ್ದರೆ ಕೊಲೆ ಯಾಕೆ ಮಾಡುತ್ತಿದ್ದರು?" ಜಯಂತರ ಸಾಕ್ಷಿ ಸಶಕ್ತವಾದುದರಿಂದ ರಮಾಕಾಂತರು ಸುಮ್ಮನಾದರು.

ಜಯಂತರ ತರ್ಕವನ್ನು ಕೇಳಿ ಡ್ರೈವರನು ಕ್ಷಣದಲ್ಲೆ–"ಒಂದು ಅಗತ್ಯವಾದ ವಿಷಯವನ್ನು ನಿಮ್ಮಲ್ಲಿ ಹೇಳಬಯಸುತ್ತೇನೆ" ಎಂದನು.

"ಹಾಂ, ಹಾಂ, ಖಂಡಿತವಾಗಿ ಹೇಳು" ಉತ್ಸಾಹದಿಂದ ನುಡಿದರು ರಮಾಕಾಂತರು.

"ಸ್ವಲ್ಪ ಸಮಯದಿಂದ ರಾಜಕುಮಾರರು ಚಿಂತಿತರಾಗಿದ್ದರು. ಒಂದು ಸಲ ತನ್ನಷ್ಟಕ್ಕೆ ಮಾತಾಡುವುದನ್ನು ಕಂಡಿದ್ದೇನೆ......"

"ಏನು? ಏನು? ಬೇಗ ಹೇಳು" ಎಂದು ತನ್ನ ಜಿಜ್ಞಾಸೆಯನ್ನು ಒತ್ತಿ ಹಿಡಿಯಲಾರದೆ ಕೇಳಿದರು ರಮಾಕಾಂತರು.

"ಅವರು ತನ್ನಷ್ಟಕ್ಕೆ....ವಿಚಿತ್ರ ವಿಷಯವಾಗಿದೆ....ಏನು ಮಾಡಬೇಕೆಂಬುದೇ

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4%
5 ,, 12	,,	4¼%
13 ,, 24	,,	4½%

ರೂ. 5,000/- ಮತ್ತು ಮೇಲಣ ಡಿಪೋಸಿಟಗೆ ¼% ಜಾಸ್ತಿ ಕೊಡಲಾಗುವುದು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ¾%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್.

ಮೂಲ್ಕಿ ಬೇಂಕ್ ಲಿ. ಮುಲ್ಕಿ.

Tel: 'BLUEYAGAR'. — ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ — Phone: 374.

ಕೆ. ಆರ್. ಕೆ. ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು.[ಮಾಲಿಕ:ಕೆ. ಕೆ ಆರ್. ಶೇಟ್

NAVAYUGA WEEKLY, UDIPI.
REGD. NO.BG. 176

25–5–1961

LICENSE NO. 31
Licensed to Post without Prepayment

ನನಗೆತಿಳಿಯದು ಎಂದು ಒಮ್ಮಿಂದೊಮ್ಮೆ ಅವರುಸುಮ್ಮನಾದರು. ನನ್ನ ಇರುವಿಕೆಯು ಅವರಿಗೆ ತಿಳಿದಿತ್ತು. ಅವರ ಸಿಗರೇಟ್ ಕೇಸಿನಲ್ಲಿ ಒಂದು ತುಂಡು ಕಾಗದವಿತ್ತು. ಅವರದನ್ನು ಯಾವಾಗಲೂ ತೆಗೆದು ನೋಡುತ್ತಿದ್ದರು."

ರಮಾಕಾಂತ ರಾಜ ಕುಮಾರರ ಸಿಗರೇಟ್ ಕೇಸನ್ನು ತೆಗೆದು ನೋಡಿದರು. ಅದರಲ್ಲಿ ಏನೂ ಇರಲಿಲ್ಲ. "ಒಳ್ಳೆದು ಮತ್ತೇನಾಯ್ತು?"

"ಇವತ್ತು ಬೆಳಿಗ್ಗೆ ಕೆಲವು ಸಾವಿರ ರೂಪಾಯಿಗಳನ್ನು ಜೇಬಿನಲ್ಲಿ ಇಟ್ಟು ಕೊಂಡಿದ್ದರು.'—ಎಂದ ಡ್ರೈವರ್.

"ನೋಡಿದಿರೇನು' ಎಂದು ಉತ್ಸಾಹಪೂರಿತರಾಗಿ ಜೋರಾಗಿ ನುಡಿದರು ರಮಾಕಾಂತರು. "ಸಂಕೋಲೆಯು ಜೋಡಿಸುತ್ತಾ ಹೋಗುತ್ತಲಿದೆ. ನಾನು ಮೊದಲೇ ಹೇಳಿದಂತೆ ರಾಜಕುಮಾರರ ಜೇಬಿನಿಂದ ಹಣ ಹಾರಿಸಲಿಕ್ಕಾಗಿಯೇ ಕೊಲೆ ನಡೆದಿದೆ. ಕೊಲೆಗಾರನ ಹೆಸರು ಸಂಯೋಗವಶದಿಂದ ಸಿಕ್ಕಿದೆ. ಹಾಗೂ ಅವರ ಉದ್ದೇಶವೂ ತಿಳಿದಿದೆ. ಈ ಸಮಸ್ಯೆಯು ಹೆಚ್ಚು ಸಮಯ ತೆಗೆದು ಕೊಳ್ಳುವುದಿಲ್ಲ. ಈಗ ನನ್ನ ಮಾತನ್ನು ಸಮರ್ಥಿಸುವಿರಲ್ಲವೇ ಮಿ| ಜಯಂತ್?' ಎಂದರು.

"ಎಂದೂ ಇಲ್ಲ. ನಾನು ನಿಮ್ಮ ಮಾತನ್ನು ಅನುಮೋದಿಸುವುದಿಲ್ಲ.'

ಜಯಂತರವರು ದಾಕ್ಷಿಣ್ಯಕ್ಕೆ ಕಟ್ಟು ಬಿದ್ದು ಎಂದೂ ಮಾತನಾಡುವುದಿಲ್ಲ. ಯಾವಾಗಲೂ ಸಿಧಾನ ಹಾಗೂ ವಿಚಾರ ವಿನಿಮಯವಿಲ್ಲದ ಕೆಲಸಕ್ಕಾಗಿ ಅವರು ಪೋಲೀಸರನ್ನು ಖಡಾಖಡಿ ನಿಂದಿಸುತ್ತಿದ್ದರು. ದೊಡ್ಡ ದೊಡ್ಡ ಆಫೀಸರರು ಕೂಡಾ ಇವರೊಡನೆ ಕೆಲವೊಂದು ಬಾರಿ ಅಪ್ರಸನ್ನರಾಗುತ್ತಿದ್ದರು. ತುಂಬಿದ ಜನ ಸಮೂಹದಲ್ಲಿ ರಮಾಕಾಂತರಂತಹ ಆಫೀಸರರಿಗೆ ಈ ರೀತಿ ತಕ್ಷಣ ವಿಪರೀತ ಉತ್ತರ ಕೊಡುವುದು ವಿಶಿಷ್ಟಪೂರ್ಣ ವ್ಯವಹಾರ—ರಮಾಕಾಂತರು ಉಪಾಯವಿಲ್ಲದೆ ಅಪಮಾನವನ್ನು ಸಹಿಸಿಕೊಂಡರು. ಸ್ವಲ್ಪ ಸಮಯ ಸುಮ್ಮನಿದ್ದು ಪುನಃ ಹೇಳಿದರು —"ಇವೆಲ್ಲಾ ವಿಷಯ ಹೋಗಲಿ, ಈ ಕೊಲೆಯನ್ನು ದಲಾಬಹದೂರನು ಮಾಡಿದನೆಂಬುವುದನ್ನು ತಾವು ಒಪ್ಪುತ್ತೀರೋ? ಇಲ್ಲವೋ?"

"ಆದರೆ, ಕೊಲೆಯೇಕೆ ಮಾಡಿದ?" ಎಂದರು ಜಯಂತರು.

"ರಾಜಕುಮಾರರ ಜೇಬಿನಿಂದ ಕಾಗದವನ್ನು ಅಪಹರಿಸಲು" ಎಂದರು ರಮಾಕಾಂತರು.

"ಹಾಗಾದರೆ, ಸಿಗರೇಟು ಕೇಸಿನಿಂದ ಕಾಗದವನ್ನು ಅಪಹರಿಸಿ ಪುನಃ ಸಿಗರೇಟು ಕೇಸನ್ನು ಅವರ ಜೇಬಿನಲ್ಲಿ ಹಾಕಿ, ಈ ಅಪಹರಣದ ಸುದ್ದಿಯು ತಿಳಿದು ಬೇಸರಿಸಬಾರದೆಂದು ಮೊದಲೇ ಕೊಲೆಮಾಡಿದರೆಂದು ತಮ್ಮ ಅಭಿಪ್ರಾಯವೇನು?" ಎಂದು ವ್ಯಂಗ್ಯವಾಗಿ ನುಡಿದು, "ದಲಾಬಹದೂರನು ದರೋಡೆಕೋರನಲ್ಲದೆ ಕೊಲೆಗಾರನಲ್ಲ. ಅವನು ಈ ವರೆಗೆ ಒಂದೂ ಕೊಲೆಮಾಡಿಲ್ಲ. ಅವನು ಕೊಲೆಯ ಸಂಪೂರ್ಣ ವಿರೋಧಿಯಾಗಿದ್ದಾನೆ" ಎಂದರು ಜಯಂತ.

ರಮಾಕಾಂತರು ತಲೆ ತಿರುಗಿಸುತ್ತಾ ಸ್ವಲ್ಪ ಹೊತ್ತು ಯೋಚಿಸಿ – "ಇದಕ್ಕೆ ತುಂಬಾ ಉತ್ತರಗಳಿವೆ" ಎಂದರು.

"ತಿಳಿಸೋಣಾಗಲಿ, ನಾನೂ ಕೇಳಿಬಿಡುತ್ತೇನೆ" ಎಂದರು ಜಯಂತ್.

ರಮಾಕಾಂತರಿಗೆ ಈ ಯುವಕನ ಸ್ಪಷ್ಟ ಮಾತುಕತೆ ಹಾಗೂ ನಿರ್ಭಯತೆಗಳನ್ನು ನೋಡಿ ತಲೆ ತಿರುಗತೊಡಗಿತು. ಆದರೆ ಈ ತುಂಬಿದ ಜನ ಜಂಗುಳಿಯಲ್ಲಿ ಈ ನವ ಯುವಕನಾದ ಅಸಭ್ಯ ಪತ್ತೇದಾರನಿಗೆ ತಿಳಿಸಿ ಹೇಳುವ ಸಾಹಸ ಅವರಲ್ಲಿರಲಿಲ್ಲ." ಪ್ರತಿಯೊಬ್ಬ ಮನುಷ್ಯನೂ ತನ್ನ ಅಭಿಪ್ರಾಯದಂತೆ ಒಂದು ನಿಶ್ಚಿತಾರ್ಥವನ್ನು ಮಾಡಿಕೊಂಡಿರುತ್ತಾನೆ. ಈ ಈ ಕೊಲೆಯ ಬಗ್ಗೆ ತಾವೇನು ತರ್ಕ ಮಾಡಿದ್ದೀರಿ ಎಂಬುದನ್ನು ತಿಳಿಸಿರಿ" ಎಂದು ನೂತ್ರ ನುಡಿದರು ರಮಾಕಾಂತರು.

"ನಾನೇನು ಈ ಬಗ್ಗೆ ಇಷ್ಟರ ವರೆಗೆ ತರ್ಕವಿತರ್ಕ ಮಾಡಿಲ್ಲ". ಎಂದು ಹೇಳಿ ಜಯಂತರವರು ಅತ್ತಿತ್ತ ಶತಪಥ ಹಾಕತೊಡಗಿದರು. ಇವರು ಬಹಳ ಕಡಿಮೆ ವಯಸ್ಸಿನವರಾದರೂ ಅವರ ಯೋಗ್ಯತೆ ಮತ್ತು ತತ್ಪರತೆಯನ್ನು ಕಂಡ ಕಾರಣ ಇತರರಾರೂ ಏನೂ ಹೇಳಲಿಲ್ಲ. ಎಲ್ಲರೂ ಮೌನದಿಂದ ಅವರನ್ನೇ ದಿಟ್ಟಿಸುತ್ತಿದ್ದರು.

ಬಹಳ ಹೊತ್ತು ಅಡ್ಡಾಡಿದ ನಂತರ– "ನಾನು ಕೋಣೆಗಳು ಯಾರ್‍ಯಾರದಿವೆ ಎಂಬುದನ್ನು ನೋಡಲಪೇಕ್ಷಿಸುತ್ತೇನೆ", ಎಂದರು.

"ಮಿ। ಜಯಂತ್ ದಲಾ ಬಹದೂರನು ಇಷ್ಟರ ವರೆಗೂ ಇಲ್ಲಿ ಯಾವುದಾದರೂ ಕೋಣೆಯಲ್ಲಿ ಅವಿತಿದ್ದಾನೆ ಎಂದು ತಮ್ಮ ಅಭಿಪ್ರಾಯವೇನು? ವ್ಯಂಗವಾಗಿ ನುಡಿದರು ರಮಾಕಾಂತರು.

ಜಯಂತರು ಉತ್ತರ ಕೊಡದೆ ಮೆಟ್ಟಿಲಿನ ಎದುರುಗಡೆಯ ಕೋಣೆಯನ್ನು ಪರಿಶೀಲಿಸಿದರು. ಅವರ ಹಿಂದುಗಡೆಯಲ್ಲಿರುವ ಕೋಣೆಯು ಮುಚ್ಚಲ್ಪಟ್ಟಿತ್ತು—"ಈ ಕೋಣೆಯ ಬಾಗಿಲು ತೆಗೆಯಿರಿ" ಎಂದರು ಜಯಂತ್.

"ಆದರೆ ಇದು ಕುಮಾರಿ ಯಮುನಳ ಕೋಣೆ ಇತ್ತೀಚೆಗೆ ಹಲವಾರು ದಿನಗಳಿಂದ ಯಾವಾಗಲೂ ಮುಚ್ಚಿಯೇ ಇರುತ್ತದೆ." ಎಂದು ತಿಳಿಸಿದರು ದಾಮೋದರ.

"ಕಸಗುಡಿಸಲು ಕೂಡಾ ಬಾಗಿಲು ತೆರೆಯುವುದಿಲ್ಲವೇನು?

"ಬೆಳಿಗ್ಗೆ ಸ್ವಲ್ಪ ಹೊತ್ತು ನೌಕರನು ಹೋಗಿ ಗುಡಿಸಿಬರಲು ಬಾಗಿಲು ತೆರೆಯುತ್ತಾನೆ."

"ಆ ನೌಕರ ಎಲ್ಲಿದ್ದಾನೆ? ಇತ್ತ ಕರೆಯಿರಿ.'

ನೌಕರನು ಬಂದ ನಂತರ ಜಯಂತರು—"ನೀನು ಬೆಳಿಗ್ಗೆ ಬರುವಾಗ ಯಾವುದಾದರೂ ಕೋಣೆ ತೆರೆದಿತ್ತೇನು? ಯಾರಾದರೂ ಬಂದ ಚಿಹ್ನೆಯಿತ್ತೇನು?" ಎಂದು ವಿಚಾರಿಸಿದರು.

ನೌಕರನು ಮೊದಲು ತುಟಿ ಬಿಚ್ಚಲಿಲ್ಲವಾದರೂ ದಾಮೋದರರ ಬಿಂಕದ ನುಡಿಗೆ–"ಹೌದು ಸ್ವಾಮಿ, ನಾನು ಇಂದು ಬೆಳಿಗ್ಗೆ ಬಾಗಿಲು ತೆರೆಯುವಾಗ, ಈ ಕೋಣೆಯಲ್ಲಿ ಸುಂದರವಾದ ಒಂದು ಚರ್ಮದ ನೀಲಿ ಬಣ್ಣದ ಪಾಕೇಟು ಸಿಕ್ಕಿತು. ಇದಕ್ಕಿಂತ ಮೊದಲು ಹಾಗೆ ಯಾವೊಂದು ವಸ್ತುವೂ ಸಿಕ್ಕಿಲ್ಲ" ಎಂದ ನೌಕರ.

ಪ್ಯಾಕೇಟಿನ ಮಾತು ಕೇಳಿ ಬೆಚ್ಚಿಬಿದ್ದು ಡ್ರೈವರನು–"ಆ ಪಾಕೇಟ್ ಹೇಗಿತ್ತು? ಅದರಲ್ಲಿ ಏನಿತ್ತು?" ಎಂದು ವಿಚಾರಿಸಿದನು. ನೌಕರನು ಈ ಪಾಕೇಟಿನ ವರ್ಣನೆ ಮಾಡಿದನು.

"ಈಗ ಆ ಪಾಕೇಟು ಎಲ್ಲಿದೆ?" ಎಂದನು ಡ್ರೈವರನು ಉತ್ಸುಕತೆಯಿಂದ. "ನನ್ನ ಕೋಣೆಯಲ್ಲಿದೆ" ಎಂದ ನೌಕರ. "ಹೋಗಿ ಕೂಡಲೇ ಕೊಂಡು ಬಾ" ಎಂದ ಡ್ರೈವರ್ ಸಂತೋಷದಿಂದ.

ನೌಕರನು ಪಾಕೇಟು ತರಲು ಹೋದನು. ಜಯಂತ್‌ರು ಉಳಿದ ಎಲ್ಲಾ ಕೋಣೆಗಳನ್ನು ಧ್ಯಾನಪೂರ್ವಕವಾಗಿ ನೋಡಿದರು. ನೌಕರನು ಅವರೆಗೂ ಹಿಂದಿರುಗಲಿಲ್ಲ. ಜಯಂತರು ದಾಮೋದರರೊಡನೆ– "ಹೋಗಿ ಅವನನ್ನು ಕರೆದುಕೊಂಡು ಬಾ". ಎಂದರು.

ಡ್ರೈವರನೂ ದಾಮೋದರರೊಡನೆ ಹೊರಟನು. ಯಾಕೆಂದರೆ ಅವನಿಗೆ ಪ್ಯಾಕೇಟು ನೋಡುವ ಆಶೆ ಅತಿಯಾಗಿತ್ತು. ಸ್ವಲ್ಪ ಸಮಯದಲ್ಲೇ ದಾಮೋದರರು ಓಡಿ ಬಂದು ನೌಕರನು ತನ್ನ ಕೋಣೆಯಲ್ಲಿ ಸತ್ತುಬಿದ್ದಿರುವನೆಂದು ತಿಳಿಸಿದರು.

(ಮುಂದುವರಿಯುವುದು)

(೧೦ನೇ ಪುಟದಿಂದ)

ಸಂತರು ಮತ್ತು ಸಾಧಕರು ಯೇಸುವಿನೊಡನೆ ತನ್ನ ಪೂರ್ಣ ತಾದಾತ್ಮ್ಯವನ್ನು ಜೋಡಿಸಿಕೊಂಡು ಆತನ ಶಿಲಾರೋಹಣದ ಯಾತನೆಯನ್ನು ಸ್ವಯಂ ಅನುಭವಿಸಿದರು. ನಮ್ಮಂತಹ ಸಾಮಾನ್ಯ ಜನರು ನಮ್ಮ ಮನೆ ಮಂದಿಯ, ನಮ್ಮ ಇಷ್ಟಮಿತ್ರರ, ನಮ್ಮ ನೆರೆಹೊರೆಯವರ ಚಿಂತೆಗಳಲ್ಲಿ ಪಾಲುಗೊಳ್ಳುವುದರಿಂದಲೇ ನಮ್ಮ ಚಿಂತೆಯು ವಿದೂರವಾಗುವುದು. ಆಗ ನಾವು ಯೇಸುವಿನ "ನಾನು ನಿಮಗೆ ಶಾಂತಿ ಪ್ರದಾನ ಮಾಡುವೆನು; ಪ್ರಪಂಚವು ನಿಮಗೆ ನೀಡಲಾರದ ನನ್ನ ಶಾಂತಿಯನ್ನು ಕೊಡುವೆನು" ಎಂಬ ಮಾತನ್ನು ಸಾಕ್ಷಾತ್ಕಾರಗೊಳಿಸಬಲ್ಲೆವು.

ಚಿಂತೆಯಿಂದಲೇ ಶಾಂತಿ ಮತ್ತು ಆನಂದಗಳು ದೊರೆಯುವುವು--ಬಹಳ ಅದ್ಭುತ ಹಾಗೂ ಅತಿ ವಿಚಿತ್ರ ಉಪಚಾರವಿದು!! ಆದರೆ, ಹೌದು, ಚಿಂತೆಯೇ ಸರ್ವ ವಿಧದ ಆಧ್ಯಾತ್ಮಿಕ ಮತ್ತು ಲೌಕಿಕ ಚಿಂತೆಗಳಿಗೆ ದಿವ್ಯೌಷಧ.

ಇಲೆಕ್ಟ್ರಿಕ್ ಮತ್ತು ರೇಡಿಯೊ ಗೈಡ್

ಸಂಪೂರ್ಣ ಮೆಕೇನಿಕ್ ನೈಅಗಲು 117 ಚಿತ್ರಗಳಿರುವ ಪರಿಪೂರ್ಣ ಪುಸ್ತಕ ರೂ. 25 ರಲ್ಲಿ ನಿಮ್ಮ ಮನೆಯಲ್ಲಿಯೇ ರೇಡಿಯೊ ತಯಾರಿಸುವ ವಿಧಾನವನ್ನು ತಿಳಿಸುತ್ತದೆ. ಇಲೆಕ್ಟ್ರಿಸಿಟಿ, ರೇಡಿಯೊ ರಿಪೇರಿಂಗ್, ವಯರಿಂಗ್, ಇಲೆಕ್ಟ್ರಿಕಲ್ ಯಂತ್ರಕ್ರಿಯೆ ಮೊದಲಾದ ವಿವಿಧ ಉದ್ಯೋಗಗಳನ್ನು ಕಲಿಯಬಹುದಾದ ಅತ್ಯಪೂರ್ವ ಪುಸ್ತಕ. ವಿಸ್ತೃತ ಹೊಸ ಆವೃತ್ತಿ ರೂ. 5/— ಹೊಲಿಗೆ ಮತ್ತು ಕಟ್ಟಿಂಗ್ (ಸಚಿತ್ರ) ರೂ. 5/— ಸಾಬೂನು, ಮತ್ತು ಪರಿಮಳದ್ರವ್ಯ ತಯಾರಿಕೆ ರೂ. 5/— ಫೋಟೋಗ್ರಫಿಯ ಕಲೆ ರೂ. 5/— ವಿ. ಪಿ. ಚಾರ್ಜು ಪ್ರತಿ ಪುಸ್ತಕಕ್ಕೆ ರೂ. 1/— ಯಾವುದಾದರೂ 3 ಪುಸ್ತಕಗಳ ಸೆಟ್ಟಿಗೆ ರೂ. 10/— ಟ. ಖ ಸಹಿತ.

Vishubharathi Publications
Sasni Gate (NS. D) ALIGARH.

ಚಿಲ್ಲರೆ ನಯೆಪೈಸೆಗಳೆ? ಹತ್ತು, ನೂರರ ನೋಟುಗಳೆ?
ಯಾವುದೇ ಇರಲಿ—
ವ್ಯವಸ್ಥಿತವಾಗಿ ಉಳಿಸಿ; ಅಭಿವೃದ್ಧಿಯನು ಗಳಿಸಿ.

ದಿನದ ಇಪ್ಪತ್ತೈದು ನಯೆಪೈಸೆಗಳು ಏಳು ವರುಷಗಳಲ್ಲಿ ಏಳುನೂರು ರೂಪಾಯಿಗಳ ನಿಧಿಯನ್ನು ನಿಮಗೆ ತಂದೊಪ್ಪಿಸುವ,

ಪಿಗ್ಮಿ

ಸಿಂಡಿಕೇಟ್ ಬೇಂಕ್ ಮೊದಲಾಗಿ ಪ್ರಾರಂಭಿಸಿದ ಮತ್ತೀಗ ಸರ್ವ ಜನಪ್ರಿಯವಾದ ಚಿಕ್ಕ ಉಳಿತಾಯ ಯೋಜನೆ

ವರುಷದ ಒಂದು ಸಾವಿರ ರೂಪಾಯಿಗಳು (ನೀವು ಇನ್ನೂರ ಐವತ್ತರಿಂದಲೂ ಪ್ರಾರಂಭಿಸಬಹುದು) ಮೂವತ್ತೈದು ವರುಷಗಳಲ್ಲಿ ನೂರುಸಾವಿರ ರೂಪಾಯಿಗಳಿಗಿಂತಲೂ ಹೆಚ್ಚಿಗೆ ಸಂಪತ್ತನ್ನು ಕೂಡಿಸಿ ಕೊಡುವ

ಇನ್‌ವೆಸ್ಟರ್ಸ್ ಪಿಜನಿ

ಭಾರತೀಯ ಬೇಂಕಿಂಗ್ ಕ್ಷೇತ್ರದಲ್ಲೇ ನವೀನವಾಗಿ ಸಿಂಡಿಕೇಟ್ ಬೇಂಕ್ ಕೈಗೊಂಡಿರುವ ಮತ್ತೀಗ ಜನಾನುರಾಗಗಳಿಸುತ್ತಿರುವ ವಿನಿಯೋಗ ವಿಭಾಗ.

ನಿಮಗೆ ಬೇಕಾದ ವಿವರಗಳನ್ನೀಯಲು
ನಮ್ಮ ನೂರನಲ್ವತ್ತೊಂದು ಶಾಖೆಗಳು ಸಿದ್ಧವಾಗಿವೆ.
ಅಥವಾ ನೀವು ನೇರವಾಗಿ ನಮ್ಮ ಪ್ರಧಾನ ಕಾರ್ಯಾಲಯಕ್ಕೆ ಬರೆಯಬಹುದು.

ಸಿಂಡಿಕೇಟ್ ಬೇಂಕ್
ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ರಿಜಿಸ್ಟರ್ಡ್ ಕಾರ್ಯಾಲಯ: ಮುಕುಂದ ನಿವಾಸ, ಉಡುಪಿ.
ಸ್ಥಾಪನೆ: ೧೯೨೫.

ಶ್ರೀ ಎ. ಬಿ. ಶೆಟ್ರ
ಸ್ಮಾರಕ ನಿಧಿಗೆ
ಸಹಾಯ ಮಾಡಿರಿ

Edited Printed & Published by K. H. Shetty, at the Navayuga Press, Udipi, S. India.

40th year of publication. 1-6-1961 ೪೦ನೇ ವರ್ಷ

ಸಂಪುಟ ೪೧ Vol. 41

ನವಯುಗ

ಸಂಚಿಕೆ ೩೭ No. 37

ಬೆಲೆ 0=13

ಪ್ರಚಲಿತ ಪ್ರಸಂಗ:

ಜಾತೀಯತೆಗೆ ಮತ್ತಷ್ಟು ಪುರಸ್ಕಾರ!

> ಡಾ|| ನಾಗನ ಗೌಡ ಸಮಿತಿಯ ವರದಿ ಮತ್ತೆ ಅದೇ ಜಾತೀಯತೆಯನ್ನು ಎತ್ತಿ ಹಿಡಿದಿದೆ; ಸಾಲದೆಂಬುದಕ್ಕೆ 'ಅತಿ ಹಿಂದುಳಿದವರು' ಎಂಬ ಮತ್ತೊಂದು ಪಂಗಡವನ್ನು ಸೃಷ್ಟಿಸಿದೆ! ಆರ್ಥಿಕ ಮಾನದಂಡದಿಂದಲೇ ಹಿಂದುಳಿದಿರುವಿಕೆಯನ್ನು ಗೊತ್ತುಮಾಡುವ ದಿಟ್ಟ ಹೆಜ್ಜೆಯನ್ನು ನಮ್ಮ ಸರಕಾರವಿಡಲು ಮುಂದಾಗಬೇಕು.

ಅಮೆರಿಕೆಯ ಉಪರಾಷ್ಟ್ರಪತಿ ಜಾನ್ಸನ್‌ರು ಭಾರತವನ್ನು ಸಂದರ್ಶಿಸಿದಾಗ ಭಾರತದ ಅಧ್ಯಕ್ಷರು ಅವರನ್ನು ಸ್ವಾಗತಿಸುತ್ತಿರುವುದನ್ನು ಇಲ್ಲಿ ಕಾಣಬಹುದು.

ಮೈಸೂರು ರಾಜ್ಯದ ಜನತೆಯು ಕಣ್ಣಿನಲ್ಲಿ ಎಣ್ಣೆ ಸುರಿದು ಪ್ರತೀಕ್ಷಿಸುತ್ತಿದ್ದ ಹಿಂದುಳಿದವರ ಪಂಗಡಗಳನ್ನು ವರ್ಗೀಕರಿಸಲು ನೇಮಿಸಿದ್ದ ಡಾ। ನಾಗನ ಗೌಡ ಸಮಿತಿಯು ತನ್ನ ವರದಿಯನ್ನು ಸರಕಾರಕ್ಕೆ ಸಲ್ಲಿಸಿದ್ದು ಅದು ಪ್ರಕಟವಾಗಿದೆ. ಈ ವರದಿಯಲ್ಲಿ ಹಿಂದುಳಿದ ವರ್ಗಗಳನ್ನು "ಹಿಂದುಳಿದವರು" ಮತ್ತು "ಅತಿಹಿಂದುಳಿದವರು" ಎಂಬುದಾಗಿ ಎರಡು ಪಂಗಡಗಳಲ್ಲಿ ವರ್ಗೀಕರಿಸಿ ಆದರ್ಶ ದಾಖಲೆಯನ್ನು ನಿರ್ಮಿಸಿದ ವಿಚಿತ್ರ ವಿವೇಚನೆಯೊಂದನ್ನು ಬಿಟ್ಟರೆ, ಮತ್ತಾವ ಆಶಾದಾಯಕ ಇಲ್ಲವೇ ಕ್ರಾಂತಿಕಾರಕ ಸಲಹೆಗಳೂ ಸೂಚನೆಗಳೂ ಇರುವುದಿಲ್ಲ. ಎಲ್ಲಿಯೂ ನಡೆಯದುದು ಮೈಸೂರಿನಲ್ಲಿ ನಡೆಯುತ್ತದೆ–ಎಂತಲೇ ಇದು ಭಾರತದ ಪ್ರಜಾಪ್ರಭುತ್ವದಲ್ಲಿ ಇನ್ನೂ ಮಾದರಿ ರಾಜ್ಯವಾಗಿಯೇ ಉಳಿದುಕೊಂಡಿದೆ.

೧೯೫೯—೬೦ರ ವರ್ಷದಲ್ಲಿ ಪ್ರೌಢಶಾಲೆಗಳಲ್ಲಿ ಅಧ್ಯಯನ ನಡೆಸುತಿದ್ದ ವಿದ್ಯಾರ್ಥಿಗಳ ಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು ರಾಜ್ಯದ ನಾನಾ ಜಾತಿಗಳ ಸಾಕ್ಷರತೆಯ ಪ್ರಮಾಣ ನೂರಕ್ಕೆ ೬.೯ ಎಂದಿಟ್ಟುಕೊಂಡು, ಇದಕ್ಕಿಂತ ಹೆಚ್ಚು ಸಾಕ್ಷರತೆಯಿರುವ ಜಾತಿಯವರು ಮುಂದುವರಿದವರೆಂದು ಸಮಿತಿ ಪರಿಗಣಿಸಿತು. ಮುಂದಿನ ೧೦—೧೫ ವರ್ಷಗಳಲ್ಲಿ ಈಗ ಹಿಂದುಳಿದವರನ್ನು ಮುಂದೆ ತರುವ ದೃಷ್ಟಿಯಿಂದ ಇವರಿಗೆ ಅಧಿಕಾಧಿಕ ಶಿಕ್ಷಣ ಸೌಲಭ್ಯ ಕೊಡಬೇಕು; ವಿದ್ಯಾರ್ಥಿವೇತನಗಳ ಸಂಖ್ಯೆಯನ್ನು ಹೆಚ್ಚಿಸುವುದು ಮಾತ್ರವಲ್ಲ, ಹಿಂದುಳಿದವರಿಗೆ ವಿಶ್ವವಿದ್ಯಾಲಯ ಶಿಕ್ಷಣವನ್ನೂ ಉಚಿತವಾಗಿ ಕೊಡಬೇಕು ಎಂಬುದು ಸಮಿತಿಯ ಅಭಿಪ್ರಾಯವಿದೆ. ಶೈಕ್ಷಣಿಕ ಪ್ರಗತಿಯಾಗುತ್ತ ಬಂದಂತೆ, ಈಗ ೭೪ ಹಿಂದುಳಿದ ಪಂಗಡಗಳು ಮತ್ತು ೧೩೫ ಅತಿಹಿಂದುಳಿದ ಪಂಗಡಗಳು ಇರುವುವಾದರೂ, ಕಾಲಕ್ರಮದಲ್ಲಿ ಬಹಳ ಕಡಿಮೆಯಾಗುವುವೆಂದು ಅದು ಹಾರೈಸಿದೆ. ಇಡಿಯ ರಾಜ್ಯದಲ್ಲಿ ಕೇವಲ ೧೫ ಜಾತಿಗಳು ಮಾತ್ರ ಮುಂದುವರಿದಿರುವುವೆಂದು ಈ ವರದಿ ಉಲ್ಲೇಖಿಸಿದೆ.

ಇದು ವರೆಗೆ ಲಿಂಗಾಯತರು ಹಿಂದುಳಿದವರಾಗಿದ್ದರೆ, ಈಗ ಅವರು ಮುಂದುವರಿದಿದ್ದಾರೆ. ಒಕ್ಕಲಿಗರನ್ನು ಹಿಂದುಳಿದವರೆಂದು ಹೇಳಿದರೂ ಇವರಲ್ಲಿ ಹೆಚ್ಚು ವಿದ್ಯಾವಂತರಾಗಿರುವ ಬಂಟರನ್ನು ಪ್ರತ್ಯೇಕಿಸಿ ಇವರು ಮುಂದುವರಿದವರೆಂದು ಘೋಷಿಸಲಾಗಿದೆ. ಮುಸ್ಲಿಮರು ಮುಂದುವರಿದವರಾಗಿದ್ದರೂ ಇವರ ಅಂಗವಾಗಿರುವ ಮಾಪಿಳ್ಳೆ, ಪಿಂಜಾರಿ ಮೊದಲಾದವರನ್ನೂ ಸೇರಿಸಿ ಒಟ್ಟು ಮುಸ್ಲಿಮರು ಹಿಂದುಳಿದವರಾಗಿ ಪರಿಣಮಿಸಿದ್ದಾರೆ. ಈ ವಿಭಜನೆಯು ಕ್ರಮ ಹಲವು ಟೀಕೆಗೂ ಗುರಿಯಾಗಿದೆ.

ರಾಜ್ಯದಲ್ಲಿ ಹಿಂದುಳಿದ ಪಂಗಡಗಳಿಗೆ ಸರಕಾರಿ ನೌಕರಿಯಲ್ಲಿ ಸೇ. ೪೫ರಷ್ಟು ಮತ್ತು ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ಸೇ. ೫೦ರಷ್ಟು ಸ್ಥಾನಗಳನ್ನು ಕಾಯ್ದಿರಿಸಬೇಕೆಂದು ನಾಗನಗೌಡ ಸಮಿತಿಯು ವರದಿ ಹೇಳುತ್ತದೆ. (ನೌಕರಿಯಲ್ಲಿ ಹಿಂದುಳಿದವರಿಗೆ ಸೇ. ೨೮, ಅತಿ ಹಿಂದುಳಿದವರಿಗೆ ಸೇ. ೨೨ ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ಇದು ಕ್ರಮವಾಗಿ ೨೮ ಮತ್ತು ೨೨) ಹರಿಜನ ಗಿರಿಜನರ ಬಗ್ಗೆ ಪ್ರತ್ಯೇಕವಾಗಿ ವಿಚಾರಿಸಲಾಗಬೇಕಾಗುವುದು.

ಒಂದು ರಾಜ್ಯದಲ್ಲಿ ಹಿಂದುಳಿದವರು ಯಾರು ಎಂಬುದನ್ನು ಅಳೆಯುವ ಮಾನದಂಡವೀ ಬಾರಿಯಾದರೂ ಬೇರೆಯಾದೀತು, ಜಾತಿ—ಪಂಗಡಗಳ ಹೆಸರಿನಲ್ಲಿ ಆಗುತ್ತಿರುವ ಗೊಂದಲ ಹರಡುತ್ತಿರುವ ಅಶಾಂತಿಗಳು ಇನ್ನಾದರೂ ದೂರವಾದಾವು ಎಂದು ಆಶಿಸಿದ್ದವರ ಎದೆಗೆ ಡಾ। ನಾಗನ ಗೌಡ ಸಮಿತಿಯ ವರದಿಯು ಹಿಮನೀರು ಎರೆದಿದೆ. ಜಾತೀಯತೆಯಿಂದಾಗುವ ಅನಾಹುತಗಳನ್ನು ವಿವರಿಸಿ, ಅದು ದೂರವಾಗಬೇಕೆನ್ನುವ, ಜಾತೀಯತೆಯು ಅಂತ್ಯಗೊಂಡಂದೇ ಭಾರತದ ಏಳ್ಗೆಯೆಂದು ಘೋಷಿಸುವ ಈ ಕಾಲದಲ್ಲಿ ಕಲಿಯುವ ಮಕ್ಕಳಲ್ಲಿ ಜಾತಿಭೇದದ ಬೀಜ ಬಿತ್ತಿ ಅದನ್ನು ಪುನಃ ಬೆಳೆಯಗೊಡುವುದು ಖೇದನೀಯ. ಎಳೆಯ ಮಗು ಸ್ಪರ್ಶಾಸ್ಪರ್ಶತೆಯನ್ನರಿಯುವುದಿಲ್ಲ; ಜಾತಿ ಭೇದದ ಗಂಧಗಾಳಿಯ ಸೋಂಕೂ ಅದಕ್ಕಿರುವುದಿಲ್ಲ. ಆದರೆ, ಅದರ ಬುದ್ಧಿ ಪರಿಪಕ್ವವಾದಂತೆ ಅದರಲ್ಲಿ ಈ ವಿಷ ಬೀಜವನ್ನು ಸಮಾಜ ಬಿತ್ತುತ್ತದೆ—ಸರಕಾರ ಜಾತ್ಯತೀತವಾಗಿದ್ದರೂ ಇದಕ್ಕೆ ಮತ್ತೂ ನೀರು ಗೊಬ್ಬರವಿಟ್ಟು ಬೆಳೆಸುವುದು ಅನ್ಯಾಯ. ಒಂದು 'ಜಾತಿಯ ತಾಯ್ತಂದೆಯರ ಹೊಟ್ಟೆಯಲ್ಲಿ ಹುಟ್ಟಿದ ನಿರಪರಾಧಿ ಮಗುವಿಗೆ ಮುಂದೆ ಆ ದರಕ್ಕಾಗಿ ಶಿಕ್ಷೆ ಲಭಿಸುವುದು ಅನ್ಯಾಯ.

ಜಾತಿಯೆಂಬುದು ತಾತ್ಕಾಲಿಕ ಭೇದ. ಅದು ಶಾಶ್ವತವಲ್ಲ. ಸಮಾಜವು ಮಾಡಿಕೊಂಡ ಕೃತಕ ವಿಂಗಡಣೆ. ಸಮಾಜವು ಇದನ್ನು ಕಾಲಕ್ರಮದಲ್ಲಿ ಬದಲಾಯಿಸಲೂ ಬಲ್ಲುದು. ಸಮಾಜದ ವಿಚಾರಧಾರೆ ಪರಿವರ್ತನ ಶೀಲವಾದುದು; ಇದರ ಪರಿಣಾಮವಾಗಿ ಇಂದು ಜಾತಿಕಟ್ಟಳೆಯನ್ನು ಕಟ್ಟುನಿಟ್ಟಾಗಿ ಅನುಸರಿಸುವವರು ಯಾರು? ಎಲ್ಲಿದ್ದಾರೆ? ಇದು ಸಂಪೂರ್ಣ ಶಿಥಿಲಗೊಂಡಿದೆ—ಹಲವಾರು ಕಾರಣಗಳಿಂದ. ಅವಶ್ಯವಾಗಿಯೂ ಜಾತೀಯತೆ ನಿರ್ನಾಮವಾಗಬೇಕಾದುದೇ ನಮ್ಮ ರಾಷ್ಟ್ರದ ನಿರ್ಮಾಪಕರು ಇದನ್ನೇ ಬಯಸುತ್ತಾರೆ; ಹೋದಲ್ಲಿ, ಬಂದಲ್ಲಿ, ನಿಂತಲ್ಲಿ, ಕುಂತಲ್ಲಿ ಇದನ್ನೇ ಡಣಾಡಂಗುರವಾಗಿ ಬಾರಿಸುತ್ತಾರೆ. ಪ್ರಗತಿ ಶೀಲ ಸಮಾಜ ರಚನೆಯಾಗಬೇಕೆನ್ನುವುದು ಮಾತ್ರ ಸಾಲದು; ಪ್ರಗತಿ ಶೀಲ ಧೋರಣೆಗಳನ್ನೂ ನಾವು ಅಳವಡಿಸಿಕೊಳ್ಳಬೇಕು.

ಡಾ|| ಗೌಡ ಸಮಿತಿಯು ವರದಿಯಲ್ಲಿ ಏನನ್ನೇ ಹೇಳಲಿ, ಅದನ್ನು ತಯಾರಿಸಲು ಅವರು ಅದೆಷ್ಟೇ ಪರಿಶ್ರಮ ವಹಿಸಿರಲಿ, ಅದರ ಸಂಗತಿಗಳು ಪ್ರಗತಿಶೀಲವಾಗಿಲ್ಲವೆಂಬುದನ್ನು ನಿಷ್ಪಕ್ಷಪಾತಿಗಳು ಹೇಳಬಲ್ಲರು. ಜಾತೀಯತೆಯ ಆಧಾರದಿಂದ ಅದನ್ನೇ ಮಾನದಂಡವಾಗಿಟ್ಟು ಹಿಂದುಳಿದಿರುವಿಕೆಯನ್ನು ಅಳೆಯುವುದೇ ಅನ್ಯಾಯ. ಆರ್ಥಿಕ ಮಹತ್ವವು ಬೆಳೆಯುತ್ತ ಬರುತ್ತಿರುವ—ಬಂದಿರುವ—ಈ ಅರ್ವಾಚೀನ ಕಾಲದಲ್ಲಿ ಪ್ರಾಚೀನ—ಅತಿಪ್ರಾಚೀನ—ಕಾಲದ ಒಲ್ಲದ ಜಾತೀಯತೆಯನ್ನು ಕಡೆಗಣಿಸುವ ಬದಲು ಎತ್ತಿಹಿಡಿದುದೇ ತಪ್ಪು. ಆರ್ಥಿಕ ಸ್ಥಿತಿಯೇ ಇಂದಿನ ಕಾಲದಲ್ಲಿ ಹಿಂದುಳಿದಿರುವಿಕೆಯನ್ನು ಅಳೆಯಲು ಯೋಗ್ಯ ಮಾನದಂಡ. ಸಮಾಜದ ವಿಕಾಸಕ್ಕೆ ಹೇತುವಾಗುವುದು ಜಾತೀಯತೆಯ ಸಂಕುಚಿತ ಪ್ರವೃತ್ತಿಯಲ್ಲ; ಆರ್ಥಿಕ ವಿಕಾಸ. ಯೋಗ್ಯತೆ, ಸ

(೧೧ನೇ ಪುಟ ನೋಡಿರಿ)

ESTD. 1921

NAVAYUGA
KANNADA WEEKLY,
UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ
ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೨೧.

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್,
ವಿದ್ವಾನ್.
ಬಿ. ಶಾಮರಾಯ ಶೆಟ್ಟಿ,
ಬಿ. ಎ., ಎಲ್. ಟಿ.

ಸಂಚಾಲಕ ಸಂಪಾದಕರು:
ಕೆ. ಪೊನ್ನಯ್ಯ ಶೆಟ್ಟಿ.

●

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50
ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಧಾರಾವಾಹಿ ಕಾದಂಬರಿ

ಯಮುನ ನೆರಳು

ಮೂಲ ಲೇಖಕರು: ಶ್ರೀ ಎಂ. ಎಲ್. ಪಾಂಡೇಯ.
ಅನುವಾದಕರು: ಶ್ರೀ ಎಸ್. ಎಂ. ಶೆಟ್ಟಿ, ಶಿಮುಂಜೆ ಪರಾರಿ.

(ಕಳೆದ ಸಂಚಿಕೆಯಿಂದ)

— ೬ —

ಜಯಂತರು ದಾಮೋದರರೊಡನೆ ತಕ್ಷಣವೇ ನೌಕರನು ಸತ್ತು ಬಿದ್ದ ಕೋಣೆಯ ಕಡೆಗೆ ಓಡಿದರು. ಅಲ್ಲಿ ಹೋಗಿ ನೋಡುವಾಗ ನೌಕರನು ಅವನ ಮಂಚದ ಬಳಿ ನೆಲದ ಮೇಲೆ ಬಿದ್ದಿದ್ದನು. ಅವನ ಒಂದು ಕೈ ತಲೆದಿಂಬಿನಡಿಯಲ್ಲಿತ್ತು. ಬಹುಶಃ ಅವನು ತಲೆದಿಂಬಿನಡಿಯಿಂದ ಪಾಕೀಟ್ ತೆಗೆಯಲು ಬಗ್ಗಿದ್ದಾಗಲೇ ಆತನ ಹತ್ಯೆ ನಡೆದಿತ್ತು. ತಲೆದಿಂಬು ಮತ್ತು ಹಾಸಿಗೆ ನೋಡಲಾಯ್ತು. ಆದರೆ ಅಲ್ಲಿ ಯಾವ ಪಾಕೀಟೂ ದೊರೆಯಲಿಲ್ಲ.

ಕೂಡಲೇ ಜಯಂತರು ದಾಮೋದರರೊಡನೆ—"ಹೊರಗೆ ಹೋಗುವ ಎಲ್ಲಾ ಮಾರ್ಗಗಳನ್ನೂ ಮುಚ್ಚಿ ಬಿಡು". "ಮಿಸ್ಟರ್ ರಮಾಕಾಂತ್, ದಯವಿಟ್ಟು ಹೊರಗೆ ಹೋಗದಂತೆ ತಮ್ಮ ಪೊಲೀಸರಿಗೆ ಪಹರೆ ಮಾಡಲು ತಿಳಿಸಿ,", ಪ್ಲೀಸ್ ಎಂದರು. ತದನಂತರ ಮೃತ ನೌಕರನ ಜೇಬನ್ನು ಪರೀಕ್ಷಿಸಲು ಅದೇ ಮುಖವಾಡದ ಗುರುತಿನ ಕಾಗದವು ಸಿಕ್ಕಿತು. ಅದರಲ್ಲಿ—"ಪಾಕೀಟನಿಂದ ಸಿಕ್ಕಿದ ಬಹುಮಾನ" ಎಂದು ಬರೆಯಲ್ಪಟ್ಟಿತ್ತು. ಜಯಂತರೊಂದಿಗೆ ರಮಾಕಾಂತರೂ ಬೆಚ್ಚಿಬಿದ್ದರು.

"ಡ್ರೈವರನನ್ನು ಕೊಂಚ ಕರೆಯಿರಿ. ಅವನಿಗೆ ಪಾಕೀಟು ನೋಡುವ ಹುಮ್ಮಸ್ಸು ತುಂಬಾ ಇತ್ತು" ಎಂದರು ಜಯಂತರು ದಾಮೋದರರೊಡನೆ.

"ನಾನವನನ್ನು ನೌಕರನ ಕಳೇಬರದ ಬಳಿ ನಿಲ್ಲಿಸಿ ಬಂದಿದ್ದೆ!" ಎಂದು ಹೆದರಿದಂತಾಗಿ ನುಡಿದರು ದಾಮೋದರ್.

ಇದನ್ನು ಕೇಳುತ್ತಲೇ ಜಯಂತರಿಗೆ ಆವೇಶ ತುಂಬಿ ದೇಹ ನಡುಗಲಾರಂಭಿಸುವಂತಾಯ್ತು—"ಎಂತಹ ಮೂರ್ಖರು ನೀವು. ಡ್ರೈವರನೊಬ್ಬನನ್ನೇ ಬಿಟ್ಟು ಬಂದಿರುವಿರಿ. ಅವನಿಗೂ ದಿನ ಪೂರೈಸಿದ ಹಾಗೆ ತೋರುತ್ತದೆ. ಸಂದಿ ಮೂಲೆಗಳಿಗೆ ಹೋಗಿ, ತೆರೆದಿರುವ ಬಾಗಿಲುಗಳನ್ನು ಸರಿಯಾಗಿ ಮುಚ್ಚಿದೆಯೋ ಇಲ್ಲವೋ? ಎಂಬುದನ್ನು ನೋಡಿ ಬನ್ನಿರಿ. ರಮಾಕಾಂತ್, ಪ್ರತಿಯೊಂದು ಬಾಗಿಲ ಬಳಿಯಲ್ಲೂ ನಿಮ್ಮ ಚತುರ ಪೋಲಿಸರ ಕಾವಲಿರಲಿ. ಯಾರೇ ಆಗಲಿ ಹೊರ ಹೋಗಬಾರದು. ಓಡುವ ಪ್ರಯತ್ನ ಮಾಡಿದರೆ ಕೂಡಲೇ ಫಾಯರ್ ಮಾಡಲು ಸಂಪೂರ್ಣ ಒಪ್ಪಿಗೆ ಕೊಡಿ. ನೋಡಿ, ತುಂಬಾ ಜಾಗ್ರತೆಯಿಂದಿರಬೇಕಾಗುತ್ತದೆ. ಯಾವೊಂದು ಅಡ್ಡಿಯೂ ಆಗಬಾರದು. ಎಲ್ಲಾ ಸಂಗತಿಗಳ ಮೇಲ್ವಿಚಾರವನ್ನು ನನ್ನ ಮೇಲೆ ಬಿಡಿರಿ."

ಎಲ್ಲಾ ಮೂಲೆಗಳಲ್ಲೂ ಡ್ರೈವರನನ್ನು ಹುಡುಕಲಾಯ್ತು. ಆದರೆ ಅವನ ಪತ್ತೆಯೇ ಇಲ್ಲ. ಆದರೆ ಓರ್ವ ಅತಿಥಿಯು "ಓರ್ವ ಕ್ಷೀಣ ಮನುಷ್ಯನು ಡ್ರೈವರನ ಕೈಹಿಡಿದುಕೊಂಡು ಹಂತದಿಂದಿಳಿದು ಸಾಗರಪೇಳ'ಯ ಕಡೆ ಹೋದನು. ಡ್ರೈವರನು ತುಂಬಾ ಭಯಭೀತನಾಗಿ ಕಾಣುತ್ತಿದ್ದನು" ಎಂದನು.

ಕೊಠಡಿಯಲ್ಲಿಯ ಎಲ್ಲಾ ನೌಕರರು ಮತ್ತು ಅತಿಥಿಗಳು ಅಲ್ಲಿಂದಿಲ್ಲಿಗೆ ಓಡಾಡತೊಡಗಿದರು. ಜಯಂತರು ಬಾಗಿಲನ್ನು ಭದ್ರತೆಯಿಂದ ಮುಚ್ಚಲು ಅಪ್ಪಣೆ ಕೊಟ್ಟರು. ಹಾಗೂ ಮೊದಲನೇ ಸೌಧದಿಂದ ತನಿಖೆ ಪ್ರಾರಂಭಿಸಿದರು. ದೂರದಿಂದ ಬಂದಿಳಿದಿದ್ದ ಅತಿಥಿಗಳಂತೂ ತಮ್ಮ ಕೋಣೆಯ ಬಾಗಿಲು ತೆರೆಯಲು ಹೆದರುತ್ತಿದ್ದರು. ಆದರೆ ಹೊರಗೆ, ಕಾವಲು ಭಯಂಕರವಾಗಿತ್ತು. ಎಲ್ಲರೂ 'ಯಮುನ ನೆರಳ'ನ ಭೀತಿಯಿಂದ ತಲ್ಲಣಿಸುತ್ತಿದ್ದರು.

ಜಯಂತರು ಎರಡನೇ ಸೌಧದಿಂದಿಳಿದು ಬಂದರು. ಅಷ್ಟರಲ್ಲಿ ಕುಮಾರಿ ಯಮುನಾ ಮತ್ತು ರಾಣೀ ಸಾಹೇಬ್ ಅಲ್ಲಿಗೆ ಬಂದುದು ತಿಳಿಯಿತು. ತನ್ನ ತಂಗಿಯ ಭಾವೀಪತಿಯ ಮರಣ ವಾರ್ತೆಯಿಂದ ಶೋಕ ಸಂತಪ್ತಳಾದ ಅವಳಿಗೆ ಮೆಟ್ಟಿಲನ್ನೇರಲು ಆಗುತ್ತಿರಲಿಲ್ಲ. ಜಯಂತರು ಅವರ ಬಳಿಗೆ ಹೋಗಿ ವಂದಿಸಿ ಸಹಾನುಭೂತಿಯಿಂದ ಎರಡು ಶಬ್ದಗಳನ್ನು ಹೇಳಿದರು. ರಾಣಿಯ ಕಣ್ಣುಗಳಿಂದ ಟಪಟಪನೇ ಕಣ್ಣೀರು ಉದುರ ತೊಡಗಿತು.

ಯಮುನಳು ಎತ್ತರ ದೇಹದ ಸುಂದರ ಯುವತಿಯಾಗಿದ್ದಳು. ಒಂದು ವರ್ಷದ ಮೊದಲು ಶೇರ್‌ಗಡದಲ್ಲಿ ರಾಜಾರಾಮಪಾಲ ಸಿಂಹರ ಜತೆ ಈಕೆಯ ಲಗ್ನ ನಡೆದಿತ್ತು. ಮದುವೆಯ ಮರುದಿನವೇ ರಾಜಾರಾಮಪಾಲ ಸಿಂಹರು ನಾಪತ್ತೆಯಾಗಿದ್ದರು. ಅವರ ಹಾಸಿಗೆಯಲ್ಲಿ ಅದೇ ಯಮುನ ನೆರಳಿನ ಕಾಗದ ಸಿಕ್ಕಿತ್ತು.

ಜಯಂತರು ಅವರೊಡನೆ ಮಾತು ಸರಿಯಾಗಿ ಆಡಲಿಲ್ಲ. ಅಷ್ಟರಲ್ಲಿ ಒಬ್ಬ ಪೋಲಿಸನು ಓಡಿ ಬಂದು, "ಎರಡನೇ ಸೌಧದಲ್ಲಿ ಒಂದು ಶವವಿದೆ." ಎಂದು ತಿಳಿಸಿದನು.

'ಆದರೆ, ನಾನೀಗ ಅಲ್ಲಿಂದಲೇ ಬರುತ್ತಿದ್ದೇನೆ! ಇದೆಂತಹ ರಹಸ್ಯ" ಎಂದ ಜಯಂತರು ಮೇಲಕ್ಕೆ ಧಾವಿಸಿದರು. ಅಲ್ಲಿ ಡ್ರೈವರನ ಮೃತ ಶರೀರವಿದ್ದಿತು. ಅವನ ಕಿಸೆಯಿಂದ ಜಯಂತರು ಕಾಗದ ತೆಗೆದರು. ಅದರಲ್ಲೂ—'ಉತ್ಸುಕತೆಯ ಪರಿಣಾಮ' ಎಂದು ಬರೆದಿತ್ತು.

ಮುಂದೆ ಶವ ಬಿದ್ದಿದ್ದ ಆ ಕೋಣೆಯನ್ನು ತೆರೆಸಿದಾಗ ಅಲ್ಲಿ ಅತಿಥಿಯಾಗಿ ಕರೆಯಲ್ಪಟ್ಟ ಫೌಜ ಆಫೀಸರ್ ನಿಹಾಲಾ ಸಿಂಹರು ಸಮಾಚಾರ ಪತ್ರಿಕೆಯನ್ನು ಓದುತ್ತಿದ್ದರು. ಪೊಲೀಸ್ ಅಫೀಸರರನ್ನು ನೋಡಿ ಅವರು ಆಶ್ಚರ್ಯ ಪ್ರಕಟಿಸಿದರು. ಅವರ ಕೋಣೆಯನ್ನು ಪರೀಕ್ಷಿಸಲಾಯ್ತು. ಆದರೆ ಅಲ್ಲಿಯೂ ಯಾವ ಸಂದೇಹಾಸ್ಪದ ವಸ್ತುಗಳೂ ದೊರೆಯಲಿಲ್ಲ. ನಿಹಾಲಾ ಸಿಂಹರಿಗೆ ಕೆಲವು ಪ್ರಶ್ನೆಗಳನ್ನು ಕೇಳಲಾಯ್ತು. ಶಾಂತ ಪ್ರವೃತ್ತಿಯ ಅವರ ವಾರ್ತಾಲಾಪದಿಂದ ಜನರಿಗೆ ಯಾವುದೇ ಸಂದೇಹಾಸ್ಪದ ಕುರುಹೂ ಸಿಕ್ಕಲಿಲ್ಲ. ಹತ್ತಿರದ ಇನ್ನಿತರ ಕೋಣೆಗಳ ತನಿಖೆ ನಡೆಸಲು ಏನೂ ಪ್ರಯೋಜನ ಉಂಟಾಗಲಿಲ್ಲ. ಸೂರ್ಯನು ಪಶ್ಚಿಮಕ್ಕೆ ತಿರುಗತೊಡಗಿದನು. ಜಯಂತರು ಒಮ್ಮಿಂದೊಮ್ಮೆಲೇ—"ಯಾರು ಎಲ್ಲಿಗೆ ಬೇಕಾದರೂ ಹೋಗಬಹುದು; ಪಹರೆಯ ಅವಶ್ಯಕತೆಯಿಲ್ಲ" ಎಂದು ಅಪ್ಪಣೆ ಮಾಡಿದರು.

"ಅಂದರೆ ಕೊಲೆಗಾರನು ಹೊರಗಿನ ವ್ಯಕ್ತಿ. ಆತನು ಕೊಲೆಮಾಡಿ ಹೊರ ಹೋಗಿರುವನು ಎಂದು ತಮ್ಮ ಅಭಿಪ್ರಾಯವೇನು?" ಎಂದರು ರಮಾಕಾಂತರು.

"ಖಂಡಿತವಾಗಿಯೂ ಅಲ್ಲ. ನನ್ನ ಅಭಿಪ್ರಾಯದಂತೆ ಕೊಲೆಗಾರನು ಇಲ್ಲಿ ವಾಸಿಸುತ್ತಲೇ ಇದ್ದಾನೆ. ಅವನು ಇಲ್ಲಿ ಈಗಲೂ ಇರುವ ಸಂಭವವಿದೆ."

"ಮತ್ತೆ ತನಿಖೆ ಏಕೆ ನಿಲ್ಲಿಸುತ್ತಿದ್ದೀರಿ"

"ತನಿಖೆ ಈಗ ನಿಷ್ಪ್ರಯೋಜಕ. ಈ ಜನಸಂದಣಿಯಲ್ಲೂ ನಿರ್ಭಯವಾಗಿ ಕೊಲೆ ಮಾಡಬಲ್ಲ ಮನುಷ್ಯ ಯಾವೊಂದು ಗುರುತನ್ನೂ ಬಿಟ್ಟು ಹೋಗುವುದಿಲ್ಲ"

'ನೀವು ಸೋಲೊಪ್ಪಿಕೊಳ್ಳುತ್ತಿದ್ದೀರೇನು? ಈ ರೀತಿಯಾಗಿ ಕೊಲೆಗಾರನನ್ನು ಸ್ವತಂತ್ರವಾಗಿ ಬಿಡುತ್ತಿದ್ದೀರಲ್ಲ! ಅವನು ಈಗ ಜೇಬಿಗೆ ಕೈಹಾಕಿ ತಿರುಗುತ್ತಾನೆ. ಅನಂತರ ಸಂದರ್ಭ ನೋಡಿ ಇಲ್ಲಿಂದ ಹೊರಟು ಹೋಗುತ್ತಾನೆ."

"ಮಿ। ರಮಾಕಾಂತ್ ನಿಷ್ಕಾರಣವಾಗಿ ಸಮಯವನ್ನು ಏಕೆ ಹರಣಗೊಳಿಸುತ್ತಿದ್ದೀರಿ? ಯಾರು ನಿರ್ಭೀತನಾಗಿ ತಿರುಗಾಡಿಕೊಂಡು ತನ್ನ ಸಾವಾನನ್ನು ಬಿ

(೧೧ನೇ ಪುಟ ನೋಡಿರಿ)

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ: ಬಡ್ಡಿ ಸೇಕಡಾ 5ರಂತೆ: ರೂ. 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100—00 ಒದಗಿಸುವುದು.

ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಸೇಕಡಾ 5¼ರ ವರೆಗೆ.

ತಾ. 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK LTD.

Estd: 1920

ರವೀಂದ್ರವಾಣಿ: ೧೧

ಪಾಪ ಮತ್ತು ಅದರ ಸಮಸ್ಯೆ

ಸತ್ಯದಿಂದ ಹೊರಗಿರುವುದು ಯಾರಿಂದಲೂ ಸಾಧ್ಯವಿಲ್ಲ. ಕಳ್ಳ ದರೋಡೆಗೋರರು ಪರಕಂಟಕರಾಗಿದ್ದರೂ, ತಮ್ಮೊಳಗೆ ಮೈತ್ರಿಯುಳಿಸಲು ಸತ್ಯವನ್ನೇ ಆಶ್ರಯಿಸುತ್ತಾರೆ. ಆದರೆ, ಮಾನವ ಚರಿತ್ರ ಸಹಿತನಾಗಿದ್ದಾನೆ; ಎಂತಲೇ ಆತ ಭವಿಷ್ಯವನ್ನೂ ನೋಡಿ ಮುಂದುವರಿಯಬೇಕಾಗುತ್ತದೆ.

ಮೂಲ ಲೇಖಕರು: ವಿಶ್ವಕವಿ ರವೀಂದ್ರನಾಥ ಟಾಗೋರ್.
ಅನುವಾದಕರು: ಶ್ರೀ. ಕೆ. ಎನ್. ಭಟ್, ಶಿರಾಡಿಪಾಲ್.

ಅಪೂರ್ಣತೆಯು ಕೇವಲ ಅಪೂರ್ಣತೆಯೇ ಆಗಿರದೆ ಪೂರ್ಣತೆಯ ಆದರ್ಶದೊಡನೆ ಇರುವುದು. ಈ ಪೂರ್ಣತೆಯೆಂಬುದು ಅನುಭವದ ಪಥದಲ್ಲಿ ಮುಂದುವರಿಯುತ್ತಿರುವುದು. ಅಸತ್ಯದಲ್ಲಿ ಸತ್ಯದ ಜ್ಞಾನಬೋಧವನ್ನು ಕೊಡುವುದು; ಅಪೂರ್ಣತೆಯಲ್ಲಿ ಪೂರ್ಣತೆಯ ಅನುಭವವನ್ನು ನೀಡುವುದು; ಇದು ನಮ್ಮ ಬುದ್ಧಿಯ ಕರ್ತವ್ಯವಾಗಿದೆ. ದೋಷಗಳು ಸದಾ ನಮ್ಮಲ್ಲಿರುತ್ತಿದ್ದರೂ, ಅವುಗಳನ್ನು ತಿಳಿದು ಸತ್ಯದ ಪ್ರಕಾಶದಿಂದ ತೊಡೆದುಹಾಕುವಿಕೆಯೇ ಜ್ಞಾನವಾಗಿದೆ. ನಮ್ಮ ದುರ್ಭಾವನೆಗಳೊಡನೆ-ಯುದ್ಧ ಮಾಡುತ್ತ ನಮ್ಮ ಚಾರಿತ್ರ್ಯವನ್ನು ಶುದ್ಧಗೊಳಿಸುತ್ತ ನಾವು ಪೂರ್ಣತೆಯನ್ನು ಪಡೆಯಬೇಕಾಗುವುದು. ಇದು ನಮ್ಮ ಆಂತರಿಕ, ಬಾಹ್ಯ ಇವೆರಡು ಪರಿಸ್ಥಿತಿಗಳಿಗೂ, ಸಂಬಂಧಿಸಿದುದಾಗಿದೆ. ಜೀವನ ಜ್ಯೋತಿಯನ್ನು ಪ್ರಕಾಶಗೊಳಿಸುವುದಕ್ಕಾಗಿ ನಮ್ಮ ಪ್ರಾಣಾಗ್ನಿಯು, ಪ್ರತಿಕ್ಷಣವೂ ಬಾಹ್ಯ ಶರೀರದ ತತ್ವಗಳನ್ನು ಪ್ರಜ್ವಲಿಸುತ್ತಿರುತ್ತದೆ. ಸಮಿಧೆಗಳು ಕೂಡ ನಮ್ಮ ನೈತಿಕ ಜೀವನದ ದೀಪ್ತಿಗೆ ಇದೇರೀತಿ ಬೇಕಾಗಿವೆ. ಇದೇ ಯಜ್ಞ, ಈ ಯಜ್ಞವು ಜೀವನಕ್ರಮವನ್ನು ಮುನ್ನಡೆಸುತ್ತಿದೆ. ನಾವು ಇದನ್ನು ಸಾಕ್ಷಾತ್ಕರಿಸಿಕೊಂಡಿದ್ದೇವೆ. ಮತ್ತು ಇದನ್ನು ನೋಡಿ ತಿಳಿದುಕೊಳ್ಳುತ್ತ ನಾವು ಮಾನವನ ಗತಿಯು ಅಕಲ್ಯಾಣದಿಂದ ಕಲ್ಯಾಣದ ಕಡೆಗೆ ಇದೆ; ಎಂದು ವಿಶ್ವಾಸಪಡುತ್ತಿದ್ದೇವೆ. ಕಲ್ಯಾಣವು ಮನುಷ್ಯನ ಪ್ರಕೃತಿಯ— ಭಾವಾತ್ಮಕವಾದ ತತ್ವವಾಗಿದೆ. ಇದು ಪ್ರತಿಯೊಂದು ಯುಗದಲ್ಲಿ, ದೇಶಕಾಲಗಳಲ್ಲಿಯೂ, ಮಾನವನ ಮುಖ್ಯ ಆದರ್ಶವಾಗಿರುವುದು ಎಂಬುದನ್ನು ನಾವು ಆದರ್ಶದಿಂದ ಕಂಡುಕೊಂಡಿದ್ದೇವೆ.

ಕಲ್ಯಾಣವೆಂದರೇನು? ಎಂದು ತಾವು ಕೇಳಬಹುದು. ಅದಕ್ಕೆ ನಾನು ಕೊಡುವ ಉತ್ತರವೆಂದರೆ-ಮನುಷ್ಯನು ತನ್ನ ವಿಸ್ತೃತ ರೂಪವನ್ನು ನೋಡಿ, ಯಾವಾಗ ಅನುಭವ ಮಾಡಿಕೊಳ್ಳಲಾರಂಭಿಸುವನೋ, ಆಗ ಆತನಿಗೆ ತನ್ನ ವರ್ತಮಾನ ಕಾಲದ, ಅನುಭವವಾಗುತ್ತಿರುವ ರೂಪ, ಅಥವಾ ವ್ಯಕ್ತಿತ್ವವು ಅದಕ್ಕಿಂತಲೂ ದೊಡ್ಡದಾಗಿ ವಿಶಾಲವಾಗಿದೆ ಎಂಬ ಅನುಭವವಾಗತೊಡಗುವಾಗ ಆತನಿಗೆ ತನ್ನ ನೈತಿಕ ಪ್ರವೃತ್ತಿಗಳ ಜ್ಞಾನೋದಯವಾಗತೊಡಗುವುದು. ಇಷ್ಟಾಗುವಾಗ, ಆತನಿಗೆ ತನ್ನ ಭಾವೀ ಜೀವನದ ಸೂಕ್ಷ್ಮವಾದ ರೂಪರೇಖೆಯ ತಿಳಿವು— ಉಂಟಾಗುವುದು. ಇಷ್ಟೆಲ್ಲ ಆಗುವಾಗ ಆತನ ಜನ್ಮತನಕ ಮುಚ್ಚಿದಂತಿದ್ದ ವಿಶಾಲವಾದ ವ್ಯಕ್ತಿತ್ವವು ಆತನ ವರ್ತಮಾನ ಕಾಲದ ವ್ಯಕ್ತಿತ್ವಕ್ಕಿಂತ ಶ್ರೇಷ್ಠವಾದುದು; ಎಂಬ ಸತ್ಯ ಆತನಿಗೆ ತಿಳುವಳಿಕೆಯಾಗಲಾರಂಭಿಸುತ್ತದೆ. ಆಗ ಆತನ ಬೋಧಶಕ್ತಿಯಲ್ಲಿ ಸ್ವಭಾವತಃ ಪರಿವರ್ತನೆಯಾಗತೊಡಗಿ ಆತನ ಇಚ್ಛೆಗಳು ಆತ್ಮಶಕ್ತಿಯಲ್ಲಿ ಪರಿವರ್ತನೆ ಹೊಂದುತ್ತವೆ.

ಆತ್ಮಶಕ್ತಿಯೇ ಮಾನವನ ವಿಸ್ತೃತ ಜೀವನದ ಮುಖ್ಯ ಇಚ್ಛೆಯಾಗಿದೆ. ಈ ಆತ್ಮಶಕ್ತಿಯು ಸಬಲವಾಗಿಲ್ಲದೆ, ಸಂಕೀರ್ಣವಾಗಿದ್ದರೆ, ಆಗ ನಮ್ಮ ಸಂಕೀರ್ಣವಾದ ವ್ಯಕ್ತಿತ್ವವು ವಿಸ್ತೃತ ವ್ಯಕ್ತಿತ್ವದೊಡನೆ, ಸಂಘರ್ಷ ನಡೆಸುವುದು. ಹೀಗಾಗುವಾಗ—ನಾವು, ತಾತ್ಕಾಲಿಕ ಆನಂದವನ್ನೀಯುವ, ಮತ್ತು ಶಾಶ್ವತ ಕಲ್ಯಾಣಕಾರೀ ಪ್ರವೃತ್ತಿಗಳೊಳಗೆ —ಭೇದವಿರುವ ಹಾಗೆ ಭಾವಿಸುತ್ತೇವೆ.

ನಮ್ಮ ವಿಶಾಲವಾದ ವ್ಯಕ್ತಿತ್ವಕ್ಕೆ ಯಾವುದು ಕಲ್ಯಾಣಕರವೋ, ಅದೇ ಕಲ್ಯಾಣಕರವಾದ ಭಾವನೆಯಾಗಿದೆ ಎಂಬ ಈ ವಿಚಾರವು ನಮಗೆ ನಮ್ಮ ಉಚ್ಚಮಟ್ಟದ ಜೀವನಾನುಭವದಿಂದ ಪ್ರಾಪ್ತವಾಗುವುದು. ಈ ದರ್ಶನದಲ್ಲಿ ವರ್ತಮಾನ ಕಾಲೀನ ಸ್ಥಿತಿ ಮಾತ್ರವಲ್ಲ; ಸಾಮಾನ್ಯರ ದೃಷ್ಟಿಗೆ ಗೋಚರಿಸದ—ಪ್ರತ್ಯಕ್ಷವಾಗಿ ನೋಡಲು ಸಾಧ್ಯವಾಗದ ಭವಿಷ್ಯವೂ ತಿಳುವಳಿಕೆಗೆ ಬರುವುದು. ಆಗ ಮನುಷ್ಯನು ತನ್ನ ವರ್ತಮಾನ ಸ್ಥಿತಿಗಿಂತ ಭವಿಷ್ಯದ ಸ್ಥಿತಿಯನ್ನೇ ಹೆಚ್ಚು ಹೆಚ್ಚಾಗಿ ಅನುಭವ ಮಾಡಿಕೊಳ್ಳ ತೊಡಗುತ್ತಾನೆ. ಇದರಿಂದಾಗಿ ಆತನು ತನ್ನ ವರ್ತಮಾನ ಕಾಲದ ಇಚ್ಛೆಗಳನ್ನು ಅದೃಶ್ಯ ರೂಪೀಭವಿಷ್ಯಕ್ಕಾಗಿ ಅರ್ಪಿಸಿ ಬಿಡಲೂ, ಸಿದ್ಧನಾಗುತ್ತಾನೆ. ಇಂತಹ ಅರ್ಪಣದ ಮೂಲಕವೇ ಆತನು ಮಹಾ ವ್ಯಕ್ತಿಯಾಗುತ್ತಾನೆ. ಏಕೆಂದರೆ, ಈ ಭಾವನೆಯ ಮೂಲಕವೇ ಆತನು ಸತ್ಯದ ಅನುಭವವನ್ನು ಮಾಡಿಕೊಳ್ಳ ತೊಡಗುತ್ತಾನೆ. ಸ್ವಾರ್ಥದ ಸಫಲತೆಗಾಗಿಯೂ ಮನುಷ್ಯನು ಈ ಸತ್ಯಾನುಭವದ ಆಶ್ರಯ ಪಡೆಯಬೇಕಾಗುತ್ತದೆ. ಮತ್ತು ತನ್ನ ಕ್ಷಣಿಕ ಆವೇಶಗಳನ್ನು ಸಂಯಮಿಸಬೇಕಾಗುತ್ತದೆ. ಅಥವಾ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಅಂಥವನು ಸದಾಚಾರ ಸಂಪನ್ನನಾಗಿ ಇರಬೇಕಾಗುತ್ತದೆ. ನಮ್ಮ ನೈತಿಕ ಶಕ್ತಿಯಾವುದಿದೆಯೋ ಅದು ನಮಗೆ--"ನಮ್ಮ ಜೀವನವು ಖಂಡಖಂಡವಾಗಿಲ್ಲ; ಮತ್ತು ಜೀವನವು ನಿರುದ್ದೇಶವಾಗಲೀ ಅಥವಾ ಅನೇಕ ಅಸಂಗತ ರೀತಿಗಳ ಮಿಶ್ರಣವಾಗಿಯಾಗಲೀ ಆಗಿಲ್ಲ" ಎಂಬುದನ್ನು ನಮಗೆ ಅನುಭವ ಮಾಡಿಕೊಡುವುದು.

ಮನುಷ್ಯನ ಆತ್ಮವು ಕಾಲದೇಶಗಳ ಭೇದದಿಂದ ಕೂಡಿದ್ದರೂ, ಏಕ ರೂಪವಾಗಿದೆ. ಮನುಷ್ಯನು ಸ್ವಾರ್ಥದ ಪರಿಸರಕ್ಕೊಳಪಟ್ಟು ಅದರಿಂದ ಬಿಗಿಯಲ್ಪಟ್ಟ ತನ್ನ ವ್ಯಕ್ತಿತ್ವವನ್ನು ಕಳೆದುಕೊಳ್ಳುತ್ತಾನೆ; ಎಂಬ ವಿಚಾರವನ್ನು ತಿಳಿದುಕೊಳ್ಳುವ ಯೋಗ್ಯತೆಯೂ ಮನುಷ್ಯನ ನೈತಿಕ ಚೇತನದಿಂದಲೇ ಪ್ರಾಪ್ತವಾಗುತ್ತದೆ. ಮನುಷ್ಯನು ಅದೃಶ್ಯರೂಪೀ ಸತ್ಯದಲ್ಲಿ ವಾಸ್ತವಿಕ ಅಂಶವನ್ನು ಕಂಡುಕೊಳ್ಳುವಷ್ಟು ವಾಸ್ತವಿಕ ಅನುಕೂಲತೆಗಳಿಂದ ಕಂಡುಕೊಳ್ಳಲಾರನು. ಆತನ ವ್ಯಕ್ತಿತ್ವಕ್ಕಿಂತ ಯಾವುದು ದೂರವಾಗಿರುವುದೋ ಯಾವುದನ್ನು ಸಾಕ್ಷಾತ್ತಾಗಿ ಆತನು ನೋಡಲಾರನೋ, ಮನುಷ್ಯನು, ಅಂತಹ, ಆ ಆತ್ಮದ ಸಹವಾಸಿಯಾಗಿರುತ್ತಾನೆ.

ಮನುಷ್ಯನಿಗೆ ತನ್ನ ಭವಿಷ್ಯದ ವ್ಯಕ್ತಿತ್ವದ ವಿಚಾರದಲ್ಲಿ ಹೇಗೆ ಒಂದು ರೀತಿಯಿಂದ ಅನುಭವವಾಗುವುದೋ ಹಾಗೆಯೇ ಆತನಿಗೆ, ತನ್ನ ವ್ಯಾಪಕವಾದ ವ್ಯಕ್ತಿತ್ವದ ತಿಳಿವು ಕೂಡ ಸ್ವಲ್ಪ ಮಟ್ಟಿಗೆ ಉಂಟಾಗುವುದು. ಇಂತಹ ಅನುಭವ ಸ್ವಲ್ಪ ಮಟ್ಟಿಗಾದರೂ ಆಗಲಾರದ ಮತ್ತು ತನ್ನ ಸ್ವಾರ್ಥಗಳನ್ನು ಇನ್ನೊಬ್ಬನ ಹಿತಕ್ಕಾಗಿ ತ್ಯಜಿಸದ, ಇನ್ನೊಬ್ಬನ ಕಲ್ಯಾಣಕ್ಕಾಗಿ ತಾನು ಸ್ವತಃ ಕಷ್ಟಗಳನ್ನು ಅನುಭವಿಸದ, ವ್ಯಕ್ತಿಯು ಇರಲಾರನು. ನಿಜವಾದ ವಿಚಾರವೆಂದರೆ, ಮನುಷ್ಯನು ಈ ಜಗತ್ತಿನಿಂದ ನಿರ್ಲಿಪ್ತನಾಗಿ ಎಂದೂ ಇರಲಾರನು. ಆತನ ವ್ಯಾಪಕವಾದ ವ್ಯಕ್ತಿತ್ವವನ್ನು ಆತನು ಯಾವಾಗ ತಿಳಿದುಕೊಳ್ಳತೊಡಗುತ್ತಾನೋ ಆಗ ಆತನು ಮಹಾ ವ್ಯಕ್ತಿಯಾಗುತ್ತ ಮುನ್ನಡೆಯುತ್ತಾನೆ. ಅಧಮನಾದ ವ್ಯಕ್ತಿಯು ತನ್ನ ಸ್ವಾರ್ಥಕ್ಕಾಗಿ ಅಧಮಕಾರ್ಯಕ್ಕಾಗಿ ಶಕ್ತಿಯನ್ನು ಸಂಗ್ರಹಿಸಿದರೂ ಮೇಲಿನ ಅನುಭವದಿಂದ ತನ್ನ ಕೃತ್ಯವನ್ನು ತಿಳಿದುಕೊಳ್ಳಬಲ್ಲನು. ಏಕೆಂದರೆ ಆತನು ಸತ್ಯವನ್ನು ಅಲಕ್ಷಿಸಿ, ಶಕ್ತಿಯನ್ನು ಸಂಗ್ರಹಿಸಲಾರನು ಸತ್ಯದ ಸಹಾಯತೆಯನ್ನು ಹೊಂದಲು, ಸ್ವಾರ್ಥಿ ಸ್ವಲ್ಪ ಮಟ್ಟಿಗಾದರೂ, ನಿಸ್ವಾರ್ಥಿಯಾಗಿ ಇರಬೇಕಾಗುತ್ತದೆ. ದರೋಡೆ ಖೋರರು ತಮ್ಮೊಳಗೆ ಐಕ್ಯವನ್ನು ಸ್ಥಾಪಿಸಿಕೊಳ್ಳುವುದಕ್ಕಾಗಿ, ಪರರನ್ನು ವಂಚಿಸುವುದಕ್ಕಾಗಿ, ಸತ್ಯದ ಆಶ್ರಯವನ್ನೇ ಹೊಂದಬೇಕಾಗುತ್ತದೆ. ಅವರು ಪರರ ಮನೆಗಳನ್ನು ಕೊಳ್ಳೆ ಹೊಡೆಯುತ್ತಿರಲಿ, ಪರರನ್ನು ವಂಚಿಸುತ್ತಲೇ ಇರುತ್ತಿರಲಿ ಆದರೆ, ಅವರ ಸಂಗಡದೊಳಗೆ ಸತ್ಯದಿಂದ ಸತ್ಯ ವರ್ತನೆಯಿಂದಲೇ ಇರುತ್ತಾರೆ. ಅನೈತಿಕ ಕಾರ್ಯಗಳನ್ನು ಪೂರ್ತಿಗೊಳಿಸುವುದಕ್ಕೂ, ತಕ್ಕ ಮಟ್ಟಿಗೆ ನೈತಿಕ ಬಲದ ಆಯುಧಗಳು ಬೇಕೇ ಬೇಕಾಗುತ್ತದೆ. ಎಷ್ಟೋ ಸಂದರ್ಭಗಳಲ್ಲಿ ನಾವು ನಮ್ಮ ನೈತಿಕ ಚಾರಿತ್ರ್ಯ ಬಲದಿಂದಲೇ ಪಾಪ ಕೃತ್ಯಗಳನ್ನೂ ಯಶಸ್ವಿಯಾಗಿ ಪೂರ್ತಿಗೊಳಿಸುತ್ತೇವೆ. ಇತರರನ್ನು ಅಧಿಕಾರದಿಂದ ತಳ್ಳಿ ನಾವು ಆಸ್ಥಾನಕ್ಕೆ ಏರುವುದು, ಇತ್ಯಾದಿಗಳೆಲ್ಲ ಇದರಿಂದಲೇ ನಡೆಯುತ್ತವೆ.

ಪಶು ಜೀವನವು ಚಾರಿತ್ರ್ಯ ಹೀನವಾಗಿರುವುದು. ಏಕೆಂದರೆ, ಅವುಗಳಿಗೆ ತತ್ಕಾಲೀನ ಆವಶ್ಯಕತೆಗಳನ್ನಷ್ಟೇ ಪೂರ್ತಿ ಮಾಡುವ ಇಚ್ಛೆ ಇರುವುದು, ಆದರೆ, ಮನುಷ್ಯ ಜೀವನವು ಚಾರಿತ್ರ್ಯ ಹೀನವಲ್ಲ; ಚಾರಿತ್ರ್ಯ ಭ್ರಷ್ಟವಾಗುವುದಷ್ಟೇ ಆಗಿದೆ. ಇದರ ಅರ್ಥವೇನೆಂದರೆ, ಚಾರಿತ್ರ್ಯ ಭ್ರಷ್ಟವಾಗುವುದಕ್ಕೂ ಆಧಾರವು ಚಾರಿತ್ರ್ಯವೇ ಆಗಿದೆ.

ಅಸತ್ಯವೂ ಕೂಡ ಸತ್ಯದ ಒಂದು ಚಿಕ್ಕ ಅಂಶದಿಂದ ಕೂಡಿರುವಂತೆ, ಆದುಷ್ಚರಿತ್ರವೂ ಕೂಡ, ಚಾರಿತ್ರ್ಯದ ಅಪೂರ್ಣತೆಯಿಂದ ಕೂಡಿರುವುದು. ಕಣ್ಣುಗಳಿದ್ದೂ ನೋಡಲು ಸಾಧ್ಯವಿಲ್ಲದಿರುವುದೆಂದರೆ, ಅಂಥವನನ್ನು ಕುರುಡನೆನ್ನುತ್ತಾರೆ. ಆದರೆ, ಕಣ್ಣಿದ್ದು ನೋಡಬಲ್ಲವನಾಗಿದ್ದರೂ, ಸರಿಯಾಗಿ ನೋಡಲಾರದವನಾಗಿದ್ದರೆ, ಆದರೆ, ಆತನು ನೋಡುವ ರೀತಿ ಅಪೂರ್ಣವಾಗಿರುವುದು ಎನ್ನಬೇಕು. ಅರ್ಥಾತ್ ಇದು ದೃಷ್ಟಿ ದೋಷವಾಗಿರದೆ ನೋಡುವವನ ದೋಷವೇ ಆಗಿರುವುದು.

ಮನುಷ್ಯನು ಜೀವನದಲ್ಲಿ ಯಾವುದಾದರೊಂದು ಪ್ರಯೋಜನವನ್ನು ಕಂಡುಕೊಂಡ ಕೂಡಲೇ ಆತನಲ್ಲಿ ಸ್ವಾರ್ಥಭಾವನೆ, ಉದಯವಾಗುತ್ತದೆ. ಆದರೆ ಆ ಪ್ರಯೋಜನವನ್ನು ಪೂರ್ಣವಾಗಿ ಹೊಂದಲು ಆತನಿಗೆ ಆತ್ಮ ಸಂಯಮ, ಮತ್ತು ಮತ್ತು ಚಾರಿತ್ರ್ಯಬಲ ಬೇಕಾಗುತ್ತದೆ. ಸ್ವಾರ್ಥಿ ಮನುಷ್ಯನು ಸ್ವೇಚ್ಛೆಯಿಂದಲೇ ಕಷ್ಟಗಳನ್ನು ಅನುಭವಿಸುತ್ತಾನೆ. ಏಕೆಂದರೆ "ಈ ಕಷ್ಟ ಸ್ವಲ್ಪ ಕಾಲ ಮಾತ್ರ ಇರಬಹುದು" ಎಂದು ಆತನು ತಿಳಿದುಕೊಳ್ಳುತ್ತಾನೆ. ಇದರಿಂದ ತಿಳಿಯಬರುವುದೇನೆಂದರೆ, ಅಲ್ಪ ದೃಷ್ಟಿಯುಳ್ಳ ಸ್ವಾರ್ಥಿಗಳಿಗೆ, ಯಾವುದು ಹಾನಿಕಾರಕವೆಂದು ತೋರುವುದೋ, ವಿಶಾಲ ದೃಷ್ಟಿಯುಳ್ಳವರಿಗೆ ಅದೇ ಲಾಭದಾಯಕವೆಂದು ಕಾಣುವುದು.

(ಸಶೇಷ)

ಸ್ವಲ್ಪ ಸ್ವಲ್ಪವಾಗಿ, ಅಲ್ಲೊಮ್ಮೆ ಇಲ್ಲೊಮ್ಮೆ, ನೀವು ಉಳಿಸುತ್ತಿರುವ ಹಣವು
ಬೇಗ ಬೇಗನೆ ವೃದ್ಧಿಗೊಂಡು, ನಿಮ್ಮ ಭವಿಷ್ಯದ ಭದ್ರತೆಯು
ಹೆಚ್ಚೆಚ್ಚಾಗಿ ಪರಿಣಮಿಸುವಂತೆ

ಕೊರ್ಪೊರೇಶನ್ ಬೇಂಕು

ನಿಮ್ಮ ಸೇವಿಂಗ್ಸ್ ಬೇಂಕ್ ಎಕೌಂಟುಗಳ ಮೇಲೆ ಇನ್ನು ಮುಂದಕ್ಕೆ
ನಾಲಿಯಾನ್ ಸೇಕಡಾ 3 ರ ದರದಲ್ಲಿ ನಿಮಗೆ ಬಡ್ಡಿ ಕೊಡುವುದು.

ವಿವರಗಳಿಗೆ ವಿಚಾರಿಸಿರಿ:

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ಸ್ಥಾಪನೆ: 1906) (ರಿಜಿಸ್ಟರ್ಡ್ ಆಫೀಸು: ಉಡುಪಿ.

ಆಡಳಿತ ಆಫೀಸು: ಮಂಗಳೂರು —1

ವಸಂತ ಕಥೆ-ಕಾದಂಬರಿಗಳ ಮಾಸ ಪತ್ರಿಕೆ.
ವಾ.ಚಂದಾ ರೂ.8. ಬಿಡಿಪ್ರತಿ 75 ಪೈಸೆ
ಮಾದರಿ ಸಂಚಿಕೆಗೆ 75ನ.ಪೈ. ಕಳುಹಿಸಿರಿ
1—ಪಾರ್ಕ್ ರಸ್ತೆ — ಬೆಂಗಳೂರು-2.

ರೋಚಕ ಸಾಧನೆ

ವೆಲ್ಲೂರಿನ ಸಂಜೀವಿನಿ – ಐಡಾ ಸ್ಕಡರ್

ಅಂತಃಕರಣದಲ್ಲಿ ಅನುಭೂತಿಯ ಕಿರಣವೊಂದು ಮಿಂಚಿದುದರಿಂದ ಪ್ರಭಾವಿತಳಾಗಿ ಅದನ್ನೇ ಮಹಾಜ್ಯೋತಿಯನ್ನಾಗಿ ಬೆಳೆಸಿ ಇದಕ್ಕಾಗಿ ತನ್ನ ಸರ್ವಸ್ವವನ್ನೂ ಮುಡುಪಾಗಿಟ್ಟ ಅಮೆರಿಕನ್ ಡಾಕ್ಟರ್ ಮಿಸ್ ಐಡಾ ಸ್ಕಡರ್ ಳ ರೋಚಕ ಸಾಧನೆಯನ್ನು ಡಾ| ಅಬ್ರಾಹಂ ಪಾಲರ ಮಾತುಗಳಲ್ಲಿ ಓದಿ ತಿಳಿಯಿರಿ.

ಹಳ್ಳಿಗಾಡುಗಳ ಆಸ್ಪತ್ರೆಗಳಲ್ಲಿ ಕೆಲಸ ನಿರ್ವಹಿಸಲು ಉತ್ಸುಕರಾದ 'ವೈದ್ಯರ ಅಭಾವ ನಮ್ಮಲ್ಲಿ ಅತ್ಯಧಿಕವಿದೆಯೆಂಬುದು ಜನಜನಿತವಿದೆ. ಸುಶಿಕ್ಷಿತಡಾಕ್ಟರರು ಹಳ್ಳಿಗಳಲ್ಲಿ ದುಡಿಯಲು ಹೆದರುತ್ತಾರೆ. ಆಧುನಿಕ ಚಿಕಿತ್ಸೆಗೆ ಆವಶ್ಯಕವಾದ ಸಾಧನ ಸಾಮಗ್ರಿಗಳು ಹಳ್ಳಿಯಲ್ಲಿ ಉಪಲಬ್ಧವಿಲ್ಲವೆನ್ನುತ್ತಾರೆ ಇವರು ಆದರೆ, ಡಾ| ಐಡಾ ಎಸ್. ಸ್ಕಡರ್‌ರವರು ಅಭಾವ ಹಾಗೂ ಸಾಧನರಹಿತವಾದ ಪರಿಸ್ಥಿತಿಯಲ್ಲಿಯೂ ದಕ್ಷಿಣ ಭಾರತದ ಹಳ್ಳಿಗಳಲ್ಲಿ ಚಿಕಿತ್ಸಾಕಾರ್ಯ ನಡೆಸಿದ ಕಥೆ ಕೇವಲ ವಿಸ್ಮಯಜನಕವಲ್ಲ; ಇತರರಿಗೆ ಪ್ರೇರಣಾದಾಯಕವಾಗಿಯೂ ಇದೆ.

ಮೋಹದ ಬಲೆಯಲ್ಲಿಯೇ ಬೆಳೆದ, ಏಳು ಸಹೋದರರ ಏಕಮಾತ್ರ ಸಹೋದರಿ, ಕುಟುಂಬದವರ ಕಣ್ಮಣಿಯಾದ ತರುಣಿ ಐಡಾ ತನ್ನ ಜೀವನವು ಈ ರೀತಿಯಾಗಿ ಕಳೆಯುವುದೆಂದು ಎಂದಿಗೂ ಊಹಿಸಿರಲಿಲ್ಲ. ಸ್ಕಡರ್ ಪರಿವಾರದವರು ಕ್ರೈಸ್ತಧರ್ಮ ಪ್ರಚಾರಕರಾಗಿ, ಭಾರತೀಯ ಜನಜೀವನವನ್ನೇ ತಮ್ಮ ಸೇವಾಕ್ಷೇತ್ರವನ್ನಾಗಿ ಮಾಡಿಕೊಂಡಿದ್ದರು. ಇಂದು ಈ ಅಮೆರಿಕೆಯ ಕುಟುಂಬವು ಭಾರತೀಯ ಜೀವನದ ಅಂಗವಾಗಿಯೇ ಕೂಡಿ ಬಳೆದಿದೆ.

ಐಡಾಳ ಬಾಲ್ಯಾವಸ್ಥೆಯು ಸುಖ ಮತ್ತು ವೈಭವಗಳಿಂದ ಕಳೆಯಿತು. ಮೊದಲಿಗೆ ಈಕೆಯು ಧರ್ಮಪ್ರಚಾರ, ಸೇವಾ ಕಾರ್ಯಗಳಲ್ಲಿಯೇ ಅಭಿರುಚಿ ತೋರಿಸುತಿದ್ದಳು. ಡಾಕ್ಟರಳಾಗಬೇಕೆಂದು ಇವಳು ಕನಸಿನಲ್ಲೂ ಆಶಿಸಿರಲಿಲ್ಲ. ತನ್ನ ಚಿಕ್ಕಪ್ಪನ ಬಳಿ ಅಮೆರಿಕೆಯಲ್ಲಿ ಶಿಕ್ಷಣ ಪಡೆಯುತಿದ್ದ ಆಕೆ ತನ್ನ ಬದುಕು ಸುಖ ಮತ್ತು ವೈಭವಗಳಿಂದಲೇ ಕಳೆಯಬೇಕೆಂದು ಬಯಸುತಿದ್ದಳು.

ತನ್ನ ತಾಯಿಯು ಸುಸ್ತು ಬಾಯಿಲೆಯಿದ್ದಾಳೆಂಬ 'ತಂತಿಯನ್ನು ಓದಿ ಆಕೆ ಭಾರತಕ್ಕೆ ಬಂದಳು. ಇಲ್ಲಿ ಒಂದು ರಾತ್ರಿ ನಡೆದ ಘಟನೆಯಿಂದ ಆಕೆಯ ಜೀವನದ ಹೆದ್ದಾರಿಯೇ ಬದಲಾಯಿತು. 'ಟಿಂಡಿವನಂ' ಎಂಬಲ್ಲಿ ಆ ಕಾಲದಲ್ಲಿ ಆಸ್ಪತ್ರೆಯೆಂಬುದೇ ಇದ್ದಿರಲಿಲ್ಲ. ಅಲ್ಲದೆ ಅದರ ಆಸುಪಾಸಿನಲ್ಲಿಯೂ ಚಿಕಿತ್ಸಾ ಸೌಕರ್ಯವಿರಲಿಲ್ಲ. ಆ ರಾತ್ರಿ ಒಬ್ಬ ಮುಸಲ್ಮಾನ, ಓರ್ವ ಬ್ರಾಹ್ಮಣ ಮತ್ತೊಬ್ಬ ಉಚ್ಚವರ್ಣ ಹಿಂದು ಆಕೆಯ ತಂದೆಯ ಮನೆಗೆ ಬಂದರು. ಆಕೆಯ ತಂದೆ ಕ್ರೈಸ್ತ ಮಿಶನರಿಯ ಕಡೆಯಿಂದ ಗ್ರಾಮಗಳಲ್ಲಿ ಚಿಕಿತ್ಸಾಕಾರ್ಯವನ್ನೂ ಮಾಡುತಿದ್ದರು. ಆ ಮೂವರು ಇವರಿಂದ ಸಹಾಯ ಪಡೆಯಲು ಬಂದಿದ್ದರು.

ಪ್ರಸವ ವೇದನೆಯಿಂದ ಮೂವರ ಪತ್ನಿಯರೂ ನರಳುತಿದ್ದರು. ಡಾಕ್ಟರರು ಜತೆಯಲ್ಲಿ ಹೊರಡಲು ಸಿದ್ಧರಾದರು. ಆದರೆ, ಒಂದು ಹೊಸ ಪ್ರಶ್ನೆ ಎದ್ದುನಿಂತಿತ್ತು. ಅವರ ಪತ್ನಿಯರು ಪ್ರಸವವೇದನೆಯಿಂದ ನರಳಿ ಸತ್ತರೂ ಚಿಂತೆಯಿಲ್ಲ. ಪುರುಷ ಡಾಕ್ಟರರಿಂದ ಚಿಕಿತ್ಸೆ ಮಾಡಿಸಿಕೊಳ್ಳಲು ನಿರಾಕರಿಸುತಿದ್ದರು. ಸೇವಾಭಾವನೆಯ ಡಾಕ್ಟರರು ಏನು ಮಾಡಬೇಕು? ಅವರ ರೋಗಗ್ರಸ್ತ ಪತ್ನಿ ಎದ್ದು ಕುಳಿತುಕೊಳ್ಳುವುದಕ್ಕೂ ಅಶಕ್ತರಿದ್ದರು. ತತ್‌ಕ್ಷಣ ಐಡಾಳತ್ತ ಅವರ ಮನಸ್ಸು ಹರಿಯಿತು. ಪೋರಿಯಾಗಿದ್ದ ಐಡಾಳಿಗೆ ಚಿಕಿತ್ಸೆ ಇಲ್ಲವೇ ಪ್ರಸವದ ಜ್ಞಾನವೆಲ್ಲಿಂದ ಬರಬೇಕು? ಮೂವರೂ ನಿರಾಶರಾಗಿ ಮರಳಿದರು. ರಾತ್ರಿಯಿಡಿ ಐಡಾ ಪರಮಾತ್ಮನನ್ನು ಪ್ರಾರ್ಥಿಸುತಿದ್ದಳು. ಆ ಸಮಯದಲ್ಲಿ ಆಕೆ ಬೇರೇನನ್ನು ತಾನೆ ಮಾಡಬಲ್ಲಳು? ಮುಂಜಾನೆಯೇ ಆಕೆಯ ಕಿವಿಗಳಿಗೆ ಕೂಗಾಡುವ ಶಬ್ದ ಕೇಳಿತು. ಮೂವರು ಸ್ತ್ರೀಯರೂ ಚಿಕಿತ್ಸೆಯಿಲ್ಲದುದರಿಂದ ಮೃತ್ಯುವಶರಾಗಿದ್ದರು. ಅದೇ ಗಳಿಗೆಯಲ್ಲಿ ಬಾಲಿಕೆ ಐಡಾ ನಿಶ್ಚಯಮಾಡಿದಳು: ಡಾಕ್ಟರಳಾಗಿ ಭಾರತಕ್ಕೆ ಬರಬೇಕು; ಇಲ್ಲಿಯೇ ದೀನ ದುಃಖಿತರ ಸೇವೆಯನ್ನೇ ಮಾಡಿ ಜೀವನ ಸಾರ್ಥಕ ಮಾಡಿಕೊಳ್ಳಬೇಕು. ಆಕೆ ಅಮೆರಿಕೆಗೆ ಮರಳಿ ಹೋದಳು. ಡಾಕ್ಟರಿಕೆಯಲ್ಲಿ ಉತ್ತೀರ್ಣಳಾಗಿ ಕೂಡಲೇ ಭಾರತಕ್ಕೆ ಬಂದಳು. ೧೯೦೦ರಲ್ಲಿ ಆಕೆ ತನ್ನ ಕಾರ್ಯಾರಂಭ ಮಾಡಿದಳು. ಡಾಕ್ಟರರಾದ ತನ್ನ ತಂದೆಯ ಸಹಾಯದಿಂದ ತನ್ನ ಲಕ್ಷ್ಯವನ್ನು ಬೇಗನೆ ಪೂರೈಸುವೆನೆಂಬ ಆಶೆ ಆಕೆಯಲ್ಲಿತ್ತು. ಆದರೆ, ದುರ್ದೈವ ವಶದಿಂದ ಐದೇ ತಿಂಗಳುಗಳಲ್ಲಿ ಆಕೆಯ ತಂದೆಯೂ ಕಾಲವಶರಾದರು.

ಸಜ್ಜನರು ನಿರ್ಧಾರವನ್ನು ವಜ್ರಾಘಾತವಾದರೂ ಬದಲಿಸುವುದಿಲ್ಲ ತಂದೆಯ ಮರಣ ಐಡಾಳನ್ನು ತನ್ನ ಮಾರ್ಗದಿಂದ ವಿಚಲಿತಗೊಳಿಸಲಿಲ್ಲ. ಒತ್ತಿ ಬರುವ ದುಃಖಾಶ್ರುಗಳನ್ನು ಒರಸಿ ಆಕೆ ತನ್ನ ಕಾರ್ಯದಲ್ಲಿ ತಲ್ಲೀನಳಾದಳು. ಒಂದು ಚಿಕ್ಕ ಕೋಣೆಯಲ್ಲಿ ಅತ್ಯಲ್ಪ ಸಾಧನಗಳಿಂದ ಆಕೆ ತನ್ನ ಚಿಕಿತ್ಸಾಲಯವನ್ನು ತೆರೆದಳು. ಅದೇ ಕೋಣೆಯಲ್ಲಿ ಎರಡು ವರ್ಷಗಳಲ್ಲಿ ಐದು ಸಾವಿರ ರೋಗಿಗಳನ್ನು ಉಪಚರಿಸಿದಳು.

ಪ್ಲೇಗಿನ ಹಾವಳಿ ಮಿತಿಮೀರಿತ್ತು. ಸಹಾಯಕರಾರೂ ಇಲ್ಲ; ಪರಿಚಾರಿಕೆಯರಿಲ್ಲ; ಸಮುಚಿತ ಸಾಧನಗಳಿಲ್ಲ. ಆದರೂ ಐಡಾಳು ಅತಿ ಚಿಕ್ಕ ಶಲ್ಯ ಚಿಕಿತ್ಸೆಯಿಂದ ತೊಡಗಿ ಹೊಟ್ಟೆಯ ಆಪರೇಶನ್‌ನ ವರೆಗಣ ಕಾರ್ಯವನ್ನೂ ಸಾಧಿಸಿದಳು. ಅಡುಗೆಯವನ ಪತ್ನಿಯನ್ನೇ ತರಬೇತಿಗೊಳಿಸಿದಳು. ಆಕೆಯೇ ಪರಿಚಾರಿಕೆ ಹಾಗೂ ಕಂಪೌಂಡರ್ ಆದಳು.

ಬೀದಿ ಪಕ್ಕದಲ್ಲನ ಈ ಚಿಕ್ಕ ಆಸ್ಪತ್ರೆಯತ್ತ ಎಲ್ಲರ ಗಮನ ಹರಿಯಿತು. ಓರ್ವ ಅಮೆರಿಕನ್ ನಾಗರಿಕನ ಆರ್ಥಿಕ ಸಹಾಯದಿಂದ ಆ ಕೋಣೆ ೧೯೦೨ರಲ್ಲಿ ರೂಪಾಂತರ ಹೊಂದಿ, ನಲುವತ್ತು ಹಾಸುಗೆಗಳ ಒಂದು ಆಸ್ಪತ್ರೆ ನಿರ್ಮಾಣಗೊಂಡಿತು. ಆ ಐಡಾಳ ಉದ್ದೇಶ ಚಿಕಿತ್ಸೆ ನಡೆಸುವುದು ಮಾತ್ರವಲ್ಲ, ಆಗಾಗ ಆಕೆಯ ಮನಸ್ಸು ವಿಚಾರ ಸಂಘರ್ಷದ ನಡುವೆ ಸಿಕ್ಕಿಬಿದ್ದು ಹೊಯ್ದಾಡುತಿತ್ತು. "ನಾನು ಇಂದು ಇದ್ದೇನೆ, ನಾಳೆ, ತಂದೆಯಂತೆಯೇ ನಿಂತಲ್ಲಿಯೇ ಸಾಯಲೂ ಬಹುದು. ಆಗ ಮಾಡಿದ ಎಲ್ಲಾ ಕೆಲಸ ವ್ಯರ್ಥವಾಗುವುದು. ಇದರಿಂದಾಗಿ, ೧೯೦೭ರಲ್ಲಿ ಆಕೆ ನರ್ಸ್‌ಗಳ ಟ್ರೈನಿಂಗ್ ಸ್ಕೂಲ್ ಮತ್ತು ಕಂಪೌಂಡರರಿಗೆ ಪ್ರಮುಖ ಶಿಕ್ಷಣ ಶಾಲೆಗಳನ್ನು ತೆರೆದಳು.

ಅನಂತರ ಆಕೆ ಇನ್ನೂ ಒಂದು ಹೆಜ್ಜೆ ಮುಂದಿಟ್ಟಳು. ಮಹಿಳಾ ಚಿಕಿತ್ಸಕರಾಗಲು ಶಿಕ್ಷಣ ಒದಗಿಸುವುದು ಸಾಧ್ಯವಿಲ್ಲವೆ? ಎಂದು ವಿಚಾರಿಸಿದಳು. ಪ್ರಮುಖ ಸರ್ಜನರು ಇದಕ್ಕೆ ಒಪ್ಪಿಗೆಯಿತ್ತರು. ಆದರೆ, ಇದಕ್ಕೆ ಮೂವರು ಮಹಿಳೆಯರಾದರೂ ಸೇರುವುದು ಸಂದೇಹವೆಂದೂ ಹೇಳಿದರು. ಆದರೆ, ಆಕೆ ಧೈರ್ಯದಿಂದ ತರಗತಿ ತೆರೆಯುವ ಘೋಷಣೆ

(೯ನೇ ಪುಟ ನೋಡಿ)

ಅಮೆರಿಕೆಯ ಪ್ರಥಮ ಅಂತರಿಕ್ಷ ಪ್ರವಾಸಿ ಆಸ್ಟ್ರೋನಟ್ ಏಲನ್ ಬಿ. ಶಪ್ಪರ್ಡ್ ಹಾರಾಟಕ್ಕೆ ಅನುಕೂಲವಾದ ಉಡುಗೆ ತೊಡುಗೆಗಳನ್ನು ಧರಿಸಿಕೊಂಡಿರುವುದನ್ನು ಇಲ್ಲಿ ಕಾಣಬಹುದು. ಹವಾನಿಯಂತ್ರಿತವಾದ ಈ ತೊಡುಗೆಗಳ ಮೇಲೆ ಉಷ್ಣ ರಕ್ಷಣೆಗಾಗಿ ಬೆಳ್ಳಿಯ ತೆಳು ಲೇಪವನ್ನು ಹಾಕಲಾಗಿದೆ.

ಸ್ಥಾಪನೆ: 1924

ದಿ ಕರ್ನಾಟಕ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ರಿಜಿಸ್ಟರ್ಡ್ & ಹೆಡ್ ಆಫೀಸು: **ಕೊಡಿಯಾಲಬೈಲ್? ಡೊಂಗರಕೇರಿ, ಮಂಗಳೂರು–3.**

ಈ ಕೆಳಗಿನ ಏರಿಸಿದ ಬಡ್ಡಿದರಗಳಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು.

ಒಂದರಿಂದ ಎರಡು ತಿಂಗಳುಗಳ ವರೆಗೆ	.... ಸಾ|| ಸೇಕಡಾ	3-75	ನ.ಪೈಸೆ
ಮೂರರಿಂದ ಐದು ತಿಂಗಳುಗಳ ವರೆಗೆ	,,	4-25	,,
ಆರು ತಿಂಗಳುಗಳಿಂದ 12 ತಿಂಗಳುಗಳ ವರೆಗೆ....	,,	4-50	,,
12 ತಿಂಗಳು ಮಿಕ್ಕಿ 24 ತಿಂಗಳುಗಳ ವರೆಗೆ	,,	4-75	,,
24 ತಿಂಗಳು ಮಿಕ್ಕಿ 48 ತಿಂಗಳುಗಳ ವರೆಗೆ	,,	5-00	,,
48 ತಿಂಗಳುಗಳಿಗೆ ಮಿಕ್ಕಿ	,,	5-25	,,

ಸೇವಿಂಗ್ಸ್ ಬ್ಯಾಂಕ್ ಬಡ್ಡಿ ದರವನ್ನು ಸಾ. ಸೇಕಡ 2½% ರಿಂದ 3½%ಗೆ ಏರಿಸಲಾಗಿದೆ.

THE KARNATAKA BANK LIMITED.

ನಾಶದ ರಹಸ್ಯ

ಮೃತ್ಯು ಕ್ರೂರಿಯಲ್ಲ, ದಯಾಮಯಿ.

ಜೀವಿಗಳ ಜೀವನವನ್ನು ಅಪಹರಿಸುವ ಮೃತ್ಯು ಕ್ರೂರಿಯಲ್ಲ; ದಯಾಮಯಿ. ಲೋಭ ಮೋಹಾದಿ ದುರ್ಗುಣಗಳು ಜೀವಜಂತುಗಳಲ್ಲಿ ಬೇರುಬಿಟ್ಟು ಹರಡಿ ಅವನ್ನು ಬರಿಗೈದಾಗ, ಮೃತ್ಯುವೇ ಬಂದು ಜಡಸೃಷ್ಟಿಯಿಂದವನ್ನು ಬಿಡುಗಡೆಗೊಳಿಸುತ್ತಾಳೆ



ಕಾಶ್ಮೀರದ ಘಾಶ್ಮಿನಾ ಶಾಲಿ ಪಕ್ಷರೇಖೆಗಳನ್ನು ಎಳೆಯುತ್ತಿದ್ದಾರೆ

ಬ್ರಹ್ಮಾಂಡವನ್ನು ಸೃಷ್ಟಿಸುವ ಮಹಾ ಕಾರ್ಯವು ಸಂಪೂರ್ಣಗೊಂಡ ಬಳಿಕ ಲೋಕಪಿತ ಬ್ರಹ್ಮದೇವನು ಸುತ್ತ ದೃಷ್ಟಿ ಹರಿಸಿದ. ಎತ್ತಲೂ ಸೃಷ್ಟಿ ಬೆಳೆಯುತ್ತ ಬರುತ್ತಿರುವುದು, ಪ್ರತಿದಿನ ನವನವ ಲೋಕ ಲೋಕಾಂತರಗಳು ಸೃಷ್ಟಿಯಾಗುತ್ತಿರುವುದು, ಚೇತನ ಮತ್ತು ಜಡ ಪದಾರ್ಥಗಳ ನಿರ್ಮಾಣ ನಿರಂತರ ಆಗುತ್ತ ನಡೆಯುತ್ತಿರುವುದು ಕಂಡು ಬರುತ್ತಿತ್ತೇ ಹೊರತು, ಎಲ್ಲಿಯೂ ಯಾವುದೇ ವಸ್ತುವು ವಿನಾಶವಾಗುತ್ತಿರುವುದು ದೃಗ್ಗೋಚರವಾಗುತ್ತಿರಲಿಲ್ಲ. ಹೇಗೆಯೋ ಬಹುಕಾಲ ಕಳೆಯಿತೆಂದರೆ, ಇದರ ಪರಿಣಾಮವು ಎಲ್ಲಿಗೆ ಬಂದು ನಿಂತೀತು ಎಂಬ ಗಹನವಿಚಾರವು ಅತನ ತಲೆಯನ್ನು ಸುತ್ತುವರಿಯತೊಡಗಿತು. ಯೋಚಿಸುತ್ತ ಅತನು ಸೋತನೇ ಹೊರತು ಯಾವುದೇ ಸಮಾಧಾನ ಲಭಿಸಲಿಲ್ಲ. ಇದರಿಂದ ಕುಪಿತನಾದ ಬ್ರಹ್ಮನಿಂದ ಉಜ್ವಲ ಜ್ವಾಲೆ ಸೂಸಿ ಲೋಕ—ಲೋಕಾಂತರಗಳನ್ನು ದಹಿಸತೊಡಗಿತು; ಸರ್ವನಾಶವಾದೀತೆಂಬ ಭಯವು ಹುಟ್ಟಿಕೊಂಡಿತು.

ಆಗ, ಸೃಷ್ಟಿಕರ್ತನ ಒಳಗೆ ಭಗವಂತನಾದ ವಿಷ್ಣುವು ಆಗಮಿಸಿದನು ಸಮಸ್ತ ಚರಾಚರ ಜಗತ್ತಿನ ಪರವಾಗಿ ಕ್ಷಮಾಯಾಚನೆ ಮಾಡುತ್ತ, "ವಿಭೊ, ನೀವು ಬಹು ಪ್ರಯತ್ನದಿಂದ ಸೃಷ್ಟಿಸಿದ ಸೃಷ್ಟಿಯನ್ನು ತಮ್ಮ ಕೋಪಾನಲದಿಂದ ನಾಶ ಮಾಡುವುದು ನ್ಯಾಯವೆ? ದಯಮಾಡಿ ತಮ್ಮ ಕ್ರೋಧವನ್ನು ಅಂಕೆಗೆ ತಂದುಕೊಳ್ಳಿರಿ" ಎಂದು ಕೈಮುಗಿದನು ಈ ಕರಣಾಯಾಚನೆಯಿಂದ ಸುಪ್ರಸನ್ನನಾದ ಬ್ರಹ್ಮದೇವನು ತನ್ನ ಕೋಪವನ್ನು ತನ್ನಲ್ಲಿಯೇ ಲೀನ ಮಾಡಿಕೊಂಡನು. ಕ್ಷಣಕಾಲ ಧ್ಯಾನಯೋಗದಲ್ಲಿ ತಲ್ಲೀನನಾಗಿ, ಸೃಷ್ಟಿಯ ಪ್ರವೃತ್ತಿ ಧರ್ಮ ಮತ್ತು ಮೋಕ್ಷಕ್ಕಾಗಿ ನಿವೃತ್ತಿ ಧರ್ಮಗಳಾವುವೆಂದು ಚಿಂತಿಸತೊಡಗಿದನು.

ಇತ್ತ ಕ್ರೋಧಾಗ್ನಿಯ ಜ್ವಾಲೆಗಳು ವಿಲೀನವಾದುವು. ಅಲ್ಲಿ ಒಬ್ಬಾಕೆ ನಾರಿಯು ಪ್ರಾದುರ್ಭವಿಸಿದಳು ಆಕೆ ಅತೀವ ರಹಸ್ಯಮಯಿಯಿದ್ದಳು ಕೆಂಪು ಮಿಶ್ರಿತ ಕಪ್ಪು ವರ್ಣದ ಕಾಂತಿಯು ಆಕೆಯ ಅಂಗಾಂಗಗಳಲ್ಲಿ ಹೊಳೆಯುತಿತ್ತು. ಮುಖ, ನಾಲಿಗೆ ಮತ್ತು ನೇತ್ರಗಳು ತೇಜೋಪೂರ್ಣವಾಗಿದ್ದುವು ಸ್ವರ್ಣ ಕುಂಡಲ ಮತ್ತು ವಿವಿಧ ರತ್ನಾಭರಣಗಳಿಂದ ಅಲಂಕೃತವಾಗಿದ್ದರೂ ಅವು ಅತಿ ಕ್ರೂರವಾಗಿ ತೋರುತಿದ್ದುವು.

ಈಕೆಯು ಪ್ರಕಟವಾದ ತುಸು ಹೊತ್ತಿನ ನಂತರ ಆಕೆಯನ್ನು ಕುರಿತು ಬ್ರಹ್ಮನು ಆದೇಶವಿತ್ತನು, "ನನ್ನ ಸಂಹಾರ ಬುದ್ಧಿಯಿಂದ ನಿನ್ನ ಜನ್ಮವಾಯ್ತು. ನೀನು ಜಡ ಚೇತನ ಸೃಷ್ಟಿಯ ವಿನಾಶವನ್ನು ಮಾಡು."

ಈ ಆಜ್ಞೆಯನ್ನು ಕೇಳಿದ ಕ್ಷಣಾರ್ಧದಲ್ಲಿಯೇ ಆ ಲಲನೆಯ ನಯನಗಳಿಂದ ಅಶ್ರುಧಾರೆಯು ನಿರಾತಂಕವಾಗಿ ಪ್ರವಹಿಸತೊಡಗಿತು. ನಡುಗುದ್ಧ್ವನಿಯಿಂದ ಆಕೆ ನಿವೇದಿಸಿಕೊಂಡಳು: ಭಗವಂತನೇ ಅಭಾಗಿನಿಯಾದ ನನ್ನಿಂದ ನಿನಗಿದೇ ಲಾಭವೆ? ತಿಳಿತಿಳಿದೂ ನಾನು ಸಂಹಾರ ರೂಪದ ಕ್ರೂರ ಕರ್ಮವನ್ನು ಮಾಡುವೆನೆಂತು? ಪ್ರಾಣ ಮೋಹದಿಂದ ವಿಲಾಪಿಸುತ್ತ ಇರುವ ಪ್ರಾಣಿಗಳ ಪ್ರಾಣವನ್ನು ನಾನೆಂತು ಅಪಹರಿಸುವೆ? ನಾನು ಅಪಹರಿಸಿದ ಪ್ರಾಣಧಾರಿಗಳ ಬಂಧು ಮಿತ್ರರು ಉಷ್ಣ ನಿಶ್ವಾಸವನ್ನು, ಅವರ ದಗ್ಧ ಹೃದಯದಿಂದ ಹೊರಡುವ ಶಾಪವನ್ನು ಸಹಿಸಿಯೂ ನಾನು ಜೀವಿಪೆನೆಂತು? ಕೃಪೆದೋರಿ ಈ ಮಹಾ ಭಯಾನಕ ಧರ್ಮಸಂಕಟದಿಂದ ಎನ್ನ ಪಾರು ಮಾಡು'

ಬ್ರಹ್ಮನು ಹೇಳಿದನು: "ಆದರೆ, ಈ ಸಂಹಾರ ಕಾರ್ಯಕ್ಕಾಗಿಯೇ ನಿನ್ನ ಸೃಷ್ಟಿಯಾಗಿದೆ. ಹೋಗು, ನನ್ನ ಆದೇಶವನ್ನು ಪಾಲಿಸು ಈ ಸಂಬಂಧವಾಗಿ ಇನ್ನು ಬೇರೆ ತರ್ಕವಿತರ್ಕಗಳು ಅನವಶ್ಯ. ಪ್ರಾಣಿಗಳ ನಾಶವಂತೂ ಆಗಲೇ ಬೇಕಾಗಿದೆ; ಅದು ನಿಶ್ಚಿತ. ನೀನು ಅದಕ್ಕೊಂದು ನಿಮಿತ್ತಮಾತ್ರವಾಗಿರು."

ಈ ಅಂತಿಮ ನುಡಿಗಳು ಮೃತ್ಯುವಿಗೆ ಸಾಂತ್ವನೆಯೊದಗಿಸಲಿಲ್ಲ. ಸಂಹಾರ ಮಾಡುವ ಕೆಲಸವೇ ಆಕೆಗೆ ಸ್ವೀಕೃತವಿರಲಿಲ್ಲ. ಬ್ರಹ್ಮ ಲೋಕವನ್ನು ಬಿಟ್ಟು ಬಿಟ್ಟು ತಪಶ್ಚರ್ಯೆ ಮಾಡುವ ಉದ್ದೇಶದಿಂದ ಆಕೆ ಧೇನುಕಾ ಶ್ರಮವನ್ನು ಹೊಕ್ಕಳು.

ಬಹು ವರ್ಷಗಳ ವರೆಗೆ ಮೃತ್ಯುದೇವಿ ಸುಕಾಗ್ರಮದಲ್ಲಿ ತಪಸ್ಸು ಮಾಡಿದಳು. ಈಕೆಯ ಏಕಾಗ್ರ ಸಾಧನೆಯಿಂದ ಸಂಪ್ರೀತನಾದ ಬ್ರಹ್ಮನು ಪ್ರತ್ಯಕ್ಷನಾದನು. ಅತನು ಕೇಳಿದನು: "ಮಗಳೇ, ಇಷ್ಟೊಂದು ಉಗ್ರ ತಪಸ್ಸನ್ನು ಯಾವ ಮಹೋದ್ದೇಶ ನಿಮಿತ್ತವಾಗಿ ಆಚರಿಸುತ್ತಿರುವೆ?"

"ಪರಮಾತ್ಮನೇ, ಎಲ್ಲ ಪ್ರಾಣಿಗಳೂ ತಂತಮ್ಮ ನಿಯತ ಕಾರ್ಯಗಳಲ್ಲಿ ತತ್ಪರವಾಗಿರುವುದನ್ನು ನೀನು ನೋಡಿರಬೇಕು. ಯಾರೂ ಇನ್ನೊಬ್ಬರಿಗೆ ವಚನ ಮತ್ತು ವಿಚಾರಗಳ ಮೂಲಕವಾಗಿಯೂ ಅಹಿತವೆಸಗುವುದಿಲ್ಲ. ಹೀಗಿರುವಾಗ, ನಾನು ಇವರನ್ನು ನಾಶಗೊಳಿಸುವುದಾದರೂ ಹೇಗೆ ಅದು ಅಧರ್ಮವಾಗುವುದಿಲ್ಲವೆ? ಈ ಅಧರ್ಮಭಯದಿಂದಲೇ ನಾನು ಉಗ್ರತಪಶ್ಚರ್ಯೆಗೆ ತೊಡಗಿರುವೆನು. ಕರುಣೆದೋರಿ ನನಗೆ ಆಶ್ರಯವಿತ್ತು ಈ ಸಂಕಟದಿಂದ ಉಳಿಸಿಕೊಡಿರಿ".

ತ್ರಿಕಾಲಜ್ಞನಾದ ಬ್ರಹ್ಮನು ಹೇಳಿದನು "ಪುತ್ರೀ, ಪ್ರಜಾಸಂಹಾರದಿಂದ ನಿನಗೆ ಅಧರ್ಮದ ಲೇಪ ತಪ್ಪದು, ನಾನು ಆಶ್ವಾಸನ ನೀಡುತ್ತೇನೆ. ನನ್ನ ಆಜ್ಞೆಯನ್ನು ಪರಿಪಾಲಿಸು. ಧರ್ಮವು ನಿನ್ನನ್ನು ಪವಿತ್ರವಾಗಿಡುವುದು. ಲೋಕಪಾಲ, ಯಮರಾಜ ರೋಗ ಮತ್ತು ದೇವಗಣಗಳೊಡನೆ ನಾನು ನಿನ್ನನ್ನ ಸಂರಕ್ಷಿಸುತ್ತೇನೆ. ಸಂಹಾರಕಾರ್ಯ ಮಾಡುತ್ತಿದ್ದರೂ ನಿನ್ನನ್ನು ಪಾಪ ಅಂಟದೆ ಉಳಿಯಲಿ, ನೀನು ರಜೋಗುಣ ವಿಮುಕ್ತೆಯಾಗಿ ಬಾಳುವಂತಾಗಲಿ ಎಂದು ವರದಾನ ಮಾಡುತ್ತೇನೆ."

"ಇದೇನೋ ಸರಿಯಾಯಿತು. ಆದರೆ, ದೇವ, ನಿಷ್ಪಾಪ ಪ್ರಾಣಿಗಳಿಗೆ ಪೀಡೆಕೊಡುವುದರಿಂದ ನನ್ನ ಆತ್ಮವು ಶಾಂತಿಯಿಂದಿರ ಬಹುದೆ?"

ಕ್ಷಣಕಾಲ ವಿಚಾರಿಸಿ ಬ್ರಹ್ಮನು ಹೇಳಿದನು. "ನಿನ್ನ ಮಾತಿನಲ್ಲಿ ಸತ್ಯಾಂಶವಿದೆ. ಲೋಭ, ಮೋಹ, ಕ್ರೋಧ, ಈರ್ಷ್ಯೆ, ದ್ರೋಹ, ನಿರ್ಲಜ್ಜತೆ ನಿರ್ದಯತೆ ಮತ್ತು ಕಠೋರವಾಣಿಗಳು ರಜೋಗುಣ ಮತ್ತು ತಮೋಗುಣ ಪ್ರವೃತ್ತಿಗಳು ಪ್ರಾಣಿಗಳ ಶರೀರವನ್ನು ಹೊಕ್ಕು ಅವನ್ನು ಟೊಳ್ಳಾಗಿಸುವುವು; ಅವರು ಸಂಚಯಿಸಿದ ಧರ್ಮನಿಧಿಯನ್ನು ಒರಿದುಗೆಯ್ಯುವುವು. ಇದರ ಪರಿಣಾಮವಾಗಿ ಆ ಪ್ರಾಣಿಗಳು ತಾವಾಗಿಯೇ ನಿನ್ನ ಬಾಯಿಗೆ ಬೀಳುವುವು. ಇನ್ನು ತೆರಳು ಕಾಮ ಕ್ರೋಧ ವಿಮುಕ್ತೆಯಾಗಿ ಜೀವಿಗಳ ನಾಶವನ್ನು ಮಾಡು."

ಆ ದಿನದಿಂದ ಮೃತ್ಯು ಲೋಕಪಿತನ ಆಜ್ಞಾಪಾಲನೆ ಮಾಡಲಾರಂಭಿಸಿದಳು. ಮದ-ಮಾತ್ಸರ್ಯ, ದ್ವೇಷ ಅಸೂಯೆ, ಕಾಮ-ಕ್ರಾಂತಿ ಮೊದಲಾದುವು ಮನೋವಿಕಾರಗಳನ್ನೂ ದೈಹಿಕ ವಿಕಾರಗಳನ್ನೂ ಉತ್ಪನ್ನಗೊಳಿಸಿ ಮಾನವನ ಪುಣ್ಯ ಮತ್ತು ಸ್ವಾಸ್ಥ್ಯಗಳನ್ನು ನಶಿಸುತ್ತವೆ. ಆಗ ದಯಾಮಯಿಯಾದ ಮೃತ್ಯು ಬಂದು ತನ್ನ ಬರಿದು ಬಾಳಿನಿಂದ ಅವರನ್ನು ಮುಕ್ತಗೊಳಿಸುತ್ತಾಳೆ

ವಿದ್ಯಾರ್ಥಿಗಳಿಗೆ ಮಾತ್ರ

ವಿದ್ಯಾರ್ಥಿಗಳೆ,

- ಸಿಂಡಿಕೇಟ್ ಬ್ಯಾಂಕಿನಲ್ಲಿ ಒಂದು ಸೇವಿಂಗ್ಸ್ ಬ್ಯಾಂಕ್ ಖಾತೆಯನ್ನು ತೆರೆದು,—
- ನಿಮಗಾಗಿ ಮಾತ್ರ ವಿನಿಯೋಗಿಸಿದ (ರೂ. ೫೦೦ರ ವರೆಗೆ ಮುಫತ್ತಾಗಿ ಹಣ ಕಳುಹಿಸುವುದೇ ಇತ್ಯಾದಿ) ಕೆಲವು ವಿಶೇಷ ಸೌಲಭ್ಯಗಳ ಸದುಪಯೋಗವನ್ನು ಮಾಡಿ,—
- ವಿದ್ಯಾರ್ಜನೆಯ ಜೊತೆಗೆ ಉಳಿತಾಯದ ಮನೋವೃತ್ತಿ ಮತ್ತು ಬ್ಯಾಂಕಿಂಗ್ ಅಭ್ಯಾಸಗಳನ್ನೂ ಅಭಿವೃದ್ಧಿಗೊಳಿಸಿರಿ.

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್.

"ನಚಿಕೇತ"ರ

ಇನ್ನೊಂದು ನವೀನ ಕಾದಂಬರಿ—

ಋಣ ಯಾತ್ರೆ

ಇದೀಗ ಪ್ರಕಟವಾಗಿದೆ.

ಬೆಲೆ ರೂ. 1-50 ನ. ಪೈಸೆ.

ಮೊದಲು ಪ್ರಕಟವಾದ ಕಾದಂಬರಿ—

ಭಾವಾರ್ಚನೆ

ಬೆಲೆ ರೂ 1-25 ನ ಪೈಸೆ.

ಪ್ರತಿಗಳು ಸಿಗುವ ಸ್ಥಳಗಳು.—

ನವಯುಗ ಪ್ರೆಸ್, ಉಡುಪಿ

ನವಭಾರತ ಬುಕ್ ಡಿಪೊ, ಉಡುಪಿ.

ತಾನಾಗಿಯೇ ತಿಳಿದುಕೊಳ್ಳಬೇಕು; ಇಲ್ಲವೇ ಬೇರೆಯವರು ತಿಳಿಸಿ ಹೇಳುವಾಗಲಾದರೂ ಅರಿತುಕೊಳ್ಳಬೇಕು. ಇವೆರಡು ವಿಧಾನಗಳಿಂದಲೂ ತಿಳಿದುಕೊಳ್ಳಲು ಪ್ರಯತ್ನಿಸದಿರುವವನು ಖಂಡಿತವಾಗಿಯೂ ಮೂರ್ಖನು.

ನವಯುಗ

೪೦ ವರುಷ	ಉಡುಪಿ ೧-೬-'೬೧	ವಾರ ೩೮

ಕುರುಡು ಮಾರ್ಗದರ್ಶನ

ಮೈಸೂರು ರಾಜ್ಯದ ಮುಖ್ಯ ಮಂತ್ರಿ ಶ್ರೀ ಬಿ. ಡಿ. ಜತ್ತಿಯವರು ಕಳೆದ ವರ್ಷ ಹುಬ್ಬಳ್ಳಿಯಲ್ಲಿ ಮಾತಾಡುತ್ತಿದ್ದಾಗ ಒಂದು ಬಾರಿ "ಹಿಂದುಳಿದ ಪಂಗಡ"ಗಳಿಗೆ ಸೇರಿದವರಿಗೆ ಒಂದು ಬಗೆಯ ಎಚ್ಚರಿಕೆಯನ್ನು ಕೊಟ್ಟಿದ್ದರು. "ಹೆಚ್ಚಿನವರು ನಿರೀಕ್ಷಿಸುತ್ತಿರುವುದಕ್ಕೆ ಮೊದಲೇ ಹಿಂದುಳಿದವರಿಗೆ ನೀಡಲಾಗುತ್ತಿರುವ ಸೌಲಭ್ಯಗಳನ್ನು ಹಿಂತೆಗೆದುಕೊಳ್ಳುವ ಗಳಿಗೆ ಬರಬಹುದು ಎಂಬುದೇ ಈ ಎಚ್ಚರಿಕೆಯ ಮಾತು. ತಮ್ಮ ವಿದ್ಯಾರ್ಹತೆಯು ಪರ್ಯಾಪ್ತವಾಗಿಲ್ಲವಾದರೂ, ಸರಕಾರಿ ನೌಕರಿಯಲ್ಲಿ ಇಲ್ಲವೆ ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಗೆ ಕೆಲವೊಂದು ಸ್ಥಾನಗಳನ್ನು ಗಳಿಸುವುದು ತಪ್ಪಿ ಎಲ್ಲ ಪಂಗಡಗಳವರೂ ತಂತಮ್ಮ ಅರ್ಹತೆಗೆ ಸರಿಯಾದ ಸ್ಥಾನಮಾನಗಳನ್ನು ಪಡೆಯುವ ಸೌಲಭ್ಯ ದೊರೆಯುವ ಗಳಿಗೆ ಬರಲೇಬೇಕು. ಕೇವಲ ಯೋಗ್ಯತೆಯೊಂದೇ ಸ್ಥಾನವೊದಗಿಸಿಕೊಡುವ ಸಾಧನೆವೆನಿಸುವ ಸಮಯ ಬರಲೇಬೇಕು.

ಪ್ರಪಂಚದಲ್ಲಿಯೇ ಹಿಂದುಳಿದ ರಾಷ್ಟ್ರವೆಂದು ಪರಿಗಣಿತವಾದ ಭಾರತದಲ್ಲಿ ಹೆಚ್ಚಿನ ಜನರು ಆರ್ಥಿಕವಾಗಿಯೂ ಶೈಕ್ಷಣಿಕವಾಗಿಯೂ ಹಿಂದುಳಿದವರು. ಆದುದರಿಂದ ಎಲ್ಲರಿಗೂ ಪ್ರೋತ್ಸಾಹ ದೊರೆಯಬೇಕೆಂಬುದು ಸತ್ಯ. ಚಾರಿತ್ರಿಕ ಕಾರಣಗಳಿಂದ ಸಮಾಜದಲ್ಲಿ ಅತಿ ಹೀನ ಮಟ್ಟದಲ್ಲಿ ಬೆಳೆದು ಬಂದ ಪರಿಶಿಷ್ಟ ಜನಾಂಗ ಮತ್ತು ವರ್ಗಗಳವರನ್ನು ಬಿಟ್ಟರೆ, ಉಳಿದೆಲ್ಲರ ಬಗ್ಗೆಯೂ ಇರುವ ಸಮಸ್ಯೆ ಒಂದೇ ಸ್ವರೂಪದ್ದು ಎನ್ನಬಹುದು. ನಮ್ಮ ಸಂವಿಧಾನವು ಪರಿಶಿಷ್ಟ ವರ್ಗಗಳವರಿಗೆ ನೀಡುವಂತಹ ಸೌಕರ್ಯವನ್ನು ಅದೇ ರೀತಿಯಲ್ಲಿ ಇತರ ಹಿಂದುಳಿದ ಪಂಗಡಗಳವರಿಗೂ ನೀಡಲು ಅವಕಾಶ ನೀಡಿದೆಯೆಂಬುದು ನಿಜವೇ. ಆದರೆ, ಸಾರ್ವತ್ರಿಕ ಪ್ರಾಥಮಿಕ ವಿದ್ಯಾಭ್ಯಾಸ ಮತ್ತು ಆರ್ಥಿಕ ಉನ್ನತಿಯ ಗುರಿಯನ್ನು ಅದು ಇಟ್ಟುಕೊಂಡಿರುವುದನ್ನು ಗಮನಿಸುವಾಗ, ನಮ್ಮ ಸಂವಿಧಾನ ನಿರ್ಮಾತರು ಇಡಿಯ ಭಾರತೀಯ ಜನ ಸಮೂಹವನ್ನೇ 'ಹಿಂದುಳಿದವರು' ಎಂಬುದನ್ನು ಲಕ್ಷ್ಯದಲ್ಲಿಟ್ಟುಕೊಂಡಿರುವುದು ವ್ಯಕ್ತವಾಗುತ್ತದೆ. ಆದರೆ, ಈ ಉದ್ದೇಶವನ್ನೂ ಆದರ್ಶವನ್ನೂ ಬದಿಗಿಟ್ಟು, 'ಹಿಂದುಳಿದ ಭಾರತೀಯರಲ್ಲಿ'ಯೂ ಭೇದವನ್ನು ಕಲ್ಪಿಸಲು ಹವಣಿಸುತ್ತಿರುವುದು ಶೋಭನೀಯವೆನ್ನುವಂತಿಲ್ಲ.

ಮೈಸೂರಿನಲ್ಲಿ ಹಿಂದುಳಿದವರು ಯಾರೆಂಬುದನ್ನು ಪರಿಶೀಲಿಸಲು ನೇಮಿಸಿದ್ದ ಡಾ। ನಾಗನ ಗೌಡ ಸಮಿತಿಯು ತನ್ನ ಅಂತಿಮ ವರದಿಯನ್ನು ಸರಕಾರಕ್ಕೆ ಸಲ್ಲಿಸಿದೆ. ಈ ಸಮಿತಿಯು ಜಾತೀಯತೆಯನ್ನೇ ಉಳಿಯಗೊಟ್ಟುದು ನಿಜವಾಗಿಯೂ ದುರ್ದೈವದ ಸಂಗತಿ—ಕುರುಡನೇ ಕುರುಡನಿಗೆ ಮಾರ್ಗದರ್ಶನಮಾಡಲು ಮುಂದುವರಿದಂತೆ. ರಾಜ್ಯದಲ್ಲಿನ ಪ್ರತಿಯೊಂದು ಜಾತಿಗೆ ಸೇರಿದವರ ಒಟ್ಟು ಜನರ ಮತ್ತು ಅವರಲ್ಲಿ ಸುಶಿಕ್ಷಿತರ ಅಂತಿಮ ಸಂಖ್ಯೆಯನ್ನು ಗಳಿಸಲಾರದ ಈ ಸಮಿತಿಯು ಇಪ್ಪತ್ತು ವರ್ಷಗಳ ಹಿಂದಿನ ಜನಗಣನೆಯ ಅಂಕಸಂಖ್ಯೆಗಳ ಆಧಾರವನ್ನು ಇಟ್ಟುಕೊಂಡಿರುವುದು ಮೂರ್ಖತನವೆನ್ನಬೇಕು. ದೇಶದ ಕಾಯವೇ ಕಳೆದ ವರ್ಷಗಳಲ್ಲಿ ಪಲ್ಲಟವಾಗಿದೆಯೆಂಬುದನ್ನು ಯಾರೊಬ್ಬ ವಿವೇಕಿಯೂ ತಿಳಿದುಕೊಳ್ಳುವ ಮನಸ್ಸಿದ್ದರೆ, ತಿಳಿದುಕೊಳ್ಳಬಲ್ಲ. ಅಂದಿನ ಅಂಕೆಸಂಖ್ಯೆಗಳನ್ನು ಅಂದಾಜಿನಿಂದ ಹೆಚ್ಚಿಸಿಕೊಂಡಿದೆಯಾದರೂ ಇದು ಸಕ್ರಮವಲ್ಲ. ಜಾತ್ಯತೀತ ರಾಷ್ಟ್ರದ ಜನಗಣನೆಯಲ್ಲಿ ಜಾತಿಗೆ ಸಂಬಂಧಪಟ್ಟ ವಿವರಗಳನ್ನು ಕಲೆಹಾಕುವ ಪರಿಪಾಠವನ್ನು ಬಿಟ್ಟುಕೊಟ್ಟಿರುವುದು ಜಾತೀಯತೆಯ ದೂರೀಕರಣಕ್ಕೊಂದು ಮಾರ್ಗದರ್ಶನವೆನಿಸಿದ್ದರೆ, ಈ ಸಮಿತಿಯು ಈ ಪದ್ಧತಿಯನ್ನು ಪುನಃ ಜೀವಂತಗೊಳಿಸಬೇಕೆಂದು ಅಭಿಪ್ರಾಯವಿತ್ತಿರುವುದು ಮುಂದೆ ಸರಿದವನನ್ನು ಹಿಂದೆ ಜಗ್ಗಲು ಹವಣಿಸಿದಂತೆಯೇ ಸರಿ. ಹೈಸ್ಕೂಲುಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಸಮಿತಿಯು ಗಮನಿಸಿದೆಯಾದರೂ ಇದು ತೃಪ್ತಿಕರವಾದ ವಿಧಾನವೆನ್ನುವಂತಿಲ್ಲ. ಆರ್ಥಿಕ ಪರಿಸ್ಥಿತಿಯು ಹೆಚ್ಚಿನ ಜಾತಿಗಳು ಹಿಂದುಳಿಯುವುದರಲ್ಲಿ ಮಹತ್ವದ ಪಾತ್ರವಹಿಸಿದೆಯೆಂಬುದನ್ನು ತಿಳಿದುಕೊಂಡು ಈ ಸಮಿತಿಯು ಆರ್ಥಿಕ ಸ್ಥಿತಿಗತಿಗಳನ್ನೇ ಹಿಂದುಳಿದಿರುವಿಕೆಯ ಅಳತೆಗೋಲನ್ನಾಗಿ ಮಾಡುವ ಸತ್ಸಂಪ್ರದಾಯವನ್ನು ಹಾಕಿ ಕೊಡದೆ ಮತ್ತೂ ಜಾತೀಯತೆಯನ್ನೇ ಆಧಾರವಾಗಿಟ್ಟುಕೊಂಡುದು ತೀರ ಅಸಮಂಜಸವಿದೆ. ಸಾರ್ವತ್ರಿಕವಾಗಿ ವಾರ್ಷಿಕ ರೂ. ೧,೨೦೦ ಕ್ಕಿಂತ ಕಡಿಮೆ ಆದಾಯವಿರುವವರೆಲ್ಲರೂ ಹಿಂದುಳಿದವರು ಎಂದು ನಮ್ಮ ನೆರೆಯ ರಾಜ್ಯ ಮಹಾರಾಷ್ಟ್ರ ಘೋಷಿಸಿರುವುದನ್ನು ನಾವು ಗಮನಿಸಬಹುದು. ಜಾತಿವಾರಾಗಿ ನಾವು ಕೆಲವು ಪಂಗಡಗಳಿಗೆ ಹಿತವೆಸಗುವುದಾದರೂ ಈ ಹಿತ-ಸೌಕರ್ಯಗಳು ನಿಜವಾದ ಆವಶ್ಯಕತೆಯುಳ್ಳವನಿಗೆ ಲಭಿಸುವ ಸಂದರ್ಭಗಳು ವಿರಳ—ಅತಿ ವಿರಳ. ಇದರ ಲಾಭ ಪಡೆದುಕೊಳ್ಳುವವರು ಆ 'ಹಿಂದುಳಿದವರಲ್ಲಿ ಮುಂದುವರಿದವರು' ಮಾತ್ರ.

ಶ್ರೀ ಎಂ. ಎಸ್. ಪಾಟೀಲರ ಭಿನ್ನಾಭಿಪ್ರಾಯದ ಟಿಪ್ಪಣಿಯನ್ನು ನಾವು ನೋಡುವುದಾದರೆ, ಕೇವಲ ಲಿಂಗಾಯತರು ಮಾತ್ರವಲ್ಲ ಇತರ ಮುಂದುವರಿದವರೆಂದು ಘೋಷಿಸಲಾದ ಜಾತಿಗಳಲ್ಲೂ ಹಲವಾರು ಉಪಜಾತಿಗಳು ಹಿಂದುಳಿದವರಾಗುವುದು ಸಾಧ್ಯವಿದೆ. ಬ್ರಾಹ್ಮಣ ಜಾತಿಯಲ್ಲಿಯೇ ಅದೆಷ್ಟು ಉಪಜಾತಿಗಳಿಲ್ಲ? ಮುಸ್ಲಿಮರ ಉಪಜಾತಿಗಳೆಲ್ಲವೂ ಹಿಂದುಳಿದಿರುವುವೆಂಬುದನ್ನು ಸಮಿತಿಯೇ ಒಪ್ಪಿಕೊಂಡಿದೆ. ಇವೆಲ್ಲವುಗಳಿಂದಲೇ ಸಮಾಜದ ಶಾಂತಿಯು ಕೆಡುವುದು; ಅಲ್ಲಸಲ್ಲದ ಖೇದಜನಕ ಪ್ರಕರಣಗಳಿಗೆ ನಾಂದಿಯಾಗುವುದು. ಇದಕ್ಕೆಲ್ಲ ಪರಿಹಾರವೆಂದರೆ, ಜಾತೀಯತೆಯ ನಾಶ—ಇದಕ್ಕೆ ಪೂರಕವಾಗಿರುವುದು ಹಿಂದುಳಿದಿರುವವರ ವರ್ಗೀಕರಣವನ್ನು ಆರ್ಥಿಕ ತಳಹದಿಯಲ್ಲಿ ಮಾಡುವುದು. ಡಾ। ನಾಗನ ಗೌಡ ಸಮಿತಿಯು ಅನುಸರಿಸಿದ ನೀತಿ ಜಾತೀಯತೆಯ ಯುಗಕ್ಕೆ ಸೇರಿದುದು; ಜಾತ್ಯತೀತ ಕಲ್ಯಾಣರಾಷ್ಟ್ರ ರಚನೆಯ ಉದ್ದೇಶವನ್ನೇ ಭಂಗಪಡಿಸುವಂತಹದು. ಆದುದರಿಂದ, ಸರಕಾರ ಅದನ್ನು ಸ್ವೀಕರಿಸಿ, ಜಾತೀಯತೆಗೆ ಮತ್ತಷ್ಟು ಪುರಸ್ಕಾರ ದೊರೆಯುವಂತೆ ಮಾಡಬಾರದು. ಉತ್ತಮವಾದುದನ್ನು ನಮ್ಮಲ್ಲಿಲ್ಲವಾದರೆ, ಬೇರೆಯವರಿಂದಾದರೂ ಕಲಿತುಕೊಳ್ಳಬೇಕು; ಆದುದರಿಂದ, ಮಹಾರಾಷ್ಟ್ರದ ನೀತಿಯನ್ನು ಅನುಕರಿಸಿದರೆ, ಹಾನಿಯೇನೂ ತಟ್ಟಲಾರದು.

ಶಿಕ್ಷಕರ ಹಿತಚಿಂತನೆ

ಕಡ್ಡಾಯ ಪ್ರಾಥಮಿಕ ಶಿಕ್ಷಣವು ವ್ಯವಸ್ಥಿತವಾಗುವುದರೊಡನೆ ಶಿಕ್ಷಕರ ಹೊಣೆಗಾರಿಕೆಯಲ್ಲಿಯೂ ಹೆಚ್ಚಳವಾಗುವುದು. ನಮ್ಮ ಶಿಕ್ಷಕ ಸಮಾಜವನ್ನು ಸರಕಾರ ಅಧಿಕ ಜವಾಬ್ದಾರಿ ವಹಿಸುವಂತೆ ಆದೇಶವೀಯುವುದರೊಡನೆ ಅವರ ಜೀವನದ ಉನ್ನತಿಯ ಕಡೆಗೂ ಅವಶ್ಯ ಗಮನ ಹರಿಸಬೇಕು. ಸರಕಾರದ ನಾನಾ ವಿಭಾಗಗಳ ಹಲವಾರು ಯೋಜನೆಗಳಲ್ಲಿ ನೀರಿನಂತೆ ಸಂಪತ್ತು ಹರಿದು ಹೋಗುವಾಗ, ಶಿಕ್ಷಕರ ಹಿತಸಾಧನೆಯ ಬಗ್ಗೆ ಹಣವಿಲ್ಲವೆನ್ನುವುದು ಸರಕಾರಕ್ಕೇನೂ ಅಪಹಾಸ್ಯಕರ. ನಾನಾ ಆಡಳಿತೆಯ ಶಿಕ್ಷಕರಿಗೆ ದೊರೆಯುತ್ತಿರುವ ವೇತನವು ನಿಶ್ಚಿತ ಸಮಯಕ್ಕೆ ಸರಿಯಾಗಿ ದೊರೆಯುತ್ತಿಲ್ಲ; ಈ ಬಗ್ಗೆ ನಿಶ್ಚಿತ ದಿನವೆಂಬುದೂ ಇಲ್ಲ. ಎರಡು ಮೂರು ತಿಂಗಳುಗಳ ವರೆಗೂ ಸಂಬಳ ಕೈಸೇರದಿರುವುದುಂಟು; ಬಂದರೆ, ಒಂದೇ ತಿಂಗಳು ಅಷ್ಟು ಬರುವುದೂ ಉಂಟು. ಮಳೆಯ ಅನಿಶ್ಚಿತತೆಯಿಂದ ಕಂಗೆಟ್ಟ ರೈತರ ಉದ್ಧಾರಕ್ಕೆ ಸರಕಾರ ನೀರಾವರಿ ಯೋಜನೆಗಳನ್ನು ಕೈಗೊಳ್ಳುತ್ತಿದೆ. ಆದರೆ, ವೇತನ ಸಿಗುವ ದಿನದ ಅನಿಶ್ಚಿತತೆಯನ್ನು ಸರಕಾರ ತಾನೇ ಹೋಗಲಾಡಿಸಬಲ್ಲುದಾದರೂ ಅದು ಮೌನವಹಿಸುತ್ತಿದೆ. ಗ್ರಾಮೀಣ ಪ್ರದೇಶಗಳ ಶಿಕ್ಷಕರಿಗೆ ವಸತಿಯ ಅಭಾವವಿದ್ದರೆ, ನಗರದವರಿಗೆ ಬಾಡಿಗೆಯ ಹೆಚ್ಚಳ ಕಾಡುತ್ತಿದೆ. ಇವೆಲ್ಲವನ್ನೂ ಸಹಿಸಿಕೊಂಡು ಮುಂದಾದರೂ ಭಡ್ತಿ ದೊರೆಯುವುದೆಂಬ ಆಶೆಯಿದೆ ಎನ್ನೋಣವೆ? ಎನ್. ಜಿ. ಓ.ಗಳಿಗಿರುವಂತೆ ಈ ಸೌಲಭ್ಯ ಶಿಕ್ಷಕರಿಗಿಲ್ಲ. ತಮ್ಮ ಸಂಸಾರ ಪೋಷಣೆ, ಮಕ್ಕಳ ಶಿಕ್ಷಣ, ವೃದ್ಧಾಪ್ಯದ ಚಿಂತೆ—ಇನ್ನು ಆಕಸ್ಮಿಕವಾಗಿ ಮೃತ್ಯುಮುಖನಾದರೆ, ಸಂಸಾರದ ದುಸ್ಥಿತಿ ಇವುಗಳಿಂದ ತಮ್ಮ ವರ್ತಮಾನ ಮತ್ತು ಭವಿಷ್ಯಗಳ ವಿಕ್ಷಿಪ್ತ ಚಿಂತಾಜಗತ್ತಿನಲ್ಲಿರುವ ಶಿಕ್ಷಕನು ಮರ್ಯಾದೆಯಿಂದ ಜೀವಿಸುವುದೇ ಮಹಾ ಸಾಹಸ. ಆದುದರಿಂದ ಅಧ್ಯಾಪಕರಿಂದ ಸಮರ್ಥ ಸೇವೆಯನ್ನು ಬಯಸುವ ಸರಕಾರ ಅವರ ಸೇವೆಯನ್ನು ಮಾಡುವುದು ತನ್ನ ಕರ್ತವ್ಯವೆಂಬುದನ್ನು ಮರೆಯಬಾರದು. ಭಾವಿನಾಗರಿಕರು ಸುಶಿಕ್ಷಿತರಾಗಬೇಕೆಂದು ನಾವು ಬಯಸುವಂತೆಯೇ ನಾಗರಿಕ ನಿರ್ಮಾತರನ್ನು ಕಡೆಗಣಿಸಬಾರದು. ಅಧ್ಯಾಪಕರಿಗೆ ಮಕ್ಕಳಿಗೆ ಎಲ್ಲ ಹಂತಗಳಲ್ಲಿಯೂ ಧರ್ಮಾರ್ಥ ಶಿಕ್ಷಣ, ವಸತಿ ಸೌಕರ್ಯ, ಪ್ರೊವಿಡೆಂಟ್ ಫಂಡ್, ಉಚಿತ ವಿಮೆ ಮತ್ತು ನಿವೃತ್ತಿ ವೇತನಗಳ ವ್ಯವಸ್ಥೆಗಳನ್ನು ಒದಗಿಸುವುದು ಅಪೇಕ್ಷಣೀಯ ಮತ್ತು ಅತ್ಯಗತ್ಯ. ಇವು ಕೈಗೆ ಸಿಕ್ಕಿದ ಪಕ್ಷದಲ್ಲಿ ಶಿಕ್ಷಕನ ಚಿಂತಾಭಾರ ಬಹಳಷ್ಟು ಕಡಿಮೆಯಾಗುವುದು. ಅಧ್ಯಾಪಕರೆಂದರೆ, ರಾಷ್ಟ್ರ ನಿರ್ಮಾತೃಗಳ ನಿರ್ಮಾತೃಗಳು. ಅವರ ಬಗ್ಗೆ ಗೌರವ ಕಳಕಳಿಯುಕ್ತ ಭಾವದಿಂದ ವರ್ತಿಸುವುದರಿಂದ ರಾಷ್ಟ್ರ ಕಲ್ಯಾಣವಾಗಲು ನೆರವಾಗುವುದು. ಮೈಸೂರು ಸರ್ಕಾರ ಇತ್ತ ಗಮನಹರಿಸಲೇಬೇಕು.

ಸಂಕ್ಷಿಪ್ತ ಸುದ್ದಿಗಳು

ಅಂಗೋಲಕ್ಕೆ ಭಾರತದ ಬೆಂಬಲ

ಮಾನವತೆಯನ್ನು ಎತ್ತಿ ಹಿಡಿಯುವ ಅಮೂಲ್ಯ ಗುಣವಿರುವವರು ಕೆಲವೇ ಮಂದಿ. ಅವರಲ್ಲಿ ನಮ್ಮ ಪ್ರಧಾನಿ ಪಂಡಿತ ನೆಹರು ಕೂಡ ಒಬ್ಬರು. ಸ್ವತಂತ್ರ ವಿಶ್ವರಚನೆಯೇ ವಿಶ್ವಶಾಂತಿಗೆ ಮೂಲ; ವಸಾಹತುವಾದವೇ ಶಾಂತಿಭಂಗಕ್ಕೆ ಪ್ರೇರಕವೆಂಬುದನ್ನು ಇವರು ನಿಂತಲ್ಲಿ ಕೂತಲ್ಲಿ ಪ್ರತಿಪಾದಿಸುತ್ತಾರೆ. ಅದರಲ್ಲಿಯೂ ಆಫ್ರಿಕ್ಯದ ಪ್ರಶ್ನೆಗಳ ಮೇಲೆ ಇವರ ಕಳಕಳಿ ಮತ್ತೂ ಅಧಿಕ. ವಸಾಹತುವಾದದಿಂದ ಪದದಲಿತವಾದ ಇಲ್ಲಿನ ರಾಷ್ಟ್ರಗಳು ಸ್ವತಂತ್ರವಾಗಿ ಅಭಿವೃದ್ಧಿ ಹೊಂದಿದರೇನೇ ವಿಶ್ವದ ಕ್ಷೋಭೆಶಮನವಾದೀತು ಎಂದಿವರ ಅಭಿಪ್ರಾಯ. ಇದರಿಂದಲೇ ಅಂಗೋಲಾದಲ್ಲಿ ಸರ್ವಾಧಿಕಾರಿ ಸಾಲಝಾರರು ತೋರಿದ ಅಮಾನುಷ ವರ್ತನೆಗೆ ಕಿಡಿಕಿಡಿಯಾದ ಇವರು ಪೋರ್ಚುಗಲ್‌ನ ವಿರುದ್ಧ ಹೋರಾಡುವ ಅಂಗೋಲಾದ ಜನತೆಗೆ ಭಾರತದ ಬೆಂಬಲ ಸೂಚಿಸಿದ್ದಾರೆ.

ಸಾಲಝಾರರ ಸಮರ್ಥಕ

ಗೋವೆಯು ಪೋರ್ಚುಗಲಿನ ಅವಿಭಾಜ್ಯ ಅಂಗವೆಂದು ಘೋಷಿಸಿದ್ದ ನಿರಂಕುಶ ಪ್ರಭು ಸಾಲಝಾರರಿಗೆ ಅಮೆರಿಕೆಯ ರಾಜ್ಯಾಂಗ ಕಾರ್ಯದರ್ಶಿಯಾಗಿದ್ದ ದಿವಂಗತ ಡಲ್ಲೆಸರು ಸಮರ್ಥಕರಾಗಿದ್ದರು. ಅವರ ನಿಧನಾನಂತರ ಅಸಹಾಯಕರಂತಾದ ಸಾಲಝಾರರ ಕೈಹಿಡಿಯಲು ಬ್ರಿಟನ್ನಿನ ವಿದೇಶ ಮಂತ್ರಿ ಲಾರ್ಡ್ ಹೋಮರು ಮುಂದೆ ಬರುವಂತಿದೆ. ಕಳೆದ ನಾಲ್ಕಾರು ಶತಮಾನಗಳಿಂದ ಬೆಳೆದು ಬಂದ ಬ್ರಿಟನ್–ಪೋರ್ಚುಗಲಿನ ಸ್ನೇಹ ಸಂಬಂಧವನ್ನು ನೆನಸಿಕೊಂಡರೆ, ತನ್ನ ಪುರಾಣಕಾಲದ ಮಿತ್ರನನ್ನು ಬಿಡಲು ಬ್ರಿಟನ್ನು ಒಪ್ಪಲಾರದು. ಆದರೆ, ಪರಿವರ್ತನಶೀಲವಾದ ಯುಗವಾಣಿಗೆ ಮನ್ನಣೆಯಿತ್ತು ತಾನೇ ವಸಾಹತುವಾದಕ್ಕೆ ತಿಲಾಂಜಲಿಯೀಯುತ್ತ ಬಂದ ಬ್ರಿಟನ್ನು ಅದಕ್ಕೆ ಬೆಂಬಲವೀಯುವುದು ಹಾಸ್ಯಾಸ್ಪದವಾಗುವುದು.

ಸಮಗ್ರತೆ ಅತ್ಯವಶ್ಯ

ಪಂಡಿತ ಪಂತರ ನಿಧನಾನಂತರ ಕೇಂದ್ರ ಸರಕಾರದ ಗೃಹಮಂತ್ರಿ ಖಾತೆಯ ಕಾರ್ಯಭಾರ ಹೊತ್ತ ಲಾಲಬಹದೂರ ಶಾಸ್ತ್ರಿಗಳ ಮೂರ್ತಿ ಚಿಕ್ಕದಾದರೂ ಕೀ

ರ್ಶಿ ದೊಡ್ಡದು. ತಮ್ಮ ಶಾಖೆಯನ್ನು ಸಮರ್ಪಕವಾಗಿ ನೋಡಿಕೊಳ್ಳುವ ಸಾಮರ್ಥ್ಯ ಅವರಲ್ಲಿದೆ-ಜನತೆಯ ಆಶೆ ಆಕಾಂಕ್ಷೆಗಳನ್ನು ಅರಿತು ಅವನ್ನು ಪೂರೈಸಲು ದುಡಿಯುವ ಅಪೇಕ್ಷೆಯೂ ಇದೆ. ಎಂತಲೇ ನೆಹರು ಅವರನ್ನು ಮೆಚ್ಚುತ್ತಾರೆ. ಚೀನದ ಹಠ ಮಾರಿತನ, ಪಾಕಿಸ್ತಾನದ ಕಟು ಟೀಕೆಗಳಿಂದ ನೊಂದ ಭಾರತ ತನ್ನ ಸಮಗ್ರತೆಯನ್ನು, ಐಕ್ಯವನ್ನು ಉಳಿಸಿಕೊಂಡರೆ, ತನ್ನ ರಕ್ಷಣೆಯನ್ನು ತಾನು ಮಾಡಿಕೊಳ್ಳಬಲ್ಲುದು ಎಂದಿವರ ಅಂಬೋಣ. ಅದಕ್ಕಾಗಿಯೇ ಎ. ಐ. ಸಿ. ಸಿ. ಅಧಿವೇಶನದಲ್ಲಿ ಇವರು ಈ ಸಮಗ್ರತೆಯ ಬಗ್ಗೆ ಎಚ್ಚರಿಕೆಯ ಮಾತಾಡಿದ್ದಾರೆ.

ಚಿಕಿತ್ಸೆಯ ಹೆಸರಿನಲ್ಲಿ

ಅಧಿಕಾರಕ್ಕೆ ಏರುವುದೂ ಅಧಿಕಾರದಿಂದ ಇಳಿಯುವುದೂ ಸರ್ವ ಸಾಮಾನ್ಯವಾಗಿದೆ. ಆದರೆ, ಅಧಿಕಾರಕ್ಕೆ ಏರಿಸಿದವರೇ ಇಳಿಸಿ ಅವರನ್ನು ಬಲಿತೆಗೆದುಕೊಳ್ಳುವುದು ಸರ್ವಾಧಿಕಾರಿ ರಾಷ್ಟ್ರಗಳಲ್ಲಿ ಮಾತ್ರ ಸಾಧ್ಯ. ಟಿಬೇಟಿನ ಅನಭಿಷಿಕ್ತ ದೊರೆ ದಲ್ಯಾ ಲಾಮರಿಗೆ ವಿರುದ್ಧ ಎತಿ ಕಟ್ಟಿ, ಇವರನ್ನು ಓಡಿಸಿ ತಾನು ಗದ್ದುಗೆಗೇರಿಸಿದ ಪಂಚನ್ ಲಾಮಾರನ್ನು ಚೀನ ಈಗ ಇಳಿಸುವ ಹೊಂಚು ಹಾಕುತ್ತಿದೆ. ದೇಹದ ಗಾಯವೊಂದಕ್ಕೆ ಉಪಯುಕ್ತ ಚಿಕಿತ್ಸೆ ನಡೆಸುವ ಹೆಸರಿನಲ್ಲಿ ಪಂಚೆನ್ ಲಾಮಾರನ್ನು ರಾಜಧಾನಿ ಲಾಸ್ಸದಿಂದ ಪೇಕಿಂಗ್‌ಗೆ ಚೀನ ಕರೆಸಿಕೊಂಡಿದೆ. ಕಮ್ಯೂನಿಸ್ಟ್ ವಿರೋಧವಾಗಿ ಇವರು ಭಾಷಣ ಮಾಡಿದ್ದರೆಂದೂ ಅದಕ್ಕಾಗಿ ವಿಚಾರಣೆ ನಡೆಸಲು ಕರೆಸಿಕೊಳ್ಳಲಾಗಿದೆಯೆಂದೂ ಹೇಳಲಾಗುತ್ತಿದೆ.

ಒರಿಸ್ಸದ ಚುನಾವಣೆ

ಒರಿಸ್ಸದ ಮಧ್ಯಾವಧಿ ಚುನಾವಣೆಗಳು ಸಮೀಪಿಸುತ್ತಿರುವಂತೆ ಅಲ್ಲಿ ರಾಜಕೀಯ ಚಟುವಟಿಕೆಗಳೂ ಹೆಚ್ಚುತ್ತಿವೆ. ಹಿಂದಿನ ಕೆಲವು ಕಾಂಗ್ರೆಸ್ ಸದಸ್ಯರಿಗೆ ಈ ಬಾರಿ ಸ್ಪರ್ಧಿಸಲು ಪಕ್ಷದ ಟಿಕೇಟು ದೊರೆಯದಿರುವುದರಿಂದ, ಚುನಾವಣೆಯನ್ನು ಬಿಟ್ಟಿರುವುದು ಅವರಿಗೆ ಇಷ್ಟವಿಲ್ಲದುದರಿಂದ ಸುಮಾರು ೩೦ ಜನರು ಸ್ವತಂತ್ರವಾಗಿ ಸ್ಪರ್ಧೆಗೆ ಇಳಿದಿದ್ದಾರೆ. ಪ್ರಧಾನಿ ನೆಹರು ಇವರಿಗೆ ಎಚ್ಚರಿಕೆ ನೀಡಿದ್ದಾರೆ. ಈ ಮಹನೀಯರು ಸ್ವಾರ್ಥ ದೃಷ್ಟಿಯಿಂದಷ್ಟೇ ಚುನಾವಣೆಗೆ ಸ್ವತಂತ್ರರಾಗಿ ನಿಂತಿರುತ್ತಾರೆಂಬುದನ್ನು ತಿಳಿಸಿ, ಇಂತಹರಿಗೆ ಮುಂದೆಂದೂ ಕಾಂಗ್ರೆಸ್ ಪಕ್ಷದಲ್ಲಿ ಸ್ಥಾನ ಸಿಗಲಾರದು ಎಂದಿದ್ದಾರೆ. ಒರಿಸ್ಸದಲ್ಲಿ ಬದ್ರ ಸರಕಾರವನ್ನು ಕಾಂಗ್ರೆಸ್ ಒಂದೇ ಸ್ಥಾಪಿಸಬಲ್ಲುದು, ಆದುದರಿಂದ ಅದೇ ಗೆಲ್ಲುವಂತಾಗಬೇಕೆಂದು ವಿನಂತಿಸಿದರು.

ವಿಶಿಷ್ಟ ರಾಜಕಾರಣ

ಸರ್ವೋದಯ ಧುರೀಣರಾದ ಜಯಪ್ರಕಾಶರು ರಾಜಕಾರಣವನ್ನು ಬಿಟ್ಟರೂ ರಾಜಕಾರಣವು ಅವರನ್ನು ಬಿಡುತ್ತಿದಿಲ್ಲ. ಆದರೆ, ತಾನು ಬಿಟ್ಟ ಮತ್ತು ತನ್ನನ್ನು ಬಿಡದಿರುವ ರಾಜಕಾರಣಗಳಲ್ಲಿ ಬಹಳ ಅಂತರವಿದೆಯೆಂದವರಿಷ್ಟು ಸಮಯದ ನಂತರ ಸ್ಪಷ್ಟಪಡಿಸಿದ್ದಾರೆ. ರಾಜಕಾರಣದ ಸಂಪೂರ್ಣ ರಚನೆಯನ್ನೇ ಬದಲಿಸುವ ಇಚ್ಛೆ ಇವರದು. ಸಂಕುಚಿತ ಪಕ್ಷದ ಅಥವಾ ವೈಯಕ್ತಿಕ ಹಿತದ ಉದ್ದೇಶವುಳ್ಳ ರಾಜಕಾರಣದಲ್ಲಿ ಇವರಿಗೆ ಆಸಕ್ತಿಯಿಲ್ಲದುದರಿಂದ ಅದನ್ನವರು ಬಿಟ್ಟಿದ್ದಾರೆ; ಅದರಿಂದ ದೂರವಿದ್ದಾರೆ. ವಿಶಾಲ ಧೋರಣೆಯ ರಾಜಕಾರಣ ಇವರದು. ಆದರೆ, ಈ ಪರಿವರ್ತಿತ ರಾಜಕಾರಣವು ಇಂದಿನ ರಾಜಕಾರಣದ ಸ್ಥಾನಾಪನ್ನವಾಗಬೇಕಾದರೆ, ನಮ್ಮ ಭಾರತದಲ್ಲಿ ಅದೆಷ್ಟು ದಶಕಗಳು ಬೇಕಾಗುವುದೋ ಏನೋ!

ದಯಾಳರ ನಿವೃತ್ತಿ

ಸಂಯುಕ್ತ ರಾಷ್ಟ್ರ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಶ್ರೀ ಡಾಗ್ ಹೆಮ್ಮರ್‌ಶೀಲ್ಡರು ಕಾಂಗೋದಲ್ಲಿಯ ತಮ್ಮ ಪ್ರತಿನಿಧಿ ಶ್ರೀ ರಾಮೇಶ್ವರ ದಯಾಳುರವರನ್ನು ಆ ಹುದ್ದೆಯಿಂದ ಬಿಡುಗಡೆಮಾಡಿದ್ದಾರೆ. ಕಾಂಗೊದಲ್ಲಿ ಸಂ. ರಾ. ಸಂಸ್ಥೆಯ ಕಾರ್ಯಾಚರಣೆಯನ್ನು ಪುನರ್ಘಟಿಸುವ ಯೋಜನೆಯಿರುವುದರಿಂದ ಇವರನ್ನು ಕಳುಹಿಸಲಾಗಿದೆ. ಶ್ರೀ ದಯಾಳರ ದಕ್ಷತೆಯಿಂದ, ವಿಕ್ಷಿಪ್ತಗೊಂಡಿದ್ದ ಕಾಂಗೊವಿನ ಹಲವಾರು ಪ್ರಶ್ನೆಗಳೂ ಸಮಸ್ಯೆಗಳೂ ಉತ್ತರಿಸಲ್ಪಟ್ಟವೆ. ಕಾಂಗೋಲಿ ಪಾರ್ಲಿಮೆಂಟು ಸೇರುವುದಕ್ಕೆ ಕಾಯಿದೆ ಬದ್ಧ ಒಪ್ಪಂದವಾಗಿದೆ. ದಯಾಳರು ಮರಳಿ ಭಾರತಕ್ಕೆ ಬಂದರೂ ಭಾರತದ ಸೇನೆಯು ಅಲ್ಲಿಯೇ ಇರುವುದು. ನ್ಯೂಯಾರ್ಕ ಟ್ಯಾಮ್ಸ್ ಪತ್ರಿಕೆಯು ಈ ಸಂಬಂಧದಲ್ಲಿ ಅಗ್ರಲೇಖನವೊಂದನ್ನು ಬರೆದು, ಭಾರತದ ಕಳಕಳಿಯನ್ನು ಪ್ರಶಂಸಿಸಿದೆ. ಭಾರತದ ಬೆಂಬಲ ಯುಕ್ತರಾಷ್ಟ್ರಸಂಘಕ್ಕೆ ಸದಾ ಸಿದ್ಧವಿದೆ.

ಮುಚ್ಚಿದರೆ ಮುಗುಳು! ಬಿಚ್ಚಿದರೆ ಅರಳು!!

ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಕುಸುಮವೇ—

ಶ್ರೀ ಕೆ. ಹೊನ್ನಯ್ಯ ಶೆಟ್ಟರ

ಮುಗುಳು

ದಿ! ಶ್ರೀ. ಕಡೆಕಾರು ರಾಜಗೋಪಾಲ ಕೃಷ್ಣರಾಯರ ಮುನ್ನುಡಿ.

ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದ ಚೊಕ್ಕ ಪುಸ್ತಕ

ವಿದ್ಯಾರ್ಥಿಗಳು ನಲಿನಲಿದು ಓದುವುದು, ಓದಿ ಓದಿ ನಲಿವುದರಿಂದ

ಈಗ ೧೨ನೇ ಮುದ್ರಣವನ್ನು ಕಂಡಿದೆ—

ಅಭಿನಯಕ್ಕೆ, ಕೋಲಾಟಕ್ಕೆ, ನರ್ತನಕ್ಕೆ ಅನುಕೂಲವಾದ ಪದ್ಯಗಳು, ತ್ರಿವರ್ಣ ಮುಖಪತ್ರ, ಇಷ್ಟಾದರೂ ಬೆಲೆ: ೦-೬-೦ (ಟ. ಖರ್ಚು ಬೇರೆ).

ಪ್ರತಿಗಳು ಎಲ್ಲ ಪುಸ್ತಕ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಅಲ್ಲಲ್ಲಿಯ ಸುದ್ದಿಸಾರ

ಪೆಥೋಲೋಜಿ ಬ್ಲೋಕಿನ ಶಂಕು ಸ್ಥಾಪನಾ ಸಮಾರಂಭ— ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಪೆಥೋಲೋಜಿ ಬ್ಲೋಕಿನ ಶಂಕು ಸ್ಥಾಪನಾ ಸಮಾರಂಭವು ಕಳೆದ ತಾ. 24ರಂದು ಮೈಸೂರು ಸರಕಾರದ ಗೃಹ ಮಂತ್ರಿ ಶ್ರೀ ಎಚ್. ಎಮ್. ಚೆನ್ನ ಬಸಪ್ಪನವರಿಂದ ನೆರವೇರಿಸಲ್ಪಟ್ಟಿತು.

ರಿಜಿಸ್ಟ್ರಾರ್ ಡಾ| ಟಿ ಎಂ. ಎ. ಪೈಯವರು ಸ್ವಾಗತ ಭಾಷಣವೀಯುತ್ತಾ ಈ ಸಮಾರಂಭದ ಶಂಕುಸ್ಥಾಪನೆ ಮಾಡಬೇಕಾಗಿದ್ದ ಕೇಂದ್ರ ಸರಕಾರದ ಗೃಹಮಂತ್ರಿ ಶ್ರೀ ಬಿ. ಎಸ್. ದಾತಾರರು ಬರಲಾಗದ ವಿಚಾರವನ್ನು ಅವರು ಇಲ್ಲಿಯ ಸಂಸ್ಥೆಗಳ ಸ್ಥಾಪನೆಗೆ ಕೊಟ್ಟ ಸಹಕಾರವನ್ನೂ ಪ್ರಸ್ತಾಪಿಸಿ ಎಕೆಡೆಮಿಯ ನೇತೃತ್ವದಲ್ಲಿ ನಡೆಯುತ್ತಿರುವ ಸಂಸ್ಥೆಗಳ ವಿವರವನ್ನಿತ್ತು ದೇಶದ ವಿವಿಧ ಭಾಗಗಳಿಂದ ಬಂದು ವಿದ್ಯಾರ್ಜನೆ ಮಾಡುತ್ತಿರುವ ಸುಮಾರು 3,000 ವಿದ್ಯಾರ್ಥಿಗಳಿರುವ ಇಲ್ಲಿನ ಭಾರತೀಯ ಸಂಸ್ಥೆಗಳಿಗೆ ಸರಕಾರ ತಕ್ಕ ಪ್ರೋತ್ಸಾಹ ವೀಯಬೇಕೆಂದು ಕೋರಿದರು. ಶ್ರೀ ಟಿ. ರಮೇಶ ಪೈಗಳು ಶುಭ ಸಂದೇಶಗಳನ್ನು ಓದಿದರು.

ಮಂತ್ರಿಗಳು ಶಂಕು. ಸ್ಥಾಪನಾ ಭಾಷಣ ಮಾಡುತ್ತಾ ದಕ್ಷಿಣ ಕನ್ನಡಿಗರ ಕಾರ್ಯ ಸಾಧನೆ, ಸಮರ್ಥ ಯೋಜನೆ ಮೊದಲಾದುವು ಎಂದೂ ಮರೆಯಲಾಗದವುಗಳೆಂದೂ ಮಣಿಪಾಲಕ್ಕೆ ಆಗಮಿಸುವಾಗ ಪ್ರತಿ ಸಲವೂ ನವ ಪ್ರಯೋಗ, ಉನ್ನತ ಕಾರ್ಯ ನಡೆಯುತ್ತಿದ್ದು ಮಣಿಪಾಲವು ನಮ್ಮ ರಾಜ್ಯದಲ್ಲಿ ಒಂದು ಪ್ರಮುಖ ವಿದ್ಯಾ ಕೇಂದ್ರವಾಗಿ ಪ್ರಖ್ಯಾತವಾಗಲಿರುವುದೆಂದೂ ಇಲ್ಲಿನ ಕಾರ್ಯಗಳು ಶಾಶ್ವತವಾದವುಗಳೆಂದೂ ಇದರ ಕಾರಣ ಪುರುಷರಾದ ಡಾ| ಪೈಗಳು ಅಖಿಲ ರಾಜ್ಯಕ್ಕೇನೇ ಹೆಮ್ಮೆಯ ವ್ಯಕ್ತಿಗಳೆಂದೂ ಇಲ್ಲಿನ ಮಹತ್ವದ ಕೆಲಸಗಳನ್ನು ಸರಕಾರದಿಂದಲೂ ಸಾಧಿಸಲು ಕಷ್ಟ ಸಾಧ್ಯವೆಂದೂ, ಇಲ್ಲಿಂದ ಹೋಗುವ ವಿದ್ಯಾರ್ಥಿಗಳು ದೇಶ ಸೇವಾಕಾರ್ಯ ಸಲ್ಲಿಸುವ ಸ್ಫೂರ್ತಿ ಖಂಡಿತ ಪಡೆಯುವರೆಂದೂ ಇಲ್ಲಿಯ ಮಹಾ ಸಂಸ್ಥೆಗಳು ನಿರಾಂತಕವಾಗಿ ನಿರಂತರ ಆದರ್ಶ ಸೇವೆ ಸಲ್ಲಿಸಲೆಂದೂ ಬಯಸಿದರು. ಅಂತ್ಯದಲ್ಲಿ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ವೈಸ್ ಪ್ರಿನ್ಸಿಪಾಲ್ ಡಾ| ಎ. ಕೃಷ್ಣರಾಯರು ಧನ್ಯವಾದ ಸಮರ್ಪಣೆ ಮಾಡಿದರು.

ಮೋಟಾರು ಕೆಲಸಗಾರರ ಸಮ್ಮೇಳನ— ಕಳೆದ ತಾ. 21ರಂದು ಮಂಗಳೂರಿನ ಮಿಶನ್ ಹೈಸ್ಕೂಲಿನಲ್ಲಿ ಮೋಟಾರು ಮತ್ತು ಎಂಜಿನಿಯರಿಂಗ್ ಕೆಲಸಗಾರರ ಸಮ್ಮೇಳನವು ಶ್ರೀ ಡಿ ವೆಂಕಟೇಶ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಸ್ವಾಗತ ಸಮಿತಿಯ ಅಧ್ಯಕ್ಷ ಶ್ರೀ ಎ. ಸಂಕರ ಆಳ್ವರು ಸ್ವಾಗತಿಸಿದರು. ಜತೆ ಕಾರ್ಯದರ್ಶಿ ಶ್ರೀ ಎಂ. ಬಿ. ನರಸಪ್ಪನವರು ಸಂದೇಶ ವಾಚಿಸಿದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ. ಎ. ಪೈಗಳು ಸಮ್ಮೇಳನವನ್ನು ಉದ್ಘಾಟಿಸಿದರು. ಬಳಿಕ ವಿನೋದಾವಳಿಗಳು ನಡೆದವು.

ಬಂಟರ ಯಾನೆ ನಾಡವರ ಸಂಘ ಮುಂಬಯಿ— ಇದರ 33ನೇ ವಾರ್ಷಿಕ ಮಹಾ ಸಭೆಯು 5ನೇ ಸ್ನೇಹ ಸಮಾರಂಭಕೂಟದೊಡನೆ ತಾ. 14—5—61ರಲ್ಲು ಶಿವಾಜಿ ಪಾರ್ಕಿನಲ್ಲಿರುವ ಭಾರತ್ ಸ್ಕೌಟ್ ಹೋಲಿನಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಕೆ. ವಿಟ್ಠಲ ಸಟ್ರ ಅಧ್ಯಕ್ಷತೆಯಲ್ಲಿ ವಿಜ್ರಂಭಣೆಯಿಂದ ಜರಗಿತು.

ಹೊಸ ವರ್ಷದ ಆಡಳಿತ ಸಮಿತಿಗೆ 28 ಮಂದಿ ಮತ್ತು ಈ ಕೆಳಗಿನ ಮಹನೀಯರನ್ನು ಚುನಾಯಿಸಲಾಯಿತು.

ಶ್ರೀ ಕೆ. ವಿಠಲ ಸೆಟ್ಟಿ ಅಧ್ಯಕ್ಷ, ಬಿ. ಗೋಪಾಲ ಶೆಟ್ಟಿ—ಉಪಾಧ್ಯಕ್ಷ, ಮೂಲ್ಕಿ ಗಂಗಯ ಶೆಟ್ಟಿ ಗೌರವ ಪ್ರ. ಕಾರ್ಯದರ್ಶಿ ಆರ್. ಬಿ. ಶೆಟ್ಟಿ, ಬಿ. ಎ ಗೌ. ಉಪಕಾರ್ಯದರ್ಶಿ, ಬಿ. ಗೋಪಾಲ ಕೃಷ್ಣ ರೈ ಬಿ. ಕೋಮ್. ಗೌ. ಕೋಶಾಧಿಕಾರಿ, ಯನ್. ಗೋಪಾಲ ಸೆಟ್ಟಿ, ಬಿ. ಎ ಎಲ್‌ಎಲ್. ಬಿ. ಗೌ. ಉಪ ಕೋಶಾಧಿಕಾರಿ. ಕೆ ರಾಮ ರಾಯ ಶೆಟ್ಟಿ—ಶಾಲಾ ಚೆಯರ್‌ಮೆನ್, ಜಗನ್ನಾಥ ವಿ. ಶೆಟ್ಟಿ, ಬಿ. ಎ. (ಹೋನರ್ಸ್) ಗೌ. ಶಾಲಾ ಕಾರ್ಯದರ್ಶಿ, ಸುಂದರ ಬಿ ಶೆಟ್ಟಿ ಗೌ. ಶಾಲಾ ಕೋಶಾಧಿಕಾರಿ. ಎಮ್ಮಾರ್‌ಕ್ ರಘು ಸೆಟ್ರನ್ನು ಎಫ್. ಸಿ. ಎ. ಸಂಘದ ಗೌ. ಲೆಕ್ಕ ಪರಿಶೋಧಕರನ್ನಾಗಿ ಆರಿಸಲಾಯಿತು.

ವೃತಪಟ್ಟ ಆಜೀವ ಮತ್ತು ಸಾಮಾನ್ಯ ಸದಸ್ಯರ ದುಃಖ ಸೂಚನೆಯಾದ ಮೇಲೆ ಸಭಿಕರ ಮತ್ತು ಅಧ್ಯಕ್ಷರ ಭಾಷಣಗಳಾದವು.

ಸಂಘದ ಅಧ್ಯಕ್ಷರ ಪುತ್ರಿ ಕುಮಾರಿ ನೀನಳ ನರ್ತನ, ಕೆ. ಶಾಮು ಶೆಟ್ರ ತುಳು ಪದ್ಯಗಳು, ನೆರೂರ್‌ಕಾರರ ಮೆಜಿಕ್ ಶೋ, ಶ್ರೀ ಶೆಟ್ಟಿಗಾರ ಮತ್ತು ಅವರ ಗ್ರೂಪಿನವರ 'ಕುಮಾರ ವಿಜಯ' ಎಂಬ ಬಯಲಾಟ, ಲಘು ಉಪಹಾರ ಮತ್ತು ಉಪಕಾರ ಸ್ಮರಣೆಯೊಂದಿಗೆ ಅಂದಿನ ಸಭೆಯು ಮುಕ್ತಾಯವಾಯಿತು.

ಅಶೋಕ ಧ್ವಜ ಸ್ತಂಭದ ಉದ್ಘಾಟನೆ—ಉಡುಪಿ ಮುನಿಸಿಪಲ್ ಕೌನ್ಸಿಲ್ ಬುನಾದಿ ಮತ್ತು ಹಾ. ಎ. ಶಾಲೆಗೆ ಶ್ರೀ ಕೆ. ಅನಂತ ಪರಿಯಪ್ಪ ಶೆಣೈ ಮತ್ತು ಸಹೋದರರು ದಾನವಾಗಿತ್ತ ಅಶೋಕ ಧ್ವಜ ಸ್ತಂಭದ ಉದ್ಘಾಟನಾ ಸಮಾರಂಭವು ನಗರ ಸಭೆಯ ಮಾಜಿ ಅಧ್ಯಕ್ಷ ಶ್ರೀ ಕೆ. ಕೆ ಪೈಯವರ ಅಧ್ಯಕ್ಷತೆಯಲ್ಲಿ ಉಡುಪಿ ನಗರ ಸಭಾಧಿಪತಿ ಡಾ| ಕೆ. ಎಲ್ ಐತಾಳರವರಿಂದ ನೆರವೇರಿಸಲ್ಪಟ್ಟಿತು. ಪ್ರಾರ್ಥನೆಯಾದ ಮೇಲೆ ನಗರಸಭಾ ಮಾಜಿ ಸದಸ್ಯ ಶ್ರೀ ಕೆ. ಆರ್. ಶೆಣೈಯವರು ಸ್ವಾಗತ ಭಾಷಣ ಮಾಡಿದರು. ಡಾ| ಐತಾಳರು ಶೆಣೈ ಸಹೋದರರ ಸ್ತುತ್ಯ ಕಾರ್ಯವನ್ನು ಪ್ರಶಂಸಿಸಿ ಧ್ವಜ ಸ್ತಂಭವನ್ನು ಉದ್ಘಾಟಿಸಿದರು. ನಗರ ಸಭಾ ಮಾಜಿ ಸದಸ್ಯ ಶ್ರೀ ಕೆ. ದೇವೇಂದ್ರ ಶೆಣೈಯವರು ಧ್ವಜ ಸ್ತಂಭವನ್ನು ನಗರ ಸಭೆಗೊಪ್ಪಿಸಿದರು. ನಗರ ಸಭಾ ಮಾಜಿ ಉಪಾಧ್ಯಕ್ಷ ವಕೀಲ ಶ್ರೀ ಪಿ ವಿ. ಆಚಾರ್ಯರು ಶೆಣೈ ಸಹೋದರರಲ್ಲಿರುವ ಆದರ್ಶನೀಯ ಐಕ್ಯತೆ, ವಿರಂಗಗಳಲ್ಲಿ ಅವರು ಸಲ್ಲಿಸುತ್ತಿರುವ ನಿಷ್ಠಾವಂತ ಸೇವೆ ಮೊದಲಾದವುಗಳನ್ನು ಕೊಂಡಾಡಿ ಭಾಷಣವಿತ್ತರು. ಅಧ್ಯಕ್ಷ ಶ್ರೀ ಕೆ. ಕೆ. ಪೈಯವರು ಶೆಣೈ ಕುಟುಂಬದವರ ಮತ್ತು ಸಹೋದರರ ನಿರಾಡಂಬರ ಕಾರ್ಯ ಕಲಾಪಗಳನ್ನು ಪ್ರಶಂಸಿಸಿ ಭಾಷಣವಿತ್ತರು. ಶ್ರೀ ಕೆ. ಆರ್ ಶೆಣೈಯವರು ಧನ್ಯವಾದ ಸಮರ್ಪಣೆ ಮಾಡಿದ ಬಳಿಕ ಶಾಲಾ ಬಾಲಕಿಯರಿಂದ ಸಂಕೀರ್ತನಾದಿ ವಿವಿಧ ವಿನೋದಾವಳಿಗಳು ಜರಗಿದವು. ಬೆಳಿಗ್ಗೆ ಶ್ರೀ ಕೆ. ಶ್ರೀನಿವಾಸ ಶೆಣೈ ಮತ್ತು ಶ್ರೀ ಬೈಲೂರು ವಾಸುದೇವರಾಯರ ಕಡೆಯಿಂದ ಶಾಲಾ ಮಕ್ಕಳಿಗೆ ಸಿಹಿತಿಂಡಿ ಹಂಚಲಾಗಿತ್ತು.

ಕಾಂಗ್ರೆಸ್ ಕಾರ್ಯಕರ್ತರ ಸಭೆ— ಕಳೆದ ತಾ—24ರಂದು ಉಡುಪಿ ತಾಲೂಕು ಕಾಂಗ್ರೆಸ್ ಕಮಿಟಿಯ ಆಫೀಸಿನಲ್ಲಿ ಮೈಸೂರು ರಾಜ್ಯದ ಗೃಹ ಮಂತ್ರಿ ಶ್ರೀ ಎಚ್. ಎಮ್. ಚೆನ್ನಬಸಪ್ಪನವರು ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಮದ್ಯಪಾನ ನಿಷೇಧದ ಸಮಸ್ಯೆಗಳ ಕುರಿತು ವಿಚಾರವಿನಿಮಯ ನಡೆಸಿದರು ಆರಂಭದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ. ಎ. ಪೈಗಳು ಜಿಲ್ಲೆಯಲ್ಲಿಯ ಮದ್ಯಪಾನ ಪರಿಸ್ಥಿತಿಯ ಸ್ಥಿತಿ ಚಿತ್ರವನ್ನು ವಿವರಿಸಿದರು ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ರವರು ಮದ್ಯಪಾನ ನಿರೋಧದಯೋಜನೆ ಉಗ್ರ ಕಾರ್ಯಕ್ರಮದಲ್ಲಿ ಇಲ್ಲಿಯ ನಾಗರಿಕರು ಸಂಪೂರ್ಣ ಸಹಕಾರವೀಯುವ ಭರವಸೆಯಿತ್ತರು.

ಉಪಾಹಾರ ಸತ್ಕಾರ—ಶ್ರೀ ಕಾರ್ಕಳ ಮೋಹನ್ ದಾಸರು ಕುಮಾರಿ ಪ್ರೇಮ ಅವರನ್ನು ಕಳೆದ ತಾ 26ರಂದು. ಗಂಗೊಳ್ಳಿಯಲ್ಲಿ ವಿವಾಹವಾದ ಸಂಬಂಧ ಉಡುಪಿ ಬೋರ್ಡ್ ಹೈಸ್ಕೂಲಿನ ಜನತಾ ಭವನದಲ್ಲಿ ಕಳೆದ ತಾ. 28ರಂದು ಉಪಾಹಾರ ಸಮಾರಂಭವೊಂದನ್ನು ಏರ್ಪಡಿಸಿದ್ದರು.

'NAVAYUGA' WEEKLY is in the list of periodicals and Newspapers approved for use in Secondary School as per proceedings Roc· No· 466 N/50 date 2-12-1950 of the Directors of public Instruction Madras·

ಶಾಲೆಗಳಿಗೆ ಬೇಕಾಗುವ

ಯೂನಿಫಾರಂಗಳೂ

ಹಾಜರು ರಿಜಿಸ್ಟರುಗಳೂ

ನವಭಾರತ ಪುಸ್ತಕ ಭಂಡಾರ

ಉಡುಪಿ

ದಿ| ಮುಖರ್ಜಿಯವರ ಅಂತ್ಯಸಂಸ್ಕಾರ

• ದಿವಂಗತ ಏರ್ ಮಾರ್ಶಲ್ ಮುಖರ್ಜಿಯವರ ಅಂತ್ಯ ಸಂಸ್ಕಾರ ೧೯೬೦ರ ನವಂಬರ ೧೧ನೆ ದಿನಾಂಕ ನವದೆಹಲಿಯಲ್ಲಿ ನಡೆದಿತ್ತು. ಪ್ರಧಾನ ಮಂತ್ರಿ, ಹಾಗೂ ಮತ್ತಿತರ ಸಚಿವ ಸಂಪುಟದ ಸದಸ್ಯರು ಸಿವಿಲ್ ಮತ್ತು ಮಿಲಿಟರಿ ಅಧಿಕಾರಿಗಳು ಕೂಡ ಸಾರ್ವಜನಿಕರೊಡನೆ ಈ ಅಂತ್ಯಕ್ರಿಯೆಯಲ್ಲಿ ಭಾಗ ವಹಿಸಿದ್ದರು. ದಿವಂಗತ ಏರ್ ಮಾರ್ಶಲರ ಕಳೇಬರವನ್ನು 'ನಿಗಮಬೋಧ ಘಾಟ್'ಕ್ಕೆ ಒಯ್ಯುತ್ತಿರುವುದನ್ನು ಈ ಚಿತ್ರದಲ್ಲಿ ಕಾಣಬಹುದು.

೧೯೫೪ರ ಎಪ್ರಿಲ್ ಮೊದಲನೆ ದಿನ ದಿ| ಮುಖರ್ಜಿಯವರು ಭಾರತೀಯ ವಾಯು ಪಡೆಯ ಮೇಲಿನ ಅಧಿಕಾರವನ್ನು ಸ್ವೀಕರಿಸಿದರು. ಈ ಅಧಿಕಾರ ವಹಿಸಿದ ಭಾರತೀಯರಲ್ಲಿವರು ಮೊತ್ತಮೊದಲಿಗರು ಇವರ ಅಧಿಕಾರಾವಧಿಯಲ್ಲಿಯೇ ಭಾರತೀಯ ವಾಯು ಪಡೆಯು-ತನ್ನ ವಿಕಾಸವನ್ನು ಹೊಂದಿತು; ಅಲ್ಲದೆ ವಿಸ್ತಾರವಾಗಿ ಜೆಟ್ ಪಡೆಯಾಗಿ ರೂಪಾಂತರ ಹೊಂದಿತು.

ದಿ| ಮುಖರ್ಜಿಯವರು ಕಲಕತ್ತೆಯಲ್ಲಿ ೧೯೦೪ರ ಮಾರ್ಚಿ ೫ನೆಯ ದಿನ ಜನಿಸಿದರು. ಕಲಕತ್ತೆಯಲ್ಲಿ ಪ್ರಾರಂಭಿಕ ವಿದ್ಯಾಭ್ಯಾಸವನ್ನು ಮುಗಿಸಿದ ಇವರು ೧೯೨೮ರಲ್ಲಿ ಇಂಗ್ಲೆಂಡಿನಲ್ಲಿ ಕ್ರಾನ್‌ವೆಲ್‌ನ ರೋಯಲ್ ಏರ್ ಫೋರ್ಸ್ ಕಾಲೇಜನ್ನು ಸೇರಿದರು. ಎರಡು ವರ್ಷಗಳ ನಂತರ ೧೯೩೦ರಲ್ಲಿ "ವಿಂಗ್ಸ್" ಎನಿಸಿಕೊಂಡರು. ಏರ್ ಮಾರ್ಶಲ್ ಮುಖರ್ಜಿಯವರು ಒಂದು ವರ್ಷದ ವರೆಗೆ ಇಂಗ್ಲೆಂಡಿನ ಆರ್. ಎ. ಎಫ್. ಸ್ಕ್ವಾಡ್ರನ್‌ನಲ್ಲಿ ಸೇವೆ ಸಲ್ಲಿಸಿದರು. ೧೯೩೩ನೆಯ ಎಪ್ರಿಲ್ ಮೊದಲನೆಯ ತಾರೀಕಿನಂದು ಭಾರತೀಯ ಏರ್ ಫೋರ್ಸ ಸ್ಥಾಪನೆಗೊಂಡಂದಿನಿಂದ ಇವರು ಇದರಲ್ಲಿ ಸಂಬಂಧಪಿಲಿಸಿಕೊಂಡಿದ್ದಾರೆ. ೧೯೩೮ರ ಮಾರ್ಚಿಯಲ್ಲಿ ಇವರು ಐ. ಎ. ಎಫ್. ಆಫೀಸರರಾದರು.

ಇದರ ನಂತರ ಇವರು ವಿಂಗ್ ಕಮೊಂಡರರಾದರು. ವಾಯು ಪಡೆಯ ನಿಲ್ದಾಣದ ಮೊತ್ತಮೊದಲಿನ ಭಾರತೀಯ ಅಧಿಕಾರಿಯಾಗಿ, ಟ್ರೈನಿಂಗ್‌ನ ಡೈರೆಕ್ಟರರಾಗಿ, ಇವರು ದುಡಿದರು. ಭಾರತದ ಸ್ವಾತಂತ್ರ್ಯ ನಂತರ, ವಾಯು ಪಡೆಯು ಪ್ರತ್ಯೇಕ ವಿಭಾಗವಾದಾಗ, ಪ್ರಧಾನ ಕಾರ್ಯಾಲಯದ ಡೆಪ್ಯುಟಿ ಚೀಫ್ ಆಗಿ ಇವರು ನೇಮಿಸಲ್ಪಟ್ಟರು. ಸ್ವಲ್ಪ ಸಮಯದಲ್ಲಿಯೇ ಇವರು ಏರ್‌ವೈಸ್ ಮಾರ್ಶಲ್ ಆಗಿ ಭಡ್ತಿ ಪಡೆದರು. ೧೯೫೧ರಲ್ಲಿ ಬ್ರಿಟನ್ನಿನ ಇಂಪೀರಿಯಲ್ ಡಿಫೆನ್ಸ್ ಕಾಲೇಜಿನಲ್ಲಿ ಮರಳಿ ತರಬೇತಿ ಪಡೆದು ಮರಳಿದೊಡನೆಯೇ ಇವರು ಏರ್‌ಮಾರ್ಶಲ್ ಆಗಿ, ಭಾರತೀಯ ವಾಯುಪಡೆಯ ವರಿಷ್ಠಾಧಿಕಾರಿಯಾದರು. ನಾಲ್ಕು ವರ್ಷದ ಈ ಹುದ್ದೆಯ ಮೊದಲನೆಯ ಅವಧಿಯು ಕೊನೆಗೊಂಡೊಡನೆಯೇ ಮರಳಿ ನಾಲ್ಕು ವರ್ಷಗಳ ವರೆಗೆ ಇವರ ಸೇವೆಯನ್ನು ಮುಂದುವರಿಸಲಾಗಿತ್ತು. ಆದರೆ ದುರ್ದೈವದಿಂದ ಈ ಅವಧಿಯ ನಡುವೆಯೇ ಭಾರತವು ಅವರನ್ನು ಕಳೆದುಕೊಂಡಿತು.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

S. E P. 26/1961

S. C. 40/1958

ಸೀಸಂಪ—(D H) Petitioner

ಕೊರಗಪ್ಪ ಪೂಜಾರಿ ಪೂವಪ್ಪ ಪೂಜಾರಿ ಆಳಿಯ, ಪುತ್ತೂರು ತಾಲ್ಲೂಕು ಬಿಳಿಯೂರೆ ಗ್ರಾಮದ ಕೆಳಗಿನ ಮನೆ ಎಂಬಲ್ಲಿರುವವ—

Respondent

ಸದ್ರಿ ಎದ್ರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—

ಅರ್ಜಿದಾರಳು ಎದ್ರಿಯ ಮೇಲೆ ದಾಖಲ್ಲು ಮಾಡಿದ ಪುತ್ತೂರು ಡಿ. ಮುನ್ಸಿಫ್ ಕೋರ್ಟಿನ S.C. 40/58ನೇ ದಾವೆಯಲ್ಲಿ ಪಡೆದ ಮೋಲ್ಕಂಡ ಡಿಕ್ರಿಯ ಅಮಲ್ಜಾರಿ ಯಾಕೆ ನಡಿಸಕೂಡದೆಂಬ ಬಗ್ಗೆ ಮತ್ತು ಸದ್ರಿ ಅಮಲ್ಜಾರಿಯಲ್ಲಿ ನಿಂಮನ್ನು ಕೈದಿ ವಾರಂಟಿನಲ್ಲಿ ಹಿಡಿದು ಸಿವಿಲ್ ಜೈಲಿಗೆ ರವಾನಿಸಬೇಕೆಂತ ಪಗ್ಗೆರೆ ಅರ್ಜಿದಾರಳು ದಾಖಲ್ಲು ಮಾಡಿದ ಮೋಲ್ಕಂಡ ಅರ್ಜಿಯು ತಾ. 6—6—1961ಕ್ಕೆ ನಿಂಮ ಹಾಜ್ರಾತಿ ಬಗ್ಗೆ ಇಟ್ಟಿರುವುದರಿಂದ ಸದ್ರಿ ದಿವಸ ಪೂರ್ವಾಹ್ನ ಘಂಟೆ 11ಕ್ಕೆ ಮೋಲ್ಕಂಡ ಕೋರ್ಟಿನಲ್ಲಿ ಹಾಜ್ರಾಗತಕ್ಕಸಿಕೊಳ್ಳತಕ್ಕದ್ದೆಂತ ಇದರಿಂದ ನಿಮಗೆ ನೋಟೀಸು ಕೊಡಲಾಗಿಯದೆ.

ಕೋರ್ಟ ಹುಕುಂ ಪ್ರಕಾರ

(Sd.) P.Anantharaja Ariga

Advocate for Petitioner.

ಠೀಕಾಣ: ಪುತ್ತೂರು, ತಾ. 20—5—61

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (1=50)

ರೂ. 1=75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ.

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಹನಿ ಗತಿ

ಕೆ. ರಮೇಶ ಪೈ, ಉಡುಪಿ.

—೦—

'ನೆಟ್ಟನೆ ಗುರಿಯಿಟ್ಟು ಹೊಡೆಯಲು...'

ಚಕ್ರವರ್ತಿ ರಾಜಗೋಪಾಲಾಚಾರ್ಯರು ವಿನೋದ ಪ್ರಿಯರು; ಹಾಸ್ಯವಾದುವುದೆಂದರೆ ಅವರಿಗೆ ತುಂಬ ಮೋಜು. ಆಗ ಮದ್ರಾಸಿನಲ್ಲಿ ಹಿಂದೀ ಶಿಕ್ಷಣ ಕಡ್ಡಾಯ ಮಾಡಲ್ಪಟ್ಟಿತ್ತು. ಇದಕ್ಕಾಗಿ ರಾಜಾಜಿಯವರ ಬೆಂಬಲವಿರುತ್ತಿತ್ತು. ಆದ್ದರಿಂದ ಅನೇಕರು ಅವರನ್ನು ವಿರೋಧಿಸುತ್ತಿದ್ದರು. ಕೆಲವರು ಆ ಹೊತ್ತಿಗೆ ಸತ್ಯಾಗ್ರಹವನ್ನು ಹೂಡಿದ್ದರು.

ಒಮ್ಮೆ ಮದ್ರಾಸು ನಗರದ ಟ್ರಿಪ್ಲಿಕೇನ್ ಮಹಲಿನಲ್ಲಿ ದೊಡ್ಡ ಸಭೆ ಸೇರಿತ್ತು. ಸಭೆಯಲ್ಲಿ ರಾಜಗೋಪಾಲಾಚಾರ್ಯರವರು ಹಿಂದೀ ಪ್ರಚಾರ, ಅದರ ಆವಶ್ಯಕತೆಯ ಕುರಿತು ಭಾಷಣ ಮಾಡುತ್ತಿದ್ದರು. ಈ ಹೊತ್ತಿಗೆ ಫಕ್ಕನೆ ಅವರ ಮೇಲೆ ಸಭೆಯಿಂದ ಒಂದು ಕಲ್ಲೆಸೆಯಲ್ಪಟ್ಟಿತು. ಸುದೈವ ವಶಾತ್ ಅದು ರಾಜಾಜಿಯವರಿಗೆ ತಾಗದೆ ಅಲ್ಲೇ ಹತ್ತಿರದಲ್ಲಿ ಬಿದ್ದು ಬಿಟ್ಟಿತು,

ಕೂಡಲೆ ರಾಜಾಜಿ ವಿನೋದಪೂರ್ಣವಾಗಿ ನುಡಿಯ ತೊಡಗಿದರು. "ನಮಗೆ ಚೆನ್ನಾಗಿ ಗುರಿಯಿಟ್ಟು ಹೊಡೆಯಲು ಕೂಡಾ ಬರುವುದಿಲ್ಲ ಹಾಗೆ ಬರುತ್ತಿದ್ದರೆ ಸ್ವರಾಜ್ಯಕ್ಕೆ ಸಮೀಪವಾಗಿ ನಾವು ಎಂದೋ ಬಂದು ಹೋಗುತ್ತಿದ್ದೆವು"

೦೦ ೦೦

ವಿದೇಶಿಯರ ಸ್ಥಾನ....

ಸ್ವಾಮಿ ವಿವೇಕಾನಂದರೊಮ್ಮೆ ಅಮೇರಿಕದಲ್ಲಿ ಒಂದು ಸಭೆಯಲ್ಲಿ ಭಾಷಣ ಮಾಡುತ್ತಿದ್ದರು. ಅಷ್ಟರಲ್ಲಿ ಒಬ್ಬ ಅಮೇರಿಕನ್ ಮಹಿಳೆ ಅವರ ಉಡಿಗೆತೊಡಿಗೆಗಳನ್ನು ಗಮನಿಸಿದಳು. ಸ್ವಾಮಿಜಿಯವರು ಆವಾಗ ಧೋತ್ರವನ್ನೂ, ಉದ್ದವಾದ ಕೋಟನ್ನೂ ತಲೆಗೆ ಮುಂಡಾಸನ್ನೂ ಧರಿಸುತ್ತಿದ್ದರು. ಈ ಪೋಷಾಕು ಸ್ವದೇಶದಲ್ಲೇ ನಿರ್ಮಾಣಗೊಂಡದ್ದಾಗಿತ್ತು. ಆದರೆ ಅವರು ಧರಿಸುತ್ತಿದ್ದ ಮೆಟ್ಟುಗಳು ಮಾತ್ರ ಪರದೇಶದ ತಯಾರಿಕೆ. ಅವು ವಿಲಾಯಿತಿಯಲ್ಲಿ ತಯಾರಾದ ಮೆಟ್ಟುಗಳೆಂಬುವುದಾಗಿ ಆ ಮಹಿಳೆ ಕಂಡುಕೊಂಡಳು, ಆಕೆ ಆವಾಕ್ಕಾಗಿ ಸ್ವಾಮಿಜಿಯವರನ್ನು ಪ್ರಶ್ನೆ ಮಾಡಿದಳು, "ಸ್ವದೇಶ ಪ್ರೇಮಿಗಳಾಗಿ ತಾವೇಕೆ ವಿದೇಶಿ ತಯಾರಿಕೆಯ ಮೆಟ್ಟುಗಳನ್ನು ಧರಿಸಿರುತ್ತೀರಿ?"

ಸ್ವಾಮಿಜಿ ತಡಮಾಡಲಿಲ್ಲ. ನಗುನಗುತ್ತಾ, ಹೌದು, ನಮ್ಮ ದೇಶದಲ್ಲಿ ವಿದೇಶಿಯರಿಗೆ ಇರುವ ಸ್ಥಾನದ ದ್ಯೋತಕವಾಗಿ ಇವನ್ನು ಧರಿಸಿದ್ದೇನೆ ವಿನಹ ಮತ್ತಾವ ಕಾರಣದಿಂದಲೂ ಅಲ್ಲ"ವೆಂದರಂತೆ.

ಮಹಿಳೆ ಸುಮ್ಮಗಾದಳು.

(ಹಿಂದಿಯಿಂದ)

ಜ್ಯೋತಿಷ್ಯ ನಿಮ್ಮ ಜೀವನಕ್ಕೆ ಸಂಬಂಧಿಸಿದ 5 ಪ್ರಶ್ನೆಗಳನ್ನು ಸೀಲು ಮಾಡಿದ ಲಕೋಟೆಯಲ್ಲಿ ಕಳುಹಿಸಿ. ಅದನ್ನು ಒಡೆಯದೆಯೇ ದೇವೀ ಉಪಾಸನೆಯಿಂದ ಉತ್ತರವನ್ನು ರೂ. 2ಕ್ಕೆ ವಿ. ಪಿ. ಮಾಡಲಾಗುವುದು.

ಶ್ರೀ ಗಾಯತ್ರಿ ಮಂತ್ರಾಲಯ
ಪೋಸ್ಟ್ ಬಾಕ್ಸ್-808 —ಬೆಂಗಳೂರು-2.

ಶರಾವತಿ ಯೋಜನೆ

ಯೋಜನಾಪೂರ್ತಿಗೆ ಅಮೆರಿಕನ್ ಸಹಾಯ

ಭಾರತದ ಭಾರಿ ವಿದ್ಯುದ್ಯೋಜನೆಯಾದ ಶರಾವತಿ ಕೊಳ್ಳದಲ್ಲಿ ತಯಾರಾಗುವ ವಿದ್ಯುತ್ ಶಕ್ತಿ ಮೈಸೂರು ರಾಜ್ಯದ ಅವಶ್ಯಕತೆಯನ್ನು ಪೂರೈಸಲು ಸಹಕಾರಿಯಾಗಿದೆ. ಅಮೆರಿಕನ್ ಸಹಾಯವು ಇದಕ್ಕೆ ಲಭಿಸಿದೆ.



ಭಾರತದಲ್ಲಿ ಅಮೆರಿಕನ್ ರಾಯಭಾರಿ ಶ್ರೀ ಜಾನ್ ಕೆನ್ನೆತ್ ಗೆಲ್‌ಬ್ರೆಥ್.

ಅಮೇರಿಕೆಯ ರಾಯಭಾರಿ ಶ್ರೀ ಜಾನ್‌ಕೆನ್ನೆಥ್ ಗೆಲ್‌ಬ್ರೆಥ್‌ರವರು ಭಾರತದ ಹಿರಿಯ ಜಲವಿದ್ಯುದ್ಯೋಜನೆಯಾದ ಶರಾವತಿ ಕೊಳ್ಳದ ಯೋಜನೆಗೆ ೫೬,೭೨,೫೫,೦೦೦ ಡಾಲರ್ ಸಾಲ ನೀಡುವ ಅಮೆರಿಕನ್ ನಿರ್ಧಾರವನ್ನು ಘೋಷಿಸಿದ್ದಾರೆ. ಈ ಯೋಜನಾಪೂರ್ತಿಯಿಂದ ಜಲವಿದ್ಯುತ್ ತಯಾರಿಯಲ್ಲಿ ಭಾರತವು ಸಾಕಷ್ಟು ಮುಂದುವರಿದಂತಾಗುವುದು.

ಕಳೆದ ಕೆಲವು ತಿಂಗಳುಗಳಲ್ಲಿ ಅಮೆರಿಕೆಯು ಭಾರತದಲ್ಲಿ ಏಳು ವಿದ್ಯುದಾಲಯಗಳ ನಿರ್ಮಾಣ ಸಂಬಂಧದಲ್ಲಿ ಹಲವಾರು ಒಪ್ಪಂದವನ್ನು ಮಾಡಿಕೊಂಡಿತ್ತು. ಇವುಗಳ ನಿರ್ಮಾಣದಲ್ಲಿ ಒದಗುವ ಸಂಪೂರ್ಣ ವೆಚ್ಚವನ್ನು ಅಮೆರಿಕೆಯು ವಹಿಸುವುದು. ಈ ವಿದ್ಯುದಾಲಯಗಳು ನಿರ್ಮಾಣಗೊಂಡಾಗ ಭಾರತದಲ್ಲಿ ೧೦ ಲಕ್ಷ ಕಿಲೊ ವಾಟ್ ವಿದ್ಯುತ್—ಶಕ್ತಿಯನ್ನು ತಯಾರಿಸುವ ಸಾಮರ್ಥ್ಯ ಹೆಚ್ಚುವುದು. ವಿದ್ಯುಚ್ಛಕ್ತಿಯ ಅಭಾವದಿಂದ ಅಭಿವೃದ್ಧಿಗೊಳ್ಳಲಾರದಿದ್ದ ಪ್ರದೇಶಗಳು ಮುಂದೆ ವಿಕಾಸಗೊಳ್ಳುವುದು ಸಾಧ್ಯವಾಗುವುದು.

ಶರಾವತಿಕೊಳ್ಳದಲ್ಲಿ ಅತಿ ಕಡಿಮೆ ವೆಚ್ಚದಿಂದ ವಿದ್ಯುತ್ತನ್ನು ತಯಾರಿಸ ಬಹುದು. ಪ್ರಪಂಚದಲ್ಲಿಯೇ ಇದು ದೊಡ್ಡ ಆದರೆ ಅತ್ಯಲ್ಪ ವೆಚ್ಚ ಬರುವ ಯೋಜನೆಯಾಗಿದೆ. ಯೋಜನೆಯ ಎರಡನೆ ಘಟ್ಟದಲ್ಲಿ ಅಣೆಕಟ್ಟನ್ನು ೧೫೮ ಅಡಿ ಎತ್ತರಕ್ಕೆ ಏರಿಸಲಾಗುವುದು. ವಿದ್ಯುದಾಲಯವನ್ನು ವಿಸ್ತರಿಸಲಾಗುವುದು. ಪ್ರತಿಯೊಂದು ೪೫,೧೦೦ ಕಿಲೋವಾಟ್ ಶಕ್ತಿಯನ್ನು ಉತ್ಪಾದಿಸ ಬಲ್ಲ ಐದು ಹೊಸ ಜನರೇಟರ್‌ಗಳನ್ನು ಸ್ಥಾಪಿಸಲಾಗುವುದು. ಉಪ ಕೇಂದ್ರಗಳಿಗೆ ೨೨೦ ಕಿಲೋ ವಾಟ್ ಶಕ್ತಿಯ ಸರಿಗೆಗಳನ್ನು ೪೦೧ ಮೈಲು ಉದ್ದಕ್ಕೆ ಹರಡಿಸಲಾಗುವುದು.

ಮೈಸೂರು ರಾಜ್ಯದಲ್ಲಿ ಸುಮಾರು ೪೦ ಲಕ್ಷ ಕಿಲೋ ವಾಟ್ ವಿದ್ಯುತ್ತನ್ನು ತಯಾರಿಸುವ ಶಕ್ತಿಯಿದೆ. ಹೆಚ್ಚಿನ ವಿದ್ಯುತ್ ಅಗ್ಗ ದರದಲ್ಲಿ ದೊರೆಯ ಬಲ್ಲುದು. ಮುಂದಿನ ವರ್ಷಗಳಲ್ಲಿ ತೋರಿಬರುವ ವಿದ್ಯುತ್ ಶಕ್ತಿಯ ಆವಶ್ಯಕತೆಗಳನ್ನು ದೃಷ್ಟಿಸಿಕೊಂಡು ಶರಾವತಿ ವಿದ್ಯುದ್ಯೋಜನೆಯ ವಿಕಾಸದತ್ತ ವಿಶೇಷ ಲಕ್ಷ್ಯವನ್ನು ಪೂರೈಸಲಾಗುತ್ತಿದೆ.

ಮೈಸೂರು ರಾಜ್ಯದಲ್ಲಿ ವಿದ್ಯುಚ್ಛಕ್ತಿಯ ಅಭಾವದ ಕಾರಣದಿಂದಾಗಿ, ಔದ್ಯೋಗಿಕ ವಿಕಾಸದಲ್ಲಿ ಆತಂಕ ತಲೆದೋರಿದೆ ಎಂದು ಹೇಳಲಾಗುತ್ತಿದೆ. ವಿದ್ಯುತ್ತಿನ ಉತ್ಪಾದನೆಗಿಂತ ಬೇಡಿಕೆಯು ಅಧಿಕವಿರುವುದರಿಂದ ಈಗ ಇರುವ ವಿದ್ಯುದಾಲಯಗಳ ವಿಸ್ತರಣೆಯೂ ಆಗಬೇಕಾಗಿದೆ. ರಿಪೇರಿಯೆ ಮೊದಲಾದುಗಳಿಗಾಗಿಯೂ ಯಂತ್ರಗಳಿಗೆ ವಿರಾಮ ಕೊಡುವಂತಿಲ್ಲವಾಗಿದೆ. ಯಾವುದಾದರೊಂದು ಯಂತ್ರವು ಕೆಟ್ಟು ಹೋಯಿತೆಂದರೆ, ವಿದ್ಯುತ್ ತಯಾರಿಯನ್ನು ನಿಲ್ಲಿಸಿಯೇ ಬಿಡಬೇಕಾಗುತ್ತದೆ. ಹೀಗೆ ಚಿಕ್ಕಪುಟ್ಟ ಉದ್ದಿಮೆಗಳಿಗೆ ಮತ್ತು ನೀರಾವರಿಯೋಜನೆಗಳಿಗೆ ಬೇಡಿಕೆಯಿದ್ದರೂ ವಿದ್ಯುಚ್ಛಕ್ತಿಯನ್ನು ಒದಗಿಸುವುದು ಸಾಧ್ಯವಿಲ್ಲದಂತಾಗಿದೆ. ಶರಾವತಿಯ ಯೋಜನೆಯಿಂದಾಗಿ, ವಿದ್ಯುದುತ್ಪಾದನಾ ಸಾಮರ್ಥ್ಯವು ಗಣನೀಯ ಪ್ರಮಾಣದಲ್ಲಿ ಹೆಚ್ಚುವುದರಿಂದ, ಈ ಎಲ್ಲ ಅಭಾವಗಳನ್ನು ದೂರೀಕರಿಸುವುದು ಸಾಧ್ಯವಿದೆ.

ಅಮೆರಿಕೆಯು ಸದ್ಯದ ಕೊಡಮಾಡಿದ ಸಾಲದಲ್ಲಿ ೨೧೫ ಲಕ್ಷ ಡಾಲರವು (ರೂ. ೧೦.೨ ಕೋಟಿ) ವಿದೇಶ ವಿನಿಮಯದ ಆವಶ್ಯಕತೆಗಾಗಿ ಅಮೆರಿಕನ್ ಅಭಿವೃದ್ಧಿ ಋಣ ಕೋಶ'ದಿಂದ ನೀಡಲ್ಪಡುವುದು. ಉಳಿದ (ರೂ. ೧೬.೨ ಕೋಟಿ) ೩,೬೭,೨೫ ಸಾವಿರ ಡಾಲರ್‌ಗಳು ಭಾರತೀಯ ನಾಣ್ಯಗಳಲ್ಲಿ ವೆಚ್ಚ ಬೀಳುವುದು. ಇದನ್ನು ಭಾರತಕ್ಕೆ ಕೃಷಿ ವಸ್ತುಗಳ ರೂಪದಲ್ಲಿ ನೀಡಲಾಗುವುದು.

— —

ರೋಚಕ ಸಾಧನೆ

(೪ನೇ ಪುಟದಿಂದ)

ಮಾಡಿದುದೇ ತಡ ನೂರೈವತ್ತು ಮಹಿಳೆಯರಿಂದ ಆವೇದನಾಪತ್ರ, ಬಂದಿತು. ಮುಂದಿನ ವರ್ಷ ಈ ಸಂಖ್ಯೆ ಇಮ್ಮಡಿಯಾಯಿತು.

ಈ ಕಾಲೇಜಿನ ಸ್ಥಿತಿಗತಿಯೂ ವಿಸ್ಮಯಕಾರಕವಾಗಿತ್ತು. ಬಾಡಿಗೆಯ ಕಟ್ಟಡ. ತಗಡಿನ ಶೆಡ್ಡಿನಲ್ಲಿ ಶಲ್ಯ ಚಿಕಿತ್ಸೆಯ ಕೋಣೆ. ಮಹಿಳೆಯರಿಗೆ ರಸಾಯನ ಶಾಸ್ತ್ರದ ಉಪನ್ಯಾಸ ಕೇಳಲು ಪುರುಷರ ಕಾಲೇಜಿಗೆ ಹೋಗಬೇಕಿತ್ತು. ಇಂತಹ ಸ್ಥಿತಿಯಿರುವಾಗ ಒಬ್ಬಾಕೆಯೂ ಪರೀಕ್ಷೆಯಲ್ಲಿ ಉತ್ತೀರ್ಣಳಾಗಳು ಎಂದು ಒಬ್ಬ ಬ್ರಿಟಿಷ್ ಅಧಿಕಾರಿಯು ಹೇಳಿಯೂ ಬಿಟ್ಟನು. ಆದರೆ, ಐಡಾ ನಿರಾಶೆಗೊಳ್ಳಲಿಲ್ಲ. ತಾನೇ ಪ್ರಾಣಿಶಾಸ್ತ್ರವನ್ನು ಕಲಿಸತೊಡಗಿದಳು. ೧೮ ಯುವತಿಯರು ಫೈನಲ್ ಪರೀಕ್ಷೆಯಲ್ಲಿ ಕೂತರು; ಎಲ್ಲರೂ ಉತ್ತೀರ್ಣರಾದರು; ಇವರಲ್ಲಿ ನಾಲ್ವರು ಪ್ರಥಮ ಸ್ಥಾನಗಳಿಸಿದರು!

ಇದಾದನಂತರ ಐಡಾ ಅಥವಾ ಆಕೆಯ ಯೋಜನೆಗಳನ್ನು ತಿರಸ್ಕರಿಸುವುದು ಅಸಂಭವವಾಯ್ತು. ತೊಟ್ಟಿಪಾಳಯಂನಲ್ಲಿ ಶೀಘ್ರವೇ ಒಂದು ದೊಡ್ಡ ಆಸ್ಪತ್ರೆಯ ಸುಂದರ ಕಟ್ಟಡ ಮೂಡಿತು. ೧೯೩೬ರಲ್ಲಿ ಐಡಾಳ ಪ್ರಯತ್ನದ ಫಲವಾಗಿ ವೆಲ್ಲೂರಿನಲ್ಲಿಯೂ ಒಂದು ಹೊಸ ಮೆಡಿಕಲ್ ಕಾಲೇಜು ಸ್ಥಾಪನೆಗೊಂಡಿತು. ಐಡಾಳ ಈ ಕಾಲೇಜು ಇಂದು ದೇಶದ ಸರ್ವಶ್ರೇಷ್ಠ ಚಿಕಿತ್ಸಾ ಕಾಲೇಜುಗಳಲ್ಲಿ ಪ್ರಮುಖವಾಗಿದೆ. ಕುಷ್ಠ ರೋಗ ಮತ್ತು ಮಸ್ತಿಷ್ಕಗಳ ಶಲ್ಯ ಚಿಕಿತ್ಸೆಗಳ ವಿಶ್ವಕ್ಕೇನೇ ಹಿರಿದಾದ ಕೇಂದ್ರವಿಲ್ಲಿದೆ.

ದೇಶವಿದೇಶಗಳ ವಿಖ್ಯಾತ ಹಾಗೂ ಸೇವಾಭಾವವುಳ್ಳ ಚಿಕಿತ್ಸಕರ ಸಂಪರ್ಕಗಳಿಸಿ ಐಡಾ ಅವರನ್ನು ತನ್ನಲ್ಲಿಗೆ ಬರುವಂತೆ ಪ್ರೇರೇಪಿಸಿದಳು. ಆಕೆಯ ಒಬ್ಬಾಕೆ ಅಂತರಂಗ ಸ್ನೇಹಿತೆ ಜಿ. ಡೋಡ್ ಕೂಡ ಅಮೇರಿಕೆಯನ್ನು ಬಿಟ್ಟು ವೆಲ್ಲೂರಿಗೆ ಬಂದಳು; ಐಡಾಳ ಕಾರ್ಯದಲ್ಲಿ ನೆರವಾದಳು. ಇವರಿಬ್ಬರೂ ಏಕದೇವ ನ್ಯಾಯದಿಂದಿದ್ದರು. 'ಸ್ಕೊ-ಡೋಡ್' ಎಂಬ ಹೆಸರಿನಿಂದ ಇವರ ಕೀರ್ತಿಲತೆಯೂ ಪಸರಿಸಿತು.

೧೯೬೦ರ ಮೇ ೨೪ರಂದು ತನ್ನ ೯೦ನೆಯ ವಯಸ್ಸಿನಲ್ಲಿ ಐಡಾ ಇಹಲೋಕ ಲೀಲೆಯನ್ನು ಮುಗಿಸಿದಳು. ಆದರೆ, ಆ ಕಾಲದಲ್ಲಿ ಆಕೆ ಸುಪ್ರಸನ್ನಳಾಗಿದ್ದಳು. ಆಕೆಯ ಸ್ವಪ್ನ ಸಾಕಾರರೂಪವನ್ನು ತಾಳಿತ್ತು. ಆನ ನೆಟ್ಟಿದ್ದ ಪುಟ್ಟ ಗಿಡ ಇಂದು ವಟ ವೃಕ್ಷವಾಗಿ ಬೆಳೆದಿತ್ತು, ಹರಡಿತ್ತು. ವಿಶ್ವವಿಖ್ಯಾತ ವೆಲ್ಲೂರು ಮೆಡಿಕಲ್ ಕಾಲೇಜಿನ ರೂಪದಲ್ಲಿ ಅದು ಸಾವಿರಾರು ಜನರಿಗೆ ನೆರಳ ನೀಡುತಿತ್ತು.

ಐಡಾ ಸ್ಕೋವನ್ನು ನೆನೆಯುವಾಗ ದೀಪದ ಮಹಿಳೆ ಫ್ಲಾರೆನ್ಸ್ ನೈಟಿಂಗೇಲಳ ಹೆಸರೂ ಹೊಳೆಯುತ್ತದೆ. ಐಡಾ ಕೂಡ ಈಕೆಯಂತೆಯೇ ತನ್ನ ಅದಮ್ಯ ಸಾಹಸ, ಸತತ ಪರಿಶ್ರಮ, ಉಕ್ಕಿ ಬರುವ ಶ್ರದ್ಧೆ ಮತ್ತು ಉಗ್ರ ತಪಸ್ಸುಗಳಿಂದ ಭಾರತದಲ್ಲಿ ಸೇವೆಯ ಜ್ಯೋತಿಯನ್ನು ಪ್ರಜ್ವಲಿಸಿದಳು. ಈ ಮಹಾ ಕಾರ್ಯ ಮತ್ತು ಮಾರ್ಗದರ್ಶನಕ್ಕಾಗಿ ಇಡಿಯ ಭಾರತವು ಆಕೆಗೆ ಋಣಿಯಾಗಿದೆ.

ಇಲೆಕ್ಟ್ರಿಕ್ ಮತ್ತು ರೇಡಿಯೊ ಗೈಡ್

ಸಂಪೂರ್ಣ ಮೆಕೇನಿಕ್ ಅಗಲು 217 ಚಿತ್ರಗಳಿರುವ ಪರಿಪೂರ್ಣ ಪುಸ್ತಕ ರೂ 25 ರಲ್ಲಿ ನಿಮ್ಮ ಮನೆಯಲ್ಲಿಯೇ ರೇಡಿಯೊ ತಯಾರಿಸುವ ವಿಧಾನವನ್ನು ತಿಳಿಸುತ್ತದೆ, ಇಲೆಕ್ಟ್ರಿಸಿಟಿ, ರೇಡಿಯೊ ರಿಪೇರಿಂಗ್, ವಯರಿಂಗ್, ಇಲೆಕ್ಟ್ರಿಕಲ್ ಯಂತ್ರಕ್ರಿಯೆ ಮೊದಲಾದ ವಿವಿಧ ಉದ್ಯೋಗಗಳನ್ನು ಕಲಿಯಬಹುದಾದ ಅಪೂರ್ವ ಪುಸ್ತಕ. ವಿಸ್ತೃತ ಹೊಸ ಆವೃತ್ತಿ ರೂ. 5/— ಹೊಲಿಗೆ ಮತ್ತು ಕಟ್ಟಿಂಗ್ (ಸಚಿತ್ರ) ರೂ. 5/— ಸಾಬೂನು, ಮತ್ತು ಪರಿಮಳದ್ರವ್ಯ ತಯಾರಿಕೆ ರೂ. 5/— ಫೊಟೊಗ್ರಾಫಿಯ ಕಲೆ ರೂ. 5/— ವಿ. ಪಿ. ಚಾರ್ಜು ಪ್ರತಿ ಪುಸ್ತಕಕ್ಕೆ ರೂ. 1/— ಯಾವುದಾದರೂ 3 ಪುಸ್ತಕಗಳ ಸೆಟ್ಟಿಗೆ ರೂ. 10/— ಟ. ಖ ಸಹಿತ.

Vishubharathi Publications
Sasni Gate (NS. D) ALIGARH.

ದಿ ವಿಜಯ ಬೇಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ: 1931

ರಿಜಿಸ್ಟರ್ಡ್ ಆಫೀಸು:
ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು-3, ಸೌತ್ ಕೆನರಾ.

ಕಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡ 5½ರ ವರೆಗೆ ಹೆಚ್ಚಿಸಲಾಗಿದೆ.
ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ಪಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲಾಗುತ್ತದೆ.
ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ.

ಕಾರಂತರ ಪುಸ್ತಕಗಳು

ಅಳಿದ ಮೇಲೆ (ಹೊಸ ಕಾದಂಬರಿ)	2_75
ಪಂಚಮುಖ (ಕಾದಂಬರಿ)	2_50
ನಮ್ಮ ಸುತ್ತಲಿನ ಕಡಲು	1_75
ಪರಮಾಣು—ಇಂದು—ನಾಳೆ	೨ ೧೨

ಸಿಗುವ ಸ್ಥಳ:
ನವಭಾರತ ಬುಕ್ ಡಿಪೊ, ಉಡುಪಿ.

ಪಕ್ಷಿ ಪರಿಚಯ:

ಪಂಚಮ ಸ್ವರದ ಕೋಗಿಲೆ

ಆನಂದೋನ್ಮತ್ತತೆಯಿಂದ ವಸಂತ ಋತುವಿನಲ್ಲಿ ಹಾಡಿ ನಲಿಯುವ ಕೋಗಿಲೆ ವರ್ಷಾಕಾಲ ಪ್ರಾರಂಭವಾದೊಡನೆಯೇ ಮೂಕವಾಗುತ್ತದೆ. ಕಾಗೆಗಳಿಂದ ತನ್ನ ಮರಿಗಳನ್ನು ಬೆಳೆಸುವ ಬುದ್ಧಿವಂತ ಆಲಸಿ ಪಕ್ಷಿ ಕೋಗಿಲೆಯ ಮೌನ ಮಳೆಗಾಲ ತೊಡಗಿದುದರ ಸೂಚನೆ.

ಸ್ವರಮಾಧುರ್ಯದ ದೃಷ್ಟಿಯಿಂದ ಕೋಗಿಲೆಯು ಸರ್ವಶ್ರೇಷ್ಠ ಪಕ್ಷಿಜಾತಿಯೊಡನೆ ಗಣಿಸಲ್ಪಡುತ್ತದೆ. "ಕುಹೂ ಕುಹೂ" ಎಂಬ ಸುಮಧುರ ಸಂಗೀತದ ಪರಿಚಯವಿಲ್ಲದವರು ಯಾರು? ಬೇಸಗೆಯ ದಿನಗಳಲ್ಲಿ ಸಘನವೃಕ್ಷ—ಹೆಚ್ಚಾಗಿ ಚೂತ ವೃಕ್ಷ—ದಲ್ಲಿ ಕೋಗಿಲೆಯು ಕುಹೂಂವ ಕಿವಿದೆರೆಗೆ ಬಡಿಯಿತೆಂದರೆ, ನಮ್ಮ ಕೈಯ ಕಾರ್ಯವೆಲ್ಲವನ್ನೂ ಬದಿಗೊತ್ತಿ ನಿಂತಕಾಲಲ್ಲಿಯೇ ಆ ಇನಿದಾದ ಸಂಗೀತದತ್ತ ಕಿವಿಗೊಡುತ್ತೇವೆ. ಕೋಗಿಲೆಯ ಗಾಯನವನ್ನು ಕೇಳದವರು ಯಾರೂ ಇಲ್ಲವೆನ್ನಬಹುದು. ಆದರೇನು? ಅದನ್ನು ಕಣ್ಣಾರೆ ಕಂಡವರು ಅದೆಷ್ಟು ಜನರು? ನೋಡುವ ಉತ್ಸಾಹ, ಆಶೆಯಿದ್ದರೂ ಎಷ್ಟುಮಂದಿ ಕೋಗಿಲೆಯನ್ನು ನೋಡಿದ್ದಾರೆ? ನೀವು ಅದನ್ನು ಕಾಣುವ ತಹತಹದಿಂದ ಅರಸುತ್ತ ಹೋಗಬಹುದು; ಆದರೆ, ಅದು ನಿಮ್ಮ ಕಣ್ಣಿಗೆ ಬೀಳುವುದಕ್ಕೆ ಮೊದಲು ನೀವೇ ಅದಕ್ಕೆ ದೃಷ್ಟಿಗೋಚರವಾಗುತ್ತೀರಿ. ತತ್ಕ್ಷಣ ಅದು ಆನುಕದಿಂದ ಇನ್ನೊಂದು ಮರಕ್ಕೆ ನೆಗೆದು ಬಿಡುವುದು; ನಿಮ್ಮ ಪ್ರಯಾಸ ನಿಷ್ಫಲವಾಗುವುದು. ಇದಕ್ಕೆ ಮುಖ್ಯ ಕಾರಣವೇನೂ ಇಲ್ಲ. ಒತ್ತೊತ್ತಾಗಿ ಚಿಗುರಿದ ಮರದೆಲೆಯ ನಡುವೆ ಅದು ವಿಹರಿಸುತ್ತಿರುವುದೊಂದೇ ಕಾರಣ.

ಗಂಡು ಮತ್ತು ಹೆಣ್ಣು ಕೋಗಿಲೆಗಳು ಒಟ್ಟಿಗೆ ತಿರುಗಾಡುತ್ತವೆ ಎಂಬುದೇನೂ ಇಲ್ಲ. ಕೆಲವೊಮ್ಮೆ ಒಂಟಿಯಾಗಿಯೇ ಇವು ಕಾಣಿಸುತ್ತವೆ. ರೂಪ—ಬಣ್ಣಗಳಿಂದ ಗಂಡು—ಹೆಣ್ಣುಗಳ ಅಂತರವನ್ನು ಗುರುತಿಸಬಹುದು. ಗಂಡು ಕೋಗಿಲೆಯು ಬಹಳವಾಗಿ ಹೊಳೆಯುವ ಕಪ್ಪು ಬಣ್ಣದಿಂದ ರಂಜಿಸುತ್ತದೆ; ಹೆಣ್ಣಿನ ಶರೀರ ಬೂದು ಬಣ್ಣ. ಅದರ ಮೇಲೆ ಬಿಳಿ ಕಲೆಗಳು. ಹೊಟ್ಟೆಯ ಭಾಗದಲ್ಲಿ ಬಿಳಿ ಮತ್ತು ಕರಿಯ ಗೀರುಗಳು ಇರುತ್ತವೆ. ಎರಡರ ಕಣ್ಣುಗಳೂ ಕೆಂಪಾಗಿರುತ್ತವೆ; ಕೊಕ್ಕು ನಸು ಹಸುರು ಇಲ್ಲವೇ ಹಳದಿ ಬಣ್ಣದ್ದಿರುತ್ತದೆ. ಗಂಡು ಕೋಗಿಲೆ ಮಾತ್ರ "ಕುಹೂ ಕುಹೂ" ಮಧುರ ಸಂಗೀತ ಹಾಡಬಲ್ಲುದು. ಹೆಣ್ಣು ಸಾಮಾನ್ಯವಾಗಿ ಮೌನವಾಗಿರುವುದು; ಮರದಿಂದ ಮರಕ್ಕೆ ಹಾರುವುದು; ಹೆಚ್ಚೆಂದರೆ, "ಕಿಕ್ ಕಿಕ್" ಎಂದು ತೀವ್ರ ಮತ್ತು ನೀರಸ ಸ್ವರವನ್ನು ಹೊರಡಿಸುವುದು. ಗಂಡು ಕೋಗಿಲೆಯ ಸ್ವರವು ಹೊರಡುವ ಕ್ರಮವನ್ನು ನೀವು ಕಂಡುಕೊಂಡಿದ್ದೀರಾ? ಮೊದಲಿಗೆ ಅದು ಮೆತ್ತಗಾಗಿ ಕುಹೂ ಎನ್ನುವುದು. ಗಾಯನ ಮುಂದುವರಿದಂತೆ, ಅದು ಪಂಚಮದತ್ತ ಸರಿಯುತ್ತ, ಉನ್ನತವಾಗುತ್ತ ಬರುವುದು. ಹೀಗೆ ಎಂಟು—ಒಂಭತ್ತು ಬಾರಿ ಹಾಡಿದೊಡನೆಯೇ ಅದು ಸುಮ್ಮನಾಗುವುದು. ಈ ರೀತಿ ಪದೇ ಪದೇ ಸ್ವರವನ್ನು ಪ್ರತಿಧ್ವನಿಸುವ ಕಾರ್ಯಕ್ರಮವು ಸೂರ್ಯೋದಯದಿಂದ ಸಂಧ್ಯಾಸಮಯದ ವರೆಗೆ ನಡೆಯುತ್ತ ಇರುವುದು.

ಕೋಗಿಲೆಯ ಹೆಚ್ಚಿನ ಸಮಯ ಚಿಕ್ಕ ಪುಟ್ಟ ಹೂ—ಹಣ್ಣು, ಕ್ರಿಮಿ—ಕೀಟಗಳನ್ನು ತಿನ್ನುವುದರಲ್ಲಿ ಮತ್ತು ಪ್ರಣಯ ಕ್ರೀಡೆಗಳಲ್ಲಿಯೇ ಕಳೆಯುತ್ತದೆ. ಗ್ರೀಷ್ಮ ಋತುವಿನಿಂದ ವರ್ಷರ್ತುವಿನವರೆಗಣ ಅವಧಿ ಕೋಗಿಲೆಗಳ ಪ್ರಜನನ ಕಾಲ. ಆದರೆ, ಗೂಡುಗಟ್ಟುವುದು, ಮೊಟ್ಟೆಗಳನ್ನು ರಕ್ಷಿಸುವುದು, ಮರಿಗಳನ್ನು ಕಾಪಾಡುವುದು ಮೊದಲಾದ ಹೊಣೆಗಾರಿಕೆಗಳನ್ನು ಕೋಗಿಲೆಯು ಸಂಪೂರ್ಣ ಬಿಟ್ಟುಕೊಡುವುದು. ಕೋಗಿಲೆಗಿರುವ ಚಿಂತೆಯೊಂದೇ-ಪ್ರಸನ್ನತೆಯಿಂದ ಹಾಡುತ್ತ ಅತ್ತಿತ್ತ ತಿರುಗಾಡುವುದು! ಸಂತತಿಯಿಲ್ಲದೆ ಜೀವಸೃಷ್ಟಿ ನಡೆಯುವುದಿಲ್ಲ. ಇದಕ್ಕಾಗಿಯೇ ಕೋಗಿಲೆಯು ಒಂದು ವಿಚಿತ್ರ ವಿಧಾನವನ್ನು ಕಂಡುಕೊಂಡಿದೆ.

ಕೋಗಿಲೆ ಮತ್ತು ಕಾಗೆಗಳು ಮೊಟ್ಟೆಯಿಡುವ ಸಮಯ ಸಾಮಾನ್ಯವಾಗಿ ಒಂದೇ. ಇವೆರಡರ ಮೊಟ್ಟೆಗಳೂ ಸಾಮಾನ್ಯವಾಗಿ ಸಮಾನ ಆಕಾರದ್ದಾಗಿವೆ. ಮೊಟ್ಟೆಗಳ ಬಣ್ಣವು ಹಸುರು. ಮೇಲ್ಗಡೆ-ಬೂದು ಬಣ್ಣದ ಚಿಹ್ನೆಗಳೂ ಇರುತ್ತವೆ. ಕಾಗೆಯ ಮೊಟ್ಟೆಗಿಂತ ಕೋಗಿಲೆಯದು ತುಸು ಚಿಕ್ಕದು. ಹೆಣ್ಣು ಕೋಗಿಲೆಯು ಮೊಟ್ಟೆಯಿಡುವ ಸಂದರ್ಭ ಬಂದಾಗ, ಅದರ ಗಂಡು ಯಾವುದಾದರೂ ಒಂದು ಕಾಗೆಯ ಗೂಡಿನ ಸಮೀಪ ಬರುತ್ತದೆ. ತನ್ನ ಹಾವಭಾವಗಳಿಂದ ಕಾಗೆಯನ್ನು ಉದ್ರಿಕ್ತಗೊಳಿಸುತ್ತದೆ. ರೊಚ್ಚಿಗೆದ್ದ ಕಾಗೆ ಗೂಡಿನಿಂದ ಹೊರ ಬಂದು ಅದನ್ನು ಓಡಿಸುವುದರಲ್ಲಿಯೇ ತತ್ಪರವಾಗುತ್ತದೆ. ಈ ಸದವಕಾಶವನ್ನೇ ಪ್ರತೀಕ್ಷಿಸುತಿದ್ದ ಹೆಣ್ಣು ಕೋಗಿಲೆ ಬರಿದಾದ ಕಾಗೆಯ ಗೂಡನ್ನು ಹೊಕ್ಕು ಅಲ್ಲಿ ತನ್ನ ತತ್ತಿಗಳನ್ನು ಇಡುವುದು. ಹೆಣ್ಣು ಕೋಗಿಲೆಯು ಮೊದಲೇ ಅಂಡಗಳನ್ನಿಟ್ಟು ತನ್ನ ಕೊಕ್ಕಿನ ಸಹಾಯದಿಂದ ಅವನ್ನು ಎತ್ತಿ ಕಾಗೆಯ ಗೂಡಿನಲ್ಲಿ ಮಡಗುವುದೆಂದು ಕೆಲವರು ಹೇಳುತ್ತಾರೆ. ಅದೇನೇ ಇದ್ದರೂ ಇದು ಕಾಗೆಯ ಗೂಡಿನಲ್ಲಿಯೇ ಮೊಟ್ಟೆಯಿಡುವುದು ಖಂಡಿತ. ಸ್ವಲ್ಪಸಮಯಾನಂತರ ತನ್ನನ್ನು ಹಿಂಬಾಲಿಸಿಕೊಂಡು ಬರುವ ಕಾಗೆಯನ್ನು ಯುಕ್ತಿಯಿಂದ ವಂಚಿಸಿ ಕೋಗಿಲೆ ಓಡಿಹೋಗುತ್ತದೆ. ಕಾಗೆ ನಿರಾಳಗೊಂಡು ತನ್ನ ಗೂಡಿಗೆ ಮರಳುತ್ತದೆ. ಅಲ್ಲಿ ತನ್ನ ಮೊಟ್ಟೆಗಳೊಡನೆಯಿರುವ ಕೋಗಿಲೆಯ ಮೊಟ್ಟೆಗಳನ್ನೂ ರಕ್ಷಿಸುತ್ತದೆ. ಕೆಲವೊಮ್ಮೆ ಕಾಗೆಯ ಗೂಡಿನಲ್ಲಿ ಎಂಟು-ಹತ್ತು ಕೋಗಿಲೆಯ ಮೊಟ್ಟೆಗಳು ಇರುವುದುಂಟು. ಒಂದೇ ಗೂಡಿನಲ್ಲಿ ಹಲವಾರು ಹೆಣ್ಣು ಕೋಗಿಲೆಗಳು ಬಂದು ಮೊಟ್ಟೆಯಿಡುವುದೂ ಇದೆ.

ಕಾಗೆಗಳ ಮೊಟ್ಟೆಗಳಿಗಿಂತ ಕೋಗಿಲೆಯವುಗಳಿಂದ ಮರಿಗಳು ಬೇಗನೆ ಹೊರ ಬರುತ್ತವೆ. ಇವು ಶೀಘ್ರವಾಗಿ ಬೆಳೆಯುತ್ತವೆ. ಎರಡರ ಮರಿಗಳಲ್ಲಿಯೂ ಉಲ್ಲೇಖನೀಯ ಅಂತರವಿಲ್ಲವಾದುದರಿಂದ ಕಾಗೆಯು ಎಲ್ಲವಕ್ಕೂ ಆಹಾರವೊದಗಿಸುತ್ತದೆ. ಯಾವ ಭೇದಭಾವವೂ ಇಲ್ಲದೆ ಅದು ಬೆಳೆಸುತ್ತದೆ. ಕೋಗಿಲೆಯ ಮರಿಗಳು ಸ್ವಭಾವತಃ ಜಗಳವಾಡುವವುಗಳು. ಇದರಿಂದಾಗಿ ಕಾಗೆಯ ಮರಿಗಳನ್ನು ಗೂಡಿನಿಂದ ಹೊರಗೆ ಓಡಿಸುತ್ತವೆ. ಬೆಳೆದ ನಂತರ, ಒಂದು ದಿನ ಸಂದರ್ಭನೋಡಿ, ತಮ್ಮ ದಾದಿ ಕಾಕ ದಂಪತಿಗಳನ್ನು ತೊರೆದು ಸ್ವತಂತ್ರವಾಗುತ್ತವೆ. ಇದರಿಂದಲೇ ಕೋಗಿಲೆಗೆ ಪರಪುಷ್ಟ ಎಂಬ ಎಂಬ ಹೆಸರು ಬಂದಿದೆ.

ಶರದೃತುವಿನಿಂದ ಮುಂದಿನ ವಸಂತದವರೆಗೆ ಕೋಗಿಲೆಯ ಕುಹೂಗಾನವು ಶಾಂತವಾಗುತ್ತದೆ. ಮಳೆಗಾಲ ಪ್ರಾರಂಭವಾದೊಡನೆಯೇ ಕೋಗಿಲೆ ಬೇರೆಡೆಗೆ ಹೋಗುವುದೆಂದು ಕೆಲವರು ಹೇಳುತ್ತಾರೆ. ಆದರೆ, ಇದು ಸರಿಯಲ್ಲ. ಅದು ಇದ್ದಲ್ಲಿಯೇ ಇರುತ್ತದೆ; ಆದರೆ, ಕುಟಿ ಬಿಚ್ಚುವುದಿಲ್ಲ; ಅದರಲ್ಲಿ ಅಷ್ಟು ಚಂಚಲತೆಯಿಲ್ಲದಿರುವುದರಿಂದ, ಅದು ಇದೆಯೆಂಬುದರ ಪರಿವೆಯೇ ನಮಗಾಗುವುದಿಲ್ಲ.

ಕೋಗಿಲೆಯ ಮೌನವನ್ನೇ ಕವಿಗಳು ವರ್ಷಾಕಾಲದ ಸೂಚನೆಯನ್ನಾಗಿ ಉಪಯೋಗಿಸಿದ್ದಾರೆ. ಇದಕ್ಕೆ ಎರಡು ಉದಾಹರಣೆಯನ್ನು ಕೊಡಬಹುದು:

ಮಾಕಂದಂ ಬೀತಿರೆ ಜಂ
ಬೂಕುಜ ಫಲದಿಂ ಶುಕಾಳಿ
ಸುಖಿಯಾಯ್ತು ಪಿಕಂ
ಮೂಕತೆವೆತ್ತಿರ್ಪುದುರಿಂ
ದೇಕಗ್ರಾಹಿಗೆ ಸುಖೋದಯಂ
ಸಮನಿಪುದೇ ||

ಮಾವಿನ ಮರವು ಚಿಗುರು ಹೂಗಳಿಂದ ಶೂನ್ಯವಾಗಲು ಜಂಬೂಫಲವನ್ನು ತಿಂದು ಗಿಳಿಗಳು ಸುಖದಿಂದ ಜೀವಿಸತೊಡಗಿದುವು. ಕೋಗಿಲೆಗಳು ಆಲೋಚನೆ ಮಾಡದೆ ಮೂಕರಾಗಿಬಿಟ್ಟುವು. ಒಂದು ವಸ್ತುವೇ ಗತಿ ಎಂದು ನಂಬಿರುವವನಿಗೆ ಸುಖಪ್ರಾಪ್ತಿಯಿದೆಯೆ? ಇದು ರುದ್ರಭಟ್ಟನ ಜಗನ್ನಾಥ ವಿಜಯದ ವರ್ಷಾಕಾಲ ವರ್ಣನಾವಸರದ ಒಂದು ಪದ್ಯ.

ಅಭಿನವ ಪಂಪ ನಾಗಚಂದ್ರನು ತನ್ನ ಪಂಪರಾಮಾಯಣದಲ್ಲಿ ಇದೇ ಭಾವವನ್ನು ಬೇರ ಮಾತುಗಳಲ್ಲಿ ವರ್ಣಿಸಿದ್ದಾನೆ–

ಮಾಕಂದಂ ಫಲಹೀನಮಾದ
ಪದದೊಳ್ ಜಂಬೂಫಲಾಸ್ವಾದನ
ಸ್ವೀಕಾರೋತ್ಸವದಿಂದಂ ಮರೆದು
ಕೀರಂ ಪ್ರೌಢಿಯುಂ ತಾಳ್ದಿದ
ತ್ತೇಕಗ್ರಾಹಿ ಕನಲ್ದು ಭೂತ
ಕಳಿಕಾಸ್ವಾದ ವ್ಯವಚ್ಛೇದದಿಂ
ಮೂಕೀಭಾವಮನಪ್ಪುಕೆಯ್ದುದ
ವಿವೇಕವ್ಯಾಕುಳಂ ಕೋಕಿಳಂ ||

ಮಾವಿನ ಮರವು ಫಲಹೀನವಾದ ಕಾಲದಲ್ಲಿ ಜಂಬೂಫಲವನ್ನು ಆಸ್ವಾದಿಸುತ್ತ ಗಿಳಿಯು ಬುದ್ಧಿವಂತನೆಂದು ತೋರಿಸಿಕೊಂಡಿತು. ಏಕಗ್ರಾಹಿಯಾದ ಕೋಗಿಲೆಯು ಚೂತಕಳಿಕೆಯು ದೊರೆಯದುದರಿಂದ ಮುನಿದು, ಮೂಕ ಭಾವವನ್ನು ತಾಳಿತು.

ತನ್ನ ಮರಿಗಳನ್ನು ಪೋಷಿಸುವಲ್ಲಿ ಬುದ್ಧಿವಂತಿಕೆಯ ಚರಮ ಸೀಮೆಯನ್ನು ಮುಟ್ಟಿದ ಕೋಗಿಲೆಯನ್ನು ನಮ್ಮ ಕವಿಗಳು ವರ್ಣಿಸಿದ ಕ್ರಮ ಕೇವಲ ಸಮಯಕ್ಕೆ ಮಾತ್ರ ಒಪ್ಪುವಂತಹುದು!

— ಗೋರಾ

ಶ್ರೀ ಎ. ಬಿ. ಶೆಟ್ರಿ
ಸ್ಮಾರಕ ನಿಧಿಗೆ
ಸಹಾಯ ಮಾಡಿರಿ

ಅಮೃತಾಂಜನ
ಎಲ್ಲಾ ನೋವುಗಳಿಗೆ ಸಿದ್ಧೌಷಧ



ಎಲ್ಲಾ ತರದ ... ೫೦ ವರ್ಷ ... ಪ್ರಾಯದ

ಅಂದವಾದ ಮನೆಗಳಿಗೆ! ಆಕರ್ಷಕವಾದ ಆಫೀಸುಗಳಿಗೆ!!

ಸುಸಜ್ಜಿತವಾದ ಆಸ್ಪತ್ರೆಗಳಿಗೆಲ್ಲಾ ಬೇಕಾಗುವ

ಖೀರ್ದಾರವರ ಉಕ್ಕಿನ

"ಮಿಡ್ಸೇಫ್" 50" × 30" × 17' ಡ್ರೆಸ್ಸಿಂಗ್ ಟೇಬಲ್ 65" × 33" × 19"

ಮುಟೆಲಿಫ್: 78" × 36" × 19" ವಾರ್ಡ್ರೋಬ್ 78" × 39" × 24"

ಸಾದಾ ಮತ್ತು ಒಳಗಡೆ ಲೋಕರ್, ಮತ್ತು ಕನ್ನಡಿಗಳುಳ್ಳ ಕಪಾಟುಗಳು ವಗೈರೆ ಎಲ್ಲಾ ತರದ ಉಕ್ಕಿನ ಫರ್ನಿಚರ್‌ಗಳು.

"ರೇಲೀಸ್" & "ಉಷಾ" ಟೇಬಲ್ ಮತ್ತು ಸೀಲಿಂಗ್ ಫೇನ್‌ಗಳು.

—— ದ್ವಿಮುಖವಾಗಿರುವ "ಸೋಫಾ ಹಾಗೂ ಹಾಸಿಗೆ" ——

ಮದುವೆ ಸನಾರಂಭಗಳಿಗೆ ಉಡುಗರೆ ಸಾಹಿತ್ಯಗಳು ನಮ್ಮ ವೈಶಿಷ್ಟ್ಯ.

ಹೆಚ್ಚಿನ ವಿವರಗಳಿಗೆ:

ಶಾಸ್ತ್ರಿ ಮತ್ತು ಕಂಪೆನಿ,

ಹಂಪನ್‌ಕಟ್ಟೆ, ಮಂಗಳೂರು

Phone: 788 Grams; "SHASTRYCO

ಧಾರಾವಾಹಿ ಕಾಂದಬರಿ

(೩ನೇ ಪುಟದಿಂದ)

ಟ್ಟು ಹೋದರೂ ಕತ್ತಲಲ್ಲಿ ಕೂಡಾ ಹಿಂತಿರುಗಿ ನೋಡುವುದಿಲ್ಲವೇನು? ಅವನೇ ಕೊಲೆಗಾರ" — ಜಯಂತರು ನುಡಿಯುನ್ನು ಪೂರೈಸುವ ಮೊದಲೇ ದಾಮೋದರನು ಒಂದು ಚೀಲವನ್ನು ಕಂಕುಳಲಿಟ್ಟುಕೊಂಡು ಅಸ್ತವ್ಯಸ್ತವಾಗಿ ಓಡಿ ಬಂದನು —"ಸ್ವಾಮಿ, ಹೋಗುವ ಮೊದಲು ಈ ಚೀಲವನ್ನು ಪರೀಕ್ಷಿಸಿ ಹೋಗಿ'' ಎಂದನು.

ಜಯಂತನವರು ಆಶ್ಚರ್ಯದಿಂದ — "ದಾಮೋದರ್, ನಿಮಗೇನೂ ಆಗಲಿಲ್ಲ ತಾನೇ? ಇಷ್ಟು ಚಿಂತೆಯಲ್ಲಿ ಹಾಗೂ ಭಯದಲ್ಲಿ ಏಕಿದ್ದೀರಿ? ಈ ಚೀಲದಲ್ಲೇನಿದೆ?" ಎಂದು ವಿಚಾರಿಸಿದರು.

"ಅದರಲ್ಲೇನಿದೆಯೆಂದು ನಿಮಗೆ ಈಗಲೇ ತಿಳಿಯಬಹುದು. ಇದು ಕೆಳಗೆ ಒಂದು ಮೂಲೆಯಲ್ಲಿತ್ತು. ನೌಕರನು ಬಿಡಿಸಿ ನೋಡಿ ಚೀತ್ಕಾರಮಾಡಿ ಓಡಿ ಹೋದನು. ನಾನಿದನ್ನು ನಿಮಗೆ ತೋರಿಸಲಿಕ್ಕಾಗಿ ತಂದೆ."

"ಒಳ್ಳೇದು ಅದನ್ನು ಬಿಚ್ಚು" ಎಂದರು ಜಯಂತರು.

ಅದರಲ್ಲಿ ಒಂದು ಕೋಟು ಮತ್ತು ಒಂದು ಪೇಂಟ್ ಇತ್ತು. ಅದರಡಿಯಲ್ಲಿ ನೀರಿನಿಂದ ಒದ್ದೆಯಾದ ಎರಡು ಟವೆಲುಗಳಿದ್ದವು. ಅದರಲ್ಲಿ ಹಸಿ ಬಣ್ಣವನ್ನು ಒರಸಿದಂತೆ ಅಲ್ಲಲ್ಲಿ ಪಸರಿಸಿದ ಕಲೆಗಳಿದ್ದುವು. ಆ ಟವೆಲುಗಳಲ್ಲಿ ಗಡ್ಡ, ಮೀಸೆ ಮತ್ತು ತಲೆಯ ಉದ್ದವಾದ ಕೂದಲುಗಳಿದ್ದವು!

ರಾಣಿಯ ಬಂಗಲೆಯಲ್ಲಿ ಕೊಲೆಗಳಾಗಿ ಬಹು ದಿವಸಗಳು ಸಂದವು. ಆದರೆ ಪೋಲಿಸರಿಂದ ಕೊಲೆಗಳನ್ನು ಹಿಡಿಯಲಾಗಲಿಲ್ಲ. ರಾಜಕುಮಾರ ಡ್ರೈವರ ಮುಂತಾದವರ ಕೊಲೆ ಕಡಿಮೆ ಆಶ್ಚರ್ಯಕರವಾದುವಲ್ಲ. ಇಡೀ ಪೋಲೀಸು ಖಾತೆಯಲ್ಲಿಯೇ ಅಜಮಾರದ ಯಮುನ ನೆರಳಿನದಳಷ ವಿನಃ ಬೇರಾವ ವಿಷಯವೂ ಇರಲಿಲ್ಲ.

ದಲಿತ ಬೇಂಕಿನ ಮೆನೇಜಿಂಗ್ ಡ್ಯಾರೆಕ್ಟರರ ಕೋಣೆಯಲ್ಲಿಯೂ ಇದೇ ವಿಷಯವಾಗಿ ಚರ್ಚೆ ನಡೆಯುತ್ತಿತ್ತು.

"ಏನು ಫಲಕ ದಾರಿ ಸಿಂಹರವೇ! ನಿಮ್ಮ ಮಾರ್ಗದಲ್ಲಿ ಇನ್ನಾವ ತೊಂದರೆಯೂ ಇಲ್ಲ ತಾನೇ? ನಮ್ಮ ಪುಣ್ಯದಿಂದ ರಾಜಕುಮಾರನು ಕೈಲಾಸವಾಸಿಯಾದನು. ಈ ಕೊಲೆಗಾರನು ವಿಚಿತ್ರ ಪುರುಷ. ನಮಗೆ ತುಂಬಾ ಉಪಕಾರ ಮಾಡುತ್ತಿದ್ದಾನೆ.— ಸ್ವಲ್ಪ ತಡೆದು ಇಷ್ಟು ಸಹಾಯವಾದರೂ ನಮ್ಮ ದೌರ್ಭಾಗ್ಯದಿಂದ ಯಾವೊಂದು ಕಾರ್ಯವೂ ಸರಿಯಾಗಿ ನಡೆಯುವುದಿಲ್ಲ" ಎಂದರು. ದಲಿತ ಸಿಂಹರು.

"ನಿಜ ನಿಜ, ತಾವು ಹೇಳಿದ ಮಾತು ಸತ್ಯ" ಎಂದ ಫಲಕಧಾರಿ.

"ನನ್ನ ಅಭಿಪ್ರಾಯದಲ್ಲಿ ಮಾಯಾವತಿ ಹಾಗೂ ಯಮುನಳ ಮದುವೆಯಾಗುವುದು ಅಸಂಭವವೇ ಸರಿ! ಯಾರೊಬ್ಬನೂ ಇವರೊಡನೆ ಮದುವೆಯಾಗಿ ಮೃತ್ಯುವಿನ ಶಿಕಾರಿಯಾಗಲು ಮುಂದೆ ಬರಲಾರ" ಎಂದ ರಾಮಸಿಂಹ.

"ಹಾಂ, ಇವರೊಡನೆ ಲಗ್ನವೆಂದರೆ ಮೃತ್ಯುವಿನೊಡನೆ ಆಲಿಂಗನೆಯೇ ಸರಿ! ಅಂದ ಬಳಿಕ ಮದುವೆಯಾಗುವುದು ಹೇಗೆ?" ಎಂದ ದಲಿತಸಿಂಹ.

"ಈಗ ಜನರು ಅವರಿಬ್ಬರ ಹೆಸರೆತ್ತಲೂ ಹೆದರುತ್ತಾರೆ" ಎಂದ ರಣವೀರ ಸಿಂಹ.

"ಒಳ್ಳೆದು ಏನೇ ಆಗಲಿ, ಪ್ರಪಂಚದಿಂದ ನಮಗೇನಾಗ ಬೇಕಾಗಿದೆ? ನಮ್ಮ ಕೆಲಸವಾದರೆ ಸರಿ! ಬೇಕಂತೂ ದಿವಾಳಿಯೂ ಯ್ತು . ಕಾಲದ ಶೂಲವು ತಲೆಯ ಮೇಲೆ ಕೂತಂತಾಯ್ತು ಇದರಿಂದ ಪಾರಾಗುವ ದಾರಿಯಿಲ್ಲ.'

ನಿಮಗಾರಿಗಾದರೂ ಈ ತರಹ ಸಾಯುವವರ ರಹಸ್ಯ'ಗೊತ್ತಾಯ್ತೋ ಇಲ್ಲವೋ? ಹಾಗಾದರೆ ನೀವು ಸಹ ಸಂಸಾರಿಗರಂತೆ ಅಂಧಕಾರದಲ್ಲಿದ್ದೀರೆನ್ನಿ" ಎಂದ ರಾಮಸಿಂಹ ಡ್ಯಾರೆಕ್ಟರರಲ್ಲಿ.

"ಸಂಸಾರದವರಿಂದಲೇ ಪತ್ತೆಯಾಗಲಿಲ್ಲ. ಅಂದ ಬಳಿಕ ನಾನವರಿಗಿಂತ ಹೊರಗಿನವನೇನು" ಎಂದು ನಗುತ್ತಾ ಉತ್ತರಿಸಿದ ದಲಿತ ಸಿಂಹ.

"ನನಗಂತೂ ತಿಳಿದಿದೆ" ಎಂದ ರಾಮಸಿಂಹ.

"ಹೇಗೆ" ದಲಿತ ಸಿಂಹನು ಕೇಳಿದನು.

"ಮೃತ್ಯು ಬಂತು........ಸತ್ತರು"

"ವ್ಹಾ, ವ್ಹಾ, ಎಂತಹ ಯೋಚನೆ!" ಎಂದು ನಗುತ್ತಾ ನುಡಿದರು ರಣವೀರ ಸಿಂಹ." ತಮಾಷೆ ಬಿಡು. ಫಲಕಧಾರಿ ನೀನು ಎಂದು ನಿನ್ನ ಕೆಲಸವನ್ನು ಮುಗಿಸುತ್ತಿ ಎಂದು ತಿಳಿಸು" ಎಂದ ದಲಿತ ಸಿಂಹ.

"ಹಾಂ, ನಾನೀ ಮಾತನ್ನು ಹೇಳಲು ಮರೆತು ಬಿಟ್ಟೆ. ನಿನ್ನೆ ನಾನು ಮಾಯಾವತಿಯಿದ್ದಲ್ಲಿಗೆ ಹೋಗಿದ್ದೆ. ಅಲ್ಲಿ ರಾಜಕುಮಾರನ ಸಾವಿನ ಬಗ್ಗೆ ಸಂತಾಪ ವ್ಯಕ್ತಪಡಿಸಿದಾಗ—"ಆ ಮಾತು ಬಿಡು, ಹಳೆಯ ಮಾತು ನನಗೆ ರುಚಿಸುವುದಿಲ್ಲ." ಎಂದಳು. ಬೇರೆ ವಿಷಯಗಳನ್ನು ಮಾತನಾಡಿದಾಗ ಆನಂದಿತಳಾದಳು. ಅನಂತರ ನನ್ನೊಡನೆ ಕೇಳಿದಳು—"ಹಾಂ ಫಾಲ್ ಆ ದಿನ ಕುದುರೆಯಿಂದ ಬೀಳುತ್ತಿದ್ದ ನನ್ನನ್ನು ಬದುಕಿಸಿದನಲ್ಲಾ ಆ ಮಹೇಂದ್ರ ಗಡದಲ್ಲಿ ವಾಸಿಸುವ ಜಯಂತ ಸ್ವರೂಪ ಚಿತ್ರಕಾರ. ಅವನಲ್ಲಿ ಒಂದು ಚಿತ್ರ ಬಿಡಿಸ ಕೇಳಲು ನಾನು ಹೇಗೆ ಹೋಗುವುದು?" ಎಂದು. ನಾನು ಹೇಳಿದೆ—"ನಿನ್ನನ್ನು ಬದುಕಿಸಿದ ದಿನದ ಹೊರತು ಇನ್ನಾವ ದಿನವೂ ನಾನವನನ್ನು ಕಂಡಿಲ್ಲ. ಅಲ್ಲದೆ ಅವನು ಅದೇನು ಕೆಲಸ ಮಾಡುತ್ತಾನೆಂಬುದನ್ನೂ ಅರಿತಿಲ್ಲ" ಎಂದು ನಾನು ಹೇಳಿದುದನ್ನು ಕಂಡು ಸುಮ್ಮನಾದಳು. ಅವಳು ಜಯಂತನನ್ನು ಕಾಣಲು ಉತ್ಕಂಠಿತಳಾಗಿದ್ದಾಳೆ. ಇದು ಖಂಡಿಂತ ಆಪತಜನಕವಾಗಿದೆ. ಅವಳ ಮಾತಿನಿಂದ ಅವಳು ಅವನನ್ನು ಪ್ರೀತಿಸುವುದಾಗಿ ಕಂಡು ಬರುತ್ತಿದೆ. ಆ ವ್ಯಕ್ತಿಯಾರು? ಏನು ಮಾಡುತ್ತಾನೆ? ಎಂಬುದೇ ತಿಳಿಯದು ಎಲ್ಲಿ ಹೋಗಿ ಬರುವಾಗಲೂ ನಾನವನನ್ನು ಕಂಡಿಲ್ಲ ಆದ್ದರಿಂದ ಅದು ನನಗೆ ತುಂಬಾ ಆಶ್ಚರ್ಯವನ್ನುಂಟು ಮಾಡಿದೆ."

"ನನಗೂ ಈ ವ್ಯಕ್ತಿ ಯಾರು ಎಂಬ ಬಗ್ಗೆ ಆಶ್ಚರ್ಯವಾಗಿದೆ" ಎಂದರು ದಲಿತಸಿಂಹ.

"ನಾನು ಅವನನ್ನು ಕಂಡಿದ್ದೇನೆ. ಕಪ್ಪು ಮುಶ್ಕೀ ಕುದುರೆಯಲ್ಲಿ ಕೆಲವೊಮ್ಮೆ ತಿರುಗಾಡ ಹೋಗುವನು. ಅವನೊಡನೆ ಒಬ್ಬ ಗೂರ್ಖಾ ನೌಕರನೂ ಇರುತ್ತಾನೆ" ಎಂದ ರಾಮಸಿಂಹ.

"ಹಾಗಾದರೆ ನಿಮಗೆ ಅವನ ವಾಸಸ್ಥಾನವು ತಿಳಿದಿರಬಹುದು" ಎಂದ ಫಲಕಧಾರಿ.

"ಇಲ್ಲ, ಮನೆಯ ಪತ್ತೆಯೇ ನನಗೆ ತಿಳಿಯದು.''

"ತಮಗೆ ಅದರ ಕುರಿತು ಬೇರಾವ ವಿಷಯಗಳು ತಿಳಿದಿವೆ?"

"ಇಲ್ಲ, ಮುಶ್ಕೀ ಕುದುರೆಯಲ್ಲಿ ತಿರುಗಾಟದ ಹೊರತು ಬೇರಾವುದೂ ನನಗರಿಯದು."

"ಅವನ ಪೂರ್ಣ ಪರಿಚಯವಾಗುವ ತನಕ ನೀವೇನೂ ಮಾಡಲು ಸಾಧ್ಯವಿಲ್ಲ. ಮೊದಲು ಅವನಾರೆಂದು ಕಂಡು ಹಿಡಿದು, ಅನಂತರ ಯುಕ್ತಿಯಿಂದ ಕಾರ್ಯ ಪೂರೈಸುವ. ಅವರೇಗೆ ಕುಮಾರಿ ಮಾಯಾವತಿಯನ್ನು ನೀನು ಯಾವ ರೀತಿಯಲ್ಲಾದರೂ ತಡೆದು ನಿಲ್ಲಿಸು'' ಎಂದ ದಲಿತಸಿಂಹ ಫಲಕಧಾರಿಯೊಂದಿಗೆ.

"ದಲಿತಸಿಂಹರ ಮಾತು ನಿಜ'' ಎಂದ ರಾಮಸಿಂಹ.

"ರಣವೀರ ನೀನು ಆತ್ಮರಾಮ ಇದ್ದಲ್ಲಿಗೆ ಹೋಗಿ ರಾಣಿ ಯಮುನಾಳು ಏನುತ್ತರವಿತ್ತಳೆಂದು ಅರಿ'' ಎಂದ ದಲಿತ ಸಿಂಹ.

ಅಷ್ಟರಲ್ಲಿ ಟಪಾಲಿನವನು ಒಂದು ಕಾಗದವನ್ನು ಕೊಟ್ಟು ಹೋದನು. ದಲಿತ ಸಿಂಹರು ಪತ್ರವನ್ನೋದಿದರು. ಅದರಲ್ಲಿ ಈ ರೀತಿ ಬರೆದಿತ್ತು—

"ಯಮುನಾಳು ಮಾಯವಾಗಿದ್ದಾಳೆ ಎಷ್ಟು ಹುಡುಕಾಡಿದರೂ ಸಿಗಲಿಲ್ಲ. ಸೂಚನೆಗಾಗಿ ಪತ್ರ ಕಳುಹಿಸಿದ್ದೇನೆ"

ಪತ್ರವನ್ನೋದಿ ಬೆರಗುಗೊಂಡ ದಲಿತ ಸಿಂಹರು ರಾಮಸಿಂಹನೊಡನೆ "ಇದೇ ನ್ಯಾಯವು'' ಅಂದರು.

"ಅದುದೇನು? ಈ ಕಡೆಯಿಂದಲೂ ಆಶೆ ಬಿಟ್ಟು ಬಿಡಿ. ಆದರೆ ಇದರಲ್ಲಿ ಆತ್ಮರಾಮನ ಕೈಯಿದೆ ಎಂದು ಭಾಸವಾಗುತ್ತದೆ'' ಎಂದ ರಾಮಸಿಂಹ.

"ನಾನೂ ಈ ಮಾತನ್ನು ಸಮರ್ಥಿಸುತ್ತೇನೆ" ಅಂದ ರಣವೀರ.

"ಅಂತೂ ಆತ್ಮರಾಮನು ನನ್ನ ಹತ್ತಿರ ಕೇಳದೆಯೇ ಈ ಕೆಲಸ ಯಾಕೆ ಮಾಡಿದ" ಎಂದ ದಲಿತ ಸಿಂಹ.

"ತಮಗೆ ಸೂಚಿಸದೆ ಇದ್ದುದರಿಂದಲೇ ಯಾವುದಾದರೂ ಒಳ್ಳೆಯದನ್ನೇ ಯೋಚಿಸ ಬಹುದು. ಪ್ರತಿಯೊಂದು ವಿಚಾರವನ್ನು ನಿಮಗೆ ತಿಳಿಸ ಬೇಕೆಂಬ ನಿರ್ಬಂಧವಿಲ್ಲ. ತಾನೆ?'' ಎಂದು ರಾಮಸಿಂಹನ ಸಮಾಧಾನವಿದು.

"ಈ ಕೆಲಸವು ಆತ್ಮರಾಮನದ್ದೇ ನನಗೆ ಭಾಸವಾಗುತ್ತದೆ. ಈ ಸಂದೇಹಕ್ಕೆ ತಕ್ಕಂತೆ ಇಲ್ಲಿ ಕೆಲವು ದಿನಗಳಿಂದ ಮಾಯವಾಗಿದ್ದಾಳೆ.' ಎಂದು ಬರೆದುದು ಸಾಕ್ಷಿಕೊಡುತ್ತದೆ. ಸಂಭವತಃ ಅವನು ಈ ಆಲೋಚನೆಯಲ್ಲಿಯೇ ಇರಬಹುದು" ಎಂದ ದಲಿತಸಿಂಹ.

"ಈ ಮಾತು ನಿಜವಾದರೆ ಫಲಕಧಾರಿಗಿಂತಲೂ ಮುಂಚೆ ಆತ್ಮರಾಮನು ಕಾರ್ಯ ಸಿದ್ಧಿ ಮಾಡುವ ಸಂಭವವಿದೆ." ಎಂದು ತೃಪ್ತಿಗೊಂಡ ರಾಮಸಿಂಹ.

"ನಿನ್ನ ಮಾತು ನಿಜ! ಒಳ್ಳೆದು ನೀವೆಲ್ಲರೂ ಈಗ ಹೋಗಿ. ಸಾಯಂಕಾಲ ನಿಮಗೆ ಪುನಃ ಬರಬೇಕಾಗಿದೆ' ಎಂದು ಡ್ಯೈರೆಕ್ಟರರು ಎಲ್ಲರನ್ನೂ ಕಳಿಸಿದರು.

(ಮುಂದುವರಿಯುವುದು)

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ	4%
5 ,, 12 ,,	4¼%
13 ,, 24 ,,	4½%

ರೂ. 5.000/- ಮತ್ತು ಮೇಲಣ ಡಿಪೋಸಿಟಿಗೆ ¼% ಜಾಸ್ತಿ ಕೊಡಲಾಗುವುದು.

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½% ಚಾಲ್ತಿ ಠೇವಣಾತಿಗೆ ½% ಗ

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್.

ಮೂಲ್ಕಿ ಬೇಂಕ್ ಲಿ. ಮುಲ್ಕಿ.

ನವಯುಗ ವಾರ ಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

Tel: 'BLUEYAGAR'. — ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ — Phone: 374.

ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು.[ಮಾಲಿಕ:ಕೆ.ಕೆ.ಆರ್.ಶೇಟ್

NAVAYUGA WEEKLY, UDIPI.
REGD. NO.BG. 176

1-6-1961

LICENSE NO. 31
Licensed to Post without Prepayment

ಪರಿಚಯ:

ಬಹುಭಾಷಾ ಪ್ರವೀಣ—ಎರಿಕ್ ಲೋ

> ದಕ್ಷಿಣ ಆಫ್ರಿಕೆಯ ವಿದೇಶ ಮಂತ್ರಿ ಶ್ರೀ ಎರಿಕ್ ಲೋ ವಿಚಿತ್ರ ಕಾಯದೆಗಳನ್ನು ಮಂಜೂರು ಮಾಡಿಸುತಿದ್ದಾರೆ—ಶ್ವೇತೇತರರ ದಮನಕ್ಕಾಗಿ. ಇದರ ಯಶಾಪಯಶಗಳನ್ನು ಪ್ರಪಂಚಕ್ಕೆ ಪ್ರಪಂಚವೇ ನಿರೀಕ್ಷಿಸುತ್ತಿದೆ.

ದಕ್ಷಿಣಆಫ್ರಿಕೆಯ ವರ್ಣದಮನ ನೀತಿಯು ನಿರಂತರವಾಗಿ ಒಂದೆಡೆ ಮುಂದುವರಿಯುತ್ತಿರುವಂತೆಯೇ ಅಲ್ಲಿ ಶ್ವೇತೇತರರ ಚೀತ್ಕಾರವು ಮತ್ತಷ್ಟು ಬಲವಾಗಿ ಕೇಳಿ ಬರುತ್ತಿದೆ. ಇದಕ್ಕೆ ಒಗ್ಗರಣೆ ಹೊಯ್ಯುವಂತೆ ಮೇ ೩೧ನೆ ದಿನಾಂಕದಂದು ದಕ್ಷಿಣ ಆಫ್ರಿಕೆಯು ಕಾಮನ್‌ವೆಲ್ತಿನೊಡನಿದ್ದ ಸಂಬಂಧವನ್ನು ಕಡಿದೊಗೆದು ಸ್ವತಂತ್ರ ಗಣತಂತ್ರವಾಗಿ ರೂಪಾಂತರಗೊಂಡಿದೆ. ಗಣತಂತ್ರವು ಶ್ವೇತ ವರ್ಣೀಯರ ಸುದೃಢ ಕೋಟೆಯಾಗ ಬೇಕೆಂಬ ಅಭಿಲಾಷೆಯಿಂದ ದಮನ ಚಕ್ರವಾದರೂ ಅಧಿಕಾಧಿಕ ವೇಗದಿಂದ ನಡೆದು ಬರುತ್ತಿದೆ. ದಕ್ಷಿಣ ಆಫ್ರಿಕೆಯ ಇಂದಿನ ದುರವಸ್ಥೆಯು ಕಳೆದ ವರ್ಷ ಶಾರ್ಪವಿಲೆಯಲ್ಲಿ ನಡೆದ ಗೋಳಿಬಾರಿನ ನಂತರ ಆರಂಭವಾಯಿತು. ಈ ಅವ್ಯವಸ್ಥೆಯು ಕೊನೆಗೊಂಡು ಅಲ್ಲಿ ಶಾಂತಿ ಸ್ಥಾಪನೆಯಾಗ ಬೇಕಾದರೆ, ಇನ್ನು ಕೆಲವು ಕಾಲಬೇಕಾಗಬಹುದು.

ದಕ್ಷಿಣ ಆಫ್ರಿಕೆಯ ಸಂಸತ್ತು ಇಲ್ಲವೇ ಅಲ್ಲಿನ ಶಾಸನಸೂತ್ರ ಸಂಚಾಲಕರು ಇದನ್ನು ತಿಳಿಯುವುದಿಲ್ಲ. ಕೆಲವೇ ದಿನಗಳಿಗೆ ಮೊದಲು ಸಂಸತ್ತು ಒಂದು ವಿಧೇಯಕವನ್ನು ಸ್ವೀಕರಿಸಿ, ಯಾವನೇ ಒಬ್ಬನ ಮೇಲೆ ಯಾವ ಪ್ರಕಾರದ ಖಟ್ಲೆಯನ್ನು ಹೊರಿಸದೇನೇ ಹನ್ನೆರಡು ದಿನಗಳವರೆಗೆ ಸ್ಥಾನಬದ್ಧತೆಯಲ್ಲಿಡುವ ಅಧಿಕಾರವನ್ನು ಸರಕಾರಕ್ಕೆ ಕೊಟ್ಟಿದೆ. ಇಷ್ಟರಿಂದಲೆ ಸರಕಾರ ತೃಪ್ತವಾಗಲಿಲ್ಲ. ದಕ್ಷಿಣ ಆಫ್ರಿಕೆಯ ಪರರಾಷ್ಟ್ರ ಮಂತ್ರಿಗಳಾದ ಶ್ರೀ ಎರಿಕ್ ಲೋ ಅವರು ಇನ್ನೂ ಒಂದು ವಿಚಿತ್ರ ಕಾಯದೆಯನ್ನು ಮಂಜೂರು ಮಾಡಿಸಿಕೊಳ್ಳಲು ಮುಂದುವರಿದಿದ್ದಾರೆ. ಇದು ಸ್ವೀಕೃತವಾಯಿತೆಂದರೆ, ಇದರ ಬಲದಿಂದ ಸಂಸತ್ತಿನ ಅನುಮತಿಯನ್ನು ಪಡೆದುಕೊಳ್ಳದೇನೇ ಕೇವಲ ಘೋಷಣೆಯ ಮೂಲಕ ಯಾವುದೇ ಒಂದು ನಿರ್ಧಾರವನ್ನು ಕಾನೂನಿನ ರೂಪಕ್ಕೆ ತರುವ ಅಧಿಕಾರ ಸರಕಾರಕ್ಕೆ ದೊರೆಯುತ್ತದೆ.

ಕಳೆದ ವರ್ಷ ಲಂಡನ್ನದಲ್ಲಿ ಹಲವಾರು ಪತ್ರಿಕಾ ಪ್ರತಿನಿಧಿಗಳ ಪ್ರಶ್ನೆಯೊಂದಕ್ಕೆ ಉತ್ತರವೀಯುತ್ತ ಶ್ರೀ ಲೋ ಅವರು 'ದಕ್ಷಿಣ ಆಫ್ರಿಕೆಯಲ್ಲಿ ಕಳೆದ ಮೂರು ಶತಮಾನಗಳಿಂದ ಬಿಳಿಯರು ವಾಸಿಸುತ್ತ ಬಂದಿದ್ದಾರೆ; ಹಾಗಿರುವಾಗ ದ. ಆಫ್ರಿಕೆಯಿಂದ ಇವರು ಹೊರಟು ಹೋಗ ಬೇಕೆಂಬ ವಾದವು ಹುರುಳಿಲ್ಲದ್ದು' ಎಂದಿದ್ದರು. ಈ ವಿವೇಕಶೂನ್ಯ ಸಂಕ್ಷಿಪ್ತ ಹೇಳಿಕೆಯೇ ಶ್ರೀಯುತರ ವ್ಯಕ್ತಿತ್ವದರ್ಶನಕ್ಕೆ ನಿದರ್ಶನವಾಗಬಲ್ಲುದು. ದಕ್ಷಿಣ ಆಫ್ರಿಕೆಯ ನಿವಾಸಿಗಳು ಆಫ್ರಿಕನರೇ ಇರಲಿ, ಏಶ್ಯನರೇ ಇರಲಿ, ಬಿಳಿಯರು ಆ ದೇಶವನ್ನು ಬಿಟ್ಟು ಹೋಗಬೇಕೆಂದು ಎಂದೂ ಬಯಸಿರುವುದಿಲ್ಲ; ಎಲ್ಲಿಯೂ ಹೇಳಿರುವುದಿಲ್ಲ. 'ಶ್ವೇತವರ್ಣೀಯರು ತಮ್ಮ ಮೇಲೆ ಅತ್ಯಾಚಾರ ಮಾಡಬಾರದು ಶಾಂತಿಯಿಂದ ಬಾಳಬೇಕೆಂಬ ನಮ್ಮ ಅಭಿಲಾಷೆಯನ್ನು ಸಲ್ಲಿಸಲಿ' ಎಂದವರು ಆಶಿಸುತ್ತಾರೆ.

೭೦ ವರ್ಷ ಪ್ರಾಯದ ಶ್ರೀ ಎರಿಕ್ ಲೋರವರು ದಕ್ಷಿಣ ಆಫ್ರಿಕೆಯ ಒಂದು ಸಂಪನ್ನ ವ್ಯವಸಾಯಿ. ೧೯೨೪ರಲ್ಲಿ ದೇಶದ ಸಂಸತ್ ಸದಸ್ಯರಾದ ಇವರು ಮರುವರ್ಷವೇ ಕೂಟ ನೀತಿಯಲ್ಲಿ ತಲೆ ಹಾಕಿದರು. ತನ್ನ ಸರಕಾರದ ಕಡೆಯಿಂದ ಇವರು ಹಲವಾರು ವಿದೇಶಗಳಲ್ಲಿ ವಾಣಿಜ್ಯ ದೂತರಾಗಿ ಕೆಲಸ ನಿರ್ವಹಿಸಿದರು. ಡಾ। ಮೊಲಾನ್‌ರವರ ಸಚಿವ ಸಂಪುಟದಲ್ಲಿ ಇವರು ಗನಿ ಮತ್ತು ಅರ್ಥ ಶಾಖೆಯ ಮಂತ್ರಿಗಳಾದರು. ೧೯೪೭—೪೯ರಲ್ಲಿ ಸಂಯುಕ್ತ ರಾಷ್ಟ್ರ ಸಂಘದ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿದ ದ. ಆಫ್ರಿಕೆಯ ನಿಯೋಗದ ನೇತಾರರು ಇವರಾಗಿದ್ದರು. ಕೆಲ ಸಮಯ ಇವರು ವಿದೇಶ ಮಂತ್ರಿಯಾಗಿಯೂ ಇದ್ದರು.

ತಮ್ಮ ವಕ್ತೃತೆಗಾಗಿ ಲೋ ಸುಪ್ರಸಿದ್ಧಿ ಪಡೆದಿದ್ದಾರೆ. ದಕ್ಷಿಣ ಆಫ್ರಿಕೆಯ ಹೆಚ್ಚಿನ ಭಾಷೆಗಳನ್ನು ಅವರು ಕಲಿತುಕೊಂಡಿದ್ದಾರೆ. ಫ್ರೆಂಚ ಭಾಷೆಯ ಮೇಲೂ ಇವರು ತಮ್ಮ ಕೈಯಾಡಿಸುವ ಸಾಮರ್ಥ್ಯ ಗಳಿಸಿದ್ದಾರೆ. ವ್ಯಾಯೊಲಿನ್ ವಾದನದಲ್ಲಿ ಸಿದ್ಧಹಸ್ತೆಯಾದ ಇವರ ಪತ್ನಿ ಏನಾಸ್ಮಿಮೆನ್ ರಾಜನೀತಿಯಲ್ಲೂ ಸಾಕಷ್ಟು ಕೀರ್ತಿಗಳಿಸಿದ್ದಾರೆ.

ಶ್ವೇತೇತರರ ದಮನಕಾರ್ಯವು ದಕ್ಷಿಣ ಆಫ್ರಿಕೆಯ ಸರಕಾರದಿಂದ ಆಗುವುದಾದರೆ, ಇದರಲ್ಲಿ ವಿದೇಶಮಂತ್ರಿ ಶ್ರೀ ಎರಿಕ್ ಲೋರವರ ಕೈವಾಡ ಮಹತ್ವಪೂರ್ಣವಾಗಿದೆ. ಇವರ ಯಶಾಪಯಶಗಳನ್ನು ಪ್ರಪಂಚ ಅವಶ್ಯ ನಿರೀಕ್ಷಿಸುತ್ತಿದೆ.

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ಮೂರ್ಖತೆ ಮತ್ತು ಶಕ್ತಿಗಳು ಜಾತೀಯತೆಯಿಂದ ಬರುವುದಿಲ್ಲ. ಜಾತೀಯ ಭೂತವನ್ನೇ ನಾವು ನಂಬಿ ಕುಳಿತರೆ, ಅದರಿಂದ ರಾಷ್ಟ್ರಹಿತವಾಗುವಂತಿಲ್ಲ. ಸಮಗ್ರ ರಾಷ್ಟ್ರದ ವಿಕಾಸಕ್ಕಾಗಿ, ಹೊಸ ಸಮಾಜದ ನಿರ್ಮಾಣ ಕಾರ್ಯದಲ್ಲಿ ಸಹಯೋಗ ನೀಡುವುದಕ್ಕಾಗಿ ಸರಕಾರ ಒಂದೇ ಒಂದು ತತ್ವವನ್ನು ಘೋಷಿಸಬೇಕು. ಹಿಂದುಳಿದಿರುವಿಕೆಯನ್ನು ಜಾತಿಯ ಮೇಲೆ ವಿಂಗಡಿಸುವುದಿಲ್ಲ—ಆರ್ಥಿಕ ಸ್ಥಿತಿಯನ್ನು ಹೊಂದಿಕೊಂಡು ಎಂದು. ಆಗ ಈ ಎದ್ದಿರುವ ಜಾತೀಯ ಭಿನ್ನಾಭಿಪ್ರಾಯವು ಬಗೆಹರಿಯದಿರುವುದೆ?

ಸೆಕೆಂಡರಿ ಶಿಕ್ಷಣವನ್ನು ಸರಕಾರ ವಾರ್ಷಿಕ ರೂ. ೧,೨೦೦ಕ್ಕಿಂತ ಕಡಿಮೆ ಆದಾಯವಿರುವವರ ಮಕ್ಕಳಿಗೆ ಉಚಿತವಾಗಿ ನೀಡಲು ನಿರ್ಧರಿಸಿದೆ. ಹಾಗೆಯೇ ರೂ. ೧,೦೦೦ಕ್ಕಿಂತ ವಾರ್ಷಿಕ ಆದಾಯ ಕಡಿಮೆಯಿರುವವರೆಲ್ಲರೂ ಹಿಂದುಳಿದವರೆಂದು ಘೋಷಿಸಬಹುದು. ಈ ಬಗ್ಗೆ ಅವಶ್ಯಕ ಅಂಕೆ ಸಂಖ್ಯೆಗಳನ್ನು ಅಧ್ಯಯನ ನಡೆಸಿ ಆರ್ಥಿಕ ತಳಹದಿಯಲ್ಲಿಯೇ 'ಹಿಂದುಳಿಯುವಿಕೆ'ಯನ್ನು ನಿಷ್ಕರ್ಷೆ ಮಾಡುವ ನಿರ್ಧಾರ ಸರಕಾರ ಕೈಗೊಳ್ಳಬೇಕು. ಮಗುವಿನ ಯೋಗ್ಯತೆ ಮತ್ತು ಬುದ್ಧಿಶಕ್ತಿಗಳಿಗೆ ಜಾತಿಯೊಂದು ಶಾಪವಾಗಿ ಪರಿಣಮಿಸಬಾರದು-ಅದು ವರದಹಸ್ತವಾಗುವ ಕಾಲ ಅತಿ ಹಿಂದೆ ಉಳಿಯಿತು.

ಸುಧಾರಣೆ—ಪರಿವರ್ತನೆ—ಪರಿಶೀಲನೆಯ ಹೆಸರಿನಲ್ಲಿ ಒಂದಷ್ಟು ಶಕ್ತಿ—ಸಂಪತ್ತು ವೆಚ್ಚಮಾಡಿ ಇದ್ದುದನ್ನೂ ಕೆಡಿಸಿಕೊಳ್ಳುವುದು ಯಾರಿಗೂ ಶೋಭನೀಯವಲ್ಲ. ಅನಿವಾರ್ಯ ಶಿಕ್ಷಣ—ಪಂಚಾಯತ ರಾಜ್ಯರಚನೆ ಪಂಚವಾರ್ಷಿಕ ಯೋಜನೆ ಮೊದಲಾದುವುಗಳಲ್ಲಿ ತೋರಿಸಿದ ದಿಟ್ಟತನದ ಹೆಜ್ಜೆಯನ್ನು ಸರಕಾರ ಈ ಸಂಬಂಧದಲ್ಲಿಯೂ ಇಡಬೇಕು. ಹಾವು ಸಾಯಬಾರದು; ಕೋಲು ಮುರಿಯಬಾರದು ಎಂಬಂತೆ ಇಲ್ಲವೇ 'ನಾನು ಕುಟ್ಟಿದಂತೆ ಮಾಡುತ್ತೇನೆ, ನೀನು ಅಳುವಂತೆ ಮಾಡು' ಎಂಬಂತೆ ವರ್ತಿಸುವುದರಿಂದ ಜನತೆ ತೃಪ್ತಿಗೊಳ್ಳದು. ತಮ್ಮ ವಿಕಾಸಕಾರ್ಯ ಹೇಗೆ ನಡೆಯಬೇಕು, ಅದಕ್ಕೆ ಯಾವ ಕ್ರಮ ಕೈಗೊಳ್ಳಬೇಕು ಎಂಬುದರ ಬಗ್ಗೆ ಸರಕಾರಕ್ಕಿಂತಲೂ ಹೆಚ್ಚಾಗಿ ಮತ್ತು ತೀವ್ರವಾಗಿ ಇಂದು ಜನತೆ ಯೋಚಿಸುವ ಶಕ್ತಿ ಪಡೆದಿದೆ. ಕರ್ನಾಟಕದ ಜನತೆ ಜಾತಿಭೇದವನ್ನು ಮರೆಯಲು ಪ್ರಯತ್ನಿಸುವಾಗ, ಸರಕಾರ ಅದನ್ನು ಶಾಶ್ವತಗೊಳಿಸಲು ಹವಣಿಸುವುದು ಸರ್ವಥಾ ಅಸಮಂಜಸವಾಗಿದೆ.

—ಗೋರಾ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—.
ಡಾ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N.P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕಕಳಿಸಲಾಗುವುದು.
ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಡಿ. ಕೆ. ಭಾರದ್ವಾಜರ
ಇಂಗ್ಲಿಷ್, ಇಂಗ್ಲಿಷ್-ಕನ್ನಡ

ಡಿಕ್ಷ್ನೆರಿ

ಬೆಲೆ: ರೂ. ನಾಲ್ಕು.

ಐದು ರೂಪಾಯಿ ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ ಉಡುಪಿ.

Edited Printed & Published by K. H. Shetty, at the Navayuga Press, Udipi, S. India.

40th year of publication. 8-6-1961 ೪೦ನೇ ವರ್ಷ

ಸಂಪುಟ ೪೧ Vol. 41

ನವಯುಗ

ಸಂಚಿಕೆ ೩೮ No. 38

ಬೆಲೆ 0-13

ಪ್ರಚಲಿತ ಪ್ರಸಂಗ:

ಕೃಷಿ ಕ್ಷೇತ್ರದಲ್ಲಿ ಮಹಾಯೋಜನೆ

ಮಂಡ್ಯ ಜಿಲ್ಲೆಯಲ್ಲಿ ಪ್ರಾರಂಭವಾಗುವ ಪ್ಯಾಕೇಜ್ ಡೀಲ್ ಯೋಜನೆಯು ರಾಜ್ಯದ ಆಹಾರದ ಪ್ರಶ್ನೆಯನ್ನು ಉತ್ತರಿಸಲು ಸಶಕ್ತವಾಗಬೇಕು. ಮಾರ್ಶಲ್ ಯೋಜನೆಯಂತಹ ಇದು ಯಶಸ್ವಿಯಾಗುವಂತೆ ನೋಡಿಕೊಳ್ಳುವುದು ಅತ್ಯವಶ್ಯ.

ಯುರೋಪಿನ ರಾಷ್ಟ್ರ ನಾಯಕರೊಡನೆ ಸಮಾಲೋಚನೆ ನಡೆಸಲು ಉತ್ಸುಕರಾಗಿ ಸಂಚಾರಕ್ಕೆ ತೊಡಗಿರುವ ಅಮೆರಿಕನ್ ಅಧ್ಯಕ್ಷ ಶ್ರೀ ಜಾನ್ ಕೆನೆಡಿ.

"ಫೋರ್ಡ್ ಫೌಂಡೇಶನ್"ನಿಂದ ಆರ್ಥಿಕ ಸಹಾಯವನ್ನು ಪಡೆದು ತೃತೀಯ ಪಂಚವಾರ್ಷಿಕ ಯೋಜನಾವಧಿಯಲ್ಲಿ ಮೈಸೂರು ರಾಜ್ಯದ ಮಂಡ್ಯ ಜಿಲ್ಲೆಯಲ್ಲಿ 'ಪ್ಯಾಕೇಜ್‌ಡೀಲ್' ಕಾರ್ಯಕ್ರಮವು ಪ್ರಾರಂಭವಾಗಲಿದೆ. ಈ ಯೋಜನೆಯು ಎಲ್ಲಿ ತೊಡಗಬೇಕೆಂಬ ಬಗ್ಗೆ ಪ್ರಾರಂಭದಲ್ಲಿ ಭಿನ್ನಾಭಿಪ್ರಾಯವೆದ್ದಿದ್ದರೂ ಈಗ ಅದೆಲ್ಲ ದೂರವಾಗಿದೆ. ಕೇಂದ್ರ ಸರಕಾರದ ಮನ್ನಣೆಯನ್ನು ಪಡೆದ ಈ ಯೋಜನೆಯ ಪೂರ್ವ ಸಿದ್ಧತೆಯ ಬಗ್ಗೆ ಮಾತುಕತೆ ನಡೆಸಲು ರಿಜರ್ವ್ ಬೇಂಕಿನ ಅಧಿಕಾರಿಗಳು ಇತ್ತೀಚೆಗೆ ಬಂದಿದ್ದಾರೆ. ಮುಂದಿನ ಕಾರ್ಯಕ್ರಮಗಳು ಆದಷ್ಟು ಶೀಘ್ರದಲ್ಲಿಯೇ ಪ್ರಾರಂಭವಾಗುವುವೆಂಬ ನಿರೀಕ್ಷೆಯಿದೆ. ರಾಜ್ಯ ಸರಕಾರ ಕೂಡ ಈ ಯೋಜನೆಯ ಬಗ್ಗೆ ತೀವ್ರಾಸಕ್ತಿ ತಾಳಿರುವುದರಿಂದ ಇದು ವ್ಯವಹೃತವಾಗುವುದರಲ್ಲಿ ಹೆಚ್ಚು ಸಮಯ ಕಳೆಯದು.

'ಪ್ಯಾಕೇಜ್ ಡೀಲ್' ಯೋಜನೆಯ ಒಟ್ಟು ವೆಚ್ಚ ಐದುಕೋಟಿ ಐವತ್ತೇಳು ಲಕ್ಷ ರೂಪಾಯಿಗಳು. ಇದರ ಕಾಲಾವಧಿ ಐದು ವರ್ಷಗಳು. ಸುಧಾರಿಸಿದ ಬೀಜ, ಗೊಬ್ಬರ, ನೀರಾವರಿ ಸೌಲಭ್ಯ ಮೊದಲಾದುವನ್ನು ಒದಗಿಸಿ ಬೇಸಾಯಗಾರರು ಉತ್ತಮರೀತಿಯಲ್ಲಿ ಸಾಗುವಳಿ ನಡೆಸಲು ಅನುಕೂಲತೆಗಳನ್ನು ಕಲ್ಪಿಸಿಕೊಟ್ಟು ರಾಜ್ಯದಲ್ಲಿ ಆಹಾರೋತ್ಪಾದನೆಯನ್ನು ಹೆಚ್ಚಿಸುವುದೇ ಈ ಯೋಜನೆಯ ಗುರಿಯಾಗಿದೆ. ನಿಯೋಜಿತ ಯೋಜನೆಯನ್ವಯ ಮೂರನೆಯ ಯೋಜನಾಂತ್ಯದಲ್ಲಿ ೩೭॥ ಸಾವಿರ ಟನ್ ಅಕ್ಕಿ ೧೧॥ ಸಾವಿರ ಟನ್ ರಾಗಿಯು ಹೆಚ್ಚಿಗೆ ಬೆಳೆಯುವುದು. ಆಗ ರಾಜ್ಯದ ಆಹಾರ ಪ್ರಶ್ನೆಗೆ ಉತ್ತರ ದೊರೆಯಲು ಹೆಚ್ಚು ಕಠಿನವೆನಿಸುವುದಿಲ್ಲ.

ಯೋಜನೆಯ ಗುರಿಯು ಬೃಹತ್ತಾಗಿರುವುದರಿಂದ ಅದರ ಕಾರ್ಯಾಚರಣೆಯಲ್ಲಿಯೂ ಅತೀವ ಜಾಗ್ರತೆಯಿಂದಿರಬೇಕಾಗುತ್ತದೆ. ಮಂಡ್ಯ ಜಿಲ್ಲೆಯಲ್ಲಿ ಸುಮಾರು ೧,೩೦೦ ಹಳ್ಳಿಗಳಿವೆ. ಇವುಗಳನ್ನು ೧೩೦ ಸಾಮುದಾಯಿಕ ಅಭಿವೃದ್ಧಿ ಕ್ಷೇತ್ರಗಳನ್ನಾಗಿ ವಿಂಗಡಿಸಿ, ಅವುಗಳ ಮೂಲಕ ಯೋಜನೆಯನ್ನು ಜ್ಯಾರಿಗೊಳಿಸಲಾಗುವುದು. ಈಯೆಲ್ಲ ಕಾರ್ಯಭಾರವನ್ನು ಪರಿಶೀಲಿಸಲು ಯೋಜನಾಧಿಕಾರಿಯೊಬ್ಬರನ್ನು ವಿಶೇಷವಾಗಿ ನೇಮಿಸಲಾಗುವುದು. ಆವಶ್ಯಕ ಅನುಕೂಲತೆಯನ್ನು ಬೇಸಾಯಗಾರರಿಗೆ ಒದಗಿಸಿಕೊಡುವುದರೊಡನೆ ಸಹಕಾರಿ ಸಂಘಗಳಿಗೆ ಅಗ್ರಪ್ರಾಶಸ್ತ್ಯವೊದಗುವಂತೆ ಸಾಲ ನೀಡುವ ಸೌಕರ್ಯವನ್ನೂ ಇದರಲ್ಲಿ ಯೋಜಿಸಲಾಗಿದೆ. ಇದರಿಂದಾಗಿ ಪರಿಶ್ರಮಪಟುವೆನಿಸಿದ ರೈತನು ಲಭ್ಯವಿರುವ ಸೌಲಭ್ಯಗಳೆಲ್ಲವನ್ನೂ ಪಡೆದು, ಉತ್ಸಾಹದಿಂದ ಪರಿಶ್ರಮ ವಹಿಸುವುದು ಅತ್ಯಗತ್ಯವಾಗಿದೆ.

ಭಾರತವು ಹಳ್ಳಿಗಳ ದೇಶ; ಪ್ರಪಂಚದ ಅತಿ ದೊಡ್ಡ ಪ್ರಜಾಸತ್ತೆ. ನಮ್ಮ ಜನಸಂಖ್ಯೆಯು ದಿನದಿಂದ ದಿನಕ್ಕೆ ಹೆಚ್ಚುತ್ತ ಹೋಗುತ್ತಿರುತ್ತದೆ. ಮೊದಲೇ ಆಹಾರದ ಅಭಾವದಿಂದ ಕಂಗಾಲಾಗುತ್ತಿರುವ ಭಾರತೀಯರು ಜನಸಂಖ್ಯೆಯ ಹೆಚ್ಚಳದಿಂದ ಮತ್ತಷ್ಟು ದಿಗಿಲುಗೊಳ್ಳುತ್ತಾರೆ. ಪ್ರತಿವರ್ಷ ನಮ್ಮ ಜನರ ಹೊಟ್ಟೆಯನ್ನು ತಣ್ಣಗಿರುವುದಕ್ಕೋಸ್ಕರ ಲಕ್ಷಾಂತರ ರೂಪಾಯಿಗಳು ವಿದೇಶಗಳಿಗೆ ಹೋಗುತ್ತಿರುವುವು. ಆಹಾರದ ವಿಷಯದಲ್ಲಿ ನಾವು ಪರಿಪೂರ್ಣತೆ ಪಡೆಯುವ ವರೆಗೆ, ನಮ್ಮಲ್ಲಿ ಯಾವ ಅಭಿವೃದ್ಧಿ ನಡೆದರೂ ಅದು ತೃಪ್ತಿಕರವಾಗಿರುವುದಿಲ್ಲ.

ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಒಕ್ಕಲುತನದ ಅಭಿವೃದ್ಧಿಯ ಕಡೆಗೆ ವಿಶೇಷ ಗಮನವನ್ನು ಹರಿಸಲಾಗಿದೆ. ಆದರೂ ಆಹಾರದ ಮಟ್ಟಿಗೆ ಸ್ವಾವಲಂಬನೆಯನ್ನು ಪಡೆದುಕೊಳ್ಳುವುದು ನಮ್ಮಿಂದ ಅಸಾಧ್ಯವಾಯಿತು. ದ್ವಿತೀಯ ಯೋಜನೆಯಲ್ಲಿ ಕೈಗಾರಿಕೆಗಳಿಗೆ ಪ್ರಾಶಸ್ತ್ಯ ನೀಡಲಾಗಿತ್ತು. ಆದರೆ, ಒಕ್ಕಲುತನ ಸಂಬಂಧದ ನಮ್ಮ ಅಂಕೆ ಸಂಖ್ಯೆಗಳು ತಲೆಕೆಳಗಾದುದರಿಂದ ಮೂರನೆಯ ಯೋಜನೆಯಲ್ಲಿ ಮರಳಿ ಕೃಷಿಗೆ ಪ್ರಾಧಾನ್ಯವೀಯಲಾಗಿದೆ. ಆಹಾರೋತ್ಪಾದನೆಯಲ್ಲಿ ನಾವು ಅಧಿಕ ಆಸಕ್ತಿವಹಿಸಿ ಪರದೇಶಗಳವರಿಂದ ಕೈಯೊಡ್ಡುವ ದುಸ್ಥಿತಿಯನ್ನು ದೂರೀಕರಿಸುವುದು ಅತ್ಯವಶ್ಯವಾಗಿದೆ. ಬೇಸಾಯದ ಕ್ಷೇತ್ರದಲ್ಲಿ ನಮ್ಮಲ್ಲಿ ಹಲವಾರು ಪ್ರಶ್ನೆಗಳಿವೆ. ಭೂಮಿಯು ಒಡೆಕನವು ಯಾರಿಗೆ ಸೇರಬೇಕೆಂಬುದರಿಂದ ಹಿಡಿದು ಬೆಳೆದ ಉತ್ಪಾದನೆಗೆ ಒಳ್ಳೆಯ ಬೆಲೆ ಬರುವುದರವರೆಗೆ ಇರುವ ಪ್ರಶ್ನೆಗಳೆಲ್ಲವೂ ಅತಿ ಜಟಿಲವಾಗಿಯೇ ನಮ್ಮಲ್ಲಿವೆ. 'ಉಳುವವನೇ ಹೊಲದೊಡೆಯ'ನೆಂಬ ಉದಾರ ತತ್ವದ ಹಿಂದೆ—ಮುಂದೆ ಸುತ್ತಿರುವ ಮುಳ್ಳು ಬೇಲಿಯನ್ನು ಕೀಳಬೇಕಾಗಿದೆ.

ಹಳೆಯ ಮಾದರಿಯ ಒಕ್ಕಲುತನಕ್ಕಿಂತ ಯಾಂತ್ರಿಕ ಸಹಾಯದಿಂದ ಬೇಸಾಯ ಮಾಡುವುದು ಲಾಭದಾಯಕವೆಂಬುದು ಸಿದ್ಧವಾಗಿರುವುದರಿಂದ ನಮ್ಮಲ್ಲಿ ವ್ಯವಸಾಯ ಕ್ಷೇತ್ರದಲ್ಲಿ ಯಂತ್ರಗಳ ಉಪಯೋಗ ಅಧಿಕಾಧಿಕವಾಗಬೇಕು. ರಾಸಾಯನಿಕ ಗೊಬ್ಬರಗಳ ಉಪಯೋಗದತ್ತ ಹಳ್ಳಿಗರನ್ನು ಆಕರ್ಷಿಸುವಂತೆಯೇ ನೈಸರ್ಗಿಕ ಗೊಬ್ಬರಗಳ ಬಳಕೆಯನ್ನೂ ಪ್ರೋತ್ಸಾಹಿಸಬೇಕು. ರೈತ ಜನರಿಗೆ ಉತ್ತಮ ಬೀಜಗಳನ್ನು ಒದಗಿಸುವುದರೊಡನೆ ಗಿಡಗಳನ್ನು ಕೆಡಿಸುವ ಕ್ರಿಮಿಗಳನ್ನು ನಾಶಗೊಳಿಸುವ ಸಾಧನಗಳನ್ನೂ ಪೂರೈಸಬೇಕಾಗಿದೆ. ಮಳೆಯ ನೀರನ್ನೇ ಹೊಂದಿಕೊಂಡಿರುವ ಜಮೀನುಗಳಿಗೆ ನೀರಾವರಿ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕಾಗಿದೆ. ಆರ್ಥಿಕ ದುಸ್ಥಿತಿಯಿಂದ ಕಂಗೆಟ್ಟಿರುವ ರೈತ ಜನರಿಗೆ ಸ್ವತಂತ್ರವಾಗಿ ಬೇಸಾಯ ನಡೆಸಲು ಅನುಕೂಲವಾಗುವಂತೆ ಆರ್ಥಿಕ ಸಹಾಯವನ್ನೂ ನೀಡಬೇಕಾಗಿದೆ. ಇಷ್ಟು ಮಾತ್ರವಲ್ಲ, ಆಕಸ್ಮಿಕವಾಗಿ ಬೆಳೆಗೊದಗಬಹುದಾದ ಹಾನಿಗಳಿಂದ ರೈತನ ಸ್ಥಿತಿಯು ಕಂಗೆಡದಂತೆ ಕೆಲವು ವಿದೇಶಗಳಲ್ಲಿರುವಂತೆ 'ಧಾನ್ಯ—ವಿಮೆ'ಯ ಸೌಲಭ್ಯವೂ ದೊರೆಯುವುದು ಅಪೇಕ್ಷಣೀಯವಾಗಿದೆ. ಕೈಗೆ ಬಂದ ರೈತನ ಉತ್ಪತ್ತಿಗೆ ಯೋಗ್ಯ ಮಾರುಕಟ್ಟೆಯು ದೊರೆತು, ಆತನು ಸುಖ-ಸಂತೋಷಗಳಿಂದ ಬದುಕುವಂತೆ ಆವಶ್ಯಕ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ.

ಇವೆಲ್ಲವನ್ನು ಅಲ್ಲವಾದರೂ ಇವುಗಳಲ್ಲಿ ಹೆಚ್ಚಿನವನ್ನು ಕಾರ್ಯರೂಪಕ್ಕೆ ತರುವ 'ಮಾರ್ಶಲ್ ಯೋಜನೆ'ಯಂತಿದೆ "ಪ್ಯಾಕೇಜ್ ಡೀಲ್". ಇದು ಸಂಪೂರ್ಣ ಯಶಸ್ವಿಯಾಯಿತೆಂದರೆ, ಮೊದಲೇ ಹೇಳಿದಂತೆ ನಮ್ಮ ಆಹಾರದ ಪ್ರಶ್ನೆ ಬಗೆಹರಿಸಲು ತುಂಬ ಸಹಕಾರವಾಗುವುದು. ಆದರೆ, ಈ ಯೋಜನೆಗಾಗಿ ವ್ಯಯಿಸುವ ಅಪಾರ ಹಣವು ಸಂಪೂರ್ಣ ಉಪಯೋಗಕ್ಕೆ ಬೀಳುವಂತೆ, ರೈತರಲ್ಲಿ 'ಪ್ಯಾಕೇಜ್ ಡೀಲ್' ಯೋಜನೆಯ ಬಗ್ಗೆ ಆಸಕ್ತಿಯನ್ನು ಹುಟ್ಟಿಸಿ, ಅದರಿಂದಾಗ ಬಹುದಾದ

(೧೨ನೇ ಪುಟ ನೋಡಿರಿ)

ESTD. 1921

NAVAYUGA
KANNADA WEEKLY,
UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೨೧.

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್.
ಬಿ. ಶಾಮರಾಯ ಶೆಟ್ಟಿ, ಬಿ. ಎ., ಎಲ್. ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

●

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್) ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್) ಕಲಂ ಇಂಚಿಗೆ ರೂ. 3-50
ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಧಾರಾವಾಹಿ ಕಾದಂಬರಿ

ಯಮುನ ನೆರಳು

ಮೂಲ ಲೇಖಕರು: ಶ್ರೀ ಎಂ. ಎಲ್. ಪಾಂಡೇಯ.
ಅನುವಾದಕರು: ಶ್ರೀ ಎಸ್. ಎಂ. ಶೆಟ್ಟಿ, ಶಿವುಂಜೆ ಪರಾರಿ.
(ಕಳೆದ ಸಂಚಿಕೆಯಿಂದ)

— ೭ —

ಮಹೇಂದ್ರಗಡವು ನಿರ್ಜನ ಪ್ರದೇಶ. ಅಲ್ಲಿ 'ಸೇಂಟರ್ ಜಯಂತ್'ರಾಗಿ ವಾಸಿಸುವ ಜಯಂತಕುಮಾರರ ಹೊರತು ಬೇರಾರ ಮನೆಗಳೂ ಇಲ್ಲ. ಮನೆಯಲ್ಲಿ ಒಂದು ಬದಿಗೆ ಲೋಹದ ಜಾಲಿಯಿಂದ ಮಾಡಲ್ಪಟ್ಟ ದೊಡ್ಡ ದ್ವಾರವಿತ್ತು. ಅದನ್ನು ಸದಾ ಒಳಗಿನಿಂದ ಮುಚ್ಚುತಿದ್ದರು. ಹಿಂಬದಿಯಲ್ಲಿ ಬೆಟ್ಟ ಶ್ರೇಣಿಗಳು ಉನ್ನತವಾಗಿ ಕಾವಲು ಕೊಡುತಿದ್ದವು. ಮನೆಯ ಹಿಂಬದಿಯಲ್ಲಿ ಒಂದು ನದಿ ಹರಿಯುತ್ತದೆ. ಎಡ ಬದಿಯಲ್ಲಿ ಭಯಂಕರವಾದ ಅರಣ್ಯ. ಅರಣ್ಯಕ್ಕೆ ಸಮೀಪವೇ ಗಡಿಯ ಹೆಬ್ಬಾಗಿಲು. ಅದನ್ನು ದಾಟಿ ಯಾರೂ ಬರಬಹುದಿತ್ತು.

ಈ ಭಯಂಕರ ಕಾಡು ಅಂಧಕಾರಮಯವಾಗಿತ್ತು. ಜಯಂತರ ಮನೆಯ ವಿದ್ಯುತ್ ದೀಪವು ಬಹು ದೂರದ ವರೆಗಿನ ಪ್ರದೇಶವನ್ನೂ ಪ್ರಕಾಶಿಸುವ ಪ್ರಯತ್ನ ಮಾಡುತಿತ್ತು. ಈ ಘೋರ ಅಂಧಕಾರದಲ್ಲಿ ಕಿರುಬಾಗಿಲಿನ ಹತ್ತಿರ ನಿಂತಿದ್ದ ಓರ್ವ ಕುಂಟ ಹಾಗೂ ಒಕ್ಕಣ್ಣ ಮನುಷ್ಯನು ಒಮ್ಮೆ ಕಿರುಬಾಗಿಲಿನ ವರೆಗೂ ಮತ್ತೊಮ್ಮೆ ಕಾಡಿನ ವರೆಗೂ ಅಡ್ಡಾಡಿ ಬರುತಿದ್ದನು. ೧೦ ನಿಮಿಷಗಳು ಅಡ್ಡಾಡಿರಬಹುದು. ಅಷ್ಟರಲ್ಲಿ ಕೆಲವರು ಬರುವ ಶಬ್ದ ಕೇಳಿ ಅವನು ಬೆಚ್ಚಿಬಿದ್ದು ಒಂದು ಹಿರಿದಾದ ಮರದೆಡೆಯಲ್ಲಿ ಅವಿತುಕೊಂಡನು. ವಿದ್ಯುತ್ ದೀಪದ ಪ್ರಕಾಶದಲ್ಲಿ ಐದು ಜನ ಕಪ್ಪುಮುಖವಾಡ ಧರಿಸಿದ ಮನುಷ್ಯರು ಕಂಡುಬಂದರು. ಅವರ ಕೈಗಳಲ್ಲಿ ಪಿಸ್ತೂಲು ಇತ್ತು. ನೋಡುವಾಗ ಯಾವುದೋ ಜಟಿಲ ಕಾರ್ಯವನ್ನು ಪೂರೈಸಲು ಹೋಗುತ್ತಿರುವರಂತೆ ಕಂಡು ಬರುತಿತ್ತು.

ಅವರಲ್ಲೊಬ್ಬನು—"ನಾನು ಮುಂಚೆ ಹೋಗಲೋ, ಅಥವಾ ನೀವೂ ನನ್ನೊಟ್ಟಿಗೆ ಬರುತ್ತೀರೋ?" ಎಂದನು. ಎರಡನೆಯವನು—"ನಾವೆಲ್ಲರೂ ನಿನ್ನೊಟ್ಟಿಗೆ ಬರುತ್ತೇವೆ, ಆದರೆ ಬಹಳ ಸಾವಧಾನದಿಂದ ನಡೆಯ ಬೇಕು." ಎಂದು ಹೇಳಿ ಎಲ್ಲರೂ ಕಿರುದ್ವಾರದ ಬಳಿ ಬಂದರು. ಒಳಗೆ ಪ್ರವೇಶಿಸುವವರೇ ಇದ್ದರು. ಅಷ್ಟರಲ್ಲಿ ಯಾರೋ ಬರುವ ಕಾಲ ಸಪ್ಪಳ ಕೇಳಿ ಅಲ್ಲೇ ನಿಂತುಬಿಟ್ಟರು. ಬಂದವನು ಮರದೆಡೆಯಲ್ಲಿದ್ದ ಕುಂಟನಾಗಿದ್ದನು ಅವರಿಗೆ ತುಂಬಾ ಆಶ್ಚರ್ಯವಾಯಿತು. ಇಂತಹ ಅಂಧಕಾರದಲ್ಲಿ ಕುಂಟ ಹಾಗೂ ಕುರುಡನ ಸಾಕ್ಷಾತ್ಕಾರ ಹೇಗಾಯ್ತು? ಎಂದು

ಕುಂಟನು ಮುಂದುವರಿದು—"ನೀವಾರು?" ಎಂದು ಕೇಳಿದನು.

"ಮೊದಲು ನೀನು ಹೇಳು, ಈ ಸಮಯದಲ್ಲಿ ನೀನೇಕೆ ಇಲ್ಲಿ ಬಂದೆ? ಎಂದು ವಿಚಾರಿಸಿದ ಅವರಲ್ಲೊಬ್ಬ.

"ನೀವು ನನ್ನ ವಿಷಯವನ್ನು ಬಯಲು ಮಾಡುವುದಿಲ್ಲವೆಂದರೆ ಮಾತ್ರ ನನ್ನ ಪರಿಚಯ ತಿಳಿಸುತ್ತೇನೆ" ಎಂದ ಕುಂಟ.

"ಸರಿ!"

"ದೊಡ್ಡ ಮನುಷ್ಯರ ಮಾತೇ ದೊಡ್ಡದು"

"ನಿಜ, ನಿಜ. ಇನ್ನತ್ತಿನಿಂದ ನೀನು ನಮ್ಮ ಮಿತ್ರ ಬೇಕಾದುದನ್ನು ನಿಸ್ಸಂಕೋಚವಾಗಿ ಹೇಳು"

"ನಾನೋರ್ವ ಬಡ ಕುಟುಂಬದ ಮನುಷ್ಯ. ನಾನು ಇಲ್ಲಿ ಕಳವು ಮಾಡಲು ಬಂದಿದ್ದೆ, ನನ್ನ ಹೆಸರು ಜಮುನಾ ಪ್ರಸಾದ್" ಎಂದ.

"ನೀನು ವಾಸ್ತವ ವೀರಪುರುಷ. ಒಬ್ಬನೇ ಕಳವು ಮಾಡಲು ಹೊರಟಿರುವೆಯಲ್ಲ 'ಎಂತಹ ಧೈರ್ಯ ನಿನ್ನದು! ಆಗಲಿ, ಇನ್ನು ಮುಂದೆ ನೀನು ನಮ್ಮ ಮಿತ್ರ. ನಿನಗೆ ಇನ್ನು ಮುಂದೆ ಕಳವಿನ ಕಾರ್ಯ ಬೇಡ, ಹಣಕ್ಕಾಗಿ ಚಿಂತಿಸಬೇಡ. ನಾವು ಕಳ್ಳರಲ್ಲ. ಈ ಗಡಿಯಲ್ಲಿ ವಾಸಿಸುವವನಾರು? ಎಂಬುದನ್ನರಿಯಲು ಬಂದವರು. ನಮ್ಮ ಪೂರ್ಣ ಪರಿಚಯ ನಮ್ಮೊಡನೆ ವಾಸಿಸಲು ಬಂದಾಗ ತನ್ನಿಂದ ತಾನೇ ತಿಳಿಯುವುದು."

"ನನಗೆ ಇಂತಹ ಮಿತ್ರರು ಭೇಟಿಯಾದುದರಿಂದ ನಾನು ತುಂಬಾ ಭಾಗ್ಯಶಾಲಿ. ಈ ವಿಷಯದಲ್ಲಿ ನಿಮಗೆ ಕಷ್ಟಪಡುವ ಆವಶ್ಯಕತೆಯಿಲ್ಲ. ಅವನು ಯಾರು? ಎಲ್ಲಿರುವನು? ಎಂಬುದನ್ನು ನಾನು ಬಲ್ಲೆ. ಈ ಸಮಯ ಕೆಲಸಮಾಡುವ ಅಗತ್ಯವಿಲ್ಲ."

"ಒಳ್ಳೆದು, ನಾವೆಲ್ಲರೂ ನಿನ್ನ ಮಾತಿನಂತೆ ಹಿಂತಿರುಗುವೆವು. ಆದರೆ ನಮಗೆ ದಗಾಕೊಡುವುದು ಅಷ್ಟು ಸುಲಭವೂ ಅಲ್ಲ. ಮಾಡಲು ಹೋಗಲೂ ಬೇಡ. ನೀನು ನಮ್ಮೊಡನೆ ಕಲಿತು ಕಾರ್ಯಮಾಡಬೇಕು. ಆದರಿಂದ ನೀನು ಸ್ವತಂತ್ರನಾಗಿರುತ್ತೀ."

ತದನಂತರ ಅವರೆಲ್ಲರೂ ಜಮುನಾ ಪ್ರಸಾದರೊಂದಿಗೆ ಹೊರಟು ಹೋದರು.

ಜಯಂತರವರು ತನ್ನ ಕೆಂಪು ಬಣ್ಣದ ಕೋಣೆಯಲ್ಲಿ ಕುಳಿತು ವೃತ್ತ ಪತ್ರಿಕೆ ಓದುತಿದ್ದರು. ಅಷ್ಟರಲ್ಲಿ ಮೆಶಿನ್‌ನಲ್ಲಿ 'ಎಲರಮ್' ಆಯ್ತು. ಜಯಂತರವರು ಮೆಶಿನ್ ಸ್ಟಾರ್ಟ್‌ಮಾಡಿ ಕಾಗದದಲ್ಲಿ ಸಂಕೇತಗಳನ್ನು ಬರೆತೆಗೆದುಕೊಳ್ಳತೊಡಗಿದರು—"ಇವತ್ತು ರಾತ್ರಿ ಜಾಗ್ರತೆಯಿಂದಿರಿ!"

ಜಯಂತರವರು ಕಾಗದವನ್ನು ಕೆಳಗಿರಿಸಿ ಬೆಲ್ ಬಾರಿಸಿದರು. ನವಲೇಂದ್ರನು ಓಡಿ ಬಂದನು. ಸಂಕೇತವನ್ನು ಅವನಿಗೆ ವಿಶದೀಕರಿಸಿದರು. ಸಂಕೇತವನ್ನರಿತ ನವಲೇಂದ್ರನು ಪುನಃ ಬಂದು ಏನೋ ಹೇಳಿದನು. ಜಯಂತರು ಧೈರ್ಯದಿಂದ—'ದಾಮೋದರ ತನ್ನ ಮಕ್ಕಳಾಟಿಗೆಯನ್ನು ಬಿಟ್ಟಿಲ್ಲವೇನು? ಅವರನ್ನು ಕೋಣೆಯಲ್ಲಿ ಕುಳ್ಳಿರಿಸು, ನಾನು ಬರುತ್ತೇನೆ" ಅಂದರು.

ನವಲೇಂದ್ರನು ಬಾಗಿಲ ಬಳಿ ಹೋಗಿ ಬಾಗಿಲು ತೆರೆದು ಬಂದವನನ್ನು ಕುಳ್ಳಿರಿಸಿ, ಬಾಗಿಲು ಮುಚ್ಚಿ ಜಯಂತರ ಆದೇಶಾನುಸಾರ ಅವರಿಗೆ ಸೂಚನೆ ಕೊಡಲು ಹೋದನು.

ಬಂದವರು ಕುಮಾರಿ ಮಾಯಾವತಿ ಮತ್ತು ಅವಳ ಸಖಿ ಪ್ರಾಣದಾಸರ ಪುತ್ರಿ ಹರ್ಷವತಿಯಾಗಿದ್ದರು. ಹರ್ಷವತಿಯ ವಿವಾಹ ದಾಮೋದರ ಸ್ವರೂಪರೊಡನೆ ನಿಶ್ಚಯವಾಗಿತ್ತು. ಆಗಮಿಸಿದ ಅವರು ಸರಿಯಾಗಿ ಕುಳಿತು ಕೊಳ್ಳುವ ಮೊದಲೇ ಬಾಗಿಲು ಪುನಃ ತೆರೆಯಿತು. ಜಯಂತರು ಒಳ ಪ್ರವೇಶಿಸಿದರು.

"ಕಷ್ಟಕ್ಕಾಗಿ ಧನ್ಯವಾದ, ತಾವು ಬಂದ ಉದ್ದೇಶ?" ಎಂದರು ಜಯಂತ.

"ತಮಗೆ ಚಿತ್ರ ತೆಗೆಯಲು ಮೋಡೆಲಿನ ಆವಶ್ಯಕತೆಯಿದೆಯೆಂದು ಕೇಳಿದ್ದೇವು. ಅದಕ್ಕಾಗಿ ಚಿತ್ರ ತೆಗೆಯಲು ನಾವು ಬಂದಿದ್ದೇವೆ" ಎಂದಳು ಮಾಯಾ.

"ನಮಗೆ ಮೋಡೆಲ್‌ಗಳ ಅಗತ್ಯವಿಲ್ಲ. ಯಾಕೆಂದರೆ ನಿಮ್ಮ ರೂಪ ಆಧುನಿಕವಾಗಿದೆ. ನಾನು ನಿಮ್ಮ ಮೂಗಿನ ಚಿತ್ರ ತೆಗೆಯುವೆ"

"ಕ್ಷಮಿಸಿ, ನಿಮ್ಮ ಪರಿಹಾಸದಲ್ಲೂ ಎಷ್ಟೊಂದು ಮಧುರತೆ ಇದೆ!" ಎಂದಳು ಮಾಯಾ.

"ನಾನು ತಮಾಷೆ ಮಾಡುತ್ತಿಲ್ಲ. ನೀವು ನಿಮ್ಮ ಮುಖದ ಮೇಲೆ 'ಬುರ್ಖಾ' ಹಾಕಿಕೊಂಡಿದ್ದೀರಿ. ಅಂತಹ ಸಂಧರ್ಭದಲ್ಲಿ ತೋರಿಬರುವುದು ಮೂಗು ಮಾತ್ರ. ಆದುದರಿಂದಲೇ ಅದರ ಚಿತ್ರ ತೆಗೆಯಲು ಸಾಧ್ಯ."

"ಧನ್ಯವಾದ ನಾವು ನಮ್ಮ ಚಿತ್ರ ತೆಗೆಯಿಸ ಬೇಕಾದರೆ ಎಷ್ಟು ಖರ್ಚು ತಗಲುವುದು?"

"ನಾನು ಬಹಳ ಕಡಿಮೆ ಕೆಲಸ ಮಾಡುತಿದ್ದೇನೆ. ಆದರೆ, ಯಾರಾದರು ಹಠ ಮಾಡಿದರೆ ಒಂದು ಸಾವಿರ ರೂಪಾಯಿ ಕೊಂಡು ಕೊಳ್ಳುತ್ತೇನೆ."

(೧೧ನೇ ಪುಟ ನೋಡಿರಿ)

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ವ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ: ಬಡ್ಡಿ ಸೇಕಡಾ 5ರಂತೆ: ರೂ. 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100—00 ಒದಗಿಸುವುದು.

ಕರೆ, ಚಿಕ್ಕ ವ್ಯಾದೆ, ನಿರಖು ಠೇವಣಾತಿಗಳ ಮೇಲೆ ಬಡ್ಡಿಯ ಶರ್ತಗಳು: ಬಡ್ಡಿ ಸೇಕಡಾ 5¼ರ ವರೆಗೆ.

ತಾ. 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK LTD.
Estd: 1920

ಅಭಿಪ್ರಾಯ:

ಶಿಕ್ಷಣಕ್ಷೇತ್ರ ವಿಕ್ಷುಬ್ಧ ಸಾಗರವಾಗಬಾರದು

ಕಡ್ಡಾಯ ಶಿಕ್ಷಣ ಯೋಜನೆಯೊಡನೆ ಸುಧಾರಣೆಯ ಹೆಸರಿನಲ್ಲಿ ಪ್ರಶಾಂತ ಶಿಕ್ಷಣ ಕ್ಷೇತ್ರದಲ್ಲಿ ಅನಪೇಕ್ಷಿತ ಗೊಂದಲವೆಬ್ಬಿಸಿ ಅದನ್ನು ವಿಕ್ಷುಬ್ಧ ಸಾಗರವನ್ನಾಗಿ ಮಾಡಬಾರದು. ಹಾಗೆ ಮಾಡಿದರೆ, ಸುಶಿಕ್ಷಿತ ನಾಗರಿಕರ ನಿರ್ಮಾಣದ ಬದಲು 'ಶಾಲೆಗೆ ಹಾಜರಾದ' ನಾಗರಿಕರಷ್ಟೆ ಹೆಚ್ಚುತ್ತಾರೆ.

ಶ್ರೀ ನೆಟ್ಟಾರು ವೆಂಕಟಸುಬ್ಬರಾವ್, ಬಾಳಿಲ

ನಮ್ಮ ದೇಶದ ಘಟನೆ, ಸರಕಾರದ ಧ್ಯೇಯ, ಧೋರಣೆ, ಇಂದಿನ ಸಮಾಜದ ಆವಶ್ಯಕತೆಗಳಿಗನುಸಾರವಾಗಿ ನಮ್ಮ ರಾಜ್ಯದಲ್ಲಿ ಶಾಲಾ ಪ್ರಾಯದ ಎಲ್ಲಾ ಮಕ್ಕಳಿಗೂ ವಿದ್ಯಾಭ್ಯಾಸವನ್ನೊದಗಿಸುವ ಕಡ್ಡಾಯ ಶಿಕ್ಷಣ ಯೋಜನೆಯು ರೂಪಿಸಲ್ಪಟ್ಟದ್ದು ಕಾನೂನಾಗಿ ಸದ್ಯದಲ್ಲಿಯೇ ಜಾರಿಗೆ ಬರಲಿದ್ದು ಇದಕ್ಕೆ ಬೆಂಬಲವಿತ್ತು ಯಶಸ್ವಿಗೊಳಿಸುವುದು ಪ್ರತಿಯೊಬ್ಬನ ಕರ್ತವ್ಯವಾಗಿದೆ.

ಸರಕಾರ ರಾಜ್ಯದ ಬಹುಮುಖ ಅಭಿವೃದ್ಧಿ ಯೋಜನೆಗಳಿಗೆ ಹಣ ವಿನಿಯೋಗಿಸಬೇಕಾಗಿದ್ದರೂ, ರಾಷ್ಟ್ರದ ಮುಂದಿನ ನಾಗರಿಕರನ್ನು ರೂಪಿಸಲಿರುವ ವಿದ್ಯಾಭ್ಯಾಸದ ಯೋಜನೆಗೂ ಸಾಕಷ್ಟು ಹಣ ವಿಂಗಡಿಸಿ ಮಕ್ಕಳಿಗೆ ಪರಿಣಾಮಕಾರಿಯಾದ ಉತ್ತಮ ವಿದ್ಯೆಯೊದಗಿಸುವ ಹೊಣೆ ನಿರ್ವಹಿಸಬೇಕಾಗಿದೆ.

ಈ ದಿಸೆಯಲ್ಲಿ ಇಡೀ ರಾಜ್ಯದಲ್ಲಿ ಏಕರೂಪದ ವಿದ್ಯಾ ನಿಯಮಗಳನ್ನು ಕೈಗೊಳ್ಳುವ ಪ್ರಯತ್ನ ನಡೆದಿದೆ. ಈ ವರೆಗೆ ಆ ನಿಯಮಗಳು ಕಾನೂನಾಗಿಬಾರದಿದ್ದರೂ ಕಾನೂನು ನಿಯಮಗಳನ್ನು ಬದಲಾಯಿಸುವ ಸೂಚನೆಗಳನ್ನು, ಸರಕಾರ ಜನತೆಯ ಮುಂದಿಟ್ಟಿದೆ—ಇವು ಜಾರಿಗೆ ಬಂದಲ್ಲಿ ಕೀಳ್ಮಟ್ಟದಲ್ಲಿರುವ ನಮ್ಮ ವಿದ್ಯಾಭ್ಯಾಸದ ಮಟ್ಟ ಇನ್ನು ಕೆಳಗಿಳಿಯಬಹುದೆಂಬುದನ್ನು ಊಹಿಸಿ ಎಲ್ಲರೂ ದಿಕ್ಕುಗೆಡುವಂತಾಗಿದೆ

ಸರಕಾರ ಶಿಕ್ಷಣವನ್ನು ವ್ಯಾಪಕಗೊಳಿಸಿ ಎಲ್ಲಾ ಮಕ್ಕಳನ್ನು ಶಾಲೆಗೆ ಬರುವಂತೆ ಮಾಡುವಾಗ ಬೇಕಾದ ಅನುಕೂಲತೆಗಳನ್ನೊದಗಿಸುವುದವಶ್ಯ. ಜನಸಂಖ್ಯೆಯ ಮಿತಿಯ ನಿಯಮವನ್ನೇ ತೆಗೆದು ಹಾಕಿ ಒಂದು ಮೈಲಿನ ದೂರದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗೂ ಅನುಕೂಲವಾಗುವಂತೆ ಶಾಲೆಗಳನ್ನು ತೆರೆದು, ಅಗತ್ಯವಿರುವಲ್ಲಿ ಕಟ್ಟಡಗಳನ್ನು ರಚಿಸಿ, ಸಾಕಷ್ಟು ಸ್ಥಳಾವಕಾಶವೊದಗಿಸಬೇಕು—ಸಂತೆಯಲ್ಲಿ ಜನನೆರೆದಂತೆ, ಶಾಲೆಯಲ್ಲಿ ಮಕ್ಕಳು ಸೇರುವಂತಾಗಬಾರದು. ಈಗಿರುವ ಸ್ಥಳಾವಕಾಶದ ನಿಯಮಗಳನ್ನೂ ತೆಗೆದು ಹಾಕುವುದು ಸರಿಯಾಗಲಾರದು. ಆರೋಗ್ಯಕ್ಕೂ ವಿದ್ಯಾರ್ಜನೆಗೂ ಅಗತ್ಯವಾಗಿರುವ ಸ್ಥಳಾನುಕೂಲತೆಯಿರುವ ಕಟ್ಟಡಗಳನ್ನು ವಿಸ್ತರಿಸುವುದು—ತೀರಾ ಅಗತ್ಯವಾಗಿದೆ.

ಅಧ್ಯಾಪಕ ವಿದ್ಯಾರ್ಥಿಗಳ ದಾಮಾಶಯು ಇನ್ನು ಮುಂದೆ ೧:೪೦ ಎಂದು ಈಗಾಗಲೇ ತಿಳಿಯುತ್ತೇವೆ; ಈ ನಿಯಮಗಳು ಎಲ್ಲಾ ಶಾಲೆಗಳಲ್ಲಿಯೂ ಅನುಸರಿಸುವಂತಾದಲ್ಲಿ ವಿದ್ಯಾಭ್ಯಾಸದ ಮಟ್ಟಕ್ಕೆ ಇನ್ನಷ್ಟು ಹಾನಿಯೊದಗಬಹುದು. ಹೆಚ್ಚಿನ ಹಳ್ಳಿ ಶಾಲೆಗಳಲ್ಲಿ ಒಬ್ಬ ಅಧ್ಯಾಪಕನು ೬೦—೭೦ ಮಕ್ಕಳನ್ನು ೫ ಕ್ಲಾಸುಗಳಲ್ಲಿ ವಿಂಗಡಿಸಿ ವಿದ್ಯೆ ಹೇಳಿಕೊಡಬೇಕಾಗುತ್ತದೆ. ಉಚ್ಚ ಶಿಕ್ಷಣ ಸಂಸ್ಥೆಗಳಲ್ಲಾದರೆ ವಿದ್ಯಾರ್ಥಿಗೆ ಆಸಕ್ತಿ, ಶ್ರದ್ಧೆಗಳೂ, ಭಾಷಾ ಜ್ಞಾನವೂ ಇರುತ್ತದೆ ಇಲ್ಲಿ ಹಾಗಲ್ಲ. ಹಲವು ಭಾಷೆಗಳನ್ನಾಡುವ ಮಕ್ಕಳಿಗೆ ಶಿಸ್ತು, ಭಾಷಾಜ್ಞಾನ, ಓದು, ಬರಹ, ಲೆಕ್ಕಗಳನ್ನು ಕಲಿಸಬೇಕಾಗಿದೆ—ಮನೆಯ ವಾತಾವರಣದಿಂದ ಬದಲಿಸಿ, ಶಾಲೆಯ ವಾತಾವರಣಕ್ಕೆ ಅವರನ್ನು ಒಗ್ಗುವಂತೆ ಮಾಡಬೇಕು. ಒತ್ತಾಯದಿಂದ ಬಡ ಹಳ್ಳಿಗರ ಮಕ್ಕಳನ್ನು ದಂಡನೆ ವಿಧಿಸಿಯಾದರೂ ಶಾಲೆಗೆ ಬರುವಂತೆ ಮಾಡಿ, ಈಗ ಸಿಗುವ ಮಟ್ಟದ ವಿದ್ಯೆಯೂ ಮಕ್ಕಳಿಗೆ ಸಿಗದಂತಹ ಪರಿಸ್ಥಿತಿಯೊದಗದಂತೆ ಸರಕಾರ ಏರ್ಪಾಡು ಕೈಗೊಳ್ಳುವುದು ಯುಕ್ತವಾಗಿದೆ.

ಇದನ್ನು ಪರಿಶೀಲಿಸಿ ವಿದ್ಯಾಯೋಜನೆಯನ್ನು ಯಶಸ್ವಿಯಾಗಿ ಪರಿಣಾಮಕಾರಿಯಾದ ಉತ್ತಮ ವಿದ್ಯೆ ಮಕ್ಕಳಿಗೆ ಕಲಿಸಲು ಸಾಧ್ಯವಾಗುವ ಹಾಗೂ ವಿದ್ಯಾರ್ಥಿಗಳಿಗೆ ಕಲಿಯುವುದಕ್ಕೆ ಅನುಕೂಲವಾಗುವ ದಾಮಾಶಯು ನಿಶ್ಚಯಿಸುವುದಗತ್ಯ ಇಂದಿನ ಪರಿಸ್ಥಿತಿಯಲ್ಲಿ ೧:೩೦ ಇರುವ ದಾಮಾಶಯವೇ ಸಮಂಜಸವೆಂಬ ಅಭಿಪ್ರಾಯ ವಿದ್ಯಾಭ್ಯಾಸದ ಈಗಿನ ಮಟ್ಟವನ್ನುಳಿಸಲು ಯುಕ್ತವೇ ಆಗಿದೆ.

ಪ್ರಾಂತ ಪುನಾರಚನೆಯಾದಂದಿನಿಂದಲೇ ಆಗಿಂದಾಗ ಬದಲಾಯಿಸುವ ಪ್ರವೃತ್ತಿಯಲ್ಲೇ ಇದ್ದು ಅನಿಶ್ಚಿತ ಸ್ಥಿತಿಯಲ್ಲಿರುವ ನಮ್ಮ ಶಾಲೆಗಳ ಆಡಳಿತದ ಬಗ್ಗೆ ಸರಕಾರವು ವಹಿಸಿದ ಧೋರಣೆಯಿಂದಲೂ, ಹೊಸ ನಿಯಮಗಳಿಂದಲೂ ಶಾಲಾ ಆಡಳಿತೆ ಸಂಸ್ಥೆಗಳೂ, ಅಧ್ಯಾಪಕರೂ ಕಳವಳಗೊಂಡಿರುವರು—ಆಡಳಿತೆ ಸಂಸ್ಥೆಗಳಿಗೆ ಉತ್ಸಾಹ ಕುಂದುವುದಕ್ಕೂ ಅಧ್ಯಾಪಕವರ್ಗ ಸಾಕಷ್ಟಿಲ್ಲವಾಗುವುದಕ್ಕೂ ಇದು ಕಾರಣವಾಗಿದೆ. ತರಬೇತಿ ಹೊಂದಿದ ಅಧ್ಯಾಪಕರಿಂದು ಬೇರೆ ಉದ್ಯೋಗವನ್ನವಲಂಬಿಸಿರುವುದೂ ಇದೆ ಉದ್ಯೋಗದಲ್ಲಿ ಸೇರಿ ಮುಂದರಿಸಿ ಜೀವನ ನಡೆಸಲು ಸಾಧ್ಯವಾಗುವ ಆಕರ್ಷಕ ವೇತನ ಧೋರಣೆ, ಉದ್ಯೋಗದಲ್ಲಿ ಭದ್ರತೆ, ಅನುಕೂಲತೆ, ಯೋಗ್ಯತಾನುಸಾರ ಉನ್ನತಿ ಹೊಂದಲು ಆಸ್ಪದ ಮುಂತಾದುವುಗಳು ಯೋಗ್ಯ ಉಪಾಧ್ಯಾಯರು ಸಾಕಷ್ಟು ಸಂಖ್ಯೆಯಲ್ಲಿ ಸಿಗುವಂತಾಗಲು ಅತ್ಯಗತ್ಯ ಅಭಿವೃದ್ಧಿ ಕಾರ್ಯಗಳಾದ ನೀರಾವರಿ ಯೋಜನೆಗಳು, ಬೃಹತ್ ಉದ್ಯಮಗಳು, ಕಾರ್ಖಾನೆಗಳಲ್ಲಿರುವ ಅಧಿಕಾರಿಗಳಲ್ಲಿರುವ ಅಧಿಕಾರಿಗಳ ಉದ್ಯೋಗದ ಕುರಿತು ಸರಕಾರ ಮೇಲೆ ಹೇಳಿದ ವೇತನ ಧೋರಣೆ ಮುಂತಾದುವುಗಳು ಅಗತ್ಯವೆಂದು ಮನಗಂಡಿದ್ದರೆ, ಮುಂದಿನ ಜನಾಂಗವಾಗಿರುವ, ದೇಶದ ಅಭ್ಯುದಯ ನಿರ್ಮಾಪಕರಾಗಿರುವ ಮಕ್ಕಳನ್ನು ತಿದ್ದಿ, ಉತ್ತಮ ನಾಗರಿಕರನ್ನಾಗಿ ಮಾಡುವ ಅಧ್ಯಾಪಕ ವರ್ಗಕ್ಕೆ ಅಂಥ ಸೌಲಭ್ಯಗಳಿರುವುದು ಇನ್ನೂ ಹೆಚ್ಚು ಪ್ರಾಮುಖ್ಯವಾಗಿದೆ. ಅಧ್ಯಾಪಕ ವೃತ್ತಿಯನ್ನಾಶ್ರಯಿಸಿದವರನ್ನು ಗೊಂದಲಕ್ಕೂ, ಸಂಕಷ್ಟಕ್ಕೂ ಗುರಿಪಡಿಸಿ ಆಗಾಗ ತೆಗೆದು ಹಾಕಲ್ಪಡುವ ಪರಿಸ್ಥಿತಿ ನಿರ್ಮಿಸುವ ನಿಯಮಗಳನ್ನು ಅವರಿಗೆ ಕುಂದು ಅಸ್ಥಿರತೆಯನ್ನುಂಟು ಮಾಡುತ್ತಿರುವ ಸೂಚನೆಗಳು ನಮ್ಮ ಮುಂದಿರುವುದು. ಖೇದಕರವಾಗಿದೆ. ಯೋಗ್ಯ ಅಧ್ಯಾಪಕರನ್ನಾಕರ್ಷಿಸಲು ಇದರಿಂದ ತಡೆಯುಂಟಾಗಿದೆ.

ನಮ್ಮ ರಾಜ್ಯದ ಬೇರೆ ಬೇರೆ ಕಡೆಗಳ ಭೌಗೋಲಿಕ ಸ್ಥಿತಿ, ಹವಾಮಾನ, ಭಾಷೆ, ನಡೆ ನುಡಿ, ಹಳ್ಳಿಗಳ ರಚನಾ ಪದ್ಧತಿ, ಧಾರ್ಮಿಕ ಪದ್ಧತಿಗಳು ಭಿನ್ನ ಭಿನ್ನವಾಗಿದ್ದು ಶಾಲೆಗಳನ್ನು ಎಲ್ಲಾ ಕಡೆಯಲ್ಲಿ ಒಂದೇ ಕ್ರಮದಲ್ಲಿ ನಡೆಸಲು ಕಷ್ಟಸಾಧ್ಯ. ರಾಜ್ಯಕ್ಕೆ ಪ್ರಾಮುಖ್ಯವಾದ ದೀರ್ಘ ರಜಾ ದಿನಗಳ ಕುರಿತು ಕೆಲವೊಂದು ನಿಯಮಗಳನ್ನು ಗೊತ್ತುಪಡಿಸಿ, ಉಳಿದುವುಗಳನ್ನು ಆಯಾಯ ಸ್ಥಳದ ಪರಿಸ್ಥಿತಿ, ಆವಶ್ಯಕತೆ, ಅನುಕೂಲತೆಗಳನ್ನು ಹೊಂದಿಕೊಂಡು ಕೊಡುವಂತೆ ಮಾಡುವುದು ಆವಶ್ಯಕವೂ, ಯುಕ್ತವೂ ಆಗಿದೆ. ಹೀಗಾಗದಿದ್ದಲ್ಲಿ ನಿಶ್ಚಿತ ದಿನಗಳಲ್ಲಿ ಶಾಲೆ ತೆರೆಯಲ್ಪಟ್ಟು ನಡೆಯುವಂತಾದರೂ, ವಿದ್ಯಾರ್ಥಿಗಳಿಗೆ ಶಾಲೆಗಳಿಗೆ ಸರಿಯಾಗಿ ಹಾಜರಾಗಲು ತೊಂದರೆಯಾಗಿ, ವಿದ್ಯಾರ್ಜನೆ ಸರಿಯಾಗಿ ಜರಗದೆ, ವಿದ್ಯೆಯ ಫಲಿತಾಂಶ ದೊರಕುವುದೂ ಕಡಿಮೆಯಾಗಬಹುದು.

ಪ್ರಾಥಮಿಕ ಶಾಲೆಗಳು ನಮ್ಮ ರಾಜ್ಯದ ಕೆಲವು ಭಾಗಗಳಲ್ಲಿ ಖಾಸಗಿ ಆಡಳಿತೆಯ ಆಶ್ರಯದಲ್ಲಿ ನಡೆಯಲ್ಪಡುತ್ತಿದ್ದು ಉತ್ತಮ ಫಲಿತಾಂಶ ಪ್ರಕಟಿಸುತ್ತಿವೆ. ಇವುಗಳಲ್ಲಿರುವ ವಿದ್ಯಾರ್ಥಿಗಳ ಶಿಸ್ತು, ವಿದ್ಯಾ ಯೋಗ್ಯತೆ ಮೇಲ್ತರಗತಿಯದಾಗಿದೆ. ಇಲ್ಲಿ ವಿದ್ಯಾರ್ಥಿಗಳ ದಾಮಾಶಯು ಕಡಿಮೆಯಿರುವುದರಿಂದ ವೈಯುಕ್ತಿಕ ಗಮನವಿತ್ತು ಸಮರ್ಥವಾಗಿಯೂ, ಪರಿಣಾಮಕಾರಿಯಾಗಿಯೂ ವಿದ್ಯೆ ಕಲಿಸುವುದಕ್ಕೆ ಆಸ್ಪದವುಂಟಾಗಿದೆ. ಹಳ್ಳಿಗಳ ಅಭಿವೃದ್ಧಿಗೆ ಕಾರ್ಯಕರ್ತರು, ಸಹಾಯಕರು, ಮುಂದಾಳುಗಳು, ಅವಶ್ಯವಿರುವ ಇಂದಿನ ಆಡಳಿತ ವಿಕೇಂದ್ರೀಕರಣದ ದಿನಗಳಲ್ಲಿ ಖಾಸಗೀ ಆಡಳಿತ ಶಿಕ್ಷಣ ಸಂಸ್ಥೆಗಳು ಸಲ್ಲಿಸಿದ ಕರ್ತವ್ಯಗಳನ್ನು ಪರಿಶೀಲಿಸಿ ಇಂತಹ ಸಂಸ್ಥೆಗಳು ಆವಶ್ಯವೆಂದು ಸರಕಾರಕ್ಕೆ ಮನಗಂಡರೆ ಅವುಗಳ ಬೆಳವಣಿಗೆಗೆ ಬೇಕಾ

(೧೦ನೇ ಪುಟ ನೋಡಿರಿ)

ಇಲೆಕ್ಟ್ರಿಕ್ ಮತ್ತು ರೇಡಿಯೊ ಗೈಡ್

ಸಂಪೂರ್ಣ ಮೆಕೇನಿಕ್ ಆಗಲು 117 ಚಿತ್ರಗಳಿರುವ ಪರಿಪೂರ್ಣ ಪುಸ್ತಕ ರೂ 25 ರಲ್ಲಿ ನಿಮ್ಮ ಮನೆಯಲ್ಲಿಯೇ ರೇಡಿಯೊ ತಯಾರಿಸುವ ವಿಧಾನವನ್ನು ತಿಳಿಸುತ್ತದೆ. ಇಲೆಕ್ಟ್ರಿಸಿಟಿ, ರೇಡಿಯೊ ರಿಪೇರಿಂಗ್, ವಯರಿಂಗ್, ಇಲೆಕ್ಟ್ರಿಕಲ್ ಯಂತ್ರಕ್ರಿಯೆ ಮೊದಲಾದ ವಿವಿಧ ಉದ್ಯೋಗಗಳನ್ನು ಕಲಿಯಬಹುದಾದ ಅತ್ಯಪೂರ್ವ ಪುಸ್ತಕ. ವಿಸ್ತೃತ ಹೊಸ ಆವೃತ್ತಿ ರೂ. 5/— ಹೊಲಿಗೆ ಮತ್ತು ಕಟ್ಟಿಂಗ್ (ಸಚಿತ್ರ) ರೂ. 5/— ಸಾಬೂನು, ಮತ್ತು ಪರಿಮಳದ್ರವ್ಯ ತಯಾರಿಕೆ ರೂ. 5/— ಫೊಟೋಗ್ರಾಫಿಯ ಕಲೆ ರೂ. 5/— ವಿ. ಪಿ. ಚಾರ್ಜು ಪ್ರತಿ ಪುಸ್ತಕಕ್ಕೆ ರೂ. 1/— ಯಾವುದಾದರೂ 3 ಪುಸ್ತಕಗಳ ಸೆಟ್ಟಿಗೆ ರೂ. 10/— ಟ. ಖ ಸಹಿತ.

Vishubharathi Publications
Sasni Gate (NS. D) ALIGARH.

ಸ್ಥಾಪನೆ: 1924

ದಿ ಕರ್ಣಾಟಕ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ರಿಜಿಸ್ಟರ್ಡ್ & ಹೆಡ್ ಆಫೀಸು: ಡೊಂಗರಕೇರಿ, ಮಂಗಳೂರು—3.

ಈ ಕೆಳಗಿನ ಏರಿಸಿದ ಬಡ್ಡಿದರಗಳಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು.

ಒಂದರಿಂದ ಎರಡು ತಿಂಗಳುಗಳ ವರೆಗೆ	ಸಾ॥ ನೇಕಡಾ	3-75	ನ.ಪೈಸೆ
ಮೂರರಿಂದ ಐದು ತಿಂಗಳುಗಳ ವರೆಗೆ	,,	4-25	,,
ಆರು ತಿಂಗಳುಗಳಿಂದ 12 ತಿಂಗಳುಗಳ ವರೆಗೆ....	,,	4-50	,,
12 ತಿಂಗಳು ಮಿಕ್ಕಿ 24 ತಿಂಗಳುಗಳ ವರೆಗೆ	,,	4-75	,,
24 ತಿಂಗಳು ಮಿಕ್ಕಿ 48 ತಿಂಗಳುಗಳ ವರೆಗೆ	,,	5-00	,,
48 ತಿಂಗಳುಗಳಿಗೆ ಮಿಕ್ಕಿ	,,	5-25	,,

ಸೇವಿಂಗ್ಸ್ ಬ್ಯಾಂಕ್ ಬಡ್ಡಿ ದರವನ್ನು
ಸಾ. ನೇಕಡ 2½% ರಿಂದ 3¼%ಗೆ ಏರಿಸಲಾಗಿದೆ.

THE KARNATAKA BANK LIMITED.



ರವೀಂದ್ರವಾಣಿ: ೧೨

ಪಾಪ ಮತ್ತು ಅದರ ಸಮಸ್ಯೆ

ವಿವಿಧ ವಸ್ತುಗಳ ಉಪಯೋಗ ಪಡೆದುಕೊಳ್ಳಬೇಕಾದರೆ, ಅವುಗಳ ಸ್ಥಿರ ಪ್ರಕೃತಿಯನ್ನು ನಾವು ಅರಿತುಕೊಳ್ಳಬೇಕಾಗುವುದು. ವಸ್ತುಗಳು ಅಸ್ಥಿರ ಸ್ವಭಾವದವುಗಳಾಗಿದ್ದರೆ, ಅವನ್ನು ತಿಳಿಯುವ ಅಗತ್ಯವೇ ಇರುವುದಿಲ್ಲ.

ಮೂಲ ಲೇಖಕರು: **ವಿಶ್ವಕವಿ ರವೀಂದ್ರನಾಥ ಟಾಗೋರ್.**
ಅನುವಾದಕರು: **ಶ್ರೀ. ಕೆ. ಎನ್. ಭಟ್, ಶಿರಾಡಿಪಾಲ್.**

ಯಾವ ಮನುಷ್ಯನು ಮಾನವನ ಕಲ್ಯಾಣಕ್ಕಾಗಿಯೇ ಜೀವಿಸಿರುತ್ತಾನೋ ಆತನ ಜೀವನದ ಪ್ರಯೋಜನವು ಬಹು ವ್ಯಾಪಕವಾಗಿರುವುದು, ಆತನು ತನ್ನ ಪಥದಲ್ಲಿ ಬರುವ ಕಷ್ಟಗಳನ್ನು ಲಕ್ಷಿಸಲಾರನು. ಕಲ್ಯಾಣಮಯ ಜೀವನವೆಂದರೆ, ಸರ್ವರ ಕ್ಷೇಮ ಚಿಂತನೆ ಮತ್ತು ಸರ್ವರಿಗಾಗಿ ಜೀವಿಸುವುದೇ ಆಗಿದೆ. ಸುಖವು ಒಬ್ಬನಿಗೆ ಮಾತ್ರ ಸಂಬಂಧಿಸಿರುತ್ತದೆ. ಆದರೆ ಕಲ್ಯಾಣವು ಮನುಷ್ಯರೆಲ್ಲರ ಸುಖಕ್ಕೆ ಸಂಬಂಧಿಸಿದುದಾಗಿದೆ. ಈ ಕಲ್ಯಾಣ ಭಾವನೆಯು ಉದಯವಾದೊಡನೆ ಸುಖ—ದುಃಖದ ಅರ್ಥವೇ ಬದಲಾವಣೆಯಾಗುವುದು. ಈ ಬದಲಾವಣೆ ಎಷ್ಟರ ಮಟ್ಟಿನದೆಂದರೆ, ಮನುಷ್ಯನು ಸುಖವನ್ನು ತ್ಯಜಿಸಿ ದುಃಖವನ್ನೇ ತನ್ನದನ್ನಾಗಿ ಮಾಡಿಕೊಳ್ಳುತ್ತಾನೆ ಜೀವನದ ಕಲ್ಯಾಣ ಪಥದಲ್ಲಿ ಮೃತ್ಯುವೂ ಸಹಾಯಕವಾಗುವುದಾದರೆ, ಅದನ್ನೂ ಆತ ಸ್ವಾಗತಿಸುತ್ತಾನೆ. ಮನುಷ್ಯನ ಈ ಉಚ್ಚ ಭಾವನೆಗಳು, ಜಗತ್ತಿನ ಸುಖ—ದುಃಖ, ಲಾಭ—ಹಾನಿಗಳನ್ನು ಪರಿವರ್ತನೆಗೊಳಿಸುತ್ತವೆ ದೇವರ ಇತಿಹಾಸ ಮತ್ತೂ ನಮ್ಮ ನಿತ್ಯದ ಬ್ರಹ್ಮಾರ್ಪಣ ಭಾವನೆಯೂ ಇದನ್ನೇ ಸಮರ್ಥಿಸುವುದು.

ನಾವು ಸಮುದ್ರದಿಂದ ಬೊಗಸೆಯಲ್ಲಿ ನೀರನ್ನೆತ್ತಿ ಹಿಡಿದರೆ, ನಮಗದು ಸ್ವಲ್ಪ ಭಾರವಾಗುವುದು. ಆದರೆ ನಾವು ಸಮುದ್ರದಲ್ಲಿಯೇ ಮುಳುಗಿದಾಗ, ಅಂತಹ ಸಾವಿರಾರು ಬೊಗಸೆ ನೀರು, ನಮ್ಮ ಮೇಲಿನಿಂದ ಹಾದು ಹೋಗುವುದು. ಆದರೆ ಆಗ ನಮಗದು ಸ್ವಲ್ಪವೂ ಭಾರವಾಗಿ ತೋರುವುದಿಲ್ಲ ಇದೇ ರೀತಿಯಿಂದ, ನಮ್ಮ ಸ್ವಾರ್ಥಕ್ಕಾಗಿ ಮಾತ್ರ, ಬೊಗಸೆಯನ್ನು ತುಂಬಿಕೊಂಡರೆ, ಆಗ ನಮಗೆ, ನಮ್ಮ ಸುಖ—ದುಃಖದ ಹೊರೆ ಸ್ವಲ್ಪ ಭಾರವಾದುದು, ತಿಳಿದು ಬರುವುದು. ಆದರೆ, ನಿಸ್ವಾರ್ಥದ ಪಥದಲ್ಲಿ ಸುಖ—ದುಃಖ, ಇವುಗಳು ಎಷ್ಟು ಹಗುರವಾಗಿ ಕಾಣುವುವೆಂದರೆ, ಮನುಷ್ಯನು ಈ ನಿಸ್ವಾರ್ಥ ಪಥದಲ್ಲಿ ಎಂತಹ ಕಠಿಣ ಪರಿಸ್ಥಿತಿಯಲ್ಲೂ ನಗು-ನಗುತ್ತ ಕಲ್ಯಾಣ ಪಥದ ಮೂಲಕ ಮುಂದುವರಿಯುತ್ತಾನೆ. ಈ ಪಥದಲ್ಲಿ ನಿರಾಶೆಯು ಎಂದೂ ಆತನ ಗತಿಯನ್ನು ಕುಂದಗೊಳಿಸಲಾರದು. ಮತ್ತು ಅನೇಕ ಕೆಲಸಗಳ ಗಡಿಬಿಡಿಯಲ್ಲಿಯೂ ಕೂಡ ಆತನ ಧೈರ್ಯ ಚಂಚಲವಾಗಲಾರದು.

ಪೂರ್ಣ ಕಲ್ಯಾಣಮಯವಾದ ಪಥದ ಮೂಲಕ ಜೀವನ ನಡೆಸುವುದೆಂದರೆ ಅಸೀಮದ ಅನುಭವವನ್ನೂ ಹೊಂದುವುದೇ ಆಗಿದೆ. ಇದು ಜೀವನದ ಬಹು ವ್ಯಾಪಕವಾದ ಅರ್ಥವಾಗಿದೆ. ಇದನ್ನು ನಾವು ಆತ್ಮೀಯ ಜೀವನ ಕ್ರಮದಿಂದ ಮಾತ್ರ ತಿಳಿದುಕೊಳ್ಳಬಲ್ಲೆವು. ಬುದ್ಧನೂ ಕೂಡ ಈ ಆತ್ಮೀಯ ದೃಷ್ಟಿ ಬಲಗೊಳ್ಳುವಂತೆ ಉಪದೇಶ ಮಾಡಿದ್ದನು. ಈ ಸಾಮಸೀಹನ ಜೀವನದೃಷ್ಟಿಯೂ ಇದೇ ಆಗಿತ್ತು. ನಾವು ಈ ಆತ್ಮೀಯ ಜೀವನದ ಅನುಭವವನ್ನು ಯಾವಾಗ ಹೊಂದುವೆವೋ ಆಗ ಸುಖ—ದುಃಖ ವೆಂಬ ಬಂಧನದಿಂದ ಮುಕ್ತರಾಗುತ್ತೇವೆ. ಮತ್ತು 'ಅಹಂ' ಎಂಬುದನ್ನು ತ್ಯಜಿಸಿದಬಳಿಕ ಬರಿದಾದ ಆ ಸ್ಥಾನವು ಅನಿರ್ವಚನೀಯ ಆನಂದದಿಂದ ತುಂಬಿಕೊಳ್ಳುವುದು ಈ ಆನಂದವು ಅನಂತ ಪ್ರೇಮದಿಂದಲೇ ಉದಿಸುವುದು. ಈಗ ಆತ್ಮಶಕ್ತಿಯು, ಮತ್ತೂ ಹೆಚ್ಚಾಗಿ ಬಲಗೊಳ್ಳುವುದು, ಮತ್ತು ಅದು ಸ್ವಾಂತಃ ಸುಖದಿಂದ ಶಕ್ತಿ ಸಂಪನ್ನವಾಗುವುದು. ಗೀತೆಯ ಕರ್ಮಯೋಗವೂ ಕೂಡ ಇದೇ ದೃಷ್ಟಿಯುಳ್ಳದ್ದಾಗಿದೆ. ನಿಷ್ಕಾಮಕರ್ಮದ ಮೂಲಕ ವಿಶ್ವದ ಕಾರ್ಯಶೀಲ ಜಗತ್ತಿನಲ್ಲಿ ಏಕೈಕ ಭಾವನೆಯನ್ನು ಸ್ಥಾಪಿಸಲು ಇದೇ ಉಪಾಯವಾಗಿದೆ.

ಬುದ್ಧನು ಮನುಷ್ಯನನ್ನು ದುಃಖದಿಂದ ಮುಕ್ತಗೊಳಿಸುವ ಸಾಧನೆಯನ್ನು ಈ ಸತ್ಯ ಪಥದ ಮೂಲಕವೇ ಮಾಡಿದ್ದನು. ಮತ್ತು ತನ್ನ ವ್ಯಕ್ತಿತ್ವವನ್ನು ವಿಶ್ವದಲ್ಲಿ ವಿಲೀನಗೊಳಿಸಿದ ಬಳಿಕವೇ ಮನುಷ್ಯನು ತನ್ನ ಅಂತಿಮ ಲಕ್ಷ್ಯವನ್ನು ಹೊಂದುತ್ತಾನೆ, ಆಗಲೇ ಆತನಿಗೆ ಸಮಸ್ತ ದುಃಖಗಳಿಂದಲೂ, ಮುಕ್ತಿ ಪ್ರಾಪ್ತವಾಗುವುದು, ಎಂದು ತಿಳಿದಿದ್ದನು.

ಒಂದು ಸಲ ನನ್ನ ಓರ್ವ ವಿದ್ಯಾರ್ಥಿಯು, ಬಿರುಗಾಳಿಯ ಉಪದ್ರವದಿಂದ ಬಹು ನೊಂದುಕೊಂಡಿದ್ದನು. ಆತನಿಗೆ ಈ ವಿಷಯ, ಮಾನಸಿಕ ಯಾತನೆಯನ್ನುಂಟು ಮಾಡಿದ್ದಿತು. ಆತನನ್ನೊಡನೆ ಕೇಳಿದನು—"ಪ್ರಕೃತಿಯು ಬಿರುಗಾಳಿಯ ವೇಳೆಯಲ್ಲಿ ನನ್ನನ್ನು ಒಂದು ಮಣ್ಣಿನ ಸಣ್ಣ ಮುದ್ದೆಯಂತೆ ಭಾವಿಸಿತ್ತು. ನನಗಿದು ಬಹು ಖೇದವೆನಿಸಿದೆ! ನಾನು ನನ್ನ ಬಾಹ್ಯ ಪರಿಸ್ಥಿತಿಗಳಿಂದ ಪ್ರಭಾವಿತನಾಗಲಾರೆ. ಏಕೆಂದರೆ ನಾನು ನನ್ನದೇ ಆದ ಪ್ರತ್ಯೇಕ ವ್ಯಕ್ತಿತ್ವವುಳ್ಳವನಾಗಿದ್ದೇನೆ."

ಆಗ ನಾನು—"ಒಂದುವೇಳೆ ಪ್ರಕೃತಿಯು ನಮ್ಮ ವ್ಯಕ್ತಿಗತ ಸ್ಥಿತಿಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು,' ತನ್ನ ಕಾರ್ಯಪಥವನ್ನು ಬದಲಾಯಿಸುವುದಾದರೆ, ಆಗ ವ್ಯಕ್ತಿಗಳಿಗೇ ವಿಶೇಷ ಹಾನಿಯಾಗಬಹುದು" ಎಂದೆ. ಆದರೆ ಇದರಿಂದ ಆ ವಿದ್ಯಾರ್ಥಿಗೆ ಸಮಾಧಾನವಾಗಲಿಲ್ಲ. ಆತನು ಮತ್ತೂ ಕೇಳಿದನು—"ನಾನು ನನ್ನ ಸೋಹಂ ಭಾವವನ್ನು ಮರೆಯುವುದಿಲ್ಲ. ಈ ಭಾವವು ತನ್ನ ಮಹತ್ವವನ್ನು ತನ್ನ ವ್ಯಕ್ತಿತ್ವದಲ್ಲಿಯೇ ಹುಡುಕುವುದು."

ಆಗ ನಾನು ಆತನಿಗೆ—"ಈ ಅಹಂಭಾವದ ಸಂಬಂಧವು ಅಹಂ ರಹಿತದೊಡನೆಯೂ ಇರುವುದು. ಈಗ ಇವೆರಡರ ಮಧ್ಯದ, ಒಂದು ಮಧ್ಯಸ್ಥಿಕೆಯು ಎರಡನ್ನೂ ಸೇರಿಸುವ ಒಂದು ಸಮಭಾವ ಬೇಕಾಗಿದೆ. "ಸೋಹಂ ಮತ್ತು ನಾಹಂ" ಎಂಬುದೇ ಇದಾಗಿದೆ." ಎಂದು ಹೇಳಿದೆ.

ಈಗಲೂ ನಾನು ಈ ಮಾತನ್ನೇ ಪುನರುಚ್ಚರಿಸುತ್ತಿದ್ದೇನೆ. ನಮ್ಮ ವ್ಯಕ್ತಿತ್ವವು ಸ್ವಭಾವತಃ ವಿಶಾಲವಾದ ವಿಶ್ವನೊಡನೆ, ಸಮಭಾವವನ್ನಿರಿಸಲು, ಇಚ್ಛಿಸುವುದು; ಎಂಬುದನ್ನು ನಾವು ನೆನಪಿಡಬೇಕು. ತನ್ನ ಕಣ್ಣುಗಳ ಮೂಲಕ ತಾನು ತನ್ನನ್ನು ಮಾತ್ರ ನೋಡಿಕೊಳ್ಳುವುದಾದರೆ, ಆ ಕಣ್ಣುಗಳಿದ್ದೂ ಪ್ರಯೋಜನವಿಲ್ಲ.

ನಮ್ಮ ವ್ಯಕ್ತಿತ್ವವು ಎಷ್ಟು ವಿಶಾಲವಾಗಿರುವುದೋ ಅಷ್ಟೇ ಬಲವಾಗಿ ಅದು, ವಿಶ್ವದ ವಿಶಾಲತೆಯ ಕಡೆಗೆ ಎಳೆಯಲ್ಪಡುವುದು. ಏಕೆಂದರೆ, ವ್ಯಕ್ತಿತ್ವದ ಶಕ್ತಿಯು ಕೇಂದ್ರವು ವಿಶ್ವದೊಳಗೇ ಇರುವುದಾಗಿದೆ, ಹೊರತು ತನ್ನಲ್ಲೇ ಅಲ್ಲ—ಹೇಗೆಂದರೆ ಕೆರೆಯ ಆಳವನ್ನು ನೆಲದಲ್ಲಿ ತೋಡಿದ ಒಂದು ದೊಡ್ಡ ಅಗಳಿನ ಮೂಲಕ ನೋಡಲಾಗುವುದಿಲ್ಲ. ಕೆರೆಯಲ್ಲಿರುವ ನೀರಿನ ಆಳ ಎಷ್ಟೆಂದು ನೋಡಿಯೇ ಅದನ್ನು ಕಂಡು ಹಿಡಿಯಬೇಕಾಗುತ್ತದೆ. ನಮ್ಮ ಪ್ರಕೃತಿಯ ಸಂತೋಷವು ವಾಸ್ತವಿಕತೆಯ ಪ್ರಾಪ್ತಿಯಲ್ಲಿ ಅಡಕವಾಗಿರುವುದು ನಿಜವಾದರೆ, ಅದು ತನ್ನ ಕಲ್ಪಿತ ರಚನೆಗಳಿಂದಲೇ ಸಂತುಷ್ಟಿ ಹೊಂದಲಾರದೆಂದಾದರೆ, ಆಯಾ ವಸ್ತುಗಳ ಪ್ರಕೃತಿಗೆ, ಅವುಗಳ ಸ್ವಭಾವಸಿದ್ಧವಾದ ನಿಯಮದಂತೆಯೇ ವ್ಯವಹಾರ ಮಾಡುವುದು ಶ್ರೇಯಸ್ಕರವಾಗಿದೆ. ಈ ಕಠೋರ ಸತ್ಯದ ಕಾರಣದಿಂದ ನಾವು ಕೆಲವು ವೇಳೆ ಕಷ್ಟವನ್ನನುಭವಿಸಬೇಕಾಗುತ್ತದೆ.

ಪೃಥ್ವಿಯು ಮೃದುವಾಗಿಲ್ಲದಿರುವುದರಿಂದ, ನಡೆಯಲು ಕಲಿಯುತ್ತಿರುವ ಮಗು ಬಿದ್ದಾಗ ಅದಕ್ಕೆ ಗಾಯಗಳಾಗುತ್ತವೆ. ಆದರೆ, ಪೃಥ್ವಿಯು, ಮೃದುವಾಗಿಲ್ಲದೆ ಹೀಗೆ ಕಠೋರವಾಗಿರುವುದರಿಂದಲೇ ನಡಿಗೆ ಕಲಿಯಲು ಮಗುವಿಗೆ ಸಹಾಯಕವಾಗುತ್ತದೆ, ಎಂದು ತಿಳಿದುಕೊಳ್ಳಬೇಕು.

ಒಂದು ಸಲ ನಾನು ಕುಳಿತಿದ್ದ ನನ್ನ ದೋಣಿಯು, ಒಂದು ಸೇತುವೆಯ ಕೆಳಗಿನಿಂದಾಗಿ ಹೋಗುತ್ತಿತ್ತು. ಆಗ ದೋಣಿಯ ಬಟ್ಟೆ, ಸೇತುವೆಯ ತೀರದ ಒಂದು ದೊಡ್ಡ ಬಡಿಗೆಗೆ ಸಿಕ್ಕಿಕೊಂಡಿತು. ಆಗ, ಬೆಕ್ಕು ಆಕಳಿಸುತ್ತ ತಲೆಯನ್ನೆತ್ತುವಂತೆ, ಆ ಸೇತುವೆ, ಸ್ವಲ್ಪ ಮೇಲಕ್ಕೇಳಬೇಕಿತ್ತು ಅಥವಾ ದೋಣಿಯ ಬಟ್ಟೆ ಸ್ವಲ್ಪ ಕೆಳಗೆ ಸರಿಯಬೇಕಿತ್ತು. ಹೀಗಾಗಿದ್ದರೆ ಯಾವ ಸಮಸ್ಯೆಯೂ ಇಲ್ಲದೆ ದೋಣಿ ಮುಂದೆ ಸಾಗಬಹುದಿತ್ತು. ಆದರೆ, ಈ ಸೇತುವೆ, ಅಥವಾ ದೋಣಿಯ ಬಟ್ಟೆ ಇವೆರಡೂ ನನ್ನ ಕಷ್ಟವನ್ನು ಲೆಕ್ಕಿಸದೆ ಸ್ಥಿರವಾಗಿಯೇ ಇದ್ದ ಕಾರಣ, ನನಗೆ ಕ್ಷಣಿಕವಾದ ಖೇದವುಂಟಾಯಿತು. ಆದರೆ ಮರುಕ್ಷಣದಲ್ಲಿಯೇ "ಈ ವರಿಯ ಪದ್ಧತಿ ಇದ್ದುದರಿಂದಲೇ ನಾವು ಸೇತುವೆಯ ಮೇಲೆ, ವಿಶ್ವಾಸವಿಟ್ಟು ಅದರಿಂದ ಉಪಯೋಗ ಹೊಂದುತ್ತೇವೆ" ಎಂಬ ವಿಚಾರ ಹೊಳೆದಾಗ ನನಗೆ ಸಂತೋಷವೇ ಆಯಿತು.

ವಸ್ತುಗಳು ಅವುಗಳು ಇರುವಂತೆಯೇ ಇರುತ್ತವೆ. ಆದರೆ ಆ ವಸ್ತುಗಳ ಉಪಯೋಗ ಪಡೆಯಲು, ಅವುಗಳ ಸ್ಥಿರ ಪ್ರಕೃತಿಯನ್ನು ನಾವು ತಿಳಿದುಕೊಳ್ಳಬೇಕಾಗುತ್ತದೆ. ವಸ್ತುಗಳ ಸ್ವಭಾವವು ಅಸ್ಥಿರವಾಗಿದ್ದರೆ ಆಗ ನಮಗೆ ಈ ತಿಳುವಳಿಕೆಯೇ ಬೇಕಾಗಿರುವುದಿಲ್ಲ. ನಮ್ಮ ಇಚ್ಛೆಯು ಅವುಗಳ ಸಂಚಾಲನೆ ಮಾಡಲಾರದೆಂಬುದನ್ನು ನಾವು ತಿಳಿದುಕೊಳ್ಳುತ್ತೇವೆ. ಅವುಗಳಿಗೆ ತಂತಮ್ಮ ಸ್ವಂತ ನಿಯಮಗಳಿಲ್ಲ; ಅವು ಸ್ಥಿರವಾಗಿವೆ ಎಂದು ತಿಳಿದಾಗ ಮಾತ್ರ ನಮ್ಮ ಜ್ಞಾನವು ಸ್ಥಿರವಾಗುತ್ತದೆ. ಈ ಜ್ಞಾನದಲ್ಲಿ ಆನಂದವಿದೆ. ಜ್ಞಾನದ ಮೂಲಕವೇ ನಾವು ಬಾಹ್ಯ ವಸ್ತುಗಳೊಡನೆ ಸಂಬಂಧವನ್ನು ಬೆಳೆಸುತ್ತೇವೆ. ಅವುಗಳಲ್ಲಿ ಆತ್ಮೀಯತೆಯನ್ನು ಹೆಚ್ಚಿಸುತ್ತೇವೆ. ಮತ್ತು ಇದೇ ರೀತಿಯಿಂದ ನಮ್ಮ ಆತ್ಮದ ಸಮಸ್ತ ಕ್ಷೇತ್ರವನ್ನೂ ವಿಶಾಲಗೊಳಿಸುತ್ತೇವೆ.

—(ಸಶೇಷ.)

ಸ್ವಲ್ಪ ಸ್ವಲ್ಪವಾಗಿ, ಅಲ್ಲೊಮ್ಮೆ ಇಲ್ಲೊಮ್ಮೆ, ನೀವು ಉಳಿಸುತ್ತಿರುವ ಹಣವು
ಬೇಗ ಬೇಗನೆ ವೃದ್ಧಿಗೊಂಡು, ನಿಮ್ಮ ಭವಿಷ್ಯದ ಭದ್ರತೆಯು
ಹೆಚ್ಚೆಚ್ಚಾಗಿ ಪರಿಣಮಿಸುವಂತೆ

ಕೊರ್ಪೊರೇಶನ್ ಬೇಂಕು

ನಿಮ್ಮ ಸೇವಿಂಗ್ಸ್ ಬೇಂಕ್ ಎಕೌಂಟುಗಳ ಮೇಲೆ ಇನ್ನು ಮುಂದಕ್ಕೆ
ಸಾಲಿಗೊಂದಾನ್ ಸೇಕಡಾ **3** ರ ದರದಲ್ಲಿ ನಿಮಗೆ ಬಡ್ಡಿ ಕೊಡುವುದು.

ವಿವರಗಳಿಗೆ ವಿಚಾರಿಸಿರಿ:

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ಸ್ಥಾಪನೆ: 1906) (ರಿಜಿಸ್ಟರ್ಡ್ ಆಫೀಸು: **ಉಡುಪಿ.**
ಆಡಳಿತ ಆಫೀಸು: **ಮಂಗಳೂರು—1**



ನವಯುಗಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ

ಜಗತ್ಪ್ರಲಯ

ಮೂರೇ ಸೆಕೆಂಡುಗಳಲ್ಲಿ ಸರ್ವನಾಶ!

ಅಣುಯುಗದಲ್ಲಿ ಇಡಿಯ ಪ್ರಪಂಚವನ್ನು ನಾಶಮಾಡಲು ಕೇವಲ ಮೂರು ಸೆಕುಂಡುಗಳು ಸಾಕಾಗುವುದು, ಒಂದು ಬಾರಿ ಸರ್ವನಾಶ ಮಾಡುವ ಅಸ್ತ್ರವ ಕೀಲಿ ಕಿತ್ತಿತೆಂದರೆ, ಮತ್ತದನ್ನು ತಡೆಯುವ ಬ್ರಹ್ಮಾಸ್ತ್ರ ಬೇರೆಯಿಲ್ಲ



ಅಗ್ನಿಬಯ ಸೂಚನೆಯನ್ನು ನೀಡಬಲ್ಲ ಥರ್ಮೋಕೇಪ್ಸ್ ದಳಲಿಯಲ್ಲಿ ಜೋಡಿಸಲಾದ ಗ್ರಾಹಕ ಮೇಲ್ಗಡೆಯುಳ್ಳಂಗವಾದ ಥರ್ಮೋ ಕೇಪ್ಸ್ ಇಡಲ್ಪಟ್ಟಿದೆ

ಪ್ರಪಂಚದ ಸರ್ವನಾಶವಾಗಬೇಕಾದರೆ ಎಷ್ಟು ಸಮಯ ಬೇಕಾದೀತು ಎಂದು ಯಾರಾದರೂ ಕೇಳಿದರೆ, ತತ್ಕ್ಷಣ ಉತ್ತರ ಕೊಡುವ ಸಾಹಸವನ್ನು ಯಾರೂ ಮಾಡಲಾರರು ಆದರೆ, ಇಂದಿನ ರಾಕೆಟು ಮತ್ತು ಅಣು ಶಸ್ತ್ರಗಳ ಯುಗದಲ್ಲಿ ಕೇವಲ ಮೂರೇ ಮೂರು ಸೆಕೆಂಡುಗಳು ಸಾಕೆಂದು ವಿಜ್ಞಾನಿಗಳು ಹೇಳುತ್ತಾರೆ ಶಬ್ದಕ್ಕಿಂತಲೂ ವೇಗವಾಗಿ ಪ್ರಹಾರ ಮಾಡುವ ವಿನಾಶಕಾರಿ ಶಸ್ತ್ರಾಸ್ತ್ರಗಳಿಂದ ಶಕ್ತಿ ಸಂಪನ್ನ ರಾಷ್ಟ್ರಗಳು ಈ ಕ್ಷಣಗಳ ಅಂತರವನ್ನೂ ದೂರ ಮಾಡುವುದರಲ್ಲಿವೆ ರಾಕೆಟುಗಳ ಮಾಲಿಕರೆನಿಸಿದ ರಶ್ಯ, ಬ್ರಿಟನ್ ಮತ್ತು ಅಮೆರಿಕಗಳ ಬಳಿಯಲ್ಲಿಯೇ ಸರ್ವನಾಶದ ಇಲ್ಲವೆ ಸೃಷ್ಟಿಯ ಕೀಲಿಯು ಕೈ ಉಳಿದಿದೆ

ಲಂಡನ್ನಿನ ನಾರ್‌ಫಾಕ್ ಸೇನಾ ನಿಲ್ದಾಣದಲ್ಲಿ 'ಥೋರ್ ಮಿಸಾಯಿಲ್' ಎಂಬ ಒಂದು ಅಸ್ತ್ರ ಸುಸಜ್ಜಿತವಾಗಿದೆ. ಅಮೆರಿಕೆಯಲ್ಲಿ ನಿರ್ಮಾಣಗೊಂಡ ಅರುವತ್ತು ಥೋರ್ ಮಿಸಾಯಿಲ್‌ಗಳು ಯಾವುದೇ ಕ್ಷಣದಲ್ಲಿ ಹದಿನೈದು ನಿಮಿಟುಗಳ ಪೂರ್ವಸೂಚನೆಯಿಂದ ರಶ್ಯದತ್ತ ಗುರಿಯಿಡಲು ಸನ್ನದ್ಧವಾಗಿನಿಂತಿವೆ ಈ ರಾಕೆಟು ಅರ್ಧವೃತ್ತಾಕಾರದ ರೇಖೆಯ ೧,೭೦೦ ಮೈಲುಗಳನ್ನು ಒಂದು ಸಾವಿರ ಸೆಕೆಂಡುಗಳಲ್ಲಿ ಸಂಚರಿಸಬಲ್ಲುದು. ಇವನ್ನು ಬಿಟ್ಟ ಸಮಯದಿಂದ ರಶ್ಯಕ್ಕೆ ತನ್ನನ್ನುಳಿಸಿಕೊಳ್ಳಲು ಹೆಚ್ಚೆಂದರೆ ಐದು ಇಲ್ಲವೆ ಆರು ನಿಮಿಷಗಳ ಅವಕಾಶವುಳಿಯುವುದು ಆದರೆ, ರಶ್ಯದೊಡನೆ ಇದಕ್ಕಿಂತಲೂ ಅಧಿಕ ವೇಗವುಳ್ಳ 'ಅಂತಾಗ್ರಹ ಬೆಲಿಸ್ಟಿಕ್ ಮಿಸಾಯಿಲ್' ಇರುವುದು!

ಈ ಸರ್ವ ಸಂಹಾರಕ ಅಸ್ತ್ರಗಳ ಪ್ರಯೋಗ ಎಂದಾಗಬೇಕೆಂಬುದನ್ನು ರಾಜಕಾರಣಿಗಳೇ ನಿರ್ಧರಿಸಬೇಕು ಬ್ರಿಟನ್ನಿನಲ್ಲಿರುವ 'ಥೋರ್ ಮಿಸ್ಸಾಯಿಲ್'ನ್ನು ಬಿಡುವ ಆದೇಶವೀಯುವ ಮತ್ತದನ್ನು ನಿಯಂತ್ರಣ ಮತ್ತು ಸಂಚಾಲನೆಮಾಡುವ ಅಧಿಕಾರವು ಅಮೆರಿಕೆಯ ರಾಷ್ಟ್ರಪತಿ ಮತ್ತು ಬ್ರಿಟನ್ನಿನ ಪ್ರಧಾನಿಯವರ ಕೈಯೊಳಗಿದೆ ಈ ಮಿಸ್ಸಾಯಿಲಿನ ಬೀಗದಕೈಗಳೂ ಎರಡಿವೆ ಇವುಗಳಲ್ಲಿ ಒಂದು ಬ್ರಿಟನ್ನಿನ ಸೇನಾಧಿಕಾರಿಯೊಡನೆ ಮತ್ತೊಂದು ಅಮೆರಿಕೆಯ ಸೇನಾಧಿಕಾರಿಯೊಡನೆ ಇದೆ. ಆದೇಶವು ಹೊರಟೊಡನೆಯೇ ಈ ಇರ್ವರು ಸೇನಾಧಿಕಾರಿಗಳೂ ಒಟ್ಟಾಗಿ ಬೀಗ ತೆರೆಯಬಲ್ಲರು ಕೀಲಿಕೈ ತಿರುಗಿತೆಂದರೆ ರಾಕೆಟನ್ನು ಮತ್ತೆ ತಡೆಯುವುದು ಸಾಧ್ಯವಿಲ್ಲ; ಶಾಂತಿಯು ಉಸಿರುಕಟ್ಟಿ ಸತ್ತಂತೆಯೇ ಸರಿ. ಒಂದೆರಡು ನಿಮಿಟುಗಳಲ್ಲಿಯೇ ಜಗತ್ತು ಸರ್ವ ನಾಶದ ತವರ್ಮನೆಯಾಗುವುದು.

ಥೋರ್ ಮಿಸ್ಸಾಯಿಲ್‌ನ ನಿರ್ಮಾಣದಲ್ಲಿ ಒಂದು ಎಚ್ಚರಿಕೆಯನ್ನು ವಹಿಸಲಾಗಿದೆ- ಅದನ್ನು ಬಿಟ್ಟೊಡನೆಯೇ ಅದು ಮರಳಿ ಹುಚ್ಚು ನಾಯಿಯಂತೆ ತನ್ನ ಯಜಮಾನನ ಮೇಲೆಯೇ ಉರಿದು ಬೀಳುವುದಿಲ್ಲ, ಗುರಿ ತಪ್ಪುವುದೂ ಇಲ್ಲ. ಈ ಸಂಬಂಧದ ವ್ಯವಸ್ಥೆಗಳು ಸಮರ್ಪಕವಾಗಿವೆಯೆಂದು ವಿಜ್ಞಾನಿಗಳು ಹೇಳುತ್ತಾರೆ ಆದರೆ ಈ ಆಕಾಶ ಬಾಣಗಳನ್ನು ಬಿಡುವುದೆಂದರೆ, ತಮ್ಮ ಮೇಲೆಯೇ ಆಪತ್ತನ್ನು ಆಮಂತ್ರಿಸಿಕೊಂಡಂತಲ್ಲವೆಂದು ತಿಳಿಯುವುದಕ್ಕೆ ಇನ್ನೂ ಧೈರ್ಯ ಸಾಲದು

ರಾಕೆಟುಗಳಲ್ಲಿ ತುಂಬಿಸುವ ಆಣವಿಕ ಅಸ್ತ್ರಗಳ ಪ್ರಮುಖ ಅಂಗಗಳು ಉಚ್ಚ ತಮ್ಮ ಅಧಿಕಾರಿಗಳ ಕಾವಲಿನಲ್ಲಿವೆ ಅವಶ್ಯಕತೆ ಎದ್ದು ತೋರಿದಾಗ, ಅವನ್ನು ರಾಕಟುಗಳ ತಲೆಯಲ್ಲಿ ತುರುಕಿಸಲಾಗುವುದು ಆದರೆ, ಅವಸರದಲ್ಲಿ ಇವನ್ನು ರಾಕೆಟಿಗೆ ತುಂಬಿಸುವಾಗ ತೃಣದಷ್ಟು ತಪ್ಪಿಹೋಯಿತೆಂದರೆ, ತುಂಬಿಸುವವನು ತನ್ನ ರಾಷ್ಟ್ರವನ್ನೇ ಬಲಿತೆಗೆದುಕೊಂಡಂತಾಗುವುದು. ಗಡಿಬಿಡಿಯ ಕೆಲಸವೆಂದರೆ, ಪೈಶಾಚಿಕ ಕರ್ಮ, ಯುದ್ಧವೆಂಬುದ ದೈತ್ಯನ ಆಟಿಕೆ ಇದರಿಂದ ಪಿಶಾಚಿಯು ತನ್ನ ಆಟವನ್ನು ತೋರಿಸಿಯೇ ಬಿಡುವುದು ಕಳೆದವರ್ಷ ಪೇರಿಸ್ ನಗರದಲ್ಲಿ ಸೇರಿದ ಪರಿಷತ್ ಸಮ್ಮೇಳನವು ಭಂಗಗೊಂಡನಂತರ, ಅಮೇರಿಕೆಯು ತನ್ನ ಸೇನೆಗೆ ಜಾಗ್ರತೆಯಿಂದಿರಲು ಆದೇಶವಿತ್ತಿತ್ತು, ಆ ಸಮಯ ಪೆಲ್ಟ್‌ವೆಲ್ ಎಂಬಲ್ಲಿದ್ದ ಅಮೆರಿಕೆಯ ವಾಯುಸೇನೆಯ ಅಧಿಕಾರಿಗಳು ಥೋರ್ ಮಿಸ್ಸಾಯಿಲಿಗೆ ಆಣವಿಕ ಅಸ್ತ್ರಗಳನ್ನೂ ಏರಿಸಿದ್ದರು

ಆಕ್ರಮಣದ ಆದೇಶ ದೊರೆತ ಹದಿನೈದು ನಿಮಿಟುಗಳಲ್ಲಿಯೇ ಆಕಾಶಬಾಣವು ಹಾರುವುದು ಬ್ರಿಟನ್ನಿನ ನಾರ್‌ಫೋಕ್ ನಿಲ್ದಾಣದಲ್ಲಿ ಅಸ್ತ್ರಬಿಡಬೇಕೆಂದಿದ್ದರೆ, ಮೊದಲಿಗೆ ಬ್ರಿಟಿಷ ಸೇನಾಧಿಕಾರಿಯು ತನ್ನ ಕೈಯಲ್ಲಿರುವ ಕೀಲಿಕೈಯನ್ನು ರಾಕೇಟಿಗೆ ಸಿಕ್ಕಿಸುವನು ಅನಂತರ ಐದು ಬಗೆಯ ಗಣನೆಯನ್ನು ಗಣಿಸಲಾಗುವುದು, ಇದಕ್ಕೆ ೧೪ ನಿಮಿಟು ೫೭ ಸೆಕುಂಡುಗಳು ಬೇಕಾಗುವುವು ಈ ೫೭ನೆಯ ಸೆಕೆಂಡಿನ ಅಮೆರಿಕನ್ ಸೇನಾಧಿಕಾರಿಯು ತನ್ನ ಬೀಗದ ಕೈಯನ್ನು ರಾಕಟಿಗೆ ಸಿಕ್ಕಿಸಿ, ರಾಕೆಟನ್ನು 'ಶಾಂತಿ'ಯ ಕಿನಾರೆಯಿಂದ 'ಯುದ್ಧ'ದ ತಡಕ್ಕೆ ತಿರುಗಿಸುವನು ಇದಕ್ಕೆ ಮೂರು ಸೆಕುಂಡುಗಳ ಕಾಲಾವಧಿ ಬೇಕಾಗುವುದು. ಹೀಗೆ ಶಾಂತಿ ಮತ್ತು ಯುದ್ಧಗಳ ನಡುವೆಯಿರುವ ಅಂತರವೆಂದರೆ ಒಟ್ಟು ಹದಿನೈದು ನಿಮಿಷಗಳು!

ಎರಡನೆಯ ಬೀಗದ ಕೈ ತಿರುಗಿದ ಹದಿನೈದು ನಿಮಿಷಗಳಲ್ಲಿ ಸಂಕ್ರಮುಕ್ತವಾಗಿ ಕಡು ಹಸುರು ವರ್ಣದ ಪ್ರಕಾಶ ಹರಡುವುದು, ಆಗ ಭೀಷಣ ಗರ್ಜನೆ ಮಾಡುತ್ತ ಮೂರು ಆಕಾಶ ಬಾಣಗಳು ಮೇಲಕ್ಕೇರುವುವು ಬ್ರಿಟನ್ನಿನಲ್ಲಿ ಇಂತಹ ಐದು ಕೇಂದ್ರಗಳಿದ್ದು ಒಂದೊಂದರಲ್ಲಿ ಐದೈದು ನಿಯಂತ್ರಕ ಯಂತ್ರಗಳಿವೆ ಪ್ರತಿ ನಿಲ್ದಾಣವು ಇನ್ನೊಂದರಿಂದ ಹನ್ನೆರಡು ಮೈಲುಗಳಷ್ಟು ದೂರವಿರುವುದು

ಬೀಗದ ಕೈಹಾಕಿ ತಿರುಗಿಸಿದ ನಂತರ ರಾಕೇಟುಗಳನ್ನು ಮರಳಿ ಬೀಳಿಸುವುದಾ

(೮ನೇ ಪುಟ ನೋಡಿರಿ)

FINANCIAL PROBLEM SOLVED

Join the Novel of Mutual Money Circulation Scheme of Madras and earn Rs 17,476/- by investing Rs 6/- only *Apply to*

M N Rao Retired Post master, Udipi (S Kanara)

ವಿಶ್ವಕವಿ ಟಾಗೋರರ ಪುಣ್ಯಸ್ಮರಣೆಗಾಗಿ
ಅವರ ಶತಮಾನೋತ್ಸವದ ಸುಸಂದರ್ಭದಲ್ಲಿ
ಪ್ರಕಟವಾದ ಕಿರುಗಾಣಿಕೆಗಳು

ಚಿತ್ರಾಂಗದೆ

ಬೆಲೆ ೬೦ ನ ಪೈಸೆ
(ಶ್ರೀ ಕೆ. ಕೆ ಶೆಟ್ಟಿ, ಎಂ. ಎಲ್. ಸಿ ಅವರಿಂದ ಅನುವಾದಿತ)

ರವೀಂದ್ರನಾಥರ ಕಿರುಗತೆಗಳು

ಬೆಲೆ ೯೦ ನ. ಪೈಸೆ,
(ಶ್ರೀ ಹನುಮಂತರಾವ್ ಮೂಂಜರೇಕರ, ಕಾರವಾರ ಅವರಿಂದ ಅನುವಾದಿತ)
ಪ್ರಕಾಶಕರು
ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ನವಯುಗ ಪ್ರೆಸ್, ಉಡುಪಿ.

ದಿ ವಿಜಯ ಬೇಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬೇಂಕ್ — ಸ್ಥಾಪನೆ 1931
ರಿಜಿಸ್ಟರ್ಡ್ ಆಫೀಸು
ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು 3 ಸೌತ್ ಕೆನರಾ

ಕಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡಾ ೪½ರ ವರೆಗೆ ಹೆಚ್ಚಿಸಲಾಗಿದೆ
ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಗೆ ಹಿಂದೆ ಪಡೆಯುವ ಡಿಪಾಜಿಟುಗಳನ್ನು (Call Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲಾಗುತ್ತದೆ
ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ವಯಕ್ತಿಕವಾಗಿ ವಿಚಾರಿಸಿರಿ

ಮುಕುಟಧಾರಿಯಾಗಿರುವಷ್ಟು ಕಾಲ ರಾಜ ರಾಜನೆನಿಸುತ್ತಾನೆ; ಮಾನವತೆಯಿರುವಷ್ಟು ಸಮಯ ಮನುಷ್ಯ ಮಾನವನೆನಿಸುತ್ತಾನೆ. ಮಾನವತೆಯಿಲ್ಲವೆಂದಾದರೆ, ಆತ ಮಾನವನಲ್ಲ; ದಾನವ ಇಲ್ಲವೇ ಪಶು

ನವಯುಗ

೪೦ ವರುಷ	ಉಡುಪಿ ೮-೬-'೬೧	ವಾರ ೩೮

ಮಹಾರಾಷ್ಟ್ರದ ಮಾದರಿ

ಮೂರನೆಯ ಸಾರ್ವತ್ರಿಕ ಚುನಾವಣೆಗಳು ಸಮೀಪಿಸುತ್ತ ಬರುತ್ತಿರುವಂತೆ ಅವಶ್ಯಕ ತಯಾರಿಯನ್ನು ವಿವಿಧ ರಾಜಕೀಯ ಪಕ್ಷಗಳು ಮಾಡತೊಡಗುವುದು ಸ್ವಾಭಾವಿಕವೇ. ಪ್ರಜಾಸತ್ತೆಯಲ್ಲಿ ಭಿನ್ನಾಭಿಪ್ರಾಯಗಳಿರುವುದು ವಾಸ್ತವವಾದುದರಿಂದ, ಬೇರೆಬೇರೆ ಪಕ್ಷಗಳ ಉದ್ದೇಶ—ಗುರಿಗಳೂ ಬೇರೆಬೇರೆಯಾಗಿರುವುದನ್ನು ಅಲ್ಲಗಳೆಯುವುದು ಸಾಧ್ಯವಿಲ್ಲ. ತಮ್ಮ ಪಕ್ಷದ ಹೆಗ್ಗಳಿಕೆಯನ್ನು ಹೇಳಹೋಗಿ ವೇದಿಕೆಯ ಮೇಲೆ ನಿಂತು ಇತರ ಪಕ್ಷಗಳ ಮೇಲೆ ಟೀಕೆಯ ಮಳೆಯನ್ನು ಸುರಿಸುವುದು ತಪ್ಪೆಂದು ಹೇಳುವಂತಿಲ್ಲ. ಆದರೆ, ನಮ್ಮ ರಾಜಕಾರಣವು ಶುಭ್ರ ನೀರಿನಂತೆ ನಿರ್ಮಲವಿಲ್ಲದಿರುವುದರಿಂದ ಪಕ್ಷೀಯ ತಳಹದಿಯಲ್ಲಿ ಸ್ಪರ್ಧೆ ನಡೆದರೂ ಪ್ರಚಾರದ ವೇಳೆ ಕೇಳಿಬರುತ್ತಿರುವುದು ವೈಯಕ್ತಿಕ ನಿಂದೆ—ಅವಹೇಳನಗಳೇ ಹೆಚ್ಚು. ಇದರಿಂದಾಗಿ, ನಮ್ಮ ದೇಶದಲ್ಲಿ ಪಕ್ಷಗಳ ಬಗ್ಗೆ ವಿಶ್ವಾಸ ಹುಟ್ಟುವುದು ತಪ್ಪಿ ವ್ಯಕ್ತಿಗಳ ಮೇಲೆ ಅಭಿಮಾನ ಹೆಚ್ಚುವುದು. ಇದೇ ಮುಂದುವರಿದು, ಅಂಧಾನುಕರಣೆಯ ಪಥ ಹಿಡಿದು ದೇಶದಲ್ಲಿ ವ್ಯಕ್ತಿಪೂಜಾ ಪದ್ಧತಿ ಬೆಳೆಯಲು ಅನುಕೂಲವೊದಗುವುದು; ಪ್ರಜಾಸತ್ತೆಯ ಮೂಲೋದ್ದೇಶಗಳಿಗೇನೇ ಕೊಡಲಿ ಏಟು ಬೀಳುವುದು.

ಇದನ್ನು ಮನಗಂಡ ಮಹಾರಾಷ್ಟ್ರ ರಾಜ್ಯವು ಭಾರತಕ್ಕೇನೇ ಹೊಸತಾದ ಮಾರ್ಗದರ್ಶನ ಮಾಡಲು ಮುಂದಾಗಿದೆ. ಅಲ್ಲಿನ ಎಲ್ಲ ಪ್ರಮುಖ ರಾಜಕೀಯ ಪಕ್ಷಗಳೂ ಒಂದು ನೇರಿ ಕೆಲವೊಂದು ಮೂಲಭೂತ ಸಿದ್ಧಾಂತಗಳನ್ನು ಅಂಗೀಕರಿಸಿಕೊಂಡಿರುವುವು. ರಾಜಕೀಯ ಪಕ್ಷಗಳ ನೀತಿಯನ್ನು ಟೀಕಿಸಬೇಕು; ವೈಯಕ್ತಿಕ ಟೀಕೆ ಮಾಡಬಾರದು; ಜಾತಿ ಮತ ದ್ವೇಷ ಒಳಿಯುವಂತಹ ಪ್ರಸಂಗಗಳನ್ನು ತಂದೊಡ್ಡಬಾರದು; ಏರ್ಪಡಿಸುವ ಸಭೆಗಳಿಗೆ ಬೇರೆಯವರು ಆತಂಕವೊಡ್ಡಬಾರದು; ಒಂದು ಪಕ್ಷವು ಟಿಕೇಟು ಕೊಡದ್ದರಿಂದ ಮತ್ತೊಂದು ಪಕ್ಷದ ಆಸರೆ ಪಡೆಯ ಬಂದವನಿಗೆ ಟಿಕೇಟು ನೀಡಬಾರದು—ಹೀಗಿದೆ ಈ ಸಿದ್ಧಾಂತಗಳ ಮಾಲಿಕೆಯಿದೆ. ನಿಷ್ಪಕ್ಷಪಾತವಾಗಿ ಚುನಾವಣೆಗಳು ನಡೆಯಬೇಕಾದರೆ, ನಾವು ಈ ತತ್ವಗಳನ್ನು ಅಕ್ಷರಶಃ ಒಪ್ಪಿಕೊಳ್ಳಬೇಕು. ಕಳೆದೆರಡು ಚುನಾವಣೆಗಳ ಅನುಭವದಿಂದ ಹೇಳುವುದಾದರೆ, ನಮ್ಮಲ್ಲಿ ಈ ಬಗೆಯ ಆದರ್ಶಗಳನ್ನು ಕೊಂದು ತಿಂದ ಘಟನೆಗಳೇ ನೂರಾರಿವೆ. ಈ ಕಾರಣದಿಂದ ನಮ್ಮಲ್ಲಿಯೂ ಪ್ರಜಾಪ್ರಭುತ್ವಕ್ಕೆ ತಕ್ಕುದಾದ ರೀತಿಯಲ್ಲಿ ಚುನಾವಣೆಗಳು ನಡೆಯ ಬೇಕಾದುದು ಅಪೇಕ್ಷಣೀಯ ವೆಂಬುದರಿಂದ ಈ ಬಗೆಯ ಆದರ್ಶಗಳನ್ನು ಕಾರ್ಯಕೃತಗೊಳಿಸಬೇಕು. ಪಾಶ್ಚಾತ್ಯ ದೇಶಗಳಲ್ಲಿ ಒಂದೇ ವೇದಿಕೆಯ ಮೇಲೆ ನಿಂತು ಚುನಾವಣಾ ಸ್ಪರ್ಧಾಳುಗಳು ತಂತಮ್ಮ ಉದ್ದೇಶಗಳನ್ನು ವಿವರಿಸುತ್ತಾರಂತೆ. ನಮ್ಮ ದೇಶದಲ್ಲೂ ಈ ತೆರದ ವ್ಯವಸ್ಥೆ ಮಾಡುವುದರಿಂದ ಹುರಿಯಾಳುಗಳು ಚುನಾವಣೆಗಾಗಿ ಮಾಡಬೇಕಾಗುವ ವೆಚ್ಚವು ಕಡಿಮೆಯಾಗುವುದು—ಎಂದು ಹಿಂದೊಮ್ಮೆ ಜಯಪ್ರಕಾಶ ನಾರಾಯಣರು ಅಭಿಪ್ರಾಯಪಟ್ಟಿದ್ದರು. ಒಂದೇ ವೇದಿಕೆಯಲ್ಲಿ ಸ್ಪರ್ಧಾಳುಗಳು ತಂತಮ್ಮ ಉದ್ದೇಶವನ್ನು ವಿವರಿಸುವುದು ನಮ್ಮಲ್ಲಿ ವ್ಯಾವಹಾರಿಕವೆನಿಸಬೇಕಾದರೆ, ಅದೆಷ್ಟು ದಶಕಗಳು ಬೇಕಾಗಬಹುದೆಂದು ಈಗಲೇ ಹೇಳುವಂತಿಲ್ಲ. ಪಾರ್ಲಿಮೆಂಟ್ ಭವನದಲ್ಲಿಯೂ ತಮಗೆ ಪಥ್ಯವೆನಿಸದ ವಿಚಾರಗಳನ್ನು ಬೇರೆ ಸದಸ್ಯರು ಪ್ರಕಟಪಡಿಸುವಾಗ ಸಭಾತ್ಯಾಗ ಮಾಡುವಷ್ಟು ನಾವು ಮುಂದುವರಿದವರೆನಿಸಿದ ಘಟನೆಗಳು ಇಲ್ಲದಿಲ್ಲ. ಆದುದರಿಂದ ಮಹಾರಾಷ್ಟ್ರದಲ್ಲಿ ಮಾಡಿಕೊಂಡ ಒಪ್ಪಂದವು ಅದೆಷ್ಟರ ಮಟ್ಟಿಗೆ ಕೃತಕೃತ್ಯವಾಗುವುದೆಂದು ಕಾದು ನೋಡಬೇಕಾಗಿದೆ. ಈ ಒಡಂಬಡಿಕೆಯ ಅರ್ಥದಷ್ಟಾದರೂ ಕಾರ್ಯರೂಪದಲ್ಲಿ ಬಂದಿತೆಂದರೆ, ನಾವು ಮತ್ತು ನಮ್ಮ ರಾಜಕಾರಣವು ಪ್ರಗತಿಗೊಳ್ಳುತ್ತಿವೆಯೆಂದು ತಿಳಿಯುವುದಕ್ಕೆ ಸಾಕ್ಷಿಯೆನಿಸುವುದು. ರಾಜಕಾರಣವು ಪರಿಶುದ್ಧವಾಗಿರಬೇಕು; ವ್ಯಕ್ತಿನಿಂದೆ ಮತ್ತು ವ್ಯಕ್ತಿಪ್ರತಿಷ್ಠೆಯ ಪೂಜಾಸನವಾಗಬಾರದು; ಸ್ಪರ್ಧಾಳುವಿನ ವೈಯಕ್ತಿ ಹಿನ್ನೆಲೆಯನ್ನೇ ಚುನಾವಣೆಯಲ್ಲಿ ಪಣವಿಡುವುದಲ್ಲ; ಪಕ್ಷದ ನೀತಿ—ಉದ್ದೇಶ ಮತ್ತು ಕಾರ್ಯಸಾಧನೆಯ ಸತ್ಯಾಸತ್ಯತೆ—ಗಳ ಬಗ್ಗೆ ಜನಮತವು ಚುನಾವಣೆಯಲ್ಲಿ ಪ್ರಕಟಗೊಳ್ಳಬೇಕು. ಹೀಗಾದ ಪಕ್ಷದಲ್ಲಿ ರಾಜಕೀಯ ದಳಗಳೊಳಗಿನ ಕಚ್ಚಾಟ-ಮತ್ಸರ-ದ್ವೇಷ-ವಿರೋಧಗಳು ದೂರವಾಗುವುವು—ಅವುಗಳಲ್ಲಿ ಅನ್ಯೋನ್ಯತೆಯ ಭಾವನೆ ಮೂಡಿಬರುವುದು. ಚುನಾವಣೆಯಲ್ಲಿ ಗೆದ್ದರೆ ಮಾತ್ರ ಸಾಲದು—ನ್ಯಾಯೋಚಿತ ವಿಧಾನದಲ್ಲಿ ಜಯಗಳಿಸಬೇಕು. ನಮ್ಮ ದೇಶದಲ್ಲಿದರ ಸಾಧ್ಯಾಸಾಧ್ಯತೆಯನ್ನು ಒರೆಗೆಕ್ಕುವ ಪ್ರಯತ್ನವೀಗ ಮಹಾರಾಷ್ಟ್ರದಲ್ಲಿ ನಡೆದಿದೆ.

ಭಾರತದ ರಾಜ್ಯಗಳಲ್ಲಿ ಬೊಂಬಾಯಿಯು ಹಿಂದಿನಿಂದಲೂ ಒಂದು ವಿಶಿಷ್ಟ ಸ್ಥಾನವನ್ನು ಗಳಿಸಿದೆ. ಇಂದೀಗ ಅದು ವಿಭಜನೆಗೊಂಡರೂ ಬೊಂಬಾಯಿ ರಾಜಧಾನಿಯಾಗಿರುವ 'ಮಹಾರಾಷ್ಟ್ರ'ವು ತನ್ನ ಹಿಂದಿನ ಪರಂಪರೆಯನ್ನು ಬಿಟ್ಟುಕೊಟ್ಟಿಲ್ಲ. ದೇಶಕ್ಕೆ ಒಂದಲ್ಲ ಒಂದು ರೀತಿಯ ಮಾರ್ಗದರ್ಶನವನ್ನದು ಮಾಡುತ್ತಲೇ ಇದೆ. ವಾರ್ಷಿಕ ೧,೨೦೦ ರೂಪಾಯಿಗಳಿಗಿಂತ ಕಡಿಮೆ ಆದಾಯವಿರುವವರು ಹಿಂದುಳಿದ ಪಂಗಡಕ್ಕೆ ಸೇರಿದವರೆಂದು ಮೊತ್ತಮೊದಲಿಗೆ ಘೋಷಿಸಿದ ರಾಜ್ಯವಿದು. ಪ್ರತಿಯೊಂದು ಸಂದರ್ಭದಲ್ಲಿಯೂ ದಿಟ್ಟತನದ ಹೆಜ್ಜೆಯನ್ನಿಡಲು ಅದು ಮುಂದಾಗುತ್ತಿದೆ. ಈಗ ಅಲ್ಲಿ ನಡೆದ ರಾಜಕೀಯ ಪಕ್ಷಗಳ ನಡುವಣ ಒಡಂಬಡಿಕೆಯು ಯಶಸ್ವಿಯಾಯಿತೆಂದರೆ, ನಮ್ಮ ಉಳಿದ ರಾಜ್ಯಗಳೂ ಅವನ್ನು ಕಾರ್ಯಾನ್ವಿತಗೊಳಿಸಲು ಪ್ರಯತ್ನ ನಡೆಸಬೇಕು. ಮಹಾರಾಷ್ಟ್ರದ ಈ ನವಪ್ರಯೋಗ ಯಶಸ್ವಿಯಾಗಲೇಬೇಕು.

ಸ್ವಪ್ರತಿಷ್ಠೆಯ ಪ್ರಜಾರಾಜ್ಯ

ದಕ್ಷಿಣ ಆಫ್ರಿಕೆಯು ಮೇ ೩೧ರಂದು ಸ್ವತಂತ್ರ ಪ್ರಜಾರಾಜ್ಯವಾಗಿ ಮಾರ್ಪಟ್ಟಿತು. ಬ್ರಿಟಿಷ ಡೊಮಿಯನ್‌ನಿಂದ ಹೊರಗೆ ಬಂದ ಆ 'ಸುದಿನ'ವನ್ನು ವೈಭವೋಪೇತವಾಗಿ ಆಚರಿಸಬೇಕಿತ್ತು. ಇದುವರೆಗೆ ಹಲವಾರು ಪ್ರಜಾಸತ್ತೆಗಳು ಜನ್ಮತಾಳಿವೆ. ಅವು ತಮ್ಮ ಜನ್ಮದಿನವನ್ನು ಸಂತೋಷದಿಂದ ಆಚರಿಸುತಿದ್ದುವು. ಆದರೆ, ದಕ್ಷಿಣ ಆಫ್ರಿಕೆಯು ಮಾತ್ರ ಸ್ಮಶಾನ ಗಂಭೀರತೆಯಲ್ಲಿ ಈ ದಿನವನ್ನು ಕಳೆಯಬೇಕಾಯಿತೆಂದರೆ, ಅದರ ದೌರ್ಭಾಗ್ಯವೆನ್ನಲೇಬೇಕು. ದಕ್ಷಿಣ ಆಫ್ರಿಕೆಯು ಮೊಂಡುತನದಿಂದ ಮುಂದುವರಿಸಿಕೊಂಡು ಬರುತ್ತಿರುವ ವರ್ಣಭೇದ ನೀತಿಯೇ ಈ ರುದ್ರ ಮೌನಕ್ಕೆ ಕಾರಣವಾಗಿದೆ. ನಗರಗಳಲ್ಲಿ ಸೈನಿಕ ಬಂದೋಬಸ್ತಿನಿಂದ ಪ್ರಜಾರಾಜ್ಯ ದಿನಾಚರಣೆಯನ್ನು ಆಚರಿಸಬೇಕಾಗಿ ಬಂತೆಂದರೆ, ಇದಕ್ಕಿಂತ ಅವಮಾನದ ಸಂಗತಿ ಬೇರೇನಿಲ್ಲ. ತಮ್ಮ ಪ್ರಜಾರಾಜ್ಯವು ಶ್ವೇತವರ್ಣೀಯರ ಬಲವಾದ ಕೋಟೆಯಾಗಬೇಕು, ಶ್ವೇತೇತರರನ್ನು ಪದದಲಿತರನ್ನಾಗಿ ಮಾಡುವ ತಮ್ಮ ಕಾರ್ಯಸಾಧನೆಯನ್ನು ಮುಂದೊತ್ತಬೇಕೆಂಬ ಇರಾದೆಯಿಂದಲೇ ಅದು ಕಾಮನ್‌ವೆಲ್ತಿನಿಂದ ಹೊರಗೆ ನಡೆಯಿತು. ವಿಶ್ವದ ಹೆಚ್ಚಿನ—ಸಾಮಾನ್ಯವಾಗಿ ಮೂರರಲ್ಲೆರಡಂಶದಷ್ಟು ರಾಷ್ಟ್ರಗಳು ಅದಕ್ಕೆ ವಿರೋಧವಿವೆ; ಆಫ್ರೇಸ್ಯ ರಾಷ್ಟ್ರಗಳು ಅದರೊಡನಿರುವ ವ್ಯಾಪಾರಸಂಬಂಧವನ್ನು ಕಳೆದುಕೊಂಡಿವೆ. ನಾಲ್ಕೂ ಕಡೆಯಿಂದ ಆರ್ಥಿಕ ದಿಗ್ಬಂಧನ ಹೇರಿದಂತಾಗಿರುವುದರಿಂದ, ಅದರ ಆರ್ಥಿಕ ಸ್ಥಿತಿ ಕೆಟ್ಟುಹೋಗುವಂತಾಗುವುದು. ಸ್ವಯಂ ಬ್ರಿಟನ್ ಮತ್ತು ಅಮೆರಿಕೆಗಳಿಗೇನೇ ಇದರ ವರ್ಣಭೇದ ನೀತಿಯು ಸರಿಯೆನಿಸುತ್ತಿಲ್ಲ. ಸಂಯುಕ್ತ ರಾಷ್ಟ್ರ ಸಂಘವೂ ಬೆಂಬಲ ನೀಡುತ್ತಿಲ್ಲ. ಹೀಗಿದ್ದರೂ ಇಂದಿನ ಜಗತ್ತಿನಲ್ಲಿ 'ತಾನು ತನ್ನದು' ಎಂಬ ಚಂಡಿತನಕ್ಕೆ ಜೋತು ಬಿದ್ದು, ದಕ್ಷಿಣ ಆಫ್ರಿಕೆ ತಾನೇ ನವೆಯುತ್ತದೆ. ದಮನದಿಂದ ಶಮನಗೊಳಿಸಲಾರದ ಸನ್ನಿವೇಶಗಳಿಂದ, ಅದು ಆತ್ಮಘಾತುಕ ಕೃತಿಗೆ ಮುಂದೆಣಿಸುತ್ತಿದೆ. ಇದು ವರೆಗೆ ಆದುದೆಲ್ಲವನ್ನೂ ಸಂಪೂರ್ಣ ಮರೆತು, ತನ್ನ ಹಿತಕ್ಕಾಗಿ, ಪ್ರಪಂಚದ ಒಳಿತಿಗಾಗಿ ಅದು ತನ್ನ ಉಗ್ರ ನೀತಿಯನ್ನು ಬಿಟ್ಟುಕೊಟ್ಟು ಅಲ್ಲಿನ ಶ್ವೇತೇತರರ ಪ್ರೀತಿ ವಿಶ್ವಾಸಗಳನ್ನು ಗೆದ್ದುಕೊಂಡು ಮುಂದುವರಿಯುವುದು ಕ್ಷೇಮಕರ. ತನ್ನ ನೀತಿಯೇ ತನಗೆ ಎಂದು ಮುಂದುವರಿಯುವುದಾದರೆ, ಪ್ರಗತಿ ಹೇತುವಾಗಬೇಕಾದ ಪ್ರಜಾರಾಜ್ಯ ಸ್ಥಾಪನೆಯೇ ಅದಕ್ಕೆ ಕುಠಾರಪ್ರಾಯವಾಗಬಹುದು.

ಸಂಕ್ಷಿಪ್ತ ಸುದ್ದಿಗಳು

ಶಿಕ್ಷಣದ ಅಗತ್ಯತೆ

ಭಾರತವು ಹಿಂದುಳಿದಿರುವುದಕ್ಕೆ ಮುಖ್ಯ ಕಾರಣವೆಂದರೆ, ನಮ್ಮಲ್ಲಿ ಸ್ವಾಭಿಮಾನ, ಆತ್ಮವಿಶ್ವಾಸಗಳ ಅಭಾವ; ಹಾಗೂ ಮೂಢ ನಂಬಿಕೆಗಳು. ಇವು ನಮ್ಮನ್ನು ಪ್ರಗತಿಪಥದಿಂದ ಸದಾ ಹಿಂದೆ ಜಗ್ಗುತ್ತಿರುವುವು, ಇವೆಲ್ಲವಕ್ಕೂ ಕಳಶವಿಟ್ಟಂತಾಗಿದೆ ನಮ್ಮ ಅನಕ್ಷರತೆ. ಪ್ರತಿಯೊಬ್ಬ ಭಾರತೀಯನನ್ನು ಓದು ಬರಹ ಬಲ್ಲವನಾದ ಪಕ್ಷದಲ್ಲಿ ಆತನ ಪಾರಂಪರಿಕ ಅಂಧವಿಚಾರಧಾರೆಯು ಪರಿವರ್ತನೆಗೊಳ್ಳುವುದು ಸಾಧ್ಯವಾಗಬಹುದು. ಆದಕ್ಕಾಗಿಯೇ ನಮ್ಮ ಸಂವಿಧಾನದಲ್ಲಿ ವಿದ್ಯಾಭ್ಯಾಸವನ್ನು ಪಡೆಯುವುದು ಪ್ರತಿಯೊಬ್ಬ ಭಾರತೀಯ ಮಗುವಿನ ಅಧಿಕಾರವೆಂಬ ಆದರ್ಶವನ್ನು ಕೂಡಿಸಲಾಗಿದೆ. ಇದರ ಕಾರ್ಯಾಚರಣೆಯು ಈ ತೃತೀಯ ಯೋಜನೆಯಲ್ಲಿ ನಡೆಯುತ್ತಿದೆ. ಇದು ಅತ್ಯಧಿಕ ವೆಚ್ಚದ ಕೆಲಸವಾದರೂ ರಾಷ್ಟ್ರದ ಭವಿತವ್ಯದ ಹಿತದೃಷ್ಟಿಯಿಂದ ಇದಕ್ಕೆ ಅಗ್ರಸ್ಥಾನ ನೀಡಲೇಬೇಕು; ಯೋಜನೆಯಲ್ಲಿ ಇದಕ್ಕೆ ಮೀಸಲಾದ ಹಣದಲ್ಲಿ ಯಾವುದೇ ಕಡಿತ ಮಾಡಬಾರದು ಎಂದು ಪ್ರಧಾನಿ ನೆಹರು ವಾದಿಸಿದರೆ ಆಶ್ಚರ್ಯವಿಲ್ಲ. ಅವರ ಮಾತುಗಳಲ್ಲಿ ಕಳಕಳಿ ತುಂಬಿದೆ; ಅನಕ್ಷರತಾ ಪಿಡಂಭೂತವನ್ನಟ್ಟಿಬಿಡುವ ಉತ್ಸಾಹ ತುಳುಕಾಡುತ್ತಿದೆ.

ನುಂಗಲಾರದ ತುತ್ತು

ಜಾತೀಯತೆಯನ್ನೇ ಮೂಲಾಧಾರವಾಗಿ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದವರನ್ನು ಪ್ರತ್ಯೇಕಿಸಿದ ನಾಗನಗೌಡ ಸಮಿತಿಯ ವರದಿಯು 'ಮೈಸೂರು ರಾಜ್ಯ'ವಿರುವ ತನಕ ಯಾರಿಂದಲೂ ಮರೆಯಾಗಲಾರದು. ವಿಧಾನಸಭಾ ಕಾಂಗ್ರೆಸ್ ಪಕ್ಷದಲ್ಲಿಯೂ ಉಗ್ರ ಟೀಕೆಗೆ ಗುರಿಯಾದ ಈ ವರದಿಯು ಸರಕಾರಕ್ಕೆ ನುಂಗಲಾರದ ತುತ್ತಾಗಿ ಪರಿಣಮಿಸಿದರೆ ಆಶ್ಚರ್ಯವಿಲ್ಲ. ಸಂವಿಧಾನದಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ ರಕ್ಷಣೆ ನೀಡುವ ಅವಕಾಶವಿಲ್ಲವೆಂದು ಈ ಸಮಿತಿಯ ಸದಸ್ಯರು ವಾದಿಸಿದರೆಂದು ವರದಿಯಾಗಿದೆ. ಆದರೆ, ಹಿಂದುಳಿದಿರುವಿಕೆಯನ್ನು ಜಾತೀಯ ತಳಹದಿಯಲ್ಲಿಯೇ ಮಾಡಬೇಕೆಂಬ ಉಲ್ಲೇಖವೂ ಅಲ್ಲಿಲ್ಲ. ಏನೇ ಇರಲಿ; ಚುನಾವಣೆಗಳು ಹತ್ತಿರ ಬರುತ್ತಿರುವಾಗ ಸರಕಾರದ ತಲೆ ಕೆಡಿಸುವ ಇನ್ನೊಂದು ಪ್ರಶ್ನೆ ಮುಂದೆ ಬಂದಂತಾಯಿತು. ಇದರಿಂದ ಉಳಿದು ಬರುವ ಏಕಮೇವ ಉಪಾಯವೆಂದರೆ, ಆರ್ಥಿಕ ತಳಹದಿಯಲ್ಲೇ ಹಿಂದುಳಿದಿರುವಿಕೆಯನ್ನಳೆಯುವ ದೃಢ ನಿರ್ಧಾರಮಾಡಿ, ಅದನ್ನು ಕಾರ್ಯಗತಗೊಳಿಸಲು ಇನ್ನೊಂದು ಸಮಿತಿಯನ್ನು ರಚಿಸುವುದು. ಆಗ, ನಾಗನಗೌಡ ಸಮಿತಿಯ ವರದಿಯನ್ನು ಮೂಲೆಗೆ ತಳ್ಳಿದಂತಾಗುವುದು.

ವಿನಂತಿ

ಚಂದಾದಾರರು ತಮ್ಮ ಬಾಕಿ ಚಂದಾ ಹಣವನ್ನು ದಯಮಾಡಿ ಬೇಗನೆ ಕಳುಹಿಸಿಕೊಟ್ಟು ಪ್ರೋತ್ಸಾಹಿಸುವಂತೆ ವಿನಂತಿ.

ಅಲ್ಲಲ್ಲಿಯ ಸುದ್ದಿ ಸಾರ

ಹಿಂದೀ ಪ್ರಚಾರ ಸಮಿತಿ ಉಡುಪಿ ಇದರ ಕಾರ್ಯಾಲಯವನ್ನು ತಾ. 1-6-61 ರಿಂದ ಚಿತ್ತರಂಜನ ಭವನದಿಂದ ಕೋಳಿದ ಪೇಟೆಯಲ್ಲಿ ಐಡಿಯಲ್ ಸ್ಟುಡಿಯೋದ ಎದುರಿಗಿರುವ ಸಮಿತಿಯ ವಿಶಾರದ ವಿದ್ಯಾಲಯದ ಹೊಸ ಕಟ್ಟಡಕ್ಕೆ ವರ್ಗಾಯಿಸಲಾಗಿದೆ ಎಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಪಾರ್ಲಿಮೆಂಟಿನ ಒಳನೋಟ— ಎಂಬ ವಿಚಾರವಾಗಿ ಶ್ರೀ ಕೆ ಆರ್. ಆಚಾರ್ ಎಮ್. ಪಿ. ಅವರು ಮಂಗಳೂರಿನ ಪತ್ರಿಕೋದ್ಯೋಗಿ ಸಂಘದಲ್ಲಿ ಕಳೆದ ತಾ. 21 ರಲ್ಲಿ ನಮ್ಮ ಪಾರ್ಲಿಮೆಂಟಿನಲ್ಲಿ ನಡೆಯುವ ಕಾರ್ಯಕಲಾಪಗಳನ್ನು ವಿವರಿಸಿದರು. ಮಂಗಳೂರು ಹಾಸನ ರೈಲ್ವೆ, ಮಂಗಳೂರು ಬಂದರ ಮೊದಲಾದವು ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲ್ಪಟ್ಟ ಬಗೆ ಹೇಗೆಂಬುದನ್ನೂ ತಿಳಿಯಪಡಿಸಿದರು. ಬೆಂಗಳೂರು ಬಾನುಲಿಯಲ್ಲಿ ತುಳು, ಕೊಂಕಣಿ ಕಾರ್ಯಕ್ರಮಗಳನ್ನೂ ಸೇರಿಸಬೇಕೆನ್ನುವ ಹಾಗೂ ರಾಜ್ಯದ ಪತ್ರಿಕೆಗಳಿಗೆಲ್ಲಾ ಪ್ರಾದೇಶಿಕ ಪ್ರಾತಿನಿಧ್ಯ ಮತ್ತು ಪ್ರಸಾರ ತಳಹದಿಯ ಮೇಲೆ ಜಾಹಿರಾತು ಕೊಡಬೇಕೆನ್ನುವ ನಿರ್ಣಯಗಳೂ ಈ ಸಭೆಯಲ್ಲಿ ಅಂಗೀಕಾರವಾದುವು.

ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕ ಸಮಾರಂಭ – ಉಡುಪಿ ಬೋರ್ಡ್ ಹೈಸ್ಕೂಲಿನ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕ ಸಮಾರಂಭವು ಇದೇ ತಾ. 2 ಮತ್ತು 3ರಂದು ಬೋರ್ಡ್ ಹೈಸ್ಕೂಲಿನ ಜನತಾ ಭವನದಲ್ಲಿ ನೆರವೇರಿತು. ಮೊದಲದಿನ ಶ್ರೀ ಜಿ. ಸಿ. ರೇಗೊರವರ ಅಧ್ಯಕ್ಷತೆಯಲ್ಲಿ ಸಭೆ ಜರಗಿದಾಗ ಸಂಘದ ಅಧ್ಯಕ್ಷ ಶ್ರೀ ಕೆ.ಎಸ್. ಹರಿದಾಸ ಭಟ್ಟರು ಸ್ವಾಗತಿಸಿದರು. ಡಾ| ಟಿ. ಎಂ. ಎ. ಪೈಯವರ ತೈಲಚಿತ್ರದ ಅನಾವರಣವಾದ ಬಳಿಕ ಡಾ| ಪೈಗಳ ಕುರಿತು ಶ್ರೀ ರೋಕಿ ಫೆರ್ನಾಂಡಿಸ್‌ರೂ. ಶ್ರೀ ಬಿ. ರಾಮರಾಯ ಸೆಟ್ಟರೂ ಮಾತನಾಡಿದರು. ಅಧ್ಯಕ್ಷರ ಭಾಷಣ ಕಾರ್ಯದರ್ಶಿ ಶ್ರೀ ಟಿ ಎ. ವಾಸುದೇವನ್ ಅವರಿಂದ ಧನ್ಯವಾದ ಸಮರ್ಪಣೆಗಳಾದ ಮೇಲೆ ಮನರಂಜನಾ ಕಾರ್ಯಕ್ರಮಗಳು ನೆರವೇರಿದುವು. ಮರುದಿನ ವಾರ್ಷಿಕ ಮಹಾಸಭೆ ಜರಗಿ ಭೋಜನವಾದ ಬಳಿಕ ಶ್ರೀ ಆರ್. ಫೆರ್ನಾಂಡಿಸ್‌ರಿಂದ ಭಾಷಣವಾಯಿತು.

ಎ. ಬಿ. ಶೆಟ್ಟಿ ಮೆಮೋರಿಯಲ್ ಹಾಸ್ಟೆಲ್— ಮೈಸೂರು ನಗರದ ಯಾದವಗಿರಿ ಬಡಾವಣೆಯಲ್ಲಿರುವ ಎ ಬಿ ಶೆಟ್ಟಿ ಮೆಮೋರಿಯಲ್ ಹಾಸ್ಟೆಲ್ 1-7-61ರಿಂದ ಆರಂಭವಾಗುವುದು. ಹಾಸ್ಟೆಲಿಗೆ ಸೇರಲಿಚ್ಛಿಸುವ ಮೈಸೂರು ನಗರದ ಕಾಲೇಜುಗಳಲ್ಲಿ ಓದುವ ವಿದ್ಯಾರ್ಥಿಗಳು 20-6-61ರ ಒಳಗೆ ಅರ್ಜಿ ಸಲ್ಲಿಸತಕ್ಕದ್ದು. ಪ್ರಿಂಟಾದ ಫಾರಂಗಳನ್ನು ರೂ. 1-15ನ್ನು ಕಾರ್ಯದರ್ಶಿ, ಎ. ಬಿ ಶೆಟ್ಟಿ ಮೆಮೋರಿಯಲ್ ಹಾಸ್ಟೆಲ್ ಮೈಸೂರು-2. ಇವರಿಗೆ ಕಳುಹಿಸಿ ಪಡೆಯಬಹುದು.

ಉಡುಪಿ ಡಿ. ಮು ಕೋರ್ಟಿನಲ್ಲಿ

O.S.17/1956; R·I A895/1960

ವನಮಾಲ S. ನಾಯಕ್-ಜನರಲ ಯೋಜಂಟ್ K. ಜಗನ್ನಾಥ ನ್ಯಾಕ—ಅರ್ಜಿದಾರ

ಮತ್ತು

ರತಿ ಶೆಡ್ತಿ-ಕಾಡೂರು ಬೆಳ್ತಡಿ ಲಿಂಗಮ್ಮ ಶಡ್ತಿ ಮಗಳು-ಉಡುಪಿ ತಾಲ್ಲೂಕು ನಂಬ್ರ 34ನೇ ಕುದಿ ಗ್ರಾಮದಲ್ಲಿರುವವಳು —ಎದುರಾಳು

ಸದ್ರಿ ಎದುರಾಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಅರ್ಜಿದಾರನು ಎದುರಾಳಿಯ ಮೇಲೆ ಪ್ಯಾನ್ ಡಿಕ್ರಿ ನಿವೃತ್ತಿ ಕೇಳಿ ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ತಾರೀಖು 12-6-1961 ಕ್ಕೆ ನಿಂಮ ಅಯ್ಯರು ನೋಟೀಸಿನ ಬಗ್ಗೆ ಯಿಟ್ಟಿದೆ. ಆ ಕುರಿತು ನಿಮಗೇನಾದರೂ ಆಕ್ಷೇಪಣೆ ದಾಖಲು ಮಾಡುವಂತಾದ್ದಿದ್ದರೆ ಆ ದಿವ್ಸ ಹಗಲು ಗಂಟೆ 11ಕ್ಕೆ ಸರಿಯಾಗಿ ಈ ಕೋರ್ಟಿನ ಮುಂದೆ ಬಂದು ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳ ತಕ್ಕದ್ದು. ತಪ್ಪಿದ್ರೆ ನಿಂಮ ಗೈರು ಹಾಜರಿಯಿಂದ ತೀರ್ಮಾನಿಸಲ್ಪಡುವುದು.

(By order of the Court)

P. N. Krishnamurthi Rao
Advocate for Petitioner
Udipi S. K. Dated 31-5-61

ಮದರಾಸು ರಾಜ್ಯಪಾಲ ಶ್ರೀ ಬಿಷ್ಣುರಾಮ ಮೇಧಿ –ಇವರು ದ. ಕ. ಜಿಲ್ಲೆಯಲ್ಲಿ ಮೂರು ದಿನಗಳ ಪ್ರವಾಸಮಾಡಿ ಇದೇ ತಾ 1ರಂದು ಹಿಂತೆರಳಿದರು. ಅವರು ಮಂಗಳೂರಲ್ಲಿ ಯುರೋಲಿಯ ಸ್ಪಿಂಗ್ ಕಾರ್ಖಾನೆ, ಕಾಫಿ, ಗೇರುಬೀಜ ಕಾರ್ಖಾನೆಗಳನ್ನು ಸಂದರ್ಶಿಸಿ ಮಂಗಳೂರು ಲಾಯನ್ಸ್ ಕ್ಲಬ್ಬಿನವರು ಏರ್ಪಡಿಸಿದ ಭೋಜನ ಕೂಟದಲ್ಲಿ ಭಾಗವಹಿಸಿದರು. ಅಲ್ಲಿ ಅವರು ಶ್ರೀ ಜೆ. ಸೋಮ ಶೇಖರ ರಾಯರು ಸ್ವಾಗತಿಸಿದ ಬಳಿಕ ಭಾಷಣ ಮಾಡಿ ಇಂದೀಗ ವಿಶ್ವಭಾಂದವ್ಯ ಬೆಳೆಯಬೇಕಾದ ಆವಶ್ಯಕತೆಯನ್ನು ವಿವರಿಸಿದರು. ಶ್ರೀ ಬಿ ಎಸ್. ಭಾಸ್ಕರ ರೈಗಳು ಧನ್ಯವಾದ ಸಮರ್ಪಣೆ ಮಾಡಿದರು. ತಾ. 31 ರಂದು ರಾಜ್ಯಪಾಲರು ಉಡುಪಿಗೆ ಬಂದು ಶ್ರೀಕೃಷ್ಣ ದರ್ಶನ ಮಾಡಿದರು. ಪರ್ಯಾಯ ಮಠದ ಶ್ರೀ ಪಾದಂಗಳವರು ರಾಜ್ಯಪಾಲರಿಗೆ ಯಥೋಚಿತ ಉಡುಗೊರೆಯನ್ನಿತ್ತು ಆಶೀರ್ವದಿಸಿದರು. ಬಳಿಕ ರಾಜ್ಯಪಾಲರು ಕಾರ್ಕಳ, ಮೂಡಬಿದ್ರಿಗಳನ್ನು ನೋಡಿ ಮಂಗಳೂರಿಗೆ ಬಂದು ಸೈಂಟ್ ಎಲೋಸಿಸ್ ಕಾಲೇಜ್, ಜೆಪ್ಪಿನ ಟೈಲ್ ಫೇಕ್ಟರಿ, ಶ್ರೀಮಂತ ವಸ್ತು ಪ್ರದರ್ಶನಾಲಯ ಮೊದಲಾದುವನ್ನು ನೋಡಿ ಸಂತೋಷಪಟ್ಟರು. ಅಲ್ಲದೆ ಜಿಲ್ಲೆಯ ಪ್ರಾಕೃತಿಕ ಸಂಪತ್ತನ್ನು ನಾವು ಉಪಯೋಗಿಸುವಂತಾದರೆ ದೇಶಕ್ಕೆ ಅದೊಂದು ಭಾಗ್ಯವೆಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ಬ್ಲಡ್ ಬೇಂಕಿನ ಉದ್ಘಾಟನೆ - ಕಳೆದ ತಾ. 31ರಂದು ಮಣಿಪಾಲದ ಕಸ್ತೂರ್ಬಾ ಜನರಲ್ ಆಸ್ಪತ್ರೆಯಲ್ಲಿ ಬ್ಲಡ್ ಬೇಂಕಿನ (ರಕ್ತ ಸಂಚಯ) ಉದ್ಘಾಟನಾ ಸಮಾರಂಭವು ಉಡುಪಿಯ ಲಾಯನ್ಸ್ ಕ್ಲಬ್ ಮತ್ತು ಕಸ್ತೂರ್ಬಾ ಜನರಲ್ ಆಸ್ಪತ್ರೆಯ ನೇತೃತ್ವದಲ್ಲಿ ಬೆಂಗಳೂರಿನ ಮಾಜಿ ಮೇಯರ್ ಶ್ರೀ ಜಿನಾಭ್ಯಾ ದೇವಿದಾಸ್ ಅವರಿಂದ ನೆರವೇರಿಸಲ್ಪಟ್ಟಿತು. ಸಮಾರಂಭದ ಅಧ್ಯಕ್ಷತೆಯನ್ನು ಮೈಸೂರಿನ ಇಲೆಕ್ಟ್ರಿಸಿಟಿ ಬೋರ್ಡಿನ ಅಧ್ಯಕ್ಷ ಶ್ರೀ ಟಿ. ಚೆನ್ನಯನವರು ವಹಿಸಿದ್ದರು. ಲಯನ್ ಅಧ್ಯಕ್ಷ ಶ್ರೀ ಟಿ. ಎ. ಪೈಗಳು ಆರಂಭದಲ್ಲಿ ಸ್ವಾಗತಿಸುತ್ತ ರಾಷ್ಟ್ರಾಭಿವೃದ್ಧಿಯ ಕಾರ್ಯದಲ್ಲಿ ಜನತಾ ಪ್ರಯತ್ನ ಆವಶ್ಯಕತೆಯನ್ನೂ ಸಹಕಾರಿ ನೆಲೆಯಲ್ಲಿ ಬೆಳೆಸಲ್ಪಡುವ ಮಣಿಪಾಲ ಆಸ್ಪತ್ರೆಯಲ್ಲಿ ಬೊಂಬಾಯಿ ಮದ್ರಾಸುಗಳಲ್ಲಿ ಸಿಗುವ ತಜ್ಞ ಚಿಕಿತ್ಸೆಗಾಗಿ ರಕ್ತ ಶೇಖರಣೆ ಅಗತ್ಯವಾದುದರಿಂದ ಲಯನ್ಸ್ ಕ್ಲಬ್ಬಿನವರು ಈ ಕುರಿತು ವಹಿಸಿದ ಆತುರಾಸಕ್ತಿಯನ್ನು ವಿವರಿಸಿದರು. ಕೆ.ಎಂ.ಸಿ ಯ ವೈಸ್ ಪ್ರಿನ್ಸಿಪಾಲ್ ಡಾ| ಎ. ಕೃಷ್ಣಾರಾಯರೂ, ಶ್ರೀ ಪಿ. ಶೀನ ಸೆಟ್ಟರೂ ರಕ್ತ ಸಂಚಯ ಯೋಜನೆಯನ್ನು ಬೆಂಬಲಿಸಿ ಮಾತನಾಡಿದರು. ಶ್ರೀ ಜಿನಾಭ್ಯಾಯನವರು ಭಾಷಣ ಮಾಡುತ್ತಾ ಲಯನ್ಸ್ ಕ್ಲಬ್ ಈ ರೀತಿಯ ಕಾರ್ಯಕೈಗೊಂಡುದು ದೇಶದಲ್ಲಿಯೇ ಮೊದಲನೇಯದೆಂದು ಈ ಬಗ್ಗೆ ಅಭಿನಂದನೆ ಸಲ್ಲಿಸಿದರು. ಶ್ರೀ ಚೆನ್ನಯನವರು ಮಾತನಾಡುತ್ತಾ ಪ್ರವಾಸಿಗಿಯಾಗಿ ತಜ್ಞ ವೈದ್ಯಕೀಯ ಸವಲತ್ತುಗಳು ಇಲ್ಲಿ ನಡೆಯುತ್ತಿರುವುದು ವಿಶೇಷವಾದುದೆಂದೂ ಶೈಕ್ಷಣಿಕ ಮತ್ತು ವೈದ್ಯಕೀಯ ರಂಗಗಳಲ್ಲಿ ರಚನಾತ್ಮಕ ನಿಸ್ವಾರ್ಥ ಕೆಲಸಗಳನ್ನು ಮಾಡುತ್ತಿರುವ ಡಾ. ಮಾಧವ ಪೈಗಳೂ ಅವರ ಕುಟುಂಬದವರೂ ಅಭಿನಂದನೀಯರೆಂದೂ ಇಲ್ಲಿಯ ಕೆಲಸಗಳು ಇತರ ಜಿಲ್ಲೆಗಳಿಗೆ ಮಾರ್ಗದರ್ಶಕವೆಂದೂ ಇಲ್ಲಿಯ ಎಲ್ಲಾ ಮಹತ್ವದ ಕಾರ್ಯಗಳಿಗೆ ಜನರು ಬೆಂಬಲಿಸುವುದು ಅಗತ್ಯವೆಂದೂ ಹೇಳಿದರು. ಈ ಸದವಕಾಶ ಕಾಲದಲ್ಲಿಯೇ, ಶ್ರೀ ಟಿ. ಎ. ಪೈಗಳು ರಕ್ತದಾನ ಮಾಡಿದರು. ಕಸ್ತೂರ್ಬಾ ಜನರಲ್ ಆಸ್ಪತ್ರೆಯ ಸುಪರಿಂಡೆಂಟ್ ಡಾ| ಟಿ. ಸೋಮನಾಥರು ಧನ್ಯವಾದ ಸಮರ್ಪಣೆಗೈದರು.

ರಕ್ತದಾನ ಮಾಡುವವರಿಗೆ ರೂ. 10/-ರ ಬಹುಮಾನ ನೀಡಲಾಗುವುದೆಂದೂ ತಿಳಿದು ಬರುತ್ತದೆ.

ಉಗ್ರಕಾರ್ಯಕ್ರಮ— ಮದ್ಯ ನಿಷೇಧ ಕಾನೂನನ್ನು ಉಲ್ಲಂಘಿಸುವವರ ಮೇಲಿನ ಉಗ್ರ ಕಾರ್ಯಕ್ರಮ ಕೈಕೊಳ್ಳುವ, ಕಾರ್ಯವು ಕಳೆದ ತಾ 25ರಂದು ಮಂಗಳೂರಲ್ಲಿ ಪ್ರಾರಂಭವಾಯಿತು. ರಾಜ್ಯ ಸರಕಾರದ ಗೃಹ ಮಂತ್ರಿ ಶ್ರೀ ಎಚ್ ಎಮ್. ಚೆನ್ನ ಬಸಪ್ಪ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ. ಎ ಪೈ ಕಾರ್ಯದರ್ಶಿ ಶ್ರೀ ಕೆ. ಸೂರ್ಯನಾರಾಯಣ ಅಡಿಗ ಮಾಜಿ ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಬಿ. ಮಂಜಯ ಹೆಗ್ಡೆ, ತಾಲೂಕು ಕಾಂಗ್ರೆಸ್ ಅಧ್ಯಕ್ಷ ಶ್ರೀ. ಎ. ಶಂಕರ ಆಳ್ವ ಮೊದಲಾದವರೂ ಸರಕಾರಿ ಅಧಿಕಾರಿಗಳೂ ಸಶಸ್ತ್ರ ಪೋಲೀಸರೂ ನಗರದ ಹಲವು ಮದ್ಯ ತಯಾರಿಕಾ ಕೇಂದ್ರಗಳಿಗೆ ಧಾಳಿ ನಡೆಸಿ ಹಲವು ಮದ್ಯ ತಯಾರಕರನ್ನು ಬಂಧಿಸಲಾಗಿದೆ ಸಾವಿರಾರು ಬಾಟ್ಲಿ ಮದ್ಯವು ಸಿಕ್ಕಿದೆ. ಅಂತ್ಯದಲ್ಲಿ ಸಚಿವರರು ಪತ್ರಿಕಾ ಪ್ರತಿನಿಧಿಗಳೊಂದಿಗೆ ಮಾತನಾಡುತ್ತಾ ಮದ್ಯಪಾನ ನಿಷೇಧ ಕಾರ್ಯ ಸಾರ್ವಜನಿಕರಿಗಿರುವ ಉತ್ಸಾಹಾಸಕ್ತಿಗಳನ್ನು ಕೊಂಡಾಡಿದರು.

ಫೀಲ್ಡ್ ಆಫೀಸರರ ಸಭೆ ಉಡುಪಿ ಶಾಖೆಯ ಜೀವವಿಮಾ ಫೀಲ್ಡ್ ಆಫೀಸರರ ಸಭೆಯೊಂದು ಕಳೆದ ತಾ. 31ರಂದು ಜೀವನ ಕೃಷ್ಣ ಶಾಖಾ ಕಚೇರಿಯಲ್ಲಿ ಉಡುಪಿಯ ಸೀನಿಯರ್ ಡಿವಿಜನಲ್ ಮೆನೇಜರ್ ಶ್ರೀ ಟಿ ಆರ್ ಎ. ಪೈಯವರ ಅಧ್ಯಕ್ಷತೆಯಲ್ಲಿ ಜರಗಿಸಲ್ಪಟ್ಟಿತು ಅಸಿಸ್ಟೆಂಟ್ ಬ್ರಾಂಚ್ ಮೆನೇಜರ್ ಶ್ರೀ ಟಿ. ಪಿ. ಎನ್. ಸಂದಿಯೋರರು ಸ್ವಾಗತಿಸುತ್ತ ಫೀಲ್ಡ್ ಆಫೀಸರರು ಈವರ್ಷ ಈ ವರೆಗೆ ಮಾಡಿದ ಉತ್ತಮ ಕಾರ್ಯಗಳಿಗಾಗಿ ಅಭಿನಂದಿಸಿ ಮುಂದಿನ ತಿಂಗಳುಗಳಲ್ಲಿ ಹೆಚ್ಚಿನ ಕೆಲಸ ಮಾಡುವಂತೆ ವಿನಂತಿಸಿಕೊಂಡರು ಶ್ರೀ ಟಿ ಆರ್. ಎ. ಪೈಗಳು ಉಡುಪಿ ಶಾಖೆಯವರು ಮಾಡಿದ ಉತ್ತಮ ಕಾರ್ಯವನ್ನೂ ಫೀಲ್ಡ್ ಆಫೀಸರರ ದಕ್ಷತೆಯನ್ನೂ ಶ್ಲಾಘಿಸಿ ಮಾತನಾಡಿದರು. ಅಸಿಸ್ಟೆಂಟ್ ಡಿವಿಜನಲ್ ಮೆನೇಜರ ಶ್ರೀ ಇ ಯು ಜಕೋ ಅವರು ಭಾಷಣ ಮಾಡಿದ ನಂತರ ವಿಮಾ ವ್ಯವಹಾರವನ್ನು ಹೆಚ್ಚಿಸುವ ಹಾಗೂ ವಿಮಾದಾರರಿಗೆ ಪಕ್ಷ ಸೇವೆ ಸಲ್ಲಿಸುವ ಕುರಿತೂ ವಿಚಾರ ವಿನಿಮಯ ನಡೆಯಿತು. ಕೊನೆಗೆ ಅಸಿಸ್ಟೆಂಟ್ ಬ್ರಾಂಚ್ ಮೆನೇಜರರು ಧನ್ಯವಾದಗಳನ್ನರ್ಪಿಸಿದರು.

ಕಡ್ಡಾಯಶಿಕ್ಷಣ ವಿಚಾರಗೋಷ್ಠಿ ಕಳೆದ ತಾ 28ರಲ್ಲಿ ಉಡುಪಿ ಉತ್ತರ ಶ್ರೇಣಿಯ ಶಿಕ್ಷಕರ ವಿಚಾರಗೋಷ್ಠಿ ಸಭೆಯು ಶ್ರೀ ಟಿ. ಎ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಹಿರಿಯ ಪರೀಕ್ಷಾಧಿಕಾರಿ ಶ್ರೀ ವೈ. ಗೋಪಾಲ್ ಅವರು ಸ್ವಾಗತಿಸಿ ಕಡ್ಡಾಯ ಶಿಕ್ಷಣದ ಮಾಹಿತಿಯನ್ನು ವಿವರಿಸಿದರು. ಜಿಲ್ಲಾ ವಿದ್ಯಾಧಿಕಾರಿ ಶ್ರೀ ಕೆ. ವಿಠಲ ಶೆಟ್ಟಿಯವರು ಕಡ್ಡಾಯ ಶಿಕ್ಷಣದ ಆವಶ್ಯಕತೆ ಸಫಲತೆ ಕುರಿತ. ಭಾಷಣವಿತ್ತರು ಶ್ರೀ ಎ. ಜೆ ಆಳ್ವೆಯವರು ಕಡ್ಡಾಯ ಶಿಕ್ಷಣದ ಪರವಾಗಿ ಮಾತನಾಡಿದರು. ಉಪಾಧ್ಯಾಯರ ಪ್ರಶ್ನೆಗಳಿಗೆ ವಿದ್ಯಾಧಿಕಾರಿಗಳು ಸೂಕ್ತ ಉತ್ತರವಿತ್ತ ಬಳಿಕ ಅಧ್ಯಕ್ಷ ಶ್ರೀ ಟಿ ಎ ಪೈಗಳು ಈ ಯೋಜನೆಯು ಯಶಸ್ವಿಯಾಗ ಬೇಕಾದರೆ ಬೆಂಬಲ ನೀಡುವ ಜಿಲ್ಲಾ ಮಟ್ಟದ ವಿದ್ಯಾ ಕೌನ್ಸಿಲನ್ನು ರೂಪಿಸುವುದು ಅಗತ್ಯವೆಂದೂ ಎಲ್ಲಾ ಮಕ್ಕಳಿಗೂ ವಿದ್ಯಾ ಸೌಕರ್ಯವನ್ನು ಕೊಡುವುದು ಅತ್ಯಾವಶ್ಯಕವೆಂದೂ ಮುಂತಾಗಿ ಹೇಳಿದರು. ಶ್ರೀ ವೈ ಗೋಪಾಲನವರು ಕೊನೆಗೆ ಧನ್ಯವಾದಗಳನ್ನರ್ಪಿಸಿದರು.

ಮತ್ಸ್ಯ ರೇವುಗಳ ರಚನೆ— ರಾಜ್ಯದಲ್ಲಿ ಆರು ಮತ್ಸ್ಯ ರೇವುಗಳನ್ನು ರೂ ೧ ಕೋಟಿ ೩೭ ಲಕ್ಷದ ೫೦ ಸಾವಿರ ವೆಚ್ಚದಿಂದ ಮಂಗಳೂರು, ಮಾಲ್ಪೆ, ಮಲ್ಪೆ, ಕುಂದಾಪುರ, ಭಟ್ಕಳ ಮತ್ತು ಕಾರವಾರಗಳಲ್ಲಿ ನಿರ್ಮಿಸಲಾಗುವುದೆಂದು ಮಂಗಳೂರಲ್ಲಿ ತಾ. ೩ರಂದು ಸೇರಿದ ರಾಜ್ಯದ ವಿಜನುಗಾರಿಕೆ ಸಲಹಾ ಸಮಿತಿಯ ಸಭೆಯಲ್ಲಿ ಸಮಾಜ ಕಲ್ಯಾಣ ಖಾತೆಯ ಮಂತ್ರಿಶ್ರೀ ಎನ್. ರಾಚಯ್ಯನವರು ತಿಳಿಸಿದರು. ಮಂಗಳೂರು– ರೂ. ೧ ಕೋಟಿ ೫ ಲಕ್ಷ, ಮಾಲ್ಪೆಗೆ ರೂ. ೧ ಲಕ್ಷ ೪೦ ಸಾವಿರ, ಮಲ್ಪೆಗೆ ರೂ. ೩ಲಲಕ್ಷ ೫೦ ಸಾವಿರ, ಕುಂದಾಪುರ ರೂ. ೬ ಲಕ್ಷ ೬೦ ಸಾವಿರ, ಭಟ್ಕಳ ರೂ ೩ ಲಕ್ಷ ಮತ್ತು ಕಾರವಾರ—ರೂ. ೩೪ ಲಕ್ಷಗಳು ಈ ರೀತಿಯಾಗಿ ಈ ರೇವು ನಿರ್ಮಾಣಗಳಿಗೆ ವೆಚ್ಚವಾಗುವುದೆಂದೂ ಮಂತ್ರಿಗಳು ತಿಳಿಯಪಡಿಸಿದರು.

ಇಲೆಕ್ಟ್ರಿಸಿಟಿ ಬೋರ್ಡಿನ ಸದಸ್ಯರಿಗೆ ಸತ್ಕಾರ – ಮೈಸೂರು ರಾಜ್ಯದ ಇಲೆಕ್ಟ್ರಿಸಿಟಿ ಬೋರ್ಡಿನ ಸಭೆಗಾಗಿ ಮಣಿಪಾಲಕ್ಕೆ ಬಂದಿದ್ದ ಸದಸ್ಯರನ್ನ ಸತ್ಕರಿಸಲು ಉಡುಪಿ ರೋಟರಿ ಕ್ಲಬ್ಬಿನವರು ಶ್ರೀ ಆದೂರು ಲಕ್ಷ್ಮೀನಾರಾಯಣರ ಅಧ್ಯಕ್ಷತೆಯಲ್ಲಿ ಕಳೆದ ತಾ. 30ರಂದು ಸಮಾರಂಭವೊಂದನ್ನು ಏರ್ಪಡಿಸಿದ್ದರು ಅತಿಥಿಗಳ ಪರಿಚಯವನ್ನು ಶ್ರೀ ಟಿ. ರಮೇಶ ಪೈಗಳು ಮಾಡಿದ ನಂತರ ವಿದ್ಯುತ್ ಬೋರ್ಡಿನ ಅಧ್ಯಕ್ಷ ಶ್ರೀ ಟಿ. ಚೆನ್ನಯನವರ ಅಪೇಕ್ಷೆಯಂತೆ ಬೋರ್ಡಿನ ಸದಸ್ಯ ಶ್ರೀ ಟಿ. ಎ ಪೈಗಳು ವಿದ್ಯುತ್ ಬೋರ್ಡಿನ ಕಾರ್ಯಕಲಾಪಗಳನ್ನು ವಿವರಿಸುತ್ತ ಪಶ್ಚಿಮ ಘಟ್ಟಗಳಿಂದ ಸುಮಾರು 600 ಗಜ ಕೆಳಕ್ಕೆ ಧುಮುಕುವ ಹೆಚ್ಚಿನ ನದಿಗಳಿಂದ ಇಲೆಕ್ಟ್ರಿಸಿಟಿಯನ್ನು ಉತ್ಪಾದನೆಗೊಳಿಸುವಂತಾದರೆ ವಿದ್ಯುತ್ತಿನ ಅಭಾವವನ್ನು ಹೋಗಲಾಡಿಸಬಹುದೆಂದೂ ಈ ಕುರಿತು ತಕ್ಕ ಕಾರ್ಯಕ್ರಮಕೈಗೊಳ್ಳುವುದು ಅಪೇಕ್ಷಣೀಯವೆಂದೂ ಮಾನವ ಜೀವನದಲ್ಲಿ ಕ್ರಾಂತಿಯಾಗಬೇಕಾದರೆ ವಿದ್ಯೆಹಾಗೂ ವಿದ್ಯುತ್ ಅತ್ಯಾವಶ್ಯಕವೆಂದೂ ಮುಂತಾಗಿ ಹೇಳಿದರು ಡಾ|ಟಿ ಎಂ. ಎ ಪೈಗಳು ಧನ್ಯವಾದ ಸಮರ್ಪಿಸುತ್ತಾ ವಿದ್ಯುತ್ ವಿಸ್ತರಣಾ ಯೋಜನೆಯಲ್ಲಿ ಬೋರ್ಡಿನ ಯೋಜನೆಯನ್ನು ಶ್ಲಾಘಿಸಿ ಬೋರ್ಡ್ ಈ ಕುರಿತು ಇನ್ನೂ ಹೆಚ್ಚಿನ ಆಸಕ್ತಿ ವಹಿಸಬೇಕೆಂದರು.

ದೇಲಂಪಾಡಿ— ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಮಂದಿರದಲ್ಲಿ ತಾ. 3-6-61ರಂದು ಇಂದ್ರಜಿತ ಕಾಳಗ ಎಂಬ ಕಥಾ ಭಾಗದ ಯಕ್ಷಗಾನ ತಾಳಮದ್ದಳೆಯು ಶ್ರೀ ಕೀರಿಕಾಡು ಮಾಸ್ತರ್ ವಿಷ್ಣು ಭಟ್ಟರ ಅಧ್ಯಕ್ಷತೆಯಲ್ಲಿ ಪ್ರದರ್ಶಿಸಲ್ಪಟ್ಟಿತು ಕಲ್ಲಡ್ಕ ಶ್ರೀ ನಾರಾಯಣ ರೈಗಳು ಕಾರ್ಯಕ್ರಮವನ್ನು ಅಣಿಗೊಳಿಸಿದ್ದು ಕೊನೆಯಲ್ಲಿ ಧನ್ಯವಾದವಿತ್ತರು.

ಧರ್ಮಾರ್ಥ ಮೆಜಿಕ್ ತಂತ್ರಗಳನ್ನು ಕಲಿಯಿರಿ!

(1) ಒಂದು ಸಣ್ಣ ಚೆಂಡನ್ನು ನಿಮ್ಮ ಬಾಯಿಯೊಳಗೆ ಹಾಕಿರಿ ಮತ್ತು ಅದನ್ನು ನಿಮ್ಮ ಕಣ್ಣಿನಿಂದ ಹೊರಕ್ಕೆ ತೆಗೆಯಿರಿ. (2 ನಿಮ್ಮ ಅಂಗೈ ಅಡಿಯಲ್ಲಿ ಒಂದು ರೂಪಾಯಿ ನಾಣ್ಯವನ್ನು ಹಾಕಿರಿ, ಮತ್ತು ಅದನ್ನು ಒಂದು ಪೆಟ್ಟಿನಿಂದ ನಿಮ್ಮ ಮುಷ್ಟಿಯ ಕೆಳಗೆ ಅದೃಶ್ಯಗೊಳಿಸಿರಿ.

ಈ ಆಸಾಧಾರಣ ಉಪಾಯಗಳನ್ನ ಪಡೆಯಲಿಕ್ಕೆ ಟಪಾಲು ವಗೈರೆ ಖರ್ಚಿಗಾಗಿ 65 ನಯೇ ಪೈಸ ಸ್ಟಾಂಪ್ ಕಳುಹಿಸಿರಿ 5ರೂಪ್ಯಾ ಕಳುಹಿಸುವವರು ಅವರ ಮನೆಯಲ್ಲಿಯೇ ಮುಂದೆ ಇತರ ಎಲ್ಲಾ ತಂತ್ರಗಳನ್ನು ಪಡೆಯಬಹುದು.

The Royal Trick Centre,
P. B. No. 15 Aligarh (U.P.)

ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್
(ಆಂಗ್ಲ ಸ್ವಯಂಬೋಧಿನಿ)
ರೂ. 2-00.

ಸುಲಭದಲ್ಲಿ ಪತ್ರಲೇಖನ
Letter Writing Made Easy
ಆಂಗ್ಲ ಪತ್ರವ್ಯವಹಾರ ಬೋಧಿನಿ
ರೂ 1—25.

ವಿಚಾರಿಸಿರಿ:
ನವಭಾರತ ಪುಸ್ತಕ ಭಂಡಾರ,
ಉಡುಪಿ.

ವಿಜ್ಞಾನ ಪ್ರಗತಿ:

ರೇಡಿಯೋ ಕೆಪಾಸಿಟರ್ ಉತ್ಪಾದನೆ

ನವದೆಹಲಿಯ ರಾಷ್ಟ್ರೀಯ ಭೌತಿಕ ವಿಜ್ಞಾನ ಪ್ರಯೋಗ ಶಾಲೆಯು ಈ ಮಹತ್ಸಾಧನೆಯು ಭಾರತವು ವಿಜ್ಞಾನ ಕ್ಷೇತ್ರದಲ್ಲಿ ಮುಂದುವರಿಯುತ್ತಿರುವುದರದ್ಯೋತಕವಾಗಿದೆ.

ರಾಷ್ಟ್ರೀಯ ಭೌತಿಕ ವಿಜ್ಞಾನಪ್ರಯೋಗಶಾಲೆಯಲ್ಲಿ ತಯಾರಾಗಿರುವ ಸುಮಾರು ೨೦ ಲಕ್ಷ ಸಿರಾಮಿಕ್ ಕೆಪಾಸಿಟರ್‌ಗಳು (ವಿದ್ಯುತ್ ಸಂಚಯ ಸಾಧನ) ರೇಡಿಯೋ ಸೆಟ್‌ಗಳು, ಆಂಪ್ಲಿಫೈಯರ್‌ಗಳು, ಕಿವುಡರು ಉಪಯೋಗಿಸುವ ಸಾಧನಗಳು, ಹವಾಮಾನದ ಬಲೂನ್‌ಗಳು, ಫ್ಲೂರಸೆಂಟ್ ವಿದ್ಯುತ್ ಸಲಕರಣೆಗಳು ಮತ್ತಿತರ ವಿದ್ಯುಚ್ಛಕ್ತಿ ಮತ್ತು ಎಲೆಕ್ಟ್ರಾನಿಕ್ ಸಲಕರಣೆಗಳಲ್ಲಿ ಈ ತನಕ ಜೋಡಿಸಲ್ಪಟ್ಟಿವೆ.

ಈ ಕೆಪಾಸಿಟರ್‌ಗಳ ತಯಾರಿಕೆ ಭಾರತೀಯ ಸಂಶೋಧಕರ ಸತತ ಪ್ರಯತ್ನದ ಫಲ. ಭಾರತೀಯ ಭೌತಿಕ ವಿಜ್ಞಾನ ಪ್ರಯೋಗ ಶಾಲೆಯಲ್ಲಿ ರೇಡಿಯೋ ಸರ್ಕ್ಯೂಟ್ಸ್ ಮತ್ತು ಕಾಂಪೊನೆಂಟ್ಸ್ ಡೆವಲಪ್‌ಮೆಂಟ್ ವಿಭಾಗವೆಂದೇ ಒಂದು ಪ್ರತ್ಯೇಕ ವಿಭಾಗವಿದೆ.

ಭಾರತದಲ್ಲಿ ರೇಡಿಯೋ ಗ್ರಾಹಕಗಳ ಬೆಲೆ ದುಬಾರಿಯಾಗಿರುವುದಕ್ಕೆ ಕಾರಣ, ಹೊರದೇಶಗಳಿಂದ ಬಿಡಿ ಭಾಗಗಳನ್ನು ತರಿಸಿಕೊಳ್ಳುವುದಕ್ಕೆ ವಿಶೇಷ ವೆಚ್ಚ ತಗಲುವುದೇ ಆಗಿದೆ. ಭಾರತದಲ್ಲಿ ರೇಡಿಯೋ ಕೈಗಾರಿಕೆ ಒಂದು ಉತ್ತಮ ಅಡಿಪಾಯದ ಮೇಲೆ ನಿಲ್ಲುವಂತಾಗಬೇಕಾದರೆ, ಬಿಡಿ ಭಾಗಗಳನ್ನೆಲ್ಲಾ ಭಾರತದಲ್ಲಿಯೇ ತಯಾರಿಸುವುದು ಸಾಧ್ಯವಾಗಬೇಕು. ಭೌತಿಕ ವಿಜ್ಞಾನ ಪ್ರಯೋಗ ಶಾಲೆಯಲ್ಲಿ ಇದರ ಬಗ್ಗೆ ಸತತ ಪ್ರಯತ್ನ ನಡೆಯುತ್ತಿದೆ ಮತ್ತು ಉತ್ತಮ ಫಲಿತಾಂಶಗಳೂ ಕಂಡು ಬರುತ್ತಿವೆ.

ಸಿರಾಮಿಕ್ ಕೆಪಾಸಿಟರ್‌ಗಳನ್ನು ತಯಾರಿಸಲು ಇಲ್ಲಿ ಅನುಸರಿಸುವ ವಿಧಾನದಲ್ಲಿ ಟೈಟೇನಿಯಂ ಡೈಆಕ್ಸೈಡ್‌ನ್ನು ಬಳಸಲಾಗುತ್ತಿದೆ. ಕೇರಳದ ಸಮುದ್ರ ತೀರದ ಮರಳಲ್ಲಿ ಟೈಟೇನಿಯಂ ಡೈಆಕ್ಸೈಡ್ ನಲ್ಲಿರುವ ಎರಡು ಮುಖ್ಯ ಅದುರುಗಳು ಹೇರಳವಾಗಿ ಲಭಿಸುತ್ತವೆ. ಕೆಪಾಸಿಟರ್‌ಗಳ ತಯಾರಿಕೆಗೆ ಇವು ಅತ್ಯುತ್ತಮ ಕಚ್ಚಾ ಮಾಲುಗಳಾಗಿವೆ.

ಒಂದು ರೇಡಿಯೋ ಗ್ರಾಹಕದಲ್ಲಿ ೧೫ರಿಂದ ೩೫ ಕೆಪಾಸಿಟರ್‌ಗಳು ಇರುತ್ತವೆ. ಸಾಮಾನ್ಯವಾಗಿ ಇವುಗಳನ್ನು 'ಕ್ಯಾಪ್ಸ್' ಎಂದು ಕರೆಯಲಾಗುತ್ತದೆ. ಯಾವ ರೀತಿಯ 'ಸರ್ಕ್ಯೂಟ್' ಮತ್ತು ಎಷ್ಟು ವಾಲ್ಟ್‌ಗಳವೆ ಎಂಬುದರ ಮೇಲೆ ಇವು ಆಧಾರಿತವಾಗಿರುತ್ತವೆ. ರೇಡಿಯೋ ರಿಸೀವರ್ ಕೈಗಾರಿಕೆಯೊಂದೇ ವರ್ಷಕ್ಕೆ ೫೦ ಲಕ್ಷದಷ್ಟು 'ಕ್ಯಾಪ್'ಗಳನ್ನು ಹೊರದೇಶಗಳಿಂದ ಆಮದು ಮಾಡಿಕೊಳ್ಳುತ್ತಿದೆ ಎಂದು ಅಂದಾಜು ಹಾಕಲಾಗಿದೆ. ಮನೆಗಳಲ್ಲಿ ಮತ್ತು ಕಚೇರಿಗಳಲ್ಲಿ ಇದೀಗ ಹೆಚ್ಚಿನ ಪ್ರಮಾಣದಲ್ಲಿ ಬಳಕೆಯಲ್ಲಿರುವ ಫ್ಲೂರಸೆಂಟ್ ಟ್ಯೂಬ್ ಲ್ಯಾಂಪ್‌ಗಳ ಕಾರಣಗಳಿಂದ ರೇಡಿಯೋಶ್ರವಣಕ್ಕೆ ಅಡಚಣೆಯಾಗುತ್ತದೆ. ಆದರೆ ಕೆಪಾಸಿಟರ್‌ಗಳ ಉಪಯೋಗದಿಂದ ಈ ಅಡಚಣೆಯನ್ನು ನಿವಾರಿಸಬಹುದು.

ವಿದ್ಯುತ್ ದೀಪಗಳ ಕೈಗಾರಿಕೆಯಲ್ಲಿ ಬೇಕಾಗುವ ಕೆಪಾಸಿಟರ್‌ಗಳ ಸಂಖ್ಯೆ ರೇಡಿಯೋ ರಿಸೀವರ್‌ಗಳ ಕೈಗಾರಿಕೆಯ ಬೇಕಾಗುವ ಸಂಖ್ಯೆಗಿಂತ ಮೂರರಷ್ಟು ಹೆಚ್ಚು. ಆಂಪ್ಲಿಫೈಯರ್ಸ್, ಕಿವುಡರ ಸಾಧನಗಳು ಇವೇ ಮೊದಲಾದುವುಗಳಿಗೆ ಸಂಬಂಧಿಸಿದ ಕೈಗಾರಿಕೆಗಳಲ್ಲೂ ಇವುಗಳ ಆವಶ್ಯಕತೆ ಇದೆ.

ಕೆಪಾಸಿಟರ್‌ಗಳ ಉಪಯೋಗಕ್ಕೆ ಸಂಬಂಧಿಸಿದಂತಹ ಒಂದು ನಿದರ್ಶನವನ್ನು ಇಲ್ಲಿ ಕೊಡಬಹುದು. ರೇಡಿಯೋ ಸೆಟ್‌ಗಳಲ್ಲಿ, ಅದೂ ಚಿಕ್ಕ ಸೆಟ್‌ಗಳಲ್ಲಿ ಪದೇ ಪದೇ ಅನುಭವಕ್ಕೆ ಬರುವ ಒಂದು ತೊಂದರೆಯೆಂದರೆ ಇದ್ದಕ್ಕಿದ್ದ ಹಾಗೆಯೇ ಬೇರೆ ಸ್ಟೇಷನ್ ಬರತೊಡಗುವುದು. ಮುಳ್ಳನ್ನು ಆಗಾಗ ಹಿಂದು ಮುಂದು ಮಾಡಿ ಮತ್ತೆ ನಮಗೆ ಬೇಕಾದ ಸ್ಟೇಷನ್ ಸ್ಪಷ್ಟವಾಗಿ ಕೇಳುವ ಹಾಗೆ ಮಾಡುವ ಆವಶ್ಯಕತೆ ಕಾಡುಬರುತ್ತದೆ. ಇದಕ್ಕೆ ಕಾರಣ ಕೆಲವು ಬಿಡಿ ಭಾಗಗಳ ಕಾವು ಹೆಚ್ಚುವುದರ ಪರಿಣಾಮವಾಗಿ ಸಂಚಯನಶಕ್ತಿಯಲ್ಲಿ ಬದಲಾವಣೆ ಹೊಂದುತ್ತವೆ. ಕಾವು ಪರಿಸ್ಥಿತಿಯನ್ನು ಹದವಾಗಿಡುವ ಸಿರಾಮಿಕ್ ಕೆಪಾಸಿಟರ್ಸ್ ಸಹ ಇದೀಗ ತಯಾರಾಗಿದ್ದು ರೇಡಿಯೋ ಸೆಟ್‌ಗಳಲ್ಲಿ ಅವುಗಳನ್ನು ಜೋಡಿಸುವುದರಿಂದ ಮೇಲೆ ತಿಳಿಸಿದಂತಹ ದಿಕ್‌ಚ್ಯುತಿ (ಡ್ರಿಫ್ಟ್) ದೋಷ ಮಾಯವಾಗುತ್ತದೆ.

(೧೨ನೇ ಪುಟ ನೋಡಿರಿ)

ಜಗತ್ಪ್ರಲಯ

(೫ನೇ ಪುಟದಿಂದ)

ಗಲೀ, ಅದು ಹಾರುವ ದಿಕ್ಕನ್ನು ಬದಲಾಯಿಸುವುದಾಗಲೀ ಸಾಧ್ಯವಿಲ್ಲವೆಂದು ಮೊದಲೇ ಹೇಳಲಾಗಿದೆ. ಇದೊಂದು ಬ್ರಹ್ಮಾಸ್ತ್ರಕ್ಕೆ ಸಮಾನವಾದುದು. ಕೈಯಿಂದ ಜಾರಿತೆಂದರೆ, ಅದು ಮಾಡುವ ಪ್ರಭಾವ ಅವರ್ಣನೀಯ. ಇದನ್ನು ಆಕಾಶದಲ್ಲಾಗಲೀ ಮಾರ್ಗ ಮಧ್ಯದಲ್ಲಾಗಲೀ ನಷ್ಟಪಡಿಸುವುದು ಸಾಧ್ಯವಿಲ್ಲ. ಮೊದಲಿನ ಬೀಗದ ಕೈ ತಿರುಕಿಸಿದ ಮೇಲೆ ರಾಕೇಟು ಸಿಡಿಯುವ ವರೆಗಿನ ೧೪ ಮಿನಿಟು ೫೭ ಸೆಕೆಂಡುಗಳೊಳಗೆ ಬೇಕಾದರೆ ಮಾತ್ರ ತಡೆಯಬಹುದು. ಏಕೆಂದರೆ, ಎರಡನೆಯ ಕೈ ತಿರುಗಿದೊಡನೆಯೇ ಭೀಷಣ ಪ್ರಕೋಪದೊಡನೆ ಸರ್ವನಾಶವು ಪ್ರಾರಂಭವಾಗುವುದು.

ಫೆಲ್ಟ್‌ವೆಲ್‌ನ ಇಪ್ಪತ್ತು ಹಾಕೂ ನಾರ್‌ಫೋಕ್‌ನ ಐದು ನಿಯಂತ್ರಕ ನಿಲ್ದಾಣಗಳಲ್ಲಿ ಈ ರಾಕೆಟುಗಳ ಪ್ರಯೋಗಾಭ್ಯಾಸವು ನಿರಂತರ ನಡೆಯುತ್ತ ಇರುತ್ತದೆ. ಅಲ್ಲಿಯ ನಾಯಿಗಳೂ ಅವನ್ನು ನೋಡಿಬಿಟ್ಟವೆಯೆಂದರೆ, ಅದೆಷ್ಟು ಸರ್ವಸಾಮಾನ್ಯವೆಂದು ನೀವೇ ಊಹಿಸಿಕೊಳ್ಳಬಹುದು. ೧೯೬೦ರ ಪೂರ್ವಾರ್ಧದಲ್ಲಿ ಬ್ರಿಟನ್ನಿನಲ್ಲಿ ಥೋರ್ ಮಿಸ್ಸೈಲ್‌ನ ಸ್ಥಾಪನೆಯಾದಾಗ, ಸೋವಿಯತ್ ರಶ್ಯವನ್ನು ಒಂದೆರಡು ವರ್ಷಗಳವರೆಗಾದರೂ ಹೆದರಿಸುವುದು ಸಾಧ್ಯವೆಂದು ಪಾಶ್ಚಾತ್ಯ ರಾಷ್ಟ್ರಗಳು ಭಾವಿಸಿದ್ದುವು. ಆದರೆ, ರಶ್ಯವು ತಾನು "ಐ. ಸಿ. ಬಿ. ಎಮ್." ಎಂಬ ಬ್ರಹ್ಮಾಸ್ತ್ರವನ್ನು ತಯಾರಿಸಿದೆನೆಂದು ಘೋಷಣೆ ಮಾಡಿದೊಡನೆಯೇ ಎಲ್ಲರ ಮೇಲೂ ಬಿಸಿ ನೀರು ಎರೆದಂತಾಯಿತು. ಬ್ರಿಟನ್ನಿಗೆ ಮತ್ತಷ್ಟು ಗಂಡಾಂತರವೇ ಸಂಭವಿಸುವಂತಾಯಿತು. ರಶ್ಯವು ಬೇಕಾದಾಗ, ಬ್ರಿಟನ್ನಿನ ಮೇಲೆ ತಿರುಗಿ ಬೀಳಬಹುದಾಗಿತ್ತು. ಈ ಬ್ರಹ್ಮಾಸ್ತ್ರವು ಕೇವಲ ನಾಲ್ಕೇ ಮಿನಿಟುಗಳಲ್ಲಿ ಪರಿಣಾಮ ಬೀರುವುದು. ಈ ಅವಧಿಯಲ್ಲಿ ಯಾವ ರಕ್ಷಣೆಯನ್ನು ಮಾಡಿಕೊಳ್ಳುವುದೂ ಕಷ್ಟ. ರಶ್ಯವು ಕೂಡ ಈ ಅಸ್ತ್ರವನ್ನು ಬ್ರಿಟನ್ನಿನತ್ತ ಮುಖಮಾಡಿಯೇ ಇರಿಸಿದೆ. ಸೈನಿಕ ದೃಷ್ಟಿಯಿಂದ ರಶ್ಯನ್ ಬ್ರಹ್ಮಾಸ್ತ್ರವು ಒಳ್ಳೆಯ ಸ್ಥಳದಲ್ಲಿಯೇ ಸ್ಥಾಪಿತವಾಗಿದೆ ಎಂದು ಯುದ್ಧ ವಿಶಾರದರು ಹೇಳುತ್ತಾರೆ.

ಸರ್ವ ಸಂಹಾರಕ ಪ್ರಚಂಡ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತವಾದ ಈ ಶಕ್ತಿಸಂಪನ್ನ ರಾಷ್ಟ್ರಗಳ ಜೂಜಾಟದಲ್ಲಿ ಸರ್ವನಾಶದ ಭೀಷಣತೆ ಯಾವ ಗಳಿಗೆಯಲ್ಲಿ ಪ್ರಕಟಗೊಳ್ಳುವುದೆಂದು ಹೇಳುವಂತಿಲ್ಲ. ಆದರೆ, ಈ ಗಳಿಗೆಯು ಬಂದಿತೆಂದರೆ, ಆಗ ಪ್ರಪಂಚದ ಮಾನವ ನಾಗರಿಕತೆಯು ಕೇವಲ ಮೂರೇ ಮೂರು ಸೆಕೆಂಡುಗಳಲ್ಲಿ ಮಣ್ಣುಪಾಲಾಗುವುದೆಂಬುದು ಮಾತ್ರ ಶಿಲಾತಲಾಕ್ಷರದಷ್ಟು ನಿಶ್ಚಿತ.

(ಸಂಗ್ರಹ)

—ಗೋರಾ

ನೂತನ ಸೇನಾಧಿಕಾರಿ

ಮೇ ೮ರಂದು ನಿವೃತ್ತರಾದ ಜನರಲ್ ಕೆ. ತಿಮ್ಮಯ್ಯನವರ ಸ್ಥಾನದಲ್ಲಿ ಭಾರತದ ನೂತನ ಸೇನಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಿದ ಜನರಲ್ ಪಿ. ಎನ್. ಥಾಪರ್

ಕಾರಂತರ ಪುಸ್ತಕಗಳು

ಅಳಿದ ಮೇಲೆ (ಹೊಸ ಕಾದಂಬರಿ)	2-75
ಸಂಚಯಿತ (ಕಾದಂಬರಿ)	2-50
ನಮ್ಮ ಸುತ್ತಲಿನ ಕತೆಗಳು	1-75
ಪರಪಾಲು—ಇಂದು—ನಾಳೆ	3-00

ಸಿಗುವ ಸ್ಥಳ.
ನವಭಾರತ ಬುಕ್ ಡಿಪೋ, ಉಡುಪಿ

ಉದಯೋನ್ಮುಖ ಲೇಖಕ ಶ್ರೀ. ಪಿ. ಎನ್. ಹೆಬ್ಬಾರ ('ಸಿರಿಪತಿ')
ಅವರ ನವೀನ ಕೃತಿ—

ಕಪಾಲ ಮೋಕ್ಷ

(ಮುನ್ನುಡಿ— ಡಾ| ಟಿ. ಎಂ. ಎ. ಪೈ, ಎಂ. ಬಿ., ಬಿ. ಎಸ್.)

ಏಳು ಪ್ರಬಂಧ, ಎಂಟು ಸಣ್ಣ ಕತೆಗಳನ್ನೊಳಗೊಂಡ ಮೌಲಿಕ ಕೃತಿ. ನೈಜ ಘಟನೆಗಳ ಆಧಾರದ ಮೇಲೆ ನೆಯ್ದ ವರ್ಣನಾತ್ಮಕ ಪ್ರಬಂಧಗಳಾದರೂ ಸಣ್ಣ ಕತೆಯಷ್ಟೇ ಸ್ವಾರಸ್ಯಪೂರ್ಣವಾಗಿವೆ. ಕತೆಗಳಲ್ಲಿ ಕತೆಗಾರರ ಸಹಜ ಸುಂದರ ಶೈಲಿ, ಸಾಮಾಜಿಕ ನ್ಯಾಯ—ಅನ್ಯಾಯ [illegible] ಸುಳಿವು ಹೊಳವುಗಳನ್ನು ಕಾಣಬಹುದು.

180 ಪುಟಗಳು — ಬಿಳಿ ಕಾಗದ — ಬೆಲೆ ರೂ. 2=00

ರೂ. 2=25 ನ ಪೈಸೆ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು
ಪುಸ್ತಕ ವ್ಯಾಪಾರಿಗಳಿಗೆ ವಿಪುಲ ಕಮಿಶನ್!

ನವಭಾರತ ಪುಸ್ತಕ ಭಂಡಾರ, ಉಡುಪಿ.

ಡಿ. ಕೆ. ಭಾರದ್ವಾಜರ
ಇಂಗ್ಲಿಷ್, ಇಂಗ್ಲಿಷ್–ಕನ್ನಡ
ಡಿಕ್ಷನರಿ

ಬೆಲೆ: ರೂ. ನಾಲ್ಕು.

ಐದು ರೂಪಾಯಿ ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ ಉಡುಪಿ.

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4%
5 ,, 12	,,	$4\frac{1}{4}$%
13 ,, 24	,,	$4\frac{1}{2}$%

ರೂ. 5,000/- ಮತ್ತು ಮೇಲಣ ಡಿಪೋಸಿಟಿಗೆ $\frac{1}{4}$% ಜಾಸ್ತಿ ಕೊಡಲಾಗುವುದು.

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ $2\frac{1}{2}$%
ಚಾಲ್ತಿ ಲೇವಣಾತಿಗೆ $\frac{1}{4}$% ಗ

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೊಂಜ,
ಮೆನೇಜರ್.

ಮೂಲ್ಕಿ ಬೇಂಕ್ ಲಿ. ಮುಲ್ಕಿ.

ವಿಚಿತ್ರ ಸತ್ಯ:

ಸಜೀವ ವಿದ್ಯುದುತ್ಪಾದಕ ಯಂತ್ರಗಳು

ಜೀವಕೋಟಿಯಲ್ಲಿಯೂ ಒಂದಲ್ಪ ಪ್ರಮಾಣದಲ್ಲಿ ವಿದ್ಯುತ್ ತಯಾರಿಸುವ ಶಕ್ತಿಯಿದೆಯೆಂದರೆ, ನೀವು ಸುಳ್ಳು ಎನ್ನಬಹುದು. ಆದರೆ, ೫೦೦ ವೋಲ್ಟ್ ಶಕ್ತಿಯ ವಿದ್ಯುಚ್ಛಕ್ತಿಯನ್ನು ತಯಾರಿಸುವ ಮೀನುಗಳು ಪ್ರಪಂಚದಲ್ಲಿವೆ ಎನ್ನುವಾಗ ನಿಮ್ಮ ಊಹೆಯು ತಲೆಕೆಳಗಾಗುವುದು.

ನೀರಿನಲ್ಲಿ ವಾಸ ಮಾಡುವ ಮೀನುಗಳ ಶರೀರದಲ್ಲಿ ವಿದ್ಯುತ್ತು ಇದೆಯೆಂದರೆ ನೀವು ನಂಬಲಾರಿರಿ. ಆದರೆ, ಅನೇಕ ವೇಳೆ ನಾವು ಸುಳ್ಳೆಂದು ತಿಳಿದುಕೊಳ್ಳುವುದೇ ಸತ್ಯವೆಂದು ಅಂತ್ಯದಲ್ಲಿ ಕಂಡು ಬರುವುದು. ಕೇವಲ ಮೀನುಗಳು ಮಾತ್ರವಲ್ಲ ಜಗತ್ತಿನಲ್ಲಿರುವ ಪ್ರತಿಯೊಂದು ಜೀವ ಜಂತುವಿನ ನರಮಂಡಲ, ಮಾಂಸ ಪೇಶಿ ಮತ್ತು ಗ್ರಂಥಿಗಳು ಒಂದಲ್ಪ ಪ್ರಮಾಣದಲ್ಲಿ ವಿದ್ಯುತ್ತನ್ನು ಉತ್ಪಾದಿಸುತ್ತವೆ. ಉಳಿದ ಪ್ರಾಣಿಗಳಿಗಿಂತ ಕೆಲವು ಜಾತಿಯ ಮೀನುಗಳು ಅಧಿಕ ಪ್ರಮಾಣದಲ್ಲಿ ವಿದ್ಯುದುತ್ಪಾದನೆ ಮಾಡುವುವೆಂಬುದನ್ನು ತಿಳಿದ ವಿಜ್ಞಾನಿಗಳೇ ಆಶ್ಚರ್ಯ ಚಕಿತರಾಗಿದ್ದಾರೆ. ಈ ಮೀನುಗಳ ಶಾರೀರಿಕ ರಚನೆಯನ್ನು ವೀಕ್ಷಿಸುವಾಗ, ಇವುಗಳನ್ನು ಸಜೀವ 'ಜನರೇಟರ್' ಎಂದು ಕರೆಯಬಹುದು. ವಿದ್ಯುತ್ತು ತಯಾರಿಸಬಲ್ಲ ಏಳು ಜಾತಿಯ ಮೀನುಗಳನ್ನು ಪರಿಶೀಲಿಸಿದಾಗ, ಅವುಗಳ ಶರೀರದಲ್ಲಿ ಪರ್ಯಾಪ್ತ ಪ್ರಮಾಣದ ವಿದ್ಯುತ್ತು ಉತ್ಪಾದಿತವಾಗುತ್ತದೆಯೆಂದು ತಿಳಿದುಬಂದಿದೆ.

ಉತ್ತರ ಅಟ್ಲಾಂಟಿಕ ಸಾಗರದ "ಟಾರ್ಪೆಡೊ ನೋಬಿಲಿಯಾನಾ" ಎಂಬ ಮೀನಿನ ಶರೀರದಲ್ಲಿ ೫೦ರಿಂದ ೬೦ ವೋಲ್ಟಿನಷ್ಟು ವಿದ್ಯುತ್ತು ತಯಾರಾಗುತ್ತದೆ ಇಷ್ಟೊಂದು ಪ್ರಮಾಣದ ಶಕ್ತಿಯಿರುವ ಮೀನು ವಿದ್ಯುನ್ಮಯವೆಂದೇ ಹೇಳಬಹುದು. ಆಫ್ರಿಕೆಯ ಸಮುದ್ರದಲ್ಲಿ "ಕೇಟ್ ಫಿಶ್" ಎಂಬ ಮೀನು ಆಕಾರದಲ್ಲಿ ಸಣ್ಣದಾದರೂ ಅದರಲ್ಲಿ ೩೫೦ ವೋಲ್ಟ್ ವಿದ್ಯುತ್ತನ್ನು ತಯಾರಿಸುವ ಶಕ್ತಿಯಿದೆ. ಸಾಮಾನ್ಯವಾಗಿ, ತಯಾರಿಸುವ ವೋಲ್ಟೇಜು ಆಯಾ ಮೀನಿನ ಆಕಾರವನ್ನು ಹೊಂದಿಕೊಂಡಿದೆ. ದಕ್ಷಿಣ ಅಮೇರಿಕೆಯ ದೊಡ್ಡ ನದಿಯಾದ ಅಮೆಜನ್‌ನಲ್ಲಿ 'ಇಲೆಕ್ಟ್ರೋಫೊರಸ್' ಎಂಬ ಒಂದು ಮೀನು ಇದೆ. ಇದರ ಶರೀರದಿಂದ ೫೦೦ ವೋಲ್ಟಿನಷ್ಟು ವಿದ್ಯುತ್ತು ಉತ್ಪಾದನೆಯಾಗಬಲ್ಲುದು.

ಅಧಿಕ ಪ್ರಮಾಣದಲ್ಲಿ ವಿದ್ಯುತ್ತು ತಯಾರಿಸುವ ಮೀನುಗಳಲ್ಲಿರುವ ಈ ಶಕ್ತಿಯು ಅವುಗಳಿಗೆ ಆಕ್ರಮಣ ಮಾಡುವುದಕ್ಕೆ ಮತ್ತು ಆತ್ಮರಕ್ಷಣೆಗೆ ಸಹಾಯಕವಾಗಿದೆ ಅತ್ಯಲ್ಪ ವಿದ್ಯುದುತ್ಪಾದನಾ ಶಕ್ತಿಯಿರುವ ಮೀನುಗಳ ಶಕ್ತಿಯು ನೀರಿನಲ್ಲಿ ತಿರುಗಾಡುವುದರಲ್ಲಿ ಮತ್ತು ಆಕ್ರಮಣ ಮಾಡುವುದರಲ್ಲಿ ನೆರವಾಗುತ್ತದೆ.

ಮೀನುಗಳ ನರಮಂಡಲದಲ್ಲಿ ಯಾವ ರಾಸಾಯನಿಕ ಕ್ರಿಯೆಯಿಂದಾಗಿ ವಿದ್ಯುತ್ ಹುಟ್ಟುತ್ತದೆ, ಒಂದು ನರಮಂಡಲದಿಂದ ಇನ್ನೊಂದು ನರಮಂಡಲಕ್ಕೆ ಮಾಂಸಪೇಶಿ ಅಥವಾ ಗ್ರಂಥಿಗಳಲ್ಲಿ ವಿದ್ಯುತ್ತಿನ ಪ್ರವಾಹವು ಹೇಗೆ ಹರಿಯುತ್ತದೆ ಎಂಬ ಪ್ರಶ್ನೆಗಳು ನಿಜವಾಗಿಯೂ ಅಧ್ಯಯನಕ್ಕೆ ಇನ್ನೂ ಯೋಗ್ಯವಿರುತ್ತವೆ.

ಬಹಳ ಪ್ರಾಚೀನ ಕಾಲದಿಂದಲೂ ಮಾನವನು ವಿದ್ಯುತ್ಪೂರಿತ ಮೀನುಗಳ ಪರಿಚಯ ಪಡೆದಿದ್ದನು. ಈಗುಪ್ತದ ಪ್ರಾಚೀನ ಶಿಲ್ಪಕೃತಿಗಳಲ್ಲಿ ಅಲ್ಲಿನ ಕೇಟ್‌ಫಿಶ್‌ನ ಚಿತ್ರಕೂಡ ಅಂಕಿತವಾಗಿದೆ. ರೋಮ್‌ವಾಸಿಗಳು ಬಾವು, ಶಿರೋವೇದನೆ ಮತ್ತು ಮೆದುಳಿಗೆ ಸಂಬಂಧಿಸಿದ ರೋಗಗಳಿಗೆ "ಟಾರ್ಪೆಡೊ" ಹೆಸರಿನ ವಿದ್ಯುತ್ತಿನ ಮೀನುಗಳನ್ನು ಪ್ರಯೋಗಿಸುತಿದ್ದರು. ಇವರ ಈ ಚಿಕಿತ್ಸಾ ಪದ್ಧತಿಯು ವಸ್ತುತಃ ವಿದ್ಯುದ್ದ್ವಾರಾ ಚಿಕಿತ್ಸಾ ಪ್ರಣಾಳಿಯ ಪೂರ್ವರೂಪವಾಗಿದೆ.

೧೭೮೬ರಲ್ಲಿ ಜಿಯೋವಾನೀ ಬೋರ್ಲ್ಲಿ ಯೆಂಬವನು ಈ ಮೀನುಗಳ ಮಾಂಸ—ಪೇಶಿಗಳು ಒಂದು ಕ್ರಮದಲ್ಲಿ ತೆರೆಯುತ್ತವೆ ಮತ್ತು ಮುಚ್ಚುತ್ತವೆಯೆಂದೂ ಆಗ, ಅವುಗಳಲ್ಲಿ ಒಂದು ನಿಯಮಿತ ರೂಪದಲ್ಲಿ ಆಘಾತದ ಅನುಭವವಾಗುತ್ತದೆಯೆಂದೂ ಕಂಡುಹಿಡಿದನು. ಮೀನುಗಳು ವಿದ್ಯುತ್ ಪ್ರವಾಹವನ್ನು ಹರಿಯಿಸುತ್ತ ಇರುತ್ತವೆಂಬುದನ್ನು ಸ್ವತಂತ್ರ ಪ್ರಯೋಗಗಳನ್ನು ನಡೆಸಿದ ಶ್ರೀಗಳಾದ ಲಾರೆನ್ಸ್ ಸ್ಕಾರ್ಟ್ ಚಾಂಸ್ ಗ್ರೆಬ್ಸೆಂಡ್ ಮತ್ತು ಮಿಚಲ್ ಆಡೇನ್ಸನ್‌ರು ಕಂಡುಹಿಡಿದರು. ಶ್ರೀಗಳಾದ ಜಾನ್‌ವಾಶ್, ಹೆನ್ರಿಕೈವೇಂಡಿಶ್, ಹ್ಯೂವಿಲಿಯಂಸನ್ ಮತ್ತು ಲಜರೋ ಸ್ಪೈಲನ್ ಜಾನಿಯವರು ಮೀನುಗಳ ಶರೀರದಲ್ಲಿ ವಿದ್ಯುತ್ ಉತ್ಪಾದನೆ ಮಾಡುವ ಯಂತ್ರಗಳಿವೆಯೆಂಬುದನ್ನು ಸಂಶೋಧನೆ ಮಾಡಿದರು.

ಗಾಲ್ವಾನಿ ಮತ್ತು ಏಲೆಸ್ಸಾಂಡ್ರೊವೋಲ್ಟರ ನಡುವೆ ತತ್ವಗಳ ಸಂಬಂಧದಲ್ಲಿ ವಾದವಿವಾದಗಳು ನಡೆದಿದ್ದುವು. ಇವುಗಳಲ್ಲಿ ವಿದ್ಯುತ್ತೀಯ ಮೀನುಗಳ ವಿಷಯವೂ ಮಹತ್ವಪೂರ್ಣವಾಗಿತ್ತು. ಗಾಲ್ವಾನಿಯು ಒಂದು ಕಪ್ಪೆಯನ್ನು ಹಿಡಿದು, ಅದರಿಂದ ವಿದ್ಯುತ್ತನ್ನು ತಯಾರಿಸಿ ಜಂತುಗಳಲ್ಲಿಯೂ ವಿದ್ಯುತ್ತಿದೆಯೆಂಬುದನ್ನು ಪ್ರದರ್ಶಿಸಿದನು. ಈ ಸಿದ್ಧಾಂತವು ಜಾಂತ್ರಿಕ ವಿದ್ಯುತ್ ಸಂಬಂಧಿಯೆಂದು ವಾಲ್ಟ ಒಪ್ಪಿರಲಿಲ್ಲ. ಆದರೆ ಗಾಲ್ವಾನಿಯ ಸಿದ್ಧಾಂತವು ಸರಿಯಾಗಿತ್ತು. ಆ ಸಮಯ ವಿದ್ಯುತ್ ಧಾರೆಯನ್ನು ಪ್ರದರ್ಶಿಸುವ ಅನ್ಯಮಾಧ್ಯಮವಾವುದೂ ಇರಲಿಲ್ಲ. ಕಪ್ಪೆಯ ಸ್ನಾಯು ಪರೀಕ್ಷೆಯನ್ನು ಗಾಲ್ವಾನಿ ಮಾಡಿದ್ದನಾದರೂ ಅದು ಆ ವಿದ್ಯುದ್ದ್ವಾರೆಯನು ಹಿಡಿದು ಪ್ರಕಟ ಮಾಡುವ ಸಾಧನ ಮಾತ್ರವಾಗಿತ್ತು. ಆದರೆ, ವೋಲ್ಟಾನ ಜಾಂತ್ರಿಕ ವಿದ್ಯುತ್ತನ್ನು ತಿರಸ್ಕರಿಸುವ ವಿಚಾರವಾದರೂ ಸರಿಯಾದುದಲ್ಲ.

ಭಾರತದಲ್ಲಿ ಅಮೇರಿಕೆಯ ರಾಯಭಾರಿ ಶ್ರೀ ಗೆಲ್‌ಬ್ರೈಥ್ ಕುಟುಂಬವಿದು. ಎಡದಿಂದ ಬಲಕ್ಕೆ—ಶ್ರೀಮತಿ ಗೆಲ್‌ಬ್ರೈಥ್, ಮಗ ಜೇಮ್ಸ್, ಶ್ರೀ ಗೆಲ್‌ಬ್ರೈಥ್ ಮತ್ತು ಮಗಂದಿರು ಅಲನ್ ಮತ್ತು ಪೀಟರ್.

ಅಲ್ಪ ಪ್ರಮಾಣದ ವಿದ್ಯುತ್ತು ತಯಾರಿಸುವ ಮೀನುಗಳಿಗೆ ಪ್ರಾಯೋಗಿಕ ಮಹತ್ವವಿಲ್ಲವೆಂದು ಬಹಳ ಸಮಯದ ವರೆಗೆ ತಿಳಿಯಲಾಗುತ್ತಿತ್ತು. ೧೯೫೦ರಲ್ಲಿ ನ್ಯೂಯೋರ್ಕಿನ ಮತ್ಸ್ಯಶಾಲೆಯಲ್ಲಿ ಮೀನು ವಿದ್ಯುದುತ್ಪಾದನೆಯ ಸಂಬಂಧದಲ್ಲಿ ಸಂಶೋಧನೆ ನಡೆಸಿದ ಶ್ರೀ ಕೋರ್ಟಿಸ್‌ರವರು ಮತ್ತಷ್ಟು ಬೆಳಕು ಚೆಲ್ಲಿ ಮೀನುಗಳು ಕೇವಲ ೨೫ ಸೆಕುಂಡುಗಳಲ್ಲಿ ವಿದ್ಯುತ್ತನ್ನು ಉತ್ಪಾದಿಸ ಬಲ್ಲವೆಂಬುದನ್ನು ಸಿದ್ಧ ಮಾಡಿತೋರಿಸಿದರು.

ಆಫ್ರಿಕೆಯ ಜಿಮ್ನಾರಕಸ್ ಮತ್ತು ಅಮೇರಿಕೆಯ ನ್ಯೈಫ್ ಜಾತಿಯ ಮೀನುಗಳು ನಿರಂತರ ವಿದ್ಯುತ್ ಪ್ರಸರಣ ಮಾಡುತಿರುವುವು ಎಂದು ಪ್ರಯೋಗಗಳ ಮೂಲಕ ತಿಳಿದುಬಂದಿದೆ. 'ಜಿಮ್ನಾರಕಸ' ಎಂಬುದು ಪ್ರತಿ ಸೆಕುಂದಿಗೆ ೩೦೦ ಮತ್ತು 'ನ್ಯೈಫ್' ಮೀನು ಪ್ರತ್ಯೇಕ ಸೆಕುಂದಿಗೆ ೧೫೦೦ ವಿದ್ಯುತ್ತನ್ನು ಪ್ರಸಾರಮಾಡುವುದೆಂಬುದು ಸಿದ್ಧವಾಗಿದೆ.

ಈ ಮೀನುಗಳ ವಿದ್ಯುದುತ್ಪಾದಕ ಅಂಗವು ಮೆದುಳಿನಿಂದ ಸಂಚಾಲಿತವಾಗುತ್ತದೆ. ಆದರೆ, ಆದೇಶ ನೀಡುವ ಈ ಕೇಂದ್ರಗಳ ಗತಿವಿಧಿಗಳು ಮಾತ್ರ ಅತಿ ಜಟಿಲವಾಗಿವೆ. ಆದೇಶಕೊಡುವ ಈ ಕೇಂದ್ರವು ವಿಭಿನ್ನ ರೂಪ ಧರಿಸುತ್ತದೆ ಮತ್ತು ನಿಜವಾಗಿ ಬೇರೆ ರೂಪದಲ್ಲಿಯೇ ತನ್ನ ಆದೇಶವನ್ನು ವಿದ್ಯುತ್—ಉತ್ಪಾದಕ ಕ್ರಿಯೆಗಾಗಿ ಕಳಿಸುತ್ತದೆ. ಈ ಮೀನುಗಳಲ್ಲಿ ವಿದ್ಯುದುತ್ಪಾದನೆ ಬಹಳ ದಕ್ಷತೆಯಿಂದ ನಡೆಯುತ್ತದೆ. ಸಶಕ್ತ ವಿದ್ಯುತ್—ಮೀನುಗಳಿಗೆ ಅತಿಶಕ್ತಿಶಾಲಿ ವಿದ್ಯುತ್ ಧಾರೆಗಳ ಆವಶ್ಯಕತೆಯಿರುವುದು.

ವಿದ್ಯುದುತ್ಪಾದಕ ಮೀನುಗಳಲ್ಲಿ ಲಕ್ಷ ಗಟ್ಟಲೆಯಲ್ಲಿ ಇಲೆಕ್ಟ್ರೋಪ್ಲೇಟ್‌ಗಳು ಇವೆಯೆಂಬುದನ್ನು ಪ್ರಯೋಗಗಳ ಮೂಲಕ ಈಗ ಕಂಡುಕೊಂಡಿದ್ದಾರೆ. ಇವುಗಳು ಶರೀರ ತುಂಬಿ ಹರಡಿದ್ದ ವಿವಿಧ ಸ್ನಾಯುಗಳೊಡನೆ ಸುಸಂಬದ್ಧವಾಗಿವೆ.

ಬೇರೆ ಬೇರೆ ಮೀನುಗಳಲ್ಲಿರುವ ವಿದ್ಯುದುತ್ಪಾದಕ ಯಂತ್ರವು ಬೇರೆ ಬೇರೆ ಸಿದ್ಧಾಂತಕ್ಕನುಸಾರವಾಗಿ ಕೆಲಸ ಮಾಡುತ್ತದೆ. 'ಕೇಟ್ ಫಿಶ್' ಮೀನಿನ ಶರೀರದಲ್ಲಿ ವಿದ್ಯುತ್ತು ತಯಾರಾಗುವ ಕ್ರಮವೇ ವಿಭಿನ್ನವಿದೆ. ಅದರ ಬೆನ್ನೆಲುಬಿನ ಇಕ್ಕಡೆಗಳಲ್ಲಿ ಒಂದು ಅತಿ ಸೂಕ್ಷ್ಮವಾದ ಧಮನಿಯಿರುತ್ತದೆ. ಈ ಧಮನಿಯಿಂದ ಲಕ್ಷಾಂತರ ಉಪಶಾಖೆಗಳು ದೇಹದತುಂಬ ಹರಡಿದ್ದು ಇವುಗಳೊಡನೆ ಶರೀರದ ಇಲೆಕ್ಟ್ರೋಪ್ಲೇಟ್‌ಗಳು ಜೋಡಿಸಲ್ಪಟ್ಟಿವೆ.

ಇಷ್ಟನ್ನು ತಿಳಿದುಕೊಂಡಿರುವೆವಾದರೂ ಈ ಪ್ರಾಕೃತಿಕ ಯಂತ್ರವು ಕೆಲಸ ಮಾಡುವುದು ಹೇಗೆ ಮತ್ತು ಈ ಕೆಲಸ ನಡೆಯುವುದು ಹೇಗೆ ಎಂಬುದು ಇನ್ನೂ ಒಗಟಾಗಿ ಉಳಿದಿದೆ. ಬೆಳೆಯುತ್ತಿರುವ ವಿಜ್ಞಾನ ಶಾಸ್ತ್ರ ಈ ರಹಸ್ಯವನ್ನೂ ಹೊರಗೆಡಹಲು ಸದ್ಯದಲ್ಲಿಯೇ ಸಮರ್ಥವೆನಿಸಬಹುದು.

ಮುಚ್ಚಿದರೆ ಮುಗುಳು! ಬಿಚ್ಚಿದರೆ ಅರಳು!!
ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಕುಸುಮವೇ—
ಶ್ರೀ ಕೆ. ಹೊನ್ನಯ್ಯ ಶೆಟ್ಟರ
ಮುಗುಳು
ದಿ| ಶ್ರೀ. ಕಡೆಕಾರು ರಾಜಗೋಪಾಲ ಕೃಷ್ಣರಾಯರ ಮುನ್ನುಡಿ.
ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದ ಚೊಕ್ಕ ಪುಸ್ತಕ
ವಿದ್ಯಾರ್ಥಿಗಳು ನಲಿನಲಿದು ಓದುವುದು, ಓದಿ ಓದಿ ನಲಿವುದರಿಂದ
ಈಗ ೧೨ನೇ ಮುದ್ರಣವನ್ನು ಕಂಡಿದೆ.
ಅಭಿನಯಕ್ಕೆ, ಕೋಲಾಟಕ್ಕೆ, ನರ್ತನಕ್ಕೆ ಅನುಕೂಲವಾದ ಪದ್ಯಗಳು.
ತ್ರಿವರ್ಣ ಮುಖಪತ್ರ, ಇಷ್ಟಾದರೂ ಬೆಲೆ: ೦ ೬.೦ (ಟಿ. ಖರ್ಚು ಬೇರೆ).
ಪ್ರತಿಗಳು ಎಲ್ಲ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಅಭಿಪ್ರಾಯ:

ಅಜ್ಞಾನವೇ ಪರಮ ಸುಖ

"ಹೆಡ್ಡನಿಗೆ ಒಂದು ದಾರಿ; ಬುದ್ಧಿವಂತನಿಗೆ ಮೂರು ದಾರಿ"—ಆದುದರಿಂದ ಲೋಕಕ್ಕೇ ಬುದ್ಧಿಗೇಡಿಗಳಿಂದ ಹಾನಿ ಕಡಿಮೆ; ಬುದ್ಧಿಜೀವಿಗಳಿಂದಲೇ ಅಶಾಂತತೆ—ಪ್ರಚಲಿತ ವಾತಾವರಣವು ನಮಗೆ ಕಲಿಸುವ ಪಾಠವಿದು. ಆದುದರಿಂದ ಅಜ್ಞಾನವೇ ಪರಮ ಸುಖ ಎನ್ನಬಹುದೆ?

ಶ್ರೀ ನಾಗರಾಜ, 'ಹಿಂದೀರತ್ನ', ಉಜಿರೆ

ನಮ್ಮ ಸಂಸ್ಕೃತದ ಅಧ್ಯಾಪಕರು ಹೇಳಿದ ಒಂದು ಕತೆಯಿದು:

"ಒಂದು ಬೆಕ್ಕು ಮತ್ತು ಒಂದು ನರಿ ಗೆಳೆಯರಾಗಿ, ದಾರಿಯಲ್ಲಿ ಹೋಗುವಾಗ, ಬೇಟೆಗಾರರು ಎದುರಾದರಂತೆ. ಆಗ ಮರಹತ್ತುವ ಒಂದೇ ಉಪಾಯ ತಿಳಿದ ಬೆಕ್ಕು ಮರಹತ್ತಿತು. ಹಲವು ಉಪಾಯಗಳ ತಜ್ಞನಾದ ನರಿಯಾದರೋ—ಆ ಉಪಾಯವೋ .. ಈ ಉಪಾಯವೋ—ಎಂಬ ನಿರ್ಧಾರಕ್ಕೆ ಕೂಡಲೇ ಬರಲಾಗದುದರಿಂದ ಬೇಟೆಗಾರರ ಪಾಲಿನ ತುತ್ತಾಯ್ತು"

—ಇಲ್ಲಿ ಬೆಕ್ಕು ನರಿಗಿಂತ ಜಾಣನಲ್ಲದಿದ್ದರೂ, ಪ್ರಾಣಾಪಾಯದಿಂದ ಪಾರಾಯ್ತು. ನರಿಗೆ ತನ್ನ ಜಾಣತನವೇ ಮುಳುವಾಯ್ತು!

ಇಂದಿನ ಜೀವನದಲ್ಲಿ, ನಮಗೆ ನಮ್ಮ ಜಾಣತನವೇ ತೊಡಕಾಗಿ, ಪರಿಣಮಿಸುವ ಸನ್ನಿವೇಶಗಳು ಹಲವಾರು. ವಿವಿಧ ಜನಾಂಗಗಳನ್ನು ನೋಡಿದರೆ,—ಪರಿಶೀಲಿಸಿದರೆ, ನಾಗರಿಕರಲ್ಲದ ದೇಶಗಳ ಜನರೇ—ಬಹುಶಃ ಹೆಚ್ಚು ತೊಂದರೆ ತಕರಾರುಗಳಿಲ್ಲದೆ ಬದುಕುತ್ತಿದ್ದಾರೆ. ಮೂಲ ಜನಾಂಗದವರೆನಿಸಿದ, ಕಾಡು ನಿವಾಸಿಗಳೂ ಬಹುಶಃ ನಮ್ಮಲ್ಲಿರುವ ನಾಗರಿಕರಷ್ಟು ಮಾನಸಿಕ ತಾಪತ್ರಯವಿಲ್ಲದೆ—ನಿರಾತಂಕ ಜೀವನವನ್ನು ಸಾಗಿಸುವದನ್ನು ಕಾಣಬಹುದು.

ಹುಚ್ಚು ಹಿಡಿಯುತ್ತದೆ— ನಮ್ಮಲ್ಲಿ ಕೆಲವರಿಗೆ.

ಮತ್ತೆ ಕೆಲವರಿಗೆ ಅರೆಹುಚ್ಚು—ಇಲ್ಲವೇ - ಒಂದು ವಿಷಯಕ್ಕೆ ಸಂಬಂಧಿಸಿದ 'ಹುಚ್ಚು' ಇರುತ್ತದೆ. ಇದು ಆಯಾ ವ್ಯಕ್ತಿಯ ಜ್ಞಾನದ ಕಾಳಜಿಕಾರಣದಿಂದಲ್ಲವೇ. ಪೂರ್ಣಜ್ಞಾನಿಯಾದವನಿಗೆ— ಇಂತಹ ತಾಪತ್ರಯ ಕಡಿಮೆಯೆಂದು ಕೆಲವರ ಅಂದಾಜು. ಆದರೆ ಆ ಪೂರ್ಣಜ್ಞಾನವೆಂದರೆ—ವೃದ್ಧಾಪ್ಯದ ಕೂಸು. ವ ಎದಿಕನದ ಪ್ರಾರಂಭದಲ್ಲಿ ತಾನಾಗಿಯೇ ಈ ವೈರಾಗ್ಯ ಕಾಣಿಸುವುದೇ ವಿನಃ ಆ ವರೆಗೆ—ಮನುಷ್ಯ ಮಹತ್ವಾಕಾಂಕ್ಷೆಯ ಬೆನ್ನೇರಿ, ನಾಗಾಲೋಟದಿಂದ ಸಾಗುವಾಗ ಎದುರಿಸಬೇಕಾಗುವ ಪ್ರಸಂಗಗಳು ಅವನ ಮತಿಗೆಡಿಸುತ್ತವೆ.

ಇಂತಹ ಹುಚ್ಚಿಗೆ ಈಡಾಗುವವರು—ಭಾವನಾಪ್ರಿಯರು ಅಥವಾ ವಿಶೇಷ ಜ್ಞಾನಿಗಳು—ಪ್ರತಿಭಾವಂತರೆಂದೇ ಹೇಳಬಹುದು.

ಒಬ್ಬ ಜನಸಾಮಾನ್ಯ ಅಂತಹದಕ್ಕೆ ಗುರಿಯಾಗುವದು—ಕಡಿಮೆ. ಏಕೆಂದರೆ ಅವನ ಮೆದುಳು ಅದಕ್ಕೆ ಪಕ್ವಾಗುವಷ್ಟು ಬಲದ್ದೂ ಅಲ್ಲ—ಅವಕಾಶವೂ ಇಲ್ಲ 'ದೃಢವಾದ ಶರೀರದಲ್ಲಿ ದೃಢವಾದ ಮನಸ್ಸು ಇರುತ್ತದೆ' ಯೆನ್ನುವ ಮಾತು ಇದೆ. ಆದರೆ ದುರ್ಬಲವಾದ ಮನಸ್ಸುಳ್ಳವನ ಶರೀರವೇ ದೃಢವಾಗಿ ಬೆಳೆಯುತ್ತದೆ. ಜೀವನದಲ್ಲಿ ಪ್ರತಿಯೊಂದು ವಿಚಾರಕ್ಕೂ ಹೆಚ್ಚಿನ ಗಮನ ಕೊಡುವವನ ಮನಸ್ಸು—ಶರೀರಗಳೆರಡೂ ದುರ್ಬಲವಾಗುವ ಸಂಭವ ಹೆಚ್ಚು!

ಓರ್ವ ಹೆಡ್ಡನಿದ್ದಾನೆ—ಅವನಿಗೆ ಯಾವುದೇ ವಿಚಾರ ಫಕ್ಕನೆ ತಲೆ ಹತ್ತುವುದಿಲ್ಲ. ಸಾಮಾಜಿಕ ವ್ಯವಹಾರದಲ್ಲಿ ಯಾ ಅವನ ಔದ್ಯೋಗಿಕ ಜೀವನದಲ್ಲಿ ಪ್ರತಿಯೊಂದರಲ್ಲೂ ಕುಶಲನಲ್ಲ. ಎಲ್ಲರೂ ಹೀಗಳೆಯುವಂತಹ ಮನುಷ್ಯ! ಅಂತಹ ಮನುಷ್ಯನ ಮೆದುಳು ಸ್ವಭಾವತಃ ಜಡವೆಂದಾದರೆ, ಅದು ಸಣ್ಣ ವಿಷಯಗಳಿಗೂ ಅನಗತ್ಯವಾದ ಕೋಲಾಹಲವನ್ನು ಎಬ್ಬಿಸಲಾರದು! ಬಿರುಗಾಳಿಯನ್ನೆಬ್ಬಿಸಿ, ಮನಸ್ಸನ್ನು ಭ್ರಾಂತಿಯ ಬಂಡೆಗಲ್ಲಿಗೆ ಅಪ್ಪಳಿಸಲಾರದು! ಅಂತಹವನು ಪ್ರತಿಯೊಂದು ವಿಷಯವನ್ನೂ ನಿಧಾನವಾಗಿ, ತೀವ್ರತೆಯಿಲ್ಲದೆ ಚಿಂತಿಸಿ, ವಿಚಾರಿಸಿ, ಹೆಜ್ಜೆ ಇಡುವುದರಿಂದ ಅವನಿಗಾಗುವ ತೊಂದರೆ ತಾಪತ್ರಯಗಳು ಕಡಿಮೆ. ನಮಗೆ ತೊಂದರೆಯೆನಿಸಬಹುದಾದರೂ, ಅವನ ಪಾಲಿಗದು ಸರ್ವ ಸಾಮಾನ್ಯ!

ತಿಳುವಳಿಗಸ್ತರಾದ ಪಟ್ಟಣಿಗರು ನಡೆಸುವ ಚಳುವಳಿ, ಗೊಂದಲ, ಉದಾಂಧವೇಗಳನ್ನು ಹಳ್ಳಿಯ 'ಅಜ್ಞಾನಿ'ಗಳೆನ್ನಿಸುವ ಅನಾಗರಿಕ'ರೆನ್ನಿಸುವ ಮಂದಿ ಉಂಟುಮಾಡ ಬಲ್ಲರೇ? ಸರ್ವಥಾ ಅಸಾಧ್ಯ.

ಕೊಂಗೋದಲ್ಲಿ ಲುಮುಂಬಾ ಸತ್ತಾಗ ನಮ್ಮ ದೇಶದಲ್ಲಿ ಬೊಬ್ಬಿಡುತ್ತಾ ರಾಯಬಾರಿ ಕಚೇರಿಯ ಕಿಟಕಿಯ ಗಾಜುಗಳನ್ನು ಒಡೆಯುವ ದೆಹಲಿಯಲ್ಲಿ ಅರ್ಧಸಚಿವರು ತೆರಿಗೆಯೇರಿಸಿದಾಗ ನಮ್ಮೂರ ಬೀದಿಗಳಲ್ಲಿ ಮೆರವಣಿಗೆ ಮಾಡಿ ಊರ ಜನರ ದೈನಂದಿನ ವ್ಯವಹಾರಗಳಿಗೆ ತಡೆಯೊಡ್ಡುವ, ಆಂಗ್ಲ ತರುಣಿಯರು ತಮ್ಮ ತುಟಿಗಳಿಗೆ ಲಿಪ್‌ಸ್ಟಿಕ್ ಬಳಿಯುತ್ತಾರೆಂದು ನಮ್ಮವರೂ ಕರಿ ಮೋರೆಯ ತುಟಿಗೆ ಕೆಂಪು ರಂಗೇರಿಸುವ, ಅತ್ಯಂತ ಜ್ಞಾನವನ್ನು ವಿಶೇಷ ಜ್ಞಾನವೇ ವಿಜ್ಞಾನವೆಂದಾದರೆ-ವಿಜ್ಞಾನದ ಪರಮಾವಧಿಯನ್ನು ಕಂಡಾಗ ಅಜ್ಞಾನದ ಹೊಳೆ ಹರಿದು, ನೆರೆದುಂಬಿ-ಜನಾಂಗಜನಾಂಗಗಳನ್ನೇ ಮುತ್ತಿಬಿಡಬಾರದೇ—ಅನ್ನಿಸುತ್ತದೆ.

ವಿಜ್ಞಾನದ ವೃಕ್ಷವಾದ ಆಟಂಬಾಂಬುಗಳಂತಹ ಕ್ರೂರಾಸ್ತ್ರಗಳು ಹಿರೋಶಿಮಾ—ನಾಗಾಸಾಕಿಗಳಲ್ಲಿ ಬಿಟ್ಟ ಹೂಗಳನ್ನು ಹಣ್ಣುಗಳನ್ನು ಕಾಣುವಾಗ, ನಮ್ಮ ಜ್ಞಾನವೇ ನಮಗೆ ಕೇಡು, ಅಜ್ಞಾನವೇ ಪರಮ ಸುಖ—ಎಂಬ ಮಾತಿನ ಸತ್ಯಾಂಶ ನಮಗೆ ಮನದಟ್ಟಾಗುತ್ತದೆ.

ಅಭಿಪ್ರಾಯ

(೩ನೇ ಪುಟದಿಂದ)

ದ ಆಸ್ಪದವಿತ್ತು, ಪ್ರೋತ್ಸಾಹ ನೀಡುವುದಗತ್ಯ.

ವಿದ್ಯಾಭ್ಯಾಸದ ಯೋಜನೆಯು ಯಶಸ್ವಿಯಾಗಲು ಹಳ್ಳಿಗರ ಪ್ರೋತ್ಸಾಹ ಬೇಕೇ ಬೇಕು. ಎಷ್ಟೋ ಜನರು ತಮ್ಮ ಅಜ್ಞಾನ, ಉದಾಸೀನತೆಗಳಿಂದ ಮಕ್ಕಳನ್ನು ಶಾಲೆಗಳಿಗೆ ಕಳುಹಿಸದಿರುವುದು ನಿಜವಾಗಿ ಬಡತನದ ತಮ್ಮ ಸಮಸ್ಯೆಗಳನ್ನು ಪರಿಹರಿಸಲಾಗದೆ ಕಳುಹಿಸದಿರುವವರ ಸಂಖ್ಯೆಯೂ ಕಡಿಮೆಯಲ್ಲ. ಅವರ ಮಕ್ಕಳನ್ನು ಶಾಲೆಗೆ ಬರಬೇಕೆಂದು ಒತ್ತಾಯಿಸುವಾಗ, ಮಕ್ಕಳ ವಿದ್ಯಾಭ್ಯಾಸಕ್ಕೆ ಬೇಕಾಗುವ ಪುಸ್ತಕ, ಸ್ಲೇಟುಗಳು, ಊಟದ ವ್ಯವಸ್ಥೆಗಳನ್ನು ಮಾಡುವುದಲ್ಲದೆ, ಹೆತ್ತವರ ಸಂಕಷ್ಟ, ಪರಿಸ್ಥಿತಿಗಳನ್ನೂ ಗಮನದಲ್ಲಿಡುವುದವಶ್ಯ. ಅವರನ್ನು ದೂಷಿಸದೆ ಸಹಾನುಭೂತಿಯಿಂದ ಅವರ ಸಮಸ್ಯೆಗಳನ್ನು ಕಂಡುಹಿಡಿದು, ಪರಿಹಾರ ಸೂಚಿಸಿ, ಸಹಕರಿಸುವಂತೆ ಮಾಡಿಕೊಳ್ಳುವುದಗತ್ಯ. ಮಕ್ಕಳಿಗೆ ಬೇಕಾಗಬಹುದಾದ ವಿದ್ಯಾಭ್ಯಾಸದ ಸಮಯದ ಮಿತಿಯನ್ನು ಕಡಿಮೆಮಾಡಿ, ಆಟ ಮತ್ತು ಇನ್ನಿತರ ಚಟುವಟಿಕೆಯ ಸಮಯಗಳಲ್ಲಿ ಹೆತ್ತವರೊಂದಿಗೆ ಕಳೆಯುವಂತೆ ಮಾಡಿದಲ್ಲಿ, ಹಳ್ಳಿಗರ ಸಂಕಷ್ಟ, ಕಟ್ಟಡಗಳಲ್ಲಿ ಸ್ಥಳಾಭಾವ, ಅಧ್ಯಾಪಕರ ಕೊರತೆ, ಮಧ್ಯಾಹ್ನ ಊಟ, ವಿದ್ಯಾಭ್ಯಾಸದ ಮಟ್ಟದ ಇಳಿಯುವುದು, ಅಧ್ಯಾಪಕ ವಿದ್ಯಾರ್ಥಿ ದಾಮೋಶೆಯ ಮುಂತಾದುವುಗಳಿಗೆ ಪರಿಹಾರವೊದಗಿ ಪ್ರಯೋಜನಕಾರಿಯಾದ ಉತ್ತಮ ವಿದ್ಯೆ ದೊರಕುವಂತಾಗಬಹುದೋ ಎಂಬುದನ್ನು ನಿಷ್ಪಕ್ಷಪಾತ ದೃಷ್ಟಿಯಿಂದ ಪರಿಶೀಲಿಸುವುದು ಸಂದರ್ಭೋಚಿತವೂ, ಅಗತ್ಯವೂ ಆಗಿದೆ.

ದೇಶದ ಭಾವೀ ಉನ್ನತಿಗೆ ಮಕ್ಕಳಿಗೆ ನೀಡುವ ಶಿಕ್ಷಣವೇ ತಳಹದಿ: ಕಡ್ಡಾಯ ಶಿಕ್ಷಣದಂತಹ ವ್ಯಾಪಕ ಹಾಗೂ ವಿಶಾಲ ಯೋಜನೆಗಳನ್ನು ಕೈಗೊಳ್ಳುವಾಗ ಈಗ ಸಿಗುತ್ತಿರುವ ವಿದ್ಯಾಭ್ಯಾಸ, ಸೌಕರ್ಯ, ಸೌಲಭ್ಯಗಳೂ ಮಾಯವಾಗಿ ಶಿಕ್ಷಣಕ್ಕೆ ಹಾನಿಯೊದಗುವುದು ಖಂಡನೀಯವಾಗಿದೆ.

ಕಡ್ಡಾಯ ವಿದ್ಯಾಭ್ಯಾಸದ ಯೋಜನೆ ಜಾರಿಗೆ ತರುವ ದೃಷ್ಟಿಯಿಂದ ಶಾಲಾ ನಿಯಮಗಳನ್ನು ಬದಲಾಯಿಸುವಾಗ, ಅವ್ಯವಸ್ಥೆಯಾಗಬಾರದು. ಆಗಾಗ ಬದಲಾಯಿಸುವ ಅನಿಶ್ಚಿತ ಪರಿಸ್ಥಿತಿ ಯೊದಗಬಾರದು. ಪ್ರಯೋಜನಕಾರಿಯೂ, ಸಮರ್ಥವೂ ಆದ ಉತ್ತಮ ವಿದ್ಯೆ ದೊರಕುವಂತಾಗುವ ವ್ಯವಹಾರ ಸಾಧ್ಯವಾಗುವ ನಿಯಮಗಳನ್ನು ತಂದು ವಿದ್ಯಾಭಿವೃದ್ಧಿಯಾಗುವಂತೆ ಮಾಡಬೇಕಲ್ಲದೆ, ಅವನತಿಯುಂಟಾಗುವ ಪರಿಸ್ಥಿತಿಯೊದಗಬಾರದು. ಯೋಜನೆಯು ಯಶಸ್ವಿಗೊಳ್ಳುವುದರೊಂದಿಗೆ, ಉತ್ತಮ ಪರಿಣಾಮ, ಫಲಿತಾಂಶಗಳೂ ಉಂಟಾಗುವಂತಾಗಬೇಕು. ಶಿಕ್ಷಣ ಶಾಖೆಯ ಅಧಿಕಾರಿಗಳೂ, ತಜ್ಞರೂ, ಸಂಬಂಧಪಟ್ಟವರೂ ಆಸಕ್ತಿವಹಿಸಿ, ಈ ಸಂದರ್ಭದಲ್ಲಿ ಸೂಕ್ತ ಕಾರ್ಯಪ್ರವೃತ್ತರಾಗಬೇಕು.

"ನಚಿಕೇತ"ರ

ಇನ್ನೊಂದು ನವೀನ ಕಾದಂಬರಿ—

ಋಣ ಯಾತ್ರೆ

ಇದೀಗ ಪ್ರಕಟವಾಗಿದೆ.

ಬೆಲೆ ರೂ. 1-50 ನ. ಪೈಸೆ.

ಮೊದಲು ಪ್ರಕಟವಾದ ಕಾದಂಬರಿ—

ಭಾವಾರ್ಚನೆ

ಬೆಲೆ ರೂ. 1-25 ನ. ಪೈಸೆ.

ಪ್ರತಿಗಳು ಸಿಗುವ ಸ್ಥಳಗಳು:—

ನವಯುಗ ಪ್ರೆಸ್, ಉಡುಪಿ.

ನವಭಾರತ ಬುಕ್ ಡಿಪೊ, ಉಡುಪಿ.

ಧಾರಾವಾಹಿ ಕಾದಂಬರಿ

(೧ನೇ ಪುಟದಿಂದ)

"ಅದಕ್ಕಿಂತ ಕಡಿಮೆ ತೆಗೆದುಕೊಳ್ಳಲು ಸಾಧ್ಯವಿಲ್ಲವೇ?"

ಕ್ಷಮಿಸಿ........ಇಲ್ಲ.

"ಒಳ್ಳೇದು. ನಾನು ಎಂದು ಬರಬೇಕು?' ಎಂದು ವಿಚಾರಿಸಿದಳು ಮಾಯಾ.

"ನಾನು ಸ್ವಯಂ ಸೂಚನೆ ಕೊಡುತ್ತೇನೆ. ಅದಕ್ಕಿಂತ ಮುಂಚೆ ಬರುವ ಕಷ್ಟ ತೆಗೆದು ಕೊಳ್ಳಬೇಡಿರಿ. ಯಾಕೆಂದರೆ ಬಂದವರೊಡನೆ ಶಾಂತ ರೀತಿಯಲ್ಲಿ ಕುಳಿತು ಮಾತಾಡುವಷ್ಟು ವ್ಯವಧಾನ ನನಗಿಲ್ಲ. ಈ ದುರ್ವರ್ತನೆಯ ವ್ಯವಹಾರಕ್ಕಾಗಿ ನನ್ನ ಕ್ಷಮಿಸಿ'' ಎಂದು ಗಂಭೀರ ರೀತಿಯಲ್ಲಿ ನುಡಿದ ಜಯಂತ.

"ಅಪ್ಪಣೆ, ಮುಂದೆಂದೂ ತಮ್ಮ ಅಪ್ಪಣೆ ಪಡೆಯದೆ ಇಲ್ಲಿಗೆ ಬರುವುದಿಲ್ಲ." ಎಂದು ನಿರಾಶಾಪೂರ್ವಕ ದೃಷ್ಟಿಯನ್ನು ಜಯಂತರ ಕಡೆ ಬೀರಿದಳು. ಆದರೆ, ಅವರು ಅದಕ್ಕಿಂತ ಮುಂಚೆಯೇ ಅಲ್ಲಿಂದ ಹೋಗಿದ್ದರು. ಅನಂತರ ಅವರು ಹೊರ ಬಂದು, ಕಾರಿನಲ್ಲಿ ಕುಳಿತು ಮನೆಗೆ ಮರಳಿದರು.

ಅವರು ಹೊರಟು ಹೋದ ಅನಂತರ ನವಲೇಂದ್ರನು ನೌಕರ ಕೊಠಡಿಗೆ ಹೋದನು. ಈ ವಿಷಯದಲ್ಲಿ ಜಯಂತರು ಮೊದಲೇ ಆತನಲ್ಲಿ ತಿಳಿಸಿದ್ದುದರಿಂದ ನೌಕರೆಲ್ಲಾ ಇದ್ದೇ ಇದ್ದರು. ನವಲೇಂದ್ರನು ಓರ್ವೋರ್ವರನ್ನೂ ಕರೆದು ಏನೋ ಹೇಳಿದನು. ಅವರು ತಕ್ಷಣವೇ ಒಂದೊಂದು ಸ್ಥಳದಲ್ಲಿ ಹೋಗಿ, ತಮ್ಮ ಪಿಸ್ತೂಲು (ರಿವಾಲ್ವರು)ಗಳನ್ನು ಸರಿಪಡಿಸಿ ಜೇಬಿನಲ್ಲಿಟ್ಟುಕೊಂಡರು ರಾತ್ರಿಯು ಬಹಳವಾದುದರಿಂದ ಜಯಂತರು ಮಲಗಲು ಶಯನ ಗೃಹಕ್ಕೆ ಹೋದರು. ನವಲೇಂದ್ರನು ಗುಪ್ತಸ್ಥಾನವಲ್ಲಿ ಅವಿತುಕೊಂಡನು.

ಅಷ್ಟರಲ್ಲೇ ಓರ್ವ ನೌಕರನು ವೇಗದಿಂದ ಓಡಿ ಬಂದು—"ಐದು ವ್ಯಕ್ತಿಗಳಿದ್ದಾರೆ. ಓರ್ವ ಕುಂಟನೂ ಇದ್ದಾನೆ. ಅವರು ಗಡಿಪ್ರವೇಶಿಸಿ ಮೆಟ್ಟಿಲು ಬಳಿ ಬಂದಿದ್ದಾರೆ ಅವರಕೈಯಲ್ಲಿಪಿಸ್ತೂಲುಗಳಿವೆ. ಅವರು,ಕುಂಟನಹೊರತು ಉಳಿದವರೆಲ್ಲರೂ ಕಪ್ಪು ಮುಖವಾಡವನ್ನು ಧರಿಸಿಕೊಂಡಿದ್ದಾರೆ. ಕುಂಟನೇ ದಾರಿ ತೋರಿಸುತಿದ್ದಾನೆ" ಅಂದ.

"ಕೂಡಲೇ ಹೋಗಿ ತನ್ನ ಜಾಗದಲ್ಲಿ ಅವಿತುಕೋ. ನಿನ್ನ ಅವಿತಿರುವ ಯತ್ನವು ಸ್ವಲ್ಪವೂ ಭಾಸವಾಗದಿರಲಿ. ನಾನು ಸಂಕೇತಕೊಟ್ಟ ನಂತರವೇ ಎಲ್ಲರೂ ಇಲ್ಲಿಗೆ ಬನ್ನಿ" ಎಂದು ಮೆಟ್ಟಿಲಕಡೆ ಮೆಲ್ಲನೆ ಮುಂದುವರಿದು ಒಂದು ಸುರಕ್ಷಿತ ಸ್ಥಾನದಲ್ಲಿ ನಿಂತುಕೊಂಡು, ಬರುವವರ ಗತಿವಿಧಿಗಳನ್ನು ನೋಡಿಕೊಂಡನು. ನವಲೇಂದ್ರ, ಎಲ್ಲರ ಕೈಗಳಲ್ಲಿಯೂ ಪಿಸ್ತೂಲುಗಳಿದ್ದುವು. ಅಲ್ಲದೆ ಅವರ ಶರೀರವೆಲ್ಲವೂ ಕಪ್ಪು ವಸ್ತ್ರದಿಂದ ಮುಚ್ಚಲ್ಪಟ್ಟಿತ್ತು. ಆದರೆ ಕುಂಟನು ಮಾತ್ರ ನಿಜಮುಖದಿಂದಿದ್ದನು. ಆತನೇ ಎಲ್ಲರಿಗೂ ಮಾರ್ಗದರ್ಶಕನಾಗಿದ್ದನು. ಇತರರು ಬಹಳ ಸಾವಧಾನದಿಂದ ಅವನನ್ನು ಹಿಂಬಾಲಿಸುತಿದ್ದರು. ತಮ್ಮ ತಮ್ಮಲ್ಲೇ ಏನೇನೊ ಮಾತಾಡಿಕೊಳ್ಳುತ್ತಿದ್ದರು. ಮೇಲೆ ಬಂದ ಅವರು ನೇರವಾಗಿ ಜಯಂತರ ಕೋಣೆಯ ಕಡೆ ನಡೆದರು. ಬಾಗಿಲು ಮುಚ್ಚಿದುದರಿಂದ ಅದನ್ನು ತೆರೆಯಲು ಯುಕ್ತಿ ತೋರಲಿಲ್ಲ. ತಮ್ಮಲ್ಲಿಯೇ ಏನೋ ಮಾತಾಡಿಕೊಳ್ಳುತ್ತಿದ್ದರು. ನವಲೇಂದ್ರನಿಗೂ ಅದು ಕೇಳದಿರಲಿಲ್ಲ. ಸ್ವಲ್ಪ ಕ್ಷಣ ಅಲ್ಲೇ ನಿಂತು, ಪರಾಮರ್ಶೆ ಮಾಡಿದ ನಂತರ ಕುಂಟನು ಬಹಳ ಸರಳತೆಯಿಂದ ಬಾಗಿಲು ತೆರೆದನು. ಎಲ್ಲರೂ ಒಳ ಪ್ರವೇಶಿಸಿದರು. ಆದರೆ ಆ ಕೋಣೆಯಿಂದ ಹೊರಬರುವ ದ್ವಾರವನ್ನು ಕಾಣದೆ ಅವರು ಚಕಿತರಾದರು. ಅವರು ಹಿಂತಿರುಗಲಾಲೋಚಿಸುತ್ತಿರುವಾಗಲೇ 'ಖಟ್' ಎಂಬ ಶಬ್ದ ಉಂಟಾಗಿ ಗೋಡೆಯು ಬಿರುಕುಬಿದ್ದು ಹೊರಬರಲು ದ್ವಾರ ಉಂಟಾಯ್ತು. ಅದರಿಂದ ನವಲೇಂದ್ರನು-ಕೆಲವು ಸಶಕ್ತ ವ್ಯಕ್ತಿಯರೊಂದಿಗೆ ಪಿಸ್ತೂಲು ಸಮೇತ ಒಳಪ್ರವೇಶಿಸಿದನು. ಅವನ ವ್ಯಕ್ತಿಗಳು ಮುಖವಾಡ ಧರಿಸಿದ್ದ ಐದು ಜನರಿಗೆ ಪಿಸ್ತೂಲು ಒತ್ತಿ ಹಿಡಿದ. ನಿಂತರು.

"ಎಲ್ಲರೂ ಕೈ ಮೇಲಕ್ಕೆತ್ತಿ" ಎಂದ ನವಲೇಂದ್ರ.ಉಪಾಯ ತೋಚದೆ ಅವರು ಕೈಯನ್ನು ಮೇಲೆತ್ತಲೇ ಬೇಕಾಯ್ತು. ಅವರ ಕೈಯಲ್ಲಿದ್ದ ಪಿಸ್ತೂಲುಗಳು ತನ್ನಿಂದ ತಾನೇ ಕೆಳಕ್ಕುರುಳಿದುವು.ಎಲ್ಲರೂ ಹಿಮ್ಮೆಟ್ಟತೊಡಗಿದರು. ಅಂತೆಯೇ ಸಣ್ಣ ದ್ವಾರದ ವರೆಗೂ ನಡೆದರು. ನವಲೇಂದ್ರನು 'ಗೋಡೆಯಿಂದ ಹಾರಿ ಹೋಗಿ' ಎಂದು ಆಜ್ಞೆಯಿತ್ತ. ಅವರಾದರೂ ಹಾಗೆಯೇ ಮಾಡಿದರು ಎಲ್ಲರೂ ಅಂಧಕಾರದಲ್ಲಿ ಮಾಯವಾದರೆಂದು ತಿಳಿದ ಮೇಲೆ, ನೌಕರರನ್ನು ಕಳುಹಿಸಿ, ಜಯಂತರ ಕೋಣೆಗೆ ಹೋಗಿ ಬಾಗಿಲು ಮುಚ್ಚಿ, ತನ್ನ ಕೋಣೆಗೆ ಮಲಗ ಹೋದನು.

ಮುಂಜಾವಿನ ಆರು ಗಂಟೆಗೆ ಜಯಂತರ ಮೇಜಿನಲ್ಲಿ ಜೋರಾಗಿ 'ಎಲರಾಮ್' ಆದಾಗ ಅವರು ಬೆಚ್ಚಿ ಬಿದ್ದು ಎದ್ದರು. ಕೂಡಲೇ ಸಂಕೇತಗಳನ್ನು ಬರೆಯುವ ಸಿದ್ಧತೆ ಮಾಡಿ ಮೆಶೀನ್ ಸ್ಟಾರ್ಟ್ ಮಾಡಿದರು.

ಸ್ವಲ್ಪ ಸಮಯದಲ್ಲೇ ಸಂವಾದ ಮುಗಿಯಿತು. ತದನಂತರ ಸಂಕೇತವನ್ನು ಓದಿದರು. 'ನನಗೆ ಈ ವರೆಗೂ ನಿನ್ನಲ್ಲಿ ವಿಶ್ವಾಸ ಉಂಟಾಗಲಿಲ್ಲ. ನಾನು ಯಾವೊಂದೂ ರಹಸ್ಯದಲ್ಲಿ ಭಾಗವಹಿಸಲಿಚ್ಛಿಸುವುದಿಲ್ಲ." ಜಯಂತರು ತುಂಬಾ ಭಾರಿ ಸಂಕೇತವನ್ನು ಓದಿ ನವಲೇಂದ್ರನನ್ನು ಕರೆದು 'ಚಹಾ' ತರಲು ಹೇಳಿ ನಿತ್ಯ ಕ್ರಿಯೆಯನ್ನು ಮುಗಿಸಲು ಹೊರಟರು. ಅಲ್ಲಿಂದ ಹಿಂತಿರುಗಿ ಬರುವಾಗ ನವಲೇಂದ್ರನ 'ಚಹಾ' ಸಿದ್ಧವಾಗಿತ್ತು.

ಚಹವನ್ನು ಎತ್ತಿಕೊಂಡ ಜಯಂತರು "ನವಲ್, ನೀನು ದಾಮೋದರರಲ್ಲಿಗೆ ಹೋಗಿ ಕುಮಾರಿ ಮಾಯಾವತಿಯನ್ನು ಚಿತ್ರ ತೆಗೆಯಲು ಬರಹೇಳು," ಎಂದರು.

ನವಲೇಂದ್ರನು ಹೊರ ಬಂದು ಕುದುರೆಯನ್ನು ಏರಿ ರಾಣಿ ಇಲಾವತಿಯ ಬಂಗಲೆಗೆ ಹೊರಟನು. ನವಲೇಂದ್ರನು ಅತ್ತ ತಲ್ಪುವಾಗ ಮಾಯಾವತಿಯ ಸಂವಾದವು ಫಲಕದಾರಿಯೊಡನೆ ಆಗುತಿತ್ತು. ಅವರೆದುರಿನ ಮೇಜಿನ ಮೇಲೆ ಕಾಗದ—ಶಾಯಿ—ಹೋಲ್ಡರುಗಳನ್ನು ಜೋಡಿಸಲ್ಪಟ್ಟಿತ್ತು.

ನವಲೇಂದ್ರನು ಮುಂದೆ ಹೆಜ್ಜೆ ಇರಿಸಿ ಸಲಾಮು ಮಾಡಿ, ಜಯಂತರ ಆದೇಶವನ್ನು ತಿಳಿಸಿದನು. "ಯಾವಾಗ ಬರಲಿ" ಎಂದು ಜಿಜ್ಞಾಸೆಯಲ್ಲಿ ಕೇಳಿದಳು ರಾಜಕುಮಾರಿ.

"ನಾಳೆ ಬೆಳಗ್ಗೆ" ಎಂದ ನವಲೇಂದ್ರ.

"ಒಳ್ಳೆದು, ಅವರಿಗೆ ನನ್ನ ನಮಸ್ಕಾರಗಳನ್ನೂ ನಾನು ನಿಯುಕ್ತ ಸಮಯಕ್ಕೆ ತಪ್ಪದೆ ಬರುವೆನೆಂಬುದನ್ನು ತಿಳಿಸು" ಎಂದು ಉತ್ಸುಕತೆಯಿಂದ ಅಂದಳು ಮಾಯಾ.

ಇದನ್ನಾಲಿಸಿದ ನವಲೇಂದ್ರನು ಸಲಾಮು ಮಾಡಿ ಕುದುರೆಯನ್ನೇರಿದನು.

ನವಲೇಂದ್ರನ ಮಾತಿನಲ್ಲಿ ಯಾವ ವಿಷವಿತ್ತೊ ಯಾರು ಬಲ್ಲರು. ಮೊದಲ ವಿಷಯವನ್ನು ಕೇಳಿದ ಫಲಕದಾರಿಯ ಮುಖದ ಬಣ್ಣ ಬದಲಾಯಿತು. ತನ್ನ ಮನದಲ್ಲಿಯ ಹಾಲಾಹಲವನ್ನು ಒತ್ತಿ ಹಿಡಿದು —"ಇವನು ಆ ದಿವಸ ನಿಮ್ಮ ಪ್ರಾಣ ರಕ್ಷಣೆ ಮಾಡಿದ ಸವಾರನ ನೌಕರನಾಗಿರಬೇಕಲ್ಲವೇ? ಪರಮಾತ್ಮನ ಕೃಪೆಯಿಂದ ತಾವಿಷ್ಟು ಬೇಗನೇ ಅವರ ಪರಿಚಯದವರಾದಿರಿ!"

"ಪರಿಚಯವೆಂದರೆ! ತಮ್ಮ ಅಭಿಪ್ರಾಯವೇನು?" ಬೆಚ್ಚಿ ಬಿದ್ದು ಕೇಳಿದಳು ಮಾಯಾವತಿ.

"ಅಂದರೆ ತಾವಿಷ್ಟು ಶೀಘ್ರದಲ್ಲಿಯೇ ಅವರ ಪರಿಚಯದವರಾದಿರಿ. ಊ ಗೂ ಚಿತ್ರ ಬಿಡಿಸುವ ಕೆಲಸವನ್ನು ಅವರಿಗೆ ಒಪ್ಪಿಸಿದ್ದೀರಿ." ಎಂದು ಜಾಗ್ರತೆಯಾಗಿ ಹೇಳಿದ ಫಲಕದಾರಿ.

"ಪ್ರತಿಯೊಂದು ಕಾರ್ಯವೂ ಮನುಷ್ಯನ ಆಶೆ ಹಾಗೂ ಕರ್ತವ್ಯದಿಂದ ಪೂರೈಸುತ್ತದೆ."

"ತಾವು ಬಂಗಾಳಿ ಭಾಷೆ ಕಲಿಯಲಪೇಕ್ಷಿಸುತಿದ್ದೀರಿ ಎಂದು ಕೇಳಿದ್ದೆ."

"ಹೌದು, ಕಲಿಯಲು ಆಶೆಯೇನೋ ತುಂಬಿದೆ. ಆದರೆ, ಉರ್ದು ಭಾಷೆಯನ್ನೇ ಬಳಸಿಕೊಂಡ ನಾನು ಅದರಲ್ಲೇ ಪಾಂಡಿತ್ಯ ಮೆರೆಯಬಲ್ಲೆ. ನಮ್ಮ ಮಾತೃ ಭಾಷೆಯು ಅದಾಗಿರುವಾಗ ....ತಮಗೆ ಉರ್ದು ಭಾಷೆ ಬರುತ್ತದೇನು?

"ಓದಬಲ್ಲೆ: ಆದರೆ ಬರೆಯಲು ಅಶಕ್ತ, ಹಾಗಾದರೆ, ನಾನು ನಿಮಗೆ ಬಂಗಾಲಿ ಕಲಿಸುತ್ತೇನೆ, ನೀವು ನನಗೆ ಉರ್ದು ಕಲಿಸಿರಿ"

"ನಿಜ, ಶಾಯಿ:—ಕಾಗದಗಳಂತೂ ಇವೆ. ಇವತ್ತೇ 'ಶ್ರೀಗಣೇಶ' ಮಾಡಿಬಿಡುವ" ಅಂದಳು ಮಾಯಾ.

"ನಾನಂತೂ ಸಿದ್ಧ, ತಾವು ಮೊದಲು ಒಂದು ಲೇಖವನ್ನು 'ಉರ್ದು'ವಿನಲ್ಲಿ ಬರೆಯಿರಿ. ನಾನದನ್ನು ನಕಲು ಮಾಡುವೆನು. ಮತ್ತೆ ನಾನೆರಡು ವಾಕ್ಯಗಳನ್ನು ಬಂಗಾಲಿಯಲ್ಲಿ ಬರೆಯುವೆನು. ನೀವದನ್ನು ನಕಲು ಮಾಡಿಕೊಳ್ಳಿ"

ಅನಂತರ ಫಲಕದಾರಿಯು ಒಂದು ಕಾಗದದಲ್ಲಿ ಕೆಲವು ಬಂಗಾಲಿ ವಾಕ್ಯಗಳನ್ನು ಬರೆದು—"ತೆಗೊಳ್ಳಿ, ಇದನ್ನು ನಕಲುಮಾಡಿ, ತದನಂತರ ನಿಮ್ಮ ವಾಕ್ಯದ ನಕಲು ಮಾಡುವೆನು" ಎಂದ.

ಮಾಯಾವತಿಯು ಬಹಳ ಆಕಾಂಕ್ಷೆಯಿಂದ ಆ ಕಾಗದವನ್ನು ಪಡಕೊಂಡು ನಕಲು ಮಾಡಲು ಪೆನ್ನನ್ನೆತ್ತಿಕೊಂಡಳು. ಅಷ್ಟರಲ್ಲಿ ದಾಮೋದರರು ಬಂದು ಮಾಯಾವತಿಯ ಕೈಯಿಂದ ಕಾಗದ ಪಡಕೊಂಡು ಓದಿದರು. ಅನಂತರ

"ಏನು ವಿಷಯ" ಎಂದು ವಿಚಾರಿಸಿದರು.

"ಏನೂ ಇಲ್ಲ ನಾನವರಿಂದ ಬಂಗಾಲಿ ಭಾಷೆಯನ್ನು ಕಲಿಯುತಿದ್ದೇನೆ" ಎಂದಳು ಮಾಯಾ

"ನನ್ನ ಅಭಿಪ್ರಾಯವೆಂದರೆ ಯಾವೊಬ್ಬ ಮನುಷ್ಯನೂ ತನಗೆ ಚೆನ್ನಾಗಿ ತಿಳಿಯದ ಭಾಷೆಯನ್ನು ಯಾವಾಗಲೂ ಪ್ರಯೋಗದಲ್ಲಿ ತರಕೂಡದು" ಎಂದರು.

"ಏಕೆ ದಾಮೋದರ್. ಅದರಲ್ಲೇನು ಹಾನಿಯಿದೆ?" ಎಂದಳು ಮಾಯಾ.

"ಹಾನಿ—ಲಾಭದ ವಿಷಯ ನಾನು ಮಾತಾಡುವುದಿಲ್ಲ ಈ ರೀತಿಯಿಂದ ಕೆಲವೊಂದು ಸಲ ಮನುಷ್ಯರು ಮೋಸವನ್ನೆಸಗುತ್ತಾರೆ."

"ನನ್ನ ವಿಚಾರದಲ್ಲಿ....ಇದರಲ್ಲಿ ಯಾವೊಂದೂ ಕಪಟವಿರಲಿಕ್ಕಿಲ್ಲ. ತಾವು ನಿಶ್ಚಿಂತರಾಗಿರಿ!" ಎಂದಳು ರಾಜಕುಮಾರಿ.

"ಕ್ಷಮಿಸಬೇಕು, ನಾನು ನಿಮ್ಮ ಮನಸ್ಸಿಗೆ ವಿರೋಧವನ್ನೆಸಗಲಾರೆ" ಖಿನ್ನ ಮನಸ್ಕರಾದ ದಾಮೋದರರು ಅಲ್ಲಿಂದ ಹೊರಟರು.

ಮಾಯಾವತಿಯು ಫಲಕದಾರಿಯ ಕೈಯಿಂದ ಕಾಗದ ಪಡಕೊಂಡು ಬಹಳ ಉತ್ಸುಕತೆಯಿಂದ ನಕಲುಮಾಡಿ ಹಿಂತಿರುಗಿಸಿದಳು.

—"ವಾಹ್, ನಿಮ್ಮ ಅಕ್ಷರವು ಅತಿ ಸುಂದರವಾಗಿದೆ, ಕೆಲವು ಸಮಯ ದಿನಗಳಾಗಲೂ ಅಭ್ಯಾಸ ಮಾಡಿದರೆ ಶೀಘ್ರದಲ್ಲೇ ಬಂಗಾಲಿ ಭಾಷೆ ಬರೆಯಬಹುದು."

"ಎಲ್ಲಾ ತಮ್ಮ ದಯೆ! ನನಗೀಗ ಅವಶ್ಯವಾದ ಒಂದು ಕಾರ್ಯವಿದೆ ಅದಕ್ಕೆ ಹೋಗಲೇಬೇಕು. ಕ್ಷಮಿಸಿ" ಅಂದಳು ಮಾಯಾ.

"ತಾವು ಹೋಗಿರಿ ಆದರೆ ಒಂದು ವಿನಂತಿಯಿದೆ. ನಿಮ್ಮೊಡನೆ ಏಕಾಂತದಲ್ಲಿ ಮಾತಾಡುವುದಿತ್ತು. ಇವತ್ತು ರಾತ್ರಿ ನಿಮಗೆ ಸಮಯವಿದೆಯೇನು?" ಎಂದು ವಿಚಾರಿಸಿದ ಫಲಕದಾರಿ ಸಿಂಹ.

"ಈ ಮಾತು ಅಸಂಭವ! ಆಗಲಿ, ರಾತ್ರಿ ಒಂಬತ್ತು ಗಂಟೆಗೆ ತೋಟದಲ್ಲಿ ಭೇಟಿಯಾಗಿರಿ" ಎಂದು ಹೇಳಿ ಅವರೀರ್ವರು ಒಬ್ಬರನ್ನೊಬ್ಬರು ವಂದಿಸಿ ಅಗಲಿದರು.

(ಮುಂದುವರಿಯುವುದು)

ಶ್ರೀ ಎ. ಬಿ. ಶೆಟ್ರು
ಸ್ಮಾರಕ ನಿಧಿಗೆ
ಸಹಾಯ ಮಾಡಿರಿ

Tel: 'BLUEYAGAR'. — ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ — Phone: 374.
ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್
ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು. ಮಾಲಿಕ:ಕೆ.ಕೆ ಆರ್ ಶೇಟ್

ವಿಜ್ಞಾನ ಪ್ರಗತಿ

(೧ನೇ ಪುಟದಿಂದ)

ಒಂದು ನಿರ್ದಿಷ್ಟ ಪ್ರಮಾಣದಲ್ಲಿ 'ಅಲ್ಕಲೀನ್ ಅರ್ಥ್ ಆಕ್ಸೈಡ್'ಗಳನ್ನು ಸೇರಿಸಿ 'ಬಾಲ್‌ಮಿಲ್'ನಲ್ಲಿ 'ಟೈಟೇನಿಯಂ ಡಯಾಕ್ಸೈಡ್' ಜೊತೆಗೆ ಬೆರೆಸುವ ಕ್ರಮ ಅನುಸರಿಸುವುದರ ಮೂಲಕ ಕೆಪಾಸಿಟರ್‌ಗಳನ್ನು ತಯಾರಿಸುವ ವಿಧಾನವನ್ನು ಭೌತಿಕ ವಿಜ್ಞಾನ ಪ್ರಯೋಗಶಾಲೆಯಲ್ಲಿ ಕಂಡುಹಿಡಿಯಲಾಗಿದೆ. ಹಾಗೆ ಬೆರೆಸಿದ ಮಿಶ್ರಣವನ್ನು ಸ್ವಯಂಚಾಲಿತ ಯಂತ್ರದ ಸಹಾಯದಿಂದ 'ಚಪ್ಪಟೆಯ ಚಕ್ರ'ಗಳನ್ನಾಗಿ ಪರಿವರ್ತಿಸಲಾಗುವುದು. ಚಕ್ರಗಳನ್ನು ಅನಂತರ ಒಣಗಿಸಿ ವಿದ್ಯುತ್ ಬಲೆಗಳಲ್ಲಿ ಹದಗೊಳಿಸಲಾಗುವುದು. ಹೀಗೆ ಹದಗೊಂಡ ಚಕ್ರಗಳು ೧,೪೦೦ ಡಿಗ್ರಿ ಸೆಂಟಿಗ್ರೇಡ್‌ನಷ್ಟು ಶಾಖವನ್ನು ತಡೆಯುವ ಶಕ್ತಿಯನ್ನು ಪಡೆಯುತ್ತವೆ. ಅನಂತರ ಸೀಸದ ಭಾಗವನ್ನು ಬೆಸೆಗೆ ಹಾಕಲಾಗುವುದು.

ಅನಂತರ ಆ ಕೆಪಾಸಿಟರ್ ಯೂನಿಟ್‌ಗಳನ್ನು ಬೇಕ್‌ಲೈಟ್‌ನಿಂದ ಲೇಪಿಸಲಾಗುವುದು. ಈ ಯೂನಿಟ್‌ಗಳ ತಯಾರಿಕೆಗಾಗಿ ವಾಣಿಜ್ಯ ದರ್ಜೆಯ ಟೈಟೇನಿಯಂ ಡೈಆಕ್ಸೈಡ್ ಮತ್ತಿತರ ಕಚ್ಚಾ ಪದಾರ್ಥಗಳನ್ನು ಬಳಸಲಾಗಿದೆ. ಪ್ರಾಯೋಗಿಕ ಯಂತ್ರವಿಭಾಗದಲ್ಲಿ ದಿನಕ್ಕೆ ೧,೫೦೦ ಯೂನಿಟ್‌ಗಳನ್ನು ತಯಾರಿಸಿ, ಅದರ ಆಧಾರದ ಮೇಲೆ ಲೆಕ್ಕಾಚಾರ ಮಾಡಿದಲ್ಲಿ ೧೦೦ ಮೈಕ್ರೋಫರಾಡ್ ಪ್ರಮಾಣದ ಒಂದು ಕೆಪಾಸಿಟರ್‌ನ ತಯಾರಿಕೆಗೆ ೧೩ ನಯೆಪೈಸೆ ವೆಚ್ಚ ತಗಲುತ್ತದೆಂದು ಗೊತ್ತಾಗಿದೆ.

ಸೆರಾಮಿಕ್ ಕೆಪಾಸಿಟರ್‌ಗಳನ್ನು ತಯಾರಿಸುವ ವಿಭಾಗವು ಹೊಸಮಾದರಿಯ ಥರ್ಮಲ್ ಕೆಪಾಸಿಟರ್‌ಗಳನ್ನು ಅಭಿವೃದ್ಧಿಪಡಿಸಿದೆ. ಈ ಕೆಪಾಸಿಟರ್‌ಗಳನ್ನು 'ಥರ್ಮೋಕ್ಯಾಪ್' ಗಳೆಂದೂ ಕರೆಯಬಹುದಾಗಿದೆ. ಶಾಖ ಮಾಪಕದಂತೆ ಈ ಕೆಪಾಸಿಟರ್ ಸಹ ಅತ್ಯಂತ ಸೂಕ್ಷ್ಮಗ್ರಾಹಿಯಾಗಿದ್ದು ಉಷ್ಣಾಂಶದ ಬದಲಾವಣೆಗಳನ್ನು ತಿಳಿಸಬಲ್ಲ ಶಕ್ತಿ ಪಡೆದಿದೆ. ದೂರ ಸಂಬಂಧ ನಿಯಂತ್ರಣದಿಂದ ಕೆಲಸಮಾಡುವ ಈ ಕೆಪಾಸಿಟರ್ ದಾಖಲಾಗಿರುವ ಉಷ್ಣಾಂಶವನ್ನು ರೇಡಿಯೋ ತರಂಗಗಳ ಮೂಲಕ ತಿಳಿಸುವುದು. ಆದ್ದರಿಂದ ಈ ಕೆಪಾಸಿಟರ್ ಸಾಧನವು ಅತ್ಯಂತ ಮುಖ್ಯವಾದುದಾಗಿದೆ.

ಥರ್ಮೋಕ್ಯಾಪ್‌ಗಳನ್ನು ಜೋಡಿಸಿದ ಟ್ರಾನ್ಸ್‌ಮಿಟರ್ ಯಂತ್ರವೊಂದನ್ನು ಸ್ವಯಂಚಾಲಿತ ಅಗ್ನಿಭಯ ಸೂಚಕ ಯಂತ್ರವನ್ನಾಗಿ ಬಳಸಬಹುದಾಗಿದೆ. ಉಷ್ಣಾಂಶದಿಂದಿಗೆ ಬದಲಾಯಿಸುವಂತಹ ಒಂದು ನಿರ್ದಿಷ್ಟ ಸ್ಪಂದನದಲ್ಲಿ ಈ ಸಾಧನವು ಸಂಕೇತಕೊಡುತ್ತದೆ. ಇಂತಹ ಸಲಕರಣೆಯನ್ನು ಸುಲಭವಾಗಿ ಅಗ್ನಿಸ್ಪರ್ಶವಾಗುವಂತಹ ವಸ್ತುಗಳನ್ನು ದಾಸ್ತಾನು ಮಾಡಿರುವ ಸ್ಥಳಗಳಲ್ಲಿ ಇಡಬಹುದು. ರೇಡಿಯೋ ರಿಸೀವರ್ ಯಂತ್ರದಲ್ಲಿ ಕೇಳಿ ಬರುವ ಶಿಳ್ಳು ಶಬ್ದವು ಉಷ್ಣಾಂಶ ಬದಲಾವಣೆಗಳನ್ನು ಸೂಚಿಸುತ್ತದೆ. ನಷ್ಟ ಸಂಭವಿಸುವುದಕ್ಕೆ ಅವಕಾಶ ಉಂಟಾಗುವುದಕ್ಕೆ ಮುಂಚಿತವಾಗಿಯೇ ಬೆಂಕಿಯನ್ನು ಪತ್ತೆಹಚ್ಚಿ ಅದನ್ನು ಆರಿಸಲು ಸಾಧ್ಯವಾಗುತ್ತದೆ.

ರಾಷ್ಟ್ರೀಯ ಭೌತಿಕ ವಿಜ್ಞಾನ ಪ್ರಯೋಗ ಶಾಲೆಯಲ್ಲಿ ರೇಡಿಯೋ ಸರ್ಕ್ಯೂಟ್ಸ್ ಮತ್ತು ಕಾಂಪೊನೆಂಟ್ಸ್ ಡೆವಲಪ್‌ಮೆಂಟ್ ಸೆಕ್ಷನ್ ಎಂಬ ವಿಭಾಗವೊಂದಿದೆ. ಈ ವಿಭಾಗದಲ್ಲಿ ರಜತ ಲೇಪಿತ ಅಭ್ರಕ ಪಟಲಗಳನ್ನು ತಯಾರಿಸುವ ಒಂದು ವಿಧಾನವನ್ನು ಅಭಿವೃದ್ಧಿಪಡಿಸಿದೆ. ಈ ಪಟಲವು ವಿವಿಧ ವಿದ್ಯುತ್ ಹಾಗೂ ಎಲೆಕ್ಟ್ರಾನಿಕ್ ಪರಿಕರಗಳ ತಯಾರಿಕೆಯಲ್ಲಿ ಅಗತ್ಯವಾಗಿರುತ್ತದೆ.

ಅನೇಕ ದಶಮಾನಗಳಿಂದಲೂ ವಿಶ್ವದ ಮಾರುಕಟ್ಟೆಗಳಿಗೆ ಭಾರತವು ಉತ್ಕೃಷ್ಟ ದರ್ಜೆಯ ಅಭ್ರಕ ಅಥವಾ ಕಾಗೆ ಬಂಗಾರವನ್ನು ಪೂರೈಸುವ ಪ್ರಮುಖ ರಾಷ್ಟ್ರವಾಗಿದೆ. ಈ ಖನಿಜ ವಸ್ತುವನ್ನು ರಫ್ತು ಮಾಡಿ ದೇಶವು ಪ್ರತಿ ವರ್ಷವೂ ಸುಮಾರು ೧೦ ಕೋಟಿ ರೂ.ಗಳಷ್ಟು ವಿದೇಶೀ ವಿನಿಮಯ ಹಣವನ್ನು ಸಂಪಾದಿಸುತ್ತಿದೆ. ಅಭ್ರಕವನ್ನು ಸಂಸ್ಕರಿಸಿ ಸಿದ್ಧಗೊಂಡ ವಸ್ತುವಿನ ರೂಪದಲ್ಲಿ ಅಥವಾ ಅರ್ಧದ ಮಟ್ಟಿಗೆ ಸಿದ್ಧಪಡಿಸಿದ ವಸ್ತುವಿನ ರೂಪದಲ್ಲಿ ವಿದೇಶಗಳಿಗೆ ರಫ್ತು ಮಾಡಿದಲ್ಲಿ ದೇಶವು ಮತ್ತೂ ಹೆಚ್ಚಿನ ವಿದೇಶಿ ವಿನಿಮಯ ಹಣವನ್ನು ಗಳಿಸುವುದು.

ವಿದೇಶಗಳಿಗೆ ರಫ್ತುಮಾಡುವ ಸಲುವಾಗಿ ರಜತ ಲೇಪಿತ ಅಭ್ರಕ ಪಟಲವನ್ನು ಭಾರಿ ಪ್ರಮಾಣದಲ್ಲಿ ತಯಾರಿಸಲು ಮುಂಬೈನ ಸಂಸ್ಥೆಯೊಂದಕ್ಕೆ ಅನುಮತಿ ಕೊಡಲಾಗಿದೆ.

ರಾಷ್ಟ್ರೀಯ ಭೌತಿಕ ವಿಜ್ಞಾನ ಪ್ರಯೋಗ ಶಾಲೆಯಲ್ಲಿ ಸೆರಾಮಿಕ್ ಕಂಡೆನ್ಸರ್‌ಗಳನ್ನು ತಯಾರಿಸುವ ಯೋಜನೆಯು ಸಫಲಗೊಂಡಿದ್ದು ದೇಶದಲ್ಲಿ ದೊರೆಯುವ ಕಚ್ಚಾ ಪದಾರ್ಥಗಳು ಈ ಉಪಕರಣದ ತಯಾರಿಕೆಗೆ ಯೋಗ್ಯವಾಗಿವೆ ಎಂಬ ಅಂಶವನ್ನು ರುಜುವಾತು ಮಾಡಿಕೊಟ್ಟಿದೆಯಲ್ಲದೆ ದೇಶದಲ್ಲಿ ಎಲೆಕ್ಟ್ರಾನಿಕ್ಸ್ ಉದ್ಯಮಕ್ಕೆ ಅಗತ್ಯವಾದ ಇತರ ಸೆರಾಮಿಕ್ ಉಪಕರಣಗಳ ಬಗ್ಗೆ ಮತ್ತೂ ಹೆಚ್ಚಿನ ಸಂಶೋಧನೆ ನಡೆಸಲು ಪ್ರಚೋದಿಸಿದೆ ಎಂದು ಹೇಳಬಹುದು. ಭಾರತೀಯ ತಂತ್ರಜ್ಞರಿಂದಲೇ ಭಾರತೀಯ ಕಚ್ಚಾ ಪದಾರ್ಥಗಳಿಂದ ಸೆರಾಮಿಕ್ ಉಪಕರಣಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ ಈಗ ಅವಕಾಶ ಲಭಿಸಿದೆ.

* ರಜತ ಲೇಪಿತ ಅಭ್ರಕ ಪಟಲದ ತಯಾರಿಕೆಯ ವಿಧಾನವನ್ನು ಬೆಂಗಳೂರಿನಲ್ಲಿರುವ ಭಾರತೀಯ ಟೆಲಿಫೋನ್ ಕಾರ್ಖಾನೆ (ಐ. ಟಿ. ಐ.)ಯು ಬಳಸಿಕೊಳ್ಳಲು ಅನುಮತಿ ಕೊಡಲಾಗಿದೆ.

ವಿವೇಚನೆ

ಸಮಯ ಸ್ಫೂರ್ತಿ

ಸರ್ ಜೇಮ್ಸ್ ಥಾರ್ನ್‌ಹಿಲ್ ಲಂಡನ್ನಿನ ಪ್ರಸಿದ್ಧ ಕಲಾಕಾರ. ಒಮ್ಮೆ ಈತನನ್ನು ಲಂಡನ್ನಿನಲ್ಲಿರುವ ಪ್ರಸಿದ್ಧ "ಸೆಂಟ್ ಪಾಲ್ 'ಕೇಥಡ್ರಾಲ್"ನ ಗೋಪುರದ ಒಳಾಂಗಣದಲ್ಲಿ ಸುಂದರವಾಗಿ ಚಿತ್ರಿಸುವಂತೆ ನೇಮಿಸಲಾಯಿತು. ಆತ ರಮ್ಯವಾಗಿ ಚಿತ್ರಿಸಿದ. ಚಿತ್ರ ಮುಗಿಯುವ ಸ್ಥಿತಿಗೆ ಬಂತು.

ಅಂದು ಆತ ಚಿತ್ರಣದ ಕೊನೆಯ ಭಾಗವನ್ನು ಮುಗಿಸುವುದರಲ್ಲಿದ್ದ. ದೂರದಿಂದ ಅದು ಹೇಗೆ ಕಾಣುವುದೋ ನೋಡ ಬಯಸಿದ. ಅಟ್ಟಣಿಗೆಯ ಪಾರ್ಶ್ವದಲ್ಲೇ ಹಿಂದಕ್ಕೆ ಹಿಂದಕ್ಕೆ ಹೋಗುತ್ತಾ ಕೊನೆಯವರೆಗೂ ಹೋದ. ಆತ ಇನ್ನೊಂದು ಹೆಜ್ಜೆ ಇಟ್ಟದ್ದರೆ ಕೆಳಗೆ ಬಿದ್ದು ಕಲ್ಲಿನ ನೆಲದ ಮೇಲೆ ಚೂರು ಚೂರಾಗುತ್ತಿದ್ದ. ಹಿಂದಿರುವ ಅಪಾಯ ಆತನಿಗೆ ತಿಳಿಯದು. ....

ಸೇವಕ ಇದ್ದಕ್ಕಿದ್ದಂತೆ ಬ್ರಶು ಹಿಡಿದವನಂತೆ ಬಣ್ಣದ ಪಾತ್ರೆಯನ್ನೇ ಬಹುದಿನಗಳಿಂದ ಕಷ್ಟಪಟ್ಟು ಚಿತ್ರಿಸಿದ ಚಿತ್ರದ ಮೇಲೆ ಎಸೆದಾಗ ಥಾರ್ನ್ ಹಿಲ್‌ನ ಕೋಪ ಶಿಖರಕ್ಕೇರಿತು. ಆತ ಕ್ಷಣಾರ್ಧದಲ್ಲಿ ಸೇವಕನೆಡೆಗೆ ಓಡಿದ ಶಿಕ್ಷಿಸಲು.

ಸೇವಕ ನಮ್ರನಾಗಿ ನಿಂತು ತನ್ನ ವಿಚಿತ್ರ ಕೆಲಸಕ್ಕೆ ಕಾರಣ ವಿವರಿಸಿದಾಗ ಬೇಧವಿಲ್ಲದೇ ಸೇವಕ ಯಜಮಾನನ ತೋಳ ಬಂಧನದಲ್ಲಿದ್ದ.

ಸರ್ ಜೇಮ್ಸ್ ಆತನನ್ನು ಎಷ್ಟು ವಂದಿಸಬೇಕೋ ತಿಳಿಯದಾಗಿದ್ದ. ಸೇವಕನ ಜಾಣ್ಮೆ, ಸಮಯ ಸ್ಫೂರ್ತಿ ಅತೀ ಹೆಚ್ಚಿನದಿತ್ತು.

ಸೇವಕ ಆತನನ್ನು ಹಿಂದಿರುವ ಆಪತ್ತಿನ ಬಗ್ಗೆ ಎಚ್ಚರಿಸುವ ಒಂದು ಮಾತನ್ನಾಡಿದ್ದರೂ ಭಯ – ಗಾಬರಿಯಿಂದ ತಡವರಿಸಿ ಇಡುವ ಒಂದೇ ಒಂದು ಹೆಜ್ಜೆಯೇ ಆತನು ಇಹಲೋಕ ತ್ಯಜಿಸಲು ಸಾಕಾಗುತ್ತಿತ್ತು. ಆದರೆ ಹಿಂದಿನ ಅಪಾಯದ ತಿಳಿವನ್ನೇ ಕೊಡದೆ ಜೀವ ತೇಯ್ದು ರಚಿಸಿದ ಚಿತ್ರ ಹಾಳುಮಾಡಿದಾಗ ಆಕ್ಷಣ ಆವನ ಮನಸ್ಸೆಲ್ಲಾ ಅಲ್ಲೇ, ಅದರ ಮೇಲೇ ಕೇಂದ್ರೀಕೃತವಾಗಿ ಅದನ್ನು ತಡೆಯಲು ಕ್ಷಣಾರ್ಧದಲ್ಲಿ ಮುಂದೆ ಓಡಿ ಬರುವಂತಾಯಿತು. , ಅಂತೆಯೇ ಅಮೂಲ್ಯ ಪ್ರಾಣವುಳಿಯಿತು.

—"ರಂಜನೆ" ಬೆಂಗಳೂರು.

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ಅಭಿವೃದ್ಧಿ ಕಾರ್ಯಕ್ರಮಗಳನ್ನು ಜತೆಗೆ ಆದರಿಂದ ಸಾಧಿಸಬಹುದಾದ ದೇಶ ಸುಭಿಕ್ಷೆಯನ್ನು ಮುಂದಟ್ಟು ಮಾಡಬೇಕಾಗಿದೆ. ಇದು ನಗರ ಪ್ರದೇಶಗಳಲ್ಲಿ ಭಿತ್ತಿಪತ್ರ—ಸಭೆ — ಮೆರವಣಿಗೆಯಿಂದ ಮಾತ್ರ ಸಾಧಿತವಾಗುವುದಿಲ್ಲ – ಪ್ರತ್ಯೇಕ ರೈತ ಕುಟುಂಬದ ಮನೆ ಮನೆಯಲ್ಲಿ ಈ ಬಗ್ಗೆ ಪ್ರಚಾರವಾಗಬೇಕು ಇದಕ್ಕೆ ಆವಶ್ಯಕ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಬೇಕು.

'ಪ್ಯಾಕೇಜ್ ಡೀಲ್' ಯೋಜನೆಯು ಮಂಡ್ಯ ಜಿಲ್ಲೆಯಲ್ಲಿ ವ್ಯವಹೃತವಾಗುವುದಾದರೂ ಅದರ ಫಲವುಣ್ಣುವವರು ಆ ಜಿಲ್ಲೆಯವರು ಮಾತ್ರವಲ್ಲ. ಈ ಯೋಜನೆಯು ಯಶಸ್ವಿಯಾಗಿ ತೃತೀಯ ಯೋಜನಾಂತ್ಯದಲ್ಲಾದರೂ ಆಹಾರ ಸ್ವಾವಲಂಬನೆಯನ್ನು ಸಾಧಿಸಿಕೊಳ್ಳುವಂತಾಗಲೆಂದು ಎಲ್ಲರೂ ಬಯಸುತ್ತಾರೆ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. –ಸಂ.ನ.

'NAVAYUGA' WEEKLY is in the list of periodicals and Newspapers approved for use in Secondary School as per proceedings Roc· No· 466 N/50 date 2-12-1950 of the Directors of public Instruction Madras·

"ಅತ್ಯುತ್ತಮ ಬ್ಯಾಂಕಿಂಗ್ ಸೇವೆ"

- ಸಿಗ್ಮ
- ಕ್ಯುಮುಲೇಟಿವ್
- ಇನ್ವೆಸ್ಟರ್ಸ್ ಏಜನ್ಸಿ
- ಲಕ್ಷ್ಮಿ ಕ್ಯಾಶ್ ಸರ್ಟಿಫಿಕೇಟ್ಸ್
- ಸಿಂಡಿಕೇಟ್ ಬ್ಯಾಂಕ್ ಕೇಶ್ ಸರ್ಟಿಫಿಕೇಟ್ಸ್
- ಭದ್ರತಾ ಕೋಶಗಳು
- ವಿದ್ಯಾರ್ಥಿಗಳಿಗೆ ಮತ್ತು ಧರ್ಮ ಸಂಘ— ಸಂಸ್ಥೆಗಳಿಗೆ ವಿಶೇಷ ಸೌಕರ್ಯಗಳು ಇನ್ನಿತರ ಎಲ್ಲಾ ವಿಧದ ಬ್ಯಾಂಕಿಂಗ್ ಸೇವೆಗಳು

ದಕ್ಷಿಣ ಭಾರತದಾದ್ಯಂತ ಹಬ್ಬಿರುವ 141 ಶಾಖೆಗಳು

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್.
ರಿಜಿಸ್ಟರ್ಡ್ ಆಫೀಸ್: ಮುಕುಂದ ನಿವಾಸ, ಉಡುಪಿ, (ಮೈಸೂರು ರಾಜ್ಯ)
ಸ್ಥಾಪನೆ: 1925

Edited Printed & Published by K. H. Shetty, at the Navayuga Press, Udipi, S, India,

40th year of publication. 15-6-1961 ೪೦ನೇ ವರ್ಷ

ಸಂಪುಟ ೪೧ Vol. 41

ಸಂಚಿಕೆ ೩೯ No. 39

ಬೆಲೆ 0=13

ನವಯುಗ

ಪ್ರಚಲಿತ ಪ್ರಸಂಗ

ಭಾಷಾವಿವಾದಕ್ಕೊಂದು ಮುಕ್ತಾಯ

ಅಸ್ಸಾಮದ ಕಚಾರಿನಲ್ಲಿ ಸಂಗ್ರಾಮ ಪರಿಷತ್ತು ಬಂಗಾಳಿ ಭಾಷೆಯನ್ನೂ ರಾಜ್ಯಭಾಷೆಯಾಗಿ ಸ್ವೀಕರಿಸಬೇಕೆಂದು ಹೂಡಿದ ಸತ್ಯಾಗ್ರಹದಿಂದಾಗಿ ಅಲ್ಲಿ ಗೋಳಿಬಾರೂ ನಡೆದು ವಿಕ್ಷುಬ್ಧ ಪರಿಸ್ಥಿತಿ ತಲೆದೋರಿತು; ಕೇಂದ್ರ ಗೃಹಮಂತ್ರಿ ಶಾಸ್ತ್ರಿಯವರು ಮುಂದಿಟ್ಟ ಸೂತ್ರದಿಂದ ಅಲ್ಲಿನ ಪರಿಸ್ಥಿತಿ ಶಾಂತವಾಗುವ ನಿರೀಕ್ಷೆಯಿದೆ.

ಭಾರತವು ಸ್ವತಂತ್ರವಾದ ಮೇಲೆ ಅದು ಎದುರಿಸುವ ಹಲವಾರು ಪ್ರಶ್ನೆಗಳಲ್ಲಿ ಅಧಿಕೃತ ಭಾಷೆಯ ಸಮಸ್ಯೆಯೂ ಒಂದು. ಭಾರತ ಸರಕಾರದ ಅಧಿಕೃತ ಭಾಷೆ ಯಾವುದಾಗಬೇಕೆಂಬುದರಲ್ಲಿ ಮಾತ್ರವಲ್ಲ ರಾಜ್ಯದ ಮಟ್ಟದಲ್ಲಿಯೂ ಈ ಸಂಬಂಧದಲ್ಲಿ ಭಿನ್ನಾಭಿಪ್ರಾಯಗಳು ಪ್ರಕಟಗೊಳ್ಳುತ್ತವೆ. ಬಹುಪ್ರಚುರಪಟ್ಟ ೧೯೬೫ರ ವರೆಗೆ ಇಂಗ್ಲಿಷ್ ಭಾಷೆಯೇ ಮುಂದುವರಿಯುವುದೆಂದೂ ಅನಂತರ ಕೂಡ ಹಿಂದಿಯೊಡನೆ ಇಂಗ್ಲಿಷ್ ಬಳಕೆಯಲ್ಲಿರುವುದೆಂದೂ ಹೇಳಿ ಹಿಂದ್ಯೇತರರಲ್ಲಿ ಹುಟ್ಟಿದ್ದ ಭಯವನ್ನು ದೂರೀಕರಿಸುವ ಪ್ರಯತ್ನ ಕೇಂದ್ರದಲ್ಲಿ ನಡೆಯಿತು. ರಾಜ್ಯಗಳ ಅಧಿಕೃತ ಭಾಷೆಯನ್ನು ನಿರ್ಧರಿಸುವ ಪ್ರಶ್ನೆಯು ಬಹಳ ಜಟಿಲವಾಗುತ್ತ ಬರುತ್ತಿದೆ. ಅದರಲ್ಲಿಯೂ ಎರಡು—ಮೂರು ಭಾಷೆಗಳನ್ನು ಆಡುವ ಜನರಿರುವೆಡೆ ಇದು ಮತ್ತಷ್ಟು ಭೀಕರವಾಗಿ ಪರಿಣಮಿಸಿದೆ. ಈ ಕಾರಣದಿಂದಲೇ ಅಸ್ಸಾಮಿನ ಪರಿಸ್ಥಿತಿಯು ವಿಕ್ಷುಬ್ಧವಾಗುವಂತಾಯಿತು. ಪರಿಣಾಮವಾಗಿ ಕಚಾರ ಜಿಲ್ಲೆಯಲ್ಲಿ ಗೋಳಿಬಾರನ್ನೂ ಮಾಡಬೇಕಾಯಿತು. ಅಲ್ಲಿ ಬಂಗಾಳಿ ಮಾತನಾಡುವವರ ಸಂಖ್ಯೆಯು ಅಧಿಕ. ಆದರೆ, ಅಸ್ಸಾಮ ಸರಕಾರದ ಅಧಿಕೃತ ಭಾಷಾ ವಿಧೇಯಕದಿಂದಾಗಿ ಬಂಗಾಳಿಗಳು ಉದ್ರಿಕ್ತರಾಗಿ ಇದನ್ನು ಪ್ರತಿಭಟಿಸಿದುದರಿಂದ ಪರಿಸ್ಥಿತಿ ಮತ್ತಷ್ಟು ಕಂಗೆಟ್ಟಿತು.

ಅಸ್ಸಾಮ ಸರಕಾರವು ಈ ಭಾಷಾ ವಿವಾದವನ್ನು ಬಗೆಹರಿಸುವುದರಲ್ಲಿ ಅಸಮರ್ಥವಾದುದರಿಂದ ಕೇಂದ್ರ ಗೃಹಮಂತ್ರಿ ಲಾಲ ಬಹದೂರ ಶಾಸ್ತ್ರಿಯವರು ಸೂತ್ರವೊಂದನ್ನು ಮುಂದಿಟ್ಟರು. ಮೊದಲಿನ ಪರಿಸ್ಥಿತಿಯನ್ನೇ ಅನಿರ್ದಿಷ್ಟ ಅವಧಿಯ ವರೆಗೆ ಮುಂದುವರಿಸುವುದು ಈ ಸೂತ್ರದ ಪ್ರಧಾನಾಂಗ. ಕಚಾರ ಜಿಲ್ಲೆಯವರು ಬಂಗಾಳಿಯನ್ನೂ ಅಧಿಕೃತ ಭಾಷೆಯನ್ನಾಗಿ ಸ್ವೀಕರಿಸಬೇಕೆಂದರೂ ಶ್ರೀ ಶಾಸ್ತ್ರಿಯವರೀ ಬೇಡಿಕೆಯನ್ನು ತಿರಸ್ಕರಿಸಿದರು. ಅಸ್ಸಾಮ ಅಧಿಕೃತ ಭಾಷಾ ವಿಧೇಯಕದಲ್ಲಿ ಜಿಲ್ಲಾ ಕೌನ್ಸಿಲುಗಳಲ್ಲಿ ಮೂರರಲ್ಲಿ ಎರಡರಷ್ಟು ಬಹುಮತದಿಂದ ಅಸ್ಸಾಮಿಯನ್ನು ಅಧಿಕೃತ ಭಾಷೆಯನ್ನಾಗಿ ಮಾಡುವ ಸೌಲಭ್ಯವಿರುತ್ತದೆ. ಪರಿಸ್ಥಿತಿಯ ಒತ್ತಡಗಳಿಂದಾಗಿ ಈ ಅನುಚ್ಛೇದದಂತೆ ಬಂಗಾಳಿಗಳೇ ಅಧಿಕವಿರುವ ಕಚಾರದಲ್ಲಿ ಅಸ್ಸಾಮಿಯೇ ಗದ್ದುಗೆ ಗೇರುವ ಸಂಭವವಿದೆಯೆಂಬ ಅಂಜಿಕೆ ಅಲ್ಲಿನವರಲ್ಲಿ ಹುಟ್ಟಿತ್ತು.

ಶ್ರೀ ಶಾಸ್ತ್ರಿ ಸೂತ್ರಗಳಂತೆ ಅಧಿಕೃತ ಭಾಷಾ ವಿಧೇಯಕದಲ್ಲಿರುವ ಈ ಅನುಚ್ಛೇದವನ್ನು ಕಿತ್ತು ಹಾಕಲಾಗುವುದು. ಈಗಲೂ ಮುಂದೆಯೂ ಅಸ್ಸಾಮಿ ಭಾಷೆಯೊಡನೆ ಇಂಗ್ಲಿಷ್ ಭಾಷೆ ಕೂಡ ಸರಕಾರಿ ವ್ಯವಹಾರದಲ್ಲಿರುವುದು. ಕಚಾರ ಜಿಲ್ಲೆ ಮತ್ತು ಅಸ್ಸಾಮ ಸರಕಾರಗಳ ನಡುವೆ ಯಾವ ಭಾಷೆಯಲ್ಲಿ ವ್ಯವಹಾರ ನಡೆಯಬೇಕೆಂದು ವಿಧೇಯಕದಲ್ಲಿ ಹೇಳಲಿಲ್ಲ. ಆದರೆ ಅಸ್ಸಾಮ ಸರಕಾರವು ಸದ್ಯ ಇಂಗ್ಲಿಷನ್ನೂ ಆ ಸ್ಥಾನಾಪನ್ನವಾದಾಗ ಹಿಂದಿಯನ್ನೂ ಉಪಯೋಗಿಸಬೇಕೆಂದು ಶಾಸ್ತ್ರಿ ಸೂತ್ರದಲ್ಲಿ ಸ್ಪಷ್ಟಗೊಳಿಸಲಾಗಿದೆ. ಹೀಗೆ ಕಚಾರದ ಮಟ್ಟಿಗೆ ಅಸ್ಸಾಮಿ ಭಾಷೆಯು ಪ್ರಭುತ್ವ ನಡೆಸುವುದು ಈ ಸೂತ್ರಗಳಂತೆ ಭವಿಷ್ಯದಲ್ಲಿ ಕೂಡ ಸಾಧ್ಯವಿಲ್ಲ. ಈ ಕಾರಣದಿಂದಲೇ 'ಶಾಸ್ತ್ರಿ ಸೂತ್ರವು 'ಪಂತ ಸೂತ್ರ'ಗಳಿಗಿಂತ ವ್ಯಾಪಕ ಸ್ವರೂಪ ಪಡೆದಿದೆ ಎಂದು ಹೇಳಲಾಗುತ್ತಿದೆ.

ಕೇಂದ್ರ ಗೃಹಮಂತ್ರಿಗಳ ಸೂತ್ರದನ್ವಯ ಭಾಷಾ ಅಲ್ಪಸಂಖ್ಯಾಕರಿಗೆ ಶಿಕ್ಷಣ ಮತ್ತು ಉದ್ಯೋಗಗಳನ್ನು ಸಂವಿಧಾನ ಮತ್ತು ರಾಜ್ಯ ಪುನರ್ಘಟನಾ ಆಯೋಗದ ಅಂಗೀಕೃತ ಸಿಫಾರಸುಗಳ ನ್ವಯವಾಗಿ ಅವಶ್ಯ ಒದಗಿಸಬೇಕು ಎಂದು ವ್ಯಕ್ತವಾಗುತ್ತದೆ. ಇದರಿಂದಾಗಿಯೇ ಅಸ್ಸಾಮ ವಿಶ್ವವಿದ್ಯಾಲಯದಲ್ಲಿ ಬಂಗಾಳಿಯನ್ನೂ ಬಿ. ಎ. ಪದವಿಗೆ ಒಂದು ವಿಶೇಷ ವಿಷಯವನ್ನಾಗಿಡಲು ಸಲಹೆನೀಡಲಾಗುತ್ತಿದೆ. ಅಸ್ಸಾಮದ ಗುಡ್ಡಗಾಡು ಪ್ರದೇಶದ ಜನರು ಕೂಡ ಅಸ್ಸಾಮಿ ಭಾಷೆಯೊಡನೆ ಇಂಗ್ಲಿಷೂ ರಾಜ್ಯ ಭಾಷೆಯಾಗಿ ಮುಂದುವರಿಯಬೇಕೆಂದು ಬಯಸುತ್ತಿದ್ದಾರೆ. ಶ್ರೀ ಶಾಸ್ತ್ರಿಸೂತ್ರಗಳಿಂದ ಇದೂ ಸಾಧ್ಯವೆನಿಸುವುದರಿಂದ, ಅವುಗಳಲ್ಲಿ ಬೆಳೆಯುತ್ತಿರುವ ಪ್ರತ್ಯೇಕತಾ ಭಾವನೆಯು ದೂರವಾಗುವ ನಿರೀಕ್ಷೆಯಿದೆ.

ಕೇಂದ್ರ ಸರಕಾರದಲ್ಲಿ ಗೃಹಖಾತೆಯನ್ನು ವಹಿಸಿಕೊಂಡ ನಂತರದಲ್ಲಿ ಮೊತ್ತಮೊದಲಿಗೆ ಶ್ರೀ ಶಾಸ್ತ್ರಿಯವರು ಸಮಸ್ಯೆಯ ಪರಿಹಾರಕ್ಕೆ ಪ್ರಯತ್ನ ಪಟ್ಟರು. ಇವರು ಮುಂದಿಟ್ಟ ಸೂತ್ರವನ್ನು ಕಾಂಗ್ರೆಸ್ಸು ಮತ್ತು ಮಂತ್ರಿಮಂಡಳಿಯು ಸಂತೋಷದಿಂದ ಒಪ್ಪಿಕೊಂಡಿವೆ. ಆದರೆ, ಈ ಹಿಂದಿನ ಪಂತ ಸೂತ್ರದ ಬಗ್ಗೆ ಇವೆರಡರ ಮಧ್ಯೆಯೂ ಭಿನ್ನಾಭಿಪ್ರಾಯಗಳಿದ್ದುವು. ಮುಖ್ಯಮಂತ್ರಿ ಶ್ರೀ ಚಲಿಹಾರವರು ಈ ಸೂತ್ರವೊಂದು 'ಹೊಂದಾಣಿಕೆಯ ಮಾರ್ಗ'ವೆಂದು ತಿಳಿದರೂ ತಮ್ಮ ತೃಪ್ತಿಯನ್ನು ವ್ಯಕ್ತಪಡಿಸಿದ್ದಾರೆ. ಆದರೆ, ಕಚಾರದ ನಾಯಕರು ಮಾತ್ರ ಈ ಬಗ್ಗೆ ತಮ್ಮ ಅಂತಿಮ ನಿರ್ಧಾರವನ್ನು ಹೊರಗೆಡಹಲಿಲ್ಲ. ಶ್ರೀ ಶಾಸ್ತ್ರಿಯವರು ನಿಕಟದಲ್ಲಿಯೇ ಇವರೂ ಇದನ್ನು ಅನುಮೋದಿಸುವರು ಎಂಬ ನಿರೀಕ್ಷೆಯಿಟ್ಟುಕೊಂಡು ದೆಹಲಿಗೆ ಮರಳಿದರು. ತಮ್ಮ ಮುಂದೆ ಬ್ರಹದಾಕಾರವನ್ನು ತಾಳಿ ತಾಂಡವ ನಡೆಸುತ್ತಿದ್ದ ಈ ಅಸ್ಸಾಮದ ಭಾಷಾ ಪ್ರಶ್ನೆಗೆ ಸಮಾಧಾನ ಕಂಡುಹಿಡಿದ ಶಾಸ್ತ್ರಿಯವರು ಕಾಂಗ್ರೆಸ್ ವರಿಷ್ಠರ ಹಾಗೂ ನಾಯಕರ ದೃಷ್ಟಿಯಿಂದ ಅಭಿಮಾನಾರ್ಹರಾಗಿದ್ದಾರೆ. ಪ್ರಧಾನ ಮಂತ್ರಿ ನೆಹರು ಕೂಡಾ ತಾನು ಮನಿಲಾಕ್ಕೆ ವಿಶ್ರಾಂತಿಗಾಗಿ ತೆರಳುವುದಕ್ಕೆ ಮೊದಲು ಶ್ರೀ ಶಾಸ್ತ್ರಿಯವರು ಮುಂದಿಟ್ಟ ಸೂತ್ರಗಳನ್ನು ಸಮರ್ಥಿಸಿ, ಅದೊಂದೇ ಪರಿಹಾರ ಮಾರ್ಗವೆಂದು ಸಂತುಷ್ಟಿ ವ್ಯಕ್ತಪಡಿಸಿದ್ದಾರೆ. ಇದೇ ರೀತಿಯಲ್ಲಿ ಪಂಜಾಬದ ಭಾಷಾ ವಿವಾದವನ್ನೂ ಶ್ರೀ ಶಾಸ್ತ್ರಿಯವರು ಸಮಾಧಾನಕರವಾಗಿ ಬಗೆಹರಿಸುವರೆಂಬ ವಿಶ್ವಾಸವನ್ನು ರಾಜಕೀಯ ವರ್ತುಲಗಳು ತಾಳಿವೆ.

ಕಾಂಗ್ರೆಸ್ಸು ಗೃಹಮಂತ್ರಿಯವರ ಸೂತ್ರಗಳಿಗೆ ಒಪ್ಪಿಗೆಯನ್ನು ಸೂಚಿಸಿದ ಪ್ರಜಾ ಸಮಾಜವಾದಿ ಪಕ್ಷವು ಆ ಬಗ್ಗೆ 'ಪ್ರತಿಕೂಲಾಭಿಪ್ರಾಯ'ವನ್ನು ತಳೆದಂತಿದೆ. 'ಭಾರತೀಯರೆಲ್ಲರೂ ಬಂಗಾಳಿಯು ಅಸ್ಸಾಮಿ ಭಾಷೆಗೆ ಅತೀವ ಸಂಬಂಧಿಸಿದೆಯೆಂದೂ ಹಿಂದಿಗಿಂತ ಬಂಗಾಳಿಗಳು ಅಸ್ಸಾಮಿಯನ್ನು ತೀವ್ರವಾಗಿ ಅರಿತುಕೊಳ್ಳುವುದು ಸಾಧ್ಯವೆಂದೂ ತಿಳಿದಿದ್ದಾರೆ. ಕಚಾರದ ಜನತೆಯು ಹಿಂದಿಯನ್ನು ಸ್ವೀಕರಿಸಲೇ ಬೇಕೆಂದು ಹೇಳಿದರೆ, ಅಸ್ಸಾಮಿ—ವಿರೋಧ ಭಾವನೆ ಬೆಳೆಯಬಹುದು. ಆದುದರಿಂದ ನಾನು ಕಚಾರದ ಜನತೆಯು ಈ ಸೂತ್ರವನ್ನು ಒಪ್ಪಿಕೊಳ್ಳಬೇಕೆನ್ನುವುದಿಲ್ಲ. ಕಚಾರ ಸಂಗ್ರಾಮ ಪರಿಷತ್ತು ಬಂಗಾಳಿಯನ್ನೂ ರಾಜ್ಯದ ಅಧಿಕೃತ ಭಾಷೆಯನ್ನಾಗಿ ಮಾಡಬೇಕೆಂದು ಸತ್ಯಾಗ್ರಹವನ್ನು ಹೂಡಿತ್ತು; ಈ ಸೂತ್ರದಿಂದ ಉದ್ದೇಶ ಸಫಲವಾಗಲಿಲ್ಲ. ಕೆಲವೊಂದು ಬಗೆಯ ರಿಯಾಯತಿಯನ್ನು ನೀಡುವ ಪ್ರಯತ್ನ ಮಾತ್ರ ಇದರಲ್ಲಿ ಅಡಗಿದೆ. ಶ್ರೀ ಶಾಸ್ತ್ರಿಯವರು ಬ್ರಹ್ಮಪುತ್ರ ಕಣಿವೆ ಮತ್ತು ಕಚಾರದ ಕಾಂಗ್ರೆಸಿಗರನ್ನು ಮಾತ್ರ ಕಂಡು ಮಾತಾಡಿದರೇ ಹೊರತು, ಸಂಗ್ರಾಮ ಪರಿಷತ್ತಿನ ನಾಯಕರೊಡನೆ ವಿಚಾರ ಮಾಡಲಿಲ್ಲ' ಎಂದು ಪಶ್ಚಿಮ ಬಂಗಾಳದ ಪ್ರಜಾ ಪಕ್ಷದ ನಾಯಕ ಡಾ| ಪಿ. ಸಿ. ಘೋಷರು ನಿಲುವು ವ್ಯಕ್ತಪಡಿಸಿದ್ದಾರೆ. ಇವರ ಅಭಿಪ್ರಾಯನಂತೆ, ಅಸ್ಸಾಮದಲ್ಲಿ ಅಸ್ಸಾಮಿ, ಬಂಗಾಳಿಗಳೂ ಮಾತ್ರವಲ್ಲ ಗುಡ್ಡನಾಡಿನ ಜನರು ಬಯಸುವ ಇನ್ನೊಂದು ಭಾಷೆ—ಹೀಗೆ ಮೂರು ರಾಜ್ಯದ ಭಾಷೆಗಳಾಗಬೇಕು!

ಬಂಗಾಳಿಯೂ ರಾಜ್ಯದ ಭಾಷೆಯಾಗಬೇಕು ಎಂಬುದರ ಬಗ್ಗೆ ಸತ್ಯಾಗ್ರಹ ಹೂಡಿದ ಕಚಾರ ಜಿಲ್ಲಾ ಸಂಗ್ರಾಮ ಪರಿಷತ್ತಿನ ನಾಯಕರಲ್ಲೊಬ್ಬರಾದ ಪರಿತೋಷಪಾಲ್ ಚೌದರಿಯವರು ಶಾಸ್ತ್ರಿ ಸೂತ್ರವು ಪರಿಷತ್ತಿಗೆ ಸ್ವೀಕೃತವಲ್ಲವೆಂದು ಉದ್ಘೋಷಿಸಿದ್ದಾರೆ. 'ನಮ್ಮ ನ್ಯಾಯಬದ್ಧ ಕೇಳಿಕೆಯು ಈಡೇರುವ ವರೆಗೆ ನಮ್ಮ ಸತ್ಯಾಗ್ರಹವು ಮುಂದುವರಿಯುವುದು' ಎಂದಿವರು ಹೇಳಿದ್ದಾರೆ. ತಾವು ತಳೆದ ನಿಲುವಿಗೆ ಇವರು, "ಪರಿಹಾರಕ್ಕೆ ಶಾಸ್ತ್ರಿ ಸೂತ್ರವು ಮುಂದೆ ಬಂದುದೇ ವಿಸ್ಮಯಜನಕ; ಆದರೂ ಕಚಾರದ ಜನರನ್ನು ಪ್ರತಿನಿಧೀಕರಿಸುವ ಪರಿಷತ್ತಿನ ಅಭಿಪ್ರಾಯ ಕೇಳದೆ ವಿವಾದ ಬಗೆಹರಿಯುವುದಾದರೂ ಹೇಗೆ?" ಎಂಬ ಕಾರಣ

(೧೨ನೇ ಪುಟ ನೋಡಿರಿ)

ESTD. 1921

NAVAYUGA
KANNADA WEEKLY,
UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೨೧.

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್.
ಬಿ. ವಾಮನರಾಯ ಶೆಟ್ಟಿ, ಬಿ. ಎ., ಎಲ್. ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

●

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್) ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್) ಕಲಂ ಇಂಚಿಗೆ ರೂ. 3 50
ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸಾಕರ್ಯವಿರುತ್ತದೆ.

ಧಾರಾವಾಹಿ ಕಾದಂಬರಿ

ಯಮುನ ನೆರಳು

ಮೂಲ ಲೇಖಕರು: **ಶ್ರೀ ಎಂ. ಎಲ್. ಪಾಂಡೇಯ.**
ಅನುವಾದಕರು: **ಶ್ರೀ ಎಸ್. ಎಂ. ಶೆಟ್ಟಿ, ಶಿಮುಂಜೆ ಪರಾರಿ.**
(ಕಳೆದ ಸಂಚಿಕೆಯಿಂದ)

೮

ಮಾಯಾವತಿಯು ಒಳ ಪ್ರವೇಶಿಸಿದಂತೆಯೇ ದಾಮೋದರರು ಸಿಟ್ಟಿನಿಂದ— „ನಾನು ತಮಗೆ ಎಷ್ಟೋ ಬಾರಿ ಹೇಳದೆ ಈ ದುಷ್ಟರು ನಿಮಗೆತಿಳಿಯದ ಭಾಷೆಬರೆಯುವಾಗ ಅದಕ್ಕೆ ಹಸ್ತಾಕ್ಷರ ಸಹಿ ಮಾಡ ಬೇಡಿಎಂದು. ಆದರೆನೀವೆಲ್ಲಿ ಕೇಳಬೇಕು? ಇವತ್ತು ತಾವು ಮೋಸಹೋದುದಕ್ಕಾಗಿ ನನಗೆ ತುಂಬಾ ಪಶ್ಚಾತ್ತಾಪವಾಗುತ್ತಿದೆ. ಅದರಿಂದ ತಪ್ಪಿಸಿ ಕೊಳ್ಳುವ ಉಪಾಯವೂ ತಿಳಿಯದಾಗಿದೆ."

"ಎಂತಹ ಮೋಸ' ಅಂಜುತ್ತಾ ಕೇಳಿದಳು ಮಾಯಾ.

„ಓಹೋ, ಸಣ್ಣ ಮೋಸವಲ್ಲ, ಅದೊಂದು ದೊಡ್ಡ ಮಾಯಾಜಾಲ. ಇವತ್ತು ನೀವು ನಕಲು ಮಾಡಿದ ಕಾಗದವು ಒಂದು ಸನದು. ಅದರ ಪ್ರಕಾರ ತಾವು ಫಲಕದಾರಿಯನ್ನು ಪ್ರೇಮಿಸುತ್ತೀರಿ. ಭವಿಷ್ಯದಲ್ಲಿ ಅವನೊಡನೆ ನಿಮ್ಮ ವಿವಾಹ ನಮ್ಮ ದೇಶದ ವಿಧಾನಾನುಸಾರವಾಗಿ ತಾವು ತಮ್ಮ ಒಪ್ಪಿಗೆಯನ್ನು ಫಲಕದಾರಿಗೆ ಲೇಖನಿ ಮುಖಾಂತರ ಒಪ್ಪಿಸಿದ್ದೀರಿ" ಎಂದು ಆವೇಶದಿಂದ ನುಡಿದರು. ದಾಮೋದರ್.

ಇದನ್ನು ಕೇಳುತ್ತಲೇ ಮಾಯಾವತಿಯ ಮುಖವು ಆರಕ್ತವಾಯಿತು. ಆವಳು ಭಯದಿಂದ ಕಂಪಿಸತೊಡಗಿದಳು. "ಈಗೇನು ಮಾಡುವುದು? ಅಂಜುತ್ತಾ ನುಡಿದಳು ಮಾಯಾ.

„ಆಗ ಬಾರದುದು ಆಗಿ ಹೋಯ್ತು. ಈಗ ಆ ಕಾಗದ ವಾಪಾಸು ಸಿಗುವ ಸಂಭವವಂತೂ ಇಲ್ಲ. ಆದರೂ ಪ್ರಯತ್ನ ಮಾಡಿ ನೋಡುತ್ತೇನೆ" ಎಂದು ಹೇಳಿ ದಾಮೋದರರು ಅಲ್ಲಿಂದ ಕಾಲ್ಕಿತ್ತರು.

ಮಾಯಾವತಿಯು ವಿಚಿತ್ರಾವಸ್ಥೆಯಲ್ಲಿದ್ದಳು. ಹೃದಯದಲ್ಲಿ ಬಿರುಗಾಳಿ ಎದ್ದಿತ್ತು. ಭಯದಿಂದ ಆಗತ್ಯ ಕಾರ್ಯದತ್ತವೂ ಹೋಗಲಿಲ್ಲ. ರಾತ್ರಿಯ ಒಂಬತ್ತರ ಸಮಯವನ್ನೇ ನಿರೀಕ್ಷಿಸುತ್ತಿದ್ದಳು.

ಅಂತೂ ಹೇಗಾದರೂ ಹಗಲು ಕಳೆದು ರಾತ್ರಿಯ ಒಂಬತ್ತರ ತಾಸು ಸಮೀಪಿಸಿತು. ಮಾಯಾವತಿಯು ಸಾವಧಾನದಿಂದ ಹೊರಗೆ ಲತಾಮಂಟಪಕ್ಕೆ ಹೊರಟಳು. ಮಾಯಾಳು ಫಲಕಧಾರಿಯನ್ನು ಭೇಟಿಯಾಗಲು ಇಲ್ಲಿಗೇ ಬರಹೇಳಿದ್ದಳು. ಆ ಮಂಟಪದ ಬಳಿ ನಿಂತಿದ್ದ ಫಲಕದಾರಿ ಸಿಂಹನನ್ನು ಮಾಯಾವತಿಯು ಕಂಡಳು. ಆಕೆಯು ಮಂಟಪದ ಬಾಗಿಲು ತೆರೆಯಲೂ ಇಲ್ಲ; ಹೊರಗೆ ಬರಲೂ ಇಲ್ಲ.

ಮಾಯಾಳನ್ನು ನೋಡುತ್ತಲೇ ಫಲಕದಾರಿಯು—„ಬಹು ಹೊತ್ತಿನಿಂದ ನಾನು ನಿಮ್ಮ ಪ್ರತೀಕ್ಷೆ ಮಾಡುತ್ತಿದ್ದೇನೆ" ಎಂದನು.

„ತಡವಾದುದಕ್ಕಾಗಿ ಕ್ಷಮಿಸಿ, ಏನು ಕೆಲಸವಿತ್ತು ಹೇಳಿ" ಎಂದು ಖಿನ್ನ ಮನಸ್ಕಳಾಗಿ ನುಡಿದಳು ಮಾಯಾವತಿ.

ತಮ್ಮ ಹತ್ತಿರ ಬರುವ ಆಜ್ಞೆಯನ್ನು ಕೆಲವೊಂದು ಕ್ಷಣಗಳಿಗಾಗಿ ಕೊಡುವಿರೆಂದು ನಂಬುತ್ತೇನೆ. ಯಾಕೆಂದರೆ ನನ್ನ ಮಾತನ್ನು ತಮಗೆ ಶಾಂತಿಪೂರ್ವಕವಾಗಿ ಹೇಳಲು ಅವಕಾಶ ವಾಗುತ್ತದೆ." ವಿನೀತನಾಗಿ ಪ್ರಾರ್ಥಿಸಿದನು.

"ಕ್ಷಮಿಸಿ ಮಹಾಶಯರೇ, ನಾನು ನನ್ನನ್ನು 'ಜ್ಯೂಲಿಯಟ್' ಹಾಗೂ ತಮ್ಮನ್ನು 'ರೋಮಿಯೋ' ಆಗಿ ಸ್ವೀಕರಿಸಲು ಸಿದ್ಧಳಿಲ್ಲ. ಯಾಕೆಂದರೆ ನನ್ನ ಮನೆತನದ ಮರ್ಯಾದೆಯನ್ನು ನಾನು ಗಮನಿಸಬೇಕಾಗುತ್ತದೆ. ತಾವು ಹೇಳ ಬೇಕಾದ ಮಾತನ್ನು ದೂರದಿಂದಲೇ ತಿಳಿಸಿ."

ಎಲ್ಲಾ ಆಶೆಗಳಿಗೆ ಕಣ್ಣೀರು ಎರೆದುದರಿಂದ ನನಗೆ ತುಂಬಾ ದುಃಖವಾಗುತ್ತದೆ ಆಗಲಿ ತಮ್ಮ ಇಚ್ಛೆಯಂತೆಯೇ ಕೇಳಿರಿ- ತಾವು ನನ್ನನ್ನು ಪ್ರೀತಿಸುತ್ತಿರೇನು? ನಿಮ್ಮ ಸುಖ ಜೀವನದಲ್ಲಿ ಪಾಲುಗಾರನಾಗಬಹುದೇನು?" ಒಂದೇ ಉಸಿರಿನಲ್ಲಿ ನುಡಿದ ಫಲಕದಾರಿ ಸಿಂಹ.

"ಕ್ಷಮಿಸಿ ನಾನು ನಿಮ್ಮ ಈ ಸುಂದರ ಪ್ರಸ್ತಾಪವನ್ನು ಸ್ವೀಕಾರ ಮಾಡಲು ಅಸಮರ್ಥಳಿದ್ದೇನೆ. ಅಲ್ಲದೆ, ನನ್ನ ಪ್ರೇಮಿಯಾಗುವವನ ಅವಸ್ಥೆಯೂ ನಿಮಗೆ ತಿಳಿದಿದೆ." ಎಂದಳು ಮಾಯಾವತಿ.

"ಮಾಯಾ, ಏನು ಹೇಳುತ್ತೀಯೋ! ಅದು ಸತ್ಯ! ಆದರೆ ಆ ಘಟನೆಗಳೆಲ್ಲಾ ದೈವೀಯೋಗಗಳಾಗಿದ್ದುವು ಕ್ಷಮಿಸಿ, ನಿಮ್ಮ ಈಗಿನ ವ್ಯವಹಾರದಿಂದ ನನಗೆ ಮರ್ಮಘಾತವಾಗಿದೆ. ನಿಮ್ಮ ಮನಸ್ಸು ಜಯಂತ ಚಿತ್ರಕಾರನ ಕಡೆ ಆಕರ್ಷಿತವಾಗಿದೆ. ಆದರೆ, ಕೊನೆಗಾದರೂ ನನ್ನೊಡನೆಯೇ ನಿಮ್ಮ ಲಗ್ನವಾಗುವುದು. ಎಂಬುದನ್ನು ಮರೆಯ ಬೇಡಿ,"

"ಫಲಕದಾರೀ..." ರೋಷಾನ್ವಿತಳಾಗಿ ಕಿರುಚಿದಳು ಮಾಯಾ ಕುಮಾರಿ „ಈಗಿನ ನಿಮ್ಮ ಮಾತುಗಳು ನೀವು ಜಾಗ್ರತಾವಸ್ಥೆಯಲ್ಲಿಲ್ಲವೆಂಬುದನ್ನು ಪ್ರಮಾಣಿಸುತ್ತಿವೆ. ನಿಮ್ಮ ನೀಚತ್ವಪೂರ್ಣ ವ್ಯಭಿಚಾರವು ಯುಕ್ತಿ ಸಂಗತವಲ್ಲ. ನನ್ನ ದುಃಖವೆಂದರೆ ತಾವು ಈಗ ನನ್ನ ಸ್ಥಳದಲ್ಲಿದ್ದೀರಿ. ಏನು ಬೇಕಾದರೂ ಮಾತಾಡಬಹುದು. ಒಂದ ಮಾತು ಕೇಳಿ. ನನ್ನನ್ನು ಪಡೆಯಲಿಕ್ಕಾಗಿ ನಿಮ್ಮ ಎಲ್ಲಾ ಸಾಧನಗಳನ್ನುಪಯೋಗಿಸಿ ನೋಡಬಹುದು. ನನಗೆ ಕುಸಂಗಕ್ಕಾಗಿ ಸಮಯವಿಲ್ಲ ಕ್ಷಮಿಸಿ" ಎಂದು ಹೇಳಿ ಮಾಯಾವತಿಯು ಬಂಗಲೆಗೆ ಬಾಣದಂತೆ ಮರಳಿದಳು.

ರೋಷಾತಿರೇಕದಿಂದ ಫಲಕದಾರಿಯೂ ತನ್ನ ಮನೆಗೆ ಮರಳಿದನು.

೦ ೦ ೦

ಜಯಂತ ಕುಮಾರರು ತನ್ನ ನೆರೆಯ ಕೋಣೆಯಲ್ಲಿ ಮಾಯಾವತಿಯ ಚಿತ್ರ ಬಿಡಿಸುತ್ತಿದ್ದರು. ಚಿತ್ರಕ್ಕೆ ಅನಿವಾರ್ಯ ಭಂಗಿಯಲ್ಲಿ ಕುಳ್ಳಲು ಮಾಯಾವತಿಗೆ ಬಾರಿಬಾರಿಗೆ ಕ್ರಮ ಬದಲಾಯಿಸಬೇಕಾಗುತಿತ್ತು. ಕೆಲವೊಮ್ಮೆ ಆಕೆಯ ಅಧರಗಳಲ್ಲಿ ನಗೆ ಮಿನುಗುತಿತ್ತು ಆಗಾಗ ವಿಚಿತ್ರ ಭಾವನೆಗಳು ಬಂದು ಬಾಯಿ ಯಿಂದ 'ಆರ್ತನಾದ'ವೂ ಹೊರ ಬೀಳುತಿತ್ತು. ಆದರೆ ಜಯಂತರು ಆಕೆಯ ಭಾವನೆಯತ್ತ ಮನಕೊಡದೆ ಚಿತ್ರೀಕರಣದಲ್ಲಿ ಮಗ್ನರಾಗಿದ್ದರು. ಮಾಯಾವತಿಗೆ ಅಲ್ಲಿಯ ಒಂದೊಂದು ಕೋಣೆಯಲ್ಲೂ ಕ್ಷಣವನ್ನು ಕಳೆಯುವುದು ಅಹೋಭಾಗ್ಯವೆಂದು ಭಾ

(೪೧ನೇ ಪುಟ ನೋಡಿರಿ)

ಸ್ಥಾಪನೆ: 1924

ದಿ ಕರ್ನಾಟಕ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)

ರಿಜಿಸ್ಟರ್ಡ್ & ಹೆಡ್ ಆಫೀಸು: **ಡೊಂಗರಕೇರಿ, ಮಂಗಳೂರು—3.**

ಈ ಕೆಳಗಿನ ಏರಿಸಿದ ಬಡ್ಡಿದರಗಳಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು.

ಒಂದರಿಂದ ಎರಡು ತಿಂಗಳುಗಳ ವರೆಗೆ	ಸಾ॥ ಸೇಕಡಾ	3-75	ನ.ಪೈಸೆ
ಮೂರರಿಂದ ಐದು ತಿಂಗಳುಗಳ ವರೆಗೆ	,,	4-25	,,
ಆರು ತಿಂಗಳುಗಳಿಂದ 12 ತಿಂಗಳುಗಳ ವರೆಗೆ....	,,	4-50	,,
12 ತಿಂಗಳು ಮಿಕ್ಕಿ 24 ತಿಂಗಳುಗಳ ವರೆಗೆ	,,	4-75	,,
24 ತಿಂಗಳು ಮಿಕ್ಕಿ 48 ತಿಂಗಳುಗಳ ವರೆಗೆ	,,	5-00	,,
48 ತಿಂಗಳುಗಳಿಗೆ ಮಿಕ್ಕಿ	,,	5-25	,,

ಸೇವಿಂಗ್ಸ್ ಬ್ಯಾಂಕ್ ಬಡ್ಡಿ ದರವನ್ನು
ಸಾ. ಸೇಕಡ 2½% ರಿಂದ 3¼%ಗೆ ಏರಿಸಲಾಗಿದೆ.

THE KARNATAKA BANK LIMITED.



ನಿಮಗೂ ತಿಳಿದಿರಲಿ

ವಿಶ್ವದ ಕೆಲವು ವೈಚಿತ್ರ್ಯಗಳು

ಪ್ರಕೃತಿಯು ವಿಚಿತ್ರವಾದುದು; ಚೆನ್ನಾಗಿ ಅಭ್ಯಾಸ ಮಾಡುವ ಶಾಸ್ತ್ರಿಯಿದ್ದವನಿಗ ಮಾತ್ರ ಪ್ರಕೃತಿಯು ನಿಗೂಢ್ಯಪದ ಪರಿಚಯವಾಗಬಲ್ಲುದು. ಅಂತೆಯೇ ವಿಕೃತಿಯು ಕೈಯೂ ಹಿಂದೆ ನಿಂತಿಲ್ಲ. ಮಾನವನು 'ವಿಕೃತಿ'ಯ ಪ್ರೇರಿತ ಕರ್ತೃವಾಗಿ ಹಲವಾರು ಅದ್ಭುತ ಕಾರ್ಯ ಮಾಡಿದ್ದಾನೆ. ಈ ಪ್ರಕೃತಿ ಮತ್ತು ವಿಕೃತಿಗಳ ದ್ವಂದ್ವ ಅನಾದಿಯಿಂದಲೂ ನಡೆದು ಬರುತ್ತದೆ.

'ರಂಜನೆ', ಬೆಂಗಳೂರು.

ವಿಶ್ವದ ವೈಚಿತ್ರ್ಯಗಳು ಎಣಿಕೆಗೆ ಬಾರದಷ್ಟಿವೆ. ಒಂದೊಂದನ್ನೂ ಹೇಳ ಬಯಸಿದಾಗ ಒಂದಕ್ಕಿಂತ ಒಂದು ವಿಚಿತ್ರವಾಗಿ ಸ್ವಾರಸ್ಯವಾಗಿಯೂ ತೋರುತ್ತವೆ. ಭಾರತದಲ್ಲಿ ಸಿಗುವಷ್ಟು ವೈಚಿತ್ರ್ಯಗಳು ವಿಶ್ವದ ಬೇರಾವ ದೇಶಗಳಲ್ಲೂ ದೊರೆಯಲಾರವು. ಭಾರತವನ್ನು ಬಿಟ್ಟರೆ ಮುಂದಿನ ಸ್ಥಾನಕ್ಕೆ ಆಫ್ರಿಕವೂ ಚೀನಾವೂ ಬಿರುಸಿನಿಂದ ಸ್ಪರ್ಧಿಸುತ್ತವೆ.

ದೇಶದ ನಾನಾ ಭಾಗಗಳಲ್ಲೂ ವೈವಿಧ್ಯ ವಿಜ್ಞಾನಿಗಳು ಸೇರಿರುವ ಈ ಕಾಲದಲ್ಲಿ ವೈಚಿತ್ರ್ಯಗಳ ನಿರ್ಮಾಣ ಹೆಚ್ಚಿನ ಆಶ್ಚರ್ಯ ತರಲಾರವು. ಆದರೂ ಪ್ರಾಚೀನ ಕಾಲದಿಂದಲೂ ನಡೆದು ಬರುತ್ತಿರುವ ಆಶ್ಚರ್ಯ ಕಾರಕ ಸಂಗತಿಗಳನ್ನು ಕಂಡಾಗ ಕಣ್ಣು ಬಟ್ಟಗಲವಾಗುವುದೇ ಅಲ್ಲದೆ ಪ್ರಾಚೀನರ ಮೇಲೆ ನಮಗಿರುವ ಪೂಜ್ಯ ಭಾವನೆ ಇಮ್ಮಡಿಸುತ್ತದೆ.

ವೈಚಿತ್ರ್ಯಗಳಲ್ಲಿ "ಪ್ರಕೃತಿ ವೈಚಿತ್ರ್ಯ" ಮತ್ತು "ಮಾನವ ವೈಚಿತ್ರ್ಯ" ಎಂಬೆರಡು ವಿಧಗಳಿವೆ.

ಮೊದಲನೆಯದಕ್ಕೆ ಭಾರತದ ಮೂಲೆ ಮೂಲೆಗಳಲ್ಲೂ ನಿದರ್ಶನಗಳನ್ನು ಕಾಣಬಹುದಾಗಿದೆ.

೦ ಟಿ. ನರಸೀಪುರದ ಆಗಸ್ತ್ಯೇಶ್ವರದ ದೇವರ ಮೇಲಿನ ಕುಳಿಯಲ್ಲಿ ಒಂದುದ್ದರಣೆಯಷ್ಟೇ ನೀರು ಬರುವುದು ಹೆಚ್ಚುವುದೂ ಇಲ್ಲ ಮತ್ತೆ ಖಾಲಿಯಾಗುವುದೂ ಇಲ್ಲ.

೦ ಹಿಮವದ್ಗಿರಿ ಸ್ವಾಮಿಯ ಬೆಟ್ಟದ ಮೇಲಿನ ಗೋಪಾಲ ಸ್ವಾಮಿಯ ದೇವಸ್ಥಾನದ ಗರ್ಭ ಗುಡಿಯ ಹೊಸಲಿನ ಮೇಲ್ಭಾಗದಲ್ಲಿ ಹಿಮ ನೀರು ತೊಟ್ಟಿಕ್ಕುತ್ತಿತ್ತದೆ ಆದರೆ ದೇವಸ್ಥಾನದ ಯಾವ ಭಾಗದ ಆ ರೀತಿ ನೀರಿನ ವಸತಿಯನ್ನು ಕಾಣಲಾರಿರಿ.

೦ ಬಿಹಾರದ ಸೇಬಲ ಪೂರದಿಂದ ಎಂಟು ಮೈಲಿಗೂರದಷ್ಟಿರುವ ಪಾಂಡರಿ ಎಂಬ ಊರ ಹನುಮನ ಗುಡಿಯ ಮುಂದಿರುವ ಅತ್ತೀ ಮರದ ವಿಚಿತ್ರ ಕೇಳಿ. ಪ್ರತಿ ಹನುಮ ಜಯಂತಿಯ ದಿನ ಬೆಳಗಿನಿಂದ ಸಾಯಂಕಾಲದ ವರೆಗೂ ಅದರ ಎಲೆಗಳು ಉದುರುತ್ತಿರುತ್ತವೆ. ಸಂಜೆಯ ವರೆಗೆ ಮರದಲ್ಲಿ ಒಂದೇ ಒಂದು ಎಲೆ ಕಾಣ ಸಿಗುವುದಿಲ್ಲ. ಆದರೆ ಮಾರನೆಯ ದಿನ ಸೂರ್ಯೋದಯಕ್ಕೆ ಆ ಮರದಲ್ಲಿ ಹೊಚ್ಚ ಹೊಸ ಎಲೆಗಳು ಮೊದಲಿನಂತೆಯೇ ಕಾಣಸಿಗುತ್ತವೆ.

೦ ಪವಿತ್ರ ಯಾತ್ರಾಸ್ಥಳವೊಂದರ ದೇವಸ್ಥಾನದ ಒಳಾಂಗಣದಲ್ಲಿರುವ ವೃಕ್ಷವೊಂದು ವಿವಿಧ ಕಾಲಕ್ಕೆ ವಿಧವಿಧ ಜಾತಿಯ ಹಣ್ಣುಗಳನ್ನು ಬಿಡುವುದು. ಒಮ್ಮೆ ಕಿತ್ತಳೆ, ಒಮ್ಮೆ ಚೇಪೆ, ಮತ್ತೊಮ್ಮೆ ಮಾವು ಇತ್ಯಾ

೦ ಹಿಮಾಲಯದ ಬುಡದಲ್ಲಿ ಬೆಳಕು ಕೊಡುವ ಮರಗಳು ಇವೆ.

೦ ಜಗತ್ತಿನಲ್ಲೆಲ್ಲೂ ಕಾಣ ಸಿಗದ ದೇವತೆಯ ಪ್ರತ್ಯಕ್ಷ ದರ್ಶನ ಕಾಶ್ಮೀರದ ಗಡಿಯಾದ ಪಠಾಣ ಕೋಟೆಯ ಸಮೀಪದಲ್ಲಿರುವ ಜ್ವಾಲಾ ಮುಖೀ ಕ್ಷೇತ್ರದಲ್ಲಿ ಸಿಗುತ್ತದೆ. ಪರ್ವತದ ತಪ್ಪಲಿನಲ್ಲಿರುವ ಈ ದೇವಸ್ಥಾನದೊಳಗಿನ ಕಲ್ಲಿನ ಗೋಡೆಯಲ್ಲೂ ಮತ್ತು ಕಲ್ಲಿನ ಕುಂಡದಲ್ಲೂ ಸುಮಾರು ಎಂಟುಹತ್ತು ಜಾಗಗಳಲ್ಲಿ ಯಾವ ವಿಧವಾದ ಎಣ್ಣೆ — ಬತ್ತಿಗಳಿಲ್ಲದೇ ಸದಾ ಜ್ವಾಲೆಯು ಉರಿಯುತ್ತಿರುತ್ತದೆ. ಇಲ್ಲಿ ಮೂರ್ತಿ ಪೂಜೆಗೆ ಬದಲು ಪ್ರತ್ಯಕ್ಷ ಜ್ವಾಲಾಮುಖಿ ದೇವಿಯ ಪೂಜೆ ನಡೆಯುತ್ತದೆ.

೦ ಆಫ್ರಿಕಾದ ಅರಣ್ಯದಲಿರುವ 'ಮನುಷ್ಯನನ್ನು ನುಂಗುವ ಗಿಡಗಳು" ಇವು ತಮ್ಮ ಸುತ್ತ ೮ ಅಡಿ ಅಥವಾ ೧೦ ಅಡಿಯೊಳಗೆ ಜನ ಸಂಚಾರವಾದರೆ ಅದು ತನ್ನ ಎಲೆಗಳಿಂದೆಳೆದುಕೊಂಡು ಹಲವಾರು ಘಂಟೆಗಳು ಕಳೆದ ಮೇಲೆ ಅಸ್ಥಿಪಂಜರವನ್ನು ಬಿಡುತ್ತವೆ.

೦ ಚಿಂತಾಮಣಿಯ ಕೈವಾರದ ಹತ್ತಿರವಿರುವ ಒಂದು ಗುಡ್ಡದಲ್ಲಿ ವರ್ಷಕ್ಕೊಂದು ಬಾರಿ ಕೀವು ರಕ್ತ ಹೊರ ಹೊಮ್ಮುತ್ತದೆ. ವೈದ್ಯರು ಇದನ್ನು ಪರೀಕ್ಷಿಸಿ ಇದು ಮನುಷ್ಯನ ಕೀವು, ರಕ್ತಗಳ ಸಕಲ ಗುಣಗಳನ್ನೂ ಹೊಂದಿದೆಯೆಂದು ಖಚಿತ ಪಡಿಸಿದ್ದಾರೆ. ಆ ಕಾಲದಲ್ಲಿ ಗುಡ್ಡದ ಮೇಲೆಲ್ಲಾ ಬಹಳ ಕಾಗೆಗಳು ಹಾರಾಡುತ್ತಿರುತ್ತವೆ.

ಇವುಗಳೆಲ್ಲಾ ಪ್ರಕೃತಿಯ ವೈಚಿತ್ರ್ಯಗಳಾಗಿದ್ದು ಕೆಲವೊಮ್ಮೆ ಮಾನವನಿಗೆ ಉಪಯೋಗವನ್ನೂ ಮತ್ತೆ ಕೆಲವು ಅನರ್ಥವನ್ನೂ ಕೊಡುವುದಾಗಿವೆ.

'ಮಾನವನ ವೈಚಿತ್ರ್ಯಗಳು' ಎಂದರೆ ಮನುಷ್ಯ ನಿರ್ಮಾಣ ಮಾಡಿದವುಗಳಲ್ಲಿ ಕಂಡು ಬರುವ ವೈಚಿತ್ರ್ಯಗಳು.

ಇವಕ್ಕೂ ಸಾಕಷ್ಟು ನಿದರ್ಶನಗಳುಂಟು;

೦ ಹಂಪೆಯ ವಿಜಯ ವಿಟ್ಠಲನ ಗುಡಿಯ ನವರಂಗದ ಕಂಭದಲ್ಲಿರುವ ಬಳಪದ ಉಪಕಂಭಗಳಿಗೆ ಹೊಡೆದಾಗ ಕ್ರಮವಾಗಿ 'ಸಪ್ತಸ್ವರ'ಗಳನ್ನು ಕೇಳಬಹುದು.

೦ ಬೇಲೂರಿಗೊಂದು ನೃತ್ಯಭಂಗಿಯಲ್ಲಿ ಕಡೆದಿರುವ ಸ್ತ್ರೀಯ ಕೈಯಲ್ಲೊಂದು ತೊಟ್ಟು ನೀರನ್ನು ಹಾಕಿದರೆ ಅದು ಸರ್ವಾಂಗದ ಮೇಲೆ ಹಾದು ಪಾದದ ಕೊನೆಯನ್ನು ಮುಟ್ಟುವುದು.

೦ ಲೇಪಾಕ್ಷಿಯ ದೇವಸ್ಥಾನದ ನಡು ಕಂಭದ ಕೆಳಗೆ ಕಾಗದಗಳನ್ನು ಹಾಯಿಸಬಹುದು.

೦ ವೇಳೂರು ಎಂಬ ಗ್ರಾಮದಲ್ಲಿರುವ ಕೈಲಾಸ ದೇವಾಲಯದಲ್ಲಿ ನಡೆದಿರುವಷ್ಟು ಅತಿ ಸೂಕ್ಷ್ಮ ಕೆತ್ತನೆಯ ಕೆಲಸ ಜಗತ್ತಿನಲ್ಲೆಲ್ಲೂ ದೊರೆಯುವುದಿಲ್ಲ.

೦ ಇಟಲಿಯ ಪೀಸಾ ಗೋಪುರ ಪ್ರತೀ ವರ್ಷ ೧೦ರಲ್ಲಿ ೭ನೇ ಭಾಗ ಮಿಲಿಮೀಟರಿನಷ್ಟು ನಿಯಮಿತವಾಗಿ ವಾಲುತ್ತಿದೆ.

೦ ಲಕ್ಷ್ಮಣನು ಬಾಣಗಳಿಂದ ನೆಯ್ದ "ತೂಗು ಸೇತುವೆ". ಈಗಲೂ ಅದರ ಮೇಲೆ ನಿಂತು ಗಾಳಿಗೆ ತೂಗಿಕೊಳ್ಳಬಹುದು.

೦ ಹಿಂದೊಂದು ಶಿವಾಲಯದಲ್ಲಿ ಲಿಂಗ ಗರ್ಭ— ಗುಡಿಯಲ್ಲಿ ಗಾಳಿಯಲ್ಲಿ ತೇಲಾಡುತ್ತಿತ್ತು ಯಾವ ಆಸರೆಯೂ ಇಲ್ಲದೆ. ಅದನ್ನು ಕ್ರಿ. ಶ. ೭ನೇ ಶತಮಾನದಲ್ಲಿ ಕಟ್ಟಿದ್ದರೆಂಬ ಪ್ರತೀತಿ. ಆದರಿಂದದು ಹಲವಾರು ದಾಳಿಗಳಿಂದಾಗಿ ಹಾಳಾಗಿ ಬಿದ್ದಿದೆ.

೦ ಚೀಣಾ ದೇಶದ ದೇವಾಲಯವೊಂದರಲ್ಲಿ ಒಂದು ಸ್ತ್ರೀ ವಿಗ್ರಹದ ಕೆತ್ತನೆ ಎಷ್ಟು ಚೆನ್ನಾಗಿದೆ ಎಂದರೆ, ಎಷ್ಟೋ ಜನ ಪರಿಚಯವಿದ್ದವರೂ ಕೆಲವೊಮ್ಮೆ ಹೆಗಲ ಮೇಲೆ ಕೈ ಬಿಟ್ಟು ಪೇಸ್ತು ಬಿದ್ದಿದ್ದಾರೆ.

೦ ತುರ್ಕಿಸ್ಥಾನದ ಇಸ್ತಾಂಬುಲ್ ನಗರದಲ್ಲಿರುವ ಸೆಂಟ್ ಸೋಫಿಯಾ ಮಸೀದಿಯ ಒಂದು ಕಂಭ ೫೦೦ ವರ್ಷಗಳಿಂದಲೂ ನೀರು ಸುರಿಸುತ್ತಿದೆ.

೦ ಜಪಾನಿನ ಗ್ರೋವ್ ಜಾಕುತ್ತು ಎಂಬುವು ಜಗತ್ತಿನಲ್ಲಿ ಪ್ರಸಿದ್ಧ ಗವಿಗಳಾಗಿವೆ ಇದರ ಮಹಾದ್ವಾರವನ್ನು ಪ್ರವೇಶಿಸುತ್ತಲೇ ಸುಂದರವಾದ ಭಗವಾನ್ ಬುದ್ಧದೇವನ ಪ್ರತಿಮೆ ಕಾಣಸಿಗುತ್ತದೆ. ಅದು ಕಲ್ಲಿನ ಪ್ರತಿಮೆಯಿದ್ದು ಸದಾ ಸುಗಂಧವನ್ನು ಸೂಸುತ್ತಿದೆಯಾದರೂ ಆ ಸುಗಂಧ ಎಲ್ಲಿಂದ ಬರುತ್ತದೆನ್ನುವುದು ನಿಗೂಢವಾಗಿದೆ.

ಇವೆಲ್ಲಾ ಆಧುನಿಕ ಮಾನವನಿಗೆ ಒಂದ ರೀತಿಯಲ್ಲಿ ಆಶ್ಚರ್ಯಕಾರಕವಿದ್ದರೂ ಜಗತ್ತಿನಲ್ಲಿ ಎಲ್ಲರ ಒಮ್ಮತದಿಂದ ಪ್ರಾಚೀನ ಯುಗದ ಮಾನವ ಅದ್ಭುತ ರಚನೆಗಳೆಂದು ಹೆಸರಾದವುಗಳಿವು. ಅಲೆಕ್ಸಾಂಡ್ರಿಯದ ಬಂದರದಲ್ಲಿರುವ "ದೀಪಸ್ತಂಭ" ಮುಸಲೋನಿನ 'ಗೋರಿ' (ನಿಷ್ಯಾ ಮೈನರ್), ಬೇಬಿಲೋನಿನ 'ತೂಗುವ ತೋಟ', ಯುಪಿಸಿನ್ (ಗ್ರೀಸ್)ನಲ್ಲಿನ 'ಡಯಾನ' ದೇವಾಲಯ. ಒಲಿಂಪಿಯಾದ 'ಜ್ಯೂಪಿಟರ್" ಪ್ರತಿಮೆ. ರೋಡ್ಸ್ ದ್ವೀಪದಲ್ಲಿತ್ತೆಂದು ಹೇಳಲಾಗುವ 'ಕೊಲೋಸಸ್" ಪ್ರತಿಮೆ. ಈಜಿಪ್ಟಿನ ಪಿರಮಿಡ್ಡುಗಳು.

ಇವುಗಳೆ ಅಲ್ಲದೇ ಷಹಜಾನನು ತನ್ನ ಪತ್ನಿಯ ನೆನಪಿಗಾಗಿ ಕಟ್ಟಿಸಿದ ಆಗ್ರಾದ 'ತಾಜಮಹಲ್". ಹಾಗೂ ಚೈನಾ ದೇಶದ ಗಡಿಯಲ್ಲಿ ವಿವಿಧ ಕಾಲದಲ್ಲಿ ಕಟ್ಟಿ ಪೂರೈಸಲಾದ 'ಗ್ರೇಟ್‌ವಾಲ್ ಆಫ್ ಚೈನಾ' ಇವುಗಳನ್ನೂ ವಿಶ್ವದ ಏಳು ಅದ್ಭುತಗಳಲ್ಲಿ ಸೇರಿಸುವುದುಂಟು.

(ಆಧಾರಗಳಿಂದ)

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಹಣ ಹೂಡಿರಿ: ಬಡ್ಡಿ ಸೇಕಡಾ 5ರಂತೆ: ರೂ. 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100—00 ಒದಗಿಸುವುದು.

ಕರೆ, ಚಿಕ್ಕ ಮ್ಯಾದೆ, ಸ್ಥಿರ ಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಸೇಕಡಾ 5¼ರ ವರೆಗೆ.

ತಾ. 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK LTD.

Estd: 1920

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ ನ

'NAVAYUGA' WEEKLY is in the list of periodicals and Newspapers approved for use in Secondary School as per proceedings Roc. No. 466 N/50 date 2-12-19.0 of the Directors of public Instruction Madras.

ಶಿಶುಪೋಷಣೆ

ಹಿಮಾಲಯದ ತಪ್ಪಲಿನ ಶಿಶುಶಾಲೆ

ನಾಲ್ಕು ಸಾವಿರ ನಿರಾಶ್ರಿತ ಟಿಬೇಟಿಯನ್ನರ ಮಕ್ಕಳಲ್ಲಿ ಇನ್ನೂರೈವತ್ತು ಎಳೆಯ ಮುಖಗಳು ಹಿಮಾಲಯದ ತಪ್ಪಲಿನ ಧರ್ಮಾವರ ಶಿಶುಶಾಲೆಯಲ್ಲಿ ತಮ್ಮ ಧರ್ಮ ಮತ್ತು ಸಂಸ್ಕೃತಿಗಳನ್ನುಳಿಸಿಕೊಂಡು ಬೆಳೆದು ಬರುತ್ತಿವೆ. ಈ ಹಸನ್ಮುಖಗಳು ಅಲ್ಲಿನ ಪ್ರಾಕೃತಿಕ ಸೌಂದರ್ಯವನ್ನು ಮತ್ತಷ್ಟು ಹೆಚ್ಚಿಸುತ್ತಿವೆ.

ಧರ್ಮಶಾಲಾ ಬೆಟ್ಟಗಳಿಗೆ ಹಿಮಾಲಯದ ಹಿಮಾಚ್ಛಾದಿತ ಶಿಖರಗಳು ಮನೋಹರವಾಗಿ ದೃಷ್ಟಿ ಗೋಚರವಾಗುತ್ತವೆ. ಇಲ್ಲಿಯೇ ಜನ ವಸತಿಯಿಂದ ತುಸು ಮೇಲ್ಗಡೆ ಎರಡು ಬಂಗಲೆಗಳಿವೆ. ಇಲ್ಲಿ ತಿಬೇಟದಿಂದ ಬಂದ ಆಶ್ರಯಾರ್ಥಿಗಳಾದ ಮಕ್ಕಳಿಗೆ ಒಂದು ಶಿಶು ಶಾಲೆಯನ್ನು ಪ್ರಾರಂಭಿಸಲಾಗಿದೆ.

ಒಂದು ದೃಷ್ಟಿಯಿಂದ ಹೇಳುವುದಾದರೆ, ಈ ಶಿಶು ಶಾಲೆಯು ಉಳಿದವುಗಳಂತೆಯೇ ಇದೆ. ಅಲ್ಲಿ ನಾವು ಪಾದಾರ್ಪಣ ಮಾಡಿದೊಡನೆಯೇ ನಮ್ಮ ಕೈಗಳನ್ನು ತಣ್ಣಗಿನ ಕರಗಳು ಸ್ಪರ್ಶಿಸಿದಂತೆ ಭಾಸವಾಗುವುದು; ಕೆಳಗಡೆ ದೃಷ್ಟಿ ಹಾಯಿಸಿದೊಡನೆಯೇ ನಮಗೆ ಒಂದು ವೃತ್ತಾಕಾರದ ಮುಖ ತೋರುವುದು. ಉದಾಸೀನತೆಯಿಂದ ತುಂಬಿದ ಅದರ ಕಣ್ಣುಗಳು ಪ್ರೇಮ ಭಿಕ್ಷೆ ಬೇಡುತ್ತಿರುವಂತೆ ಪ್ರತೀತವಾಗುತ್ತದೆ. ೨೫೦ ಶಿಶುಗಳಿದ್ದರೂ ಕೇವಲ ಬೆರಳೆಣಿಕೆಯಷ್ಟು ಶಿಕ್ಷಿಕೆಯರು ಇರುವಾಗ ಪ್ರತಿ ಮಗುವಿಗೂ ತಾಯಿಯಂತಹ ಪ್ರೇಮ ಲಭಿಸುವುದು ಸಾಧ್ಯವಿಲ್ಲ.

ಇನ್ನೊಂದು ರೀತಿಯಿಂದ ನೋಡುವುದಾದರೆ, ಇದು ಉಳಿದ ಶಿಶು ಶಾಲೆಗಳಿಗಿಂತ ತೀರ ಭಿನ್ನವಾಗಿದೆ. ತಿಬೇಟಿನ ಸಂಸ್ಕೃತಿ ಮತ್ತು ಧರ್ಮಗಳಿಗೆ ಈ ಮಕ್ಕಳು ವಿವಿಧ ಘಟನೆಗಳ ಮೂಲಕ ಇಲ್ಲಿ ತಮ್ಮ ಜೀವನ ಕಾಲದಲ್ಲಿ ಸಾಕಾರ ರೂಪವನ್ನು ಕೊಡಬಲ್ಲರು.

ಧರ್ಮ ಶಾಲೆಯ ಶಿಶು ಶಾಲೆಯಲ್ಲಿರುವವರು ಕೆಲವರು ನಿಜವಾದ ಟಿಬೇಟಿನ ಅನಾಥ ಮಕ್ಕಳು. ಕೆಲವು ಟಿಬೇಟಿಯನ್ನರು ಮಕ್ಕಳನ್ನು ಇಲ್ಲಿಗೆ ಒಪ್ಪಿಸಿಕೊಟ್ಟು ಮೈಸೂರು ರಾಜ್ಯದಲ್ಲಿ ವಾಸ ಮಾಡಲಿದ್ದಾರೆ. ಇದಕ್ಕಾಗಿ ಮೈಸೂರಿನಲ್ಲಿ ಮೂರು ಸಾವಿರ ಟಿಬೇಟಿಯನ್ನರಿಗೆ ವಸತಿಯನ್ನು ಕಲ್ಪಿಸಿಕೊಡಲಾಗುತ್ತಿದೆ.

ಅನಾಥ ಅಥವಾ ತಮ್ಮ ಹೆತ್ತವರಿಂದ ದೂರವಿರುವ ಈ ಮಕ್ಕಳನ್ನು ಅಲ್ಲಿನ ಶಿಕ್ಷಿಕೆಯರು ತುಂಬ ಪ್ರೀತಿಸುತ್ತಾರೆ. ಪ್ರಾಯಃ ಇಷ್ಟೊಂದು ನಲ್ಮೆಯು ಮಕ್ಕಳಿಗೆ ದೊರೆತು ಅವರನ್ನು ಪ್ರಸನ್ನಗೊಳಿಸುವ ಶಿಶು ಶಾಲೆಗಳು ಇಲ್ಲವೇ ಇಲ್ಲವೆಂದು ಹೇಳಬಹುದು. ಬಹಳ ದೀರ್ಘವಾದ ಮತ್ತು ತ್ರಾಸದಾಯಕವಾದ ಪರ್ವತಮಾರ್ಗವನ್ನು ದಾಟಿದ ನಂತರ ದೊರೆಯುವ ಅರವಟ್ಟಿಗೆಯಂತೆ ಈ ಶಿಶುಶಾಲೆಯಿದೆ. ಈ ಮಕ್ಕಳು ದಿಕ್ಕುಗೇಡಿಗಳಾಗಿ ಬರುವಾಗ ಎಷ್ಟೋ ಮಂದಿ ಜ್ವರಪೀಡಿತರಿದ್ದರು; ಪುಷ್ಟಿಕರ ಆಹಾರ ದೊರೆಯದ ಕಾರಣ ಇವರ ಆರೋಗ್ಯ ಕೆಟ್ಟುಹೋಗಿತ್ತು; ಇವರಲ್ಲಿ ಎಳ್ಳಷ್ಟೂ ಉತ್ಸಾಹವಿರಲಿಲ್ಲ. ಕೆಲವು ಮಕ್ಕಳ ತಂದೆತಾಯ್ಗಳು ಇಲ್ಲವೇ ಸಂಬಂಧಿಕರು ನಡುದಾರಿಯಲ್ಲಿಯೇ ಮಡಿದರು. ಇಂತಹವರನ್ನು ಇತರ ನಿರಾಶ್ರಿತರು ಭಾರತಕ್ಕೆ ಹೊತ್ತುತಂದರು. ಈಗ, ಈ ಶಿಶುಶಾಲೆಯ ಮಕ್ಕಳು ಒಂದಾಗಿ ಇರುತ್ತಾರೆ; ಅವರ ಆರೈಕೆ ನೋಡಿಕೊಳ್ಳುವವರು ಅವರವರೇ ಆಗಿದ್ದಾರೆ; ಅವರದೇ ಭಾಷೆಯನ್ನಾಡುತ್ತಾರೆ; ಅವರಂತೆಯೇ ಬಹುದೂರದ ತಿಬೇಟಿನಿಂದಲೇ ಬಂದವರಿದ್ದಾರೆ.

೮ ವರ್ಷದ ವರೆಗಿನ ಮಕ್ಕಳು ಸುಮಾರು ೧೫೦ ಇದ್ದು ಇವರೆಲ್ಲರೂ ಒಂದೇ ದೊಡ್ಡ ಕೋಣೆಯಲ್ಲಿ ಒಟ್ಟಿಗೆ ವಾಸಮಾಡುತ್ತಿದ್ದಾರೆ. ಒಂದರಿಂದ ಮೂರು ವರ್ಷದ ಮಕ್ಕಳೂ ೧೦೦ ಇದ್ದು ಈ ಹಾಲ್ಗೂಸುಗಳ ಶುಶ್ರೂಷೆ ಮತ್ತೊಂದು ಬಂಗಲೆಯಲ್ಲಿ ನಡೆಯುತ್ತಿದೆ. ಈ ಎರಡೂ ಬಂಗಲೆಗಳ ಸುತ್ತುಮುತ್ತಲೂ ಘನವಾದ ಕಾಡಿದೆ. ಆದರೂ ಮುಂದುಗಡೆ ಬಯಲು ವಿಶಾಲ ಮೈದಾನವಿದೆ. ಆಕಾಶವು ಶುಭ್ರವಿರುವಾಗ, ಮಕ್ಕಳು ವಿನೋದಾರ್ಥವಾಗಿ ಪರ್ವತದ ಬೀಸುವ ಗಾಳಿಗೆ ಮೈಯೊಡ್ಡುತ್ತಾ ಅಲ್ಲಿಯೇ ಭೋಜನವನ್ನೂ ಮುಗಿಸುತ್ತಾರೆ.

ಇಷ್ಟೊಂದು ಮಕ್ಕಳನ್ನು ಮಲಗಿಸಿ ನಿದ್ರೆ ಬರಿಸುವುದೊಂದು ಸಮಸ್ಯೆಯೆನಿಸಿದರೂ ಇಂದದು ಬಗೆಹರಿಯುವಂತಿದೆ. ಇಲ್ಲಿ ಚಾಪೆಗಳು ಕಡಿಮೆಯಾಗಿವೆ; ಆದರೆ, 'ಕೇರ್' ಎಂಬ ಪರೋಪಕಾರಿ ಸಂಸ್ಥೆಯು ಚಾಪೆ ಮಾಡಿಸಲು ಹಣವನ್ನು ಕೊಟ್ಟಿದೆ. ಈಗ ಮಕ್ಕಳು ತಮ್ಮ ಬಟ್ಟೆಬರೆಗಳನ್ನು ಒಂದು ಬದಿಗಿಟ್ಟು, ನೆಲದ ಮೇಲೆ ಒಟ್ಟೊಟ್ಟಿಗೆ ಮಲಗಿ ಬಿಡುತ್ತಿದ್ದಾರೆ.

ಕೆಳಗಿನ ಬಂಗಲೆಯ ಮುಂದೆ ಮಕ್ಕಳು ಆಡುತ್ತಿರುವಾಗ, ಯಾರಾದರೂ ಅಲ್ಲಿಗೆ ಬಂದರೆಂದರೆ, ೮ ವರ್ಷದೊಳಗಿನ ೧೫೦ ಮಕ್ಕಳು ಅಭಿನಂದಿಸುವಾಗ ಆತನು ಕಂಗಾಲಾಗಲೇ ಬೇಕು. ೧೫೦ ಮಕ್ಕಳೂ ತಮ್ಮೆರಡೂ ಕೈಗಳನ್ನು ಮೇಲಕ್ಕೆತ್ತಿ 'ನಮಸ್ತೇ' ಎಂದು ಒಟ್ಟಿಗೆ ಕೂಗುವಾಗ, ಆ ಕೂಗಿನ ಬಲದಿಂದ ತಾನು ಬೆಟ್ಟದ ಕೆಳಗೆ ಉರುಳುತ್ತಿರುವಂತೆ ಭಾಸವಾಗುವುದು. ಆಗಂತುಕನ ಹೃದಯದಲ್ಲಿ ಮಕ್ಕಳ ಬಗ್ಗೆ ಪ್ರೇಮ ಭಾವನೆ ಹುಟ್ಟುವುದು. ಪ್ರಪಂಚದ ಎಲ್ಲೆಡೆಯ ಮಕ್ಕಳು ಆಕರ್ಷಕರಿರುತ್ತಾರೆ. ಆದರೆ, ಟಿಬೇಟಿನ ಈ ಎಳೆಯ ಮಕ್ಕಳು ಮತ್ತಷ್ಟು ಆಕರ್ಷಣೀಯರಾಗಿದ್ದಾರೆ.

ಒಂದು ವರ್ಷಕ್ಕೆ ಮೊದಲು ದಲೈಲಾಮಾರು ಕೊಟ್ಟ ೨೫ ಸಾವಿರ ರೂಪಾಯಿಗಳ ದೇಣಿಗೆಯ ಬಲದಿಂದ ಈ ಶಿಶು ಶಾಲೆಯು ಸ್ಥಾಪಿತವಾಯಿತು. ದಲೈಲಾಮರಾದರೊ ಇಲ್ಲಿಯೇ ಇನ್ನೂ ಸ್ವಲ್ಪ ಮೇಲೆ ವಾಸಿಸುತ್ತಿದ್ದಾರೆ. ಭಾರತ ಸರಕಾರದೊಡನೆ ಸಹಾಯ ಯಾಚಿಸಿದಾಗ, ಎರಡು ಬಂಗಲೆಗಳು ದೊರೆತುವು ಮಾತ್ರವಲ್ಲ, ಮಕ್ಕಳ ಭೋಜನದ ವ್ಯವಸ್ಥೆಯೂ ಆಯಿತು. ಕಾಲಕ್ರಮದಲ್ಲಿ ಅನ್ಯಕ್ಷೇತ್ರಗಳಿಂದಲೂ ಸಹಾಯ ದೊರೆಯಿತು; ಅಮೆರಿಕೆಯ ಜನತೆಯು ಒಣ ಹಾಲನ್ನು ಕೊಡುತ್ತಿದ್ದು, ಇದರಿಂದ ತಯಾರಿಸಿದ ಹಾಲನ್ನು ಮಕ್ಕಳಿಗೆ ಕುಡಿಸುತ್ತಾರೆ. ಅಮೆರಿಕೆಯ ಟಿಬೇಟು ಸಹಾಯಕ ಸಮಿತಿ ಮತ್ತು ರೆಡ್‌ಕ್ರಾಸ್ ಸಂಸ್ಥೆಗಳು ಈ ಮಕ್ಕಳ ಉಪಯೋಗಕ್ಕೆ ಸಾಕಷ್ಟು ಔಷಧಿಗಳನ್ನು ಕೊಟ್ಟಿವೆ. ಫ್ರೆಂಚ ಪರಿಚಾರಿಕೆಯಾದ ಮಿಸ್ ಎನಿಪ್ಪೋಲಿಯಾಳು ಇಡೀ ದಿನ ಇಲ್ಲಿಯೇ ಇದ್ದು ಮಕ್ಕಳ ಉಪಚಾರ ಮಾಡುತ್ತಿದ್ದಾಳೆ.

ಈ ಶಿಶು ಶಾಲೆಯ ವ್ಯವಸ್ಥೆಯು ದಲೈಲಾಮರ ತಂಗಿ ಶ್ರೀಮತಿ ಸೇರಿಂಗ್ ಡೋಲಮಾಯಾಬಶೀಯ ಜವಾಬ್ದಾರಿಯಲ್ಲಿದೆ. ಅವರೇ ಮಕ್ಕಳ ತಾಯಿ. ಇವರು ಎಲ್ಲ ಕೆಲಸವನ್ನೂ ೧೦ ಸಹಾಯಕಿಯರು ಮತ್ತಿಬ್ಬರು ಅಡುಗೆಯವರ ನೆರವಿನಿಂದ ನಿರ್ವಹಿಸುತ್ತಾರೆ. ೧೫೦ ಬೆಳೆದ ಮಕ್ಕಳ ಮೇಲ್ವಿಚಾರವನ್ನು ೧೩ ಜನರು ಮಾಡುತ್ತಿದ್ದಾರೆ. ಇವರಿಗೆ ವಿದ್ಯಾಭ್ಯಾಸವನ್ನು ನೀಡಲು ಏಳ್ವರು ಟಿಬೇಟಿಯನ್ ಶಿಕ್ಷಕರು ಮತ್ತೊಬ್ಬ ಹಿಂದೀ ಶಿಕ್ಷಕರಿದ್ದಾರೆ.

ಶಾಲೆ ಪ್ರಾರಂಭವಾಗುವುದಕ್ಕೆ ಮೊದಲು ಟಿಬೇಟಿನ ಮಾದರಿಯ ಪ್ರಾರ್ಥನೆ ನಡೆಯುತ್ತದೆ. ಚಿಕ್ಕ ಮಕ್ಕಳಿಗೆ ಟಿಬೇಟೀ ಭಾಷೆಯ ವರ್ಣಮಾಲೆಯನ್ನು ಕಲಿಸುತ್ತಾರೆ. ಹಿರಿಯ ಮಕ್ಕಳಿಗೆ ಟಿಬೇಟಿನ ಇತಿಹಾಸ, ಸಂಸ್ಕೃತಿಗಳನ್ನಲ್ಲದೆ ಹಿಂದಿ ಮತ್ತು ಸ್ವಲ್ಪ ಇಂಗ್ಲಿಷ್ ಭಾಷೆಗಳ ಜ್ಞಾನವನ್ನು ಒದಗಿಸಲಾಗುತ್ತಿದೆ. ಎಂಟು ವರ್ಷವಾದ ನಂತರ ಮಕ್ಕಳನ್ನು ಮುಂದಿನ ಶಿಕ್ಷಣಕ್ಕಾಗಿ ಮಸ್ಸೂರಿಗೆ ಕಳುಹಿಸುತ್ತಾರೆ. ಟಿಬೇಟಿನ ನಿರಾಶ್ರಿತ ಮಕ್ಕಳಿಗಾಗಿ ಅಲ್ಲಿ ಒಂದು ವಿಶೇಷ ಶಾಲೆಯಿದೆ; ಇದರಲ್ಲಿ ಈಗ ಸುಮಾರು ೪೦೦ ಮಕ್ಕಳು ಓದುತ್ತಿದ್ದಾರೆ.

ಟಿಬೇಟಿನ ಮಕ್ಕಳನ್ನು ಹೊರಗಡೆ ಕಳಿಸುವಾಗ, ಅವರೊಡನೆ ದೊಡ್ಡ ಪ್ರಾಯದ ಟಿಬೇಟಿಯನರನ್ನೂ ಕಳಿಸುತ್ತಾರೆ. ಕಿರಿಯವರು ಟಿಬೇಟಿನ ಭಾಷೆ ಮತ್ತು ಸಂಸ್ಕೃತಿಯನ್ನು ಮರೆತು ಬಿಡಬಾರದೆಂಬುದೇ ಈ ಏರ್ಪಾಡಿನ ಉದ್ದೇಶ. ತಮ್ಮ ದೇಶದ ಹಿಂದಿನ ಘಟನೆಗಳನ್ನು ಸದಾ ನೆನಪಿಡುವಂತೆ ಶಿಕ್ಷಕರು ಪ್ರಯತ್ನಿಸುತ್ತಾರೆ. ಟಿಬೇಟಿನಲ್ಲಿ ಅತೀವ ವೇಗದಿಂದಾಗುತ್ತಿರುವ ಪರಿವರ್ತನೆಗಳಿಂದಾಗಿ ಈ ಮಕ್ಕಳೇ ಅಲ್ಲಿನ ಧರ್ಮ ಮತ್ತು ಸಂಸ್ಕೃತಿಯ ಅವಶೇಷವಾಗಬೇಕೆಂದು ಪ್ರೌಢ ಟಿಬೇಟಿಯನ್ನರು ಅಪೇಕ್ಷಿಸುತ್ತಾರೆ. ಇದರಿಂದಾಗಿಯೇ ಅನಾಥ ಮಕ್ಕಳನ್ನು ಬೇರ್ಪಡಿಸುವ ಕಾರ್ಯವಿದುವರೆಗೆ ನಡೆದಿಲ್ಲ. ಇವರನ್ನು ಬೇರೆ ಮಾಡಿದರೆ ಅವರು ಕೂಡಲೆ ಭೂತಕಾಲದ ಘಟನೆಗಳನ್ನು ಮರೆತು ಬಿಡಬಹುದು; ಮತ್ತು ಭಾರತ ಅಥವಾ ಪ್ರಪಂಚದ ಬೇರಾ

(೭ನೇ ಪುಟ ನೋಡಿರಿ)

ನಾವು ನಿಮಗೆ ಹೆಚ್ಚು ಉತ್ತಮವಾಗಿ
ಸೇವೆ ಸಲ್ಲಿಸಲು ವಿಸ್ತರಿಸುತ್ತಿದ್ದೇವೆ.

ನಮ್ಮ
ಕೋಟ್ಟಾಯಮ್
ಶಾಖೆಯು
೧೬ನೇ ಜೂನ್ ೧೯೬೧ರಂದು
ತೆರೆಯಲ್ಪಡುವುದು.
—೦-೦—
ಈ ಸಂದರ್ಭದಲ್ಲಿ ಒಂದು ಶೈಕ್ಷಣಿಕ
ಪ್ರದರ್ಶನ ಏರ್ಪಡಿಸಲ್ಪಟ್ಟಿರುವದು.

ಸೀಸಿಯಾ ಮಿಡ್‌ಲ್ಯಾಂಡ
ಬ್ಯಾಂಕ ಲಿಮಿಟೆಡ್
(ಹೆಡ್ ಆಫೀಸು: ಆಲ್ಲೆಪ್ಪೆ)
೧೨ನೇ ಜೂನ್ ೧೯೬೧ರಂದು
ಕೆನರಾ ಬ್ಯಾಂಕ್
ಲಿಮಿಟೆಡ್ ನೊಡನೆ
ವಿಲೀನವಾಗುವುದು.
—೦—೦—

ನಮ್ಮ
ತ್ರಿಚೂರ್
ಶಾಖೆಯು
೧೯ನೇ ಜೂನ್ ೧೯೬೧ರಂದು
ಪ್ರಾರಂಭವಾಗುವುದು.
—೦-೦—

ಈ ವಿಸ್ತರಣೆಯ ನಂತರ ನಮ್ಮ ಶಾಖೆಗಳು ೯೭ ಆಗುವವು ಮತ್ತು ನಮ್ಮ ಸಾಂಪ್ರದಾಯಕವಾದ
ಅತ್ಯುತ್ತಮ ಬ್ಯಾಂಕಿಂಗ್ ಸೇವೆಯು ಈ ಎಲ್ಲಾ ಶಾಖೆಗಳಲ್ಲಿಯೂ ನಿಮಗೆ ಸ್ವತಃ ದೊರೆಯುವುದು.

ಕೆನರಾ ಬ್ಯಾಂಕ್ ಲಿಮಿಟೆಡ್
(ಸ್ಥಾಪನೆ: ೧೯೦೬)

ರಿಜಿಸ್ಟರ್ಡ್ ಆಫೀಸು:
ಮಂಗಳೂರು

ಆಡಳಿತ ಕಚೇರಿ:
ಬೆಂಗಳೂರು

ರವೀಂದ್ರವಾಣಿ ೧೩

ಪಾಪ ಮತ್ತು ಅದರ ಸಮಸ್ಯೆ

ಕಷ್ಟದಲ್ಲಿ ಪೂರ್ಣತೆಯು ತುಂಬಿಕೊಂಡಿದೆ. ನಾವು ಸ್ವಾರ್ಥಸಾಧನೆಗಾಗಿ ಕಷ್ಟ ಅನುಭವಿಸಿದರೆ, ಕಷ್ಟಕ್ಕೆ ಸರಿಯಾದ ಬೆಲೆ ಕೊಟ್ಟಂತಾಗಲಿಲ್ಲ ಮಾತ್ರವಲ್ಲ ಅದನ್ನು ಅಪವಿತ್ರಗೊಳಿಸಿದಂತಾಗುತ್ತದೆ. ಆಗ, ಅದರಿಂದ ನಮಗೆ ಪ್ರತಿಫಲವು ದುಃಖರೂಪದಲ್ಲಿ ದೊರೆಯುತ್ತದೆ. ನಿಸ್ವಾರ್ಥ ದೃಷ್ಟಿಯಿಂದ ಕಷ್ಟವನುಭವಿಸಿದರೆ ಅದು ಸುಖದಲ್ಲಿ ಪರ್ಯವಸಾನಗೊಳ್ಳುವುದು

ಮೂಲ ಲೇಖಕರು: ವಿಶ್ವಕವಿ ರವೀಂದ್ರನಾಥ ಟಾಗೋರ್.
ಅನುವಾದಕರು: ಶ್ರೀ. ಕೆ. ಎನ್. ಭಟ್, ಶಿರಾಡಿಪಾಲ್.

ಜೀವನದ ಪ್ರತಿಯೊಂದು ಹೆಜ್ಜೆ ಹೆಜ್ಜೆಗೂ ನಾವು ನಮಗಿಂತ ಹೊರಗಿನ ವಸ್ತುಗಳ ಕುರಿತು ಲಕ್ಷ್ಯವಿಡಬೇಕಾಗುತ್ತದೆ. ಕೇವಲ ಮೃತ್ಯುವಿನ ವೇಳೆ ಮಾತ್ರ ನಾವು ಒಬ್ಬಂಟಿಗರಾಗುತ್ತೇವೆ. ಕವಿಯು ತನ್ನ ವ್ಯಕ್ತಿಗತವಾದ ಭಾವನೆಗಳನ್ನು ಸರ್ವರಿಗೂ ಆನಂದದಾಯಕವಾಗುವ ರೀತಿಯಲ್ಲಿ ನೀಡಬಲ್ಲನಾದರೆ, ಆಗ ಮಾತ್ರ ಕವಿಯೆನಿಸುತ್ತಾನೆ. ಎಲ್ಲರಲ್ಲಿಯೂ ಇರತಕ್ಕ ದಿವ್ಯ ಭಾವನೆಗಳನ್ನು ಒಂದು ಮಧ್ಯಸ್ಥ ರೀತಿಯಿಂದ ಆತನು ಸ್ಪರ್ಶಿಸಿ, ಶ್ರೋತೃವರ್ಗದಲ್ಲಿ ಏಕಾತ್ಮ ಭಾವವನ್ನುಂಟುಮಾಡಲಾರನೆಂದಾದರೆ, ಆತ ಕವಿಯಾಗಲಾರನು. ಕಾವ್ಯವೆಂದರೆ ಅದು ಸರ್ವರ ಹೃದಯದ ಭಾವನೆಗಳಿಂದ ತುಂಬಿದ ಸರ್ವರಿಗೂ ಹೃದಯಸ್ಪರ್ಶಿಯಾಗುವ ರೀತಿಯಿಂದ ಇರಬೇಕು. ಹಾಗಿದ್ದರೆ ಮಾತ್ರವೇ ಅದು ಕಾವ್ಯವಾಗಬಹುದು. ಕವಿಯಾದವನು ಸಮಸ್ತರ ಹೃದಯ-ಭಾವನೆಗಳನ್ನು ತಿಳಿದು ಅನುಭವಿಸಿ ತನ್ನ ಕಾವ್ಯದಲ್ಲಿ ಮೂಡಿಸಬಲ್ಲನಾದರೆ, ಆಗ ಆತನ ಕಾವ್ಯವು ಅಮರ ಕಾವ್ಯವಾಗಬಹುದು.

ಮನುಷ್ಯನ ವ್ಯಕ್ತಿತ್ವವು ಅತ್ಯುಚ್ಚ ಮಟ್ಟದ—ಸತ್ಯವಲ್ಲ; ಸತ್ಯದಲ್ಲಿ ಅದಕ್ಕಿಂತಲೂ ಉಚ್ಚ ಮಟ್ಟದ ಸಮಸ್ತ ವಿಶ್ವದೊಡನೆ ಸಂಬಂಧವಿರುವ ಒಂದು ಅಧಿಕಾರವಿದೆ. ಸತ್ಯವು ಯಾರ ಸಂಪರ್ಕವೂ ಇಲ್ಲದ ಒಂದು ಏಕಾಂತ ಸ್ಥಳದಲ್ಲೇ ಇರುವುದಾಗಿದ್ದರೆ, ಆಗ ಅದಕ್ಕೆ ಭಯಂಕರವಾದ ಕಾರಾಗೃಹ ವಾಸದ ಅನುಭವವಾಗಬಹುದು. ಏಕೆಂದರೆ, ಮನುಷ್ಯನ ಮನಸ್ಸು ತನ್ನ ಅತಿ ಆಳದಲ್ಲಿ ಎಲ್ಲದರೊಡನೆ ಯುಕ್ತವಾಗಿ ಮಹತ್ವಕ್ಕಿಂತಲೂ ಅತಿ ಮಹತ್ವವನ್ನು ಪಡೆಯುವ ಕಲ್ಪನೆಯನ್ನು ಮಾಡುತ್ತಿರುತ್ತದೆ. ಅದರ ಪ್ರಗಾಢವಾದ ಆನಂದವು ಅದೇ ಆಗಿರುತ್ತದೆ. ಒಂದು ವೇಳೆ ಎಲ್ಲದರಲ್ಲಿಯೂ ಒಂದೇ ನಿಯಮವು ಕಾರ್ಯಮಾಡದಿರುತ್ತಿದ್ದರೆ, ಇದು ಅಸಂಭವವಾಗಬಹುದಿತ್ತು. ಈ ನಿಯಮಗಳ ಜ್ಞಾನದ ಅನುಸರಣದ ಮೂಲಕವೇ ನಾವು ಮಹಾ ವ್ಯಕ್ತಿತ್ವವುಳ್ಳವರಾಗುತ್ತೇವೆ. ವಿಶ್ವದ ಅನುಭೂತಿಯನ್ನು ಪಡೆಯುತ್ತೇವೆ. ಇದಕ್ಕೆ ವ್ಯತಿರಿಕ್ತವಾಗಿ ನಮ್ಮ ವ್ಯಕ್ತಿಗತ ಇಚ್ಛೆಗಳು, ವಿಶ್ವ ನಿಯಮಗಳ ಪ್ರತಿಗಾಮಿಗಳಾದರೆ, ನಾವು ದುಃಖ ಮತ್ತು ಕ್ಷುದ್ರತೆಯ ಅನುಭವ ಮಾಡುತ್ತೇವೆ.

ಪ್ರಕೃತಿಯ ನಿಯಮಗಳು ನಮಗಿಂತ ಭಿನ್ನವಾಗಿವೆ, ಎಂದು ತಿಳಿಯುವ ಒಂದು ಕಾಲವೂ ಇತ್ತು. ಆದರೆ ಈ ಪ್ರಕೃತಿಯ ನಿಯಮಗಳೂ ನಮ್ಮವೇ ಆಗಿವೆ ಎಂಬುದನ್ನೀಗ ತಿಳಿದುಕೊಂಡಿದ್ದೇವೆ. ವಿಶ್ವದ ಅಥವಾ ಪ್ರಕೃತಿಯ ಶಕ್ತಿ ಯಾವುದಿದೆಯೋ ಅದು ನಮ್ಮ ಶಕ್ತಿಯೇ ಆಗಿದೆ. ವಿಜ್ಞಾನದ ಸಹಾಯದಿಂದ, ಪ್ರಕೃತಿ ನಿಯಮಗಳ ಜ್ಞಾನವು ನಮಗೆ ಚೆನ್ನಾಗಿ ಆಗಿದೆ. ಇದರಿಂದ ನಾವು ವಿಶೇಷ ಶಕ್ತಿಶಾಲಿಗಳಾಗಿದ್ದೇವೆ. ವಿಶ್ವ ಶಕ್ತಿಯೊಡನೆ ನಮ್ಮ ಸಂಬಂಧ ಬೆಳೆಯುತ್ತಿದೆ. ನಮ್ಮ ದೃಷ್ಟಿ, ನಮ್ಮ ಶಕ್ತಿ ಮತ್ತು ನಮ್ಮ ಎಲ್ಲಾ ಇಂದ್ರಿಯಗಳೂ, ಅದರ ಶಕ್ತಿಯೂ, ವಿಶ್ವ ವ್ಯಾಪಕವಾದ ಕ್ಷೇತ್ರದಲ್ಲಿ ಹರಡಿಕೊಂಡಿದೆ. ವಿಜ್ಞಾನದಿಂದ ಸಂಶೋಧಿಸಿದ ಶಕ್ತಿ ಮತ್ತು ವಿದ್ಯುಚ್ಛಕ್ತಿ ಇವು ನಮ್ಮ ನಾಡಿಗಳಾಗಿ ಮಾಂಸ ಖಂಡಗಳಂತೆ ಆಗಿವೆ. ಶರೀರದ ಎಲ್ಲಾ ಅಂಗಗಳ ಸಾಮಂಜಸ್ಯವೂ ಸರಿಯಾಗಿದ್ದು ಈ ದೇಹವು ನಮ್ಮದು, ಎಂದು ನಾವು ಹೇಗೆ ಹೇಳಬಲ್ಲೆವೋ ಹಾಗೆಯೇ ವಿಶ್ವದೊಡನೆಯೂ, ನಮ್ಮ ಸಂಪೂರ್ಣ ಸಂಬಂಧವಿರುವುದು. ಈ ಸಂಬಂಧದ ಪೂರ್ಣ ಜ್ಞಾನ ತಿಳಿದ ಮೇಲೆ, ಈ ಜಗತ್ತೆಲ್ಲವೂ ನಮ್ಮ ದೇಹದ ಒಂದು ವ್ಯಾಪಕವಾದ ರೂಪದಂತೆ ನಮಗೆ ಭಾಸವಾಗುತ್ತದೆ. ನಾವು ಈ ಪರಿಯ ಅನುಭವ ಹೊಂದಲು ಯೋಗ್ಯರಾಗಿಲ್ಲದೆ ಅದರಿಂದ ವಂಚಿತರಾಗಿರುವುದರಿಂದಲೇ ನಮ್ಮ ಕ್ಷುದ್ರವಾದ ದುರ್ಬಲತೆಗಳು ಮಾತ್ರ ನಮಗೆ ಕಾಣಿಸುತ್ತವೆ; ಮತ್ತು ಈ ದುರ್ಬಲತೆಗಳಿಗೂ ಇದೇ ಕಾರಣವಾಗಿದೆ.

ನಮ್ಮ ಶಕ್ತಿಗೆ ಅಂತ್ಯವೆಂಬುದಿಲ್ಲ. ಏಕೆಂದರೆ ನಾವು ವಿಶ್ವದ ಶಕ್ತಿಯ ರೂಪದಿಂದ ವಿಶ್ವ ಶಕ್ತಿಯ ಪ್ರಕಟವಾದ ಒಂದು ರೂಪವಾಗಿರುವೆವು; ಹೊರತು ಬೇರೆಯಾಗಿಲ್ಲ. ವಿಜ್ಞಾನವು ನಮಗೆ ವಿಶ್ವಾತ್ಮವನ್ನೂ ಅದರ ಭೌತಿಕ ರೂಪದ ಮೂಲಕ, ನೋಡುವ ಹೊಸ ದೃಷ್ಟಿಯನ್ನೂ ಕಲ್ಪಿಸಿ ಕೊಟ್ಟಿದೆ. ಇದರಿಂದಾಗಿ ನಾವು ದುಃಖ ದಾರಿದ್ರ್ಯ—ರೋಗ-ಮರಣ, ಇವುಗಳ ಮೇಲೂ ವಿಜಯವನ್ನು ಹೊಂದುವ ಉದ್ಯೋಗವನ್ನೂ ಮಾಡುತ್ತಿದ್ದೇವೆ. ಇದರಿಂದ ನಮಗೆ "ನಮ್ಮ ದುಃಖ ರೋಗ ದಾರಿದ್ರ್ಯ ಇತ್ಯಾದಿಗಳ ನಿವಾರಣೆಯು ನಮ್ಮ ವ್ಯಕ್ತಿಗತ ಆತ್ಮವು ವಿಶ್ವಾತ್ಮದೊಡನೆ ಸಮಭಾವವನ್ನೂ ಸ್ಥಾಪಿಸಿದಾಗ ಮಾತ್ರ ಸಾಧ್ಯ"ಎಂಬ ಜ್ಞಾನ ಉಂಟಾಗಿದೆ.

ಇದೇ ಸ್ಥಿತಿಯು ನಮ್ಮ ಆಧ್ಯಾತ್ಮಿಕ ಜೀವನದಲ್ಲಿಯೂ ಇರುವುದು. ನಮ್ಮ ಒಳಗಿನ ವ್ಯಕ್ತಿ ಅರ್ಥಾತ್ ಆತ್ಮವು ಮನುಷ್ಯನ ವಿಶ್ವ ವ್ಯಕ್ತಿತ್ವದೊಡನೆ, ಯಾವಾಗ ವಿದ್ರೋಹ ಮಾಡತೊಡಗುವುದೋ ಆಗ ನಾವು ಕ್ಷುದ್ರರಂತೆ ಆಗಿಬಿಡುತ್ತೇವೆ; ಮತ್ತು ಕಷ್ಟವನ್ನೂ ಅನುಭವಿಸುತ್ತೇವೆ. ಈ ಸ್ಥಿತಿಯಲ್ಲಿ ನಮ್ಮ ಸಫಲತೆಯೋ ಅಸಫಲತೆಯ ರೂಪದಲ್ಲಿ ಪರಿವರ್ತನೆಯಾಗುತ್ತದೆ ಮತ್ತು ನಮ್ಮ ಆಕಾಂಕ್ಷೆಗಳ ತೃಪ್ತಿಗಾಗಿಯೇ ನಮ್ಮನ್ನು ಪ್ರೇರೇಪಿಸುತ್ತ ಅಸಮರ್ಥರನ್ನಾಗಿ ಮಾಡಿಬಿಡುತ್ತದೆ. ನಾವು ನಮ್ಮಲ್ಲಿಯೇ ವಿಶೇಷ ಪುರಸ್ಕಾರವನ್ನು ಹೊಂದುವ ಅಭಿಲಾಷೆಯನ್ನೂ ಜಾಗೃತಗೊಳಿಸುತ್ತೇವೆ. ಈ ಪುರಸ್ಕಾರವಾದರೂ ನಮ್ಮದೇ ಆಗಿದ್ದು ಇದಕ್ಕೆ ಬೇರಾರು ಭಾಗಿಗಳಾಗಿರುವುದಿಲ್ಲ. ಆದರೆ ಇದನ್ನು ನಾವು ಮರೆತು; ಇದಕ್ಕಾಗಿಯೇ ಹಂಬಲಿಸುವವರಾಗುತ್ತೇವೆ. ಅಂದರೆ, ಪ್ರತಿಯೊಂದು, ಸಾಮಾನತೆಯು, ವಿಶೇಷತೆಯೊಡನೆ ಸದಾ ಯುದ್ಧ ನಡೆಸುತ್ತಲೇ ಇರುವುದು. ಈ ಸಂಘರ್ಷ ರೂಪೀ ಯುದ್ಧದ ಪರಿಸ್ಥಿತಿಯಲ್ಲಿ ಮನುಷ್ಯನು ನಾಲ್ಕು ಗೋಡೆಗಳ ನಡುವೆ ಅಡಗಿ ಕುಳಿತಂತೆ ಇರುತ್ತಾನೆ. ಈಗ ಆತನ ಮನೆಯು, ವಾಸ್ತವಿಕವಾದ ಮನೆಯಂತಿರದೆ, ಅಸ್ವಾಭಾವಿಕವಾದ ಗೋಡೆಗಳಿಂದ ಕೂಡಿದ, ಒಂದು ಒರಟಾದ ದುರ್ಗದಂತಾಗುತ್ತದೆ. ಆಗಲೂ ಆತನು "ತಾನು ಸುಖಿಯಾಗಿಲ್ಲ, ಪ್ರಪಂಚದ ಪ್ರತಿ ವಸ್ತು ಜೀವಿಗಳೂ ತನ್ನ ಕೇಡಿಗಾಗಿ ಪ್ರಯತ್ನ ಮಾಡುತ್ತಿವೆ." ಎಂದು ಭಾವಿಸುತ್ತಾನೆ. ಆದರೆ ಇದು ಸರಿಯಲ್ಲ. ವಿಶ್ವದ ಆತ್ಮವು ನಮಗೆ ಸುಖದ ಆವರಣವನ್ನು ನೀಡಲು ಬಹು ಉತ್ಸುಕವಾಗಿರುತ್ತದೆ. ಆದರೆ, ನಮ್ಮ ವ್ಯಕ್ತಿಗತವಾದ ಆತ್ಮವು ಅದನ್ನು ಸ್ವೀಕರಿಸಲು, ಸಿದ್ಧವಾಗಿರದೆ, ಎಲ್ಲೆಡೆಗಳಲ್ಲಿಯೂ, ವಿದ್ರೋಹ, ವಂಚನೆಯ ಬೀಜಗಳನ್ನು ಬಿತ್ತಿ ವಿಷಮತೆಯನ್ನುಂಟು ಮಾಡಿ, ಸಮಾಜದ ಸಾಧಾರಣವಾದ ವ್ಯವಸ್ಥೆಯನ್ನೂ ಹಾಗೆಯೇ ಇರಗೊಡಿಸದೆ, ತಡೆಯನ್ನೊಡ್ಡುತ್ತ ದುಃಖವನ್ನು ಅನುಭವಿಸಲು ಕಾರಣವಾಗುತ್ತದೆ

ತನ್ನ ಜೀವನದಿಂದ ಮನುಷ್ಯನು—"ಈ ಜಗತ್ತಿನಲ್ಲಿ ದುಃಖವಿರುವುದು ನಿಜ; ಆದರೆ ಅದನ್ನು ಸುಖದ ರೂಪಕ್ಕೆ ಪರಿವರ್ತನೆಗೊಳಿಸುವುದೂ ಮನುಷ್ಯನ ಕೈಯ್ಯಲ್ಲೇ ಇದೆ!" ಎಂಬ ಪಾಠವನ್ನು ಪಡೆಯಬೇಕು.

ಒಂದು ದಿನ, ಓರ್ವ ಬಡ ರೈತನ ಹೆಂಡತಿಯು ನನ್ನೊಡನೆ,—"ನನ್ನ ಹಿರಿಯ ಮಗನನ್ನು ಕೆಲವು ದಿನಗಳ ಮಟ್ಟಿಗೆ, ಓರ್ವ ಧನಿಕ ಸಂಬಂಧಿಕನಲ್ಲಿಗೆ, ಈಗ ಕಳುಹಿಸಬೇಕಾಗಿದೆ ಎಂದು ಹೇಳಿದಳು, ಇದನ್ನು ನೆನೆದ. ಮಗನನ್ನು ಕಷ್ಟದಿಂದ ಬಿಡುಗಡೆ ಮಾಡಿದಂತಾಗುತ್ತದೆ, ಎಂಬ ವಿಚಾರ ಆಕೆಯಲ್ಲಿದ್ದರೂ, ಇದರಿಂದ ಆಕೆಗೆ, ಬಹಳವಾಗಿ ಮಾನಸಿಕಯಾತನೆ ಉಂಟಾದುದನ್ನೂ ಆಕೆ ಹೇಳಿದಳು. ಮಾತೆಯ ಕಷ್ಟವೆಂದರೆ, ಅದು 'ಸ್ವತ್ವ'ವಾಗಿದೆ — ಮಗನನ್ನು ತನ್ನ 'ಸ್ವತ್ವ'ದಿಂದ, ಬೇರಾದರೆ, ಸುಖವೇ ಇರಲಿ, ಕಷ್ಟವೇ ಇರಲಿ, ವಂಚಿತಗೊಳಿಸುವುದು ಆಕೆಗೆ ಅಸಹ್ಯವಾಯಿತು. ಮನುಷ್ಯನು ತನ್ನ ಕಷ್ಟದಿಂದ ಬಿಡುಗಡೆ ಹೊಂದುವುದಕ್ಕಿಂತ ತನ್ನ ಕಲ್ಯಾಣಕ್ಕಾಗಿ ಹೆಚ್ಚು ಕಷ್ಟವನ್ನನುಭವಿಸಲೂ, ಸಿದ್ಧನಿರುತ್ತಾನೆ ಎಂಬ ಅಂಶ ಇಲ್ಲಿ ಪ್ರಕಟವಾಗುವುದು. ಈ ಕಷ್ಟವೇ ಮನುಷ್ಯನಿಗೆ ಆನಂದವೆನಿಸುವುದು. ಕಷ್ಟದಲ್ಲಿಯೂ ಆನಂದದ ಅನುಭವವನ್ನು ಪಡೆಯಬೇಕಾದರೆ, ನಮ್ಮ ಹೃದಯದೊಳಗೆ ಮೃತ್ಯುವಿಗೂ ಹೆದರದಿರುವ ವಿಶ್ವಾತ್ಮ ಶಕ್ತಿಯು ತುಂಬಿರಬೇಕು. ಆನಂದದ ಮತ್ತೊಂದು ರೂಪವು ಕಷ್ಟವೆಂಬುದೇ ಆಗಿದೆ, ಎಂಬ ಈ ಜ್ಞಾನವೂ ತಿಳಿದಿರಬೇಕು. ಇಂತಹ ಈ ಜ್ಞಾನ ಜ್ಞಾನಿಗೆ ಮಾತ್ರ ಲಭಿಸುತ್ತದೆ. ಜ್ಞಾನಿಯು—"ಕಷ್ಟವೇ ನಮ್ಮ ನಿಜವಾದ ಸಂಪತ್ತಾಗಿದೆ. ಇದು ನಮ್ಮನ್ನು ಪೂರ್ಣತೆಯ ಕಡೆಗೆ ಸಾಗಿಸುವ ದಾರಿಯಾಗಿದೆ. ನಾವು ಭಿಕ್ಷುಕರಾಗಿಲ್ಲ. ಜೀವನದ-ಅಮೂಲ್ಯವಾದ ಪ್ರತಿಯೊಂದು ವಸ್ತುವಿನ ಬದಲಿಗೆ, ನಾವು ನಿಜವಾದ ಬೆಲೆಯನ್ನು ತೆರಬೇಕಾಗುತ್ತದೆ. ಕಷ್ಟವನ್ನನುಭವಿಸುವುದು ವ್ಯರ್ಥವಲ್ಲ. ತನ್ನ ಶಕ್ತಿ, ಬು

(೨ನೇ ಪುಟ ನೋಡಿ)

SRI POORNAPRAJNA COLLEGE, UDIPI.

The College will re-open for the new academic year on Monday, 26th June, 1961 and regular lecturing work will start by 1st July, 1961.

In addition to the Pre-University Courses in Arts and Commerce, the College proposes to impart instruction in the I year of the B. A. and B Com. Classes. The following combinations would be available for the B. A. course.

1. History, Economics — English
2. History. Sanskrit — English
3. Sanskrit, Kannada — History

Application form for admission together with a copy of the Prospectus can be obtained from the College Office on payment of 50 nP.

Applications for admission, complete in all respects, should reach the Office together with a Registration Fee of Rs. Three not later than a fortnight after the declaration of the results of the qualifying examination.

It is proposed to introduce from this year a Scheme of Poor Boys' Aid to particularly deserving students in addition to merit scholarships that would be available to students with high percentage of marks.

8th June, 1961. V. M. INAMDAR, PRINCIPAL.

ನಾವಾಗಿ ಜಾಗ್ರತರಾಗದಿದ್ದರೆ ಮೃತ್ಯುವು ತಾನೇ ಬಂದು ಎಚ್ಚರಿಸುವುದು. ಆದುದರಿಂದ, ಅದು ಬಂದು ನಮ್ಮನ್ನು ಜಾಗ್ರತಗೊಳಿಸುವುದಕ್ಕೆ ಸಾಕಷ್ಟು ಮೊದಲು ನಾವೇ ಎಚ್ಚರವಾಗುವುದು ಶ್ರೇಯಸ್ಕರ.

ನವಯುಗ

೪೦ ವರುಷ	ಉಡುಪಿ ೧'-೬-'೬೧	ವಾರ ೩೯

ಕಾಂಗ್ರೆಸ್ ಜಯಭೇರಿ

ಕಾಂಗ್ರೆಸ್ ಸಂಸ್ಥೆಯಲ್ಲಿ ಹೊಸ ರಕ್ತಗಳಿಗೆ ಪ್ರಾತಿನಿಧ್ಯವನ್ನು ನೀಡುವ ಆವಶ್ಯಕತೆಯತ್ತ ಪಕ್ಷದ ಹಿತಚಿಂತಕರ ಲಕ್ಷ್ಯವು ಅಧಿಕಾಧಿಕವಾಗಿ ಸರಿಯತೊಡಗಿರುವ ಈ ಕಾಲದಲ್ಲಿ ಒಡಿಸ್ಸದ ಮಧ್ಯಾವಧಿ ಚುನಾವಣೆಗಳ ಫಲಿತಾಂಶವು ಈ ವಿಚಾರಕ್ಕೆ ಪುಷ್ಟಿಯನ್ನು ನೀಡುವಂತಿದೆ. ಅಲ್ಲಿ ಕಾಂಗ್ರೆಸ್ಸು ತನ್ನ ನಿರೀಕ್ಷೆಗಿಂತಲೂ ಅಧಿಕ ಸ್ಥಾನವನ್ನು ಪಡೆದು ಸ್ವತಂತ್ರವಾಗಿ ಸರಕಾರವನ್ನು ಮೊತ್ತಮೊದಲಿಗೆ ನಿರ್ಭಯತೆಯಿಂದ ಸ್ಥಾಪಿಸುವ ಬಲ ಪಡೆದಿದೆಯೆಂಬುದು ಅಭಿಮಾನದ ಸಂಗತಿ. ಅಲ್ಲಿ ಕಳೆದ ಹತ್ತು ವರ್ಷಗಳಲ್ಲೂ ಡೋಲಾಯಮಾನ ಪರಿಸ್ಥಿತಿಯಲ್ಲಿದ್ದ ಕಾಂಗ್ರೆಸ್ಸು ತಾನು ಸ್ಪರ್ಧಿಸಿದ ೧೩೮ ಸ್ಥಾನಗಳಲ್ಲಿ ೮೨ನ್ನು ಗಳಿಸಿರುವುದು ಕೇವಲ ಒಡಿಸ್ಸದ ಕಾಂಗ್ರೆಸಿಗರಿಗೆ ಮಾತ್ರವಲ್ಲ, ಇಡಿಯ ಭಾರತೀಯ ಕ್ಷೇಮಚಿಂತಕರಿಗೆ ತಮ್ಮ ಗುರುತರವಾದ ಹೊಣೆಗಾರಿಕೆಯನ್ನು ಎತ್ತಿ ತೋರಿಸುತ್ತದೆ. ದೇಶದಲ್ಲಿ ಕಾಂಗ್ರೆಸ್ಸಿನಷ್ಟು ಪ್ರಾತಿನಿಧ್ಯವುಳ್ಳ ರಾಜಕೀಯ ಪಕ್ಷ ಬೇರೊಂದಿಲ್ಲವಾದರೂ ಒಡಿಸ್ಸದ ಮಟ್ಟಿಗೆ ಹೇಳುವುದಾದರೆ, ಅಲ್ಲಿ ಕಾಂಗ್ರೆಸ್ಸ ತನ್ನ ಪ್ರಭಾವವನ್ನು ಪುನಃ ಸ್ಥಾಪಿಸಿದೆ; ಇದಕ್ಕೆ ಉಳಿದ ಪಕ್ಷಗಳಿಗಿಂತ ಕಾಂಗ್ರೆಸ್ ವಾಸಿ ಯೆಂಬುದೊಂದೇ ಕಾರಣವಾಗಿರದೆ ಅಲ್ಲಿ ಕಾಂಗ್ರೆಸ್‌ಪಕ್ಷದ ಉಮೇದ್ವಾರರಲ್ಲಿ ೪೫ ಯುವಕರಿಗೆ ಪ್ರಾತಿನಿಧ್ಯವನ್ನು ನೀಡುವ ಧೋರಣೆ ವಹಿಸಿದುದೂ ಆಗಿದೆ.

ಮೊದಲನೆಯ ಸಾರ್ವತ್ರಿಕ ಚುನಾವಣೆಯ ಅನಂತರ ಹಾಗೂ ಹೀಗೂ ತೊಳಲಾಡುತ್ತ ಅಲ್ಲಿ ಕಾಂಗ್ರೆಸ್ಸು ಸರಕಾರ ರಚಿಸಿತು. ಮುಂದಿನ ಚುನಾವಣೆಯಲ್ಲಿ ಅದರ ಬಲ ಮತ್ತಷ್ಟು ಇಳಿದುದರಿಂದ ಅದು ಭೀಕರ ಪರಿಸ್ಥಿತಿಯನ್ನು ಎದುರಿಸಬೇಕಾಯಿತು. ಕೊನೆಯಲ್ಲಿ ತನ್ನ ಬೆನ್ನ ಹಿಂದೆಯೇ ಇದ್ದ ರಾಜ—ಮಹಾರಾಜರ ಗಣತಂತ್ರ ಪರಿಷತ್ತಿನ ಮರೆ ಹೋಗುವುದೂ ಅದಕ್ಕೆ ಅಗತ್ಯವಾಯಿತು. ಒಡಿಸ್ಸದ ಜನತೆಯು ಯಾವುದೇ ಒಂದು ಪಕ್ಷವನ್ನು ಬಹುಮತದಿಂದ ಆರಿಸದ ಪ್ರಯುಕ್ತ ಮೊದಲೇ ದುಸ್ಥಿತಿಯಲ್ಲಿದ್ದ ರಾಜ್ಯ ಪಡೆಯಬೇಕಾದಷ್ಟು ಪ್ರಗತಿ ಸಾಧಿಸಲಾರದಾಯಿತು. ಅಪ್ರಾಗತಿಕವಾದ ಗಣತಂತ್ರ ಪರಿಷತ್ತಿನ ಜಂಭಾ ಬಲವನ್ನೇ ಉಡುಗಿಸಿ ಕಮ್ಯೂನಿಸ್ಟರನ್ನು ಸದೆಬಡಿದು, ಸ್ವತಂತ್ರರನ್ನು ನೆಲಸಮಗೆಯ್ದು, ಒಡಿಸ್ಸದ ಜನತೆಯೂ ಕಾಂಗ್ರೆಸ್ಸಿನಲ್ಲಿ ವಿಶ್ವಾಸವನ್ನು ತೋರ್ಪಡಿಸಿದುದು ಆಧುನಿಕ ಭಾರತದ ಇತಿಹಾಸದಲ್ಲಿಯೇ ಉಲ್ಲೇಖಾರ್ಹವಿದೆ. ಇಂತಹುದೇ ದಾಖಲೆಯನ್ನು ಕಳೆದ ವರ್ಷ ಕೇರಳದ ಜನತೆಯೂ ನಿರ್ಮಿಸಿತ್ತು. ಆದರೂ ಒಡಿಸ್ಸದ ಚುನಾವಣಾ ಪರಿಣಾಮವು ಮುಂದಿನ ವರ್ಷ ನಡೆಯಲಿರುವ ತೃತೀಯ ಸಾರ್ವತ್ರಿಕ ಚುನಾವಣೆಗಳ ಮೇಲೆ ಪರಿಣಾಮಕಾರೀ ಪ್ರಭಾವ ಬೀರುವ ಸಂಭವವಿರುವುದರಿಂದ, ಇದು ಮಹತ್ತ್ವಪೂರಿತವೆಂದೆನ್ನಲೇಬೇಕು.

ಒಡಿಸ್ಸದಲ್ಲಿ ಕಾಂಗ್ರೆಸ್ಸು ದಿಗ್ವಿಜಯಭೇರಿ ಬಾರಿಸುವಂತಾದುದು ಕಾಂಗ್ರೆಸಿಗರಿಗೂ ಕಲಿಸಿದ ಒಂದು ವಿಷಯವೆಂದು ಹೇಳಲೇಬೇಕಾಗಿದೆ. "ಅನ್ಯಥಾ ಶರಣಂ ನಾಸ್ತಿ" ಎಂಬುದರಿಂದ, ಕಾಂಗ್ರೆಸ್ಸೊಂದೇ ಇಂದಿನ ಯುಗಕ್ಕೆ ಹೊಂದಿಕೊಂಡಿರುವ ಧ್ಯೇಯಧೋರಣೆಗಳಿರುವ ಮತ್ತು ಸಮರ್ಥ ಪಕ್ಷವೆಂಬುದನ್ನು ಈ ಚುನಾವಣಾ ಪರಿಣಾಮವು ಮತ್ತೊಮ್ಮೆ ಎಚ್ಚರಿಸಿದಂತಾಗಿದೆ. ಮುಂದಿನ ಚುನಾವಣೆಗಳಲ್ಲಿಯೂ ಒಡಿಸ್ಸದ ಪರಿಣಾಮವೇ ಮರುಕೊಳಿಸುವ ಸಲ್ಲಕ್ಷಣಗಳು ತೋರಿಬರುತ್ತಿರುವುದರಿಂದ, ಭಾರತದ ಉಳಿವು ಮತ್ತು ಅಳಿವುಗಳನ್ನು ಸಾಧಿಸುವವರು ಕಾಂಗ್ರೆಸ್ಸಿಗರೇ ಎಂದು ಈ ಪರಿಣಾಮವು ಮತ್ತೊಮ್ಮೆ ಅವರನ್ನು ಕರ್ತವ್ಯ ಪಥಭ್ರಷ್ಟರಾಗಬೇಡಿರೆಂದು ಪ್ರಾರ್ಥಿಸಿದೆ. ಕಾಂಗ್ರೆಸಿನಲ್ಲಿ ಶಕ್ತಿಯಿಲ್ಲ; ಅದು ಸತ್ತಂತಾಗಿದೆ. ಎಂದು ಮುಂತಾಗಿ ಅಪಹಾಸ್ಯ ಮಾಡುವವರಿಗೆ ಅದು ಸತ್ತಿಲ್ಲ; ಚೇತರಿಸಿಕೊಳ್ಳುವಷ್ಟು ಶಕ್ತಿ ಸಂಪನ್ನವಾಗಿದೆ ಎಂಬ ಕಟು ಸತ್ಯವನ್ನು ಬೊಟ್ಟು ಮಾಡಿ ತೋರಿಸಿದೆ. ವಿವಿಧ ವಿರೋಧಿ ಪಕ್ಷಗಳ ಶುಷ್ಕವಾದಗಳಿಗೆ ಕಿವಿಗೊಟ್ಟು ತಮ್ಮ ಭವಿಷ್ಯವನ್ನು ಸಂಪೂರ್ಣ ನರಕದಲ್ಲಿ ಕೆಡಹುವಷ್ಟು ಮೂರ್ಖರು ಭಾರತೀಯರಲ್ಲವೆಂಬುದನ್ನು ಪೂರ್ವಭಾವಿಯಾಗಿ ಒಡಿಸ್ಸದ ನಾಗರಿಕರು ಉದ್ಘೋಷಿಸಿದ್ದಾರೆ. ತನ್ನ ಸಂದೇಶವನ್ನು ಮನೆ ಮನೆಗೂ ನೀಡಿ ದೇಶದ ಹಿತಕ್ಕಾಗಿ ದುಡಿಯುವ ದೃಢ ಪ್ರತಿಜ್ಞೆಗೆಯ್ದು ಕಾಂಗ್ರೆಸ್ ಕಾರ್ಯಕರ್ತರು ನಿರಪೇಕ್ಷಾಭಾವನೆಯಿಂದ ಕಾರ್ಯಪ್ರವೃತ್ತರಾದರೆ, ಜನತೆಯು ಕಾಂಗ್ರೆಸ್ಸಿನ ಕೈ ಬಿಡುವುದಿಲ್ಲವೆಂಬುದನು ಸಾರಿಹೇಳಿದೆ.

ಚುನಾವಣೆಗಳಲ್ಲಿ ಗೆಲ್ಲುವುದೊಂದೇ ಕಾಂಗ್ರೆಸ್ಸಿನ ಧ್ಯೇಯವಲ್ಲ. ಅದು ಭಾರತೀಯರನ್ನು ಅಭಿವೃದ್ಧಿಯ ಪಥದತ್ತ ಮುಂದೆ ಕೊಂಡೊಯ್ಯುವ ಮಹಾ ಸಾಹಸ ಕಾರ್ಯದಲ್ಲಿ ಕೈಹಾಕಿದೆ. ಒಡಿಸ್ಸದ ಚುನಾವಣೆಯಲ್ಲಿ ಸಂಪೂರ್ಣ ವಿಜಯಗಳಿಸಿದ ಕಾಂಗ್ರೆಸ್ಸು ಅಲ್ಲಿ ಸರಕಾರ ಸ್ಥಾಪಿಸಿದಾಗ, ಇಡಿಯ ಭಾರತದಲ್ಲಿಯೇ ಅದು ಅಧಿಕಾರ ಪಡೆದಂತಾಗುತ್ತದೆ; ಇಡಿಯ ದೇಶದ ಆಗು ಹೋಗುಗಳ, ಉತ್ಥಾನ—ಪತನಗಳ, ಕೀರ್ತಿ-ಅಪಕೀರ್ತಿಗಳ, ಗೊತ್ತು-ಗುರಿಗಳ ಉತ್ತರದಾಯಿತ್ವವನ್ನದು ತನ್ನ ಹೆಗಲ ಮೇಲೆ ಹೊತ್ತಂತಾಗುತ್ತದೆ. ತಾನು ಹೊತ್ತ ಭಾರವನ್ನು ಸಂಪೂರ್ಣ ಯಶಸ್ವಿಯಾಗಿ ನಿರ್ವಹಿಸುವುದರಲ್ಲಿಯೇ ದೇಶದ ಮತ್ತು ತನ್ನ ಭದ್ರತೆಯಿದೆಯೆಂಬುದನ್ನದು ಅವಶ್ಯ ಮನವರಿಕೆ ಮಾಡಿಕೊಳ್ಳಬೇಕಾಗಿದೆ. ಇದಕ್ಕಾಗಿ ತನ್ನಲ್ಲಿರುವ ಸಕಲ ದುರ್ಬಲತೆಯನ್ನು ದೂರಮಾಡಿ, ತನ್ನ ಶಕ್ತಿಯನ್ನು ಯುವಜನಾಂಗದ ಸಹಾಯದಿಂದ ಬೆಳೆಸಿಕೊಂಡು ದೇಶದ ಪುನರುತ್ಥಾನದ ಮಹಾಕಾರ್ಯದಲ್ಲಿ ಪ್ರವೃತ್ತವಾಗಬೇಕು; ಭಾರತೀಯರು ಯಾವ ಆಶೆ—ಆಮಿಶಗಳನ್ನಿಟ್ಟು ತನ್ನನ್ನು ಅಧಿಕಾರಕ್ಕೇರಿಸಿದ್ದಾರೋ ಅವನ್ನು ಪೂರೈಸಿಕೊಟ್ಟು ಅವರ ಮನಸ್ಸನ್ನು ತಣ್ಣಗಿರಿಸಬೇಕು; ಪಕ್ಷದ ಸಂಘಟನೆಯನ್ನು ಬಲಭದ್ರಗೊಳಿಸಿ ದೇಶದ ಹಿತವನ್ನು ಸಾಧಿಸಬೇಕು.

ಸಂಕ್ಷಿಪ್ತ ಸುದ್ದಿಗಳು

ರಾಯ್‌ರ ಚುಚ್ಚು ಮದ್ದು

ದಿವಂಗತ ಪಂಡಿತ ಪಂತರ ಆಪ್ತರಾದ ಪಶ್ಚಿಮ ಬಂಗಾಳದ ಮುಖ್ಯ ಮಂತ್ರಿ ಶ್ರೀ ಬಿ. ಸಿ. ರಾಯ್ ಪಡೆದುದು ವೈದ್ಯಕೀಯ ಶಿಕ್ಷಣವಾದರೂ ರಾಜನೀತಿಯನ್ನು ರಕ್ತಗತ ಮಾಡಿಕೊಂಡಿದ್ದಾರೆ. ಪಂತರ ನಿಧನಾನಂತರ ಅವರ ಸ್ಥಾನಾಪನ್ನರಾದ ಲಾಲಬಹದೂರ ಶಾಸ್ತ್ರಿಯವರಿಗೂ ಇವರು ಪ್ರಿಯರಾಗಿದ್ದಾರೆ! ಅಸ್ಸಾಮದ ಭಾಷಾವಿವಾದವನ್ನು ಬಗೆಹರಿಸಲು ಹೋದ ಶಾಸ್ತ್ರೀಯವರಿಗೆ ಪ್ರತಿರಾಜ್ಯದಲ್ಲಿಯೂ ಭಾಷಾ ಅಲ್ಪಸಂಖ್ಯಾಕರ ಹಿತ ರಕ್ಷಣೆಯನ್ನು ಮಾಡುವ ಸಂಬಂಧದ ರಾಜ್ಯ ಪುನರ್ಘಟನಾ ವಿಧೇಯಕದ ಅನುಚ್ಛೇಧವನ್ನು ಕಾರ್ಯಗತಗೊಳಿಸುದರ ಆವಶ್ಯಕತೆಯನ್ನು ಒತ್ತಿ ತಿಳಿಸಿದರು. ಇಂದಿಗೂ ಕಾಗದ ಪತ್ರಗಳಲ್ಲಿ ಮಾತ್ರ ವಿರುವ ಅದು ಕಾರ್ಯಗತವಾಗುವುದರಿಂದ ಭಾರತದ ಎಲ್ಲ ರಾಜ್ಯಗಳಲ್ಲಿಯೂ ಇರುವ ಈ ಭಾಷಾ ವಿವಾದ ಸರಳವಾಗಿ ಬಗೆಹರಿಯಬಲ್ಲುದೆಂದು ತಿಳಿಸಿ ಹೇಳಿದರು. ಶ್ರೀ ಶಾಸ್ತ್ರಿಯವರಿಗೂ ಇದು ಹೌದೆಂದು ತೋರಿದೆ; ಆದುದರಿಂದಲೇ ಇವರು ಹಲಯುಗಳ ಸಮ್ಮಿಳಿತ ಸಮ್ಮೇಳನವೊಂದನ್ನು ಕರೆಯುವ ಬಗ್ಗೆ ವಿಚಾರ ಮಾಡುತಿದ್ದಾರೆ.

ಪ್ರತಿಭೆಗೆ ಪ್ರೋತ್ಸಾಹ

ಮೂರನೆಯ ಯೋಜನೆಯ ಐದು ವರ್ಷದ ಅವಧಿಯಲ್ಲಿ ನಾಲ್ಕು ಕೋಟಿ ರೂಪಾಯಿಗಳನ್ನು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಶಿಷ್ಯವೃತ್ತಿಯನ್ನು ಒದಗಿಸಲು ತೆಗೆದಿರಿಸಲಾಗಿದೆಯೆಂದು ಕೇಂದ್ರ ಶಿಕ್ಷಣ ಶಾಖೆಯು ಪ್ರಚುರಪಡಿಸಿದೆ ಎಂದು ತಿಳಿಯುತ್ತದೆ. ೪೫ ಕೋಟಿ ಭಾರತೀಯರಿರುವಾಗ ಈ ಮೀಸಲಾದ ಮೊತ್ತವು ಅತೀವ ಅಲ್ಪವೆಂಬುದನ್ನು ಒಪ್ಪಲೇಬೇಕಾದರೂ ಪ್ರತಿಭಾವಂತರ ಕಡೆಗೆ ಎಳ್ಳಷ್ಟಾದರೂ ಗಮನಹರಿಸುವ ಸದವಸರವೊದಗಿತೆಂದು ಸಂತೋಷಪಡಬೇಕು. ಈ ಶಿಷ್ಯವೃತ್ತಿಯನ್ನು ಹಂಚಲು ಮಂತ್ರಿಶಾಖೆಯು ಎರಡು ಯೋಜನೆಗಳನ್ನು ರೂಪಿಸಿದೆ. ಮೊದಲನೆಯದು ರಾಷ್ಟ್ರೀಯರೆಲ್ಲರಿಗೂ ತೆರವಾಗಿದ್ದರೆ, ಎರಡನೆಯದು ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಕರ ಮಕ್ಕಳಿಗೆ ಮಾತ್ರ ಪರಿಸೀಮಿತವಾಗಿನೆ. ನಮ್ಮ ದೇಶದಲ್ಲಿ ಪ್ರತಿಭಾಸಂಪನ್ನರಿಗೇನೂ ಅಭಾವವಿಲ್ಲವಾದುದರಿಂದ, ಈ ಯೋಜನೆಗಳಿಂದ ಎಲ್ಲ ಅರ್ಹರಿಗೂ ಪ್ರಯೋಜನ ದೊರೆಯುವುದೆಂದು ಹೇಳಲಾಗುವುದಿಲ್ಲ.' ಆದರೂ ಆರ್ಥಿಕ ಸ್ಥಿತಿಗತಿಗಳು ಬಹಳ ಹೀನವಾಗಿರುವ ಬುದ್ಧಿವಂತರಲ್ಲಿ ಕೆಲವರಾದರೂ ತಮ್ಮ ಶಿಕ್ಷಣವನ್ನು ಮುಂದುವರಿಸಿ ತಮ್ಮ ಹಾಗೂ ದೇಶದ ಹಿತ ಸಾಧಿಸುವಂತೆ ಪ್ರೇರಕವಾಗುವ ನಿರೀಕ್ಷೆಯಿದೆ. ಸ್ವೀಡನ್ನಿನಂತಹ ರಾಷ್ಟ್ರದಲ್ಲಿ ಗರ್ಭದಿಂದ ಗೋರಿಯವರೆಗಿನ ಭಾರವನ್ನು ಸರಕಾರವೇ ಹೊರುತ್ತಿರುವುದನ್ನು ಕಾಣುವಾಗ, ನಮ್ಮದೇನು ಮಹಾ ಎಂದೆನ್ನಿಸುವುದು ವಾಸ್ತವ. ಹಿಂದುಳಿದವರಿಗೆ, ಪರಿಶಿಷ್ಟ ವರ್ಗದವರಿಗೆ ಶಿಕ್ಷಣ ಪಡೆಯಲು ನಾನಾ ವಿಧವಾಗಿ ಹೆಚ್ಚಿನ ಪ್ರಮಾಣದಲ್ಲಿ ಸಹಾಯ ನೀಡುತ್ತಿರುವ 'ಸರಕಾರಿ ವಲಯ' ಪ್ರತಿಭಾಸಂಪನ್ನ ವಿದ್ಯಾರ್ಥಿಗಳು ರಾಷ್ಟ್ರದ ರತ್ನಗಳೆಂದು ಪರಿಗಣಿಸಿ, ಅವರಿಗೆ ಸೂಕ್ತ ಶಿಕ್ಷಣವೊದಗಿಸಿ ಅವರಿಂದ ದೇಶಕಲ್ಯಾಣ ಸಾಧಿಸಿಕೊಳ್ಳುವುದೂ ತನ್ನ ಕರ್ತವ್ಯವೆಂದು ಭಾವಿಸಬೇಕು. ಮೂರನೆಯ ಯೋಜನೆಯ ಈ ನಾಲ್ಕು ಕೋಟಿ ರೂಪಾಯಿಗಳು ಈ ಸತ್ಸಂಪ್ರದಾಯಕ್ಕೆ ನಾಂದಿಯಿಡುವಂತಾಗಲಿ.

ಪಟನಾಯಕರ ಯಶಸ್ಸು

ಹರಿಕೃಷ್ಣ ಮೆಹತಾಬರು ಗಣತಂತ್ರ ಪರಿಷತ್ತಿನೊಡನೆ ಕೂಡಿ ರಚಿಸಿದ ಸಮ್ಮಿಶ್ರ ಸರಕಾರವು ರಾಜಿನಾಮೆ ನೀಡುವಂತೆ ಮಾಡಿ, ಒಡಿಸ್ಸದಲ್ಲಿ ಮಳೆಗಾಲಪ್ರಾರಂಭಕ್ಕೆ ಮೊದಲೇ ಮಧ್ಯಾವಧಿ ಚುನಾವಣೆಯನ್ನು ನಡೆಸುವಂತೆ ಗೆಯ್ದು ಎಂದೂ ಪರ್ಯಾಪ್ತ ಬಹುಮತ ಗಳಿಸದ ಕಾಂಗ್ರೆಸ್ಸಿಗೆ ಅಲ್ಲಿ ಇತ್ಯಪೂರ್ವ ವಿಜಯ ಗಳಿಸಿಕೊಟ್ಟ ಕೀರ್ತಿ ಪ್ರಾಂತೀಯ ಕಾಂಗ್ರೆಸ್ ಅಧ್ಯಕ್ಷ ಶ್ರೀ ಬಿಜಯಾನಂದ ಪಟನಾಯಕರಿಗೆ ಸೇರಿದುದು. ಶ್ರೀ ಪಟನಾಯಕರ ಅದಮ್ಯ ಉತ್ಸಾಹ ಮತ್ತು ಅಸೀಮ ಪರಿಶ್ರಮ ಹಾಗೂ ಅಗಾಧ ಕಾರ್ಯತತ್ಪರತೆಯು ಕಾಂಗ್ರೆಸ್ಸಿನ ಮಾತ್ರವಲ್ಲ ಭಾರತದ ಇತಿಹಾಸದಲ್ಲಿ ಒಡಿಸ್ಸದಲ್ಲಿನ ವಿಜಯವನ್ನು ಸ್ವರ್ಣಾಕ್ಷರಗಳಲ್ಲಿ ಬರೆಸಿದ್ದವು. ಈ ಬಾರಿ ಹರಿಕೃಷ್ಣ ಮೆಹತಾಬರು ಚುನಾವಣೆಗಳಲ್ಲಿ ಸ್ಪರ್ಧಿಸದೆ ಇರುವುದರಿಂದ, ಶ್ರೀ ಪಟನಾಯಕರೇ ವಿಧಾನ ಸಭಾ ಕಾಂಗ್ರೆಸ್ ಪಕ್ಷದ ನಾಯಕರಾಗಿ ಸರಕಾರ ರಚಿಸಿದರೆ ಆಶ್ಚರ್ಯಪಡಬೇಕಾಗಿಲ್ಲ.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

S. C. 63/61

J. S. W. Coelho by Power of Attorney holder Juana Farias Bai —ವಾದಿ

Francis D'Mello ಬಿ. ಡೆಮೆಲ್ಲೊರ ಮಗ, ಪುತ್ತೂರು ಕಸಬಾ ಕಲ್ಲಾರೆಯಲ್ಲಿ ಕಾಯಂ ವಾಸ್ತವ್ಯವಿರುವವರು P.O. Puttur —ಪ್ರತಿವಾದಿಗೆ

ವಾದಿಯು ನಿಮಗೆ ಸಾಲ ಕೊಟ್ಟ ಬಾಬ್ತು ವಸೂಲಿ ಬಗ್ಗೆ ಮಾಡಿದ ಮೇಲಿನ ದಾವೆಯು ತಾ. 22—6—61ಕ್ಕೆ ತಸ್ಕೀಗೆ ಇರುವುದರಿಂದ ನೀವು ಆ ದಿನ ಹಾಜರಾಗಿ ಉತ್ತರ ಕೊಡದಿದ್ದಲ್ಲಿ ನಿಮ್ಮನ್ನು ಏಕಪಕ್ಷವಾಗಿ ತೀರ್ಮಾನಿಸಲಾಗುವುದೆಂತ ಈ ಮೂಲಕ ತಿಳಿಸಿದೆ.

(By Order of the Court)

B. Sripati Rao
Advocate for plff

ಅಲ್ಲಲ್ಲಿಯ ಸುದ್ದಿ ಸಾರ

ಗ್ರಂಥ ಪ್ರಕಾಶನ ಸಮಾರಂಭ— ಬೆಂಗಳೂರಲ್ಲಿರುವ ಗಾಂಧಿ ಸ್ಮಾರಕ ನಿಧಿಯು ಕರ್ನಾಟಕ ಶಾಖೆಯವರು ಕನ್ನಡದಲ್ಲಿ ಪ್ರಕಟಿಸುತ್ತಿರುವ ಗಾಂಧೀಜಿಯ ಗ್ರಂಥಗಳ ೧೪ನೇ ಸಂಪುಟ— "ನನ್ನ ಸಮಕಾಲೀನರು" ಗ್ರಂಥ ಪ್ರಕಾಶನ ಸಮಾರಂಭವನ್ನು ಉಡುಪಿಯ ಪೂರ್ಣಪ್ರಜ್ಞ ಕಾಲೇಜಿನ ಸಭಾಂಗಣದಲ್ಲಿ ತಾ. 7—6—61ರಂದು ಪೇಜಾವರ ಮಠದ ಶ್ರೀ ಶ್ರೀ. ವಿಶ್ವೇಶ್ವರ ತೀರ್ಥ ಶ್ರೀಪಾದಂಗಳವರು ನೆರವೇರಿಸಿದರು. ಬಿಹಾರಿನ ಮಾಜಿ ರಾಜ್ಯಪಾಲರೂ ಗಾಂಧೀ ಸ್ಮಾರಕ ನಿಧಿಯ ಅಧ್ಯಕ್ಷರೂ ಸಂಯುಕ್ತ ಕರ್ನಾಟಕ ಸಂಪಾದಕ ಕೂಟದ ಶ್ರೀ ಆರ್. ಆರ್. ದಿವಾಕರರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಆರಂಭದಲ್ಲಿ ಮೈಸೂರು ಗಾಂಧೀ ಗ್ರಂಥಮಾಲೆಯ ಪ್ರಧಾನ ಸಂಪಾದಕ ಶ್ರೀ ಎಮ್. ಯಾಮುನಾಚಾರ್ಯರು ಸ್ವಾಗತ ಭಾಷಣ ಮಾಡಿ ಗ್ರಂಥಮಾಲೆಯ ವಿವರಗಳನ್ನಿತ್ತರು. ಅಂತ್ಯದಲ್ಲಿ ಸಂಚಾಲಕ ಶ್ರೀ ರಾಮಚಂದ್ರ ವಡವಿಯವರು ಧನ್ಯವಾದಗಳನ್ನರ್ಪಿಸಿದರು.

ತೈಲ ಚಿತ್ರಗಳ ಅನಾವರಣ— ಮೇಲಿನ ಸಮಾರಂಭದ ಬಳಿಕ ಮಧ್ವಸಿದ್ಧಾಂತ ಪ್ರಬೋಧಿನಿ ಸಂಸ್ಕೃತ ಪಾಠಶಾಲೆಯ ಪ್ರಾರ್ಥನಾ ಮಂದಿರದಲ್ಲಿ ಶ್ರೀ ಮಧ್ವಾಚಾರ್ಯರ ತೈಲ ಚಿತ್ರವನ್ನು ಶ್ರೀ ಆರ್. ಆರ್. ದಿವಾಕರರೂ ಶ್ರೀ ವಾದಿರಾಜ ಸ್ವಾಮಿಗಳ ತೈಲ ಚಿತ್ರವನ್ನು ಶ್ರೀ ಕೆ. ಆರ್. ಆಚಾರ್ ಎಮ್. ಪಿ. ಅವರೂ ಅನಾವರಣ ಗೈದರು. ಶ್ರೀ ಬೈಲೂರು ವಾಸುದೇವ ರಾಯರು ಸ್ವಾಗತಿಸಿದರು. ಅಂತ್ಯದಲ್ಲಿ ಶ್ರೀ ಹೊಸಬೆಟ್ಟು ರಾಮರಾಯರು ವಂದನಾರ್ಪಣೆಗೈದರು.

ಮುನ್ಸೀಫರಾಗಿ ಆಯ್ಕೆ— ಮಂಗಳೂರಿನ ಎಡ್ವಕೇಟುಗಳಾದ ಶ್ರೀ ಸೀನ ಸಮಿರಾಜ ಮಲ್ಲರನ್ನೂ, ಶ್ರೀ ಮನಮೋಹನ ಶೆಟ್ಟಿಯವರನ್ನೂ, ಡಿಸ್ಟ್ರಿಕ್ಟ್ ಮುನ್ಸೀಫರನ್ನಾಗಿ ಸರಕಾರವು ಆಯ್ಕೆ ಮಾಡಿರುವುದಾಗಿ ತಿಳಿದು ಬರುತ್ತದೆ.

ಪರೀಕ್ಷಾ ಫಲಿತಾಂಶ— 1961ನೇ ಏಪ್ರಿಲ್ ತಿಂಗಳಲ್ಲಿ ಜರಗಿದ ಡಿ. ಎಸ್. ಎ. ಸಿ. ಡಿಪ್ಲೊಮಾ ಪ್ರಥಮ ಪರೀಕ್ಷೆಗೆ ಉಡುಪಿ ಆಯುರ್ವೇದ ಕಾಲೇಜಿನಿಂದ ಕುಳಿತ 13 ವಿದ್ಯಾರ್ಥಿಗಳಲ್ಲಿ 9 ಮಂದಿ ಉತ್ತೀರ್ಣರಾಗಿರುವರಾಗಿ ಕಾಲೇಜ್ ಪ್ರಿನ್ಸಿಪಾಲರು ತಿಳಿಸಿರುತ್ತಾರೆ.

ಉದ್ಘಾಟನೆ— ಹೊಸೂರು ಕರ್ಜೆ ಎಲಿಮೆಂಟರಿ ಶಾಲೆಯಲ್ಲಿ 6ನೇ ತರಗತಿಯ ಉದ್ಘಾಟನೆಯು ಜೂನ್ ತಾರೀಕು 6ರಂದು ಹೊಸೂರು ಪಂಚಾಯತಿನ ಸಭಾಪತಿಗಳಾದ ಶ್ರೀ ಎಮ್. ಮೋಹನ್‌ದಾಸ ಸೆಟ್ಟರವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಕೆ. ಎಲ್. ಕ್ರಮಧಾರಿಯವರು ಸಭೆಯ ಉದ್ದೇಶವನ್ನು ತಿಳಿಸಿದರು. ತರಗತಿಯ ಉದ್ಘಾಟನೆಯ ಬಳಿಕ ಮಕ್ಕಳಿಂದ ವಿವಿಧ ವಿನೋದಾವಳಿಗಳು ನಡೆದುವು. ಬಳಿಕ ಸಭಿಕರಲ್ಲಿ ಶ್ರೀ ಕೆ. ಎಸ್. ಕ್ರಮಧಾರಿ, ನಾರಾಯಣ ಸೆಟ್ಟಿ, ಮತ್ತು ಶೀನಪ್ಪ ಸೆಟ್ಟರು ಭಾಷಣವಿತ್ತರು. ಅಧ್ಯಕ್ಷರ ಭಾಷಣದ ತರುವಾಯ ಶಾಲಾ ಮೆನೇಜರ್ ಶ್ರೀ ಕೆ. ಎ. ಗೋಪಾಲ ಭಟ್ಟರವರು ಧನ್ಯವಾದವಿತ್ತರು.

ಅನ್ಯರ ಸಹಾಯವಿಲ್ಲದೆ ಸ್ವತಂತ್ರವಾಗಿ ಇಂಗ್ಲಿಷ್ ಪತ್ರವ್ಯವಹಾರ ಮಾಡಲು ಉಪಯುಕ್ತ ಪುಸ್ತಕ

Letter Writing Made Easy

ಸುಲಭದಲ್ಲಿ ಪತ್ರಲೇಖನ

೧

ವಿವಿಧ ಮಾದರಿಯ 75 ಇಂಗ್ಲಿಷ್ ಪತ್ರಗಳು.

ಬೆಲೆ: ರೂ. 1—75.

ಹೈಸ್ಕೂಲು ವಿದ್ಯಾರ್ಥಿಗಳಿಗೂ ಅಲ್ಪಸ್ವಲ್ಪ ಇಂಗ್ಲಿಷ್ ಮಾಹಿತಿಯುಳ್ಳ ವಯಸ್ಕರಿಗೂ ಅತ್ಯನುಕೂಲ ಕೈಪಿಡಿ.

ರೂ. 1-50 ಕಳಿಸಿದರೆ ೧ ಪ್ರತಿ ಬುಕ್ ಪೋಸ್ಟು ಮಾಡಬಹುದು.

ವಿಳಾಸ:—

ನವಯುಗ ಪ್ರೆಸ್, ಉಡುಪಿ, ಅಥವಾ ನವಭಾರತ ಬುಕ್ ಡಿಪೋ, ಉಡುಪಿ.

ಹಾಜರಿ ವೇತನ ವಿತರಣಾ ಸಮಾರಂಭ— ತಾ. 9—6—61ರಂದು ಹೇರೂರು ಬೋರ್ಡ್ ಹಾ. ಎ. ಶಾಲಾ ಬಾಲಕಿಯರಿಗೆ ಸರಕಾರದಿಂದ ದೊರೆತ ಹಾಜರಿ ವೇತನ ವಿತರಣಾ ಸಮಾರಂಭವು ಶ್ರೀ ಎಚ್. ಬಾಬು ಪೂಜಾರಿ, ಸದಸ್ಯ ಹೇರೂರು ಪಂಚಾಯತ್, ಇವರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯ ಶ್ರೀ ಎನ್. ಕೆ. ಸುಂದರ ರಾಯರು ಕಡ್ಡಾಯ ಶಿಕ್ಷಣದ ಕುರಿತು ಸಹಕಾರ ಕೋರಿ ಮಾತನಾಡಿದರು. ಶ್ರೀ ಬಿ. ನಾರಾಯಣ್, ಇವರು ಸಂದರ್ಭೋಚಿತ ಭಾಷಣವಿತ್ತರು. ಶ್ರೀ. ಯಚ್. ಭುಜಂಗ ಸೆಟ್ಟರು ವಿದ್ಯಾರ್ಥಿಗಳಿಗೆ ಸಿಹಿತಿಂಡಿ ವಿತರಣೆಗೈದರು.

ಕಾರ್ಯಕಾರಿ ಸಮಿತಿಯ ಸಭೆ— ದ. ಕ. ಜಿಲ್ಲಾ ಸ್ವತಂತ್ರ ಪಕ್ಷದ ಕಾರ್ಯಕಾರಿ ಸಮಿತಿಯ ಸಭೆಯು ತಾ. 4—6—61ರಂದು ಶ್ರೀ ಜೆ. ಎಮ್. ಲೋಬೊ ಪ್ರಭುಗಳ ಲೌಟ್ ಹೌಸ್ ಬಂಗ್ಲೆಯಲ್ಲಿ ಶ್ರೀ ನೂಜಿಬೈಲು ಕೃಷ್ಣ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾ ಕಾರ್ಯದರ್ಶಿ ಶ್ರೀ ಉಗ್ಗಪ್ಪ ಶೆಟ್ರು ಸ್ಟೇಟ್ ಬ್ಯಾಂಕು ಬಂದು ಮಾಡಿದ ಪ್ರಸಾರ ಕಾರ್ಯಕ್ರಮವನ್ನೂ ಅದರಿಂದಾದ ಪ್ರಯೋಜನಗಳನ್ನೂ ವಿವರಿಸಿದರು. ಪಕ್ಷದ ಮುಂದಿನ ಅಭಿವೃದ್ಧಿಗೆ ಅವಶ್ಯವಿರುವ ಹಲವು ಸೂಚನೆಗಳನ್ನು ಹಾಜರಿದ್ದ ಮೆಂಬರರೂ, ಮಾನ್ಯ ಅಧ್ಯಕ್ಷರೂ ಸೂಚಿಸಿದರು. ಜತೆ ಕಾರ್ಯದರ್ಶಿ ಶ್ರೀ ಎಚ್. ನಾಗಪ್ಪನವರು ಹಳ್ಳಿ ಹಳ್ಳಿಗಳಲ್ಲಿ ಇನ್ನೂ ಬಲವಾದ ಪ್ರಸಾರ ಕಾರ್ಯಕ್ರಮವನ್ನು ಕೈಕೊಳ್ಳಬೇಕೆಂದೂ ಸೂಚಿಸಿ ಧನ್ಯವಾದಗಳನ್ನರ್ಪಿಸಿದರು.

ಮರಾಠಿಗರ ಮಹಾಸಭೆ— ದ. ಕ. ಜಿಲ್ಲಾ ಮರಾಠಿಗ ಸಂಘದ ಮಹಾ ಸಭೆಯು ಕಳೆದ ತಾ. 28ರಂದು ಶ್ರೀ ಎ. ಜೆ. ಆಲ್ವೆಯವರ ಅಧ್ಯಕ್ಷತೆಯಲ್ಲಿ ಮಣಿಪಾಲದಲ್ಲಿ ನೆರವೇರಿತು. ಸಂಘದ ಅಧ್ಯಕ್ಷ ಶ್ರೀ ಅಣ್ಣಯ್ಯ ನಾಯ್ಕರಿಂದ ಸ್ವಾಗತ ಭಾಷಣ, ಕಾರ್ಯದರ್ಶಿಗಳಿಂದ ವರದಿವಾಚನ, ಶ್ರೀಗಳಾದ ಬನ್ನಂಜೆ ರಾಮಾಚಾರ್ಯ, ಪಿ. ಶೀನ ಶೆಟ್ಟರಿಂದ ಭಾಷಣ, ಕಾರ್ಯಕಾರೀ ಸಮಿತಿಯ ಆಯ್ಕೆಯಾದ ಬಳಿಕ ಕೆಲವು ನಿರ್ಣಯಗಳಾಗಿ ಅಧ್ಯಕ್ಷ ಭಾಷಣವಾಯ್ತು.

ಶ್ರೀ ರಾಮ ಪಟ್ಟಾಭಿಷೇಕ ಮಹೋತ್ಸವ— ರಾಜಧಾನಿಯ ಮೋಡರ್ನ್ ಕೆಫೆಯ ಮಾಲಿಕರಾದ ಶ್ರೀ ಕೆ. ಸೀತಾರಾಮ ರಾಯರು ಮೈಸೂರು ದಾಸ ಪ್ರಕಾಶ ಶ್ರೀ ರಾಮ ಮಂದಿರದಲ್ಲಿ ಇದೇ ತಾ. 6 ಮತ್ತು 7ರಂದು ಶ್ರೀ ರಾಮ ಪಟ್ಟಾಭಿಷೇಕ ಮಹೋತ್ಸವವನ್ನು ಎಂದಿನಂತೆ ವಿಜೃಂಭಣೆಯಿಂದ ಆಚರಿಸಿದರು. ಮೊದಲ ದಿನ ಪಾರಾಯಣ, ಅಭಿಷೇಕಾದಿಗಳು ನಡೆದು ಮಹಾ ಸಂತರ್ಪಣೆ ಜರಗಿತು. ಸಂಜೆ ಅಸ್ಥಾನ ವಿದ್ವಾನ್ ಸಂಗೀತ ರತ್ನ ಶ್ರೀ ಚೌಡಯ್ಯನವರ ಪಿಟೀಲುವಾದನ ಕಚೇರಿ ಜರಗಿದ ಬಳಿಕ ಶ್ರೀ ಸೀತಾ ರಾಮ ರಾವ್ ಮತ್ತು ಸಹೋದರರೂ ಚಿರಂಜೀವಿಗಳಿಂದ ಡಿ. ಶ್ರೀ ಗೋವಿಂದ ದಾಸರಿಂದ ಪಾರಂಪರ್ಯವಾಗಿ ಆಚರಿಸಲಾದ ಭಜನೆ ನಡೆಯಿತು. ಅರಮನೆಯ ಧರ್ಮಾಧಿಕಾರಿ ಶ್ರೀ ಎಚ್. ಎನ್. ರಘುವೇಂದ್ರಾಚಾರ್ಯರು ಸಂಗೀತರತ್ನ ವಾಸುದೇವಾಚಾರ್ಯರ ಗುಣಕಥನಮಾಡಿ ಅವರ ನಿಧನಕ್ಕಾಗಿ ಸಂತಾಪ ಸೂಚಿಸಿದರು ಮರುದಿನ ಮಧ್ಯಾಹ್ನ ಸುಮಾರು 4,000 ಬಡಬಗ್ಗರಿಗೆ ಅನ್ನದಾನ ದೊರೆಯಿತು.

ಕೆನರಾ ವರ್ಕ್ ಶಾಪುಗಳ ಶಾಖೆ— ಮಂಗಳೂರಿನ ಕೆನರಾ ವರ್ಕ್ ಶಾಪ್ ಸಂಸ್ಥೆಯು ನಾಗಪುರದಲ್ಲಿ ಒಂದು ಹೊಸ ಕಾರ್ಖಾನೆಯನ್ನು ಇತ್ತೀಚೆಗೆ ಪ್ರಾರಂಭಿಸಿದೆ. ಈ ಸಂಸ್ಥೆಯಲ್ಲಿ ತಯಾರಾಗುವ ಮೋಟಾರ್ ವಾಹನಗಳಿಗೆ ಬೇಕಾಗುವ "ಕೆನರಾ ಸ್ಪ್ರಿಂಗು"ಗಳು ಎಲ್ಲೆಲ್ಲೂ ಪ್ರಸಿದ್ಧಿಗೆ ಬಂದಿದ್ದು ಉತ್ತರ ಹಿಂದುಸ್ಥಾನದಲ್ಲಿ ಅದಕ್ಕೆ ಧಾರಾಳ ಗಿರಾಕಿಗಳಿರುವ ದೃಷ್ಟಿಯಿಂದ ಅವರ ಸೌಕರ್ಯಕ್ಕಾಗಿ ನಾಗಪುರದಲ್ಲೀಗ ಈ ಕಾರ್ಖಾನೆ ತೆರೆಯಲಾಗಿದೆ. ಕೇಂದ್ರದ ಉಕ್ಕು ಗಣಿ ಮತ್ತು ಇಂಧನ ಶಾಖೆಯ ಸಚಿವ ಸರ್ದಾರ್ ಸ್ವರ್ಣ ಸಿಂಗರು ಈಚೆಗೆ ಈ ಕಾರ್ಖಾನೆಯ ಆರಂಭೋತ್ಸವ ನೆರವೇರಿಸಿದರು. ಈ ಸಂಸ್ಥೆಯ ಅಧ್ಯಕ್ಷ ಮತ್ತು ತಾಂತ್ರಿಕ ಡೈರೆಕ್ಟರ್ ಆಗಿರುವ ಶ್ರೀ ವಿ. ಎಸ್. ಕುಡ್ವ ಹಾಗೂ ಮೆನೇಜಿಂಗ್ ಡೈರೆಕ್ಟರ್ ಶ್ರೀ ಎಸ್. ವಿ. ಕುಡ್ವ ಇವರು ರಾಷ್ಟ್ರೀಯ ಅಭಿವೃದ್ಧಿ ಕಾರ್ಯ ಕ್ಷೇತ್ರಕ್ಕೆ ಈ ಜಿಲ್ಲೆಯ ಪರವಾಗಿ ಸಲ್ಲಿಸಿರುವ ಅಮೋಘ ಸೇವೆಗಾಗಿ ಅಭಿನಂದನೀಯರು.

ಪರೀಕ್ಷಾ ಫಲಿತಾಂಶ— ಕಳೆದ ಏಪ್ರಿಲ್‌ನಲ್ಲಿ ಜರಗಿದ ಪ್ರಿಯುನಿವರ್ಸಿಟಿ ಪರೀಕ್ಷಾ ಫಲಿತಾಂಶವು ಇದೇ ಜೂನ್ 10ರಂದು ಪ್ರಕಟವಾದಂತೆ ಉಡುಪಿಯ ಪೂರ್ಣಪ್ರಜ್ಞ ಕಾಲೇಜಿನ ತೇರ್ಗಡೆಯು ಸೇಕಡಾ 60.6 ಆಗಿದೆ. ಈ ಕಾಲೇಜು ಕಳೆದ ಜೂನ್ ತಿಂಗಳಲ್ಲಿ ಉಡುಪಿಯ ಅಷ್ಟಮಠಾಧಿಪತಿಗಳಿಂದ ಸ್ಥಾಪಿತವಾಗಿದ್ದು ಆರ್ಟ್ಸ್ ಮತ್ತು ಕೋಮರ್ಸ್ ವಿಷಯಗಳಲ್ಲಿ ಶಿಕ್ಷಣವನ್ನೀಯುತ್ತಿದೆ ಎಂದು ಸಂಬಂಧ ಪಟ್ಟವರು ತಿಳಿಸುತ್ತಾರೆ.

ಜಿಲ್ಲಾ ನೋಟರಿಯಾಗಿ— ಮಂಗಳೂರಿನ ವಕೀಲ್ ಶ್ರೀ ಡಿ. ಮೋಹನ ರಾಯರನ್ನು ಮೈಸೂರು ಸರಕಾರವು ನೇಮಕ ಮಾಡಿದೆ. ಮಂಗಳೂರಿನಲ್ಲಿ ಈ ವರೆಗೆ ಈ ಹುದ್ದೆ ಇರಲಿಲ್ಲ.

ಸಪ್ತಾಹಿಕ ಸಭೆ— ಮಂಗಳೂರು ಯುವಕ ಜನ ಕಾಂಗ್ರೆಸ್ಸಿನ ಸಾಪ್ತಾಹಿಕ ಸಭೆಯು ಲೋಕಸಭಾ ಸದಸ್ಯ ಶ್ರೀ ಕೆ. ಆರ್. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿ ಪ್ರಚಲಿತ ರಾಜಕೀಯ ಪರಿಸ್ಥಿತಿಯ ಕುರಿತು ವಿಚಾರ ವಿನಿಮಯ ನಡೆಯಿತು.

ಉಡುಪಿ ನಗರ ಸಭೆ— ಇದರ ಅವಸರದ ಸಭೆಯೊಂದು ಇದೇ ತಾ 5ರಂದು ನಗರ ಸಭಾಧಿಪತಿ ಡಾ! ಕೆ. ಎಲ್. ಐತಾಳರ ಅಧ್ಯಕ್ಷತೆಯಲ್ಲಿ ಜರಗಿತು. ನಗರ ಸಭೆಯ ರಜತೋತ್ಸವದ ನೆನಪಿಗಾಗಿ ಅನಧಿಕೃತ ಕಟ್ಟಡ ಮತ್ತು ಆಹಾರ ಮಿಶ್ರಣಗಳ ವಿಷಯದಲ್ಲಿ ಜನವರಿ 31ರ ಒಳಗೆ ನಡೆದಿರುವ ಖಟ್ಲೆಗಳನ್ನು ಹಿಂದೆಗೆಯ ಬೇಕಾಗಿ ನಗರ ಸಭೆಯು ಫೆಬ್ರವರಿ ತಿಂಗಳಲ್ಲಿ ಠರಾಯಿ ಸಿದ್ಧನ್ನು ಅಕ್ಷೇಪಿಸಿ ಕಮಿಶನರು ಸರಕಾರಕ್ಕೆ ಬರೆಕೊಂಡಂತೆ ಈ ನಿರ್ಣಯವನ್ನು ಏಕೆ ರದ್ದು ಮಾಡಕೂಡದೆಂದು ಸರಕಾರ ಉದಾಹರಣೆ ಕೇಳಿದ್ದರಿಂದ ಪರ್ಯಾಲೋಚಿಸಲು ಈ ಸಭೆ ಜರಗಿತು. ಈ ನಿರ್ಣಯದ ಕುರಿತು ನಗರ ಸಭಾಧಿಪತಿಗಳು ಬರೆದ ಪತ್ರವನ್ನು ಈ ಸಭೆಯು ಸರ್ವಾನುಮತದಿಂದ ಪುಷ್ಟೀಕರಿಸಿ ಮಂಜೂರು ಗೊಳಿಸಿತು.

ಹಿಂದೀ ಪರೀಕ್ಷೆಗಳು— ಮೈಸೂರು ಹಿಂದೀ ಪ್ರಚಾರ ಪರಿಷತ್ತಿನ ಮುಂದಿನ ಪರೀಕ್ಷೆಗಳು ಸಪ್ಟಂಬರ ಮೊದಲನೆಯವಾರದಲ್ಲಿ ನಡೆಯಲಿವೆ. ಇವುಗಳಲ್ಲಿ ಉಡುಪಿ ಕೇಂದ್ರದಲ್ಲಿ ಪ್ರವೇಶ ಬಯಸುವ ಅಭ್ಯರ್ಥಿಗಳು ಜೂನ್ ತಿಂಗಳ ಅಂತ್ಯದೊಳಗೆ ತಮ್ಮ ಅವೇದನಾ ಪತ್ರಗಳನ್ನು ನಿಶ್ಚಿತ ಶುಲ್ಕದೊಡನೆ ಪ್ರಧಾನ ಕಾರ್ಯದರ್ಶಿ, ಹಿಂದೀ ಪ್ರಚಾರ ಪರಿಷತ್, ಸಂತೆಕಟ್ಟೆ, ಉಡುಪಿ ಇವರಿಗೆ ತಲುಪಿಸಬೇಕು. ವಿಲಂಬ ಶುಲ್ಕದೊಡನೆ ಕಳಿಸುವ ಅಂತಿಮ ತಾರೀಕು ಜುಲೈ 15 ಆಗಿರುತ್ತದೆ.

ಜಮೀನುದಾರ ಮಂತ್ರಿಗಳು

ಮೈಸೂರು ಮಂತ್ರಿಗಳಲ್ಲಿ ಸದ್ಯ ಕೃಷಿ ಮತ್ತು ಸಮಾಜ ಕಲ್ಯಾಣ ಶಾಖೆಗಳ ಮಂತ್ರಿಗಳಾದ ರಾಚಯ್ಯನವರು ಮಾತನಾಡುವುದು ತುಂಬ. ಅವರು ಭಾಷಣ ಮಾಡುತ್ತ ಮಾಡುತ್ತ ಅದರಲ್ಲೇ ತನ್ಮಯರಾಗಿ ಹೋಗುತ್ತಾರೆ; ಆಗ ಕೆಲವೊಮ್ಮೆ ಅಪ್ರಿಯವಾದ ಸತ್ಯವೂ ಅವರ ಬಾಯಿಂದ ಹೊರಬರುತ್ತದೆ. ಬಳ್ಳಾರಿಯಲ್ಲಿ ಇತ್ತೀಚೆಗೆ ಮಾತಾಡಿದ ಇವರು ಭೂಸುಧಾರಣೆ ಇನ್ನೂ ಜ್ಯಾರಿಯಲ್ಲಿ ಬಾರದಿರಲು ಜಮೀನುದಾರರಾಗಿರುವ ಮಂತ್ರಿಗಳ ಉದಾಸೀನ ಧೋರಣೆಯೇ ಕಾರಣವೆಂದೂ ಘೋಷಿಸಿದರು. ತನ್ನ ಶಾಖೆಯಲ್ಲಿ ಒಕ್ಕಲುತನದ ಉಪಕರಣ ಮತ್ತು ಗೊಬ್ಬರಗಳ ಪೂರೈಕೆ ಸರಿಯಾಗಿ ನಡೆಯದಿರುವುದಕ್ಕೆ ವಿವಿಧಖಾತೆಗಳಲ್ಲಿ ಪರಸ್ಪರ ಹೊಂದಾಣಿಕೆಯಿಲ್ಲದಿರುವುದೇ ಕಾರಣವೆಂದು ಜಾರಿಸಿಕೊಂಡು ಇದರ ಭಾರವನ್ನು ಇತರ ಮಂತ್ರಿಗಳ ತಲೆಯ ಮೇಲೆ ಹೊತ್ತು ಹಾಕಿದರು. ಇನ್ನೆರಡೇ ವರ್ಷಗಳಲ್ಲಿ ದೇಶವು ಸಮೃದ್ಧವಾಗುವುದರಿಂದ ಈಗಿನ ಕೊರತೆಗಳು ದೂರಾಗುವುದೆಂದು ಭವಿಷ್ಯವನ್ನು ನುಡಿದರು. ಅನಂತರವೇ ಸರಕಾರದ ಶಾಖೆಗಳಲ್ಲಿ ಹೊಂದಾಣಿಕೆ ಹುಟ್ಟಿದರೆ ಸಾಕು ಎಂದು ಮಾತ್ರ ಪುಣ್ಯಕ್ಕೆ ಹೇಳಲಿಲ್ಲ!

ನಿಜಲಿಂಗಪ್ಪರ ಹೇಳಿಕೆ

ನಮ್ಮ ರಾಜ್ಯದಲ್ಲಿ ಮಾತ್ರವಲ್ಲ ಇಡಿಯ ರಾಷ್ಟ್ರದಲ್ಲಿಯೇ ಚಿರ ಪರಿಚಿತರಾದ ಶ್ರೀ ನಿಜಲಿಂಗಪ್ಪನವರು ಉನ್ನತ ಅಭಿಪ್ರಾಯಪಡುವವರಲ್ಲಿ ಒಬ್ಬರು. ರಾಜ್ಯ ಕಾಂಗ್ರೆಸ್ಸು—ಸರಕಾರಗಳ ಸಂಘರ್ಷಣೆಯವೇಳೆ ಅವರು ಕೆಲವರ ಅಪಕೃಪೆಗೆ ಪಾತ್ರರಾಗಿದ್ದರೂ ಈಗದು ಸರಿ ಹೊಂದಿರುವುದಕ್ಕೆ ಇವರೂ ಕಾರಣರು. ರಾಜ್ಯದಲ್ಲಿ ಸಾಮಾಜಿಕ ಪರಿಸ್ಥಿತಿ, ಜಾತಿ ಧರ್ಮಗಳ ತಳಹದಿಯಲ್ಲಿ ಹಿಂದುಳಿದವರನ್ನು ನಿರ್ಧರಿಸಬಾರದು ಆರ್ಥಿಕ ತಳಹದಿಯೇ ಇದಕ್ಕೆ ಆಧಾರವಾಗಬೇಕು ಎಂಬುದನ್ನಿವರು ಸಮರ್ಥಿಸುತ್ತಾರೆ. ರಾಜ್ಯದಲ್ಲಿ ಡಾಕ್ಟರರ ಅಭಾವವಿದೆಯೆಂದು ಎಲ್. ಎಂ. ಪಿ. ಅಭ್ಯಾಸಕ್ರಮವನ್ನು ಮರಳಿ ತರುವುದಕ್ಕಿಂತ ಸಾಮಾನ್ಯ ಅಷ್ಟೇ ವೆಚ್ಚ ಬರುವ ಮೆಡಿಕಲ್ ಕಾಲೇಜುಗಳನ್ನೇ ತೆರೆಯಬೇಕು ಎಂದಿವರು ಹೇಳುತ್ತಾರೆ.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R.E.P. 108/61 O.S. 316/60

ಎಮ್. ಸಂಜೀವ ಶೆಟ್ಟಿ

—ವಾದಿ ಅರ್ಜಿದಾರ

ಎ. ಕೆ. ನಾರಾಯಣ ಭಂಡಾರಿ— ವೆಂಕಪ್ಪ ಭಂಡಾರಿ ಮಗ—ಮೂಜಿಗ್ರಾಮ ಬಂಟ್ವಾಳ ತಾಲೂಕು. —ಪ್ರತಿವಾದಿ-ಎದುರಿಗೆ

ನಿಮ್ಮನ್ನು ವಾರಾಂಟಿನಲ್ಲಿ ಹಿಡಿಯ ಬೇಕಾಗಿ ಅರ್ಜಿದಾರ ಮಾಡಿದ ಮೇಲಿನ ಅಮಲ್ದಾರಿಯ ನೋಟೀಸು ಬಗ್ಗೆ ತಾ. 28—6—61ಕ್ಕೆ ಇಟ್ಟಿರುವುದರಿಂದ ನಿಮ್ಮ ಆಕ್ಷೇಪಣೆಗಳಿದ್ರೆ ನೀವು ಆ ದಿನ ಬೆಳಗ್ಗೆ ಗಂಟೆ 11ಕ್ಕೆ ಈ ಕೋರ್ಟು ಮುಂದೆ ಹಾಜರಾಗಿ ಉಪಪಡಿಸದಿದ್ರೆ ನಿಮ್ಮನ್ನು ಶಿಸ್ತ್ಯಾ ಮಾಡಿ ತೀರ್ಮಾನಿಸಲಾದೀತೆಂತ ಈ ಮೂಲಕ ತಿಳಿಸೋಣಾಗಿಯದೆ

(Sd) K. R. Shenoy
Advocate for petr.

ಪುತ್ತೂರು, ತಾ. 5—6—61

ಕಾದಂಬರಿ ಪುಸ್ತಕಗಳು

ಅಳಿದ ಮೇಲೆ (ಹೊಸ ಕಾದಂಬರಿ)	2_75
ಪಂಚಯಜ್ಞ (ಕಾದಂಬರಿ)	2_50
ನಮ್ಮ ಸುತ್ತಲಿನ ಕಡಲು	1_75
ಪರಮಾಣು—ಇಂದು—ನಾಳೆ	3_00

ಸಿಗುವ ಸ್ಥಳ:
ನವಭಾರತ ಬುಕ್ ಡಿಪೊ, ಉಡುಪಿ.

ಔದ್ಯೋಗಿಕ ಸಾಮ್ರಾಜ್ಯ

ವಿಶಾಲ ಔದ್ಯೋಗಿಕ ಸಾಮ್ರಾಟ - ಬಾಟಾ

ಪ್ರಶಾಸನಿಕ ಸಾಮ್ರಾಜ್ಯಗಳು ಕ್ಷೀಣಗೊಳ್ಳುತ್ತ ಬರುತ್ತಿರುವಾಗ ಬಾಟಾ ತನ್ನ ಔದ್ಯೋಗಿಕ ಸಾಮ್ರಾಜ್ಯವನ್ನು ವಿಸ್ತರಿಸುತ್ತ ಬರುತಿದ್ದಾನೆ. ಪ್ರಪಂಚದ ಪ್ರಧಾನ ದೇಶಗಳಲ್ಲಿ ಈತನ ಕಾರಖಾನೆಗಳಿವೆ; ದಿನಕ್ಕೆ ೧೦ ಲಕ್ಷ ಜೋಡುಗಳಿಲ್ಲಿ ತಯಾರಾಗುತ್ತಿವೆ.

"ಬಾಟಾ" ಎಂಬ ಹೆಸರನ್ನು ಕೇಳದವರು ಅತಿವಿರಳ. ನೀವು ಜೋಡು ಮೆಟ್ಟುವ ಅಭ್ಯಾಸವಿಲ್ಲದವರಾದರೆ, ಆ ಮಾತು ಬೇರೆ! ಇಲ್ಲವಾದರೆ ನಿಶ್ಚಯವಾಗಿಯೂ ನೀವು ಒಂದಲ್ಲ ಒಂದು ದಿನ ಬಾಟಾ ಜೋಡನ್ನು ಮೆಟ್ಟಿರಬಹುದು. "ಬಾಟಾ" ಎಂದರೆ ಯಾರು, ಯಾರ ಹೆಸರದು ಎಂಬು ನಿಮಗೆ ಗೊತ್ತಿರಲಾರದು.

ಇಂದಿಗೆ ೬೬ ವರ್ಷಗಳಿಗೆ ಮೊದಲಿನ ಕತೆ. ಚೆಕೊಸ್ಲೊವಾಕಿಯದಲ್ಲಿ ಒಬ್ಬ ಜೋಡು ಹೊಲಿಯುವ ಪುಟ್ಟದೊಂದು ಕಾರಖಾನೆಯನ್ನು ತೆರೆದಿದ್ದ. ಅದರ ಮಾಲಿಕನೇ "ಬಾಟಾ". ಈ ಬಾಟಾನ ಮೊಮ್ಮಗ ಟಾಂಬಾಟನು ಕೆನೆಡದಲ್ಲಿದ್ದಾನೆ. ಅಲ್ಲಿನ ನಾಗರಿಕತೆಯನ್ನೂ ಈತ ಸ್ವೀಕರಿಸಿದ್ದಾನೆ. ಅಲ್ಲಿಂದಲೇ ಬಾಟಾ ತನ್ನ ವಿಶಾಲ ಔದ್ಯೋಗಿಕ ಸಾಮ್ರಾಜ್ಯದ ಮೇಲ್ವಿಚಾರಣೆ ನಡೆಸುತಿದ್ದಾನೆ.

ಟಾಂ ನ ಅಜ್ಜ ಚೆಕೊಸ್ಲೊವಾಕಿಯಾದ ಒಬ್ಬ ಸಮಗಾರನಾಗಿದ್ದ. ಹತ್ತು ವರ್ಷಗಳ ವರೆಗೆ ಜ್ಲಿನ್ ಎಂಬ ಹೆಸರಿನ ಹಳ್ಳಿಯಲ್ಲಿ ಜೋಡು ಹೊಲಿಯುವುದರಲ್ಲಿಯೇ ಕಾಲ ಕಳೆದ. ಈತ, ಥಾಂಸನ್ ಬಾಟಾನೊಡನೆ ಸ್ವಲ್ಪ ಹಣ ಕೂಡಿದೊಡನೆ ಐನೂರು ರೂಪಾಯಿಗಳ ಬಂಡವಾಳದಿಂದಿ ಒಂದು ಫೇಕ್ಟರಿ ತೆರೆದನು. ಈ ಕಾರಖಾನೆ ಮೊತ್ತಮೊದಲು ಪುಟ್ಟ ಕೊಠಡಿಯೊಂದರಲ್ಲಿತ್ತು. ಬಹಳ ಕಷ್ಟದಿಂದ ಇಲ್ಲಿ ನಾಲ್ಕೈದು ಜನರು ಕುಳಿತುಕೊಳ್ಳಬಹುದಿತ್ತು. ಕಾಲಕ್ರಮದಲ್ಲಿ ಥಾಂಸನ್ ಬಾಟಾನ ಅದೃಷ್ಟ ಖುಲಾಯಿಸಿತು. ಜ್ಲಿನ್ ಹಳ್ಳಿಯು ಉದ್ಯಮದ ನಗರವಾಗಿ ಬದಲಾಗುತ್ತ ಬಂತು. ಮೆಟ್ಟಿನ ಕಾರಖಾನೆಗೆ ಸಂಬಂಧವುಳ್ಳ ೪೦ ಸಾವಿರ ಜನರೀಗ ಅಲ್ಲಿ ವಾಸಿಸುತ್ತಾರೆ. ಥಾಂಸನ್‌ನ ನಂತರ ಆತನ ಮಗ ಕಾರ್ಯ ನಿರ್ವಹಿಸಿದನು.

ಸನ್ ೧೯೩೨ರಲ್ಲಿ ವಾಯು ದುರ್ಘಟನೆಯೊಂದರಲ್ಲಿ ಟಾಂ ಮೃತ್ಯುಮುಖನಾದನು. ಆಗ ಟಾಮನ ಮಗ ಜೂನಿಯರ್ ಟಾಂ ಬಹಳ ಚಿಕ್ಕವನಾಗಿದ್ದನು. ಇದರಿಂದಾಗಿ, ಇವನ ಚಿಕ್ಕಪ್ಪ ಜಾನ್ ಬಾಟಾನು ಆತನ ಸಂರಕ್ಷಕನಾದನು. ಆದರೆ, ಮುಂದೆ ಈತನೇ ಎಲ್ಲವನ್ನೂ ವಂಚಿಸುವ ಹವಣಿಕೆಯಲ್ಲಿದ್ದನು. ಟಾಂ ಕೆಲಸ ನಿರ್ವಹಿಸ ತೊಡಗಿದೊಡನೆಯೇ ಜಾನ್ ಉತ್ತರ ಅಮೆರಿಕೆಯಲ್ಲಿ ಹಲವು ನಗರಗಳಲ್ಲಿ ಬಾಟಾಕ್ಕೆ ಎದುರಾದ ಮೆಟ್ಟುಗಳನ್ನು ತಯಾರಿಸುವ ಯೋಜನೆ ಕೈಗೊಂಡನು. ಆದರೆ, ಅದು ಅಸಫಲವಾಯಿತು.

ತನ್ನ ಜೀವಾವಧಿಯಲ್ಲಿ ಟಾಮನು ಪ್ರಭಾವಶಾಲಿಯಾಗಿದ್ದನು. ಯುರೋಪಿನ ದೊಡ್ಡ ದೊಡ್ಡ ಆಡಳಿತೆದಾರರೂ ಸಾಮ್ರಾಟರೂ ಅವರಿಗೆ ಪರಿಚಿತರಾಗಿದ್ದರು. ಒಂದು ಬಾರಿ ಸ್ವೀಡನ್ನಿನ ಸರಕಾರವು ವಿದೇಶಗಳಿಂದ ಬರುವ ಮೆಟ್ಟುಗಳಮೇಲೆವಿಶೇಷಕರ ಹೇರಿತಂತೆ. ಇದರ ಪ್ರತ್ಯಕ್ಷ ಪ್ರಭಾವವು ಬಾಟಾನ ಮೇಲೆ ಬಿತ್ತು. ಆತ, ನೇರಾಗಿ ಸ್ವೀಡನ್ ಅಧಿಪತಿ ಗುಸ್ತಾವರಿಗೆ ಫೋನ್ ಮಾಡಿದರು. ಇದರಿಂದಾಗಿ, ಟಾಂ ಮತ್ತು ಗುಸ್ತಾವರಲ್ಲಿ ಮೈತ್ರಿ ಬೆಳೆಯಿತು; ಶೀಘ್ರವಾಗಿಯೇ ಸ್ವೀಡನ್ನಿನಲ್ಲಿ ಬಾಟಾನ ಒಂದು ದೊಡ್ಡ ಕಾರಖಾನೆ ತೆರೆಯಲ್ಪಟ್ಟಿತು.

ಇಂದಿಗೂ ಟಾಂಬಾಟಾನ ಮಗ ಜೂನಿಯರ್ ಟಾಂ ಬಾಟಾನು ವಿಶಾಲ ಬಾಟಾ ಸಾಮ್ರಾಜ್ಯದ ಶಾಸಕನಾಗಿದ್ದಾನೆ. ೨೭ ದೇಶಗಳಲ್ಲಿ ಬಾಟಾನ ಕಾರಖಾನೆಗಳು ಮತ್ತು ಅಂಗಡಿಗಳಿವೆ. ಕಲಕತ್ತೆಯ ಸಮೀಪದಲ್ಲಿ ಬಾಟಾ ನಗರದ ಸ್ಥಾಪನೆಯು ಸ್ವರ್ಗೀಯ ಟಾಂಬಾಟಾರಿಂದಾಯಿತು. ಇದಕ್ಕೆ ಮೊದಲಲ್ಲಿ ಕೇವಲ ಅರಣ್ಯವಿತ್ತು. ಪಾದರಕ್ಷೆ ನಿರ್ಮಾಣವಾಗುವ ಈ ನಗರದಲ್ಲಿ ಈಗ ಒಂದು ಲಕ್ಷ ಜನರಿದ್ದಾರೆ. ಚೆಕೊಸ್ಲೊವಾಕಿಯಾದಲ್ಲಿ ಸಾಮ್ಯವಾದಿ ಪ್ರಶಾಸನವು ಸಂಸ್ಥಾಪಿತವಾದ ಮೇಲೆ ಜ್ಲಿನ್‌ನ ವಿಶಾಲ ಮೆಟ್ಟಿನ ಕಾರಖಾನೆಯನ್ನು ರಾಷ್ಟ್ರೀಕರಣಗೊಳಿಸಲಾಯ್ತು. ಇನ್ನೂ ಕೆಲವು ಸಾಮ್ಯವಾದೀ ರಾಷ್ಟ್ರಗಳಲ್ಲಿದ್ದ ಬಾಟಾನ ಕಾರಖಾನೆಗಳು ರಾಷ್ಟ್ರೀಕೃತವಾಗಿವೆ. ಆದರೆ ಇಂದಿಗೂ ಬಾಟಾನಸಾಮ್ರಾಜ್ಯವುಅತಿವಿಶಾಲವೆಂಬಂತೆಯೇ ಬೆಳೆದು ಬಂದಿದೆ. ಬ್ರಿಟನು ಫ್ರಾನ್ಸು, ಸ್ವೀಡನ್, ನಾರ್ವೆ, ಅಮೆರಿಕೆ, ಕೆನೆಡಾ,] ಮೊದಲಾದ ೨೭ದೇಶಗಳಲ್ಲಿ ಬಾಟಾನ ಕಾರಖಾನೆಗಳಿವೆ ಅಂಗಡಿಗಳಿವೆ ಈ ಕಾರಖಾನೆಗಳಲ್ಲಿ ಪ್ರತಿದಿನ ೧೦ ಲಕ್ಷ ಜೋಡುಗಳು ನಿರ್ಮಾಣವಾಗುತ್ತವೆ.

ರವೀಂದ್ರವಾಣಿ

(೫ನೇ ಪುಟದಿಂದ)

ಧ್ಧಿವಂತಿಕೆ ಮತ್ತು ಪ್ರೇಮ, ಇವುಗಳಗೆ ತಕ್ಕ ಬೆಲೆಯನ್ನು ಕೊಡುವುದರ ರೂಪವೇ ಈ ಕಷ್ಟವಾಗಿರುವುದು" ಎಂಬುದನ್ನು ತಿಳಿದುಕೊಳ್ಳುತ್ತಾನೆ.

ಕಷ್ಟದಲ್ಲಿ ಪೂರ್ಣತೆಯ ಆನಂದದ ವೃದ್ಧಿ ಮತ್ತು ಅಸೀಮ ಭಾವನೆಗಳು ಲಕ್ಷಣ ಬದ್ಧವಾಗಿ ಸೂಕ್ಷ್ಮ ರೂಪದಲ್ಲಿರುತ್ತವೆ. ಆದರೆ ನಾವು ಕೇವಲ ಸ್ವಾರ್ಥ ಸಾಧನೆಗಾಗಿ, ಕಷ್ಟಗಳನ್ನು ಅನುಭವಿಸಿದರೆ, ಆಗ ನಾವು ಕಷ್ಟಕ್ಕೆ ಸರಿಯಾದ ಬೆಲೆ ಕೊಡದೆ, ಅದನ್ನು ಅಪವಿತ್ರಗೊಳಿಸಿದಂತಾಗುತ್ತದೆ. ಹೀಗೆ ಮಾಡಿದಾಗ ಅದರ ಪ್ರತಿಫಲವು ನಮಗೆ ದುಃಖದ ರೂಪದಿಂದ ಲಭಿಸುವುದು.

ಪುಸ್ತಕ ವಿಮರ್ಶೆ

[ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ.— ಸಂ. ನ.

ಗುರುದೇವ ರವೀಂದ್ರನಾಥ ಠಾಕೂರ್‌ರ ಜೀವನ ಪರಿಕ್ರಮ—ಲೇಖಕರು: ಪಂಡಿತ್ ಬಿ. ಲಕ್ಷ್ಮಣ ದೇವ ವಿದ್ಯಾರ್ಥಿ ಪ್ರಕಾಶಕರು: ಸದ್ಧರ್ಮ ಪ್ರಚಾರಕ ಗ್ರಂಥಮಾಲೆ, ಮಂಗಳೂರು. ಪುಟಗಳು: ೩೦. ಬೆಲೆ ೭೫ ನಯೇ ಪೈಸೆ

ಗುರುದೇವರ ಶತ ಸಾಂವತ್ಸರಿಕೋತ್ಸವದ ಸದವಸರದಲ್ಲಿ ಅವರ ಜೀವನ ಚರಿತ್ರೆಯನ್ನು ಸಂಕ್ಷಿಪ್ತವಾಗಿ ತಿಳಿಸುತ್ತದೆ. ಈ ಪುಸ್ತಕ. ಕವೀಂದ್ರ ರವೀಂದ್ರರ ವಿಶ್ವವಿಶಾಲ ವ್ಯಕ್ತಿತ್ವವನ್ನು ಅರಿಯದರೆ ಬಹುದಾದರೂ ಕೇಳದವರು ವಿರಳವೇ. ತಮ್ಮ ವಿಶ್ವಮಾನ್ಯ ಜೀವನ ಪರಿಕ್ರಮದಿಂದಲೇ ಇವರು ವಿಶ್ವದ ಕಣ್ಮಣಿಯಾಗಿದ್ದಾರೆ. ಸ್ವಯಂ ಶಾಂತಿನಿಕೇತನ ಹಾಗೂ ವಿಶ್ವ ಭಾರತಿಗಳನ್ನು ಸಂದರ್ಶಿಸಿದ ಶ್ರೀ ಪಂಡಿತ ಲಕ್ಷ್ಮಣದೇವ ವಿದ್ಯಾರ್ಥಿಯವರು ಸ್ವಲ್ಪ ದರದಲ್ಲಿ ಗುರುದೇವರ ಬಹುಮುಖ ಜೀವನವನ್ನು ಚಿತ್ರಿಸುವ ಸಾಹಸವನ್ನು ಮಾಡಿ ಯಶಸ್ವಿಯಾಗಿದ್ದಾರೆ. ಕನ್ನಡದಲ್ಲಿ ಗುರುದೇವರ ಜೀವನದ ಬಗ್ಗೆ ಹುಟ್ಟಿದ ಗ್ರಂಥಗಳು ಅತೀವ ವಿರಳವಾಗಿರುವಾಗ, ಕನ್ನಡಿಗರು ಈ ಪುಟ್ಟ ಸುಂದರ ಪುಸ್ತಕವನ್ನು ಮೆಚ್ಚುವುದರಲ್ಲಿ ಸಂದೇಹವಿಲ್ಲ. ಕೆಲವೊಂದು ಅನರ್ಥಕಾರಿ ಅಚ್ಚಿನ ದೋಷಗಳು (ಉದಾ; ತ್ರಿಕಾಲ ಬಾಧಿತವೆಂಬುದು (ತ್ರಿಕಾಲಾಭಾದಿತದ ಬದಲು) ಉಳಿದಿರುವ ಕುಂದನ್ನುಳಿದರೆ, ಸುಂದರ ಆಕರ್ಷಕವಾದ ಮುದ್ರಣ ನಮ್ಮನ್ನು ಸೂರೆಗೊಳ್ಳುತ್ತದೆ.

ಭಗವಾನ್ ಶ್ರೀಕೃಷ್ಣ-ಲೇಖಕರು:- ಶ್ರೀ ಸೀತಾನದಿ ಗಣಪಯ್ಯ ಶೆಟ್ಟಿ. ಪ್ರಕಾಶಕರು: ಸುಬೋಧ ಸಾಹಿತ್ಯಮಾಲೆ, ಹಿರಿಯಡಕ, ಪುಟಗಳು: ೬೨. ಬೆಲೆ: ರೂ. ೦—೭೫.

ಸುಪ್ರಸಿದ್ಧ ಯಕ್ಷಗಾನ ಅರ್ಥಧಾರಿಗಳೂ ಯಕ್ಷಗಾನ ಕೃತಿ ರಚಯಿತರೂ ಆದ ಶ್ರೀ ಗಣಪಯ್ಯ ಶೆಟ್ಟರು ತನ್ನ ಇತರ ಸಾಹಿತ್ಯ ಕೃತಿಗಳಿಂದಲೂ ಕನ್ನಡಿಗರಿಗೆ ಸುಪರಿಚಿತರಾಗಿದ್ದಾರೆ. ಭಾಗವತದ ಕಥಾಪುರುಷನಾದ ಶ್ರೀಕೃಷ್ಣನು ವಿಷ್ಣುವಿನ ಅವತಾರವೆಂಬ ಕಲ್ಪನೆಯು ಅಡಿಗಲ್ಲಿನ ಮೇಲೆ ಆತನ ಜೀವನದ ಪ್ರತಿಘಟನೆ ನಿಲ್ಲುತ್ತದೆ. ಅಸಾಧಾರಣ ಕಾರ್ಯಗಳನ್ನು ಮಾಡಿಸಿದ ಆತ ದೇವನೇ ಎಂದು ನಮ್ಮ ಪೂರ್ವಜರು ದೃಢವಾಗಿ ನಂಬಿದ್ದರು, ನಾವೂ ನಂಬಿ ಬಂದಿದ್ದೇವೆ. ಕನ್ನಡದಲ್ಲಿ ಭಾಗವತದ ವಿವಿಧ ಕಥಾ ಭಾಗಗಳನ್ನು ಎತ್ತಿಕೊಂಡು ಬರೆದ ಗ್ರಂಥಗಳೇ ಹೆಚ್ಚು. ಶ್ರೀ ಕೃಷ್ಣಾವತಾರದ ಕಥೆಯು ಕೇಳುವುದಕ್ಕೆ ಅತಿರಂಗಾಗಿರುವುದರಿಂದಲೋ ಏನೋ ಅದು ಬಹಳ ಜನಪ್ರಿಯವಾಗಿದೆ. ಪ್ರಾಚೀನ ಕನ್ನಡ ಕವಿಗಳೂ ಈ ತನ್ನನ್ನೇ ಕಥಾ ನಾಯಕನನ್ನಾಗಿಸಿ ಕಾವ್ಯ ಬರೆದಿದ್ದಾರೆ. ಹೊಸ ಕನ್ನಡದಲ್ಲಿಯೂ ಶ್ರೀಕೃಷ್ಣ ಶಾಸ್ತ್ರಿಗಳು ಶ್ರೀಕೃಷ್ಣನ ಬೃಹತ್ ಗ್ರಂಥವೊಂದನ್ನು ಬರೆದಿದ್ದಾರೆ. ಆದರೆ, ಎಳೆಯರಿಗೂ ತಿಳಿಯಲು ಅನುಕೂಲವಾಗುವಂತೆ ಸರಳವಾದ ತಿಳಿಗನ್ನಡ ಭಾಷೆಯಲ್ಲಿ ಬರೆದಿರುವ ಶ್ರೀ ಶೆಟ್ಟರ ಪುಸ್ತಕದ ಪ್ರಮಾಣವೂ ಮಿತಿಯಾಗಿದೆ. ಪಂಡಿತರೊಂದಿಗೆ ಪಂಡಿತೇತರರೂ ತಲೆದೂಗುವಂತಿದೆ, ಆಕರ್ಷಕವಾಗಿದೆ. ಲೇಖಕರ 'ಜೀನ್ ವಾಲ್ಜೀನ್', ಪುಸ್ತಕವು ಪಠ್ಯ ಪುಸ್ತಕವಾಗುವ ಗೌರವಕ್ಕೆ ಪಾತ್ರವಾದಂತೆಯೇ ಈ ಭಗವಾನ್ ಶ್ರೀ ಕೃಷ್ಣನೂ ಆ ಸ್ಥಾನವನ್ನಡರುವ ಯೋಗ್ಯತೆ ಪಡದಿದೆ. ವಿಷಯ—ಭಾಷೆ—ಕಥನಶೈಲಿಯೆಲ್ಲವೂ ಒಂದಕ್ಕೊಂದು ಹೊಂದಿಕೊಂಡು ಪುಸ್ತಕದ ಮೌಲ್ಯವನ್ನು ಹೆಚ್ಚಿಸಿವೆ.

—ಗೋರಾ.

ನವಯುಗ'ಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ

Navayuga Enterprise Ltd.,

Registered Office: PALUKOTE, UDIPI·

NOTICE·

The register of members and Share transfer books of the company will remain closed from 10th June to 5th July, 1961 (both days inclusive).

(By order of the Board)

Udipi, **K. Honnayya Shetty,**
Date: 25—5—1961. Managing Director.

ದಿ ವಿಜಯ ಬೇಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ: 1931

ರಿಜಿಸ್ಟರ್ಡ್ ಆಫೀಸು:
ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ ರೋಡ್,
ಮಂಗಳೂರು-3, ಸೌತ್ ಕೆನರಾ.

ಖಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡ 5¼ರ ವರೆಗೆ ಹೆಚ್ಚಿಸಲಾಗಿದೆ.
ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ಪಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸೋಣಾಗುತ್ತದೆ.
ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ.

ಪರಿಚಯ

ಸಫಲ ವಿದೇಶ ನೀತಿಜ್ಞ — ಫೌಜಿ

ಸಂಯುಕ್ತ ಅರಬ ರಾಷ್ಟ್ರದ ವಿದೇಶ ನೀತಿಯನ್ನೇ ಬದಲಾಯಿಸಿದ ವಿದೇಶ ಮಂತ್ರಿ ಫೌಜಿಯವರು ಪೂರ್ವ ಪಶ್ಚಿಮ ರಾಷ್ಟ್ರಗಳಲ್ಲಿ ತಮ್ಮ ದೇಶದ ಬಗ್ಗೆ ಎಲ್ಲರ ಸದ್ಭಾವನೆಯನ್ನೂ ಗಳಿಸಿ ಕೊಡುವ ಸಾಹಸ ಇವರದು.

ಮುಂದಿನ ಸಪ್ಟೆಂಬರ ತಿಂಗಳಲ್ಲಿ ತಟಸ್ಥ ರಾಷ್ಟ್ರಗಳ ಒಂದು ಶಿಖರ ಸಮ್ಮೇಳನವನ್ನು ನಡೆಸುವ ಉದ್ದೇಶದಿಂದ ಕಳೆದ ವಾರ ಕ್ಯಾರೊದಲ್ಲಿ ಪೂರ್ವಭಾವಿ ಸಭೆಯು ಆರಂಭವಾಯಿತು. ಇದರ ಅಧ್ಯಕ್ಷರಾಗಿ ಸಂಯುಕ್ತ ಅರಬ ರಾಷ್ಟ್ರದ ವಿದೇಶ ಮಂತ್ರಿಯಾದ ಡಾ॥ ಮಹಮದ್ ಫೌಜಿಯವರು ಚುನಾಯಿತರಾದರು.

೧೯೫೮ರಲ್ಲಿ ಸಂಯುಕ್ತ ಅರಬ ಗಣರಾಜ್ಯವು ರೂಪುಗೊಂಡನಂತರ ಮೊತ್ತಮೊದಲು ಸ್ಥಾಪಿತವಾದ ಮಂತ್ರಿ ಮಂಡಳಿಯಲ್ಲಿ ಶ್ರೀ ಫೌಜಿಯವರನ್ನು ವಿದೇಶ ಮಂತ್ರಿಯಾಗಿ ನೇಮಿಸಲಾಯಿತು. ಅಂದಿನಿಂದ ಇಂದಿನ ವರೆಗೂ ಇವರು ತನ್ನ ಸ್ಥಾನವನ್ನು ಅಲಂಕರಿಸಿದ್ದಾರೆ. ಡಾ॥ ಫೌಜಿಯವರ ಮಂತ್ರಿತ್ವದಲ್ಲಿ ಸಂಯುಕ್ತ ಅರಬ ರಾಜ್ಯದ ವಿದೇಶ ನೀತಿಯಲ್ಲಿ ಒಂದು ಮುಖ್ಯ ಪರಿವರ್ತನೆಯಾಯಿತು. ಅದಕ್ಕೆ ಮೊದಲು ಗಣರಾಜ್ಯದ ವಿರೋಧೀ ರಾಷ್ಟ್ರಗಳ ಬಗ್ಗೆ ತೀವ್ರ ಕಟು ಧೋರಣೆಯನ್ನು ವಹಿಸಲಾಗುತಿತ್ತು. ಆದರೆ, ಆ ನಂತರ ಮಾತ್ರ ಈ ನೀತಿಯು ಬದಲಾಯಿತು. "ಸರ್ವ ರಾಷ್ಟ್ರಗಳೊಡನೆಯೂ ಮೈತ್ರಿಪೂರ್ಣ ವ್ಯವಹಾರ"ವೆಂಬ ಆದರ್ಶದ ಹಿನ್ನೆಲೆಯಲ್ಲಿ ನೂತನ ವಿದೇಶ ನೀತಿಯು ರೂಪುಗೊಂಡಿತು ಈ ನವನೀತಿಯನ್ನು ಕಾರ್ಯರೂಪಕ್ಕೆ ತಂದ ಯಶಸ್ಸು ಡಾ॥ ಫೌಜಿಯವರ ದೂರದರ್ಶಿತನಕ್ಕೆ ಸೇರಿದುದು.

ಶ್ರೀ ಫೌಜಿಯವರು ಪೂರ್ವ ಮತ್ತು ಪಶ್ಚಿಮ ರಾಷ್ಟ್ರಗಳ ಸ್ನೇಹಿತರು. ಎಲ್ಲರನ್ನೂ ಸುದೃಷ್ಟಿಯಿಂದ ಕಾಣುವ ಶ್ರೇಷ್ಠ ವ್ಯಕ್ತಿತ್ವ ಇವರದು. ಶ್ರೀ ನಸ್ಸೇರರು ತಮ್ಮ ವಿದೇಶ ಮಂತ್ರಿಯ ಚಕ್ಯತೆಯಿಂದ ಮುಗ್ಧರಾಗಿ ಹೋಗಿದ್ದಾರೆ ಪ್ರಪಂಚದಲ್ಲಿ ಸಂಯುಕ್ತ ಅರಬ ರಾಷ್ಟ್ರದ ಬಗ್ಗೆ ಸದ್ಭಾವನೆ ಮತ್ತು ಪರಸ್ಪರ ಸಂಬಂಧವಿಟ್ಟುಕೊಂಡು ರಾಷ್ಟ್ರದ ಧವಳ ಕೀರ್ತಿಯನ್ನು ಪಸರಿಸುವ ಪವಾಡವು ಸಾಧ್ಯವೆನಿಸಿದುದು ಡಾ॥ ಫೌಜೀಯವರಿಂದ ಆದುದರಿಂದಲೇ ನಸ್ಸೇರರ ಕೈಗಳಲ್ಲಿ ಫೌಜೀಯವರ ನೇಮಕದ ನಂತರ ಇಮ್ಮಡಿ ಕಸುವು ಬಂದಿದೆ. ಸಂಯುಕ್ತ ಅರಬ ರಾಷ್ಟ್ರಕ್ಕೆ ಯಾವಾಗಲೂ ಒಂದಲ್ಲ ಒಂದುದಿನ ಪೂರ್ವ ಪಶ್ಚಿಮ ಗುಂಪುಗಳು ಒಂದಾಗಿ ತನ್ನನ್ನು 'ಪ್ರಭಾವಶಾಲಿ' ಪಂಗಡಗಳಲ್ಲಿ ವಿಭಜಿಸಿ ಹಾಕಬಹುದೆಂಬ ಹೆದರಿಕೆಯೂ ಇತ್ತು. ಇದನ್ನು ದೂರಮಾಡುವುದಕ್ಕಾಗಿಯೇ ಭಾರತ, ಯುಗೊಸ್ಲಾವಿಯಾ ಮತ್ತು ಇಂಡೋನೇಶ್ಯ ಮೊದಲಾದ ತಟಸ್ಥ ರಾಷ್ಟ್ರಗಳೊಡನೆ ಸೌಹಾರ್ದವನ್ನು ಬೆಳಸಿಕೊಳ್ಳುವ ಪ್ರಯತ್ನವು ನಡೆಯಿತು. ಈ ಯಶಸ್ವೀ ಪ್ರಯತ್ನದ ಪರಿಣಾಮವಾಗಿ ಈಗ ನಡೆದ ಕ್ಯಾರೊ ಸಮ್ಮೇಳನವು ಸಮಾವೇಶಗೊಂಡಿತು.

ಜಗತ್ತನ್ನೇ ವಿಶ್ವವನ್ನೇ ನಡುಗಿಸಿದ ಸುಯೇಜ ಪ್ರಕರಣದ ವೇಳೆಯೂ ಶ್ರೀ ಫೌಜೀಯವರು ವಿದೇಶ ಮಂತ್ರಿಯಾಗಿದ್ದರು. ಸುಯೇಜದ ಬಗ್ಗೆ ಒಡಂಬಡಿಕೆ ನಡೆಸಲು ಪ್ರಯತ್ನ ನಡೆಯುತ್ತಿರುವಂತೆಯೇ ನಡು ನಡುವೆ ಬ್ರಿಟನ್ನಿನ ಆಗಿನ ಪ್ರಧಾನ ಮಂತ್ರಿ ಶ್ರೀ ಈಡನ್ನರು ವ್ಯಕ್ತಪಡಿಸಿದ ಅಭಿಪ್ರಾಯಗಳಿಂದ ಇವರು ಕ್ರುದ್ಧರಾದರು. ಇವರು ಸ್ಪಷ್ಟವಾಕ್ಯಗಳಿಂದ ಅಂಥೋನಿ ಈಡನ್ನರನ್ನು ಟೀಕಿಸಿನಿಂದಿಸಿದರು. ಇದಾದ ಕೆಲವೇ ಸಮಯಾನಂತರ ಈಡನ್ನರ ಪ್ರಧಾನಿತ್ವ ಜಾರಿಹೋಯಿತು

ಡಾ॥ ಫೌಜೀಯವರು ೬೧ ವರ್ಷ ಪ್ರಾಯದವರು ಕ್ಯಾರೊ, ರೋಮ್ ಮತ್ತು ಲಿವರ್‌ಪೂಲ್ ವಿಶ್ವವಿದ್ಯಾಲಯಗಳಲ್ಲಿ ಇವರು ವಿದ್ಯಾಭ್ಯಾಸ ಪಡೆದರು ಬೇರೆ ಬೇರೆ ರಾಷ್ಟ್ರಗಳಲ್ಲಿ ಜಗತ್ತದರಾಯಭಾರಿಗಳಾಗಿ ಇವರು ತಮ್ಮ ರಾಜಕೀಯ ಜೀವನವನ್ನು ಪ್ರಾರಂಭಿಸಿದರು. ಸಂಯುಕ್ತ ರಾಷ್ಟ್ರದ ಮಹಾಸಭೆಯಲ್ಲಿಯೂ ಇವರು ಜಗತ್ತದ ಪ್ರತಿನಿಧಿ ಮಂಡಳದ ನಾಯಕರಾಗಿ ಸಫಲತೆಗಳಿಸಿದ್ದಾರೆ. ಡಾ॥ ಫೌಜೀಯವರ ನೇತೃತ್ವದಲ್ಲಿ ಸದ್ಯ ನಡೆದ ಕ್ಯಾರೊ ಸಮ್ಮೇಳನವು ಯಶಸ್ವಿಯಾಗುವುದು ಖಂಡಿತ.

ಇತ್ತೀಚೆಗೆ ಭಾರತಕ್ಕೆ ಆಗಮಿಸಿದ ಅಮೇರಿಕದ ಉಪಾಧ್ಯಕ್ಷ ಜೋನ್ಸನ್ನರನ್ನು ಪ್ರಧಾನಿ ನೆಹರೂ, ರಾಧಾಕೃಷ್ಣನ್ ಮೊದಲಾದವರು ಸ್ವಾಗತಿಸಿದರು. ಚಿತ್ರದಲ್ಲಿ ಉಪರಾಷ್ಟ್ರಪತಿ ರಾಧಾಕೃಷ್ಣನ್, ಶ್ರೀಮತಿ ಜೋನ್ಸನ್, ಅಮೆರಿಕದ ಉಪಾಧ್ಯಕ್ಷ ಜೋನ್ಸನ್, ಮತ್ತು ಅಧ್ಯಕ್ಷ ಕೆನೆಡಿಯವರ ಸೋದರಿ ಶ್ರೀಮತಿ ಸ್ಟಿಫನ್ ಸ್ಮಿತ್ ಪ್ರಧಾನಿ ನೆಹರೂ ಮೊದಲಾದವರನ್ನು ಕಾಣಬಹುದು.

ಶಿಶುಪೋಷಣೆ

(೪ನೇ ಪುಟದಿಂದ)

ವ ರಾಷ್ಟ್ರಗಳಲ್ಲಿದ್ದರೂ ಅಲ್ಲಿನ ಮಣ್ಣಿನಲ್ಲಿ ಸೇರಿ ಹೋಗ ಬಹುದು; ಅವರು ತಮ್ಮ ಭಾಷೆ ಮತ್ತು ತಮ್ಮ ಸಂಸ್ಕೃತಿಯನ್ನೂ ಧರ್ಮವನ್ನೂ ಮರೆತು ಬಿಡಬಹುದು— ಎಂಬ ಹೆದರಿಕೆ ಪ್ರೌಢ ಟಿಬೇಟಿಯನ್ನರಿಗಿದೆ.

ಹೀಗಿದ್ದರೂ ಈ ಮಕ್ಕಳಿಗೆ ಸಹಾಯವು ಅವಶ್ಯ ಮತ್ತವರಿಗೆ ಶಿಕ್ಷಣದ ಸೌಲಭ್ಯವೂ ಬೇಕು. ಇತ್ತೀಚೆಗೆ ಒಬ್ಬ ಉದಾರಿಯು ಹತ್ತು ವರ್ಷದ ಇಬ್ಬರು ಟಿಬೇಟೀ ಬಾಲಕರನ್ನು ಡಿಲ್ಲಿಯ ಸ್ಟಿಂಟ್‌ಕ್ಸೇವಿಯರ್ ಶಾಲೆಯಲ್ಲಿ ಸಂಬಳಕೆತ್ತು ಕಲಿಸುವ ವ್ಯವಸ್ಥೆ ಮಾಡಿದ್ದಾರೆ. ಶಾಲೆಯ ಅಧಿಕಾರಿಗಳೂ ಒಬ್ಬ ಬಾಲಕನಿಗೆ ನಿಶ್ಶುಲ್ಕವಾಗಿ ಶಿಕ್ಷಣ ನೀಡಲು ದಾಖಲು ಮಾಡಿಕೊಂಡಿದ್ದಾರೆ. ಈ ಮೂವರೂ ಆಧುನಿಕ ಜಗತ್ತಿನಿಂದ ಸಂಪೂರ್ಣ ದೂರವಿದ್ದ ಒಂದು ಪ್ರದೇಶಕ್ಕೆ ಸೇರಿದವರಾದರೂ ಇವರು ಕಲಿಯುವುದರಲ್ಲಿ ತೀಕ್ಷ್ಣರಾಗಿದ್ದಾರೆ; ನಿರೀಕ್ಷೆಗಿಂತ ಮಿಗಿಲಾಗಿ ಅಭ್ಯಾಸ ಮಾಡುತಿದ್ದಾರೆ

ಅಮೇರಿಕೆಯ ಎರಡು ಕುಟುಂಬದವರು ಒಬ್ಬೊಬ್ಬ ಹುಡುಗನಿಗೆ ಆಶ್ರಯವಿತ್ತು ಅವರ ಪಾಲನೆ ಪೋಷಣೆ ಮತ್ತು ಶಿಕ್ಷಣದ ಭಾರವನ್ನು ಹೊತ್ತಿದ್ದಾರೆ ಇವರು ಪ್ರತಿಯೊಬ್ಬರಿಗೆ ಪ್ರತಿ ಮಾಸ ೧೫ರಿಂದ ೨೦ ಡಾಲರ್ ವೆಚ್ಚಮಾಡುತಿದ್ದಾರೆ ಇವರು ಈ ಹುಡುಗರೊಡನೆ ಪತ್ರ ವ್ಯವಹಾರವನ್ನೂ ಚಿತ್ರವಿನಿಮಯವನ್ನೂ ಮಾಡುತಿದ್ದಾರೆ ವಿದೇಶದಲ್ಲಿದ್ದರೂ ತಮ್ಮ ಸಂಸ್ಕೃತಿಕ ಪರಂಪರೆಯನ್ನು ಮರೆಯದೆ ಉಳಿಸಿಕೊಳ್ಳುವ ಅಭಿಲಾಷೆ ಅವರಲ್ಲಿ ಉದ್ಭವಿಸುವವರಿಗೆ ಹೆಚ್ಚಿನ ಇಲ್ಲವೆ ಎಲ್ಲ ಮಕ್ಕಳೂ ಒಟ್ಟಿಗೆ ಇರುವಂತೆ ವ್ಯವಸ್ಥೆ ಯಾಗುವುದೆಂದು ನಿರೀಕ್ಷೆಯಿದೆ

ಈಗ ಭಾರತದಲ್ಲಿ ನಿರಾಶ್ರಿತರಾಗಿ ಬಂದ ೪,೦೦೦ ಟಿಬೇಟಿಯನ್ ಮಕ್ಕಳಿದ್ದಾರೆ ಅವರಲ್ಲಿ ಒದು ಬರಹದ ವ್ಯವಸ್ಥೆ ದೊರೆಯದವರು ಅದೆಷ್ಟೋ ಮಂದಿಯಿದ್ದಾರೆ.

ಭಾರತವು ತಮಗೆ ಆಶ್ರಯವಿತ್ತು ಎಲ್ಲ ವ್ಯವಸ್ಥೆಯನ್ನೂ ಮಾಡಿಕೊಡುತ್ತಿದೆ. ಮತ್ತು ಹೆಚ್ಚಿನ ಭಾರತೀಯ ಮಕ್ಕಳಿಗೆ ಒದಗಿಸದಿರುವಷ್ಟು ಸೌಲಭ್ಯವನ್ನು ತಮಗೆ ಅದು ಪೂರೈಸಿಕೊಟ್ಟಿದೆ ಎಂಬುದನ್ನು ಧರ್ಮಶಾಲೆಯಲ್ಲಿ ಕಾಲಿಡುವ ಆಗಂತುಕನನ್ನು ಟಿಬೇಟಿನ ಮಕ್ಕಳು ಸ್ವಾಗತಿಸುವಾಗ ಸಂಚಲಿತರಾಗಿ ಉದ್ಗರಿಸುವ "ನಮಸ್ತೆ" ಶಬ್ದವು ಪ್ರತಿಬಿಂಬಿಸುತ್ತದೆ. ಆದರೆ ಪ್ರತಿಧ್ವನಿ ಎಲ್ಲೆಲ್ಲಿಯೂ ವ್ಯಾಪಿಸಿ ಅದನ್ನು ಅನುಮೋದಿಸುತ್ತದೆ

(ಮೂಲ: ಅಮೆರಿಕನ್ ರಿಪೋರ್ಟರ್)

ವಿನಂತಿ

ಚಂದಾದಾರರು ತಮ್ಮ ಬಾಕಿ ಚಂದಾ ಹಣವನ್ನು ದಯಮಾಡಿ ಬೇಗನೆ ಕಳುಹಿಸಿಕೊಟ್ಟು ಪ್ರೋತ್ಸಾಹಿಸುವಂತೆ ವಿನಂತಿ

ಶ್ರೀ ಎ. ಬಿ. ಶೆಟ್ಟಿ
ಸ್ಮಾರಕ ನಿಧಿಗೆ
ಸಹಾಯ ಮಾಡಿರಿ

ಉದಯೋನ್ಮುಖ ಲೇಖಕ ಶ್ರೀ. ಪಿ. ಎನ್. ಹೆಬ್ಬಾರ ('ಸಿರಿಪತಿ')
ಅವರ ನವೀನ ಕೃತಿ—

ಕಪಾಳ ಮೋಕ್ಷ

(ಮುನ್ನುಡಿ— ಡಾ॥ ಟಿ. ಎಂ. ಎ. ಪೈ, ಎಂ. ಬಿ., ಬಿ ಎಸ್.)

ಏಳು ಪ್ರಬಂಧ, ಎಂಟು ಸಣ್ಣ ಕತೆಗಳನ್ನೊಳಗೊಂಡ ಮೌಲಿಕ ಕೃತಿ ನೈಜ ಘಟನೆಗಳ ಆಧಾರದ ಮೇಲೆ ನೆಯ್ದ ವರ್ಣನಾತ್ಮಕ ಪ್ರಬಂಧಗಳಾದರೂ ಸಣ್ಣ ಕತೆಯಷ್ಟೇ ಸ್ವಾರಸ್ಯಪೂರ್ಣವಾಗಿವೆ. ಕತೆಗಳಲ್ಲಿ ಕತೆಗಾರರ ಸಹಜ ಸುಂದರ ಶೈಲಿ, ಸಾಮಾಜಿಕ ನ್ಯಾಯ—ಅನ್ಯಾಯ ಹಾಗೂ ವಿಧಿವಿಲಾಸದ ಸುಳಿವು ಹೊಳವುಗಳನ್ನು ಕಾಣಬಹುದು.

180 ಪುಟಗಳು — ಬಿಳಿ ಕಾಗದ — ಬೆಲೆ ರೂ, 2=00

ರೂ. 2=35 ನ. ಪೈಸೆ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು
ಪುಸ್ತಕ ವ್ಯಾಪಾರಿಗಳಿಗೆ ವಿಪುಲ ಕಮಿಶನ್!

ನವಭಾರತ ಪುಸ್ತಕ ಭಂಡಾರ, ಉಡುಪಿ

ಸ್ವಲ್ಪ ಸ್ವಲ್ಪವಾಗಿ, ಆಲ್ಲೊಮ್ಮೆ ಇಲ್ಲೊಮ್ಮೆ, ನೀವು ಉಳಿಸುತ್ತಿರುವ ಹಣವು
ಬೇಗ ಬೇಗನೆ ವೃದ್ಧಿಗೊಂಡು, ನಿಮ್ಮ ಭವಿಷ್ಯದ ಭದ್ರತೆಯು
ಹೆಚ್ಚೆಚ್ಚಾಗಿ ಪರಿಣಮಿಸುವಂತೆ

ಕೊಪೊರೇಶನ್ ಬೇಂಕು

ನಿಮ್ಮ ಸೇವಿಂಗ್ಸ್ ಬೇಂಕ್ ಎಕೌಂಟುಗಳ ಮೇಲೆ ಇನ್ನು ಮುಂದಕ್ಕೆ
ಸಾಲಿಯಾನ್ ಸೇಕಡಾ 3 ರ ದರದಲ್ಲಿ ನಿಮಗೆ ಬಡ್ಡಿ ಕೊಡುವುವು.

ವಿವರಗಳಿಗೆ ವಿಚಾರಿಸಿರಿ:

ದಿ. ಕೆನರಾ ಬೇಂಕಿಂಗ್ ಕೊಪೊರೇಶನ್ ಲಿಮಿಟೆಡ್

(ಸ್ಥಾಪನೆ: 1906) (ರಿಜಿಸ್ಟರ್ಡ್ ಆಫೀಸು: ಉಡುಪಿ
ಆಡಳಿತ ಆಫೀಸು: ಮಂಗಳೂರು—1

ನಿಮಗೆ ಗೊತ್ತೇ?

ನಾಮ ಪರಿವರ್ತನೆಯ ಮೋಜು

ಹೆಸರು ಪರಿವರ್ತಿಸುವುದೂ ಒಂದು ಬಗೆಯ ಮೋಜು. ಇದಕ್ಕೆ ಹಲವಾರು ಕಾರಣಗಳಿರಬಹುದು. ಆದರೆ, ಜನಪ್ರಿಯತೆಯೇ ಈ ಬಗೆಯ ಪರಿವರ್ತನೆಗೆ ಕಾರಣವೆನ್ನುವವರು ಹೆಚ್ಚು.

ಹೆಸರು ಬದಲಾಯಿಸುವ ಜನರಿರುವುದನ್ನು ನೀವು ಕಂಡಿರಬಹುದು. ಆಗಾಗ ವರ್ತಮಾನ ಪತ್ರಿಕೆಗಳಲ್ಲಿ ತಮ್ಮ ಹೆಸರು ಬದಲಾಯಿಸಲು ನಿರ್ಧರಿಸಿದ ವ್ಯಕ್ತಿಗಳ ವಿಜ್ಞಾಪನೆಯನ್ನು ನೀವು ಓದಿರಲೂ ಬಹುದು. ನಾಮ ಪರಿವರ್ತನೆಯೇನೂ ಹೊಸತಲ್ಲ. ಈ ಮಾತಿಗೆ ಇತಿಹಾಸವೇ ಸಾಕ್ಷಿ. ಸಲೀಮನು ದೆಹಲಿಯ ಸಿಂಹಾಸನವನ್ನೇರಿ ಮಹಾ ರಾಜನಾದಾಗ, ಜಹಾಂಗೀರ ಎಂದು ಹೆಸರಿಟ್ಟುಕೊಂಡನು. ಈಗಿನ ರಶ್ಯದ ಜನಕ ಮತ್ತು ಸಾಮ್ಯವಾದಿಗಳ ನಾಯಕ ಜೋಸೆಫ್‌ವಜಿ ಆರಿವೋನೋವಿಚ್ ನಾಯಕರೆನಿಸಿಕೊಂಡ ನಂತರ, ಸ್ಟಾಲಿನ್ ಎಂಬ ಹೆಸರಿನಿಂದ ವಿಶ್ವ ವಿಖ್ಯಾತರಾದರು, ಲಮಹೀ ಎಂಬ ಹಳ್ಳಿಯ ಧನಪತರಾಯರು ಸಾಹಿತ್ಯಾಕಾಶದಲ್ಲಿ ಮಿನುಗಲು ತೊಡಗಿದೊಡನೆಯೇ ಮುಂಶೀ ಪ್ರೇಮಚಂದ ಎನಿಸಿಕೊಂಡರು.

ನಾಮ ಪರಿವರ್ತನೆಯನ್ನು ಏಕೆ ಮಾಡಿಕೊಳ್ಳ ಬೇಕು? ಜನಪ್ರಿಯತೆಯು ಹೆಸರಿನ ಕಾರಣದಿಂದ ಬರುತ್ತದೆ ಎಂದು ಹೇಳುವವರಿದ್ದಾರೆ. ಸಿನಿಮಾ ಪ್ರಪಂಚದಲ್ಲಿ ಹೆಸರು ಬದಲಾಯಿಸುವ ಪರಿಪಾಠ ಬಂದಿರುವುದು ಇದೇ ಕಾರಣದಿಂದಿರ ಬೇಕು. ದಿಲೀಪ್ ಕುಮಾರ್ ಮತ್ತು ನರ್ಗಿಸರ ಹೆಸರುಗಳಿಂದು ಜನ ಜನಿತವಾಗಿವೆ. ಯಾರಾದರೊಬ್ಬರು ನಿಮ್ಮ ಬಳಿಗೆ ಬಂದು ಯೂಸುಫ್‌ಖಾನ್ ಮತ್ತು ಫಾತಿಮಾ ರಶೀದರ ಅಭಿನಯ ಅತೀವ ಪ್ರಶಂಸನೀಯವಿದೆಯೆಂದರೆ, ನೀವು ವಿಸ್ಮಯ ಚಕಿತರಾಗಿ ಇದಾರ ಬಗ್ಗಿನ ವಿಮರ್ಶೆಯೆಂದು ಮುಖ ಮುಖ ನೋಡುತ್ತೀರಿ. ಡೇನಿಲ್ ಮತ್ತು ಮಾರ್ಲಿನ್ ಮುನ್ರೊರವರು ಇಂದು ಸುವಿಖ್ಯಾತ ಕಲಾವಿದರಾಗಿದ್ದಾರೆ. ಇವರ ಬಗ್ಗೆ ಡೇವಿಡ್ ಕೊಮೆಂಸ್ಕಿ ಅಥವಾ ನೋರ್ಮಾ ಜೀನ್ ಬೇಲರ್ ಎಂಬ ಹೆಸರಿನ ಮೇಲೆ ಚರ್ಚೆ ನಡೆದರೆ, ಜನರು ಗುರುತು ಹಿಡಿಯುವುದಕ್ಕೂ ಅಸಮರ್ಥರಾಗುತ್ತಾರೆ.

ಇಂಗ್ಲೆಂಡಿನ ಒಬ್ಬಾಕೆ ನವಯುವತಿಯು ಒಂದು ವರ್ಷದಲ್ಲಿ ಮೂರು ಬಾರಿ ಹೆಸರು ಬದಲಾಯಿಸಿದಳು. ಆಕೆಯ ಹೆಸರು ಎಲಿಜಬೆಥ್ ವ್ಯಾಲೆಟ್ ಥಾಮ್ಸನ್ ಎಂದಿತ್ತು. ಆಕೆಯ ಅತಿಪರಿಚಿತನೊಬ್ಬ ಮಡಿದು ಹೋದನು. ಹೋಗುವಾಗ, ತನ್ನ ಲಕ್ಷಾಂತರ ಸಂಪತ್ತನ್ನು ಆಕೆಗೆ ಕೊಡುವುದಾಗಿಯೂ ಆದರೆ, ಆಕೆ ತನ್ನ ಹೆಸರನ್ನು ಇನ್‌ಗೀ ಎಂದು ಬದಲಾಯಿಸಿಕೊಳ್ಳಬೇಕೆಂದೂ ಕೇಳಿ ಕೊಂಡಿದ್ದನು. ಫಲಸ್ವರೂಪವಾಗಿ ಆಕೆಯ ಹೆಸರು ಎಲಿಜಬೆತ್ ವ್ಯಾಲೆಟ್ ಎಂದಾಯಿತು. ಅದೇ ವರ್ಷ ಆಕೆಯ ವಿವಾಹವೂ ಆಯಿತು. ಇದರ ನಂತರ ಆಕೆ ಶ್ರೀಮತಿ ಎಲಿಜಬೆಥ್ ಥಲಿಂಗ್‌ಟನ್ ಆದಳು. ಹೀಗೆ ಒಂದೇ ವರ್ಷದಲ್ಲಿ ಮೂರನೆಯ ಹೆಸರು ಇಡಬೇಕಾದ ಪರಿಸ್ಥಿತಿ ಆಕೆಗೊದಗಿತು.

೨೦ ವರ್ಷಗಳಿಗೆ ಮೊದಲು ಟೆಲಿಫೋನಿಯೊದಲ್ಲಿ ಡಾಕ್ಟರುಗಳು ಹೆಸರು ಬದಲಾಯಿಸ ಬಾರದೆಂದು ಕಾನೂನು ದ್ವಾರಾ ವಿಧಿಸಲಾಯಿತು. ಡಾ| ಎಡ್ಗರ್ ಪಾರ್ಕರನೇ ಇದಕ್ಕೆ ಮೂಲಕಾರಣನಾದವನು. ಈ ಮಹಾಶಯ ತನ್ನ ನಾಮ ಫಲಕ ಮತ್ತು ಟೆಲಿಫೋನ್ ಡೈರೆಕ್ಟರಿಯಲ್ಲಿ ತನ್ನ ಹೆಸರನ್ನು ಪೆನ್‌ಲೆಸ್ ಪಾರ್ಕರ್ ಎಂದು ಬರೆಸಿದ್ದನು. ಇತರ ಡಾಕ್ಟರರು ಈ ಹೆಸರನ್ನು ವಿರೋಧಿಸಿದರು. ಪರಿಣಾಮವಾಗಿ ಸರಕಾರವು ಯಾವನೇ ಡಾಕ್ಟರನು ತನ್ನ ಹೆಸರನ್ನು ಬದಲಾಯಿಸುವುದನು ಕಾನೂನು ಮೂಲಕ ತಡೆಗಟ್ಟಿತು. ಪೆನ್‌ಲೆಸ್ ಪಾರ್ಕರ್ ಮರಳಿ ಎಡ್ಗರ್ ಪಾರ್ಕರ್ ಆದನು. ಆವನು ಕೂಡಲೇ ಕಛೇರಿಗೆ ಹೋಗಿ ತಮ್ಮ ಹೆಸರನ್ನು ಬದಲಾಯಿಸಿಕೊಂಡನು.

ಹನಿಗತೆ

ಬೆಳೆಯುಸಿರಿ ಮೊಳಕೆಯಲ್ಲಿ!

ಒಮ್ಮೆ ಮೈದಾನವೊಂದರಲ್ಲಿ ಕೆಲವು ಹುಡುಗರು ಜೊತೆಗೊಂಡು ಚೆಂಡಾಟ ಮಾಡುತ್ತಿದ್ದರು. ಆಟದಲ್ಲಿ ಬಾಲಕರೆಲ್ಲ ತಲ್ಲೀನರಾಗಿದ್ದುದರಿಂದ ಅವರಿಗೆ ಬೇರೆ ವಿಷಯವೇನೂ ಗಮನಕ್ಕೆ ಬರುವಂತಿರಲಿಲ್ಲ ಈ ಮಧ್ಯೆ ಚೆಂಡು ಅಲ್ಲೊಮ್ಮೆ ಇಲ್ಲೊಮ್ಮೆ ನೆಗೆದು ಹೋಗುತ್ತಿದ್ದುದರಿಂದ ಬಾಲಕರೆಲ್ಲ ಅದನ್ನು ಹಿಂಬಾಲಿಸಿಕೊಂಡು ಹೋಗಿ, ಅದನ್ನು ಹೆಕ್ಕಿ ಪುನಃ ಆಟ ಪ್ರಾರಂಭಿಸುತ್ತಿದ್ದರು. ಆಟವಾಡಲು ಶುರುವಾಗಿ ಸುಮಾರು ಹೊತ್ತಾಯಿತು. ಫಕ್ಕನೆ ಚೆಂಡು ಪಕ್ಕದ ಮರವೊಂದರ ಪೊಟರೆಯೊಳಕ್ಕೆ ನೆಗೆದು ಸ್ವಸ್ಥಬಿದ್ದುಕೊಂಡಿತು. ಮಕ್ಕಳೆಲ್ಲ ಮರದ ಬಳಿ ಧಾವಿಸಿ ಬಂದರು. ಒಬ್ಬ ಮರವನ್ನು ಹತ್ತಿ ಪೊಟರೆಯೊಳಗೆ ಕೈಹಾಕಿದ. ಚೆಂಡು ಕಾಣೆ. ಎಷ್ಟೆಷ್ಟೊ ಪ್ರಯತ್ನಪಟ್ಟರೂ ಅದು ನೀರಿಗೆ ಹೋಮವಿಟ್ಟಂತೆ ನಿಷ್ಫಲವಾಯಿತು. ಮಕ್ಕಳಿಗೆಲ್ಲ ದಿಗಿಲು. ಮಾಡುವುದೇನು? ಮುಂದೇನು? ಮಕ್ಕಳಿಗಾಯಿತು ಸಮಸ್ಯೆ ಅಷ್ಟರಲ್ಲಿ ಆ ದಾರಿಯಾಗಿ ಒಬ್ಬ ಬಾಲಕ ಹೋಗುತಿದ್ದ. ಆತ ಫಕ್ಕನೆ ತನ್ನಂತಿರುವ ಈ ಬಾಲಕರೆಲ್ಲ ಒಟ್ಟುಗೂಡಿ ಏನೋ ಪ್ರಯತ್ನಪಡುತ್ತಿರುವುನ್ನು ಕಂಡ.

‹ಏನಂತೆ?’ ಎಂದು ಆ ದಾರಿಹೋಕ ದಾರಕ ಪ್ರಶ್ನೆಮಾಡಿದ. ಮಕ್ಕಳು ತಮ್ಮ ಕಷ್ಟವನ್ನು ಆ ಬಾಲಕನಲ್ಲಿ ತೋಡಿಕೊಂಡರು. ಮೊನ್ನೆ ಮೊನ್ನೆ ಕೊಂಡುಕೊಂಡಿದ್ದ ಹೊಸ ಚೆಂಡಾಗಿದ್ದಿರಬೇಕು. ಆ ಹುಡುಗರ ಅಚಾತುರ್ಯತೆಗೆ ಕನಿಕರಗೊಂಡು, ಕೂಡಲೇ ಹೊಸತಾಗಿ ಬಂದ ಆ ಹುಡುಗ, ‘ನೋಡಿ, ಓಡಿ ಹೋಗಿ ಒಂದು ಬಕೆಟ್ ನೀರು ಹೊತ್ತು ತನ್ನಿ ನಾನು ತೆಗೆದು ಕೊಡುತ್ತೇನೆ’ ಎಂದ. ಸರಿ. ಮಕ್ಕಳಲ್ಲಿ ಒಬ್ಬ ಹೋಗಿ ನೀರು ತಂದ. ಆ ಬಾಲಕ ಮತ್ತೆ ತಡ ಮಾಡಲಿಲ್ಲ, ಮರಹತ್ತಿ ಪೊಟರೆ ತುಂಬ ನೀರು ಸುರಿದ ಆಶ್ಚರ್ಯ! ಕ್ಷಣಾರ್ಧದಲ್ಲಿ ಎಲ್ಲೋ ಅಡಗಿಕೊಂಡಿದ್ದ ಚೆಂಡು ಫಕ್ಕನೆ ಮೇಲೆ ಬಂದು ತೇಲ ತೊಡಗಿತು. ಈಗ ಆ ಬಾಲಕ ಪ್ರಯಾಸವಿಲ್ಲದೆ ಕೈ ಒಳಗೆ ಹಾಕಿ ಚೆಂಡು ತೆಗೆದುಕೊಟ್ಟ. ಹಾರಿ ಹೋದ ಜೀವ ಮಕ್ಕಳಿಗೆ ಮತ್ತೆ ಬಂದಂತಾಯಿತು. ಎಲ್ಲರೂ ಆ ಹುಡುಗನ ಪ್ರಸಂಗೋಚಿತವಾದ ಬುದ್ಧಿವಂತಿಕೆಗೆ ಮೆಚ್ಚಿದರು, ‘ನೀನು ಬಹಳ ಬುದ್ಧಿವಂತ......!’ ಎಂದರು.

ಆ ಬುದ್ಧಿವಂತನೇ ಈಗ ಭಾರತದ ಪ್ರಧಾನ ಮಂತ್ರಿಯಾಗಿ ಇದ್ದಾನೆ ಎಂದರೆ ನಿಮಗೆ ಎಷ್ಟು ಆಶ್ಚರ್ಯವಾಗಲಿಕ್ಕಿಲ್ಲ? ಬೆಳೆಯುಸಿರಿ ಮೊಳಕೆಯಲ್ಲೇ ತೋರಿತು

(ಹಿಂದಿಯಿಂದ)

—ಕೆ. ರಮೇಶ ಪೈ, ಉಡುಪಿ.

‘ಇಂಗ್ಲಿಷ್ ಕಲಿಯಲಿಲ್ಲವಲ್ಲಾ’ ಎಂದು ಚಿಂತಿಸಬೇಡಿರಿ!

ಅನ್ಯರ ಸಹಾಯವಿಲ್ಲದೆ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ ಪುಸ್ತಕವನ್ನು ಇಂದೇ ಕೊಂಡುಕೊಳ್ಳಿರಿ!

ಸುಲಭದಲ್ಲಿ ಇಂಗ್ಲಿಷ್

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ಸುಲಭವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.

ನೀವೂ ಪ್ರಯತ್ನಿಸಿ, ಇಂಗ್ಲಿಷ್ ಭಾಷೆ ಕಲಿಯಿರಿ! ವಿದ್ಯಾರ್ಥಿಗಳಿಗಂತೂ ಅತ್ಯುಪಯುಕ್ತ ಪುಸ್ತಕ.

ಹೊಸ ಮುದ್ರಣ—ಸಾದಾ ಪ್ರತಿ 2:00. ಉತ್ತಮ ಪ್ರತಿ 2:50.

ಪುಸ್ತಕದ ಬೆಲೆಯೊಂದಿಗೆ 25 ನ. ಪೈ. ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು.

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. P. No. 22/61

ಕುಕ್ಕೆಹಳ್ಳಿ ಪದ್ಮಾವತಿ ಹೆಗ್ಗಡ್ತಿ

—ಅರ್ಜಿದಾರಳು

ಮೇಲ್ಕಂಡ ಅರ್ಜಿ ವ್ಯವಹರಣೆಯು ಅರ್ಜಿದಾರಳ ಗಂಡ ಮೃತ ಕಿಟ್ಟು ಸೆಟ್ಟಿಯು ಮೃತಪಟ್ಟು ಆತ ಬರೆದಿಟ್ಟ ಮೀಲು ಪ್ರಕಾರ ಆತನ ಸೊತ್ತುಗಳಿಗೆ ಅರ್ಜಿದಾರಳು ಹಕ್ಕುದಾರಳಾಗಿ ಆ ಮೇರೆಗೆ ಅರ್ಜಿಯಲ್ಲಿ ಹೇಳಿದ ನಾರಾಯಣ ಆಚಾರಿಯಿಂದ ಬರತಕ್ಕನೋಟಿನ ಹಣ ಶೀನ ಮರಕಾಲನಿಂದಬರತಕ್ಕ ಅಕ್ಕಿ ಕ್ರಯ ಮತ್ತು ಕುಕ್ಕೆಹಳ್ಳಿ ಕೋಒಪರೇಟಿವ್ ಸೊಸೈಟಿಯಲ್ಲಿರುವ ಐವೇಜು ಕೂಡಾ ರೂಪಾಯಿ 487.50 ವಸೂಲು ಪಡೆಯುವರೆ ಸಕ್ಸೆಶ್ಯನ್ ಸರ್ಟಿಫಿಕೇಟು ಕೊಡಬೇಕಾಗಿ ಕೊಟ್ಟ ಅರ್ಜಿಯು ತಾರೀಕು 1—7—1961ಕ್ಕೆ ತನಿಗೆ ಇಟ್ಟಿರುವದ್ರಿಂದ ಆಕ್ಷೇಪ ಹೇಳುವವರು ಆ ದಿನ ಸದ್ರಿ ಕೋರ್ಟು ಮುಂದೆ ಹಾಜರಾಗಿ ಜ್ಯಾಹಿರು ಮಾಡಿಕೊಳ್ಳ ತಕ್ಕದ್ದು.

P. Padmanabha Rao
Vakil for Petitioner

Udipi, Dated 8-6-61

ಶಾಲೆಗಳಿಗೆ ಬೇಕಾಗುವ
ಯಾವತ್ತೂ ಫಾರ್ಮುಗಳೂ
ಹಾಜರಿ ರಿಜಿಸ್ಟ್ರಿಗಳೂ
ಸುಲಭ ದರದಲ್ಲಿ ಸಿಗುತ್ತವೆ
ನವಯುಗ ಪ್ರೆಸ್ ಉಡುಪಿ.

ಯಮುನ ನೆರಳು

(೩ನೇ ಪುಟದಿಂದ)

ಸವಾಗುತಿತ್ತು. ಜಯಂತರ ಅತಿ ಸಮೀಪದಲ್ಲಿ ಕುಳಿತ ಅವಳಿಗೆ ಅಮಿತಾನಂದವುಂಟಾಗಿತ್ತು. ಚಿತ್ರ ಮಾಡುತ್ತಲೇ ಒಂದೆರಡು ಮಾತುಗಳನ್ನು ಆಡಿದ್ದರೆ ಒಳ್ಳೆಯದಿತ್ತೆಂದು ಆಲೋಚಿಸುತ್ತಿದ್ದಳು. ಆದರೆ ಜಯಂತರು ನೀರಸ ಪ್ರಕೃತಿಯವರಾಗಿದ್ದರು. ಚಿತ್ರದಲ್ಲಿಯು ಅವರ ತಲ್ಲೀನತೆ ಕಂಡು ಮಾತಾಡುವ ಸಾಹಸವೂ ಉಂಟಾಗುತಿದ್ದಿಲ್ಲ. ಹೀಗಿರುವಾಗ ಜಯಂತರೇ ಮಾತಾಡಿದರು. "ಕುಮಾರಿಯವರೇ, ನಿಮ್ಮ ರೇಖಾಚಿತ್ರ ತಯಾರಾಯ್ತು. ಇನ್ನು ಬಣ್ಣದ ಕೆಲಸ ಮಾತ್ರ ಬಾಕಿ ಇದೆ. ನಾಳದು ನಿಮ್ಮ ಚಿತ್ರ ಸಿಗುವಂತೆ ಮಾಡುತ್ತೇನೆ."

ಪಾಪ! ಅವಳೆಣಿಸಿದ್ದಳು ಚಿತ್ರೀಕರಣವು ಹಲವು ದಿವಸಗಳ ವರೆಗಾದರೂ ನಡೆಯಬಹುದೆಂದು! ಆದರೆ ಜಯಂತರ ತತ್ಪರತೆಯು ಅವಳ ಎಲ್ಲಾ ಆಶೆಗಳನ್ನು ನೆಲಸಮ ಮಾಡಿತು. ಜಯಂತರ ಮಾತು ಕೇಳುತ್ತಲೇ ನವಲೇಂದ್ರನು ವೀಳ್ಯದೆಲೆಯನ್ನು ತೆಗೆದುಕೊಂಡು ಒಳಸೇರಿದನು. ಅದರಲ್ಲಿ ರಾಜಕುಮಾರಿಯೂ ಒಂದು 'ಖುಂಡೆ'ಯನ್ನು ಸ್ವೀಕರಿಸಿದಳು.

"ಚಿತ್ರದ ಹಣ ಈಗಲೇ ಬೇಕಿತ್ತೇನು?"

"ತಮ್ಮ ಚಿತ್ರ ತಮಗೆ ಸಿಕ್ಕಿ ಅದು ಒಪ್ಪಿಗೆಯಾದರೆ ಮಾತ್ರ ಕೊಡಿ'.

ಹೊರ ಹೋಗಿದ್ದ ನವಲೇಂದ್ರನು ಪುನಃ ಒಳ ಬಂದು 'ಚಹಾ ತಯಾರಿದೆ' ಎಂದು ತಿಳಿಸಿದನು. ಜಯಂತರೂ ಮಾಯಾವತಿಯೂ ಬೇರೊಂದು ಕೋಣೆಗೆ ಹೋಗಿ ಚಹಾ ಕುಡಿಯ ತೊಡಗಿದರು. ಚಹಾಪಾನವು ಮೌನದಲ್ಲೇ ಕೊನೆಗೊಂಡಿತು ಮಾಯಾವತಿಯು ಕೆಲ ಹೊತ್ತಾದರೂ ಅಲ್ಲಿರಲು ಆಶಿಸುತಿದ್ದಳು. ಆದರೆ ಜಯಂತರ ಮುಖ ಭಂಗಿಯು 'ಇನ್ನು ಹೋಗು' ಎಂದು ಆಕೆಗೆ ತಿಳಿಸುವಂತಿತ್ತು.

ಕೊನೆಗೆ ಆಕೆಯು ಎದ್ದು ನಿಲ್ಲುತ್ತಲೇ ಜಯಂತರು ನಮಸ್ಕಾರ ಮಾಡಿದರು. ಆಕೆಯು ಹೊರಬಂದು ಕಾರಿನಲ್ಲಿ ಕುಳಿತು ಬಂಗಲೆಗೆ ಮರಳಿದಳು.

ಬಂಗಲೆಯ ದ್ವಾರದಲ್ಲಿ ಕಾರು ನಿಲ್ಲುತ್ತಲೇ ಹರ್ಷವತಿಯು ಓಡಿ ಬಂದು—

—'ಚಿತ್ರ ತೆಗೆಯುವುದರಲ್ಲಂತೂ ಸಾಫಲ್ಯಪಡೆದಿರಲೇ ಬೇಕು. ಆದರೆ ಚಿತ್ರವೆಲ್ಲಿ?' ಎಂದು ಪ್ರಶ್ನಿಸಿದಳು.

'ನಾಳದು ಕಳುಹಿಸಿ ಕೊಡುತ್ತಾರಂತೆ.'

'ಚಿತ್ರಕಾರರು ಆಲಸಿಗಳೆಂದು ಕಾಣುತ್ತದೆ.'

'ಆಲಸಿಗಳಲ್ಲ ಆದರೆ, ಯಾರನ್ನೂ ಲೆಕ್ಕಿಸದವರು'

'ಅವರ ವಾಸ್ತವಿಕ ಜೀವನದ ಬಗ್ಗೆ ಏನಾದರೂ ತಿಳಿಯಿತೇ?'

'ಅದು ರಹಸ್ಯವಾಗಿಯೇ ಉಳಿದಿದೆ.'

ಅಷ್ಟರಲ್ಲಿ ಬಂದ ದಾಮೋದರರು ಕೇಳಿದರು. 'ಹೇಳ, ಚಿತ್ರವೆಲ್ಲಿದೆ?'

'ನಾಳದು ಸಿಗುವುದಂತೆ'

'ಬೇರೆ ಏನಾದರೂ ಮಾತು ನಡೆಯಿತೇ?"

'ಇಲ್ಲ. ಅವರು ಸುಮ್ಮನೆ ಚಿತ್ರದಲ್ಲೇ ತಲ್ಲೀನರಾಗಿದ್ದರು."

'ನಿಜ ಅವರು ನೀರಸ ಪ್ರಕೃತಿಯವರು. ಅವರ ಹೆಸರು ಸಹಾ ಯಾರಿಗೂ ತಿಳಿದಿಲ್ಲ' ಶುಷ್ಕಾಕ್ಷರದಿಂದ ಹೇಳಿದರು ದಾಮೋದರ್.

"ಈ ನೀರಸತೆಯ ಕಾರಣ ನಿಮಗೆ ಗೊತ್ತೇನು?'

'ಇಲ್ಲ, ನನಗೂ ಹೆಚ್ಚಿಗೆ ಗೊತ್ತಿಲ್ಲ. ಬಹಳ ಪ್ರಯತ್ನಪಟ್ಟರೂ ಈ ವರೆಗೆ ಅವರ ರಹಸ್ಯ ತಿಳಿದಿಲ್ಲ.

''ವಿಚಿತ್ರ ಜೀವ" ಎಂದು ಸಮರ್ಥಿಸಿದಳು ಮಾಯಾ.

ಇವರು ಮಾತಾಡುತ್ತಾ ತೊಟ್ಟ ಮುಟ್ಟುತ್ತಿರುವಾಗಲೇ ಮಳೆಯಲ್ಲಿ ಬಂದ ರಾಣಿ ಸಪೇಬರ ಕಾರು ನಿಂತಿತು ಎಲ್ಲರೂ ಅವರನ್ನು ಸ್ವಾಗತಿಸಿದರು. ಒಳಗೆ ಬಂದು ಆ ರಾಜಾಸನದ ಮೇಲೆ ಕುಳಿತ ಬಳಿಕ ರಾಣಿಯವರು ಪ್ರಾಣದಾಸನನ್ನು ಬರ ಹೇಳಿದರು. ದಾಮೋದರರು ಅವರನ್ನು ಕರೆಯುವುದಕ್ಕಾಗಿ ಹೋದರು ರಾಣಿಯು ಮಾಯಾವತಿಯೊಡನೆ – 'ನಿನ್ನ ಆರೋಗ್ಯ ಈಗ ಒಳ್ಳೆಯದಿದೆ ಎಂದು ಕಾಣುತ್ತದೆ. ಎಂದರು.

' ಹೂಂ ಮೊದಲಿಗಿಂತ ಈಗ ಒಳ್ಳೆಯದಿದೆ"

"ಹಾಂ, ಸ್ವಲ್ಪ ಸಮಯದಲ್ಲಿ ಸಂಪೂರ್ಣ ಆರೋಗ್ಯವಾಗ ಬಹುದು'' ಎಂದಳು ರಾಣಿ. ಅಷ್ಟರಲ್ಲೇ ದಾಮೋದರ್ ಮತ್ತು ಪ್ರಾಣದಾಸರು ಒಳ ಸೇರಿದರು ನಮಸ್ಕಾರ ವಿಧಿ ನಡೆದ ನಂತರ ರಾಣಿ ಪ್ರಾಣದಾಸನೊಡನೆ—"ಬಹಳ ದಿವಸದಿಂದ ದರ್ಶನವಾಯ್ತು. ಇಲಾಖೆಯಲ್ಲಿ ತುಂಬಾ ಕೆಲಸವಿತ್ತೇ?"

"ಕೆಲಸವೇನೂ ಇಷ್ಟಿಲ್ಲ, ಆದರೆ, ಕೆಲವು ದಿನಗಳಿಂದ ನನ್ನ ಆರೋಗ್ಯವು ಒಳ್ಳೆಯದಿಲ್ಲದಿದ್ದುದರಿಂದ ಎಲ್ಲಿಯೂ ಹೋಗಲಿಲ್ಲ."

"ಈಗ ನಿಮ್ಮಲ್ಲೊಂದು ಆಗತ್ಯ ಕೆಲಸವಿದೆ ಆದಕ್ಕಾಗಿ ಕರೆಸಿದೆ"

ಈ ಮಾತನ್ನು ಕೇಳುತ್ತಲೇ ಪ್ರಾಣದಾಸರು ಎದ್ದು ನಿಂತರು ರಾಣಿಯವರೂ ಎದ್ದರು. ಅವರೀರ್ವರೂ ಎದ್ದರು. ಅವರೀರ್ವರೂ ಎದುರಿನ ಕೋಣೆಗೆ ಹೋದರು. ಕುರ್ಚಿಯ ಮೇಲೆ ಕುಳಿತ ನಂತರ ಒಂದು ಕವರನ್ನು ತೆಗೆದು ಪ್ರಾಣದಾಸನಿಗೆ ಓದ ಕೊಟ್ಟಳು ರಾಣಿ. ಅವರು ಕವರನ್ನು ಹರಿದು ಕಾಗದವನ್ನು ಓದತೊಡಗಿದರು.

"ರಾಣೀ ಸಾಹೇಬರಲ್ಲಿ— ತಾವು ಕೊಂಡು ಕೊಂಡ ಹೊಸ ಇಲಾಖೆಯನ್ನು ಕೆಲಸಮುಗಿಯುವ ವರೆಗೆ ನಮ್ಮ ಅಧೀನಕ್ಕೆ ಬಿಟ್ಟು ಕೊಡ ಬೇಕು. ನಾವು ಆದರಿಂದ ಅಲ್ಪವಾದರೂ ಹಣ ಸಂಪಾದಿಸಲಿಚ್ಛಿಸುತ್ತೇವೆ ಅಲ್ಲದೆ ಆ ಹಣವನ್ನು ನಾವು ಸಾಲರೂಪವಾಗಿ ಸ್ವೀಕರಿಸಿ, ಅಲ್ಪಾವಧಿಯಲ್ಲಿ ಹಿಂತಿರುಗಿಸುವ ವಿಶ್ವಾಸ ಕೊಡತ್ತೇನೆ. ಒಂದು ವೇಳೆ ತಾವು ಇದಕ್ಕೆ ಒಪ್ಪದಿದ್ದರೆ ಪರಿಣಾಮವು ಭಯಂಕರವಾಗುವುದು ಇದರ ಜೋಣೆಯು ತಮ್ಮ ಮೇಲೆಯೇ ಇದೆ.

—ಸ್ಯಾಹ ನಕಾಬ್."

ಪತ್ರ ಓದುತ್ತಲೇ ಪ್ರಾಣದಾಸರ ಪ್ರಾಣ ಒಣಗಿಹೋಯಿತು. ಶರೀರವು ಕಂಪಿಸತೊಡಗಿತು ಭಯದಿಂದ ಅವರ ಬಾಯಿಯಿಂದ 'ಯಮುನ ನೆರಳು' ಎಂಬ ಆರ್ತನಾದ ಹೊರಬಿತ್ತು.

"ತಾವೇಕೆ ಇಷ್ಟು ಭಯಭೀತರಾಗುತ್ತಿದ್ದೀರಿ? ಜಗತ್ತಿನಲ್ಲಿರುವಾಗ ಇಂಥಹ ಹಲವಾರು ದುಷ್ಟರಿಂದ ಸಾವಿನ ಪತ್ರಗಳು ಬರುತ್ತವೆ. ನನಗೆ ನಿಮ್ಮೊಡನೆ ಬಹಳ ವಿಷಯ ಚರ್ಚಿಸಲಿಕ್ಕಿದೆ. ಆ ದಿವಸ ಯಮುನಳು ಇಲ್ಲಿಗೆ ಬಂದು ಇಲ್ಲೇ ಇದ್ದಳು. ಅನಂತರ ಸಾಯಂಕಾಲ ತನ್ನ ಬಂಗಲೆಗೆ ಹೋದವಳು ಮಾರನೆಯ ದಿವಸ ಸ್ನಾನಾಳು ಕೊಂಡುಕೊಳ್ಳಲು ಮಾರ್ಕೆಟಿಗೆ ಹೋದಳು ಆದರೆ, ಮನೆಗೆ ಮರಳಿ ಬರಲೇ ಇಲ್ಲ. ಈ ಕೆಲಸವೂ 'ಸ್ಯಾಹ ನಕಾಬ್' ದಳದವರದ್ದೇ ಆಗಿದೆ. ಈ 'ಸ್ಯಾಹ ನಕಾಬ್' ಯಾರು? ಎಂಬುದು ಇನ್ನೊಂದು ಪ್ರಶ್ನೆ ಈ ಕೊಲೆಗಳು ಹೇಗೆ ನಡೆಯುತ್ತವೆ? ಇವು ಹೆಚ್ಚಾಗಿ ಏಕಾಂತದಲ್ಲೂ—ಕತ್ತಲೆಯಲ್ಲೂ ನಡೆಯುತ್ತದೆ. ಯಾವ ರೀತಿಯಿಂದ ಅವರು ಅಷ್ಟು ಶೀಘ್ರವಾಗಿ ಕೆಲಸ ಮಾಡುತ್ತಾರೆ ಎಂಬುದು ವಿಚಾರಣೀಯವಾಗಿದೆ" ಎಂದಳು ರಾಣಿ

' ಹೌದು, ನಾನೂ ಚಿಂತಾಕ್ರಾಂತನಾಗಿದ್ದೇನೆ. ಆದರೆ ದೊಡ್ಡ ರಾಜಕುಮಾರಿಯ ಮರಣದ ವಿಚಾರವು ನಿಮಗೂ ತುಂಬಾ ದುಃಖಪ್ರದವಾಗಿದೆ."

"ಅವಳಲ್ಲಿಂದ ಹೋಗಿ ಮೂರು ದಿವಸಗಳಾಯ್ತು. ಅವಳಿಗೆ ಇಲ್ಲಿಗೆ ಬರಲೂ ಮನಸ್ಸಿಲ್ಲ. ಆದುದರಿಂದ ಅವಳ ಮನೆಯವರು ನಮ್ಮ ಹೊಸ ಇಲಾಖೆಗೆ ಬಂದಿದಾಳೋ ಎಂದು ನೋಡಲು ಬಂದಿದ್ದರು. ನಾನು ಇಲಾಖೆಯಿಂದ ಬರುವಾಗ ಅವಳ ಬಂಗಲೆಗೆ ಓರ್ವ ವ್ಯಕ್ತಿಯನ್ನು ಗುಪ್ತವಾಗಿ ಕಾವಲಿಟ್ಟಿದ್ದೇನೆ. ಅಲ್ಲದೆ ಪೋಲಿಸರಿಗೂ ವರ್ತಮಾನ ಕೊಟ್ಟಿದ್ದೇನೆ. ಇದನ್ನು ಕೆಲದಿವಸಗಳವರೆಗೆ ಮುಚ್ಚಿಡ ಬೇಕೆಂದು ಪೋಲೀಸರುಗಳ ಅಭಿಪ್ರಾಯ."

"ಆದರೆ, ಪೋಲೀಸರು ಯಾವೊಂದೂ ಕಾರ್ಯವನ್ನು ಮಾಡಿದಂತೆ ಭಾಸವಾಗುತ್ತಿಲ್ಲ"

"ನಿಜ ಅದೇನೋ ಸತ್ಯ. ಆದರೆ, ನಾವೇನು ತಾನೇ ಮಾಡಲು ಸಾಧ್ಯ? ಈಗ ಈ ಕಾಗದದ ಬಗ್ಗೆ ನಾವೇನು ಮಾಡಬೇಕು?"

"ಮಾಡುವುದಾದರೂ ಏನು? ಪೋಲೀಸರಿಗಂತೂ ಸೂಚನೆ ಕೊಟ್ಟೇ ಕೊಡುವುದು."

"ನಾನು ಬರುತ್ತಲೇ ಆ ಕೆಲಸ ಪೂರೈಸಿ ಬಂದಿದ್ದೇನೆ. ಮುಕ್ತು ಸುಮ್ಮಗಿರುವುದೇ ಲೇಸು. ನನ್ನ ಜಮೀನು ಗೊಡ್ಡು ಬೆದರಿಕೆಗಳಿಗೆ ಹೆದರಿ ಅನ್ಯರ ವಶವಾಗುವುದು ಎಂದಿಗೂ ಒಪ್ಪತಕ್ಕ ವಿಷಯವಲ್ಲ.

'ಹೂಂ, ಅದೇ ಸರಿ, ಆದರೆ, ದೊಡ್ಡ ರಾಜಕುಮಾರಿಯ ಶನಿಖೆಯ ಬಗ್ಗೆ ತಮ್ಮ ಆಜ್ಞೆಯೇನು?"

"ನೋಡಿ, ನಾನು ಈ ವಿಷಯವನ್ನು ಪೋಲಿಸರಿಗೂ ತಿಳಿಸಿದ್ದೆ. ಈ ಕೆಲಸಕ್ಕಾಗಿಯೇ ಕೆಲ ಜನರನ್ನೂ ನಿಯಮಿಸಿದ್ದೆ ಆದರೂ ಯಾವುದೊಂದೂ ಪ್ರಯೋಜನವಿಲ್ಲವಾಯ್ತು.

"ನಿಜವಾಗಿಯೂ ಆಶ್ಚರ್ಯವಾಗಿದೆ" ಸಾಯಂಕಾಲ ಪೂಲ ಚಂದ'ರಲ್ಲಿ ಹೋಗಬೇಕು ತಾವು ಬರುವಿರೇ?

"ನನಗೂ ಹೋಗಲಿಕ್ಕೇ ಇದೆ. ನಾನು ನಿಮ್ಮೊಡನೆಯೇ ಬರುತ್ತೇನೆ."

ರಾಣಿ ಇಲಾವತಿಯು ಕೋಣೆಯಿಂದ ಹೊರ ಬಂದು ಮಾಯಾವತಿಯೊಡನೆ—"ಈಗಿನಸಮಯತುಂಬಾಕೆಟ್ಟುಹೋಗಿದೆ. ತುಂಬಾ ಜಾಗ್ರತೆಯಿಂದಿರು" ಎಂದರು.

'ಹೂಂ' ಅಂದಳು ಮಾಯಾ.

ರಾಣಿಯು ಕಾರಿನಲ್ಲಿ ಕುಳಿತು ಹೊರಟು ಹೋದಳು. ಅವಳು ಹೋದ ನಂತರ

ಇಲೆಕ್ಟ್ರಿಕ್ ಮತ್ತು ರೇಡಿಯೊ ಗೈಡ್

ಸಂಪೂರ್ಣ ಮೆಕೇನಿಕ್ ಆಗಲು 117 ಚಿತ್ರಗಳಿರುವ ಪರಿಪೂರ್ಣ ಪುಸ್ತಕ ರೂ 25 ರಲ್ಲಿ ನಿಮ್ಮ ಮನೆಯಲ್ಲಿಯೇ ರೇಡಿಯೊ ತಯಾರಿಸುವ ವಿಧಾನವನ್ನು ತಿಳಿಸುತ್ತದೆ. ಇಲೆಕ್ಟ್ರಿಸಿಟಿ, ರೇಡಿಯೊ ರಿಪೇರಿಂಗ್, ವಯರಿಂಗ್, ಇಲೆಕ್ಟ್ರಿಕಲ್ ಯಂತ್ರಕ್ರಿಯೆ ಮೊದಲಾದ ವಿವಿಧ ಉದ್ಯೋಗಗಳನ್ನು ಕಲಿಯಬಹುದಾದ ಅತ್ಯಪೂರ್ವ ಪುಸ್ತಕ. ವಿಸ್ತೃತ ಹೊಸ ಆವೃತ್ತಿ ರೂ. 5/— ಹೊಲಿಗೆ ಮತ್ತು ಕಟ್ಟಿಂಗ್ (ಸಚಿತ್ರ) ರೂ. 5/— ಸಾಬೂನು, ಮತ್ತು ಪರಿಮಳದ್ರವ್ಯ ತಯಾರಿಕೆ ರೂ. 5/— ಫೊಟೊಗ್ರಾಫಿಯ ಕಲೆ ರೂ. 5/— ವಿ. ಪಿ. ಚಾರ್ಜು ಪ್ರತಿ ಪುಸ್ತಕಕ್ಕೆ ರೂ. 1/— ಯಾವುದಾದರೂ 8 ಪುಸ್ತಕಗಳ ಸೆಟ್ಟಿಗೆ ರೂ. 10/— ಟ. ಖ ಸಹಿತ.

Vishubharathi Publications
Sasni Gate (NS. D) ALIGARH

ಧನಾರ್ಥ ಮೆಜಿಕ್ ತಂತ್ರಗಳನ್ನು ಕಲಿಯಿರಿ!

(1) ಒಂದು ಸಣ್ಣ ಚೆಂಡನ್ನು ನಿಮ್ಮ ಬಾಯಿಯೊಳಗೆ ಹಾಕಿರಿ. ಮತ್ತು ಅವನ್ನು ನಿಮ್ಮ ಕಣ್ಣಿನಿಂದ ಹೊರಕ್ಕೆ ತೆಗೆಯಿರಿ. (2) ನಿಮ್ಮ ಅಂಗೈ ಅಡಿಯಲ್ಲಿ ಒಂದು ರೂಪಾಯಿ ನಾಣ್ಯವನ್ನು ಹಾಕಿರಿ. ಮತ್ತು ಅದನ್ನು ಒಂದು ಪೆಟ್ಟಿನಿಂದ ನಿಮ್ಮ ಮುಷ್ಠಿಯ ಕೆಳಗೆ ಅದೃಶ್ಯಗೊಳಿಸಿರಿ.

ಈ ಆಶ್ಚರ್ಯಕರ ಉಪಾಯಗಳನ್ನು ಪಡೆಯಲಿಕ್ಕೆ ಟಪ್ಪಾಲು ವಗೈರೆ ಖರ್ಚಿಗಾಗಿ 65 ನಯೇ ಪೈಸೆ ಸ್ಟಾಂಪ್ ಕಳುಹಿಸಿರಿ 5 ರೂ ನ್ನು ಕಳುಹಿಸುವವರು ಅವರ ಮನೆಯಲ್ಲಿಯೇ ಮುಂದೆ ಇತರ ಎಲ್ಲಾ ತಂತ್ರಗಳನ್ನು ಪಡೆಯಬಹುದು.

The Royal Trick Centre,
P. B. No. 15, Aligarh (U.P.)

Tel: 'BLUEYAGAR'. —— ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ —— Phone: 374.

ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು. ಮಾಲಿಕ:ಕೆ.ಕೆ.ಆರ್.ಶೇಟ್

NAVAYUGA WEEKLY, UDIPI.
REGD. NO.BG. 176

15-6-1961

LICENSE NO. 31
Licensed to Post without Prepayment

ಮಾಯಾವತಿಯು ಹರ್ಷವತಿಯೊಡನೆ— 'ಬಹಳ ದಿವಸದಿಂದ ಅಡ್ಡಾಡ ಹೋಗಿಲ್ಲ. ಇವತ್ತು 'ಹೋಗೋಣವೇನು?"

"ಹೂಂ, ಹೋಗುವ ದಾಮೋದರ್‌ಜೀ ತಾವು ಬರುತ್ತೀರೇ"

'ಬಂದರೆ....ಏನೂ ಆಪತ್ತಿಲ್ಲ. ಆದರೆ ಸಮಯ ತುಂಬಾ ಹಾಳಾಗಿದೆ. ಇಂಥ ಸಮಯದಲ್ಲಿ ನಾವು ಅಡ್ಡಾಡಹೋಗುವುದು ಒಳ್ಳೆಯದಲ್ಲ."

"ಸಮಯ ಏನಾದರೇನು? ನಾವು ಅಡ್ಡಾಡುವುದಕ್ಕೂ ಸಮಯದ ಪ್ರಭಾವಕ್ಕೂ ಏನು ಸಂಬಂಧ?' ಎಂದಳು ಹರ್ಷವತಿ.

ದಾಮೋದರರು ನಗುತ್ತಾ—"ಈ ಪ್ರಶ್ನೆಗೆ ಉತ್ತರ ನನ್ನಲಿಲ್ಲ. ಹೇಳು, ನೀವು ಯಾವಾಗ ಹೊರಡುತ್ತೀರಿ? ನಾನಂತೂ ಯಾವಾಗಲೂ ಸಿದ್ಧ."

"ಮಧ್ಯಾಹ್ನದ ನಂತರ" ಎಂದು ಹರ್ಷದಿಂದ ನುಡಿದಳು ಹರ್ಷವತಿ.

ಮೂರು ಘಂಟೆಯ ಹೊತ್ತಿಗೆ ಅವರು ಅಡ್ಡಾಡ ಹೊರಟರು. ಕಾರಿನಲ್ಲಿ ಹೋಗದೆ ವಿಕ್ಟೋರಿಯಾದಲ್ಲಿ ಹೋಗುವುದಾಗಿ ನಿಷ್ಕರ್ಷೆಯಾಯಿತು. ಇವರು ವಿಕ್ಟೋರಿಯಾದಲ್ಲಿ ಹೊರಟರು. ಪ್ರಾಣದಾಸರು 'ಪೂಲಚಂದ'ರ ಮನೆಗೆ ಹೊರಟರು.

ಇವರು 'ಆಶಾ ಸಾಗರ' ಮುಟ್ಟಿ ಗುಡ್ಡ ಹತ್ತ ತೊಡಗಿದರು. ಗಾಡಿಯನ್ನು ಒಂದು ಬದಿಯಲ್ಲಿ ನಿಲ್ಲಿಸಿದ್ದರು. ಇವರು ಸಾಧಾರಣ ಒಂದು ಘಂಟೆಯ ವರೆಗೆ ಅಡ್ಡುತಲೇ ಇದ್ದರು. ಕೂಡಲೇ ಒಂದು ಕಾರು ಅತ್ತ ಬರುವುದು ಕಂಡಿತು. ಅದರಲ್ಲಿ ರಾಣಿ ಹಾಗೂ ಪ್ರಾಣದಾಸರಿದ್ದರು 'ನೀವು ಈ ಕಡೆ ಬಂದಿದ್ದೀರಾ' ಎಂದು ನುಡಿದಳು ರಾಣಿ ಕಾರು ನಿಲ್ಲಿಸಿ.

"ತಿರುಗಾಡಲು ಬಂದೇ ಬಂದಿರಿ. ಜಾಗ್ರತೆಯಾಗಿರಬೇಕು.

"ನಾವು ಬಂದು ಈಗಲೇ ಹಿಂತಿರುಗುವವರಿದ್ದೆವು" ಎಂದರು ದಾಮೋದರರು.

ರಾಣಿಯೂ ಅವರೊಡನೆ ನಡೆಯುತ್ತಾ ಅಡ್ಡಾಡ ತೊಡಗಿದಳು. ಅಡ್ಡಾಡುತ್ತಾ ಒಬ್ಬರು ಇನ್ನೊಬ್ಬರಿಂದ ಬಹುದೂರವಾದರು. ಅವರ ಅಡ್ಡಾಟದ ಸ್ವಲ್ಪ ಸಮಯದಲ್ಲೇ 'ಧುಮ್' ಎಂಬ ಶಬ್ದವಾಯ್ತು. ರಾಣಿಯು ಬೀಳುವುದನ್ನು ಎಲ್ಲರೂ ಕಂಡರು. ಪ್ರಾಣದಾಸ ಬೀಳುವ ರಾಣಿಯನ್ನು ಎತ್ತಿಕೊಂಡು ಮೋಟಾರಿನ ಹತ್ತಿರ ಬಂದರು. ಮೋಟಾರಿನ ಬಳಿ ಬರುತ್ತಲೇ ಅವಳ ಪ್ರಾಣ ಪಕ್ಷಿ ಹಾರಿ ಹೋಗಿತ್ತು. ಅವಳ ಕುಪ್ಪಸದ ಜೇಬಿನಲ್ಲಿ 'ಜಮುನ ಸೆರೆ [illegible] ಕಾಗದವಿತ್ತು. ಅದರಲ್ಲಿ—

ಅಸಹ್ಯಕರ? ಭಯಂಕರ ಪರಿಣಾಮ [illegible]ತ್ತು.

[illegible] ಈ ಪರಿಸ್ಥಿತಿಯನ್ನು ಕಂಡು [illegible] ಬಿಕ್ಕಿಬಿಕ್ಕಿ ಅಳತೊಡಗಿದರು. ಆದರೆ [illegible]ವತಿಯನ್ನು ಕಾಣಲು ಆಕೆ [illegible] [illegible]ಗಿದ್ದಳು. ರಾಣಿಯ [illegible] ಮಾಯಾವತಿಯು ಅ[illegible] ಎಲ್ಲರಿಗೂ ದಿಗಿಲಿಟ್ಟಿಸಿ[illegible] ಎಷ್ಟೆಷ್ಟು ಹುಡುಕಾಡಿದರೂ ಮಾ[illegible]ವತಿಯು ಪತ್ತೆಯಾಗಲಿಲ್ಲ.

ಹರ್ಷವತಿಯು ಅಧೀರಳಾದಳು. ದಾಮೋದರರು ಮೋಟಾರು ತೆಗೆದುಕೊಂಡು ಎಲ್ಲಿಯೋ ಹೊಂಟರು. ರಾಣಿಯ ಕಳೇಬರವನ್ನು ಗಾಡಿಯಲ್ಲಿಟ್ಟು ಪ್ರಾಣದಾಸರು ಹರ್ಷಾವತಿಯೊಡನೆ ಬಂಗಲೆಗೆ ಮರಳಿದರು

ಮಾಯಾವತಿಯು ಮಾಯವಾದ ಸಂದರ್ಭದಲ್ಲಿ ತನ್ನನ್ನು ಮೂವರು ವ್ಯಕ್ತಿಗಳು ಹಿಡಿದಿರುವುದನ್ನು ಕಂಡಿದ್ದಳು. ಅವರ ಮುಖಗಳು ಕಪ್ಪು ನಾಕಾಬಿನಿಂದ ಮುಚ್ಚಲ್ಪಟ್ಟಿತ್ತು. ಅವರು ಮಾಯಾವತಿಯನ್ನು ಒಂದು ಕುಂಜಕ್ಕೆ ಎಳೆದುಕೊಂಡು ಹೋದರು. ಅಲ್ಲಿಯ ಮರಗಳು ವಿಶಾಲವಾಗಿದ್ದುವು. ಒಳಗಿನ ದೃಶ್ಯವನ್ನು ಯಾರೂ ಕಾಣುವಂತಿಲ್ಲ. ಅದು ಪ್ರಾಕೃತಿಕ ಮರಗಳಿಂದಲೇ ಸುಂದರವಾದ ಕೋಣೆಯಂತೆ ಕಾಣುತ್ತಿತ್ತು.

'ರಾಜಕುಮಾರಿ ನಿನ್ನ ತಾಯಿಯ ಈ ದುರ್ಗತಿಗೆ ಕಾರಣವೇನೆಂಬುದನ್ನು ನೀನರಿತಿರಬಹುದು. ಅವರ ಎಲ್ಲಾ ಚಲ-ಅಚಲ ಸಂಪತ್ತಿಗೆ ನೀನೇ ಒಡೆಯಳು ಅಲ್ಲದೆ ನಾವು ನಿನ್ನ ತಾಯಿಯಿಂದ ಕೇಳಿದ ಹಣ ನೀನಾದರೂ ಕೊಡುವಿರೆಂದು ನಂಬುತ್ತೇವೆ. ಇಲ್ಲವೇ ನಿನ್ನ ತಾಯಿಯವರು ಇತ್ತೀಚೆಗೆ ಕೊಂಡಿರುವ ಹೊಸ ಇಲಾಖೆಯನ್ನು ನಮ್ಮ ಹೆಸರಿಗೆ ಬರೆದು ಬಿಡಿರಿ ಇಲ್ಲವಾದಲ್ಲಿ ನಿನ್ನ ತಾಯಿಗೊದಗಿದ ದುರ್ಗತಿಯೇ ನಿನಗೂ ಬರಬಹುದು' ಎಂದ ಅವರಲ್ಲೊಬ್ಬ.

'ನನಗೆ ಯಾವ ಪರಿಣಾಮದ ಭಯವೂ ಇಲ್ಲ. ನನ್ನ ಪ್ರಿಯ ಜನರ ಮರಣದಿಂದ ದುಃಖವಾಗಿದೆ ಇನ್ನುಳಿದುದು ಸಂಪತ್ತಿನ ಪ್ರಶ್ನೆ' ಅದಂತೂ ನನ್ನ ಹೆಸರಿನಲ್ಲೇ ಇಲ್ಲ'

'ಈ ಸಮಯದಲ್ಲಿ ನೀನು ಹಣಕೊಟ್ಟು ಬಿಡುಗಡೆಯಾಗಬಹುದು.

'ಇಂತಹ ಸಮಯದಲ್ಲಿ ಅದೂ ಅಸಂಭವ' ಎಂದಳು ಮಾಯಾ.

' ಈ ಹಟಮಾರಿ ತರುಣಿ ನಮ್ಮ ಮಾತುಗಳಿಗೆ ಒಪ್ಪಲಿಕ್ಕಿಲ್ಲ, ನಮ್ಮ ರಹಸ್ಯವು ಅವಳಿಗರಿಯದಿರುವುದರಿಂದ ಆಕೆಯ ಕೊಲೆ ಮಾಡುವುದೇ ಉಚಿತ ಹಾಗೂ ಯುಕ್ತಿ ಸಂಗತ' ಎಂದ ಇನ್ನೋರ್ವ.

'ಸರಿ, ಆದರೆ, ಕೊಲೆ ಮಾಡುವುದರ ಬದಲು ಆಕೆಯ ಕೈಕಾಲು ಕಟ್ಟಿ ಸಾಗರಕ್ಕೆಸೆಯುವುದು ಲೇಸು" ಎಂದ ಮೊದಲನೆಯವ.

ಅಂತೆಯೇ ಎಲ್ಲರೂ ಕೂಡಿ, ಆಕೆಯ ಕೈಕಾಲು ಬಂಧಿಸಿ ಸಾಗರದತ್ತ ಮುಂದುವರಿದರು. ತದನಂತರ ಈರ್ವರು ಕೂಡಿ ಆಕೆಯನ್ನೆತ್ತಿ ಸಾಗರಕ್ಕೆಸೆದರು. ಅಲ್ಲದೆ ಕ್ಷಣ ನಿಲ್ಲದೆ ತಮ್ಮ ಜಾಗಕ್ಕೆ ಮರಳಿದರು.

ಅಷ್ಟರಲ್ಲಿ ಓರ್ವ ಕುಂಟನು ಎಲ್ಲಿಂದಲೋ ಬಂದು ನೀರಿಗೆ ಧುಮುಕಿದನು. ಮಾಯಾವತಿಯು ಮುಳುಗುತ್ತಿದ್ದಲ್ಲೇ ತಾನು ಮುಳುಗಿ ಬಹು ಪರಿಶ್ರಮದಿಂದ ಆಕೆಯನ್ನೆತ್ತಿಕೊಂಡು ನೀರಿನಿಂದ ಹೊರಬಂದು ದಂಡೆ ಸೇರಿದನು. ಅನಂತರ ಒಂದು ಒಣ ಸ್ಥಳದಲ್ಲಿ ಹಸುರಿನ ಮೇಲೆ ಮಲಗಿಸಿ ಕೈಕಾಲುಗಳ ಕಟ್ಟನ್ನು ಬಿಚ್ಚಿದನು. ಮಾಯೆಯು ಸ್ಮೃತಿಯಲ್ಲಿರಲಿಲ್ಲ. ಸ್ವಲ್ಪ ನೀರನ್ನು ಕುಡಿದಿದ್ದಳು. ಮರದ ಕೊಂಬೆಗೆ ಕುಂಟನು ಮಾಯೆಳನ್ನು ಕಾಲು ಮೇಲೆ ಮಾಡಿ ನೇತಾಡಿಸಿ ಒಳಸೇರಿದ ನೀರನ್ನು ಹೊರಹಾಂತಿಸಿದನು. ಅನಂತರ ಆಕೆಯನ್ನು ನೆಲದ ಮೇಲೆ ಮಲಗಿಸಿ ಅಂಗೈ ಮತ್ತು ಕಾಲಿನ ಅಡಿಯನ್ನು ತಿಕ್ಕ ತೊಡಗಿದನು. ಸಾಧಾರಣ ಅರ್ಧ ತಾಸಿನ ಬಳಿಕ ಅವಳಿಗೆ ಸ್ಮೃತಿ ಬಂತು. ಆಕೆಯು ಎದ್ದು ಕುಳಿತಳು. ಅವಳಿಗೆ ಸ್ಮೃತಿ ಬರುವುದನ್ನು ಕಂಡ ಕುಂಟನು, ಅಘೋರ್ ಜಮುನ ಪ್ರಸಾದನು ಅವಿತುಕೊಂಡನು.

ಮಾಯಾವತಿಯು ತನ್ನ ಮೊದಲಿನ ಸ್ಥಿತಿಯನ್ನು ಕಂಡು ನಡುಗಿದಳು. ಮೇಲೆ ಹೇಗೆ ಬಂದೆ ಎಂದು ಆಲೋಚಿಸಿ ನಾಲ್ಕು ಕಡೆ ನೋಡಿದಳು. ಯಾರೂ ಇಲ್ಲದುದನ್ನು ಕಂಡು ಆಶ್ಚರ್ಯಗೊಂಡಳು. ನಿಧಾನವಾಗಿ ಎದ್ದು ಮಾರ್ಗದಕಡೆ ನಡೆದಳು. ಸ್ವಲ್ಪವೇ ಸಮಯದಲ್ಲಿ ಅವಳು ಸೇತುವೆಯ ಹತ್ತಿರ ಬಂದಳು. ಅಲ್ಲಿಂದ ತನ್ನ ಬಂಗಲೆಯನ್ನು ಸೇರಿದಳು.

(ಮುಂದುವರಿಯುವುದು)

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ವನ್ನು ಮುಂದೆ ದೂಡಿದ್ದಾರೆ.

ಶ್ರೀ ಶಾಸ್ತ್ರಿಯವರು ಮುಂದಿಟ್ಟ ಸೂತ್ರಗಳು ತಾತ್ಕಾಲಿಕವಾಗಿ ಕಚಾರದ ಜನರ ಶಾಂತಭಾವನೆತಳೆಯುವುದಕ್ಕೆ ಸಹಕಾರಿಯಾಗಿವೆಯೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ಆದರೆ, ಅದುವೇ "ಶಾಶ್ವತ ಪರಿಹಾರ ಮಾರ್ಗವೆಂಬುದರ ಬಗ್ಗೆ ಮಾತ್ರ ಈಗ ಭಿನ್ನಾಭಿಪ್ರಾಯವುಳಿದಿದೆ. ಹೀಗಿದ್ದರೂ ಕೆಲಕಾಲ ಅಲ್ಲಿ ಶಾಂತಿಯು ನೆಲೆಯೂರಿತೆಂದರೆ, ಪ್ರಶಾಂತ ವಾತಾವರಣವು ತಲೆದೋರಿದಾಗ, ಈ ತೆರದ ಭಾಷಾವಿವಾದಗಳಿಂದಾಗುವ ಹಾನಿಯನ್ನು ತಡೆಗಟ್ಟುವುದಕ್ಕೆ ಇದುವೇ ಉತ್ತಮ ಮಾರ್ಗವೆಂಬುದು ಮನವರಿಕೆಯಾಗದಿರದು; ಆಗಬೇಕು. ಇದರಂತೆಯೇ ಭಾರತದ ಇತರತ್ರವಿರುವ ಭಾಷಾ ಪ್ರಶ್ನೆಗಳೂ ಸೌಹಾರ್ದಪೂರ್ಣವಾಗಿಯೆ ಬಗೆಹರಿದು, ಆರ್ಥಿಕಪ್ರಗತಿಸಾಧಿಸುವತ್ತ ಧಾವಿಸುತ್ತಿರುವ ಭಾರತದಶಕ್ತಿ ಅಪವ್ಯಯವಾಗದಂತೆ ನೋಡಿಕೊಳ್ಳಬೇಕು. ನಮ್ಮ ನೇಶದ ಸಾಧನ ಸಂಪತ್ತಿಯ ಉಪಯೋಗ ಮಾಡಿಕೊಳ್ಳುವುದರಿಂದಲೇ ನಮ್ಮ ಉನ್ನತಿಯಿರುವುದರಿಂದ ಈ ಪುನಾರಚನೆಯ ಸಂಧಿಕಾಲದಲ್ಲಿ ನಮ್ಮ ಸರ್ವಶಕ್ತಿಯನ್ನೂ ಏಕ ಗುರಿಯತ್ತ ಕೇಂದ್ರೀಕರಿಸುವ ಆವಶ್ಯಕತೆಯಿದೆ. ಮಿತಿಮೀರಿದ ಭಾಷಾ ಪ್ರೇಮದಿಂದ, ಜಾತೀಯ ಪ್ರೇಮದಿಂದ ನಮ್ಮ ಉನ್ನತಿ ಸರ್ವಥಾ ಅಸಾಧ್ಯವಿದೆ ಎಂಬುದನ್ನು ಭಾರತೀಯರು ಅರಿತುಕೊಳ್ಳಬೇಕಾಗಿದೆ. ಈ ದೃಷ್ಟಿಯಿಂದ ಶ್ರೀ ಲಾಲಬಹದೂರ ಶಾಸ್ತ್ರಿಗಳ ಸೂತ್ರ ಬಹುದೂರ ದರ್ಶಿತನದಿಂದ ಕೂಡಿದೆ ಎಂದೇ ಹೇಳಬೇಕು.

5 ರೂ. ಮಾತ್ರ

ನೀವಿನ್ನೂ ಸಿಂಡಿಕೇಟ್ ಬೇಂಕಿನಲ್ಲಿ ಒಂದು
ಸೇವಿಂಗ್ಸ್ ಬೇಂಕ್ ಖಾತೆಯನ್ನು ತೆರೆದಿಲ್ಲವೆ?
ಹಾಗಾದರೆ ಇನ್ನು ತಡಮಾಡಬೇಡಿರಿ.
ಕೇವಲ ಐದು ರೂಪಾಯಿಗಳಿಂದ ನೀವು
ಸೇವಿಂಗ್ಸ್ ಬೇಂಕ್ ಲೆಕ್ಕವನ್ನು ಪ್ರಾರಂಭಿಸಬಹುದು.
ನಿಮಗೆ ಸಾಧ್ಯವಿದ್ದಷ್ಟನ್ನು—25 ನಯೆಪೈಸೆಯಷ್ಟನ್ನು
ಸಹಾ—ನೀವು ನಿಮ್ಮ ಲೆಕ್ಕಕ್ಕೆ ಕೂಡಿಸುತ್ತಾ ಹೋಗಬಹುದು.
ಸಿಂಡಿಕೇಟ್ ಬೇಂಕಿನ ಚೆಕ್ ಮತ್ತು ಪಾಸ್ ಪುಸ್ತಕಗಳೆರಡು
ನಿಮ್ಮ ಗೌರವದ ಸೊತ್ತುಗಳಾಗುವುವು.
ಮಾತ್ರವಲ್ಲ, ನಿಮ್ಮ ಹಣಕ್ಕೆ ಯೋಗ್ಯ ಬಡ್ಡಿಯನ್ನೂ
(ಆರು ತಿಂಗಳಿಗೊಮ್ಮೆ ಸಾ. ಸೇಕಡಾ 3ರಷ್ಟು) ಗಳಿಸಬಹುದು.

ಇಂದೇ ನಿಮಗೆ ಸಮೀಪವಿರುವ ನಮ್ಮ ಶಾಖೆಯೊಂದನ್ನು ದಯಮಾಡಿ ಸಂದರ್ಶಿಸಿರಿ.

ಆಗಾಗ ಉಳಿಸಲು
ಮಿತವಾಗಿ ವ್ಯಯಿಸಲು
ಬಡ್ಡಿಯನು ಗಳಿಸಲು
ಸೇವಿಂಗ್ಸ್ ಬೇಂಕ್

ಸಿಂಡಿಕೇಟ್ ಬೇಂಕ್
ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್.

ಡಿ. ಕೆ. ಭಾರದ್ವಾಜರ
ಇಂಗ್ಲಿಷ್, ಇಂಗ್ಲಿಷ್-ಕನ್ನಡ
ಡಿಕ್ಸನರಿ
ಬೆಲೆ: ರೂ. ನಾಲ್ಕು.
ಐದು ರೂಪಾಯಿ ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಲಾಗುವುದು.
ನವಭಾರತ ಪುಸ್ತಕ ಭಂಡಾರ ಉಡುಪಿ.

Edited Printed & Published by K. H. Shetty, at the Navayuga Press, Udipi, S. India.

40th year of publication. 22-6-1961 ೪೦ನೇ ವರ್ಷ

ಸಂಪುಟ ೪೧ Vol. 41

ನವಯುಗ

ಸಂಚಿಕೆ ೪೦ No. 40

ಬೆಲೆ 0=13

ಪ್ರಚಲಿತ ಪ್ರಸಂಗ

ಶೈಕ್ಷಣಿಕ ವಿಕಾಸ ಯೋಜನೆಗಳು

ಭಾರತದ ಶೈಕ್ಷಣಿಕ ವಿಕಾಸ ಯೋಜನೆಗಳನ್ನು ಯಶಸ್ವಿಗೊಳಿಸಲು ಯುನೆಸ್ಕೊವಿನ ರಾಷ್ಟ್ರಗಳು ಉತ್ಸಾಹದಿಂದ ಕಾರ್ಯಪ್ರವೃತ್ತವಾಗುತ್ತಿವೆ. ಸಾಧನ ಸಲಕರಣೆಗಳ ರೂಪದಲ್ಲಿರುವ ಅವುಗಳ ಸಹಾಯ ಪ್ರಾಥಮಿಕ ಶಿಕ್ಷಣ ಕ್ಷೇತ್ರಕ್ಕೆ ವರದಾನ ಸದೃಶವಾಗಿದೆ.

ಅಮೆರಿಕದಲ್ಲಿ ಭಾರತದ ರಾಯಭಾರಿಯಾಗಿದ್ದ ಶ್ರೀ ಛಗ್ಲಾರು ತನ್ನ ಅಧಿಕಾರ ಪದಿಯ ಸಂಧ್ಯಾಕಾಲದಲ್ಲಿ ಅಧ್ಯಕ್ಷ ಕೆನೆಡಿಯವರಿಗೆ ಹಸ್ತಾಂದೋಲನ ನೀಡುತ್ತಿರುವರು.

ಮೂರನೆಯ ಪಂಚವಾರ್ಷಿಕ ಯೋಜನಾವಧಿಯಲ್ಲಿ ಭಾರತದಲ್ಲಿ ಖಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಕೊಡುವ ಕಾರ್ಯವು ಭರದಿಂದ ಮುನ್ನಡೆಯಲಿರುವುದು. ಶಿಕ್ಷಣದ ಅಭಿವೃದ್ಧಿಗಾಗಿ ೪೧೧ ಕೋಟಿ ರೂಪಾಯಿಗಳ ಯೋಜನೆಯು ಸಿದ್ಧವಾಗಿದ್ದು, ಇದು ಕಾರ್ಯರೂಪಕ್ಕೆ ಬರಲಿದೆ. ಈ ಯೋಜನೆಗೆ ಯುನೆಸ್ಕೊ ಮತ್ತದರ ಮುಂದುವರಿದ ಸದಸ್ಯ ರಾಷ್ಟ್ರಗಳ ಸಹಾಯವೂ ದೊರೆಯುವುದೆಂದು ವಿಶ್ವಸನೀಯವಾಗಿ ತಿಳಿದು ಬಂದಿದೆ. ಈ ಸಂಬಂಧದಲ್ಲಿ ಭಾರತ ಸರಕಾರವು ಯುನೆಸ್ಕೊ ಮತ್ತು ಅದರ ಸದಸ್ಯ ರಾಷ್ಟ್ರಗಳೊಡನೆ ಮಾತುಕತೆಗಳನ್ನು ನಡೆಸಿದೆ. ಕೇಂದ್ರ ಶೈಕ್ಷಣಿಕ ಮಂತ್ರಿ ಶಾಖೆಯ ಕಾರ್ಯದರ್ಶಿ ಶ್ರೀ ಪಿ. ಎನ್. ಕಿರ್ಪಾಲರು ಯುನೆಸ್ಕೊವಿನ ಉಚ್ಚ ಅಧಿಕಾರಿಗಳೊಡನೆ ಹಾಗೂ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳೊಡನೆ ಈ ಸಂಬಂಧದ ವಿಚಾರ ವಿನಿಮಯ ಮಾಡಿ ಮರಳಿ ಬಂದಿದ್ದಾರೆ.

೧೯೬೦ರಲ್ಲಿ ಕರಾಚಿಯಲ್ಲಿ ಸೇರಿದ ಏಶ್ಯನ್ ರಾಷ್ಟ್ರಗಳ ಸಮ್ಮೇಳನದಲ್ಲಿ ಏಶ್ಯದ ಎಲ್ಲ ರಾಷ್ಟ್ರಗಳಲ್ಲಿಯೂ ಸಾರ್ವತ್ರಿಕ ಉಚಿತ ಅನಿವಾರ್ಯ ಪ್ರಾಥಮಿಕ ಶಿಕ್ಷಣವನ್ನು ಸಾಧಿಸಲು ೨೦ ವರ್ಷಗಳ ಯೋಜನೆಯೊಂದು ಸ್ವೀಕೃತವಾಗಿತ್ತು. ಈಗ 'ಯುನೆಸ್ಕೊ'ವು ನೀಡುವ ಸಹಾಯವು ಈ ಯೋಜನೆಯಲ್ಲಿ ಅಂತರ್ಗತವಾಗುವುದು. ಈ ಸಹಾಯವನ್ನು ಆರ್ಥಿಕ ರೂಪದಲ್ಲಿ ನೀಡದೆ ಆವಶ್ಯಕ ಸಾಧನೋಪಕರಣಗಳ ಪೂರೈಕೆಯ ರೂಪದಲ್ಲಿ ಕೊಡಲಾಗುವುದು. ಇದು ವರೆಗೆ ವಿಶ್ವವಿದ್ಯಾಲಯ ಶಿಕ್ಷಣ, ಮುಖ್ಯವಾಗಿ ವಿಜ್ಞಾನ ಮತ್ತು ತಾಂತ್ರಿಕ ಶಿಕ್ಷಣಗಳ, ಬಗ್ಗೆ ಯುನೆಸ್ಕೊವಿನ ನೆರವು ಲಭಿಸುತಿತ್ತು. ಈಗ, ಯುನೆಸ್ಕೊವಿನ ಮೂಲಕ ಅದರ ಸದಸ್ಯ ರಾಷ್ಟ್ರಗಳು ನೀಡುವ ಸಹಾಯವು ಪ್ರಾಥಮಿಕ, ಮಾಧ್ಯಮಿಕ ಹಾಗೂ ವಿಶ್ವವಿದ್ಯಾಲಯದ ಶಿಕ್ಷಣಗಳೆಲ್ಲವುಗಳಿಗೂ ದೊರೆಯುವುದು.

ಸ್ಕೇಡಿನೇವಿಯನ್ ದೇಶಗಳು ಭಾರತೀಯ ಶಾಲಾ ಮಕ್ಕಳಿಗೆ ಉಚಿತವಾಗಿ ಪಠ್ಯಪುಸ್ತಕವನ್ನು ಒದಗಿಸುವ ಹಂಚಿಕೆಯೊಂದನ್ನು ತಯಾರಿಸಿವೆ. ಅಸ್ಟ್ರೇಲಿಯಾ ಮತ್ತು ನ್ಯೂಜಿಲೇಂಡ್‌ಗಳು ಮೂರನೆಯ ಯೋಜನಾವಧಿಯ ಪ್ರತಿ ವರ್ಷದಲ್ಲಿ ಯುನೆಸ್ಕೊವಿನ ಮೂಲಕ ೧೦ ಸಾವಿರ ಟನ್ ಕಾಗದವನ್ನು ಪೂರೈಸುವ ನಿರೀಕ್ಷೆಯಿದೆ. ಯುನೆಸ್ಕೊವಿನ 'ಏಶ್ಯನ್ ಯೋಜನೆ'ಯನ್ವಯ ಈ ಬಗೆಯ ಸಹಾಯವು ದೊರೆಯುವುದರಿಂದ, ಉಳಿದ ಏಶ್ಯನ್ ರಾಷ್ಟ್ರಗಳಿಗೂ ಇದರಿಂದ ಪ್ರಯೋಜನವಿದೆ. ಪಾಕಿಸ್ತಾನಕ್ಕೆ ಮೂರು ಸಾವಿರ, ಇಂಡೊನೇಶ್ಯಕ್ಕೆ ಎರಡೂವರೆ ಸಾವಿರ ಮತ್ತು ಬರ್ಮಾಕ್ಕೆ ಒಂದೂವರೆ ಸಾವಿರ ಟನ್ ಕಾಗದವು ಪ್ರತಿವರ್ಷ ಸಿಗುವಂತಾಗುವುದು.

ಅಸ್ಟ್ರೇಲಿಯಾ—ನ್ಯೂಜಿಲೇಂಡ್‌ಗಳ ಕಾಗದದ ಕೊಡುಗೆಯಂತೆಯೇ ಪಶ್ಚಿಮ ಜರ್ಮನಿಯ ಮುದ್ರಣದ ಯಂತ್ರೋಪಕರಣಗಳ ದೇಣಿಗೆಯೂ ಮಹತ್ವಪೂರ್ಣವಾಗಿದೆ. ಮುದ್ರಣ ಯಂತ್ರಗಳನ್ನೊದಗಿಸಲು ಒಂದು ಮಿಲಿಯ ಮಾರ್ಕ್‌ಗಳನ್ನು ತೆಗೆದಿರಿಸಿದೆ. ಪಶ್ಚಿಮ ಜರ್ಮನಿಯು ದಾನನೀಯುವ ಮುದ್ರಣ ಯಂತ್ರವು ೧೨೦ ಪುಟಗಳ ಒಂದು ಲಕ್ಷ ಪುಟಗಳನ್ನು ಅಚ್ಚುಹಾಕಿ ಸಿದ್ಧಪಡಿಸುವ ಶಕ್ತಿ ಪಡೆಯುವುದು. ಈ ಯಂತ್ರವು ಮುಂದಿನ ವರ್ಷದ ಹೊತ್ತಿಗೆ ಭಾರತಕ್ಕೆ ಬರಲಿದ್ದು ಅದು ಕೇಂದ್ರ ಶಿಕ್ಷಣಮಂತ್ರಿ ಶಾಖೆಯಡಿಯಲ್ಲಿ ಕಾರ್ಯಪ್ರವೃತ್ತವಾಗುವುದು.

ಮಾಧ್ಯಮಿಕ ಶಿಕ್ಷಣದಲ್ಲಿ ತಾಂತ್ರಿಕ ಶಿಕ್ಷಣದತ್ತ ಭಾರತವು ತೀವ್ರ ಗಮನ ಹರಿಸುತ್ತಿವೆ ಮುಂದುವರಿದ ರಾಷ್ಟ್ರಗಳು ಯುನೆಸ್ಕೊವಿನ ಮೂಲಕ ಭಾರತೀಯ ಮಾಧ್ಯಮಿಕ ಶಾಲೆಗಳಿಗೆ ಅತ್ಯಂತ ಅವಶ್ಯಕವಾದ ವೈಜ್ಞಾನಿಕ ಯಂತ್ರೋಪಕರಣಗಳನ್ನು ಒದಗಿಸಿ ಕೊಡುವುವು. ಕೆಲವೊಂದು ವಿಶ್ವವಿದ್ಯಾಲಯಗಳನ್ನು ವಿಸ್ತರಿಸಲು ಮತ್ತು ಅವುಗಳ ಸ್ಥಿತಿಯನ್ನು ಸುಧಾರಿಸಲು ಮುಂದಿಟ್ಟಿರುವ ಸೂಚನೆಗಳನ್ನು ಆ ರಾಷ್ಟ್ರಗಳು ಪರ್ಯಾಲೋಚಿಸುತ್ತಿರುವುವು. ಇದು ಕಾರ್ಯರೂಪಕ್ಕೆ ಬಂದಿತೆಂದರೆ, ವಿಶ್ವವಿದ್ಯಾಲಯಗಳಲ್ಲಿ ಅಧ್ಯಾಪಕರು, ಪುಸ್ತಕಗಳು ಮತ್ತಿತರ ಉಪಕರಣಗಳ ಸೌಲಭ್ಯ ಹೆಚ್ಚುವುದು.

ಅನಭಿವೃದ್ಧ ರಾಷ್ಟ್ರಗಳಲ್ಲಿನ ಶಿಕ್ಷಣಾಭಿವೃದ್ಧಿ ಯೋಜನೆಯ ಬಗ್ಗೆ ಮುಂದುವರಿದ ರಾಷ್ಟ್ರಗಳಲ್ಲಿ ಆಸ್ಥೆ ಹೆಚ್ಚುತ್ತಿದೆ. ಆರ್ಥಿಕಾಭಿವೃದ್ಧಿ ಯೋಜನೆಗಳು ತೀವ್ರ ಫಲಪ್ರದವೆನಿಸಲು ಅಲ್ಲಿ ಶಿಕ್ಷಣ ಪ್ರಸಾರವೂ ಅದೇ ಪ್ರಮಾಣದಲ್ಲಿ ಮುಂದುವರಿಯುವುದು ಅವಶ್ಯವೆಂದು ಅವು ತಿಳಿದುಕೊಂಡಿವೆ. ಇದು ವರೆಗೆ ಉದ್ಯಮ, ಶಾರಿಗೆ ಮತ್ತು ಒಕ್ಕಲತನಗಳ ಕ್ಷೇತ್ರಗಳಿಗೆ ಕೊಡುತಿದ್ದಂತೆಯೇ ಈಗ ಶೈಕ್ಷಣಿಕ ವಿಕಾಸ ಕಾರ್ಯಕ್ರಮಕ್ಕೂ ಅವು ಮುಕ್ತಹಸ್ತದಿಂದ ದಾನನೀಡಲು ಮುಂಪೆ ಬರುತ್ತಿವೆ. ಪ್ಯಾರಿಸ್‌ನಲ್ಲಿ ಇತ್ತೀಚಿಗೆ ಸೇರಿದ್ದ ಯುನೆಸ್ಕೊ ಅಧಿವೇಶನದಲ್ಲಿ ಭಾರತೀಯ ಪ್ರತಿನಿಧಿಯಾಗಿರುವ ಶ್ರೀಮತಿ ಇಂದಿರಾ ಗಾಂಧಿಯವರು ಏಶ್ಯ ಮತ್ತು ಆಫ್ರಿಕದಲ್ಲಿ ಶಿಕ್ಷಣ ಪ್ರಸಾರಕ್ಕೆ ಯುನೆಸ್ಕೋ ಸಹಾಯ ನೀಡುವ ಅವಶ್ಯಕತೆಯನ್ನು ಒತ್ತಿ ಹೇಳಿದ್ದರು.

ಭಾರತದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಸಫಲಗೊಳಿಸುವಲ್ಲಿರುವ ವಿಘ್ನವಿಡಂಬನಗಳನ್ನು ಅವರು ವಿವರಿಸುತ್ತ "ನಮ್ಮ ದೇಶದ ಮಕ್ಕಳಿಗೆ ಪಾಠಪುಸ್ತಕಗಳನ್ನು ಬಟ್ಟೆ ಬರೆಗಳನ್ನೂ ಒದಗಿಸಿಕೊಡ ಬೇಕಲ್ಲದೆ ಮಧ್ಯಾಹ್ನದ ಊಟದ ವ್ಯವಸ್ಥೆಯನ್ನು ಕೂಡ ಮಾಡಿಕೊಡ ಬೇಕಾಗುವುದು. ಪ್ರಾಥಮಿಕ ಶಿಕ್ಷಣವನ್ನು ರಾಷ್ಟ್ರವನ್ನು ರಾಷ್ಟ್ರದ ಯೋಜನೆಯನ್ನಾಗಿಸದೆ ವ್ಯಕ್ತಿಗತ ಯೋಜನೆಯನ್ನಾಗಿ ರೂಪಿಸುವುದು ಅತ್ಯವಶ್ಯವಾಗಿದೆ. ಇದಕ್ಕಾಗಿ ಮುಂದುವರಿದ ರಾಷ್ಟ್ರಗಳು ಆಸಕ್ತಿಯಿಂದ ಸಹಾಯ ನೀಡಬೇಕಾಗಿದೆ. ನಮ್ಮ ಮೂರನೆಯ

೧೨ನೇ ಪುಟ ನೋಡಿರಿ

ESTD. 1921

NAVAYUGA
KANNADA WEEKLY, UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೨೧.

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್.
ಬಿ. ಶಾಮರಾಯ ಶೆಟ್ಟಿ, ಬಿ. ಎ., ಎಲ್. ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

●

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50
ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾದಾರರು ಚಂದಾ ಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮಾ ಮಾಡುವ ಅನುಕೂಲ ಇರುವುದು.

ಧಾರಾವಾಹಿ ಕಾದಂಬರಿ

ಯಮುನ ನೆರಳು

ಮೂಲ ಲೇಖಕರು: **ಶ್ರೀ ಎಂ. ಎಲ್. ಪಾಂಡೇಯ.**
ಅನುವಾದಕರು: **ಶ್ರೀ ಎಸ್. ಎಂ. ಶೆಟ್ಟಿ, ಶಿಮುಂಜೆ ಪರಾರಿ.**
(ಕಳೆದ ಸಂಚಿಕೆಯಿಂದ)

೯

"ನಾವು ಎಷ್ಟೊಂದು ಪ್ರಯತ್ನಪಟ್ಟರೂ ನಮ್ಮ ಕೆಲಸ ಆಗುವುದಿಲ್ಲ. ಫಲಕದಾರಿಯು ಬಹಳ ಕಷ್ಟಪಟ್ಟರೂ ಬಂಗಾರದ ಜಿಂಕೆಯು ತಪ್ಪಿಕೊಂಡಿತು." ಎಂದ ವ್ಯಸನದಿಂದ ತನ್ನ ಸಹಯೋಗಿಗಳೊಡನೆ ದಲಿತಸಿಂಹ.

"ಶ್ರೀಮಾನ್, ನನ್ನ ಅಭಿಪ್ರಾಯದಂತೆ ಇವೆಲ್ಲಾ ಯುಕ್ತಿಗಳು ಸಫಲವಾಗುವಂತಿಲ್ಲ. ನಾನು ನೀವು ಹೇಳಿದಂತಹ ಅಸಾಧ್ಯ ಕೆಲಸವೊಂದನ್ನು ಮಾಡಿದೆ. ಅದೂ ಪ್ರಯೋಜನಕಾರಿಯಾಗಲಿಲ್ಲ. ಇನ್ನುಳಿದುದೊಂದೇ ಮಾರ್ಗ. ಒಂದು ವೇಳೆ ತನ್ನ ಒಪ್ಪಿಗೆಯಾದರೆ ಮಾಯಾವತಿಯು ಪತ್ರವನ್ನು ವೃತ್ತ ಪತ್ರಿಕೆಯಲ್ಲಿ ಪ್ರಕಟಿಸಿ ಅವಳ ಮನವನ್ನು ಸೆಳೆಹಿಡಿಯುವುದು." ಎಂದ ಫಲಕದಾರಿ.

"ಆಗತ್ಯವಾಗಿ—'ಈ ಕಾರ್ಯದಿಂದ ನಿಮ್ಮ ಪ್ರಯತ್ನ ಸಫಲವಾಗುವುದೆಂದು ನಾನು ನಂಬಿರುವೆನು. ಫಲಕದಾರ! ನಮಗೆ ಆ ವಿಚಿತ್ರ ಚಿತ್ರಕಾರನ ಬಂಗಲೆ ಇನ್ನೊಮ್ಮೆ ನೋಡಬೇಕಿತ್ತು." "ಅಲ್ಲಿಯ ತನಿಖೆ ನಡೆಸುವುದು ವ್ಯರ್ಥ. ಹಿಮ್ಮೆಯಂತೂ ನಮಗೆ ಅಲ್ಲಿಯ ಅನುಭವವಾಗಿದೆ".

"ಒಮ್ಮೆ ವಿಫಲವಾಗಿದೆಯೆಂದು ಇನ್ನೊಮ್ಮೆ ಪ್ರಯತ್ನ ಪಟ್ಟರೆ ಕೆಡುಕಾದೀತೇ?"

ತಪ್ಪಿಚ್ಛೆ, ಆದರೆ ಈ ಸಲ ತುಂಬಾ ಹುಷಾರಾಗಿರಬೇಕು".

ತದನಂತರ ಫಲಕದಾರಿಸಿಂಹನು ಎದ್ದು ಮನೆಯತ್ತ ಮರಳಿದನು. ಇತರ ಸದಸ್ಯರೂ ಹೊರಟರು.

ಈ ಘಟನೆಯ ಮರುದಿವಸ ಮಾಯಾವತಿಯು ತನ್ನ ತೋಟದಲ್ಲಿ ಹರ್ಷಾವತಿ ದಾಮೋದರರೊಂದಿಗೆ ಮಾತಾಡುತ್ತಿದ್ದಳು. ಅವಳು ದಾಮೋದರರೊಡನೆ— "ನಾನು ಜಯಂತರಿಗೆ ಧನ್ಯವಾದವನ್ನರ್ಪಿಸಲು ಆಶಿಸುತ್ತೇನೆ" ಎಂದಳು.

"ಆದರೆ ಬಾರಿ ಬಾರಿ ಅಲ್ಲಿ ಹೋಗುವುದು ಒಳ್ಳೇದಲ್ಲ. ಜಯಂತರಿಗೆ ಸಮಯವೂ ಇರುವುದಿಲ್ಲ. ಮತ್ತವರ ನೀರಸ ಪ್ರವೃತ್ತಿಯು ಗುಣವಾಗಿ ಅವರು ಯಾರೊಡನೆಯೂ ಬೆರೆಯುವುದಿಲ್ಲ'

"ನಾನು ಕೇವಲ ಅವರ ಉಪಕಾರಕ್ಕೆ ಧನ್ಯವಾದಗಳನ್ನು ಅರ್ಪಿಸಲು ಆಶಿಸುತ್ತೇನೆ"

"ಹಾಗಾದರೆ ತಾವೇನು ಯೋಚಿಸಿದ್ದಿರಿ? ಧನ್ಯವಾದ ಯಾವ ರೀತಿಯಲ್ಲಿ ಕೊಡಲಿಚ್ಛಿಸುತ್ತೀರಿ? ಈ ವಿಷಯದಲ್ಲಿ ನನ್ನಿಂದೇನು ಕೆಲಸವಾಗಬೇಕು?"

"ನೀವು ಒಂದು ಸಲ ನನ್ನನ್ನು ಕರೆದುಕೊಂಡು ಹೋಗಿರಿ. ನಾನವರಿಗೆ ಹೂಗೊಂಡೆಯನ್ನು ಕಾಣಿಕೆಯಾಗಿ ಕೊಡಲಿಚ್ಛಿಸುತ್ತೇನೆ"

"ನನ್ನನ್ನು ಕರೆದುಕೊಂಡು ಹೋಗದಿದ್ದರೆ ಒಳ್ಳೆಯದಿತ್ತು. ಆದರೆ ತಾವು ಹೇಹೇಳುವಾಗ ಬರಲಿಕ್ಕಾಗದಿರುತ್ತದೆಯೇ? ಎಂದರು ದಾಮೋದರ್.

ದಾಮೋದರರ ಆಜ್ಞೆಯನ್ನು ಪಡೆಯುತ್ತಲೇ ಒಂದು ಚಂದದ ಹೂ ಗೊಂಚಲನ್ನು ಸಿದ್ಧಪಡಿಸಿ ಮಾಯಾಳು ದಾಮೋದರರೊಡನೆ ಮಹೇಂದ್ರಗಡದತ್ತ ಸಾಗಿದಳು.

ಮಹೇಂದ್ರಗಡವನ್ನು ತಲಪಿದ ದಾಮೋದರರು ಕಾರನ್ನು ಹೊರಬಾಗಿಲ ಬಳಿ ನಿಲ್ಲಿಸಿದರು. ನವಲೇಂದ್ರನು ಬಾಗಿಲು ತೆರೆದನು. ಒಳ ಹೋದ ನಂತರ ನವಲೇಂದ್ರನು ಮಾಯಾವತಿಯನ್ನು ಒಂದು ಕೋಣೆಯಲ್ಲಿ ಕುಳ್ಳಿರಿಸಿ, ದಾಮೋದರರೊಂದಿಗೆ ಜಯಂತರ ರೂಮಿಗೆ ಹೋದನು.

"ಹಲೋ, ದಾಮೋದರ್! ಏನು ಬಂದಿರಿ? ಎಲ್ಲ ಸೌಖ್ಯ ತಾನೆ?"

"ಮಹಾರಾಯರೇ, ನಿಮಗೆ ಧನ್ಯವಾದವನ್ನರ್ಪಿಸಲು ಮಾಯಾ ಬಂದಿರುವಳು."

"ಧನ್ಯವಾದವೇಕೆ?"

"ಚಿತ್ರ ಮಾಡಿಕೊಟ್ಟುದಕ್ಕಾಗಿ"

ಶುಲ್ಕ ಪಡೆದ ನಂತರ ಧನ್ಯವಾದರ್ಪಣೆ ಎಂತಹದು. ನೀವು ನಿಮ್ಮ ಹುಡುಗಾಟಿಕೆಯನ್ನು ಇನ್ನೂ ಬಿಟ್ಟಿಲ್ಲ."

"ನೀವೇಕೆ ಕೋಪಗೊಳ್ಳುತ್ತೀರಿ? ಇದರಲ್ಲಿ ನನ್ನಪರಾಧವೇನು? ನಾನು ಬೇಡವೆಂದು ಬಹಳ ತಿಳಿಸಿದೆ. ಆದರೆ ಅವಳು ಕೇಳಲಿಲ್ಲ."

"ಆಗಲಿ ....." ಎಂದು ಹೇಳಿ ಮಾಯಾಳನ್ನು ಕರೆಯಲು ನವಲೇಂದ್ರನಿಗೆ ಸನ್ನೆ ಮಾಡಿದರು. ಮಾಯಾಳು ಹೊರಗಿನಿಂದ ಬರುತ್ತಲೇ ಜಯಂತರನ್ನು ಕಂಡು ನಮಸ್ಕರಿಸಿದಳು. ಮಾಯಾಳು ಅವರಿದಿರಿನ ಕುರ್ಚಿಯಲ್ಲಿ ಅವರ ಹೇಳಿಕೆ ಮೇರೆಗೆ ಕುಳಿತುಕೊಂಡು 'ಗುಲಾದಸ್ತ'ವನ್ನು ಜಯಂತರ ಕಡೆ ನೀಡಿದಳು. "ಇದರ ಆವಶ್ಯಕತೆಯೇನಿತ್ತು?" ಎನ್ನುವಾಗ ಅವರ ಅಂತರ್‌ದೃಷ್ಟಿಯಲಿ ಸಜಲವಾಯ್ತು. ಮಾಯಾವತಿಯ ನೇತ್ರಗಳೂ ತುಂಬಿ ಬಂದವು. ಸ್ವಲ್ಪವೇ ಸಮಯದಲ್ಲಿ ಈರ್ವರೂ ತಮ್ಮ ದುಗುಡವನ್ನು ಹತ್ತಿಕ್ಕಿ ಶಾಂತತೆಯಿಂದ ನಿಶ್ಚಲರಾಗಿ ಕುಳಿತರು.

ಜಯಂತರ ಅನ್ಯಮನಸ್ಕ ವ್ಯವಹಾರದಿಂದ ಮಾಯಾಳು ಎದ್ದು ದಾಮೋದರರೊಂದಿಗೆ ಕಾರಿನಲ್ಲಿ ಕುಳಿತು ಬಂಗಲೆಗೆ ತೆರಳಿದಳು. ಅವರು ಬಂಗಲೆಯನ್ನು ತಲುಪುವಾಗಲೇ ಪ್ರಾಣದಾಸರು ಭಯವಿಹ್ವಲರಾಗಿ ಕೋಣೆಯನ್ನು ಪ್ರವೇಶಿಸಿದರು. ಅಲ್ಲಿಂದ ಒಂದು ಕಾಗದವನ್ನು ತೆಗೆದುಕೊಟ್ಟರು ದಾಮೋದರರು ಪತ್ರವನ್ನೋದಿ ಮಾಯಾಳ ಕೈಗಿತ್ತರು. ಮಾಯಾಳು ಓದ ತೊಡಗಿದಳು.

ಕುಮಾರಿ ಮಾಯಾವತಿಗೆ—

ಜಯಹಿಂದ್—

ನಿಮ್ಮ ದುರ್ವ್ಯವಹಾರದಿಂದ ನೀವು ಬಂಗಾಲೀ ಭಾಷೆಯಲ್ಲಿ ಬರೆದುಕೊಟ್ಟ ಪತ್ರವನ್ನು ವೃತ್ತ ಪತ್ರಿಕೆಯಲ್ಲಿ ಪ್ರಕಟಿಸುವುದಾಗಿ ನಿರ್ಧಾರ ಮಾಡಿದೆ. ತಾವು ನನ್ನನ್ನು ಪ್ರೇಮಿಸಿರುವುದಾಗಿಯೂ, ನನ್ನೊಡನೆ ಮದುವೆಯಾಗುವಿರಾಗಿಯೂ ಒಪ್ಪಿದುದು ಜ್ಞಾಪಕದಲ್ಲಿರಬಹುದು. ಅಲ್ಲದೆ ತಾವು ಆ ಪತ್ರದ ಮೂಲಕ ನನ್ನ ಪತ್ನಿಯಾಗಿದ್ದೀರಿ. ಇತ್ತೀಚೆಗಿನ ನಿಮ್ಮ ವ್ಯವಹಾರಗಳು ಅರುಚಿಕರವಾಗಿ ತೋರುತ್ತಿವೆ. ಹಾಗೂ ಇದು ನನಗೆ ಅಪ್ರಿಯ ಸಂಗತಿಯಾಗಿದೆ.

ಇತಿ ನಿಮ್ಮ ಭಾವೀಪತಿ,
ಫಲಕದಾರಿಸಿಂಹ ತಾಲೂಕೇದಾರ.

ಪತ್ರವನ್ನೋದಿದ ಮಾಯಾಳಿಗೆ ತಲೆ ತಿರುಗಿತು. ಭಯದಿಂದ ಹೃದಯ ಕಂಪಿಸತೊಡಗಿತು ಮುಖವು ವಿವರ್ಣವಾಯಿತು. ದಯಾ ಯಾಚನೆಯ ದೃಷ್ಟಿಯಿಂದ ದಾಮೋದರರ ಕಡೆ ನೋಡುತ್ತಾ–'ಈಗೇನು ಮಾಡುವುದು' ಎಂದಳು

"ತಾವು ಹೆದರಬೇಡಿ, ಯಾವ ರೀತಿ

(೧೧ನೇ ಪುಟ ನೋಡಿರಿ)

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ರೇವಣಿ ಮಾಡಿರಿ: ಬಡ್ಡಿ ಸೇಕಡಾ 5ರಂತೆ: ರೂ 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ 100—00 ಒದಗಿಸುವುದು.

ಕರೆ, ಚಿಕ್ಕ ಮ್ಯಾದೆ, ನಿರಖು ರೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು; ಬಡ್ಡಿ ಸೇಕಡಾ 5¼ರ ವರೆಗೆ.

ತಾ. 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK LTD.
Estd: 1920



ವಿಚಾರವರ್ಷ

ಚೈತನ್ಯಪೂರ್ಣ ಸಾಹಿತ್ಯ ಸೃಷ್ಟಿ

ಮನೋರಂಜನೆಯಷ್ಟೇ ಸಾಹಿತ್ಯದ ಉದ್ದೇಶವಲ್ಲ; ಅಲ್ಲಾವುದೀನನ ವಿಚಿತ್ರ ದೀಪದ ಕಾಲ್ಪನಿಕ ಕಥೆಯೇ ಸಾಹಿತ್ಯದ ಪರಾಕಾಷ್ಠೆಯಲ್ಲ. ಮಾನವನ ಮುಂದೆ ಉನ್ನತ ಆದರ್ಶವನ್ನು ನಿಲ್ಲಿಸಿ, ಆತನನ್ನು ಚೇತನಾಯುಕ್ತನನ್ನಾಗಿ ಮಾಡಿ ಕೃತಕೃತ್ಯವಾಗುವ ಸಾಹಿತ್ಯ ಸೃಜನೆ ನಮಗಿಂದು ಬೇಕು. ನಮ್ಮಲ್ಲಿರುವ ದೋಷ-ಅಶಕ್ತತೆಗಳ ದೂರೀಕರಣ ಇದಕ್ಕೆ ಮೊದಲಾಗಬೇಕು.

ಜೀವನ ದರ್ಶನದಲ್ಲಿ ಅದೃಷ್ಟವಾದ ಮತ್ತು ಪುರುಷಾರ್ಥವಾದಗಳೆಂಬ ಎರಡು ವಾದಗಳಿವೆ. ಈ ಎರಡು ವಾದಗಳು ಪರಸ್ಪರ ಪರಿಪೋಷಕವಾಗಿವೆಯಾದರೂ ಇಷ್ಟರಿಂದಲೇ ತೃಪ್ತರಾಗುವುದು ಸಮಂಜಸವಲ್ಲ. ಅದೃಷ್ಟ ಮತ್ತು ಪುರುಷಾರ್ಥಗಳ ಕ್ಷೇತ್ರದ ಮಿತಿಯನ್ನು ನಾವು ನಿರ್ಧರಿಸುವುದು ಅವಶ್ಯವಾಗಿದೆ

ಮಾನವ ಸಿದ್ಧಿಯನ್ನು ಬಯಸುವವನು. ಜೀವನದ ಅಂತಿಮ ಉದ್ದೇಶವಾದರೂ ಸಿದ್ಧಿಯೇ. ಬಾಹ್ಯ ಮತ್ತು ಆಂತರಿಕ ಸಿದ್ಧಿಗಳೆಂದು ಇದನ್ನು ಇರ್ತರವಾಗಿ ವಿಭಜಿಸಬಹುದು.

ಮನುಷ್ಯನ ಬುದ್ಧಿಯು ವಿಕಾಸಗೊಳ್ಳುವುದನ್ನು ಆಂತರಿಕ ಸಿದ್ಧಿಯೆನ್ನಬೇಕು. ಆತನ ಕಾರ್ಯಕುಶಲತೆಯ ವೃದ್ಧಿಯು ಕೂಡ ಆಂತರಿಕ ಸಿದ್ಧಿ. ಮಾನವನು ತನ್ನ ಇಚ್ಛೆಗಳನ್ನು, ವಿಕಾರಗಳನ್ನು ಮತ್ತು ಕಲ್ಪನಾ ವಿಲಾಸಗಳನ್ನು ಗೆದ್ದುಕೊಂಡನೆಂದರೆ, ಅದು ಕೂಡ ಆತನ ಆಂತರಿಕ ಸಿದ್ಧಿ. ಇದನ್ನೇ ನಾವು ಸಂಯಮ ಶಕ್ತಿಯೆನ್ನುತ್ತೇವೆ. ಮನುಷ್ಯ ಮಾತ್ರನ ಶಾಶ್ವತ ನಿಧಿಯೆಂದರೆ, ಇವೇ ಸಿದ್ಧಿಗಳು. ಇವುಗಳಲ್ಲಿ ಪ್ರಯತ್ನ, ಪುರುಷಾರ್ಥಗಳ ಕೈವಾಡವೂ ಇಲ್ಲದಿಲ್ಲ.

ಬಾಹ್ಯ ಸಿದ್ಧಿಗಳ ಮಟ್ಟಿಗೆ ಹೇಳುವುದಾದರೆ, ಅವಕ್ಕೆ ಪುರುಷಾರ್ಥ ಮತ್ತು ಅದೃಷ್ಟಗಳೆರಡರ ಸಂಮಿಳನವು ಅನಿವಾರ್ಯ. ಇಸ್ಪೀಟು ಆಡುವವರು ಒಳ್ಳೆಯ ಎಲೆ ತಮ್ಮ ಕೈಸೇರುವುದು ಭಾಗ್ಯವಶದಿಂದ ಎಂದು ತಿಳಿಯುತ್ತಾರೆ. ಆದರೆ ಪಾಲಿಗೆ ಅದೃಷ್ಟ ಬಲದಿಂದ ಬಂದ ಆ ಒಳ್ಳೆಯ ಎಲೆಗಳನ್ನು ಚತುರತೆಯಿಂದ ಆಟದಲ್ಲಿ ಉಪಯೋಗಿಸಿಕೊಳ್ಳುವುದು ಮಾತ್ರ ಅಗತ್ಯವಿದೆ.

ಅದೃಷ್ಟವನ್ನು ನಾವು ಗುರುತಿಸಿಕೊಳ್ಳಬೇಕು; ಅದನ್ನು ಒಪ್ಪಿಯೂ ಕೊಳ್ಳಬೇಕು. ಆದರೆ, ಅದನ್ನೇ ಮರೆಹೋಗುವುದು ಅಥವಾ ಅದನ್ನೇ ನಂಬಿ ಉಪಾಸನೆ ನಡೆಸುವುದು ಮನುಷ್ಯನಿಗೆ ಶೋಭಾದಾಯಕವಾಗಿಲ್ಲ.

ಪುರುಷಾರ್ಥ ಮತ್ತು ಅದೃಷ್ಟಗಳ ಬಗ್ಗೆ ಶುದ್ಧ ದೃಷ್ಟಿಯ ವಿವೇಚನೆಯಿದು. ಆದರೆ, ಸಾಹಿತ್ಯದಲ್ಲಿ ಅದೃಷ್ಟದ ಉಪಾಸನೆಗೆ ಸ್ಥಾನ ದೊರೆಯಬಾರದು. ಪುರುಷಾರ್ಥವಿಹೀನರಾದ ಮಾನವರು, ಜೀವನ ಸಂಗ್ರಾಮದಲ್ಲಿ ಅಸಫಲರಾದವರು ನಿಜವಾಗಿ ದೈವ ಸಹಾಯದಿಂದ ಸಾಹಿತ್ಯದಲ್ಲಿ ಸಾಫಲ್ಯಾನುಭವ ಮಾಡಬಯಸುತ್ತಾರೆ. ಅಲ್ಲಾವುದ್ದೀನ ಮತ್ತಾತನ ವಿಚಿತ್ರ ದೀಪದ ಕಥೆ ಇದೇ ಮನೋವೃತ್ತಿಯ ಒಂದು ಮಾದರಿಯಾಗಿದೆ.

ನಮ್ಮ ದೇಶದ ಪುರಾಣಗಳಲ್ಲಿ ಕಲ್ಪತರು, ಚಿಂತಾಮಣಿ ಮತ್ತು ಕಾಮಧೇನುಗಳ ಕಥಾ ಪ್ರಪಂಚ ಬರುತ್ತದೆ. ಇವೆಲ್ಲವೂ ಪುರುಷಾರ್ಥ ವಿಹೀನ ಅದೃಷ್ಟವಾದಿಗಳ ಕಾಲ್ಪನಿಕ ಸೃಷ್ಟಿಯಾಗಿದೆ. ಕಥೆಗಾರರು ಮುಂದುವರಿಸಲು ಅಸಮರ್ಥರಾದಾಗ, ಶಂಖಚಕ್ರಗದಾಪದ್ಮ ಭೂಷಿತನಾದ ವಿಷ್ಣುಪರಮಾತ್ಮನನ್ನು ತಂದು ಮುಂದೆ ನಿಲ್ಲಿಸುತ್ತಾರೆ. ಈತನ ಮೂಲಕ ಎಲ್ಲ ಕಾರ್ಯವನ್ನೂ ಸಾಧಿಸಿಕೊಳ್ಳುತ್ತಾರೆ

'ಯೋಗಕ್ಷೇಮಂ ವಹಾಮ್ಯಹಂ' ಎಂಬ ಪರಮಾತ್ಮನ ಅಭಯವಾಣಿಯನ್ನು ಭಕ್ತರು ಅಚಲವಾಗಿ ನಂಬಿದ್ದಾರೆ. ಪರಮಾತ್ಮನ ಅನನ್ಯ ಭಕ್ತರ ಭರಣ ಪೋಷಣೆಯ ಭಾರವನ್ನು ಸ್ವಯ ಪರಮಾತ್ಮನೇ ಹೊತ್ತುಕೊಂಡಿರುವಾಗ, ಮನುಷ್ಯನು ಪ್ರಯಾಸ ಪಡಬೇಕಾದ ಆವಶ್ಯಕತೆಯಾದರೂ ಏನು?

ಆಂಗ್ಲ ಸಾಹಿತ್ಯದಲ್ಲಿ ಕೂಡ ಒಬ್ಬ ಸುಯೋಗ್ಯ ವ್ಯಕ್ತಿಯು ಜೀವನದಲ್ಲಿ ಭಾಗ್ಯೋದಯ ತೋರಿರಬೇಕಾದಾಗ, ಆತನ ಅತಿ ದೂರದ ಅಜ್ಞಾನ ಚಿಕ್ಕಪ್ಪನೊಬ್ಬ ಮೃತ್ಯುಪತ್ರವನ್ನು ಹಿಡಿದುಕೊಂಡು ಆ ವ್ಯಕ್ತಿಯ ಬಳಿಗೆ ಆಪಸುತ್ತ ಸಮಾಗಮಿಸುತ್ತಾನೆ. ಇದೆಲ್ಲವೂ ಅದೃಷ್ಟದ ಕೈವಾಡ. ವಿಚಿತ್ರ ದೀಪ, ರತ್ನ ಚಿಂತಾಮಣಿ ಮೊದಲಾದುವು ತಮ್ಮ ಕೈಸೇರಿದ್ದರೂ ಜನರು ರಾಜ ಮಂದಿರ, ರಾಜಕುಮಾರಿ ಮತ್ತು ಮಿಷ್ಟಾನ್ನ ಮೊದಲಾದುವುಗಳಿಗಾಗಿಯೇ ಜೀವ ಬಿಡುತ್ತಿದ್ದುದು ಅತಿ ಮೋಜಿನ ಸಂಗತಿ. ಯಾವುದೇ ಕಥೆಯು 'ಅಲ್ಲಾವುದ್ದೀನ'ನು ತನ್ನ ದೀಪದೊಡನೆ, ಸಹಾರಾ ಅಥವಾ ಕಚ್ಛದ ಮರುಭೂಮಿಯಲ್ಲಿ ನದಿಗಳು ಹರಿಯಲಿ; ಬರಗಾಲ ಪೀಡಿತ ದೇಶಗಳಲ್ಲಿ ಸುಭಿಕ್ಷೆಯುಂಟಾಗಿ ಜನರ ಜೀವನ ಸುಖಮಯವಾಗಲಿ; ಯುದ್ಧವು ಮುಂದೆ ನಡೆಯದಂತಾಗಲಿ ಎಂದು ಮುಂತಾಗಿ ಕೇಳಿಕೊಂಡ ಉದಾಹರಣೆಗಳಿಲ್ಲ. ಸಾಧು ಸಂತರ ಪ್ರಾರ್ಥನೆಯಲ್ಲಿ ಅಪರೂಪಕ್ಕೊಮ್ಮೆ ಇಂತಹ ಉದ್ಗಾರ ಹೊರಪಟ್ಟದುಂಟು. ಅದೃಷ್ಟವಾದಿ ಸಾಹಿತ್ಯಕಾರರ ಕ್ಷೇತ್ರದಲ್ಲಿ ವ್ಯಕ್ತಿಗತ ಸ್ವಾರ್ಥ, ಭೋಗ ಮತ್ತು ಐಶ್ವರ್ಯಗಳೇ ತಾಂಡವವಾಡುತ್ತಿವೆ.

ನಾವು ರಾಜ ಪರಂಪರೆಯನ್ನು ಮುನ್ನಡೆಸಿಕೊಂಡು ಬಂದವರು; ಇದರಲ್ಲಿ ಕೂಡ ನಾವು ಪುರುಷಾರ್ಥವನ್ನು ಕ್ಷೀಣಗೊಳಿಸಿದ್ದೇವೆ. ರಾಜನೇ ಎಲ್ಲವನ್ನೂ ಮಾಡುತ್ತಾನೆ. ಮಾಡದೆ ಹೋದರೆ ನರಕಕ್ಕೆ ಹೋಗುತ್ತಾನೆ—ಎಂದು ಹೇಳಿ ರಾಜನೀತಿಕ ಜೀವನದತ್ತ ನಾವು ಉದಾಸೀನತೆಯನ್ನು ಪ್ರದರ್ಶಿಸುತ್ತೇವೆ. ಈ ತೆರದ ಉದಾಸೀನ ಮನೋಭಾವದಿಂದಾಗಿ ನಾವೇನನ್ನು ಕಳೆದು ಕೊಂಡಿದ್ದೇವೆ ಎಂಬುದಕ್ಕೆ ಕೇವಲ ಇತಿಹಾಸ ಮಾತ್ರ ಸಾಕ್ಷಿಯಲ್ಲ, ನಮ್ಮೆಲ್ಲರ ಇಂದಿನ ಜೀವನವೇ ಜ್ವಲಂತ ನಿದರ್ಶನ. ಬ್ರಿಟಿಷರು ಇಲ್ಲಿ ರಾಜ್ಯವಾಳ ತೊಡಗಿದೊಡನೆಯೇ ನಾವು ನಮ್ಮ ಪುರುಷಾರ್ಥಗಳನ್ನು ಅವರ ಕೈಗಳಿಗೆ ಒಪ್ಪಿಸಿ ಕುಳಿತೆವು. ಪ್ರಪಂಚವೆಷ್ಟು ಮುಂದುವರಿದಿದೆ, ಅದರಲ್ಲೀಗ ಏನೇನು ನಡೆಯುತ್ತಿದೆ—ಇವೆಲ್ಲವನ್ನೂ ನೋಡುವ ತಿಳಿಯುವ ಭಾರ ಆಂಗ್ಲೇಯರ ತಲೆಯ ಮೇಲೆ! ನಮ್ಮ ಮಟ್ಟಿಗೆ ಕೇವಲ ಎರಡೇ ಎರಡು ದೇಶಗಳು ಸತ್ಯ ಮೊದಲನೆಯದಾಗಿ ಬ್ರಿಟನ್, ಎರಡನೆಯದಾಗಿ ಭಾರತ. ಉಳಿದೆಲ್ಲ ರಾಷ್ಟ್ರಗಳು ಪರದೆಯಡಿಯಲ್ಲಿ ಮುಳುಗಿ ಹೋಗಿದ್ದುವು; ಅಥವಾ ಪರದೆಯಲ್ಲಿ ಬಿಡಿಸಿದ ಚಿತ್ರಗಳಂತಿದ್ದುವು.

ನಮ್ಮ ರಾಷ್ಟ್ರದ ಪುರುಷಾರ್ಥವನ್ನು ನಾವು ಹೆಚ್ಚಿಸಬೇಕಾಗಿದ್ದರೆ, ನಮ್ಮ ಸಾಹಿತ್ಯದಲ್ಲಿ ಎಲ್ಲ ದೇಶಗಳ ಬಗ್ಗೆ ತಿಳುವಳಿಕೆಯನ್ನು ಒದಗಿಸ ಬೇಕು. ಈ ತಿಳುವಳಿಕೆಗಳು ಆಂಗ್ಲೇಯರ ಕಣ್ಣುಗಳು ಕಂಡದ್ದಿರಬಾರದು; ನಮ್ಮ ಕಂಗಳಿಗೆ ಗೋಚರವಾದುವುಗಳು ಅಥವಾ ನಮ್ಮ ಒರೆಗಲ್ಲಿನಲ್ಲಿ ನಿಜವೆಂದು ಹೊರಬಂದವುಗಳಾಗಬೇಕು. ನಮ್ಮ ಪುರುಷಾರ್ಥ ಬೆಳೆಯಬೇಕೆಂದಿದ್ದರೆ, ನಮ್ಮ ಮುಂದಿರುವ ಮಾರ್ಗವಿದೊಂದೇ ಆಗಿದೆ.

ನಮ್ಮ ಪುರುಷಾರ್ಥಕ್ಕೆ ಬಾಧಕವೆಂದು ಸಿದ್ಧವಾಗಿರುವ ಒಂದು ವಿಚಾರವಿದೆ. ನಾವು ಇನ್ನೊಬ್ಬರ ದೋಷಗಳನ್ನು ಅರಸುವುದರಲ್ಲಿಯೇ ದಿನರಾತ್ರಿ ನಿಮಗ್ನರಾಗಿದ್ದೇವೆ. ಪ್ರತಿಯೊಬ್ಬರ ಪ್ರಯತ್ನದ ಬಗ್ಗೆಯೂ ನಿಂದೆ ಮಾಡುವುದೇ ನಮ್ಮ ಪುರುಷಾರ್ಥವಾಗಿ ಪರಿಣಮಿಸಿದೆ. ಒಬ್ಬನೊಂದು ಹೊಸ ವಿಚಾರವನ್ನು ಹೊರಗೆಡಹಿದರೆ, ಹೊಸ ಮಾರ್ಗವೊಂದನ್ನು ಅರಸಿದರೆ, ಯಾವುದಾದರೊಂದು ಪ್ರಯೋಗ ಮಾಡಿದನೆಂದರೆ, ಕೂಡಲೇ ನಾವು ಆ ಬಗ್ಗೆ ತಲೆ ಕೆಡಿಸಿಕೊಳ್ಳಲು ಮುಂದಾಗುತ್ತೇವೆ. ಹಲವು ಬಾರಿ ಇಂತಹ ನಿರಾಧಾರ ಟೀಕೆಗಳಿಂದ ಹತಾಶರಾಗಿ ಪುರುಷಾರ್ಥವನ್ನು ತ್ಯಜಿಸಿ, ಅದೃಷ್ಟವಾದಿಗಳಾಗುತ್ತಾರೆ. ಮನುಷ್ಯ ಟೀಕೆ ಟಿಪ್ಪಣಿಗಳನ್ನು ಮಾಡುವುದರಿಂದ ಸುಧಾರಿಸುವುದಿಲ್ಲ ಅನುಭವಗಳಿರುವುದರಿಂದ ಆತ ಸುಸಂಸ್ಕೃತನಾಗುತ್ತಾನೆ. ಜೀವನ ಶುದ್ಧಿಯ ಬಗ್ಗೆ ಆಗ್ರಹ ತೊಟ್ಟು ನಾವು ಪುರುಷಾರ್ಥವನ್ನು ಅದುಮಿ ಹಿಡಿದಿದ್ದೇವೆ; ಇದರಿಂದಾಗಿ ಜೀವನವಾದರೂ ಶುದ್ಧವಾಗಲಿಲ್ಲ. ನೀರು ಹರಿಯುತ್ತಿರುವುದರಿಂದಲೇ ಶುದ್ಧವಾಗಿ ಉಳಿಯುವುದೆಂಬ ಕಟು ಸತ್ಯವನ್ನು ನಾವು ಮರೆತು ಬಿಟ್ಟಿದ್ದೇವೆ

ನಮ್ಮಲ್ಲಿ ಸಿದ್ಧವಾಗಿರುವ ಸಾಹಿತ್ಯದಲ್ಲಿ ಅಧಿಕಾಂಶ ಟೀಕೆ ಟಿಪ್ಪಣಿಗಳೇ ತುಂಬಿವೆ. ಸೃಜನಾತ್ಮಕ ಸಾಹಿತ್ಯ ಅಪರೂಪ. ಪ್ರತಿಯೊಬ್ಬನೂ ಪ್ರಯೋಗ ಪರಾಯಣನಾಗುವಂತೆ ಮಾಡುವ ಚೇತನಾಯುಕ್ತ ಸಾಹಿತ್ಯ ನಮ್ಮದಾಗಬೇಕು. ನಮ್ಮ ದೇಶದಲ್ಲಿ ಪ್ರಯೋಗಕ್ಕಾಗಿ ವಿಷ ತಿಂದು ಮಡಿದರೂ ಆತನು ಅಭಿನಂದನಾರ್ಹನೆನ್ನಬೇಕು. ಪ್ರತಿಯೊಬ್ಬನೂ ಮುಂದುವರಿಯಲು ಅವಕಾಶ ಕಲ್ಪಿಸಿ ಕೊಡಬೇಕು. ತನ್ನ ದಾರಿ ತಪ್ಪಿತೆಂದರೆ, ಅನುಭವದಿಂದಲೇ ಆತ ಅದನ್ನು ಕಲಿತುಕೊಳ್ಳುವನು ಇನ್ನೊಬ್ಬನನ್ನು ತಡೆಯುವುದಾಗಲೀ ಆತನಿಗೆ ಸಲಹೆ ನೀಡುವುದಾಗಲೀ ನಮ್ಮ ಕಾರ್ಯವಲ್ಲ ನಮ್ಮ ದೇಶದಲ್ಲಿ ಯಾರೊಬ್ಬನಾದರೂ ಹೊಸ ಪ್ರಯೋಗ ಮಾಡಿ ನೋಡಿದನೆಂದರೆ, ಅದನ್ನು ವಿಸ್ತಾರವಾಗಿ ವರ್ಣಿಸುವುದು ನಮ್ಮ ಸಾಹಿತ್ಯಕಾರರ ಉದ್ದೇಶವಾಗಬೇಕು. ಜೀವನದ ನವನವ ಪ್ರಯೋಗಗಳ ವರ್ಣ

(೧೦ನೇ ಪುಟ ನೋಡಿ)

ಸ್ಥಾಪನೆ: 1924

ದಿ ಕರ್ಣಾಟಕ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ರಿಜಿಸ್ಟರ್ಡ್ & ಹೆಡ್ ಆಫೀಸು: ಡೊಂಗರಕೇರಿ, ಮಂಗಳೂರು—3.

ಈ ಕೆಳಗಿನ ಏರಿಸಿದ ಬಡ್ಡಿದರಗಳಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು.

ಒಂದರಿಂದ ಎರಡು ತಿಂಗಳುಗಳ ವರೆಗೆ	ಸಾ॥ ಸೇಕಡಾ	3-75	ನ.ಪೈಸೆ
ಮೂರರಿಂದ ಐದು ತಿಂಗಳುಗಳ ವರೆಗೆ	,,	4-25	,,
ಆರು ತಿಂಗಳುಗಳಿಂದ 12 ತಿಂಗಳುಗಳ ವರೆಗೆ....	,,	4-50	,,
12 ತಿಂಗಳು ಮಿಕ್ಕಿ 24 ತಿಂಗಳುಗಳ ವರೆಗೆ	,,	4-75	,,
24 ತಿಂಗಳು ಮಿಕ್ಕಿ 48 ತಿಂಗಳುಗಳ ವರೆಗೆ	,,	5 00	,,
48 ತಿಂಗಳುಗಳಿಗೆ ಮಿಕ್ಕಿ	,,	5-25	,,

ಸೇವಿಂಗ್ಸ್ ಬ್ಯಾಂಕ್ ಬಡ್ಡಿ ದರವನ್ನು ಸಾ. ಸೇಕಡ 2½% ರಿಂದ 3½%ಗೆ ಏರಿಸಲಾಗಿದೆ.

THE KARNATAKA BANK LIMITED.

ಡಿ. ಕೆ. ಭಾರದ್ವಾಜರ

ಇಂಗ್ಲಿಷ್, ಇಂಗ್ಲಿಷ್-ಕನ್ನಡ

ಡಿಕ್ಷನರಿ

ಬೆಲೆ: ರೂ. ನಾಲ್ಕು.

ಐದು ರೂಪಾಯಿ ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ ಉಡುಪಿ.

ಯಶಸ್ಸಿನ ರಹಸ್ಯ

ಜೀವನದಲ್ಲಿ ಸಫಲರಾಗಬೇಕೆ?

ಜೀವನದಲ್ಲಿ ಸಫಲರಾಗಬೇಕೆಂದು ಬಯಸದವರಿಲ್ಲ; ಆದರೆ, ಸಫಲರಾದವರು ವಿರಳ. ಯಶಸ್ವೀ ಜೀವನದ ರಹಸ್ಯ ಅಭೇದ್ಯವಲ್ಲ; ಅದನ್ನು ಒಡೆಯುವ ಕೀಲಿಕೈ ನಿಮ್ಮೊಡದೆಯೇ ಇದೆ.

ಸುಖ, ಸಮೃದ್ಧಿ, ಕೀರ್ತಿ ಮತ್ತು ಪ್ರತಿಷ್ಠೆಗಳ ಅಭಿಲಾಷೆ ಯಾರಿಗೆ ಇಲ್ಲ"? ಆದರೆ, ಒಂದು ವಸ್ತು ಬೇಕೆಂಬ ಆಶೆಯಿದ್ದ ಮಾತ್ರಕ್ಕೆ ಕೈಸೇರುವುದುಂಟೆ? ಪ್ರಾಪ್ತಿಯ ಇಚ್ಛೆ ತೀವ್ರವಾಗುತ್ತ ಹೋದಂತೆ ಮನುಷ್ಯ ಆ ಬಗ್ಗೆ ದೃಢ ಸಂಕಲ್ಪ ಮಾಡುತ್ತಾನೆ. ತನ್ನ ಸಂಪೂರ್ಣ ಶಕ್ತಿಗಳನ್ನು ಏಕಾಗ್ರಗೊಳಿಸಿ, ನಿಯೋಜಿತ ರೀತಿಯಲ್ಲಿ ಆಸಕ್ತಿಯಿಂದ ಕಾರ್ಯಪ್ರವೃತ್ತನಾಗುತ್ತಾನೆ. ಆಗಲೇ ಉದ್ದೇಶವು ಕೈಗೂಡುವುದು. ನೀವು ಎಂದಾದರೂ ಇಂತಹ ಪ್ರಯಾಸಪಟ್ಟಿದ್ದುಂಟೆ?

ನಾವು ಮಾಡಿದ ಪರಿಶ್ರಮಕ್ಕೆ ತಕ್ಕ ಪ್ರಮಾಣದಲ್ಲಿ ಫಲ ದೊರೆಯದಿರುವುದರಿಂದ ಆರಂಭ ಕಾಲದಲ್ಲಿ ಕಾರ್ಯಸಿದ್ಧಿಗಾಗಿ ಧೈರ್ಯವು ಅವಶ್ಯ ಬೇಕು. ಆಸಕ್ತಿಯಿಂದ ನಾವು ಮುಂದುವರಿದೆವಾದರೆ, ಆಗ ಕಾರ್ಯವು ಬಹಳ ಸುಲಭದಲ್ಲಿಯೇ ಸಫಲವಾಗಬಹುದು ಇದೇ ಮುಂದುವರಿದು ಕೊನೆಕೊನೆಗೆ ಕಡಿಮೆ ಪರಿಶ್ರಮದಿಂದ ಅಧಿಕ ಫಲ ದೊರೆಯುವುದೂ ಸಾಧ್ಯವಿದೆ. ಆದರೆ, ಹೀಗಾಗ ಬೇಕಾದರೆ, ನಾವು ಎಂದಿಗೂ ಧೈರ್ಯಗೆಡಬಾರದು; ಆಸಕ್ತಿಯನ್ನು ಕಳೆದುಕೊಳ್ಳಬಾರದು.

ಸುಖ, ಸಮೃದ್ಧಿ, ಕೀರ್ತಿ ಅಥವಾ ಪ್ರತಿಷ್ಠೆಯನ್ನು ಗಳಿಸುವುದಕ್ಕೆ ನಾವು ಯಾವ ಸಾಧನವನ್ನು ಬಳಸಿಕೊಳ್ಳಬೇಕೆಂಬುದರ ಸ್ಪಷ್ಟ ಚಿತ್ರ ಮೊತ್ತಮೊದಲು ನಮ್ಮ ಮನಸ್ಸಿನಲ್ಲಿ ಅಂಕಿತವಾಗಿರಬೇಕು. ಈ ಸಾಧನವನ್ನು ನಿಶ್ಚಯಿಸುವಾಗ ಕೂಡ ನಮ್ಮ ನಮ್ಮ ಅಭಿರುಚಿಯನ್ನು ಅವಶ್ಯ ಗಮನಿಸಬೇಕು. ಎಲ್ಲರ ರುಚಿಯೂ ಏಕಸಮವಾಗಿರುವುದಿಲ್ಲ. ಒಬ್ಬೊಬ್ಬನಿಗೆ ಒಂದೊಂದರಲ್ಲಿ ವಿಶೇಷ ಇಷ್ಟವಿರುವುದು ಸ್ವಾಭಾವಿಕವೇ. ನಮ್ಮ ಅಭಿರುಚಿಗೆ ಹೊಂದಿಕೊಂಡಿರುವ ಕಾರ್ಯದಲ್ಲಿ ಏಕಾಗ್ರಭಾವ ಮೂಡುವುದೂ ಅಷ್ಟೇ ವಾಸ್ತವಿಕ. ಈ ಏಕಾಗ್ರತೆಯಿಂದ ಕಾರ್ಯತತ್ಪರರಾದರೆ ಸಫಲತೆಯು ನಮ್ಮದಾಗುವುದೂ ಸಾಹಜಿಕ. ಆದರೆ, ಇಲ್ಲಿ ಏಳುವ ಪ್ರಶ್ನೆಯೊಂದೇ. ನಮ್ಮ ಅಭಿರುಚಿಗೆ ಹೊಂದಿಕೊಳ್ಳುವ ಸಾಧನ ನಮಗೆ ದೊರೆಯದೆ ಹೋದರೆ! ಆಗ, ಆ ಸಾಧನಕ್ಕೆ ಹೊಂದಿಕೊಳ್ಳುವ ಅಭಿರುಚಿಯನ್ನು ಇಟ್ಟುಕೊಳ್ಳಬೇಕಾಗುತ್ತದೆ.

ನಾವು ಬಯಸಿದ ಉದ್ಯೋಗವನ್ನೇ ಪಡೆದವರು ಅದೆಷ್ಟು ಮಂದಿ? ನಾವು ಆಶಿಸುವಂತೆಯೇ ನಮ್ಮ ಜೀವನವನ್ನು ಮುಂದುವರಿಸಿದವರ ಸಂಖ್ಯೆ ಅದೆಷ್ಟು? ತಾನೊಂದೆಣಿಸಿದರೆ ದೈವ ಬೇರೊಂದು ಬಗೆಯಿತು—ಎಂಬ ಗಾದೆಯ ಮಾತು ಸರ್ವಸಾಮಾನ್ಯವಾಗಿ ಎಲ್ಲರ ಜೀವನದಲ್ಲೂ ಒಂದಲ್ಲ ಒಂದು ರೀತಿಯಲ್ಲಿ ಸತ್ಯವಾಗಿಯೇ ಅನುಭವಕ್ಕೆ ಬಂದಿದೆ. ಇದರಿಂದ ಅಧೀರರಾಗ ಬೇಕಾಗಿಲ್ಲ. ಇಚ್ಛೆಗೆ ಅನುಕೂಲವಾದ ಕೆಲಸವು ದೊರೆಯದೆ ಹೋದರೆ, ಅದಕ್ಕೆ ಸರಿಹೊಂದುವ ರುಚಿಯನ್ನಿಟ್ಟುಕೊಂಡು, ದತ್ತಚಿತ್ತರಾಗಿ, ಅದನ್ನು ಸಫಲಗೊಳಿಸಿರಿ. ನಿಮ್ಮ ಅಭಿರುಚಿಗೆ ಸಮವಾದ ಉದ್ಯೋಗ ದೊರೆಯುವುದೇ ಎಂದು ಅವೇರವರಸುತ್ತಿರಿ; ಇದರಿಂದಲೇ ತಮ್ಮ ವಿಕಾಸ ಮಾಡಿಕೊಂಡವರ ಅನೇಕ ಜನರಿದ್ದಾರೆ.

ಜೀವನದಲ್ಲಿ ಸಂಪತ್ತಿನ ಸ್ಥಾನ ಮಹತ್ವಪೂರ್ಣವಾಗಿದೆಯೆಂಬುದು ನಿಜ. ಇದನ್ನು ಗಳಿಸುವುದೂ ನ್ಯಾಯ. ಆದರೆ, ಧನ ಗಳಿಸುವಾಗ ನಾವು ನ್ಯಾಯ ಮಾರ್ಗಗಳನ್ನು ಮಾತ್ರ ಅನುಸರಿಸ ಬೇಕು. ಧನಪ್ರಾಪ್ತಿಗೆ ಪ್ರಾರಂಭದಲ್ಲಿ ಸ್ವಲ್ಪ ಬಂಡವಳ ಬೇಕಾಗುತ್ತದೆ. ನಮ್ಮದೇ ಹಣವಿಲ್ಲವೆಂದಾದರೆ, ಅಧಿಕ ಸಂಪತ್ತು ಗಳಿಸುವುದು ಗಗನ ಕುಸುಮ ಮಾತ್ರ. "ಹತ್ತಾಗುವುದು ನಿನ್ನಿಂದ, ಮತ್ತಾಗುವುದು ನನ್ನಿಂದ" ಎಂದು ಸಂಪತ್ತು ಹೇಳುತ್ತದೆಯಂತೆ. ಪ್ರಾರಂಭಿಕ ಧನ ಗಳಿಸುವಲ್ಲಿ ತುಸು ತ್ರಾಸವೆನಿಸುವುದು. ನಮ್ಮ ಸಂಪಾದನೆಯ ಒಂದಲ್ಪ ಭಾಗವನ್ನು ಉಳಿಸಿಕೊಂಡರೆ ಮಾತ್ರ ನಾವು ಈ 'ಬಂಡವಾಳ' ಸಿದ್ಧಗೊಳಿಸಬಹುದು. ಹಣ ಒಂದೇ ಬಾರಿ ಬಂದು ಸೇರುವುದೆಂದು ಯಾರಾದರೂ ಹೇಳಬಹುದು. ಆದರೆ, 'ಹನಿಗೂಡಿ ಹಳ್ಳ'ವೆಂಬುದು ಈ ಮಟ್ಟಿಗೆ ಸತ್ಯ. ನಮ್ಮ ಗಳಿಕೆಯನ್ನು ಮಿತವ್ಯಯದ ಅಭ್ಯಾಸ ಬೆಳೆಸಿ ಉಳಿಸಬೇಕು. ಪ್ರಾರಂಭದಲ್ಲಿ ಪರಿಶ್ರಮಪಟ್ಟು ಬಂಡವಾಳವನ್ನು ತಯಾರಿಸಿಕೊಂಡರೆ, ಮುಂದೆ ಅದೇ ಬಂಡವಾಳದಿಂದ ಉದ್ಯೋಗ ಧಂದೆಗಳಲ್ಲಿ ತೊಡಗಬಹುದು; ಸಫಲಗೊಳ್ಳಬಹುದು. ಆದರೆ, ಬೇರೆಯವರ ಸಂಪತ್ತಿನಿಂದ ಕಾರ್ಯಸಾಧಿಸುವೆವೆಂದು ತಿಳಿದು ಸುಮ್ಮನಿರುವವರು ಮುಂದೆ ಅಸಫಲರಾಗುವುದು ಖಂಡಿತ. ಆದುದರಿಂದ ಸರ್ವ ಪ್ರಕಾರದ ಮೋಹಗಳನ್ನು ಬದಿಗಿಟ್ಟು, ಹಣವುಳಿಸಿರಿ. ಹೀಗೆ ಪರಿಶ್ರಮಪೂರ್ವಕ ಉಳಿಕೆಯನ್ನು ಸಾಧಿಸಿದವರು ಖಂಡಿತಕ್ಕೂ ಮುಂದುವರಿಯುತ್ತಾರೆ.

ನಾವು ಮಾಡಬಯಸುವ ಕೆಲಸ ಅಥವಾ ಧನ ಗಳಿಸಲು ಅನುಸರಿಸಿದ ಉದ್ಯೋಗಗಳೇ ಆ ಕೆಲಸದಲ್ಲಿ ಸಫಲರಾಗುವ ಮುಂದಿನ ಮಾರ್ಗವನ್ನು ತೋರಿಸುತ್ತವೆ. ಆ ಮಾರ್ಗದಲ್ಲಿ ನಾವು ಪರಿಶ್ರಮ ಆಸಕ್ತಿಗಳೊಡನೆ ಮುಂದುವರಿದೆವೆಂದಾದರೆ, ಖಂಡಿತಕ್ಕೂ ಸಫಲರಾಗುತ್ತೇವೆ. ಸಫಲತೆಯು ನಮ್ಮದಾದಾಗ ಆತ್ಮವಿಶ್ವಾಸ ವರ್ಧಿಸುತ್ತದೆ. ಆದರೆ, ಒಂದು ಕೆಲಸವು ಸಮರ್ಥರ ಸಹಾಯವಿಲ್ಲದೆ ಪೂರ್ಣವಾಗುವುದಿಲ್ಲವಾದುದರಿಂದ ನಮ್ಮ ವಿಚಾರಕ್ಕೆ ಅನುಕೂಲರಾದ ಸಂಗಡಿಗರನ್ನೂ ನಾವು ಅರಸಿಕೊಂಡು ಉನ್ನತಿಯ ಪಥ ಭ್ರಮಣ ಮಾಡಬೇಕಾಗುತ್ತದೆ.

ನಮ್ಮ ಸಾಧನೆಯ ಯಶಾಪಯಶಗಳು ಮುಖ್ಯವಾಗಿ ನಾವು ಆರಿಸುವ ಸಹಯೋಗಿಗಳನ್ನು ಹೊಂದಿಕೊಂಡಿವೆ. ನಿಮ್ಮ ಮಿತ್ರವರ ವಿಚಾರಗಳಲ್ಲಿ ಸಮಾನತೆಯಿದ್ದರೆ ಕಾರ್ಯಸಾಧನೆಯಾದಂತಾಗಲಿಲ್ಲ; ಅವರಲ್ಲಿ ಸಹನಾಶೀಲತೆ; ಉದಾರತೆ, ದೂರದೃಷ್ಟಿಗಳೂ ಇರಬೇಕಾಗುತ್ತದೆ. ಇಲ್ಲವಾದರೆ, ಮುಂದೆ ವಿಪತ್ತಿನಲ್ಲಿ ಬೀಳಬೇಕಾಗುವುದು. ಆದರೆ, ಸಹಚರರನ್ನು ತನ್ನ ಸ್ವಾರ್ಥಕ್ಕಾಗಿಯೇ ಬಳಸಿಕೊಳ್ಳುವುದು ಸರಿಯಲ್ಲ. ತನ್ನ ಸ್ವಾರ್ಥದ ಬಗ್ಗೆ ಮಾತ್ರ ವಿಚಾರ ಮಾಡುವವರಿಂದ ಇತರರಿಗೆ ಯಾವ ರೀತಿಯ ಪ್ರಯೋಜನವೂ ದೊರೆಯಲಾರದು. ನ್ಯಾಯ ಮಾರ್ಗದಲ್ಲಿ ಮುಂದುವರಿಯುವ, ತಮ್ಮ ಸ್ವಾರ್ಥವನ್ನೂ ನ್ಯಾಯ ದೃಷ್ಟಿಯಿಂದ ಸಾಧಿಸುವ, ಪರರ ಶ್ರೇಯಸ್ಸನ್ನು ಕಡೆಗಣಿಸದ ಸಂಗಡಿಗರನ್ನು ಅರಸಿಕೊಳ್ಳಬೇಕು.

ಪರರಿಂದ ಕಲಿತುಕೊಳ್ಳುವ ಅಭ್ಯಾಸವಿರುವವರು ತಮ್ಮ ಕಾರ್ಯದಲ್ಲಿ ಬೇಗನೇ

(೯ನೇ ಪುಟ ನೋಡಿರಿ)



ನಿಮಗೂ ತಿಳಿದಿರಲಿ

ಅನ್ನ ಸತ್ಯಾಗ್ರಹದ ದಿನ ನಿಕಟವಿದೆ!

ಅತ್ಯಧಿಕ ಕೋಲಾಹಲದಿಂದ ಶ್ರವಣೇಂದ್ರಿಯವು ಅಶಕ್ತವಾಗುವುದು; ಮೆದುಳು ಕೆಡುವುದು; ಪಚನ ಕಾರ್ಯ ಕೆಟ್ಟು ಹೋಗುವುದು; ನಾವೆಲ್ಲ ಅನ್ನ ಸತ್ಯಾಗ್ರಹ ಮಾಡಬೇಕಾಗುವುದು ಅಥವಾ ದೂರ ಗುಡ್ಡಕ್ಕೆ ಓಡಿ ನೆಮ್ಮದಿಯಿಂದಿರಬೇಕಾಗುವುದು!

ಓಡುತ್ತಿರುವ ರೈಲಿನ ಗಡಬಡ, ಯಂತ್ರ ಗಿರಣಿಗಳ ಧರ್‌ಧರ್, ಜೆಟ್ ವಿಮಾನಗಳ ಸೀಟಿ, ಮೋಟಾರುಗಳ ಪೊಂಪೊಂ, ಧ್ವನಿವರ್ಧಕಗಳ ಕರ್ಣಕಠೋರ ಗಾಯನ, ಸಂಚರಿಸುವ ಜನಪ್ರವಾಹದ ಕೋಲಾಹಲ, ಮಿಲ್ಲುಗಳ ಸೈರನ್ನು, ಇನ್ನೂ ವಿವಿಧ ಕಿವಿದೆರೆಗಳನ್ನು ಒಡೆಯುವ ಧ್ವನಿಗಳು—ಇವು ವಿಜ್ಞಾನ ಯುಗವು ಮಾನವನಿಗೆ ಇತ್ತ ವರದಾನಗಳು. ಇವುಗಳಿಂದ ಆತ ದೂರವಿರಬೇಕೆಂದು ಬಯಸಿದರೂ, ಪ್ರಯತ್ನಿಸಿದರೂ ಅವು ಆತನ ಬೆನ್ನು ಹತ್ತಿಕೊಂಡೇ ಬರುತ್ತವೆ.

ಐದು ವರ್ಷಗಳಿಗೆ ಮೊದಲು ಮಾರ್ಗಗಳಲ್ಲಿ ಗಾಡಿಗಳ 'ಚುರ್ ಚೂಂ ಚೂಂ' ಕೇಳಿಬರುತಿತ್ತು. ಅಲ್ಲಿ ಗುಲ್ಲು ಕೇಳಿದೊಡನೆಯೇ ಜನರು ನೋಡುವುದಕ್ಕೆ ಹೊರಗೆ ಓಡಿ ಬರುತಿದ್ದರು—ಯಾರಾದರೂ ಹೊಡೆದಾಡುತ್ತಿರುವರೇ ಎಂಬ ಸಂದೇಹದಿಂದ. ಅಂದು ಸರ್ಕಸ್ ಅಥವಾ ನಾಟಕ ಕಂಪೆನಿಯವರು ಡೋಲು ಅಥವಾ ಗಂಟೆಗಳನ್ನು ಬಾರಿಸಿ ಜನರನ್ನು ಆಕರ್ಷಿಸುತಿದ್ದರು. ರಾತ್ರೆಯಲ್ಲಿ ನಾಯಿಗಳು ತುಸು ಉದ್ದ ಕೂಗೆಬ್ಬಿಸಿದರೂ ಜನರವುಗಳನ್ನು ದೂರುತಿದ್ದರು. ಕಾಗೆಗಳ ಕಾಕಾ ಧ್ವನಿಯು ಕೂಡ ಅಪಶಕುನವನ್ನೇ ಸೂಚಿಸುತಿತ್ತು. ಪ್ರಾಯಃ ಮಾನವನೂ ಈ ರೀತಿಯ ಟೀಕೆಗೆ ಗುರಿಯಾಗುತಿದ್ದನಾದ್ದರಿಂದ ಅವನೂ ಧ್ವನಿ ತಗ್ಗಿಸಿಯೇ ನಡೆಯಬೇಕಾಗಿತ್ತು.

ದಿನ ಕೆಲಸಗಳನ್ನೆಲ್ಲ ಮುಗಿಸಿ ಸುಸ್ತಾಗಿ ಮನೆಗೆ ಬಂದು ಆರಾಮಾಸನದಲ್ಲಿ ಒರಗುತ್ತಿರುವಂತೆಯೇ ನಿಮಗೆ ನೆರೆ ಮನೆಯ ರೇಡಿಯೋ ಕಿರಿಚುತ್ತಿರುವುದು ಕೇಳಬಹುದು. ನಿಮಗದು ಇಷ್ಟವೆನಿಸಲಿ ಅನಿಷ್ಟವೇ ಆಗಲಿ, ಅದನ್ನು ಅವಶ್ಯ ಆಲಿಸಲೇಬೇಕಾಗುತ್ತದೆ. ಅವರ ರೇಡಿಯೋವಿನ ಮೇಲೆ ನಿಮಗೆಲ್ಲಿಯ ಅಧಿಕಾರ? ದಿನವಿಡೀ ಆಫೀಸಿನಲ್ಲಿ ಟೈಪ್‌ರೈಟರಿನ ಖಟ ಖಟ ನಾದ, ಮನೆಯಲ್ಲಿ ಈ ಮೋದ! ಎಲ್ಲೆಡೆಯೂ ಅಶಾಂತತೆ.... ಈ ಅಶಾಂತಿಯ ಗುಲ್ಲು ತುಂಬಿದ ಪ್ರಪಂಚದಲ್ಲಿ ಯಾರಾದರೂ ನೆಮ್ಮದಿಯಿಂದಿರಬೇಕೆಂದು ಬಯಸಿದರೆ, ಅದು ಹೇಗೆ ಸಾಧ್ಯವೆನಿಸೀತು?

ಧ್ವನಿವರ್ಧಕಗಳ ಆವಿಷ್ಕಾರವು ಅತಿ ಸಾಮಾನ್ಯವಾದುದು ಹೇಗೆಂದು ಗೊತ್ತಿಲ್ಲ ಆದರೆ, ಅದರ ಬಗ್ಗೆ ನಾವು ಯಾವುದೇ ಕಾರ್ಯಕ್ರಮ ತೆಗೆದುಕೊಳ್ಳುವಂತಿಲ್ಲ. ಪರಮಾತ್ಮನು ನ್ಯಾಯಪಕ್ಷಪಾತಿಯಾಗಿದ್ದರೆ, ಅವನ್ನು ಗೌರೀಶಂಕರದಿಂದ ಪಾತಾಳಗಂಗೆಗೆ ಉರುಳಿಸಿ ಬಿಡಬೇಕಿತ್ತು. ಹಗಲನ್ನಂತೂ ಕೆಡಿಸಿಬಿಡುತ್ತದೆ; ರಾತ್ರೆಯಾದರೂ ಸುಮ್ಮನುಳಿಯ ಬಾರದೆ? ಅದೂ ಕೇಳಬೇಡಿ. ಜ್ಯೇಷ್ಠ ಮಾಸದ ಬಿರುಗಾಳಿ ಮಳೆಯಿಂದ ಕೂಡಿದ ವಿಚಿತ್ರ ವಾತಾವರಣದಲ್ಲಿ ಸುಖ ನಿದ್ರೆಯಾದರೂ ಬರಬೇಕೆಲ್ಲಿಂದ?

ಲಂಡನ್ನಿನ ಒಂದು ವಿಮಾನ ನಿಲ್ದಾಣದ ಬಳಿ ವಾಸಿಸುತಿದ್ದ ಜನರಿಗೆ ನಿದ್ರೆಯೇ ಬೀಳುತ್ತಿರಲಿಲ್ಲ. ಇದರಿಂದ ಅಶಾಂತರಾದ ಜನರು ಒಂದು ರಾತ್ರಿ ಕಮಾಂಡರನ ಮನೆಗೆ ಹೋಗಿ ದೂರಿಟ್ಟರು. ಆತನನ್ನು ಹಾಸಿಗೆಯಿಂದ ಹೊರಗೆಳೆದು ತಂದರು. ಧ್ವನಿರಕ್ಷಿತಕೋಣೆಯೊಳಗೆ ಮಲಗುವವನೊಡನೆ ಗಟ್ಟಿಯಾಗಿ ಹೇಳಿದರು—"ವಿಮಾನದ ಕಿರುಚಾಟದಿಂದಾಗಿ ಕಳೆದ ಕೆಲವು ವಾರಗಳಿಂದ ನಿದ್ದೆಯೇ ಬಂದಿಲ್ಲ." ಕಮಾಂಡರನ ಧ್ವನಿಯೂ ತಣಿದು ಹೋಗುವಂತೆ ಇವರ ಸ್ವರದ ಕಾವೇರಿತ್ತು. ಆದರೆ, ಆತನೇನು ಮಾಡಬಲ್ಲ?

ಇಂಗ್ಲೆಂಡಿನ ಕೇಂಟಿನ ನಿವಾಸಿಗಳ ಸ್ಥಿತಿ ಇದಕ್ಕೂ ಭಯಂಕರವಿತ್ತು. ಅಲ್ಲಿ ಅಹೋರಾತ್ರಿ ಸಾಂಯ್ ಸಾಂಯ್ ಎಂಬ ಶಬ್ದ ಆಗುತ್ತಿರುತ್ತದೆ. ವಿಜ್ಞಾನಿಗಳು ಕೂಡ ಬಹುವಾಗಿ ತಲೆ ಕೆಡಿಸಿಕೊಂಡರು; ಆದರೂ, ಈ ಸ್ವರವೆಲ್ಲಿಂದ ಬರುತ್ತದೆಂದು ಅವರು ತಿಳಿಯದಾಗಿದ್ದಾರೆ.

ವಿದ್ಯುದಾಗಾರದ ಗರಗರ, ಟೈಪ್‌ರೈಟರಿನ ಕಟಕಟ, ಯಂತ್ರಾಲಯಗಳ ಖಟಖಟ ಮೊದಲಾದ ಚಿಕ್ಕ ಪ್ರಮಾಣದ ಧ್ವನಿಯನ್ನು ಸಹಿಸುವ ಅಭ್ಯಾಸ ಮನುಷ್ಯನ ರಕ್ತಗತವಾಗಿದೆ. ಆದರೆ, ಗಲಭೆಯಿಷ್ಟರಲ್ಲಿಯೇ ನಿಲ್ಲುವುದಿಲ್ಲ. ನಿರಂತರ ಹೆಚ್ಚುತ್ತ ಹೋಗುವ ಗಲಭೆಯ ಪರಿಣಾಮವಾಗಿ ಕಿವಿಕಿವುಡಾಗುವುದುಂಟು; ಧ್ವನಿಯನ್ನು ತರಂಗಿತಗೊಳಿಸುವ ಶಕ್ತಿ ನಷ್ಟವಾಗುವುದು ಎಂದು ಡಾ| ಚಾರ್ಲ್ಸ್ ವಾರೇನರು ಹೇಳುತ್ತಾರೆ. ಮನುಷ್ಯ ಸಂಪೂರ್ಣ ಕಿವುಡನಾಗುತ್ತಾನೆ; ಪ್ರಾಯಃ ಆಗಲೇ ಎಂತಹ ಗಲಭೆಯ ನಡುವೆಯೂ ಆತ ಶಾಂತಿಯಿಂದಿರಬಲ್ಲ; ಬಿದಿರೂ ಇಲ್ಲ; ಕೊಳಲೂ ಇಲ್ಲ; ಊದುವವರೂ ಇಲ್ಲ—ಎಂಬಂತಾಗುವುದು.

ಕರ್ಣ ತಮ್ಮಟೆಯು ನಿರ್ಬಲವಾಯಿತೆಂದರೆ, ಮೆತ್ತಗಿನ ಸ್ವರವನ್ನು ಯಾರೂ ಕೇಳಲಾರರು. ಆದುದರಿಂದ ನಾವು ಘಟ್ಟಿಯಾಗಿ ಮಾತಾಡುವುದನ್ನು ಅಭ್ಯಾಸ ಮಾಡುತ್ತೇವೆ. ನಮ್ಮ ಮಿತ್ರರೊಡನೆ ಇಲ್ಲವೆ ಮನೆಯವರೊಡನೆ ಮಾತಾಡುವಾಗ ತುಂಬ ತ್ರಾಸವಾಗುತ್ತದೆ. ಯೌವನ ಪ್ರಾಯದಲ್ಲಿ ಸ್ನಾಯು—ತಂತುಗಳು ಸಬಲವಾಗಿರುವುದರಿಂದ ಅದೆಂತಹ ಶಬ್ದವನ್ನೂ ನಾವು ಸಹಿಸಬಲ್ಲೆವು; ಆದರೆ, ಇಂದ್ರಿಯಗಳೂ ಪೆನ್‌ಶನ್ ಪಡೆಯುತ್ತವೆಯಾದುದರಿಂದ, ಆ ಮೇಲೆ ಒಂದಲ್ಪ ಶಬ್ದವಾದರೂ ನಮಗೆ ಅಸಹನೀಯವೆನಿಸುತ್ತದೆ. ಆಗ ಇದುವರೆಗೆ ಇವನ್ನೆಲ್ಲ ಹೇಗೆ ಸಹಿಸಿಕೊಂಡಿದ್ದೆವು ಎಂದು ನಮ್ಮನ್ನೇ ನಾವೇ ಪ್ರಶ್ನಿಸಿಕೊಳ್ಳುತ್ತೇವೆ.

ಜರ್ಮನ್ ದಾರ್ಶನಿಕ ಶೋಪೆನ್ಹಾವರನು ಒಂದು ವಿಚಾರವನ್ನು ಕಂಡುಹಿಡಿದಿದ್ದಾನೆ—"ಮಾನವನು ವಿದ್ವಾಂಸನಾಗುತ್ತ ಹೋದಂತೆ ಗಲಭೆ ಕೇಳುವ ಸಹನೆಯನ್ನು ಕಳೆದುಕೊಳ್ಳುತ್ತ ಬರುತ್ತಾನೆ" ಪ್ರಪಂಚದ ಶಾಂತಿ ಪ್ರಗತಿಯಲ್ಲಿ ಈ ಗಲಭೆಗಳೊಂದು ಬಾಧೆಯೆನ್ನುತ್ತಾನೆ ಈತ. ಆದರೆ, ದಾರ್ಶನಿಕ ವಾದಕ್ಕೆ ಕಿವಿಗೊಡುವವರಾರು? ಆತ ನಿಸ್ಸಹಾಯಕನಾಗಿ ಕೊನೆಗೊಂದು ದಿನ ಹೇಳಿಯೇಬಿಟ್ಟ— ಪ್ರಪಂಚದಲ್ಲಿ ಜರ್ಮನರಷ್ಟು ಗಲಭೆ ಮತ್ತಾರೂ ಎಬ್ಬಿಸುವುದಿಲ್ಲ; ಅವರ ಪತನ ಸಮೀಪವಾಗುತ್ತಿದೆ!" ಶೋಪೆನ್ಹಾವರನ ಈ ಉದ್ಗಾರ ಪರಿಣಾಮಕಾರಿಯೂ ಆಯ್ತು. ಆದರೆ, ಇದರಿಂದ ಜರ್ಮನಿಯೂ ಪಾಠ ಕಲಿಯಲಿಲ್ಲ; ಉಳಿದ ರಾಷ್ಟ್ರಗಳೂ ಇದರತ್ತ ಲಕ್ಷ್ಯ ಹರಿಸಲಿಲ್ಲ.

ಇಂದು ವೈಜ್ಞಾನಿಕರಿಗೆ ಮಹತ್ವವಿರುವುದರಿಂದ ಗಲಭೆಯ ಸಂಬಂಧದಲ್ಲಿ ಅವರ ದೃಷ್ಟಿಕೋಣವನ್ನೂ ತಿಳಿಯುವುದು ಅಪ್ರಾಸಂಗಿಕವಾಗದು. ಕರ್ಣ ರಸಾಯನವಾದ ಮಧುರ ಧ್ವನಿ ಇಲ್ಲವೆ ಸಂಗೀತ ಮಾನವನ ಆರೋಗ್ಯಕ್ಕೆ ಲಾಭದಾಯಕ, ಕರ್ಣಕಟು ತೀವ್ರ ಧ್ವನಿ ಹಾನಿಪ್ರದ ಎಂದಿವರು ಹೇಳುತ್ತಾರೆ ಡಾ| ಅರ್ಲ್ ಡಬ್ಲ್ಯೂ. ಫ್ಲೋಸ್ಡೊರ್ಫ್ ಮತ್ತು ಲೆಸ್ಲಿ ಎ. ಚೇಂಬರ್ಸ್ ರವರು ಧ್ವನಿಗಳಿಂದ ಶರೀರ ಮತ್ತು ರಕ್ತದ ರಾಸಾಯನಿಕ ತತ್ವಗಳು ಪರಿವರ್ತನೆಗೊಳ್ಳುವುದು ಎಂದು ಹೇಳುತ್ತಾರೆ. ತೀವ್ರ ಧ್ವನಿಯಿಂದ ಮೊಟ್ಟೆಗಳನ್ನು ಬೇಯಿಸುತ್ತಾರೆ. ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳಲ್ಲಿ ಕನೆಡಾದ ರೇಲ್ವೆ ಇಂಜಿನ್‌ಗಳ ಸೀಟಿಯ ಧ್ವನಿಯಂತಹ ಸ್ವರವುಳ್ಳ ನೌಕರರನ್ನೇ ಇಟ್ಟುಕೊಳ್ಳ ಬಯಸಬಹುದು. ಈ ನೌಕರ ಗಟ್ಟಿಯಾಗಿ ಗ್ರಾಹಕನ ಆರ್ಡರನ್ನು ಪಾಕಶಾಲೆಗೆ ತಲಪಿಸುವಾಗ ತಪ್ಪೂ ಆಗುವುದಿಲ್ಲ; ಮಾತ್ರವಲ್ಲ, ಆತನ ತೀವ್ರಧ್ವನಿಯಿಂದ ಮೊಟ್ಟೆಯೂ ಬೆಂದು ಹೋಗುವುದು. ಒಂದು ಕಾರಣದಿಂದ ಎರಡು ಕಾರ್ಯಗಳಾಗುತ್ತವೆ. ಧ್ವನಿಪ್ರವಾಹಗಳಿಂದ ಕೀಟಾಣುಗಳನ್ನೂ ನಷ್ಟಗೊಳಿಸಬಹುದೆಂದು ವಿಜ್ಞಾನಿಗಳು ಹೇಳುತ್ತಾರೆ. ಕೀಟಾಣುಗಳಿಂದ ತುಂಬಿದ ಪ್ರಪಂಚದಿಂದ ಸಾಂಕ್ರಾಮಿಕ ರೋಗಗಳನ್ನು ದೂರೀಕರಿಸುವ ತೂರ್ಯ ಧ್ವನಿಯಾಗಿ ಅತೀವ ಗಲಭೆಯೆಬ್ಬಿಸ ತೊಡಗಿದರೆ, ಆಶ್ಚರ್ಯವಿಲ್ಲ.

ಅಮೆರಿಕೆಯ ಹುಚ್ಚರ ಆಸ್ಪತ್ರೆಗಳನ್ನು ಸಂದರ್ಶಿಸಿದ ಮನಶ್ಶಾಸ್ತ್ರಜ್ಞರು ಗಲಭೆಯಿಂದಾಗಿ ತಮ್ಮ ಮೆದುಳಿನ ಶಕ್ತಿಯನ್ನು ಕಳೆದುಕೊಂಡವರ ಸಂಖ್ಯೆಯೇ ಅಲ್ಲಿ ಅಧಿಕವಿದೆಯೆನ್ನುತ್ತಾರೆ. ಪ್ರಪಂಚದಲ್ಲಿ ಇತರತ್ರವಿಲ್ಲದಂತೆ ಈ ಸಂಖ್ಯೆಯು ದಿನದಿಂದ ದಿನಕ್ಕೆ ಬೆಳೆಯುತ್ತ ಹೋಗುತ್ತಿರುತ್ತದೆ. ಎಲ್ಲ ಆಸ್ಪತ್ರೆಗಳನ್ನೂ ಹುಚ್ಚರಿಗಾಗಿ ತೆರೆದು, ಶಾರೀರಿಕ ರೋಗಿಗಳಿಗಾಗಿ ಒಂದು ಕೋಣೆಯನ್ನು ಪ್ರತ್ಯೇಕಿಸಿಡುವ ದಿನವೂ ಅಲ್ಲಿ ಹೆಚ್ಚು ದೂರವಿರಲಾರದು.

ಡಾ| ವಾಲ್ಟರ್ ಬಿ ಕಾನನ್‌ನ ಸಂಶೋಧನೆಯಿಂದ ಅರಿದುಳಿದ ಧ್ಯೇಯಕೂಡಾ ದೂರ ಸರಿಯುತ್ತಿದೆ. ಪಚನ ಕ್ರಿಯೆಯ ಮೇಲೂ ಗಲಭೆಯ ಪ್ರಭಾವ ಬೀರುತ್ತದೆಯೆಂದಿವರು ಹೇಳುತ್ತಾರೆ. ಗಲಭೆಯ ಪರಿಣಾಮ ಬೆಳೆಯುತ್ತ ಹೋಯಿತೆಂದರೆ, ನಾವೆಲ್ಲರೂ ಅನ್ನ ಸತ್ಯಾಗ್ರಹ ಮಾಡಲೇ ಬೇಕಾದ ದಿನ ಬರಬಹುದು; ಆಹಾರ ಸಮಸ್ಯೆಗೆ ಇದು ಉತ್ತಮ ಪರಿಹಾರವೆಂದು ತೃಪ್ತಿಪಟ್ಟುಕೊಳ್ಳಬಹುದಾದರೂ ಶರೀರದ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವುದರಿಂದ ಶಾರೀರಿಕ ಯಾತನೆಯಿಂದ ದೇಹತ್ಯಾಗವೇ ಇಷ್ಟವಾಗಿ ಪರಿಣಮಿಸಬಹುದು!

ಇಷ್ಟನ್ನೆಲ್ಲಾ ಓದಿದ ಮೇಲೆ ನೀವೇನು ಮಾಡುತ್ತೀರಿ? ಅಧಿಕ ಕೋಲಾಹಲದ ನಡುವೆ ಇರುವವರು ನಿಮ್ಮ ಕಿವಿಗಳಿಗೆ ಹತ್ತಿಯನ್ನು ತುರುಕಿಸಿಕೊಳ್ಳುವ ಬಗ್ಗೆ ಯೋಚನೆ ಮಾಡತೊಡಗುವಿರಿ; ಇಲ್ಲವೇ ಪ್ರಾಚೀನ ಕಾಲದ ಋಷಿ ಮುನಿಗಳಂತೆ ನಿಸ್ಸಬ್ದ ಪ್ರಕೃತಿಯ ಮಡಿಲಿಗೆ ಧಾವಿಸಿ, ಅಲ್ಲಿ ನೆಲೆನಿಲ್ಲುವ ಹವಣಿಕೆ ಮಾಡುವಿರಿ. ಹೆಚ್ಚಿನವರು ಇದ್ದಲ್ಲೇ ಇದ್ದುಕೊಂಡು ಬರುವುದನ್ನೆಲ್ಲ ಎದುರಿಸದೆ ಗತ್ಯಂತರವಿಲ್ಲವೆಂಬ ಸತ್ಯವನ್ನು ಮನಗಾಣುವಿರಿ. ಯಾವುದಕ್ಕೂ ಅವಸರ ಮಾಡಬೇಡಿ; ಮಧುರ ಧ್ವನಿಯಿಂದ ಸ್ವಾಸ್ಥ್ಯ ವೃದ್ಧಿಯಾಗುವುದಾದರೂ ತೀವ್ರ ಧ್ವನಿಯಿಂದ ಸ್ವಾಸ್ಥ್ಯ ಹಾನಿಯಿಲ್ಲವೆಂಬುದನ್ನೂ ಸಂಶೋಧಿಸುವ ಮಹಾ ವಿಜ್ಞಾನಿಯೊಬ್ಬ ಜನಿಸದಿರಲಾರನೆ? ಕಾಲ ಬಂಜೆಯಾಗದು ತಾನೆ?

(ವಿವಿಧ ಮೂಲಗಳಿಂದ)

—ಗೋರಾ.

ಸ್ವಲ್ಪ ಸ್ವಲ್ಪವಾಗಿ, ಅಲ್ಲೊಮ್ಮೆ ಇಲ್ಲೊಮ್ಮೆ, ನೀವು ಉಳಿಸುತ್ತಿರುವ ಹಣವು ಬೇಗ ಬೇಗನೆ ವೃದ್ಧಿಗೊಂಡು, ನಿಮ್ಮ ಭವಿಷ್ಯದ ಭದ್ರತೆಯು ಹೆಚ್ಚೆಚ್ಚಾಗಿ ಪರಿಣಮಿಸುವಂತೆ

ಕೊರ್ಪೊರೇಶನ್ ಬೇಂಕು

ನಿಮ್ಮ ಸೇವಿಂಗ್ಸ್ ಬೇಂಕ್ ಎಕೌಂಟುಗಳ ಮೇಲೆ ಇನ್ನು ಮುಂದಕ್ಕೆ ಸಾಲಿಯಾನ್ ಸೇಕಡಾ **3** ರ ದರದಲ್ಲಿ ನಿಮಗೆ ಬಡ್ಡಿ ಕೊಡುವುದು.

ವಿವರಗಳಿಗೆ ವಿಚಾರಿಸಿರಿ:

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ಸ್ಥಾಪನೆ: 1906) (ರಿಜಿಸ್ಟರ್ಡ್ ಆಫೀಸು: **ಉಡುಪಿ.**

ಆಡಳಿತ ಆಫೀಸು: **ಮಂಗಳೂರು—1**

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕವಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ. ನ.

> ಸಬಲತೆಯೆಂದರೆ [ಜೀವನ; ನಿರ್ಬಲತೆಯೆಂದರೆ ಮರಣ. ಸಬಲತೆಯಲ್ಲಿ ಸುಖವಿದೆ; ನಿರ್ಬಲತೆಯಲ್ಲಿ ದುಃಖವಿದೆ. ಸಬಲತೆಯನ್ನು ರಕ್ಷಿಸಿಕೊಳ್ಳುವುದು ಕಷ್ಟ; ನಿರ್ಬಲತೆಯನ್ನು ದೂರಮಾಡುವುದು ಕಷ್ಟ.

ನವಯುಗ

೪೦ ವರುಷ	ಉಡುಪಿ ೨೨-೬-'೬೧	ವಾರ ೪೦

ಅಮರಾವತಿ

ಕಮ್ಯುನಿಸ್ಟ್ ನಾಯಕ ಶ್ರೀ ಎ. ಕೆ. ಗೋಪಾಲನ್ನರ ಉಪವಾಸವು ಹೆಚ್ಚಿನ ಅನಾಹುತಗಳಿಗೆ ನಾಂದಿಯೆನಿಸುವುದಕ್ಕೆ ಮೊದಲೇ ಮುಕ್ತಾಯಗೊಳ್ಳುವಂತಾದುದು ಸಂತೋಷಕರ. ಕೇರಳ ಸರಕಾರವಾದರೋ ಈ ಉಪವಾಸವನ್ನು ಮೊದಮೊದಲು 'ಇದೊಂದು ರಾಜಕೀಯ ದುರುದ್ದೇಶ'ದಿಂದ ಕೂಡಿದ ಅಸ್ತ್ರವೆಂಬ ಭಾವನೆಯಿಂದ ಅವಜ್ಞೆಯನ್ನೇ ತೋರಿಸುತಿತ್ತು. ಅದರ ಮೂಲೋದ್ದೇಶವಾದರೂ ಇದಕ್ಕೆ ಬಹುದೂರವಿಲ್ಲ. ಅವಕಾಶವನ್ನೇ ಹಾರೈಸಿ ತಮ್ಮ ಸ್ವಾರ್ಥಸಾಧನೆಯನ್ನು ಸಾಧಿಸುವ ಕಲೆಯನ್ನು ಕರಗತ ಮಾಡಿಕೊಂಡು ಅದನ್ನೇ ಹವ್ಯಾಸವಾಗಿಟ್ಟುಕೊಂಡಿರುವ ಕಮ್ಯುನಿಸ್ಟರು ಅಯ್ಯಪ್ಪನ ಕ್ಯೊವಿನ ಅರಣ್ಯಗಳಲ್ಲಿನ ಸುಮಾರು ೧,೭೦೦ ಕುಟುಂಬಗಳನ್ನು ಅಮರಾವತಿಯಲ್ಲಿ ಪುನಃ ನಿರ್ವಾಸಗೊಳಿಸುವ ಯೋಜನೆಯ ಕಾರ್ಯಾಚರಣೆಯ ಸಂಬಂಧದಲ್ಲಿ ತಮ್ಮ ಮೂಸೆ ಹೊಗ್ಗಿಸಿದುದರಲ್ಲಿ ಆಶ್ಚರ್ಯವಿಲ್ಲ. ತಮಗಿದ್ದ ಪ್ರತಿಷ್ಠೆಯನ್ನೂ ಗೌರವವನ್ನೂ ಕಳೆದು ಕೊಂಡಿರುವ ಕಮ್ಯುನಿಸ್ಟರಿಗೆ ಹೇಗಾದರೂ ಮಾಡಿ ಅವನ್ನು ಕೇರಳದಲ್ಲಿ ಪುನಸ್ಸ್ಥಾಪನೆಗೊಳಿಸುವುದು ಅನಿವಾರ್ಯವೆಂಬಂತಾಗಿದೆ. ಮುಂದಿನ ಚುನಾವಣೆಯಲ್ಲಿ ಜಯಗಳಿಸುವ ಆಶೆಯನ್ನವರು ಇನ್ನೂ ಬಿಟ್ಟುಕೊಟ್ಟಿಲ್ಲದಿರುವುದರಿಂದ ಇದು ಅವಶ್ಯವೂ ಆಗಿತ್ತು. ಈ ದಿಸೆಯಲ್ಲಿ ಅವರು ಉಪಯೋಗಿಸಿದ ಪ್ರಬಲಾಸ್ತ್ರವೇ ಗೋಪಾಲನ್ನರ ಉಪವಾಸ, ಮತ್ತು ನಂಬೂದ್ರಿಪಾದರ ನೇರ ಕಾರ್ಯಕ್ರಮ!

ಇಡಿಕ್ಕಿ ಹೈಡೆಲ್‌ನ ಜಲಾನಯನ ಯೋಜನೆಯ ದೆಸೆಯಿಂದ ಮುಳುಗುವ ಪ್ರದೇಶದ ೧,೭೦೦ ಕುಟುಂಬಗಳನ್ನು ಅಮರಾವತಿಗೆ ತಂದು ಅಲ್ಲಿ ಪ್ರತಿಯೊಂದು ಕುಟುಂಬಕ್ಕೆ ಒಂದೊಂದು ಎಕ್ರೆ ಭೂಮಿ, ಮನೆ ಕಟ್ಟಲು ಬಿದಿರು, ಹಣ, ಕೆಲಸಮಯದ ವರೆಗೆ ಪುಕ್ಕಟೆ ಆಹಾರ, ವೈದ್ಯಕೀಯ ಸೌಕರ್ಯ ಮೊದಲಾದುವನ್ನು ಸರಕಾರ ನೀಡಲು ನಿರ್ಧರಿಸಿ, ಅದರನ್ವಯ ಸುಮಾರು ಐನೂರು ಕುಟುಂಬಗಳು ಮೊದಲೇ ನೆಲೆನಿಂತಿದ್ದುವು. ಸರಕಾರವು ತಾನು ಯಾವ ದುರುದ್ದೇಶದಿಂದಲೂ ಹೀಗೆ ಮಾಡುವುದಲ್ಲ; ಅಮರಾವತಿಯಲ್ಲಿ ನಿರ್ವಾಸಿತರಿಗೆ ಸಕಲ ವ್ಯವಸ್ಥೆಯನ್ನೂ ಮಾಡಿಕೊಡಲಾಗುವುದೆಂಬುದನ್ನು ಮೊದಲಾಗಿ ಜನತೆಗೆ ಮುಂದಿಟ್ಟು ಮಾಡಲಿಲ್ಲವೆಂದು ತೋರುತ್ತದೆ; ಅಂತಿಮ ಕಾಲದಲ್ಲಿ ಅದು ನೀಡಿದ ಸ್ಪಷ್ಟೀಕರಣವನ್ನು ಮೊದಲೇ ನೀಡುತಿದ್ದರೆ, ಈ ದುರ್ಘಟನೆಯೇ ನಡೆಯುತ್ತಿರಲಿಲ್ಲವೆಂದು ಹೇಳಬಹುದು. ಈಗ ಆದ ಒಪ್ಪಂದದಂತೆ ಪ್ರತಿ ಕುಟುಂಬಕ್ಕೆ ರೂ.೧೦ರ ಬದಲು ರೂ.೨೫ ಸರಿಹಾರ ದ್ರವ್ಯ ದೊರೆಯುವುದು. ಉಪವಾಸದ ಮಹಿಮೆಯಿಂದ ದೊರೆತ ಪ್ರಧಾನ ಲಾಭವೆಂದರೆ ಇದೊಂದೇ.

ಸರಕಾರವು ಧರ್ಮಾರ್ಥ ವೈದ್ಯಕೀಯ ಸಹಾಯವನ್ನು ನೀಡಲು ಮೊದಲೇ ಒಪ್ಪಿದ್ದು ಈಗ ಇನ್ನೊಂದು ತಾತ್ಕಾಲಿಕ ಚಿಕಿತ್ಸಾಲಯವನ್ನು ತೆರೆಯಲು ಒಪ್ಪಿದೆ. ನಿರ್ವಾಸಿತರಿಗೆ ಉದ್ಯೋಗವನ್ನು ಕೈಗೊಳ್ಳಲು ಕಾಮಗಾರಿಯನ್ನು ಅದು ಪ್ರಾರಂಭಿಸುವುದು. ಒಂದು ತಿಂಗಳ ವರೆಗೆ ಧರ್ಮಾರ್ಥ 'ರೇಶನ್', ಮನೆ ಕಟ್ಟಲು ಬಿದಿರು ಮತ್ತಿತರ ಸಾಧನೋಪಕರಣಗಳು ಮತ್ತೊಂದು ಕುಟುಂಬಕ್ಕೆ ಒಂದು ಎಕ್ರೆ ವ್ಯವಸಾಯ ಯೋಗ್ಯ ಭೂಮಿಯನ್ನು ನೀಡುವುದು. ೧,೭೦೦ ಇಂತಹ ಕುಟುಂಬಗಳಲ್ಲಿ ೧೦೦೦ ಕುಟುಂಬಗಳಿಗೆ ಅಲ್ಲೆಲ್ಲಿಯೂ ಭೂಮಿ ದೊರೆಯುವುದಿಲ್ಲ. ೫೦೦ ಕುಟುಂಬಗಳು ಸರಕಾರವು ತಮಗೊದಗಿಸಿದ ಭೂಮಿಯಲ್ಲಿ ಈಗಾಗಲೇ ಹೋಗಿ ನೆಲೆಸಿವೆ. ಕಮ್ಯುನಿಸ್ಟರು ಮುಂದಿಟ್ಟ ಪ್ರಧಾನ ಬೇಡಿಕೆಗಳಲ್ಲಿ ಒಂದು ಕುಟುಂಬಕ್ಕೆ ಐದು ಎಕ್ರೆ ಭೂಮಿಯೂ ಒಂದಾಗಿತ್ತು. ಇದು ಮುಂದೆ ಮೂರು ಎಕ್ರೆಗಳಿಗೆ ಇಳಿಸಲ್ಪಟ್ಟಿತ್ತಾದರೂ ಕೇರಳದಂತಹ ಜನದಟ್ಟಣೆಯ ರಾಜ್ಯದಲ್ಲಿ ಅಷ್ಟು ಭೂಮಿಯನ್ನು ಒದಗಿಸುವ ಸಾಧ್ಯಾಸಾಧ್ಯತೆಗಳನ್ನೂ ಉಚಿತಾನುಚಿತತೆಗಳನ್ನೂ ಕೇಳಿಕೆದಾರರು ಸದ್ವಿವೇಕ ದೃಷ್ಟಿಯಿಂದ ವಿವೇಚಿಸಿದಂತೆ ಕಾಣುವುದಿಲ್ಲ. ಮಳೆಗಾಲವು ಪ್ರಾರಂಭವಾದುದರಿಂದ ಪುನರ್ವಸತಿಯ ಕಾರ್ಯವು ಭರದಿಂದ ಸಾಗಬೇಕಿತ್ತೆಂಬುದನ್ನು ಒಪ್ಪಲೇ ಬೇಕು. ಸರಕಾರದ ಪ್ರಕಟಣೆಯ ವಿವರ ಮತ್ತು ಉದ್ದೇಶಗಳು ಸಾಕಷ್ಟು ಪ್ರಸಿದ್ಧವಾಗದೆ ಇರುವುದರಿಂದಲೇ ಪುನರ್ವಸತಿಯ ಸೌಲಭ್ಯ ಒದಗಿಸಬೇಕೆಂಬ ಬಗ್ಗೆ ಎಲ್ಲೆಲ್ಲಿಯೂ ಸಹಾನುಭೂತಿಯು ಪ್ರಕಟವಾಗುತಿತ್ತೆನ್ನಬಹುದು.

ಶ್ರೀ ಎ. ಕೆ. ಗೋಪಾಲನ್ನರ ಉಪವಾಸದಿಂದ ಮಹಾ ಸಾಧನೆಯೇನೂ ಆದಂತಿಲ್ಲ. ಸತ್ಯಾಗ್ರಹ—ಉಪವಾಸಗಳ ಮಹತ್ವದಲ್ಲಿ ಆಸಕ್ತಿ ವಹಿಸದ ಕಮ್ಯುನಿಸ್ಟರು, ಅವುಗಳಲ್ಲಿ ವಿಶ್ವಾಸವಿಡದವರು ಈಗ ಅದಕ್ಕೆ ಕೈಹಾಕಿದುದು ಆಶ್ಚರ್ಯವೆಂಬಂತಿದೆ. ಪ್ರಜಾಸತ್ತೆಯಲ್ಲಿ ಪ್ರಜಾತಂತ್ರಾತ್ಮಕ ವಿಧಾನಗಳಲ್ಲಿ ಅಮರಾವತಿಯ ಚಿಕ್ಕ ಪುಟ್ಟ ಭಿನ್ನಾಭಿಪ್ರಾಯಗಳನ್ನು ಪರಿಹರಿಸಿಕೊಳ್ಳುವುದು ಸಾಧ್ಯವಿತ್ತು. ಯಾರಿಂದಲೂ ಪೂರೈಸಲಾರದಂತಹ ಬೇಡಿಕೆಗಳನ್ನು ಮುಂದಿಟ್ಟು, ತಾವು ಮಹಾ ಕಾರ್ಯ ಮಾಡುತಿದ್ದೇವೆಂದು ತೋರಿಸಿಕೊಡುವ ಹವ್ಯಾಸ ಭಾರತದ ಕಮ್ಯುನಿಸ್ಟರಿಗಷ್ಟೇ ಯೋಗ್ಯವಾದುದು. ಅವರು ತಲೆಯೆತ್ತದಂತೆ, ಅವಕಾಶ ಪಡೆಯದಂತೆ ತನ್ನ ಆಡಳಿತೆಯನ್ನು ಸಮರ್ಪಕವಾಗಿ ಮುಂದುವರಿಸುವುದು ಆಡಳಿತದ ಹೊಣೆಗಾರಿಕೆ.

ವಿಜಯ ಶ್ರೀ

ಪ್ರಧಾನಿ ನೆಹರು ಹೇಳುವಂತೆ 'ಒಡಿಸ್ಸದಲ್ಲಿ ಕಾಂಗ್ರೆಸಿನ ವಿಜಯವು ಪೂರ್ವನಿರೀಕ್ಷಿತ'ವಿರುವಂತೆಯೆ ಭಾವೀ ಸಾರ್ವತ್ರಿಕ ಚುನಾವಣೆಗಳಲ್ಲಿ ಕಾಂಗ್ರೆಸ್ಸಿನ ಯಶಸ್ಸೂ ನಿರೀಕ್ಷಿತವೆನ್ನಬಹುದು. ಕಾಂಗ್ರೆಸ್ಸನ್ನು ಸೋಲಿಸಬೇಕೆಂಬ ಹಂಬಲ ಇತರ ಪಕ್ಷಗಳಿಗಿದ್ದರೂ ತಂತಮ್ಮ ದುರ್ಬಲತೆ ಮತ್ತು ಪ್ರಭಾವ ಕ್ಷೇತ್ರಗಳ ಕೊರತೆಗಳಿಂದಾಗಿ ಅವು ಇನ್ನೂ ಮುಖಾಮುಖ ನೋಡಬೇಕಾಗಿ ಬಂದಿದೆ. ಹಾಗಿರುವಾಗ, ಕೆಲವೊಂದು ಪಕ್ಷಗಳು ಚುನಾವಣಾ ಮೈತ್ರಿಯನ್ನು ಸಾಧಿಸಿಕೊಳ್ಳಬಹುದಾದರೂ, ಇದರಿಂದ ಆಗಬಹುದಾದ ಪರಿಣಾಮ ಅಗಣ್ಯವೆಂಬುದು ಸ್ವತಃ ಸಿದ್ಧ. ಕಾಂಗ್ರೆಸ್ಸು ಯಾವ ಪಕ್ಷದೊಡನೆಯೂ ಸೇರುವ ಅಗತ್ಯ ಇಲ್ಲವಾದುದರಿಂದ ಅದು ಸ್ವತಂತ್ರವಾಗಿಯೇ ಸ್ಪರ್ಧಿಸುವುದು. ಉಳಿದ ಪಕ್ಷಗಳ ಧ್ಯೇಯ—ಉದ್ದೇಶಗಳಲ್ಲಿ ಮೂಲಭೂತ ಅಂತರಗಳಿರುವುದಾದರೂ ಚುನಾವಣಾ ಸ್ನೇಹ ಸಾಧಿಸುವ ಇಚ್ಛೆಪಡುತ್ತಿರಬಹುದು. ಪ್ರಜಾ ಸಮಾಜವಾದಿ ಪಕ್ಷವು ತಾನು ಸ್ವತಂತ್ರವಾಗಿಯೇ ಚುನಾವಣೆಗಿಳಿಯಲು ನಿರ್ಧರಿಸಿದೆ ಯೆಂದುದರಿಂದ ವಿರೋಧೀ ಪಕ್ಷಗಳ ಆಶೆ ಈಡೇರುವ ಲಕ್ಷಣಗಳು ಗೋಚರಿಸುತ್ತಿಲ್ಲ. ಒಡಿಸ್ಸದ ಚುನಾವಣೆಯಲ್ಲಿ ರಾಜ ಮಹಾರಾಜರ ಪಕ್ಷವೂ ಸೊಲುಣ್ಣ ಬೇಕಾಯಿತೆಂಬಾಗ, ಜನತೆಯು ತಮ್ಮ ಉದ್ಧಾರವು ಯಾರಿಂದ ಸಾಧ್ಯವಾದೀತೆಂದು ಆಶಿಸಿದೆಯೆಂಬುದರ ಕಲ್ಪನೆ ನಮಗೆ ಬರುತ್ತದೆ. ಕಾಂಗ್ರೆಸ್ಸು ಹಿರಿಯ ಪಕ್ಷ; ಅದರಲ್ಲಿ ಚೇತನಾಶಕ್ತಿಯಿದೆ; ಅದರಲ್ಲಿಯೂ ಕೆಲವೊಂದು ಹುಳುಕುಗಳೂ ದೋಷಗಳೂ ಇರುವುದು ಹೌದಾದರೂ ಅದನ್ನು ಬಿಟ್ಟರೆ, ದೇಶವನ್ನು ಸರಿದಾರಿಯಲ್ಲಿ ಮುಂದೆ ಕರೆದೊಯ್ಯುವ ಪಕ್ಷ ಬೇರೊಂದಿಲ್ಲ.

ಸಂಕ್ಷಿಪ್ತ ಸುದ್ದಿಗಳು

ಸುಲಭದಲ್ಲಿ ಪ್ರಶಂಸೆ

ಮೈಸೂರಿನ ಮುಖ್ಯಮಂತ್ರಿ ಶ್ರೀ ಜತ್ತಿಯವರು ಮಹಾ ಭಾಗ್ಯಶಾಲಿಗಳು. ಅನಿರೀಕ್ಷಿತವಾಗಿಯೇ ಅವರು ಅಧಿಕಾರಕ್ಕೆ ಬಂದರು; ತನ್ನ ಸಿಂಹಾಸನವನ್ನು ಬಿರುಗಾಳಿ ಅಲ್ಲಾಡಿಸುವಾಗಲೂ ಅದರಿಂದ ಉರುಳುತ್ತೇನೆ—ಉರುಳಿದೆ ಎನ್ನುವಂತೆಯೇ ಉಳಿದುಕೊಂಡರು. 'ನಾವು ಕಾಂಗ್ರೆಸ್ಸಿನ ಮಂತ್ರಿಗಳಲ್ಲ; ಜನತೆಯ ಮಂತ್ರಿಗಳು' ಎಂದು ಹಾಡಿ ವಿರೋಧೀ ಪಕ್ಷೀಯರ ಬಲವನ್ನೂ ಗಳಿಸುತ್ತಾರೆ ಇವರು. ಬಳ್ಳಾರಿಯಲ್ಲಿ ಮೆಡಿಕಲ್ ಕಾಲೇಜಿನ ಬಗ್ಗೆ ಜನತೆಯು ಸಹಾಯ ರೂಪದ ಹಣವನ್ನು ಪಡೆದ ಮರುದಿನವೇ ಅಲ್ಲಿ ಕಾಲೇಜ್ ಸ್ಥಾಪನೆಯ ಆಜ್ಞೆ ವಿಧಿಸಿದುದರಿಂದ ಬಳ್ಳಾರಿ—ಹೊಸಪೇಟೆಗಳಲ್ಲಿ ಗೌರವಾದರಗಳಿಗೆ ಪಾತ್ರರಾಗಿದ್ದಾರೆ. ಜತ್ತಿಯವರು ತಮ್ಮ ನ್ಯಾಯವಾದ ಬೇಡಿಕೆಯನ್ನು ಮನ್ನಿಸಿದರೆಂಬ ಅಚಲ ವಿಶ್ವಾಸ ಅವರಲ್ಲಿದೆ. ಹೀಗೆ ಸುಲಭದಲ್ಲಿ ಪ್ರಶಂಸೆ ಪಡೆಯುವುದು ಎಲ್ಲರಿಂದಲೂ ಅಸಾಧ್ಯ.

ಸ್ಥಿರ ಆಡಳಿತೆಗೆ ನಾಂದಿ

'ಜನತೆಯೇ ಜನಾರ್ದನ'ನೆಂದು ಕಿರೀಟಧಾರಿಗಳ ಗಣತಂತ್ರ ಪರಿಷತ್ತನ್ನು ಹಿಮ್ಮೆಟ್ಟಿಸಿದ ಒಡಿಸ್ಸದ ಬಡ ಜನತೆ ಸಿದ್ಧಾಂತ ಮಾಡಿತು. ಈ ಅಮರ ತತ್ವವನ್ನು ಒಡಿಸ್ಸದ ಮನೆ ಮನೆಯ ಮುಂದೆ ಹಾಡಿ ಹೇಳಿದ ಯಶಸ್ಸು ಅಲ್ಲಿನ ಕಾಂಗ್ರೆಸ್ ಅಧ್ಯಕ್ಷ ವಿಜಯಾನಂದ ಪಟವರ್ಧನರಿಗೆ ಸೇರಿದ್ದು. ಎಂತಲೇ ಅಲ್ಲಿನ ಕಾಂಗ್ರೆಸ್ ವಿಜಯಪಟವರ್ಧನರ ವೈಯಕ್ತಿಕ ದಿಗ್ವಿಜಯ. ಇದರ ಪರಿಣಾಮವಾಗಿ ಯೋ ಏನೋ ಅವರೇ ವಿಧಾನ ಸಭಾ ಕಾಂಗ್ರೆಸ್ಸಿನ ನಾಯಕರಾಗಿ ಆರಿಸಲ್ಪಟ್ಟಿದ್ದಾರೆ. ೮ ಜನ ಸದಸ್ಯರಿರುವ ಮಂತ್ರಿಮಂಡಳಿಯು ಒಡಿಸ್ಸದಲ್ಲಿ ಈ ಮಾಸಾಂತ್ಯದೊಳಗೆ ಅಧಿಕಾರ ವಹಿಸುವುದು. ಅಲ್ಲಿಗೆ ಅಲ್ಲಿನ ಅಸ್ಥಿರ ಆಡಳಿತೆ ದೂರವಾಗಿ ಮುಂದಿನ ದಕ್ಷ ಸ್ಥಿರ ಆಡಳಿತೆಯ ನಾಂದಿಯಾಗುವುದು.

ಯಾರ ಮಂತ್ರಿಗಳು?

ಭಾರತದಲ್ಲಿ ಹರಿಜನ-ಗಿರಿಜನರ ಉದ್ಧಾರ ಕಾರ್ಯ ತೃಪ್ತಿಕರವಾಗಿ ನಡೆಯುತ್ತಿಲ್ಲವೆಂದು ಹಿಂದೊಮ್ಮೆ ಕೇಂದ್ರ ಮಂತ್ರಿ ಶ್ರೀ ಜಗಜೀವನರಾಮರ ನುಡಿಯನ್ನು ಪುನರುಚ್ಚರಿಸಿದ್ದ ಮೈಸೂರಿನ ಮಂತ್ರಿ ರಾಚಯ್ಯನವರು ಈಗ ತಮ್ಮ ಧ್ವನಿಯನ್ನು ಸ್ವಲ್ಪ ಬದಲಿಸಿದಂತಿದೆ. 'ಹರಿಜನ ಗಿರಿ ಜನರು ತಮ್ಮ ಉದ್ಧಾರ ಕಾರ್ಯವನ್ನು ತಾವೇ ಮಾಡಿಕೊಳ್ಳಬೇಕು' ಎಂದವರಿಗೆ ಕರೆಯಿತ್ತು ಅವರ ಕರ್ತವ್ಯದ ಪರಿಜ್ಞಾನವನ್ನು ಮಾಡಿಕೊಡುವಷ್ಟು ಈಗ ಮುಂದುವರಿದಿದ್ದಾರೆ. ಆದರೆ, ತಾನು ಮತ್ತು ಬಸವಲಿಂಗಪ್ಪನವರು ಹರಿಜನರ ಹಿತಕ್ಕಾಗಿಯೇ ಕಂಕಣ ಬದ್ಧರಾಗಿ ದುಡಿಯುತ್ತೇವೆ ಎಂಬ ಅವರ ಉದ್ಗಾರ ಮಾತ್ರ ಮಂತ್ರಿ ಸ್ಥಾನಕ್ಕೆ ಶೋಭನೀಯವೆನಿಸಲಾರದು. ಮಂತ್ರಿಗಳು ಹರಿಜನರ ಗಿರಿಜನರ ಮಂತ್ರಿಗಳಲ್ಲ, ಜನತೆಯ ಮಂತ್ರಿಗಳು—ಜನತೆಯ ಹಿತಕ್ಕಾಗಿ ದುಡಿಯಬೇಕೇ ಹೊರತು ಒಂದು ಕೋಮಿನವರ ಒಳಿತಿಗಲ್ಲವೆನಿಸುವುದಿಲ್ಲವೆ?

ಉಡುಪಿ ಡಿ. ಮು. ಕೋರ್ಟಿನಲ್ಲಿ

O. P. No. 27/61.

ರತ್ನಾವತಿ ಸೆಡ್ತಿ ಕೂಡಾ— ಅರ್ಜಿದಾರರು

ಮತ್ತು

ದ್ಯಾಮು ಹೆಗಡ್ತಿ— ಎದ್ರಿಳು.

ಇವರೊಳಗೆ

ಈ ಮೂಲಕ ಸಮಸ್ತರಿಗೂ ತಿಳಿಯಪಡಿಸುವುದೇನೆಂದರೆ:—

ಮೃತ ನಾರಾಯಣ ಹೆಗ್ಡೇರೆ ಬಾಬ್ತು ಅರ್ಜಿಯಲ್ಲಿ ವಿವರಿಸಿದ ಆ್ಯವೇಜುಗಳ ವಸೂಲಿಗೆ ಅರ್ಜಿದಾರರಿಗೆ ವಾರೀಸು ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರರು ದಾಖ್ಲು ಮಾಡಿದ ಮೇಲಿನ ಅರ್ಜಿಯು ತಾರೀಕು 15—7—61ಕ್ಕೆ ಈ ಕೋರ್ಟಿನಲ್ಲಿ ತನ್ಖಿಗೆ ಇಟ್ಟಿರುವುದರಿಂದ—ಅ ಕುರಿತು ಆಕ್ಷೇಪಿಸುವವರು ಮೇಲಿನ ತಾರೀಕು ಹಗಲು ಗಂಟೆ 11ಕ್ಕೆ ಈ ಕೋರ್ಟಿನಲ್ಲಿ ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು.

Y. C. S. Hegde,
Advocate for Petitioners.

ಉಡುಪಿ, ತಾ. 19-6-61.

ಸುಲಭ ದರದಲ್ಲಿ
ಶಾಲೆಗಳಿಗೆ ಬೇಕಾಗುವ
ಯಾವತ್ತೂ ಫಾರ್ಮುಗಳೂ
ಹಾಜರಿ ರಿಜಿಸ್ಟ್ರಿಗಳೂ
ಸುಲಭ ದರದಲ್ಲಿ ಸಿಗುತ್ತವೆ
ನವಯುಗ ಪ್ರೆಸ್ ಉಡುಪಿ.

ಅಲ್ಲಲ್ಲಿಯ ಸುದ್ದಿ ಸಾರ

ಪರೀಕ್ಷೆಯ ಫಲಿತಾಂಶ ಉಡುಪಿ

ಎಮ್. ಜಿ. ಎಮ್. ಕಾಲೇಜಿನ ಇದೇ ಎಪ್ರಿಲ್‌ನಲ್ಲಿ ಜರಗಿದ ಪ್ರಿಯುನಿವರ್ಸಿಟಿ ಪರೀಕ್ಷೆಯ ಫಲಿತಾಂಶದ ಪ್ರಥಕ್ಕರಣೆಯು ಹೀಗಿದೆ. ಎಲ್ಲಾ ಪರೀಕ್ಷೆಗಳಿಗೆ 232 ಮಂದಿ ಕುಳಿತಿದ್ದು 129 ವಿದ್ಯಾರ್ಥಿಗಳು (56%) ಪಾಸಾಗಿರುವರು. ಭಾಗ ೧. ಇಂಗ್ಲೀಷಿನಲ್ಲಿ 234ರಲ್ಲಿ 164 (71%) ಭಾಗ ೨. ಕನ್ನಡ 183ರಲ್ಲಿ 171 (94%) ಹಿಂದಿ 41ರಲ್ಲಿ 39 (95%) ಸಂಸ್ಕೃತ 10ರಲ್ಲಿ 7(70%) ಭಾಗ ೩. ಲೆಕ್ಕ ಫಿಸಿಕ್ಸ್ ಕೆಮಿಸ್ಟ್ರಿ 79ರಲ್ಲಿ 70 (90%) ಬೈಯೋಲೊಜಿ, ಫಿಸಿಕ್ಸ್, ಕೆಮಿಸ್ಟ್ರಿ 71 ರಲ್ಲಿ 34 (48%) ಚರಿತ್ರೆ, ಅರ್ಥ ಶಾಸ್ತ್ರ, ತರ್ಕಶಾಸ್ತ್ರ 13ರಲ್ಲಿ 9 (69%) ಚರಿತ್ರೆ, ಅರ್ಥಶಾಸ್ತ್ರ, ಸಿವಿಕ್ಸ್ 82ರಲ್ಲಿ 44 (54%) ಭಾಗ ೪. ಸೋಶಲ್ ಸಾಯನ್ಸ್ 158ರಲ್ಲಿ 130(79%) ಜನರಲ್ ಸಾಯನ್ಸ್ 99ರಲ್ಲಿ 96 (98%).

ಕೆನರಾ ಬ್ಯಾಂಕಿನ ಕೊಟ್ಟಾಯಮ್ ಶಾಖೆಯು ಇದೇ ತಾ. 16ರಂದೂ ತ್ರಿಚೂರು ಶಾಖೆಯು ಇದೇ 19ರಂದೂ ತೆರೆಯಲ್ಪಟ್ಟ ಸುಸಂದರ್ಭದಲ್ಲಿ ಆಯಾಯ ಶಾಖೆಗಳಲ್ಲಿ ಸ್ವಾಗತ ಸತ್ಕಾರಗಳು ಜರಗಿದುವು.

ಉಡುಪಿ ಬೋರ್ಡ್ ಹೈಸ್ಕೂಲಿನ ವಿದ್ಯಾರ್ಥಿಗಳಿಗೆ ಪ್ರಥಮ ಮತ್ತು ದ್ವಿತೀಯ ಶ್ರೇಣಿ— ಮದ್ರಾಸು ಕರ್ನಾಟಕ ವಿಭಾಗದ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಉಡುಪಿ ಬೋರ್ಡ್ ಹೈಸ್ಕೂಲಿನ ಲಕ್ಷ್ಮೀನಾರಾಯಣ ರಾವ್ ಎಂಬ ವಿದ್ಯಾರ್ಥಿಯು ಒಟ್ಟು 600 ಮಾರ್ಕುಗಳಲ್ಲಿ 521 ಮಾರ್ಕನ್ನು ಪಡೆದು ಪ್ರಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣನಾಗಿರುವನು. 503 ಮಾರ್ಕುಗಳನ್ನು ಪಡೆದು ಯು. ಪ್ರೇಮಾನಂದ ಶೇಟ್ ಎಂಬ ವಿದ್ಯಾರ್ಥಿಯು ದ್ವಿತೀಯ ಶ್ರೇಣಿಯಲ್ಲಿ ತೇರ್ಗಡೆ ಹೊಂದಿರುವನು.

ಈ ಹೈಸ್ಕೂಲಿನಿಂದ ಎಸ್. ಎಸ್. ಎಲ್. ಸಿ. ಪಬ್ಲಿಕ್ ಪರೀಕ್ಷೆಗೆ ಕಳುಹಿಸಲ್ಪಟ್ಟ ಎಲ್ಲಾ (95) ವಿದ್ಯಾರ್ಥಿಗಳಲ್ಲಿ 82 ಮಂದಿ ತೇರ್ಗಡೆ ಹೊಂದಿ 86% ಫಲಿತಾಂಶ ದೊರೆತಿರುವುದು.

ಮಣಿಪಾಲ ಇಂಜಿನಿಯರಿಂಗ್ ಕಾಲೇಜಿನಫಲಿತಾಂಶ— ವಿಶ್ವವಿದ್ಯಾಲಯದ ಈ ಸಲದ ಬಿ. ಇ. ಪರೀಕ್ಷೆಯಲ್ಲಿ ಮಣಿಪಾಲದ ಇಂಜಿನಿಯರಿಂಗ್ ಕಾಲೇಜು ಸೇಕಡಾ 84.5 ರಷ್ಟು ಫಲಿತಾಂಶ ಪಡೆದಿರುತ್ತದೆ. ಇದು ವಿಶ್ವವಿದ್ಯಾಲಯದಲ್ಲೇ ಪ್ರಥಮ ಸ್ಥಾನ ಎಂದು ತಿಳಿದು ಬರುತ್ತದೆ. ಸೇಕಡಾ 68.2ರಷ್ಟು ವಿದ್ಯಾರ್ಥಿಗಳುಎಸ್. ಇ. ಪರೀಕ್ಷೆಯಲ್ಲೂ ಸೇಕಡಾ 57.6ರಷ್ಟು ವಿದ್ಯಾರ್ಥಿಗಳುಎಫ್. ಇ. ಪರೀಕ್ಷೆಯಲ್ಲೂ ತೇರ್ಗಡೆಯಾಗಿದ್ದಾರೆ ಎಂದೂ ತಿಳಿದು ಬರುತ್ತದೆ.

ಹೊಸ ಕಟ್ಟಡದಪ್ರವೇಶೋತ್ಸವ

ಉಡುಪಿ ಅಭಿವೃದ್ಧಿ ಯೋಜನೆಯ ಸಹಕಾರದಿಂದ ಸದಿಯ ಸಾಹುಕಾರ ಸ್ಮಾರಕ ನಿಧಿ (ರಜಿಸ್ಟರ್) ಉದಿಯಾವರ ಇದರವತಿಯಿಂದ ಕಟ್ಟಿಸಿದ ಪಿತ್ರೋಡಿ ಪ್ರೌಢ ಪ್ರಾಥಮಿಕ ಶಾಲಾ ಹೊಸ ಕಟ್ಟಡದ ಪ್ರವೇಶ ಸಮಾರಂಭವು ಇದೇ ತಾ. 12ರಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ. ಎ. ಪೈಯವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಶಾಲಾ ಕರೆಸ್ಪೋಂಡೆಂಟ್ ಶ್ರೀ ಯು. ಆನಂದ ಮೆಂಡನರು ಸ್ವಾಗತಿಸಿದರು.

ಮುಖ್ಯೋಪಾಧ್ಯಾಯ ಶ್ರೀ ಎ. ಡಿ. ಸೋಜಾರವರು ವರದಿಯನ್ನೂ ಸಂದೇಶಗಳನ್ನೂ ಓದಿದರು. ಉಡುಪಿ ಉತ್ತರ ಶ್ರೇಣಿಯ ಪರೀಕ್ಷಾಧಿಕಾರಿ ಶ್ರೀ ವೈ. ಗೋಪಾಲ್‌ರವರು ಆರನೇ ತರಗತಿಯ ಉದ್ಘಾಟನಗೈದರು. ಶ್ರೀ ಟಿ. ಶ್ರೀಪತಿ ಆಚಾರ್ಯರು ದಿ| ಸದಿಯ ಸಾಹುಕಾರರ ಭಾವ ಚಿತ್ರ ಅನಾವರಣ ಮಾಡಿದರು. ಶ್ರೀ ಯು. ಕೃಷ್ಣಪ್ಪಸಾಹುಕಾರರಿಂದ ದಾನವಾಗಿ ಕೊಡಲ್ಪಟ್ಟ ಬಟ್ಟೆಬರೆಗಳನ್ನು ಶ್ರೀಮತಿ ಮನೋರಮಾ ಆಚಾರ್ಯರು ವಿತರಣೆಗೈದರು. ಅಂತ್ಯದಲ್ಲಿ ಶ್ರೀ ಎಂ. ಕೆ. ಶಾಂತಪ್ಪನವರು ಮಕ್ಕಳಿಗೆ ಸಿಹಿತಿಂಡಿ ವಿತರಣೆ ಗೈದರು.

ಕಡ್ಡಾಯ ಪ್ರಾಥಮಿಕ ಶಿಕ್ಷಣ ವಿಚಾರ ಗೋಷ್ಠಿ— ಕೋಟೇಶ್ವರದಲ್ಲಿ ತಾ. ಕೋಟೇಶ್ವರದಲ್ಲಿ ತಾ. 15—6—61 ರಂದು ಜಿಲ್ಲಾ ವಿದ್ಯಾಧಿಕಾರಿ ಶ್ರೀ ಕೆ. ವಿಠಲ ಶೆಣೈಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಯು. ಎ. ಆನಂದನವರು ಸ್ವಾಗತಿಸಿದರು. ವಿಚಾರ ಗೋಷ್ಠಿಯ ಉದ್ಘಾಟನೆಯನ್ನು ಮಂಗಳೂರು ತಾಲೂಕು ಬೋರ್ಡ್ ಉಪಾಧ್ಯಕ್ಷ ಶ್ರೀ ಬಿ. ಎಂ. ಇದಿನಬ್ಬನವರು ನೆರವೇರಿಸುತ್ತ ಅಧ್ಯಾಪಕರು, ಹಾಗೂ ಹೆತ್ತವರು ತಮ್ಮ ಜವಾಬ್ದಾರಿಯನ್ನು ವಿದ್ಯಾಪ್ರಸಾರದಲ್ಲಿ ಸರಿಯಾಗಿ ನಿರ್ವಹಿಸಿದ್ದಲ್ಲಿ ನಮ್ಮ ದೇಶದಲ್ಲಿ ಹೆಚ್ಚಿನವರು ವಿದ್ವಾಂಸರಾಗಿ, ದೇಶವನ್ನು ಭೂಮಂಡಲದಲ್ಲೇ ರಾರಾಜಿಸುವಂತೆ ಮಾಡಬಹುದೆಂದರು. ಕಡ್ಡಾಯ ಶಿಕ್ಷಣ ಜಾರಿಯು ಯಶಸ್ವಿಯಾಗುವುದಕ್ಕೆ ಹೆತ್ತವರು ಶಿಕ್ಷಣಕ್ಕೆ ಕೊಡುವ ಗೌರವ, ಆದರ ಹಾಗೂ ಬೆಲೆಗಳ ಮೇಲೆ ಹೊಂದಿಕೊಂಡಿದೆ ಎಂದರು.

ಅಧ್ಯಕ್ಷ ಶ್ರೀ ಶೆಣೈಯವರು ನೆರೆದ ಅಧ್ಯಾಪಕ ವೃಂದಕ್ಕೆ, ಪಂಚಾಯತ್ ಬೋರ್ಡ್ ಸದಸ್ಯರಿಗೆ, ಕಡ್ಡಾಯ ಶಿಕ್ಷಣದ ಮಸೂದೆಯನ್ನು ತನ್ನ ಸರಳವಾದ ಭಾಷೆಯಿಂದ ಅರ್ಥವತ್ತಾಗಿ ವಿವರಿಸಿ, ಮನನ ಮಾಡಿಕೊಟ್ಟರು. ವಿಚಾರ ಗೋಷ್ಠಿಯ ಸಂಚಾಲಕ ಶ್ರೀ ಯು. ಎ. ಆನಂದನವರು ಕಡ್ಡಾಯ ಶಿಕ್ಷಣದಲ್ಲಿ ಪ್ರತಿಯೊಂದು ಶಾಲೆಯು ಮಾಡಬೇಕಾದ, ಮಾಡಬಹುದಾದ ಕರ್ತವ್ಯ ಭಾಗಗಳನ್ನು ವಿವರಿಸಿ, ಶಾಲೋದ್ಧಾರಕ ಸಂಘಗಳ ಮಹತ್ವ ಹಾಗೂ ಸಂಘಟನಾ ವಿಧಾನವನ್ನು ವಿವರಿಸಿ, ಹೇಗೆ ಶಾಲೋದ್ಧಾರಕ್ಕಾಗಿ ಮಹಾ ಜನರ ಸಹಾಯ ಸಹಕಾರಗಳನ್ನು ಪಡೆಯಬಹುದೆಂದು ಹೇಳಿದರು. ಸಭಿಕರ ಪರವಾಗಿ ಶ್ರೀ ವೆಂಕಟರಾಯರು ಮತ್ತು ಶ್ರೀ ಶ್ರೀನಿವಾಸ ಭಟ್ಟರು ಮಾತನಾಡಿದರು. ನೆರೆದ ಅನೇಕ ಅಧ್ಯಾಪಕ, ಅಧ್ಯಾಪಕಿಯರು ಚರ್ಚೆಯಲ್ಲಿ ಭಾಗ ವಹಿಸಿದ್ದರು. ಕೋಟೇಶ್ವರ ಶಾಲೆಯ ಹೆಡ್‌ಮಾಸ್ಟರರು ಹಾಗೂ ಸ್ವಾಗತ ಸಮಿತಿಯ ಅಧ್ಯಕ್ಷ ಶ್ರೀ ನಾರಾಯಣರಾಯರು ವಿಚಾರ ಗೋಷ್ಠಿಯ ಸಮಯ ಜರಗಿಸಿದ ಎರಡು ಉಪಾಹಾರ ಮತ್ತು ಊಟದ ಖರ್ಚನ್ನು ಹಾಗೂ ಅದಕ್ಕೆ ಸಹಾಯವಿತ್ತವರ ವಿವರವನ್ನು ತಿಳಿಸಿದರು.

ವಿಧಾನ ಪರಿಷತ್ತಿನ ಸದಸ್ಯ ಶ್ರೀ ಮುಕುಂದರಾಯರು ಸಮಾರೋಪ ಭಾಷಣ ಮಾಡುತ್ತಾ ಅಧ್ಯಾಪಕ, ವಿದ್ಯಾರ್ಥಿ ನಿಷ್ಪತ್ತಿ 1:40 ಆದುದಕ್ಕೆ ಯಾರೂ ಗಾಬರಿಗೊಳ್ಳದೆ ಇಡೀ ಭಾರತಕ್ಕೆ ಅನ್ವಯಿಸುವ ಈ ದಾಮಾಶಯವನ್ನು ಸಂತಸದಿಂದ ಅಂಗೀಕರಿಸಿ, ಮುಂದಿನ ಜನಾಂಗದ ಏಳಿಗೆಯ ಜವಾಬ್ದಾರಿಯನ್ನು ಹೊತ್ತಿರುವ ಉಪಾಧ್ಯಾಯರು ಒಮ್ಮನಸ್ಸಿನಿಂದ ಹಾಗೂ ಪ್ರಾಮಾಣಿಕತೆಯಿಂದ ಕಾರ್ಯವೆಸಗಿ, ವಿಚಾರ ಗೋಷ್ಠಿಯ ಸಂದೇಶವನ್ನು ಹಳ್ಳಿಯ ಮೂಲೆಗೆ ಪಸರಿಸ ಬೇಕೆಂದೂ ವಿನಂತಿಸಿದರು.

ವಿಚಾರ ಗೋಷ್ಠಿಯಲ್ಲಿ ಆಸುಪಾಸಿನ 33 ಶಾಲಾ ಅಧ್ಯಾಪಕರು ಸುಮಾರು 175 ಮಂದಿ ಹಾಜರಿದ್ದರು. ಪರೀಕ್ಷಾಧಿಕಾರಿಗಳಾದ ಶಿವರಾಮ ಗೌಡರು ಮತ್ತು ಮಹಾಲಿಂಗನವರು ಈ ಸಂದರ್ಭದಲ್ಲಿ ಅಧ್ಯಾಪಕರಿಗೆ ಸೂಕ್ತ ಸಲಹೆಗಳನ್ನು ನೀಡಿದರು

ಹೊಲಿಗೆ ಕೆಲಸಗಾರರ ಸಂಘ— ದ. ಕ. ಜಿಲ್ಲಾ ಹೊಲಿಗೆ ಕೆಲಸಗಾರರ ಸಂಘದ ಮಹಾಸಭೆಯು ವಕೀಲ್ ಶ್ರೀ ಜಿ. ಸೋಮಶೇಖರ ರಾಯರ ಅಧ್ಯಕ್ಷತೆಯಲ್ಲಿ ಮಂಗಳೂರಲ್ಲಿ ಇತ್ತೀಚೆಗೆ ನೆರವೇರಿತು. ಸಂಘದ ಅಧ್ಯಕ್ಷ ಶ್ರೀ ದೂಮಪ್ಪ, ಎಂ. ಎಲ್. ಎ. ಅವರು ಸ್ವಾಗತ ಭಾಷಣ ಮಾಡಿದರು. ಶ್ರೀ ಬಿ. ಮಂಜಯ್ಯ ಹೆಗ್ಡೆಯವರೂ ಮಂಗಳೂರು ತಾಲೂಕು ಕಾಂಗ್ರೆಸ್ಸಿನ ಕಾರ್ಯದರ್ಶಿ ಶ್ರೀ ಬಿ. ಎಂ. ಇದಿನಬ್ಬನವರೂ ಸಂಘದ ಏಳಿಗೆಯ ಆವಶ್ಯಕತೆಯ ಕುರಿತು ಮಾತನಾಡಿದರು.

ಉಡುಪಿ ನಗರ ಸಭೆಯು— ಸಾಮಾನ್ಯ ಸಭೆಯೊಂದು ಸಭಾಧಿಪತಿ ಡಾ. ಕೆ. ಎಲ್. ಐತಾಳರ ಅಧ್ಯಕ್ಷತೆಯಲ್ಲಿ ಇದೇ ತಾ. 14 ರಂದು ಜರಗಿತು. ಕಡಿಯಾಳಿ ವಾರ್ಡಿನ ಉಪಚುನಾವಣೆ ನಡೆಸುವ ಕಾರ್ಯ ಕ್ರಮವನ್ನು ಕಮಿಶನರು ಸಕಾಲದಲ್ಲಿ ನಿರ್ವಹಿಸದೆ ಆಕ್ಷೇಪಿಸಿ ಡಾ| ಪಿ. ಜಿ. ಆಚಾರ್ಯರು ಮುಂತಂದ ನಿರ್ಣಯವು ಚರ್ಚಿಸಲ್ಪಟ್ಟು ಕಮಿಶನರು ಪಶ್ಚಾತ್ತಾಪ ವ್ಯಕ್ತ ಪಡಿಸಿದ್ದರಿಂದ ನಿರ್ಣಯವನ್ನು ಹಿಂತೆಗೆದು ಕೊಳ್ಳಲಾಯಿತು.

ಅನಂತರ ಉಪಾಧ್ಯಕ್ಷ ಶ್ರೀ ಪಿ. ಆರ್. ಶೆಣೈಯವರ ಅಧ್ಯಕ್ಷತೆಯಲ್ಲಿ ಸಭೆ ಜರಗಿದಾಗ ಉಡುಪಿ ಬೋರ್ಡ್ ಹೈಸ್ಕೂಲನ್ನು ನಗರ ಸಭೆಯು ವಹಿಸಿ ಕೊಳ್ಳಬೇಕಾಗಿ ಶ್ರೀ ಎನ್. ಸೀತಾರಾಮ ಕಾಮತರು ತಂದ ನಿರ್ಣಯವನ್ನು ಶ್ರೀ ಎ. ಜೆ. ಆಲ್ಸೆ, ಡಾ| ಪಿ. ಜಿ. ಆಚಾರ್, ಶ್ರೀ ಟಿ. ಎ. ವಾಸುದೇವನ್ ಪಿ.ವೈಕಾರವರು ನಗರ ಸಭೆಯ ಆರ್ಥಿಕ ಪರಿಸ್ಥಿತಿಯಲ್ಲಿ ನಷ್ಟದ ಹೊರೆ ಯಾದೀತೆಂದು ವಿರೋಧಿಸಿದರು. ಕೊನೆಗೆ ಚರ್ಚೆಯಾಗಿ, ಶ್ರೀ ಕಾಮತರ ನಿರ್ಣಯವು ಬಹುಮತದಿಂದ ಮಂಜೂರಾಯಿತು. ಆರ್ಥಿಕ ಬಲವಿಲ್ಲದೆ ಈ ನಗರ ಸಭೆಗೆ ಅಭಿವೃದ್ಧಿ ಕಾರ್ಯಗಳನಿರ್ವಹಣಕ್ಕಾ ಒಂದು ಲಕ್ಷ ರೂಪಾಯಿ ಗ್ರಾಂಟನ್ನೀಯ ಬೇಕೆಂಬ ಶ್ರೀ ಪಿ. ಎನ್. ಕೃಷ್ಣಮೂರ್ತಿರಾಯರು ನಿರ್ಣಯವು ಅಂಗೀಕಾರವಾಯಿತು.

ಪ್ರಮಾಣ ಪತ್ರ ವಿತರಣೋತ್ಸವ

ಉಡುಪಿಯ ಹಿಂದಿ ಪ್ರಚಾರ ಸಮಿತಿಯ ಪ್ರಮಾಣ ಪತ್ರ ವಿತರಣೋತ್ಸವವು ಇದೇ ತಾ. 18ರಂದು ವರದೇಂದ್ರ ಕಲಾಮಂದಿರದಲ್ಲಿ ಮಂಗಳೂರು ಮಾಜಿ ನಗರ ಸಭಾಧ್ಯಕ್ಷ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಸಮಿತಿಯ ಅಧ್ಯಕ್ಷ ಶ್ರೀ ಟಿ. ಎ. ಪೈಗಳು ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ಸಿ. ಮಹಾಬಲ ನಾಯರ್‌ರು ವರದಿಯನ್ನೋದಿದರು. ಡಾ| ಕೆ. ಎಲ್. ಐತಾಳರು ಪ್ರಮಾಣಪತ್ರ ವಿತರಣೆ ಗೈದರು. ಅಧ್ಯಕ್ಷರ ಭಾಷಣವಾದ ಮೇಲೆ ಮನೋರಂಜನಾ ಕಾರ್ಯಕ್ರಮಗಳು ನೆರವೇರಿದವು.

ಹೊಸ ತರಗತಿಯ ಉದ್ಘಾಟನೆ—

ಉಡುಪಿ ಮಹಾತ್ಮಗಾಂಧಿ ಬುನಾದಿ ಮತ್ತು ಶಾಲೆ ಶಾಲೆಯ ನೂತನ 6ನೆ ತರಗತಿಯ ಉದ್ಘಾಟನೆಯನ್ನು ಇದೇ ತಾ. 20 ರಂದು ಉಡುಪಿ ಉತ್ತರ ಶ್ರೇಣಿಯ ಹಿರಿಯ ಪರೀಕ್ಷಾಧಿಕಾರಿ ಶ್ರೀ. ವೈ. ಗೋಪಾಲ್‌ರವರು ನೆರವೇರಿಸಿದರು ಸಭಾಧ್ಯಕ್ಷತೆಯನ್ನು ನಗರ ಸಭಾಪತಿ ಡಾ. ಕೆ. ಎಲ್. ಐತಾಳರು ವಹಿಸಿದ್ದರು. ಶ್ರೀ ಎ. ಜೆ. ಆಲ್ಸೆಯವರು ಸ್ವಾಗತಿಸಿದರು. ಡಾ. ಪಿ. ಜಿ. ಆಚಾರ್ಯರೂ ಶ್ರೀ ಎನ್. ಸೀತಾರಾಮಕಾಮತರೂ ಸಂದರ್ಭೋಚಿತ ಭಾಷಣವಿತ್ತರು.

ಮೆಡಿಕಲ್ ಕಾಲೇಜ್— ಮಂಗಳೂರಲ್ಲಿ ಸರಕಾರಿ ಮೆಡಿಕಲ್ ಕಾಲೇಜು ತೆರೆಯಲ್ಪಡುವುದಿಲ್ಲವೆಂದೂ ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜಿನಲ್ಲಿ ಸೇ. 51 ವಿದ್ಯಾರ್ಥಿಗಳನ್ನು ಮೈಸೂರು ಸರಕಾರ ಆರಿಸಿ ಸ್ಥಾನ ಕಲ್ಪಿಸಿ ಕೊಡುವುದೆಂದೂ ಈ ಬಗ್ಗೆ ಸರಕಾರ ಯುಕ್ತ ಸಹಾಯ ಧನ ಕೊಡಲಿದ್ದುವುದೆಂದೂ ತಿಳಿದು ಬರುತ್ತದೆ. ಇದು ವರೆಗೆ ಈ ಕಾಲೇಜಿನಲ್ಲಿ ಪ್ರತಿ ವರ್ಷ 120 ವಿದ್ಯಾರ್ಥಿಗಳಿಗೆ ಪ್ರವೇಶ ದೊರೆಯುತ್ತಿತ್ತು. ಮೆಡಿಕಲ್ ಕೌನ್ಸಿಲಿನವರು ಸೇ. 50ರಷ್ಟು ಸ್ಥಾನಗಳನ್ನು ಹೆಚ್ಚಿಸಲು ಅನುಮತಿ ನೀಡಿರುವರು. ಆದುದರಿಂದ ಒಟ್ಟು 180 ವಿದ್ಯಾರ್ಥಿಗಳಿಗೆ ಈ ವರ್ಷದಿಂದ ಪ್ರವೇಶ ದೊರೆಯುವುದು.

— ವಿದ್ಯಾರ್ಥಿ ವೇತನ —

ಕರ್ನಾಟಕ ಫ್ರೀ ನೈಟ್ ಹೈಸ್ಕೂಲಿನ ಸಂಚಾಲಕರಾದ ಮುಂಬಯಿಯ ಬಂಟರ ಯಾನೆ ನಾಡವರ ಸಂಘದವರು ಇಲ್ಲಿಯ ಕಾಲೇಜುಗಳಲ್ಲಿ ಕಲಿಯುವ ಯಾ ಕಲಿಯಲಿಚ್ಛಿಸುವ ಸ್ವಜಾತಿ ಬಡ ವಿದ್ಯಾರ್ಥಿಗಳಿಗೆ ಎಂದಿನಂತೆ ವಿದ್ಯಾರ್ಥಿ ವೇತನ ರೂಪದಿಂದ ಸಾಲ ಕೊಡುವುದರಿಂದ ಧನ ಸಹಾಯ ಪಡೆಯಲಿಚ್ಛಿಸುವ ವಿದ್ಯಾರ್ಥಿಗಳು ಜೂನ್ ತಿಂಗಳ ಅಂತ್ಯದೊಳಗೆ ಅರ್ಜಿ ಹಾಕ ಬೇಕಾಗಿ ಅಪೇಕ್ಷಿಸಲಾಗಿದೆ.

Hon. General Secretary,
Bunt Alias Nadava Sangha,
Bombay 17, Kumta Street,
BOMBAY-1

ದಿ ಕೆಥೋಲಿಕ್ ಬೇಂಕ್ ಲಿಮಿಟೆಡ್, ಕುಂದಾಪುರ

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು, ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡಕೊಂಡ ಸಾಲವನ್ನು ರಜಿಸ್ಟ್ರಿ ನೋಟೀಸು ಕೊಟ್ಟಲ್ಲಿ ಕೂಡಾ ಮರುಪಾವತಿ ಮಾಡದೆ ಇರುವುದರಿಂದ, ಸದ್ರಿಯವರು ಈಡಿಟ್ಟ ಚಿನ್ನಾಭರಣಗಳನ್ನು ಜುಲೈ ತಿಂಗಳ ತಾರೀಕು 7—7—1961ನೇ ಶುಕ್ರವಾರ ಮಧ್ಯಾಹ್ನ ಘಂಟೆ 12ಕ್ಕೆ ಸರಿಯಾಗಿ ನಮ್ಮ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ಮೇಲ್ಕಾಣಿಸಿದ ತಾರೀಕಿಗೆ ಏಲಂ ಮಾಡಲು ಅಸಾಧ್ಯವಾದಲ್ಲಿ ಪುನಃ ನೋಟೀಸು ಕೊಡದನೇ. ಬೇಂಕಿಗೆ ಯುಕ್ತ ಕಂಡ ಇನ್ನಿತರ ದಿನಗಳಲ್ಲಿ ಏಲಂ ಮಾಡಲಾಗುವುದು.

ಲೋನು ನಂಬ್ರ.	ಸಾಲಗಾರನ ಹೆಸರು ಮತ್ತು ವಿಳಾಸ	ಸಾಲದ ಮೊಬಲಗು
35/518	ನಾರಾಯಣ ಹೆಬ್ಬಾರ್ S/o ಸುಬ್ರಾಯ ಹೆಬ್ಬಾರ್ ಹಂಗಳೂರು ಕುಂದಾಪುರ ಪೋಸ್ಟು.	Rs. 60/-
618	ಎ. ಪದ್ಮನಾಭ ಭಟ್, S/o ಶಂಕರ ಭಟ್, ಅಂಪಾರಗ್ರಾಮ ಕರ್ವಾಡಿ ಪೋಸ್ಟು	12/-
994	ಮಹಾಬಲ ಆಚಾರಿ, S/o ನಾಗಪ್ಪಆಚಾರಿ, ಆರತಿ, ಹೊಸಾಡು ಗ್ರಾಮ, ಗಂಗೊಳ್ಳಿ ಪೋಸ್ಟು	45/-
36/532	ಎ. ನಾರಾಯಣ ಸೆಟ್ಟಿ, S/o ಎ. ನಂದ್ಯಪ್ಪ ಸೆಟ್ಟಿ, C/o ವಿ. ಶ್ರೀನಿವಾಸ ಸೆಟ್ಟಿ, ವಕೀಲ್ ಕುಂದಾಪುರ ಪೋಸ್ಟು	90/-
631	ಆರ್ಥರ್ ವೆಲ್ಸನ್ S/o ಎಡ್ವಿನ್ ವೆಲ್ಸನ್, ಡ್ರೈವರ್ ಭಗವಾನ್ ಬಿಲ್ಡಿಂಗ್ ರೋಡು ಕುಂದಾಪುರ ಪೋಸ್ಟು	15/-
745	ಮಹಾಬಲ ಹೆಗ್ಡೆ, N/o ಅಣ್ಣಪ್ಪ ಸೆಟ್ಟಿ, ಪಟೇಲ್ ಆಲ್ಪಾಡಿ, ಅರ್ಡಿ ಪೋಸ್ಟು	45/-
873	ಸಯ್ಯದ್ ಬುಡಾನ್ ಸಾಹೇಬ್, S/o ಸಯ್ಯದ್ ಕುಳ್ಳಡೆ ಉಮ್ಮರ್ ಸಾಹೇಬ್ ಕೋಟೇಶ್ವರ ಪೋಸ್ಟು	20/-
1067	ಎ. ನಂದ್ಯಪ್ಪ ಸೆಟ್ಟಿ, S/o ದುಗ್ಗಪ್ಪ ಸೆಟ್ಟಿ, ಕಂಕತಾರ್ ಮನೆ ಆನಗಳ್ಳಿ ಪೋಸ್ಟು	165/-

Office of The Catholic Bank Ltd.,
COONDAPOOR
19—6—1961

I. Menezes
(Agent)

ಮನಶ್ಶಾಸ್ತ್ರ

ನೀವು ಸ್ನೇಹಶೀಲರಾಗುವಿರಾ?

ನಮ್ಮನ್ನು ಬೇರೆಯವರು ಸ್ನೇಹದಿಂದ ಕಾಣುವುದಿಲ್ಲವೆನ್ನಬೇಡಿರಿ; ಅವರ ಸ್ನೇಹ ಗಳಿಸುವ ಕಲೆಯನ್ನು ಮೊದಲು ಕಲಿತುಕೊಳ್ಳಿರಿ. ಆಗ ನೀವೂ ಸ್ನೇಹಶೀಲರಾಗುವಿರಿ, ನಿಮ್ಮ ಸ್ನೇಹಿತರ ಸಂಖ್ಯೆಯೂ ಹೆಚ್ಚುವುದು.

'ರಂಜನೆ', ಬೆಂಗಳೂರು.

ನಿಮ್ಮನ್ನು ಸಮಾಜದಲ್ಲಿ ಹೆಚ್ಚು ಜನ ಸರಿಯಾಗಿ ಸ್ನೇಹ ಭಾವದಿಂದ ಕಾಣುತ್ತಿಲ್ಲವೆ? ಸುತ್ತುಮುತ್ತಲ ಜನತೆ ನಿಮ್ಮಲ್ಲಿ ಮೈತ್ರಿಯಿಂದಿಲ್ಲವೇ? ಜನರ ನೈಜ ಸಹವಾಸಗಳಿಲ್ಲದೆ ತಮಗೆ ಜೀವನ ಬೇಸರಿಸುತ್ತಿರುವುದೇ? ಅಂತಿದ್ದರೆ ತಮಗೆ ಜೀವನದಲ್ಲಿ ಬೇಸರ ಕಳೆಯಲು, ಸಹಜ ಸ್ನೇಹಿತರ ಸಂಪಾದನೆಯಲ್ಲಿ ಈ ಲೇಖನ ನಿಮ್ಮ ಸಹಾಯಕ್ಕೆ ಬರಬಹುದು.

ಮೊದಲಿಗೆ, ನಿಮ್ಮ ಬಗ್ಗೆ ಜನರು ಸಂಪೂರ್ಣ ತಿಳುವಳಿಕೆ ಪಡೆದುಕೊಳ್ಳಲು ಕಾಲಾವಧಿ ಹಾಗೂ ಸಂದರ್ಭಗಳನ್ನು ಕಲ್ಪಿಸಿಕೊಡಿ. ಯಾವಾಗಲೂ ಸಮಾಜದಲ್ಲಿ ಓಡಿಯಾಡದೆ, ಅಥವಾ ಎಂದಾದರೂ ಒಮ್ಮೆ ಜನರಲ್ಲಿ ಕಲೆಯುವವರಿದ್ದು, ಹೆಚ್ಚಾಗಿ ಮಾತನಾಡದೆ ಇತ್ತರರ ಗಮನವನ್ನು ಕಿಂಚಿತ್ತೂ ಸೆಳೆಯದೇ ಜನರು ನಿಮ್ಮಲ್ಲಿ ಹೆಚ್ಚಾಗಿ ಸ್ನೇಹಪರತೆಯಿಂದಿಲ್ಲವೆಂದು ಆರೋಪಿಸುವುದರಲ್ಲಿ ಹುರುಳಿರುವುದಿಲ್ಲ.

ಸಾಮಾನ್ಯವಾಗಿ ಅವರು ನಿಮ್ಮ ಬಗ್ಗೆ ತೋರುವ ನಡವಳಿಕೆ ಹಾಗೂ ಪ್ರತಿಕ್ರಿಯೆಗಳ ಬಗ್ಗೆ ಹೆಚ್ಚು ಹಚ್ಚಿಕೊಳ್ಳಬೇಡಿ ಬದಲಾಗಿ ನಿಮ್ಮ ಕೈಲಾದಷ್ಟು ಸರಳವಾಗಿ, ಸ್ನೇಹ-ಪರತೆಯಿಂದ ಮುಂದುವರಿಯಿರಿ. ಜನರಲ್ಲಿ ದಿಟ್ಟತನದಿಂದ ಮಾತಾಡಿ ಹಾಗೂ ಅವರಲ್ಲಿ ಆಸಕ್ತಿ ಹೊಂದಿದವರೇ ಅಲ್ಲದೇ ಅವರುಗಳನ್ನು ಆಕರ್ಷಿಸುವ ವಿಷಯಗಳಲ್ಲೂ ಆಸಕ್ತಿ ವಹಿಸಿರಿ. ಜನ, ಸಮುದಾಯಗಳಲ್ಲಿ ನಿಮ್ಮನ್ನೊಬ್ಬರಾಗಿ ಸ್ವೀಕರಿಸುವ ಮೊದಲು ಸುಮಾರು ಜನ ನಿಮ್ಮನ್ನು ಸಮಾಜದಲ್ಲಿ ಓಡಿಯಾಡಿದುದನ್ನು ಕಂಡಿರಬೇಕಿರುತ್ತದೆ.

ವಿಧೇಯರೂ, ಪ್ರಮಾಣಿಕರೂ, ಸ್ವಾವಲಂಬಿಗಳೂ, ನಂಬಲರ್ಹರಾದವರೂ ಅಲ್ಲದೇ ವಿಚಾರಶೀಲರೂ ಇದ್ದು ಬೇರೆಯವರು ನಿಮ್ಮಲ್ಲಿ ರಹಸ್ಯವಾಗಿ ಯಾರ ಬಗ್ಗೆಯಾದರೂ ಹೇಳಿದ್ದನ್ನು ಇತರರಿಗೆ ಹೇಳುವ ಕಾರ್ಯಕ್ಕೆ ಹೋಗಬೇಡಿ. ಒಬ್ಬರನ್ನು ಅವರೆದುರಿನಲ್ಲಿ ಹೊಗಳುವವರಿದ್ದು ಅವರ ಹಿಂದೆ ನಗುವುದು, ಅವರ ಹಿಂದೆ ಹರಟುವುದನ್ನೂ ಮಾಡಬೇಡಿರಿ.

ಯಾವಾಗಲೂ ನೀವು ಹೇಳಿರುವುದನ್ನೂ ತಪ್ಪದೇ ಕೊಟ್ಟ ಭರವಸೆಗಳನ್ನೂ ತಪ್ಪದೇ ನೆರವೇರಿಸದಿರಬೇಡಿ. ಅಕಸ್ಮಾತ್ ತಪ್ಪಿ ಹೋದರೆ ಅವರಲ್ಲಿ ಹೋಗಿ ತಪ್ಪಿದ್ದಕ್ಕೆ ಕಾರಣವನ್ನು ಸಾಧ್ಯವಾದಷ್ಟೂ ನಂಬಿಕೆಯಾಗುವಂತೆ ತಿಳಿಯಹೇಳುವುದೇ ಅಲ್ಲದೇ ತಮ್ಮ ಕ್ಷಮಾಪಣೆಯನ್ನು ಕೇಳಿಕೊಳ್ಳದೆ ಇರಬೇಡಿ. ಇದರಿಂದ ತಾವು ನಡೆದ ತಪ್ಪು ಅವರ ಮನಃಪಟಲದಿಂದ ಮರೆಯಾಗುವುದು; ಮತ್ತೊಮ್ಮೆ ಅವರು ನಿಮ್ಮಲ್ಲಿ ವಿಶ್ವಾಸವನ್ನಿಡುವ ಮನಸ್ಸಿನವರಾಗುತ್ತಾರೆ.

ನಿಮ್ಮ ಮಿತ್ರರನ್ನು ಅರ್ಥ ಮಾಡಿಕೊಳ್ಳಲಿಕ್ಕೆ, ನಿಮ್ಮ ಸ್ವಲ್ಪ ಕಾಲವನ್ನು ವಿನಿಯೋಗಿಸಿ, ಯಾವಾಗಲೂ ಮೊದಲ ನೋಟಕ್ಕೆ ಜನರ ಸ್ವಭಾವ ಹಾಗೂ ಗುಣಗಳ ಬಗ್ಗೆ ತೀರ್ಮಾನಕ್ಕೆ ಬರಬೇಡಿರಿ. ಮೊದಲ ನೋಟಕ್ಕೆ ಕಾಣಸಿಗದ ಲೆಕ್ಕವಿಲ್ಲದಷ್ಟು ಗುಣಾವಗುಣಗಳು ನಮಗೆ ಅನಂತರ ಕಾಣ ಬರುವುದು. ಅಂತಹವುಗಳನ್ನು ನಾವು ಅಗತ್ಯ ತಿಳಿದುಕೊಳ್ಳಬೇಕಿದೆ.

ಯಾವಾಗಲೂ ಜನರನ್ನು ಮೆಚ್ಚದಿರದೇ ಅವರಲ್ಲಿ ಆಸಕ್ತಿಯನ್ನು ವಹಿಸಿರಿ. ನೀವು ಸಂಧಿಸುವ ಪ್ರತಿಯೊಬ್ಬರಲ್ಲೂ, ನೀವು ಮೆಚ್ಚಬಹುದಾದ ಗುಣಗಳನ್ನು ಕಂಡುಕೊಳ್ಳಿ, ಹಾಗೂ ಅವರನ್ನು ಗೌರವಿಸಿರಿ. ಗಡಸು ನಡತೆಯುವರು ಉತ್ತಮ ಕೆಲಸಗಾರರಿರಬಹುದು. ದಿಟ್ಟ ಹಾಗೂ ದರ್ಪದವರು ಸಾಮಾನ್ಯವಾಗಿ ಒಳ್ಳೆಯ ಮುಂದಾಳುಗಳಾಗಬಲ್ಲವರಲ್ಲದೇ ಅವರು ಕೆಲಸಗಳನ್ನು ಮಾಡಿ ಮುಗಿಸುವುದರಲ್ಲಿ ನಿಪುಣರಿರುತ್ತಾರೆ. ಶೀಘ್ರ ಕೋಪಿಯಾದ ಹಾಗೂ ತೀಕ್ಷ್ಣ ನಾಲಿಗೆಯುಳ್ಳ ಹೆಂಗಸು ದಯಾಪರ, ಸತ್ಯದ ದಾರಿಯಲ್ಲೇ ನಡೆಯುವ ಉತ್ತಮ ಸಹಾಯಕಳಿರಬಹುದು. ಹೆಚ್ಚು ಬುದ್ಧಿ ತಿಳಿಯದ ಹಾಗೂ ಅವಿಚಾರಿಯಾದ ಹುಡುಗಿ ತನ್ನ ಮಿತ್ರರು ಹಾಗೂ ಬಂಧುಗಳಲ್ಲಿ ಬಹು ವಿಧೇಯಳೂ ಇರಬಹುದು.

ಸರಿಯಾಗಿ ನೋಡಲು ಕಷ್ಟವಿದ್ದು ಓರೆಯಾಗಿ ಒಂದು ಕೋನದಲ್ಲಿ ನೋಡುವ ಯಾವೊಬ್ಬನೂ ಕುತಂತ್ರಿಯಾಗಲಾರ. ಕೈ ನಡುಗಿಸುವ, ಹಾಗು ತೊದಲುವ ಯಾವೊಬ್ಬ ಮನುಷ್ಯನಲ್ಲೂ ಅಶಕ್ಯವೆಂದು ಕೆಟ್ಟಭಿಪ್ರಾಯ ಪಡೆದುಕೊಳ್ಳಬೇಡಿರಿ.

ಜನರಲ್ಲಿ ಅತಿ ಮೆಚ್ಚುವಿಕೆ ಹಾಗು ತಿರಸ್ಕೃತ ಭಾವನೆಯನ್ನು ಕೂಡಲೇ ನೀವು ಪಡೆಯುವಂತಹವರಿದ್ದರೆ ನಿಮ್ಮ ನಡತೆಯ ಬಗ್ಗೆ ನೀವೇ ಒಮ್ಮೆ ಸೂಕ್ಷ್ಮವಾಗಿ ಯೋಚಿಸಿ ನೋಡುವುದೊಳ್ಳೆಯದು. ನಾವು ಸಾಮಾನ್ಯವಾಗಿ ನಮಗೂ ಹೆಚ್ಚು ಸುಂದರರನ್ನು, ಹೆಚ್ಚು ಜನಪ್ರಿಯರನ್ನು ಹಾಗೂ ಹೆಚ್ಚು ಮುಂದುವರಿದಿರುವವರನ್ನು ಕಂಡು ಒಂದು ವಿಧದ ತಿರಸ್ಕಾರ ಭಾವನೆ ಪಡೆಯಬಹುದು. ಅವರ ಸಣ್ಣ ತಪ್ಪುಗಳನ್ನು ಕಂಡು ಹಿಡಿಯಲು ಪ್ರಯತ್ನಿಸಬಹುದು, ಕಾರಣ ಅವರ ಬಗ್ಗೆ ನಮಗೇ ತಿಳಿಯದಂತೆ ಮತ್ಸರದ ಕಿಡಿ ಹೊತ್ತಿರಬಹುದು.

ಪ್ರತಿಸಲ ನಿಮ್ಮ ಪಕ್ಷಪಾತ ಹಾಗೂ ಪೂರ್ವಾಭಿಪ್ರಾಯಗಳನ್ನು ಪರೀಕ್ಷಿಸಿ ನೋಡುವುದುತ್ತಮ. ನಾವು ಒಬ್ಬನನ್ನು ಮೆಚ್ಚುವುದು ಅಥವಾ ಮೆಚ್ಚದಿರುವುದು ಆತ ನಮ್ಮ ಮಿತ್ರ, ಯಾ ಆಗದವನರೊಡನೆ ಸಂಬಂಧದಿಂದಿರುವುದರಿಂದಲಿರಬಹುದು.

ಸಾಧ್ಯವಾದಷ್ಟೂ ನಿಮ್ಮ ಜೀವನದಲ್ಲಿ ಸುಳಿಯುವ ಎಲ್ಲರನ್ನೂ 'ಸಾಮಾನ್ಯ ಜನ' ದೃಷ್ಟಿಯಿಂದ ನೋಡಿರಿ. ಅವರ ಅಂತಸ್ತು ಹಾಗೂ ಸಮಾಜದಲ್ಲಿ ಅವರ ಸ್ಥಾನಮಾನದಿಂದಾಗಲೀ, ಅವರಲ್ಲಿ ನಿಮಗಿರುವ ಅಪೂರ್ಣ ಭಾವನೆಗಳಿಂದಾಗಲೀ, ಅವರ ಬಗ್ಗೆ ಸಂಪೂರ್ಣ ತೀರ್ಮಾನಕ್ಕೆ ಬರಬೇಡಿ.

ನೀವು ಇತರರಲ್ಲಿ ಕಾಣಬಯಸುವ ಗುಣಗಳನ್ನು ನೀವು ಹೊಂದಿದ್ದೀರಾ? ಒಮ್ಮೆ ಯೋಚಿಸಿ ನೋಡಿ. ಅವುಗಳನ್ನು ಪಡೆದುಕೊಳ್ಳಿರಿ. ಯಾವಾಗಲೂ ನಿರ್ಮಲ ಚಿತ್ತರೂ, ಮನೋಹರರೂ, ಸ್ವಚ್ಛರೂ, ತುಂಬಿದ ಹೃದಯದವರೂ, ವಿಚಾರ ಶೀಲರೂ, ಕ್ಷಮಾಶೀಲರೂ ಇದ್ದು ಜನರಲ್ಲಿ ಹೇಗೆ ನಡೆದುಕೊಳ್ಳಬೇಕೆಂದು ತಿಳಿದಿರುವ ವ್ಯಕ್ತಿತ್ವವನ್ನು ಪಡೆಯುಕೊಳ್ಳಲು ಶ್ರಮ ವಹಿಸಿರಿ.

(ಆಧಾರಗಳಿಂದ)

ಪುಸ್ತಕ ವಿಮರ್ಶೆ

[ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ.— ಸಂ. ನ.

ಭಾವ ಪ್ರಕಾಶ— ಲೇಖಕರು: ಶ್ರೀಗಳಾದ ಬಿ. ಜಿ. ಸತ್ಯಮೂರ್ತಿ ಮತ್ತು ಎನ್. ನಾರಾಯಣ ಬಲ್ಲಾಳ. ಪ್ರಕಾಶಕರು: ಶ್ರೀ ರಾಘವೇಂದ್ರ ಪ್ರಕಾಶನ, ಉಡುಪಿ. ಪುಟಗಳು: ೪೫ ಬೆಲೆ: ರೂ. ೧—೫೦.

ಉಡುಪಿಯ ಶ್ರೀಗಳಾದ ಸತ್ಯಮೂರ್ತಿ ಮತ್ತು ನಾರಾಯಣ ಬಲ್ಲಾಳರು ತಾವು ಬರೆದ, ಅನುವಾದಿಸಿದ ಎರಡೆರಡು ಕಥೆಗಳನ್ನು ಸಂಗ್ರಹಿಸಿ ಪುಸ್ತಕ ರೂಪದಲ್ಲಿ ಮುಂದಿಟ್ಟಿದ್ದಾರೆ. ಇದಕ್ಕೆ ಕನ್ನಡಿಗರು ನೀಡುವ ಉತ್ತೇಜನವೇ ಉದಯೋನ್ಮುಖ ಲೇಖಕರ ಹೃದಯಕ್ಕೆ ಅಮೃತ ಸೇಚನವಾಗುವುದು. ಅಪೂರ್ಣ ಜೀವಿಗಳ ಪ್ರಾಬಲ್ಯವಿರುವ ಈ ಪ್ರಪಂಚದಲ್ಲಿ ಅವರ ಜೀವನವನ್ನು ಪೂರ್ಣಗೊಳಿಸಲು ಉಡುಗೊರೆಯ ರೂಪದಲ್ಲಿ ಸತ್ಯಶೋಧನೆಯ ಅನರ್ಘ್ಯರತ್ನವನ್ನರಸುವಲ್ಲಿ ನೆರವೀಯುವುದು—ಬದುಕಿನ ಅರ್ಥವನ್ನು ಹೊರಗೆಡಹುವುದು ಲೇಖಕರ ಸಾಹಿತ್ಯಕಾರರ ಕರ್ತವ್ಯ. ಈ 'ಭಾವ ಪ್ರಕಾಶ'ದ ಲೇಖಕದ್ವಯರು ಈ ಕರ್ತವ್ಯಪಥದಲ್ಲಿ ಹೆಜ್ಜೆಯಿಟ್ಟಿದ್ದಾರೆ; ಅವರನ್ನು ಪರ್ಯಾಪ್ತ ಪ್ರೋತ್ಸಾಹವಿತ್ತು ಮುಂದುವರಿಯಲು ಪ್ರೇರೇಪಣೆಕೊಡಬೇಕಾದವರು ಕನ್ನಡಿಗರು. 'ಭಾವಪ್ರಕಾಶ'ದಲ್ಲಿ ಸತ್ಯನಿಷ್ಠ ಸಾಹಿತಿಯ ಅನಂತಭಾವಸಾಗರದ ತೆರೆಗಳನ ಜುವೆ ಮುಂದೊತ್ತುವ ಸಾಹಸವು ಮನೋಜ್ಞವಾಗಿ ವರ್ಣಿತವಾಗಿದೆ. 'ಸಂಜೆಗತ್ತಲು' ಕಥಾವಸ್ತು ಸಾಮಾನ್ಯವಿದೆ. ಶ್ರೀ ಬಲ್ಲಾಳರ 'ಪ್ರೇಯಸಿ' ಗಾಯ್‌ಡಿ ಮೋಪಾಸನ ಕಥೆಯೊಂದರ ಉತ್ತಮ ಅನುವಾದ. 'ಮರ್ಯಾದೆಯ ಜೀವನಕ್ಕಾಗಿ'ಯಲ್ಲಿನ ವಸ್ತುವಿನಲ್ಲಿ ನವೀನತೆಯಿದೆ— ಓಟವೂ ಇದೆ

ಕಂಕಣದ ಸಂಕಲ್ಪ—(ಸಾಮಾಜಿಕ ನಾಟಕ) ಲೇಖಕರು: ಸೀತಾಸುತ. ಪ್ರಕಾಶಕರು: ಜಾತಕ ಪ್ರಕಾಶನ, ಬೆಂಗಳೂರು—೨. ಪುಟಗಳು: ೫೩. ಬೆಲೆ. ೫೦ ನ. ಪೈ.

'ಬಾಲ ವಿವಾಹ'ದ ಹಳೆಯ ಪ್ರಶ್ನೆಯನ್ನು ಆಧಾರವಾಗಿಟ್ಟು, ಅದರಿಂದಾಗುವ ಹಾನಿಗಳನ್ನು ಸಮಾಜಕ್ಕೆ ತಿಳಿಸುವ ವಸ್ತು 'ಕಂಕಣದ ಸಂಕಲ್ಪ'ದಲ್ಲಿ ಕಾಣುತ್ತದೆ. ಇದು 'ಸಾಮಾಜಿಕ ನಾಟಕ'ವೆಂದು ಕರೆಯಲ್ಪಡಬಹುದಾದರೂ ಅಭಿನಯಕ್ಕೆ ನಿಲುಕುವುದು ಸಾಧ್ಯವಿಲ್ಲ. ಕೇವಲ ಶ್ರವಣೇಂದ್ರಿಯಕ್ಕೆ ಮಾತ್ರ ಹಿಡಿಸುವಂತಹದು. 'ನಾರಿಲೋಕದಲ್ಲಿ ನಾರದರು' ಎಂಬ ನಾಟಕದಲ್ಲಿ ಲೇಖಕರು ತೋರಿದ ಪಟುತ್ವ, ಚುಚ್ಚು ಮಾತುಗಳು ಇಲ್ಲಿ ಇಲ್ಲದೆ ನಮ್ಮನ್ನು ನಿರಾಸೆಗೊಳಿಸುತ್ತವೆ. ಅಲ್ಲಲ್ಲಿ ಕಾದಂಬರಿಯು, ಕಥೆಯು ಓಟವೂ ಸೇರಿಕೊಂಡಂತೆ ಭಾಸವಾಗುವುದರಿಂದ "ಇದೂ ನಾಟಕವೇ?" ಎಂಬ ಪ್ರಶ್ನೆ ನಮ್ಮಲ್ಲೇಳುವುದು. ಒಟ್ಟಿನಲ್ಲಿ, ವಸ್ತುವಿನ ದೃಷ್ಟಿಯಿಂದ ಸ್ವೀಕಾರಾರ್ಹ ಹೊತ್ತಗೆಯಿದು.

ಗೋರಾ.

ವಿಶ್ವಕವಿ ಟಾಗೋರರ ಪುಣ್ಯಸ್ಮರಣೆಗಾಗಿ
ಅವರ ಶತಮಾನೋತ್ಸವದ ಸುಸಂದರ್ಭದಲ್ಲಿ
ಪ್ರಕಟವಾದ ಕಿರುಗಾಣಿಕೆಗಳು

ಚಿತ್ರಾಂಗದೆ

ಬೆಲೆ: ೬೦ ನ. ಪೈಸೆ.
(ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಅವರಿಂದ ಅನುವಾದಿತ)

ರವೀಂದ್ರನಾಥರ ಕಿರುಗತೆಗಳು

ಬೆಲೆ: ೯೦ ನ. ಪೈಸೆ.
(ಶ್ರೀ ಹನುಮಂತರಾವ್ ಮೊಂಜರೇಕರ, ಕಾರವಾರ ಅವರಿಂದ ಅನುವಾದಿತ)
ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ನವಯುಗ ಪ್ರೆಸ್, ಉಡುಪಿ.

[illegible] ಪುಸ್ತಕಗಳು

ಅಳಿದ ಮೇಲೆ (ಹೊಸ ಕಾದಂಬರಿ)	2–75
ಪಂಜರುತು (ಕಾದಂಬರಿ)	2–50
ನನ್ನ ಸುತ್ತಲಿನ ಕಡಲು	1–75
ಪರಮಾಣು—ಇಂದು—ನಾಳೆ	3–00

ಸಿಗುವ ಸ್ಥಳ:
ನವಭಾರತ ಬುಕ್ ಡಿಪೊ, ಉಡುಪಿ.

ಯಶಸ್ಸಿನ ರಹಸ್ಯ

(೪ನೇ ಪುಟದಿಂದ)

ಸಫಲರಾಗುತ್ತಾರೆ. ಜೀವನದಲ್ಲಿ ಸಫಲರಾದವರ ಸಾಫಲ್ಯರಹಸ್ಯವನ್ನು ತಿಳಿದು ಅವನ್ನು ತಮ್ಮ ಜೀವನದಲ್ಲಿಯೂ ಅಳವಡಿಸಿಕೊಳ್ಳುವುದು ಲಾಭದಾಯಕವಿದೆ. ಪರಿಶ್ರಮದಿಂದಷ್ಟೆ ಕಾರ್ಯ ಸಾಧನೆಯಾಗುವುದಿಲ್ಲ. ಅಧಿಕ ಪರಿಶ್ರಮಪಟ್ಟವರೂ ಅಸಫಲರಾದ ಉದಾಹರಣೆಗಳು ಬಹಳವಿವೆ. ಹೀಗಾಗುವುದರ ಕಾರಣವನ್ನು ತಿಳಿಯಬೇಕು. ಪರಿಶ್ರಮದೊಡನೆ ಸದ್ವಿವೇಕವಿರಬೇಕು. ತಾವೇ ಎಲ್ಲವನ್ನೂ ತಿಳಿರುವೆವೆನ್ನುವವರು ಕಾರ್ಯ ಸಾಧನೆಯಲ್ಲಿ ಬಹಳಷ್ಟು ಹಿಂದುಳಿಯುತ್ತಾರೆ.

ಹೆಚ್ಚು ಓದು ಬರಹವರಿಯದಿರುವವರು ಅಥವಾ ಕೆಲವೊಮ್ಮೆ ನಿರಕ್ಷರ ಕುಕ್ಷಿಗಳೇ ಕೋಟಿಗಟ್ಟಲೆಯ ಸಂಪತ್ತು ಗಳಿಸಿದ ಸಂದರ್ಭಗಳು ಅನೇಕವಿರುವುದು ಆಶ್ಚರ್ಯಕರವೆನಿಸಬಹುದು. ಸುಶಿಕ್ಷಿತರು ಕೂಡ ಕೆಲವೊಮ್ಮೆ ಕಾರ್ಯದಲ್ಲಿ ಸೋಲುವುದುಂಟು. ಈ ಸಂಬಂಧ ನಾವು ಪರಿಶೀಲನೆ ನಡೆಸಿದರೆ, ಕಾರ್ಯಸಾಧಕರಲ್ಲಿ ಪುಸ್ತಕದ ಜ್ಞಾನವು ಕಡಿಮೆಯಿದ್ದರೂ ಒಂದು ವಸ್ತುವನ್ನು ಅರಿಯುವ ಮತ್ತು ಗ್ರಹಣ ಮಾಡುವ ಶಕ್ತಿ ಅತ್ಯಧಿಕವಾಗಿತ್ತೆಂದು ತಿಳಿಯುವುದು. ಪ್ರತಿ ಘಟನೆ ಅಥವಾ ವ್ಯಕ್ತಿಯಿಂದ ಶಿಕ್ಷಣ ಪಡೆದು ತನ್ನ ಜೀವನವನ್ನು ಸಂಪನ್ನಗೊಳಿಸುವವನು ತನ್ನ ಧ್ಯೇಯ ಮತ್ತು ತನ್ನ ಕಾರ್ಯಗಳಲ್ಲಿ ತನ್ನ ಜ್ಞಾನ, ಅನುಭವ ಮತ್ತು ಕಲೆಗಳನ್ನು ಅಳವಡಿಸಿಕೊಳ್ಳುವವನು ನಿಜವಾದ ಶಿಕ್ಷಿತನೆನ್ನಬಹುದು. ಈ ಜ್ಞಾನ ಮತ್ತು ಗ್ರಹಣ ಶಕ್ತಿಗಳೇ ನಮ್ಮ ವಿಚಾರ ಮತ್ತು ಯೋಜನೆಗಳಿಗೆ ಬಲವನ್ನು ತಂದು ಕೊಡುವುವು. ವ್ಯಕ್ತಿಗತ ಉನ್ನತಿಯ ಮಾರ್ಗವೆಂದರೆ, ಇದೇ.

ನಿರಾಶೆ, ಭಯ ಮತ್ತು ಸಂದೇಹಗಳನ್ನು ದೂರವಿಟ್ಟು, ಸಾಹಸಿ, ನಿರ್ಭಯ ಮತ್ತು ಆತ್ಮ ವಿಶ್ವಾಸಿಗಳಾಗ ಬೇಕು. ನಮ್ಮ ಕಾರ್ಯವನ್ನು ಆರ್ಥಿಕ ಲಾಭದ ದೃಷ್ಟಿಯಿಂದ ಮಾಡಬಯಸುವುದಾದರೆ, ಅದರ ಮೂಲ್ಯವನ್ನೂ ನಾವು ತೆರಬೇಕಾಗುವುದು ಬೆಲೆ ನೀಡದೆ ಯಾವ ವಸ್ತುವೂ ನಮ್ಮ ಕೈ ಸೇರುವುದಿಲ್ಲ.

ಕೊಡು—ಕೊಳ್ಳುಪಟದಿಂದ ಪ್ರಪಂಚದ ಎಲ್ಲ ಕೆಲಸಗಳೂ ನಡೆಯುತ್ತವೆ. ನೀವು ಪರರಿಗೇನಾದರೂ ಕೊಟ್ಟರೆ ಮಾತ್ರ ನೀವೂ ಬೇರೆಯವರಿಂದ ಪಡೆಯ ಬಲ್ಲಿರಿ. ನಿಮ್ಮ ಧ್ಯೇಯಪ್ರಾಪ್ತಿಯು ಅನ್ಯರ ಉಪಯುಕ್ತ ಸೇವೆ ಮಾಡುವುದರಿಂದಲೇ ಆಗಬಹುದು. ಯಾರೊಡನಾನರೂ ಇಂದು ಸಂಪತ್ತಿರುವುದಾದರೆ, ಅದು) ಇದೇ ಮಾರ್ಗದಲ್ಲಿ ಬಂದುದು. ಪರರನ್ನು ಒಂದಲ್ಲ ರೀತಿಯಿಂದ ಸೇವಿಸಿದುದರಿಂದಲೇ ಅದು ಪ್ರಾಪ್ತವಾಯಿತು.

ಬೇರೆಯವರನ್ನು ಹಿಂಸಿಸಿ ಇಲ್ಲವೆ ಶೋಷಿಸಿ ಶ್ರೀಮಂತರಾದವರೂ ಇದ್ದಾರೆ. ಆದರೆ, ಇಂತಹರ ವ್ಯವಹಾರವು ಜನರಿಗೆ ತಿಳಿಯಿತೆಂದರೆ, ಆಗ, ಅವರ ಪ್ರತಿಷ್ಠೆ ಮಾಯವಾಗುವುದು. ಅವರ ಪ್ರಭಾವ ಕುಂದುವುದು. ಆದುದರಿಂದ ಸಮೃದ್ಧಿ ಪ್ರಾಪ್ತಿಯ ಉತ್ತಮ ಮಾರ್ಗವೆಂದರೆ, ಬೇರೆಯವರ ಸೇವೆ ಮಾಡುವುದು. ಪರರಿಗೆ ಯಥೋಚಿತ ಸೇವೆ ಸಲ್ಲಿಸುವ ಸ್ವಶಕ್ತಿಯನ್ನು ಹೆಚ್ಚಿಸಿಕೊಂಡಲ್ಲಿ ಮಾತ್ರ ನಮ್ಮ ಪರಿಶ್ರಮಕ್ಕೆ ತಕ್ಕ ಬೆಲೆ ಲಭಿಸುವುದು; ಆಗಲೇ ಸುಖ, ಸಮೃದ್ಧಿ, ಕೀರ್ತಿ ಮತ್ತು ಪ್ರತಿಷ್ಠೆಗಳು ನಮ್ಮ ಕಾಲಬಳಿಗೆ ಕೈ ಮುಗಿದು ಧಾವಿಸಿ ಬರುವುವು.

— —

ಕನಿಗತೆ

ಮನೆಯಲ್ಲೇ ಮಹದೇವ!

ಹಳ್ಳಿಯೊಂದರಲ್ಲಿ ಒಬ್ಬ ಮನುಷ್ಯನಿದ್ದನು. ಆತನಿಗೆ ತನ್ನ ತಂದೆತಾಯಿಯ ಮೇಲೆ ಅನನ್ಯ ಭಕ್ತಿ ಇತ್ತು. ಅವರನ್ನು ಅತೀ ಪ್ರೀತಿಯಿಂದ ನೋಡುತ್ತಿದ್ದನು. ತನ್ನ ಹೆಂಡತಿ, ಮಗು, ಮತ್ತು ತಂದೆ—ತಾಯಿ ಇವರ ಸೇವೆ, ಸಂಸಾರಕ್ಕೆ ಬೇಕಾಗುವ ಸಂಪಾದನೆ ಇವುಗಳಲ್ಲಿ ಆತನ ದಿನ ಕಳೆದು ಹೋಗುತಿತ್ತು. ಆತನಿಗೆ ದೇವರ ಧ್ಯಾನಕ್ಕೂ, ಪೂಜೆ ಪ್ರಾರ್ಥನೆಗಳಿಗೂ ಸಮಯವೇ ದೊರೆಯುತ್ತಿರಲಿಲ್ಲ ಆತನಿಗೆ ಇದರಿಂದ ವಿಪರೀತ ದುಃಖವಾಗುತ್ತಿತ್ತು.

ಒಂದುದಿನ ಆತನು ಒಬ್ಬ ಸಾಧುವಿನ ಬಳಿಗೆ ಹೋಗಿ ತನ್ನ ದುಃಖವನ್ನು ಹೇಳಿಕೊಂಡನು. "ನನ್ನ ಕುಟುಂಬ, ಹೆಂಡತಿ, ತಂದೆತಾಯಿಯರ ಸೇವೆಯಲ್ಲಿಯೇ ದಿನ ಕಳೆದು ಹೋಗುತ್ತಿದೆ ಭಗವಂತ ಸೇವೆಗೆ ಅವಸರವೇ ದೊರೆಯುವದಿಲ್ಲ ಭಗವಂತನ ಸಾಕ್ಷಾತ್ಕಾರ ಗೃಹಸ್ಥನಿಗೆ ಹೇಗೆ ಸಾಧ್ಯ?" ಎಂದು ಕೇಳಿದನು.

ಸನ್ಯಾಸಿಯು ಆತನನ್ನು ಸಂತೈಸುತ್ತಾ "ಭಗವಂತನು ಎಲ್ಲೆಡೆಯಲ್ಲಿಯೂ, ಎಲ್ಲಾ ವಸ್ತುಗಳಲ್ಲಿಯೂ ಇದ್ದಾನೆ. ನೀನು ಸೇವೆ ಮಾಡುವ ನಿನ್ನ ತಂದೆತಾಯಿ, ಹೆಂಡತಿ ಮಗನಲ್ಲಿಯೂ ಇದ್ದಾನೆ. ನಿನ್ನ ತಂದೆಯನ್ನು ನಾರಾಯಣನೆಂದೂ, ತಾಯಿಯನ್ನು ಭಗವತಿಯೆಂದೂ ಹೆಂಡತಿಯನ್ನು ಲಕ್ಷ್ಮಿಯೆಂದೂ; ಮಗನನ್ನು ಗೋಪಾಲನೆಂದು ತಿಳಿದುಕೋ. ಆಗ ನಿನ್ನ ಮನೆಯು ದೇವರ ನಿವಾಸವಾಗುವದು. ನೀನು ಮಾಡುವ ಸೇವೆಯೂ ದೇವರ ಪೂಜೆಯಾಗುವದು. ಸರ್ವವನ್ನೂ ದೇವರ ಅಂಶವೆಂದು ತಿಳಿದು. ನಿನ್ನ ಕರ್ತವ್ಯ ಮಾಡುವನಿಕ್ಕಿಂಥಾ ಆರಾಧನೆ, ಪೂಜೆ, ಪ್ರಾರ್ಥನೆಗಳು ಬೇರಿಲ್ಲ" ಎಂದು ಬೋಧಿಸಿದನು.

ಗೃಹಸ್ಥನು ಸನ್ಯಾಸಿಯ ಉಪದೇಶವನ್ನು ಶಿರಸಾವಹಿಸಿ ತನ್ನ ನಿಷ್ಠೆಯ ಗ್ರಹಸ್ಥನ ಇಹ ಜೀವನದಲ್ಲಿಯೇ ದೈವ ಸಾಕ್ಷಾತ್ಕಾರವನ್ನು ಪಡೆಯಲು ಸಮರ್ಥನಾದನು.

— —

ಅಮೃತ ಬಿಂದು

ಇಂದಿನ ಬೆವರಿನ ಬಿಂದು, ನಾಳೆಯ ಸುಖದ ಸಿಂಧು.

೦ ೦

ಜಯದ ಆಸೆ ಪಡುವಿಯಾದರೆ ಸೋಲಿನ ಸೊಲ್ಲು ಎತ್ತಬೇಡ.

೦ ೦

ಜೀವನಕ್ಕೆ ಒಂದು ಗುರಿ ಇರದಿದ್ದರೆ ಜೀವನ ತುಂಬಿ ಬಾರದು.

೦ ೦

ಸಿಟ್ಟಾಗುವುದು ಇನ್ನೊಬ್ಬರ ತಪ್ಪಿಗೆ ನಾವೇ ಶಿಕ್ಷಿಸಿಕೊಂಡಂತೆ.

೦ ೦

ಸಿಟ್ಟೇ ಬಾರದದನು, ಅಜ್ಞಾನಿ, ಸಿಟ್ಟಾಗದಿರುವವನು ಜ್ಞಾನಿ.

೦ ೦

ಸದ್ಭಾವನೆಯೇ ಆನಂದ, ಶಾಂತಿಗಳ ಮೂಲ. ನಿನ್ನ ನಂಬಿಕೆಯಂತೆ ನೀನಿರ ಲಿಸು.

೦ ೦

ಹೊಟ್ಟೆಕಿಚ್ಚಿನ ಕಿಡಿಗೆ ಅಸ್ಪದ ಕೊಡುವವನು ಸುಖದ ಸ್ವರ್ಗವನ್ನು ಸುಟ್ಟುಕೊಳ್ಳುತ್ತಾನೆ.

೦ ೦

ನಾಳೆ ಬರಬಹುದೆಂಬ ಕಷ್ಟಗಳ ಊಹನೆಯಿಂದ ಇಂದಿನ ಸುಖವನ್ನು ಹಾಳು ಮಾಡಿಕೊಳ್ಳಬೇಡ. ಚಿಂತೆ ಯಾವಾಗಲೂ ಚಿತೆ.

೦ ೦

ದೂರ ನಿಂತು ಆಲೋಚಿಸಿದರೆ ಹೇಗೆ ಮಾಡುವುದೆಂದು ಹೆದರುವೆ. ಕಾರ್ಯಕ್ಕೆ ಕೈಯೊಡ್ಡಿ ಮಡಿದರೆ ಹೇಗೆ ಮಾಡಿದೆನೆಂದು ನಂತರ ಆಶ್ಚರ್ಯಪಡುವೆ!

೦ ೦

ಜೀವನದಲ್ಲಿ ಮಾಡುವ ಒಂದು ತಪ್ಪು, ಮೊದುಳಿನಲ್ಲಿ ಅನೇಕ ತಪ್ಪುಗಳ ತಂಡಕ್ಕೇ ಅನುಮಾಡುತ್ತದೆ.

೦ ೦

ಚಿಕ್ಕ ತಪ್ಪುಗಳನ್ನು ಸಂಕೋಚವಿಲ್ಲದೆ ಮಾಡಲು ತೊಡಗಿದರೆ ದೊಡ್ಡವುಗಳನ್ನು ನಿಸ್ಸಂಕೋಚವಾಗಿ ಮಾಡಲು ಕಲಿಯುತ್ತೀವೆ.

೦ ೦

ನಿನ್ನಲ್ಲಿರುವ ತಪ್ಪುಗಳನ್ನು ಲೆಕ್ಕ ಹಾಕು. ಇತರರಲ್ಲಿರುವ ಒಳ್ಳೆಯ ಗುಣಗಳನ್ನು ಗಮನಿಸು.

೦ ೦

ನೀನು ಇತರರಿಗೆ ಮಾಡಿದ ಸಹಾಯವನ್ನು ಮರೆತುಬಿಡು. ನೀನು ಇತರರಿಂದ ಪಡೆದ ಸಹಾಯವನ್ನು ಸದಾ ಮನಸ್ಸಿನಲ್ಲಿಡು.

೦ ೦

ದ್ವೇಷಕ್ಕೆಡೆಕೊಡುವವನು ಮಾತ್ರವಲ್ಲ ಭಯಕ್ಕೆಡೆ ಕೊಡುವವನೂ ಸುಖದ ಸ್ವರ್ಗವನ್ನು ಸುಟ್ಟುಕೊಳ್ಳುತ್ತಾನೆ.

೦ ೦

ಇನ್ನೊಬ್ಬರಿಗಾಗಿ ಏನೂ ಒಳ್ಳೆಯದನ್ನು ಮಾಡದಿರುವ ಜೀವನ ತನಗಾಗಿ ಒಳ್ಳೆಯದನ್ನು ಸಾಧಿಸದು.

೦ ೦

ಬೇಸಿಗೆಯ ಬೆಂಕಿಗೆ ಗಾಳಿ ದೊರೆತರೆ ಅನಾಹುತ. ಸಿರಿವಂತ ತಿಳಿಗೇಡಿಗಳಿಗೆ ಹೊಗಳಿಕೆ ದೊರೆತರೆ ಅನಾಹುತ.

೦ ೦

ಸಾಬೂನು ನೊರೆಯಿಂದ ಮಸಿ ಬೆಳ್ಳಗಾಗದು. ಎಷ್ಟೇ ಬುದ್ಧಿವಾದದಿಂದಲೂ ತಿಳಿಗೇಡಿ ಸುಧಾರಿಸನು.

೦ ೦

ಬಲಾತ್ಕಾರದಿಂದ ಗೆದ್ದರೆ ಮಿತ್ರನು ಶತ್ರುವಾದಾನು. ಪ್ರೀತಿಯಿಂದ ಪರಿವರ್ತಿಸಿದರೆ ಶತ್ರು ಮಿತ್ರನಾದಾನು.

೦ ೦

ಕ್ಷಮಾಬಲವಿರುವ ಹೃದಯಕ್ಕಿಂಥಾ ದೊಡ್ಡ ಶಕ್ತಿ ಜಗತ್ತಿನಲ್ಲಿಲ್ಲ. ಪ್ರತಿಕಾರದ ಬದಲು ಕ್ಷಮೆಯು ಅಜೇಯ ಅಸ್ತ್ರ.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ
ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ ೦=25 N.P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕಕಳಿಸಲಾಗುವುದು.
ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಅಭಿಪ್ರಾಯ

ವೈಚಾರಿಕ ಪ್ರಯತ್ನಕ್ಕೆ ಪ್ರೋತ್ಸಾಹವಿಲ್ಲ!

ಎರಡು ವರ್ಷ ಕಳೆದರೂ ಶ್ರೀ ಜಿ. ವಿ. ಭಟ್ಟರ ಕ್ರಾಂತಿಕಾರಿ ನೂತನ ಸಸಿ ನೆಡುವ ವಿಧಾನವನ್ನು ಪ್ರಚಾರಕ್ಕೆ ತರಲು ಸರಕಾರಕ್ಕೆ ಸಾಧ್ಯವಾಗಲಿಲ್ಲ; ರಚನಾತ್ಮಕ ಪ್ರಗತಿಯಿಲ್ಲದೆ ಹತ್ತು ಪಂಚವಾರ್ಷಿಕ ಯೋಜನೆಗಳು ಕಳೆದರೂ ರಾಷ್ಟ್ರೀಯ ಅಭಿವೃದ್ಧಿಯಾಗಲಾರದು.

ನಮ್ಮ ನಾಡು ಸ್ವತಂತ್ರವಾದ ನಂತರ ರಾಷ್ಟ್ರೀಯ ಸರ್ವತೋಮುಖ ಅಭಿವೃದ್ಧಿ ಸಾಧನೆಗಾಗಿ ಎರಡು ಪಂಚವಾರ್ಷಿಕ ಯೋಜನೆಗಳು ನಡೆದು ಹೋದುವು. ನಮ್ಮನ್ನು ಕಾಡಿಸಿ ಪೀಡಿಸುತ್ತಿದ್ದ ಸಮಸ್ಯೆಗಳಿಗೆ ಸಮಾಧಾನವನ್ನು ಹುಡುಕಲು ಎಷ್ಟೋ ಸಮಿತಿಗಳು, ನಿಯೋಗಗಳು ನಿರ್ಮಾಣ ಹೊಂದಿದುವು. ಎಷ್ಟೋ ಮಂದಿ ತಜ್ಞರು ಎಷ್ಟೋ ಬಗೆಯಿಂದ ಈ ಕುರಿತು ಚಿಂತಿಸಿದರು. ಆದರೆ ನಮ್ಮನ್ನು ಹರಿದು ತಿನ್ನುತ್ತಿದ್ದ ಸಮಸ್ಯೆಗಳು ಮಾತ್ರ ಇನ್ನೂ ಸಮಸ್ಯೆಗಳಾಗಿಯೇ ಉಳಿದಿವೆ. ವಿದ್ಯೆ, ಆಹಾರ—ಕ್ಷೇತ್ರಗಳಲ್ಲಿನ ಅಭಿವೃದ್ಧಿ ಖಂಡಿತವಾಗಿಯೂ ತೃಪ್ತಿದಾಯಕವಲ್ಲವೆಂಬ ನಿಷ್ಠುರ ಸತ್ಯವನ್ನು ನಾವು ಒಪ್ಪಲೇ ಬೇಕಾಗಿ ಬಂದಿದೆ. ವಿಜ್ಞಾನರಂಗದಲ್ಲಿ ನಮ್ಮ ಶೋಧನೆಯೋ ಸಾಧನೆಯೋ ಎಷ್ಟಕ್ಕೂ ಹಿರಿಯ ಮಟ್ಟದ್ದಲ್ಲವೆಂಬುದೂ ಅಷ್ಟೇ ಸ್ಪಷ್ಟವಾಗಿದೆ.

ಇದಕ್ಕೆ ಕಾರಣವೇನು? ಅಭಿವೃದ್ಧಿಯ ಸಿದ್ಧಿಗೆ ಸಹಾಯಕವಾಗುವ ಸಂಶೋಧಕ ಬುದ್ಧಿಗೆ—ನಿರ್ಮಾಣ ಶಕ್ತಿಗೆ—ನಮ್ಮಲ್ಲಿ ಬರಗಾಲವೇನು? ಮುಂದುವರಿದ 'ದೊಡ್ಡ' ರಾಷ್ಟ್ರಗಳಲ್ಲಿ ಮಾತ್ರ ತಜ್ಞರ—ಅನ್ವೇಷಕರ—ಸೃಷ್ಟಿಯೆಂದು ದೈವ ನಿಯಮವೇನು?

ಈ ಕುರಿತು ವೈಚಾರಿಕ ಪ್ರಯತ್ನಕ್ಕೆ ತೊಡಗುವಾಗ ದಕ್ಷಿಣ ಕನ್ನಡದ ಅಡ್ಯನಡ್ಕದ ಶ್ರೀ ಜಿ. ವಿ. ಭಟ್ಟರು ಎರಡು ವರ್ಷಗಳ ಹಿಂದೆ ಮೊದಲಾಗಿ ಬೆಳಕು ಬೀರಿದ 'ಸಸಿ ನಡುವ ಹೊಸ ವಿಧಾನ'ವೊಂದು ಸ್ಮರಣೆಗೆ ಬರುತ್ತದೆ.

'ಸಮಬಾಹು ತ್ರಿಕೋನ' ಪದ್ಧತಿಯೆಂದು ಕರೆಯಲ್ಪಡುವ ಈ ಹೊಸ ವಿಧಾನವು ಆಹಾರ ಕ್ಷೇತ್ರದಲ್ಲಿ ಬಹುದೊಡ್ಡ ಕ್ರಾಂತಿಯನ್ನೇ ಉಂಟುಮಾಡಬಲ್ಲುದು. ಬರೀ ನಡುವ ಕ್ರಮವನ್ನು ಸುಧಾರಿಸುವುದರಿಂದ, ಈಗಿರುವಷ್ಟೇ ಭೂಮಿಯಲ್ಲಿ, ಈಗಿನಷ್ಟೇ ಪರಿಶ್ರಮದಲ್ಲಿ, ಈಗಿನಷ್ಟೇ ಗೊಬ್ಬರ ವಗೈರೆ ಉಪಯೋಗಿಸಿ, ಸಾಧಾರಣ ಸೇಕಡಾ ಮೂವತ್ತರಷ್ಟು ಹೆಚ್ಚು ಉತ್ಪಾದನೆಯನ್ನು ಪಡೆಯುವುದು ಹೊಸ ವಿಧಾನದಲ್ಲಿ ಸಾಧ್ಯವಿದೆ. ಈಗ ಚೌಕ ಕ್ರಮದಲ್ಲಿ ನಡುವ ಎಲ್ಲಾ ಬೆಳೆಗಳಿಗೂ ಇದನ್ನು ಉಪಯೋಗಿಸುವುದು ಸಾಧ್ಯವಿದ್ದು, ಅಡಕೆಯಲ್ಲಿ ಇನ್ನೂ ಹೆಚ್ಚಿನ ಉತ್ಪತ್ತಿ ಸಿಗುವಂತೆ ಇದನ್ನು ಯೋಜಿಸಬಹುದಾಗಿದೆ. ಇದೊಂದು ಇಂದ್ರಜಾಲವೇನೂ ಅಲ್ಲ; ಪ್ರಾಯೋಗಿಕ ಸತ್ಯ ಅಷ್ಟೆ!

ಹೊಸ ವಿಧಾನದ ಬಗ್ಗೆ ಈಗಾಗಲೇ ಪತ್ರಿಕೆಗಳಲ್ಲಿ ವಿವರಣೆ ಪ್ರಕಟವಾಗಿದ್ದು ಅದಕ್ಕೆ ಸಂಬಂಧಿಸಿದ ಚಿತ್ರಗಳನ್ನು ನೋಡಿದರೆ ಯಾವನೇ ಕೃಷಿಕನಿಗಾದರೂ ಈ ಸತ್ಯದ ಅರ್ಥವಾಗದಿರದು.

ಸಾಮಾನ್ಯ ಕೃಷಿಕನಿಗೂ ಅರ್ಥವಾಗಬಲ್ಲ ತತ್ವ ಮೇಲ್ಮಟ್ಟದ ಅಧಿಕಾರಿಗಳಿಗೆ ಮಾತ್ರ ಅರ್ಥವಾಗುತ್ತಿಲ್ಲ ಎಂದರೆ ಆಶ್ಚರ್ಯವಾಗುತ್ತದೆ. ಅವರಿಗೆ ಅರ್ಥವಾಗುತ್ತಿಲ್ಲ ಎಂಬುದಕ್ಕೆ ಶ್ರೀ ಭಟ್ಟರ ಕ್ರಾಂತಿಕಾರಿ ವಿಧಾನವು ಇನ್ನೂ ಬೀಜಾವಸ್ಥೆಯಲ್ಲೇ ಇರುತ್ತಿರುವುದೇ ನಿದರ್ಶನ! ಈ ಎರಡು ವರ್ಷಗಳಲ್ಲಿ ನನಗೆ ತಿಳಿದಂತೆ ಹೊಸ ವಿಧಾನವು ರಾಷ್ಟ್ರೀಯ ಅಭಿವೃದ್ಧಿಗೆ ನೆರವಾಗುವಂತೆ ಅದನ್ನು ಸಾರ್ವತ್ರಿಕ ಪ್ರಸಿದ್ಧಿಗೆ ತರಲು ಶ್ರೀ ಭಟ್ಟರು ಸಂಬಂಧಿಸಿದ ಅಧಿಕಾರಿ ವರ್ಗದೊಂದಿಗೆಲ್ಲ ವ್ಯವಹರಿಸುತ್ತಿರುವರು. ಅದನ್ನು ಪ್ರಸಿದ್ಧಿಗೆ ತರುವ ವಿಚಾರ ಹಾಗಿರಲಿ, ಅದರ ಯಥಾರ್ಥತೆಯನ್ನು ಮನಗಾಣಲು ಒಂದು ಮಾದರಿಯನ್ನಾದರೂ ನಿರ್ಮಿಸುವುದು ಇದು ವರೆಗೂ ನಮ್ಮ ಸರಕಾರಕ್ಕೆ ಸಾಧ್ಯವಾಗಲಿಲ್ಲವೆಂದರೆ ಇದಕ್ಕಿಂತ ಹೆಚ್ಚಿನ ಲಾಂಛನ ಬೇರೇನಿದೆ?

ಕೃಷಿ ವಿಚಾರದಲ್ಲಿ ಅಭಿವೃದ್ಧಿ ಪ್ರಯತ್ನ ಮಾಡುವುದಕ್ಕಾಗಿಯೇ ಮೀಸಲಾದ ಪ್ರಯೋಗಿಕ ಸಂಸ್ಥೆಗಳಲ್ಲಿ ಸಂಬಳ ತಿನ್ನುವ ಅಧಿಕಾರಿಗಳಿಗೆ ರಾಷ್ಟ್ರೀಯ ಮಹತ್ವವುಳ್ಳ ಒಂದು ಹೊಸ ವಿಧಾನವನ್ನು ಪ್ರಯೋಗಿಸಿ ನೋಡುವುದೂ ಸಾಧ್ಯವಿಲ್ಲವೆ?

ಹೊಸ ವಿಚಾರವೊಂದನ್ನು ಸರಕಾರದ ಗಮನಕ್ಕೆ ತರುವುದು ಮಾತ್ರ ವ್ಯಕ್ತಿಯ ಕರ್ತವ್ಯ, ಅದರ ಸಂಪೂರ್ಣ ಉಪಯೋಗವನ್ನು ಎಲ್ಲೆಲ್ಲ ಸಾಧ್ಯವಿದೆಯೋ ಅಲ್ಲೆಲ್ಲ ಜನತೆಗೆ ಒದಗಿಸುವುದು ಸರಕಾರದ ಜವಾಬ್ದಾರಿ.

ಎರಡು ವರ್ಷಗಳ ಕಾಲಾವಧಿ ಸಣ್ಣದೇನೂ ಅಲ್ಲ. ಈ ಕಾಲಾವಧಿಯಲ್ಲಿ ಶ್ರೀ ಭಟ್ಟರಷ್ಟೇ ಆಸಕ್ತಿಯನ್ನು ಅಧಿಕಾರಿಗಳೂ ವಹಿಸಿದ್ದರೆ, ಇಷ್ಟರಲ್ಲೇ ಹೊಸ ವಿಧಾನದ ಯೋಗ್ಯತೆಯನ್ನು ಸಿದ್ಧಗೊಳಿಸಿ ಅದನ್ನು ರಾಷ್ಟ್ರದಾದ್ಯಂತ ಪ್ರಚಾರಕ್ಕೆ ತರುವುದು ಸಾಧ್ಯವಿತ್ತು. ಆದರೆ ನಮ್ಮ ಅಧಿಕಾರಿಗಳು ಇದೇನೋ ಶ್ರೀ ಭಟ್ಟರ ವ್ಯಕ್ತಿಗತ ಸ್ವಾರ್ಥವೆಂದು ಭಾವಿಸಿ ಈ ವಿಚಾರವನ್ನು ಪತ್ರವ್ಯವಹಾರದಲ್ಲೇ ಮುಂದೂಡುವಂತೆ ತೋರುತ್ತದೆ. ಶ್ರೀ ಭಟ್ಟರ ಸದುದ್ದೇಶವನ್ನಾಗಲಿ, ಈ ವಿಧಾನದ ರಾಷ್ಟ್ರೀಯ ಮಹತ್ವವನ್ನಾಗಲಿ, ಅವರು ಅರ್ಥಮಾಡಿಕೊಂಡಂತೆ ಕಾಣುವುದಿಲ್ಲ.

ಶ್ರೀ ಭಟ್ಟರು ಸ್ವತಃ ಈ ವಿಧಾನವನ್ನು ಪ್ರಯೋಗಕ್ಕಿಳಿಸಿ ಜಯಶಾಲಿಗಳಾಗಿದಾರೆ. ಅವರು ಈ ಕುರಿತು ಇನ್ನೂ ಸಂಶೋಧನೆಯನ್ನು ಮುಂದುವರಿಸುತ್ತಲೇ ಇದ್ದಾರೆ. ಇಂತಹ ಪ್ರಯೋಗಗಳು ಸಂಪೂರ್ಣ ತೃಪ್ತಿಕರವಾಗಬೇಕಾದರೆ ಆ ಕಾರ್ಯವನ್ನು ಸಾಮೂಹಿಕವಾಗಿ ಒಂದು ಸಂಸ್ಥೆ ಮಾಡಬೇಕು.

ಇತ್ತೀಚೆಗೆ ಜರ್ಮನಿ ಸರಕಾರವು ಶ್ರೀ ಭಟ್ಟರ ಪತ್ರಕ್ಕೆ ಉತ್ತರವಾಗಿ ಹೊಸ ವಿಚಾರದ ಯೋಗ್ಯತೆಯನ್ನು ಸಂಪೂರ್ಣವಾಗಿ ಒಪ್ಪಿ ಧನ್ಯವಾದಪೂರ್ವಕ ಪತ್ರ ಬರೆದಿರುವುದಾಗಿ ನಾನು ತಿಳಿಯುತ್ತೇನೆ. ವಿದೇಶಿಯರು ತೋರಿಸಿಕೊಟ್ಟ ನಂತರವಾದರೂ ನಮ್ಮಲ್ಲಿರುವುದನ್ನು ಗುರುತಿಸಿಕೊಳ್ಳುವ ಸದ್ಬುದ್ಧಿ ನಮ್ಮ ಸರಕಾರಕ್ಕೆ ಬರುವುದೋ ಏನೊ.

ಸಸಿ ನಡುವ ವಿಧಾನದಲ್ಲಿ ನಮ್ಮಲ್ಲಿ ಜಪಾನಿ ಪದ್ಧತಿಯಿದೆ. ಚೈನಾ ಪದ್ಧತಿಯಿದೆ. ಆದರೆ ನಮ್ಮದೆನ್ನುವ ಒಂದೇ ಒಂದು ಪದ್ಧತಿಯಾದರೂ ನಮ್ಮಲ್ಲಿಲ್ಲ. ಕಾರಣ ನಮ್ಮಲ್ಲಿರುವುದನ್ನು ಉಪಯೋಗಿಸಿಕೊಳ್ಳುವ ಬುದ್ಧಿ ನಮ್ಮಲ್ಲಿಲ್ಲ. ಎಲ್ಲದರಲ್ಲೂ ಪರದೇಶಗಳನ್ನು ಅವಲಂಬಿಸುವ ದಾಸ್ಯ ಬುದ್ಧಿ ಬಿಡದೆ ಖಂಡಿತವಾಗಿಯೂ ನಮ್ಮ ಉತ್ಕರ್ಷವಾಗಲಾರದು.

"ಆಹಾರ ಉತ್ಪಾದನೆ ಹೆಚ್ಚಿಸಿರಿ" ಎಂದು ಬೊಬ್ಬಿರಿದ ಮಾತ್ರಕ್ಕೆ ಸಮಸ್ಯೆ ಪರಿಹಾರವಾಗುವುದಿಲ್ಲ. ಆ ದೆಸೆಯಲ್ಲಿ ಏನಾದರೂ ಒಂದು ರಚನಾತ್ಮಕ ಕಾರ್ಯ ನಾವು ಮಾಡಬೇಕು. ಹೇಳುವ ಹತ್ತರಲ್ಲಿ ಒಂದನ್ನಾದರೂ ಕಾರ್ಯರೂಪಕ್ಕೆ ತರಲು ನಮ್ಮ ಸರಕಾರ ಕಲಿಯಬೇಕು.

ಶ್ರೀ ಭಟ್ಟರ ಹೊಸ ವಿಧಾನವನ್ನು ಅತಿ ಶೀಘ್ರವೇ ಪ್ರಚಾರಕ್ಕೆ ತರುವುದು ಸರಕಾರದ ಕರ್ತವ್ಯ. ಇಲ್ಲವಾದರೆ ಇದೊಂದು ರಾಷ್ಟ್ರೀಯ ನಷ್ಟವೆನಿಸಿ ಪರಿಣಾಮದಲ್ಲಿ ನಾವು ಪಶ್ಚಾತ್ತಾಪ ಪಡಬೇಕಾದೀತು.

— ರಮಾನಂದ ಬನಾರಿ,
ದೇಲಂಪಾಡಿ.

ವಿಚಾರವರ್ಷ

(೩ನೇ ಪುಟದಿಂದ)

ನೆ ನಮ್ಮ ಸಾಹಿತ್ಯದಲ್ಲಿ ಉತ್ಸಾಹದಿಂದ ದಿಂದ ಮುಂದುಬರಬೇಕು.

ನಾವು ಬುದ್ಧಿಯಿಂದ ನಮ್ಮ ಪೂರ್ವಜರ ದಾಸ್ಯತ್ವ ಸ್ವೀಕರಿಸಿದ್ದೇವೆ. ನಮ್ಮ ತಾಯ್ತಂದೆ ಅಥವಾ ಸಂಬಂಧಿಕರನ್ನು ಆಶ್ರಯಿಸಿಯೇ ನಮ್ಮ ಜೀವನ ಪದ್ಧತಿಯನ್ನು ರೂಪಿಸುತ್ತೇವೆ. ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಗಳಿಗಾಗಿ ಸರಕಾರದತ್ತ ಆಶಾಪೂರ್ಣ ನೇತ್ರದಿಂದ ನೋಡುತ್ತೇವೆ. ಇವೆಲ್ಲವೂ ಅವಶ್ಯ ಬದಲಾಗಬೇಕು

ಆದುದರಿಂದ ಸಾಹಿತ್ಯದ ಮೂಲರೂಪ ಮತ್ತು ಅದರ ಮೂಲಮಂತ್ರವಿದು: ಜೀವನವನ್ನು ವ್ಯಕ್ತಮಾಡುವುದು ಅಥವಾ ಅದನ್ನು ನೂತನ ಪ್ರೇರಣೆಯಿತ್ತು ಜೀವನಾನುಭೂತಿಯನ್ನು ವಿಶಾಲ ಮತ್ತು ಗಂಭೀರಗೊಳಿಸುವುದು; ಸಾಹಿತ್ಯದ ಮೂಲಕ ಸಮಾಜದ ಮುಂದೆ ಉನ್ನತ ಆದರ್ಶಗಳನ್ನು ಇಡುವುದು, ಅದರಲ್ಲಿ ಮಾನವನ ಮನಸ್ಸಿನ ಸಮರ್ಥಕತೆಯನ್ನು ತಿಳಿಯುವ ಶಕ್ತಿವರ್ಧಿಸುವುದು. ಇದರಿಂದ ಮನುಷ್ಯನ ವ್ಯಕ್ತಿತ್ವ ಮತ್ತು ಸಮಾಜದ ಜೀವನ ಪರಿಶುದ್ಧವಾಗುವುದು; ಸಮರ್ಥವಾಗುವುದು; ಸಮೃದ್ಧವಾಗುವುದು ಮತ್ತು ಎಲ್ಲಮೊಬ್ಬನೆ ಕೃತಕೃತ್ಯವಾಗುವುದು. ಸಾಹಿತ್ಯದ ಕರ್ತವ್ಯವೆಂದರೆ ಇದೇ ತಾನೆ?

(ಕಾಕಾ ಕಾಲೇಲಕರರ ಲೇಖದ ಸಂಗ್ರಹ)

—ಗೋರಾ.

‘NAVAYUGA’ WEEKLY is in the list of periodicals and Newspapers approved for use in Secondary School as per proceedings Roc· No· 466 N/50 date 2-12-1950 of the Directors of public Instruction Madras·

ದಿ ವಿಜಯ ಬೇಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ: 1931

ರಿಜಿಸ್ಟರ್ಡ್ ಆಫೀಸು:
ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು-3, ಸೌತ್ ಕೆನರಾ.

ಕಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡ 5¼ರ ವರೆಗೆ ಹೆಚ್ಚಿಸಲಾಗಿದೆ. ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ಪಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸೋಣಾಗುತ್ತದೆ.

ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ.

Tel: ·BLUEYAGAR'. — ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ — Phone: 374.

ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು. ಮಾಲಿಕ: ಕೆ.ಕೆ.ಆರ್.ಶೇಟ್

ಯಮುನ ನೆರಳು

(೨ನೇ ಪುಟದಿಂದ)

ಯಿಂದಾದರೂ ಆ ಪತ್ರವನ್ನು ದುಷ್ಟನ ಕೈಯಿಂದ ಎಳೆದು ತರುತ್ತೇನೆ.'' ಎಂದು ದಾಮೋದರರು ಪ್ರಾಣದಾಸರಿಗೆ—''ನಡೆಯುವ'' ಎಂದರು. ಈರ್ವರೂ ಕಾರಿನಲ್ಲಿ ಕುಳಿತು ಜಯಂತರಲ್ಲಿಗೆ ಹೊರಟರು.

ಇಷ್ಟು ಬೇಗನೇ ಪುನಃ ಬಂದುದರಿಂದ ಜಯಂತರಿಗೆ ಆಶ್ಚರ್ಯವಾಯಿತು. ಆದರೆ ದಾಮೋದರರು ಘಟನೆಯನ್ನು ವಿವರೀಕರಿಸಿದುದರಿಂದ ಅದನ್ನರಿತು ಶಾಂತರಾದರು.

''ಹಾಗಾದರೆ, ಈಗ ಮಾಡುವುದಾದರೂ ಏನು'' ಎಂದರು ಜಯಂತ್.

''ನಾವು ನಮ್ಮ ವೇಶ ಪಲ್ಲಟಿಸಿ ಫಲಕದಾರಿಯ ಮನೆಗೆ ಹೋಗುವ'' ಅಂದರು ಪ್ರಾಣದಾಸರು— ''ಅವನಿಂದ ಆ ಪತ್ರವನ್ನು ಶಾಂತಿಯಿಂದ—ಯಾ—ಜಗಳ ಮಾಡಿಯಾದರೂ ಸೆಳೆದು ಕೊಳ್ಳಲೇ ಬೇಕು''

ಜಯಂತರು ತಕ್ಷಣದಲ್ಲೇ ಬೇರೊಂದು ಕೋಣೆಗೆ ಹೋಗಿ ಪುತ್ರಕಾರನ ವೇಷದಲ್ಲಿ ಮರಳಿ ಬಂದರು. ಅವರ ಗುರುತನ್ನು ಪ್ರಾಣದಾಸ ದಾಮೋದರರಿಂದಲೂ ಕಂಡುಹಿಡಿಯಲಾಗಲಿಲ್ಲ.

ಮಹೇಂದ್ರಗಡದಿಂದ ಮೂವರೂ ಕಾರಿನಲ್ಲಿ ತೆರಳಿ ಫಲಕದಾರಿಯ ಬಂಗಲೆಯನ್ನು ತಲಪಿ, 'ವಿಸಿಟಿಂಗ್ ಕಾರ್ಡ್'ನ್ನು ಒಳ ಕೊಟ್ಟರು. ಫಲಕದಾರಿಯು ಕೂಡಲೆ ಅವರನ್ನು ಒಳ ಬರುವಂತೆ ಹೇಳಿ ಕಳುಹಿಸಿದನು. ಅವರು ದಾಮೋದರರನ್ನು ನೋಡುತ್ತಲೇ—''ಬನ್ನಿ, ಬನ್ನಿ, ಎಲ್ಲ ಕುಶಲ ತಾನೇ'' ಎಂದ.

''ಹೌದು ಎಲ್ಲಾ ನಿಮ್ಮ ದಯೆ''

''ಹೇಳಿ, ಇತ್ತ ಬರುವ ಕಷ್ಟವೇಕಾಯ್ತು''

''ಬಹಳ ದಿವಸಗಳಿಂದ ದರ್ಶನವಾಗಲಿಲ್ಲ. ಬೇರೊಂದು ಅಗತ್ಯ ಕೆಲಸವೂ ಇತ್ತು''

''ನಾನು ತಮ್ಮ ಯಾವ ಸೇವೆ ಮಾಡಬಲ್ಲೆ'' ಎಂದ ಫಲಕದಾರಿ.

''ಬೇರೇನೂ ಇಲ್ಲ. ತಾವು ಮಾಯಾವತಿಯಿಂದ ಮೋಸದಲ್ಲಿ ಬರೆಯಿಸಿದ ಪತ್ರವನ್ನು ಹಿಂತಿರುಗಿಸಿರಿ.''

''ತಾವು ನನ್ನ ಸ್ವಕೆಲಸದಲ್ಲಿ ಹಸ್ತಕ್ಷೇಪ ಮಾಡಬಾರದು. ನಾನೆಂದಿಗೂ ಆ ಪತ್ರವನ್ನು ಕೊಡಲಾರೆ.''

''ಹಾಗಾದರೆ ತಾವು ನಮ್ಮ ಮಿತ್ರತೆಯನ್ನು ಮುರಿಯಲಿಚ್ಛಿಸುತ್ತಿದ್ದೀರಿ.''

''ನಮ್ಮ ನಿಮ್ಮ ಮಿತ್ರತೆಯೇ ಎಲ್ಲಿತ್ತು ದಾಮೋದರ್!''

''ಹಾಗೆ ಹೇಳಿ. ನಾವು ಕಾಗದವನ್ನು ಹುಡುಕಿಕೊಳ್ಳುತ್ತೇವೆ.''

''ತಾವೆಂದೂ ಹಾಗೆ ಮಾಡಲಾರಿರಿ.'', ಎಂದು ಫಲಕದಾರಿಯು ಮೇಜಿನ ಮೇಲಿದ್ದ ಚೀನಿಮಣ್ಣಿನ ಡಬ್ಬಿಯನ್ನೆತ್ತಿಕೊಂಡರು. ಅಷ್ಟರಲ್ಲಿ ಜಯಂತರು ತಮ್ಮ ಕೈ ಚತುರತೆಯಿಂದ ಅವನ ಕೈಗೆ ಹೊಡೆದರು. ಡಬ್ಬಿಯು ನೆಲಕ್ಕೆ ಬಿದ್ದು ಚೂರು ಚೂರಾಯಿತು. ಅದರೊಳಗೆ ಇದ್ದ ಒಂದು ಉರುಟಾಗಿ ಸುತ್ತಲ್ಪಟ್ಟ ಕಾಗದವು ಹೊರಬಿತ್ತು. ಅದನ್ನು ಜಯಂತರು ಕಾಲಡಿಯಲ್ಲಿ ಒತ್ತಿಹಿಡಿದರು. ಪ್ರಾಣದಾಸ ದಾಮೋದರರು ತಮ್ಮ ಬಲವಾದ ಕೈಗಳಿಂದ ಅವನನ್ನು ಬಿಗಿಹಿಡಿಯತೊಡಗಿದರು. ಜಯಂತರು ಕಾಲಡಿಯಲ್ಲಿದ್ದ ಪತ್ರವನ್ನು ತೆಗೆದು ನೋಡಿದರು. ಅದೇ ಪತ್ರವಾಗಿತ್ತು. ಅವರು ಅದನ್ನು ಜೇಬಿನೊಳಗೆ ತುರುಕಿಸಿ ತನ್ನ ಸಾಥಿಗಳನ್ನು ಹೋಗಲು ಸಂಕೇತ ಮಾಡಿದರು. ದಾಮೋದರರು ಫಲಕದಾರಿಯನ್ನು ಬಿಟ್ಟುಬಿಟ್ಟರು. ಅವರು ಬಾಗಿಲೆಡೆಗೆ ಹೋಗುವಾಗ ಫಲಕದಾರಿಯು —''ಒಳ್ಳೇದು ತೆಗೆದುಕೊಂಡು ಹೋಗಿರಿ. ನನ್ನ ಮೂರ್ಖತೆಯಿಂದಲೇ ನಿಮಗೆ ಪತ್ರ ಸಿಕ್ಕಿತು. ಇಲ್ಲದಿದ್ದಲ್ಲಿ ನೀವು ಎಷ್ಟು ಪ್ರಯತ್ನಪಟ್ಟರೂ ಆ ಪತ್ರ ನಿಮ್ಮ ಕೈಗೆ ಸಿಕ್ಕುತ್ತಿರಲಿಲ್ಲ,, ಎಂದು ನುಡಿದನು.

ಅಲ್ಲಿಂದ ಮೂವರೂ ಹೊರಬಿದ್ದರು. ದಾಮೋದರರು ಜಯಂತರನ್ನು ಅವರ ನಿವಾಸಸ್ಥಳಕ್ಕೆ ಮುಟ್ಟಿಸಿದರು. ಅಲ್ಲಿಂದ ಬಂಗಲೆಗೆ ಹಿಂತಿರುಗಿ ಮಾಯಾವತಿಗೆ ಆ ಕಾಗದವನ್ನು ಕೊಟ್ಟು—''ತಕೊಳ್ಳಿ. ಇಂತಹ ತಪ್ಪನ್ನು ಜೀವಮಾನದಲ್ಲಿ ಇನ್ನೊಮ್ಮೆ ಎಂದೂ ಮಾಡಬೇಡಿ ಕಾಗದವನ್ನು ಹರಿದು ಹಾಕಿರಿ,, ಅಂದರು.

ಕಾಗದವನ್ನು ಕಂಡ ಮಾಯಾಳಿಗೆ ಹಿಡಿಸಲಾರದಷ್ಟು ಆನಂದವಾಯ್ತು. ಕಾಗದವನ್ನು ಚೂರು ಚೂರು ಮಾಡಿದಳು.

ಈ ಘಟನೆಯು ಹತ್ತು ದಿವಸದ ನಂತರ ಮಹೇಂದ್ರಗಡದ ಅರಣ್ಯದಲ್ಲಿ ಕಪ್ಪು ವಸ್ತ್ರಗಳಿಂದ ಶರೀರವನ್ನು ಮುಚ್ಚಿಕೊಂಡಿದ್ದ ಕೆಲವರು ಗಡಿಯ ಸಣ್ಣ ಬಾಗಿಲಿನ ಹತ್ತಿರ ಬಂದರು. ಗೋಡೆಯನ್ನು ಅಗೆದು ಮೆಟ್ಟಲುಗಳನ್ನೇರ ತೊಡಗಿದರು. ಪಥ ಪ್ರದರ್ಶಕನಾದ ಕುಂಟನು ಇಂದು ಮುಂದೆ, ಮುಂದೆ ಹೋಗುತ್ತಿದ್ದನು. ಈ ಸಲ ಅವರು ನಿರ್ವಿಘ್ನವಾಗಿ ಮೇಲಕ್ಕೆ ಬಂದರು. ಅವರು ಕತ್ತಲೆಯಲ್ಲಿ ಒಂದು ಕಂಬದ ಬಳಿ ಅವಿತರು. ಕುಂಟನು ಅವರಿಂದ ಬೇರೆಯಾಗಿ ಮುಂದೆ ಹೋದನು. ಹಸುರು ಬಣ್ಣದ ಲಾಟೀನು ತೆಗೆದುಕೊಂಡು ಏನೋ ಸಂಕೇತ ಮಾಡಿದನು. ಇದಕ್ಕುತ್ತರವಾಗಿ ಮೇಲಿನ ಕೋಣೆಯಿಂದ ಮೂರು ಬಾರಿ ನೀಲಿ ಬಣ್ಣದ ಪ್ರಕಾರದ ಸಂಕೇತವು ಸಿಕ್ಕಿತು. ಕುಂಟನು 'ಲಾಟೀನು' ನಂದಿಸಿ ತನ್ನ ಮಿತ್ರಬಳಗವನ್ನು ಸೇರಿದನು. ಅಲ್ಲದೆ, ಅವರನ್ನು ಮುಂದೆ ಹೋಗಲು ಸಂಜ್ಞೆ ಕೊಟ್ಟನು.

ಕೋಣೆಯ ಬೀಗ ಒಡೆದು ಕುಂಟನು ಒಳ ಪ್ರವೇಶಿಸಿದನು. ಅವನ ಬಳಗದವರೂ ಕೋಣೆಗೆ ಪ್ರವೇಶವಿತ್ತರು. ಕುಂಟನು ಜಯಂತರ ಪಲ್ಲಂಗದ ಬಳಿಗೆ ಹೋದನು. ತನ್ನ ಜೇಬಿನಿಂದ 'ಬಿಚ್ಚಾ' ತೆಗೆದು ಜಯಂತರ ಮೇಲೆ ಆಕ್ರಮಣ ಮಾಡುವವನಿದ್ದ. ಅಷ್ಟರಲ್ಲಿ ಜಯಂತರು ಹಾಸಿಗೆಯಲ್ಲಿ ಎದ್ದು ಕುಳಿತರು, ಕುಂಟನು 'ಬಿಚ್ಚಾ' ಹಿಡಿದ ಕೈಯನ್ನು ತನ್ನ ಕೈಯಿಂದ ಅದುಮಿ ವಿಪರೀತವಾಗಿ ಹೊಡೆದರು. ಅದರ ಶಬ್ದವನ್ನು ಕೇಳಿ ಕುಂಟನ ಬಳಗ ಮೆಟ್ಟಲಿಳಿದು ಓಡ ತೊಡಗಿತು. ಆದರೆ ಅಲ್ಲಿ ಮೊದಲೇ ಜನರು ಕಾದು ನಿಂತುದರಿಂದ ಎಲ್ಲರೂ ಹಿಡಿಯಲ್ಪಟ್ಟರು. ಸ್ವಲ್ಪವೇ ಸಮಯದಲ್ಲಿ ನವತೇಂದ್ರನು ಅವರ ಕೈಕಾಲು ಕಟ್ಟಿಸಿ ಕಾಡಿನಲ್ಲಿ ಬಿಟ್ಟನು. ಆದರೆ ಕುಂಟನು ಆ ಬಳಗದಲ್ಲಿರಲಿಲ್ಲ, ಅವನು ಹೇಗ ಕಾಣೆಯಾದ ಎಂಬುದು ಯಾರಿಗೂ ತಿಳಿಯದು ಸ್ವಲ್ಪ ಸಮಯದ ನಂತರ ಕುಂಟನು ಕಾಡಿಗೆ ಬಂದು ಅವರ ಕಟ್ಟುಗಳನ್ನು ಬಿಡಿಸಿದಾಗಲೇ ಅವರು ಮುಕ್ತರಾದುದು. ಎಲ್ಲರೂ ಓಡ ತೊಡಗಿದರು.

೧೦

ಬೆಳಗ್ಗೆ ದಲಿತಸಿಂಹರು ತಮ್ಮ ಆಫೀಸಿನಲ್ಲಿ ರಾಮಸಿಂಹ, ಮತ್ತು ಫಲಕದಾರಿಯೊಡನೆ ಮಾತಾಡುತಿದ್ದರು. ಆಗ ಬಾಗಿಲು ತೆರೆಯಿತು. ಆತ್ಮಾರಾಮನು ಒಳಸೇರಿದನು. ''ಹಲೋ, ಆತ್ಮಾರಾಮ ಏನು ಸಮಾಚಾರ?'' ಎಂದು ಎಲ್ಲರೂ ಒಕ್ಕೊರಳಿನಿಂದ ಕೇಳಿದರು. ಫಲಕದಾರಿ ಎದ್ದು ತನ್ನ ಸ್ಥಾನವನ್ನು ಅವನಿಗೆ ಬಿಟ್ಟುಕೊಟ್ಟನು

''ಸಮಾಚಾರವೇನು......ಎಲ್ಲಾ ಸರಿಯಾಗಿದೆ, ನಾವು ನಮ್ಮಂತಹ ಮೂರ್ಖರಲ್ಲ. ಎಂದು ಫಲಕದಾರಿಯನ್ನುದ್ದೇಶಿಸಿ ಹೇಳಿದ ಆತ್ಮಾರಾಮ.

''ಒಳ್ಳೇದಪ್ಪ ನೀನೇನು ಮಾಡಿದೆ ಹೇಳು?'' ಎಂದರು ದಲಿತಸಿಂಹ.

''ನಾನೆಲ್ಲವನ್ನೂ ಸರಿಪಡಿಸಿದ್ದೇನೆ ವಿವಾಹ ಮಾತ್ರ ಬಾಕಿ ನೀವು. ಹೇಳಿರಿ ನೀವೇನೆಲ್ಲಾ ಮಾಡಿದಿರಿ?''

''ನಾನೇನು ಹೇಳಲಿ, ಯಾವುದರಲ್ಲಿ ಕೈ ಹಾಕಿದರೂ ಸಫಲತೆಯು ಮಾರು ದೂರ ಹೋಗುತ್ತದೆ''

'ಮತ್ತೆ ಮಾಯಾವತಿಯ ವಿಷಯವೇನಾಯ್ತು ಚಿತ್ರಕಾರನ ರಹಸ್ಯ ಪತ್ತೆಯಾಯ್ತೇನು?;

ಅವನೊಬ್ಬ ವಿಚಿತ್ರ ವ್ಯಕ್ತಿ. ಅಲ್ಲಿಯ ಪ್ರತಿಯೊಂದೂ ಮಾತೂ ರಹಸ್ಯಪೂರ್ಣವಾಗಿದೆ. ಅವನು ಜಾದೂಗಾರನಾಗಿರಬೇಕು. ಮಾಯಾವತಿಯ ವಿಷಯ ದಾಮೋದರ ಪ್ರಾಣದಾಸರಿಂದಾಗಿ ಏನೂ ಪ್ರಯೋಜನವಿಲ್ಲದಂತಾಗಿದೆ. ಒಂದು ನಿಶ್ಚಿತ ಯುಕ್ತಿಯಿತ್ತು ಅದು ಫಲಕದಾರಿಯ ಅಸಾವಧಾನತೆಯಿಂದಾಗಿ ತಪ್ಪಿಹೋಯ್ತು''

''ಒಳ್ಳೆದು, ನಾಳೆ ಪೂಲಚಂದ್ರದಲ್ಲಿ ಮದುವೆಯಿದೆ ಅಲ್ಲಿನೀವೇನಾದರೂ ಮಾಡಲು ಸಾಧ್ಯವಿದೆ. ಯಾಕೆಂದರೆ ಮಾಯಾವತಿ ಅಲ್ಲಿಗೆ ಬರುತ್ತಾಳೆ. ಹಾಗೂ ಒಬ್ಬಳೇ ಇರುವ ಸಂಭವವಿದೆ'' ಎಂದ ಆತ್ಮಾರಾಮ.

''ಹಾಂ, ಆತ್ಮಾರಾಮ... ....ನಿನ್ನ ಮಾತುಗಳು ಸತ್ಯ ಮಾತ್ರನಾಗಬೇಕಾಗಿತ್ತೋ'' ಎಂದು ದಲಿತಸಿಂಹರು ಮಿತ್ರಬಳಗವನ್ನೊಮ್ಮೆ ನೋಡಿದರು. ಸ್ವಲ್ಪ ಕಾಲ ತಮ್ಮಲ್ಲೇ ಪರಾಮರ್ಶಿಸಿ ಕೊಂಡರು. ಅನಂತರ ಸಭೆಯು ವಿಸರ್ಜಿತವಾಯ್ತು. ದಲಿತಸಿಂಹರು ಆಫೀಸು ಕೆಲಸಕ್ಕೆ ತೊಡಗಿದರು. ಪೇದೆಯು ಬಂದು ಪೂಲಚಂದ್ರನ ಆಮಂತ್ರಣ ಪತ್ರವನ್ನು ತಂದು ಕೊಟ್ಟನು ಅದನ್ನು ತೆಗೆದ ಮೇಜಿನ ಡ್ರಾಯರಿನಲ್ಲಿಟ್ಟರು.

ಮರುದಿನ ದಲಿತ ಸಿಂಹರ ವಸ್ತುಗಳು ಮಿತ್ರಾಗಾರ ಕೂಡಿತು. ಅಲ್ಲಿಂದ ಕ್ಷಣ ಕಾಲದಲ್ಲೇ ಪೂಲಚಂದರ ಮನೆಯ ಕಡೆ ಸೇರಿದರು. ರಾತ್ರಿ ಹನ್ನೆರಡು ಗಂಟೆಯ ವರೆಗೆ ಸಮಾರಂಭವು ವಿಜೃಂಭಣೆಯಿಂದ ನಡೆಯಿತು ಅಲ್ಲಿ ಅತಿಥಿಗಳು

ಥರ್ಸ್ಟನ್ ಮೆಜಿಕ್ ತಂತ್ರಗಳನ್ನು ಕಲಿಯಿರಿ!

(1) ಒಂದು ಸಣ್ಣ ಚೆಂಡನ್ನು ನಿಮ್ಮ ಬಾಯಿಯೊಳಗೆ ಹಾಕಿರಿ ಮತ್ತು ಅದನ್ನು ನಿಮ್ಮ ಕಣ್ಣಿನಿಂದ ಹೊರಕ್ಕೆ ತೆಗೆಯಿರಿ. (2) ನಿಮ್ಮ ಅಂಗೈ ಅಡಿಯಲ್ಲಿ ಒಂದು ರೂಪಾಯಿ ನಾಣ್ಯವನ್ನು ಹಾಕಿರಿ. ಮತ್ತು ಅದನ್ನು ಒಂದು ಏಟಿನಿಂದ ನಿಮ್ಮ ಮುಷ್ಟಿಯ ಕೆಳಗೆ ಅದೃಶ್ಯಗೊಳಿಸಿರಿ.

ಈ ತಮಾಷಾ ಉಪಾಯಗಳನ್ನು ಪಡೆಯಲಿಕ್ಕೆ ಟಪ್ಪಾಲು ವಗೈರೆ ಖರ್ಚಿಗಾಗಿ 65 ನಯೇ ಪೈಸೆ ಸ್ಟಾಂಪ್ ಕಳುಹಿಸಿರಿ 5 ರೂಪಾಯಿ ಕಳುಹಿಸುವವರು ಅವರ ಮನೆಯಲ್ಲಿಯೇ ಮುಂದೆ ಇತರ ಎಲ್ಲಾ ತಂತ್ರಗಳನ್ನು ಪಡೆಯಬಹುದು.

The Royal Trick Centre,
P. B. No. 15, Aligarh (U.P.)

NAVAYUGA WEEKLY, UDIPI.
REGD. NO.BG. 176
22-6-1961
LICENSE NO.·31
Licensed to Post without Prepayment

ಮತ್ತು ಮನೆಯವರು ಮಾತ್ರ ಇದ್ದರು. ಇದುವರೆಗೆ ಹೊರಡುವ ಮಾಯಾವತಿಯನ್ನು ಕಪ್ಪು ಮುಖವಾಡ ಧರಿಸಿದ ಐದು ಮಂದಿ ವ್ಯಕ್ತಿಗಳು ಬಂದು ಮುತ್ತಿದರು, ಅವರ ಕೈಯಲ್ಲಿ ಪಿಸ್ತೂಲುಗಳಿದ್ದವು ಆಕೆಯನ್ನು ಕರಕೊಂಡು ಅವರು ಹೊರದ್ವಾರದತ್ತ ಬರುವಷ್ಟರಲ್ಲಿ ಬಿಳಿ ಮುಖವಾಡ ಧರಿಸಿದ್ದ ನಾಲ್ಕು ಮಂದಿ ಬಂದು ಅವರನ್ನು ಮುತ್ತಿದರು. ಮುತ್ತಿದವರು ಕೈ ಮೇಲಕ್ಕೆತ್ತಲು ಆಜ್ಞೆಯಿತ್ತರು. ಕಪ್ಪು ಮುಖವಾಡದವರು ತಮ್ಮ ಕೈಗಳನ್ನು ತಲೆಗಿಂತ ಮೇಲೆ ಎತ್ತಿ ಹಿಡಿದರು.

ಒಬ್ಬ ಬಿಳಿ ಮುಖವಾಡ ಧರಿಸಿದವನು—"ಪಿಸ್ತೂಲು ಕೆಳಗೆ ಹಾಕಿ ಹೆಬ್ಬಾಗಿಲಿನಿಂದ ಓಡಿಹೋಗಿ,, ಎಂದು ಆಜ್ಞೆ ಕೊಡಲು ಕಪ್ಪು ಮುಖವಾಡದವರು ಅಂತೆಯೇ ಮಾಡಿದರು. ಬಿಳೀ ಮುಖವಾಡದವರು ಮಾಯಾಳನ್ನು ಭಯಭೀತರಾಗಿ ನಿಂತಿರುವ ಅತಿಥಿಗಳ ಬಳಿ ನಿಲ್ಲಿಸಿ, ತಾವು ಬಂದ ದಿಕ್ಕಿಗೆ ಹೊರಟು ಅದೃಶ್ಯರಾದರು.

ಈ ಘಟನೆಯನ್ನು ಪೋಲೀಸರಿಗೆ ತಿಳಿಸಲಾಯ್ತು. ಅವರಾದರೂ ಹಲವು ಪ್ರಶ್ನೆಗಳನ್ನು ಕೇಳಿ ಮರಳಿ ಹೊರಟು ಹೋದರು.

ಈ ಘಟನೆಯ ಮರುದಿವಸ ದಲಿತ ಬೇಂಕಿನ ಆಫೀಸಿನಲ್ಲಿ ಪುರಾತನ ಪರಿಚಿತ ಸದಸ್ಯರು ಕೂಡಿ ಪರಾಮರ್ಶಿಸುತ್ತಿದ್ದರು, ಅಷ್ಟರಲ್ಲಿ ಕುಂಟ ಜಮುನಾ ಪ್ರಸಾದನು ಬಂದು ಇದಿರು ನಿಂತುಕೊಂಡನು. ಕ್ಷಣಕಾಲ ಸುಮ್ಮನಿದ್ದು—"ರಾತ್ರಿಯ ಮಹತ್ಕಾರ್ಯದ ಬಹುಮಾನ,, ಎಂದಾಗ ದಲಿತ ಸಿಂಹರು ತಲೆಯಲ್ಲಾಡಿಸಿದರು. ಮುಂದೆ ಏನೋ ಮಾತಾಡುವಷ್ಟರಲ್ಲಿ ಪ್ರಾಣದಾಸರು ಬಾಗಿಲನ್ನು ದೂಡಿ ಒಳಹೊಕ್ಕರು ಎಲ್ಲರೂ ಎದ್ದು ನಿಂತರು. ದಲಿತಸಿಂಹರು ಕೈನೀಡಿ—"ನಮ್ಮ ಭಾಗ್ಯದಿಂದ ತಾವಿಂದು ಆಫೀಸಿಗೆ ಬಂದಿರುವಿರಿ." ಎಂದರು.

ಪ್ರಾಣದಾಸರು—"ನಾನು ನಿಮ್ಮಲ್ಲಿ ಹೇಳಬಾರದ ವಿಷಯವನ್ನು ಹೇಳಲು ಬಂದಿದ್ದೇನೆ. ಆದರೆ ಅದನ್ನು ಹೇಳಲೇ ಬೇಕಾಗಿದೆ" ಎಂದು ಹೇಳಿದರು.

"ತಾವು ತಮ್ಮ ಮಾತನ್ನು ನಿಸ್ಸಂಕೋಚವಾಗಿ ಹೇಳಿರಿ."

"ನಾನೊಬ್ಬ ಮಿತ್ರನಂತೆ ನಿಮಗೆ ಸಲಹೆ ಕೊಡುತಿದ್ದೇನೆ. ನಿಮ್ಮ ಸಹಯೋಗಿಗಳೊಂದಿಗೆ ನೀವು ಈ ನಗರದಿಂದ ಹೊರಟು ಹೋಗಿರಿ. ಅನ್ಯ ಗೌಪ್ಯ ವಿಷಯದ ಹೊರತು ಬೇಂಕು ದಿವಾಳಿಯಾದುದರಿಂದ ನಿಮ್ಮಲ್ಲಿ ಬಹಳ ತಕರಾರುಗಳು ಹುಟ್ಟಿವೆ. ತಮಗೆ ಅದರ ಬಗ್ಗೆ ಸ್ವಲ್ಪವೂ ನಾಚಿಕೆಯಿಲ್ಲ"

"ಪ್ರಾಣದಾಸ್‌ಜೀ, ನಿಮ್ಮ ಈ ಮೈತ್ರಿ ಪೂರ್ಣ ಸಲಹೆಗಾಗಿ ಧನ್ಯವಾದಗಳು. ಆದರೆ ಬೇಂಕು ದಿವಾಳಿಯಾದ ಕಾರಣ ನಾನೇಕೆ ನಗರವನ್ನು ಬಿಡಬೇಕು?"

"ಇದರಿಂದ ನಿಮಗೆ ತುಂಬಾ ಅಪಮಾನವಾಗುತ್ತಿದೆ."

"ಅದು ಆಗುವುದು ಕೇವಲ ನಿಮ್ಮ ನಾಲಗೆಯಿಂದ."

"ಅಲ್ಲ, ನನ್ನ ನಾಲಿಗೆ ಅಕಾರಣವಾಗಿ ಎಂದೂ, ಯಾರಿಗೂ ಹಾನಿ ಕೊಡಲಿಕ್ಕಿಲ್ಲ. ನಿಮ್ಮನ್ನು ನಿಮ್ಮ ಕುಕೃತ್ಯಗಳೇ ಅಪಮಾನಿಸುತ್ತಿವೆ." ಎಂದು ಸಿಟ್ಟಿನಿಂದ ನುಡಿದರು ಪ್ರಾಣದಾಸ.

"ನನ್ನ ಕುಕೃತ್ಯ......ಕೇವಲ ನನ್ನ ಕುಕೃತ್ಯಗಳೇನು?

"ಅಲ್ಲ, ನಿಮ್ಮ ಸಹಯೋಗಿಗಳಾಗಿರುವವೆಲ್ಲಾ ದುಷ್ಕರ ಕುಕೃತ್ಯಗಳು."

ಎಲ್ಲರ ಮುಖವೂ ಕಪ್ಪಾಯ್ತು. ಒಂದು ಬದಿಯಲ್ಲಿ ನಿಂತು ಬಿಚ್ಚು ತೆಗೆಯುತಿದ್ದ. ಜಮುನಾ ಪ್ರಸಾದರ ಕಡೆ ಎಲ್ಲರೂ ದೃಷ್ಟಿ ಹೊರಳಿಸಿದರು. ಜೇಬಿನೊಳಗೆ ಕೈ ತುರುಕಿಸಿ ಕೊಂಡಿದ್ದಾತನು ಒಮ್ಮಿಂದೊಮ್ಮೆಲೆ 'ಬಿಚ್ಚು' ತಗೆದನು ಪ್ರಾಣದಾಸರು ಕೂಡಲೇ ತನ್ನ ಕಿಸೆಯಿಂದ ಪಿಸ್ತೂಲನ್ನು ತೆಗೆದು ಜಮುನಾ ಪ್ರಸಾದರ ಎದೆ ಗುರಿಯಿಟ್ಟು ನಿಂತರು. ಅವರು ಸಿದ್ಧರಾಗುವ ಮುಂಚೆಯೇ ಜಮುನಾ ಪ್ರಸಾದನು ಓಡಿ ಬಾಗಿಲು ಮುಚ್ಚಿ ತಾನು ತನ ಕಾರಿನಲ್ಲಿ ಕುಳಿತು ಪರಾರಿಯಾದನು.

ಈ ಘಟನೆ ನಡೆದ ಮೇಲೆ ದಲಿತಸಿಂಹರು ಹೇಳಿದರು—ಇತ್ತೀಚೆಗೆ ಎಂತಹ ಘಟನೆಗಳು ತಲೆಯೆತ್ತಿವೆ! ಪ್ರಾಣದಾಸರು ಹೇಳಿದ ಮಾತು ನಮಗೆ ಎಷ್ಟು ಮಹತ್ವಪೂರ್ಣವಾಗಿದೆ! ನನ್ನ ಎಲ್ಲಾ ಉಪಾಯಗಳು ವ್ಯರ್ಥವಾಗುತ್ತವೆ." ನನ್ನಭಿಪ್ರಾಯದಲ್ಲಿ ಯಾರೋ ನಮ್ಮ ಉಪಾಯಗಳನ್ನು ಗುಪ್ತವಾಗಿ ಅರಿತು ಯುಕ್ತ ಸಮಯದಲ್ಲಿ ವಿಫಲಗೊಳಿಸುತ್ತಾರೆ".

"ಅಲ್ಲಲ್ಲ ಹಾಗಲ್ಲ, ನನ್ನ ಅಭಿಪ್ರಾಯವೆಂದರೆ ನಮ್ಮ ಪ್ರತಿಯೊಂದು ಯುಕ್ತಿಗಳೂ ಪರಿಣಾಮವನ್ನು ಲೆಕ್ಕಿಸದೆ ಅನಿಯಮಿತ ರೂಪದಿಂದಾಗುತ್ತಿವೆ" ರಾಮಸಿಂಹನೆಂದ. ಈ ಅಂತಿಮ ಉಪಾಯವಂತೂ ನಿರರ್ಥಕವಾಯ್ತು. ಯುಕ್ತ ಸಮಯದಲ್ಲಿ ಬಂದು ಸಹಾಯ ಒದಗಿಸಿದ ವಿಚಿತ್ರ ಉಪಕಾರಿಯು ಮಾಯಾವತಿಗೆ ಯಾರು ಸಿಕ್ಕಿದನೋ ತಿಳಿಯದು ಎಂದ ಫಲಕದಾರಿ

"ಅಹುದು ನಮಗೆ ಇನ್ನೂ ಬಹುಕೆಲಸ ಮಾಡಲಿದೆ. ನೀವು ಈಗಲೇ ಧೈರ್ಯ ಬಿಟ್ಟರೆ ಹೇಗಾದೀತು?,,

"ದಲಿತಸಿಂಹ ಜೀ, ತಾವು ಯಾರೆಂದು ತಮಗೇ ಅರಿಯದು. ನಮ್ಮ ಎಲ್ಲಾ ಯುಕ್ತಿಗಳು ವ್ಯರ್ಥವಾಗಿ ಹೋಗುತ್ತಲಿವೆ. ಆದರೂ, ತಾವು ಕೋಕ್ಕರೆಗೆ ಒಂದೇ ಕಾಲು, ಎಂದ ಹಾಗೆ ಹಟಮಾಡುತ್ತಿದ್ದೀರಿ, ಎಂದು ಖಿನ್ನ ಮನಸ್ಕನಾಗಿ ನುಡಿದ ರಾಮಸಿಂಹ.

"ಹಾಗಲ್ಲ, ಏನೋ ಸಂಯೋಗದಿಂದ ನಮ್ಮ ಕೆಲಸವು ನಿರರ್ಥಕವಾಯ್ತು. ಇಂತಹ ಸಣ್ಣ ಅಸಫಲತೆಯಿಂದನೋಯಬಾರದು. ಜಯ ಖಂಡಿತ ನಮ್ಮದೇ ಈ ಸಲ ವಿಫಲವಾಗದಂತಹ ಯುಕ್ತಿಯು ಆತ್ಮಾರಾಮನದು.,,

(ಮುಂದುವರಿಯುವುದು)

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು.ರಾಘವೇಂದ್ರ ಆಚಾರ್ಯ,ಎಂ.ಎ.)

ಸಾಮಾನ್ಯ ರೋಗಗಳು
(ಡಾ ಕೆ ಎಲ್.ಐತಾಳ,ಎಂ ಬಿ.ಬಿ.ಎಸ್
ಜನರಿಗ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

ಒಂದು ಆಶ್ಚರ್ಯಕರವಾದ ದೃಷ್ಟಾಂತ

ನಿಮ್ಮ ಭವಿಷ್ಯತ್ಕಾಲದ ಆವಶ್ಯಕತೆಗಳನ್ನು ಪೂರೈಸಿಕೊಡಲು ಬ್ಯಾಂಕುಗಳು ಹೇಗೆ ಸಹಕರಿಸುತ್ತವೆ? ಮಿತವ್ಯಯವನ್ನು ಸಾಧಿಸುವುದರ ಮೂಲಕ ನೀವೊಂದು ಸೇವಿಂಗ್ಸ್ ಖಾತೆಯನ್ನು ತೆರೆದು ಈ ಖಾತೆಯಲ್ಲಿ ನೀವು ಚಕ್ರಬಡ್ಡಿಯ ದರದಲ್ಲಿ ಬಡ್ಡಿಯನ್ನು ಗಳಿಸುವಂತೆ ಅವು ನಿಮಗೆ ಪ್ರೋತ್ಸಾಹನ್ನೀಯುತ್ತವೆ. ಬೆಂಜಮಿನ್ ಫ್ರಾಂಕ್ಲಿನನು ಮಿತವ್ಯಯದ ಪ್ರತಿಪಾದಕರಲ್ಲೊಬ್ಬನು ಮೂಲಧನವು ಬಡ್ಡಿಗೆ ಬಡ್ಡಿ ಕೂಡಿ ಹೇಗೆ ವೃದ್ಧಿಯಾಗುತ್ತಿದೆ ಎಂಬುದಕ್ಕೆ ಒಂದು ಆಶ್ಚರ್ಯಕರವಾದ ನಿದರ್ಶನವನ್ನು ಆತನು ಜಗತ್ತಿನ ಮುಂದಿಟ್ಟಿರುವನು.

೧೭೯೦ರಲ್ಲಿ ಫ್ರಾಂಕ್ಲಿನನು ಸಾವಿರ ಡಾಲರುಗಳನ್ನು ಬೋಸ್ಟನ್ ನಗರದ ಜನರ ಉಪಯೋಗಕ್ಕೆಂದು ಮೀಸಲಾಗಿರಿಸಿದನು, ೧೦೦ವರುಷಗಳ ನಂತರ ಅದು ಬಡ್ಡಿ ಕೂಡಿ ವೃದ್ಧಿಯಾದ ಬಳಿಕವೇ ಅದನ್ನು ಪಯೋಗಿಸಬೇಕೆಂದೂ ಆತನು ವಿಧಿಸಿದ್ದನು. ೧೦೦ ವರುಷಗಳ ನಂತರ ಅದು ೪೦೦,೦೦೦ ಡಾಲರುಗಳಷ್ಟು ಬೆಳೆದಿತ್ತು. ಈ ಮೊತ್ತದಿಂದ ಫ್ರಾಂಕ್ಲಿನಿನ ಹೆಸರಿನಲ್ಲಿ ಒಂದು ಟೆಕ್ನಿಕಲ್ ಶಾಲಾ ಕಟ್ಟಡವನ್ನು ಕಟ್ಟಿಸಿದ ನಂತರ ಅದರಲ್ಲಿನ 92,000 ಡಾಲರುಗಳನ್ನು ಪುನಃ ವೃದ್ಧಿಯಾಗಲು ಬಿಡಲಾಯಿತು. ಅದೀಗ ಒಂದು ಮಿಲಿಯ ಡಾಲರುಗಳಷ್ಟಾಗಿದೆ.

ಒಂದು ಸೇವಿಂಗ್ಸ್ ಬ್ಯಾಂಕ್ ಖಾತೆ ಯನ್ನು ತೆರೆಯಿರಿ

ನಿಮಗೆ ಸಮೀಪವಿರುವ ನಮ್ಮ ೧೪೦ ಶಾಖೆಗಳೊಂದರಲ್ಲಿ ದಯಿಮಾಡಿ ವಿಚಾರಿಸಿರಿ·

ಸಿಂಡಿಕೇಟ್ ಬೇಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್.,
ರಿಜಿಸ್ಟರ್ಡ್ ಆಫೀಸ್: ಉಡುಪಿ, ಮೈಸೂರು ರಾಜ್ಯ, ಸ್ಥಾಪನೆ, ೧೯೨೫.

ಕೆನ್ನಡಿ ಮಂತ್ರಿ ಮಂಡಳಿಯಲ್ಲಿ ಸೇರಿದ ಶ್ರೀ ಜೆ· ಎಡ್ವರ್ಡ್‌ಡೇ.

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ಯೋಜನಾವಧಿಯಲ್ಲಿ ಈಗ ಇರುವ ೪೩೦ ಲಕ್ಷ ಮಕ್ಕಳು ಅಲ್ಲದೆ ೨೧೦ ಲಕ್ಷ ಹೆಚ್ಚಿನ ಮಕ್ಕಳು ಶಾಲೆಗಳಲ್ಲಿ ಸೇರಿಕೊಳ್ಳುವ ನಿರೀಕ್ಷೆಯಿದೆ. ಇಷ್ಟೊಂದು ಅಧಿಕ ಸಂಖ್ಯೆಯ ಮಕ್ಕಳಿಗೆ ಬೃಹತ್ ಪ್ರಮಾಣದಲ್ಲಿಯೇ ಪುಸ್ತಕಗಳನ್ನು ಅಚ್ಚು ಹಾಕಿಸಿ ಕೊಡುವುದೊಂದು ಉಪಯುಕ್ತ ಕಾರ್ಯಕ್ರಮವಾಗಿದೆ. ಇದಕ್ಕೆ ಅಧಿಕ ಪ್ರಮಾಣದಲ್ಲಿ ಕಾಗದವೂ ಮುದ್ರಣಾಲಯ ಸೌಕರ್ಯವೂ ಬೇಕಾಗುವುವು. ಯನೆಸ್ಕೊವಿನ ಸದಸ್ಯ ರಾಷ್ಟ್ರಗಳು ಈ ಆರ್ಥಿಕ ಸಹಾಯದ ಬದಲು ಇಂತಹ ಒಡವೆ ವಸ್ತುಗಳ ರೂಪದಲ್ಲಿ ನೆರವು ನೀಡುವುದರಿಂದ ಬಹಳ ಉಪಕಾರವಾದಂತಾಗುವುದು."

ಅನಕ್ಷರಸ್ಥರ ತವರ್ಮನೆಯೆನ್ನಬಹುದಾದ ಭಾರತದಲ್ಲಿ ಶೈಕ್ಷಣಿಕ ಪ್ರಗತಿಯು ಭರದಿಂದ ಸಾಗಬೇಕಾದುದರ ಆವಶ್ಯಕತೆಯನ್ನು ಬೇರೆ ಹೇಳಬೇಕಾಗಿಲ್ಲ. ಕೇವಲ ಉದ್ದಿಮೆರಂಗಗಳಲ್ಲಿಯೇ ಮುಂದುವರಿದ ಮಾತ್ರಕ್ಕೆ ನಾವು ಸುಸಂಸ್ಕೃತರೆನಿಸುವುದು ಸಾಧ್ಯವಿಲ್ಲ. ಆದುದರಿಂದ ಒಂದು ಅನಭಿವೃದ್ಧ ರಾಷ್ಟ್ರದ ಆವಶ್ಯಕತೆಗಳಲ್ಲಿ ಶಿಕ್ಷಣವೂ ಅಗ್ರಗಣ್ಯ ಸ್ಥಾನ ಪಡೆಯುತ್ತದೆ. ನಮ್ಮ ಸರಕಾರಗಳಾದರೂ ಶೈಕ್ಷಣಿಕ ಪ್ರಗತಿಗಾಗಿ ಹೋರಾಡುತ್ತಿವೆ. ವಿದೇಶಗಳು ನಮ್ಮ ಈ ಪ್ರಾಥಮಿಕ ಆವಶ್ಯಕತೆಯನ್ನು ಸುದೃಷ್ಟಿಯಿಂದ ಕಂಡು, ಆ ಅವಕ್ಕೆ ತಮ್ಮಿಂದ ಶಕ್ಯವೆನಿಸುವ ಸಹಾಯವನ್ನು ನೀಡಲು ಮುಂದೆ ಬರುತ್ತಿವೆಯೆಂದ ಮೇಲೆ, ನಾವೂ ನಮ್ಮ ಉತ್ಥಾನ ಕಾರ್ಯದಲ್ಲಿ ಆಸಕ್ತಿ ವಹಿಸುವುದು ಅನಿವಾರ್ಯ; ಮತ್ತು ಅತ್ಯಗತ್ಯ. ಆದುದರಿಂದ ಸರಕಾರ ರೂಪಿಸಿರುವ ಶೈಕ್ಷಣಿಕ ಯೋಜನೆಯನ್ನು ಸಫಲಗೊಳಿಸಿ, ಅನಕ್ಷರತೆಯ ದೂರೀಕರಣಕಾರ್ಯದಲ್ಲಿ ನಾವು ಕೃತಕೃತ್ಯರಾಗಬೇಕು.

ಶ್ರೀ ಎ. ಬಿ. ಶೆಟ್ರ
ಸ್ಮಾರಕ ನಿಧಿಗೆ
ಸಹಾಯ ಮಾಡಿರಿ

Edited Printed & Published by K. H. Shetty, at the Navayuga Press, Udipi, S. India.

40th year of publication. 29-6-1691 ೪೦ನೇ ವರ್ಷ

ಸಂಪುಟ ೪೧ Vol. 41

ನವಯುಗ

ಸಂಚಿಕೆ ೪೧ No. 41

ಬೆಲೆ 0=13

ಪ್ರಚಲಿತ ಪ್ರಸಂಗ:

ರಾಜ್ಯ ಸರಕಾರದ ಜಾಹಿರಾತು ನೀತಿ

ಸರಕಾರದ ಜಾಹಿರಾತುಗಳು ಅಧಿಕ ಪ್ರಸಾರವಿರುವ ಪತ್ರಿಕೆಗಳಿಗಷ್ಟೇ ಮೀಸಲಾಗಿರಬಾರದು, ಜನತೆಯ ಭಾಷೆಯಲ್ಲಿ ಜನತೆಗೆ ತಿಳಿಯುವಂತೆ ವಿಚಾರ ವಿಮರ್ಶೆಮಾಡುವ ಚಿಕ್ಕ ಪತ್ರಿಕೆಗಳ ಉಪಯೋಗವನ್ನೂ ಅದು ನೋಡಿಕೊಳ್ಳಬೇಕು

ಪ್ರಜಾಪ್ರಭುತ್ವದಲ್ಲಿ ಜನತೆಯ ಅಭಿಪ್ರಾಯವು ಪ್ರಕಟಗೊಳ್ಳುವುದಕ್ಕೆ ಇರುವ ಮಾಧ್ಯಮಗಳಲ್ಲಿ ಪತ್ರಿಕೆಗಳು ಅತಿ ಮಹತ್ವದ ಸ್ಥಾನವನ್ನು ಪಡೆಯುತ್ತವೆ ನಮ್ಮ ದೇಶದಲ್ಲಿ ಕೂಡ ಪತ್ರಿಕೆಗಳು ತಮ್ಮ ಕರ್ತವ್ಯಕ್ಕೆ ಚ್ಯುತಿಯನ್ನು ತಂದುಕೊಂಡಂತಿಲ್ಲ. ಪತ್ರಿಕೆಗಳು ತಮ್ಮ ಅಭಿಪ್ರಾಯವನ್ನು ಪ್ರಕಟಿಸುವುದರೊಡನೆ ದೇಶದ ಮುಂದಿರುವ ಧ್ಯೇಯ ಧೋರಣೆ ಸರಕಾರದ ನೀತಿ ರೀತಿ ಮೊದಲಾದುವುಗಳ ಬಗ್ಗೆಯೂ ಜನಮತವು ಹೊರ ಬರುವುದಕ್ಕೆ ಬಹುಪ್ರಕಾರವಾಗಿ ಮಾಧ್ಯಮಗಳಾಗಿ ನಡೆದು ಬರುತ್ತಿವೆ. ಇಂತಹ ಪತ್ರಿಕೆಗಳಲ್ಲಿ ಪ್ರಾದೇಶಿಕ ಭಾಷೆಯ ಪತ್ರಿಕೆಗಳು ಸಲ್ಲಿಸುವ ಸೇವೆಯು ಗಣನೀಯವಾಗಿದೆ. ಇವು ದೇಶದ ಸ್ಥಿತಿಗತಿಗಳನ್ನು ತನ್ನ ಪ್ರದೇಶದ ಜನತೆಗೆ ತಿಳಿಯುವ ಭಾಷೆಯಲ್ಲಿ ಚೊಕ್ಕವಾಗಿ ತಿಳಿಸುವ ಮತ್ತು ವುಗಳ ಬಗ್ಗೆ ಅದರ ಪ್ರತಿಕ್ರಿಯೆಗಳೇನೆಂಬುದನ್ನು ತಿಳಿಯುವ ಮಹಾಕಾರ್ಯವನ್ನು ಮಾಡುತ್ತಿವೆ. ಪ್ರಸಾರದ ದೃಷ್ಟಿಯಿಂದ ಇವು 'ಚಿಕ್ಕ ಪತ್ರಿಕೆ'ಗಳು ಎಂಬ ವಿಭಾಗಕ್ಕೆ ಸೇರುವುದು ವಾಸ್ತವಿಕವೆನಿಸಿದರೂ ಅವು ಮಾಡುವಷ್ಟು ಪ್ರಭಾವವನ್ನು ಅಧಿಕ ಪ್ರಸಾರವುಳ್ಳ ದೊಡ್ಡ ಪತ್ರಿಕೆಗಳು ಮಾಡುವಂತಿಲ್ಲ.

ಅಧಿಕ ಪ್ರಸಾರವಿರುವ ಪತ್ರಿಕೆಗಳಲ್ಲಿ ಹೆಚ್ಚಿನವು ದೈನಿಕಗಳೇ ಎಂಬುದನ್ನು ಒಪ್ಪಬೇಕು. ಈ ಪತ್ರಿಕೆಗಳು ನಗರ ಪ್ರದೇಶಗಳಲ್ಲಷ್ಟೇ ತಿರುಗಾಡುವುವು ಗ್ರಾಮಗಳೇ ಅಧಿಕವಿರುವ ನಮ್ಮ ದೇಶದಲ್ಲಿ ದೈನಿಕ ಪತ್ರಿಕೆಗಳು ಕೈ ಸೇರದಿರುವ ಗ್ರಾಮ ಪಂಚಾಯತುಗಳು ಅದೆಷ್ಟಿರಲಾರವು? ಇಂತಹ ಕಡೆಗಳಲ್ಲಿ ಚಿಕ್ಕ ಸಾಪ್ತಾಹಿಕ—ಮಾಸಿಕ ಪತ್ರಿಕೆಗಳು ಹೋಗುವ ನಿದರ್ಶನ ಹಲವಾರಿವೆ. ಹಾಗಿರುವಾಗ, ಪ್ರಸಾರಾಧಿಕ್ಯವಿರುವ ದೈನಿಕಗಳು ಸ್ವಯಂ ತಿಳುವಳಿಕೆಯುಳ್ಳ ನಗರವಾಸಿಗಳ ಕೈಸೇರುವುದಾದರೆ, ಗ್ರಾಮೀಣ ಪ್ರದೇಶಗಳಲ್ಲಿ ಚಿಕ್ಕ ಪತ್ರಿಕೆಗಳೇ ಪ್ರಭಾವೀಕಾರ್ಯ ನಡೆಸಬಲ್ಲುವು. ಈ ದೃಷ್ಟಿಯಿಂದ ಚಿಕ್ಕ ಪತ್ರಿಕೆಗಳು ಸಲ್ಲಿಸುತ್ತಿರುವ ಸೇವೆಯನ್ನು ಅಲ್ಲಗಳೆಯುವ ಎದೆಗಾರಿಕೆ ಸಲ್ಲದು

ಆದರೆ, ನಮ್ಮ ರಾಜ್ಯ ಸರಕಾರ ಚಿಕ್ಕ ಪತ್ರಿಕೆಗಳ ಬೆಳವಣಿಗೆಯನ್ನು ಹಾರೈಸುತ್ತದಾದರೂ ಐದು ಸಾವಿರಕ್ಕಿಂತ ಕಡಿಮೆ ಪ್ರಸಾರವಿರುವ ಪತ್ರಿಕೆಗಳಿಗೆ ಜಾಹಿರಾತುಗಳನ್ನು ನೀಡದಿರುವ ಘೋಷಣೆ ಮಾಡಿದುದು ವಿಚಿತ್ರವೆನಿಸುತ್ತದೆ. ಎರಡು ಕೋಟಿಗೂ ಮಿಕ್ಕಿ ಕನ್ನಡಿಗರಿರುವರಾದರೂ ಇವರಲ್ಲಿ ಸಾಕ್ಷರರ ಪ್ರಮಾಣ ಸುಮಾರು ಸೇ. ೨೫ ಎಂಬುದರಿಂದ ಪತ್ರಿಕೆ ಕೊಂಡು ಓದುವವರ ಸಂಖ್ಯೆಯನ್ನು ನಾವು ಊಹಿಸಿಯೇ ತಿಳಿಯಬಹುದು. ಕನ್ನಡದಲ್ಲಿರುವ ದೈನಿಕ ಪತ್ರಿಕೆಗಳಲ್ಲಿ ೨೫ ಸಾವಿರವಾದರೂ ಪ್ರಸಾರವಿರುವುವು ಎಷ್ಟು? ಈ ಪ್ರಶ್ನೆಗೆ ದೊರೆವ ಉತ್ತರವು ಅತೃಪ್ತಿಕರವಿರುವಾಗ ಐದುಸಾವಿರ ಪ್ರಸಾರವಿರಬಹುದಾದ ಸಾಪ್ತಾಹಿಕಮಾಸಿಕಗಳ ಸಂಖ್ಯೆಯು ಮತ್ತಷ್ಟು ಅಸಮಾಧಾನಕರವಾಗಿ ಕಾಣಬಹುದು.

ಸರಕಾರವು ಜಾಹಿರಾತನ್ನು ನೀಡುವಾಗ ಕೆಲವಾರು ದೃಷ್ಟಿಕೋಣಗಳನ್ನಿಟ್ಟುಕೊಳ್ಳುವುದು ನ್ಯಾಯೋಚಿತವೇ. ಅವುಗಳಲ್ಲಿ ಪ್ರಸಾರಾಧಿಕ್ಯವೂ ಒಂದೆಂಬುದೂ ನಿಜವೇ. ಆದರೆ, ಅದೊಂದೇ ಮಾನದಂಡವಾಗಿದ್ದರೆ ಸಾಲದು. ಒಂದು ಪತ್ರಿಕೆ ಅದು ಎಳೆಯದಿರಲಿ, ಹಿರಿಯದಿರಲಿ, ಪ್ರಸಾರವಾಗುತ್ತಿರುವ ಪ್ರದೇಶಗಳನ್ನೂ ನಾವು ಗಮನಿಸದಿರುವುದು ಸರಿಯಲ್ಲ. ಇಂಗ್ಲಿಷ್ ಹಿಂದೀ ಭಾಷೆಯ ಪತ್ರಿಕೆಗಳಿಂದು ಅಖಿಲ ಭಾರತದ ಹೆಚ್ಚಿನ ನಗರಗಳಲ್ಲಿ ಪ್ರಚಾರದಲ್ಲಿರಬಹುದು ಆದರೆ, ರಾಜ್ಯದಲ್ಲಿ ಆ ಭಾಷೆಯ ಪತ್ರಿಕೆಗಳ ಪ್ರಸಾರವೆಷ್ಟು, ಅವನ್ನು ಬಲ್ಲವರೆಷ್ಟು, ಓದುವವರೆಷ್ಟು ಎಂಬುದನ್ನು ಕಡೆಗಣಿಸುವುದು ನ್ಯಾಯವೆನಿಸಲಾರದು. ಸರಕಾರವು ಜಾಹಿರಾತನ್ನು ನೀಡುವ ಉದ್ದೇಶವೇನು? ಅದಷ್ಟು ಹೆಚ್ಚು ಜನರಿಗೆ ತಿಳಿಯ ಬೇಕು, ರಾಜ್ಯದ ಎಲ್ಲ ಭಾಗಗಳಲ್ಲೂ ಅದರ ಪ್ರಚಾರವಾಗಬೇಕು—ಎಂಬುದು. ಈ ದೃಷ್ಟಿಯಿಂದ ಐದು ಸಾವಿರಕ್ಕೆ ಮೀರದ ಪ್ರಸಾರವಿರುವ ಚಿಕ್ಕ ಪತ್ರಿಕೆಗಳು ಹಿಂದೆನಿಲ್ಲಲಾರವು. ಒಂದು ಜಿಲ್ಲೆಯಲ್ಲಿ ಆ ಜಿಲ್ಲೆಯ ಒಂದು ಭಾಷಾ ಪತ್ರಿಕೆಯು ಒಟ್ಟಿನಲ್ಲಿ ಅಧಿಕ ಪ್ರಸಾರವಿರುವ ದೊಡ್ಡ ಪತ್ರಿಕೆಗಿಂತ ಹೆಚ್ಚು ಪ್ರಚಾರದಲ್ಲಿರುವುದು ಸಾಧ್ಯ. ಹಾಗೆ ಇದ್ದೂ ಇವೆ. ಸಾಮಾನ್ಯವಾಗಿ ಒಂದು ಪ್ರದೇಶದ ಪತ್ರಿಕೆಯು ಆ ಪ್ರದೇಶದ ಜನತೆಗೆ ಪರಿಪೂರ್ಣ ಸೇವೆಯನ್ನು ಸಲ್ಲಿಸುತ್ತದೆ, ಜನಾನುರಾಗವನ್ನೂ ಪಡೆಯುತ್ತದೆ. ಅಂತಹವರಲ್ಲಿ ಜಾಹೀರಾತು ಕೊಡುವುದರಿಂದ ಆ ಪ್ರದೇಶದ ಜನರಿಗೆ ವಿಷಯವು ತಿಳಿಯುತ್ತದೆ.

ಕೇಂದ್ರ ಸರಕಾರದ ಜಾಹಿರಾತಿನ ಧೋರಣೆಯು ಉದಾರವಿರುವುದರಿಂದ ಚಿಕ್ಕ ಪತ್ರಿಕೆಗಳಿಗೂ ಅವು ದೊರೆಯುತ್ತಿವೆ; ಜಾಹಿರಾತಿನ ವಿಷಯವು ಜನತೆಗೆ ಸರಿಯಾಗಿ ಅರ್ಥವಾಗುತ್ತದೆ, ಲೈಫ್ ಇನ್ಶ್ಯೂರೆನ್ಸ್ ಕಾರ್ಪೊರೇಶನ್ ಗ್ರಾಮೀಣ ಪ್ರದೇಶಗಳಿಗೆ ವಿಮಾ ಸಂದೇಶವನ್ನು ನೀಡುವ ಸದುದ್ದೇಶದಿಂದ ಸಾಮಾನ್ಯವಾಗಿ ಚಿಕ್ಕ ಭಾಷಾ ಪತ್ರಿಕೆಗಳಲ್ಲಿಯೇ ಜಾಹಿರಾತನ್ನು ಕೊಡುತ್ತಿದೆ ಆದರೆ, ನಮ್ಮ ರಾಜ್ಯ ಸರಕಾರ ಈ ಸತ್ಯವನ್ನು ಕಂಡುಕೊಳ್ಳದೆ ಅದೇನೋ ಒಂದು ಕುರುಡು ತತ್ವವನ್ನು ನೆಮ್ಮಿಕೊಂಡಿರುವುದು ವಿಚಿತ್ರವೆನಿಸುತ್ತದೆ.

ಕನ್ನಡದಲ್ಲಿ ಪತ್ರಿಕಾ ವ್ಯವಸಾಯವೇ ತೊಡಕಿನದಾಗಿದೆಯೆಂಬುದು ಜನಜನಿತ ಆದರೂ ಎದುರು ಬಂದ ವಿಘ್ನ ವಿಡಂಬರಗಳನ್ನು ಎದುರಿಸಿ, ಆಯವ್ಯಯಗಳ ಮುಖಗಳನ್ನು ಒಂದಾಗಿಸುವುದಕ್ಕಾಗಿ ಹೋರಾಡುತ್ತ, ಜನತೆಯಲ್ಲಿ ವಿಚಾರ ಕ್ರಾಂತಿಯನ್ನೆಬ್ಬಿಸುತ್ತ ಇವು ಮುಂದುವರಿಯುತ್ತಿವೆ. ಜನತೆಗೆ ತಿಳಿಯುವ ಭಾಷೆಯಲ್ಲಿ ವಿಚಾರ ವಿಮರ್ಶೆಯನ್ನು ಮಾಡಿ ಸತ್ಯವನ್ನು ಹೊರಗೆಡಹಲು ಇವು ಪ್ರಯತ್ನಿಸುತ್ತವೆ ಉಚ್ಚ ಆದರ್ಶವಿರುವ ಚಿಕ್ಕ ಪತ್ರಿಕೆಗಳು ಕನ್ನಡದಲ್ಲಿ ಹೇರಳವಿವೆ. ಇವುಗಳನ್ನು ಎತ್ತಿ ಹಿಡಿದು ಇವುಗಳ ಮೂಲಕವೂ ಜಾಹೀರಾತುಗಳನ್ನು ಕೊಡುವುದರಿಂದ ಸರಕಾರದ ನೀತಿಯು ಸ್ಪಷ್ಟವೆನಿಸದು. ದೊಡ್ಡ ಪತ್ರಿಕೆಗಳ ಮಾಲಕರಾದರೂ ಶ್ರೀಮಂತರು ಇರುತ್ತಾರೆ; ವ್ಯಾಪಾರಿ ಸಂಸ್ಥೆಗಳು ಅವನ್ನೇ ಹೆಚ್ಚಾಗಿ ಆಧರಿಸಿರುತ್ತಾರೆ. ಆದರೆ, ಸರಕಾರದ ಜಾಹೀರಾತಿನ ಧೋರಣೆಯು ಕೇವಲ ವ್ಯಾಪಾರ ದೃಷ್ಟಿಯಿಂದ ಪ್ರೇರಿತವಾಗಿರುವುದಿಲ್ಲ; ಪ್ರಚಾರ—ಪ್ರಸಾರ ದೃಷ್ಟಿಯೂ ಇರುತ್ತದೆ. ಉದಾಹರಣೆಗೆ ಪಂಚವಾರ್ಷಿಕ ಪ್ರಗತಿ ಸೂಚಕವಾದ ಜಾಹೀರಾತನ್ನು ಸ್ಥಳೀಯ ಭಾಷಾಪತ್ರಿಕೆಗಳಲ್ಲಿ ಕೊಡುವುದರಿಂದಲೇ ಹೆಚ್ಚು ಜನರ ಗಮನಕ್ಕೆ ಬ

(೧೩ ಪುಟ ನೋಡಿರಿ)



ಆಕಾಶ ಬಾಣಗಳನ್ನು ಹೊಡುವ ಪ್ರಪಂಚದಲ್ಲಿಯೇ ಅತಿ ದೊಡ್ಡದಾದ ನೌಕೆ. ಇದನ್ನು ಅಮೆರಿಕೆಯು ನಿರ್ಮಿಸುತ್ತಿದೆ. ಈ ವರ್ಷಾಂತ್ಯದಲ್ಲಿದು ಕಾರ್ಯಪ್ರವೃತ್ತವಾಗುವ ನಿರೀಕ್ಷೆಯಿದೆ.

ESTD 1921

NAVAYUGA
KANNADA WEEKLY, UDIPI.

Founder
Late Sri A. B. Shetty
Former Minister for Public Health, Govt of Madras & Govt. of Mysore

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ದಿ| ಎ ಬಿ ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ **ರಾಷ್ಟ್ರೀಯ ವಾರಪತ್ರಿಕೆ**

ಸ್ಥಾಪನೆ. ೧೯೨೧.

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್
ಬಿ ವಾಮನರಾಯ ಶೆಟ್ಟಿ, ಬಿ. ಎ, ಎಲ್. ಟಿ

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

●

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50
ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮಾ ಮಾಡುವ ಸೌಕರ್ಯವಿರುವುದು

ಧಾರಾವಾಹಿ ಕಾದಂಬರಿ

ಯಮುನ ನೆರಳು

ಮೂಲ ಲೇಖಕರು: ಶ್ರೀ ಎಂ. ಎಲ್. ಪಾಂಡೇಯ.
ಅನುವಾದಕರು: ಶ್ರೀ ಎಸ್. ಎಂ ಶೆಟ್ಟಿ, ಶಿವಮುಂಜೆ ಪರಾರಿ.
(ಕಳೆದ ಸಂಚಿಕೆಯಿಂದ)

೧೧

ಮಹೇಂದ್ರಗಡದ ಬಂಗಲೆಯ ಒಂದು ಕೋಣೆಯಲ್ಲಿ ಜಯಂತರು ಕೆಲಸ ಮಾಡುತ್ತಿದ್ದರು. ಒಮ್ಮಿಂದೊಮ್ಮೆ ಪರದೆಯನ್ನು ಸರಿಸಿ ಪ್ರಾಣದಾಸರು ಒಳಪ್ರವೇಶಿಸಿದರು. ಜಯಂತರು ಅವರಿಗೆ ನಮಸ್ಕರಿಸಿ ಕುಳಿತುಕೊಳ್ಳಲು ತಮ್ಮ ಎದುರಿಗಿದ್ದ ಆಸನಕ್ಕೆ ಕೈಯಿಟ್ಟರು.

"ನಾನು ನಿನ್ನೆ ಆ ದುಷ್ಟ ದಲಿತಸಿಂಹನಲ್ಲಿ ಹೋಗಿದ್ದೆ. ತನ್ನ ಸಹಯೋಗಿಗಳೊಡನೆ, ಈ ನಗರದಿಂದ ಹೋಗು, ಇಲ್ಲದಿದ್ದರೆ ನಿನಗೆ ತುಂಬಾ ಅಪಾಯವಾಗುತ್ತದೆ! ಎಂದು ತಿಳಿಸಿದೆ. ಆದರೆ ಆ ಲಫಂಗನು ಕೋಲಿಗೆ ಸಿದ್ಧಮಾಡಿಟ್ಟುಕೊಂಡಿದ್ದನು. ನನ್ನ ಎಚ್ಚರಿಕೆ ಕೇಳಿದ ಕುಂಟ ಜಮುನಾ ಪ್ರಸಾದನು ಬಿಚ್ಚಾ ತೆಗೆದನು. ನಾನು ಮುಂಚೆಯೇ ಸಾವಧಾನದಲ್ಲಿದ್ದೆ. ಕಿಸೆಯಿಂದ ಪಿಸ್ತೂಲು ತೆಗೆಯುತ್ತಲೇ ಎಲ್ಲರೂ ತಣ್ಣಗಾದರು."

'ಇತ್ತೀಚೆಗೆ ಕುಂಟ ಸಾಹೇಬರು ಬಹಳ ವೀರಪುರುಷರಾಗುತ್ತಿದ್ದಾರೇನು?" ಎಂದು ನಗುತ್ತಾ ಕೇಳಿದರು ಜಯಂತರು.

"ಅನಂತರ ನಾನು ಅಲ್ಲಿಂದ ಬಂದೆ ಆದರೆ ಜಯಂತ್‌ಜೀ, ಇವತ್ತಿನ ಪತ್ರಿಕೆ ನೋಡಿ ನನಗೆ ತುಂಬಾ ಭಯ ಮತ್ತು ದುಃಖವುಂಟಾಗಿದೆ ಮಾಯಾವತಿಯು ಆತ್ಮಾರಾಮನೊಡನೆ ವಿವಾಹವಾಗುತ್ತಾಳಂತೆ"

"ಹೌದೆ ಯಾವಾಗ?"

"ನೆನಪಿಲ್ಲ, ಆದರೆ ಇದೇ ತಿಂಗಳಲ್ಲಿ."

"ಒಳ್ಳೇದು, ನೀನು ಮಾಯಾವತಿಯೊಡನೆ ಮಾತನಾಡಿದಿಯೇನು?"

"ಕೆಲವು ದಿನಗಳಿಂದ ನಾನವಳಿಗೆ ಸಿಗಲಿಲ್ಲ. ಅವಳಿಗೆ ಅಸೌಖ್ಯವೆಂದು ಹರ್ಷವತಿ ಹೇಳುತ್ತಿದ್ದಳು ಆದುದರಿಂದ ಅವಳು ಕೋಣೆಯನ್ನು ಬಿಟ್ಟು ಹೊರಬರುವುದೇ ಇಲ್ಲವಂತೆ."

"ಈ ಮಾತು ಗುಪ್ತವಾಗಿದೆ. ಈ ವಿಷಯವೇನೆಂದು ನನ್ನ ಈ ತಲೆಗೆ ಹೊಳೆಯಲಾರದು. ಯಾಕೆಂದರೆ ಎಲ್ಲಾ ವಿಷಯವು ಫಲಕದಾರಿಗೆ ಸಂಭವಿಸಿದ್ದು. ಆವನೊಡನೆ ಇದ್ದ ಆ ಪ್ರೇಮಪತ್ರವನ್ನು ನಾವು ಕಸಿದುಕೊಂಡಿದ್ದೇವೆ. ಈಗ ಪುನಃ ಆತ್ಮರಾಮನೊಡನೆ ಏನು ಸಂಬಂಧ!" ಎಂದರು ಜಯಂತರು.

ಅಷ್ಟರಲ್ಲಿ ದಾಮೋದರರು ಬಂದರು. ಜಯಂತರು ಮುಗುಳ್ನಗುತ್ತಾ, "ಏನು ದಾಮೋದರ್, ಸೌಖ್ಯ ತಾನೇ!" ಎಂದರು.

"ಏನು ಹೇಳಲಿ ಮಹಾರಾಯ, ಹೊಸ ಸಮಸ್ಯೆಯೊಂದು ನಿಕಟವಾಗಿ ನಿಂತಿದೆ. ವಿಷಯವಂತೂ ತಮಗೆ ತಿಳಿದೇ ಇರಬಹುದು. ಇದರರ್ಥವೇನು?"

"ನಿನ್ನ ತಲೆಗೇನು ಬಂತು? ಈ ಮಾತು ಸತ್ಯವಾಗಿರಬಹುದೇನು?"

"ನನ್ನ ಮೆದುಳು ಏನೂ ಕೆಲಸ ಮಾಡಲಾರದು. ಕಾರಣ—ಇದರ ಪೂರ್ವ ಘಟನೆಯ ಬಗ್ಗೆ ತಾವು ಸಂಪೂರ್ಣ ತಿಳಿದಿದ್ದೀರಿ. ಅದು ತಿರಸ್ಕೃತವೂ ಆಗಿದೆ, ಆದರೆ ಈಗ ಈ ನವರಹಸ್ಯವೇನು?"

"ಹುಡುಗಿ ತುಂಬಾ ಮೂರ್ಖಳು. ಸದಾ ತನ್ನ ಹುಡುಗಾಟಿಕೆಯಿಂದ ಒಂದಲ್ಲ ಒಂದು ರೀತಿಯಲ್ಲಿ ಹಾನಿ ಮಾಡಿಕೊಳ್ಳುತ್ತಾಳೆ. ನನ್ನ ಅಭಿಪ್ರಾಯದಂತೆ ಅವಳನ್ನು ಪುನಃ ಯಾರೋ ತನ್ನ ಮಾಯಾಜಾಲದಲ್ಲಿ ಕೆಡಹಿದ್ದಾರೆ." ಎಂದರು ಪ್ರಾಣದಾಸರು

'ಹಾಂ, ಸಂಭವವಿದೆ ದಾಮೋದರ್, ನೀವು ಈ ಬಗ್ಗೆ ತನಿಖೆ ನಡೆಸಿರಿ. ವಿಷಯ ಮಹತ್ವಪೂರ್ಣವಾಗಿದೆ" ಎಂದು ಜಯಂತರು ತಮ್ಮ ಕಾರ್ಯದಲ್ಲಿ ಮಗ್ನರಾದರು. ಪ್ರಾಣದಾಸ ದಾಮೋದರರಿಬ್ಬರೂ ಹೊರಬಂದು ಮೋಟಾರಿನಲ್ಲಿ ಹೊಂಟರು.

ದಾರಿಯಲ್ಲಿ ಪ್ರಾಣದಾಸರೊಂದಿಗೆ— "ನನಗೆ ಇಲ್ಲಿ ಅವಶ್ಯ ಕೆಲಸವಿರುವುದರಿಂದ ನಿಮ್ಮೊಡನೆ ಬರಲ ಸಾಧ್ಯವಿದೆ. ಆದುದರಿಂದ ನನ್ನ ನಿಲ್ಲಿಸಿರಿ" ಎಂದು ದಾಮೋದರರು ನಿಂತ ಕಾರಿನಿಂದ ಕೆಳಗಿಳಿದು ಒಂದು ಕಡೆಗೆ ನಡೆಯ ಹತ್ತಿದರು.

ಮಾರ್ಗದ ಸಾಗಿನಲ್ಲಿ ಪ್ರಾಣದಾಸರು ಮಾರ್ಕೆಟಿನ ಮಾರ್ಗವಾಗಿ ಹೋಗಲು ಡ್ರೈವರನಿಗೆ ತಿಳಿಸಿದರು. ಮಾರ್ಕೆಟಿನಲ್ಲಿ ಜನರ ಗುಂಪು ಕಿಕ್ಕಿರಿದಿತ್ತು. ಆಕಸ್ಮಾತ್ತಾಗಿ ಪ್ರಾಣದಾಸರು ಮೋಟಾರು ನಿಲ್ಲಿಸ ಹೇಳಿದರು. ಎದುರಿನಿಂದ ನಿಧಾನವಾಗಿ ಹೋಗುವ ಗಾಡಿಯನ್ನು ಕಂಡಾಗ ಮಾಯಾವತಿಯು ಫಲಿಕದಾರಿ ಹಾಗೂ ಆತ್ಮರಾಮನೊಡನೆ ಹೊಂದಿಕೊಂಡಿದ್ದನ್ನು ಕಂಡರು ಅವರ ಆಶ್ಚರ್ಯ ಮೇರೆ ತಪ್ಪಿತು. ಅವರೇ ಸ್ವತಃ ನೋಡಿದ್ದಲ್ಲವೇ! ಮೋಟಾರು ವೇಗವಾಗಿ ಬಂಗಲೆಗೆ ತಲುಪಿತ . ಅಲ್ಲಿ ಮಾಯಾವತಿಯ ಬಗ್ಗೆ ಕೇಳಲಾಗಿ ಇತ್ತೀಚೆಗೆ ಕೆಲವು ದಿನಗಳಿಂದ ಅಸ್ವಸ್ಥಳಾದ ಕಾರಣ ಕೋಣೆಯಿಂದ ಹೊರ ಬರಲಿಲ್ಲವೆಂದು ತಿಳಿಯಿತು. ಈ ಸೂಚನೆಯು ಅವರ ಸಂದೇಹಕ್ಕೆ ಮತ್ತಷ್ಟು ಕಳೆ ಕೊಟ್ಟಿತು.

ಮರುದಿನ ದಾಮೋದರರೂ—ಹರ್ಷವತಿಯೂ ಮಾರ್ಕೆಟಿಗಾಗಿ ಹೋಗಿದ್ದರು. ಅಲ್ಲಿ ಅವರ ಎದುರಾಗಿ ಒಂದು ಟಾಂಗಾ ಬಹಳ ವೇಗವಾಗಿ ಹಾದು ಹೋಯ್ತು. ಅದರೊಳಗಿನ ದೃಶ್ಯ ನೋಡಿ ದಾಮೋದರರ ಹಣೆಯ ಮೇಲೆ ಬೆವರಿನ ಸಣ್ಣ ಹನಿಗಳು ಸಾಲುಗಟ್ಟಿದ್ದುವು. ಹರ್ಷವತಿಯೂ ಆಶ್ಚರ್ಯದಿಂದ ಅವಾಕ್ಕಾದರು. ಯಾಕೆಂದರೆ ಆ ಟಾಂಗಾ ಗಾಡಿಯಲ್ಲಿ ಆತ್ಮರಾಮ ಮತ್ತು ಮಾಯಾವತಿಯರು ಕುಳಿತಿದ್ದರು. ಅಲ್ಲದ ಆ ಟಾಂಗಾವು ದಲಿತ ಸಿಂಹರ ಮನೆಯತ್ತ ಸಾಗುತ್ತಿತ್ತು

ದಾಮೋದರರ ಆಶ್ಚರ್ಯಕ್ಕೆ ಸೀಮೆಯೇ ಇರಲಿಲ್ಲ. ಅವರು ಅಲ್ಲಿ ಒಂದರೆಕ್ಷಣವೂ ನಿಲ್ಲದೆ, ನೇರವಾಗಿ ಬಂಗಲೆಗೆ ಹಿಂತಿರುಗಿ ಹರ್ಷವತಿಯಿಂದ ಮಾಯಾವತಿಯ ಕೋಣೆಯ ತನಿಖೆ ನಡೆಸಿದರು. ಆದರೆ, ಮಾಯಾವತಿಯು ಅಲ್ಲಿರಲಿಲ್ಲ. ಈ ವಿಷಯವು ಅವಳು, ಆತ್ಮರಾಮನೊಡನೆ,

((೧೧ನೇ ಪುಟ ನೋಡಿರಿ)

ಸ್ಥಾಪನೆ: 1924

ದಿ ಕರ್ಣಾಟಕ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ರಿಜಿಸ್ಟರ್ಡ್ & ಹೆಡ್ ಆಫೀಸು: **ಡೊಂಗರಕೇರಿ, ಮಂಗಳೂರು-3.**

ಈ ಕೆಳಗಿನ ಏರಿಸಿದ ಬಡ್ಡಿದರಗಳಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು.

ಒಂದರಿಂದ ಎರಡು ತಿಂಗಳುಗಳ ವರೆಗೆ	....	ಸಾ|| ಸೇಕಡಾ	3-75	ನ.ಪೈಸೆ
ಮೂರರಿಂದ ಐದು ತಿಂಗಳುಗಳ ವರೆಗೆ	...	,,	4-25	,,
ಆರು ತಿಂಗಳುಗಳಿಂದ 12 ತಿಂಗಳುಗಳ ವರೆಗೆ....		,,	4-50	,,
12 ತಿಂಗಳು ಮಿಕ್ಕಿ 24 ತಿಂಗಳುಗಳ ವರೆಗೆ		,,	4-75	,,
24 ತಿಂಗಳು ಮಿಕ್ಕಿ 48 ತಿಂಗಳುಗಳ ವರೆಗೆ		,,	5 00	,,
48 ತಿಂಗಳುಗಳಿಗೆ ಮಿಕ್ಕಿ	....	,,	5-25	,,

ಸೇವಿಂಗ್ಸ್ ಬ್ಯಾಂಕ್ ಬಡ್ಡಿ ದರವನ್ನು
ಸಾ. ಸೇಕಡ 2½% ರಿಂದ 3½%ಗೆ ಏರಿಸಲಾಗಿದೆ.

THE KARNATAKA BANK LIMITED.

ವಿಜ್ಞಾನ

ಹಲ್ಲಿನಿಂದ ಗಲ್ಲಿಗೆ

ಕೊಲೆಯ ಸುಳಿವು ಹತ್ತದಂತೆ ಮಾಡಿದ ಕೊಲೆಗಾರನ ಸೂಕ್ಷ್ಮಾತಿಸೂಕ್ಷ್ಮ ರಹಸ್ಯವನ್ನು ವಿಜ್ಞಾನವು ಭೇದಿಸಿಬಿಟ್ಟಿತು. ಮೃತಶರೀರದ ಹಲ್ಲಿನಿಂದಾಗಿ ಕೊಲೆಗಟುಕನಿಗೆ ಗಲ್ಲಿನ ಶಿಕ್ಷೆ ದೊರಕಿತೇ ಬಿಟ್ಟಿತು.

'ರಂಜನ್', ಬೆಂಗಳೂರು.

ಒಂದಾನೊಂದು ಕಾಲದ ಪೋಲಿಸ್ ಪಡೆಗಳಲ್ಲಿ ಪತ್ತೇದಾರರಿಗೆ ವಿಶಿಷ್ಟ ಸ್ಥಾನ ವಿತ್ತು. ಆದರೆ ಈಗ ಪತ್ತೇದಾರರಿಗಿಂತ ಹೆಚ್ಚಾಗಿ ವಿಜ್ಞಾನಿಗಳು ಕೆಲಸ ಮಾಡುತ್ತಿದ್ದಾರೆ.

ಹಿಂದಿನ ಕಾಲದ ಕೊಲೆಗಾರ ಶಿಕ್ಷೆಯಿಂದ ಯಶಸ್ವಿಯಾಗಿ ತಪ್ಪಿಸಿಕೊಳ್ಳಲು ತನ್ನ ಬೆರಳ ಗುರ್ತುಗಳು, ಹಾಗು ಕೊಲೆಯಾದವನಿಂದ ತನಗೆ ಸಂಪರ್ಕ ಕಲ್ಪಿಸಬಹುದಾದ ಪುರಾವೆಗಳನ್ನು, ಕಣ್ಣಿಗೆ ಕಾಣಸಿಗುವಂತಹ ಪದಾರ್ಥಗಳ ಸುಳುಹನ್ನೂ ಕೊಡದಿದ್ದರೆ ಸಾಕಿತ್ತು. ಆದರೆ ಈಗ ಒಂದು ಚೂರು ಧೂಳು, ಒಂದು ಮಿಲಿಮೀಟರಿನಷ್ಟು ಬಟ್ಟೆ, ಒಂದು ಚೂರು ಬಹು ತೆಳುವಾದ ಕೂದಲು, ಅಲ್ಲದೇ ಬರಿಯ ಕಣ್ಣಿಗೆ ಕಾಣಲಾರದಾದ ಎಷ್ಟೋ ಪದಾರ್ಥಗಳಿಂದ ಕೊಲೆಗಾರನನ್ನು ನ್ಯಾಯಾಲಯಕ್ಕೆ ಎಳೆದು ತರಬಹುದಾಗಿದೆ.

ಸೂಕ್ಷ್ಮದರ್ಶಕ ಮತ್ತಿತರ ಲೆಕ್ಕವಿಲ್ಲದಷ್ಟು ಆಧುನಿಕ ಉಪಕರಣಗಳು ಏನನ್ನೂ ಬಿಡುವಂತಿಲ್ಲ. ಹಿಂದಿನ ನ್ಯಾಯಾಸ್ಥಾನದ ವಿಜ್ಞಾನಿಗಳು ಲೆಕ್ಕವಿಲ್ಲದಷ್ಟು ಆಶ್ಚರ್ಯಕಾರಕ ವಿಜಯಗಳನ್ನು ಸಾಧಿಸಿದ್ದರೂ ಎಷ್ಟೋ ಹತ್ಯಾಕಾರಿಗಳು ಅವರ ದವಡೆಗಳಿಂದ ತಪ್ಪಿಸಿಕೊಳ್ಳುತ್ತಿದ್ದರು. ವಿಜ್ಞಾನಿಗಳ ಸೂಕ್ಷ್ಮತೆ ಪ್ರತಿದಿನವೂ ವೃದ್ಧಿಗೊಳ್ಳುತ್ತಿದೆ. ಅಂತೆಯೇ ಮುಂದಿನ ಹತ್ಯಾಕಾರಿಗಳೂ ಅತ್ಯಂತ ಹೆಚ್ಚಿನ ಬುದ್ಧಿವಂತರೂ ಇಲ್ಲವೇ ಪ್ರಬಲ ಅದೃಷ್ಟವಂತರೂ ಆಗಿರದಿದ್ದರೆ ಗಲ್ಲಿನಿಂದ ತಪ್ಪಿಸಿಕೊಳ್ಳುವುದು ಬಹು ದುಸ್ತರ.

ಲಂಡನ್ನಿನ ಹ್ಯಾರಿ ಡಬ್‌ಕಿನ್‌ನನ್ನು ಗಲ್ಲಿಗೆ ಕಳುಹಿಸಿದ್ದು ವಿಜ್ಞಾನವೇ. ಆತ ಅದೇ ೩೦ ವರ್ಷಗಳ ಮುಂಚೆ ಈ ಕೊಲೆಗೈದಿದ್ದರ ಸಿಕ್ಕಿಹಾಕಿಕೊಳ್ಳುವುದು ಸಂಶಯವೇ ಆಗಿತ್ತು. ಆಗಿನ ವಿಜ್ಞಾನ ಬಾಲ್ಯಾವಸ್ಥೆಯಲ್ಲಿದ್ದು ಪತ್ತೇ ತಂದೂರು ಕಣ್ಣಿಗೆ ಕಾಣುವ ಪುರಾವೆಗಳಿಂದಲೇ ಸ್ಥಿರಪಡಿಸಲ್ಪಡಬೇಕಿತ್ತು.

ಈ ಕತೆ ಪ್ರಾರಂಭವಾದುದು ೧೯೪೧ರ ಏಪ್ರಿಲ್ ಮಾಹೆಯಲ್ಲಿ. ಲಂಡನ್ ಆಗ ಎರಡನೇ ಮಹಾಯುದ್ಧದ ದವಡೆಯಲ್ಲಿ ಕುಳಿತಿದ್ದು ಭಯದಿಂದ ತಳಮಳಿಸುತ್ತಿತ್ತು. ಸುಮಾರು ಎಲ್ಲ ದಿವಸಗಳ ರಾತ್ರಿಗಳಲ್ಲೂ ಜರ್ಮನರ ವಿಮಾನ ಧಾಳಿ ನಡೆಯುತ್ತಿದ್ದು ಲೆಕ್ಕವಿಲ್ಲದಷ್ಟು ಮರಣಹೋಮ ನಡೆದಿತ್ತು. ಅಂತಹ ಸಮಯದಲ್ಲಿ ಒಬ್ಬ ಮಹಾನುಭಾವ ಕೊಲೆಗೈಯುವ ಯೋಚನೆ ಮಾಡಿದ್ದ.

ಆ ಏಪ್ರಿಲ್‌ನ ದಿನದಂದು ರಾಫೇಲ್ ಡಬ್‌ಕಿನ್ ತಾನು ಅತ್ಯಂತ ಸುಂದರವಾಗಿ ಕಾಣಲು ಅಲಂಕರಿಸಿಕೊಳ್ಳುತ್ತಿದ್ದಳು. ಆಕೆ ೨೦ ವರ್ಷಗಳ ಹಿಂದೆ ಬೇರೆಯಾಗಿ ಹೋಗಿದ್ದ ತನ್ನ ಗಂಡನನ್ನು ಅಂದು ಕೂಡುವವಳಿದ್ದಳು.

ರಾಫೇಲ್ ಗಂಡನಿಗಾಗಿ ಒಂದು ಮಗುವನ್ನು ಹೆತ್ತು ಕೊಟ್ಟಿದ್ದಳು. ಆದರೆ ಆ ಮಗು ಅವರು ಬೇರಾಗುವುದನ್ನು ತಪ್ಪಿಸುವ ಕಾರ್ಯದಲ್ಲಿ ಯಶಸ್ವಿಯಾಗಿರಲಿಲ್ಲ. ಅವರ ವಿವಾಹ ಎಂದೂ ಸುಖಕರವಾಗಿದ್ದಿರಲಿಲ್ಲ. ಕೊನೆಗೆ ಆತ ಅವಳಿಂದ ಬೇರೆಯಾಗಿದ್ದ.

ಪುನಃ ಹೆಂಡತಿಯತ್ತ ತಿರುಗಿ ನೋಡದಿದ್ದ ಅವನು ರಾಫೇಲ್ ಜೀವನಾಂಶಕ್ಕಾಗಿ ದಾವಹೂಡಿದಾಗ ಸಿಕ್ಕಿ ಹಾಕಿಕೊಂಡಿದ್ದ ಜೀವನಾಂಶದ ಬಾಕಿ ಯಾವಾಗಲೂ ಬಹಳವಾಗಿ ನಿಲ್ಲುತ್ತಿತ್ತು. ಇವೆಲ್ಲ ಇದ್ದರೂ ಅಂದು ರಾಫೇಲ್ ತನ್ನ ಪತಿಯಲ್ಲಿ ಬಹಳ ಪ್ರೀತಿಯಿಂದಿದ್ದಳು.

ಲಂಡನ್ನಿನ ಉತ್ತರ—ಪೂರ್ವದಲ್ಲಿ ವಾಸಿಸುತ್ತಿದ್ದ ಇವಳ ಮನೆಯವರು ಇವರಿಬ್ಬರ ಪುನರ್ಮಿಲನ ಅಸಾಧ್ಯವೆಂದೇ ಬಗೆದಿದ್ದರು. ಆದರೆ ಈ ವಿಷಯವನ್ನು ಅವಳಿಗೆ ತಿಳಿಸುವ ಧೈರ್ಯಸಕ್ಕೆ ಹೋಗಿರಲಿಲ್ಲ. ಬಹಳ ಸರಳ ವಿಧೇಯತೆಗಳಿಂದ ಕೂಡಿದ್ದ ರಾಫೇಲ್‌ಳು ಹ್ಯಾರಿಯಲ್ಲಿ ಕಳೆದು ಹೋದ ಸಂತೋಷವನ್ನು ಮತ್ತೆ ಪಡೆಯ ಬಲ್ಲಳೆಂದೇ ತಿಳಿದಿದ್ದಳು. ಅವಳು ಅವನನ್ನು ಕುರಿತು ಹೊರಟಾಗ ನಗೆ ಮೊಗದಿಂದಲೇ ಇದ್ದಳು. ಅವಳ ಜೀವನ ಯಾವಾಗಲೂ ಬಹಳ ಹೋರಾಟದಿಂದಲೇ ಸಾಗುತ್ತಿತ್ತಲ್ಲದೇ ಸ್ವಲ್ಪ ದಿವಸಗಳಿಂದ ಅವಳು ರೋಗದಿಂದ ನರಳಿದ್ದಳು.

ಅಂದು ಪ್ರೀತಿ, ಸಂತಸದಿಂದ ಹೊರಟ ಆ ಚಿಕ್ಕ ಆ ಹೆಂಗಸು ಮತ್ತೆ ಹಿಂತಿರುಗಲಿಲ್ಲ.

ಅವಳ ಬರುವಿಕೆಯನ್ನು ಬಹಳ ಆಸ್ಥೆಯಿಂದ ನೋಡುತ್ತಿದ್ದ ಆಕೆಯ ಸೋದರಿ ರಾತ್ರಿ ಬಹಳ ಹೊತ್ತು ಕಾದಳು. ಜರ್ಮನರ ಧಾಳಿಯಾಯಿತೆಂದು ತಿಳಿಸುವ ಒಂದೇ ಒಂದು ಎಚ್ಚರಿಕೆಯ ಶಬ್ದವನ್ನಾದರೂ ಆಕೆ ಕೇಳಲಿಲ್ಲ. ಆದ್ದರಿಂದ ರಾತ್ರಿಯೆಲ್ಲಾ ಅವಳು ಎಲ್ಲಿ ತಂಗಿರ ಬಹುದು? ಅವಳಿಗೆ ಯೋಚನೆಯಾಗಿತ್ತು.

ಮಾರನೆಯ ದಿನ ಬೆಳಗ್ಗೆ ಆಕೆ ತನ್ನ ತಂಗಿ ಕಾಣೆಯಾದುದನ್ನು ಪೋಲಿಸರಿಗೆ ತಿಳಿಸಿದಳು. ಅವರೂ ವಿಷಯ ತಿಳಿದಂತೆ ಅವಳಿಗೆ ತಿಳಿಸುವುದಾಗಿ ಆಶ್ವಾಸನೆಯಿತ್ತರು.

ಒಂದು ದಿನ ಮಧ್ಯಾಹ್ನ ರಾಫೇಲಳ ಕೈಚೀಲ ಹಾಗೂ ನಿಯಂತ್ರಿತ ಧಾನ್ಯ ಪುಸ್ತಕ ಇವುಗಳು ಸರ್ರೇಯ ಗಿಲ್ಡ್‌ಫೋರ್ಡ್ ಅಂಚೆ ಕಛೇರಿಯಲ್ಲಿ ಸಿಕ್ಕಿದುವು. ಆದರೆ ಗಿಲ್ಡ್‌ಫೋರ್ಡಿನಲ್ಲಿ ಅವಳೇನು ಮಾಡುತ್ತಿದ್ದಳು? ಅಲ್ಲಿ ಅವಳಿಗೆ ಬಲ್ಲವರಾರೂ ಇರಲಿಲ್ಲ. ಸ್ವಲ್ಪ ಅನುಮಾನಗೊಂಡ ಪೋಲಿಸರು ಹ್ಯಾರಿಗೆ ಕರೆ ಕಳುಹಿದರು. ಹೆಂಡತಿಯ ಅದೃಶ್ಯದಿಂದ ತನಗೇನೂ ಆಗದವನಂತೆ ಆತ ಶಾಂತನಾಗಿದ್ದ.

ಆತ ಅವಳೊಡನೆ ಅಂದು ಸಂಜೆ ಇದ್ದನೆಂಬುದನ್ನು ವಿರೋಧಿಸಲಿಲ್ಲ. ಆದರೆ ತನ್ನ ಒಂದು ಕತೆಗೆ ಮಾತ್ರ ಪ್ರಬಲವಾಗಿ ಹತ್ತಿಕೊಂಡಿದ್ದ.

"ನಾವು ಸ್ವಲ್ಪ ಹೊತ್ತು ಚಕ್ಕಂದವಾಡಿದೆವು. ಅನಂತರ ಅವಳು ನನ್ನನ್ನು ಜರೆಯ ತೊಡಗಿದಳು.... ಜಗಳಕ್ಕೆ ಮೊದಲಾಯಿತು. ಆಕೆ ಜಗಳವಾಡಿಕೊಂಡು ಬಿರಬಿರನೆ ಹೊರಟ. ಹೋದಳು ಅಷ್ಟರ ವೇಳೆಗೆ ಕತ್ತಲಾಗಿ ಹೋಗಿತ್ತು, ನಾನು ಕೆನ್ಸಿಂಗ್‌ಟನ್ ರಸ್ತೆಗೆ ಕೆಲಸದ ಮೇಲೆ ಹೊರಟು ಹೋದೆ"

ಇದರ ಮೇಲೆ ಕೆಲಸ ಮುಂದುವರಿಸಲು ನ್ಯಾಯಾಲಯಕ್ಕೆ ಸಿಕ್ಕ ಪುರಾವೆಗಳು ಬಹಳ ಅತ್ಯಲ್ಪ. ಹ್ಯಾರಿಯ ಮೇಲೆ ಅಪರಾಧವನ್ನು ಕೇಂದ್ರೀಕರಿಸಲು ಸಾಧ್ಯವಿದ್ದಿರಲಿಲ್ಲ. ಅವರಿಗೆ ರಾಫೇಲಳು ಅದೃಶ್ಯಳಾಗಿರುವ ವಿಷಯವಲ್ಲದೇ ಮತ್ತೇನೂ ತಿಳಿದಿರಲಿಲ್ಲ.

ಆಕೆಗೆ ಏನೋ ಅನಾಹುತವಾಗಿದೆಯೆಂದೂ, ರಾಫೇಲಳ ಸೋದರಿಗೆ ತೋರಿತು, ಅಂತೆಯೇ ಆಕೆ ದೊರೆತಿದ್ದ ಕೈಚೀಲವನ್ನೂ ಪರಿಣತರಲ್ಲಿಗೆ ಕೊಂಡೊಯ್ದಳು.

ಮಾನಸಿಕ ಶಾಸ್ತ್ರಜ್ಞ ಅದನ್ನು ನೋಡಿ ಅದರ ಯಜಮಾನಿ ಯಾವುದೋ ಭಯಂಕರ ಕೊನೆಯನ್ನನುಭವಿಸಿರಬೇಕೆಂದೂ ಆಕೆ ಬಹುಶಃ ಕೊರಳು ಹಿಚುಕಲ್ಪಟ್ಟು ಜೀವನದ ಕೊನೆಯುಸಿರು ಬಿಟ್ಟಿರಬೇಕೆಂದೂ ತಿಳಿಸಿದನು.

ಪೋಲಿಸರಿಗೆ ಈ ವಿಷಯ ತಿಳಿಸಲ್ಪಟ್ಟಿತು. ಆದರೆ ಅದು ಪುರಾವೆಯಾಗಿರಲಿಲ್ಲ. ಈ ವಿಚಾರಗಳು ಕೆಲ ತಿಂಗಳುಗಳವರೆಗೆ ಹಾಗೇ ಇದ್ದವು.

ಕೆನ್‌ಸಿಂಗ್ ಟೌನ್ ರಸ್ತೆಯಲ್ಲಿದ್ದ, ಬಾಂಬಿನಿಂದ ಹಾಳಾದ ಒಂದು ಹಳೇ ಇಗರ್ಜಿಯನ್ನೊಳಗೊಂಡ ನಿವೇಶನವನ್ನು ಜುಲೈ ೧೯ರಲ್ಲಿ ನೆಲಸಮ ಮಾಡಲು ಪಡೆಗಳು ಕೆಲಸಕ್ಕೆ ಪ್ರಾರಂಭಿಸಿದವು. ಒಬ್ಬ ಕೆಲಸಗಾರ ಇಟ್ಟಿಗೆಗಳ ಒಂದು ಸಾಲನ್ನು ಎತ್ತಿ ಹಾಕುತ್ತಿದ್ದಂತೇ ಒಂದು ಕಲ್ಲು ಚಪ್ಪಡಿಯನ್ನು ಕಂಡ. ಅದನ್ನೂ ಎತ್ತಿದ.... ಅದರ ಕೆಳಗೆ ಒಂದು ಅಸ್ಥಿಪಂಜರ ಕಂಡಿತು. ಆತ ತಾನೊಂದು ಹೆಸರಿಲ್ಲದ ಗೋರಿಯನ್ನು ಕಂಡು ಹಿಡಿದಿರಬೇಕೆಂದು ತಿಳಿದುಕೊಂಡ. ಆದರೆ ಗುಂಪಿನ ಮೇಲ್ವಿಚಾರಕ, ಮೂಳೆಗಳ ಕೆಲವು ಭಾಗಗಳಲ್ಲಿ ಇನ್ನೂ ಸಣ್ಣ ಸಣ್ಣ ಚೂರು ಮಾಂಸ ಖಂಡಗಳು ಉಳಿದಿರುವುದನ್ನು

(೧೦ನೇ ಪುಟ ನೋಡಿರಿ)



ಅಂತರಿಕ್ಷ ಯಾತ್ರೆಯಲ್ಲಿ ಸಫಲರಾಗಿ ಮರಳಿಬಂದ ಶ್ರೀ ಶೆಪ್ಪರ್ಡರನ್ನು ಅಮೆರಿಕೆಯ ಉಪರಾಷ್ಟ್ರಪತಿ ಶ್ರೀ ಜಾನ್ಸನರು ಸ್ವಾಗತಿಸುತ್ತಿರುವುದು. ಅವರೊಂದಿಗೆ ಅಧ್ಯಕ್ಷ ಕೆನಡಿ ಮತ್ತು ಶ್ರೀಮತಿ ಕೆನಡಿಯವರನ್ನು ಕಾಣಬಹುದು.

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ: ಬಡ್ಡಿ ಸೇಕಡಾ 5ರಂತೆ: ರೂ. 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100—00 ಒದಗಿಸುವುದು.

ಕರೆ, ಚಿಕ್ಕ ಮ್ಯಾದೆ, ಸಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಸೇಕಡಾ 5¼ರ ವರೆಗೆ.

ತಾ. 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK LTD.

Estd: 1920

ರಹಸ್ಯಭೇದ

ವಧು ವೀಕ್ಷಣೆ

ತಮ್ಮ ಮನೆಯ ಕಲಿಯನ್ನು ಹೇಗಾದರೂ ಹೊರಹಾಕಿ ಲಕ್ಷ್ಮಿಯನ್ನು ಕರೆದು ತರಬೇಕೆಂದು ಎಲ್ಲರ ಹಂಬಲ—ಆದರೆ, ಎಲ್ಲರ ಮನೆಯ ಹುಡುಗಿಯರೂ ಕಲಿಗಳೇ ಎಂಬುದು ಅಪ್ರಿಯವೆನಿಸಿದರೂ ಸತ್ಯವಲ್ಲವೆ?

ಶ್ರೀ "ನವಗಿರಿನಂದ"

"ಮಹಾರಾಜಶ್ರೀಯವರಿಗೆ ಅನೇಕ ನಮಸ್ಕಾರಗಳು. ನಿಮ್ಮ ತಾ ೪ರ ಪತ್ರ ತಲಪಿದೆ. ಅತ್ಯಾನಂದವಾಗಿದೆ. ನನಗೆಮಾತ್ರವಲ್ಲ ಮನೆಯಲ್ಲಿ ಎಲ್ಲರಿಗೂ ಸಂತೋಷವಾಗಿದೆ. ನೀವುಗಳು ಈ ತಿಂಗಳು ತಾರೀಕು ೧೫ಕ್ಕೆ ಹುಡುಗಿಯನ್ನು ನೋಡಲು ಇಲ್ಲಿಗೆ ಬರುತ್ತೇವೆಂದು ದಿನ ನಿರ್ಣಯ ಮಾಡಿರುವಿರಿ. ಇದು ನಿಮ್ಮನ್ನು ತಕ್ಕ ಸಿದ್ಧತೆಗಳಿಂದ ಇದಿರುಗೊಳ್ಳಲು ನಮಗೆ ಸಾಕಷ್ಟು ಅವಕಾಶವನ್ನು ಕೊಟ್ಟಂತಾಯಿತು. ಅಂತೆಯೇ ಇದು ಶುಭ ಕಲ್ಯಾಣದಲ್ಲಿ ಪರಿಣಾಮ ಹೊಂದೀತೆಂಬ ದೃಢ ವಿಶ್ವಾಸ ನನಗಿದೆ.

ಹಾಗಿರುವಾಗ ಈ ದೀರ್ಘ ಪತ್ರವೇಕೆಂದು ನೀವು ಆಶ್ಚರ್ಯ ಪಡಬಹುದು. ಮತ್ತೇನಲ್ಲ, ನನಗೆ ನಿಮ್ಮ ಪತ್ರ ನೋಡಿ ಊಹನೆಗಳೆದ್ದುವು. ಕೆಲವೆರಡು ಸಂದೇಹಗಳು ಹುಟ್ಟಿಕೊಂಡವು. ಇಂತಹ ಊಹಾ ಸಂದೇಹಗಳು ಹುಟ್ಟಿಸ ವಂತೆ ನಿಮ್ಮಗನು ನಕ್ಕೆ ಕೆಲವು ದಿನಗಳ ಅವಕಾಶವಿಟ್ಟು ದಿನ ನಿರ್ಣಯಿಸಿ ಬರೆದುದಕ್ಕೆ ನಾನು ನಿಮಗೆ ಋಣಿಯಾಗಿರಬೇಕಾಗಿದೆ.

ಬಹುಶಃ ನನ್ನ ಈ ಪತ್ರವನ್ನು ನೀವು ಇದಿರು ನೋಡಿರಲಿಕ್ಕಿಲ್ಲ. ಆದರೆ ಕನ್ಯಾಪಿತನಾದ ನಾನು ಕೆಲವು ಸಂದೇಹಗಳನ್ನು ನಿಮ್ಮ ಮುಂದಿಡಲೇ ಬೇಕಾಗಿದೆ. ನೀವು ಹುಡುಗಿಯನ್ನು ನೋಡುವುದು ಇದೇ ಮೊದಲನೆಯದಾಗಿರಲಿಕ್ಕಿಲ್ಲ; ಇದಕ್ಕಿಂತ ಮೊದಲು, ಅನೇಕವಿಲ್ಲದಿದ್ದರೂ ಒಂದೆರಡು ಕಡೆಗಳಲ್ಲಿ ಯಾದರೂ, ನೀವು ಹುಡುಗಿಯನ್ನು ನೋಡಿ ಬಂದಿರಬಹುದು. "ಈ ಹುಡುಗಿ ನಮಗೆ ಬೇಡ" ಎಂದು ನಿಮ್ಮ ಹುಡುಗನೇ ಹೇಳಿರಬಹುದು. ಇವಳು ಮೊದ್ದು, ಇವಳು ಮೂಕಿ, ಇವಳು ಅತಿವಾಚಾಳಿ, ಹೀಗೆ ಏನೋ ಒಂದೊಂದು ಕೊರತೆ ನಿಮಗೆ ತೋರಿರಬಹುದು. ಬಹುಶಃ ನೀವು ಮುಂದಾಗಿ ತಿಳಿಸದೆ ಅಲ್ಲಿಗೆ ಹೋಗಿರಬಹುದು. ಈ ವಿಧವಾಗಿ ಅನೇಕ ಕಡೆಗಳಲ್ಲಿ ತಿರುಗಿ ತಿರುಗಿ ಸಾಕಾಗಿ ಹೋಗಿ ಬಿಟ್ಟರೆ "ಹುಡುಗನ ಮನಸ್ಸಿಗೆ ಮಾತ್ರ ಹಿಡಿಸಿದರೂ ಸಾಕಪ್ಪ" ಎಂದು ಅನಿಸಿಬಿಡುವುದೂ ಉಂಟು. ಹಾಗಾಗಲು ಹುಡುಗಿ ಸುಂದರಿಯಾಗಿ ಕಾಣಿಸಬೇಕಾಗುತ್ತೆ. ಯಾರ ಸೌಂದರ್ಯ ದೃಷ್ಟಿ ಎಂತಹುದೋ ಯಾರಿಗೆ ಗೊತ್ತು? 'ತಾನು ಮೆಚ್ಚಿದವಳೇ ರಂಭೆ' ಎಂದು ಗಾದೆ. ಅದಕ್ಕಾಗಿ ಒಳ್ಳೇ ಸೀರೆಗೀರೆ ಉಟ್ಟುಕೊಂಡು, ಏನೋ ಮಿನುಮಿನುಗುವ ಫ್ಯಾಶನ್ನು ಮಾಡಿಕೊಂಡು ಅದಕ್ಕೆ ತಕ್ಕ ಭಾಷೆ, ರೀತಿ, ನೀತಿಗಳನ್ನು 'ರಿಹರ್ಸಲ್' ಮಾಡಿಕೊಂಡು ಸಿದ್ಧವಾಗಿರಲಿ ಎಂಬ ಅಭಿಪ್ರಾಯದಿಂದ ಕೆಲವು ದಿನ ಅವಕಾಶ ಕೊಟ್ಟು ಮುಂದಾಗಿ ನೀವು ಪತ್ರ ಬರೆದಿರಬಹುದು ಸಾಕು.

ನ್ಯಾಯ ತಾನೆ? ಏನೂ ತಿಳಿಸದೆ ದಿಡುಧಿಕ್ಕನೆ ಹುಡುಗಿಯನ್ನು ನೋಡಲಿಕ್ಕೆ ಹೋದಾಗ ಆ ಹುಡುಗಿ ಹೇಗಿದ್ದಾಳು? ತಲೆ ಒಣ ಹುಲ್ಲಿನಂತೆ ಹಾರಾಡುತಿದ್ದೀತು. ಸಿಂಬಳ ಬುರುಕಿಯಾಗಿದ್ದರೂ ಇದ್ದಾಳು. ತಂಗಿ ತಮ್ಮಂದಿರೊಂದಿಗೆ ಜಗಳವಾಡುತಿದ್ದಳು. ಕರ್ಕಶ ಸ್ವರದಲ್ಲಿ ಅರಚುತ್ತಲೋ, ಯಾವ ಸಿನಿಮಾ ಹಾಡನ್ನು ಕಿರಿಚುತ್ತಲೋ ಇರಬಹುದು. ನೀವು ಆ ಮನೆಯ ವಠಾರಕ್ಕೆ ಹೋಗುವ ಮುಂಚೆಯೇ ಅವಳ ಗಲಾಟೆ ನಿಮ್ಮ ಕಿವಿಯನ್ನು ಕೊರೆಯಬಹುದು. ಹೀಗೆ ಆ ಸಂಬಂಧ ನಿಮಗೆ ಬೇಡವೆನಿಸಬಹುದು. ಏಕೆಂದರೆ ಇಂತಹ ಹುಡುಗಿ ನಿಮ್ಮಲ್ಲಿಯೂ ಇರಬಹುದು. ನೀವು ಬಯಸುವುದು ನಿಮ್ಮ ಮನೆಗೆ ಸೊಸೆಯಾಗಿ ಬರುವ ಶ್ರೀ ಲಕ್ಷ್ಮಿಯನ್ನು—ಲಕ್ಷ್ಮೀ ಸ್ವರೂಪಿಣಿಯನ್ನು. ಈ ಸಂದರ್ಭದಲ್ಲಿ ನನಗೊಂದು ಗಾದೆ ನೆನಪಾಗುತ್ತದೆ: 'ಕಲಿಯನ್ನು ಕೊಟ್ಟು ಸಿರಿಯನ್ನು ತರಬೇಕೂ' ಅಂತ. ಅರ್ಥಾತ್ ಪ್ರತಿಯೊಬ್ಬರಿಗೂ ಅವರವರ ಮನೆಯಲ್ಲಿರುವ ಹುಡುಗಿಯರು ಕಲಿಗಳು—ಅಂದರೆ ದರಿದ್ರ ದೇವತೆಗಳು, ಪರರ ಮನೆಯ ಹುಡುಗಿಯರು ಸಿರಿಗಳು.

ಅಂತೆಯೇ ಹುಡುಗಿಯನ್ನು ನೋಡಲಿಕ್ಕೆ ಬರುವವರಿಗೆ ತಮ್ಮ ಮಗಳ ಕಲಿಯ ಹಾಗೆ ಕಾಣಬಾರದಲ್ಲಾ ಎಂದುಕೊಂಡು ಆ ಹೆಣ್ಣುಗಳಿಗೆ ಕೆಲವು ಅಭ್ಯಾಸಗಳನ್ನು ಮಾಡಿಸಬೇಕಾಗುತ್ತದೆ. ನೋಡಲಿಕ್ಕೆ ಬರುವವರನ್ನು ಕಣ್ಣುಬಿಟ್ಟು ನೋಡಬೇಡ. ಮುಖದಲ್ಲಿ ಸ್ವಲ್ಪ ನಾಚಿಗೆಯ ಲೇಪ ಬಳಿದುಕೊ. ಕೇಳಿದ ಪ್ರಶ್ನೆಗೆ ಬೆದರದೆ ಸಾವಧಾನವಾಗಿ ಉತ್ತರ ಕೊಡು. ಈ ಈ ಹಾಡುಗಳನ್ನು ಹೀಗೆ ಹೀಗೆ ಹಾಡು. ಇಂತಿಂಥ ಸ್ವರಸ್ಥಾಯಿಯಲ್ಲಿ ಮಾತಾಡು. ಇತ್ಯಾದಿ ಅನೇಕ ಬಗೆಯ ರಿಹರ್ಸಲ್ ಮಾಡಿಸಿಡುತ್ತಾರೆ. ಆ ದಿನ ಪ್ರತ್ಯೇಕವಾಗಿ ಅವಳಿಗೆ ವೇಷ ಹಾಕುತ್ತಾರೆ. ಮನೆಯಲ್ಲಿ ನಿತ್ಯ ಫ್ಯಾಶನ್ ಮಾಡಿಕೊಳ್ಳುವ ಹುಡುಗಿಯಾದರೂ ಆ ದಿನ ಸಾದಾ ವೇಷದಲ್ಲಿ ಕಾಣಿಸಿಕೊಳ್ಳಬೇಕೆಂದು ನಿಯಮಿಸುತ್ತಾರೆ. ಸಾದಾವೇಷವೂ ಒಂದು ವೇಷ ತಾನೆ?

ಹೀಗೆ ನಡೆಯುತ್ತದೆ ಹುಡುಗಿಯನ್ನು ನೋಡುವ ನಾಟಕ. ಹುಡುಗನಿಗೂ, ಹುಡುಗನ ಅಕ್ಕ ತಂಗಿಯರಿಗೂ, ತಾಯಿತಂದೆಯರಿಗೂ ಹಿಡಿಸಿ ಬಿಟ್ಟರೆ ಮುಂದಿನ ವಿಷಯ ಗಡಗಡ ಸಾಗುತ್ತೇ ಅನ್ನಿ. ಇಲ್ಲಾ ಮುರಿದು ಹೋಗುತ್ತೆ.

ಈ ವಿಷಯ ನನಗೂ ನಿಮಗೂ ಎಲ್ಲರಿಗೂ ತಿಳಿದುದೇ ಆದರೂ ಈ ಸಾಂಪ್ರದಾಯವನ್ನು ಬಿಟ್ಟು ನಡೆಯಲು ಸಾಧ್ಯವೆ? ನಾಟಕದಲ್ಲಿ ಕೂಡಾ ಇದು ವೇಷಧಾರಿಗಳು ಆಡುವಂಥಾದ್ದು, ಅವರ ನಿಜಸ್ವಭಾವ ಬೇರೆಯೇ ಇದೆ ಎಂದು ಗೊತ್ತಿದ್ದರೂ ನಾಟಕ ನೋಡುವುದರಲ್ಲಿ ಒಂದು ರಸ, ಒಂದು ಕುತೂಹಲ ಇದ್ದೇ ಇದೆ ತಾನೆ? ಅಂತೆಯೇ ನಾನು ಕೂಡಾ ನನ್ನ ಮಗಳನ್ನು ತಕ್ಕರಿಹರ್ಸಲ್‌ನಿಂದ ಒಂದು ಬಗೆಯಾಗಿ ಸಿದ್ಧಪಡಿಸಿಯೇ ನಿಮಗೆ ತೋರಿಸುತ್ತೇನೆ. ಅಂದ ಮೇಲೆ ಅವಳ ನಿಜವಾದ ನೀತಿ ರೀತಿ ನಡವಳಿಕೆಗಳು ಬೇರೆಯೇ ಇವೆಯೆಂದು ಒಪ್ಪಿಕೊಂಡ ಹಾಗಾಯಿತಲ್ಲ? ನಿಜ. ಅದನ್ನೂ ಮುಚ್ಚಿಟ್ಟುಕೊಂಡು ನಾಳೆ ನಿಮ್ಮ ದೂರಿಗೆ ಭಾಜನನಾಗಬಾರದೆಂಬುದಕ್ಕೆ ನಿಮಗೀ ಪತ್ರವನ್ನು ಮುಂದಾಗಿ ಬರೆಯುತಿದ್ದೇನೆ.

ನೀವುಗಳು ೧೫ನೇ ತಾರೀಕಿಗೆ ಬರುತ್ತೀರಿ, ಬನ್ನಿ. ನಾನು ಉಪಚರಿಸುತ್ತಾ ನಿಮ್ಮಗಳನ್ನು ಬರಮಾಡಿಕೊಳ್ಳುತ್ತೇನೆ. ನೀವು ಬಂದು ನಮ್ಮ ಚಾವಡಿಯ ಆಸನಗಳನ್ನು ಅಲಂಕರಿಸುತ್ತೀರಿ. ನಾನೂ ನಿಮ್ಮೊಂದಿಗೆ ಕುಳಿತು ಮಾತಾಡುತ್ತಾ "ಸುನೀತಾ, ಆ ತಟ್ಟೆಗಳನ್ನಿತ್ತ ತಾರಮ್ಮ" ಎಂದು ನನ್ನ ಮಗಳನ್ನು ಕರೆಯುತ್ತೇನೆ. ಅವಳು ತಲೆ ತಗ್ಗಿಸಿಕೊಂಡು ಹೆಜ್ಜೇ ಮೇಲೆ ಹೆಜ್ಜೆಯಿಡುತ್ತಾ ಬರುತ್ತಾಳೆ. ಸೀರೆಗೀರೆ ಜೋರಾಗಿಯೇ ಉಟ್ಟುಕೊಂಡು ಶೃಂಗಾರವಾಗಿಯೇ ಬರುತ್ತಾಳೆಂತಿಟ್ಟುಕೊಳ್ಳಿ. ತಟ್ಟೆಗಳನ್ನು ನಿಮ್ಮಿದಿರಿಟ್ಟು ನಾಚಿಗೆಯಿಂದ ಹಿಂದಿರುಗುತ್ತಾಳೆ. ಮತ್ತೆ ಅವಳ ತಾಯಿ ಅವಳ ಕೈಯಲ್ಲಿ ಕಾಫೀನೂ ಕೊಟ್ಟು ಕಳುಹಿಸುತ್ತಾಳೆ. ಈ ನಡುವೆ ನಾನು ಅವಳ ವಿದ್ಯಾಬುದ್ಧಿ ಜಾಣ್ಮೆಗಳನ್ನು ಕುರಿತು ಹೇಳುತ್ತಾ ಇದ್ದೇನು. ನೀವು ಕೂಡಾ ಅವಳೊಡನೆ ನೇರಾಗಿ ಕೆಲವು ಪ್ರಶ್ನೆ ಕೇಳಿ ಮಾತಾಡಿಸುತ್ತೀರಿ. ಅವಳೂ ಬಹಳ ನಾಜೂಕಾಗಿ ಉತ್ತರಿಸುತ್ತಾಳೆ. ಹೀಗೆ ಹುಡುಗೀನ ನೋಡೋ ನಾಟಕ ನಡೆದೇ ನಡೆಯುತ್ತೆ.

ಅವಳು ತಲೆ ತಗ್ಗಿಸಿಕೊಂಡು ಬರುವಾಗ ಲಜ್ಜಾಭರಣ ಭೂಷಣೆಯಾಗಿ ನಿಮಗೆ ಕಾಣಿಸಿಯಾಳು. ಹಾಗೆಂದು ಪೂರಾ ನೀವು ನಂಬಿ ಬಿಡಬಾರದು ನೀವು ಅಪರಿಚಿತರಾದುದರಿಂದ ಅದು ಕಡ ತಂದ ಒಂದು ಬಗೆಯ ನಾಚಿಗೆ. ಪಳಗಿ ಹೋದ ಮೇಲೆ ಅಂಥ ನಾಚಿಗೆಯೇನೂ ಇರಲಾರದು. ನಮ್ಮ ಮನೆಯಲ್ಲಿ 'ಛೀ, ನಾಚಿಗೆಕೆಟ್ಟವಳೆ" ಎಂದು ನೂರಾರು ಸಾರಿ ಬೈಗುಳು ತಿಂದವಳು ನನ್ನ ಮಗಳು ಹೆಣ್ಣುಗಳಿಗೆ ನಿಜವಾದ ಸ್ವಾಭಾವಿಕವಾದ ನಾಚಿಗೆ ಬರಬೇಕಾದ ವೇಳೆಗೆ ಬಂದೇಬರುತ್ತದೆಂದು ಮಾತ್ರವೇ ನೀವು ಮರೆಯದಿದ್ದರೆ ಸಾಕು.

ನನ್ನ ಮಗಳು ಬಹಳ ಮೃದುಭಾಷಿಣಿಯೂ, ಅಲ್ಪಭಾಷಿಣಿಯೂ ಆಗಿ ನಿಮಗೆ ಕಾಣಬಹುದು. ಅದೂ ನಿಜವಲ್ಲ; ಮನೆಯಲ್ಲಿ ಅವಳದು ಏನು ಮಾತು! ಏನು ಗಲಾಟೆ! ನಮ್ಮ ಮಕ್ಕಳೊಡನೆ ಮೊದಲು ಜಗಳ ಹುಟ್ಟಿಸುವವಳೇ ಅವಳಾಗಿದ್ದಾಳೆ. ಹಿರಿಯ ಮಗಳು ಗಾದೆಯೇ ಇದೆಯಲ್ಲ?— 'ಹಿರಿಯಕ್ಕನ ಚಾಳಿ ಮನೆ ಮಕ್ಕಳಿಗೆಲ್ಲಾ' ಅಂತ?

"ನೀನೂ ನಮ್ಮೊಂದಿಗೆ ಸ್ವಲ್ಪ ತಿಂಡಿ ತಕ್ಕೊಳ್ಳಮ್ಮ" ಅಂತ ನೀವೇ ಹೇಳುತ್ತೀರನ್ನುವ. ನನ್ನ ಮುಖ ನೋಡುತ್ತಾಳೆ. ನಾನೂ ಒತ್ತಾಯ ಮಾಡುತ್ತೇನೆ. ಆಗ ಅವಳೂ ತಿನ್ನುತ್ತಾಳೆಂದುಕೊಳ್ಳಿ. ಅವಳು ಎಷ್ಟು ಹೊತ್ತು ತಿನ್ನುತ್ತಿದ್ದರೂ ತಟ್ಟೆಯಲ್ಲಿ ತಿಂಡಿ ಅಕ್ಷಯ ಪಾತ್ರದ ಹಾಗೆಯೇ ಇದ್ದೀತು. ಅದನ್ನು ನೋಡಿ ಇವಳದು ಬಹಳ ಚಿಕ್ಕ ಹೊಟ್ಟೆ, ತಾನೇನೂ ತಿನ್ನದೆ ಇತರರಿಗೇ ಕೊಡುವ ಸ್ವಭಾವ ಅಂತ ತಿಳಿದುಕೊಳ್ಳಬೇಡಿ. ತಂದೆತಾಯಿಗಳು ತಮಗಿಲ್ಲದಿದ್ದರೂ ಮಕ್ಕಳಿಗೆ ಕೊಡುವಂಥ ಭಾವನೆ ಖಂಡಿತಾ ಇವಳಿಗಿನ್ನೂ ಹುಟ್ಟಿಲ್ಲ. ನಮ್ಮ ಮನೆಯೊಳಗೆ ಏನು ತಿಂಡಿಯಾದರೂ ಎಲ್ಲಾ ಮಕ್ಕಳಿಗೂ ಕೊಟ್ಟಷ್ಟು ಅವಳಿಗೂ ಸಿಕ್ಕಲೇ ಬೇಕು. ಒಂದು ಚೂರು ಕಮ್ಮಿಯಾದರೂ ರಂಪವೆಬ್ಬಿಸಿಬಿಡುತ್ತಾಳೆ. ತಾನು ಬಚ್ಚಿಟ್ಟುಕೊಂಡು, ತಂಗಿ ತಮ್ಮಂದಿರಿಗೆ ಹಾಳಾದ್ದನ್ನು ಬೇರ್ಪಡಿಸುವುದರಲ್ಲಿ ಕೂಡಾ ನನ್ನ ಮಗಳು ಗಟ್ಟಿಗಿತ್ತಿಯೇ ಅಂದುಕೊಳ್ಳಿ.

ಸಂಗೀತವೋ? ನಿಮ್ಮ ಇದಿರು ಅವಳು ಹಾಡಿದ ಹಾಡು ಅದಲ್ಲ ಅವಳ ನಿಜವಾದ ಹಾಡು. ಬೆಕ್ಕನ್ನು ಮಡಿಲಲ್ಲಿಟ್ಟುಕೊಂಡು ಅವಳು ಹಾಡುವುದುಂಟು. ಅದಕ್ಕೊಂದು ಅರ್ಥವೋ ಧಾಟಿಯೋ ಇರದು. ಮುಖ್ಯ ತೊಟ್ಟಿಲು ತೂಗಿ ಮಗುವನ್ನು ನಿದ್ರಿಸಲು ಅವಳು ಏನೋ ಒಂದು ಸಂಗೀತಗೆಯುವಳೆಂದಷ್ಟೇ ನೀವು ನಂಬಿದರೆ ಸಾಕು.

ಇನ್ನು ಕೆಲಸ ಕಾರ್ಯಗಳಲ್ಲಿ ಬಹಳ ಚುರುಕಾಗಿದ್ದಾಳೆಂದೂ ವಿವಿಧ ಪಾಕಗಳನ್ನು ಕಲಿತಿದ್ದಾಳೆಂದೂ, ಈಗ ನೀವು ತಿಂದ ತಿಂಡಿಗಳನ್ನು ಇವಳೇ ಮಾಡಿರುವಳೆಂದೂ, ಇದರ ಮೇಲೆ ಹೊಲಿಗೆ, ಕಸೂತಿ ಎಲ್ಲದರಲ್ಲೂ ಗಟ್ಟಿಗಿತ್ತಿಯೆಂದೂ, ತಮ್ಮನ ಅಂಗಿ, ತಂಗಿಯ ಲಂಗ ಅವಳ ರವಕೆ, ಕಸೂತಿ, ಎಂಬ್ರಾಯಿಡರೀ ಹಾಕಿದ ಟೇಬಲ್ ಕ್ಲಾತ್ ಎಲ್ಲವೂ ಇವಳದೇ ಕೃತಿ

(೧೨ನೇ ಪುಟ ನೋಡಿರಿ)

ಸ್ವಲ್ಪ ಸ್ವಲ್ಪವಾಗಿ, ಅಲ್ಲೊಮ್ಮೆ ಇಲ್ಲೊಮ್ಮೆ, ನೀವು ಉಳಿಸುತ್ತಿರುವ ಹಣವು
ಬೇಗ ಬೇಗನೆ ವೃದ್ಧಿಗೊಂಡು, ನಿಮ್ಮ ಭವಿಷ್ಯದ ಭದ್ರತೆಯು
ಹೆಚ್ಚುಹೆಚ್ಚಾಗಿ ಪರಿಣಮಿಸುವಂತೆ

ಕೊರ್ಪೊರೇಶನ್ ಬೇಂಕು

ನಿಮ್ಮ ಸೇವಿಂಗ್ಸ್ ಬೇಂಕ್ ಎಕೌಂಟುಗಳ ಮೇಲೆ ಇನ್ನು ಮುಂದಕ್ಕೆ
ನಾಲಿಯಾನ್ ಸೇಕಡಾ 3 ರ ದರದಲ್ಲಿ ನಿಮಗೆ ಬಡ್ಡಿ ಕೊಡುವುದು.

ವಿವರಗಳಿಗೆ ವಿಚಾರಿಸಿರಿ:

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ಸ್ಥಾಪನೆ: 1906) (ರಿಜಿಸ್ಟರ್ಡ್ ಆಫೀಸು: ಉಡುಪಿ.
ಆಡಳಿತ ಆಫೀಸು: ಮಂಗಳೂರು—1

ಮನಶ್ಶಾಸ್ತ್ರ

ಸರಿಯಾಗಿ ಕಣ್ಣೀರು ಸುರಿಸಿರಿ

ನಮ್ಮ ಮನಸ್ಸು ಚಿಂತೆಗಳಿಂದ ಭಾರವಿರುವಾಗ, ಅವನ್ನು ತೋಡಿಕೊಂಡು ಅತ್ತುಬಿಡಬೇಕು; ಇಲ್ಲವಾದರೆ, ನಮ್ಮಲ್ಲಿ ವಿಭಿನ್ನ ಮನೋರೋಗಗಳು ನೆಲೆಯೂರುವುವು.

ಶೀರ್ಷಿಕೆಯನ್ನು ಓದಿದೊಡನೆಯೇ ಮೂಗಿಗೆ ಬೆರಳೇರಿಸ ಬೇಡಿರಿ. ಕ್ರೋಧ, ಕ್ಷೋಭ ಅಥವಾ ಮಾನಸಿಕ ವೇದನೆಯ ವೇಳೆಯಲ್ಲಿ ಎದೆ ಬಿಚ್ಚಿ ಅತ್ತು ಬಿಡುವುದು ಉತ್ತಮ ಉಪಾಯವೆಂದು ಮಾನಸ ಚಿಕಿತ್ಸಕರು ಹೇಳುತ್ತಾರೆ. ಕಳೆದ ಇನ್ನೂರು ವರ್ಷಗಳಿಂದಲೂ ಮಾನವನು ಭಾವನೆಗಳ ರಕ್ಷಣಾಕೋಶವನ್ನು ತೆರೆಯುವ ಈ ಪದ್ಧತಿಯನ್ನು ಹೀನವೆಂದೇ ತಿಳಿದಿರುವನೆಂಬುದು ವಿಚಿತ್ರವೆನಿಸುತ್ತದೆ. ದೃಢ ಚರಿತ್ರರು ಮತ್ತು ಉನ್ನತ ವ್ಯಕ್ತಿತ್ವವುಳ್ಳವರೂ ಮಾತ್ರ ಆಗಾಗ ಕಣ್ಣೀರನ್ನು ಸುರಿಸಿ ಶಾಂತಿ ಮತ್ತು ಸಂತೋಷಗಳನ್ನು ಗಳಿಸಿರುವರೆಂಬುದು ಮತ್ತಷ್ಟು ವಿಚಿತ್ರವೆನಿಸುತ್ತದೆ.

ಬ್ರಿಟನ್ನಿನ ಮಾಜಿ ಪ್ರಧಾನ ಮಂತ್ರಿ ಸರ್ ವಿನ್‌ಸ್ಟನ್ ಚರ್ಚಿಲ್ಲರ ಉದಾಹರಣೆಯನ್ನೇ ಎತ್ತಿಕೊಳ್ಳಿರಿ. ಅವರು ಹಲವಾರು ಬಾರಿ ಸಾರ್ವಜನಿಕ ರೂಪದಲ್ಲಿ ಅಶ್ರುಧಾರಾವರ್ಷವನ್ನು ಸುರಿಸಿದ್ದಾರೆ. ಕಳೆದ ಜಾಗತಿಕ ಯುದ್ಧಾನಂತರ ಇಂಗ್ಲೆಂಡಿನಲ್ಲಿ ವಿಜಯೋತ್ಸವವನ್ನು ಆಚರಿಸುತ್ತಿರುವಾಗ, ತನ್ನ ಸುತ್ತುಮುತ್ತ ಹರ್ಷ ಮತ್ತು ಉಲ್ಲಾಸದ ವಾತಾವರಣವನ್ನು ಕಂಡು ಅವರ ನಯನಗಳಲ್ಲಿ ಹಲವಾರು ಬಾರಿ ನೀರೊಸರಿತ್ತು. ಇದೇ ರೀತಿಯಲ್ಲಿ ಯುದ್ಧಾವಧಿಯಲ್ಲಿ ನೈತಿಕತೆಯು ತನ್ನ ಹೀನ ಮಟ್ಟವನ್ನು ತಲಪಿದಾಗ, ಇಡಿಯ ವಿಶ್ವದಲ್ಲಿ ಅವರ ಒಂದು ಭಾಷಣವನ್ನು ಪ್ರಸಾರ ಮಾಡಲಾಗಿತ್ತು. ಈ ಭಾಷಣದಲ್ಲಿ ಅವರು ಬ್ರಿಟಿಷ ರಾಷ್ಟ್ರಕ್ಕೆ ತನ್ನ "ರಕ್ತ ಅಶ್ರು, ಶ್ರಮ ಮತ್ತು ಸ್ವೇದ" ದಾನ ನೀಡುವ ವಚನವಿತ್ತಿದ್ದರು. ಆ ವೇಳೆಯಲ್ಲಿಯೂ ಅವರ ನೇತ್ರಗಳಲ್ಲಿ ಮೌನ ಅಶ್ರು ಸಾಗರವು ಭೋರ್ಗರೆಯುವಂತಿತ್ತು.

ಸರ್ ವಿನ್‌ಸ್ಟನ್ ಚರ್ಚಿಲ್ಲರು ಯುದ್ಧಕ್ಷೇತ್ರದಲ್ಲಿನ ಅನೇಕ ಆಸ್ಪತ್ರೆಗಳು ಮತ್ತು ಜರ್ಮನಿಯ ಆಕಸ್ಮಿಕ ಆಕಾಶ ಮಾರ್ಗ ಆಕ್ರಮಣಗಳಿಂದ ವಿಧ್ವಂಸಗೊಂಡ ಲಂಡನ್ನಿನ ನೂರಾರು ಭಗ್ನಾವಶೇಷಗಳನ್ನು ನಿರೀಕ್ಷಿಸಿದ್ದಾರೆ. ಆದರೂ ಅವರಿಗೆ ಈ ವಿಧದ ವಿಧ್ವಂಸಲೀಲೆ ಮತ್ತು ಪೀಡೆಯ ಪ್ರತ್ಯಕ್ಷ ದರ್ಶನವಾಗುವಾಗ, ಅವರ ಕಣ್ಣುಗಳಿಂದ ಕಣ್ಣೀರು ಮಳೆಯಾಕಾರದಲ್ಲಿ ಸುರಿಯ ತೊಡಗುತಿತ್ತು. ಆಗ ಒಮ್ಮೊಮ್ಮೆ ಅವರೊಡನೆ ಅನೇಕ ವ್ಯಕ್ತಿಗಳಿದ್ದುದೂ ಇದೆ.

೧೯೪೦ರಲ್ಲಿ ಅವರ ಮೊಮ್ಮಗನೊಬ್ಬನ ನಾಮಕರಣ ಸಂಸ್ಕಾರವು ನಡೆಯುತಿತ್ತು. ಆಗ ಚರ್ಚಿಲ್ಲರು ಕಣ್ಣುಗಳಲ್ಲಿ ನೀರನ್ನು ತಂದುಕೊಂಡು ತನ್ನ ಬಳಿ ಕುಳಿತಿದ್ದ ವ್ಯಕ್ತಿಯೊಡನೆ ಮೆತ್ತಗಿನ ಸ್ವರದಲ್ಲಿ ಹೇಳಿದರು:—"ನೋಡು, ಇಂತಹ ಪ್ರಪಂಚದಲ್ಲಿ ಹುಟ್ಟ ಬೇಕಾದರೆ, ಹುಡುಗ ಅದೃಷ್ಟ ಹೇಗಿರಬೇಡ?"

ಹೀಗೆ ಸಾರ್ವಜನಿಕ ರೂಪದಲ್ಲಿ ಹೃದಯಾಂತರಾಳದಿಂದ ಅಶ್ರುಧಾರೆ ಹರಿಸಿದವರಲ್ಲಿ ಚರ್ಚಿಲ್ಲರನ್ನು ಬಿಟ್ಟರೆ, ಅಮೆರಿಕೆಯ ಜನರಲ್ ಪೆಟನ್ ಮತ್ತು ಚೇಂಪಿಯನ್ ಬಾಸ್ಕರ್ ಕಾರ್ಮೈನ್ ಬೈಸಿಲಿಯೊರವರೂ ಅಗ್ರಗಣ್ಯರಾಗಿದ್ದಾರೆ. ನಾಟ್ಯರಂಗದ ಅದ್ವಿತೀಯ ನಾಯಿಕೆ ಚಾರ್ಲ್ಸ್ ಲಾಫ್ಟನ್ ಕೂಡ ತನ್ನ ದರ್ಶಕರಿಗೆ ಕೃತಜ್ಞತೆ ವ್ಯಕ್ತಪಡಿಸುವಾಗ, ಹಲವು ಬಾರಿ ನೀರು ತಂದುಕೊಂಡುದುಂಟು.

ಮಾನಸ ಚಿಕಿತ್ಸಕರು ಈ ರೀತಿಯಾಗಿ ಎದೆ ತೆರೆದು ಅಳುವುದನ್ನು ಹಾರ್ದಿಕವಾಗಿ ಸಮರ್ಥಿಸುತ್ತಾರೆ. ಆದರೆ, ಸಾಮಾಜಿಕ ಪರಿಸ್ಥಿತಿಗಳು ಮಾತ್ರ ಇದಕ್ಕೆ ವಿಪರೀತವಿವೆ. ಪುರುಷನು ಹಲವು ಬಾರಿ ಆವೇಗದ ಸಮಯದಲ್ಲಿ ಕಣ್ಣೀರು ಸುರಿಸುವುದಿಲ್ಲ. ಎಲ್ಲ ಮಾನಸ ಚಿಕಿತ್ಸಕರೂ ಆಗಾಗ ಅತ್ತುಬಿಡುವುದರಿಂದ ಹೃದಯ ಹಗುರಾಗುವುದು, ಮಾನಸಿಕ ವೇದನೆಯೂ ಕಡಿಮೆಯಾಗುವುದು ಎಂದು ಹೇಳುತ್ತಾರೆ. ಈ ಪ್ರಾಕೃತಿಕ ಸಾಧನೆಗಳನ್ನು ಬಿಟ್ಟು ಮನಸ್ಸಿನಲ್ಲಿ ನಿರಾಶೆ ಮತ್ತು ಚಿಂತೆಗಳನ್ನು ತುಂಬಿಕೊಳ್ಳುವುದು ಆರೋಗ್ಯದ ದೃಷ್ಟಿಯಿಂದ ಘಾತಕವಾಗಿದೆ. ಸ್ತ್ರೀಯರಿಗಿಂತ ಪುರುಷರಿಗೆ ರೋದಿಸುವ ಅವಕಾಶ ದೊರೆಯುವುದು ಕಡಿಮೆಯಾದುದರಿಂದ ಅವರು ರಕ್ತದ ಒತ್ತಡವೇ ಮೊದಲಾದ ರೋಗಗಳಿಗೆ ಪಕ್ಕಾಗುತ್ತಾರೆ. ಈ ಸಂಗತಿಯನ್ನು ಅನುಲಕ್ಷಿಸಿ ಈಗಿನ ಜೀವನ ಪದ್ಧತಿಯಲ್ಲಿರುವ ವೇದನೆಗಳಲ್ಲಿ ಅತ್ಯಧಿಕ ಅಂಶವನ್ನು ಕಣ್ಣೀರಿನ ಮಾಧ್ಯಮದಿಂದಲೇ ದೂರೀಕರಿಸಬಹುದೆಂದೂ ಹೀಗೆ ಕಣ್ಣೀರಿನ ಮಾಧ್ಯಮದಿಂದಲೇ ಇವನ್ನು ಹೋಗಲಾಡಿಸುವುದು ಅವಶ್ಯವೆಂದೂ ಮಾನಸ ಚಿಕಿತ್ಸಕರು ಹೇಳುತ್ತಾರೆ.

ಅಮೆರಿಕೆಯ ಡಾ| ಜೇಮ್ಸ್ ಬಾಂಡರು ಈ ಸಂಬಂಧದಲ್ಲಿ ಹಲವು ವರ್ಷಗಳವರೆಗೆ ಸಂಶೋಧನೆ ನಡೆಸಿದ್ದಾರೆ. ಇದರ ಪರಿಣಾಮವಾಗಿ, ಅವರು ನೊಂದ ಮನುಷ್ಯನು ಆಗಾಗ ಅಳುತ್ತಿದ್ದರೆ, ಆತನ ಆರೋಗ್ಯವು ನೆಮ್ಮದಿಯಿಂದಿರುವುದೆಂದು ಹೇಳುತ್ತಾರೆ.

ಪ್ರತಿಯೊಂದು ಕಾರ್ಯಾಲಯದ ಪ್ರತಿಯೊಬ್ಬನೂ ತಮ್ಮ ತಪ್ಪು ಅಥವಾ ದುರ್ವ್ಯವಹಾರಗಳಿಂದ ಚಿಂತಿತನಾದನೆಂದರೆ, ಏನಾಗುವುದು? ಇಂದು ಅಳುವುದಕ್ಕೆ ಇರುವ ಸಾಮಾಜಿಕ ಪ್ರತಿಬಂಧವಿರುವುದನ್ನು ದೃಷ್ಟಿಯಲ್ಲಿರಿಸಿಕೊಂಡರೆ, ಆತನು ತನ್ನ ಭಾವನೆಗಳನ್ನು ತನ್ನ ಅಧಿಕಾರಿಯ ಮುಂದೆ ಪೂರ್ಣ ವ್ಯಕ್ತಗೊಳಿಸುವುದು ಅಥವಾ ಸಂಜೆಗೆ ಮನೆಗೆ ಮರಳಿದ ನಂತರ ತನ್ನ ಪತ್ನಿಯ ಮುಂದೆ ತೋಡಿಕೊಳ್ಳುವುದು—ಇವನ್ನುಳಿದರೆ, ಅನ್ಯಪರಿಹಾರವಿರುವುದಿಲ್ಲ. ಈ ಎರಡೂ ಮಾರ್ಗಗಳನ್ನು ಆತ ಅನುಸರಿಸದೆ ಹೋದರೆ, ತಾನೊಬ್ಬ "ಸಭ್ಯ" ವ್ಯಕ್ತಿಯಂತೆ ಕಾರ್ಯಪ್ರವೃತ್ತನಾಗುತ್ತ ಮುಂದುವರಿದನೆಂದರೆ, ಖಂಡಿತಕ್ಕೂ ಆತ ಒಂದಲ್ಲ ಒಂದು ವಿಧದ ಮಾನಸಿಕ ರೋಗಕ್ಕೆ ಗುರಿಯಾಗುತ್ತಾನೆ. ಅದು ಹೃದ್ರೋಗದ ರೂಪದಲ್ಲಿ ಬಹುದು; ಸ್ನಾಯು ಸಂಬಂಧಿ ಚರ್ಮರೋಗ ರೂಪದಲ್ಲಿರಬಹುದು. ಇಲ್ಲವೇ ಬೇರಾವುದಾದರೊಂದು ರೋಗದ ಆಕಾರ ತಾಳಿ ಕೊಳ್ಳಬಹುದು.



ಗಗನ ಯಾತ್ರೆಯನ್ನು ಮಾಡಿ ಮರಳಿದ ಅಮೆರಿಕೆಯ ಶ್ರೀ ಶೆಪ್ಪರ್ಡರನ್ನು ಅತ್ಲಾಂಟಿಕ ಸಾಗರದಿಂದ ಮೇಲಕ್ಕೆ ಎತ್ತಿ ತರುವ ದೃಶ್ಯ.

ಆದುದರಿಂದ ಈ ವೇದನೆಗಳನ್ನು ಯಥಾ ಶೀಘ್ರದೂರೀಕರಿಸುವುದು ಅಗತ್ಯ. ಮಾನಸ ಚಿಕಿತ್ಸಕರು ಇದಕ್ಕಿರುವ ಉತ್ತಮ ಉಪಾಯವೆಂದರೆ, ಎದೆತೆರೆದು ಅಳುವುದೆಂದು ಏಕಕಂಠದಿಂದ ಹೇಳುತ್ತಾರೆ. ಇಂದಿನ ಸಾಮಾಜಿಕ ಪರಿಸ್ಥಿತಿಯಲ್ಲಿ ಸ್ತ್ರೀಯರಿಗೆ ಮಾತ್ರ ಹೀಗೆ ಅಳುವ ಅಧಿಕಾರವಿದೆ. ಅಳುವನ್ನು ಪೀಡೆ ಮತ್ತು ಆವೇಗಗಳನ್ನು ದೂರಗೊಳಿಸುವುದಕ್ಕಾಗಿಯೇ ಪ್ರಕೃತಿ ನಿರ್ಮಿಸಿದೆಯೆನ್ನುತ್ತಾರೆ ಮಾನವನ ಚಿಕಿತ್ಸಕರು. ಆದುದರಿಂದ ಆರೋಗ್ಯವರ್ಧಕ ಉಪಾಯಗಳಲ್ಲಿ ಅಳುವಿಗೆ ಗಣನೀಯ ಸ್ಥಾನವಿದೆ.

ಆದರೆ, ಕೇವಲ ಅಳುವಿಕೆಯೊಂದೇ ಭಾವನಾತ್ಮಕ ವಿಕ್ಷೋಭಗಳಿಗೆ ಉಪಚಾರವೆನ್ನಲು ಬರುವುದಿಲ್ಲ. ಆವೇದನೆಯಿಂದ ಮುಕ್ತಿಪಡೆಯಲು ಇದೊಂದು ಅತ್ಯಂತ ಪ್ರಭಾವಶಾಲಿ ಪ್ರಾಕೃತಿಕ ಸಾಧನವಾಗಿದೆ. ಕೆಲವು ದೇಶಗಳಲ್ಲಿ ಮುಖ್ಯವಾಗಿ ಲೇಟಿನ್ ಅಮೆರಿಕೆಯಲ್ಲಿ ಸಾಮಾಜಿಕ ದೃಷ್ಟಿಯಿಂದ ಪುರುಷರಿಗೂ ಅಳುವ ಅವಕಾಶ ದೊರೆತಿದೆ; ಆದರೆ ವಿಶ್ವದ ಹೆಚ್ಚಿನ ದೇಶಗಳು ಪುರುಷರೋದನಕ್ಕೆ ತೀವ್ರ ಪ್ರತಿಬಂಧವನ್ನು ಹೇರಿವೆ. ಪುರುಷರು ಅಧಿಕವಾಗಿ ಅತ್ತು ಬಿಡುವುದರಿಂದ ಅವರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀಳಬಹುದು; ಮನೋವೈಜ್ಞಾನಿಕ ಪರಿಣಾಮವಾಗಬಹುದು ಎಂದು ಮಾನಸ ಚಿಕಿತ್ಸಕರು ಹೇಳುತ್ತಿರುವಂತೆಯೇ ಅವರು ಉದ್ಗರಿಸುತ್ತಾರೆ— ಇಂದಿನ ಜನರಲ್ಲಿ ಒಂದು ದುರ್ಬಲತೆಯಿದೆ; ಇದರಿಂದಾಗಿ ಅವರು ಹೃದಯ ತುಂಬಿಸಿ ಅಳುವುದಕ್ಕೂ ಅಸಮರ್ಥರಾಗಿದ್ದಾರೆ!

ವಿಶ್ವಕವಿ ಟಾಗೋರರ ಪುಣ್ಯಸ್ಮರಣೆಗಾಗಿ
ಅವರ ಶತಮಾನೋತ್ಸವದ ಸುಸಂದರ್ಭದಲ್ಲಿ
ಪ್ರಕಟವಾದ ಕಿರುಗಾಣಿಕೆಗಳು

ಚಿತ್ರಾಂಗದೆ

ಬೆಲೆ: ೬೦ ನ. ಪೈಸೆ.
(ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಅವರಿಂದ ಅನುವಾದಿತ)

ರವೀಂದ್ರನಾಥರ ಕಿರುಗತೆಗಳು

ಬೆಲೆ. ೮೦ ನ. ಪೈಸೆ.
(ಶ್ರೀ ಹನುಮಂತರಾವ್ ಮೊಂಜಡೇಕರ, ಕಾರವಾರ ಅವರಿಂದ ಅನುವಾದಿತ)
ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ನವಯುಗ ಪ್ರೆಸ್, ಉಡುಪಿ.

ಜೀವನದ ವಿವಿಧ ಘಟನೆಗಳನ್ನು ಹೃದಯ ಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.
ಬೆಲೆ: ರೂಪಾಯಿ ಒಂದು.
ರೂ. 1–26 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು
ನವಭಾರತ ಪುಸ್ತಕ ಭಂಡಾರ, ಉಡುಪಿ.

ಸದ್ಭಾವನಾ ಪ್ರೇರಿತನಾದ ತ್ಯಾಗಿ ಮಾತ್ರವೇ ಕಾಲಕ್ರಮದಲ್ಲಿ ಪ್ರಗತಿ ಹೊಂದುತ್ತಾನೆ; ದುರ್ಭಾವನೆಯಿಂದ ಮಾಡಿದ ತ್ಯಾಗ, ಮಾಡಿದವನನ್ನೇ ದುರ್ಮಾರ್ಗಕ್ಕೆಳಸುತ್ತದೆ.

ನವಯುಗ

೪೦ ವರುಷ	ಉಡುಪಿ ೨೯-೬-'೬೧	ವಾರ ೪೧

ಆರೋಗ್ಯ ಯೋಜನೆ

ಭಾರತದ ಮೂರನೆಯ ಯೋಜನಾವಧಿಯಲ್ಲಿ ಆರೋಗ್ಯ ವಿಭಾಗದ ಬಗ್ಗೆ ಒಟ್ಟು ೩೪೧ ಕೋಟಿ ರೂಪಾಯಿಗಳನ್ನು ಒದಗಿಸುವ ಅಂತಿಮ ಯೋಜನೆಯನ್ನು ಸಿದ್ಧಗೊಳಿಸುವ ಕೆಲಸ ನಡೆಯುತ್ತಿದೆ. ಈ ಮೊತ್ತವು ಮೊದಲಿನ ಅಂದಾಜಿಗಿಂತ ೨೦ ಕೋಟಿಯಷ್ಟು ಹೆಚ್ಚಿರುವುದರಿಂದ ಯೋಜಕರು ಈ ಸಂಬಂಧದಲ್ಲಿ ತೋರಿಸುತ್ತಿರುವ ಕಳಕಳಿಯು ನಮಗೆ ವ್ಯಕ್ತವಾಗುತ್ತದೆ. ಆರೋಗ್ಯ ವಿಭಾಗದ ಬೇರೆ ಬೇರೆ ಕಾರ್ಯಕ್ರಮಗಳಿಗೆ ಮೀಸಲಾಗಿಟ್ಟ ಹಣವನ್ನು ಕಾಣುವಾಗ, ಇದು ಹಿಂದಿನ ಯೋಜನೆಗಿಂತ ತುಂಬ ಪ್ರಗತಿಪರವೆಂದು ಹೇಳಬಹುದು. ರಾಷ್ಟ್ರ ಯೋಜನೆಯ ಒಟ್ಟು ವೆಚ್ಚದಲ್ಲಿ ಸೇಕಡಾ ಹದಿನೈದರಷ್ಟು ಆರೋಗ್ಯ ಸಂಬಂಧಿ ಕಾರ್ಯಕ್ರಮಗಳಿಗೆ ತೆಗೆದಿರಿಸಬೇಕೆಂದು ಬೋರ್ ಸಮಿತಿಯು ಸೂಚಿಸಿದ್ದನ್ನೂ ನಾವು ಗಮನಿಸಬಹುದು.

ಮಲೇರಿಯಾ ಮತ್ತು ಸಿಡುಬುಗಳನ್ನು ಸಂಪೂರ್ಣ ಹತೋಟಿಗೆ ತರುವುದು ಕ್ಷಯ ರೋಗದ ನಿಯಂತ್ರಣದ ಬಗ್ಗೆ ಹೆಚ್ಚಿನ ಕಾರ್ಯಕ್ರಮ ಕೈಗೊಳ್ಳುವುದು, ಇನ್ನಿತರ ಹರಡುವ ರೋಗಗಳನ್ನು ಪ್ರತಿಬಂಧಿಸುವುದು, ಕುಟುಂಬ ನಿಯಂತ್ರಣದ ಕಾರ್ಯಕ್ರಮವನ್ನು ವಿಸ್ತರಿಸುವುದು, ವೈದ್ಯಕೀಯ ಶಿಕ್ಷಣದ ಸೌಲಭ್ಯವನ್ನು ಹೆಚ್ಚಿಸುವುದು, ಸಂಶೋಧನೆಗಳಿಗೆ ಆಸ್ಪದ ಕಲ್ಪಿಸುವುದು ಈ ಯೋಜನೆಯಲ್ಲಿ ಅಳವಡಿಸಿಕೊಂಡಿರುವ ವಿವಿಧ ಕಾರ್ಯಕ್ರಮಗಳಾಗಿವೆ. ಗ್ರಾಮೀಣ ಪ್ರದೇಶಗಳಲ್ಲಿ ನೀರಿನ ಸರಬರಾಯಿ ಮತ್ತು ಒಳ ಚರಂಡಿ ಯೋಜನೆಗಳಿಗೆ ಪ್ರಾಶಸ್ತ್ಯವನ್ನಿತ್ತು ಇದಕ್ಕಾಗಿ ೧೦೫ ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಇಲ್ಲಿ ಹೆಚ್ಚು ಹಣವನ್ನು ವ್ಯಯ ಮಾಡುವುದು ಇರುವ ಸಮಸ್ಯೆಗೆ ಪರಿಹಾರವಲ್ಲವೆಂಬುದನ್ನು ನಾವು ಕಂಡುಕೊಳ್ಳಬೇಕಾಗುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ಸಂವರ್ಧನೆಯಾಗುವುದಕ್ಕೆ ಅಲ್ಲಿನ ಜನತೆಗೆ ಅಧಿಕಾಧಿಕ ಆರೋಗ್ಯ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕಾಗುತ್ತದೆ. ಆದರೆ, ಅಲ್ಲಿ ದೊರೆಯುವ ಸೌಕರ್ಯಗಳು ಸೀಮಿತವಿರುವುದರಿಂದ ನಿರೀಕ್ಷಿತ ಪರಿಣಾಮಗಳು ಹಿಂದಿನ ಯೋಜನೆಯಲ್ಲಿ ಕಂಡು ಬಂದಿಲ್ಲ. ಈ ಅಭಾವವನ್ನು ನೀಗಿಸುವ ಪ್ರಯತ್ನ ಅವಶ್ಯ ನಡೆಯಬೇಕು. ನಮ್ಮ ದೇಶದಲ್ಲಿರುವ ಆರೋಗ್ಯ ಪ್ರಶ್ನೆಯಲ್ಲಿ ವೈದ್ಯರ ಅಭಾವವು ಮಹತ್ವದ ಪಾತ್ರ ವಹಿಸುತ್ತದೆ. ಈಗ ಇಲ್ಲಿ ಒಟ್ಟು ೯೦ ಮೆಡಿಕಲ್ ಕಾಲೇಜುಗಳಿದ್ದು ಮೂರನೆಯ ಯೋಜನಾವಧಿಯಲ್ಲಿ ೧೫ ಹೆಚ್ಚಿನ ಕಾಲೇಜುಗಳನ್ನು ಸ್ಥಾಪಿಸಲಾಗುವುದು. ಈಗ, ಪ್ರವೇಶ ಪಡೆಯುವವರ ಸಂಖ್ಯೆ ಆರು ಸಾವಿರವಿದ್ದುದು ಆಗ ಎಂಟು ಸಾವಿರವಾಗುವುದು. ಈಗಿರುವ ಕಾಲೇಜುಗಳ ವಿಸ್ತರಣೆಯನ್ನೂ ಮಾಡುವ ಉದ್ದೇಶವಿದೆ. ಐದು ಹೊಸ ಆಯುರ್ವೇದ ಕಾಲೇಜುಗಳನ್ನೂ ತೆರೆಯುವುದರೊಡನೆ ಈಗ ಇರುವ ೩೦ ಕಾಲೇಜುಗಳ ವಿಸ್ತರಣೆಯನ್ನೂ ಮಾಡಲಾಗುವುದು. ಈ ಎಲ್ಲ ಕಾರ್ಯಕ್ರಮಗಳಿಂದಾಗಿ ಮೂರನೆಯ ಯೋಜನಾಂತ್ಯದಲ್ಲಿ ೯೦ ಸಾವಿರ (ಈಗ ಇದು ೭೦ ಸಾವಿರ) ಆಧುನಿಕ ವೈದ್ಯ ವಿದ್ಯಾ ತಜ್ಞರು ದೇಶದಲ್ಲಿರುವಂತಾಗುವುದು; ಹೀಗೆಯೇ ಸುಮಾರು ೨—೩ ಲಕ್ಷ ಆಯುರ್ವೇದ ಹಾಗೂ ಹೋಮಿಯೋಪತಿ ಇರುವರು. ರಾಷ್ಟ್ರದ ವಿವಿಧೆಡೆಗಳಲ್ಲಿ ಈಗಿರುವ ಹತ್ತು ಸಾವಿರ ಆಸ್ಪತ್ರೆಗಳೂ ಡಿಸ್ಪೆಂಸರಿಗಳನ್ನು ೧೨ ಸಾವಿರಕ್ಕೆ ಹೆಚ್ಚಿಸಿ, ಅಲ್ಲಿ ಒಟ್ಟು ೫೦ ಸಾವಿರ ಹೆಚ್ಚಿನ ಹಾಸಿಗೆಗಳನ್ನು ಒದಗಿಸಲಾಗುವುದು. ಆಸ್ಪತ್ರೆಗಳ ಸ್ಥಾಪನೆ ಮತ್ತು ವಿಸ್ತರಣೆಗಾಗಿ ೬೨ ಕೋಟಿ ರೂಪಾಯಿಗಳನ್ನೂ ವೈದ್ಯಕೀಯ ಶಿಕ್ಷಣ ಹಾಗೂ ಸಂಶೋಧನೆಗಳಿಗೆ ೫೬ ಕೋಟಿ ರೂಗಳನ್ನೂ ತೆಗೆದಿರಿಸಲಾಗಿದೆ. ಸಾರ್ವಜನಿಕ ರೋಗರುಜಿನಗಳ ದೂರೀಕರಣಕ್ಕಾಗಿ ೭೦ ಕೋಟಿ ರೂಪಾಯಿಗಳು ದೊರೆತಿವೆ. ಭಾರತದ ಎಲ್ಲೆಡೆಗಳಲ್ಲಿ ಮಲೇರಿಯಾ ಮತ್ತು ಸಿಡುಬು ರೋಗಗಳ ನಿರ್ಮೂಲನ ಚಳವಳವನ್ನು ಬಲಪಡಿಸಲಾಗುವುದು. ಈ ಸಂಬಂಧದಲ್ಲಿ ಈಗಾಗಲೇ ಸಾಕಷ್ಟು ಪ್ರಗತಿಯಾಗಿದೆಯಾದರೂ ಮಲೆನಾಡಿನ ಕೊಂಪೆಗಳಿಂದಲೂ ಇದನ್ನು ನಾಶಮಾಡುವ ಕಾರ್ಯಕ್ರಮ ತೀವ್ರವಾಗುವಂತಾಗಬೇಕು ಇನ್ನೊಂದು ಪ್ರಧಾನ ವಿಭಾಗವೆಂದರೆ ಪರಿವಾರ ನಿಯಂತ್ರಣದ್ದು. ಇದಕ್ಕೆ ೨೭ ಕೋಟಿ ರೂಪಾಯಿಗಳನ್ನು ಯೋಜನಾವಧಿಯಲ್ಲಿ ವೆಚ್ಚಮಾಡಲಾಗುವುದು. ನಮ್ಮ ದೇಶದಲ್ಲಿ ಈ ವರ್ಷದ ಜನಗಣನೆಯ ಅಂಕೆ ಅಂಶಗಳನ್ನು ನೋಡುವಾಗ, ಪರಿವಾರ ನಿಯಂತ್ರಣದ ಪ್ರಾಮುಖ್ಯದ ಅರಿವಾಗದುಳಿಯದು. ನಮ್ಮ ಯೋಜನೆಗಳು ಬೆಳೆಯುತ್ತ ಬಂದರೂ ಯೋಜಕರ ಅಂಕೆಸಂಖ್ಯೆಗಳನ್ನೇ ಬುಡಮೇಲು ಮಾಡುವಂತೆ ನಮ್ಮ ಜನಸಂಖ್ಯೆಯು ಏರುತ್ತ ಬರುತ್ತಿರುವುದನ್ನು ಎಲ್ಲರೂ ಬಲ್ಲರು. ಆದರೂ ಇದು ವ್ಯಕ್ತಿಗತ ಇಚ್ಛೆ ಹಾಗೂ ಸಾರ್ವಜನಿಕ ಸದಭಿಪ್ರಾಯದಿಂದ ಮಾತ್ರ ಬಗೆಹರಿಯಬಲ್ಲ ಪ್ರಶ್ನೆಯಾದುದರಿಂದ ಜನಮತವನ್ನು ಇತ್ತ ಸರಿಸುವ ಪ್ರಯತ್ನಗಳು, ರಚನಾತ್ಮಕ ಕಾರ್ಯಗಳು ನಡೆಯಬೇಕಷ್ಟೆ. ಹಿಂದಿನ ಯೋಜನೆಯಲ್ಲಿ ತೆಗೆದಿರಿಸಿದ ಐದು ಕೋಟಿ ರೂಪಾಯಿಗಳೂ ವೆಚ್ಚವಾಗದೆ ಹೋದರೂ ಸಾರ್ವಜನಿಕ ಅಭಿಪ್ರಾಯವನ್ನು ಪ್ರತಿಬಿಂಬಿಸುವ ಪ್ರಯತ್ನ ನಡೆದಿದೆ.

ರಾಷ್ಟ್ರದಲ್ಲಿ ಮೆಡಿಕಲ್ ಕಾಲೇಜುಗಳನ್ನು ಸ್ಥಾಪಿಸಿದ ಮಾತ್ರಕ್ಕೆ ವೈದ್ಯರು ದೊರೆತಂತಾಗಲಿಲ್ಲ. ಇಂದು ಇರುವ ಕಾಲೇಜುಗಳಲ್ಲಿ ಕೂಡ ಪರಿಣತರಾದ ಶಿಕ್ಷಕರ ಅಭಾವವಿದೆಯೆಂದು ಹೇಳುವಾಗ, ವೈದ್ಯರ ಅಭಾವಕ್ಕಿಂತಲೂ ವೈದ್ಯಕೀಯ ಶಿಕ್ಷಕರ ಅಭಾವವು ಅಪಾಯಕಾರಿಯೆನ್ನಬೇಕು. ಇದರಿಂದ ಈ ಅಪಾಯವನ್ನು ದೂರೀಕರಿಸುವ ಪ್ರಯತ್ನವೂ ಅತ್ಯವಶ್ಯ. ಇದಕ್ಕಾಗಿ ಕೇಂದ್ರ ಆರೋಗ್ಯ ಮಂತ್ರಿ ಶಾಖೆಯು ಇಡಿಯ ದೇಶದಲ್ಲಿ ಐದು "ರಿಜಿನಲ್ ಪೋಸ್ಟ್ ಗ್ರೇಜುವೇಟ್" ಕೇಂದ್ರಗಳನ್ನು ತೆರೆಯಲು ನಿರ್ಧರಿಸಿದೆ; ಇದರಲ್ಲಿ ಕೊರತೆ ಬೀಳುವ ಸುಮಾರು ಎರಡು ಸಾವಿರ ವೈದ್ಯಕೀಯ ಶಿಕ್ಷಕರನ್ನು ಮತ್ತು ಪರಿಣತ ತಜ್ಞರನ್ನು ತರಬೇತಿಗೊಳಿಸಲಾಗುವುದು. ಈಗ ಸ್ವೀಕರಿಸಿದ ಯೋಜನೆಯ ಪ್ರಮಾಣವು ಮೂಲ ಬೇಡಿಕೆಯ ೩೦ ಸೇ. ಐವತ್ತರಷ್ಟಿಲ್ಲವಾದರೂ ರಾಷ್ಟ್ರದ ಯೋಜನೆಯ ರೂಪವನ್ನು ಹೊಂದಿಕೊಂಡು ಮತ್ತಿತರ ಉಪರೂಪಗಳನ್ನು ಅಂಕಿಸ ಬೇಕಾಗಿರುವುದರಿಂದ ಇದು ತೀರ ಅತೃಪ್ತಿಕರವೆನ್ನುವಂತಿಲ್ಲ. ಇಷ್ಟು ಹಣವನ್ನು ವ್ಯಯಿಸಿ ನಿಯೋಜಿತ ಫಲವನ್ನು ನಾವು ಪಡೆದೆವೆಂದರೆ, ನಮ್ಮ ಆರೋಗ್ಯ ಸಮಸ್ಯೆಯ ಪರಿಹಾರದ ದಿನ ನಿಕಟವಾಗುತ್ತಿದೆಯೆಂದು ಹೇಳಬಹುದು.

ಸರ್ವಪಕ್ಷ ಸಮ್ಮೇಳನ

ಮುಂದಿನ ಸಪ್ಟಂಬರ ತಿಂಗಳಿನಲ್ಲಿ ಭಾರತದಲ್ಲಿ ಜಾತಿ—ಭಾಷೆಗಳ ನೆಪೆಯಿಂದಾಗುವ ಗೊಂದಲಗಳನ್ನೂ ಅನೈಕ್ಯ ಬೀಜವನ್ನೂ ಕಿತ್ತುಹಾಕಿ ರಾಷ್ಟ್ರೀಯತೆಯ ಭಾವನೆಯನ್ನು ಭಾರತೀಯರಲ್ಲಿ ಹುಟ್ಟಿಸುವುದಕ್ಕೆ ಮತ್ತದನ್ನು ಬೆಳೆಸುವುದಕ್ಕೆ ಅನುಕೂಲವಾಗುವಂತೆ ಸಕಲ ರಾಜಕೀಯ ಪಕ್ಷಗಳ ನಾಯಕರ ಸಮ್ಮೇಳನವೊಂದನ್ನು ನಡೆಸುವ ಇಚ್ಛೆ ಪ್ರಧಾನಿ ನೆಹರುಗಳಲ್ಲಿ ಹುಟ್ಟಿದೆ. ಈ ಮೊದಲಿಗೂ ಇದೇ ಮಾದರಿಯ ಸಮ್ಮೇಳನ ನಡೆಯಬೇಕೆಂಬ ವಾದವು ಅಲ್ಲಲ್ಲಿ ಎದ್ದಿದ್ದರೂ ಪ್ರಧಾನಿಯವರು ತಮ್ಮ ಇಂಗಿತವೇನೆಂಬುದನ್ನು ಬಹಿರಂಗ ಪಡಿಸಿರಲಿಲ್ಲ. ಜುಗುಪ್ಸೆ ಹುಟ್ಟಿಸುವ, ಸಮಸ್ಯೆಗಳ ಪರಿಹಾರದ ಬದಲು ಹೊಸ ಸಮಸ್ಯೆಗಳನ್ನೇ ತಂದೊಡ್ಡುವ ಸಭೆ-ಸಮ್ಮೇಳನಗಳಿಗೂ ನಮ್ಮಲ್ಲಿ ಕೊರತೆಯಿಲ್ಲ. ಅಂತೆಯೇ ಸಂತೆಯ ಮಂದಿ ನೆರೆದಂತೆ ನೆರೆದು ನೆರೆಯ ನೀರಿನಂತೆ ಜಾರುವವರ ಸಮ್ಮೇಳನಗಳೂ ಆಗಾಗ ನೆರವೇರುತ್ತಿರುತ್ತವೆ. ಅದೇನಿದ್ದರೂ ರಾಷ್ಟ್ರೀಯ ಏಕತೆಯ ಮಹಾ ಪ್ರಶ್ನೆಯೊಂದನ್ನು ಉತ್ತರಿಸಲು ಈ ಸಮ್ಮೇಳನವು ಸಹಾಯಕವಾಗುವುದಾದರೆ, ಅದು ಸೇರುವುದು ಬಹು ಸಂತೋಷ. ಇಲ್ಲವಾದರೂ ಭಿನ್ನ ಭಿನ್ನಾಭಿಪ್ರಾಯದ ಎಲ್ಲ ರಾಷ್ಟ್ರೀಯ ಪಕ್ಷಗಳ ನಾಯಕರು ಒಂದುಸೇರುವ ಸಂದರ್ಭ ಬರುವುದಾದರೆ, ಅದೂ ಸ್ವಾಗತಾರ್ಹ. ಯು. ಎನ್. ಒ. ಒಂದಿಲ್ಲವಾದರೆ, ರಶ್ಯ—ಅಮೆರಿಕೆಗಳ ಪ್ರತಿನಿಧಿಗಳನ್ನು ಒಟ್ಟಿಗೆ ಕಾಣುವುದು ಸಾಧ್ಯವೋ ಅಸಾಧ್ಯವೋ ಹೇಳಬಾರದು; ಆದರೆ, ಈ ಸಮ್ಮೇಳನ "ಯುನೋ"ದ ಪ್ರತಿರೂಪವಾಗದಿರಲಿ ಎಂದು ಹಾರೈಕೆ ಬೇಕಾಗಿದೆ.

ಸಂಕ್ಷಿಪ್ತ ಸುದ್ದಿಗಳು

ಡಾ| ಮೆಹತಾಬ

ಸಂಪನ್ನ ಸಂತಾನದಲ್ಲಿ ಜನಿಸಿ ಗುಣಸಂಪನ್ನರಾದ ಹರೆಕೃಷ್ಣ ಮೆಹತಾಬರನ್ನು ಯಾರೂ ಮರೆಯುವಂತಿಲ್ಲ. ಒಡಿಸ್ಸ ರಾಜ್ಯದಲ್ಲಿ ಬಿಕ್ಕಟ್ಟಿನ ಪ್ರಸಂಗದಲ್ಲಿಯೂ ಮಂತ್ರಿಮಂಡಳಿಯನ್ನು ಸ್ಥಾಪಿಸಿ ಅಲ್ಲಿ ಆಡಳಿತೆಯ ಸೂತ್ರಧಾರರಾಗಿ ಮುನ್ನಡೆದ ಧೀರರಿವರು. ಪ್ರಾದೇಶಿಕ ಕಾಂಗ್ರೆಸ್ಸಿನ ವರ್ತನೆಯಿಂದ ನೊಂದ ಮೆಹತಾಬರು ಅಲ್ಲಿ ನಡೆದ ಮಧ್ಯಾವಧಿ ಚುನಾವಣೆಯಲ್ಲಿ ಸ್ಪರ್ಧಿಸಲಿಲ್ಲ. ವಿಜೇತ ಪಟನಾಯಕರೂ ಇವರನ್ನು ನೆನೆದುಕೊಂಡರೆಂದರೆ, ಇವರ ಉನ್ನತ ವ್ಯಕ್ತಿತ್ವದ ಪರಿಚಯವಾಗುವುದು. ಇಂತಹ ಡಾಕ್ಟರ ಮೆಹತಾಬರು ಸ್ವತಂತ್ರಪಕ್ಷ ಸೇರುವರೆಂಬ ಕಿಂವದಂತಿ ಗುಣುಗತೊಡಗಿದೆ. ರಾಜಾಜಿಯವರನ್ನು ಮದ್ರಾಸದಲ್ಲಿ ಮೆಹತಾಬರು ಕಂಡು ಮಾತಾಡಿದುದು ಈ ಊಹೆಗೆ ಕಾರಣವಾದರೆ, ಅವರ ಉದ್ದೇಶವು ರಹಸ್ಯವಿರುವುದರಿಂದ ಇದಕ್ಕೆ ಪುಷ್ಟಿದೊರೆಯುತ್ತದೆ.

ವ್ಯರ್ಥ ಆಪಲಾಪ

ಚೌ ಎನ್ ಲಾಯ್ ಬ್ರಹತ್ ಚೀನದ ಪ್ರಧಾನಿಗಳಾಗಿದ್ದಾರೆ. ಭಾರತದ ಭೂಭಾಗವನ್ನು ಸಾಮ್ರಾಜ್ಯವಾದಿ ಚೀನವು ಆಕ್ರಮಿಸಿರುವುದು ಈಗ ಜಗಜ್ಜನಿತವಾದರೂ ಆ ಸತ್ಯವು ಲೈಯವರ ಕಿವಿದೆರೆಗಿನ್ನೂ ಬಡಿದಂತಾಗಿಲ್ಲ. ಚೌರವರು ದೂರದ ಪೇಕಿಂಗಿನಲ್ಲಿ ಕುಳಿತು ಭಾರತದ ಅಹಿತ ಬಯಸುವ ಕೃತ್ಯ ನಡೆಸುತಿದ್ದರೆ, ಭಾರತದೊಳಗಿರುವ ಅವರ ಕೈಗೊಂಬೆಗಳು ಮತ್ತಷ್ಟು ಹೇಯ ಕೆಲಸ ಮಾಡುತ್ತಿವೆ. ಕಾಡು ಪ್ರಾಣಿಗಳು ನಮಗಿದಿರಾದಾಗ ಎಚ್ಚರಿಕೆಯಿಂದಲೇ ನಡೆಯುತ್ತೇವೆ; ಆದರೆ, ಸಜ್ಜನನಂತೆ ಅಭಿನಯಿಸಿ ವಂಚಿಸುವವನ ಮೇಲೆ ನಮಗೆ ಸಂದೇಹವೇ ಹುಟ್ಟುವುದಿಲ್ಲ. ಭಾರತದ ಕಮ್ಯುನಿಸ್ಟ ನಾಯಕರೊಬ್ಬರು ಚೀನವು ಆಕ್ರಮಣ ಮಾಡಿಯೇ ಇಲ್ಲ; ಭಾರತದ ಏಕ ಪಕ್ಷೀಯ ನೀತಿ ಸರಿಯಲ್ಲ ಎಂಬ ಅಪಲಾಪವೆಬ್ಬಿಸಿದ್ದಾರೆ!

ಪಾನಪ್ರತಿಬಂಧ

ಪಾನಪ್ರತಿಬಂಧದ ವಿಸ್ತರಣೆ ಹಾಗೂ ಆ ಸಂಬಂಧದಲ್ಲಿ ಸಾಬ್ಯಾನಿಟ್ಟನಿಂದ ಪ್ರ

ಉಡ್ಪಿ ಡಿ. ಮು. ಕೋರ್ಟಿನಲ್ಲಿ

RIA. 64/1961 O.S 172/1960.

ಕೃಷ್ಣ ಭಟ್ಟ ಅರ್ಜಿದಾರ —ವಾದಿ

ಮತ್ತು

1 ಸದಾಶಿವ ಹೆಗಡೆ ಮಗ ಸಂಕಯ್ಯ ಸೆಟ್ಟಿಯ ಮಗ ಕಡೆಕಾರ್ ಗ್ರಾಮ

—1ನೆ ಯದ್ರಿ 1ನೆ ಪ್ರತಿವಾದಿ

ಮೇಲ್ಕಂಡ ವ್ಯಾಜ್ಯದಲ್ಲಿ ಕೊಡುವದಾದ ಪ್ರಿಲಿಮಿನರಿ ಡಿಕ್ರಿಯನ್ನು ಫೈನಲ್ ಮಾಡಬೇಕೆಂತ ಅರ್ಜಿದಾರನ ಕಡೆಯಿಂದ ದಾಖಲಾದ ಸದರಿ ಅರ್ಜಿಯು 1ನೆ ಪ್ರತಿವಾದಿಗೆ ನೋಟೀಸು ಮಾಡುವ ಬಗ್ಗೆ ತಾ 3-7-1961 ಕ್ಕೆ ತನ್ನಗೆ ಯಿಟ್ಟಿದೆ ಆತಗೆ ಆಕ್ಷೇಪಯಿದ್ದರೆ ಸದರಿ ತಾರೀಕಿನ ಬೆಳಿಗ್ಗೆ 10 ಗಂಟೆಗೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದೆಂಬ ಸಂಗ್ತಿ ತಿಳಿಸಿಯದೆ.

K. Laxminarayana Aithal,
Vakil for plaintiff.

ಉಡ್ಪಿ, ತಾ. 26—6—1961

ಅಲ್ಲಲ್ಲಿಯ ಸುದ್ದಿಸಾರ

ಡಿಸ್ಟ್ರಿಕ್ಟ್ ಕಮಿಶನರರ ಸ್ಪಷ್ಟೀಕರಣ— ಬೋರ್ಡ್ ಹೈಸ್ಕೂಲುಗಳಲ್ಲಿ ಫಸ್ಟ್ ಫಾರ್ಮಿಗೆ (6ನೇ ವರ್ಗಕ್ಕೆ) ಪ್ರವೇಶಗಳನ್ನು ರದ್ದುಗೊಳಿಸುವುದರಿಂದ ಉಂಟಾಗಬಹುದಾದ ಅಸೌಕರ್ಯಗಳ ಕುರಿತು ದ. ಕ. ಜಿಲ್ಲೆಯ ಡಿಸ್ಟ್ರಿಕ್ಟ್ ಕಮಿಶನರರು ಸ್ಪಷ್ಟೀಕರಣವಿತ್ತಿದ್ದು ಅದರ ಸಾರಾಂಶವಿಂತಿದೆ.

ಸರಕಾರವು ಕೈಗೊಂಡ ಹೊಸ ಶೈಕ್ಷಣಿಕ ಯೋಜನೆಯಂತೆ ಪ್ರಾಥಮಿಕ ಶಿಕ್ಷಣವು ಮೊದಲಿನ 7 ವರ್ಷಗಳ ವಿದ್ಯಾಭ್ಯಾಸವನ್ನೂ ಅನಂತರದ ಮಾಧ್ಯಮಿಕ ಅಥವಾ ಹೈಸ್ಕೂಲಿನ ಶಿಕ್ಷಣವು ಮೇಲಿನ ನಾಲ್ಕು ವರ್ಷಗಳ ವಿದ್ಯಾಭ್ಯಾಸವನ್ನೂ ಒಳಗೊಂಡಿದೆ.

ಈಗಾಗಲೇ ಒಂದರಿಂದ ಆರು ಮತ್ತು 8 ಹಾಗೂ 9ನೆ ವರ್ಗಗಳಲ್ಲಿ ಹೊಸ ಪಾಠಪಟ್ಟಿ ಜ್ಯಾರಿಗೆ ಬಂದಿದೆ. ಇದರಿಂದಾಗಿ ಹೈಸ್ಕೂಲಿನ 1ನೇ ಫಾರ್ಮ್ ಎಂಬುದು 6ನೇ ತರಗತಿಯಾಗಿ ಪರಿವರ್ತನೆಗೊಂಡಿದೆ. ಹೈಸ್ಕೂಲಿನ ಹಳೆಯ 1 ಫಾರ್ಮಿನ ಮತ್ತು ಹಾಯರ್ ಎಲಿಮೆಂಟರಿ ಶಾಲೆಯ ಹಳೆಯ 6ನೇ ತರಗತಿಯ ಪಾಠ ಪಟ್ಟಿಗಳು ಪರಸ್ಪರ ಭಿನ್ನವಾಗಿವೆ, ಇತ್ತೀಚೆಗೆ ಅವೆರಡರ ಪಾಠ ಪಟ್ಟಿಗಳಲ್ಲಿ ಸಮಾನತೆಯನ್ನು ತರಲಾಗಿದ್ದು, 6ನೇ ತರಗತಿ ಎಲ್ಲಿರಬೇಕೆಂಬ ಪ್ರಶ್ನೆಯೇ ಇಲ್ಲ.

9ನೇಯ ವರ್ಗದಲ್ಲಿ ಆಯ್ದ ವಿಷಯಗಳನ್ನು ಕಲಿಸಬೇಕು. ಆಗ ಭೌತ ಶಾಸ್ತ್ರ ಮತ್ತು ರಸಾಯನ ಶಾಸ್ತ್ರಗಳ ಶಿಕ್ಷಣವನ್ನೀಯಬೇಕಾಗುವುದು. ಪ್ರಯೋಗ ಶಾಲೆಗಳ ಸೌಕರ್ಯ ಬೇಕಾಗುವುದು. ಹೊಸ ಪ್ರವೇಶಗಳು ಹೆಚ್ಚುತ್ತಿರುವುದರಿಂದ 8ನೆಯ ಮತ್ತು 9ನೆಯ ತರಗತಿಗಳಲ್ಲಿ ಹೆಚ್ಚಿನ ವಿಭಾಗಗಳು ತೆರೆಯಲು ಒತ್ತಾಯ ಬರುತ್ತಿರುವುದರಿಂದ ಅವನ್ನು ಒದಗಿಸುವುದು ಅಗತ್ಯ ಆದರೆ, ಪ್ರಕೃತದ ಶಾಲಾ ವ್ಯವಸ್ಥೆಗಳು ಸರಿಯಿಲ್ಲದಾಗೂ ವಿಜ್ಞಾನ ಪ್ರಯೋಗ ಶಾಲೆಗಳನ್ನು ತೆರೆಯುವುದು ಕಠಿಣವೆಂದು ಬೋರ್ಡ್ ಹೈಸ್ಕೂಲುಗಳ ಮುಖ್ಯೋಪಾಧ್ಯಾಯರುಗಳು ವರದಿ ಮಾಡಿರುವರು.

ಆದರೆ ಡ್ಯಾರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಇವರ ಸರ್ಕ್ಯುಲರ್ ನಂ. B6/1016-1MB-5/61-62 (Dated 7.6.61) ಇದರ ಪ್ರಕಾರ ಮುಂದಿನ ವರ್ಷಗಳಲ್ಲಿ ಹೊಸ ವಿಭಾಗಗಳ ಸೌಕರ್ಯಗಳನ್ನೊದಗಿಸುವುದು ಬಹು ಕಠಿಣವಾಗಿದೆ. ಆದ್ದರಿಂದ ಹೈಸ್ಕೂಲುಗಳಲ್ಲಿ 6ನೆಯ ತರಗತಿಗೆ ಪ್ರವೇಶಗಳನ್ನು ನಿಲ್ಲಿಸಬೇಕಾಗುತ್ತದೆ. ಇದರಿಂದ ಆಗಬಹುದಾದ ತೊಂದರೆಗಳನ್ನು ನಿವಾರಿಸಲು ವಿದ್ಯಾರ್ಥಿಗಳ ಪ್ರವೇಶಕ್ಕಾಗಿ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಗಳಲ್ಲಿ 6ನೆಯ ತರಗತಿಯ ಸೌಲಭ್ಯವನ್ನೀಯಲಾಗುತ್ತದೆ. ಇದೇ ರೀತಿ 6ನೆಯ ತರಗತಿಗಳನ್ನು ತೆರೆಯಲು ಮುನ್ಸಿಪಲ್ ಮತ್ತು ಪಂಚಾಯತುಗಳ ಪ್ರಾಥಮಿಕ ಶಾಲೆಗಳಿಗೆ ಅನುಮತಿಯನ್ನೀಯಲಾಗುತ್ತದೆ. ಹಾಯರ್ ಎಲಿಮೆಂಟರಿ ಶಾಲೆಗಳಿಲ್ಲದ ಕೇಂದ್ರಗಳಲ್ಲಿ 6ನೆಯ ವರ್ಗಗಳು ತೆರೆಯಲ್ಪಟ್ಟಿವೆ ಆದ್ದರಿಂದ ಬೋರ್ಡ್ ಹೈಸ್ಕೂಲುಗಳಲ್ಲಿ 6ನೆಯ ತರಗತಿಗಳಿಗೆ ಪ್ರವೇಶಗಳನ್ನು ರದ್ದುಗೊಳಿಸುವುದರಿಂದ ಯಾವ ತೊಂದರೆಯೂ ಉಂಟಾಗಲಾರದು.

ವಿದ್ಯಾರ್ಥಿ ವೇತನ—ದ. ಕ. ದ್ರಾವಿಡ ಬ್ರಾಹ್ಮಣ ಶಿಕ್ಷಣ ಸಂಘ, ಉಡುಪಿ, ಇವರು 1961ನೇ ವರ್ಷದ ಸಾಲಿನಲ್ಲಿ, ಕಾಲೇಜು ಶಿಕ್ಷಣ ಹೊಂದುತ್ತಿರುವ ಬಡ ಹಾಗೂ ಯೋಗ್ಯ ದ್ರಾವಿಡ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಸಾಲ ರೂಪದ ವೇತನಗಳನ್ನು ವಾರ್ಷಿಕ ರೂಪಾಯಿ 500—00ಕ್ಕೆ ಮೀರದಂತೆ ಒದಗಿಸಲಿರುವರೆಂದೂ, ಕಳೆದ ವಾರ್ಷಿಕ ಪರೀಕ್ಷೆಯಲ್ಲಿ ಸರಾಸರಿ 60% ಗುಣಗಳನ್ನು ಪಡೆದ ವಿದ್ಯಾರ್ಥಿಗಳು ರೂ. 1.15 M.O. ಮಾಡಿ ಅರ್ಜಿ ಫಾರಮು ಮತ್ತು ಇತರ ವಿವರಗಳನ್ನು ಪಡಕೊಂಡು ತಾ. 15—8—1961ರೊಳಗೆ ಅರ್ಜಿಗಳನ್ನು ಹಾಕಬಹುದೆಂದೂ ಸಂಘದ ಕಾರ್ಯದರ್ಶಿಗಳವರು ತಿಳಿಸುತ್ತಾರೆ.

ನಾಟ್ಯ ಶಿಕ್ಷಣಕ್ಕಾಗಿ ಶಿಷ್ಯವೃತ್ತಿ

ಧಾರವಾಡ ತಾ. 22. ದಿಲ್ಲಿಯ ಸಂಗೀತ ನಾಟಕ ಅಕಾಡೆಮಿಯವರು ಆರಂಭಿಸಿರುವ ನಾಟ್ಯ ಶಿಕ್ಷಣ ಕೇಂದ್ರದಲ್ಲಿ ಸೌ. ಭಾರತೀ ಶ್ರೀ ಹಾವನೂರರಿಗೆ ಶಿಷ್ಯವೃತ್ತಿ ದೊರೆತಿದ್ದು ಜುಲೈ ತಿಂಗಳ ಆರಂಭದಲ್ಲಿ ಅವರು ದಿಲ್ಲಿಗೆ ಹೋಗಲಿದ್ದಾರೆ. ಶ್ರೀಮತಿ ಹಾವನೂರರು ನಾಟಕವನ್ನೇ ತನ್ನ ಕಾರ್ಯಕ್ಷೇತ್ರವನ್ನಾಗಿ ಇರಿಸಿಕೊಂಡಿರುವ ಸ್ಥಳೀಯ ಕಲೋದ್ಧಾರಕ ಸಂಘದ ಸದಸ್ಯೆಯಾಗಿದ್ದು, ಇದುವರೆಗೆ ೨೫ಕ್ಕೆ ಮೇಲ್ಪಟ್ಟು ನಾಟಕಗಳಲ್ಲಿ ಭಾಗವಹಿಸಿದ್ದಾರೆ. ಸ್ಪರ್ಧೆಗಳು ಏರ್ಪಟ್ಟದ್ದಲ್ಲೆಲ್ಲ ಪ್ರಥಮ ಸ್ಥಾನವನ್ನು ಪಡೆದಿದ್ದಾರೆ.

ಈ ತರಬೇತಿಯು 2 ವರ್ಷಗಳ ಅವಧಿಯದಿದ್ದು, ಅದರಲ್ಲಿ ನಾಟಕ ಲೇಖನ, ಅಭಿನಯ, ರಂಗ ನಿರ್ಮಿತಿ, ವೇಷಭೂಷ, ಪ್ರಕಾಶ ಯೋಜನೆ ಮುಂತಾದ ವಿಷಯಗಳನ್ನು ಕಲಿಸಲಾಗುತ್ತದೆ. ಈ ವ್ಯಾಪಕವಾದ ನಾಟಕ ತರಬೇತಿಯನ್ನು ಹೊಂದುವ ಉತ್ತರ ಕರ್ನಾಟಕದ ನಾಟ್ಯ ವಿಲಾಸೀ ಕಲಾವಿದರಲ್ಲಿ ಶ್ರೀಮತಿ ಹಾವನೂರರು ಮೊದಲಿಗರೆನ್ನಬಹುದು.

ಮಹಾಸಭೆ— ಮುಂಬಯಿ ದ. ಕ. ಬ್ರಾಹ್ಮಣರ ಸಂಘದ ವಾರ್ಷಿಕ ಮಹಾಸಭೆಯು ದಿನಾಂಕ 18ರಂದು ಸಂಘದ ಭುಜಂಗರಾವ್ ಹಾಲಿನಲ್ಲಿ ಶ್ರೀ ಕೆ. ಭುಜಂಗ ರಾಯರ ಅಧ್ಯಕ್ಷತೆಯಲ್ಲಿ ಜರುಗಿತು.

ಪ್ರಾರ್ಥನೆಯ ಬಳಿಕ ಸಂಘದ ವಾರ್ಷಿಕ ವರದಿ ಮತ್ತು ವರ್ಷದ ಆದಾಯ ವೆಚ್ಚದ ಪಟ್ಟಿಯನ್ನು ಸಭೆಯ ಮುಂದಿಡಲಾಗಿ ಮಂಜೂರಾಯಿತು. ತರುವಾಯ ಸಂಘದ (ಅಸೋಸಿಯೇಶನಿನ) ಕ್ರಮನಿಬಂಧನೆಯ ಪ್ರಕಾರ ಶ್ರೀ ಯು. ವಿ. ಉಪಾಧ್ಯಾಯರನ್ನ ತಿರುಗಿ ಸಂಘದ ಕಟ್ಟಡದ ಸಮಿತಿಗೆ ನೇಮಿಸಲಾಯಿತು.

ಅಧ್ಯಕ್ಷರು ಮಾತಾಡುತ್ತಾ ನಾವು ಆದಷ್ಟು ಬೇಗನೆ ಶ್ರೀಕೃಷ್ಣ ಪ್ರತಿಷ್ಠೆಯನ್ನು ಮಾಡಲಿಚ್ಛಿಸಿರುವುದಾಗಿಯೂ ಅದಕ್ಕೆ ನಿಮ್ಮೆಲ್ಲರ ನೆರವು ಬೇಕಾಗಿದೆಯೆಂದೂ ಸಭಿಕರೊಡನೆ ಕೇಳಿಕೊಂಡರು.

ಸಂಘದ ಹೊಸ ಕಾರ್ಯಕಾರಿ ಸಮಿತಿಗೆ ಶ್ರೀ ಕೆ. ಭುಜಂಗರಾಯರು ಅಧ್ಯಕ್ಷರಾಗಿಯೂ, ಡಾ. ಲಲಿತಾ ರಾವ್ ಮತ್ತು ಶ್ರೀ ಎ. ವೆಂಕಟಬ್ರಾವ್‌ರವರು ಉಪಾಧ್ಯಕ್ಷರಾಗಿಯೂ, ಶ್ರೀ ಬಿ. ಸುಬ್ಬ ರಾವ್ ಮತ್ತು ಶ್ರೀ ಯು. ರಾಮ ರಾವ್ ಗೌ. ಕಾರ್ಯದರ್ಶಿಗಳಾಗಿಯೂ, ಶ್ರೀ ಕೆ. ಆರ್. ಹೆಬ್ಬಾರ್ ಇವರುಗಳು ಗೌ. ಕೋಶಾಧಿಕಾರಿಗಳಾಗಿಯೂ ಆರಿಸಲ್ಪಟ್ಟರು.

ಶ್ರೀಗಳಾದ ಎ. ಆರ್. ಆಲೆವೂರು, ಕೆ. ಆನಂದ ಹೆಬ್ಬಾರ್, ಕಾಪು ವೆಂಕಟರಾವ್, ಮತ್ತು ಶ್ರೀಮತಿ ಲಲಿತಾ ಭಟ್ ಇವರನ್ನು ಗೌ. ಸದಸ್ಯರಾಗಿಯೂ, ಶ್ರೀ ಪಿ. ಸುಬ್ರಾವ್ ಗೌ. ಲೆಕ್ಕ ಪರಿಶೋಧಕರಾಗಿಯೂ, ಶ್ರೀ ಯಚ್. ಸುರೇಶ್‌ರವರು ಗೌ. ಕಾನೂನು ಸಲಹೆಗಾರರಾಗಿಯೂ ಆರಿಸಲ್ಪಟ್ಟರು.

ನಂತರ ಸಭಿಕರಿಗೂ, ಅಧ್ಯಕ್ಷರಿಗೂ ಕಾರ್ಯದರ್ಶಿಗಳು ಧನ್ಯವಾದಗಳನ್ನರ್ಪಿಸಲಾಗಿ ಅಂದಿನ ಸಭೆಯು ಮುಕ್ತಾಯವಾಯಿತು.

ಹಿಂದೀ ಪ್ರಚಾರ ಸಮಿತಿ—ಉಡುಪಿ, ಇದರ ಮಹಾ ಸಭೆಯು ತಾ. 18.6.61 ರಂದು ಶ್ರೀ ಎ. ಜೆ. ಆಲ್ಸೆಯವರ ಅಧ್ಯಕ್ಷತೆಯಲ್ಲಿ ಜರಗಿ, 1960ರ ವಾರ್ಷಿಕ ವರದಿಯನ್ನೂ 1960ರ ಪರಿಶೋಧಿತ ಆಯವ್ಯಯದ ಪಟ್ಟಿಯನ್ನೂ 1961ರ ಬಗ್ಗೆ ಮುಂಗಡಪತ್ರವನ್ನೂ ಸರ್ವಾನುಮತದಿಂದ ಸ್ವೀಕರಿಸಲಾಯ್ತು. 1961ನೇ ವರ್ಷದ ಬಗ್ಗೆ ಈ ಕೆಳಗಿನ ಹೊಸ ಕಾರ್ಯಕಾರಿಣಿ ಸಮಿತಿಯನ್ನು ಆರಿಸಲಾಯ್ತು. ಶ್ರೀ ಟಿ. ಎ. ಪೈ, (ಅಧ್ಯಕ್ಷ) ಶ್ರೀ ಎ. ಕೃಷ್ಣರಾವ್ ಮತ್ತು ಶ್ರೀ ಪಿ. ಮುಖ್ಯಪ್ರಾಣ ತಂತ್ರಿ (ಉಪಾಧ್ಯಕ್ಷರು) ಶ್ರೀ ಸಿ. ಮಹಾಬಲ ನಾಯಕ್ (ಕಾರ್ಯದರ್ಶಿ) ಕುಮಾರಿ ಯು. ಚಂದ್ರಭಾಗಿ (ಜೊತೆ ಕಾರ್ಯದರ್ಶಿ) ಶ್ರೀ ಎ. ಜೆ. ಆಲ್ಸೆ (ಕೋಶಾಧ್ಯಕ್ಷ) ಶ್ರೀ ಕೆ. ನಾರಾಯಣ ಐತಾಳ, ಕುಮಾರಿ ಯು ನಾರಾಯಣಿ, ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆ, ಶ್ರೀ ಎಸ್. ಕೆ. ಶ್ರೀಪತಿ ಆಚಾರ್ಯ, ಶ್ರೀ ಬಿ ಲಕ್ಷ್ಮೀನಾರಾಯಣ ನೆಲ್ಲಿ, ಶ್ರೀ ಎಸ್. ಕುಮಾರಸ್ವಾಮಿ ರಾವ್, ಶ್ರೀ ಉ. ಲಕ್ಷ್ಮೀನಾರಾಯಣ ಕಿಣಿ, ಶ್ರೀ ಕೆ. ಎ. ಗಾಣಿಗ ಮತ್ತು ಶ್ರೀ ಪಿ. ಎಸ್. ಮಧ್ಯಸ್ಥ (ಸದಸ್ಯರು).

ತರುವಾಯ ಗೌರವ ಲೆಕ್ಕಪರಿಶೋಧಕರಾಗಿ ಶ್ರೀ ಎಚ್. ನರಹರಿರಾಯರು ನೇಮಿಸಲ್ಪಟ್ಟರು.

ಕೆಲ ಕಾಫಿ ತೋಟಗಳ ಕೆಲಸಗಾರರ ಪರಿಸ್ಥಿತಿ— ಮೈಸೂರು ಸ್ಟೇಟ್ ಪ್ಲಾಂಟೇಶನ್ ಲೇಬರ್ ಅಸೋಸಿಯೇಶನ್ ಕಾರ್ಯದರ್ಶಿ ಶ್ರೀ ಎ. ರಾಮಣ್ಣನವರ ಹೇಳಿಕೆ.

ನಾನು ಮತ್ತು ವಿಧಾನ ಸಭಾ ಸದಸ್ಯ ಶ್ರೀ ಬಿ. ರಾಚಯ್ಯ ಕಾರ್ಮಿಕನಾಯಕರುಗಳಾದ ಸರ್ವ ಶ್ರೀ ಟಿ. ಎಸ್. ಸುಬ್ಬಣ್ಣ, ಎಚ ಕಂಠಯ್ಯ ಕೆ. ಬಿ. ಶಿವಯ್ಯನವರು ಮೈಸೂರು ಜಿಲ್ಲೆಗೆ ಸೇರಿದ ಬಿಳಿಗಿರಿ ಗುಡ್ಡದಲ್ಲಿ ಕಾಫಿ ತೋಟಗಳಲ್ಲಿ ಕೆಲಸ ಮಾಡುತ್ತಿರುವ ಕೆಲಸಗಾರರ ಪರಿಸ್ಥಿತಿಯನ್ನು ಅರಿಯಲು ಇತ್ತೀಚೆಗೆ ಬೆಡುಗುಳಿ, ಗೊರಹಟ್ಟಿ, ಹೊನ್ನಮೇಟಿ ಎಸ್ಟೇಟುಗಳಿಗೆ ಭೇಟಿಯಿತ್ತು ಅಲ್ಲಿಯ ಕೆಲಸಗಾರರ ಸ್ಥಿತಿಗತಿಗಳನ್ನು ಅರಿತುಕೊಂಡೆವು.

ಪ್ಲಾಂಟೇಶನ್ ಲೇಬರ್ ಆಕ್ಟ್ ಜಾರಿಗೆ ಬಂದು ಹತ್ತು ವರ್ಷಗಳಾದರೂ ಈ ಎಸ್ಟೇಟುಗಳ ಪೈಕಿ ಬೆಡುಗುಳಿ ಮತ್ತು ಗೊರಹಟ್ಟಿ ಎಸ್ಟೇಟುಗಳ ಮಾಲೀಕರು ಆ ಕಾನೂನನ್ನೇ ತಿರುವಿ ನೋಡಿದಂತಿಲ್ಲ. ಕೆಲಸಗಾರರಿಗೆ ವಾಸಕ್ಕಾಗಿ ಕೊಟ್ಟಿರುವ ಗೂಡುಗಳಂತಿರುವ ಮನೆಗಳ ಚಿಕ್ಕ ಕೋಣೆಯಲ್ಲಿ ಎರಡು ಸಂಸಾರಗಳು ವಾಸಮಾಡಬೇಕಾಗಿದೆ. ಮನೆಗಳ ಸುತ್ತು ಕೊಳಕು ಕೊಚ್ಚೆಗಳು ಬಹಳ ಅನಾರೋಗ್ಯಕರವಾದ ಜಾಗದಲ್ಲೇ ಆ ಮನೆಗಳೂ ಕಟ್ಟಲ್ಪಟ್ಟಿವೆ. ಈ ವಿಚಾರವನ್ನು ಸಂಬಂಧಪಟ್ಟವರು ಯಾರೂ ವಿಚಾರಿಸಿದಂತೆಯೇ ಕಾಣುತ್ತಿಲ್ಲ. ಪ್ಲಾಂಟೇಶನ್ ಆಕ್ಟಿನಂತೆ ಮನೆಗಳನ್ನು ಕಟ್ಟುವ ವ್ಯವಸ್ಥೆ ಇನ್ನೂ ಆರಂಭಿಸದಿರುವುದು ಶೋಚನೀಯ.

ಹೊನ್ನಮೇಟಿ ಎಸ್ಟೇಟಿನಲ್ಲಿ ಅಲ್ಲಿಯ ಮ್ಯಾನೇಜರ್‌ರವರು 31 ಜನರನ್ನು ಕೆಲಸದಿಂದ ನಿಲ್ಲಿಸಿದ್ದರು. ಮ್ಯಾನೇಜರವರೊಡನೆ ನಡೆಸಿದ ಸಂಧಾನದ ಫಲವಾಗಿ ಖಾಯಂ ಕೆಲಸಗಾರರನ್ನು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳುವುದಾಗಿ ಭರವಸೆ ಇತ್ತಿದ್ದಾರೆ. ಈ ಪ್ರದೇಶ ಬಹಳ ಹಿಂದೆ ಇರುವುದರಿಂದ ಕಾರ್ಮಿಕ ಇಲಾಖೆಯ ಗಮನ ಅತ್ತಕಡೆ ಅಗತ್ಯ.

ತಿಧ್ವನಿಸಿದ ಮೊರೆ ಮೈಸೂರಿನ ಗೃಹ ಮಂತ್ರಿ ಚೆನ್ನಬಸಪ್ಪನವರನ್ನು ಅಪ್ರತಿಭರನ್ನಾಗಿ ಮಾಡಿತು. ಇವಕ್ಕೇನಾದರೂ ಮಾಡಲೇಬೇಕೆಂಬ ದೃಢ ನಿರ್ಧಾರಕ್ಕೆ ಬಂದರವರು. ಮಾಡಿದ ನಿರ್ಧಾರವನ್ನು ನಿರ್ಧಾರದ ರೂಪದಲ್ಲಿಯೇ ಇರಗೊಡದಿರಬೇಕಾದರೆ ಧೈರ್ಯಬೇಕು; ಉತ್ಸಾಹಬೇಕು; ಮಂತ್ರಿ ಸ್ಥಾನದಲ್ಲಿದ್ದವರಿಗೆ ಕರ್ತವ್ಯ ಭಾವನೆಯೂ ಬೇಕು. ಮಂತ್ರಿ ಚೆನ್ನಬಸಪ್ಪನವರು ಸಾಮಾನ್ಯ ಮಂತ್ರಿಗಳಲ್ಲವಾದುದರಿಂದಲೇ ಹಾಸ್ಯಾಸ್ಪದ ನೀತಿಯೆಂದು ಉಪನಾಮ ಪಡೆದ ಪಾನಪ್ರತಿಬಂಧದಲ್ಲೂ ಒಂದು ಅರ್ಥ ಬರುವ ಕುರುಹು ತೋರುತ್ತಿದೆ. ರಾಜ್ಯದ ಮೂಲೆ ಮೂಲೆಗಳಲ್ಲಿ ಸ್ವದೇಶಿ-ವಿದೇಶೀ ಸೆರೆಯ ಬಾಟಲಿಗಳನ್ನು ಹುಡುಕಿ ತೆಗೆದ ವರ್ತಮಾನಗಳು ಬರತೊಡಗಿವೆ.

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 66/1961

ಅಬ್ಬುನ್ ಬ್ಯಾರಿ ಕೂಡಾ — ವಾದಿರು.

ವಾಮನ ಬಾಳಿಗ ಕೂಡಾ — ಪ್ರತಿವಾದಿರು.

2ನೇ ಪ್ರತಿವಾದಿ— B. ಅನಂತ ಯಾನೆ ಪದ್ಮನಾಭ ಬಾಳಿಗ, ವಾಮನ ಬಾಳಿಗರ ಮಗ, ಮಂಗಳೂರು ಪಸರಾ ಪೈಕಿ ಬಂದರದಲ್ಲಿರುವವರು, ಇವರಿಗೆ—

ತಾ. 23—11—1904ರಲ್ಲಾದ ಮೂಲಗೇಣಿ ಚೀಟು ಶರ್ತ ಪ್ರಕಾರ ಬಾಕಿ ಮೂಲಗೇಣಿ ವಸೂಲಿ ಬಗ್ಗೆ ನಿಮ್ಮ ಮೇಲೆ ಮಾಡಿದ ಮೇಲಿನ ದಾವೆಯು ನಿಮ್ಮ ಹಾಜ್ರಾತಿ ಬಗ್ಗೆ ತಾ. 13—7—1961ಕ್ಕೆ ಖ್ಯಾದೆಯಿರುತ್ತದೆ. ನಿಮಗೇನಾದರೂ ಆಕ್ಷೇಪವಿದ್ದರೆ ಆ ದಿನ ಬೆಳಿಗ್ಗೆ 11 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಉದಾಹರಿಸಿಕೊಳ್ಳತಕ್ಕದ್ದೆಂತಲೂ, ತಪ್ಪಿದರೆ ನಿಮ್ಮನ್ನು ಶಿಪ್ಪಾ ಮಾಡಿ ಮುಂದರಿಸಲಾಗುವುದೆಂತಲೂ ಕೋರ್ಟು ಹುಕುಂ ಪ್ರಕಾರ ನಿಮಗೆ ಈ ಮೂಲಕ ತಿಳಿಸಲಾಗಿಯದೆ.

(Sd.) N. Subramanyam,
Advocate for Plffs.

ಮೊಕ್ಕಾಂ: ಪುತ್ತೂರು. ತಾ. 22.6.1961.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R. E. A. 187/61
R. E. P. 273/60
O. S. 519/53

S. ಕೃಷ್ಣಪ್ಪ —ಅರ್ಜಿದಾರ

ತಂಗಮ್ಮ ಯಾನೆ ಶಚಿದೇವಿ ಕೂಡಾ —ಎದ್ರಿರು

3ನೇ ಎದ್ರಿ ಗುಲಾಬಿ, ತಂಗಮ್ಮ ಯಾನೆ ಶಚಿದೇವಿಯ ಮಗಳು. ಉಡುಪಿ ತಾಲೂಕು ನಡುಸಾಲ್ ಗ್ರಾಮದ ಪಡುಬಿದ್ರಿ.

7ನೇ ಎದ್ರಿ ಸಂಜಯ, 8ನೇ ಎದ್ರಿ ಸುಧೀರ, 9ನೆ ಎದ್ರಿ ಸುನಿಲ

—ಮೈನರರು ಗಾರ್ಡಿಯನ್ ಗುಲಾಬಿ, ಇವರಿಗೆ ತಿಳಿಸುವುದೇನೆಂದರೆ—

ನಿಮ್ಮನ್ನು ಮೃತ ಪದ್ಮಾವತಿಯ ವಾರೀಸುದಾರರಾಗಿ ಕಕ್ಷಿಗೆ ಕೂಡಿಸ ಬೇಕೆಂತ ಅರ್ಜಿದಾರನು ದಾಖಲು ಮಾಡಿದ ಅರ್ಜಿಯು ತಾ. 14—7—1961ಕ್ಕೆ ಇರುವುದರಿಂದ ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ಆ ದಿವಸ ಉದಹರಿಸಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರು ಹಾಜ್ರಿಯಲ್ಲಿ ತೀರ್ಮಾನಿಸಲಾದೀತು.

ಬಿ. ಚಿದಾನಂದ ರಾವ್,
ಅರ್ಜಿದಾರನ ವಕೀಲ್.

ಪುತ್ತೂರು, ತಾ. 21—6—'61.

ಶ್ರೀ ಎ. ಬಿ. ಶೆಟ್ರಿ ಸ್ಮಾರಕ ನಿಧಿಗೆ ಸಹಾಯ ಮಾಡಿರಿ

ಸುಲಭ ದರದಲ್ಲಿ
ಶಾಲೆಗಳಿಗೆ ಬೇಕಾಗುವ
ಹೊಸತೂ ಫಾರ್ಮುಗಳೂ
ಹಾಜರಿ ರಿಜಿಸ್ಟ್ರಿಗಳೂ ಸಿಗುತ್ತವೆ
ನವಯುಗ ಪ್ರೆಸ್ ಉಡುಪಿ.

"ನಚಿಕೇತ"ರ
ಇನ್ನೊಂದು ನವೀನ ಕಾದಂಬರಿ—
ಋಣ ಯಾತ್ರೆ
ಇದೀಗ ಪ್ರಕಟವಾಗಿದೆ.
ಬೆಲೆ ರೂ. 1-50 ನ. ಪೈಸೆ.
ಮೊದಲು ಪ್ರಕಟವಾದ ಕಾದಂಬರಿ—
ಭಾವಾರ್ಜನೆ
ಬೆಲೆ ರೂ. 1-25 ನ. ಪೈಸೆ.
ಪ್ರತಿಗಳು ಸಿಗುವ ಸ್ಥಳಗಳು:—
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ

ವಿಜ್ಞಾನ ವಿಸ್ಮಯ

ಆಸಾಮದಲ್ಲಿ ವಿಲಕ್ಷಣ ಯೋಜನೆ

ದುರ್ಗಮ ಪರ್ವತಘಾಟಿಯಲ್ಲಿ ಭೂಕಂಪ ನಡೆಯುವಪ್ರದೇಶದಲ್ಲಿ ವಿಲಕ್ಷಣವಾದ ಅಣೆಕಟ್ಟು ನಿರ್ಮಾಣವಾಗುತ್ತಿದೆಯೆಂದರೆ ಆಶ್ಚರ್ಯಪಡಬೇಡಿರಿ; ಈ ಅಣೆಕಟ್ಟು ಕೇವಲ ಜಲವಿದ್ಯುತ್ಪಾದನೆಗಳಿಗೆ ಮಾತ್ರವಲ್ಲ, ಭೂಕಂಪ ಶಾಸ್ತ್ರಾಭ್ಯಾಸಕ್ಕೂ ಪ್ರೇರಕವಾಗುವುದು.



ನವದೆಹಲಿಯ ಮೆಟಿರೋಲೋಜಿಕಲ್ ವಿಭಾಗದ ಕರ್ಮಶಾಲೆಯಲ್ಲಿ ರೇಡಿಯೋ ಸೋಂಡೆಯನ್ನು ತಯಾರಿಸುತ್ತಾರೆ.

ಆಸಾಮದ ಪರ್ವತ ಪ್ರದೇಶದಲ್ಲಿ ಶಿಲೋಂಗಿನಿಂದ ಸುಮಾರು ಒಂಭತ್ತು ಮೈಲು ದಕ್ಷಿಣಕ್ಕಿರುವ ಬಡಾಪಾನಿಯೆಂಬ ಹಳ್ಳಿಯಲ್ಲಿ ಭಾರತದ ಬೇರೆ ಬೇರೆ ಭಾಗಗಳಿಂದ ಬಂದಿರುವ ಮಜೂರರು ದೊಡ್ಡದೊಂದು ಜಲವಿದ್ಯುದ್ಯೋಜನೆಯ ನಿರ್ಮಾಣಕಾರ್ಯದಲ್ಲಿ ನಿರತರಾಗಿದ್ದಾರೆ. 'ಉಮಿಯಂ' ನದಿಯಲ್ಲಿ ಅಮೇರಿಕೆಯ ಬುಲ್ ಡೋಜರ್ ಸ್ಕ್ರೇಪರ್ ಮೊದಲಾದ ಸಾಧನೋಪಕರಣಗಳಿಂದ ಈ ಯೋಜನೆಯು ರೂಪುಗೊಳ್ಳುತ್ತಿದೆ.

ಈ ಯೋಜನೆಗೆ ತಗಲುವ ಅಂದಾಜು ವೆಚ್ಚ ಸುಮಾರು ೭||ಕೋಟಿ ರೂಪಾಯಿಗಳು. ಇದನ್ನು ಅಮೇರಿಕೆಯು ಸಂಪೂರ್ಣವಾಗಿ ಸಾಲದ ರೂಪದಲ್ಲಿ ವಹಿಸಿಕೊಳ್ಳಲು ಒಪ್ಪಿದೆ. ದೇಶೀಯ ಖರ್ಚನ್ನು ಅಮೇರಿಕೆಯ ಸರಕಾರದ ಕಾನೂನಿನ ೪೮೦ನೆ ಅನುಚ್ಛೇಧದನ್ವಯ ಕೊಡಲಾದ ಸಾಮಾನುಗಳ ಮಾರಾಟದಿಂದ ಬರುವ ಹಣವನ್ನು ಸಾಲದ ಮೊತ್ತಕ್ಕೆ ಜಮಾ ಮಾಡಿಕೊಂಡು ಮತ್ತು ವಿದೇಶವಿನಿಮಯವನ್ನು ವಿಕಾಸ ಋಣ ಯೋಜನೆಯನ್ವಯ ಒದಗಿಸಲಾಗುವುದು. ಈ ಎರಡೂ ವಿಧದ ಸಾಲಗಳನ್ನು ಭಾರತೀಯ ನಾಣ್ಯಗಳ ರೂಪದಲ್ಲಿಯೇ ಮರಳಿಸ ಬೇಕಾಗುವುದು.

ಉಮಿಯಂ ನದಿಯೆಂದರೆ, ಗೋಳಾಡುವ ನದಿಯೆಂದರ್ಥ. ಈ ಯೋಜನೆಯು ೧೯೬೩ರಲ್ಲಿ ಸಂಪೂರ್ಣಗೊಳ್ಳುವುದು. ಆಗ ಇದರಿಂದ ಜಯಂತಿಯಾ ಗುಡ್ಡ ಪ್ರದೇಶ, ಕಾಮರೂಪ ಮತ್ತು ನವಗಾಂವ್ ಜಿಲ್ಲೆಗಳಲ್ಲಿ ಔದ್ಯೋಗಿಕ ವಿಕಾಸಕ್ಕೆ ಸಹಾಯ ದೊರೆಯುವುದು. ಕಾಂಕ್ರೀಟಿನ ಅಣೆಕಟ್ಟಿನ ಹಿಂದೆ ಒಂದು ಬೃಹತ್ ಜಲಾಶಯವು ರೂಪುಗೊಂಡು ಇದರಿಂದ ತೋಟಗಾರಿಕೆ, ಮೀನುಗಾರಿಕೆ ಮೊದಲಾದುವನ್ನು ಅಭಿವರ್ಧಿಸಬಹುದು. ಅನೇಕ ಪ್ರಾಕೃತಿಕ ಸಾಧನ ಮತ್ತು ಉದ್ಯೋಗಗಳ ಅಭಿವೃದ್ಧಿಗೆ ಈ ಯೋಜನೆ ಪ್ರೇರಕ ವಾಗುವುದು.

ಆಸಾಮದ ದೊಡ್ಡ ಪ್ರಾಕೃತಿಕ ಸಾಧನಸ್ರೋತವೆಂದರೆ ಜಲವಿದ್ಯುದ್ಯೋಜನೆಗಳು. ಇವುಗಳನ್ನೇ ಉಳಿದವು ಹೊಂದಿಕೊಂಡಿವೆ. ಆಸಾಮದಲ್ಲಿ ಉಳಿದ ಅಖಂಡ ಭಾರತದಲ್ಲಿ ತಯಾರಿಸುವಷ್ಟು ವಿದ್ಯುತ್ತನ್ನು ಉತ್ಪಾದಿಸ ಬಹುದೆಂದು ಇಂಜಿನಿಯರು ಹೇಳುತ್ತಾರೆ. ಇವರ ಹೇಳಿಕೆಯನ್ನಯ ಆಸಾಮವು ತನ್ನ ಆವಶ್ಯಕತೆಗಳನ್ನು ಪೂರೈಸಿಕೊಂಡು, ಸಮೀಪದ ಬಿಹಾರ ಮತ್ತು ಪಶ್ಚಿಮಬಂಗಾಳ ಗಳಿಗೂ ವಿದ್ಯುತ್ತನ್ನು ಗಣನೀಯ ಪ್ರಮಾಣದಲ್ಲಿ ಒದಗಿಸುವದಿನವೊಂದುಬಂದೇ ಬರುವುದು.

ಉಮಿಯಂ ವಿದ್ಯುತ್ ಕೇಂದ್ರದ ಉತ್ಪಾದನಾಶಕ್ತಿ ೩೬ ಸಾವಿರ ಕಿಲೊವಾಟ್‌ನ್ನು ಇದು ನಿಯಮಿತ ರೂಪದಲ್ಲಿ ಒದಗಿಸಬಲ್ಲುದು. ನದಿಯ ಪ್ರವಾಹದ ಗತಿಯನ್ನು ಬದಲಿಸಿದುದರಿಂದ ಈಗಾಗಲೇ ಉಂತ್ರಾರೂ ಯೋಜನೆಯ ಸ್ಥಿತಿಯು ಸುದೃಢವಾಗುವುದು. ಈಗ ಇದು ತಯಾರಿಸುವ ಶಕ್ತಿಯು ೪||ಸಾವಿರ ಕಿಲೋವಾಟ್‌ಗಳಷ್ಟು ಇದು ಆಗ ೮||ಸಾವಿರಕ್ಕೇರುವುದು. ದೇಶದ ಇತರ ಜಲವಿದ್ಯುದ್ಯೋಜನೆಗಳಿಗಿಂತ ಉಮಿಯಂ ಯೋಜನೆಯು ವೈಶಿಷ್ಟ್ಯಪೂರ್ಣವಾಗಿದೆ.

ಉಮಿಯಂ ಜಲಾಶಯವು ನಿರ್ಮಾಣವಾಗುವಾಗ ಮುಳುಗುವ ಜಾಗವು ಆಸಾಮ ಸರಕಾರಕ್ಕೆ ಸೇರಿದ್ದಲ್ಲ; ಖಾಸಗಿ ಇಲಾಖೆಗೆ ಸೇರಿದ ಕಬಾಯಲಿ ಜನಾಂಗದ್ದು. ತಮ್ಮ ಕಾಡು ಮತ್ತು ಧಾನ್ಯ ತುಂಬಿದ ಗದ್ದೆಗಳನ್ನು ಸರಕಾರದ ಎಲ್ಲೆಯೊಳಗೆ ತರುವುದನ್ನು ಮೊದಲು ಬಲವಾಗಿ ವಿರೋಧಿಸಿದರು. ಬಡಾಪಾನಿ, ಲೋಅರ್ ಉಮ್ರೂರ್ ಗ್ರಾಮಗಳೂ ಮುಳುಗುವುವು ಶಿಲಾಂಗ್ ಮತ್ತು ಗೌಹಾತಿಗಳ ನಡುವಣ ರಾಷ್ಟ್ರೀಯ ಮಾರ್ಗದಗತಿಪರಿವರ್ತಿಸಲು ಸ್ವಲ್ಪಾಂಶಕಾಡನ್ನೂ ವಶಪಡಿಸಿಕೊಳ್ಳಬೇಕಾಗುವುದು.

ಖಾಸಗಿ ಜಮೀನಿನ ಜಮೀನ್ದಾರರಿಗೆ ಯೋಜನಾ ನಿರ್ಮಾಣದಿಂದ ದೊರೆಯುವ ಅನೇಕ ಲಾಭಗಳನ್ನು ವಿವರಿಸಿ, ಅವರಿಗೆ ಅಧಿಕ ಪರಿಹಾರವನ್ನೊದಗಿಸುವ ಆಶೆ ತೋರಿಸಿ ಯಶಸ್ವಿಯಾದ ಕೀರ್ತಿಯಲ್ಲಿ ಅಧಿಕಾಂಶ ಆಸಾಮು ವಿದ್ಯುತ್ ಬೋರ್ಡಿನ ಅಧ್ಯಕ್ಷ ಶ್ರೀ ಬಿ. ಸಿ. ಕಪೂರ್ ಮತ್ತು ಕಬಾಯಲೀ ನಾಯಕ ಶ್ರೀ ಸ್ಟೆನ್ಲಿ ನಿಕಲ್ಸ್‌ರಾಯ್‌ರವರಿಗೆ ಸೇರಿದೆ.

ಕಾಂಕ್ರೀಟಿನ ಆಣೆಕಟ್ಟು ಹಾಕುವಾಗ ಹಲವಾರು ಸಮಸ್ಯೆಗಳು ಮುಂದೆ ಬರುತ್ತವೆ. ಕಟ್ಟು ಒಂದು ಪರ್ವತ ಕಣಿವೆಯಲ್ಲಿ ನಿರ್ಮಿತವಾಗುವುದು. ಆ ಸನ್ನಿವೇಶದ ಪ್ರಾಕೃತಿಕ ಲಕ್ಷಣ ಮತ್ತು ಬಂಡೆಕಲ್ಲು ಮೊದಲಾದುವುಗಳಿಂದಾಗಿ ನೇರವಾಗಿ ಕಟ್ಟು ರಚನೆ ಮಾಡುವುದು ಅಸಾಧ್ಯವಾದುದರಿಂದ W ಆಕೃತಿಯಲ್ಲಿ ರಚಿಸಲಾಗುವುದು. ಈ ಮಾದರಿಯ ಆಣೆಕಟ್ಟುಗಳಲ್ಲಿ ಇದು ಭಾರತದಲ್ಲಿಯೇ ಮೊತ್ತಮೊದಲಿನದು.

ಇಕ್ಕಡೆಯಲ್ಲಿರುವ ಪರ್ವತಮೂಲೆಗಳನ್ನೂ ಆಣೆಕಟ್ಟಿನಲ್ಲಿ ಅಳವಡಿಸಿಕೊಳ್ಳುವುದರಿಂದ ಬಹಳ ಕಾಂಕ್ರಿಟಿನ ಉಳಿತಾಯವಾಗುವುದು ಕಬ್ಬಿಣದಂತೆಯೇ ಸಿಮೆಂಟನ್ನೂ ಬಿಹಾರ ರಾಜ್ಯದಿಂದಲೇ ಪಡೆದುಕೊಳ್ಳಬೇಕಾಗುವುದು. ಆಣೆಕಟ್ಟಿನ ಪ್ರದೇಶದಲ್ಲಿ ಭೂಕಂಪವಾಗುವ ಭಯವಿರುವುದರಿಂದ, ಕಟ್ಟವನ್ನು ಸಾಕಷ್ಟು ಅಗಲವಿರಿಸಬೇಕಾದುದು ಅವಶ್ಯ. ಇದಕ್ಕಾಗಿ ವೆಚ್ಚವು ಅಧಿಕ ಬರುವುದು.

೧೯೫೦ರಲ್ಲಿ ಇಲ್ಲಿ ಅತಿ ದೊಡ್ಡ ಭೂಕಂಪವಾಗಿತ್ತು. ಚಿಕ್ಕಪುಟ್ಟ ಭೂಕಂಪಗಳಿಲ್ಲಿ ನಿತ್ಯವೂ ನಡೆಯುತ್ತಿರುತ್ತದೆ. ಇದರಿಂದ ಭೂಕಂಪ ಶಾಸ್ತ್ರದ ಮೌಲಿಕ ಸಂಶೋಧನೆಗೆ ಇದು ಬಹು ಪ್ರಸಿದ್ಧವಾಗಿದೆ. ಎಲ್ಲಿ ೧೮೯೭ರಲ್ಲಿ ಭೂಕಂಪ ನಡೆದ ಬಳಿಕ ಭಾರತದ ಸರ್ವೇಕ್ಷಣಾ ವಿಭಾಗವು ಸಂಶೋಧನೆಗಳನ್ನು ಪ್ರಾರಂಭಿಸಿದೆ. ಹೊಸ ಅಣೆಕಟ್ಟು ಸನ್ನಿವೇಶದಲ್ಲಿ ಭೂಕಂಪಕ್ಕೆ ಸಂಬಂಧಿಸಿದ ಜ್ಞಾನ ಗ್ರಹಣ ಮಾಡುವ ಹೊಸ ಉಪಕರಣಗಳನ್ನು ಜೋಡಿಸಲ್ಪಡುವುವು.

ಉಮಿಯಂ ಜಲವಿದ್ಯುದ್ಯೋಜನೆಯಲ್ಲಿ ಕಾಂಕ್ರೀಟಿನ ಮುಖ್ಯ ಕಟ್ಟೆಯಲ್ಲದೆ ಮಣ್ಣಿನ ಎರಡು ದೊಡ್ಡ ದಂಡೆಗಳನ್ನೂ ಹಾಕಲಾಗುವುದು. ಇವುಗಳಲ್ಲಿ ಒಂದು ೧೨೧೪ ಅಡಿ ಉದ್ದ ಮತ್ತು ೯೦ ಅಡಿ ಎತ್ತರವಿರುವುದು. ಇನ್ನೊಂದು ೫೦೦ ಅಡಿ ಉದ್ದ ಹಾಗೂ ೫೦ ಅಡಿ ಎತ್ತರವಿರುವುದು. ಮಧ್ಯದ ಕಟ್ಟು ೫೬೦ ಅಡಿ ಉದ್ದ ಹಾಗೂ ೨೨೦ ಅಡಿ ಅಗಲವಿದ್ದು ಇದರ ಮೇಲಿನಿಂದಲೇರಾಷ್ಟ್ರೀಯ ಹೆದ್ದಾರಿಯು ಹಾದುಹೋಗುವುದು.೧||ಮೈಲು ಉದ್ದದ ಸುರಂಗದ ಮೂಲಕ ಜಲಾಶಯದ ನೀರು ಪಕ್ಕದ ಉಮ್ರೂರು ಘಾಟಿಯಲ್ಲಿ ೫೪೦ ಅಡಿ ಕೆಳಗೆ ದುಮುಕುವುದು. ಅದರಿಂದ ವಿದ್ಯುತ್ತನ್ನು ತಯಾರಿಸಲಾಗುವುದು. ಜಲಾಶಯದಲ್ಲಿ ೬೫ ೫ ವರ್ಗ ಮೈಲಿ ನೀರು ನಿಲ್ಲುವುದು. ಈ ಪ್ರದೇಶದಲ್ಲಿ ಸುರಿಯುವ ವಾರ್ಷಿಕ ಮಳೆ ೧೦೫ ಅಂಗುಲಗಳು. ಇದರಿಂದಾಗಿ ಜಲಾಶಯದಲ್ಲಿ ನೀರು ಸದಾ ತುಂಬಿರುವುದು.

ಡಿ. ಕೆ. ಭಾರದ್ವಾಜರ
ಇಂಗ್ಲಿಷ್, ಇಂಗ್ಲಿಷ್-ಕನ್ನಡ
ಡಿಕ್ಷನರಿ
ಬೆಲೆ: ರೂ. ನಾಲ್ಕು.
ಐದು ರೂಪಾಯಿ ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಲಾಗುವುದು.
ನವಭಾರತ ಪುಸ್ತಕ ಭಂಡಾರ ಉಡುಪಿ.

A NEW BOOK WITHIN THE REACH OF EVERYBODY
"LETTER WRITING MADE EASY"
(75 EVERY DAY LETTERS)
(Written by An Experienced Teacher.)
Useful to one and all, the teacher, the student and the layman.
Price: Rs. 1 = 25. (Postage extra)
If Rs.1=50 is sent by M.O. one copy will be sent by B. P.
Copies can be had from the Publishers:
Navayuga Enterprise Ltd. Udipi.
and also from:
M/s Indian Industrials & Agencies, Mangalore-1.
M/s Navabharat Book Depot, Udipi.

ಸೂಚನೆ

"ನವಯುಗ"ದಲ್ಲಿ ಪ್ರಕಟನೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

ರೈತರಿಗೆ ಸಲಹೆ

ಮುಂಗಾರು ಬೆಳೆಯಲ್ಲಿ ಹಸುರೆಲೆ ಗೊಬ್ಬರಗಳು

ಅಲ್ಪ ವೆಚ್ಚ—ಪ್ರಯಾಸಗಳಿಂದ ಅಧಿಕ ಸಾರವತ್ತಾದ ಗೊಬ್ಬರಗಳನ್ನು ತಯಾರಿಸಿ ರೈತರು ಉತ್ತಮ ಫಸಲನ್ನು ಪಡೆಯಬಹುದು. ಈ ಗೊಬ್ಬರಗಳ ಬಳಕೆಯನ್ನು ನಮ್ಮ ರೈತರೂ ಏಕೆ ಮಾಡಿಕೊಳ್ಳಬಾರದು?

ಮುಂಗಾರಿನ ಅತಿರೇಕ ಮಳೆಪಡೆಯುವ ನಮ್ಮ ಜಿಲ್ಲೆಯಲ್ಲಿ ಭೂಸಾರವು ಹೆಚ್ಚು ಪ್ರಮಾಣದಲ್ಲಿ ನಷ್ಟ ಹೊಂದುತ್ತಿರುವುದನ್ನು ರೈತ ಬಾಂಧವರು ಅರಿತಿರಬಹುದು. ಈ ನಷ್ಟವನ್ನು ತುಂಬುವುದು ಮುಖ್ಯ ಕಾರ್ಯವಾಗಿದೆ. ಈ ಕಾರ್ಯದಲ್ಲಿ ಹಸುರೆಲೆಗೊಬ್ಬರ, ಹಟ್ಟಿಗೊಬ್ಬರ, ಕಂಪೋಸ್ಟುಗಳ ಭಾಗವು ಅತ್ಯಂತ ಮಹತ್ವವುಳ್ಳದಾಗಿದೆ. ಹಸುರೆಲೆಗಳು ಕೊಳೆತು ಮಣ್ಣಿನ ನಿರ್ಬಲತೆಯನ್ನು ನೀಗಿಸಿ ಸಸ್ಯಾದಿಗಳು ಉತ್ಪನ್ನವಾಗುವ ಮತ್ತು ಚೆನ್ನಾಗಿ ಬೆಳೆಯುವ ಚೈತನ್ಯವನ್ನು ತುಂಬುತ್ತವೆ. ಇವು ಮಣ್ಣಿನ ಸಾರಜನಕಾಂಶವನ್ನು ಅಧಿಕ ಪ್ರಮಾಣದಲ್ಲಿ ತುಂಬುವುದರಿಂದ ಬೆಳೆಯ ಇಳುವರಿ ಹೆಚ್ಚಾಗುವುದು, ಇದರಿಂದಲೇ ನಾವು ಹೆಚ್ಚಾಗಿ ಹಸುರೆಲೆ ಗೊಬ್ಬರಗಳನ್ನು ಉಪಯೋಗಿಸಲೇ ಬೇಕಾಗಿದೆ. ಹುರುಳಿ, ಹೆಸರು, ಉದ್ದು ಮುಂತಾದ ದ್ವಿದಳ ಧಾನ್ಯಗಳ ಪರ್ಯಾಯ ಬೆಳೆಯು ಅತ್ಯಂತ ಉಪಯುಕ್ತವಾದುದು. ಈ ದ್ವಿದಳ ಧಾನ್ಯಗಳು ವಾಯು ಮಂಡಲದಲ್ಲಿನ ಸಾರಜನಕವನ್ನು ಹೀರಿ, ಸಸ್ಯಾದಿಗಳಿಗೆ ಉಪಯುಕ್ತವಾದ ಸಸಾರಜನಕವನ್ನು ಮಣ್ಣಿನಲ್ಲಿ ತಮ್ಮ ಬೇರುಗಳ ಮೂಲಕ ಸಂಗ್ರಹಿಸುತ್ತವೆ. ಹುರುಳಿಯಂತಹ ತೀರಾ ಕಮ್ಮಿ ಬೆಲೆಯ ಧಾನ್ಯಗಳನ್ನೇ ಬಿತ್ತಿ ಉತ್ತು, ಮಣ್ಣಿಗೆ ಸೇರಿಸುವುದು ಈ ಕಾರಣದಿಂದ ಆಗತ್ಯ. ಸಾರಾಂಶವಾಗಿ ಹೇಳುವುದಾದರೆ—ಹಸುರೆಲೆ ಗೊಬ್ಬರದ ಉಪಯೋಗದಿಂದ:—

೧. ಮಣ್ಣಿಗೆ ಅತ್ಯಲ್ಪ ಖರ್ಚಿನಿಂದ ಸಾರಜನಕ ಮತ್ತು ಸಾವಯವ ಪೂರೈಕೆ.

೨. ಜೀವಾಣುಗಳ ಚಟುವಟಿಕೆ.

೩. ಮಣ್ಣಿನ ಭೌತಿಕ ರಚನೆ ಕ್ರಮಗೊಳ್ಳುವುದು. ಅಂದರೆ ತೇವವನ್ನು ರಕ್ಷಿಸುವುದು. ಜೇಡಿ ಮಣ್ಣಿನಲ್ಲಿ ಗಾಳಿಯಾಡುವುದಕ್ಕೆ ಅನುಕೂಲವಾಗುವುದು ಇತ್ಯಾದಿ.

ಹೀಗಾಗಿ ಮಣ್ಣಿನ ಭೌತಿಕ ಹಾಗೂ ಪರಂಪರೆಯ ರಕ್ಷಣೆಯಲ್ಲಿ ಹಸುರೆಲೆ ಗೊಬ್ಬರದ ಪಾತ್ರವು ಅತ್ಯಂತ ಮಹತ್ವವುಳ್ಳದಾಗಿದೆ.

ನಮ್ಮ ಜಿಲ್ಲೆಯಲ್ಲಿ ಬಳಕೆಯಲ್ಲಿರುವ ಹಸುರೆಲೆ ಗೊಬ್ಬರಗಳೆಂದರೆ:—೧. ಕೊಳಂಜಿ. ೨. ಗ್ಲಿರಿಸೀಡಿಯಾ (ನಗರ ಕೇಸರಿ). ೩. ಸೆಸ್ಬೇನಿಯಾ. ೪. ಸಣಬು.

ಕೊಳಂಜಿ:—ಇದೊಂದು ದ್ವಿದಳ ಧಾನ್ಯ ವರ್ಗಕ್ಕೆ ಸೇರಿಸಿದ ಹಸುರೆಲೆ ಗೊಬ್ಬರ, ಪ್ರತ್ಯೇಕ ಬೆಳೆಯಾಗಿಯೂ ಮಿಶ್ರ ಬೆಳೆಯಾಗಿಯೂ ಬೆಳೆಸಬಹುದು. ಎಕ್ರೆಗೆ ೨೦—೩೦ ರಾತ್ಲ ಬೀಜವನ್ನು ಬಿತ್ತಿ ಸಾಕಷ್ಟು ಬಲಿತ ಸಸಿಗಳನ್ನು ನೇಗಿಲಿನಿಂದ ಹೂಡಿ ಭೂಗತ ಮಾಡುವುದರಿಂದ ಮುಂದಿನ ಬೆಳೆಗೆ ಬೇಕಾದ ಗೊಬ್ಬರ ಒದಗುವುದು. ಇದಕ್ಕೆ ಸುಮಾರು ಹತ್ತು ರೂಪಾಯಿ ಖರ್ಚು ತಗಲುವುದು. ಈ ಬೀಜಗಳನ್ನು ಮದ್ರಾಸಿನ ತಂಜಾವೂರು, ತಿರುಚಿನಾಪಳ್ಳಿ ಜಿಲ್ಲೆಯಲ್ಲಿ ಅಧಿಕ ಪ್ರಮಾಣದಲ್ಲಿ ಉಪಯೋಗಿಸಿ, ಫಸಲು ಸಂಪಾದಿಸಿದ ದಾಖಲೆಗಳಿವೆ. ಈ ಕೊಳಂಜಿ ಬೆಳೆಗೆ ಸೂಪರ್ ಫೋಸ್ಫೇಟ್ ಗೊಬ್ಬರವನ್ನು ಹಾಕಿ, ಭತ್ತದ ಬೆಳೆಗೆ ಬೇಕಾದ ಫೋಸ್ಫೇಟು ಗೊಬ್ಬರದ ಪೂರೈಕೆಯನ್ನು ಕೂಡಾ ಮಾಡಿಕೊಂಡು ಭತ್ತದ ಇಳುವರಿಯನ್ನು ಹೆಚ್ಚಿಸಲಾಗಿದೆಯೆಂದು ತಿಳಿದುಬಂದಿದೆ. ಈ ಪ್ರದೇಶಗಳಿಂದಲೇ ಇದರ ಬೀಜಗಳನ್ನು ನಾವು ವಾಡಿಕೆಯಾಗಿ ತರಿಸುತಿದ್ದೇವೆ. ಆದರೆ ಸಾಗುವಳಿಗೆ ತಗಲುವ ಖರ್ಚು ಅಧಿಕವಾಗಿಯೂ, ಬೀಜದ ಕ್ರಯವೇರಿಕೆಯಿಂದಲೂ, ಸಕಾಲದಲ್ಲಿ ಬೀಜಗಳ ಸರಬರಾಜು ಸಾಧ್ಯವಾಗದೆಯೂ ಇದ್ದ ಪ್ರಸಂಗಗಳಿವೆ. ಇದನ್ನು ಹೋಗಲಾಡಿಸಲು ಇದರ ಬೀಜ ಸಂಗ್ರಹವನ್ನು ನಮ್ಮಲ್ಲಿಯೇ ಮಾಡುವುದು ಅತ್ಯಂತ ಅಗತ್ಯವಾದುದಾಗಿದೆ. ಸಾಮಾನ್ಯವಾಗಿ ಇದು ಕಾಯಿ ಹಿಡಿಯುವ ಕಾಲವು ಮುಂಗಾರಿನ ಸನ್ನಿಹಿತ ಕಾಲದಲ್ಲಾದುದರಿಂದ ಬೀಜ ಸಂಗ್ರಹವು ಕಷ್ಟಕರವಾಗಿದೆ. ಆದರೂ ಬಂಜರು ಭೂಮಿಯಲ್ಲಿ ಇದರ ಖಾಸಗೀ ಬೆಳೆಯನ್ನು ಬೆಳೆಸಿ ಮೇ, ಜೂನ್ ಆದಿಯಲ್ಲಿಯೇ ಬೀಜಗಳನ್ನು ಸಂಗ್ರಹಿಸಿ ಅದಕ್ಕೆ ತಕ್ಕ ವಿರಾಮ ಕಾಲವನ್ನು ಕೊಟ್ಟು, ಒಂದನೇ ಮತ್ತು ಎರಡನೇ ಬೆಳೆಯ ನಂತರ ಬಿತ್ತಲು ಪ್ರಯತ್ನಿಸಬೇಕಾಗಿದೆ.

ಗ್ಲಿರಿಸೀಡಿಯಾ—ಇದೊಂದು ದ್ವಿದಳ ಧಾನ್ಯವರ್ಗಕ್ಕೆ ಸೇರಿದೆ ಅತ್ಯಂತ ಚುರುಕಾಗಿಯೂ, ಸುಲಭವಾಗಿಯೂ ಬೆಳೆವ ಗೊಬ್ಬರದ ಗಿಡ. ಈ ಗಿಡದ ಎಳೆತುದಿಗಳನ್ನು ಕತ್ತರಿಸಿ, ಗದ್ದೆಯಲ್ಲಿ ಹರಡಿ; ಹೂಡಿ ಭೂಗತ ಮಾಡುವುದು ವಾಡಿಕೆ. ಹಟ್ಟಿ ಗೊಬ್ಬರದೊಂದಿಗೆ ಸೇರಿಸಿ ಹೂಡಿದರೆ ತುಂಬಾ ಪ್ರಯೋಜನಕಾರಿಯಾಗಿದೆ. ಮುಂಗಾರಿನಲ್ಲಿ ಈ ಗಿಡಗಳ ತುಂಡುಗಳನ್ನು ಸಂಗ್ರಹಿಸಿ, ಗದ್ದೆಯಂಚಿನಲ್ಲಿ ನೆಟ್ಟರೆ ಬಹು ಬೇಗನೆ ಚಿಗುರಿ, ಬಲಿತು ಗಿಡವಾಗಬಲ್ಲುದು. ಏಪ್ರಿಲ್, ಮೇ ತಿಂಗಳಲ್ಲಿ ಕಾಯಿ ಬಿಟ್ಟ ಬೀಜ ಸಂಗ್ರಹಿಸಬಹುದು ಬೀಜವನ್ನು ಮುಂಗಾರಿನಲ್ಲಿ ಬಿತ್ತಿ ಸಸಿ ಮಾಡಿ ಪುನಃ ಗದ್ದೆಯಂಚಿನಲ್ಲಿಯೂ, ತೋಡುಗಳ ದಡಗಳಲ್ಲಿಯೂ ಬಂಜರು ಜಾಗಗಳಲ್ಲಿಯೂ ನೆಟ್ಟರೆ ಹಸುರೆಲೆ ಗೊಬ್ಬರದ ದೊಡ್ಡ ತೋಪನ್ನೇ ನಿರ್ಮಿಸಬಹುದು. ಗಿಡವು ಬಲಿತು ತುಸು ದೊಡ್ಡದಾಗುವತನಕ ಜಾಗ್ರತೆ ವಹಿಸ ಬೇಕಾಗುವುದು

ಸಸ್ಬೇನಿಯಾ:—ಇದನ್ನು ಪ್ರತ್ಯೇಕ ಬೆಳೆಯಾಗಿ ಬೆಳೆಸಿ, ಹೂಡಿ ಮಣ್ಣಿಗೆ ಸೇರಿಸಬಹುದು. ಇದರ ಬೀಜಗಳು ಕೃಷಿ ವಿಸ್ತರಣಾಧಿಕಾರಿಗಳ ಡಿಪೋದಲ್ಲಿಯೂ, ಗ್ರಾಮ ಸೇವಕರಲ್ಲಿಯೂ ಸಿಗುವುದು. ರಾತ್ಲಿಗೆ ಸುಮಾರು 25 ನಯಾ ಪೈಸೆ. ಮುಂಗಾರಿನ ಮತ್ತು ಹಿಂಗಾರಿನ ನಾಟಿ ಮಾಡಿದ ಗದ್ದೆಯ ಮಣ್ಣಿನಲ್ಲಿ ಸುತ್ತಲೂ ಸಾಲಾಗಿ ನೆಟ್ಟು, ತಮಗೆ ಬೇಕಾದ ಬೀಜಗಳನ್ನು ತಾವೇ ಸಂಗ್ರಹಿಸಬಹುದು. ಹಳದಿ ಬಣ್ಣದ ಗುಂಪು ಹೂವುಗಳ ಈ ಗಿಡಗಳು ಬೆಳೆಯ ಸುತ್ತಲೂ ಹೂವು ಬಿಟ್ಟಾಗ ನಯನ ಮನೋಹರವಾಗಿ ಕಾಣುತ್ತವೆ.

ಕೃಷಿ ವಿಸ್ತರಣಾಧಿಕಾರಿಗಳೂ, ಗ್ರಾಮ ಸೇವಕರೂ ನಿಮಗೆ ಸದಾ ನೆರವು ನೀಡಲು ಸಿದ್ಧರಾಗಿದ್ದಾರೆ. ಹಸುರೆಲೆ ಪೂರೈಕೆಗೆ ಅವರ ಸಹಾಯ ಪಡೆಯಲು ಸಂಕೋಚಪಡಬೇಡಿರಿ.

—ಯೆಸ್. ಯಂ. ಟಿಪ್ ಸೆಟ್ಟಿ,
(ಬಿ. ಎಜಿ.)
ಜಿಲ್ಲಾ ಕೃಷಿ ಅಧಿಕಾರಿ, ಮಂಗಳೂರು.

ಉದಯೋನ್ಮುಖ ಲೇಖಕ ಶ್ರೀ. ಪಿ ಎನ್. ಹೆಬ್ಬಾರ ('ಸಿರಿಪತಿ')
ಅವರ ನವೀನ ಕೃತಿ—

ಕಪಾಳ ಮೋಕ್ಷ

(ಮುನ್ನುಡಿ— ಡಾ| ಟಿ. ಎಂ. ಎ. ಪೈ, ಎಂ. ಬಿ., ಬಿ. ಎಸ್.)

ಏಳು ಪ್ರಬಂಧ, ಎಂಟು ಸಣ್ಣ ಕತೆಗಳನ್ನೊಳಗೊಂಡ ಮೌಲಿಕ ಕೃತಿ' ನೈಜ ಘಟನೆಗಳ ಆಧಾರದ ಮೇಲೆ ನೆಯ್ದ ವರ್ಣನಾತ್ಮಕ ಪ್ರಬಂಧಗಳಾದರೂ ಸಣ್ಣ ಕತೆಯಷ್ಟೇ ಸ್ವಾರಸ್ಯಪೂರ್ಣವಾಗಿವೆ. ಕತೆಗಳಲ್ಲಿ ಕತೆಗಾರರ ಸಹಜ ಸುಂದರ ಶೈಲಿ, ಸಾಮಾಜಿಕ ನ್ಯಾಯ—ಅನ್ಯಾಯ ಹಾಗೂ ವಿಧಿವಿಲಾಸದ ಸುಳಿವು ಪೊಳವುಗಳನ್ನು ಕಾಣಬಹುದು.

180 ಪುಟಗಳು — ಬಿಳಿ ಕಾಗದ — ಬೆಲೆ ರೂ, 2=00

ರೂ, 2=25 ನ. ಪೈಸೆ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು
ಪುಸ್ತಕ ವ್ಯಾಪಾರಿಗಳಿಗೆ ವಿಪುಲ ಕಮಿಶನ್!

ನವಭಾರತ ಪುಸ್ತಕ ಭಂಡಾರ, ಉಡುಪಿ.

ಗುರುದೇವ ರವೀಂದ್ರನಾಥರ ಪ್ರೇಮ ಸೂತ್ರ

ಮನಸ್ಸಿನಲ್ಲಿ ಕಳಂಕವಿಲ್ಲದಿದ್ದರೆ ಮಾನವನು ಯಮನನ್ನೂ, ಅತನ ನೆರಳನ್ನೂ ಹೆದರಲಾರನು. ಹುಟ್ಟಿದವರೆಲ್ಲಾ ಒಂದಲ್ಲ ಒಂದು ದಿನ ಸ್ಮಶಾನವನ್ನು ಸೇರಲೇಬೇಕು. ಪ್ರೀತಿ ಮಾಡಿದ ಸ್ನೇಹಿತನನ್ನು ದೂಷಿಸುವವನು ಮೃಗಜನ್ಮವನ್ನು ಪಡೆಯುವನು. 1500 ವರ್ಷಗಳ ಹಿಂದೆ ಬರೆದ ವಿಚಾರಗಳನ್ನು ಈಗ ತರ್ಜುಮೆ ಮಾಡುವಾಗ ಅಲ್ಲಲ್ಲಿ ವ್ಯತ್ಯಾಸವನ್ನು ಮಾಡದಿದ್ದರೆ, ಮಾನವನ ಜನ್ಮ ಸಫಲವಾಗದು. ಸೊಣಪ್ರತಿಪುರಾಣಕ್ಕೆ ಬೆಲೆಯಿಲ್ಲ. ಸತ್ಯಕ್ಕೆ ಯಾವಾಗಲೂ ಬೆಲೆಯಿದೆ. ಆವಸರದಿಂದ ಯಾವ ಕಾರ್ಯವನ್ನೂ ಮಾಡಬಾರದು. ಕೆಲವು ಕಾರ್ಯಗಳನ್ನು ಕೂಡಲೇ ಮುಗಿಸಬೇಕು. ಇಬ್ಬದಿಯಲ್ಲೂ ನಲಿಯುವ ಅಲ್ಪರು ದೇಶದ್ರೋಹಿಗಳು. ಶುದ್ಧವಾದ ಅಂತರಂಗವಿದ್ದು, ತನ್ನ ಅಭಿಪ್ರಾಯಗಳನ್ನು ಧೈರ್ಯವಾಗಿ ಹೇಳುವವನು ತನ್ನ ಜಾತಿ ಅಥವಾ ಸಂಬಂಧಿಕರ ತಪ್ಪುಗಳನ್ನು ಕೂಡ ಮನ್ನಿಸನು. ಜಾತಿಯಿಂದಲೂ ನೀತಿಯೇ ಮೇಲು. ಅಸತ್ಯದಿಂದಲೂ ಸತ್ಯವೇ ಮೇಲು. ದುಷ್ಟರ ಸಂಗದಿಂದ ನಾಶ. ಶಿಷ್ಟರ ಸಂಗದಿಂದ ಶಾಂತಿ. ಪರಮಾತ್ಮನ ತಲೆ ಎಲ್ಲಾ ಅಣುಗಳಲ್ಲಿವೆ. ಬುದ್ಧದೇವನು ಇದನ್ನು ವಿವರಿಸಿರುವನು. ವರ್ಧಮಾನ ಮಹಾ ವೀರನೂ ವಿವರಿಸಿರುವನು. ಸಸ್ಯಾಹಾರದಲ್ಲೂ ಅಹಿಂಸೆಯಲ್ಲೂ ಬೆಲೆಯಿದೆ. ಮಹಾತ್ಮಾಗಾಂಧಿ ಮತ್ತು ಪಂಡಿತ ಮಾಲವೀಯರು ಈ ತತ್ವವನ್ನು ಸರಿಯಾಗಿ ಗ್ರಹಿಸಿದ ಪುಣ್ಯಾತ್ಮರು. ಪರಮಾತ್ಮನಿಗೆ ಸಹಸ್ರ ನಾಮಗಳಿವೆ.

ಎಂ. ಬಿ. ಶಂಕರ ರಾವ್

ಅಮೃತ ಬಿಂದು

ತನ್ನತನದ ಯಾ ಸ್ವಾರ್ಥತೆಯನ್ನು ಮರೆಯದೆ ಯಾರಿಂದಲೂ ಮಹತ್ಕಾರ್ಯವಾಗದು. ತನ್ನತನ ಮರೆತಾಗಲೇ ಗೆಳೆತನ ಬೆಳೆಯುತ್ತದೆ ಪ್ರೇಮ ಕುದುರುತ್ತದೆ. ಇಡೀ ಪ್ರಪಂಚ ತನ್ನದಾಗುತ್ತದೆ.

೦೦ ೦೦

ಆತುರದಿಂದ ಗೆಳೆತನ ಮಾಡಿದರೆ ಪದಾಕಾಲ ಪರಿತಪಿಸಬೇಕಾಗುವದು.

೦೦ ೦೦

ತನಗೆ ನ್ಯಾಯವೆಂದು ತೋರಿದುದನ್ನು ಹೆದರಿಕೆಯಿಲ್ಲದೆ ಮಾಡುವ ತಾನು ಮಾಡಲು ಹಿಂಜರಿಯುವದನ್ನು ಇನ್ನೊಬ್ಬರು ಮಾಡಬೇಕೆಂದು ಅಪೇಕ್ಷಿಸದ, ಪ್ರತಿಯೊಂದನ್ನೂ ಇನ್ನೊಬ್ಬರ ಸ್ಥಾನದಲ್ಲಿ ತನ್ನನಿಟ್ಟು ಹೋಲಿಸಿ ಮಾಡುವವನನ್ನು ಸಭ್ಯ ಮನುಷ್ಯನೆಂದು ಕರೆಯಬಹುದು.

೦೦ ೦೦

ಒಳ್ಳೆಯ ಮನುಷ್ಯನಿಗೆ ಒಳ್ಳೆಯದರಿಂದ ಆನಂದವೆನಿಸದು. ಕೆಟ್ಟದರಿಂದ ದುಃಖವಾಗದು. ಏಕೆಂದರೆ ಅತನಿಗೆ ಅವುಗಳ ಕಾರ್ಯ ಕಾರಣಗಳ ಅರಿವಿರುತ್ತದೆ.

೦೦ ೦೦

ಉತ್ತಮ ತತ್ವಗಳ ಅರಿವು ಮತ್ತು ಗುರಿ ಇಲ್ಲದವನು ಉತ್ತಮ ಜೀವನ ನಡೆಸಲಾರ. ತತ್ವರಹಿತ ಜೀವನ ಗುರಿ ನೋಡದೆ ಗುಂಡು ಹೊಡೆದಂತೆ ನಿರರ್ಥಕ!

೦೦ ೦೦

ಒಂದು ದೀಪದಿಂದ ಸಾವಿರ ದೀಪ ಹಚ್ಚಿದರೂ ಮೂಲ ದೀಪವು ಚ್ಯುತಿ ಇಲ್ಲದೆ ಬೆಳಗುತ್ತಿರುವಂತೆ, ಒಳ್ಳೆಯದನ್ನು ಇತರರಿಗೆ ಮಾಡಿದಷ್ಟು ಅದು ಕಡಿಮೆಯಾಗದೆ ಉಳಿಯುವದು.

೦೦ ೦೦

ಘನತೆಗಿಂಥಾ ಸರಳವಾಗಿರುವದು ಬೇರಿಲ್ಲ. ಏಕೆಂದರೆ ಸರಳತೆಯೇ ಘನತೆಯ ಅಡಿಗಲ್ಲು.

ವಿಜ್ಞಾನ

(೮ನೇ ಪುಟದಿಂದ)

ಗಮನಿಸಿದ. ಆನಂತರ ಪೋಲೀಸರನ್ನು ಕರೆತರಲಾಯಿತು.

ನೆಲಸಮ ಮಾಡುವ ಕಾಲಗಳಲ್ಲಿ ಅಸ್ಥಿ ಪಂಜರಗಳನ್ನು ಕಾಣುವುದು ಆಶ್ಚರ್ಯಕಾರಕ ವಿಷಯವಾಗಿರಲಿಲ್ಲ. ಏಕೆಂದರೆ ಬಾಂಬಿನ ದೆಸೆಯಿಂದಾಗಿ ಎಷ್ಟೋ ದೇಹಗಳು ಕಟ್ಟಡಗಳ ಕೆಳಗೆ ಸಿಕ್ಕಿ ಅನಂತರ ಎಷ್ಟೋ ತಿಂಗಳುಗಳಾದ ಮೇಲೆ ಮತ್ತೆ ಬೆಳಕಿಗೆ ಬಂದು ಕಾಣಸಿಗುತ್ತಿದ್ದವು.

ಆದರೆ ಇದು ಜರ್ಮನರ ಬಾಂಬಿನಿಂದಲ್ಲದೇ ಬೇರೆ ವಿಧದಿಂದ ಸತ್ತಂತಿತ್ತು. ವಿಜ್ಞಾನಿಗಳು ಕೆಲಸಕ್ಕೆ ತೊಡಗಿದರು. ಪ್ರಯೋಗ ಶಾಲೆಗಳಲ್ಲಿ ಒಬ್ಬ ಕೊಲೆಗಡುಕನ ಶೋಧನೆಗೆ ಪ್ರಾರಂಭವಾಯಿತು.

ಗುರುತಿಸಲು ಅಸಾಧ್ಯವಾಗುವಂತೆ ಅವಶೇಷದ ಅಂಗಗಳನ್ನು ಛೇದಿಸಲಾಗಿತ್ತು. ಮುಖದ ಚರ್ಮವನ್ನು ಕಿತ್ತು ಹಾಕಲಾಗಿತ್ತಲ್ಲದೇ ದವಡೆಯ ಒಂದು ಭಾಗವನ್ನು ಕಿತ್ತುಹಾಕಲಾಗಿತ್ತು. ಕೈ ಹಾಗೂ ಕಾಲುಗಳು ಕಾಣದಾಗಿದ್ದವು. ಕೊಲೆಗಾರ ಆ ದೇಹವನ್ನು ಸುಡಲು ಕೂಡ ಅರ್ಧ ಮನಸ್ಸು ಮಾಡಿದಂತಿತ್ತು.

'ದೇಹ ಎಂದಿಗೂ ಗುರುತಿಸಲು ಸಾಧ್ಯವಿಲ್ಲ. ಅಂತೆಯೇ ಆ ದೇಹಕ್ಕೂ ತನಗೂ ಸಂಬಂಧ ಕಲ್ಪಿಸಲಾಗುವುದಿಲ್ಲವೆಂದೂ, ತಾನು ಸರಿಯಾದ ಕೆಲಸ ಮಾಡಿದ್ದೇನೆಂದೂ' ಕೊಲೆಗಾರ ನೆಚ್ಚಿಕೊಂಡಿದ್ದಿರಬಹುದು. ಆದರೆ ಆತ ತಪ್ಪು ತಿಳಿದುಕೊಂಡಿದ್ದ. ಆತ ವಿಜ್ಞಾನವನ್ನು ಮರೆತಿದ್ದ.

ಪ್ರಖ್ಯಾತ ಡಾಕ್ಟರ್ ಕೇಕ್ ಸಿಂಪ್ಸನ್‌ರವರ ಮುಂದಾಳುತ್ವದಲ್ಲಿ ಕೆಲ ವಿಜ್ಞಾನಿಗಳು ಲಂಡನ್ನಿನ 'ಗೆ'ಸ್ ಆಸ್ಪತ್ರೆಯಲ್ಲಿ ಮೂಳೆಗಳ ಪರೀಕ್ಷೆಯನ್ನು ಮಾಡತೊಡಗಿದ್ದರು, ಅವರು ಪೋಲೀಸರ ಪತ್ತೇತರದೂರಿನಲ್ಲಿ ಎಷ್ಟೋ ಸೂಕ್ಷ್ಮವಾದ ಎಷ್ಟೋ ಸುಳಹುಗಳನ್ನು ಕೊಟ್ಟರು.

ಎಲುಬುಗಳು ೪೦-೫೦ ವರ್ಷದ ಹೆಂಗಸಿನದೆಂದು ಗುರುತಿಸಿದರು. ಆಶ್ಚರ್ಯಕರವೆನ್ನುವಂತೆ ಆಕೆ ವಾಯುರೋಗದಿಂದ ನರಳುತ್ತಿದ್ದಳೆಂದೂ, ಮತ್ತೆ ಒಮ್ಮೆ ವಾಯುಗಡ್ಡೆಯನ್ನು ತೆಗೆಸಿದ್ದಳೆಂದೂ ತಿಳಿಸಿದರು. ಅಳತೆಯನ್ನೂ ತಿಳಿಸಿದರು— ಆಕೆ ಐದು ಅಡಿ ೯ ಅಂಗುಲ ಎತ್ತರವಿದ್ದಳು—ಅಲ್ಲದೇ ಆಕೆ ಸತ್ತು ಕೊನೆ ಪಕ್ಷ ಒಂದು ವರ್ಷವಾದರೂ ಕಳೆದಿದೆಯೆಂದು ತಿಳಿಸಿದರು.

ಗಂಟಲಿನ ಆಳದಲ್ಲಿದ್ದ ಒಂದು ಅತೀ ಸೂಕ್ಷ್ಮ ಎಲುಬನ್ನು ಕಂಡು ಡಾ|| ಸಿಂಪ್ಸನ್ನರು ಆಕೆಯ ಮರಣ ಆಕಸ್ಮಿಕವಲ್ಲ, ಆಕೆ ಕೊರಳು ಹಿಚುಕಲ್ಪಟ್ಟೇ ಸತ್ತಿರುವುದಾಗಿ ತಿಳಿಸಿದರು.

ಈ ಸೂಕ್ಷ್ಮ ಎಲುಬು, ಧ್ವನಿ ಪೆಟ್ಟಿಗೆಯ ಒಂದು ಭಾಗವಿದ್ದು ಅದು ಹೆಚ್ಚು ಮಾಂಸ ಹಾಗೂ ಖಂಡಗಳಿಂದ ಆವರಿಸಲ್ಪಟ್ಟಿರುತ್ತದೆ. ಇದು ಆಕಸ್ಮಿಕವಾಗಿ ಒಡೆಯುವುದಿಲ್ಲ— ಆದರೆ ಕೈಗಳ ಹಿಡಿತ ಹೆಚ್ಚಾಗಿ ಗಂಟಲನ್ನು ಸಾಕಷ್ಟು ಪ್ರಬಲವಾಗಿ ಅದುಮಿದರೆ ಮಾತ್ರ ಅದು ಒಡೆದು ಮನುಷ್ಯ ಸಾಯುತ್ತಾನೆ.

ವಿಜ್ಞಾನ ಶಾಸ್ತ್ರ ಹೆಚ್ಚೆಚ್ಚು ವಿಷಯಗಳನ್ನು ದೊರಕಿಸಿ ಕೊಡುತ್ತಿದ್ದಂತೇ, ಪತ್ತೇದಾರರು ಅಸ್ಥಿಪಂಜರ ಸಿಕ್ಕ ಆ ಚಿಕ್ಕ ಚರ್ಚಿನ ಹಿಂಬಾಗಕ್ಕೆ ಹೋಗಿ ವಿಚಾರಿಸುತ್ತಿರಲು ಅವರ ಅದೃಷ್ಟವೆಂಬಂತೆ ಒಬ್ಬ ವಿಶೇಷ ಪೋಲಿಸ್ ಕಾನ್ಸ್‌ಟೇಬಲ್ ಹಾಗೂ ಒಬ್ಬ ಅಗ್ನಿವಾಹಕ ದಳದವನು ಆ ಜಾಗದಲ್ಲಿ ೧೯೪೧ರ ಆಗಷ್ಟ್ ೧೫ರಲ್ಲಿ ಬೆಂಕಿ ಕಂಡದ್ದನ್ನು ನೆನಪಿಗೆ ತಂದುಕೊಂಡರು. ಆದರೆ ಆ ರಾತ್ರಿ ವಿಮಾನ ಧಾಳಿಯಾದಂತೆ ದಾಖಲೆಗಳಿರಲಿಲ್ಲ.

ಅದೇ ಜಾಗದಲ್ಲಿ ೧೫ರ ರಾತ್ರಿ ಹ್ಯಾರಿ

ಭಾರತದಲ್ಲಿ ಅಮೆರಿಕದ ರಾಯಭಾರಿಯಾಗಿದ್ದ ಶ್ರೀ ಎಲ್ಸ್‌ವರ್ತ್ ಬಂಕರವರು ತನ್ನ ಅಧಿಕಾರಾವಧಿಯ ಸಂಧ್ಯಾ ಕಾಲದಲ್ಲಿ ಭಾರತದ ಆರ್ಥಿಕ ಮಂತ್ರಿ ಶ್ರೀ ಮುರಾರ್ಜಿ ದೇಸಾಯಿಯವರೊಂದಿಗೆ ಭಾರತಕ್ಕೆ ಅಮೆರಿಕ ನೀಡುವ ಸಹಾಯದ ಸಂಬಂಧ ಸಹಿಮಾಡುತ್ತಿದ್ದಾರೆ.

ಡಬ್‌ಕಿನ್‌ನೆಂಬಾತ ಬೆಂಕಿ ಅನಾಹುತ ವೀಕ್ಷಣೆಗೆ ಬಂದಿದ್ದನೆಂದೂ ಕಂಡುಬಂದಾಗ ಪೋಲಿಸರ ಕಷ್ಟ ತೀರುತ್ತ ಬಂತು. ಆತನನ್ನು ರಾಛೇಲಳ ಅದೃಶ್ಯದ ಬಗ್ಗೆ ಮತ್ತೆ ಪ್ರಶ್ನಿಸಲಾಯಿತು. ಆದರೆ ಆತ ತಾನು ಹಿಂದೆ ಹೇಳಿದ್ದ ಕತೆಗೆ ಬಲವಾಗಿ ಹತ್ತಿಕೊಂಡಿದ್ದ. ಬಹಳ ಬೇರಸರಗೊಂಡ ಆತ ಅದರ ಬಗ್ಗೆ ನಿಶ್ಚಿತನಾಗಿದ್ದ.

ಪೋಲಿಸರು ಯಾವ ವಿಧವಾದ ಅನುಮಾನವಿಲ್ಲದೇ ಆ ಅವಶೇಷ ರಾಛೇಲಳದೇ ಎಂದು ಸಾಬೀತು ಮಾಡುವ ವರೆಗೂ ಹ್ಯಾರಿ ಯಾವ ವಿಧದ ಭಯವೂ ಪಡಬೇಕಾಗಿರಲಿಲ್ಲ ಶಂಕೆಗಳು ನ್ಯಾಯಾಲಯದಲ್ಲಿ ನಡೆಯುವ ಪುರಾವೆಗಳಲ್ಲ. ಆ ದೇಹ ಆತನ ಹೆಂಡತಿಯ ದೇಹದಂತಿರುವ ಬೇರೆಯವರದಿರ ಬಹುದು (?)

ಪೋಲಿಸರು ಲೆಕ್ಕವಿಲ್ಲದಷ್ಟು ಜನರನ್ನು ಕೊಲೆಗಾಗಿ ಶಂಕಿಸುವರು; ಆದರೆ ಅವರನ್ನು ಸಾಕಷ್ಟು ಪುರಾವೆಗಳಿಲ್ಲದಿರುವುದರಿಂದ ನ್ಯಾಯಾಲಯಕ್ಕೆ ಎಳೆ ತಂದು ದಂಡಿಸಲಾಗುವುದಿಲ್ಲ. ಚರ್ಚಿನಲ್ಲಿ ಸಿಕ್ಕ ಆ ದೇಹ ರಾಛೇಲಳದೇ ಎಂದು ಸಾಬೀತು ಮಾಡಬೇಕಿತ್ತು. ಅಂತೆಯೇ ಮತ್ತೆ ವಿಜ್ಞಾನದ ಮರೆ ಹೊಕ್ಕರು.

ಸ್ತ್ರೀಯರ ವಾಯುಗಡ್ಡೆಯ ಆಪರೇಷನ್ ಕುರಿತು ದಾಖಲೆಗಳನ್ನು ಎಲ್ಲಆಸ್ಪತ್ರೆಯಗಳಲ್ಲೂ ಶೋಧಿಸಲಾಯಿತು. ಮಿಲ್ಡ್ ಮೆ" ಎಂಬ ಆಸ್ಪತ್ರೆಯಲ್ಲಿ ಪತ್ತೇದಾರರು ರಾಛೇಲಳು ಆಪರೇಷನನ್ನು ಮಾಡಿಸಿಕೊಂಡಿದ್ದಳೆಂಬುದನ್ನು ಹುಡುಕಿ ತೆಗೆದರು. ರಾಛೇಲಳ ಸೋದರಿ ಯುದ್ಧದ ಮೊದಲು ರಜಾ ವಿಹಾರದಲ್ಲಿ ತೆಗೆಯಲಾಗಿದ್ದ ರಾಛೇಲಳ ಒಂದು ಚಿತ್ರವನ್ನು ವಿಜ್ಞಾನಿಗಳಿಗೆ ಒದಗಿಸಿ ಕೊಟ್ಟಳು. ಅವರು ಅದನ್ನು ಜೀವ-ಗಾತ್ರಕ್ಕೆ ರೂಪಿಸಿ, ಅಸ್ಥಿಪಂಜರದ ತಲೆಯೊಡನೆ ಹೋಲಿಸಿದರು. ಅದು ಸರಿಯಾಗಿ ಹೊಂದಿಕೊಂಡಿತು.

ಅನಂತರ ಅವರು ಮುಂದುವರಿದು ರಾಛೇಲಳ ದಂತವನ್ನು ನೋಡಿ ಸರಿಪಡಿಸುತ್ತಿದ್ದ ದಂತ ವೈದ್ಯರನ್ನು ಬರಮಾಡಿದರು. ಆತ ಆಕೆಯ ದಾಖಲೆಗಳನ್ನು ಹುರುವಿ ಹಾಕಿದ ಒಂದು ಕಡೆ,

"ಬೇರು ಕ್ರಮೇಣ ಮೇಲ್ಮುಖಕ್ಕೆ ಹೊರಡುತ್ತಿದೆ."

ದಂತ ವೈದ್ಯರು ಹೇಳಿದ ಮಾತು ತಲೆಬುರುಡೆಯ ದಂತ ಪಂಕ್ತಿಯ ಮೇಲೆ ಬಿಡಲಾದ ಕ್ಷ-ಕಿರಣಗಳಿಂದ ಕಂಡು ಬಂದು ಪರಸ್ಪರ ಹೊಂದಿಕೊಂಡಿತು. ಅಲ್ಲದೆ ತೆಗೆದುಕೊಳ್ಳದೇ ಬಿಟ್ಟಿದ್ದ ಒಂದು ದವಡೆಯಲ್ಲಿ ವೈದ್ಯರು ಹಾಕಲಾಗಿದ್ದ ರಸಾಯನಿಕ ವಸ್ತುಗಳು ಅವರ ದಾಖಲೆಗಳಿದ್ದಂತವೇ ಆಗಿದ್ದವು.

ಚರ್ಚಿನಲ್ಲಿ ದೊರೆತ ಅಸ್ಥಿಪಂಜರ ರಾಛೇಲಡಬೆಕನ್ನಳದೇ ಎನ್ನುವುದರಲ್ಲಿ ಸಂಶಯವಿರಲಿಲ್ಲ ಪೋಲೀಸರಿಗೆ ಈಗ ಸಾಕಷ್ಟು ಪುರಾವೆಗಳು ಸಿಕ್ಕಿದ್ದವು. ಹ್ಯಾರಿಯನ್ನು ವಿಚಾರಣೆಗೆ ಗುರಿಪಡಿಸಲಾಯಿತು. ಆತ ಕೊಲೆಗಾರನೆಂದು ತೀರ್ಮಾನಿಸಿ ವಾಂಡ್ಸ್‌ವರ್ತಿನ ಜೈಲಿನಲ್ಲಿ ಗಲ್ಲಿಗೆ ಹಾಕಲಾಯಿತು.

ಐವತ್ತು— ಅರವತ್ತು ವರುಷಗಳ ಕೆಳಗೆ ಹ್ಯಾರಿಯನ್ನು ಕೊಲೆಗಾರನೆಂದು ಸಾಬೀತು ಮಾಡುವುದು ದುಸ್ತರವಾಗಿತ್ತು. ಆದರೆ ವಿಜ್ಞಾನ ಇಂದು ತನ್ನ ಪ್ರಜ್ವಲ ಮುನ್ನಡೆಯಿಂದಾಗಿ ಒಬ್ಬ ಹಂತಕನನ್ನು ನ್ಯಾಯಾಸ್ಥಾನಕ್ಕೆಎಳೆತರುವ ಶಕ್ತಿಯುಳ್ಳದ್ದಾಗಿದೆ.

(ಆಧಾರದಿಂದ)

"ಇಂಗ್ಲಿಷ್ ಕಲಿಯಲಿಲ್ಲವಲ್ಲಾ" ಎಂದು ಚಿಂತಿಸಬೇಡಿರಿ!

ಅನ್ಯರ ಸಹಾಯವಿಲ್ಲದೆ ತನ್ನಷ್ಟಕ್ಕೆ ತಾನೇ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ ಪುಸ್ತಕವನ್ನು ಇಂದೇ ಕೊಂಡುಕೊಳ್ಳಿರಿ!

ಸುಲಭವಾಗಿ ಇಂಗ್ಲಿಷ್

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ಸುಲಭವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.

ನೀವೂ ಪ್ರಯತ್ನಿಸಿ, ಇಂಗ್ಲಿಷ್ ಭಾಷೆ ಕಲಿಯಿರಿ! ವಿದ್ಯಾರ್ಥಿಗಳಿಗಂತೂ ಅತ್ಯುಪಯುಕ್ತ ಪುಸ್ತಕ.

ಹೊಸ ಮುದ್ರಣ—ಸಾದಾ ಪ್ರತಿ 2:00. ಉತ್ತಮ ಪ್ರತಿ 2:50.

ಪುಸ್ತಕದ ಬೆಲೆಯೊಂದಿಗೆ 25 ನ. ಪೈ. ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು.

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಗಳಲ್ಲಿ ದೊರೆಯದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.

ನವಯುಗ'ಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

ಯಮುನ ನೆರಳು

(೩ನೇ ಪುಟದಿಂದ)

ದಲಿತಸಿಂಹರ ಮನೆಗೆ ಹೋದುದನ್ನು ಸ್ಪಷ್ಟಗೊಳಿಸಿತು.

೧೨

ಪೋಲೀಸ್ ಕೇಪ್ಟನ್ ಶರ್ಮರ ರೂಮಿನಲ್ಲಿ ಇನ್ಸ್‌ಪೆಕ್ಟರ್ ರಮಾಕಾಂತ್ ಹಾಗೂ ಇನ್ನಿತರ ಅಧಿಕಾರಿಗಳು ಯಾವುದೋ ಗೂಢ ವಿಷಯದ ಬಗ್ಗೆ ಚರ್ಚೆ ನಡೆಸುತಿದ್ದರು.

"ಇತ್ತೀಚೆಗೆ ಅಜಮೀರವು ದುರ್ಘಟನಾ ಕೇಂದ್ರವಾಗಿದೆ" ಎಂದರು ಕೇಪ್ಟನ್;

"ಇನ್ನೂ ವಿಚಿತ್ರವೆಂದರೆ ಯಾವೊಂದು ವಿಷಯದ ಬಗ್ಗೆಯೂ ನಮಗಿದುವರೆಗೂ ತಿಳಿದುಬಂದಿಲ್ಲ" ಎಂದ ಇನ್ನೋರ್ವ ಆಫೀಸರ.

"ರಾಜಾರಾಮಪಾಲ ಸಿಂಹ, ರಾಜಕುಮಾರ ಪ್ರತಾಪ ಸಿಂಹ, ರಾಣಿ ಇಲಾವತೀ, ರಾಜಕುಮಾರನ ಡ್ರೈವರ್, ಹಾಗೂ ರಾಣಿಯ ನೌಕರರ ಮೃತ್ಯುಗಳು ಎಷ್ಟು ಮಹತ್ವಪೂರ್ಣವಾಗಿವೆ; ಹಾಗೂ ರಹಸ್ಯಮಯವಾಗಿವೆ! ವಿಚಿತ್ರವೆಂದರೆ ರಾಜಾ ಸಾಹೇಬರ ಶವದ ಪತ್ತೆಯು ಇಂದಿಗೂ ಆಗಲಿಲ್ಲ, ವ್ಯಸನವೆಂದರೆ ಇಷ್ಟೊಂದು ಕೊಲೆಗಳು ನಡೆದಾಗಲೂ ನಮಗೆ ಕೊಲೆಗಾರನ ಗತಿವಿಧಿಗಳನ್ನು ಕಂಡುಹಿಡಿಯಲಾಗಲಿಲ್ಲ. ಅಲ್ಲದೆ ಸ್ವಲ್ಪ ಅಡಚಣೆ ತರಲೂ ಆಗಲಿಲ್ಲ" ಎಂದರು ಕೇಪ್ಟನ್ ಸಾಹೇಬರು.

"ಅಪರಾಧವೇ ತಿಳಿಯದಾಗ ಅದನ್ನು ತಡೆಗಟ್ಟುವ ಪ್ರಯತ್ನವೆಂತು ಮಾಡುವುದು" ಎಂದರು ರಮಾಕಾಂತ್.

"ಕೊಲೆಯು ವಿಚಿತ್ರ ರೀತಿಯದೇನೋ ಹೌದು. ಈ ರಹಸ್ಯ ಕಂಡುಹಿಡಿಯಲು ಸ್ವಲ್ಪ ಸಮಯ ಬೇಕಾಗಬಹುದು. ಆದರೆ ಈ ವರೆಗೆ ತುಂಬಾ ಸಮಯ ಕಳೆದರೂ ನಮ್ಮಿಂದೇನೂ ಮಾಡಲಾಗಲಿಲ್ಲ. ಇದು ಉರುಳು ಹಾಕಿ ಸಾಯುವಂತಹ ಪಾಪ. ಜನತೆಯು ನಮ್ಮನ್ನು ಅವರ ರಕ್ಷಣೆಗಾಗಿ ಇಟ್ಟಿದೆ" ಎಂದರು ಕೇಪ್ಟನ್.

"ಬೇರೊಂದು ವಿಷಯವೆಂದರೆ ಅಲ್ಲಿಯ 'ಕುಂಜ (ಕುಂಜರವೇಟರೀ) ದುಷ್ಟನ ನಿವಾಸಸ್ಥಾನವೆಂದು ಪ್ರಸಿದ್ಧವಾಗಿದೆ. ಅಲ್ಲದೆ ವಾಸ್ತವದಲ್ಲಿಯೂ ಆ ಸ್ಥಳ ರಹಸ್ಯಪೂರ್ಣವಾಗಿದೆ. ಅತ್ತ ಹಗಲಲ್ಲಿ ಹೋಗಲಿಕ್ಕೆ ಹೆದರಿಕೆಯಾಗುತ್ತದೆ. ಅಲ್ಲಿ ವಿಚಿತ್ರ ರೀತಿಯ ಅಪರೂಪವಾಗಿಯೂ ಕಾಣದ ಮರಗಳು ತುಂಬಾ ಇವೆ. ಎಷ್ಟೊ ಮೃತ ಶರೀರಗಳನ್ನು ತಂದು ಮಾಯ ಮಾಡಿಬಿಟ್ಟಿರುವರೆಂದೂ ವರ್ತಮಾನವಿತ್ತು. ಆದು ಪತ್ತೆಯಾಗಲಿಲ್ಲ" ಎಂದರು ಡಿ. ಎಸ್. ಪಿ.

"ಹಾಂ, ನಿಮ್ಮ ಮಾತು ಸತ್ಯ ನಾನೂ ಆ ಸ್ಥಳ ನೋಡಿದ್ದೇನೆ. ನಮ್ಮ ಈ ನಗರದಲ್ಲಿ ಈ ಕುಂಜದ ಹೊರತು ಬೇರಾವ ಅಂತಹ ರಹಸ್ಯಮಯ ಸ್ಥಳವಿಲ್ಲ." ಎಂದು ನುಡಿದರು ಕೇಪ್ಟನ್.

"ಈ ಸ್ಥಳದ ಒಡೆಯನಾರು?" ಎಂದರು ರಮಾಕಾಂತ್.

"ಯಾರೋ ಒಬ್ಬ ಚನ್ನುಲಾಲನೆಂಬವನಿದ್ದನು. ಅವನು ತೀರಿ ಹೋಗಿದ್ದಾನೆ. ಆವನಿಗಾರೂ ಉತ್ತರಾಧಿಕಾರಿಗಳಿಲ್ಲ. ಅದನ್ನು "ಟ್ರಸ್ಟ" ಮಾಡಿ ಒಂದು ಕಮಿಟಿ ವ್ಯವಹಾರ ನಡೆಸುತಿತ್ತು. ಇಲ್ಲಿ ಗುಪ್ತ ಕೊಲೆಗಳಾಗಲು ತೊಡಗಿದ ನಂತರ ಆ ಸ್ಥಳಕ್ಕೆ ತನ್ನದೆಂದು ಯಾರೂ ಮುಂದೆ ಬರುವುದಿಲ್ಲ" ಎಂದರು ಕೇಪ್ಟನ್.

"ಮತ್ತೇ ತೋಟವನ್ನು ಯಾರು ನೋಡಿ ಕೊಳ್ಳುತ್ತಾರೆ?' ಎಂದರು ಡಿಪ್ಟಿ.

"ಎರಡು ವರ್ಷಗಳಿಂದ ಅದರ ಪಾಲನೆಯನ್ನು ಯಾರೂ ಮಾಡುವುದಿಲ್ಲ.

'ಹಾಗಾದರೆ ಗಿಡಗಳು ಹೆಚ್ಚ ಹಸುರಾಗಿಯೇ ಬೆಳೆಯುತ್ತವೆ."

"ಇದೂ ಒಂದು ರಹಸ್ಯವಾಗಿದೆ, ದುಷ್ಟರಲ್ಲಿಯೋ ಅದನ್ನು ಯಾರೋ ಸಲಹುತಿದ್ದಾರೆ' ಎಂದರು ಕೇಪ್ಟನ್.

"ಹಾಗಾದರೆ ಹಿಂಬಾಲಿಸುವುದಿಲ್ಲವೇಕೆ?

"ಎಲ್ಲವೂ ವ್ಯರ್ಥ. ಅಪರಾಧಿಯು ಹಿಂಬಾಲಿಸುವದನ್ನು ಕಂಡು ಕೆಲವು ದಿನ ಅತ್ತಗೆ ಹೋಗುವುದನ್ನೇ ಬಿಡುತ್ತಾರೆ. ಯಾರಾದರೂ ಸಿಕ್ಕಿ ಬಿದ್ದರೂ, ಯಾತ್ರಿ-ಇಲ್ಲವೇ ದರ್ಶಕನೆಂದು ತಿರುಗಾಡಲು ಬಂದಿದ್ದೆನೆಂದೂ ತಪ್ಪಿಸಿಕೊಳ್ಳುತ್ತಾರೆ."

"ಯಮುನ ನೆರಳಿನ ದಳದ ಕಾಗದವು ಸಾಯುವವರ ಕಿಸೆಗೆ ಹೇಗೆ ಬೀಳುತ್ತದೆ? ಎಂಬುದೂ ರಹಸ್ಯವಾಗಿದೆ. ಅದು ಯಾವ ರಾಸಾಯನಿಕ ದ್ರವ್ಯದಿಂದ ಮಾಡಲ್ಪಡುತ್ತದೆ? ಸಾಧಾರಣವಾಗಿ ಅವರು ಶಾಯಿಯನ್ನು ಉಪಯೋಗಿಸುವುದಿಲ್ಲ" ಎಂದರು ರಮಾಕಾಂತ್.

"ಆ ದಳದ ಚಿಹ್ನೆಯ ವಿಶೇಷತೆಯೇ ಇದಾಗಿದೆ."

"ರಾಣಿ ಇಲಾವತಿಯ ದೊಡ್ಡ ಮಗಳು ಹಾಗೂ ರಾಜಾರಾಮಪಾಲರ ಮಡದಿಯಾದ ರಾಣಿ ಯಮುನಾಳ ಪತ್ತೆಯು ಈ ವರೆಗೂ ಆಗಲಿಲ್ಲ" ಎಂದರು ಡಿಪ್ಟಿ ಸಾಹೇಬರು.

"ನನ್ನಭಿಪ್ರಾಯವೆಂದರೆ ಅವಳನ್ನು ಕೊಲೆಮಾಡಲಾಗಿದೆ.

"ಆಗಿರಲೂ ಸಾಕು, ಆದರೆ ಅವಳನ್ನು ಎಲ್ಲಿಯಾದರೂ ಬಚ್ಚಿಟ್ಟಿದ್ದಾರೆಂಬ ನಾನೂ ಅಭಿಪ್ರಾಯ ಪಡುತ್ತೇನೆ." ಎಂದರು ಕೇಪ್ಟನ್.

"ಒಳ್ಳೇದು, ಹಾಗಾದರೆ ಅಪೇಕ್ಷಿತ ಅಪರಾಧಿಗಳಾರು" ಎಂದರು ರಮಾಕಾಂತ

"ಅವರು ಆ ಕಪ್ಪು ನಕಾಬಿನವರೇ ಆಗಿರಬೇಕು. ಮತ ಬೇಧದಿಂದ ಅವರು ಬೇರೆಯಾಗಿರಬಹುದು. ಅವರ ಮೇಲೆ ಇಷ್ಟರ ವರೆಗೆ ಯಾವ ರಿಪೋರ್ಟೂ ಇಲ್ಲ. ಆದರೂ ಅವರನ್ನು ನಂಬಲಾಗದು" ಎಂದರು ಡಿಪ್ಟಿ.

ಮಾತು ನಡೆಯುತ್ತಲೇ ಓರ್ವ ವ್ಯಕ್ತಿಯು ಕಪ್ಪು ಬುರ್ಖಾದಲ್ಲಿ ಒಳ ಪ್ರವೇಶಿಸಿದನು. ಆ ನಡಿಗೆ ಗಂಡಸಿನಂತೆ ಕಾಣುತ್ತಿತ್ತು. ಒಳಗೆ ಬಂದು "ಶರ್ಮಾಜೀ, ಪೋಲೀಸ್ ಕೇಪ್ಟನ್ ಯಾರು? ಎಂದು ಕೇಳಿದನು.

"ನಾನೇ ಶರ್ಮ ಕೇಪ್ಟನ್" ಎಂದು ಎದ್ದುನಿಂತರು ಕೇಪ್ಟನ್.

"ನನಗೆ ನಿಮ್ಮಲ್ಲಿ ಏಕಾಂತದಲ್ಲಿ ಮಾತಾಡಲಿಕ್ಕಿದೆ" ಎಂದನಾತ.

ಇದನ್ನು ಕೇಳಿ ಕೇಪ್ಟನರು ಅವನನ್ನು ಬದಿಯ ಕೋಣೆಗೆ ಕರೆದುಕೊಂಡು ಹೋದರ. ಇರ್ವರೂ ಅರ್ಧತಾಸಿನ ವರೆಗೆ ಮಾತಾಡಿದರು. ಶರ್ಮರವರು ಹೊರಬರುವಾಗ "ನಿಶ್ಚಿಂತರಾಗಿರಿ, ನಾನು ಪ್ರತಿ ಘಳಿಗೆಯಲ್ಲೂ ಸಿದ್ಧನಾಗಿರುತ್ತೇನೆ. ಅಲ್ಲದೆ ಅದು ನನ್ನ ಕರ್ತವ್ಯ ತಾನೇ. ತಾವು ಇಷ್ಟು ಕಷ್ಟಪಟ್ಟುದಕ್ಕಾಗಿ ಧನ್ಯವಾದ' ಅಂದರು.

ಅನಂತರ ಕೇಪ್ಟನರು ಕುರ್ಚಿಯಲ್ಲಿ ಆರಾಮಿಸಿದರು. ಆಗಂತಕನು ಹೊರಟು ಹೋದನು. ಅಷ್ಟರಲ್ಲಿ ಡಿಪ್ಟಿಯವರು ಬಂದು

--'ಸರ್ಕಾರ್ ಸೌಖ್ಯತಾನೇ?' ಎಂದರು.

"ಹಾಂ, ಇವಕ್ತು ಸ್ವಲ್ಪ ರಹಸ್ಯದ ಪತ್ತೆಯಾಗಿದೆ. ಆದರೆ ಕ್ಷಮಿಸಿ ಆ ಕುರಿತು ನಾನು ನಿಮಗೆಏನನ್ನೂ ತಿಳಿಸುವಹಾಗಿಲ್ಲ, ಹಾಂ, ಆದರೆ ಇಷ್ಟು ಖಂಡಿತ ಯಮುನಾವತಿಯು ಬದುಕಿದ್ದಾಳೆ.

"ಬದುಕಿದ್ದಾಳೇನು?" ಎಂದು ಆಚರಿಯಿಂದ ನುಡಿದರು ರಮಾಕಾಂತರು.

ಹಾಂ, ಮತ್ತು ಈ ಸೂಚನೆಯೇ ರಹಸ್ಯೋದ್ಘಾಟನೆಯ 'ಶ್ರೀ ಗಣೇಶ' ಮಾಡಬಹುದು ಎಂದು ಹೇಳಿ ಸಿಗರೇಟು ತೆಗೆಯಲು ಶರ್ಮರು ಜೇಬಿಗೆ ಕೈ ತುರುಕಿದಾಗ, ಸಿಗರೇಟು ಕೇಸಿನೊಡನೆ ಒಂದು ಕಾಗದವು ಹೊರಬಂತು. ಅದರಲ್ಲಿ ಅದೇ ಕಪ್ಪು ನಕಾಬಿನ ಚಿಹ್ನೆ ಯಮನ ದಳದವರ ಹಾಗಿತ್ತು.

ಆದರಲ್ಲಿ ಈ ರೀತಿ ಬರೆದಿತ್ತು —

"ಸುಮ್ಮನಿರು!"

ಈ ಕಾಗದ ಜೇಬನ್ನು ಹೇಗೆ ಪ್ರವೇಶಿಸಿತು? ಎಂದು ಎಲ್ಲಾ ಇತರ ಅಧಿಕಾರಿಗಳಿಗೂ ಆಶ್ಚರ್ಯಕಂಪನಗಳುಂಟಾದುವು. ಏನೊಂದೂ ತಿಳಿಯದಿದ್ದುದರಿಂದ ಅವರು ಜೇಬಿನಲ್ಲಿ ಸಿಕ್ಕಿದ ಕಾಗದದ ಪ್ರಕಾರ ನಡೆಯ ಬೇಕಾಗಿತ್ತು. ಆ ಕಾಗದದಲ್ಲಿ ಬರೆದಿದ್ದುದು ಅರ್ಥಾತ್.

"ಸುಮ್ಮನಿರು."

ದಿ ವಿಜಯ ಬೇಂಕ್ ಲಿಮಿಟೆಡ್

ಶೆಡ್ಯೂಲ್ಡ ಬೇಂಕ್. ಸ್ಥಾಪನೆ: 1931

ರಿಜಿಸ್ಟರ್ಡ್ ಆಫೀಸು:

ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,

ಮಂಗಳೂರು.-3, ಸೌತ್ ಕೆನರಾ.

ಕಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡ 5½ರ ವರೆಗೆ ಹೆಚ್ಚಿಸಲಾಗಿದೆ.

ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ಪಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸೋಣಾಗುತ್ತದೆ.

ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ.

ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

(ಯು.ರಾಘವೇಂದ್ರ ಆಚಾರ್ಯ,ಎಂ.ಎ.)

ಸಾಮಾನ್ಯ ರೋಗಗಳು

(ಡಾ. ಕೆ.ಎಲ್.ಐತಾಳ,ಎಂ.ಬಿ.ಬಿ.ಎಸ್

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—

ನವಭಾರತ ಪುಸ್ತಕ ಭಂಡಾರ, ಉಡುಪಿ.

'NAVAYUGA' WEEKLY is in the list of periodicals and Newspapers approved for use in Secondary School as per proceedings Roc. No. 466 N/50 date 2-12-19 0 of the Directors of public Instruction Madras.

Tel: 'BLUEYAGAR'. — ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ — Phone: 374.

ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು. ಮಾಲಿಕ:ಕೆ.ಕೆ.ಆರ್.ಶೇಟ್

ರಹಸ್ಯಭೇದ

(೪ನೇ ಪುಟದಿಂದ)

ಯೆಂದೂ ನಿಮಗೆ ತೋರಿಸಲಾಗುವುದು. ಇವುಗಳ ಸತ್ಯವನ್ನೂ ಇಷ್ಟು ಕೇಳಿಬಿಡಿ.

ಕೆಲಸ ಕಾರ್ಯಗಳಲ್ಲಿಒಂದೊಂದಕ್ಕೂ ಇವಳ ತಾಯಿಯ ಬಾಯಿಯಿಂದ ಬೇಕಾದಷ್ಟು ಬೈಗಳನ್ನು ತಿಂದಿದ್ದಾಳೆ. ಸಿಡಿಮಿಡಿಗುಟ್ಟುತ್ತಾಳೆ. ತಾಯಿ ಹೊರಗಾದಾಗ ಇವಳು ಮಾಡಿದ ಅಡಿಗೆಯನ್ನು ಉಣ್ಣುವಾಗ ನಮ್ಮೆಲ್ಲರ ಮುಖ ನೋಡ ಬೇಕಿತ್ತು. ನೀವು ಕೆಲವು ಪಾತ್ರೆ ಪರಡಿಗಳನ್ನು ಒಡೆದಿದ್ದಾಳೆ. ಜಜ್ಜಿದ್ದಾಳೆ. ತಂದೆಯಾದ ನನ್ನ ಮೇಲೆ ಸ್ವಲ್ಪ ಭಯವಿದೆಯಾಗಲೀ, ತಾಯಿಯ ಮುಂದೆ ಬಲು ಶಾಣೆ! ನನ್ನ ಮುಂದೇನೋ ಸಾಧುವಾಗಿರುವಂತೆ ಕಾಣಿಸುತ್ತಾಳೆ. ನಾನಿಲ್ಲದಾಗ ಅವಳು ಮಾಡುವ ತಂಟೆ ತಕರಾರುಗಳನ್ನು ಅವಳ ತಾಯಿ ನನಗೆ ಹೇಳಿದಾಗ, ನನ್ನ ಕೈಯಿಂದ ಕೆಲವು ಪೆಟ್ಟುಗಳನ್ನು ಕೂಡ ತಿಂದಿದ್ದಾಳೆ. ಇನ್ನೂ ಮಕ್ಕಳ ಬುದ್ಧಿಬಿಟ್ಟಿಲ್ಲ ವಯಸ್ಸು ಇಪ್ಪತ್ತಾದರೂ. ಈ ತಿಂಡಿಗಳನ್ನು ಅವಳೇ ಮಾಡಿದ್ದೆಂದರೆ ಅವಳೊಬ್ಬಳೇ ಅಲ್ಲೆಂಬುದೇ ಸತ್ಯ. ಅದು ಹೆಚ್ಚು ರುಚಿಯಾಗಿದ್ದರೆ ಖಂಡಿತಾ ಅವಳ ತಾಯಿಯ ಪಾಕವೆಂದೇ ತಿಳಿದುಕೊಳ್ಳಿ.

ಇನ್ನು ಅವಳ ಹೊಲಿಗೆ ಕಸೂತಿಗಳು—ಮೊತ್ತಮೊದಲು ಬಹಳ ಉತ್ಸಾಹದಿಂದ ಕಲಿಯಲಾರಂಭಿಸಿದಳೇನೋ ನಿಜ. ಆ ಮೇಲೆ ಬಂತಯ್ಯ ಉದಾಸೀನ. ಅವಳಿಂದ ಒಂದೊಂದನ್ನೂ ಹೊಲಿಸಲು ಎಷ್ಟೋ ಸಾರಿ ಅವಳನ್ನು ಅಳಿಸಿ ಮೂಗಿನಿಂದಿಳಿಸಬೇಕಾಗುತ್ತಿತ್ತು. ಅಷ್ಟಾದರೂ ಬಹಳ ಗಟ್ಟಿಗಿತ್ತಿ ಎಂದು ಹೇಳಲಾರೆ. ಎಷ್ಟೋ ಬಟ್ಟೆಗಳನ್ನು ಹಾಳು ಮಾಡಿದ್ದಾಳೆ. ಸೂಜಿ ಮುರಿದಿದ್ದಾಳೆ. ಸಾಧಾರಣ ಟೇಲರು ಮಾಡುವ ತಪ್ಪುಗಳಿಗಿಂತ ಒಂದೆರಡು ಹೆಚ್ಚೇ ಇವಳು ಮಾಡುತ್ತಾಳೆ. ಆದರೂ ಹೊಗಳಿ ಹೊಗಳಿ ಇವಳಿಂದ ಕೆಲಸ ಮಾಡಿಸಿಕೊಳ್ಳಬೇಕಾದುದೊಂದು ರಹಸ್ಯವೇ ಅಂದುಕೊಳ್ಳಿ. ಈ ವಿಷಯಗಳಲ್ಲಿ ಇವಳಿಗೆ ಪ್ರವೇಶ ಮಾತ್ರವೇ ದೊರೆತಿದೆಯೆಂದೂ, ಅಭಿವೃದ್ಧಿ ಇನ್ನು ಮುಂದೆ ಹೊಕ್ಕ ಮನೆಯಲ್ಲಿ ಆಗಲಿದೆಯೆಂದೂ ನೀವು ತಿಳಿದುಕೊಂಡರೆ ಸಾಕು.

ಕಡೆಯದಾಗಿ, ಇವಳ ನಡಿಗೆಯನ್ನು ನೋಡಿ, 'ಆಹಾ, ಎಂಥ ಸುಂದರ ಮಂದಗಮನೆ' ಎಂದು ಭಾವಿಸಬೇಡಿ ಸ್ವಲ್ಪ ಹಾರು ನಡಿಗೆಯುಂಟು. ಓಡು ನಡಿಗೆಯೂ ಉಂಟು. ತಾಂಟು ನೋಂಟಾಗಿ ನಿಲ್ಲುವುದೂ ಉಂಟು. ಇದೆಲ್ಲ ಆಯಾ ಕಾರ್ಯಗಳಿಗೆ ತಕ್ಕಂತೆ ಏರ್ಪಟು ವಂಥಾದ್ದು ಇನ್ನವಳು ಹಿಂದಿರುಗಿ ಹೋಗುವಾಗ ತಲೆಯ ಜಡೆ ನೆಲ ಸೋಕುವಷ್ಟು ನೀಳವಾಗಿ ಕಾಣಿಸಿದರೂ ಅದರ ಅರ್ಧದಷ್ಟೇ ಉಂಟೆಂದು ತಿಳಿಯಿರಿ.

ಉಳಿದ ವಿಷಯಗಳಲ್ಲಿ ಸಾಮಾನ್ಯ ಎಲ್ಲರ ಮನೆಯ ಹುಡುಗಿಯರ ಹಾಗೆಯೇ ನನ್ನ ಮಗಳೂ ಇದ್ದಾಳೆ. ನನ್ನ ಹೆಂಡತಿ ಕೂಡಾ ನನ್ನ ಮನೆಗೆ ಬಂದಾಗ ಹೀಗೆಯೇ ಇದ್ದಳು. 'ಗೃಹಿಣಿ' ಎಂಬ ಜವಾಬ್ದಾರಿ ಬೀಳಬೀಳುತ್ತಿದ್ದ ಹಾಗೆ ನನ್ನ ಮನೆಯ ಶ್ರೀದೇವಿಯಾಗಿದ್ದಾಳೆ ನನ್ನ ಹೆಂಡತಿ

ಅಂತೆಯೇ ನನ್ನ ಮನೆಯ ಕಲಿದೇವಿಯನ್ನು ನಿಮ್ಮ ಮನೆಯ ಶ್ರೀದೇವಿಯನ್ನಾಗಿ ಮಾಡಿಕೊಳ್ಳುವುದು ನಿಮ್ಮ ಭಾರ. ಮುಖ್ಯ ಅವಳನ್ನು ಪರರ ಮನೆಗೆ ಹೋಗುವ ದಾರಿಗೆ ತಯಾರುಗೊಳಿಸಿ ಇಟ್ಟಿದ್ದೇವೆಯೇ ಹೊರತು ಹೆಚ್ಚಿನದೇನೂ ಇಲ್ಲ. ಬಹುಶಃ ಇದಕ್ಕಿಂತ ಮೇಲೆ ಹುಡುಗಿಯನ್ನು ತಯಾರು ಗೊಳಿಸಲು ಯಾವ ತಂದೆ ತಾಯಿಗಳಿಗೂ ಸಾಧ್ಯವಿಲ್ಲವೆಂದೇ ಭಾವಿಸುತ್ತೇನೆ.

ಏಕೆಂದರೆ ಎಲ್ಲ ಹುಡುಗಿಯರೂ ತಾಯಿಮನೆಯಲ್ಲಿ ಒಂದು ಅವಧಿಯ ವರೆಗೆ ಬೆಳೆದು ಇನ್ನೊಂದು ಅವಧಿಯಲ್ಲಿ ಮುಂದುವರಿಯಬೇಕಾದುದು ಗಂಡನ ಮನೆಯಲ್ಲಿ ತಾನೆ? ಹಾಗೆ ಹೊಂದಿಕೊಳ್ಳುವ ಮಾರ್ದವತೆ ಎಲ್ಲಾ ಹುಡುಗಿಯರಿಗೂ ಇರುವುದೆಂದು ತಿಳಿದುಕೊಂಡರೆ, ನೀವು ನನ್ನ ಮಗಳನ್ನು ನಿಮ್ಮ ಸೊಸೆಯನ್ನಾಗಿ ಮಾಡಿಕೊಳ್ಳಲು ಏನೂ ಅಭ್ಯಂತರವಿಲ್ಲ.

ಹೀಗೆ ನಿಮ್ಮನ್ನು ಸ್ವಾಗತಿಸಲು ಸರ್ವಸಿದ್ಧನಾಗಿರುವ

—ಕನ್ಯಾ ಪಿತ

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ರುತ್ತದೆಯಲ್ಲವೆ? ಹಾಗೆಯೇ ಉಳಿದ ಸಂಗತಿಗಳೂ.

ನಮ್ಮ ರಾಜ್ಯ ಸರಕಾರದ ವಾರ್ತಾಶಾಖೆಯು ಉಚಿತ ಪ್ರಕಟಣೆಗೆಂದು ಸುದ್ದಿಗಳನ್ನು ಕೇವಲ ಅಧಿಕ ಪ್ರಸಾರವಿರುವ ಪತ್ರಿಕೆಗಳಿಗಷ್ಟೇ ಕಳಿಸುತ್ತಿಲ್ಲ. ಚಿಕ್ಕ ಪತ್ರಿಕೆಗಳು ಇವಕ್ಕೆ ನೀಡುವಷ್ಟು ಪ್ರಸಾರವನ್ನು ದೊಡ್ಡ ಪತ್ರಿಕೆಗಳು ನೀಡುವುದೂ ಇಲ್ಲ. 'ಸರಕಾರೀ ಗಜೇಟು' ಎಂಬ ಉಪನಾಮಕ್ಕೆ ಗುರಿಯಾದ ಚಿಕ್ಕ ಪತ್ರಿಕೆಗಳೂ ಇಲ್ಲವೆಂದಿಲ್ಲ. ಆದರೆ, ರಾಜ್ಯದ ದೇಶದ ಪ್ರಮುಖ ಆಗುಹೋಗುಗಳನ್ನು ಎತ್ತಿ ಅವನ್ನು ತಿಳಿಯಾಗಿ ತನ್ನ ಪ್ರದೇಶದ ಜನರಿಗೆ ತಿಳಿಯಪಡಿಸುವ ಚಿಕ್ಕ ಪತ್ರಿಕೆಗಳಲ್ಲಿ ಜಾಹಿರಾತುಗಳನ್ನು ಕೊಡುವುದು ಅಪರಾಧವೆನಿಸದು, ಪ್ರಸಾರ ಕಡಿಮೆಯಿರುವ ಪತ್ರಿಕೆಗಳ ಜಾಹಿರಾತು ದರವಾದರೂ ಕಡಿಮೆಯೇ ಇರುತ್ತದೆ ಎಂಬುದನ್ನು ಸರಕಾರ ಅರಿಯಬೇಕು. ದೊಡ್ಡ ಆಂಗ್ಲ ಪತ್ರಿಕೆಯೊಂದರಲ್ಲಿ ಜಾಹಿರಾತು ನೀಡಲು ತಗಲುವ ವೆಚ್ಚದಲ್ಲಿಯೇ ಆ ವಿಷಯವನ್ನು ಹತ್ತು— ಪ್ರಾದೇಶಿಕ ಭಾಷಾ ಪತ್ರಿಗಳ ಮೂಲಕ ಅದಕ್ಕಿಂತ ಹೆಚ್ಚು ಜನರಲ್ಲಿ ಪ್ರಚಾರ ಮಾಡುವುದೂ ಸಾಧ್ಯವೆಂಬುದನ್ನು ತಿಳಿದುಕೊಳ್ಳಬೇಕು.

ಪರಿಸ್ಥಿತಿಯನ್ನು ಸರಿಯಾಗಿ ಮನನ ಮಾಡಿ ಸರಕಾರ ತನ್ನ ನೀತಿಯನ್ನು ಅವಶ್ಯ ಬದಲಿಸಿ, ಚಿಕ್ಕ ಪತ್ರಿಕೆಗಳ ಮೂಲಕ ತನ್ನ ಉದ್ದೇಶ ಸಾಧನೆಯನ್ನು ಮಾಡಿಕೊಳ್ಳಲು ಹೇಸದಿರಲಿ ಇದರಿಂದ ಉಭಯತ್ರರಿಗೂ ಲಾಭವಾಗುವುದು ಖಂಡಿತ.

—ಗೋರಾ.

ಪುಸ್ತಕ ವಿಮರ್ಶೆ

[ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ.— ಸಂ. ನ.

ಪ್ಲವ ಸಂವತ್ಸರದ ಪಂಚಾಂಗ— ಪಂಡಿತ ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಇವರು ಗುಣಿಸಿ ಪರಿಶೋಧಿಸಿ ಎಲ್ಲೂರು ಸುಜ್ಞಾನಾಮೃತ ಕಾರ್ಯಾಲಯದಿಂದ ಪ್ರಕಟಿತವಾದ ಪಂಚಾಂಗವನ್ನು ಆದರದೊಡನೆ ಸ್ವೀಕರಿಸುತ್ತೇವೆ. ಇದರಲ್ಲಿ ನಿತ್ಯನೈಮಿತ್ತಿಕ ಪಂಚಾಂಗ ಕ್ರಮವನ್ನೂ ಇತರ ಆವಶ್ಯಕ ಜ್ಯೋತಿಷ್ಯಭಾಗವನ್ನೂ ಸಂಪ್ರದಾಯದಂತೆ ನೀಡಲಾಗಿದೆಯಲ್ಲದೆ, ೧೮೫೬ರಿಂದ ೧೯೬೧ನೆ ಇಸವಿಗಳ ವರೆಗಿನ ೧೦೫ ವರ್ಷಗಳ ಪಂಚಾಂಗ (ತಾರೀಕು ಪಟ್ಟಿ)ವನ್ನೂ ಕೊಡಲಾಗಿದೆ. ಕಳೆದ ೩೫ ವರ್ಷಗಳಿಂದಲೂ ಜನತೆಯ ಆವಶ್ಯಕತೆ ಪೂರೈಸುತ್ತ ಬಂದಿರುವ ಶ್ರೀ ಜ್ಯೋತಿಷ್ಮರ ಪಂಚಾಂಗ ಉಪಯುಕ್ತವಿದೆ. ಇದರ **ಬೆಲೆ:** ರೂ. ೦-೫೦.

ಜನತಾವಾಣಿ. ಮಂಗಳೂರಿನ ಜನತಾ ಶಿಕ್ಷಣ ಸಮಿತಿಯ ರಾತ್ರಿ ಶಾಲೆಯ ಪತ್ರಿಕೆಯಿದು. ೧೯೫೯ರಲ್ಲಿ ಪ್ರಾರಂಭವಾದ ರಾತ್ರಿ ಶಾಲೆಯು ವಿದ್ಯಾರ್ಥಿಗಳಲ್ಲಿ ಸಾಹಿತ್ಯಿಕ ಆಸಕ್ತಿಯನ್ನೂ ಹುಟ್ಟಿಸುತ್ತಿದೆ ಮತ್ತು ಇದರಲ್ಲಿ ಯಶಸ್ವಿಯಾಗಿದೆಯೆಂಬುದಕ್ಕೆ ಅಂಕೆಯ್ಯ ಮೀರಿದ ಪುಟಗಳ ಈ ಪತ್ರಿಕೆಯೇ ಸಾಕ್ಷಿ. ರಾತ್ರಿ ಶಾಲೆಗಳ ಮಹತ್ವವು ಬೆಳೆಯುತ್ತಿದ್ದಂತೆಯೇ ಇವುಗಳ ಕಡೆಗೆ ಹರಿಸುವ ಗಮನವೂ ಆಶಾದಾಯಕವಿದೆ. ಇಲ್ಲಿ ಕಲಿಯುವ ವಿದ್ಯಾರ್ಥಿಗಳ ಸಂಖ್ಯೆಯೂ ಬೆಳೆಯುತ್ತಿದೆ. ಸಾಹಿತ್ಯವು ಜೀವನಕ್ಕೊಂದು ಮಾರ್ಗದರ್ಶನ ಮಾಡಬಲ್ಲುದಾದುದರಿಂದ ಇದನ್ನು ಅಧ್ಯಯನ ನಡೆಸುವ ಮತ್ತು ತನ್ನ ಅನುಸಂಧಾನದ ಪರಿಣಾಮವನ್ನು ಹೊರಗೆಡಹುವ ಉತ್ಸಾಹ ಕಿರಿಯ ಹಿರಿಯ ವಿದ್ಯಾರ್ಥಿಗಳಲ್ಲಿ ಮೂಡ ಬೇಕು. 'ಜನತಾವಾಣಿ'ಯಲ್ಲಿದರ ಯಶಸ್ವಿತೆ ಎದ್ದು ತೋರುತ್ತದೆ.

—ಗೋರಾ

ದಿ ಕಲ್ಯಾಣಪುರ ಪ್ರೆಸ್, ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: 'ವಿಶ್ವಜ್ಞಭವನ'
ಉಡುಪಿ, ದ. ಭಾರತ.

1956 ಕಂಪೆನಿಯ ಆಕ್ಟಿನ 412ನೇ ಸೆಕ್ಷನ್ ಪ್ರಕಾರ ಶೇರ್‌ಹೊಲ್ಡರರಿಗೆ ನೋಟೀಸು ಈ ಮೂಲಕ ತಿಳಿಯ ಪಡಿಸುವುದೇನೆಂದರೆ ಕಂಪೆನಿಯ ಈಗಿನ ಮೇನೇಜಿಂಗ್ ಡಿರೆಕ್ಟರ್ ಕೆ. ರಾಮದಾಸ ಭಟ್ಟರನ್ನು ಮೊದಲಿನ ಟರ್ಮ್ಸ್ ಮತ್ತು ಶರ್ತಗಳ ಪ್ರಕಾರವೇ ತಾ 1.4.61 ರಿಂದ ಪುನಃ ಐದು ವರ್ಷಗಳ ತನಕ ನೇಮಿಸಲು ಕೇಂದ್ರ ಸರ್ಕಾರಕ್ಕೆ ಅರ್ಜಿಯನ್ನು ಮಾಡಿಕೊಳ್ಳುತ್ತದೆ.

(ಬೋರ್ಡಿನ ಆದೇಶದ ಮೇರೆಗೆ)

ಕೆ. ರಾಮದಾಸ ಭಟ್ಟ,
ಮೇನೇಜಿಂಗ್ ಡೈರೆಕ್ಟರ್.

13—6—61

ಎರಡು ವರ್ಗಗಳು.

ಒಮ್ಮೆ ಹಡ್ಡರ್ಸ್‌ಫೀಲ್ಡಿನ ಕಾರ್ಮಿಕರನ್ನು ಉದ್ದೇಶಿಸಿ ಕಾಬ್ಡನ್ ಮಹಾಶಯರು ಹೇಳಿದರು. "ಈ ಜಗತ್ತು ಎರಡು ವರ್ಗದ ಜನರಿಂದ ಕೂಡಿಕೊಂಡಿರುವುದು:—ಉಳಿಸುವವರು ಮತ್ತು ವ್ಯಯಿಸುವವರು. ಒಂದು ವರ್ಗ ಮಿತವ್ಯಯ ಮಾಡುವವರದು, ಉಳಿತಾಯಗಾರರದು. ಇನ್ನೊಂದು ಮನಬಂದಂತೆ ವೆಚ್ಚ ಮಾಡುವವರದು, ದುಂದುಗಾರರದು. ಮಾನವರನ್ನು ನಾಗರಿಕರನ್ನಾಗಿ, ಸುಖಜೀವಿಗಳನ್ನಾಗಿ ಮಾಡಲು ನೆರವಾಗುವ ಮನೆಮಂದಿರ ಕಾರ್ಖಾನೆ, ಕರ್ಮಶಾಲೆ, ಸಂಕಸೇತುವೆ, ಹಡಗವಿಮಾನ ಇತ್ಯಾದಿ ಸಾಧನಗಳೆಲ್ಲವೂ ಈ ಮೊದಲ ವರ್ಗದ ಜನರ ಸಾಧನೆಗಳು. ಹಣವನ್ನು ಪೋಲು ಮಾಡುವವರು ಯಾವಾಗಲೂ ಅಸಂತುಷ್ಟಿಗಳಾಗಿ, ಈ ಮೊದಲನೆಯ ವರ್ಗದ ಜನರ ದಾಸರಾಗಿ ಎಂಬಂತೆ ಬಾಳಬೇಕಾಗುವುದು."

ಒಂದು ಸೇವಿಂಗ್ಸ್ ಬ್ಯಾಂಕ್ ಖಾತೆಯನ್ನು ತೆರೆಯಿರಿ.

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್,
ರಜಿಸ್ಟರ್ಡ್ ಆಫೀಸ್: ಉಡುಪಿ, ಮೈಸೂರು ರಾಜ್ಯ, ಸ್ಥಾಪನೆ: ೧೯೨೫.

ಧನರ್ವಾರ್ಥ ಮೆಜಿಕ್ ತಂತ್ರಗಳನ್ನು ಕಲಿಯಿರಿ!

(1) ಒಂದು ಸಣ್ಣ ಚೆಂಡನ್ನು ನಿಮ್ಮ ಬಾಯಿಯೊಳಗೆ ಹಾಕಿರಿ, ಮತ್ತು ಅದನ್ನು ನಿಮ್ಮ ಕಣ್ಣಿನಿಂದ ಹೊರಕ್ಕೆ ತೆಗೆಯಿರಿ. (2) ನಿಮ್ಮ ಅಂಗೈ ಅಡಿಯಲ್ಲಿ ಒಂದು ರೂಪಾಯಿ ನಾಣ್ಯವನ್ನು ಹಾಕಿರಿ, ಮತ್ತು ಅದನ್ನು ಒಂದು ಪೆಟ್ಟಿನಿಂದ ನಿಮ್ಮ ಮುಷ್ಟಿಯ ಕೆಳಗೆ ಅದೃಶ್ಯಗೊಳಿಸಿರಿ.

ಈ ಅಸಾಮಾನ್ಯ ಉಪಾಯಗಳನ್ನು ಪಡೆಯಲಿಕ್ಕೆ ಟಪ್ಪಾಲು ವಗೈರೆ ಖರ್ಚಿಗಾಗಿ 6ಪ ನಯೇ ಪೈಸೆ ಸ್ಟ್ಯಾಂಪ್ ಕಳುಹಿಸಿರಿ. ೫ರೂಪಾಯಿ ಕಳುಹಿಸುವವರು ಅವರ ಮನೆಯಲ್ಲಿಯೇ ಮುಂದೆ ಇತರ ಎಲ್ಲಾ ತಂತ್ರಗಳನ್ನು ಪಡೆಯಬಹುದು.

The Royal Trick Centre,
P. B. No. 15, Aligarh (U.P.)

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

Edited Printed & Published by K. H. Shetty, at the Navayuga Press, Udipi, S. India.